ಯೇಸು ಕಪೆರ್ನೌವೂಮಿನಲ್ಲಿ ವಾಸವಾದದರ ಯೇರಡು ಕಾರಣಗಳು ಯಾವವಂದರೆ. a. ಕಪೆರ್ನೌವೂಮಿನಲ್ಲಿ ಪೆಚ್ಚಾದ ಕತ್ತಲೆ ಇತ್ತು. ಯಾಕಂದರೆ ನಿವಾಸಿಗಳಲ್ಲಿ ಅನೇಕರು ವಿಗ್ರಹಾರಾಧಕರಾಗಿದ್ದರು; ಈ ಪಟ್ಟಣವು ಕಾನಾನ್ ದೇಶದ ಪ್ರಾಂತ್ಯದಲ್ಲಿ, ಜೆಬುಲೋನ್ ನಫ್ತಲಿ ಕುಲಗಳು ಕೂಡುವಲ್ಲಿ ಇತ್ತು. b. ಈ ಪಟ್ಟಣದಲ್ಲಿ ವಿಶೇಷವಾದ ವ್ಯಾಪಾರವಿತ್ತು. ಯಾಕಂದರೆ ಅದು ಗಲಿಲಾಯಸಮುದ್ರದ ತೀರದಲ್ಲಿಯೂ, ಈ ಸಮುದ್ರವನ್ನು ದಾಟುವ ಯಾದಾಕಿನ ತೀರದಲ್ಲಿಯೂ ಇತ್ತು. ಯೆಶ್. ೯, ೧. ಅಗ್ಗಾನವೂ ವ್ಯಾಪಾರವೂ ಬಹಳವಾಗಿದ್ದ ಸ್ಥಳದಲ್ಲಿ ಯೇಸುವಿಗೆ ಬಹಳ ಕೆಲಸ ಇತ್ತು. ಅಂಥಾ ಸ್ಥಳವೇ ಅತನಿಗೆ ಬೇಕಾಯಿತು. ಲೂಕ್. ೫, ೧.

೩. ಯೇಸು ಗಲಿಲಾಯದಲ್ಲಿ ಬ್ಯಾಧಿಸುವದಕ್ಕೆ ಆರಂಭ ಮಾಡುತ್ತಾನೆ. ಕಪೆರ್ನೌವೂಮಿನ ಸಾಲೆಯಲ್ಲಿ ಬ್ಯಾಧಿಸಿ ಅಶುದ್ಧಾತ್ಮವನ್ನು ಪೋರಡಿಸುತ್ತಾನೆ.

ಮತ್ಥ್. ೪, ೧೭. ಮಾರ್ಕ್. ೧, ೧೪. ೧೫. —೨೧—೨೪. ಲೂಕ್. ೪, ೧೫. ೩೧—೪೨.

ಮತ್ಥ್. ೪, ೧೭. ಮಾರ್ಕ್. ೧, ೧೪. ೧೫. ಅಂದಿನಿಂದ[೧] ಯೇಸು—ಮಾನಸಾಂತರ ಪಡಿರಿ; [ಮತ್ತು ಸುವಾರ್ತೆಯಲ್ಲಿ[೨] ವಿಶ್ವಾಸವಿಡಿರಿ]; ಯಾಕಂದರೆ [ಸಮಯ

ಮಾರ್ಕ್. ೧, ೨೧—೨೭.

ವು ಪೂರ್ಣವಾಯಿತು ಗ)]; ಪರಲೋಕರಾಜ್ಯವು ಸಮೀಪವಾಯಿತು, ಯೆಂದು ಳ) ಪ್ರೋ
ಳಿ, ಸಾರಲಾರಂಭಿಸಿದನು.

೧. ಕಪೆನಃವೂಮಿನಲ್ಲಿ ವಾಸವಾದ ಮೇಲೆ ಯೇಸು ಯಾಕೆ ಗಲಿ
ಲಾಯದಲ್ಲಿ ಬೋಧಿಸುವದಕ್ಕೆ ಆರಂಭಿಸಿದನೆಂಬ ಮಾತನ್ನು ಈಗಲೇ
ಹೇಳಿದೆವು (ಯೋ. ೪, ೩.); ಯಾಕಂದರೆ ಆ ಸೀಮೆಯಲ್ಲಿ ಆ
ತನ ಬೆಳಕು ಪ್ರಕಾಶಿಸುವದಕ್ಕೆ ಹೆಚ್ಚಾದ ಅವಸ್ಥವಿತ್ತು. ಅಲ್ಲಿ ಯೇ
ಸು ಕ್ರಮದಿಂದ ತನ್ನ ಉದ್ಯೋಗವನ್ನು ಆರಂಭಿಸಿದನು; ಆ ಪರ್ಯಂ
ತರ ಅತನು ಮಾಡಿದ್ದೇನಂದರೆ—a.) ಯೆರೂಸಲೇಮಿನ ಹಬ್ಬದಲ್ಲಿ
ಅತನು ಗಲಿಲಾಯದವರ ಮನಸ್ಸನ್ನು ಲಕ್ಷಣಾದ್ಭುತಗಳಿಂದ ಸಿದ್ಧ ಮಾಡಿ
ದ್ದನು. b.) ತನ್ನ ಶಿಷ್ಯರನ್ನು ಕೂಡಿಸಿ ಇದ್ದನು. c.) ತಂದೆಯು ನ
ಮಯವನ್ನು ಕಾಟ್ಟ ಪ್ರಕಾರ ಅತನು ಯೆರೂಸಲೇಮಿನಲ್ಲಿಯೂ ಸಮಾ
ಯದಲ್ಲಿಯೂ ಉಪದೇಶವನ್ನೂ ಶಿಕ್ಷೆಯನ್ನೂ ಕಾಟ್ಟು ಕೆಲವರ ಸಂಗ
ಡ ಯೇಕಾಂತವಾಗಿ ಮಾತಾಡಿ ಇದ್ದನು.

೨. ಹೇಳಿ ವಾದಂಬಡಿಕೆಯ ಸಂಬಂಧವಾದ ನ್ಯಾಯಪ್ರಮಾಣವನ್ನ
ಲ್ಲಿ, ಸುವಾರ್ತೆಯನ್ನು ಸಾರಿ ಹೇಳುವದು ಯೇಸುವಿನ ಮುಖ್ಯವಾದ ಕೆ
ಲಸವಾಗಿತ್ತು. ಆ ಸುವಾರ್ತೆ ಅಂದರೆ—ಯೇಸುವೆಂಬ ರಕ್ಷಕನು ಬಂ
ದನೆಂದೂ ಅತನ ಸಂಗಡ ಪರಲೋಕರಾಜ್ಯವು ಸಮೀಪಿಸಿತೆಂದೂ
ಹೇಳುವ ಮಾತು.—ಅದದರಿಂದ ವಿಶ್ವಾಸವನ್ನು ಹುಟ್ಟಿಸುವದೇ
ಯೇಸುವಿನ ಮುಖ್ಯವಾದ ಕೆಲಸವಾಗಿತ್ತು. ತಾನು ಹೇಳಿದ ಮಾತು
ಗಳಿಂದಲೂ ತಾನು ತೋರಿಸಿದ ಅದ್ಭುತಗಳಿಂದಲೂ ವಿಶ್ವಾಸವನ್ನು ಹು
ಟ್ಟಿಸಿದನು. ಆದರೆ ನ್ಯಾಯಪ್ರಮಾಣದ ಪ್ರಸಂಗದಿಂದ (ಸ್ನಾನಿಕನಾದ
ಯೋಹಾನನು ಸಹ ಮಾಡಿದ ಪ್ರಸಂಗದಿಂದ,) ತಕ್ಕ ಫಲ ಉಂಟಾ
ಗದ ಕಾರಣ ಯೇಸು ಮಾನಸಾಂತರದ ಮಾತನ್ನು ಸಹ ಜನರಿಗೆ ಹೇಳಿ
ಸತಾಗಿ ತಿಳಿಸಿದನು; ಪವಿತ್ರಪ್ರಸಂಗದಲ್ಲಿ ನ್ಯಾಯಪ್ರಮಾಣವನ್ನು ಯೆ
ಲ್ಲರಿಗೆ ಯೆರಡನೇ ಸಾರಿ ಸ್ಪಷ್ಟವಾಗಿ ವಿವರಿಸಿದನು. ಯಾಕಂದರೆ ಮಾ
ನಸಾಂತರ ಪಟ್ಟವರಲ್ಲಿ ಮಾತ್ರ ಸತ್ಯ ವಿಶ್ವಾಸ ಹುಟ್ಟ ಬಹುದು.

೩. ಅಂದರೆ—ನಾನು, ದೇವರ ರಾಜ್ಯವು, ಬರುವ ಹಾಗೆ ಸಿದ್ಧ
ಮಾಡುವದಕ್ಕೆ ನೇಮಿಸಿದ ಕಾಲವು ಸಮಾಪ್ತವಾಯಿತು. ಯಾವದಕ್ಕಾ
ಗಿ ಹೊಳೆ ವಾಡಂಬಡಿಕೆ ಸಿದ್ಧ ಮಾಡುತ್ತಿತ್ತೋ ಅದು ಬರುವ ಹಾಗೆ
ತಕ್ಕ ಸಮಯವಾಯಿತು. ಯಾಕಂದರೆ ಬೇರೆ ಜನಾಂಗಗಳಿಗೂ ಬೆಳ
ಕು ಉದಯವಾಗುವ ಹಾಗೆ ತಕ್ಕ ಸಮಯವಿತ್ತು.

೪. ದೇವರ ರಾಜ್ಯದ ವಾಡವೆಗಳನ್ನೆಲ್ಲಾ ತನ್ನಲ್ಲೇ ಅಡಗಿಸಿ ಕಾಂ
ಡ ಕ್ರಿಸ್ತನಲ್ಲಿ ದೇವರ ರಾಜ್ಯವು ಪೂರ್ಣವಾಗಿ ಪ್ರತ್ಯಕ್ಷವಾಯಿತು. ಆ
ದರೆ ಆ ರಾಜ್ಯದಲ್ಲಿ ಶೇರ ಬೇಕಾದವರಲ್ಲಿ ಮಾನಸಾಂತರವೂ ವಿಶ್ವಾಸ
ವೂ ಇರ ಬೇಕು. ಆದದರಿಂದ—ದೇವರ ರಾಜ್ಯವು ಸಮೀಪವದೆ
ಯೆಂದು, ಯೆಲ್ಲರಿಗೂ ಹೇಳ ಬಹುದು. ಅದು ಬಂತೆಂದು, ಮಾನ
ಸಾಂತರ ಪಟ್ಟಾಂದಿದವರಿಗೂ ವಿಶ್ವಾಸಿಸುವವರಿಗೂ ಮಾತ್ರ ಹೇಳ ಬ
ಹುದು.

ಯೇಸು ಆರಂಭದಲ್ಲಿ ಯೆಹೂದ್ಯರ ಸಾಲೆಗಳಲ್ಲಿ ಬೋಧಿಸಿದನೆಂದೂ, ಆಗಲೇ ಅತನ ಬೋಧನೆಗೆ ಅನೇಕರು ಮೆಚ್ಚಿದರೆಂದೂ, ಲೂಕ. ೪, ೧೫. ಬರೆದದೆ. ಯೇಸುವಿನ ಬೋಧನೆಯ ವಿಷಯದಲ್ಲಿ ಮತ್ತ. ೪, ೧೭. ಮಾರ್ಕ. ೧, ೧೪. ಲೂಕ. ೪, ೧೫. ಅವಿಶೇಷವಾಗಿ ಹೇಳಿದ್ದು ಇನ್ನೂ ಮುಂದೆ ವಿಶೇಷವಾಗಿ ವಿವರಿಸಿ ಅದೆ.

ಮಾರ್ಕ್. ೧, ೨೧. ಮತ್ತು ಅವರು ಕಪೆನ್ಹೂವುಮಿನಲ್ಲಿ ಪ್ರವೇಶಿಸಿದ ಕೂಡಲ್ಯೇ ಆ
ತನು ಸಬ್ಬತಿನಲ್ಲಿ ಕಪೆನ್ಹೂವುಮಿನ ಸಭೆಮನೆಗೆ ಹೋಗಿ, ಬೋಧಿಸಿದನು ಗ). ೨೨. ಮತ್ತು ಅತನ ಬೋಧನೆಗೆ ಆಶ್ಚರ್ಯಪಟ್ಟರು; ಯಾಕಂದರೆ ಶಾಸ್ತ್ರಿಗಳ ಹಾಗಲ್ಲ, ಅ
ಧಿಕಾರ ಉಂಟಾದವನ ಹಾಗೆ ಬೋ), ಅವರನ್ನು ಬೋಧಿಸುತ್ತಿದ್ದನು. ೨೩. ಇದಲ್ಲದೆ ಅ
ವರ ಸಭೆಮನೆಯಲ್ಲಿ ಅಶುದ್ಧಾತ್ಮವುಳ್ಳ ವಾಬ್ಬ ಮನುಷ್ಯನಿದ್ದನು. ಅವನು ಘಟ್ಟಿಯಾ
ಗಿ ಕೂಗಿದ್ದೇನಂದರೆ ಛ) —೨೪. ನಜರೇತಿನವನಾದ ಯೇಸುವೇ, ಬಿಡು! ನಮಗೂ
ನಿನಗೂ ಯೇನು? ನಮ್ಮನ್ನು ನಾಶನ ಮಾಡ ಬಂದಿಯೋ? ನೀನು ಯಾರೆಂದು, ಬ
ಲ್ಲೆನು; ದೇವರ ಪರಿಶುದ್ಧನೇ. ೨೫. ಆಗ ಯೇಸು ಅದನ್ನು ಗದರಿಸಿ,—ಮೌನವಾ
ಗಿರು, ಅವನೊಳಗಿಂದ ಹೊರಡು ಜ), ಅಂದನು. ೨೬. ಅಶುದ್ಧಾತ್ಮವು ಅವನನ್ನು
ವಾದ್ದಾಡಿಸಿ ಝ), ಮಹಾ ಶಬ್ದದಿಂದ ಕೂಗಿ ಞ), ಅವನೊಳಗಿಂದ ಹೊರಟಿತು ಟ).
೨೭. ಮತ್ತು ಯೆಲ್ಲರು ಆತ್ಯಾಶ್ಚರ್ಯಪಟ್ಟು, ಇದೇನು? ಈ ಹೊಸ ಬೋಧನೆ ಯೇ

ಮಾರ್ಕ್. ೧, ೨೮—೩೧. ಲೂಕ. ೪, ೩೫. ೫, ೧೨. ಮತ್ತಾ. ೮, ೧೪. ೧೭.

ನು)? ಈತನು ಅಶುದ್ಧಾತ್ಮಗಳಿಗೂ ಅಧಿಕಾರದಿಂದ ಅಪ್ಪಣೆ ಕೊಡುತ್ತಾನೆ; ಅವು ಈ ತನಿಗೆ ವಿಧ್ಯೆಯವಾಗಿವೆ, ಯೆಂದು ತಮ್ಮಲ್ಲಿ ತರ್ಕಿಸಿ ಕೊಂಡರು. ೨೮. ಸಂಗಡಲೇ ಅವನ ಸುದ್ದಿಯು ಗಲಿಲಾಯದ ಸುತ್ತಲಿರುವ ದೇಶಕ್ಕೆಲ್ಲಾ ಪಬ್ಲಿಶು[ಗ]).

೧. ದೇವರ ರಾಜ್ಯದ ಪ್ರಸಂಗಕ್ಕೆ ವಾಂದಾಂದು ವೇಳೆ ಸ್ಥಳ ಸಮಯಗಳ ವಿಶೇಷದಿಂದ ಸಫಾಯವಾಗುತ್ತದೆ. ಉದಾಗ್ಯೂ ೨ ತಿಮ. ೪, ೨. ಪೌಳಿರುವ ಮಾತನ್ನು ಗ್ಞಾಪಕ ಮಾಡಿ ಕೊಳ್ಳ ತಕ್ಕದ್ದು. ಯೇಸು ಸಾಲೆಗಳಲ್ಲಿಯೂ ಸಬ್ಬತಿನಲ್ಲಿಯೂ ಮಾತ್ರವಲ್ಲ, ಪರ್ವತದಲ್ಲಿಯೂ ಸಮುದ್ರದಲ್ಲಿಯೂ ದಾರಿಯಲ್ಲಿಯೂ ಮನೆಯಲ್ಲಿಯೂ, ಯೆಲ್ಲೆಲ್ಲಿಯೂ ಯೆಲ್ಲಾ ಸಮಯಗಳಲ್ಲಿಯೂ, ಬೋಧಿಸಿದನು. ಯಾಕಂದರೆ ದೇವರ ರಾಜ್ಯದ ವಾಟವು ಸೂರ್ಯನ ವಾಟದ ಪ್ರಾಗೆ ಅದೆ (ಕೀರ್ತ. ೧೯.). ನಾವು ಸಫ ಉದಿತ್ಯವಾರದಲ್ಲಿ ಮಾತ್ರವಲ್ಲ, ಯಾವಾಗಲೂ, ಮನೆಯಲ್ಲಿ ಮಾತ್ರವಲ್ಲ, ಅಂಗಡಿಬೀದಿಯಲ್ಲಿಯೂ ದೇವರ ರಾಜ್ಯದ ಕೆಲಸವನ್ನು ಮನಸ್ಪಿನಲ್ಲಿ ಇಟ್ಟು ಕಾಂಡಿರ ತಕ್ಕದ್ದು.

೨. ದಿವ್ಯ ಅಧಿಕಾರವನ್ನೂ ಅಗ್ಞೆಯನ್ನೂ ಪ್ರಾಂದಿದವನಾಗಿ ಬೋಧಿಸಿದನು. ಆತ್ಮದಲ್ಲಿಯೂ ಬಲದಲ್ಲಿಯೂ ಆಗುವ ಬೋಧನೆಗೂ, ಆತ್ಮಬಲವಿಲ್ಲದ ಬೋಧನೆಗೂ ಬಹಳ ವೆತ್ಯಾಸಕಡಿಮೆ. ಯೇಸುವಿಗೆ ಮಿತಿಯಿಲ್ಲದ ಆತ್ಮವೂ ಬಲವೂ ಇತ್ತು. ಶಾಸ್ತ್ರಿಯವರಲ್ಲಿ ಕೆಲವರು ಸುಳ್ಳಾದ ಬೋಧನೆಗಳನ್ನು ಪ್ರಸಂಗಿಸುತ್ತಿದ್ದರೆಂದು ಪರ್ವತಪ್ರಸಂಗದಿಂದ ಕಾಣುತ್ತದೆ; ಉದರೆ ಸತ್ಯವನ್ನು ಪ್ರಸಂಗಿಸುವವರು ಸಫ ನಿಜೀವವಾದ ಮಾತುಗಳನ್ನು ಪ್ರಸಂಗಿಸುತ್ತಿದ್ದರು. ಆತ್ಮವಿಲ್ಲದ ಅಕ್ಷರ ಮಾತ್ರ ಅವರಿಗಿತ್ತು.

೩. ಈ ಮನುಷ್ಯನು ಬೇರೆ ಸಮಯದಲ್ಲಿ ಸಾಲೆಯಲ್ಲಿ ಸುಮ್ಮನೆ ಇರುತ್ತಿದ್ದನೆಂದು ಕಾಣುತ್ತದೆ; ಉದರೆ ಯೇಸು ಬಂದದರಿಂದ ಈ ಅಶುದ್ಧಾತ್ಮವು ಕಳವಳಗಾಂಡಿತು; ಯಾಕಂದರೆ ಕತ್ತಲೆಯ ಸಂಬಂಧದಲ್ಲಿರುವವರೆಲ್ಲರಿಗೆ, ಬೆಳಕನ್ನೂ ಪರಿಶುದ್ಧತ್ವವನ್ನೂ ನೋಡಿದರೆ, ಭಯವಾಗುತ್ತದೆ. ಉದದರಿಂದ ಈ ದೆವ್ವವು ಪ್ರಾಳಿದ್ದೇನಂದರೆ—ನೀನು ದೇವರ ಪರಿಶುದ್ಧನು. ದೇವರ ಮಗನು ಮನುಷ್ಯನಾಗಿ ಅವತಾರವಾದದ್ದಕ್ಕೆ ಈ ದುರಾತ್ಮವು ಮುಖ್ಯವಾಗಿ ಕಳವಳಗಾಂಡದರಿಂದ—ನಜರೇತಿನವನಾದ ಯೇಸುವೇ, ಯೆಂದು ಕೂಗಿತು.—ದೇವರ ಮಗನು ಬಂದದರಿಂದ ಕತ್ತಲೆಯ ರಾಜ್ಯಕ್ಕೆ ಅಂತ್ಯವು ಬಂತೆಂದು ತಿಳಕಾಂಡದರಿಂದ—ನೀನು ನಮ್ಮನ್ನು ನಾಶನ ಮಾಡುವದಕ್ಕೆ ಬಂದಿ ಯೆಂದು ಪ್ರಾಳಿತು. ತನಗೆ ಯೇನೂ ಶಕ್ತಿ ಇಲ್ಲವೆಂದು ತಿಳಿದು ಕಾಂಡು, ತಕ್ಷಣವಾಗಲಿ ಯುಗಳವಾಗಲಿ ಮಾಡ ಮನಸ್ಪಿಲ್ಲದೆ, ತನ್ನನ್ನು ಬಿಡ ಬೇಕೆಂದು ಯೇಸುವನ್ನು ಬೇಡಿ ಕಾಂಡಿತು.

೪. ಆದರೆ ಯೇಸು ಈ ದುಷ್ಟ ಆತ್ಮವನ್ನು ಸುಮ್ಮನೆ ಬಿಡಲಿಲ್ಲ. ಈ ಬಡ ರಾಗಿಷ್ಟನಿಗೆ ಸಫಾಯ ಮಾಡುವದಕ್ಕೆ ಮನಸ್ಪಿಲ್ಲದೆ ಇದ್ದಾಗ್ಯೂ, ಕತ್ತಲೆಯ ರಾಜ್ಯದ ಮೇಲೆಯೂ ತನಗೆ ಅಧಿಕಾರ ಉಂಟೆಂದು ತೋರಿಸ ಬೇಕಾಯಿತು. ಯೇಸು ಈ ದೆವ್ವವನ್ನು ಸುಮ್ಮನಿರಿಸಿದ ಕಾರಣವೇನಂದರೆ—ಅಂಧಕಾರದ ರಾಜ್ಯದಲ್ಲಿಂದ ಬಂದ ಸಾಕ್ಷಿಯನ್ನು ಜೀವದಲ್ಲಿರುವ ಮನುಷ್ಯರು ಕೇಳಿ ಯೇಸುವಿನ ದಿವ್ಯ ಸ್ವಭಾವವನ್ನು ತಿಳಕೊಳ್ಳ ಬೇಕೆಂದು ಯೇಸುವಿನ ಚಿತ್ರವಿದ್ದಿಲ್ಲ; ಯೆಲ್ಲಾ ನಾಲಿಗೆಗಳು ಆತನಿಗೆ ಅರಿಕೆ ಮಾಡ ಬೇಕಾಗಿದ್ದಾಗ್ಯೂ (ಫಿಲಿ. ೨, ೧೦. ೧೧.), ಮನುಷ್ಯರ ವಿಶ್ವಾಸವು ದೆವ್ವಗಳ ಸಾಕ್ಷಿಯಿಂದ ಸ್ಥಾಪನೆಯಾಗುವದು ಅಗತ್ಯವಾಗಿದ್ದಿಲ್ಲ. ಉದದರಿಂದ ಈಗಿನ ಕಾಲದಲ್ಲಿ ಸತ್ತ ಚೂತ ಪ್ರೇತಗಳ ಸಾಕ್ಷಿಯಿಂದಲೂ ದುರಾತ್ಮಗಳ ಸಾಕ್ಷಿಯಿಂದಲೂ ಸುವಾರ್ತೆಯನ್ನು ಸ್ಥಾಪಿಸ ಮನಸ್ಪುಳ್ಳವರು ಮೋಸದಲ್ಲಿದ್ದಾರೆ. ಲೂಕ. ೧೬, ೨೯. ಪ್ರಾಗಾದರೂ ವಿಶ್ವಾಸಿಸದವರು ತಮ್ಮ ಅವಿಶ್ವಾಸದ ಅಪರಾಧವನ್ನೂ ಶಿಕ್ಷೆಯನ್ನೂ ಪ್ರಾಗಾರುತ್ತಾರೆ; ಉದರೆ ವಿಶ್ವಾಸಿಸುವವರಿಗೆ ಅಧಾಲಾಕದಾಳಗಿಂದ ಬಂದ ಸಾಕ್ಷಿ ಬೇಡ.

೫. ಈ ದೆವ್ವವು ಬೇಡಿದ್ದನ್ನು ಯೇಸು ಮಾಡದೆ ಇದ್ದ ಕಾರಣ ಆದು ಪ್ರಾಗಾರಡುವಾಗಲೇ ತನ್ನ ಕೆಟ್ಟತನವನ್ನು ತೋರಿಸಿತು.

೬. ವ. ೨೫. ಬರೆ ಭಯದಿಂದಲೇ, ಇಲ್ಲಿ ಭಯದಿಂದಲೂ ಕಾಪದಿಂದಲೂ, ಕೂಗಿತು.

೭. ದೆವ್ವವು ಪ್ರಾಗಾರಗೆ ಬಂತೆಂದು, ಈ ಮನುಷ್ಯನ ಮುಖದಿಂದಲೂ ಪ್ರಾಗಾರಗಿನ ಅಕಾರದಿಂದಲೂ ಪ್ರತ್ಯಕ್ಷವಾಯಿತು.

೮. ದೆವ್ವವನ್ನು ಪ್ರಾಗಾರಡಿಸಿದ್ದು ಯೇನೆಂದೂ, ದೆವ್ವಗಳನ್ನು ಪ್ರಾಗಾರಡಿಸ ಶಕ್ತನು ಯೆಂಥಾ ಬೋಧಕನೆಂದೂ, ಕೇಳಿದರು.

೯. ಅದ್ಭುತಕ್ರಿಯೆಗಳು ಯೆಲ್ಲಾದರೂ ನಡೆದರೆ, ಜನರು ಬಹಳ ಆಶ್ಚರ್ಯಃ ಪಟ್ಟು ಯೆಚ್ಚರಿಕೆ ಆಗುತ್ತಾರೆ. ದೇವರ ವಾಕ್ಯದ ಪ್ರಸಂಗವಾದರೆ, ಅಷ್ಟು ಯೆಚ್ಚರಿಕೆ ಆಗುವದಿಲ್ಲ. ಅದು ದಾಡ್ಡ ತಪ್ಪು ಸರಿ.

೪. ಯೇಸು ಸೀಮೋನನ ಅತ್ತೆಯನ್ನು ಸ್ವಸ್ಥ ಮಾಡುತ್ತಾನೆ.

ಮಾರ್ಕ್. ೧, ೨೯—೩೫. ಲೂಕ. ೪, ೩೮. ೪೨.

ಈ ದೆವ್ವ ಹಿಡಿದವನನ್ನು ಸ್ವಸ್ಥ ಮಾಡಿದಾಗಲೇ ಯೇಸು ಸಾಲೆಯನ್ನು ಬಿಟ್ಟು ಮನೆಗೆ ಪ್ರಾಗಾದನು. ಗುಬಾರು ಆಗದ ಪ್ರಾಗೆ ಪ್ರಾಗಾದನೆಂದು ಕಾಣುತ್ತದೆ. ಆತನು ಪ್ರಾಗಾದ್ದು ಪೇತ್ರನ ಅತ್ತೆಯ ಮನೆಗೆ. ಪೇತ್ರನ ಸ್ವಂತ ಮನೆ ಬೆತ್ಸಾಯಿದದಲ್ಲಿ ಇತ್ತು. ಯಾಗಾ. ೧, ೪೪. ಸೀಮೋನನೂ, ಅಂದ್ರೇಯನೂ, ಯಾಕಾಬನೂ, ಯಾಪಾನನೂ ಆತನ ಸಂಗಡ ಪ್ರಾಗಾದರು. ಇವರಲ್ಲಿ ಮೂವ್ವರು ಆಗಲೇ ಯೇಸುವಿನ ಶಿಷ್ಯರಾಗಿದ್ದರು. ಯಾಗಾ. ೧, ೩೫. ೪೦. ಯಾಕಾಗಾಬನು ಯಾಗಾಪಾನನ ಸಫಾಗಾದರವಾಗಿದ್ದದರಿಂದ ಸಂಗಡ ಬಂದನೆಂದು ಕಾಣುತ್ತದೆ. ಈ ವಾಳ್ಳು ಮಂದಿಯನ್ನು ಯೇಸು ಈ ಮೇಲೆ ಅಪಾಸ್ತಲರಾಗ ಕರೆದನು. ಮತ್ತಾ. ೪, ೧೮. ಮಾರ್ಕ. ೧, ೧೬. ೧೯. ಪೇತ್ರನ ಅತ್ತೆ ಜ್ವರದಿಂದ

ಮಾರ್ಕ್. ೧, ೩೨—೩೫. ೧, ೧೬—೨೦. ಲೂಕ. ೪, ೪೦—೪೪. ೫, ೧—೧೧. ಮತ್ಥ. ೮, ೧೬. ೧೭. ೪, ೨೩. ೯, ೧—೨೨.

ಬಹಳ ಉಪದ್ರ ಪಡುತ್ತಿದ್ದಳು; ಆದರೆ ಯೇಸು ಅವಳಿಗೆ ವಾಂದು ಮಾತು ಹೇಳಿ (ಲೂಕ.) ಅವಳ ಕೈಗಳನ್ನು ಹಿಡಿದು (ಮತ್ಥ. ಮಾರ್ಕ.) ಅವಳನ್ನು ಸ್ವಸ್ಥ ಮಾಡಿದನು. ಸಂಗಡಲೇ ಅವಳು ಯೇಸುವಿಗೂ, ಸಂಗಡ ಬಂದವರಿಗೂ, ಬೇಕಾದ ಉಪಚಾರಗಳನ್ನು ಮಾಡಿದಳು.

೫. ಯೇಸು ಕಪೆರ್ನಹೂಮಿನಲ್ಲಿದ್ದ ಮೊದಲನೇ ದಿವಸದ ಸಾಯಂಕಾಲ.

ಮಾರ್ಕ್. ೧, ೨೯—೩೪. ಲೂಕ್. ೪, ೪೦ .೪೧. ಮತ್ಥ್. ೮, ೧೬. ೧೭.

ಈ ಸಂಗತಿಯ ಸ್ಥಳ ಇಲ್ಲಿ ಉಂಟೆಂದು ಮಾರ್ಕ. ೧, ೨೯ ಕಾಣ ಬರುತ್ತದೆ. ಪೂರ್ತು ಮುಣುಗಿದಾಗ ಊರಿನವರೆಲ್ಲರು ಯೇಸು ವಾಸವಾಗಿದ್ದ ಮನೆಯ ಬಾಗಲ ಮುಂದೆ ಕೂಡಿ ಬಂದು, ತಮ್ಮೊಳಗೆ ಇದ್ದ ರೋಗಿಷ್ಠರನ್ನೂ ದೆವ್ವ ಹಿಡಿದವರನ್ನೂ ಯೇಸುವಿನ ಬಳಿಗೆ ತಂದರು. ಸಾಲೆಯಲ್ಲಿ ಈ ದೆವ್ವ ಹಿಡಿದವನಿಗೆ ಆದದ್ದನ್ನು ಕೇಳಿ ಪೂರ್ತಿಗೆ ಮಾಡಿದರು. ರೋಗಿಷ್ಠರೆಲ್ಲರ ಮೇಲೆ ಯೇಸು ತನ್ನ ಕೈಗಳನ್ನು ಇಟ್ಟು, ಅವರನ್ನು ಸ್ವಸ್ಥ ಮಾಡಿದನು (ಲೂಕ.). ಅವರು ಬಹಳ ಮಂದಿಯಾಗಿದ್ದರು (ಮಾರ್ಕ.). ಅದೇ ಪ್ರಕಾರ ಈತನು ಸಾಲೆಯಲ್ಲಿ ಮಾಡಿದ ಪೂರ್ತಿಗೆಯೇ ಅನೇಕ ದೆವ್ವಗಳನ್ನು ಪೂರಡಿಸಿದನು. ಹೀಗೆ ಮಾಡಿದದರಿಂದ ಯೇಸು ಯೆಶ. ೫೩, ೪. ೫. ಬರೆದಿರುವ ಮಾತುಗಳನ್ನು ಪೂರ್ತಿ ಮಾಡಿದನೆಂದು ಮತ್ಥ. ೮, ೧೭. ಹೇಳಿ ಅದೆ. ಈ ಮಾತುಗಳು, ಯೇಸು ಕ್ರುಜೆಯಲ್ಲಿ ತೂಗಿ ನಮ್ಮ ಪಾಪಗಳನ್ನು ಪೂರ್ತು ಕಾಂಡಾಗಲೇ ಸಂಪೂರ್ತಿವಾದವು, ಆದರೆ ಪ್ರವಾದನೆಗಳೆಲ್ಲಾ ಕ್ರಮದಿಂದಲೇ ಪೂರ್ತಿವಾಗುತ್ತವೆ. ಆದದರಿಂದ ಯೇಸು ತನ್ನ ಸುತ್ತಲಿರುವ ಶ್ರಮೆಯನ್ನು ನೋಡಿ ಕನಿಕರ ಪಟ್ಟು ಸಪಾಯ ಮಾಡಿದಾಗ ಈ ಪ್ರವಾದನೆಯು ಪೂರ್ತಿವಾಗುವದಕ್ಕೆ ಆರಂಭವಾಯಿತೆಂದು ಹೇಳುವದಕ್ಕೆ ಕಾರಣ ಉಂಟು. ಸಪಾಯ ಮಾಡುತ್ತಿರುವಾಗ ಈತನು ಮನುಷ್ಯರ ಪಾಪಗಳನ್ನೂ ಅವುಗಳಿಂದುಂಟಾಗುವ ಕಷ್ಟವನ್ನೂ ಪೂರ್ತುಕಾಳ್ಳುತ್ತಿದ್ದನು. ಈ ಸಾರಿ ಈತನು ಬಹಳ ಕಷ್ಟ ಪಟ್ಟನು. ಈ ಮೇಲೆ ವಾಂದು ಸಾರಿ ಈತನ ಮಾನುಷ್ಯಬಲವು ಸ್ವಲ್ಪ ಕಡಿಮೆ ತೀರಿ ಪೂರ್ತಿಯಿತು. ಮಾರ್ಕ. ೪, ೨೩.

೬. ಯೇಸು ಸ್ವಲ್ಪ ಕಾಲ ಯೇಕಾಂತದಲ್ಲಿದ್ದ ಮೇಲೆ ಗಲಿಲಾಯದಲ್ಲಿ ಸಂಚಾರ ಮಾಡಲಿಕ್ಕೆ ಆರಂಭಿಸುತ್ತಾನೆ.

ಮಾರ್ಕ್. ೧, ೩೫—೩೯. ಲೂಕ್. ೪, ೪೨—೪೪. ಮತ್ಥ್. ೪, ೨೩.

ಯೇಕಾಂತದಲ್ಲಿ ಯೇಸು ತನ್ನ ಉದ್ಯೋಗಕ್ಕಾಗಿ ಪೂರ್ತಿ ಬಲವನ್ನು ಕೂಡಿಸುತ್ತಿದ್ದನು. ಯಾಕಂದರೆ ಈತನು ಸತ್ಯದೇವರು ಮಾತ್ರವಲ್ಲ, ಸತ್ಯ ಮನುಷ್ಯನು ಸಹ ಆಗಿದ್ದದರಿಂದ ಬಹಳ ಕೆಲಸ ಮಾಡಿದ ಮೇಲೆ ಈತನಿಗೆ ಆಯಾಸ ಬರುತ್ತಿತ್ತು. ಈತನು ಆರಂಭಿಸ ಬೇಕೆಂದಿದ್ದ ಪ್ರಯೋಗಕ್ಕಾಗಿ ಸಹ ಪೂರ್ತಿ ಬಲ ಬೇಕಾಯಿತು. ಆದದರಿಂದ ಈತನು ಮರುದಿವಸದ ಮುಂಜಾನೆ ಯೇಕಾಂತದಲ್ಲಿ ಪ್ರಾರ್ಥನೆ ಮಾಡುತ್ತಿದ್ದನು (ಮಾರ್ಕ.). ಸೀಮೋನ್ ಮೊದಲಾದವರು ಈತನನ್ನು ಕರೆದು ಕಾಂಡು ಪೂರ್ತಿಗುವದಕ್ಕೆ ಬಂದಾಗ ಯೇಸು ಅವರಿಗೆ ವಾಪ್ಪಲಿಲ್ಲ. ಯಾಕಂದರೆ ಪೂರ್ತಿರಗಿನ ಸುಖವನ್ನು ಕಾಡುವ ಮೆಸ್ಸೀಯನಾಗಿ ಕಪೆರ್ನಹೂಮಿನಲ್ಲಿ ಕೂಡ್ರುವದು ಈತನಿಗೆ ತಕ್ಕದ್ದಾಗಿದ್ದಿಲ್ಲ; ಸಮಸ್ತ ಜನಾಂಗಕ್ಕೆ ಈತನು ರಾಜ್ಯದ ಸುವಾರ್ತೆಯನ್ನು ಸಾರ ಬೇಕಾಯಿತು. ಇದಕ್ಕಾಗಿ ತಂದೆ ಈತನನ್ನು ಕಳುಹಿಸಿ ಇದ್ದನು. ಆದದರಿಂದ ಕಪೆರ್ನಹೂಮಿನಲ್ಲಿ ಇರ ಬೇಕೆಂದು ಜನರು ಈತನಿಗೆ ಬೇಡಿ ಕಾಂಡಾಗ, ಈತನು ವಾಪ್ಪದೆ, ಸಮಸ್ತ ಗಲಿಲಾಯದಲ್ಲಿ ಸಂಚಾರ ಮಾಡಿ, ಪರ್ವತಪ್ರಸಂಗ ಮೊದಲಾದ ಪ್ರಸಂಗಗಳಿಂದ ನ್ಯಾಯಪ್ರಮಾಣದ ಉಪದೇಶ ಕಾಟ್ಟು, ಸುವಾರ್ತೆಯನ್ನು ಮುಖ್ಯವಾಗಿ ಯೆಹೂದ್ಯರ ಸಾಲೆಗಳಲ್ಲಿ ಸಾರಿ, ಬೇರೆ ಬೇರೆ ರೋಗಗಳು ವ್ಯಾಧಿಗಳು ಉಳ್ಳವರನ್ನು ಸ್ವಸ್ಥ ಮಾಡಿ, ದೆವ್ವಗಳನ್ನು ಪೂರ್ತಿಡಿಸಿದನು. ಇದರಿಂದ ನಾವು ತಿಳುಕಾಳ್ಳ ತಕ್ಕದ್ದೇನಂದರೆ — ಕ್ರಿಸ್ತನು ಕೆಲವು ಜನರಿಗೋಸ್ಕರ ಮಾತ್ರವಲ್ಲ, ಸರ್ವಲೋಕಕ್ಕೋಸ್ಕರ ಬಂದವನಾಗಿದ್ದಾನೆ. ಈತನನ್ನು ಸತ್ಯವಾಗಿ ಪ್ರೀತಿ ಮಾಡುವವರು ಈತನಿಗೆ ಅಡ್ಡಿ ಮಾಡದೆ, ಈತನು ಸರ್ವಲೋಕಕ್ಕೆ ತಿಳಿಯ ಬರುವ ಪೂರ್ತಿಗೆ ಸಪಾಯ ಮಾಡ ಬೇಕು. ಯೇಸು ಕಪೆರ್ನಹೂಮಿನಲ್ಲಿ ನಿಲ್ಲ ಬೇಕೆಂದು ಹೇಳಿದ್ದನು ಬೇಡಿ ಕಾಂಡದ್ದು ಸರಿಯಾಗಿದ್ದಿಲ್ಲ. ಆದರೆ ಸತ್ಯ ಪ್ರೀತಿ ತನ್ನ ಶಿಷ್ಯರಲ್ಲಿ ಹುಟ್ಟುವ ಪೂರ್ತಿಗೆಯೇ ಯೇಸು ಅವರಿಗೆ ಮೂರು ವರುಷ ಉಪದೇಶ ಕಾಟ್ಟನು.

೭. ಗಲಿಲಾಯಸಮುದ್ರದ ಸಮೀಪದಲ್ಲಿ ನಾಲ್ಕು ಮಂದಿ ಶಿಷ್ಯರನ್ನು ಅಪೊಸ್ತಲರಾಗ ಕರೆಯುತ್ತಾನೆ.

ಮತ್ಥ್. ೪, ೧೮—೨೨. ಮಾರ್ಕ್. ೧, ೧೬—೨೦. ಲೂಕ್. ೫, ೧—೧೧.

ಲೂಕ್. ೫, ೧. ಸಮೂಹವು ದೇವರ ವಾಕ್ಯವನ್ನು ಕೇಳುವದಕ್ಕೆ ಈತನ ಮೇಲೆ ಬಿದ್ದು ಕಾಂಡಿರುವಾಗ, ಗೆನೆಜರೇತ್ ಸರೋವರದ ಬಳಿಯಲ್ಲಿ ನಿಂತು, ೨. ಸರೋವರದ ಪಾ

ಮತ್ಥಾ. ೪, ೧೪—೨೨. ಮಾರ್ಕ್. ೧, ೧೬—೨೦. ಲೂಕ. ೫, ೩—೧೧.

ತ್ತರ ನಿಂತ ಯೆರಡು ಪಡಗಗಳನ್ನು ನೋಡಿದನು. ಆದರೆ ಮಿನುಗಾರರು ಅವುಗಳಿಂದ ಇಳಿದು ಬಲೆಗಳನ್ನು ತೊಳೆಯುತ್ತಿದ್ದರು. ೩. ಆಗಲಾತನು ಆ ಪಡಗಗಳಲ್ಲಿ ಸೀಮೋನನದಾಗಿರುವ ವಾಂದರಲ್ಲಿ ಯೇರಿ, ಧಡದಿಂದ ಸ್ವಲ್ಪ ದೂರ ನೂಕ ಬೇಕೆಂದು ಅವನನ್ನು ಬೇಡಿ ಕೊಂಡು, ಕೂತು, ಪಡಗದಾಳಗಿಂದ ಸಮೂಹಗಳನ್ನು ಬೋಧಿಸಿದನು. ೪. ಮಾತಾಡಿ ತೀರಿಸಿದ ಮೇಲೆ, ಸೀಮೋನನಿಗೆ—ಆಳವಾದ ಸ್ಥಳಕ್ಕೆ ನಡಿಸಿ ಮಿನುಬೇಟೆಗೆ ನಿಮ್ಮ ಬಲೆಗಳನ್ನು ಇಳಿಸಿರಿ, ಅಂದನು. ೫. ಸೀಮೋನನು ಪ್ರತ್ಯುತ್ತರವಾಗಿ,—ಅಯ್ಯಾ, ನಾವು ರಾತ್ರಿ ಯೆಲ್ಲಾ ಕಷ್ಟ ಮಾಡಿದ್ದರೂ, ಯೇನೂ ಸಿಗಲಿಲ್ಲ; ಆದಾಗ್ಯೂ ನಿನ್ನ ಮಾತಿನ ಮೇರೆಗೆ ಬಲೆ ಇಳಿಸುತ್ತೇನೆಂದು ಆತನಿಗೆ ಪ್ರತ್ಯುತ್ತರ ಕೊಟ್ಟನು. ೬. ಅದನ್ನು ಮಾಡಿ, ಮಿನುಗಳ ದೊಡ್ಡ ಸಮೂಹವನ್ನು ಕೂಡಿಸಿದರು. ಮತ್ತು ಅವರ ಬಲೆ ಹರಿದು ಹೋಗುತ್ತಿತ್ತು. ೭. ಆಗಲವರು ಬೇರೆ ಪಡಗದಲ್ಲಿದ್ದ ಜತೆಗಾರರಿಗೆ, ಬಂದು, ತಮಗೆ ಸಹಾಯ ಮಾಡ ಬೇಕೆಂದು ಸಂಜ್ಞೆ ಮಾಡಿದರು. ಅವರು ಬಂದ ಮೇಲೆ, ಯೆರಡು ಪಡಗಗಳನ್ನೂ, ಅವು ಮುಳುಗುವಷ್ಟು, ತುಂಬಿಸಿದರು. ೮. ಸೀಮೋನ್ ಪೇತ್ರನು ಅದನ್ನು ನೋಡಿ, ಯೇಸುವಿನ ಮೊಣಕಾಲುಗಳ ಮುಂದೆ ಬಿದ್ದು,—ಕರ್ತನೇ ನನ್ನನ್ನು ಬಿಟ್ಟು ಹೋಗು; ಪಾಪಿಯಾದ ಮನುಷ್ಯನಾಗಿದ್ದೇನೆ, ಅಂದನು. ೯. ಯಾಕಂದರೆ ಅವರು ಹಿಡಿದ ಮಿನುಗಳ ರಾಶಿಯ ನಿಮಿತ್ತ ಅವನಿಗೂ ಅವನ ಸಂಗಡ ಇದ್ದವರೆಲ್ಲರಿಗೂ ದಿಗಿಲು ಹುಟ್ಟಿತು. ೧೦. ಸೀಮೋನನ ಪಾಲುಗಾರರಾದ ಜೆಬೆದಾಯನ ಮಕ್ಕಳಾದ ಯಾಕೋಬನಿಗೂ ಯೋಹಾನನಿಗೂ ಅದೇ ಪ್ರಕಾರವಾಯಿತು. ಆಗ ಯೇಸು ಸೀಮೋನನಿಗೆ—ಭಯ ಪಡ ಬೇಡ; ಇನಿಂದ ಮನುಷ್ಯರನ್ನು ಹಿಡಿಯುವವನಾಗಿರುವಿ, ಅಂದನು. ೧೧. ಮತ್ತು ಅವರು ಪಡಗಗಳನ್ನು ಧಡಕ್ಕೆ ತಂದು, ಯೆಲ್ಲಾ ಬಿಟ್ಟು, ಆತನನ್ನು ಹಿಂಬಾಲಿಸಿದರು.

ಮತ್ಥಾಯನೂ ಮಾರ್ಕನೂ ಬರೆದ ಸಂಗತಿಯೂ, ಲೂಕನು ಬರೆದದ್ದೂ, ವಾಂದೆಯಾಗಿ, ಬೇರೆಯಾಗಿ, ಯೆಂದು ಸ್ವಲ್ಪ ಸಂಶಯವದೆ. ಆದರೆ ಈ ಸಂಗತಿ ವಾಂದೇ ಯೆಂದು ನೆನಸುವದಕ್ಕೆ ಕೆಲವು ಕಾರಣಗಳು ಅವೆ. ಅವು ಯಾವವಂದರೆ — ಲೂಕನು ಬರೆದದ್ದಕ್ಕೂ, ಮತ್ಥಾಯನೂ ಮಾರ್ಕನೂ ಬರೆದದ್ದಕ್ಕೂ ಹೊಚ್ಚುಕಡಿಮೆ ಇದ್ದರೆ, ಪೇತ್ರನು ಯೆರಡು ಸಾರಿ ಅಪಾಸ್ತಲನಾಗ ನೇಮಿಸಲ್ಪಟ್ಟಿರುವನು. ಹೀಗೆ ಆಯಿತೆಂದು, ನೆನಸ ಕೂಡದು; ಯಾಕಂದರೆ a. ಪೇತ್ರನೂ ಅಂದ್ರೇಯನೂ ಯಾಕೋಬನೂ ಯೋಹಾನನೂ ತಮ್ಮ ಕೆಲಸಗಳನ್ನು ಬಿಟ್ಟು, ಯೇಸುವನ್ನು ಹಿಂಬಾಲಿಸಿದರೆಂದು ಮತ್ಥ. ೪, ೨೨. ಮಾರ್ಕ. ೧, ೨೦. ಬರೆದದೆ. ಹೀಗಿರಲಾಗಿ ಪೇತ್ರನು ಲೂಕ. ೫. ತಿರಿಗಿ ತನ್ನ ಮುಂಚಿನ ಕೆಲಸವನ್ನು ನಡಿಸಿ, ಯೆರಡನೇ ಸಾರಿ ಕರೆಯಲ್ಪಡುವದು ಹ್ಯಾಗೆ? ಹ್ಯಾಗಾದರೆ, ಪೇತ್ರನು ಆರಂಭದಲ್ಲಿ ಹಿಂಜರಿದು ಯೇಸುವನ್ನು ಬಿಟ್ಟನೆಂಬ ಹಾಗೆ ತಾಗುತ್ತಿರುವದು. b. ಲೂಕನಲ್ಲಿ ಪೇತ್ರನಿಗೆ ಪೇಳಿದ್ದೂ, ಮತ್ಥಾಯನಲ್ಲಿಯೂ ಮಾರ್ಕನಲ್ಲಿಯೂ ಪೇಳಿದ್ದೂ ವಾಂದೇ. ಆದರೆ ಲೂಕನ ಚರಿತ್ರೆ ಪೇತ್ರನನ್ನು ಪ್ರತ್ಯೇಕವಾಗಿ ಕರೆದದರ ಚರಿತ್ರವಾಗಿದ್ದರೆ, ಯೇಸು ವಿಶೇಷವಾದ ಕೆಲವು ಮಾತುಗಳನ್ನು ಪೇಳಿ ಪೇತ್ರನನ್ನು ಮತ್ತಾಬ್ಬರಿಗಾಗದ ದಾಡ್ಡ ಉದ್ಯೋಗಕ್ಕಾಗಿ ಕರೆದಿರುವನೆಂದು ನೆನಸ ಬೇಕು. c. ಮತ್ಥಾಯನಲ್ಲಿಯೂ ಮಾರ್ಕನಲ್ಲಿಯೂ ಬರೆದಿರುವ ಚರಿತ್ರವು ಮೊದಲನೇ ಸಾರಿ ಕರೆದ

ಮತ್ಥ. ೪, ೧೪—೨೨. ಮಾರ್ಕ. ೧, ೧೬—೨೦. ಲೂಕ. ೫, ೧—೧೧.

ದರ ಚರಿತ್ರವಲ್ಲ; ಅದು ಯೋಹ. ೧, ೩೫. ಬರದದೆ. ಆದರೆ ಅಲ್ಲಿ ಅವರು ಶಿಷ್ಯರಾಗುವದಕ್ಕೆ, ಇಲ್ಲಿ ಅಪಾಸ್ತಲರಾಗುವದಕ್ಕೆ, ಕರೆಯಲ್ಪಟ್ಟರು. ಹೀಗಿರಲಾಗಿ ಮತ್ಥಾಯನಲ್ಲಿಯೂ ಮಾರ್ಕನಲ್ಲಿಯೂ ಲೂಕನಲ್ಲಿಯೂ ಬರೆದದ್ದು ಏನಾಂದೆ ಯೆಂದು ತಿಳುಕೊಳ್ಳ ಬೇಕಾದರೆ, ಅದು ಲೂಕನು ಬೆಳುವ ಸಮಯದಲ್ಲಿ ಸಂಚವಿಸಿತೆಂದು ನೆನಸ ಬೇಕು. ಯೇಸು ಗಲಿಲಾಯದಲ್ಲಿ ಸಂಚಾರ ಮಾಡಿದ ಸಮಯದಲ್ಲಿ ಅದು ಆಯಿತು. ಯೇಸು ಇವರನ್ನು ಕರೆಯುವದಕ್ಕಿಂತ ಮುಂಚೆಯೂ ಕರೆದ ಮೇಲೆಯೂ ಸಂಚಾರ ಮಾಡಿದನೆಂದು ನೆನಸ ಬಹುದು. ಯೇಸು ಈ ಪ್ರಕಾರ ಸಂಚಾರ ಮಾಡುತ್ತಿರುವಾಗ ದಾಡ್ಡ ಜನಸಮೂಹವು ಅತನನ್ನು ಹಿಂಬಾಲಿಸುತ್ತಿತ್ತು. ಈ ಸಮೂಹವು ಅತನ ಸಂಗಡ ಕಪೆನೌಮಿಗೆ ಸಮೀಪವಾದ ಬೆಥ್ಸಾಯಿದಕ್ಕೆ ಬಂತು. ಅಲ್ಲಿ ಅಂದ್ರೆಯನ ಪೇತ್ರನ ಫಿಲಿಪ್ಪನ ಯಾಕೋಬನ ಯೋಹಾನನ ಮನೆಗಳಿದ್ದವು.

ಯೇಸು ಪೇತ್ರನನ್ನೂ ಅಂದ್ರೆಯನನ್ನೂ ಯಾಕೋಬನನ್ನೂ ಯೋಹಾನನನ್ನೂ ಅಪಾಸ್ತಲರಾಗ ಕರೆದದ್ದು ಹ್ಯಾಗಂದರೆ.—ಏನಾಂದು ರಾತ್ರಿಯಲ್ಲಿ ಮೀನುಗಳು ಶಿಗದೆ ಇದ್ದಾಗ (ಲೂಕ. ೫, ೩.), ಪೇತ್ರನು ಮುಂಜಾನೆ ಮೀನುಗಳನ್ನು ಹಿಡಿಯಲಿಕ್ಕೆ ನಾಡುತ್ತಾನೆ (ಮತ್ಥ. ೪, ೧೮. ಮಾರ್ಕ. ೧, ೧೬.). ಯೇಸು ಗಲಿಲಾಯಸಮುದ್ರದ ತೀರದಲ್ಲಿ ಸಂಚಾರ ಮಾಡಿದಾಗ, ಪೇತ್ರನನ್ನೂ ಅಂದ್ರೆಯನನ್ನೂ ಹ್ಯಾಗೆ ಕಂಡನು.

ಮಧ್ಯಾಹ್ನದಲ್ಲಿ ಯೇಸು ತಿರಿಗಿ ಸಮುದ್ರದ ಬಳಿಯಲ್ಲಿ ನಿಂತಿದ್ದನು. ಪೇತ್ರನೂ ಅಂದ್ರೆಯನೂ ತಮ್ಮ ಬಲೆಗಳನ್ನು ತಾಳಿಯುತ್ತಿದ್ದರು (ಲೂಕ. ೫, ೨.). ಯಾಕಂದರೆ ಬಲೆಗಳನ್ನು ವಾಶಿಗಿಸುವದೂ ಬಲೆಗಳನ್ನು ನೆಟ್ಟಗೆ ಮಾಡುವದೂ (ಮತ್ಥ. ೪, ೨೧. ಮಾರ್ಕ. ೧, ೧೯.) ಮಧ್ಯಾಹ್ನಕ್ಕೆ ತಕ್ಕ ಕೆಲಸವಾಗಿತ್ತು. ಈಗ ದಾಡ್ಡ ಸಮೂಹವು ಯೇಸುವನ್ನು ಕೇಳುವದಕ್ಕೆ ಕೂಡಿ ಬಂದದರಿಂದಲೂ, ಈ ಸಮೂಹವು ಅತನ ಮೇಲೆ ಬೀಳುತ್ತಾ ಇದ್ದದರಿಂದಲೂ ಯೇಸು, ಸೀಮೋನನ ದೋಣಿಯನ್ನು ಯೇರಿ, ಸ್ವಲ್ಪ ದೂರ ಯೆಳೆಯ ಬೇಕೆಂದು ಬೇಡಿ ಕಾಂಡನು. ಇದು ಆದ ಮೇಲೆ ಯೇಸು ಪಾಡಗದಲ್ಲಿ ಕೂತು ಕಾಂಡು ಜನಾಂಗಕ್ಕೆ ಉಪದೇಶ ಕಾಟ್ಟನು (ಲೂಕ. ೫, ೩.). ಉಪದೇಶವನ್ನು ತಿರಿಸಿದ ಮೇಲೆ ಯೇಸು ಸೀಮೋನನಿಗೆ, ದೋಣಿಯನ್ನು ಮುಂದೆ ಯೆಳೆದು, ಬಲೆಗಳನ್ನು ಹಾಕ ಬೇಕೆಂದು ಹೇಳಿದನು. ಸೀಮೋನನು—ತಾವು ರಾತ್ರಿ ಯೆಲ್ಲಾ ಕಷ್ಟ ಮಾಡಿ ಯೇನೂ ಹಿಡಿಯದೆ ಇದ್ದ ಮೇಲೆ ತಮಗೆ ಈಗ ಮಧ್ಯಾಹ್ನದಲ್ಲಿ ಯೇನೂ ಶಿಗಲಿಲ್ಲವೆಂದು ಹೇಳಿ, ಯೇಸುವಿನ ಅಪ್ಪಣೆಯ ಪ್ರಕಾರ ಮಾಡುವದಕ್ಕೆ ಸಿದ್ಧವಾಗಿದ್ದನು. ಆಗ, ಆಗಾ, ಪೇತ್ರನೂ ಅಂದ್ರೆಯನೂ ಅವರ ಸಂಗಡ ಇದ್ದವರೂ ಬಲೆ ಹರಿಯುವಷ್ಟು ಮೀನುಗಳನ್ನು ಹಿಡಿದರು. ಸಹಾಯ ಮಾಡುವದಕ್ಕೆ ಮತ್ತಾಂದು ದೋಣಿಯಲ್ಲಿದ್ದ ಅಂದ್ರೆಯನ ಜನರನ್ನು ಕರೆಯ ಬೇಕಾಯಿತು. ಇವರು ಬಂದ ಮೇಲೆ ಯೆರಡು ಪಾಡಗಗಳನ್ನು, ಅವು ಸ್ವಲ್ಪ ಕಡಿಮೆ ಮುಳುಗುವ ಹಾಗೆ, ತುಂಬಿಸಿದರು. ಪೇತ್ರನು ಇದನ್ನು ನಾಡಿದ ಮೇಲೆ ಕಳವಳಗಾಂಡು, ಯೇಸು ಪರಿಶುದ್ಧನೂ ತಾನು ಪಾಪಿಷ್ಟನೂ ಯೆಂಬುವದನ್ನು ತಿಳಿದು ಕಾಂಡು, ಪರಿಶುದ್ಧನಾದ ಯೇಸು ತನ್ನ ಬಳಿಯಲ್ಲಿ ಇರುವದರಿಂದ ದಾಡ್ಡ ಪಾಪಿಷ್ಟನಾಗಿರುವ ತಾನು ನಾಶನವಾಗುತ್ತೇನೆಂದು ತಿಳಿದು ಕಾಂಡನು. ಪೇತ್ರನು ತನ್ನ ಪಾಪಗಳನ್ನು ನೆನಸಿದ್ದು ಬಹಳ ವಾಳ್ಕೆ ದಾಯಿತು. ಅಂದಿನಿಂದ ಅವನು, ಯೇಸು ಪ್ರಪಂಚದ ಸುಖವನ್ನು ಮಾತ್ರವಲ್ಲ, ಅತ್ಯಕ್ಷಿಣಿಯನ್ನು ಕಾಡುವವನಾಗಿದ್ದಾನೆ ಯೆಂಬುವದನ್ನು ತಿಳಿದು ಕಾಂಡನು (ಮಾರ್ಕ. ೧, ೩೬. ೪೭. ಲೂಕ. ೪, ೪೨.). ಇದೇ ಯೇಸುವಿಗೆ ಬೇಕಾಗಿದ್ದದರಿಂದ ಅತನು ಈ ಅದ್ಭುತವನ್ನು ಮಾಡಿದನೆಂದು ನೆನಸ ಬಹುದು. ಆದರೆ ಯೇಸು "ಚಯ ಪಡ ಬೇಡ" ಯೆಂದು ಹೇಳಿ ಅವನನ್ನು ಶಾಂತ ಪಡಿಸಿದ ಮೇಲೆ, ಇಂದಿನಿಂದ ಮನುಷ್ಯರನ್ನು ಹಿಡಿಯುವ ಕೆಲಸ ನಿನಗಾಗುವದೆಂದು ಅವನಿಗೆ ಹೇಳಿದನು. ಇದಕ್ಕಾಗಿ ಪೇತ್ರನೂ ಅಂದ್ರೆಯನೂ ಯೇಸುವನ್ನು ಹಿಂಬಾಲಿಸ ಬೇಕಾಯಿತು; ಯಾಕಂದರೆ ಈ ಪರ್ಯಂತರ ಅವರು ಶಿಷ್ಯರಾಗಿದ್ದಾಗ್ಯೂ, ತಮ್ಮ ಕೆಲಸಗಳನ್ನು ಇನ್ನೂ ನಡಿಸುತ್ತಿದ್ದರು; ಆದರೆ ಅಂದಿನಿಂದ ಅವರು ಯೇಸುವಿನ ಸಂಗಡ ಇರುವದು ಅಗತ್ಯವಾಯಿತು. ಯೇಸು ತಾನೇ ಅವರನ್ನು ಮನುಷ್ಯರನ್ನು ಹಿಡಿಯುವವರಾಗ ಮಾಡಿ, ಅವರಿಗೆ ಉಪದೇಶ ಕಾಟ್ಟು, ತನ್ನ ಅತ್ಮವನ್ನು ಅವರಿಗೆ ಕಾಡುವದಕ್ಕೆ ನಿಶ್ಚಯಿಸಿದನು (ಮತ್ಥ. ೪, ೧೯. ಮಾರ್ಕ. ೧, ೧೭.). ಈ ಮಾತನ್ನು ಕೇಳಿದ ಕೂಡಲೇ (ಲೂಕ. ೫, ೧೧. ಮತ್ಥ. ೪, ೨೦. ಮಾರ್ಕ. ೧, ೧೮.). ಅವರು ದೋಣಿಗಳನ್ನು ದಡಕ್ಕೆ ಯೆಳೆದು, ಅವುಗಳನ್ನೂ ಬಲೆಗಳನ್ನೂ ಬಿಟ್ಟು, ಯೇಸುವನ್ನು ಹಿಂಬಾಲಿಸಿದರು.

ಯೇಸು ತಾನು ಅಗಲೇ ಕರೆದ ಪೇತ್ರನ ಅಂದ್ರೆಯನ ಸಂಗಡ ಸ್ವಲ್ಪ ಮುಂದೆ ಹೋದಾಗ (ಮತ್ಥ. ೪, ೨೧. ಮಾರ್ಕ. ೧, ೧೯.), ದೋಣಿಯಲ್ಲಿ ತಂದೆಯಾದ ಜೆಬೆದಾಯನ ಸಂಗಡ ಬಲೆಗಳನ್ನು ನೆಟ್ಟಗೆ ಮಾಡುತ್ತಿರುವ ಯಾಕೋಬನನ್ನೂ ಯೋಹಾನನನ್ನೂ ಕಂಡನು. ಇವರು ಪೇತ್ರನಿಗೆ ಅಗಲೇ ಆದದ್ದನ್ನು ನಾಡಿ, ತಾವು ಸಹ ಆಶ್ಚರ್ಯವೂ ಚಯವೂ ಪಟ್ಟರು. ಅವರು ಸಹ ತಮ್ಮ ಪಾಪಗಳ ನಿಮಿತ್ತ ಬಹಳ ದುಃಖ ಪಟ್ಟರೆಂತಾ ಯೆಂದು ಬರೆದಿರುವದಿಲ್ಲ. ಅವರು ಸಹ ಪಾಪಿಷ್ಟರು ಸರಿ; ಆದರೆ ಜೆಬೆದಾಯನ ಮಕ್ಕಳ ಮನಸ್ಸಿಗೂ ಪೇತ್ರನ ಮನಸ್ಸಿಗೂ ಬಹಳ ಹೆಚ್ಚುಕಡಿಮೆ ಇತ್ತು. ಹ್ಯಾಗಾದರೂ, ಯೇಸು ಅವರನ್ನು ಕರೆದಾಗ, ಅವರು ಸಹ ಯೇಸುವನ್ನು ಹಿಂಬಾಲಿಸುವದಕ್ಕೆ ಸಿದ್ಧವಾಗಿದ್ದರು. ಅವರು ತಂದೆಯನ್ನೂ ಅವನ ಸೇವಕರನ್ನೂ ಪಾಡಗದಲ್ಲಿ ಬಿಟ್ಟು ಯೇಸುವನ್ನು ಹಿಂಬಾಲಿಸಿದರು.

ಹೀಗಿರಲಾಗಿ ಈ ನಾಲ್ಕು ಮಂದಿ ಇನ್ನೂ ಮುಂದೆ ಶಿಷ್ಯರಲ್ಲ, ಅಪಾಸ್ತಲರಾಗಿದ್ದರು. ಮಿಕ್ಕಾದ ಯೆಂಟು ಅಪಾಸ್ತಲರನ್ನು ಸಹ ಯೇಸು ಪವಿತ್ರಪ್ರಸಂಗ ಆಗುವದಕ್ಕಿಂತ ಮುಂಚೆ ಕೂಡಿಸಿದನು. ಆದರೆ ಈ ನಾಲ್ಕು ಮಂದಿ ಮೊದಲನೇ ಅಪಾಸ್ತಲರೆಂದು ಅನ್ನಿಸಿ ಕಾಳ್ಳುತ್ತಾ

ಮಾರ್ಕ್. ೨, ೧. ೨. ಲೂಕ. ೫, ೧೭. ೧೮.

೬. ಪೇತ್ರನ, ಅಂದ್ರೇಯನ, ಯಾಕೋಬಾನನ ಸಂಗಡ ಯೇಸು ಫಿಲಿಪ್ಪನನ್ನೂ ನಥಾನಯೇಲನನ್ನೂ ಶಿಷ್ಯರಾಗ ಕರೆದನು (ಯೋಹ. ೧, ೪೩.). ಇವರನ್ನು ಅದೇ ಸಮಯದಲ್ಲಿ ಅಪಾಸ್ತಲರಾಗ ಕರೆಯದ ಕಾರಣಿವೇನೆಂದು, ನಮಗೆ ತಿಳಿಯುವದಿಲ್ಲ.

ಅಪಾಸ್ತಲವುದ್ಯೋಗಕ್ಕಾಗಿ ಪ್ರತ್ಯೇಕವಾದ ಕರೆಯುವಿಕೆ ಬೇಕು. ಆದಾಗ್ಯೂ, ಈ ಮಾತಿನ ಮತ್ತಾಂದು ಅಭಿಪ್ರಾಯವನ್ನು ನೆನಸಿದರೆ, ಯೇಸುವಿನ ಶಿಷ್ಯರೆಲ್ಲರು ಅಗತ್ಯವಾಗಿ ಅಪಾಸ್ತಲರಾಗಿರ ಬೇಕು.

೪. ಯೇಸು ಸೀಮೆಯಲ್ಲಿ ಸಂಚಾರ ಮಾಡಿದ ಮೇಲೆ, ಕಪೆರ್ನೌವೂಮಿಗೆ ತಿರುಗಿ ಕಾಂಡು, ಪಕ್ಷವಾಯುವಿನವನನ್ನು ಸ್ವಸ್ಥ ಮಾಡುತ್ತಾನೆ.

ಮಾರ್ಕ್. ೨, ೧—೧೨. ಲೂಕ. ೫, ೧೭—೨೬. ಮತ್ಥ. ೯, ೧—೮.

ಯೇಸು ಗೆಗೇಸೇನರ ದೇಶಕ್ಕೆ ಪೋಗಿ ಬಂದ ಮೇಲೆ ಮತ್ಥಾಯನು ಈ ಚರಿತ್ರವನ್ನು ಪೇಳುತ್ತಾನೆ. ಆದರೆ ಮತ್ಥಾಯನು ಕಾಲಕ್ರಮವನ್ನು ವಿಶೇಷವಾಗಿ ನೋಡದೆ ಆಯಾ ಚರಿತ್ರಗಳನ್ನು ಗ್ಲಾಪಕವಾದ ಪ್ರಕಾರವೇ ಬರೆಯುತ್ತಾನೆ; ಮಾರ್ಕನೂ ಲೂಕನೂ ಈ ಸಂಗತಿ ಸಂಭವಿಸಿದ ಕಾಲವನ್ನು ಜಾಗ್ರತೆಯಾಗಿ ತೋರಿಸುತ್ತಾರೆ. ಫರಿಸಾಯರೂ ಶಾಸ್ತ್ರಿಗಳೂ ಯೇಸುವಿನ ಮೇಲೆ ಅಷ್ಟು ಪಾಗೆ ಮಾಡದೆ ಇದ್ದದರಿಂದಲೂ, ಯೇಸು ಅವರನ್ನು ಅಷ್ಟು ಕಠಿಣವಾಗಿ ಗದರಿಸದೆ ಇದ್ದದರಿಂದಲೂ, ಈ ಸಂಗತಿ ಮತ್ಥಾಯನು ಪೇಳುವ ಸಮಯಕ್ಕಿಂತ ಸ್ವಲ್ಪ ಮುಂಚೆ ಉಂಟಾಯಿತೆಂದು ಕಾಣಿ ಬರುತ್ತದೆ.

ಮಾರ್ಕ್. ೨, ೧. ೨. ಕೆಲವು ದಿವಸಗಳಾದ ಮೇಲೆ ಯೇಸು ತಿರಿಗಿ ಕಪೆರ್ನೌವೂಮಿನಲ್ಲಿ ಪ್ರವೇಶಿಸಿದನು. ಮತ್ತು, ಆತನು ಮನೆಯಲ್ಲಿ ಇದ್ದಾನೆಂದು ಸುದ್ದಿ ಆದಾಗಲೇ, ೨. ಬಾಗಲಿನ ಸಮೀಪದಲ್ಲಿ ಊದರೂ ಸ್ಥಳ ಸಾಲದ ಪಾಗೆ, ಅನೇಕರು ಕೂಡಿ ಕಾಳ್ಳಲು, ಅವರಿಗೆ ವಾಕ್ಯವನ್ನು ಪೇಳಿದನು ೧). ಲೂಕ. ೫, ೧೭. ಆತನು ಬೋಧಿಸುತ್ತಿರುವಾಗ, ಗಲಿಲಾಯ, ಯೆಹೂದ, ದೇಶಗಳ ಸಕಲ ಗ್ರಾಮಗಳಿಂದಲೂ, ಯೆರೂಸಲೇಮಿನಿಂದಲೂ, ಬಂದ ಫರಿಸಾಯರೂ, ನ್ಯಾಯಶಾಸ್ತ್ರಿಗಳೂ ೨), ಕೂತು ಕಾಂಡಿರಲು, ಕರ್ತನ ಬಲವು ಅವರನ್ನು ವಾಶಿ ಮಾಡುವದಕ್ಕೆ ಇತ್ತು ೩).

೧. ಯೇಸು ಸೀಮೆಯಲ್ಲಿ ಸಂಚಾರ ಮಾಡಿದಾಗ ಆತನನ್ನು ಹಿಂಬಾಲಿಸಿದ ಸಮೂಹಪಾಗಳು (ಲೂಕ. ೫, ೧.) ಆತನನ್ನು ಬಿಟ್ಟು ಪೋಗಿದ್ದವು; ಆದರೆ ಕಪೆರ್ನೌವೂಮಿನವರು ಪೆಚ್ಚಾಗಿ ಯೇಸುವನ್ನು ಕೇಳುವದಕ್ಕೂ, ಆತನು ಮಾಡುವ ಅದ್ಭುತಕ್ರಿಯೆಗಳನ್ನು ನೋಡುವದಕ್ಕೂ ಅಪೇಕ್ಷಿಸಿದರು. ಜನರು ಕೂಡಿ ಬಂದಾಗಲೇ ಯೇಸು ಅವರಿಗೆ ವಾಕ್ಯದ ಪ್ರಸಂಗ ಮಾಡುತ್ತಿದ್ದನು.

೨. ಸಮುದ್ರದ ಬಳಿಯಲ್ಲಿ ಯೇಸುವಿನ ಮಾತುಗಳನ್ನು ಕೇಳಿದ ಸಮೂಹಪಾಗಳು ಮನೆಗೆ ಪೋದಾಗ, ಯೇಸುವಿನ ವಿಷಯವಾದ ಸಮಾಚಾರವು ಯೆಲ್ಲಾ ಕಡೆಯೆಲ್ಲಿಯೂ ವಿಸ್ತಾರವಾಯಿತು. ಫರಿಸಾಯರು ಶಾಸ್ತ್ರಿಗಳೂ ಸಹ ಯೇಸು ಯಾರೆಂದೂ, ಯೇಸು ಮಾಡುತ್ತಾನೆಂದೂ ವಿಚಾರಿಸುವದಕ್ಕೆ ಮನಸ್ಸು ಮಾಡಿದರು. ಅವರಲ್ಲಿ ಕೆಲವರು ದೂರದಿಂದ, ಯೆಹೂದದಿಂದಲೂ, ಯೆರೂಸಲೇಮಿನಿಂದಲೂ, ಬಂದರು.

೩. ಯೇಸುವಿನ ವಾಶಿ ಮಾಡುವ ಬಲಗಳು ವಾಳ್ಳೇ ಮಳೆಗಳ ಪಾಗೆ ಇದ್ದವು. ಮನಸ್ಸು ಬಂದ ಕ್ಷಣಿದಲ್ಲಿ ಸಿದ್ಧವಾಗಿದ್ದಿಲ್ಲ. ಆದರೆ ಈ ಸಾರಿ ಈ ಬಲವು ಸಿದ್ಧವಾಗಿತ್ತು. ಈಗಲೇ ಸಿದ್ಧವಾಗಿದ್ದ ಬಲದಿಂದ ಯೇಸು ಬೇರೆ ರೋಗಿಷ್ಠರನ್ನು ವಾಶಿ ಮಾಡಿದನಾ ಯೇನಾ ಯೆಂದು ನಮಗೆ ತಿಳಿಯುವದಿಲ್ಲ; ಆದರೆ ಪಕ್ಷವಾಯುವಿನವನನ್ನು ಯೇಸುವಿನ ಬಳಿಗೆ ಕರೆಕಾಂಡು ಬಂದಾಗಲೇ, ಈ ವಾಶಿ ಮಾಡುವ ಬಲವು ಯೇಸುವಿನಲ್ಲಿ ಸಿದ್ಧವಾಯಿತೆಂದು, ಈ ಸಂಗತಿಯನ್ನು ನೆಟ್ಟಗೆ ಆಲೋಚಿಸಿದರೆ, ಕಾಣುತ್ತದೆ.

೧೪. ಮತ್ತು ಇಗೋ, ಪಕ್ಷವಾಯುವಿನವನಾದ ೧) ಮಾಬ್ಬ ಮನುಷ್ಯನನ್ನು ಮಂಚದ ಮೇಲೆ ಪೋತ್ತುಕಾಂಡ [ನಾಲ್ಕು ಮಾರ್ಕ್.] ಜನರು ಅವನನ್ನು ಮಾಳಿಗೆ ತಂದು,

ಲೂಕ. ೫, ೧೯—೨೬.

ಈತನ ಮುಂದೆ ಇಡ ಬೇಕೆಂದು, ೧೯. ಅವನನ್ನು ಮಾಳಿಗೆ ತರುವದಕ್ಕೆ ಸಮೂಹದ ನಿಮಿತ್ತ ದಾರಿ ಕಾಣದೆ, ಮನೆಯ ಮೇಲೆ ಯೇರಿ, ಹೆಂಚುಗಳನ್ನು ತೆಗದು, ಅವನನ್ನು ಮಂಚದ ಸಂಗಡ ಮಧ್ಯದಲ್ಲಿ ಯೇಸುವಿನ ಮುಂದಕ್ಕೆ ಇಳಿಸಿದರು.

೧. ಈ ರೋಗ ಯೆಂಥಾದ್ದೆಂದು, ನಮಗೆ ಚನ್ನಾಗಿ ತಿಳಿಯುವದಿಲ್ಲ. ವಾಯುವಿನಿಂದಾಗಲಿ, ಬೇರೆ ರೋಗದಿಂದಾಗಲಿ ಈ ಮನುಷ್ಯನ ಮಾಂದು ಪಾರ್ಶ್ವವು ನಿತ್ರಾಣವಾಗಿ ಪೋಗಿ, ಈ ಕಡೆಯ ಕೈ ಕಾಲು ನಡೆಯದೆ ಇತ್ತೆಂದು ಕಾಣುತ್ತದೆ. ಯಾಕಂದರೆ ಯೇಸು ಅವನನ್ನು ಸ್ವಸ್ಥ ಮಾಡಿದಾಗ, ನಡೆಯುವ ತ್ರಾಣವು ಅವನಿಗೆ ಬಂತು. ಈ ರೋಗವು ಪ್ರತ್ಯೇಕವಾದದ್ದೆಂದೂ, ದಾಡ್ಡದೆಂದೂ, ಮತ್ತ. ೪, ೨೪. ಕಾಣಿ ಬರುತ್ತದೆ; ಈದರೆ ಅದು ಕುಂಟ ರೋಗಕ್ಕೆ ಸಂಬಂಧವಾದದ್ದೆಂದು, ಅಪಾ. ೮, ೭. ನಾಡ ಬಹುದು. ಈ ರೋಗದಲ್ಲಿ ಬಿದ್ದವರಿಗೆ ಬಹಳ ನಾವು ಆಗುತ್ತಿತ್ತೆಂದು ಮತ್ತ. ೮, ೬. ಕಾಣಿ ಬರುತ್ತದೆ. ಪಾಗಾದರೂ ಕೈಕಾಲುಗಳ ನರಗಳು ಪಿಡಿದದರಿಂದ ಬಹಳ ನಾವು ಆಗುತ್ತಿತ್ತೆಂದು ಕಾಣುತ್ತದೆ. ಈ ರೋಗವು ಬಹಳ ಕಠಿಣವಾಗಿದ್ದದರಿಂದ, ಅದನ್ನು ವಾಸಿ ಮಾಡುವದಕ್ಕೆ ಪ್ರತ್ಯೇಕವಾದ ಬಲವು ಬೇಕಾಗಿತ್ತೆಂದೂ ಪೇತ್ರನ ಅತ್ತೆಗಿದ್ದ ಜ್ವರವು ಮೊದಲಾದ ಸಾಧಾರಣ ರೋಗಗಳನ್ನು ವಾಸಿ ಮಾಡುವ ಬಲವು ಅದಕ್ಕಾಗಿ ಸಾಕಾಗಲಿಲ್ಲವೆಂದೂ ನೆನಸಬಹುದು.

೨೦. ಆತನು ಅವರ[೧]) ವಿಶ್ವಾಸವನ್ನು ನೋಡಿ, ಮನುಷ್ಯನೇ [ನನ್ನ ಮಗನೇ[೨]) ಮಾರ್ಕ.] ನಿನ್ನ ಪಾಪಗಳು ಮನ್ನಿಸಲ್ಪಟ್ಟವೆ[೩]), ಯೆಂದು ಅವನಿಗೆ ಪೇಳಿದನು. ೨೧. ಶಾಸ್ತ್ರಿಗಳೂ, ಫರಿಸಾಯರೂ, ದೂಷಣೆ ಪೇಳುವ[೪]) ಇವರಾರು? ದೇವರಾಬ್ಬನೇ ಹೊರತು, ಪಾಪಗಳನ್ನು ಮನ್ನಿಸ ಶಕ್ತನಾರು[೫])? ಯೆಂದು ತಮ್ಮಲ್ಲಿ ಆಲೋಚಿಸಲಾರಂಭಿಸಿದಾಗ, ೨೨. ಯೇಸು ಅವರ ಆಲೋಚನೆಗಳನ್ನು ತಿಳಿದು, ಅವರಿಗೆ ಉತ್ತರ ಕೊಟ್ಟು, ಪೇಳಿದ್ದೇನಂದರೆ—ನೀವು ನಿಮ್ಮ ಹೃದಯಗಳಲ್ಲಿ ಆಲೋಚಿಸಿ ಕೊಳ್ಳುವದೇನು[೬])? ೨೩. ಯಾವದು ಸುಲಭ? ನಿನ್ನ ಪಾಪಗಳು ನಿನಗೆ ಮನ್ನಿಸಲ್ಪಟ್ಟವೆ ಯೆಂದು ಪೇಳುವದಾ? ಇಲ್ಲವೆ ಯೆದ್ದು ತಿರುಗಾಡು ಯೆಂದು ಪೇಳುವದಾ? ೨೪. ಈದರೆ ಭೂಮಿಯ ಮೇಲೆ ಪಾಪಗಳನ್ನು ಮನ್ನಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾರ ಉಂಟೆಂದು ನೀವು ತಿಳಿಯುವ ಪಾಗೆ, ಆತನು ಪಕ್ಷವಾಯುವಿನವನಿಗೆ—ಯೆದ್ದು, ನಿನ್ನ ಮಂಚ ಯೆತ್ತಿ, ನಿನ್ನ ಮನೆಗೆ ಹೋಗೆಂದು[೭]) ನಿನಗೆ ಪೇಳುತ್ತೇನೆ, ಅಂದನು. ೨೫. ಸಂಗಡಲೇ ಅವನು ಅವರ ಮುಂದೆ ಯೆದ್ದು, ತಾನು ಮಲಗಿದ್ದ ಮಂಚವನ್ನು ಯೆತ್ತಿ, ದೇವರನ್ನು ಮಹಿಮೆ ಪಡಿಸುತ್ತ[೮]), ತನ್ನ ಮನೆಗೆ ಹೋದನು. ೨೬. ಆಗ ವಿಸ್ಮಯವು ಯೆಲ್ಲರನ್ನು ಹಿಡಿಯಿತು; ಅವರು ದೇವರನ್ನು ಮಹಿಮೆ ಪಡಿಸಿ, ಇಂದು ಅಪರೂಪವಾದವುಗಳನ್ನು ನೋಡಿದ್ದೇವೆಂದು[೯]) ಪೇಳಿ, ಭಯ ತುಂಬಿದವರಾದರು.

೧. ಈ ಪಕ್ಷವಾಯುವಿನವನಲ್ಲಿ ವಿಶ್ವಾಸವಿತ್ತಾ, ಯೇನಾ, ಪೇಳಿ ಇರುವದಿಲ್ಲ; ಅವನಲ್ಲಿ ಇದ್ದರೂ, ಇಲ್ಲದಿದ್ದರೂ, ಈ ಮತ್ತಾಬ್ಬರಲ್ಲಿ ಇದ್ದ ವಿಶ್ವಾಸದಿಂದ ಅವನಿಗೆ ಸಹಾಯವಾಯಿತು. ಯೇಸು ಅವರಿಬ್ಬರಲ್ಲಿ ಕೂಡಿ ಇದ್ದ ವಿಶ್ವಾಸವನ್ನು ನೋಡಿ, ಅವರ ಬಿನ್ನಪಗಳನ್ನು ಕೇಳಿ, ಈ ರೋಗಿಷ್ಟನನ್ನು ಸ್ವಸ್ಥ ಮಾಡಿದನು.

೨. ಮಗನೆಂಬ ಮಾಂದೇ ಮಾತಿನಿಂದ ಯೇಸು ಈ ರೋಗಿಷ್ಟನಿಗೆ ಅಚಯ ತಾಡುತ್ತಾನೆ. ನಾವು ದೇವರ ಮಕ್ಕಳಾಗಿದ್ದೇವೆಂದು ದೇವರ ಆತ್ಮವು ನಮಗೆ ಸಾಕ್ಷಿ ತಾಟ್ಟರೆ, ಯೆಷ್ಟಾ ಸುಖವೂ ಸಮಾಧಾನವೂ ನಮಗಿರ ಬಹುದು!

೩. ರೋಗಿಷ್ಟನೂ ಅವನನ್ನು ಪೋತ್ತು ತಾಂಡು ಬಂದವರೂ ವಿ

ಲೂಕ. ೫, ೨೦—೨೬.

ಶ್ವಾಸಿಸಿದದರಿಂದ ಪಾಪಗಳು ಅವನಿಗೆ ಮನ್ನಿಸಲ್ಪಟ್ಟವು. ಅವರ ವಿಶ್ವಾಸದಲ್ಲಿ ಪಾಪದ ವಿಷಯವಾದ ದುಃಖವೂ ಮಾನಸಾಂತರವೂ ಕೂಡಿ ಇತ್ತೆಂದು ನಂಬ ಬಹುದು. ರಕ್ಷಣ್ಯವ ಕಾರ್ಯವು ಅವರಿಗೆ ತಿಳಿಯಲಿಲ್ಲ; ಆದದರಿಂದ ಅವರು ಯೇಸು ಕ್ರಿಸ್ತನ ಶ್ರಮೆ ಮರಣಗಳಿಂದ ಉಂಟಾದ ಪುಣ್ಯವನ್ನೂ ನೀತಿಯನ್ನೂ ಪಿಡಿಯ ಕೂಡದೆ ಇದ್ದರು; ಆದರೆ ವಿಶ್ವಾಸದಲ್ಲಿ ತಿಳಿಯುವಿಕೆ ಅಲ್ಲ, ಯೇಸುವಿನ ಮೇಲೆ ಇಡುವ ನಂಬಿಕೆಯೇ ವಿಶೇಷವಾದದ್ದು. ಆದದರಿಂದ ಪಾಳೇ ವಾದಂ ಬಡಿಕೆಯಲ್ಲಿಯೂ, ಯೇಸು ಬರುವದಕ್ಕಿಂತ ಮುಂಚೆಯೂ, ವಿಶ್ವಾಸಿಸಿದ ಪಿತೃಗಳಿಗೆ ಅವರ ವಿಶ್ವಾಸದ ಮೂಲವಾಗಿ ನೀತಿ ಉಂಟಾಯಿತು. ಆದರೆ ಈಗಿನ ಕಾಲದಲ್ಲಿ ನಮಗೆ ದೇವರ ವಾಕ್ಯದಲ್ಲಿ ದೇವರ ಮುಗಃವೂ ಚಿತ್ತವೂ ಸಂಪೂರ್ಣವಾಗಿ ತಿಳಿಸಿ ಇರುವದರಿಂದ, ನಾವು ಯೇಸು ತಿಳುಕಾಳ್ಳದೆ ದೇವರ ಮಗನಲ್ಲಿ ವಿಶ್ವಾಸ ಇಟ್ಟರೆ ಸಾಲದು; ಅತನು ನಮ್ಮ ಪಾಪಗಳಿಗಾಗಿಕ್ಕರ ಸತ್ತನೆಂದೂ ನಮ್ಮ ನೀತಿಗಾಗಿಕ್ಕರ ಸತ್ತವರಾಳಗಿಂದ ಯೆದ್ದನೆಂದೂ ತಿಳಿದು ಕಾಂಡು, ಅತನಲ್ಲಿ ಪೂರ್ಣಮನಸ್ಸಿನಿಂದ ವಿಶ್ವಾಸಿಸ ಬೇಕು. ಪಾಪಗಳು ಪರಿಹಾರವಾದರೆ ಕ್ರಿಸ್ತನ ಪುಣ್ಯದಿಂದ ಪರಿಹಾರವಾಗುತ್ತವೆ, ಅಷ್ಟೆ; (ರೋ. ೩, ೨೫. ೨೬.) ಕ್ರಿಸ್ತನ ಮರಣದಿಂದ ಉಂಟಾದ ಉಚಿತವಾದವು ವಿಶ್ವಾಸದ ಮೂಲವಾಗಿಯೇ ನಮಗೆ ಉಂಟಾಗುತ್ತದೆ. ಈ ರೋಗಿಷ್ಠನ ಪಾಪಗಳು ಅವನ ರೋಗಕ್ಕೆ ಕಾರಣವಾಗಿದ್ದವೆಂದು ತಿಳಿದು, ಯೇಸು ಅವನಿಗೆ ಮೊದಲು ಪಾಪಪರಿಹಾರವನ್ನೂ, ಆ ಮೇಲೆ ಶರೀರಸ್ವಸ್ಥವನ್ನೂ ಕಾಟ್ಟನೆಂದು ಕಾಣುತ್ತದೆ; ಆದರೆ ಅವನು ತಾನು ಮುಂಚೆ ಮಾಡಿದ ಪಾಪಗಳ ನಿಮಿತ್ತ ಮಾನಸಾಂತರ ಪಟ್ಟನೆಂದು ನೆನಸ ಬಹುದು, ಯಾಕಂದರೆ ಯೇಸು ಪಾಪಪರಿಹಾರದ ಮಾತನ್ನು ಪೇಳಿದೆ ಅನೇಕರನ್ನು ಸ್ವಸ್ಥ ಮಾಡಿದನು. ಆದರೆ ಶರೀರ, ಪ್ರಾಣ, ಆತ್ಮಗಳಿಗೆ ಸತ್ಯ ರಕ್ಷಣ್ಯವಾಗ ಬೇಕಾದರೆ, ಮೊದಲು ಪಾಪಪರಿಹಾರವಾಗ ಬೇಕು.

೪. ಯೇಸು ಪಾತುಃ ಮತ್ಸ್ಯವಾದರೂ ಅಂಥಾ ಮಾತನ್ನು ಪೇಳುತ್ತಿದ್ದರೆ, ಅದು ದೂಷಣೆಯ ಮಾತು ಆಗುತ್ತಿತ್ತು.

೫. ಯೇಸು ಈ ರೋಗಿಷ್ಠನನ್ನು ಸ್ವಸ್ಥ ಮಾಡಿ, ಪಾಪವನ್ನು ಪರಿಹರಿಸುವದಕ್ಕೆ ತನಗೆ ಶಕ್ತಿ ಉಂಟೆಂದು ತೋರಿಸಿದನು. ಜನರು ಇದನ್ನು ನೋಡಿ, ಯೇಸೂ, ದೇವರೂ, ಯೇಕವಾಗಿದ್ದಾರೆಂದು ತಿಳುಕಾಳ್ಳ ಬೇಕಾಯಿತು.

೬. ಅವರು ಯೇನು ಆಲೋಚಿಸಿ ಕಾಳ್ಳುತ್ತಿದ್ದರೆಂದು, ಯೇಸುವಿಗೆ ತಿಳಿಯಿತು; ಆದರೆ, ಯಾಕೆ ಅವರು ಅಂಥಾ ಆಲೋಚನೆ ಮಾಡಿದರೆಂದು, ಕೇಳಿದನು. ಈ ಪರ್ಯಂತರ ಅವರು ನೋಡಿ ಕೇಳಿದ್ದನ್ನು ನೆಟ್ಟಗೆ ಆಲೋಚಿಸಿದ್ದರೆ, ಯೇಸು ದಿವ್ಯ ಸ್ವಭಾವವುಳ್ಳವನೆಂದೂ, ಈತನು ಪಾಪಗಳನ್ನು ಪರಿಹರಿಸುವದಕ್ಕೆ ಶಕ್ತನಾಗಿದ್ದಾನೆಂದೂ ಅವರಿಗೆ ತಿಳಿಯ ಬಹುದಿತ್ತು. ಆದರೆ ಅಲ್ಪವಿಶ್ವಾಸಿಗಳಿಗೆ ಪೆಚ್ಚು ಪೆಚ್ಚು ದೃಷ್ಟಾಂತ ಬೇಕು. ಅವರು ವಿಶ್ವಾಸಿಸುವದಕ್ಕೆ ಸಾಕಷ್ಟು ಕಾರಣವಿದ್ದಾಗ್ಯೂ, ಅವರು ಮುಂದೆ ಮುಂದೆ ತಡ ಮಾಡುತ್ತಾರೆ.

೭. ಪಾಪಪರಿಹಾರವನ್ನು ಕಾಡುವದಕ್ಕೂ, ರೋಗಗಳನ್ನು ಆಶ್ಚರ್ಯವಾಗಿ ಸ್ವಸ್ಥ ಮಾಡುವದಕ್ಕೂ, ಅದೇ ದಿವ್ಯ ತ್ರಾಣ ಬೇಕು. ಆದರೆ "ನಿನ್ನ ಪಾಪಗಳು ಪರಿಹಾರವಾಗಿವೆ" ಯೆಂದೂ, "ಯೆದ್ದು ನಡೆ" ಯೆಂದೂ ಪೇಳುವದರಲ್ಲಿ ಪೆಚ್ಚುಕಡಿಮೆ ಉಂಟು. "ಪಾಪಗಳು ಪರಿಹಾರವಾಗಿವೆ" ಯೆಂದು ಪೇಳುವದು ಮನುಷ್ಯರ ಮುಂದೆ ಸುಲಭವೆಂದು ಕಾಣುತ್ತದೆ. ಯಾಕಂದರೆ "ಯೆದ್ದು ನಡೆ" ಯೆಂದು ಪೇಳಿದ ಮೇಲೆ, ಅಂಥಾ ಮಾತಿಗೆ ಬಲವೂ ಸಾಫಕವೂ ಉಂಟಾಗಿ ಯೆಂದು ಕ್ಷಣಮಾತ್ರದಲ್ಲಿ ಕಾಣಿಬರ ಬೇಕು; ಪಾಪಪರಿಹಾರವು ಆಯಿತಾಗಿ ಇಲ್ಲವಾಗಿ ಯೆಂದು ಮನುಷ್ಯರ ಕಣ್ಣುಗಳಿಗೆ ಕಾಣಿ ಬರುವದಿಲ್ಲ. ಪೂರ್ವಿರುವದರಿಂದ ಯೇಸು, ಮನುಷ್ಯರ ದೃಷ್ಟಿಗೆ ಕಠಿಣವೆಂದು ಕಾಣುವಂಥಾದ್ದನ್ನು ಮಾಡಿ, ಸುಲಭವಾದದ್ದನ್ನು ಸಫಲ ಮಾಡುವದಕ್ಕೆ ತನ್ನಲ್ಲಿ ಶಕ್ತಿ ಉಂಟೆಂದೂ, ತಾನು ಮನುಷ್ಯನ ಮಗನಾಗಿದ್ದಾಗ್ಯೂ, ದೇವರ ಸಂಗಡ ಯೇಕವಾಗಿದ್ದೇನೆಂದೂ, ವಿಹಿತವಾಗಿ ತೋರಿಸಿದನು. ಭೂಮಿಯ ಮೇಲೆ ಅತನಿಗೆ ಅಂಥಾ ಅಧಿಕಾರವುಂಟೆಂದು, ಪೇಳಿರುವ ಕಾರಣವೇನಂದರೆ—ಪಾಪಗಳನ್ನು ಪರಿಹರಿಸುವದಕ್ಕೆ ಶಕ್ತನಾದ ವಾಬ್ದನು ಭೂಮಿಯ ಮೇಲೆ ಸಂಚಾರ ಮಾಡುತ್ತಾನೆಂಬ ಮಾತು ದಾಡ್ಡದು; ಯೇಸು ಕ್ರಿಸ್ತನು ತನ್ನ ಶ್ರಮೆ ಮರಣಗಳಿಂದ ಪ್ರಾಯಶ್ಚಿತ್ತವನ್ನುಂಟು ಮಾಡುವದಕ್ಕಿಂತ ಮುಂಚೆಯೂ, ಪರಲೋಕದಲ್ಲಿ ಪ್ರಧಾನಯಾಜಕತ್ವವನ್ನು ಆರಂಭಿಸುವದಕ್ಕಿಂತ ಮುಂಚೆಯೂ; ತನ್ನಿಂದ ಇನ್ನೂ ಮುಂದೆ ಆಗ ಬೇಕಾದ ಕ್ರಿಯೆಯನ್ನು ನೋಡಿ ಪಾಪಗಳನ್ನು ಪರಿಹರಿಸುವದಕ್ಕೆ ಶಕ್ತನಾಗಿದ್ದನೆಂಬ ಮಾತು ದಾಡ್ಡದು. ಸಾಧಾರಣವಾಗಿ ಪಾಪಗಳ ಪರಿಹಾರವನ್ನು ಸಿದ್ಧ ಮಾಡಿದವನು, ಅದು ಉಂಟಾಗುವ ಪುಣ್ಯಗೆ ತನ್ನನ್ನು ತಾನೇ ಅರ್ಪಿಸಿದವನು, ಯೇಸು ಕ್ರಿಸ್ತನು; ಆದರೆ ಪಾಪಗಳನ್ನು ಪರಿಹರಿಸುವವನು, ಮನುಷ್ಯರನ್ನು ತನ್ನ ಅವ್ಯಾನ್ಯದಲ್ಲಿ ಶೇರಿಸುವವನು, ತಂದೆಯಾದ ದೇವರು; ಆದರೆ ಈ ಸಾರಿ ತಂದೆಯಾದ ದೇವರ ಐಕ್ಯದಲ್ಲಿರುವ ಕ್ರಿಸ್ತನು ತಾನೇ ಪಾಪಗಳು ಪರಿಹರಿಸಲ್ಪಟ್ಟವೆ ಯೆಂಬ ಮಾತನ್ನು ಉಚ್ಚರಿಸಿದನು. ಈಗಿನ ಕಾಲದಲ್ಲಿ ಯೇಸು ತಾನೇ ಪಾಪಪರಿಹಾರದ ಮಾತನ್ನು ನಮಗೆ ಪೇಳುವದಿಲ್ಲ. ಆದಾಗ್ಯೂ ನಾವು ಮಾನಸಾಂತರ ಪಟ್ಟರೆ, ನಮಗೆ ಸಂದೇಹವಿಲ್ಲದೆ ಪಾಪಪರಿಹಾರವು ಸಿಕ್ಕುವದು; ಭೂಮಿಯಲ್ಲಿ ಈಗಲೂ ಸಂಚಾರ ಮಾಡುವ ಮನುಷ್ಯರಲ್ಲಿ ಯಾರೂ ಅದನ್ನು ನಮಗೆ ಕಾಡ ಕೂಡದು; ಆದರೆ ದೇವರ ವಾಕ್ಯವೂ ಪರಿಶುದ್ಧಾತ್ಮವೂ, ಸಭೆಯಲ್ಲಿ ಆಗುವ ಪರಿಶುದ್ಧ ಆಚಾರಗಳೂ ಪಾಪಪರಿಹಾರಕ್ಕೆ ದೃಷ್ಟಾಂತವಾಗಿವೆ.

೮. ನಮಗೆ ಈದ ದಯವನ್ನು ಬಿಡದೆ ನೆನಸ ಬೇಕು. ಕೃತಘ್ನರು ಸತ್ಯ ಚರ್ಚರಲ್ಲ.

೯. ವಿಸ್ಮಯವೂ ಸ್ತೋತ್ರವೂ ಭಯವೂ ಇವುಗಳಿಂದ ಅವರ ಮನಸ್ಸಿನಲ್ಲಿ ಆಶ್ಚರ್ಯವಾದ ಗಲಿಬಿಲಿ ಉಂಟಾಯಿತು. ಈ ಸಂಗತಿಯನ್ನು ಚನ್ನಾಗಿ ಮನಸ್ಸಿನಲ್ಲಿ ಆಲೋಚಿಸಿದವರು—ಯೇಸು ಉಪದೇಶ ಮಾಡಿ, ಆಶ್ಚರ್ಯಕ್ರಿಯೆಗಳನ್ನು ನಡಿಸುವ ಪ್ರವಾದಿ ಮಾತ್ರವಲ್ಲ, ಪಾಪಕ್ಕೂ ಮರಣಕ್ಕೂ ತಪ್ಪಿಸುವ ರಕ್ಷಕನಾಗಿದ್ದಾನೆಂಬ ಮಾತನ್ನು ತಿಳುಕಾಳ್ಳ ಬೇಕಾಯಿತು. ಆದರೆ ಈ ಪರಿಸಾಯರೂ ಶಾಸ್ತ್ರಿಗಳೂ ಸಫಲ ಈ ವಿಶ್ವಾಸಿತವಾದ ಚಯವನ್ನೂ, ಆಶ್ಚರ್ಯವನ್ನೂ ಅನುಚವಿಸಿದರೆಂದು ಕಾಣುತ್ತದೆ.

ಮತ್ಥ. ೯, ೯. ೧೦. ಲೂಕ. ೫, ೨೯.

೯. ಯೇಸು ಲೇವಿ ಯೆಂಬ ಮತ್ಥಾಯನನ್ನು ಶಿಷ್ಯನಾಗ ಕರೆದು, ಅಪಾಸ್ತಲರ ಲೆಕ್ಕದಲ್ಲಿ ಶೇರಿಸುತ್ತಾನೆ.

ಮತ್ಥ. ೯, ೯—೧೭. ಮಾರ್ಕ. ೨, ೧೩—೨೨. ಲೂಕ. ೫, ೨೭—೩೯.

ಮತ್ಥ. ೯, ೯. ಮತ್ತು ಯೇಸು ಅಲ್ಲಿಂದ ಪೋದು ಹಾಗುವಾಗ೧), ಸುಂಕಕ್ಕೆ ಕೂತು ಕಾಂಡಿದ್ದ೨) ಮತ್ಥಾಯನೆಂಬ೩) ಮನುಷ್ಯನನ್ನು ನೋಡಿ, ಅವನಿಗೆ, ನನ್ನನ್ನು ಹಿಂಬಾಲಿಸು೪), ಅಂದನು. ಅವನು ಯೆದ್ದು, ಆತನನ್ನು ಹಿಂಬಾಲಿಸಿದನು೫).

೧. ಯೇಸು ಕಪೆನಃವೂಮನ್ನು ಬಿಟ್ಟು, ಸಮುದ್ರತೀರಕ್ಕೆ ಪೋಗಿ, ಬೋಧಿಸಿದಾಗ, ತಿರಿಗಿ ಬಪಳ ಜನರು ಕೂಡಿದರೆಂದು ಮಾರ್ಕ. ೨, ೧೩. ಪೋಳಿ ಅದೆ. ಅಲ್ಲಿಂದ ಆತನು ಮುಂದೆ ಪೋದಾಗ, ಲೇವಿಯು ಆತನಿಗೆ ಸಿಕ್ಕಿದನು. ಈ ವೃತ್ತಾಂತ ಮತ್ಥಾಯನ ಪುಸ್ತಕದಲ್ಲಿ ಸಂಕ್ಷೇಪವಾಗಿ ಪೋಳಿ ಅದೆ.

೨. ರೋಮಾಯರ ಸರಕಾರದವರು ಮಾಡಿಸುವ ಸುಂಕದ ಕೆಲಸದಲ್ಲಿ ಬಪಳ ಮಂದಿ ಗಲಿಲಾಯರು ಚಾಕ್ರಿ ಮಾಡುತ್ತಿದ್ದರೆಂದು ಕಾಣುತ್ತದೆ.

೩. ಅಪಾಸ್ತಲನಾದ ಮೇಲೆ ಅವನಿಗೆ ಬೇರೆ ಪೆಸರಾಯಿತು. ಪೋಗೆ ನಥಾನಯೇಲನಿಗೆ ಬತಾಃಲೊಮಾಯನೆಂದೂ, ಸೀಮೋನನಿಗೆ ಪೇತ್ರನೆಂದೂ ಪೆಸರಾಯಿತು. ಚಿಕ್ಕ ಯಾಕೋಬನು ಸಪಾ ಅಲ್ಪಾಯನ ಮಗನಾಗಿದ್ದನು. ಆದರೆ ಮತ್ಥಾಯನ ತಂದೆಯಾಗಿದ್ದ ಅಲ್ಪಾಯನು ಅವನಲ್ಲ. ಯಾಕಂದರೆ ಯಾಕೋಬನೂ ಮತ್ಥಾಯನೂ ಸಪೋದರರಾಗಿದ್ದರೆ, ಸುವಾರ್ತೇಗಳಲ್ಲಿ ಅದು ಪೋಳಿ ಇರುತ್ತಿತ್ತು. ಅಪಾಸ್ತಲರ ಪೆಸರುಗಳು ಯೇಸಿನ ಇರುವಲ್ಲಿ ಮತ್ಥಾಯನೂ ಫಿಲಿಪ್ಪನೂ ಬತಾಃಲೊಮಾಯನೂ ಥೋಮನೂ ಕೂಡಾ ಇರುತ್ತಾರೆ. ಮತ್ಥ. ೧೦. ಮಾರ್ಕ. ೩. ಲೂಕ. ೬. ಆದರೆ ಈ ನಾಲ್ಕು ಪೆಸರುಗಳ ಕಡೆಯಲ್ಲಿ ಮತ್ಥಾಯನು ತನ್ನದನ್ನು ಬರೆಯುತ್ತಾನೆ. ಮಾರ್ಕನೂ ಲೂಕನೂ ಅವನ ಪೆಸರನ್ನು ಮೂರನೇದಾಗಿಯೂ, ಥೋಮನದನ್ನು ಕಡೇದಾಗಿಯೂ ಬರೆಯುತ್ತಾರೆ.

೪. ಈ ಮಾತನ್ನು ಪೋಳಿ ಯೇಸು ಅವನನ್ನು ತನ್ನ ಬಳಿಯಲ್ಲಿ ಯಾವಾಗಲೂ ಇರುವ ಶಿಷ್ಯರ ಲೆಕ್ಕದಲ್ಲಿ ಶೇರಿಸಿದನು.

೫. ಅವನು ಚಾಕ್ರಿಯನ್ನೂ ತನ್ನದೆಲ್ಲವನ್ನೂ ಬಿಟ್ಟು ಕ್ಷಣದಲ್ಲಿ ಯೇಸುವನ್ನು ಹಿಂಬಾಲಿಸಿದನು. ಅವನಿಗೆ ಅಸ್ತಿ ಇತ್ತೆಂದು ಕಾಣುತ್ತದೆ. ಲೂಕ. ೫, ೨೯. ಅವನು ಹಿಂಬಾಲಿಸಿದನೆಂಬ ಮಾತು ಉಚ್ಚಾರಕ್ಕೆ ಸಕ್ಕದು. ಆದರೆ ಈ ಕಾರ್ಯವು ಬಪಳ ದಾಡ್ಡದು. ಪೋಗೆ ಕ್ಷಣಮಾತ್ರದಲ್ಲಿ ಹಿಂಬಾಲಿಸಿದವನ ಮನಸ್ಸಿನಲ್ಲಿ ವಾಳ್ಕೆ ಗ್ಲಾನವೂ, ಪರಲೋಕದಲ್ಲಿರುವ ತಂದೆಯು ಕರೆದಾಗಲೆ ಬರುವದಕ್ಕೆ ಸಿದ್ಧವಾದ ಮನಸ್ಸೂ ಇತ್ತೆಂದು ಕಾಣುತ್ತದೆ. ಅವನು ಆ ಕ್ಷಣದಲ್ಲಿ ಹಿಂಬಾಲಿಸಿದನು. ಪೋಗೆಯೆ ಮಾಡ ಬೇಕು.

ಲೂಕ. ೫, ೨೯. ಆ ಮೇಲೆ ಲೇವಿಯು ತನ್ನ ಮನೆಯಲ್ಲಿ ಆತನಿಗೆ ದಾಡ್ಡ ಔತಣವನ್ನು ಮಾಡಿಸಿದನು೧). ಮತ್ಥ. ೯, ೧೦. ಮತ್ತು ಆದದ್ದೇನಂದರೆ—ಆತನು ಮನೆಯಲ್ಲಿ ಊಟಕ್ಕೆ ಕೂತಿರುವಾಗ, ಇಗೋ, ಬಪಳುಮಂದಿ೨) ಸುಂಕದವರೂ ಪಾಪಿಗಳೂ೩) ಬಂದು, ಯೇಸುವಿನ ಮತ್ತು ಆತನ ಶಿಷ್ಯರ ಸಂಗಡ ಕೂತು ಕಾಂಡರು.

೧. ಯೇಸುವನ್ನು ಹಿಂಬಾಲಿಸುತ್ತೇನೆಂದು ಪೋಳಿದವನಾಬ್ಬನು, ತನ್ನ ಸ್ನೇಹಿತರಿಗೂ ನೆಂಟರಿಗೂ ಔತಣವನ್ನು ಮಾಡಿಸಿ, ಸಲಾಮು ಪೋಳಿ, ಬರ ಮನಸ್ಸಾಗಿದ್ದನು. ಆದರೆ ಈ ಮನಸ್ಸಿನಿಂದ ಮತ್ಥಾಯನು ತನ್ನ ಔತಣವನ್ನು ಮಾಡಿಸಲಿಲ್ಲ; ತನ್ನನ್ನು ಕರೆದ ಯೇಸುವಿಗಾಸ್ಕರ ಯೆಲ್ಲವನ್ನು ಬಿಡ ಮನಸ್ಸಾಗಿ, ಆತನ ಮಾನಕ್ಕಾಗಿಯೆ ಅದನ್ನು ಮಾಡಿಸಿದನು. ನೀನು ಯೇಸುವಿನ ಶಿಷ್ಯನಾಗಿ ಪ್ರಪಂಚವನ್ನು ಬಿಡ ಬೇಕಾದರೆ, ನಿನ್ನ ಮನಸ್ಸಿಗೆ ಸುಖ ಉಂಟಾಗಿ, ದುಃಖ ಆಗುತ್ತದೆಯೆಂಗಾ?

೨. ಸುಂಕದವರು ಯೇಸುವನ್ನು ಹಿಂಬಾಲಿಸಿ, ಲೇವಿಯ ಮನೆಗೆ ಬಂದರೆಂದು ಮಾರ್ಕ. ೨, ೧೫. ಪೋಳಿ ಅದೆ. ಆತನು ಸುಂಕದವನಾದ ಲೇವಿಯನ್ನು ಅಂಗೀಕಾರ ಮಾಡಿ, ಇವನು ಮಾಡಿಸಿದ ಔತನಕ್ಕೆ ಬಂದದರಿಂದ ಅವರಿಗೆ ಧೈಯಃ ಬಂತು. ಸುಂಕದವರೂ ಪಾಪಿಷ್ಟರೂ ಯೆಂಬ ಯೆರಡು ಮಾತುಗಳಿಂದ ಯೆರಡು ತರದ ಮನುಷ್ಯರು ವರ್ಣಿಸಿ ಇದ್ದಾರೆ. a.) ಅನ್ಯಾಯವಾದ ಸಂಪತ್ತನ್ನು ಕೂಡಿಸುವವರು. ಇದಕ್ಕೆ ಸುಂಕದ ಕೆಲಸದಲ್ಲಿ ಬಪಳ ಅಸ್ಪದವಿತ್ತು. b.) ಬೇರೆ ಪ್ರಕಾರದ ಪಾಪಮಾರ್ಗಗಳಲ್ಲಿ ನಡೆಯುವವರು.

೩. ಮತ್ಥಾಯನು ಕರೆದಷ್ಟು ಮಂದಿ ಔತನಕ್ಕೆ ಕೂತು ಕಾಂಡರು; ಮನಸ್ಸಿದ್ದವರೆಲ್ಲರೂ ನಾಡಲಿಕ್ಕೂ ಕೇಳಲಿಕ್ಕೂ ಮನೆಗೆ ಬಂದರು. ಯೇಸು ಬೇಡವನ್ನಲಿಲ್ಲ; ಯಾಕಂದರೆ ಅವರು ಅನೀತಿವಂತರೂ ಪಾ

ಮಾರ್ಕ್. ೨, ೧೬. ಮತ್ಥ. ೯, ೧೨. ಮತ್ಥ. ೯, ೧೨. ೧೩.

ಪಿಷ್ಟರು ಆಗಿದ್ದದರಿಂದ ತಮಗೆ ರಕ್ಷಕನು ಬೇಕು ಯೆಂಬ ಮಾತನ್ನು ಚಂನ್ನಾಗಿ ತಿಳುಕಾಂಡರು. ಮತ್ಥ. ೯, ೧೨. ಈ ಪ್ರಕಾರದ ಮನುಸ್ಸಳ ಮನುಷ್ಯರು ಕತೃನ ಸುವಾರ್ತೆಯನ್ನು ಅಂಗೀಕಾರ ಮಾಡುವದಕ್ಕೆ ಸಿದ್ಧವಾಗಿದ್ದರು.

ಮಾರ್ಕ್. ೨, ೧೬. ಆಗ ಶಾಸ್ತ್ರಿಗಳು ಫರಿಸಾಯರೂ ೧), ಆತನು ಸುಂಕದವರ ಮತ್ತು ಪಾಪಿಷ್ಟರ ಸಂಗಡ ಉಣ್ಣುವದನ್ನು ನೋಡಿ, ಆತನ ಶಿಷ್ಯರಿಗೆ—ಆತನು ಸುಂಕದವರ ಪಾಪಿಷ್ಟರ ಸಂಗಡ ಉಂಡು ಕುಡಿಯುವದೇನು? ಅಂದರು. ಮತ್ಥ. ೯, ೧೨. ಯೇಸು ಕೇಳಿ, ಅವರಿಗೆ ಹೇಳಿದ್ದೇನಂದರೆ—ಆರೋಗ್ಯವಾಗಿರುವವರಿಗಲ್ಲ, ಕ್ಷೇಮವಿಲ್ಲದವರಿಗೆ ೨) ವೈದ್ಯನು ಬೇಕು. ೧೩. ಆದರೆ ಹೀಗೆ ೩), ಬಲಿಯಂನಲ್ಲ ೪), ಕರುಣೆಯನ್ನು ೫) ಇಚ್ಛೆಯಿಸುತ್ತೇನೆಂಬುವದು ೬) ಯೇನೆಂದು ಕಲಿತು ಕೊಳ್ಳಿರಿ ೭); ಯಾಕಂದರೆ ನೀತಿವಂತರಂನಲ್ಲ, ಪಾಪಿಗಳನ್ನು ಮಾನಸಾಂತರಕ್ಕೆ ಕರೆಯ ಬಂದೆನು ೮).

೧ ಪಕ್ಷವಾಯುವಿನವನ ಸಂಗತಿಯನ್ನು ಹೇಳಿದ ಫರಿಸಾಯರು ಶಾಸ್ತ್ರಿಗಳು ಇಲ್ಲಿಯೂ ಇದ್ದರೆಂದು ಕಾಣುತ್ತದೆ. ಪಕ್ಷವಾಯುವಿನವನಲ್ಲಿ ಆದ ಅದ್ಭುತದಿಂದ ಅವರ ಮನಸ್ಸಿನಲ್ಲಿ ಸ್ವಲ್ಪ ಕಳವಳವಾಯಿತು; ಆದರೆ ಅವರ ಹೃದಯವು ಬೇರೆಯಾಗದ ಕಾರಣ ಕತೃನಿಗೆ ಯೆದುರಾಡುವ ಮನಸ್ಸು ಇನ್ನೂ ಅವರಲ್ಲಿ ಇತ್ತು. ಆದದರಿಂದ ಯೇಸುವಿನ ವಿಷಯವಾಗಿ ಪೂರ್ವ ಸಂಶಯಗಳು ಅವರ ಮನಸ್ಸಿನಲ್ಲಿ ಪುಟ್ಟಿದವು. ಅಂಥಾ ಕೆಟ್ಟ ಜನರ ಸಂಗಡ ಯೇಸುವಿಗೆ ಗಾಡಿವೆ ಇದ್ದರೆ, ಪಾಳ್ಳೇದಲ್ಲವೆಂದು ನೆನಸಿದರು.

೨. ಸುಂಕದವರೂ ಪಾಪಿಷ್ಟರೂ ಪೂರ್ಣಾಗಿ, ಪೂರ್ಣಗೆ ಫರಿಸಾಯರೂ ಶಾಸ್ತ್ರಿಗಳೂ ಪಾಪವೆಂಬ ಕಾಗದಲ್ಲಿ ಬಿದ್ದಿದ್ದರು; ಆದರೆ ಶಾಸ್ತ್ರಿಗಳೂ ಫರಿಸಾಯರೂ ತಾವು ಕ್ಷೇಮದಲ್ಲಿದ್ದೇವೆಂದು ನೆನಸಿ ಕಾಳ್ಳುತ್ತಿದ್ದರು; ಪಾಪಿಷ್ಟರೂ ಸುಂಕದವರೂ ತಮ್ಮ ಪಾಪಗಳನ್ನು ತಿಳಿದು, ತಮ್ಮ ಕಾಗದ ನಿಮಿತ್ತ ಚಿಂತೆ ಮಾಡಿ, ಯೇಸು ಕಾಗಿಷ್ಟರ ವೈದ್ಯನಾಗಿಯೂ ಪಾಪಿಷ್ಟರ ರಕ್ಷಕನಾಗಿಯೂ ಬಂದದರಿಂದ ಸಂತೋಷಿಸಿ, ಫರಿಸಾಯರಿಗಿಂತಲೂ ಶಾಸ್ತ್ರಿಗಳಿಗಿಂತಲೂ ಚನ್ನಾಗಿ ಆತನನ್ನು ತಿಳುಕಾಂಡರು. ಆದದರಿಂದ ಯೇಸು ಅವರ ಬಳಿಗೆ ಬಂದು, ಅವರ ಸಂಗಡ ಸಂತೋಷಿಸಿದನು; ಫರಿಸಾಯರನ್ನು ಪೂರ್ಣಗೆ ಬಿಟ್ಟನು.

೩. ನಿಮ್ಮ ಸಾಲಿಗೆ ಪೂರ್ಣಾಗಿರಿ. ಪ್ರವಾದಿಗಳ ಬಳಿಗೆ ಪೂರ್ಣಾಗಿ ವಿಚಾರಣೆ ಮಾಡಿರಿ. ಅವರು ಪೂರ್ಣಾಶೆಯ ೬, ೬. ಮೊದಲಾದ ವಾಕ್ಯಗಳನ್ನು ವಾದಿದ್ದರೆ, ಅವರಿಗೆ ಬೋಧೆ ಆಗುತ್ತಿತ್ತು.

೪. ಬಲಿಗಳೂ ಅಪಣಗಳೂ ದೇವರಿಗೆ ಸಮರ್ಪಕವಾಗಿವೆ ಯೆಂದು ಪೂರ್ಣಾಶೆಯನ ಕಾಲದಲ್ಲಿ ಯೆಹೂದ್ಯರು ನೆನಸಿದ ಪ್ರಕಾರವೇ ಯೇಸುವಿನ ಕಾಲದಲ್ಲಿ ಫರಿಸಾಯರೂ ಶಾಸ್ತ್ರಿಗಳೂ ನೆನಸಿದರು. ಯಾಕಂದರೆ ಬಲಿ ಮೊದಲಾದವುಗಳನ್ನು ಕಾಡುವದು ಸುಲಭ; ಪೃದಯಗಳನ್ನು ಬದಲು ಮಾಡುವದು ಕಠಿಣವಾಗಿದೆ.—ಅವರು ನೆನಸಿದ್ದು ಪೂರ್ಣಾಗಲ್ಲವೆಂದು, ದೇವರು ಪೂರ್ಣಾಶೆಯನ ಬಾಯಿಂದ ಬೋಧಿಸಿದ ಪ್ರಕಾರ ಯೇಸು ಊಗಲೇ ಬೋಧಿಸಿದನು.

೫. ಸುಂಕದವರೂ ಪಾಪಿಷ್ಟರೂ ಮೊದಲಾದವರ ವಿಷಯದಲ್ಲಿ, ಅವರು ಮಾನಸಾಂತರ ಪಟ್ಟು ವಿಶ್ವಾಸಿಸುವ ಪಕ್ಷದಲ್ಲಿ, ಕರುಣೆ ಮುಖ್ಯವಾಗಿ ತೋರಿಸ ಬೇಕು. ಯೇಸು ಸುಂಕದವರ, ಪಾಪಿಷ್ಟರ ಸಂಗಡ ಊಟ ಮಾಡಿ, ಕರುಣೆ ತೋರಿಸಿದನು. ಇದಕ್ಕೆ ಅಡ್ಡಿ ಮಾಡುವ ಫರಿಸಾಯರಲ್ಲಿ ಕರುಣೆ ಇದ್ದಿಲ್ಲ; ಅವರು ಕರುಣೆಯನ್ನು ಕಲಿಯುವದು ಅವಶ್ಯವಾಗಿತ್ತು. ಆದದರಿಂದ ಯೇಸು ಪೂರ್ಣಾಶೆ. ೬, ೬. ಬರೆದಿರುವ ಮಾತನ್ನು ಅವರ ಜ್ಞಾಪಕಕ್ಕೆ ತರುತ್ತಾನೆ.

೬. ಪೂರ್ಣಾಶೆ. ೬, ೬. ಬರೆದಿರುವ ಮಾತು ಯೇನೆಂದು ಕಲಿಯಿರಿ.

೭. ತಾವು ದೇವರ ವಾಕ್ಯವನ್ನು ಬಲ್ಲವರಾಗಿದ್ದೇವೆಂದು ಅವರು ನೆನಸಿದರೂ, ಕಲಿಯುವದು ಅವರಿಗೆ ಅವಶ್ಯವಾಗಿತ್ತು.

೮. "ಮಾನಸಾಂತರಕ್ಕೆ" ಯೆಂಬ ಮಾತು ಪೂರ್ವ ವಾಡಂಬಡಿಕೆಯ ಉತ್ತಮವಾದ ಮೂಲಪ್ರತಿಗಳಲ್ಲಿ ಇರುವದಿಲ್ಲ. ಈ ಮಾತು ಇಲ್ಲಿ ಬೇಡ; ಯಾಕಂದರೆ ತಾವು ಚಕ್ರರೆಂದು ನೆನಸಿ ಕಾಳ್ಳುವ ಫರಿಸಾಯರಲ್ಲಿ ಮಾನಸಾಂತರ ಕಾಗದೆ ಇದ್ದದರಿಂದಲೂ, ಪಾಪಿಷ್ಟರಾದ ಸುಂಕದವರಲ್ಲಿ ಅದು ಇದ್ದದರಿಂದಲೂ, ಯೇಸು ಮತ್ಥಾಯನನ್ನು ಕರೆದನು, ಮಿಕ್ಕಾದ ಸುಂಕದವರನ್ನು ಅಂಗೀಕಾರ ಮಾಡಿದನು; ಆದರೆ ಫರಿಸಾಯರನ್ನೂ ಶಾಸ್ತ್ರಿಗಳನ್ನೂ ಪೂರ್ಣಗೆ ಸುಮ್ಮನೆ ಬಿಟ್ಟನು. ತಾನು ಕರೆದವರನ್ನು ಯೇಸು ಪರಲೋಕರಾಜ್ಯದ ಕೃಪೆಯನ್ನು ಪೂರ್ಣಾಂದುವದಕ್ಕಾಗಿಯೂ ತನ್ನ ಐಕ್ಯದಲ್ಲಿ ಶೇರುವದಕ್ಕಾಗಿಯೂ ಕರೆದನು. ಮಾನಸಾಂತರ ಪಟ್ಟ ಪಾಪಿಷ್ಟರನ್ನೇ ಆತನು ಕರೆವನು.

ಪಕ್ಷವಾಯುವಿನವನ ಸಂಗತಿ ಪೂರ್ಣಾಗಿ, ಪೂರ್ಣಗೆ ಇದು ಸಪ್ತ, ಯೇಸು ಜಗದ್ರಕ್ಷಕನಾಗಿದ್ದಾನೆಂಬುವದನ್ನು ಸ್ಥಾಪಿಸುವ ಬಗ್ಗೆ ಉಂಟಾಯಿತು. ಯಾಕಂದರೆ ಪೌಚ್ಚಾದವರು, ಯೇಸು ಉಪದೇಶ ಕಾಟ್ಟು ಆಶ್ಚರ್ಯಕಗಳನ್ನು ಮಾಡುವ ಬೋಧಕನೆಂದು ನಂಬಿ, ಇದರ ಅಚೆಗೆ ಯೇನೂ ತಿಳುಕಾಳ್ಳಲಿಲ್ಲ.

ಮತ್ಥ್. ೯, ೧೫. ಲೂಕ. ೫, ೫—೫೮.

ಹೃದಯದಲ್ಲಿ ಬದಲಾಗದವರು, ತಮ್ಮ ನಡತೆಯನ್ನು ತಿದ್ದದೆ ಇರುವವರು, ಬಲಿಗಳಲ್ಲಿಯೂ ಉಪವಾಸಗಳಲ್ಲಿಯೂ ವೃಥಃ ಚರವಸವನ್ನು ಇಡ ಬಾರದೆಂದೂ, ಕ್ರಿಸ್ತನು ಪಾಳೇ ವಾಡಂಬಡಿಕೆಯ ನ್ಯಾಯಪ್ರಮಾಣವನ್ನು ಪೂರ್ತಃ ಮಾಡಿ, ಪೌಸ ಮಾರ್ಗವನ್ನು ಸ್ಥಾಪಿಸುವನೆಂದೂ ತಾ೪ರಿಸುವದಕ್ಕೆ, ಕರ್ತನು ಮತ್ಥಾಯನ ಮನೆಯಲ್ಲಿ ಕೂತು ಕಾಂಡಿರುವಾಗ ಮತ್ತಾಂದು ಸಂಚಾರ್ಷಣೆ ಮಾಡಿದನು. ಸ್ನಾನಿಕಾದ ಯಾ೪ಪೌನನ ಶಿಷ್ಯರಲ್ಲಿ ಕೆಲವರು ಬಂದು, ತಾವು ಫರಿಸಾಯರ ಪೌಗೆ (ಲೂಕ. ೬೮, ೬೨.) ಬಪಳವಾಗಿ ಉಪವಾಸ ಮಾಡುತ್ತಿರುವದರಿಂದ ಯೇಸೂ ಅತನ ಶಿಷ್ಯರೂ ಬಿತನಕ್ಕೆ ಕೂತು ಕಾಂಡವರ ವಿಷಯದಲ್ಲಿ ಅತಂಕ ಪೌಂದಿ, ಫರಿಸಾಯರ ಸಂಗಡ ಯೇಸುವಿಗೆ "ನಿನ್ನ ಶಿಷ್ಯರು ಯಾಕೆ ಉ ಪವಾಸ ಮಾಡುವದಿಲ್ಲ"? ಯೆಂದು ಕೇಳಿದರು. ಶಾಸ್ತ್ರಿಗಳು ಫರಿಸಾಯರ ಪೌಗೆ ಬಪಳವಾಗಿ ಉಪವಾಸ ಮಾಡಲಿಲ್ಲವೆಂದು ಕಾಗುತ್ರದೆ. ಯಾ೪ಪೌನನ ಶಿಷ್ಯರು ಈ ಪ್ರಶ್ನೆಯನ್ನು ಮಾಡಿದರು; ಫರಿಸಾಯರು ಅವರ ಬಳಿಯಲ್ಲಿ ನಿಂತಿದ್ದರು. ಯೇಸು ಅವರಿಗೆ ಉತ್ತರ ಕಾಟ್ಟು, ತನ್ನ ಶಿಷ್ಯರು ಉಪವಾಸ ಮಾಡುವದು ತಕ್ಕದ್ದಲ್ಲವೆಂದೂ ಪೌಸ ವಾಡಂಬಡಿಕೆಯಲ್ಲಿ ಶೇರಿದವರು ಪಳೇ ವಾಡಂಬಡಿಕೆಯ ನ್ಯಾಯಪ್ರಮಾಣವ ನ್ನು ಅನುಸರಿಸಿ ಉಪವಾಸ ಮಾಡುವ ಪೌಂಗಿನಲ್ಲಿ ಇರುವದಿಲ್ಲವೆಂದೂ ತಾ೪ರಿಸಿದನು. ಪೌಗಂದರೆ—

ಮತ್ಥ್. ೯, ೧೫. ಮದುವೆಯವರು, ಮದಲಿಂಗನು ಅವರ ಸಂಗಡ ಇರುವ ಪರ್ಯಂತರ, ದುಃಖ ಪಡಲಾಗುವದೇ? ಆದರೆ ಮದಲಿಂಗನು ಅವರ ಬಳಿಯಿಂದ ತೆಗೆಯಲ್ಪಡುವ ದಿವಸಗಳು ಬರುವವು; ಆಗ ಉಪವಾಸ ಮಾಡುವರು[೧]. ಲೂ ಕ. ೫, ೫೮. ಇದಲ್ಲದೆ ಪಳೇ ವಸ್ತ್ರಕ್ಕೆ ಪೌಸ ಬಟ್ಟೆಯ ತುಂಡು ಯಾವನೂ ಪು ಚ್ಚುವದಿಲ್ಲ; ಪುಚ್ಚಿದರೆ, ಪೌಸತು ಪರಿದು ಪೌಗ್ಯೂವದು; [ಪೂರಕು ಪೌಚ್ಚಾಗುವ ದು. ಮತ್ಥ್. ಮಾರ್ಕ್.] ಮತ್ತು ಪಳೇದಕ್ಕೆ ಪೌಸದರ ತುಂಡು ಸರಿ ಬ್ಯೀಳುವದಿಲ್ಲ[೨]. ೫೮. ಮತ್ತು ಪೌಸ ದ್ರಾಕ್ಷೇರಸವನ್ನು ಪಳೇ ಬುದ್ದಿಲಿಗಳಲ್ಲಿ ಯಾವನೂ ಪೌಕು ವದಿಲ್ಲ; ಪೌಕಿದರೆ, ಪೌಸ ದ್ರಾಕ್ಷೇರಸವು ಬುದ್ದಿಲಿಗಳನ್ನು ವಾಡೆದು, ಬೆಲ್ಲಲ್ಪಡು ವದು, ಮತ್ತು ಬುದ್ದಿಲಿಗಳು ಕೆಟ್ಟು ಪೌಗ್ಯೂವವು. ೫೯. ಆದರೆ ಪೌಸ ದ್ರಾಕ್ಷೇ ರಸವನ್ನು ಪೌಸ ಬುದ್ದಿಲಿಗಳಲ್ಲಿ ಪೌಕ ಬೇಕು; ಆಗ ಯೆರಡೂ ಕ್ಷದ್ರವಾಗಿರುವ ವು. ೫೯. ಮತ್ತು ಯಾವನಾದರೂ ಪಳೇದನ್ನು ಕುಡಿದ ಕೂಡಲೇ ಪೌಸತು ಬೇ ಕನ್ನುವದಿಲ್ಲ; ಯಾಕಂದರೆ—ಪಳೇದು ಲೇಸು, ಅನ್ನುವನು.

೧. ಮದಲಿಂಗನಾದ ತಾನೇ ದಿಬ್ಬಗಿದವರಾದ ಶಿಷ್ಯರ ಸಂಗಡ ಚೂಲಾ೪ಕದಲ್ಲಿ ಇದ್ದ ಸಮಯವು, ತಾನು ಸತ್ತು ಪುನರುತ್ಥಾನವಾದ ಮೇಲೆ ಶಿಷ್ಯರನ್ನು ಅಗಲಿದ ಸಮಯವೂ, ಈ ಯೆರಡು ಸಮಯಗ ಳ ಪೆಚ್ಚುಕಡಿಮೆಯನ್ನು ಯೇಸು ತಾ೪ರಿಸುತ್ತಾನೆ. ಮದಲಿಂಗನು ತಮ್ಮ ಬಳಿಯಲ್ಲಿ ಇರುವ ವೇಳೆಯಲ್ಲಿ ದಿಬ್ಬಗಿದವರು ಉಪವಾಸ ಮಾ ಡುವ ರೂಢಿ ಇಲ್ಲ; ತಾನೇ ಇರುವ ವೇಳೆಯಲ್ಲಿ ಶಿಷ್ಯರು ಉಪವಾಸ ಮಾಡುವದು ತಕ್ಕದ್ದಲ್ಲವೆಂದು ಪೌಳುತ್ತಾನೆ. ಯಾಕಂದರೆ ಸಂತಾ೪ ಷವುಳ್ಳ ಸಮಯದಲ್ಲಿ ಉಪವಾಸ ಮಾಡಿದರೆ, ವಿಪರೀತವೆಂದು ಕಾ ಗುವದು. ಸ್ನಾನಿಕಾದ ಯಾ೪ಪೌನನು, ತಾನು ಮದಲಿಂಗನ ಸ್ನೇ ಹಿತನೆಂದು, ಪೌಳೆ ಇದ್ದದರಿಂದ (ಯಾ೪. ೩, ೨೯.) ಅತನ ಶಿ ಷ್ಯರು ನಪಾ ಯೇಸುವೇ ಮದಲಿಂಗನೆಂದು ತಿಳಿದು ಕಾಂಡು ದಿಬ್ಬಗಿ ದವರಾಗ ಬೇಕಾಗಿತ್ತು. ದಿಬ್ಬಗಿದವರಾದ ಮೇಲೆ ಅವರು ಸಂತಾ೪ಷ ದಿಂದ ತುಂಬಿ, ಉಪವಾಸವನ್ನು ಮರೆಯುತ್ತಿದ್ದರು. ಇದಲ್ಲದೆ ಯೇ ಸು ಇನ್ನಾಂದು ಮಾತನ್ನು ಪೌಳುತ್ತಾನೆ; ಅದೇನಂದರೆ—ತನ್ನ ಶಿಷ್ಯರಿ ಗೆ ನಪಾ, ತಾನು ಪೌಗಿದ ಮೇಲೆ, ದುಃಖದ ಕಾಲವು ಬರುವದು; ಆಗ ದುಃಖವು ತನ್ನಿಂದ ತಾನೇ ಬರುವದು. ಪೌಲನಿಗೆ ಅಂಥಾ ಕಾಲ ಬಂತು. ೨ ಕಾರ್. ೧೧, ೨೭. ಅಪಾಸ್ತ. ೨೭. ಮೋಶೆಯ ನ್ಯಾಯ ಪ್ರಮಾಣವನ್ನು ಅನುಸರಿಸಿ ಉಪವಾಸ ಮಾಡುವದಕ್ಕೆ ಕಾರಣ ಇಲ್ಲ ವೆಂದೂ, ಆತ್ಮವು ಪ್ರೇರೇಪಿಸುವಾಗಲೇ ಉಪವಾಸ ಮಾಡಿದರೆ ವಾ ಳ್ಗೇದೆಂದೂ ಯೇಸು ಬಾ೪ಧಿಸುತ್ತಾನೆ. ಮತ್ಥ್. ೬, ೬೭.

೨. ಇದರ ಅಭಿಪ್ರಾಯವೇನಂದರೆ—ನ್ಯಾಯಪ್ರಮಾಣವೆಂಬ ಪಾ ಳೇ ವಸ್ತ್ರದ ಮೇಲೆ ಕೆಲವು ಪೌಸ ಬಾ೪ಧನೆಗಳನ್ನೂ ಕಟ್ಟಳೆಗಳನ್ನೂ ಪಚ್ಚುವ ಮನಸ್ಸು ಯೇಸುವಿಗೆ ಇದ್ದಿಲ್ಲ. ಈ ಪ್ರಕಾರ ಪಳೇ ವಸ್ತ್ರ ದ ಮೇಲೆ ಪೌಸ ತುಂಡನ್ನು ಪೌಲಿದರೆ, ಮೋಸ ಪೆಚ್ಚಾಗುತ್ತಿತ್ತು; ಯಾಕಂದರೆ ಸ್ವಂತ ಮಗ್ಗದ ಮೇಲೆ ಪೆಚ್ಚು ನಂಬಿಕೆ ಇಡುವದಕ್ಕೆ ಕೆ ಲವರಿಗೆ ಅಸ್ಪದ ಆಗುತ್ತಿತ್ತು; ಮಿಕ್ಕಾದವರು ಈ ಪೌಸ ಕಟ್ಟಳೆಗ

ಮತ್ಥಾ. ೫, ೧೪—೨೬. ಮಾರ್ಕ. ೫, ೨೨—೪೫. ಲೂಕ. ೮, ೪೧—೫೬.

ಳನ್ನು ಸಹ ಮಿಂಠಿ ಪಾಪವನ್ನು ಪೆಚ್ಚಿಸುತ್ತಿದ್ದರು. ದೇವರು ಕಾಚ್ಚ ನ್ಯಾಯಪ್ರಮಾಣವನ್ನು ಯಾರೂ ಕೈಕಾಳ್ಳದ ಕಾರಣ ತನ್ನಲ್ಲಿ ತಾನೇ ವಾ ಳ್ಳೇದಾಗಿರುವ ಈ ಪಾಳೆ ನ್ಯಾಯವು ನಿಷ್ಪ್ರಯೋಜಕವಾಯಿತು. ಪೀ ಗಿರಲಾಗಿ ಯೇಸು ಪಾಳೆ ನ್ಯಾಯಪ್ರಮಾಣಕ್ಕೆ ಪಾಸಾಸತನ್ನು ಕೂಡಿಸ ಮ ನಸ್ಸಿಲ್ಲದೆ, ಪಾಳೆದನ್ನು ತೆಗದು ಪಾಕಿ ಪೂರ್ಣವಾಗಿ ಪಾಸಾಸತನ್ನು ತರ ಮನಸ್ಸಾಗಿದ್ದನು; ಯಾಕಂದರೆ ಪಾಸಾಸ ದ್ರಾಕ್ಷೇರಸವನ್ನು ಪಾತ್ರಗೆ ಪಾಳೇಬುದ್ದಿಲಿಗಳಲ್ಲಿ ಪಾಕ ಕೂಡದಾ, ಪಾತ್ರಗೆ ಪಾಳೆ ಪಾಸಾಸ ವಾ ಡಂಬಡಿಕೆಗಳನ್ನು ಬೆರಿಕೆ ಮಾಡುವದಕ್ಕೆ ಆಗದೆ ಪಾತ್ರೇಯಿತು. ಪಾತ್ರಗೆ ಮಾಡಿದ್ದರೆ ಪಾಳೆದೂ ಪಾತ್ರಾಸತೂ ಯೆರಡೂ ಕೆಡುತ್ತಿದ್ದವು; ಮ ತ್ತು ಯೆಲ್ಲರೂ ಪಾತ್ರಾಸತನ್ನು ಬಿಟ್ಟು ಪಾಳೆದನ್ನೇ ಅನುಸರಿಸುತ್ತಿದ್ದರು. ಈ ಮಾತುಗಳನ್ನು ಕೇಳಿದವರು ನೆಟ್ಟಗೆ ಗ್ರಹಿಸುವ ಪಾತ್ರಗೆಯೂ, ಯಾ ರೂ ಅವುಗಳ ಅಭಿಪ್ರಾಯವನ್ನು ಗ್ರಹಿಸದೆ ಮೋಸದಲ್ಲಿ ಬೀಳದ ಪಾತ್ರ ಗೆಯೂ ಯೇಸು ಪರ್ವತಪ್ರಸಂಗದಲ್ಲಿ ಅವುಗಳನ್ನು ವಿವರಿಸಿದನು. (ಮತ್ಥಾ. ೫, ೧೭.)

೧೦. ಯೇಸು ಯಯಿೞೀರನ ಮಗಳನ್ನು ಯೆಬ್ಬಿಸುತ್ತಾನೆ. ರಕ್ತಕುಸುಮರೋಗವುಳ್ಳ ಸ್ತ್ರೀಯಂನು ಸ್ವಸ್ಥ ಮಾಡುತ್ತಾನೆ.

ಮತ್ಥಾ. ೯, ೧೪—೨೬. ಮಾರ್ಕ. ೫, ೨೨—೪೩. ಲೂಕ. ೮, ೪೧—೫೬.

ಆದ ಸಂಗತಿಯ ಸಮಯವನ್ನು ಈ ಸಾರಿ ಮತ್ಥಾಯನು ತಾರಿಸುತ್ತಾನೆ; ಯಯಿೞೀರನು ಯೇಸುವನ್ನು ಪೂಡುಕಿದಾಗ, ಅತನು ಸಮು ದ್ರದ ಬಳೆಯಲ್ಲಿ ಇದ್ದನೆಂದು ಮಾರ್ಕನೂ ಲೂಕನೂ ತಿಳಿಸುತ್ತಾರೆ; ಆದರೆ ಅದು ಯಾವಾಗ ಆಯಿತೆಂದು ಅವರು ಪೇಳುವದಿಲ್ಲ. ಆದರೆ ಮತ್ಥಾಯನು, ಸಮುದ್ರದ ತೀರದಲ್ಲಿರುವ ತನ್ನ ಮನೆಯಲ್ಲಿ ಈ ಸಂಭಾಷಣೆಗಳು ಆದಾಗ, ಯಯಿೞೀರನು ಲೇವಿಯ ಮನೆಗೆ, ಯೇಸು ಇದ್ದಲ್ಲಿ ಗೆ, ಬಂದು, ತನ್ನ ಮಗಳಿಗೆ ಸಹಾಯ ಮಾಡ ಬೇಕೆಂದು ಬೇಡಿ ಕಾಂಡನೆಂದು ಪೇಳುತ್ತಾನೆ. ಮಾರ್ಕನೂ ಲೂಕನೂ ಆದ ವೃತ್ತಾಂತವ ನ್ನೆಲ್ಲಾ ವಿವರಿಸಿ ಪೇಳುವದೇನೆಂದರೆ—ಈ ಸಚಿಮನೆಯೆ ಯಜಮಾನನು ಬಂದು, ತನ್ನ ಮಗಳು ಸಾಯುತ್ತಾಳೆ ಯೆಂದು ಪೇಳಿದನು. ಯೇಸು ಅವನ ಸಂಗಡ ಪಾತ್ರಾಟು, ದಾರಿಯಲ್ಲಿ ಇದ್ದಾಗ, ಅವಳು ಸತ್ತಳೆಂಬ ವರ್ತಮಾನ ಬಂತು. ಆದರೆ ಮತ್ಥಾಯನು ಸಂಕ್ಷೇಪವಾಗಿ ಈ ಸಂಗತಿ ಯನ್ನು ಪೇಳಿ, ಅವಳು ತೀರಿ ಪಾತ್ರಾಗಿದ್ದಳೆಂದು ಪೇಳುತ್ತಾನೆ (೯, ೧೮.).

ಈ ಪಕ್ಷವಾಯುವಿನವನನ್ನು ಸ್ವಸ್ಥ ಮಾಡಿದದರಿಂದಲೂ ಸುಂಕದವರನ್ನೂ ಪಾಪಿಷ್ಠರನ್ನೂ ಅಂಗೀಕಾರ ಮಾಡಿ ಅವರ ಸಂಗಡ ಊಟ ಮಾ ಡಿದದರಿಂದಲೂ ಯೇಸು, ತಾನು ಪಾಪಕ್ಕೂ ಶಾಪಕ್ಕೂ ತಪ್ಪಿಸುವ ರಕ್ಷಕನಾಗಿದ್ದೇನೆಂದು ತಾರಿಸಿದನು. ಆಗ, ಯಯಿೞೀರನ ಮಗಳನ್ನು ಯೆಬ್ಬಿ ಸಿ, ತಾನು ಮರಣಕ್ಕೆ ಸಹ ತಪ್ಪಿಸ ಶಕ್ತನಾಗಿದ್ದೇನೆಂದು ಮೊದಲನೇ ಸಾರಿ ತಾರಿಸಿದನು. ಯಾಕಂದರೆ ಮರಣವು ಪಾಪದ ಸಂಬಳವಾ ಗಿದೆ; ಅದು ದಾಡ್ಡ ಪಾಪಗಳನ್ನು ಮಾಡದೆ ಇರುವವರನ್ನೂ (ರೋಮಾ. ೫, ೧೨.), ಯಯಿೞೀರನ ಮಗಳ ಪ್ರಕಾರ ನಿದಾನಿಷಿಯಾಗಿರುವ ಮಕ್ಕಳ ನ್ನೂ ಸಹ ಹಿಡಿಯುತ್ತದೆ. ಇಂಥವರಲ್ಲಿ ಮರಣದ ಕಾಂಡಿಯು ಅಷ್ಟು ತೀಕ್ಷ್ಣವಾಗದೆ ಇದ್ದಾಗ್ಯೂ, ಅವರು ಸಾಯ ಬೇಕಷ್ಟೆ. ಮರಣವನ್ನು ಜಯಿಸುವದಕ್ಕೆ, ದೇವರಿಂದ ಬರುವ ಬಲವೇ ಪಾತ್ರಾತು, ಮತ್ತೊಂದು ಬಲವಿಲ್ಲ. ದೇವರ ಬಲವು ಯೇಸುವಿನಲ್ಲಿ ಪ್ರತ್ಯಕ್ಷವಾಯಿತು. ಈ ಪೂಡುಗಿ ಸಾಯಲಿಲ್ಲವೆಂದೂ, ಮನೆಯವರು ಮಾತ್ರ ಅವಳು ಸತ್ತಳೆಂದು ನೆನಸಿದರೆಂದೂ, ಕೆಲವರು ಪೇಳುತ್ತಾರೆ. ಯಾಕಂದರೆ ಯೇ ಸು ತಾನೇ ಅವಳು ಸಾಯಲಿಲ್ಲವೆಂದು ಪೇಳಿದನು. ಮಾರ್ಕ. ೫, ೩೯. ಮತ್ಥಾ. ೯, ೨೪. ಲೂಕ. ೮, ೫೨. ಆದರೆ ಅವಳು ಸಾ ಯಲಿಲ್ಲವೆಂದು ಪೇಳುವವರ ಮಾತು ವಾಳ್ಳೇದಲ್ಲ. ಸತ್ತವರೆಲ್ಲರು ಕತೀನಿಗೆ ಬದುಕುವದರಿಂದಲೂ (ಲೂಕ. ೨೦, ೩೮.) ದಾನಿಷವಿಲ್ಲದ ಚಿಕ್ಕವರಿಗೂ ಸತ್ಯವಿಶ್ವಾಸವುಳ್ಳವರಿಗೂ ಮರಣವು ನಿದ್ರೆಯಂತೆ ಆಗಿರುವದರಿಂದಲೂ ಯೇಸು ಹೀಗೆ ಪೇಳಿದನು; ಅದನ್ನು ಪೇಳಿದ ಮೇಲೆ ಅವ ಳ ಆತ್ಮವು ಅವಳಲ್ಲಿ ತಿರಿಗಿ ಶೇರುವ ಪಾಗೆ ಮಾಡಿದನು. (ಲೂಕ. ೮, ೫೫.) ಹೀಗಿರುವದರಿಂದ ಅವಳ ಆತ್ಮವು ಪಾತ್ರಾಗಿತ್ತೆಂದು ತಿಳುಕಾಳ್ಳ ಬೇಕು. ಶರೀರವನ್ನು ಬಿಟ್ಟು ಅಗಲಿದ ಆತ್ಮವನ್ನು ತಿರಿಗಿ ಶರೀರದಲ್ಲಿ ಶೇರಿಸುವದು ಸೃಷ್ಟಿಯ ಕಾಲದಲ್ಲಿ ಮಣ್ಣಿನಿಂದುಂಟಾದ ಶರೀರದ ಸಂ ಗಡ ದೇವರ ಶ್ವಾಸವಾಗಿರುವ ಆತ್ಮವನ್ನು ಕೂಡಿಸಿದ ಸರ್ವತ್ರಾಗಿವುಳ್ಳ ದೇವರ ಕೆಲಸವೇ ಸರಿ. ಹೀಗಿರುವದರಿಂದ ಯೇಸು ಯಯಿೞೀರನ ಮಗ ಳನ್ನು ಸತ್ತವಳಾಳಗಿಂದ ಯೆಬ್ಬಿಸಿದನೆಂಬುವದಕ್ಕೆ ಸಂದೇಪವಿಲ್ಲ;—ಕೆಲವು ಮಂದಿ ಸತ್ತವರನ್ನು ತಾನು ಯೆಬ್ಬಿಸಿದೆನೆಂದು, ಅತನು ಮತ್ಥಾ. ೧೦, ೫. ಪೇಳುತ್ತಾನಲ್ಲಾ? ಇಲ್ಲಿ ಅತನು ನಿದಾನಿಷಿಯಾದ ಪೂಡುಗಿಯನ್ನು, ಅವಳ ಪ್ರಾಣ ಪಾತ್ರಾದಾಗಲೇ, ಉಜ್ಜೀವಿಸ ಮಾಡುತ್ತಾನೆ. ಇದು ಮಾಡುವ ಪಾತ್ರಗೆ ದಿವ್ಯ ಅಧಿಕಾರವು ಬೇಕಾಯಿತು. ಈ ಅಧಿಕಾರವನ್ನು ಯೇಸು ಪೂಡುಗಿಯ ಕೈಯನ್ನು ಹಿಡಿಯುವದರಿಂದಲೂ ಅವಳ ಪೀಸ ರನ್ನು ಪೇಳಿ ಅವಳಿಗೆ ಉಗ್ಗಾಪಿಸುವದರಿಂದಲೂ ಪ್ರಸಿದ್ಧಿ ಮಾಡಿದನು. ಬಪಿಳ ಮಂದಿ ಕೂಡಿ ಬಂದು ಅತ್ತದರಿಂದ ಈ ಪೂಡುಗಿ ವಾಳ್ಳೆ ಯವಳೆಂದು ತಾರುತ್ತದೆ. ಆದರೆ ಅಂಥವರ ಮರಣವು ಅಷ್ಟು ದುಃಖವುಳ್ಳದ್ದಲ್ಲ; ಯಾಕಂದರೆ, ಶರೀರವನ್ನೂ ಆತ್ಮವನ್ನೂ ಅಗಲಿಸುವ ಮ ರಣದ ಸ್ವರೂಪವು ಅವರಲ್ಲಿ ಸಹ ಇದ್ದಾಗ್ಯೂ, ಅವರ ಮರಣವು ಸುಖವುಳ್ಳದ್ದೇ; ಅದರ ಅಚೆಯಲ್ಲಿ ನ್ಯಾಯತೀರ್ಪಿಕೆ ಇಲ್ಲ. ಹೀಗಿರುವದ ರಿಂದ ಯೇಸು ಈ ಪೂಡುಗಿಯ ಬಳೆಯಲ್ಲಿ ಗಾಳಾಡುವವರಿಗೂ, ಪಾದ್ಯಗಳನ್ನು ಬಾರಿಸುವವರಿಗೂ, ಕಾಣಿಕೆಯನ್ನು ಬಿಟ್ಟು ಪಾತ್ರಾಗಲಾಗ್ಗಾಪಿ

ಮತ್ಥ. ೯, ೨೭—೩೪.

ನಿದನು. ಇದಲ್ಲದೆ, ಅವರನ್ನು ಕಳುಹಿಸುವದಕ್ಕೆ ಬೇರೆ ಕಾರಣಗಳಿದ್ದವು. ಉದರೆ ತಂದೆಗೆ ವಾಬ್ಬಳಾದ ಮಗಳನ್ನು ತಿರಿಗಿ ಕಾಡ ಬೇಕೆಂದು ನಿಶ್ಚಯಿಸಿ ಇದ್ದನು. (ಮಾರ್ಕ. ೫, ೨೩.) ಉದ ಕಾರ್ಯವನ್ನು ಪ್ರಸಿದ್ಧಿ ಮಾಡ ಬಾರದೆಂದು ಯೇಸು ಆಜ್ಞಾಪಿಸಿದನು (ಮಾರ್ಕ. ೮ಊಕ.); ಆ ದಾಗ್ಯೂ ಅದು ಸುತ್ರಲಾಗಿರುವ ಸೀಮೆಯಲ್ಲೆಲ್ಲಾ ಪ್ರಸಿದ್ಧಿಯಾಯಿತು (ಮತ್ಥ.). ಯಾಕಂದರೆ ಈ ಪುಡುಗಿ ಸತ್ತು ಪೂರ್ಣಗಿದ್ದಳೆಂದು; ಬಪೂಳ ಮಂದಿಗೆ ತಿಳಿದಿತ್ತು. ಅವರೆಲ್ಲರು ದೇವರ ಸ್ತುತ್ರಕ್ಕಾಗಿ ಈ ವೃತ್ತಾಂತವನ್ನು ತಿಳಿಸಿದರು.

ಯೇಸು ಯಯೀರನ ಮಗಳನ್ನು ಯೆಬ್ಬಿಸುವ ಮುಂಚೆ, ಅವಳ ಮನೆಗೆ ಪೂರ್ಣಗುವ ಮಾರ್ಗದಲ್ಲಿಯೇ, ರಕ್ತಕುಸಮರೋಗವುಳ್ಳ ಸ್ತ್ರೀಯನ್ನು ಸ್ವಸ್ಥ ಮಾಡಿದನು. ಅವಳು ಪನ್ನೆರಡು ವರುಷ ರೋಗದಲ್ಲಿದ್ದು, ತನಗೆ ಇದ್ದದ್ದನ್ನೆಲ್ಲಾ ವೃಥಾವಾಗಿ ವೈದ್ಯರಿಗೆ ವೆಚ್ಚ ಮಾಡಿ, ಗುಣವಾಗದೆ, ಪೆಚ್ಚಾದ ರೋಗದಲ್ಲಿ ಬಿದ್ದಿದ್ದಳು. ಅವಳು ಯೇಸುವನ್ನು ಬೇಡಿ ಕಾಳ್ಳುವಷ್ಟು ಧೈರ್ಯ ಮಾಡದೆ, ತಾನು ಅತನ ವಸ್ತ್ರದ ಶರಗನ್ನಾದರೂ ಮುಟ್ಟಿದರೆ, ವಾಶಿಯಾಗುವೆನೆಂದು ನೆನಸಿದಳು. ನೆನಸಿದ ಪ್ರಕಾರವೇ ಮಾಡಿದಳು. ಯೇಸುವಿನ ಸುತ್ರಲಿದ್ದ ಸಮೂಪದಲ್ಲಿ ಶೀರ, ಯೇಸುವಿನ ವಸ್ತ್ರವನ್ನು ಮುಟ್ಟಿದಳು. ಮುಟ್ಟಿದ ಕ್ಷಣ ಅವಳ ರಕ್ತದ ಪ್ರವಾಪವು ನಿಂತಿತು. ಆಗ ಯೇಸುವಿಗೆ—ತನ್ನಿಂದ ಬಲವು ಪೂರ್ಣಟಿತೆಂದು, ತಿಳಿಯಿತು. ಈ ಸ್ತ್ರೀ, ಅತನನ್ನು ವಿಶ್ವಾಸವಾಗಿ ಮುಟ್ಟಿ, ಆ ಬಲವನ್ನು ಅತನಿಂದ ತೆಗದಿದ್ದಳು. ವಿಶ್ವಾಸಕ್ಕೆ ಯೆಷ್ಟು ದಾಡ್ಡ ಅಧಿಕಾರ ಉಂಟು ಯೆಂಬುವದು ಇಲ್ಲಿ ಕಾಣಿ ಬರುತ್ತದೆ. ಯೇಸು—ತನ್ನನ್ನು ಯಾರು ಮುಟ್ಟಿದರೆಂದು ಕೇಳಿದನು. [ಅತನು ಶಿಷ್ಯರ ಸಂಗಡ ಮತ್ಥಾಯನ ಮನೆಯನ್ನು ಬಿಟ್ಟು ಪೂರ್ಣಟಿದ್ದನು (ಮತ್ಥ.); ಉದರೆ ದಾರಿಯಲ್ಲಿ ಬಪೂಳ ಮಂದಿ ಕೂಡಿ ಕಾಂಡು ಅತನನ್ನು ಹಿಂಬಾಲಿಸಿದರೆಂದು ಕಾಣುತ್ತದೆ (ಮಾರ್ಕ. ೮ಊಕ.).] ತನ್ನನ್ನು ಯಾರು ಮುಟ್ಟಿದರೆಂಬ ಮಾತನ್ನು ಯೇಸು ತಿಳಿಯದೆ ಇದ್ದದರಿಂದ ಪೋಳಲಿಲ್ಲ; ದೇವರು ತನಗೆ ಸಪೂಾಯ ಮಾಡಿದದರಿಂದ ಅತನಿಗೆ ಸ್ತುತ್ರ ಕಾಡುವದಕ್ಕೂ, ತನ್ನ ದಾಡ್ಡ ವಿಶ್ವಾಸವನ್ನು ಮತ್ತಾಬ್ಬರಿಗೆ ಮಾದರಿಯಾಗಿ ತೋರಿಸುವದಕ್ಕೂ ಆ ಸ್ತ್ರೀಗೆ ಉಸ್ಪದ ಕಾಡ ಮನಸ್ಸು ಮಾಡಿದನು. ಈ ಸ್ತ್ರೀ ತಾನು ಮಾಡಿದ್ದನ್ನು ಅರಿಕೆ ಮಾಡಿದಾಗ, ಯೇಸು ಅವಳ ವಿಶ್ವಾಸಕ್ಕೆ ಮೆಚ್ಚಿ, ತನ್ನ ಸಮಾಧಾನವನ್ನು ಅವಳಿಗೆ ಕಾಟ್ಟು, ಆ ರೋಗ ಇನ್ನೂ ಮೇಲೆ ಬರುವದಿಲ್ಲವೆಂದು ಅವಳಿಗೆ ಪೋಳಿದನು. ಯೇಸು ವಾಶಿ ಮಾಡಿದ್ದಕ್ಕೂ, ಬೇರೆ ಮನುಷ್ಯರು ವಿಶ್ವಾಸವುಳ್ಳ ಮನಸ್ಸಿನಿಂದಾದರೂ ವಾಶಿ ಮಾಡಿದ್ದಕ್ಕೂ ಇದೇ ಪೆಚ್ಚುಕಡಿಮೆ—ಯೇಸು ವಾಶಿ ಮಾಡಿದ್ದೆಲ್ಲಾ ವಾಂದೇ ಸಾರಿ ಪೂರ್ಣವಾಗಿ ಸಮವಾಯಿತು. ಯೇಸು ಈ ಸ್ತ್ರೀಗೆ ತನ್ನ ಸಮಾಧಾನವನ್ನು ಕಾಟ್ಟದ್ದು ವಾಳ್ಳೆ ವರವಾಗಿತ್ತು; ಯಾಕಂದರೆ ನಮಗೆ ಉಂಟಾಗುವ ಪೂರ್ಣಗಿನ ಸಪೂಾಯಗಳೂ ವರಗಳೂ ಯೆಲ್ಲಾ ದೇವರ ಸಮಾಧಾನದ ಮೂಲವಾಗಿಯೇ ಕ್ಷೇಮವನ್ನೂ ಸಂತೋಷವನ್ನೂ ಉಂಟು ಮಾಡುತ್ತವೆ. ಈ ದರೆ ರಕ್ತಕುಸಮರೋಗವುಳ್ಳ ಸ್ತ್ರೀಗೆ ಇದ್ದ ವಿಶ್ವಾಸವು ನಮಗೆ ಉಂಟೋ?

೧೧. ಯೇಸು ಕುರುಡರಿಬ್ಬರಿಗೆ ದೃಷ್ಟಿ ಕಾಡುತ್ತಾನೆ; ದೆವ್ವ ಹಿಡಿದ ಮೂಗನಿಗೆ ಬಾಯಿ ಕಾಡುತ್ತಾನೆ. ಮತ್ಥ. ೯, ೨೭—೩೪.

ಈ ಯೆರಡು ಸಂಗತಿಗಳು ಯಯೀರನ ಮಗಳನ್ನು ಯೆಬ್ಬಿಸಿದ ಸಮಯದಲ್ಲಿ ಉದವೆಂದು, ಮತ್ಥಾಯನು ತೋರಿಸುತ್ತಾನೆ. ಮಾರ್ಕ. ೩, ೨೨—೩೦. ೮, ೨೨—೨೬. ಬರೆದಿರುವ ವೃತ್ತಾಂತಗಳು ಬೇರೆಯಾಗಿವೆ.

ಸತ್ತವರಿಗೆ ಜೀವವನ್ನು ಕಾಡ ಶಕ್ತನು ಬಪೂ ಪೆಚ್ಚಾಗಿ ಶರೀರದ ಇಂದ್ರಿಯಗಳನ್ನು ಪೂರ್ಣಸತಾಗಿ ಉಂಟು ಮಾಡುವದಕ್ಕೆ ಶಕ್ತನಾಗಿದ್ದಾನೆಂದು, ಯೇಸು ಈ ಸಂಗತಿಯಿಂದ ತೋರಿಸಿದನು.

ಮತ್ಥ. ೯, ೨೭. ಮತ್ತು ಯೇಸು ಅಲ್ಲಿಂದ[೧] ಪೂರ್ಣಾಗುವಾಗ, ಇಬ್ಬರು ಕುರುಡರು ಆತನನ್ನು ಹಿಂಬಾಲಿಸಿ[೨], ದಾವೀದನ ಮಗನೇ[೩], ನಮ್ಮನ್ನು ಕರ್ಣೀಸು[೪], ಯೆಂದು ಕೂಗಿದರು. ೨೮. ಆತನು ಮನೆಗೆ ಬಂದಾಗ[೫] ಕುರುಡರು ಆತನ ಬಳಿಗೆ ಬಂದರು. ಯೇಸು ಅವರಿಗೆ--ಇದನ್ನು ಮಾಡ ಬಲ್ಲೆನೆಂದು ನಂಬುತ್ತೀರ್ಯಾ[೬])? ಅಂದನು. ಅವರು ಆತನಿಗೆ—ಹೌದು, ಕರ್ತನೇ, ಅಂದರು. ೨೯. ಆಗಲಾತನು ಅವರ ಕಣ್ಣುಗಳನ್ನು ಮುಟ್ಟಿ—ನಿಮ್ಮ ವಿಶ್ವಾಸದ ಪ್ರಕಾರ ನಿಮಗೆ ಆಗಲಿ,

ಮತ್ಥಾ. ೯, ೫೦. ೧೨, ೧—೮. ಮಾರ್ಕ್. ೨, ೨೫—೩೮. ಲೂಕ. ೬, ೧—೫.

ಅಂದನು. ೫೦. ಆಗ ಅವರ ಕಣ್ಣುಗಳು ತೆರೆಯಲ್ಪಟ್ಟವು. ಮತ್ತು ಯೇಸು ಅವರಿಗೆ—ನೋಡಿ ಕಾಳ್ಗಿರಿ; ಯಾರೂ ತಿಳಿಯ ಬಾರದೆಂದು ಖಂಡಿತವಾಗಿ ಆಜ್ಞಾಪಿಸಿದನು.

೧. ಯೇಸು ಸಚೆ ಮನೆಯ ಯಜಮಾನನಾದ ಯಯಿರನ ಮನೆಯನ್ನು ಬಿಟ್ಟು ಪೋದಾಗ ಈ ಸಂಗತಿ ಉಂಟಾಯಿತು.

೨. ಬೀದಿಯಲ್ಲಿ ಅತನನ್ನು ಹಿಂಬಾಲಿಸಿದರು (ವ. ೨೮.).

೩. ದಾವೀದನ ಮಗನು ಮೆಸ್ಸೀಯನಾಗಿ ಬರುವನೆಂದು ಮುಂತಿಳಿಸಿ ಇತ್ತು; ಹೀಗಿರುವದರಿಂದ ಈ ಕುರುಡರು—ದಾವೀದನ ಮಗನೇ ಯೆಂದು ಕೂಗಿ, ಯೇಸು ಮೆಸ್ಸೀಯನಾಗಿದ್ದಾನೆಂದು ಅರಿಕೆ ಮಾಡಿದರು. ಅವರಲ್ಲಿ ವಿಶ್ವಾಸದ ಆರಂಭವು ಆಗಲೇ ಇತ್ತು; ಯೇಸು ಅದನ್ನು ಸ್ವಲ್ಪ ಪರೀಕ್ಷಿಸಿದನು. ವ. ೨೮.—

೪. ಆತ್ಮದ ಕಷ್ಟಗಳಲ್ಲಿ ಮುಖ್ಯವಾಗಿ ನಾವು ಯೇಸುವಿನ ಕರುಣೆಯನ್ನು ಬೇಡಿ ಕಾಳ್ಗಬೇಕು. ಅದರೂ ಶರೀರದ ಕಷ್ಟಗಳಲ್ಲಿಯೂ ನಾವು ಬೇಡಿ ಕಾಂಡರೆ, ಅತನು ಕೇಳದೆ ಇರಲಿಕ್ಕಿಲ್ಲ.

೫. ಮನೆಗೆ ಪೋದನೆಂದು ಪೇಳಿ ಅದೆ. ಅದರೆ ಅತನು ತನ್ನ ಮನೆಗೆ ಪೋಗಲಿಲ್ಲ, ಸ್ನೇಹಿತರಾದ ಯಾರ ಮನೆಗೆ ಪೋದನೆಂದು, ಮತ್ಥಾ. ೯, ೨೫. ಕಾಗಿ ಬರುತ್ತದೆ. ಯೇಸು ಬೀದಿಯಲ್ಲಿ ಅಲ್ಲ, ಮನೆಯಲ್ಲಿಯೇ ಅವರನ್ನು ಸ್ವಸ್ಥ ಮಾಡಿದ್ದರ ಕಾರಣವೇನಂದರೆ — ಯಯಿರನ ಮಗಳ ವಿಷಯದಲ್ಲಿ ಪೋಗಾಗಿ, ಪೋಗಿ ಇವರ ವಿಷಯದಲ್ಲಿಯೂ ಗದ್ದಲ ಆಗದ ಪೋಗೆ ಯೇಸು ಸಮೂಹದ ಮುಂದೆ ಅವರಿಗೆ ಸಹಾಯ ಮಾಡಲಿಲ್ಲ. ಯೇಸು ಅದ್ಭುತಗಳಿಂದಲ್ಲ, ವಾಕ್ಯದ ಬಲದಿಂದ ಮುಖ್ಯವಾಗಿ ಜನರ ಆತ್ಮಗಳನ್ನು ತನ್ನ ಕಡೆಗೆ ಯೆಳೆಯ ಮನಸ್ಸಾಗಿದ್ದನು. ಅತನು ಆಗಲೇ ಶತ್ರುಗಳ ಭಯದಿಂದ ಅಂತರಂಗದಲ್ಲಿ ತನ್ನ ಕ್ರಿಯೆಗಳನ್ನು ನಡಿಸಿದನೆಂದು ನೆನಸುವದಕ್ಕೆ ಕಾರಣ ಇಲ್ಲ; ಯಾಕಂದರೆ ಆಗ ಅತನಿಗೆ ಬಹಳ ಮಂದಿ ಶತ್ರುಗಳು ಇದ್ದಿಲ್ಲ. ಅದರೆ ವಾಕ್ಯದ ಪ್ರಸಂಗದಿಂದ ಮುಖ್ಯವಾಗಿ ಜನರನ್ನು ತನ್ನ ರಾಜ್ಯದಲ್ಲಿ ಶೇರಿಸ ಮನಸ್ಸಾಗಿ, ಈ ಮೊದಲಾದ ಆಶ್ಚರ್ಯಕ್ರಿಯೆಗಳನ್ನು ಕರುಣೆಯಿಂದಲೇ ಮಾಡಿದನು. ಈಗಲೂ ಕರ್ತನು ಕರುಣಿಸುವದಕ್ಕೂ, ಕರುಣೆಯಿಂದ ನಮ್ಮ ಪ್ರಾರ್ಥನೆಗಳನ್ನು ಕೇಳಿ ಆಶ್ಚರ್ಯಗಳನ್ನು ಸಹಾಯ ಮಾಡುವದಕ್ಕೂ ಸಿದ್ಧವಾಗಿದ್ದಾನೆ. ಅದರೆ ಕರ್ತನ ಜೀವ, ಮರಣ, ಪುನರುತ್ಥಾನಗಳ ಚರಿತ್ರದಲ್ಲಿ ಶೇರಿದ ಆಶ್ಚರ್ಯಗಳಿಂದ ನಮ್ಮ ವಿಶ್ವಾಸಕ್ಕೆ ಸಾಕಷ್ಟು ಆಧಾರ ಇರುವದರಿಂದ, ಯೇಸು ಆಶ್ಚರ್ಯಗಳನ್ನು ಮುಂಚಿನಷ್ಟು ಬಹಳ ಸಾರಿ ಮಾಡುವದಿಲ್ಲ. (ಯೋಹಾ. ೪, ೪೬. ಬರೆದಿರುವ ಸಂಗತಿಯನ್ನು ಸಹ ನೋಡ ಬೇಕು).

೬. ಅವರ ವಿಶ್ವಾಸವು ಬಲವನ್ನೂ ಧೈರ್ಯವನ್ನೂ ಪೋಂದಿದ ಮೇಲೆ ಯೇಸು ಅವರಿಗೆ ಸಹಾಯ ಮಾಡಿದನು. ಅಂಥಾ ಬಲವುಳ್ಳ ವಿಶ್ವಾಸವನ್ನು ಪೋಂದದ ಅನೇಕರಿಗೆ ಯೇಸು ಸಹಾಯ ಮಾಡಿದನು. ಅದರೆ ವಿಶ್ವಾಸದ ಆರಂಭವು ಯಾರಲ್ಲಿ ಇತ್ತೋ, ಅವರಲ್ಲಿ ಅದು ಅಭಿವೃದ್ಧಿಯಾಗುವ ಪೋಗೆ ಯೇಸು ತನ್ನಿಂದಾಗುವ ಉಪಾಯಗಳನ್ನೆಲ್ಲಾ ಮಾಡಿದನು. ಕುರುಡರಲ್ಲಿ ಅಂಥಾ ಆರಂಭವು ಇದ್ದದರಿಂದ ಯೇಸು ಅವರ ವಿಶ್ವಾಸವನ್ನು ಅಭಿವೃದ್ಧಿ ಮಾಡಿದನು.

ಈ ಕುರುಡರು ದೃಷ್ಟಿಯನ್ನು ಪೋಂದಿದ ಮೇಲೆ ಸಂತೋಷದಿಂದ ಸ್ತೋತ್ರ ಮಾಡಿ ಪೋಗುತ್ತಿರಲಾಗಿ (ವ. ೩೦.), ದೆವ್ವ ಹಿಡಿದ ವಾಬ್ಬ ಮೂಗನನ್ನು ಜನರು ತಕ್ಕೊಂಡು ಬಂದರು (ವ. ೩೨.). ಈ ದೆವ್ವವು ಪೋರಡಿಸಲ್ಪಟ್ಟ ಮೇಲೆ ಮೂಗನು ತಿರುಗಿ ಮಾತಾಡಿದನು. ಅದನ್ನು ನೋಡಿ ಕೇಳಿದವರಿಗೆ ಬಹಳ ಆಶ್ಚರ್ಯವಾಯಿತು. ಸಮೂಹದವರಿಗೆ ಆಶ್ಚರ್ಯವಾಗುವಷ್ಟರಲ್ಲಿ ಫರಿಸಾಯರು ಪೋಟ್ಟಿಕಿಚ್ಚು ಪಟ್ಟು, ಯೇಸು ದೆವ್ವಗಳ ಶ್ರೇಷ್ಠನ ಸಹಾಯದಿಂದ ದೆವ್ವಗಳನ್ನು ಪೋರಡಿಸುತ್ತಾನೆ ಯೆಂದು ಪೇಳಿದರು.

೧೨. ಯೇಸು ಪಸ್ಕಹಬ್ಬದ ಸಮಯದಲ್ಲಿ ವಾಂದು ವಿಶ್ರಾಂತಿದಿವಸದಲ್ಲಿ ಪೈರುಪೋಲಗಳನ್ನು ಪೋದು ಪೋದಾಗ ಸಂಭವಿಸಿದ್ದು.

ಮತ್ಥಾ. ೧೨, ೧—೮. ಮಾರ್ಕ್. ೨, ೨೫—೩೮. ಲೂಕ. ೬, ೧—೫.

ಮತ್ಥಾಯನು, ಈ ಸಂಗತಿ "ಆ ಕಾಲದಲ್ಲಿ" ಆಯಿತೆಂದು, ಪೇಳುತ್ತಾನೆ. ಮಾರ್ಕನೂ ಲೂಕನೂ ಸಹ, ಅದು ಯಾವಾಗ ಆಯಿತೆಂದು ಸ್ಪಷ್ಟವಾಗಿ ಪೇಳುವದಿಲ್ಲ. ಅದರೆ ಲೂಕನ ಆರನೇ ಸಂಧಿಯಲ್ಲಿ ಅದು ಪಸ್ಕಕಾಲದ ವಾಂದು ಸಬ್ಬಥಿನಲ್ಲಿ ಆಯಿತೆಂದು ಬರೆದದೆ. ಪೈರು ಸಹಾ ಆ ಕಾಲದಲ್ಲಿ ಪೋಗ್ಗಾಗಿತ್ತು. ಇದು ಮಾರ್ಚ್, ಎಪ್ರಿಲ್ ತಿಂಗಳುಗಳಲ್ಲಿ ಆಗುತ್ತದೆ. ಮೂಲಭಾಷೆಯಲ್ಲಿ ಇರುವ ಮಾತಿನ ಅರ್ಥ ಪ್ರಾಯವೇನಂದರೆ—ಮೊದಲನೇಯವುಗಳಲ್ಲಿ ಯೆರಡನೇದು. ಅದು ಪೋಗಂದರೆ—ಪಸ್ಕವನ್ನು ಇಸ್ರಾಯೇಲ್ಯರು ಯೇಳು ದಿವಸಗಳ ತನಕ ಆಚರಿಸುತ್ತಿದ್ದರು. ಈ ದಿವಸಗಳಲ್ಲಿ ಮೊದಲನೇದೂ ಕಡೇದೂ ಪುಬ್ಬವಾಗಿತ್ತು. ಹೀಗಿರಲಾಗಿ, ಪಸ್ಕಪುಬ್ಬದ ಆರಂಭವು (ನಿಸನ್ ತಿಂಗಳಿನ ೧೪ನೇ ದಿವಸವು) ಶನಿವಾರವಾಗುವ ಪಕ್ಷದಲ್ಲಿ, ಸಬ್ಬಥಿನ ದಿವಸವಾದ ಈ ಶನಿವಾರವು ಪುಬ್ಬದ ದಾಡ್ಡ ದಿವಸವಾಗಿತ್ತು. ಈ ಮೊದಲನೇ ದಿವಸವು ಆದಿತ್ಯವಾರವಾಗಿದ್ದರೆ, ಕಡೇ ದಿವಸದ ದಾಡ್ಡ ಪುಬ್ಬವು ಬರುವ ಸಬ್ಬಥಿನಲ್ಲಿ ಆಗುತ್ತಿತ್ತು. ಅದರೆ ಬೇರೆ ಯಾವದಾಂದು ದಿವಸದಲ್ಲಿ ಪಸ್ಕಪುಬ್ಬ ಆರಂಭವಾದರೆ, ಆ ವಾಂದೇ ಸಪ್ತಕವಾಳಿಗೆ ಮೂರು ಪುಬ್ಬಗಳು ಆಗುತ್ತಿದ್ದವು. ಅವುಗಳಲ್ಲಿ ಶ್ರೇಷ್ಠವಾದದ್ದು ಪಸ್ಕಪು

ಮತ್ಥ್. ೧೨, ೧—೮. ಮಾರ್ಕ್. ೨, ೨೩—೨೮.

ಬ್ಬದ ಈರಂಚವು. ಅದಕ್ಕೆ ಸಮಾನವಾದ ಯೆರಡನೇದು ಈ ನಡುವೆ ಬಂದ ಸಬ್ಬಥು; ಮೂರನೇದು ಪಸ್ಕಪಾಬ್ಬದ ಕಡೆ ದಿವಸವು. ಪೋಗಿರುವದರಿಂದ ಅಂಥಾ ಸಬ್ಬತಿಗೆ ಮೊದಲನೆಯವುಗಳಲ್ಲಿ, ಅಂದರೆ, ಶ್ರೇಷ್ಠವಾದವುಗಳಲ್ಲಿ; ಯೆರಡನೇದು ಯೆಂದು ಪೇಸರಾಯಿತು.

ಇಲ್ಲಿ ಪೋಳಿರುವ ಪಸ್ಕಪಾಬ್ಬವು ಯೇಸು ತನ್ನ ಉದ್ಯೋಗವನ್ನು ಈರಂಭಿಸಿದ ಮೇಲೆ ಯೆರಡನೇದಾಗಿತ್ತೆರಿದು ಕಾಣುತ್ತದೆ. ಯೇಸು ದೆಶಂಬರ್ ತಿಂಗಳಲ್ಲಿ ಗಲಿಲಾಯಕ್ಕೆ ಬಂದನೆಂದು, ನಾವು ನೋಡಿದೆವು (ಯೋಹ. ೪.). ಅಂದಿನಿಂದ ಇಲ್ಲಿ ಬರೆದಿರುವ ಸಂಗತಿಯ ಪರ್ಯಂತರ ನಾಲ್ಕು ತಿಂಗಳು ಪೋಗಿರ ಬಹುದು; ಇನ್ನೂ ಸ್ವಲ್ಪ ಕಾಲ ಪೋದ ಮೇಲೆ ಯೇಸು ಪಂಚಾಶತ್ತಿನ ಪಾಬ್ಬವನ್ನಾಚರಿಸುವ ಬಗ್ಗೆ ಯೆರೂಸಲೇಮಿಗೆ ಪೋದನು. ಈ ಯೆರಡು ಕಾಲಗಳ ನಡುವೆ ಪಸ್ಕಪಾಬ್ಬದ ಕಾಲದಲ್ಲಿ ಈದ ಸಂಗತಿ ಇಲ್ಲಿ ಬರುತ್ತದೆ. ಪೋಗಿರುವದರಿಂದ ತಿಳುಕಾಳ್ಳ ತಕ್ಕದ್ದೇನಂದರೆ. a.) ತನ್ನ ಉದ್ಯೋಗದ ಸಮಯದಲ್ಲಿ ಈದ ಯೆರಡನೇ ಪಸ್ಕಪಾಬ್ಬಕ್ಕೆ ಯೇಸು ಪೋಗಲಿಲ್ಲ. ಈತನು ಗಲಿಲಾಯದಲ್ಲಿಯೇ ಇದ್ದನು. ಯಾಕಂದರೆ ಈತನು ಪೈರಿನ ಪೋಲವನ್ನು ದಾಟಿ ಸಮುದ್ರದ ತೀರದಲ್ಲಿ ಸಂಚಾರ ಮಾಡಿದನೆಂದೂ, ಮತ್ತಾಯನನ್ನು ಕರೆದ ಸಮಯದಲ್ಲಿ ಮಾಡಿದ ಪ್ರಕಾರವೇ ತಿರಿಗಿ ಸಮುದ್ರದ ಬಳಿಯಲ್ಲಿ ಸಂಚಾರ ಮಾಡಿದನೆಂದೂ ಮಾರ್ಕ. ೨, ೨೩. ಸ್ಪಷ್ಟವಾಗಿ ಪೇಳಿ ಅದೆ. b.) ಈ ಪಸ್ಕಕಾಲದಲ್ಲಿ ವಿಶೇಷವಾದದ್ದೇನಾದರೂ ಈಗದ ಕಾರಣಿ ಯೇಸುವಿನ ಚರಿತ್ರದ ವಾರಂದು ಭಾಗವನ್ನು ಇಲ್ಲಿ ಮುಗಿಸುವದಕ್ಕೂ, ಮತ್ತೊಂದನ್ನು ಈರಂಭಿಸುವದಕ್ಕೂ, ಕಾರಣಿ ತೋರುವದಿಲ್ಲ. ಯೋಹ. ೫, ೧. ಬರೆದಿರುವ ಪಂಚಾಶತ್ತಿನ ಪಾಬ್ಬದ ಕಾಲದಲ್ಲಿಯೇ ವಾರಂದು ಪೂರ್ತಿ ಭಾಗವನ್ನು ಈರಂಭಿಸ ಬೇಕು.

ಮತ್ಥ್. ೧೨, ೧. ಆ ಕಾಲದಲ್ಲಿ ಯೇಸು ಸಬ್ಬಥಿನಲ್ಲಿ ಪೈರಿನ ಪೋಲಗಳನ್ನು ಪೋದು ಪೋಗುವಾಗ, ಈತನ ಶಿಷ್ಯರು ಪಸಿದು, ತೆನೆಗಳನ್ನು ಕಿತ್ತು, ತಿನ್ನಲಾರಂಭಿಸಿದರು. ೨. ಆದರೆ ಫರಿಸಾಯರು ನೋಡಿ, ಈತನಿಗೆ,—ಇಗೋ, ನಿನ್ನ ಶಿಷ್ಯರು ಸಬ್ಬಥಿನಲ್ಲಿ ಮಾಡ ಬಾರದ್ದನ್ನು ಮಾಡುತ್ತಾರೆ, ಅಂದರು. ೩. ಈತನು ಅವರಿಗೆ,—ದಾವೀದನು, ಅವನೂ ಅವನ ಸಂಗಡ ಇದ್ದವರೂ ಪಸಿದಾಗ, ಯೇನು ಮಾಡಿದನೆಂದು, ೪. ಅವನು ದೇವರ ಮನೆಯಲ್ಲಿ ಪ್ರವೇಶಿಸಿ, ಯಾಜಕರು ಮಾತ್ರವೇ ಪೋಗತಕ್ಕ, ಅವನೂ ಅವನ ಸಂಗಡ ಇದ್ದವರೂ ತಿನ್ನ ಬಾರದ ಸಮುಖದ ರೊಟ್ಟಿಗಳನ್ನು ತಿಂದನೆಂದು, ನೀವು ವಾಚಿಸಲಿಲ್ಲವಾ? ೫. ಇಲ್ಲವೆ ಸಬ್ಬಥುಗಳಲ್ಲಿ ಯಾಜಕರು ದೇವಾಲಯದಲ್ಲಿ ಸಬ್ಬಥನ್ನು ಭಂಗ ಮಾಡಿ, ಅಪರಾಧವಿಲ್ಲದೆ ಇದ್ದಾರೆಂದು, ನ್ಯಾಯ ಪ್ರಮಾಣದಲ್ಲಿ ವಾಚಿಸಲಿಲ್ಲವಾ? ೬. ಆದರೂ ನಿಮಗೆ ಪೇಳುತ್ತೇನೆ,—ದೇವಾಲಯಕ್ಕಿಂತ ದಾಡ್ಡವನು ಇಲ್ಲಿ ಇದ್ದಾನೆ. ೭. ಆದರೆ, ನನಗೆ ಬಲಿಯಲ್ಲ, ಕರುಣೆಯೇ ಬೇಕು, ಯೆಂಬ ಮಾತು ಯೇನೆಂದು ನೀವು ತಿಳಿದಿದ್ದರೆ, ನಿರಪರಾಧಿಗಳಿಗೆ ಆಗ್ಗೆ ನಿರ್ಣಯಿಸದೆ ಇರುತ್ತಿದ್ದಿರಿ.

ಮಾರ್ಕ್. ೨, ೨೭. ಮತ್ತು ಅವರಿಗೆ ಪೇಳಿದ್ದೇನಂದರೆ—ಮನುಷ್ಯನು ಸಬ್ಬಥಿಗಾಸ್ಕರವಲ್ಲ, ಸಬ್ಬಥು ಮನುಷ್ಯನಿಗಾಸ್ಕರ ಉಂಟಾಯಿತು. ೨೮. [ಮತ್ಥ್. ೧೨, ೮.] ಪೂರ್ಣರಲಾಗಿ ಮನುಷ್ಯನ ಮಗನು ಸಬ್ಬಥಿಗೂ ಕರ್ತನಾಗಿದ್ದಾನೆ.

ಈ ದಾಡ್ಡ ಸಬ್ಬಥಿನಲ್ಲಿ ಶಿಷ್ಯರ ಸಂಗಡ ಪೈರಿನ ಪೋಲಗಳನ್ನು ದಾಟಿದದರಿಂದ ಸಬ್ಬಥಿನ ಆಚರಣೆಯ ವಿಷಯವಾಗಿ ಫರಿಸಾಯರ ಸರಿಗಡ ಮಾತಾಡುವದಕ್ಕೆ ಅವಕಾಶವಾಯಿತು. ಅದು ಪೂರ್ಣವಂದರೆ—ಶಿಷ್ಯರಿಗೆ ಪಸಿವೆ ಇತ್ತು (ಮತ್ಥ್. ೧೨, ೧.); ಅವರು ತೆನೆಗಳನ್ನು ಕಿತ್ತು, ತಮ್ಮ ಕೈಗಳಿಂದ ಪಾರಿಸಿ, ತಿನ್ನುವದಕ್ಕೆ ಅರಂಭ ಮಾಡಿದರು. ತೆನೆಗಳನ್ನು ಕೀಳುವದರಲ್ಲಿ ಯೇನೂ ತಪ್ಪು ಇದ್ದಿಲ್ಲ. ಪೂರ್ಣಗೆ ಮಾಡ ಬಹುದೆಂದು ನ್ಯಾಯಪ್ರಮಾಣದಲ್ಲಿ ಪೇಳಿ ಇತ್ತು. ಆದರೆ ಅಂಥಾ ಕೆಲಸ ಮಾಡಿ ಅವರು ಸಬ್ಬಥನ್ನು ಮಿರಿದದರಿಂದ, ಫರಿಸಾಯರು ಯೇಸುವಿನ

ಮತ್ಥ. ೧೨, ೯—೧೪. ಮಾರ್ಕ. ೩, ೧—೬. ಲೂಕ. ೬, ೬—೧೧.

ಸಂಗಡ ತಕ್ಕ ಮಾಡಿದರು. ಯೇಸು ಅವರಿಗೆ ನಾಲ್ಕು ವಿಧವಾದ ಉತ್ತರವನ್ನು ಕೊಟ್ಟನು. .a) ದಾವೀದನಿಗೆ ಪುರೋಹಿತನಾಗಿ, ಅವನು ಸ ಮುಖದ ರೊಟ್ಟಿಯನ್ನು ತಿಂದು, ಬಾರದ ಕೆಲಸವನ್ನು ಮಾಡಿದನು (೧ ಸಾಮು. ೨೧, ೬). — ಕಳ್ಳತನ ಮೊದಲಾದ ಅನ್ಯಾಯಗಳನ್ನು ಯೆಂದಿಗಾ ದರೂ ಮಾಡ ಬಾರದೆಂಬುವದು ನಿಶ್ಚಯ; ಆದರೆ ನೇಮಾಚಾರಗಳನ್ನು ಬಹಿಳ ಅವಸರವಿರುವ ಪಕ್ಷದಲ್ಲಿ ಮಿರ ಬಹುದೆಂದು ಯೇಸು ದಾ ವೀದನ ಉದಾಹರಣೆಯಿಂದ ತೋರಿಸುತ್ತಾನೆ. b.) ಯಾಜಕರು ದೇವಾಲಯದ ಸೇವೆಯನ್ನು ಮಾಡ ಬೇಕಾಗಿದ್ದದರಿಂದ, ಸಬ್ಬಥಿನಲ್ಲಿಯೂ ಕೆಲ ಸ ಮಾಡ ಬೇಕಾಯಿತು (ಮತ್ಥ. ೧೨, ೫. ೬.). ಹೀಗಿರುವದರಿಂದ ಸಬ್ಬಥಿನಲ್ಲಿ ಮಾಡುವ ಕೆಲಸವೆಲ್ಲಾ ಪಾಪವೇ ಯೆಂದು ಹೇಳ ಕೂಡ ದು; ಮಾಡುವ ಕೆಲಸಗಳ ಹೆಚ್ಚುಕಡಿಮೆಯನ್ನು ನೋಡ ಬೇಕು. "ನನ್ನ ಶಿಷ್ಯರು ನನ್ನನ್ನು ಹಿಂಬಾಲಿಸುತ್ತಾ, ನನಗೆ ಸೇವೆ ಮಾಡುತ್ತಾ, ತೆನೆಗಳ ನ್ನು ಕಿತ್ತು, ತಮ್ಮ ಪುರೋಹಿತನಾದ ನನ್ನ ಕೆಲಸ ಯಾಜಕರು ದೇವಾಲಯದಲ್ಲಿ ಮಾಡುವ ಕೆಲಸಕ್ಕಿಂತಲೂ ಅಗತ್ಯವಾಗಿದೆ; ಯಾಕಂದರೆ ನಾ ನು ದೇವಾಲಯಕ್ಕಿಂತಲೂ ದಾಡ್ಡವನು", ಯೆಂದು ಯೇಸು ಹೇಳಿದನು. c.) ಫರಿಸಾಯರು ಹೇಳಿದ ದೂರು ಸತ್ಯಮನಸ್ಸಿನಿಂದಲೂ, ದೇವ ರ ಮನದ ವಿಷಯವಾದ ಆಸಕ್ತಿಯಿಂದಲೂ ಉಂಟಾಗಲಿಲ್ಲ (ಮತ್ಥ. ೧೨, ೭.). ಅವರು ಶಿಷ್ಯರ ಮೇಲೆ ನಿದೇಶ ಮಾಡಿ ಮಾತಾಡಿದರು. ಆದದರಿಂದ ಯೇಸು, ಲೇವಿಯೆ ಸಂಗಡ ಊಟ ಮಾಡಿದಾಗ ಅವರಿಗೆ ಹೇಳಿದ ಮಾತನ್ನು (ಪ್ರಾಶ್. ೬, ೬.) ಅವರಿಗೆ ಜ್ಞಾಪಕ್ಕೆ ಹೇ ಳುತ್ತಾನೆ. d.) ಸಬ್ಬಥಿನ ಅಭಿಪ್ರಾಯವೇನೆಂದು, ಯೇಸು ವಿವರಿಸುತ್ತಾನೆ. ಅದು ಮನುಷ್ಯರಿಗಾಗಿಸ್ಥರವೇ ಉಂಟಾಯಿತೆಂದು ತೋರಿಸುತ್ತಾನೆ. ಮಾರ್ಕ. ೨, ೨೭. ಹೀಗಿರುವದರಿಂದ ಸಬ್ಬಥನ್ನು ವಿವೇಕದಿಂದಲೇ ಆಚರಿಸ ಬೇಕು. ಮತ್ತಾಬ್ಬರು ಮಾಡುವದನ್ನು ಸಹ ವಿವೇಕದಿಂದ ಲೇ ಪರೀಕ್ಷಿಸ ಬೇಕು. ನ್ಯಾಯಪ್ರಮಾಣದ ಅಕ್ಷರವನ್ನಲ್ಲ, ಅದರ ಆತ್ಮವನ್ನೇ ಅನುಸರಿಸುವದರಲ್ಲಿ ಉಪಯೋಗ ಉಂಟು. ಶರೀರದ ವಿಶ್ರಾಂ ತಿಗೂ ದೇವರ ಸ್ಮರಣೆಗೂ ಯೇನು ಉಪಯೋಗವಾಗಿದೆ ಯೆಂದು ವಿಚಾರಿಸ ಬೇಕು. ಈ ಯೆರಡು ಮುಖ್ಯವಾದ ಕಾರ್ಯಗಳಿಗೆ ಅಚ್ಚಂತರ ಮಾಡದೆ ಇರುವಂಥಾದ್ದು ಅನ್ಯಾಯವಾದದ್ದಲ್ಲ; ಆದರೆ ಈ ಯೆರಡು ಅಭಿಪ್ರಾಯಗಳಿಗೆ ಯಾವದು ಉಪಯೋಗವಾಗಿದೆಯೋ, ಯಾವದು ವಿ ರೋಧವಾಗಿದೆಯೋ, ಯೆಂದು ನಮಗೆ ಖಾಂದಾಂದು ವೇಳೆ ನೆಟ್ಟಗೆ ತಿಳಿಯದೆ ಇದ್ದಾಗ್ಯೂ, ಸಬ್ಬಥಿನ ಯಜಮಾನನಾದ ಯೇಸುವಿಗೆ ತಿಳಿದದೆ. ಮನುಷ್ಯರ ಶರೀರಾತ್ಮಗಳಿಗೆ ರಕ್ಷಣೆ ಆಗುವ ಬಗ್ಗೆ ಸಬ್ಬಥು ನೇಮಿಸಲ್ಪಟ್ಟಿತಷ್ಟೆ. ಆದರೆ ಆ ರಕ್ಷಣೆಯನ್ನುಂಟು ಮಾಡುವವನು ದೇವರ ಮತ್ತು ಮನುಷ್ಯನ ಮಗನಾದ ಯೇಸುವೇ. ಹೀಗಿರುವದರಿಂದ ಆ ರಕ್ಷಣೆಯನ್ನು ಉಂಟು ಮಾಡುವ ಬಗ್ಗೆ ಯೇಸುವಿಗೆ ಯೆಲ್ಲಾ ಕಾರ್ಯಗಳ ಮೇಲೆಯೂ ಮನುಷ್ಯರಿಗಾಗಿಸ್ಥರ ಉಂಟಾದ ಸಬ್ಬಥಿನ ಮೇಲೆಯೂ ಅಧಿಕಾರ ಉಂಟಾಯಿತು. ಮನುಷ್ಯರ ರಕ್ಷಣೆಗಾಗಿಪಕವಾಗಿ ಯೇಸು ಸಬ್ಬಥಿ ನ ಆಚಾರದ ವಿಷಯದಲ್ಲಿ ಪ್ರಾಸ ಕ್ರಮವನ್ನು ನೇಮಿಸಿದ್ದಾನೆ.

೧೫. ಯೇಸು ವಿಶ್ರಾಂತಿದಿವಸದಲ್ಲಿ ವಾಂದು ಸಾಲೆಯಲ್ಲಿ ಬೋಧಿಸುವಾಗ, ವಾಗಿದ ಕೈಯನ್ನು ಸ್ವಸ್ಥ ಮಾಡಿದ್ದು.

ಮತ್ಥ. ೧೨, ೯—೧೪. ಮಾರ್ಕ. ೩, ೧—೬. ಲೂಕ. ೬, ೬—೧೧.

ಈ ತೆನೆಗಳ ಸಂಗತಿ ಆದ ಕೂಡಲೇ ಇದು ಉಂಟಾಯಿತೆಂದು, ಮತ್ಥಾಯೆನು ವ. ೯. ಸ್ಪಷ್ಟವಾಗಿ ತೋರಿಸುತ್ತಾನೆ. ಯೇಸು ಸಮುದ್ರ ತೀರವನ್ನು ಬಿಟ್ಟು, ವಾಂದು ಸಾಲೆಗೆ (ವಾಂದು ಮೇಳೆ ಕಪೆನಃವೂಮಿಗೆ) ಪ್ರಾಸಾದನು. —

ಸಬ್ಬಥುಗಳಲ್ಲಿ ಮುಖ್ಯವಾಗಿ ಸಾಲೆಗಳಲ್ಲಿ ಬೋಧಿಸುತ್ತಾ ಯೇಸು ತನ್ನ ಉದ್ಯೋಗವನ್ನು ಬಹಿಳ ಯೆಚ್ಚರಿಕೆಯಿಂದ ನಡಿಸಿದೆನು. ಆದರೆ ಫ ರಿಸಾಯರು ಆತನ ಮೇಲೆ ಪಾಗೆ ಮಾಡಿ, ಯೆಲ್ಲಾ ಕಡೆಯಲ್ಲಿಯೂ ಆತನನ್ನು ಯೆದುರಿಸಿದರು. ತೆನೆಗಳ ವಿಷಯದಲ್ಲಿ ತಕ್ಕ ಮಾಡಿದವರನ್ನು ಯೇಸು ಸುಮ್ಮನಿರಿಸಿದನು; ಆದರೆ ಈಗ, ಸಬ್ಬಥಿನಲ್ಲಿ ವಾಂದು ಸಾಲೆಯೊಳಗೆ ಬೋಧಿಸುವ ವೇಳೆಯಿಲ್ಲಿ, ಚೇರಾಬ್ಬರಿಗೆ ಚೇರೆ ಅಸ್ಪದವಾಯಿ ತು. ವಾಗಿದ ಕೈಯುಳ್ಳ ವಾಬ್ಬ ಮನುಷ್ಯನು ಅಲ್ಲಿ ಇರಲಾಗಿ, — ಆತನು ಸಬ್ಬಥಿನ ದಿವಸದಲ್ಲಿ ಅವನನ್ನು ಸ್ವಸ್ಥ ಮಾಡುವನೋ ಯೆಂ ದು, ಫರಿಸಾಯರು ಪ್ರಾಸಾರಿಸಿ ನೋಡಿದರು. ಯೇಸು ಈ ಮನುಷ್ಯನನ್ನು ಮಧ್ಯದಲ್ಲಿ ನಿಂದ್ರಿಸಿದಾಗ, ಫರಿಸಾಯರು ಕ್ಷೋಭೆಯಲ್ಲಿ (ಮತ್ಥ ೧೨, ೧೦.) ಯೆದ್ದು ನಿಂತು — ಸಬ್ಬಥಿನಲ್ಲಿ ಸ್ವಸ್ಥ ಮಾಡುವದು ಸರಿಯೋ? ಯೆಂದು ಕೂಗಿದರು. ಮುಂಚಿನವರಿಗಿಂತಲೂ ದುಷ್ಟ ಮನಸ್ಸು ಇವರ ಲ್ಲಿ ಇತ್ತು. ಯಾಕಂದರೆ ಆವಾಗ ಪುರೋಹಿತನನ್ನು ತಿರಿಸುವ ವಿಷಯದಲ್ಲಿ, ಇಲ್ಲಿ ಬಹುಕಷ್ಟವೆಳ್ಳ ರೋಗವನ್ನು ಪರಿಹರಿಸುವ ವಿಷಯದಲ್ಲಿ, ಮಾತು ಆಯಿತು. ಮಾರ್ಕ. ೩, ೪. ಲೂಕ. ೬, ೯. ಆದದರಿಂದ ಯೇಸು ಇವರಿಗೆ ಬಹುಖಂಡಿತವಾದ ಉತ್ತರವನ್ನು ಕೊಟ್ಟು, ಅವರ ಕಠಿಣ ಮನಸ್ಸಿನ ನಿಮಿತ್ತ ದುಃಖಗೊಂಡು, ಕೋಪಿಸಿ, ಆ ಮನುಷ್ಯನಿಗೆ—ನಿನ್ನ ಕೈ ಚಾಚು! ಯೆಂದು ಹೇಳಿ, ಅವನ್ನು ಕ್ಷಣಮಾತ್ರದಲ್ಲಿ ಸ್ವಸ್ಥ ಮಾ ಡಿ, ಅವರನ್ನು ನಾಚಿಕೆ ಪಡಿಸಿದನು. ಆದರೆ ಫರಿಸಾಯರು ಬುದ್ಧಿಯನ್ನು ಕಲಿಯದೆ, ಹೆಚ್ಚು ಶಿಟ್ಟು ಮಾಡಿ, ಸಾಲೆಯನ್ನು ಬಿಟ್ಟು, ಪೂರಾ ಆ ದನ ವಾಗಲಗದವರೆ ಸಂಗಡ, ಯೇಸುವನ್ನು ಯಾವ ಪ್ರಕಾರದಲ್ಲಿ ಕಾಂದುಪ್ರಾಕಿಲಾದೀತೆಂದು ಆಲೋಚನೆ ಮಾಡಿದರು. ಯಾಕಂದರೆ ಆ

ಮತ್ಥ. ೧೨, ೧೩—೨೧. ೪, ೨೪. ೨೫. ಮಾರ್ಕ. ೩, ೭—೧೯.
ಲೂಕ. ೬, ೧೨—೧೯. ಮತ್ಥ. ೧೦, ೨—೪.

ಪೌರಾಣದವರು ಸ್ನಾನಿಕನಾದ ಯಾಪಾನನ ಮೇಲೆ ದ್ವೇಷ ಮಾಡಿದ ಪ್ರಕಾರ ಯೇಸುವಿನ ಮೇಲೆಯೂ ಆಗಲೇ ಮಾಡಿದರೆಂದು ಕಾಣುತ್ತದೆ. ಯೇಸು ತನ್ನ ದಿವ್ಯಮಹಿಮೆಯನ್ನು ಪ್ರಸಿದ್ಧಿ ಮಾಡಿದಾಗಲೇ ಅತನನ್ನು ಕಾಂದು ಪಾಕ ಬೇಕೆಂದು ನಿಶ್ಚಯಿಸಿ ಕಾಂಡವರಲ್ಲಿ ಬಹಳ ಕಠಿಣವಾದ ಮನಸ್ಸು ಇತ್ತೆಂದು ನೆನಸ ಬಹುದು. ಆದರೆ ಕತ್ತಲೆಯ ಅಧಿಕಾರವು ಅಂಥಾದ್ದೇ ಸರಿ.

೧೪. ಯೇಸು ಸಮೂಹವನ್ನು ಅಗಲ ಬೇಕೆಂಬ ಆಲೋಚನೆಯಿಂದ ಪಾಡಗವನ್ನೇರುತ್ತಾನೆ.

ಪರ್ವತದ ಮೇಲೆ ಪ್ರಾರ್ಥನೆ ಮಾಡುತ್ತಾ ರಾತ್ರಿಯನ್ನು ಕಳೆಯುತ್ತಾನೆ. ಮರುದಿವಸದಲ್ಲಿ ಅಪಾಸ್ತಲರ ಲೆಕ್ಖವನ್ನು ನೋಮಿಸುತ್ತಾನೆ. ಕೆಲವು ಆಶ್ಚರ್ಯಕ್ರಿಯೆಗಳನ್ನು ಮಾಡುತ್ತಾನೆ.

ಮತ್ಥ. ೧೨, ೧೩—೨೧. ೪, ೨೪. ೨೫. ಮಾರ್ಕ. ೩, ೭—೧೯.
ಲೂಕ. ೬, ೧೨—೧೯. (ಮತ್ಥ. ೧೦, ೨—೪.)

೧೨—೧೪.... ೪೭೫
೧೫—೨೧.... ೪೭೬
೨೨—೨೫.... ೪೭೭
೨೬—೩೪.... ೪೭೮
೩, ೧..... ೪೭೯
೨— ೫.... ೪೮೦
೬—೧೨.... ೪೮೧
೧೩—೧೬.... ೪೮೨
೧೭—೨೪.... ೪೮೩
೪, ೧— ೬.... ೪೮೪
೭—೧೦.... ೪೮೫
೧೧—೧೪.... ೪೮೬
೧೫—೨೧.... ೪೮೭
೨೨—೨೫.... ೪೮೮

೨ ಯೌಹಾ.

೧, ೧—೧೩.... ೪೯೦

ಪುಟ.

೧೪—೨೩.... ೪೯೦
೨೪—೨೮.... ೪೯೧
೧೩, ೧— ೪.... ೪೯೨
೫— ೮.... ೪೯೩
೯—೧೨.... ೪೯೪

ಶಿಯೌಹಾ.

೧, ೧—೧೫.... ೪೯೫

ಹಿಬ್ರಿ.

೧, ೧— ೩.... ೪೯೬
೪— ೭.... ೪೯೭
೮—೧೪.... ೪೯೮
೨, ೧— ೬.... ೪೯೯
೭—೧೨.... ೫೦೦
೧೩—೧೫.... ೫೦೧
೩, ೧— ೬.... ೫೦೨
೭—೧೨.... ೫೦೩
೧೩—೧೬.... ೫೦೪
೪, ೧— ೪.... ೫೦೫
೫— ೮.... ೫೦೬
೯—೧೩.... ೫೦೭
೧೪—೧೭.... ೫೦೮
೫, ೧— ೬.... ೫೦೯
೭—೧೦.... ೫೧೦
೧೧—೧೪.... ೫೧೧
೬, ೧— ೭.... ೫೧೨
೮—೧೨.... ೫೧೩
೧೩—೧೫.... ೫೧೪
೭, ೧— ೩.... ೫೧೫
೪—೧೦.... ೫೧೬
೧೧—೧೩.... ೫೧೭
೮, ೧— ೩.... ೫೧೮
೪—೧೦.... ೫೧೯
೧೧—೧೪.... ೫೨೦
೯, ೧— ೩.... ೫೨೧
೪—೧೦.... ೫೨೨
೧೧—೧೪.... ೫೨೩
೧೦, ೧— ೪.... ೫೨೪
೫— ೮.... ೫೨೫
೯—೧೨.... ೫೨೬
೧೩—೧೬.... ೫೨೭
೧೭—೨೦.... ೫೨೮
೧೧, ೧— ೪.... ೫೨೯
೫—೧೦.... ೫೩೦
೧೧—೧೪.... ೫೩೧
೧೫—೧೮.... ೫೩೨
೧೯—೨೨.... ೫೩೩
೨೩—೨೬.... ೫೩೪
೧೨, ೧— ೩.... ೫೩೫
೪—೧೦.... ೫೩೬
೧೧—೧೩.... ೫೩೭

ಪುಟ.

೧೪—೧೭.... ೫೩೮
೧೮—೨೩.... ೫೩೯
೨೪—೨೭.... ೫೪೦
೧೩, ೧— ೩.... ೫೪೧
೪—೧೦.... ೫೪೨
೧೧—೧೪.... ೫೪೩
೧೫—೧೮.... ೫೪೪
೧೯—೨೨.... ೫೪೫
೨೩—೨೬.... ೫೪೬
೧೪, ೧— ೩.... ೫೪೭
೪—೧೦.... ೫೪೮
೧೧—೧೪.... ೫೪೯
೧೫—೧೮.... ೫೫೦
೧೯—೨೨.... ೫೫೧
೨೩—೨೬.... ೫೫೨
೧೫, ೧— ೩.... ೫೫೩
೪—೧೦.... ೫೫೪
೧೧—೧೪.... ೫೫೫
೧೬, ೧— ೩.... ೫೫೬
೪—೧೦.... ೫೫೭
೧೧—೧೪.... ೫೫೮
೧೭, ೧— ೩.... ೫೫೯
೪—೧೦.... ೫೬೦
೧೧—೧೪.... ೫೬೧
೧೮, ೧— ೩.... ೫೬೨
೪—೧೦.... ೫೬೩
೧೧—೧೪.... ೫೬೪
೧೯, ೧— ೩.... ೫೬೫
೪—೧೦.... ೫೬೬
೧೧—೧೪.... ೫೬೭
೨೦, ೧— ೩.... ೫೬೮
೪—೧೦.... ೫೬೯
೧೧—೧೪.... ೫೭೦
೨೧, ೧— ೩.... ೫೭೧
೪—೧೦.... ೫೭೨
೧೧—೧೪.... ೫೭೩
೨೨, ೧— ೩.... ೫೭೪
೪—೧೦.... ೫೭೫
೧೧—೧೪.... ೫೭೬
೨೩, ೧— ೩.... ೫೭೭
೪—೧೦.... ೫೭೮
೧೧—೧೪.... ೫೭೯
೨೪, ೧— ೩.... ೫೮೦
೪—೧೦.... ೫೮೧
೧೧—೧೪.... ೫೮೨
೨೫, ೧— ೩.... ೫೮೩
೪—೧೦.... ೫೮೪
೧೧—೧೪.... ೫೮೫
೨೬, ೧— ೩.... ೫೮೬
೪—೧೦.... ೫೮೭
೧೧—೧೪.... ೫೮೮

ಪುಟ.

೨೭, ೧— ೩.... ೫೮೯
೪—೧೦.... ೫೯೦
೧೧—೧೪.... ೫೯೧
೨೮, ೧— ೩.... ೫೯೨
೪—೧೦.... ೫೯೩
೧೧—೧೪.... ೫೯೪
೨೯, ೧— ೩.... ೫೯೫
೪—೧೦.... ೫೯೬
೧೧—೧೪.... ೫೯೭
೩೦, ೧— ೩.... ೫೯೮
೪—೧೦.... ೫೯೯
೧೧—೧೪.... ೬೦೦
೩೧, ೧— ೩.... ೬೦೧
೪—೧೦.... ೬೦೨
೧೧—೧೪.... ೬೦೩
೩೨, ೧— ೩.... ೬೦೪
೪—೧೦.... ೬೦೫
೧೧—೧೪.... ೬೦೬
೩೩, ೧— ೩.... ೬೦೭
೪—೧೦.... ೬೦೮
೧೧—೧೪.... ೬೦೯
೩೪, ೧— ೩.... ೬೧೦
೪—೧೦.... ೬೧೧
೧೧—೧೪.... ೬೧೨
೩೫, ೧— ೩.... ೬೧೩
೪—೧೦.... ೬೧೪
೧೧—೧೪.... ೬೧೫
೩೬, ೧— ೩.... ೬೧೬
೪—೧೦.... ೬೧೭
೧೧—೧೪.... ೬೧೮
೩೭, ೧— ೩.... ೬೧೯
೪—೧೦.... ೬೨೦
೧೧—೧೪.... ೬೨೧
೩೮, ೧— ೩.... ೬೨೨
೪—೧೦.... ೬೨೩
೧೧—೧೪.... ೬೨೪
೩೯, ೧— ೩.... ೬೨೫
೪—೧೦.... ೬೨೬
೧೧—೧೪.... ೬೨೭
೪೦, ೧— ೩.... ೬೨೮
೪—೧೦.... ೬೨೯
೧೧—೧೪.... ೬೩೦
೪೧, ೧— ೩.... ೬೩೧
೪—೧೦.... ೬೩೨
೧೧—೧೪.... ೬೩೩
೪೨, ೧— ೩.... ೬೩೪
೪—೧೦.... ೬೩೫
೧೧—೧೪.... ೬೩೬

ಪುಟ.

೪೩, ೧— ೩.... ೬೩೭
೪—೧೦.... ೬೩೮
೧೧—೧೪.... ೬೩೯
೪೪, ೧— ೩.... ೬೪೦
೪—೧೦.... ೬೪೧
೧೧—೧೪.... ೬೪೨
೪೫, ೧— ೩.... ೬೪೩
೪—೧೦.... ೬೪೪
೧೧—೧೪.... ೬೪೫
೪೬, ೧— ೩.... ೬೪೬
೪—೧೦.... ೬೪೭
೧೧—೧೪.... ೬೪೮
೪೭, ೧— ೩.... ೬೪೯
೪—೧೦.... ೬೫೦
೧೧—೧೪.... ೬೫೧
೪೮, ೧— ೩.... ೬೫೨
೪—೧೦.... ೬೫೩
೧೧—೧೪.... ೬೫೪
೪೯, ೧— ೩.... ೬೫೫
೪—೧೦.... ೬೫೬
೧೧—೧೪.... ೬೫೭
೫೦, ೧— ೩.... ೬೫೮
೪—೧೦.... ೬೫೯
೧೧—೧೪.... ೬೬೦
೫೧, ೧— ೩.... ೬೬೧
೪—೧೦.... ೬೬೨
೧೧—೧೪.... ೬೬೩
೫೨, ೧— ೩.... ೬೬೪
೪—೧೦.... ೬೬೫
೧೧—೧೪.... ೬೬೬

ಯಾಕೋ.

೧, ೧..... ೬೬೭
೨— ೬.... ೬೬೮
೭—೧೨.... ೬೬೯
೧೩—೧೮.... ೬೭೦
೧೯—೨೩.... ೬೭೧
೨೪—೨೮.... ೬೭೨
೨, ೧— ೩.... ೬೭೩
೪— ೭.... ೬೭೪
೮—೧೨.... ೬೭೫
೧೩—೧೭.... ೬೭೬
೩, ೧— ೪.... ೬೭೭
೫— ೮.... ೬೭೮
೯—೧೩.... ೬೭೯
೪, ೧— ೪.... ೬೮೦
೫— ೮.... ೬೮೧
೯—೧೨.... ೬೮೨
೧೩—೧೭.... ೬೮೩
೫, ೧— ೪.... ೬೮೪
೫— ೮.... ೬೮೫
೯—೧೨.... ೬೮೬

ಪುಟ.

೧೩—೧೭.... ೬೮೭
೧೮—೨೨.... ೬೮೮
೬, ೧— ೪.... ೬೮೯
೫— ೮.... ೬೯೦
೯—೧೨.... ೬೯೧
೧೩—೧೭.... ೬೯೨
೭, ೧— ೪.... ೬೯೩
೫— ೮.... ೬೯೪
೯—೧೨.... ೬೯೫
೧೩—೧೭.... ೬೯೬

ಯೂದ.

೧, ೧— ೩.... ೬೯೭
೪—೧೦.... ೬೯೮
೧೧—೧೬.... ೬೯೯
೧೭—೨೩.... ೭೦೦

ಪ್ರಕ.

೧, ೧— ೬.... ೭೦೧
೭— ೮.... ೭೦೨

		ಪುಟ.
	೧೦—೨೦....	೫೫೬
೨,	೧— ೭....	೫೫೪
	೪—೧೧....೧೦೦೦	
	೧೨—೧೭....೧೦೦೧	
	೧೪—೨೦....೧೦೦೨	
	೨೧—೨೫....೧೦೦೩	
೩,	೧— ೫....೧೦೦೪	
	೬— ೫....೧೦೦೫	
	೧೦—೧೩....೧೦೦೬	
	೧೪—೧೫....೧೦೦೭	
	೨೮—೨೨....೧೦೦೮	
೪,	೧— ೬....೧೦೦೯	
	೭—೧೧....೧೦೧೦	
೫,	೧— ೪....೧೦೧೧	
	೫—೧೪....೧೦೧೨	
೬,	೧— ೨....೧೦೧೪	
	೩— ೬....೧೦೧೫	
	೭— ೪....೧೦೧೬	
	೫—೧೨....೧೦೧೭	
	೧೩—೧೭....೧೦೧೪	
೭,	೧— ೩....೧೦೧೪	
	೪— ೪....೧೦೨೦	
	೫—೧೦....೧೦೨೧	
೮,	೧— ೫....೧೦೨೨	
	೬—೧೨....೧೦೨೩	
೯,	೧.....೧೦೨೪	
	೨—೧೨....೧೦೨೫	
	೧೩—೧೪....೧೦೨೬	
	೧೫—೨೦....೧೦೨೭	
೧೧,	೧— ೬....೧೦೨೮	
	೭— ೬....೧೦೨೯	
	೭—೧೦....೧೦೩೦	
	೧೧—೧೫....೧೦೩೧	
	೧೬—೨೦....೧೦೩೨	
೧೨,	೧— ೬....೧೦೩೩	

		ಪುಟ.
೯,	೧.....೧೦೩೪	
	೨—೧೨....೧೦೩೫	
	೧೩—೧೪....೧೦೩೬	
	೧೫—೨೦....೧೦೩೭	
೧೦,	೧— ೪....೧೦೩೮	
	೫—೧೪....೧೦೩೯	
೧೧,	೧— ೬....೧೦೪೦	
	೭—೧೧....೧೦೪೧	
	೧೨—೧೭....೧೦೪೨	
	೧೮—೨೨....೧೦೪೩	
೧೨,	೧— ೬....೧೦೪೪	
	೭—೧೦....೧೦೪೫	
	೧೧—೧೫....೧೦೪೬	
	೧೬—೨೦....೧೦೪೭	
೧೩,	೧— ೬....೧೦೪೮	
	೭—೧೦....೧೦೪೯	
	೧೧—೧೫....೧೦೫೦	
	೧೬—೨೨....೧೦೫೧	
೧೪,	೧— ೫....೧೦೫೨	
	೬.....೧೦೫೩	
	೭— ೫....೧೦೫೪	
	೧೦—೧೩....೧೦೫೫	
	೧೪—೧೫....೧೦೫೬	
	೧೬—೨೦....೧೦೫೭	
೧೫,	೧— ೫....೧೦೫೮	
	೬—೧೦....೧೦೫೯	
	೧೧—೧೪....೧೦೬೦	
	೧೫—೧೭....೧೦೬೧	
	೧೮—೨೦....೧೦೬೨	
೧೬,	೧— ೫....೧೦೬೩	
	೬—೧೦....೧೦೬೪	
	೧೧—೧೪....೧೦೬೫	
	೧೫.....೧೦೬೬	
	೧೬—೨೦....೧೦೬೭	
೧೭,	೧— ೫....೧೦೬೮	
	೬—೧೦....೧೦೬೯	
	೧೧—೧೪....೧೦೭೦	
	೧೫—೧೭....೧೦೭೧	
	೧೮—೨೦....೧೦೭೨	

ಹೊಸವಾಡಂಬಡಿಕೆಯ ಯೆರಡನೆ ಭಾಗ.

ಅಪಾಸ್ತಲರ ಚರಿತ್ರವು ಅಪಾಸ್ತಲರು ಬರದ ಪುಸ್ತಕಗಳು.

ಲೂಕನು ಬರದ ಅಪೊಸ್ತಲಚರಿತ್ರದ ವಿಷಯವಾದ ಪೀಠಿಕೆ.

೧. ಈ ಚರಿತ್ರವನ್ನು ಬರದವನು ಯಾರೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಅವನು ಪೌಲನ ಕಡೇ ಪ್ರಯಾಣದಲ್ಲಿ ಇವನ ಸಂಗಡ ಇದ್ದನೆಂದು ಸಂಧಿ ೧೬, ೧೦. ೨೦, ೫. ಕಾಣ ಬರುತ್ತದೆ. ಪಾಠ್ಯಾಗಂದರೆ ತ್ರಾಯದಿಂದ ಫಿಲಿಪ್ಪಿ ಪರ್ಯಂತರ ಆದ ಸಂಗತಿಗಳನ್ನು ವಿವರಿಸುವಾಗ, ನಾವು ಯೆಂಬ ಮಾತನ್ನು ಪ್ರಯೋಗಿಸುತ್ತಾನೆ. ಪೌಲನು ಗ್ರೀಕ ದೇಶದಲ್ಲಿ ಪ್ರಯಾಣ ಮಾಡುತ್ತಿರುವಾಗೈ, ಅವನು ಫಿಲಿಪ್ಪಿಯಲ್ಲಿ ಉಳಕಾಂಡನೆಂದು ಕಾಣುತ್ತದೆ. ಆದರೆ ಕಡೇ ಸಾರಿ ಯೆರೂಸಲೇಮಿಗೆ ಪಾಠ್ಯಾಗುವಾಗ (ಸ. ೨೦, ೫.) ಆ ಚರಿತ್ರವನ್ನು ಬರದವನು ತಿರಿಗಿ ಪೌಲನ ಬಳಿಗೆ ಬಂದು, ಅಂದಿನಿಂದ ಪುಸ್ತಕವ ಅಂತ್ಯದ ಪರ್ಯಂತರ ಪೌಲನ ಪಾತ್ರರ ಇದ್ದನು.

ಈ ಚರಿತ್ರವನ್ನು ರಚಿಸಿದವನು ಯಾರೆಂದು ಪುಸ್ತಕದಲ್ಲಿ ಬರೆಯದೆ ಇದ್ದಾಗ್ಯೂ, ಪೂರ್ವ ಸಭೆಯವರೆಲ್ಲರು, ರಚಿಸಿದವನು ಲೂಕನೆಂದು, ವಾಪ್ಯಿಕಾಳ್ಳುತ್ತಾರೆ. ಅವನು ಅಂತಿಯಾಖ್ಯ ಪಟ್ಟಣದವನೆಂದು ಕಾಣುತ್ತದೆ. ಪೌಲನು ಕಾಲಾ. ೪, ೧೪. ಯಾರಿಗೆ ಪ್ರಿಯನಾದ ವೈದ್ಯನು ಯೆಂದು ಪೇಳುತ್ತಾನಾ, ಅವನೆ ಯೆಂಮ ತಾರುತ್ತದೆ. ಇದಲ್ಲದೆ ಅಲ್ಲಿ ವಿವರಿಸಿರುವ ಬೇರೆ ಕ್ರೈಸ್ತರ ವಿಷಯದಲ್ಲಿ, ಅವರು ಮುಂಜಿಯವರೆಂದು, ಅಂದರೆ ಯೆಹೂದರ ಮತದಾಳಗಿಂದ ಬಂದವರೆಂದು, ಪೇಳಿರುವದರಿಂದ (ವ. ೧೧.) ಲೂಕನು ಜನಾಂಗಗಳಾಳಗಿಂದ ಬಂದು ಶೇರಿದವನೆಂದು ಕಾಣುತ್ತದೆ. ಅವನಾಬ್ಬನೆ ಕಷ್ಟದ ಕಾಲದಲ್ಲಿ ಪೌಲನ ಪಾತ್ರರ ಉಳಿದನೆಂದು ೨ ತಿಮೊ. ೪, ೧೧. ಅವನ ಮಾನಕ್ಕಾಗಿ ಪೇಳಿ ಅದೆ. ಅವನ ವಿಷಯದಲ್ಲಿ ನಿಶ್ಚಯವಾಗಿ ತಿಳಿದಿರುವ ಸಮಾಚಾರ ಇಷ್ಟೆ. ಅವನು ಅಪಾ. ಕ್ರಿ. ೧೩, ೧. ಬರದಿರುವ ಲೂಕನಾಗಿದ್ದನೆಂದು ಅನೇಕರು ನೆನಸುತ್ತಾರೆ; ಆದರೆ ಅವನು ವಿನಯವನ್ನು ಬಿಟ್ಟು, ಸೌಲನೆಂಬ ಪೌಲನ ಪೆಸರಿನ ಮುಂಚೆ ತನ್ನದನ್ನು ಬರೆಯುತ್ತಿದ್ದಿಲ್ಲವೆಂದು ನೆನಸ ಬೇಕು.

ಅವನು ಚಿತ್ರಗಾರನಾಗಿದ್ದು, ಮರಿಯಳ ಚಿತ್ರಗಳನ್ನೂ ಮಾಂದು ಮೇಳೆ ಕ್ರಿಸ್ತನ ಚಿತ್ರಗಳನ್ನು ಸಹಾ ಬರದವನೆಂದು ಯೇಳನೆ ಪರುಷಶತದಲ್ಲಿ ಮಾಂದು ಸುದ್ದಿ ಹುಟ್ಟಿತು. ಆದರೆ ಈ ಮಾತು ನಿಶ್ಚಯವಲ್ಲಾ. ಇದಲ್ಲದೆ ಅವನು ಯೆಪ್ಪತ್ತು ಮಂದಿ ಶಿಷ್ಯರಲ್ಲಿ ಮಾಬ್ಬನಾಗಿದ್ದನೆಂದು ಕೆಲವರು ನೆನಸುತ್ತಾರೆ; ಆದರೆ ಅವನು ಜನಾಂಗಗಳವನಾಗಿದ್ದದರಿಂದಲೂ (ಕೊಲೊ. ೪, ೧೧.) ತಾನು ಯೇಸುವನ್ನು ನೋಡಿದವರ ಹತ್ತರ ವಿಚಾರಿಸಿ ಬರಿಯುತ್ತೇನೆಂದು ಸುವಾರ್ತೆಯ ಆರಂಭದಲ್ಲಿ ತಾನೆ ನೋಡದವನ ಹಾಗೆ ಹೇಳುವದರಿಂದಲೂ, ಇದು ಸತ್ಯವಲ್ಲವೆಂದು ಕಾಣುತ್ತದೆ. ಅವನು ಪೌಲನನ್ನು ಬಿಟ್ಟು ಹೋದ ಮೇಲೆ, ಯೆಲ್ಲಿ ಇದ್ದನೆಂದೂ ಯಾವ ಉದ್ಯೋಗ ನಡಿಸಿದನೆಂದೂ ಯೆಲ್ಲಿ ಹೋಗಿ ಸತ್ತನೆಂದೂ ತಿಳಿಯುವದಿಲ್ಲಾ.

೨. ಲೂಕನು ತನ್ನ ಸುವಾರ್ತೆಯನ್ನೂ ಅಪೊಸ್ತಲರ ಕ್ರಿಯೆಗಳನ್ನೂ ಥೆಯೊಫಿಲನೆಂಬವನಿಗೋಸ್ಕರ ಬರದನು. ಇವನು ಸಹಾ ಯಾರೆಂಬುವದು ನಿಶ್ಚಯವಾಗಿ ತಿಳಿಯುವದಿಲ್ಲ. ಆದರೆ ಸುವಾರ್ತೆಯಲ್ಲಿ ೧, ೧. ಅವನಿಗೆ ಉತ್ತಮನೆಂಬ ಹೊಗಳಿಕೆ ಇಟ್ಟಿರುವದರಿಂದ, ಅವನು ಘನವಂತನೆಂದು ಕಾಣುತ್ತದೆ. ಹೊಗ್ಯಾಗಂದರೆ ಅಪೊ. ೨೩, ೨೬. ೨೪, ೨. ೨೬, ೨೫. ದೇಶದ ಅಧಿಪತಿ ಮೊದಲಾದ ಚಾರಿ ಉದ್ಯೋಗಸ್ಥರಿಗೆ ಅದೇ ಹೊಗಳಿಕೆ ಹೇಳುತ್ತದೆ. ಲೂಕನ ಪುಸ್ತಕದಲ್ಲಿ ಕಾನಾನ್ ದೇಶದ ಮುಖ್ಯ ಪಟ್ಟಣಗಳು ಗೊತ್ತಿಲ್ಲದವುಗಳ ಪ್ರಕಾರ ವಿವರಿಸಿರುವದರಿಂದಲೂ, ಇತಲಿಯಲ್ಲಿರುವ ಸಣ್ಣ ಸಣ್ಣ ಹಳ್ಳಿಗಳು ವಿವರವಿಲ್ಲದೆ ಬರದಿರುವದರಿಂದಲೂ, ಆ ಥೆಯೊಫಿಲನು ಇತಲಿಯವನೆಂದೂ, ಮಾಂದು ಮೇಳೆ ರೋಮದವನೆಂದೂ ತಿಳಕಾಳ್ಳ ಬಹುದು. ಪೌಲನು ರೋಮದಲ್ಲಿ ಶೆರೆಯವನಾಗಿದ್ದಾಗ, ದಾದ್ದ ದಾಡ್ಡವರಲ್ಲಿ ಕೆಲವರು ಅವನ ಪ್ರಸಂಗದಿಂದ ವಿಶ್ವಾಸಿಸಿದರು. ಮಾಂದು ಮೇಳೆ ಥೆಯೊಫಿಲನು ಇವರಲ್ಲಿ ಮಾಬ್ಬನಾಗಿದ್ದಾನು.

೩. ಈ ಚರಿತ್ರವು ಪೌಲನು ಶೆರೆಯಲ್ಲಿ ಇದ್ದ ಯೆರಡನೆ ವರ್ಷದ ಪರ್ಯಂತರ ಸಂಗತಿಗಳನ್ನು ವಿವರಿಸಿ, ಅಲ್ಲಿ ಮುಗಿಯುವದರಿಂದ, ಅದೇ ಸಮಯದಲ್ಲಿ ಈ ಪುಸ್ತಕವು ಬರದದ್ದು ಯೆಂದು ನಿಶ್ಚೈಸ ಬಹುದು. ಆ ಸಮಯ ಯಾವದೆಂದರೆ, ಕ್ರಿಸ್ತನು ಹುಟ್ಟಿದ ಮೇಲೆ ೬೨ನೆ ವರ್ಷ.

೪. ಅಪೊಸ್ತಲರ ಚರಿತ್ರ ಯಾವ ಆಲೋಚನೆಯಿಂದ ಯಾವ ಪ್ರಯೋಜನಕ್ಕಾಗಿ ಬರದದೆ?—ಪರಿಶುದ್ಧ ಬರಹಗಾರರೆಲ್ಲರು ಪರಿಶುದ್ಧಾತ್ಮದ ಪ್ರೇರಣೆಯಿಂದ ಬರದರು. ಹೀಗಿರುವದರಿಂದ ಅವರು ನಿರ್ವಾಹವಿಲ್ಲದೆ ಮಾಡಿದ ಕೆಲಸವನ್ನು ಯಾವ ಆಲೋಚನೆಯಿಂದಲೂ ಯಾವ ಪ್ರಯೋಜನಕ್ಕಾಗಿಯೂ ಮಾಡಿದರೆಂದು ವಿವರಿಸುವದು ಕೆಲಸವಿಲ್ಲವೆಂದು ಕಾಣುತ್ತದೆ. ಆದರೆ ದೇವರ ಆತ್ಮವು ಸ್ವಭಾವಕ್ಕೆ ಅನುಕೂಲವಾದ ರೀತಿಯಿಂದ ಮನುಷ್ಯರ ಆತ್ಮಗಳನ್ನು ಪ್ರೇರೇಪಿಸುವದರಿಂದ, ದೇವಪ್ರೇರಿತ ಮನುಷ್ಯರಲ್ಲಿ ಪರಿಶುದ್ಧಾತ್ಮವು ಹುಟ್ಟಿಸಿದ ಸ್ವಂತ ಆಲೋಚನೆಗಳನ್ನೂ ಅನುಭವಗಳನ್ನೂ ಅನುಸರಿಸುವದು ಹಾಳ್ಗೇದು. ಲೂಕನು ಸುವಾರ್ತೆಯ ಆರಂಭದಲ್ಲಿಯೆ, ತಾನು ನಿಜವಾದ ಚರಿತ್ರಗಾರನಾಗಿ, ವಾಡಿಕೆ ಇರುವ ಅನೇಕ ಸುದ್ದಿಗಳಿಗೆ ಬದಲಾಗಿ, ತಾನು ಜಾಗ್ರತೆಯಾಗಿ ವಿಚಾರಿಸಿದ ವೃತ್ತಾಂತವನ್ನು ಸ್ಥಾಪಿಸುತ್ತೇನೆಂದು ಹೇಳುತ್ತಾನೆ. ಹಾಗೇ ಅವನು ಮಾಡಿದನು. ಆವ ಸಂಗತಿಗಳ ಸಮಯವನ್ನು ಅವನು ಜಾಗ್ರತೆಯಾಗಿ ಬರಿಯುತ್ತಾನೆ. ಈ ಲೋಕದ ರಾಜ್ಯಸಮಾಚಾರಗಳನ್ನು ಸಹಾ, ಅವು ದೇವರ ರಾಜ್ಯದ ಚರಿತ್ರಕ್ಕೆ ಸಂಬಂಧವಾಗಿರುವಾಗ, ಬರಿಯುತ್ತಾನೆ, ಅಪೊ. ೧೧, ೨೪. ೧೨, ೨೧. ೧೮, ೨. ಅವನು ಸುವಾರ್ತೆಯ ಆರಂಭದಲ್ಲಿ ಬರದ ಪ್ರಕಾರ ಮುಖ್ಯವಾಗಿ ಸತ್ಯದ ವಿವರವನ್ನು ಹುಡುಕುವ ವಿದ್ಯಾಸಂಪನ್ನರಾಗಿ, ವಿಚಾರದಿಂದ ನಿಶ್ಚೈಸ

ಅಪೇಕ್ಷಿಸುವವರಿಗೆ, ಯೇಸು ಕ್ರಿಸ್ತನಲ್ಲಿರುವ ರಕ್ಷಣೆಗೆ ಸಂಬಂಧವಾಗಿರುವ ಸಂಗತಿಗಳ ನಿಶ್ಚಯವನ್ನು ತಿಳಿಸಿ, ಅವಿಶ್ವಾಸಕ್ಕೂ ಪಾಪಕ್ಕೂ ವಿರೋಧವಾದ ಆಯುಧವನ್ನು ಅವರ ಕೈಯಾಳಗೆ ಕಾಟ್ಟು, ಮುಖ್ಯವಾಗಿ ಯೆಲ್ಲರನ್ನೂ ರಕ್ಷಿಸ ಬೇಕೆಂದಿರುವ ಯೇಸು ಕ್ರಿಸ್ತನ ಕೃಪೆಯನ್ನು ಪ್ರಸಿದ್ಧವಾಗಿ ತೋರಿಸಿ, ತನ್ನ ಬೋಧಕನಾದ ಪೌಲನ ಉಪದೇಶವನ್ನು ಅನುಸರಿಸ ಬೇಕೆಂದಿದ್ದನು.

ಈ ಚರಿತ್ರದ ಮೊದಲನೆ ಸಂಧಿಯ ೧ನೆ ಶ್ಲೋಕದಲ್ಲಿ, ಇದು ಯೇಸುವಿನ ಜೀವಕಥೆಯನ್ನು ಅವಶ್ಯವಾಗಿ ಪೂರ್ಣ ಮಾಡುವಂಥಾ ದಿವ್ಯ ರಕ್ಷಣಾಚರಿತ್ರದ ೨ನೆ ಮುಖ್ಯ ಭಾಗವಾಗಿರುತ್ತದೆಂಬದಾಗಿ ತಾನೆ ತಿಳಿಸುತ್ತಾನೆ. ಸುವಾರ್ತೆಯ ಅಂತ್ಯದಲ್ಲಿ ಹೇಳಿರುವ ದಿವಾರೋಹಣವನ್ನು ಈ ಚರಿತ್ರದಲ್ಲಿ ಮುಂದಾಗಿ ಹೇಳಿ, ಕ್ರೈಸ್ತ ಸಭಾಚರಿತ್ರವು, ಯೆತ್ತಲ್ಪಟ್ಟ ಕ್ರಿಸ್ತನ ಪ್ರವೃತ್ತಿಯಾಗಿರುತ್ತದೆ ಯೆಂಬದನ್ನು ಸೂಚಿಸುತ್ತಾನೆ. ಆದರೆ ಇದು ಯಾವದರಲ್ಲಿ ಮುಖ್ಯವಾಗಿ ಕಂಡು ಬರುತ್ತದೆ?—ನಡದ ಬಹಳ ಕಾರ್ಯಗಳಿಂದ ಯಾವದನ್ನು ಹೆಕ್ಕಿಕಾಂಡಿದ್ದಾನೆ? ಪಲೆಸ್ತೀನದಲ್ಲಿಯೂ ಸುರ್ಯದಲ್ಲಿಯೂ ದೇವರು ಮರೆಯಾಗಿ ನಡಿಸಿದ ಕಾರ್ಯಗಳ ವಿಷಯದಲ್ಲಿಯೂ, ಸಕಲ ಅಪಾಸ್ತಲರ ಗತಿಯ ವಿಷಯದಲ್ಲಿಯೂ ಬೇಕಾದಷ್ಟು ವರ್ಣಿಸ ಬಲ್ಲವನಾಗಿದ್ದನು. ಆದಾಗ್ಯೂ ೧೨ನೆ ಸಂಧಿಯ ಪರ್ಯಂತರ ಪೌಚ್ಚಾಗಿ ಪೇತ್ರನ ವಿಷಯದಲ್ಲಿಯೂ, ಅಲ್ಲಿಂದ ಮುಂದೆ ಪೌಲನ ವಿಷಯದಲ್ಲಿಯೂ ಪ್ರಸ್ತಾವ ಮಾಡುತ್ತಾನೆಂಬದು ಪ್ರತ್ಯಕ್ಷ. ಪೌಲನ ವಿಷಯದಲ್ಲಿ ಸಭಾ, ಆತನ ಪತ್ರಿಕೆಗಳಿಂದ ತಿಳಿದದ್ದನ್ನೆಲ್ಲಾ ಹೇಳುವದಿಲ್ಲಾ. ಭಾಗೆ ಕಾರಿಂಥದ ಕರ್ಕರೆ, ಪೇತ್ರನ ಸಂಗಡ ಆದ ಖೇದ, ಇಲ್ಲೂರ್ಯ ಪ್ರಯಾಣ, ರೋಮ. ೧೫, ೧೯. ಗಲ. ೨. ಅಪಾಸ್ತಲನು ಸುಳ್ಳು ಅಪ್ರಬುದ್ಧ ಆಸಕ್ತರ ಸಂಗಡ ಬಹಳ ಜಗಳಾದ ಬೇಕಾಯಿತು. ಇದು ಅಪಾಸ್ತಲರ ಚರಿತ್ರ ೧೫ನೆ ಸಂಧಿಯಲ್ಲಿ ಮಾತ್ರ ಹೇಳಿಯದೆ. ಆಗೈ ಪೇತ್ರ ಯಾಕೋಬರ ಸಭಾಯದಿಂದ ಯೆಲ್ಲಾ ಸಮವಾಯಿತು. ಲೂಕನು ಮೊದಲನೆ ಸಭೆಯ ಗತಿಯಲ್ಲಿ ಉಂಟಾದ ಕಷ್ಟಗಳನ್ನೂ ಅಡ್ಡಿಗಳನ್ನೂ ಹೇಳದೆ ಬಿಡಲಿಲ್ಲ ಸರಿ, ಭಾಗೆ ೬, ೧೫.; ಆದಾಗ್ಯೂ ಕರ್ತನಿಗೆ ಕೃತಜ್ಞಾಪಿಸುವದಕ್ಕೆ ಕಾರಣವಾಗಿರುವಂಥಾದ್ದನ್ನೂ, ಆತನ ವಾಗ್ದತ್ತಗಳ ಸಂಪೂರ್ಣತೆಯನ್ನು ತೋರಿಸುವಂಥಾದ್ದನ್ನೂ ಪೌಚ್ಚಾಗಿ ವಿವರಿಸುತ್ತಾನೆ. ಹಳೆ ವಾಡಂಬಡಿಕೆಯ ನಡವಡಿಕೆಯ ಪುಸ್ತಕವು ದೇವಸೇವಕರ ಬಲಹೀನತೆಯನ್ನು ಅಲ್ಲಿ ಇಲ್ಲಿ ಭಾಗೈಗೆ ಹೇಳದಿರುತ್ತದಾ, ಭಾಗೆಯೇ ಲೂಕನು ಕರ್ತನ ಚಾಕರರ ಪಾಪಮಯವಾದ ಬಲಹೀನತ್ವ ಪ್ರತ್ಯಕ್ಷವಾಗುವ ಮನುಷ್ಯಗುಣಕ್ಕಿಂತ ಪೌಚ್ಚಾಗಿ, ಕ್ರಿಸ್ತನ ದಿವ್ಯ ಶಕ್ತಿಯು ಆತನ ಕಡೆಯವರಲ್ಲಿ ಯತ್ನೈಸಿದ ಕಾರ್ಯಗಳನ್ನೇ ವರ್ಣಿಸುತ್ತಾನೆ. ಅಪಾಸ್ತಲ ಚರಿತ್ರವು ದೇವರ ರಾಜ್ಯದ ಜಯಚರಿತ್ರವೆಂದನ್ನ ಬಹುದು. ಇದು ನಮಗೆ ಸಭಾ ಬುದ್ಧಿಸೂಚಕನಂತೆ ಇರಲಾಗಿ, ನಾವು ಸಭಾ ಈ ನಮ್ಮ ಕೆಟ್ಟ ಕಾಲಗಳಲ್ಲಿ ಮನುಷ್ಯರಿಗಿಂತ ಪೌಚ್ಚಾಗಿ ದೇವರ ಕ್ರಿಯೆಗಳ ಕಡೆಗೆ ನಮ್ಮ ಕಣ್ಣುಗಳನ್ನು ಯೆತ್ತ ತಕ್ಕದ್ದು. ಅಪಾಸ್ತಲರ ಚರಿತ್ರದಲ್ಲಿ ಹೇಳಿರುವದನ್ನು ಆಗಿನ ಸಂಸ್ಥಾನದ ಉದ್ಯೋಗಸ್ಥರೂ ಗ್ರಂಥ ಕರ್ತರೂ ಪೌಚ್ಚಾಗಿ ಲಕ್ಷಿಸಲೇ ಇಲ್ಲಾ; ಲಕ್ಷಿಸಿದರೆ ಅದಕ್ಕೆ ವಿರೋಧವಾಗಿದ್ದರು. ಆದಾಗ್ಯೂ ಅದು ದೇವರ ಕಣ್ಣಿನಲ್ಲಿ ಘನವಾಗಿತ್ತು. ಅದೇ ಪ್ರಕಾರ ನಾವು ಸಭಾ ನಮ್ಮ ದಿನಗಳಲ್ಲಿಯೂ ದಾಡ್ಡ ಲೌಕಿಕಾರ್ಭಗಳಿಗಿಂತಲೂ, ರಾಜ್ಯ ಜನಾಂಗಗಳಿಗಿಂತಲೂ, ಭೂಮಿಯಲ್ಲಿರುವ ದೇವರ ರಾಜ್ಯದ ಶಾಂತ ಗತಿಯನ್ನು ಲಕ್ಷಿಸುತ್ತಿರುವಾ. ಯೆಷ್ಟಕ್ಕೆ ಯೆಲ್ಲಾ ದುಃಖಕರವಾಗಿ ಕಾಣುತ್ತದಾ, ಅಷ್ಟಕ್ಕೆ ಪೌಚ್ಚಾಗಿ ನಮ್ಮ ದೃಷ್ಟಿಯನ್ನು, ಯೆಲ್ಲಾದರಲ್ಲಿ ತನ್ನ ಕೈನಡಿಸಿ, ಯೆಲ್ಲಾ ತಕ್ಕ ಪ್ರಯೋಜನಕ್ಕೆ ಬರ ಮಾಡುವ ದೇವರ ಕಡೆಗೆ ಯೆತ್ತುವಾ.

ಅಪಾಸ್ತಲಚರಿತ್ರವು ದೇವರ ಕ್ರಿಯೆಗಳಲ್ಲಿ ಯಾವವುಗಳನ್ನು ಮುಖ್ಯವಾಗಿ ವರ್ಣಿಸುತ್ತದೆ ಯೆಂತ ಕೇಳಿದರೆ, ಉತ್ತರವೇನಂದರೆ:

೧. ಯೆರೂಸಲೇಮಿನ ಕ್ರೈಸ್ತ ಸಭೆಯ ಸ್ಥಾಪನೆಯೂ ಮತ್ತು ಅದರ ಮೊದಲನೆ ಚರಿತ್ರವೂ. ಇದರಿಂದ, ಆತ್ಮವು ಬಲವಾಗಿ ಆಳುತ್ತಿರುವಾಗ, ಮನುಷ್ಯಬಲಹೀನತ್ವವು ಯೆಷ್ಟು ಇದ್ದರೂ, ಭೂಮಿಯಲ್ಲಿ ದೇವರ ಸಭೆಯು ಪೂರ್ಣಾಗಿರ ಬೇಕೆಂಬದಕ್ಕೆ ಯೆಲ್ಲಾ ಕಾಲಗಳಿಗೆ ತಕ್ಕ ಮಾದರಿ ಶಿಕ್ಕುವದು. ಆ ಮೊದಲನೆ ಪ್ರೀತಿ, ಆ ವಿಶ್ವಾಸದ ನಂಬಿಕೆ, ಅಲ್ಲಿದ್ದ ಬುದ್ಧಿ ಜ್ಞಾನಗಳು, ಇದೆಲ್ಲಾ ನಮ್ಮನ್ನು ಯಾವಾಗಲೂ ನಾಚಿಕೆ ಪಡಿಸಿದರೂ, ಧೈರ್ಯ ಸಪಾ ಪಡಿಸುವ ಮಾದರಿಯಾಗಿರುತ್ತದೆ. ಅದರ ಪೂರ್ತಾರ್ಥ, ಇಲ್ಲಿ ಮೊದಲನೆ ಮೂಲ ಕ್ರೈಸ್ತ ಸಚಾಕ್ರಮವು ಕಾಣಿಸಿರುವದರಿಂದ, ಆ ವೃತ್ತಾಂತಗಳೆಲ್ಲಾ ನಮ್ಮ ಕಾಲಕ್ಕೆ ವಿಶೇಷ ಪ್ರಯೋಜನವಾಗಿವೆ. ಕರ್ತನು ಕಾಟ್ಟ ಅಪ್ಪಣೆಯ ಪ್ರಕಾರ ಪೇತ್ರನು ಸಭೆಯ ಬಂಡೆಯಾದನೆಂಬದು ಇಲ್ಲಿ ಕಾಣ ಬರುತ್ತದೆ. ಇವನು ಆರಂಭದಲ್ಲಿ ಯೆಲ್ಲಾ ಕಡೆಯಲ್ಲಿಯೂ ಮೊದಲಿಗನು. ಅದೇ ಪ್ರಕಾರ ಪೂರ್ಣಾಗೆ ಯೆಲ್ಲಾ ಕಾರ್ಯವು ಸಪಾಸೋದರಸ್ನೇಪದಲ್ಲಿ ನಡಿಯಿತು ಯೆಂಬದೂ, ಕರ್ತನು ತಾನೆ ನೇಮಿಸಿದ ಕುರುಬರೂ ಬೋಧಕರೂ, ತರುವಾಯ ಆದ ಪೂರ್ಣಾಗೆ, ಜನರ ಮೇಲೆ ಸರ್ವಥಾ ಆಳಲಾಲ್ಲದವರಾಗಿ ಇದ್ದರೆಂಬದೂ ಪ್ರತ್ಯಕ್ಷವಾಗುತ್ತದೆ. ಹೀಗಾಗಿ ಅಪಾಸ್ತಲಚರಿತ್ರವು ಬೋಧಕರಿಗೆ ಮುಖ್ಯವಾಗಿರ ತಕ್ಕ ಪುಸ್ತಕ. ಬ್ರಾಂತ್ ಯೆಂಬ ಬೋಧಕನಾಬ್ಬನು ಹೇಳುವದೇನಂದರೆ: "ನಮ್ಮ ರಕ್ಷಕನ ಸುವಾರ್ತಾಕಥೆಗಳ ಮೇಲೆ, ಪರಿಶುದ್ಧ ಬರಪಾದಲ್ಲಿ ಅಪಾಸ್ತಲಚರಿತ್ರದಂತೆ ಬೇರೆ ಯಾವ ಪುಸ್ತಕದಿಂದಲಾದರೂ ಬೋಧಕರು ತಮ್ಮ ಕೆಲಸವನ್ನು ತಕ್ಕ ಪ್ರಕಾರ ನಡಿಸಲಿಕ್ಕೆ ಬೇಕಾದ ವಿವೇಕವು ಬಾರದು. ಈ ಕೆಲಸಕ್ಕೆ ತಕ್ಕ ಪ್ರಕಾರ ಸಿದ್ಧವಾಗ ಬೇಕಾದರೆ, ಯೇನು ಅವಶ್ಯವೆಂಬದು ಅದರಿಂದ ಕಾಣ ಬರುತ್ತದೆ. ನಿತ್ಯವಾದ ಸತ್ಯದ ವಾಕ್ಯವನ್ನು ದೇವರ ಆತ್ಮಕ್ಕೆ ಅನುಕೂಲವಾಗಿ ಪೂರ್ಣಾಗೆ ಪ್ರಸಂಗಿಸ ಬೇಕು, ಪೂರ್ಣಾಗೆ ಪೂಂಚಿ ಕಾಡ ಬೇಕು ಯೆಂಬದು ಅತಿ ಯೋಗ್ಯವಾದ ಮಾದರಿಗಳಿಂದ ತೋರಿಸಿ ಅದೆ. ಮನುಷ್ಯರು ಅಂಧಕಾರದಿಂದ ಪ್ರಕಾಶಕ್ಕೂ, ಸೈತಾನನ ಅಧಿಕಾರದಿಂದ ದೇವರ ಕಡೆಗೂ ಪೂರ್ಣಾಗೆ ತಿರುಗಿಸಲ್ಪಡ ಬೇಕೆಂಬದು ಮಾತ್ರವಲ್ಲಾ, ಇದು ಆದ ಮೇಲೆ ಕ್ರಿಸ್ತನಲ್ಲಿ ಇಡುವ ವಿಶ್ವಾಸದಿಂದ ಪರಿಶುದ್ಧವಾದವರ ಸಂಗಡ ಬಾಧ್ಯತೆಯನ್ನು ಪೂರ್ತಾಂದುವ ಪೂರ್ಣಾಗೆ, ಅವರನ್ನು ಪೂರ್ಣಾಗೆ ಸಾಕ ಬೇಕೆಂಬದು ಸಪಾ ತೋರಿಸಿ ಅದೆ. ಇದಲ್ಲದೆ ದುಃಖದಲ್ಲಿಯೂ ಸೌಖ್ಯದಲ್ಲಿಯೂ ಯೋಗ್ಯವಾಗಿ ನಡಕಾಳ್ಳುವದಕ್ಕೂ, ಕ್ರಿಸ್ತನ ರಾಜ್ಯದ ಸ್ನೇಹಿತರಿಗೂ ಶತ್ರುಗಳಿಗೂ ತಕ್ಕ ಪ್ರಕಾರ ಯೆದುರುಗಾಳ್ಳುವದಕ್ಕೂ, ಕಪಟಿಗಳ ಸಂಗಡಲೂ ಯಥಾರ್ಥ ಮನಸ್ಸಿನವರ ಸಂಗಡಲೂ ನಡತೆಯಲ್ಲಿ ಪ್ರಯೋಜನವಾಗಿರುವದಕ್ಕೂ, ಸಪಾಸೋದರರನ್ನು ಅವರ ಪಾಪಗಳಲ್ಲಿ ಪ್ರೀತಿಯಿಂದ ಪೂರ್ತಾರುವದಕ್ಕೂ, ಅಲೆಯುವಂಥಾ ಸತ್ಯದಿಂದ ತೊಲಗಿದ ಸೇವಕರನ್ನು ಖಂಡಿತವಾಗಿ ವಾಗ್ದಂಡಿಸಿ, ತಿರಿಗಿ ಕ್ರಮಕ್ಕೆ ತರುವದಕ್ಕೂ ಇತ್ಯಾದಿ ಬೇಕಾದಷ್ಟು ಬುದ್ಧಿಯನ್ನು ಈ ಪುಸ್ತಕದಿಂದ ಕಲಿಯ ಬಹುದಲ್ಲವೇ. ನಿಶ್ಚಯವಾಗಿ ಬೋಧಕಾದ್ಯೋಗದಲ್ಲೆಲ್ಲಾ ಪರಿಶುದ್ಧ ಬರಪಾದ ಈ ದಿವ್ಯ ಪುಸ್ತಕದಿಂದ ಯಾವಾಗಲೂ ಆಲೋಚನೆ ಕೇಳಿ ಕಾಳ್ಳ ಬಹುದು,,.

೨. ಸ್ತೆಫನನ್ನು ಕಲ್ಲೆಸದಂದಿನಿಂದ ಪೌಲನೆಯು ಉಂಟಾಗಲಾಗಿ, "ನೀವು ಯೆರೂಸಲೇಮಿನಲ್ಲಿಯೂ ಸಮಸ್ತ ಯೆಹೂದ ಸಮಾರ್ಯಗಳಲ್ಲಿಯೂ ಭೂಮಿಯ ಅಂತ್ಯದ ವರೆಗೂ ನನಗೆ ಸಾಕ್ಷಿಗಳಾಗಿರುವಿರಿ,,,

ಯೆಂಬ ವಾಕ್ಯವನ್ನು ಕ್ರೈಸ್ತರು ಈಡೇರಿಸಲಿಕ್ಕೆ ಕಾರಣವಾಯಿತು. ಈ ಪ್ರಕಾರ ಲನೆ ಸಂಧಿಯಿಂದ ಅಪಾಸ್ತ ಲಚರಿತ್ರವು ಮುಖ್ಯವಾಗಿ ಸುವಾರ್ತೆಯ ವಿಸ್ತರಣೆಯ, ಮತ್ತೂ ಯಾರ ಪರಿಮುಖವಾಗಿ ಅದಾಯಿತಾ ಆ ಅಪಾಸ್ತಲನಾದ ಪೌಲನ ಚರಿತ್ರವಾಗಿರುತ್ತದೆ. ಮಿಕ್ಕಾದ ಅಪಾಸ್ತಲರು ಪಲೆಸ್ತೀನದಲ್ಲಿಯೂ ಸುತ್ತಲೂ ಮಾಯಿದ್ದೇನೆಂಬದನ್ನೂ, ಕ್ರೈಸ್ತ ಧರ್ಮವು ಅಲೆಕ್ಸಂಡ್ರಿಯಕ್ಕೂ, ಸುರ್ಯಕ್ಕೂ, ಬಬಿಲಾನಿಗೂ ೧ ಪೇತ್ರ. ೫, ೧೩. ಪಾಶ್ಚಾಗೆ ಬಂತೆಂಬದನ್ನೂ, ಅದು ವಿಶೇಷವಾಗಿದ್ದರೂ, ಲೂಕನು ಪೆಚ್ಚೇನೂ ಪೇಳುವದಿಲ್ಲಾ. ಪಾಶ್ಚಾ ಗೆಯೇ ತನ್ನ ಯಜಮಾನನಾದ ಪೌಲನ ವಿಷಯದಲ್ಲಿ ಸಪಾಶ್ಚಾ ಬಪಾಳ, ಪಾಶ್ಚಾಗೆ ಸಂವರ್ತನದ ತರುವಾಯ ಅರ್ಬಸ್ಥಾನದಲ್ಲಿ ಕಳದ ಮೂರು ವರುಷಗಳನ್ನೂ, ಪೌಲನು ತಾನೆ ೨ ಕೊರಿ. ೧೧. ಪೇಳುವ ಪ್ರಿಂಸೆ ಸಮುದ್ರಪ್ರಯಾಣಗಳನ್ನೂ, ಕೊರಿಂಥದ ಪಾಶ್ಚಾರಾಟಗಳನ್ನೂ, ಶಿಮೊಥೆಯನ ೧ನೆ ಪತ್ರಿಕೆಯಲ್ಲಿ ಪೌಲನು ಪೇಳುವ ಸುಳ್ಳು ಬೋಧಕರನ್ನೂ, ಅದೇ ಪ್ರಕಾರ ಕ್ರೈಸ್ತ ಧರ್ಮವು ಪಾಶ್ಚಾಗೆ ರೋಮಾಯರಿಗೆ ಬಂತೆಂಬ ದನ್ನೂ, ಪೌಲನು ಶೀತನನ್ನು ನೇಮಿಸಿದ ಕ್ರೇತಕ್ಕೆ ಅದು ಪಾಶ್ಚಾಗೆ ಮುಟ್ಟಿತೆಂಬದನ್ನೂ, ಈ ಮುಂತಾದ ಸಂಗತಿಗ ಳನ್ನು ಪೇಳದೆ ಬಿಡುತ್ತಾನೆ. ಈ ಪ್ರಕಾರ ಲೂಕನು ಪೌಲನ ವಿಷಯದಲ್ಲಿ ಬರಿಯುವಾಗೈ ಸಪಾಶ್ಚಾ ಪ್ರತ್ಯೇಕ ಸಂಕಲ್ಪ ಮಾಯಿ ಕಾಂಯಿದ್ದನೆಂಬದು ಪ್ರತ್ಯಕ್ಷ. ಆ ಪ್ರಯೋಜನವೇನಂದರೆ, ಕ್ರಿಸ್ತನ ಕೃಪೆಯು ಸರ್ವರಿಗೆ ಶಿಕ್ಕ ತಕ್ಕದ್ದಾಗಿರುತ್ತದೆಂಬದಕ್ಕೂ, ಈ ಕಾರಣದಿಂದಲೆ ಪರಜನರಿಗೆ ಸಪಾಶ್ಚಾ ಕ್ರಿಸ್ತನ ಸಭೆಯಲ್ಲಿ ಬಾಧ್ಯತೆ ಉಂಟೆಂ ಬದಕ್ಕೂ ಆಧಾರವಾಗಿರುವ ವರ್ತಮಾನಗಳನ್ನು ಶಿಳಿಸುವದೇ. ರೋಮಾಯರ ಮತ್ತು ಗಲತರ ಪತ್ರಿಕೆ ಗಳಿಂದ ಮುಖ್ಯವಾಗಿ ಕಾಣಬರುವ ಪ್ರಕಾರ, ಮೇಲೆ ಪೇಳಿದ್ದೆ ಅವನ ಯಜಮಾನನಾದ ಪೌಲನ ಮು ಖ್ಯಾಪೇಕ್ಷೆಯಾಗಿತ್ತು. ಆದ್ದರಿಂದ ಪರಜನಸಂವರ್ತನದ ಆರಂಭವಾಗಿರುವ ಕಾರ್ನೇಲ್ಯನ ಸ್ನಾನವು ಕೂ ಲಂಕುಶವಾಗಿ ಯೆರಡು ಸಾರಿಯೂ, ಪರಜನರ ಅಪಾಸ್ತಲನ ಸಂವರ್ತನವು ಮೂರು ಸಾರಿಯೂ ವರ್ಣಿಸಿ ಅದೆ. ದಿವ್ಯ ಕೃತ್ಯದಿಂದ ಅವಶ್ಯವಾಗಿ ಸುವಾರ್ತೆಯು ಪರಜನರ ಬಳಿಗೆ ಪಾಶ್ಚಾಗೆ ಬಂತೆಂಬದನ್ನೂ, ಇವರು ದೇವರ ರಾಜ್ಯದಲ್ಲಿ ಸಮಾನ ಅಂಗಗಳಾಗಿ ಕಾಣಿಸಿ ಕಾಂಯಿದ್ದಾರೆಂಬದನ್ನೂ ಈ ಪುಸ್ತಕ ವಾದುವ ವರಿಗೆ ಸ್ಪಷ್ಟವಾಗಿ ಶಿಳಿಸ ಬೇಕೆಂಬದು ಅವನ ಮನಸ್ಸಾಗಿತ್ತು. ಆದ್ದರಿಂದ ಪೌಲನು ಯಾವಾಗಲೂ ಯೆ ಹೂದರಿಗೆ ರಕ್ಷಣೆಯನ್ನು ಪ್ರಸಂಗಿಸಿದರೂ, ಅವರು ಅದನ್ನು ತಳ್ಳಿ ಬಿಟ್ಟ ಕಾರಣ, ಅವನು ಸ್ವೀಕರಿಸ ಮನಸ್ಸಿ ರುವ ಪರಜನರ ಕಡೆಗೆ ತಿರುಗಿ ಕಾಳ್ಳುವದು ಪಾಶ್ಚಾಗೆ ಅವಶ್ಯವಾಯಿತೆಂತ, ಜಾಗ್ರತೆಯಾಗಿ ತೋರಿಸಿ ಅದೆ, ೧೩, ೪೬; ೨೮, ೨೮. ಈ ಪ್ರಕಾರ ಸುವಾರ್ತೆಯು ಸಮಸ್ತ ರೋಮಾಯ ರಾಜ್ಯದಲ್ಲಿ ವಿಸ್ತಾರವಾಗಿ, ಪರಜನರ ರಾಜಧಾನಿ ಆಗಿರುವ ರೋಮಕ್ಕೆ ಸಪಾಶ್ಚಾ ನುಗ್ಗಿತು. ಇದು ಲೂಕನಿಗೆ ಮುಖ್ಯ ಕಾರ್ಯವಾಗಿರ ಲಾಗಿ, ಅವನು ಚರಿತ್ರವನ್ನು ಇಲ್ಲಿ ತೀರಿಸಿ ಬಿಟ್ಟನು. ಆ ಯೆರಡು ವರುಷಗಳು ತೀರಿದ ಮೇಲೆ ಸಪಾಶ್ಚಾ ಪೌಲನಿಗೆ ಯೇನಾಯಿತೆಂಬದನ್ನು ತಿಳಕಾಳ್ಳಲಿಕ್ಕೆ ನಾವು ಅಪೇಕ್ಷಿಸುತ್ತಾ ಇರ ಬಹುದೇ ಪಾಶ್ಚಾರ್ತು, ಅವನು ಯೇನಾಂದೂ ಪೆಚ್ಚು ಬರದು ಇಡಲಿಲ್ಲಾ. ಲೂಕನಿಗೆ ಪೌಲನ ಸ್ವಂತ ಮೂರ್ತಿಯೆ ವಿಶೇಷವಾಗಿದ್ದದ್ದಾ ದರೆ, ಅವನ ವಿಷಯದಲ್ಲಿ ಪೆಚ್ಚು ಬರಿಯುತ್ತಿದ್ದನು. ಆದರೆ ಅಪಾಸ್ತಲನ ಕೃತ್ಯದ ವಿಷಯದಲ್ಲಿ ಮಾತ್ರವೆ ಆತನ ಮನಸ್ಸಿನ ಪ್ರಕಾರ ವಿವರಿಸಲಿಕ್ಕೆ ಇಚ್ಛೈಯಿಸಿದನು. ಮತ್ತು ನಿಯಮದ ಪಾಶ್ಚಾರ್ತಾಗಿ ದೇವರ ಸರ್ವ ಸಾಧಾರಣ ಕೃಪೆಯ ವಿಷಯದಲ್ಲಿಯೂ, ಸುವಾರ್ತೆಯ ಮುಂದೆ ಪರಜನರೂ ಯೆಹೂದರೂ ಸಮಾನರೆಂಬ ವಿಷಯದಲ್ಲಿಯೂ ಬೋಧಿಸಿದ ಪೌಲನ ಬೋಧನೆಯು, ಸಭೆಯ ಕರ್ತನ ಚರ್ಯಗಳಿಂದ ನ್ಯಾಯವಾದದ್ದು

ಯೆಂತಾಯಿತು ಯೆಂಬ ಸಂಗತಿಯನ್ನು ಪ್ರಾಮಾಣ್ಯವಾಗಿ ತಾನೀಸಲಿಕ್ಕೆ ಲೂಕನು ಬರದದ್ದೇ ಸಾಕಾಗಿರುತ್ತದೆ. ಲುಥರನು ಅಪಾಸ್ತಲಚರಿತ್ರವನ್ನು ಪೌಲನ ಪತ್ರಿಕೆಗಳಿಗೆ ಸಮ ಇಟ್ಟು, ಚಂದವಾಗಿ ಪೇಳುವದೇನಂದರೆ:

"ಲೂಕನು ಈ ಪುಸ್ತಕದಲ್ಲಿ ಯೆಲ್ಲಾ ಕ್ಶೆಸ್ತರಿಗೆ ಲಾಕಾಂತ್ಯದ ಪರ್ಯಂತರ ಕ್ಶೆಸ್ತ ಬಾಧನೆಯ ಮುಖ್ಯ ಭಾಗವನ್ನು ಬಾಧಿಸುತ್ತಾನೆ. ಅದೇನಂದರೆ, ನಿಯಮದ ಸಹಾಯವಿಲ್ಲದೆ, ನಮ್ಮ ಸ್ವಂತ ಕ್ರಿಯೆಗಳ ಸಹಾಯವಿಲ್ಲದೆ, ನಾವೆಲ್ಲರೂ ಯೇಸು ಕ್ರಿಸ್ತನಲ್ಲಿಡುವ, ವಿಶ್ವಾಸದಿಂದ ಮಾತ್ರವೆ ನೀತಿನಿರ್ಣಯ ಪಡ ಬೇಕು. ಈ ಬಾಧನೆಯೆ ಈ ಪುಸ್ತಕ ಬರಿಯುವದಕ್ಕೆ ಮುಖ್ಯ ಕಾರಣವೂ ಆಲಾಚನೆಯೂ ಆಗಿತ್ತು. ಆದಕಾರಣ ಯೆಹೂದರೂ ಪರಜನರೂ ಕ್ರಿಸ್ತನ ವಿಶ್ವಾಸದಿಂದ, ಕ್ರಿಯೆಗಳ ಪುಣ್ಯವೇನೂ ಇಲ್ಲದೆ, ನೀತಿ ನಿರ್ಣಯ ಪಡ ಬೇಕೆಂಬ ಅಪಾಸ್ತಲರ ಪ್ರಸಂಗವನ್ನು ಮಾತ್ರವಲ್ಲಾ, ಪರಜನರೂ ಯೆಹೂದರೂ ನಿಯಮ ವಿಲ್ಲದೆ, ಸುವಾರ್ತೆಯಿಂದ ಮಾತ್ರವೆ ನೀತಿನಿರ್ಣಯ ಪಟ್ಟರೆಂಬದಾಗಿ ಆ ಬಾಧನೆಯ ದೃಷ್ಟಾಂತಗಳನ್ನೂ ಚರಿತ್ರವನ್ನೂ ಸಹಾ ಬಲವಾಗಿ ವಿವರಿಸುತ್ತಾನೆ. ಆದ್ದರಿಂದ ಈ ಪುಸ್ತಕವು ಪೌಲನ ಪತ್ರಿಕೆಗಳಿಗೆ ವ್ಯಾಖ್ಯಾನದ ಹಾಗೆ ಇರುತ್ತದೆಂತ ಪೇಳ ಬಹುದು. ಪೌಲನು ಬರಹಗಳಾಳಗಿಂದ ಯಾವ ಮಾತುಗಳನ್ನೂ ಶ್ಲೋಕಗಳನ್ನೂ ಬಾಧಿಸಿ ಪ್ರಯಾಗಿಸಿದನಾ, ಅದನ್ನು ಲೂಕನು ಇಲ್ಲಿ ತಿಳಿಸಿ, ಅದು ಈ ಪ್ರಕಾರ ನಡಿಯಿತು, ಪೌಲನು ಬಾಧಿಸಿದ ಪ್ರಕಾರವೆ ನಡಿಯ ಬೇಕು ಯೆಂಬದಾಗಿ, ದೃಷ್ಟಾಂತಗಳಿಂದಲೂ ಕಥೆಗಳಿಂದಲೂ ಸಾಧಿಸುತ್ತಾನೆ. ಯೇನಂದರೆ ನಿಯಮವಲ್ಲಾ, ಯಾವ ಕ್ರಿಯೆಯೂ ಅಲ್ಲಾ, ಕ್ರಿಸ್ತನಲ್ಲಿಡುವ ವಿಶ್ವಾಸ ಮಾತ್ರವೆ ಮನುಷ್ಯರನ್ನು ನೀತಿನಿರ್ಣಯ ಪಡಿಸುತ್ತದೆ. ಮತ್ತು ವಾದುವವನೇ, ಅದು ಸತ್ಯವೆಂಬದಕ್ಕೆ ಈ ಪುಸ್ತಕವು ನಿನಗೆ ವಾಳ್ಳೇ ಕನ್ನಡಿಯಾಗಿರುವದು. ವಿಶ್ವಾಸ ಮಾತ್ರವೆ ನೀತಿನಿರ್ಣಯ ಪಡಿಸುತ್ತದೆ; ಹಾಗಾಗಂದರೆ ಈ ಸಂಗತಿಯ ದೃಷ್ಟಾಂತಗಳೂ ಕಥೆಗಳೂ ಯೆಲ್ಲಾ ನಿನಗೆ ಚಪ್ರವಾದ ಸಮಾಧಾನಕರ ಸಾಕ್ಷಿಗಳಾಗಿರುತ್ತವೆ. ಅವು ಸುಳ್ಳಾಡುವದಿಲ್ಲಾ ತಪ್ಪುವದಿಲ್ಲಾ,,.

೫೯. ಅಪಾಸ್ತಲರ ಚರಿತ್ರದ ಕಾಲಸಂಖ್ಯೆ.

ಲೂಕನು ಸುವಾರ್ತೆಯಲ್ಲಿ ೩, ೧. ಮತ್ತು ೨೩. ಯಾಹಾನನೂ ಯೇಸುವೂ ಉದ್ಯೋಗಾರಂಭಿಸಿದ ಕಾಲಸಂಗತಿಗಳನ್ನು ಚಂನಾಗಿ ತಿಳಿಸಿದ್ದಾನೆ. ಯಾಹಾನನ ಸುವಾರ್ತೆಯಿಂದ ಹುಬ್ಬುಗಳ ಕಾಲಗಳನ್ನು ಯೆಣಿಸಲಿಕ್ಕಾಗುತ್ತದೆ. ಈ ಪ್ರಕಾರ ಸಾಧಾರಣ ಲೆಖ್ಖಕ್ಕೆ ಸರಿಯಾಗಿ ಕರ್ತನಾದ ಯೇಸುವು ಹುಟ್ಟಿದ ೩೩ನೆ ವರುಷದಲ್ಲಿ ಊಮಿಯಿಂದ ತಂದೆಯ ಬಳಿಗೆ ಹಾಹಾದನೆಂಬದು ಸಾಧ್ಯವಾಗುತ್ತದೆ. ಆದರೆ ಅಪಾಸ್ತಲರ ಚರಿತ್ರದಲ್ಲಿಯೂ ಪತ್ರಿಕೆಗಳಲ್ಲಿಯೂ ಅಂಥಾ ಕಾಲಸಂಖ್ಯೆಗಳು ಕಾಣುವದಿಲ್ಲಾ. ಆದಾಗ್ಯೂ ಯಾವ ಕಾಲಕ್ರಮದಲ್ಲಿ ಪರಿಶುದ್ಧ ವೃತ್ತಾಂತಗಳು ನಡದವು, ಮತ್ತು ಲಾಕಕಾರ್ಯಗಳಿಗೂ ಅವುಗಳಿಗೂ ಯಾವ ಸಂಬಂಧವಿತ್ತು ಯೆಂಬದು ಸತ್ಯ ಶಾಧಕನಿಗೆ ಅಲ್ಪವಲ್ಲಾ. ಪರಿಶುದ್ಧ ಗ್ರಂಥಕಾರರಲ್ಲಿ ಪೇಳಿರುವ ಸ್ವಲ್ಪ ಕಾಲಸಂಖ್ಯೆಗಳನ್ನು ಲೌಕಿಕ ಗ್ರಂಥಕಾರರಿಗೆ ಸಮ ಇಟ್ಟು ನಾಡಿದ್ದಲ್ಲಿ, ಪ್ರಾಪ್ತಿಯಾಗುವದೇನಂದರೆ:

೧. ಸ್ತೆಫನನನ್ನು ಕಲ್ಲೆಸದದ್ದು ಪಾಂತಿಯ ಪಿಲಾತನ ಕಾಲದಲ್ಲಿ ಅಲ್ಲಾ, (ಇವನು ರಾಮಿಯ ನ್ಯಾಯತೀರ್ಪಿನ ಕ್ರಮಕ್ಕೆ ಯಾವಾಗಲೂ ಅನುಕೂಲವಾಗಿದ್ದನು,) ಇವನ ತರುವಾಯ ಬಂದ ಯೆಹೂದ ಸ್ವೇಹಿತನಾದ ವಿತೆಲ್ಯನ ಕಾಲದಲ್ಲಿ ಸಂಚವಿಸಿ ಇರ ಬೇಕು. ಪಿಲಾತನು ಅದನ್ನು ಸಹಿಸುತ್ತಿದ್ದಿಲ್ಲಾ, ಅಥವಾ ಮತ್ತೆ ಶಿಕ್ಷಿಸುತ್ತಿದ್ದನು. ಇವನು ಕ್ರಿಸ್ತಶಕ ೩೬ನೆ ವರುಷದಲ್ಲಿ ಉದ್ಯೋಗ ಕಳಕಾಂಡನು.

೨. ಪೌಲನು ಸಂವರ್ತನದ ಮೂರು ವರುಷದ ಮೇಲೆ ಬೇರೆ ಅಪಾಸ್ತಲರ ಬಳಿಗೆ ಬಂದನೆಂಬದು ಗಲ. ೧, ೧೮. ಪೇಳಿರುವದರಿಂದ, ಸ್ತೆಫನನನ್ನು ಕಲ್ಲೆಸದದ್ದೂ, ಪೌಲನ ಸಂವರ್ತನವೂ ವಾಂದೇ ವರುಷದಲ್ಲಿ ಆಯಿತೆಂತ ನೆನಸ ಬೇಕು. ದಮಸ್ಕದಿಂದ ಪೌಲನು ಅರ್ಬಸ್ಥಾನದ ಅರಸನಾದ ಅರೇತನ ದೆಶೆಯಿಂದ ವಾಪಸಿ ಪೋದಾದನು. ೨ಕಾರಿ. ೧೧, ೩೨. ಆದರೆ ದಮಸ್ಕವು ಬೇರೆ ಕಾಲದಲ್ಲಿ ರಾಮಿಯ ಜಿಲ್ಲೆಗೆ ಶೇರಿದ್ದ ಕಾರಣ, ರಾಮಿಯರ ಸಂಗಡ ಸಮಾಧಾನದಲ್ಲಿದ್ದ ಯೆಹೂದ ಅರಸ ಪೆರಾದ ಅಗ್ರಿಪ್ಪನ ಸಂಗಡ ಯುದ್ಧ ಮಾಡಿ, ಅವನನ್ನು ಜಯಿಸಿದ ಕಾಲದಲ್ಲಿ ಮಾತ್ರವೆ ಅರೇತನು ದಮಸ್ಕದಲ್ಲಿ ಅಧಿಕಾರ ನಡಿಸಿ ಇರ ಬೇಕು. ಇದಕ್ಕಾಸ್ಕರ ಮಹಾರಾಜ ಶಿಬೇರ್ಯನು ಕಾಪಗಾಂಡು, ಅರೇತನನ್ನು ಜೀವಂತನಾಗಿ ಆಗಲಿ ಸತ್ತವನಾಗಿ ಆಗಲಿ ತನ್ನ ಕೈಗೆ ವಾಪ್ಪಿಸ ಬೇಕೆಂದು, ಸೇನಾಧಿಪತಿ ವಿತೆಲ್ಲಿನಿಗೆ ಅಪ್ಪಣೆ ಕಾಟ್ಟಿನು. ಆದರೆ ಇದು ಆಗುಪಷ್ಟರಾಳಗೆ ಶಿಬೇರಿಯನು ೩೭ನೆ ವರುಷದ ಮಾರ್ಚಿ ೨೦ಗಳಲ್ಲಿ ಸತ್ತನು. ಅವನ ತರುವಾಯ ಪಟ್ಟವೇರಿದ ಕಲಿಗುಲನ ಅಧಿಕಾರದ ಯೆರಡನೆ ವರುಷದಲ್ಲಿ, ಅಂದರೆ ಕ್ರಿಸ್ತ ಶಕದ ೩೮ನೆ ಅಥವಾ ೩೯ನೆಯಲ್ಲಿ ಆ ಕಾರ್ಯವು ೀರಿತು. ಪೋಗಾದರೆ ಅರೇತನು ದಮಸ್ಕದಲ್ಲಿ ೩೯ನೆ ವರುಷದ ತರುವಾಯ ಅಧಿಕಾರ ನಡಿಸಿರ ಕೂಡದು. ಅಲ್ಲಿಂದ ಆದ ಪೌಲನ ಪಲಾಯನವೂ ಯೆರೂಸಲೇಮಿಗೆ ಅವನು ಮಾಡಿದ ಪ್ರಯಾಣವೂ ೩೯ನೆ ವರುಷದಲ್ಲಿ ಆಯಿತು, ಅವನ ಸಂವರ್ತನ ೩೬ನೆಯಲ್ಲಿ.

೩. ಮಹಾರಾಜ ಕ್ಲೌದ್ಯನ ಕಾಲದಲ್ಲಿ ಬರಗಾಲ ಉಂಟಾಯಿತು. ಆ ಸಮಯದಲ್ಲಿ ಪೌಲನು ಯೆರೂಸಲೇಮಿಗೆ ಯೆರಡನೆ ಪ್ರಯಾಣ ಮಾಡಿದನು. ಅಪಾ. ಕ್ರಿ. ೧೧, ೨೯. ೩೦. ಪೆರಾದ ಅಗ್ರಿಪ್ಪನ ಮರಣವೂ ಸಂಧಿ. ೧೨, ೨೧. ೨೫. ಆ ಬರಗಾಲವೂ ೪೪ನೆ ವರುಷದಲ್ಲಿ ಉಂಟಾಯಿತು.

೪. ಸಂವರ್ತನದ ಪದಿನಾಲ್ಕು ವರುಷದ ಮೇಲೆ ಗಲ. ೨, ೧. ಪೌಲನು ತಿರಿಗಿ ಮೂರನೆ ಸರ್ತಿ ಯೆರೂಸಲೇಮಿಗೆ ಬಂದನು. ಅದು ಗಲ. ೨. ಮತ್ತು ಅಪಾ. ೧೫. ಸಮ ನಾಯಿದ್ದಲ್ಲಿ, ಅಪಾಸ್ತಲರ ಕೂಟಕ್ಕಾಗಿ ಇತ್ತೆಂದು ಸ್ಪಷ್ಟವಾಗಿ ಕಾಣುತ್ತದೆ. ಪೋಗಾದರೆ, ಈ ವಿಶೇಷವಾದ ಸಂಚಾಷಣೆಯು ಐವತ್ತನೆ ವರುಷದಲ್ಲಿ ನಡೀತು. ಗಲ. ೨, ೧. ಪೇಳಿದ್ದು ಅಪಾಸ್ತಲರ ಸಂಗಡ ಮೊದಲನೆ ಸರ್ತಿ ಪೌಲನು ಮಾಡಿದ ಪರಿಚಿತಿಯ ಸಂಗತಿ ಯೆಂಬದಾಗಿ, ಇದೆಲ್ಲಾ ಮೂರು ವರುಷದ ತರುವಾಯ, ಆಯಿತೆಂತ ನೆನಸ ಬಹುದು. ಆದರೆ ಈ ಆಲಾಚನೆಯು ಕೆಳಗೆ ಬರುವಂಥಾದ್ದಕ್ಕೆ ಅನುಕೂಲವಾಗಿರುವ ದಿಲ್ಲಾ.

೫. ತರುವಾಯ ಪೌಲನು ಐವತ್ತಾಂದನೆ ವರುಷದಲ್ಲಿ ಯೆರಡನೆ ಪ್ರಸಂಗಪರ್ಯಾಟಣೆ ಮಾಡಿ, ವಿಲಾಯತೀ ಪರ್ಯಂತರ ಬಂದು, ಪ್ರಯಾಣದಲ್ಲಿ ತಡ ಮಾಡಿ ಕಾರಿಂಥಕ್ಕೆ ಶೇರಿದನು. ಆ ಸಮಯದಲ್ಲಿಯೇ ಮಹಾರಾಜ ಕ್ಲೌದ್ಯನು ಯೆಹೂದರನ್ನು ರಾಮದಿಂದ ಪೋಗಾರಗೆ ಪೋಗಾಡಿದನು. ಇದು ಐವತ್ತೆರಡನೆ ವರುಷದಲ್ಲಿ ನಡದಿರ ಬೇಕು.

೬. ಕಾರಿಂಥದಲ್ಲಿ ಪೌಲನು ವಾಂದೂವರೆ ವರುಷ ಉಳ ಕಾಂಡು, ಅಲ್ಲಿಂದ ಥೆಸ್ಸಲಾನೀಕೆಯರ ಪತ್ರಿಕೆಗಳನ್ನು (೧. ೨.) ಬರದನು. ತರುವಾಯ ಎಫೆಸ ಕೈಸರ್ಯೆಯ ಮಾರ್ಗವಾಗಿ ಯೆರೂಸಲೇಮಿಗೆ ಪ್ರಯಾಣ ಮಾಡಿ, ಸ್ವಲ್ಪ ಕಾಲ ಅಲ್ಲಿ ತಡದು, ತಿರಿಗಿ ಅಂತಿಯಾಖ್ಯಕ್ಕೆ ಬಂದನು. ಅಲ್ಲಿಂದ ಗಲತ ಫ್ರುಗ್ಯ ಶೀಮೆಗಳಿಗೆ ೧೮, ೨೩. ಮೂರನೆ ಪ್ರಸಂಗಪರ್ಯಾಟಣೆ ಮಾಡಿದನು. ಈ ಸರ್ತಿ ಎಫೆಸದಲ್ಲಿ ಯೆರಡು

ವರುಷಕ್ಕೆ ಪೌಚ್ಚು ತಡದನು. ೧೯, ೮—೧೦. ಅಲ್ಲಿಂದ ಗಲತರ ಪತ್ರಿಕೆಯನ್ನೂ (೩.) ಕಾರಿಂಥದವರ ಮೊದಲನೆ ಪತ್ರಿಕೆಯನ್ನೂ (೪.) ಬರದನು. ಮತ್ತೆ ೨೦, ೧. ಮಕೆದಾನ್ಯಕ್ಕೆ ಪಾಸ್ಸಾಗಿ, ಅಲ್ಲಿಂದ ಕಾರಿಂಥದವರ ಯೆರಡನೆ ಪತ್ರಿಕೆಯನ್ನು (೫.) ಬರದನು. ಅಲ್ಲಿಂದ ಕಾರಿಂಥಕ್ಕೆ ಬಂದು, ರಾೀಮಿಯರ ಪತ್ರಿಕೆಯನ್ನು (೬.) ಬರದು, ಅಲ್ಲಿಯೆ ಮೂರು ತಿಂಗಳು ಉಳ ಕಾಂಡನು. ಪಸ್ಕ ಪುಬ್ಬದ ಮೊದಲು ಐದನೆ ಸರ್ತಿ ಯೆರೂಸಲೇಮಿಗೆ ಪ್ರಯಾಣ ಮಾಡಿ ಬಂದನು. ಸ್ವಲ್ಪ ಮೊದಲು ಐಗುಪ್ತದವನಾಬ್ಬನು ಕಾಟಕಾಯಿಯೆಬ್ಬಿಸಿದ್ದನು. ೨೧, ೩೭—೩೯. ಇದು ಫೇಲಿಕ್ಸನು ಅಧಿಪತಿಯಾಗಿದ್ದಾಗ, ಫೆಸ್ತನು ಆ ಉದ್ಯೋಗಕ್ಕೆ ಬರುವ ಯೆರಡು ವರುಷದ ಮೊದಲು ಸಂಭವಿಸಿತು ೨೪, ೨೭. ಯಾಸೇಫನ ಪುಸ್ತಕದಿಂದ ನಮಗೆ ತಿಳಿದು ಬರುವದೇನಂದರೆ: ಫೇಲಿಕ್ಸನು ತಿರಿಗಿ ಪಾಸ್ಸಾಗ ಬೇಕಾದ ಮೇಲೆ, ಯೆಹೂದರು ಅವನ ವರ್ತಾಯಕ್ಕಾಸ್ಕರ ಫಿರ್ಯಾದು ಮಾಡಿದರು. ಮತ್ತು ಬಹಳವಾಗಿ ಮಾನದಲ್ಲಿದ್ದ ಅವನ ಸಹೋದರನಾದ ಪಲ್ಲನ ಪ್ರಯತ್ನದಿಂದ ಮಾತ್ರವೆ ಶಿಕ್ಷೆಗೆ ತಪ್ಪಿ ಪಾಸ್ಸಾದನು. ಆದರೆ ಮಹಾರಾಜ ನೇರೋ ಅವನ ಅಧಿಕಾರವನ್ನೆಲ್ಲಾ ಬಹುಕಾಲ ಪರ್ಯಂತರ ತೆಗದ ಮೇಲೆ, ಶುಮಾರು ೬೨ನೆ ವರುಷದಲ್ಲಿ ಅವನ ಐಶ್ವರ್ಯಕ್ಕಾಸ್ಕರ ಅವನಿಗೆ ವಿಷ ಪಾಸ್ಸಾಕಿಸಿದನು. ಅದೇ ವರುಷದಲ್ಲಿ ಫೇಲಿಕ್ಸನ ತರುವಾಯ ಅಧಿಪತಿಯಾಗಿದ್ದ ಫೆಸ್ತನು, ಸ್ವಲ್ಪ ಕಾಲವಾದರೂ, ಬಲವಾಗಿ ಉದ್ಯೋಗ ನಡಿಸಿ ತೀರಿ ಪಾಸ್ಸಾದನು. ಪಾಸ್ಸಾಗಾದರೆ ಫೇಲಿಕ್ಸನು ಪಾಸ್ಸಾಗೂ ೬೨ನೆ ವರುಷದ ಮೊದಲು ಉದ್ಯೋಗ ಕಳ ಕಾಂಡು ಇರ ಬೇಕು. ಮತ್ತು ಪೌಲನು ೬೦ನೆ ವರುಷದ ಮೊದಲು, ವಾಂದು ವೇಳೆ ಖೈದಿನಲ್ಲಿ, ಯೆರೂಸಲೇಮಿಗೆ ಬಂದಿರ ಬೇಕು. ಅವನು ೬೦ನೆ ವರುಷದ ಪರ್ಯಂತರ ಕೈಸರೈಯದಲ್ಲಿ ಇದ್ದು, ೬೦ನೆಯಿಂದ ೬೧ನೆಯ ಹೀಮಕಾಲದಲ್ಲಿ ರಾೀಮಕ್ಕೆ ಪ್ರಯಾಣ ಮಾಡಿದನು. ಆ ಸಂಗತಿ ಪೇಳಿದ ಮೇಲೆ, ೬೩ನೆ ವರುಷದ ವೃತ್ತಾಂತವೆ ಅಪಾಸ್ತಲಚರಿತ್ರೆಯ ಅಂತ್ಯವಾಗಿದೆ. ರಾೀಮದಿಂದ ಪೌಲನು ಕಾಲಾಸ್ಸೆಯರಿಗೂ, ಫಿಲೆಮೋನನಿಗೂ, ಎಫೆಸದವರಿಗೂ, ಫಿಲಿಪ್ಪಿಯವರಿಗೂ (೭—೧೦.) ಪತ್ರಿಕೆಗಳನ್ನು ಬರದನು.

ಈ ಕಾಲದಲ್ಲಿ ಯಾಕಾಬನನ್ನು ಯೆರೂಸಲೇಮಿನಲ್ಲಿ ೬೨ನೆ ವರುಷದಲ್ಲಿ ಕಲ್ಲೆಸದರು. ಪಾಸ್ಸಾಗಾದರೆ ಯಾಕಾಬನ ಪತ್ರಿಕೆ ಸಹಾ ಪೌಲನ ಮೊದಲನೆ ರಾೀಮಿಯ ಬಂಧನದ ಸಮಯದಲ್ಲಿ ಬರದಿರ ಬೇಕು. ಆದರೂ ಈ ಪತ್ರಿಕೆಯ ಗ್ರಂಥಕಾರನು ಯೆರೂಸಲೇಮಿನ ಯಾಕಾಬನಾ ಮತ್ತು ಆ ಯಾಕಾಬನ ಮರಣದ ವರ್ತಮಾನವು ಸತ್ಯವಾ ಯೆಂಬದು ಪೂರ್ಣ ನಿಶ್ಚಯವಾಗುವದಿಲ್ಲಾ.

೭. ಸ್ವಲ್ಪ ತರುವಾಯ ಪೌಲನು ತಿರಿಗಿ ಬಿಡುಗಡೆಯಾದನು. ೬೪ನೆ ವರುಷದ ಅಂತ್ಯದಲಿ ಮಹಾರಾಜ ನೇರೋ ರಾೀಮವನ್ನು ಸುಡಿಸಿ ಬಿಟ್ಟನು. ಮತ್ತೆ ಅದನ್ನು ಕ್ರೈಸ್ತರ ಮೇಲೆ ಪಾಸ್ಸಾಕಿ, ಅದಕ್ಕಾಸ್ಕರ ಅವರನ್ನು ಕ್ರೂರವಾಗಿ ಕಾಲ್ಲಿಸಿದನು. ಪೌಲನು ಆ ಸಮಯದಲ್ಲಿ ರಾೀಮದಲ್ಲಿದ್ದದ್ದಾದರೆ, ಅವನು ಸಭೆಯ ಮುಖ್ಯಸ್ಥನಾಗಿದ್ದದರಿಂದ, ನಿಶ್ಚಯವಾಗಿ ಅವನಿಗೆ ಅದೇ ಗತಿ ಆಗುತ್ತಿತ್ತು. ಈ ಸಂಗತಿಯನ್ನು ಆಲಾೀಚಿಸುವಾಗೈ, ಪೌಲನು ಇತಲಿಯಿಂದ ಪೌಬ್ರೆಯರ ಪತ್ರಿಕೆಯನ್ನು (೧೩.) ಬರಸಿದ ತರುವಾಯ, ತಿರಿಗಿ ಪೂರ್ವದೇಶಕ್ಕೆ ಪಾಸ್ಸಾಗಿದ್ದನೆಂದು ತಾೀರುತ್ತದೆ. ಆ ಕಾಲದಲ್ಲಿ ೧ ತಿಮೊ. ೧, ೩. ಎಫೆಸದಲ್ಲಿ ತಿಮೊಥೆಯನನ್ನೂ, ಕ್ರೇತಕ್ಕೆ ಬಂದು ಅಲ್ಲಿ ತೀತನನ್ನೂ ತನ್ನ ಬದಲಿಗೆ ಇಟ್ಟನು. ತಿಮೊಥೆಯನಿಗೆ ಮೊದಲನೆ ಪತ್ರಿಕೆಯನ್ನೂ (೧೨.) ತೀತನಿಗೆ ಸಹಾ ವಾಂದು ಪತ್ರಿಕೆಯನ್ನೂ (೧೩.) ಪ್ರಯಾಣಕಾಲದಲ್ಲಿ ಬರದನು.

ಈ ಪ್ರಕಾರ ಪೌಲನು ಪೂರ್ಣವಾಗಿ ಪೂರ್ವದೇಶವನ್ನು ಬಿಟ್ಟು ಪಶ್ಚಾದ ಮೇಲೆ, ಮೊದಲನೆ ಪತ್ರಿಕೆಯಿಂದ ಪೇತ್ರನೂ, ಸ್ವಲ್ಪ ಕಾಲದ ಮೇಲೆ ಯೂವನೂ ಸಪೂರ್ಣ ತಬ್ಬಿಲಿಯಾದ ಸಭೆಗಳನ್ನು ಪರಾಮರ್ಶಿಸಿದರು. ಪೌಲನು ನಿಕಾಪೌಲಿಯಲ್ಲಿ ಹಿಮಕಾಲ ಕಳದು, ಪಶ್ಚಿಮದೇಶದ ಮೇರೆಗೆ ಸ್ಪನ್ಯ ದೇಶದ ಪರ್ಯಂತರಕ್ಕೆ ಪ್ರಯಾಣ ಮಾಡಿದನು. ಆಗ್ಗೆ ಅವನನ್ನು ಶಿರಿಗಿ ಹಿಡಿದು, ೬೬ನೆ ವರುಷದಲ್ಲಿ ರೋಮದಲ್ಲಿ ಬಂಧಿತನಾಗಿ ಇಟ್ಟರು. ಇಲ್ಲಿಂದ ಅವನು, ಮರಣಕಾಲವು ಸಮೀಪಿಸಿತೆಂದು ತಿಳಿದು, ತಿಮೊಥೆಯನಿಗೆ ೨ನೆ ಪತ್ರಿಕೆಯನ್ನು (೧೪.) ಬರದನು. ಇವನನ್ನು ಮಾರ್ಕನ ಸಹಿತವಾಗಿ ಬರ ಬೇಕೆಂದು ಬೇಡಿ ಕಾಂಡನು. ೨ ತಿಮೊ. ೪, ೧೧. ಅವರ ಸಂಗಡ ಪೇತ್ರನು ಬಂದನೆಂದು ಹೇಳುವವರುಂಟು. ಇವನು ೨ನೆ ಪತ್ರಿಕೆಯನ್ನು ಬರದು, ತರುವಾಯ ಪೌಲನ ಸಂಗಡ ಸಾಕ್ಷಿಮರಣವನ್ನು ಅನುಭವಿಸಿದನು.

೮. ಇದು ೬೭ನೆ ವರುಷದಲ್ಲಿ ಸಂಭವಿಸಿತು. ಪೇತ್ರನನ್ನು ಕ್ರೂಜೆಗೆ ಹಾಕಿದರು. ಪೌಲನು ರೋಮಿಯ ನಾಗರಿಕನಾಗಿದ್ದದರಿಂದ ಅವನ ತಲೆ ಕಡಿದರು. ಅದೇ ಸಮಯದಲ್ಲಿ ನ್ಯಾಯಶಿಕ್ಷೆಯು ಯೆದುರುನಿಲ್ಲುವ ಯೆಹೂದ ಜನಾಂಗದ ಮೇಲೆ ಬರಲಿಕ್ಕೆ ಆಗಿತ್ತು. ಹಾಗಾಗಿದ್ದರೆ ೬೬ನೆ ವರುಷದಲ್ಲಿ ಸುರ್ಯದ ಅಧಿಪತಿಯಾಗಿದ್ದ ಕೆಸ್ತಿಯ ಗಲ್ಲನ ಕಾಲದಲ್ಲಿ ಕಡೇ ಯೆಹೂದರ ಯುದ್ಧವು ಆರಂಭಿಸಿತು. ವೆಸ್ಪಸ್ಯಾನನು ೬೭ನೆಯಲ್ಲಿ ಆ ಯುದ್ಧವನ್ನು ಮುಂದೆ ನಡಿಸಿದನು. ಮಹಾರಾಜ ನೇರೋ ೬೮ನೆಯಲ್ಲಿ ಪಟ್ಟ ಕಳಕಾಂಡ ಕಾರಣ, ಯುದ್ಧಕ್ಕೆ ಸ್ವಲ್ಪ ಅಡ್ಡಿ ಆಯಿತು. ಆದರೂ ವೆಸ್ಪಸ್ಯಾನನು ಮಹಾರಾಜನಾದ ಮೇಲೆ, ತನ್ನ ಮಗನಾದ ತೀತನ ಪರಿಮುಖವಾಗಿ ಆ ಯುದ್ಧವನ್ನು ಪೆಟ್ಟು ಬಲವಾಗಿ ನಡಿಸಿ, ೭೦ನೆಯಲ್ಲಿ ಯೆರೂಸಲೇಮವನ್ನು ಪೂರ್ಣ ನಾಶ ಮಾಡಿಸಿದನು.—ಆಗ್ಗೆ ಇನ್ನೂ ಜೀವಂತರಾಗಿದ್ದ ಅಪಾಸ್ತಲರು ಆ ಸಮಯದಲ್ಲಿ ಅಥವಾ ಅದರ ಮೊದಲೆ ಯೆಲ್ಲಿಗೆ ಹಾಗಾದರು ಯೆಂಬ ವಿಷಯದಲ್ಲಿ ಯೇನೂ ನಿಶ್ಚಯವಿಲ್ಲಾ. ತರುವಾಯ ಉಂಟಾದ ದಂತಕಥೆಗಳು ಮಾತ್ರವೆ ಆ ಸಂಗತಿಯನ್ನು ವಿವರಿಸುತ್ತವೆ. ಆದರೂ ಯೋಹಾನನ ವಿಷಯದಲ್ಲಿ ಮಾತ್ರ ನಿಶ್ಚಯ ವರ್ತಮಾನ ಉಂಟು. ಅವನು ಅಂಬಿನಿಂದ ಸಣ್ಣ ಆಸ್ಯದಲ್ಲಿ ವಸ್ತಿ ಮಾಡಿದನು. ಕಡೇ ಪೌಲಪತ್ರಿಕೆಗಳಲ್ಲಿ ಕಾಣ ಬರುವ ಗಂಡಾಂತರಗಳಿಗಾಗಿಯೂ, ಪೆಚ್ಚು ನಿರ್ಲಜ್ಜೆಯಾಗಿ ದುಮುಕುವ ಸುಳ್ಳು ಬೋಧಕರಿಗಾಗಿಯೂ, ಯೆಹೂದರ ಪಗೆಗಾಗಿಯೂ, ಪರಜನರಿಂದ ಬಂದ ರಕ್ತಮಯ ಹಿಂಸೆಗಳಿಗಾಗಿಯೂ, ವಾಬ್ಬ ಅಪಾಸ್ತಲನು ಅಲ್ಲಿ ಇರುವದು ಅತ್ಯವಶ್ಯವಾಗಿತ್ತು. ಇಲ್ಲಿ ಯೋಹಾನನು ಬೋಧನೆಯಿಂದಲೂ ಬರಹದಿಂದಲೂ ೧೦೦ನೆ ವರುಷದ ಪರ್ಯಂತರ ಯತ್ನೈಸುತ್ತಾ ಇದ್ದನು. ಈ ಪ್ರಕಾರ ಹಾಸವಾಡಂಬಿಕೆಯ ಬರಹಗಳು ಕ್ರಿಸ್ತಶಕದ ಮೊದಲನೆ ವರ್ಷಶತವನ್ನೆಲ್ಲಾ ಆವರಿಸಿ ಕಾಳ್ಳುತ್ತವೆ.

ಅಪಾಸ್ತಲಚರಿತ್ರೆಯ ವಿಭಾಗ.

ಇದು ಸುಲಭವಾಗಿ ಯೆರಡು ಮುಖ್ಯ ಭಾಗಗಳಾಗುತ್ತದೆ: ಹಾಗಾಗಿದ್ದರೆ ಸಂಧಿ ೧—೧೨. ಯೆಹೂದರಲ್ಲಿ ಆದ ಕ್ರೈಸ್ತ ಧರ್ಮದ ಸ್ಥಾಪನೆ; ಮತ್ತು ಸಂಧಿ ೧೩—೨೮. ಅಪಾಸ್ತಲನಾದ ಪೌಲನ ಪರಿಮುಖವಾಗಿ ಪರಜನರಲ್ಲಿ ಆದ ಅದರ ವಿಸ್ತರಣ. ಮಿಕ್ಕಾದ ಅಪಾಸ್ತಲರನ್ನು ಸಹಾ ಆಲೋಚಿಸುವದಾದರೆ, ಕೆಳಗೆ ಬರುವ ಪರಿಚ್ಛೇದಗಳು ಉಂಟಾಗುವವು.

I. ಪಲೆಸ್ತೀನದಲ್ಲಿ ಆದ ಕ್ರೈಸ್ತ ಸಭೆಯ ಸ್ಥಾಪನೆ, ಪ್ರಚ್ರೀಕರಣ. ಸಂಧಿ ೧—೧೨. ಈ ವಿಷಯದಲ್ಲಿ ಪ್ರೇತ್ರನು ಸ್ಥಾಪನೆಯ ಬಂಡೆಯಾಗಿ ಕಾಣಿ ಬರುತ್ತಾನೆ.

೧. ಯೇಸುವಿನ ದಿವಾರಾಪಣದಿಂದಾದ ಸ್ಥಾಪನೆ. ಅಪಾಸ್ತಲನ ಆಯಿಕೆ. ಮುಖ್ಯವಾಗಿ ಪಂಚಾಶತ್ತಿನ ಪುಬ್ಬ. ಸ. ೧. ೨.

೨. ಅಟಕಗಳಿಂದ ಕುಂದದ ಸಭೆಯ ವೃದ್ಧಿ.

೧. ಮೊದಲನೆ ಅದ್ಭುತದಿಂದ ಆದ ಭದ್ರೀಕರಣ. ಮೊದಲನೆ ಹಿಂಸೆ. ಸ. ೩. ೪.

೨. ಆಶ್ಚರ್ಯಕರ ಅದ್ಭುತ, ಅಧಿಕ ಕಠಿಣ ಹಿಂಸೆ. ಸ. ೫.

೩. ಮೊದಲನೆ ತರ್ಕದಿಂದ ಬಂದ ಆತ್ಮದ ಹೊಸ ಪ್ರಕಟಣೆ. ಅತಿ ಕಠಿಣವಾದ ಹಿಂಸೆಯಿಂದ ಕ್ರೈಸ್ತ ಧರ್ಮವು ಹೆಚ್ಚು ವಿಸ್ತರಿಸುತ್ತದೆ. ಸ. ೬—೯.

೩. ಪರಜನರ ಬಳಿಗೆ ಬರುವ ಪಾಗೆ ಕ್ರೈಸ್ತ ಧರ್ಮಗತಿಯ ಸಿದ್ಧವಾಗುವ ಕಾಲ.

೧. ಪರಜನ ಅಪೊಸ್ತಲನ ಸಂವರ್ತನ. ಸ. ೯.

೨. ಮೊದಲನೆ ಪರಮನುಷ್ಯನ ಸಂವರ್ತನ. ಸ. ೧೦—೧೧, ೧೪.

೩. ಅಂತಿಯೊಖ್ಯವು ಪರಜನರ ಮಾತೃ ಸಭೆಯಾಗಿ, ಯೆರೂಸಲೇಮಿನ ಸಭೆಯ ಸಂಗಡ ಸಹೋದರ ಸಂಬಂಧದಲ್ಲಿ ನಡಿಯುತ್ತದೆ. ಕರ್ತನು ಸಭೆಯನ್ನು ಕಾಪಾಡುತ್ತಾನೆ. ಸ. ೧೧, ೧೪—೧೨, ೨೫.

II. ಅಪಾಸ್ತಲನಾದ ಪೌಲನ ಪರಿಮುಖವಾಗಿ ಪರಜನರಲ್ಲಿ ಆದ ಕ್ರೈಸ್ತ ಧರ್ಮಸ್ಥಾಪನೆ. ಸ. ೧೩—೨೮.

೧. ಪೌಲನು ಸಣ್ಣ ಆಸ್ಯದಲ್ಲಿ ಮಾಡಿದ ಮೊದಲನೆ ಪ್ರಸಂಗಪರ್ಯಾಟನೆ. ಸ. ೧೩. ೧೪.

ಯೆಹೂದ ಕ್ರೈಸ್ತರಿಗೂ ಪರಜನ ಕ್ರೈಸ್ತರಿಗೂ ಇರುವ ಪರಸ್ಪರ ತಾರತಮ್ಯ ವಿಷಯದಲ್ಲಿ ನಡದ ತರ್ಕದ ನಿವಾರಣೆ. ಸ. ೧೫.

೨. ಪೌಲನು ವಿಲಾಯತಿಯಲ್ಲಿ ಶೇರಿ, ಕಾರಿಂಥದ ವರೆಗೆ ಮಾಡಿದ ಯೆರಡನೆ ಪ್ರಸಂಗಪರ್ಯಾಟನೆ. ಸ. ೧೫, ೩೬—೧೮, ೨೨. ಮಕೆದಾನ್ಯದಲ್ಲಿಯೂ ಅಥೇನೆಯಲ್ಲಿಯೂ ಕಾರಿಂಥದಲ್ಲಿಯೂ ಉಳಕಾಂಡದ್ದು.

ಥೆಸ್ಸಲಾನೀಕೆಯರಿಗೆ ಬರದ ಪತ್ರಿಕೆಗಳು. (೧. ೨).

ಅಂತಿಯಾಖ್ಯದಲ್ಲಿ ಪೇತ್ರನನ್ನು ಗದರಿಸಿದ್ದು. ಗಲ. ೨.

೩. ಪೌಲನ ಮೂರನೆ ಪ್ರಸಂಗಪರ್ಯಾಟನೆ. ಅಪಾಸ್ತ. ೧೮, ೨೩—೨೦, ೨.

ಎಫೆಸದಲ್ಲಿ ಬಹುಕಾಲ ಇದ್ದದ್ದು. ಗಲತರ ಪತ್ರಿಕೆ. (೩).

೧ನೆ ಕಾರಿಂಥದವರ ಪತ್ರಿಕೆ. (೪). ಮಕೆದಾನ್ಯದ ಪ್ರಯಾಣದಲ್ಲಿ ಬರದ ಯೆರಡನೆ ಕಾರಿಂಥದವರ ಪತ್ರಿಕೆ. (೫).

ಕಾರಿಂಥದಲ್ಲಿ ರೋಮಾಯರಿಗೆ ಬರದ ಪತ್ರಿಕೆ. (೬).

೪. ಪೌಲನು ಪಲೆಸ್ತೀನದಲ್ಲಿಯೂ, ರೋಮದಲ್ಲಿಯೂ ಇದ್ದದ್ದು. ಅಪೊಸ್ತ. ೨೦, ೩—ಸ. ೨೮.

೧. ಪೌಲನು ಯೆಹೂದ ಜನಾಂಗದ ಮುಂದೆ. ಸ. ೨೨.

೨. ಯೆಹೂದರ ಶ್ರೇಷ್ಠರ ಮುಂದೆ. ಸ. ೨೩.

೩. ರೋಮಿಯಾಯ ನ್ಯಾಯಸ್ಥಾನದ ಮುಂದೆ.

೧. ಫೆಲಿಕ್ಸನ ಮುಂದೆ. ಸ. ೨೪.

೨. ಫೆಸ್ತನ ಮುಂದೆ. ಸ. ೨೫.

೩. ಅಗ್ರಿಪ್ಪನ ಮುಂದೆ. ಸ. ೨೬. ಸಾಕ್ಷಿ ಕೊಟ್ಟದ್ದು.

೪. ರೋಮಕ್ಕೆ ಮಾಡಿದ ಪ್ರಯಾಣ. ಸ. ೨೭. ೨೮.

೫. ರೋಮದಲ್ಲಿ ನಡಿಸಿದ ಪ್ರವೃತ್ತಿ. ಕೊಲೊಸ್ಸೆಯರ ಪತ್ರಿಕೆ (೭). ಫಿಲೆಮೊನನದು (೮). ಎಫೆಸದವರದು (೯). ಫಿಲಿಪ್ಪಿಯರದು. (೧೦).

III. ಅಪೊಸ್ತಲರ ಅಂತ್ಯದ ಪ್ರವೃತ್ತಿ. ಪೇತ್ರನ ಪತ್ರಿಕೆ. ಬ್ಯಾಧಕಪತ್ರಿಕೆಗಳು. ೧ನೆ ೨ನೆ ತಿಮೊ. ತೀತ. ಸರ್ವಸಭೆಗೆ ಬರದ ಪತ್ರಿಕೆಗಳು. ಯಾಕೋಬನದು, ಪೇತ್ರನ ೧ನೆ, ೨ನೆಯವುಗಳು, ಯೂದನದು, ಯೋಹಾನನ ೧ನೆ, ೨ನೆ, ೩ನೆಯವುಗಳು; (ಪೌಟ್ಟಿಗೆ ೧೧ನೆಯಿಂದ ೨೧ನೆ ವರೆಗೆ).

ಅಪೊಸ್ತಲಚರಿತ್ರೆಯ ಮೊದಲನೆ ಪರಿಚ್ಛೇದ.

ಮುಖ್ಯವಾಗಿ ಪೇತ್ರನ ಸೇವೆಯಿಂದ ಪಲೆಸ್ತೀನದಲ್ಲಿ ಉಂಟಾದ ಕ್ರೈಸ್ತ ಸಭೆಯ ಸ್ಥಾಪನೆ.

ಸ. ೧–೧೨.

ದಿವಾರೋಹಣದಿಂದಲೂ, ಮತ್ಥಿಯನೆಂಬ ಅಪೊಸ್ತಲನ ಆಯಿಕೆಯಿಂದಲೂ, ಪಂಚಾಶತ್ತಿನ ಮಹಾಕಾರ್ಯದಿಂದಲೂ ಉಂಟಾದ ಸಭಾಸ್ಥಾಪನೆ.

ಸ. ೧. ೨.

ಸ. ೧. ಯೇಸುವಿನ ಚರಿತ್ರೆಯ ಅಂತ್ಯಕ್ಕೆ ಶೇರಿದ ಅಪೊಸ್ತಲಚರಿತ್ರೆಯ ಆರಂಭ.

I. ಯೇಸುವಿನ ಜೀವದ ಪುನರಾಲೋಚನೆ. ವ. ೧—೩.

II. ಯೇಸುವಿನ ದಿವಾರೋಹಣದ ಪುನರಾಲೋಚನೆ. ವ. ೪—೧೪.

III. ಅಪೊಸ್ತಲರು ಮತ್ಥಿಯನನ್ನು ಆರಿಸಿದ್ದು. ವ. ೧೫—೨೬.

ಅಪೊ. ಕ್ರಿ. ೧, ೧—೫.

ಮೊದಲನೆ ಸಂಧಿಯ ಮೊದಲನೆ ೧೪ ಶ್ಲೋಕಗಳಲ್ಲಿ ಅಪೊಸ್ತಲರ ಚರಿತ್ರವು ಯೇಸುವಿನ ಜೀವ ಚರಿತ್ರದ ತರುವಾಯ ಬರ ತಕ್ಕ ಕ್ರೈಸ್ತ ರಕ್ಷಣಾಚರಿತ್ರದ ಅವಶ್ಯವಾದ ಯೆರಡನೆ ಭಾಗವಾಗಿದೆಂಬದನ್ನು ಲೂಕನು ಸೂಚಿಸುತ್ತಾನೆ. ಆದ್ದರಿಂದ ಇಲ್ಲಿ ದಿವಾರೋಹಣದ ವೃತ್ತಾಂತವನ್ನು ಹೇಳುತ್ತಾನೆ. ಸುವಾರ್ತೆಯಲ್ಲಿ ಅದೇ ವೃತ್ತಾಂತದಿಂದ ಯೇಸುವಿನ ಜೀವಚರಿತ್ರವನ್ನು ತೀರಿಸಿ ಇದ್ದರೂ, ಇಲ್ಲಿ ಅದನ್ನು ಯೆರಡನೆ ಸಾರಿಯೂ ಹೆಚ್ಚು ವಿವರವಾಗಿಯೂ ತಿಳಿಸುವದರಿಂದ—ಅದು ಯೇಸುವಿನ ಮೂರ್ತಿಗೂ, ಭೂಮಿಯಲ್ಲಿ ಆತನು ನಡಿಸಿದ ಕಾರ್ಯಕ್ಕೂ ಪರಿಪೂರ್ತಿಯಾಗಿರುವದಲ್ಲವೆ, ಆತನ ಪರಲೋಕಪ್ರವೃತ್ತಿ ಆರಂಭವಾಗಿರುವ ಕಾರಣ, ಬಹುಘನವಾದದ್ದೆಂದೂ, ಅಪೊಸ್ತಲಚರಿತ್ರವೆಂಬ ಈ ಗ್ರಂಥವು ಕರ್ತನು ತಾನೇ ಕರದ ಅಪೊಸ್ತಲರ ಪರಿಮುಖವಾಗಿ ಸಭೆಯನ್ನು ಸ್ಥಾಪಿಸಿದ ಮೊದಲನೆ ಚರಿತ್ರವಾಗಿರುವ ಕಾರಣ, ಅದು ಅಪೊಸ್ತಲರ ಪ್ರವೃತ್ತಿಯನ್ನಲ್ಲ, ವರಲೋಕಕ್ಕೇರಿದ ಕರ್ತನದನ್ನೆ ವರ್ಣಿಸುತ್ತದೆಂದೂ ತೋರಿಸಿ, ಗ್ರಂಥವನ್ನು ಆರಂಭದಿಂದಲೆ ಈ ಆಲೋಚನೇ ಹಿಡುಕೊಂಡು ಮಾಡುತ್ತಾನೆ. ಯೆರಡನೆ ವಚನದಿಂದ ಕರ್ತನು ಅಪೊಸ್ತಲರಲ್ಲಿ ತೊಡಗಿಸಿದ ಕಾರ್ಯವನ್ನು, ಭೂಮಿಯನ್ನು ಬಿಟ್ಟು ಹೋಗುವದಕ್ಕಿಂತ ಮುಂಚೆ ಹ್ಯಾಗೆ ಸಂಪೂರ್ತಿ ಮಾಡಿದನು ಯೆಂಬದನ್ನು ಸೂಚಿಸುತ್ತಾನೆ. ದಿವಾರೋಹಣದ ಸಂಗತಿಯ ಮುಂಜೆ, ಅದಕ್ಕೆಲ್ಲಾ ಹ್ಯಾಗೆ ಸಿದ್ಧವಾಯಿತೆಂಬದನ್ನು ತಿಳಿಸುತ್ತಾನೆ. ದಿವಾರೋಹಣದ ವೃತ್ತಾಂತದಲ್ಲಿಯೂ ಅಪೊಸ್ತಲರ ವಿಷಯವಾದದ್ದನ್ನು ವಿವರವಾಗಿ ವರ್ಣಿಸುತ್ತಾನೆ. ಕಡೆಯಲ್ಲಿ ದಿವಾರೋಹಣವನ್ನು ಕಂಡ ಬಲದಿಂದ ಅವರು ಆಗಲೆ ಭದ್ರವಾಗಿಯೂ ನಿಸ್ಸಂಶಯವಾಗಿಯೂ ನಡ ಕೊಳ್ಳಲಾರಂಭಿಸಿದ್ದನ್ನು ವಿವರಿಸುತ್ತಾನೆ.

I. ಯೇಸುವಿನ ಜೀವದ ಪುನರಾಲೋಚನೆ. ವ. ೧—೫.

೧. ಓ ಥೆಯಾಫಿಲನ್ಯೇ ೧), ಯೇಸು, ತಾನು ಆದು ಕಾಂಡ ಅಪೊಸ್ತಲರಿಗೆ ೨) ಪರಿಶುದ್ಧಾತ್ಮದಿಂದ ೩) ಕಟ್ಟಳೆ ಕೊಟ್ಟು ೪), ಯೆತ್ತಲ್ಪಟ್ಟ ದಿವಸದ ವರೆಗೆ, ೨. ಮಾಡಲೂ ಬೋಧಿಸಲೂ ಆರಂಭಿಸಿದ ಯೆಲ್ಲವುಗಳ ವಿಷಯವಾಗಿ ಮೊದಲನ್ಯೇ ೫) ಚರಿತ್ರೆಯನ್ನು ಬರೆದಿದ್ದೆನೆ. ೩. ಅವನು ಶ್ರಮೆ ಪಟ್ಟ ಮ್ಯೇಲೆ ನಾಲ್ವತ್ತು ದಿವಸಗಳ ಪರ್ಯಂತರ ಅವರಿಗೆ ಕಾಣಿಸಿ ಕೊಂಡು, ದೇವರ ರಾಜ್ಯದವುಗಳಂನು ಹೇಳುತ್ತಾ, ಅನೇಕ ಗುರುತುಗಳಿಂದ ತನಂನು ಬದುಕುವವನಾಗಿ ೬) ತೋರಿಸಿದನು.

೧. ಸುವಾರ್ತೆಯನ್ನು ಬರಿಯುವಾಗ ಲೂಕನು ೧, ೩. ಥೆಯಾಫಿಲನಿಗೆ ದಾಡ್ಡವರಿಗೆ ಯಾಗ್ಯವಾದ ಬಹುಮಾನ ಕಾಟ್ಟನು. ಆದರೆ ಇಲ್ಲಿ ಓ ಥೆಯಾಫಿಲನೇ ಯೆಂತ ಮಾತ್ರ ಬರಿಯುತ್ತಾನೆ. ತನ್ಮಧ್ಯ ಇಬ್ಬರಲ್ಲಿ ವಿಶೇಷವಾದ ಸಲಿಗೆ ಉಂಟಾಯಿತೆಂತ ಕಾಣುತ್ತದೆ.

೨. ಅಪೊಸ್ತಲರೆಂಬ ಪೆಸರು ಪುಸ್ತಕದ ಉದ್ದಿಶ್ಯಕ್ಕೆ ವಾಪ್ತಿಕೆಯಾಗಿದೆ, ಯಾಕಂದರೆ ಶಿಷ್ಯಾಶ್ರಮವು ಆಗ ಕಳದು ಪೌಲಾಗುವಂಥಾದ್ದಾಗಿತ್ತು.

೩. ಅಪ್ಪಣೆ ಕಾಡುತ್ತಾ ಇದ್ದವನು ತಾನೆ ಪರಿಶುದ್ಧಾತ್ಮ ಉಂಟಾದವನಾಗಿದ್ದನು. ಲೂಕ. ೪, ೧೮. ಮತ್ತು ಅದನ್ನು ಅಪ್ಪಣೆಗಳಾಡನೆ ಅಪೊಸ್ತಲರಿಗೆ ಕಾಟ್ಟನು. ಯೋಹಾ. ೨೦, ೨೨. ಇದಲ್ಲದೆ ಬೇಗ ಅದನ್ನು ಸಮೃದ್ಧಿಯಾಗಿ ಕಾಡ ಬೇಕೆಂದಿದ್ದನು. ಈ ಪ್ರಕಾರ ದಿವಾರೋಹಣದ ಮುಂಚೆ ಪಂಚಾಶತ್ತಿನ ಮುಂಗಡವನ್ನು ಕಾಟ್ಟನೆಂತ ತಿಳು ಕೊಳ್ಳ ಬೇಕು.

೪. ಪೌರಾಟು ಪೌರೋಗುವವರು ಅವಶ್ಯ ಇರುವ

ಪೂರ್ಣಗೆಯೂ ಸಾಕಾಗುವ ಪರಿಯಂತರಕ್ಕೂ ಬುದ್ಧಿ ಹೇಳುತ್ತಾ, ಅಪ್ಪಣೆ ಕಾಡುತ್ತಾ ಇರುವರು. ೩ನೆ ವಚನದಲ್ಲಿ ಲೂಕನು, ಕರ್ತನು ಆ ನಾಲ್ವತ್ತು ದಿನಗಳಲ್ಲಿ ಅಪೊಸ್ತಲರಿಗೆ ಯೇನೇನು ಹೇಳಿದನೆಂತ ವಾಚ್ಯಾರೆ ಶಿಳಿಸಿ, ೨ನೆ ಳನೆ ಮುಂತಾದ ವಚನಗಳಲ್ಲಿ ದಿವಾರಾಧಣೆಯಾದ ದಿನದಲ್ಲಿಯೆ ಯೇನು ಹೇಳಿದನೆಂತ ವರ್ಣಿಸುತ್ತಾನೆ. (೩ನೆ ವಚನದ ಅಂತ್ಯವಂನೂ ಮತ್ತು ೪ನೆ ವಚನದ ಆರಂಭವನ್ನೂ ನಾಡು). ಆ ದಿನದ ಪರಿಯಂತರಕ್ಕೆ ಲೂಕನು ಸುವಾರ್ತೆಯ ಚರಿತ್ರವನ್ನು ಬರದಿದ್ದನು. ಆ ದಿನದಿಂದಲೆ ಈ ಯೆರಡನೆ ಪುಸ್ತಕ ಆರಂಭಿಸುತ್ತಾನೆ.

೩. ಪೂರ್ಣಗಂದರೆ, ರಕ್ಷಣಾಚರಿತ್ರದ ಮೊದಲನೆ ಪುಸ್ತಕವು ತೀರಿತು; ಆದರೆ ಅದಕ್ಕೆ ತಗಲಿ ಯೆರಡನೇದು ಬರ ಬೇಕು. ಈ ಅರ್ಥವು ಕರ್ನಾಟಕ ಭಾಷಾಂತರದಲ್ಲಿ ಕಾಣುವದಿಲ್ಲ, ಆದರೆ ಮೂಲಭಾಷೆಯಲ್ಲಿ ವಾಂದು ಸಣ್ಣ ಶಬ್ದದಿಂದ ಪ್ರತ್ಯಕ್ಷವಾಗುತ್ತದೆ. "ಮೊದಲನೆ ಚರಿತ್ರವನ್ನು ಬರದೆನು ಸರಿ,, ಯೆಂತ ಹೇಳಿದರೆ, ಶುಮಾರು ಅದೇ ಅರ್ಥವಾದೀತು. ಚರಿತ್ರವೆಂಬದಕ್ಕೆ ಮೂಲಭಾಷೆಯಲ್ಲಿ ಅಧ್ಯಾಯವೆಂಬ ಅಭಿಪ್ರಾಯ, ಅಂದರೆ, ಮನಸ್ಸಿರುವವನು ವಾಂದೇ ಸರ್ತಿ ಬುಡದಿಂದ ತುದಿ ವರೆಗೆ ವಾಂದ ತಕ್ಕ ಗ್ರಂಥ. ಲೂಕನು ಉಭಯ ಪುಸ್ತಕಗಳ ಗ್ರಂಥಕರ್ತನಾಗಿರುವ ಕಾರಣ, ವಾಂದರಿಂದಾಂದಕ್ಕೆ ಬಲ ಬರುತ್ತದೆ. ಕ್ರಿಸ್ತನ ಚರಿತ್ರದಲ್ಲೆಲ್ಲಾ ಉತ್ಥಾನದಿಂದ ದಿವಾರಾಧಣೆಯಾದ ವರೆಗಿನ ಈ ಕಾಲವು ಮುಖ್ಯವಾದ ಗಡಿಯಾಗಿರುತ್ತದೆ. ಆ ಕಾಲದ ವಿಷಯವಾಗಿ ಮೊದಲನೆ ಪುಸ್ತಕ ಮುಗಿಸಿದನು, ಅದರ ವಿಷಯವಾಗಿಯೆ ಯೆರಡನೇದನ್ನು ಆರಂಭಿಸುತ್ತಾನೆ. ಮತ್ತು ಇದರಲ್ಲಿ ಅಷ್ಟಾಗಿ ಅಪೊಸ್ತಲರ ಕ್ರಿಯೆಗಳನ್ನಲ್ಲ, ಮೊದಲನೆ ಪುಸ್ತಕದಲ್ಲಿ ಯೇಸು ಕ್ರಿಸ್ತನ ಕ್ರಿಯೆಗಳನ್ನು ಪೂರ್ಣಾಗಾಗೇ, ಪೂರ್ಣಾಗೆ ಇದರಲ್ಲಿ ಕ್ರಿಸ್ತನು ತಂದೆಯಿಂದ ಕಳುಹಿಸಿದ ಪರಿಶುದ್ಧಾತ್ಮದ ಕ್ರಿಯೆಗಳನ್ನು ವರ್ಣಿಸುತ್ತಾನೆ.

೪. ಯೇಸು ಅವರಿಗೆ ಮೊದಲೆ ಜೀವಂತನಾಗಿಯೂ ನಿಜವಾಗಿ ಯೆದ್ದವನಾಗಿಯೂ ಅತಿ ನಿರ್ವಿವಾದದ ಪ್ರಮಾಣಗಳಿಂದ ಕಾಣಿಸಿ ಕಾಂಡದರಿಂದ, ಅವರು ಮುಂದಿನ ಉದ್ಯೋಗಕ್ಕೆ ಸಿದ್ಧವಾದರು. ಇದು ಪೂರ್ಣಾಗಾಯಿತಂದರೆ ೧) ನಾಲ್ವತ್ತು ದಿವಸಗಳ ಪರಿಯಂತರ, ಬಿಡದೇ ಅವರ ಸಂಗಡ ವಾಸ ಮಾಡದೆ ಇದ್ದರೂ, ಆಗಾಗ್ಗೆ ಅಲ್ಲಲ್ಲಿ ಅವರಿಗೆ ಕಾಣಿಸಿ ಕಾಂಡನು. ೨) ಆ ಸಮಯದಲ್ಲಿ ದೇವರ ರಾಜ್ಯದ ಸ್ವಭಾವದ ವಿಷಯವಾದ ಬೋಧನೆಯನ್ನೂ ಕಾಟ್ಟನು. ಈ ಪ್ರಕಾರ ಅವರ ವಿಶ್ವಾಸ ಸ್ಥಿರವಾಯಿತು, ಅವರ ಶಿಳಿವಿಕೆ ಶುದ್ಧವಾಯಿತು. ಆದರೂ ಅವರು ಕೆಲಸಕ್ಕೆ ಸಪೂರ್ಣ ಸಿದ್ಧರಾಗುವದಕ್ಕೆ, ದಿವಾರಾಧಣೆಯೆ ಮುಖ್ಯ ಆಧಾರವಾಗಿತ್ತು.

II. ಯೇಸುವಿನ ದಿವಾರೋಹಣದ ಪುನರಾಲೋಚನೆ. ವ. ೪—೧೪.

ದಿವಾರೋಹಣದ ವಿಷಯದಲ್ಲಿಯೂ, ಅಪೊಸ್ತಲರ ಸಾಧನೆಗೂ ಬೋಧನೆಗೂ ಅವಶ್ಯವಾದ್ದನ್ನೂ ಲೂಕನು ವಿಸ್ತಾರವಾಗಿ ಹೇಳುತ್ತಾನೆ. ಅದು ಕ್ರಮ ಪ್ರಕಾರ ಪ್ಯಾಗಂದರೆ.

೧) ಸಾಧನೆಯು. ೧) ವ. ೪. ೫. ಅನೇಕರಿಗೆ ತತ್ಪುತ್ವದ ಮತ್ತು ಮುಂದಿನ ಕೃಪೆಯ ಸ್ಥಳವಾಗಿಯೂ, ಯೆಹೂದ ಜನಾಂಗದ ಮಧ್ಯಸ್ಥಾನವಾಗಿಯೂ ಇರುವ ಯೆರೂಸಲೇಮಿನಲ್ಲಿ ಕಾದುಕೊಂಡಿರ ಬೇಕೆಂಬ ಆಜ್ಞೆ. ಈ ಆಜ್ಞೆಯು ಪರಿಶುದ್ಧಾತ್ಮ ಬೇಗ ಬರುವದೆಂಬ ವಾಗ್ದತ್ತದಿಂದ ಮನೋಹರವಾಯಿತು ೨) ವ. ೬. ಇಸ್ರಯೇಲರಿಗೆ ಲೌಕಿಕ ರಾಜ್ಯವು ತ್ವರ್ಯದಲ್ಲಿ ಸಿಕ್ಕುವದೆಂಬ ನಿರೀಕ್ಷೆಯನ್ನು ಇನ್ನೂ ಬಿಡಲೊಲ್ಲದ ಶಿಷ್ಯರ ಬಲಹೀನತ್ವವು. ೩) ವ. ೭. ೮. ಯೇಸುವು ಈ ನಿರೀಕ್ಷೆಯನ್ನು ಪ್ರೀತಿಯಿಂದ ತೆಗದು ಬಿಟ್ಟದ್ದು ಹ್ಯಾಗಂದರೆ: ಮೊದಲಾಗಿ ವ. ೭ನ್ನಿ ಅವರು ತಮ್ಮ ಕೆಲಸವಾಗಿರದ ಸಂಗತಿಗಳನ್ನು ತಿಳಿಕೊಳ್ಳು

ಅಪಾ. ಕ್ರಿ. ೧, ೧೨—೧೪.

ವದಕ್ಕೆ ಪ್ರಯತ್ನ ಮಾಡಿದ್ದು ಆಗದೆಂತ ಅವರನ್ನು ವಾಗ್ದಂಡಿಸಿ, ಅವರಿಗೆ ಬೇಕಾದ್ದನ್ನು ಅತಿ ಮಮತೆಯಿಂದ ವಾಗ್ದತ್ತ ಮಾಡಿ, ಅಂತ್ಯ ಪರಿಯಂತರಕ್ಕೂ ಮಹಿಮೆಯುಳ್ಳ ಉದ್ಯೋಗವನ್ನು ಮುಂದೋರಿಸುತ್ತಾನೆ.

೨) ದಿವಾರೋಹಣದ ಕಾರ್ಯವು ವ. ೯ಲ್ಲಿ ಸಂಕ್ಷೇಪವಾಗಿ ವರ್ಣಿಸಿ ಅದೆ. ದೃಶ್ಯದಿಂದ ಅದೃಶ್ಯಕ್ಕೆ, ಇಹದಿಂದ ಪರಕ್ಕೆ, ಮನುಷ್ಯತ್ವದಿಂದ ದೈವತ್ವಕ್ಕೆ ಹೋಗುವ ಮಾರ್ಗವು ನಮ್ಮ ಗ್ರಹಿಕೆಯನ್ನು ಮೀರುತ್ತದೆ. ಈ ವಿಷಯದಲ್ಲಿ ನಮಗೆ ತಿಳಿಯುವದು ಯೆಷ್ಟೆಂದರೆ—ಯೇಸುವಿನ ಶರೀರವು ಭೂಪ್ರಕೃತಿಯ ಕ್ರಮಗಳಿಗೆ ಬಿಡುಗಡೆಯಾದ ಕಾರಣ, ಭೂಮಿಯಿಂದ ಯೇರ ತಕ್ಕವಾಯಿತು. ಆದರೆ ಮತ್ತೆ ಯೇನು ಸಂಭವಿಸಿತು ಯೆಂಬದು ಅವರ ಕಣ್ಣಿಗೂ ನಮ್ಮ ಕಣ್ಣಿಗೂ ಮರೆಯಾಗಿರುತ್ತದೆ.

೩) ಈ ಸಂಗತಿಯೇನೆಂಬ ವಿಷಯದಲ್ಲಿ ವ. ೧೦. ೧೧. ದಿವದಿಂದ ಬಂದ ಇಬ್ಬರು ದೂತರು ನಿಶ್ಚಯವರ್ತಮಾನ ಹೇಳುತ್ತಾರೆ. ಇವರು ಮೇಲಕ್ಕೆ ಯೇರಿ ಹೋದವನ ವಿಷಯದಲ್ಲಿ, ಆತನು ಅದೇ ಪ್ರಕಾರ ತಿರಿಗಿ ಬರುವನು ಯೆಂಬದನ್ನು ತಿಳಿಸುತ್ತಾರೆ. ಇದರಿಂದ ನಾವು ಗ್ರಹಿಸ ತಕ್ಕದ್ದೇನಂದರೆ:

೧. ಆತನು ಮೇಲೇರಿದ ಭಾವವುಳ್ಳವನಾಗಿ ಬದುಕುತ್ತಾ, ತಂದೆಯ ಬಲಕಡೆಯಲ್ಲಿ ಮನುಷ್ಯನಾಗಿ ಕೂತು ಕೊಂಡಿರುತ್ತಾನೆ. ೨. ಆತನು ತಿರಿಗಿ ಬಂದು, ತಾನು ಪಡಕೊಂಡ ಅಧಿಕಾರವನ್ನು ಭೂಮಿಯಲ್ಲಿ ಸಹ ಪ್ರತ್ಯಕ್ಷ ಮಾಡುವನು.[1]

೪) ದಿವಾರೋಹಣದ ಅನಂತರದಲ್ಲಿಯೇ ಆದದ್ದು. ವ. ೧೨—೧೪.

೧೨. ಆಗಲವರು ಯೆರೂಸಲ್ಮೆಮಿಗೆ ಸಮೀಪವಾಗಿ ಸಬ್ಬತ್ತಿನ ಹಾದಿಯಷ್ಟು ದೂರವಾಗಿರುವ ಒಪ್ಪೀಗುಡ್ಡವೆಂಬ ಗುಡ್ಡದಿಂದ ಯೆರೂಸಲ್ಮೆಮಿಗೆ[ಗ] ತಿರಿಗಿ ಬಂದರು. ೧೩. ಬಂದಾಗ, ತಂಮ ಉಪ್ಪರಿಗೆಗೆ[ಎ] ಹೋದರು. ಅಲ್ಲಿ ಪೇತ್ರನೂ[ಅ], ಯಾಕೋಬನೂ, ಯೋಹಾನನೂ, ಅಂದ್ರೆಯನೂ, ಫಿಲಿಪ್ಪನೂ, ತೋಮನೂ, ಬಾರ್ತಲೊಮಾಯನೂ, ಮತ್ತಾಯನೂ, ಅಲ್ಫಾಯನ ಮಗನಾದ ಯಾಕೋಬನೂ, ಜಲೋತಶನೆಂಬ ಸೀಮೋನನೂ, ಯಾಕೋಬನ ಸಹೋದರನಾದ ಯೂದನೂ ಇರುತ್ತಿದ್ದರು. ೧೪. ಇವರೆಲ್ಲರು ಸ್ತ್ರೀಯರ ಸಂಗಡಲೂ, ಯೇಸುವಿನ ತಾಯಿಯಾದ ಮರಿಯಳ[ಳ] ಸಂಗಡಲೂ, ಅವನ ತಂಮಂದಿರ ಸಂಗಡಲೂ[ಶ], ಯೇಕ ಮನಸ್ಸಾಗಿ[ಟ], ಪ್ರಾರ್ಥನೆ ವಿಜ್ಞಾಪನೆಗಳಲ್ಲಿ ನೆಲೆಗೊಂಡಿದ್ದರು.

೧. ಒಪ್ಪೆ ಗುಡ್ಡದಲ್ಲಿಯೆ ಯೇಸುವಿನ ಮಹೋಪಕಾರ ಸಂಕಟ ಉಳ್ಳ ಪುಣ್ಯಕಾರ್ಯವು ನಡಿಯಿತು. ಆ ಗುಡ್ಡ ಐದು ಸ್ತಾದ್ಯ ದೂರವಿತ್ತು. ಸಬ್ಬತ್ತಿನ ಪುಣ್ಯಾದಿಯಂದರೆ, ಯೆಹೂದರು ಸಬ್ಬತ್ತಿನಲ್ಲಿ ದೇವಾಲಯದೆ ಪ್ರಯಾಣ ಮಾಡ ಬಹುದಾಗಿರುವಷ್ಟು, ಅಂದರೆ ಶುಮಾರು ೨೦೦೦ ಅಡಿ ದೂರ ಇತ್ತು.

೨. ಮನೆಯ ಮೇಲ್ಪುರಿಗೆ. ಈ ಮನೆಯು ಎಂದು ವೇಳೆ ಮರಿಯಳದಾಗಿತ್ತು. ೧೨, ೧೩. ಅಲ್ಲಿ ಅವರು ಪಟ್ಟಣದ ಗುಲ್ಲಿಗೆ ದೂರದಲ್ಲಿ ನಿರಾತಂಕವಾಗಿದ್ದರು. ಆದರೂ ಪ್ರಾರ್ಥನೆಯ ಸಮಯಗಳಲ್ಲಿ ಅವರು ಇಸ್ರಯೇಲರಾಳಿಗಿನ ಸಹೋದರರ ಸಂಗಡ ಅನ್ಯೋನ್ಯವಾಗಿ, ವಿಶ್ವಾಸದಲ್ಲಿ ಕಟ್ಟಿ ಕಾಳ್ಳುವದಕ್ಕೆ, ಲೂಕ. ೨೪, ೫೩. ದೇವಾಲಯಕ್ಕೆ ಹೋಗುತ್ತಾ ಇದ್ದರು.

೩. ಅಪಾಸ್ತಲಜಾಡುಗಳು ಬೇರೆ ಬೇರೆ ಕ್ರಮ

ವಾಗಿ ಹೇಳಿರುವ ವಿಷಯದಲ್ಲಿ ಸುವಾರ್ತಾಚರಿತ್ರವನ್ನು ನಾವು ಕಾಳ್ಮಬದು.

೪. ಮರಿಯಳ ಹೆಸರು ಬರಹಗಳಲ್ಲಿ ಇಲ್ಲಿ ಕಡೇ ಸಾರಿ ಬರುತ್ತದೆ. ಮಹಿಮೆಯುಳ್ಳ ಅಂತ್ಯದ ಪರಿಯಂತರ ತನ್ನ ಮಗನ ಗತಿಯನ್ನೆಲ್ಲಾ ನಾಡುವದಕ್ಕೂ, ಮುಖ್ಯವಾಗಿ ಇಷ್ಟುವರೆಗೆ ತನ್ನ ಪ್ರಾದಯದಲ್ಲಿ ಮನನ ಮಾಡುತ್ತಾ ಇದ್ದದ್ದಕ್ಕೆಲ್ಲಾ (ಆ ಸಮಯದಿಂದ ಬಲ ಪಡೆದಿರುವ) ಅಪಾಸ್ತಲರಿಗೆ ಸಾಕ್ಷಿ ಕಾಡುವದಕ್ಕೂ, ಆ ಪರಿಯಂತರ ಅವಳು ಬದುಕಿದಳು. ಅವಳ ಅವಸಾನವು ವಿಶೇಷವಾಗಿತ್ತು ಯೆಂಬದಕ್ಕೆ, ಅಥವಾ ದಂತಕಥೆಯ ಪ್ರಾಂತಿಯ ಪ್ರಕಾರ, ಅವಳು ದಿವಾರಾಪಣವಾಗಿ ಪಡೆದಳೆಂಬದಕ್ಕೆ ಯೇನಾದಾದೂ ಆಧಾರವಿಲ್ಲಾ.

೫. ಯೇಸುವಿನ ಶರೀರಸಂಬಂಧದ ಸಪಡೆದ ರು ಯಾಕೋಬ. ೭, ೫. ಮತ್ತಾ. ೧೨, ೪೬. ಮಾರ್ಕ. ೩, ೨೦. ೨೧. ಮುಂಚೆ ಯೇಸುವನ್ನು ನಂಬದೆ ಇದ್ದರು. ಅವರಲ್ಲಿ ಶ್ರೇಷ್ಠನಾದ ಯಾಕೋಬನಿಗೆ ಉತ್ಥಾನವಾದವನು ಪ್ರತ್ಯಕ್ಷವಾದ್ದರಿಂದ ವಾಂದುವೇಳೆ, ೧. ಕಾರಿ. ೧೫, ೭., ಅವರು ಪೂರ್ಣವಾಗಿ ವಿಶ್ವಾಸಕ್ಕೆ ವಶವಾದರೆಂತ ಕಾಣುತ್ತದೆ.

೬. ಅವರೆಲ್ಲರು ವಾಬ್ಬರ ಸಂಗಡ ವಾಬ್ಬರು ಸಪಡೆದರರ ಸಂಸರ್ಗದಲ್ಲಿದ್ದು, ದೇವರ ಸಂಗಡ ಯೆಡೆಬಿಡದೆ ಪ್ರಾರ್ಥನೆಯಲ್ಲಿ ನಡಕಾಂಡು, ಸಮಸ್ತ ವಿಜ್ಞಾಪನೆಗಳನ್ನು ಆತನ ಮುಂದೆ ತರುತ್ತಾ ಇರುವದರಿಂದ ವಾಂಟಿಗರಾಗಿದ್ದ ವೇಳೆಯಲ್ಲಿ ಬಪು ಬಲವಾಗಿ ಬಲಗಾಂಡು, ತಮ್ಮ ಕರ್ತನ ಅಪ್ಪಣೆಗಳನ್ನು ನಡಿಸಿ, ಆತನ ವಾಗ್ದತ್ತಗಳನ್ನು ಪಡಕಾಳ್ಳಲಿಕ್ಕೆ ಅತ್ಯುತ್ತಮವಾಗಿ ತಂಮಂನು ಸಿದ್ಧ ಮಾಡಿಕಾಂಡರು.

III. ಯೂದನ ಸ್ಥಳದಲ್ಲಿ ಅಪಾಸ್ತಲನಾದ ಮತ್ಥೀಯನನ್ನು ಆರಿಸಿ ಕಾಂಡದ್ದು. ವ. ೧೫—೨೬.

ಕ್ರೈಸ್ತ ಸಭೆಯ ಈ ಮೊದಲನೆ ಕೃತ್ಯವು, ಪರಿಶುದ್ಧಾತ್ಮ ಪೂರ್ಣ ಹೊಯ್ಯಲ್ಪಡುವ ಮೊದಲೆ ಸಂಭವಿಸಿತೆಂಬದು ಸರಿ, ಆದಾಗ್ಯೂ ಲೂಕನು ಈ ವಿಷಯದಲ್ಲಿ ಹೇಳಿದ್ದನ್ನು ನೋಡಿದರೆ, ಅದು ಕರ್ತನ ಚಿತ್ತದ ಪ್ರಕಾರವಾಗಿಯೂ, ಮುಂಗಡವಾದ ಆತ್ಮಸಂಪ್ರದಾನವು ಯೋಹಾ. ೨೦, ೨೨. ಅಪೊಸ್ತಲರಿಗೆ ಪ್ರಾಪ್ತವಾದ ತರುವಾಯದಲ್ಲಿಯೂ, ನಡಿಯಿತೆಂಬದನ್ನು ಲಕ್ಷಿಸಬೇಕು. ಪೇತ್ರನು ಮಾತಾಡಿದ ಪ್ರಕಾರ, ಬರಹದ ಸ್ಪಷ್ಟ ವಾಕ್ಯಗಳಿಂದ ಅವರು ಮನೋನಿಶ್ಚಯ ತಕ್ಕೊಂಡು, ಚೀಟು ಹ್ಯಾಗೆ ಬೀಳುತ್ತದೊ, ಅದೇ ತಮ್ಮ ಪ್ರಾರ್ಥನೆಗೆ ದೈವೋತ್ತರವೆಂದು ನೆನಸಿ ಕೊಂಡರು. ಕೆಲವರು ಈ ವಿಷಯದಲ್ಲಿ ಆಲೋಚಿಸುವದೇನಂದರೆ—ಕರ್ತನು ತಾನೆ ಪೌಲನನ್ನು ಯೂದನ ಸ್ಥಳದಲ್ಲಿ ಇಟ್ಟನೆಂತ ತಿಳಕೊಳ್ಳಬೇಕಾಗಿರುವ ಕಾರಣ, ಅಪೊಸ್ತಲರು ಮಾಡಿದ್ದು ಅಕಾಲಕಾರ್ಯವಾಗಿತ್ತು. ಆದರೆ ಅದು ಹಾಗಲ್ಲವೆಂತ ನಮ್ಮ ಆಲೋಚನೆ. ದಿವಾರೋಹಣದಿಂದ ಅಪೊಸ್ತಲರು ಅಂತರ್ಯವಾದ ಹೃದಯದಲ್ಲಿ ತಿರಿಗಿ ಹ್ಯಾಗೆ ಸಮವಾದರೊ, ಹಾಗೆಯೇ ಬಹಿರಂಗದಲ್ಲಿಯೂ ಯೂದನಿಂದ ಬಂದ ನಷ್ಟವು ಪರಿಹಾರವಾಗ ಬೇಕಾಗಿತ್ತು. ಕೀರ್ತ. ೬೯ರಲ್ಲಿ ಬರದಿರುವ ವಾಕ್ಯದಿಂದ, ಅಪೊಸ್ತಲರಿಗೆ ಈ ಪ್ರಕಾರ ವೊಬ್ಬನನ್ನು ಆಯ್ದು ಕೊಳ್ಳುವದಕ್ಕೆ ಅಧಿಕಾರ ಬಂತು. ಆದ್ದರಿಂದ ಮತ್ಥೀಯನನ್ನು ಅಪೊಸ್ತಲರಲ್ಲ, ನಿಜವಾಗಿ ಕರ್ತನು ತಾನೆ ಆಯ್ದು ಕೊಂಡನೆಂತ ಹೇಳಬೇಕು. ಈ ಅಪೊಸ್ತಲರ ಕೂಟವು ಕ್ರೈಸ್ತ ಸಭೆಯ ಸ್ಥಾಪನೆಗೂ ಇಸ್ರಯೇಲ ಜನಾಂಗಕ್ಕೂ ವಿಶೇಷವಾದ್ದಾಗಿತ್ತು. ಈ ವಿಶೇಷತ್ವವು ಅದಕ್ಕೆ ನಿತ್ಯದಲ್ಲಿಯೂ ಇರುವದು. ಮತ್ತಾ. ೧೯, ೨೮. ಲೂಕ. ೨೨, ೩೦. ಪ್ರಕ. ೨೧, ೧೪. ಇದು ಹೀಗಿದ್ದರೂ, ಪೌಲನಿಗೆ ಪರಜನರಲ್ಲಿ ಇದ್ದ ಉದ್ಯೋಗವೂ, ಅವನ ವಿಂಗಡ

ವಾದ ಕಿರೀಟವೂ ಬಾಡಿ ಹೋಗದೆಂಬ ವಿಷಯದಲ್ಲಿ ನಾವು ಐಶ್ವರ್ಯವುಳ್ಳ ದೇವರನ್ನು ನಂಬಬಹುದು. ಆದರೆ, ಕರ್ತನಾದ ಯೇಸು ಆ ನಾಲ್ವತ್ತು ದಿನಗಳಲ್ಲಿ, ಅಪೊಸ್ತಲ ಕೂಟವು ಭರ್ತಿಯಾಗುವ ಹಾಗೆ, ಆ ಒಂದು ಸ್ಥಳಕ್ಕೆ ಯಾಕೆ ಯಾರನ್ನಾದರೂ ನೇಮಿಸಲಿಲ್ಲಾ ಯೆಂತ ಯಾರಾದರೂ ಕೇಳುವ ಪಕ್ಷದಲ್ಲಿ, ಅವರಿಗೆ ನಮ್ಮ ಉತ್ತರವೇನಂದರೆ: "ಈ ಪ್ರಕಾರ ಆತನು ಇಷ್ಟು ಪರಿಯಂತರ ತಾನೆ ಅಪ್ಪಣೆ ಕೊಡುತ್ತಾ ಇದ್ದು, ಅಂದಿನಿಂದ ಸಭೆಯನ್ನು ಮನುಷ್ಯರ ಪರಿಮುಖವಾಗಿ ಆಳಲಿಕ್ಕೆ ಆರಂಭಿಸಿದನು. ಇದಲ್ಲದೆ ಶಿಷ್ಯರಿಗೆ ತಾನು ಕೊಟ್ಟ ಯೋಹಾ. ೨೦, ೨೨. ಆತ್ಮವು ಯತ್ನೈಸುವ ಹಾಗೆ, ಅದಕ್ಕೆ ಯೆಡೆ ಬಿಡ ಬೇಕೆಂದಿದ್ದನು. ಹೀಗಿರುವದರಿಂದ ಪೇತ್ರನ ಮಾತುಗಳಲ್ಲಿಯೂ ಪ್ರಾರ್ಥನೆಯಲ್ಲಿಯೂ ಆ ಆತ್ಮದ ಬಲವು ಪ್ರತ್ಯಕ್ಷವಾಗುತ್ತದೆ,,.

೧. ಪೇತ್ರನ ಮದಿಪು.

೧೫. ಆ ದಿವಸಗಳಲ್ಲಿ, ಹೆಚ್ಚು ಕಡಿಮೆ ನೂರಿಪ್ಪತ್ತು ಮಂದಿ ಶಿಷ್ಯರು ೧) ಇರಲಾಗಿ, ಅವರ ಮಧ್ಯದಲ್ಲಿ ೨) ಪೇತ್ರನು ೩) ಯೆದ್ದು, ಹೇಳಿದ್ದೇನಂದರೆ.

೧. ಉತ್ಥಾನವಾದವನನ್ನು ೧ ಕಾರಿ. ೧೫, ೬. ನಾಟಿದ ಐನೂರು ಮಂದಿಯಲ್ಲಿ ಹೆಚ್ಚಾದವರು ಗಲಿಲಾಯದಲ್ಲಿ ಉಳಕಾಂಡರೆಂತ ತೀರುತ್ತದೆ.

೨. ಅಪಾಸ್ತಲರು ಯೆಲ್ಲರು ವಾಟ್ಸು ಕೂಡಿದವರು ತಂಮಷ್ಟಕ್ಕೆ ಅಧಿಕಾರಿಗಳಂತೆ ಆಜ್ಞಾಪಿಸಲಿಕ್ಕೂ ಕ್ರಮಿಸಲಿಕ್ಕೂ ಇಚ್ಛೈಸದೆ, ಈ ವಿಶೇಷ ಕಾರ್ಯವನ್ನು ಸಮಸ್ತ ಸಭೆಯ ತಿಳಿವಿಕೆಗೆ ತಂದರು. ಈ ಕಾರಣದಿಂದ ಕೂಡಿ ಬಂದ ಸಭೆಯ ಸಂಖ್ಯೆಯು ಪೂರ್ಣವಾಗಿಯೂ ಸ್ಪಷ್ಟವಾಗಿಯೂ ಹೇಳಿಯದೆ. ಹೀಗಾಗಿ ಕೆಲವು ಮುಖ್ಯಸ್ಥರ ಆಲಾಚನೆ ಮಾತ್ರ ಕೇಳಿದ್ದೆಂತ ಹೇಳುವದಕ್ಕೆ ಉಪಾಯವಿಲ್ಲ. ಸಭೆಯು ಬಹಳ ದಾಡ್ಡದಾದಂದಿನಿಂದ ಆ ಪ್ರಕಾರ ನಿರ್ಣೈಸಲಿಕ್ಕೆ ಆಗುವದಿಲ್ಲವೆಂಬುವದು ಸರಿ; ಆದಾಗ್ಯೂ ವಿಶೇಷವಾದ ಕಾರ್ಯಗಳಲ್ಲಿ ಯಾರಾದರೂ ವಾಬ್ಬನೆ, ಅಥವಾ ಬಾಧಕರು ಮಾತ್ರವೆ ನಿರ್ಣೈಸುವದು ಉಚಿತವಲ್ಲಾ. ಅದುಕಾರಣ ಪುನಸ್ಥಾಪನೆಯ ಕಾಲದಿಂದ ಸುಪಾರ್ತಾಪಕ್ಷದ ಸಭಾಧಿಕಾರಿಗಳು, ಬಾಧಕರೂ ಸಭೆಯವರೂ ವಾಬ್ಬರಿಗಾಬ್ಬರು ಸಹಾಯ ಮಾಡಿ, ವಾಟ್ಸಿಗೆ ಕೆಲಸ ನಡಿಸುವ ಹಾಗೆ, ಪ್ರಯತ್ನ ಮಾಡುತ್ತಾರೆ.

೩ ಪೇತ್ರನು ಸಭೆಯ ಬಂಡೆ ಆವನೆಂಬದು (ಮತ್ತಾ. ೧೬, ೧೮.) ಇಲ್ಲಿ ಕಾಣಬರುತ್ತದೆ. ಅಪಾಸ್ತಲರು ಯಾಪಹಾ. ೨೦, ೨೨. ತಮ್ಮ ಉದ್ಯೋಗ ಕ್ಕಾಸ್ಕರ ಹಾಂದಿದ ಪರಿಶುದ್ಧಾತ್ಮದಿಂದ, ಅವನು ಮತ್ತಾಬ್ಬರಿಗಿಂತ ಹೆಚ್ಚಾಗಿ ಪ್ರೇರಣೆ ಹಾಂದಿ, ಸಮವಾದದ್ದನ್ನು ಮತ್ತಾಬ್ಬರ ತಿಳವಳಿಕೆಗೆ ತಂದನು. ಆದರೆ ಅವನ ಅನುಸಾರಿಯೂ ಉತ್ತರಾಧಿಕಾರಿಯೂ ಯೆಂಪು ಈಗಿನ ಕಾಲದಲ್ಲಿ ಅನಿನಿಕಾಳ್ಳುವನು ಮಾಡುವ ಪ್ರಕಾರ, ಪೇತ್ರನು ಸ್ವಂತ ಅಧಿಕಾರದಿಂದ ಯೇನಾಂದೂ ನಿರ್ಣೈಸಲಿಲ್ಲ.

೧೬. ಸಹೋದರರೇ, ಯೇಸುವನ್ನು ಹಿಡಿದವರಿಗೆ ದಾರಿ ತೋರಿಸಿದವನಾದ ಯೂದನನ್ನು ಕುರಿತು ಪರಿಶುದ್ಧಾತ್ಮವು ದಾವೀದನ ಬಾಯಿಂದ ೧) ಮುಂದಾಗಿ ಹೇಳಿದ ಆ ಬರಹವು ೨) ಇಡೇರಿ ಬೇಕಾಗಿತ್ತು. ೧೭. ಹ್ಯಾಗಂದರೆ ೩), ಅವನು ನಮ್ಮನಿಂಗಡ ಯೆಣಿಸಲ್ಪಟ್ಟು, ಈ ಸೇವೆಯಲ್ಲಿ ಪಾಲು ೪) ಹೊಂದಿದವನಾಗಿ,

೧೯. ಅನ್ಯಾಯದ ಸಂಬಳದಿಂದ ಹಾಲವನ್ನು ಕೊಂಡು ಕೊಂಡು, ಬ್ಯಾರಲ ಬಿದ್ದು ಶ), ನಡು ವಾಡೆದು ಹಾಯ್ತು, ಅವನ ಕರುಳುಗಳೆಲ್ಲಾ ಬೆಲ್ಲಲ್ಪಟ್ಟವು. ೧೯. ಇದು ಯೆರೂಸಲ್ಮೇಮಿನಲ್ಲಿ ವಾಸವಾಗಿರುವವರೆಲ್ಲರಿಗೆ ತಿಳಿಯ ಬಂದದರಿಂದ ಟ), ಆ ಹಾಲಕ್ಕೆ ಅವರ ಸ್ವಭಾಷೆಯಲ್ಲಿ ಒ), ರಕ್ತದ ಹಾಲವೆಂಬ ಅಕೆಲ್ದಮ ಯೆಂದು ಹೆಸರಾಯಿತು. ೨೦. ಯಾಕಂದರೆ, ಕೀರ್ತ. ೬೯, ೨೫. ಅವನ ನಿವಾಸವು ಹಾಳಾಗಲಿ; ಅದರಲ್ಲಿ ವಾಸ ಮಾಡುವವನು ಇಲ್ಲದೆ ಹಾಯ್ತಾಗಲಿ ಯೆಂದೂ, ಕೀರ್ತ. ೧೦೯, ೮. ಅವನ ಅಧ್ಯಕ್ಷತೆಯನ್ನು ಬೇರಾಬ್ಬನು ತಕ್ಕಾಳಲಿ ಯೆಂದೂ, ಕೀರ್ತನೆಗಳ ಪುಸ್ತಕದಲ್ಲಿ ಲ) ಬರದದೆ.

೧. ಕೀರ್ತ. ೪೧, ೯. ನನ್ನ ಕಾಟ್ಟಿ ತಿಂದವನು ಸಹಾ ನನ್ನ ಮೇಲೆ ಹಿಂಮಡಿಯನ್ನು ವ. ೧೬—೨೦. ಯೆತ್ತಿದ್ದಾನೆ. ಈ ಮಾತನ್ನು ಯೇಸು ತಾನೆ ಯಾ ಹಾ. ೧೩, ೧೮. ಹೇಳುತ್ತಾನೆ. ಈ ಕೀರ್ತನೆಯಲ್ಲಿ ದಾವೀದನು ತನ್ನ ವಿಷಯದಲ್ಲಿಯೂ, ತನ್ನ ಯಥಾರ್ಥತ್ವ ಮಾನಸಾಂತರಗಳ ವಿಷಯದಲ್ಲಿಯೂ, ಅಹಿತಾಪೇಲನ ದ್ರಾಹದಿಂದ ತನ್ನ ಮೇಲೆ ಬಂದ ಅನ್ಯಾಯವಾದ ಹಿಂಸೆಯ ವಿಷಯದಲ್ಲಿಯೂ ಮಾತಾಡಿದನು. ಆದಾಗ್ಯೂ ಪರಿಶುದ್ಧಾತ್ಮವು ಅವನ ಬಾಯಲ್ಲಿ ದ್ರಾಹಿಯಾದ ಸ್ನೇಹಿತನ ವಿಷಯವಾದ ಮಾತುಗಳನ್ನು ಇಟ್ಟಿತು. ಇದು ಯೇಸುವಿನ ವಾಕ್ಯದ ಪ್ರಕಾರ ಪರಮ ದ್ರಾಹಿಯಾದ ಯೂದನಲ್ಲಿ ಪೂರ್ಣವಾಗಿ ಈಡೇರಿತು.

೨. ದುಃಖಕರವಾದ ಕಾರ್ಯವನ್ನು ಪೇತ್ರನು ಸ್ವಲ್ಪವಾದರೂ ಅಡಗಿಸುವದಕ್ಕೂ ಪಗುರ ಮಾಡುವದಕ್ಕೂ ನಾಡದೆ, ಆ ಭಯಂಕರವಾದ ಗತಿಯನ್ನೆಲ್ಲಾ ಪೂರ್ಣ ಸತ್ಯದ ಪ್ರಕಾರ ಹೇಳುತ್ತಾನೆ. ಅದರಿಂದ ಬರ ಬಹುದಾದ ಆತಂಕಕ್ಕೆ ಮಾತ್ರವೆ ದೇವರ ವಾಕ್ಯದಿಂದ ಅಡ್ಡ ಕಟ್ಟುತ್ತಾನೆ. ಪಾಠಾಗಂದರೆ: ವ. ೧೬—೨೦. ಯೂದನಲ್ಲಿ ಬರಹದ ಪ್ರಕಾರವೆ ಈಡೇರಿತು. ಹೀಗೆಯೆ ರಕ್ಷಕನು ತನ್ನನ್ನೆ ಯಾಹಾ. ೧೭, ೧೨. ಈ ವಿಷಯದಲ್ಲಿ ಆದರಿಸಿ ಕಾಂಡನು. ಆದರೂ ಅದಕ್ಕಾಸ್ಕರ ಯೂದನು ವಾಪ್ತಿಸಿ ಕಾಡುವದು ಅಗತ್ಯವಾಗಿತ್ತೆಂತ ನೆನಸ ಬಾರದು. ಅವನು ವಾಪ್ತಿಸಿ ಕಾಟ್ಟಿದ್ದು ಅವನ ಸ್ವಂತ ಅಪರಾಧ. ಆದಾಗ್ಯೂ ಅವನು ತನ್ನ ಪ್ರಾದಯವನ್ನು ಸೈತಾನನಿಗೆ ಕಾಟ್ಟಾದ ಮೇಲೆ, ಮತ್ತಾಬ್ಬರ ಸಮಾಧಾನಕ್ಕಾಸ್ಕರ, ಸಮಸ್ತವು ಪೂರ್ಣವಾಗಿ ದೇವರ ಕೈಕೆಳಗಿತ್ತೆಂಬದನ್ನು ತೀರಿಸುವದು ಅವಶ್ಯವಾಯಿತು. ಸೈತಾನನು ಆ ವಾಬ್ಬನಿಂದ ಆಧಾರ ತಕ್ಕಾಂಡು, ಮಿಕ್ಕಾದವರನ್ನು ಸಹಾ ಕೆಡಿಸ ಅಪೇಕ್ಷಿಸದೆ ಇರುತ್ತಿದ್ದಿಲ್ಲ. ಅದಕ್ಕೆ ಪ್ರತಿಯಾಗಿ ಇಲ್ಲಿ ಹೇಳುವದೇನಂದರೆ, ನಾಶನದ ಮಗನೇ ಪಾಠಾರತು ಮತ್ತಾಬ್ಬನೂ ನಾಶವಾಗಲಿಲ್ಲಾ. ಯಾಹಾ. ೧೭, ೧೨.

೩ ಈ ವಾಕ್ಯ ಸಹಾ ಈಡೇರಿತು ಯೆಂಬದನ್ನು ತಿಳಿಸುವದಕ್ಕಾಗಿ, ಪಾಠಾಗೆಂದರೆ ಯೆಂತ ಹೇಳುತ್ತಾನೆ.

೪. ಮೂಲಭಾಷೆಯಲ್ಲಿ, ಈ ಸೇವೆಯ ಚೀಟು ಯೆಂದಿರುತ್ತದೆ. ಸುವಾರ್ತೆಯ ಉದ್ಯೋಗವು, ನಮ್ಮ ಪುಣ್ಯವೇನೂ ಇಲ್ಲದೆ, ಕರ್ತನ ಕೃಪೆಯಿಂದಲೆ ಸಿಕ್ಕ ತಕ್ಕ ವಾಡವೆಯಾಗಿದೆ. ಅದರಲ್ಲಿ ಸುವಾರ್ತೆಯ ಸೇವಕನು ಅಹಂಕಾರವನ್ನು ಬಿಟ್ಟು, ಕರ್ತನನ್ನೂ ನೆರೆಯವರ ಪ್ರಾಣಗಳನ್ನೂ ಸೇವಿಸ ಬೇಕು. ೨ ಕಾರಿ. ೪, ೫.

೫. ಅವನು ಸತ್ತ ಮೇಲೆ ಸಹಾ ದೇವರ ನ್ಯಾಯತೀರ್ಪು ಅವನ ಶರೀರದ ಮೇಲೆ ಪ್ರತ್ಯಕ್ಷವಾಯಿತು. ಅವನು (ವಾಂದು ವೇಳೆ ಪಗ್ಗ ಕಡದು ಪಾಠಾದ್ದರಿಂದ) ಬಾರಲ ಬಿದ್ದು, ಕರುಳುಗಳೆಲ್ಲಾ ಚೆಲ್ಲಿದವೇನಾ.

ಅಪಾ. ಕ್ರಿ. ೧, ೨೧. ೨೨.

೬. ಇದು ವ. ೧೮. ಆರಂಭದಲ್ಲಿ ಹೇಳಿಯದೆ.

೭. ಅಕೆಲ್ದಮಾ ಯೆಂಬದು ಇಬ್ರೀಯರ ಭಾಷೆಯ ಶಬ್ದ. ಅದನ್ನು ಲತೀನ ಥಾರೆಯಾದ ಥೆಯೊಫಿಲನೂ ಬೇರೆ ವಾದುವವರೂ ತಿಳಿಯರೆಂತ ನೆನಸಿ, ಲೂಕನು ಅದರ ಅಚಿಪ್ರಾಯವನ್ನು ಹೇಳುತ್ತಾನೆ.

೮. ಕೀರ್ತ. ೬೯, ೨೬. ಮತ್ತು ೧೦೯, ೮. ಇಲ್ಲಿ ದ್ರಾವೀದನ ವಿಷಯದಲ್ಲಿಯೂ ಅವನ ದುಷ್ಟ ಶತ್ರುಗಳ ವಿಷಯದಲ್ಲಿಯೂ ಹೇಳಿಯದೆ. ಆದರೆ ಅವನು ಪಾಟ್ಸ್ಪಾರೆ ಮೆಸ್ಸೀಯನ ಮುಂಗುರ್ತಾಗಿ ಇರುವ ಕಾರಣ, ಯೇಸುವಿನಲ್ಲಿ ಅಧಿಕವಾಗಿ ಈಡೇರಿದ್ದು ದಾವೀದನಲ್ಲಿ ಕಾಂಚವಾಗಿ ಕಾಣ ಬಂತು. ಇಲ್ಲಿ ಹೇಳಿದ ಪ್ರವಾದನೆಯು ಸಂಪೂರ್ಣವಾಗಿ ಸಂಭವಿಸಿತು. ಯೂದನು ಮಾಡಿದ ಆಸ್ತಿಯಲ್ಲಿ ನಿವಾಸ ಉಂಟಾಗಲಿಲ್ಲಾ. ಆ ಪಟ್ಣಾಲವು ಪರರಿಗೆ ಪೂಳಿದುವ ಸ್ಥಳವಾಗಿ ಪಟ್ಣಾಯಿತು. ಅವನ ಅಧ್ಯಕ್ಷತ್ವವನ್ನು ಬೇರಾಬ್ಬನು ತಕ್ಕಾಳ್ಳಲಿ ಯೆಂಬ ಪ್ರವಾದನೆಯಿಂದ ಇಂಥ ಪನೆ ಯೆಂಬದು ನಿಶ್ಚಯ ಹೇಳಿ ಇರದಕಾರಣ, ಯಾರನ್ನಾದರೂ ಚೀಟಿನಿಂದ ಆರಿಸಿ ತಕ್ಕಾಳ್ಳುವದಕ್ಕೆ ಯೆಡೆ ಆಯಿತು.

೨೧. ಹೀಗಿರುವದರಿಂದ ೧), ಯೌಹಾನನ ಸ್ನಾನವು ಮೊದಲ್ಗೊಂಡು ಕರ್ತನಾದ ಯೇಸು ನಮ್ಮಲ್ಲಿಂದ ಯೆತ್ತಲ್ಪಟ್ಟ ದಿವಸದ ವರಿಗೂ, ೨೨. ಅವನು ನಮ್ಮಲ್ಲಿ ಬರುತ್ತಾ ಹೌಗುತ್ತಾ ಇದ್ದ ಕಾಲವೆಲ್ಲಾ ನಮ್ಮ ಸಂಗಡ ಇದ್ದ ಜನರಾದ ಇವರಲ್ಲಿ ವೌಬ್ಬನುನಂಮ ಕೂಡ ಅವನ ಪುನರುತ್ಥಾನಕ್ಕೆ ೨) ಸಾಕ್ಷಿಯಾಗ ಬ್ಯೇಕು.

೧. ಪ್ರವಾದನೆಯು ಈಡೇರುವ ಪಟ್ಣಾಗೆಯೂ, ಅಪಾಸ್ತಲರ ಸಂಖ್ಯೆಯು ತುಂಬುವ ಪಟ್ಣಾಗೆಯೂ ಆಗ ಬೇಕು.

೨. ಬೇರೆ ಯೆಲ್ಲಾ ಸಾಕ್ಷಿಗೆ ಬದಲಾಗಿ ಉತ್ಥಾನವು ಮುಖ್ಯವಾದದ್ದಾಗಿ ಇಲ್ಲಿ ತಿಳಿಸಿ ಅದೆ. ಯಾಕಂದರೆ ೧) ಅದು, ಯೇಸುವಿನ ಬಾಧನೆ ಕ್ರಿಯೆಗಳ ಪಟ್ಣಾಗೆ, ಸಕಲ ಜನಾಂಗದ ಮುಂದೆ ನಡಿಯಲಿಲ್ಲ. ೨) ಆದಾಗ್ಯೂ ಅದೇ ಸಮಸ್ತ ವಿಶ್ವಾಸಕ್ಕೆ ಆಧಾರವಾಗಿರುತ್ತದೆ. ೧ ಕಾರಿ. ೧೫, ೧೪—೧೯. ಯಾಕಂದರೆ ಅದರಿಂದಲೆ ದೇವರ ಮಗನು ಆತ್ಮದಲ್ಲಿ ನೀತಿನಿರ್ಣಯ ಪಟ್ಟನು. ೧ ತಿಮೊ. ೩, ೧೬. ಉತ್ಥಾನದ ವಿಶ್ವಾಸದಿಂದ ಯೇಸು ಮೆಸ್ಸೀಯನೆಂಬವರ ಫನದ ವಿಷಯದಲ್ಲಿ ಯೆಪೂದರು ಮನಾಪೃಥವನ್ನು ಪಟ್ಣಾಂದಿ, ಯೇಸುವಿನ ಕ್ರೂಜೆಯ ಯೆಡತಡೆಯನ್ನು ಕಳಕಾಂಡರೆಂಬದಲ್ಲದೆ, ಪರಜನಾಂಗದವರು ಸಪಟ್ಣಾ ಸತ್ಯವರನ್ನು ಬದುಕಿಸ ಬಲ್ಲಂಥ ದೇವರಂನು ಅರಿತು ಕಾಳ್ಳ ಕಲಿತರೆಂಬದನ್ನು ತಿಳಕಾಳ್ಳ ಬೇಕು. ಇದಕ್ಕೆ ದೇವರ ಮಗನು ಮಹಿಮೆಯಲ್ಲಿ ಉತ್ತರಾತ್ತರವಾಗಿ ಬದುಕುತ್ತಾ ಆಳುತ್ತಾ ಇರುತ್ತಾನೆಂಬ ಬಾಧನೆ ಯೆಲ್ಲಾ ಶೇರುತ್ತದೆ. ಉತ್ಥಾನದ ಬಾಧನೆಯು ಮಧ್ಯಮಣಿಯಾಗಿ, ಕ್ರಿಸ್ತನು ಇಪುದಲ್ಲಿ ಕಳದ ಜೀವದ ಮತ್ತು ಪರದಲ್ಲಿ ಶೇರಿದ ಜೀವವ ಮರ್ಮವನ್ನು ಇಕ್ಕರಿಗೆ ತಿಳಿಸ ತಕ್ಕದ್ದಾಗಿದೆ.

೨. ಆಯ್ಕೆ.

೨೩. ಆಗಲವರು ಯುಸ್ತನೆಂಬ ಉಪನಾಮವುಳ್ಳ ಬರ್ಸಬನೆಂಬ ಯಾಕೋಬನು, ಮತ್ತಿಯನು, ಇವರಿಬ್ಬರನ್ನು ನಿಲ್ಲಿಸಿ, ಪ್ರಾರ್ಥನೆ ಮಾಡಿದ್ದೇನಂದರೆ, ೨೪. ಯೆಲ್ಲರ ಹೃದಯಗಳನ್ನು ತಿಳಿದವನಾದ ಕರ್ತನೇ ೧), ಯೂದನು ಸ್ವಸ್ಥಳಕ್ಕೆ ಹೌಗುವ ಹಾಗೆ, ೨೫. ಅಪರಾಧಿಯಾಗಿ ಕಳೆದು ಕಾಂಡ ಅಪಾಸ್ತಲತನವೆಂಬ ಸೇವೆಯಲ್ಲಿ

ಅಪೊ. (ಕ್ರಿ. ೧, ೨೩—೨೬.

ಪೌಲನ್ನು ಹೊಂದುವದಕ್ಕೆ ೨ ಜನರಲ್ಲಿ ನೀನು ಯಾವ ಒಬ್ಬನನ್ನು ಆರಿಸಿಕೊಂಡಿ ಎಂದು ತೋರಿಸು ೨೬. ಆಗ ಅವರು ಚೀಟುಗಳನ್ನು ಹಾಕಿ ಕೊಡುವಾಗ ೨), ಮತ್ತಿಯನಿಗೆ ಚೀಟು ಬಂದದರಿಂದ, ಅವನು ಹನ್ನೊಂದು ಅಪೊಸ್ತಲರ ಸಂಗಡ ಯೆಣಿಸಲ್ಪಟ್ಟನು.

೧. ಕರ್ತನೆಂದರೆ ಕರ್ತನಾದ ಯೇಸುವೆಂಬದು ನಿಶ್ಚಯ ವ. ೨೧., ಆತನೆ ಅಪೊಸ್ತಲರನ್ನು ಆಯ್ದು ಕೊಂಡವನು. ಇವನನ್ನು ಸಹಾ ಆತನೆ ಆಯ್ದು ಕೊಳ್ಳ ಬೇಕು. ಇದೆ, ಕರ್ತನಾದ ಯೇಸುವಿಗೆ ಶಿಷ್ಯರು ಮಾಡಿದ ಮೊದಲನೆ ಪ್ರಾರ್ಥನೆ.

೨. ಅಪೊಸ್ತಲರು ಆಲೋಚನೆಯಿಂದ ಯೆಲ್ಲರಲ್ಲಿ ೨ ಜನರನ್ನು ಪೇಳ್ಕಿ, ಕರ್ತನ ಮುಂದೆ ಇಟ್ಟಿದ್ದರು. ಇವರಿಬ್ಬರಲ್ಲಿ ಯಾಬ್ಬನನ್ನು ನಿಶ್ಚೈಸುವದು ಚೀಟು ಹಾಕುವದರಿಂದಲ್ಲದೆ ಬೇರೆ ಉಪಾಯದಿಂದ ಆಗಲಿಲ್ಲ. ಈ ಮಾರ್ಗವು ಮುಖ್ಯವಾಗಿ ಆ ಕಾಲಕ್ಕೂ ಅಂಥಾ ಕಾರ್ಯಕ್ಕೂ ತಕ್ಕದ್ದಾಗಿತ್ತು. ಕರ್ತನು ಅಪೊಸ್ತಲರ ಬಳಿಯಲ್ಲಿ ಇದ್ದ ಕಾಲಕ್ಕೂ, ಆದರಿಕನು ಅವರ ಬಳಿಗೆ ಬಂದ ತರುವಾಯದ ಕಾಲಕ್ಕೂ, ಇದು ಮಧ್ಯವಾಗಿತ್ತು. ಅವರು ಪರಿಶುದ್ಧಾತ್ಮವನ್ನು ಪೊಂದಿದ ಮೇಲೆ ಚೀಟು ಹಾಕಿದ್ದು ತೋರುವದಿಲ್ಲ. ೧೦, ೧೪. ೧೬, ೬. ಕರ್ತನು ಆಯ್ದು ಕೊಂಡನೆಂಬದನ್ನು ನೋಡಿ, ಯೆಲ್ಲರು ಒಪ್ಪಿದರು. ಈ ಹೊಸ ಅಪೊಸ್ತಲನಿಗೆ ಹೊಸ್ತಮಸ್ತಕ ಮಾಡಿದರೆಂತ ಯೇನೂ ಹೇಳಿರುವದಿಲ್ಲ, ಯಾಕಂದರೆ ಕರ್ತನು ತಾನೆ ಅವನಂನು ನೇಮಿಸಿದನು.

ಸಂಧಿ. ೨. ಪಂಚಾಶತ್ತಿನ ಹಬ್ಬ.

I. ಪ್ರತ್ಯಂಶ. ವ. ೧—೧೪.

II. ಪ್ರೇತ್ರನ ಭಾಷಣ. ವ. ೧೪—೪೦.

III. ಪ್ರೇತ್ರನ ಭಾಷಣದ ಫಲ. ಮೂರುಸಾವಿರ ಮಂದಿಯ ಸ್ನಾನ. ವ. ೪೨—೪೭.

IV. ಮೊದಲನೆ ಕ್ರೈಸ್ತ ಸಭೆಯ ಸ್ಥಿತಿ. ವ. ೪೨—೪೬.

ಪಂಚಾಶತ್ತಿನ ಹಬ್ಬದ ವಿಶೇಷತ್ವವನ್ನು ಕುರಿತು ವ್ಯಾಖ್ಯಾನಗಾರನಾದ ಗೆರ್ಲಖನೆಂಬ ಬೋಧಕನು ಬಹು ಚೆಲೋದಾಗಿ ಹೇಳುವದೇನಂದರೆ.

"ಹ್ಯಾಗೆ ಕ್ರಿಸ್ತನು ನಿಜವಾಗಿ ಪಸ್ಕ ಕುರಿಯಾಗಿ, ಪಸ್ಕಹಬ್ಬದಲ್ಲಿ ಕ್ರೂಜಿಸಲ್ಪಟ್ಟನೊ, ಹಾಗೆಯೆ ಆತನು ಯೆಹೂದರ ಯೆರಡನೆ ಮುಖ್ಯ ಹಬ್ಬದ ದಿನದಲ್ಲಿ ತನ್ನ ಸಭೆಯನ್ನು ಸ್ಥಾಪಿಸಿದನು. ಇಸ್ರಯೇಲರು ಐಗುಪ್ತದಿಂದ ಹೊರಟು ಬಂದ ಐವತ್ತನೆ ದಿನವಾಗಿದ್ದರಿಂದ, ಆ ದಿನಕ್ಕೆ ಪಂಚಾಶತ್ತೆಂಬ ಹೆಸರಾಯಿತು. ಅದು ಸಿನಾಯಿ ಪರ್ವತದಲ್ಲಿ ನಿಯೆಮವನ್ನು ಕೊಟ್ಟ ದಿನವಾಗಿಯೂ, ಹೊರಡೋಣ. ೨೩, ೧೬. ದ್ವಿ. ನಿ. ೧೬, ೯. ಮುಂಚಿನ ಪೈರಿನ ಹಬ್ಬವಾಗಿಯೂ ಇತ್ತು. ಈ ಯೆರಡು ಕಾರ್ಯಗಳು ಈ ಪಂಚಾಶತ್ತಿನ ಹಬ್ಬದಲ್ಲಿ ಮಹಿಮೆಯಾಗಿ ಈಡೇರಿದವು. ಈ ದಿನದಲ್ಲಿ ಪರಿಶುದ್ಧಾತ್ಮವು ತನ್ನ ನಿಯಮವನ್ನು ಕಲ್ಲಿನ ಹಲಿಗೆಗಳಲ್ಲಿ ಅಲ್ಲಾ, ಹೃದಯಗಳಲ್ಲಿ ಬರದನು. ಹೆಜೆ. ೩೬, ೨೬. ೨೭. ಮತ್ತು ತಾನೆ ಮೂರು ವರುಷದಿಂದ ವ್ಯವಸಾಯ ಮಾಡುತ್ತಾ ಬಂದ ಹೊಲದಿಂದ ಪ್ರಥಮಫಲಗಳನ್ನು ಕೂಡಿಸಿದನು.

"ನಡದ ಸಂಗತಿಯನ್ನೆ ಲಕ್ಷಿಸುವದಾದರೆ, ಅಂತರ್ಯದಲ್ಲಿ ಯೇನು ಸಂಭವಿಸಿತು ಯೆಂಬದು

ಪ್ರಾಮುಖ್ಯವಾಗಿರುತ್ತದೆ. ಅಪೊಸ್ತಲರೂ ಮೊದಲನೆ ಶಿಷ್ಯರೂ ಯೋಹಾನನಿಂದ ಸ್ನಾನ ಪಡಕೊಂಡು, ಬಲ ಹೀನತ್ವದಲ್ಲಿ ಆದರೂ ಹ್ಯಾಗೂ ಯೇಸುವಿನ ಬೆನ್ನು ಹತ್ತಿದವರಾಗಿ, ಆತನ ದಿವಾರೋಹಣದ ಮುಂಚೆಯೂ, ಮುಖ್ಯವಾಗಿ ಯೋಹಾ. ೨೦, ೨೨. ಆ ಸಮಯದಲ್ಲಿಯೂ, ದೇವರ ಆತ್ಮದ ಪ್ರೇರಣೆಗಳನ್ನು ಅಲ್ಪಸ್ವಲ್ಪ ತಮ್ಮಲ್ಲಿ ಅನುಭವಿಸಿದವರಾಗಿ ಸಹಾ ಇದ್ದು, ಕ್ರಿಸ್ತನ ಕೆಲಸವು ಸಂಪೂರ್ತಿಯಾದ ಬಳಿಕ ಆತನು ಮಹಿಮೆ ಪಟ್ಟ ಮೇಲೆ, ಪರಿಶುದ್ಧಾತ್ಮವನ್ನು ಹೊಂದಿದರು. ಈ ಆತ್ಮವು ಯೋಹಾ. ೩, ೫. ಅವರಲ್ಲಿ ಪುನರ್ಜನ್ಮವನ್ನು ಉಂಟು ಮಾಡಿ, ಅವರನ್ನು ಯೇಸುವಿನ ಸಂಬಂಧದಲ್ಲಿ ಧೃಢ ಪಡಿಸಿ ಬಿಗಿ ಮಾಡಿತು. ಮುಂಚೆ ಬಹಿರಂಗದ ಸಲಿಗೆಯಿಂದ ಇದು ಯೆಂದಿಗೂ ಆಗುತ್ತಿದ್ದಿಲ್ಲಾ. ಯೇಸುವು ಅವ್ವರೊಳಗೆ ವೊಂದೊಂದಾಗಿ ಯೇನೇನು ಮಾಡಿದ್ದನೊ, ಅದೆಲ್ಲಾ ಈಗ ಸಂಪೂರ್ಣವಾಯಿತು. ಯೇಸುವು ಮುಂಚೆ ಅವರಿಗೆ ಆತ್ಮ ಕೊಟ್ಟದ್ದು ಅವರನ್ನು ಸಿದ್ಧ ಮಾಡುವದಕ್ಕಾಗಿತ್ತು. ಅದಕ್ಕೂ ಇದಕ್ಕೂ, ಮಂದವಾಗಿ ಬೀಸುವ ಘಾಳಿಗೂ ಸಮಸ್ತವನ್ನು ಅದುರಿಸುವ ಬಿರು ಘಾಳಿಗೂ ಯೆಷ್ಟೋ ಅಷ್ಟೇ ಹೆಚ್ಚು ಕಡಿಮೆ ಉಂಟು.

"ಅಂತರ್ಯದಲ್ಲಿ ನಡದ ಕಾರ್ಯವು, ಅದರಿಂದ ಸ್ಥಾಪನೆಯಾದ ಸಭೆಯ ಹಾಗೆಯೆ, ಬಹಿರಂಗವಾಗಿ ಶಿಷ್ಯರಿಗೂ, ಸಮಸ್ತ ಇಸ್ರಯೇಲರಿಗೂ, ಮುಂದಿನ ಕಾಲದ ಸಭೆಯ ಸಮಸ್ತ ಅಂಗಗಳಿಗೂ, ಈ ನವಕಾಲದ ಮುಂಬೆಳಗು ಅಧಿಕ ಶುದ್ಧವಾಗಿ ಕಾಣುವ ಹಾಗೆ, ಬಹಿರಂಗದಲ್ಲಿ ಪ್ರತ್ಯಕ್ಷವಾಗುವದು ಅವಶ್ಯವಾಗಿತ್ತು. ಶಿಷ್ಯರು ಪ್ರಾರ್ಥನೆಯ ತಾಸಿನಲ್ಲಿ ವೊಟ್ಟಿಗೆ ಧ್ಯಾನ ಮಾಡುವ ಬಗ್ಯೆ ಕೂಡಿ ಬಂದಿದ್ದರು. ಪರಿಶುದ್ಧಾತ್ಮವು ಅವರ ಮೇಲೆ ಇಳಿದು ಬಂದು, ಅವರಂನು ಲೌಕಿಕವಾದ ದೇವಮಂದಿರ ಮಾಡುವಾಗ್ಯೆ, ಕಿವಿಗೆಕೇಳ ತಕ್ಕ ಘಾಳಿಯಾಗಿ, ನಿರ್ಮಿಸುವ ಬಲವುಳ್ಳ ಜೀವದ ಶ್ವಾಸವು ಬೀಸಿತು. ಮಹಾ ಬೆಂಕಿ ಬೆಳಕುಗಳ ರಾಶಿಯು ಭಾಗ ಭಾಗಗಳಾಗಿ, ಬೆಂಕಿಯ ನಾಲಿಗೆಗಳಾಗಿ, ವೊಬ್ಬೊಬ್ಬನ ಮೇಲೆ ಕೂತು ಕೊಂಡಿತು. ಇದು ಅವರ ಮೇಲೆ ಹೊಯಿದಿರುವ ಜೀವದ ಬೆಂಕಿಯಂತಿರುವ ಬಲಕ್ಕೆ ಗುರ್ತಾಗಿತ್ತು. ಇಸ್ರಯೇಲ ಜನಾಂಗವು ಈ ಹೊಸ ಸಭೆಯಂನು ಹ್ಯಾಗೆ ತಿಳಿಯದೆ ಹೋಯಿತೊ, ಹಾಗೆಯೆ ಅವರ ಹುಟ್ಟು ನುಡಿಯು ದೇವರ ಮಹಾ ಕಾರ್ಯಗಳನ್ನು ಗ್ರಹಿಸಲಾರದೆ ಹೋಯಿತು. ಈ ಆತ್ಮಹರ್ಷದಲ್ಲಿ ಅಲ್ಲಿ ಕೂಡಿ ಬಂದ ಸಕಲ ಜನಾಂಗಗಳ ಭಾಷೆಗಳನ್ನು ಮಾತಾಡಿ, ಈ ಮೊದಲನೆ ದಿನದಲ್ಲಿಯೆ ಸಮಸ್ತ ಲೋಕವನ್ನು ಕ್ರಿಸ್ತನ ಸಭೆಯಲ್ಲಿ ಸೂಚನೆಯಾಗಿ ಆವರಿಸಿ ಕೊಂಡರು. ಬಾಬೆಲಿನ ಗರ್ವದಿಂದ ಗಲಿಬಿಲಿಯಾಗಿ ಹೋದ ಭಾಷೆಗಳು ಹೊಸ ಜೆಯೋನಿನ ದೈನ್ಯದಿಂದಲೂ ಪ್ರೀತಿಯಿಂದಲೂ ತಿರಿಗಿ ವೊಂದಾದವು,,.

ಮೊದಲನೆ ಕ್ರೈಸ್ತ ಜನಾಂಗದಲ್ಲಿ ಸಂಭವಿಸಿದ ಪರಿಶುದ್ಧಾತ್ಮದ ಅಸಾಧಾರಣವಾದ ಪ್ರಯತ್ನಗಳು ಇವೆ. ಇಂದಿನ ಪರಿಯಂತರಕ್ಕೂ ಆಗುತ್ತಾ ಬರುವ ಸಾಧಾರಣವಾದ ಪ್ರಯತ್ನಗಳು ಆ ಮೂರು ಸಾವಿರ ಮಂದಿಯಲ್ಲಿ ಪ್ರತ್ಯಕ್ಷವಾಗುತ್ತವೆ. ಇವರು ನಡದ ಕಾರ್ಯಗಳನ್ನು ನೋಡಿ, ಪೇತ್ರನ ಬಲವಾದ ಮಾನಾಂತರಪ್ರಸಂಗವನ್ನು ಕೇಳಿ, ಕ್ಷಣದಲ್ಲಿ ಪಾಪನಿದ್ರೆಯಿಂದೆಚ್ಚತ್ತು, ತಿರುಗಿಕೊಂಡು, ವಿಶ್ವಾಸಿಗಳಾದರು.

ಅವರು ದೇವರ ಕಡೆಗೆ ತಿರುಗಿದ್ದು, ಅಂದರೆ, ಅವರ ಸಂವರ್ತನವು ಯಥಾರ್ಥವಾಗಿತ್ತೆಂಬದೂ, ಪರಿಶುದ್ಧಾತ್ಮದ ಪ್ರಯತ್ನವು ಸ್ಥಿರವಾಗಿ ನಿಲ್ಲುವದಾಗಿತ್ತೆಂಬದೂ, ಹೊಸ ಸಭೆಯವರು ವೊಬ್ಬರ ಮೇಲೊಬ್ಬರು ಪ್ರೀತಿ ಇಟ್ಟು, ಭಕ್ತಿಯುಳ್ಳ ಸಹೋದರಸ್ನೇಹದ ಸಂಸರ್ಗದಲ್ಲಿ ನಡಕೊಂಡದರಿಂದ ಪ್ರತ್ಯಕ್ಷವಾಗುತ್ತದೆ.

ಅಪಾ. ಕ್ರಿ. ೨, ೧—೫.

I. ವೃತ್ತಾಂತ. ವ. ೧—೧೪.

೧. ಆಗತಕ್ಕ ಕಾರ್ಯದ ಸನ್ನಾಹ.

೧. ಮತ್ತು ಪಂಚಾಶತ್ತಿನ[೧]) ದಿವಸವು ಪೂರ್ಣವಾದಾಗ, ಯೆಲ್ಲರು ಯೇಕ ಮನಸ್ಸಾಗಿ[೨]) ವಾಂದು ಸ್ಥಳದಲ್ಲಿ[೩]) ಇರಲಾಗಿ,

೧. ಪಳೆವಾಡಂಬಡಿಕೆಯ ಇಮ್ಮಡಿ ಪಬ್ಬದ ದಿನವನ್ನು ತನ್ನ ಮಹಿಮೆಯ ಪ್ರಕಟಣೆಗಾಸ್ಕರ ದೇವರು ಆಯ್ದು ಕಾಂಡದರಿಂದ, ಪೂರ್ತಾನ ಸಭೆಯ ಸ್ಥಾಪನೆಯು ಅಧಿಕ ಉತ್ಸವವಾಗಿಯೂ ಪ್ರಕಟವಾಗಿಯೂ ನಡೆಯಿತು. ಈ ಪ್ರಕಾರ ಪಳೇ ಪಬ್ಬದ ಮುಂಗುರ್ತುಗಳು ಈಡೇರಿದವು. ಪೀಗೆ ಪಳೇ ಪಂಚಾಶತ್ತಿನ ಪಬ್ಬವು ಪೂರ್ತಾನ ಪಂಚಾಶತ್ತಿನ ಪಬ್ಬವನ್ನು ಸೂಚಿಸಿತು. ಪಳೇ ವಾಡಂಬಡಿಕೆಯ ಚರಿತ್ರದಲ್ಲಿ ಪೂರ್ತಾನ ವಾಡಂಬಡಿಕೆಯ ಕಾರ್ಯಗಳು ಆಗಲೇ ದೇವರ ಮನಸ್ಸಿನಲ್ಲಿ ಇದ್ದವು ಯೆಂತ ತಿಳಕಾಳ್ಳ ಬೇಕು.

೨ ಈ ಪ್ರಕಾರ ಯೇಸುವಿನ ಅಪ್ಪಣೆಗೆ ವಿಧೇಯವಾಗಿ ಪ್ರೀತಿಯಲ್ಲಿ ವಾಟ್ಟಿಗೆ ಇದ್ದದರಿಂದ, ಶಿಷ್ಯರು ಬರುವ ಕಾರ್ಯಕ್ಕೆ ಸಿದ್ಧರಾದರು.

೩. ಯೆಲ್ಲಿ ಯೆಂತಾ ಪೇಳಿರುವದಿಲ್ಲಾ. ವ. ೨. ಮನೆ ಯೆಂಬ ಮಾತು ಮಾತ್ರವೆ ಬರುತ್ತದೆ. ಆದರೆ ವ. ೧೩. ಪಗಲಿನ ಮೂರನೆ ತಾಸು ಆಗಿತ್ತೆಂಬ ಮಾತಿನಿಂದ, ಇದೆಲ್ಲಾ ದೇವಾಲಯದ ಸುತ್ತಲು ಇರುವ ಮೂವತ್ತು ಮಂಟಪಗಳಲ್ಲಿಯೂ ಮನೆಗಳಲ್ಲಿಯೂ ಆ ಮನೆ ವಾಂದಾಗಿತ್ತೆಂತ ನೆನಸ ಬಪುದು.

೨. ಬಹಿರಂಗದ ಗುರ್ತುಗಳು.

೨. ಬ್ರೀಸುವ ಬಿರುಷಾಳಿಯಂತಿರುವ[೧]) ಶಬ್ದವು ಪಕ್ಕನೆ ಆಕಾಶದಲ್ಲಿ[೨]) ಉಂಟಾಗಿ, ಅವರು ಕೂತು ಕಾಂಡಿರುವ ಮನೆ ಯೆಲ್ಲಾ[೩]) ತುಂಬಿತು. ೩. ಮತ್ತು ಬೆಂಕಿಯ ಉರಿಯಂತೆ ಭಾಗವಾದ ನಾಲಿಗೆಗಳು[೪]) ಅವರಿಗೆ ಕಾಣಿಸಿ, ಅವರಲ್ಲಿ ವಾಬ್ಬಾಬ್ಬನ ಮ್ಯೇಲೆ ಕೂತು ಕಾಂಡವು[೫]).

೧. ಷಾಳಿಯು ಭೂಮಿಯಲ್ಲಿರುವ ಸಮಸ್ತ ವಸ್ತುಗಳಲ್ಲಿ ಅತಿ ಬಲವಾಗಿಯೂ, ಅತಿ ವೇಗವಾಗಿಯೂ, ಯೆಲ್ಲಾ ಪ್ರತಿಬಂಧಗಳನ್ನು ಜೈಸುವಂಥಾದ್ದಾಗಿಯೂ ಇರುವ ಶಕ್ತಿಯಾಗಿದೆ. ಇದಲ್ಲದೆ ಎಲೀಯನಿಗಾದ ೧ ಅರ. ೧೯, ೧೧. ದರ್ಶನದಲ್ಲಿಯೂ, ಇದು ದೇವರ ಸಾಮಿಪ್ಯದ ಗುರ್ತಾಗಿತ್ತು.

೨. ಪೀಗಿರುವದರಿಂದ ಈ ಅದ್ಭುತಕಾರ್ಯದ ಕಾರಣವೇನೆಂಬ ವಿಷಯದಲ್ಲಿ ಯಾರಿಗಾದರೂ ಸಂಶಯ ಪುಟ್ಟುವದಕ್ಕೆ ಆಧಾರವಿರಲಿಲ್ಲಾ.

೩. ಈ ಮನೆಯಲ್ಲಿ ಕೂಡಿ ಬಂದವರಿಗಾಸ್ಕರ ಇದೆಲ್ಲಾ ನಡಿಯಿತೆಂಬದಕ್ಕೆ ಗುರ್ತು.

೪. ಬೆಂಕಿಯ ರಾಶಿಯು ಕಾಣ ಬಂತು. ಅದು ಮನೆಯೆಲ್ಲಾ ತುಂಬಿಸಿ, ನಾಲಿಗೆಗಳಂತೆ ತೋರುವ ಜ್ವಾಲೆಗಳಾಗಿ, ವಾಬ್ಬಾಬ್ಬನ ಮೇಲೆ ಕೂತು ಕಾಂಡಿತು. ಬೆಂಕಿಯು ಭೂಮಿಯಲ್ಲಿ ಸಮಸ್ತವನ್ನು ಪ್ರವೇಶಿಸುವಂಥಾ, ಸಮಸ್ತವನ್ನು ಶುಚಿ ಮಾಡುವಂಥಾ, ಘನವುಳ್ಳ ಶಕ್ತಿಯಾಗಿರುವ ಕಾರಣ, ಯೆಲ್ಲಾ ಮಲವನ್ನು ದಹಿಸಿ ಬಿಡುವ ದೇವರ ಜೀವಶಕ್ತಿಗೆ ದೃಷ್ಟಾಂತವಾಗಿರುತ್ತದೆ. ಯೇಸು ವಾಗ್ದತ್ತ ಮಾಯಿದ ಅಗ್ನಿಮಯವಾದ ಆತ್ಮಸ್ನಾನವನ್ನು ಇಲ್ಲಿ ನೆನಪು ಮಾಯಿಕಾಳ್ಳ ಬೇಕು. ಮತ್ತಾ. ೩, ೧೧.

೫. ಮೂಲ ಭಾಷೆಯಲ್ಲಿ ಕೂತು ಕಾಂಡದ್ದು

ಯೇನೆಂತ ಕ್ರಿಯಾಪದದಿಂದ ತಿಳಿಯುವದಿಲ್ಲಾ. ಅಲ್ಲಿ ಕೂತು ಕಾಂಬಿತು ಯೆಂದು ಯೇಕವಚನ ಪೇಳಿಯದೆ, ಅಂದರೆ, ಪ್ರತ್ಯಕ್ಷವಾದ ಬೆಂಕಿಯ ಜ್ವಾಲೆ. ಆದರೆ ಅದರಲ್ಲಿ ಆತ್ಮವು ಪ್ರಕಟವಾಯಿತು. ಬಹಿರಂಗದ ಕಾರ್ಯವನ್ನು ಬಿಟ್ಟು, ಈಗ ಅಂತರ್ಯದ ಕಾರ್ಯವನ್ನು ವಿಚಾರಿಸುವಾ.

೩. ಅಂತರ್ಯದ ಅದೃಶ್ಯ ಕಾರ್ಯ.

೪. ಮತ್ತು ಯೆಲ್ಲರು ಪರಿಶುದ್ಧಾತ್ಮದಿಂದ ತುಂಬಿದವರಾಗಿ೧), ಆತ್ಮವು ಅವರಿಗೆ ನುಡಿಯ ಕೊಟ್ಟ ಪ್ರಕಾರ ಬ್ಯೇರೆ ಭಾಷೆಗಳಿಂದ೨) ಮಾತಾಡಲಾರಂಭಿಸಿದರು೩).

೧. ವ. ೩ಲ್ಲಿ ಬಹಿರಂಗದ ಗುರ್ತಿನ ಸಂಗತಿಯ ವಿವರಿಸಿದ ಮೇಲೆ, ಲೂಕನು ಶಿಷ್ಯರ ಅಂತರ್ಯದಲ್ಲಿ ಯೇನು ನಡೆಯಿತು, ಮತ್ತು ಅದರಿಂದ ಯೇನು ಫಲ ಬಂತು, ಯೆಂಬದನ್ನು ವರ್ಣಿಸುತ್ತಾನೆ. ವ. ೧. ೧೪. ೧೫. ಮತ್ತು ೧, ೧೪. ೧೫. ಬರವಿರುವವರೆಲ್ಲರೂ ೩ಲ್ಲಿ ಶೇರಿದರು. ೩ವರು ಪ್ರಾಯದಲ್ಲಿಯೂ, ಲಿಂಗದಲ್ಲಿಯೂ, ಉದ್ಯೋಗಾಶ್ರಮದಲ್ಲಿಯೂ ಹೆಚ್ಚು ಕಡಿಮೆಯಾದ ಜನರಾಗಿದ್ದರು.

೨. ೩ಲ್ಲಿ ನಡದ ಅದ್ಭುತವು ಕೇಳುವವರ ಕಿವಿಗಳಲ್ಲಿ ಅಲ್ಲಾ, ಮಾತಾಡುವವರ ಬಾಯಿಗಳಲ್ಲಿ ನಡೆಯಿತು. ೧೦, ೪೬. ೧೯, ೬. ಮಾರ್ಕ. ೧೬, ೧೭. ೧ಕೊರಿ. ೧೨, ೧. ಈ ಸಣ್ಣ ಸಮೂಹವು ಯೆಲ್ಲಾ ಲೌಕದ ಭಾಷೆಗಳಲ್ಲಿ ದೇವರಿಗೆ ತಂದ ಸ್ತೋತ್ರವು, ಸಮಸ್ತ ಲೌಕವು ತಮ್ಮ ನಾಲಿಗೆಗಳಿಂದ ದೇವರಿಗೆ ತರಲಿಕ್ಕಿರುವ ಸ್ತೋತ್ರದ ಸುಂದರವಾದ ಮುಂಗಡವಾಗಿತ್ತು. ೧ಕೊರಿ. ೧೨, ೧೧. ಪೇಳಿರುವ ಪ್ರಕಾರ ಆತ್ಮವು ಅವರಲ್ಲಿ ಯತ್ನೈಸಿದ ಕಾರಣ, ಅವರು ಕಷ್ಟವಿಲ್ಲದೆ, ಸ್ವಂತ ಭಾಷೆಯಲ್ಲಿ ಮಾತಾಡುವ ರೀತಿಯಾಗಿ, ಪ್ರಸಂಗಿಸಿದರು. ಅವರ ನುಡಿಯು ಬಲವಾಗಿಯೂ ಸಮಾಧಾನವಾಗಿಯೂ ೪ತ್ತು. ವ. ೧೪. ೨೬, ೨೫. ನಿಯಮದವನಾದ ಮೋಶೆಯು ತಾದಲು ಭಾಷೆಯವನಾಗಿದ್ದನು; ಆದಿ ಸುವಾರ್ತೆಯವರು ಅಗ್ನಿಪ್ರಯೋಗವಾದ ಪ್ರಜ್ವಲಿಸುವ ನಾಲಿಗೆಗಳಿಂದ ನುಡಿದರು.

೩. ಮೊದಲನೆ ಸಭೆ ೩ಲ್ಲಿ ಆರಂಭವಾಯಿತು. ಮುಂಚೆ ಆಗಲಿಲ್ಲ. ಅವರು ಯೇನೂ ಯೆಡತಡೆ ೩ಲ್ಲದೆ ಸುಲಭವಾಗಿ ಮಾತಾಡಿದರು.

೪. ಕಾರ್ಯದ ಫಲ.

೫. ಆಕಾಶದ ಕೆಳಗಿರುವ ಸಕಲ ಜನಾಂಗಗಳಾಳಿಗೆ ಭಕ್ತಿಯುಳ್ಳ ಜನರಾದ ಯೆಹೂದರು ಯೆರೂಸಲ್ಯೇಮಿನಲ್ಲಿ ವಾಸವಾಗಿದ್ದರು೧). ಆ ಶಬ್ದವು ಉಂಟಾಗುವಾಗ೨), ಸಮೂಹವು ಕೂಡಿ ಬಂದು, ಕಳವಳ ಪಟ್ಟಿತು೩); ೬. ಯಾಕಂದರೆ ವೌಬ್ಬಾಬ್ಬನು ತನ್ನ ತನ್ನ ಭಾಷೆಯಲ್ಲಿ ಅವರು ಮಾತಾಡುವದನ್ನು ಕೇಳಿದರು. ೭. ಆಗ ಯೆಲ್ಲರು ಭ್ರಮಿಸಿ, ಆಶ್ಚರ್ಯ ಪಟ್ಟು, ವೌಬ್ಬರಿಗೌಬ್ಬರು ಹೇಳಿ ಕಾಂಡದ್ದೇನಂದರೆ, ಲ. ೩ಗೌ ಮಾತಾಡುವ ೩ವರೆಲ್ಲರು ಗಲಿಲಾಯದವರಲ್ಲವೌ೪)? ೮ಹಾಗಾದರೆ, ನಮ್ಮಲ್ಲಿ ವೌಬ್ಬಾಬ್ಬರು ತಮ್ಮ ತಮ್ಮ ಹುಟ್ಟು ಭಾಷೆಯಲ್ಲಿ ಕೇಳುವದ್ದೇನು? ೯. ಪಾರ್ಥರೂ೫), ಮೇದರೂ, ಎಲಾಮ್ಯರೂ, ಮೆಸೊಪೌತಾಮ್ಯ,

ಅಪೌ. ಕ್ರಿ. ೨, ೫೯—೧೧.

ಯೆಹೂದ್ಯ, ಕಪ್ಪದೋಕ್ಯ, ೧೦. ಪೌಂತ, ಆಸ್ಯ, ಫ್ರುಗ್ಯ, ಪಂಫುಲ್ಯ, ಐಗುಪ್ತ ದೇಶಗಳಲ್ಲಿಯೂ, ಕುರೇನೆಗೆ ಸಮೀಪವಾದ ಲಿಬ್ಯದ ಶೀಮೆಗಳಲ್ಲಿಯೂ, ೧೧. ವಾಸವಾಗಿರುವವರೂ, ಪರವಾಸ ಮಾಡುವ ರೋಮಾಯರೂ, ಯೆಹೂದರೂ, ಮತಶೇರಿದವರೂ, ಕ್ರೇತರೂ, ಅರಬರೂ ಆಗಿರುವ ನಾವು, ಅವರು ನಮ್ಮ ಭಾಷೆಗಳಲ್ಲಿ ದೇವರ ಮಹತ್ಕಾರ್ಯಗಳನ್ನು [೮] ನುಡಿಯುವದನ್ನು ಕೇಳುತ್ತೇವೆ.

೧. ಇವರು ತಮ್ಮ ಮನೆ ಊರು ಮುಂತಾದ್ದು ಬಿಟ್ಟು, ದೇವಾಲಯಕ್ಕಾಸ್ಕರ ಅಲ್ಲಿಗೆ ಬಂದವರು. ಪೌಲಾಗೆ ಹಿಂದೂ ಜನರು ಕಾಶಿಯಲ್ಲಿ ಅವಸಾನ ಕಾಲ ಕಾದುಕಾಳ್ಳುತ್ತಾರಾ, ಪೌಲಾಗೆ ಇಸ್ರಾಯೇಲರು ಪರದೇಶಗಳಿಂದ ಬಂದು, ಪರಿಶುದ್ಧ ಪಟ್ಟಣವಾದ ಯೆರೂಸಲೇಮಿನಲ್ಲಿ ತಮ್ಮ ಅಂತ್ಯ ಕಾಲ ಕಳೆಯಲಪೇಕ್ಷಿಸಿದರು. ಇಂಥವರ ಪೌರ್ವಾರ್ಯ, ಪುಬ್ಬಕ್ಕೆ ಮಾತ್ರ ಬಂದ ಪರದೇಶಸ್ಥರೂ ಪರಜನರಾಳಗಿಂದ ಮತಶೇರಿದವರೂ ಸಪೌಲಾ ಅಲ್ಲಿ ಇದ್ದರು. ಈ ಪ್ರಕಾರ ಯೆಹೂದರ ಚದರಿಕೆಯಿಂದ ದೇವರ ರಾಜ್ಯದ ವಿಸ್ತರಣಕ್ಕೆ ಸಪೌಲಾಯ ಆಗಬೇಕೆಂಬ ದೇವರ ಪೂರ್ವ ಆಲೋಚನೆ ನೆರವೇರಿತು.

೨. ದೂರಕ್ಕೆ ಕೇಳಿಸಿದ ಆಕಾಶದಿಂದ ಬಂದ ಶಬ್ದವೂ ಅಪೌಸ್ತಲರ ನುಡಿಯೂ ಪೌಚ್ಚು ದೂರಕ್ಕೆ ಪುಬ್ಬಿದ ಸುದ್ದಿಯೂ ಯೆಲ್ಲಾ ಪಟ್ಟಣದ ಜನರಿಗೆ ಅದ್ಭುತಕಾರ್ಯವು ಪುಟ್ಟಿದ ಸ್ಥಳವಾದ ದೇವಾಲಯಕ್ಕೆ ಓಡಿ ಬರಲಕ್ಕೆ ಕಾರಣವಾಯಿತು.

೩. ನೂರಿಪ್ಪತ್ತು ಮಂದಿಯಾದ ಶಿಷ್ಯರು ಮಾತಾಡಿದ ಅನೇಕ ಭಾಷೆಗಳಲ್ಲಿ ಅಲ್ಲಿ ಕೂಡಿ ಬಂದ ಪರದೇಶಸ್ಥರಲ್ಲಿ ವಾಬ್ಬಾಬ್ಬನು ತನ್ನ ಕುಲಭಾಷೆಯನ್ನು ಕೇಳಿದನು. ಪ್ರಥಮದಲ್ಲಿ ಯೆಲ್ಲರು ಬಾಯಿ ಮುಚ್ಚಿ ವಿಸ್ಮಯವಾದರು; ಮತ್ತೆ ಮಾತಾಡ ತಾಡಗಿದರು ವ. ೭—೧೧. ಕಡೆಯಲ್ಲಿ ಈ ಕಾರ್ಯದ ಮೂಲವನ್ನೂ ಕಾರಣವನ್ನೂ ಗ್ರಹಿಸುವದಕ್ಕೆ ಯತ್ನೈಸಿದರು ವ. ೧೨. ೧೩.

೪. ಇವರು ರಮ್ಯವಾಗಿರದ ಕರಡು ಭಾಷೆ ಮಾತಾಡುವವರಾಗಿದ್ದದ್ದಲ್ಲದೆ, ವಿದ್ಯಾಹೀನರಾದ ಯೇನೂ ಶಿಳಿಯದ ಮೀನುಗಾರರಾಗಿದ್ದರು.

೫. ಇಲ್ಲಿ ಪೇಳಿರುವ ಜನಾಂಗಗಳು ಖಂಡಿತವಾದ ಕ್ರಮದಲ್ಲಿ ಬರುವದಿಲ್ಲಾ, ಆದಾಗ್ಯೂ ವಾಂಡಿಷ್ಟು ಕ್ರಮ ಕಾಣುತ್ತದೆ. ಪೌಲಾಗೆಂದರೆ, ಮೊದಲನೆ ನಾಲ್ಕು ಜನಾಂಗಗಳು ಪಾರ್ಥರಿಂದ ಮೆಸಾಪಾತಮ್ಯದವರ ವರೆಗೆ ಮೂಡಣ ಶೀಮೆಯವರು; ಕಪ್ಪದಾಕೃದಿಂದ ಪಂಫುಲ್ಯದ ವರೆಗೆ ಐದು ಜನಾಂಗಗಳು ಬಡಗರು; ಐಗುಪ್ತವೂ ಕುರೇನೆಯೂ ಯೆರೂಸಲೇಮಿಗೆ ತೆಂಕಣ ಕಡೆಯಲ್ಲಿವೆ; ರೋಮವೂ ಕ್ರೇತವೂ ಪಡುವಣ ಕಡೆಗೆ; ಅರಬರು ತಿರಿಗಿ ತೆಂಕಣ ಕಡೆಗೆ.

೪ಲ್ಲಿ ಕ್ಶೈಸ್ತ ಸಖೆಯಲ್ಲಿದ್ದ ಮೊದಲನೆ ಉದ್ಯೋಗಗಳ ವಿಷಯವಾದ ಪುದ್ಗತ ಮೂಡ ತಕ್ಕ ಸಮಾಚಾರವು ಪೇಳಿಯದೆ. ಅದೇನೆಂದರೆ:

೧. ಆರಂಭದಲ್ಲಿ ಅಪಾಸ್ತಲರು ತಾವೆ ಯೆಲ್ಲಾ ಕೆಲಸಗಳನ್ನು ನಡಸಿದರು. ಸಖೆಯು ಪೆಚ್ಚಿದ ಮೇಲೆ, ಬೇರೆ ಉದ್ಯೋಗಗಳು ಅವಶ್ಯವಾದವು. ಪಾಗೆ, ಎಫೆ. ೪, ೧೧—೧೨., ಪ್ರವಾದಿಗಳೂ, ಸು

ಅಪೌ. (ಕ್ರಿ. ೬, ೭—೧೧.

ವಾರ್ತಿಕರೂ, ಕುರುಬರೂ, ಬಾಧಕರೂ, ಮುಂತಾದವರು.

೨. ಮೊದಲನೆ ಉದ್ಯೋಗವು ಸೇವಕರದು, ಇವರು ಧರ್ಮದ ಪಕ್ಷವನ್ನು ಪಂಚಿ ಕಾಡುತ್ತಿದ್ದರು. ಇವರು ಸಭಾ ಪರಿಶುದ್ಧ ಜನರಾಗಿರ ಬೇಕಾಯಿತು. ಯಾಕಂದರೆ, ಅ) ಅತ್ಯಂತ ಬಹಿರಂಗದ ಕೆಲಸಗಳು ಸಭಾ ಪರಿಶುದ್ಧ ಮನಸ್ಸಾಚಾರದಿಂದ ನಡೆಯ ಬೇಕು. ಇ) ಕ್ರೈಸ್ತರು ನಡಸುವ ದರಿದ್ರಪೋಷಣವು ಅವರ ಆತ್ಮದ ಪೋಷಣದಿಂದ ಯೆಂದಿಗೂ ವಿಂಗಡವಾಗ ಬಾರದು. ಉ) ಆ ಕಾಲದಲ್ಲಿ ವಿಶೇಷವಾದ ಜ್ಞಾನವು ಅವಶ್ಯವಾಗಿತ್ತು.

೪. ಅಪಾಸ್ತಲರು ಈ ಕಾರ್ಯವನ್ನು ಸಭಾಸಾದರಚಾರದಿಂದ ಸಭೆಗೆ ತಿಳಿಸಿ, ಅವರಿಗೆ ತಕ್ಕ ಜನರನ್ನು ಆಯ್ದು ಕಾಳ್ಗಲಿಕ್ಕೆ ಅಪ್ಪಣೆ ಕಾಟ್ಟರು.

೪. ಆದರೆ ಅವರು ಆಯ್ದವರನ್ನು ತಾವೆ ನೇಮಿಸಿ, ಪುಸ್ತಮಸ್ತಕದಿಂದ ಈ ಕಾರ್ಯಕ್ಕೆ ವಿಂಗಡಿಸಿದರು.

೭. ಮಶ್ಗು ದೇವರ ವಾಕ್ಯವು ಬೆಳೆದು ೧), ಶಿಷ್ಯರ ಲೆಕ್ಕವು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚಿತು; ಮಶ್ಗು ಯಾಜಕರಲ್ಲಿ ೨) ಬಹು ಜನರು ವಿಶ್ವಾಸಕ್ಕೆ ವಿಧೇಯರಾದರು.

೧. ಇದು ಕ್ರಮಪ್ರಿಯನಾದ ದೇವರಿಂದ ಬಂದ ಕ್ರಮದ ಆಶೀರ್ವಾದವು. ಅವರಲ್ಲಿದ್ದ ಸ್ಥಿರವಾದ ಯೇಕತ್ವದಿಂದಲೂ ದೇವರ ವಾಕ್ಯದ ಜಾಗ್ರತೆಯುಳ್ಳ ಧ್ಯಾನದಿಂದಲೂ ಇದೆಲ್ಲಾ ಆಯಿತು.

೨. ಯಾಜಕರು ಬಂದಾರೆಂತ ಯೀಸಿಲಕ್ಕೆ ಕಾರಣವಿರಲಿಲ್ಲಾ. ಆದರೆ ಅವರು ಕ್ರೈಸ್ತರಾಗಲಾಗಿ, ಬೇರೆ ಆಶ್ರಮದವರು ಸಭಾ ಸಾಕೆಯಲ್ಲಿ ಶೇರುವದಕ್ಕೆ ಧೈರ್ಯಗಾಂಡರು. ವಿಶ್ವಾಸಕ್ಕೆ ವಿಧೇಯವಾಗುವದೆಂದರೆ, ಸುವಾರ್ತೆಯ ವಿಶ್ವಾಸಯೋಗ್ಯವಾದ ಸಾಕ್ಷಿಗೆ ವಿಧೇಯವಾಗುವದು. ಬೇರೆ ಕಡೆಯಲ್ಲಿ ಸುವಾರ್ತೆಗೆ ವಿಧೇಯವಾಗುವದೆಂತ ಹೇಳಿಯದೆ, ರಾ. ೧೦, ೧೬. ೨ ಥೆಸ್ಸ. ೧, ೮. ಆದ್ದರಿಂದ ವಿಶ್ವಾಸದ ವಿಧೇಯತ್ವ ಯೆಂಬ ಮಾತು ರಾ. ೧, ೫. ೧೬, ೧೬. ಬರುತ್ತದೆ. ದೇವರು ನಮಗೆ ತನ್ನ ಸಾಕ್ಷಿಯನ್ನು ಮುಂದಿಡುತ್ತಾನೆ. ಯಾರು ಅದನ್ನು ಸತ್ಯವೆಂದು ಅಂಗೀಕರಿಸುತ್ತಾನಾ ಅವನು ಅದರಿಂದಲೆ ಆಜ್ಞಾಧೀನವಾಗಿ ಕಿವಿಗಾಡುತ್ತಾನೆ.

II. ಸ್ತೆಫನನು.

೮. ಮತ್ತು ಸ್ತೆಫನನು ವಿಶ್ವಾಸದಿಂದಲೂ ಬಲದಿಂದಲೂ ತುಂಬಿದವನಾಗಿ, ದಾಡ್ಡ ಅದ್ಭುತಗಳನ್ನೂ ಲಕ್ಷಣಗಳನ್ನೂ ಜನರಲ್ಲಿ ನಡಿಸಿದನು. ೯. ಆಗ ಲಿಬೆರ್ತೀನರೆಂಬ ೧) ಸಭೆಯಲ್ಲಿಯೂ, ಕುರ್ಯೇನರಲ್ಲಿಯೂ, ಅಲೆಕ್ಸಂದ್ರಿಯದವರಲ್ಲಿಯೂ, ಕಿಲಿಕ್ಯದವರಲ್ಲಿಯೂ, ಆಸ್ಯದವರಲ್ಲಿಯೂ, ಕೆಲವರು ಯೆದ್ದು, ಸ್ತೆಫನನ ಸಂಗಡ ತರ್ಕಿಸಿದರು. ೧೦. ಆದರೆ ಅವನ ಜ್ಞಾನವನ್ನೂ, ಅವನು ಮಾತಾಡಿದ ಆತ್ಮನನ್ನೂ, ಯೆದುರಿಸಲಾರದೆ ಇದ್ದರು, ೧೧. ಆಗಲವರು, ಇವನು ಮೋಶೆಗೂ ದೇವರಿಗೂ ವಿರೋಧವಾಗಿ ದೂಷಣೆ ಮಾತುಗಳನ್ನಾಡುವದನ್ನು ೨) ಕೇಳಿದೆವೆಂದು, ಹೇಳುವ ಜನ

ರನ್ನು ರಹಸ್ಸವಾಗಿ ನಿದ್ದ ಮಾಡಿದರು. ೧೨. ಮತ್ತು ಜನರನ್ನೂ[ಳ], ಹಿರಿಯರನ್ನೂ ಶಾಸ್ತ್ರಿಗಳನ್ನೂ ಪ್ರೇರೇಪಿಸಿ, ಅವನ ಮೇಲೆ ಬಿದ್ದು, ಅವನನ್ನು ಮಂಡ್ರಿಸಭೆಗೆ ಮೈದು ಕೊಂಡು ಹೋಗಿ, ಅಬದ್ಧ ಸಾಕ್ಷಿಗಳನ್ನು ನಿಲ್ಲಿಸಿದರು. ೧೩. ಇವರು ಹೇಳಿದ್ದೇನಂದರೆ, ಈ ಮನುಷ್ಯನು ಈ ಪರಿಶುದ್ಧ ಸ್ಥಳಕ್ಕೂ ನ್ಯಾಯಪ್ರಮಾಣಕ್ಕೂ ವಿರೋಧವಾಗಿ ದೂಷಣೆ ಮಾತುಗಳನ್ನಾಡುವದನ್ನು ಬಿಡುವದಿಲ್ಲ. ೧೪. ಯೇನಂದರೆ, ನಜರೇತಿನವನಾದ ಯೇಸು ಈ ಸ್ಥಳವನ್ನು ಲಯ ಮಾಡಿ, ಮೋಶೆಯು ನಮಗೆ ಕೊಟ್ಟ ಸಂಪ್ರದಾಯಗಳನ್ನು ಮಾರ್ಪಡಿಸುವನೆಂದು, ಅವನು ಹೇಳಿದ್ದನ್ನು ಕೇಳಿದೆವು. ೧೫. ಮತ್ತು ಮಂಡ್ರಿಸಭೆಯಲ್ಲಿ ಕೂತು ಕೊಂಡವರೆಲ್ಲರು ಅವನ ಮೇಲೆ ಕಣ್ಣಿಟ್ಟು, ಅವನ ಮುಖವು ದೂತನ[ಳ] ಮುಖದ ಹಾಗಿರುವದನ್ನು ನೋಡಿದರು.

೧. ಲಿಬರ್ತಿನರೆಂದರೆ, ಮುಂಚೆ ರೋಮದಲ್ಲಿ ಮನೆಯಾಳುಗಳಾಗಿದ್ದು, ಮತ್ತೆ ಬಿಡುಗಡೆ ಪೊಂದಿದವರ ಮಕ್ಕಳು. ಕುರೇನೆಯು, ಅಫ್ರಿಕದಲ್ಲಿ ಐಗುಪ್ತದ ಪಿಂದಕಪೆಯಲ್ಲಿತ್ತು. ಅಲೆಕ್ಸಂಡ್ರಿಯ ಐಗುಪ್ತದಲ್ಲಿ ದಾಡ್ಡ ಪಟ್ಟಣವಾಗಿತ್ತು. ಅಲ್ಲಿ ಯೆಹೂದರ ವಿದ್ವಾಂಸಿಕೆಯು ಪ್ರಬಲವಾಗಿತ್ತು. ಕಿಲಿಕ್ಯವು ಪೌಲನ ಜನ್ಮದೇಶವಾಗಿತ್ತು. ಸಣ್ಣ ಆಸ್ಯದಲ್ಲಿ ಎಫೆಸವು ಮುಖ್ಯಪಟ್ಟಣವಾಗಿತ್ತು. ಈ ೫ ದೇಶಗಳವರು ವಾಟ್ಸಿಗೆ ಈ ಸಭೆಮನೆಯನ್ನು ಕಟ್ಟಿದರೆಂತ ತೋರುತ್ತದೆ. ಅಂಥಾ ಳಲಂ ಸಭೆಮನೆಗಳು ಪರದೇಶಸ್ಥರಾದ ಯೆಹೂದರಿಗಾಸ್ಕರ ಕಟ್ಟಿದ್ದವು. ಸಾಧಾರಣ ಪಲೆಸ್ತೀನದವರಿಗಿಂತ ಅಧಿಕ ವಿಶ್ವಶ್ತಿ ಉಳ್ಳ ಇಂಥಾ ಪರದೇಶಸ್ಥರು ಸ್ತೆಫನನ ಸಂಗಡ ತರ್ಕ ಮಾಡಿದರು.

೨. ತಮ್ಮೊಳಗೆ ನಡದ ತರ್ಕದಲ್ಲಿ ಹೇಳಿದ ಮಾತು ಹಿಡಿದು, ರೋಪದಿಂದಲೂ ಪೂರ್ವಾಪೇಕ್ಷೆಯಿಂದಲೂ ದೇವದೂಷಣೆಯ ದೂರು ಸ್ತೆಫನನ ಮೇಲೆ ಪೂರಕಿದರು.

೩. ಇಷ್ಟು ವರೆಗೆ ಜನರು ಬೆಚ್ಚಾಗಿ ಕ್ರೈಸ್ತರ ಪಕ್ಷವಾಗಿದ್ದರು.

೪. ಅಂದರೆ, ಅವನ ಮುಖವು ರಮ್ಯವಾಗಿಯೂ, ಆನಂದಕರವಾಗಿಯೂ ಆಸಕ್ತಿ ಉಳ್ಳದ್ದಾಗಿಯೂ ಪ್ರಕಾಶಿಸಿತು.

ಸಂಧಿ ೭.

I. ಸ್ತೆಫನನ ಭಾಷಣ. ವ. ೧—೫೩.

ಸ್ತೆಫನನು ಮೋಶೆಯ ನಿಯಮಕ್ಕೂ ದೇವಾಲಯಕ್ಕೂ ವಿರೋಧವಾಗಿ ಮಾತಾಡುತ್ತಾನೆಂದು ಹೇಳಿದ ದೂರು ಪೂರ್ಣವಾಗಿ ಉಂಟು ಮಾಡಿದ್ದೆಂತಾ ನೆನಸ ಕೆಲಸವಿಲ್ಲ; ಯೇಸುವಿನ ಹಾಗೆಯೆ ಸ್ತೆಫನನ ಮಾತಿಗೆ ಸಹಾ ಮನಸೋಯಿಚ್ಛೆ ಅರ್ಥ ಮಾಡಿ ಕೊಂಡು, ಅವನ ಮಾತನ್ನು ಮೋಸದಿಂದ ತಬ್ಬಿಬ್ಬು ಮಾಡಿದರೆಂತ ತೋರುತ್ತದೆ. ಅವನು ನಿಯಮವಾಗಲಿ ದೇವಾಲಯವಾಗಲಿ ಅಲ್ಲಾ, ಯೇಸು ಕ್ರಿಸ್ತನಲ್ಲಿರುವ ವಿಶ್ವಾಸ ಮಾತ್ರವೆ ರಕ್ಷಿಸುತ್ತದೆಂತ ಹೇಳಿದ್ದಾನು. ಅವರಲ್ಲಿದ್ದ ಅನಾಧಾರವಾದ ಭರವಸವನ್ನು ತೆಗೆಯುವದಕ್ಕೆ ಆಲೋಚಿಸಿ, ದೇವಾಲಯದ ಕಲ್ಲಿನ ಮೇತೆ ಕಲ್ಲು ನಿಲ್ಲದೆಂಬ ಯೇಸುವಿನ ಮಾತನ್ನು ಹೇಳಿರ ಬಹುದು. ಪ್ರಧಾನಯಾಜಕನು ಇದು ಹೌದೋ, ನೀನು ಈ ದೂಷಣೆಯ ಮಾತುಗಳನ್ನು ಹೇಳಿದ್ದೀಯೋ ಯೆಂದು

ಅಪಾ. ಕ್ರಿ. ೭, ೪೮—೫೪.

ಕೇಳಿದಾಗ, ಸ್ತೆಫನನು ಈ ಅಥವಾ ಆ ವಾಕ್ಯದ ಆಧಾರದಿಂದ ತನ್ನ ಕಾರ್ಯವನ್ನು ಸಾಧಿಸಲಿಕ್ಕೆ ನೋಡದೆ, ಬರಹಗಳ ಬೋಧನೆಯೆನ್ನೆಲ್ಲಾ ಪೊಟ್ಟಿಗೆ ತಕ್ಕೊಂಡು ಮಾತಾಡಿದನು. ಅವನು ಯೆಹೂದ ಜನಾಂಗದ ಸಮಸ್ತ ಚರಿತ್ರದ ವಿಷಯದಲ್ಲಿ ದೊಡ್ಡ ಭಾಷಣ ಮಾಡಿ, ದೇವರ ಮಹಿಮೆಯನ್ನೂ ವ. ೨., ಮೋಶೆಯ ದಿವ್ಯ ಕರೆಯುವಿಕೆಯನ್ನೂ ವ. ೩. ೪., ನಿಯಮದ ಅಧಿಕಾರವನ್ನೂ ವ. ೫೩. ೪೪. , ದೇವಾಲಯದ ಪರಿಶುದ್ಧತ್ವವನ್ನೂ ಅರಿಕೆ ಮಾಡಿ, ಕಡೆಯಲ್ಲಿ ನಾನಲ್ಲ, ನೀವೂ ನಿಮ್ಮ ಪಿತೃಗಳೂ ಆರಂಭದಿಂದಲೆ ದೇವರನ್ನೂ ಆತನ ಅಡಿಳಿತೆಯನ್ನೂ ತುಚ್ಛೀಕರಿಸುವವರಾಗಿದ್ದೀರಿ ಯೆಂದು, ೧) ವಾದ್ದತ್ತಕಾಲದಲ್ಲಿ ನಿಮ್ಮ ಗುಣಕ್ಕೆ ಪಿತೃಗಳನ್ನು ದಯಾ ಕರಿಸಿ, ೨) ಮೋಶೆಯ ಪರಿಮುಖವಾಗಿ ನಿಯಮವನ್ನೂ ಸಾಕ್ಷಿ ಗುಡಾರವನ್ನೂ ಕೊಟ್ಟು, ೩) ದಾವೀದ ಸಲಮೋನರ ಕಾಲದಿಂದ ತನ್ನ ದೇವಾಲಯವನ್ನು ನಿಮ್ಮ ಮಧ್ಯದಲ್ಲಿ ಸ್ಥಾಪಿಸಿ ನಡಸುತ್ತಾ ಬಂದನು; ಆದರೆ ನೀವು ಮೋಶೆಯನ್ನು ತಳ್ಳಿ ಬಿಟ್ಟಿರಿ; ಪ್ರವಾದಿ ಆಮೋಸನು ಹೇಳುವ ಪ್ರಕಾರ, ಅರಣ್ಯದಲ್ಲಿ ಅಸಹ್ಯವಾದ ವಿಗ್ರಹಾರಾಧನೆ ಮಾಡಿದಿರಿ; ಕಡೆಯಲ್ಲಿ ದೇವಾಲಯವನ್ನು ಸಹಾ ಮಾಂಸಭಾವದ ಬಹಿರಂಗದ ಆರಾಧನೆಗಳಿಂದ ಅಶುದ್ಧ ಮಾಡಿದಿರಿ, ಯೆಂದು ಪ್ರಸಂಗಿಸಿದನು.

೪೮. ಆದರೆ ಮಹೋನ್ನತನು ಕೈಯಿಂದಾದ ಮಂದಿರಗಳಲ್ಲಿ ವಾಸ ಮಾಡನು. ೪೯. ಅದಕ್ಕೆ ಪ್ರವಾದಿಯು (ಯೆಶಾ. ೬೬, ೧.) ಹೇಳುವದೇನಂದರೆ, ಆಕಾಶವು ನನಗೆ ಸಿಂಹಾಸನವು, ಭೂಮಿಯು ನಂನ ಪಾದಪೀಠವು, ಯೆಂಥಾ ಮನೆಯಂನು ನನಗೆ ಕಟ್ಟುವಿರಿ? ೫೦. ಇದ್ದವೆ ನಂನ ವಿಶ್ರಾಂತಿಯ ಸ್ಥಳವು ಯೆಲ್ಲಿ? ನಂನ ಕೈ ಇವುಗಳಂನೆಲ್ಲಾ ಮಾಡಿತಲ್ಲವೌ? ಯೆಂದು ಕರ್ತನು ಹೇಳುತ್ತಾನೆ.

ಇಲ್ಲಿ ಸ್ತೆಫನನು ಚರಿತ್ರದ ಆಲೋಚನೆಯನ್ನು ಬಿಟ್ಟು, ಅವರ ಕೋಪ ಕಿಡಿಯೇರುವದನ್ನೂ ಸಂತಾಪವನ್ನೂ ನೋಡಿ, ಚರಿತ್ರವೆಲ್ಲಾದರ ಸಾಕ್ಷಿಯು ಅವರಿಗೆ ಹೃದ್ಗತವಾಗುವ ಹಾಗೆ ಹೇಳಿದ್ದೇನಂದರೆ:

೫೧. ಬಾಗ್ಗದ ಕುತ್ತಿಗೆಯುಳ್ಳವರೇ! ಹೃದಯದಲ್ಲಿಯೂ ಕಿವಿಗಳಲ್ಲಿಯೂ ಪರಿಚ್ಛೇದನೆ ಹೊಂದದವರೇ! ನೀವು ಯಾವಾಗಲೂ ಪರಿಶುದ್ಧಾತ್ಮಕ್ಕೆ ಯೆದುರು ಬೀಳುತ್ತೀರಿ; ನಿಮ್ಮಪಿತೃಗಳು ಹಾಗ್ಗೌ, ಹಾಗೆಯೇ ನೀವು. ೫೨. ಪ್ರವಾದಿಗಳಲ್ಲಿ, ನಿಮ್ಮಪಿತೃಗಳು ಹಿಂಸಿಸದವನಾರು? ನೀವು ಇಗ ವೌಪ್ಪಿನಿ ಕೌಟ್ಟು, ಕೌಂದು ಹಾಕಿದ ನೀತಿವಂತನ ಬರುವಿಕೆಯ ವಿಷಯವಾಗಿ ಮುಂತಿಳಿಸಿದವರಂನು ಅವರು ಕೌಂದು ಹಾಕಿದರು. ೫೩. ನೀವು ದೂತರ ನೇಮಕಗಳಿಂದ ನ್ಯಾಯಪ್ರಮಾಣವಂನು ಹೊಂದಿ, ಕೈಕೌಳ್ಳಲ್ಲಿಲ್ಲ.

ಅವನ ದೀರ್ಘ ಭಾಷಣವನ್ನು ಸ್ತೆಫನನ ನಿಯಮಜ್ಞಾನದ ಪ್ರಮಾಣವೆಂದು ದೇವರ ವಾಕ್ಯದ ಮೇಲೆ ಕಪಟದಿಂದ ಅಥವಾ ನಿಜವಾಗಿ ಇಷ್ಟ ಲಕ್ಷ್ಯೆಯಿಂದ ಆರಂಭದಲ್ಲಿ ನಿಧಾನವಾಗಿ ಕೇಳಿದ್ದರು; ಆದರೆ ಆ ಭಾಷಣವು ತಮಗೆ ಕಕ್ಕ ಮಾನಸಾಂತರ ಪ್ರಸಂಗವಾಗುತ್ತದೆಂತ ಕಂಡಾಗಲೆ, ಯೆಲ್ಲಾ ಜೇರೆ ಆಯಿತು.

II. ಮೊದಲನೆ ರಕ್ತಸಾಕ್ಷಿಯ ಮರಣ. ವ. ೫೪—೫೯.

೫೪. ಇವುಗಳಂನು ಕೇಳಿ, ಶಂಮ ಹೃದಯಗಳಲ್ಲಿ ಇರಿಯಲ್ಪಟ್ಟು, ಅವನ ಮೇಲೆ ಹಲ್ಲು ಕಡಿದರು. ೫೫. ಆದರೆ ಅವನು ಪರಿಶುದ್ಧಾತ್ಮದಿಂದ ತುಂಬಿದವನಾಗಿ ೧), ಆಕಾಶವಂನು ದೃಷ್ಟಿಸಿ, ದೇವರ ಮಹಿಮೆಯಂನೂ, ದೇವರ ಬಲಪಾರ್ಶ್ವದಲ್ಲಿ ಯೇಸು ನಿಂತು ಕಾಂಡಿರುವದಂನೂ ನೋಡಿ, ೫೬. ಇಗೋ, ಆಕಾಶಗಳು ತೆರದಿರುವದಂನೂ ಮನುಷ್ಯನ ಮಗನು ದೇವರ ಬಲಪಾರ್ಶ್ವದಲ್ಲಿ ನಿಂತು ಕಾಂಡಿರುವದಂನೂ ನೋಡುತ್ತೇನೆ, ಅಂದನು. ೫೭. ಆಗಲವರು ಮಹಾ ಶಬ್ದದಿಂದ ಕೂಗಿ, ತಮ್ಮ ಕಿವಿಗಳಂನು ಮುಚ್ಚಿ ಕಾಂಡು, ಯೇಕ ಮನಸ್ಸಾಗಿ ಅವನ ಮೇಲೆ ಬಿದ್ದು, ಅವನಂನು ಪಟ್ಟಣದ ಹೊರಗೆ ಹಾಕಿ, ಕಲ್ಲೆಸೆದರು ೨). ೫೮. ಮತ್ತು ಸಾಕ್ಷಿಯವರು ತಮ ವಸ್ತ್ರಗಳಂನು ೩) ಸೌಲನೆಂಬ ವಾಬ್ಬ ಯೌವನಸ್ಥನ ಪಾದಗಳ ಹತ್ತರ ಇಟ್ಟರು. ೫೯. ಆಗ ಕರ್ತನಾದ ಯೇಸುವೇ, ನಂನ ಆತ್ಮವಂನು ಅಂಗೀಕರಿಸೆಂದು ಕರೆದು ಹೇಳುವ ೪) ಸ್ತೆಫನನಂನು ಕಲ್ಲೆಸೆದರು. ೬೦. ಅವನು ಮೋಕಾಲೂರಿ ಕಾಂಡು, ಮಹಾ ಶಬ್ದದಿಂದ, ಕರ್ತನೇ, ಇ ಪಾಪವಂನು ಅವರ ಮೇಲೆ ಹೊರಿಸ ಬೇಡವೆಂದು ಕೂಗಿದನು. ಇದಂನು ಹೇಳಿ ನಿದ್ದೆ ಹೊಂದಿದನು ೫).

೧. ಅವರಲ್ಲಿ ಸೈತಾನೀಯ ಉಗ್ರ ಪೂಜಾಗಾದೇ ಪೂಜಾಗೆಯೆ ಸ್ತೆಫನನಲ್ಲಿ ಪರಿಶುದ್ಧಾತ್ಮದ ಬಲವೂ ತೇಜಸ್ಸೂ ಪೆಚ್ಚೆಚ್ಚಾಗಿ ಯೇರುತ್ತಾ ಬರಲಾಗಿ, ಅವನು ಮೇಲಕ್ಕೆ ನೋಡುತ್ತಲೆ, ಆತ್ಮದೃಷ್ಟಿಯಿಂದ ದೇವರ ಮಹಿಮೆಯನ್ನು ಕಂಡನು.

೨. ಇದು ನ್ಯಾಯದ ಸಮಸ್ತ ಕ್ರಮಕ್ಕೆ ಪೂರ್ಣ ವಿರೋಧವಾಗಿತ್ತು.

೩. ಸಾಕ್ಷಿಗಳು ಕಲ್ಲುಗಳನ್ನು ಮುಂಚೆ ಯೆಸೆಯಬೇಕಾಯಿತು, ದ್ವಿ. ನ್ಯಾ. ೧೭, ೭; ಪೂರಾಗಾದರೆ ಸೌಲನು ಇದಕ್ಕೆಲ್ಲಾ ಸಮ್ಮತಿ ಪಟ್ಟು ನೋಡುವವನಲ್ಲದೆ, ಈ ಕರ್ಮದಲ್ಲಿ ತನ್ನಿಂದಾಗುವಷ್ಟು ಆಸಕ್ತ ಪಾಲುಗಾರನಾಗಿದ್ದನು.

೪. ಅವನು ಕ್ರೈಸ್ತ ನಿರೀಕ್ಷೆಯಲ್ಲಿಯೂ ಶತ್ರುಪ್ರೀತಿಯಲ್ಲಿಯೂ ಪ್ರಾರ್ಥನೆ ಮಾಡುತ್ತಾ ತೀರಿ ಪೂರಾದನು. ದೇವರ ಪೆಸರಿನಲ್ಲಿ ಮುಂಚೆ ಕಠಿಣವಾಗಿ ಮಾನಸಾಂತರವನ್ನು ಪ್ರಸಂಗಿಸಿದನಾದರೂ, ತನ್ನ ಸ್ವಂತ ವಿಷಯದಲ್ಲಿ ಅವರಿಗೆ ಕ್ಷಮೆ ಕಾಡ ಬೇಕೆಂತ ಮೃದುಮನಸ್ಸಿನಿಂದ ಬೇಡಿ ಕಾಂಡನು. ಅವರು ದುಷ್ಟತ್ವದಿಂದ ಅವನ ವಿಷಯದಲ್ಲಿ ಘಟ್ಟಿಯಾಗಿ ಕೂಗಿದರು; ಅವನು ಪೃದಯದ ಅತ್ಯಂತ ಅಂತಃಕರಣದಿಂದ ಅವರಿಗೆ ಕೃಪೆ ಕಾಡ ಬೇಕೆಂದು ಘಟ್ಟಿಯಾಗಿ ಕೂಗಿ ಪ್ರಾರ್ಥಿಸಿದನು.

೫. ನಿದ್ದೆ ಪೂರಾಗುವದೆಂಬ ಮಾತು, ಪರಿಶುದ್ಧರ ಮರಣವನ್ನೂ ಅವರು ಪೂರೈಸುವ ಉತ್ಥಾನವನ್ನೂ ಸೂಚಿಸುವದಕ್ಕೆ, ಪೂರಾಸ ವಾಡಂಬಡಿಕೆಯಲ್ಲಿ ಸಾಧಾರಣವಾಗಿ ಪ್ರಯೋಗಿಸುವ ಚಂದವಾದ ಶಬ್ದ. ಲುಥರನು ಹೇಳುವದೇನಂದರೆ: ಮರಣವುನನಗೆ ನಿದ್ರೆಯಾಯಿತು.

ಅಪೌ. ಕ್ರಿ. ೮, ೧–೨.

ಸಂಧಿ ೮.

ಸ್ತೆಫನನ ಮರಣಾದ ಫಲಗಳು.

೧. ಮೂರನೆ ಅಧಿಕ ಕಠಿಣವಾದ ಹಿಂಸೆ. ವ. ೧—೩.

೧. ಮತ್ತು ಸೌಲನು ಅವನ ಕೊಲೆಗೆ ಸಂಮತಿ ಪಡುತ್ತಿದ್ದನು, ಮತ್ತು ಆ ಕಾಲದಲ್ಲಿ ಯೆರೂಸಲೇಮಿನಲ್ಲಿರುವ ಸಭೆಗೆ ದೊಡ್ಡ ಹಿಂಸೆ[೧] ಆಯಿತು. ೨. ಅಪೊಸ್ತಲರ ಹೊರತು ಮಿಕ್ಕಾದವರೆಲ್ಲರು ಯೆಹೂದ್ಯ ಸಮಾರ್ಯ ದೇಶಗಳಲ್ಲಿ ಚದರಿ ಹೋದರು. ಊದರೆ ಭಕ್ತಿಯುಳ್ಳ ಮನುಷ್ಯರು ಸ್ತೆಫನನಂನು ಹೂಣಿಟ್ಟು[೨], ಅವನಿಗೋಸ್ಕರ ದೊಡ್ಡ ಗೋಳಾಟ ಮಾಡಿದರು.

೧. ರಕ್ತವನ್ನು ರುಚಿ ನೋಡಿದ ಕಾಡು ಮೃಗಗಳಲ್ಲಿ ರಕ್ತದಾಹವು ಹುಟ್ಟಾಗುವದಾ, ಹುಟಾಗೆಯೆ ಇಲ್ಲಿ ಯೇಸುವಿನ ಶತ್ರುಗಳಿಗೆ ಆಯಿತು. ಯಾಕಂದರೆ ತಮ್ಮ ದುಷ್ಟ ಕಾರ್ಯಕ್ಕೆ ಶಿಕ್ಷೆ ಬರಲಿಲ್ಲವೆಂತಲೂ, ಇಷ್ಟು ಪರ್ಯಂತ ಆದ ಹುಟಾಗೆ ಸದ್ದು ಮನಸ್ಸಿನ ಸದ್ದುಕಾಯರು ಮಾತ್ರವಲ್ಲ, ನಿಯಮಾಸಕ್ತರಾದ ಫರಿಸಾಯರು ಸಹಾ ಕ್ರೈಸ್ತರ ಮೇಲೆ ಪಿತೃಗಳ ನಿಯಮವನ್ನು ತುಚ್ಛೀಕರಿಸುವವರೆಂಬದಾಗಿ ಕಾಪಥ್ರಷ್ಟರಾಗಿದ್ದಾರೆಂತಲೂ ನೋಡಿದರು. ಸೌಲನು ಅಂಥವನಾಗಿದ್ದನು. ಇವನೆ ಮತ್ತೆ ಹಿಂಸಾಪ್ರಯಾಣದಲ್ಲಿ ಕರ್ತನ ಕಡೆಗೆ ತಿರುಗಿ ಕಾಂಡ ಪೌಲನು. ಸತ್ಕಾರಿಗೆ ಮಾಡ ತಕ್ಕ ಮಾನವನ್ನು ಸ್ತೆಫನನಿಗೆ ಮಾಡಲಿಕ್ಕೆ ಅಪ್ಪಣೆ ಕಾಟ್ಟರು ಸರಿ, ಆದರೆ ಜೀವಂತರಾದ ಅವನ ಸ್ನೇಹಿತರು ಶ್ರಮ ಪಡ ಬೇಕಾಯಿತು.

೨. ಸ್ತೆಫನನ ಭಕ್ತಿಭಾವವಾದ ಮರಣದಿಂದಲೂ ಅವನ ಸ್ನೇಹಿತರ ಧೈರ್ಯದಿಂದಲೂ ಜನರಲ್ಲಿ ವಾಳ್ಳೇಜೀ ಶಿ ಹುಟ್ಟಿದ ಕಾರಣ, ಯೇಸುವಿಗೆ ಆದ ಹುಟಾಗೆಯೆ ಇವನನ್ನು ಸಹಾ ಹೂಣಿಡುವಾಗೈ ಅಟಕವಾಗಲಿಲ್ಲಾ.

೨. ಸಮರ್ಯದ ಸಂವರ್ತನ. ವ. ೪ — ೨೫.

ಈ ಮೊದಲನೆ ವಿಶೇಷವಾದ ಹಿಂಸೆಯಿಂದ ಬಹಳ ಆಶೀರ್ವಾದ ಬಂತು. ಮೊದಲನೆ ಕ್ರೈಸ್ತರು ಯೆಹೂದ ಜನಾಂಗದಲ್ಲಿ ಮೆಲ್ಲ ಮೆಲ್ಲ ಮಾನವನ್ನು ಹೊಂದಿದವರಾಗಿ, ಯೆಹೂದ ದೇವಾರಾಧನೆಯಲ್ಲಿ ಮಮತೆ ಇಡುವವರಾಗಿ, ಮಾಂಸಭಾವದ ಯೆಹೂದತನದಲ್ಲಿ ಬಿದ್ದು, ಸಮಸ್ತ ಲೋಕಕ್ಕೆ ಹೋಗಿರಿ ಯೆಂಬ ಕರ್ತನ ಆಜ್ಞೆಯನ್ನು ಮರತು ಬಿಡುವ ಗಂಡಾಂತರದಲ್ಲಿ ಬೀಳ ಬಹುದಿತ್ತು. ಆದರೆ ಸಮಸ್ತವನ್ನಾಳುವ ಕರ್ತನು ತನ್ನ ಸಭೆಯಲ್ಲಿ ಯೇನೊಂದೂ ಮಿತಿ ಮೀರದ ಹಾಗೆ ಮಾಡುವವನಾಗಿ, ಈ ಮಹಾ ಹಿಂಸೆಗೆ ತಡೆ ಕಟ್ಟಲಿಲ್ಲ. ಹೀಗಾಗಿ ಬಿರುಗಾಳಿಯಿಂದ ಬೆಂಕಿಯ ಕಿಡಿಗಳು ಆಚೆ ಈಚೆ ಹಾರಿ, ದೂರದಲ್ಲಿರುವವರಿಗೆ ಸಹಾ ಬೆಳಕಾಯಿತು. ಸಮರ್ಯಕ್ಕೆ ಆಶೀರ್ವಾದವು ಮುಂಚೆ ಶಿಕ್ಕಿತು.

ಧರ್ಮದ ಹಣಿಗಳನ್ನು ಹಂಚಿ ಕೊಡಲಿಕ್ಕೆ ನೇಮಕವಾದ ಯೇಳು ಮಂದಿಯಲ್ಲಿ ವೊಬ್ಬನಾದ ಫಿಲಿಪ್ಪನು ಪಲಾಯನದಲ್ಲಿ ಸಮರ್ಯಕ್ಕೆ ಬಂದು, ಸುವಾರ್ತೆಯನ್ನು ಪ್ರಸಂಗಿಸಿದಾಗ, ಅಲ್ಲಿರುವ ಭೋಳ್ಳೆ ಯಥಾರ್ಥ ಜನರು ಕಿವಿ ಕೊಟ್ಟರು. ಇದಲ್ಲದೆ ದೆವ್ವ ಹಿಡಿದವರನ್ನೂ, ಕೋಗಿಗಳನ್ನೂ, ಕುಂಟರನ್ನೂ ವಾಸಿ ಮಾಡಿದ ಅದ್ಭುತಗಳನ್ನು ನೋಡಿದಾಗ, ಮೋಸಗಾರನಾದ ಸೀಮೋನನಂಥವರ ಕಾರ್ಯದ ಹಾಗೆ ಫಿಲಿಪ್ಪನ ಕಾರ್ಯವಲ್ಲಾ, ಫಿಲಿಪ್ಪನಲ್ಲಿ ದಿವ್ಯಬಲವು ಉಂಟಿಂತ ತಿಳಿದು ಕೊಂಡರು. ಹೀಗಾಗಿ ಗಂಡಸರೂ ಹೆಂಗಸರೂ ಸ್ನಾನವನ್ನು ಬೇಡಿ ಕೊಂ

ಡರು. ಫಿಲಿಪ್ಪನು ಅವರಿಗೆ ಸ್ನಾನ ಕೊಟ್ಟನು. ಆ ಸೀಮೋನನು ಸಹಾ ಸತ್ಯದ ಬಲವನ್ನು ತಿಳಿದು ಸ್ನಾನವಂನು ತಕ್ಕೊಂಡನು. ಆದಾಗ್ಯೂ ತಂನ ದುರ್ವಿಶ್ವಾಸವಂನೂ ಅದರಿಂದ ಜನರಲ್ಲಿ ತನಗುಂಟಾದ ಮಾನವಂನೂ ಬಿಡಲಿಕ್ಕೆ ಅವನಿಗೆ ಮನಸ್ಸಿರಲಿಲ್ಲಾ. ಈ ದುರ್ಮನಸ್ಸು ಬೇಗ ಪ್ರತ್ಯಕ್ಷವಾಯಿತು. ಹ್ಯಾಗೆಂದರೆ, ಯೆರೂಸಲೇಮಿನ ಸಭೆಯಂನು ಕಾಯುವದಕ್ಕೂ, ಬಲಪಡಿಸುವದಕ್ಕೂ ಅಲ್ಲೆ ಉಳಕೊಂಡ ಅಪೊಸ್ತಲರು ಸಮರ್ಯದ ಸಂವರ್ತನದ ಸುದ್ದಿ ಕೇಳಿ, ಅಲ್ಲಿ ಅವರಿಗೆ ಸಹಾ ಅಸಾಧಾರಣವಾದ ಅದ್ಭುತವರಗಳಂನು ಕೊಡುವದಕ್ಕೆ ಪೇತ್ರನಂನೂ ಯೋಹಾನನಂನೂ ಕಳುಹಿಸಿದರು. ಈ ವರಗಳು ಆ ಕಾಲದಲ್ಲಿ ಅಪೊಸ್ತಲರು ತಲೆಯ ಮೇಲೆ ಕೈ ಇಟ್ಟರೆ ಶಿಕ್ಕುವದಿತ್ತು. ಹಾಗೆಯೆ ಅಲ್ಲಿ ಆಯಿತು. ಇದಂನು ಸೀಮೋನನು ನೋಡಿ, ಅದಕ್ಕೆ ಅಪೊಸ್ತಲರಿಗೆ ಹಣ ಕೊಡ ಬಂದನು.

೧೪. ಅಪಾಸ್ತಲರ ಕೈಯಿಡುವಿಕೆಯಿಂದ ಪರಿಶುದ್ಧಾತ್ಮವು ಕೊಡಲ್ಪಡುತ್ತದೆಯೆಂದು, ಸೀಮೋನನು ನೋಡಿ, ಅವರಿಗೆ ಹೀಗೆ ಶಂದು, ನಾನು ಯಾವನ ಮೇಲೆ ಕೈಗಳನ್ನಿಡುತ್ತೇನೋ, ೧೯. ಅವನು ಪರಿಶುದ್ಧಾತ್ಮವನ್ನು ಹೊಂದುವ ಹಾಗೆ, ನನಗೂ ಈ ಅಧಿಕಾರ ಕೊಡಿರಿ, ಅಂದನು. ೨೦. ಆದರೆ ಪೇತ್ರನು ಅವನಿಗೆ ಹೇಳಿದ್ದು, ದೇವರ ವರವನ್ನು ಹಣದಿಂದ ಕೊಂಡು ಕೊಳ್ಳ ಬಹುದೆಂದು, ನೀನು ನೆನಸಿದ ಕಾರಣ, ನಿನ್ನ ಬೆಳ್ಳಿಯು ನಿನ್ನ ಸಂಗಡ ನಾಶವಾಗಲಿ ೧); ೨೧. ಈ ಕಾರ್ಯದಲ್ಲಿ ನಿನಗೆ ಪಾಲೂ ಭಾಗವೂ ಇಲ್ಲ; ಯಾಕಂದರೆ ನಿನ್ನ ಹೃದಯವು ದೇವರ ಮುಂದೆ ನೆಟ್ಟಗಲ್ಲ. ೨೨. ಆದದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು, ಮಾನಸಾಂತರ ಪಟ್ಟು, ನಿನ್ನ ಹೃದಯದ ಯೋಚನೆಯು ನಿನಗೆ ಮನ್ನಿಸಲ್ಪಟ್ಟೀತೋ ನೋ, ದೇವರನ್ನು ಬೇಡಿ ಕೊ. ೨೩. ಯಾಕಂದರೆ ನೀನು ಕಹಿಯಾದ ಪಿತ್ತದಲ್ಲಿಯೂ, ಅನ್ಯಾಯದ ಬಂಧದಲ್ಲಿಯೂ, ಇರುತ್ತೀ ಯೆಂದು, ನೋಡುತ್ತೇನೆ. ೨೪. ಆಗ ಸೀಮೋನನು ಪ್ರತ್ಯುತ್ತರವಾಗಿ, ನೀವು ಹೇಳಿದವುಗಳಲ್ಲಿ ವೊಂದಾದರೂ ನನ್ನ ಮೇಲೆ ಬಾರದ ಹಾಗೆ, ನೀವೇ ನನಗಾಸ್ತರ ಕರ್ತನನ್ನು ಬೇಡಿ ಕೊಳ್ಳಿರಿ, ಅಂದನು ೨). ೨೫. ಮತ್ತು ಅವರು ಕರ್ತನ ವಾಕ್ಯವನ್ನು ಸಾಕ್ಷಿ ಹೇಳಿ, ಮಾತಾಡಿದ ಮೇಲೆ, ಯೆರೂಸಲೇಮಿಗೆ ತಿರಿಗಿ ಬರುವಾಗ್ಗೆ, ಸಮಾರ್ಯರ ೩) ಅನೇಕ ಗ್ರಾಮಗಳಲ್ಲಿ ಸುವಾರ್ತೆ ಪ್ರಸಂಗಿಸಿದರು.

೧. ಪೇತ್ರನ ಮಾತುಗಳು, ಆತ್ಮಿಕ ಉದ್ಯೋಗವಂನೂ ಕೃಪೆಯ ವರಗಳನ್ನೂ ಅಪೇಕ್ಷಿಸಿ, ಯಥಾರ್ಥ ಹೃದಯವಿಲ್ಲದೆ, ಹಣದ ಮೇಲೆ ಮನಸ್ಸಿಡುವ ಪ್ರತಿ ಮನುಷ್ಯನಿಗೆ ತಾಗುತ್ತವೆ. ಅಂಥವನಿಗೆ ಯಥಾರ್ಥವಾದ ಪೂರ್ಣ ಮಾನಸಾಂತರದಿಂದಲ್ಲದೆ ಗುಣವಾಗದು. ಸಭಾಚರಿತ್ರದಲ್ಲಿ ಸೀಮೋನನ ಪೆಸರು ಸಭೆಯ ಉದ್ಯೋಗಗಳಂನು ಕ್ರಯ ವಿಕ್ರಯ ಮಾಡುವ ಅಪರಾಧಕ್ಕೆ ಬಂದದೆ. ಪೌರೋಹಿತ್ಯವೆಂದರೆ ಅಂಥಾ ಉದ್ಯೋಗಗಳಂನು ಕಾಂಡರೆ ಅಥವಾ ಮಾರಿದರೆ, ಅದಕ್ಕೆ ಸೀಮೋನನ ಪಾಪವೆಂದು ಹೇಳುವದು ವಾಡಿಕೆಯಾಯಿತು.

೨. ಪೂರ್ವದ ವರ್ತಮಾನಗಳಿಂದ ತಾವೇ

ವದೇನಂದರೆ: ಸೀಮೋನನ ಪಶ್ಚಾತ್ತಾಪವು ಭಯದಿಂದ ಬೇಗ ಪುಟ್ಟಿ ಆಂತರ್ಯದಲ್ಲಿ ನೆಲೆಗಾಳ್ಳಲಿಲ್ಲ. ಅವನು ಪೂರ್ವ ಮಾನಗಳ ಅಭಿಲಾಷೆಯಿಂದ ತರುವಾಯ ಆ ದುಷ್ಟ ಅಧಿಪತಿಯಾದ ಫೇಲಿಕ್ಸನ ಬಳಿಗೆ ಪೂರ್ವಾಗಿ, ಅರಸನಾದ ಅಗ್ರಿಪ್ಪನ ಸಪೂರ್ವಾದರಿಯಾದ ದ್ರುಸಿಲ್ಲಳು ತಂನ ಗಂಡನಾದ ಯೆಮೆಸದ ಅರಸನಂನು ಬಿಟ್ಟು, ಫೇಲಿಕ್ಸನ ಬಳಿಗೆ ಬರುವ ಪೂರ್ವಾಗೆ ಮಾಡಿದ ದುಷ್ಕೃತ್ಯದಲ್ಲಿ ಸಪೂರ್ವಾಯಕನಾದನು.

೩. ಈ ಪ್ರಕಾರ ಅನೇಕ ಶತವರುಷಗಳಿಂದ ಶತ್ರುತ್ವದಲ್ಲಿ ಬದುಕಿದ ಯೆಹೂದರೂ ಸಮಾರ್ಯರೂ ಯೇಸುವಿನಲ್ಲಿ ವಾಂದಾದರು.

೩. ಕಂದಾಕೆ ರಾಣಿಯ ಕಡೆಯ ಪ್ರಭುವು. ವ. ೨೬—೪೦.

೨೬. ಮಶ್ಚ ಕರ್ತನ ದೂತನು ೧) ಫಿಲಿಪ್ಪನ ಸಂಗಡ ಮಾತಾಡಿ, ಹೇಳಿದ್ದೇನಂದರೆ, ನೀನು ಯೆದ್ದು, ಯೆರೂಸಲೇಮಿನಿಂದ ಗಾಜಕ್ಕೆ ಇಳಿದು ಹೂರ್ವಾಗುವ ಮಾರ್ಗವಾದ ಶಂಕಿಗ ಕಡೆಗೆ ಹೂರಟು ಹೂರ್ವಾಗು. ೨೭. ಅದು ಅರಣ್ಯವು ೨). ಅವನು ಯೆದ್ದು, ಹೂರಟನು ೩). ಆಗ, ಇಗೋ, ಐಥಿಯೂಪ್ಯನಾದ ೪) ನಪುಂಸಕನೂ, ಐಥಿಯೂಪ್ಯರ ರಾಣಿಯಾದ ಕಂದಾಕೆಯ ಪ್ರಭುವೂ, ಅವಳ ಸಮಸ್ತ ಬೂಕ್ಕಸದ ಮೇಲೆ ಅಧಿಕಾರಿಯೂ, ಆಗಿರುವ ವೂಬ್ಬ ಮನುಷ್ಯನು. ೨೮. ಅವನು ಆರಾಧನೆಗೂಸ್ಕರ ಯೆರೂಸಲೇಮಿಗೆ ಬಂದು, ತಿರಿಗಿ ಹೂರ್ವಾಗಿ, ತನ್ನ ರಥದ ಮೇಲೆ ಕೂತುಕೂಂಡು, ಪ್ರವಾದಿಯಾದ ಯೆಶಾಯನ ಪುಸ್ತಕವನ್ನು ವೂರ್ವಾದುತ್ತಾ ಇದ್ದನು ೫). ೨೯. ಆಗ ಆತ್ಮವು ಫಿಲಿಪ್ಪನಿಗೆ, ಹತ್ತಿರ ಹೂರ್ವಾಗಿ, ಈ ರಥಕ್ಕೆ ಕೂಡಿಕೂಳ್ಳಿ, ಯೆಂದು ಹೇಳಿತು. ೩೦. ಫಿಲಿಪ್ಪನು ಹತ್ತಿರಕ್ಕೆ ವೂರ್ವಾದಿ, ಅವನು ಪ್ರವಾದಿಯಾದ ಯೆಶಾಯನ ಪುಸ್ತಕ ವೂರ್ವಾದುವದನ್ನು ಕೇಳಿ, ವೂರ್ವಾದುವವುಗಳನ್ನು ತಿಳುಕೂಳ್ಳುತ್ತಿಯೂ? ಅಂದನು. ೩೧. ಅದಕ್ಕೆ ಅವನು, ವೂಬ್ಬನು ನನಗೆ ಉಪದೇಶಿಸಿದರೆ ಹೂರ್ತು, ಹೂಗೆ ತಿಳುಕೂಂಡ್ತೇನೆಂದು ೬) ಹೇಳಿ, ನೀನು ಯೇರಿ, ನನ್ನ ಸಂಗಡ ಕೂಡ್ರಬೇಕೆಂದು ಫಿಲಿಪ್ಪನನ್ನು ಬೇಡಿ ಕೂಂಡನು.

೧. ರಕ್ಷಣೆಯಂನು ಬಾಧ್ಯರಾಗಿ ಪೂರ್ವಾಂದಲಿರುವವರಸೇವೆಗಾಗಿ ದೇವರು ಕಳುಹಿಸುವ ದೂತರು ಆಗಾಗ್ಗೆ ಸುವಾರ್ತೆಯ ಪ್ರಸಂಗಕ್ಕೆ ಸಪೂರ್ವಾಯ ಮಾಡುತ್ತಾರೆ.

೨. ಮಾರ್ಗದಲ್ಲಿ ಜನರ್ವಾರೂ ಇರಲಿಲ್ಲಾ. ಇದು ಮತ್ತೆ ಆದ ಪ್ರಸಂಗಕ್ಕೆ ಉಪಯೋಗವಾಗಿತ್ತು. ಗಾಜವಂನು ಯೆಹೂದ ಅರಸನಾದ ಅಲೆಕ್ಸಂಧ್ರ ಯಂನಾಯನು ಕ್ರಿಸ್ತ ಶಕದ ೯೬ ವರುಷದ ಮುಂಚೆ ಪೂರ್ವಾಳು ಮಾಡಿದ್ದನು. ಆದರೆ ಅಷ್ಟರಾಳಗೆ ಅದು ತಿರಿಗಿ ಪೌಸರ್ವಾಶಿಯಾದ ಪಟ್ಟಣವಾಗಿತ್ತು.

೩. ವಿಶ್ವಾಸದ ವಿಧೇಯತ್ವದಿಂದ, ಯಾಕೆಂತ ತಿಳಿಯದೆ, ಪೂರ್ವಾಗೆ ಮಾಡಿದನು.

೪. ಐಗುಪ್ತದ ದಕ್ಷಿಣದಲ್ಲಿ ನೀಲ ನದಿಯ ಪೂರ್ತ್ತರ ಇದ್ದ ದೇಶಕ್ಕೆ ಐಥಿಯೂಪ್ಯವೆಂಬ ಪೌಸರು. ಈಗಿನ ಕಾಲದಲ್ಲಿ ಅದಕ್ಕೆ ಪೂರ್ವಿಶಿ ದೇಶ ಪೇಳುತ್ತಾರೆ. ಆ ಪ್ರಭುವು ನಿಸ್ಸಂಶಯವಾಗಿ ಯೆಹೂದರ ಮತ ಶೇರಿದವನಾಗಿದ್ದನು. ಅವನು ಯೆಹೂದರ ಕಟ್ಟು ಕಟ್ಟಳೆಗಳಂನು ಸ್ವೀಕರಿಸಿದವನಾಗಿ, ಯೆರೂಸಲೇಮಿನಲ್ಲಿ ಬಲಿ ಅರ್ಪಿಸಲಿಕ್ಕೆ ಪೂರ್ವಾಗಿದ್ದನು. ಆ ಪ್ರಕಾರ

ತಂನ ಪ್ರಾಣಪಾಷಣದ ಸಾಧನೆಗಾಸ್ಕರ ಶು
ಮಾರು ೩೦ ಪುರದಾರಿ ದೂರ ಪ್ರಯಾಣ ಮಾ
ಡಿದನು.

೫. ಈ ಪ್ರಕಾರ ಅವನು ಕಾಲವಂನು ಕಾಂಡು
ಕಾಂಡು, ತನಗಿದ್ದ ಸ್ವಲ್ಪ ಜ್ಞಾನವಂನು ಸಫಲಾ ಚ
ನ್ನಾಗಿ ಪ್ರಯೋಗಿಸಿದನು. ಆದ್ದರಿಂದ ಅವನ ನಂಬಿ
ಕೆಯು ಸಫಲವಾಯಿತು.

೬. ಇವನ ಪಾಗೆ ಸಮಸ್ತರೂ ತಮ್ಮ ಅಜ್ಞಾನವ
ನ್ನೂ ಅಸಾಮರ್ಥ್ಯವಂನೂ ಅರಿಕೆ ಮಾಡುವದಾದರೆ,
ಸಭೆಯ ಬಾಧಕರ ಕೆಲಸವು ನೆರೆ ಸುಲಭವಾದೀತು!

೫–೮. ಅವನು ವಾಯ್ದುಕ್ತಿದ್ದ ಬರಹದ ವಚನವೇನಂದರೆ ೧), ಕುರಿಯ ಹಾಗೆ ಅವನು ಕೊಲ್ಲಲ್ಪಡುವದಕ್ಕೆ ನಡಿಸಲ್ಪಟ್ಟನು; ಕತ್ತರಿಸುವವನ ಮುಂದೆ ನಿಶ್ಶಬ್ದವಾಗಿರುವ ಕುರಿಮರಿಯ ಹಾಗೆ ತನ್ನ ಬಾಯನ್ನು ತೆರೆಯುವದಿಲ್ಲ; ೩೩. ಅವನ ದೀನತ್ವದಲ್ಲಿ ಅವನ ನ್ಯಾಯಶಿರ್ವಿಕೆಯು ೨) ತೆಗದು ಹಾಕಲ್ಪಟ್ಟಿತು; ಅವನ ಸಂತಾನವಂನು ಯಾವನು ವರ್ಣಿಸುವನು? ಯಾಕಂದರೆ ಅವನ ಜೀವವು ಭೂಮಿಯಿಂದ ತೆಗೆದು ಹಾಕಲ್ಪಡುತ್ತದೆ. ೩೪. ಆಗ ನಪುಂಸಕನು ಫಿಲಿಪ್ಪನಿಗೆ ಪ್ರಶ್ನೋತ್ತರವಾಗಿ, ಪ್ರವಾದಿಯು ಯಾರ ವಿಷಯವಾಗಿ ಇದನ್ನು ಹೇಳುತ್ತಾನೆ; ತನ್ನ ವಿಷಯವಾಗಿಯಾ? ಬೇರಾಬ್ಬನ ವಿಷಯವಾಗಿಯಾ? ದಯ ಮಾಡಿ ಹೇಳ ಬೇಕು, ಅಂದನು. ೩೫. ಆಗ ಫಿಲಿಪ್ಪನು ತನ್ನಬಾಯಿ ತೆರೆದು, ಈ ಬರಹದಿಂದ ಆರಂಭ ಮಾಡಿ, ಅವನಿಗೆ ಯೇಸುವನ್ನು ಪ್ರಸಂಗಿಸಿದನು. ೩೬. ಅವರು ಮಾರ್ಗದಲ್ಲಿ ಹೋಗುತ್ತಿರಲಾಗಿ, ನೀರಿನ ೩) ಬಳಿಗೆ ಬಂದರು. ಆಗ ನಪುಂಸಕನು, ಇಗೋ, ನೀರು; ನಾನು ಸ್ನಾನ ಹೊಂದುವದಕ್ಕೆ ೪) ಅಡ್ಡಿಯೇನು? ಅಂದನು. ೩೭. ಫಿಲಿಪ್ಪನು, ನೀನು ಪೂರ್ಣ ಹೃದಯದಿಂದ ೫) ವಿಶ್ವಾಸಿಸಿದರೆ, ಆಗ ಬಹುದು ಅನ್ನಲು, ಯೇಸು ಕ್ರಿಸ್ತನು ದೇವರ ಮಗನಾಗಿದ್ದಾನೆಂದು, ವಿಶ್ವಾಸಿಸುತ್ತೇನೆಂಬದಾಗಿ, ಅವನು ಪ್ರಶ್ನೋತ್ತರ ಹೇಳಿ, ರಥ ನಿಲ್ಲಿಸ ಅಪ್ಪಣೆ ಕೊಟ್ಟನು. ೩೮. ಆಗ ಫಿಲಿಪ್ಪನೂ ನಪುಂಸಕನೂ, ಇಬ್ಬರೂ ನೀರಿನಲ್ಲಿ ಇಳಿಯ ಹೋದರು. ಮತ್ತು ಅವನಿಗೆ ಸ್ನಾನ ಕೊಟ್ಟನು. ೩೯. ಅವರು ನೀರಿನಿಂದ ಏರಿ ಬಂದಾಗ, ಕರ್ತನ ಆತ್ಮವು ಫಿಲಿಪ್ಪನನ್ನು ಎತ್ತಿ ಕೊಂಡು ಹೋಯಿತು ೬). ನಪುಂಸಕನು ಅವನನ್ನು ಇನ್ನು ನೋಡಲಿಲ್ಲ. ಮತ್ತು ಸಂತೋಷದಿಂದ ತನ್ನ ಮಾರ್ಗವಾಗಿ ಹೋದನು. ೪೦. ಆದರೆ ಫಿಲಿಪ್ಪನು ಅಜೋತಿನಲ್ಲಿ ಕಾಣಿಲ್ಪಟ್ಟನು ೭), ಕೈಸರೈಯಕ್ಕೆ ೮) ಬರುವ ಪರ್ಯಂತರ ಪಟ್ಟಗಳೆಲ್ಲಾ ಹಾಯ ಹೋಗಿ ಸುವಾರ್ತೆ ಪ್ರಸಂಗಿಸಿದನು.

೧. ದೇವರ ವಿಶೇಷವಾದ ಘಟನೆಯಿಂದ ಅ
ವನು ಆಗೈ ಯೆಶಾಯ. ೫೩, ೭. ೮. ವಾದಿಕಾಂ
ಡಿದ್ದನು. ಈ ವಾಕ್ಯವು ಕ್ರಿಸ್ತನ ಶ್ರಮಗಳ ವಿಷಯ
ದಲ್ಲಿಯೂ, ಮತ್ತೆ ಬರ ತಕ್ಕ ಮಹಿಮೆಯ ವಿಷಯ

ಅಪಾ. ಕ್ರಿ. ೯.

ದಲ್ಲಿಯೂ ಅತಿ ಸ್ಪಷ್ಟವಾದ ಸ್ಥಳ. ಇದನ್ನು ಹಿಡಿದು ಸುವಾರ್ತೆಯ ಪ್ರಸಂಗ ಮಾಡುವದು ಬಹು ಸುಲಭವಾಯಿತು. ಗ್ರೀನ್‌ಲಂಡ ಯೆಂಬಲ್ಲಿ ಮಿಶನೆರಿಯರು ಕೆಲವು ಪರುಷ ಪರ್ಯಂತ ನಿಷ್ಫಲವಾಗಿ ಕೆಲಸ ಮಾಡಿದ ಮೇಲೆ, ಕಡೆಯಲ್ಲಿ ರಕ್ಷಕನ ಶ್ರಮ ಮರಣಗಳ ವಾರ್ತೆಯಂನು ಜನರಿಗೆ ಹೇಳಿದಾಗ, ಕೇಳುವವರ ಹೃದಯದಲ್ಲಿ ಪ್ರಸಂಗವು ಸಫಲವಾಯಿತೆಂಬದು ಗಾತ್ರಾಗಿದೆ.

೨. ಗ್ರೇಕ ಭಾಷಾಂತರದ ಪ್ರಕಾರ. ನಮಗೆ ಬದಲಾಗಿ ಆತನ ಮೇಲೆ ಆತನ ಅತ್ಯಂತ ಅಲ್ಪತ್ವದಲ್ಲಿ ನ್ಯಾಯತೀರ್ಪನ್ನು ದೇವರು ಇಟ್ಟು, ಅದನ್ನು ತಿರಿಗಿ ತೆಗದನು. ಆಗೈ ಅವನ ಮಹಿಮಾಶ್ಚಿಕೆಗೆ ಆರಂಭವಾಯಿತು; ಅದರಿಂದೇನುಂಟಾಯಿತೆಂದರೆ: ಈಗ ಅವನ ಜೀವದ ಉದ್ದವನು ಯಾರೂ ಯೆಣಿಸಲಾರನು. ಈ ಮಹಿಮೆಯ ಕಾರಣವು ಅವನ ಮರಣ. ಅವನ ದೃಶ್ಯವಾದ ಜೀವವು ಹಾಳಾಯಿತು. ಆದರೆ ಅದಕ್ಕೆ ಬದಲಾಗಿ ನಿತ್ಯ ಜೀವವನೂ, ನಂಮನ್ನು ಸಹಾ ಬದುಕಿಸುವ ಅಧಿಕಾರವನೂ ಹೊಂದಿದ್ದಾನೆ.

೩. ಈ ಪ್ರಕಾರ ಈ ಮನುಷ್ಯನ ಪ್ರಾಣವನ್ನು ದುಡಿಯುವದಕ್ಕೂ, ಈ ದೇವಕಾರ್ಯವನು ತ್ವರ್ಯವಾಗಿ ಸಂಪೂರ್ತಿ ಮಾಡುವದಕ್ಕೂ ಅವಶ್ಯವಾದದ್ದೆಲ್ಲಾ ಕೈಗೂಡಿ ಬರ ಬೇಕಾಯಿತು.

೪. ಹಾಗಾದರೆ ಫಿಲಿಪ್ಪನು ಅವನ ಸಂಗಡ ಸ್ನಾನದ ವಿಷಯದಲ್ಲಿಯೂ ಯೆಲ್ಲಾ ಕ್ರೈಸ್ತ ಬಾಧನೆಯ ವಿಷಯದಲ್ಲಿಯೂ ಮಾತಾಡಿ ಇರ ಬೇಕು.

೫. ಮನುಷ್ಯರಂನು ನಡಸುವ ವಾಳ್ಳೇ ಮಾರ್ಗ ಇದೆ. ಫಿಲಿಪ್ಪನು ನಿಯಮದ ಸನ್ನಾಹಗಳಿಂದ ತಡಿಸಲಿಲ್ಲ. ಆದಾಗ್ಯೂ ಸ್ವಲ್ಪ ಮನವಾಡ್ಡಿದ್ದು ಸಾಕೆಂದು ಹೇಳದೆ, ಪೂರ್ಣ ಹೃದಯವಂನು ಅಪೇಕ್ಷಿಸಿದನು. ಮತ್ತು ಸಂಪೂರ್ಣ ತಿಳಿಪಿಕೆ ಇಲ್ಲದೆ ಇದ್ದರೂ, ಸತ್ಯ ವಿಶ್ವಾಸವಂನು ಕಂಡ ಕೂಡಲೆ, ಇದನ್ನು ಪೂರ್ಣ ಮಾಡುವದಕ್ಕೆ ಪ್ರಯತ್ನ ಮಾಡಿದನು. ಈ ಪ್ರಕಾರ, ಆಗ ಬೇಕಾದದ್ದೇನಾಂದೂ ಬಿಡದೆ, ಉತ್ಸೇಗದಿಂದ ಯೇನಾಂದೂ ನಡಿಸದೆ ಇದ್ದನು.

೬. ಆತ್ಮದ ಅಂತರ್ಪ್ರೇರಣೆಯಿಂದ ಅಥವಾ ಲೀಯಗೆ ಆದ ಹಾಗೆ, ೧ ಅರಸು. ೧೮, ೪೬.

೭ ಹಾಗ್ಯಾಗೆಂತಾ ತಿಳಿಯದೆ ಅಲ್ಲಿಗೆ ಬಂದನು.

೮. ಈ ಪ್ರಕಾರ ಫಿಲಿಸ್ತಿಯರ ದಕ್ಷಿಣಪ್ರಾಂತ್ಯದಿಂದ ಕೈಸರೈಯ ಇರುವ ಕರ್ಮೆಲ್ ಪರ್ವತದ ಪರ್ಯಂತ ಪಲೆಸ್ತೀನದ ತೀರವನ್ನೆಲ್ಲಾ ಹಾಳಾದು ಹಾಳಾದನು. ಆಗೈ ಪಲೆಸ್ತೀನವೆಲ್ಲಾ ಸುವಾರ್ತೆಯಿಂದ ತುಂಬಿತ್ತು. ಪೌರಾಣದನು ಸಮುದ್ರತೀರದಲ್ಲಿ ಈ ಪಟ್ಟಣವಂನು ಕಟ್ಟಿ, ಕೈಸರ ಔಗುಸ್ತನ ಮಾನಕ್ಕೆ ಕೈಸರಪಟ್ಟಣವೆಂಬರ್ಥವಾದ ಕೈಸರೈಯವೆಂಬ ಹೆಸರಿಟ್ಟನು. (ಇದು ಬೇರೆ, ಯಾರ್ದಾನ್ ಮೂಲದಲ್ಲಿರುವ ಫಿಲಿಪ್ಪನ ಕೈಸರೈಯ ಬೇರೆ.) ಅಲ್ಲಿ ಫಿಲಿಪ್ಪನು ಉಳಕಾಂಡನು. ಶುಮಾರು ೩೯ ವರುಷದ ಮೇಲೆ ಹೆಂಣು ಮಕ್ಕಳ ಸಂಗಡ ೨೧, ೮. ಅಲ್ಲಿಯೆ ಇದ್ದನು.

ದೂರವಾದ ಪರಜನಾಂಗಗಳಲ್ಲಿ ಆಗ ತಕ್ಕ ಸುವಾರ್ತೆಯ ಪ್ರವೇಶದ ಸಂನಾಹವು.

೧. ಪರಜನಾಂಗಗಳ ಅಪಾಸ್ತಲನ ಸಂವರ್ತನ. ಸಂ. ೯, ೧—೩೦.

ಹಿಂಸೆಯಿಂದಲೆ ಸುವಾರ್ತೆಗೆ ಮಾರ್ಗವು ಹೆಚ್ಚೆಚ್ಚು ಸರಾಗವಾಗುತ್ತಿರುವಾಗ್ಯೆ, ಅದನ್ನು ವಿಸ್ತರಿಸುವದಕ್ಕೆ ಪ್ರಾಮುಖ್ಯ ಕಾರಣವಾಗ ತಕ್ಕ ಹಿಂಸಕನಂನೆ ಕರ್ತನು ಸ್ವಯಂಕೃತ್ಯದಿಂದ ಗೆದ್ದನು. ಆದ್ದರಿಂದ ಪಾಲನ ಸಂವರ್ತನದ ವೃತ್ತಾಂತವಂನೆ ನೋಡಿದರೆ, ಸಮಸ್ತ ಕ್ರೈಸ್ತತ್ವಕ್ಕೆ ಅದರಿಂದ ಉಂಟಾದ ಫಲಗಳನ್ನು ನೋಡಿದರೆ, ಅದು ಕ್ರೈಸ್ತ ಸಭಾಚರಿತ್ರದ ಪರಮ ಕಾರ್ಯಗಳಲ್ಲಿ ವೊಂದಾಗಿದೆ. ಕ್ರೈಸ್ತ ಧರ್ಮವಂನು ಪರಜನಾಂಗಗಳಿಗೆ ತರುವ ಬಗ್ಯೆ ದೇವರು ಆಯ್ದ ಕರಣವಾಗಿದ್ದ ಮನುಷ್ಯನು ಈ ಕಾರ್ಯಕ್ಕೆ ಯಾವ ರೀತಿಯಿಂದ ಸ್ಥಿರವಾದನೆಂಬ ಸಂಗತಿಯನ್ನು ತಿಳಿಕೊಳ್ಳುವದು ನಮಗೆ ವಿಶೇಷವಾಗಿರ ಬೇಕಲ್ಲಾ! ಇದಲ್ಲದೆ

ಅಪೌ. ಕ್ರಿ. ೯, ೧. ೨.

ಕರ್ತನು ಇಲ್ಲಿ ಬಲವಂತನಂತೆ ಕೊಳ್ಳೆ ಇಟ್ಟ ರೀತಿಯು ಯೆಲ್ಲಾ ಸಂವರ್ತನಗಳಿಗೆ ವಿಸ್ತಾರವಾಗಿ ವರ್ಣಿಸಿರುವ ಮಾದರಿಯಾಗಿದೆ. ಅದರಲ್ಲಿ ಲಕ್ಷ್ಯವಾದದ್ದೇನಂದರೆ: ೧) ಸಂವರ್ತನವಿಲ್ಲದ ಹಳ್ಳೆ ಸ್ವಭಾವದ, ಕೋಪಾವಿಷ್ಟವಾದ ವಿಕೋಧ. ೨) ಕೃಪೆಯಿಂದ ಕ್ಷಣ ಮಾತ್ರದಲ್ಲಿ ಉಂಟಾದ ಪರಾಜಯ. ಇದು ಇಲ್ಲಿ ಹೆಚ್ಚು ಪ್ರಕಾಶಮಯವಾಗಿ ತೋರುತ್ತದೆ. ಯಾಕಂದರೆ ಪೌಲನು ತಾನು ಕರ್ತನಿಂದಲೆ ಕರೆಯಲ್ಪಟ್ಟವನೆಂದೂ, ಮಿಕ್ಕಾದ ಅಪೊಸ್ತಲರ ಹಾಗೆಯೆ ಕರ್ತನಂತು ತಾನೆ ಕಂಡಿದ್ದೇನೆಂದೂ ೧ ಕೊರಿ. ೧೫, ೫. ಹೇಳಿ, ಜೀವಕಾಲವೆಲ್ಲಾ ಅದರಿಂದ ತನ್ನ ಅಧಿಕಾರವನ್ನು ಪ್ರಮಾಣಿಸಲವಶ್ಯವಾಗಿತ್ತು. ೩) ಕರ್ತನ ಬಾಣ ತಾಗಿದವನು ಬಹಿರಂಗದಲ್ಲಿ ಸಹಾ ಪೂರ್ಣವಾಗಿ ಸೋತು, ಅನಾಥನಾದದ್ದನ್ನು ಇಲ್ಲಿ ನೋಡ ಬಹುದು. ೪) ಕರ್ತನು ಕೃಪೆಯಿಂದ ಅವನ ಕೈ ಹಿಡಿದು ಅವನನ್ನು ಮುಂದೆ ನಡಸಿದ್ದೂ, ಮುಖ್ಯವಾಗಿ ಸಹೋದರಸಂಸರ್ಗದ ಸಾಧಾರಣ ಮಾರ್ಗದಲ್ಲಿ ವರ್ತಿಸ ಮಾಡಿದ್ದೂ ವಿಶೇಷ. ೫) ಕಾರ್ಯವು ಪೂರ್ಣವಾದ ಮೇಲೆ, ಕರ್ತನ ಕರಣವು ಮುಂದಿನ ಸಾಧನೆಗೆ ಹ್ಯಾಗೆ ಸಂಸಿದ್ಧವಾಯಿತೆಂಬದು ಸಹಾ ಇಲ್ಲಿ ಕಾಣುತ್ತದೆ.

ಹಿಂಸಕನಾದ ಸೌಲನು.

೧. ಮತ್ತು ಸೌಲನು ೧) ಕರ್ತನ ಶಿಷ್ಯರಿಗೆ ವಿರೋಧವಾಗಿ ಇನ್ನು ಬೆದರಿಕೆಯಿಂದಲೂ ಕೊಲೆಯಿಂದಲೂ ಉಸುರು ಬಿಡುತ್ತಾ ೨), ೨. ಪ್ರಧಾನಯಾಜಕನ ಬಳಿಗೆ ಹೋಗಿ, ತಾನು ಈ ಮಾರ್ಗಸ್ಥರಾದ ಗಂಡಸರನ್ನೂ ಹೆಂಗಸರನ್ನೂ ಕಂಡರೆ, ಅವರನ್ನು ಕಟ್ಟಿ, ಯೆರೂಸಲ್ಮೇಮಿಗೆ ಕರ ಕೊಂಡು ಬರುವ ಹಾಗೆ, ದಮಸ್ಕದಲ್ಲಿರುವ ೩) ಸಭೆಗಳಿಗೆ ಪತ್ರಿಕೆಗಳನ್ನು ಕೊಡ ಬೇಕೆಂದು, ಅವನನ್ನು ಬೇಡಿ ಕೊಂಡನು.

೧. ಸೌಲನು ಯೆಲ್ಲಾ ತೂಗಿಸುವ ಬುದ್ಧಿಯುಳ್ಳ ಗಮಲಿಯೇಲನ ಶಿಷ್ಯನಾಗಿದ್ದರೂ, ೨೨, ೩. ಸಹಜವಾದ ಗುಣವು ಅವನನ್ನು ಬೋಧಕನನ್ನನುಸರಿಸ ಬಿಡಲಿಲ್ಲ. ಪೌಲನು, ರೋ. ೭, ೯. ೧೦. ನಿಯಮದ ಕೆಳಗಿರುವವನ ಪಾಪಾಚರಾಟವನ್ನು ಕಂಪಾರೆ ಕಂಡವನಂತೆ ವರ್ಣಿಸುವದರಿಂದ, ಅವನು, ಎಫೆಸ್ಕರ್ತದಲ್ಲಿದ್ದ ಲುಥರನ ಪಾಪಾಗೆ, ಫರಿಸಾಯರ ಪುಣ್ಯಸಿದ್ಧಿಪಡಕಾಳ್ಳವದಕ್ಕೆ ತಾನೆ ಆ ಪ್ರಕಾರ ಪಾಪಾಚರಾಡಿದನೆಂತ ಊಹಿಸುವದು ಯುಕ್ತವಾಗಿದೆ. ಆದರೆ ಅವನ ಪುಣ್ಯಸಾಧನೆಗಳು ಅವನ ಮನಸ್ಸಾಕ್ಷಿಯನ್ನು ಸಂತೈಸದೆ ಪಾಪಾದ, ಅಷ್ಟು ಪೆಚ್ಚಾದ ಉಗ್ರದಿಂದ ಅವನು ನಿಯಮನಿಂದಕರೆಂದೆಣಿಸಿದವರನ್ನು ಹಿಂಸಿಸಿ, ತನ್ನಾಳಗಿಲ್ಲದ ವಿಶ್ರಾಂತಿಯನ್ನು ಪಾಸ್ತ್ರಗತ ಮಾಡಯತ್ನಿಸಿದನು. ಅವನು ಇದನ್ನು ಯಥಾರ್ಥ ಪ್ರಾಮಾಣಿಕತೆಯಿಂದ ಶಿಳಿಯದವನಾಗಿ ಮಾಡಿದರೂ, ೧ ತಿಮೊ. ೧, ೧೩. ೧೪. ಜೀವಕಾಲವೆಲ್ಲಾ ಅವನಿಗೆ ಅದರಿಂದ ಯೆಂಥಾ ಮನಾವ್ಯಥೆ ಬಂತೆಂದು, ಅವನು ತಂನ ಅಪರಾಧವನ್ನು ಆ ಮಹಾ ದುಃಖಚರಿತವಾದ ಪ್ರಾಮಾಣಿಕತೆಯಿಂದ ಅರಿಕೆ ಮಾಡುವ ಅನೇಕ ಸ್ಥಳಗಳಲ್ಲಿ ಕಾಣುತ್ತದೆ.

೨. ಅತಿ ಕಠಿಣವಾದವುಗಳನ್ನು ಬಿಡದೆ ಯೆಲ್ಲಾ ಉಪಾಯಗಳನ್ನು ಪ್ರಯೋಗಿಸಿ, ಪೆಚ್ಚು ಕಡಿಮೆ ನೋಡದೆ ಯೆಲ್ಲರನ್ನು ಹಿಡಿದು, ದೂರದಲ್ಲಿಯೂ ಇರುವ ಸ್ಥಳಗಳನ್ನು ಶೋಧಿಸ ಬೇಕೆಂದು ನಡಿಸಿದ ಈ ಹಿಂಸೆಯಲ್ಲಿ ಅತ್ಯುಗ್ರವೂ ಸೂಕ್ಷ್ಮ ಕ್ರೂರತ್ವವೂ ಪೆಚ್ಚಿದವು.

೩. ದಮಸ್ಕವು ರೋಮಾಯ ಸಾಮ್ರಾಜ್ಯದ ಸುರ್ಯ ಜಿಲ್ಲೆಗೆ ಶೇರಿದ್ದಾಗಿದ್ದರೂ, ವಿಶ್ವಾಸ ಸಹಾಶಿಕ್ಷೆಗಳ ವಿಷಯದಲ್ಲಿ ಸಮಸ್ತ ರೋಮಾಯ ಸಂಸ್ಥಾನದಲ್ಲಿರುವ ಯೆಹೂದರು ಪ್ರಧಾನಯಾಜಕನಿಗೆ ವಾಳಗಾಗಿದ್ದರು.

ಅಪೌ. ಕ್ರಿ. ೯, ೩—೯

ಅವನಿಗೆ ಆದ ದರ್ಶನ.

೩. ಆದರೆ ಅವನು ಪ್ರಯಾಣವಾಗಿ, ದಮಸ್ಕಕ್ಕೆ ಸಮೀಪಿಸುವಾಗ, ಫಕ್ಕನೆ ಆಕಾಶದಿಂದ ಬೆಳಕು ೧) ಅವನ ಸುತ್ತಲು ಮಿಂಚಿತು. ೪. ಅವನು ನೆಲಕ್ಕೆ ಬಿದ್ದು, ಸೌಲನ್ಯೇ, ಸೌಲನ್ಯೇ, ನನ್ನನ್ನು ೨) ಯಾಕೆ ಹಿಂಸಿಸುತ್ತೀ? ಯೆಂದು ತನಗೆ ಹೇಳುವ ಶಬ್ದವನ್ನು ೩) ಕೇಳಿದನು. ೫. ಅವನು, ಕರ್ತನೇ, ನೀನು ಯಾರು? ಅನ್ನಲಾಗಿ, ಕರ್ತನು, ನಾನು ನೀನು ಹಿಂಸಿಸುವ ಯೇಸುವೇ; ಮುಳ್ಳುಗಳ ಮೇಲೆ ವಾದೆಯುವದು ೪) ನಿನಗೆ ಕಠಿಣವು, ಅಂದನು. ೬. ಅವನು ನಡುಗಿ, ಭ್ರಮಿಸಿ ೫), ಕರ್ತನೇ, ನಾನು ಯೇನು ಮಾಡ ಇಚ್ಛೈಸುತ್ತೀ? ಅನ್ನಲು, ಕರ್ತನು ಅವನಿಗೆ, ನೀನು ಯೆದ್ದು, ಪಟ್ಟಣದಲ್ಲಿ ಪ್ರವೇಶಿಸು; ಆಗ ನೀನು ಮಾಡ ಬೇಕಾದದ್ದು ನಿನಗೆ ಹೇಳಲ್ಪಡುವದು ೬), ಅಂದನು.

೧. ಸೂರ್ಯಪ್ರಕಾಶಕ್ಕಿಂತ ಬಲವಾದ ಪ್ರಕಾಶ ೨೬, ೧೨.

೨. ತನ್ನವರಿಗೆ ಆದ್ದು ತನಗೆ ಆಯಿತೆಂದು ಕರ್ತನು ಯೆಣಿಸುತ್ತಾನೆ.

೩. ಆಗೈ ಅವನು ಯೇಸುವನ್ನು ನಾೀಡಿದನು. ವ. ೧೭—೨೭.

೪. ವಾದೆಯುವದೆಂದರೆ, ಯೆತ್ತುಗಳ ವಿಷಯದಲ್ಲಿ ಹೇಳುವ ವಾಂದು ಮಾತು. ಇವುಗಳನ್ನು ಮುಳ್ಳುಗಾಲಿನಿಂದ ನಡಿಸುವಾಗೈ, ಅವುಗಳು ವಾದ್ದರೆ, ಮುಳ್ಳು ಮಾಂಸದಾಳಗೆ ತಿವಿಯುವದರಿಂದ, ನಾೀವು ಹೆಚ್ಚಾಗುವದು. ಈ ಮಾತಿನ ಅತಿಪ್ರಾಯವೇನಂದರೆ: ಹೆಚ್ಚು ಕಾಲ ವಿರೋಧ ಮಾಡುವದು ನಿರರ್ಥಕವಾಗಿಯೂ ನಿನಗೆ ಕಂಟಕವಾಗಿಯೂ ಇರುವದು.

೫. ಅಬದ್ಧ ವಿಶ್ವಾಸವೆಂದು ತಾನು ಹಿಂಸಿಸುತ್ತಾ ಬಂದ, ಮತದ ಕರ್ತನಾದ ಯೇಸುವು ದಿವ್ಯ ಮಹಿಮೆಯಲ್ಲಿ ಬದುಕುತ್ತಾನೆಂತಲೂ, ತಾನು ಇಷ್ಟು ವರೆಗೆ ದೇವರಿಗೆ ವಿರೋಧವಾಗಿ ಲಡಾಯಿ ಮಾಡಿದೆನೆಂತಲೂ ಪೌಲನು ಈಗ ಅನುಭವದಿಂದ ತಿಳಿಕಾಂಡನು.

೬. ನಾೀಡದೆ ನಂಬ ಬೇಕೆಂತಲೂ ವಿಧೇಯವಾಗ ಬೇಕೆಂತಲೂ ಕರ್ತನು ತನ್ನ ಸೇವಕರಿಗೆ ಆಜ್ಞಾಪಿಸುತ್ತಾನೆ. ಪೂಾಗೆ ತಾೀಮನಿಗೆ ಯಾೀಪೂಾ. ೨೦, ೨೯. ಅಬ್ರಪೂಾಮನಿಗೆ ಉತ್ಪತ್ತಿ. ೧೨. ೧.

ದರ್ಶನದ ವರ್ಣನೆ.

೭. ಅವನ ಸಂಗಡ ಪ್ರಯಾಣ ಮಾಡುವ ಜನರು ಶಬ್ದವನ್ನು ಕೇಳಿ ೧), ಯಾರನ್ನೂ ನಾೀಡದೆ, ಮೂಗರಾಗಿ ನಿಂತರು. ೮. ಸೌಲನು ನೆಲದಿಂದ ಯೆದ್ದು, ತನ್ನ ಕಣ್ಣುಗಳನ್ನು ತೆರೆಯುವಾಗ, ಯಾರನ್ನೂ ನಾೀಡಲಿಲ್ಲ. ಆಗ ಅವರು ಅವನನ್ನು ಕೈ ಹಿಡಿದು, ನಡಿಸಿ, ದಮಸ್ಕಕ್ಕೆ ಕರಕಾಂಡು ಬಂದರು ೨). ೯. ಮತ್ತು ಅವನು ಮೂರು ದಿವಸ ಕಣ್ಣು ಕಾಣದೆ ೩), ಉಣ್ಣಲಿಲ್ಲ, ಕುಡಿಯಲಿಲ್ಲ.

೧. ಸಂ. ೨೨, ೯. ಪೌಲನು ತಾನೆ ಹೇಳುವದೇನಂದರೆ: ಅವರು ಬೆಳಕನ್ನು ನೋಡಿ ಚಯಸ್ಥರಾದರು; ಆದರೆ ನನ್ನ ಸಂಗಡ ಮಾತಾಡುವವನ ಶಬ್ದವನ್ನು ಕೇಳಲಿಲ್ಲಾ. ಈ ಮಾತಿನ ಅರ್ಥವೇನಂದರೆ: ಅವರು ಬೆಳಕನ್ನು ಕಂಡು, ಯಾರನ್ನೂ ಕಾಣಲಿಲ್ಲಾ; ಶಬ್ದವನ್ನು ಕೇಳಿ ಅರ್ಥವನ್ನು ಗ್ರಹಿಸಲಿಲ್ಲಾ. ಈ ದರ್ಶನವು ಯಥಾರ್ಥವಾಗಿ ನಡೆಯಿತೆಂಬದಕ್ಕೆ ನಿಷ್ಪಕ್ಷಪಾತಿಗಳಾದ ಸಾಕ್ಷಿಗಳು ಇರುವ ಪಕ್ಷಾಗೆಯೂ ದರ್ಶನವು ಪೌಲನಿಗಾತ್ಕರ ಮಾತ್ರ ಆಯಿತೆಂದು ತಿಳಿಯುವ ಪಕ್ಷಾಗೆಯೂ ಯೆಲ್ಲಾ ಹೀಗೆ ನಡೆಯಿತು.

೨. ಪೌಲನಿಗೆ ಕಣ್ಣು ಕಾಣದ್ದರಿಂದ.

೩. ಇದೆಲ್ಲಾ ಅವನ ಅಂತಃಸ್ಥಿತಿಯ ಗುರುತಾಗಿತ್ತು. ಮುಂಚೆ ಮತ್ತಾಬ್ಬರನ್ನು ನಡಿಸುವವನೆಂದು ಹೇಳಿ ಕಾಂಡವನು ಈಗ ಕುರುಡನಂತೆ ನಡಿಸಲ್ಪಡಬೇಕು. ಫರಿಸಾಯಜ್ಞಾನ ಕಳದು ಪಕ್ಷಾಗಿ, ಈಗ ಕತ್ತಲೆಯಲ್ಲಿದ್ದಾನೆ. ಮತ್ತು ಹಿಂದಿನ ಕಾಲದ ಸ್ಥಿತಿಗತಿಯ ವಿಷಯದಲ್ಲಿ ದುಃಖ ಪಡುವವನಾಗಿ, ಉಣ್ಣುವದನ್ನೂ ಕುಡಿಯುವದನ್ನೂ ಮರತು ಬಿಟ್ಟನು.

೧೦. ಆದರೆ ದಮಸ್ಕದಲ್ಲಿ ಅನನ್ಯೀಯನೆಂಬ ೧) ವ್ಯಾಬ್ಬ ಶಿಷ್ಯನಿದ್ದನು. ಅವನಿಗೆ ಕರ್ತನು ದರ್ಶನದಲ್ಲಿ, ಅನನ್ಯೀಯನೇ! ಯೆಂದು ಕರೆದನು. ೧೧. ಅವನು, ಇಗೋ, ಇದ್ದೇನೆ, ಕರ್ತನೇ! ಅನ್ನಲಾಗಿ, ಕರ್ತನು ಅವನಿಗೆ ಹೇಳಿದ್ದು, ನೀನು ಯೆದ್ದು, ನೆಟ್ಟನೆ ಬೀದಿ ಯೆಂಬ ಬೀದಿಗೆ ಹೋಗಿ, ಯೂದನ ಮನೆಯಲ್ಲಿ ತಾರ್ಸದವನಾದ ಸೌಲನನ್ನು ಹುಡುಕು; ಯಾಕಂದರೆ, ಇಗೋ, ಪ್ರಾರ್ಥಿಸುತ್ತಾನೆ; ೧೨. ಮತ್ತು ದರ್ಶನದಲ್ಲಿ ೨) ಅನನ್ಯೀಯನೆಂಬ ವ್ಯಾಬ್ಬ ಮನುಷ್ಯನು ಪ್ರವೇಶಿಸಿ, ತಾನು ದೃಷ್ಟಿಯನ್ನು ಹೊಂದುವ ಹಾಗೆ, ತನ್ನ ಮೇಲೆ ಕೈ ಇಟ್ಟದ್ದನ್ನು ಕಂಡಿದ್ದಾನೆ. ೧೩. ಆಗ ಅನನ್ಯೀಯನು ಪ್ರತ್ಯುತ್ತರವಾಗಿ, ಕರ್ತನೇ, ಈ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನ ಪರಿಶುದ್ಧರಿಗೆ ಬಹಳ ಕೇಡು ಮಾಡಿದ್ದಾನೆಂದು, ಅನೇಕರಿಂದ ಕೇಳಿದ್ದೇನೆ. ೧೪. ಮತ್ತು ಇಲ್ಲಿ ನಿನ್ನ ಹೆಸರನ್ನು ಕರೆಯುವವರೆಲ್ಲರನ್ನು ಕಟ್ಟುವದಕ್ಕೆ, ಪ್ರಧಾನಯಾಜಕರಿಂದ ಅವನಿಗೆ ಅಧಿಕಾರ ಉಂಟು, ಅಂದನು. ೧೫. ಆಗ ಕರ್ತನು ಅವನಿಗೆ ಹೇಳಿದ್ದು, ನೀನು ಹೋಗು; ಯಾಕಂದರೆ, ಇವನು ಜನಾಂಗಗಳ ಮುಂದೆಯೂ, ಅರಸರ ಮುಂದೆಯೂ, ಇಸ್ರಾಯೇಲಿನ ಮಕ್ಕಳ ಮುಂದೆಯೂ, ನನ್ನ ಹೆಸರನ್ನು ಯೆತ್ತುವದಕ್ಕೆ, ನನಗೆ ಆಯಲ್ಪಟ್ಟ ಪಾತ್ರೆಯಾಗಿದ್ದಾನೆ. ೧೬. ಮತ್ತು ಅವನು ನನ್ನ ನಾಮಕ್ಕಾಸ್ತರ ಯೆಷ್ಟು ಶ್ರಮೆ ೩) ಪಡ ಬೇಕೆಂದು, ಅವನಿಗೆ ತೋರಿಸುವೆನು. ೧೭. ಆಗ ಅನನ್ಯೀಯನು ಹೊರಟು ಹೋಗಿ, ಆ ಮನೆಯಲ್ಲಿ ಪ್ರವೇಶಿಸಿ, ಅವನ ಮೇಲೆ ಕೈಗಳನ್ನಿಟ್ಟು, ಸಹೋದರನಾದ ೪) ಸೌಲನೇ, ನೀನು ಬಂದ ಮಾರ್ಗದಲ್ಲಿ ನಿನಗೆ ಪ್ರತ್ಯಕ್ಷವಾದ ಯೇಸುವೆಂಬ ಕರ್ತನು, ನೀನು ನೋಡುವ ಹಾಗೆಯೂ, ಪರಿಶುದ್ಧಾತ್ಮದಿಂದ ತುಂಬಿಸಲ್ಪಡುವ ಹಾಗೆಯೂ, ನನ್ನನ್ನು ಕಳುಹಿಸಿದ್ದಾನೆ, ಅಂ

ಅಪೌ. ಕ್ರಿ. ೫, ೧೪—೨೫.

ದನು. ೧೪. ಸಂಗಡಲ್ಯೇ ಸಿಪ್ಪೆಗಳ ಹಾಗೆ ಇರುವವುಗಳು ಅವನ ಕಣ್ಣುಗಳಿಂದ ಬಿದ್ದವು. ಅವನು ಕ್ಷಣದಲ್ಲಿ ದೃಷ್ಟಿಯನ್ನು ಹೊಂದಿ ೫), ಯೆದ್ದು, ಸ್ನಾನ ಹೊಂದಿ, ಊಟ ಮಾಡಿ, ಬಲಗೊಂಡನು. ೧೫. ಮತ್ತು ಸೌಲನು ದಮಸ್ಕದಲ್ಲಿರುವ ಶಿಷ್ಯರ ಸಂಡಗ ಕೆಲವು ದಿವಸಗಳ್ದಿದನು.

೧. ಅಪೊಸ್ತಲಿಕ ಕರೆಯುವಿಕೆಯನ್ನೂ, ಅಪೊಸ್ತಲಿಕ ಜ್ಞಾನವನ್ನೂ, ಸುವಾರ್ತೆಯ ತಿಳುವಿಕೆಯನ್ನೂ, ಮನುಷ್ಯಬೋಧನೆ ಇಲ್ಲದೆ, ಕರ್ತನಿಂದಲೆ ಪೊಂದಿದನು. ಸಭಾಪ್ರವೇಶವು ಮತ್ತಾಬ್ಬರ ಸೇವೆಯಿಂದ ಸಾಮಾನ್ಯ ಮಾರ್ಗದಲ್ಲಿ ನಡಿಯ ಬೇಕಾಯಿತ್ತು. ಕರ್ತನು ಅವಶ್ಯ ಇದ್ದಷ್ಟು ಮಾತ್ರವೆ ಅಸಾಧಾರಣ ರೀತಿಯಿಂದ ಮಾಡುತ್ತಾನೆ.

೨. ಕಾರ್ನೇಲ್ಯನ ವಿಷಯದಲ್ಲಿ ಆದ ಪೊಂದಾಗೆ ಇಲ್ಲಿ ಸಪೊಂದಾ ಯೆರಡು ದರ್ಶನಗಳಿಂದ ಬರೆ ಕನಸೆಂಬ ಸಂಶಯವು ಪೊಂದಾಯಿತು. ಇಲ್ಲಿ ದೇವರು ವಾಂದಕ್ಕಾಂದು ಸರಿ ಬೀಳುವ ದರ್ಶನಗಳಿಂದ ವಿಶ್ವಾಸಕ್ಕೆ ಸಪೊಂದಾಯ ಮಾಡಿದನು. ಈಗ ಸಪೊಂದಾ ಕರ್ತನನ್ನು ಪುಡುಕುವವರ ಪೃದಯಗಳಲ್ಲಿ ನಡಿಯುವ ವಾಂದಕ್ಕಾಂದು ಸರಿ ಬೀಳುವ ಅನುಭವಗಳಿಂದ ಕರ್ತನು ಪೊಂದಾಗೆಯೆ ಮಾಡುತ್ತಾನೆ.

೩. ಕ್ರಿಸ್ತನ ಸೇವಕರೆಲ್ಲರು ಶ್ರಮ ಪಡ ಬೇಕು, ಆದರೂ ಈ ಪಿಂಸಕನು ಪ್ರಾಮುಖ್ಯವಾಗಿ ಶ್ರಮ ಪಡ ಬೇಕು. ಪೌಲನು ಈ ಕಟ್ಟಳೆಗೆ ವಿಶೇಷ ತಾಳ್ಮೆಯಿಂದ ವಾಳಗಾದನು. ಸಮ ನಾೀಡು ೨ ತಿಮೊ. ೩, ೧೧. ೧ ಥೆಸ್ಸ. ೩, ೪. ಕಾಲಾ. ೧, ೨೪. ಫಿಲಿ. ೩, ೧೦.

೪. ತಗ್ಗಿದ ಪ್ರಾಣಿಗಳ ಸಂಗಡ ಬಪಳ ಮೃದುವಾಗಿ ಮಾತಾಡ ಬೇಕು.

೫. ಶರೀರದ ಮತ್ತು ಆತ್ಮದ ಪ್ರಕಾರ.

ನವಸಂವರ್ತಿಯ ಕರ್ಣೌ. ವ. ೨೦—೩೧.

ವ. ೨೦. ಹೊಸತಾಗಿ ಸಂವರ್ತಿಯಾದವನು ಕ್ರೈಸ್ತರ ಸಂಸರ್ಗದಲ್ಲಿ ಕೆಲವು ಕಾಲ ಬಲಗೊಂಡ ಮೇಲೆ, ಅವನು ಬಲವಂತನಾಗಿಯೂ, ಮುಂಚಿನ ಅನುಭವಗಳಿಂದ ದೈನ್ಯದಲ್ಲಿ ಭದ್ರವಾದವನಾಗಿಯೂ, ಪ್ರಕಟವಾಗಿ ಬೋಧಿಸ ತೊಡಗಿ, ಯೆಹೂದರಿಗೆ ಹಳ್ಳೆವೊಡಂಬಡಿಕೆಯಿಂದ ಯೇಸು ಕ್ರಿಸ್ತನ ದೇವತ್ವವನ್ನು ಪ್ರಮಾಣಿಸಿ ತೋರಿಸ ತಕ್ಕವನಾಗಿದ್ದನು. ೨೧. ಇದರಿಂದಲೂ, ಅವನು ದಮಸ್ಕಕ್ಕೆ ಯಾವ ಉದ್ದಿಶ್ಯ ಬಂದನೆಂಬದನ್ನು ಆಲೋಚಿಸುವದರಿಂದಲೂ ಜನರಲ್ಲಿ ಬಹಳ ಗುಲ್ಲು ಆಯಿತು. ಇದು ಬೇಡಾ ಯೆಂತ ಅವನು ಅರ್ಬಸ್ಥಾನಕ್ಕೆ ಹೋಗಿ, ಸ್ವಲ್ಪ ಕಾಲ ಯೇಕಾಂತವಾಗಿದ್ದನು. ಅವನು ತಿರುಗಿ ಬಂದ ಸಮಯದಲ್ಲಿ, ಅರಸನಾದ ಅರೇತನು ರೋಮಿಯಾಯರಿಂದ ಸ್ವಲ್ಪ ಕಾಲಕ್ಕೆ (೪ಮಾರು ೩೪ನೆ ೩೫ನೆ ವರುಷಗಳಲ್ಲಿ) ಪಟ್ಟಣವನ್ನು ಅಪಹರಿಸಿ ಕೊಂಡಿದ್ದನು. ಸೌಲನು ಮುಂಚಿನ ಹಾಗೆಯೆ ಯೆಹೂದರಿಗೆ, ಯೇಸುವು ಮೆಸ್ಸೀಯನೆಂತ ಬರಹಗಳಿಂದ ಸಾಧಿಸುತ್ತಾ ಇರಲಾಗಿ, ಅವರು ಬೇರೇನೂ ತಿಳಿಯದೆ, ಅವನನ್ನು ಕೊಲ್ಲುವದೆ ವೊಳ್ಳೇದೆಂತ ಆಲೋಚಿಸಿದರು. ಅರಸನಾದ ಅರೇತನು ಸಹಾ ಅವರ ಪಕ್ಷ ತಕ್ಕೊಂಡು, ಸೌಲನು ತಪ್ಪಿ ಹೋಗದ ಹಾಗೆ, ಹೆಬ್ಬಾಗಲುಗಳಲ್ಲಿ ಹಗಲಿರುಳು ಕಾವಲಿಡಿಸಿದನು. ೨೪. ಆದರೆ ಇವನು ತನ್ನ ಜೀವವನ್ನು ಕರ್ತನ ಸೇವೆಗೋಸ್ಕರ ಕಾಪಾಡುವ ಮನಸ್ಸಿನಿಂದಲೂ, ಅಕಾಲವಾದ ಸಾಕ್ಷಿಮರಣದ ಅಭಿಲಾಷೆ ಇಲ್ಲದೆಯೂ, ಪಟ್ಟಣದ ಗೋಡೆಗೆ ತಾಗಿರುವ ಮನೆಯಿಂದ ಇಳಿಸಿ ಕೊಂಡು, ೧ ಕೊರಿ. ೧೧. ಸಂವರ್ತನದ ಮೂರು ವರುಷದ ಮೇಲೆ, ಕ್ಷೇಮವಾಗಿ ಯೆರೂಸಲೇಮಿಗೆ ಬಂದು ಮುಟ್ಟಿದನು. ೨೬. ಅಲ್ಲಿ ಅವನಿಗೆ

೩. ಪರಜನರ ಬಳಿಗೆ ಸುವಾರ್ತೆ ಬರಲಿಕ್ಕೆ ಸಂನಾಹ.

ಅಪಾ. ಕ್ರಿ. ೯, ೩೧—೩೫.

ಬೇಕೊಂದು ಪರೀಕ್ಷೆ ಬಂತು. ಹ್ಯಾಗಂದರೆ, ಅವನು ಅಪೊಸ್ತಲರ ಬಳಿಗೆ ಹೋಗದೆ, ಬೇರೆ ಶಿಷ್ಯರ ಬಳಿಗೆ ಬಂದನು. ಆದರೆ ಇವರು ಅವನ ಮುಂದಿನ ಹಿಂಸಾಸಕ್ತಿಯನ್ನು ನೆನಪು ಮಾಡಿ ಕೊಂಡು, ಅವನನ್ನು ನಂಬಲಿಲ್ಲಾ. ಹೀಗಿರಲಾಗಿ ಕುಪ್ರದಲ್ಲಿ ಹುಟ್ಟಿ, ಪೌಲನ ಹಾಗೆಯೆ ವಿದ್ಯಾಭ್ಯಾಸಕ್ಕಾಗಿ ಯೆರೂಸಲೇಮಿಗೆ ಬಂದು, ಪೌಲನ ಹಾಗೆ ಯೆರೂಸಲೇಮಿನಲ್ಲಿ ವಸ್ತಿಯಾದ ಸಂಬಂಧಿಕರ ಮನೆಯಲ್ಲಿ ಉಳುಕೊಳ್ಳುತ್ತಾ, ಬಹಳ ವರ್ಷ ಕಾಲಕ್ಷೇಪ ಮಾಡಿ, ಪೌಲನಿಗೆ ಮುಂಚೆ ಬಳಿಕೆಯಾದ ಸ್ನೇಹಿತನಾಗಿದ್ದನೆಂದು ಉಹಿಸ ತಕ್ಕ, ಬರ್ನಬನು ಅವನನ್ನು ಶೇರಿಸಿ ಕೊಂಡು, ತರುವಾಯ ಅಪೊಸ್ತಲರಾದ ಪೇತ್ರ ಯಾಕೋಬರ ಬಳಿಗೆ ಕರಕೊಂಡು ಹೋಗಿ, ಅವನ ಸಂವರ್ತನಚರಿತ್ರವನ್ನೂ, ಅವನು ದಮಸ್ಕದಲ್ಲಿ ಯೇಸು ಕ್ರಿಸ್ತನ ಹೆಸರನ್ನು ಪ್ರಸಂಗಿಸಿದನೆಂಬುವದನ್ನೂ ತಿಳಿಸಿದನು. ಆಗ್ಯೆ ಸಂತೋಷದಿಂದ ಅಂಗೀಕರಿಸಲ್ಪಟ್ಟು, ಕರ್ತನಾದ ಯೇಸುವಿನ ಹೆಸರನ್ನು ಧೈರ್ಯದಿಂದ ಸಾರಿದನು. ಮುಂಚೆ ಸ್ತೆಫನನು ಮಾಡಿದ ಹಾಗೆಯೆ, ಪೌಲನು ಸಹಾ ಗ್ರೀಕ ರೀತಿಯಾಗಿ ವಿದ್ಯೆ ಕಲಿತ ಯೆಹೂದರ ಬಳಿಗೆ ಹೋಗಿ, ಅವರ ಸಂಗಡ ತರ್ಕ ಮಾಡಲಾಗಿ, ಅವನು ಅವರ ವಿದ್ಯೆಗಳಲ್ಲಿ ಪರಿಶ್ರಮ ಉಳ್ಳವನಾಗಿರುವ ಕಾರಣ, ಅವನಿಗೆ ಯೆದುರ್ನಿಲ್ಲಲಾರದೆ ಹೋದರು. ಆದ್ದರಿಂದ ಅವರ ಹಗೆಗೂ ಜೀವಘಾತಕ್ಕೂ ಗುರಿಯಾದನು. ದೇವಾಲಯದಲ್ಲಿ ೨೨, ೧೭—೨೧. ಅವನಿಗಾದ ಯೇಸುವಿನ ದರ್ಶನದಲ್ಲಿ ಯೆಹೂದರನ್ನು ಬಿಟ್ಟು, ಪರ ಜನಾಂಗಗಳ ಬಳಿಗೆ ಹೋಗಿ, ಸುವಾರ್ತಾಕಾರ್ಯವನ್ನು ನಡಿಸ ಬೇಕೆಂಬ ಅಪ್ಪಣೆ ಸಹಾ ಅದೇ ಕಾಲದಲ್ಲಿ ಆದ್ದರಿಂದ, ಸಹೋದರರು ಅವನನ್ನು ಕೈಸರ್ಯೆಯದ ಮಾರ್ಗವಾಗಿ ಅವನ ಜನ್ಮಪಟ್ಟಣವಾದ ಕಿಲಿಕ್ಯದ ತರ್ಸಕ್ಕೆ ಕಳುಹಿಸಿ ಕೊಟ್ಟರು. ಅಲ್ಲಿ ಅವನು ಕೆಲವು ವರುಷ ಪರ್ಯಂತ ಯೇಕಾಂತದಲ್ಲಿ ಕೆಲಸ ನಡಸಿದನು. ಮತ್ತೆ ಬರ್ನಬನು ಅಧಿಕವಾದ ಅಪೊಸ್ತಲಿಕ ಪ್ರಯತ್ನದ ಬಗ್ಯೆ ಅವನನ್ನು ಅಂತಿಯೊಖ್ಯಕ್ಕೆ ಕರಕೊಂಡು ಹೋದನು. ಅಪೊಸ್ತಲನಾದ ಪೌಲನ ಮೇಲೆ ಬಂದಂಥ (೨ ಕೊ. ೧೧, ೨೩. ಇತ್ಯಾದಿ ವಚನಗಳಲ್ಲಿ ಬರದ ಸಂಕ್ಷೇಪವಾದ ಸೂಚನೆಯಲ್ಲಿ ಅಲ್ಲದೆ) ಬೇರೆ ಯೆಲ್ಲಿಯೂ ಹೇಳದಿರುವಂಥ ಹಿಂಸೆಗಳೂ ರಕ್ಷಣೆಗಳೂ ಯೇಕಾಂತದಲ್ಲಿ ಕೆಲಸ ನಡಿಸುವ ಕಾಲದಲ್ಲಿ ಸಂಭವಿಸಿದವೆಂತ ನೆನಸ ಬಹುದು.

೨) ಮೊದಲನೆ ಪರಜನಾಂಗದವನ ಸಂವರ್ತನ.

ಇದಕ್ಕೆ ಸಂನಾಹ. ಪೇತ್ರನು ಲುದ್ದದಲ್ಲಿಯೂ ಯಾಪ್ಪೆಯಲ್ಲಿಯೂ ಇದ್ದದ್ದು.

ಸಂ. ೯, ೩೧—೪೩.

ವ. ೩೧. ಸೌಲನು ಹೋದ ಮೇಲೆ, ಸಭೆಗೆ ತಿರಿಗಿ ಸಮಾಧಾನ ಬಂತು. ಅದು ಹೊರಗಿನಿಂದಲೂ ಒಳಗಿನಿಂದಲೂ ವಿಶ್ರಮಿಸಿ ಕೊಂಡು ಬಲಗೊಳ್ಳುವ ಕಾಲವಾಗಿತ್ತು. ೩೨. ಈ ಸಮಯ ವೊತ್ತೈಸೀದೆಂದು ನೋಡಿ, ಪೇತ್ರನು ಸಮುದ್ರತೀರಕ್ಕೂ, ಲುದ್ದದಲ್ಲಿ ಆರಂಭವಾಗುವ ಸಾರೋನಿನ ಬೈಲಿಗೂ ಪ್ರಯಾಣ ಮಾಡಿದನು. ಅಲ್ಲಿ ಯೆಂಟು ವರ್ಷ ಪಕ್ಷವಾಯು ರೋಗದವನಾಗಿದ್ದ ಐನೇಯಿನೆಂಬವನನ್ನು, ಬಹಳ ಪ್ರಾರ್ಥನೆ ಮಾಡದೆ, ಧೈರ್ಯವಾದ ವಿಶ್ವಾಸದಿಂದ, "ಕ್ರಿಸ್ತನಾದ ಯೇಸು ನಿನ್ನನ್ನು ಸ್ವಸ್ಥ ಮಾಡುತ್ತಾನೆ, ಯೆದ್ದು ನಿನ್ನ ಹಾಸಿಕೆಯನ್ನು ಹಾಸಿಕೊ", ಯೆಂಬ ವೊಂದೇ ಮಾತಿನಿಂದ ಗುಣ ಮಾಡಿದನು. ೩೫. ಈ

ಅಪೌ. ಕ್ರಿ. ೫೪, ೫೬—೪೫.

ಅದ್ಭುತದಿಂದ ಆ ಸೀಮೆಯೆಲ್ಲೆಲ್ಲಾ ಮಹಾ ಸಂವರ್ತನ ಉಂಟಾಯಿತು. ೫೬—೪೫. ಆ ಕಾಲದಲ್ಲಿ ಸಮುದ್ರತೀರದಲ್ಲಿರುವ ಲುದ್ದದಿಂದ ೪೦ ಮೈಲು ದೂರವಾದ ಯೊಪ್ಪೆಯಲ್ಲಿ ತಬೀಥಳೆಂಬ ಧರ್ಮಿಷ್ಠಳಾದ ಸ್ತ್ರೀಯು ಸತ್ತು ಹೋದಳು. ಅವಳಿಗಿದ್ದ ಜಿಂಕೆ ಯೆಂಬ ಅರ್ಥ ಉಳ್ಳ ದೊರ್ಕ ಯೆಂಬ ಹೆಸರಿಗೆ ಅನುಸಾರವಾಗಿ, ಸುಕಾರ್ಯಗಳಲ್ಲಿ ಚುರುಕಿನಿಂದಲೂ ಸಾಹಸದಿಂದಲೂ ಮಾನಗೊಂಡವಳಾಗಿದ್ದಳು. ಈ ಉಪಕಾರಿಯಾದ ಸ್ತ್ರೀ ಸತ್ತಳೆಂಬ ದುಖ್ಖದಿಂದ ಅಲ್ಲಿಯ ಕ್ರೈಸ್ತರು ಪೇತ್ರನನ್ನು ತಮ್ಮ ಬಳಿಗೆ ಬರ ಬೇಕೆಂದು ಬೇಡಿ ಕೊಂಡರು. ಅವನು ಅಲ್ಲಿ ಶೇರಲು, ಬಡ ಜನರಾದ ಅನೇಕರು ಅವನನ್ನು ಯೆದುರ್ಗೊಂಡು, ಅವಳ ಸಾಹಸ ಪ್ರೀತಿಗಳ ಕೆಲಸಗಳನ್ನು ತೋರಿಸಿದರು. ಮತ್ತಾ. ೨೫, ೫೬. ಆಗ್ಯೇ ಅವನು ಯೇಸು ಯಾಯಿರನ ಬಳಿಯಲ್ಲಿ ಮಾಡಿದ ಹಾಗೆಯೂ, ಎಲೀಸನ ಹಾಗೆಯೂ, ೨ ಅರಸು. ೪, ೫೩., ಪ್ರಾರ್ಥನೆಯಿಂದ ಕರ್ತನ ಚಿತ್ತವನ್ನು ತಿಳಿಯುವ ಬಗ್ಯೆ ಯೇಕಾಂತವಾಗಿ ಇರ ಬೇಕೆಂದು, ಯೆಲ್ಲರಿಗೆ ಹೊರಗೆ ಹೋಗ ಹೇಳಿದನು. ಯಾಕಂದರೆ ಇಲ್ಲಿ ಐನೇಯನ ಬಳಿಯಲ್ಲಿ ಆದ ಹಾಗೆ, ದೇವರ ಚಿತ್ತವು ಯೇನೆಂತ ಅವನಿಗೆ ನಿಶ್ಚಯವಾಗಿರಲಿಲ್ಲಾ. ಹ್ಯಾಗಂದರೆ ಈ ಅದ್ಭುತಕ್ಕೆ ಮನುಷ್ಯರು ಕರದದ್ದಲ್ಲದೆ, ಆತ್ಮವು ತಾನೇ ಅವನನ್ನು ಕರೆಯಲಿಲ್ಲ. ಅವನು ಮೊಣಕಾಲೂರಿ ಪ್ರಾರ್ಥನೆ ಮಾಡಿ ಹೇಳಿದ್ದೇನಂದರೆ: ತಬೀಥಳೆ ಯೇಳು! ಆಗಲವಳು ಕಂಣುಗಳನ್ನು ತೆರದು, ಪೇತ್ರನನ್ನು ನೋಡಿ, ಕೂತು ಕೊಂಡಳು. ಮತ್ತೆ ಪೇತ್ರನು ದುಖ್ಖ ಪಡುವವರನ್ನು ಒಳಗೆ ಕರದು, ಪುನರ್ದತ್ತವಾದವಳನ್ನು ಬದುಕುವವಳಾಗಿ ಅವರಿಗೆ ಒಪ್ಪಿಸಿದನು. ಈ ಅದ್ಭುತವು ಆ ದೊಡ್ಡ ಬಂದ್ರದಲ್ಲಿ ಪ್ರಕಟವಾಗಲಾಗಿ, ಮುಂಚೆ ಕ್ರಿಸ್ತನ ವಿಷಯದಲ್ಲಿ ಯೇನೊಂದೂ ಕೇಳ್ಳದೆ ಇದ್ದವರು ಸಹಾ ವಿಶ್ವಾಸಿಗಳಾದರು. ಪೇತ್ರನಿಗೆ ಕೈತುಂಬ ಕೆಲಸ ಶಿಕ್ಕಿದ್ದರಿಂದ, ಅವನು ಸೀಮೋನನೆಂಬ ಒಬ್ಬ ತೊಗಲುಗಾರನ ಮನೆಯಲ್ಲಿ ಬಹುಕಾಲ ಉಳ್ಳಕೊಂಡನು. ತೊಗಲುಗಾರರು ಅಶುದ್ಧರೆಂಬ ಹಾಗೆ ವಿಂಗಡವಾಗಿ ಬದುಕುತ್ತಿದ್ದದರಿಂದ, ಜನರು ಪೇತ್ರನ ಬಳಿಗೆ (೧೫, ೬.) ಸುಲಭವಾಗಿ ಬರಲಿಕ್ಕೆ ಉಪಾಯವಾಯಿತು. ಇದಲ್ಲದೆ ಅಂಥಾ ಮನೆಯಲ್ಲಿ ಉಳ್ಳಕೊಳ್ಳುವದರಿಂದಲೆ ನಿಯಮಾಧೀನರು ವಿಾರಲಿಕ್ಕೆ ಹೆದರುತ್ತಾ ಇದ್ದ ನಿಬಂಧನೆಗಳನ್ನು ತಾನು ಸುವಾರ್ತೆಯ ಉದ್ದಿಶ್ಯ ಅಸಡ್ಡೆ ಮಾಡುತ್ತೇನೆಂಬದಕ್ಕೆ ದೃಷ್ಟಾಂತ ಕೊಟ್ಟನು.

ಈ ಪ್ರಕಾರ ಸುವಾರ್ತೆಯು ಯೆಹೂದ ದೇಶದ ಮೇರೆಗಳ ಪರ್ಯಂತ ಬಂದಾದ ಮೇಲೆ, ದೇವರು ಮಾಡುವ ನವ ಅದ್ಭುತದಿಂದ ಯೆಹೂದರಿಗೂ ಪರಜನರಿಗೂ ಮಧ್ಯದಲ್ಲಿದ್ದ ನಡುಗೋಡೆಯನ್ನು ಕೆಡವುವದು ಅವಶ್ಯವಾಯಿತು. ಸುವಾರ್ತೆಯ ಸರ್ವಾಭಿಪ್ರಾಯವೂ, ಕ್ರಿಸ್ತನ ಸನ್ನಾಜ್ಞೆಯೂ, ಹಳ್ಳೆ ವೊಡಂಬಡಿಕೆಯ ಪ್ರವಾದನೆಯೂ, ದೇವರು ಪರಜನಾಂಗಗಳನ್ನು ಅಂಗೀಕರಿಸುವನೆಂಬ ಸಂಗತಿಯನ್ನು ಸ್ಪಷ್ಟವಾಗಿ ಸೂಚಿಸಿದ್ದವು ಸರಿ, ಮತ್ತು ಪೇತ್ರನು ತಾನೆ ೨, ೫೮. ಪಂಚಾಶತ್ತಿನ ಹಬ್ಬದಲ್ಲಿಯೆ ಅದಕ್ಕೆ ಸಾಕ್ಷಿ ಕೊಟ್ಟನು ಸಹ ಸರಿ; ಆದರೆ ಪ್ರವಾದಿಗಳು, ಯಾವಾಗಲೂ ಹಳ್ಳೆ ವೊಡಂಬಡಿಕೆಯ ಜನಾಂಗವು ಮೂಲವೆಂದು ಯೆಣಿಸಿ, ಪರಜನಾಂಗಗಳು ಯೆಹೂದರ ಸಂಬಂಧದಲ್ಲಿ ಶೇರುವದರಿಂದಲೆ ರಕ್ಷಣೇ ಪಡಕೊಳ್ಳ ಬೇಕೆಂಬ ಹಾಗೆ, ಮಾತಾಡುತ್ತಾರೆ. ಯೇಸು ತಾನೆ ಸಹಾ ಮತ್ತಾ. ೧೫, ೨೪. ಯೆಹೂದ ಜನಾಂಗದ ಪ್ರಮಾಣವನ್ನು ದಾಟಲೊಲ್ಲದವನಾಗಿ ಮಾತಾಡುತ್ತಾನೆ. ಹೀಗಾಗಿ, ಕ್ರಿಸ್ತನ ಪರಿಮುಖವಾಗಿ ನಿಯಮವು ಈಡೇರಿತೆಂಬ ತಿಳಿವಿಕೆಯು ಅಪೊಸ್ತಲರಿಗೆ ಅಷ್ಟು ವರೆಗೆ ಸ್ವಚ್ಛವಾಗಲಿಲ್ಲಾ. ಇದಲ್ಲದೆ ವಿಶ್ವಾಸದಿಂದಲೆ ನೀತಿನಿರ್ಣಯವೆಂಬ ಬೋಧನೆಯು ಮಿಕ್ಕಾದ ಸಮಸ್ತ ಕ್ರೈಸ್ತಬೋಧನೆಗಳಿಗೆ ಅಸ್ತಿವಾರವಾಗಿದೆಂಬುವದು ತೋರ ಬರ

ಲಿಲ್ಲ. ಪರಿಚ್ಛೇದನೆಯನ್ನು ಸ್ಥಾಪಿಸುವಾಗಲೆ ಉತ್ಪ. ೧೭, ೧೦. ೧೩. ಅದು ನಿತ್ಯ ವೊಡಂಬಡಿಕೆ ಯೆಂಬ ವಿಷಯದಲ್ಲಿ ದೇವರು ಅತಿ ಸ್ಪಷ್ಟವಾದ ವಾಕ್ಯಗಳನ್ನು ಹೇಳಿದನು. ಯೆಹೂದರು ಪೂರ್ಣ ನಿಯಮವು ತಬ್ದಾಭಿಪ್ರಾಯವೂ ನಿರಂತರ ಅಧಿಕಾರವೂ ಉಳ್ಳದ್ದೆಂದು ನಿಸ್ಸಂಶೆಯವಾಗಿ ನಂಬುವವರಾಗಿ ಬೆಳೆದ ಕಾರಣ, ಆತ್ಮಬೋಧಿತರಲ್ಲಿ ಉತ್ತಮರಿಗಾದರೂ ಉಪಾಧ್ಯಾಯನೋಪಾದಿಯಾದ ನಿಯಮದ ಉದ್ಯೋಗವೂ ಬಲವೂ ತತ್ಕಾಲಿಕವೆಂದು ಬೇಗ ಗ್ರಹಿಸುವದೂ, ವಿಶೇಷವಾಗಿ ಪರಜನಾಂಗಗಳಿಂದ ವಿಂಗಡವಾಗ ಬೇಕೆಂಬದಾಗಿ ಇಸ್ರಯೇಲರಿಗೆ ಬಹುಕಾಲ ವ್ಯರ್ಥವಾಗಿ ಪ್ರಸಂಗಿಸಿದ ಬಳಿಕ ಕಡೆಗೆ ಸ್ಥಾಪನೆಯಾದಂಥ ನಿಯಮಾಸಕ್ತಿಯಿಂದ ಭ್ರಾಂತ ಜನರು ಆಗ ಮಿತಿವಿಾರುವಷ್ಟು ಘಟ್ಟಿಯಾಗಿ ಸಾಧಿಸುತ್ತಾ ಬರುವಂಥಾ ಕಟ್ಟಳೆಯನ್ನು ಮನಃಪೂರ್ವಕವಾಗಿ ಬಿಡುವದೂ ಕಷ್ಟಕಾರ್ಯವಾಗಿ ಕಂಡು ಬಂದರೆ, ಬೆರಗಾಗ ಕೆಲಸವಿಲ್ಲ. ಆದ್ದರಿಂದ ಅಪೊಸ್ತಲರಲ್ಲಿ ಶ್ರೇಷ್ಠನಾದ ಪೇತ್ರನು ಈ ವಿಷಯದಲ್ಲಿ ಮೊದಲೆ ಬೋಧನೆ ಹೊಂದುವದೂ, ಮತ್ತೆ ಉಳಿದವರಲ್ಲಿಯೂ ಸೋತು ಹೋಗ ತಕ್ಕ ಹಳ್ಳೆ ಯೆಹೂದತನದ ವಿರುದ್ಧವು ಅವನಲ್ಲಿ ಪ್ರತ್ಯಕ್ಷವಾಗಿ ಖಂಡಿಸಲ್ಪಡುವದೂ ಅವಶ್ಯವಾಗಿತ್ತು. ಪೇತ್ರನು ಸ್ವಲ್ಪ ಮುಂಚೆಯೆ ಐನೇಯ ತಬೀಥರಲ್ಲಿ ನಡಸಿದ ಯೆರಡು ಮಹಾ ಅದ್ಭುತಗಳಿಂದ ಕೃಪೆಯ ಪೂರ್ಣ ಅನುಭೋಗದಲ್ಲಿ ಇರುವವನೆಂಬದಾಗಿ ಯೋಹಾ ೧೪, ೧೨. ೧೬, ೨೩. ಯೆಲ್ಲರ ಮನಸ್ಸಿಗೆ ಖಚಿತವಾದದ್ದು ಸಹಾ ಸಫಲವಾಯಿತು. ಇದಲ್ಲದೆ ಕೈಸರ್ಯೆಯವು ಪರಜನರಾದ ಸರ್ಕಾರದವರ ಅಧಿಕಾರಸ್ಥಾನವಾಗಿ ಇದ್ದದರಿಂದಲೂ, ಶತಾಧಿಪತಿಯು ಆ ಸರಕಾರದ ಘನ ಉಳ್ಳ ಸೇವಕನಾಗಿದ್ದದರಿಂದಲೂ, ನಡದ ಕಾರ್ಯಕ್ಕೆ ಲೋಕದ ದೃಷ್ಟಿಯಲ್ಲಿಯೂ ಅಭಿಮಾನ ಬರ ಕಾರಣವಾಯಿತು.

೧೦ ಸಂಧಿ.

ಕೌರ್ನೇಲ್ಯನಿಗಾದ ದರ್ಶನ. ವ: ೧—೮.

೧. ಮತ್ತು ಕೈಸರ್ಯೆಯದಲ್ಲಿ ಕೌರ್ನೇಲ್ಯನೆಂಬ ವೌಬ್ಬ ಮನುಷ್ಯನಿದ್ದನು. ಅವನು ಇತಾಲಿಕ ೧) ಯೆಂಬ ಹೆಸರುಳ್ಳ ರಾಣುವೆಯಲ್ಲಿ ಶತಾಧಿಪತಿಯೂ, ಭಕ್ತಿಯುಳ್ಳವನೂ ೨), ೨. ತನ್ನ ಯೆಲ್ಲಾ ಮನೆಯ ೩) ಸಂಗಡ ದೇವನಿಗೆ ಭಯ ಪಡುವವನೂ, ಜನರಿಗೆ ಬಹಳ ಧರ್ಮಗಳನ್ನು ಮಾಡುವವನೂ, ದೇವರನ್ನು ಯಾವಾಗಲೂ ಬೇಡಿಕೊಳ್ಳುವವನೂ, ಆಗಿದ್ದನು. ೩. ಅವನು ಹಗಲಿನ ಹೆಚ್ಚು ಕಡಿಮೆ ವೌಂಭತ್ತನೇ ೪) ತಾಸಿನಲ್ಲಿ ದೇವರ ದೂತನು ತನ್ನ ಹತ್ತರ ಪ್ರವೇಶಿಸಿ, ಕೌರ್ನೇಲ್ಯನೇ! ಯೆಂದು, ತನಗೆ ಕರೆದದ್ದನ್ನು ದರ್ಶನದಲ್ಲಿ ಪ್ರತ್ಯಕ್ಷವಾಗಿ ಕಂಡನು. ೪. ಅವನ ಮೇಲೆ ಕಂಗೊಟ್ಟು, ಭಯ ಪಟ್ಟು, ಕರ್ತನೇ, ಯೇನು? ಅಂದನು. ದೂತನು ಅವನಿಗೆ ಹೇಳಿದ್ದು, ನಿನ್ನ ಪ್ರಾರ್ಥನೆಗಳೂ, ನಿನ್ನ ಧರ್ಮಗಳೂ, ದೇವರ ಮುಂದೆ ಜ್ಞಾಪಕವಾಗಿ ಯೇರಿ ೫) ಬಂದವು. ೫. ಈಗ ಯಾಪ್ಪಕ್ಕೆ ಜನರನ್ನು ಕಳುಹಿಸಿ, ಪೇತ್ರನೆಂಬ ೬) ಸಿ

ಅಪಾ. ಕ್ರಿ. ೧೦, ೬—೮.

ಮೊನನ್ನು ಕರಿಸು. ಇವನು ತೊಗಲುಗಾರನಾದ ಸೀಮೊನನೆಂಬವನ ಸಂಗಡ ವಾಸ ಮಾಡುತ್ತಾನೆ. ೬. ಅವನ ಮನೆಯು ಸಮುದ್ರದ ಬಳಿಯಲ್ಲಿ ಅದೆ. ಅವನು, ನೀನು ಮಾಡ ಬೇಕಾದದ್ದೇನೆಂದು, ನಿನಗೆ ಹೇಳುವನು. ೭. ಕೊರ್ನೇಲ್ಯನ ಸಂಗಡ ಮಾತಾಡಿದ ದೂತನು ಹೊರಟು ಹೋದಾಗ, ೮. ಅವನು ತನ್ನ ಮನೇ ಚಾಕರಿಯವರಲ್ಲಿ ಇಬ್ಬರನ್ನೂ, ತನ್ನ ಬಳಿಯಲ್ಲಿ ಕಾದು ಕೊಂಡಿದ್ದ ೨) ರಾಣುವೆಯವರಲ್ಲಿ ಯೌಬ್ಬ ಭಕ್ತಿಯುಳ್ಳವನನೂ, ಕರೆದು, ಅವರಿಗೆ ಯೆಲ್ಲವನ್ನು ತಿಳಿಸಿ ೯), ಅವರನ್ನು ಯೊಪ್ಪಕ್ಕೆ ಕಳುಹಿಸಿದನು.

೧. ಈ ಇತಾಲಿಕ ಯೆಂಬ ರಾಣುವೆಯು ಕಾಯಿಟೆಯ ಕಾವಲಿಗೂ ಅಧಿಪತಿಯ ಮೈಗಾವಲಿಗೂ ಅಲ್ಲಿತ್ತು.

೨. ಆದರೂ, ಅವನು ಪರಿಚ್ಛೇದನೆ ಪಡಕಾಳ್ಳದೆ ಇದ್ದ ಕಾರಣ, ನೇಮನಿಷ್ಠಾಸಕ್ತರಾದ ಯೆಹೂದರು ಅವನ ಸಹವಾಸದಲ್ಲಿ ಶೇರಲಿಲ್ಲಾ, ೧೧, ೩. ಅವನು ಮತದ್ವಾರಶೇರಿದವನಂನಿಸಿ ಕಾಂಡು, ವಿಗ್ರಹಾರಾಧನೆಯನ್ನು ಬಿಟ್ಟು, ಸತ್ಯ ದೇವರನ್ನು ಆರಾಧಿಸುವವನಾಗಿದ್ದನು. ಆದಾಗ್ಯೂ ಪರಿಚ್ಛೇದನೆ ಮುಂತಾದ ಯೆಹೂದ ನೇಮದ ಆಚರಣೆಗಳಂನು ಕೈಕಾಳ್ಳಲಿಲ್ಲಾ.

೪. ಈ ಪರಜನಾಂಗದವನ ಮನೆಯವರೆಲ್ಲರು ಭಕ್ತರಾಗಿದ್ದರೆಂಬದನ್ನು ನೀತಿ, ಯೆಷ್ಟೀ ಕ್ರೈಸ್ತರು ನಾಚಿಕೆ ಪಡ ತಕ್ಕದ್ದು!

೪. ನಾಲ್ಕು ದಿನ ಉಪವಾಸ ಮಾಡಿ, ತಂನನ್ನು ಸಿದ್ಧ ಮಾಡಿ ಕಾಂಡ ಮೇಲೆ, ವ. ೩೦.

೫. ದೇವರಿಗೆ ಸಮರ್ಪಕವಾಗಿರುವ ಬಲಿಯಿಂದ ಯೇರುವ ಪ್ರಾಣಿಯಂತೆ; ದೇವರು ಅಧಿಕ ಜ್ಞಾನ ಕ್ಕಾಗೇಸ್ಕರ ನೀನು ಮಾಡಿದ ಪ್ರಾರ್ಥನೆಯನ್ನೂ, ನಿನ್ನ ಧರ್ಮಗಳನ್ನೂ ಕಟಾಕ್ಷದಿಂದ ನೋಡಿದ್ದಾನೆ. ಆದಾಗ್ಯೂ ದೇವರ ಕೃಪೆಯನ್ನು ಕ್ರಿಯೆಗಳಿಂದ ದುಡಿಯ ಬಹುದೆಂಬ ಪ್ರಾಣಗಲ್ಲಾ. ಈ ವಿಶ್ವಾಸವೂ, ಸಂಪತ್ತನ್ನು ಸಂತೋಷದಿಂದ ಧರ್ಮವಾಗಿ ಕಾಡುವ ಉದಾರತ್ವವೂ ತಾವೆ ಮುಂಪರಿಯುವ ದೇವರ ಕೃಪೆಯ ಫಲಗಳಾಗಿರುತ್ತವೆ.

೬. ಕ್ರಿಸ್ತನು ಪೌಲನಿಗೆ ಅನನೀಯನಿಂದ ಪ್ರಾಣಗಾ, ಪ್ರಾಣಗೆಯೆ ದೂತನು ಕಾರ್ನೇಲ್ಯನಿಗೆ ಪೇತ್ರನಿಂದ ಕ್ರಮಪ್ರಕಾರ ಮುಂದಿನ ಮಾರ್ಗವನ್ನು ತಿಳುಕಾಳ್ಳಲಿಕ್ಕೆ ಅಪ್ಪಣೆ ಕಾಟ್ಟನು. ಪೇತ್ರನು ತಂನಂನು ಕರಿಸಿದ ಕಾರ್ನೇಲ್ಯನ ಬಳಿಗೆ ಪ್ರಾಣದದ್ದು, ಕಾರ್ನೇಲ್ಯನು ಯೆಹೂದ ಧರ್ಮಕ್ಕಲ್ಲ, ದೇವರ ರಾಜ್ಯವು ಪರಜನಾಂಗಕ್ಕೆ ತಿರುಗ ಬೇಕೆಂಬದಕ್ಕೆ ಅಧಿಕ ಸ್ಪಷ್ಟವಾದ ಗುರ್ತಾಗಿತ್ತು.

೭. ಇವರು ಅವನ ಸೇವಕರಾಗಿದ್ದರು. ಭಕ್ತಿಯುಳ್ಳ ಯಜಮಾನನಿಗೆ ಭಕ್ತಿಯುಳ್ಳ ಸೇವಕರು ಸಹಾಯರುತ್ತಾರೆ.

೮. ಅವರಿಗೆ ಸಹಾಯದರರಿಗೆಂದು ಯೆಲ್ಲಾ ತಿಳಿಸಿದನು. ಅವನಿಗೂ ಸೇವಕರಿಗೂ ಇಂಥಾ ಸಲಿಗೆ ಇತ್ತು. ಇಷ್ಟು ವರೆಗೆ ಮನೆತನವನ್ನು ಭಕ್ತಿಯಿಂದ ನಡಸಿದ ಕಾರಣ, ಈ ಕಾಲದಲ್ಲಿ ಇಂಥಾ ಕೆಲಸದಲ್ಲಿ ನಂಬಿಗಸ್ಥರಾದ ಜನರು ಅವನಿಗೆ ದೊರಕಿದರು. ದೇವಭೀತಿ ಇರುವ ಮನೆಯಲ್ಲಿ ಯೆಷ್ಟೀ ಯುಕ್ತವಾದ ಪರಸ್ಪರ ಸ್ನೇಹದ ಬಳಿಕೆ ಹುಟ್ಟುತ್ತದೆ! ತನ್ನ ಮನೆಯನ್ನು ದೈವಿಕವಾಗಿ ನಡಸುವ ಯಜಮಾನನಷ್ಟು ಮಾನವನ್ನೂ ಪ್ರೀತಿಯನ್ನೂ ಮಹಾ ಧನವುಳ್ಳ ಧಾರೆಯಾದರೂ ಮನೆಯವರಿಂದ ಪಡಕಾಳ್ಳಲಾರ.

ಅಪಾ. ಕ್ರಿ. ೧೦, ೯—೧೬.

ಪೇತ್ರನಿಗಾದ ದರ್ಶನ. ವ. ೯—೧೬.

೯. ಮಾರನೇ ದಿವಸ ಅವರು ಪ್ರಯಾಣವಾಗಿ ಪಟ್ಟಕ್ಕೆ ಸಮೀಪಿಸಿದಾಗ, ಪೇತ್ರನು ಹೆಚ್ಚು ಕಡಿಮೆ ಆರನೇ ತಾಸಿನಲ್ಲಿ ಪ್ರಾರ್ಥನೆ ಮಾಡುವದಕ್ಕಾಗಿ ಮಾಳಿಗೆಗೆ ೧) ಯೇರಿದನು. ೧೦. ಆದರೆ ಅವನು ಬಹಳವಾಗಿ ಹಸಿದು, ಊಟ ಮಾಡ ಬೇಕೆಂದಿದ್ದನು. ೧೧. ಅವರು ಸಿದ್ಧ ಮಾಡುತ್ತಿರುವಾಗ್ಗೆ ಅವನು ಪರವಶವಾಗಿ, ಆಕಾಶವು ತೆರೆದಿರುವದನ್ನೂ, ನಾಲ್ಕು ಕಾನೆ ಕಟ್ಟಿದ ದಾಡ್ಡ ದುಪ್ಪಟ್ಟಿಯ ಹಾಗಿರುವಂಥ, ಭೂಮಿಯ ಮೇಲೆ ಇಳಿಸಲ್ಪಡುವಂಥ, ವಸ್ತುವು ತನ್ನ ಕಡೆಗೆ ಇಳಿದು ಬರುವದನ್ನೂ, ನೋಡಿದನು. ೧೨. ಅದರೊಳಗೆ ಭೂಮಿಯ ಸಕಲ ಚತುಷ್ಪಾದಗಳೂ ೨), ಮೃಗಗಳೂ, ಕ್ರಿಮಿಗಳೂ, ಆಕಾಶದ ಪಕ್ಷಿಗಳೂ ಇದ್ದವು. ೧೩. ಮತ್ತು, ಪೇತ್ರನೇ, ಯೆದ್ದು, ಕಾಯಿದು, ತಿನ್ನು, ಯೆಂಬ ಶಬ್ದವು ಅವನಿಗಾಯಿತು. ೧೪. ಆದರೆ ಪೇತ್ರನು, ಕರ್ತನೇ, ಬೇಡವೇ ಬೇಡ ೩). ನಾನು ಯೆಂದೂ ಹೊಲೆಯಾದದ್ದೂ ಅಶುದ್ಧವಾದದ್ದೂ ಯೇನಾದರೂ ತಿನ್ನಲಿಲ್ಲ, ಅಂದನು. ೧೫. ಮತ್ತು ಶಬ್ದವು ತಿರಿಗಿ ಯೆರಡನೇ ಸಾರಿ, ದೇವರು ಶುದ್ಧ ಮಾಡಿದ್ದನ್ನು ೪) ನೀನು ಹೊಲೆ ೫) ಅನ್ನ ಬೇಡ, ಯೆಂದು ಅವನಿಗೆ ಹೇಳಿತು. ೧೬. ಇದು ಮೂರು ಸಾರಿ ೬) ಆಯಿತು. ತರುವಾಯ ಆ ವಸ್ತು ತಿರಿಗಿ ಆಕಾಶಕ್ಕೆ ಯೆತ್ತಲ್ಪಟ್ಟಿತು.

೧. ಪ್ರಾಗಂದರೆ, ಮನೆಯ ಬಾಳ್ಮಾಳಿಗೆಗೆ. ಅಲ್ಲಿಂದ ಮೇಲೆ ಆಕಾಶವೂ ಇತ್ತ ಕಡೆಯಲ್ಲಿ ಸಮುದ್ರವೂ ಕಾಣ ಬಂತು.

೨. ದೇವರು ಪೇತ್ರನ ಸ್ಥಿತಿಗೆ ಅನುಸಾರವಾದ ಆಕೃತಿಯುಳ್ಳ ದರ್ಶನವನ್ನು ಅವನಿಗೆ ತೋರಿಸಿದನು. ಪೇತ್ರನು ಶರೀರದ ಪ್ರಕಾರ ಪಾಸಿದು ಉಣ್ಣಲಿಚ್ಛೈಸಿದನು; ಆತ್ಮದ ಪ್ರಕಾರ ಪಾಸಿದು ಸುವಾರ್ತೆಯ ವಿಸ್ತರಣೆಗಾಗಿ ಪ್ರಾರ್ಥನೆ ಮಾಡಿದನೆಂದು ಊಹಿಸ ತಕ್ಕದ್ದು.

೩. ಯೆಹೂದ ಜಾತಿಯ ಅಲೌಕಿಕತೆಯಿಂದ, ಕರ್ತನ ಅಪ್ಪಣೆಗೆ ಸಪ್ರಾ ಯೆದುರು ನಿಲ್ಲುತ್ತಾನೆ. ಪೇತ್ರನ ಹೃದಯದಲ್ಲಿದ್ದ ವಿಂಗಡವಾಗಿರ ಬೇಕೆಂಬ ಯೆಹೂದ ಜಾತಿಯ ಜಾವನೆ ಚನ್ನಾಗಿ ವಾಸಿಯಾಗುವ ಪ್ರಾಗೆ, ಅದು ಮುಂಚೆ ಪ್ರತ್ಯಕ್ಷವಾಗುವದು ಅವಶ್ಯವಾಗಿತ್ತು.

೪. ಪರಲೋಕದಿಂದ ಇಳಿಯ ಮಾಡಿದರಿಂದ, ದೇವರು ಅದು ಶುದ್ಧವೆಂದಂದ ಪ್ರಾಗಾಯಿತು.

೫. ಈ ಮಾತಿನಿಂದ, ಅವನು ಪರಜನಾಂಗಗಳ ಸಮಸ್ತ ಆಪ್ರಾರಗಳನ್ನು ತಕ್ಕಾಳ್ಳ ಬಹುದೆಂದೂ, ಯೆಹೂದರ ಆಪ್ರಾರನಿಬಂಧನೆಗಳೂ ವಿಂಗಡವಾಗಿರ ಬೇಕೆಂಬ ನ್ಯಾಯವೂ ಕಳದು ಪ್ರಾಣದ್ದನ್ನು ತಿಳಕಾಳ್ಳ ಬೇಕಾದದ್ದಲ್ಲದೆ, ಯೆಹೂದರು ಇಷ್ಟು ವರೆಗೆ ಅಶುದ್ಧ ಮೃಗಗಳಂತೆ ಯೆಣಿಸಿದ ಪರಜನರು ತಾವೆ ಶುದ್ಧರಾಗಿದ್ದಾರೆಂದೂ ವ. ೪೮. ಗ್ರಹಿಸ ಬೇಕೆಂಬದು ದೇವರ ಮನಸ್ಸಾಗಿತ್ತು.

೬. ಅವನಿಗೆ ಚನ್ನಾಗಿ ಖಚಿತವಾಗುವ ಪ್ರಾಗೆಯೂ, ಅವನಲ್ಲಿದ್ದ ಸಂಶಯವೆಲ್ಲಾ ಪ್ರಾಣಾಗುವ ಪ್ರಾಗೆಯೂ, ಅದು ಮೂರು ಸರ್ತಿ ಆಯಿತು.

ಅಪೌ. ಕ್ರಿ. ೧೦, ೧೭—೨೪.

ಕೈಸರ್ಯೈಯಕ್ಕೆ ಪ್ರೇತ್ರನ ಪ್ರಯಾಣ. ವ. ೧೭—೨೩.

೧೭. ತಾನು ಕಂಡ ನ್ಯಾಟವು ಯೇನೆಂದು ೧), ಪ್ರೇತ್ರನು ತನ್ನಲ್ಲಿ ಅನುಮಾನ ೨) ಪಡುತ್ತಿರುವಾಗ, ಇಗೋ, ಕೌರ್ನೇಲ್ಯನ ಕಡೆಯಿಂದ ಕಳುಹಿಸಲ್ಪಟ್ಟ ಜನರು ಸೀ ಮೋನನ ಮನೆಯಂನು ವಿಚಾರಿಸಿ, ೧೪. ಬಾಗಲಿನ ಬಳಿಯಲ್ಲಿ ನಿಂತು ಕೂಂಡು, ಕೂಗಿ, ಪ್ರೇತ್ರನೆಂಬ ಸೀಮೋನನು ಇಲ್ಲಿ ವಾಸವಾಗಿದ್ದಾನೌ? ಯೆಂದು ವಿಚಾರಿಸಿ ದರು. ೧೮. ಈದರೆ ಪ್ರೇತ್ರನು ಈ ದರ್ಶನವಂನು ಆಲೌಚಿಸುವಾಗ, ಆತ್ಮವು ಅವನಿಗೆ, ಇಗೌ, ಮೂರು ಜನರು ನಿಂನನ್ನು ಹುಡುಕುತ್ತಾರೆ; ೨೦. ಆದದರಿಂದ ನೀನು ಯೆದ್ದು, ಇಳಿದು, ಯೇನೂ ಸಂದೇಹ ೩) ಪಡದೆ, ಅವರ ಸಂಗಡ ಹೌಗು; ಯಾಕಂದರೆ ನಾನು ಅವರಂನು ಕಳುಹಿಸಿದ್ದೇನೆಂದು ಹೇಳಿತು. ೨೧. ಈಗ ಪ್ರೇತ್ರನು ಕೌರ್ನೇಲ್ಯನ ಬಳಿಯಿಂದ ತಂನ ಬಳಿಗೆ ಕಳುಹಿಸಲ್ಪಟ್ಟ ಜನರ ಹತ್ತರ ಇಳಿದು ಹೌಗಿ, ಇಗೌ, ನೀವು ಹುಡುಕುವವನು ನಾನೇ; ನೀವು ಬಂದ ಕಾರಣವೇನು? ಅಂದನು. ೨೨. ಅವರು ಶತಾಧಿಪತಿಯೂ, ನೀತಿವಂತ ಮನುಷ್ಯನೂ, ದೇವರಿಗೆ ಭಯ ಪಡುವವನೂ ೪), ಯೆಹೂದ್ಯರ ಸಮಸ್ತ ಜನರಿಂದ ಸಾಕ್ಷಿ ಗೌಂಡವನೂ, ಆಗಿರುವ ಕೌರ್ನೇಲ್ಯನು ನಿನ್ನನ್ನು ತಂನ ಮನೆಗೆ ಕರೇ ಕಳುಹಿಸಿ, ನಿಂನಿಂದ ವಾಕ್ಯ ಗಳಂನು ಕೇಳ ಬೇಕೆಂದು, ಪರಿಶುದ್ಧ ದೂತನಿಂದ ಅಪ್ಪಣೆ ಹೌಂದಿದನು, ಅಂದರು. ೨೩. ಆಗಲವನು ಅವರಂನು ವೌಳಗೆ ಕರೆದು, ಉಪಚರಿಸಿದನು. ೨೪. ಮಾರಣೆ ದಿವಸ ಪ್ರೇತ್ರನು ಅವರ ಸಂಗಡ ಹೌರಟನು. ಮತ್ತು ಯಾಪ್ಪದವರಾದ ಸಹೌದರರಲ್ಲಿ ೫) ಕೆಲವರು ಅವನ ಸಂಗಡ ಹೌದರು.

೧. ವಾಳಗಿನ ಮನಾವಿಚಾರಗಳೂ ಪೂರ್ವಾಗಿನ ಕಾರ್ಯಗಳೂ ವಾಂದಕ್ಕಾಂದು ಸಮ ಬಿದ್ದವು.

೨. ಅಪೌಸ್ತಲನಲ್ಲಿ ಸಪೂರ್ಣ ದೇವರ ಚಿತ್ತವೇ ನೆಂದು ಬೇಗ ನಿಶ್ಚಯವಾಗಲಿಲ್ಲಾ. ಅವನು ಚನ್ನಾಗಿ ಆಲೌಚಿಸಿ, ದಿವ್ಯ ಅಭಿಪ್ರಾಯವನ್ನು ತಿಳಕಾಳ್ಳುವ ಪೂರ್ವಾಗೆ, ದೇವರು ಅವನನ್ನು ಸ್ವಲ್ಪಕಾಲ ಕತ್ತಲೆಯಲ್ಲಿ ಇರ ಬಿಟ್ಟನು.

೩. ಅನ್ಯಥಾ ಉತ್ಪೇಗಿಯಾಗಿರುವ ಪೇತ್ರನು ಈ ಸರ್ತಿ ಅತಿರೇಕ ಸಂದೇಹಗಳಿಂದ ಬಿಡುಗಡೆಯಾಗಲು ಪಶ್ಯವಾಯಿತು. ಮನುಷ್ಯನು ಯೆಷ್ಟು ಬೇಗ ವಾಂದು ಅತಿರೇಕದಿಂದ ಮತ್ತೌಂದು ಅತಿರೇಕಕ್ಕೆ ಮನ ವಾಡ್ದುತ್ತಾನೆ!

೪. ಆತ್ಮವು ಯೆಲ್ಲಾ ಮುಂಚೆಯೆ ಸಿದ್ಧ ಮಾಡಿ ಯದೆ ಯೆಂಬದನ್ನು ಅವರು ತಿಳಿಯದೆ ಇದ್ದ ಕಾರಣ, ಪೇತ್ರನನ್ನು ಸಮ್ಮತಿ ಪಡಿಸುವ ಬಗೈ, ಕೌರ್ನೇಲ್ಯನ ನಾನಾ ಸುಗುಣಗಳನ್ನು ಪೇಳ ತಾಡಗಿದರು. ಮತ್ತೆ ಪೇತ್ರನು ಅವರಿಗೆ ಸ್ನೇಪಚಾಪದಿಂದ ಕಿವಿ ಕಾಡುವ ದಲ್ಲದೆ, ಮನೆಯಲ್ಲಿ ಶೇರಿಸಿ ಕಾಂಡು ಆತಿಥ್ಯ ಸಪೂರ್ಣ ಮಾಡುವದನ್ನು ನೋಡುವಾಗೈ, ಚಾರಿತ್ರವೆಂದನ್ನ ಬೇಕಾಯಿತು.

೫. ೧೧, ೧೨. ನೋಡಿದರೆ, ಸಂಗಡ ಪೂರ್ವಾ ದವರು ಆರು ಮಂದಿ ಯೆಂತಾ ತೋರುತ್ತದೆ. ಅ ವರು ಮುಖ್ಯವಾಗಿ ಪೇತ್ರನ ಪ್ರೀತಿಯಿಂದಲೂ, ದೇ ವರು ಪರಜನರಲ್ಲಿ ಯೇನು ಮಾಡುತ್ತಾನೆಂಬದಂನು

ನ್ಮಾಡ ಬೇಕೆಂಬ ಅಭಿಲಾಷೆಯಿಂದಲೂ ಪುನ್ಮಾದರೂ, ಪೇತ್ರನಿಗೆ ಈ ಸಾಕ್ಷಿಗಳು ಇದ್ದದ್ದು ಯೆಷ್ಟು ವಾಳ್ಳೇದಾಗಿತ್ತೆಂಬದು ತರುವಾಯ ಪ್ರಕಟವಾಯಿತು.

ಕೈಸರ್ಯೆಯದಲ್ಲಿ ಪ್ಯೇತ್ರನಿಗಾದ ಸ್ವಾಗತ. ವ. ೨೪—೫೫.

೨೪. ಮಾರನೆ ದಿವಸ ೧) ಕೈಸರ್ಯೆಯಕ್ಕೆ ಶ್ಯೇರಿದರು. ಆಗ ಕಾರ್ನೆಲ್ಯನು ತನ ನೆಂಟರಂನೂ ೨), ಆಪ್ತ ಸ್ನೇಹಿತರಂನೂ ಕೂಡ ಕರಿಸಿ, ಅವರಂನು ಯೆದುರು ನ್ಮಾಡ್ತುತ್ತಿದ್ದನು ೩). ೨೫. ಪ್ಯೇತ್ರನು ವಾಳ್ಳಗೆ ಬರಲಾಗಿ, ಕಾರ್ನೆಲ್ಯನು ಅವನಂನು ಯೆದುರುಗಾಂಡು, ಅವನ ಪಾದಗಳ ಮುಂದೆ ಬಿದ್ದು, ನಮಸ್ಕರಿಸಿದನು ೪). ೨೬. ಆದರೆ ಪ್ಯೇತ್ರನು, ಯೇಳು, ನಾನೂ ಮನುಷ್ಯನಾಗಿದ್ದೇನೆಂದು ೫) ಹ್ಯೇಳಿ, ಅವನಂನು ಯೆತ್ತಿದನು. ೨೭. ಮತ್ತು ಅವನ ಸಂಗಡ ಮಾತಾಡುತ್ತಾ ವಾಳ್ಳಗೆ ಬಂದು ೬), ಕೂಡ ಬಂದಿರುವ ಅನ್ಯೇಕರಂನು ನ್ಮಾಡಿ, ಅವರಿಗೆ ಹ್ಯೇಳಿದ್ದೇನಂದರೆ, ೨೮. ಅನ್ಯ ಜಾತಿಯವನಂನು ಕೂಡಿ ಕಾಳ್ಳುವದೂ ಮುಟ್ಟುವದೂ ಯೆಹೂದ್ಯನಾದ ಮನುಷ್ಯನಿಗೆ ನ್ಯಾಯವಲ್ಲವೆಂದು ೭), ನೀವು ಬಲ್ಲಿರಿ. ಆದರೆ, ಯಾವ ಮನುಷ್ಯನಂನಾದರೂ ಹಾಲೆಯನೂ ಅಶುದ್ಧನೂ ಯೆಂದು ಹ್ಯೇಳ ಬಾರದೆಂಬದಾಗಿ, ದ್ಯೇವರು ನನಗೆ ತ್ಯೋರಿಸಿದ್ದಾನೆ.

೧. ಪುನಾಗಂದರೆ ಕೈಸರ್ಯೆಯದಿಂದ ಪುನಾರಟು ಪುನ್ಮಾದ ಮೂರು ದಿನದ ಮೇಲೆ.

೨. ವಾಳ್ಳೆಯವರ ಅಥವಾ ಕೆಟ್ಟವರ ಸಂಬಂಧದಿಂದಲೂ ಪರಿಚಿತಿಯಿಂದಲೂ ಅಕಸ್ಮಾತ್ತಾಗಿ ಯೆಷ್ಟಾ ಸರ್ತಿ ಗುಣ ಇಲ್ಲವೆ ಅವಗುಣ ಆಗುತ್ತದೆ. ಆದ್ದರಿಂದ ಸಮಯ ಬರಲು, ನಿನ್ನನ್ನು ಯಾರಾದರೂ ಕರದು ಸಂಗಡ ತಕ್ಕಾಂಡು ಪುನಾಗುವದಾದರೆ, ಲಿಂಜಾರ ಬೇಡ; ಮತ್ತು ನೀನು ಸಪುನಾ ಆಗುವಷ್ಟು ಸರ್ತಿ ಪರರನ್ನು ಕರ್ತನ ಬಳಿಗೆ ಕರಕಾಂಡು ಪುನಾಗುವದಕ್ಕೆ ಪ್ರಯತ್ನ ಮಾಡು.

೩. ಈ ಸಮಯವೆಲ್ಲಾ ಅವನು ಬೇರೇನೂ ಆಲ್ಯೋಚಿಸಲಿಲ್ಲಾ.

೪. ಪರಜನರ ಮನ್ಯೋಚಿತವಾದ ಪ್ರಕಾರ ಅವನು, ಪೇತ್ರನು ಬರೇ ಮನುಷ್ಯನಲ್ಲವೆಂತ ಯೆಣಿಸಿ, ಉದ್ದಂಡ ನಮಸ್ಕಾರ ಮಾಡಿದನು.

೫. ನಂಮ ಕಾಲದಲ್ಲಿ ಅವನ ಉತ್ತರಾಧಿಕಾರಿಯನ್ನಿಸಿ ಕಾಳ್ಳುವ ಪಾಪನು ತಕ್ಕಾಳ್ಳುವ ಮಾನವಂನು ಪೇತ್ರನು ತಕ್ಕಾಳ್ಳದೆ ಪುನ್ಮಾದ್ದರಿಂದ, ರ್ಯೋಮಾಯ ಸಭೆಯವರು ಅವನಿಗೂ ಬೇರೆ ಪರಿಶುದ್ಧರಿಗೂ ಮರಣಾನಂತರ ಮಾಡುವ ಆರಾಧನೆ ಅವನಿಗೆ ಯೆಷ್ಟಾ ಅಸಪ್ಪುವಾಗಿದೆಂದು ಯೆಣಿಸ ಬೇಕಲ್ಲಾ!

೬. ಮನೆಯಲ್ಲಿ ಬಂದು ಮುಟ್ಟಿದ ಕೂಡಲೆ, ವ. ೨೫. ಕಾರ್ನೆಲ್ಯನು ಅವನನ್ನು ಸ್ವೀಕರಿಸಿದ ಮೇಲೆ, ಸ್ನೇಹಭಾವದ ಸಂಭಾಷಣೆ ಮಾಡುತ್ತಾ, ಅವನ ಸಂಗಡ ಕ್ಯಾಣಿಗೆ ಪುನ್ಮಾದನು.

೭. ಯೆಹೂದ ವ್ಯಾಖ್ಯಾನಿಗಳು ಲೇವಿಕ. ೭, ೨—೬. ೨೩, ೩—೬ಕ್ಕೆ ಅಷ್ಟು ವಿಪರೀತ ಅರ್ಥ ಮಾಡಿದ್ದರು. ದೇವರು ಇಸ್ರಯೇಲ ಜನರಿಗೆ ಕಾನನ್ ದೇಶದವರ ಸಂಗಡ ಕೂಡಿಕಾಂಡು ವಿಗ್ರಹಾರಾಧನೆಯಲ್ಲಿ ಬೀಳ ಬಾರದೆಂತ ಕಾಟ್ಟಿ ಅಪ್ಪಣೆಗೆ ಯೆಂಥಾ ಅರ್ಥ ಮಾಡಿ ಬಿಟ್ಟಿರು! ಆದಾಗ್ಯೂ ಈ ಮೇರೆಯನ್ನು ಕಡಿಯುವದಕ್ಕೆ ಅನಾಧಾರಣವಾದ ದೈವಪ್ರಕಟಣೆಯು ಅವಶ್ಯವಾಗಿತ್ತು.

ಅಪೌ. ಚ. ೧. ಪರಿಚ್ಛೇದ. ಪಲೆಸ್ತೀನದ ಸಭೆ.

ಅಪೌ. ಕ್ರಿ. ೧೦, ೫೦—೪೧.

ವ. ೫೦—೫೫. ಕೊರ್ನೇಲ್ಯನು, ತಾನು ನಾಲ್ಕು ದಿವಸ ಪರ್ಯಂತ (ಯೆಹೂದರ ಪ್ರಾರ್ಥನೆಯು ತಾನಾಗಿರುವ) ಮಧ್ಯಾನ್ಹದ ಮೇಲೆ ಮೂರು ಘಂಟೆ ವರೆಗೆ ಉಪವಾಸ ಮಾಡಿದ್ದನ್ನೂ, ಹೃದಯಪೂರ್ವಕವಾದ ಪ್ರಾರ್ಥನೆ ಉಪವಾಸಗಳಿಗೆ ಪ್ರತ್ಯುತ್ತರವಾಗಿ ಆ ಕಾಲದಲ್ಲಿ ದೂತದರ್ಶನವಾದ್ದನ್ನೂ, ಪೇತ್ರನನ್ನು ಕರಿಸುವದಕ್ಕೆ ದೂತನು ಕೊಟ್ಟ ಅಪ್ಪಣೆಯನ್ನೂ ತಿಳಿಸಿ, ಕಡೆಯಲ್ಲಿ ಹೇಳಿದ್ದೇನಂದರೆ:

೫೫. ಹೀಗಿರಲಾಗಿ ನಿಂಗಡಲ್ಕೆ ನಿನ್ನ ಬಳಿಗೆ ಕಳುಹಿಸಿದೆನು; ಮತ್ತು ನೀನು ಬಂದದ್ದು ವಾಳ್ಕೆಯಾಯಿತು. ಆದದರಿಂದ ಇಗ ದೇವರಿಂದ ನಿನಗೆ ಆಜ್ಞಾಪಿಸಲ್ಪಟ್ಟವುಗಳನ್ನೆಲ್ಲಾ ಕೇಳುವದಕ್ಕೆ ನಾವೆಲ್ಲರು ದೇವರ ಮುಂದೆ ಇಲ್ಲಿ ಇದ್ದೇವೆ.

ಬೋಧಕರಿಗೂ ಕೇಳುವವರಿಗೂ ಇದು ತಕ್ಕ ಮನೋಭಾವನೆಯು. ಬೋಧಕರು ತಮಗೆ ದೇವರು ಅಪ್ಪಣೆ ಕೊಟ್ಟದ್ದಲ್ಲದೆ ಬೇರೇನೂ ಹೇಳ ಬಾರದು; ಆದರೆ ಕೇಳುವವರು ಪ್ರಸಂಗವನ್ನು ಮನಸ್ಸು ಬಂದ ಹಾಗೆ ಅಲ್ಪ ಸ್ವಲ್ಪ ಮಾತ್ರವಲ್ಲ, ಅದನ್ನೆಲ್ಲಾ ದೇವರ ಅಪ್ಪಣೆ ಯೆಂದು ಇದ್ದ ಹಾಗೆ ತೆಕ್ಕೊಳ್ಳಬೇಕು.

ಕೈಸರೈಯದಲ್ಲಿ ಪೇತ್ರನ ಭಾಷಣ. ವ. ೫೪—೪೩.

೫೪. ಆಗ ಪೇತ್ರನು ಬಾಯಿ ತೆರೆದು, ಹೇಳಿದ್ದೇನಂದರೆ, ದೇವರು ಮುಖದಾಕ್ಷಿಣ್ಯ ನ್ಯಾಯಮಾಡುವವನಲ್ಲವೆಂದೂ ೧), ೫೫. ಸಕಲ ಜನಾಂಗಗಳಲ್ಲಿ ಅವನಿಗೆ ಭಯಪಟ್ಟು, ನೀತಿಯನ್ನು ನಡಿಸುವವನು ಅವನಿಗೆ ಸಮರ್ಪಕವಾಗಿದ್ದಾನೆಂದೂ ೨), ನಿಶ್ಚಯವಾಗಿ ೩) ಗ್ರಹಿಸುತ್ತೇನೆ. ೫೬. ಅವನು ಎಲ್ಲರ ಕರ್ತನಾಗಿರುವ ಯೇಸು ಕ್ರಿಸ್ತನ ಮುಖಾಂತರವಾಗಿ ಸಮಾಧಾನವನ್ನು ೪) ಪ್ರಸಂಗಿಸಿ, ಇಸ್ರಾಯೇಲನ ಮಕ್ಕಳಿಗೆ ಕಳುಹಿಸಿದ ವಾಕ್ಯವನ್ನು ನೀವು ಬಲ್ಲಿರಿ ೫). ೫೭. ಈ ವಾಕ್ಯವು ಯೋಹಾನನು ಸಾರಿದ ಸ್ನಾನದ ಶರುವಾಯ ಗಲಿಲಾಯದಿಂದ ಆರಂಭವಾಗಿ, ಸಮಸ್ತ ಯೆಹೂದಕ್ಕೆ ಆಯಿತು; ೫೮. ಅದೇನಂದರೆ, ನಜರೇತಿನವನಾದ ಯೇಸುವನ್ನು ದೇವರು ಪರಿಶುದ್ಧಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು ೬). ಅವನ ಸಂಗಡ ದೇವರು ಇದ್ದದರಿಂದ, ಅವನು ಉಪಕಾರ ಮಾಡುತ್ತಾ, ಪಿಶಾಚನಿಂದ ಬಲಾತ್ಕಾರ ಪಟ್ಟವರೆಲ್ಲರನ್ನು ೭) ಸ್ವಸ್ಥ ಮಾಡುತ್ತಾ, ಸಂಚರಿಸಿದನೆಂಬುವದೇ ೮). ೫೯. ಅವನು ಯೆಹೂದ್ಯರ ದೇಶದಲ್ಲಿಯೂ ಯೆರೂಸಲೇಮಿನಲ್ಲಿಯೂ ಮಾಡಿದವುಗಳಿಗೆಲ್ಲಾ ನಾವು ಸಾಕ್ಷಿಗಳಾಗಿದ್ದೇವೆ. ೬೦. ಅವನನ್ನು ಮರದ ಮೇಲೆ ತೂಗ ಹಾಕಿ, ಕೊಂದು ಬಿಟ್ಟರು. ಅವನನ್ನು ದೇವರು ಮೂರನೇ ದಿವಸದಲ್ಲಿ ಎಬ್ಬಿಸಿ, ಪ್ರತ್ಯಕ್ಷವಾಗ ಮಾಡಿದನು. ೬೧. ಸಮಸ್ತ ಜನರಿಗೆ ಅಲ್ಲ, ಮುಂಚೆ ದೇವರಿಂದ ಅದು ನೇಮಿಸಲ್ಪಟ್ಟು, ಅವನು

ಅಪಾ. ಕ್ರಿ. ೧೦, ೪೨. ೪೩.

ಸತ್ಯವರಾಳಗಿಂದ ಯೆದ್ದ ಮ್ಯೋಲೆ ಅವನ ಸಂಗಡ ಉಂಡು ಕುಡಿದ ಸಾಕ್ಷಿಗಳಾದ ನಮಗೆ ಮಾತ್ರವ್ಯೇ. ೪೨. ಮತ್ತು ಅವನ್ಯೇ ಬದುಕುವವರಿಗೂ ೫) ಸತ್ತವರಿಗೂ ದ್ಯೇವರಿಂದ ನ್ಯೇಮಿಸಲ್ಪಟ್ಟ ನ್ಯಾಯಾಧಿಪತಿಯಾಗಿದ್ದಾನೆಂದು ಸಾಕ್ಷಿ ಕೊಟ್ಟು, ಜನರಿಗೆ ಸಾರ ಬ್ಯೇಕೆಂದು, ನಮಗೆ ಅಪ್ಪಣೆ ಕೊಟ್ಟಿದ್ದಾನೆ. ೪೩. ಅವನ ಹೆಸರಿನಿಂದ ಅವನಲ್ಲಿ ವಿಶ್ವಾಸವಿಡುವವರೆಲ್ಲರು ಪಾಪ ಪರಿಹಾರವನ್ನು ಹೊಂದುತ್ತಾರೆಂದು, (ಪ್ರವಾದಿಗಳೆಲ್ಲರು ೧೦) ಅವನಿಗೆ ಸಾಕ್ಷಿ ಕೊಡುತ್ತಾರೆ.

೧. ಇದರ ಅರ್ಥವೇನೆಂದರೆ:—ಯಾವ ಮಾರ್ಗದಲ್ಲಿ ನಾವು ನೀತಿಯನ್ನು ಪೂರೈಸಿ ಬಪ್ಪುದಾ ಆ ವಾಂದೇ ಕೃಪೆಯ ಮಾರ್ಗವನ್ನು ತಾರೀಸುತ್ತಾನೆ ಯೆಂತಷ್ಟೆ. ನಮ್ಮ ಕಾಲದಲ್ಲಿ ಅನೇಕರು ಈ ವಾಕ್ಯವನ್ನು ಡಾಂಕು ಮಾಡಿ, ಸಜ್ಜನರಿಗೆ ಸುಗುಣಕ್ಕಾಸ್ಕರ ಕೃಪೆಯು ಅವಶ್ಯವಿಲ್ಲವೆಂದು ಹೇಳುವವರ ಅರ್ಥವು ಇಲ್ಲಿ ತಾರುವದಿಲ್ಲಾ. ಇಲ್ಲದಿದ್ದರೆ ಕಾರ್ನೇಲ್ಯನಿಗೆ ಸಹಾ ಅಧಿಕವೇನಾದರೂ ಅವಶ್ಯವಾಗಿರುತ್ತಿದ್ದಿಲ್ಲಾ.

೨. ಪೂರೈಗಂದರೆ, ದೇವರು ಪೂರಾಸವಾಡಂ ಬಡಿಕೆಯಲ್ಲಿ ಜನಾಂಗ ಕುಲ ಮುಂತಾದ ಭೇದಗಳನ್ನು ಲಕ್ಷಿಸದೆ, ಕ್ರೈಸ್ತಧರ್ಮಕ್ಕೆ ಕರೆಯುವದರಲ್ಲಿ ಜನಾಂಗಗಳಲ್ಲಿಯೂ ಮನುಷ್ಯರಲ್ಲಿಯೂ ಇರುವ ಜಾತಿ ಮೊದಲಾದ ತಾರತಮ್ಯಗಳನ್ನು ಗಣನೆ ಮಾಡದೆ ಇದ್ದಾನೆ.

೩. ನಾನೀಗ ಕೇಳಿದ್ದೂ ದರ್ಶನದಲ್ಲಿ ಮುಂಚೆ ನೋಡಿದ್ದೂ, ವಾಂದಕ್ಕಾಂದು ಸಮ ಬೀಳುವ ಕಾರಣ.

೪. ಅಂದರೆ ದೇವರ ಸಂಗಡ ಸಮಾಧಾನ. ಅದರಲ್ಲಿ ಯೆಹೂದರಿಗೂ ಪರಜನರಿಗೂ ಆಗ ತಕ್ಕ ಸಮಾಧಾನವೂ ಶೇರಿತೆಂದು ಎಫೆ. ೨, ೧೫—೧೬. ಪೇತ್ರನು ಇಲ್ಲಿ ಕಲಿತು ಕಾಂಡನು.

೫. ಸಾಧಾರಣವಾದ ಸುದ್ದಿಯಿಂದ ಮಾತ್ರವಲ್ಲ, ಪ್ರಾಮುಖ್ಯವಾಗಿ ಫಿಲಿಪ್ಪನು ಮಾಡಿದ ಪ್ರಸಂಗದಿಂದ. ೮, ೪೦.

೬. ಯೇಸುವು ಜ್ಞಾನದಲ್ಲಿಯೂ ಕೃಪೆಯಲ್ಲಿಯೂ ಬೆಳದು ಪುರುಷನಾದ ಮೇಲೆ, ಈಲೋಕವಿಮೋಚನಾದ್ಯಾಗಕ್ಕೆ ಬೇಕಾದ ಸಂಪೂರ್ಣ ಪ್ರತಿಷ್ಠೆಯನ್ನೂ ಅಧಿಕಾರವನ್ನೂ ಸ್ವಾನದಲ್ಲಿ ಪರಿಶುದ್ಧಾತ್ಮದಿಂದ ಪೂರೈಂದಿದನು.

೭. ಆತ್ಮಿಕವಾಗಿ ಮಾತ್ರವಲ್ಲ, ಶರೀರ ಪ್ರಕಾರವಾಗಿ ಸಹಾ, ಪೂರೈಗಂದರೆ, ದೆವ್ವ ಹಿಡಿದವರನ್ನು ಮಾತ್ರವಲ್ಲ, ಬೇರೆ ಶರೀರದ ಕಷ್ಟಗಳಿಂದ ಸೈತಾನನು ಪೀಡಿಸಿದವರನ್ನು ಸಹಾ. ಲೂ. ೧೩, ೧೬.

೮. ಆತನು ಉಪಕಾರ ಮಾಡುತ್ತಾ ಸಂಚರಿಸಿದನೆಂಬ ಈ ಸಂಗ್ರಹ ಮಾತಿನಿಂದ ಸಂಕ್ಷೇಪವಾಗಿಯೂ ಅಪ್ರತಿಮ ಸುಂದರವಾಗಿಯೂ, ಯೇಸುವಿನ ಜೀವವೃತ್ತಾಂತವೆಲ್ಲಾ ವರ್ಣಿಸಿ ಅದೆ. ಆರಂಭದಿಂದ ಕಡೇ ನ್ಯಾಯತೀರ್ಪಿನ ಪರ್ಯಂತ, ಯೇಸುವಿನ ಸಮಸ್ತ ಗತಿಯನ್ನು ಪೇತ್ರನು ಈ ಪರಜನರ ಮುಂದೆ ವರ್ಣಿಸಿದ್ದಕ್ಕಿಂತ ಸಾದೃಶವಾಗಿಯೂ ಸುಲಭವಾಗಿಯೂ ಹೇಳ ಯಾರಿಗೂ ಅಳವಲ್ಲ.

೯. ನ್ಯಾಯತೀರ್ಪಿನ ದಿನದಲ್ಲಿ, ಭೂಮಿಯಲ್ಲಿ ಬದುಕುವವರಿಗೂ ಮುಂಚೆ ಸತ್ತು ಪೂರೈದವರಿಗೂ, ಅಂದರೆ, ಯೆಲ್ಲರಿಗೂ ಯೆಂಬರ್ಥ. ಆತನು ಕಡೆಯಲ್ಲಿ ಯೆಲ್ಲರಿಗೂ ನ್ಯಾಯಕರ್ತನಾಗುವ ಕಾರಣ, ಆತನು ರಕ್ಷಕನಾಗಿ ಕಾಣಿಸಿ ಕಾಳ್ಳುವ ವೇಳೆಯಲ್ಲಿ, ಯೆಲ್ಲರೂ ಆತನನ್ನು ಆಶ್ರಯಿಸಿ ಕಾಳ್ಳ ತಕ್ಕದ್ದು. ೨, ೨೧.

೧೦. ಕ್ರಿಸ್ತನು ಸಮಸ್ತ ಪರಿಶುದ್ಧ ಬರಪಿಕ್ಕೆ ಮಧ್ಯಮಣಿಯಾಗಿದ್ದಾನೆ. ಪಳೆವಾಡಂಬಡಿಕೆ ಸಹಾ ಆತನ ವಿಷಯದಲ್ಲಿ ಸ್ಪಷ್ಟವಾಕ್ಯಗಳಿಂದಲೂ, ಅಥವಾ, ಮುಂಗುರ್ತುಗಳಿಂದಲೂ ಮಾತಾಡುತ್ತದೆ. ಉದಾ. ಯೆಶಾ, ೫೩, ೫. ೬. (೫೫, ೩. ೭.) ಯೆರೆ. ೩೧, ೩೧—೩೪. ಪೆಜೆಕಿ. ೧೬, ೬೦—೬೩. ೩೬, ೨೫. ದನಿ. ೯, ೨೪. ಪೂರಾಸೆ. ೩, ೫. (೧೩, ೧೪.) ಯೂಯೇಲ್. ೩, ೫. ಆಮೋ. ೯, ೧೪. ಚೆಫ. ೩, ೯. ಪುಗ್ಗಾಯಿ. ೨, ೮. ಜಖ. ೧೩, ೧. ಮಲೆ. ೪, ೨.

ಅಪೌ. ಚ. ೧. ಪೆರಿಚ್ಯೋದ. ಪಲೆಸ್ತ್ರೀನದ ಸಭೆ.

ಅಪೌ. ಕ್ರಿ. ೧೦, ೪೪—೧೧, ೧.

ಪೇತ್ರನ ಪ್ರಸಂಗದ ಫಲ. ವ. ೪೪—೪೯.

ಪೇತ್ರನು ಈ ಪ್ರಕಾರ ಕ್ರಿಸ್ತನನ್ನು ಪ್ರಸಂಗಿಸಿ, ಆರಂಭದಿಂದ ನ್ಯಾಯತೀರ್ಪಿನ ಕಡೇ ಮಹಿಮೆಯ ಪರ್ಯಂತ ಆತನ ಗತಿಯನ್ನು ವರ್ಣಿಸಿ, ಕಡೆಯಲ್ಲಿ ತನ್ನ ಭಾಷಣದ ನಿಜ ಪ್ರಯೋಜನಕ್ಕೆ ಬಂದನು. ಅದೇನೆಂದರೆ, ಅದರಿಂದ ಹೃದಯಗಳಲ್ಲಿ ಹುಟ್ಟಿ ತಕ್ಕ ಸಂತುಷ್ಟವಾದ ಪಾಪಕ್ಷಮೆಯ ನಿಶ್ಚಯವು. ಇದು ಕ್ರಿಸ್ತನ ವಾಕ್ಯದ ಮೂಲವಾಗಿ ಪರಿಶುದ್ಧಾತ್ಮದಿಂದ ಮನುಷ್ಯನಲ್ಲಿ ಉಂಟಾಗುತ್ತದೆ. ಹಾಗೆಯೆ ಇಲ್ಲಿಯೂ ಆಯಿತು.

೪೪. ಪೇತ್ರನು ಇನ್ನು ಇ ಮಾತುಗಳನ್ನಾಡುತ್ತಿರಲಾಗಿ, ವಾಕ್ಯವನ್ನು ಕೇಳುವ ವರೆಲ್ಲರ ಮೇಲೆ ಪರಿಶುದ್ಧಾತ್ಮವು ೧) ಬಿತ್ತು. ೪೫. ಜನಾಂಗಗಳ ಮೇಲೆ ಸಹ ಪರಿಶುದ್ಧಾತ್ಮದ ವರವು ೨) ಹಾಯ್ದಿಟ್ಟದರಿಂದ, ಪೇತ್ರನ ಸಂಗಡ ಬಂದ ಪರಿಛೇದನೆಯವರಾದ ವಿಶ್ವಾಸಿಗಳು ಭ್ರಮೆ ಗೊಂಡರು. ೪೬. ಯಾಕಂದರೆ ಅವರು ಭಾಷೆಗಳಿಂದ ಮಾತಾಡಿ, ದೇವರನ್ನು ಮಹಿಮೆ ಪಡಿಸುವದನ್ನು ಕೇಳಿದರು. ೪೭. ಆಗ ಪೇತ್ರನು ಪ್ರಶ್ನೋತ್ತರವಾಗಿ, ನಮ್ಮ ಹಾಗೆಯೇ ಪರಿಶುದ್ಧಾತ್ಮವನ್ನು ಹೊಂದಿದ ೩) ಇವರು ಸ್ನಾನ ಹೊಂದದ ಹಾಗೆ, ಯಾರಾದರೂ ನೀರು ತಡೆಯ ಬಹುದೇ? ಯೆಂದು ಹೇಳಿ, ೪೮. ಕರ್ತನ ಹೆಸರಿನಲ್ಲಿ ಅವರಿಗೆ ಸ್ನಾನ ಕೊಡ ಬೇಕೆಂದು ೪), ಆಜ್ಞಾಪಿಸಿದನು ೫). ಆಗ, ಕೆಲವು ದಿವಸ ಇರ ಬೇಕೆಂದು, ಅವನಂನು ಬೇಡಿ ಕೊಂಡರು.

೧. ಪರಿಶುದ್ಧಾತ್ಮವು ಅಪಾಸ್ತಲನ ಪ್ರಸಂಗಕ್ಕೆ ಅಸಾಧಾರಣ ರೀತಿಯಿಂದ, ಪಂಚಾಶತ್ತಿನ ದಿನದಲ್ಲಿ ಮಾಡಿದ ಪ್ರಕಾರ, ಮುದ್ರೆ ಪೊತ್ತಾಕಿತು. ಯೆರಡನೆ ಪಂಚಾಶತ್ತಿನ ದಿನವು ಪರಜನರಿಗಾಗಿ ಬಂದ ಪೊತ್ತಾಗಾಯಿತು.

೨. ಪಂಚಾಶತ್ತಿನ ದಿನದಲ್ಲಿ ತಂಮಲ್ಲಿ ಕಾಣಿಸಿದ ಬಲದ ಲಕ್ಷಣಗಳಿಂದ ಅದನು ತಿಳಕೊಂಡರು.

೩. ಕರ್ತನು ತಾನು ನೇಮಕ ಮಾಡಿದ ಕ್ರಮಗಳಿಗೆ ಅಧೀನವಾಗಿರುವದಿಲ್ಲ; ಮನುಷ್ಯನೆ ಅಧೀನವಾಗಿದ್ದಾನೆ. ಇಲ್ಲಿ ವಿಶ್ವಾಸಿಗಳು ಮುಂಚೆ ಆತ್ಮವನ್ನೂ ಮತ್ತೆ ಸ್ನಾನವನ್ನೂ ಪೊಂದಿದರು. ಸಮರ್ಯದಲ್ಲಿ ಬೇರೆ ಕ್ರಮ. ೮, ೧೪—೧೭.

೪. ಅವರು ಕರ್ತನ ಸಂಸರ್ಗದ ಮುದ್ರೆಯಾದ ಆತ್ಮನನ್ನು ಪ್ರತ್ಯಕ್ಷವಾಗಿ ಪೊಂದಿದ್ದರೂ, ಸ್ನಾನವು ಅನವಶ್ಯವೆಂದು ಪೇತ್ರನು ಭಾವಿಸಲಿಲ್ಲಾ.

೫. ಅವನು ತಾನೆ, ಪೌಲನ ಪೊಗಳಿಕೆಯೆ, ೧೦ ಕಾರಿ. ೧., ಪ್ರಸಂಗವನ್ನು ಪ್ರಾಮುಖ್ಯವೆಂದೆಣಿಸಿದನು.

ಪೇತ್ರನು ಯೆರೂಸಲೇಮಿನಲ್ಲಿ ಪರಜನಸ್ವೀಕಾರದ ಸಂಗತಿಯಂನು ಪ್ರತಿಪಾದನೆ ಮಾಡಿದ್ದು. ೧೧, ೧—೧೮.

೧೧ ಸಂಧಿ.

೧. ಆದರೆ ಜನಾಂಗಗಳು ದೇವರ ವಾಕ್ಯವನ್ನು ಅಂಗೀಕರಿಸಿದವೆಂದು ಅಪಾಸ್ತಲರೂ ಯೆಹೂದದಲ್ಲಿರುವ ಸಹೋದರರೂ ಕೇಳಿದರು. ೨. ಮತ್ತು ಪೇತ್ರನು

ಅಪಾ. ಕ್ರಿ. ೧೧, ೨—೧೭.

ಯೆರೂಸಲ್ಮೇಮಿಗೆ ಯೇರಿ ಬಂದಾಗ ಪರಿಛ್ಛೇದನೆಯವರು ಅವನ ಸಂಗಡ, ೩. ನೀನು ಅಪರಿಛ್ಛೇದನೆಯವರಾದ ಜನರ ಹತ್ತರ ಪ್ರವೇಶಿಸಿ, ಅವರ ಸಂಗಡ ಊಟ ಮಾಡಿದಿ ಯೆಂದು, ವಿವಾದ ಮಾಡಿದರು ೧). ೪. ಆಗ ಪೇತ್ರನು ಮೊದಲಿನಿಂದ ಕ್ರಮ ವಾಗಿ ಅವರಿಗೆ ವಿವರಿಸಿ ಹೇಳಿದ್ದೇನಂದರೆ, ೫. ನಾನು ಯಾಪ್ಪ ಪಟ್ಟಣದಲ್ಲಿ ಪ್ರಾರ್ಥಿ ಸುತ್ತಿರುವಾಗ ಪರವಶವಾಗಿ, ದರ್ಶನವನ್ನು ಕಂಡೆನು. ಯೇನಂದರೆ, ಆಕಾಶದಾಳ ಗಿಂದ, ನಾಲ್ಕು ಕಾನೆಗಳಿಂದ ಇಳಿಸಲ್ಪಟ್ಟ ದಾಡ್ಡ ದುಪ್ಪಟಿಯ ಹಾಗಿರುವ ವಸ್ತುವು ಇಳಿಯಿತು. ೬. ಅದರ ಮೇಲೆ ನಾನು ಕಣ್ಣಿಟ್ಟು, ಯೋಚನೆ ಮಾಡಿ, ಭೂಮಿಯ ಚತುಷ್ಪಾದಗಳನೂ, ಮೃಗಗಳನೂ, ಕ್ರಿಮಿಗಳನೂ, ಆಕಾಶದ ಪಕ್ಷಿಗಳನೂ ನೋಡಿದೆನು. ೭. ಮತ್ತು, ಪೇತ್ರನೇ, ಯೆದ್ದು, ಕೊಂದು, ತಿನ್ನು, ಯೆಂದು ಹೇಳುವ ಶಬ್ದವನ್ನು ಕೇಳಿದೆನು. ೮. ಆಗ ನಾನು, ಕರ್ತನೇ, ಬೇಡವೇ ಬೇಡ. ಹೊಲೆಯಾ ದದ್ದೂ ಅಶುದ್ಧವಾದದ್ದೂ ಯೇನಾದರೂ ಯೆಂದೂ ನನ್ನ ಬಾಯಿಯೊಳಗೆ ಹೋಗ ಲಿಲ್ಲ, ಅಂದೆನು. ೯. ಆದರೆ ಯೆರಡನೇ ಸಾರಿ ಆ ಶಬ್ದವು ಆಕಾಶದಿಂದ ನನಗೆ, ದೇ ವರು ಪರಿಶುದ್ಧ ಮಾಡಿದವುಗಳನ್ನು ನೀನು ಹೊಲೆ ಅನ್ನ ಬೇಡವೆಂದು ಉತ್ತರ ಹೇಳಿತು. ೧೦. ಇದು ಮೂರು ಸಾರಿ ಆಯಿತು. ಆಗ ಯೆಲ್ಲಾ ಆಕಾಶಕ್ಕೆ ತಿರಿಗಿ ಯೆತ್ತಲ್ಪ ಟ್ಟಿತು. ೧೧. ಮತ್ತು ಇಗೋ, ಆ ಕ್ಷಣದಲ್ಲಿ ಮೂರು ಜನರು ಕೈಸರ್ಯೆಯದಿಂದ ನನ್ನ ಬಳಿಗೆ ಕಳುಹಿಸಲ್ಪಟ್ಟು, ನಾನಿದ್ದ ಮನೆಯ ಬಳಿಯಲ್ಲಿ ನಿಂತು ಕೊಂಡಿದ್ದರು. ೧೨. ಮತ್ತು ಆತ್ಮವು, ಯೇನೂ ಸಂದೇಹ ಪಡದೆ, ಅವರ ಸಂಗಡ ಹೋಗ ಬೇಕೆಂದು ನನಗೆ ಹೇಳಿತು. ಈ ಆರು ಮಂದಿ ಸಹೋದರರು ಸಹ ನಂಜ ಸಂಗಡ ಬಂದರು. ನಾವು ಆ ಮನುಷ್ಯನ ಮನೆಯಲ್ಲಿ ಪ್ರವೇಶಿಸಿದೆವು. ೧೩. ಅವನು ನಮಗೆ, ಯಾಪ್ಪಕ್ಕೆ ಜನರನ್ನು ಕಳುಹಿಸಿ, ಪೇತ್ರನೆಂಬ ಸೀಮೋನನನ್ನು ಕರಿಸು; ೧೪. ನಿನ್ನನ್ನೂ ನಿನ್ನ ಸಮಸ್ತ ಮನೆಯಂನೂ ರಕ್ಷಿಸಿ ಶಕ್ತ ಮಾತುಗಳಂನು ನಿನಗೆ ಹೇಳುವನೆಂದು, ತಂನ ಮನೆಯಲ್ಲಿ ನಿಂತು ಕೊಂಡು, ತನಗೆ ಹೇಳುವ ದೂತನನ್ನು ಕಂಡೆನೆಂಬುವದನ್ನು ತಿಳಿಸಿ ದನು. ೧೫. ನಾನು ಮಾತಾಡಲಾರಂಭಿಸಿದಾಗ, ಪರಿಶುದ್ಧಾತ್ಮವು ಆರಂಭದಲ್ಲಿ ನಂಮ ಮೇಲೆ ಬಿದ್ದ ಪ್ರಕಾರವೇ, ಅವರ ಮೇಲೆಯೂ ಬಿತ್ತು. ೧೬. ಮತ್ತು, ಯೋಹಾನನು ನೀರಿನಿಂದ ಸ್ನಾನ ಕೊಟ್ಟನು; ಆದರೆ ನೀವು ಪರಿಶುದ್ಧಾತ್ಮದಿಂದ ಸ್ನಾನ ಹೊಂದುವಿರಿ, ಯೆಂದು ಕರ್ತನು ಹೇಳಿದ ಮಾತನ್ನು ಜ್ಞಾಪಕ ಮಾಡಿ ಕೊಂ ಡೆನು. ೧೭. ಆದದರಿಂದ, ಕರ್ತನಾದ ಯೇಸುವಿನಲ್ಲಿ ವಿಶ್ವಾಸಿಸಿದ ನಮಗೆ

ಅಪೌ. ಕ್ರಿ. ೧೧, ೧೪. ೧೫.

ದೇವರು ಕೌಟ್ಟದ್ದಕ್ಕೆ ಸರಿಯಾದ ವರವನ್ನು ಅವರಿಗೂ ಕೌಟ್ಟಿದ್ದರೆ, ದೇವರಿಗೆ ೨) ಅಡ್ಡಿ ಮಾಡುವದಕ್ಕೆ ನಾನು ಯೆಷ್ಟರವನು? ೧೪. ಇವುಗಳನ್ನು ಕೇಳಿ, ಸುಮ್ಮನಿದ್ದು, ಹಾಗಾದರೆ ದೇವರು ಜನಾಂಗಗಳಿಗೂ ೩) ಜೀವಕ್ಕೆ ಮಾನಸಾಂತರವನ್ನು ಕೌಟ್ಟಿದ್ದಾನೆಂದು, ದೇವರನ್ನು ಮಹಿಮೆ ಪಡಿಸಿದರು ೪).

೧. ಇಲ್ಲಿ ನಡದ ಕಾರ್ಯದಿಂದ, ಪ್ರತ್ಯೇಕವಾದ ದೈವ ಪ್ರಕಟಣೆಯಿಂದ ಯೆಹೂದರ ಖೇದಕಾವನ್ನು ನಿವಾರಿಸುವದು ಯೆಷ್ಟು ಅವಶ್ಯವಾಗಿತ್ತೆಂತ ಪ್ರತ್ಯಕ್ಷವಾಗುತ್ತದೆ. ಪೌಲಾಗಂದರೆ ಅಪಾಸ್ತಲರು ಮೊದಲಾದ ವಿಶ್ವಾಸಿಗಳಿಗೆ ಪರಜನರು ಮುಂಚೆ ಯೆಹೂದರಾಗುವದು ಅವಶ್ಯವಿಲ್ಲವೆಂಬದನ್ನೂ, ಕ್ರಿಸ್ತನಲ್ಲಿಡುವ ವಿಶ್ವಾಸದಿಂದ ಯೆಲ್ಲಾ ನಡುಗಾಡೆ ಬಿದ್ದು ಪೌಲಾಗುತ್ತದೆಂಬದನ್ನೂ, ಗ್ರಹಿಸುವದು ಪ್ರಯಾಸವಾಯಿತು.

೨. ನಾನು ಮಾಡಿದ್ದು ಅನ್ಯಾಯವೆಂದು ಸಾಧಿಸುತ್ತೀರಾದರೆ, ನೀವು ದೇವರ ಸಂಗಡ ವಿವಾದ ಮಾಡ ಬೇಕು. ಆತನು ೧) ಪರಜನರನ್ನು ಶುದ್ಧರೆಂದಂದಿದ್ದಾನೆ, ೨) ಅವರಿಗೆ ಪ್ರಸಂಗಿಸುವದಕ್ಕೆ ನಮಗೆ ಅಪ್ಪಣೆ ಕಾಟ್ಟಿದ್ದಾನೆ, ೩) ಈ ಕಾರ್ಯವೆಲ್ಲಾ ತನ್ನ ದೂತನಿಂದ ಆರಂಭಿಸಿ ಮುಂದೆ ನಡಿಸಿದ್ದಾನೆ, ೪) ಇದಲ್ಲದೆ ನಾನು ಪ್ರಸಂಗಿಸುವಾಗೈ, ತನ್ನ ಆತ್ಮದಿಂದ ಅವರನ್ನು ಬೆಳಗಿಸಿ, ಶಿರುಗಿಸಿ, ವಿಶ್ವಾಸಿಗಳೂ ಜಾಗ್ರವಂತರೂ ಆಗುವ ಪೌಗೆ ಮಾಡಿದ್ದಾನೆ.

೩. ಅಂದರೆ ಯೆಹೂದರಾಗದೆ, ಪರಜನರಾಗಿರುವಾಗಲೆ.

೪. ಇದರಿಂದ, ಅವರು ಪ್ರೀತಿ ಇಲ್ಲದ ಮನಸ್ಸಿನಿಂದಲ್ಲ ಯಥಾರ್ಥ ಹೃದಯದಿಂದಲೆ, ಪರಜನ ಸ್ವೀಕಾರಕ್ಕೆ ಯೆದುರಾಡಿದ್ದರೆಂದು ಕಾಣ ಬಂತು.

೪) ಅಂತಿಯೊಕ್ಯದಲ್ಲಿ ಉಂಟಾದ ಪರಜನರ ಮೂಲಸಭೆ. ಸಂ. ೧೧, ೧೪—೩೦.

ಈಗ ಯೆರೂಸಲೇಮಿನಲ್ಲಿ ಪರಜನರ ಸ್ವೀಕಾರದ ಕಾರಣ ಆನಂದವಾಯಿತು ನಿಜ; ಆದಾಗ್ಯೂ, ದೇವರ ಕೃಪೆಯು ಅಪ್ರತಿಬಂಧವಾಗಿಯೂ ಉಚಿತವಾಗಿಯೂ ಶಿಕ್ಕುತ್ತದೆಂಬದಕ್ಕೂ, ಹಳ್ಳೆವೊಡಂಬಡಿಕೆಯ ರಕ್ಷಣೆಯ ಮನೆವಾರ್ತೆಯು ತೀರಿ ಹೋಯಿತೆಂಬದಕ್ಕೂ, ಮುಖ್ಯವಾಗಿ ದೇವಾಲಯವು ಇದ್ದು ಅದರ ಉಪಾಧಿಗಳೆಲ್ಲಾ ನಡಿಯುತ್ತಿರುವ ಮಟ್ಟಿಗೆ, ವೊಪ್ಪಿ ಕೊಳ್ಳುವದು ಯೆಹೂದರಿಗೆ ಯೆಷ್ಟು ಕಷ್ಟವಾಯಿತೆಂದು, ಸಂಧಿ ೧೫ರಿಂದಲೂ ಗಲ. ಸ. ೨ರಿಂದಲೂ ಕಂಡು ಬರುತ್ತದೆ. ಹೀಗಿರಲಾಗಿ ಯೆರೂಸಲೇಮಿನವರು ಪರಜನಗಳ ಸಂವರ್ತನವನ್ನು ನಡಿಸ ಬೇಕಾದ್ದಾದರೆ, ಆ ಕಾರ್ಯವು ಬಹು ಅಂಜಿಕೆಯಿಂದಲೂ ತಡೆ ತಡೆಯಾಗಿಯೂ ನಡಿಯುತ್ತಿತ್ತು. ಕ್ರೈಸ್ತಧರ್ಮ ಸಹಾ ಯೆಹೂದರ ವೊಂದು ಮತದ ಪ್ರಕಾರವಾಗುತ್ತಿತ್ತು. ಆಕಾರಣ ದೇವರ ರಾಜ್ಯವು ಪರಜನಗಳೊಳಗೆ ಪ್ರವೇಶವಾಗಲಿಕ್ಕಿರುವ ಸಮಯದಲ್ಲಿ ಆ ಕಾರ್ಯವನ್ನು ಬಲವಾಗಿ ನಡಿಸ ತಕ್ಕ ಮತ್ತೊಂದು ಮಾತೃಸಭೆ ಪರಜನರಲ್ಲಿ ಉಂಟಾದ್ದು ದೇವರ ಘಟನೆ ಯೆಂತ ಯೆಣಿಸುವದು ಯುಕ್ತ. ಈ ಉದ್ದಿಶ್ಯಕ್ಕೆ ಕೆಲವು ಕಾರಣದಿಂದ ಸುರ್ಯದ ಬಕೊಂತೆ ಹೊಳ್ಳೆಯ ಕರೆಯಲ್ಲಿರುವ ಅಂತಿಯೊಕ್ಯವು ಯೋಗ್ಯವಾಗಿತ್ತು. ಅದನ್ನು ಕ್ರಿಸ್ತಶಕದ ಮುಂಚೆ ಸುಮಾರು ೩೦೦ನೆ ವರುಷದಲ್ಲಿ ಸುರ್ಯದ ಅರಸನಾದ ಸೆಲ್ಯೆಕ ನಿಕಾತೋರ್ ಯೆಂಬವನು ತನ್ನ ತಂದೆಯಾದ ಅಂತಿಯೊಖನ ಬಹುಮಾನಕ್ಕೆ ಸಮುದ್ರದಿಂದ ದೂರವಾಗಿರದ, ನಾವೆಗಳು ನಡಿಯ ತಕ್ಕ ಹೊಳ್ಳೆಯ ತೀರದಲ್ಲಿ ಸುರ್ಯದ ಮುಖ್ಯಪಟ್ಟಣ

ಣವಾಗಿ ಕಟ್ಟಿದ್ದನು. ಅದು ಸುಸ್ಥಾನವೂ ಭದ್ರ ವಿಶಾಲವಾದ ನಗರವೂ ಆದ್ದು, ರೋಮವನ್ನೂ ಅಲೆ ಕ್ಸಂದ್ರಿಯವನ್ನೂ ಬಿಟ್ಟು, ರೋಮಿಯ ಮಹಾರಾಜ್ಯದ ಮೂರನೆ ಪಟ್ಟಣವೂ, ರೋಮಿಯ ಸಂಸ್ಥಾನಕ್ಕೆ ಶೇರಿದ ಪೂರ್ವಸ್ಯದ ಮುಖ್ಯಪಟ್ಟಣವೂ ಆಗಿರುವದರಿಂದ, ಮೂಡಣ ಪಡುವಣ ದಿಕ್ಕುಗಳ ಕಲಾ ಕುಶಲರೂ, ವರ್ತಕರು ಮುಂತಾದವರ ಸಮೂಹಗಳೂ ಕೂಡಿ ಬರುವಂಥಾ ಸ್ಥಳವಾಗಿತ್ತು. ಯೆಹೂದರು ಸಹಾ ಬಹಳ ಮಂದಿ ಅಲ್ಲಿ ಇದ್ದರು. ಅವರಿಗೆ ಪ್ರತ್ಯೇಕವಾದ ಪ್ರಜಾಪತಿ ಇದ್ದನು. ಹೀಗಿರಲಾಗಿ, ಕ್ರೈಸ್ತ ಸಭೆ ಸಹಾ ಅಭಿಮಾನವನ್ನೂ, ಯೆರೂಸಲೇಮಿನ ಸಭೆಗೆ ವೊಳಗಾಗಿರದ ಸ್ವತಂತ್ರವನ್ನೂ ಹೊಂದಲಿಕ್ಕೆ ವೊಳ್ಳೆ ಆಸ್ಪದವಾಯಿತು; ಇದು ಸುವಾರ್ತೆಯ ವೃದ್ಧಿಗೆ ಬಹು ಪ್ರಯೋಜನವಾಗಿತ್ತು. ಪೇತ್ರನು ಕೊರ್ನೇಲ್ಯನ ಸ್ನಾನದಿಂದ ಕ್ರೈಸ್ತಸಭೆಯಲ್ಲಿ ಸ್ಥಾಪಿಸಿದ ಕಟ್ಟಳೆಯನ್ನು ಪೂರ್ವಸಂಪ್ರದಾಯಗಳಿಗೆ ಬಿಡುಗಡೆಯಾದ ಮನಸ್ಸಿನಿಂದ ಕೈಕೊಳ್ಳುವ ಪದ್ಧತಿ ಇಲ್ಲಿ ಹುಟ್ಟಿತು. ಸ್ವಲ್ಪ ಕಾಲದ ಮೇಲೆ ಸುವಾರ್ತೆಯ ಆಸಕ್ತಿಯಿಂದಲೆ ಪ್ರಸಂಗಪ್ರಯಾಣಗಳನ್ನು ಮಾಡಿ, ಪರಜನಗಳಲ್ಲಿ ಯೇಸು ಕ್ರಿಸ್ತನ ಹೆಸರು ಸಾರಿ, ನಂಬಿದವರನ್ನು ತಡೆ ಇಲ್ಲದೆ ದೇವರ ರಾಜ್ಯದ ಬಾಧ್ಯಸ್ಥರಾಗಿ ಶೇರಿಸಿ ಕೊಳ್ಳುವದು ಇಲ್ಲಿ ವಾಡಿಕೆಯಾಯಿತು. ಇದಲ್ಲದೆ ಈ ಕಾರ್ಯವು ದೇವರ ರಾಜ್ಯದಲ್ಲಿ ತಕ್ಷಣ ಪೂರ್ಣ ಪ್ರತಿಪಾದ್ಯವಾಯಿತು. ಆ ತರುವಾಯ ಪೂರ್ವದಿಕ್ಕಿನ ಜ್ಞಾನದಿಂದ ಉಂಟಾದ ಜ್ಞಾನಿಕರೆಂಬವರ ಅಪಬೋಧನೆ ಅಲ್ಲಿ ಪ್ರಬಲವಾದದ್ದು ಸರಿ; ಆದರೆ ಕ್ರೈಸ್ತ ಸಭೆಗೆ ಇಂದಿನ ಪರ್ಯಂತಕ್ಕೂ ಬಹು ಆಶೀರ್ವಾದಮಯವಾದ ಸ್ವಸ್ಥ ಬುದ್ಧಿಯುಳ್ಳ ದೇವವಾಕ್ಯವಿಚಾರಕರ ಶಾಲೆಯೂ ಅಲ್ಲಿ ಉಂಟಾಯಿತು. ಅಂತಿಯೊಕ್ಯದಲ್ಲಿ ವಿಶೇಷ ಗುಣ ಲಕ್ಷಣಗಳುಳ್ಳ ಸಭೆಯು ಉಂಟಾದ್ದು ಕ್ರೈಸ್ತ ಸಭಾಚರಿತ್ರದಲ್ಲಿ ವೊಂದು ಮಹಾ ಕಾರ್ಯವೆಂದನ್ನ ಬೇಕು. ಇದಲ್ಲದೆ ಈ ಯೆರಡು ಮುಖ್ಯ ಸಭೆಗಳು ಯೆಷ್ಟು ವಿವಿಧವಾಗಿದ್ದರೂ, ಭೇದವಾಗದೆ ನಿಜವಾದ ಪ್ರೀತಿಯಲ್ಲಿ ಯೇಕೀಕರವಾಗಿ ಇದ್ದದ್ದು ದೈವಘಟನೆಯಾಗಿರುತ್ತದೆ. ಈ ವಿಷಯದಲ್ಲಿ ಬರ್ನಬನು ಅತಿ ಯುಕ್ತ ಸಹಾಯಕನಾಗಿದ್ದನು; ಯಾಕಂದರೆ ಅವನು ಸತ್‌ಕ್ರಿಯಾನ್ವಿತವಾದ ಭಕ್ತಿಗಾಗಿ ಯೆರೂಸಲೇಮಿನಲ್ಲಿ ಹೆಸರ್ವಾಶಿಯಾಗಿದ್ದು, ಗ್ರೀಕ ಯೆಹೂದನಾಗಿರುವ ಕಾರಣ ಪರಜನರಿಗೂ ನೆರೆಹಿತನಾಗಿದ್ದನು. ಇವನಿಂದಲೂ ಸ್ವಲ್ಪ ಕಾಲದ ಮೇಲೆ ಬಂದ ಪೌಲನಿಂದಲೂ ಅಂತಿಯೊಕ್ಯದ ಸಭೆ ನಡಿಸಲ್ಪಟ್ಟು ಅಭಿವೃದ್ಧಿಯಾಗಿ ಬಲಗೊಂಡಿತು. ಪರಜನರು ಸಹಾ ಸ್ವಲ್ಪ ಕಾಲದ ಬಳಿಕ ಅವರು ಯೆಹೂದರ ವೊಂದು ಮತವಲ್ಲ, ಬೇರೆ ತರದವರು ಯೆಂದು ಖಚಿತ ಮಾಡಿ ಕೊಂಡು, ಅವರಿಗೆ ಕ್ರೈಸ್ತರು, ಅಂದರೆ, ಕ್ರಿಸ್ತನವರು ಯೆಂಬ ಹೆಸರಿಟ್ಟರು. ಯೆರೂಸಲೇಮಿನ ಸಂಬಂಧದಲ್ಲಿ ಅವರು ಸಾರ್ವದಾ ನಡೆಯುವ ವಿಶ್ವಾಸದ ಸಲಿಗೆಯಿಂದಲೂ ವ. ೨೭, ಕೃತ್ಪ್ರು ಕಟವಾಗುವ ಪ್ರೀತಿಯಿಂದಲೂ ಉಳುಕೊಂಡರು.

ವ. ೧೫ ಸುವಾರ್ತೆಗೆ ಆಗಲೆ ದೊಡ್ಡ ದ್ವಾರ ತೆರದಿತ್ತು. ಮೇಲೆ ಹೇಳಿದ ಪೌಲ ಕೊರ್ನೇಲ್ಯರ ಸಂಗತಿಯು ಅತ್ತ ಕಡೆಯಲ್ಲಿ ನಡಿಯುತ್ತಿರುವಾಗ್ಯೆ, ಇತ್ತ ಕಡೆಯಲ್ಲಿ, ಸ್ತೆಫನನ ಮರಣಾನಂತರವಾದ ಅದೇ ಹಿಂಸೆಯ ದೆಶೆಯಿಂದ, ಯೆರೂಸಲೇಮಿನ ಸಭೆಯವರು ಚದರಿ ಹೋಗಿ, ಗಲಿಲಾಯಕ್ಕೂ ಸಮುದ್ರಕ್ಕೂ ಮಧ್ಯದಲ್ಲಿರುವ ತೀರದೇಶವಾದ ಫೊನಿಕ್ಯಕ್ಕೂ, ಅದರ ಮುಖ್ಯಪಟ್ಟಣಗಳಾಗಿರುವ ತೂರ ಸೀದೋನಗಳಿಗೂ, ಅಲ್ಲಿಂದ ಯೆದುರಿರುವ ಬರ್ನಬನ ಜನ್ಮದೇಶವಾದ ಕುಪ್ರ ದ್ವೀಪಕ್ಕೂ, ರೋಮಿಯ ಸಂಸ್ಥಾನದ ಪೂರ್ವದೇಶದ ಮಹಾ ಪಟ್ಟಣವಾದ ಬಲೊಂತೆಯ ತೀರದಲ್ಲಿರುವ ಅಂತಿಯೊಕ್ಯಕ್ಕೂ ಬಂದು ಮುಟ್ಟಿ

ಅಪೌ. ಕ್ರಿ. ೧೧, ೧೫—೨೬.

ದ್ದರು. ಯೇಸು ಕ್ರಿಸ್ತನ ಸುವಾರ್ತೆಯು ಅದನ್ನು ಹವಣಿಸಿದ ಹಳ್ಳೇವೊಡಂಬಡಿಕೆಯ ಪ್ರಕಾರ ಯೆಹೂದರ ಬಾಧ್ಯತೆಯೇ ಯೆಂದೆಣಿಸಿದದರಿಂದ ಅವರು ಯೆಹೂದರಿಗೆ ಮಾತ್ರ ಪ್ರಸಂಗಿಸುತ್ತಾ ಇದ್ದರು.

೮. ಕ್ರಿಸ್ತನ ಆಗಮನದ ನಿರೀಕ್ಷೆಯು ಹೊಸ ವಾಡಂಬಡಿಕೆಯಲ್ಲಿ ಸತ್ಕ್ರೈಸ್ತ ಲಕ್ಷಣಗಳಲ್ಲಿ ಮುಖ್ಯವಾದದ್ದಾಗಿ ತೋರುತ್ತದೆ.

ಸ. ೨.

II. ಸಫಲವಾದ ಸಹವಾಸಕಾಲದ ಸೌಖ್ಯದ ನೆನಪು. ಸ. ೨, ೧—೧೬.

೧. ಪೌಲನ ನಿರ್ದೋಷವಾದ ಪ್ರವೃತ್ತಿ. ವ. ೧—೧೨.

೨. ಥೆಸ್ಸಲೊನೀಕೆಯರು ಮುದದಿಂದ ಮಾಡಿದ ವಾಕ್ಸ್ವೀಕಾರ. ವ. ೧೩—೧೬.

ಮುಂದಿನ ಶೋಧನೆಗಳನ್ನು ಯೆದುರಿಸ ತಕ್ಕ ಪೊಡ್ಡಣವನ್ನು ಬಾಲಸಭೆಯ ಕೈಯಲ್ಲಿ ಇಡುವದಕ್ಕೆ ಹೊಸ ವಿಶ್ವಾಸದ ಮೊದಲಿನ ಕಾಲವನ್ನು ಶಿಷ್ಯರ ನೆನಪಿಗೆ ತಂದು, ಬೋಧಕನಾದ ತನ್ನ ಮೇಲೆ ಇಟ್ಟ ಪ್ರೀತಿಯನ್ನು ಅವರಲ್ಲಿ ದೃಢ ಪಡಿಸುವದು ಅಪೊಸ್ತಲನಿಗೆ ವಾಡಿಕೆಯಾದ ಉಪಾಯವಾಗಿದೆ. ಆದ್ದರಿಂದ ವ. ೧. ೨.

೧ ಥೆಸ್ಸ. ೨, ೧–೧೨.

ಫಿಲಿಪ್ಪಿಯಲ್ಲಿ ಮಹಾ ನಿಂದೆಯನ್ನು ಅನುಭವಿಸಿದ ಕೂಡಲೆ, ಥೆಸ್ಸಲೊನೀಕೆಯಲ್ಲಿ ಮಹಾ ವಿರುದ್ಧವನ್ನು ತಾಳಿ ಕೊಳ್ಳಬೇಕಾದರೂ, ಅವರ ಮಧ್ಯದಲ್ಲಿ ತಾನೆ ಪೂರ್ಣ ನಿಶ್ಚಯದಿಂದ ತಿಳಿಕೊಂಡ ಸತ್ಯವನ್ನು ಗೆಲುವಾದ ವಿಶ್ವಾಸದಿಂದ ಪ್ರಸಂಗಿಸಿದ್ದಕ್ಕೆ ಅವರೆ ಸಾಕ್ಷಿ ಯೆಂತಲೂ ೩. ತನ್ನಲ್ಲಿ ಕಪಟ ಆಲೋಚನೆಗಳೂ ಮೋಸದ ಯುಕ್ತಿಗಳೂ ಇರಲಿಲ್ಲವೆಂತಲೂ, ೪. ಸರ್ವಜ್ಞನಾದ ದೇವರ ಯೆದುರಿನಲ್ಲೆಂದು ಮನುಷ್ಯವಿಚಾರಗಣ್ಯ ಮಾಡದೆ ಮಾತಾಡಿದೆನೆಂತಲೂ; ೫. ಅವರಿಗೆ ಇಚ್ಛಕವಾಡದೆ, ಉದ್ಯೋಗದ ನ್ಯಾಯನದಿಂದ ಲಾಭವನ್ನಾಗಲಿ, ೬. ಮಾನವನ್ನಾಗಲಿ ಅರಸಲಿಲ್ಲವೆಂತಲೂ, ೭. ಅಪೊಸ್ತಲನ ಅಧಿಕಾರಗಳನ್ನು ಸಹಾ ಪ್ರಯೋಗಿಸದೆ, ತಾಯಿಯು ಮಗುವನ್ನು ಸಾಕುವ ವಾತ್ಸಲ್ಯದಿಂದಲೂ ೮. ಅವಸರವಾದರೆ ಜೀವವನ್ನೂ ವೆಚ್ಚ ಮಾಡುವ ಅಕ್ಕರದಿಂದಲೂ ಅವರಿಗೆ ಯೆಲ್ಲಾನ್ನು ಕೊಟ್ಟು ಬಿಟ್ಟಿನೆಂತಲೂ ಹೇಳಿದ ಮೇಲೆ, ಬರಿಯುವದೇನಂದರೆ:

೯. ಯಾಕಂದರೆ, ಸಹೋದರರೇ, ನಂಮ ಕಷ್ಟವನ್ನೂ ಪ್ರಯಾಸವಂನೂ ಜ್ಞಾಪಕ ಮಾಡಿ ಕೊಳ್ಳುತ್ತೀರಿ; ಹ್ಯಾಗಂದರೆ. ನಿಂಮಲ್ಲಿ ವಾಬ್ಬನಿಗಾದರೂ ಭಾರವಾಗದ ಹಾಗೆ, ರಾತ್ರಿ ಹಗಲು ಕೆಲಸ ಮಾಡಿ ೧), ದೇವರ ಸುವಾರ್ತೆಯಂನು ನಿಮಗೆ ಪ್ರಸಂಗಿಸಿದೆವು. ೧೦. ವಿಶ್ವಾಸಿಸುವವರಾದ ನಿಮಗೆ ಯೆಷ್ಟು ಪರಿಶುದ್ಧವಾಗಿಯೂ ೨) ನ್ಯೀತಿಯಾಗಿಯೂ ನಿರ್ಮಲವಾಗಿಯೂ ಇದ್ದೆವೆಂಬುವದಕ್ಕೆ ನೀವೂ ದೇವರೂ ಸಾಕ್ಷಿಗಳಾಗಿದ್ದೀರಿ. ೧೧. ಹ್ಯಾಗಂದರೆ, ತಂದೆಯು ೩) ತ್ನಂತ ಮಕ್ಕಳಿಗೆ ಹ್ಯಾಗ್ಯಾ, ಹಾಗೆಯೇ ನಿಂಮಲ್ಲಿ ವಾಬ್ಬಾಬ್ಬನಿಗೆ ೪) ನಾವು ಬುದ್ಧಿಯಂನು ಹ್ಯೇಳಿ, ಉದರಣೆಯನ್ನು ೫) ಕೌಟ್ಟು. ೧೨. ತಂನ ರಾಜ್ಯಕ್ಕೂ ಮಹಿಮೆಗೂ ನಿಂಮಂನು ಕರೆಯುವ ದೇವರಿಗೆ ತಕ್ಕ ೬) ಹಾಗೆ ನಡಿಯ ಬೇಕಂತ, ಸಾಕ್ಷಿ ಕೌಟ್ಟೆವೆಂದು ಬಲ್ಲಿರಿ.

೧. ಪ್ರಸಂಗಿಸುತ್ತಾ ಇರುವ ವೇಳೆಯಲ್ಲಿ ಸ್ವಂತ ಕೈಯಿಂದ ಜೀವನ ಮಾಡುವ ಬಗ್ಗೆ. ಪೌಲನು ಬೇರೆ ಸಖೆಗಳಿಂದ ಅರ್ಥಸಹಾಯ ತಕ್ಕಾಂಡರೂ ೨ ಕೊರಿ. ೧೧, ೮., ಥೆಸ್ಸಲೊನೀಕೆಯಲ್ಲಿ ನಡಕಾಂಡ ಹಾಗೆಯೇ ಕೊರಿಂಥದಲ್ಲಿಯೂ ನಡಕಾಂಡನು. ಅವನು ಸಖೆಯಾಳಗೆಯೂ ಸಖೆಯ ಹೊರಗೆಯೂ ಇರುವ ದೂಷಕರ ಬಾಯಿ ಮುಚ್ಚಲಾಗುವ ಹಾಗೆ, ಕಾಲೋಚಿತವಾಗಿ ನಡಕಾಂಡನು. ಆದರೆ ಬೇರೆ ಅಪೊಸ್ತಲರು ಮಾಡಿದ ಪ್ರಕಾರ ೧ ಕೊರಿ. ೯. ರೋಮ. ೧೫, ೨೭. ಬೋಧಕನು ಸುವಾರ್ತೆಯ ಉದ್ಯೋಗದಿಂದ ಬದುಕುವ ನ್ಯಾಯವನ್ನು ಪೌಲನು ಸಹಾ ಬಲವಾಗಿ ಸಾಧಿಸದಿರುವದಿಲ್ಲಾ. ಹೀಗಿರಲಾಗಿ ಸರ್ವಾವಸ್ಥೆ ಖೇದವಾದ ನಂಮ ಕಾಲದಲ್ಲಿ, ಸುವಾರ್ತೋದ್ಯೋಗದಪರ ಸಂಬಳ ಅಪಹರಿಸುವದು ಮಹಾ ಅನ್ಯಾಯ. ಹೊಸಾಗಾದರೂ ಪೌಲನು ಸಾರ್ವದಾ ಸ್ವಾರ್ಥವಿಲ್ಲದ ಆತ್ಮ ಪರಿತ್ಯಾಗದ ಉನ್ನತ ಮಾದರಿಯಾಗಿ ಇರುವನು.

೨. ದೇವರ ಮುಂದೆ ಪರಿಶುದ್ಧವಾಗಿಯೂ, ಮನುಷ್ಯರ ಮುಂದೆ ನೀತಿಯಾಗಿಯೂ, ಸ್ವಂತ ಮನಸ್ಸಾಕ್ಷಿಯ ಮುಂದೆ ನಿರ್ಮಲವಾಗಿಯೂ.

೩. ತಂದೆಯಂತೆ ಸ್ಥೈರ್ಯದಿಂದಲೂ, ವಾಬ್ಬಾಬ್ಬನನ್ನು ಪರಾಮರಿಸುವ ಜಾಗ್ರತೆಯಿಂದಲೂ, ದಿಡಾಳುತನದಿಂದಲೂ, ಪ್ರೀತಿಯಿಂದಲೂ ನಡಕಾಂಡು, ವಾಟ್ಸಾರೆ ಮಾತ್ರ ಅಲ್ಲಾ, ವಾಬ್ಬಾಬ್ಬನ ಪ್ರಾಣಕ್ಕಾಕ್ಕೋಸ್ಕರ ಪೌಲನು ಚಿಂತಿಸಿದನು. ಸಖೆಗೆ ಪ್ರಸಂಗಿಸಿದರೆ ಸಾಲದು, ವಾಬ್ಬಾಬ್ಬನ ಸಂಗಡ ಪ್ರತ್ಯೆಪ್ರತ್ಯೆಕವಾಗಿ ಮಾತಾಡ ಬೇಕು.

೪. ಮುಖದಾಕ್ಷಿಣ್ಯವಿಲ್ಲದೆ.

೧ ಥೆಸ್ಸ. ೨, ೧೫.—೩, ೬.

೫. ಅವರವರಿಗೆ ಅವಶ್ಯವಿರುವ ಪ್ರಕಾರ, ಪೌಲನು ವಾಬ್ಬನ ಚಿತ್ತವನ್ನು ಬಲಪಡಿಸಿ, ವಾಬ್ಬನ ಸಂಕಲ್ಪವನ್ನು ಚಂಚಲವಿಲ್ಲದ ಸ್ಥೈರ್ಯಕ್ಕೆ ಧೈರ್ಯ ಪಡಿಸಿ, ವಾಬ್ಬನ ಮನಸ್ಸನ್ನು ಆದರಣೆಯಿಂದ ಸಂತೈಸಿ, ಕದಲುವವನನ್ನು ಯೋಗ್ಯವಾದ ನಡತೆಗೆ ದೇವರ ಪೆಸರಿನಲ್ಲಿ ಚನ್ನಾಗಿ ಯೆಚ್ಚರಿಸಿದನು. ಆ ಪ್ರಕಾರ ಪೌಲನು ಸ. ಳ. ಮಾಡುತ್ತಾನೆ.

೬. ಅಂದರೆ, ದೇವರು ನಿಮ್ಮಿಂದ ಕೇಳ ಬಹುದಾದ ಪ್ರಕಾರ.

ವ. ೧೫. ಪೌಲನು ಯೆಷ್ಟು ಕಷ್ಟ. ತಕ್ಕೊಂಡನೊ, ಅಷ್ಟಕ್ಕೆ ಹೆಚ್ಚಾಗಿ ದೇವರಿಗೆ ಕೃತಜ್ಞನಾಗಿದ್ದು, ಆತನು ತನ್ನ ಕೆಲಸವು ನಿರರ್ಥಕವಾಗದ ಹಾಗೆ ಮಾಡಿದವನೆಂದು ದೀನಭಾವದಿಂದ ಹೊಗಳಿದನು. ಥೆಸ್ಸಲೊನೀಕೆಯರು ವಾಕ್ಯವನ್ನು ನಿಜವಾಗಿ ದೇವರ ವಾಕ್ಯವೆಂದು ತಿಳಿದುಕೊಂಡರು; ಮತ್ತು ಅದು ತನ್ನ ಕಾರಣಿಕೆಯನ್ನು ಅವರಲ್ಲಿ ತೋರಿಸಿತು. ೧೪. ಪರಜನರಾದ ಸ್ವದೇಶಸ್ಥರಿಂದ ನಾನಾ ಪ್ರಕಾರದ ಕಷ್ಟಗಳನ್ನು ತಾಳ್ಮೆಯಿಂದ ಸಹಿಸುವದರಲ್ಲಿ ಆ ವಾಕ್ಯದ ಬಲವು ಪ್ರಕಟವಾಯಿತು. ಯೆಹೂದ ದೇಶದಲ್ಲಿರುವ ಮೂಲಸಭೆಯು ಸ್ವಜನರಾದ ಯೆಹೂದರಿಂದ ಹ್ಯಾಗೆ ಯೇನೇನು ಕಷ್ಟ ತಾಳಿಕೊಳ್ಳ ಬೇಕಾಯಿತೆಂದು ಹೇಳಿ, ಅವರನ್ನು ಸಮಾಧಾನ ಪಡಿಸುತ್ತಾನೆ. ೧೫. ಆದಾಗ್ಯೂ ಯೆಹೂದರ ಮೋಸಗಳಿಗೆ ಅವರು ಬೊಳ ಬೀಳ್ದ ಹಾಗೆ, ಪೌಲನು ೨ ಥೆಸ್ಸ. ೧, ೬. ರ ಹಾಗೆಯೇ ಪರಿಶುದ್ಧ ಕೋಪಾಸಕ್ತಿಯಿಂದ ಮುಂಚೆ ತಮ್ಮ ಪ್ರವಾದಿಗಳನ್ನು ಹ್ಯಾಗೋ ಹಾಗೆಯೇ ಯೇಸುವನ್ನು ಕೊಂದು, ಸುವಾರ್ತೆಯನ್ನು ತಾವು ಬಿಸಾಡಿ ಬಿಟ್ಟು, ೧೬. ತಮ್ಮ ಪಾಪದ ಅಳತೆಯನ್ನು ತುಂಬಿಸುವದಕ್ಕೆ ಪರಜನರ ವಿಶ್ವಾಸಕ್ಕೆ ಅಡ್ಡಿ ಮಾಡುವ ಯೆಹೂದರ ಮಹಾ ಅಪರಾಧವನ್ನು ಬಲವಾದ ವಾಕ್ಯಗಳಿಂದ ವಿವರಿಸುತ್ತಾನೆ. ಆದರೆ ಅವರ ಸಂಸ್ಥಾನವನ್ನು ನಾಶ ಮಾಡುವ ದೇವರ ನ್ಯಾಯತೀರ್ಪುಗಳು ಈಗಲೇ ಆರಂಭವಾಗಿವೆಯೆಂದು ಹೇಳುತ್ತಾನೆ. (ಹ್ಯಾಗೆಂದರೆ ಆ ಕಾಲದಲ್ಲಿ ಒಂದು ಕಲಹದಲ್ಲಿ ಅನೇಕ ಸಾವಿರ ಯೆಹೂದರು ಮಡಿದು ಹೋದರು.)

III. ಥೆಸ್ಸಲೊನೀಕೆಯರನ್ನು ನೋಡ ಬೇಕೆಂದು ಅಪೊಸ್ತಲನಲ್ಲಿರುವ ಮಹಾ ಕಾಂಕ್ಷೆ. ೨, ೧೭.—೩, ೧೩.

ಅ) ತಾನೇ ಬರಲಿಕ್ಕೆ ಬಹಳವಾಗಿ ಬಯಸಿ. ೧೭—೨೦. ಇ) ತನ್ನ ಬದಲಿಗೆ ತಿಮೊಥೆಯನನ್ನು ಕಳುಹಿಸಿದ್ದೇನೆ. ೩, ೧—೫. ಉ) ಅವನು ತಂದ ವೊಳ್ಳೇ ವರ್ತಮಾನಗಳಿಂದ ಹರ್ಷವಾದೆನು. ೬—೮. ಎ) ತಾನು ಬರ ಬೇಕೆಂಬ ಅಭಿಲಾಷೆ ಅಳಿದು ಹೋಗಲಿಲ್ಲಾ. ೧೦—೧೩.

ಸ. ೨, ೧೭—೨೦. ಈಗಲೇ ತನ್ನ ಮಾನವೂ ಆನಂದವೂ, ಕ್ರಿಸ್ತನ ಪ್ರತ್ಯಕ್ಷತೆಯ ದಿನದಲ್ಲಿ ತನ್ನ ನಿರೀಕ್ಷೆಯೂ ಆಗಿರುವ ಥೆಸ್ಸಲೊನೀಕೆಯರನ್ನು ನೋಡ ಬೇಕೆಂದು ಯೆಷ್ಟೋ ಅಪೇಕ್ಷೆಯು ತನ್ನಲ್ಲಿ ಉಂಟೆಂದು ಪೌಲನು ಮಹಾ ಮಮತೆಯಿಂದ ಹೇಳುತ್ತಾನೆ. ಯೆರಡು ಸಾರಿ ಬರಬೇಕೆಂದಿದ್ದೆನು, ಆದರೆ ಸೈತಾನನು ತನ್ನನ್ನು ತಡದನು ಯೆಂದು ಹೇಳುತ್ತಾನೆ. ೩ನೆ ಸಂಧಿಯಲ್ಲಿ ಪೌಲನು ಬರೆಯುವದೇನಂದರೆ— ವ. ೧. ತಾನು ಅವರ ಮೇಲೆ ಇಟ್ಟ ಪ್ರೀತಿಯಿಂದ, ತನ್ನ ಕೊರತೆ ಯೆಣಿಕೆ ಮಾಡದೆ ೨. ಜೊತೆಗಾರನಾದ ತಿಮೋಥೆಯನನ್ನು ಅವರ ಬಳಿಗೆ ಕಳುಹಿಸಿ ಬಿಟ್ಟು, ೩. ಕ್ರೈಸ್ತರಿಗೆ ತಪ್ಪದೆ ಬರುವ ಉಪದ್ರವಗಳಲ್ಲಿ ಅವರನ್ನು ಸ್ಥಿರ ಪಡಿಸಿ, ೪. ತನಗೆ ವರ್ತಮಾನ ತರಲಾಗ್ಗೂಪಿಸಿದ ಮೇಲೆ, ೬. ಈತನು ಅವರು ವಿಶ್ವಾಸದ್ಲಲಿಯೂ

ಗಥೆಸ್ಸ. ೩, ೭—೪, ೫.

ಪ್ರೀತಿಯಲ್ಲಿಯೂ ನಿಶ್ಚಂಚಲವಾಗಿ ನಿಂತಿದ್ದಾರೆಂಬ ವೊಳ್ಳೇ ವರ್ತಮಾನವನ್ನು ಸ್ವಲ್ಪ ದಿವಸದ ಹಿಂದೆ ತಂದು, ೭. ಪ್ರಸ್ತುತ ಉಪದ್ರವಗಳಲ್ಲಿ ತನ್ನನ್ನು ಆದರಿಸಿ ೮. ಪುನರ್ಜೀವಿತರಿಸಿದರಿಂದ, ೯. ದೇವರಿಗೆ ಸಾಕಷ್ಟು ಕೃತಜ್ಞತೆ ಸಲ್ಲಿಸಿ ತೀರದು. ೧೦. ದೇವರೂ ಕ್ರಿಸ್ತನೂ ಇವರ ಕೃಪೆಯ ಘಟನೆಯಿಂದ ತಾನು ಅಲ್ಲಿಗೆ ಬರ ಬೇಕೆಂದು ಅತಿರೇಕವಾಗಿ ಅಪೇಕ್ಷಿಸಿ, ಅವರ ವಿಶ್ವಾಸದ ಕೊರತೆಗಳನ್ನು ಪೂರ್ಣ ಮಾಡುವದಕ್ಕೆ ಬರುತ್ತೇನೆಂದು ಬಹು ನಮ್ರತೆಯಿಂದ ಸೂಚಿಸಿ, ೧೩. ೧೪. ಯೇಸು ಕ್ರಿಸ್ತನು ಸಮಸ್ತ ಪರಿಶುದ್ಧರ ಸಂಗಡ ಬರುವಲ್ಲಿ ತಪ್ಪಿಲ್ಲದವರಾಗಿ ಕಾಣಿಸಿಕೊಳ್ಳುವ ಹಾಗೆ, ಅವರ ಹೃದಯಗಳನ್ನು ಪರಿಶುದ್ಧತ್ವದಲ್ಲಿ ಬಲಪಡಿಸುವ ಪ್ರೀತಿಯ ಅಧಿಕವಾದ ಪರಿಪೂರ್ತಿಯನ್ನು ಕರ್ತನು ಅವರಿಗೆ ಕೊಡ ಬೇಕೆಂದು ಪ್ರಾರ್ಥಿಸುತ್ತಾನೆ.

ಪತ್ರಿಕೆಯ ಯೆರಡನೆ ಭಾಗ.

೪ ಸಂಧಿ.

ನೀತಿಪಾಠಗಳೂ ಬಾಧನೆಗಳೂ.

I. ನಿರ್ಮಲತ್ವದಲ್ಲಿಯೂ, ನ್ಯಾಯದಲ್ಲಿಯೂ, ಸಹೋದರಪ್ರೀತಿಯಲ್ಲಿಯೂ, ಶಾಂತವಾದ ಪ್ರವೃತ್ತಿಯಲ್ಲಿಯೂ ನಡಕೊಳ್ಳಬೇಕೆಂಬ ಬುದ್ಧಿ ಮಾತುಗಳು.

೧. ಕಡೆಯಲ್ಲಿ, ಸಹೋದರರೇ, ನೀವು ಹ್ಯಾಗೆ ನಡೆದು ದೇವರಂನು ಮೆಚ್ಚಿಸಬೇಕೆಂದು, ನಮ್ಮಿಂದ ಗ್ರಹಿಸಿದ ಪ್ರಕಾರ, ಇನ್ನೂ ಹೆಚ್ಚಿರೆಂದು ನಿಮ್ಮನ್ನು ಬೇಡಿಕೊಂಡು, ಕರ್ತನಾದ ಯೇಸುವಿನಲ್ಲಿ ಬುದ್ಧಿ ಹೇಳುತ್ತೇವೆ. ೨. ಯಾಕಂದರೆ ಕರ್ತನಾದ ಯೇಸುವಿನಿಂದ ೧) ನಿಮಗೆ ಯಾವ ಅಪ್ಪಣೆಗಳನ್ನು ಕೊಟ್ಟೆವೆಂದು, ಬಲ್ಲಿರಿ. ೩. ಯಾಕಂದರೆ ಇದ್ದೇ ೨) ದೇವರ ಚಿತ್ತವು, ನೀವು ಪರಿಶುದ್ಧರಾಗುವದ್ದೇ. ಹ್ಯಾಗಂದರೆ ಜಾರತ್ವಕ್ಕೆ ೩) ದೂರವಾಗಿರುವದು—೪. ೫. ವ್ಯಾಭಿಚಾರವನ್ನು ದೇವರನ್ನರಿಯದ ಜನಾಂಗಗಳ ೪) ಪ್ರಕಾರ ದುರಾಶೆಗಳ ೫) ಪಡದೆ, ಪರಿಶುದ್ಧತ್ವದಲ್ಲಿಯೂ ಘನತೆಯಲ್ಲಿಯೂ ತನ ಪಾತ್ರವನ್ನು ಕಾಪಾಡ ತಿಳಿದು ಕೊಳ್ಳುವದು.

೧. ಅಪಾಸ್ತಲನು ತನ್ನ ಪ್ರೀತಿಯ ಧಾರೆಯಂನು ಇಷ್ಟುವರೆಗೆ ಯೆರದು, ಬಳಿಕ, ಅಪ್ಪಣೆಗಳನ್ನು ಕಾಡತಾಡಗುತ್ತಾನೆ. ಆದರೆ ಇದನ್ನು ಬಹಳ ನಮ್ರತೆಯಿಂದ ಮಾಡುತ್ತಾನೆ. ಆಜ್ಞೆ ಯೆಂಬದನ್ನು ಬಿಟ್ಟು ಬೇಡಿಕೊಳ್ಳೋಣ, ಬುದ್ಧಿ ಹೇಳೋಣ, ಮುಂಚೆಗ್ರಹಿಕೆಯಾದದ್ದನ್ನು ಗ್ನಾಪಕ ಮಾಡೋಣವೆಂಬ ಶಬ್ದಗಳನ್ನು ಬಳಸಿಕೊಂಡು, ಕಡೆಯಲ್ಲಿ ಅಪ್ಪಣೆ ಯೆಂಬದನು ಪ್ರಯೋಗಿಸಿದರೂ, ಅಧಿಕಾರಗರ್ವಭಾವನೆ ಪುಟ್ಟದ ಹಾಗೆ ಕರ್ತನಾದ ಯೇಸುವಿನಿಂದ ಅಪ್ಪಣೆ ಕೊಟ್ಟಿದೆಂದು ಬರೆಯುತ್ತಾನೆ. ಯೇಸುವಿನ ಆಳುಗಳು ತಾವು ಅಪ್ಪಣೆ ಕೊಡದೆ, ಕರ್ತನ ಆಜ್ಞೆಗಳನ್ನು ಸಹೋದರರಿಗೆ ಗ್ನಾಪಕ ಮಾಡುತ್ತಾರೆ.

೨. ದೇವರನ್ನು ಮೆಚ್ಚಿಸಲಾಸಕ್ತರು ನೆರೆ ಹೊರೆಯವರಲ್ಲಿಯೂ ತಮ್ಮಲ್ಲಿಯೂ ಹೊಯ್ಗೆ ನಡೆ ಕೊಳ್ಳ

೧ ಥೆಸ್ಸ. ೪, ೬—೧೨.

ಬೇಕೆಂಬದು ೩ನೆಯಿಂದ ೧೨ನೆ ವರೆಗೂ ಹೇಳಿಯದೆ. ಅಪಾಸ್ತಲನು ಸಂಪತ್ತುಳ್ಳ ಚಾರಿ ವ್ಯಾಪಾರ ಪಟ್ಟಣಗಳಲ್ಲಿ ವಾಡಿಕೆಯಾದ ಪಾಪಗಳಿಗೂ, ಮುಖ್ಯವಾಗಿ ಅತಿ ಭಯಂಕರವಾಗಿರುವ ಗುಪ್ತಾಲೋಚನೆಯ ಪಾತನದ ಪಾಪಗಳಿಗೂ ಯೆದುರ್ನಿಲ್ಲುವದಕ್ಕೆ ಯೆಚ್ಚರಿಸುತ್ತಾನೆ.

೩. ಜಾರತ್ವವು ಪಾಪವಲ್ಲವೆಂದು ಗ್ರೀಕ ಜ್ಞಾನಿಗಳು ಸಹ ಹೇಳಿದರು. ಆದರೆ ಕ್ರೈಸ್ತನು ವಿರಹದ ಕರ್ಮಗಳನ್ನೆಲ್ಲಾ ಬಿಟ್ಟರೆ ಸಾಲದು, ಶರೀರವನ್ನು ನಿರ್ಮಲತ್ವದಲ್ಲಿಯೂ ಘನತೆಯಲ್ಲಿಯೂ ಪೂರ್ಣವಾಗಿ ಕಾಪಾಡ ಬೇಕು. ಶರೀರವು ಪ್ರಾಣದ ನಿವಾಸಸ್ಥಳವೂ ಕರಣವೂ ಆಗಿರುವದರಿಂದ, ಅದಕ್ಕೆ ಘಟ ಯೆಂಬ ಪೆಸರು ಬಂತು; ಅದು ಪರಿಶುದ್ಧಾತ್ಮದ ಮಂದಿರವಾಗುವ ಹಾಗೆ ೧ ಕಾರಿ. ೬, ೧೫—೨೦. ಪ್ರಾಣದ ಸಂಗಡ ಶುದ್ಧವಾಗ ಬೇಕು.

೪. ಅಖಿಲಾಷೆಯನ್ನು ಜೈಸದೆ, ಅದರಿಂದ ಪರಾಜಯವಾದರೆ, ಅದು ಪೀಡೆಯೂ ವ್ಯಾಧಿಯೂ ಆಗಿ ಹಾನಿಯಾಗುತ್ತದೆ. ದೇವರಾಜ್ಞೆನೆ ತನಗೆ ಯಜಮಾನನೆಂಬದನ್ನು ತಿಳಿಯದೆ ಅಥವಾ ತಿಳಿಯಲಾಲ್ಲದೆ ಇರುವವನು ಮಾತ್ರವೆ ಅದರಲ್ಲಿ ನಿಮಗ್ನನಾಗುತ್ತಾನೆ.

೬. ತನ್ನ ಸಹೋದರನನ್ನು ವ್ಯವಹಾರದಲ್ಲಿ ಅತಿಕ್ರಮಿಸದೆ ೧), ವಂಚಿಸದೆ ೨), ಇರುವದು —ಯಾಕಂದರೆ, ನಾವು ನಿಮಗೆ ಮುಂಚೆ ಹೇಳಿ ಸಾಕ್ಷಿ ಕೊಟ್ಟ ಪ್ರಕಾರ; ಇವೆಲ್ಲವುಗಳ ನಿಮಿತ್ತ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿದ್ದಾನೆ. ೭. ಹಾಗಂದರೆ ದೇವರು ನಮ್ಮನ್ನು ಅಶುದ್ಧತ್ವಕ್ಕೆ ೩) ಅಲ್ಲ, ಪರಿಶುದ್ಧತ್ವಕ್ಕೆ ಕರೆದಿದ್ದಾನೆ. ೮. ಹೀಗಿರುವದರಿಂದ, ಅಲಕ್ಷ್ಯ ಮಾಡುವವನು ಮನುಷ್ಯನಂತಲ್ಲ, ತನ್ನ ಪರಿಶುದ್ಧಾತ್ಮವನು ನಮಗೆ ಕೊಟ್ಟ ದೇವರನ್ನೇ ೪) ಅಲಕ್ಷ್ಯ ಮಾಡುತ್ತಾನೆ.

೧. ಮೂಲಭಾಷೆಯಲ್ಲಿ ವ್ಯುಪಹಾರದಲ್ಲಿ ಅಂತಲ್ಲಾ, ಈ ವಿಷಯದಲ್ಲಿ, ಅಂತುಂಟು; ಅಂದರೆ, ಜಾರತ್ವದಿಂದ ಹುಟ್ಟುವ ಮೋಸ ಮುಂತಾದವುಗಳಲ್ಲಿ ಅತಿಕ್ರಮಿಸದೇ ಯೆಂಬ ಅರ್ಥ.

೨. ಸರಕಾರದ ನ್ಯಾಯವನ್ನು ಮೀರದೆ ಅಥವಾ ಮರೆಯಾಗಿ ವಂಚಿಸುವವರನ್ನು ಮನುಷ್ಯರಾದ ನ್ಯಾಯಾಧಿಪತಿಗಳು ಶಿಕ್ಷಿಸದೆ ಇರುವಲ್ಲಿ ಸಹಾ.

೩. ಅಶುದ್ಧತ್ವವೆಂದರೆ ನಿಷೇಧಿಸಲ್ಪಟ್ಟದರ ಮೇಲೆ ಮನಸ್ಸಿಡುವದು. ಮುಖ್ಯವಾಗಿ ಯೇಳನೆ ಕಟ್ಟಳೆಯನ್ನು ಮೀರುವ ಸಮಸ್ತ ಪಾಪಗಳು.

೪. ಪಾಪಿ ತನಗಾಗಲಿ ಮತ್ತಾಬ್ಬರಿಗಾಗಲಿ ಮಾಡುವ ನಷ್ಟವೆ ಲೌಕದ ಚಿಂತೆ; ಪಾಪವು ದೇವರಿಗೆ ವಿರೋಧವಾದದ್ದೆಂಬುವದು ಅಪಾಸ್ತಲನ ಚಿಂತೆ.

೯. ಆದರೆ ಸಹೋದರರ ಸ್ನೇಹದ ವಿಷಯವಾಗಿ ನಿಮಗೆ ಬರೆಯುವದು ಅವಶ್ಯವಿಲ್ಲ; ಯಾಕಂದರೆ ನೀವೇ ದೈವ ಬೋಧನೆ ಹೊಂದಿದವರಾಗಿದ್ದೀರಿ. ೧೦. ಯೆಲ್ಲಾ ಮಕೆದೋನ್ಯದಲ್ಲಿರುವ ಯೆಲ್ಲಾ ಸಹೋದರರಿಗೆ ಅದನ್ನು ಮಾಡುತ್ತೀರಲ್ಲ? ೧೧. ಆದಾಗ್ಯೂ, ಸಹೋದರರೇ, ಇನ್ನೂ ಹೆಚ್ಚಬೇಕೆಂದೂ ೧), ನೀವು ಹೊರಗಿನವರ ವಿಷಯ ಚನ್ನಾಗಿ ನಡೆದು ಕೊಳ್ಳುವ ಹಾಗೆಯೂ, ನಿಮಗೆ ಯಾವದರಲ್ಲಿಯೂ ಕೊರತೆ ಇಲ್ಲದ ಹಾಗೆಯೂ, ೧೨. ನಾವು ನಿಮಗೆ ಆಜ್ಞಾಪಿಸಿದ ಪ್ರಕಾರ ಶಾಂತವಾಗಿರ ಪ್ರಯಾಸ ಪಟ್ಟು, ಸ್ವಂತ ಕೆಲಸಗಳನ್ನು ನೋಡಿ

೧ ಥೆಸ್ಸ. ೪, ೧೩—೧೯.

ದಿ ಕೌಂಡು ೨), ನಿಮ್ಮನ್ನಂತ ಕೈಗಳಿಂದ ಕಷ್ಟ ಮಾಡ ಬ್ಯೇಕೆಂದೂ, ನಿಮಗೆ ಬುದ್ಧಿ ಹೇಳುತ್ತೀವೆ.

೧. ಯಾಕಂದರೆ, ವಿಶ್ವಾಸ ಪ್ರೀತಿಗಳ ಜೀವದಲ್ಲಿ ಯಥಾಸ್ಥಿತಿಯಲ್ಲಿ ಇರುವದೆಂಬದು ಇಲ್ಲಾ; ಮುಂದೆ ಬಾರದವನು ಹಿಂದಕ್ಕೆ ಹೋಗುತ್ತಾನೆ, ಬೆಳಿಯದವನು ಕುಗ್ಗುತ್ತಾನೆ.

೨. ಮುಖ್ಯವಾಗಿ ಪಟ್ಟಣಗಳಲ್ಲಿ ವಾಸಿಸುವ ಕ್ರೈಸ್ತರು ಆಗಾಗ್ಗೆ ಮೊದಲನೆ ಆನಂದದ ಹೆಚ್ಚುಗೆಯಲ್ಲಿ ಕಂಡ ಕೆಲಸಕ್ಕೆಲ್ಲಾ ಕೈ ಹಾಕಿ, ಉದ್ಯೋಗದಲ್ಲಿ ಸೋಮಾರಿಗಳಾಗಿ, ಬಾಯಿಬಡಿಕತನದಿಂದ ಸಹೋದರರಿಗೆ ಭಾರವೂ ಲೋಕಕ್ಕೆ ಯೆಡತಡೆಯೂ ಆಗುತ್ತಾರೆ. ಇಂಥಾ ಅನರ್ಥವು ಯೆಷ್ಟು ಘಟ್ಟಿ ಆಗಿ ಹೋಗ ಬಹುದೆಂದು, ಪೌಲನು ಯೆರಡನೆ ಪತ್ರಿಕೆಯಲ್ಲಿಯೂ ಸ. ೩, ೬—೧೬ ಬಹಳ ಆಸಕ್ತಿಯಿಂದ ಗದರಿಸಿ ಮಾತಾಡ ಬೇಕಾದ್ದರಿಂದ, ತೀಕ್ಷ್ಣ ಬಹುದು.

II. ಉತ್ಥಾನದಲ್ಲಿ ವಿಶ್ವಾಸಿಗಳ ಗತಿ ಯೇನೆಂಬ ಬೋಧನೆ. ವ. ೧೩—೧೯.

೧೩. ಇದಲ್ಲದೆ ಸಹೋದರರೇ, ನಿದ್ರೆಹೊಂದಿದ ವಿಶ್ವಾಸಿಗಳ ಪ್ರಕಾರ ದುಃಖ ೧) ಪಡದ ಹಾಗೆ, ನಿದ್ದೆ ಹೊಂದಿದವರ ೨) ವಿಷಯ ನೀವು ಅರಿಯದಿರ ನನಗೆ ಮನಸ್ಸಿಲ್ಲ. ೧೪. ಯಾಕಂದರೆ, ಯೇಸು ಸತ್ತು ತಿರಿಗಿ ಯೆದ್ದನೆಂದು ೩) ನಾವು ನಂಬಿದರೆ, ಅದೇ ಪ್ರಕಾರ ದೇವರು ಯೇಸುವಿನ ಮುಖಾಂತರ ನಿದ್ದೆ ಹೊಂದಿದವರನ್ನು ೪) ಅವನ ಸಂಗಡ ಕರಕೊಂಡು ಬರುವನು ೫). ೧೫. ಯಾಕಂದರೆ ನಾವು ಕರ್ತನ ವಾಕ್ಯದಿಂದ ೬) ನಿಮಗೆ ಹೇಳುವದೇನಂದರೆ, ಬದುಕುವವರಾಗಿ ಕರ್ತನ ಬರುವಿಕೆಯ ವರೆಗೆ ಉಳಿಯುವ ನಾವು ೭) ನಿದ್ದೆ ಹೊಂದಿದವರಿಗಿಂತ ಮುಂದಾಗುವದಿಲ್ಲ. ೧೬. ಯಾಕಂದರೆ, ಕರ್ತನು ತಾನೇ ಆರ್ಭಟದಿಂದಲೂ ೮), ಪ್ರಧಾನದೂತನ ಶಬ್ದದಿಂದಲೂ ೯), ದೇವರ ತುತೂರಿಯಿಂದಲೂ, ಪರಲೋಕದಿಂದ ಇಳಿದು ಬರುವನು; ಮತ್ತು ಕ್ರಿಸ್ತನಲ್ಲಿ ಸತ್ತವರು ಮೊದಲು ಯೇಳುವರು; ೧೭. ಆಮೇಲೆ ಬದುಕುವವರಾಗಿ ಉಳಿಯುವ ನಾವು ಅವರ ಸಂಗಡ ಮೇಘಗಳಲ್ಲಿ ೧೦) ಕರ್ತನನ್ನು ಯೆದುರುಗೊಳ್ಳುವದಕ್ಕೆ ಆಕಾಶಕ್ಕೆ ೧೧) ಯೆತ್ತಲ್ಪಟ್ಟು, ಹಾಗೆಯೇ ಯೆಂದೆಂದಿಗೂ ಕರ್ತನ ಸಂಗಡ ಇರುವೆವು. ೧೮. ಆದಕಾರಣ, ಈ ಮಾತುಗಳಿಂದ ಬೋಧಿಸಿರಿ ೧೨).

೧. ಥೆಸ್ಸಲೊನೀಕೆಯರು, ಕರ್ತನ ಆಗಮನವು ತಾವು ಜೀವದಲ್ಲಿರುವಾಗಲೆ ಆದೀತೆಂದು ನೆನಸಿ, ಅದರ ಮುಂಚೆ ಸತ್ತವರ ವಿಷಯದಲ್ಲಿ ಬಹಳ ಚಿಂತೆ ಮಾಡಿದರು. ಅವರು ಸತ್ತವರ ಗಾಡವೆ ಬಿಡ ಬೇಕೆಂತ ಪೌಲನು ಹೇಳುವದಿಲ್ಲಾ; ಅವರ ಗತಿಯ ವಿಷಯದಲ್ಲಿ ಅವರು ದುಃಖಿತರಾಗಿ ಇದ್ದದ್ದು ಸಹಜವೆಂದೆಣಿಸುತ್ತಾನೆ. ಆದರೆ ಆ ವಿಷಯದಲ್ಲಿ ಅವರಿಗೆ ಸಮವಾದ ಜ್ಞಾನವು ಇಲ್ಲದಿರಲಾಗಿ, ಯುಕ್ತವಾದ ಬೋಧನೆ ಕಾಡುತ್ತಾನೆ.

೨. ನಿದ್ದೆ ಹೊಂದಿದವರೆಂದರೆ ಸತ್ತವರು. ಉತ್ಥಾನದಲ್ಲಿ ಯೇಳುತ್ತಾರೆಂಬ ನಿಶ್ಚಯದಿಂದ ನಿದ್ದೆ ಹೊಂದಿದವರೆಂಬ ಹೆಸರು ಹುಟ್ಟಿಯದೆ.

೩. ಆತನು ಪಾಪವನ್ನು ಜೈಸಿದ ಕಾರಣ, ಆತನ ಮರಣವು ನಮ್ಮ ಮರಣದ ಕಾಂಡಿಯನ್ನು ಮುರಿಯಿತು; ಆತನ ಉತ್ಥಾನವು ವಿಶ್ವಾಸಿಗಳ ಉತ್ಥಾನಕ್ಕೆ ಕಾರಣವಾಗಿರುತ್ತದೆ. ಯೆರಡು ವಿಧವಾದ ಈ ಸಂಬಂಧವು ಬಹಳ ಬಿಗಿಯಾಗಿರುವದರಿಂದ, ಸತ್ತವರು ಸಹಾ ತಿರಿಗಿ ಬದುಕಿ, ಆತನ ಮಹಿಮೆಯಲ್ಲಿ ಪಾಲು ಹೊಂದದೆ ಇರಲಾರರು.

೪. ವಿಶ್ವಾಸಿಗಳ ಮರಣಕ್ಕೆ ಅಪಾಸ್ತಲರು ನಿದ್ರೆಯೆಂದು ಹೇಳುತ್ತಾರೆ. ಯಾಕೆಂದರೆ ೧) ಮರಣವು ದೇವರ ಶಾಪವಾಗಿಯೂ ನ್ಯಾಯತೀರ್ಪಾಗಿಯೂ ಕ್ರಿಸ್ತನಲ್ಲಿರುವವರ ಮೇಲೆ ಬರುವದಿಲ್ಲಾ. ೨) ಪರಿಶುದ್ಧ ಬರಹದಲ್ಲಿ ಸತ್ತವರ ಸ್ಥಿತಿಗತಿಗಳು ವಿವರವಾಗಿ ಹೇಳದೆ ಇದ್ದರೂ, ಇಹವನ್ನು ಬಿಟ್ಟು ಇಕ್ಕಟ್ಟು ವಿಶ್ರಾಂತಿಯ ಸ್ಥಿತಿಯಲ್ಲಿದ್ದಾರೆಂಬದು ಚನ್ನಾಗಿ ಸೂಚಿಸಿಯದೆ. ೩) ಸತ್ತ ಬಳಿಕ ಉತ್ಥಾನವೆ.

೫. ತನ್ನ ಪುನರಾಗಮನದ ಮಹಿಮೆಯಲ್ಲಿ ಪಾಲು ಹೊಂದುವ ಹೊತ್ತಿಗೆ.

೬. ಅಂದರೆ, ಪ್ರತ್ಯೇಕ ಪ್ರಕಟನೆಯಾಗಿ. ಆದರೆ ಮುಂಚಿನ ಮಾತು ಸಾಮಾನ್ಯ ಕ್ರೈಸ್ತವಿಶ್ವಾಸಾನುಮಾನಾತ್ಮಕ.

೭. ಅಂದರೆ, ಸತ್ತವರ ಮಾತು ಬಿಟ್ಟು, ಜೀವದಲ್ಲಿರುವ ನಮ್ಮ ಗತಿಯನ್ನು ಮಾತ್ರವೆ ವಿಚಾರಿಸುವದಾದರೆ, ಕ್ರಿಸ್ತನ ಆಗಮನವನ್ನು ಜೀವದಲ್ಲಿದ್ದು ನಾವೇ ಕಾಣುವದು ಸಾಧ್ಯವಾಗಿರುತ್ತದೆ. ಆದರೆ ಈ ಮಾತಿಗಾಸ್ಪದರ, ಪೌಲನು ಯೇಸುವಿನ ಆಗಮನವನ್ನು ಸಮೀಪವೆಂದೆಣಿಸಿದನು ಎಂದು ಹೇಳಲಾಗದು; ಅವನು ಕರ್ತನ ಪ್ರತ್ಯಕ್ಷತೆಯ ಕಾಲದಲ್ಲಿ ಜೀವದಿಂದಿರುವವರ ಪೈಸರಿನಲ್ಲಿ ಮಾತಾಡುತ್ತಾನೆ. ನಾವಾಗಲಿ, ಅವರಾಗಲಿ, ಅಂದು ಬದುಕುವವರು ಸತ್ತವರಿಗೆ ಮುಂದಾಗುವದಿಲ್ಲಾ ಎಂಬ ಅರ್ಥ. ಕಡೇ ದಿನದಲ್ಲಿ ಬದುಕುವವರು ಮೊದಲು ಸತ್ತವರಿಗಿಂತ ಮುಂಚೆ ನ್ಯಾಯತೀರ್ಪು ಹೊಂದುವದಿಲ್ಲಾ, ಅವರಿಗಿಂತ ಹೆಚ್ಚಾದ ಮಹಿಮೆಯಲ್ಲಿ ಶೇರುವದಿಲ್ಲಾ.

೮. ಉತ್ಥಾನಕ್ಕೆ ಯೆಚ್ಚರವಾಗಿರಿ ಎಂಬ ಕರ್ತನ ಕೂಗು. ಯೋಪೊಸಾ. ೫, ೨೮. ಪೂರ್ವಾಗೆ ಸೇನಾಪತಿಯ ಶಬ್ದದ ಪ್ರಕಾರ ಸೇನೆಯಲ್ಲಾ ಕ್ಷಣದಲ್ಲಿ ಚಲಿಸುತ್ತದಾ, ಪೂರ್ವಾಗೆಯೆ ಕರ್ತನ ವಾಂದೇ ಶಬ್ದವು ಆತನ ಸೇವಕರ ಅಸಂಖ್ಯಾತವಾದ ಸೇನೆಯನ್ನು ಕ್ಷಣಮಾತ್ರದಲ್ಲಿ ಚಲಿಸುವದು.

೯. ಮಹಾ ದೂತಗಣಗಳ ಸೇನಾಪತಿಗಳ ಶಬ್ದದಿಂದ. ಚಾಗೃವೂ ಪರಿಶುದ್ಧತ್ವವೂ ಉಳ್ಳ ಆತ್ಮಗಳಾದ ದೂತರು ವಿಮೋಚನೆ ಹೊಂದಿದ ಪಾಪಿಗಳ ತಾರಣಾರ್ಥವಾಗಿ ಪೂರ್ವಾಗೆ ಬಿಡದೆ ಸಹಾಯ ಮಾಡುತ್ತಾರಾ, ಪೂರ್ವಾಗೆಯೇ ದೇವರ ರಾಜ್ಯದ ಪರಿಪೂರಣಕ್ಕೂ ಅವರು ಕಷ್ಟ ತೆಗದು ಕಾಳ್ಳುತ್ತಾರೆ, ಅವರು ದೇವರ ಕಪಾಳೆ ಹಿಡಿಯುತ್ತಾರೆ. ೧ ಕೊರಿ. ೧೫, ೫೨. ಮತ್ತಾ. ೨೪, ೩೧.

೧೦. ಮೇಘಗಳಲ್ಲಿ, ಹೊಗಾದರೆ, ಮಾರ್ಪಟ್ಟ ಮಹಿಮಾನವಾದ ಶರೀರದಾಡನೆ. ಈ ಮಾತು ೧ ಕೊರಿ. ೧೫, ೫೨. ೫೩. ಅದೇ ಪ್ರಕಾರ ಮಹಿಮೆ ಪಟ್ಟ ಕರ್ತನ ಶರೀರವು ದಿವಾರೋಹಣವಾಗುವಾಗೆ ಆಕಾಶಕ್ಕೆ ಯೇರಿತು.

೧೧. ಈ ಮಾತಿನಿಂದ, ಕ್ರಿಸ್ತನು ಪೂರ್ಣವಾಗಿ ಭೂಮಿಗೆ ಇಳಿಯದೆ, ಭೂಮಿಯ ಸ್ವಲ್ಪ ಮೇಲ್ಗಡೆಯಲ್ಲಿ ಇದ್ದು, ತನ್ನನ್ನು ಪ್ರಕಟಿಸಿಕೊಂಡು, ನಮ್ಮನ್ನು ತನ್ನ ಬಳಿಗೆ ಯೇರಿಸಿ ಕೊಳ್ಳುವನು ಎಂದು ನೆನಸಬಹುದು. ಸಮನಾಡು ಜಕರೀಯ. ೧೪, ೪.

೧೨. ಸಾಯುವವರ ವಿಷಯದಲ್ಲಿ ಈ ಪ್ರಕಾರ ಆವರಿಸಿ ಕೊಳ್ಳಿರಿ. ಭೂಮಿಯ ಸಮಸ್ತ ಕುಲಗಳು ಗೋಳಾಡುವ, ಕರ್ತನ ದಿನವು ವಿಶ್ವಾಸಿಗಳಿಗೆ ಇಲ್ಲಿಯೇ ಆದರಣೆಗೆ ಕಾರಣವಾಗಿರುತ್ತದೆ. ಆದರೆ ಚಿಂತೆ ಮಾಡದೆ ಉದಾಸೀನ ಮಾಡುವವರಂತೆ ಅವರು ಇರದೆ, ಅದನ್ನು ಉಪಯೋಗಿಸ ಬೇಕು.

೧ ಥೆಸ್ಸ. ೫, ೧—೧೧.

೫. ಸಂಧಿ.

ಪುರವಣಿ.

I. ಕ್ರಿಸ್ತನ ಆಗಮನ ಕಾಲವು ಯಾವದೆಂದು ತಿಳಿಯದ ಕಾರಣ, ಯಾವಾಗಲೂ ಯೆಚ್ಚರವಾಗಿರುವದು ಯೆಷ್ಟು ಅವಶ್ಯ. ವ. ೧—೧೧.

೧. ಆದರೆ, ಸಹೋದರರೇ, ಕಾಲಗಳಿಂಗೂ ಸಮಯಗಳಿಗ್ನೂ ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ[೧]). ೨. ಯಾಕಂದರೆ ಕರ್ತನ ದಿನವು ಕಳ್ಳನು ರಾತ್ರಿಯಲ್ಲಿ[೨]) ಬರುವ ಪ್ರಕಾರ ಬರುವದೆಂದು, ನೀವೇ ಚನ್ನಾಗಿ ಬಲ್ಲಿರಿ. ೩. ಯೇನಂದರೆ ಸಮಾಧಾನವೂ ನಿರ್ಭಯವೂ, ಯೆಂದು ಅವರು ಹೇಳುವಾಗಲೇ, ಗರ್ಭಿಣಿಗೆ ನೋವು[೩]) ಬಂದ ಹಾಗೆ, ಅವರಿಗೆ ನಾಶನವು ಪಕ್ಕನೆ ಬರುವದು; ಅವರು ತಪ್ಪಿಸಿಕೊಳ್ಳರು. ೪. ಆದರೆ, ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮನ್ನು ಹಿಡಿಯುವ ಹಾಗೆ, ನೀವು ಅಂಧಕಾರದಲ್ಲಿ ಇರುವವರಲ್ಲ[೪]). ೫. ನೀವೆಲ್ಲರು ಬೆಳಕಿನ ಮಕ್ಕಳೂ ಹಗಲಿನ ಮಕ್ಕಳೂ ಆಗಿದ್ದೀರಿ[೫]). ೬. ನಾವು ರಾತ್ರಿಯವರೂ ಕತ್ತಲೆಯವರೂ ಅಲ್ಲ. ಹಾಗಾದರೆ, ಮಿಕ್ಕಾದವರ ಪ್ರಕಾರ ನಿದ್ದೆ ಮಾಡದೆ[೬]), ಯೆಚ್ಚತ್ತು ಮಿಠಿಯಾಗಿರುವಾ. ೭. ಯಾಕಂದರೆ ನಿದ್ದೆ ಮಾಡುವವರು ರಾತ್ರಿಯಲ್ಲಿ[೭]) ಮಾಡುತ್ತಾರೆ; ಮದ್ಯ ಕುಡಿಯುವವರು ರಾತ್ರಿಯಲ್ಲಿ ಕುಡಿಯುತ್ತಾರೆ. ೮. ಆದರೆ ನಾವು ಹಗಲಿನವರಾಗಿದ್ದು, ವಿಶ್ವಾಸ ಪ್ರೀತಿಗಳ ಕವಚವನ್ನೂ, ರಕ್ಷಣೆಯ ನಿರೀಕ್ಷೆಯಾದ ಶಿರಸ್ತ್ರಾಣವನ್ನೂ, ತೊಟ್ಟು ಕಾಂಡು[೮]), ಮಿಠಿಯಾಗಿರುವಾ. ೯. ಯಾಕಂದರೆ ದೇವರು ನಮ್ಮನ್ನು ಕೋಪಕ್ಕೆ[೯]) ಅಲ್ಲ, ನಾವು ಯೆಚ್ಚರಿದ್ದರೂ[೧೦]), ನಿದ್ದೆ ಮಾಡಿದರೂ, ಅವನ ಸಂಗಡ ಬದುಕುವ ಹಾಗೆ, ೧೦. ನಮಗೋಸ್ಕರ ಸತ್ತ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ರಕ್ಷಣೆಯನ್ನು ಸಂಪಾದಿಸುವದಕ್ಕೆ ನೇಮಿಸಿದ್ದಾನೆ. ೧೧. ಆದದರಿಂದ[೧೧]) ನೀವು ಮಾಡುವ ಪ್ರಕಾರವೇ, ಒಬ್ಬರಿಗೊಬ್ಬರು ಬುದ್ಧಿ ಹೇಳಿ, ಒಬ್ಬರಿಗೊಬ್ಬರು ಆತ್ಮವೃದ್ಧಿ ಮಾಡಿರಿ[೧೨]).

೧. ಹೌದಾಗಿದ್ದರೆ, ದೇವರು ಸ್ವಂತ ಅಧಿಕಾರದಲ್ಲಿ ಕಾಲಗಳನ್ನೂ ಸಮಯಗಳನ್ನೂ ಇಟ್ಟು ಕಾಯಿದ್ದಾನೆಂದು ನೀವು ತಿಳಿದಿರುವ ಕಾರಣ. ಮತ್ತಾ. ೨೪, ೩೬. ಅಪಾ. ಕ್ರಿ. ೧, ೭. ಮತ್ತಾ. ೨೪. ಲೂಕ. ೧೨. ಬರದ ಯೇಸು ಕ್ರಿಸ್ತನ ಶಿಷ್ಯರಿಗಳ ಅವಿಪ್ರಾಯವನ್ನು ಪೌಲನು ಮುಂಚೆ ಅವರಿಗೆ ಬಾಯಿಂದ ಹೇಳಿದ್ದಕ್ಕೆ ಸಂಶಯವಿಲ್ಲ.

೨. ಯಾರೂ ನೆನಸದ, ಯಾರೂ ಸಿದ್ಧವಾಗಿರದ ಸಮಯದಲ್ಲಿ ಭಯಂಕರವಾಗಿ ಆ ದಿನ ಬರುವದು. ಇದನ್ನು ಕರ್ತನು ತಾನೇ ಹೇಳುತ್ತಾನೆ. ಮತ್ತಾ. ೨೪,

೪೩. ಲೂಕ. ೧೨, ೩೯. ಪ್ರಕ. ೩, ೩. ೧೬, ೧೫. ಅದೇ ಪ್ರಕಾರ ಲೌಕವು ಪೌರ್ಣಾಗೆ ಗಾಡವೆ ಇಲ್ಲದೆ ಇರುವದೆಂದು ಹೇಳಿಯದೆ ಮತ್ತಾ. ೨೪, ೩೭. ಲೂಕ. ೧೭, ೨೬.

೩. ಗರ್ಭಿಣಿಗೆ ವೃಥೆ ಬರುವದೆಂಬದು ನಿಶ್ಚಯ; ಆದರೂ ಯಾವಾಗೈ ಬಂದೀತೆಂಬದು ಅವಳಿಗೆ ತಿಳಿಯದು; ಮತ್ತು ಅದು ಬರುವಾಗೈ, ಅದನ್ನು ನಿವಾರಿಸಲಿಕ್ಕೆ ಅವಳಿಗೆ ಉಪಾಯವಿಲ್ಲಾ.

೪. ಸತ್ಯ ಕ್ರೈಸ್ತರು ಅಂಧಕಾರದಲ್ಲಿ, ಅಂದರೆ, ತಿಳಿವಿಕೆಯಲ್ಲಿಯೂ ನಡತೆಯಲ್ಲಿಯೂ ದೇವದಿಗೆ ಅನ್ಯವಾದ ಸ್ಥಿತಿಯಲ್ಲಿ ಇರದಿರುವ ಕಾರಣ, ಆ ದಿನವು ಭಯಂಕರ ರೀತಿಯಾಗಿ ಅವರ ಮೇಲೆ ಬಂದು ಬೀಳದು.

೫. ಅವರ ಈಗಿನ ಸ್ಥಿತಿಯು ಸುವಾರ್ತೆಯ ಸತ್ಯದ ಬೆಳಕಿನಿಂದ ಪುಟ್ಟಿದ ಶುದ್ಧೀಕರಣಾನ್ವಿತವಾದ ಪೂರ್ಣ ಪ್ರಕಾಶಮಾನ ಸ್ಥಿತಿಯಾಗಿರುತ್ತದೆ.

೬. ಕ್ರೈಸ್ತನು ತನ್ನ ಕಡೆಯಲ್ಲಿ, ತಾನು ಪೌಂದಿದ ಬೆಳಕಿಗೂ ಶಕ್ತಿಗೂ ಸರಿಯಾಗಿ ನಡಕಾಳ್ಳ ಬೇಕು, ಅವನು ಬಾಧವಿಲ್ಲದೆ, ಅಲಸಿಯಾಗಿ ರಕ್ಷಣೆಯನ್ನು ಅಸಡ್ಡೆ ಮಾಡದೆ, ಸಾಮಾರಿತನದಲ್ಲಿಯೂ ಪ್ರಪಂಚಚಾರಗದ ಕ್ರಮೆಯಲ್ಲಿಯೂ ಬೀಳದೆ, ಸಿದ್ಧವಾಗಿ ನಿಲ್ಲ ಬೇಕು. ಸ. ನಾ. ರಾಮ. ೧೩.

೭. ಶುದ್ಧ ಪ್ರಾಪಂಚಿಕರು ಸಪೌ ತಮ್ಮ ದುಷ್ಕರ್ಮಕ್ಕೆ ತಕ್ಕ ಸಮಯವನ್ನು ನಾಡಿಕಾಳ್ಳುತ್ತಾರಾದ ಮೇಲೆ, ವಿಶ್ವಾಸಿಯು ತನಗೆ ಕಾಟ್ಟಿರುವ ಕೃಪಾವಧಿಯನ್ನು ಯೆಷ್ಟಾ ಜಾಗ್ರತೆಯಿಂದ ಉಪಯೌಗಿಸ ಬೇಕಲ್ಲವೇ. ಪ್ರಾಪಂಚಿಕರ ನಿಶ್ಚಿಂತವಾದ ಸ್ಥಿತಿಯು ಕ್ರೈಸ್ತನ ಪ್ರಾಣಸ್ಥಿತಿಗೆ ವಾಪ್ಪದು. ನಿದ್ರೆ ಮಾಡುವದೂ ಮತ್ತರಾಗುವದೂ ಅಂದರೆ, ಅಲಕ್ಷೆಯಿಂದಲೂ ಜಾಡ್ಯದಿಂದಲೂ, ಇಹಚಿಂತೆ ಚಾಂಗಾಧಿಗಳಿಂದ ಸಾಕ್ಷಿ, ಕರ್ತಾರವಾದ ನಿತ್ಯತ್ವದ ಸಂಗತಿಯನ್ನು ಮರತು ಬಿಡುವದು. ರಾತ್ರಿ ಅಂದರೆ, ಅವಿಶ್ವಾಸವೂ ಅಜ್ಞಾನವೂ. ಈ ಪ್ರಕಾರ ಪೂರ್ಣ ಅರ್ಥವೇನೆಂದರೆ, ಅವಿಶ್ವಾಸವೂ ಅಜ್ಞಾನವೂ ಮಾತ್ರವೇ, ನಿದ್ರೆ ಯೆಂಬ ಅಲಕ್ಷೆಯಿಂದಲೂ, ಜಾಡ್ಯದಿಂದಲೂ, ಮತ್ತುವಾಗುವದೆಂಬ ಪ್ರಪಂಚದ ಚಿಂತೆ ಚಾಂಗಗಳಿಂದಲೂ, ಮನುಷ್ಯನನ್ನು ಮದಾಂಧ ಮಾಡುತ್ತವೆ.

೮. ವಿಶ್ವಾಸ ಪ್ರೀತಿಗಳು ಕವಚವಾಗಿರುತ್ತವೆ, ಪೌರ್ಣಾಗಂದರೆ, ಪ್ರೀತಿಯನ್ನು ಕೈಕಾಳ್ಳುವ ವಿಶ್ವಾಸವು ಯೆಲ್ಲಾ ಯೆಸುಗೆಗಳನ್ನು ನಿವಾರಿಸುತ್ತದೆ. ವಿಶ್ವಾಸವು ಪಾಪಪರಿಪೌರವನ್ನು ಅಪ್ಪಿಕಾಳ್ಳುವದರಿಂದ ನಮ್ಮನ್ನು ಕಾಪಾಡುವ ದೇವಸಂಸರ್ಗವನ್ನು ಬಳಸುತ್ತದೆ; ಪ್ರೀತಿಯು ಯೆಲ್ಲಾ ಕೇಡನ್ನು ವಾಳ್ಳೇದರಿಂದ ಜೈಸುತ್ತದೆ. ನಿಶ್ಚಯವಾದ ಬಿಡುಗಡೆಯ ಪೌರ್ಣೈಕೆಯು ಪೂರ್ಣವಾಗಿ ತಲೆಯನ್ನು ಯೆತ್ತಲಿಕ್ಕೆ ಧೈರ್ಯ ಕಾಡುತ್ತದೆ. ಲೂಕ. ೨೧, ೨೮. ಈ ಪೌರ್ಣೈಕೆ ನಮ್ಮಲ್ಲಿ ಇರುವದು ಯುಕ್ತವಾಗಿದೆ, ಯಾಕೆಂದರೆ. ವ. ೯ ರ ಪ್ರಕಾರ.

೯. ದೇವರ ಕೃಪೆಯ ಆಯಿಕೆಯಲ್ಲಿಯೂ ಯೇಸು ಕ್ರಿಸ್ತನ ಮರಣದಲ್ಲಿಯೂ (ಉತ್ಥಾನದಲ್ಲಿಯೂ) ಬೇರೂರುವ ರಕ್ಷಣೆಯ ಪೌರ್ಣೈಕೆಯು, ನ್ಯಾಯ ತೀರ್ಪಿನ ದಿನದ ವಿಷಯದಲ್ಲಿ ಯೆಲ್ಲಾ ಕರಕರೆಯನ್ನೂ ಅಂಜಿಕೆಯನ್ನೂ ಭಯವನ್ನೂ ನಂಮಿಂದ ತೆಗಿಯ ತಕ್ಕದ್ದು.

೧೦. ಕ್ರಿಸ್ತನ ಆಗಮನಕಾಲದಲ್ಲಿ ನಾವು ಜೀವದಲ್ಲಿದ್ದರೂ ತೀರಿ ಪೌರ್ಣಾಗಿದ್ದರೂ ಯೆಂಬ ಅರ್ಥ. ಈ ವಾಕ್ಯಕ್ಕೆ ಅರ್ಥ ಬೇರೆ, ವ. ೬ಕ್ಕೆ ಅರ್ಥ ಬೇರೆ.

೧೧. ದೇವರ ಮಪೌರ್ಣ ಕೃಪಾಸಂಕಲ್ಪವು. ವ. ೯, ನಿಮ್ಮಲ್ಲಿ ಪೂರ್ತಿ ಆಗುವ ಪೌರ್ಣಾಗೆ.

೧೨. ವಾಬ್ಬನು ವಾಬ್ಬನಲ್ಲಿ ಆತ್ಮವೃದ್ಧಿಯು ಆಗುವ ಪೌರ್ಣಾಗೆ ಮಾಡಲಿ, ರಾಮ. ೧೪, ೧೯. ೧ ಕಾರಿ. ೮, ೧.

II. ಬೈರೆ ಬೈರೆ ಬುದ್ಧಿ ಮಾತುಗಳು. ಸಮಾಪ್ತಿ. ವ. ೧೨–೨೪.

೧) ಬೋಧಕರ ಸನ್ಮಾನವು. ವ. ೧೨. ೧೩. ೨) ಆತ್ಮಿಕ ಸಹಾಯ ಬೇಕಾದಂಥಾ ಅಲ್ಪರ ಪರಾಮರಿಕೆ. ವ. ೧೪. ೧೫. ೩) ಅಂತರ್ಯದಲ್ಲಿರುವ ಸಾಖ್ಯವಾದ ವಿಶ್ರಾಂತಿ. ವ. ೧೬–೧೮. ೪) ಆತ್ಮವರಗಳ

೧ ಥೆಸ್ಸ. ೫, ೧೨—೧೮.

ವಿಷಯದಲ್ಲಿ ಹ್ಯಾಗೆ ನಡಕೊಳ್ಳ ಬೇಕು. ವ. ೧೪—೨೨. ೫) ಆಶೀರ್ವಾದ. ವ. ೨೩. ೨೪. ೬) ಸಮಾಪ್ತಿ. ವ. ೨೫, ೨೮.

೧೨. ಆದಲ್ಲದೆ ೧), ಸಹೋದರರೇ, ನಿಮ್ಮಲ್ಲಿ ಕಷ್ಟ ಪಟ್ಟು, ಕರ್ತನಲ್ಲಿ ನಿಮ್ಮ ಮುಖ್ಯಸ್ಥರಾಗಿದ್ದು ೨), ನಿಮಗೆ ಬುದ್ಧಿ ಹೇಳುವವರನ್ನು ತಿಳಿದು ೩), ೧೩. ಅವರ ಕೆಲಸಕ್ಕಾಗಿಸ್ತರ ಅವರನ್ನು ಪ್ರೀತಿಯಲ್ಲಿ ಅತ್ಯಧಿಕವಾಗಿ ಸನ್ಮಾನಿಸ ಬೇಕೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇವೆ. ನಿಮ್ಮಲ್ಲಿ ಸಮಾಧಾನವಾಗಿರ್ರಿ ೪).

೧. ವಾಬ್ಬರನ್ನಾಬ್ಬರು ಕಟ್ಟುವ ಪಂಗು ವ. ೧೧. ಘನವಾಗಿರುವ ಕಾರಣ.

೨. ಪೌಲಸ್ತಾಗಿ ಪುಟ್ಟಿದ ಥೆಸ್ಸಲೊನೀಕೆಯ ಸಭೆಗೂ ಮುಖ್ಯಸ್ಥರಿದ್ದರೆಂದು ಇದರಿಂದ ಕಾಣುತ್ತದೆ.

೩. ಬೋಧಕರಾಗಿಯೂ ಮುಖ್ಯಸ್ಥರಾಗಿಯೂ ಇರುವ ಉದ್ಯೋಗವನ್ನು ಪೂರೈಂದಿದವರನ್ನು ಅಧಿಕವಾಗಿ ಸನ್ಮಾನಿಸ ತಕ್ಕದ್ದು.

೪. ಅವರಿಗೆ ಅತ್ಯಧಿಕವಾದ ಪ್ರೀತಿಯನ್ನು ತೋರಿಸಿರಿ.

೫. ಅಂದರೆ, ಅವರ ಕೆಲಸವು ಸುಲಭವಾಗುವ ಪೂರಾಗೆ ಪರಸ್ಪರ ಸಮಾಧಾನವನ್ನು ಕೈಕೊಳ್ಳಿರಿ.

೧೪. ಸಹೋದರರೇ, ನಾವು ನಿಮಂನ್ನು ಬೇಡಿ ಕೊಳ್ಳುವದೇನಂದರೆ ೧), ಕ್ರಮ ಹೀನರಿಗೆ ೨) ಬುದ್ಧಿ ಹೇಳಿರಿ; ಮನಗುಂದಿದವರನ್ನು ೩) ಸಂತೈಸಿರಿ; ಬಲಹೀನರಿಗೆ ಕೈ ಕೊಡಿರಿ; ಯೆಲ್ಲರ ಕಡೆಗೆ ದೀರ್ಘಶಾಂತರಾಗಿರ್ರಿ. ೧೫. ಕೇಡಿಗೆ ಕೇಡನ್ನು ಯಾರೂ ಯಾರಿಗಾದರೂ ೪) ಮಾಡದ ಹಾಗೆ, ನೋಡಿ ಕೊಳ್ಳಿರಿ ೫). ವಾಬ್ಬಾಬ್ಬರಿಗೂ ಸ್ತರವೂ ಯೆಲ್ಲರಿಗೂ ಸ್ತರವೂ ವಾಳ್ಳೇದನ್ನು ಯಾವಗಲೂ ಹಿಂದಟ್ಟಿರಿ ೬).

೧. ಅಲ್ಪರನ್ನು ವ. ೧೨ ಬೇಡಿ ಕೊಳ್ಳುತ್ತಾನೆ; ದಾಡ್ಡವರನ್ನು ಯೆಚ್ಚರಿಸುತ್ತಾನೆ.

೨. ಕ್ರಮದಾಳಗೆ ಬರಲಾಲ್ಲದವರಿಗೆ. ೨ ಥೆಸ್ಸ. ೩, ೬. ೧೧. ಇಂಥಾ ಸಾಂಪಾದ ಸ್ಥಿತಿಯಲ್ಲಿ ಇರುವ ಸಭೆಯಲ್ಲಿಯಾದರೂ, ಯೆಳೇ ಪ್ರಾಯದ ವಿಶ್ವಾಸಿಗಳು ಮೊದಲನೇ ಸಂತೋಷಕಾಲದಲ್ಲಿ ಆತ್ಮದ ಶಿಕ್ಷೆಗೆ ವಾಳಗಾಗಲಾಲ್ಲದಿದ್ದರೆ, ಅಕ್ರಮಗಳು ಪುಟ್ಟುತ್ತಿದ್ದವು.

೩. ಬಲವಿಲ್ಲದವರಿಗೆ ಬೇಸರಗಾಳ್ಳುವದು ಬಲವಿಲ್ಲದವನ ಲಕ್ಷಣ, ಅವರಿಗೆ ತಾಳ್ಮೆಯಿಂದ ಕೈಕಾಡುವದು ಬಲವಂತನ ಲಕ್ಷಣ.

೪. ಅಂದರೆ ಪೀಂಸಕರಾದ ಪರಜನರಿಗೂ ಯೆಪೂದರಿಗೂ ಸಪೂರಾ ಕೇಡು ಮಾಡ ಬಾರದು.

೫. ವಾಬ್ಬರಿಗಾಬ್ಬರು ಕಾವಲರಾಗಿರಿ. ನಿಧಾನಿಯು ಉತ್ಸೇಗಿಯನ್ನು ತಡಿಸ ಬೇಕು.

೬. ವಾಳ್ಳೇದನ್ನು ಮನುಷ್ಯನು ಪೀಂದಟ್ಟಿ ಬೇಕು, ಕೆಟ್ಟದ್ದು ಮನುಷ್ಯನನ್ನು ಪೀಂದಟ್ಟುತ್ತದೆ.

೧೬. ಯಾವಾಗಲೂ ಸಂತೋಷ ಪಡಿರಿ ೧). ೧೭. ಯೆಡೆ ಬಿಡದೆ ಪ್ರಾರ್ಥಿಸಿರಿ ೨). ೧೮. ಯೆಲ್ಲಾದರಲ್ಲಿ ಸ್ತೋತ್ರ ಮಾಡಿರಿ; ಯಾಕಂದರೆ ನಿಮಂನು ಕುರಿತು ಕ್ರಿಸ್ತ ಯೇಸುವಿನಲ್ಲಿ ದೇವರ ಚಿತ್ತವು ೩) ಇದ್ದೇ.

೧ ಥೆಸ್ಸ. ೫, ೧೯—೨೩.

೧. ಈ ಮೂರು ಬುದ್ಧಿಮಾತುಗಳು ವಾಂದ ಕ್ಕಾಂದು ಸಂಬಂಧವಾಗಿವೆ. ದುಃಖದಲ್ಲಿಯೂ ಸಂತಾಷ ಪಡುವ ಬಲವು ಫಿಲಿ. ೩, ೧. ೪, ೪., ಯೆಡೆ ಬಿಡದ ವಿಶ್ವಾಸಪ್ರಾರ್ಥನೆಯಿಂದಲೆ ಪುಟ್ಟುತ್ತದೆ. ರಾೀಮ. ೧೨, ೧೨.

೨. ಯೆಡೆ ಬಿಡದೆ ಪ್ರಾರ್ಥಿಸ ಬೇಕಂದರೆ; ನಂಮ ಸುಖ ದುಃಖಗಳನೆಲ್ಲಾ ಪ್ರಾರ್ಥನೆಯಲ್ಲಿ ದೇವರಿಗೆ ಅರಿಕೆ ಮಾಡಿದರೆ ಸಾಲದು ಲೂಕ. ೧೮, ೧., ಮನಾೀವಾಕ್ಕಾಯಗಳಿಂದಲೂ ಯಾವಾಗಲೂ ದೇವರಿಗೆ ಅಧೀನರಾಗಿದ್ದು, ಆತನ ಪ್ರೀತಿ ಸಂಸರ್ಗವನ್ನು ಬಯಸುತ್ತಾ ೀರ ಬೇಕು. ಈ ಅಜಿಲಾಷೆಗೆ ಕೃತಜ್ಞತೆ ಮೂಲವಾಗಿದೆ. ಯೆಲ್ಲಾ ಪ್ರಾರ್ಥನೆಯು ಪೃದಯದಲ್ಲಿ, ಅಥವಾ ಬಾಯಿಂದ, ಆಗುವ ಕೃತಜ್ಞಾಪನೆಯಿಂದ ತಾಡಗ ಬೇಕು.

೩. ೀದು, ನಂಮಂನು ಕ್ರಿಸ್ತ ಯೇಸುವಿನಲ್ಲಿ ಪೃದಯಪೂರ್ವಕವಾಗಿ ಪ್ರೀತಿ ಮಾಡಿ, ನಾವೂ ಈ ಪ್ರೀತಿಗೆ ಒಪ್ಪ ಬೇಕೆಂದು ಅಪೇಕ್ಷಿಸುವ ದೇವರ ಚಿತ್ತವಾಗಿದೆ.

೧೯. ಆತ್ಮವಂನು ಆರಿಸ ಬ್ಯೆಡಿರಿ ೧). ೨೦. (ಪ್ರವಾದನೆಗಳಂನು ೨) ಅಸಡ್ಡೆ ಮಾಡ ಬ್ಯೆಡಿರಿ. ೨೧. ಯೆಲ್ಲವಂನು ೩) ಪರ್ಕ್ಷಿಸಿ, ವಾಳ್ಳೆದಂನ್ಯೆ ಹಿಡಿದು ಕಾಳ್ಳಿರಿ. ೨೨. ಕೆಟ್ಟದರ ತಾೀರಿಕೆಗೆಲ್ಲಾ ೪) ದೂರವಾಗಿರ್ರಿ.

೧. ಅಂದರೆ, ವಿಶೇಷವಾದ ಕೃಪಾವರಗಳಿಂದ ಅದು ಪ್ರಕಟವಾಗುವಾಗೈ, ೧ ಕಾರಿ. ೧೨.

೨. ಅಂದರೆ, ದೇವರ ವಾಕ್ಯದ ಬಾೀಧನೆಯೂ ೧ ಕಾರಿ. ೧೪, ೩. ೀ., ಚವಿಷ್ಯತ್ಕಾಲದ, ಮುಖ್ಯವಾಗಿ ಕ್ರಿಸ್ತನ ದಿನದ ವಿಷಯವಾದ ಪ್ರಕಟಣೆಯೂ. ೀದನ್ನು ಕೆಲವರು ಅತಿರೇಕ ದಾಡ್ಡದು ಮಾಡಿದರು, ಕೆಲವರು ಅಲ್ಪವೆಂದೆಣಿಸಿದರು.

೩. ದೇವರ ವಾಕ್ಯದ ಸೂತ್ರಪ್ರಮಾಣದಿಂದ ೀ ದರಿಂದ ಪೊಚ್ಚೆಂಬ ದಾೀಷವೂ ಕಡಿಮೆ ಯೆಂಬ ದಾೀಷವೂ ಪರಿಹಾರವಾಗಿದೆ.

೪. ಕಪಟಭಕ್ತಿಯ ನೆವನಗಳಿಂದ ವಾಳ ಪಾಕ್ಕುವ ಸಮಸ್ತ ತರದ ಕೇಡಿನ ತಾೀರಿಕೆಗೆ ಯೆಂಬ ಅರ್ಥ.

೨೩. ೀವಲ್ಲದೆ, ಸಮಾಧಾನವ ೧) ದೇವರು ತಾನ್ಯೆ ನಿಂಮಂನು ಸಂಪೂರ್ಣವಾಗಿ ಪರಿಶುದ್ಧ ೨) ಮಾಡಲಿ; ಮಶ್ತು ನಿಂಮ ಪೂರ್ಣ ಆತ್ಮ ೩) ಪ್ರಾಣ ಶರೀರಗಳು ನಂಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯಲ್ಲಿ ೪) ಶಪ್ಪಿಲ್ಲದ ಹಾಗೆ, ಕಾಪಾಡಲ್ಪಡಲಿ.

೧. ಆತನು ಅನ್ಯೋನ್ಯ ಸಮಾಧಾನವನ್ನೂ ಪೃತ್ಸಂತಾೀಷವನ್ನೂ ಕಷ್ಟದಲ್ಲಿಯೂ ಅಳಿಯದ ಸಂತಾೀಷವನ್ನೂ, ಮೇಲೆ ಪೇಳಿರುವ ಪ್ರಕಾರ ೀಕ್ಯಟ್ಟು ಆಪತ್ತುಗಳಲ್ಲಿಯೂ ದೃಢವಾದ ಕೃತಜ್ಞತೆಯಂನೂ ಕಾಡುತ್ತಾನೆ.

೨. ಶುದ್ಧರಾಗಲಿಕ್ಕೆ ತಾಡಗಿದ ಭಕ್ತರು ಸಿದ್ಧಿಯಂನು ಪಡೆಯ ಬೇಕೆಂದು ಬಯಸಿ ಪ್ರಾರ್ಥಿಸುತ್ತಾನೆ.

೩. ಅಪಾಸ್ತಲನು ಪುನರ್ಜನ್ಮ ಪಾಂದಿದವರ ವಿಷಯದಲ್ಲಿ ಮಾತಾಡಿ, ಆತ್ಮ ಪ್ರಾಣ ಶರೀರಗಳು ಕ್ರಿಸ್ತನ ದಿನಕ್ಕೆ ಸುರಕ್ಷಿತವಾಗಿರ ಬೇಕೆಂದು ಪೇಳುತ್ತಾನೆ. ದೇವರ ವಾಕ್ಯದ ಬೇರೆ ಬೇರೆ ಸ್ಥಳಗಳಲ್ಲಿ ಮನುಷ್ಯನು ದ್ವಿಭಾವ ಉಳ್ಳವನಂತೆ, ಅವನಿಗೆ ಪ್ರಾಣ ಶರೀರಗಳು, ಅಥವಾ ಆತ್ಮ ಶರೀರಗಳು ಉಂಟೆಂದು ಪೇಳಿಯದೆ. ಪುನರ್ಜನ್ಮ ಪಾಂದದ ಮನುಷ್ಯರಿಗೆ ೧ ಕಾರಿ. ೨, ೧೪. ೧ಕಾರಿ. ೧೫, ೪೪. ಪ್ರಾಣ ಜಾವದವರೆಂದೂ, ಬೇರೆ ಕಡೆಯಲ್ಲಿ ರಾೀಮ. ೭, ೧೪. ೮,೭. ಮಾಂಸ ಜಾವದವರೆಂದೂ ಪೇಳಿಯದೆ. ಪುನರ್ಜನ್ಮ ಪಾಂದಿದವರ ಜಾವವು ದೇವರ ವಾಕ್ಯದಲ್ಲಿ ಆತ್ಮ, ಪ್ರಾಣ, ಶರೀರವೆಂಬ ತ್ರಿಭಾಗವಾದದ್ದಾಗಿ ತಾೀರುತ್ತದೆ.

೪. ಅಂದರೆ, ಮನುಷ್ಯರ ಮುಂದೆ ಅಲ್ಲಾ, ಸ್ವಂತ

೧ ಥೆಸ್ಸ. ೫, ೨೪—೨೯.

ಮನಸ್ಸಾಕ್ಷಿಯಲ್ಲಿ ಸಪೂರ್ಣ ಅಲ್ಲಾ, ಕ್ರಿಸ್ತನ ನ್ಯಾಯಸ್ಥಾನದ ಮುಂದೆ ತಪ್ಪಿಲ್ಲದವನಾಗಿ ನಿರ್ಣಯಪೂರ್ಣಾಂದುವ ಪದವಿ ಮನುಷ್ಯಪ್ರಯತ್ನದ ಗುರಿಯಾಗಿರ ತಕ್ಕದ್ದು; ಇಲ್ಲವಿದ್ದರೆ ಪಾಪದ ಸಂಗಡ ವಾಪ್ಪಂದ ಮಾಡಿ, ತನ್ನಲ್ಲಿ ಉಳಿದಿರುವ ಮಲಿನತ್ವದಲ್ಲಿಯೆ ಸಂತುಷ್ಟನಾಗಿರುವನು.

೨೪. ನಿಮ್ಮಂನು ಕರೆಯುವವನು ೧) ನಂಬಿಕೆಯುಳ್ಳವನು; ಅವನು ಅದಂನು ಮಾಡುವನು ೨).

೧. ಸುವಾರ್ತೆಯ ಪ್ರಸಂಗದಿಂದಲೂ, ದಿವ್ಯ ಕೃಪೆಯ ಅಂತರ್ಯತ್ನಗಳಿಂದಲೂ ತನ್ನ ಮಗನ ಅನ್ಯೋನ್ಯತೆಕ್ಕೆ ಕರಿಯುವವನು.

೨. ನಿಮ್ಮನ್ನು ಕಾಪಾಡುವವನು ವ. ೨೩. ಇದೇ ಪ್ರಕಾರ ಕಾರಿಂಥರ ಮತ್ತು ಫಿಲಿಪ್ಪಿಯರ ವಿಷಯದಲ್ಲಿ ಅಪಾಸ್ತಲನು ಪೇಳುತ್ತಾನೆ, ೧ ಕಾರಿ. ೧, ೮. ಫಿಲಿ. ೧, ೬. ದೇವರ ಕೃಪಾಪ್ರವೃತ್ತಿಯನ್ನು ತನ್ನಲ್ಲಿ ಅನುಭವಿಸಿದ ಜಕ್ಕನು, ತಾನು ಎಸಗಿದ್ದನ್ನು ಕಡೆವರೆಗೂ ಸಾಗಿಸುವ ದೇವರ ಸ್ಥೈರ್ಯದಲ್ಲಿ ಭರವಸವಿಡ ಬೇಕು.

೨೫. ಸಹೋದರರ್ಸೇ, ನಮಗೋಸ್ಕರ ೧) ಪ್ರಾರ್ಥನೆ ಮಾಡಿರಿ. ೨೬. ಸಹೋದರರೆಲ್ಲರಂನು ಪರಿಶುದ್ಧ ಮುದ್ದಿನಿಂದ ೨) ವಂದಿಸಿರಿ. ೨೭. ಈ ಪತ್ರಿಕೆಯು ಪರಿಶುದ್ಧ ಸಹೋದರರೆಲ್ಲರಿಗೆ ವ್ಯಾದಿ ಹೇಳಲ್ಪಡ ಬೇಕೆಂದು, ನಿಮಗೆ ಕರ್ತನ ಮೇಲೆ ಆಣೆ ಇಡುತ್ತೇನೆ ೩). ೨೮. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ ೪). ಆಮೆನ್.

೧. ಇದೇ ಪ್ರಕಾರ ಅಪಾಸ್ತಲನು ರೋಮ. ೧೫, ೩೦. ಎಫೆ. ೫, ೨೯. ಕೊಲೊ. ೪, ೩. ಬೇರೆ ಕಾಳ್ಳುತ್ತಾನೆ. ಅವನು ತಾನೆ ಈ ವಿಷಯದಲ್ಲಿ ಉದಾಸೀನ ಮಾಡುವವನಲ್ಲಾ, ಫಿಲಿ. ೧, ೪. ಕೊಲೊ. ೧, ೩. ಎಫೆ. ೧, ೧೬. ೧ ಥೆಸ್ಸ. ೧, ೨.

೨. ರೋಮ. ೧೬, ೧೬. ೨ ಕೊರಿ. ೧೩, ೧೨. ಪರಿಶುದ್ಧ ಸಪೂರ್ಣೋದರಪ್ರೀತಿಯ ಮುದ್ದಿನಿಂದ. ಇದು ಪ್ರಥಮ ಕ್ರೈಸ್ತರಲ್ಲಿ, ವಾಟ್ಸಿಗೆ ಪ್ರಾರ್ಥನೆ ಮಾಡಿದ ಮೇಲೆಯೂ, ರಾತ್ರಿಭೋಜನ ತಕ್ಕಾಳ್ಳುವದಕ್ಕಿಂತ ಮುಂಚೆಯೂ, ವಾಡಿಕೆಯಾಗಿತ್ತು. ಅಪಾಸ್ತಲನು ತಾನು ವಾಬ್ಬಾಬ್ಬನನ್ನು ಅಪ್ಪಿಕೊಂಡು ಯೆಲ್ಲರಿಗೆ ತನ್ನ ಪ್ರೀತಿಯನ್ನು ತೋರಿಸುವ ಇಚ್ಛೆಯನ್ನು ತೋರಿಸುವದಕ್ಕೆ ವಾಬ್ಬರು ವಾಬ್ಬರಿಗೆ ತನ್ನ ಪೆಸರಿನಲ್ಲಿ ಮುದ್ದಿಡ ಬೇಕೆಂದು ಬರೆಯುತ್ತಾನೆ.

೩. ಈಗಿನ ಕಾಲದಲ್ಲಿ ರೋಮಿಯ ಪಾಪನ ಕಡೆಯ ಸಭೆಯು ಮಾಡುವ ಪ್ರಕಾರ, ಆ ಕಾಲದಲ್ಲಿಯೂ ಕೆಲವರು, ಯಾರಾದರೂ ಅಪಯೋಗಿಸದ ಪೂರ್ಣಾಗೆ ಅಪಾಸ್ತಲನ ವಾಕ್ಯವಂನು ಯೆಲ್ಲರಿಗೆ ಓದಿ ಪೇಳದಿರುವದು ವಾಳ್ಕೇದೆಂದೆಣಿಸಿದ ಕಾರಣ, ಅಂಥವರಿಗೆ ಪೌಲನು ಥಟವಾಗಿ ಯೆದುರು ನಿಲ್ಲುತ್ತಾನೆ. ಆ ಕಾಲದಲ್ಲಿ ೨ ಥೆಸ್ಸ. ೨, ೩. ಸುಳ್ಳು ಪತ್ರಿಕೆಗಳು ಸಪೂರ್ಣ ಇದ್ದ ಕಾರಣ, ಇದನ್ನು ಯೆಲ್ಲರಿಗೆ ಪ್ರಕಟಿಸಲವಶ್ಯವಾಗಿತ್ತು.

೪. ಇದು ವಾಡಿಕೆಯಾದ ಅಪಾಸ್ತಾಲಿಕ ನಮಸ್ಕಾರ. ವಿಶ್ವಾಸಿಗಳಾಗಿದ್ದರೆ, ನಮಗೂ ಈ ನಮನಬಂತೆಂದು ತಿಳಕೊಂಡು, ಈ ನಮನದ ಬಲವನ್ನು ನಮ್ಮಲ್ಲಿ ಅನುಭವಿಸ ಬಹುದು.

೨ ಥೆಸ್ಸ.

ಥೆಸ್ಸಲೊನೀಕೆಯರಿಗೆ ಬರದ ಯೆರಡನೆ ಪತ್ರಿಕೆ.

ಥೆಸ್ಸಲೊನೀಕೆಯರಿಗೆ ಕಳುಹಿದ ಮೊದಲನೆ ಪತ್ರಿಕೆಯ ಫಲದ ವಿಷಯದಲ್ಲಿಯೂ ಆ ಸಭೆಯ ಸ್ಥಿತಿಯ ವಿಷಯದಲ್ಲಿಯೂ ಅಪೊಸ್ತಲನಾದ ಪೌಲನು ಕೊರಿಂಥದಲ್ಲಿದ್ದಾಗ ಹೆಚ್ಚಿಗೆ ವರ್ತಮಾನ ಕೇಳಿದನು. ಅದು ವೊಟ್ಟಾರೆ ಮುಂಚಿನ ಹಾಗೆಯೇ ಆನಂದಕರವಾಗಿತ್ತು: ಯೇನಂದರೆ ಉಪದ್ರವಗಳು ನಿಲ್ಲದಿದ್ದರೂ, ಆ ಸಭೆಯು ತಾತ್ಕಾಲಿಯೊಗಿರುವದಲ್ಲದೆ, ವಿಶ್ವಾಸ ಪ್ರೀತಿಗಳಲ್ಲಿ ಅಭಿವೃದ್ಧಿಯಾಗುತ್ತಾ ಬಂತು. ಆದರೆ ಕರ್ತನ ಆಗಮನದ ವಿಷಯದಲ್ಲಿ ಮಾತಾಡುವವರ ಹರಟೆ ಸಹಾ ನಿಂತು ಹೋಗಿರಲಿಲ್ಲ. ಕೆಲವರು ಪ್ರತ್ಯೇಕ ಪ್ರಕಟಣೆಯಿಂದೆಂಬ ಹಾಗೆ, ಅದು ಸವಿಾಪವಾಗಿರುತ್ತದೆ ಯೆಂದು ಹೇಳಿ; ಅಪೊಸ್ತಲನ ಮೊದಲನೆ ಪತ್ರಿಕೆ ಈ ಅಭಿಪ್ರಾಯಕ್ಕೆ ವೊಪ್ಪದರಿಂದ, ಕರ್ತನ ಆಗಮನವು ಸವಿಾಪವೆಂಬ ಹಾಗೆ ಕಾಲವನ್ನೂ ಸಮಯವನ್ನೂ ನಿಶ್ಚೈಸುವ ಕಳ್ಳ ಪತ್ರಿಕೆಯನ್ನು ರಚಿಸಿ, ಅಪೊಸ್ತಲನು ತಾನೆ ಪತ್ರಿಕೆ ಬರದನೆಂದು ಹೇಳಿದರೆಂತ ತೋರುತ್ತದೆ. ಅಂಥಾ ಮಾತು ೧ ಥೆಸ್ಸ. ೫, ೧. ಕ್ಕೆ ವಿರೋಧ. ಭ್ರಮೆಯನ್ನೂ ಅದರಿಂದ ಹುಟ್ಟಿದ ಮನೆ ಮನೆ ತಿರುಗುವ ದುರ್ನಡತೆಯನ್ನೂ ನಿಲ್ಲಿಸುವ ಬಗ್ಯೆ, ೩, ೧೧. ಪೌಲನು ಈ ಯೆರಡನೆ ಪತ್ರಿಕೆಯನ್ನು ಬರದನು. ಇದರಲ್ಲಿಯೂ ಮೂರು ಸಂಗತಿಗಳು ಉಂಟು. ೧) ಥೆಸ್ಸಲೊನೀಕೆಯರ ನಂಬಿಕೆಯನ್ನು ಹೊಗಳಿ ಕ್ರಿಸ್ತನ ಪುನರಾಗಮನದ ಸತ್ಯ ಬೋಧನೆಯಿಂದ ಅದನ್ನು ಆದರಿಸಿ ಬಲ ಪಡಿಸುತ್ತಾನೆ. ೨) ಪುನರಾಗಮನದ ಮುಂಚೆ ಬರ ಬೇಕಾದ ಮಾರ್ಮಲೆಯ ವಿಷಯ ಬೋಧಿಸುತ್ತಾನೆ. ೩) ಭಕ್ತಿಯನ್ನಿಸಿ ಕೊಂಬ ತಿರುಕತನದ ವಿಷಯ ಅತಿ ಬಲವಾಗಿ ಬೆದರಿಸುತ್ತಾನೆ. ಈ ಕಡೇ ಸಂಗತಿಯಿಂದಲೆ ಈ ಪತ್ರಿಕೆಯು ಸಮಸ್ತ ಕ್ರೈಸ್ತರಿಗೆ, ಮುಖ್ಯವಾಗಿ ಹೊಸಬರಿಗೆ ಬಹು ವಿಶೇಷ. ಇದಲ್ಲದೆ ಕ್ರಿಸ್ತನ ಆಗಮನದ ಮುಂಚೆ ಇರ ತಕ್ಕ ಅವಸ್ಥೆಗಳ ವಿಷಯ ಇಲ್ಲಿ ಬರದಿರುವ ಬೋಧನೆಯು ಹೊಸ ವೊಡಂಬಡಿಕೆಯಲ್ಲೆಲ್ಲಾ ಅಪರೂಪವಾಗಿರುತ್ತದೆ, ಹ್ಯಾಗಂದರೆ, ಈ ಸಂಗತಿ ಹೇಳುವ ಪ್ರಕಟಣೆಯ ದರ್ಶನಗಳು ಸಹಾ ಇಷ್ಟು ಸ್ಪಷ್ಟವಾಗಿರುವದಿಲ್ಲಾ. ಆದ್ದರಿಂದ ಕರ್ತನ ಆಗಮನವು ನಮ್ಮ ಕಾಲದಲ್ಲಿ ಅಧಿಕ ಸವಿಾಪವಾಗಿರುವ ಕಾರಣ, ಈ ಪತ್ರಿಕೆಯ ಪ್ರವಾದನೆಯನ್ನು ಅಧಿಕ ಕೃತಜ್ಞತೆಯಿಂದ ಮನಸ್ಸಿನಲ್ಲಿ ತಕ್ಕೊಂಡು ಪ್ರಯೋಗಿಸ ತಕ್ಕದ್ದು.

ಸ. ೧.

I. ಥೆಸ್ಸಲೊನೀಕೆಯರ ಅಖಿವದಿಗ್ಧಾಸ್ಕರ ಅಪೊಸ್ತಲನಲ್ಲಿ ಹುಟ್ಟಿದ ಸಂತೊಷ. ವ. ೧—೪.

II. ಉಪದ್ರವಕಾಲದಲ್ಲಿ ಮುಂದಿನ ನ್ಯಾಯಶಿರ್ಪಿನ ಆಲೊಚನೆಯಿಂದ ಪಡ ಕೊಳ್ಳ ಶಕ್ತ ಆದರಣೆ. ವ. ೫—೧೦.

III. ಅದರ ಮೇಲೆ ದೃಷ್ಟಿ ಇಟ್ಟು ಮಾಡಿದ ಬಿನಹ. ವ. ೧೧. ೧೨.

ಮೊದಲನೆ ಪತ್ರಿಕೆಯಲ್ಲಿ ಮಾಡಿದ ಹಾಗೆಯೆ ಪೌಲನು ಸಿಲ್ವಾನ ತಿಮೊಥೆಯರ ಸಹಿತವಾಗಿ ಥೆಸ್ಸಲೊನೀಕೆಯರಿಗೆ ಸಾಮಾನ್ಯವಾದ ನಮಸ್ಕಾರ ಹೇಳಿ, ಯೆಲ್ಲಾ ಹಿಂಸೆಗಳಲ್ಲಿಯೂ ಅವರ ವಿಶ್ವಾಸವೂ ಸಹೋ

೨ ಥೆಸ್ಸ. ೧, ೫—೧೦.

ದಕಪ್ರೀತಿಯೂ ಬೆಳಿಯುತ್ತಾ ಬರುವ ಕಾರಣ, ತಾನು ಅವರಿಗೋಸ್ಕರ ಪಡುವ ಸಂತೋಷವನ್ನೂ ಹೆಚ್ಚಳವನ್ನೂ ತಿಳಿಸುತ್ತಾನೆ. ಅದಾದ ಮೇಲೆ, ಸಮವಾಗಿಯೂ ವಿಷಮವಾಗಿಯೂ ಅವರಲ್ಲಿ ತರ್ಕವಾಗುತ್ತಾ ಇರುವ ಕ್ರಿಸ್ತನ ಪುನರಾಗಮನದ ಮುಖ್ಯ ಸಂಗತಿಗೆ ಬಂದು, ವಿಶ್ವಾಸಿಗಳು ಆಗ್ಯೇ ಯೇನು ಹಾಕೈಸ ಬಹುದು, ಅವಿಶ್ವಾಸಿಗಳು ಯಾಕೆ ಹೆದರ ಬೇಕು ಯೆಂಬದನ್ನು ತೋರಿಸುತ್ತಾನೆ. ಹಿಂಸೆಗಳಲ್ಲಿಯೂ ಉಪದ್ರವಗಳಲ್ಲಿಯೂ ಅವರಲ್ಲಿದ್ದ ಸ್ಥಿರ ಬುದ್ಧಿಯನ್ನು ಹೊಗಳಿ, ಕ್ರಿಸ್ತನ ಆಗಮನದ ಸಮವಾದ ಬೋಧನೆಯೆನ್ನು ಕೊಟ್ಟು, ಮುಂದೆ ಹೇಳುವದೇನಂದರೆ:

೫. ಅದು ನೀವು ದೇವರ ರಾಜ್ಯದ ನಿಮಿತ್ತ ಶ್ರಮ ಪಡುವವರಾಗಿ, ಅದಕ್ಕೆ ಯೋಗ್ಯರೆಂದೆಣಿಸಲ್ಪಡುವ[೧] ಹಾಗೆ, ದೇವರ ನೀತಿಯಾದ ನ್ಯಾಯತೀರ್ಪಿಕೆಯ ದೃಷ್ಟಾಂತವಾಗಿದೆ[೨]. ೬. ಹ್ಯಾಗಂದರೆ, ದೇವರಂತೆಯದವರಿಗೂ[೩], ನಮ್ಮ ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಗೆ ವಿಧೇಯರಾಗದವರಿಗೂ, ೭. ದಂಡನೆಯಾಂತು ಕೊಡುವ ಕರ್ತನಾದ ಯೇಸುವು ತನ್ನ ಬಲದ ದೂತರ[೪] ಸಂಗಡ ಅಗ್ನಿಜ್ವಾಲೆಯಲ್ಲಿ[೫] ಪರಲೋಕದಿಂದ ಪ್ರತ್ಯಕ್ಷವಾಗುವಾಗ[೬], ನಿಮ್ಮಂತೆ ಉಪದ್ರಪಡಿಸುವವರಿಗೆ ಉಪದ್ರವನ್ನೂ ೮. ಉಪದ್ರಪಡುವವರಾದ ನಿಮಗೆ ನಮ್ಮ ಸಂಗಡ ವಿಶ್ರಾಂತಿಯನ್ನೂ[೭], ಪ್ರತಿಯಾಗಿ ಕೊಡುವದು ದೇವರಿಗೆ ನ್ಯಾಯವಾಗಿದೆ[೮]. ೯. ಅವರು ಕರ್ತನ ಮುಖದಿಂದಲೂ[೯], ಅವನ ಶಕ್ತಿಯ ಮಹಿಮೆಯಿಂದಲೂ, ನಿತ್ಯ[೧೦] ನಾಶನವಾದ ದಂಡನೆಯಾಂತು ಅನುಭವಿಸುವರು—ಅವನು ತನ ಪರಿಶುದ್ಧರಲ್ಲಿ ಮಹಿಮೆ ಪಡುವ ಹಾಗೆಯೂ, ೧೦. ನಿಮಗೆ ಆದ ನಮ್ಮ ಸಾಕ್ಷಿಯು ವಿಶ್ವಾಸಿಸಲ್ಪಟ್ಟದರಿಂದ[೧೧], ವಿಶ್ವಾಸಿಗಳೆಲ್ಲರಲ್ಲಿ[೧೨] ಆಶ್ಚರ್ಯವಂತನಾಗುವ[೧೩] ಹಾಗೆಯೂ, ಬರುವ ಆ ದಿವಸದಲ್ಲಿಯೇ.

೧. ಚಕ್ತರು ಶ್ರಮಗಳಲ್ಲಿ ದೇವರ ರಾಜ್ಯಕ್ಕೆ ಯೋಗ್ಯರಾಗುತ್ತಾರೆ; ಅಂದರೆ, ಅವುಗಳಿಂದ ಅದನ್ನು ದುಡಿಯ ಬಹುದೆಂದಲ್ಲಾ, ಯಾಕಂದರೆ ನಮಗೆಷ್ಟು ಉಪದ್ರವ ಬಂದರೂ, ಅದು ಆ ಮಹಿಮೆಗೆ ಯೆಂದಿಗೂ ಯೆಣೆ ಆಗದು. ರೋಮ. ೮, ೧೮. ಇದಲ್ಲದೆ ದೇವರ ಕರುಣೆಯಿಂದ ಮಾತ್ರವೆ ನಾವು ಯೋಗ್ಯರಾಗುತ್ತೇವೆ, ಕೊಲೊ. ೧, ೧೨. ಆದರೆ ಮನುಷ್ಯನ ವಾಳ ಚಾಪವನ್ನು ಉಪದ್ರವದ ಬೆಂಕಿಯಲ್ಲಿ ಪುಟಕ್ಕೆ ಪಕ್ವಾಕ ಬೇಕೆಂಬದು ದೇವರ ಕ್ರಮ (೧ಪೇತ್ರ. ೧, ೭. ಇದಲ್ಲದೆ ಮರಣದ ಪರ್ಯಂತಕ್ಕೂ, ಪ್ರಕ. ೧೨, ೧೧. ತಮ್ಮ ಪ್ರಾಣವನ್ನು ಪ್ರೀತಿ ಮಾಡಲಿಲ್ಲವೆಂಬ ಮಾತಿನಿಂದ ಶತ್ರುವಿನ ದೂರು ಪಿಮ್ಮೆಟ್ಟಿಸ ಬೇಕು.) ಆದ್ದರಿಂದ ಯಾರಾದರೂ ಶ್ರಮಗಳಿಲ್ಲದೆ ಆಳ ಕೂಡದು, ಮಗನಾದ ಕ್ರಿಸ್ತನ ಶ್ರಮರೂಪವಿಲ್ಲದೆ ತಂದೆಯ ಬಾಧ್ಯಸ್ಥಿಕೆಯಲ್ಲಿ ಶೇರ ಕೂಡದು, ರೋಮ. ೮, ೧೭. ೨೯. ೨ ತಿಮೊ. ೨, ೫. ೧೧, ೧೨.

೨. ಚಕ್ತರ ಶ್ರಮಗಳನ್ನೂ ದುಷ್ಟರ ಸುಖವನ್ನೂ ನ್ಯಾಡುವಾಗ್ಯೆ, ಚಕ್ತನಾದ ಅಸಾಫನು ಸಪಾಕೀರ್ತ. ೭೩, ೨. ಯೆಡರುವದಕ್ಕೆ ಸ್ವಲ್ಪ ಮಾತ್ರ ತಪ್ಪಿದರೂ, ಅದೆಲ್ಲಾ ದೇವರು ಕಡೆ ಕಾಲದಲ್ಲಿ ಮಾಡುವ ನೀತಿಯುಳ್ಳ ನ್ಯಾಯತೀರ್ಪಿಗೆ ಪ್ರಮಾಣವಾಗಿರುತ್ತದೆ; ಆತನು ತನ್ನ ಪರಿಶುದ್ಧತ್ವ ನೀತಿಗಳ ಪ್ರಕಾರ ಯೆಲ್ಲರಿಗೆ ಪ್ರತಿಫಲ ಕಾಡದೆ ಇರಲಾರನು. ತನ್ನ ಮಕ್ಕಳನ್ನು ಪೀಂಸಿಸುವ ಪಾಕಾಗೆ ದುಷ್ಟರ ಹೃದಯ

ಗಳನ್ನು ದೇವರು ಕಠಿಣ ಮಾಡಿದರೆ, ನ್ಯಾಯಶೀರ್ಪು ಗಳು ಅವರ ಮೇಲೆ ಬೇಗ ಪುರಿಮು ಬರುವವೆಂದು ನಿಶ್ಚಯವಾಗಿ ತಿಳ ಕಾಳ್ಳ ತಕ್ಕದ್ದು.

೩. ಶಿಕ್ಷೆನಿರ್ಣಯ ಪೌಾಂದುವವರು ಯೆರಡು ತರದವರು, ೧) ಸ್ವಂತ ಅಪರಾಧದಿಂದ (ರಾೋಮ. ೧, ೧೮—೨೦.) ದೇವರನ್ನು ಅರಿಯದೆ, ಆತನ ಸುವಾರ್ತೆ ಕೇಳದೆ ಇರುವ ಪರಜನರೂ ಯೆಹೂದರೂ, ೨) ಆತನ ಪ್ರಕಟಣೆಯನ್ನು ಪೌಾಂದಿದ್ದರೂ, ಅದರ ಫಲವನ್ನು ಪಡಕಾಳ್ಳದಂಥಾ, ಅವಿಶ್ವಾಸಿಗಳಾವ ಯೆದುರಾಡುವ ಕ್ರೈಸ್ತರೂ, ಆ ಕಾಲದ ಯೆಹೂದರೂ.

೪. ಯೇಸು ತನ್ನ ಬಲವನ್ನು ಪ್ರಕಟ ಮಾಡುವ ದೂತರ ಸಂಗಡ. ದೂತರು ಆತನ ಬಲದ ಸೇವಕರಾಗಿದ್ದು, ದೇವರ ರಾಜ್ಯದ ಮುಖ್ಯ ಕಾರ್ಯಗಳಾಗಿದ್ದ ಕ್ರಿಸ್ತನ ಜನನ, ಉತ್ಥಾನ, ದಿವಾರೋಪಣೆ, ಪುನರಾಗಮನಗಳಲ್ಲಿ ಪ್ರತ್ಯಕ್ಷವಾಗುತ್ತಾರೆ.

೫. ಅಪೌಸ್ತಲನಾದ ಪೇತ್ರನು ಇದೇ ತರದ ಮಾತುಗಳನ್ನು ಪೇಳುತ್ತಾನೆ. ೨ ಪೇತ್ರ. ೩, ೧೦.

೬. ದುಷ್ಟರ ನ್ಯಾಯಶೀರ್ಪೂ ವಿಶ್ವಾಸಿಗಳ ಚಾಗ್ಯವೂ, ಇವೆರಡೂ ಕ್ರಿಸ್ತನ ಪುನರಾಗಮನದಲ್ಲಿಯೇ ಬರುತ್ತವೆ.

೭. ಅದೇ ಶ್ರಮಗಳನ್ನೂ ಅದೇ ಚಾಗ್ಯವನ್ನೂ ಅನುಭವಿಸುವ ಅಪೌಸ್ತಲರ ಸಂಗಡ. ಬೇರೆ ಬೇರೆ ಅಂತರಗಳಿದ್ದರೂ, ಈ ಯೆರಡು ಆಯಲ್ಪಟ್ಟವರಲ್ಲಿ ಒಬ್ಬನಿಗಾದರೂ ತಪ್ಪುವದಿಲ್ಲಾ.

೮. ನ್ಯಾಯಶೀರ್ಪಿಗೆ ಕಾರಣವಾಗಿರುವ ದೇವರ ನೀತಿಯು ೧) ಶತ್ರುಗಳನ್ನು ಶಿಕ್ಷಿಸುವಂಥಾದ್ದಾಗಿಯೂ ೨) ನಿರಪರಾಧಿಗಳಾಗಿ ಶ್ರಮ ಪಟ್ಟವರನ್ನು ಸಂತೈಸಿ, ವಾಳ್ಳೇ ಪ್ರತಿಫಲ ಕಾಡುವಂಥಾದ್ದಾಗಿಯೂ ಪ್ರತ್ಯಕ್ಷವಾಗುತ್ತದೆ.

೯. ಈಗ ನಂಬದಿರುವವರು ಆ ದಿನದಲ್ಲಿ ಆತನ ನ್ಯಾಯವಿಚಾರಕಮುಖವನ್ನು ಕಾಣುತಲೇ ನೆಲಕ್ಕೆ ಬಿದ್ದು ಪೌಾಗುವರು. ಸಮು ನಾೋಡು ೨, ೮. ಪ್ರಕ. ೧೯, ೧೨. ೧೫. ಯಾೋಪೌಾ. ೨, ೧೦. ೧೯.

೧೦. ನಿತ್ಯವೆಂಬ ಭಯಂಕರವಾದ ಈ ಶಬ್ದವನ್ನು ಮನಸ್ಸಿಗೆ ತೆಗದುಕಾ.

೧೧. ಥೆಸ್ಸಲಾನೀಕೆಯರು ಚಾಗ್ಯ ಪಡುವವರಲ್ಲಿ ಇರುವರೆಂಬ ಆನಂದವಾದ ಚರವಸವು ಪೌಾಗೆ ಬಂತೆಂತ ಈ ಮಾತಿನಿಂದ ತಾೋರಿಸಿ ಉದೆ.

೧೨. ಅಂಪರೆ ತನ್ನ ಪರಿಶುದ್ಧರಾದ ವಿಶ್ವಾಸಿಗಳ ಸಂಗಡಲೂ ವಿಶ್ವಾಸಿಗಳಲ್ಲಿಯೂ ನಡಿಸಿದ ಕಾರ್ಯದಿಂದ. ಅಪೌಸ್ತಲನು ಇಲ್ಲಿ ಪ್ರವಾದಿಗಂಭೀರತ್ವದಲ್ಲಿ ಪ್ರವಾದಿಗಳ ರೀತಿಯಾಗಿ, ಸಮಾನವಾಗಿ ನಡಿಯುವ ಪಾಪಗಳಿಂದ ಮಾತಾಡುತ್ತಾನೆ. ಪೋಗಿರು ಪದರಿಂದ ವಿಶ್ವಾಸಿಗಳೆಂದರೂ ಪರಿಶುದ್ಧರೆಂದರೂ ಯೆರಡೂ ವಾಂದೆ.

೧೩. ಕರ್ತನು ಅವರಲ್ಲಿ ಮಾಡುವ ಕಾರ್ಯವು ಮಹಿಮೆಯಾಗಿಯೂ ಆಶ್ಚರ್ಯಕರವಾಗಿಯೂ ಇರುವದು; ಆತನು ಅವರಲ್ಲಿ ತನ್ನನ್ನು ಮಹಿಮೆ ಪಡಿಸಿ, ಅವರಿಗೆ ತನ್ನ ಮಹಿಮೆಯನ್ನು ಕಾಡುವನು. ಯಾೋಪೌಾ. ೧೭. ಕರ್ತನು ತನ್ನವರ ಪ್ರಾಣ ಶರೀರಗಳನ್ನು ಮಹಿಮೆ ಪಡಿಸಿ, ಇಷ್ಟುವರಿಗೆ ಅವರಲ್ಲಿ ಮರೆಯಾಗಿದ್ದ ವಾಳಚಾಗ್ಯವನ್ನೂ ಪರಿಶುದ್ಧೀಕರಣದ ಬಲಗಳನ್ನೂ ಸಮಸ್ತರ ಮುಂದೆ ಪ್ರಕಟ ಮಾಡಿ, ಅವರನ್ನು ದೇವರ ಮಂದಿರವೆಂದೂ ತನ್ನ ಸ್ನೆಹಿತರೂ ಮಕ್ಕಳೂ ಯೆಂದು ಕಾಣಿಸಿ, ನಿತ್ಯಾನಂದದಲ್ಲಿ ಪೌಾಗಿಸುವಾಗೈ ಅದೆಲ್ಲಾ ಪೂರ್ಣವಾಗುವದು. ಆಗೈ ಸಕಲ ನಿರ್ಮಾಣವು ಇದನ್ನು ನಾೋಡಿ, ಆಶ್ಚರ್ಯಪಡಲಾಗಿ, ಕರ್ತನಿಗೆ ಮಹಿಮೆ ಉಂಟಾಗುವದು.

ವ. ೧೧. ಅಪೊಸ್ತಲನು ಥೆಸ್ಸಲೊನೀಕೆಯರಿಗೋಸ್ಕರ ಪ್ರಾರ್ಥನೆ ಮಾಡಿ, ಬೇಡುವದೇನಂದರೆ: ಯೇಸು ಕ್ರಿಸ್ತನ ಹೆಸರು ಯೆಂಬ ಆತನ ಪ್ರಕಟಭಾವವು ಅವರಲ್ಲಿಯೂ, ಅವರು ಕ್ರಿಸ್ತನಲ್ಲಿಯೂ ಪೂರ್ಣವಾಗಿ ಮಹಿಮೆ ಪಡುವ ಹಾಗೆ, ದೇವರು ಅವರನ್ನು ಈ ಮಹಿಮೆಯುಳ್ಳ ಕರಿಯುವಿಕೆಗೆ ಯೋಗ್ಯರಾಗ ಮಾಡಿ, ತನ್ನ ದಿವ್ಯ ಬಲದಿಂದ ತನ್ನ ಪೂರ್ಣ ಕೃಪಾಸಂಕಲ್ಪವನ್ನು ಅವರಲ್ಲಿ ಪೂರೈಸಿ, ವಿಶ್ವಾಸದ ಕೃತ್ಯವನ್ನು ಅವರಲ್ಲಿ ತೀರಿಸ ಬೇಕೆಂತಾ. ಕ್ರಿಸ್ತನು ನಮ್ಮ ರಕ್ಷಕನೂ ತಾರಕನೂ ಆಗಿ ಸಮಸ್ತರ ಮುಂದೆ ಕಾ

ಣಿಸಿ ಕೊಂಡರೆ, ಆತನು ನಮ್ಮಲ್ಲಿ ಮಹಿಮೆ ಪಡುತ್ತಾನೆ. ಪರಿಶುದ್ಧವಾಗಂಥ ದಿವ್ಯ ಪದವಿಗೊಂಡ ಆತನ ಮನುಷ್ಯಭಾವದ ಸಮಸ್ತ ಗುಣಗಳು ನಮಗೆ ಪ್ರಾಪ್ತವಾದರೆ, ನಾವು ಆತನಲ್ಲಿ ಮಹಿಮೆ ಪಡುತ್ತೇವೆ. ದೇವರು ನಮ್ಮಲ್ಲಿಯೂ, ನಾವು ಆತನಲ್ಲಿಯೂ, ಆ ದಿನದಲ್ಲಿ ಹೆಚ್ಚಳ ಪಡುವೆವು.

೨ನೆ. ೨.

I. ಬರ ಶಕ್ಕ ಮಾರ್ಮಲೆಯ ವಿಷಯವಾದ ಬ್ಯಾಧನೆ. ವ. ೧—೧೨.

ಅ) ಕ್ರಿಸ್ತನ ಆಗಮನವನ್ನು ಅಕಾಲದಲ್ಲಿ ನಿರೀಕ್ಷಿಸ ಬಾರದೆಂಬ ಬೆದರಿಕೆ. ವ. ೧—೩. ಇ) ಅದಕ್ಕೆ ಮುಂಚೆ ಬರುವ ಪ್ರತಿಕ್ರಿಸ್ತನ ಚರ್ಯೆನಿರೂಪಣ. ವ. ೩. ೪. ಉ) ಸನ್ನಾಹ. ವ. ೫—೭. ಎ) ಪ್ರತಿಕ್ರಿಸ್ತನ ಆಗಮನವು. ವ. ೯—೧೨.

೧. ಇದಲ್ಲದೆ, ಸಹೋದರರೇ, ನಂಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯನ್ನೂ ಅವನ ಬಳಿಯ ನಂಮ ಕೂಡುವಿಕೆಯನ್ನೂ ೧) ಕುರಿತು, ೨. ಕ್ರಿಸ್ತನ ದಿನವು ಸಮೀಪವಾಯಿತೆಂತ, ನೀವು ಆತ್ಮನಿಂದಲಾದರೂ ೨), ವಾಕ್ಯದಿಂದಲಾದರೂ ೩), ನಂಮಿಂದ ಬಂತೆಂಬುವ ಪತ್ರಿಕೆಯಿಂದಲಾದರೂ, ಬೇಗ ಬುದ್ಧಿ ಕದಲಿ ೪), ಭ್ರಮೆ ಪಡ ಬೇಡಿರೆಂದು ೫) ನಿಮಮಂನು ಬೇಡಿ ಕೊಳ್ಳುತ್ತೇವೆ. ೩. ಯಾರಾದರೂ ಯಾವ ಪ್ರಕಾರದಲ್ಲಿಯೂ ನಿಮಗೆ ಮೋಸ ಮಾಡದಿರಲಿ.

೧. ಅಂದರೆ ೧ ಥೆಸ್ಸ. ೪, ೧೭. ಕರ್ತನ ಯೆದುರಾಗಿ ಆಗುವ ನಮ್ಮ ಆಕಾಶಾರೋಪಣ.

೨. ಅಂದರೆ, ವಂಚಕ ಪ್ರವಾದಿಯ ಮಾತಿನಿಂದ.

೩. ಪೌಲನಿಂದ ಬಂದದ್ದೆಂಬ ಚಾರಪತ್ರಿಕೆಯಿಂದ. ಈ ಪ್ರಕಾರದವಂಚನೆಗಳು ಅವರಲ್ಲಿ ನಡದು ಇರಬೇಕು; ಮತಭ್ರಾಂತಿ ಪಿಡಿದ ಜನರು ಯೆಷ್ಟು ಸುಲಭವಾಗಿ ವಂಚಕರಾಗಿ ಪರಿಣಮಿಸುತ್ತಾರೆಂಬದಕ್ಕೆ ಇದು ವಾಳ್ಳೇ ದೃಷ್ಟಾಂತ.

೪. ಅಂದರೆ, ನಿಮಗಿರುವ ಸಮವಾದ ಮನಸ್ಸಾಕ್ಷಿ ದೃಢತ್ವದಲ್ಲಿ.

೫. ಅಂದರೆ, ಸುಳ್ಳು ಆನಂದದಿಂದಲೂ, ಅಕಾಲವಾದ ನಿರೀಕ್ಷೆಯಿಂದಲೂ ಸ್ವಾಭಾವಿಕ ಭಯದಿಂದಲೂ ಆತ್ಮಶಾಂತಿಯನ್ನು ಕಳ ಕೊಳ್ಳ ಬಾರದು.

೪. ಯಾಕಂದರೆ ಶಿರುಗಿಬೀಳುವಿಕೆಯು ೧) ಮೊದಲು ಬಂದು, ದ್ರೋಹರ ಮಂದಿರದಲ್ಲಿ ೨) ದ್ರೋಹರೆಂದು ಕೂತು ಕೊಂಡು, ತಾನು ದ್ರೋಹರೆಂದು ತನಂನು ತೋರಿಸಿ ಕೊಳ್ಳುವ ಹಾಗೆ ದ್ರೋಹರೆಂದು ಕರೆಯಲ್ಪಡುವಂಥ, ಅಥವಾ ಆರಾಧಿಸಲ್ಪಡುವಂಥ, ಯೆಲ್ಲಾದರ ೩) ಮೇಲೆ ತನಂನು ಯೆತ್ತಿ ಕೊಂಡು ಯೆದುರಿಸುವ ನಾಶನದ ೪) ಮಗನಾದ ಪಾಪದ ಮನುಷ್ಯನು ೫) ಪ್ರತ್ಯಕ್ಷವಾದರೆ ಹೊರತಾಗಿ, ಆ ದಿವಸ ಬರುವದಿಲ್ಲ.

೨ ಥೆಸ್ಸ. ೨, ೫—೭.

೧. ಶಿರುಗಿಬೀಳ್ವಿಕೆ ಅಂದರೆ, ಪೃದಯದಲ್ಲಿ ಉದಾಸೀನವಾಗಿ ಮರೆಯಾಗಿ ನಡಿಯುವ ವಿನಾಶಕ್ಕಾಳಗಾಗುವದು. ಪೌಲನ ಅಭಿಪ್ರಾಯವೇನಂದರೆ: ಥೆಸ್ಸಲಾನೀಕೆಯರು ಕ್ರಿಸ್ತನ ದಿನವನ್ನು ನಿಜವಾಗಿ ಸಮೀಪವಾಗಿರುವದಕ್ಕಿಂತ ಸಮೀಪವೆಂದೆಣಿಸ ಬಾರದು. ಆದ್ದರಿಂದ ಆ ದಿನದ ಮುಂಚೆ ವಿಪರೀತವಾದ ವಾಂದು ಕೇಡು ಬರುವದೆಂದು ಬಾಧಿಸುತ್ತಾನೆ. ಆದರೆ ಕೇಡು ಮಾತ್ರವಲ್ಲಾ, ಪಿಡಿದು ಕಾಳ್ಳುವಂಥಾದ್ದು ಸಹ ಯೇನೆಂದು ಸೂಚಿಸುತ್ತಾನೆ. ಕೇಡು ಪೌಲನ ಕಾಲ ಪಿಡಿದು ಯೇಸು ಕ್ರಿಸ್ತನ ಆಗಮನದ ಪ್ರತ್ಯಕ್ಷತೆಯ ಪರ್ಯಂತ ನಡಿಯುತ್ತಾ ಪೂರ್ತಾಗುವದು. ಪಿಡಿದು ಕಾಳ್ಳುವಂಥಾದ್ದು ಪೌಲನ ಕಾಲದಲ್ಲಿಯೇ ಇತ್ತು. ಕೇಡಿಗೆ ಬಲಬಂದು ಮಿತಿಮೀರುವ ಪರ್ಯಂತ ಮಧ್ಯದಲ್ಲಿ ಪಿಡಿದು ಕಾಳ್ಳುವಂಥಾದ್ದು ಇರುತ್ತದೆಂದು ಪೇಳುತ್ತಾನೆ. ಕೇಡು ಮೊದಲು ಕಾರ್ಯರೂಪವಾಗಿಯೂ, ಬಳಿಕ ಕರ್ತೃರೂಪವಾಗಿಯೂ ಪೇಳಿಯದೆ. ಬೀಳ್ವಿಕೆಯೂ ಅನೀತಿಯ ಮರ್ಮವೂ ಮಹಾ ಕೇಡಾಗಿರುತ್ತವೆ. ಅತ್ಯಂತವಾದ ಕೇಡು ಯೇನಂದರೆ: ಅನೀತಿವಂತನು ತಾನೆ.

೨. ಅಂದರೆ, ವಾಂದು ವೇಳ್ಳ ಯೆರೂಸಲೇಮಿನಲ್ಲಿ ಕಟ್ಟಿಲ್ಪಡ ತಕ್ಕ ದೇವಾಲಯದಲ್ಲಿ. ಪ್ರಕ. ೧೧, ೩.

೩. ಅವನು, ದೇವರಾಗಲಿ ದೇವತೆಯಾಗಲಿ ಯೆಂಬುವಂಥಾದ್ದಾಗಿ, ಜೂಲಾಕ್ಕಿಂತಲೂ ಮನುಷ್ಯಜಾತಿಗಿಂತಲೂ ಉನ್ನತವಾದ್ದೆಂದು ಮನುಷ್ಯರಲ್ಲಿ ಪೆಸರ್ಗೊಂಡದ್ದೆಲ್ಲಾದರ ಮೇಲೆ ತನ್ನನ್ನು ಯೆತ್ತಿಕಾಂಡು, ತನ್ನಲ್ಲಿರುವ ಮಾನುಷಾತ್ಮಕ್ಕೆಯೇ ಮನುಷ್ಯರು ದೇವರಿಗೆ ತಕ್ಕ ಆರಾಧನೆ ಮಾಡ ಬೇಕೆಂದು ಆಗ್ಞಾಪಿಸುವನು.

೪. ಅವನು ಅನೇಕರನ್ನು ವಿನಾಶದಲ್ಲಿ ಧುಮುಕಿಸುವದಲ್ಲದೆ, ತಾನೆ ನಾಶನವ ಮಹಾ ಗುಂಡಿಯಲ್ಲಿ ಬೀಳುವದರಿಂದ, ನಾಶನವ ಮಗನೆಂದು ಅವನಿಗೆ ಪೆಸರವೆ ಪ್ರಕ. ೨೦, ೧೦. ೧೫. ಯೂದನಿಗೂ ಯೀಪಾ. ೧೭, ೧೨. ನಾಶನವ ಮಗನು ಯೆಂಬ ಪೆಸರು ಪೇಳಿರುತ್ತದೆ.

೫. ಪ್ರತಿ ಕ್ರಿಸ್ತನಲ್ಲಿ ದೇವರ ಮೇಲಿರುವ ಶತ್ರುತ್ವವು ಪೂರ್ಣವಾಗಿ ಪ್ರತ್ಯಕ್ಷವಾಗುವದು. ೧ ಯೀಪಾ. ೨, ೧೮. ಪ್ರಕ. ೧೧, ೭. ೧೩, ೮. ೧೭, ೮. ೧೭, ೧೧. ೧೮. ೧೯. ೨೦. ದನಿ. ೯, ೨೭. ಈ ಕಾರಣದಿಂದಲೆ ಅವನಿಗೆ ಪಾಪದ ಮನುಷ್ಯನೆಂಬ ಪೆಸರು ಬಂದದೆ.

೫. ನಾನು ನಿಂಮ ಹತ್ತರ ಇದ್ದಾಗಲ್ಕೇ, ಇವುಗಳಂನು ನಿಮಗೆ ಹ್ಯೇಳಿದೆನೆಂದು ೧) ಜ್ಞಾಪಕವಿಲ್ಲವೌ್ಕೀ? ೬. ಮತ್ತು ಅವನು ತಂನ ಕಾಲದಲ್ಲಿ (ಪ್ರತ್ಯಕ್ಷವಾಗುವ ಹಾಗೆ, ಇಗ ಹಿಡಿದು ಕಾಳ್ಳುವಂಥಾದ್ದಂನು ಬಲ್ಲಿರಿ ೨). ೭. ಯೇನಂದರೆ ಅನೀತಿಯ ೩) ಮರ್ಮವು ಇಗಲೂ ಯಶ್ಶಿಸುತ್ತದೆ; ಹಿಡಿದು ಕಾಳ್ಳುವವನು ಮಧ್ಯದಲ್ಲಿಂದ ಹಾರಗಾಗುವ ಪರ್ಯಂತ ಇರುವನು ಅಷ್ಟೆ.

೧. ಅಪಾಸ್ತಲನಾದ ಪೌಲನು, ಕರ್ತನ ದಿನವು ಬರುವ ಮುಂಚೆ ಅನೇಕ ಮಹಾ ಕಾರ್ಯಗಳು ನಡಿಯದೆ ಇರವು ಯೆಂದು ತಾನು ಆರಂಭದಿಂದಲೇ ಪೇಳಿ ಇದ್ದೆನೆಂದು ಇಲ್ಲಿ ತಿಳಿಸುತ್ತಾನೆ. ಆದರೂ ಆತನ ಪ್ರಸಂಗವನ್ನು ಕೇಳಿದ ಥೆಸ್ಸಲಾನೀಕೆಯರು, ಕರ್ತನ ದಿನವು ಸಮೀಪವೆಂಬಂತೆ ಪೂರ್ಣ ಪೃದಯದಿಂದ ಅಪೇಕ್ಷಿಸಿದ ಪಾಗೆ, ನಾವೂ ಅದನ್ನು ಯಾವಾಗಲೂ ಯೆದುರು ನೋಡ ಬೇಕು. ಈ ವಿಷಯವಾಗಿ ಪ್ರಥಮಕಾಲದ ವಿಶ್ವಾಸಿಗಳ ಮುಖ್ಯ ಆಲಾಚನೆಗಳು ಯೆಂಥವುಗಳಾಗಿದ್ದವೆಂದರೆ: ನಾವು ಅಕ್ರಮಗಳಲ್ಲಿಯೂ ಪಾಪಗಳಲ್ಲಿಯೂ ಎಫೆ. ೨, ೧. ಸತ್ತವರಾಗಿದ್ದೆವು, ನಾವು ಸ್ವಭಾವದಿಂದ ಎಫೆ. ೨, ೨. ಕೋಪದ ಮಕ್ಕಳಾಗಿದ್ದೆವು; ಆದರೆ ದೇವರು ಎಫೆ. ೨, ೫. ಕ್ರಿಸ್ತನ ಸಂಗಡ ನಂಮಂನು ಬದುಕಿಸಿ, ಕ್ರಿಸ್ತ ಯೇಸುವಿನಲ್ಲಿ ಎಫೆ. ೨, ೬. ನಮ್ಮನ್ನು ಕೂಡಾ ಯೆಬ್ಬಿಸಿ, ಪರಲೋಕದ ನಾಗರಿಕರಾಗ ಮಾ

ಯಿದ್ದಾನೆ. ಈಗ ಫಿಲಿ. ೩, ೨೦. ನಮ್ಮ ಪಟ್ಟಣವಾಸವು ಪರಲೋಕದಲ್ಲಿ ಉಂಟು. ಇಪುದಲ್ಲಿ ನಾವು ಸ್ವಲ್ಪಕಾಲ ಶ್ರಮಪಟ್ಟ ಮೇಲೆ, ಈ ನ್ಯೂನತ್ವದ ಶರೀರದ ವಿಸರ್ಜನೆಯು ಬೇಗ ಬರುವದು. ನಿದ್ದೆ ಪುಗಾಗಿ ವಿಶ್ರಮಿಸಿ ಕಾಂಡ ಮೇಲೆ, ಕ್ರಿಸ್ತನ ದಿನದಲ್ಲಿ ಯೆಚ್ಚರವಾಗುವಾಗೈ ಫಿಲಿ. ೩, ೨೧. ಆತನು ನಮ್ಮ ನೀಚತನದ ಶರೀರವನ್ನು ತನ್ನ ಮಹಿಮೆಯ ಶರೀರಕ್ಕೆ ಸಾರೂಪ್ಯವಾಗುವ ಪುಗಾಗೆ ಮಾರ್ಪಡಿಸುವನು. ೧ ಯೋಪುಗಾ. ೩, ೨.

೨. ಅಂದರೆ ಈ ಪತ್ರಿಕೆಯಲ್ಲಿ ಬರುವ ಸೂಚನೆಯಿಂದಲೂ, ವಿದ್ಯಮಾನಗಳ ತಿಳಿವಿಕೆಯಿಂದಲೂ ಅವರು ತಿಳಕಾಳ್ಳ ಬಪುದು ಯೆಂಬ ಅರ್ಥ.

೩. ಮಾಂಸದಲ್ಲಿ ದೇವರು ಪ್ರತ್ಯಕ್ಷವಾದ್ದು ೧ ತಿಮೊ. ೩, ೧೬. ಚಕ್ತಿಯ ಮರ್ಮವೆಂದು ಪುಗಾಗೆ ಪೋಳಿರುತ್ತದಾ, ಪುಗಾಗೆಯೆ ಪ್ರತಿಕ್ರಿಸ್ತನು ಸೈತಾನಚಾವದ ಸಂಪೂರ್ಣ ಪ್ರಕಟಣೆಯಾದ ಮೂರ್ತಿಯಾಗಿರುವನು. ಆದರೆ ಈಗಲೂ ಸರ್ವ ಮನುಷ್ಯ ಚರಿತ್ರದಲ್ಲಿಯೂ ಅದೇ ಸೈತಾನಬಲಗಳು ಪ್ರಕಟವಾಗುತ್ತವೆ. ಕರ್ತನ ಆಗಮನವೂ ಕಳ್ಳಕ್ರಿಸ್ತನ ಬರಾಣವೂ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಪ್ರಕಾರವಾಗಿ ನಡಿಯುತ್ತವೆ. ಈ ಅಪಿಪ್ರಾಯವನ್ನು ಪಿಡುಕಾಂಡರೆ, ಪ್ರತಿಕ್ರಿಸ್ತನು ಕಳದ ಕಾಲಗಳಲ್ಲಿ ಬಂದನೆಂದು ಪೋಳುವವರ ಮಾತಿಗೆ ಪುರುಳಿಲ್ಲವೆಂದು ತಾರುವದಿಲ್ಲಾ.

ಅ) ಅಪೊಸ್ತಲನ ಕಾಲದಲ್ಲಿ ಪ್ರತಿಕ್ರಿಸ್ತಭಾವಗುಣಾದಿಗಳು ಮಹಾರಾಜರ ಅಪ್ಪಣೆಯ ಪ್ರಕಾರ ಅವರನು ಆರಾಧಿಸುವ ಪರಜನರ ಮನುಷ್ಯದೈವೀಕರಣದಿಂದಲೂ, ರೋಮದಿಂದ ಆ ಕಾಲದಲ್ಲಿ ಯೆಹೂದರನು ಗಡಿದಾಟಿಸುವದಕ್ಕೆ ಕಾರಣವಾದ ಯೆಹೂದರ ಮಾರ್ಮಿಕತೆಯ ಬುದ್ಧಿಯಿಂದಲೂ, ಕ್ರೈಸ್ತರೊಳಗೆ ಅವಿಶ್ವಾಸದಿಂದಲೂ, ೧ ಕೊರಿ. ೧೫, ೧೨. ೨ ತಿಮೊ. ೨, ೧೪., ಮಾಂಸಭಾವದ ಸುಳ್ಳು ಬೋಧಕರ ಅಪವಿಶ್ವಾಸದಿಂದಲೂ ಕೊಲೊ. ೨, ೨೪. ಪ್ರತ್ಯಕ್ಷವಾದವು. ಇ) ಮಧ್ಯಕಾಲದಲ್ಲಿ ವಿಪರೀತವಾಗಿ ಹೋದ ರೋಮಾಯ ಪಾಪನ ಅಧಿಕಾರವು ಪ್ರತಿಕ್ರಿಸ್ತನ ಬಲದ ಕೇವಲ ಭಯಂಕರವಾದ ಪ್ರಕಟಣೆಯಾಗಿತ್ತು; ಆದ್ದರಿಂದ ಪುನಸ್ಥಾಪಕರು ಪಾಪನನ್ನೇ ಪ್ರತಿಕ್ರಿಸ್ತನೆಂದೆಣಿಸಿದರು; ಆದರೆ ಅವರು ಕ್ರಿಸ್ತನಿಗೆ ಬಹಿರಂಗದಲ್ಲಿ ಯಾದರೂ ಮಾನ ಕೊಟ್ಟರಾದ್ದರಿಂದ, ಆ ಮಾತು ವಳಕ್ಕೆ ಸರಿ ಬೀಳ್ಳದು. ಉ) ನಮ್ಮ ಕಾಲದಲ್ಲಿ ಅನೀತಿಯ ಮರ್ಮವು ಅಧಿಕ ಪ್ರಕಟವಾಗಿ ಕಾಣಿಸಿ ಕೊಳ್ಳುತ್ತದೆ. ಇಂದಿನ ಜ್ಞಾನಿಗಳು ಮನುಷ್ಯತ್ವವೆ ದೇವತ್ವವೆಂಬ ಬೋಧನೆಯೂ, ಮಾಂಸದ ಅಭಿಮಾನವನು ಸಾಧಿಸ ಬೇಕೆಂಬ ಬೇರೊಂದು ಭಯಂಕರವಾದ ಬೋಧನೆಯೂ, ಕ್ರೈಸ್ತ ವಿಶ್ವಾಸದ ಆಧಾರಗಳಂತೆ ಕೆಡಹ ಬೇಕೆಂದಿರುವ ಜನರು ಮಾಡುವ ಪ್ರಯತ್ನಗಳೂ, ದೈವ ಸ್ವಾಮಿತ್ವಕ್ಕೂ ಮಾನುಷ ಸ್ವಾಮಿತ್ವಕ್ಕೂ ಯೆದುರು ನಿಲ್ಲುವ ಮಾರ್ಮಿಕತೆಯ ಆತ್ಮವೂ, ಇದೆಲ್ಲಾ ಪ್ರತಿಕ್ರಿಸ್ತನ ಆಗಮನಕ್ಕೆ, ಇಪ್ಪಟ್ಟವರೆಗೆ ಯೆಂದೂ ಈ ಪ್ರಕಾರ ಬಲವಾಗಿಯೂ ಏಕಕಾಲದಲ್ಲಿಯೂ ಕಾಣದೇ ಇದ್ದ ಮುಂಗುರ್ತುಗಳಾಗಿರುತ್ತವೆ. ಈಗ ಅನೀತಿಯ ಬಲಗಳೆಲ್ಲಾ ಯೆಲ್ಲಾದರೂ ವೊಟ್ಟು ಕೂಡುವದು ಮಾತ್ರವೇ ಉಳಿದದೆ; ಯಾರಾದರೂ ವೊಬ್ಬ ಅತ್ಯಂತ ಬುದ್ಧಿಯುಳ್ಳ ಮನುಷ್ಯನು ಜನರಿಗೆ ಸ್ವತಂತ್ರ, ಸುಖ, ಬಲ, ಅಧಿಕಾರ, ಮಹಿಮೆ ಮುಂತಾದ ಸಮಸ್ತವನೂ ಕೊಡ ಬಲ್ಲೆನೆಂದು ಹೇಳಿ, ಲೋಕವು ಕೊಡಲಿಕ್ಕೆ ಸಿದ್ಧವಾಗಿದ್ದ ಅಧಿಕಾರವನ್ನು ಬಲುಕ್ಕಾಸಿ ಕೊಳ್ಳಲಿಕ್ಕೆ ಶಕ್ತನಾಗಿದ್ದರೆ, ಅಪೊಸ್ತಲನು ಮುಂಚೆ ತಿಳಿಸಿದ್ದೆಲ್ಲಾ ಪ್ರತ್ಯಕ್ಷವಾಗಿ ಬಂದ ಪಾಗೆ ಇರುವದು. ಆದ್ದರಿಂದ ನಾವು ಯೆಷ್ಟೋ ಜಾಗ್ರತೆಯಾಗಿರ ತಕ್ಕದ್ದು! ಅನೇಕ ವ್ಯಾಖ್ಯಾನಗಾರರು, ಮುಖ್ಯವಾಗಿ ಪೂರ್ವಿಕರಾದ ಖ್ರುಸೊಸ್ತೊಮ ಔಗುಸ್ತೀನ ಮುಂತಾದವರು, ದಿವ್ಯ ಬರಹದ ರೀತಿಗೆ ಅನುಸಾರವಾಗಿ, ಪ್ರತಿಕ್ರಿಸ್ತನು ಯೆಂಬದು ವೊಬ್ಬ ಮನು

ವ್ಯನನ್ನಲ್ಲಾ, ಪಟ್ಟಣಗಳು ದೇಶಗಳು ಜನಾಂಗಗಳು ಮುಂತಾದವುಗಳಿಗೆ ಪುರುಷರ ಇಲ್ಲವೆ ಸ್ತ್ರೀಯರ ಹೆಸರಿಟ್ಟು ಮಾತಾಡುವ ಪ್ರವಾದಿಗಳ ವಾಡಿಕೆಯ ಪ್ರಕಾರ ಯೇಶಾ. ೧೦, ೫. ದನಿ. ೭, ೧೭. ಪ್ರತಿಕ್ರಿಸ್ತನಿಗೆ ಅನುಕೂಲವಾದ ಬುದ್ಧಿಯೆನ್ನು, ಅಥವಾ ಅಂಥಾ ಬುದ್ಧಿಯುಳ್ಳ ಜನರ ವಿಧವನ್ನು ಸೂಚಿಸುತ್ತದೆಂದು ನೆನಸುತ್ತಾರೆ. ಹಾಗಾದರೆ ಪ್ರತಿಕ್ರಿಸ್ತನ ಕಾಲದ ಮಧ್ಯದಲ್ಲಿ ತಿಳಿಯದೆ ಶೇರಿದವರು, ಪ್ರತಿಕ್ರಿಸ್ತನೆಂಬ ಪುರುಷನ ಪ್ರತ್ಯಕ್ಷತೆಯೆಂಬು ಯೆದುರು ನೋಡುತ್ತಾ ಇದ್ದಾರು. ಅದು ಹ್ಯಾಗೂ ಇರಲಿ, ವೊಂದು ನಿಶ್ಚಯಃ ಪ್ರತಿಕ್ರಿಸ್ತನು ವೊಂಟಿಗನಾಗಿಯೂ ಮುನ್ನಡಿಯುವ ಚಿನ್ಹಗಳಿಲ್ಲದೆಯೂ ಪ್ರತಿಷ್ಠೆ ಮಾಡಿ ಕೊಳ್ಳಲಿಕ್ಕೆ ಇಲ್ಲಾ, ಪ್ರತಿಕ್ರಿಸ್ತರು ೧ ಯೋಹಾ. ೨, ೧೮. ೧೫. ೨೨. ೪, ೩. ೨ ಯೋಹಾ. ೭ ಅನೇಕರಿರುವರು. ಕ್ರಿಸ್ತವಿರೋಧವಾದ ವಿಕಾರವಾದ ಬುದ್ಧಿ ಆ ಕಾಲದವರಲ್ಲಿ ಪ್ರಬಲವಾಗಿ, ಅನೇಕರಲ್ಲಿ ಅಧಿಕಾಧಿಕವಾಗಿ ಪ್ರಕಟವಾಗುವದು; ಇದಲ್ಲದೆ ಆ ಪಕ್ಷದವರೆಲ್ಲರು ವೊಬ್ಬನನ್ನು ಕರ್ತನೆಂದೂ ಯಜಮಾನನೆಂದೂ ಸನ್ಮಾನಿಸುವರು.

೮. ಆಗಲೇ ಆ ಅನ್ಯಾಯವಂತನು ೧) ಪ್ರಕಟವಾಗುವನು ೨); ಅವನನ್ನು ಕರ್ತನು ತನ್ನ ಬಾಯಿಯ ಆತ್ಮದಿಂದ ಸಂಹರಿಸಿ ೩), ತನ್ನ ಬರುವಿಕೆಯ ಪ್ರಕಾಶದಿಂದ ಅವನನ್ನು ಲಯ ಮಾಡುವನು. ೯. ಅವನ ಬರುವಿಕೆಯು ಸೈತಾನನ ಯತ್ನದ ಪ್ರಕಾರವಾಗಿ ಸುಳ್ಳಿನ ೪) ಯೆಲ್ಲಾ ಬಲದಲ್ಲಿಯೂ, ಗುರುತುಗಳಲ್ಲಿಯೂ, ಅದ್ಭುತಗಳಲ್ಲಿಯೂ, ೧೦. ಅನ್ಯಾಯದ ಯೆಲ್ಲಾ ಮೋಸದಲ್ಲಿಯೂ, ತಮ್ಮ ರಕ್ಷಣೆಗಾಗಿರುವ ಸತ್ಯದ ಪ್ರೀತಿಯನ್ನು ಅಂಗೀಕರಿಸದ ಕಾರಣ ನಾಶನವಾಗುವವರಲ್ಲಿ ೫) ಇರುವದು. ೧೧. ಆದದರಿಂದ ಸತ್ಯವನ್ನು ನಂಬದೆ, ೧೨. ಅನ್ಯಾಯವನ್ನು ಮೆಚ್ಚಿದವರೆಲ್ಲರು ಖಂಡನೆಗೆ ೬) ಪಡುವ ಹಾಗೆ, ಅವರು ಸುಳ್ಳನ್ನು ನಂಬುವದಕ್ಕೆ ದೇವರು ಅವರಿಗೆ ಬಲವಾದ ಮೋಸವನ್ನು ಕಳುಹಿಸುವನು.

೧. ಶಬ್ದಾರ್ಥದ ಪ್ರಕಾರ ಅನ್ಯಾಯಿ. ಅವನು ಯೆಲ್ಲಾ ನ್ಯಾಯಗಳನು ಅಲಕ್ಷ ಮಾಡಿ, ತನಗೆ ಅಧಿಕ ಯಾರೂ ಇಲ್ಲವೆಂದನ್ನುವನು. ಈಗಲೇ ಮಹಾತ್ಮರೆಂದನಿಸಿ ಕಾಳ್ಳುವವರು ದೇವರ ನಿಯಮಕ್ಕೆ ಅಧಿಕರೆಂಬ ಮಾತು ಜನರಲ್ಲಿ ಸಲ್ಲುತ್ತದೆ.

೨. ಅವನು ಮುಂಚೆಯೇ ಇದ್ದಾನೆ; ಆದರೆ ಕಡೇ ಪ್ರತಿಬಂಧವು ಸಹಾ ತೀರಾ ಹಾನಾದ ಬಳಿಕ, ಅವನು ಯೇನೂ ಅಳುಕದೆ, ಉರುವಣಿಸಿ ಬರುವನು.

೩. ಆದರಣೆಗೆಂಬ ಹಾಗೆ ಅಪಾಸ್ತಲನು ಪ್ರತಿಕ್ರಿಸ್ತನ ಪೂರ್ಣ ಪ್ರಕಟಣೆಗೆ ಕೂಡಲೆ ಅವನ ಅಂತ್ಯವನ್ನು ಶೇರಿಸುತ್ತಾನೆ. ಪ್ರತಿ ಕ್ರಿಸ್ತನ ಅಳಿವಿಗೆ ಕರ್ತನ ವಿಶ್ವಾಸವು ಸಾಕು, ಯೇಶಾ. ೧೧, ೪., ಆತನ ಪ್ರತ್ಯಕ್ಷತೆಯೇ ಸಾಕು. ಮತ್ತು ಅವನು ತಾನೆ ಬೆಂಕಿಯ ಕೆರೆಯಲ್ಲಿ ಹಾಕಲಾಗುವನು ಪ್ರಕ. ೧೯, ೨೦.

೪. ಸಾಧಾರಣವಾಗಿ ಮನುಷ್ಯಸಂತತಿಯ ಆಂತರ್ಯದಲ್ಲಿ ನಡಿಯುವ ಸೈತಾನಯತ್ನಗಳು ಬಹಿರಂಗವಾಗಿ ಆಶ್ಚರ್ಯಕರವಾದ ಅದ್ಭುತಗಳಾಗಿ ಪ್ರತ್ಯಕ್ಷವಾಗುವವು. ಆದರೆ ಅವು ಸತ್ಯವಾದ ಅದ್ಭುತಗಳಲ್ಲಾ, ಅಂದರೆ, ದಿವ್ಯ ಪ್ರವೃತ್ತಿಯ ಪ್ರಕಟಣೆಗಳಲ್ಲಾ, ಸೈತಾನ ತಂತ್ರಗಳ ಮಾಟವಾಗಿರುತ್ತವೆ.

೫. ಆದರೂ ನಾಶವಾಗಿ ಹೋಗ ಮನಸ್ಸಿರುವವರಿಗೆ ಮಾತ್ರವೇ ಮೋಸ ಆಗುತ್ತದೆ. ಪೃಥಯದ ಬಾಗಲು ಮುಚ್ಚುವವರೆಲ್ಲರು ಪೂರ್ವಾಕೃತಿಯಲ್ಲಿ ಪ್ರತ್ಯಕ್ಷವಾಗುವ ಸುಳ್ಳಿಗೆ ಮರುಳು ನಂಬಿಕೆಯಿಂದ

ವಾಳಗಾಗುವ ನ್ಯಾಯವಾದ ಶಿಕ್ಷೆ ದೇವರಿಂದ ನೇಮಕವಾಗಿದೆ. ಈಗಲಾದರೂ ಅವಿಶ್ವಾಸಿಗಳಾದ ಜನರಿಗೆ ಆಗಾಗ್ಗೆ ಹೀಗೆ ಆಗುವದಂನು ನಾೀಡ ಬಹುದು; ಮನುಷ್ಯನು ಯೇನಾದರೂ ವಾಂದು ವಿಶ್ವಾಸವಿಲ್ಲದೆ ೀರ ಕೂಡದು.

೬. ಈ ಪ್ರಕಾರ ಅವಿಶ್ವಾಸಿಗಳಾದ ದುರುಳ ಜನರೆಲ್ಲರು ೀದಿರ್ಕ್ರಿಸ್ತನ ಪುನಿ ಮೋಸವನ್ನು ನಂಬುವದರಿಂದ ತಂಮ ಪಾಪಗಳ ಅಳತೆಯಂನು ತುಂಬಿ ದೇವರ ಮಹಾ ನ್ಯಾಯತೀರ್ಪಿಗೆ ಪಾಂತ್ರಾಗುತ್ತಾರೆ.

II. ಥೆಸ್ಸಲೊನೀಕೆಯರ ನಿಶ್ಚಿಕರ್ಷ.

ಇಂಥಾ ದುಃಖಕರ ಭಯಂಕರ ಕಾರ್ಯಗಳು ಬರುವದಂನು ಎದುರು ನೋಡುತ್ತಾ ಇದ್ದರೂ, ಅಪೊಸ್ತಲನು ಯೆದೆಕದಲದೆ, ಥೆಸ್ಸಲೊನೀಕೆಯರ ರಕ್ಷಣೆಯಂನು ನೆನದು ಅತ್ಯಧಿಕವಾಗಿ ಆನಂದ ಪಡುತ್ತಾನೆ.

ವ. ೧೩ ಥೆಸ್ಸಲೊನೀಕೆಯರಂನು ಕ್ರಿಸ್ತನು ಪ್ರೀತಿ ಮಾಡಿದ ಸಹೋದರರರೆಂದು ಆದಿಯಿಂದಲೆ ಭಾಗ್ಯಕ್ಕೆ ಆಯ್ದು ಕೊಂಡಂಥಾ, ಪರಿಶುದ್ಧಾತ್ಮದಿಂದ ತಂನ ಜನಾಂಗವೆಂದು ಲೋಕದಿಂದ ವಿಂಗಡಿಸಿ, ಅವರಲ್ಲಿ ಸತ್ಯದ ವಿಶ್ವಾಸವಂನು ಹುಟ್ಟಿಸಿ, ಅನಾದಿಕೃಪಾಸಂಕಲ್ಪವಂನು ನಡಿಸಿದಂಥಾ ದೇವರಿಗೆ ಕೃತಜ್ಞಾಪಿಸುತ್ತಾನೆ. ೧೪ ಪೌಲನು ಪ್ರಸಂಗಿಸಿದ ಸುವಾರ್ತೆಯಂನು ಅಂಗೀಕರಿಸಿದರಿಂದ ಆಯಲ್ಪಟ್ಟವರು ಕರದವರಾದರು. ಯೇಸು ಕ್ರಿಸ್ತನ ಮಹಿಮೆಯಲ್ಲಿ ಪಾಲು ಹೊಂದಿ ಯೇಸು ಕ್ರಿಸ್ತನಂನು ಮಹಿಮೆ ಪಡಿಸುವಂಥಾ, ಯೇಸುಕ್ರಿಸ್ತನ ಮಹಿಮೆಯುಳ್ಳ ಸ್ವಾಸ್ಥ್ಯವಾದ ಜನಾಂಗವಾಗ ಬೇಕೆಂಬದೇ ಅವರ ಕರಿಯುವಿಕೆಯ ಉದ್ದಿಶ್ಯ. ೧೫. ಆದ್ದರಿಂದ ಅವರು ಭದ್ರವಾಗಿ ನಿಂತು ಕೊಂಡು, ನುಡಿಯಿಂದಲೂ ಬರಹದಿಂದಲೂ ಅವನು ಕಲಿಸಿ ಕೊಟ್ಟಿದ್ದಂನೆಲ್ಲಾ ನಂಬಿಕೆಯಾಗಿ ಕೈಕೊಳ್ಳ ತಕ್ಕದ್ದು. ೧೬. ಇದಲ್ಲದೆ ನಂಮ ಕರ್ತನಾದ ಯೇಸು ಕ್ರಿಸ್ತನು ಉಚಿತಕರುಣೆಯಿಂದ ನಿತ್ಯ ಆದರಣೆಯಂನೂ ಒಳ್ಳೇ ಕೋರಿಕೆಯಂನೂ ಕೊಟ್ಟ ನಂಮ ತಂದೆಯಾದ ದೇವರು ಸಹಿತವಾಗಿ, ಅವರ ಹೃದಯಗಳಂನು ಸಂತೈಸಿ, ಅವರಂನು ಒಳ್ಳೇ ನಡೆನುಡಿಯಲ್ಲೆಲ್ಲಾ ಸ್ಥಿರ ಪಡಿಸ ಬೇಕೆಂದು ಅಪೇಕ್ಷಿಸುತ್ತಾನೆ.

೩. ೪.

I. ಅಪೊಸ್ತಲನ ಬಿನ್ನಹವು ಅಪೇಕ್ಷೆಯೂ ವ. ೧—೫.

೧. ಕಡೆಯಲ್ಲಿ, ಸಹೋದರರೇ, ನಿಮಲ್ಲಿ ಆವ ಪ್ರಕಾರ ಕರ್ತನ ವಾಕ್ಯವು ಓಡಿ ೧) ಮಹಿಮೆ ೨) ಪಡುವ ಹಾಗೆಯೂ, ೨. ಅಯುಕ್ತ ದುಷ್ಟ ಮನುಷ್ಯರಿಗೆ ೩) ನಾವು ತಪ್ಪಿಸಲ್ಪಡುವ ಹಾಗೆಯೂ, ನಮಗಾೀಸ್ಕರ ಪ್ರಾರ್ಥಿಸಿರಿ ೪), ಯಾಕಂದರೆ ವಿಶ್ವಾಸವು ಯೆಲ್ಲರಲ್ಲಿ ಇಲ್ಲ; ೩. ಆದರೆ ಕರ್ತನು ನಂಬಿಕೆಯುಳ್ಳವನು ೫); ಅವನು ನಿಮ್ಮನ್ನು ಸ್ಥಿರ ಪಡಿಸಿ, ಕೇಡಿಗೆ ೬) ತಪ್ಪಿಸುವನು. ೪. ಇದಲ್ಲದೆ, ನಾವು ನಿಮಗೆ ಆಜ್ಞಾಪಿಸುವವುಗಳಂನು ಮಾಡುತ್ತೀರೆಂದೂ, ಮಾಡುವಿರೆಂದೂ, ಕರ್ತನಲ್ಲಿ ೭) ನಿಂ

೨ ಥೆಸ್ಸ. ೩, ೫. ೬.

ಮನ್ನುಕುರಿತು ಪ್ರಾರ್ಥನೆಮಾಡಿದ್ದೇವೆ. ೫. ಮತ್ತು ಕರ್ತನು ನಿಮ್ಮ ಹೃದಯಗಳನ್ನು ದೇವರ ೯) ಪ್ರೀತಿಗೂ ಕ್ರಿಸ್ತನ ತಾಳ್ಮೆಗೂ ಸರಾಗ ಮಾಡಲಿ.

೧. ಅಂದರೆ ಬೇಗ ಹುಟ್ಟಿ.

೨. ದಿವ್ಯ ಬಲವನ್ನು ಪ್ರಕಟ ಮಾಡುವ ಹಾಗೆ.

೩. ಅಪಾಸ್ತಲನಿಗೆ ಬಹು ವಿಧವಾಗಿ ಹಿಂಸೆಗಳನ್ನು ಪಾದಗಿಸಿದಂಥಾ, ಅವನು ಯೆಷ್ಟು ಪ್ರಯತ್ನ ಮಾಡಿದರೂ, ದೇವರು ಅವರಿಗೆ ಮಾರ್ಗವನ್ನು ಯೆಷ್ಟು ಸರಾಳ ಮಾಡಿದ್ದರೂ, ವಿಶ್ವಾಸಕ್ಕೆ ಬರಲಾಲ್ಲದೆ ಇದ್ದಂಥಾ, ಕೊರಿಂಥದಲ್ಲಿಯೂ ಬೇರೆ ಕಡೆಯಲ್ಲಿಯೂ ಇರುವ ಯೆಹೂದರಿಗೆ ಮುಖ್ಯವಾಗಿ. ಅವರು ಶೀರಾ ಪುರ್ಥರು. ಯಾಕಂದರೆ ವಿಶ್ವಾಸದ ಪ್ರಸಂಗ ಯೆಲ್ಲರ ಬಳಿಗೆ ಬಂದರೂ ವಿಶ್ವಾಸವು ಯೆಲ್ಲರಿಗೆ ಬರುವದಿಲ್ಲಾ. ಅಪಾ. ಕ್ರಿ. ೧೭, ೩೧. ೧೫ರೊ. ೨, ೪. ಈ ದುಃಖದ ಅನುಭವಪಚನವನ್ನು ಧ್ಯಾನಿಸಿದರೆ ಪ್ರಸಂಗವು ನಿರರ್ಥಕವೆಂಬ ಚಿಂತೆಯೂ, ಯೆಲ್ಲರು ಮೆಚ್ಚುವ ಹಾಗೆ ವಿಶ್ವಾಸವನ್ನು ಲೋಕಕ್ಕೆ ಸಮರ್ಪಕ ಮಾಡುವ ಬುದ್ಧಿಯೂ ಆಗ್ಗಾಗ್ಗೆ ಪರಿಹಾರವಾಗ ತಕ್ಕದ್ದು. ಆದರೆ ಯಾರಿಗೂ ಯದೆಗುಂದದ ಹಾಗೆ, ಅಪಾಸ್ತಲನು ಪ. ೩. ಕರ್ತನು ನಂಬಿಕೆಯುಳ್ಳವನು ಯೆಂಬದನ್ನು ಜ್ಞಾಪಕ ಮಾಡುತ್ತಾನೆ.

೪. ದೇವರ ಮಕ್ಕಳಿಗೆ, ವಾಬ್ದರಿಗಾಗಿಸ್ಕರ ವಾಬ್ದರು ಬಿನ್ನೈಸುವದಲ್ಲದೆ, ದೇವರ ರಾಜ್ಯದ ಅಭ್ಯುದಯವನ್ನೂ ಆತನ ವಾಕ್ಯದ ವಿಸ್ತರಣೆಯನ್ನೂ ಬಯಸಿ, ಚಿಂತಿಸಿ, ಯೆಲ್ಲಾದಕ್ಕಾಗಿಸ್ಕರ ಪ್ರಾರ್ಥನೆ ಮಾಡುವ ಅತಿಶಯವಾದ ಅಧಿಕಾರವದೆ. ಮತ್ತಾ. ೯, ೩೮.

೫. ಗ್ರೀಕ ಭಾಷೆಯಲ್ಲಿ ವಿಶ್ವಾಸಕ್ಕೆ (ಪಿಸ್ತಿಸ್) ಕರ್ನಾಟಕದ ಹಾಗೆಯೇ ಯೆರಡು ಅರ್ಥ ಉಂಟು. ವಿಶ್ವಾಸಿ ಯೆಂಬದಕ್ಕೆ ದೇವರನ್ನು ನಂಬುವವನೆಂತಲೂ ನಂಬಿಗಸ್ಥನೆಂತಲೂ ಅರ್ಥವದೆ. ಆದ್ದರಿಂದ ಅಪಾಸ್ತಲನ ಮಾತನ್ನು ಈ ಪ್ರಕಾರ ಭಾಷಾಂತರ ಮಾಡಬಹುದು: ಯಾಕಂದರೆ ವಿಶ್ವಾಸವು ಯೆಲ್ಲರಲ್ಲಿ ಇಲ್ಲಾ; ಆದರೆ ಕರ್ತನು ವಿಶ್ವಾಸಿ (ನಂಬಿಗಸ್ಥನು). ಈ ಮಾತು ಪೃತ್ಯಚಿತ ಮಾಡಿ ಕಾಂಡರೆ, ನಮ್ಮ ಕಷ್ಟವೆಲ್ಲಾ ನಿಷ್ಫಲವಾಯಿತೆಂಬ ವ್ಯಸನದಿಂದ ಯೆದೆಗುಂದುವದಿಲ್ಲಾ. ದೇವರು ಶಕ್ತರಲ್ಲಿ ತಾಡಗಿದ ಕೆಲಸವನ್ನು ಅರೆವಾಸಿ ಬಿಡಲಿಕ್ಕಿಲ್ಲಾ.

೬. ಸೈತಾನನಿಗೂ ಅವನಿಂದ ಬರುವ ಸಮಸ್ತ ಕೇಡಿಗೂ. ಯಾಕೋಬ. ೧೭, ೧೫. ೧ ಯಾಕೋ. ೫, ೧೮.

೭. ಮನುಷ್ಯರನ್ನು ನಂಬಲಿಕ್ಕೆ ಕರ್ತನ ಮೇಲೆಯೇ ದೃಷ್ಟಿ ಇಡ ಬೇಕು. ಯಾಕಂದರೆ ಮನುಷ್ಯರೆಲ್ಲರೂ ಸುಳ್ಳರೆಂದು ಬರದದೆ.

೮. ದೇವರ ಚಿತ್ತವನ್ನು ಮಾಡುವ ಬಗ್ಗೆ ದೇವರ ಪ್ರೀತಿಗೂ, ಕ್ರಿಸ್ತನಿಗಾಗಿಸ್ಕರ ಶ್ರಮ ಪಡುವ ಬಗ್ಗೆ ಚಂಚಲವಿಲ್ಲದ ತಾಳ್ಮೆಗೂ.

II. ಶಕ್ತರನ್ನಿಸಿ ಕಾಪ್ಪುವವರ ಸಾರ್ವಭೌಮಾಧಿಕಾರದ ವಾಗ್ದಂತ.

೧) ಸಂಕ್ಷೇಪವಾದ ಅಪ್ಪಣೆ. ವ. ೬. ೨) ಹೆಚ್ಚಿಗೆ ವಿವರ ವ. ೭—೧೫. ಅ) ಅಪೊಸ್ತಲನು ತಾನು ಕೈಕೊಂಡು ಮುಂಚೆ ಸ್ಪಷ್ಟವಾಗಿ ಸ್ಥಾಪಿಸಿದ ಕಟ್ಟಳೆ. ಇ) ಸೋಮಾರಿಗಳಿಗೆ ಮತ್ತೆ ಕೊಟ್ಟ ಅಪ್ಪಣೆ. ವ. ೧೧. ೧೨. ಉ) ಸಜ್ಜನರು ಅವರಿಗೆ ಯೇನು ಮಾಡ ಬೇಕು ಯೆಂಬದು ವ. ೧೩—೧೫.

೬. ಇದಲ್ಲದೆ, ಸಹೋದರರೇ, ನಮ್ಮಿಂದ ಹೊಂದಿದ ಸಂಪ್ರದಾಯದ ಪ್ರಕಾರವಲ್ಲ, ಅಕ್ರಮದಿಂದ ನಡೆಯುವ ಪ್ರತಿ ಸಹೋದರನಿಂದ ತಾಲಿಗಿ ಹೋಗ ಬೇಕೆಂದು ೧), ನಂಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ ೨).

೨ ಥೆಸ್ಸ. ೩, ೭—೧೨.

೭. ಯಾಕಂದರೆ, ನಂಮಂನು ಹ್ಯಾಗೆ ಅನುಸರಿಸ[೩]ಬ್ಯೇಕೆಂದು ನೀವ್ಯೇ ಬಲ್ಲಿರಿ. ಯ್ಯೇನಂದರೆ ನಾವು ನಿಂಮ್ಮಲ್ಲಿ ಕ್ರಮವಿಲ್ಲದವರಾಗಿರಲಿಲ್ಲ[೪]. ೮. ನಾವು ವ್ಯಾಬ್ಜನಿಂದ ಆವದೂ ರ್ಯಾಟ್ಟಿಯಂನು ಸುಂಮನೆ ತಿನಲಿಲ್ಲ; ಆದರೆ ಅಧಿಕಾರವಿಲ್ಲದೆ ಇರುವ ದುಂಮಲ್ಲ, ೯. ನಂಮಂನು ಅನುಸರಿಸುವದಕ್ಕೆ ನಿಮಗೆ ನಂಮಂನು ಮಾದರಿಯಾಗಿ ಕ್ಯಾತುವ ಹಾಗೆ, ನಿಂಮ್ಮಲ್ಲಿ ವ್ಯಾಬ್ಜನಿಗೂ ಭಾರವಾಗದ ಹಾಗೆ, ಕಷ್ಟದಲ್ಲಿಯೂ ಪ್ರಯಾಸದಲ್ಲಿಯೂ ರಾತ್ರಿ ಹಗಲು ಕೆಲಸ ಮಾಡಿದೆವು. ೧೦. ಯಾಕಂದರೆ ವ್ಯಾಬ್ಜನು ಕೆಲಸ ಮಾಡಲಾಲದ್ದಿದ್ದರೆ, ಅವನು ತಿನಲೂ[೫] ಬಾರದೆಂದು, ನಿಂಮ ಹತ್ತರವಿದ್ದಾಗ, ನಿಮಗೆ ಆಜ್ಞಾಪಿಸಿದೆವು.

೧. ನಯವಾಕ್ಯಗಳಿಗೆ ಕಿವಿಗಾಡದವರಿಗೆ ಲಘುವಾದ ಸಚಾಶಿಕ್ಷೆಯ ಭಯದಿಂದ ಯೆಚ್ಚರಿಸ ಬೇಕು. ಇಲ್ಲಿ ಪೌಳಿದ್ದು ಆ ಸಭೆಗಳಲ್ಲಿ ನಡದ ಮೊದಲನೇ ಸಚಾಶಿಕ್ಷೆಯ ಉದಾಹರಣೆ. ಸದ್ಯಕ್ಕೆ ಇಷ್ಟು ಸಾಕು. ಕೆಳಗೆ ವ. ೧೪. ಅಧಿಕ ವಿವರ ಬರುತ್ತದೆ.

೨. ಮೊದಲನೆ ಪತ್ರಿಕೆಯಲ್ಲಿ ಬುದ್ಧಿ ಮಾತಾಗಿ ಪೌಳಿದ್ದನ್ನು ೪, ೧೧. ಇಲ್ಲಿ ಕ್ರಿಸ್ತನ ಪೆಸರಿನಲ್ಲಿ ಅಪಾಸ್ತಾಲಿಕ ಅಧಿಕಾರದಿಂದ ಆಜ್ಞೆಯಾಗಿ ಪೌಳುತ್ತಾನೆ.

೩. ಬ್ಯಾಧಕನ ನಡತೆ ಯೆಷ್ಟ್ವೀ ಉಪಯೋಗವಾದದ್ದು. ಬಾಯಿಂದ ಕಲಿಸುವದಕ್ಕಿಂತ ನಡತೆಯಿಂದ ಕಲಿಸುವದು ಬಹುಶಾ ಲೇಸು. ಇದಲ್ಲದೆ ಕೂಲಂಕಷವಾದ ಬ್ಯಾಧನೆಗಿಂತ, ವಾಂದೇ ವಾಂದು ನಡತೆಯ ಮಾದರಿಯು ಅಧಿಕ ಪ್ರಯೋಜನವಾಗಿರುತ್ತದೆ. ಅಪಾಸ್ತಲನು ೧ ಥೆಸ್ಸ. ೨, ೬. ತನ್ನ ನಡತೆಯನ್ನು ಥೆಸ್ಸಲೊನೀಕೆಯರಲ್ಲಿ ಅತಿಶಯವಾದ ವಾತ್ಸಲ್ಯದ ಪ್ರಮಾಣವಾಗಿಯೂ, ಗರ್ವವುಳ್ಳ ಕಾರಿಂಥರಲ್ಲಿ ೧ ಕಾರಿ. ೪. ಸ್ವಾರ್ಥವಿಲ್ಲದ ನಮ್ರತೆಯ ದೃಷ್ಟಾಂತವಾಗಿಯೂ ಪ್ರಯೋಗಿಸಿ, ಇಲ್ಲಿ ಕೈ ಕಷ್ಟದಿಂದ ಜೀವನ ಮಾಡಿ ಕಾಳ್ಳುವ ಮಾದರಿಯಾಗಿ ತೋರಿಸುವದು ಯುಕ್ತವಾಗಿತ್ತು.

೪. ಅಪಾಸ್ತಲನು ಸ್ಥಿರವಾದ ಉದ್ಯೋಗವಿಲ್ಲದೆ ಇರಲಿಲ್ಲಾ; ಶಿಷ್ಯರ ಧರ್ಮಗಳಿಂದ ಕಾಲಕ್ಷೇಪ ಮಾಡಲಿಲ್ಲಾ; ಉದರಪೋಷಣಕ್ಕೆ ಬೇಕಾದ್ದನ್ನು ಸ್ವಂತ ಕಷ್ಟದಿಂದ ದುಡಿದನು. ಯಾರಿಗೂ ಭಾರವಾಗದ ಪೂರ್ತಿಗೆಯೂ, ಮತ್ತೊಬ್ಬರು ತನ್ನನ್ನು ಅನುಸರಿಸುವ ಪೂರ್ತಿಗೆಯೂ ಹೀಗೆ ನಡಕಾಂಡನು.

೫. ತಾನು ಕೇವಲ ಪಾರಮಾರ್ಥಿಕಾವಶ್ಯಕನೆಂದು ದೇವರ ಧ್ಯಾನದಲ್ಲಿಯೇ ನಿಮಗ್ನನಾಗಿರುವ ಕಾರಣ, ಕಷ್ಟ ಮಾಡುವದು ಅನುಚಿತವೆಂದು ಯಾರಾದರೂ ಪೌಳುವದಾದರೆ, ಆಪೂರ್ತಿ ಸಪೂರ್ತಿ ಬಿಡಲಿಕ್ಕೆ ಆಗುತ್ತದಾ ನೋಡಲಿ! ಆದರೆ ಆಪೂರ್ತಿವು ಅಪಶ್ಯವೆಂದಾದರೆ, ಕಷ್ಟ ಮಾಡುವದೂ ಅವಶ್ಯವೆಂದು ತಿಳಕಾಳ್ಳಲಿ. ಕಷ್ಟ ಮಾಡದೆ ಜೀವಿಸುವದಕ್ಕೆ ಸಾಕಷ್ಟು ಆಸ್ತಿ ಇದ್ದವನಿಗೂ ದೇವರ ರಾಜ್ಯಕ್ಕ್ಯಾಸ್ಕರ ಯೇನೂ ಕಷ್ಟ ಪಡದೆ ಇರುವದು ನ್ಯಾಯವಲ್ಲ. ನಾವು ಭೂಮಿಯಲ್ಲಿರುವ ಮಟ್ಟಿಗೂ, ಆಪೂರ್ತಿಕ್ಕೂ ಕಷ್ಟಕ್ಕೂ ಯಾವಾಗಲೂ ಗಂಟು. ಕಷ್ಟವಿಲ್ಲದೆ ಕಾಲಕ್ಷೇಪ ಮಾಡುವವರಾಗಿ ಕಾಣಿಸಿ ಕಾಳ್ಳುವವರಿಗೆ ತಕ್ಕ ಕೆಲಸಗಳು ಬಹಳ ಉಂಟು.

೧೧. ಯಾಕಂದರೆ ಕೆಲವರು ಕ್ರಮವಿಲ್ಲದೆ[೧] ನಿಂಮ್ಮಲ್ಲಿ ನಡೆಮು, ಕೆಲಸ ಮಾಡದೆ, ತಿರುಗಾಮುತ್ತಾರೆಂದು[೨] ಕ್ಯೇಳ್ಪುತ್ತ್ರೇವೆ. ೧೨. ಅಂಥವರಿಗೆ, ಸಮಾಧಾನದಿಂದ[೩] ಕೆಲಸ ಮಾಡಿ ಸ್ವಂತ ರ್ಯಾಟ್ಟಿಯಂನು ತಿನ ಬ್ಯೇಕೆಂದು, ನಂಮ ಕರ್ತನಾವ

ಯೇಸು ಕ್ರಿಸ್ತನಿಂದ ಬುದ್ಧಿ ಹೇಳಿ ಆಜ್ಞಾಪಿಸುತ್ತೇವೆ. ೧೩. ಆದರೆ, ಸಹೋದರರೇ, ನೀವು ದಣಿಯದೆ ೪) ಸತ್‌ಕ್ರಿಯೆ ಮಾಡಿರಿ. ೧೪. ಪತ್ರಿಕೆಯಲ್ಲಿರುವ ನಮ್ಮ ಮಾತಿಗೆ ವಾಬ್ಬನು ವಿಧೇಯನಾಗದಿದ್ದರೆ, ಅವನನ್ನು ಗುರುತಿಡಿರಿ ೫); ಅವನು ನಾಚಿಕೆ ಪಡುವ ಹಾಗೆ, ಅವನ ಸಂಗಡ ಕಲೆಯ ಬೇಡಿರಿ. ೧೫. ಆದಾಗ್ಯೂ ಅವನನ್ನು ಶತ್ರುವೆಂದೆಣಿಸದೆ, ಸಹೋದರನಿಗೆಂದು, ಬುದ್ಧಿ ಹೇಳಿರಿ.

೧. ಪುನಃ ಕ್ರೈಸ್ತಾವಲಂಬರು ಮೋಕ್ಷಾನುಭವಗಳಲ್ಲಿ ನಿಮಗ್ನರಾಗಿ, ಇವುದ ಕೆಲಸಗಳಲ್ಲಿ ಅವಶ್ಯವಾದ ಜಾಗ್ರತೆಯನ್ನು ಬಿಡುವ ಮೋಸಕ್ಕೆ ಯೆಚ್ಚರಿಕೆಯಾಗಿರುವದು ವಿಶೇಷ ಯುಕ್ತವಾಗಿದೆ.

೨. ಅವರು ಯೇನಾಂಬೂ ಕೆಲಸ ಮಾಡದಿರಲಾರದೆ ಪರರ ಕಾರ್ಯಗಳಲ್ಲಿ ಕೈ ಹಾಕುತ್ತಾರೆ; ಇದಲ್ಲದೆ ಪರರ ಅನ್ನ ಉಂಡು ಬದುಕುವದು ಅಲಸವಾದ ಹುಟ್ಟಿಗೆ ಪರಮ ಸುಖವೆಂದು ತೋರುತ್ತದೆ.

೩. ಮರ್ಮಜಿಗ್ನಾಸಕ್ಕೆ ಶಾಂತ ಗುಣವೂ, ಮಾತಾಳಿಗಳ ಪಾರುಟಿಗೆ ತಾನೇ ದುಡಿದದ್ದನ್ನು ಉಣ್ಣುವ ಕಷ್ಟಾಳುತನವೂ ಪ್ರತೀಕಾರವಾಗಿರುತ್ತದೆ.

೪. ಅಂದರೆ ಅಯೋಗ್ಯರ ದೆಶೆಯಿಂದ ಕರಕರೆ ಪಟ್ಟು, ಆಪತ್ತು ಅವಸರಗಳಲ್ಲಿ ಬಿದ್ದು, ಅರ್ಥ ಸಹಾಯ ಅವಶ್ಯವಿರುವವರಿಗೆ ಕಾಡುವದರಲ್ಲಿ ದಣಿಯ ಬಾರದು.

೫. ಅಂದರೆ, ಈ ಪತ್ರಿಕೆಯಿಂದಲೂ ವಾಬ್ಬನು ಬುದ್ಧಿ ತಕ್ಕಾಳ್ಳದಿದ್ದರೆ, ಅಂಥವನನ್ನು ಪ್ರಕಟವಾಗಿ ಅವಿಧೇಯನೆಂದು ಗುರುತಿಡಿರಿ. ಇಲ್ಲಿ ಮೊದಲನೆ ಸಭೆಗಳಲ್ಲಿ ನಡದ ಸಭಾದಂಡದ ಯೆರಡು ದೃಷ್ಟಾಂತಗಳು ಉಂಟು. ಅ) ಬೇರೆ ಸಭೆಗಳಿಗೂ, ಮುಖ್ಯವಾಗಿ ಅಪಾಸ್ತಲನಿಗೂ ತಿಳಿಸುವದು ಇ) ಸಭೆಯ ಸಂಸರ್ಗದಿಂದಲೂ ಸ್ನೆಹಸಂಗದಿಂದಲೂ ಬಹಿಷ್ಕಾರ ಮಾಡಿ ವಿಂಗಡಿಸುವದು. ಆದರೂ ತಪ್ಪು ಮಾಡಿದವನನ್ನು ತಿರಿಗಿ ಗುಣ ಮಾಡ ಬೇಕೆಂದು ಸಹೋದರಪ್ರೀತಿಯಿಂದ ಬುದ್ಧಿ ಹೇಳುವದನ್ನು ಬಿಡದೆ ಇರುವದು.

III. ಸಮಾಪ್ತಿ. ವ. ೧೬—೧೮.

೧೬. ಆದರೆ, ಸಮಾಧಾನದ ಕರ್ತನು ತಾನೇ ನಿಮಗೆ ಯಾವಾಗ್ಲೂ ಎಲ್ಲಾ ವಿಧದಿಂದ ಸಮಾಧಾನವನು ೧) ಕೊಡಲಿ. ಕರ್ತನು ನಿಮ್ಮೆಲ್ಲರ ಸಂಗಡ ಇರಲಿ. ೧೭. ಪೌಲನೆಬ ೨) ನನ ಸ್ವಂತ ಕೈಯಿಂದ ವಂದನೆಯು. ಎಲ್ಲಾ ಪತ್ರಿಕೆಗಳಲ್ಲಿ ಇದೇ ಗುರುತು; ಹೀಗೆ ಬರೆಯುತ್ತೇನೆ. ೧೮. ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

೧. ಕಪಟಿ ಮೋಸ ಮುಂತಾದಕ್ಕೆ ವಿರೋಧವಾಗಿ ಪೂರೈರಾಡುವದರಿಂದಲೇ ಸಭೆಯಲ್ಲಿ ಉಂಟಾಗುವ ಸಮಾಧಾನವ ಮಾತಿಗೆ ಅಪಾಸ್ತಲನು ವಾಡಿಕೆಯಾದ ಸಮಾಧಾನನಮನವನ್ನು ಶೇರಿಸುತ್ತಾನೆ. ಪೃದಯಗಳಲ್ಲಿಯೂ ಸಭೆಯಲ್ಲಿಯೂ, ಕಡೆಗೆ ಸಮಸ್ತ ಲೋಕದಲ್ಲಿಯೂ ಲೂಕ. ೨, ೧೪. ಉಂಟಾಗ ತಕ್ಕ ಪರಿಶುದ್ಧ ಚಾಗ್ಯಕರ ದಿವ್ಯ ಸಮಾಧಾನದ ಮೇಲೆ ಯಾವಾಗಲೂ ಮುಖ್ಯ ಆಶೆ ಇರ ಬೇಕು.

೨. ಪೌಲನು ತನ್ನ ಪತ್ರಿಕೆಗಳನ್ನು ಮತ್ತೊಬ್ಬರ ಕೈಯಿಂದ ಬರಿಸಿದರೂ, ಚಾರಪತ್ರಿಕೆಗಳಿಗೆ ಇಂಬು

ಅಪಾ. ಕ್ರಿ. ೧೪, ೧೪—೨೦.

ಶಿಕ್ಷಿಪಡಿಸಿಕೊಂಡ, ಸ್ವಂತಕೈಯಿಂದವಾಪ್ತಿತಪಡಿಸಿಕೊಂಡ ಇದ್ದನು. ೨, ೨. ೧ ಕೊರಿ. ೧೬, ೨೧. ಕೊಲೊ. ೪, ೧೪. ಗಲ. ೬, ೧೧. ಫಿಲೆ. ೧೯. ಚಾರಪತ್ರಿಕೆಗಳ ಚಯ ಕಳದನಂತರ ಬರದ ಕೆಲವು ಪತ್ರಿಕೆಗಳಲ್ಲಿ ವಾಪ್ತಿತ ಪಡಿಸಿಕೊಂಡಿಲ್ಲ.

೪. ಪೌಲನು ಯೆರೂಸಲೇಮಿಕ್ಕೂ ಅಂತಿಯೊಕ್ಯಕ್ಕೂ ತಿರುಗಿದ್ದು.

ಅಪಾ. ಕ್ರಿ. ೧೪, ೧೪—೨೦.

ವಿಶ್ವಾಸಿಗಳ ನಿಯಮದ ವಿಷಯವಾದ ಪೌಲನ ಮನಸ್ಸಾಗತ.

ಗ್ರೀಕ ದೇಶದಲ್ಲಿ ಪ್ರಥಮ ಫಲಗಳನ್ನು ಕಂಡ ಮೇಲೆ, ಯೆರೂಸಲೇಮಿನಲ್ಲಿಯೂ ಅಂತಿಯೊಕ್ಯದಲ್ಲಿಯೂ ಇರುವ ಮಾತೃ ಸಭೆಗಳ ಬಳಿಗೆ ತಿರುಗುವ ಆಶೆಯು ಪೌಲನ ಮನಸ್ಸನ್ನು ಯೆಳೆಯಿತು. ಅವನು ತನ ಗೋಸ್ಕರವಾಗಿಯೂ ವರಜನಸಂವರ್ತಿಗಳಿಗೋಸ್ಕರವಾಗಿಯೂ ನಿಯಮದ ಬಂಧಗಳಿಂದ ಬಿಡುಗಡೆಯಾದ ಕ್ರೈಸ್ತ ಸ್ವತಂತ್ರವನ್ನು ಸಾಧಿಸುವದಕ್ಕೆ ಯಾವಾಗಲೂ ಸಿದ್ಧವಾಗಿದ್ದರೂ ಕೆಲವು ಭಕ್ತ್ಯಾಚಾರಗಳನ್ನು ಆಗಿಂದಾಗ್ಯೆ ನಡಿಸುವದು ಅನ್ಯಾಯವೆಂದೆಣಿಸಲಿಲ್ಲಾ. ಕೊರಿಂಥದಿಂದ ಹೊರಟು, ಅಕ್ವಿಲ ಪ್ರಿಸ್ಕಿಲ್ಲರ ಸಹಿತವಾಗಿ ನಗಯೇರುವ ಮುಂಚೆ, ತಲೆ ಬೋಳಿಸಿ ಕೊಂಡು, ತಾನು ಯೆರೂಸಲೇಮಿನ ದೇವಾಲಯದಲ್ಲಿ ಬಲಿಯನ್ನು ಅರ್ಪಿಸುವ ವರೆಗೆ ಮೂವ್ವತ್ತು ದಿನ ಪರ್ಯಂತ ಕ್ಷೌರ ಮಾಡಿಸಿ ಕೊಳ್ಳೆನೆಂತಲೂ, ದ್ರಾಕ್ಷೆರಸವನ್ನು ಮುಟ್ಟೆನೆಂತಲೂ ಹರಿಕೆ ಹೇಳಿ ಕೊಂಡನು. ೧೮. ಅವನು ಮುಂಚೆ ಎಫೆಸಕ್ಕೆ ಹೋದನು, ಅಲ್ಲಿಯೆಹೂದರು ಅವನ ಹರಿಕೆಯನ್ನು ನೋಡಿ, ಸ್ನೆಹಭಾವದಿಂದ ತಮ್ಮ ಮನೆಗಳಿಗೆ ಕರದರು. ೨೦. ತಮ್ಮ ಸಂಗಡ ಕೆಲವು ಕಾಲ ಇರ ಬೇಕೆಂದು ಇಚ್ಛೈಸಿದರು. ೨೧. ಅವನು ಆ ಮಾತಿಗೆ ಒಪ್ಪದಿದ್ದರೂ, ಸದ್ಯಕ್ಕೆ ಅಕ್ವಿಲ ಪ್ರಿಸ್ಕಿಲ್ಲರನ್ನು ಅಲ್ಲಿ ಬಿಟ್ಟು ತಾನೇ ತಿರಿಗಿ ಬರುತ್ತೇನೆಂದು ಮಾತು ಕೊಟ್ಟನು. ೨೨. ಯೆಲ್ಲಿಯೂ ತಡ ಮಾಡದೆ ಸಮುದ್ರಮಾರ್ಗವಾಗಿ ಕೈಸರ್ಯೆಯಕ್ಕೂ ಅಲ್ಲಿಂದ ಪಥ ಮಾರ್ಗವಾಗಿ ಯೆರೂಸಲೇಮಕ್ಕೂ ಬಂದು, ಹೇಳಿ ಕೊಂಡ ಹರಿಕೆಯನ್ನು ಸಲ್ಲಿಸಿದನು. ಅಲ್ಲಿ ವಿಶೇಷವಾದ್ದೇನೂ ನಡಿಯದೆ ಇರಲಾಗಿ, ಅಂತಿಯೊಕ್ಯಕ್ಕೆ ಮಾಡಿದ ಮುಂದಿನ ಪ್ರಯಾಣದ ವರ್ತಮಾನ ಮಾತ್ರವೆ ಹೇಳಿಯದೆ.

ಪೌಲನ ಮೂರನೆ ಪ್ರಸಂಗಪರ್ಯಟನ. ಅಪಾ. ಕ್ರಿ. ೧೪, ೨೦—೨೧, ೧೬. ಗಲ. ಕೊರಿ. ರೋಮ.

೧) ಅಂತಿಯೊಕ್ಯದಲ್ಲಿ ಪೇತ್ರನನ್ನು ಗದರಿಸಿದ್ದು. ಗಲ. ೨, ೧೧.
೨) ಅಪೊಲ್ಲೋಸನೂ ಯೋಹಾನಶಿಷ್ಯರೂ. ಅಪಾ. ಕ್ರಿ. ೧೪, ೨೪.
೩) ಎಫೆಸದ ಅಭ್ಯುದಯವಾದ ಪ್ರವೃತ್ತಿ. ಅಪಾ. ಕ್ರಿ. ೧೯.
೪) ಗಲತರ ಪತ್ರಿಕೆ.
೫) ಮೊದಲನೆ ಕೊರಿಂಥರ ಪತ್ರಿಕೆ.
೬) ಎಫೆಸದ ಕಲಹ. ಅಪಾ. ಕ್ರಿ. ೧೯, ೨೧.

೭) ಯೆರಡನೆ ಕಾರಿಂಥರ ಪತ್ರಿಕೆ.

೮) ರೋಮಾಯರ ಪತ್ರಿಕೆ.

ಪೌಲನ ಈ ಮೂರನೆ ಪ್ರಸಂಗಪ್ರಯಾಣವು ಮುಂಚೆ ಸ್ಥಾಪನೆಯಾದ ಸಭೆಗಳನ್ನು ಕ್ರೈಸ್ತ ಧರ್ಮದಲ್ಲಿ ನೆಲೆಗೊಳಿಸುವದಕ್ಕೆ ಪ್ರಾಮುಖ್ಯವಾಗಿತ್ತು. ಅದ್ದರಿಂದ ಅವನು ಎಫೆಸದಲ್ಲಿ ಬಹುಕಾಲ ಇದ್ದು ನಡಿಸಿದ ಸುವಾರ್ತಾಕಾರ್ಯವು ಯೆಷ್ಟೋ ಸಫಲವಾಯಿತೆಂದು ಅಪೊಸ್ತಲಚರಿತ್ರದಲ್ಲಿ ವರ್ಣಿಸಿ ಅದೆ. ಈ ಎಫೆಸವು ರೋಮಿಯ ಸಂಸ್ಥಾನದ ಪಶ್ಚಿಮಾಸ್ಯದ ಮಹಾ ನಗರವೂ ಧರ್ಮಕಾರ್ಯಗಳ ಮಹಾ ಸಂಗಮ ಸ್ಥಾನವೂ ಆಗಿತ್ತು. ಪೌಲನು ಎಫೆಸಕ್ಕೆ ಮುಟ್ಟುವಷ್ಟರಲ್ಲಿಯೇ, ಕ್ರಿಸ್ತನ ವಾಕ್ಯವನ್ನು ಕೇಳಿ ಇದ್ದರೂ, ಮಹಿಮೆ ಪಟ್ಟ ರಕ್ಷಕನ ವಿಷಯದಲ್ಲಿಯೂ ಆತನು ದಯ ಮಾಡುವ ವರಗಳ ವಿಷಯದಲ್ಲಿಯೂ ಯೇ ನೊಂದೂ ತಿಳಿಯದ ಅಕೆಕ್ವೈಸ್ತರಾದ ಯೋಹಾನಶಿಷ್ಯರನ್ನು ಅವನ ಜತೆಕೆಲಸದವರಾದ ಅಕ್ವಿಲ ಪ್ರಿಸ್ಕಿಲ್ಲ ರೆಂಬ ದಂಪತಿಗಳು ಅಲ್ಲಿ ಕಂಡರು. ಅಲೆಕ್ಸಂದ್ರಿಯದ ಯೆಹೂದನಾದ ಬಹು ತೀವ್ರ ಬುದ್ಧಿಯೂ ವಾಕ್ಪಟುತ್ವವೂ ಇರುವ ಅಪೊಲ್ಲೊನ ಯೆಂಬವನು ಅವರಲ್ಲಿ ಪ್ರಖ್ಯಾತಿ ಪಟ್ಟವನಾಗಿದ್ದರೂ, ಅಪೊಸ್ತಲನಾದ ಪೌಲನಿಂದ ಬೋಧಿಸಲ್ಪಟ್ಟ ಅಕ್ವಿಲ ಪ್ರಿಸ್ಕಿಲ್ಲರೆಂಬ ಕ್ರೈಸ್ತ ದಂಪತಿಗಳಿಂದ ಉಪದೇಶ ತಕ್ಕೊಳ್ಳುವದು ನ್ಯೂನತೆ ಯೆಂದೆಣಿಸದೆ, ವಿದ್ಯಾಸಂಪನ್ನರಾದ ಗ್ರೀಕರ ದೇಶದಲ್ಲಿ ಪೌಲನಿಗೆ ಉತ್ತಮ ಜತೆಕೆಲಸದವನಾಗುವ ಹಾಗೆ, ಜ್ಞಾನದಲ್ಲಿ ವೃದ್ಧಿಯಾಗುತ್ತಾ ಇದ್ದನು. ಪೌಲನ ಬರೋಣದ ಮುಂಚೆಯೇ ಅಪ್ಪಣ್ಣ ನಡದಿತ್ತು. ಅವನೂ ಆ ತರದ ಹನ್ನೆರಡು ಮಂದಿಯನ್ನು ಕಂಡು, ಪೇತ್ರನು ಮುಂಚೆ ಸಮರ್ಪಿದವರಿಗೆ ಮಾಡಿದ ಹಾಗೆ ಸ. ಶ. ಅವರಿಗೆ ಹಸ್ತಕ ಮಸ್ತಕ ಮಾಡಿ, ಅವರನ್ನು ಪೂರ್ಣ ವಿಶ್ವಾಸಕ್ಕೂ ತಶ್ಶಲಗಳಿಗೂ ನಡಿಸಿದನು. ಯೆಹೂದರಲ್ಲಿ ಮೂರು ತಿಂಗಳ ವರೆಗೆ ಬೋಧಿಸಿದ ಬಳಿಕ, ಕೆಲವರು ಹಗೆ ಮಾಡಿ ಸುವಾರ್ತೆಗೆ ಯೆದುರ್ಕಾಂಡಿಸಿದ ಕಾರಣ, ಪೌಲನು ಶಿಷ್ಯರನ್ನು ಪ್ರತ್ಯೇಕಿಸುವಾಗ, ಅನೇಕರು ಅವನನ್ನು ಅನುಸರಿಸಲಾಗಿ, ಈ ವಿಶೇಷವಾದ ಸ್ಥಳದಲ್ಲಿ ಯೆಹೂದರೂ ಪರಜನರೂ ಕೂಡಿದ ದೊಡ್ಡ ಸಭೆಯು ಉಂಟಾಯಿತು. ಅವರಲ್ಲಿ ಪೌಲನು ಬಹಳ ಗೆಲವಿನಿಂದ ಉಳಿ ಕೊಂಡನು. ಪರಜನರ ಮಂತ್ರ ತಂತ್ರಗಳು ಪ್ರಬಲವಾದ್ದಲ್ಲಿಯೇ ವಿಶೇಷವಾದ ಅದ್ಭುತಗಳನ್ನು ಮಾಡುವ ಶಕ್ತಿಯನ್ನು ದೇವರು ಅವನಿಗೆ ಕೊಟ್ಟದರಿಂದ ಅಲ್ಲಿ ಘಟ್ಟಿಯಾಗಿ ಹೋದ ಕುವಿಶ್ವಾಸವನ್ನು ಭಕ್ತರೊಳಗಿಂದ ಬೇರೊಂದಿಗೆ ಕಿತ್ತು ಹಾಕುವದಕ್ಕೆ ಮಾರ್ಗವಾಯಿತು. ಈ ರೀತಿಯಲ್ಲಿ ಅವನು ದೆಮೆತ್ರಿಯನ ಕಲಹದಿಂದ ಪಲಾಯನ ಮಾಡ ಬೇಕಾಗುವವರೆಗೆ ಶುಮಾರು ಯೆರಡು ವರುಷ ಅಲ್ಲಿ ಸುವಾರ್ತೆಯ ಕಾರ್ಯವನ್ನು ನಡಿಸುತ್ತಾ ಇದ್ದನು. ಈ ದೆಮೆತ್ರಿಯನು ಬೊಬ್ಬೆ ಯೆಬ್ಬಿಸಿದ್ದೇ, ಕ್ರೈಸ್ತಧರ್ಮವು ವಿಸ್ತರಿಸುತ್ತದೆಂದು ಪರಜನರಲ್ಲಿ ಹುಟ್ಟಿದ ಭಯಕ್ಕೆ ಸಾಕ್ಷಿ ಆಯಿತು. ಪೌಲನು ಆ ಬಳಿಕ ಗ್ರೀಕ ದೇಶವನ್ನೂ ಇಷ್ಟು ವರೆಗೆ ನೋಡದೆ ಇದ್ದ ಇಲ್ಲುರ್ಯವನ್ನೂ ಸಂಚರಿಸಿದನು. ಈ ಸಂಗತಿಯು ಅಪೊಸ್ತಲಚರಿತ್ರದಲ್ಲಿ ಹೇಳಿರುವದಿಲ್ಲಾ. ಸ್ವಲ್ಪ ಕಾಲದ ಮೇಲೆ ಅವನು ತಿರಿಗಿ ಯೆರೂಸಲೇಮುಕ್ಕೆ ಹೋದನು. ಅಲ್ಲಿ ಬಂಧನದಲ್ಲಿ ಬಿದ್ದನು.

ಪೌಲನು ಈ ಕಾಲದಲ್ಲಿ ಬರದ ಪತ್ರಿಕೆಗಳಿಂದ ಅವನ ಬೋಧನೆ ಪ್ರವೃತ್ತಿಗಳಲ್ಲಿ ಪ್ರಾಮುಖ್ಯ ವಿಷಯಗಳು ತಿಳಿಯ ಬರುವದರಿಂದ, ಅವು ಅಪೊಸ್ತಲಚರಿತ್ರಕ್ಕಿಂತ ವಿಶೇಷವಾಗಿವೆ. ಪೇತ್ರ

ನನ್ನು ಸಹಾ ತಿರಿಗಿ ಮರುಳುಗೊಳಿಸಿದ ಯೆಹೂದ ಕ್ರೈಸ್ತರ ಪೂರ್ವ ಸಂಪ್ರದಾಯಾಗ್ರಹದಿಂದುಂಟಾದ ಹೋರಾಟವನ್ನು ಈ ಪರಿಚ್ಛೇದದ ಆರಂಭದಲ್ಲಿ ಬರದದ್ದು ಸುಮ್ಮನೆ ಅಲ್ಲಾ. ಪೌಲನು ಸಹೋದರಪ್ರೀತಿಯಿಂದ ಹೇಳಿದ ಮಾತಿಗೆ ಪೇತ್ರನು ಕಿವಿ ಕೊಟ್ಟನು. ಆದರೆ ಅತ್ಯಾಸಕ್ತಿಯಿಂದ ಬುದ್ಧಿ ತಪ್ಪಿದ ಬೇರೆ ಜನರು ಅಂದಿನಿಂದ ಪೌಲನಿಗೂ ಅವನ ಕಾರ್ಯಕ್ಕೂ ಮುನಿದು, ವಿಶ್ವಾಸನೀತಿಯನ್ನು ತಿರಸ್ಕರಿಸಿ, ಮೋಶೆಯ ನಿಯಮಾಲಂಬನವು ನಿರಂತರವಾದದ್ದೆಂದು ಸಾಧಿಸಿ, ಅಪೊಸ್ತಲನಾದ ಪೌಲನ ಅಧಿಕಾರವನ್ನು ನಿರಾಕರಿಸಿದರು. ಇಂಥಾ ಮಾತುಗಳಿಗೆ ಭೋಳೆ ಜನರಾದ ಗಲತರಲ್ಲಿ ಬೇಗ ಇಂಬು ಶಿಕ್ಕಿತು. ಆದಕಾರಣ ಅಪೊಸ್ತಲನು ಅವರಿಗೆ ಬರದ ಪತ್ರಿಕೆಯಲ್ಲಿ ತನ್ನ ಅಪೊಸ್ತಲತನದ ನಿಜ ಘನತೆಯನ್ನೂ, ವಿಶ್ವಾಸದಿಂದಲೆ ರಕ್ಷಣೆ ಬರುತ್ತದೆಂಬ ಬೋಧನೆಯನ್ನೂ ಪ್ರತಿಪಾದಿಸಿ, ಈ ವಿಶ್ವಾಸಕ್ಕೆ ಫಲ ತರ ಬೇಕೆಂದು ಯೇಚ್ಛರಿಸುತ್ತಾನೆ. ಗಲತರು ಅವಿವೇಕದಿಂದ ಅನ್ಯರಾದ ಕುಹಕಬೋಧಕರ ಮಾತುಗಳನ್ನು ಬೇಗ ನಂಬಿ, ಮೋಸ ಹೋದರು; ಕೊರಿಂಥದವರು ಅಪೊಸ್ತಲನಿಗೂ ಅಧೀನವಾಗಲೊಲ್ಲದೆ, ವಿದ್ಯಾಗರ್ವದಿಂದ ತರ್ಕಗಳನ್ನೂ ಭೇದಗಳನ್ನೂ ನಾನಾ ಅಕ್ರಮಗಳನ್ನೂ ನಡಿಸಿ ಮೋಸ ಹೋದರು. ಆದ್ದರಿಂದ ಇಲ್ಲಿ ಸಹಾ ತನ್ನ ಅಪೊಸ್ತಲತನದ ಘನತೆಯನ್ನು ಕುಂದಿಸಿದವರಿಗೆ ಯೆದುರಾಗಿ, ಅದನ್ನು ಕ್ರಿಸ್ತನ ಕೃಪೆಯ ಹಾಗೆಯೆ ಅಲ್ಪತ್ವದಲ್ಲಿ ಮಹಿಮೆಯಾಗಿ ಕಾಣ ಬರುವಂಥಾದ್ದಾಗಿ ಸ್ಥಾಪಿಸಿ, ಅಕ್ರಮಗಳನ್ನು ನಿಲ್ಲಿಸಿ, ಕ್ರೈಸ್ತ ಪದ್ಧತಿಯ ವಿಷಯವಾಗಿ ಕೊರಿಂಥದ ಸಭೆಯವರು ಕೇಳಿದ ಕೆಲವು ಪ್ರಾಮುಖ್ಯ ಪ್ರಶ್ನೆಗಳಿಗೆ ಉತ್ತರ ಕೊಡ ಬೇಕಾಯಿತು. ಕೊರಿಂಥರ ಯೆರಡನೆ ಪತ್ರಿಕೆಯು ಮೊದಲನೆ ಪತ್ರಿಕೆಯ ಅಭಿಪ್ರಾಯಗಳನ್ನು ಪೆಚ್ಚಾಗಿ ವಿವರಿಸಿ, ಬಲಪಡಿಸುತ್ತದೆ; ಇದನ್ನು ಅಪೊಸ್ತಲನು, ಕೊರಿಂಥದವರಾದ ಗರ್ವಾತ್ಮಗಳ ಮೇಲೆ ಬಹಳ ಮನೋವ್ಯಥೆ ಪಟ್ಟು, ಪ್ರಯಾಣದಲ್ಲಿ ಬರದನು. ಈ ಯೆರಡು ಪತ್ರಿಕೆಗಳನ್ನು ನೆರೆವಿಚಾರಿಸಿದರೆ, ಆದಿಕಾಲದ ಸಭೆಗಳ ಬಹು ವಿಧದ ಅವಸ್ಥೆ ಪೂರ್ವೋತ್ತರಗಳನ್ನೂ, ಅಪೊಸ್ತಲನ ಕೆಲಸಗಳನ್ನೂ, ಉದ್ಯೋಗೋಪದ್ರವಗಳನ್ನೂ, ಅಡಿ ವರೆಗೆ ನೋಡ ಬಹುದು. ತರುವಾಯ ಕೊರಿಂಥವರಿಗೂ ಗಲತರಿಗೂ ಪತ್ರಿಕೆಗಳನ್ನು ಬರಿಯುವದು ಕೇವಲಾವಶ್ಯವಾಗಿದ್ದ ಹಾಗೆ, ಅಂಥಾ ಅವಸರವಿಲ್ಲದಿದ್ದರೂ, ಗ್ರೀಕರಲ್ಲಿ ನಡಿಸಿದ ಪ್ರವೃತ್ತಿಯ ಕಡೆ ಕಾಲದಲ್ಲಿ, ಆ ವರೆಗೆ ಅಪೊಸ್ತಲರ್ಯಾರೂ ಸಂದರ್ಶನ ಮಾಡದ ರೋಮು ರಾಜಧಾನಿಯಲ್ಲಿ ಪರಜನರಿಂದಲೂ ಯೆಹೂದರಿಂದಲೂ ಉಂಟಾದ ಸಭೆಗೆ, ಕ್ರಿಸ್ತನ ಪ್ರೀತಿಯ ಪೂರ್ಣ ಅನ್ಯೋನ್ಯದೊಳಗೆ ಅವರನ್ನು ಹೊಗಿಸಿ, ಸತ್ಯದ ತಿಳಿವಿಕೆಯಿಂದ ಅದರಲ್ಲಿ ಸ್ಥಿರ ಪಡಿಸ ಶಕ್ಯ ವೊಂದು ಕಾಗದವನ್ನು ಬರದನು. ಈ ಪತ್ರಿಕೆಯಲ್ಲಿ ಪೌಲನು ಕ್ರಮವಾಗಿ ಸಮಸ್ತ ಮನುಷ್ಯರ ವಿಮೋಚನಾವಶ್ಯಕತ್ವವನ್ನೂ, ಕ್ರಿಸ್ತನ ಪರಿಮುಖವಾಗಿ ಯೆಹೂದರಿಗೂ ಪರಜನರಿಗೂ ಉಂಟಾದ ವಿಮೋಚನೆಯನ್ನೂ, ಸಮಸ್ತ ಮನುಷ್ಯರಿಗೆ ವಿಮೋಚನಾಸ್ವೀಕಾರಕರಣವಾದ ವಿಶ್ವಾಸವನ್ನೂ, ಅದರ ಚರಿತ್ರವನ್ನೂ ಫಲಗಳನ್ನೂ ವರ್ಣಿಸಿ, ಪೂರ್ಣವಾದ ಬೋಧನಾಸಂಗ್ರಹವನ್ನು ಕೊಟ್ಟು, ದೇವರು ಮುಂಚೆ ಯೆಹೂದರಿಗೆ ಸಾರಿದ ಸುವಾರ್ತೆಯನ್ನು ಅವರು ನಂಬದೆ ಹೃದಯಗಳನ್ನು ಕಠಿಣ ಮಾಡಿ ಕೊಂಡ ಕಾರಣ, ಅದು ಪರಜನರಿಗೆ ಬಂತೆಂಬದನ್ನೂ, ಪರಜನರ ಪರಿಪೂರ್ತಿಯು ವೊಳಗೆ ಬಂದ ಮೇಲೆ, ಇಸ್ರಯೇಲರು ಸಮೂಹ ಸಮೂಹಗಳಾಗಿ ಕರ್ತನ ಕಡೆಗೆ ತಿರುಗಿ ಕೊಳ್ಳುವರೆಂಬದನ್ನೂ ವಿವರಿಸುತ್ತಾನೆ. ಈ ನಾಲ್ಕು ಪತ್ರಿಕೆಗಳು, ಪ್ರಾಮುಖ್ಯವಾದ ಮೂಲಬೋಧಗ್ರಂಥಗಳಾಗಿ ಎಣಿಕೆಯಾದ್ದರಿಂದ, ದೇವವಾಕ್ಯದ ಪುಸ್ತಕದಲ್ಲಿ ಅಪೊಸ್ತಲರ ಪತ್ರಿಕೆಗಳೊಳಗೆ ಮೊದಲು ಬರುತ್ತವೆ.

ಳಳಿಒ ಅಪಾ. ಬಿ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ರ.

ಅಪಾ. ಕ್ರಿ. ೧೪, ೨೩. (ಗಲ. ೨, ೧೧—೨೧.)

೧. ಅಂತಿಯೊಕ್ಯದಲ್ಲಿ ಪೇತ್ರನಿಗೆ ಮಾಡಿದ ವಾಗ್ದಂಡ. ಗಲ. ೨, ೧೧—೨೧.

ಸಣ್ಣ ಆಸ್ಯವನ್ನು ಪೌಲಾದು ಎಫೆಸ ವರೆಗೆ ಮಾಡಿದ ಪ್ರಯಾಣ. ೧೪, ೨೩.

ಪೌಲನು ಅಂತಿಯೊಕ್ಯಕ್ಕೆ ತಿರಿಗಿ ಬಂದು, ಪೂರ್ವ ಸ್ನೇಹಿತರ ಸಂಗಡಲೂ ಜತೆ ಅಪೊಸ್ತಲರ ಸಂಗಡಲೂ ವೊಟ್ಟಿಗೆ ಇದ್ದನು. ಬರ್ನಬನು ಕುಪ್ರದಿಂದ ತಿರಿಗಿ ಬಂದಿದ್ದನು. ೧೫, ೨೮. ಪೇತ್ರನು ಸಹಾ ಸ್ವಲ್ಪ ದಿನದ ಮೇಲೆ ಅಲ್ಲಿಗೆ ಬಂದನು. ಎಲ್ಲಿರು ಹೃದಾನಂದಸಂಗದಲ್ಲಿ ಇರುತ್ತಿರಲು, ಯೆರೂಸಲೇಮಿನಿಂದ ಬಂದ ಫರಿಸಾಯ ಮತದ ಆಸಕ್ತಿಗಂಟರು ಅವರ ಐಕ್ಯಕ್ಕೆ ಇಡುರು ತಂದು ಕಾಕಿದರು. ಈ ಜನರು ಯೆರೂಸಲೇಮಿನ ಸಭಾಸಮಾಗಮದಲ್ಲಿ ಸ. ೧೫. ನಿವಾರಿಸಿದ ತರ್ಕಗಳನ್ನು ತಿರಿಗಿ ಕೆದರಿಸಿ, ಪರಜನರಾದ ಕ್ರೈಸ್ತರು ಯೆಹೂದ ನಿಯಮವನ್ನು ಕೈಕೊಳ್ಳ ಬೇಕೆಂದೂ, ಕೈಕೊಳ್ಳದೆ ಹೋದರೆ, ತಮ್ಮ ಸಹವಾಸದಲ್ಲಿರ ಕೂಡದೆಂದೂ ಹೇಳಿದರು. ಪೌಲನು ಇಂಥಾ ಅಲ್ಪ ಬುದ್ಧಿಯ ಯೆಹೂದ ಕ್ರೈಸ್ತರ ಸ್ನೇಹವನ್ನು ದುಡಿಯುವ ಬಗ್ಯೆ ಮಾಡಿದ್ದನ್ನೇ ಅವರು ಆಸ್ಪದವಾಗಿ ಹಿಡಿದು ತರ್ಕಿಸಿ, ಮೋಶೆಯ ನಿಯಮಾಲಂಬನ ನಿತ್ಯವಾದದ್ದೆಂದು ಸ್ಥಾಪಿಸಿ, ಯೆರೂಸಲೇಮಿನ ಸಭೆಯೂ, ಅವರ ಅಸ್ರಸ್ಥ ಯಾಕೋಬನೂ ತಮ್ಮ ಪಕ್ಷದಲ್ಲಿ ಇದ್ದಾನೆಂದು ಹೇಳಿ, ಅಂತಿಯೊಕ್ಯದ ಸಭೆಯಲ್ಲಿ ಆಧಾರ ಹೊಂದಿದರು. ೧೨. ಯೆರೂಸಲೇಮಿನಲ್ಲಿ ಪರಜನರ ಪಕ್ಷ ಬಿಗಿ ಹಿಡಿದ ಪೇತ್ರನು ಸಹಾ ನರಭಯದಿಂದಲೂ ನರದಯಾಪೇಕ್ಷೆಯಿಂದಲೂ ಮರುಳಾಗಿ, ಪರಜನರಾದ ಕ್ರೈಸ್ತರ ಹೊಕ್ಕುಬಳಿಕೆಯಿಂದ ತೊಲಗ ತೊಡಗಿದನು. ಪರಿಶುದ್ಧಾತ್ಮದ ಪ್ರೇರಣೆ ಪ್ರಕಾರ ನಡದ ಪೇತ್ರನು ಬೋಧನೆಯಲ್ಲಿ ತಪ್ಪು ಮಾಡಿದನೆಂದು ನೆನಸ ಕೆಲಸವಿಲ್ಲಾ; ಪೇತ್ರನ ನಡತೆ ಅಂದು ಅವನ ಸ್ವಂತ ಜ್ಞಾನಕ್ಕೆ ವಿರೋಧವಾಗಿತ್ತು, ಹ್ಯಾಗೆಂದರೆ ಪರಜನರಾಗಿ ಹುಟ್ಟಿದ ಸಹೋದರರು ಇಸ್ರಯೇಲ ಜನಾಂಗದಲ್ಲಿ ಶೇರವೆ ಇದ್ದರೂ, ದೇವರ ರಾಜ್ಯಕ್ಕೆ ಸಮಬಾಧ್ಯರೆಂಬದಕ್ಕೆ ಮುಂಚೆ ವೊಪ್ಪಿಕೊಂಡಿದ್ದನು. ೧೩. ಪೇತ್ರನ ತಪ್ಪು ದೊಡ್ಡ ಮೋಸಕ್ಕೆ ಹೇತುವಾಗಲಿಕ್ಕಿತ್ತು. ಹ್ಯಾಗಂದರೆ ಬರ್ನಬ ಮೊದಲಾದ ಬೇರೊಬ್ಬರು ಯೆದುರಾಡುವ ಮನಸ್ಸಾಕ್ಷಿಯಿಂದಲಾದರೂ ಪೇತ್ರನನ್ನು ಅನುಸರಿಸಿದರಿಂದ, ಯೆರೂಸಲೇಮಿನ ಸಭಾ ನಿರ್ಣಯವು ಸ. ೧೫. ಘನವುಳ್ಳ ಅಂತಿಯೊಕ್ಯದ ಸಭೆಯಲ್ಲಿ ಯೆದುರಾಳಿಗಳಾದ ಜನರ ದೆಸೆಯಿಂದ ನಿರರ್ಥಕವಾಗಿ ಹೋಗುವ ಹಾಗೆ ಇತ್ತು. ಪರಜನ ಕ್ರೈಸ್ತರಿಗೆ ಪರಿಚ್ಛೇದನೆ ಮಾಡಿಸುವದು ಅವಶ್ಯವೆಂತಾ ಹೇಳಿದ್ದರೂ, ಅವರು ಪರಿಚ್ಛೇದನೆ ಮಾಡಿಸಿ ಕೊಳ್ಳದಿದ್ದರೆ, ಅವರ ಭಕ್ತಿಗೂ ದೇವಸಮರ್ಪಕ ಸ್ಥಿತಿಗೂ ಕುಂದು ಇರುವದರಿಂದ, ಸಂಪೂರ್ಣರೆಲ್ಲಾ ಮುಂಚೆನ ಹಾಗೆಯೆ ಅವರಿಗೆ ವಿಂಗಡವಾಗಿರ ಬೇಕೆಂದು ಹೇಳಿರುವರು. ಇದೆಲ್ಲಾ ನಿಯಮದ ಕಾರ್ಮಿಕ ಪರಿಶುದ್ಧತ್ವವಲ್ಲದೆ ಮತ್ತೇನು? ೧೪. ಆದರೆ ಪೌಲನು ಸ್ಥಿರವಾಗಿ ನಿಂತು, ತಾನು ಸಹೋದರರ ಬಲಹೀನತ್ವವನ್ನು ತಾಳಿ, ನಿಷ್ಟಾಚಾರಗಳಲ್ಲಿ ಅವರನ್ನು ಅನುಸರಿಸಿ ಮೆಚ್ಚಿಸ ಮನಸ್ಸು ಮಾಡಿದ್ದರೂ, ಸುಳ್ಳು ಬೋಧನೆ ಕಲ್ಪಿಸಿ, ಮನಸ್ಸಾಕ್ಷಿಗಳಿಗೆ ಅಂಕೆ ಮಾಡ ಬೇಕೆಂದಿರುವವರಿಗೆ ಸರ್ವಥಾ ವೊಪ್ಪಿಕೊಳ್ಳುವವನಲ್ಲವೆಂದು ತೋರಿಸಿದನು. ಹ್ಯಾಗಂದರೆ ಸರ್ವರ ಮುಂದೆ ಪೇತ್ರನ ಚಂಚಲಬುದ್ಧಿಯನ್ನು ಗದರಿಸಿ, ಅವನ ನಡತೆಯು ತನಗೆ ತಾನೆ ಪ್ರತಿಕೂಲವಾದದ್ದಲ್ಲದೆ ಸಮಸ್ತ ಸುವಾರ್ತಾಬೋಧನೆಗೂ ವಿಶ್ವಾಸದಿಂದ ನೀತಿ ನಿರ್ಣಯ ಯೆಂಬದಕ್ಕೂ, ಕ್ರಿಸ್ತನ ಪುಣ್ಯವೇ ಭಕ್ತನಿಗೆ ಗತಿ ಎಂಬದಕ್ಕೂ ವಿರೋಧವಾಗಿದೆಂದು ಪ್ರಮಾಣಿಸಿದನು. ಹೆಚ್ಚಾದ್ದು ಗಲ. ೨ಲ್ಲಿ ಬರದದೆ.

ಅಪಾ. ಕ್ರಿ. ೧೪, ೨೪—೨೪.

ಪೇತ್ರನು ಅಪೊಸ್ತಲನಿಗೆ ತಕ್ಕ ದೀನಭಾವದಿಂದ ಈ ವಾಗ್ದಂಡಕ್ಕೆ ಒಪ್ಪಿಕೊಂಡನು. ಇದು ಸ್ಪಷ್ಟವಾಗಿ ಹೇಳಿರುವದಿಲ್ಲ ಸರಿ, ಆದರೂ ಈ ಇಬ್ಬರು ಅಪೊಸ್ತಲರು ಮತ್ತೆಯೂ ಭೇದವಾಗಿರುತ್ತಾ ಇದ್ದರೆಂದು ಯೆಲ್ಲಿಯೂ ತೋರುವದಿಲ್ಲಾ; ಇದಲ್ಲದೆ ಯೆರೂಸಲೇಮದಲ್ಲಿ ಅವರು ಮತ್ತೆ ಸಹೋದರಪ್ರೀತಿಯಿಂದ ವೊಟ್ಟು ಇದ್ದದ್ದು ಹೇಳಿಯದೆ. ಪೌಲನಿಗೆ ಬಂಧನ ಪ್ರಾಪ್ತಿ ಆದ ಮೇಲೆ, ಪೇತ್ರನು ಅವನ ಸಭೆಗಳನ್ನು ಪರಾಮರಿಸಿದ್ದಲ್ಲದೆ, ತಾನು ಬರದ ಕಾಗದಗಳಲ್ಲಿ, ಮುಖ್ಯವಾಗಿ ೨ ಪೇತ್ರ. ೩, ೧೫. ಲ್ಲಿ, ಪೌಲನ ಸಂಗಡ ಯೇಕಮತ್ಯದಲ್ಲಿಯೂ, ಅವನ ಬೋಧನೆಗೆ ಅನುಕೂಲವಾಗಿಯೂ ಇದ್ದೇನೆಂದು ತಿಳಿಸುತ್ತಾನೆ. ಈ ಪ್ರಕಾರ ಪೌಲನು ಸರ್ವರ ಮುಂದೆ ವಾಗ್ದಂಡಿಸಿದ್ದರಿಂದಲೂ, ಪೇತ್ರನು ತನ್ನ ತಪ್ಪನ್ನು ದೀನಭಾವದಿಂದ ತಿಳಿಕೊಂಡದರಿಂದಲೂ, ಮತ್ತೆ ಪಾಪರ ಅಧಿಕಾರದಲ್ಲಿ ಆದ ಹಾಗೆ, ಸುವಾರ್ತೆಯ ನೀತಿನಿರ್ಣಯಬೋಧನೆಯು ವೊಬ್ಬಾಗಿ ಹೋಗುವ ಕಂಟಕವು ಸದ್ಯಕ್ಕೆ ನಿವೃತ್ತಿ ಆಯಿತು. ಆದರೆ ಆ ಆಸಕ್ತಿಗಂಟರು ತಮ್ಮ ಮೂರ್ಖತನವನ್ನು ಬಿಡದೆ, ಅದರಲ್ಲಿ ಘಟ್ಟಿಯಾಗಲಾಗಿ, ಅಪೊಸ್ತಲನಾದ ಪೌಲನು ಮತ್ತೆ ಬರದ ಪತ್ರಿಕೆಗಳಲ್ಲಿ ಕುಹಕಬೋಧಕರೆಂದು ಅವರನ್ನು ಯೆದುರಿಸುತ್ತಾನೆ.

ಆ ಕಾಲದಲ್ಲಿ ಪೌಲನು ಸಭೆಗಳ ನೋಡ ಹೋದ್ದಲ್ಲಿ, ಗಲತ ಪ್ರುಗ್ಯ ಸೀಮೆಗಳಲ್ಲಿರುವವರು ವೊಳ್ಳೇ ಸ್ಥಿತಿಯಲ್ಲಿಯೆ ಇದ್ದರು. ಅಲ್ಲಿಂದ ಹೊರಟು, ಮುಂಚಿನ ಪ್ರಯಾಣದಲ್ಲಿ ಕರ್ತನು ಹೋಗ ಬಿಡದಂಥಾ ೧೬, ೬. ರೋವಿಾಯ ಸಣ್ಣ ಆಸ್ಯದ ದೊಡ್ಡ ಪಟ್ಟಣವಾದ ಎಫೆಸಕ್ಕೆ ಬಂದು, ಅಲ್ಲಿ ಮೊದಲನೆ ಸರ್ತಿಗೆ ಹೆಚ್ಚು ದಿನ ನಾವಕಾಶ ಮಾಡಿದನು.

೨. ಅಪಾಲ್ಲೋಸನು. ಯೋಹಾನಾನ ಶಿಷ್ಯರು. ಅಪಾ. ಕ್ರಿ. ೧೪, ೨೪. —೧೯, ೭.

ಅಪಾಲ್ಲೋಸನು. ಸ. ೧೪, ೨೪—೨೪.

ಪೌಲನು ಗಲತ ಪ್ರುಗ್ಯ ಸೀಮೆಗಳಲ್ಲಿರುವ ಸಭೆಗಳನ್ನು ದರ್ಶಿಸುತ್ತಾ ಇರುವ ಸಮಯದಲ್ಲಿ, ಮತ್ತೆ ಜತೆ ಕೆಲಸದವನಾಗಿ ಕೊರಿಂಥದಲ್ಲಿ ಕೀರ್ತಿಗೊಂಡವನೊಬ್ಬನು ಎಫೆಸಕ್ಕೆ ಬಂದನು. ಇವನ್ಯಾರೆಂದರೆ ಅಪೊಲ್ಲೋನ್ಯ ಅಥವಾ ಅಪೊಲ್ಲೋಸ್. ಇವನು ಅತೆಕ್ಸಂದ್ರಿಯದ ಯೆಹೂದ ವಿದ್ವಾಂಸನೂ, ಮಹಾ ಬುದ್ಧಿಬಲವುಳ್ಳವನೂ, ದೇವರ ವಾಕ್ಯದಲ್ಲಿ ಬಹು ಪರಿಶ್ರಮ ಉಳ್ಳವನೂ, ಅದನ್ನು ವ್ಯಾಖ್ಯಾನಿಸುವದಕ್ಕೂ, ಯೆದುರಾಳಿಗಳ ಬಾಯಿ ಮುಚ್ಚುವ ಹಾಗೆ ಅದನ್ನು ಪ್ರತಿಪಾದನೆ ಮಾಡುವದಕ್ಕೂ ಘಟ್ಟಿಗನೂ ಆಗಿದ್ದನು. ೨೫. ಅವನು ಸುವಾರ್ತೆಯ ನವಶಿಷ್ಯನಾಗಿದ್ದು, ಸತ್ಯದ ಪ್ರೀತಿಯಲ್ಲಿ ಉರಿಯುತ್ತಾ, ತನಗೆ ತಿಳಿದಷ್ಟು ಯೇಸುವಿನ ಬೋಧನೆಯನ್ನು ಬೇರೊಬ್ಬರಿಗೂ ಕಲಿಸುವದಕ್ಕೆ ಆಸಕ್ತಿ ಪಟ್ಟನು. ಆದರೆ ಅವನಿಗೆ ಯೋಹಾನನ ಸ್ನಾನ ಮಾತ್ರವೆ ತಿಳಿದಿತ್ತು, ಹಾಗಂದರೆ, ಮಾನಸಾಂತರದ ಅವಶ್ಯತ್ವವನ್ನು ಗ್ರಹಿಸಿ, ಮೆಸ್ಸೀಯನು ಬಂದಿದ್ದಾನೆಂದು ನಂಬಿದ್ದನು. ಆದರೆ ಯೇಸುವಿನ ದಿವಾರೋಹಣದ ಮೇಲೆ, ಸ್ನಾನದಿಂದ ಅತಿಶಯವಾದ ಆತ್ಮಸಂಪ್ರದಾನ ಆಯಿತೆಂಬ ಮಾತು ಅವನು ಕೇಳಿರಲಿಲ್ಲಾ. ಯೋಹಾ. ೭, ೫೫. ೨೬. ಅವನಿಗೆ ತಿಳಿಯದೆ ಹೋದ್ದನ್ನು ಅಕ್ವಿಲ ಪ್ರಿಸ್ಕಿಲ್ಲರು ತಿಳಿಸಿದರು. ಅವರು ಅವನ ಮಾತುಗಳಿಂದ, ಅವನಿಗೆ ಕ್ರೈಸ್ತ ರಕ್ಷಣಾರ್ಥಗಳ ಅನುಭವ ಪೂರ್ಣವಾಗಿ ಪ್ರಾಪ್ತಿಯಾಗಲಿಲ್ಲವೆಂದು ಕಂಡು, ಅವನನ್ನು ತಮ್ಮ ಮನೆಗೆ ಕರದು,

ಳಳಿಲ್ ಅಪಾ. ಚ. ಎ. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

ಅಪಾ. ಕ್ರಿ. ೧೫, ೧—೫.

ಸುವಾರ್ತೆಯಲ್ಲಿ ಪೂರ್ಣವಾದ ಬೋಧನೆಯನ್ನು ಕೊಟ್ಟರು. ಈ ಜನರು ಅವನಂತೆ ವಿದ್ವಾಂಸರಲ್ಲವಾದರೂ, ದೀನಭಾವದಲ್ಲಿ ಅವರಿಂದ ಬೋಧನೆ ತಕ್ಕೊಳ್ಳುವದು ನ್ಯೂನತ್ವವೆಂದೆಣಿಸಲಿಲ್ಲ. ೨೭. ಆದರೆ ಗ್ರೀಕರಲ್ಲಿ ಸುವಾರ್ತೆಯನ್ನು ಪ್ರಸಂಗಿಸ ಬೇಕೆಂದು ಅವನಿಗೆ ಮನ ಯೆಳ್ಳಿಯಿತು. ಅವನು ಎಫೆಸರ ಸ್ನೇಹಪತ್ರವಂನು ತಕ್ಕೊಂಡು, ಗ್ರೀಕ ದೇಶಕ್ಕೆ ಹೋಗಿ, ದೇವರು ಕೊಟ್ಟ ಕೃಪಾವರಗಳ ಬಲದಿಂದ ಅನೇಕರಿಗೆ ಉಪಯೋಗವಾಗುವ ಹಾಗೆ ಕಷ್ಟ ಮಾಡಿದನು. ಪೌಲನು ೧ ಕೊರಿ. ೩, ೬. ನೆಟ್ಟದ್ದಕ್ಕೆ ನವಸಂವರ್ತಿಗಳಾದ ಕ್ರೈಸ್ತರಲ್ಲಿ ನೀರು ಹೊಯ್ಯುತ್ತಾ, ೨೪. ಯೆದುರಾಡುವ ಯೆಹೂದರನ್ನು ಲೇಖನಪ್ರಮಾಣಗಳಿಂದ ಖಂಡಿಸುತ್ತಾ ಇದ್ದನು.

ಯಾಕೋಹಾನಶಿಷ್ಯರು. ಸು. ೧೫, ೧—೭.

ಪೌಲನು ಎಫೆಸಕ್ಕೆ ಬಂದಾಗ್ಯೆ, ಅಪೊಲ್ಲೋಸನು ಅಲ್ಲಿ ಇರಲಿಲ್ಲ; ಆದರೆ ಅವನ ತರದ ಗತಿಯವರಾದ ಬೇರೆ ಹನ್ನೆರಡು ಶಿಷ್ಯರನ್ನು ಕಂಡನು. ಇವರು ಸ್ನಾನಿಕನಾದ ಯೋಹಾನನಿಂದ ಅಥವಾ ಅವನ ಶಿಷ್ಯರಿಂದ ಮಾನಸಾಂತರದ ಸ್ನಾನವನ್ನೂ, ಬರುವವನಲ್ಲಿ ಇಡತಕ್ಕ ವಿಶ್ವಾಸವನ್ನೂ ಹೊಂದಿದ್ದರೂ, ಕ್ರೈಸ್ತರ ಸಂಗವಿಲ್ಲದೆ, ಆರಂಭಿಸಿದ್ದಲ್ಲಿಯೆ ನಿಂತಿದ್ದರು. ಆದಾಗ್ಯೂ ಅವರು ಯಥಾರ್ಥಮನಸ್ಸಿನವರಾಗಿ ಇದ್ದ ಕಾರಣ, ಆ ಕಾಲದಲ್ಲಿ ಅವರ ಹಾಗೆ ಇದ್ದ ಬೇರೆ ಅರೆ ವಿಶ್ವಾಸಿಗಳು ಮಾಡಿದ ಹಾಗೆ, ಪ್ರತ್ಯೇಕ ಮತವನ್ನು ಕಟ್ಟದೆ, ತಮ್ಮ ನ್ಯೂನತ್ವವನ್ನು ಮರೆ ಮಾಡದೆ, ಅರಿಕೆ ಮಾಡಿದರು. ೨. ಮಹಿಮೆ ಪಟ್ಟ ಕ್ರಿಸ್ತನ ಬಲದ ವಿಷಯದಲ್ಲಿಯೂ, ಆತನು ದಯೆ ಮಾಡಿದ ದಿವ್ಯ ಜೀವಶಕ್ತಿಗಳ ವಿಷಯದಲ್ಲಿಯೂ ತಾವು ಕೇಳ್ಳಲಿಲ್ಲವೆಂತ ಅರಿಕೆ ಮಾಡಿದ ಕಾರಣ, ಅವರು ಪರಿಶುದ್ಧಾತ್ಮದ ವಿಷಯದಲ್ಲಿಯೂ ತಮ್ಮ ಗುರುವಾದ ಯೋಹಾನನು ಮತ್ತಾ. ೩, ೧೧. ಬರುವದೆಂದು ಹೇಳಿದ ಆತ್ಮದ ಅವತರಣದ ವಿಷಯದಲ್ಲಿಯೂ ಅವರು ಯೇನೊಂದೂ ತಿಳಿಯಲಿಲ್ಲವೆಂತ ತೋರುತ್ತದೆ. ಹಾಗಾದರೆ ಯೋಹಾನನ ಸ್ನಾನದ ಪೂರ್ಣ ಅರ್ಥವು ಅವರಿಗೆ ತಿಳಿದಿರಲಿಲ್ಲ. ಹೀಗಿರಲಾಗಿ, ಯೋಹಾನನು ತಾನೆ ಹೇಳಿದ ಪ್ರಕಾರ, ಅವನ ಸ್ನಾನವೂ ಅವನ ಸಮಸ್ತ ಉದ್ಯೋಗವೂ ಸನ್ನಾಹಕರವಾಗಿ ತ್ತೆಂತಲೂ, ಕ್ರಿಸ್ತನಲ್ಲಿ ಸಂಪೂರ್ಣತೆಯು ಬಂತೆಂತಲೂ, ಅವರು ಸಹಾ ಈಗ ಪೂರ್ಣ ಕೃಪಾನುಭವದೊಳಗೆ ಶೀರ ಬೇಕೆಂತಲೂ ಅವರಿಗೆ ಪೌಲನು ಕಲಿಸಿ ಕೊಟ್ಟನು. ಅವರು ಈ ಮಾತಿಗೆ ವೊಳ್ಳೇ ಮನಸಿನಿಂದ ಸಮ್ಮತಿ ಪಟ್ಟು, ಕರ್ತನು ತಾನೆ ಆರಿಸಿ ಕೊಂಡ ಪಾದಶಿಷ್ಯರಾದ ಹನ್ನೆರಡು ಅಪೊಸ್ತಲರಿಗೆ ಅವಶ್ಯವಿರದಂಥಾ, ಕರ್ತನ ದಿವಾರೋಹಣದಂದಿನಿಂದ ಇತರರೆಲ್ಲರಿಗೆ ಅಗತ್ಯವಾಗ ಕ್ರೈಸ್ತ ಸ್ನಾನವನ್ನು ತಕ್ಕೊಂಡರು. ೬. ಇದು ಸಮವಾಗಿತ್ತೆಂಬದು ಫಲದಿಂದ ಪ್ರತ್ಯಕ್ಷವಾಯಿತು. ಹ್ಯಾಗೆಂದರೆ, ಪೌಲನು ಅವರ ಮೇಲೆ ಕೈ ಇಟ್ಟಾಗ, ಆದಿ ಕ್ರೈಸ್ತರಿಗೆ ಪ್ರಾಪ್ತವಾದ ಪರಿಶುದ್ಧಾತ್ಮದ ಅವತರಣದ ಚೆನ್ನುಗಳು ಕಾಣ ಬಂದವು; ಈ ಪ್ರಕಾರ ಈ ಹನ್ನೆರಡು ಮಂದಿಯು ಯಾವದರಲ್ಲಿ ಆದರೂ ಬೇರೆ ಕ್ರೈಸ್ತರಿಗಿಂತ ಕಡಿಮೆ ಆಗಲಿಲ್ಲ.

೩. ಪೌಲನು ಎಫೆಸದಲ್ಲಿ ನಡಿಸಿದ ಮಂಗಲವಾದ ಪ್ರವೃತ್ತಿ. ಅಪಾ. ಕ್ರಿ. ೧೯, ೮—೨೦.

೧) ಪೌಲನು ಎಫೆಸದಲ್ಲಿ ಮಾಡಿದ ಪ್ರಸಂಗ ಅದ್ಭುತಗಳು. ವ. ೮—೧೨.

ವ. ೮. ಮೂರು ತಿಂಗಳು ಪರ್ಯಂತ ಪೌಲನು ಸಭೆಮನೆಯಲ್ಲಿ ಪ್ರಸಂಗಿಸುತ್ತಾ ಇದ್ದನು. ೯. ಆದರೆ ವಿರುದ್ಧವೊ ಹಗೆಕಿಚ್ಚೂ ಯೆದ್ದಾಗ, ಆ ಯೆಹೂದರ ಸಭೆಯಿಂದ ತಾನೂ ವಿಶ್ವಾಸಿಗಳಾದ ಯೆಹೂದರೂ

ಅಪೌ. ಕ್ರಿ. ೫೫, ೧೦—೧೯.

ವಿಂಗಡವಾಗಿ, ತುರನ್ನನೆಂಬ ಒಬ್ಬ ವಿದ್ವಾಂಸನ ಶಾಲೆಯನ್ನು ತಂನ ಕಡೆಯವರ ಸಭೆ ಕೂಡುವದಕ್ಕೆ ನಿಶ್ಚಯಿಸಿದನು. ೧೦. ಆಗ್ಯೆ ಯೆಹೂದರೂ ಪರಜನರೂ ಸುಲಭವಾಗಿ ಅಲ್ಲಿ ಬರುವದಕ್ಕೆ ಆಸ್ಪದವಾಯಿತು ಎಫೆ. ೨, ೧೪. ಎಫೆಸದಲ್ಲಿ ದಿಗ್ದೇಶಗಳಿಂದಲೂ ಜನರು ಬರುತ್ತಾ ಹೋಗುತ್ತಾ ಇರುವ ಕಾರಣ, ಪೌಲನು ಯೆರಡು ವರುಷವರೆಗೆ ಅಲ್ಲಿದ್ದು ಪ್ರಸಂಗಿಸಿದ ಸುವಾರ್ತೆಯು ಪ್ರತಿದೊರೆಯ ಅಧಿಕಾರದಲ್ಲಿದ್ದ ಆಸ್ಯದ ಲ್ಲೆಲ್ಲಾ ಹಬ್ಬಿತು. ೧೧. ಎಫೆಸವು ಅನೇಕ ಮಾಟ ತಂತ್ರಗಳಿಂದ ಬಲವಾದ ಸೈತಾನದುರ್ಗವಾಗಿದ್ದ ಕಾರಣ, ಅಲ್ಲಿಯೆ ದೇವರು ಯೇಸುವಿನ ಹೆಸರಿನಲ್ಲಿ ಅದ್ಭುತಬಲಗಳಿಂನು ಪ್ರಾಮುಖ್ಯವಾಗಿ ಪ್ರಕಟಿಸಿದನು. ಪೌಲನು ಅನೇಕರಂನು ಕೈ ಇಟ್ಟು ವಾಸಿ ಮಾಡಿದರ ಹೊರತಾಗಿ, ಯೇಸುವೂ ಮಾರ್ಕ. ೫, ೩೦. ಪೇತ್ರನ ನೆರಳೂ ಅಪೊ. ಕೃ. ೫, ೧೫. ವಾಸಿ ಮಾಡಿದ ಪಾಗೆಯೆ, ಪೌಲನಲ್ಲಿದ್ದ ಅದ್ಭುತಬಲವು ಅವನ ಮೈಯಲ್ಲಿದ್ದ ಯೆಲವಸ್ತ್ರಕ್ಕೂ ಅಂಗವಸ್ತ್ರಕ್ಕೂ ಹತ್ತಿ ಬರುವಷ್ಟು ಅತಿಶಯವಾಯಿತು. ೧೨. ಇದಲ್ಲದೆ ಬಾಗಲಲ್ಲಿ ಮಂದಿವೊತ್ತಾಗಿ ಅಪೊಸ್ತಲನನ್ನೆ ಮುಟ್ಟಲಿಕ್ಕೆ ಆಗದೇ ಹೋದ್ದಲ್ಲಿ, ಅವನ ಮೈ ಮೇಲಿನಿಂದ ಕೈವಸ್ತ್ರಗಳಿಂನೂ ಅಂಗವಸ್ತ್ರಗಳಿಂನೂ ರೋಗಿಷ್ಟರ ಮೇಲೆ ಇಟ್ಟಾಗ, ರೋಗಗಳು ಅವರಂನು ಬಿಟ್ಟವು, ದುರಾತ್ಮಗಳು ಅವರಿಂದ ಹೊರಟು ಹೋದವು.

೨) ಮಂತ್ರವಾದವನ್ನು ನಿಲ್ಲಿಸಿದ್ದು. ವ. ೧೩—೨೦.

ಅ) ಯೇಸುವಿನ ಹೆಸರಂನು ಅಪಯೋಗಿಸುವದಕ್ಕೆ ಮಂತ್ರಗಾರರು ಪ್ರಯತ್ನ ಮಾಡಿದ್ದು. ವ. ೧೩. ೧೪.
ಇ) ಅದರಿಂದ ಅವರಿಗೆ ಬಂದ ಬಾಧೆ. ವ. ೧೫—೧೭. ಉ) ಅದರ ಫಲ. ವ. ೧೭—೨೦.

೧೩. ಆಗ ತಿರುಗಾಡುವ ೧) ಮಂತ್ರಜ್ಞರಾದ ಯೆಹೂದ್ಯರಲ್ಲಿ ಕೆಲವರು ದುರಾತ್ಮಗಳುಂಟಾದವರಿಗೆ, ಪೌಲನು ಸಾರುವ ಯೇಸುವಿನ ಆಜ್ಞೆ ನಿಮಗೆ ಇಡುತ್ತೇವೆಂದು, ಕರ್ತನಾದ ಯೇಸುವಿನ ಹೆಸರಂನು ೨) ಉಚ್ಚರಿಸಿ ಮುಂಕೊಂಡರು. ೧೪. ಯೆಹೂದ್ಯರ (ಪ್ರಧಾನಯಾಜಕನಾದ ೩) ಸ್ಕೇವನ ಯೇಳು ಮಂದಿ ಮಕ್ಕಳು ಇದನ್ನು ಮಾಡಿದರು. ೧೫. ಆಗ ದುರಾತ್ಮವು ೪) ಪ್ರತ್ಯುತ್ತರವಾಗಿ, ಯೇಸುವಂನು ಅರಿತಿದ್ದೇನೆ; ಪೌಲನಂನೂ ಬಲ್ಲೆನು; ಆದರೆ ನೀವು ಯಾರು? ಯೆಂದು ಹೇಳಿತು. ೧೬. ಮತ್ತು ಆ ದುರಾತ್ಮಪುಳ್ಳ ಮನುಷ್ಯನು ಅವರ ಮೇಲೆ ಹಾರಿ, ಅವರಂನು ಜಯಿಸಿ, ಬಲಾತ್ಕಾರ ಮಾಡಿದ್ದರಿಂದ, ಅವರು ಬೆತ್ತಲೆಯಾಗಿಯೂ ೫) ಘಾಯವಾಗಿಯೂ ಆ ಮನೆಯಂನು ಬಿಟ್ಟು, ವ್ಯೋಡಿ ಹೌೀದರು. ೧೭. ಇದು ಎಫೆಸದಲ್ಲಿ ವಾಸವಾಗಿರುವ ಸಮಸ್ತ ಯೆಹೂದ್ಯರಿಗೂ ಗ್ರೀಕರಿಗೂ ತಿಳಿಯ ಬಂದದರಿಂದ, ಅವರೆಲ್ಲರ ಮೇಲೆ ಭಯವು ೬) ಬಿತ್ತು; ಮತ್ತು ಕರ್ತನಾದ ಯೇಸುವಿನ ಹೆಸರು ಮಹಿಮೆ ಹೌಂದಿತು. ೧೮. ಮತ್ತು ವಿಶ್ವಾಸಿಸಿದವರಲ್ಲಿ ಅನೇಕರು ತಂಮ ಕ್ರಿಯೆಗಳಿಂನು ಅರಿಕೆ ೭) ಮಾಡಿ

ಶಿಳಿಸಲಾರಂಭಿಸಿದರು. ೧೫. ಮತ್ತು ಚಮತ್ಕಾರಗಳಂನು ನಡಿಸಿದವರಲ್ಲಿ ಬಹು ಮಂದಿ ತಮ್ಮ ಪುಸ್ತಕಗಳಂನು [೮]) ತಂದು, ಕೂಡಿಸಿ, ಯೆಲ್ಲರ ಮುಂದೆ ಸುಟ್ಟು ಬಿಟ್ಟರು [೯]). ಮತ್ತು ಅವುಗಳ (ಕ್ರಯಮಂನು ಲೆಕ್ಕಿ ಮಾಡಿ, ಅದು ಐವತ್ತು ಸಾವಿರ ಬೆಳ್ಳಿ ಹಣವೆಂದು [೧೦]) ಕಂಡರು. ೨೦. ಷ ಪ್ರಕಾರ ಕರ್ತನ ವಾಕ್ಯವು (ತ್ರಾಣ ವಾಗಿ ಬೆಳೆದು, ಬಲಗೊಂಡಿತು [೧೧]).

೧. ಇಂಥಾ ಯೆಹೂದತಿರುಕರಿಗೆ ಆ ಕಾಲದಲ್ಲಿ ಪರ ಜನರ ಅಪವಿಶ್ವಾಸವು ಆಯವಾಯಿತು. ಬಾರ್‌ಯೇ ಹು ೧೩, ೬. ಅಂಥವನಾಗಿದ್ದನು. ಈ ಜನರು ಸ ಲಮೋನನಿಂದ ಬಂದದ್ದೆಂಬ ಮಂತ್ರಗಳಿಂದಲೂ ತಂ ತ್ರಗಳಿಂದಲೂ ರೋಗಿಗಳಂನೂ ಭೂತ ಹಿಡಿದವರ ನ್ನೂ ವಾಸಿ ಮಾಡ ಬಲ್ಲೆವೆಂದು ಹೇಳಿ, ಅನೇಕರಂ ನು ಮರಳು ಗಾಳಿಸಿದರು. ಅವರು ಕೆಲವು ಕೀರ್ತ ನೆಗಳಂನು ಸಹಾ ಮಂತ್ರಗಳಾಗಿ ಉಪಯೋಗಿ ಸಿದರು.

೨. ಯೇಸುವಿನ ನಾಮದಲ್ಲಿ ಮಹಾ ಬಲವುಂ ಟೆಂದು ಅವರು ನಂಬಿದ್ದು ತಪ್ಪಲ್ಲಾ. ಆದರೆ ಆ ನಾಮವನ್ನು ಹೇಳಿದರೆ ಸಾಕು, ವಿಶ್ವಾಸವು ಅವಶ್ಯ ವಲ್ಲವೆಂದು ಅವರು ನೆನಸಿದ್ದು ಬರೆ ಭ್ರಮೆಯಾಗಿತ್ತು.

೩. ಅಂದರೆ ಮತ್ತಾ. ೨, ೪. ಮುಂತಾದ ಸ್ಥ ಳಗಳಲ್ಲಿ ಕಾಣುವ ಪ್ರಕಾರ, ಇವನು ಶ್ರೇಷ್ಠ ಯಾ ಜಕರಲ್ಲಿ ವಾಬ್ಬನು, ವಾಂದು ವೇಳೆ ಎಫೆಸದ ಅಧಿ ಕರ್ತ ನಾಗಿದ್ದನು. ಪ್ರಧಾನಯಾಜಕರಲ್ಲಿ ಯಾರಿಗಾ ದರೂ ಈ ಪೌಸರು ಇದ್ದದ್ದು ತಾರುವದಿಲ್ಲಾ.

೪. ಈ ಪ್ರಕಾರ ಆ ಆತ್ಮವು, ಅವರಿಗಲ್ಲ, ಆದರೆ ಯೇಸುವಿಗೂ ಪೌಲನಿಗೂ ತನ್ನ ಮೇಲೆ ಅಧಿಕಾರ ಉಂಟೆಂದು ಅರಿಕೆ ಮಾಡ ಬೇಕಾಯಿತು.

೫. ಅವರು ಕೆದರಿಸಿದ ದುರಾತ್ಮದ ಬಾಧೆಯಿಂದ ಅವರ ದುರ್ಬುದ್ಧಿಗೆ ಶಿಕ್ಷೆಯೂ ಮತ್ತಾತ್ಯಬ್ಬರಿಗೆ ಬೆದರಿಕೆ ಯೂ ಆಯಿತು. ಪೌಲಾಗೆ ಇರದೆ ಇರುವಲ್ಲಿ, ಯಾ ರಾದರೂ ಚನ್ನಾಗಿ ತಿಳಿಯದೆ ಅಲ್ಪ ಸ್ವಲ್ಪವಾದರೂ ಯೇಸುವಿನಲ್ಲಿ ವಿಶ್ವಾಸವಿಡುವಂಥಾ ಮಂತ್ರವಾದಿ ಗಳಿಗೆ ಲೂಕ. ೯, ೪೯. ಕರ್ತನು ತನ್ನ ಪೌಸರಿನಲ್ಲಿ ಈ ಪ್ರಕಾರ ಮಾಡುವದಕ್ಕೆ ಅಡ್ಡಿ ಮಾಡಲಿಲ್ಲಾ. ಇ ಪುದಲ್ಲಿ ಶಿಕ್ಷೆ ಪೌಲಾಂದದ ದುಷ್ಟ ಉಚ್ಚಾಟಕರು ನ್ಯಾಯಶೀರ್ಪಿನಲ್ಲಿ ತಕ್ಕ ಸಂಬಳ ಪೌಲಾಂದುವರು. ಮತ್ತಾ. ೭, ೨೨.

೬. ಯಾಕಂದರೆ, ಈ ಅದ್ಭುತದಿಂದ ಯೇಸುವಿನ ಅಧಿಕಾರವೂ ಆತನ ಮಲಿವಿಲ್ಲದ ಪರಿಶುದ್ಧತ್ವವೂ, ವಾಟ್ಟಿಗೆ ಪ್ರತ್ಯಕ್ಷವಾದವು. ಪೌಲಾಗೆಯೆ ೨, ೪೩. ೫, ೧೧. ಆದರೆ ಮಂತ್ರವಾದವನ್ನು ಕ್ರೈಸ್ತತ್ವದ ಸಂ ಗಡ ಬೆರಿಕೆ ಮಾಡ ಬಹುದೆಂದು ಯೆಣಿಸಿದ ಅನೇಕ ಕ್ರೈಸ್ತರು ಸಹ ಆ ತರದ ಪಾಪಗಳಂನು ಪೂರ್ಣ ಬಿಟ್ಟವರಾಗಿರಲಿಲ್ಲಾ.

೭. ಅಂದರೆ, ಸಂಪರ್ತನದ ಮುಂಚೆ ತಾವು ಅಂ ಥಾ ಮಂತ್ರವಾದ ಮಾಡುವವರಾಗಿದ್ದೆವೆಂತಲೂ, ಆ ಸಮಯದಲ್ಲಿ ಯಾವ ಯಾವ ಅನರ್ಥವಂನು ನಡಿಸಿದೆವೆಂತಲೂ ಅರಿಕೆ ಮಾಡಿದರು.

೮. ಮಂತ್ರವಾದವೂ ಉಚ್ಚಾಟನಾದಿ ವಾಕ್ಯಗ ಳೂ ಇರುವ ಪುಸ್ತಕಗಳಂನು. ಪೂರ್ವಕಾಲದಲ್ಲಿ "ಎಫೆಸದ ಗ್ರಂಥಗಳು" ಮಹಾ ಮಂತ್ರಶಾಸ್ತ್ರವೆಂ ದು ಪ್ರಖ್ಯಾತಿ ಪಟ್ಟಿದ್ದವು.

೯. ಈ ಪಾಪಮಯವಾದ ವ್ಯಾಪಾರವು ತಮಗೆ ಅಸಹ್ಯವಾಗಿರುತ್ತದೆಂಬದಕ್ಕೆ ಸಾಕ್ಷಿಯಾಗಿ ಇದಂನು ಮಾಡಿದರು. ಪೌಲಾಗಂದರೆ, ಯಾರಾದರೂ ತಂನ ಪಾಪಗಳ ದೆಶೆಯಿಂದ ಬಹಳ ದುಃಖಿತನಾಗಿದ್ದರೆ, ಅವುಗಳಿಗೆ ಯೇನೇನು ಕರಣವಾಗಿತ್ತಾ, ಅದನ್ನೆಲ್ಲಾ ಹೃದಯಪೂರ್ವಕವಾಗಿ ಬಿಸಾಡುತ್ತಾನೆ. ಸತ್ಯ ಮಾ ನಸಾಂತರವುಳ್ಳವನು ಪಾಪದ ಉರುಳುಗಳನ್ನೆಲ್ಲಾ ಕಿತ್ತು ಬಿಡುತ್ತಾನೆ.

೧೦. ಅಂದರೆ ಶುಮಾರು ಪೌತ್ತು ಸಾವಿರ ರೂ ಪಾಯಿ.

ಗಲಾತ್ಯ ಪತ್ರಿಕೆ.

೧೧. ಜನಚರಿತವಾದ ಆಸ್ಯಕ್ಕೆ ಮುಖ್ಯ ಪಟ್ಟಣವೂ, ಪುಷ್ಕಳ ವ್ಯಾಪಾರಕ್ಕೂ ಪರಜನರ ಮಂತ್ರವಾದಕ್ಕೂ, ವಿಗ್ರಹಾರಾಧನೆಗೂ ಮುಖ್ಯಸ್ಥಾನವೂ ಆಗಿರುವ ಈ ಎಫೆಸ ಪಟ್ಟಣದಲ್ಲಿ ಇಂಥಾ ಕಾರ್ಯ ನಡದದ್ದು ಬಹು ವಿಶೇಷವಾಗಿತ್ತು.

೪. ಗಲತದವರಿಗೆ ಬರದ ಪತ್ರಿಕೆ.

ಎಫೆಸದಲ್ಲಿ ನಡದ ಸುವಾರ್ತಾಕಾರ್ಯದ ಅಭಿವೃದ್ಧಿಯನ್ನು ಕಂಡು, ಪೌಲನು ಬಹಳ ಗೆಲವಿನಲ್ಲಿ ಅಲ್ಲಿ ಮೂರು ಯೆರಡೂವರೆ ವರುಷ ಪರ್ಯಂತ ಉಳಕೊಂಡ ಸಮಯದಲ್ಲಿ, ಮುಂಚೆ ಸ್ಥಾಪಿಸಿದ ಸಭೆಗಳ ದೆಶೆಯಿಂದ ಅವನಿಗೆ ಚಿಂತೆಯೂ ದುಃಖವೂ ಬಾರದೆ ಇರಲಿಲ್ಲಾ. ಹ್ಯಾಗಂದರೆ ಎಫೆಸಕ್ಕೆ ಅಲ್ಲಲ್ಲಿಂದ ಆಗಿಂದಾಗ್ಗೆ ವರ್ತಮಾನ ಬಂದು ಮುಟ್ಟುತ್ತಾ ಇತ್ತು. ಇಂಥಾ ವರ್ತಮಾನಗಳ ದೆಶೆಯಿಂದ ಯೆರಡು ಪತ್ರಿಕೆಗಳನ್ನು, ಒಂದು ಗಲತದವರಿಗೂ, ಒಂದು ಕೊರಿಂಥದವರಿಗೂ ಬರಿಯುವದು ಉಚಿತ ಕಂಡಿತು.

ಪೌಲನ ಪತ್ರಿಕೆಗಳನ್ನು ಹೊಂದಿದ ಬೇರೆ ಸಭೆಗಳ ಹಾಗೆ ಗಲತ ಸಭೆಯವರು ಒಂದೇ ಪಟ್ಟಣದಲ್ಲಿ ಒಟ್ಟಿಗೆ ಇರದೆ, ಗಲತವೆಂಬ ಒಂದು ಸೀಮೆಯಲ್ಲಿ ಚದರಿ ವಾಸವಾಗಿದ್ದರು. ಈ ಸೀಮೆಯು ಸಣ್ಣ ಆಸ್ಯದ ಮಧ್ಯದಲ್ಲಿ ಇತ್ತು. ಅದರ ಉತ್ತರ ಪ್ರಾಂತ್ಯದಲ್ಲಿ ಪಫ್ಲಗೊನ್ಯ, ಪೂರ್ವಕಡೆಯಲ್ಲಿ ಪೊಂತ, ದಕ್ಷಿಣ ಕಡೆಯಲ್ಲಿ ಕಪದೊಕ್ಯ ಫ್ರುಗ್ಯ ಲುಕವೊನ್ಯ, ಪಶ್ಚಿಮ ಕಡೆಯಲ್ಲಿ ಫ್ರುಗ್ಯ ಬಿಥುನ್ಯ ಇದ್ದವು. ಅದು ಒಳ್ಳೇ ಫಲ ಕೊಡುವ ದೇಶವಾಗಿತ್ತು. ಕ್ರಿಸ್ತ ಶಕದ ಮುಂಚೆ, ಮೂರನೆ ವರುಷಶತದಲ್ಲಿ, ಮೊದಲು ರೋಮವನ್ನು ಪಾಳು ಮಾಡಿ, ಗ್ರೀಕ ದೇಶವನ್ನು ಸುಲಕೊಂಡ, ಕೈನ ತೀರ ಕರೆ ಸೀಮೆಗಳ ಕಡೆಯ ಗಲ್ಲ ಜನಾಂಗಗಳು ಈ ಗಲತ ಸೀಮೆಗೆ ಬಂದು, ನಿವಾಸ ಮಾಡಿದರು. ಅವರು ಗ್ರೀಕರ ಸಂಗಡ ಮಿಶ್ರವಾದ ಕಾರಣ, ಆ ಸೀಮೆಗೆ ಗಲ್ಲಗ್ರೀಕ ಯೆಂಬ ಹೆಸರು ಸಹಾ ಬಂತು. ಅವರಿಗೆ ಪರಕೀಯ ಮರ್ಯಾದೆಗಳೂ, ಗೆರ್ಮಾನನುಡಿಗೆ ಸಂಬಂಧವಾದ ಭಾಷೆಯೂ ಇತ್ತು; ಆದಾಗ್ಯೂ, ಗ್ರೀಕ ಭಾಷೆಯೂ ಅವರಲ್ಲಿ ವಾಡಿಕೆ ಆಗಿತ್ತು. ಕ್ರಿಸ್ತ ಶಕದ ಮುಂಚೆ ಇಪ್ಪತ್ತಾರನೆ ವರುಷ ಪರಿಯಂತ ಅವರಿಗೆ ಸ್ವಂತ ಅರಸುಗಳು ಇದ್ದರು; ಅಂದಿನಿಂದ ಅವರ ದೇಶವು ರೋಮಿಯಾಯ ಸೀಮೆಯಾಯಿತು. ಅವರಿಗೆ ವಿಶೇಷ ಮಾನ್ಯಗಳಿದ್ದ ಕಾರಣ, ಅನೇಕ ಯೆಹೂದರು ಗಲತ ಸೀಮೆಗೆ ಬಂದು ವಾಸ ಮಾಡಿದರು. ಪೂರ್ವದಲ್ಲಿ ನಿರ್ಬಂಧಪ್ರಿಯ ಕಾಡು ಜನರಾಗಿದ್ದರು; ಆದರೆ ಗ್ರೀಕ ಯೆಹೂದರ ಸಂಗಡ ವ್ಯಾಪಾರ ನಂಟಸ್ತಿಕೆಗಳಿಂದ ಅವರ ನಡೆನುಡಿ ಮಧ್ಯಮವಾಯಿತು.

ತಂಮ ಜಾತಿಗುಣವಾದ ಚಪಲ ಬುದ್ಧಿಯಿಂದ ಅವರು ತಮಗೆ ಪೌಲನು ಸೀಲ ತಿಮೊಥೆಯರ ಸಂಗಡ ಮಾಡಿದ ಅಪೊ. ಕ್ರಿ. ೧೬, ೬. ಯೆರಡನೆ ಪ್ರಸಂಗಪ್ರಯಾಣದಲ್ಲಿ ಸಾರಿದ ಸುವಾರ್ತೆಗೆ ಮುದದಿಂದ ಒಳ್ಳಗಾಗಿ ಗಲ. ೪, ೫. ಅವನಲ್ಲಿ ಪರಮ ಮಮತೆಯೆಂನು ತೋರಿಸಿದ್ದರು. ಯೆರಡನೆ ಸರ್ತಿ ಅವರ ಬಳಿಗೆ ಬಂದಾಗ, ಅಪೊ. ಕ್ರಿ. ೧೮, ೨೩., ಅವರು ಪೂರ್ವ ಪ್ರಕಾರವೆ ಇದ್ದರು. ಆದರೆ ಸ್ವಲ್ಪ ಕಾಲ ಕಳದ ಮೇಲೆ (ಯೆರೂಸಲೇಮದಲ್ಲಿಯೂ ಸ. ೧೫.) ಹಾಗೆ ಪೇತ್ರನಂನು ಸಹಾ ತಂಮ ಪಕ್ಷಕ್ಕೆಳಕೊಂಡ ಅಂತಿಯೊಕ್ಯದಲ್ಲಿಯೂ ಪೌಲನು ತೀಕ್ಷ್ಣವಾಗಿ ಯೆದುರ್ನಿಂತ ಅದೇ ಯೆಹೂದ ಆಸಕ್ತಿಗಂಟರು ಗಲತ ಸಭೆಗಳಿಂನು ಹೊಕ್ಕು, ನೀವು ಮೋಶೆಯ ನ್ಯಾಯಪ್ರಮಾಣದ ಪ್ರಕಾರ ಪರಿಚ್ಛೇದಿಸಿ ಕೊಳ್ಳದಿದ್ದರೆ ರಕ್ಷಣೆ ಹೊಂದಲಾರಿರಿ; ಅಂದರೆ, ಕ್ರಿಸ್ತನ ಪುಣ್ಯದ ವಿಶ್ವಾಸದ ಸಂಗಡ, ಅವಶ್ಯವಾದ ನ್ಯಾಯಪ್ರಮಾಣ ನೀತಿಯ ಉತ್ತಮವಾದ ಕೃಪಾ

ಗಲತರ ಪತ್ರಿಕೆ.

ಚೆನ್ನಾವಾಗಿರುವ ಪರಿಚ್ಛೇದನೆಯೆಂನು ಮಾಡ ಬೇಕು ಯೆಂಬ ಬೋಧನೆಯು ಯೆರೂಸಲೇಮದಲ್ಲಿ ನಿರಾಕರಿಸಿ ಇದ್ದರೂ, ಅದಂನು ಪುನರಪಿ ಸ್ಥಿರ ಪಡಿಸ ನೋಡಿದರು ಅಪೊ. ಕೃ. ೧೫, ೧. ಮತ್ತು ಇದು ಪೌಲನ ಬೋಧನೆಗೆ ಕೇವಲ ವಿರುದ್ಧವಾಗಿರುವದರಿಂದ, ಅವರು ಅವನ ಅಪೊಸ್ತೊಲಿಕ ಉದ್ಯೋಗಘನತೆಯಂನೆ ಅಣಗಿಸಿ, ಅವನು ಮತ್ತೊಬ್ಬರಂತೆ ನಿಜ ಅಪೊಸ್ತಲನೇ ಅಲ್ಲಾ, ಕ್ರಿಸ್ತನಿಂದಲೆ ಅಪೊಸ್ತೊಲೋದ್ಯೋಗವಂನು ಹೊಂದಿದವರು ಅವನ ಪ್ರಸಂಗವಂನು ಸ್ಥಿರ ಪಡಿಸಿದ ಹೊರತು, ಅದಕ್ಕೆ ಬಲ ಸಾಲದು ಯೆಂಬ ತರದ ಮಾತುಗಳಂನು ಹೇಳಿದರು. ಈ ಭೋಳ್ಕೆ ಗಲತರು ಕ್ಷಣದಲ್ಲಿ ಅವರ ಬಲೆಯೊಳಗೆ ಸಿಕ್ಕಿ ಕೊಂಡು, ಪೌಲೆಯ ಕಟ್ಟಳೆಗಳ ಸಾಧನೆಯಿಂದ ತಮಗೆ ವಿಶೇಷ ಪರಿಶುದ್ಧತ್ವ ಪ್ರಾಪ್ತವಾಗುವದೆಂದೆಣಿಸಿದರು. ಇವರಿಗೆ, ಯೆಹೂದ ಹೆಸರಿನಿಂದ ಹಿಂಸೆಗಳಿಗೆ ತಪ್ಪಿಸಿ ಕೊಳ್ಳ ಬಹುದು ಯೆಂದು ನೆನಸುವ ಅಲ್ಪವಿಶ್ವಾಸಿಗಳು ೬, ೧೨. ಬೇಗ ಪೊಡಂಬಟ್ಟರು; ಅತ್ತ ಕಡೆಯಲ್ಲಿ ಸ್ವಲ್ಪ ಮಂದಿಯಾಗಿದ್ದ ಪ್ರತಿಪಕ್ಷದವರು ಸುವಾರ್ತೆಯ ಸ್ವತಂತ್ರದ ದರ್ಪದಿಂದ ಅವರಂನು ಪ್ರೀತಿಶೂನ್ಯರಾಗಿ ತುಚ್ಛೀಕರಿಸಿದರು. ಅಪೊಸ್ತಲನು ಈ ದುಃಖಕರವಾದ ವರ್ತಮಾನವಂನು ಎಫೆಸದಲ್ಲಿ ಕೇಳಿ, ಬಹಳ ಶೋಕದಿಂದಲೂ ಅಕ್ಕರದ ಚಿಂತೆಯಿಂದಲೂ ಗಲತ ಸಭೆಗಳಿಗೆ ಈ ಪತ್ರಿಕೆಯಂನು ಬರದನು. ಅವನು ಅದರಲ್ಲಿ ೧) ಮುಂಚೆ ತಂನ ಅಪೊಸ್ತೊಲೋದ್ಯೋಗವಂನು ಮನುಷ್ಯರಿಂದಲ್ಲ, ಬೇರೆ ಅಪೊಸ್ತಲರ ಹಾಗೆಯೆ, ಅವರ ಉಪದೇಶವಿಲ್ಲದೆ ನಸಾ, ಕ್ರಿಸ್ತನಿಂದಲೆ ಹೊಂದಿದೆನೆಂದು ಪ್ರತಿಪಾದಿಸಿದ ಮೇಲೆ, ೨) ಕ್ರಿಸ್ತನು ನಂಮನ್ನು ನಿಯಮದ ನೊಗದಿಂದ ಬಿಡುಗಡೆ ಮಾಡಿದನೆಂಬದಂನು ಹಳ್ಳೆಪೊಡಂಬಡಿಕೆಯಾದ ನಿಯಮದಿಂದಲೆ ಪ್ರಮಾಣಿಸುತ್ತಾನೆ. ಕಡೆಯಲ್ಲಿ ಪ್ರಸ್ತಾವೋಚಿತವಾದ ಬುದ್ಧಿ ಮಾತುಗಳು ಬರುತ್ತವೆ. ದೇವರ ಮುಂದೆ ಕ್ರಿಸ್ತನ ವಿಶ್ವಾಸದ ನೀತಿಯ ಹೊರತು ಬೇರೊಂದು ಸಲ್ಲದು ಯೆಂಬದೆ, ರೋಮಾಯರ ಪತ್ರಿಕೆಯ ಹಾಗೆ, ಈ ಪತ್ರಿಕೆಯ ಮುಖ್ಯತಾತ್ಪರ್ಯವಾಗಿರುತ್ತದೆ.

ಕ್ರೈಸ್ತರು ಮನುಷ್ಯಸಂಪ್ರದಾಯ ಸ್ವಕೃತ ಪುಣ್ಯಗಳೆಂಬ ನೊಗಕ್ಕೆ ಕುತ್ತಿಗೆ ಪೊಡ್ಡಿದ ಕಾಲಕ್ಕೆ ಈ ಪತ್ರಿಕೆಯು ಬಹಳ ಪ್ರಯೋಜನವಾಯಿತು. ಆದ್ದರಿಂದ ಲುಥರನು ಪುನಸ್ಥಾಪನೆಯ ಆರಂಭದಿಂದಲೆ ಈ ಪತ್ರಿಕೆಯ ಮೇಲೆ ಬಹಳ ಲಕ್ಷೆ ಇಟ್ಟನು. ತೆಬ್ಬಲನ ಸಂಗಡ ತರ್ಕ ಉಂಟಾಗುವ ಮುಂಚೆಯೆ, ಲುಥರನು ಸರ್ವ ಶಾಲೆಯಲ್ಲಿ ಮಾಡಿದ ಗಲತ ಪತ್ರಿಕೆಯ ವ್ಯಾಖ್ಯಾನದಿಂದ ಯೆಲ್ಲಾ ಕಡೆಯಲ್ಲಿಯೂ ಮಹಾ ವಾಗ್ವಾದ ಉಂಟಾಯಿತು. ಮತ್ತೆ ೧೫೧೯ರಲ್ಲೂ ೧೫೨೩ರಲ್ಲೂ ಅವನ ಅಪ್ರತಿಮವಾದ ಈ ಪತ್ರಿಕೆಯ ಟೀಕು ಛಾಪಿಸಲಾಯಿತು.

ಹೇದಿಜರ್ ಯೆಂಬ ಬೋಧಕನು ಹೇಳುವದೇನಂದರೆ: "ರೋಮಾಯರ ಪತ್ರಿಕೆಗೂ ಅದರ ಕ್ಷಪ್ತಸಾರಾಂಶವೆಂದು ಕೆಲವರು ಹೇಳುವ ಗಲತರ ಪತ್ರಿಕೆಗೂ ಬೋಧನೆಗಳಲ್ಲಿಯೂ ವಾಕ್ಯಗಳಲ್ಲಿಯೂ ಪರಸ್ಪರ ಸಂಬಂಧ ಉಂಟಿಂಬದಂನು ಪ್ರಮಾಣಿಸಿ ತೋರಿಸುವದು ಅವಶ್ಯವಲ್ಲಾ; ಹ್ಯಾಗಂದರೆ ಸ್ವಲ್ಪವಾದರೂ ಜಾಗ್ರತೆಯಿಂದ ದೇವರ ವಾಕ್ಯವಂನು ಶೋಧಿಸುವವನು ಅದಂನು ತಾನೆ ನೋಡದೆ ಇರನು". ಈ ಪರಸ್ಪರ ಸಂಬಂಧವಂನು ಕಂಡದರಿಂದ, ಈ ಪತ್ರಿಕೆಯು ರೋಮ ಪಟ್ಟಣದಿಂದ ಬರೆಯಲಾಯಿತು ಯೆಂಬ ದಂತವರ್ತಮಾನವು ಉಂಟಾಯಿತೆಂತ ತೋರುತ್ತದೆ. ಆದರೆ ಈ ಮಾತು ಹೌದೆಂತ ಹೇಳಲಿಕ್ಕೆ ಆಧಾರ ಕಾಣುವದಿಲ್ಲಾ. ಹ್ಯಾಗಂದರೆ ಪತ್ರಿಕೆಯಂನು ನೋದಿದರೆ, ಪೌಲನು ಸ್ವಲ್ಪ ಕಾಲದ ಮುಂಚೆ ಗಲತ ಸೀಮೆಯಲ್ಲಿ ಇದ್ದನೆಂದು ಪತ್ರಿಕೆಯಲ್ಲಿ ಯೆಲ್ಲಾ ಕಡೆಯಲ್ಲಿಯೂ ಪ್ರತ್ಯಕ್ಷವಾಗುತ್ತದೆ. ಹೀಗಿರಲಾಗಿ ರೋಮ

ದಿಂದ ಬರದದ್ದೆಂಬದು ಸರಿ ಬೀಳ್ಗದು. ಇದಲ್ಲದೆ ಈ ಪತ್ರಿಕೆಯು ಮೇಲೆ ಹೇಳಿದ ಗಲತರ ಸಭೆಯ ಆಗಿನ ಸ್ಥಿತಿಗೆ ಚಂನಾಗಿ ವೊಪ್ಪುವದರಿಂದ ಸಹಾ, ಅದನು ಎಫೆಸದಿಂದ ಬರದು ಕಳುಹಿಸಿ ಇರಬೇಕೆಂದು ಹೆಚ್ಚಾದ ವ್ಯಾಖ್ಯಾನಗಾರರು ನೆನಸುತ್ತಾರೆ. ಆದರೂ ಇದರಲ್ಲಿ ಆಗಲಿ, ಬೇರೆ ಅವೊಸ್ತೊಲಿಕ ಪತ್ರಿಕೆಗಳಲ್ಲಿ ಆಗಲಿ, ಬರದ ಸ್ಥಳವೂ ದಿನವೂ ವಿಳಾಸದಲ್ಲಿ ಕಾಣಿಸಿ ಇರದರಿಂದ, ನಿಶ್ಚಯ ಹೇಳ ಕೂಡದು.

ಸ. ೧.

ಪೀಠಿಕೆ.

I. ನಮನ. ವ. ೧—೫.

೧. ಮನುಷ್ಯರಿಂದಲ್ಲ, ಮನುಷ್ಯನ ಮುಖಾಂತರವಲ್ಲ ೧), ಯೇಸು ಕ್ರಿಸ್ತನಿಂದಲೂ ೨), ಅವನನ್ನು ಸತ್ತವರಾಳಗಿಂದ ಯೆಬ್ಬಿಸಿದ ೩) ತಂದೆಯಾದ ದೇವರಿಂದಲೂ, ೨. ಅಪಾಸ್ತಲನಾದ ಪೌಲನೂ, ನನ್ನ ಸಂಗಡ ಇರುವ ಸಹೋದರರೆಲ್ಲರೂ ೪), ಗಲತದ ಸಭೆಗಳಿಗೆ ೫) ತಂದೆಯಾದ ೬) ದೇವರಿಂದಲೂ, ೩. ನಂಮ ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ. ೪. ಅವನು ಇಗಲಿರುವ ದುಷ್ಟ ೭) ಯುಗದಾಳಗಿಂದ ನಂಮನ್ನು ಬಿಡಿಸುವದಕ್ಕೆ, ದೇವರೂ ನಮ್ಮ ೮) ತಂದೆಯೂ ಆಗಿರುವವನ ಚಿತ್ತದ ಪ್ರಕಾರ, ನಂಮ ಪಾಪಗಳಿಗೋಸ್ಕರ ತನ್ನನ್ನು ೯) ಕೊಟ್ಟನು; ೫. ಅವನಿಗೆ ಯೆಂದೆಂದಿಗೂ ಮಹಿಮೆ ಆಗಲಿ. ಆಮೆನ್.

೧. ಪೌಲನ ಬಾಧನೆಗಾಗಲಿ ಪ್ರಸಂಗಾದ್ಯಾಗಕ್ಕಾಗಲಿ, ಮೂಲವು ಮನುಷ್ಯರಲ್ಲಾ, ದೇವರು ತಾನೇ; ಅವನು ಬೇರೆ ಅಪಾಸ್ತಲಶಿಷ್ಯರ ಪೂಗೆ ಮನುಷ್ಯನ ಪರಿಮುಖವಾಗಿ ಅಲ್ಲಾ, ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ಕಳುಪಿಸಲ್ಪಟ್ಟಿದ್ದನು. ಈ ಪ್ರಕಾರ ಅವನಿಗೂ ಪನ್ನೆರಡು ಮಂದಿಗೂ ಪೆಚ್ಚು ಕಮಿಮೆ ಇರಲಿಲ್ಲಾ.

೨. ಮಧ್ಯಸ್ಥನೆಂದು ಯೇಸುವಿನಿಂದಲೂ, ಮೂಲ ಕಾರಣವೆಂದು ತಂದೆಯಿಂದಲೂ ರೋಮ. ೧೧, ೩೬. ಯೇಸು ಕ್ರಿಸ್ತನಿಂದ ಯೆಂಬದಕ್ಕೆ ಮೂಲಭಾಷೆಯಲ್ಲಿ ಯೇಸು ಕ್ರಿಸ್ತನ ಮುಖಾಂತರವೆಂದು ಬರದದೆ.

೩. ಅದು ದೇವರ ಸರ್ವತ್ರಾಣದ ಕೃತ್ಯವಾಗಿತ್ತು. ಅದೇ ಪ್ರಕಾರ ಪೌಲನ ಸಂವರ್ತನವೂ ಈ ಪತ್ರಿಕೆಯಲ್ಲಿ ಪ್ರಸ್ತಾವವಾಗುವ, ಕ್ರಿಸ್ತನಲ್ಲಿಡ ತಕ್ಕ ವಿಶ್ವಾಸದಿಂದ ಉಂಟಾಗುವ ಆತ್ಮಿಕ ಉತ್ಥಾನವೂ ಇರುತ್ತವೆ. ಅಪಾಸ್ತಲನು ತನ್ನ ಕರೆಯುವಿಕೆಯನ್ನು ನೆನಸುವಾಗ್ಗೆ, ಯಾವಾಗಲೂ ಉತ್ಥಾನವಾದ ಕರ್ತನ ನೆನಪು ಅವನಿಗೆ ಆಗುತ್ತದೆ.

೪. ಈ ಮಾತಿನಿಂದ, ಪೌಲನ ಕಡೆಯಲ್ಲಿ ವಿಶ್ವಾಸಿಗಳ ದಾಡ್ಡ ಸಮೂಹವು ಇರುತ್ತದೆಂದು ಗಲತರು ತಿಳಿಕಾಳ್ಳ ಬೇಕು.

೫. ಪೂಗಾದರೆ ಇದು ಗಲತರೆಲ್ಲರೂ ವಾದ ತಕ್ಕ ಪರಿವರ್ತಿಪತ್ರಿಕೆಯಾಗಿತ್ತು. ಸಖೆಗಳೆಂದು ಮಾತ್ರವೆ ಪೇಳಿ, ತನಗೆ ಅವರ ದೆಶೆಯಿಂದ ಬಂದ ಮನಾಪೀಡೆಯನು ಸೂಚಿಸುವದಕ್ಕೆ, ಬೇರೆ ಪತ್ರಿಕೆಗಳಲ್ಲಿ ವಾಡಿಕೆಯಾಗಿರುವ ದೇವರ ಪ್ರಿಯರು, ಕರಿಯಲ್ಪಟ್ಟ ಪರಿಶುದ್ಧರು ಮುಂತಾದ ವಿಶೇಷಣಗಳನು ಇಲ್ಲಿ ಪ್ರಯೋಗಿಸುವಮಿಲ್ಲಾ, ಆದರೂ ಈ ಸಂಕಷ್ಟದ

ಲ್ಲಿಯೂ ಅವನು ಕ್ರಿಸ್ತ ಯೇಸುವಿನಲ್ಲಿರುವ ದೇವರ ಕೃಪೆಯ ಐಶ್ವರ್ಯವಂನು ನಂಬಿ, ದೇವರ ಸಮಾಧಾನದ ಬಲದಿಂದ ಗಲತರು ಸ್ವಸ್ಥಪಾದಾರೆಂದು ನಿರೀಕ್ಷಿಸುತ್ತಾನೆ.

೬. ಇದು ೧ ಥೆಸ್ಸ. ೧. ಪ್ರಕಾರವೆ ಸಾಧಾರಣವಾವ ನಮನ. ಪಾಪಗಳಂನು ಕ್ಷಮಿಸುವ ದೇವರ ಪ್ರೀತಿಯೂ, ನಾವು ದೇವರ ಪ್ರಿಯರೆಂಬ ಅನುಭವ ಕಾಡುವ ಕೃಪಾವರವೂ, ಗಲತರ ಕ್ಷೇಮಕ್ಕೂ ಚಾಗ್ಯಕ್ಕೂ ಮಾತ್ರವಲ್ಲಾ, ನಿಯಮದ ಕೆಳಗೆ ಬಿದ್ದು ಪಾಪಾದಾರೆಂದು ಚಯ ಪಡುವ ಅಪಾಸ್ತಲನ ಕಾರಿಕೆಯ ದೃಢೀಕರಣಕ್ಕೂ ಬೇಕಾಗಿತ್ತು. ಪ್ರೀತಿಯೂ ಅದರ ಅನುಭವವೂ ಸಮಸ್ತ ಸುದಾನಗಳ ಮೂಲವಾಗಿರುವ ದೇವರಿಂದ ಬಂದು, ಕ್ರಿಸ್ತನ ಪರಿಮುಖವಾಗಿ ನಮಗೆ ಶಿಕ್ಕ ಬೇಕು.

೭. ನಿನ್ನ ವಿಮೋಚನೆಯ ಪ್ರಯೋಜನವನ್ನು ಚನ್ನಾಗಿ ತಿಳಕಾ. ಅದೇನಂದರೆ, ಈ ದುಷ್ಟ ಯುಗದವರ ಸಹವಾಸಕ್ಕೂ ಮಲಿನತ್ವಕ್ಕೂ ದೂರವಾಗಿ ಇರುವದು.

೮. ನಮ್ಮ ರಕ್ಷಣೆಯು ಕ್ರಿಸ್ತನ ಬಲಿಯಿಂದ ಮಾತ್ರವೆ ಸಾಧ್ಯವಾಯಿತು. ಇದರ ಮೂಲಕಾರಣವೇನಂದರೆ: ತನ್ನ ಮಗನನ್ನು ಕಾಟ್ಟಿ ಯೋಪಾ. ೩, ೧೬. ರೋಮ. ೮, ೩೨. ದೇವರ ಕೃಪಾಸಂಕಲ್ಪವು. ಕ್ರಿಸ್ತನ ವಿಮೋಚನೆಯ ಯೆಡೆಯಲ್ಲಿ, ಸ್ವಂತ ಕ್ರಿಯೆಗಳಿಂದ ದೇವರ ಮುಂದೆ ನೀತಿನಿರ್ಣಯವನ್ನು ಪಾಂದುವದಕ್ಕೆ ಯೆತ್ನೈಸುವವರು, ಸರ್ವರಿಗಾಶ್ಕರ ತನ್ನನ್ನು ಅರ್ಪಿಸಿದ ರಕ್ಷಕನಿಗೂ ನಮಗಾತನನ್ನು ಕಾಟ್ಟಿ ತಂದೆಗೂ ಕೃತಘ್ನರು.

೯. ಬೇರೆ ಪತ್ರಿಕೆಗಳ ನಮನಗಳಲ್ಲಿ ಬಾರದ ಈ ಮಾತಿನಿಂದ ಸಹ, ಗಲತರ ನಿಯಮನೀತಿಯಂನು ಖಂಡಿಸುವ ಅಭಿಪ್ರಾಯವು ಕಾಣುತ್ತದೆ. ಇದಕ್ಕೆ ಲುಥರನು ಹೇಳುವದೇನೆಂದರೆ: "ಅವನು ಸ್ವಂತ ನೀತಿಗೆ ಯೆದುರಾಗಿ, ತನ್ನ ವಾಕ್ಯಗಳನ್ನು ಪೂಡುವದನ್ನು ನಾೀಡು."

II. ಗಲತರು ಅಚ್ಚ ಸುವಾರ್ತೆಯಿಂದ ಬಿದ್ದು ಹೌೀದ್ದು. ವ. ೬—೧೦.

೬. (ಕ್ರಿಸ್ತನ ಕೃಪೆಯಲ್ಲಿ ನಿಮಂನು ಕರೆದವನಿಂದ ಬೇರೆ ೧) ಸುವಾರ್ತೆಗೆ ಇಷ್ಟು ಬೇಗ ೨) ತಿರುಗಿ ಕೌಳ್ಳುತ್ತೀರೆಂದು, ಆಶ್ಚರ್ಯ ಪಡುತ್ತೇನೆ ೩). ೭. ಅದು ಮತ್ತೌಂದು ೪) ಅಲ್ಲ, ನಿಮಂನು ತೌಂದರೆ ಪಡಿಸಿ, (ಕ್ರಿಸ್ತನ ಸುವಾರ್ತೆಯಂನು ತಿರಿಗಿಸಿ ಬಿಡ ಇಚ್ಛೈಸುವವರು ೫) ಕೆಲವರು ಇದ್ದಾರೆ, ಅಷ್ಟೆ. ೮. ಆದರೆ ನಾವಾದರೂ ೬), ಆಕಾಶದಿಂದ ಬಂದ ದೂತನಾದರೂ, ನಾವು ನಿಮಗೆ ಪ್ರಸಂಗಿಸಿದ್ದೌ ಹೌರ್ತು, ಬೇರೆ ಸುವಾರ್ತೆ ನಿಮಗೆ ಪ್ರಸಂಗಿಸಿದರೆ, ಶಾಪವಾಗಲಿ. ೯. ನಾವು ಮುಂಚೆ ೭) ಹೇಳಿದ ಪ್ರಕಾರ, ಇಗಲು ತಿರಿಗಿ ಹೇಳುತ್ತೇನೆ, ನೀವು ಹೌಂದಿದ್ದೌ ಹೌರ್ತು, ವಾಬನು ನಿಮಗೆ ಬೇರೆ ಸುವಾರ್ತೆ ಪ್ರಸಂಗಿಸಿದರೆ, ಶಾಪವಾಗಲಿ ೮). ೧೦. ಯಾಕಂದರೆ ೯) ಇಗ ಮನುಷ್ಯರಂನು ಸಂಮತಿ ಪಡಿಸುತ್ತೇನಾ? ದೇವರಂನಾೀ? ಇಲ್ಲವೆ ಮನುಷ್ಯರಂನು ಮೆಚ್ಚಿಸಿ ಹುಡುಕುತ್ತೇನಾೀ? ಇಂನು ಮನುಷ್ಯರಂನು ಮೆಚ್ಚಿಸಿದರೆ, ನಾನು ಕ್ರಿಸ್ತನ ದಾಸನಾಗಿರೆನು.

ಗಲ. ೧, ೬—೧೦.

೧. ಕೃಪೆಯು ನಿಯಮದ ಅವಲಂಬನದಿಂದಿರುತ್ತದೆಂದು ಮಾಡುವ ಸುವಾರ್ತೆಯು ಪೌಸರಿಗೆ ಮಾತ್ರವೆ ಸುವಾರ್ತೆ. ಅಸತ್ಯವು ಸತ್ಯದ ಪೌಸರು ತಕ್ಕಾಳ್ಳದ ಪೌಕಾರತು ಸಲ್ಲದು. ಕ್ರೈಸ್ತರಲ್ಲಿರುವ ಅಬದ್ಧ ಬಾಧೆಗಳೆಲ್ಲಾ ಸುವಾರ್ತೆಯೂ ಚಕ್ತಿಯೂ ಯೆಂಬ ಪೌಸರುಗಳಿಂದ ಮೆರೆಯ ನಾಡುತ್ತವೆ.

೨. ನೀವು ಸಂವರ್ತಿಗಳಾದ, ನಾನು ನಿಮ್ಮಲ್ಲಿಂದ ಪೌಕಾರಟು ಬಂದ, ಅಷ್ಟು ಸ್ವಲ್ಪ ಕಾಲದಾಳಗೆ ಯೆಂಬ ಅರ್ಥ. ಇಂಥಾ ಪ್ರಾರ್ಥನಾಸಕ್ತನಾದ ಜಾಗರೂಕತೆಯ ಪೌಲನು ಕಾವಲಿಯಂತಿರುವಾಗೈ ಪೋಗಾದ ಮೇಲೆ, ಈಗಿನ ಬಾಧಕರು ಬೇಗ ದಣಿದು ಕೂರುವಲ್ಲಿ ಪೌಕಾಗಾಗ ಬೇಕು!

೩. ಬಾಪುಲ್ಯವಾಗಿ ಮಾತಾಡದೆ, ಆರಂಭದಲ್ಲಿ ವಾಡಿಕೆಯಾದ ಪೌಕಾಗಳಿಕೆ ಯೇನೂ ಪೋಳದೆ, ಮುಖ್ಯ ಸಂಗತಿಯಾದ, ಸತ್ಯವಾದ ನೀತಿನಿರ್ಣಯಬಾಧೆಯನ್ನು ಬಿಟ್ಟರೆಂಬ ದಾಡ್ಡ ತಪ್ಪು ಪೊರಿಯುತ್ತಾನೆ.

೪. ಮೋಸಗಾರರ ಮೇಲೆ ಮುಖ್ಯ ಅಪರಾಧ ಪೌಕಾರಿಸುವದರಿಂದ ಉಳಿದವರನ್ನು ದುರಿಯ ನಾಡುತ್ತಾನೆ.

೫. ಅವರು ನೀತಿನಿರ್ಣಯಕ್ಕೆ ವಿಶ್ವಾಸ ವಾಂದೆ ಸಾಕಾಗಿರುವದಿಲ್ಲಾ, ನಿಯಮಸಾಧನೆಯ ಸಹಿತವಾಗಿ ಮಾತ್ರವೆ ಪ್ರಯೋಜನವಾಗಿದೆ ಯೆಂದು ಬಾಧಿಸಿ, ಬೇಕೆಂದು ಕ್ರಿಸ್ತನ ಸುವಾರ್ತೆಯನ್ನು ಮಗಚಿಬಿಡುತ್ತಾರೆ. ಈ ಪ್ರಕಾರ ಅವರು ರಕ್ಷಣೆಯು ನಿಯಮವನ್ನು ಪೂರೈಸದವರೆಗೆ ಪ್ರಾಪ್ತವಾಗದೆಂದೂ, ಕ್ರಿಸ್ತನ ಪುಣ್ಯವು ಸಾಲದೆಂದೂ ಮಾಡುತ್ತಾರೆ. ರಾಮಿಯ ಪಾಪನ ಸಖೆಯ ಬಾಧನೆಯು ಅದೆ.

೬. ಸುವಾರ್ತೆಯನ್ನು ತಿರುಕು ಮುರುಕು ಮಾಡುವವರು ಯೆಷ್ಟು ತಿರಸ್ಕಾರಕ್ಕೆ ಯೋಗ್ಯರೆಂತಾ ತಾರೀರಿಸುವದಕ್ಕೆ ಅಪಾಸ್ತಲರನ್ನೂ ದೂತರನ್ನೂ ಉದಾಪುರಣೆ ಮಾಡಿ ಮಾತಾಡುತ್ತಾನೆ.

೭. ಮುಂಚೆ, ಅಂದರೆ, ಈಗಲೆ ಮೇಲೆ. ಮೇಲೆ ಪೋಳಿದ್ದನ್ನು ಯೆಲ್ಲರಿಗೆ ತಾಗುವ ಪೌಕಾಗೆ ತಿರಿಗಿ ಪೋಳುತ್ತಾನೆ. ಆ ಮಾತು ಘಟ್ಟಿಯಾಗುವದರ ಪೌಕಾರತು, ಆ ಮಾತು ಆಸಕ್ತಿಯಿಂದಲೂ ಉತ್ಪೇಗದಿಂದಲೂ ಬಾಯಿಂದ ಬೇಗ ಜಾರಿತೆಂದು ಯಾರೂ ನೆನೆದ ಪೌಕಾಗೆ ಸಪೌಕಾ ಆಗುತ್ತದೆ. ಗಲತರ ದುರ್ಬಾಧಕರು ಅಪಾಸ್ತಲರ ಪಾದಶಿಷ್ಯರಾಗಿದ್ದರೂ, ಪೂರ್ಣ ಅನಧಿಕಾರಿಗಳೆಂದು ತಾರೀರಿಸುತ್ತಾನೆ.

೮. ಈ ಕಠಾರತ್ವಕ್ಕೆ ಅಪಾಸ್ತಲನ ಪ್ರೀತಿಯೆ ಕಾರಣವಾಯಿತು. ಪೌಕಾಗೆಂದರೆ, ರಕ್ಷಣೆಯೂ ಸುವಾರ್ತೆಯ ನಿರ್ಮಲತ್ವವೂ ಕಂಟಕದಲ್ಲಿದ್ದರೆ, ಪ್ರೀತಿ ಮಾಡುವವನು ಪರಮ ಕಠಿಣ ಮಾತಂನೂ ಕಠಿಣವೆಂದೆಣಿಸುವದಿಲ್ಲಾ.

೯. ಪೌಲನು ದೇವರ ಮೇಲೆ ಮಾತ್ರ ದೃಷ್ಟಿ ಇಟ್ಟು, ಮನುಷ್ಯರ ಶ್ಲಾಘನೆಯನ್ನಲ್ಲಾ, ಕರ್ತನ ಮಾನವನು ಮಾತ್ರವೆ ಬಯಸುತ್ತಾ ಇರುವದರಿಂದ, ಇಷ್ಟು ಸ್ಥೈರ್ಯದಿಂದ ಮಾತಾಡುವದಕ್ಕೆ ಅಧಿಕಾರಿಯಾಗಿದ್ದನು. ಅವನ ವಿರೋಧಿಗಳು, ಅವನು ಪರಜನರ ಕಡೆಗೆ ಸಡಲಾಗಿದ್ದರೆ ಅನೇಕರನ್ನು ಕ್ರೈಸ್ತರಾಗ ಮಾಡ ಬಹುದು ಯೆಂಬ ಆಲೋಚನೆಯಿಂದಲೇ ನಿಯಮನ್ನು ಅಲಕ್ಷಿಸುತ್ತಾನೆಂಬ ಅಪವಾದವನ್ನು ಅವನ ಮೇಲೆ ಪೌಕಾಡಿದರೆಂತ ತಾರುತ್ತದೆ. ಅದಕ್ಕೆ ವಿರೋಧವಾಗಿ ಅವನು, ನಾನು ಮನುಷ್ಯರ ಮೆಚ್ಚಿಗೆ ಬೇಕೆಂದಿರುವವನಲ್ಲವೆಂದು ಪೋಳುತ್ತಾನೆ.

III. ಅಪೌಸ್ತಾಲಿಕ ಅಧಿಕಾರದ ಪ್ರಮಾಣ.

ಪೌಲನು ಇಲ್ಲಿಂದ ಯೆರಡನೆ ಸಂಧಿಯ ಅಂತ್ಯದ ವರೆಗೆ ತನ್ನ ಜೀವಚರಿತ್ರವನ್ನು ಹೇಳಿ, ಸುವಾರ್ತೆಯನ್ನು ತಾನು ಮನುಷ್ಯರಿಂದಲ್ಲ, ಯೇಸು ಕ್ರಿಸ್ತನ ಪ್ರಕಟಣೆಯಿಂದಲೆ ಪಡ ಕೊಂಚೆನೆಂದು ಪ್ರಮಾಣಿಸುತ್ತಾನೆ. ಪೌಲನ ಸಂವರ್ತನದ ಸಂಗತಿಯನ್ನು ವಿಚಾರಿಸುವಾಗಲೇ ನೋಡಿ ಕೊಂಡ ಈ ಚರಿತ್ರಭಾಗದ ಸಾರಾಂಶವು ಕ್ಷಿಪ್ತವಾಗಿ ಹ್ಯಾಗೆಂದರೆ:

ಗಲ. ೨೬.

೧) ನನ್ನ ಕರವಣ ಮನುಷ್ಯಸಹಾಯವಿಲ್ಲದೆ, ಕರ್ತನಿಂದಲೆ ಆಯಿತು. ವ. ೧೧—೧೭. ಅ) ಬಹು ಕಾಲ ಬಹಳ ಯೆದುರ್ನಿಂತ ಮೇರೆ, ವ. ೧೩. ೧೪., ಇ) ದೇವರು ತನ್ನ ಸ್ವಂತ ಉಚಿತವಾದ ಕೃಪೆಯಿಂದ, ತನ್ನ ನಿತ್ಯ ಸಂಕಲ್ಪದ ಪ್ರಕಾರ ನನ್ನನ್ನು ಆರಿಸಿ ಕೊಂಡು, ದಮಸ್ಕದ ಹತ್ತರ ಆದ ದರ್ಶನದಿಂದ ಕ್ರಿಸ್ತನನ್ನು ನನ್ನ ಹೃದಯದಲ್ಲಿ ಪ್ರಕಟಿಸಿ, ತಾನು ನಿಶ್ಚಯಿಸಿದ ಕಾಲದಲ್ಲಿ ಕ್ಷಣ ಮಾತ್ರದಲ್ಲಿ ನನ್ನನ್ನು ಕರದು, ಪರಜನರ ಪ್ರಸಂಗಿ ಆಗುವದಕ್ಕೆ ನೇಮಿಸಿದನು. ವ. ೧೫, ೧೬.; ಉ) ಆಗಲೆ ನನ್ನ ಅಪೊಸ್ತಲತನವು ಸಂಪೂರ್ಣವಾಯಿತು; ನಾನು ಆ ಮೇಲೆ ಮಾನುಷೋಪದೇಶವನ್ನು ತಕ್ಕೊಂಡದ್ದಿಲ್ಲ, ಅರ್ಬಸ್ಥಾನಕ್ಕೆ ಹೋಗಿ ನನ್ನ ಉದ್ಯೋಗಕ್ಕೆ ಯೇಕಾಂತದಲ್ಲಿ ಸಿದ್ಧ ಮಾಡಿ ಕೊಂಡೆನು. ವ. ೧೭.

೨) ನನ್ನ ಅಪೊಸ್ತೊಲಿಕ ಪ್ರವೃತ್ತಿಯನ್ನೂ ಸ್ವಾಧೀನನಾಗಿಯೆ ನಡಿಸಿದೆನು. ವ. ೧೮—೨೪.; ಅ) ನನ್ನ ಸಂವರ್ತನದ ಮೂರು ವರುಷ ಕಳಿಯುವ ಮುಂಚೆ ಪೇತ್ರ ಯಾಕೋಬರ ಪರಿಚಿತಿ ನನಗೆ ಆಗಲಿಲ್ಲಾ, ಅಗ್ಯೆ ಸಹಾ ಅವರ ಸಂಗಡ ಹದಿನಾಲ್ಕೆ ದಿನ ಇದ್ದೆನು, ವ. ೧೮—೨೦.; ಇ) ಯೆರೂಸಲೇಮದ ಮಾತೃಸಭೆಯ ಸಂಗಡ ಯಾವ ತರದ ಸಂಬಂಧದಲ್ಲಿ ಆದರೂ ನಾನಿರಲಿಲ್ಲಾ. ವ. ೨೧—೨೪.

ಸಾಧಿ ೨.

ಮುಂದಿನ ವಿವರ.

೩) ಅಪೊಸ್ತಲರು ನನಗೂ ನನ್ನ ಮೂಲಬೋಧನೆಗಳಿಗೂ ಸಮಸ್ತರ ಮುಂದೆ ಸಮ್ಮತಿ ಪಟ್ಟಿರು. ವ. ೧—೧೦. ಇಲ್ಲಿ ಪೌಲನು ಸಭೆಯ ಸಮಾಗಮಕ್ಕೆ ಅಪೊ. ಕ್ರಿ. ೧೫. ಪ್ರಯಾಣ ಮಾಡಿದ ಸಂಗತಿಯನ್ನು ಹೇಳಿ, ಅವನಿಗೆ ಮಾತ್ರವೆ ವಿಶೇಷವಾಗಿರುವ ಕಾರಣ, ಲೂಕನು ಪ್ರಕಟವಾಗಿ ನಡದ ಸಮಸ್ತ ಸಭೆಗೆ ವಿಶೇಷವಾಗಿದ್ದ ಅದಕ್ಕೆ ತಿಳಿದಿರುವ ವೃತ್ತಾಂತವನ್ನು ಮಾತ್ರವೆ ಹೇಳುವ ಅಪೊಸ್ತಲಚರಿತ್ರದಲ್ಲಿ ಬಿಟ್ಟ ಕೆಲವು ಸಂಗತಿಗಳನ್ನು ತಿಳಿಸುತ್ತಾನೆ. ಪೌಲನು ಅಂತಿಯೊಖ್ಯದ ಸಭೆಯ ಅಪೇಕ್ಷೆಯ ಪ್ರಕಾರ, ಅದು ಸಮವೆಂದು ಪ್ರಕಟನೆಯಿಂದ ತಿಳಿ ಕೊಂಡು, ಯೆರೂಸಲೇಮಿಗೆ ಪ್ರಯಾಣ ಮಾಡಿದೆನೆಂತಲೂ, ಈ ಪ್ರಯಾಣವು ಪೌಲನ ಸಂವರ್ತನದ ಹದಿನಾಲ್ಕು ವರುಷದ ಮೇಲೆ ಆಯಿತೆಂತಲೂ, ಅಪೊಸ್ತಲರೆಲ್ಲರು ಸಹಜ ರೀತಿಯಿಂದ ಸಭೆಯ ಸಮಾಗಮದ ಮುಂಚೆ ವೊಟ್ಟಿಗೆ ಕೂತು ಕೊಂಡು, ನಿಯಮಾವಲಂಬನತ್ವದ ವಿಷಯದಲ್ಲಿಯೂ ಪರಜನರ ಅಪೊಸ್ತಲನ ಕರವಣವ ವಿಷಯದಲ್ಲಿಯೂ ಮಾತಾಡಿದರೆಂತಲೂ, ಈ ಪತ್ರಿಕೆಯಿಂದ ತಿಳಿದು ಬರುತ್ತದೆ. ಇದರ ಮುಖ್ಯ ಸಾರವೇನೆಂದರೆ: ಅ) ಪ. ೧. ೨. ದೇವರ ಅಪ್ಪಣೆಯ ಪ್ರಕಾರ, ಪ್ರಾಮುಖ್ಯ ಯೆಹೂದ ಅಪೊಸ್ತಲರ ಸಂಗಡ ಯೇಕೀಕರವಾಗುವ ಹಾಗೆ, ಯೆರೂಸಲೇಮಿಕ್ಕೆ ಈ ಕಾರ್ಯಕ್ಕೊಸ್ಕರವೆ ಪ್ರಯಾಣ ಮಾಡಿದೆನು. ಅಪೊಸ್ತಲರೆಲ್ಲರು ಈ ವಿಷಯದಲ್ಲಿ ಸಮ್ಮತವಾಗಿದ್ದಾರೆಂಬ ನಿಶ್ಚಯವು ಇಲ್ಲದಿದ್ದರೆ, ನನ್ನ ಇಷ್ಟು ವರೆಗಿನ ಅಥವಾ ಮುಂದಿನ ಪ್ರವೃತ್ತಿಯು ನಿರರ್ಥಕವಾಗಿ ಹೋಗುತ್ತಿತ್ತು ವ. ೨. ಇ) ನಾನು ನನ್ನ ಮೂಲಾಭಿಪ್ರಾಯಗಳನ್ನು ನಡದ ಕಾರ್ಯಗಳಿಂದ ಸಾಧಿಸಿದೆನು. ವ. ೩—೫. ಅಪೊಸ್ತಲರ ಸಂಗಡ ಕ್ಷಣದಲ್ಲಿ ನಾನು ವೊಂದಾದೆ; ಅನರು ಸಾಧಾರಣ ಕ್ರೈಸ್ತನಾಗಿದ್ದದರ ಹೊರ್ತು, ಸುವಾರ್ತೆಯ ಬೋಧಕನೂ ಆಗ ಬೇಕೆಂದಿದ್ದ ತೀತನಿಗೆ ಸಹಾ ಪರಿಚ್ಛೇದನೆ ಆಗುವದು ಅವ

ತ್ಯವೆಂದು ಹೇಳಲಿಲ್ಲಾ. ಪರಜನರಿಗೆ ಹ್ಯಾಗಾದರೂ ಪರಿಚ್ಛೇದನೆ ಆಗ ಬೇಕೆಂದು ವದ್ದಾಡಿದ ಯೂದಕ್ರೈಸ್ತ ಆಸಕ್ತಿಗಂಟರ ಸಂಗಡ ನಾನು ಹೆಚ್ಚಾಗಿ ಹೋರಾಡ ಬೇಕಾಯಿತು. ಆದಾಗ್ಯೂ ನಾನು ಬಿಡಲಿಲ್ಲಾ. ಉ) ವ. ೬—೧೦. ಮುಖ್ಯ ಅಪೊಸ್ತಲರಾದ ಯಾಕೋಬ ಪೇತ್ರ ಯೋಹಾನರು, ನಾನು ಪರಜನರ ಅಪೊಸ್ತಲನೆಂದು ಒಪ್ಪಿಗೆಯಾದರು. (ಪೌಲನು ಯಾಕೋಬನ ಹೆಸರು ಮುಂಚೆ ಹೇಳುವದು ಯಾಕೆಂದರೆ, ಅವನು ಯೆಹೂದ ಕ್ರೈಸ್ತರಲ್ಲಿ ಯೆಲ್ಲರಿಗಿಂತ ಅಧಿಕ ಮಾನ ಉಳ್ಳವನಾಗಿರುವದರಿಂದ ಅಪೊ. ಕೃ. ೧೫ರಲ್ಲಿ ಕಾಣುವ ಪ್ರಾಗೆ, ಅವನ ಮಾತಿನ ಭಾರದಿಂದಲೇ ತೀರ್ಪು ಮಾಡಿದರು.) ಅವನು ವ. ೬ಲ್ಲಿ ಹೇಳುವದೇನಂದರೆ: ಕರ್ತನ ಸಂಗಡ ನಡದಾಡಿದ ಅಪೊಸ್ತಲರು ತಾವೆ ನನಗೆ ವಿರೋಧವಾಗುವದಾದರೂ, ನನಗೆ ಚಿಂತೆ ಇಲ್ಲಾ. ಆದರೆ ಅವರು ನಂನ ಬೋಧನೆಯಲ್ಲಿ ಯೇನೂ ಕೊರತೆ ಕಾಣಲಿಲ್ಲಾ; ಅದಲ್ಲದೆ ವ. ೭. ನಂನ ಕೆಲಸದಲ್ಲಿ ದೇವರಿಟ್ಟ ಪ್ರತ್ಯಕ್ಷವಾದ ಆಶೀರ್ವಾದವನ್ನು ನೋಡಿ, ತಮಗೆ ಯೆಹೂದರಲ್ಲಿ ಹ್ಯಾಗೋ ಹಾಗೆಯೆ ನನಗೆ ಪರಜನರಲ್ಲಿ ಅಪೊಸ್ತೊಲೋತ್ಯೋಗವು ನೇಮಿಸಿ ಅನೆ ಯೆಂದು ತಿಳಿ ಕೊಂಡರು. ವ. ೯. ಆದ್ದರಿಂದ ಅವರು ಯೆಹೂದರಲ್ಲಿಯೂ, ನಾನೂ ಬರ್ನಬನೂ ಪರಜನರಲ್ಲಿಯೂ ಸುವಾರ್ತೆಯ ಕಾರ್ಯವನ್ನು ನಡಿಸ ಬೇಕೆಂದು ಯೊಬ್ಬರಿಗೊಬ್ಬರು ಪೂರ್ಣ ಸ್ನೇಹದಿಂದ ಕೈಕೊಟ್ಟು ನಿಶ್ಚಯ ಮಾಡಿದ್ದಾಯಿತು. ವ. ೧೦. ಯೊಂದು ಮಾತ್ರವೆ, ಸಹೋದರ ಪ್ರೀತಿಯ ಮೇಲೆಯೂ ಯೆರೂಸಲೇಮದಲ್ಲಿರುವ ಬಡ ಕ್ರೈಸ್ತರ ಅರ್ಥಸಹಾಯದ ಮೇಲೆಯೂ ಕಣ್ಣಿಡ ಬೇಕೆಂದಂದರು, ಮತ್ತಿದನ್ನು ನಾವು ಯಥಾನುಶಕ್ತಿಯಾಗಿ ನಡಿಸುತ್ತಾ ಬಂದೆವು.

೪) ನಾನು ಸುವಾರ್ತೆಯ ಸತ್ಯಭಾವವನ್ನು ಪೇತ್ರನಿಗೆದುರಾಗಿ ಸಹ ಸಾಧಿಸಿದೆನು. ಗಲ. ೨, ೧೧—೨೧. ನಾವು ಕಾಲಕ್ರಮದ ಪ್ರಕಾರ ಅಂತಿಯೊಖ್ಯದಲ್ಲಿ ನಡದದ್ದೆಂದು ಪುಟ ೪೪೬ ಹೇಳಿದ ಸಂಗತಿಯನ್ನು ಪೌಲನು ಇಲ್ಲಿ ತಿಳಿಸುತ್ತಾನೆ. ಅದೇನಂದರೆ: ವ. ೧೧. ಪೇತ್ರನು ಯೆಹೂದ ಆಸಕ್ತಿಗಂಟರಿಗೆ ಹೆದರಿ, ಪ್ರಕಟವಾಗಿ ಕ್ರೈಸ್ತರ ಕಾಲಡಿಯಲ್ಲಿ ಇಡುರು ಹಾಕಿದ ಕಾರಣ, ಅಪವಾದಕ್ಕೆ ಗುರಿಯಾದ್ದರಿಂದ, ಪೌಲನು ಅವನನ್ನು ಗದರಿಸಿದನು. ಆ ಭ್ರಮೆಯೂ, ಗಲತರಿಗೆ ಪತ್ರಿಕೆ ಬರಿಯಲಿಕ್ಕೆ ಕಾರಣವಾದ ಸಂಗತಿಯೂ ಯೊಂದೇಯಾಗಿರುವ ಕಾರಣ, ಪೇತ್ರನಿಗೆ ಪ್ರತಿಯಾಗಿ ಆಡಿದ್ದು ಈ ಪತ್ರಿಕೆಯ ಮುಖ್ಯ ತಾತ್ಪರ್ಯಕ್ಕೆ ಸಮ ಬೀಳುತ್ತದೆ. ಹೀಗಿರುವದರಿಂದ ಅದರ ಪ್ರಸ್ತಾವ, ಅದೇನಂದರೆ, ನಿಯಮಕ್ಕೂ ಸುವಾರ್ತೆಗೂ ಇರುವ ಪರಸ್ಪರ ಸಂಬಂಧವು ಇಲ್ಲಿ ಹೇಳುತ್ತದೆ. ಅಲ್ಲಿ ಹೇಳಿದ ಮಾತೂ, ಗಲತರಿಗೆ ಬರಿಯುವ ಮಾತೂ ಯೊಂದರಲ್ಲಿ ಯೊಂದು ಕೇರಿ ಬೆರಕೆಯಾಗುತ್ತದೆ. ಈ ವಿಶೇಷವಾದ ಮಾತುಗಳನ್ನು ಇದ್ದ ಹಾಗೆ ನಾವಿಲ್ಲಿ ವಿಚಾರಿಸುವಾ. ಆ ಭಾಷಣದ ಅಭಿಪ್ರಾಯವು ಕ್ಲಪ್ತವಾಗಿ ಯೇನೆಂದರೆ: ೧) ನಿನ್ನ ಈಗಿನ ನಡತೆಯು ಮುಂಚಿನ ನಡತೆಗೆ ವಿರೋಧ. ೨) ಕ್ರಿಸ್ತನಿಂದ ಮಾತ್ರವೆ ಆಗುವ ನೀತಿನಿರ್ಣಯದ ವಿಶ್ವಾಸವನ್ನು ಯೆದುರಿಸುತ್ತಿ. ವ. ೧೫—೧೭. ೩) ನಿಯಮದಿಂದ ನಮ್ಮನ್ನು ಬಿಡುಗಡೆ ಮಾಡುವ ಪುನರ್ಜನ್ಮದ ಸ್ವಭಾವವನ್ನು ಮರೆಯುತ್ತಿ. ವ. ೧೮—೨೧.

೧೪. ಆದರೆ ಅವರು ಸುವಾರ್ತೆಯ ಸತ್ಯವನ್ನು ಕುರಿತು ನೆಟ್ಟಗೆ ನಡಿಯದೆ ಇರುವದನ್ನು ಕಂಡು, ನಾನು ಪೇತ್ರನಿಗೆ ಎಲ್ಲರ ಮುಂದೆ ಹೇಳಿದ್ದೇನಂದರೆ, ನೀನು ಯೆಹೂ

ವ್ಸನಾಗಿದ್ದು, ಯೆಹೂದ್ಸರ ಹಾಗಲ್ಲ, ಜನಾಂಗಗಳ ೧) ಹಾಗೆ ಬದುಕಿದರೆ, ಜನಾಂಗಗಳಿಗೆ ಯೆಹೂದ್ಸರನ್ನು ಅನುಸರಿಸ ಅಗಶ್ಸ ಮಾಡುವದ್ಕೇನು? ೨) ೧೫. ನಾವು ಜನಾಂಗಗಳವರಾದ ಪಾಪಿಷ್ಠರಲ್ಲ, ಹುಟ್ಟು ಯೆಹೂದ್ಸರಾಗಿದ್ದು, ೧೬. ಯೇಸು ಕ್ರಿಸ್ತನ ವಿಶ್ಶಾಸದ ಮೂಲವಾಗಿ ಅಲ್ಲದೆ, ನ್ಸಾಯಪ್ರಮಾಣದ ಕ್ರಿಯೆಗಳಿಂದ ಮನುಷ್ಸನು ನೀತಿನಿರ್ಣಯ ಪಡುವದಿಲ್ಲವೆಂದು ೩) ತಿಳಿದು, ನಾವು ನ್ಸಾಯಪ್ರಮಾಣದ ಕ್ರಿಯೆಗಳಿಂದಲ್ಲ, ಕ್ರಿಸ್ತನ ವಿಶ್ಶಾಸದಿಂದ ನೀತಿನಿರ್ಣಯ ಪಡುವದಕ್ಕೆ ಕ್ರಿಸ್ತ ಯೇಸುವನ್ನು ವಿಶ್ಶಾಸಿಸಿದೆವು; ಯಾಕಂದರೆ ನ್ಸಾಯಪ್ರಮಾಣದ ಕ್ರಿಯೆಗಳಿಂದ ಯಾವ ಮಾಂಸವಾದರೂ ನೀತಿನಿರ್ಣಯ ಪಡದು. ೧೭. ಆದರೆ ಕ್ರಿಸ್ತನಿಂದ ನೀತಿನಿರ್ಣಯ ಪಡುವ ಹಾಗೆ ಹುಡುಕುವಾಗ, ನಾವು ಪಾಪಿಷ್ಠರಾಗಿ ಕಾಣಲ್ಪಟ್ಟರೆ, ಅದರಿಂದ ಕ್ರಿಸ್ತನು ಪಾಪದ ಸೇವಕನಾಸ್ಸಾ? ೪) ಆಗದು. ೫) ೧೮. ಯಾಕಂದರೆ ನಾನು ಕಿತ್ತವುಗಳನ್ನೇ ತಿರಿಗಿ ಕಟ್ಟಿದರೆ, ನನ್ನನ್ನು ಮೀರುವವನಾಗಿ ತೋರಿಸುತ್ತೇನೆ. ೧೯. ಯಾಕಂದರೆ ನಾನು ದ್ಸೇವರಿಗೆ ಬದುಕುವ ಹಾಗೆ, ನ್ಸಾಯಪ್ರಮಾಣದಿಂದ ನ್ಸಾಯಪ್ರಮಾಣಕ್ಕೆ ಸತ್ತೆನು. ೬) ೨೦. ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟೆನು. ಆದರೆ ಬದುಕುತ್ತೇನೆ; ೭) ಇನ್ನು ನಾನಲ್ಲ, ಕ್ರಿಸ್ತನೇ ನನ್ನಲ್ಲಿ ಬದುಕುತ್ತಾನೆ; ಹೀಗಿರಲಾಗಿ ನಾನು ಇಗ ಮಾಂಸದಲ್ಲಿ ಬದುಕುವದು, ನಂನನ್ನು ಪ್ರೀತಿಮಾಡಿ, ತನಂನು ನನಗ್ಸಾಸ್ಕರ ಕೊಟ್ಟ ದ್ಸೇವರ ಮಗನ ಮೇಲಿರುವ ವಿಶ್ಶಾಸದಲ್ಲಿ ಬದುಕುತ್ತೇನೆ. ೨೧. ನಾನು ದ್ಸೇವರ ಕೃಪೆಯಂನು ತೆಗೆದು ಹಾಕುವದಿಲ್ಲ ೮); ಯಾಕಂದರೆ ನ್ಸಾಯಪ್ರಮಾಣದಿಂದ ನೀತಿ ಉಂಟಾದರೆ, ಕ್ರಿಸ್ತನು ಸುಮ್ಮನೆ ಸತ್ತನು.

೧. ಇಷ್ಟು ವರೆಗೆ, ಕಾರ್ನೆಲ್ಯನ ಮನೆಯಲ್ಲಿಯೂ ಅಪಾ. ಕ್ರಿ. ೧೦, ೧೧. ಯೆರೂಸಲೇಮಿನ ಸಮಾಗಮದಲ್ಲಿಯೂ ಸ. ೧೫., ತನ್ಮಥ್ಸ ಇಲ್ಲಿಯೂ, ಯೆಹೂದರ ಆಚಾರ್ಸದ ಕಟ್ಟಳೆಗಳನ್ನೂ ಹೇದದ ಕಟ್ಟಳೆಗಳನ್ನೂ ಕೈಕಾಳ್ಗದೆ, ಪರಜನ ಕ್ರೈಸ್ತರನ್ನೂ ಯೆಹೂದ ಕ್ರೈಸ್ತರನ್ನೂ ಸಮಾನರೆಂದೆಣಿಸಿದಿ.

೨. ಈಗ ಮಾತ್ರ, ನೀನು ಪರಜನರಿಂದ ನಿನ್ನನ್ನು ಬೇರ್ಪಡಿಸಿ ಕಾಂಯ, ಅವರು ಯೆಹೂದ ನಿಯಮಕ್ಕೆ ಪೂರ್ಣ ಅಧೀನವಾಗಿ ಬದುಕುವ ಮಟ್ಟಿಗೂ ಅವರು ಪಾಪಾಲೆ ಯೆಂದು ಹೇಳಿ, ಅವರನ್ನು ಸಪಾಪಾದರ ಸಂಗಕ್ಕೆ ಆಗಲಿಸುತ್ತೀಯಾ? ಇದು ಸಮವಾ?

೩. ವ. ೧೫. ೧೬. ಅವನ ಚಂಚಲ ಬುದ್ಧಿಯ ಮೇಲೆ ಅಪವಾದ ಹೇಳಿದ ತರುವಾಯ, ಈಗ ಸುವಾರ್ತಾಶ್ರಿತವಾದ ಸಮಸ್ತ ಕ್ರೈಸ್ತತ್ವದ ಮೂಲಬೋಧನೆಯ ಸಂಗತಿಯನ್ನು ಆರಂಭ ಮಾಡುತ್ತಾನೆ. ನಿಯಮದಿಂದ ನಮಗೇನೂ ಪ್ರಯೋಜನ ಬರುವದಿಲ್ಲವೆಂದು ಅನುಭವದಿಂದ ತಿಳಕಾಂಡಿದ್ದೇವೆ. ಅದು, ನಾವು ಪರಜನರ ಘೋರ ಪಾಪಗಳಲ್ಲಿ ಬೀಳದ ಹಾಗೆಯೂ ರಾಮ. ೨., ದೇವರಿಗೆ ಪೂರ್ಣವಾಗಿ ಬೆನ್ನು ಹಾಕಿ ಹಾಳಾಗದ ಹಾಗೆಯೂ, ನಮ್ಮನ್ನು ಕಾಪಾಡಿತೆಂಬದು ಸರಿ: ಆದಾಗ್ಯೂ ಅದು ಸಾಲದೆಂತಲೂ, ನಾವು ಪೂರ್ಣ ಪರಿಶುದ್ಧರಾಗ ಬೇಕೆಂಬ ದೇವರ ನಿಯಮ

ವನ್ನು ನಡಿಸಲಾರೆವಾದ್ದರಿಂದ, ಕ್ರಿಸ್ತನ ವಿಶ್ವಾಸದ ಪೂರ್ಣತೆ ನಮಗೆ ರಕ್ಷಣೆ ಇಲ್ಲವೆಂತಲೂ, ಬರಪೂಗಳಿಂದಲೂ ಮನಸ್ಸಾಕ್ಷಿಯಿಂದಲೂ ತಿಳಕಾಂಡಿದ್ದೇವೆ.

೪. ಕ್ರಿಸ್ತನ ವಿಶ್ವಾಸವು ಸಾಲದೆ, ವಿಶ್ವಾಸಿಗಳಾದ ನಾವು ಸಪೂರ್ಣ ಮೋಶೆಯ ನಿಯಮವನ್ನು ಕೈಕಾಳ್ಳದಿರುವ ಪಕ್ಷದಲ್ಲಿ, ಪಾಪಿಗಳಾಗಿ ದೇವರ ಮುಂದೆ ಕಾಣಿಸಿಕಾಳ್ಳುವದಾದರೆ, ಕ್ರಿಸ್ತನು ಅಸತ್ಯ ನೀತಿಮಾರ್ಗವನ್ನು ಸಾರಿಸಿದ ಪೂರ್ಣಗೆ ಆವೀತು; ಮತ್ತು ಆತನಿಂದ ಬಂದ ನಿಯಮವ ವಿಸರ್ಜನೆಯು ಪಾಪವಾಗಿರ ಬೇಕು, ಪೂರ್ಣಗಾದರೆ ಕ್ರಿಸ್ತನು ಪಾಪವರ್ಧಕನಾಗಿರ ಬೇಕು!

೫. ಆದರೆ ಇದನ್ನು ನೆನಸುವದೆ ದೂಷಣೆಯಲ್ಲವೆ! ಆದ್ದರಿಂದ ತಪ್ಪು ನಿನ್ನಲ್ಲಿಯೆ ಅದೆ; ನಿಯಮಸಾಧನೆಯಿಂದ ಅಧಿಕ ಪರಿಶುದ್ಧತ್ವವನ್ನು ಪಡಕಾಳ್ಳ ನಾವಿದ ನೀನೂ ನಿನ್ನವರೂ, ಮುಂಚೆ ಮೋಶೆಯ ನಿಯಮವು ತೆಗದು ಪೂರ್ಣಕಲಾಯಿತು ಯೆಂದು ಪೇಳಿ, ಈಗ ಅದು ಅಗತ್ಯವೆಂಬ ಪೂರ್ಣಗೆ ಮಾಡುವದರಿಂದ ಅತಿಕ್ರಮಿಗಳೆಂದು ನೀವೆ ನಿಮ್ಮನ್ನು ಮಾಪಿ ಕಾಳ್ಳುತ್ತೀರಿ. ಪೌಲನು ಇಲ್ಲಿ ನಯವಾಗಿ ಮಾತಾಡ ಬೇಕೆಂದು, ಮಧ್ಯಮಪುರುಷ ಪ್ರಯೋಗಿಸದೆ, ಉತ್ತಮಪುರುಷದಲ್ಲಿಯೆ ನಾನು ಯೆಂದು, ಸಂಕಪ ರೂಪವಾಗಿ ಪೇಳುತ್ತಾನೆ. ಇದಲ್ಲದೆ ಇದಾಂದು ಯಾವಾಗಲೂ ಸತ್ಯ, ಯೇನಂದರೆ, ಯಾರಾದರೂ ವಿಶ್ವಾಸದಲ್ಲಿ ನಿಯಮದ ನಾಗದಿಂದ ಬಿಡಿಸಿಕಾಂಡು, ಮತ್ತೆ ತಿರಿಗಿ ಅದನ್ನು ಪೆಗಲ ಮೇಲೆ ತಕ್ಕಾಳ್ಳಲಿಕ್ಕಿದ್ದರೆ, ಅಂಥವನು ತನ್ನ ಮೊದಲಿನ ವಿಶ್ವಾಸವು ಅತಿಕ್ರಮವೆಂದು ಪೇಳಿದ ಪೂರ್ಣಗಾಯಿತು.

೬. ನಿಯಮವಿಧಿಗಳನ್ನು ನಡಿಸುವದಕ್ಕೆ ಪ್ರಯತ್ನ ಮಾಡಿ, ನನ್ನ ಬಲ ಸಾಲದೆಂದು ತಿಳ ಕಾಂಡಾಗ, ನನಗೆ ಬಂದ ವೇದನೆ ನಾನೆ ಬಲ್ಲೆ ರೋಮ. ೭; ಮಾನಸಾಂತರದಿಂದ ನಾನು ನಿಜವಾಗಿ ಸತ್ತೆನು. ಆದ್ದರಿಂದ ಈ ಅಸಾರ್ಥಕವಾದ ಪೂರ್ಣಾರಾಟವನು ಬಿಟ್ಟೆನು, ಮನಸ್ಸಾ ಇಚ್ಛೆ ದುಷ್ಟತನದಲ್ಲಿ ನಡ ಕಾಳ್ಳುವದಕ್ಕೆ ಅಲ್ಲಾ, ದೇವರ ಕೃಪೆಯಿಂದ ಆತನ ಸಂಗಡ ಕೂಡಿ ಕಾಂಡು ಆತನ ಮಹಿಮೆಗೆ ಬದುಕುವದಕ್ಕಾಸ್ಕರವಾಗಿ ಬಿಟ್ಟೆ; ಪೂರ್ಣಾಗೆಂದರೆ ಈ ಕೃಪೆಯು ಸ್ವಸಾಮರ್ಥ್ಯದಿಂದ ಲ್ಲಾ ಕ್ರಿಸ್ತನ ಕ್ರೂಜೆಯ ಮರಣದಿಂದಲೇ ಉಂಟಾಯಿತು.

೭. ಈ ಪ್ರಕಾರ ಪಾಪಿ ಮನುಷ್ಯನಾಗಿ ಮಾಂಸದಲ್ಲಿ ಪೂರ್ಣಾದು, ಆದರೂ ವಿಶ್ವಾಸದಲ್ಲಿ, ತನ ಆತ್ಮದಿಂದ ವಿಶ್ವಾಸಿಯಲ್ಲಿ ಬದುಕಿ, ಸಕಲ ಸತ್ಕ್ರಿಯೆಗಳಿಗೆ ಬಲ ಪಡಿಸುವ ದೇವರ ಮಗನ ಪೂರ್ಣ ಆಶ್ರಿತನಾಗಿ ಬದುಕುತ್ತೇನೆ. ಆತನು ತನ್ನನ್ನು ಕಾಟ್ಟಿ ಕಾರಣ, ನಾನು ನನ್ನ ಪೃದಯವನ್ನೂ ಜೀವವನ್ನೂ ಆತನಿಗೆ ಕಾಟ್ಟು, ಕೃತಜ್ಞನಾಗಿರ ಇಚ್ಛೈಸುತ್ತೇನೆ. ಈ ಪ್ರಕಾರ ಪಾಳೇ ಮನುಷ್ಯನ ಮರಣದಿಂದ ಪೂರ್ಣಾಸ ಮನುಷ್ಯನ ಜೀವ, ಅಶಕ್ತಿಯಿಂದ ಶಕ್ತಿ ಉಂಟಾಯಿತು.

೮. ವ. ೨೧. ಕ್ರಿಸ್ತನನ್ನು ನನಗಾಸ್ಕರ ಕಾಟ್ಟಿ ದೇವರ ಕೃಪೆಯು ಈ ಪ್ರಕಾರ ಮಾತ್ರವೆ ಪೂರ್ಣವಾಗಿ ಸಲ್ಲುವದು. ನಿಯಮವನ್ನು ತುಂಬಿಸುವದರಿಂದ ದೇವರ ಮುಂದೆ ನೀತಿವಂತನಾಗ ಬಹುದಾದರೆ, ಕ್ರಿಸ್ತನು ನಮ್ಮ ಪಾಪಗಳಿಗಾಸ್ಕರ ಸಾಯುವದು ಅನವಶ್ಯ. ಕ್ರಿಸ್ತನ ಸಪೂರ್ಣಾಯದಿಂದ ಸಂಪೂರ್ಣವಾದ ಕ್ರಿಯಾನೀತಿಯನ್ನು ಪಡ ಕಾಳ್ಳುವ ಪೂರ್ಣಗೆ ಮಾತ್ರವೆ ಆತನ ಕೃಪೆ ಅವಶ್ಯವೆಂದು ಪೇಳುವವನು ಅದನ್ನು ಅಪಮಾನ ಪಡಿಸುತ್ತಾನೆ.

ಕೆಳಗೆಯೂ ಬೇರೆ ಪತ್ರಿಕೆಗಳಲ್ಲಿಯೂ ಮುಖ್ಯವಾಗಿ ರೋಮಾಯ ಪತ್ರಿಕೆಗಳಲ್ಲಿಯೂ ಪೌಲನು ಬಹಳವಾಗಿ ಚರ್ಚಿಸುವ ನಿಯಮದ ಅಭಿಪ್ರಾಯ ಯೇನೆಂದು ಮೇಲಿನ ಸಂಗ ಪರಿಶ್ಲೇದದಿಂದ ತಿಳ ಕೊಳ್ಳಬಹುದು. ನಿಯಮಾಚಾರಗಳನ್ನು ಕೈಕೊಳ್ಳ ಬೇಕೆಂಬ ಮಾತಿನಿಂದ ತರ್ಕ ಹುಟ್ಟಿತು; ಪೇತ್ರನು ದೇವರ ಅಪ್ಪಣೆಯಿಂದಲೆ ಒಂದು ಸಾರಿ ಅದನ್ನು ಬಿಟ್ಟು ಮೇಲೆ, ಥಲವಾದಿಗಳಾದ ಯೆಹೂದ ಕ್ರೈಸ್ತರ ದೆಶೆಯಿಂದ ಅದನ್ನು ತಿರಿಗಿ ಕೈಕೊಳ್ಳ ನೋಡುವದು ದುಷ್ಕರ್ಮವೆಂದು ಪೌಲನು ಅವನಿಗೆ ತೋರಿಸುತ್ತಾನೆ. ವಿಶೇಷವಾಗಿ ವ. ೧೬. ಹಿಡಿದು ಪೌಲನು ಹೇಳುವ ಕಾರಣಗಳಿಂದ ಆಚಾರನಿಯಮನಿಬಂಧನೆ ಮಾತ್ರ

ಗಲ. ೫.

ವಲ್ಲಾ, ಸಮಸ್ತ ನಿಯಮನಿಬಂಧನೆಯು ಶೀರಿತೆಂದು ಪ್ರತ್ಯಕ್ಷವಾಗುತ್ತದೆ. ಈ ೪ ಅವಾಚ ಪಾನಗಳನ್ನು ಬಿಟ್ಟು, ಪರಿಚ್ಛೇದನೆ ಮುಂತಾದ ಆಚಾರನಿಯಮವನ್ನು ಕೈಕೊಳ್ಳುವದು ಮನುಷ್ಯನಿಗೆ ಹೊಡ್ಡದಲ್ಲಾ. ಆದರೆ ನಾನು ಪರಿಶುದ್ಧನಾಗಿರುವ ಹಾಗೆ, ನೀವು ಪರಿಶುದ್ಧರಾಗ ಬೇಕು ಯೆಂಬ ನಿರ್ಮಾಣಿಕನಾದ ನೀತಿಯುಳ್ಳ ದೇವರ ಅಪ್ಪಣೆಯಾದ ನೀತಿನಿಯಮವನ್ನು ಕೈಕೊಳ್ಳುವದು ಮನುಷ್ಯನಿಗೆ ಅಸಾಧ್ಯ. ಇದು ಮನುಷ್ಯನನ್ನು ಆಜ್ಞೆನಿರ್ಲ್ಯೆಸಿಕೊಳ್ಳುತ್ತದೆ. ನೀನು ಮಾಡಬೇಕು, ಬಾರದು, ಯೆಂಬಂಥಾ ವಿಧಿಗಳೆಲ್ಲಾ ಕ್ರಿಸ್ತನ ಪುಣ್ಯದಿಂದ ತೆಗದು ಹಾಕಲಾಗ ಬೇಕು; ಇಲ್ಲದಿದ್ದರೆ ಮನುಷ್ಯನು ರಕ್ಷಣೆ ಪಡಕೊಳ್ಳಲಾರನು. ಮನುಷ್ಯನು ಯೇನೊಂದೂ ಮಾಡುವದಕ್ಕೆ ಕೆಲಸವಿಲ್ಲಾ; ಯೆಲ್ಲಾ ಅವನಿಗೆ ಕೃಪೆಯಿಂದ ಉಡುಗನೆಯಾಗಿ ಶಿಕ್ಕುತ್ತದೆ. ಅವನಿದನ್ನು ಹೊಂದಿದನೋ, ಮತ್ತೆ ಅವನು ದೇವರಿಗೆ ಬಮಕಲಿಚ್ಛೆಸುತ್ತಾನೆ. ವ. ೧೫; ಕ್ರಿಸ್ತನು ಅವನಲ್ಲಿ ಬದುಕುತ್ತಾನೆ, ಮತ್ತು ಮಾಂಸದಲ್ಲಿ ಪಾಪಮಯ ಭಾವ ಉಳ್ಳವನಾಗಿ ಬದುಕಿದರೂ, ವಿಶ್ವಾಸದಲ್ಲಿ ಪರಿಶುದ್ಧನಾಗಿ ತನಗೋಸ್ಕರ ತನ್ನನ್ನೇ ಅರ್ಪಿಸಿದ ಕ್ರಿಸ್ತನಿಗೆ ಬದುಕುತ್ತಾನೆ. ಆದ್ದರಿಂದ ಮುಖ್ಯ ಸಂಗತಿಯಾಗಿ ಇಲ್ಲಿ ಹೇಳಿರುವ ಪಾರಂಗತವಾದ ವಿಚಾರವೇನೆಂದರೆ: I. ವಿಶ್ವಾಸದಿಂದ ಬರುವ ನೀತಿಯ ವಿಷಯ ಸ. ೫. ೪. II. ವಿಶ್ವಾಸದ ಫಲಗಳ ವಿಷಯ ಸ. ೫. ೬.

ಪತ್ರಿಕೆಯ ಯೆರಡನೆ ಜಾಗ.

ಸ. ೫. ೪.

ಸರ್ವವು ವಿಶ್ವಾಸದಿಂದ.

ಪೇತ್ರನ ವಿಷಯವಾಗಿ ಅಂತಿಯೋಕ್ಯದಲ್ಲಿ ನಡದ ಸಂಗತಿಯನ್ನು ಹೇಳುತ್ತಾ ಅಪೊಸ್ತಲನಾದ ಪಾಲನು ಈ ಪತ್ರಿಕೆಯ ಮುಖ್ಯ ಕಾರ್ಯದೊಳಗೆ ಬಂದು ಮುಟ್ಟುತ್ತಾನೆ. ಹ್ಯಾಗೆಂದರೆ ಮೇಲೆ ಹೇಳಿದ ಪ್ರಕಾರ, ಆ ಸಂಗತಿಯೂ, ಗಲತರಲ್ಲಿ ಖಂಡಿಸಬೇಕಾದ್ದೂ ಒಂದೆ, ಅಂದರೆ, ಮೋಶೆಯ ನಿಯಮವು ಈಗಲೂ ಸಲ್ಲುತ್ತದೋ ಇಲ್ಲವೊ ಯೆಂಬದು. ಆಗ ಪೇತ್ರನಿಗೆ ಹ್ಯಾಗೋ ವ. ೧೬. ಹಾಗೆಯೇ ಈಗ ಗಲತರಿಗೆ, ಮನುಷ್ಯನು ನಿಯಮಕ್ರಿಯೆಗಳಿಂದ ಅಲ್ಲಾ, ವಿಶ್ವಾಸದಿಂದಲೇ ನೀತಿ ಪಡುತ್ತಾನೆಂದೂ, ಕ್ರೈಸ್ತನಾದವನಿಗೆ ನಿಯಮವು ಸಲುವದಿಲ್ಲವೆಂದೂ, ಅದರಿಂದ ಅವನಿಗೆ ಬಂದ ಅನುಭವದಿಂದಲೂ, ಕ್ರಿಸ್ತನ ಮರಣದಿಂದಲೂ, ಅದರಲ್ಲಿಡುವ ವಿಶ್ವಾಸದಿಂದಲೂ, ಅವನಿಗೂ ದೇವರಿಗೂ ಇರುವ ಸಂಬಂಧದ ಸ್ವಭಾವವು ಪೂರ್ಣವೆಲೆ ಆಯಿತೆಂದೂ ಪಾಲನು ಹೇಳುತ್ತಾನೆ. ಹಾಗಾದರೆ, ದೇವರು ತಾನೇ ಸ್ಥಾಪಿಸಿದ ನಿಯಮ ಮುಂತಾದ ಹಳೆವೊಡಂಬಡಿಕೆಯ ಸಮಸ್ತ ರಕ್ಷಣಾಮಾರ್ಗವು ಹೀನವಾಗುವದಿಲ್ಲವೊ ಯೆಂಬ ಮೊದಲಾದ ಪ್ರಶ್ನೆಗಳನ್ನು ಚರ್ಚಿಸುವ ಬಗ್ಯೆ, ಪಾಲನು ಹಳೆವೊಡಂಬಡಿಕೆಯಿಂದಲೆ, ನಿಯಮದ ಸ್ವಭಾವದಿಂದಲೂ, ಅದೆಲ್ಲಾ ತಾತ್ಕಾಲಿಕವಾಗಿಯೂ, ನಡುಬಿಡಿಳಿತೆಯಾಗಿಯೂ ಸುವಾರ್ತೆಗೋಸ್ಕರ ಸನ್ನಾಹಕರ ಶಿಕ್ಷೆಯಾಗಿಯೂ ಇತ್ತೆಂಬ ಸೂಚನೆಗಳಿಂದಲೂ ಪ್ರಮಾಣಿಸುತ್ತಾನೆ. ಹೀಗಿರಲಾಗಿ ಈ ಯೆರಡು ಸಂಧಿಗಳ್ಲಿಯೂ, ನಿಯಮವಲ್ಲಾ ವಿಶ್ವಾಸ ಮಾತ್ರವೆ ರಕ್ಷಿಸುತ್ತದೆ ಯೆಂಬದೆ ಮುಖ್ಯ ಮಾತಾಗಿರುತ್ತದೆ.

ಗಲ. ೩, ೧—೫.

ಮುಖ್ಯ ಪ್ರಮಾಣ. ಸ. ೩, ೧—೪, ೭.

೧) ಅದಕ್ಕೆ ನಿಮ್ಮ ಸ್ವಂತ ಅನುಭವ ಸಾಕ್ಷಿ. ಸ. ೩, ೧—೫.

೧. ಓ ಬುದ್ಧಿಹೀನ ಗಲಾತ್ಯರೇ![೧] ಸತ್ಯಕ್ಕೆ ವಿಧೇಯರಾಗದ ಹಾಗೆ, ಯಾವನು ನಿಮಗೆ ಮಾಟ[೨] ಮಾಡಿದನು? ಯೇಸು ಕ್ರಿಸ್ತನು ನಿಮ್ಮಲ್ಲಿ ಶಿಲುಬೆಗೆ ಹಾಕಲ್ಪಟ್ಟವನಾಗಿ ನಿಮ್ಮ ಕಣ್ಣುಗಳೆದುರಿಗೆ ಬರೆಯಲ್ಪಡಲಿಲ್ಲವೋ? ೨) ೨. ಇದನು ಮಾತ್ರ ನಿಮ್ಮಿಂದ ಕಲಿಯ ಬೇಕೆಂದಿದ್ದೇನೆ[೪]—ನೀವು ಆತ್ಮವನ್ನು[೫] ಹೊಂದಿದ್ದು, ನ್ಯಾಯಪ್ರಮಾಣದ ಕ್ರಿಯೆಗಳಿಂದಲೋ, ವಿಶ್ವಾಸದ ಕೇಳ್ವಿಕೆಯಿಂದಲೋ? [೬] ೩. ಇಷ್ಟು ಬುದ್ಧಿಹೀನರಾಗಿದ್ದೀರೋ? ಆತ್ಮದಲ್ಲಿ ಆರಂಭಿಸಿ, ಇಗ ಮಾಂಸದಲ್ಲಿ[೭] ಶಿರಿಸುತ್ತಿರೋ? ೪. ಇಂಥವುಗಳನು ನೀವು ತಾಳಿದ್ದು[೮] ವ್ಯರ್ಥವೋ? ವ್ಯರ್ಥವಾಯಿತ್ತೇನೋ. [೯] ೫. ಹಾಗಾದರೆ ಆತ್ಮವನು ನಿಮಗೆ ತಂದು ಕೊಟ್ಟು, ನಿಮ್ಮಲ್ಲಿ ಬಲವಾದ ಕ್ರಿಯೆಗಳನು ಯತ್ನಿಸುವವನು ನ್ಯಾಯಪ್ರಮಾಣದ ಕ್ರಿಯೆಗಳಿಂದಲೋ? ವಿಶ್ವಾಸದ ಕೇಳ್ವಿಕೆಯಿಂದಲೋ?

೧. ಅಪಾಸ್ತಲನು ತನ ಪಶ್ಚಿಕೆಯ ಮೂಲಬಾಧನೆಯನು ಸಂಕ್ಷೇಪವಾಗಿ ತಿಳಿಸಿದ ಮೇಲೆ. ಗಲತರನ್ನು ನಂಬಿಸಿದ ಕುಪಾಕಬಾಧಕರ ಅಬದ್ಧ ಬಾಧನೆಗಳನ್ನು ಕಠಿಣವಾಗಿ ಖಂಡಿಸುತ್ತಾನೆ—ಬುದ್ಧಿಹೀನ ಗಲತರೇ ಯೆಂದು, ಶಿಷ್ಯರಿಗೆ ಉತ್ಥಾನವಾದ ಯೇಸುವು ಹೇಳಿದ ಪ್ರಕಾರ ಲೂಕ. ೨೪, ೨೫., ಪೌಲನು ಗಲತರಿಗೆ ಖಂಡಿತವಾಗಿ ಗದರಿಸಿ ಹೇಳುತ್ತಾನೆ. ಈ ಮಾತುಗಳು, ಸ್ನೇಹಿತನ ಘಾಯಗಳ ಹಾಗೆ, ನಂಬಿಕೆಯುಳ್ಳವುಗಳು ಸಾಮತಿ. ೨೭, ೬. ಕ್ರಿಸ್ತನಂನು ರಕ್ಷಣೆಯ ಏಕಾಧಾರವಾಗಿ ತಕ್ಕ್ಕಾಳ್ಳದ ಅವರ ಬುದ್ಧಿಗೆ ಅಪಾಸ್ತಲನು ಬುದ್ಧಿ ಶೂನ್ಯತ್ವವೆಂದು ಹೇಳುತ್ತಾನೆ. ಇದು ಮಹಾಜ್ಞಾನವೆಂದು ಅನೇಕರು ಯೆಣಿಸಿದರೆ ಯೇನಾಯಿತು?

೨. ಹಾಗಂದರೆ, ನೀವು ನಿಮ್ಮ ವಿಶ್ವಾಸವನು ಕಳಕಾಳ್ಳುವ ಹಾಗೆ ಯಾರು ನಿಮ್ಮ ಕಣ್ಣು ಕಟ್ಟಿ, ಮರುಳುಗಾಳಿಸಿದರಾ, ನಾನರಿಯೆ. ಅಷ್ಟು ಬೇಗ ತಿರಿಗಿಬಿದ್ದದ್ದು ನಿಮ್ಮ ಸ್ವಂತಬುದ್ಧಿಯಿಂದಾಗಲಿಲ್ಲಾ, ಈ ಯುಗದ ಪ್ರಭುಗಳ ಶಕ್ತಿಗಳೂ ಪ್ರಯತ್ನಗಳೂ ಶೇರದೆ ಹೀಗಾಗಲಿಲ್ಲಾ ೧ಕೊರಿ. ೪, ೪. ೧೧, ೩.

೩. ಕ್ರಿಸ್ತನನ್ನೂ ಆತನ ಪಿಮೋಚನಾಕೃಪೆಯನ್ನೂ, ಆತನ ಬಲಿಮರಣವು ನಿಮ್ಮ ಮಧ್ಯದಲ್ಲಿ ಸಂಚಿತವಿಸಿದಂತೆ, ನಿಮ್ಮ ಕಣ್ಣುಗಳ ಮುಂದೆ ಇಟ್ಟು ವಿವರಿಸಿದೆನು.

೪. ಅಂದರೆ, ನೀವು ನನ್ನಿಂದ ಬಹಳ ಕಲಿತಿರಿ, ನನಗೂ ನಿಮ್ಮಿಂದ ಹಾಂದು, ಹಾಂದೇ ಕಲಿಯ ಮನಸ್ಸುಂಟು, ಸ್ವಲ್ಪ ಕಲಿಸಿರಿ ಯೆಂದು ಹೇಳಿ, ಅವರ ಭ್ರಮೆ ನಿವಾರಿಸತಕ್ಕ ಹಾಂದೆ ಪ್ರಶ್ನೆ ಮಾಡುತ್ತಾನೆ.

೫. ಆತ್ಮದ ಸಾಧಾರಣ ಅಸಾಧಾರಣ ವರಗಳು ಪರಜನರ ಅಂಧಕಾರಕ್ಕೆದುರಾಗಿ ವಿಶೇಷ ರೀತಿಯಲ್ಲಿ ಪ್ರತ್ಯಕ್ಷವಾದವು. ಆದಾಗ್ಯೂ ಗಲತರ ಹಾಗೆಯೆ, ಸಮಸ್ತ ಸತ್ಯ ಕ್ರೈಸ್ತರು, ಸ್ವಂತ ಜ್ಞಾನವೂ ದೇವರ ಕೃಪೆಯೂ ಬಲವಾಗಿ ಜೇದವಾದ ದೇವರ ಆತ್ಮವು ಪ್ರಾಪ್ತವಾಯಿತೆಂಬ ನಿಶ್ಚಯ ಉಂಟಾದ ಆರಂಭ ಕಾಲದ ನೆನಪು ಇಲ್ಲದೆ ಹೋಗಲಾಗದು.

ಗಲ. ೩, ೬. ೫.

೬. ಮಾಡಾಣವಲ್ಲಾ, ಕೇಳಾಣ; ನಿಯಮವಲ್ಲಾ, ಯೇನಾಂದೂ ಮಾಡದೆ ದೇವರು ದಯಪಾಲಿಸುವದನ್ನು ತಕ್ಕಾಳ್ಳುವ ವಿಶ್ವಾಸ ಮಾತ್ರ ಬೇಕು.

೭. ಬರೇ ಬಹಿರಂಗದ್ದೆಲ್ಲಾ, ಪ್ರಾಣರಕ್ಷಣವನ್ನು ವರ್ಧಿಸದೆ ಅದನ್ನು ತಡಿಸುವ ಫಿಲಿ. ೩, ೩. ಪರಿಚ್ಛೇದನೆಯೂ, ಯೆಹೂದ ಮಾನ್ಯಗಳೂ, ಸ್ವಂತ ಬಲದಿಂದ ತನಗೆ ಮಿಗಿಲಾಗ ಕೂಡದೆ, ನೀತಿಯನ್ನೂ ಜೀವವನ್ನೂ ಪಡ ಕಾಳ್ಳಲಾರದ ಮಾಂಸವೆಂಬ ಕೆಟ್ಟು ಪೋದ ಪಾಳೆ ಸ್ವಚಾವದಲ್ಲಿ ಮನುಷ್ಯನು ಉಳಕಾಂಡು ನಡಿಸುವ ನಿಯಮಾಚರಣೆ ಮುಂತಾದ್ದೂ ಮಾಂಸವೆಂದನ್ನುತ್ತಾನೆ.

೮. ಯೆಹೂದರಿಂದ ಬಂದ ಪಿಂಸೆಗಳನ್ನೂ ಸ. ೬, ೧೨. ವಾಳ ಪೋರಾಟಗಳನ್ನೂ ತಾಳಿದ್ದು. ವಿಶ್ವಾಸದ ಮಾರ್ಗದಲ್ಲಿ ಮಾಡುವದಕ್ಕೆ ಬಹಳವಿಲ್ಲಾ, ಆದರೆ ತಾಳುವದಕ್ಕೂ ಆತ್ಮಿಕ ಪ್ರಸವವೇದನೆಗಳನ್ನು ಸಹಿಸುವದಕ್ಕೂ ಸಾಕಷ್ಟು ಉಂಟು.

೯. ಅಂದರೆ, ವೃರ್ಥವಾಗಿದ್ದರೆ; ಪೋಗಂದರೆ, ವೃರ್ಥವಲ್ಲವೆಂದು ಚಾವಿಸುತ್ತೇನೆ.

೨) ಪರಿಶುದ್ಧ ಬರಪಾದ ಪ್ರಮಾಣ. ಸ. ೩, ೬—೪, ೩೧.

ಈಗ ವಿಶ್ವಾಸದಿಂದಲೆ ನೀತಿ ಯೆಂಬದನ್ನು ಹಳ್ಳೆ ವೊಡಂಬಡಿಕೆಯಿಂದ ಸಾಕಾದ ಪ್ರಮಾಣಗಳಿಂದನು ಕೊಟ್ಟು ಸಾಧಿಸುತ್ತಾನೆ. ಯೆಹೂದ ಆಸಕ್ತಿಗಂಟರು ಪರಿಚ್ಛೇದನೆಯಿಂದ ಅಬ್ರಹಾಮನ ಆಶೀರ್ವಾದದಲ್ಲಿಯೂ, ಮೋಶೆಯ ನಿಯಮವನ್ನು ಕೈಕೊಳ್ಳುವದರಿಂದ ವೊಡಂಬಡಿಕೆಯ ಜನಾಂಗದ ಸಕಲ ವಾಗ್ದತ್ತಗಳಲ್ಲಿಯೂ, ಶೇರ ಇಚ್ಛೈಸುತ್ತಿರಲು, ಪೌಲನು, ಅಬ್ರಹಾಮನು ತಾನೆ ಆಶೀರ್ವಾದವನ್ನು ವಿಶ್ವಾಸದ ಮೂಲವಾಗಿ ಮಾತ್ರವೆ ಹೊಂದಿದನೆಂತಲೂ, ಅದರಲ್ಲಿ ಅಂಶಿಗಳಾಗಿರ ಬೇಕೆಂಬವರೆಲ್ಲರು ಅದೇ ಪ್ರಕಾರ ವಿಶ್ವಾಸದಿಂದಲೆ ಹೊಂದ ಬೇಕೆಂತಲೂ; ವಾಗ್ದತ್ತವು ನಿಯಮದಿಂದ ನಿರರ್ಥಕವಾಗದೆ, ಕ್ರಿಸ್ತನಲ್ಲಿ ಪೂರ್ಣವಾಯಿತೆಂತಲೂ, ನಿಯನುವೆಲ್ಲಾ ಅದರ ಸ್ವಭಾವಕ್ಕನುಸಾರವಾಗಿ ಸಂನಾಹಕರವಾಗಿ ಇದ್ದದರಿಂದ, ವಿಶ್ವಾಸಿಯು ನಿರ್ಬಂಧವಾಗಿದ್ದಾನೆಂತಲೂ ತೋರಿಸಿ ಕೊಡುತ್ತಾನೆ.

ನಾಲ್ಕನೆ ಸಂಧಿಯಲ್ಲಿ ಇದೇ ಸಂಗತಿಯನ್ನು ಮುಂದೆ ಪ್ರಶಂಸಿಸಿ, ನಿಯಮವಲ್ಲಾ ಸುವಾರ್ತೆಯೆ ದೇವರ ಪುತ್ರತ್ವದೊಳಗೆ ನಮ್ಮನ್ನು ನಡಿಸುವದರಿಂದ ಅದನ್ನು ಬಿಮ್ಮಗೆ ಹಿಡಕೊಳ್ಳ ಬೇಕೆಂತಲೂ, ಅಬ್ರಹಾಮನ ಕುಲ ಚರಿತ್ರದಲ್ಲಿ ಹಳ್ಳೆ ವೊಡಂಬಡಿಕೆಯು ಕಾಣಿಸುವ ಸೂಚನೆಗಳಿಂದ ಈ ಸಂಗತಿಯು ಪ್ರತಿಪಾದ್ಯವಾಗುತ್ತದೆಂತಲೂ ತೋರಿಸುತ್ತಾನೆ. ತಿಳಿಯ ಕಷ್ಟವಾದ ಈ ವಾಕ್ಯವನ್ನು ಚನ್ನಾಗಿ ಗ್ರಹಿಸಲಿಕ್ಕಾಗುವ ಹಾಗೆ, ವಿಂಗಡಿಸಿ ಆಲೋಚಿಸ ತಕ್ಕದ್ದೇನಂದರೆ: ಅ) ನೀತೀಕರಣವೂ ದೈವಪುತ್ರಸ್ವೀಕಾರವೂ ವಿಶ್ವಾಸದಿಂದಲ್ಲದೆ ನಿಯಮದಿಂದ ಬಾರದೆಂಬ ಲೇಖನಪ್ರಮಾಣ. ೩, ೬—೪, ೭. ಇ) ಹೊಂದಿದ ಕೃಪೆಯಿಂದ ಬಿದ್ದು ಹೋಗ ಬಾರದೆಂದು ಗಲತರಿಗೆ ಬುದ್ಧಿಯ ಮಾತು ೪, ೮—೨೦. ಉ) ಹಳ್ಳೇ ವೊಡಂಬಡಿಕೆಯ ಮುಂಗುರುತುಗಳಿಂದ ಬರುವ ಪ್ರಮಾಣದ ಶೇಷ ೪, ೨೧—೩೧. ಇವುಗಳಲ್ಲಿ ಮೊದಲನೆ ಭಾಗವನ್ನು ಹ್ಯಾಗೆ ವಿಭಾಗಿಸ ಬಹುದೆಂದರೆ: ೧) ಅಬ್ರಹಾಮನ ಆಶೀರ್ವಾದವು ವಿಶ್ವಾಸಕ್ಕೆ ಮಾತ್ರವೆ ಸಲುತ್ತದೆ. ೩, ೬—೯. ಈ ಸದ್ಯ ಪ್ರಮಾಣಕ್ಕೆ ತಾಗಿ, ಯಾಕೆ ವಿಶ್ವಾಸಿಗಳು ಮಾತ್ರವೆ ಆಶೀರ್ವದಿತರಾಗ ಕೂಡುತ್ತದೆಂಬದರ ಕಾರಣವು ವಿವರಿಸಿ ಅದೆ. ೨) ನಿಯಮವಲ್ಲಾ ಕ್ರಿಸ್ತನು ಮಾತ್ರವೆ ಆಶೀರ್ವಾದ ಕೊಡಲಾಗುತ್ತದೆ. ಸ. ೩, ೧೦—೧೪. ೩) ನಿಯಮವು ವಾಗ್ದತ್ತವನ್ನು ತೆಗದು ಹಾಕಲಾರದು ವ. ೧೫—೧೮. ೪) ನಿಯಮವು ರಕ್ಷಣೆಗೆ ಸಿದ್ಧೋಪಕರಣವಾಗಿತ್ತು ವ. ೧೯—೨೪. ೫) ವಿಶ್ವಾಸದಿಂದ ಸಮಸ್ತರು ದೇವರ ಮಕ್ಕಳೂ

ಗಲ. ೩, ೬—೯.

ವಾದ್ದತ್ತದ ಬಾಧ್ಯರೂ ಆಗುತ್ತಾರೆ. ವ. ೨೫—೨೯. ೬) ದಾಸತ್ವ ಪುತ್ರತ್ವವಾಗುವದು ಹ್ಯಾಗೆಂಬ ವಿವರ ಸ. ೪, ೧—೭.

೧. ಅಬ್ರಹಾಮನ ಆಶೀರ್ವಾದವು ವಿಶ್ವಾಸಕ್ಕೆ ಮಾತ್ರವೆ ಸಲ್ಲುತ್ತದೆ.

೬. ಹಾಗೆಯೇ ಅ ಬ್ರಹಾಮನು ೧) ದೇವರನ್ನು ವಿಶ್ವಾಸಿಸಿದನು; ಅದು ಅವನಿಗೆ ನೀತಿ ಯೆಂದು ಯೆಣಿಸಲ್ಪಟ್ಟಿತು. ೭. ಆದದರಿಂದ ವಿಶ್ವಾಸದವರು, ಇವರೇ ಅಬ್ರಹಾಮನ ಮಕ್ಕಳಾಗಿದ್ದಾರೆಂದು ೨) ತಿಳಿದು ಕೊಳ್ಳಿರಿ. ೮. ಆದರೆ ವಿಶ್ವಾಸದಿಂದ ದೇವರು ಜನಾಂಗಗಳನ್ನು ನೀತಿನಿರ್ಣಯ ಪಡಿಸುವನೆಂದು ಬರಹವು ಮುಂಚೆ ನೋಡಿ ೩), ಅಬ್ರಹಾಮನಿಗೆ ನಿನ್ನಲ್ಲಿ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವ ವೆಂಬ ಸುವಾರ್ತೆಯನ್ನು ಮುಂತಿಳಿಸಿತು ೪). ೯. ಹೀಗಿರಲಾಗಿ ವಿಶ್ವಾಸದವರು ವಿಶ್ವಾಸಿಯಾದ ಅಬ್ರಹಾಮನ ಸಂಗಡ ಆಶೀರ್ವದಿಸಲ್ಪಡುತ್ತಾರೆ ೫).

೧. ವಿಶ್ವಾಸದಿಂದ ನೀತಿ ಯೆಂಬ ಬೋಧನೆಯು, ಯೆಹೂದರು ಹೇಳುವ ಹಾಗೆ, ಯೆಂದೂ ಕೇಳದಂಥಾ ಮಾತಲ್ಲಾ. ಪರಿಚ್ಛೇದನೆಗೂ ಸಮಸ್ತ ಆಯಿಕೆಗೂ ಇಸ್ರಾಯೇಲರ ಸಕಲ ಮಾನ್ಯಗಳಿಗೂ ಮೂಲ ಪುರುಷನಾದ ಅಬ್ರಹಾಮನೆ, ಬರಹಗಳು ಹೇಳುವ ಪ್ರಕಾರ ಉತ್ಪ. ೧೫, ೬., ವಿಶ್ವಾಸದಿಂದಲೆ ನೀತಿ ಪಟ್ಟನು. ಆದ್ದರಿಂದ ಅಬ್ರಹಾಮನು ತಾನೆ ವಾಡಂಬಡಿಕೆಯ ಕೃಪೆಯನ್ನು ಹೊಂದಿದ ಮಾರ್ಗವನ್ನು ಬಿಟ್ಟು, ಬೇರೆ ಮಾರ್ಗದಿಂದ ಅವನ ವಾಡಂಬಡಿಕೆಯಲ್ಲಿ ಶೇರಲಕ್ಕೆ ನಾಡುವದು ಬುದ್ಧಿಹೀನತ್ವ.

೨. ಇದರಿಂದ ಅನುಮಾನಿಸ ತಕ್ಕದ್ದೇನಂದರೆ: ಶರೀರ ಪ್ರಕಾರ ಅಬ್ರಹಾಮನಿಂದ ಹುಟ್ಟಿದವರಿಗೆ ಅಲ್ಲಾ, ದೇವರ ವಾಕ್ಯದ ಕಡೆಗೆ ಅದೇ ಪೂರ್ಣ ವಿಧೇಯತ್ವವೂ ಆತನ ವಾಗ್ದತ್ತಗಳಲ್ಲಿ ಅದೇ ನಿಶ್ಚಂಚಲವಾದ ಭರವಸವೂ ಇರುವಂಥವರಿಗೆ ಅಬ್ರಹಾಮನ ಮಕ್ಕಳ ಸ್ವತಂತ್ರವು (ಆ ಕೃಪೆಯ ಬಾಧ್ಯತೆಯು) ಶಿಕ್ಕತಕ್ಕದ್ದು. ಈ ಪ್ರಕಾರ ನಂಬಿದವರಲ್ಲಿ ಅಬ್ರಹಾಮನು ಮೊದಲನೆಯವನು, ಮತ್ತು ಅವನನ್ನು ಅದರಲ್ಲಿ ಅನುಸರಿಸುವವರೆಲ್ಲರು ಅವನ ಆತ್ಮವೆಂಬ ಬೀಜದಿಂದ ಹುಟ್ಟಿದ ಕಾರಣ, ಅವನು ಸಮಸ್ತ ವಿಶ್ವಾಸಿಗಳ ತಂದೆ.

೩. ಬರಹವು, ಅಂದರೆ, ಅದರ ನಿಜ ಕರ್ತೃವಾದ ಪರಿಶುದ್ಧಾತ್ಮವು ಈ ಸಂಗತಿಯನ್ನು ಸಹಾ, ಉತ್ಥಾನದ ಸಂಗತಿಯ ಹಾಗೆಯೆ ಮತ್ತಾ. ೨೨, ೨೯., ಮುಂಚೆಯೆ ನಿಶ್ಚೈಸಿತ್ತು.

೪. ನೀತಿಯು ವಿಶ್ವಾಸದಿಂದ ಮಾತ್ರವೆ ಬರುತ್ತದೆಂಬದು, ಅಬ್ರಹಾಮನಿಗಾದ ಉತ್ಪ. ೧೭, ೩. ವಾಗ್ದತ್ತದ ವಚನದಿಂದಲೆ ತಿಳಿಯ ಬರುತ್ತದೆ. ಹೀಗಾಗಿ ಆ ಪ್ರಕಾರ ಅವನ ಸ್ವಂತ ಸಂತತಿ ಮಾತ್ರವಲ್ಲಾ, ಯೆಲ್ಲಾ ಪರಜನರು, ಮತ್ತೆ ಇವರು ಅವನಲ್ಲಿ, ಅಂದರೆ ಅವನ ಮತ್ತು ಅವನ ಬೀಜವಾದ ಕ್ರಿಸ್ತನ ಪರಿಮುಖವಾಗಿ ಮಾತ್ರವಲ್ಲಾ, ಅವರು ಅವನಲ್ಲಿ ಬೇರುಗೊಂಡವರಾಗಿ, ಆತ್ಮದ ಪ್ರಕಾರ ಅವನಿಂದ ಹುಟ್ಟಿ, ಅವನ ಮನೋಭಾವದವರಾಗಿ, ಆತನ ಆಶೀರ್ವಾದದಲ್ಲಿ ಅಂಶಿಗಳಾಗ ಬೇಕು.

೫. ದೇವರ ವಾಕ್ಯದಲ್ಲಿರುವ ದೇವರ ಈ ಸಂಕಲ್ಪದ ಪ್ರಕಾರ ಅಬ್ರಹಾಮನ ಹಾಗೆ ವಿಶ್ವಾಸಿಸುವವರೆಲ್ಲರೂ ಅವನ ಆಶೀರ್ವಾದಕ್ಕೆ ಅಂಶಿಗಳಾಗುತ್ತಾರೆ.

೨. ನಿಯಮವಲ್ಲಾ, ಕ್ರಿಸ್ತನು ಮಾತ್ರವೆ ಆಶೀರ್ವಾದವನ್ನು ಕೊಡಲಾಗುತ್ತದೆ.

೧೦. ಯಾಕಂದರೆ ನ್ಯಾಯಪ್ರಮಾಣದ ಕ್ರಿಯೆಗಳವರಷ್ಟು ಶಾಪಕ್ಕಾಳಗಾಗಿದ್ದಾರೆ೧); ಹ್ಯಾಗಂದರೆ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆದ ಯೆಲ್ಲವುಗಳಲ್ಲಿ, ಅವುಗಳಂನು ಮಾಡುವ ಹಾಗೆ, ನೆಲೆಯಾಗಿರದ ಯಾವನಾದರೂ ಶಾಪಗ್ರಸ್ತನೆಂದು ಬರೆದದೆ. ೧೧. ನ್ಯಾಯಪ್ರಮಾಣದಿಂದ ವಾಬ್ಬನಾದರೂ ದೇವರ ಮುಂದೆ ನೀತಿನಿರ್ಣಯ ಪಡುವದಿಲ್ಲವೆಂಬುವದು ಪ್ರಕಟವಾಗಿದೆ; ಯಾಕಂದರೆ ೨) ನೀತಿವಂತನು ವಿಶ್ವಾಸದಿಂದ ಬದುಕುವನು. ೧೨. ಆದರೆ ನ್ಯಾಯಪ್ರಮಾಣವು ೩) ವಿಶ್ವಾಸದ್ದಲ್ಲ; ಅವುಗಳಂನು ಮಾಡುವ ಮನುಷ್ಯನು ಅವುಗಳಲ್ಲಿ ಬದುಕುವನು. ೧೩. ಅಬ್ರಹಾಮನ ಆಶೀರ್ವಾದವು ಕ್ರಿಸ್ತ ಯೇಸುವಿನಿಂದ ಜನಾಂಗಗಳ ಮೇಲೆ ಬಂದು, ನಾವು ಆತ್ಮದ ವಾಗ್ದತ್ತವಂನು ವಿಶ್ವಾಸದ ಮೂಲವಾಗಿ ಹೊಂದುವ ಹಾಗೆ, ೧೪. ಕ್ರಿಸ್ತನು ನಮಗ್ಯಾಸ್ತರ ಶಾಪವಾಗಿ, ನ್ಯಾಯಪ್ರಮಾಣದ ಶಾಪವಾಳಗಿಂದ ನಂಮಂನು ಕೊಂಡು ಕೊಂಡನು ೪); ಹ್ಯಾಗಂದರೆ ಮರದಲ್ಲಿ ತೂಗಾಡುವವರೆಲ್ಲರು ಶಾಪಗ್ರಸ್ತರೆಂದು ಬರೆದದೆ.

೧. ವಿಶ್ವಾಸ ಮಾತ್ರವೆ ಆಶೀರ್ವಾದ ಪೊಂದುವದು ಯಾಕೆ ಯೆಂಬದಕ್ಕೆ ಮೊದಲನೆ ಕಾರಣ ಪೇಳಿಯದೆ. ನಿಯಮವು ಶಾಪ ಮಾತ್ರವೆ ಕಾಡುತ್ತದೆ ದ್ವಿ. ನ್ಯಾ. ೨೭, ೨೬.; ಯಾಕಂದರೆ ನಿಯಮದಿಂದ ನೀತಿ ಪಡ ಇಚ್ಛೈಸುವವನು ಅದನ್ನು ಪೂರ್ಣವಾಗಿ ಮಾಡ ಬೇಕು: ಆದರೆ ಅದಕ್ಕೆ ಶಕ್ತರ್ಯಾರೂ ಇಲ್ಲ; ಪೊಂದಾಗಾದರೆ ಅಂಥವನು ನಿಯಮದ ಉಕ್ತಿಗೆ ಅನುಸಾರವಾಗಿ ತಾನೇ ಶಾಪಕ್ಕಾಳಗಾಗಿದ್ದಾನೆ.

೨. ಯೆರಡನೆ ಕಾರಣ: ಬರಪಾವು ತಾನೆ ವಿಶ್ವಾಸಕ್ಕೆ ಜೀವವೆಂದು ಪೇಳುತ್ತದೆ. ಪ್ರವಾದಿ ಪಾಬಕುಕನು. ೨, ೪. ಕಲ್ದಾಯರ ಅಜಿಯಾಗದ ಶಿಕ್ಷೆಯಿಂದ ಬಿಡಿಸುವ ವಿಷಯದಲ್ಲಿ ಮಾತಾಡುತ್ತಾನಾದರೂ, ಆ ಪಾಂದು ದೃಷ್ಟಾಂತದಿಂದ ದೇವರ ಸಮಸ್ತ ನ್ಯಾಯಶಿಕ್ಷೆಗಳಿಗೆ, ಕಪೇ ದಿನವ ನ್ಯಾಯಶಿಕ್ಷೆಗೆ ಸಪೊಂದಾಯೆಲ್ಲಾ ಮನುಷ್ಯರನ್ನು ರಕ್ಷಿಸುವದಕ್ಕೆ ಬೇಕಾದ ವಾಂದೇ ಪೇತುವನ್ನು ತಿಳಕಾಳ್ಳ ಬಪುದು. ಗರ್ವಿಯೂ ಸ್ವನೀತಿಯವನೂ ಮಡಿದು ಪೊಂದಾಗುತ್ತಿರುವಾಗೈ, ನೀತಿವಂತನು ದೀನಚಾವದ ವಿಶ್ವಾಸಚಿರವಸದ ಮೂಲವಾಗಿ ರಕ್ಷಣೆ ಪೊಂದುತ್ತಾನೆ.

೩. ಮೂರನೆ ಕಾರಣ: ನಿಯಮವು ಕ್ರಿಯೆಯನ್ನಲ್ಲದೆ, ವಿಶ್ವಾಸವನ್ನು ಸರ್ವಥಾ ಅರಿಯದು.

೪. ಇಷ್ಟುವರೆಗೆ ಶಾಪ ಮಾತ್ರವೆ ಪೇಳಿಯದೆ, ವಿಶ್ವಾಸಕ್ಕೆ ಆಶೀರ್ವಾದವು ಯೆಲ್ಲಿಂದ ಬರುತ್ತದೆಂಬದು ಪೇಳಿರುವದಿಲ್ಲಾ. ಅದು ಈಗ ಪೇಳಲಾಗುತ್ತದೆ: ಕ್ರಿಸ್ತನು ನಿಯಮದ ಶಾಪವನ್ನು ತೆಗದು, ಆಶೀರ್ವಾದವನ್ನು ವಿಶ್ವಾಸಕ್ಕೆ ಬರ ಮಾಡಿದ್ದಾನೆ. ಈ ಮಾತಿನಲ್ಲಿ ಇರುವ ಮುಖ್ಯ ಆಲಾಚನೆಗಳು ಯಾವದೆಂದರೆ: ೧) ಕ್ರಿಸ್ತನು ಮರದಲ್ಲಿ ತೂಗುವವನಾಗಿ ದ್ವಿ. ನ್ಯಾ. ೨೧, ೨೩. ಶಾಪವಾದನು, ಕ್ರೂಜೆಯ ಮರಣದಿಂದ ಶಾಪಗ್ರಸ್ತನೆಂದು ಕಾಣಿಸಿಕೊಂಡನು. ಕ್ರಿಸ್ತನು ನಿರ್ಮಲನೂ ಪರಿಶುದ್ಧನೂ ಆಗಿರುವದರಿಂದ, ಶಾಪಕ್ಕೂ ಅದರಿಂದ ಬರ ತಕ್ಕ ಶಿಕ್ಷೆಗೂ ಗುರಿಯಾಗುವದು ನ್ಯಾಯವಲ್ಲಾ. ಆದರೆ ಆತನು ಪಾಪಿಮನುಷ್ಯಸಂತಾನದ ಅಂಗವೂ ಪ್ರತಿ

ಗಲ. ೩, ೧೫—೧೪.

ನಿಧಿಯೂ ಆಗಿ ಬಂದು, ಅವರ ಶ್ರಮಗಳನ್ನು ತಾನಾಗಿ ತನ್ನ ಮೇಲೆ ಪೂರ್ತಿ ಕಾಂಡನು. ಪೀಗಿರಲಾಗಿ ನಿಜಭಾವದ ಪ್ರಕಾರ ಪಾಪವಿಲ್ಲದವನಾಗಿ ಯಾವ ಶಿಕ್ಷೆಗಾದರೂ ವಾಳಗಾಗ ತಕ್ಕವನಲ್ಲವಾದಾಗ್ಯೂ, ಕ್ರೂಜೆಯಲ್ಲಿ ಶಾಪಕ್ಕೂ ದೇವರ ಕೋಪಕ್ಕೂ ವಾಳಗಾಗಿ, ದೇವರ ಶಾಪವಂನೂ ಕೋಪವನ್ನೂ ನಿಜವಾಗಿ ಸಹಿಸಿದನು; ಪೂರ್ತಿಗೆಂದರೆ ಆತನು ಶರೀರದಲ್ಲಿ ಕಠೋರವಾದ ಶ್ರಮಗಳನ್ನೂ, ಅಸಾಧಾರಣವಾಗಿ, ದೇವರು ಕೈ ಬಿಟ್ಟನೆಂದು ಮನಸಿನಲ್ಲಿ ನ್ಯಾಯತೀರ್ಪನ್ನೂ ತಾಳಿದನು. ೨) ಅದನ್ನವನು ನಮಗೋಸ್ಕರವಾಗಿಯೂ ನಮ್ಮ ಪೇಸರಿನಲ್ಲಿಯೂ ನಮ್ಮ ಸ್ಥಳದಲ್ಲಿಯೂ ಸಹಿಸಿದನು. ಮತ್ತಾ. ೨೦, ೨೮. ೨೬, ೨೮. ಲೂಕ. ೨೨, ೧೯. ೧ಕಾರಿ. ೧೧, ೨೪. ಯೋಪೂ. ೬, ೧೭. ೧೦, ೧೧. ೧೫. ೧೧, ೫೧. ರೋಮ. ೫, ೮. ೧೪, ೧೫. ೧ಕಾರಿ. ೧, ೧೩. ೫, ೭. ೧೫, ೫೫. ಗಲ. ೨, ೨೦. ೧ಪೇತ್ರ. ೨, ೨೧. ೧ಯೋಪೂ. ೩, ೧೬. ಆತನು ನಮ್ಮ ಮೇಲೆ ಬರ ತಕ್ಕದ್ದನ್ನು ತಾನೇ ಪೂರ್ತಿ ಕಾಂಡನು ರೋಮ. ೫, ೧೨. ೨ಕಾರಿ. ೫, ೨೧. ೩) ಅದರಿಂದ ಆತನು ನಮ್ಮನ್ನು ಕ್ರಯಕ್ಕೆ ಕಾಂಡು, ವಿಮೋಚಿಸಿ, ನ್ಯಾಯ ಪ್ರಕಾರ ನಾವು ಪೂರ್ತಿ ತಕ್ಕ ಸಮಸ್ತ ಶಿಕ್ಷೆಗೆ ಬಿಡುಗಡೆ ಮಾಡಿದನು. ೪) ಈ ವಿಮೋಚನೆಯನ್ನು ಪೂರ್ತಿಯಾದುವದಕ್ಕೆ ನಮಗೆ ವಿಶ್ವಾಸ ಮಾತ್ರವೇ ಅವಶ್ಯ. ೫) ವಿಶ್ವಾಸಿಗೆ ಪೂರ್ತಿ ಸ ದೈವಿಕ ಜೀವ ಕಾಡುವ ಪರಿಶುದ್ಧಾತ್ಮವು ಶಿಕ್ಕುತ್ತದೆ. ೬) ಇದೇ ಅಬ್ರಹಾಮನಿಗೆ ವಾಗ್ದತ್ತವಾದ ಆಶೀರ್ವಾದ. ಪರಜನರು ಸಹ ಅದನ್ನು ಪೂರ್ತಿಯಾಂದ ಬೇಕೆಂಬದು ದೇವರ ಉದ್ದಿಶ್ಯ. ಈ ಪ್ರಕಾರ ಪರಜನರನ್ನು ಯೆಹೂದರನ್ನೂ ಖೇದ ಮಾಡುವ ನಡುಗೋಡೆಯು ಕೆಡವಿ ಪೂರ್ತಿಕಲಾಯಿತು, ಮತ್ತು ನಾವು ಯೆಲ್ಲರು ಯಾಂದೇ ವಿಶ್ವಾಸಿಸಭೆಯಾಗಿ ಸಮಾನವಾದ ಆತ್ಮವರಗಳನ್ನು ಪೂರ್ತಿಯಾಂದುತ್ತೇವೆ.

೪. ನಿಯಮವು ವಾಗ್ದತ್ತವನು ತೆಗದು ಹಾಕದು. ವ. ೧೫—೧೪.

೧೫. ಸಹೋದರರೇ, ಮನುಷ್ಯನ ಪ್ರಕಾರ ೧) ಮಾತಾಡುತ್ತೇನೆ, ನಿರ ಮಾಡಲ್ಪಟ್ಟ ಮಾನವಂಬಡಿಕೆಯನ್ನು ಮನುಷ್ಯನದಾದರೂ ಯಾರೂ ಹೀನ ಮಾಡುವದೂ ಹೆಚ್ಚು ಮಾಡುವದೂ ಇಲ್ಲ. ೧೬. ಈದರೆ ಅಬ್ರಹಾಮನಿಗೂ, ಅವನ ಬೀಜಕ್ಕೂ ೨), ವಾಗ್ದತ್ತಗಳು ಹೇಳಲ್ಪಟ್ಟವು; ಅನೇಕರನ್ನು ಕುರಿತಂತೆ ಬೀಜಗಳಿಗೂ ೩) ಎಂದಲ್ಲ, ಒಬ್ಬನನ್ನು ಕುರಿತಂತೆ ನಿನ್ನ ಬೀಜಕ್ಕೂ ಎಂದು, ಹೇಳುತ್ತದೆ; ಅವನು ಕ್ರಿಸ್ತನೇ. ೧೭. ಇದನು ಹೇಳುತ್ತೇನೆ—ದೇವರಿಂದ ಕ್ರಿಸ್ತನಿಗಾಗಿ ಮೊದಲು ನಿರ ಮಾಡಲ್ಪಟ್ಟ ಒಡಂಬಡಿಕೆಯಂನು ನಾನೂರ ಮೂವತ್ತು ೪) ವರುಷಗಳ ಮೇಲೆ ಉಂಟಾದ ನ್ಯಾಯ ಪ್ರಮಾಣವು, ವಾಗ್ದತ್ತವನು ತೆಗೆದು ಹಾಕುವದಕ್ಕಾಗಿ, ಅನಿರ ಮಾಡದು. ೧೮. ಯಾಕಂದರೆ ಬಾಧ್ಯವು ೫) ನ್ಯಾಯಪ್ರಮಾಣದಿಂದಾದರೆ, ಇನ್ನು ವಾಗ್ದತ್ತದಿಂದಲ್ಲ; ಈದರೆ ಅಬ್ರಹಾಮನಿಗೆ ವಾಗ್ದತ್ತದಿಂದಲೇ ದೇವರು ದಯ ಮಾಡಿದನು.

ಗ್ರಹಿಸ ಕಷ್ಟವಾದ ಈ ವಾಕ್ಯಗಳ ಸಂಕ್ಷೇಪಾರ್ಥವೇನೆಂದರೆ, ಅಬ್ರಹಾಮನಿಗೆ ಕೊಟ್ಟ ವಾಗ್ದತ್ತಗಳು ನಿಜವಾಗಿ ಕ್ರಿಸ್ತನಲ್ಲಿ ಈಡೇರಿದವು, ಮಧ್ಯದಲ್ಲಿ ಬಂದ ನಿಯಮವು ವಾಗ್ದತ್ತದಲ್ಲಿ ವೊಂದಿಷ್ಟಾದರೂ ಅಲ್ಲಾಡಿಸ

ಆರದು. ಈ ಮಾತಿನಿಂದ ಪೌಲನು ದೈವಿಕವಾದ ನಿಯಮವನ್ನು, ಯೇನೂ ಸೊಡವೆ ಇಲ್ಲದೆ, ಅಜ್ಞೆಗೆ ಮಾಡಲಾಗದೆಂತಲೂ, ನಿಯಮಕ್ಕೆ ಅಧೀನವಾಗದೆ ವಾಗ್ದತ್ತದಲ್ಲಿ ಪಾಲು ಹೊಂದ ಕೂಡದೆಂತಲೂ ಹೇಳುವವರ ಕಕ್ಷೆಗೆ ಯೆದುರು ನಿಲ್ಲುತ್ತಾನೆ. ಪೌಲನು ಹೇಳುವದೇನೆಂದರೆ: ಹಾಗಲ್ಲ, ವಾಗ್ದತ್ತವು ಮುಂಚೆಯೆ ಇತ್ತು, ಅದು ಆರಂಭದಿಂದಲೆ ನಿಯಮದ ಅವಲಂಬನದಿಂದಿರಲಿಲ್ಲ. ಪೌಲನ ಆಲೋಚನೆಗಳ ಕ್ರಮ ಯೇನೆಂದರೆ: ಅ) ಮಾನುಷ ಮರಣಪತ್ರ ಸಹಾ ಸ್ಥಿರವಾಗಿರುತ್ತದೆ; ಇ) ಹಾಗಾದರೆ ದೈವಿಕವಾದ್ದು ಯೆಷ್ಟೋ ಹೆಚ್ಚು; ಉ) ಅದರ ವಾಕ್ಯಗಳ ವೊಳ ಅರ್ಥವನ್ನು ಚನ್ನಾಗಿ ತಿಳಿಕೊಂಡರೆ, ಅದು ಕ್ರಿಸ್ತನ ವಿಷಯವಾಗಿಯೂ ಆತನ ಸಂಗಡ ವೊಂದೇಯಾಗಿರುವ ವಿಶ್ವಾಸಿಗಳೆಂಬ ಬೀಜದ ವಿಷಯದಲ್ಲಿಯೂ ಹೇಳಿ ಇರುತ್ತದೆಂದು ಕಾಣುವದು; ಎ) ಬಹು ಕಾಲದ ಮೇಲೆ ಬಂದ ನಿಯಮವು ಆ ಮೂಲ ವಾಗ್ದತ್ತವನ್ನು ತೆಗದು ಹಾಕಲಾರದು.

೧. ಅಂದರೆ ಮಾನುಷ ಅವಸ್ಥೆಗಳಿಂದ ತಕ್ಕಾಂಡ ಉಪಮೆಯನ್ನು ಪೇಳುತ್ತೇನೆ; ಆದರೂ ಅದು ಪೂರ್ಣಾರ್ಥವನ್ನು ಸರಿಯಾಗಿ ತಿಳಿಸುವದಿಲ್ಲಾ.

೨. ಉತ್ಪ. ೨೨, ೧೮. ಅಬ್ರಹಾಮನಿಗೂ, ೨೬, ೪. ಇಸಾಕನಿಗೂ: ನಿನ್ನ ಬೀಜದಿಂದ—೨೮, ೪. ಯಾಕೋಬನಿಗೆ ನಿನ್ನಿಂದಲೂ ನಿನ್ನ ಬೀಜದಿಂದಲೂ ಭೂಮಿಯ ಯೆಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವವು ಯೆಂದು ವಾಗ್ದತ್ತವಾಯಿತು. ನಿನ್ನಿಂದ ಯೆಂದು ಯಾಕೋಬನಿಗೆ ಮಾತ್ರವೇ ಸ್ಪಷ್ಟವಾಗಿ ಪೇಳಿ ಇದ್ದರೂ, ಇದು ಸಹಾ ಅಬ್ರಹಾಮನಿಗೂ ಇಸಾಕನಿಗೂ ಕಾಟ್ಟಿ ಅದೇ ವಾಂದೇ ವಾಗ್ದತ್ತ ಆಗಿರುವ ಕಾರಣ, "ನಿನಿಂದ" ಯೆಂಬ ಮಾತು ಅಬ್ರಹಾಮನ ವಿಷಯದಲ್ಲಿಯೂ ಪೇಳ ಬಹುದು.

೩. ಉತ್ಪತ್ತಿಯ ಪುಸ್ತಕದಲ್ಲಿಯೆ ಬಹುವಚನವಾಗಿ ಬಾರದಂಥಾ ಶಬ್ದವು ಬೇಕೆಂದು ಪ್ರಯೋಗಿಸಿ ಅದೆ. ಅದರಿಂದ ಪರಿಶುದ್ಧಾತ್ಮವು ಅಪಾಸ್ತಲನಿಗೆ ಕಾಟ್ಟಿ ಪ್ರಕಾಶೀಕರಣದಿಂದ ಸೂಚಿಸುವದೇನೆಂದರೆ: ವಾಗ್ದತ್ತವು ಪೂರ್ವಾರ್ ಕೆತ್ತೂರರಲ್ಲಿ ಅಬ್ರಹಾಮನಿಗೆ ಪುಟ್ಟಿದ ಮಕ್ಕಳಂಥವರಿಗಲ್ಲ, ಆಯ್ದುಕಾಂಡ ವಾಂದೇ ಕುಲಕ್ಕೆ, ಮತ್ತಿದರಲ್ಲಿ ಯೇಕ ಪ್ರಥಮ ಫಲವಾಗಿರುವ ಕ್ರಿಸ್ತನಿಗೂ ತಾನೇ ತಲೆಯಾಗಿ ತನ್ನ ಶರೀರವಾಗಿ ಮಾಯಿ ಕಾಂಡ ವಿಶ್ವಾಸವುಳ್ಳ ಸಭೆಗೂ ಮಾತ್ರವೇ ಬರುತ್ತದೆ.

೪. ಸಮವಾಗಿ ಲೆಖ್ಖ ಮಾಡಿದರೆ ಅಬ್ರಹಾಮನಿಗೆ ಆದ ವಾಗ್ದತ್ತದಿಂದ ಯಾಕೋಬನು ಯಾಸೇಫನ ಬಳಿಗೆ ಬಂದ ಕಾಲದ ಪರಿಯಂತ ೨೧೫ ವರುಷ, ಅಂದಿನಿಂದ ಇಸ್ರಾಯೇಲ ಮಕ್ಕಳು ಕಾನಾನ್ ದೇಶಕ್ಕೆ ಪೂರಾಟು ಪೂರಾಗುವ ಪರಿಯಂತ ಪೂರಾ. ೧೫, ೪೦. ವಾಸವಾಗಿದ್ದ ಕಾಲ ೪೩೦ ವರುಷ, ಹೀಗೆ ನಿಜವಾಗಿ ೬೪೫ ವರುಷ. ಆದರೂ ಪೌಲನು ಮೋಶೆಯ ಪುಸ್ತಕದಲ್ಲಿ ೪೩೦ ವರುಷದ ಸಂಗತಿಯು ಸ್ಪಷ್ಟವಾಗಿ ಪೇಳಿರುವದರಿಂದಲೂ, ಇಂತಿಷ್ಟೇ ಯೆಂದು ಇಲ್ಲಿ ಪೇಳುವದು ಅವಶ್ಯವಾಗಿರದೆ ಬಹು ಕಾಲದ ಮೇಲೆ ಯೆಂದು ತಾತ್ಪರಿಸುವದಕ್ಕೆ ೪೩೦ ಸಾಕಾಗಿರುವದರಿಂದಲೂ, ಮೋಶೆಯ ಪುಸ್ತಕಗಳನ್ನು ವಾದುವವರೆಲ್ಲರಿಗೆ ತಿಳಿದಿರುವ ಸಂಖ್ಯೆಯನ್ನು ಮಾತ್ರವೇ ತಿಳಿಸಿ, ೪೩೦ ವರುಷದ ಮೇಲೆ ಯೆಂದು ಪೇಳುತ್ತಾನೆ.

೫. ಅಪಾಸ್ತಲನು ಆಶೀರ್ವಾದವೆಂದು ಪೇಳಿದ್ದಕ್ಕೆ ಇಲ್ಲಿ ಬಾಧ್ಯವೆಂದು ಪೇಳುವದು ಯಾಕೆಂದರೆ, ಆ ಮಾತಿನಿಂದ ಯಾಕೃತಾನುಸಾರವಾಗಿ ಅಲ್ಲವಾದರೂ, ನ್ಯಾಯಪ್ರಕಾರವಾಗಿಯೆ ಕ್ರಿಸ್ತನ ಆಶೀರ್ವಾದವು ನಮಗೆ ಬರುತ್ತದೆಂದು ಬಹು ಯಾಕೃವಾಗಿ ತಿಳಿಯ ಬರುತ್ತದೆ.

ಗಲ. ೩, ೧೯. ೨೦.

ಅಪೊಸ್ತಲನು ಯೆಹೂದರು ನೆನಸಿದ ಪ್ರಕಾರ, ದೇವರ ನೀತಿಯಾಗಲಿ, ಅಬ್ರಹಾಮನ ಆಶೀರ್ವಾದವಾಗಲಿ, ಹೀಗೆ ಇಸ್ರಯೇಲನ ಸಮಸ್ತ ಮಾನ್ಯತೆಯು ನಿಯಮದಿಂದಲ್ಲಾ, ಯೆಷ್ಟೋ ಮುಂಚೆ ಕೊಟ್ಟಿರುವ ವಾಗ್ದತ್ತದಿಂದಲೆ ಬರ ಬೇಕೆಂದು ತೋರಿಸಿ ಕೊಟ್ಟು ಆಯಿತು. ಆಗ್ಯೆ ತನ್ನಷ್ಟಕ್ಕೆ ವೊಂದು ಪ್ರಶ್ನೆ ಹುಟ್ಟುತ್ತವೆ: ಹಾಗಾದರೆ ನಿಯಮವನ್ನು ಕೊಟ್ಟದ್ದೇ ಯಾಕೆ? ಇದಕ್ಕೆ ಪೌಲನು ಉತ್ತರ ಕೊಟ್ಟು, ಈ ದೈವಿಕ ಕಾರ್ಯವಾಗಿರುವ ನಿಯಮವನ್ನು ಅವನು ಗಣ್ಯ ಮಾಡುವದಿಲ್ಲಾ ಯೆಂಬ ಅಪವಾದವನ್ನು ನಿವಾರಿಸುವದು ಅವಶ್ಯವಾಯಿತು. ಇಲ್ಲಿ ಪ್ರತಿ ವಾಕ್ಯವನ್ನು ಟೀಕಿಸುವದು ದುರ್ಲಭವಾಗಿದ್ದರೂ, ವೊಟ್ಟಾರೆ ಅಭಿಪ್ರಾಯವು ಯೇನೆಂದರೆ: ಅ) ನಿಯಮವು ಮಹಾ ಘನವುಳ್ಳದ್ದು. ಕೇವಲ ಸ್ಥೂಲವಾದ ಅಸಹ್ಯ ಪಾಪಗಳನ್ನು ಸ. ೨, ೧೫. ತಡಿಸಿ, ಅತಿಕ್ರಮಿಸುವವರಲ್ಲಿ ಅವರ ಅಪರಾಧದ ಬೋಧವನ್ನು ಹುಟ್ಟಿಸುವದರಿಂದ ಕ್ರಿಸ್ತನಿಗೋಸ್ಕರ ಉಪಾಧ್ಯಾಯನಾಗಲಿಕ್ಕೆ ತಕ್ಕದ್ದಾಯಿತು. ಇದಲ್ಲದೆ ಅದು ದೂತರ ಸೇವೆಯಿಂದಲೂ, ದೇವರಿಗೂ ಜನಾಂಗಕ್ಕೂ ಮಧ್ಯಸ್ಥನಾಗಿದ್ದ ದೇವರು ಕಳುಹಿಸಿದ ಮಹಾಪುರುಷನಾದ ಮೋಶೆಯಿಂದಲೂ ವಾಗ್ದತ್ತವನ್ನು ಸಹಾ ಕೊಟ್ಟ ಅದೇ ವೊಬ್ಬನೆ ದೇವರು ನಿಯಮವನ್ನು ಕೊಟ್ಟನು. ವ. ೧೯. ೨೦. ಇ) ಆದರೂ ಅದು ನೀತಿ ಪಡಿಸಲಾರದು ವ. ೨೧. ೨೨. ಉ) ಅದು ಬರೇ ಸನ್ನಾಹಕರವಾದ ಆಡಿಳತೆಯಾಗಿತ್ತು ವ. ೨೩—೨೫.

೧೯. ಹಾಗಾದರೆ ನ್ಯಾಯಪ್ರಮಾಣವು ಯಾಕೆ? ವಾಗ್ದತ್ತಹೊಂದಿದ ಬೀಜವು ಬರುವ ಪರ್ಯಂತ ೧), ದೂತರ ಮುಖಾಂತರ ಮಧ್ಯಸ್ಥನ ೨) ಕೈಯಿಂದ ನೇಮಿಸಲ್ಪಟ್ಟು ೩), ಮೀರುವಿಕೆಗಳ ೪) ನಿಮಿತ್ತ ಶೇರಿಸಲ್ಪಟ್ಟಿತು. ೨೦. ಆದರೆ ಮಧ್ಯಸ್ಥನು ವೊಬ್ಬನವನಲ್ಲ ೫), ಆದರೆ ದೇವರು ವೊಬ್ಬನೇ.

೧. ಯಾರ ಪರಿಮುಖವಾಗಿ ಭೂಮಿಯ ಜನಾಂಗಗಳು ಆಶೀರ್ವದಿಸಲ್ಪಡುವವೆಂದು ಪೇಳಿ ಆತ್ತಾ, ಆ ವಾಗ್ದತ್ತವನ್ನು ಪೌಲಾಂದಿದ ನಿಜ ಕಾಳಿಂಗಮರ್ದನನಾಗಿರುವ ಅಬ್ರಪೌಮನ ವಿಕಬೀಜವಾದ ಕ್ರಿಸ್ತನಿಗಾಸ್ಕರ ನಿಯಮವು ಇಸ್ರಯೇಲರಲ್ಲಿ ನಿಜವಾಗಿ ಸನ್ನಾಪಕರ ಆಡಿಳತೆ ಆಯಿತು. ಅಂಕೆ ಳನಾಡು.

೨. ಇಲ್ಲಿ ಮಧ್ಯಸ್ಥನೆಂದರೆ ಕ್ರಿಸ್ತನಲ್ಲಾ, ಪಳೆ ವಾಡಂಬಡಿಕೆಯ ಮಧ್ಯಸ್ಥನಾದ ಮೋಶೆಯು. ಬೇರೆ ಕಡೆಯಲ್ಲಿ ಕ್ರಿಸ್ತನಿಗೆ ಮಾತ್ರವೆ ಈ ಪೆಸರು ಬರುತ್ತದೆಂಬದೂ ೧ ತಿಮೊ. ೨, ೫. ಇಬ್ರಿ. ೮, ೬. ೯, ೧೫. ೧೨, ೨೪. ಆತನು ಮನುಷ್ಯರಿಗಾದ ದೇವರ ಸಮಸ್ತ ಪ್ರಕಟಣೆಗಳ ಮಧ್ಯಸ್ಥನೆಂಬದೂ ಯೋಪೌ. ೧. ೧ ಕಾರಿ. ೧೦, ೪. ಇಬ್ರಿ. ೩, ೧—೩. ಸರಿ; ಆದರೆ ಇಲ್ಲಿ ಈ ಅಭಿಪ್ರಾಯ ಸಮ ಬೀಳದು; ಈ ಅಭಿಪ್ರಾಯ ಮಾಡಿ ಕಾಂಡರೆ, ಪಳೆ ವಾಡಂಬಡಿಕೆಯ ವಿಷಯದಲ್ಲಿ ಯೇನಾಂದೂ ವಿಶೇಷ ಪೇಳಿದ ಪೌಲಾಗೆ ಆಗಲಿಕ್ಕಿಲ್ಲಾ. ಇದರ ಪೌಲಾರತು ಪೌಲನು ಇಲ್ಲಿ, ಮಧ್ಯಸ್ಥನೆಂದರೆ ಕ್ರಿಸ್ತನೆಂದೆಳಿಸುತ್ತಿದ್ದರೆ, ನಿಶ್ಚಯಾರ್ಥದ ಉಪಪದವನ್ನು ಬರೆಯುತ್ತಿದ್ದನು. ಮತ್ತು ಮಧ್ಯಸ್ಥನ ತರುವಾಯ ದೂತರ ಮಾತು ಬರುತ್ತಿದ್ದಿಲ್ಲಾ. ಪುತ್ತು ಕಟ್ಟಳೆಗಳನ್ನು ದೇವರು ತಾನೇ ಜನಾಂಗಕ್ಕೆ ಕಾಟ್ಟದ್ದು ಪೌಲಾದು; ಆದರೆ ತರುವಾಯ ನೇಮಿಸಿದ ಕಟ್ಟು ಕಟ್ಟಳೆಗಳಿಗೆ ದೇವರಿಗೂ ಜನಾಂಗಕ್ಕೂ ಮೋಶೆಯು ಮಧ್ಯಸ್ಥನಾಗಿದ್ದನು. ಯಾಕಂದರೆ ಪೌಲಾರ. ೨೦, ೧೯. ನಾವು ಸಾಯದ ಪೌಲಾಗೆ ದೇವರು ನಮ್ಮ ಸಂಗಡ ಮಾತಾಡದೆ ಇರಲಿ ಎಂತ ಪೇಳಿದರೆಂದು ಬರದದೆ.

ಗಲ. ೩, ೨೧. ೨೨.

೩. ನಿಯಮವು ಅನೇಕ ದೂತಗಣಗಳ ಮಧ್ಯದಾಳಿಂದ ಕಾಡಲಾಯಿತಾದ ಕಾರಣ, ದ್ವಿ. ನ್ಯಾ. ೩೩, ೨. ಇಬ್ರಿ. ೨, ೨. ಅದು ಅತಿ ಮಹಿಮೆಯುಳ್ಳದ್ದಾಯಿತು. ಈ ಸಂಗತಿಯನ್ನು ಅಪಾಸ್ತಲರ ಕಾಲದ ಯೆಹೂದರು ಬಹಳ ಸರ್ವಿ ಗರ್ವದಿಂದ ಪೋಳುತ್ತಾ ಇದ್ದರು. ಸ್ತೆಫನನು ಅಪಾ. ಕ್ರಿ. ೭, ೩೮. ಅದೇ ಕಾರಣದಿಂದ ಅವರ ಅಪರಾಧವು ಅಧಿಕವೆಂದು ಪೇಳಿದನು.

೪. ಅಂದರೆ ಪಾಪಸ್ವಭಾವದ ಫಾರ ಕರ್ಮಗಳನ್ನು ತಡಿಸಿ, ಪರಜನರಲ್ಲಿ ರಾಮಿಯಾರ ಪತ್ರಿಕೆಯ ೧೫ನೆಯ ಪ್ರಕಾರ ಕಾಣಬಂದ ಪಾತಕಗಳಲ್ಲಿ ಬೀಳದ ಹಾಗೆ ಯೆಹೂದರನ್ನು ಕಾಪಾಡುವದಕ್ಕೂ, ಮತ್ತು ಪಾಪವು ದೇವರಿಗೆ ವಿರೋಧವಾದ ಮಹಾ ಶತ್ರುತ್ವವೆಂದು ತಿಳಿಯ ಬರುವ ಹಾಗೆ ಮಾಡುವದಕ್ಕೂ ಯೆಂಬ ಅರ್ಥ. ಹಾಗೆಂದರೆ ನಿಯಮವಿಲ್ಲದವರಲ್ಲಿ ಪಾಪವು ಯೆಣಿಸಲಾಗುವದಿಲ್ಲಾ ರೋಮ. ೫, ೧೩.; ಆದ್ದರಿಂದ ವಿಮೋಚಕನು ಬೇಕೆಂಬ ಬಯಕೆ ಸಹಾ ಅವರಲ್ಲಿ ಹುಟ್ಟುವದಿಲ್ಲಾ.

೫. ಇಲ್ಲಿರುವ ಸಣ್ಣ ವಾಕ್ಯದ ಅರ್ಥವು ಮರೆಯಾಗಿರುವದರಿಂದ, ಅದಕ್ಕೆ ಈ ವರೆಗೆ ಶುಮಾರು ೨೫೦ ಅರ್ಥ ಮಾಡಿದ್ದಾರೆ. ಆದರೆ ಇಲ್ಲಿ ಬರದ ಶಬ್ದಗಳು ಸ್ಪಷ್ಟವಾಗಿರುವದರಿಂದಲೂ, ಬೇರೆ ಬೇರೆ ಪ್ರಕಾರವಾಗಿ ಭಾಷಾಂತರವಾಗ ಕೂಡದೆ ಇರುವದರಿಂದಲೂ ವಿದ್ಯೆ ಇಲ್ಲದವನು ಸಹಾ ದಿವ್ಯ ವಾಕ್ಯವನ್ನು ಶೋಧಿಸಿ ಅರ್ಥವನ್ನು ದೃಢ ಮಾಡಿ ಕಾಳ್ಳಬಹುದು. ಮುಖ್ಯ ಪ್ರಶ್ನೆ ಯೇನಂದರೆ: ನಿಯಮವು ಪ್ರಶಸ್ತವೆಂದು ಅಪಾಸ್ತಲನ ಅಭಿಪ್ರಾಯವಾ, ಸುವಾರ್ತೆಗಿಂತ ಅದು ಅಲ್ಪವೆಂಬ ಕಾರಣವನ್ನು ಪೇಳುತ್ತಾನಾ? ಮೊದಲನೇ ಅರ್ಥ ಸರಿಯಾಗಿದ್ದರೆ, ಅಭಿಪ್ರಾಯವೇನಂದರೆ: ಮಧ್ಯಸ್ಥನು ವಾಂದೇ ಪಕ್ಷದವನಲ್ಲ; ಯಾರಿಗೆ ಮಧ್ಯಸ್ಥನಾಗಿದ್ದಾನಾ, ಆ ಉಭಯ ಪಕ್ಷದವರ ಕಡೆಯಿಂದಲೂ ಅಧಿಕಾರ ಪಡಾಂದಿರ ಬೇಕು. ಆದ್ದರಿಂದ ಮೋಶೆಯು ಯೆಹೂದ ಜನಾಂಗದವನಾದ ವಾಬ್ಬನೆಂದು ಮಾತ್ರವಲ್ಲ, ದೇವರ ನಿಯೋಗಿ ಯೆಂದೂ ಯೆಣಿಸ ತಕ್ಕದ್ದು: ಮತ್ತು ದೇವರು ಯಾವಾಗಲೂ ವಾಬ್ಬನೇ, ನಿಯಮವನ್ನೂ ಅದಕ್ಕಿಂತ ಮುಂಚೆ ವಾಗ್ದತ್ತವನ್ನೂ ಕಾಟ್ಟವನು ವಾಬ್ಬನೇ. ಆತನು ಯಾವಾಗಲೂ ಅದೇ ದಯಾಚರಿತನಾದ ಬಲಾಢ್ಯ ಮಹಿಮೆಯುಳ್ಳ ದೇವರು; ಆದಕಾರಣ ಆತನ ನಿಯೋಗಿಗೂ ಆತನು ಕಾಟ್ಟ ನಿಯಮಕ್ಕೂ ಇರುವ ಮಹಿಮೆ ದಾಡ್ಡದು. —ಯೆರಡನೇ ಅರ್ಥಕ್ಕನುಸಾರವಾಗಿ ಯೇನು ತಿಳಿಯ ಬೇಕಂದರೆ: ಮೋಶೆಯು ನ್ಯಾಯಪ್ರಮಾಣಕ್ಕೆ ಮಧ್ಯಸ್ಥನಾಗಿದ್ದನು. ಆದರೆ ಮಧ್ಯಸ್ಥನು ಅವಶ್ಯವಿರುವಲ್ಲಿ ಖೇದವೂ ಪ್ರತಿಪಕ್ಷಗಳೂ ಬೇಕು; ಪೀಗಿರಲಾಗಿ ಮೋಶೆಯ ಮಧ್ಯಸ್ಥಾದ್ಯೋಗದಿಂದ ಖೇದವೂ ದೇವರ ಅಸಾಮಿಪಾಪವೂ ಅನುಮಾನವಾಗುತ್ತದೆ. ದೇವರಿಗೆ ತನಗಾಗಿ ಸ್ಕರ ಮಧ್ಯಸ್ಥನು ಬೇಕಾಗಿರಲಿಲ್ಲಾ. ಹಾಗಾದರೆ ನಿಯಮವನ್ನು ವಿಧಿಸುವಾಗಲೆ, ದೇವರಿಗೂ ಮನುಷ್ಯರಿಗೂ ಖೇದವಿತ್ತೆಂಬದು ನಿಶ್ಚಯವಾಯಿತು! ಪೀಗಿದ್ದ ಮೇಲೆ ನಿಯಮದಿಂದ ದೇವರ ಸಂಗಡ ಅನ್ಯೋನ್ಯವಾದೀತೆಂದು, ಯಾರಾದರೂ ನಿರೀಕ್ಷಿಸ ಬಹುದೇ! —ನಿಯಮದಲ್ಲಿ ಖೇದ ಕಾಣುತ್ತದೆ; ಆದರೆ ದೇವರಿಗೂ, ಆತನು ಮುಂಚೆ ಮಾಡಿದ ವಾಗ್ದತ್ತಕ್ಕೂ ಖೇದವೆಂಬದು ಆಗದು.

೨೧. ಹಾಗಾದರೆ ನ್ಯಾಯಪ್ರಮಾಣವು ದೇವರ ವಾಗ್ದತ್ತಗಳಿಗೆ ವಿರೋಧವಾ೧)? ಆಗದು; ಬದುಕಿಸ ಬಲವುಳ್ಳ ನ್ಯಾಯಪ್ರಮಾಣವು ಕಾಡಲ್ಪಟ್ಟಿದ್ದರೆ, ನಿಜವಾಗಿ ನ್ಯಾಯಪ್ರಮಾಣದಿಂದ ನೀತಿ ಉಂಟಾಗಿರುವದು. ೨೨. ಆದರೆ ೨) ಯೇಸು ಕ್ರಿಸ್ತನ ವಿಶ್ವಾಸದಿಂದಾದ ವಾಗ್ದತ್ತವು ವಿಶ್ವಾಸಿಸುವವರಿಗೆ ಕಾಡಲ್ಪಡುವ ಹಾಗೆ, ಬರಹವು ಎಲ್ಲವನ್ನು ಏಕವಾಗಿ ಪಾಪದ ಕೆಳಗೆ ಮುಚ್ಚಿ ಹಾ[illegible]

೧. ನಿಯಮದಲ್ಲಿ ಭೇದವೂ, ವಾಗ್ದತ್ತದಲ್ಲಿ ಯೇ ಕತ್ವವೂ ಇದ್ದರೂ, ದೇವರು ವಾಗ್ದತ್ತವನ್ನು ಕಾಟ್ಟಿ ಮೇಲೆ ನಿಯಮವನ್ನು ಕಾಟ್ಟಿದ್ದು ಪರಸ್ಪರ ವಿರೋಧ ವಾದದ್ದೂ, ಅನವಶ್ಯವಾದದ್ದೂ ಅಲ್ಲ. ಯೆರಡರ ಫಲವೂ ವಾಂದೇಯಾಗಿರುತ್ತಿದ್ದರೆ, ನಿಯಮವು ಅದ ನ್ನು ಮಾಡುವದಕ್ಕೆ ಶಕ್ತಿಯನ್ನು ಕಾಟ್ಟು, ಈ ಪ್ರಕಾರ ನೀತಿಯನ್ನು ಸಫಾ ಕೈಗೂಡಿ ಬರ ಮಾಡುತ್ತಿದ್ದರೆ, ಆ ಮಾತಿಗೆ ಆಧಾರವಾಗ ಬಹುದಿತ್ತು.

೨. ಆದರೆ ನಿಯಮವು ನೀತಿಯನ್ನೂ ಜೀವವನ್ನೂ ಯೆಂದಿಗೂ ಕಾಡಲರಿಯದಲ್ಲದೆ, ಪಾಪ ಶಾಪಗಳ ತಿಳಿವಿಕೆಯನ್ನು ತಂದು, ವಿಶ್ವಾಸದ ಪೂರ್ತಿ ಬೇರೆ ದಿಕ್ಕು ಕಾಣದ ಪೂರಾಗೆ ಮಾಡುತ್ತದೆ. ಈ ಪ್ರಕಾರ ಬದುಕಿಸಿ, ಚಾಗ್ಯ ಪಡಿಸುವ ಕ್ರಿಸ್ತವಿಶ್ವಾಸದ ಕಡೆಗೆ ನಿಯಮವು ಮನುಷ್ಯರನ್ನು ನಡಿಸಿ, ವಾಗ್ದತ್ತವನ್ನು ಸ್ಥಿರ ಪಡಿಸುತ್ತದೆ. ಆದರೆ ನಿಯಮ ತಾನೇ ಮನುಷ್ಯರ ನ್ನು ಚಾಗ್ಯ ಪಡಿಸಲಾರದು.

೨೩. ಆದರೆ ವಿಶ್ವಾಸವು ೧) ಬರುವದಕ್ಕಿಂತ ಮುಂಚೆ, (ಪ್ರಕಟವಾಗಲಿರುವ ೨), ವಿಶ್ವಾಸಕ್ಕಾಗಿ ಮುಚ್ಚಲ್ಪಟ್ಟು ೩), ನ್ಯಾಯಪ್ರಮಾಣದ ಕೆಳಗೆ ಕಾಯಲ್ಪಡುವವರಾ ಗಿದ್ದೆವು. ೨೪. ಹೀಗಿರಲಾಗಿ ನಾವು ವಿಶ್ವಾಸದಿಂದ ನೀತಿನಿರ್ಣಯ ಪಡುವ ಹಾಗೆ, ನ್ಯಾಯಪ್ರಮಾಣವು ನಮ್ಮನ್ನು ಕ್ರಿಸ್ತನಿಗೆ ಶರುವ ಉಪಾಧ್ಯನಾಗಿತ್ತು ೪).

೧. ವಿಶ್ವಾಸದ ಗುರಿಯಾಗಿರುವ ಯೇಸುವು ಬರು ವ ಮುಂಚೆ ಯೆಂಬ ಅರ್ಥ.

೨. ವಿಶ್ವಾಸವು ದೇವರ ಆಡಳಿತೆಯ ಅಂತ್ಯವಾಗಿ ರುತ್ತದೆ. ಇದಕ್ಕೆ ಮುಂಚೆ ನಿಯಮಾಧೀನಸ್ಥಿತಿಯು ಅವಶ್ಯವಾಯಿತು.

೩. ಕೈಕಾಳ್ಳ ದುರ್ಲಭವಾಗಿರುವ ನಿಯಮಕ್ಕಾಳ ಗಾದ ಬಂಧನ ಬಲಾತ್ಕಾರಗಳ ಅವಸ್ಥೆಯು ಇಲ್ಲಿ ಕಾಣಿಸಿ ಅದೆ. ಆದರೆ ಅದೇ ನಿಯಮವು ತನಗೆ ವಾಳಗಾದವರನ್ನು ಅತಿರೇಕ ಪಾಪಗಳಾಳಗೆ ಬೀಳದ ಪೂರಾಗೆ ಕಾಪಾಡಿತು. ಪಾಪಿಗಳಿಗೆ ನ್ಯಾಯತೀರಿಸು ವ ನಿಯಮದ ಅಧಿಕಾರಕ್ಕೆ ವಾಳಗಾಗಿದ್ದ ಯೆಹೂದ ರು ಆಗ್ಗೇನಿರ್ಣಯಕ್ಕೆ ತಪ್ಪಿಸುವ ಮುಂದಿನ ರಕ್ಷಣೆಯ ಅಪೇಕ್ಷೆಯನ್ನು ಬಿಡದೆ ಇರುವದಲ್ಲದೆ ಇಚ್ಛಾನುಸಾ ರವಾಗಿ ಪಾಪ ಮಾಡುವದಕ್ಕೆ ಪೆದರುತ್ತಾ ಇದ್ದರು.

೪. ನಿಯಮವು ಮನುಷ್ಯನಲ್ಲಿ ಪಾಪದ ತಿಳಿವಿಕೆ ಯನ್ನೂ ದೇವರ ಕೃಪೆಯ ಬಯಕೆಯನ್ನೂ ಪುಟ್ಟಿಸು ವದರಿಂದ, ಅದಕ್ಕೆ ಉಪಾಧ್ಯಾಯನೆಂಬ ಪೆಸರು ಬಂ ತು. ಅದೇ ಪೆಸರಿನಿಂದಲೆ ಅದು ಸದಾಕಾಲ ನಿಲ್ಲ ತಕ್ಕದ್ದಲ್ಲವೆಂಬದು ಸಫಾ ತಿಳಿಯ ಬರುತ್ತದೆ.

ಇಲ್ಲಿ ಹೇಳಿದ್ದೆಲ್ಲಾ, ಯೆಷ್ಟು ಕಟ್ಟು ಕಟ್ಟಳೆಗಳು ಇದ್ದರೂ, ನಿಯಮವನ್ನು ನಿಜವಾಗಿ ಕೈಕೊಳ್ಳುವ ದಕ್ಕೂ ಕೈಕೊಂಡು ರಕ್ಷಣೆಯನ್ನು ಪಡಕೊಳ್ಳುವದಕ್ಕೂ ಶಕ್ತವಾಗದೇ ಹೋದಂಥಾ, ಮೋಶೆಯಿಂದ ಕ್ರಿಸ್ತನ ವರೆಗೆ ಇದ್ದ ಇಸ್ರಯೇಲಿನವರ ಸ್ಥಿತಿಗೆ ಮಾತ್ರವೆ ವೊಪ್ಪುವದೆಂದು ನೆನಸಲಾಗದು; ನಿಯಮದ ಭೀ ಷಣದಿಂದಲೂ ಮನಸ್ಸಾಕ್ಷಿಯ ದಂಡದಿಂದಲೂ ರಕ್ಷಕನು ಬೇಕೆಂಬ ಬಯಕೆಗೂ ವಿಶ್ವಾಸಕ್ಕೂ ಬರ ತಕ್ಕ ಪ್ರತಿ ಮನುಷ್ಯನಿಗೆ ಇಂದಿನ ವರೆಗೂ ಅದೇ ಪ್ರಕಾರವಾಗುತ್ತವೆ. ನಿಯಮದ ಅಧಿಕಾರದ ಕಾಲದಲ್ಲಿಯೂ ನಿಜವಾದ ಆತ್ಮಭಾವದ ಅಬ್ರಹಾಮನ ಮಕ್ಕಳಿಗೆ ವಿಶ್ವಾಸವೂ ವಿಶ್ವಾಸನೀತಿಯೂ ರೋಮ. ೪. ಇಬ್ರಿ. ೧೧. ಇತ್ತು. ಮತ್ತು ಹೊಸ ವೊಡಂಬಡಿಕೆಯ ಕೃಪಾಧಿಕಾರಕಾಲದಲ್ಲಿಯೂ ಪ್ರತಿ ಭಕ್ತನು ನಿಯಮದಂಡವನ್ನು ಸಹಾ ಅನುಭವಿಸ ಬೇಕು. ಲುಥರನು ಹೇಳುವದೇನಂದರೆ: "ಈ ಮಾತು ಆ ಕಾಲಕ್ಕೆ ಮಾತ್ರವಲ್ಲಾ, ನಿಯಮವೂ ಕೃಪೆಯೂ ಯೆರಡೂ ವೊಬ್ಬೊಬ್ಬ ವಿಶ್ವಾಸಿಯಲ್ಲಿ ನಡಿಸುತ್ತಾ ಇರುವ ಕಾರ್ಯಕ್ಕೂ ವೊ

ಪ್ರತ್ತದೆಂದು ತಿಳಿಕೊ. ಕ್ರಿಸ್ತನು ಬಂದು, ನಿಯಮವನ್ನು ತೆಗದು, ಬಿಡುಗಡೆಯನ್ನೂ ನಿತ್ಯಜೀವವನ್ನೂ ಬೆಳಕಿಗೆ ತಂದ ಚರಿತ್ರದ ಪ್ರಕಾರ ಪೂರ್ವಕಾಲದಲ್ಲಿ ನಡದದ್ದು ದಿನಂಪ್ರತಿಯಲ್ಲೂ ಆತ್ಮದ ಪ್ರಕಾರ ಪ್ರತಿ ಭಕ್ತನಲ್ಲಿ ನಡಿಯುತ್ತಾ ಇರುತ್ತದೆ".

೫. ವಿಶ್ವಾಸದಿಂದ ಯೆಲ್ಲರೂ ದ್ಯೇವರ ಮಕ್ಕಳು. ವ. ೨೫—೨೯.

೨೫. ಆದರೆ ವಿಶ್ವಾಸವು ಬಂದ ಮ್ಯೇಲೆ, ೫ಂನೂ ೧) ಉಪಾಧ್ಯನ ಕೆಳಗೆ ೫ರೆವು. ೨೬. ಯಾಕಂದರೆ ಕ್ರಿಸ್ತ ಯ್ಯೇಸುವಿನಲ್ಲಿರುವ ೨) ವಿಶ್ವಾಸದ ಮೂಲವಾಗಿ ಯೆಲ್ಲರು ದ್ಯೇವರ ಮಕ್ಕಳಾಗಿದ್ದೀರಿ ೩). ೨೭. ಹ್ಯಾಗಂದರೆ ಕ್ರಿಸ್ತನಿಗಾಗಿ ಸ್ನಾನ ಹೊಂದಿದವರಷ್ಟು ೪) ಕ್ರಿಸ್ತನಂನು ಧರಿಸಿ ಕೊಂಡಿರಿ ೫). ೨೮. ಯೆಹೂದ್ಯನೂ ೬) ೫ಲ್ಲ, ಗ್ರೇಕನೂ ೫ಲ್ಲ, ದಾಸನೂ ೫ಲ್ಲ, ಸ್ವತಂತ್ರನೂ ೫ಲ್ಲ, ಗಂಡೂ ೫ಲ್ಲ, ಹೆಣ್ಣೂ ೫ಲ್ಲ; ಯಾಕಂದರೆ ನೀವೆಲ್ಲರು ಕ್ರಿಸ್ತ ಯ್ಯೇಸುವಿನಲ್ಲಿ ವೊಬ್ಬನ್ಯೇ ಆಗಿದ್ದೀರಿ. ೨೯. ಮತ್ತು ನೀವು ಕ್ರಿಸ್ತನವರಾದರೆ, ಅಬ್ರಹಾಮನ ೭) ಬೀಜವು, ವಾಗ್ದತ್ತದ ಪ್ರಕಾರ ಬಾಧ್ಯಸ್ಥರೂ, ಆಗಿದ್ದೀರಿ.

೧. ಕಾರ್ಯವು ಪುಸ್ತಗತವಾದಾಗ, ಕರ್ಣವಾಗಿದ್ದ ಸನ್ನಾಪಕರವಾದ ನಿಯಮದ ಉಪಾಧ್ಯಾಯನ ದ್ಯಾಗವು ತೀರಿತು.

೨. ೫ಲ್ಲಿರುವ ಅಧಿಕರಣವಿಭಕ್ತಿಗೆ ವಿಶೇಷತ್ವವದೆ. ಪ್ರಾಪ್ತಿಗೆಂದರೆ, ವಿಶ್ವಾಸವು ನಮ್ಮನ್ನು ಕ್ರಿಸ್ತನ ಸಂಸರ್ಗದಿಂದ ಆತನ ಸ್ವಭಾವದಲ್ಲಿ ಅಧಿಕಾಧಿಕವಾಗಿ ಪಾಲಾಗಿಸುವದರಿಂದ, ನಾವು ಆತನ ಪಾಲಾಗಾಗುತ್ತೇವೆ, ಅಂದರೆ, ದೇವರ ಮಕ್ಕಳಾಗುತ್ತೇವೆ.

೩. ಮುಂಚೆ ಪೌಲನು ತನ್ನ ವಿಷಯದಲ್ಲಿಯೂ ಯೆಹೂದ ಜನಾಂಗದ ವಿಷಯದಲ್ಲಿಯೂ ಉತ್ತಮ ಪುರುಷದಲ್ಲಿ ಮಾತಾಡಿದ ಮೇಲೆ, ೫ಲ್ಲಿ ಪ್ರಥಮ ಕಾರ್ಯವನ್ನು ಸೂಚಿಸುವವನಾಗಿ, ಕುಪಾಕಬಾಧಕರು ಶಿರಸ್ಕರಿಸಿದ ಪರಜನ ಕ್ರೈಸ್ತರ ವಿಷಯವಾದ ಬಾಧನೆಯನ್ನು ಸ್ಥಾಪಿಸುವ ಬಗ್ಗೆ, ಅವರನ್ನೂ ಶೇರಿಸಿ, ೫ದ್ದೀರಿ ಯೆಂದು, ಮಧ್ಯಮಪುರುಷವನ್ನು ಪ್ರಯೋಗಿಸುತ್ತಾನೆ.

೪. ದೇವರು ಸ್ನಾನದಲ್ಲಿ ಕಾಡುವ ಸಾಕ್ಷಿಯಿಂದಲೂ, ಪ್ರಾಸವಾಡಂಬಡಿಕೆಯ ಕೃಪೆಯು ವಾಬ್ಬಾಬ್ಬನಲ್ಲಿ ಉಂಟು ಮಾಡುವ ಅನುಭವದಿಂದಲೂ, ಭಕ್ತನು ಕ್ರಿಸ್ತನಲ್ಲಿಯೂ ಆತನ ಪುತ್ರತ್ವ ಸಹಬಾಧ್ಯ ಸ್ಥಿತಿಗಳ ಸ್ವತಂತ್ರದಲ್ಲಿಯೂ ಶೇರುತ್ತಾನೆ. ಆದಿಕಾಲದಲ್ಲಿ ಪೃದಯದಿಂದ ವಿಶ್ವಾಸಿಗಳಾದವರು ಸ್ನಾನದಿಂದ ಕ್ರೈಸ್ತರಾಗುವಾಗೈ, ಸ್ನಾನಕ್ಕೂ ಪುನರ್ಜನ್ಮಕ್ಕೂ ೫ರುವ ಸಂಬಂಧವು ಪ್ರತ್ಯಕ್ಷವಾಗಿತ್ತು. ಆದರೂ ಮಕ್ಕಳಿಗೂ ಸ್ನಾನದಲ್ಲಿ ದೇವರ ಕೃಪೆಯು ಉಚಿತವಾಗಿ ಶಿಕ್ಕುವದರಿಂದ, ಮಕ್ಕಳಾಗಿ ಸ್ನಾನ ಪ್ರಾಂದಿದವರು ಮತ್ತೆ ಅದರಲ್ಲಿ ನೆಲೆಯಾಗುವದಕ್ಕೆ ಯೆತ್ನೈಸಿದರೆ ಸಾಕು. ಆ ಪ್ರಕಾರ ಮಾಡದೆ, ದೇವರ ಪ್ರಸಾದವನ್ನು ಅಯೋಗ್ಯವಾಗಿ ತಕ್ಕಾಳ್ಳುವದರಿಂದ ಆ ಪ್ರಸಾದವು ಮಾರ್ಪಡುವದಿಲ್ಲಾ. ವಾಳ್ಳೆಯವರನ್ನೂ ಕೆಟ್ಟವರನ್ನೂ ಮದಿವೆಯ ಮನೆಗೆ ಕರೆಯುವ ದೇವರು ವಾಳ್ಳೆಯವರಿಗೂ ಕೆಟ್ಟವರಿಗೂ ತನ್ನ ಪ್ರಸಾದಗಳಲ್ಲಿ ಕೃಪೆಯನ್ನು ಕಾಡ ೫ಚ್ಛೈಸುತ್ತಾನೆ. ವಾಬ್ಬರು ಅದನ್ನು ತಕ್ಕಾಳ್ಳುತ್ತಾರೆ, ವಾಬ್ಬರು ತಕ್ಕಾಳ್ಳುವದಿಲ್ಲಾ; ಆದರೆ ಅದರ ಶಕ್ತಿ ಕಡಿಮೆ ಆಗುವದಿಲ್ಲಾ, ಕುರುಡನಿಗೆ ಕಾಣದಿದ್ದರೆ, ಆಕಾಶದಲ್ಲಿ ಪ್ರಾಳೆಯುವ ಸೂರ್ಯವು ೫ಲ್ಲವಾದೀತೇ?

೫. ಕ್ರಿಸ್ತನನ್ನು ಧರಿಸಿಕಾಳ್ಳುವದೆಂದರೆ, ಆತನ

ಗಲ. ೪, ೧—೫.

ಸ್ವಭಾವದಾಳಗೆ ಶೇರಿ, ಅದಂನು ಪೂರಾದ್ದು ಕಾಳ್ಳುವದು; ಆದ್ದರಿಂದ ಅಂಥಾ ಮನುಷ್ಯನನ್ನು ಕಾಣುವವನು ಕ್ರಿಸ್ತನನ್ನೆ ಕಂಡ ಪೂರಾಗಾಯಿತು; ಅದೇ ಪ್ರಕಾರ ದೇವರು ಸಪೂರಾ ಅವನನ್ನು ಅವನ ಪಾಪಗಳಲ್ಲಿ ಅಲ್ಲಾ, ಕ್ರಿಸ್ತನ ನೀತಿಯಲ್ಲಿ ಇರುವವನಾಗಿ ದೃಷ್ಟಿಸುತ್ತಾನೆ.

೬. ದೇವರು ಯೆಲ್ಲಾ ಮಾನುಷ ಖೇದಗಳಿಗೆ ಅಶೀತನಾಗಿರುವ ಪೂರಾಗೆಯೆ, ದೇವರ ಮಗನ ಸಂಸರ್ಗದಲ್ಲಿ ಶೇರುವವರಾಳಗೆ ಸಮಸ್ತ ಖೇದಗಳು ಅಳಿದು ಪೂರಾಗುತ್ತವೆ. ವಾಂದೇ ಕೃಪೆಯು ಸರ್ವರಿಗೂ ಪ್ರಾಪ್ತವಾಗುವದರಿಂದ, ಬಹಿರಂಗದ ತಾರತಮ್ಯಗಳೆಲ್ಲಾ ಯೇಸುಕ್ರಿಸ್ತನಿಗೆ ಬಾರವು.

೭. ನಿಯಮದ ಉದ್ದಿಶ್ಯದ ವಿಷಯವನ್ನು ಮಥ್ಯಾದಲ್ಲಿ ಚರ್ಚಿಸಿದ ಮೇಲೆ, ಅಬ್ರಪೂರಾಮನ ಬೀಜವೆಂಬ ಕ್ರಿಸ್ತನ ಐಕ್ಯದಲ್ಲಿರುವ ಕ್ರೈಸ್ತರೆ ಅಬ್ರಪೂರಾಮನ ಪುತ್ರರಾಗಿದ್ದಾರೆಂದು ಪೌಲನು ಪೇಳುತ್ತಾನೆ. ಈ ಪ್ರಕಾರ ವ. ೬ರಿಂದ ಪ್ರಸ್ತಾವವಾಗುತ್ತಾ ಬಂದ ಅಬ್ರಪೂರಾಮನಿಗಾದ ವಾಗ್ದತ್ತದ ಸಂಗತಿಯು ಕ್ರೈಸ್ತರಲ್ಲಿ ನಿಜವಾಗಿ ನೆರವೇರುತ್ತದೆಂದು ಪ್ರಮಾಣಿಸುತ್ತಾನೆ.

ಸ. ೪.

೬. ದಾಸತ್ವ ಹೋಗಿ ಪುತ್ರತ್ವವು ಹ್ಯಾಗೆ ಬರುತ್ತದೆಂಬದು. ಸ. ೪, ೧—೭.

ನಿಯಮಕ್ಕೊಳಗಾಗಿದ್ದ ಕಾಲವು ಮನುಷ್ಯರು ಬಂಧನದಲ್ಲಿ ಮುಚ್ಚಿಟ್ಟ ಕಾಲವಾಗಿತ್ತೆಂದು ಸಾಧಿಸುವ ಮಾತಿನಿಂದ, ಹಳ್ಳೇವೊಂಡಬಡಿಕೆಯ ವಿಶ್ವಾಸಿಗಳಿಗೆ ಯಾವದಾದರೂ ವಿಶ್ವಾಸದ ಪ್ರಯೋಜನವು ಇರಲಿಲ್ಲವೆಂಬ ಅರ್ಥವು ಹುಟ್ಟದ ಹಾಗೆ, ಅದಂನು ಹೆಚ್ಚಾಗಿ ವಿವರಿಸುವದು ಅವಶ್ಯವಾಯಿತು. ಈ ಕಾರಣದಿಂದ ಪೌಲನು, ಅವರು ದೇವರ ಮಕ್ಕಳಾಗಿದ್ದರೂ, ಪ್ರಾಯ ಬಾರದ ಶಿಶುಗಳಾಗಿದ್ದಕೆಂತಲೂ, ಅವರಿಗೆ ಬಾಧ್ಯಸ್ಥಿಕೆ ಇದ್ದರೂ, ಆಸ್ತಿಯಂನು ಸ್ವತಂತ್ರಿಸಿ ಕೊಳ್ಳಕೆ ಇದ್ದಕೆಂತಲೂ, ಆದ್ದರಿಂದ ಚಾಕರರಿಗೆ ಸದೃಶವಾಗಿದ್ದಕೆಂತಲೂ ತೋರಿಸುತ್ತಾನೆ. ಇಲ್ಲಿ ಪುತ್ರತ್ವವನ್ನೆ ಚನ್ನಾಗಿ ವರ್ಣಿಸಿ, ಅವರಿಂದುಂಟಾಗುವ ಭಾಗ್ಯಾವಸ್ಥೆಯಂನು ಗಲತರ ನೆನಪಿಗೆ ತಂದು ಪುನಃಪತನದ ಭಯವಂನು ಅವರಲ್ಲಿ ಹುಟ್ಟಿಸುತ್ತಾನೆ.

ನಿಯಮದವರ ದಾಸತ್ವ; ಸುವಾರ್ತೆಯವರ ಪುತ್ರತ್ವ. ವ. ೧—೫.

೧. ಇದಂನು ಹೇಳುತ್ತೇನೆ—ಬಾಧ್ಯಸ್ಥನು ಬಾಲಕನಾಗಿರುವ ೧) ಕಾಲವಷ್ಟು, ಯೆಲ್ಲಕ್ಕೆ ೨) ಅಧಿಕಾರಿಯಾಗಿದ್ದರೂ, ದಾಸನಿಗಿಂತ ವಿಶೇಷನಲ್ಲ; ೨. ಆದರೆ ತಂದೆ ಮುನ್ನೇಮಿಸಿದ ಕಾಲದವರೆಗೆ ಯಜಮಾನರಿಗೂ ಉಗ್ರಾಣಿದವರಿಗೂ ವಾಳಗಾಗಿದ್ದಾನೆ. ೩. ಹಾಗೆಯೇ ನಾವು ಬಾಲಕರಾಗಿರುವಾಗ, ಲೌಕಿಕದ ಸೂತ್ರಗಳಿಗೆ ೩) ದಾಸರಾಗಿ ವಾಳಗಾಗಿದ್ದೆವು.

೧. ನಿಯಮದಾಳಗಿದ್ದ ಸಮಸ್ತ ಕಾಲದ ಜೀವವು ಕಳದು ಪೂರಾಗುವ ಪರತಂತ್ರವಾವ, ಬಾಲ್ಯಪ್ರಾಯಕ್ಕೆ ಸಾದೃಶ್ಯವಾಗಿರುತ್ತದೆ.

೨. ಅಂದರೆ, ಬಾಧ್ಯಸ್ಥನಾಗಿರುವದರಿಂದ ತಂದೆಯ ಸಮಸ್ತ ಆಸ್ತಿಯು ಅವನಿಗೆ ಸಿಕ್ಕ ಬೇಕಾಗಿದ್ದರೂ, ಈಗಲೆ ಯೆಲ್ಲಾ ಅವನದಾಗಿದ್ದರೂ, ಯೆಂಬ ಅರ್ಥ.

ಗಲ. ೪, ೪—೭.

ಹೀಗಿರುವದರಿಂದ, ಸಮಸ್ತ ಆಸ್ತಿಯು ಮಗನಿಗೆ ಸಿಕ್ಕಬೇಕೆಂದು ನೇಮಿಸಿದರೂ, ಅವನು ಪ್ರಾಯಸ್ಥನಾದ ಮೇಲೆ ಆಸ್ತಿಯನ್ನು ಅನುಭವಿಸಲಿಕ್ಕೆ ತಾಡಗ ತಕ್ಕ ಕಾಲವನ್ನು ಮರಣಪತ್ರದಲ್ಲಿ ನಿಶ್ಚೈಸಿ, ತೀರಿಪೋದ ತಂದೆಯ ಮಗನ ದೃಷ್ಟಾಂತವು ಇಲ್ಲಿ ಉಪಯೋಗ ಮಾಡಿಯದೆ.

೩. ಮೇಲಿನ ದೃಷ್ಟಾಂತದ ಪ್ರಯೋಜನವು ಇಲ್ಲಿ ಬರುತ್ತದೆ. ಲೋಕದ ಸೂತ್ರಗಳಂದರೆ, ಮನುಷ್ಯಜಾತಿಯ ಬಾಲ್ಯಾವಸ್ಥೆಗೆ ವಾಪ್ಪುವ ಚಕ್ತಿಯ ಶಾಲೆ. ಲೋಕದ ಅಕ್ಷರಮಾಲೆ ಯೆಂಬ ಮಾನುಷ ಸಂಪ್ರದಾಯಗಳೂ, ಕಟ್ಟುಗಳೂ, ಕಟ್ಟಳೆಗಳೂ, ಬೋಧನೆಗಳೂ, ಗಾದೆಗಳೂ, ಮರ್ಯಾದೆಗಳೂ, ದೇವಾರಾಧನೆಗಳೂ ಮುಂತಾದ್ದನ್ನೆಲ್ಲಾ ಚಾಗ್ಯಸಂಪಾದನೆಗೆ ಅವಶ್ಯವೆಂದು ಪೇಳಿ, ಗುರುಗಳು ಮನುಷ್ಯರ ಪೆಗಲುಗಳ ಮೇಲೆ ಇಟ್ಟರೂ, ನಿಜವಾಗಿ ಅದೆಲ್ಲಾ ಇಪಾಕ್ಕೆ ಮಾತ್ರವೆ ಸಂಬಂಧವಾದ್ದೆಂದು ತಿಳಿಯ ಬಪುದು. ಅವುಗಳು ವ. ೯. ಬಲವಿಲ್ಲದ ಪೀನ ಸೂತ್ರಗಳೆಂದು, ಪೌಲನು ಪೇಳುತ್ತಾನೆ. ಯಾಕಂದರೆ ಅವು ಆತ್ಮಕ್ಕೆ ಶಕ್ತಿ ಜೀವ ಸಮಾಧಾನಗಳನ್ನು ಕಾಡಲಾರವು.

ಬಿಡುಗಡೆ. ವ. ೪—೭.

೪. ಆದರೆ ಕಾಲದ ಸಂಪೂರ್ಣತೆಯು ಬಂದಾಗ ೧), ನಾವು ಪುತ್ರಸ್ವೀಕಾರ ಹೊಂದುವ ಹಾಗೆ, ನ್ಯಾಯಪ್ರಮಾಣಕ್ಕಾಳಗಾದವರನು ಕೊಂಡು ಕೊಳ್ಳುವದಕ್ಕೆ ೨), ೫. ದೇವರು ತನ ಮಗನಂನು ಸ್ತ್ರೀಯಿಂದ ೩) ಹುಟ್ಟಿದವನಾಗಿಯೂ, ನ್ಯಾಯಪ್ರಮಾಣಕ್ಕಾಳಗಾದವನಾಗಿಯೂ, ಕಳುಹಿಸಿದನು. ೬. ಮತ್ತು ನೀವು ಮಕ್ಕಳಾಗಿರುವದರಿಂದ ೪), ದೇವರು ತನ ಮಗನ ಆತ್ಮವನು ನಿಮ್ಮ ಹೃದಯಗಳಾಳಗೆ ಕಳುಹಿಸಿದನು, ಅಪ್ಪಾ ತಂದೆಯೇ, ಎಂದು ಕೂಗುವಂಥಾದ್ದನ್ನೇ ೫). ೭. ಹೀಗಿರಲಾಗಿ ನೀನು ಇನು ದಾಸನಲ್ಲ, ಮಗನೇ; ಮಗನಾದರೆ, ಕ್ರಿಸ್ತನ ಮುಖಾಂತರ ದೇವರಿಗೆ ಬಾಧ್ಯಸ್ಥನೂ ೬) ಆಗಿದ್ದೀ.

೧. ದೇವರು ನಿತ್ಯ ಸಂಕಲ್ಪದಲ್ಲಿ ನಿಶ್ಚೈಸಿದ ಕಾಲವು ಎಫೆ. ೧, ೧೦. ಕಳದು ಪೋಗಲಾಗಿ, ಸನ್ನಾಪಕಾರ್ಯಗಳೆಲ್ಲಾ ಪೂರ್ಣವಾದಾಗ, ಮನುಷ್ಯಜಾತಿಯ ಆತ್ಮಿಕ ಬಡತನವೂ ಬಯಕೆಯೂ ಸಾಕಷ್ಟು ಬೆಳದಾಗ, ಯೆಂಬ ಅರ್ಥ.

೨. ಕ್ರಿಯೆಯಿಂದಲೂ ಸಪನದಿಂದಲೂ ತಾರಿಸಿದ ಸಂಪೂರ್ಣವಾದ ವಿಧೇಯತ್ವದಿಂದ ಕಾಂಡು ಕಾಂಡನು; ಬಿಡಿಸುವವನು ತನ್ನನ್ನೆ ಪೂರ್ಣಾಂಶಿಗಾರನಾಗಿಟ್ಟು, ಬಂಧನದವರ ಬಂಧನಕ್ಕೆ ತಾನೆ ವಾಳಗಾಗಿ, ಬಂಧನದವರನ್ನು ಬಿಡಿಸುವ ಪ್ರಕಾರ, ಯೇಸುವು ವಿಧೇಯತ್ವ ಶ್ರಮ ಮರಣಾದಿಗಳಿಂದ ನಿಯಮದ ಶಾಪವನ್ನೂ, ತನ್ನ ಆತ್ಮದಿಂದ ಅದರ ದಾಸ್ವತವನ್ನೂ ಪರಿಹರಿಸಿದ್ದಾನೆ.

೩. ಅಂದರೆ, ಆತನು ಇತರರ ಪೂರ್ಣಾಗೆಯೆ ನಿಜ ಮನುಷ್ಯನಾಗಿ ಯೆಪೂದ ಜನಾಂಗದ ಪ್ರತ್ಯೇಕ ನಿಬಂಧನೆಗಳಲ್ಲಿಯೇ ಪುಟ್ಟಿ ಯೆಲ್ಲಾದರಲ್ಲಿ ತಂದೆಯ ಚಿತ್ತಕ್ಕೆ ವಾಳಗಾಗಿದ್ದನು.

೪. ಇಲ್ಲಿರುವ ಮಾತು ಚನ್ನಾಗಿ ಗ್ರಹಿಸತಕ್ಕದ್ದು. ಯೇಸುವಿನ ಆತ್ಮವು ಪ್ರಾದಯಗಳಲ್ಲಿ ಬಲವಾಗಿರುವಷ್ಟಕ್ಕೆ ಸರಿಯಾಗಿ ನಾವು ಮಕ್ಕಳಾಗಿದ್ದೇವೆಂದು ಪೇಳಿರುವದಿಲ್ಲಾ. ನಾವು ಕ್ರಿಸ್ತನ ವಿಮೋಚನಾಕ್ರಯದಿಂದಲೆ ಮಕ್ಕಳಾಗಿದ್ದೇವೆ. ಮಕ್ಕಳಾದವರಿಗೆ ಅತ್ಯವ

ಶ್ಯ ಫಲವಾಗಿ ಶಿಶುಪ್ರಾಯವಾದ ಪ್ರಾರ್ಥನಾತ್ಮದ ದಾನವು ಶಿಕ್ಕುತ್ತದೆ.

೫. ರೋಮ. ೮, ೧೬. ವಿಶ್ವಾಸಿಗಳಲ್ಲಿ ಉಳಕಾಂಡು ಪ್ರಾರ್ಥಿಸುತ್ತಿರುವ ಆತ್ಮವು ಮಗನ ಆತ್ಮವಾಗಿರುವದರಿಂದ, ಶಿಶುಗಳಿಗೆ ತಕ್ಕ ಮಮತಾಧೈರ್ಯದಿಂದ ದೇವರಿಗೆ ಅಪ್ಪಾ ಯೆಂದು ಹೇಳುತ್ತದೆ.

೬. ಮುಂದಿನ ಮಹಿಮೆಯ (ರೋಮ. ೮, ೧೭.) ಬಾಧ್ಯಸ್ಥನು.

ಪುನಃಪಶನದ ಮೊಸದ ವಿಷಯ ಬೆದರಿಕೆ. ಸು. ೪, ೯—೨೦.

ಅಪೊಸ್ತಲನು ಗಲತರಿಗೆ ಸುವಾರ್ತೆಯ ಬಿಡುಗಡೆಯನ್ನು ಅತ್ಯಂತ ಘನ ಮಹಿಮೆಯೂ ಮಂಗಳವೂ ಉಳ್ಳ ಪದವಾಗಿ ವರ್ಣಿಸಿದ ಮೇಲೆ, ಆ ಬಿಡುಗಡೆಯನ್ನು ಕಳಕೊಳ್ಳ ಬಾರದೆಂದು ಬಹಳ ಘಟ್ಟಿಯಾಗಿ ಬುದ್ಧಿ ಹೇಳುತ್ತಾನೆ. ಶೋಧಿಸುತ್ತಾ, ಪ್ರಮಾಣಿಸುತ್ತಾ ಬಂದವನು ಕ್ಷಣದಲ್ಲಿ ಅವರ ಸಂಗಡ ಮುಖಾಮುಖಿಯಾಗಿ ಮಾತಾಡುವಂತೆ, ಅವರನ್ನು ಬೇಡಿ ಕೊಳ್ಳುತ್ತಾನೆ. ಕಡೆಯಲ್ಲಿ ಯೇನಾದರೂ ಒಂದು ಉಪಾಯವನ್ನು ಬಳಸದೆ ಬಿಡದ ಹಾಗೆ, ದೇವರ ವಾಕ್ಯದಲ್ಲಿ ಬರದ ಒಂದು ಚರಿತ್ರದ ಉಪಮೆಯ ಆಂತರಭಿಪ್ರಾಯವನ್ನು ಪ್ರಮಾಣಿಸಿ, ತನ್ನ ಪತ್ರಿಕೆಯನ್ನು ಓದುವ ಯೆಹೂದರ ಮನಸ್ಸನ್ನು ಮೆಚ್ಚಿಸ ಎತ್ತುಗಡೆ ಮಾಡುತ್ತಾನೆ. ೨೧—೩೧.

೧) ಬುದ್ಧಿಗೆ ಅನುಸಾರವಾದ ಪ್ರಮಾಣ. ಸು. ೪, ೯—೧೧.

೯. ಆಗ ದೇವರಂನರಿಯದೆ, ಸ್ವಭಾವವಾಗಿ ೧) ದೇವರುಗಳಲ್ಲದವರಂನು ಸೇವಿಸಿದಿರಿ. ೯. ಆದರೆ ಇಗ ದೇವರಂನರಿಶು ೨), ವಿಶೇಷವಾಗಿ ದೇವರಿಂದ ಅರಿಯಲ್ಪಟ್ಟು ೩), ಮತ್ತು ಬಲಹೀನವಾದ ಬಡ ಸೂತ್ರಗಳ ಹತ್ತರ, ಅವುಗಳಂನು ಮತ್ತು ತಿರಿಗಿ ಸೇವಿಸ ಬೇಕೆಂದು, ಯಾಕೆ ತಿರುಗಿ ಕೌಳ್ಳುತ್ತೀರಿ? ೧೦. ದಿವಸಗಳಂನೂ, ಮಾಸಗಳಂನೂ, ಸಮಯಗಳಂನೂ, ವರುಷಗಳಂನೂ ೪) ಆಚರಿಸುತ್ತೀರಿ. ೧೧. ನಿಂಮಲ್ಲಿ ಸುಮ್ಮನೆ ಕಷ್ಟ ಪಟ್ಟೆನೋ ಎಂತಾ, ನಿಮಗಾಗಿ ಸರ ಭಯ ಪಡುತ್ತೇನೆ.

೧. ಅಂದರೆ ನಿಮ್ಮಲ್ಲಿ ಹುಟ್ಟಿದವರು ಮುಂಚೆ ಪರಜನರಾಗಿದ್ದು, ದೇವರ ವಿಷಯದಲ್ಲಿ ಯೇನಾಂದೂ ತಿಳಿಯದವರಾಗಿದ್ದಿರಿ. ಎ. ೯.

೨. ಆದರೆ ಈಗ ದೇವರ ಕೃಪೆಯಿಂದ ನೀವು ಸತ್ಯ ದೇವರ ತಿಳಿವಿಕೆಗೆ ಬಂದು ಮುಟ್ಟಿದ್ದೀರಿ. ಆದರೆ ಇದು ನಿಮ್ಮ ಸ್ವಂತ ಕ್ರಿಯೆ ಅಲ್ಲಾ, ದೇವರ ಕೃಪೆಯ ಉಚಿತವಾದ ದಾನವಾಗಿರುತ್ತದೆ.

೩. ಆತನು ನಿಮ್ಮನ್ನು ೧ ಕೊರಿ. ೮, ೩. ತನ ಸಂಸರ್ಗದಲ್ಲಿ ಇರ ತಕ್ಕ ಸ್ವಜನರಾಗ ಮಾಡಿದ್ದಾನೆ. ಮನುಷ್ಯನು ದೇವರನ್ನರಿಯ ಬೇಕಾದರೆ, ಮುಂಚೆ ದೇವರಿಂದರಿಯಲ್ಪಟ್ಟಿರ ಬೇಕು. ಈ ಪ್ರಾಸ ತಿಳಿವಿಕೆಯು ದೇವರ ಉದಾರ ಕೃಪೆಯಿಂದ ಉಂಟಾಗಿರಲಾಗಿ, ಅವರು ದೇವರ ಪುತ್ರತ್ವದ ಮಹಿಮೆಯನ್ನು ಬಿಟ್ಟು, ಪುನಶ್ಚ ಪರತಂತ್ರವಾದ ಬಾಲ್ಯಾವಸ್ಥೆಯಲ್ಲಿ ಬೀಳುವದು ನಾಚಿಕೆಯೆಂದೆಣಿಸ ತಕ್ಕದ್ದು.

೪. ಯೆಹೂದರ ಸಬ್ಬತುಗಳನ್ನೂ ಶುದ್ಧಪಾಡ್ಯಗಳಂನೂ ಮೂರು ಮುಖ್ಯ ಪರ್ವಕಾಲಗಳಂನೂ ಪರ್ಷಾವದಿಯ ಪುಬ್ಬವನ್ನೂ, ಅಂದರೆ ಯೆಹೂದರ ನಿಯಮಾಚಾರಗಳನ್ನು ಅವರು ಅನ್ಯ ಜನರಾಗಿರುವಾಗೆ ಕೈಕಾಳಲಿಲ್ಲಾ. (ಕೆಲವರು ಇಲ್ಲಿ ಯಾಬೆಲ್ ವರ್ಷವನ್ನು ಸಹಾ ಶೇರಿಸುತ್ತಾರೆ. ಆದರೆ ಅದು ಕಾನಾನ್ ದೇಶದಲ್ಲಿ ಮಾತ್ರವೆ ನಡೆಯುತ್ತಿತ್ತು.)

ಗಲ. ೪, ೯—೧೧.

ನೀವು ತಿರುಗಿ ಕಾಳುಕ್ಕತ್ತೀರಿ ಯೆಂದು, ಪೌಲನು ಪೇಳುವದರಿಂದ, ಯೆಹೂದ ನಿಯಮಾಚಾರಗಳನ್ನು ಪರಜನರಲ್ಲಿ ವಾಡಿಕೆಯಾದ ಪದ್ಧತಿಗಳಿಗೆ ಸಮಾನ ಮಾಡುತ್ತಾನೆ. ಪಗ್ಯಾಗೆಂದರೆ

ಕ್ರಿಸ್ತನ ವಿಷಯವಾದ ಪ್ರವಾದನೆಗಳನ್ನುಳಿದ ಯೆಹೂದರ ಭಕ್ತಿಗೂ ಪರಜನರ ಭಕ್ತಿಗೂ ಹೆಚ್ಚು ಕಡಿಮೆ ಇಲ್ಲ. ಮುಂಗುರುತಾಗಿರುವ ಅಭಿಪ್ರಾಯವಿಲ್ಲದೆ ಆಚಾರನಿಯಮವು ಪರಜನರ ಪ್ರಕೃತಿಪೂಜೆಗೆ ಸರಿಯಾಗಿದೆ. ಗಲತರು ಯೆಹೂದರಾದ ಕುಹಕಬೋಧಕರನ್ನು ನಂಬಿ, ಯೆಹೂದರ ಸಬ್ಬತುಗಳನ್ನೂ ಪಾಪ್ಯಗಳನ್ನೂ ಹಬ್ಬಗಳನ್ನೂ ಆಚರಿಸಿದರಿಂದ, ದಿವಸಗಳನ್ನು ನಿರ್ಣೈಸುವ ಸೂರ್ಯಚಂದ್ರಾದಿಗಳ ಗತಿಗೆ ಅನುಕೂಲವಾಗಿ ನೀತಿನಿರ್ಣಯವನ್ನೂ ಶುದ್ಧೀಕರಣವನ್ನೂ ಪಡಕೊಳ್ಳ ಬೇಕೆಂಬುವದಕ್ಕೆ ಸಮ್ಮತಿಸಿದರು. ಪರಜನರು ಅವುಗಳನ್ನು ಮುಖ್ಯವಾಗಿ ಆರಾಧಿಸುತ್ತಾರೆ; ಆದ್ದರಿಂದ ದಿನಗಳನ್ನು ಆಯುವವರು ಅವುಗಳ ಆರಾಧನೆಗೆ ತಿರುಗಿದ ಹಾಗಾಯಿತು.

ಆದರೆ ದೇವರು ತಾನೆ ಜಗದುತ್ಪತ್ತಿಯ ಕಾಲದಲ್ಲಿಯೆ ಸಬ್ಬತನ್ನು ವಿಶ್ರಾಂತಿ ದಿನವಾಗಿ ಸರ್ವರಿಗೆ ನೇಮಿಸಿ, ನಾಲ್ಕನೆ ಕಟ್ಟಳೆಯಿಂದ ಸ್ಥಿರ ಪಡಿಸಲಿಲ್ಲವೊ? ಇದಕ್ಕೆ ಅತಿ ಸುಲಭವಾದ ಪ್ರತ್ಯುತ್ತರವೇನೆಂದರೆ: ಮಾರ್ಕ. ೨, ೨೭. ಮನುಷ್ಯನು ಸಬ್ಬತಿಗೋಸ್ಕರವಲ್ಲ, ಸಬ್ಬತು ಮನುಷ್ಯನಿಗೋಸ್ಕರ ಉಂಟಾಯಿತು. ಯೇಳೇಳು ದಿನಕ್ಕೆ ವೊಂದು ದಿನ ಪ್ರಪಂಚಕಾರ್ಯಗಳನ್ನು ಬಿಟ್ಟು, ಆಯಾಸ ಪರಿಹರಿಸಿಕೊಂಡು, ದೇವರಲ್ಲಿ ವಿಶ್ರಮಿಸಿಕೊಳ್ಳುವ ಕಟ್ಟಳೆ ಮನುಷ್ಯರಿಗೆ ವೊಂದು ದೊಡ್ಡ ಉಪಕಾರ. ಅದು ಅವರಿಗೆ ಅವಶ್ಯ. ಅವರು ಅದನ್ನು ಉಪಕಾರವೆಂದೆಣಿಸದ ಕಾರಣ, ಬೇರೆ ಕಟ್ಟಳೆಗಳ ಹಾಗೆ ಅದನ್ನು ಕಟ್ಟಳೆಯಾಗಿ ಕೊಡ ಬೇಕಾಯಿತು. ಆದರೆ ಕ್ರಿಸ್ತನು ಬಹಿರಾಚಾರದ ಸಮಸ್ತ ಕಟ್ಟಳೆಗಳ ನೊಗವನ್ನು ತೆಗದು, ವಿಶ್ವಾಸಕ್ಕೆ ಯೆಲ್ಲವುಗಳ ಮೇಲೆ ಸ್ವತಂತ್ರವನ್ನು ಕೊಟ್ಟಿರುವದರಿಂದ, ಅವುಗಳನ್ನು ಕೈಕೊಳ್ಳುವವರು ದೇವರಿಗೂ ನೆರೆಯವನಿಗೂ ಮಾಡುವ ಪ್ರೀತಿ ಹಂಗಿನಿಂದಲೆ ಕೈಕೊಳ್ಳುತ್ತಾರೆ. ಸಬ್ಬತು ನೊಗವೆಂದಲ್ಲ, ದೇವರ ಉಪಕಾರವೆಂದು ಯೆಣಿಸುವವನು ಅದರ ನಿಜಪ್ರಯೋಜನಕ್ಕನುಸಾರವಾಗಿ ಅದನು ಕೈಕೊಳ್ಳುತ್ತಾನೆ. ಅದು ವಿಮೋಚನಾಕಾರ್ಯಕ್ಕೆ ಕರಣವಾಗಿದೆಯಷ್ಟೆ. ಆದ್ದರಿಂದ ಅದಕ್ಕೆ ಅನುಕೂಲವಾಗುವ ಕೆಲಸಗಳಿಗೆಲ್ಲಾ ದೇವರ ಅನುಜ್ಞೆ ಮಾತ್ರವಲ್ಲಾ, ಆಜ್ಞೆ ಸಹಾ ಉಂಟು. ಆದಕಾರಣ ಅವಸರ ಉದ್ಯೋಗ ಪ್ರೀತಿಗಳ ಕೆಲಸಗಳು ಸಬ್ಬತಿಗೆ ಯುಕ್ತವಾಗಿವೆ. ಈ ಪ್ರಕಾರ ಕರ್ತನಾದ ಯೇಸುವು ಸಬ್ಬತನ್ನು ಸ್ವತಂತ್ರನಾಗಿ ಪ್ರಯೋಗಿಸಿದನು. ಅತನ ಸಭೆಯು ಆದಿಕಾಲದಲ್ಲಿಯೆ ಪರಿಶುದ್ಧಾತ್ಮದ ಸ್ವತಂತ್ರಾಧಿಕಾರದಿಂದ ಶನಿವಾರಕ್ಕೆ ಬದಲಾಗಿ ಆದಿತ್ಯವಾರವನ್ನು ಸಬ್ಬತಿಗಾಗಿ ನೇಮಕ ಮಾಡಿತು. ಗಲತರು ಸಂಶಯ ತುಂಬಿದ ಬೇರೆ ಯೆಹೂದ ಕ್ರೈಸ್ತರ ಹಾಗೆ, ಸಬ್ಬತು ಮುಂತಾದವುಗಳ ಪುನರಾಚರಣೆಯಿಂದ ಸುವಾರ್ತಾಸ್ವತಂತ್ರವನ್ನು ತಳ್ಳ ಬೇಕೆಂದಿದ್ದರು. ರೋಮ. ೧೪, ೫. ಕೊ. ೨, ೧೬.

೨) ಪೃದಯಕ್ಕೆ ತಾಗತಕ್ಕ ಚಾಷಣೆ. ವ. ೧೨—೨೦.

ಕೆಳಗೆ ಅಪೊಸ್ತಲನು ಗಲತರನ್ನು ತಿರಿಗಿ ದುಡಿಯುವ ಬಗ್ಯೆ, ತನಗೂ ಅವರಿಗೂ ಮುಂಚೆ ಇದ್ದು, ಮತ್ತೆ ಕುಹಕಬೋಧಕರಿಂದ ಕಳಂಕವಾಗಿ ಹೋದ, ಪರಸ್ಪರ ಪ್ರೀತಿಸಂಬಂಧವನ್ನು ಪ್ರತಂಸಿಸಿ, ಅದನ್ನು ತಿರಿ

ಗಲ. ೪, ೧೨—೨೦.

೫ ಯಥಾಪ್ರಕಾರ ಘಟ್ಟಿ ಮಾಡ ಇಚ್ಛಿಸುತ್ತಾನೆ. ಸಂಕ್ಷೇಪವಾದ ಸಾರಾಂಶವೇನಂದರೆ: ಅ) ನಿಮ್ಮ ಹೃದಯಗಳನ್ನು ನನ್ನ ಕಡೆಗೆ ಮುಚ್ಚದೆ ತೆರದಿಡಿರಿ. ನಾನು ನಿಮ್ಮಲ್ಲಿ ಪ್ಯಾಗೊ, ಪಾಗೆ ನೀವು ನನ್ನಲ್ಲಿ ಭರವಸ ಇಡಿರಿ. ನಾನು ನನಗೇನಾದರೂ ಹೆಚ್ಚು ಕಡಿಮೆ ಆಯಿತೆಂಬ ಹಾಗೆ ಕೋಪದಿಂದ ನಿಮ್ಮ ಸಂಗಡ ಮಾತಾಡುವದಿಲ್ಲಾ. ವ. ೧೨. ಇ) ನೀವು ನನಗೆ ಹೃದಯಪೂರ್ವಕವಾದ ಪ್ರೀತಿಯನ್ನೆತೋರಿಸಿದ್ದಿರಲ್ಲಾ. ವ. ೧೩—೧೫. ಉ) ಈ ಪ್ರೀತಿಯನ್ನು ಕೆಡಿಸುವದಕ್ಕೆ ನನ್ನ ಕಡೆಯಿಂದ ಯೇನೊಂದೂ ಆಗಲಿಲ್ಲಾ. ನಾನು ನಿಮಗೆ ಸತ್ಯವನ್ನು ಮಾತ್ರ ಹೇಳಿದೆನು. ವ. ೧೬. ಎ) ಆದರೆ ಸ್ವಾರ್ಥ ತುಂಬಿದ ಕುಹಕಬೋಧಕರು ನಿಮ್ಮ ಪ್ರೀತಿಯನ್ನೂ ಭರವಸವನ್ನೂ ತಮ್ಮ ಕಡೆಗೆ ಮಾತ್ರವೆ ಯೆಳಿಯಲಿಕ್ಕೆ ನೋಡುತ್ತಾರೆ. ವ. ೧೭. ಐ) ತನ್ನ ಮೇಲೆ ಅಲ್ಲಾ ಕ್ರಿಸ್ತನ ಮೇಲೆ ಮಾತ್ರವೆ ದೃಷ್ಟಿ ಇಡುವವರಲ್ಲಿ ಅಂಥಾ ಸಲಿಗೆ ಇದ್ದರೆ, ಅದು ಹೇಳುವವರಿಗೂ ಕೇಳುವವರಿಗೂ ಒಳ್ಳೇದು. ಪೂರ್ವ ಪ್ರಕಾರದ ಸಲಿಗೆ ನಮ್ಮಲ್ಲಿ ಇರುತ್ತಿದ್ದರೆ, ಯೆಷ್ಟೋ ವಾಸಿ! ವ. ೧೮. ಬ) ಪುನಶ್ಚ ಆ ಪ್ರಕಾರ ಆಗುವ ಹಾಗೆ ನನ್ನಿಂದಾಗುವಷ್ಟು ಮಾಡಬೆ ಇರೆನು. ವ. ೧೯. ೨೦.

೧೨. ನಾನೂ ನಿಮ್ಮ ಹಾಗೆ ಇರುವದರಿಂದ ನೀವು ನಂನ[೧]) ಹಾಗೆ ಆಗಿರಿ; ಸಹೋದರರ್ಸೇ, ನಿಮ್ಮಂನು ಬೇಡಿ ಕೊಳ್ಳುತ್ತೇನೆ; ನೀವು[೨]) ನನಗ್ಯೇನೂ ಅನ್ಯಾಯ ಮಾಡಲಿಲ್ಲಾ. ೧೩. ಆದರೆ[೩]) ಮಾಂಸದ ಬಲಹೀನತ್ವದಿಂದ[೪]) ಮೊದಲು ನಿಮಗೆ ಸುವರ್ತೆ ಪ್ರಸಂಗಿಸಿದೆನೆಂದು ಬಲ್ಲಿರಿ. ೧೪. ಮತ್ತು ನನ್ನ ಮಾಂಸದಲ್ಲಿರುವ ನನ್ನ ಶೋಧನೆಯನ್ನು ನೀವು ಹೀನೈಸಲಿಲ್ಲಾ, ಅಸಂಹಿಸಲಿಲ್ಲಾ, ಆದರೆ ದೇವದೂತನ ಹಾಗೆ, ಕ್ರಿಸ್ತ ಯೇಸುವಿನ ಹಾಗೆ, ನನ್ನನ್ನು ಅಂಗೀಕರಿಸಿದಿರಿ. ೧೫. ಹಾಗಾದರೆ, ನಿಮಗೆ ಇದ್ದ ಹರ್ಷಾವು ಯೆಲ್ಲಿ? ಸಾಧ್ಯವಾಗಿದ್ದರೆ, ನಿಮ್ಮ ಕಂಗಳುಗಳನ್ನು[೫]) ಕಿತ್ತು ಕೊಡದು, ನನಗೆ ಕಾಡುತ್ತಿದ್ದಿರೆಂದು ನಿಮಗೆ ಸಾಕ್ಷಿ ಕಾಡುತ್ತೇನೆ. ೧೬. ಹೀಗಿರಲಾಗಿ ನಿಮಗೆ ಸತ್ಯವನ್ನು ಹೇಳುವದರಿಂದ ನಿಮ್ಮ ಶತ್ರುವಾದೆನ್ಹೋ? ೧೭. ನಿಮ್ಮ ಮೇಲೆ ಆಸಕ್ತಿಪಡುತ್ತಾರೆ[೬]), ಆದರೆ ಚನಾಗಿ ಅಲ್ಲ, ನೀವು ಅವರ ಮೇಲೆ ಆಸಕ್ತಿಪಡುವ ಹಾಗೆ, ನಿಮ್ಮನ್ನು ಹಾಗೆ ಹಾಕ ಇಚ್ಛೈಸುತ್ತಾರೆ. ೧೮. ಆದರೆ ನಾನು ನಿಮ್ಮ ಹತ್ತರ ಇರುವಲ್ಲಿ ಮಾತ್ರವಲ್ಲಾ, ಯಾವಾಗಲೂ ಒಳ್ಳೇದರಲ್ಲಿ ಆಸಕ್ತಿ ಪಡುವದು ಒಳ್ಳೇದು. ೧೯. ನನ್ನ ಮಕ್ಕಳ್ಯೇ[೭]), ಕ್ರಿಸ್ತನು ನಿಮ್ಮಲ್ಲಿ ರೂಪವಾಗುವ[೮]) ಮಟ್ಟಿಗೂ ತಿರಿಗಿ ನಿಮಗಾಕ್ಕಸರ ಪ್ರಸವ ವ್ಯೇದನೆ ಪಡುತ್ತೇನೆ. ೨೦. ಆದರೆ ಇಗಲ್ಯೇ ನಿಮ್ಮ ಬಳಿಯಲ್ಲಿದ್ದು[೯]), ನನ್ನ ಶಬ್ದವನು ಬದಲು ಮಾಡ ಇಚ್ಛೈಸೋನು; ಯಾಕಂದರೆ ನಿಮ್ಮ ವಿಷಯವಾಗಿ ಮಾರ್ಗ ಕಾಣದೆ ಇದ್ದೇನೆ.

೧. ನಿಮ್ಮ ಪ್ರಿಯಯಗಳಂನು ನಂನ ಪ್ರಿಯಯದ ಪಾಗೆ ಮಾಯಿರಿ. ನಾನು ನಿಮ್ಮ ಕಡೆಗೆ ಇರುವ ಪಾಗೆ ನೀವು ನನ್ನ ಕಡೆಗೆ ಆಗಿರಿ; ಪಾಗೆಂದರೆ ನಾನು ನಿಮ್ಮನ್ನು ಪ್ರಿಯಪುರಸ್ಸರವಾಗಿ ಪ್ರೀತಿ ಮಾಯಿ, ಯೇಕಚಿತ್ತವಾಗಿ ಇರ ಇಚ್ಛೈಸುತ್ತೇನೆ.

೨. ನೀವು ನನ್ನ ಮನ ನಾಂದಿಸಿದಿರಿ, ಅಥವಾ ನನಗೆ ದುಃಖ ಕಾಟ್ಟಿರಿ ಯೆಂಬ ಪೂರ್ವಾಗೆ, ಸ್ವಂತ ವಿಷಯದಲ್ಲಿ ಮಾತಾಡುವದಿಲ್ಲಾ.

೩. ಪ. ೧೩—೧೫. ನೀವು ಮಾಡಿದ ಪೃದಯ ಪೂರ್ವಕವಾದ ಪ್ರೀತಿಯನ್ನು ನಾನು ಇಂದಿನವರೆಗೂ ಮರತವನಲ್ಲಾ.

೪. ನಾೀಡುವವರಿಗೆ ಅಲ್ಪನಾಗಿಯೂ ಒಂದು ವೇಳೆ ಶರೀರದ ಸಂಕಟದಲ್ಲಿಯೂ ೨ ಕಾರಿ. ೧೨, ೭. ಯೆಂಬ ಅರ್ಥ. ಇದರಿಂದ ಸಾಧಾರಣ ಜನರು ಅವನನ್ನು ಅಲಕ್ಷಿಸಿ ಇರ ಬೇಕು. ೧ ಕಾರಿ. ೨, ೩. ಅಸಫ್ಯಿಸಲಿಲ್ಲಾ ಯೆಂಬ ಮಾತಿಗೆ, ಮೂಲಭಾಷೆಯಲ್ಲಿ ಉಗುಳಿ ಬಿಡಲಿಲ್ಲವೆಂದು ಬರದದೆ. ಈ ಪ್ರಕಾರ ಆ ಕಾಲದಲ್ಲಿ ಅವರು ಆತ್ಮದಿಂದ ಮಾಂಸವನ್ನು ಜೈಸಿ, ಬಹಿರಂಗದ್ದನ್ನು ಯೆಷ್ಟಾದರೂ ಲಕ್ಷಿಸದೆ ಇರಲಾಗಿ, ದಾಸ ರೂಪದ ವೇಷದಲ್ಲಿ ಬಂದ ದೇವರ ನಿಯೂಗಿಯನ್ನು ತುಚ್ಛೀಕರಿಸದೆ, ಕಳುಹಿಸಿದವನಂತೆಯೆ ಕಳುಹಿಸಲ್ಪಟ್ಟವನನ್ನು ಸನ್ಮಾನಿಸಿದರು. ಸ. ೩, ೨.

೫. ಅಂದರೆ, ನಿಮಗೆ ಅತಿಪ್ರಿಯವಾದ್ದನ್ನು ಕಾಡುತ್ತಿದ್ದಿರಿ. ಮತ್ತಾ. ೫, ೨೯. ಪೌಲನು ಕಣ್ಣಿನ ಒಂದು ರೂಗದಿಂದ ಆಗ್ಗಾಗ್ಗೆ ಬಹಳ ಉಪದ್ರವ ಪಟ್ಟಿದರಿಂದ, ಗಲತರು ಅತಿಶಯವಾದ ಮಮತೆಯಿಂದ, ಆಗುವದಾದರೆ, ಅವನಿಗೆ ತಮ್ಮ ಕಣ್ಣುಗಳನ್ನು ಕಾಡ ಮನಗಾಂಡಿದ್ದರು.

೬. ಅಂದರೆ, ಮತ್ಸರದ ಪ್ರೀತಿಯಿಂದ ಬೆನ್ನಟ್ಟಿ, ಕಾದು, ತನ್ನ ವಶದಲ್ಲಿ ಇಟ್ಟು ಕಾಳ್ಳ ನಾೀಡುವದು. ದೂರದಲ್ಲಿದ್ದರೂ, ಬಾೀಧಕರಿಗೂ ಸಖೆಗಳಿಗೂ ಇಂಥಾ ಪ್ರೀತಿಯ ಬಳಿಕೆಯು ಯಾವಾಗಲೂ ಇರತಕ್ಕದ್ದು; ಬಾೀಧಕರು ಯೌವನದ ಸಖೆಗಳಿಗಾಸ್ಕರ ಪರಿಶುದ್ಧವಾದ ಆಸಕ್ತಿಯಿಂದ ಚಿಂತಿಸುವದೂ, ಅವರು ತಮ್ಮ ಬಾೀಧಕರಂನು ಕೃತಜ್ಞತೆಯಲ್ಲಿ ಪ್ರತಿಯಾಗಿ ಪ್ರೀತಿ ಮಾಡುವದೂ ಸಹಜವಾಗಿರುತ್ತದೆ. ಪೂರ್ವಾಗೆ ಗಲತರೂ ಅವರ ಬಾೀಧಕರೂ ಮಾಬ್ಬರಮೇಲಾಬ್ಬರು ಆಸಕ್ತಿಯಿಂದ ಪ್ರೀತಿ ಇಟ್ಟದ್ದು ತಕ್ಕದ್ದಾಗಿತ್ತು. ಆದರೆ ಸಖೆಯನ್ನು ಶುದ್ಧ ಕನೈಯಾಗಿ ಕ್ರಿಸ್ತನ ಬಳಿಗೆ ತರುವದಕ್ಕೆ ಕ್ರಿಸ್ತನಿಗಾಸ್ಕರ ಆಸಕ್ತಿ ಪಡ ತಕ್ಕದ್ದು ೨ ಕಾರಿ. ೧೧, ೨. ಆ ಕುಪಿಕಬಾೀಧಕರು ಪೂರ್ವಾಗೆ ಮಾಡಲಿಲ್ಲಾ; ಅವರು ತಮ್ಮ ಪ್ರಯೋಜನವನ್ನು ಮಾತ್ರವೆ ಚಿಂತಿಸಿ, ತಮ್ಮ ಪಕ್ಷದ ವಾಂದು ಗುಂಪು ಕಟ್ಟಿಕಾಳ್ಳ ನಾೀಡಿದರಲ್ಲದೆ, ಬೇರಾಂದಿಲ್ಲಾ; ಇದಲ್ಲದೆ ಗಲತರು ಅವರ ಮಾತು ಕೇಳಿ, ಪೌಲನಿಗೂ ಕ್ರಿಸ್ತನಿಗೂ ಸಹಾ ಬೆನ್ನು ಪೂರ್ವಾಕಿದರು. ಆದ್ದರಿಂದ ಪೌಲನು ವ. ೧೮. ಕಳದು ಪೂರ್ವಾದ ಕಾಲದ ಮುಂಚಿನ ಪ್ರೀತಿಯನ್ನು ನೆನಪು ಮಾಡಿ, ದುಃಖ ಪಡುತ್ತಾನೆ.

೭. ಮೇಲಿನ ಮಾತು ಕಠಿಣವಾಗಿ ತಾೀರಿದ ಕಾರಣ, ಅವನು ಅತಿ ನಮ್ರಪ್ರೀತಿಯ ವಚನಗಳನ್ನು ಪ್ರಯೋಗಿಸುತ್ತಾನೆ. ಆದರೂ ಆ ವಚನಗಳು ಯಥಾಸ್ಥಿತಿಗೆ ಸರಿ ಬಿದ್ದವು. ಪೂರ್ವಾಗೆಂದರೆ, ಸುವಾರ್ತೆಯ ಪ್ರಸಂಗದಿಂದ ಅವನು ಅವರನ್ನು ಪಡದನು. ೧ ಕಾರಿ. ೪, ೧೫. ಮಗು ಪೆರುವ ತಾಯಿಗೆ ಬರುವ ವೇದನೆಗಳಂತೆ, ಗಲತರನ್ನು ದೇವರ ಉಚಿತ ಕೃಪೆಯ ಸುವಾರ್ತೆಯಿಂದ ಯೆರಡನೆ ಸರ್ತಿ ದೇವರ ಕಡೆಗೆ ತಿರುಗಿಸ ಇಚ್ಛೈಸುವ ಪೌಲನಿಗೆ ಅವರಿಗಾಸ್ಕರ ಯೆರಡನೆ ಸರ್ತಿ ಆಯಾಸವೂ ಕಷ್ಟವೂ ವೇದನೆಗಳೂ ಪ್ರಾಪ್ತಿಯಾಗುತ್ತವೆ.

೮. ಕ್ರಿಸ್ತನ ಸತ್ಯವೂ ಮನಸ್ಸೂ ರೂಪವೂ ನಿಮ್ಮ ವಿಶ್ವಾಸದಲ್ಲಿಯೂ ನಡತೆಯಲ್ಲಿಯೂ ಸ್ಥಾಪನೆಯಾಗುವ ಪೂರ್ವಾಗೆ, ನೀವು ತಿರಿಗಿ ಪುಟ್ಟುವ ಮಟ್ಟಿಗೂ, ಯೆಂಬ ಅರ್ಥ.

೯. ನಿಮ್ಮ ನಿಜಸ್ಥಿತಿಯು ಪೂರ್ವಾಗೆ ಇರುತ್ತದೆಂದು, ನಾನು ಅರಿಯದೆ ಇರುವ ಕಾರಣ, ನಿಮ್ಮ ಬಳಿಗೆ ಬಂದು, ನಿಮ್ಮ ಕಿವಿಗಳಲ್ಲಿ ಚನ್ನಾಗಿ ಬೀಳುವ ಶಬ್ದದಿಂದ ಮಾತಾಡ ಇಚ್ಛೈಸುತ್ತೇನೆ; ಅವಶ್ಯವಿದ್ದ ಪೂರ್ವಾಗೆ ಶಿಕ್ಷಿಸಿ, ಬುದ್ಧಿ ಹೇಳಿ, ಅಥವಾ ಆದರಿಸಿ, ಬೇಡಿಕಾಂಡು, ನಿಂಮ ಸಂಗಡ ಮಾತಾಡ ಇಚ್ಛೈಸುತ್ತೇನೆ.

ಗಲ. ೪, ೨೧.

ಹಳೇ ವಾಡಂಬಡಿಕೆಯ ವಾಂದು ದ್ವಯಾರ್ಥದ ಕಥೆಯಿಂದ ತಕ್ಕಾಂಡ ಸುವಾರ್ತೆಯ ಸ್ವತಂತ್ರದ ವಿಷಯವಾದ ಉಪಪ್ರಮಾಣವು. ವ. ೨೧—೩೧.

ಅಪೊಸ್ತಲನು ವ. ೧೨—೨೦. ತಾನು ಕೊಡುವ ಪ್ರಮಾಣಕ್ಕೆ ಗಲತರ ಹೃದಯಗಳಿಗೆ ಸರಾಗ ಮಾರ್ಗ ಸಿಕ್ಕ ಬೇಕೆಂದು, ಕೇವಲ ಪ್ರೀತಿಮಮತಾಭಾವದಿಂದ ಮಾತಾಡಿದ ಮೇಲೆ, ಬೋಧನೆಯನ್ನು ಮುಂದೆ ನಾಗಿಸುತ್ತಾನೆ. ಅವನು ತನ್ನ ಸ್ವರವನ್ನು ಬೇರೆ ಮಾಡಿ ವ. ೨೦., ಗಲತರಲ್ಲಿ ಇದ್ದ ಯೆಹೂದ ಬೋಧಕರು ಮಾಡಿದ ರೀತಿಯಾಗಿ, ಹಳೆವೊಡಂಬಡಿಕೆಯ ವೊಂದು ಕಥೆಯನ್ನು ವ್ಯಾಖ್ಯಾನಿಸುತ್ತಾನೆ. ಅಂಥಾ ಅನ್ಯಾಭಿಪ್ರಾಯದ ವ್ಯಾಖ್ಯಾನವನ್ನು ಅವನು ಬೇರೆ ಯೆಲ್ಲಿಯೂ ಬರೆಯಲಿಲ್ಲ. ಆದರೆ ದಿವ್ಯ ಪ್ರಕಾಶವನ್ನು ಹೊಂದದೆ ಇದ್ದ ಯೆಹೂದರು ಇಚ್ಛಾನುಸಾರವಾಗಿ ಅರ್ಥ ಮಾಡಿದ ರೀತಿಯನ್ನು ನೋಡಿ, ಪೌಲನು ಇಲ್ಲಿ ಪರಿಶುದ್ಧ ಚರಿತ್ರದ ಅಭಿಪ್ರಾಯವನ್ನು ಸತ್ಯದ ಪ್ರಕಾರ ಬಿಚ್ಚಿ, ಅದು ಬೋಧನೆಗೂ ಶಿಕ್ಷೆಗೂ ಪ್ರಯೋಜನವಾದ ಪ್ರವಾದನೆಯೆಂದು ಯುಕ್ತವಾಗಿ ವಿವರಿಸುತ್ತಾನೆ. ಹ್ಯಾಗಂದರೆ, ನಿಯಮವೆಂಬ ಹಳೆವೊಡಂಬಡಿಕೆಯಲ್ಲಿ ಪೂರ್ಣ ಭರವಸವನ್ನಿಡುವವರಿಗೆ ಆ ಹಳೆವೊಡಂಬಡಿಕೆಯೆ, ಅವರು ನೆನಸದಿರುವಲ್ಲಿ, ಹೊಸವೊಡಂಬಡಿಕೆಯ ತತ್ವವಾದ ಉಚಿತ ಕೃಪೆಯನ್ನು ಹ್ಯಾಗೆ ಸೂಚಿಸುತ್ತದೆಂದು, ದೃಷ್ಟಾಂತ ಕೊಡುತ್ತಾನೆ. ಹಳೆವೊಡಂಬಡಿಕೆಯಲ್ಲಿ ವಿಶ್ವಾಸವಿಡುವ ಮಾರ್ಗದಿಂದ ಹೊಸವೊಡಂಬಡಿಕೆಯ ವಿಶ್ವಾಸಕ್ಕೆ ಬಾರದಿರುವಂಥಾ ನಮಗೆ, ಈ ಪ್ರಮಾಣ ಮಾರ್ಗವು ಹುಟ್ಟುಯೆಹೂದರಿಗಿದ್ದಷ್ಟು ಅವಶ್ಯವಲ್ಲಾ; ಆದರೆ ದೇವರ ವಾಕ್ಯದಲ್ಲಿ ಬರದ ಬೇರೆ ಬೇರೆ ಕಥೆಗಳಲ್ಲಿ ಬಹಿರಂಗವಾಗಿ ಕಾಣುವ ಅರ್ಥದ ಹೊರ್ತು, ಗುಟ್ಟಾದ ಮತ್ತೊಂದು ಅಭಿಪ್ರಾಯ ಉಂಟಾಗಿರುವ ಹಾಗೆ, ದೇವರ ರಾಜ್ಯದ ಕಾರ್ಯಗಳಲ್ಲಿ ಹ್ಯಾಗೆ ವೊಂದಕ್ಕೊಂದು ಸಂಬಂಧವಾಗಿರುತ್ತದೆಂದು ತಿಳುಕೊಳ್ಳುವದಕ್ಕೆ ಈ ಸ್ಥಳವು ವಿಶೇಷ ಸಹಾಯ ಮಾಡುತ್ತದೆ. ಹ್ಯಾಗೆ ಮೊಳೆಯದೆ ಇರುವ ಬೀಜದಲ್ಲಿಯೆ ಪೂರ್ಣವಾದ ಗಿಡವು ಸೂಕ್ಷ್ಮ ರೂಪವಾಗಿ ಉಂಟಾಗಿರುತ್ತದೋ, ಹಾಗೆಯೆ ಹೊಸವೊಡಂಬಡಿಕೆಯಲ್ಲಿ ಪೂರ್ಣ ವಿಕಸಿತವಾದ ದೇವರ ರಕ್ಷಣಾಲೋಚನೆಗಳು ಹಳೆವೊಡಂಬಡಿಕೆಯ ಚರಿತ್ರದ ಕಥೆಗಳಲ್ಲಿಯೂ ಅಡಗಿವೆ. ಹೀಗಿರಲಾಗಿ ದೇವರ ಆತ್ಮದ ಬೋಧನೆಯಿಂದ ಸುವಾರ್ತಾಸಂಕಲ್ಪದ ಸಾರಜ್ಞಾನಾದವನು ಸುವಾರ್ತೆಯ ತತ್ವವನ್ನು ಹಳೆವೊಡಂಬಡಿಕೆಯ ಕಥೆಗಳಲ್ಲಿಯೂ ಕಂಡು, ಅದರಲ್ಲಿರುವ ಮುಂಗುರುತುಗಳ ಅಭಿಪ್ರಾಯವನ್ನು ಬುಡದಿಂದ ತುದಿವರೆಗೂ ವಿವರಿಸ ಬಹುದು. ಆದರೆ ದೇವರ ರಾಜ್ಯದ ಕಾರ್ಯಗಳ ಸರ್ವಸಂಬಂಧವನ್ನು ನೋಡದೆ, ಇಲ್ಲಿ ಅಲ್ಲಿ ಪರಸ್ಪರ ಸದೃಶವಾಗಿ ತೋರುವ ಸಂಗತಿಗಳನ್ನು ಹಿಡಿದು, ಇಚ್ಛಾನುಸಾರವಾಗಿ ವ್ಯಾಖ್ಯಾನ ಮಾಡಲಿಕ್ಕೆ ಆಗದು. ಕ್ರಿಸ್ತನನ್ನೂ ಅಪೊಸ್ತಲರನ್ನೂ ಈ ಕಾರ್ಯದಲ್ಲಿ ಅನುಸರಿಸುವದು ವಾಸಿ. ಅವರು ಟೀಕಿಸಿ ಪ್ರಯೋಗಿಸಿದ್ದೆಲ್ಲಾ ಬದ್ಧವಾಗಿದೆ; ನಾವು ಪರಿಶುದ್ಧ ಚರಿತ್ರವನ್ನು ಯೆಷ್ಟು ಚನ್ನಾಗಿ ಉಪಯೋಗಿಸ ಬೇಕೆಂದು ಅರ್ಥ ಮಾಡಿದರೂ, ಆಗ್ಯಾಗ್ಯೆ ತಪ್ಪು ಬಿದ್ದೀತು. ಹಾಗಾದರೆ ಈಗ ಅಪೊಸ್ತಲನ ವ್ಯಾಖ್ಯಾನವನ್ನು ನೋಡುವಾ.

ನಾನು ವ. ೨೧., ಮೂರ್ಖ ನಿಯಮಾಭಿಮಾನಿಗಳಾದ ಯೆಹೂದ ಆಸಕ್ತಿಗಂಟರು ತಾವೆ ಈವರೆಗೆ ಚನ್ನಾಗಿ ವಿಚಾರಿಸದೆ ಬಿಟ್ಟ, ಹಳೆವೊಡಂಬಡಿಕೆಯಿಂದ ತಕ್ಕೊಂಡ, ಮುಂಗುರ್ತಿನ ಕಥೆಯಿಂದ ಅವರನು ಖಂಡಿಸುವೆನು. ೨೨. ನೀವು ಅತಿ ವಿಶೇಷವೆಂದೆಣಿಸುವ ಸಂತಾನಕ್ಕೆ ಮೂಲಪುರುಷನಾದ ಅಬ್ರಹಾಮನಿಗೆ

ಇಬ್ಬರು ಮಕ್ಕಳಿದ್ದರು. ಒಬ್ಬನು ದಾಸಿ ಹಾಗರಳಲ್ಲಿ ಹುಟ್ಟಿದವನು. ಮತ್ತೊಬ್ಬನಾದ ಇಸಾಕನು ಸ್ವತಂತ್ರಳಾದ ಗರ್ತಿ ಸಾರಳಲ್ಲಿ ಹುಟ್ಟಿದವನು. (ಸ. ೫, ೨೫. ಸರಿ ನೋಡಿಕೊ.) ೨೩. ಇಸ್ಮಯೇಲನು ಮಾಂಸದ ಪ್ರಕಾರ, ಅಂದರೆ, ಸ್ವಾಭಾವಿಕವಾದ ಜನಕಶಕ್ತಿಯಿಂದಲೂ ಮಾನುಷಚಿತ್ತದಿಂದಲೂ ಹುಟ್ಟಿದನು. ಆದರೆ ಇಸಾಕನು ಹಾಗಲ್ಲ; ಅವನು ಅಬ್ರಹಾಮನೂ ಸಾರಳೂ ವೃದ್ಧಾಪ್ಯದಿಂದ ಸಂತಾನ ಪಡಕೊಳ್ಳುವದಕ್ಕೆ ಸ್ವಾಭಾವಿಕ ಶಕ್ತಿಯಿಲ್ಲದಿರುವಾಗ, ವಾಗ್ದತ್ತಕ್ಕೆ ಅನುಸಾರವಾಗಿ ಸರ್ವತ್ರಾಣಿಯಾದ ದೇವರ ಅನುಗ್ರಹದಿಂದ ಆಶ್ಚರ್ಯರೀತಿಯಾಗಿ ಹುಟ್ಟಿದನು. ೨೪. ಇದು ಅನ್ಯಾಭಿಪ್ರಾಯದ ಕಥೆಯಾಗಿದೆ. ಹಳ್ಳೆವೊಡಂಬಡಿಕೆಯಲ್ಲಿಯೂ ಹೊಸವೊಡಂಬಡಿಕೆಯಲ್ಲಿಯೂ ದೇವರ ಜನಾಂಗದವರಾದ ಮನುಷ್ಯರ ಸ್ವಭಾವವನ್ನು ತಿಳಿಕೊಳ್ಳುವ ಹಾಗೆ, ದೇವರ ನಿರ್ಣಯಕ್ಕೆ ಅನುಸಾರವಾಗಿ ಇದೆಲ್ಲಾ ಆಯಿತು. ಇಸ್ಮಯೇಲಂದರೆ ಹಳ್ಳೆವೊಡಂಬಡಿಕೆಯ ಜನಾಂಗವು; ಅವನ ತಾಯಿ ಹಾಗರಳಂದರೆ ಸಿನಾಯಿ ಪರ್ವತದಲ್ಲಿ ಆದ ನಿಯಮಸ್ಥಾಪನೆಯಿಂದುಂಟಾದ ವೊಡಂಬಡಿಕೆಯು; ಹಾಗರಳು ಅಬ್ರಹಾಮನಿಗೆ ಹೆತ್ತ ಮಗನು ನಿಜಪುತ್ರನಾಗಿದ್ದರೂ, ಬಾಧ್ಯಸ್ಥನಾಗಿರದೆ, ದಾಸನಾಗಿ ಇದ್ದ ಹಾಗೆ, ಇಸ್ರಯೇಲರು ನಿಯಮವನ್ನು ಹೊಂದಿದ ಪರ್ವತವಾದ ಸಿನಾಯಿ ಸಹಾ ದೇವರಿಗೆ ಇಸ್ರಯೇಲರ ಜನಾಂಗವೆಂಬ ಬಬ್ಬ ಮಗನನ್ನು ಹೆತ್ತಿತು. ಆದರೆ ಇಸ್ರಯೇಲರ ಜನಾಂಗವು ಆತನ ಜನಾಂಗವೆಂದೆನಿಸಿ ಕೊಂಡರೂ, ಮಾಂಸವೆಂಬ ಬಹಿರಾಚಾರದ ಪ್ರಕಾರವೇ ಆತನ ಜನಾಂಗವಾದದ್ದಲ್ಲದೆ, ದೇವರ ರಾಜ್ಯಕ್ಕೆ ಬಾಧ್ಯಸ್ಥನಾಗಿರಲಿಲ್ಲಾ. ೨೫. ಅರಬಿ ಭಾಷೆಯಲ್ಲಿ ಸಿನಾಯಿಗೆ ಹಾಗರ ಯೆಂಬ ಹೆಸರು ಬಂದಿದೆ. (ಇದನ್ನು ಪೌಲನು ಅರ್ಬಸ್ಥಾನದಲ್ಲಿ ಇದ್ದಾಗ ಕೇಳಿರ ಬಹುದು.) ಈ ಯೆರಡು ಲಕ್ಷಣಯೆಹೂದ ಜನಾಂಗದ ರಾಜಧಾನಿಯಾಗಿರುವ ಈಗಿನ ಯೆರೂಸಲೇಮಿಗೆ ವೊಪ್ಪುತ್ತದೆ. ಅಲ್ಲೆ ಯೆಹೂದರ ದಾಸಭಾವವಾದ ನ್ಯಾಯಪ್ರಮಾಣದ ಆಚರಣೆಯೂ ದೇವಾಲಯದ ಆರಾಧನೆಯೂ ನಡಿಯುತ್ತವೆ. ೨೬. ಆದರೆ ಸಾರಳು ನಮ್ಮ ತಾಯಿ ಆಗಿರುವ ಪರಲೋಕದ ಯೆರೂಸಲೇಮೆಂಬ ಕ್ರೈಸ್ತ ಸಭೆಗೆ ದೃಷ್ಟಾಂತವಾಗಿದ್ದಾಳೆ. (ಇಲ್ಲಿ ಯೆರೂಸಲೇಮಿಗೆ ಮುಂದಿನ ಯುಗದಲ್ಲಿ ಪ್ರತ್ಯಕ್ಷವಾಗಲಿರುವ ದೇವರಾಜ್ಯವೆಂಬ ಅರ್ಥವಲ್ಲ. ಪ್ರಕ. ೨೧. ಇಬ್ರಿ. ೧೨, ೨೨. ಯೇಸು ಕ್ರಿಸ್ತನು ಭೂಮಿಯಲ್ಲಿ ಸ್ಥಾಪಿಸ ತಕ್ಕ ಪರಲೋಕ ಭಾವದ ಹೊಸ ರಾಜ್ಯವೆಂಬ ಅರ್ಥವದೆ.) ಸ್ವತಂತ್ರಳಾದ ಸಾರಳ ಮಗನು ಸ್ವತಂತ್ರನಾದ ಪುತ್ರನೂ ಬಾಧ್ಯಸ್ಥನೂ ಆಗಿದ್ದ ಪ್ರಕಾರ, ಹೊಸವೊಡಂಬಡಿಕೆಯ ಜನಾಂಗವು ದೇವರ ಐಶ್ವರ್ಯಕ್ಕೆಲ್ಲಾ ಬಾಧ್ಯಸ್ಥವಾಗಿರುತ್ತದೆ. ನಿಯಮವು ದಾಸರನ್ನೂ, ಸುವಾರ್ತೆಯು ಸ್ವತಂತ್ರರಾದ ಮಕ್ಕಳನ್ನೂ ಬಾಧ್ಯಸ್ಥರನ್ನೂ ಹುಟ್ಟಿಸುತ್ತದೆ. ೨೭. ಪರಲೋಕದ ಈ ಯೆರೂಸಲೇಮು ಅನೇಕರಿಗೆ ತಾಯಿಯಾಗ ಬೇಕೆಂಬದಕ್ಕೂ, ಕ್ರೈಸ್ತ ಸಭೆಯು ನಾಲ್ಕು ಕಡೆಯಲ್ಲಿಯೂ ವಿಸ್ತಾರವಾಗ ಬೇಕೆಂಬದಕ್ಕೂ ಯೆಶಾ. ೫೪, ೧ ರಲ್ಲಿ ಬರದ ಮೆಸ್ಸೀಯಪ್ರವಾದನೆಯು ಪ್ರಮಾಣವಾಗಿರುತ್ತದೆ. ಹ್ಯಾಗೆಂದರೆ, ಆ ಪ್ರಕಾರ ವೊತ್ತಾಯಕ್ಕೆ ವೊಳಗಾಗಿ, ಸಹಾಯಕರಿಲ್ಲದೆ ಶೆರೆಯಲ್ಲಿ ಬಿದ್ದು, ಆರಂಭದಲ್ಲಿ ಕೇವಲ ಅಲ್ಪವಾಗಿದ್ದ ಹೊಸವೊಡಂಬಡಿಕೆಯ ಸಭೆಯೆಂಬ ಹೆಂಡತಿಯು, ದೇವಾಲಯದ ಆರಾಧನೆ ನಡಿಯುವ ಕಾಲದಲ್ಲಿ ತನ್ನ ಜನಾಂಗದಲ್ಲಿ ದೃಶ್ಯವಾಗಿ ವಾಸಿಸುತ್ತಾ ಇರುವ ಕರ್ತನಾದ ಗಂಡನಿದ್ದ ಇಸ್ರಯೇಲರ ಜನಾಂಗವೆಂಬ ಹೆಂಡತಿಗಿಂತ, ಸಭಾಂಗಗಳೆಂಬ ಅಧಿಕ ಮಕ್ಕಳನ್ನು ಹೊಂದುವಳು. ೨೮. ಹಾಗಾದರೆ, ಕ್ರೈಸ್ತರು ಇಸಾಕನ ಹಾಗೆ ವಾಗ್ದತ್ತದ ಮಕ್ಕಳೂ, ನಿಯಮಾನುಸಾರವಾದ ಸ್ವಂತ ಕರ್ಮಗಳನ್ನು ನಂಬದ ದೇವರ ಮಕ್ಕಳೂ ಬಾಧ್ಯಸ್ಥರೂ ಆಗಿದ್ದಾರೆ. ೨೯. ಆದರೆ ಇಸಾಕನು ಇಸ್ಮಯೇಲನಿಂದ

ಗಲ. ೪, ೩೦—೩೧.

ನಿಂದೆಯನ್ನೂ ಅಪಹಾಸ್ಯವನ್ನೂ ತಾಳಿಕೊಳ್ಳ ಬೇಕಾದ ಪ್ರಕಾರ ಉತ್ಪ. ೨೧, ೯., ಕ್ರೈಸ್ತರು ಯೆಹೂದರ ಹಿಂಸೆಯನ್ನು ತಾಳ ಬೇಕು. ೩೦. ಆದರೆ ಹಾಗರಳು ಮಗನ ಸಂಗಡ ದೇವರ ಅಪ್ಪಣೆಯಿಂದ ಹೊರಗೆ ಹಾಕಲವಶ್ಯವಾದ ಹಾಗೆ, ನಿಯಮದ ನೊಗದ ಕೆಳಗೆ ಇರಲಿಚ್ಛಿಸುವ ಯೆಹೂದರು ಮೆಸ್ಸೀಯ ರಾಜ್ಯದಿಂದ ಹೊರಗಾಗಿ, ಅದರ ಆಶೀರ್ವಾದಗಳನ್ನು ಹೊಂದದಿರುವರು. ದೇವರ ಉಚಿತ ಕೃಪೆಯು ಬೇಡೆಂದನ್ನುವ ವನು ದೇವರ ಮಕ್ಕಳ ಕುಟುಂಬಕ್ಕೆ ತಾನಾಗಿ ಬೇರೆಯಾಗುತ್ತಾನೆ. ೩೧. ಆದ್ದರಿಂದ ಇನ್ನೊಮ್ಮೆ ಹೇಳು ತ್ತೇನೆ, ನನ್ನ ಮಾತು ಮನಸ್ಸಿಗೆ ಹತ್ತಿಸಿ ಕೊಳ್ಳಿರಿ: ನಾವು ಹೊಸವೊಡಂಬಡಿಕೆಯ ಸ್ವತಂತ್ರವುಳ್ಳ ಸಭೆಗೆ ಶೇರಿದವರಾಗಿದ್ದೇವೆ.

ಈ ನಾಮ್ಯದಲ್ಲಿ ಮುಖ್ಯ ಸಂಗತಿಗಳು ಯಾವವೆಂದರೆ:

೧) ಅಬ್ರಹಾಮನ ಇಬ್ಬರು ಮಕ್ಕಳು ಹಳೆ ಹೊಸವೊಡಂಬಡಿಕೆಗಳ ದೇವಜನಾಂಗಕ್ಕೆ ದೃಷ್ಟಾಂತ ವಾಗಿದ್ದಾರೆ. ಹಾಗಂದರೆ ಯೆಹೂದತ್ವವೂ ಕ್ರೈಸ್ತತ್ವವೂ ಯೆರಡೂ ಅಬ್ರಹಾಮನಿಂದ ಬರುತ್ತವೆ. ಅಬ್ರ ಹಾಮನು ಪರಿಚ್ಛೇದನೆಯುವರಿಗೂ ಪರಿಚ್ಛೇದನೆ ಇಲ್ಲದವರಿಗೂ ತಂದೆಯಾಗಿದ್ದಾನೆ.

೨) ಒಬ್ಬನ ಉತ್ಪತ್ತಿಯು ಸ್ವಾಭಾವಿಕ ಮಾರ್ಗದಲ್ಲಿ, ಮತ್ತೊಬ್ಬನದು ಸ್ವಭಾವಾತೀತವಾದ ಮಾ ರ್ಗದಲ್ಲಿ ದೇವರ ಕೇವಲ ಕೃಪೆಯ ಪ್ರವೃತ್ತಿಫಲವಾಗಿ ಉಂಟಾಗುತ್ತದೆ; ಹಾಗಂದರೆ, ನಿಯಮಕ್ಕೆ ಮನು ಷ್ಯನು ಸ್ವಾಭಾವಿಕವಾದ ತ್ರಾಣದಿಂದ ಒಳಗಾಗ ಬಹುದು, ಆದರೆ ಸುವಾರ್ತೆಯಲ್ಲಿ ರಕ್ಷಣೆಯ ಕಾರ್ಯ ವೆಲ್ಲಾ ದೇವರಿಂದಲೆ ಆಗುತ್ತದೆ. ಮನುಷ್ಯನು ನಂಬುತ್ತಾನೆ ಅಷ್ಟೆ.

೩) ಒಂದು ಕಡೆಯಲ್ಲಿ ದಾಸತ್ವವು, ಮತ್ತೊಂದು ಕಡೆಯಲ್ಲಿ ದೇವರ ಮಕ್ಕಳ ಸ್ವತಂತ್ರವು.

೪) ಹೊಸವೊಡಂಬಡಿಕೆಯಾದ ಕ್ರಿಸ್ತನ ಸಭೆಯು ಅತ್ಯಲ್ಪವಾದ ಮೂಲದಿಂದಲೆ ಬೆಳಿಯುತ್ತಾ ಬೆಳಿಯುತ್ತಾ ಹೋಗ ಬೇಕು.

೫) ಯೆಹೂದತ್ವವು ಇಂದಿನವರೆಗೂ ಸಭೆಯನ್ನು ಹಿಂಸಿಸುತ್ತದೆ.

೬) ಆದರೆ ಅದು ಕಡೆಯಲ್ಲಿ ಪೂರ್ಣವಾಗಿ ಕಳ್ಳದು ಹೋಗ ಬೇಕು.

೭) ಆದಕಾರಣ ನಾವು ಸುವಾರ್ತೆಯ ಸ್ವತಂತ್ರವನ್ನು ಬಿಮ್ಮಗೆ ಕೈಕೊಳ್ಳುವಾ.

ಗಲತರ ಪತ್ರಿಕೆಯ ಮೂರನೆ ಭಾಗ.

ಸ. ೫೧. ೬.

ಸುವಾರ್ತಾ ಸ್ವತಂತ್ರವನ್ನು ನ್ಯಾಯ ಪ್ರಕಾರ ಪ್ರಯೋಗಿಸ ಬೇಕೆಂಬ ಬುದ್ಧಿಯ ಮಾತು.

ಅಪೊಸ್ತಲನು ಈ ವರೆಗೆ ಅಸ್ತಿವಾರವನ್ನಿಟ್ಟು, ವಿಶ್ವಾಸಿಯು ನಿಯಮದಿಂದ ಬಿಡುಗಡೆಯಾಗಿದ್ದಾನೆಂದು ಹಳೆವೊಡಂಬಡಿಕೆಯಿಂದಲೆ ಪರಮ ಸ್ಪಷ್ಟವಾಗಿ ಪ್ರಮಾಣಿಸಿದ ಮೇಲೆ, ಈ ಬೋಧನೆಯ ಪ್ರಯೋಜನವನ್ನು ಹೇಳಲಿಕ್ಕೆ ತೊಡಗುತ್ತಾನೆ. ೧) ಮೊದಲು ಅವನು ಯೆಹೂದ ಕುಹಕ ಬೋಧಕರಿಗೆ ಕಿವಿಕೊಡದೆ ಈ ಸ್ವ ತಂತ್ರವನ್ನು ಹಿಡುತೊಳ್ಳ ಬೇಕೆಂದು, ಬುದ್ಧಿ ಹೇಳುತ್ತಾನೆ. ೫, ೧—೧೨. ೨) ಬಳಿಕ ಅದನ್ನು ಅಪ ಯೋಗಿಸುವ ಮೋಸವನ್ನು ನಿವಾರಿಸುವ ಬಗ್ಯೆ, ಪ್ರೀತಿ ಪರಿಶುದ್ಧತ್ವಗಳ ಭಾವವನ್ನು ಪ್ರಸಂಗಿಸಿ, ಸ್ವತಂ

ತಕ್ಕೆ ವೊಪ್ಪುವ ನಡತೆ ಬೇಕೆಂದು ಎಚ್ಚರಿಸಿ, ಕಡೇ ಸಂಧಿಯಲ್ಲಿ ನಾನಾ ಪ್ರಸ್ತಾವೋಚಿತ ವಿಧಿಗಳನ್ನು ಕೊಡುತ್ತಾನೆ.

ಸಂಧಿ ೫.

I. ಕ್ರೈಸ್ತ ಸ್ವತಂತ್ರದಲ್ಲಿ ನೆಲೆಯಾಗಿರ ಬೇಕೆಂಬ ಬುದ್ಧಿಯ ಮಾತು. ವ. ೧—೧೨.

(ಯೆಹೂದತ್ವದಲ್ಲಿ ಪುನರಪಿ ಬೀಳ ಬಾರದೆಂಬ ಬೆದರಿಕೆ.)

ಕ್ರೈಸ್ತ ಸ್ವತಂತ್ರದಲ್ಲಿ ನೆಲೆಯಾಗಿರುವದು. ಪರಿಚ್ಛೇದನೆಯ ಪುನಃಸ್ವೀಕಾರವು ಅ) ಕ್ರೈಸ್ತ ಸತ್ಯಕ್ಕೆ ಶುದ್ಧ ವಿರೋಧವಾಗಿದೆ. ವ. ೨—೬. ಇ) ನಿಮ್ಮ ಸ್ವಂತ ಸದ್ಭಾವಕ್ಕೆ ವಿರೋಧವಾಗಿದೆ. ವ. ೭—೧೨.

೧. ಹೀಗಿರುವದರಿಂದ ಕ್ರಿಸ್ತನು ನಮ್ಮಂನು ಬಿಡುಗಡೆ ಮಾಡಿದ ಬಿಡುಗಡೆಯಲ್ಲಿ ನಿಂತು ಕಾಳ್ಳಿರಿ. ೨. ಮತ್ತು ತಿರಿಗಿ ದಾಸತ್ವದ ನೊಗಕ್ಕೆ ಒಳಗಾಗ ಬೇಡಿರಿ. ಇಗೋ ಪೌಲನಾದ ನಾನು ೧) ನಿಮಗೆ ಹೇಳುತ್ತೇನೆ—ಪರಿಛ್ಛೇದನೆ ಹೊಂದಿದರೆ, ಕ್ರಿಸ್ತನು ೨) ನಿಮಗೆ ಯೇನೂ ಪ್ರಯೋಜನವಾಗುವದಿಲ್ಲ. ೩. ಆದರೆ ಪರಿಛ್ಛೇದನೆ ಹೊಂದುವ ಒಬ್ಬೊಬ್ಬ ಮನುಷ್ಯನಿಗೆ ನ್ಯಾಯಪ್ರಮಾಣವನ್ನೆಲ್ಲಾ ಮಾಡುವ ಹಂಗಿನಲ್ಲಿದ್ದಾನೆಂದು ೩), ತಿರಿಗಿ ಸಾಕ್ಷಿ ಕೊಡುತ್ತೇನೆ. ೪. ನ್ಯಾಯಪ್ರಮಾಣದಿಂದ ನೀತಿ ನಿರ್ಣಯ ಪಡುವವರ್ಯಾರೋ, ಕ್ರಿಸ್ತನಿಗೆ ಬೇರೆಯಾದಿರಿ; ಕೃಪೆಯಲ್ಲಿಂದ ಬಿದ್ದು ಹೋದಿರಿ. ೫. ಯಾಕಂದರೆ ನಾವು ಆತ್ಮದ ೪) ಮೂಲವಾಗಿ ವಿಶ್ವಾಸದಿಂದ ನೀತಿಯ ೫) ನಿರೀಕ್ಷೆಯಂನು ಯೆದುರು ನೋಡುತ್ತೇವೆ. ೬. ಹ್ಯಾಗಂದರೆ ಕ್ರಿಸ್ತಯೇಸುವಿನಲ್ಲಿ ಪರಿಛ್ಛೇದನೆಯಾದರೂ, ಅಪರಿಛ್ಛೇದನೆಯಾದರೂ ೬), ಯೇನೂ ಉಪಯೋಗಿಸುವದಿಲ್ಲ; ಆದರೆ ಪ್ರೀತಿಯಿಂದ ಯತ್ನಿಸುವ ವಿಶ್ವಾಸವೇ ೭).

ಇಲ್ಲಿರುವ ಆಲೋಚನಾ ಕ್ರಮವೇನಂದರೆ:

೧) ಮುಖ್ಯ ವಾಕ್ಯ. ಯೆಹೂದರ ಆಚಾರಗಳಿಗೆ ತಿರುಗಿ ಕೊಂಡು ಕ್ರಿಸ್ತನನ್ನು ಬಿಡಲೂ, ನಿಯಮಕ್ಕೆ ವೊಳಗಾಗಲೂ ಬಾರದು.

೨) ಕಾರಣಗಳು. ಪರಿಚ್ಛೇದನೆಯನ್ನು ತಕ್ಕೊಳ್ಳುವದರಿಂದಲೆ, ಈ ನಷ್ಟ ಬರುವದೆಂದು, ನಿಮಗೆ ದೃಢವಾಗಿ ಹೇಳುತ್ತೇನೆ. ವ. ೨.

೩) ಯಾಕಂದರೆ, ಪರಿಚ್ಛೇದನೆ ಇರುವಲ್ಲಿ ಸಮಸ್ತ ನಿಯಮವನ್ನು ಕೈಕೊಳ್ಳುವ ಅವಶ್ಯಕವು ಹುಟ್ಟುತ್ತದೆ.

೪) ನಿಯಮವಿರುವಲ್ಲಿ ಕ್ರಿಸ್ತನ ಕೃಪೆಗೆ ಇಂಬು ಇಲ್ಲ.

೫) ಕ್ರಿಸ್ತನ ಬಳಿಯಲ್ಲಿ ವಿಶ್ವಾಸ ಮಾತ್ರವೆ ಸಲ್ಲುತ್ತದೆ. ವ. ೫. ೬

ಗಲ. ೫, ೧—೬.

೧. ಪೌಲನಾದ ನಾನು, ಅಪಾಸ್ತಲನ ಅಧಿಕಾರದಿಂದ ನಿಮಗೆ ಸಾರಿ ಸಾರಿ ಹೇಳುತ್ತೇನೆ.

೨. ನೀವು ಪರಿಚ್ಛೇದನೆಯನ್ನು ರಕ್ಷಣೆಗೆ ಅವಶ್ಯವೆಂದು ಮಾಡಿಸಿ ಕಾಂಡರೆ, ಕ್ರಿಸ್ತನ ಪರಿಚಾರತಾಗಿ ಅದನ್ನು ಸಫಲಾ ಅಂಗೀಕರಿಸಿದರೆ, ನೀವು ಆತನಲ್ಲಿ ಮಾತ್ರವೆ ನೀತಿಯನ್ನೂ ಸಫಲಾಯವನ್ನೂ ಪುಡುಕದಿರುವದರಿಂದ, ಕ್ರಿಸ್ತನಲ್ಲಿ ನಿಮಗೆ ಪಾಲು ಸಿಕ್ಕದು. ಕ್ರಿಸ್ತನಲ್ಲಿ ಇಡತಕ್ಕ ಯೇಕಾಶ್ರಿತಾವದ ಪರಿಚಾರತು, ಬೇರೆ ಯೇನಾದರೂ ರಕ್ಷಣೆಗೆ ಆಧಾರವೆಂದು ಹೇಳಿದರೆ, ಅಥವಾ ರಾಮಿಯಾಯ ಸಚೆಯಂತೆ, ವಿಶ್ವಾಸದಿಂದ ಮಾತ್ರವಲ್ಲ, ವಿಶ್ವಾಸದಿಂದಲೂ ಸಕ್ರಿಯೆಗಳಿಂದಲೂ ರಕ್ಷಣೆ ಪರಿಚಾರದಿಂದ ಬೇಕೆಂದರೆ, ಅದೇ ಪ್ರಕಾರವಾಯಿತು. ಪೌಲನು ಯೆಹೂದರ ಸ್ನೇಹಪರಾರ್ಥವಾಗಿ ತಿಮೊಥೆಯನಿಗೆ ಪರಿಚ್ಛೇದನೆ ಮಾಡಿಸಿದ ಸಂಗತಿ ಬೇರೆ.

೩. ವಾಂದು ವೇಳೆ ಕೆಲವರು, ತಾವು ಯೆಲ್ಲಾ ನಿಯಮವನ್ನಲ್ಲಾ, ಪರಿಚ್ಛೇದನೆಯನ್ನು ಮಾತ್ರ ಕೈಕಾಳ್ಳ ಅಪೇಕ್ಷಿಸುತ್ತೇವೆಂದು, ಹೇಳಿ ಇದ್ದಾರು. ಅಂಥವರಿಗೆ ಪೌಲನು, ಪರಿಚ್ಛೇದನೆಯು ವಾಡಂಬಡಿಕೆಯ ಪ್ರಸಾದಕ್ಕೆ ಗುರುತಾಗಿರುವ ಕಾರಣ, ಯೆಲ್ಲಾ ನಿಯಮವನ್ನು ಕೈಕಾಳ್ಳುವದಕ್ಕೂ, ನಿಯಮದ ವಾಂದು ಪಾಲು ಕೈಕಾಂಡರೆ, ಯೆಲ್ಲಾ ನಿಯಮವನ್ನು ಕೈಕಾಳ್ಳುವದಕ್ಕೂ ವಾಳಗಾಗುತ್ತೇವೆಂದು, ಬಹು ಬಲವಾಗಿ ತಿಳಿಸುತ್ತಾನೆ. ಯಾಕಾ. ೨, ೧೦. ಸರಿನಾಶಿಕಾ. ಆದ್ದರಿಂದ ಯಾರಾದರೂ ದೇವರ ಮುಂದೆ ನೀತಿ ಪಡುವ ಆಲಾಚನೆಯಿಂದ ವಾಂದು ಮುಖ್ಯ ಕಟ್ಟಳೆಯನ್ನು ಮಾಡ ಇಚ್ಛೈಸುವದಾದರೆ, ಅಂಥವನು ಆ ವಾಂದೇ ಕಾರಣದಿಂದ ಕ್ರಿಸ್ತನಲ್ಲಿರುವ ದೇವರ ವಾಡಂಬಡಿಕೆ ಯೆಂಬ, ವಿಮೋಚನೆಯನ್ನೆ ಬಿಸಾಡಿದ ಪರಿಚಾರಾಗಾಯಿತು. ದೇವರು ಅವನು ಸಮಸ್ತ ನಿಯಮವನ್ನು ಕೈಕಾಳ್ಳುವ ಪಂಗಿನಲ್ಲಿದ್ದಾನೆಂದು ನಿರ್ಣಯಿಸುವನು.

೪. ಮಾಂಸಚಾವದ ಯಾವ ಬಹಿರಾಚರಣೆಯಿಂದಲಾದರೂ, ನಮ್ಮ ಬಲಹೀನವಾದ ಸ್ವಚಾವದ ಪ್ರಯತ್ನವಾದ ಪರಿಚ್ಛೇದನೆಯಿಂದಲಾದರೂ ಅಲ್ಲ, ಪರಿಶುದ್ಧಾತ್ಮದ ಬಲದಿಂದಾಗುವ ಆತ್ಮಚಾವದ ಧರ್ಮದಿಂದಲೇ ನೀತಿಯನ್ನು ಪರಿಚಾರದ ಬಹುದು. ವಿಶ್ವಾಸದಿಂದ ಪುಟ್ಟಿ, ನಿರೀಕ್ಷೆಯಲ್ಲಿ ನೆಲೆಯಾಗಿರುವ ಸತ್ಯವಾದ ಆತ್ಮಿಕ ನೀತಿಗೂ, ಇಹದಲ್ಲಿ ಬಹಿರಂಗದಲ್ಲಿ ಕಾಣುವಂಥಾ, ಪ್ರಾಪ್ತವಾಗುವಂಥಾ, ಅನುಚವಿಸಿದ್ದನ್ನೂ ನಾಶಿದ್ದನ್ನೂ ನಂಬುತ್ತೇನೆಂಬುವ ನಿಯಮಕ್ರಿಯಾಜಾತವಾದ ಮಾಂಸಚಾವನೀತಿಗೂ ಯೆಂಥಾ ವ್ಯತ್ಯಾಸವು!

೫. ವಿಶ್ವಾಸನೀತಿಯು ಇಹದಲ್ಲಿ ವಿಶ್ವಾಸಿಗಳಿಗೆ ದಾರಕುವ ಕೃಪಾದಾನವಾಗಿದ್ದರೂ, ಪರದಲ್ಲಿ ಮಾತ್ರ ಪೂರ್ಣವಾಗಿ ಸಿದ್ಧಿಸುವದು.

೬. ಪರಿಚ್ಛೇದನೆಯಾಗಲಿ, ಅಪರಿಚ್ಛೇದನೆಯಾಗಲಿ, ಯಾವದಾಂದು ಬಹಿರಾಚರಣೆಯೂ ಕೆಲಸಕ್ಕೆ ಬಾರದು. ವಿಶ್ವಾಸವಿದ್ದರೆ, ಪರಜನರಲ್ಲಿ ಪುಟ್ಟಿದ್ದರೂ ಯೆಹೂದರಲ್ಲಿ ಪುಟ್ಟಿದ್ದರೂ, ಪೆಚ್ಚುಕವಿಮೆ ಇಲ್ಲ.

೭. ಇದೇ ಶಬ್ದ ರಾಮ. ೭, ೫. ೨ ಕಾ. ೧, ೬. ೪, ೧೨. ಎಫೆ. ೩, ೨೦. ೧ ಥೆಸ್ಸ. ೨, ೧೩. ೨ ಥೆಸ್ಸ. ೨, ೭. ಬರುತ್ತದೆ. ಪ್ರೀತಿಯಿಂದ ಸಚೇತನವಾಗುತ್ತದೆಂದು ರಾಮಿಯಾಯರು ಮಾಡಿದ ಭಾಷಾಂತರವು ಅಬದ್ಧವಾಗಿದೆ. ಅವರ ಅಭಿಪ್ರಾಯದ ಪ್ರಕಾರ ಪ್ರೀತಿಯು ಮತ್ತಾಂದು ಮೂಲದಿಂದ ಪುಟ್ಟಿ, ನಿರ್ಜೀವ ಭಾವವಾಗಿರುವ ವಿಶ್ವಾಸವನ್ನು ಸಚೇತನ ಮಾಡ ಬೇಕು. ಇದು ವ್ಯರ್ಥ ಮಾನುಷ ಬುದ್ಧಿ. ಕ್ರಿಸ್ತನನ್ನೂ ಆತನ ವಿಮೋಚನೆಯನ್ನೂ ಸ್ವಂತಕ್ಕೆ ಮಾಡಿ ಕಾಳ್ಳುವ ವಿಶ್ವಾಸವು ಮನುಷ್ಯನಲ್ಲಿ ಪರಿಚಾಸದೈವಿಕ ಜೀವದ ಸಜೀವವಾದ ಮೊಳಕೆಯಾಗಿರುತ್ತದೆ. ಅದು ಆಂತರ್ಯದಲ್ಲಿ ಮರೆಯಾಗಿದ್ದು, ಗಲತದ ಕುಪಿಕಬಾಧಕರು ಹೇಳಿದ ಪರಿಚಾರಕ್ಕೆ ಬಹಿರಂಗದ ಆಚಾರಗಳಲ್ಲಿ ಅಲ್ಲಾ, ಪ್ರೀತಿ ಕ್ರಿಯೆಗಳಲ್ಲಿ ಪ್ರತ್ಯಕ್ಷವಾಗುತ್ತದೆ. ವಿಶ್ವಾಸವು ಪ್ರೀತಿಯ ಫಲವನ್ನು ಕಾಡ ಬೇಕು. ಪ್ರೀತಿಯು ವಿಶ್ವಾಸದಿಂದ ಪುಟ್ಟ ಬೇಕು.

ಗಲ. ೫, ೭—೧೨.

೭. ಚಂನಾಗಿ ವ್ಯೌಡಿದಿರಿ ೧); ಸತ್ಯಕ್ಕೆ ಸಮ್ಮತಿ ಪಡದ ಹಾಗೆ, ಯಾರು ನಿಮಗೆ ಅಡ್ಡ ಹಾಕಿದರು? ೮. ಇಂ ಸಮ್ಮತಿಯು ನಿಮ್ಮಂನು ಕರೆದವನಿಂದ ಆದದ್ದಲ್ಲ. ೯. ಸ್ವಲ್ಪ ಹುಳಿಯು ಮುದ್ದೆಯನ್ನೆಲ್ಲಾ ೨) ಹುಳಿ ಮಾಡುತ್ತದೆ. ೧೦. ಯಾವದ ರಲ್ಲಾದರೂ ನಿಮಗೆ ಬೇರೆ ಮನಸ್ಸಾಗುವದಿಲ್ಲವೆಂದು, ನಾನು ಕರ್ತನಲ್ಲಿ ನಿಮ್ಮಂ ನು ಕುರಿತು ಭರವಸವಾಗಿದ್ದೇನೆ; ಆದರೆ ನಿಮ್ಮಂನು ತೊಂದರೆ ಪಡಿಸುವವನು, ಯಾರಾಗಲಿ, ಆಜ್ಞೆಯಂನು ತಾಳುವನು. ೧೧. ನಾನಾದರೆ, ಸಹೋದರರೇ, ಇಂ ನು ಪರಿಚ್ಛೇದನೆಯಂನು ಸಾರಿದರೆ, ಇಂನು ಯಾಕೆ ಹಿಂಸೆ ಪಡುತ್ತೇನೆ? ಹಾಗಾದ ರೆ, ಶಿಲುಬೆಯ ೩) ಯೆಡ ತಡೆಯು ತೆಗೆದು ಹಾಕಲ್ಪಟ್ಟಿರುವದು. ೧೨. ನಿಮ್ಮಂ ನು ಗಲಿಬಿಲಿ ಮಾಡುವವರು ಕಡಿದು ಬಿಡಲ್ಪಟ್ಟರೆ ೪), ವಾಶಿ.

ಸಂಕ್ಷೇಪಾರ್ಥವೇನಂದರೆ:

ಅ) ನೀವು ಪರರ ದುರ್ಬೋಧನೆಯಿಂದಲೇ ನೆಟ್ಟಾನ ಮಾರ್ಗವನ್ನು ಬಿಟ್ಟು ಹೋದಿರಿ. ವ. ೭—೯.

ಇ) ತಿರಿಗಿ ಬಂದೀತೆಂದು ನಿರೀಕ್ಷೆಯಲ್ಲಿ ಇದ್ದೇನೆ. ವ. ೧೦.

ಉ) ನಂನ ಮೇಲೆ ಸುಳ್ಳಾಡಿ, ನಿಮ್ಮನ್ನು ಮರುಳು ಗೊಡಿಸುವವರನ್ನು ದೇವರು ಶಿಕ್ಷಿಸುವನು. ವ. ೧೦—೧೨.

೧. ಪೌಲನು ಈ ಪತ್ರಿಕೆಯ ತಾತ್ಪರ್ಯವನ್ನು ವಿಸ್ತರಿಸುವಷ್ಟಕ್ಕೆ ತಾನು ಅತ್ಯಂತ ಪ್ರೀತಿ ಮಾಡುವ ಸಭೆಗಳಲ್ಲಿ ಸುವಾರ್ತೆಯ ಸತ್ಯವು ತಿರಿಗಿ ಮೇಲಾಗುವದೆಂಬ ಭರವಸವು ಅವನಲ್ಲಿ ಪ್ರಬಲವಾಯಿತು. ಆದರೆ ಅವನ ಪ್ರೀತಿ ಗಲತರ ಸಂಗಡ ವಾಕ್ಕಟ್ಟಾಗುವಷ್ಟಕ್ಕೆ ಅವನ ಕೋಪವು ಆ ಮೋಸಗಾರರ ಮೇಲೆ ಉರಿಯುತ್ತದೆ.

೨. ೧ ಕಾರಿ. ೫, ೬. ಕೆಲವು ಕುಪಕಬೋಧಕರು ಯೆಲ್ಲಾ ಸಭೆಯನ್ನು ಗಲಿಬಿಲಿ ಮಾಡುವದಕ್ಕೆ ಸಾಕಾದರು. ನೀವು ಪರಿಚ್ಛೇದನೆಯನ್ನು ವಿಶ್ವಾಸಕ್ಕೆ ಕೂಡಿಸಿಬರಿಂದ, ನಿಮ್ಮ ಸಮಸ್ತ ವಿಶ್ವಾಸಗ್ಞಾನವೂ ನಿಮ್ಮ ಸಮಸ್ತ ಕೃಪಾಸ್ಥಿತಿಯೂ ಕೆಟ್ಟು ಪೋಗಿವೆ.

೩. ಪೌಲನು ತಿಮೊಥೆಯನಿಗೆ ಪರಿಚ್ಛೇದನೆ ಮಾಡಿಸಿವ ನೆವನ ಪೋಲಿ, ಪೌಲನು ತಾನೆ ಪರಿಚ್ಛೇದನೆಯು ಶಾಶ್ವತವಾಗಿ ಇರತಕ್ಕದ್ದೆಂದು ಬೋಧಿಸುತ್ತಾನೆಂಬವಾಗಿ, ಆ ಕುಪಕಬೋಧಕರು ಸಾಧಿಸಿ ಇರಬಹುದು. ಆದರೆ ಪೂರ್ತಿಗೆ ಇರುತ್ತಿದ್ದರೆ, ಯೆಹೂದರು ರೋಮ ಪರಜನರ ಅಧಿಕಾರಿಗಳನ್ನು ಕೆದರಿಸಿ, ಕಲಹಗಳನ್ನು ಯೆಬ್ಬಿಸಿ, ಅವನನ್ನು ಹಿಂಸಿಸನಾಡುತ್ತಿದ್ದಿಲ್ಲಾ. ಪೌಲನು ಕ್ರೂಜಿತನಾದ ಯೇಸು ಕ್ರಿಸ್ತನಲ್ಲಿಡತಕ್ಕ ವಿಶ್ವಾಸದ ಪೂರ್ತಿರತಾಗಿ, ನಿಯಮವನ್ನು ಸಪೂರ್ತಿಕ್ಕೈಕಾಳ್ಳ ಬೇಕೆಂದು ಪರಜನರಿಗೆ ಅಪ್ಪಣೆ ಕಾಡುತ್ತಿದ್ದರೆ, ಯೆಹೂದರು ಅವನನ್ನು ಹಿಂಸಿಸದೆ, ತಮ್ಮ ಮತವನ್ನು ವಿಸ್ತರಿಸುವವನೆಂದು, ಪೂರ್ತಿಗಳುತ್ತಿದ್ದರು. ಆದರೆ ಕ್ರಿಸ್ತನು ಸಂಪೂರ್ಣವಾದ ವಿಮೋಚನಾ ಬಲಿಯಾಗಿರಲಾಗಿ, ಆತನಲ್ಲಿಡತಕ್ಕ ವಿಶ್ವಾಸದ ಪೂರ್ತಿರತಾಗಿ ಬೇರೆ ಸಾಧನವೆಲ್ಲಾ ನಿರರ್ಥಕವೆಂದು ಬೋಧಿಸುವದರಿಂದಲೆ ಕ್ರೂಜೆಯು ಮನುಷ್ಯರಿಗೆ ಯೆಡರು ಆಗುತ್ತದೆ. ಅದೇ ಪ್ರಕಾರ ಇಂದಿನ ವರೆಗೂ ಯೆಹೂದ ಜಾತಿಯವರಾಗಿರುವ ಸ್ವನೀತಿವಂತರಾದ ಕಾರ್ಮಿಕ ಪರಿಶುದ್ಧರಿಗೆ ಕ್ರಿಸ್ತನನ್ನು ಪ್ರಸಂಗಿಸಿದರೆ ಯೇನೂ ಅಡ್ಡಿ ಇಲ್ಲ. ಆದರೆ ಆತನಲ್ಲಿಯೂ ಆತನ ಕ್ರೂಜೆಯಲ್ಲಿಯೂ ಮಾತ್ರವೆ ಸಮಸ್ತ ಭರವಸವನ್ನಿ

ಟ್ಟು, ಯೆಲ್ಲಾ ಕರ್ಮಕೇರ್ಶಿಯನ್ನು ತೃಜಿಸಿದರೆ, ಇ ಡುರು ಬರುತ್ತದೆ.

೪. ಪೂರ್ಣ ಸಖೆಗಳ ಕ್ಷೇಮವನ್ನು ನಾೀಡಿ ಕಾಂ ಡು, ಸತ್ಯ ರಕ್ಷಣೆಯ ಮಾರ್ಗವನ್ನು ಕೆಡಿಸುವವರ ನ್ನು ಖಂಡಿಸಲವಶ್ಯವಾದಾಗ, ಪೌಲನು ಯೆಷ್ಟು ನಿ ಷ್ಠುರವಾಗಿದ್ದಾನೆ! ಆದರೂ ಕ್ರೈಸ್ತ ಸಖೆಯಿಂದ ಪೂ ರ್ಣವಾಗಿ ಕೆತ್ತು ಪುನಾಕಲ್ಪಡುವದೂ, ಅಥವಾ ಸೈ ತಾನನಿಗೆ ಪಾಪ್ಪಿಸಲ್ಪಡುವದೂ ೧ ಕಾರಿ. ೫, ೫. ೧ ತಿಮೊ. ೧, ೨೦. ಅಪರಾಧಿಗಳಿಗೆ, ಪಶ್ಚಾತ್ತಾ ಪ ಪಡುವ ಪಕ್ಷದಲ್ಲಿ, ರಕ್ಷಣೆಗೆ ಕಾರಣವಾಗ ಬ ಹುದಿತ್ತು. ಸಚಾಚರಿತ್ರದ ಸಾಕ್ಷಿಯಿಂದ ಕಾಣ ಬ ರುವದೇನಂದರೆ: ಈ ಯೆಪೂದ ಆಸಕ್ತಿ ಗಂಟರು ನಿ ಜವಾಗಿ ಸಖೆಯಿಂದ ಕಡಿದು ಪುನಾಕಲ್ಪಟ್ಟು, ನಚರಾ ಯರೂ ಎಬಿಯಾನ್ಯರೂ ಆಗಿ ಪುನಾೀಗಿ, ಪೆಚ್ಚು ಪೆ ಚ್ಚಾಗಿ ಸಖೆಯಿಂದ ತಂಮನ್ನು ವಿಂಗಡಿಸಿ ಕಾಂಡು, ಕಡೆಗೆ ಯೆಪೂದತ್ವದಲ್ಲಿ ತಿರಿಗಿ ಬಿದ್ದರು.

II. ವಿಶಾಲಮತಿಯವರು ಪ್ರೀತಿಯಲ್ಲಿಯೂ ಪರಿಶುದ್ಧತ್ವದಲ್ಲಿಯೂ ನಡಕಾಳ್ಳಬೇಕೆಂಬ ಬುದ್ಧಿಯ ಮಾತು. ೫. ೫, ೧೩. ೧೪.

ಇಲ್ಲಿ ಪೊದಲು ಗೊಂಡು, ಅಪೊಸ್ತಲನು ಸಭೆಯ ಕಿರಿ ಗುಂಪಿನವರ ಸಂಗಡ ಮಾತಾಡುತ್ತಾನೆ. ಇವರು ಉಚಿತ ಕೃಪೆಯಿಂದಲೆ ರಕ್ಷಣೆ ಬರುತ್ತದೆಂಬ ಶುದ್ಧ ಸುವಾರ್ತೆಯಲ್ಲಿ ನಂಬಿಕೆಯಾಗಿದ್ದರೂ, ವಿಪರೀತ ನಿಯಮಶ್ರದ್ಧರಿಗೆ ಪ್ರತೀಕಾರವಾಗಿ ಅಯುಕ್ತ ನಿರ್ಭಯವನ್ನೂ, ದರ್ಪವನ್ನೂ, ತರ್ಕಗುಣವನ್ನೂ ತೋರಿ ಸಿದರು. ಇಂಥವರಿಗೆ ಪೌಲನು ನಿಯಮವನ್ನು, ಕ್ರಿಸ್ತನಲ್ಲಿಡುವ ವಿಶ್ವಾಸದಿಂದ ಹುಟ್ಟುವ ಪ್ರೀತಿಯೆ ನವಜೀ ವದ ಧರ್ಮವೆಂದು, ಸುವಾರ್ತೆಯ ಸ್ವತಂತ್ರಭಾವಕ್ಕೆ ಅನುಸಾರವಾಗಿ ಪ್ರಸಂಗಿಸುತ್ತಾನೆ.

ಅ) ತರ್ಕವನ್ನು ಬಿಡಿರಿ.

೧೩. ಹಾ್ವಗಂದರೆ, ಸಹೌ್ಯದರರೇ, ನೀವು ಬಿಡುಗಡೆಗಾಗಿ ೧) ಕರೆಯಲ್ಪಟ್ಟಿರಿ, ಮಾತ್ರ ಮಾಂಸಕ್ಕೆ ೨) ಅವ್ಪದ ಕಾಡುವ ಬಿಡುಗಡೆಯು ಮಾತ್ರ ಬೇಡ; ಆದರೆ ಪ್ರೀತಿಯಿಂದ ಒಬ್ಬರನ್ನೊಬ್ಬರು ಸೇವಿಸಿರಿ ೩). ೧೪. ಯಾಕಂದರೆ ನಿನ್ನ ನೆರೆಯವನಂತು ನಿನ್ನ ಹಾಗೆ ಪ್ರೀತಿ ಮಾಡು ಯೆಂಬ ಒಂದೇ ವಾಕ್ಯದಲ್ಲಿ ನ್ಯಾಯಪ್ರಮಾಣವೆಲ್ಲಾ ಪೂರ್ತಿಯಾಗುತ್ತದೆ. ೧೫. ಆದರೆ ಒಬ್ಬರಂತೊಬ್ಬರು ಕಚ್ಚಿ ೪), ತಿಂದು ಬಿಟ್ಟರೆ, ಒಬ್ಬರಿಂದೊಬ್ಬರು ಲಯವಾಗದ ೫) ಹಾಗೆ, ನ್ಯಾಡಿ ಕಾಳ್ಳಿರಿ.

೧. ಬಿಡುಗಡೆಯಾಗಿರುವಪೂ ಆಳಾಗಿರುವದೂ ಕ್ರೈಸ್ತ ಧರ್ಮದಲ್ಲಿ ಜಾೀಡಾಗಿದೆ. ಅದು ಕೃಪೆ ಆತ್ಮ ಗಳ ನಿತ್ಯ ನಿಯಮವಾಗಿರವ ಮಟ್ಟಿಗೆ, ಮೋಶೆಯ ನಿಯಮದಿಂದ ಮಾತ್ರವಲ್ಲಾ, ಆಜ್ಞೆ ಕಾಟ್ಟು ನ್ಯಾಯ ತೀರಿಸುವ ಸಮಸ್ತ ನಿಯಮದಿಂದಲೂ, ಪಾಪಮರ ಣಗಳಿಂದಲೂ, ಕ್ರೈಸ್ತನು ಬಿಡುಗಡೆಯಾಗಿದ್ದಾನೆ. ಆದ ರೆ ಸಹಜಪ್ರೀತಿಯಿಂದ ನಿರ್ಮಾಣಿಕನನ್ನೂ ಸಹೌ್ಯ ದರರನ್ನೂ ಸೇವಿಸುವ ವೃತ್ತಿಗಿಂತ, ಉತ್ತಮ ಉ ದ್ಯೋಗ ವಾಂಡೂ ಇಲ್ಲವೆಂದು, ತಿಳಕಾಳ್ಳುತ್ತಾನೆ.

೨. ಸ್ವಂತ ಚಿತ್ತವನು ನಡಿಸುವ ಪದ್ಧತಿ ಅಲ್ಲಾ, ಸ್ವಚಿತ್ತವನ್ನು ಅಲ್ಲಗಳದು, ದೇವರಿಗೆ ವಶ ಮಾಡಿ ಕಾ ಟ್ಟು, ಪ್ರೀತಿಯಿಂದ ಸಹೌ್ಯದರರಿಗೆ ಆಳಾಗಿರುವ ಕಟ್ಟು ಳೆ ಕ್ರೈಸ್ತ ಸ್ವತಂತ್ರಧರ್ಮವಾಗಿದೆ. ಮಾಂಸಕ್ಕೆ ಯೆಡೆಬಿಡು ವದೆಂದರೆ, ಸ್ವಾಭಾವಿಕವಾದ ಪಾಪಾಶಿಲಾಷೆಗಳಿಗೆ, ಇಲ್ಲಿಯ ಅಭಿಪ್ರಾಯದ ಪ್ರಕಾರ, ಮುಖ್ಯವಾಗಿ ಕ್ರೋಧ ವೈರಗರ್ವಗಳ ವ್ಯಸನಗಳಿಗೆ ವಾಳಗಾಗುವದು.

೩. ಈ ಮಾತು ಉಭಯ ಪಕ್ಷದವರಿಗೂ ಸರಿ. ಬಿಡುಗಡೆಯವರೇ, ನಿಯಮದ ಅಭಿಪ್ರಾಯಕ್ಕನುಸಾ

ರವಾಗಿ ನಡಕಾಳ್ಳಿರಿ. ನಿಯಮಾಸಕ್ತರೆ, ನಿಯಮದ ಮುಖ್ಯ ಕಟ್ಟಳೆಯಾದ ಪ್ರೀತಿಯನ್ನು ಕೈಕಾಳ್ಳಿರಿ.

೪. ನೀವು ವಾಬ್ಬರನ್ನಾಬ್ಬರು ದೂಷಿಸಿ, ಬೈದು, ಕಯಿದಾಡಿದರೆ, ಯೆಂಬ ಅರ್ಥ.

೫. ಆತ್ಮದ ಪ್ರಕಾರ ನಾಶವಾಗದ ಪಾಗಾಗೆ. ಪಾಪ್ಯಾಗೆಂದರೆ ಪ್ರೀತಿ ಇರದಲ್ಲಿ, ಸುವಾರ್ತೆಯಿಂದ ನೆಟ್ಟಿರುವ ಜೀವದ ಮೊಳಿಕೆಯು ಸತ್ತು ಪಾಗಾಗುತ್ತದೆ.

೫) ಆತ್ಮದಲ್ಲಿ ನಡಕೊಳ್ಳಿರಿ.

೧೬. ಇದನ್ನು ಹೇಳುತ್ತೇನೆ—ಆತ್ಮದಲ್ಲಿ ನಡೆದು ೧) ಕಾಳ್ಳಿರಿ, ಆಗಲು ಮಾಂಸದ ೨) ಆಶೆಯನ್ನು ತೀರಿಸದೆ ಇರುವಿರಿ. ೧೭. ಯಾಕಂದರೆ ಮಾಂಸವು ಆತ್ಮಕ್ಕೆ ವಿರೋಧವಾಗಿಯೂ, ಆತ್ಮವು ಮಾಂಸಕ್ಕೆ ವಿರೋಧವಾಗಿಯೂ ಆಶಿಸುತ್ತದೆ; ನೀವು ಇಚ್ಛಿಸುವವುಗಳನ್ನು ೩) ಮಾಡದ ಹಾಗೆ, ಅವು ಮಾಂದಕ್ಕಾಂದು ವಿರೋಧವಾಗಿವೆ. ೧೮. ಆದರೆ ನೀವು ಆತ್ಮದಿಂದ ನಡಿಸಲ್ಪಟ್ಟರೆ, ನ್ಯಾಯಪ್ರಮಾಣಕ್ಕಾಳಗಾಗಿರುವದಿಲ್ಲ ೪).

೧. ನಿಮ್ಮಲ್ಲಿರುವ ಪಾಪಾಸ ಮನುಷ್ಯನ ಮನಸ್ಸನ್ನೂ ಚಿತ್ತವನ್ನೂ ಅನುಸರಿಸಿರಿ. ವಿಶ್ವಾಸದಿಂದ ಪಾಪಾಂದಿದ ಪರಿಶುದ್ಧಾತ್ಮದ ಕೃಪಾದಾನಗಳನ್ನು ನಿರ್ಜೀವ ಜ್ಞಾನಕ್ಕೆ ಅಥವಾ ಆತ್ಮದ ಅನುಭವ ಸುಖಕ್ಕೆ ವ. ೨೫. ಮಾತ್ರ ಬಳಸದೆ, ಅವುಗಳು ನಿಮ್ಮ ಚಿತ್ತಿಯ ಪ್ರವೃತ್ತಿಯನ್ನು ಬಲಪಡಿಸಿ ಆಳುವ ಪಾಗಾಗೆಯೂ, ನಿಮ್ಮ ಮನಾವಾಕ್ಕಾಯಗಳ ಪರಿಶುದ್ಧತ್ವವನ್ನು ಸಿದ್ಧಿಸುವ ಪಾಗಾಗೆಯೂ ನಾವಿ ಕಾಳ್ಳಿರಿ.

೨. ಆಗೈ ಆತ್ಮಕ್ಕೆ ವಿರೋಧವಾದ ಪಾಪಾಭಿಲಾಷೆಗಳು ನಿಮ್ಮಲ್ಲಿ ಹುಟ್ಟಿದರೂ, ನಿಮ್ಮನ್ನು ಯೆಳಕಾಂದು, ಜಯಿಸಿ ಆಳ ಕೂಡದು.

೩. ಮನುಷ್ಯನು ಕರ್ತನ ಕಡೆಗೆ ತಿರುಗಿ ಕಾಳ್ಳದೆ, ಸ್ವಾಭಾವಿಕ ಸ್ಥಿತಿಯಲ್ಲಿರುವ ಪರಿಯಂತ, ಪುಣ್ಯವಾದರೂ ಪಾಪವಾದರೂ ಅವನಲ್ಲಿ ಯೇಕಾಧಿಕಾರಿಯಾಗುವದಿಲ್ಲಾ. ಯೆಂದಾದರೂ ದೇವರ ಆತ್ಮದ ಸಂಪರ್ಕ ವಾಂದಿಷ್ಟಾದರೂ ಇಲ್ಲದೆ ಇರದ ಆತ್ಮಕ್ಕೂ, ಸ್ಪಷ್ಟವಾಗಿ ಅರಿವಿಗೆ ಬಂದ ದೇವಧ್ವನಿಗೂ ವಿರೋಧವಾಗಿ ಪಾಪಾಭಿಲಾಷೆಗಳು ಮನುಷ್ಯನಂನು ಕೆದರಿಸುತ್ತವೆ. ಆದರೆ ಅವನಲ್ಲಿರುವ ಶ್ರೇಷ್ಠಾಂಶವಾದ ಆತ್ಮವು ನ್ಯಾಯ ಪ್ರಕಾರ ಅಧಿಕಾರವನ್ನು ನಡಿಸತಕ್ಕದ್ದಾಗಿರುವದರಿಂದ, ನೀತಿಯ ಅಖಿಲಾಷೆ ಬಲವಿಲ್ಲದ್ದಾಗಿದ್ದರೂ, ಪಾಪದ ದಾರೆತನಕ್ಕೆ ಯೆದುರು ನಿಲ್ಲುವದನ್ನು ಬಿಡುವಷ್ಟು ಸಾತು ಪಾಗಾಗಲಾರದು. ಪೀಗಿರುವದರಿಂದ ಮನುಷ್ಯನು ವಾಳ್ಳೆ ಮನಸ್ಸಾಕ್ಷಿಯಿಂದಲೂ ಸತ್ಯ ಸಂತುಷ್ಟಿಯಿಂದಲೂ ಪಾಪಕ್ಕೆ ಬಿಟ್ಟಿ ಮಾಡ ಕೂಡದು; ಆದರೂ ವಾಳಗಿನ ಧ್ವನಿಯು ಆಜ್ಞಾಪಿಸುವ ಪಾಗಾಗೆ, ತನ್ನನ್ನು ನೀತಿಯ ಸೇವೆಗೆ ವಾಪ್ಪಿಸಿ ಕಾಡುವದಕ್ಕೆ ಅವನ ಬಲ ಸಾಲದು. ಇದು ನಿಯಮದ ಕೆಳಗಿರುವ ಅವಸ್ಥೆ. ವಿಶ್ವಾಸ ಉಳ್ಳವನು ಸಪಾ ಮಾಂಸಕ್ಕೆ ತಿರುಗಿ ದಾರಿ ಬಿಟ್ಟರೆ, ಅದೇ ಅವಸ್ಥೆಯಲ್ಲಿ ಬಿದ್ದಾನು; ಪಾಪಾಸ ಮನುಷ್ಯನಾಗಿರುವ ಆತ್ಮವು ದಾರೆತನವನ್ನು ಪಾಪಾಂದುವ ವರೆಗೆ, ನಿಜ ಸುಖ ಕಾಣುವದಿಲ್ಲಾ.

೪. ಪಾಪಾಸ ಮನುಷ್ಯನು ನಿಂಮಲ್ಲಿ ಮೇಲಧಿಕಾರವಂನು ಪಾಪಾಂದಿದ ಮೇಲೆ, ಕ್ರಿಸ್ತನ ಆತ್ಮವು ತಾನೆ ನಿಂಮನ್ನು ದೈವಹಿತವಾದ ಸಮಸ್ತ ಸತ್ಕ್ರಿಯೆಗಳಿಗೆ ನಡಿಸುವದು. ಆಜ್ಞೆ ಕಾಟ್ಟು, ಮೀರಿದವನನ್ನು ಶಿಕ್ಷಿಸುವ ನಿಯಮದ ಸಪಾಯವು ಬೇಡ.

ಗಲ. ೫, ೧೯—೨೧.

ಉ) ಮಾಂಸದ ಕ್ರಿಯೆಗಳು.

೧೯. ಆದರೆ ೧) ಮಾಂಸದ ಕ್ರಿಯೆಗಳು ಪ್ರಕಟವಾಗಿವೆ; ೨೦. ಯಾವಮಂದರೆ ೨), ವ್ಯಭಿಚಾರ, ಜಾರತ್ವ, ಅಶುದ್ಧತ್ವ, ಬಂಡುತನ ೩), ವಿಗ್ರಹಾರಾಧನೆ, ಶೂನ್ಯ ೪), ವಿರೋಧಗಳು, ಜಗಳಗಳು, ಹುರುಡುಗಳು, ಶಿಟ್ಟುಗಳು, ವಾಗ್ವಾದಗಳು, ದ್ವೇಷಗಳು, ಮತಭೇದಗಳು, ಹಾಟೆಕಿಚ್ಚುಗಳು, ೨೧. ಕಾಲೆಗಳು ೫), ಅಮಲುಗಳು, ದುಂದೌತನಗಳು, ಇವು ಮೊದಲಾದವುಗಳು. ಇಂಥವುಗಳಂನು ಮಾಡುವವರು ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದುವದಿಲ್ಲವೆಂದು, ಮುಂಚೆ ೬) ಹೇಳಿದ ಪ್ರಕಾರವೇ, ನಿಮಗೆ ಮುಂದಾಗಿ ಹೇಳ್ತಿತ್ತೇನೆ.

೧. ಮಾಂಸದ ಕ್ರಿಯೆಗಳು ಪ್ರಕಟವಾಗಿವೆ, ಅಂದರೆ ಕ್ರೈಸ್ತರಿಗೂ, ಕಂಣು ಬಿಟ್ಟು ನಾಡುವ ಪ್ರತಿ ಮನುಷ್ಯನಿಗೂ, ಸುಲಭವಾಗಿ ಗಾಚರವಾಗುತ್ತವೆ. ಯೆಲ್ಲರಿಗೂ ಚಯವಾಗುವ ಪೂಗೆ, ಅಪಾಸ್ತಲನು ಮಾಂಸದ ಕ್ರಿಯೆಗಳಂನೂ, ಪಾಪಸ್ವಭಾವದ ಫಲಗಳಂನೂ ಯೆಣಿಕೆ ಮಾಡುತ್ತಾನೆ. ಯಾಕಂದರೆ ಅವುಗಳನ್ನು ಅಸಹ್ಯಿಸುವದಕ್ಕೆ, ಅವುಗಳ ಪೆಸರು ಪೇಳಿದರೆ ಸಾಕು; ಅದೇ ಪ್ರಕಾರ ಆತ್ಮಿಕ ಮನಾಭಾವದ ಮತ್ತೆ ಪೇಳಿದ ರಮಣೀಯ ಫಲಗಳು ಮನಾಪೂರವಾಗಿ ಇದ್ದಾವೆ. ಮಾಂಸವೆಂದರೆ, ಗುಪ್ತೇಂದ್ರಿಯ ಚಾಗವೂ, ಶರೀರ ಸುಖವೂ, ಇಂದ್ರಿಯ ಸುಖವೂ, ಮಲಿನತ್ವದ ಪಾಪಗಳೂ ಮಾತ್ರವಲ್ಲವೆಂಪು ಇಲ್ಲಿ ಕಾಣುತ್ತದೆ. ಪೂರ್ಣಾಗಂದರೆ, ಜೇವದಗಳು ಉತ್ಕೃಷ್ಟ ಮನಸ್ಸುಗಳಲ್ಲಿ ಆಗ್ಯಾಗೈ ಸಪೂರ್ಣಜೀವಾದ ಮಾನಾಜಿಲಾಷೆಯಿಂದ ಬರುತ್ತವೆ. ಪೂರ್ಣಾಗಾದರೆ, ದೇವರಂನು ಅಗಲಿದ ಮನುಷ್ಯನ ಪ್ರೃದಯದಲ್ಲಿ ಉಂಟಾಗುವ ಸ್ವಾರ್ಥದ ಸಕಲ ಇಚ್ಛೆಗಳಿಗೆ ಮಾಂಸವೆಂಬ ಪೆಸರು. ಲುಥರನು ಪೇಳುವದೇನಂದರೆ: "ಮಾಂಸವೆಂಬ ಶಬ್ದದ ಅಭಿಪ್ರಾಯವು ಪಾಪನ ಪಕ್ಷದವರಲ್ಲಿ ಬಪುಳ ಮೊಬ್ಬಾದ್ದರಿಂದ, ವಿಷಯ ಚಾಗದ ಕ್ರಿಯೆಗಳಿಗೆ ಮಾತ್ರ ಮಾಂಸದ ಕ್ರಿಯೆಗಳೆಂದು ಪೆಸರಿಟ್ಟರು. ಆದ್ದರಿಂದ ಅವರಿಗೆ ಪೌಲನ ಬಾಧನೆಯಂನು ಸಮವಾಗಿ ತಿಳಕಾಳ್ಳಲಸಾಧ್ಯವಾಯಿತು: ಆದರೆ ಪೌಲನು ಮಾಂಸದ ಕ್ರಿಯೆಗಳ ಲೆಕ್ಕದಲ್ಲಿ, ವಿಗ್ರಹಾರಾಧನೆಯಂನೂ ಪಾಷಂಡಿತ್ವವಂನೂ ಶೇರಿಸುತ್ತಾನೆ. ಇವುಗಳಂನು ಮಾನುಷ ಬುದ್ಧಿಯು ಮಾಂಸ ವ್ಯಸನಗಳೆಂದು ಯೆಣಿಸದೆ, ಕೇವಲ ಪರಿಶುದ್ಧವಾದವುಗಳೆಂದು ನೆನಸಿ, ಮಹಾಪಾಪಗಳೆಂದು ಪೂರ್ಣಾಗಳುತ್ತದೆ. ನಿಶ್ಚಯವಾಗಿ, ಪೌಲನು ವಿಗ್ರಹಾರಾಧನೆಯಂನು ಸಹಾ ಮಾಂಸದ ಕ್ರಿಯೆ ಯೆಂದು ಯೆಣಿಸಿದ್ದು ಘನವಾದ ಕಾರ್ಯವು."

೨. ವಿಷಯ ಚಾಗದ ಪಾಪಗಳು ಮುಂಚೆ ಪೇಳಿಯವೆ. ಯಾಕಂದರೆ ಕಾಮವಿಕಾರವು ಮಾಂಸದ ಸಮಸ್ತ ವ್ಯಾಧಿಗಳಲ್ಲಿ ಸಾಮಾನ್ಯವಾಗಿಯೂ, ಅತ್ಯಂತ ವಿನಾಶಕರವಾಗಿಯೂ ಇರುತ್ತದೆ; ಇದು ಮನುಷ್ಯನ ಪ್ರೃದಯವಂನೂ ಮತಿಯಂನೂ ದೇವರ ಕಡೆಗೆ ಅಧಿಕಾಧಿಕವಾಗಿ ಮೊದ್ದ ಮಾಡಿ, ಅಶಿತ್ವರ್ಯದಿಂದ ಜೀವವನ್ನೆ ತೆಗಿಯ ತಕ್ಕ ಪಾಪವಾಗಿರುತ್ತದೆ. (ಪೋಗಿರುವದರಿಂದ ಜಾರರಿಗೆ ಕಡೆಯಲ್ಲಿ ಪುಟಿಚ್ಚು ಪೊಡಿಯುತ್ತದೆ, ಅಥವಾ ಅವರು ಸ್ವಘಾತ ಮಾಡಿ ಕಾಳ್ಳುತ್ತಾರೆ, ಅಥವಾ ಜೀವಂತರಾಗಿ ಕಾಳತು ಪೂರ್ಣಾಗುತ್ತಾರೆ, ಅಥವಾ ಪೂರ್ಣಾಗೂ ಆತ್ಮಿಕಮರಣಕ್ಕೆ ವಾಳಗಾಗುತ್ತಾರೆ.) ಅಶುದ್ಧತ್ವ ಅಂದರೆ, ಮನಾಪಕ್ಕಾಯಗಳಲ್ಲಿ ನಡಿಯುವ ಯೆಲ್ಲಾ ವಿಧದ ವಿಷಯಾಸಕ್ತಿ; ಅದಕ್ಕೆ ಪರಸಂಗಮಾಡುವವರು ಮಾತ್ರ ಅಲ್ಲಾ, ದಂಪತಿಗಳು ಸಹಾ ವಾಳಗಾಗಬಪುದು. ಅಶುದ್ಧತ್ವದಲ್ಲಿ ಯೆಲ್ಲಾ ತರದ ಸ್ವಭಾವ ವಿರಾಧವಾದ ವಿಷಯಚಾಗವು ಶೇರುತ್ತದೆ.

೨ ಕಾರಿ. ೧೨, ೨೧. ೧ ಥೆಸ್ಸ. ೪, ೭. ಬಂಡುತನ ಅಂ

ದರೆ, ತಿಂದು ಕುಡಿದು ಪುಂಕಾಟ್ಟೆಬಾಕರಾಗಿ, ಯಾವದಕ್ಕೂ ಪೇಸದೆ, ನಿರ್ಲಜ್ಜೆಯಿಂದ, ಮದಾನ್ಮತ್ತರಾಗಿ ನಡಕಾಳ್ಳುವವರ ದುರ್ಮಾರ್ಗವು. ಎಫೆ. ೪, ೧೯. ರೋಮ. ೧೩, ೧೩. ೨ ಪೇತ್ರ. ೨, ೧೭.

೩. ವಿಗ್ರಹಾರಾಧನೆ ಅಂದರೆ, ಬಾಂಬೆಗಳನ್ನೂ ಮೂರ್ತಿಗಳನ್ನೂ ಆರಾಧಿಸುವದು ಮಾತ್ರವಲ್ಲಾ, ಪೃದಯವನ್ನು ಜೀವವುಳ್ಳ ದೇವರಿಂದ ತಾಲಗಿಸುವ ದುರ್ಮಾರ್ಗವೆಲ್ಲಾ ವಿಗ್ರಹಾರಾಧನೆಯಾಗಿದೆ. ಪುಂಕಾಗೆಂದರೆ ದೇವರನು ಅಗಲಿದ ಮನುಷ್ಯನ ಪೃದಯವು ದೇವರಲ್ಲದ್ದಕ್ಕೂ, ಪೃದಯವನು ಮರುಳುಗಾಳಿಸುವ ಪ್ರಪಂಚ ವಿಷಯಗಳಿಗೂ, ಅಪೃಶ್ಯವಾದ ಬಲಗಳಿಗೂ, ಸೈತಾನಶಕ್ತಿಗಳಿಗೂ ತಂನನ್ನು ವಾಪ್ಪಿಸಿಕಾಡುತ್ತದೆ. ಶೂನ್ಯದಿಂದ ಮನುಷ್ಯರು ದೈವಿಕ ಕೃತ್ಯಗಳನು ಅದೈವಿಕವಾಗಿಯೂ ಸೈತಾನಿಕವಾಗಿಯೂ ಇರುವ ಶಕ್ತಿಗಳಿಂದ ನಡಿಸ ಎಸಗುತ್ತಾರೆ.

೪. ಮೂರನೆ ಪಾಪಗಳ ವಿಧದಲ್ಲಿ ಜೀವಘಾತಗಳೂ ಪುಗೆಗಳೂ ಮುಂತಾದವುಗಳು ಶೇರುತ್ತವೆ. ಇವು ಮುಖ್ಯವಾಗಿ ಗಲತರಲ್ಲಿ ಪ್ರಬಲವಾಗಿದ್ದವು. ದ್ವೇಷವು ಯೇನಾಂಯೂ ಕ್ಷಮಿಸದು. ಜಗಳದ ಮನಸ್ಸು ಯಾವಾಗಲೂ ಪುಲ್ಲಿಗೆ ಪುಲ್ಲು ಕಣ್ಣಿಗೆ ಕಣ್ಣು ಯೆಂಬ ಮಾತು ಮಿಡಿಯುತ್ತದೆ. ಪುರುಡಿನವರು ಯೆಲ್ಲಾ ತಮಗೆ ಬೇಕು, ಮತ್ತಾಬ್ಬರಿಗೆ ಯೇನೂ ಬೇಡವೆಂದು ಚಾವಿನಿ ಕಾಳ್ಳುತ್ತಾರೆ. ಶಿಟ್ಟು ಅಂದರೆ, ಪರರಿಂದ ಯೇನೂ ತಾಳಕೂಡದ ಪೃದಯದ ಸಂತಾಪವು. ವಾಗ್ವಾದವಂದರೆ, ಪರರನು ಬೈದು ದುಡುಕುವ ಗುಣವು. ದ್ವೇಷದಿಂದ ನೆರೆಯವರಾಳಗೆ ವ್ಯಾಜ್ಯ ಮೊದಲಾದ ಇಜ್ಜಾಜೀಡು ಕಷ್ಟಗಳು ಉಂಟಾಗುತ್ತವೆ. ಮತಭೇದಗಳು ಅಂದರೆ, ಸ್ವಂತ ಮನಾಗತವನು ಬಿಡಲಾಲ್ಲದೆ, ವಿಶ್ವಾಸಧರ್ಮಗಳ ವಿಷಯದಲ್ಲಿ ಚೇದಗಳಂನು ಪುಟ್ಟಿಸುವದರಿಂದ ಉಂಟಾಗುವ ಪಕ್ಷಗಳು. ಪುಗೆ ಪರರಂನು ಸಪಿಸಲಾರದೆ, ಮತ್ಸಾಬ್ಬರಿಗೆ ಕಷ್ಟಗಳು, ಮರಣ ಸಪಾ, ಪ್ರಾಪ್ತಿಯಾಗ ಬೇಕೆಂದು ಇಚ್ಛೈಸುವದು. ಇದರಿಂದ ಕಡೆಯಲ್ಲಿ ಕಾಲೆ ಸಪಾ ಬರುತ್ತದೆ.

೫. ನಾಲ್ಕನೆ ವಿಧವೇನಂದರೆ: ಮೇಲೆ ಪೇಳಿದ ದುರ್ವ್ಯಸನಗಳಂನು ಪುಟ್ಟಿಸುವ ವಿಪರೀತ ಅನ್ನಪಾನಾದಿಗಳ ಚಾಗವು. ಅಜಿತೇಂದ್ರಿಯತ್ವ, ಪುಂಕಾಟ್ಟೆಬಾಕತನ, ಮದ್ಯಪಾನಪ್ರೀತಿ, ಉಂಡು ಕುಡಿದು ಅನಾಯಾಸಾಗಿ ಬದುಕುವ ವೈಚವ ಮುಂತಾದ ದುರಾಚಾರಗಳು ಪರಮಸುಖವೆನ್ನಿಸುವ ವಿಷಯಲಂಪಟತನವು ಇತ್ಯಾದಿ.

೬. ನಾನು ತಕ್ಕಕಾಲದಲ್ಲಿ ನಿಮಮಂನು ಬೆದರಿಸ ಬೇಕೆಂದು ತಿರಿಗಿ ಈ ಕ್ರಿಯೆಗಳ ಫಲವಂನು ಪೇಳುತ್ತೇನೆ. ಅಂಥವರಿಗೆ ದೇವರ ರಾಜ್ಯವೂ ನಿತ್ಯಜೀವವೂ ದಾರಕುವದಿಲ್ಲ. ಗಲತರಲ್ಲಿ ಪ್ರಬಲವಾಗಿದ್ದ ಕ್ರಿಯಾನೀತಿಯ ಮೋಸದಲ್ಲಿ ಬಿದ್ದವರು ಸನ್ಮಾರ್ಗದ ಅಶಿಷನವಾಪ ಕ್ರಿಯೆಗಳ ವಿಷಯವಾಗಿ ಕುರುಡರಾಗುವದರಿಂದ, ಅವರಿಗೆ ಅತಿ ಕಠಿಣವಾದ ಮಾತುಗಳಂನು ತಿರಿಗಿ ತಿರಿಗಿ ಪೇಳುವದು ಅಪಶ್ಯವಾಗುತ್ತದೆ.

೨೨. ಆದರೆ ಆತ್ಮದ ಫಲವು ೧) ಯಾವದಂದರೆ—ಪ್ರೀತಿಯು ೨), ಸಂತೋಷವು, ಸಮಾಧಾನವು, ದೀರ್ಘಶಾಂತಿಯು, ದಯವು, ಒಳ್ಳೇತನವು, ವಿಶ್ವಾಸವು, ಸಾತ್ವಿಕತನವು, ಮಿತಾನುಭವವು ೩); ೨೩. ಇಂಥವುಗಳಿಗೆ ವಿರೋಧವಾಗಿ ನ್ಯಾಯ (ಪ್ರಮಾಣವು ೪) ಇಲ್ಲ. ೨೪. ಆದರೆ ಕ್ರಿಸ್ತನವರು ಮಾಂಸವಂನು, ಇಚ್ಛೆಗಳೂ ಆಶೆಗಳೂ ಸಹಿತವಾಗಿ, ಶಿಲುಬೆಗೆ ೫) ಹಾಕಿ ಇದ್ದಾರೆ. ೨೫. ಆತ್ಮದಲ್ಲಿ ಬದುಕಿದರೆ, ಆತ್ಮದಲ್ಲಿಯೂ ನಡೆದು ಕಾಳ್ಳುವ ೬).

೧. ಅಂದರೆ ಪವಿತ್ರಾತ್ಮನು ಸರ್ವ ಸದ್ಗುಣ ಮೂಲವಾಗಿರುವ ಆತ್ಮದ ಬಲದಿಂದ ಸಹಜವಾಗಿ ಫಲಿಸುವ ಫಲವು.

೨. ಈ ವಾಕ್ಯಗಳ ಶಬ್ದವಾದರೂ ಪರಲೋಕದಿಂದ ಬಂದ ಧ್ವನಿಯಂತೆ ಕಿವಿಗೆ ಇಂಪಾಗಿದೆ. ಪ್ರೀತಿಯು ಸಮಸ್ತ ಸದ್ಗುಣಗಳಿಗೆ ತಾಯಾದ ಪ್ರೀತಿಯು ಮೊದಲನೇದು. ಅದು ದೇವರ ಪ್ರೀತಿ ನೆರೆಯವನ ಪ್ರೀತಿ ಯೆಂಬದಾಗಿ ಯೆರಡು ವಿಧವಾದದ್ದು. ನಮಗೂ ಮತ್ತಾಬ್ಬರಿಗೂ ಕ್ರಿಸ್ತನ ಪರಿಮುಖವಾಗಿ ಉಂಟಾದ ರಕ್ಷಣೆಯ ಸಂತೋಷವು, ದೇವರ ಚಿತ್ತವನ್ನು ಮಾಡುವದಕ್ಕೆ ಯೇಚ್ಛರವಾಗಿರುತ್ತದೆ. ಅದು ಮತ್ಸರಕ್ಕೆ ಪ್ರತಿಕೂಲವಾಗಿದೆ. ಮನಸ್ಸಾಕ್ಷಿಯ ಸಮಾಧಾನವು ಪ್ರಾಣವನ್ನು ದೇವರಲ್ಲಿ ನಿಧಾನಿಸುವದರಿಂದ, ಮನುಷ್ಯನು ಪರರ ಸಂಗಡಲೂ ಸಮಾಧಾನದಲ್ಲಿ ಇರುವದು ಸುಲಭವಾಗುತ್ತದೆ. ಈ ಮೂರು ಮುಖ್ಯ ಸದ್ಗುಣಗಳಿಂದ ಉತ್ಪನ್ನವಾಗುವ ಫಲಗಳು ಯಾವವೆಂದರೆ: ನೆರೆಯವನ ತಪ್ಪುಗಳನ್ನೂ ಜೇರೆ ಉಪದ್ರವಗಳನ್ನೂ ಸೈರಿಸುವ ತಾಳ್ಮೆ ಎಂಬ ದೀರ್ಘಶಾಂತಿ. ದಯವು ಸ್ವಾರ್ಥವಿಲ್ಲದೆ ಪ್ರೀತಿಯಿಂದ ಪ್ರೀತಿಯನ್ನು ದುಡಿಯಬಯಸಿ, ಪಾಪಿಯಂನು ಸಹೋದರ ಶಿರಿಗಿ ಅನ್ಯೋನ್ಯನಾಗ ತಕ್ಕ ಸಹೋದರನೆಂದೆಣಿಸುತ್ತದೆ. ವಾಳ್ಳೇತನ ಮತ್ತಾಬ್ಬರಿಗೆ ಉಪಕಾರ ಮಾಡಲಾಸಕ್ತವಾಗಿದೆ. ರೋಮ. ೧೫, ೧೪. ಎಫೆ. ೫, ೧೯. ವಿಶ್ವಾಸವೆಂಬ [illegible]ವೇನಂದರೆ: ಇಲ್ಲಿ ಸರ್ವ ಸದ್ಗುಣಮೂಲವಾಗಿರುವ ನೀತಿವಿಧಿಸುವ ವಿಶ್ವಾಸವೆಂಬ ಅರ್ಥ ದಾರಕುವದಿಲ್ಲ. ವಿಶ್ವಾಸವೆಂಬ ಪದವು ಇಲ್ಲಿ ನೆರೆಹೊರೆಯವರ ಪರಾಕ್ಕು ಬಳಿಕೆಯಲ್ಲಿರತಕ್ಕ ನಂಬಿಕೆಯನು ಸೂಚಿಸುತ್ತದೆ. ಅದಂಪ ಯೆಲ್ಲಾ ವಂಚನೆಗೂ ಚಂಚಲತ್ವಕ್ಕೂ ಅಬದ್ಧತ್ವಕ್ಕೂ ಪ್ರತೀಕಾರವಾದ ಯಥಾರ್ಥತ್ವವೂ, ಪರರ ಮೇಲೆ ಭರವಸವಿಡುವ ಮನಸ್ಸೂ ಪುಟ್ಟುತ್ತದೆ. ಗ್ರೀಕ ಭಾಷೆಯಲ್ಲಿ ವಿಶ್ವಾಸ ಯೆಂಬ ಶಬ್ದಕ್ಕೆ ಉಭಯಾರ್ಥ ಉಂಟು. ಸಾತ್ವಿಕತ್ವ ಅಂದರೆ, ಕಾಡಾಣಿ ಬಿಡಾಣಿಯೆಂಬ ಪ್ರೀತಿಯ ಸ್ವಭಾವವನು ಪ್ರಕಟ ಮಾಡುವ ಮಹೋನ್ನತ ಸದ್ಗುಣವು. ಇದರ ವಿಷಯದಲ್ಲಿ ೧ಕೊರಿ. ೧೩. ಹೇಳುವದೇನಂದರೆ: ಅದು ಬಹುತಾಳ್ಮೆಪಡುವದು, ದಯಮಾಡುವದು, ತನವುಗಳನ್ನು ಹುಡುಕದು, ಶಿಟ್ಟು ಮಾಡದು, ಕೆಟ್ಟದ್ದನ್ನು ನೆನಸದು, ಯೆಲ್ಲಾ ಮುಚ್ಚುವದು, ಯೆಲ್ಲಾ ವಿಶ್ವಾಸಿಸುವದು, ಯೆಲ್ಲಾ ನಿರೀಕ್ಷಿಸುವದು, ಯೆಲ್ಲಾ ಸಹಿಸುವದು.

೩. ಪ್ರಾಣಕ್ಕೆ ವಿರೋಧವಾದದ್ದೆಲ್ಲವನ್ನು ತೃಜಿಸಿ, ಮಾಂಸ ಕ್ರಿಯೆಗಳ ಮೊದಲನೆ ನಾಲ್ಕನೆ ವಿಧಗಳಿಗೆ ವಿರೋಧವಾಗಿದೆ.

೪. ಈ ಸದ್ಗುಣಗಳು ಪ್ರಬಲವಾಗಿರುವಲ್ಲಿ ನಿಯಮಕ್ಕೆ ಶಿಕ್ಷಿಸ ತಕ್ಕದ್ದೇನೂ ಶಿಕ್ಕದು. ಪ. ೧೮.

೫. ಆದರೂ ಅಂಥಾ ಸತ್ಯ ಕ್ರೈಸ್ತರಿಗೂ ಯೆಲ್ಲಾ ಸುಲಭವಾಗುವದಿಲ್ಲಾ. ನಿಯಮದಿಂದಲೂ, ಅದರಿಂದ ನೀತಿ ಪಡಕಾಳ್ಳ ಬೇಕೆಂಬ ಸಾಧನೆಯಿಂದಲೂ ತಾಲಿಗಿ ಪವಿತ್ರಾಗಿ, ಕ್ರಿಸ್ತನನ್ನು ಪವಿತ್ರಾಂದಿ ಕಾಂಡಿರುವವರು ತಮ್ಮ ಮಾಂಸವನ್ನು ಕ್ರೂಜಿಸಿದ್ದಾರೆ. ಪವಿತ್ರಾಗಂದರೆ: ಅವರಿಗೆ ಮಾಂಸವೆಂಬ ಪಾಪಮಯವಾದ ಚಾವವು ಇನ್ನೂ ಇರುತ್ತದೆ, ಆದರೆ ಮಾನಸಾಂತರದಿಂದಲೂ, ಕ್ರೂಜಿಸಲ್ಪಟ್ಟವನ ಪೆಸರಿನಲ್ಲಿ ತಕ್ಕಾಂಡ ಸ್ನಾನದಿಂದಲೂ (ರೋಮ. ೬), ಅದಕ್ಕೆ ಮರಣಘಾಯವು ತಗಲಿಯದೆ. ಯಾವಾಗಲೂ ವೇದನೆಯಿಂದ ಲಡಾಯಿ ನಡಿಸುತ್ತಾ, ಬಿಡದೆ ದುರಭಿಲಾಷೆಯನ್ನು ಕಾಲ್ಲುತ್ತಾ ಬರುತ್ತಾರೆ. ಅವರು ಮಾಂಸವಿಶ್ರಾಂತಿಯನ್ನು ಯೆಂದಿಗೂ ಅಪೇಕ್ಷಿಸದೆ, ಯಾವಾಗಲೂ ಮಾಡುವ ಪ್ರಾರ್ಥನೆ ಯೇನೆಂದರೆ: ಪ್ರೀತಿಯೆ, ನಿನ್ನ ಮರಣದಾಳು ನನ್ನನ್ನೆಳಕಾಂಡು, ನಿನ್ನ ರಾಜ್ಯವನ್ನು ಪಡೆಯಲಾರದ್ದನ್ನೆಲ್ಲಾ ನಿನ್ನಾಡನೆ ಕ್ರೂಜಿಸಿ ಬಿಡು!

೬. ವ. ೧೬ರಿಂದ ಹೇಳಿದ್ದೆಲ್ಲಾ ಇಲ್ಲಿ ಉಪಕವಾಗಿದೆ. ವಿಶ್ವಾಸದ ಪರಿಮುಖವಾಗಿ ನಮ್ಮಲ್ಲಿ ಮೇಲೆ ಹೇಳಿದ ವ. ೨೨. ಸದ್ಗುಣಗಳನ್ನು ಉಂಟು ಮಾಡುವ ದೇವರ ಆತ್ಮವು ಇದ್ದರೆ, ನಮಗೆ ಪ್ರಾಪ್ತವಾದ ಪವಿತ್ರಜೀವವು ಆಂತರ್ಯಾನುಭವದಲ್ಲಿ ಮಾತ್ರವಲ್ಲ, ನಮ್ಮ ನಡೆನುಡಿಗಳಲ್ಲಿಯೂ ಪ್ರತ್ಯಕ್ಷವಾಗ ಬೇಕು. ಜೀವಕ್ಕೆ ನಡತೆ ಸಹಜವೇ ಸರಿ. ಆದರೂ ಆಲಸ್ಯಭಯವಿರುವದರಿಂದಲೂ, ಕ್ರಮವಾದ ನಡತೆಗೆ ವಿಶೇಷವಾದ ಜಾಗ್ರತೆ ಅವಶ್ಯವಿರುವದರಿಂದಲೂ, ವಾಳ್ಳೇ ನಡತೆಯ ಪಂಗಿನಲ್ಲಿ ದ್ಧೀರೆಂದು ಭಕ್ತರನ್ನು ಅಪಾಸ್ತೂಲನು ಯೆಚ್ಚರಿಸುತ್ತಾನೆ.

ಸ. ೬.

III. ಬೇರೆ ಬೇರೆ ಯೆಚ್ಚರಿಕೆಯ ಮಾತುಗಳು.

೧. ದೈನ್ಯದ ವಿಷಯ.

೨. ಪರಾಪಕಾರದ ವಿಷಯ.

೩. ಸಮಾಪ್ತಿ.

ಮುಂಚೆ ಸ. ೫ರಲ್ಲಿ ಹೇಳಿದ ಬುದ್ಧಿ ಮಾತುಗಳು ಪ್ರತ್ಯೇಕವಾದ ಅವಸ್ಥೆಗಳಿಗೆ ಅನುಕೂಲವಾಗಿ ಪ್ರಯೋಗಿಸಿ ಅವೆ. ಅವು ಪ್ರಾಮುಖ್ಯವಾಗಿ ಅಪೊಸ್ತಲನ ಕಡೆಗೆ ನಂಬಿಕೆಯಾಗಿರುವವರಿಗೂ, ಸದ್ವಿಶ್ವಾಸದಲ್ಲಿ ನೆಲೆಯಾಗಿರುವ ಸಭೆಯವರಿಗೂ ವೊಪ್ಪುತ್ತವೆ. ಅವರು ತಮ್ಮ ಸುಸ್ಥಿತಿಗೆ ಹೆಚ್ಚಳ ಪಡದೆ, ತಂಮನ್ನು ತಗ್ಗಿಸಿ ಕೊಂಡು, ವಿಧೇಯತ್ವವನ್ನು ತೋರಿಸ ತಕ್ಕದ್ದು. ಮುಂದಿನ ಮಾತುಗಳಲ್ಲಿ ಮೊದಲನೆ ಭಾಗ ಮುಖ್ಯವಾಗಿ ಬೋಧಕರಿಗೆ, ಯೆರಡನೇದು ಸಭೆಯವರಿಗೆ ಪ್ರಯೋಜನವಾಗಿದೆ.

೧. ದೈನ್ಯವಾಗಿರ ಬೇಕೆಂದು ಯೆಚ್ಚರಿಕೆ.

೫, ೨೬. ಡಾಂಬಿಕರಾಗಿರದೆ, ವೌಬ್ಬರಿಗೌಬ್ಬರು ಕೌಪವೆಬ್ಬಿಸದೆ ೧), ವೌಬ್ಬರ ಮ್ಯೇಲಾಬ್ಬರು ಹೌಟ್ಟೆಕಿಚ್ಚು ಪಡದೆ ಇರ್ರಾಗಿ. ೬, ೧. ಸಹೌದರರ್ಯೇ, ಮನುಷ್ಯನು ವೌಂದು ತಪ್ಪಿನಲ್ಲಿ ಮೊದಲು ಶಿಕ್ಕಿ ಕೌಂಡರೂ, ಆತ್ಮಿಕಭಾವದವರಾದ ೨) ನೀವು ಅಂಥವನಂನು ಸಾತ್ವಿಕಶ್ರದ ಆತ್ಮದಿಂದ ನೆಟ್ಟಗೆ ಮಾಡಿರಿ. ನೀನು ಶೌಧನೆ ಪಡದ ೩) ಹಾಗೆ, ನಿನಂನು ನೌಡಿಕೌ. ೨. ವೌಬ್ಬೌಬ್ಬರ ಹೌರೆಗಳಂನು ೪) ಹೌತ್ತು, ಹ್ಯೀಗೆಯೇ ಕ್ರಿಸ್ತನ ನ್ಯಾಯಪ್ರಮಾಣವಂನು ಪೂರೈಸಿರಿ ೫). ೩. ಯಾಕಂದರೆ ವೌಬ್ಬನು, ಯೇನು ಇಲ್ಲದೆ, ತಾನು ಯೇನಾದರೂ ಇದ್ದೇನೆಂದು ನೆನಸಿದರೆ, ತನಂನು ಮೋಸಗೌಳಿಸುತ್ತಾನೆ. ೪. ಆದರೆ ತನ ಕ್ರಿಯೆಯಂನು ವೌಬ್ಬೌಬ್ಬನು ಪರೀಕ್ಷಿಸಲಿ; ಆಗಲು ಬೇರೌಬ್ಬನಲ್ಲಿ ಅಲ್ಲ, ತನಲ್ಲಿ ಮಾತ್ರ ಹೆಚ್ಚಳವಂನು ಹೌಂದುವನು. ೫. ಯಾಕಂದರೆ ವೌಬ್ಬೌಬ್ಬನು ಸ್ವಂತ ಹೌರೆಯಂನು ಹೌರುವನು.

೧. ತಾರತಮ್ಯಗಳ ವಿಷಯದಲ್ಲಿ ದೀನತ್ವವು ಪಾಠಕ್ಕೆ ಕಂಡು ಬರ ಬೇಕೆಂದರೆ: ಬಲವಂತರು ವ್ಯರ್ಥವಾದ ಸ್ವಸ್ತುತಿಯಿಂದ ಮತ್ತಾಬ್ಬರಲ್ಲಿ ಕೋಪವೆಬ್ಬಿಸ ಬಾರದು; ಬಲಹೀನರು ಹುಟ್ಟೆಕಿಚ್ಚು ಪಡ ಬಾರದು.

೨. ನೆರೆಯವನು ತಪ್ಪು ಮಾಡಿದರೆ, ಆತ್ಮಿಕಭಾವದವರು, ಅಂದರೆ, ದೈವಿಕ ಜೀವದಲ್ಲಿ ಬೆಳೆದವರು, ನಿಗರ್ವಿಗಳಾಗಿ, ಪ್ರೀತಿ ತೋರಿಸಿ, ಬೈಯದೆ, ಬಾಯಿ ಮಾಡದೆ, ಶಾಂತಭಾವದಿಂದಲೂ ಪ್ರೀತಿಯಿಂದಲೂ ತಿದ್ದುವದಕ್ಕೆ ನೋಡ ಬೇಕು.

೩. ಮತ್ತಾಬ್ಬರನ್ನು ತಿದ್ದುವದಕ್ಕೆ ಪ್ರಯತ್ನ ಮಾಡುತ್ತಿರುವಾಗೈ, ನೀನೆ ಪಾಪದಲ್ಲಿ ಬೀಳದ ಹಾಗೆ, ಶೋಧನೆಗೆ ವಾಳಗಾಗ ಬೇಡಾ; ಹುಷಾರಿಗೆಂದರೆ ಮುಂಚೆ ಗರ್ವವೂ, ಪ್ರೀತಿಶೂನ್ಯತ್ವವೂ, ಕಡೆಯಲ್ಲಿ ಮತ್ತಾಬ್ಬರಲ್ಲಿ ಅಯುಕ್ತವೆಂದು ಕಂಡ ಅದೇ ಮೋಸಗಳೂ, ಸುಲಭವಾಗಿ ಹುಟ್ಟಾಬ್ಬುವು. ಪರರ ತಪ್ಪುಗ

ಳನ್ನು ನಾಡುವಾಗೈ, ನಮ್ಮ ಸ್ವಂತ ಬಲಹೀನತ್ವವನ್ನು ನೆನಸಿ ಕಾಳ್ಜ ಬೇಕು.

೪. ದೇವರ ವಿಷಯದಲ್ಲಿ, ಆತನು ಅರಿಯದಲ್ಲಿ ಇಸ್ರಯೇಲರ ನಡತೆಯನ್ನು ಸಹಿಸಿದನು ಯೆಂದು ಅಪಾ. ಕ್ರಿ. ೧೩, ೧೮. ಹೇಳಿಯದೆ. ವಾಬ್ಬಾಬ್ಬನಿಗೆ ತನ್ನ ತನ್ನ ನಡತೆ ಉಂಟು; ಸ್ವಂತ ಅಭಿಲಾಷೆಯಿಂದ ಸ್ವಂತ ಪುಸಾರೆ ಉಂಟಾಗುತ್ತದೆ. ಅದು ಅವನನ್ನು ತಡೆಯುವದಲ್ಲದೆ, ಮತ್ತಾಬ್ಬರಿಗೂ ಯೆದರಾಗಿ ಕಾಣುತ್ತದೆ. ತಪ್ಪುಗಳು, ಬಲಹೀನತ್ವಗಳು, ಬೇರೆ ದುರಭ್ಯಾಸಗಳು ಮುಂತಾದ್ದನ್ನೆಲ್ಲಾ ನಾವು ಮತ್ತಾಬ್ಬರಲ್ಲಿ ತಾಳಿ ಕಾಂಡು, ಅವರಿಗಾಗಿ ದೇವರ ಮುಂದೆ ಬಿನ್ನಪ ಮಾಡುವದರಿಂದ ಅವರನ್ನು ಬಿಡುಗಡೆ ಪಡಿಸ ನಾಡ ಬೇಕು.

೫. ಮತ್ತಾಬ್ಬರನ್ನು ಸಹಿಸುವದಕ್ಕೆ ಯಾವ ಕಾರಣಗಳುಂಟೆಂದು ಇಲ್ಲಿ ಹೇಳಿಯದೆ: ಅ) ಪ್ರೀತಿ ನಿಯಮದ ಕಡೆಗಿರ ತಕ್ಕ ವಿಧೇಯತ್ವ ಯಾಕೋಸಾ. ೧೩, ೩೪. ಇ) ಪ. ೩. ಪರರಿಗೆ ಯೆದರಾಗಿ ಕಾಣಿಸುವ ಕಾರತೆಗಳು ತನಗೆ ಇಲ್ಲವೆಂದು ನೆನಸುವ ಗರ್ವದಿಂದ ಪುಟ್ಟುವ ಮೋಸದ ಮಸಾ ಕಂಟಕ. ಉ) ಪ. ೪. ತನ್ನನ್ನು ತಾನೆ ಚನ್ನಾಗಿ ಶೋಧಿಸುವದರಿಂದಲೆ ನಿಜ ಸದ್ಗುಣಕ್ಕೂ ದೇವರ ಮುಂದೆ ಆಗ ತಕ್ಕ ಪೆಚ್ಚಳ್ಕೆಗೂ ಮುಟ್ಟ ಬೇಕು. ಎ) ಪ. ೫. ವಾಬ್ಬಾಬ್ಬನು ದೇವರ ನ್ಯಾಯವಿಚಾರಣೆಯಲ್ಲಿ ಸ್ವಂತ ತಪ್ಪುಗಳ ಲೆಖ್ಖವನ್ನು ವಾಪ್ಪಿಸ ಬೇಕಾಗಿರುವದರಿಂದ, ತಂನ ತಪ್ಪುಗಳನ್ನಲ್ಲದೆ, ಉದ್ಯೋಗಆವಶ್ಯಕ ಇಲ್ಲದಲ್ಲಿ, ನೆರೆಯವನ ತಪ್ಪುಗಳನ್ನು ನಾಡಿಕಾಳ್ಳ ಕೆಲಸವಿಲ್ಲಾ.

೨. ಪರಾಪಕಾರಿಯಾದ ಪ್ರೀತಿಯನ್ನು ಕೈಕಾಳ್ಳ ಬೇಕೆಂಬ ಯೆಚ್ಚರಿಕೆ.

೬. ಆದರೆ ವಾಕ್ಯದ ಉಪದೇಶ ಹೌಂದುವವನು ಉಪದೇಶಿಸುವವನಿಗೆ ಯೆಲ್ಲಾ ವಾಳ್ಳೆಯವುಗಳಲ್ಲಿ ಪಾಲು ಕಾಡಲಿ ೧). ೭. ತಪ್ಪಿ ಹೌಗ ಬ್ಯೋಡಿರಿ ೨); ದೇವರು ಹಾಸ್ಸ ಮಾಡಲ್ಪಡುವವನಲ್ಲ ೩); ಯಾಕಂದರೆ ಮನುಷ್ಯನು ಯಾವದನು ಬಿತ್ತುವನೌ, ಅದನ್ನೇ ಕಾಯ್ವನು ೪). ೮. ಯೇನಂದರೆ ತಂನ ಮಾಂಸಕ್ಕೆ ೫) ಬಿತ್ತುವವನು ಮಾಂಸದಿಂದ ಕಾಳೆಯುವಿಕೆಯನು ಕಾಯ್ವನು; ಆದರೆ ಆತ್ಮಕ್ಕೆ ೬) ಬಿತ್ತುವವನು ಆತ್ಮದಿಂದ ನಿತ್ಯಜೀವವನು ಕಾಯ್ವನು. ೯. ದಣಿಯದೆ ೭) ವಾಳ್ಳೇದನು ಮಾಡಾಣ; ಯಾಕಂದರೆ ಆಯಾಸ ಪಡದಿದ್ದರೆ, ತಕ್ಕ ಕಾಲದಲ್ಲಿ ಕಾಯ್ವೆವು. ೧೦. ಹಾಗಾದರೆ, ನಮಗೆ ಸಮಯವಿರುವ ೮) ಪ್ರಕಾರ, ಯೆಲ್ಲರಿಗೆ, ಮುಖ್ಯವಾಗಿ ವಿಶ್ವಾಸದ ೯) ಮನೆತನದವರಿಗೆ, ವಾಳ್ಳೇದನು ಮಾಡಾಣ.

೧. ಈ ಮಾತನ್ನು ಬೇರೆ ವಿಧವಾಗಿ ಭಾಷಾಂತರ ಮಾಡುತ್ತಾರೆ. "ಉಪದೇಶ ಪುಸಾಂದುವವನು ಉಪದೇಶಿಸುವವನ ಸಂಗಡ ಯೆಲ್ಲಾ ವಾಳ್ಳೇದರಲ್ಲಿ ಪಾಲುಗಾರನಾಗಲಿ," ಅಂದರೆ, ತನಗೆ ಉಪದೇಶವಾಗುವದನ್ನು ಚನ್ನಾಗಿ ಪ್ರಯೋಗಿಸಿ, ಅವನಿಗೆ ವಿಧೇಯನಾಗುವದಕ್ಕೆ ಪ್ರಯತ್ನ ಮಾಡಲಿ.

೨. ದೇವರ ವಾಕ್ಯವನ್ನು ಅಸಡ್ಡೆ ಮಾಡಿದರೆ ಚಿಂತೆ ಇಲ್ಲವೆಂಬ ಯೆಣಿಸುವದು ದಾಡ್ಡ ತಪ್ಪು.

೩. ಅಂದರೆ, ಆತನು ಶಿಕ್ಷೆ ಕಾಡದೆ ಬಿಡನು.

೪. ಮನುಷ್ಯನು ತನಗೆ ದೇವರು ಕಾಡುವ ಕೃಪೆಯನ್ನು ತಕ್ಕಾಂಡು ಫಲ ತರುತ್ತಾನಾ, ಅಥವಾ ಅದನ್ನು ತಳ್ಳಿ ಬಿಡುತ್ತಾನಾ, ಯೆಂಬದಕ್ಕೆ ಸರಿಯಾಗಿ,

ಮನುಷ್ಯನ ಸ್ಥಿತಿಯು ಪರದಲ್ಲಿ ಇರುವದು. ಆದ್ದರಿಂದ ಸತ್ಯ ಅಪಾಸ್ತಾಲಿಕ ನೀತಿಕರಣದ ಬಾಧನೆಯು ಲಘು ಮನಸ್ಸನ್ನೂ ಆಲಸ್ಯವನ್ನೂ ಉಂಟು ಮಾಡದೆ, ಯೆದೆಬಿಡದೆ ನಂಬಿಕೆಯಾಗಿರುವ ಚಾಪವನ್ನು ಪುಟ್ಟಿಸುತ್ತದೆ.

೫. ಯಾರು ಮೇಲೆ ಹೇಳಿದ ಮಾಂಸಕ್ರಿಯೆಗಳನ್ನು ಮಾಡುತ್ತಾನಾ, ಈ ಪಾಪಸ್ವಚಾವದ ಅಪ್ಪಣೆಗಳನ್ನು ಕೇಳುತ್ತಾನಾ, ಸ್ವಾರ್ಥಕ್ಕೂ, ಸ್ವೈರಕ್ಕೂ, ಸ್ವನೀತಿಗೂ ಸೇವೆ ಮಾಡುತ್ತಾನಾ, ಅವನಿಗೆ ಇಹಪರದಲ್ಲಿಯೂ ವಿನಾಶವೆ ಪ್ರಾಪ್ತವಾಗುವದು.

೬. ಆತ್ಮದಲ್ಲಿ ನಡದು, ದೇವರ ಆತ್ಮದ ಆಳಿಕೆಗೆ ವಾಳಗಾಗಿ ಬದುಕುವವನು, ನಿತ್ಯ ಚಾಗ್ಯಕರವಾದ ಕ್ರಿಸ್ತನ ಅನ್ಯಾನ್ಯವನ್ನು ಫಲವಾಗಿ ಪಾಂದುತ್ತಾನೆ.

೭. ಕಷ್ಟದ ಚಾರದಿಂದ ದಣಿದು, ಅಲಸಿಯಾಗಿ ಪಾಂಗದಿರುವದಕ್ಕೆ, ಮುಂದಿನ ಆನಂದಕರವಾದ ಬೆಳೆಯ ಕಾಲದ ಮೇಲೆ ದೃಷ್ಟಿ ಇಡುವದು ಅತ್ಯುತ್ತಮ.

೮. ನಮಗೆ ಸಮಯವು ಯಾವಾಗಲೂ ಸಿಕ್ಕುವದಿಲ್ಲವೆಂದು ತಿಳಿದು, ನಮಗೆ ದಯ ಮಾಡಿ ಇರುವ ಕಾಲವನ್ನು ನೆರೆನಂಬಿಕೆಯಾಗಿ ಪ್ರಯಾಗಿಸ ಬೇಕು. ಶತ್ರುವಾದ ಸೈತಾನನು ಪಾಗೆಯೇ ಮಾಡುತ್ತಾನೆ. ಪ್ರಕಟನೆ ೧೨, ೧೨.

೯. ಮುಂಚೆ ಸಪಾನಾದರಪ್ರೀತಿ, ಮತ್ತೆ ಯೆಲ್ಲರ ಪ್ರೀತಿ ಬರುತ್ತದೆ. ಸಪಾನಾದರ ಪ್ರೀತಿಯು ಮೊದ ದಲನೇದು, ಆದರೆ ಅದು ಬಹು ಸೂಕ್ಷ್ಮಚಾವದ್ದಾಗಿರುವದರಿಂದ, ಸುಲಭವಾಗಿ ಅದನ್ನು ನಾಯಿಸಲಿಕ್ಕೆ ಆಗುತ್ತದೆ, ಆದ್ದರಿಂದ ಅದನ್ನು ಕಾಪಾಡ ಬೇಕೆಂದು ತಿರಿಗಿ ತಿರಿಗಿ ಹೇಳುವದು ಅವಶ್ಯವಾಗುತ್ತದೆ. ಗಲ ತರಿಗೂ ಇದನ್ನು ಹೇಳುವದು ಅಗತ್ಯವಾಗಿತ್ತು.

೩. ಅಪಾಸ್ತಲನು ಅಪ್ಪಣೆ ತೆಗದು ಕಾಳ್ಳುವಾಗೈ, ಕ್ರಿಸ್ತನಲ್ಲಿರುವ ತನ್ನ ಪರಿಶುದ್ಧ ಪ್ರೀತಿಗೆ ಸಾಕ್ಷಿ ಕಾಡುತ್ತಾನೆ.

ವ. ೧೧. ನನಗೆ ಬಹಳ ಕೆಲಸವಿದ್ದರೂ, ಚಿಂತೆ ಇಲ್ಲವೆಂದು, ಮತ್ತೊಬ್ಬರಿಗಾದರೆ, ಬರಿಸುವ ಅಭ್ಯಾಸವನ್ನು ಬಿಟ್ಟು, ಸ್ವಂತ ಕೈಯಿಂದ ತಕ್ಕಷ್ಟು ಪ್ರಯಾಸವಾಗಿ ಇಷ್ಟು ಉದ್ದ ಕಾಗದವನ್ನು ಬರದ್ದರಿಂದ, ನಿಮ್ಮ ಮೇಲೆ ಇಡುವ ನನ್ನ ಹೃದಯಪೂರ್ವಕವಾದ ಪ್ರೀತಿಯನ್ನು ನೋಡ ಬಹುದು. ೧೨. ಆದರೆ ಇಚ್ಛಕ ಮಾತಿನಿಂದ ನಿಮಗೆ ಮೋಸ ಮಾಡುವ ಕುಹಕಬೋಧಕರು ಸ್ವಲಾಭವನ್ನು ನೋಡುತ್ತಾರೆ. ಅವರು ನಿಮಗೆ ಪರಿಚ್ಛೇದನೆ ಮಾಡಿ ಕೊಳ್ಳಿ ಬೇಕೆಂದು ಹೇಳುವ ಹೇತುವು ಮಾನಾಭಿಲಾಷೆ ಶ್ರಮಭಯಗಳ ಹೊರತು ಬೇರೊಂದಲ್ಲ; ಯಾಕಂದರೆ ಈ ಪ್ರಕಾರ ಯೆಹೂದರ ಮನಸ್ಸನ್ನು ದುಡಿದು, ಕ್ರಿಸ್ತನಲ್ಲಿ ಮಾತ್ರವೆ ರಕ್ಷಣೆ ಉಂಟೆಂಬ ಪ್ರಸಂಗದಿಂದ ಬಾರದಿರದ ಆತಂಕಕ್ಕೆ ತಪ್ಪಿಸಿಕೊಳ್ಳಿ ನೋಡುತ್ತಾರೆ. ೧೩. ಇದಲ್ಲದೆ ನಿಯಮನಷಾ ಅವರಿಗೆ ಅಷ್ಟು ಪ್ರಿಯವಾದದ್ದಲ್ಲ, ಹ್ಯಾಗೆಂದರೆ ಅವರು ಅದನ್ನು ಕೈಕೊಳ್ಳುವದೇ ಇಲ್ಲಾ. ಅವರು ಅನೇಕರನ್ನು ಪರಿಚ್ಛೇದನೆ ಮಾಡಿಸಿದೆವೆಂದೂ, ಬಹಿರಂಗದಲ್ಲಿ ಯೆಹೂದ ಮತದಲ್ಲಿ ಶೇರಿಸಿದೆವೆಂದೂ ಹೇಳಿ, ಯೆಹೂದರಲ್ಲಿ ಹೊಗಳಿಕೆ ಹೊಂದ ಬೇಕೆಂಬದೆ ಅವರಿಗೆ ಮುಖ್ಯ. ಆದರೆ ನಾನೋ—೧೪. ಲೋಕವು ನನಗೂ ನಾನು ಲೋಕಕ್ಕೂ ಕ್ರೂಜಿಸಲ್ಪಡುವದಕ್ಕೆ ಕಾರಣವಾದ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕ್ರೂಜೆಯ ಹೊರತು, ಯಾವದಕ್ಕೂ ಹೆಚ್ಚಳ ಪಡುವದು ನನಗೆ ಬೇಡಾ. ಹಾಗಂದರೆ ಕ್ರೂಜಿಸಲ್ಪಟ್ಟ ಯೇಸು ಕ್ರಿಸ್ತನಲ್ಲಿ ಮಾತ್ರವೆ ನನ್ನ ಮಾನವನ್ನು ಹುಡುಕುತ್ತೇನೆ. ಅತನಿಗೆ ಅನ್ಯೋನ್ಯವಾದ್ದರಿಂದ, ಲೋಕವು ನನಗೆ ಸತ್ತಿತು, ನಾನು ಅದನ್ನೂ ಅದರ ಹೊಗಳಿಕೆಯನ್ನೂ ಅಲ್ಪವೆಂದೆಣಿಸುತ್ತೇನೆ. ಇದಲ್ಲದೆ ನಾನು ನಷಾ ಅದರ ಕಣ್ಣಿಗೆ ಕ್ರೂಜಿಸಲ್ಪಟ್ಟ, ನಾಚಿಕೆ ತುಂಬಿದ, ಶಾಪಗ್ರಸ್ತ ಮನುಷ್ಯನಂತಿದ್ದೇನೆ. ೧೫. ಯಾ

ಕಂನನೆ ಸ. ೩, ೬. ಒಬ್ಬನಿಗೆ ಪರಿಚ್ಛೇದನೆಯಾದರೂ ಪರಿಚ್ಛೇದನೆಯಾಗದಿದ್ದರೂ, (ಕ್ರಿಸ್ತ ರಾಜ್ಯದಲ್ಲಿ) ಕ್ರಿಸ್ತನ ಕಡೆಗೆ ಇರುವ ಸಂಬಂಧದಲ್ಲಿ ಹೆಚ್ಚು ಕಡಿಮೆ ಆಗುವದಿಲ್ಲ; ಪುನರ್ಜನ್ಮವನ್ನು ಹೊಂದಿ, ವಿಶ್ವಾಸದಿಂದ ಅಂತಃಕರಣವಲ್ಲಿ ಹೊಸಬನಾದದ್ದೇ ಮುಖ್ಯ. ೧೬, ತಾನು ಹೊಸ್ತಾಗಿ ಹುಟ್ಟಿದೆನೆಂಬುವದನು ನಡೆನುಡಿಯಲ್ಲಿ ತೋರಿಸುವವನೆ ಸತ್ಯ ಆತ್ಮಿಕ ಇಸ್ರಯೇಲನಲ್ಲಿ ಶೇರಿ, ದೇವರ ನಿಜ ಜನಾಂಗದವನಾಗಿ, ಮೇಲೆ ಹೇಳಿದ, ಅಬ್ರಹಾಮನ ವಿಶ್ವಾಸದ ಸಂತಾನದವನಾಗಿ ಇರುತ್ತಾನೆ. ೧೭. ಇನ್ನೂ ಮುಂದೆ ಯಾರಾದರೂ ನನ್ನ ಪ್ರಸಂಗಕ್ಕೆ ಕಷ್ಟಿಗಳನ್ನು ಮಾಡಿ, ನಂನಂನು ತೊಂದರೆ ಪಡಿಸದಿರಲಿ. ಯಾಕಂದರೆ ನನಗೆ ನನ್ನ ಮನಸ್ಸು ದೃಢವಾಗಿದೆ. ಇದಲ್ಲದೆ ಕ್ರಿಸ್ತನ ಸೇವಕನಾಗಿ, ಆತನಿಗೋಸ್ಕರ ಶ್ರಮ ಪಟ್ಟದರಿಂದ ಪರೀಕ್ಷಿತನಾಗಿದ್ದೇನೆ. ಈ ಮಾತಿನಿಂದ ಪೌಲನು ಈ ಪತ್ರಿಕೆಯಲ್ಲೆಲ್ಲಾ ಸಾರಿದ ಕ್ರಿಸ್ತನ ಕೃಪೆಯ ವಿಷಯವಾದ ಸದ್ವಾಕ್ಯವನ್ನು ಗಲತರ ನೆನಪಿಗೆ ತಂದು, ಅವರು ತನ್ನನ್ನು ಪ್ರೀತಿ ಮಾಡುವದರಿಂದಲೇ ಇನ್ನು ಮುಂದೆ ತನಗೆ ನೋವು ಹುಟ್ಟಿಸದಿರ ತಕ್ಕ ದ್ದೆಂದು, ಅವರ ಮನವರಿಕೆಗೆ ತರುತ್ತಾನೆ. ಕಡೆಯಲ್ಲಿ ಅವನು ಮಾಡುವ ಸಮಾಪ್ತಿ ಯೇನೆಂದರೆ: ವ. ೧೮. ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮದ ಸಂಗಡ ಇರಲಿ. ಆಮೆನ್. ನಿಂಮ ಸಂಗಡ ಇರಲಿ ಯೆಂದು ಹೇಳ್ಗೆ, ನಿಮ್ಮ ಆತ್ಮದ ಸಂಗಡ ಇರಲಿ ಯೆಂದು ಹೇಳ್ಗುವದರಿಂದ, ಆತ್ಮದಲ್ಲಿ ನಡಕೊಳ್ಳಬೇಕೆಂದೂ, (ಪರಿಚ್ಛೇದನೆ ನಿಯಮಗಳೆಂಬ) ಮಾಂಸದಿಂದ ಅಲ್ಲಾ, ವಿಶ್ವಾಸದಿಂದಲೇ ನೀತಿ ಬರುವದೆಂದೂ, ಆತ್ಮವು ಮಾಂಸದ ಮೇಲೆ ಜಯ ಹೊಂದುವದೆಂದೂ ಕಡೆಯಲ್ಲಿ ಇನ್ನೊಂದು ಸರ್ತಿ ಸೂಚಿಸುತ್ತಾನೆ. ಕ್ರಿಸ್ತನ ಕೃಪೆಯನ್ನು ಅಂತರ್ಯದಲ್ಲಿ ಅನುಭವಿಸಿ, ಆತ್ಮದಲ್ಲಿಯೂ ಸತ್ಯದಲ್ಲಿಯೂ ಆತನ ಸಂಗಡ ಅನ್ಯೋನ್ಯವಾಗುವದು ಯೆಷ್ಟು ಅವಶ್ಯವೆಂದು, ನಾವು ಸಹ ಇದರಿಂದ ತಿಳಿ ಕೊಳ್ಳುವದು ಯುಕ್ತ.

೫. ಕಾರಿಂಥರ ಮೊದಲನೆ ಪತ್ರಿಕೆ.

ಯೆಹೂದ ಪಕ್ಷ ಶೋಧಕರ ದುರ್ಬೋಧನೆಯಿಂದ ಮರುಳಾಗಿ, ನಿಯಮ ಕರ್ಮಭಕ್ತಿಗೆ ತಿರುಗಿ ಕೊಂಡ ಭೋಳೆಗಲತರ ಸಂಗಡ ಹುಟ್ಟಿದ ವಾಗ್ವಾದಕ್ಕಿಂತ, ಕೊರಿಂಥದಲ್ಲಿ ಬಹು ಕಾಲದ ಮುಂಚೆ ವೊಂದೂವರೆ ವರುಷ ವಸ್ತಿ ಮಾಡಿ ಸ್ಥಾಪಿಸಿದ ಸಭೆಯ ಸಂಗಡ ಪೌಲನಿಗೆ ಅಧಿಕ ಕಠಿಣವಾದ ಹೋರಾಟ ಉಂಟಾಯಿತು. ಈ ಸಭೆಯಲ್ಲಿ, ಧನಸಂಪತ್ತಿನ ವ್ಯಾಪಾರಪಟ್ಟಣದೊಳಗೆ ಪುರಾತನ ವಿಗ್ರಹಾರಾಧನೆಯಿಂದ ವಾಡಿಕೆಯಾದ ದುರಾಚಾರಗಳ ಹೊರ್ತು, ಉತ್ಕೃಷ್ಟ ವಿದ್ವಾಂಸರಾದ ಗ್ರೀಕರ ಜ್ಞಾನಗರ್ವವೂ, ನಾನಾತರದ ಗುರು ಶಿಷ್ಯ ಪಕ್ಷಭೇದಗಳೂ ಮೋಸಕ್ಕೆ ಕಾರಣವಾಗಿದ್ದವು. ಕೊರಿಂಥದವರಿಗೆ ಬರದ ಉಭಯ ಪತ್ರಿಕೆಗಳನ್ನು ಚನ್ನಾಗಿ ಗ್ರಹಿಸುವ ಬಗ್ಗೆ, ಪೌಲನು ಮೊದಲನೆ ಸರ್ತಿ ಅಲ್ಲಿ ವಸ್ತಿ ಮಾಡಿದ ಕಾಲದ ವೃತ್ತಾಂತದಲ್ಲಿ ಮಾಡಿದ್ದಕ್ಕಿಂತ ಹೆಚ್ಚು ಜಾಗ್ರತೆಯಾಗಿ ವಿದ್ಯಮಾನವ್ಯವಸ್ಥೆಗಳ ಶೋಧನೆಯನ್ನು ಈಗ ಮಾಡ ಬೇಕು.

೧) ಕಾರಿಂಥ ಪಟ್ಟಣವು.

ಕೊರಿಂಥದ ಸ್ಥಳವು ಲೋಕದಲ್ಲಿರುವ ಹೆಚ್ಚಾದ ಪಟ್ಟಣಗಳಿಗಿಂತ ವಾಣಿಜ್ಯವೃತ್ತಿಗೆ ಅತಿ ಪ್ರಶಸ್ತ ವಾಗಿತ್ತು. ಹ್ಯಾಗಂದರೆ ಅದು ಯೆರಡು ಕಡಲುಗಳ ನಡುವೆ ನೀಡುವ ಭೂಕಂಠದಲ್ಲಿ, ಸುಡ್ಡದ ಇಳಿಜಾರಿ

ನಲ್ಲಿ ಕಟ್ಟಿ ಇತ್ತು; ಅದರ ತಲೆಯಲ್ಲಿದ್ದ ದುರ್ಗವು ರಮಣೀಯ ಪ್ರದೇಶಕ್ಕೆ ದೃಷ್ಟಿಮಣಿಯಾಗಿ ಮೆರೆಯುತ್ತಿತ್ತು. ಬಲಕ್ಕೂ ಯೆಡಕ್ಕೂ ಪಟ್ಟಣದ ಬೀದಿಗಳು ಉಭಯ ಬಂದ್ರಗಳ ಕಡೆಗೆ ನೀಡಿತು: ಇತಲಿ ಮುಂತಾದ ಪಶ್ಚಿಮ ದೇಶಗಳ ವ್ಯಾಪಾರ ನಡಿಸುವರೆ, ಕೊರಿಂಥದ ಸಮುದ್ರನಾಭಿಯಲ್ಲಿ ಲೆಖಾಯ ಬಂದ್ರ ಯುಕ್ತವಾಗಿತ್ತು. ಪೂರ್ವ ದೇಶಗಳಿಗೆ ಹೋಗುವರೆ, ಸಾರೋನ ಸಮುದ್ರನಾಭಿಯಲ್ಲಿ ಕೆಂಕ್ರೆಯ ಬಂದ್ರ ಅನುಕೂಲವಾಗಿತ್ತು. ಪೂರ್ವಕಾಲದಿಂದ ಕೊರಿಂಥದವರು ತಮಗಿದ್ದ ವೊಳ್ಳೀ ಸ್ಥಾನದ ಪ್ರಯೋಜನವನ್ನು ಅನುಭವಿಸುತ್ತಾ ಬಂದರು. ಗ್ರೀಕರು ಪ್ರಾಚೀನ ಕಾಲದಲ್ಲಿ ಸ್ಥಾಪಿಸಿದ ಬಹು ಬಲಾಢ್ಯವಾದ ಕೊರ್ಕುರ ಸುರಕೂಸ ಯೆಂಬ ವಸ್ತ್ರಿಗಳು ಕೊರಿಂಥದಿಂದ ಹುಟ್ಟಿದವು. ಕೊರಿಂಥವು, ಗ್ರೀಕ ದೇಶದಲ್ಲಿ ಪ್ರಧಾನವಾಗಿದ್ದ ಅಥೇನ ಸ್ಪರ್ತ ಪಟ್ಟಣಗಳು ಬಿದ್ದ ಮೇಲೆ ಮಾತ್ರವೆ, ಅಖಾಯರ ಕೂಟದಲ್ಲಿ ಮೇಲಧಿಕಾರವನ್ನು ಹೊಂದಿದರೂ, ವ್ಯಾಪಾರಪಟ್ಟಣವಾಗಿ ಅತಿಶಯವಾದ ಕೀರ್ತಿಯನ್ನು ಪಡ ಕೊಂಡಿತು. ಮತ್ತು ರೋಮಿಯಾಯನಾದ ಮುಮ್ಮಿಯನು ಅಖಾಯ ಕೂಟದವರನ್ನು ಜೈಸಿ, ಕ್ರಿಸ್ತ ಶಕದ ಮುಂಚೆ ೧೪೬ಲ್ಲಿ ಕೊರಿಂಥವನು ಸೆದ್ದು ಸುಟ್ಟು ಬಿಟ್ಟಾಗ, ಕರಗಿ ಬೀದಿಗಳಲ್ಲಿ ಹರದು ಬಂದ ಬಹಳ ಬಹಳ ಲೋಹದಿಂದ, ಪೂರ್ವಿಕರಲ್ಲಿ ಕೊರಿಂಥದ ಲೋಹವೆಂದು ಹೆಸರ್ವಾಶಿಯಾಗಿ ಭಂಗಾರ ಬೆಳ್ಳಿಗಳಿಗಿಂತ ಊಚು ಯೆಂದು ಪ್ರಿಯವಾಗಿದ್ದ ಕೀರ್ತಿಗೊಂಡ ಬೆರಿಕೆಯು ಉಂಟಾಯಿತೆಂದು ಹೇಳುತ್ತಾರೆ. ಅನಂತರ ಸ್ವಲ್ಪ ಕಾಲದ ಮೇಲೆ ಪಟ್ಟಣವನ್ನು ತಿರಿಗಿ ಕಟ್ಟಿದರು. ಮತ್ತು ಯೂಲಿಯ ಕೈಸರನು ಹೇರಳ ಮಂದಿಯಾದ ರೋಮಿಯಾಯರ ಬಿಡುಗಡೆಯಾಳುಗಳನ್ನು ಅದರಲ್ಲಿ ವಸ್ತಿಯಾಗಲೀಸಿದನು. ಇವರ ಪರಿಮುಖವಾಗಿ ಆ ಪಟ್ಟಣಕ್ಕೆ ಮುಂಚಿನಷ್ಟು ಮಹಿಮೆ ಬಾರದಿದ್ದರೂ, ಮುಂಚಿನ ವಿಸ್ತಾರವು ಪ್ರಾಪ್ತಿ ಆಯಿತು. ಅದರಲ್ಲಿದ್ದ ಮನೆಯಾಳುಗಳೇ ೪೬೦,೦೦೦ ಮಂದಿಯಾಗಿದ್ದರು. ಅಥೇನದ ಹಾಗೆ ಕೊರಿಂಥ ಪಟ್ಟಣವು ಸಹಾ ಅನೇಕಾನೇಕ ಸುಂದರಾಲಂಕಾರ ಉಳ್ಳ ದೇವಸ್ಥಾನಗಳಿಂದಲೂ, ಅಂತರಾಂತರವಾದ ಹಳ್ಳೀ ವಿಸ್ರಹಾರಾಧನೆಗಳ ಮಹಿಮೆಯಿಂದಲೂ ಶೋಭಿಸುತ್ತಾ ಇತ್ತು. ಇದಲ್ಲದೆ ಲೋಕ ಜ್ಞಾನಿಗಳ ಪಾಠಶಾಲೆಗಳೂ ಅಲ್ಲಿ ಹಲವು ಇದ್ದವು; ಆದರೆ ಮುಖ್ಯವಾಗಿ ನಯವಾದ ವೈಭವದ ವಿಷಯ ಭೋಗಕ್ಕೆ ಬೇಕಾದ್ದೆಲ್ಲಾ ಅಲ್ಲಿ ವದಗಿತು. ಈಗಿನ ಲಂಡನ್ ಪರಿಸ್ ರಾಜಧಾನಿಗಳಂತೆ, ಆಗ ಕೊರಿಂಥವು ಅಟ್ಟಿಹಾಸ ಭೂಷಣ ಅಲಂಕಾರಗಳಿಗೆ ಮೂಲಸ್ಥಾನವಾಗಿತ್ತು. ಇದಲ್ಲದೆ ಲೋಕಪ್ರಖ್ಯಾತವಾದ ಮಹಾ ನಗರಗಳಲ್ಲಿ ಸಹಜವಾಗಿರುವ ನೀತಿಭ್ರಷ್ಟತೆಯು, ಅದಕ್ಕೆ ಧರ್ಮವು ಅನುಕೂಲವಾಗಿದ್ದದರಿಂದ, ಬಹು ವಿಪರೀತವಾಗಿತ್ತು. ಅಫ್ರೊದೀತೆ ದೇವಿಯ ದೇವಸ್ಥಾನದಲ್ಲಿ ಸಾವಿರಾರು ಸೂಳೆಯರಿದ್ದರು; ಇವರು ತಮ್ಮ ವ್ಯಾಪಾರವನ್ನು ಭಕ್ತಿ ಯೆಂಬ ಹೆಸರಿನಿಂದ ನಡಿಸಿದರು. ಹೀಗಿರುವದರಿಂದ, ಭ್ರಷ್ಟ ವಿಷಯಲಂಪಟರಿಗೆ ಕೊರಿಂಥದವರೆಂಬ ಅಡ್ಡ ಹೆಸರು ಹುಟ್ಟಿತು.

೨) ಕಾರಿಂಥ ಸಭೆ.

ಈ ಕಾರ್ಯತ್ತಲಾದ ಸ್ಥಳದಲ್ಲಿ ಅಪೊಸ್ತಲನಾದ ಪೌಲನು ವೊಂದೂವರೆ ವರುಷ ವಸ್ತಿಯಾಗಿದ್ದು, ಸುವಾರ್ತೆಯ ಬೆಳಕನ್ನು ಬೆಳಗಿಸಿ, ಕ್ರೂಜೆಯ ಯಥಾರ್ಥವಾದ ಪ್ರಸಂಗದಿಂದ ಕರ್ತನಿಗೆ ದೊಡ್ಡ ಜನಾಂಗವನು ದುಡಿದನು. ಅವನು ಅಲ್ಲಿಂದ ಹೋದ ಮೇಲೆ, ಅಪೊಲ್ಲೋಸನು ಬಂದು, ಅಪೊ. ಕ್ರಿ. ೧೫, ೧. ೧ ಕೊರಿ. ೩, ೬. ಬರಹದ ವ್ಯಾಖ್ಯಾನದಲ್ಲಿ ವಿಶೇಷ ಚತುರನಾಗಿದ್ದು, ಅಧಿಕವಾದ ಶಿಷ್ಯವರ್ಗವನು

ಪಡ ಕೊಂಡು, ಪೌಲನು ತೊಡಗಿದ ಕೆಲಸವನ್ನು ಮುಂದೆ ನಾಗಿಸಿದನು. ಆದರೆ ಇವನು ಸಹಾ ಕೊರಿಂಥವನ್ನು ಬಿಟ್ಟು ಹೋದಾಗ, ನವಸಂವರ್ತಿಗಳ ದೃಢವಿಲ್ಲದ ಮನಸುಗಳಲ್ಲಿ ಪುರಾಣಭಾವದ ಸಹಜವಾದ ದುರ್ಗುಣಗಳು ತಿರಿಗಿ ಚಿಗುರಿದವು. ಇದಲ್ಲದೆ ಗಂತದಲ್ಲಿ ಆದ ಹಾಗೆಯೆ, ಯೆಹೂದ ಕ್ರೈಸ್ತರಾದ ಕುಹಕಬೋಧಕರು ಬಂದು, ಪೌಲನನ್ನು ಕ್ರಿಸ್ತನ ಸಾಕ್ಷಾತ್ತಾದ ಶಿಷ್ಯನಲ್ಲವೆಂದು ತಿರಸ್ಕರಿಸಿ, ಪೇತ್ರನ ಹೆಸರಿನಲ್ಲಿ ಕಠಿಣತರವಾದ ನಿಯಮಕರ್ಮಮಾರ್ಗವನ್ನು ಪ್ರಸಂಗಿಸಿದರು. ಇವರ ಸಂಗಡ ಬೇರೊಬ್ಬರು ಉರಿಯಿಂದ ಸೆಣಸಾಟ ಮಾಡಿದ ಕಾರಣ, ಪರಸ್ಪರ ಖಂಡನೆ ಮಾಡುವಂಥಾ ಬೇರೆ ಬೇರೆ ಗುಂಪುಗಳುಂಟಾದವು. ಹೆಚ್ಚಾದವರು ಪೌಲನವರೆನಿಸಿ ಕೊಂಡು, ತಾವು ಜ್ಞಾನದಿಂದಲೂ ಸ್ವತಂತ್ರದಿಂದಲೂ ಯೆಹೂದ ಕ್ರೈಸ್ತರಿಗೆ ಅಧಿಕರೆಂಬ ಹೆಮ್ಮೆಯಿಂದಲೂ, ಇಚ್ಛಾನುಸಾರವಾದ ನಡತೆಯಿಂದಲೂ ಯೆದುರಾಳಿಗಳನ್ನು ಕೆದರಿಸುತ್ತಾ ಇದ್ದರು. ಮತ್ತೊಬ್ಬರು ಅಪೊಲ್ಲೋಸನವರೆಂದನಿಸಿ ಕೊಂಡು, ಹೆಚ್ಚಾಗಿ ಪೌಲೀಯರ ಸಂಗಡ ಯೇಕಮತ್ಯವಾಗಿದ್ದರೂ, ತಮ್ಮ ಗುರುವಿನ ವಿಶೇಷ ಗುಣಗಳಾದ ವಾಗ್ಜಾಲತ್ವವನ್ನೂ ದ್ವ್ಯರ್ಥ ಲೇಖನ ವ್ಯಾಖ್ಯಾನನಿಪುಣತ್ವವನ್ನೂ, ಮನೋಹರವಾದ ಭಾಷಣವನ್ನೂ ಹೆಚ್ಚಾಗಿ ಹೊಗಳಿದರೆಂದು ತೋರುತ್ತದೆ. ಉಭಯತರಿಗೂ ಯೆದುರಾಗಿ, ಕೇಫ ಯೆಂಬ ಪೇತ್ರನವರೆಂಬವರು ನಿಂತರು; ಇವರು, ಪೌಲನನ್ನು ಅಸಡ್ಡೆ ಮಾಡಿ, ಅವನು ಪೇತ್ರ ಯಾಕೋಬರ ಹಾಗೆ ಕರ್ತನ ನಿಜ ಶಿಷ್ಯನಲ್ಲವೆಂದೂ, ಮೋಶೆಯ ಆಚಾರ ನಿಯಮವನ್ನು ಕೈಕೊಳ್ಳದವನೆಂದೂ ಹೇಳುತ್ತಾ ಇದ್ದರು. ನಾಲ್ಕನೆ ಗುಂಪಿನವರು ತಾವು ಯಾವ ಪಕ್ಷದಲ್ಲಿಯೂ ಶೇರುವವರಲ್ಲವೆಂದು ಅಂದು ಕೊಂಡು, ತಾವು ಮಾನುಷವಾದ್ದನ್ನು ನಂಬದೆ, ಮಾನುಷ ಬೋಧಕನನ್ನು ಅನುಸರಿಸದೆ, ಕ್ರಿಸ್ತನನ್ನು ಮಾತ್ರವೆ ಹಿಂಬಾಲಿಸುತ್ತೇವೆಂದು ಹೇಳಿ, ಅಧಿಕ ಶುದ್ಧವಾದ ಕ್ರೈಸ್ತತ್ವವನ್ನು (ವೊಂದು ವೇಳ್ಯ ದರ್ಶನಗಳಿಂದ) ಪಡ ಕೊಂಡಿದ್ದೇವೆಂತ, ಸಾಧಿಸಿದರೆಂದು ತೋರುತ್ತದೆ. ನಮ್ಮ ಕಾಲದಲ್ಲಿ ಹಲವು ಕ್ರೈಸ್ತರು ಮಾಡುವ ಪ್ರಕಾರ, ಅವರು ಕ್ರಿಸ್ತನು ತಾನೇ ಹೇಳಿದ ಬೋಧನೆ ಆತನ ಭೂಜೀವದ ವಿಷಯವಾದ ಸ್ಮೃತಿ ಇವುಗಳ ಹೊರ್ತು ತಮಗೇನೂ ಬೇಡವೆಂದು ಹೇಳಿ, ಕ್ರಿಸ್ತನು ಬೋಧಕನೂ ಪ್ರವಾದಿಯೂ ಆಗಿರುವದನ್ನು ಮುಖ್ಯವಾಗಿ ಯೆಣಿಸಿ, ಆತನ ರಾಜೋದ್ಯೋಗವನ್ನೂ ಪ್ರಧಾನ ಯಾಜಕೋದ್ಯೋಗವನ್ನೂ ಅಶ್ರದ್ಧೆ ಮಾಡಿದರು. ಈ ಪ್ರಕಾರ ಯೆರಡು ಕುಹಕಾತ್ಮಿಕ ಪಕ್ಷಗಳೂ, ಯೆರಡು ಮಾಂಸಭಾವದ ಪಕ್ಷಗಳೂ ಕೊರಿಂಥದ ಸಭೆಯಲ್ಲಿ ಇದ್ದವೆಂತ ತೋರುತ್ತದೆ. ಉಭಯತರು ಅರ್ಧ ಸಂಗತಿಯನ್ನು ಗ್ರಹಿಸಿ, ಫಲದಿಂದ ಮಿತಿಮೀರಿ ಹೋಗಲಾಗಿ, ವೊಬ್ಬರಾದರೂ ಸಮವಾದ ಮಾರ್ಗವನ್ನು ಕೈಕೊಳ್ಳಲಿಲ್ಲಾ. ಇದಲ್ಲದೆ ಇದರಿಂದ ಬಹಳ ನಷ್ಟ ಪ್ರಾಪ್ತಿ ಆಯಿತು. ಹ್ಯಾಗಂದರೆ ಧೈರ್ಯವೂ ಪರಸ್ಪರ ಪ್ರೀತಿಯೂ ಆರಿ ಹೋಯಿತು; ಸಭಾಶಿಕ್ಷೆಯು ಬಿದ್ದು ಹೋಯಿತು; ಪ್ರಕಟವಾದ ಇಡುರುಗಳಿಗೂ ಪರ ಜನರಲ್ಲಿ ವಾಡಿಕೆಯಾದ ಹಾದರಕ್ಕೂ ಯೆಡೆಯಾಯಿತು. ಸ. ೫. ಕ್ರೈಸ್ತರು ಪರಜನರ ನ್ಯಾಯಸ್ಥಾನಗಳಲ್ಲಿ ಸ. ೬. ವೊಬ್ಬರಮೇಲೊಬ್ಬರು ವ್ಯವಹಾರ ನಡಿಸಿದರು. ಸಮಾಗಮಗಳಲ್ಲಿ ವೊಳ್ಳೇ ಮರ್ಯಾದೆ ಕೆಟ್ಟು ಹೋಯಿತು. ಪರಿಶುದ್ಧ ರಾತ್ರಿಭೋಜನದ ಆಚರಣೆಯು ಅಶುದ್ಧವಾಯಿತು, ಆತ್ಮವರಗಳು ಅತಿಕ್ರಮವಾಗಿ ಪ್ರಯೋಗಿಸಲಾದವು, ಹೀಗಿರಲಾಗಿ ಬಹಳ ಆತ್ಮಿಕ ಐಶ್ವರ್ಯವಿದ್ದರೂ, ಸಭೆಯು ಬಹಳ ಗಲಿಬಿಲಿಯಾದೀತೆಂಬ ಭಯ ಉಂಟಾಯಿತು.

೩) ಅಪಾಸ್ತಲನ ಯತ್ನವು.

ಪೌಲನು ಎಫೆಸದಲ್ಲಿ ವಾಸವಾಗಿದ್ದ ಕಾಲದಲ್ಲಿ ಈ ಎಡರುಗಳ ಸುದ್ದಿ ಅವನಿಗೆ ಆಗ್ಗಾಗ್ಗೆ ತಲ್ಪಿತು. ಹ್ಯಾಗಂದರೆ, ಪೌಲನು ಎಫೆಸಕ್ಕೆ ಬಂದ ಸಮಯದಲ್ಲಿ ಕೊರಿಂಥದಲ್ಲಿ ಇದ್ದು (ಅಪೊ. ಕ್ರಿ. ೧೫, ೧.) ಕೊರಿಂಥದವರ ಮೊದಲನೇ ಪತ್ರಿಕೆ ರಚಿತವಾದ ಕಾಲದಲ್ಲಿ ಎಫೆಸಕ್ಕೆ ತಿರುಗಿದ್ದ ಅಪೊಲ್ಲೋಸ್ (೧ ಕೊರಿ. ೧೬, ೧೨.) ಅಪೊಸ್ತಲನಿಗೆ ಕೊರಿಂಥದ ಸಭೆಯ ಸ್ಥಿತಿಗತಿಗಳನ್ನು ತಿಳಿಸಿದನೆಂದು ನೆನಸ ತಕ್ಕದ್ದು. ಬಳಿಕ ಕ್ಲೋವೆಯ ಮನೆಯವರು ಬಂದು, ಸಭೆಯಲ್ಲಿ ನಡೆಯುತ್ತಾ ಇದ್ದ ವಾಗ್ವಾದಗಳ ವರ್ತಮಾನ ಹೇಳಿದರು. ಇವರ ಹೊರ್ತು ಸಭೆಯವರಾದ ಬೇರೆ ಕೆಲವರು ಯೆರಡು ದಿನದ ಕಡಲಪಯಣದಷ್ಟು ದೂರವಾದ ಕೊರಿಂಥದಿಂದ ಎಫೆಸಕ್ಕೆ ಬಂದು, ವಾವಿ ತಪ್ಪಿದ ಜಾರತ್ವದ ಸಂಗತಿಯನ್ನು ಪೌಲನಿಗೆ ಅರಿಕೆ ಮಾಡಿದರೆಂದು ತೋರುತ್ತದೆ. (೧ ಕೊರಿ. ೫, ೧.) ಇದಲ್ಲದೆ ತೀತನು ಧರ್ಮದ ಹಣವನ್ನು ಕೂಡಿಸುವ ಕೆಲಸ ತೊಡಗಿಸುವದಕ್ಕೆ ಕೊರಿಂಥಕ್ಕೆ ಹೋಗಿ, ಮರಳಿ ಎಫೆಸಕ್ಕೆ ಬಂದನೆಂದು ೨ ಕೊರಿ. ೪, ೬—೧೨ ರಲ್ಲಿಯೂ, ೨ಕೊರಿ. ೮, ೨ ರಲ್ಲಿಯೂ ಜಾಡೆಯಾಗಿ ಕಾಣುತ್ತದೆ. ಕಡೆಯಲ್ಲಿ ಸ್ತೆಫನನ್, ಫೊರ್ತುನಾತ ಅಕಾಯಿಕರು ಸಭೆಯ ಹೆಸರಿನಲ್ಲಿ ಅಪೊಸ್ತಲನ ದರ್ಶನ ಮಾಡಿ, ಬೇರೆ ಬೇರೆ ಪ್ರಶ್ನೆಗಳು (೧ ಕೊರಿ. ೭, ೧.) ಬರದ ಪತ್ರಿಕೆಯನ್ನು ಪೌಲನಿಗೆ ವೊಪ್ಪಿಸಿದರು. (೧ ಕೊರಿ. ೭, ೧. ೧೬, ೧೭.) ಅಪೊಸ್ತಲನು ಸಹ ಆಗ್ಗಾಗ್ಗೆ ಶಿಷ್ಯರನ್ನು ಕೊರಿಂಥಕ್ಕೆ ಕಳುಹಿಸಿ ಇದ್ದನು. (೨ ಕೊರಿ. ೧೨, ೧೭. ೧ ಕೊರಿ. ೪, ೧೭.) ಮತ್ತು ಅತಂತ್ರವಾಗಿ ಹೋದ ಬಂದು ಪತ್ರಿಕೆಯನ್ನು ನಮ್ಮ ಕೈಯಲ್ಲಿರುವ ಕೊರಿಂಥದವರ ಮೊದಲನೆ ಪತ್ರಿಕೆಯ ಮುಂಚೆ ಆ ಸಭೆಗೆ ಬರದನು. (೧ ಕೊರಿ. ೫, ೯. ೨ ಕೊರಿ. ೧೦, ೧೦. ೧೧.) ಪೌಲನು ಮೇಲೆ ಹೇಳಿದ ಮಾರ್ಗವಾಗಿ ಕೊರಿಂಥದ ಸಭೆಯ ದುರವಸ್ಥೆಯನ್ನು ತಿಳಿದು ಕೊಂಡು, ಪತ್ರಿಕೆಯನ್ನು ಬರದು, ಸಹೋದರರನ್ನು ಸಹ ಕಳುಹಿಸಿ, ಸಭೆಯನ್ನು ತಿದ್ದುಪಾಟು ಮಾಡಲೆಸಗಿ, ಒಂದು ಸಮಯದಲ್ಲಿ ತಾನೆ ಕೊರಿಂಥಕ್ಕೆ ಹೋಗ ನಿಶ್ಚೈಸಿ ಕೊಂಡನು. ಆದರೆ ತಾಳುವದು ವಾಸಿ ಎಂದು, ತನಗೆ ಬದಲಾಗಿ ತೀತನನ್ನೂ ತಿವೊಥೆಯನನ್ನೂ ವಿಚಾರ ಮಾಡುವ ಬಗ್ಗೆ ಕಳುಹಿಸಿ, ಕೊರಿಂಥದ ಸಭೆಯ ಪ್ರಶ್ನೆಗಳಿಗೆ (೧ ಕೊರಿ. ೫, ೧೦. ಸಂಧಿ ೭. ಸ. ೮. ಸ. ೧೧. ಸ. ೧೨, ೧.) ಪ್ರತ್ಯುತ್ತರ ಬರದು, ಪಂಚಾಶತ್ತಿನ ವರೆಗೂ ಎಫೆಸದಲ್ಲಿ ಉಳಿಕೊಂಡ ಮೇಲೆ, ತಕ್ಕ ಕಾಲ ಕೊರಿಂಥದಲ್ಲಿ ವಾಸ ಮಾಡುವದಕ್ಕೆ ಬರುತ್ತೇನೆಂದು ಮಾತು ಕೊಟ್ಟನು. (೧ ಕೊರಿ. ೧೬, ೭.)

೪) ಮೊದಲನೆ ಪತ್ರಿಕೆಯ ವಿಶೇಷತ್ವ ತಾತ್ಪರ್ಯಗಳು.

ಕೊರಿಂಥದ ಸಭೆಯು ಕೇವಲ ಬೆರತ ಸಭೆಯಾಗಿದ್ದದರಿಂದಲೂ, ನಾನಾ ಪ್ರಕಾರದ ಅನರ್ಥಗಳು ಅದರೊಳಗೆ ಹೊಕ್ಕದರಿಂದಲೂ, ಪೌಲನು ಸುವಾರ್ತೆಗೋಸ್ಕರವೂ ತನಗೋಸ್ಕರವೂ ಹೋರಾಡುವದು ಅವಶ್ಯವೆಂದು ತಿಳಿದು ಬರದ ಕೊರಿಂಥರ ಪತ್ರಿಕೆಗಳು, ಮುಖ್ಯವಾಗಿ ಮೊದಲನೇದು, ಬಹು ವಿಧವಾದ ಅಪೊಸ್ತಲ ಬುದ್ಧಿಯ ನಿಜವಾದ ಮಾದ್ರಿ ಯೆಂಬದು ನಿಶ್ಚಯ. ಬೇರೆ ಯಾವ ಪತ್ರಿಕೆಯಲ್ಲಿ ಆದರೂ ಸಭೆಯ ಸ್ಥಿತಿಯಾಗಲಿ, ಅಪೊಸ್ತಲನ ಹೃದಯವಾಗಲಿ ಇಲ್ಲಿ ಕಾಣುವಷ್ಟು ಪರಿಷ್ಕಾರವಾಗಿ ಕಾಣುವದಿಲ್ಲಾ. ವೊಂದು ಸಭೆ ಕ್ರಿಸ್ತನಲ್ಲಿರುವ ನಿರ್ಮಲವಾದ ಯೇಕೋಭಾವವನ್ನು ಅಗಲಲಿಕ್ಕೆ ತೊಡಗಿದ ಕೂಡಲೆ, ಯೆಂಥಾ ವೋ ಸಗಳಲ್ಲಿ ಬೀಳ ಬಹುದೆಂಬದಕ್ಕೆ, ಇಲ್ಲಿ ಭಯಂಕರ ದೃಷ್ಟಾಂತ ತೋರುವದಲ್ಲದೆ, ಹುಟ್ಟಿದ ಎಡರುಗಳನ್ನೂ,

೧ ಕೊರಿ. ೧, ೧—೩.

ತನ್ನ ಸ್ವಂತ ಅಧಿಕಾರಕ್ಕೆ ಬಂದ ಕಂಟಕವನ್ನೂ ಅತಿಶಯವಾದ ವಾತ್ಸಲ್ಯದಿಂದಲೂ, ಕಠಿಣವಾದ ದಂಡದಿಂದಲೂ ತಳ್ಳುವ ಅಚ್ಚಕ್ಕವಾದ ಪಾಲಕಬುದ್ಧಿಯ ಮಾದ್ರಿಯಾಗಿ ನಮ್ಮ ಪತ್ರಿಕೆ ಶೋಭಿಸುತ್ತದೆ. ಅದರ ವಿಸ್ತಾರವಾದ ತಾತ್ಪರ್ಯವನ್ನು ಒಂದೇ ನರ್ತಿ ಲಕ್ಷಿಸುವ ಹಾಗೆ, ಕೆಳಗೆ ಬರುವ ಭಾಗಗಳನ್ನು ಮಾಡುವದು ಉಚಿತವಾಗಿ ತೋರುತ್ತದೆ.

ಪ್ರಿಸ್ಕಿಕೆ. ನಮನ ಕೃತಜ್ಞತಾಪನೆಗಳು. ಸ. ೧, ೧—೯.

ಮೊದಲನೆ ಭಾಗ. ಛೇದಗಳು. ಇದಕ್ಕೆ ಕ್ರಿಸ್ತನಲ್ಲಿರುವ ಆತ್ಮದ ಐಕ್ಯವೂ ಜ್ಞಾನೈತನವೂ ಪ್ರತೀಕಾರ. ಸ. ೧—೪.

ಎರಡನೆ ಭಾಗ. ಸಭೆಯಲ್ಲಿ ಹುಟ್ಟಿದ ಅನಾಚಾರಗಳು. ಸ. ೫. ೬.

೧. ವಾವಿ ತಪ್ಪಿದ ಜಾರತ್ವದ ದಂಡನ. ಸ. ೫.

೨. ಸಭೆಯವರ ಮೇಲೆ ಸಭೆಯವರು ವ್ಯಾಜ್ಯ ಮಾಡುವ ದೋಷದ ಗದರಿಕೆ. ಸ. ೬, ೧—೮.

೩. ಹಾದರದ ವಿಷಯದಲ್ಲಿ ಬೆದರಿಕೆ. ಸ. ೬, ೯—೨೦.

ಮೂರನೆ ಭಾಗ. ಸಭೆಯವರು ಬರದು ಕೇಳಿದ ಧರ್ಮ ಪ್ರಶ್ನೆಗಳ ನಿಷ್ಕರ್ಷೆಯು.

೧. ವಿವಾಹದ ವಿಷಯವಾದ ಆಲೋಚನೆಯ ಮಾತುಗಳು. ಸ. ೭.

೨. ವಿಗ್ರಹಬಲಿಭಕ್ಷಣ. ಸುವಾರ್ತಾಸ್ವತಂತ್ರವನ್ನು ಅಪಯೋಗಿಸ ಬಾರದೆಂಬ ಬೆದರಿಕೆ. ಸ. ೮—೧೦.

೩. ಸಭೆಯಲ್ಲಿ ಆಗುವ ದೇವಾರಾಧನೆಯಲ್ಲಿ ನಡಿಯುವ ಅಕ್ರಮಗಳ ಗದರಿಕೆ. ಸ. ೧೧.

೪. ಆತ್ಮವರಗಳ ಅಪಯೋಗದ ಗದರಿಕೆ. ಇದರಲ್ಲಿ ಪ್ರೀತಿಯು ಮೂಲನಿಯಮವು. ಸ. ೧೨—೧೪.

ನಾಲ್ಕನೆ ಭಾಗ. ಉತ್ಥಾನದ ವಿಷಯವಾದ ಬಾಧನೆ. ಸ. ೧೫.

ಸಮಾಪ್ತಿ: ಯೆರೂಸಲೇಮಕ್ಕಾಸ್ಕರ ಪಣ ಕೂಡಿಸ ಬೇಕೆಂಬ ಅಪ್ಪಣೆ. ನಮನಗಳು. ಸ. ೧೬.

ಪ್ರಿಸ್ಕಿಕೆ. ನಮನ, ಮತ್ತು ದ್ಯೋವರು ಕೊರಿಂಥರಿಗೆ ದಯ ಮಾಡಿದ ಕೃಪೆಗಾಸ್ಕರ ಕೃತಜ್ಞತಾಪನ. ಸ. ೧, ೧—೯.

೧) ನಮನ. ವ. ೧—೩.

ಮೇಲೆ ಹೇಳಿದ ಪ್ರಕಾರ ಬಹಳ ತೊಡಕಾದ ಕೊರಿಂಥದ ಸಭೆಯ ಸ್ಥಿತಿಯನ್ನು ತಿದ್ದ ಬೇಕೆಂದು, ಅಪೊಸ್ತಲನು ಪತ್ರಿಕೆಯ ಆರಂಭದಿಂದಲೇ ಬಳಸುವ ಬುದ್ಧಿಯು ಹೆಚ್ಚು ಸೋಜಿಗವಾಗಿದೆ. ಅವನು ಸಾಧಾರಣವಾದ ಕ್ರೈಸ್ತ ನಮಸ್ಕಾರ ಮಾಡಿ, ಥೆಸ್ಸಲೊನೀಕೆಯರಿಗೂ ಗಲತರಿಗೂ ಮುಂಚೆ ಬರದ ಪತ್ರಿಕೆಗಳಲ್ಲಿ ಮಾಡಿದ ಪ್ರಕಾರ, ಕೊರಿಂಥದವರಿಗೂ ಕೃಪೆಯೂ ಸಮಾಧಾನವೂ, ಅಂದರೆ ಪಾಪಗಳನ್ನು ಪರಿಹರಿಸುವ ದೇವರ ಪ್ರೀತಿಯ ಅನುಭವವೂ, ಹೃದಯದಲ್ಲಿ ಅದರಿಂದ ಹುಟ್ಟಿ ತಕ್ಕ ಫಲವೂ ನಿಮಗೆ ಆಗಲಿ ಎಂದು ಹರಸುತ್ತಾನೆ. ಆದರೂ ಅಭಿವಾದನದಲ್ಲಿಯೂ ಸುಮ್ಮನೆ ಶೇರಿದ ಒಂದೇ ಮಾತಾದರೂ ಇಲ್ಲಾ.

೧ ಕೊರಿ. ೧, ೧—೩.

ದೇವರು ಕರೆಯದಂಥಾ, ಮೊಳನುಗ್ಗಿ ಬಂದಂಥಾ ಬೋಧಕರಿಗೆ ಪ್ರತಿಯಾಗಿ ತಾನು (ವ. ೧.) "ದೇವರ ಚಿತ್ತ ದಿಂದ ಯೇಸು ಕ್ರಿಸ್ತನು ಕರದ ಅಪೊಸ್ತಲನು" ಯೆಂಬ ಮಾತಿನಿಂದ ತನ್ನ ಕರವಣಿಗೆಯ ಶ್ರೇಷ್ಠ ಸ್ವತಂ ತ್ರವನ್ನೂ, ತನ್ನ ಅಪೊಸ್ತಲೋದ್ಯೋಗದ ಘನವನ್ನೂ ಸ್ಥಾಪಿಸಿ, ತಾನೇ ಅದನ್ನು ಪಡಕೊಳ್ಳದೆ, ಸ್ವಂತ ಪುಣ್ಯದಿಂದ ದೊರಕಿಸಿಕೊಳ್ಳದೆ ಇದ್ದೇನೆಂದು ಸೂಚಿಸಿ, ಸತ್ಯದೀನ ಭಾವವನ್ನೂ ತೋರಿಸುತ್ತಾನೆ. ಮುಂತೆ ಕೊರಿಂಥದ ಸಭೆಮನೆಯ ಯಜಮಾನನಾಗಿದ್ದು, ಮತ್ತೆ ಕರ್ತನ ಕಡೆಗೆ ತಿರುಗಿಕೊಂಡಂಥಾ ಈ ಪತ್ರಿಕೆಯನ್ನು ಬರದವನಾಗಿ ತೋರುವಂಥಾ ಸಹೋದರನಾದ ಸೋಸ್ಥೆನನು ಸಹಾ ಅವನ ಸಂಗಡ ನಮಸ್ಕರಿಸುತ್ತಾನೆ. ಅಪೊಸ್ತಲನು ಕ್ರಿಸ್ತ ಭಕ್ತರ ಪದವಿಯ ಮಹಿಮೆಯನ್ನು ನೆನಪು ಮಾಡುವ ಬಗ್ಯೆ, ಸಭೆಗೆ ಇಟ್ಟ ಹೆಸರು ಗಳು ವಿಶೇಷ ಲಕ್ಷ್ಯವಾಗಿರುತ್ತವೆ. ವ. ೨ರಲ್ಲಿ "ಕ್ರಿಸ್ತ ಯೇಸುವಿನಲ್ಲಿ ಪರಿಶುದ್ಧ ಮಾಡಲ್ಪಟ್ಟು, ಕರಿಯ ಲ್ಪಟ್ಟ ಪರಿಶುದ್ಧರಾದಂಥಾ, ಕೊರಿಂಥದಲ್ಲಿರುವ ದೇವರ ಸಭೆಗೂ, ಸಕಲ ಸ್ಥಳಗಳಲ್ಲಿ ಅವರಿಗೂ ನಮಗೂ ಕರ್ತನಾಗಿರುವ ಯೇಸು ಕ್ರಿಸ್ತನ ಹೆಸರನ್ನು ಕರಿಯುವವರೆಲ್ಲರಿಗೂ" ಎಂದು ಬರೆಯುತ್ತಾನೆ. ಪರಜನವು ಯವಾದ ಪಟ್ಟಣದಲ್ಲಿ ಇಲ್ಲಿ ಒಬ್ಬ, ಅಲ್ಲಿ ಒಬ್ಬ ಯೆಂಬ ಹಾಗಲ್ಲ, ಮನುಷ್ಯರ ದೊಡ್ಡ ಸಮೂಹವು ತಮ್ಮ ಒಡೆಯನೂ ತಲೆಯೂ ಆಗಿರುವ ದೇವರ ಸ್ವಾಸ್ಥ್ಯವಾಗಿರುತ್ತದೆ. ಈ ಸಭೆಯ ವರ್ಣನೆ ಯೇನಂ ದರೆ: ೧) ಅದು ಕ್ರಿಸ್ತ ಯೇಸುವಿನಲ್ಲಿ ಪರಿಶುದ್ಧೀಕೃತವಾದದ್ದಾಗಿದೆ; ಅಂದರೆ, ವಿಶ್ವಾಸದಿಂದ ಕ್ರಿಸ್ತನಿಗೆ ಕೂಡಿಕೊಂಡು ದೇವರಿಗೆ ವಿಾಸಲಾದದರಿಂದ, ನಿಜವಾಗಿ ಶುದ್ಧವಾದದ್ದಾಗಿದೆ. ೨) ಮನುಷ್ಯನನ್ನು ದಿವ್ಯ ಸಂಕಲ್ಪದಲ್ಲಿ ಅಂಶಿಯಾಗುವದಕ್ಕೆ ನೇಮಿಸಿ, ಸುವಾರ್ತೆಯಿಂದ ಕರಿಯುವ ದೇವರ ಉಚಿತ ಕೃಪೆಯೆ ಮೂಲಕಾರಣವಾಗಿದೆ. ೩) ಬೇರೆ ಬೇರೆ ಸಭೆಗಳು ಸರ್ವಸಭೆಯ ಸಂಗಡ ಅಲ್ಪ ಸಂಗತಿಗಳಲ್ಲಿ ಭೇದ ಮತವಾಗಿದ್ದರೂ, ಯೇಸು ಕ್ರಿಸ್ತನನ್ನು ಮಹಿಮೆಯ ಕರ್ತನಾಗಿ ವಿಶ್ವಾಸದಿಂದ ಆರಾಧಿಸುವ ಮುಖ್ಯ ಕಾರ್ಯದಲ್ಲಿ ಒಂದಾಗಿರುವವರೆಲ್ಲರು ಕೂಡಿರುವ ಕರ್ತನ ಸರ್ವಸಭೆಯ ಸಂಗಡ ಪರಿಶುದ್ಧ ಬಂಧುತ್ವ ದಲ್ಲಿ ಇರುತ್ತವೆ. ಹ್ಯಾಗೆಂದರೆ, ಆರಾಧಿಸುವ ಉದ್ಯೋಗವು ಕ್ರೈಸ್ತರ ಸಾಮಾನ್ಯವಾದ ಆತ್ಮಿಕ ಯಾಜಕ ತ್ವವೆಂಬ ಧರ್ಮದ ಮುಖ್ಯ ಕಾರ್ಯವಾಗಿದೆ. ಈ ಪ್ರಕಾರ ಪೌಲನು ಪತ್ರಿಕೆಯ ಬುಡದಲ್ಲಿಯೆ ಕೊರಿಂಥ ದವರು ಕಳಕೊಂಡಾರೆಂಬ ಭಯ ಹುಟ್ಟಿದ ಶುದ್ಧತ್ವ ಯೇಕತ್ವಗಳೆಂಬ ಮಹಾ ಕೃಪಾದ್ರವ್ಯಗಳನ್ನು ಕಾಪಾಡ ಬೇಕೆಂದು ಎಚ್ಚರಿಸುತ್ತಾನೆ.

೨) ಸಭೆಗೆ ಪ್ರಾಪ್ತವಾದ ಆಶೀರ್ವಾದಕ್ಕಾಗಿ ಸ್ತೋತ್ರ ಕೃತಜ್ಞಾಪನ. ವ. ೪—೯.

ತನ್ನನ್ನು ತಾನೇ ಆದರಿಸಿಕೊಳ್ಳುವದಕ್ಕೂ, ಕೊರಿಂಥದವರಿಗೆ ಹೇಳ ತಕ್ಕ ವಿವಿಧವಾದ ಬುದ್ಧಿ ಮಾತು ಗಳಿಗೆ ಅವರ ಮನಸ್ಸು ಹವಣಿಸುವದಕ್ಕೂ, ಅಪೊಸ್ತಲನು ಸತ್ಯ ಬುದ್ಧಿಯಿಂದಲೂ ಪ್ರೀತಿಯಿಂದಲೂ ಮೊ ದಲು ಅವರ ಸಭೆಗೆ ಬಂದ ಕೃಪಾಭಿವೃದ್ಧಿಯನ್ನು ಹೊಗಳುತ್ತಾನೆ. ಅವರಲ್ಲಿ ಅನೇಕರು ಅನೇಕ ಪ್ರಕಾರ ದ ತಪ್ಪುಗಳನ್ನು ಮಾಡಿದರೂ, ಸಭೆಯು ಒಟ್ಟಿಗೆ ಜ್ಞಾನದಲ್ಲಿ ಐಶ್ವರ್ಯವಾಗಿಯೂ, ವಿಶ್ವಾಸದಲ್ಲಿ ಭದ್ರ ವಾಗಿಯೂ, ಕೃಪಾವರಗಳಲ್ಲಿ ಸಂಪತ್ತುಳ್ಳದ್ದಾಗಿಯೂ ಇದ್ದು, ಕರ್ತನ ಬರೋಣವನ್ನು ಕಾದುಕೊಳ್ಳುತ್ತಾ ಇರುತ್ತದೆಂಬದಕ್ಕೆ ಸಂತೋಷ ಪಡುತ್ತಾನೆ. ಹೀಗಿರುವದರಿಂದ ದೇವರು ತೊಡಗಿದ ಒಳ್ಳೆ ಕೆಲಸವನ್ನು ಪೂರ್ತಿ ಮಾಡದಿರನೆಂದು, ನಿರೀಕ್ಷಿಸುತ್ತಾನೆ. ಇದೆಲ್ಲಾ ಅವನ ಮನಸ್ಸಿಗೆ ಬಹು ಘನವಾಗಿಯೂ ಮಹಿಮೆ

೧ ಕೊರಿ. ೧, ೪—೯.

ಯಾಗಿಯೂ ತೋರುವದರಿಂದ, ಕೊರಿಂಥದಲ್ಲಿ ಯಾವದೊಂದಾದರೂ ತಪ್ಪು ಹಿಡಿಯುವದಕ್ಕಿಂತ ಮುಂಚೆ, ಮೊದಲಾಗಿ ದೇವರಿಗೆ ಮಾನ ಕೊಡುವದು ಅವಶ್ಯವಾಯಿತು. ಬುದ್ಧಿಮಾತುಗಳನ್ನು ಹೇಳುವವರಿಗೆ ಇದು ವೊಳ್ಳೇ ಮಾದರಿ.

೪. ಯೇಸು ಕ್ರಿಸ್ತನಲ್ಲಿ ನಿಮಗೆ ಕೊಡಲ್ಪಟ್ಟ ದೇವರ ಕೃಪೆಗಾಗಿ ನಿಮ್ಮನ್ನು ಕುರಿತು ನನ್ನ ದೇವರನ್ನು ಯಾವಾಗಲೂ ೧) ಸ್ತುತಿಸುತ್ತೇನೆ ೨). ೫. ಯಾಕಂದರೆ, ಕ್ರಿಸ್ತನ ಸಾಕ್ಷಿ ನಿಮ್ಮಲ್ಲಿ ಸ್ಥಿರ ಪಟ್ಟ ಹಾಗೆಯೇ ೩), ಸಮಸ್ತ ವಾಕ್ಪದಲ್ಲಿಯೂ, ೬. ಸಮಸ್ತ ತಿಳುವಿಕೆಯಲ್ಲಿಯೂ, ಯೆಲ್ಲಾದರಲ್ಲಿ ಅವನಿಂದ ೪) ಐಶ್ವರ್ಯವಂತರಾದಿರಿ. ೭. ಈದ ಕಾರಣ ಯಾವ ವರದಲ್ಲಿಯೂ ಕೊರತೆಯಾಗಿರದೆ, ನಮ್ಮ ಕರ್ತನಾದ ಯೇಸು ಕ್ರಿಸ್ತನು (ಪ್ರತ್ಯಕ್ಷವಾಗುವದನ್ನು ೫) ಯೆದುರು ನೋಡುತ್ತಾ ಇದ್ದೀರಿ. ೮. ಅವನೇ ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿವಸದಲ್ಲಿ, ನೀವು ನಿರಪರಾಧಿಗಳಾಗಿರುವ ಹಾಗೆ, ಕಡೇ ವರಿಗೂ ನಿಮ್ಮನ್ನು ಸ್ಥಿರ ಪಡಿಸುವನು. ೯. ಯೇಸು ಕ್ರಿಸ್ತನೆಂಬ ನಮ್ಮ ಕರ್ತನಾಗಿರುವ ತನ್ನ ಮಗನ ಅನ್ಯೋನ್ಯಕ್ಕೆ ನಿಮ್ಮನ್ನು ಕರೆದ ದೇವರು ನಂಬಿಕೆಯುಳ್ಳವನಾಗಿದ್ದಾನೆ ೬).

೧. ಯಾವಾಗಲೂ ಯೆಂಬ ಮಾತಿನಿಂದ, ಅಪಾಸ್ತಲನು ಪರಿಶುದ್ಧಾತ್ಮ ತುಂಬಿದವನಾಗಿ ಪ್ರೀತಿಯ ಆಸಕ್ತಿಯಿಂದ ಪ್ರಾರ್ಥನೆಯಲ್ಲಿ ಪಾಗಲಿರುಳು ನೆಲೆಯಾಗಿದ್ದನೆಂದು, ಕಾಣುತ್ತದೆ.

೨. ನಮಗೆ ಸಂತೋಷವಾಯಿತು ಯೆಂದು ನಾವು ಸಾಧಾರಣವಾಗಿ ಹೇಳುವಲ್ಲಿ, ದೇವರ ಮಾನಾಸಕ್ತವಾದ ಪರಿಶುದ್ಧಾತ್ಮವು: ನನ್ನ ಜೀವಮೂಲವಾಗಿರುವ ನನ್ನ ದೇವರಿಗೆ ಕೃತಜ್ಞಾಪಿಸುತ್ತೇನೆ ಯೆಂಬ ಮಾತನ್ನು ಹೇಳಿಸುತ್ತದೆ.

೩. ಅಸಾಧಾರಣವಾದ ಆತ್ಮಪರಗಳಿಂದ.

೪. ಗ್ರೀಕ ಜಾತಿಯವರಾದ ಕೊರಿಂಥರು ಕ್ರೈಸ್ತರಾದ ಮೇಲೆಯೂ, ವಾಗ್ಜಾಲತ್ವ ಸೂಕ್ಷ್ಮ ಬುದ್ಧಿಗಳ ವರವುಳ್ಳವರಾಗಿದ್ದರು. ಪೌಲನು ಈ ವರಗಳು ಸ್ವಾಭಾವಿಕವಾದವುಗಳೆಂದು ತಿಳುಕೊಂಡರೂ, ಅವುಗಳು ಸಹಜ ಗುಣಗಳನ್ನು ಬಳಸಿಕೊಳ್ಳುವ ದೇವರ ಕೃಪೆಯ ಕೃತ್ಯವೆಂದು ಹೇಳುವದರಿಂದ, ಅವರ ಗರ್ವವನ್ನು ಕುಂದಿಸುತ್ತಾನೆ.

೫. ಕರ್ತನ ಆಗಮನವನ್ನು ಮಹಾ ಕಾಂಕ್ಷೆಯಿಂದ ಯೆದುರು ನೋಡುವದೆ (ಪ್ರ. ಕ. ೨೨, ೨೦.) ನಿಜ ಕ್ರೈಸ್ತರ ಲಕ್ಷಣ. ಬರಹಗಳಿಗನುಸಾರವಾಗಿ ನಿಶ್ಚೈಸುವದಾದರೆ, ಆ ನಿರೀಕ್ಷೆ ಇಲ್ಲದ ವಿಶ್ವಾಸವು ಅಪೂರ್ಣವಾಗಿರುತ್ತದೆ.

೬. ಕೊರಿಂಥರು ಅತಿ ಗುಣಾಢ್ಯರಾಗಿದ್ದರೂ, ಅವರಲ್ಲಿದ್ದ ನಂಬಿಕೆ ಅಲ್ಪಾ, ತನ್ನ ಕೆಲಸವನ್ನು ಅರೆವಾಸಿ ಬಿಡದ ದೇವರ ನಂಬಿಕೆಯೆ ಅಪಾಸ್ತಲನ ನಿರೀಕ್ಷೆಗೆ ಆಧಾರವಾಗಿತ್ತು ಫಿಲಿ. ೧, ೬. ೧ ಥೆಸ್ಸ. ೫, ೨೪. ಇದು ಪಾರ್ಷ್ಕರವಾಗಿಯೂ ದೈನ್ಯಕರವಾಗಿಯೂ ಇರುತ್ತದೆ.

೧ ಕೌರಿ. ೧, ೧೦—೧೩.

ಮೊದಲನೆ ಭಾಗವು.

ಛೇದಗಳು. ಸ. ೧, ೧೦.—ಸ. ೪.

ಪೀಠಿಕೆಯಲ್ಲಿ ಇಷ್ಟು ಹೇಳಿದ ಮೇಲೆ, ತನಗೆ ಮುಖ್ಯ ಚಿಂತೆಯಾಗಿರುವ, ಕೊರಿಂಥರಲ್ಲಿ ವೊಳ ಹೊಕ್ಕ, ಭೇದಗಳನ್ನು ಅಪೊಸ್ತಲನು ಪ್ರಶಂಸಿಸಿ, ಅದೆ ಅಭಿಪ್ರಾಯವನ್ನು ನಾಲ್ಕನೆ ಸಂಧಿಯ ಕಡೆವರೆಗೆ ಹಿಡಿಯುತ್ತಾನೆ. ತಾನು ನೆನಸಿದ ಸಂಗತಿ ಯೇನೊಂದೂ, ಅದು ಯೆಷ್ಟು ಭ್ರಷ್ಟವೆಂದೂ, ಅದಕ್ಕೆ ಸರ್ವ ಥಾ ತಾನು ಕಾರಣ ಅಲ್ಲವೆಂದೂ ಸಂಕ್ಷೇಪವಾಗಿ ಹೇಳಿದ ಮೇಲೆ, ವ. ೧೭. ಭೇದಗಳನ್ನು ಕೂಲಂಕುಶವಾಗಿ ಖಂಡಿಸಿ, ನಾನು ನಾನೆಂಬ ಅಹಂಕಾರವು ಭೇದದ ನಿಜಕಾರಣವೆಂದು ಸ್ಥಾಪಿಸುತ್ತಾನೆ. ಇದರ ವಿವರವು ಕ್ಲಪ್ತವಾಗಿ ಹ್ಯಾಗೆಂದರೆ:

I. ಸುವಾರ್ತೆಯು ದೀನಭಾವದ ವಿಧ್ಯೇಯತ್ವವನು ಬೆಸಸುತ್ತದೆ. ಯಾಕಂದರೆ

೧. ಅದು ತಾನೆ ದೀನಭಾವದ್ದಾಗಿರುತ್ತದೆ.

ಅ) ಅದರ ತಾತ್ಪರ್ಯದ ಪ್ರಕಾರ ೧, ೧೭—೨೫: ಅದು ಹುಚ್ಚುತನವಾಗಿ ಲೋಕಕ್ಕೆ ತೋ ರುತ್ತದೆ.

ಇ) ಅದರ ಅನುವರ್ತಿಗಳ ಸ್ಥಿತಿಯ ಪ್ರಕಾರ ೨೬—೩೧.

ಉ) ಅದರ ಪ್ರಸಂಗಿಯ ರೀತಿಗುಣಗಳ ಪ್ರಕಾರ. ೨, ೧—೫.

೨. ದೀನತ್ವದ ವೇಷದಲ್ಲಿ ಅತಿ ಘನವಾದ ಮಹಿಮೆಯನ್ನು ತಂದು ಕಾಡುತ್ತದೆ. ೨, ೬—೧೬.

II. ಹಿಂಗಿರಲಾಗಿ ಬಾಧಕರನು ಯುಕ್ತವಾಗಿ ಲಕ್ಷಿಸುವ ಶಿಷ್ಯರ ಧರ್ಮವೇನಂದರೆ:

೧. ಬಾಧಕರನ್ನು ಅತಿರೇಕ ಘನ ಪಡಿಸಲೂ, ಸ. ೩.

೨. ಅವರನ್ನು ಅತಿರೇಕ ಅಸಡ್ಡೆ ಮಾಡಲೂ ಬಾರದು. ಸ. ೪.

ಏಕತ್ವದಲ್ಲಿರ ಬೇಕೆಂದು ಮುಂದಾಗಿ ಶೇರಿದ ಕೆಲವು ಬುದ್ಧಿ ಮಾತುಗಳು. ಛೇದಗಳನ್ನು ಬೆಳಿಸುವ ಅನಾಚಾರವು. ವ. ೧೦—೧೭.

ವ. ೧೦. ನೀವೆಲ್ಲರೂ, ಕರ್ತನೆಂದು ಅರಿಕೆ ಮಾಡುವ ಕ್ರಿಸ್ತನ ಹೆಸರಿನಲ್ಲಿ, ಬೋಧನೆಯಲ್ಲಿಯೂ ನ ಡತೆಯಲ್ಲಿಯೂ ಯೇಕ ಮನಸ್ಸಿನವರಾಗಿರ ಬೇಕೆಂದು ಬೇಡಿ ಕೊಳ್ಳುತ್ತೇನೆ. ನಿಮ್ಮಲ್ಲಿ ಭೇದಗಳಿರ ಬಾ ರದು. ಪ್ರತ್ಯೇಕ ಪ್ರತ್ಯೇಕ ಮನೋಭಿಪ್ರಾಯಗಳನ್ನು ಸುದಾರಿಸುವ ಏಕೋ ಭಾವವೂ ಏಕೋ ಭಕ್ತಿಯೂ ಇರ ಬೇಕು. ೧೧. ಈ ಪ್ರಕಾರ ಬುದ್ಧಿ ಹೇಳುವದಕ್ಕೆ ಮುಖ್ಯಕಾರಣವೇನಂದರೆ, ನಿಮ ಮಧ್ಯದಿಂದ ಬಂ ದಂಥಾ, ಘನಸ್ತ್ರೀ ಕ್ಲೋವೆಯ ಮನೆಯವರಾದ, ಹೆಸರ್ವಾಶಿಯಾದ ನಂಬಿಕೆಯುಳ್ಳ ಜನರು, ೧೨. ನಿಮ್ಮಲ್ಲಿ ನಾಲ್ಕು ಪಕ್ಷಗಳುಂಟೆಂದೂ, ವೊಂದು ಗುಂಪಿನವರು ನಂನ ಹೆಸರನ್ನು, ಯೆರಡನೆ ಗುಂಪಿನವರು ಅಪೊಲ್ಲೋ ಸನ ಹೆಸರನ್ನು, ಮೂರನೆ ಗುಂಪಿನವರು ಪೇತ್ರನ ಹೆಸರನ್ನು, ನಾಲ್ಕನೇಯವರು ಸ್ವಯಂ ಕ್ರಿಸ್ತನ ಹೆಸರಂ ನು ಇಟ್ಟು ಕೊಂಡಿದ್ದಾರೆಂದೂ ನನಗೆ ತಿಳಿಸಿದ್ದಾರೆ. ೧೩. ನಂಮೆಲ್ಲರ ತಲೆಯಾಗಿರುವ ಕ್ರಿಸ್ತನು ತಾನೆ ಭೇ

ದವಾದನೋ? ವೊಂದೊಂದು ಪಕ್ಷಕ್ಕೆ ವೊಬ್ಬೊಬ್ಬ ಕ್ರಿಸ್ತನಿದ್ದಾನೋ? ನೀವು ಕ್ರೈಸ್ತ ಧರ್ಮಕ್ಕೆ ಮೂಲವಾದ ವಿಮೋಚನೆ ಸ್ನಾನಗಳಿಂದ ಮಾನುಷ ಬೋಧಕರಾದ ಯಾರಿಗಾದರೂ ವಶವಾದಿರೋ? ಮುಖ್ಯವಾಗಿ ನನ್ನ ಹೆಸರನ್ನು ಇಟ್ಟು ಕೊಂಡವರಂತು ಕೇಳುತ್ತೇನೆ: ನಾನು ನಿಮಗೋಸ್ಕರ ಕ್ರೂಜಿಸಲ್ಪಟ್ಟಿನೋ? ನೀವು ನನ್ನ ಹೆಸರಿನಲ್ಲಿ ಸ್ನಾನ ತಕ್ಕೊಂಡಿರೋ? ಹಾಗಂದರೆ, ನೀವು ಸ್ನಾನ ತಕ್ಕೊಳ್ಳುವಾಗ್ಯೆ, ನನ್ನನ್ನು ಆರಾಧಿಸುವದಕ್ಕೂ ನನ್ನ ಸಂಸರ್ಗದಲ್ಲಿ ಇರುವದಕ್ಕೂ ಹಂಗಿನವರಾದಿರೋ? ೧೪. ಸಭೆಮನೆ ಯಜಮಾನನಾದ ಕ್ರಿಸ್ಪನನ್ನೂ, ಅಪೊ. ಕ್ರಿ. ೪. ಸಭೆ ಕೂಡಿ ಬರುವ (ರೋಮ. ೧೬, ೨೩.) ಮನೆಯಜಮಾನನಾದ ಗಾಯನನ್ನೂ ಅಲ್ಲದೆ, ನಾನು ನಿಮ್ಮಲ್ಲಿ ಯಾರನ್ನಾದರೂ ಸ್ನಾನಿಸದ ಹಾಗೆ, ಹೆಚ್ಚಿನ ಉದ್ಯೋಗದ ವೃತ್ತಿ ಅಡ್ಡಿ ಮಾಡಿದ್ದು ದೇವರ ವಿಶೇಷವಾದ ಅಪ್ಪಣೆ ಯೆಂದು ನೋಡಿ, ಕೃತಜ್ಞನಾಗಿದ್ದೇನೆ. ೧೫. ಹೀಗಿರುವದರಿಂದ, ನಿಮ್ಮನ್ನು ಸ್ನಾನದಿಂದ ಯಜಮಾನನಾದ ನನಗೆ ಹಂಗಿನವರಾಗ ಮಾಡಿ ನನಗೊಂದು ಪರಿವಾರವನ್ನು ಕಟ್ಟಿ ಕೊಂಡೆನೆಂದು ಯಾರೂ ಹೇಳಲಿಕ್ಕೆ ಮಾರ್ಗವಿಲ್ಲಾ. ೧೬. ಆದರೂ, ಈ ಸಣ್ಣ ಕಾರ್ಯದಲ್ಲಿಯೂ ತಪ್ಪು ಮಾಡದ ಹಾಗೆ, ಈಗಲೆ ನೆನಪಾದ್ದನ್ನು ಸಹಾ ಹೇಳ ತಕ್ಕದ್ದು: ನಾನು ಅಖಾಯದ ಪ್ರಥಮ ಫಲವಾಗಿರುವ ೧೬, ೧೫. ಸ್ತೆಫನಸನನ್ನು ಮನೆಯವರ ಸಂಗಡ ಸ್ನಾನಿಸಿದ್ದೇನೆ, ವೊಂದು ವೇಳೆ ಬೇರೆ ಕೆಲವರನ್ನು ಸಹಾ, ಆದರೆ ಇವರ ಹೆಸರುಗಳನ್ನು ನಾನು ಅರಿಯೆ. ಹ್ಯಾಗೂ ಅದೇನೂ ವಿಶೇಷವಲ್ಲಾ. ಯಾಕಂದರೆ, ಕ್ರಿಸ್ತನು ನನ್ನನ್ನು ಸ್ನಾನ ಕೊಡುವದಕ್ಕೆ ಕಳುಹಿಸಲಿಲ್ಲಾ. ೧೭. ಇದಲ್ಲದೆ ಸ್ನಾನ ಕೊಡುವದು ಅಲ್ಲಾ, ಸುವಾರ್ತೆಯನ್ನು ಪ್ರಸಂಗಿಸುವದೆ ನನ್ನ ಉದ್ಯೋಗ. ಮತ್ತು ಮಾನುಷಜ್ಞಾನವೂ ಸೂಕ್ಷ್ಮ ಭಾಷಣವೂ ಬೆರಿಕೆಯಾಗುವದರಿಂದ, ಕ್ರಿಸ್ತನ ವಿಮೋಚನಾಮರಣದ ಪ್ರಸಂಗವು ಕೇಳುವವರ ಹೃದಯಗಳಲ್ಲಿ ನಿರರ್ಥಕವಾಗದ ಹಾಗೆ, ಭೋಳ್ಳೆತನದಿಂದ ಅದನ್ನು ಸಾರುವದು ನನಗೆ ಯುಕ್ತ.

ಪಕ್ಷ ಜಾವದ ಗರ್ವವನ್ನು ಕೂಲಂಕುಶವಾಗಿ ಖಂಡಿಸುತ್ತಾನೆ. ೧, ೧೭. ಸ. ೪.

ಸುವಾರ್ತೆಯು ದೈನ್ಯಜಾವದ ವಿಧೇಯತ್ವವನು ಬೆಸಸುತ್ತದೆ.

೧) ಅದು ತಾನೇ ದೀನ ಜಾವದ್ದಾಗಿರುತ್ತದೆ. ೧, ೧೭.—೨, ೫.

ಅ) ಸುವಾರ್ತೆಯ ಪ್ರಸಂಗವು ಹುಚ್ಚ್ಚ ತನವಾಗಿ ತೋರಿದರೂ, ದಿವ್ಯ ಬಲವಾಗಿದೆ. ವ. ೧೭—೨೦.

ಅಪೊಸ್ತಲನು, ಪೌಲನವರನ್ನಿಸಿ ಕೊಳ್ಳುವವರು ತನ್ನಲ್ಲಿಟ್ಟ ಮಮತೆಯ ಹೆಚ್ಚಿಗೆ ಸರಿಯಾದದ್ದಲ್ಲವೆಂದು ಹೇಳಿದ ಮೇಲೆ, ಮತ್ತೊಬ್ಬರ ಗರ್ವದ ವಿಷಯ ಮಾತಾಡ ತೊಡಗುತ್ತಾನೆ. ಪೌಲನಿಗೆ ವಾಗ್ಜಾಲತ್ವ ಮುಂತಾದ ಸುಲಕ್ಷಣಗಳು ಇಲ್ಲವೆಂದು, ಅವನನ್ನು ತುಚ್ಛೀಕರಿಸಿದ ಅವರ ಗರ್ವವು ಸಮಸ್ತ ಸಭಾಭೇದಗಳಿಗೆ ಬುಡವಾಗಿತ್ತು. ದೀನಭಾವದಲ್ಲಿ ಬಂದು, ಲೋಕಕ್ಕೆ ತುಚ್ಛೀಕರವಾಗಿರುವ ಸುವಾರ್ತೆಯ ಸ್ವಭಾವಕ್ಕೆ ಗರ್ವವು ಪ್ರತೀಕಾರವೆಂಬದನ್ನು ತೋರಿಸುತ್ತಾನೆ. ೧೭ನೆ ವಚನದ ಮಧ್ಯದಲ್ಲಿ ತಾನು ವಾಕ್ಯದ ಜ್ಞಾನವನ್ನು ಮಾನುಷರೀತಿಯಾಗಿ ಪ್ರಸಂಗಿಸುವವನಲ್ಲವೆಂದು ಹೇಳಿ, ಆ ಸಂಗತಿಯನ್ನು ಪ್ರಶಂಸಿಸುವದಕ್ಕೆ ಮೆಲ್ಲಗೆ ಆರಂಭ ಮಾಡುತ್ತಾನೆ. ಅದರಿಂದ ಕ್ರೂಜೆಯ ಮರಣ ಅನುಭವಿಸಿದ ರಕ್ಷಕನ ವಾಕ್ಯವೂ, ಕ್ರಿಸ್ತನ ವಿಮೋಚನಾಮರಣದ ಮುಖ್ಯಾರ್ಥವೂ ಬಲ ಕಳಕೊಂಡು, ಕೇಳುವವರ ಹೃದಯಗಳಲ್ಲಿ ನಿಷ್ಫಲವಾದೀತೆಂತಾ

ಸುವಾರ್ತೆಯ ದೀನತ್ವದ ವಿಷಯದಲ್ಲಿ ಮಾತಾಡುತ್ತಾ, ವ. ೧೮ಲ್ಲು ಮನುಷ್ಯರು ಅದರಿಂದ ರಕ್ಷಣೆ ಹೊಂದುತ್ತಾರೆಂದೂ, ಮನುಷ್ಯನ ಗರ್ವವನ್ನು ತಗ್ಗಿಸುವ ಈ ಬೋಧನೆಯು ದೈವಬಲವಾಗಿರುತ್ತದೆಂದು ಅನುಭವಿಸುತ್ತಾರೆಂದೂ, ಇಲ್ಲದಿದ್ದರೆ ನಾಶವಾಗ ಬೇಕೆಂದೂ ತಿಳಿಸುತ್ತಾನಾದರೂ, ಮಾನುಷ ಜ್ಞಾನವು ವ್ಯರ್ಥವಾಗಿ ಹೋಗುವದೆಂದು ಯೆಶಾಯನು ೨೯, ೧೪. ಮುಂಚೆಯೆ ಪ್ರವಾದಿಸಿದ ಪ್ರಕಾರ, ಸುವಾರ್ತೆಯು ವ. ೧೯. ಲೋಕಕ್ಕೆ ಹುಚ್ಚುತನವಾಗಿ ಕಾಣುತ್ತದೆಂಬ ಮಾತನ್ನು ಸದ್ಯಕ್ಕೆ ಮುಖ್ಯವಾಗಿ ಸ್ಥಾಪಿಸುತ್ತಾನೆ.

ಇ) ಸುವಾರ್ತೆಯ ಶಿಷ್ಯರು ಲೋಕದ ಮುಂದೆ ಅಲ್ಪವಾಗಿದ್ದರೂ, ದೇವರಲ್ಲಿ ಐಶ್ವರ್ಯವಂತರಾಗಿದ್ದಾರೆ. ವ. ೨೦—೩೧.

ವ. ೨೦. ಇದು ಕಣ್ಣಾರೆ ಕಾಣುತ್ತದೆ: ಕ್ರೈಸ್ತಧರ್ಮವನ್ನು ಸ್ವೀಕರಿಸಿದವರಲ್ಲಿ ಜ್ಞಾನಿಗಳೂ, ವಿದ್ವಾಂಸರೂ, ಬಹುಮಾನ ಪಟ್ಟವಾಗ್ಜ್ಞರೂ ಇಲ್ಲಾ. ಈ ಪ್ರಕಾರ ದೇವರ ಸಂಕಲ್ಪದೊಳಗೆ ಪ್ರವೇಶಿಸುವದಕ್ಕೆ ಸಾಮರ್ಥ್ಯ ವಿಲ್ಲದೆ ಇರುವ ಮಾನುಷ ಜ್ಞಾನವನ್ನು ದೇವರು ಹುಚ್ಚುತನವಾಗಿ ತೋರಿಸುತ್ತಾನೆ. ೨೧. ಈ ದಿವ್ಯ ಸಂಕಲ್ಪವು ಮಾನುಷ ಜ್ಞಾನಕ್ಕೆ ಕೇವಲ ವಿರೋಧ. ದೇವರು ಲೋಕಕ್ಕೆ ತನ್ನ ಜ್ಞಾನದ ಪ್ರಕಾರ ಪ್ರಕೃತಿಯಿಂದಲೂ ಮನಸ್ಸಾಕ್ಷಿಯಿಂದಲೂ ಪ್ರಕಟಿಸಿ ಕೊಂಡನು; ಮತ್ತು ಮನುಷ್ಯನು, ತನಗೆ ದಯ ಮಾಡಿರುವ, ಸಹಜವಾದ ಬುದ್ಧಿಯಿಂದ ಆತನನ್ನು ತಿಳಿಯತಕ್ಕದ್ದಾಗಿತ್ತು. ಆದರೆ ಮನುಷ್ಯರು ಪಾಪದಿಂದ ಭ್ರಷ್ಟರಾಗಿ ಹೋಗಿ, ಈ ಕ್ರಮವು ಕೆಳಗೆಮೇಲೆಯಾಗಿ, ದೇವರನ್ನು ತಿಳಿಕೊಳ್ಳುವದಕ್ಕೆ ಮಾನುಷ ಜ್ಞಾನವು ಅಸಮರ್ಥವಾದ್ದರಿಂದ, ದೇವರು ಮನುಷ್ಯರನ್ನು ಹ್ಯಾಗೂ ತನ್ನ ಜ್ಞಾನದೊಳಗೆ ತರುವ ಬಗ್ಗೆ, ಲೋಕಕ್ಕೆ ಹುಚ್ಚುತನವಾಗಿ ತೋರುವ ಕ್ರೂಜಿಸಲ್ಪಟ್ಟವನ ಪ್ರಸಂಗವಾದ ಮತ್ತೊಂದು ಉಪಾಯವನು ನೇಮಿಸಿದನು. ೨೨. ಪ್ರಪಂಚಾಸಕ್ತರಾದ ಯೆಹೂದರು ಯೇಸುವಿನ ಕಾಲದಲ್ಲಿ ಹ್ಯಾಗೊ, ಹಾಗೆಯೆ ಈಗಲೂ ಆಕಾಶದಲ್ಲಿ ಕಾಣುವ ಗುರುತುಗಳು ಬೇಕೆಂದನ್ನುತ್ತಾರೆ, ಗ್ರೀಕರು ಜಿಜ್ಞಾಸಭಾವದವರಾಗಿದ್ದು ಜ್ಞಾನ ಬೇಕೆಂದನ್ನುತ್ತಾರೆ. (ನಮ್ಮ ಕಾಲದಲ್ಲಿಯೂ ಕ್ರೈಸ್ತಧರ್ಮವು ಒಬ್ಬರಿಗೆ ಸಾಕಷ್ಟು ಭೋಗಪ್ರದಾಯಕವಾಗಿರುವದಿಲ್ಲಾ, ಮತ್ತೊಬ್ಬರಿಗೆ ಸಾಕಷ್ಟು ಲೌಕಿಕವಾಗಿರುವದಿಲ್ಲಾ; ಒಬ್ಬರಿಗೆ ಅವರ ಅಪೇಕ್ಷೆಯ ಪ್ರಕಾರ ಅದರಿಂದ ಇಹದಲ್ಲಿ ಬೇಕಾದ ಸುಖವೂ ಲೌಕಿಕ ವೈಭವವೂ ಡಂಭವೂ ದೊರಕುವದಿಲ್ಲಾ; ಮತ್ತೊಬ್ಬರು ತಮ್ಮ ಜ್ಞಾನಗರ್ವದಲ್ಲಿ ಅದು ಅತಿರೇಕ ಇಹಭಾವದ್ದೆಂದು ಅದನ್ನು ತುಚ್ಛೀಕರಿಸುತ್ತಾರೆ.) ೨೩. ಸುವಾರ್ತೆಯು ತಂನ ದಾರಿ ಬಿಡದು, ಕ್ರೂಜಿಸಲ್ಪಟ್ಟವನನ್ನು ಪ್ರಸಂಗಿಸದಿರದು; ಆದರೆ ಯೆಹೂದರಿಗೆ ಕ್ರೂಜಿಸಲ್ಪಟ್ಟ ಮೆಸ್ಸೀಯನು ಮಹಾ ಯೆಡರು; ಸ್ವಸಂತುಷ್ಟವಾದ ಜ್ಞಾನದಲ್ಲಿ ಮೆರೆಯುವ ಗ್ರೀಕರಿಗೆ ಸಮಸ್ತ ವಿಮೋಚನಾವಶ್ಯಕತ್ವವೂ ಸಮಸ್ತ ವಿಶ್ವಾಸವೂ ಕೇವಲ ಭ್ರಾಂತಿಯಾಗಿ ತೋರುತ್ತದೆ. ೨೪. ಆದರೂ ಸತ್ಯದ ಪ್ರಕಾರ, ಅಂದರೆ, ದೇವರ ಕೃಪಾಮಯವಾದ ಘಟನೆಯಿಂದ ವಿಶ್ವಾಸಕ್ಕೆ ಬಂದು ಮುಟ್ಟಿದವರ ಅನುಭವದ ಪ್ರಕಾರ ಯೆಲ್ಲಾ ಬೇರೆಯಾಗಿದೆ. ಕ್ರಿಸ್ತನು ಕ್ರೂಜೆಯಲ್ಲಿ ಸತ್ತವನು ಮಾತ್ರವಲ್ಲಾ, ಜೀವಂತನೂ ಆಳುವವನೂ ಆಗಿದ್ದು, ದಿವ್ಯ ಬಲವೂ ಜ್ಞಾನವೂ ಯೆಂದು ಪ್ರಕಟವಾಗಿ, ಭಕ್ತನನ್ನು ಪಾಪದಿಂದ ಬಿಡಿಸಿ, ಸರ್ವಸತ್ಯದೊಳಗೆ ನಡಿಸುವವನಾಗಿದ್ದಾನೆ. ೨೫. ಹ್ಯಾಗೆಂದರೆ, ದೇವರೇನು ನೇಮಿಸಿದ್ದಾನೊ, ಅದು ಲೋಕಕ್ಕೆ ಹುಚ್ಚುತನವಾಗಿಯೂ ಬಲಹೀನತ್ವವಾಗಿಯೂ ಕಾಣ ಬಂದರೂ, ಲೋಕದ ಜ್ಞಾನಕ್ಕಿಂತಾ ಅಧಿಕ ಜ್ಞಾ

೧ ಕೊರಿ. ೧, ೭—೨, ೨.

ನ ಉಳ್ಳದ್ದಾಗಿದ್ದು, ದೇವರ ಸಂಕಲ್ಪದ ತಿಳಿವಿಕೆಯೊಳಗೂ ಸ್ವಂತ ಹೃದಯದ ತಿಳುವಿಕೆಯೊಳಗೂ ಪ್ರವೇಶಿಸ ಮಾಡುತದ್ದೆ; ಇದಲ್ಲದೆ ಯೆಲ್ಲಾ ಮಾನುಷ ಬಲಕ್ಕಿಂತಾ ಅಧಿಕ ಬಲವುಳ್ಳದ್ದಾಗಿದೆ. (ಹೀಗಿರುವದರಿಂದ ಮನುಷ್ಯರ ಸಮಸ್ತ ಬಲಕ್ಕೆ ಕೇವಲ ಅಸಾಧ್ಯವಾಗಿರುವದನ್ನು, ಕ್ರೈಸ್ತಧರ್ಮವು ಬಂದಂದಿನಿಂದ, ಕ್ರೂಜಿಸಲ್ಪಟ್ಟವನ ಪ್ರಸಂಗವು ಸಾಧ್ಯ ಮಾಡಿಯದೆ) ೨೬. ಕೊರಿಂಥದ ಕ್ರೈಸ್ತಸಭೆಯಲ್ಲಿಯೆ ಅನೇಕ ಲೋಕ ವಿದ್ವಾಂಸರಿಲ್ಲಾ, ಅನೇಕ ದೊಡ್ಡ ಘನತೆಯುಳ್ಳ ಜನರಿಲ್ಲಾ, ೨೭. ಹೆಚ್ಚಾಗಿ ಭೋಳ್ಳೆ, ಬಲಹೀನ, ತುಚ್ಛೀಕಾರವಾದ ಜನರಿದ್ದಾರೆ; ಲೋಕದ ಕಣ್ಣಿಗೆ ಯೇನೂ ಅಲ್ಲವೆಂದು ತೋರುವಂಥವರನ್ನು ದೇವರು ಆರಿಸಿಕೊಂಡು, ಈ ಪ್ರಕಾರ ಜ್ಞಾನಿಗಳನ್ನೂ ಬಲವಂತರನ್ನೂ ನಾಚಿಕೆ ಪಡಿಸಿ, ತಾವೇನಾದರೂ ಆಗಿದ್ದೇವೆಂದು ಯೆಣಿಸುವವರನ್ನು ಶೂನ್ಯರೆಂದು, ಪ್ರಕಟ ಮಾಡುತ್ತಾನೆ. ೨೯. ಆದ್ದರಿಂದ ಸಮಸ್ತ ಮನುಷ್ಯರು, ದೇವರ ಕೃಪೆಯಿಲ್ಲದೆ ದಿಕ್ಕು ಕಾಣೆವೆಂದು ತಿಳಿಕೊಂಡು, ತಮಗಿರುವಂಥಾ, ಅಥವಾ ಉಂಟೆಂದು ತೋರುವಂಥಾ ಘನತೆಯಲ್ಲಿ ಹೆಚ್ಚಳ ಪಡದಿರುವದು ಯುಕ್ತವಾಗಿದೆ. ೩೦. ಆತನ ಉಚಿತವಾದ ಕೃಪೆಯಿಂದಲೆ ನೀವು ಸಹಾ ಕ್ರಿಸ್ತ ಯೇಸುವಿನ ಸಂಸರ್ಗದಲ್ಲಿ ಶೇರಿದಿರಿ. ಈತನು ನಮಗೆ ದೇವರಿಂದ ಜ್ಞಾನವೂ ೧) ನೀತಿಯೂ ೨) ಪರಿಶುದ್ಧೀಕರಣವೂ ೩) ವಿಮೋಚನಾಕರಣವೂ ೪) ಮಾಡಲ್ಪಟ್ಟಿದ್ದಾನೆ.

೧. ಆತನು ದೇವರ ಪರಿಪೂರ್ಣ ಪ್ರಕಟಣೆಯಾಗಿದ್ದಾನೆ. ಅದರಿಂದ ನಾವು, ದೇವರು ಲೋಕದ ವಿಷಯದಲ್ಲಿ ಮಾಡಿದ ಸಂಕಲ್ಪವನ್ನೂ, ಆತನ ಪರಿಶುದ್ಧ ಭಾವವನ್ನೂ, ನಿಯಮವನ್ನೂ ಅಲ್ಲದೆ, ನಮ್ಮ ಬಡತನದ ಸ್ಥಿತಿಯನ್ನೂ ತಿಳಕಾಳ್ಳ ಬಹುದು.

೨. ಆತನ ಪರಿಮುಖವಾಗಿ ನಮಗೆ ಪಾಪಕ್ಷಮೆ ಶಿಕ್ಕುತ್ತದೆ.

೩. ಪರಿಶುದ್ಧೀಕರಣಕ್ಕೆ ಬಲ ಬರುತ್ತದೆ, ಕಡೆಯಲ್ಲಿ,

೪. ಪಾಪದ ಮುಖ್ಯ ಫಲವಾಗಿರುವ ಮರಣದಿಂದಲೂ ಈ ಶರೀರ ಜೀವದ ಎಲ್ಲಾ ಕೇಡುಗಳಿಂದಲೂ ಪರದಲ್ಲಿ ವಿಮೋಚನೆ ಬರುತ್ತದೆ. ರೋಮ. ೮, ೧೦. ೧೧. ಎಫೆ. ೧, ೧೪. ೪, ೩೦. ೨ ಥೆಸ್ಸ. ೧, ೭.

ವ. ೩೧. ಯೆರೆವಿಾಯನು ೯, ೨೩. ಹೇಳಿದ ಪ್ರಕಾರ, ನಮ್ಮ ರಕ್ಷಣೆಯಿಂದ ಆತನಿಗೆ ಮಾತ್ರವೆ ಮಹಿಮೆ ಬರುವ ಹಾಗೆ, ದೇವರು ಬೇಕೆಂದು ಈ ಕಟ್ಟಳೆ ಮಾಡಿದ್ದಾನೆ. ಅಪರಾಧವೆಲ್ಲಾ ಮನುಷ್ಯನದು, ಮಾನವೆಲ್ಲಾ ದೇವರದು; ಮನುಷ್ಯನದು ಬಲಹೀನತ್ವ ಮಾತ್ರವೆ, ಬಲವೆಲ್ಲಾ ದೇವರದು.

ಸಂಧಿ ೨.

ಪೂರವಣಿ.

ಉ) ಸುವಾರ್ತೆಯ ಪ್ರಸಂಗಿಯು ಮಾನುಷ ಬಲದಿಂದಲ್ಲಾ,

ದೇವಬಲದಿಂದಲೆ ತನ್ನ ಉದ್ಯೋಗ ನಡಿಸುತ್ತಾನೆ. ಸ. ೨, ೧—೫.

ಅಪೊಸ್ತಲನು ಹೇಳುವದೇನಂದರೆ: ಹೀಗಿರುವದರಿಂದ ನಾನು ಸಹಾ ನಿಮ್ಮ ಬಳಿಗೆ ಬರುವಾಗ್ಯೆ, ವಾಗ್ಜಾಲತ್ವವನ್ನೂ ಮಾನುಷ ಜ್ಞಾನವಂನೂ ಬಳಸಿಕೊಂಡು ಬರಲಿಲ್ಲಾ. ಅದು ದೇವರ ವಿಷಯ ಸಾಕ್ಷಿ ಕೊಡುವ ಉದ್ದಿಶ್ಯಕ್ಕೆ ಕೇವಲ ವಿರೋಧವಾಗಿರುತ್ತಿತ್ತು; ೨. ಕೃಪೆಯಿಂದಲೆ ನನಗೆ ಪ್ರಾಪ್ತವಾದ ಯೇಸು ಕ್ರಿಸ್ತನೂ,

೧ ಕೊರಿ. ೨, ೫—೮.

ಆತನ ಕ್ರೂಜೆಮರಣದ ಗರ್ವ ಮುರಿಯುವ ಸತ್ಯವೂ ಇವುಗಳ ಹೊರತು ನನಗೆ ಬೇರೊಂದು ಆಧಾರವೂ ಬಲವೂ ಇರಲಿಲ್ಲ. ೫. ಅದಕ್ಕೆ ನಂನ ನಡೆನುಡಿಗಳು ಸರಿ ಬಿದ್ದವು. ನಾನು ಯೆಷ್ಟು ಬಲಹೀನನೆಂದು ಹೃದಯದಲ್ಲಿ ಅನುಭವಿಸಿ, ಯೆಹೂದ ಹಿಂಸಕರಿಗೆ ಭಯ ಪಡಲಿಕ್ಕೂ, ನನ್ನ ಪ್ರವೃತ್ತಿಯ ಫಲಗಳನ್ನು ನೋಡಿ ಯೆದೆಗುಂದುವದಕ್ಕೂ ನನಗೆ ಬಹಳ ಕಾರಣವಿತ್ತು. ೪. ನಾನು ಒಬ್ಬೊಬ್ಬರ ಸಂಗಡಲೂ, ಸರ್ವರ ಮುಂದೆಯೂ ಮಾತಾಡಿ, ಮಾನುಷ ಜ್ಞಾನದಿಂದಲೂ ವಾಗ್ಜಾಲತ್ವದಿಂದಲೂ ಜನರನ್ನು ಮರಳುಗೊಳಿಸ ಬೇಕೆಂದಿರಲಿಲ್ಲಾ, ದೇವರ ಆತ್ಮವೂ ಬಲವೂ ನಿಂಮ ಹೃದಯಗಳಲ್ಲಿ ಯೆತ್ನೈಸ ಬೇಕೆಂಬದನ್ನೆ ಬಯಸಿದೆನು. ೫. ಯಾಕಂದರೆ ನಿಮ್ಮ ವಿಶ್ವಾಸವು ನಿಮ್ಮಲ್ಲಿ ದೇವರ ಕ್ರಿಯೆಯಾಗಿ ತೋರತಕ್ಕದ್ದಾಗಿರುವದರಿಂದ, ಅದಕ್ಕೆ ಮಾನುಷ ಜ್ಞಾನವಲ್ಲಾ, ದೇವರ ಬಲವೆ ಆಧಾರವಾಗಿರ ಬೇಕು.

ಸುವಾರ್ತೆಯು ದೀನಭಾವದ ವಿಧೇಯತ್ವವನು

ಬೆಸಸುತ್ತದೆ.

೨) ಸುವಾರ್ತಾ ಪ್ರಸಂಗದ ಅಗಾಧ ಜ್ಞಾನದಿಂದ. ವ. ೬—೧೬.

ಅ) ಈ ಜ್ಞಾನದ ಸ್ವಭಾವ.

ವ. ೬. ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಬೆಳೆದ ಅಧಿಕಾನುಭವಿಗಳಾದ ಕ್ರೈಸ್ತರು ನಮ್ಮ ಮಾತು ಜ್ಞಾನವೆಂದು ಗ್ರಹಿಸುತ್ತಾರೆ. ಈ ಜ್ಞಾನವು ಮಾಂಸಕ್ಕೆ ಮೆಚ್ಚಿಗೆಯಾಗಿರದು, ಲೋಕಕ್ಕೂ, ತಮ್ಮ ಇಚ್ಛೆಯನ್ನು ನಡಿಸುವ ಲೋಕದ ಮಹಾತ್ಮರಿಗೂ ವೊಳ್ಳೀದಾಗಿ ತೋರದು. (ಆದರೆ ಇಂಥವರ ಮಹಿಮೆಯು ತಂನ ಸುವಾರ್ತೆಯನ್ನು ಮಹಿಮೆ ಪಡಿಸುವ ದೇವರ ಮುಂದೆ ವ್ಯರ್ಥವಾಗಿರುವದಲ್ಲದೆ, ಲೋಕದ ಮುಂದೆಯೂ ಬಹುಕಾಲ ನಿಲ್ಲುವಂಥಾದ್ದಲ್ಲ) ೭. ಅದು ದೇವರ ಮರೆಯಾಗಿದ್ದ ನಿತ್ಯ ಸಂಕಲ್ಪವಾಗಿರುತ್ತದೆ. ಅದಂನು ಆತನು ಕ್ರಿಸ್ತನಲ್ಲಿ ಈಗ ಪ್ರಕಟ ಮಾಡಿದ್ದಾನೆ, ಅದರಿಂದಲೇ ನಮ್ಮನ್ನು ಮಹಿಮೆಗೆ ನಡಿಸುತ್ತಾನೆ.

ಇ) ಈ ಜ್ಞಾನವು ಲೋಕಕ್ಕೆ ಮರೆಯಾಗಿದ್ದು ವಿಶ್ವಾಸಿಗಳಿಗೆ ಬೈಲಾಗಿದೆ.

ವ. ೮. ವಿಮೋಚನೆಯಂನು ಹೊಂದದಿರುವ ಲೋಕಕ್ಕೆ ಸಾಧ್ಯವಾದ, ದೇವರ ವಿಷಯದ ಪರಮ ಶ್ರೇಷ್ಠವಾದ ಜ್ಞಾನವು ಯೆಹೂದರ ಮುಖ್ಯಸ್ತರಿಗೆ, ಪರಮ ಶ್ರೇಷ್ಠವಾದ ಬಲವು ರೋಮಾಯರಿಗೆ ಇತ್ತು. ಆದರೆ ಇಬ್ಬರೂ ಕೂಡಿಕೊಂಡು, ಮಹಿಮೆಯ ಕರ್ತನಾಗಿರುವ ಕ್ರಿಸ್ತನನ್ನು, ನಮ್ಮನ್ನು ಮಹಿಮೆ ಪಡಿಸುವ ದಿವ್ಯ ಸಂಕಲ್ಪದ ಮಧ್ಯ ಮಣಿ ಯೆಂದು ಗ್ರಹಿಸದೆ, ಕ್ರೂಜಿಸಿದರಿಂದ, ಮನುಷ್ಯನು ತನ್ನಿಂದ ತಾನೇ ದಿವ್ಯ ಜ್ಞಾನವನ್ನು ತಿಳಿಕೊಳ್ಳುವದಿಲ್ಲವೆಂದು ತೋರಿಸಿದರು. ಅದು ಯೆಶಾಯ ೬೪, ೪. ಹೇಳುವ ಮಾತಿನ ಪ್ರಕಾರ ಆಯಿತು. (ಪೌಲನು ಈ ಮಾತುಗಳನ್ನು ವೊಂದಿಷ್ಟು ಬೇರೆ ಮಾಡಿ ಹೇಳುತ್ತಾನೆ.) ೯. ದೇವರು ತನ್ನನ್ನು ಪ್ರೀತಿ ಮಾಡುವವರಿಗೆ ಸಿದ್ಧ ಮಾಡಿದವುಗಳನ್ನು ಕಣ್ಣು ನೋಡಲಿಲ್ಲಾ, ಕಿವಿ ಕೇಳಲಿಲ್ಲಾ, ಅವು ಮನುಷ್ಯನ ಹೃದಯದಲ್ಲಿ ಶೇರಲಿಲ್ಲಾ. ಹಾಗಂದರೆ ನಿತ್ಯತ್ವದ ಆನಂದಗಳನ್ನು ಮಾತ್ರವಲ್ಲಾ, ದೇವರು ಮಾಡಿದ್ದೆಲ್ಲಾ, ಅಂದರೆ, ದೇವರ ಸಮಸ್ತ ಕೃಪಾಸಂಕಲ್ಪವನ್ನು ಮನುಷ್ಯಾತ್ಮವು ಸಹಜ ಬುದ್ಧಿಯಿಂದಲೇ ಯೆಂದೂ ಕಂಡು ಕೊಳ್ಳಲಿಲ್ಲಾ. ಹ್ಯಾಗೆಂದರೆ, ದೇವರ ಮಗನ ಅಗಾಧವಾದ ತಗ್ಗಿಸುವಿಕೆಯೂ, ತರುವಾಯ ಮನುಷ್ಯನ ಮಗನಿಗೆ ಬಂದ ಮಹಿಮೆಯೂ, ನಾವು ಆತನ

೧ ಕೊರಿ. ೨, ೧೦—೧೬.

ಸಂಬಂಧದಲ್ಲಿ ಹೊಂದತಕ್ಕ ನಿತ್ಯ ಮಹಿಮೆಯೂ, ಇದನ್ನೆಲ್ಲಾ ಯಾವ ಮನುಷ್ಯನಾದರೂ ಯೆಂದೂ ಊಹಿಸಲಿಲ್ಲಾ. ಆದರೆ ಅದನ್ನೇ ಯೇಸುವಿನ ದೂತರು ಸಾರಿದರು. ೧೦. ಅಪೊಸ್ತಲರೂ ಕ್ರೈಸ್ತರೂ ಆದ ನಮಗೆ ದೇವರ ಸಂಕಲ್ಪವನ್ನೂ, ದೇವರ ಸ್ವಭಾವದ ಮರ್ಮವನ್ನೂ ಶೋಧಿಸುವ ಪರಿಶುದ್ಧಾತ್ಮದಿಂದ ದೇವರು ಅದನ್ನು ಪ್ರಕಟಿಸಿದ್ದಾನೆ. (ಯೋಹಾ. ೧೬, ೧೩.) ೧೧. ಯಾಕಂದರೆ ಮನುಷ್ಯನಲ್ಲಿರುವದನ್ನು ಮನುಷ್ಯಾತ್ಮ ಮಾತ್ರವೆ ಹ್ಯಾಗೆ ಶೋಧಿಸ ಶಕ್ತವಾಗಿರುತ್ತದೊ, ಹಾಗೆಯೆ ಅಶೋಧ್ಯವಾದ ದೈವಭಾವದ ಅಗಾಧಗಳನ್ನು ದೇವಾತ್ಮ ಮಾತ್ರವೆ ಅರಿಯ ಬಲ್ಲುದಲ್ಲದೆ, ಮತ್ಯಾರಿಗೂ ಅರಿಯಲಳವಲ್ಲಾ. ೧೨. ಅವಿಶ್ವಾಸದ ಮಕ್ಕಳಲ್ಲಿ ಯೆತ್ಸೈಸುವಂಥಾ (ಎಫೆ. ೨, ೨.), ಲೌಕಿಕವಾದ್ದನ್ನೂ ಭೂಭಾವವಾದ್ದನ್ನೂ ಮಾತ್ರವೆ ತಿಳಿಯ ಶಕ್ತವಾದ ಲೋಕಾತ್ಮವನ್ನು ಕ್ರೈಸ್ತರಾದ ನಾವು ಹೊಂದಲಿಲ್ಲಾ; ನಾವು ಪರಿಶುದ್ಧಾತ್ಮವನ್ನು ಹೊಂದಿದ್ದೇವೆ, ಅದರಿಂದ, ಕ್ರಿಸ್ತನಲ್ಲಿ ದೇವರು ನಮಗೆ ದಯಪಾಲಿಸಿದರ ವಿಷಯದಲ್ಲಿ ನಮಗೆ ತಪ್ಪಕೂಡದ ನಿಶ್ಚಯ ಉಂಟಾಗುತ್ತದೆ. ೧೩. ಮಾನುಷ ಜ್ಞಾನವಲ್ಲಾ, ಆತ್ಮವೇ ಪ್ರಸಂಗದ ವಾಕ್ಯಗಳನ್ನು ಸಹಾ ನಮಗೆ ಕೊಡುತ್ತಿರಲಾಗಿ, ನಾವು ಆತ್ಮದವುಗಳನ್ನು ಆತ್ಮದವುಗಳಿಗೆ ಹೋಲಿಸಿ ಹೇಳುತ್ತೇವೆ, ಹಾಗಂದರೆ, ಆತ್ಮದ್ದನ್ನು ಆತ್ಮಿಕವಾಗಿ ಪ್ರಯೋಗಿಸಿ, ದೇವರಾತ್ಮ ಮಾತ್ರವೆ ಕೊಡತಕ್ಕ ಆತ್ಮಿಕ ಉಪದೇಶವನ್ನು ಆತ್ಮಿಕ ವಾಕ್ಯಗಳಿಂದ, ಅಂದರೆ, ಆತ್ಮವು ಕಲಿಸಿ ಕೊಡುವ ವಾಕ್ಯಗಳಿಂದ ಪ್ರಸಂಗಿಸುತ್ತೇವೆ.

ಊ) ಆ ಜ್ಞಾನವನ್ನು ತಿಳಿಕೊಳ್ಳುವದಕ್ಕೆ ಸಹಾ ಪರಿಶುದ್ಧಾತ್ಮದ ಪ್ರಕಾಶೀಕರಣ ಅವಶ್ಯ.

೧೪. ಆದರೆ ಪ್ರಾಣಿಕಾವದ ೧) ಮನುಷ್ಯನು ದೇವರ ಆತ್ಮದವುಗಳನ್ನು ಗ್ರಹಿಸನು ೨); ಯಾಕಂದರೆ ಅವನಿಗೆ ಹುಚ್ಚುತನವಾಗಿವೆ. ಮತ್ತು ಅವು ಆತ್ಮದ ಪ್ರಕಾರ ವಿಚಾರಿಸಲ್ಪಡುವ ಕಾರಣ, ಅವುಗಳನು ಅರಿಯಲಾರನು. ೧೫. ಆದರೆ ಆತ್ಮಿಕಾವದವನು ಯೆಲ್ಲಾ ವಿಚಾರಿಸುತ್ತಾನೆ ೩), ತಾನ್ಯೇ ಯಾರಿಂದಲೂ ವಿಚಾರಿಸಲ್ಪಡನು ೪). ೧೬. ಯಾಕಂದರೆ ಅವನಂನು ಉಪದೇಶಿಸುವ ಹಾಗೆ, ಕರ್ತನ ಮನಸ್ಸನ್ನು ಅರಿತವನ್ನಾರು ೫)? ಆದರೆ ನಮಗೆ ೬) ಕ್ರಿಸ್ತನ ಮನಸ್ಸು ಉಂಟು.

೧. ಪ್ರಾಣಿಕಾವದೆ, ೧ ಥೆಸ್ಸ. ೫, ೨೩. ಪ್ರಕಾರ, ಮನುಷ್ಯನನು ಶರೀರ, ಪ್ರಾಣ, ಆತ್ಮಗಳೆಂಬ ತ್ರಿಚಾಗವಾಗಿ ಯೆಣಿಸ ಬೇಕಾದ್ದಲ್ಲಿ, ದೇವರ ಆತ್ಮದ ಸಂಗಡ ಸಂಬಂಧದಲ್ಲಿರಲಿಕ್ಕೆ ಕಾರಣವಾಗಿರುವ ಆತ್ಮವೆಂಬದು ಪ್ರಾಣಿಕಾವದ ಮನುಷ್ಯನಿಗೆ ಇಲ್ಲದೆ, ಅಥವಾ ಕೇವಲ ಬಲಹೀನವಾಗಿ ಪ್ರಾಣಿಗಿರುವ ಕಾರಣ, ಅಂಥಾ ಮನುಷ್ಯನು ಸ್ವಚಾವಗುಣಗಳಿಗೆ ವಶವಾಗಿ ನಡಕಾಳ್ಳುತ್ತಾನೆ. ಪ್ರಾಣಿಕಾವವೆಂದರೆ, ಕೀಳಾಗಿರುವ ಮಾಂಸಚಾವದ, ಅಥವಾ ಕೇವಲ ಮೃಗಚಾವದ ಅಚಿಲಾಷೆಗಳು ಮಾತ್ರವಲ್ಲ, ಜ್ಞಾನೇಂದ್ರಿಯ ಕರ್ಮೇಂದ್ರಿಯ ಮೊದಲಾದ ಶಕ್ತಿಗಳೆಲ್ಲಾ ಅದರಲ್ಲಿ ಶೇರುತ್ತವೆ. ಆದರೆ ಪಾಪಪತನದಿಂದ ಪ್ರಕೃತಿಯೆಲ್ಲಾ ಪಾಪಕ್ಕೆ ವಾಳಗಾದ ಕಾರಣ, ಬರೇ ಪ್ರಾಣಿಕಾವದ ಮನುಷ್ಯನು, ಪ್ರಾಣಿಕಾವದವನಾಗಿರುವದರಿಂದಲೆ ಮಾಂಸಚಾವದ ಸ್ವಾಚಾವಿಕ ಮನುಷ್ಯನಾಗಿದ್ದು, ದೇವರಿಗೂ ಆತನ ವಾಕ್ಯಕ್ಕೂ ವಿರೋಧವಾಗಿದ್ದಾನೆ.

೨. ಅಂದರೆ, ದೇವರ ಸತ್ಯವನು ತಕ್ಕಾಳ್ಳುವದೇ ಇಲ್ಲಾ; ಅವನು ಅದರ ಸತ್ಯತ್ವವನ್ನಾಗಲಿ ವಿಶೇಷತ್ವವನ್ನಾಗಲಿ ಗ್ರಹಿಸನು, ಯಾಕಂದರೆ, ಆತ್ಮದ ಪ್ರಕಾಶೀಕರಣದಿಂದ ಮಾತ್ರವೆ ಅದನು ಸಮವಾಗಿ ವಿಚಾ

ರಿಸಲಿಕ್ಕೆ ಆಗುತ್ತದೆ. ಪೀಗಿರುವದರಿಂದ, ಪರಿಶುದ್ಧ ಬರಹವನು ವಾದುವಾಗಲೂ ವ್ಯಾಖ್ಯಾನಿಸುವಾಗಲೂ, ದೈನ್ಯವೂ ತನ್ನನ್ನು ತಾನೆ ಅಲ್ಲಗಳಿಯುವ ಮನಸ್ಸೂ, ಪ್ರಾರ್ಥನೆಯೂ ಯೆಷ್ಟಾದೀ ಅವಶ್ಯ!

೩. ಆತ್ಮದಲ್ಲಿ ಪಾಲು ಪೊಂದಿದವನಾಗಿ, ಯೆಲ್ಲಾದರಲ್ಲಿಯೂ ಮೇಲಿನಿಂದ ಬರುವ ಬಾಧೆನೆಯನ್ನು ಯಾರು ದೈನ್ಯ ವಿಶ್ವಾಸದಿಂದ ತಕ್ಕಾಳ್ಳುತ್ತಾನಾ ಅವನು ಮುಖ್ಯ ಸಂಗತಿಯಲ್ಲಿ ದೃಢ ಪೊಂದಿದವನಾಗಿ, ಈ ಮಧ್ಯಸ್ಥಾನದಲ್ಲಿ ನಿಂತು, ಬೇರೆ ಸಮಸ್ತವನು ತಾರತಮ್ಯಾನುಸಾರವಾಗಿ ಗ್ರಹಿಸಬಲ್ಲನು. ಪೀಗಿರುವದರಿಂದ ಯೇಕಾಕಿತಾವದ ಚಾಳೆ ಕ್ರಿಸ್ತರು ಅವರಿಗೆ ಅತ್ಯುನ್ನತವಾಗಿ ತಾರುವ ಮನುಷ್ಯರಿಂದನೂ ಕಾರ್ಯಗಳಿಂದನೂ ತಿಳಕಾಂಡು, ನಿಶ್ಚಯ ಪೇಳ ಶಕ್ತರೆಂದು, ನಾವಡ ಬಹುದು.

೪. ಪ್ರಕಾಶೀಕರಣವಿಲ್ಲದ ನ್ಯಾಚಾಪಿಕ ಮನುಷ್ಯರು ಅವನಂನು ಗ್ರಹಿಸಿ, ಅವನಿಗೆ ಸಮವಾಗಿ ತೀರ್ಪು ಮಾಡಲಿಕ್ಕೆ ಅಶಕ್ತರಾಗಿದ್ದು, ಅವರಿಗೆ ವಿಪರೀತವಾಗಿ ತಾರುವ ಕಾರ್ಯಗಳಲ್ಲಿ ಸಪೊಂದಾ, ಅವನ ಮೇಲೆ ಆಜ್ಞೆನಿರ್ಣಯಿಸಲಧಿಕಾರಿಗಳಾಗಿರುವದಿಲ್ಲಾ; ಅವನಿಗೆ ಆಜ್ಞೆ ನಿರ್ಣಯಿಸಿದರೆ, ಅದು ದೇವರ ಮುಂದೆ ಸಲ್ಲದು. ಆದಕಾರಣ ವಿಶ್ವಾಸದಿಂದಲೂ, ದೇವರ ವಿಧೇಯತ್ವದಿಂದಲೂ ಮಾಡುವ ಸಮಸ್ತ ಕಾರ್ಯಗಳಲ್ಲಿ ಲೌಕದವರ ಅಪಪೊಂದಾಸ್ಯಕ್ಕೆ ಅಂಜ ಕೆಲಸವಿಲ್ಲಾ.

೫. ದೇವರ ಆತ್ಮದಿಂದ ಪ್ರಕಾಶೀಕೃತನಾದವನನ್ನು ವಿಚಾರಿಸುವವನು ದೇವರನ್ನೆ ತನ್ನ ಕೈ ಕೆಳಗೆ ತರಬೇಕಾದೀತಲ್ಲಾ! ಅದು ಆಗದು. ಯೆಶಾ. ೪೦, ೧೩.

೬. ನಮಗೆ (ಅಂದರೆ ಪೌಲನಿಗೂ ಕೃಪೆಯಿಂದ ಅವನ ಪೊಂದಾಗೆ ಆದವರಿಗೂ) ಕ್ರಿಸ್ತನ ಆತ್ಮವಿರುವ ಕಾರಣ, ಅವರು ದೇವರ ಸಂಕಲ್ಪವನ್ನು ತಿಳಕಾಳ್ಳುವದಕ್ಕೆ ಆ ಆತ್ಮದಿಂದ ಸಾಮರ್ಥ್ಯ ಪೊಂದಿದ್ದಾರೆ. ವ. ೧೦ಲ್ಲಿಯೆ ಪೇಳಿರುವ ಸತ್ಯಾರ್ಥವನು ತಿರಿಗಿ ಪೇಳಿ, ಬಲಪಡಿಸುವದರಿಂದ, ಕಾರಿಂಥದವರು ಪೌಲನ ವಿಷಯದಲ್ಲಿಯೂ ಅವನ ಬಾಧೆನೆಯ ವಿಷಯದಲ್ಲಿಯೂ ಯೆಷ್ಟು ದೀನಚಾವದಿಂದ ವಿಚಾರ ಮಾಡತಕ್ಕದ್ದೆಂದು, ಅವರಿಗೆ ತಾರಿಸುತ್ತಾನೆ.

ನ. ೩.

ಬುದ್ಧಿಯ ಮಾತುಗಳು.

ಬಾಧಕರಂನು ಮಿತಿಮಾರಿ ಫನ ಪಡಿಸ ಬಾರದು. ನ. ೩.

೧) ಮತಭೇದ ಬೆಳಿಸುವದು ಶರೀರಕ್ರೈಸ್ತರ ಪದ್ಧತಿಯಾಗಿದೆ. ವ. ೧—೪.

ವ. ೧. ನಿಮ್ಮಲ್ಲಿಯೂ ಆತ್ಮದ ಜೀವನವು ಮಾಂಸದ ಮೇಲೆ ಪೂರ್ಣ ಅಧಿಕಾರ ಹೊಂದಲಿಲ್ಲಾ; ನಿಶ್ಚಯವಾಗಿ ನೀವು ಕೇವಲ ಮಾಂಸಭಾವದವರೆ; ಉಬ್ಬಿಸುವ ಜ್ಞಾನದಿಂದ ತುಂಬಿದವರಾಗಿ, ಅದಕ್ಕಾಗಿ ನೀವು ಆತ್ಮದಲ್ಲಿ ಉರೆ ಹಣ್ಣಾದ ಕ್ರೈಸ್ತರೆಂದು ಭಾವಿಸಿದಿರಲ್ಲಾ? ಆದರೆ ನಾನು ನಿಮ್ಮನ್ನು ಕ್ರೈಸ್ತತ್ವ ತಿಳಿಯದ ಮಕ್ಕಳಾಗಿ ನಡಿಸ ಬೇಕಾಯಿತು. ೨. ನಾನು ನಿಮಗೆ ಕ್ರೈಸ್ತಬೋಧನೆಯ ಅಕ್ಷರಮಾಲೆಯನ್ನಲ್ಲದೆ, ಅದರ ಪ್ರಮಾಣಗಳನ್ನೂ, ದಿವ್ಯ ರಕ್ಷಣಾಸಂಕಲ್ಪದ ಮಹಾ ಸಂಬಂಧವನ್ನೂ ತೋರಿಸಿ, ಕಲಿಸಿ ಕೊಡಲಾಗಲಿಲ್ಲಾ. ಈಗಲೂ ನೀವು ಗುಂಭವಾದ ಉಪದೇಶವನ್ನಾಗಲಿ, ಯೇಸುವಿನ ಮತ್ತು ಆತನ ರಕ್ಷಣೆಯ ಪೂರ್ಣ ಮಹತ್ವವನ್ನಾಗಲಿ ಗ್ರಹಿಸಲಾರಿರಿ. ೩. ಇದರ ಕಾರಣವೇನಂದರೆ: ನೀವು ಈವರೆಗೂ ಮಾಂಸಭಾವದವರಾಗಿದ್ದೀರಿ. ಹೃದಯದ ಅಗಾಧದಿಂದ ದೇವರ ಕಡೆಗೆ ತಿರುಗಿ ಕೊಳ್ಳದೆ, ದೃಶ್ಯವಸ್ತುಗಳಲ್ಲಿ ದೃಷ್ಟಿ ಇಡುತ್ತೀರಿ. ಸಾಧಾರಣ ಮನುಷ್ಯರ ರೀತಿಯಾಗಿ ಅಲ್ಲದೆ, ದೇವರ ಮನಸ್ಸಿಗೂ ಕ್ರಿಸ್ತನ ಮನಸ್ಸಿಗೂ ಸರಿಯಾಗಿ ನಡ

೧ ಕೊರಿ. ೩, ೪—೧೧.

ಕೊಳ್ಳುವದಿಲ್ಲವೆಂಬದಕ್ಕೆ, ನಿಮ್ಮಲ್ಲಿರುವ ಅತಿರೇಕ ತರ್ಕಗಳೂ ಜಗಳಗಳೂ ಸಾಕಾದ ಪ್ರಮಾಣ. ೪. ನೀವು ಬೇರೆ ಬೇರೆ ಪಕ್ಷಗಳಾಗುವದರಿಂದ, ನಿಮಗೆ ನಿಜವಾದ ಜ್ಞಾನವಿಲ್ಲವೆಂತಲೂ, ಸಮವಾದ ಮನೋಭಾವವಿಲ್ಲವೆಂತಲೂ, ಪೌಲನಲ್ಲಿಯೂ ಅಪೊಲ್ಲೋಸನಲ್ಲಿಯೂ ಮುಖ್ಯವಾದ್ದನ್ನು ನೋಡದೆ, ಹೊರಗಿನ ಕಾರ್ಯಗಳ ಮೇಲೆ ಕಣ್ಣಿಡುತ್ತೀರೆಂತಲೂ ಪ್ರತ್ಯಕ್ಷವಾಗುತ್ತದಲ್ಲವೊ? ನೀವು ಕ್ರಿಸ್ತನ ಕಡೆಗೆ ಸತ್ಯವಾಗಿ ತಿರುಗಿಕೊಳ್ಳಲಿಲ್ಲವೆಂದು ಅದರಿಂದ ಚನ್ನಾಗಿ ಕಾಣುತ್ತದಲ್ಲವೊ?

ಎ) ಬೋಧಕರ ಉದಾಸೀನದ ವಿಷಯದಲ್ಲಿ ಸಮವಾದ ವಿಚಾರ. ವ. ೫—೧೩.

ಅ) ಅವರು ಹಾಕುವ ನೆಲಗಟ್ಟು ಒಂದೆ. ವ. ೫—೯.

ವ. ೫. ಬೋಧಕರು ಕರ್ತನ ಸೇವಕರಲ್ಲದೆ ಬೇರೇನು; ಅವರು ನಿಮ್ಮನು ವಿಶ್ವಾಸಕ್ಕೆ ನಡಿಸುವ ಬಗ್ಗೆ ಆತನ ಕೈಯಲ್ಲಿ ಕರಣಗಳಾಗಿದ್ದಾರೆ, ಮತ್ತು ಒಬ್ಬೊಬ್ಬನು ಕರ್ತನ ಅಪ್ಪಣೆಯ ಹಾಗೆ ಆಯಾ ಪ್ರವೃತ್ತಿಯಲ್ಲಿ ಇರುತ್ತಾನೆ. ೬. ಹಾಗೆಯೆ ನಾನು ನಿಮ್ಮನ್ನು ವಿಶ್ವಾಸಕ್ಕೆ ತಂದು, ಆರಂಭ ಮಾಡಿ, ನಿಮ್ಮ ಸಭೆಗಳನ್ನು ಸ್ಥಾಪಿಸಿದೆನು; ಅಪೊಲ್ಲೋಸನು ಆ ಕೆಲಸವನ್ನು ಮುಂದೆ ನಡಿಸಿದನು (ಅಂದರೆ ದೇವರ ಕೃಪೆಯಲ್ಲಿಯೂ ತಿಳಿವಿಕೆಯಲ್ಲಿಯೂ ನೀವು ಅಭಿವೃದ್ಧಿಯಾಗುವ ಹಾಗೆ ನಿಮಗೆ ಸಹಾಯಕನಾದನು); ಆದರೆ ನೀವು ವಿಶ್ವಾಸಕ್ಕೆ ನಿಜವಾಗಿ ಬಂದದ್ದು (ನೀವು ಅದರಲ್ಲಿ ಸ್ಥಿರವಾದದ್ದು), ನಮ್ಮ ಪ್ರಯತ್ನಗಳು ನಿಷ್ಫಲವಾಗದೆ ಇದ್ದದ್ದು, ಅದೆಲ್ಲಾ ದೇವರ ಕೃತ್ಯ. ೭. ಹೀಗಿರಲಾಗಿ, ನಾವು ಮಾಡಿದೆವೆಂಬ ಹಾಗೆ, ನನಗಾಗಲಿ ಅಪೊಲ್ಲೋಸನಿಗಾಗಲಿ ಈ ಕಾರ್ಯದಲ್ಲಿ ಅಭಿಮಾನ ಕೊಡ ಬಾರದು; ಸಮಸ್ತ ವೃದ್ಧಿಗೆ ಆಶೀರ್ವಾದ ಕೊಡಬೇಕಾದ ದೇವರಿಗೆ ಮಾತ್ರವೆ ಹೊಗಳಿಕೆ ತಕ್ಕದ್ದಾಗಿರುತ್ತದೆ. ನಮ್ಮ ಅಲ್ಪಕೃತ್ಯವು ಕರ್ತನ ಮಹಾಕೃತ್ಯದ ಎದುರಿನಲ್ಲಿ ಶೂನ್ಯವಾಗುತ್ತದೆ. ೮. ಯೆಲ್ಲರೂ ಒಂದೇ ಪ್ರಯೋಜನಕ್ಕೆ ಕೆಲಸ ನಡಿಸಿದರು; ದೇವರ ಮುಂದೆಯೂ ನಿಮ್ಮ ಗುಣಕ್ಕೂ ನಮ್ಮಲ್ಲಿ ಒಬ್ಬನು ಮತ್ತೊಬ್ಬನಿಗೆ ಸರಿಯಾಗಿದ್ದಾನೆ. ಅವರು ಕೆಲಸದಲ್ಲಿ ತೋರಿಸಿದ ನಂಬಿಕೆಯ ಪ್ರಕಾರವೆ ಅವರ ಸಂಬಳವು ವಿವಿಧವಾಗಿರುವದು. ೯. ಯೆಲ್ಲಾ ದೇವರ ಕಾರ್ಯ. ದೇವರು ತನ್ನ ಕೆಲಸದಲ್ಲಿ ಒಟ್ಟಿಗೆ ಗೆಯ್ಯುವದಕ್ಕೆ ಬೋಧಕರಾದ ನಮಗೆ ಯೋಗ್ಯತೆ ಕೊಡುತ್ತಾನೆ, ಮತ್ತು ಒಂದೊಂದು ಸಭೆಯು ವಾಕ್ಯದ ಬಿತ್ತಿನಿಂದ ಕರ್ತನಿಗೆ ಪ್ರಾಣಗಳನ್ನು ದುಡಿಯುವ ಬಗ್ಗೆ ಬೇಕಾದ ದೇವರ ಹೊಲವಾಗಿರುತ್ತದೆ, ಅಥವಾ ಮತ್ತೊಂದು ಸಾಮ್ಯವನ್ನು ಹೇಳುವದಾದರೆ, ಅದು ದೇವರು ತಾನೆ ತನಗೆ ಮಂದಿರವಾಗುವ ಹಾಗೆ (೨ ಕೊರಿ. ೬, ೧೬. ಎಫೆ. ೨, ೨೦.) ಕಟ್ಟುತ್ತಿರುವ ಆಲಯವಾಗಿರುತ್ತದೆ.

ಇ) ವಿವಿಧವಾದ ಮೇಲ್ಗಟ್ಟು. ವ. ೧೦—೧೫.

೧೦. ನನಗೆ ಕೊಡಲ್ಪಟ್ಟ ದೇವರ ಕೃಪೆಯ ಪ್ರಕಾರ, ನಾನು ಬುದ್ಧಿಯುಳ್ಳ ಶಿಲ್ಪಿಯಾಗಿ ಅಸ್ತಿವಾರ ಹಾಕಿದ್ದೇನೆ; ಮತ್ತಾಬ್ಬನು ಮೇಲೆ ಕಟ್ಟುತ್ತಾನೆ. ಆದರೆ ಒಬ್ಬಾಬ್ಬನು ಹಾಗೆ ಮೇಲೆ ಕಟ್ಟುತ್ತಾನಾ, ನೋಡಿ ಕಾಳ್ಳಲಿ. ೧೧. ಯಾಕಂದರೆ ಯೇಸು ಕ್ರಿಸ್ತನಾಗಿರುವ ಹಾಕಲ್ಪಟ್ಟ ೧) ಅಸ್ತಿವಾರವಂನಲ್ಲದೆ ೨), ಮತ್ತಾಂದನ್ನು ಯಾವನೂ ಹಾಕಲಾರನು.

ಅಪೊ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

೧ ಕೊರಿ. ೫, ೧೨—೧೫.

೧. ಈ ಅಸ್ತಿವಾರವನ್ನು ದೇವರು ತಾನೇ ಪುಟಾಕಿದನು. ಆತನು ಯೇಸು ಕ್ರಿಸ್ತನ ವಿಮೋಚನೆಯಿಂದ ಮನುಷ್ಯರ ರಕ್ಷಣೆಗೆ ಅಸ್ತಿವಾರವನ್ನು ಪುಟಾಕಿದ್ದಾನೆ. ಆದರೆ ಕ್ರಿಸ್ತನ ಸೇವಕರು ವಿಶ್ವಾಸಿಗಳನ್ನು ಕ್ರಿಸ್ತನ ಜೀವವುಳ್ಳ ಸಂಸರ್ಗದಾಳಗೆಪುಟಾಗಿಸುವ ಸುವಾರ್ತೆಯ ಪ್ರಸಂಗದಿಂದ ತಿರಿಗಿ ತಿರಿಗಿ ಅದೆ ಕೆಲಸವನ್ನು ಎಸಗುತ್ತಾರೆ.

೨. ಸದಾಕಾಲ ಸ್ಥಿರವಾದ ಸುವಾರ್ತೆಯ ಮೂಲ ಬಾೀಧನೆಯಾಗಿದೆ. ಕ್ರೂಜಿಸಲ್ಪಟ್ಟ ಯೇಸು ಕ್ರಿಸ್ತನ ಮಾತು ಆತನಿಲ್ಲದೆ ದೇವರು ನಿವಸಿಸ ತಕ್ಕ ಆಲಯವಾದ ದೇವರ ಮನೆ ಇಲ್ಲವೇ ಇಲ್ಲಾ.

ವ. ೧೨. ಆದರೆ ಮನೆ ಕಟ್ಟುವವರು ಬಂದೇ ಅಸ್ತಿವಾರದ ಮೇಲೆ ಬೇರೆ ಬೇರೆ ಪ್ರಕಾರವಾಗಿ ಕಟ್ಟಬಹುದಲ್ಲಾ? ದೇವಸ್ಥಾನಗಳಲ್ಲಿ ಭಂಗಾರ ಬೆಳ್ಳಿಗಳ ಕಂಭಗಳನ್ನು ನೆಡುವರು, ಗೋಡೆಗಳಿಗೆ ಭಂಗಾರ ಬೆಳ್ಳಿಗಳ ತಗಡುಗಳನ್ನು ಹಚ್ಚುವರು, ವಿವರ್ಣಶಿಲೆಯನ್ನೂ, ಪಚ್ಚಮುಂತಾದ ರತ್ನಾದಿಗಳನ್ನೂ ಅಲ್ಲಲ್ಲಿ ಕೆತ್ತಿ ಇಡುವರು, ಅಥವಾ ಕಟ್ಟಿಗೆ, ಹುಲ್ಲು, ಕೂಳೆ ಮುಂತಾದ್ದರಿಂದ ಮಾಡಿದ ಬರೇ ಮಂಣು ಗೋಡೆಗಳನ್ನೂ ಹಾಕುವರು. ಹಾಗಾದರೆ ಬೆಂಕಿಯಿಂದ ಹಾಳಾಗುವ ಮರಮುಂತಾದ್ದರಿಂದ ಮನೆ ಕಟ್ಟಿಸಿದವನು, ಬೆಂಕಿ ಬಿದ್ದರೆ, ತನ್ನ ಜೀವವನ್ನು ಉಳಿಸಿ ಕೊಂಡರೂ, ಅಸ್ತಿಯಲ್ಲಿ ಬಹಳ ನಷ್ಟ ಪಡುವದಾಗುತ್ತದೆ. ಅದೇ ಪ್ರಕಾರ ಆತ್ಮ ಸಂಗತಿಗಳಲ್ಲಿ ಕ್ರಿಸ್ತನ ವಿಷಯವಾದ ನಿತ್ಯ ಮೂಲ ಸತ್ಯಾರ್ಥವೆಂಬ ಒಂದೆ ಸತ್ಯ ಅಸ್ತಿವಾರದ ಮೇಲೆ, ಬೆಳ್ಳಿಯುಳ್ಳ ಲೋಹಗಳ ಹಾಗೆ, ದೇವರ ಪರೀಕ್ಷೆಯಲ್ಲಿ ನಿಂತು, ಯೆಂದೆಂದಿಗೂ ಸತ್ಯವಾಗಿ ಇರುವಂಥಾ ಬೇರೆ ಬೋಧನೆಗಳನ್ನು ಮೂಲಬೋಧನೆಯಂಬ ಅಸ್ತಿವಾರದ ಮೇಲೆ ಕಟ್ಟಬಹುದು. ೧೩. ವೊಬ್ಬೊಬ್ಬನ ಕೆಲಸವು ಯಾವ ತರದ್ದೆಂದು (ಇಹದಲ್ಲಿಯೆ ಆಗುವ ಪರೀಕ್ಷೆಯಲ್ಲಿ, ಮತ್ತು ಮುಖ್ಯವಾಗಿ) ಆ ಮಹಾನ್ಯಾಯ ತೀರ್ಪಿನ ದಿನದಲ್ಲಿ ಪ್ರತ್ಯಕ್ಷವಾಗುವದು. ಆಗ್ಯೇ ಆತ್ಮದ ಪುಟಹಾಕುವ ಬೆಂಕಿ ಮಾನುಷವಾದದ್ದನ್ನೆಲ್ಲಾ ಸುಡುವದು; ಮುಖ್ಯವಾಗಿ ಬೋಧಕರ ಕೆಲಸಕ್ಕೆ ತೀವ್ರವಾದ ನ್ಯಾಯವಿಚಾರಣೆ ಆಗುವದು. ೧೪. ಆಗ್ಯೇ ಶಿಷ್ಯರಲ್ಲಿ ಕ್ರಿಸ್ತನ ವಿಶ್ವಾಸವೆಂಬ ಅಸ್ತಿವಾರದ ಮೇಲೆ ಬೋಧಕನು ಕಟ್ಟಿದ್ದು ನ್ಯಾಯ ತೀರ್ಪಿನ ಕೊಳ್ಳವೆಯಲ್ಲಿ ನಿಂತರೆ, ಅಂಥವನು ಮಾನುಷವಾದ ಅಬದ್ಧಗಳನ್ನು ಪ್ರಸಂಗಿಸಲಿಲ್ಲವೆಂದು ಪ್ರಕಟವಾಗಿ, ಅವನು ಮಹಿಮೆಯುಳ್ಳ ಕೃಪಾಪ್ರತಿಫಲವನ್ನು ಹೊಂದುವನು. ೧೫. ಆದರೆ ವೊಬ್ಬ ಬೋಧಕನು ಮೂಲ ಬೋಧನೆಯನ್ನು ಘಟ್ಟಿಯಾಗಿ ಹಿಡಕೊಂಡರೂ, ಅದರ ಸಂಗಡ ಸ್ವಂತ ಜ್ಞಾನವನ್ನೂ, ತಿಳಿಯದ ಅಬದ್ಧಗಳನ್ನೂ ಬೆರಕೆ ಮಾಡಿದ್ದರೆ, ತಾನು ಗೆಯ್ದದ್ದೆಲ್ಲಾ ಅನಾರ್ಥಕವಾಯಿತೆಂದು ನೋಡಿ, ದುಖ್ಖ ಪಡ ಬೇಕು. ಹ್ಯಾಗೆಂದರೆ ಅವನು ಪ್ರಸಂಗಿಸಿದ ಬೋಧನೆಯೂ ಅದರಿಂದ ಪಡಕೊಂಡ ಶಿಷ್ಯರೂ ಪುಟ ಹಾಕುವವನ ಬೆಂಕಿಯಲ್ಲಿ ನಿಲ್ಲರು; ಇದಲ್ಲದೆ ಅವನು ತಾನೇ ಬಹು ಕಷ್ಟದಿಂದಲಾದರೂ ಭಾರವಾದ ತಗ್ಗಿಸುನಿಕೆಯೊಡನೆಯಾದರೂ ರಕ್ಷಣೆ ಹೊಂದುವದು ದುರ್ಲಭ.

೩) ಸಭೆಯ ಮಹಾತ್ಮನದ ತಿಳುವಿಕೆಯಿಂದಲೇ ಮನುಷ್ಯನ ಜ್ಞಾನ ಮನುಷ್ಯದಾಸತ್ವಗಳ ಅನರ್ಥವು ನಿವಾರಣೆಯಾಗಬೇಕು. ವ. ೧೬—೨೩.

ಅನ್ಯಥಾ ಸತ್ಯವಾಗಿಯೆ ಇರುವ ವಿಶ್ವಾಸದ ಅಸ್ತಿವಾರದ ಮೇಲೆ ಕಟ್ಟುವ ಅಬದ್ಧವು ಭೋಳೈತನದಿಂದ ಹುಟ್ಟಿದರೂ, ಮೇಲೆ ಹೇಳಿದ ಪ್ರಕಾರ ನಿತ್ಯ ನಷ್ಟಕ್ಕೆ ಕಾರಣವಾಗ ಬಹುದು. ಹಾಗಾದರೆ ಕ್ರಿಸ್ತವಿರುದ್ಧವಾದ ಬೋಧನೆಯಿಂದ ಅಸ್ತಿವಾರವನೆ ಕೆಡವುವದಾದರೆ, ಅಶುದ್ಧವಾದ ಜ್ಞಾನಭ್ರಾಂತಿಯಿಂದ ಸಭೆಯನ್ನು ಭ್ರ

೧ ಕೊರಿ. ೩, ೧೬—೨೦.

ಪ್ಪ ಮಾಡುವವರಿಗೆ ಯೆಷ್ಟೊ ಅಧಿಕವಾಗಿ ಕಾಗಾಗ ತಕ್ಕದ್ದು! ಅಧಿಕಾಧಿಕವಾಗುವ ದೃಢದಿಂದ ಅಪೊಸ್ತಲನು ಈ ಕಂಟಕವನ್ನು ಪ್ರತಿಸಿಸಿ, ಮನುಷ್ಯ ಜ್ಞಾನಕ್ಕಿಂತಲೂ ಸಮಸ್ತ ಮನುಷ್ಯ ದಾಸತ್ವಕ್ಕಿಂತಲೂ ಕ್ರೈಸ್ತ ಸಭೆಯ ಮಹಾಘನವು ಯೆಷ್ಟು ದೊಡ್ಡದಾಗಿರುತ್ತದೆಂದು, ತಿಳುಹಿ ಬೆದರಿಸುತ್ತಾನೆ.

ಅ) ಸಭೆಯ ಮಹಾ ಘನವನ್ನು ಕಳಕೊಳ್ಳ ಬೇಡಿರಿ.

೧೬. ನೀವು ದೇವರ ಮಂದಿರವಾಗಿದ್ದೀರಿಎಂದೂ[೧], ದೇವರ ಆತ್ಮವು ನಿಮ್ಮಲ್ಲಿ ವಾಸ ಮಾಡುತ್ತದೆಂದೂ ಅರಿಯರಾ? ೧೭. ಯಾವನಾವರೂ ದೇವರ ಮಂದಿರವನ್ನು ಕೆಡಿಸಿದರೆ[೨], ಅವನನ್ನು ದೇವರು ಕೆಡಿಸುವನು[೩]; ಯಾಕಂದರೆ ದೇವರ ಮಂದಿರ ಪರಿಶುದ್ಧವಾದದ್ದು[೪]; ಆ ಮಂದಿರವು ನೀವೇ[೫].

೧. ಒಬ್ಬಬ್ಬ ಕ್ರೈಸ್ತನಲ್ಲಿಯೂ ಒಂದಾನೊಂದು ಕ್ರೈಸ್ತಸಭೆಯಲ್ಲಿಯೂ ದೇವರ ಆತ್ಮವು ವಾಸ ಮಾಡಿ, ಸ. ೧೪, ೧೫. ರೋಮ. ೮, ೯. ೧೧., ತನ್ನ ಪರಿಶುದ್ಧ ಸನ್ನಿಧಾನವನ್ನು ಪ್ರಕಟಿಸಲಿಚ್ಛಿಸುವ ದೇವಮಂದಿರವದೆ. ಅದನ್ನು ಕಾಪಾಡುವದು ಎಷ್ಟಾದೀ ಘನವೂ ಉತ್ಸವವೂ ಉಳ್ಳ ಕೆಲಸ!

೨. ಮುಂಚಿನ ಸಾಮ್ಯದಲ್ಲಿ ಹೇಳಿದ ಪ್ರಕಾರ, ಸತ್ಯ ಅಸ್ತಿವಾರದ ಮೇಲೆ ಸುಳ್ಳು ಕಟ್ಟುವ ಮೋಸಕ್ಕಿಂತ ಇದು ಅಧಿಕ. ಈ ಮಾತು ಕುಪಾಕಬೋಧಕರನ್ನು ಸೂಚಿಸುತ್ತದೆ; ಇವರು ಕಾರಿಂಥದವರ ಅವಗುಣಗಳನ್ನು ತಿಳಿದು, ಅವರ ಮನುಷ್ಯದಾಸತ್ವ ಜ್ಞಾನಾಭಾಷೆಗಳನ್ನು ಮೆಚ್ಚಿಸಿ, ಕ್ರಿಸ್ತ ವಿರೋಧವಾದ ಬೋಧನೆಯಿಂದಲೂ ಸಚಾಖೇದಗಳಿಂದಲೂ, ಜ್ಞಾನದರ್ಪದಿಂದಲೂ ಸಭೆಯನ್ನು ಪ್ರಾಳು ಮಾಡ ನೋಡಿದರು.

೩. ಅಂದರೆ, ನಿತ್ಯವಾಗಿ ನಾಶ ಮಾಡುವನು.

೪. ಪರಿಶುದ್ಧ, ಅಂದರೆ, ಕೆಡಿಸ ಬಾರದಂಥಾದ್ದು. ಅದಕ್ಕೆ ಮೋಸ ಮಾಡುವವನು ಶಿಕ್ಷೆ ತಿನ್ನದೆ ಪ್ರಾಣಿಗನು.

೫. ಚನ್ನಾಗಿ ಬೆದರಿಸುವ ಬಗ್ಗೆ ಪೌಲನು ಬಹು ಘನವಾದ ಈ ಮಾತನ್ನು ಪುನರಪಿ ಹೇಳುತ್ತಾನೆ.

ಇ) ನೀವು ಸುಳ್ಳಾದ ಮನುಷ್ಯ ಜ್ಞಾನಕ್ಕೆ ಮೊಳಗಾಗ ಬೇಡಿರಿ.

ವ. ೧೮. ಆದ್ದರಿಂದ ಕಕ್ಕಿಸುವವರೂ ಅವರಿಗೆ ಕಿವಿ ಕೊಡುವವರೂ ತಮ್ಮನ್ನು ತಾವೇ ಮೋಸಗೊಳಿಸಿ, ವಿನಾಶಕ್ಕೆ ಗುರಿಯಾಗ ಬಾರದು. ಅವರು ತಮ್ಮ ಜ್ಞಾನದಲ್ಲಿ ಹೆಚ್ಚಳ ಪಡುತ್ತಾರೆ. ಆದರೆ ಸತ್ಯವಾಗಿ ಜ್ಞಾನಿಗಳಾಗ ಬೇಕಾದರೆ, ಅವರು ತಮ್ಮನ್ನು ತಗ್ಗಿಸಿ ಕೊಂಡು, ಲೋಕದವರ ಕಣ್ಣಿನಲ್ಲಿ ಹುಚ್ಚರಾಗ ಬೇಕು. ೧೯. ಹ್ಯಾಗಂದರೆ, ಲೋಕವು ಜ್ಞಾನವೆಂದೆಣಿಸುವಂಥಾದ್ದು ದೇವರ ಬಳಿಯಲ್ಲಿ ಹುಚ್ಚತನವಾಗೆದೆ; ಹಾಗೆಯೇ ಹಿಯೋಬನ ಪುಸ್ತಕದಲ್ಲಿ ಬರದದ್ದೇನಂದರೆ: ೫, ೧೩. ಜ್ಞಾನಿಗಳಿಗೆ ಅವರ ಸ್ವಂತ ಕುತಲತ್ವವೆ ಪಾತವಾಗ ಮಾಡುತ್ತಾನೆ. ಹ್ಯಾಗಂದರೆ, ಸತ್ಯ ಜ್ಞಾನವನ್ನು ಹೊಂದದ ಹಾಗೆ, ಅದರಿಂದಲೆ ಅವರು ದಿನ ದಿನ ಹೆಚ್ಚಾಗಿ ಅಯೋಗ್ಯರಾಗುತ್ತಾರೆ. ೨೦. ಇದಲ್ಲದೆ ಕೀರ್ತ. ೯೪, ೧೧. ಹೇಳುವದೇನಂದರೆ: ಜ್ಞಾನಿಗಳ ಯೋಜನೆಗಳು ವ್ಯರ್ಥವಾಗೆವೆ ಯೆಂದು, ಕರ್ತನು ತಿಳಿದಿದ್ದಾನೆ.

೧ ಕೊರಿ. ೩, ೨೧—೨೩.

ಉ) ನೀವು ಕ್ರಯಕ್ಕೂ ಮನುಷ್ಯರ ಆಶ್ರಿತರಾಗಿರ ಬಾರದು. ವ. ೨೧—೨೩.

೨೧. ಆದಕಾರಣ೧) ಯಾವನಾದರೂ ಮನುಷ್ಯರಲ್ಲಿ ಹೆಚ್ಚಳ ಪಡದೆ೨) ಇರಲಿ. ೨೨. ಯಾಕಂದರೆ ಎಲ್ಲಾ ನಿಮ್ಮದು೩), ಪೌಲನಾಗಲಿ೪), ಅಪೊಲ್ಲೋಸನಾಗಲಿ, ಕೇಫನಾಗಲಿ, ಲೋಕವಾಗಲಿ, ಜೀವವಾಗಲಿ, ಮರಣವಾಗಲಿ೫), ಇರುವವುಗಳಾಗಲಿ, ಬರುವವುಗಳಾಗಲಿ೬), ಎಲ್ಲಾ ನಿಮ್ಮದೇ೭). ೨೩. ನೀವು ಕ್ರಿಸ್ತನವರು೮), ಕ್ರಿಸ್ತನೂ ದೇವರವನು೯).

೧. ಅಂದರೆ ಮಾನುಷ ಜ್ಞಾನವು ದೇವರ ಜ್ಞಾನಕ್ಕಿಂತಾ ಅತ್ಯಲ್ಪವಾಗಿರುವದರಿಂದಲೂ (ವ. ೧೭—೨೦.), ಬೋಧಕರು ಕರ್ತನ ಕೈಯಲ್ಲಿ ಬರೇಕರಣಗಳಾಗಿರುವದರಿಂದಲೂ, ಯೆಂಬ ಅರ್ಥ.

೨. ಮನುಷ್ಯರಲ್ಲಿ ಹೆಚ್ಚಳ ಪಡುವದೆಂದರೆ, ಅವರ ಆಶ್ರಿತನಾಗಿ, ಪೂರ್ಣ ಚರವಸವನ್ನೂ ಪೂರ್ಣ ನಿರೀಕ್ಷೆಯನ್ನೂ ಅವರಲ್ಲೆ ಇಡುವದು.

೩. ನೀವು ಕ್ರಿಸ್ತನ ಬಳಿಗೆ ಬರುವ ಹಾಗೆ, ಎಲ್ಲಾ ನಿಮಗೆ ಪ್ರಯೋಜನವಾಗ ಬೇಕು.

೪. ದೀನಭಾವದಿಂದ ಪೌಲನು, ಅವರಿಗೆ ಪ್ರಯೋಜನವಾಗ ತಕ್ಕ ಕಾರ್ಯಗಳಲ್ಲಿ ತನ್ನ ಹೆಸರು ಮುಂಚೆ ಹೇಳುತ್ತಾನೆ. ದೇವರು ಆಯ್ದುಕಾಂಡವರಲ್ಲಿ ದಿವ್ಯ ಪ್ರೀತಿಯ ಸಂಕಲ್ಪಗಳು ಈಡೇರುವ ಹಾಗೆ, ಸಮಸ್ತ ಲೋಕವು ಉಪಯುಕ್ತವಾಗ ಬೇಕಾದ ಮೇಲೆ, ಯಾಬ್ಬಾಬ್ಬ ಮನುಷ್ಯನು ಯೆಷ್ಟಾ ಹೆಚ್ಚಾಗಿ ಅನುಕೂಲವಾಗ ಬೇಕು.

೫. ಈ ಭೂಮಿಯಲ್ಲಿ ದೀರ್ಘಾಯುಷ್ಯವಾಗಲಿ ಅಕಾಲವಾದ ಮರಣವಾಗಲಿ ಯೆಂಬ ಅರ್ಥ.

೬. ಹಾಗಂದರೆ, ಮರಣದ ಈಚೆಯೂ ಆಚೆಯೂ.

೭. ದೇವರ ನಿಜ ಮಗುವು ದೇವರ ಬಾಧ್ಯಸ್ಥನಾಗಿದ್ದು, ದೇವರಿಗಿದ್ದ ಎಲ್ಲಾ ಐಶ್ವರ್ಯದಲ್ಲಿ ಪೂರ್ಣ ಅಂಶಿಯಾಗಿ ಇರುತ್ತಾನೆ; ಅವನ ರಕ್ಷಣೆಗೆ ಎಲ್ಲಾ ಅನುಕೂಲಿಸ ಬೇಕು.

೮. ವಿಶ್ವಾಸಿಯು ಲೋಕದಿಂದಲೂ ಸಮಸ್ತ ಮಾನುಷ ಕಾರ್ಯದಿಂದಲೂ ನಿರಾತಂಕವಾಗಿರುವದಕ್ಕೆ, ಅವನು ಕ್ರಿಸ್ತನಿಗೂ ಕ್ರಿಸ್ತನ ಪರಿಮುಖವಾಗಿ ದೇವರಿಗೂ ಪೂರ್ಣವಾಗಿಯೂ ಅನನ್ಯವಾಗಿಯೂ ಅವಲಂಬನದಲ್ಲಿರುವದು ಆಧಾರವಾಗಿದೆ. ಆದ್ದರಿಂದ ವಿಶ್ವಾಸಿಯು ಲೋಕಕ್ಕೆ ಪೂರ್ಣವಾಗಿ ಅನವಲಂಬನದಲ್ಲಿರುವದರಿಂದ, ಅವನಿಗೆ ಸಮಸ್ತವೂ ಉಪಯೋಗವಾಗ ಬೇಕು. ಯಾಕಂದರೆ ಅವನು ಕ್ರಿಸ್ತ ಸ್ವಾಸ್ಥ್ಯವಾಗಿರುವದರಿಂದ ದೇವರ ಸ್ವಾಸ್ಥ್ಯವಾಗಿದ್ದಾನೆ.

೯. ಕ್ರಿಸ್ತನು ಪರಮ ವಿಶೇಷಾರ್ಥದಲ್ಲಿ ದೇವರವನಾಗಿದ್ದಾನೆ; ಹಾಗೆಂದರೆ, ಆತನೂ ತಂದೆಯೂ ಒಂದೆ; ಆದ್ದರಿಂದ ಕ್ರಿಸ್ತನ ಸ್ವಾಸ್ಥ್ಯವಾಗಿರುವವನು ಆತನ ಪರಿಮುಖವಾಗಿ ದೇವರ ಸ್ವಾಸ್ಥ್ಯವಾಗಿಯೂ ಇದ್ದಾನೆ.

೧ ಕೊರಿ. ೪, ೧—೫.

ಸ. ೪.

ಪೂರಣಿ.

ಬಾಧಕರನ್ನು ಅಲ್ಪರೆಂದೆಣಿಸುವ ಪಾಪವನ್ನೂ

ಮಾಡಲಾಗದು. ಸ. ೪.

ಪೌಲನು

ಅ) ಬೋಧನೆಯ ವಿಷಯದಲ್ಲಿ ನ್ಯಾಯವಿಚಾರಕನಾದ ದೇವರಿಗೂ ವ. ೧—೫.

ಇ) ಕೊರಿಂಥರ ಗರ್ವಕ್ಕೆ ವ್ಯತ್ಯಾಸವಾದ ತನ್ನಲ್ಲಿರುವ ದೀನತ್ವಕ್ಕೂ ವ. ೬—೧೬.

ಉ) ತಾನು ಬೇಗ ಕೊರಿಂಥಕ್ಕೆ ಬಂದು ವಿಚಾರಿಸುವೆನೆಂಬ ಕಾರ್ಯಕ್ಕೂ ವ. ೧೭—೨೧.

ಬೆಕಳ್ಳು ತೋರಿಸುತ್ತಾನೆ.

ಅ) ದೇವರು ಬೋಧಕರ ಮೇಲೆ ನ್ಯಾಯಾಧಿಪತಿಯಾಗಿದ್ದಾನೆ. ವ. ೧—೫.

೧. (ಕ್ರಿಸ್ತನ ಉಳಿಗದವರೆಂದೂ ೧), ದೈವರ ಮರ್ಮಗಳ ಉಗ್ರಾಣದವರೆಂದೂ ೨), ಹೀಗೆ ಮನುಷ್ಯನು ನಮ್ಮನು ಎಣಿಸಲಿ. ೨. ಇದಲ್ಲದೆ ಉಗ್ರಾಣದವರಲ್ಲಿ, ವಾಬ್ಬಾಬ್ಬನು ನಂಬಿಕೆಯುಳ್ಳವನಾಗಿರಲಿ) ಬೇಕೆಂದು, ನ್ಯಾಡುತ್ತಾರೆ. ೩. ಆದರೆ ನಿಮ್ಮಿಂದಲಾದರೂ ೪) ಮನುಷ್ಯ ದಿವಸದಿಂದಲಾದರೂ ವಿಚಾರಿಸಲ್ಪಡುವದು ನನಗೆ ೪) ಬಹು ಸ್ವಲ್ಪವಾಗಿದೆ. ೪. ಅದಲ್ಲದೆ ನನ್ನನ್ನು ನಾನೇ ೫) ವಿಚಾರಿಸಿ ಕಾಳ್ಳಿನು; ಯಾಕಂದರೆ ನನ್ನ ವಿಷಯ ನಾನೇನೂ ಅರಿಯೆ ೬); ಆದಾಗ್ಯೂ ಇದರಿಂದ ನಾನು ನೀತಿನಿರ್ಣಯ ಪಟ್ಟವನಲ್ಲ, ನನ್ನನ್ನು ವಿಚಾರಿಸುವವನು ಕರ್ತನೇ ೭). ೫. ಆದಕಾರಣ, ಕರ್ತನು ಬರುವ ಮಟ್ಟಿಗೂ, ಸಮಯಕ್ಕೆ ಮುಂಚೆ ವಿನೂ ನಿರ್ಣಯಿಸ ಬೇಡಿರಿ. ಅವನೇ ಅಂಧಕಾರದ ರಹಸ್ಯಗಳನು ಬೆಳಕಿಗೆ ತಂದು, ಹೃದಯಗಳ ಆಲೋಚನೆಗಳನ್ನು ಬೈಲು ಪಡಿಸುವನು; ಆಗಲೇ ವಾಬ್ಬಾಬ್ಬನಿಗೆ, ದೈವರಿಂದ ಹಾಗಳಿಕೆ ೮) ಉಂಟಾಗುವದು.

೧. ಬಾಧಕರು ಉಳಿಗದವರಾಗಿರುವದರಿಂದ, ಸ. ೩, ೫., ಅವರನ್ನು ಅತಿರೇಕ ಅಧಿಕರೆಂದೆಣಿಸ ಬಾರದು, ಅವರನ್ನೆ ಪೌಳಾಂಡಿಕಾಳ್ಳ ಬಾರದು; ಆದರೆ ಅವರು ಕ್ರಿಸ್ತನ ಉಳಿಗದವರಾಗಿರುವದರಿಂದ, ಅವರಲ್ಲಿ ಕರ್ತನನ್ನು ಸನ್ಮಾನಿಸ ತಕ್ಕದ್ದು. ಈ ಪ್ರಕಾರ ಅಲ್ಪತ್ವವೂ ಘನತ್ವವೂ ವಾಟ್ಟಿಗೆ ಇರುತ್ತದೆ.

೨. ಉಗ್ರಾಣದವರಾಗಿ ಅವರು ಸ್ವಂತವಾದ್ದನ್ನು ಕಾಡುವದಿಲ್ಲಾ, ಅವರು ಕಾಡುವಂಥಾದ್ದು ಮನುಷ್ಯರಿಗೆ ಅಗಾಧವಾದದ್ದಾಗಿಯೂ ದಾರಕತಕ್ಕದ್ದಲ್ಲವಾಗಿಯೂ ಇದೆ. ಅದು ದೇವರು ಪ್ರಕಟಿಸಿದ ಬಾಧನೆ, ಲೂಕ. ೧೨, ೪೨. ಮತ್ತಾ. ೨೫, ೧೪. ನಾಳಿಕಾ.

೩. ವಾಗ್ಜಾಲತ್ವ, ಸುಮಯರ್ಯಾದೆ, ವಿದ್ವತ್ಸಂಪತ್ತು ಮುಂತಾದವುಗಳನ್ನು ಕಾರಿಂಥದವರು ಅಪೇಕ್ಷಿಸಿದರೂ, ಅದು ವಿಶೇಷವಲ್ಲಾ. ವರಗಳನ್ನು ಪೌಳಾಂದಿರುವದು ಅಲ್ಲ, ಅವುಗಳನ್ನು ನಂಬಿಕೆಯಾಗಿ ಪ್ರ

ಯೋಗಿಸುವದೆ ಮುಖ್ಯ. ಉಗ್ರಾಣದವರು ದೇವರ ಮರ್ಮಗಳನ್ನು ಸಮವಾಗಿ ಪ್ರಸಂಗಿಸಿ, ವಾಳ್ಳೇ ಪ್ರಾಣಾಪಾಯವನ್ನು ಕಾಟ್ಟಿರೆ, ನಂಬಿಕೆಯುಳ್ಳವರಾಗಿದ್ದಾರೆ. ಲೂಕ. ೧೨, ೪೨.

೪. ವ. ೩—೫. ನಂಬಿಕೆಯನ್ನು ಶಾಂಥಿಸುವದು ಕರ್ತನ ಉದ್ಯೋಗ; ಮನುಷ್ಯರ ತೀರ್ಪು ಕೆಲಸಕ್ಕೆ ಬಾರದು.

೩. ನಾನು ಯೆಷ್ಟರವನೆಂತ ನಿಶ್ಚೈಸುವದಕ್ಕೂ, ನನಗೂ ನಿಮಗೂ ಇರುವ ತಾರತಮ್ಯವನ್ನು ನಿಷ್ಕರ್ಷಿಸುವದಕ್ಕೂ ನನಗೆ ಧೈರ್ಯವಿಲ್ಲಾ, ನಿಮಗಿಂತ ನಾನು ನನ್ನನ್ನು ಚನ್ನಾಗಿ ತಿಳಿದರೂ, ನಾನು ಅದನ್ನು ಮಾಡೆನು.

೪. ನನ್ನ ಪರಿಶುದ್ಧ ಉದ್ಯೋಗದಲ್ಲಿ ಅಪನಂಬಿಕೆಯಾಗಿ ನಡದದ್ದು ನನಗೇನೂ ಗೊತ್ತಿಲ್ಲಾ, ಅಪೊ. ಕ್ರಿ. ೨೦, ೩೫. ನೋಟಿಕಾ; ಆದರೆ ಈ ಮಾತು ಪೇಳುವದರಿಂದ, ಪ್ರಭುವಯದ ಗುಂಡಿಯನ್ನು ನೋಡುವ ಕರ್ತನಿಗೂ ನನ್ನಲ್ಲಿ ತಪ್ಪು ಕಾಣದೆಂಬ ಅರ್ಥವಲ್ಲಾ. ಆದರೆ ರಾಮಿಯಾಯ ಸಖೆಯು ಬೋಧಿಸುವ ಪ್ರಕಾರ ಯಾರಾದರೂ ತನ್ನ ಕೃಪಾಸ್ಥಿತಿಯನ್ನು ಈ ಜೀವದಲ್ಲಿ ತಿಳಿಯುವದು ಅಶಕ್ಯವೆಂಬದನ್ನು ಈ ಮಾತಿನಿಂದ ಸ್ಥಾಪಿಸ ಕೂಡದು. ಪೌಲನು ತನ್ನ ಕೃಪಾಸ್ಥಿತಿಯನ್ನು ಚನ್ನಾಗಿ ತಿಳಿದಿದ್ದನು, ಇದಲ್ಲದೆ ಉದ್ಯೋಗದಲ್ಲಿ ಮರೆಯಾದ ದೋಷಗಳು ಅವನಲ್ಲಿ ಇದ್ದವಾದರೆ, ಇವುಗಳನ್ನೂ ಕ್ರಿಸ್ತನ ರಕ್ತವು ಮುಚ್ಚುತ್ತಿತ್ತು. ತನ್ನ ಕರ್ತನಾದ ಯೇಸು ಕ್ರಿಸ್ತನಿಂದ ನೀತಿಯ ಕಿರೀಟವನ್ನು ಪೊಂದುವೆನೆಂದು, ಅವನು ದೃಢವಾಗಿ ನಂಬಿದನು, ೨ ತಿಮೊ. ೪, ೮.

೬. ಆದ್ದರಿಂದ ನೀವು ಇಷ್ಟು ಬೇಗ ಪೊಗಾಗಳುವದೂ ಜರೆಯುವದೂ ಯೋಗ್ಯವಲ್ಲಾ. ನಿಜವಾದ ನ್ಯಾಯತೀರ್ಪು ಬಾರದೆ ಪೊಗಾಗದು. ಕರ್ತನಾದ ಯೇಸುವು ಯೆರಡನೆ ಸರ್ತಿ ಬರುವಾಗೈ, ಸಮಸ್ತರ ಕ್ರಿಯೆಗಳನ್ನು ಮಾತ್ರವಲ್ಲಾ, ಮರೆಯಾದ ಕಾರಣಗಳನ್ನೂ ವಾಬ್ಬಾಬ್ಬನ ಪೂರ್ಣ ಮನಾಲೋಚಾವವನ್ನೂ ಬೆಳಕಿಗೆ ತರಲಾಗಿ, ನಾವೂ ಮತ್ತಾಬ್ಬರೂ ಈ ಸಂಗತಿಯನ್ನು ಸಮವಾಗಿ ತಿಳಿಯಲಿಕ್ಕೆ ಆಗುವದು.

೮. ನಂಬಿಗಸ್ಥನಾಗಿದ್ದರೆ ಪೊಗಾಗಳಿಕೆಯೂ, ಅಪನಂಬಿಕೆಯಾಗಿದ್ದರೆ ದೋಷಾರೋಪಣವೂ ದಂಡವೂ ಬರುವದು. ಯೆಲ್ಲರೂ ನೆನಸ ಬಹುದಾದ ಈ ಯೆರಡನೆ ಮಾತನ್ನು ಪೌಲನು, ಅವರ ಮನಸ್ಸಿಗೆ ನಾವು ಕಾಡದ ಪೊಗಾಗೆ, ಬೇಕೆಂದು ಬಿಟ್ಟನು.

ಇ) ಅಪೊಸ್ತಲರು ದೀನತ್ವದ ಮಾದರಿಯಾಗಿದ್ದಾರೆ. ವ. ೬—೧೩.

ವ. ೬. ಯೆಲ್ಲರಿಗೆ ತಾಗತಕ್ಕದ್ದಾದ ಇಷ್ಟು ವರೆಗೆ ಹೇಳಿದ ಸಂಗತಿಯನ್ನು ನನಗೂ ಅಪೊಲ್ಲೋಸನಿಗೂ ಸಾಮ್ಯವಾಗಿ ಹೇಳಿದೆನು; ಅದು ಯಾಕಂದರೆ, ನೀವು ನಮ್ಮಲ್ಲಿ ದೈನ್ಯದ ಮಾದರಿಯನ್ನು ತಕ್ಕೊಳ್ಳಬೇಕು. ಅದರಿಂದ ನೀವು ಗ್ರಹಿಸ ತಕ್ಕದ್ದೇನಂದರೆ: ಬರದಿರುವದಕ್ಕಿಂತ ಹೆಚ್ಚಾದ್ದನ್ನು ಯಾರೂ ತಂನ ವಿಷಯದಲ್ಲಿ ಯೆಣಿಸಲಾಗದು. ಹಾಗೆ ಯೆಕೆ. ೩, ೨೩. ಗಾವೆ. ೩, ೭. ನೋಡಿ ಕೊಳ್ಳಬಹುದು. ಅದೇ ಪ್ರಕಾರ ತನ್ನ ಬೋಧಕನ ದೆಶೆಯಿಂದ ಅಥವಾ ಪಕ್ಷಪತಿಯ ದೆಶೆಯಿಂದ ತನ್ನನ್ನು ಮತ್ತೊಬ್ಬರ ಮೇಲೆ ಹೆಚ್ಚಿಸಿ ಕೊಳ್ಳ ಬಾರದು. ೭. ಯಾಕಂದರೆ ತಾನಧಿಕನೆಂಬ ಮಾತು ತನಗೆ ಮಾತ್ರವೆ ಪೌದಾಗಿ ತೋರುತ್ತವೆ. ಇದಲ್ಲದೆ ಅಂಥಾ ಯತಸ್ಸು ಸತ್ಯವಾಗಿ ಇರುವಲ್ಲಿಯೂ, ಅದು ಸ್ವಂತ ಪುಣ್ಯವಿಲ್ಲದೆ ದೇವರಿಂದ ಬಂದ ಕೃಪಾದಾನವಾಗಿರುವ ಕಾರಣ, ಸ್ವಂತ ಘಟ್ಟಿತನವೆಂಬ ಹಾಗೆ ಹೆಚ್ಚಳ ಪಡ ಕೆಲಸವಿಲ್ಲಾ. ೮. ನೀವು ನಿಮ್ಮಲಿ ಸಂತುಷ್ಟರಾಗಿದ್ದೀರಿ, ನೀವು ಆತ್ಮದಲ್ಲಿ ದೊಡ್ಡವರಾಗಿ ಹೋದಿರಿ: ತಿಳಿವಿಕೆಯಿಂದಲೂ ನೀತಿಯಿಂದಲೂ ನಿಮ್ಮ ಕಲ್ಪನೆಯಲ್ಲಿ ತೃಪ್ತರಾದಿರಿ, ಆತ್ಮಿಕಾಶೀರ್ವಾದದಲ್ಲಿ ಸಂಪನ್ನರಾದಿರಿ, ನೀವು ಪರಮೋನ್ನತವಾದ ಘನವನ್ನೂ ಭಾಗ್ಯವನ್ನೂ ಪಡಕೊಂಡು ಆಯಿತು. ಯೆಲ್ಲಾ ನಂಮ ಹೊರತಾಗಿ, ನಿಮ್ಮಷ್ಟಕ್ಕೆ. ನೀವು

೧ ಕೊರಿ. ೪, ೯—೧೭.

ಜಯಪ್ರದವಾದ ಸಂಪೂರ್ಣತ್ವಕ್ಕೆ ಬಂದು ಮುಟ್ಟಿದವರಂತೆ ಮಾಡುತ್ತೀರಲ್ಲ! ಅಯ್ಯೋ, ಹಾಗೆ ಇದ್ದರೆ, ಯೆಷ್ಟೋ ವಾಸಿ! ಹಾಗೆ ಆದರೆ, ನಮಗೂ ಅದರಿಂದ ಪ್ರಯೋಜನ ಬಂದೀತು. ೯. ಆದರೆ ಅಪೊಸ್ತಲರಾದ ನಂಮ ಸ್ಥಿತಿಯು ಅಷ್ಟು ಮಹಿಮಾನ್ವಿತವಾಗಿರುವದಿಲ್ಲ. ದೇವರು ಅಪೊಸ್ತಲರಾದ ನಂಮನ್ನು ಅಲ್ಪರಲ್ಲಿ ಅಲ್ಪರಾಗ ಮಾಡಿ, ಕೇವಲ ನಿಕೃಷ್ಟವಾದ ಅವಸ್ಥೆಯಲ್ಲಿಟ್ಟಿದ್ದಾನೆ. ಮರಣಕ್ಕೆ ನೇಮಕವಾದ ಪಾತಕಿಗಳಂತೆ ಇದ್ದೇವೆ; ದೂತರೂ ಮನುಷ್ಯರೂ ಆದ ನಿರ್ಮಾಣವಾದವರೆಲ್ಲರು ನಂಮ ಮೇತೆ ಕಣ್ಣಿಡುತ್ತಾರೆ. (ಅವರು ಸಂತೋಷದಿಂದಲೂ ಮಮತೆಯಿಂದಲೂ, ಇವರು ಅಲಕ್ಷ್ಯೆಯಿಂದಲೂ ನಂಮನ್ನು ನೋಡುತ್ತಾರೆ.) ೧೦. ನಾವು ಸುವಾರ್ತೆಯ ಭೋಳ್ಳೆ ಪ್ರಸಂಗದ ದೆಶೆಯಿಂದ ಬುದ್ಧಿವಂತರಿಗೆ. ಹುಚ್ಚರಾಗಿ ಕಾಣಿಸುತ್ತೇವೆ; ನೀವು ಪ್ರಪಂಚಜ್ಞಾನದ ಕೀರ್ತಿಯನ್ನು ಸುವಾರ್ತೆಯ ಸಂಗಡ ಕಟ್ಟುವದಕ್ಕೆ ಶಕ್ತರಾದ ನಿಪುಣ ಕ್ರೈಸ್ತರಾಗಿದ್ದೀರಿ. ನಾವು ನಂಮ ಬಲಹೀನತ್ವವಂನು ಕಂಡು, ನಂಮನ್ನು ತಗ್ಗಿಸಿ ಕೊಳ್ಳುತ್ತೇವೆ, ಆದರೆ ನೀವು ನಮಗೆ ತಿಳಿಯದ ಬಲದಿಂದ ಬಲವಂತರಾಗಿ ಮೆಕೆಯುತ್ತೀರಿ. ನೀವು ಮಹಿಮೆಯುಳ್ಳವರು, ನಾವು ತುಚ್ಛೀಕೃತರು. ೧೧. ಬಹಿರಂಗದಲ್ಲಿಯೂ ನಂಮ ಸ್ಥಿತಿ ನಿಕೃಷ್ಟವಾಗಿರುತ್ತದೆ. ನಾವು ಹಸಿವೆಯನ್ನೂ ಬಾಯಾರಿಕೆಯನ್ನೂ ತಾಳ ಬೇಕು, ಮೈಗೆ ಅರವೆ ಇಲ್ಲದೆ ಇರ ಬೇಕು, ಪೆಟ್ಟುಗಳಂನೂ ಹಿಂಸೆಯಂನೂ ಸಹಿಸ ಬೇಕು. ೧೨. ನಾವು ಸ್ವಂತ ಕಷ್ಟದಿಂದ ಉದರಪೋಷಣ ಮಾಡುತ್ತೇವೆ (ಅಪೊ. ಕೃ. ೨೦, ೩೪.); ಅಷ್ಟು ಮಾತ್ರವಲ್ಲ: ಬೈಗಳಿಗೂ ಹಿಂಸೆಗೂ ದೂಷಣೆಗೂ ಪ್ರತಿಯಾಗಿ, ನಂಮ ಹಿಂಸಕರಿಗೆ ಆಶೀರ್ವಾದ ದೊರಕ ಬೇಕೆಂದು ಪ್ರಾರ್ಥನೆ ಮಾಡುತ್ತೇವೆ. ೧೩. ಆದಾಗ್ಯೂ ಲೋಕದ ಶಾಪದಂತೆ ನಮ್ಮನ್ನೆಣಿಸುತ್ತಾರೆ; ದೇವರನ್ನು ಸಮಾಧಾನ ಪಡಿಸುವ ಬಗ್ಯೆ ನಾಶ ಮಾಡ ತಕ್ಕ ಮರಣಕ್ಕೆ ನೇಮಕವಾದ ದುಷ್ಕರ್ಮಿಗಳಂತೆ ಮನುಷ್ಯರಲ್ಲಿ ಮಲಸಮಾನರಾಗಿದ್ದೇವೆ.

೪. ೧೪. ಈ ಪ್ರಕಾರ ಎಣೆಜೋಡಿಸುವದರಿಂದ ನಾಚಿಕೆ ಪಡ್ಡೀರಿ. ಆದರೆ ನಿಂಮನ್ನು ನಾಚಿಕೆ ಪಡಿಸುವದು ನಂನ ಉದ್ದಿಶ್ಯವಲ್ಲ, ನಿಂಮನ್ನು ಸ್ವಬೋಧಕ್ಕೂ ದೈನ್ಯಭಾವಕ್ಕೂ ತಂದು, ದುಡಿದು ಕೊಳ್ಳ ಬೇಕೆಂದು, ಪಿತುಭಾವದ ಪ್ರೀತಿಯಿಂದ ಯೆಸಗುತ್ತೇನೆ. ೧೫. ನೀವು ನಂನ ಪ್ರಿಯ ಮಕ್ಕಳಲ್ಲವೇ? ಹ್ಯಾಗೆಂದರೆ, ಕ್ರಿಸ್ತನ ಕಡೆಗೆ ನಿಮಗೆ ಅನೇಕಾನೇಕ ಬೋಧಕರೂ ಪಾಲಕರೂ ಇದ್ದರೂ, ಅವರಿಂದ ನೀವು ಸಾಧಿಸಿ ಕೊಂಡರೂ, ಅವರಲ್ಲಿ ಯಾರಿಗಾದರೂ ನನಗಿರುವ ಪಿತುಭಾವದ ಹೃದಯವು ಇರದು, ಯಾಕಂದರೆ, ನಾನು ನಿಂಮ ಆತ್ಮಿಕ ತಂದೆ; ನಾನು ನಿಂಮನ್ನು ಕ್ರಿಸ್ತ ಯೇಸುವಿನಲ್ಲಿ ಸುವಾರ್ತೆಯಿಂದ ಹಡದೆನು; ನಂನ ಬೋಧನೆಯಿಂದ ನಿಮ್ಮನ್ನು ಕ್ರೈಸ್ತರಾಗ ಮಾಡಿದೆನು. ೧೬. ಹಾಗಾದರೆ ನಿಮ್ಮನ್ನು ನೀವೇ ಅಲ್ಲಗಳದು, ಕ್ರೂಜೆ ಹೊರುವವರಾಗಿ ನನ್ನನ್ನು ಹಿಂಬಾಲಿಸಿರಿ.

ಊ) ಅಪೊಸ್ತಲನು ತಾನೇ ಕೊರಿಂಥಕ್ಕೆ ಬಂದು, ಈ ಕಾರ್ಯವನ್ನು ತೀರಿಸ ಮನಸ್ಸಾಗಿದ್ದಾನೆ.

೪. ೧೭—೨೧.

೪. ೧೭. ಪಿತೃಪ್ರೇಮೆಯದ ಪ್ರೀತಿಯಿಂದ ನಿಮ್ಮ ಬಳಿಗೆ ತಿಮೊಥೆಯನನ್ನು ಕಳುಹಿಸಿದ್ದೇನೆ. ಅವನು ಈಗ ನಿಮ್ಮ ಬಳಿಗೆ ಬಂದು ಮುಟ್ಟಿದ್ದಾನು. ಅವನು ನನ್ನ ಪರಮಪ್ರಿಯ ಶಿಷ್ಯನೂ ಉದ್ಯೋಗ ಸಹಾಯ

೫೧೦_೨ ಅಪೌ. ಚ. _೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.
೧ ಕೌರಿ. ೪, ೧೪—೫೫, ೧—೫೫.

ಕನೂ ಆಗಿದ್ದಾನೆ. ಅವನು ಬಂದರೆ, ನೀವು ಮರತು ಬಿಟ್ಟರಾದರೆ, ಎಲ್ಲಾ ಕಡೆಯಲ್ಲಿ ಹ್ಯಾಗೊ ಹಾಗೆಯೆ ನಿಮಮ್ಲಿಯೂ ನನ್ನ ಅಪೊಸ್ತೊಲಿಕ ಪ್ರವೃತ್ತಿಯ ನಿಜಭಾವವನ್ನು ನಿಮಮ ನೆನಪಿಗೆ ತಂದಾನು.

ವ. ೧೪. ನಾನು ಕೊರಿಂಥಕ್ಕೆ ಬರ ಹೆದರುತ್ತೇನೆಂಬದಾಗಿ, ನನ್ನ ಯೆದುರಾಳಿಗಳು ಸುದ್ದಿ ಹಾಕಿದ್ದಾ ಕೆಂದು, ಕೇಳುತ್ತೇನೆ. ೧೫. ಆದರೆ ಕರ್ತನ ಚಿತ್ತವಾದರೆ, ಬೇಗ ಬರುತ್ತೇನೆ; ಆಗ್ಯೆ ಉಬ್ಬಿದವರ ಗರ್ವದ ಮಾತುಗಳನ್ನು ಲಕ್ಷಿಸದೆ, ಅವರ ನಡತೆಯಲ್ಲಿ ನುವಾರ್ತೆಯ ನಿಜಬಲವೂ ಪ್ರವೃತ್ತಿಯೂ ಉಂಟೊ ಯೆಂ ಬದನ್ನು ಮಾತ್ರವೆ ನೋಡುವೆನು. ೨೦. ಯಾಕಂದರೆ ಯಾರಾದರೂ ದೇವರ ರಾಜ್ಯದವನೊ ಯೆಂಬದು ಹೆಚ್ಚಳದ ವೊಣಮಾತುಗಳಿಂದಲ್ಲ, ಅಂತರ್ಮನುಷ್ಯನ ಸ್ವಭಾವಾಂತರದಿಂದಲೆ ಪ್ರತ್ಯಕ್ಷವಾಗುವದು. ೨೧. ಈಗ ಏನು ಆಗ ಬೇಕೆಂದು ಹೇಳಿರಿ. ನಾನು ನಿಮಗೆ ದಂಡಿಸುವವನಾಗಿ ಬರಲೋ, ಅಥವಾ ಪ್ರೀತಿಯಿಂ ದಲೂ ನಮ್ರಭಾವದಿಂದಲೂ ಬರಲೋ?

೨ನೇ ಭಾಗ.

ಸಭೆಯಲ್ಲಿದ್ದ ಇಡುರುಗಳ ದಂಡ. ಸ. ೫. ೬.

ಸ. ೫.

೧) ಅಗಮ್ಯಾಗಮನವನ್ನು ಸಹಿಸಿದ್ದಕ್ಕೆ ವಾಗ್ದಂಡ. ವ. ೧—೮.

ಅ) ಅಗಮ್ಯಾಗಾಮಿಯು. ವ. ೧. ೨.

ವ. ೧. ಅಪೊಸ್ತಲನು ಹೇಳುವದೇನಂದರೆ: ನಿಮಗೆ ಕಠಿಣ ಮಾತುಗಳನ್ನು ಹೇಳುವದು ನನಗೆ ಕಠಕಠೆ; ಆದರೂ ಹೇಳದಿರಲಾಗುವದಿಲ್ಲಾ. ಪರಜನರು ಸಹಾ ಅಸಹ್ಯಿಸುವಂಥಾ ವ್ಯಭಿಚಾರವು ನಿಮಮ್ಲಿ ನಡದದೆ ಯೆಂಬ ವರ್ತಮಾನ ಬಂದದೆ. ವೊಬ್ಬನು ಸವತಿತಾಯಿಯ ಸಂಗಡ ಅನ್ಯಾಯವಾದ ಸಂಗದಲ್ಲಿ ಬದುಕು ತ್ತಾನೆಂತ, ಸುದ್ದಿ ಬಂದದೆ. ೨. ಮತ್ತು ಇಂಥಾದ್ದು ನಡಿಯುತ್ತಿರುವಾಗ್ಯೆ, ನೀವು ಅದನ್ನು ಲಕ್ಷೆ ಮಾ ಡದೆ, ನಿಮಮ ಸಭೆಯ ಸ್ಥಿತಿಯಲ್ಲಿ ಹೆಚ್ಚಳ ಪಡುತ್ತೀರಂತೆ! ನೀವು ಇಂಥಾ ಇಡಿರಿನ ದೆಶೆಯಿಂದ ನ್ಯಾಯ ಪ್ರಕಾರ ದುಖ್ಖಪಟ್ಟು, ಆ ಮಹಾ ಪಾತಕಿಯನ್ನು ಹೊರಗೆ ಹಾಕ ಬೇಕಾಗಿತ್ತಲ್ಲವೋ?

ಇ) ಅವನ ದಂಡ. ಅವನನ್ನು ಹೊರಗೆ ಹಾಕ ಬೇಕು. ವ. ೩—೫.

ವ. ೩. ಹತ್ತರ ಇರುವವರಾದ ನೀವು ಯೇನೊಂದೂ ಮಾಡದಿರಲಾಗಿ, ಶರೀರದ ಪ್ರಕಾರ ದೂರದಲ್ಲಿ ದ್ದರೂ, ಆತ್ಮದ ಪ್ರಕಾರ ನಿಮಮ ಸಂಗಡಲಿದ್ದವನಾಗಿ, ನಿಷ್ಕರ್ಷೆ ಮಾಡಿದ್ದೇನೆ. ೪. ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಇದನ್ನು ಮಾಡ ಬೇಕು: ಸಮಾಗಮವನ್ನು ಕರಿಸಿರಿ. ನಾನು ನಂನ ಆತ್ಮದಿಂದ ನಿಮಮ ಮಧ್ಯದಲ್ಲಿರುವೆನು. ನಂಮ ಕರ್ತನಾದ ಯೇಸು ಕ್ರಿಸ್ತನು ನಮಗೆ ಕೊಟ್ಟ ಅಧಿಕಾರದಿಂದ, ೫. ದೇ ವರ ಮಂದಿರವಾಗಿರುವ ಸಭೆಯೊಳಗಿಂದ ಅವನನ್ನು ಹೊರಗೆ ಹಾಕಿ, ಮಾನಸಾಂತರಕ್ಕೂ ರಕ್ಷಣೆಗೂ ಅನು ಕೂಲವಾಗ ಬಹುದಾದ, ವೇದನೆಯುಳ್ಳ ಶರೀರದಂಡಕ್ಕೋಸ್ಕರ ಸೈತಾನನಿಗೆ ವೊಪ್ಪಿಸಿ ಕೊಡ ತಕ್ಕದ್ದು.

೧ ಕೊರಿ. ೫, ೬—೧೩. ಸೆ. ೬.

ಅ) ಸಭೆಯನ್ನು ಪೂರ್ಣವಾಗಿ ನಿರ್ಮಲ ಮಾಡ ಬೇಕೆಂಬ ಬುದ್ಧಿಯ ಮಾತು. ವ. ೬—೮.

ವ. ೬. ಇಂಥಾ ದೊಡ್ಡ ಯೆಡತಡೆ ಬಿದ್ದ ಸಮಯದಲ್ಲಿ, ನೀವು ಇಷ್ಟು ಅಲಕ್ಷ್ಯಗಾರರಾಗಿ ಇದ್ದದ್ದು ಸ್ವಸಂತುಷ್ಟತ್ವಕ್ಕೂ ಸ್ವಸ್ತುತಿಗೂ ನಿಮಗೆ ಕಾರಣವಿಲ್ಲವೆಂಬದಕ್ಕೆ ಸಾಕ್ಷಿ. ಸ್ವಲ್ಪ ಹುಳಿ ಮುದ್ದೆಯ ನ್ನೆಲ್ಲಾ ಹುಳಿ ಮಾಡುವ ಹಾಗೆ, ಸುಮ್ಮನಿರಗೊಡಿಸುವ ಒಂದೊಂದು ಸಣ್ಣ ಪಾಪವು ಸಹಾ ಸಭೆಯನ್ನೆಲ್ಲಾ ಅಶುದ್ಧ ಮಾಡಿ, ಕೆಡಿಸುತ್ತದೆಂದು, ನೀವು ಅರಿಯರಾ? ೭. ಆದ್ದರಿಂದ ನೀವು ಪೂರ್ಣ ಶುದ್ಧವಾದ ಸಭೆ ಯಾಗುವ ಹಾಗೆ, ಹಳ್ಳೇಪರಜನತ್ವದಿಂದಲೂ ಹಳ್ಳೇಮನುಷ್ಯನಿಂದಲೂ ನಿಮ್ಮನ್ನು ಹತ್ತಿಕೊಂಡಿರುವದನ್ನೆಲ್ಲಾ ದೂರ ಮಾಡಿರಿ. ನಿಮ್ಮ ಸಂವರ್ತನದಿಂದಲೆ ಪಾಪದ ಹಳ್ಳೇಹುಳಿಯು ತೆಗದು ಹಾಕಲಾಯಿತು. ಇದಲ್ಲದೆ ಕ್ರಿಸ್ತನೆಂಬ ಸತ್ಯ ಪಸ್ಕ ಕುರಿಯು ನಮಗೋಸ್ಕರ ಕಡಿದದೆ. ೮. ಹಾಗಾದರೆ ನಿಜವಾದ ಆತ್ಮಿಕ ಪಸ್ಕ ಹಬ್ಬ ವನ್ನು ನಾವು ಆಚರಿಸುವಾ! ಯೆಹೂದರು ತಮ್ಮ ಮನೆಗಳಿಂದ ಎಲ್ಲಾ ಹುಳಿಯನ್ನು ಈ ಹಬ್ಬದ ದೆಶೆಯಿಂದ ಹೊರಗೆ ಬಿಸಾಡ ಬೇಕಾಯಿತು ೨ ಮೋಶೆ: ೧೩, ೭. ಹಾಗೆಯೆ ಯೆಹೂದತ್ವದಿಂದಲೂ ಪರಜನತ್ವದಿಂ ದಲೂ ನಿಮಗೆ ಹತ್ತಿರುವ ಕೆಟ್ಟ ಹಳ್ಳೆ ಅಭ್ಯಾಸಗಳನ್ನೂ, ಬಹಿರಂಗದಲ್ಲಿಯೂ ಅಂತರಂಗದಲ್ಲಿಯೂ ತೋರಿ ಬರುವ ಪಾಪದ ತಿರಿಗಿ ತಿರಿಗಿ ಚಿಗುರುವ ಸಮಸ್ತ ಕೆಟ್ಟತನವನ್ನೂ ಬಿಸಾಡಿರಿ, ನಿಷ್ಕಪಟ ಸತ್ಯಗಳ ಶುದ್ಧ ಭಾವವನ್ನು ಧರಿಸಿರಿ.

ಆ) ದುರ್ವ್ಯಸನಿಗಳ ಸಂಗಡ ಸಂಸರ್ಗ ಬೇಡೆಂಬ ಬೆದರಿಕೆ. ವ. ೯—೧೩.

ವ. ೯. ನಾನು ಮುಂಚಿನ ಕಾಗದದಲ್ಲಿ ಬರದ ಒಂದು ಸಂಗತಿಯನ್ನು ನೀವು ಸಮವಾಗಿ ತಿಳಿಯಲಿಲ್ಲಾ. ನೀವು ಜಾರರ ಸಂಗಡ ಸಂಸರ್ಗದಲ್ಲಿ ಇರ ಬಾರದೆಂಬದಾಗಿ ನಾನು ಬರದಿದ್ದೆನು. ೧೦. ನನ್ನ ಅಭಿಪ್ರಾಯ ವನ್ನು ಗ್ರಹಿಸದೆ ಆ ಪ್ರಕಾರ ಮಾಡ ಕೂಡದೆಂದು ನೀವು ಹೇಳ್ಳುತ್ತೀರಿ. ಆದರೆ ಜಾರತ್ವ, ಲೋಭ, ಕೊಳ್ಳೆ, ವಿಗ್ರಹಾರಾಧನೆ ಮುಂತಾದ ದುಷ್ಕರ್ಮಗಳಲ್ಲಿ ಬದುಕುವ ಪರಜನರ ಸಂಗಡ ನಿಮಗೆ ಸಹವಾಸ ಇರ ಬಾರ ದೆಂದು, ನಾನು ಹೇಳ್ಳಲಿಲ್ಲಾ: ಇಲ್ಲದಿದ್ದರೆ, ಇಂಥಾ ಜನರು ಎಲ್ಲಾ ಕಡೆಯಲ್ಲಿಯೂ ಇರುವದರಿಂದ, ಲೋಕ ವನ್ನೆ ಬಿಟ್ಟು, ಎಲ್ಲಾ ಹೊಕ್ಕುಬಳಿಕೆಯನ್ನು ವರ್ಜಿಸಿ ಬಿಡ ಬೇಕಾದೀತು. ೧೨. ಸಭೆಯ ಸಂಸರ್ಗದಲ್ಲಿ ಇರದ ಜನರ ಮೇಲೆ ನಮಗೆ ತೀರ್ಪು ಮಾಡ ಕೆಲಸವಿಲ್ಲಾ. ಸಭೆಯಲ್ಲಿಯೆ ಇರುವವರ ವಿಷಯದಲ್ಲಿ ಮಾ ತ್ರ ಸಭಾದಂಡವೂ ಸ್ನೇಹಭಾವದ ವಾಗ್ದಂಡವೂ ನ್ಯಾಯವಾಗಿರುತ್ತದೆ. ೧೩. ಅವಿಶ್ವಾಸಿಗಳನ್ನು ದೇವರೆ ವಿಚಾರಿಸುವನು. ಸಭೆ ಶುದ್ಧವಾಗಿರ ಬೇಕೆಂದು, ನೀವು ಕೆಟ್ಟವರನ್ನು ನಿಮ್ಮೊಳಗಿಂದ ಹೊರಗೆ ಹಾಕಿದರೆ ಸಾಕು.

ಸೆ. ೬.

ವಾಗ್ದಂಡ ಮುಂದೆ ನಡಿಯುತ್ತದೆ.

ಒಳಗಿರುವವರನ್ನು ವಿಚಾರಿಸುವ ಸಂಗತಿಯನ್ನು ಹೇಳುತ್ತಿರುವಾಗ್ಯೆ, ಅಪೊಸ್ತಲನಿಗೆ ಕೊರಿಂಥರಲ್ಲಿದ್ದ ಮತ್ತೊಂದು ದೋಷವು ನೆನಪಾಗುತ್ತದೆ. ಅವರು ಕರ್ತನು ವಿಧಿಸಿದ ವಿಚಾರಣೆಯೆಂನು ನಡಿಸದೆ, ಪರ ಜನರನ್ನೂ ಕ್ರೈಸ್ತರನ್ನೂ ವಿಭೇದಿಸದೆ, ಆ ಕೆಲಸವು ಅಸಾಧ್ಯವೆಂದು ಶಿಕ್ಕಿದ ನೆವನವಂನು ಹೇಳಿದರು.

೪೨*

(ವ. ೧೦.) ಈ ಪ್ರಕಾರ ಸಭಾದಂಡವನು ನಡಿಸದಿರುವದರಿಂದ, ಪರಜನರ ದುರ್ವ್ಯಸನಗಳೂ, ಮುಖ್ಯವಾಗಿ ಗ್ರೀಕರ ಮುಖ್ಯ ದುರ್ಗುಣವಾಗಿದ್ದ ವ್ಯವಹಾರ ಪ್ರೀತಿಯೂ, ಮುಖ್ಯವಾಗಿ ಕೊರಿಂಥದಲ್ಲಿ ಪ್ರಬಲವಾಗಿದ್ದ ಲಂಪಟತನವೂ ಅವರಲ್ಲಿ ವಿಪರೀತವಾದವು.

೧) ತರ್ಕ ವ್ಯವಹಾರಗಳ ದಂಡ. ೬, ೧—೮.

ಅ) ನೀವು ಪರಜನರ ನ್ಯಾಯಸ್ಥಾನಗಳಲ್ಲಿ ವ್ಯವಹಾರ ನಡಿಸುವದು ಸಮವಲ್ಲ.

ವ. ೧. ದೇವರ ನ್ಯಾಯಗಳನ್ನೂ ಅಪ್ಪಣೆಗಳನ್ನೂ ಪ್ರಕಟವಾಗಿ ವಿಚಾರುವವರಾಗಿ ಬದುಕುವ ಪರಜನರಿಂದ ನಿಮ್ಮ ವ್ಯವಹಾರಗಳನ್ನು ತೀರ್ಪು ಮಾಡಿಸಿ ಕೊಳ್ಳುವದಕ್ಕೆ ನೀವು ಧೈರ್ಯಗೊಂಡಿರಿ? ನ್ಯಾಯ ಪ್ರಕಾರ ಪರಿಶುದ್ಧರಾಗಿರ ತಕ್ಕ ಕ್ರೈಸ್ತರಿಂದಲ್ಲದೆ, ಅನ್ಯಾಯಿಗಳಿಂದ ನ್ಯಾಯವನ್ನು ಹೊಂದಲಿಕ್ಕೆ ಧೈರ್ಯಗೆ ಹೋದಿರಿ? ೨. ಬರಹಗಳ ಮತ್ತು ಕ್ರಿಸ್ತನ ಸ್ಪಷ್ಟವಾದ ವಾಗ್ದತ್ತಗಳ ಪ್ರಕಾರ ಕ್ರಿಸ್ತನವರು ಆತನ ಸಂಗಡ ಲೋಕಕ್ಕೆ ನ್ಯಾಯ ವಿಚಾರಿಸುವರೆಂದು, ಅರಿಯರಾ? ದನಿ. ೭, ೧೪. ೨೨. ೨೭. ಮತ್ತಾ. ೧೯, ೧೪. ಲೂಕ. ೧೬, ೯. ಮತ್ತಾ. ೨೫, ೪೦. ೪೫. ೨ ತಿಮೊ. ೨, ೧೨. ಪ್ರಕ. ೨, ೨೬—೨೪. ೨೦, ೪. ಇದಲ್ಲದೆ ಅಲ್ಪಕಾರ್ಯಗಳನ್ನು ವಿಚಾರಿಸುವದಕ್ಕೆ ನೀವು ಸಾಕಾದವರಲ್ಲವೇನು? ೩. ಪಾಪದಲ್ಲಿ ಬಿದ್ದ ದೂತರಂನು ಸಹಾ ನಾವು ಕ್ರಿಸ್ತನೊಡನೆ ವಿಚಾರಿಸ ತಕ್ಕವರಾಗಿದ್ದ ಮೇಲೆ, ಈ ಕಾಲವಶವಾಗಿರುವ ಸಂಗತಿಗಳನ್ನು ವಿಚಾರಿಸ ತಕ್ಕರಲ್ಲವೋ? ೪. ಅದನ್ನು ಬಿಟ್ಟು, ನೀವು ಸಭೆಗೆ ಯೇನೂ ವಿಶೇಷವಾಗಿರದ ಪರಜನರನ್ನು ನನ್ನದು ನಿನ್ನದು ಯೆಂಬದರ ವಿಷಯವಾದ ವ್ಯಾಜ್ಯಗಳಲ್ಲಿ ನ್ಯಾಯಾಧಿಪತಿಗಳಾಗಿ ತಕ್ಕೊಳ್ಳುತ್ತೀರಿ. ೫. ಅದು ನಿಮಗೆ ಬಹಳ ನಾಚಿಕೆಯ ಕೆಲಸ. ಸಹೋದರರೊಳಗಿರುವ ವ್ಯಾಜ್ಯಗಳಂನು ವಿಚಾರಿಸಿ, ಸಮಾಧಾನದಲ್ಲಿ ತೀರಿಸುವದಕ್ಕೆ ಬೇಕಾಗುವ ಬುದ್ಧಿಯು ನಿಮ್ಮಲ್ಲಿ ಯಾರಿಗೂ ಇಲ್ಲವೆಂದು, ನೀವೇ ವೊಪ್ಪಿದ ಹಾಗಾಯಿತು. ೬. ಇದೇನು? ಸಹೋದರನು ಸಹೋದರನ ಸಂಗಡ ವ್ಯಾಜ್ಯ ಮಾಡಿ, ಪರಜನರ ನ್ಯಾಯಸ್ಥಾನಕ್ಕೆ ಹೋಗುತ್ತೀರಲ್ಲಾ!

ಇ) ನೀವು ವ್ಯಾಜ್ಯ ಮಾಡುವದೆ ಸಮವಲ್ಲ.

ವ. ೭. ವ್ಯಾಜ್ಯ ಮಾಡುವದೆ ಸಮವಲ್ಲ. ನೀವು ಅನ್ಯಾಯವನ್ನು ತಾಳಿಕೊಂಡು ನಷ್ಟ ಪಟ್ಟಿರೆ ವಾಶಿ. ೮. ಅದನ್ನು ಬಿಟ್ಟು, ನೀವೇ ಅನ್ಯಾಯ ಮಾಡುತ್ತೀರಿ. ಮತ್ತೊಬ್ಬರಿಗೆ, ವಿಶೇಷವಾಗಿ ನೀವು ಪ್ರೀತಿ ಮಾಡುವ ಹಂಗಿನಲ್ಲಿರುವ ಸಹೋದರರಿಗೆ ನಷ್ಟ ಮಾಡುತ್ತೀರಿ. ೯. ದೇವರ ಮಕ್ಕಳಿಗೆಂದು ದೇವರು ನಿಮಗೆ ನಿಶ್ಚೈಸಿದ ದೇವರ ರಾಜ್ಯಕ್ಕೆ ಇಂಥಾ ಅನ್ಯಾಯದಿಂದ ನೀವು ಹೊರಗಾಗುತ್ತೀರಲ್ಲವೋ?

೨) ಬೇರೆ ದುರಾಚಾರಗಳು. ವ. ೯—೧೧.

ಮುಂಚಿನ ದುರಾಚಾರಗಳು ವಿಶೇಷವಲ್ಲವೆಂಬ ಹಾಗೆ ಮಾಡುತ್ತೀರಿ. ಆದರೆ ಅಂಥಾ ಜನರ ನೋಡಿ, ನೀವು ವೋಸ ಹೋಗಿ, ಶಾಪಭಯವುಳ್ಳ ಉದಾಸೀನತ್ವದಲ್ಲಿ ಬೀಳಬೇಡಿರಿ. ಕೊರಿಂಥದಲ್ಲಿ ಪ್ರಬಲವಾಗಿದ್ದಂಥಾ, ಮುಖ್ಯವಾಗಿ ವಿಗ್ರಹಾರಾಧನೆಗೆ ಸಂಬಂಧವಾದಂಥಾ ಮಾಂಸದ ಪಾಪಗಳೂ, ಮದಿವೆಯಾಗದವರೂ ಮದಿವೆಯಾದವರೂ ಸ್ವಂತ ಲಿಂಗದವರ ಸಂಗಡ ಸ್ವಭಾವಕ್ಕೆ ವಿರೋಧವಾದ ಲಂಪ

೧ ಕೊರಿ. ೬, ೯—೧೧.

ಟತನದಿಂದ ನಡಿಸುವ ಯೆಲ್ಲಾ ಅಸಹ್ಯಗಳೂ, ೧೦. ಯೆಲ್ಲಾ ಲೋಭದ ಜಾತಿಗಳೂ, ಮೋಸ ಬಲಾತ್ಕಾರಗಳಿಂದ ಪರರ ಮೊಡವೆಯನ್ನು ಅನ್ಯಾಯವಾಗಿ ಅಪಹಾರ ಮಾಡುವದೂ, ಮದದಿಂದ ತಿನ್ನುತ್ತಾ ಕುಡಿಯುತ್ತಾ ಇರುವದೂ, ಅದಕ್ಕೆ ತಾಗಿ ಬರುವ ಜಗಳಗಳೂ ಬೈಗಳೂ—ಇವೆಲ್ಲಾ ಮೊಬ್ಬನಂನು ದೇವರ ರಾಜ್ಯಕ್ಕೆ ಅಪಾತ್ರ ಮಾಡುತ್ತವೆ. ೧೧. ನೀವು ಈ ಪಾಪಗಳಲ್ಲಿ ಮುಂಚೆ ಶಿಕ್ಕಿಕೊಂಡದ್ದೆ ದುಃಖಕರವಾದದ್ದು. ಆದರೆ ಸಮಸ್ತ ಜಾರತ್ವದ ಕೆಟ್ಟತನಗಳೊಳಗಿಂದ ನೀವು ಶುದ್ಧರಾದಿರಿ, ವಿಗ್ರಹಾರಾಧಕರಾಗಿ ಇದ್ದವರು ದೇವರಿಗೆ ಅರ್ಪಿತರೂ, ಯೇಸುವಿನ ವಿಶ್ವಾಸಸಂಬಂಧದಿಂದಲೂ ನಮ್ಮ ದೇವರ ಆತ್ಮದಿಂದಲೂ ನ್ಯಾಯವಂನು ಪ್ರೀತಿ ಮಾಡಿ ಬಳಸುವ ಜನರೂ ಆದಿರಿ. ಆದ್ದರಿಂದ ಅಂಥಾ ಮೊಂದೇ ಮೊಂದು ಪಾಪದಿಂದ ಮುಂಚಿನ ದುರವಸ್ಥೆಯಲ್ಲಿ ಬಿದ್ದೀರಲ್ಲವೇ!

೯. ಯೇನು! ಅನ್ಯಾಯಸ್ಥರು ೧) ದೇವರ ರಾಜ್ಯವಂನು ಬಾಧ್ಯವಾಗಿ ಹೊಂದುವದಿಲ್ಲವೆಂದು ಅರಿಯರಾ? ಮೋಸ ಹೊಗ ಬೇಡಿರಿ ೨); ಜಾರರಾದರೂ ೩), ವಿಗ್ರಹಾರಾಧಕರಾದರೂ, ವ್ಯಭಿಚಾರಿಗಳಾದರೂ, ಪುರುಷ ಸಂಗಮ ಪಡುವವರಾದರೂ ಮಾಡುವವರಾದರೂ, ೧೦. ಕಳ್ಳರಾದರೂ ೪), ಲಾಭಿಗಳಾದರೂ, ಮದ್ಯಪಾನಿಗಳಾದರೂ, ಬೈಯ್ಯುವವರಾದರೂ, ಕೊಳ್ಳೆಗಾರರಾದರೂ, ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದರು. ೧೧. ಮಚ್ಚು ಕೆಲವರು ಇಂಥವರಾಗಿದ್ದಿರಿ; ಆದರೆ ತೊಳೆಯಲ್ಪಟ್ಟಿದ್ದಿರಿ ೫); ಆದರೆ ಪರಿಶುದ್ಧ ಮಾಡಲ್ಪಟ್ಟಿದ್ದಿರಿ; ಆದರೆ ನೀತಿನಿರ್ಣಯ ಪಟ್ಟಿದ್ದಿರಿ; ಕರ್ತನಾದ ಯೇಸುವಿನ ನಾಮದಿಂದಲೂ ೬) ನಮ್ಮ ದೇವರ ಆತ್ಮದಿಂದಲೂ ತಾನೆ.

೧. ಇಷ್ಟುವರೆಗೆ ಗದರಿಸಿದ ಅನೀತಿಯ ಮುಖ್ಯ ದೋಷವೇನಂದರೆ: ಅದು ನಿಮಗೆ ದೇವರ ಮಕ್ಕಳಿಗೆಂದು ನ್ಯಾಯಪ್ರಕಾರ ಶಿಕ್ಷತಕ್ಕದ್ದಾಗಿರುವ ದೇವರ ರಾಜ್ಯದಾಳಗಿಂದ ನಿಮ್ಮನ್ನು ಪೂರಾಗಿ ಪೂರಾಕುತ್ತದೆ.

೨. ಪರಜನರಲ್ಲಿ ಪ್ರಬಲವಾದ ಲಘುಬುದ್ಧಿಯಿಂದಲೂ, ನಿಯಮವನ್ನು ಅಧಿಕವಾಗಿ ಅಲಕ್ಷ್ಯ ಮಾಡುವ ಕ್ರೈಸ್ತರ ನಡವಡಿಕೆಯಿಂದಲೂ ಮೋಸಪೂರಾಗಿ ಬೇಡಿರೆಂತಾ, ಹೇಳುತ್ತೇನೆ.

೩. ಜಾರತ್ವವೂ ಸೂಳೆಗಾರಿಕೆತನವೂ ಪರಜನರಿಗೆ ಪಾಪವೆಂದು ತಾತ್ಪರಲಿಲ್ಲಾ. ಅದು ವಿಗ್ರಹಪೂರಾರಾಧನೆಗೆ ಬಹುವಿಧದಿಂದ ಸಂಬಂಧವಾಗಿತ್ತು; ಹೀಗಿರುವದರಿಂದ ವಿಗ್ರಹಪೂರಾರಾಧನೆಯ ಮಾತು ಅನಂತರದಲ್ಲಿಯೇ ಬರುತ್ತದೆ. ಇಲ್ಲಿ ಅಂತರದ ಮೇಲೆ ಅಂತರವಾಗಿ ಹೇಳಿರುವ ಜಾರತ್ವದ ವಿಧಗಳು ಯಾವವೆಂದರೆ: ವಿವಾಹವಿಲ್ಲದ ಸ್ತ್ರೀಪುರುಷಸಂಗಮ, ವ್ಯಭಿಚಾರ, ಸ್ವಲಿಂಗದವರ ಸಂಗಡ ಅಸ್ವಾಭಾವಿಕವಾದ ಕಾಮಾತುರತ್ವದಿಂದ ಮೈಥುನ ಮಾಡುವದು. ಈ ಕಡೇ ದುರಾಚಾರವು ಪೂರ್ವಕಾಲದ ಪರಜನರಲ್ಲಿ ಬಹಳ ವಾಡಿಕೆಯಾಗಿದ್ದು, ಗ್ರೇಕಪ್ರೀತಿ ಯೆಂಬ ಹೆಸರು ಪಡಕಾಂಡಿತು.

೪. ಪರರ ವಾಡವೆಗಳಂನು ಬಯಸಿ, ತಂತ್ರದಿಂದಲೂ ವಾತ್ಚಾಯದಿಂದಲೂ ಅಪಹರಿಸಿ, ತುಂಟ ವಿಷಯಭೋಗದಿಂದಲೂ, ಕುಡಿಗಾರಿಕೆಯಿಂದಲೂ, ಅದರ ಸಂಗಡ ಬರುವ ವ್ಯಪಹಾರ ಚಂಡಾಟಗಳಿಂದಲೂ ಅಪಯೋಗಿಸುವಂಥಾ, ಲಾಭ ಕೂಡಿದ ಅನೀತಿಯ ನಾನಾವಿಧಗಳು ಇದರಲ್ಲಿ ಶೇರುತ್ತವೆ.

೧ ಕೌರಿ. ೬, ೧೨—೧೪.

೫. ತಾಳೆಯಲ್ಪಟ್ಟಿದ್ದೀರಿ ಯೆಂಬ ಮಾತು, ಮುಖ್ಯವಾಗಿ ಜಾರತ್ವದ ಅಶುದ್ಧತ್ವದ ವಿಷಯದಲ್ಲಿ ಪೌಳಿಯದೆ. ಪರಿಶುದ್ಧ ಮಾಡಲ್ಪಟ್ಟಿದ್ದೀರಿ ಅಂದರೆ, ಮೊವಲಿನ ವಿಗ್ರಹಾರಾಧನೆಯಿಂದ ಬಿಡುಗಡೆಯಾಗಿ, ದೇವರಿಗೆ ಅರ್ಪಿತರಾದಿರಿ. ನೀತಿನಿರ್ಣಯ ಪಟ್ಟಿರುವದು, ಅಂದರೆ, ನೆರೆಯವರ ಕಡೆಗೆ ಸಮಾಧಾನದಲ್ಲಿದ್ದು ನ್ಯಾಯವನ್ನು ಪ್ರೀತಿ ಮಾಪಿ ಬಳಸುವದು.

೬. ಯೇಸುವಿನ ಸಂಗಡ ಇರುವ ವಿಶ್ವಾಸಬಂಧದಿಂದಲೂ ಆತನ ಮಗನ ಸಂಬಂಧದಿಂದ ಮಾತ್ರವೇ ನಮ್ಮ ದೇವರೆಂದು ತಿಳಕಾಳ್ಳುವ ದೇವರ ಆತ್ಮದಿಂದಲೂ ಯೆಂಬ ಅರ್ಥ. ಮೇಲೆ ಪೌಳಿದ ಯಾವ ಪಾಪದಿಂದಲಾದರೂ ಮನುಷ್ಯನು ದೇವರಿಗೆ ಚೇದವಾಗಿ ಮುಂಚಿನ ಕೆಟ್ಟ ದುರವಸ್ಥೆಯಲ್ಲಿ ಪಿರಿಗಿ ಬೀಳದಿರನು. ಪಾಪಾಗಾದ ಮೇಲೆ, ಕ್ರೈಸ್ತರು ಪಾಪಾಗೆ ಅಂಥಾ ಕ್ರಿಯೆಗಳಿಗೆ ವಾಪ್ಪಿಕಾಳ್ಳ ಬಹುದು?

೪) ಜಾರತ್ವದ ವಿಷಯದಲ್ಲಿ ತೀವ್ರವಾದ ಬೆದರಿಕೆ. ವ. ೧೨—೨೦.

ಕೆಳಗೆ ಬರುವ ಸಂಧಿಗಳಲ್ಲಿ, ಮುಖ್ಯವಾಗಿ ಸ. ೪ರಿಂದ ೧೦ರ ವರೆಗೆ, ಅಪೊಸ್ತಲನು ಅನಿಶ್ಚಯವಾದ ಕಾರ್ಯಗಳಲ್ಲಿ ಕ್ರೈಸ್ತ ಸ್ವತಂತ್ರವನು ಹ್ಯಾಗೆ ಸಮವಾಗಿ ಪ್ರಯೋಗಿಸಬೇಕೆಂದು ವಿವರಿಸುತ್ತಾನೆ. ಆದಕೆ ಮುಂಚೆ ಅವನು, ಕೊರಿಂಥದ ವೋಸಗಾರರು ಅನುಜ್ಞೆ ಇಲ್ಲದಿದ್ದರೂ, ಕ್ರೈಸ್ತ ಸ್ವತಂತ್ರದ ನೆವನ ಮಾಡಿಕೊಂಡು, ಚಿಂತೆ ಇಲ್ಲವೆಂದು ಹೇಳಿದ ಸಂಗತಿಗಳ ವಿಷಯದಲ್ಲಿ ಪ್ರಸ್ತಾವ ಮಾಡುತ್ತಾನೆ. ಪರಜನರ ನ್ಯಾಯಸ್ಥಾನಗಳ ಮುಂದೆ ವ್ಯವಹಾರ ನಡಿಸುವ ೫, ೧. ೬, ೧. ಮಹಾ ಅನ್ಯಾಯವನು ಹ್ಯಾಗೆ ಸಹಿಸಿದಕೋ, ಹಾಗೆಯೆ ಅಲ್ಲಿಯವರು ಕೆಲವರು, ಪೌಲನು ಕ್ರೈಸ್ತನಿಗೆ ಯೆಲ್ಲಾದಕ್ಕೆ ಅಪ್ಪಣೆ ಉಂಟು ಯೆಂದು ಹೇಳಿದ ಮಾತನ್ನು ಡೊಂಕು ಮಾಡಿ, ಜಾರತ್ವದಲ್ಲಿಯೂ ಸತ್ಯಕ್ರೈಸ್ತನಿಗೆ ದೋಷವಿಲ್ಲವೆಂದು ಹೇಳ ತೊಡಗಿದರೆಂದು ತೋರುತ್ತದೆ. ಅದೇಪ್ರಕಾರ ಕೆಲವು ಕ್ರೈಸ್ತಮತದವರು ಮಾಂಸವನ್ನು ಅತಿರೇಕ ಭೋಗದಿಂದ ಕೊಲ್ಲಬೇಕೆಂದು ಬೋಧಿಸಿದರು, ಯೇಸುವಿತರು, ಮನುಷ್ಯನು ಮನಸ್ಸಿಗೆ ಕಂಡ ಹಾಗೆ ಶರೀರವನ್ನು ಪ್ರಯೋಗಿಸ ಬಹುದೆಂದು, ದುರ್ಬೋಧನೆ ಕೊಟ್ಟರು. ಅಂಥಾದ್ದಕ್ಕೆ ಪ್ರತಿಯಾಗಿ ಪೌಲನು ಕೆಳಗೆ ಬರುವದನ್ನು ವಿವರಿಸುತ್ತಾನೆ.

ಅ) ಸಾಮಾನ್ಯವಾದ ಸೂತ್ರಗಳು.

೧೨. ಯೆಲ್ಲಕೂ ನನಗೆ ಅಧಿಕಾರ ೧) ಉಂಟು; ಆದರೆ ಯೆಲ್ಲಾ ಪ್ರಯೋಜನವಾಗುವದಿಲ್ಲ. ಯೆಲ್ಲಕೂ ನನಗೆ ಅಧಿಕಾರ ಉಂಟು; ಆದರೆ ನಾನು ವಾಂದಕಾದರೂ ಅಧೀನವಾಗೆನು. ೧೩. ಆಹಾರಗಳು ಹಾಟ್ಟೆಗೆ ೨); ಹಾಟ್ಟೆಯೂ ಆಹಾರಗಳಿಗೆ. ಆದರೆ ದ್ಯೇವರು ಅದನ್ನೂ ಅವುಗಳನ್ನೂ ೩) ಲಯ ಮಾಡುವನು. ಮತ್ತು ಶರೀರವು ಜಾರಶಕಲ ೪), ಕರ್ತನಿಗೆ; ಮತ್ತು ಕರ್ತನು ಶರೀರಕೆ. ೧೪. ಇದಲ್ಲದೆ ದ್ಯೇವರು ಕರ್ತನಂನು ಯೆಬ್ಬಿಸಿದನು ೫); ನಂಮಂನು ಸಹ ತನ ಬಲದಿಂದ ಯೆಬ್ಬಿಸುವನು.

೧೨. ಯಾವ ಕಾರ್ಯವು ಅನ್ಯಾಯವಲ್ಲವಾ ಆ ವಿಷಯದಲ್ಲಿ ಅದನ್ನು ತಾನು ಮಾಡಬಹುದೆಂದು, ಕ್ರೈಸ್ತನು ನೆನಸ ಬಹುದು. ಇದು ಸ. ೧೦, ೨೩. ಪುನರಪಿ ಪೌಳಿದ ಮಧ್ಯಮ ಸಂಗತಿಗಳ ವಿಷಯ

ವಾದ ಸೂತ್ರವಾಗಿರುತ್ತದೆ. ಇದನ್ನು ಕಾರಿಂಥದ ಮೋಸಗಾರರು ತಮಗೆ ಆಯ ಮಾಡಿ ಕಾಂಡರೆಂದು, ತಾತ್ಪರ್ಯವಾಗಿರುತ್ತದೆ.

೨. ಇದರಲ್ಲಿ ಯೆರಡು ನಿಬಂಧನೆಗಳುಂಟು. ಮೊದಲಾಗಿ ನೆರೆಯವನಿಗೆ ಶುಚವಾಗ ಬೇಕೆಂದು ನಾಡತಕ್ಕದ್ದು. ಯೆರಡನೇದು ಯೇನಂದರೆ, ಪ್ರತಿಷೇಧಿಸದ ಪಾತ್ರಾಗಳಿಗೆ ದಾಸನಾಗಿ ಅವುಗಳನ್ನು ಬಿಡ ಕೂಡದ ಪಾತ್ರಾಗೆ ಅವುಗಳಲ್ಲಿ ನಿಮಗ್ನನಾಗಿ ಪಾತ್ರಾಗದ ಪಾತ್ರಾಗೆ ನಾತಿಕಾಳ್ಳ ಬೇಕು.

೩. ಕ್ರೈಸ್ತನಿಗೆ ಸ್ವತಂತ್ರವಿರುವ ಸಂಗತಿಯಾಂದು ಇಲ್ಲಿ ಪೇಳಿಯದೆ. ಆಪಾತ್ರಾರವು ಪಾತ್ರಾಟ್ಟೆಗಾತ್ಸ್ಕರ, ಪಾತ್ರಾಟ್ಟೆಯು ಆಪಾತ್ರಾರಕ್ಕಾತ್ಸ್ಕರ ನೇಮಿಸಿ ಅದೆ. ಪೀಗಿರಲಾಗಿ ಆಪಾತ್ರಾರದಲ್ಲಿ ಸ್ವಭಾವದಿಂದ ಗುಣವೂ ಅವಗುಣವೂ ಇಲ್ಲಾ; ಯಾಕೆಂದರೆ ಪಾತ್ರಾಟ್ಟೆಯೂ ಆಪಾತ್ರಾರವೂ ಯೆರಡೂ ನಾಶವಾಗಿ ಪಾತ್ರಾಗುವವು.

೪. ಪಗುರ ಮನಸ್ಸಿನ ಮೋಸಗಾರರು ಯೇನು ಪೇಳಿದರೆಂದು ತಾತ್ಪರ್ಯವಾಗುತ್ತದೆಂದರೆ: ಜಾರತ್ವವೂ ಅದೇ ಪ್ರಕಾರ; ನಾಶವಾಗುವ ಶರೀರದ ಅಂಗಗಳಿಂದ ಮಾತ್ರವೆ ಜಾರತ್ವವು ನಡಿಯುವ ಕಾರಣ, ಅದು ಅನ್ನ ಪಾನಗಳಿಗೆ ಯೆಣೆಯಾಗಿರುತ್ತದೆ. ಇದಕ್ಕೆ ಪೌಲನು ಕಾಡುವ ಉತ್ತರವೇನಂದರೆ: ಜಾರತ್ವವು ವಿಶೇಷವಾದ ಅಂಗಗಳನ್ನು ಮಾತ್ರವಲ್ಲಾ, ಪೂರ್ಣ ಶರೀರವನ್ನೆ ಅಶುದ್ಧ ಮಾಡುತ್ತದೆ. ಪಾತ್ರಾಗೆಂದರೆ ಮತ್ತೆ ವಿವರಿಸಿ ಇರುವ ಪ್ರಕಾರ, ಸ್ತ್ರೀಪುರುಷಸಂಗವು ಶರೀರದ ಪೂರ್ಣ ಸ್ವಭಾವವನ್ನೂ, ಶರೀರಪ್ರಾಣಭಾವವಾದ ಸಮಸ್ತ ಮನುಷ್ಯನನ್ನೆ ಮುಟ್ಟುತ್ತದೆ. ಆದರೆ ಮನುಷ್ಯರು ಪರಸ್ಪರ ಸಂಬಂಧದಲ್ಲಿ ಪೂರ್ಣವಾಗಿ ಕರ್ತನವರಾಗಿರ ಬೇಕು. (ಮತ್ತು ಆತನ ಚಿತ್ತದ ಪ್ರಕಾರವೆ ವಿವಾಹಸಂಬಂಧವು ಕ್ರಿಸ್ತನ ಸಂಸರ್ಗಕ್ಕೆ ಪ್ರತಿಬಿಂಬವಾಗಿರ ತಕ್ಕದ್ದು ಎಫೆ. ೫, ೨೨.)

೫. ಶರೀರವನು ಜಾರತ್ವದಿಂದ ಕೆಡಿಸ ಬಾರದೆಂಬದಕ್ಕೆ ಯೆರಡನೆ ಕಾರಣವೇನಂದರೆ: ಶರೀರದ ನಿಜ ಸ್ವಭಾವವೂ ಅದರ ಉತ್ತಮ ಅಂಶಗಳೂ ನಿತ್ಯ ಮಹಿಮೆಗೆ ನೇಮಕವಾಗಿವೆ. ಯೇಸು ಕ್ರಿಸ್ತನ ಉತ್ಥಾನದಿಂದ ಆ ವಿಷಯದಲ್ಲಿ ನಮಗೆ ಮುಂಗಡ ಶಿಕ್ಷಿರುತ್ತದೆ. ಸ. ೧೫. ನಾತಿಕಾ.

ಇ) ಜಾರತ್ವದ ದಂಡಪಾತ್ರತ್ವದ ವಿಷಯ ಹೆಚ್ಚಾದ ವಿವರ.

ಅಅ) ಅದು ಕರ್ತನಿಗೆ ವಿರೋಧವಾದ ಪಾಪ.

೧೫. ನಿಮ್ಮ ಶರೀರಗಳು ಕ್ರಿಸ್ತನ ಅಂಗಗಳಾಗಿವೆ ೧) ಯೆಂದು, ಅರಿಯರಾ? ಹೀಗಿರಲಾಗಿ, ಕ್ರಿಸ್ತನ ಅಂಗಗಳಂನು ತೆಗದು ಕಾಂಡು, ಚಾರೆಯ ಅಂಗಗಳಾಗ ಮಾಡಲ್ಯಾ? ಆಗದು. ೧೬. ಯೇನು! ಚಾರೆಯ ಸಂಗಡ ಕೂಡುವವನು ವಾಂದ್ಯೆ ಶರೀರವಾಗಿದ್ದಾನೆಂದು ೨), ಅರಿಯರಾ? ಯಾಕಂದರೆ ಅವರಿಬ್ಬರು ವಾಂದ್ಯೆ ಮಾಂಸವಾಗಿರುವರೆಂದು ಹೇಳುತ್ತಾನೆ. ೧೭. ಆದರೆ ಕರ್ತನ ಸಂಗಡ ಕೂಡುವವನು ವಾಂದ್ಯೆ ೩) ಆತ್ಮವಾಗಿದ್ದಾನೆ.

೧. ಕ್ರಿಸ್ತನು ತಲೆಯಾಗಿದ್ದು, ನಾವು ಅಂಗಗಳಾಗಿದ್ದೇವೆ. ಈ ಮಾತು ಆತ್ಮದ ವಿಷಯ ಮಾತ್ರವಲ್ಲಾ, ಶರೀರದ ವಿಷಯದಲ್ಲಿಯೂ ಖರೆ. ಪಾತ್ರಾಗೆಂದರೆ ನಾವು ಶರೀರ ಪ್ರಾಣಾತ್ಮಗಳ ಪ್ರಕಾರ ಕೇವಲ ಆತನ ಸ್ವಾಸ್ಥ್ಯವಾಗಿದ್ದೇವೆ.

೨. ಸ್ತ್ರೀಪುರುಷಸಂಗವು ಶಾರೀರಿಕವಾದದ್ದು ಮಾತ್ರವಲ್ಲಾ, ಆತ್ಮಿಕಶಾರೀರಿಕವಾದದ್ದು ಆಗಿದೆ. ತನ್ನನ್ನು ಪಾಪಕ್ಕೆ ವಾಪ್ಪಿಸಿ ಕಾಟ್ಟುವರ ಸಂಗಡ ಅನ್ಯಾಯವಾಗಿ ಈ ಸಂಬಂಧದಲ್ಲಿ ಶೇರಿದ ಮನುಷ್ಯನು ಕರ್ತನಿಂದ ಪೂರ್ಣವಾಗಿ ಬಿಡಿಸಿಕಾಂಡು, ಕೇವಲ

ಮಾಂಸಚಾವದವಳ ಸಂಗಡ ವಾಂದೇ ಮಾಂಸವಾಗುತ್ತಾನೆ.

೩. ಆದರೆ ಅದಕ್ಕೆ ಪ್ರತಿಯಾಗಿ ವಿಶ್ವಾಸದಿಂದ ಕ್ರಿಸ್ತನನ್ನು ಅಂಟಿಕಾಳ್ಳುವನು ಆತ್ಮದಲ್ಲಿಯೂ ಸತ್ಯದಲ್ಲಿಯೂ ಆತನ ಸಂಗಡ ಪೂರ್ಣ ಸಂಬಂಧದಲ್ಲಿ ಶೇರುತ್ತಾನೆ; ಈ ಸಂಬಂಧದಿಂದ ಶರೀರವೂ ಆತ್ಮಿಕವಾಗುತ್ತದೆ.

ಇಇ) ಅದರಿಂದ ಸ್ವಂತ ಶರೀರವು ಬಹಳ ಬಹಳ ಅವಮಾನ ಪಡುತ್ತದೆ.

೧೪. ಚಾರ್ತ್ಯ ಬಿಟ್ಟು ವಾಂಡಿ ಹಾಂಗಿರಿ. ಮನುಷ್ಯನು ಮಾಡುವ ಯೆಲ್ಲಾ ಪಾಪವು ಶರೀರಕ್ಕೆ ಹೊರಗಾಗಿದೆ; ಆದರೆ ಚಾರ್ತ್ಯ ಮಾಡುವನು ತನ೧) ಶರೀರಕ್ಕೆ ಪಾಪ ಮಾಡುತ್ತಾನೆ. ೧೯. ಯೇನು! ನಿಮ್ಮ ಶರೀರವು ದೇವರಿಂದುಂಟಾದ ನಿಮ್ಮೊಳಗಿರುವ ಪರಿಶುದ್ಧಾತ್ಮದ ಮಂದಿರವಾಗಿದೆ೨) ಯೆಂದೂ, ನೀವು ನಿಮ್ಮ ಸ್ವಂತವಾದವರಲ್ಲವೆಂದೂ, ಅರಿಯರಾ? ೨೦. ಯಾಕಂದರೆ ಬೆಲೆಯಿಂದ ಕೊಳ್ಳಲ್ಪಟ್ಟಿದ್ದೀರಿ೩); ಆದಕಾರಣ, ದೇವರಪುಗಳಾಗಿರುವ ನಿಮ್ಮ ಶರೀರದಿಂದಲೂ ನಿಮ್ಮ ಆತ್ಮದಿಂದಲೂ ದೇವರಂನು ಮಹಿಮೆ ಪಡಿಸಿರಿ.

೧. ಪೌಟ್ಟೆಬಾಕತನ, ಅಮಲು, ಭಯಂಕರವಾದ ಸ್ವಘಾತ ಮುಂತಾದ ಪಾಪಗಳು ಪೌರಗಿಂದ ಶರೀರದ ಮೇಲೆ ಬರುತ್ತದಲ್ಲದೆ, ಶರೀರವು ಅವುಗಳನ್ನು ಮಾಡುವದಿಲ್ಲಾ. ಅವು ಅನಿತ್ಯವಾಗಿರುವ ವಾಂದಾಂದು ಅಂಗಕ್ಕಲ್ಲದೆ ಪೂರ್ಣ ಶರೀರಕ್ಕೂ, ನಿತ್ಯತ್ವಕ್ಕೆ ನೇಮಿಸಿ ಇರುವ ಉತ್ತಮ ಅಂಶಗಳಿಗೂ ತಾಗುವದಿಲ್ಲಾ. ಇದಲ್ಲದೆ ಪರರ ಮೃಗಚಾವಚಾರಕ್ಕೂ, ಅತಿ ನೀಚವಾದ ದಾಸತ್ವಕ್ಕೂ ಮನುಷ್ಯನನ್ನು ಒಪ್ಪಿಸಿ ಬಿಡುವದಿಲ್ಲಾ.

೨. ಆದಾಗ್ಯೂ ಈ ಶರೀರಕ್ಕೆ ಮಹತ್ವ ಘನ ಉಂಟು. ಅದು ದೇವರಿಗೆ ಅರ್ಪಿತವಾಗಿದೆ ಯೆಂದು, ಪೇಳಿದರೆ ಸಾಲದು, ದೇವರು ಅದು ತನಗೆ ನಿತ್ಯ ಮಂದಿರವಾಗಿರ ಬೇಕೆಂದು, ನಿಶ್ಚೈಸಿದ್ದಾನೆ. ಸ. ೩, ೧೬ರಲ್ಲಿ ಸರ್ವ ಸಭೆಯ ವಿಷಯವಾಗಿ ಪೇಳಿದ ಮಾತು ಪ್ರತಿ ಸಭೆಯವನಿಗೂ ಅವನ ಶರೀರಕ್ಕೂ ವಾಪ್ತುವದಾಗಿ ತಿಳಿಸಿ ಅದೆ.

೩. ನಿರ್ಮಾಣದಿಂದಲೆ ಮನುಷ್ಯನು ದೇವರ ಸ್ವಾಸ್ಥ್ಯವಾಗಿದ್ದಾನೆ. ಆದರೆ ಅವನು ಪಾಪದಿಂದ ತನ್ನನ್ನು ದೇವರ ಕೈಯಿಂದ ಪರಾಂಗಲಾಯಿಸಿ ಕಾಂಡು, ಸೈತಾನನಿಗೆ ವಾಪ್ತಿಸಿ ಕಾಟ್ಟ ಮೇಲೆ, ದೇವರು ಯೇಸು ಕ್ರಿಸ್ತನ ನೆತ್ತರದ ಕ್ರಯಕ್ಕೆ ೧ ಪೇತ್ರ. ೧, ೧೯. ಮತ್ತಾ. ೨೦, ೨೮. ಅವನನ್ನು ತಿರಿಗಿ ಕಾಂಡು ಕಾಂಡನು.

ಪತ್ರಿಕೆಯ ಮೂರನೆ ಭಾಗ.

ಪಲವು ಪ್ರಶ್ನೆಗಳಿಗೆ ಪೌಲನು ಕಾಟ್ಟ ಉತ್ತರಗಳು.

೧. ವಿವಾಹದ ವಿಷಯ. ಸ. ೭.

೨. ಮಧ್ಯಮ ಕಾರ್ಯಗಳ, ಮತ್ತು ಕ್ರೈಸ್ತಸ್ವತಂತ್ರದ ವಿಷಯವಾದ ಬೋಧನೆ. ಸ. ೮—೧೦.

೩. ಸಭೆಯಲ್ಲಿ ನಡಿಯುವ ದೇವಾರಾಧನೆಯಲ್ಲಿ ಶೇರಿದ ಅನಾಚಾರಗಳು. ಸ. ೧೦. ೧೧.

೪. ಆತ್ಮದ ವರಗಳ ಸಮವಾದ ಪ್ರಯೋಗ. ಸ. ೧೨—೧೪.

೧ ಕೊರಿ. ೭, ೧—೩೫.

ಸ. ೭.

ವಿವಾಹ ನಿರ್ವಿವಾಹಜೀವದ ವಿಷಯದಲ್ಲಿ ಕೊರಿಂಥರು ಮಾಡಿದ

ಪ್ರಶ್ನೆಗಳಿಗೆ ಉತ್ತರ.

I. ವಿವಾಹಾಶ್ರಮದ ವಿಷಯ. ವ. ೧—೯.

II. ವಿವಾಹ ಪರಿತ್ಯಾಗ. ಮಿಶ್ರವಿವಾಹಗಳ ವಿಷಯ; ಇದರಲ್ಲಿಯೂ ಸಮಸ್ತ ಶರದ ಸ್ಥಿತಿಗಳಲ್ಲಿಯೂ ಕ್ರೈಸ್ತನು ತಾಳ್ಮೆಯುಳ್ಳವನಾಗಿ ಇರಬೇಕದ್ದು. ವ. ೧೦—೨೪.

III. ವಿವಾಹವಿಲ್ಲದವರ ವಿಷಯ. ವ. ೨೫—೪೦.

I. ವಿವಾಹಾ ಶ್ರಮ ವಿವಾಹಸಂಸರ್ಗಗಳ ವಿಷಯವಾದ

ಬೋಧನೆ. ವ. ೧—೯.

ನಿಮ್ಮಲ್ಲಿ ಕೆಲವರು ಜಾರತ್ವದ ಪಾಪಗಳನ್ನು ಹಗುರವೆಂದೆಣಿಸುತ್ತಾರೆ, ಮತ್ತೊಬ್ಬರು ನ್ಯಾಯವಾದ ವಿವಾಹಾಶ್ರಮದ ವಿಷಯದಲ್ಲಿ ಸಂದೇಹ ಪಡುತ್ತಾರೆ; ಆದದರಿಂದ ನೀವು ಮದಿವೆಯ ಸಂಗತಿಯಲ್ಲಿ ನನಗೆ ಮಾಡಿದ ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ನಾನು ಹೇಳುವದೇನಂದರೆ;—

ಅ) ವಿವಾಹಾಶ್ರಮವು ನ್ಯಾಯವಾದದ್ದೆಂಬುವದು ದೃಢವಾಗಿರಲಿ.

ವ. ೧. ಈಗಿನ ಲೋಕಸ್ಥಿತಿಗತಿಗಳ ದೆಶೆಯಿಂದ ಒಬ್ಬನು, (ವ. ೨೬ ಇತ್ಯಾದಿ) ಬರಲಿಕ್ಕಿರುವ ಉಪದ್ರವಗಳನ್ನು ಸುಲಭವಾಗಿ ದಾಟಿ, ದೇವರ ರಾಜ್ಯದ ವಿಸ್ತರಣಕ್ಕೆ ಚನ್ನಾಗಿ ಕೈಕೊಡಬೇಕೆಂಬ ಆಲೋಚನೆಯಿಂದ ಮದಿವೆ ಮಾಡಿ ಕೊಳ್ಳದಿದ್ದರೆ, ಒಳ್ಳೇದೆ ಸರಿ. ೨. ಆದಾಗ್ಯೂ ನಿಮ್ಮಲ್ಲಿ ಯಾರಾದರೂ ಅಬದ್ಧ ಆತ್ಮಿಕತ್ವದ ಮೋಸದಿಂದ ಕಾಮವಿಕಾರದ ಉರ್ಲಿನಲ್ಲಿ ಸಿಕ್ಕಿ ಬೀಳ್ದ ಹಾಗೆ ಮದಿವೆ ಮಾಡಿ ಕೊಳ್ಳುವದು ಒಳ್ಳೇದೆಂದು, ನಿಮಗೆ ಹೇಳುತ್ತೇನೆ. ೩. ದಂಪತಿಗಳು ಒಬ್ಬರ ಸಂಗಡ ಒಬ್ಬರು ಸಮವಾದ ವಿವಾಹಸಂಸರ್ಗದಲ್ಲಿ ಬದುಕ ತಕ್ಕದ್ದು. ೪. ಯಾಕಂದರೆ ಗಂಡ ಹೆಂಡರು ಸ್ವಂತ ಶರೀರವು ತಮಗೆ ಸ್ವಾಧೀನವಾದದ್ದಲ್ಲವೆಂದೂ, ಉಭಯತರು ಪರಸ್ಪರ ವಶವಾಗಿದ್ದೇವೆಂದೂ, ಯೆಣಿಸ ತಕ್ಕದ್ದು. ೫. ಇಂದ್ರಿಯಭೋಗವನ್ನು ಅಲ್ಲಗಳೆಯುವದರಿಂದ ಪ್ರಾರ್ಥನೆ ಉಪವಾಸಗಳಿಗೆ ನಿಮಗೆ ಯೆಚ್ಚರಿಕೆಯುಳ್ಳ ಮನಸ್ಸು ಬರುವ ಹಾಗೆ, ಪರಸ್ಪರ ಸಂಗವನ್ನು ಸ್ವಲ್ಪ ಕಾಲಕ್ಕೆ ಬಿಡುವದಲ್ಲದೆ ಒಬ್ಬರನ್ನೊಬ್ಬರು ಅಗಲ ಬೇಡಿರಿ. ಆದರೆ ಕಾಮದ ಬಲದಿಂದ ಸೈತಾನನು ನಿಮ್ಮ ಮೇಲೆ ಅಧಿಕಾರ ಹೊಂದಿ, ನಿಮ್ಮನ್ನು ಅತಿಶಯವಾದ ಪಾಪಗಳಿಗೆ ಯೆಳೆಯದ ಹಾಗೆ, ಮತ್ತೆ ವಿವಾಹಸಂಸರ್ಗಕ್ಕೆ ತಿರುಗಿ ಕೊಳ್ಳಿರಿ.

೫) ಆದರೂ ಒಬ್ಬೊಬ್ಬನ ವರಕ್ಕೆ ಅನುಸಾರವಾಗಿ, ಕ್ರೈಸ್ತ ಸ್ವತಂತ್ರವು ನಿರ್ಬಂಧವಾಗಿರುತ್ತದೆ.

ವ. ೬. ಇದನ್ನು (ಅಂದರೆ ಒಬ್ಬೊಬ್ಬನು ವಿವಾಹ ಬಂಧನಲ್ಲಿ ಬದುಕ ತಕ್ಕದ್ದೆಂಬದನ್ನು) ಅಪ್ಪಣೆಯೆಂದು ಅಲ್ಲಾ, ನಿಮ್ಮ ಬಲಹೀನತ್ವದ ಮೇಲೆ ದೃಷ್ಟಿ ಇಟ್ಟು, ಬುದ್ಧಿಯ ಆಲೋಚನೆ ಯೆಂದು ಹೇಳುತ್ತೇನೆ. ೭. ನಾನಾದರೆ, ನನ್ನ ಹಾಗೆಯೆ ಯೆಲ್ಲಾ ಕ್ರೈಸ್ತರು ಕಂಟಕವಿಲ್ಲದೆ ವಿವಾಹ ರಹಿತರಾಗಿ ಇರುವ ಸ್ವತಂತ್ರವನ್ನು ಬಳಸ ಶಕ್ತರಾಗಿದ್ದರೆ, ವೊಳ್ಳೇದೆಂದು ನೆನಸುತ್ತೇನೆ. ಆದರೆ ಇದು ವರವಾಗಿ ವೊಬ್ಬನಿಗೆ ಶಿಕ್ಕಿರ ಬೇಕು. ಹ್ಯಾಗೆಂದರೆ, ವೊಬ್ಬರಿಗೆ ನಿರ್ವಿವಾಹದ ಸ್ಥಿತಿಯು, ವೊಬ್ಬರಿಗೆ ವಿವಾಹಾಶ್ರಮವು ತಕ್ಕದ್ದಾಗಿಯೂ, ದೇವರ ರಾಜ್ಯವನ್ನು ಪಡಕೊಳ್ಳುವದಕ್ಕೆ ಅನುಕೂಲವಾಗಿಯೂ ಇರುವದು. ೮. ಹೀಗಿರುವದರಿಂದ ಮದಿವೆ ಮಾಡಿ ಕೊಳ್ಳದೆ ಇದ್ದ ಗಂಡಸರಿಗೂ ಹೆಂಗಸರಿಗೂ ನಾನು ಹೇಳುವದೇನಂದರೆ: ಅವರು ನನ್ನ ಹಾಗೆಯೆ ವಿವಾಹ ಮಾಡಿ ಕೊಳ್ಳದಿದ್ದರೆ ವೊಳ್ಳೇದು; ೯. ಆದರೆ ಜಿತೇಂದ್ರಿಯರಾಗದಿದ್ದರೆ, ಮದಿವೆ ಮಾಡಿಕೊಳ್ಳಲಿ. ಮಾಂಸದ ಅಭಿಲಾಷೆಗಳ ತಾಪದಿಂದ ಪೀಡೆ ಪಡುವದಕ್ಕಿಂತ ಅದು ವಾಸಿ.

II. ವಿವಾಹಪರಿತ್ಯಾಗ. ಮಿಶ್ರವಿವಾಹಗಳ ವಿಷಯ. ವ. ೧೦—೨೪.

೧) ವಿವಾಹಪರಿತ್ಯಾಗ.

ವ. ೧೦. ಆದರೆ ವಿವಾಹ ಮಾಡಿಕೊಂಡಾದ ಮೇಲೆ, ನನ್ನ ಆಜ್ಞೆಯ ಪ್ರಕಾರವಲ್ಲಾ, ಕರ್ತನ ಆಜ್ಞೆಯ ಪ್ರಕಾರ, ಮತ್ತಾ. ೫, ೩೨. ೧೯, ೪. ಹೇಳುತ್ತೇನೆ: ವಿವಾಹ ಬಂಧವನ್ನು ಸರ್ವಥಾ ಕಡಿಯ ಬಾರದು; ಹೆಂಡತಿಯು ಗಂಡನನ್ನು ಬಿಡ ಕೂಡದು; ೧೧. ಆದರೆ ಈ ಆಜ್ಞೆಯನ್ನು ವಿುರಿ ವೊಬ್ಬಳು ಗಂಡನನ್ನು ಬಿಟ್ಟು ಇದ್ದರೆ, ತಿರಿಗಿ ಮದಿವೆ ಮಾಡಿ ಕೊಳ್ಳದಿರಲಿ; ಅಥವಾ ಗಂಡನ ಸಂಗಡ ತಿರಿಗಿ ಸಮಾಧಾನ ಮಾಡಿದರೆ, ಅತ್ಯುತ್ತಮ; ಅದೇ ಪ್ರಕಾರ ಗಂಡನು ಹೆಂಡತಿಯನ್ನು ಹೊರಗೆ ಹಾಕ ಬಾರದು.

೨) ಮಿಶ್ರವಿವಾಹಗಳು.

ಅ) ವಿಶ್ವಾಸಿಯಾದ ಗಂಡನು ಇಲ್ಲವೆ ಹೆಂಡತಿಯು ಮದಿವೆಯ ಬಂಧವನ್ನು ಬಿಚ್ಚ ಬಾರದು.

ವ. ೧೨. ದಂಪತಿಗಳಲ್ಲಿ ವೊಬ್ಬರು ಮಾತ್ರ ಕ್ರೈಸ್ತರಾಗಿದ್ದರೆ, ಹ್ಯಾಗೆ ನಡ ಕೊಳ್ಳ ಬೇಕೆಂಬದಕ್ಕೆ ಪ್ರತ್ಯೇಕವಾದ ಕ್ರಿಸ್ತನ ಆಜ್ಞೆ ಇಲ್ಲಾ. ನನ್ನ ಬುದ್ಧಿ ಯೇನೆಂದರೆ: ಗಂಡನು ಕ್ರೈಸ್ತನಾಗಿಯೂ ಹೆಂಡತಿಯು ಕ್ರೈಸ್ತಳಲ್ಲವಾಗಿಯೂ ಇರುತ್ತಿರಲಾಗಿ, ಹೆಂಡತಿಯು ಹೆಂಡತಿಯಾಗಿ ಗಂಡನ ಸಂಗಡ ವೊಗತನ ಮಾಡ ಸಮ್ಮತಿಸಿದರೆ, ಅವನು ಅವಳನ್ನು ಅಗಲ ಬಾರದು. ೧೩. ಗಂಡನು ಕ್ರೈಸ್ತನಲ್ಲವಾದರೆ ಹೆಂಡತಿಯೂ ಅದೇ ಪ್ರಕಾರ ನಡ ಕೊಳ್ಳ ತಕ್ಕದ್ದು. ೧೪. ಯಾಕಂದರೆ ಗಂಡನೂ ಹೆಂಡತಿಯೂ ಬೇರೆ ಆಗ ಕೂಡದ ಹಾಗೆ, ವೊಂದೇ ಆದವರಾಗಿದ್ದಾರೆ. ಹೀಗಿರಲಾಗಿ ವೊಂದು ಪಕ್ಷವು ಕ್ರೈಸ್ತವಾಗಿದ್ದರೆ, ಅದರ ಸಂಗಡ ಕೂಡಿದ ಯೆರಡನೆ ಪಕ್ಷವು ಅದರ ಸಂಗದಿಂದ ಪರಿಶುದ್ಧವಾಗಿ, ಮನೆತನದ ಶುದ್ಧೀಕರಣದಲ್ಲಿ ಅಂಶಿಯಾಗುತ್ತದೆ. ಇಲ್ಲದಿದ್ದರೆ ಅಂಥಾ ಗಂಡ ಹೆಂಡರಲ್ಲಿ ಹುಟ್ಟಿದ ಮಕ್ಕಳು ಸಹಾ ಅಶುದ್ಧವಾದಾರು; ಆದರೆ ಅವರು ಕ್ರೈಸ್ತ ತಂದೆಯ ಅಥವಾ ತಾಯಿಯ ಸಂಬಂಧದಿಂದ ದೇವರಿಗೆ ಅರ್ಪಿತರಾಗಿ ಶುದ್ಧರಾಗಿದ್ದಾರೆ. ಯೆಲ್ಲರಿಗೂ ಹತ್ತಿ ಕೊಂಡಿರುವ ಸ್ವಭಾವ ಶಾಪವು ಕೀರ್ತ. ೫೧. ಯೋಹಾ. ೩. ಎಫೆ. ೨, ೩. ಕೃಪೆಯಿಂದ ತೆಗದು ಹಾಕಿ ಅದೆ.

೧ ಕೊರಿ. ೭, ೧೫—೨೨.

ಇ) ಆದರೆ ವಿಶ್ವಾಸಿಗಳು ಅವಿಶ್ವಾಸಿಗಳನ್ನು ತಡಿಯುವದು ಬೇಡ.

ವ. ೧೫. ಆದರೆ ಅವಿಶ್ವಾಸಿಯಾದ ಗಂಡನಾಗಲಿ ಹೆಂಡತಿಯಾಗಲಿ ವಿವಾಹಬಂಧವನ್ನು ಕಡಿಯ ಬೇಕೆಂದಿದ್ದರೆ, ಹಾಗೆ ಆಗಲಿ. ಹಾಗಾದರೆ ವಿಶ್ವಾಸಿಯಾದ ಗಂಡನಾಗಲಿ ಹೆಂಡತಿಯಾಗಲಿ ನಿಧಾನವಾಗಿದ್ದು, ಅವಿಶ್ವಾಸಿಯಾದ ಗಂಡನಿಗಾಗಲಿ ಹೆಂಡತಿಗಾಗಲಿ ಅಂಕೆ ಮಾಡ ಬೇಡ, ಅಂಥವರನ್ನು ಸಮ್ಮತಿ ಪಡಿಸುವ ಬಗ್ಗೆ ವಿಶ್ವಾಸವನ್ನು ಯೆಂದೂ ಬಿಡಲಾಗದು. ಕ್ರೈಸ್ತನು ಸಮಾಧಾನಕ್ಕೆ ಕರದವನಾಗಿದ್ದಾನೆ. ಆದ್ದರಿಂದ ಅವನು ಭೇದದ ಸಮಸ್ತ ಕಾರಣವನ್ನು ನಿವಾರಿಸ ತಕ್ಕದ್ದಾದರೂ, ವಿವಾಹಸಂಬಂಧವನ್ನು ಬಲವಂತಿಕೆಯಿಂದ ಹಿಡುಕೊಂಡು, ಸಮಾಧಾನವನ್ನು ಕೆಡಿಸುವದು ತಕ್ಕದ್ದಲ್ಲಾ. ೧೬. ಹೆಂಡತಿಯೆ, ನೀನು ಗಂಡನನ್ನು, ಗಂಡನೆ, ನೀನು ಹೆಂಡತಿಯನ್ನು ಕ್ರೈಸ್ತರಿಗೆ ತಕ್ಕ ನಡತೆಯಿಂದ ಕ್ರೈಸ್ತ ಧರ್ಮಕ್ಕೆ ಗೆದ್ದು, ಈ ಪ್ರಕಾರ ಅವನ ಪ್ರಾಣವನ್ನು ರಕ್ಷಿಸಲಾಗುತ್ತದೇನೊ ಯಾರು ಬಲ್ಲ? ಆದ್ದರಿಂದ ಬೇರೆ ಪಕ್ಷವನ್ನು ಸ್ವೇಚ್ಛಾನುಸಾರವಾಗಿ ಹಿಡುಕೊಳ್ಳಲೂ ಬೇಡಾ, ತಳ್ಳಲೂ ಬೇಡಾ.

ಈ) ಕ್ರೈಸ್ತನ ಬಹಿರಂಗದ ವ್ಯವಸ್ಥೆಗಳ ವಿಷಯದಲ್ಲಿ ಪ್ರಸ್ತಾವಾನೀಚಿತವಾದ ಸಾಮಾನ್ಯ ಸೂತ್ರ.

ವ. ೧೭. ವಿವಾಹಬಂಧದ ವಿಷಯದಲ್ಲಿ ಮಾತ್ರವಲ್ಲಾ, ಯೆಲ್ಲಾ ಕಾರ್ಯಗಳಲ್ಲಿಯೂ ಸ್ಥಿರವಾದ ಸೂತ್ರವೇನಂದರೆ: ದೇವರು ಸಂವರ್ತನದಿಂದ ತನ್ನ ಮಗನ ಸಂಸರ್ಗಕ್ಕೆ ಕರಿಯುವ ಸಮಯದಲ್ಲಿ ಒಬ್ಬ ನಿಗೆ ದೇವರಿಂದ ಯಾವ ಉದ್ಯೋಗ ಪ್ರಾಪ್ತಿ ಆಗಿತ್ತೋ, ಯಾವ ಆಶ್ರಮದಲ್ಲಿ ಒಬ್ಬನು ಇದ್ದನೋ, ಅದರಲ್ಲಿ ನಿಲ್ಲಲಿ. ಇದನ್ನು ನಿಮಗೂ ಸಮಸ್ತ ಸಭೆಗಳಿಗೂ ಸಾಮಾನ್ಯ ಸೂತ್ರವಾಗಿ ಹೇಳುತ್ತೇನೆ. ೧೮. ಯಾರಾದರೂ ಕ್ರೈಸ್ತರಾಗುವ ಮುಂಚೆ ಯೆಹೂದನಾಗಿದ್ದು ಪರಿಚ್ಛೇದನೆ ಹೊಂದಿ ಇದ್ದರೆ, ಅವನು ತಿರಿಗಿ ಮುಂದೊಗಲು ಬೆಳಿಸ ಬಾರದು. ೧. ಮಕ್ಕ. ೧, ೧೬. ಮುಂಚೆ ಪರಜನರವನಾಗಿದ್ದನಾದರೆ, ಪರಿಚ್ಛೇದನೆ ಮಾಡಿ ಕೊಳ್ಳದಿರಲಿ. ೧೯. ಯಾಕಂದರೆ ಇದಾದರೂ ಅದಾದರೂ ವಿಶೇಷವಲ್ಲಾ, ದೇವರ ಚಿತ್ತವನ್ನು ಮಾಡುವದೆ ಮುಖ್ಯ. ೨೦. ಕ್ರೈಸ್ತ ಧರ್ಮವನ್ನು ಸ್ವೀಕರಿಸುವ ಮುಂಚೆ (ದೈವ ಘಟನೆಯಿಂದ) ಯಾವ ಆಶ್ರಮದಲ್ಲಿ ಇದ್ದನೊ, ಅದರಲ್ಲಿ ಒಬ್ಬೊಬ್ಬನಿರಲಿ. ೨೧. ನೀನು ದಾಸತ್ವದಲ್ಲಿರುವಾಗ್ಯೆ ಕ್ರೈಸ್ತನಾದಿಯೋ? ಆ ವಿಷಯದಲ್ಲಿ ಕರ್ಕರೆ ಪಡಬೇಡ. (ಆ ಸ್ಥಿತಿಯು ರಕ್ಷಣೆಗೆ ಅಟಕವೆಂದೆಣಿಸ ಬೇಡ.) ನೀನು ಬಿಡುಗಡೆಯಾಗ ಬಹುದಾದರೂ, ಬಿಡಗಡೆಯ ಆಶೆಯಿಂದ ಯಾವಾಗಲೂ ಮನಸು ಕದಲಿಸಿಕೊಳ್ಳುವದಕ್ಕಿಂತ ದಾಸತ್ವದಲ್ಲಿರುವದೆ ಲೇಸು ಯೆಂದೆಣಿಸು. ೨೨. ಯಾಕೆಂದರೆ, ಮನೆಯಾಳಾಗಿದ್ದು ಕ್ರಿಸ್ತನ ಸಂಸರ್ಗದೊಳಗೆ ಹೊಕ್ಕವನು ಕರ್ತನ ಬಿಡುಕುಲದವನಾಗಿದ್ದಾನೆ, ಹ್ಯಾಗೆಂದರೆ ಅವನು ಕ್ರಿಸ್ತನ ಪರಿಮುಖವಾಗಿ ಅತಿ ನಿಕೃಷ್ಟವಾದ ಆಳುತನದೊಳಗಿಂದ, ಅಂದರೆ ಅಂಧಕಾರದ ಅಧಿಕಾರದೊಳಗಿಂದಲೂ ಪಾಪದ ಸೇವೆಯಿಂದಲೂ ಬಿಡುಗಡೆಯಾದನು: ಕ್ರೈಸ್ತನಾಗಿ ಉತ್ತಮವಾದ ಬಿಡುಗಡೆಯಲ್ಲಿ ಶೇರಿದ ಸ್ವತಂತ್ರಿಯು ಕ್ರಿಸ್ತನ ಆಳಾಗಿದ್ದು, ಮನೋವಾಕ್ಕಾಯಗಳಿಂದ ಆತನನ್ನು ಸೇವಿಸ ಹಂಗಿನಲ್ಲಿದ್ದಾನೆ. ಹೀಗಿರಲಾಗಿ ಉಭಯತರಲ್ಲಿ ನಿಜವಾಗ ವ್ಯತ್ಯಾಸವಿಲ್ಲಾ. ಇಬ್ಬರೂ ನಿಜವಾಗಿ ದಾಸರೂ ಸ್ವತಂತ್ರಿಗಳೂ, ಆಳುಗಳಾಗಿಯೂ ಬಿಡು

ಕುಲದವರಾಗಿಯೂ ಇದ್ದಾರೆ. ೨೩. ಯೇಸು ಕ್ರಿಸ್ತನು ಅಮೂಲ್ಯವಾದ ತನ್ನ ರಕ್ತದ ಕ್ರಯಕ್ಕೆ ದೇವರ ಸೇವೆಗೋಸ್ಕರ ಕೊಂಡುಕೊಂಡ ಆಳುಗಳಾಗಿದ್ದೀರಿ. ಆದ್ದರಿಂದ ಪರಮ ಪರಿಶುದ್ಧ ಒಡವೆಯಾದ ನಿಮ್ಮ ವಿಶ್ವಾಸವನ್ನು, ಅವಿಶ್ವಾಸಿಗಳಾದ ಯಜಮಾನರು ಗಂಡರು ಹೆಂಡರು ಮುಂತಾದ ಮನುಷ್ಯರನ್ನು ಮೆಚ್ಚಿಸ ಬೇಕೆಂದು, ಬಿಸಾಡ ಬೇಡಿರಿ; ಇಲ್ಲವೆ ಈ ಮಾನುಷ ಬಂಧಕಗಳಿಂದ ನಿಮ್ಮ ರಕ್ಷಣೆಗೆ ಕೇಡು ಬಂದೀತೆಂದು ನೆನಸ ಬೇಡಿರಿ. ೨೪. ಕ್ರೈಸ್ತ ಧರ್ಮಕ್ಕೆ ಬರ ಬೇಕೆಂಬ ಕರ್ತನ ಕರೆವಣಿ ಯಾವ ಆಶ್ರಮದಲ್ಲಿರುವವರಿಗೆ ಬಂದದೆಯೋ ಅದರಲ್ಲಿಯೇ ನಿಶ್ಚಿಂತರಾಗಿ ಇದ್ದು, ದೇವರನ್ನು ಯಾವಾಗಲೂ ನೆನವರಿಕೆ ಮಾಡಿ, ಆತನ ಕಣ್ಣುಗಳ ಮುಂದೆ ಯೆಂಬ ಹಾಗೆ ಮನಸ್ಸಾಕ್ಷಿಪೂರಸ್ಸರವಾಗಿ ನಡಕೊಳ್ಳ ಬೇಕು.

III. ನಿರ್ವಿವಾಹದ ಸ್ಥಿತಿ. ವ. ೨೫—೪೦.

ಅ) ಈಗಿನ ಲೋಕ ಸ್ಥಿತಿಗತಿಗಳ ದೆಸೆಯಿಂದ ನಿರ್ವಿವಾಹವಾಗಿರುವದು ಲೇಸು. ವ. ೨೫. ೨೬.

ವ. ೨೫. ಮದಿವೆಯಾಗದೆ ಇರುವವರ ವಿಷಯದಲ್ಲಿ ನಾನು ಕರ್ತನಿಂದ ಅಪ್ಪಣೆ ಹೊಂದಲಿಲ್ಲ. ಆತನು ಭೂಮಿಯಲ್ಲಿರುವಾಗ್ಯೆ ಶಿಷ್ಯರಿಗೆ ಅದರ ವಿಷಯ ಬೋಧನೆ ಕೊಟ್ಟದ್ದೂ ಮತ್ತು ನನಗೆ ಪ್ರತ್ಯೇಕ ಪ್ರಕಟಣೆಯನ್ನು ಕೊಟ್ಟದ್ದೂ ಇಲ್ಲಾ. ಹೀಗಿರುವದರಿಂದ ನನ್ನ ಬುದ್ಧಿಯ ಮಾತು ಹೇಳುತ್ತೇನೆ; ಆದರೂ ನನ್ನ ಬುದ್ಧಿಯು ಭರವಸಕ್ಕೂ ಲಕ್ಷಿಸೂ ಪಾತ್ರವಾಗುವ ಹಾಗೆ ಕರ್ತನ ಕೃಪೆಯಿಂದ ಆತನಿಗೆ ಯೋಗ್ಯ ಸೇವಕನಾಗಿ ನಡಕೊಂಡಿದ್ದೇನೆಂದು ನೆನಸುತ್ತೇನೆ. ೨೬. ನನ್ನ ಆಲೋಚನೆ ಯೇನಂದರೆ: ಕರ್ತನಿಗೋಸ್ಕರ ಕಷ್ಟ ತಕ್ಕೊಂಡು ತಾಳುವ ಮನಸ್ಸು ಸಂಸಾರ ಪ್ರೀತಿಯಿಂದ ಕೆಡದ ಹಾಗೆ, ಈ ಆಪತ್ತಿನ ಕಾಲದಲ್ಲಿ ಮದಿವೆ ಮಾಡಿ ಕೊಳ್ಳದಿರುವದು ಲೇಸೆಂದು, ನೆನಸುತ್ತೇನೆ.

ಆ) ಅಪೊಸ್ತಲನು ತನ್ನ ಅಭಿಪ್ರಾಯವನ್ನು ಹೆಚ್ಚಾಗಿ ವಿವರಿಸುತ್ತಾನೆ. ವ. ೨೭. ೩೪.

ವ. ೨೭. ಆದರೂ ಮದಿವೆಯಾದವರು ತಾವು ಬೇರೆ ಬೇರೆಯಾಗ ಬೇಕೂ ಬೇಡವೂ ಎಂದು ಸಂದೇಹ ಪಡ ಕೆಲಸವಿಲ್ಲಾ. ಮದಿವೆ ಮಾಡಿ ಕೊಂಡಿರದವರು ಮಾಡಿ ಕೊಳ್ಳದಿರಲಿ, ಅಷ್ಟೆ. ೨೮. ಆದಾಗ್ಯೂ ಗಂಡಸಿಗಾಗಲಿ ಹೆಂಗಸಿಗಾಗಲಿ ಈ ದುರವಸ್ಥೆಯ ಕಾಲಗಳಲ್ಲಿಯೂ ಮದಿವೇ ಗಂಟು ಕಟ್ಟಿ ಕೊಳ್ಳುವದು ಪಾಪ ವಲ್ಲಾ. ಮದಿವೆಯಾಗದವರಿಗೆ ಬಾರದಂಥಾ ಹಲವು ಇಕ್ಕಟ್ಟುಗಳು ಮುಂದಣ ಹಿಂಸಾಕಾಲದಲ್ಲಿ ಸಂಸಾರ ವಂದಿಕರಿಗೆ ಬಂದಾವೆಂಬ ವೊಂದೆ ಚಿಂತೆಯಿಂದ ನಿಮ್ಮನ್ನು ಅವುಗಳಿಗೆ ತಪ್ಪಿಸ ನೋಡುತ್ತೇನೆ.

ಇ) ಇಂಥಾ ಕಾಲಕ್ಕೆ ಯಾವ ಹೃದಯಾವಸ್ಥೆಯು ತಕ್ಕದ್ದು? ವ. ೨೯—೩೧.

ವ. ೨೯. ಓ ಸಹೋದರರೇ, ಸಮಯವು ಅಡಕ. ಮಹಾ ಹಿಂಸೆಯು ಬೇಗ ಬರುವದು. ಹೀಗಿರುವದರಿಂದ ಯಾರೂ ತನ್ನ ಹೃದಯವನ್ನು ಯಾವದಕ್ಕೂ ಕಟ್ಟ ಬಾರದು. ಹೆಂಡತಿ ಇದ್ದವನು ವಿಂಗಡವಾಗುವ ಕಾಲವು ಬರುತ್ತದೆಂದು ತಿಳಿದು, ಹೃದಯವನ್ನು ಜಿಗಿಬಿಗಿ ಘಟ್ಟಿ ಮಾಡಿ ಕೊಂಡು, ಕುಟುಂಬದ ಪ್ರೀತಿಯಿಂದ ಯೇಸು ಕ್ರಿಸ್ತನ ಹೆಸರನ್ನು ಅರಿಕೆ ಮಾಡುವದಕ್ಕೆ ಅಧೈರ್ಯವು ಹುಟ್ಟದಂತೆ ಜಾಗ್ರತೆಯಾಗಿರ ಬೇಕು. ದುಖ್ಖ ಪಡುವವರು ಬೇಗ ಬರುವ ಅವಸ್ಥಾಂತರವನ್ನು ನೆನಸಿ, ದುಖ್ಖವನ್ನು ಅಡಗಿಸ ಬೇಕು.

೧ ಕೊರಿ. ೭, ೩೦—೩೯.

೩೦. ಸಂತೋಷ ಪಡುವವರು ತಮ್ಮ ಸಂತೋಷವನ್ನು ಅಲ್ಲಗಳೆಯುವದಕ್ಕೆ ಸಿದ್ಧವಾಗಿರ ಬೇಕು. ಯಾವ ಭೂಭೋಗವಾದರೂ ನ್ಯಾಯವಾಗಿ ಪಡಕೊಂಡ ಯಾವ ಆಸ್ತಿಯಾದರೂ ಹೃದಯವನ್ನು ಬಂಧಿಸ ಬಾರದು. ೩೧. ಲೋಕದಲ್ಲಿ ಅನುಭವಿಸುವದೆಲ್ಲಾ ಅನುಭವಿಸದಂತಿರ ಬೇಕು. ಕ್ರೈಸ್ತನು ತಾನು ಅನುಭವಿಸುವ ಈ ಲೋಕದ ಸಮಸ್ತ ಆಸ್ತಿ ಸೊತ್ತುಗಳಲ್ಲಿ ನಿಮಗ್ನನಾಗದ ಹಾಗೆಯೂ, ಅವುಗಳ ಲಾಭ ನಷ್ಟಗಳಿಂದ ತನ್ನ ಹೃದಯವು ಕದಲದ ಹಾಗೆಯೂ ನೋಡಿ ಕೊಳ್ಳ ಬೇಕು. ಈ ಲೋಕದ ಈಗಿನ ಸ್ಥಿತಿಯು ಗತಿಸಿ ಹೋಗುವದು. ಹೀಗಿರುವದರಿಂದ ಭೂವಸ್ತುಗಳನ್ನೆಲ್ಲಾ ಅಲ್ಲಗಳೆಯುವದು ಅತಿಯುಕ್ತವಾದದ್ದು. ಸ. ೧೦, ೧೧. ೧. ಯೋಹಾ. ೨, ೧೫.

ಬ) ವಿವಾಹದ ಸ್ಥಿತಿಯು ಅನೇಕರಿಗೆ ಪ್ರಪಂಚಪಾಶವಾಗುತ್ತದೆ. ವ. ೩೨—೩೫.

ವ. ೩೨. ನಾನಾ ತೊಂದರೆ ಹುಟ್ಟಿಸುವ ಲೋಕದ ಚಿಂತೆಗಳಿಗೆ ನಿಮ್ಮನ್ನು ತಪ್ಪಿಸ ಬೇಕೆಂಬುವದೆ ನನ್ನ ಅಪೇಕ್ಷೆ. ಮದಿವೆಯಿಲ್ಲದವನಿಗೆ ಕರ್ತನನ್ನು ಸೇವಿಸಿ ಮೆಚ್ಚಿಸುವ ಚಿಂತೆಯ ಹೊರ್ತು ಬೇರೊಂದು ಇಲ್ಲಾ. ೩೩. ಆದರೆ ಮದಿವೆ ಮಾಡಿ ಕೊಂಡವನು ಪ್ರಪಂಚದ ಕಾರ್ಯಗಳ ಚಿಂತನ ಮಾಡಿ, ಇದರಲ್ಲಿ ಅದರಲ್ಲಿ ತನ್ನ ಹೆಂಡತಿಯನ್ನು ಮೆಚ್ಚಿಸುವದು ಅವಶ್ಯವಾಗುತ್ತದೆ. ಅದೇಪ್ರಕಾರ ಕನ್ನಿಕೆಯ ಸ್ಥಿತಿ ಮದಿವೆಯಾದವಳ ಸ್ಥಿತಿಗಿಂತ ಸುಲಭ. ೩೪. ಕನ್ನಿಕೆಯು ತನ್ನನ್ನು ಕರ್ತನಿಗೆ ಪೂರ್ಣವಾಗಿ ಒಪ್ಪಿಸಿ ಕೊಟ್ಟು, ಶರೀರಾತ್ಮಗಳಲ್ಲಿ ಪರಿಶುದ್ಧವಾಗಿರುವದಕ್ಕೆ ಚಿಂತಿಸಿದರೆ ಸಾಕು; ಆದರೆ ಮದಿವೆಯಾದವಳು ಮನೆಯಜಮಾನಿಯಾಗಿಯೂ ತಾಯಿಯಾಗಿಯೂ ಅನೇಕ ಪ್ರಪಂಚದ ಕೆಲಸಗಳನ್ನು ನಡಿಸುತ್ತಾ ಇರ ಬೇಕು, ಮತ್ತು ಅವುಗಳನ್ನು ನಂಬಿಕೆಯಿಂದ ನಡಿಸಿ, ತನ್ನ ಗಂಡನನ್ನು ಮೆಚ್ಚಿಸ ನೋಡ ಬೇಕು. ೩೫. ಇದನ್ನು ನಿಮ್ಮ ಸ್ವಂತ ಆತ್ಮ ಪ್ರಯೋಜನಕ್ಕೆ ಹೇಳುತ್ತೇನಲ್ಲದೆ, ವಿವಾಹವನ್ನು ನಿಷೇಧಿಸುವವನಾಗಿ ನಿಮ್ಮ ಮನಸ್ಸಾಕ್ಷಿಗೆ ಅಂಕೆ ಮಾಡಲಿಕ್ಕೆ ನನಗೆ ಅಪೇಕ್ಷೆ ಇಲ್ಲಾ. ನೀವು ಅಟಕವಿಲ್ಲದೆ, ಪರರ ಗೊಡವೆ ಇಲ್ಲದೆ, ಕರ್ತನನ್ನು ಸೇವಿಸಲಾದರೆ, ಬಹು ಚಂದವೆಂದು ನೆನಸಿ, ಇಷ್ಟು ಹೇಳಿದ್ದೇನೆ.

ಎ) ತಂದೆಗಳು ತಮ್ಮ ಹೆಣ್ಣು ಮಕ್ಕಳಿಗೆ ಮದಿವೆ ಮಾಡಿಸುವ ವಿಷಯವಾದ ಸೂತ್ರ. ವ. ೩೬—೩೮.

ವ. ೩೬. ಯೊಬ್ಬ ತಂದೆಯು, ತನ್ನ ಮಗಳು ಮದಿವೆಯಾಗದೆ ಪ್ರಾಯ ದಾಟಿದರೆ, ಅವಳಿಗೆ ಅದು ನಾಚಿಕೆಯೆಂದೆಣಿಸುತ್ತಾನಾದರೆ, ಅವಳು ಮದಿವೆ ಮಾಡಿ ಕೊಳ್ಳುವ ಕಾಲ ಬಂದರೆ, ಅವನ ಮನಸ್ಸಿಗೆ ಒಳ್ಳೇದೆಂದು ಕಾಣುವದನ್ನು ಮಾಡಲಿ. ಅದು ಪಾಪವಲ್ಲಾ, ಅವಳನ್ನು ಮದಿವೆ ಮಾಡಿ ಕೊಡಲಿ. ೩೭. ಆದರೆ ಮಗಳ ಕಡೆಯಿಂದಲಾಗಲಿ ಬೇರೆ ಹೇತುಗಳಿಂದಲಾಗಲಿ ಅವಸರವು ತೋರದೆ, ತನ್ನ ಮನಸು ನಡಿಸ ಶಕ್ತನಾಗಿದ್ದು, ತನ್ನ ಮಗಳನ್ನು ಮದಿವೆ ಮಾಡಿ ಕೊಡದಿರುವದಕ್ಕೆ ತನ್ನ ಹೃದಯದಲ್ಲಿ ನಿಶ್ಚೈಸಿಕೊಂಡಿದ್ದಾನಾದರೆ, ಅದು ಒಳ್ಳೇದು. ೩೮. ಹೀಗಿರುವದರಿಂದ ಮಗಳನ್ನು ಮದಿವೆ ಮಾಡಿ ಕೊಡುವದು ಒಳ್ಳೇದು; ಆದರೆ ಮದಿವೆ ಮಾಡಿ ಕೊಡದಿರುವದು ಅದಕ್ಕಿಂತ ಒಳ್ಳೇದು.—ಮುಂಚೆ ವಿವಾಹ ನಿರ್ವಿವಾಹಗಳ ತಾರತಮ್ಯದ ವಿಷಯವಾಗಿ ಹೇಳಿದ್ದನ್ನು ಪೌಲನು ಇಲ್ಲಿ ಮುಖ್ಯವಾಗಿ ತಂದೆಗಳ ಮನವರಿಕೆಗೆ ತರು

ತ್ತಾನೆ. ನಮಗಿಲ್ಲಿ ಕಾಣಬರುವದೇನಂದರೆ: ೧) ಮದಿವೆಯ ಕಾರ್ಯದಲ್ಲಿ ಹೆತ್ತವರ ಚಿತ್ತವು ಮುಖ್ಯ. ತಂದೆ ತನ್ನ ಮನಸಿಗೆ ಅನುಸಾರವಾಗಿ ಮಗಳನ್ನು ಮದಿವೆ ಮಾಡಿ ಕೊಡ ಬಹುದು; ಅಥವಾ ಕೊಡದಿರ ಬಹುದು ಯೆಂದೇ ಅಪೊಸ್ತಲನು ಹೇಳುತ್ತಾನೆ. ೨) ಇದರೂ ತಂದೆಗಳು ಕರುಣ ಹೃದಯದಿಂದ ನಡ ಕೊಳ್ಳಬೆ, ತಮ್ಮ ಮಕ್ಕಳ ಸುಖಕ್ಷೇಮ ಸ್ವಭಾವ ಅಪೇಕ್ಷೆಗಳ ಮೇಲೆ ಲಕ್ಷೆ ಇಡ ಬೇಕು. ೩) ಅವರು ಈ ಪ್ರಕಾರ, ದೇವರ ಸಹಾಯದಿಂದ ಯೇನು ನಿರ್ಣೈಸುತ್ತಾರೊ, ಅದು ಸಮ. ಆದರೂ ವಿಶೇಷವಾದ ಕಾರಣಗಳಿದ್ದರೆ, ಮಗಳನ್ನು ಮದಿವೆ ಮಾಡಿ ಕೊಡದಿರುವದು ಆಗಿನ ಕಾಲದಲ್ಲಿ ಉತ್ತಮವಾಗಿತ್ತು. ನಮ್ಮ ಕಾಲದ ವಿದ್ಯಮಾನ ಬೇರೆ.

ಬ) ವಿಧವೆಗಳ ಪುನರ್ವಿವಾಹ. ವ. ೩೯—೪೦.

ವ. ೩೯. ಒಂದು ಹೆಂಗಸು, ತನ್ನ ಗಂಡನು ಬದುಕುತ್ತಿರುವಾಗ್ಯೆ, ಬೇರೊಬ್ಬನನ್ನು ಮದಿವೆ ಮಾಡಿ ಕೊಳ್ಳ ಕೂಡದೆಂಬದು ಸಹಜ. ಆದರೆ ಅವನು ಸತ್ತರೆ, ಎರಡನೆ ಸಂಬಂಧ ಮಾಡ ಬಹುದು; ಅದು ಲಘು ಮನಸ್ಸಿನಿಂದಲ್ಲ, ಕ್ರಿಸ್ತನಲ್ಲಿ ಆಗ ಬೇಕು, ಇಷ್ಟೆ ಮುಖ್ಯ. ೪೦. ಆದರೂ ನನ್ನ ಬುದ್ಧಿಯ ಪ್ರಕಾರ ಅವಳು ವಿಧವಾವಸ್ಥೆಯಲ್ಲಿ ಉಳಕೊಂಡರೆ, ಲೇಸು. (ಇದು ನನ್ನ ಬುದ್ಧಿಮತವೂ ಆಲೋಚನೆಯೂ ಆಗಿರುತ್ತದೆ ಸರಿ; ಆದರೂ ಸಮುವಾದ್ದನ್ನು ತಿಳಿಸುವ ದೇವರ ಆತ್ಮವನ್ನು ನಿಮ್ಮ ಹಾಗೆ ನಾನೂ ಹೊಂದಿದ್ದೇನೆಂದು, ಭಾವಿಸುತ್ತೇನೆ.)

ಪರಿಶಿಷ್ಟ. ಪೌಲನು ಇಲ್ಲಿ ಮಾಡುವ ವಿವರಣೆಯಲ್ಲಿ, ಎಫೆ. ೫, ೨೨ನೆ ಮುಂತಾದ ವಚನಗಳಲ್ಲಿ ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧದ ಪ್ರತಿಬಿಂಬವಾಗಿ ವಿವಾಹದ ಮಹತ್ವ ಪದವನ್ನು ವರ್ಣಿಸದೆ ಇದ್ದದ್ದನ್ನು ನೋಡಿದರೆ, ಬೆರಗ ಬಹುದು. ಕರ್ತನ ವಾಕ್ಯ ಕ್ಕನುಸಾರವಾಗಿ ವಿವಾಹಬಂಧವು ಕಡಿಯ ಕೂಡದ್ದೆಂಬದಾಗಿ, ನಿಶ್ಚಯ ಹೇಳಿಯದೆ. ಆದರೆ ಇಲ್ಲಿ ಜಾರತ್ವದ ಚಯಕ್ಕಾಗಿ ವ. ೨., ವಿಷಯ ಬೋಗದ ಸ್ವಾಭಾವಿಕವಾದ ಸಂತೃಪ್ತಿಯನ್ನು ಪರಿಕ್ರಮಿಸುವ ಬಗ್ಗೆ, ವಿವಾಹನಿಮಕವಾಗಿದೆ ಯಂಬ ಹೇತಾಗೆ ತೋರುತ್ತದೆ. ಅದು ಅನವಶ್ಯವಾಗಿದ್ದರೆ ವಾಸಿ. ಅಪೊಸ್ತಲನು, ತನ್ನ ಹೇತಾಗೆ ಯೆಲ್ಲಾ ಮನುಷ್ಯರು ನಿವೃತ್ತಾಪಿಗಳಾಗಿ ಇರುವ ಸಾಮರ್ಥ್ಯವನ್ನು ಹೇಳಿಂದಿರುತ್ತಿದ್ದರೆ, ಯುಕ್ತವೆಂದೆಣಿಸುತ್ತಾನೆ. ವ. ೭. ಹೀಗಾದರೆ ಕರ್ತನನ್ನು ಚನ್ನಾಗಿ ಸೇವಿಸ ಬಹುದು. ವ. ೨೪; ಯಾಕಂದರೆ ವಿವಾಹದಿಂದ ಮನುಷ್ಯನು ಪ್ರಪಂಚಪಾಶಗಳಲ್ಲಿ ಸಿಕ್ಕಿ ಕೊಂಡು ವ. ೨೨. ೨೩. ವಿಶೇಷವಾದ ಶರೀರಬಾಧಪದ್ರವಗಳನ್ನು ತಾಳ ಬೇಕಾಗುತ್ತದೆ. ವ. ೨೮. ಬ್ರಹ್ಮಚಾರಿತ್ವದಲ್ಲಿ ಅಧಿಕ ಪರಿಶುದ್ಧತ್ವವದೆ ಯೆಂಬ ರೂಢಿಯಾಯ ಅಬದ್ಧ ಬೋಧನೆಗೆ ಪೌಲನು ಅನುಕೂಲವಾಗಿದ್ದಾನೆಂಬಾ ಯೆಂಬ ಸಂಶಯ ಇಲ್ಲಿ ಹುಟ್ಟೀತು.

ಆದರೆ ಚನ್ನಾಗಿ ಶೋಧಿಸಿದ್ದಲ್ಲಿ, ಈ ಮಾತಿನ ಅಭಿಪ್ರಾಯ ಬೇರೆ ಯೆಂದು ಪ್ರತ್ಯಕ್ಷವಾದೀತು: ೧) ಅಪೊಸ್ತಲನು ವಿವಾಹದ ಮಹತ್ವ ಪರಿಶುದ್ಧತ್ವವನ್ನು, ಶರೀರ ಪ್ರಾಣಾತ್ಮಗಳ ಪ್ರಕಾರ, ಗಂಡ ಹೆಂಡರ ಕರ್ತನಿಂದ ಶುದ್ಧೀಕೃತವಾದ ಸಂಬಂಧವನ್ನು ಕಂಗಿ ಮುಂದೆ ಇಟ್ಟು ಕೊಂಡಿದ್ದನೆಂಬದಕ್ಕೆ ಗಂಡ ಹೆಂಡರಲ್ಲಿ ಕೊಂದು ಪಕ್ಷವು ಮತ್ತೊಂದು ಪಕ್ಷದಿಂದ ಪರಿಶುದ್ಧ ಮಾಡಲ್ಪಡುತ್ತದೆ ಯೆಂದು ಹೇಳುವ ಮಾತು ದೃಷ್ಟಾಂತವಾಗಿರುತ್ತದೆ. ೨) ಆದರೂ, ಈ ಸಂಗತಿಯನ್ನು ಅಧಿಕವಾಗಿ ವಿವರಿಸದೆ ಇರುವದಕ್ಕೆ ಕಾರಣಗಳು ಗುಪಿವೆ ಕಾರಣ. ಅಪೊಸ್ತಲನು ಬೇರೆ ಸಮಸ್ತ ಕಾರಣಗಳನ್ನು ಬಿಟ್ಟು, ಅವರಿಗೆ, ಮದಿವೆ ಮಾಡಿ ಕೊಳ್ಳಿರಿ, ಇಲ್ಲದಿದ್ದರೆ ಅಧಿಕ ಪಾಪಗಳಲ್ಲಿ ಬಿದ್ದೀರಿ ಯೆಂದು ಹೇಳುವದರಿಂದ, ಅವರ ಮಾಂಸಚಾವದ ಗರ್ವವನ್ನು ಇಳಿಸುವದಕ್ಕೆ ವಾಳ್ಳೆ ಮಾರ್ಗವಾಯಿತು. ೩) ಇದಲ್ಲದೆ ಪೌಲನು ವ. ೨೬. ಆ ಕಾಲದ ಅವಸ್ಥೆಗಳ ಮೇಲೆ ಲಕ್ಷೆ ಇಟ್ಟನೆಂಬದನ್ನು ನೆನಪಿಗೆ ತರ ಬೇಕು. ಅವನು ಪರ್ಯಟಣೆ ಮಾಡುವ ಅಪೊಸ್ತಲನಾಗಿ ಇರುವದರಿಂದ, ಹೆಂಡತಿ ಇಲ್ಲದೆ ಇದ್ದದರಿಂದ, ನಿರಾತಂಕವಾಗಿ ಇದ್ದನು; ಬರಲಿಕ್ಕಿದ್ದ ಹಿಂಸೆಗಳಲ್ಲಿ ಹೆಂಡತಿ ಮಕ್ಕಳ ಪ್ರೀತಿಯು ಅನೇಕ ಸತೀ ಕಂಟಕರವಾಯಿತು; ಇದಲ್ಲದೆ ಕ್ರೈಸ್ತವಿವಾಹಗಳನ್ನೆ ಮಾಡಿ ಕೊಳ್ಳುವದು ಅನೇಕ ಸತೀ ಅಸಾಧ್ಯವಾದ್ದರಿಂದ, ನೀಮೆ ಯೆಲ್ಲಾ ಪರಜನಾವಸ್ಥೆಯಲ್ಲಿ ರಲಾಗಿ, ಕ್ರೈಸರು ಮದಿವೆ ಮಾಡಿ ಕೊಳ್ಳಲಿಕ್ಕೆ ಹೇತಾಗಿ, ಅಂಥಾ ಅವಸ್ಥೆಗಳಲ್ಲಿ ಬೀಳುವದಕ್ಕೆ ಯೆಡೆ ಆಯಿತು. ಅನೇಕ ಕ್ರೈಸ್ತ ರಿರುವಲ್ಲಿ ಮುಖ್ಯವಾಗಿ ಯೆಲ್ಲರೂ ಕ್ರೈಸ್ತರನ್ನಿಸಿ ಕೊಳ್ಳುವ ಜನಾಂಗಗಳಲ್ಲಿ ಇಂಥ ಹೇತಾಗೆ ಇರುವದಿಲ್ಲಾ; ಮಕ್ಕಳ ನಾಶಕ್ಕೆ ಮುತಾಂದ ಪ್ರಪಂಚ

೧ ಕೊರಿ. ೯.

ಚಿಂತೆಗಳಿಂದ ಸಹಾ ಕ್ರೈಸ್ತರು ಪೆಚ್ಚಾಗಿ ಕ್ರೈಸ್ತಸಭೆಯ ಕಟ್ಟಳೆಗಳನ್ನು ಕೈ ಕಾಳ್ಗುವ ಪ್ರಾಗಾಗುತ್ತದಲ್ಲದೆ ಬೇರಾಂದಿಲ್ಲಾ. ೪) ಈ ಕಾಲದ ಅವಸ್ಥೆಯು ಪ್ರಾಗಿದ್ದರೂ, ತಾನು ಪೇಳುವದು ನಿಯಮವೆಂಬ ಪ್ರಾಗೆ ಅಪ್ಪಗೆ ಕಾಡುವದಿಲ್ಲಾ. ವ. ೫೫. ಆದರೆ ವಿವಾಹ ಮಾಡ ಬಾರದೆಂದು ಬುದ್ಧಿ ಪೇಳುವದಲ್ಲದೆ, ಅಧಿಕಾರದಿಂದ ಆಜ್ಞಾಪಿಸಿ, ಮನಸ್ಸಾಕ್ಷಿಗೆ ಉರುಳಾಡ್ಡುವವರು ಪೌಲನ ಮನಸ್ಸಿಗೆ ಯಿಷ್ಟಾ ಇದಿರಾಳಿಗಳಾಗಿದ್ದಾರೆ!

ವಿಗ್ರಹಬಲಿ, ಕ್ರೈಸ್ತಸ್ವತಂತ್ರದ ನ್ಯಾಯವಾದ ಪ್ರಯೋಗಗಳ ವಿಷಯ. ಸ. ೮—೧೧, ೧.

ಮತ್ತೆ ರೋಮದಲ್ಲಿಯೂ ಕಾಣ ಬರುವ ಹಾಗೆಯೆ ಪರಜನರಾದ ಕ್ರೈಸ್ತರ ಸಭೆಗಳಲ್ಲೆಲ್ಲಾ, ಪರಜನರ ವಿಗ್ರಹಬಲಿಯ ಮಾಂಸವನ್ನು ತಿನ್ನ ಬಹುದೊ ಬಾರದೊ ಯೆಂಬ ಮಾತು ವಿಶೇಷವಾಗಿತ್ತು. ಪರಜನರ ವಿಗ್ರಹಗಳಿಗೆ ಅರ್ಪಿಸಿದ ಬಲಿಗಳ ಮಾಂಸದ ವೊಂದು ಪಾಲು ಬಲಿ ತಂದವರಿಗೂ, ವೊಂದು ಪಾಲು ಯಾಜಕರಿಗೂ ಬರುವದಿತ್ತು. ಉಭಯತರು ಅದನ್ನು ಮಾರುವರು, ಅಥವಾ ಬಹುವಿಧವಾಗಿ ದೇವಸ್ಥಾನಗಳಲ್ಲಿಯೂ ಮನೆಗಳಲ್ಲಿಯೂ ಆಗುವ ಔತನಗಳಲ್ಲಿ ಪ್ರಯೋಗಿಸುವರು. ಯೆಹೂದರೂ ಯೆಹೂದರಾದ ಕ್ರೈಸ್ತರೂ ಅಪೂರ್ವದಿಂದ ಅದನ್ನು ಅಸಹ್ಯಿಸುತ್ತಾ ಬಂದರು. ಪರಜನರ ದೇವತೆಗಳು ದುರಾತ್ಮಗಳೆಂದು ಅವರು ಯೆಣಿಸಿದ್ದು ಅದಕ್ಕೆ ಮುಖ್ಯ ಕಾರಣವಾಗಿತ್ತು. ಆದರೆ ಕ್ರೈಸ್ತಸ್ವತಂತ್ರದ ಬಲವನ್ನು ತಿಳಿದ ಕ್ರೈಸ್ತರು ಅದನ್ನು ಲಕ್ಷ್ಯ ಮಾಡದೆ, ವಿಗ್ರಹವು ನಿಜವಾಗಿ ದೇವತೆ ಅಲ್ಲವೆಂತಲೂ, ವಿಗ್ರಹಬಲಿಯಿಂದ ಯಾರೂ ಅಶುದ್ಧರಾಗುವದಿಲ್ಲವೆಂತಲೂ, ಹೇಳಿದರು. ಇವರಿಗೆ ಪೌಲನು ಹೇಳ್ಗುವದೇನಂದರೆ: ಅವರ ಬೋಧನೆಯು ನ್ಯಾಯವಾಗಿರುತ್ತದೆ ಸರಿ, ಆದರೂ ನಿರ್ದಯೆಯ ನಡತೆಯಿಂದ ಅವರು ತ್ರಿವಿಧವಾದ ಪಾಪಕ್ಕೆ ವೊಳಗಾಗುವ ಹಾಗೆ ಇದ್ದಾರೆ. ಮೊದಲಾಗಿ, ಬಲಹೀನ ಸಹೋದರರಿಗೆ ಇಡುರು ಇಟ್ಟು, ತಮ್ಮ ಮಾದರಿಯಿಂದ ಅವರು ಧೈರ್ಯ ತಕ್ಕೊಂಡು, ಪಾಪವೆಂದೆಣಿಸುವ ಕೃತ್ಯಗಳನ್ನು ಮಾಡುವದಕ್ಕೆ ಕಾರಣವಾಗುತ್ತದೆ. ಸ. ೯., ಇದಕ್ಕೆ ಯೆದುರಾಗಿ ತನ್ನ ನಡತೆಯ ಮಾದರಿಯನ್ನು ಸ. ೫. ತಿಳಿಸಿ, ಬಲಹೀನರಿಗೆ ಕೇಡು ಬಾರದ ಹಾಗೆ, ತನ್ನ ಕ್ರೈಸ್ತ ಸ್ವತಂತ್ರವನ್ನು ಪ್ರಯೋಗಿಸದಿರುತ್ತೇನೆಂಬ ಮಾತು ಹೇಳ್ಗುತ್ತಾನೆ. ಯೆರಡನೇದು, ಅವರ ಭಾವನೆಗೆ ಆಧಾರವಾಗಿರುವ ಪರಜನಾಂಗತ್ವವೆಲ್ಲಾ ದುರಾತ್ಮಗಳ ಕೃತ್ಯವೆಂಬ ಸತ್ಯವಾದ ಮಾತನ್ನು ಇವರು ತಕ್ಕ ಹಾಗೆ ಆಲೋಚಿಸುವದಿಲ್ಲಾ. ಮೂರನೇದು, ಪರಜನಾಂಗತ್ವದ ದುರಾಚಾರದ ದುಷ್ಕರ್ಮಗಳಲ್ಲಿ ಪಾಲುಗಾರರಾಗುವದರಿಂದ ಮಹಾ ಕಂಟಕ ಅವರಿಗೆ ಪ್ರಾಪ್ತಿ ಆಗುವ ಹಾಗೆ ಉಂಟು.

ಮೊದಲನೆ ಸೂತ್ರ: ತನ್ನ ಸ್ವತಂತ್ರದಿಂದ ಸಹೋದರರಿಗೆ ಇಡುರು ಇಡ ಬಾರದು. ಸ. ೯.

೧. ಸಾಮಾನ್ಯ ಸೂತ್ರ: ಜ್ಞಾನಕ್ಕಿಂತ ಪ್ರೀತಿ ಲೇಸು. ವ. ೧—೩.

೨. ವಿಗ್ರಹವು ಏನೂ ಅಲ್ಲವೆಂಬುವದು ಸರಿ. ವ. ೪—೬.

೩. ಆದರೂ ವಿಗ್ರಹ ಬಲಿ ತಿನ್ನುವದರಿಂದ ಸಹೋದರನಿಗೆ ಇಡರು ಮಾಡುವದು ಪಾಪವಾಗಿದೆ. ವ. ೭—೧೩.

ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಪ್ರೀತಿ.

೧ ಕೊರಿ. ೮, ೧—೬.

೧) ಜ್ಞಾನಕ್ಕಿಂತ ಪ್ರೀತಿಯು ಲೇಸು. ವ. ೧—೩.

ವ. ೧. ವಿಗ್ರಹ ಬಲಿಗಳ ವಿಷಯವಾಗಿ ನೀವು ಬರೆದದ್ದು ವಿಹಿತವಾಗಿದೆ. ಏನಂದರೆ ಕ್ರೈಸ್ತರಾದ ನಾವೆಲ್ಲರು ತಿಳುವಿಕೆಯುಳ್ಳವರಾಗಿದ್ದೇವೆ. ಆದರೆ ಬರಿತಿಳುವಿಕೆಯಿಂದ ಗರ್ವ ಹುಟ್ಟುತ್ತದೆ; ಆದರೆ ಪ್ರೀತಿಯು ಕಟ್ಟುವಂಥಾದ್ದಾಗಿ, ನೆರೆಯವನ ಆತ್ಮಕ್ಷೇಮವನ್ನು ಬಯಸಿ ಹೆಚ್ಚಿಸುತ್ತದೆ. ೨. ತಾನು ಬಲ್ಲವನೆಂದು, ಹೆಮ್ಮೆ ಮಾಡುವವನು ಸತ್ಯ ಜ್ಞಾನಕ್ಕೆ ಅನಧಿಕಾರಿಯಾಗಿದ್ದಾನೆ. ೩. ಆದರೆ ದೇವರನ್ನೂ ಸಹೋದರರನ್ನೂ ಪ್ರೀತಿ ಮಾಡುವವನನ್ನು ದೇವರು ತನ್ನವನೆಂದು ಶೇರಿಸಿ ಕೊಳ್ಳುವದರಿಂದ ಅವನು ದೇವರ ಅನ್ಯೋನ್ಯದಲ್ಲಿದ್ದು, ದೇವರ ಆತ್ಮದಿಂದ ನಿಜಜ್ಞಾನ ಸಿದ್ಧಿಯನ್ನು ಹೊಂದುತ್ತಾನೆ.

೨) ವಿಗ್ರಹವು ಏನೂ ಅಲ್ಲವೆಂಬುವದು ಸರಿ. ೪—೬.

ವ. ೪. ಹಾಗಾದರೆ ವಿಗ್ರಹ ಬಲಿ ಭಕ್ಷಣೆಯ ವಿಷಯವಾಗಿ, ಪರಜನರ ದೇವತೆಗಳು ಮನಃಕಲ್ಪಿತವಾದ ಬೀಯ ಒಡವೆಗಳೆಂದೂ, ಅವುಗಳ ಪ್ರತಿಮೆಗಳು ಕಲ್ಲು ಮಣ್ಣು ಮರ ಮುಂತಾದದ್ದೇ ಎಂದೂ, ನಾವು ಭಜಿಸುವ ದೇವರು ಒಬ್ಬನೇ ಹೊರ್ತು ಬೇರೊಬ್ಬನಿಲ್ಲವೆಂದೂ, ಬಲ್ಲೆವು. ೫. ಯಾಕಂದರೆ ದಿವದಲ್ಲಿರುವ ದೂತರಲ್ಲಿಯೂ, ೨ ಕೊರಿ. ೪, ೪. ಎಫೆ. ೨; ೬, ೧೨. ಭೂಮಿಯಲ್ಲಿರುವ ಮನುಷ್ಯರಲ್ಲಿಯೂ, ಯೋಹ. ೧೦, ೩೪. ಕೀರ್ತ. ೮೨, ೬. ಅಧಿಕಾರಿಗಳೂ ಪರಾಕ್ರಮಿಗಳೂ ೨ ಮೋಸೆ. ೨೨, ೨೮. ದೇವರುಗಳೆಂದು ಹೆಸರ್ಗೊಂಡರೂ, (ಈ ಅನ್ಯಾರ್ಥದ ಪ್ರಕಾರ ದೇವರಿಗೂ ಮನುಷ್ಯರಿಗೂ ಮಧ್ಯದಲ್ಲಿರುವ ಅನೇಕ ದೇವರುಗಳೂ ಒಡೆಯರೂ ಉಂಟೆಂದು ಕೀರ್ತ. ೮೬, ೮; ೯೨, ೧; ೧೩೬, ೨ರಲ್ಲಿ ಸೂಚಿಸಿದೆ,)—೬. ನಮಗೆ ೧) ತಂದೆಯಾದ ಒಬ್ಬನೇ ೨) ದೇವರು; ಅವನಿಂದ ಸಮಸ್ತವು; ಮತ್ತು ನಾವು ಅವನಿಗೋಸ್ಕರವು ೩). ಇದಲ್ಲದೆ ಯೇಸು ಕ್ರಿಸ್ತನಾದ ಒಬ್ಬನೇ ಕರ್ತನು; ಅವನ ಮುಖಾಂತರ ಸಮಸ್ತವು ೪); ಮತ್ತು ನಾವು ಅವನ ಮುಖಾಂತರ ೫).

೧. ಅಂದರೆ ಯೇಸು ಕ್ರಿಸ್ತನ ವಿಶ್ವಾಸದಿಂದ ತತ್ವವನ್ನು ಬಲ್ಲವರಾದ ನಮಗೆ.

೨. ಸತ್ಯವಾದ ಪೂರ್ವಾರ್ಥದ ಪ್ರಕಾರ ಸೃಷ್ಟಿಕರ್ತನೇ ದೇವರಾಗಿದ್ದಾನೆ; ಮನುಷ್ಯಜನಾದ ಯೇಸು ಕ್ರಿಸ್ತನು ಅನ್ಯಾರ್ಥದ ಪ್ರಕಾರವೇ ದೇವರಾಗಿದ್ದಾನೆ. ಯೋಹ. ೧೦, ೩೬.

೩. ಅವನಿಗಾಗಿ ಉಂಟಾಗಿದ್ದೇವೆ; ಏನಂದರೆ ಅವನನ್ನು ಶಿಲಿದುಕೊಂಡು, ಅವನ ಅನ್ಯೋನ್ಯದಲ್ಲಿ ಶೇರುವ ಉದ್ದಿಶ್ಯವಾಗಿಯೇ ಹುಟ್ಟಿದ್ದೇವೆ.

೪. ದೇವರಿಗೆ ಏಕಚಾಪವಾಗಿರುವಂಥ, ಸೃಷ್ಟಿಯನ್ನು ನಿರ್ಮಿಸಿದಂಥ, ಅನಾದಿಯಾದ ವಾಕ್ಯವೂ ಮನುಷ್ಯನಾಗಿ ಹುಟ್ಟಿದ ಯೇಸು ಕ್ರಿಸ್ತನೂ ಒಂದೇ ಪೂರ್ವಾರ್ಥ ಎರಡಲ್ಲ ಯೋಹ. ೧, ೧—೩. ೧೪. ಕೊಲೊ. ೧, ೧೬—೨೦.

೫. ಯೇಸು ಕ್ರಿಸ್ತನು ಮನುಷ್ಯ ಚಾಪವುಳ್ಳ ನಮ್ಮ ಏಕಮಧ್ಯಸ್ಥನಾಗಿದ್ದು, ಯೋಹ. ೬, ೫೩. ೧ ತಿಮೊ. ೨, ೫. ನಮಗೆ ನೂತನವಾದ ಆತ್ಮಚಾಪವನ್ನು ಎಫೆ. ೨, ೧೦. ಉಂಟು ಮಾಡಿದ್ದಾನೆ. ಮನುಷ್ಯ ಚಾಪದ ಪ್ರಕಾರ ನಮಗೆ ಕರ್ತನಾಗಿ, ಪರಲೋಕ ಭೂಲೋಕಗಳಲ್ಲಿರುವ ಸರ್ವಾಧಿಕಾರವನ್ನು ಪಡದು ಕಾಂಪಿದ್ದಾನೆ. ಅವನು ದೇವರಾಗಿದ್ದರೂ, ಪರಜನರಲ್ಲಿ ವಾಡಿಕೆಯಾದ ಅನೇಕ ದೈವ ಪೂಜೆಯವಾಸನೆಯಾದರೂ ಕ್ರೈಸ್ತರ ಮನಸ್ಸಿನಲ್ಲಿರುವದಿಲ್ಲ.

೧ ಕೊರಿ. ೮, ೭—೧೩.

೩) ಆದರೂ ವಿಗ್ರಹ ಬಲಿ ತಿನ್ನುವದರಿಂದ ಸಹೋದರನಿಗೆ ಇಡರು ಮಾಡುವದು ಪಾಪವಾಗಿದೆ. ವ. ೭—೧೩.

ಅ) ವಿಗ್ರಹ ಬಲಿ ಭಕ್ಷಣವು ಕೆಲವರಿಗೆ ಇಡುರಾಗುತ್ತದೆ.

ವ. ೭. ಕ್ರೈಸ್ತರೆಲ್ಲರಿಗೆ ಒಂದು ಪ್ರಕಾರದ ತಿಳುವಿಕೆ ಇದ್ದರೂ, ಎಲ್ಲರು ವಿಗ್ರಹಗಳ ಶೂನ್ಯತ್ವವನ್ನು ಸಂಪೂರ್ಣವಾಗಿ ಬಲ್ಲವರಾಗಿರುವದಿಲ್ಲ. ಕೆಲವರು ವಿಗ್ರಹಗಳು ಏನಾದರೂ ಉಂಟೆಂಬ ಭಾವನೆಯನ್ನು ಪೂರ್ಣವಾಗಿ ಮರತು ಬಿಡದೆ, ಮತ್ತೊಬ್ಬರನ್ನು ಅನುಸರಿಸಿ, ವಿಗ್ರಹ ಬಲಿ ಭಕ್ಷಣೆಯನ್ನು ಮಾಡಿದರೆ, ಅದು ಸಾಧಾರಣವಾದ ಮಾಂಸವೆಂದು ತಿಳಿಯದೆ, ದೇವಾರ್ಪಿತವಾದದ್ದೆಂದು ನೆನಸುತ್ತಾರೆ. ಹೀಗಿರಲಾಗಿ ವಿಗ್ರಹ ಬಲಿಯಾದ ಮಾಂಸದ ಭಕ್ಷಣೆ ಅನುಜ್ಞಾತವೆಂದು ತಿಳಿಯದವರಾಗಿ ತಿನ್ನುವದರಿಂದ, ಅವರ ಮನಸ್ಸಾಕ್ಷಿಗೆ ದೋಷ ಉಂಟಾಗುತ್ತದೆ.

ಇ) ಇಂಥಾ ಇಡರು ಇಡುವದು ಪಾಪವಾಗಿದೆ. ವ. ೮—೧೩.

ವ. ೮. ಆಹಾರದಿಂದ ದೇವರ ದೃಷ್ಟಿಯಲ್ಲಿ ನಮಗೆ ಯೋಗ್ಯತೆ ಬರುವದಿಲ್ಲ; ಯಾಕಂದರೆ ತಿನ್ನುವದರಿಂದ ಹೆಚ್ಚಾಗುವದಿಲ್ಲ, ತಿನ್ನದೆ ಇರುವದರಿಂದ ಕಡಿಮೆ ಯಾಗುವದಿಲ್ಲ. ೯. ಆದರೆ ಈ ಸ್ವಾಧೀನತ್ವ ಪ್ರಯೋಗವು ಹೆಚ್ಚು ತಿಳುವಿಕೆಯಿಲ್ಲದವರಿಗೆ ಪಾಪದ ಹೇತುವಾದೀತೆಂಬ ಭಯ ಉಂಟು. ೧೦. ಯಾಕಂದರೆ ವಿಗ್ರಹ ಬಲಿ ಭಕ್ಷಣೆಯಲ್ಲಿ ದೋಷವಿಲ್ಲವೆಂದು ಬಲ್ಲವನಾದ ನೀನು ವಿಗ್ರಹದ ಮನೆಯಲ್ಲಿ ಊಟಕ್ಕೆ ಕೂತು ಕೊಂಡಿರುವದನ್ನು ಕಂಡ ಅಲ್ಪ ಜ್ಞಾನವುಳ್ಳ ಜೊತೆ ಕ್ರೈಸ್ತನು ನಿನ್ನನ್ನು ಅನುಸರಿಸಿ, ಸಂಶಯ ಮನಸ್ಸಾಕ್ಷಿಯಿಂದ ಬಲಿ ಮಾಂಸವನ್ನು ತಿಂದರೆ, ಪಾಪ ಮಾಡ್ಯಾನಲ್ಲಾ? ೧೧. ಹಾಗಾದರೆ ನೀನು ಬಲ್ಲವನನ್ನಿಸಿ ಕೊಂಡು, ಹೆಮ್ಮೆಯಿಂದ ಮಾಡುವ ಸ್ವಾಧೀನತ್ವ ಪ್ರಯೋಗದ ದೆಸೆಯಿಂದ ಕ್ರಿಸ್ತನು ಅವನಿಗಾಗಿ ಸಾಯುವಷ್ಟು ಪ್ರೀತಿ ಮಾಡುವ ಹಾಗೆ ಪ್ರಿಯನೆಂದೆಣಿಸಿದ ಬಲಹೀನನಾದ ನಿನ್ನ ಸಹೋದರನು, ಅವನ ಮನಸ್ಸಾಕ್ಷಿಯು ಅಧಿಕಾಧಿಕ ಮಲಮಯವಾಗುವದರಿಂದ, ಕಟ್ಟ ಕಡೆಯಲ್ಲಿ ನಾಶವಾದಾನು. ಅವನಿಗಾಗಿ ನಿನ್ನ ಸ್ವಾಧೀನತ್ವದ ಪ್ರಯೋಗವನ್ನು ಸ್ವಲ್ಪ ನಿಲ್ಲಿಸಿ, ಅಲ್ಪವಾದ ಮಾಂಸ ಭಕ್ಷಣೆಯನ್ನು ಬಿಡಲೊಲ್ಲೆಯಾ? ೧೨. ಈ ಪ್ರಕಾರವಾಗಿ ಸಹೋದರರು ತಮ್ಮ ಮನಸ್ಸಾಕ್ಷಿಗಳನ್ನು ಅತಿಕ್ರಮಿಸಿ, ಅಪರಾಧಿಗಳಾಗುವ ಹಾಗೆ ಅವರನ್ನು ಮೋಸ ಗೊಳಿಸಿ, ಅನ್ಯಾಯ ಮಾಡಿದರೆ, ಯೇಸು ಕ್ರಿಸ್ತನು ಆರಂಭಿಸಿದ ಕೆಲಸವನ್ನು ಕೆಡಿಸಿ, ಅವನ ಶ್ರಮ ಮರಣಗಳ ಫಲವನ್ನು ಅಪಹರಿಸಿ, ನೆಗ್ಗಿದ ದಂಟು ಮುರಿಯೆ ಬಾರದೆಂಬ ಮನಸ್ಸುಳ್ಳ ಆತನಿಗೆ ಅತ್ಯಂತ ವಿರೋಧವಾಗಿ ನಡೆದು ಕೊಳ್ಳುತ್ತೀರಿ.

ಈ) ಅನುಮಾನೋಕ್ತಿ.

ವ. ೧೩. ಆದ್ದರಿಂದ, ನಾನು ತಿನ್ನುವ ಆಹಾರವು ಸಹೋದರನಿಗೆ ಉರುಳಾಗುತ್ತದಾದರೆ, ಸಹೋದರನಿಗೆ ಎಡರು ಆಗದಂತೆ ಬೇಕಾದರೆ, ಬಲಿಮಾಂಸವನ್ನು ಮಾತ್ರವಲ್ಲಾ ಯೆಲ್ಲಾ ಮಾಂಸವನ್ನೂ ತಿನ್ನುವದಕ್ಕೆ ವಿಹಿತವಾದ ಪದಾರ್ಥಗಳನ್ನೂ ಸರ್ವಕಾಲಕ್ಕೂ ಬಿಟ್ಟು ಬಿಟ್ಟೇನು.

ಶಿಗಿಲ್ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ರ.
೧ ಕೊರಿ. ೯, ೧—೬.

ಸ. ೯.

ಪೂರ್ವಗ್ರ.

ಪೌಲನು ಕ್ರೈಸ್ತಸ್ವತಂತ್ರವನ್ನು ಪ್ರಯೋಗಿಸದೆ, ತನ್ನನ್ನು ತಾನೆ ಅಲ್ಪಗಳಿದ ಪದ್ಧತಿಯನ್ನು ಸಭೆಯವರಿಗೆ ಮಾದರಿಯಾಗಿ ತೋರಿಸುತ್ತಾನೆ.

೧. ಅಪೊಸ್ತಲನಾಗಿ ಬಳಸಬಹುದಾದ ಮಾನ್ಯ ಸ್ವತಂತ್ರಗಳನ್ನು ವ. ೧—೧೪.
೨. ತನ್ನನ್ನು ತಾನೆ ಅಲ್ಪಗಳಿಯುವ ಮನಸ್ಸಿನಿಂದ ಬಳಸದೆ, ವ. ೧೫—೨೩.
೩. ಪರದ ಪ್ರತಿ ಫಲವನ್ನು ನೋಡಿ, ತನ್ನ ಹಾಗೆಯೆ ತಮ್ಮನ್ನು ಅಲ್ಪಗಳಯ ಬೇಕೆಂದು, ಸಭೆಯವರಿಗೆ ಬುದ್ಧಿ ಹೇಳುತ್ತಾನೆ. ವ. ೨೪—೨೭.

೧. ಅಪಾಸ್ತಲನಿಗೆ ಇರುವ ಮಾನ್ಯ ಸ್ವತಂತ್ರಗಳು.

ವ. ೧—೩. ಪೌಲನು ಅಪೊಸ್ತಲನಾದ ತನಗಿರುವ ಗುರುತ್ವವನ್ನು ಪ್ರಮಾಣಿಸುತ್ತಾನೆ.

ವ. ೧. ನಾನು ಸ್ವತಂತ್ರನಲ್ಲವೋ? ಸಾಮಾನ್ಯವಾದ ಕ್ರೈಸ್ತರ ಮಾನ್ಯಗಳಲ್ಲದೆ, ಅಪೊಸ್ತಲನಾದ ನನಗೆ ಅಧಿಕವಾದ ಮಾನ್ಯಗಳಿಲ್ಲವೊ? ಹನ್ನೆರಡು ಮಂದಿಯ ಹಾಗೆಯೆ ನನ್ನನ್ನು ಸಹಾ ಯೇಸು ತಾನೆ ಕರದನಲ್ಲವೊ? ನಿಮ್ಮ ಸಭೆಯನ್ನು ಸ್ಥಾಪಿಸಿದ್ದರಿಂದ ನಾನು ಅಪೊಸ್ತಲನೆಂಬದನ್ನು ಪ್ರಮಾಣಿಸಿದೆನಲ್ಲವೊ? ನೀವು ನಿಮ್ಮ ಸಭೆಯ ಸ್ಥಾಪನೆಯೂ ಕ್ರಿಸ್ತನ ಕೃಪೆ ಬಲಗಳಿಂದ ಉಂಟಾದ ನನ್ನ ಅಪೊಸ್ತಲೋದ್ಯೋಗದ ಫಲವಲ್ಲವೋ? ೨. ಅದು ನಿಶ್ಚಯ: ಬೇರೆ ಯಾವ ಕಡೆಯವರೂ ನನ್ನನ್ನು ಅಪೊಸ್ತಲನೆಂದು ಸನ್ಮಾನಿಸದೆ ಹೋದರೂ, ನಿಮಗೆ ಅಪೊಸ್ತಲನೆಂದು ಕಾಣಿಸಿ ಕೊಂಡಿದ್ದೇನೆ; ಮತ್ತು ನೀವು ನನ್ನ ಅಪೊಸ್ತಲೋದ್ಯೋಗಕ್ಕೆ ಮೊತ್ತಿದ ಮುದ್ರೆಯಂತಿದ್ದೀರಿ. ಹ್ಯಾಗೆಂದರೆ, ನನ್ನ ಪರಿಮುಖವಾಗಿ ನೀವೂ ವಿಶ್ವಾಸವನ್ನೂ ಅಸಾಧಾರಣವಾದ ಅಪೊಸ್ತಲರ ಆತ್ಮವರಗಳನ್ನೂ ಹೊಂದಿದ್ದೀರಿ. ಸ. ೧, ೭. ೧೨, ೭ ೩. ನನಗೆ ಅಪೊಸ್ತಲಾಧಿಕಾರವು ಹ್ಯಾಗೆ ಉಂಟಾಯಿತೆಂಬದನ್ನು ಶೋಧಿಸುವವರಿಗೆ ಇದು ತಕ್ಕ ಪ್ರತಿಪಾದನವು.

೨. ಅಪಾಸ್ತಲನ ಸ್ವತಂತ್ರಗಳು.

ವ. ೪. ನಾನು ಅಪೊಸ್ತಲನಾಗಿರುವದರಿಂದ, ಸಭೆಗಳ ಹಣದಿಂದ ಬದುಕುವದಕ್ಕೂ, ೫. ಮದುವೆ ಮಾಡಿ ಕೊಂಡ ಕರ್ತನ ಸಹೋದರರಾದ ಯಾಕೋಬ ಯೂದರು ಪೇತ್ರನು ಮುಂತಾದ ಅಪೊಸ್ತಲರು ಮಾಡುವ ಪ್ರಕಾರ, ಮದುವೆ ಮಾಡಿ ಕೊಂಡು ಸಭೆಗಳ ಹಣದಿಂದ ಕಾಲಕ್ಷೇಪ ಮಾಡುವದಕ್ಕೂ ಅಧಿಕಾರಿಯಾಗಿದ್ದೇನೆ. ೬. ಅಥವಾ ಕೈಕಷ್ಟವಿಲ್ಲದೆ, ಶಿಷ್ಯರ ಕಡೆಯಿಂದ ಪೋಷಿಸಿ ಕೊಳ್ಳುವದಕ್ಕೆ ನನಗೂ ಬರ್ನಬನಿಗೂ ಮಾತ್ರ ಅಧಿಕಾರವಿಲ್ಲವೋ?

೧ ಕೊರಿ. ೯, ೭—೧೪.

ಈ ಅಧಿಕಾರವನ್ನು

೧. ಸ್ವಜಾತಿಕ ಸಾಮ್ಯಗಳಿಂದಲೂ,

ವ. ೭. ರಾಣುವೆಯವನು ಸಂಬಳವಿಲ್ಲದೆ ಸೇವೆ ಮಾಡನು; ದ್ರಾಕ್ಷೆ ತೋಟದವನು ತೋಟದ ಫಲವನ್ನು ತಿನ್ನುತ್ತಾನೆ; ಕುರುಬನು ಮಂದೆಯ ಹಾಲು ಉಣ್ಣುತ್ತಾನೆ. ಅದೇ ಪ್ರಕಾರ ಕ್ರಿಸ್ತನ ರಾಣುವೆಯವನೂ, ಆತನ ದ್ರಾಕ್ಷೇತೋಟದ ಊಳಿಗದವನೂ, ಆತನ ಕುರಿಗಳ ಮೈಯಿಸುವವನೂ ಯೆಂದೆಣಿಸಿ ಕೊಳ್ಳುವ ಸುವಾರ್ತಾ ಬೋಧಕನು ಸಹಾ ತನ್ನ ಉದ್ಯೋಗದಿಂದ ಪೋಷಣೆ ಮಾಡಿಕೊಳ್ಳುವದು ಯುಕ್ತವಾಗಿದೆ.

೨. ಹಳೇ ವಾಡಂಬಡಿಕೆಯ ಬಾಧನೆಯಿಂದಲೂ, ಪ್ರಮಾಣಿಸುತ್ತಾನೆ.

ವ. ೮. ಇದನ್ನು ಮನುಷ್ಯಾಲೋಚನೆಯ ಪ್ರಕಾರ ಸ್ವಬುದ್ಧಿಯಿಂದಲೇ ನಾನು ನುಡಿಯುವದಿಲ್ಲಾ. ದೇವರು ತಾನೆ ಮೋಶೆಯ ಮುಖದಿಂದ ಅಪ್ಪಣೆ ಕೊಟ್ಟಿದ್ದಾನೆ, ಏನಂದರೆ ವ. ೯. ದ್ವಿ. ನಿ. ೨೫, ೪ಲ್ಲಿ ಕಣಾ ತುಳಿಯುವ ಯತ್ತಿನ ಬಾಯಿ ಕಟ್ಟ ಬಾರದೆಂದು ಬರದದೆ. ಇದರಲ್ಲಿ ಯತ್ತುಗಳ ಸಂಗತಿ ಮುಖ್ಯವಲ್ಲಾ; ಯಾರ ಕಷ್ಟದ ಫಲವನ್ನು ಅನುಭವಿಸಿ ಕೊಳ್ಳುತ್ತೇವೋ, ಅಂಥವರಿಗೆ ನಾವು ಕೃತಜ್ಞರಾಗಿರ ಬೇಕೆಂಬದೆ ಈ ಕಟ್ಟಳೆಯ ನಿಜ ಉದ್ದಿಶ್ಯ. ೧೦. ಗೆಯ್ಯುವ ಪಶುಗಳು ಸಹಾ ತಮ್ಮ ಕಷ್ಟದ ಫಲವನ್ನು ಹೊಂದ ಬೇಕೆಂದು ದೇವರು ಚಿತ್ತೈಸುತ್ತಾನಾದರೆ, ಗೆಯ್ಯುವ ಮನುಷ್ಯರಿಗೆ ಹಾಗೆ ಆಗ ಬೇಕೆಂದು, ಅಧಿಕವಾಗಿ ಚಿತ್ತೈಸುತ್ತಾನೆಂದು, ತಿಳಿಯ ತಕ್ಕದ್ದು. ದೇವರ ವಾಕ್ಯವೆಲ್ಲಾ ಮನುಷ್ಯರಿಗೋಸ್ಕರ ಕೊಟ್ಟಿರಲಾಗಿ, ಈ ಮಾತು ಸಹಾ ತಮಗೆ ತಾಗುತ್ತದೆಂದು, ಎಣಿಸ ಬೇಕು. ಹಾಗಾದರೆ ಗೆಯ್ಯುವವರೆಲ್ಲರು ತಮ್ಮ ಕೆಲಸದಿಂದ ಪೋಷಿಸಿ ಕೊಳ್ಳುವದು ದೇವರ ವಾಕ್ಯಕ್ಕೆ ಅನುಸಾರವಾಗಿರುವದರಿಂದ, ಸುವಾರ್ತೆಯ ಬೋಧಕನಿಗೂ ಇದೇ ನ್ಯಾಯವಿರ ಬೇಕು. ೧ ತಿಮೊ. ೫, ೧೭. ೧೧. ಅವರಿಗೆ ಸಿಕ್ಕುವ ಕೂಲಿಗಿಂತ ಅವರ ಕಷ್ಟವು ಬಹಳ ಅಧಿಕವಾಗಿರುವದರಿಂದ ಈ ಮಾತು ಅವರಿಗೆ ಅಧಿಕವಾಗಿ ಒಪ್ಪುತ್ತದೆ. ಅವರು ಆತ್ಮಿಕವಾದದ್ದನ್ನು ಬಿತ್ತಿ, ಆತ್ಮಿಕವಾದ ನಿತ್ಯ ಪದಾರ್ಥಗಳನ್ನು ಕೊಡುತ್ತಾ ಇರಲಾಗಿ, ದೇಹ ಪೋಷಣೆ ಹೊಂದುವದು ವಿಶೇಷವೋ? ೧೨. ಆದರೆ ಮತ್ತೊಬ್ಬರು, ಸುಳ್ಳು ಅಪೊಸ್ತಲರು ಸಹಾ, ೨ ಕೊರಿ. ೧೧, ೨೦. ಈ ಅಧಿಕಾರವನ್ನು ಉಪಯೋಗಿಸಿ ನಿಮ್ಮಿಂದ ಪೋಷಿಸಿ ಕೊಂಡರಾದರೆ, ನಿಮ್ಮ ಸಭೆಯನ್ನು ಸ್ಥಾಪಿಸಿದವನಾದ ನಾನು ಹಾಗೆ ಮಾಡಿದರೇನು ಹೆಚ್ಚು? ಆದರೆ ಈ ನನ್ನ ಅಧಿಕಾರವನ್ನು ನಾನು ಪ್ರಯೋಗಿಸದೆ, ಸ್ವಂತ ಲಾಭದ ಮೇಲೆ ದೃಷ್ಟಿ ಇಡುತ್ತೇನೆಂಬ ಅಪವಾದಕ್ಕೆ ಯೆಡೆ ಬಿಟ್ಟು ಸುವಾರ್ತೆಗೆ ದೋಷವನ್ನು ಹುಟ್ಟಿಸ ಬಾರದೆಂದು, ಅಶನವಸನಾದಿಗಳ ಕೊರತೆ ಸ. ೪, ೧೧. ಮುಂತಾದ ಉಪದ್ರವಗಳನ್ನು ಸಹಿಸುತ್ತೇನೆ. ೧೩. ಆದಾಗ್ಯೂ ಉದರ ಪೋಷಣಕ್ಕೆ ಬೇಕಾದದ್ದನ್ನು ತಕ್ಕೊಳ್ಳುವದು ಸುವಾರ್ತೆಯ ಪ್ರಸಂಗಿಗೆ ಅನುಚಿತವೆಂದು, ನಿಮ್ಮಲ್ಲಿ ಯಾರಾದರೂ ನೆನಸದ ಹಾಗೆ, ಹಳೇ ವೊಡಂಬಡಿಕೆಯಲ್ಲಿ ದೇವಾಲಯದಲ್ಲಿ ಪರಿಶುದ್ಧ ಕ್ರಿಯೆಗಳನ್ನು ನಡಿಸುವವರ ನೆನಪು ಮಾಡಿರಿ. ಲೇವಿಯರೂ ಯಾಜಕರೂ ಪರಿಶುದ್ಧ ಸ್ಥಾನಕ್ಕೆ ಬರುವ ಬಲಿಗಳಿಂದಲೂ ಕಾಣಿಕೆಗಳಿಂದಲೂ ಉಪಜೀವನ ಮಾಡುತ್ತಾರಲ್ಲಾ? ೧೪. ಅದೇ ಪ್ರಕಾರ ಕ್ರಿಸ್ತನೂ, ಮತ್ತಾ. ೧೦, ೧೦. ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದ ಉಪಜೀವಿಸ ಬೇಕೆಂದು, ನೇಮಿಸಿದ್ದಾನೆ.

೫೬–೨೦ ಅಪೊ. ಚ. ೨೬. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

೧ ಕೊರಿ. ೯, ೧೫—೨೨.

೩. ಪೌಲನು ತನ್ನನ್ನು ತಾನೆ ಅಲ್ಲಗಳೆಯುವ ಮನಸ್ಸಿನಿಂದ ತನ್ನ ಅಪಾಸ್ತಲಾಧಿಕಾರವನ್ನು ಉಪಯೋಗಿಸಲಿಲ್ಲಾ.

ಅ) ಜೀತ ಹೊಂದುವ ಅಧಿಕಾರವನ್ನು ಉಪಯೋಗಿಸಲಿಲ್ಲಾ. ವ. ೧೫—೧೮.

ವ. ೧೫. ಆದರೆ ನಾನು ಒಂದನ್ನಾದರೂ ಲಭಿಸಲಿಲ್ಲಾ. ಹೀಗೆ ಬರದರೂ, ಇನ್ನು ಮುಂದೆ ನಿಮ್ಮಿಂದ ನ್ಯಾಯವಾದ ಆದಾಯವು ಬರ ಬೇಕೆಂಬ ಆಶೆಯಿಂದ ಬರೆಯುವದಿಲ್ಲಾ. ಅನ್ಯಾರ್ಥದ ಕೀರ್ತಿಯನ್ನು ಕಳಕೊಳ್ಳುವದಕ್ಕಿಂತ ನನಗೆ ಸಾಯುವದು ವಾಸಿ. ೧೬, ಸುವಾರ್ತೆಯನ್ನು ಪ್ರಸಂಗಿಸುವದರಿಂದಲೇ ನನಗೆ ಅಭಿಮಾನ ಹುಟ್ಟುವದಿಲ್ಲಾ, ಅದು ನನ್ನ ಹಂಗು. ಹಂಗು ತೀರಿಸಿದರೆ, ಏನು ದೊಡ್ಡದು? ಪ್ರಸಂಗ ಮಾಡದೆ ಹೋದರೆ, ನನಗೆ ಅಯ್ಯೋ! ನನ್ನ ಕರ್ತನಿಗೆ ಅವಿಧೇಯನಾದರೆ, ನಾನು ಕೆಟ್ಟೆನು. ೧೭. ನನ್ನ ಹಂಗು ಸಂತೋಷದಿಂದ ಮಾಡುವದಾದರೆ, ಅದನ್ನು ಸ್ವಾರ್ಥವಿಲ್ಲದೆ ಮಾಡುತ್ತೇನೆಂಬ ಸ್ವಾನುಭವವೇ ನನಗೆ ಆತ್ಮತೃಪ್ತಿ ಯೆಂಬ ಜೀತವಾಗಿದೆ; ಆದರೆ ಕೆಲಸವನ್ನು ಅರೆ ಮನಸ್ಸಿನಿಂದ ಮಾಡಿದರೆ, ಅದು ಹ್ಯಾಗಾದರೂ ನನಗೆ ವೊಪ್ಪಿಸಿದ್ದಾಗಿದೆ. ಅದನ್ನು ಮಾಡುವ ಹಂಗು ಕಳದು ಹೋಗುವದಿಲ್ಲಾ. ೧೮. ನನ್ನ ಪ್ರತಿಫಲವೇನೆಂದು ಬಲ್ಲಿರೋ? ಲಾಭವಿಲ್ಲದೆ, ಮತ್ತೊಬ್ಬರಿಗೆ ಖರ್ಚು ಬೀಳದೆ, ನಾನು ಸುವಾರ್ತೆಯನ್ನು ಪ್ರಸಂಗಿಸುವದರಿಂದ ನನ್ನ ಏಕೋಭಾವಕ್ಕೆ ದೃಷ್ಟಾಂತ ಕೊಟ್ಟು, ದೂಷಕರ ದೂರುಗಳನ್ನೆಲ್ಲಾ ನಿವಾರಿಸಿ, ಕರ್ತನಿಗೆ ಅನೇಕ ಪ್ರಾಣಿಗಳನ್ನು ದುಡಿಯುವದೇ.

ಪರಿಶಿಷ್ಟ. ಪರಜನರಲ್ಲಿಯೂ ರಾಜಾಧಿರಾಯರಲ್ಲಿಯೂ ವಾಡಿಕೆಯಾದ ಮಾನುಷಪುಗ್ಗಿದ ಚಾಪನೆ ಪೌಲನ ಮನಸ್ಸಿಗೆ ಯಿಷ್ಟಾನಿಷ್ಟ ದೂರವಾಗಿತ್ತು. ದೇವರ ಅತ್ಯಂತ ಕೃಪೆಯಿಂದ ತನಗೆ ನೇಮಕವಾದ ಮಹಿಮೆಯನ್ನು ಅಜಾಗ್ರತೆಯಿಂದ ಕಳಕೊಳ್ಳುವ ಭಯವಲ್ಲದೆ, ಅಧಿಕವಾದ ಕಷ್ಟದಿಂದ ಅಧಿಕವಾದ ಪುಗ್ಗಿಪಡ ಕೊಳ್ಳ ಬಹುದೆಂಬ ಆಲೋಚನೆ ಅವನ ಮನಸ್ಸಿನಲ್ಲಿ ತಾರಲೀ ಇಲ್ಲ.

ಇ) ಪ್ರೀತಿಯಿಂದ ತನ್ನ ಸ್ವತಂತ್ರವನ್ನು ಯೆಲ್ಲಾ ವಿಷಯವಾಗಿ ಅಲ್ಲಗಳೆಯುತ್ತೇನೆಂದು, ಹೇಳುತ್ತಾನೆ. ವ. ೧೯—೨೩.

ವ. ೧೯. ನಾನು ಅಪೊಸ್ತಲನೂ ಕ್ರೈಸ್ತನೂ ಆಗಿದ್ದು, ವಿಶ್ವಾಸದಿಂದ ಯಾರ ಅವಲಂಬನದಲ್ಲಿಯೂ ಇರದೆ, ಯಾವ ಮಾನುಷ ಅಧಿಕಾರಕ್ಕೂ ಬಲಕ್ಕೂ ಒಳಗಾಗದೆ ಇದ್ದಾಗ್ಯೂ, ಪ್ರೀತಿಯಿಂದ ನಾನೇ ನನ್ನನ್ನು ತಗ್ಗಿಸಿ ಕೊಂಡು, ಅನೇಕರನ್ನು ದುಡಿಯುವ ಬಗ್ಯೆ, ಆಳಿನಂತೆ ಯೆಲ್ಲರಿಗೂ ವಪ್ಪಿಗೆಯಾಗುವದಕ್ಕೆ ಯತ್ನಿಸಿದೆನು. ೨೦. ಯೆಹೂದರಲ್ಲಿ ಅವರ ಹಾಗೆಯೆ ಬದುಕಿ, ಪೂರ್ವಿಕರಿಂದ ಬಂದ ಮರ್ಯಾದೆ ವಸ್ತ್ರ ಭೂಷಣ ಭಾಷೆ ವಿದ್ಯೆ ಮುಂತಾದವುಗಳನ್ನು ಬಳಸಿ ಕೊಳ್ಳುತ್ತೇನೆ. ನನ್ನ ಮನಸ್ಸು ನಿಯಮದಿಂದ ಬಿಡುಗಡೆಯಾಗಿ ಇದ್ದಾಗ್ಯೂ, ಅದಕ್ಕೆ ಬಂಧಿತರಾಗಿರುವ ಯೆಹೂದರನ್ನು ದುಡಿಯುವ ಬಗ್ಯೆ, ಅವರ ನಿಯಮಾಚಾರಗಳನ್ನು ಸಹಾ ನಡಿಸುತ್ತೇನೆ. ೨೧. ಪರಜನರಾಗಿ ಹುಟ್ಟಿ ಮೋಶೆಯ ನಿಯಮವಿಲ್ಲದವರು ಆಹಾರ ನಿಬಂಧನೆ ಮುಂತಾದವುಗಳನ್ನು ಕೈಕೊಳ್ಳ ಬೇಕೆಂದು, ನಾನು ಆಜ್ಞಾಪಿಸುವದಿಲ್ಲಾ; ಯಾಕಂದರೆ ದೇವರ ಮುಂದೆ ನಿಯಮವಿಲ್ಲದವನಲ್ಲದಿದ್ದರೂ, ಕ್ರಿಸ್ತನ ನಿಯಮವಾದ ಪ್ರೀತಿಯ ನಿಯಮಕ್ಕನುಸಾರವಾಗಿ ನಡ ಕೊಂಡು, ಪರಜನರನ್ನು ಕ್ರಿಸ್ತನಿಗೆ ವಶ ಮಾಡ ಬೇಕೆಂದಿದ್ದೇನೆ. ೨೨. ಜ್ಞಾನ ಸಾಲದೆ, ಐಹಿಕ ರಾಜಕಾರಗಳಲ್ಲಿ ಭೇದಾಭೇದ ಮಾಡುವ ಯೆಹೂದರಿಗೂ ಪರಜನರಿಗೂ, ಯೆಹೂದರಾದ ಕ್ರೈಸ್ತರಿಗೂ

೧ ಕೊರಿ. ೯, ೨೩ — ೨೭.

ಪರಜನರಾದ ಕ್ರೈಸ್ತರಿಗೂ, ಈ ಮಧ್ಯಮ ಕಾರ್ಯಗಳಲ್ಲಿ ಆಗುವಷ್ಟು ಸಮಾನನಾಗಿ ನಡ ಕೊಳ್ಳುವದಕ್ಕೆ ನೋಡುತ್ತೇನೆ. ಎಲ್ಲಾ ಕಡೆಯಲ್ಲಿಯೂ ಕೆಲವರನ್ನು ರಕ್ಷಿಸಬೇಕೆಂದೂ, ೨೩. ನಾನೇ ಸುವಾರ್ತೆಯ ಆದರಣೆ ಶಕ್ತಿಗಳನ್ನು ಹೆಚ್ಚು ಹೆಚ್ಚಾಗಿ ಪಡ ಕೊಳ್ಳ ಬೇಕೆಂದೂ, ಆ ವಿಷಯದಲ್ಲಿ ಸಮಸ್ತರಿಗೂ ಸಮರ್ಪಕನಾಗ ಲಿಕ್ಕೆಸಿ, ಯೆಲ್ಲರಿಗೆ ಯೆಲ್ಲರಂತೆ ಆದೆನು.

ಉ) ಈ ಪ್ರಕಾರ ತನ್ನನ್ನು ಅಲ್ಲಗಳಿಯುವದಕ್ಕೆ ಕಾರಣ.

೨೪. ಓಟದ ರಂಗದಲ್ಲಿ ೧) ಓಡುವವರು ಯೆಲ್ಲರು ಓಡುತ್ತಾರೆ, ಆದರೆ ಒಬ್ಬನು ೨) ಬಹುಮಾನ ಶಕ್ಕಾಳ್ಳುತ್ತಾನೆಂದು ಅರಿಯರಾ? ಹಿಡಿದು ಕೊಳ್ಳುವ ಹಾಗೆಯೇ ಓಡಿರಿ. ೨೫. ಮತ್ತು ಜಟ್ಟಿಗಳೆಲ್ಲರು ಯೆಲ್ಲವುಗಳಲ್ಲಿ ೩) ಮಿತಿಯಾ ಗಿದ್ದಾರೆ. ಅವರು ಲಯವಾಗುವ ೪) ಕಿರ್ತೀಟವನ್ನು ಶಕ್ಕಾಳ್ಳುವ ಹಾಗೆ, ನಾವೋ ನಿರ್ಲಯವಾದದ್ದನ್ನು. ೨೬. ಆದದರಿಂದ ನಾನು ಹಾಗೆಯೇ ಓಡುತ್ತೇನೆ, ನಿಶ್ಚಯವಿಲ್ಲದ ಹಾಗಲ್ಲ; ಹಾಗೆಯೇ ೫) ಗುದ್ದಾಡುತ್ತೇನೆ, ಘಾಳಿಯನ್ನು ಬಡಿ ಯುವವನ ಹಾಗಲ್ಲ. ೨೭. ಆದರೆ ಒಂದು ವ್ಯೆಳೆ ಬ್ಯೇರಾಬ್ಬರಿಗೆ ಸಾರಿದ ೬) ಮ್ಯೇಲೆ ನಾನೇ ಅಗದವನಾಗಿ ಹೊಗದ ಹಾಗೆ, ನನ್ನ ಶರೀರವನ್ನು ಕುಟ್ಟಿ ೭) ಕೆಳಗೆ ಮಾಡುತ್ತೇನೆ.

೧. ಕಾರಿಂಥರು ತನ್ನ ಪಾಗೆ ತಮ್ಮನ್ನು ಅಲ್ಲಗ ಳೆಯ ಬೇಕೆಂದು, ಯೆಚ್ಚರಿಸುವದಕ್ಕೆ ಅಪಾಸ್ತಲನು ಅವರಿಗೆ ಚನ್ನಾಗಿ ಗಾತ್ತು ಇರುವ ಸಾಮ್ಯವನ್ನು ಇಲ್ಲಿ ಉಪಯೋಗಿಸುತ್ತಾನೆ. ಪಾಗೈಂದರೆ, ಗ್ರೀಕ ದೇಶದ ಪುಲವು ಕಡೆಯಲ್ಲಿ ಪಾಗೈಗೋ ಪಾಗೆಯೆ ಮುಖ್ಯವಾಗಿ ಕಾರಿಂಥದ ಪತ್ತರ ಇರುವ ಇಸ್ತ್ಮವೆಂ ಬ ಚೂಕಂತದಲ್ಲಿ ಆಗ್ಯಾಗೈ ಮಪಾ ಜಟ್ಟಿ ಕಾಳಗ ಗಳೂ, ಮುಖ್ಯವಾಗಿ ಪಂಥದ ವಾಟಿಗಳೂ ನಡ ದವು. ಗೆದ್ದವನಿಗೆ ಪತ್ರಮಾಲೆ ಮಾತ್ರವೆ ಪ್ರಾಪ್ತಿ ಆದರೂ, ಸರ್ವ ಜನರಲ್ಲಿ ಮಪಾ ಮಾನವೂ ಕೀರ್ತಿಯೂ ಸಿಕ್ಕುತ್ತಿತ್ತು. ಅದೇ ರೀತಿಯಾಗಿ ಕ್ರೈಸ್ತ ರಾದ ನಾವೆಲ್ಲರು ಪರಕ್ಕೆ ಪಾಗೇಗುವ ವಿಶ್ವಾಸದ ವಾಟದಲ್ಲಿದ್ದು, ಜೀವ ಕಿರೀಟವನ್ನು ಅಪೇಕ್ಷಿಸು ತ್ತೇವೆ.

೨. ಸಾಮ್ಯದಲ್ಲಿ ಪೋಳಿದ ಪಾಗೆ, ನಿತ್ಯ ಜೀವದ ಕಿರೀಟವನ್ನು ವಾಬ್ಬ ಮಾತ್ರವೆ ಪಾಂದುತ್ತಾನೆಂಬ ಪಾಗಲ್ಲಾ; ಆದರೂ ಕರದಿರುವ ಅನೇಕರಲ್ಲಿ ದೇ ವರು ಆಡು ಕಾಂಯಿರುವ ಕೆಲವರು ಮಾತ್ರವೆ ಅದನ್ನು ಲಪಿಸುತ್ತಾರೆ. ಮತ್ತಾ. ೭, ೧೩. ಲೂಕ. ೧೩, ೨೪. ಮತ್ತಾ. ೨೦, ೧೬. ೨೨, ೧೪. ಲೂಕ. ೧೨, ೨೧. ೨ ಥೆಸ್ಸ. ೩, ೨. ಪೋಗಿರಲಾಗಿ ಮುಂ ದಿನ ಚಾಗ್ಯವನ್ನು ವಿಶ್ವಾಸದಿಂದ ಅರಸುವದು ಸಾ ಲದು; ಅದನ್ನು ಯುಕ್ತವಾದ ರೀತಿಯಿಂದ ಅರಸ ಬೇಕು.

೩. ಆ ಜಟ್ಟಿಗಳು ಅನೇಕ ತಿಂಗಳ ವರೆಗೆ ಆಪಾರ ಪಾನ ಮೊದಲಾದ ಈ ಸಮಸ್ತ ಚಾಗಗಳಲ್ಲಿ ಅತಿ ಕಠಿಣವಾದ ನಿಯಮವನ್ನು ಕೈ ಕಾಳ್ಳುತ್ತಾ, ತಮ್ಮನ್ನು ಕಾಳಗಕ್ಕೆ ಪಳಗಿಸಿ ಕಾಳ್ಳ ಬೇಕಾಯಿತು. ಅವರು ಪಾಗೆ ಮಾಡಿದರಾದರೆ, ಅವರಿಗಿಂತ ಬಪಳ ಅತಿ ಶಯವಾದ ಬಪುಮಾನವನ್ನು ಪಾಂದ ತಕ್ಕವ ರಾದ ನಾವು ಯೆಷ್ಟಾ ಅಧಿಕವಾಗಿ ನಮ್ಮನ್ನು ಅಲ್ಲ ಗಳಿಯ ಬೇಕು!

೫೬೨ ಅಪಾ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

೧ ಕೊರಿ. ೧೦, ೧—೨.

೪. ಆ ಮಾಲೆಯು, ಜನರಲ್ಲಿ ಬರುವ ಮಾನ ಮುಂತಾದ ಲೌಕಿಕವಾದ ಸಂಪತ್ತೆಲ್ಲಾ ಕೇಪಲ ಲಯವಾಗುವದಾಗಿದ್ದರೂ, ಅದಕ್ಕಾಸ್ಕರ ಜನರು ಅಷ್ಟು ಪ್ರಯಾಸ ಪಟ್ಟರೆ, ನಾವು ನಿರ್ಲಯವಾಗಿರುವ ಕಿರೀಟಕ್ಕಾಗಿ ಯೆಷ್ಟ್ವೀ ಸಾಧನೆಯನ್ನು ಮಾಡತಕ್ಕದ್ದು. ೧ ಪೇತ್ರ. ೧, ೪. ೨ ತಿಮೊ. ೪, ೮.

೫. ಮುಂಚಿನ ಸಾಮ್ಯವು ಪಂಥದ ವಾಟಿದಿಂದ, ಇದು ಮುಷ್ಟಿ ಯುದ್ಧದಿಂದ ಯೆತ್ತಿಯದೆ. ಅಪಾಸ್ತಲನು ಪೋಲುವದೇನಂದರೆ: ನಾನು ಘಾಳಿಯನ್ನು ಬಡಿಯುವವನ ಪೂಗೆ ಗುದ್ಯಾಡುವದಿಲ್ಲಾ; ಪೂರ್ಣ ಮನಸ್ಸಿನಿಂದ ಪೂರ್ತಾರಾಟಿ, ಯೆದುರಾಳಿಯನ್ನು ಪೂರ್ತಿಯಲ್ಲಿ ಪೂರ್ತಾಗ ಗಾಯಿಸದೆ, ಗುದ್ಯಾಡುತ್ತೇನೆ.

೬. ಅಂದರೆ, ಡಂಗುರ ಪೂರ್ತಾಕಿ, ಮತ್ತಾಬ್ಬರನ್ನು ಯುದ್ಧಕ್ಕೆ ಕರಿಯುವವನು ಕಡೆಯಲ್ಲಿ ತಾನೆ ಪಂಥಕ್ಕಿಟ್ಟ ದ್ದನ್ನು ಕಳಕಾಳ್ಳ ಬಾರದು. ಅಪಾಸ್ತಲನು ತನ್ನ ಸ್ವಂತ ಮಾದರಿಯಿಂದ ಯೆಲ್ಲಾ ಕ್ರೈಸ್ತರು ಬಿಡದೆ ತಮ್ಮನ್ನು ತಾವೆ ಅಲ್ಲಗಳಿಯುತ್ತಾ, ಜಾಗರವಾಗಿಯೆ ಇರ ಬೇಕೆಂಬ ಮಾತನ್ನು ಯೆಷ್ಟ್ವೀ ಪ್ರೌತ್ಪಚಿತವಾಗಿ ಸ್ಥಾಪಿಸುತ್ತಾನೆ!

೭. ಅಂದರೆ, ಕಣ್ಣೆಡೆಯಲ್ಲಿ ಕುಟ್ಟಿ, ಶತ್ರುವನ್ನು ಪರಾಜಿತನಾಗಿ ಕೈವಶ ಮಾಡಿ ಕಾಂಡು, ಯೆಳ ಕಾಂಡು ಪೂರ್ತಾಗುತ್ತೇನೆ. ಕಣ್ಣೆಡೆಯಲ್ಲಿ ಕುಟ್ಟುವದು ಗರಡಿ ಸಾಧಕರಲ್ಲಿ ವಾಳ್ಕೇ ಪೆಟ್ಟು. ಪೌಲನ ಅರ್ಥವೇನೆಂದರೆ: ನನ್ನನ್ನು ಅದೈವಿಕ ಕಾರ್ಯಕ್ಕೆ ಯೆಳಿಯುವ ನನ್ನ ಶರೀರಕ್ಕೆ, ಅವಶ್ಯವಾದರೆ, ವಾತ್ತಾಯ ಮಾಡಿ, ನಾವು ಕಾಡುತ್ತೇನೆ; ಅದು ತಡೆ ಇಲ್ಲದೆ ಆತ್ಮಕ್ಕೆ ವಾಳ್ಕೇ ಕರಣವಾಗುವ ಪೂರ್ತಾಗೆ ಅದನ್ನು ಆಳಿ ಕಾಳ್ಳುತ್ತೇನೆ.

ಸ. ೧೦.

ವಿಗ್ರಹ ಬಲಿಮಾಂಸ ಭಕ್ಷಣಕ್ಕೆ ಹೆದರುವದಕ್ಕೆ ಮೂರನೆ ಕಾರಣ.

ವ. ೧—೫೫.

ನಿರ್ಲಯತ್ವದಿಂದ ಕೃಪೆಯನ್ನು ಕಳಕಾಳ್ಳುವ ಕಂಟಕದ ನಿಮಿತ್ತ,

ವ. ೧—೨೨.

ಹಾಗೆ ನಡ ಕಾಳ್ಳ ಬೇಕೆಂಬ ಸೂತ್ರ. ವ. ೨೫—೫೫.

I. ನಿರ್ಲಯತ್ವದ ಕಂಟಕ.

೧. ಅರಣ್ಯದಲ್ಲಿ ಇಸ್ರಯೇಲರಿಗೆ ಆದದ್ದು ನಮ್ಮನ್ನು ಬೆದರಿಸ ತಕ್ಕದ್ದು. ವ. ೧—೧೫.

. ೧. ಸಹೋದರರೇ ಇದನ್ನು ಚನ್ನಾಗಿ ತೂಗಿಸಿರಿ: ದೇವರ ಸಂಬಂಧದಲ್ಲಿ ಮುಂಚೆ ಶೇರಿದದರಿಂದ ಯೆಹೂದರೂ ಪರಜನರಾದ ಕ್ರೈಸ್ತರೂ ಆದ ನಮ್ಮೆಲ್ಲರಿಗೆ ಪಿತೃಗಳೆಂದು ಅನ್ನಿಸಿ ಕೊಳ್ಳ ತಕ್ಕ ಇಸ್ರಯೇಲನ ಮಕ್ಕಳು ಕರ್ತನ ಸಂಗಡ ವೊಂದಾಗಿದ್ದರಿಂದ, ಕರ್ತನೆಂದು ಅನಿಸಿ ಕೊಂಡ (ಹೊರ. ೧೩, ೨೧. ೧೪, ೧೯.) ವೊಡಂಬಡಿಕೆಯ ದೂತನಿದ್ದ ಮೇಘಸ್ತಂಭದ ಆಶ್ರಯದಲ್ಲಿ ಐಗುಪ್ತದಿಂದ ಹೊರಟು ಬರುವಾಗಲೂ, ಕೆಂಪು ಸಮುದ್ರವನ್ನು ದಾಟಿ ಹೋಗುವಾಗಲೂ, ಅಸಾಧಾರಣವಾದ ದಿವ್ಯ ಕೃಪೆಗಳನ್ನು ಹೊಂದಿದರು. ೨. ಸ್ನಾನ ಹೊಂದಿದವರಾದ ನಮ್ಮ ಹಾಗೆ ಅವರು ದೇವರ ವೊಡಂಬಡಿಕೆಯಲ್ಲಿಯೂ, ದಿವ್ಯ ಪೋಷಣೆ

೧ ಕೊರಿ. ೧೦, ೩—೧೦

ಯಲ್ಲಿಯೂ, ನಾಯಕತ್ವದಲ್ಲಿಯೂ ಪ್ರವೇಶಿಸಿ, ಮೋಶೆಯನ್ನು ದೇವರ ರಾಯಭಾರಿಯೆಂದು ಸ್ವೀಕರಿಸಿದರು. ಅವರು ಆಗ ದೇವರಿಗೆ ಅರ್ಪಿತವಾದ ಜನಾಂಗವೆಂದು ಹೆಸರ್ಗೊಂಡರು; ಹ್ಯಾಗೆಂದರೆ ಸ್ನಾನ ಜಲದಲ್ಲಿ ಮುಣುಗುವದರಿಂದ ನಮಗೆ ಆಗುವ ಕಾರ್ಯವು ಅವರನ್ನು ಕವಿದ ಮೇಘದಿಂದಲೂ, ಅವರು ಸಮುದ್ರದೊಳಗಿಳಿದು ಮೇಲೇರೋಣದರಿಂದಲೂ, ಅವರಿಗೆ ಗೋಚರವಾದ ಸಾಮ್ಯವಾಗಿ ಉಂಟಾಯಿತು. ೩. ಕ್ರೈಸ್ತರ ಆತ್ಮಿಕ ಜೀವಕ್ಕೆ ರಾತ್ರಿ ಭೋಜನವು ಹ್ಯಾಗೆ ನೇಮಿಸಿ ಅದೆಯೋ, ಹಾಗೆಯೇ ಅವರು ಬಿಡುಗಡೆ ಹೊಂದಿ, ದೇವರ ಜನಾಂಗವಾದಾಗ, ಅರಣ್ಯದಲ್ಲಿ ಅವರ ಪರಿಪಾಲನೆಯ ಆಶ್ಚರ್ಯವು ಉಂಟಾಯಿತು. ಹ್ಯಾಗೆಂದರೆ, ಅವರೆಲ್ಲರೂ ಆಶ್ಚರ್ಯ ರೀತಿಯಾಗಿ ಬಂದು ಕ್ರಿಸ್ತನಿಗೆ ಮುಂಗುರ್ತಾಗಿರುವದರಿಂದ, ಯೋಹಾ. ೬, ೫೮. ಆತ್ಮ ಭಾವದ ಆಹಾರವೆಂದು ಅನಿಸಿ ಕೊಂಡಿರುವ ಮನ್ನವನ್ನು ಉಣ್ಣುತ್ತಾ ಇದ್ದರು. ೪. ಹಾಗೆಯೆ ಅವರೆಲ್ಲರೂ ಕುಡಿದ ಬಂಡೆಯ ನೀರಿನಿಂದ ಅವರ ಶರೀರಕ್ಕೂ ಪ್ರಾಣಕ್ಕೂ (ಹೊರ. ೧೭, ೬. ಅಂಕೆಗ. ೨೦, ೧೦.) ಆಶ್ಚರ್ಯವಾದ ಪರಿಪಾಲನೆಯುಂಟಾಯಿತು. ಇದು ಆ ಬಂಡೆಯ ಸ್ವಭಾವವಾಗಿರಲಿಲ್ಲಾ; ಹಾಗಾದರೆ, ನೀರು ಮುಂಚೆಯೇ ಹರಿಯುತ್ತಾ ಇರುತಿತ್ತು. ಅದು ಯಾವಾಗಲೂ ಅವರ ಸಂಗಡ ಇದ್ದು, ಸಮಸ್ತ ಅದ್ಭುತಗಳನ್ನು ಮಾಡಿದಂಥಾ ಕ್ರಿಸ್ತನೆಂಬ ಆತ್ಮಿಕ ಬಂಡೆಯಿಂದ ಬಂತು (ಅವರನ್ನು ನಡಿಸಿದ ದೇವರಿಗೆ ದ್ವಿ. ನಿ. ೩೨, ೪. ಅಚಂಚಲವಾದ ಬಲ ನಂಬಿಕೆಗಳ ದೆಶೆಯಿಂದ ಬಂಡೆ ಯಂಬ ಹೆಸರು ಬರುತ್ತದೆ. ಅದಕ್ಕನುಸಾರವಾಗಿ ಪೌಲನು ಅವರನ್ನು ನಡಿಸಿದ ಪೊಡಂಬಡಿಕೆಯ ದೂತನಾದ ಕ್ರಿಸ್ತನಿಗೂ ಬಂಡೆ ಯೆಂದು ಹೆಸರಿಡುತ್ತಾನೆ. ಈ ಪ್ರಕಾರ ಹಳ್ಳೇ ಪೊಡಂಬಡಿಕೆಯಲ್ಲಿ ದೃಶ್ಯವಾಗಿ ಪ್ರಕಟವಾದ ಕರ್ತನು ಕ್ರಿಸ್ತನಾಗಿದ್ದನೆಂದು, ತೋರಿಸುತ್ತಾನೆ.) ೫. ಆದಾಗ್ಯೂ ಅವರಲ್ಲಿ ಹೆಚ್ಚು ಮಂದಿ ಕೃಪೆಯನ್ನು ಕಳಕೊಂಡರು. ಈ ಮಾತಿಗೆ ಇಬ್ಬರನ್ನುಳಿದೆಲ್ಲರು ಅರಣ್ಯದಲ್ಲೆ ಬಿದ್ದು ಹೋದದ್ದು ಪರಮ ಸ್ಪಷ್ಟವಾದ ದೃಷ್ಟಾಂತವಾಗಿದೆ. ೬. ಅವರು ಮುಂಚೆ ಹೊಂದಿದ ಕೃಪೆಯನ್ನು ಮತ್ತೆ ಕಳಕೊಂಡರೆಂಬದನ್ನು ನೆನಸಿ, ನಾವು ಬುದ್ಧಿ ತಕ್ಕೊಂಡು, ಅವರ ಹಾಗೆಯೇ ಕೆಟ್ಟವರ ಅಭಿಲಾಷೆಯಿಂದ ಮರುಳ್ಳಾಗಿ ಹೋಗದ ಹಾಗೆ, ಜಾಗ್ರತೆಯಾಗಿರ ತಕ್ಕದ್ದು. ೭. ಅವರ ಹಾಗೆಯೆ ನಿಮಗೂ ಚತುರ್ವಿಧದ ಕಂಟಕ ಉಂಟು, ೧ನೇದು ಯೇನಂದರೆ: ಸ್ಥೂಲ ಸೂಕ್ಷ್ಮವಾದ ವಿಗ್ರಹಾರಾಧನೆ. ಇದು ಭಂಗಾರದ ಯೆತ್ತಿನ ಆರಾಧನೆಯಲ್ಲಿ ಹೊಟ್ಟೆಬಾಕತನದ ಭೋಜನ ಪಾನಗಳೊಡನೆ ಕಾಣ ಬಂತು. ಹೊರ. ೩೨, ೬. ಯೆರಡನೇದು ಯೇನಂದರೆ: ೮. ಜಾರತ್ವ. ಇದರ ದೆಶೆಯಿಂದ ಬಾಲ್‌ಪೆಯೊರ್ ಮುಂಚೆ ಒಂಚೇ ದಿನದಲ್ಲಿ ೨೩೦೦೦ ಮಂದಿ ವ್ಯಾದಿಯಿಂದ, ಸಾವಿರ ಮಂದಿ ಲೇವಿಯರ ಕತ್ತಿಯಿಂದ, ಒಟ್ಟಿಗೆ ೨೪೦೦೦ ಮಂದಿ ಹತವಾದರು. ಮೂರನೇದು: ೯. ಅಗ್ನಿಸರ್ಪಗಳು ಬರುವ ಹಾಗೆ, ಅವರು ಅಂಕೆಗ. ೨೧ಲ್ಲಿ ಮಾಡಿದ ಹಾಗೆ, ಕ್ರಿಸ್ತನನ್ನು ಶೋಧಿಸಿದ್ದು. ನೀವು ಲಘು ಮನಸ್ಸಿನಿಂದ ಪಾಪವೆಂಬ ಸರ್ಪದ ಸಂಗಡ ಸರಸವಾಡಿದರೆ ಮಾತ್ರವಲ್ಲಾ, ನಿಮಗೆ ಇಷ್ಟರೊಳಗೆ ಪ್ರಾಪ್ತಿಯಾದ ಅಸಾಧಾರಣವಾದ ಕೃಪಾ ವರಗಳು ಸಾಲವೆಂದು, ಅಸಂತುಷ್ಟರಾಗಿ ಹೆಚ್ಚಾದವುಗಳನ್ನು ಹುಡುಕಿ, ದೇವರು ನಿಮಗೆ ತನ್ನ ಕೃಪೆ ಬಲಗಳ ಹೊಸ ಹೊಸ ದೃಷ್ಟಾಂತಗಳನ್ನು ತೋರಿಸಬೇಕೆಂದು ಬಯಸಿದರೆ ಸಹಾ, ಅವರು ಮಾಡಿದ ತಪ್ಪೆ ಮಾಡುತ್ತೀರಿ. ೧೦. ನಾಲ್ಕನೇದು: ಕರ್ತನು ನಮಗೆ ಸ್ವಲ್ಪ ಮಾತ್ರವೆ ಉಪಕಾರ ಮಾಡಿ, ನಮ್ಮಿಂದ ಬಹಳ ಕೇಳ್ಳುತ್ತಾನೆಂಬ ಮನಸ್ಸಿನಿಂದ ಕರ್ತನಿಗೆ ವಿರೋಧವಾಗಿ ಗುಣುಗುಟ್ಟುವ ಅಸಂತುಷ್ಟತೆ ಬರುತ್ತದೆ. ಇದಕ್ಕೆ ಇಸ್ರಯೇಲರು ಮೋಶೆಯ ಮೇಲೆ ಅಂಕೆಗ. ೧೬. ಗುಣಗುಟ್ಟಿದ್ದೂ ಅವರ ಶಿಕ್ಷೆಯೂ ನಮ್ಮನ್ನು ಬೆದರಿಸ ತಕ್ಕದ್ದು.

೫೯೪೪ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ರ.

೧ ಕೊರಿ. ೧೦, ೧೧—೧೩.

೧೧. ಇವುಗಳೆಲ್ಲಾ ಮುಂಗುರುತುಗಳಾಗಿ ೧) ಅವರಿಗೆ ಸಂಭವಿಸಿ, ಯುಗಗಳ ಅಂತ್ಯ/ಗಳಲ್ಲಿ ೨) ಶ್ರೇರಿದ ನಮ್ಮ ಬೋಧನೆಗೋಸ್ಕರ ೩) ಬರೆಯಲ್ಪಟ್ಟವು. ೧೨. ಆದ ಕಾರಣ ತಾನು ನಿಲ್ಲುತ್ತೇನೆಂದು ೪) ನೆನಸುವವನು, ಬೀಳದ ಹಾಗೆ ನೋಡಿಕೊಳ್ಳಲಿ ೫). ೧೩. ಮನುಷ್ಯರಿಗೆ ೬) ಆಗುವ ಶೋಧನೆ ಅಲ್ಲದೆ, ಮತ್ತಾವದೂ ನಿಮ್ಮನ್ನು ಹಿಡಿಯಲಿಲ್ಲ; ಮತ್ತು ದೇವರು ನಂಬಿಕೆಯುಳ್ಳವನು ೭), ಅವನು ನಿಮ್ಮ ಬಲಕ್ಕಿಂತ ಹೆಚ್ಚಾಗಿ ನಿಮ್ಮನ್ನು ಶೋಧಿಸಲ್ಪಡಗೊಡಿಸುವದಿಲ್ಲ; ಆದರೆ ನೀವು ಸಹಿಸಿ ಕೂಡುವ ಹಾಗೆ, ಶೋಧನೆಯ ಸಂಗಡ ತಪ್ಪಿಸಿಕೊಳ್ಳುವ ಮಾರ್ಗವನ್ನೂ ಮಾಡುವನು ೮).

೧. ದೇವರ ಜನಾಂಗವು ಪುನಾಸವಾಡಂಬಡಿಕೆಯಲ್ಲಿಯೂ ಕ್ರಿಸ್ತನಿಗೆ ವಿರೋಧವಾಗಿ ಪಾಪ ಮಾಡಿದರೆ, ಅದೇ ಪ್ರಕಾರದ ಶಿಕ್ಷೆಗಳಿಗೆ ಇಹದಲ್ಲಿ ಮಾತ್ರ ವಲ್ಲಾ ಪರದಲ್ಲಿಯೂ ವಾಳಗಾಗದೆ ಪುನಾಗದು.

೨. ದೇವರ ಇಷ್ಟುವರೆಗಿನ ರಕ್ಷಣಾಪ್ರಕಟಣೆಗಳ ಅಂತ್ಯವನ್ನೂ, ಈಗಿನ ಲೌಕಾವಸ್ಥೆಯ ಅಂತ್ಯವನ್ನೂ, ಮುಂಚೆ ಪೇಳಿದ ಪ್ರವಾದನೆ ಮುಂಗುರುತುಗಳು ಪೂರ್ಣವಾಗಿ ತುಂಬುವದನ್ನೂ ನೀರೀಕ್ಷಿಸ ತಕ್ಕ ಕಾಲದಲ್ಲಿ ಜೀವಿಸುತ್ತೇವೆ; ಪುನಾಗೆಂದರೆ, ಬರಲಿಕ್ಕಿರುವ ಕ್ರಿಸ್ತನ ಆಗಮನವು ಬೇರೆ ಬೇರೆ ಕಾಲಗಳಲ್ಲಿ ಆದ ದೇವರ ಸಮಸ್ತ ಪ್ರವಾದನೆ ಘಟಣೆಗಳ ಗುರಿಯಾಗಿದೆ. ಪೂರ್ವ ಕಾಲದಿಂದ ಚೂಲಾಕದಲ್ಲಿ ನಡದ ದೇವರಾಜ್ಯ ಕಾರ್ಯವೆಲ್ಲಾ ಈ ಕಡೇ ಕಾಲದಲ್ಲಿ ಸಂಪೂರ್ಣವಾಗುತ್ತದೆ. ಒಂದಾಂದು ಪ್ರವಾದನೆಯು ತುಂಬುತ್ತದೆ; ಮುಂಗುರುತಾಗಿದ್ದ ಬಹಿರಂಗದ ವಾಂದಾಂದು ಉಪಕಾರವು ಅಂತರ್ಯದ ನಿತ್ಯ ಉಪಕಾರವನ್ನು, ವಾಂದಾಂದು ಶಿಕ್ಷೆಯು ಬರುವ ನಿತ್ಯವಿನಾಶವನ್ನೂ ಕಡೇ ಕಾಲದ ದುಷ್ಟರ ಮೇಲೆ ಬೀಳುವ ಭಯಂಕರವಾದ ಗಂಡಾಂತರಗಳನ್ನೂ ಸೂಚಿಸುತ್ತದೆ.

೩. ಪುನಾಸವಾಡಂಬಡಿಕೆಯ ಕಾಲದ ಭಕ್ತರು ಪುಳೇವಾಡಂಬಡಿಕೆಯ ಗ್ರಂಥಗಳನ್ನು ವಿಶ್ವಾಸದ ಸನ್ಮಾನದಿಂದ ವಾಲಿ ಉಪಯೋಗಿಸ ಬೇಕೆಂದೆ, ದೇವರು ಇಚ್ಛೈಸುತ್ತಾನೆ.

೪. ದೇವರ ಕೃಪೆಯಲ್ಲಿ ಭದ್ರವಾಗಿ ನಿಲ್ಲುತ್ತೇನೆಂದು. ೫. ಅಂದರೆ ಅಂಥಾ ನಿರ್ಧಯತ್ವದಿಂದ ಬೀಳದ ಪುನಾಗೆ ನೋಡಿ ಕಾಳ್ಳಲಿ.

೬. ಈ ಮಾತನ್ನು "ಮಾನುಷವಲ್ಲದೆ ಬೇರೆ ಶೋಧನೆಯು ನಿಮ್ಮನ್ನು ಹಿಡಿಯಲಿಲ್ಲಾ" ಯೆಂದು ಭಾಷಾಂತರ ಮಾಡ ತಕ್ಕದ್ದು. ಪುನಾಗಾದರೆ ಶೋಧನೆಗಳು ಮಾನುಷವಾದವುಗಳು, ಅಥವಾ ಪೈಶಾಚಿತವಾದವುಗಳು, ಆಗಿರ ಬಹುದು. ಇಷ್ಟುವರೆಗಿನ ಶೋಧನೆಗಳು ಮುಖ್ಯವಾಗಿ ಮನುಷ್ಯರಿಂದಲೂ ಸ್ವಂತ ಮಾಂಸದಿಂದಲೂ ಮೋಸಗಾರರಿಂದಲೂ ಬಂದ ಕಾರಣ, ಹೆಚ್ಚು ಕಷ್ಟವಾಗಿರದೆ, ಮಾನುಷ ಬಲದಿಂದ ಜೈಸಲಾಗುವ ತರದ್ದಾಗಿದ್ದವು. ಆದರೆ ಪ್ರಾಮುಖ್ಯವಾಗಿ ಪೈಶಾಚಿತ ಬಲದಿಂದ ಬರುವ ಶೋಧನೆಗಳು ಸಪುನಾ ಉಂಟು. ಎಫೆ. ೬, ೧೨. ೨ ಕೊರಿ. ೧೨, ೭. ಅಂಧಕಾರದ ರಾಜ್ಯವು ತನ್ನಾಳಗಾಂದಾಗಿರುವದರಿಂದ ಯೆಲ್ಲಾ ಶೋಧನೆಗಳಲ್ಲಿಯೂ ಸೈತಾನನು ತನ್ನ ಕೈ ಪುನಾಕದಿರುವದಿಲ್ಲಾ. ಪೀಗಿರಲಾಗಿ ಸಾಧಾರಣವಾದ ಅಲ್ಪ ಶೋಧನೆಗಳು ಮಾನುಷವೆಂದೂ, ಕಠಿಣವಾದ ಆತ್ಮಿಕ ಶೋಧನೆಗಳು ಪೈಶಾಚಿತವೆಂದೂ, ನೆನಸ ತಕ್ಕದ್ದು.

೭. ಕಾರಿಂಥದವರಿಗೆ ಅಧಿಕ ಕಠಿಣವಾದ ಪುನಾರಾಟಗಳು ಬರುವದಕ್ಕಿದ್ದವು, ಆದರೆ ಅಪೌಸ್ತಲನು ನಮ್ರಭಾವದಿಂದ ಅವುಗಳನ್ನು ಇಲ್ಲಿ ಬೇಗ ಪೇಳದೆ, ಮುಂಚೆ ಆದರಣೆಯ ಮಾತುಗಳಂನಾಡಿ, ನೀವು ನಂಬಿಕೆಯುಳ್ಳ ದೇವರ ಕೈಯಲ್ಲಿದ್ದೀರೆಂದು ತಿಳಿಸುತ್ತಾನೆ. ಆತನು ಶೋಧನೆಗಳನ್ನು ಅತಿಚಾರವಾಗ

೧ ಕೊರಿ. ೧೦, ೧೪—೧೭.

ಬಿಡದೆ, ನಮ್ಮ ಬಲದ ಮಿತಿ ತೂಗಿಸಿ, ತಕ್ಕ ಕಾಲದಲ್ಲಿ ಉಪಶಮನವನ್ನು ಮಾಡುತ್ತಾನೆ. ಈ ಮಾತಿನಿಂದ ನಾವು ಸಪೂರ್ಣ ಈಗಲೂ, ಇನ್ನೂ ಮುಂದೆ ಬರುವ ಶೋಧನಾಕಾಲಗಳಲ್ಲಿಯೂ, ಧೈರ್ಯ ತಕ್ಕಾಂಡು ನಂಬಿಕೆಗೆ ಯೆಚ್ಚರಿಸಿ ಕಾಳ್ಳ ಬಹುದು.

೮. ಪೂರ್ಣಾಗಾದರೆ ದೇವರ ಅನುಜ್ಞೆಯಿಂದಲೆ ಶೋಧನೆಯು ಬರುತ್ತದೆ. ಅಂದರೆ ಕೆಟ್ಟತನಕ್ಕೆ ನಮ್ಮನ್ನು ಮರುಳು ಗಾಳಿಸುತ್ತಾನೆಂದಲ್ಲ, (ಮತ್ತಾ. ೬, ೧೩. ಯಾಕಾ. ೧, ೧೩—೧೪.) ಶೋಧನೆಯ ಮೇಲೆ ಮನವಾಡ್ದ ಬಹುದಾದ ಅವಸ್ಥೆಗಳಲ್ಲಿ ನಮ್ಮನ್ನಿಡುತ್ತಾನೆ ಯೆಂಬ ಅರ್ಥ. ಆದರೂ ಶೋಧನೆಯ ಸಂಗಡ ಪೂರ್ಣಾರಗೆ ಬರುವ ಮಾರ್ಗವನ್ನು ಸಪೂರ್ಣಾ ಮಾಡುತ್ತಾನೆ.

೨. ರಾತ್ರಿಭೋಜನದಿಂದ ಕ್ರಿಸ್ತನ ಸಂಸರ್ಗವನ್ನು ಪಡಕಾಳ್ಳುವವರಿಗೆ ಯಾವ ವಿಗ್ರಹಪೂರಾರಾಧನೆಯಾದರೂ ಆಗದು.

ವ. ೧೪. ಆದ್ದರಿಂದ, ಪ್ರಿಯರೇ, ಇಷ್ಟೆಲ್ಲಾ ಕೃಪೆ ಹೊಂದಿದಾಗ್ಯೂ, ಬರಬಹುದಾದ ಕಂಟಕದ ಭಯದಿಂದಲೂ, ನಂಬಿಕೆಯುಳ್ಳ ದೇವರ ಕಡೆಗಿರುವ ಕೃತಜ್ಞತೆಯುಳ್ಳ ಪ್ರೀತಿಯಿಂದಲೂ, ವಿಗ್ರಹಾರಾಧನೆಯನ್ನು ತೊರದು ಓಡಿರಿ. ೧೫. ನೀವೇ ಗ್ರಹಿಸಿಕೊಳ್ಳ ತಕ್ಕದ್ದೇನಂದರೆ: ಮೊದಲಾಗಿ, ಪರಿಶುದ್ಧ ರಾತ್ರಿಭೋಜನದಿಂದ ಯೇಸು ಕ್ರಿಸ್ತನ ಸಂಸರ್ಗದಲ್ಲಿ ಶೇರುತ್ತೇವೆ.

೧೬. ನಾವು ಆಶೀರ್ವದಿಸುವ ೧) ಆಶೀರ್ವಾದದ ಪಾತ್ರೆಯು ಕ್ರಿಸ್ತನ ರಕ್ತದ ಅನ್ಯೋನ್ಯವಲ್ಲವೋ ೨)? ನಾವು ಮುರಿಯುವ ರೊಟ್ಟಿಯು ಕ್ರಿಸ್ತನ ಶರೀರದ ಅನ್ಯೋನ್ಯವಲ್ಲವೋ? ೧೭. ಯಾಕಂದರೆ ೩) ಅನೇಕರಾದ ನಾವು ಒಂದೇ ರೊಟ್ಟಿಯೂ, ಒಂದೇ ಶರೀರವೂ ಆಗಿದ್ದೇವೆ. ಯಾಕಂದರೆ ಎಲ್ಲರು ಆ ಒಂದೇ ರೊಟ್ಟಿಯಲ್ಲಿ ೪) ಪಾಲುಗಾರರಾಗಿದ್ದೇವೆ.

೧. ಆಶೀರ್ವಾದ ಪಾತ್ರವು ಕೃತಜ್ಞತಾಪ್ರಾರ್ಥನೆಯಿಂದಲೂ ಸ್ಥಾಪನೆಯ ವಾಕ್ಯಗಳಿಂದಲೂ ರಾತ್ರಿಭೋಜನದ ಆಚರಣೆಯಲ್ಲಿ ರಕ್ಷಣಾಸಂಪ್ರದಾನಪ ಮುದ್ರೆಯೂ ಕರಣವೂ ಆಗುತ್ತದೆ, ಪೂರ್ಣಾಗೆಂದರೆ ಮಹಿಮೆ ಪಟ್ಟ ಕ್ರಿಸ್ತನ ಶರೀರ ರಕ್ತಗಳು ರೊಟ್ಟಿ ದ್ರಾಕ್ಷೆರಸಗಳಾಡನೆ ನಮಗೆ ಕಾಡಲ್ಪಡುತ್ತವೆ.

೨. ಅದರಿಂದ ನಾವು ಕ್ರಿಸ್ತನ ಶರೀರ ರಕ್ತಗಳ ಸಂಸರ್ಗದಲ್ಲಿ ಶೇರುತ್ತೇವೆ. ಇಲ್ಲಿಯೂ, ೧ ಯೋಹಾ ಪೂರ್ಣಾ. ೧, ೭ರ ಪೂರ್ಣಾಗೆಯೆ, ರಕ್ತವೆಂಬ ಶಬ್ದವು ಮುಂಚೆ ಬರುವದರಿಂದ, ಅದು ಶರೀರದ ಸಂಗಡ ಮಾತ್ರವಲ್ಲಾ, ವಿಂಗಡವಾಗಿ ನಮಗೆ ಕಾಡಲ್ಪಡುತ್ತದೆಂದು, ಚಾವಿಸ ತಕ್ಕದ್ದು.

೩. ಪರಿಶುದ್ಧ ರಾತ್ರಿಭೋಜನದಲ್ಲಿ, ನಮಗಾಗಿ ಸ್ಕರ ಅರ್ಪಿಸಲ್ಪಟ್ಟ ಕ್ರಿಸ್ತನ ಶರೀರದ ನಿಜ ಸಂಸರ್ಗದಲ್ಲಿ ಶೇರುತ್ತೇವೆಂಬುವದನ್ನು, ಅದರಿಂದ ನಾವು ನಮ್ಮೊಳಗೆ ಒಂದೇ ಶರೀರವಾಗುವಂಥಾ, ಬರೆ ರೊಟ್ಟಿಗೆ ಅಸಾಧ್ಯವಾದಂಥಾ ಕಾರ್ಯದಿಂದ ತಿಳಕಾಳ್ಳ ಬಹುದು. ನಾವು ಎಲ್ಲರು ಕ್ರಿಸ್ತನ ಸಂಗಡ ಒಂದಾಗಿರುವ ಪಕ್ಷದಲ್ಲಿ ನಮ್ಮೊಳಗೆ ನಾವು ಒಂದಾಗಿದ್ದೇವೆ.

೪. ಕ್ರಿಸ್ತನ ಶರೀರದ ಸಂಸರ್ಗವಾಗಿರುವ ಒಂದೇ ರೊಟ್ಟಿಯಲ್ಲಿ. —ಪೀಗಿರಲಾಗಿ, ನಾವು ಕ್ರಿಸ್ತನ ಶರೀರದ ಸಂಸರ್ಗದಿಂದ ಪುಟ್ಟುವ ನಮ್ಮ ಸ್ವಂತ ಘನವನ್ನೂ ಪರಸ್ಪರ ಸಪೂರ್ಣಾದರ ಸಂಬಂಧವನ್ನೂ ವಿಗ್ರಹಪೂರಾರಾಧನೆಯ ಸಂಸರ್ಗದಿಂದ ಕೆಡಿಸ ಬಾರದು.

೫೭೬ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಭ.

೧ ಕೊರಿ. ೧೦, ೧೪—೨೧.

ಯೆರಡನೆ: ಬಲಿ ಉಣ್ಣುವವರು ಯಾರಿಗೆ ಬಲಿ ಅರ್ಪಿಸಿ ಅದೆಯೋ ಅವನ ಸಂಸರ್ಗದಲ್ಲಿ ಶೇರುತ್ತಾರೆ.

ವ. ೧೪. ಬಲಿಭೋಜನದಿಂದ, ಯಾರಿಗೆ ಬಲಿ ಅರ್ಪಿತವಾಯಿತೋ ಅವನ ಸಂಸರ್ಗದಲ್ಲಿ ಶೇರಿದ ಹಾಗಾಗುತ್ತದೆಂಬದನ್ನು ಯೆಹೂದರ ಹಳ್ಳೇ ವೊಡಂಬಡಿಕೆಯ ಬಲಿಗಳಿಂದ ತಿಳಿಕೊಳ್ಳಬಹುದು. ಯಾಜಕರೂ ಬಲಿ ಅರ್ಪಿಸುವವರೂ ದೇವಾಲಯದಲ್ಲಿ ಬಲಿಭೋಜನಗಳನ್ನು ಮಾಡುವದರಿಂದ ಪೀಠದಲ್ಲಿ ಬಲಿ ಅರ್ಪಣೆ ಆಗುವ ಯೆಹೋವನ ಆರಾಧನೆಯಲ್ಲಿ ಅಂಶಿಗಳಾಗುತ್ತಾರೆ. ಅದೇ ಪ್ರಕಾರ ಪರಜನರ ಬಲಿಭೋಜನಗಳಲ್ಲಿ ಅಂಶಿಗಳಾಗುವವರು ತಾವು ವಿಗ್ರಹಾರಾಧಕರೆಂದು ಅರಿಕೆ ಮಾಡುವದರಿಂದ ವಿಗ್ರಹಗಳ ಸಂಬಂಧದಲ್ಲಿ ಶೇರುತ್ತಾರೆ.

ಮೂರನೇದು: ವಿಗ್ರಹ ಬಲಿ ಮುಂತಾದದ್ದನ್ನು ಮಾಡುವವರು ಪೈಶಾಚಿಕ ಭಾವದ ಸಂಸರ್ಗದಲ್ಲಿ ಶೇರುತ್ತಾರೆ.

೧೯. ಹಾಗಾದರೆ, ಯೇನು ಹೇಳುತ್ತೀನೆ? ವಿಗ್ರಹವು ೧) ಯೇನಾದರೂ ಇರುತ್ತದೆಂದೂ, ಇಲ್ಲವೆ ವಿಗ್ರಹಬಲಿಯು ಯೇನಾದರೂ ಇರುತ್ತದೆಂದೂ, ಹೇಳುತ್ತೇನೌ? ೨೦. ಆದರೆ ಜನಾಂಗಗಳು ಕಡಿಯುವಂಥವುಗಳಿಂದು ದೇವರಿಗಲ್ಲ, ದೆವ್ವಗಳಿಗೆ ೨) ಕಡಿಯುತ್ತಾರೆಂದು, ಹೇಳುತ್ತೀನೆ. ಆದರೆ ನೀವು ದೆವ್ವಗಳ ಸಂಗಡ ಪಾಲುಗಾರರಾಗಿರಿ ೩), ನನಗೆ ಮನಸ್ಸಿಲ್ಲ. ೨೧. ಕರ್ತನ ಪಾತ್ರೆಯಲ್ಲಿಯೂ ದೆವ್ವಗಳ ಪಾತ್ರೆಯಲ್ಲಿಯೂ ಕುಡಿಯಲಾರಿರಿ ೪). ಕರ್ತನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ೫) ಪಾಲುಗಾರರಾಗಿರಲಾರಿರಿ.

೧. ಈ ಮಾತು — ಸ. ಲ. ವ. ಳಲ್ಲಿ ಹೇಳಿದ್ದಕ್ಕೆ ವಿರೋಧವಾದದ್ದಲ್ಲ. ವಿಗ್ರಹಗಳು ಪ್ರತಿಷ್ಠೆಯಾದಾಗ್ಯೂ, ಜೀವವಿಲ್ಲದ ವಸ್ತುಗಳೆ ಸರಿ. ಅವುಗಳಿಗೆ ಆಗುವ ಪೂಜೆ ನಿರರ್ಥಕವಾದ ಆಚಾರವಾಗಿದೆ.

೨. ವಿಶಾಚಿಗಳು ಮನುಷ್ಯರನ್ನು ಮರುಳು ಪಡಿಸಿ, ವಿಗ್ರಹಾರಾಧನೆ ಮುಂತಾದ ಪಾಪಗಳಲ್ಲಿ ಶೇರಿಸುತ್ತವೆಂದು, ಬರಹವು ಹೇಳುತ್ತದೆ. ಸೈತಾನನ ಮೋಸಕ್ಕೆ ವಾಳಗಾಗಿ ಸತ್ಯವಾದ ದೇವರ ಆರಾಧನೆಯಿಂದ ತಾಲಗಿದ ಪರಜನರು ನಾನಾ ತರದ ಮತಗಳನ್ನು ಸ್ಥಾಪಿಸಿದ್ದಾರೆ. ಆದ್ದರಿಂದ ಸ್ಥೂಲ ಸೂಕ್ಷ್ಮ ವಿಗ್ರಹಾರಾಧನೆಗಳನ್ನು ನಡಸುವವರು ಸೈತಾನನಿಗೆ ವಶವಾಗಿ ಸೇವೆ ಮಾಡುತ್ತಾರೆ. ೩ ಮೋಶೆ. ೧೭, ೭. ೫ ಮೋಶೆ. ೩೨, ೧೭. ಕೀರ್ತ. ೧೧೬, ೫೭.

೩. ಸೈತಾನನಿಗೆ ಆಗುವ ಪೂಜೆಯಲ್ಲಿ ನೀವು ಪಾಲುಗಾರರಾಗಿರ ಬಾರದು.

೪. ಪೂಜೆಮಾಡುವದು ಮಹಾ ಪಾತಕವಾಗಿದೆ.

೫. ಪರಜನರ ವಿಗ್ರಹಗಳಲ್ಲಿ ಒಂದಾಂದು ಒಂದು ದೆವ್ವ ಯೆಂಬ ಪೂರ್ವಾಗಲ್ಲ; ವಿಗ್ರಹಗಳು ಯೇನೂ ಅಲ್ಲ. ಸ. ಲ, ಳ. ಆದರೆ ವಿಗ್ರಹಾರಾಧನೆ ಎಲ್ಲಾ ದೆವ್ವಾರಾಧನೆಯಾಗಿದೆ. ದೇವರನ್ನು ಬಿಟ್ಟು ಸ್ವೇಚ್ಛಾಕಲ್ಪಿತವಾದವುಗಳನ್ನು ಪೂಜಿಸಿ, ದೇವರಿಗೆ ಕಾಡ ತಕ್ಕ ಮಾನವನ್ನು ದೇವರಲ್ಲದ್ದಕ್ಕೆ ಕಾಡುವದು ಸೈತಾನನ ಜಾವವಾದ ದೇವದ್ರೋಹವಾಗಿದ್ದು, ರಾತ್ರಿಜಾಜನದಿಂದಾಗುವ ದೇವ ಸಂಸರ್ಗಕ್ಕೆ ಶುದ್ಧ ವಿರೋಧವಾಗಿದೆ. ಹೀಗಿರಲಾಗಿ, ದೆವ್ವಾರಾಧನೆ ಮಾಡುವವರು ಸೈತಾನನಿಗೆ ಪರವಶವಾಗಿದ್ದಾರೆ. ಆದರೆ ವಿಗ್ರಹ ಪೂಜೆ ಮಾಡುವವರು ಮಾತ್ರವಲ್ಲ, ತಮ್ಮ ಹೃದಯಗಳಲ್ಲಿ ಆಯಾ ಪಾಪಗಳಿಗೆ ಸೇವೆ ಮಾಡುತ್ತಾ ಇದ್ದು, ಪರಿಶುದ್ಧವಾದ ರಾತ್ರಿಜಾಜನವನ್ನು ಆಚರಿಸುವವರು ಆಶೀರ್ವಾದವನ್ನು ಆಲ್ಲ, ಶಾಪವನ್ನೆ ಪಡಕಾಳ್ಳುತ್ತಾರೆ.

೧ ಕೊರಿ. ೧೦, ೨೨—೩೫.

ನಾಲ್ಕನೇದು: ಈ ದುರ್ಮಾರ್ಗದಲ್ಲಿ ಸೇರಿದರೆ ನಮಗೆ ಗತಿ ಇಲ್ಲ.

ವ. ೨೨. ಕರ್ತನಿಗೆ ಕೋಪ ಹುಟ್ಟಿಸತೋ? ಅವನಿಗಿಂತ ಶಕ್ತರಾಗಿದ್ದೇವೋ?

೧. ದೇವರ ಸಂಸರ್ಗದಲ್ಲಿ ಶೇರಿದವರು ದೆವ್ವಗಳಿಗೆ ಪೂಜೆ ಮಾಡಿದರೆ, ವ್ಯಭಿಚಾರಿಗಳಾದ ಸ್ತ್ರೀಯರಂತೆ ದೇವರ ಶಿಕ್ಷೆಗೆ ಗುರಿಯಾಗುತ್ತಾರೆ.

೨. ಆತನ ಶಿಕ್ಷೆಗೆ ತಪ್ಪಿಸಿ ಕಾಳ್ಳುವದಕ್ಕೆ ಸಮರ್ಥರಾಗಿದ್ದೇವೆಂದು, ಆತನನ್ನು ಉದಾಸೀನ ಮಾಡಬಹುದೆ?

II. ಅಧಿಕಾರವನ್ನು ಪ್ರಯೋಗಿಸುವದರಲ್ಲಿ ನೆರೆಯವರಿಗೆ ಭಕ್ತಿವೃದ್ಧಿಯೂ ದೇವರಿಗೆ ಮಾನವೂ ಆಗ ಬೇಕೆಂಬುವದನ್ನೆ ನೋಡ ಬೇಕು.

ವ. ೨೩.—ನೆ. ೧೧, ೧.

ಅ) ಕ್ರೈಸ್ತ ಅಧಿಕಾರದ ಸಾಮಾನ್ಯವಾದ ಕಟ್ಟಳೆ. ಇದಕ್ಕೆ ಸ. ೬, ೧೨ ಒಪ್ಪುತ್ತದೆ.

ವ. ೨೩. ಪಾಪ ರಹಿತವಾದ ಎಲ್ಲಾದಕ್ಕೂ ನನಗೆ ಅಧಿಕಾರವದೆ, ಆದರೆ ಎಲ್ಲಾದರಿಂದ ನನಗಾದರೂ ಪರರಿಗಾದರೂ ಆತ್ಮವೃದ್ಧಿ ಆಗುವದಿಲ್ಲ. ವ. ೨೪. ಯಾವನಾದರೂ ತನ್ನದನ್ನು ಅರಸ ಬಾರದು; ಒಬ್ಬೊಬ್ಬನು ಮತ್ತೊಬ್ಬನ ಪ್ರಯೋಜನವನ್ನು ಹುಡುಕಲಿ. ಫಿಲಿ. ೨, ೪. ಕೋಲಿಾ. ೧೫, ೧.

೧. ತನ್ನದನ್ನು ಅಂದರೆ, ತನ್ನ ಪ್ರಯೋಜನವನ್ನೂ ತನ್ನ ಮನಃಪೂತವನ್ನೂ ಮಾತ್ರ ಯೋಚಿಸಿ ಮಾಡದೆ,

ಪರರ ಪ್ರಯೋಜನವನ್ನೂ ಭಕ್ತಿ ವೃದ್ಧಿಯನ್ನೂ ಚಿಂತಿಸ ಬೇಕು.

ಇ) ಮಾಂಸಭಕ್ಷಣ ವಿಷಯವಾಗಿ ಮಾಡ ತಕ್ಕ ಅಧಿಕಾರದ ಪ್ರಯೋಗವು.

ವ. ೨೫. ನಿಮ್ಮ ಮನೆಗಳಲ್ಲಿ ಕಟ್ಟಿಗರ ಕೇರಿಯಿಂದ ಬರುವಂಥಾದ್ದೆಲ್ಲಾ ನಿಶ್ಚಿಂತರಾಗಿ ತಿನ್ನ ಬಹುದು. ಅಲ್ಲಿ ಮಾರುವ ಬಾಡು ಬಲಿ ಮಾಂಸವೋ ಯೇನೋ ಎಂದು, ವಿಚಾರಿಸ ಕೆಲಸವಿಲ್ಲಾ. ವ. ೨೬. ಯಾಕೆಂದರೆ, ಭೂಮಿಯೂ ಅದರ ಪರಿಪೂರ್ಣತೆಯೂ ಕರ್ತನದಾಗಿದೆ. ಕೀರ್ತ. ೨೪, ೧. ೫೦, ೧೨. ಆದ್ದರಿಂದ ನಿಮ್ಮ ಆಹಾರವು ದೇವರ ಪ್ರಸಾದವೆಂದು ತಿಳಿಕೊಂಡು, ಸಂಶಯದ ಚಿಂತೆಗಳನ್ನು ತೊರೆಯ ಬೇಕು. ೧ ತಿಮೊ. ೪, ೪. ವ. ೨೭. ಅದೇ ಪ್ರಕಾರವಾಗಿ ಅವಿಶ್ವಾಸಿಗಳಲ್ಲಿ ಬಬ್ಬನು ನಿಮ್ಮನ್ನು ಊಟಕ್ಕೆ ಕರೆಯಲು, ಅಂಥವರ ಪಜ್ಜೆಯಲ್ಲಿ ಊಟ ಮಾಡುವದರಿಂದ ಮೋಸ ಆಗುವದಿಲ್ಲವೆಂದೂ, ಹೋಗುವದು ಒಳ್ಳೇದೆಂದೂ, ನೆನಸಿದರೆ, ಹೋಗಿ ಊಟಕ್ಕೆ ಕೂತುಕೊಂಡು, ಆ ಮನೆಯವರು ನಿಮಗೆ ಇಕ್ಕುವದನ್ನೆಲ್ಲಾ, ಎಲ್ಲಿಂದ ಬಂತೆಂಬ ವಿಚಾರವಿಲ್ಲದೆ ತಿನ್ನ ಬಹುದು.

ಈ) ಅಧಿಕಾರದ ಮಿತಿ.

ವ. ೨೮. ಆದರೆ ಸಂಶಯದ ಚಿಂತೆಯುಳ್ಳ ಬಬ್ಬ ಕ್ರೈಸ್ತನಾಗಲಿ, ಅವಿಶ್ವಾಸಿಗಳಾದ ಸಹಪಜ್ಜೆಯವರಲ್ಲಿ ಬಬ್ಬನಾಗಲಿ, ಈ ಬಾಡು ಬಲಿಮಾಂಸವೆಂದು ನಿನಗೆ ಹೇಳಿದರೆ, ಹೇಳಿದವನಿಗೆ ಮೋಸ ಆಗದ ಹಾಗೆ, ತಿನ್ನ ಬೇಡ. ವ. ೨೯. ನಿನ್ನ ಮನಸ್ಸಾಕ್ಷಿ ಮಾತ್ರ ನೋಡಿದರೆ, ಅಂಥಾ ಬಾಡು ತಿನ್ನುವದಕ್ಕೆ ಏನೂ

೫೬೮ ಅಪಾ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ರ.

೧ ಕೊರಿ. ೧೦, ೩೦—೧೧, ೧.

ಅಭ್ಯಂತರವಿಲ್ಲ. ಆದರೆ ಪರರ ಮನಸ್ಸಾಕ್ಷಿಗೆ ದೋಷ ತೋರುತ್ತದೆ. ಆದ್ದರಿಂದ ನಿನ್ನ ಅಧಿಕಾರವನ್ನು ಪ್ರಯೋಗಿಸದೆ ಹೋದರೆ ವಾಸಿ. ಯಾಕೆಂದರೆ, ನಾವು ಮಾಡುವಂಥಾದ್ದು ದೋಷವಿಲ್ಲದಿದ್ದರೂ, ತಿಳಿಯದವರು ನಮ್ಮ ಮೇಲೆ ಸುಮ್ಮನೆ ತಪ್ಪು ಹೊರಿಸುವದಕ್ಕೆ ಹೇತುವನ್ನು ಹುಟ್ಟಿಸುವದು ಬೇಕೇದಲ್ಲಾ. ವ. ೩೦. ನಾನು ಊಟಕ್ಕೆ ಕೂತುಕೊಂಡು, ದೇವರ ದಯೆಯನ್ನು ನೆನಸಿಕೊಂಡು, ಕೃತಜ್ಞನಾಗಿ ಭೋಜನ ಮಾಡುವಲ್ಲಿ, ಪರರು ನಾನು ಅಪರಾಧಿ ಎಂದು ಎಣಿಸುವದಕ್ಕೆ ಹೇತುವಾಗ ತಕ್ಕದ್ದನ್ನು ಮಾಡುವದು ಯಾತಕ್ಕೆ?

ಎ) ಸಾಮಾನ್ಯವಾದ ಎರಡನೆ ಕಟ್ಟಳೆ ಏನೆಂದರೆ: ದೇವರ ಮಹಿಮೆ ಸರ್ವೋತ್ತಮವಾದದ್ದು.

ವ. ೩೧. ಉಣ್ಣುವದು ಕುಡಿಯುವದು ಮುಂತಾದದ್ದನ್ನೆಲ್ಲಾ ದೇವರ ಮಹಿಮೆಗಾಗಿ ಮಾಡಿರಿ.

ಅನುದಿನದ ಜೀವನದಲ್ಲಿ ಬಳಿಕೆಯಾದ ಅಶನ ವಸನಾದಿಗಳ ವಿಷಯವಾದ ಚಿಕ್ಕ ಚಿಕ್ಕ ಕೆಲಸಗಳನ್ನು ಕ್ರಿಸ್ತಭಕ್ತನು ವಿಶ್ವಾಸದಿಂದಲೂ ಕೃತಜ್ಞತೆಯಿಂದಲೂ ವಿಧೇಯತ್ವದಿಂದಲೂ ಮಾಡಿದರೆ, ಅವೆಲ್ಲಾ ಪುಣ್ಯಗಳಾಗುತ್ತವೆ. ಇದಕ್ಕೆ ಸರಿಯಾದ ಮಾತು ಜೆಕರೀ. ೧೪, ೨೦. ೨೧. ಮತ್ತಾ. ೧೨, ೫೫. ೬.

ಆದರೆ ದೇವರ ಮಹಿಮೆಗಾಗಿ ಏನಾದರೂ ಮಾಡ ಬೇಕಾದರೆ, ಅದನ್ನು ಪ್ರೀತಿ ಭಾವದಿಂದ ಮಾಡ ಬೇಕು. ಅದುಕಾರಣ ವ. ೩೨. ಯೆಹೂದರಾಗಲಿ, ಗ್ರೀಕರಾಗಲಿ, ಕ್ರೈಸ್ತರಾಗಲಿ, ಯಾರೂ ಮೋಸ ಹೋಗಿ ಕ್ರೈಸ್ತ ಮತದ ಮೇಲೆ ವ್ಯರ್ಥವಾಗಿ ತಪ್ಪು ಹೊರಿಸುವದಲ್ಲದೆ, ದೂಷಣೆ ಹೇಳಿದ ಹಾಗೆ, ಬುದ್ಧಿಯಿಂದ ನಡ ಕೊಳ್ಳಿರಿ. ವ. ೩೩. ನಾನು ಸಹ ಎಲ್ಲಾದರಲ್ಲಿ ಎಲ್ಲರಿಗೆ ಸಂಮತನಾಗಿ ನಡಕೊಂಡು ಸ. ೫, ೩೨, ಅವರು ರಕ್ಷಣೆಯನ್ನು ಹೊಂದುವ ಹಾಗೆ ಸ್ವಂತ ಪ್ರಯೋಜನವನ್ನಲ್ಲಾ, ಪರರದ್ದನ್ನು ಹುಡುಕುತ್ತೇನೆ. ಸ. ೧೧, ೧. ನಾನು ಕ್ರಿಸ್ತನನ್ನು ಅನುಸರಿಸುವ ಪ್ರಕಾರ ನೀವು ನನ್ನನ್ನು ಅನುಸರಿಸಿರಿ.

೧. ಪೌಲನ ಶಿಷ್ಯರೆಂದು ಅನ್ನಿಸಿ ಕಾಳ್ಳುವ ಬಲ್ಲವರಾದ ಸಖೆಯವರು ಪೌಲನು ಇಲ್ಲಿ ಗದರಿಸುವ ತಪ್ಪುಗಳನ್ನು ಪೆಚ್ಚಾಗಿ ಮಾಡುತ್ತಾ ಬಂದದರಿಂದ, ಪೌಲನು ತನ್ನ ನಡತೆಯನ್ನು ಅವರಿಗೆ ಮಾದರಿಯಾಗಿ ತಾನೀರಿಸುವದು ಅತಿ ಯುಕ್ತವಾಗಿದೆ. ಪೂರ್ವಾಗೆಂದರೆ, ನನ್ನ ಶಿಷ್ಯರಾಗಿರ ಬೇಕಾದರೆ, ನನ್ನ ಪೂರ್ವಾಗೆ ನಡದು ಕಾಳ್ಳ ಬೇಕೆಂಬ ಮಾತಿಗೆ ಸಪೂಜವಾದ ಬಲವುಂಟು. ಬಾಧಕರ ನುಡಿನಡೆಗಳಿಗೆ ಖೇದಪಿದ್ದರೆ, ಬಾಧನೆ ವ್ಯರ್ಥವಾಗಿ ಪೂರ್ವಾಗುತ್ತದೆ.

೨. ಸರ್ವರಿಗೂ ಕ್ರಿಸ್ತನು ಮಾದರಿಯಾಗಿದ್ದಾನೆ. ಕ್ರಿಸ್ತನನ್ನು ಅನುಸರಿಸುವರನ್ನು ಅನುಸರಿಸ ತಕ್ಕದ್ದು. ಆತನನ್ನು ಅಗಲುವರನ್ನು ಅಗಲ ಬೇಕು.

ಸಖೆ ಕೂಡಿದ ದ್ಯೋವಾರಾಧನೆಯಲ್ಲಿ ಹುಟ್ಟಿದ ಅಕ್ರಮಗಳ ವಿಷಯವಾದ ಶಿಕ್ಷೆ.

೧. ಪೊಂಗಸರು ಮುಸುಕಿಲ್ಲದೆ ಸಖೆಗೆ ಬಂದದ್ದು. ಸ. ೧೧, ೨—೧೬.

೨. ಪರಿಶುದ್ಧ ರಾತ್ರಿಭೋಜನದ ಆಚರಣೆಯಲ್ಲಿ ನಡದ ಅನಿಷ್ಟಗಳು. ಸ. ೧೧, ೧೭—೩೪.

೩. ಆತ್ಮವರಗಳ ಅಯುಕ್ತ ಪ್ರಯೋಗವು. ಸ. ೧೨—೧೪.

೧ ಕೊರಿ. ೧೧, ೨—೪.

೫. ೧೧.

೧) ಸಭೆಗೆ ಬರುವ ಹೆಂಗಸರಿಗೆ ಯುಕ್ತವಾದ ಪೌರಾಣಿಕೆಯ ಸಂಪ್ರದಾಯ. ವ. ೨—೧೬.

ವ. ೨. ಹೆಂಗಸರ ಹೊದಿಕೆಯ ವಿಷಯವಾಗಿ ಬೋಧನೆ ಹೇಳುವದಕ್ಕಿಂತ ಮುಂಚೆ, ನೀವು ನನ್ನ ಮಾತುಗಳನ್ನು ನೆನಪು ಮಾಡಿಕೊಂಡು, ನಾನು ಸ್ಥಾಪಿಸಿದ ಸಂಪ್ರದಾಯಗಳನ್ನು ಕೈಕೊಳ್ಳಲಿಕ್ಕೆ ಮನಸ್ಸಾಗಿದ್ದೀರೆಂದು ನಿಮ್ಮನ್ನು ಹೊಗಳುತ್ತೇನೆ; ಆದರೆ ಹೆಂಗಸರು ಪಾರಂಪರ್ಯವಾದ ದೇಶದ ಮರ್ಯಾದೆಯನ್ನು ಬಿಟ್ಟು, ಮುಸುಕು ಹಾಕಿ ಕೊಳ್ಳದೆ, ಸಭೆಗೆ ಬರುವದು ಒಳ್ಳೇದಲ್ಲ. ಹಿಂದೂ ದೇಶದ ಸ್ತ್ರೀಯರು ಶೀರೆಯ ತಲೆಗೆ ಹೊದ್ದು ಕೊಂಡು ಹೊರಗೆ ಬರುತ್ತಾರೆ; ಹಾಗೆಯೇ ಗ್ರೀಕ ದೇಶದ ಸ್ತ್ರೀಯರು ಪ್ರತ್ಯೇಕವಾದ ಒಂದು ವಸ್ತ್ರ ತಲೆಗೆ ಹೊದ್ದು ಕೊಳ್ಳುತ್ತಾ ಇದ್ದರು; ಆದ್ದರಿಂದ ಗ್ರೀಕ ಹೆಂಗಸರು ಮುಸುಕು ಇಲ್ಲದೆ ಸಭೆಗೆ ಬಂದರೆ, ಹಿಂದೂ ಹೆಂಗಸರು ಶೀರೆಯ ಶೆರಗು ತಲೆಯ ಮೇಲೆ ಹಾಕಿ ಕೊಳ್ಳದೆ, ಸಭೆ ಮುಂತಾದ್ದಕ್ಕೆ ಬರುವ ಪ್ರಕಾರ ನಾಚಿಕೆ ಇಲ್ಲವೆಂಬ ದೋಷಕ್ಕೆ ಗುರಿಯಾಗುವರು. ವ. ೩. ಹೆಂಗಸರು ತಲೆಗೆ ಹೊದ್ದು ಕೊಳ್ಳುವ ಮರ್ಯಾದೆ ಉಚಿತವಾದ ದ್ದೆಂದು ತಿಳಿದು ಕೊಳ್ಳುವ ಹಾಗೆ, ದೇವರಾಜ್ಯದಲ್ಲಿ ಇರುವ ತಾರತಮ್ಯ ಭೇದಗಳನ್ನು ನೆನಸ ಬೇಕು. ಏನೆಂದರೆ ಗಂಡಸು ಕ್ರಿಸ್ತನಿಗೆ ಅಲ್ಲದೆ ಯಾರಿಗೂ ಅಧೀನನಲ್ಲ. ಹೆಂಗಸು ತಲೆಯೆಂಬ ಗಂಡಸಿಗೆ ಅಧೀನಳಾಗಿದ್ದಾಳೆ. ಕ್ರಿಸ್ತನು ತಾನೆ ತಂದೆಯಾದ ದೇವರಿಗೆ ತನ್ನನ್ನು ಅಧೀನ ಮಾಡಿ ಕೊಂಡು ಇದ್ದಾನೆ; ಆದ್ದರಿಂದ ತಂದೆಯಾದ ದೇವರು ನಮ್ಮೆಲ್ಲರಿಗೂ ಮೇಲು ತಲೆಯಾಗಿದ್ದಾನೆ. ವ. ೪. ಹೀಗೆ ಇರಲಾಗಿ, ಅದೃಶ್ಯನಾದ ಕ್ರಿಸ್ತನು ಗಂಡಸಿಗೆ ತಲೆಯಾಗಿ ಇರುವ ಕಾರಣ, ಗಂಡಸರು ಸಭೆಗೆ ಬಂದರೆ, ತಮ್ಮ ಅಧಿಕಾರದ ಗುರುತಿಗಾಗಿ ತಲೆ ಮುಚ್ಚಿ ಕೊಳ್ಳದೆ ಇರಬೇಕು. ಅವರು ಪ್ರಾರ್ಥನೆಯಾಗಲಿ ಪ್ರವಾದನೆಯಾಗಲಿ ಮಾಡುವ ವೇಳೆಯಲ್ಲಿ, ಪರಾಧೀನರ ಮರ್ಯಾದೆಯ ಪ್ರಕಾರ, ತಲೆ ಮುಚ್ಚಿ ಕೊಂಡರೆ, ಕ್ರಿಸ್ತನಿಗೂ ತಮಗೂ ಅವಮಾನ ಮಾಡುವರು. ವ. ೫. ಅದೇ ಪ್ರಕಾರ ಹೆಂಗಸರಿಗೆ ಪ್ರಾರ್ಥನೆ ಪ್ರವಾದನೆ ಮುಂತಾದ ಪರಿಶುದ್ಧ ಕ್ರಿಯೆಗಳು ನಡಿಯುವ ವೇಳೆಯಲ್ಲಿ, ಪುರುಷಾಧೀನ ವಿಧೇಯತ್ವದ ಗುರುತಾಗಿ, ತಲೆ ಮುಚ್ಚಿ ಕೊಳ್ಳದೆ ಇರುವದು ಅವಮಾನವಾಗಿದೆ. ಹೆಂಗಸರಿಗೆ ತಲೆ ಕೂದಲು ಹೆಚ್ಚು ಉದ್ದವಾಗಿ ಬೆಳೆಯೋಣವೇ ಹೀಗೆಯಾಗ ಬೇಕೆಂಬುವದಕ್ಕೆ ಸ್ವಾಭಾವಿಕ ದೃಷ್ಟಾಂತವಾಗಿ ಇದೆ. ಮುಚ್ಚಿ ಕೊಳ್ಳದೆ ಇರುವ ಹೆಂಗಸಿನ ತಲೆ ಬೋಳು ತಲೆಗೆ ಸರಿ. ವ. ೬. ಆದ್ದರಿಂದ ತಲೆ ಹೊದಿಕೆ ಬೇಡವೆಂಬ ಹೆಂಗಸಿಗೆ ತಲೆ ಕೂದಲೂ ಬೇಡ. ಹಾಗಾದರೆ ಹೆಂಗಸರಿಗೆ ಬೋಳು ತಲೆ ಅವಮಾನವಾಗಿ ತೋರುವದರಿಂದ (೪ ಮೋಶೆ. ೫, ೧೮.) ಅವರು ತಲೆ ಮುಚ್ಚಿ ಕೊಂಡರೆ ವಾಸಿ. ವ. ೭. ಆದರೆ ದೇವನ ಪ್ರಥಮ ನಿರ್ಮಾಣವಾಗಿರುವಂಥಾ ದೇವನ ಸ್ವರೂಪನಾದ ಸ್ವಾಧೀನ ಭಾವವುಳ್ಳ ಗಂಡಸು ಸ್ವಾಧೀನವಾದ ಅಧಿಕಾರದ ಗುರುತಿಗಾಗಿ ತಲೆ ಬರಿದಾಗಿ ಬಿಡಲಿ; ದಿವ್ಯ ಮಹಿಮೆಯ ತೇಜಸ್ಸು ಅವನ ತಲೆಗೆ ಹೊದಿಕೆಯಾಗಿರಲಿ. ಬ್ರಾಹ್ಮಣರು ಸಹ ಪೂರ್ವ ಕಾಲದಲ್ಲಿ ಯೆಲ್ಲಾ ಕುಲಗಳಲ್ಲಿ ತಾವು ಶ್ರೇಷ್ಠರೆಂದು ಭೂಸುರರೆನಿಸಿ ಕೊಂಡು, ತಲೆ ಹೊದಿಕೆಯನ್ನು ಬಳಸಲಿಲ್ಲಾ. ಆದರೆ ಹೆಂಗಸು ಗಂಡಸಿನ ಮಹಿಮೆಯ ಛಾಯೆಯಾಗಿದ್ದು, ಗಂಡಸಿನ ಅಧಿಕಾರದ ಹೊರ್ತು, ಬೇರೆ ಅಧಿಕಾರವಿಲ್ಲದವಳಾಗಿ ಇದ್ದಾಳೆ. ವ. ೮. ಸ್ತ್ರೀ ಪುರುಷ ನಿರ್ಮಾಣದ ಚರಿತ್ರದಲ್ಲಿಯೂ ಈ ಪ್ರಮಾಣ ಕಾಣುತ್ತದೆ,

ರ್ಯಾಗೆಂದರೆ, ಸ್ತ್ರೀಯು ಪುರುಷನಿಂದ ಉಂಟಾಗಲು ವ. ೯. ಅವಳು ಪುರುಷನ ಉದ್ದಿಶ್ಯವಾಗಿಯೇ ನಿರ್ಮಾಣವಾದಳು. ವ. ೧೦. ಹೀಗಿರಲಾಗಿ ಸ್ತ್ರೀಪರಾಧೀನ ಸ್ಥಿತಿಯ ಗುರುತಿಗಾಗಿ ತಲೆಗೆ ಹೊದಿಕೆ ಹೊದ್ದು ಕೊಳ್ಳಬೇಕು; ದೂತರ ನಿಮಿತ್ತವಾಗಿಯೂ ಇದು ಯುಕ್ತವಾಗಿದೆ, ಯಾಕೆಂದರೆ ಮನುಷ್ಯರು ಈ ಮರ್ಯಾದೆಯನ್ನು ಎಣಿಕೆ ಮಾಡದಿದ್ದರೂ, ಆತ್ಮ ಸಿದ್ಧಿಯುಳ್ಳ ದೇವದೂತರು ದೇವಾರಾಧನೆ ಮಾಡುತ್ತಾ ಇರುವ ಭಕ್ತರ ಕೂಟಕ್ಕೆ ಅದೃಶ್ಯ ಸಾಕ್ಷಿಗಳಾಗಿ (ಇಬ್ರಿ. ೧, ೧೪.) ಮಾನಸ್ಥರಾದ ಸ್ತ್ರೀಯರ ಸಿಗ್ಗಿಗೆ ಮೆಚ್ಚುತ್ತಾರೆ. ವ. ೧೧. ಆದರೆ ನನ್ನ ಅಭಿಪ್ರಾಯವನ್ನು ವಕ್ರವಾಗಿ ತಿಳಿದು ಕೊಳ್ಳಬಾರದು; ಪುರುಷರು ಹಿಗ್ಗುವದಕ್ಕೂ ಸ್ತ್ರೀಯರು ತಗ್ಗುವದಕ್ಕೂ ಕೆಲಸವಿಲ್ಲಾ; ಉಭಯತರಿಗೂ ಸರಿ ಸಮಾನವಾದ ಕ್ರಿಸ್ತನ ಸಂಬಂಧ ಉಂಟಾಗಿದೆ. ವ. ೧೨. ಸ್ತ್ರೀ ಪುರುಷ ಜಾತಿಗಳಿಗೆ ಪರಸ್ಪರ ಸಹಾಯವೂ ಅನ್ಯೋನ್ಯವೂ ಸ್ವಭಾವ ಸಿದ್ಧವಾಗಿದೆ. ಆದಿಯಲ್ಲಿ ನಾರಿಯು ನರನಿಂದ ಹುಟ್ಟಿದ ಮೇಲೆ, ನರನು ನಾರಿಯಿಂದ ಹುಟ್ಟುತ್ತಾ ಬರುತ್ತಾನೆ, ಇದು ಉಭಯ ಜಾತಿಯವರು ಕಿಂಕರ ಭಾವದಿಂದ ಪೂಜಿಸ ತಕ್ಕ ನಿರ್ಮಾಣಿಕನಾದ ದೇವರ ಕಟ್ಟಳೆಯಾಗಿದೆ. ವ. ೧೩. ಈ ವ್ಯವಹಾರವನ್ನು ನೀವು ಸಹಜವಾದ ಬುದ್ಧಿಯಿಂದ ನಿರ್ಣೈಸ ಬಹುದು. ಸ್ತ್ರೀಯರು ತಲೆಗೆ ಹೊದ್ದು ಕೊಳ್ಳದೆ ಸಭೆಯಲ್ಲಿ ಶೇರಿ, ದೇವರನ್ನು ಪ್ರಾರ್ಥಿಸುವದು ಲಜ್ಜೆಯುಳ್ಳ ಸ್ತ್ರೀಗೆ ಯುಕ್ತವೋ ಅಲ್ಲವೋ ಎಂದು, ನೀವೇ ಹೇಳಿರಿ. ವ. ೧೪. ೧೫. ತಲೆ ಕೂದಲು ಬೆಳಿಸುವ ಪದ್ಧತಿ ಗಂಡಸರಿಗೆ ಅನುಚಿತವಾದದ್ದೆಂದೂ, ಹೆಂಗಸರಿಗೆ ಉಚಿತವಾದದ್ದೆಂದೂ ಸಹಜವಾದ ಬುದ್ಧಿಗೆ ತೋರುವದಿಲ್ಲವೋ? ವ. ೧೬. ತರ್ಕವಾದಿಯಾದ ಒಬ್ಬನು ಹೆಂಗಸರು ಈ ನಿಯಮಕ್ಕೆ ಅನುಕೂಲವಾಗಿ ನಡದು ಕೊಳ್ಳುವದು ಅವಶ್ಯವಿಲ್ಲವೆಂದು ಹೇಳಿದರೆ, ಅವನು ಎಫೆಸದಲ್ಲಿ ಇರುವ ಅಪೊಸ್ತಲರಾದ ನಾವೂ ತೋಕದಲ್ಲಿರುವ ಎಲ್ಲಾ ಸಭೆಗಳೂ ಬೇರೆ ಮನಸ್ಸಾಗಿ ಇದ್ದೇವೆಂದು ತಿಳಿ ಕೊಂಡು, ಸುಮ್ಮನೆ ಇರಲಿ.

೨) ಪ್ರೀತಿಯ ಪಾಕಜನಗಳಲ್ಲಿ ಪುಟ್ಟಿದ ಅಕ್ರಮಗಳು. ವ. ೧೭—೩೩.

ಅಪೊಸ್ತಲರ ಕಾಲದ ಸಭೆಯವರು ಪರಿಶುದ್ಧ ರಾತ್ರಿಭೋಜನವನ್ನು ಕರ್ತನು ಸ್ಥಾಪಿಸಿದ ರೀತಿಯಿಂದ ಆಚರಿಸುತ್ತಾ ಬಂದು, ಅದಕ್ಕೆ ಮುಂಚಿತವಾಗಿ ಪ್ರೀತಿ ಭೋಜನವೆಂಬ ಬಟ್ಟೂಟಾ ಮಾಡುತ್ತಾ ಇದ್ದರು. ಆದರೆ ಕೊರಿಂಥದ ಸಭೆಯು ಭೇದವಾದ ಮೇಲೆ, ಆಯಾ ಪಕ್ಷದವರು ಬೇರೆ ಬೇರೆ ಪಜ್ಜೆಯಾಗಿ ಕೂತು ಕೊಂಡು ಊಟ ಮಾಡುವದಲ್ಲದೆ, ಕೆಲವು ಮನೆಯವರು ಸ್ವೀಕರ ಪೂರ್ವ ಮರ್ಯಾದೆಯ ಪ್ರಕಾರ, ಮನೆಗಳಲ್ಲಿ ಅಡಿಗೆ ಮಾಡಿದ್ದನ್ನು ತರಿಸಿ, ಒಟ್ಟಾಗಿ ಬಡಿಸಿ ಕೊಂಡು ಉಂಣುತ್ತಾ ಇರಲಾಗಿ, ಹಣವಂತರು ಭೋಗಿಸುತ್ತಾ ಬಡವರು ಹಸಿಯುತ್ತಾ ಇದ್ದರು. ಈ ಎರಡು ತಪ್ಪುಗಳನ್ನು ಪೌಲನು ಅತಿ ತೀಕ್ಷ್ಣವಾಗಿ ಖಂಡಿಸುತ್ತಾನೆ.

ವ. ೧೭. ಈ ಬೋಧನೆಯೆನ್ನು ನಿಮಗೆ ಈಗ ಹೇಳುವ ವೇಳೆಯಲ್ಲಿ ನಿಮ್ಮ ದೇವಾರಾಧನಾಸಭೆಗಳಲ್ಲಿ ಸಾಮಾನ್ಯವಾದ ದೋಷ ಹಿಡಿದು, ನಿಮ್ಮ ಭಕ್ತಿಗೆ ಗುಣವಲ್ಲ, ಅವಗುಣವಾಗುವ ಹಾಗೆ ನಡದು ಕೊಳ್ಳುತ್ತೀರೆಂತಾ ನಿಮ್ಮನ್ನು ಗದರಿಸ ಬೇಕು. ವ. ೧೮. ಮೊದಲನೆ ತಪ್ಪು ಏನೆಂದರೆ: ನಿಮ್ಮ ನಿಮ್ಮ ಬುದ್ಧಿಗಳಲ್ಲಿ ಮಾತ್ರವಲ್ಲ, ಎಲ್ಲರಿಗೂ ಏಕೀಕಾರವಾಗಿ ಇರ ತಕ್ಕ ಸಭಾಸಮಾಗಮಗಳಲ್ಲಿಯೂ ಭೇಧಗಳು ಹುಟ್ಟಿದವೆಂದು ಕೇಳುತ್ತೇನೆ. ಈ ಸುದ್ದಿಯನ್ನು ಪೂರ್ಣವಾಗಿ ನಂಬಲಾರೆನು. ವ. ೧೯. ಆದಾ

೧ ಕೊರಿ. ೧೧, ೨೦—೨೫.

ಗ್ಯೂ ಹೀಗೆ ಆಗುವದು ಸಹಜವಾಗಿದೆ. ಸಾಧಾರಣವಾದ ಭೇದಗಳು ಮಾತ್ರವಲ್ಲ, ನಾನಾ ತರದ ಮತವ್ಯತ್ಯಾಸಗಳೂ, ಕ್ರಿಸ್ತವಚನವನ್ನು ಕೆಡಿಸುವ ಪಾಷಂಡ ಬೋಧೆಗಳೂ ನಿಮ್ಮಲ್ಲಿ ಹುಟ್ಟಿರ ಬೇಕು. ಯಾಕೆಂದರೆ, ನೀವು ಹೆಚ್ಚಾಗಿ ಕೆಟ್ಟು ಹೋಗಿರಲಾಗಿ, ತಿರಿಗಿ, ಸಭೆಗೆ ಗುಣವಾಗ ಬೇಕಾದರೆ, ನಿಜ ಕ್ರೈಸ್ತರು ತರ್ಕವಾದ ಪ್ರಿಯರಾದ ಸ್ವಾರ್ಥಿಗಳಾದ ಅಬದ್ಧ ಸಭೆಯವರನ್ನು ಅಗಲುವ ಹಾಗೆ ನಷ್ಟವೆಲ್ಲಾ ಪ್ರಕಟವಾಗ ಬೇಕು. ವ. ೨೦. ಎರಡನೆ ತಪ್ಪಿನಿಂದ ಕರ್ತನ ರಾತ್ರಿಭೋಜನದ ಪ್ರಯೋಜನವು ಪೂರ್ಣ ಭಂಗವಾಗುತ್ತದೆ. ಏನಂದರೆ, ನಿಮ್ಮ ಅನ್ಯೋನ್ಯವು ನಷ್ಟವಾದ್ದರಿಂದ, ರಾತ್ರಿಭೋಜನಕ್ಕೆ ಮುಂಚೆ, ಸಭಾಶಾಲೆಯಲ್ಲಿ ಆಗುವ ಪ್ರೀತಿಯೌತಣವೆಂಬ ಊಟಕ್ಕೆ ಕುಳಿತು ಕೊಂಡರೆ, ಒಬ್ಬೊಬ್ಬರು ತಮ್ಮ ಮನೆಯಿಂದ ಕೊಂಡು ಬಂದದ್ದನ್ನು ಬೇರೆ ಬೇರೆಯಾಗಿ ಉಂಣುತ್ತಾ ಇರಲಾಗಿ, ಕೆಲರು ಹಸಿಯುತ್ತಾರೆ, ಕೆಲರು ಉಂಡು ಕುಡಿದು ಹೊಟ್ಟಿ ತುಂಬುತ್ತಾರೆ. ವ. ೨೨. ಬಬ್ಬೊಬ್ಬನು ತಾನು ಅಟ್ಟ ಅಡಿಗೆ ಉಂಣ ಬೇಕಾದರೆ, ಮನೆಗಳಲ್ಲಿ ಊಟಾ ಮಾಡಿರಿ. ಸಭಾಶಾಲೆಯನ್ನು ಭೋಜನಶಾಲೆ ಮಾಡಿ, ಸಭೆಯಲ್ಲಿ ಉತ್ತಮರಾದ (ಯಾಕೊ. ೨, ೫.) ಬಡವರನ್ನು ನಾಚಿಸುವದು ಯಾತಕ್ಕೆ? ಪರಿಶುದ್ಧ ರಾತ್ರಿಭೋಜನದ ಪ್ರಯೋಜನವನ್ನು ಮರತು ಬಿಟ್ಟೆದ್ದೀರಷ್ಟೆ! ಅದನ್ನು ತಿರಿಗಿ ಜ್ಞಾಪಕ ಮಾಡುತ್ತೇನೆ.

ಬಳಿಕ ಅಪೊಸ್ತಲನು ವ. ೨೩—೨೫. ಶ್ರಮಚರಿತ್ರದಲ್ಲಿ ಬರದಿರುವ ಪ್ರಕಾರ ಪರಿಶುದ್ಧ ರಾತ್ರಿಭೋಜನ ಸ್ಥಾಪನೆಯ ಕ್ಲುಪ್ತವಾದ ವೃತ್ತಾಂತವನ್ನು ಸಭೆಯವರಿಗೆ ತಿಳಿಸುತ್ತಾನೆ. ಇದರಲ್ಲಿ ಮೂರು ಮಾತು ವಿಶೇಷವಾಗಿ ಲಕ್ಷಿಸ ತಕ್ಕದ್ದು: ೧. ದೇವಸ್ಥಾಪಿತ ಈ ಆಚಾರದ ರೀತಿ ಪೌಲನಿಗೆ ವಿಶೇಷ ಪ್ರಕಟಣೆಯಿಂದ ತಿಳಿಯಲಾಯಿತು. ಹ್ಯಾಗೆಂದರೆ ವ. ೨೩ಲ್ಲಿ ನಾನು ನಿಮಗೆ ಒಪ್ಪಿಸಿದ್ದನ್ನು ಕರ್ತನ ಕಡೆಯಿಂದ ಹೊಂದಿ ಇದ್ದೇನೆಂದು ಬರೆಯುತ್ತಾನೆ. ಇದರ ಅಭಿಪ್ರಾಯವೇನೆಂದರೆ: ನಾನು ಇದನ್ನು ಹನ್ನೊಂದು ಮಂದಿ ಶಿಷ್ಯರ ಕಡೆಯಿಂದ ಅಲ್ಲ, ಕರ್ತನ ಕಡೆಯಿಂದಲೆ ಕೇಳಿ ಇದ್ದೇನೆ. ೨. ಪಾತ್ರದ ವಿಷಯವಾಗಿ ಇಲ್ಲಿ ಬರದ ಮಾತುಗಳು ಮತ್ತಾಯ ಮರ್ಕರು ಬರದದ್ದಕ್ಕೆ ಸ್ವಲ್ಪ ವ್ಯತ್ಯಾಸವಾಗಿದ್ದು ಲೂಕ. ಸು. ೨೨, ೨೦ಲ್ಲಿ ಬರದ್ದಕ್ಕೆ ಒಪ್ಪುತ್ತವೆ. ಈ ಪಾತ್ರ ನನ್ನ ರಕ್ತದಲ್ಲಿರುವ ಹೊಸ ಒಡಂಬಡಿಕೆಯಾಗಿದೆ ಯೆಂಬ ವಾಕ್ಯದ ಅರ್ಥವೇನೆಂದರೆ: ಈ ಪಾತ್ರದ ವಿಶ್ವಾಸಾನ್ವಿತವಾದ ಭೋಗ ಮಾಡುವವನು, ರಕ್ತ ವಿಕಾರವಾದ ನನ್ನ ಮರಣದಿಂದುಂಟಾದ ಹೊಸ ಒಡಂಬಡಿಕೆಯಲ್ಲಿ ಪಾಲುಗಾರನಾಗುತ್ತಾನೆ. ಈ ಪಾತ್ರದಲ್ಲಿ ಕುಡಿಯುತ್ತಾ ಬರುವದರಿಂದ, ನಾನೂ ನನ್ನ ರಕ್ತವನ್ನು ಚಲ್ಲಿ ಸ್ಥಾಪಿಸಿದ ಕೃಪಾಸಂಮತಿಯಲ್ಲಿ ತಿರಿಗಿ ತಿರಿಗಿ ಶೇರು ತ್ತೀರಿ. ಇದಲ್ಲದೆ ಈ ಪಾತ್ರವು ಒಡಂಬಡಿಕೆಯ ಅಡವಂತೆ ಅದನ್ನು ಪುನಸ್ಥಾಪಿಸುತ್ತಾ, ಮುದ್ರಿಸುತ್ತಾ, ನೂತನ ಪಡಿಸುತ್ತಾ ಬರುವದರಿಂದ, ಅದಕ್ಕೆ ಹೊಸ ಒಡಂಬಡಿಕೆ ಯೆಂಬ ಹೆಸರು ಹುಟ್ಟಿದ್ದು ವಿಹಿತವೇ ಸರಿ. ೩. ಪೌಲನು ಇದನ್ನು ನನ್ನ ನೆನಪಿಗಾಗಿ ಮಾಡಿರಿ ಯೆಂಬ ಮಾತುಗಳನ್ನು ರೊಟ್ಟಿಯ ವಿಷಯವಾಗಿಯೂ ದ್ರಾಕ್ಷೇರಸದ ವಿಷಯವಾಗಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಎರಡು ಸಾರಿ ಶೇರಿಸುತ್ತಾನೆ. ಭಕ್ತರು ರಾತ್ರಿಭೋಜನವನ್ನು ಆಚರಿಸುವಲ್ಲಿ ನಮ್ಮ ಪಾಪಗಳಿಗಾಗಿ ಕ್ರೂಜೆಯಲ್ಲಿ ಸತ್ತು, ನಮ್ಮ ನೀತಿ ಕರಣಕ್ಕಾಗಿ ಸತ್ತವರೊಳಗಿಂದ ಯೆದ್ದು, ನಮ್ಮ ಮಹಿಮೆಗಾಗಿ ದಿವಕ್ಕೆ ಯೇರಿದ ಯೇಸುವನ್ನು ನೆನಪು ಮಾಡಿ ಕೊಂಡರೆ, ಅದು ಬರೀ ಬಗೆಯಲ್ಲ; ಯಾಕೆಂದರೆ ಇಬ್ಬರು ಮೂವರು ಅವನ ಹೆಸರಿನಲ್ಲಿ ಕೂಡಿ ಬಂದಲ್ಲಿ ತಾನೂ ಇದ್ದಾನೆ.

೫೬ನೇ ಅ ಅಪಾ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ.
೧ ಕೊರಿ. ೧೧, ೨೬—೩೧.

ಯೋಗ್ಯವಾದ ರಾತ್ರಿಭೋಜನದ ಆಚರಣೆಯ ವಿಷಯವಾದ ಪ್ರಸ್ತಾವೋಚಿತ ಬೋಧನೆ.

ವ. ೨೬. ಯಾಕೆಂದರೆ ಯೆಷ್ಟು ಸಾರಿ ಈ ರೊಟ್ಟಿ ತಿಂದು, ಈ ಪಾತ್ರದಲ್ಲಿ ಕುಡಿಯುತ್ತೀರೋ ಅಷ್ಟು ಸಾರಿ ಕರ್ತನ ಮರಣವನ್ನು, ಅವನು ಬರುವ ಮಟ್ಟಿಗೂ ೧) ಸಾರುತ್ತೀರಿ ೨). ೨೭. ಆದ್ದರಿಂದ ಯಾವನು ಅಯೋಗ್ಯವಾಗಿ ಈ ರೊಟ್ಟಿ ತಿನ್ನುತ್ತಾನೋ ಇಲ್ಲವೆ ಕರ್ತನ ಪಾತ್ರದಲ್ಲಿ ಕುಡಿಯುತ್ತಾನೋ ಅವನು ಕರ್ತನ ಶರೀರಕ್ಕೂ ರಕ್ತಕ್ಕೂ ಅಪರಾಧಿಯಾಗುತ್ತಾನೆ ೩). ೨೮. ಹಾಗಾದರೆ ಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಳ್ಳಲಿ ೪); ಹೀಗೆ ಆ ರೊಟ್ಟಿ ತಿಂದು ಆ ಪಾತ್ರದಲ್ಲಿ ಕುಡಿಯಲಿ. ೨೯. ಯಾಕೆಂದರೆ ಅಯೋಗ್ಯವಾಗಿ ತಿಂದು ಕುಡಿಯುವವನು ಕರ್ತನ ಶರೀರವನ್ನು ವಿಶೇಷ ಮಾಡದವನಾಗಿ ೫), ತನಗೆ ಆಜ್ಞೆ ನಿರ್ಣಯವನ್ನು ತಿಂದು ಕುಡಿಯುತ್ತಾನೆ ೬).

೧. ಮಧ್ಯ ಕಾಲದಲ್ಲಿ ಯೇಸು ಕ್ರಿಸ್ತನು ತನ್ನವರನ್ನು ಬಿಡದೆ, ಲೌಕಾಂತದವರಿಗೂ ಅವರ ಸಂಗಡ ಇರುತ್ತಾ ಬರುತ್ತಾನೆಂಬುವದಕ್ಕೆ ರಾತ್ರಿಭೋಜನದ ಸಂಪ್ರದಾಯವು ಬಲವಾದ ದೃಷ್ಟಾಂತವಾಗಿದೆ.

೨. ರಾತ್ರಿಭೋಜನವನ್ನು ಜಾಗ್ರತೆಯಾದ ಆಸಕ್ತಿಯಿಂದ ಆಚರಿಸಿ, ನಮಗಾಗಿ ಸತ್ತ ಯೇಸು ಕ್ರಿಸ್ತನ ಅನ್ಯೋನ್ಯದಲ್ಲಿ ದೃಢನಾದ ಭಕ್ತನು ಆತನಿಗೆ ತಕ್ಕ ಸಾಕ್ಷಿಯಾಗಿದ್ದಾನೆ.

೩. ರಾತ್ರಿಭೋಜನವನ್ನು ಮಾನಸಾಂತರವೂ ವಿಶ್ವಾಸವೂ ಇಲ್ಲದೆ ಆಚರಿಸುವವನು, ಕರ್ತನ ಶರೀರ ರಕ್ತಗಳು ಬೇಕಾಲೆ ಯೆಂದೆಣಿಸಿದ ಅಪರಾಧಕ್ಕೆ ಗುರಿಯಾಗಿದ್ದಾನೆ.

೪. ರಾತ್ರಿಭೋಜನವನ್ನು ಅಯೋಗ್ಯವಾಗಿ ಆಚರಿಸದ ಹಾಗೆ, ಕ್ರೈಸ್ತನು ತನ್ನ ಯೋಗ್ಯತೆಯನ್ನು ಬೇರೆಯವನಾಗಿ ಶೋಧಿಸಬೇಕು. ಶೋಧಿಸುವ ವಿಧಿ ಯಾವದೆಂದರೆ: ತಾನು ಪಾಪಿ ಯೆಂದು ತಿಳಿಕಾಂಡು, ರಕ್ಷಣೆಯನ್ನು ಮನಃಪೂರ್ವಕವಾಗಿ ಬಯಸಿ, ಕರ್ತನನ್ನು ನಂಬುವವನು ಪಾಪಿಗಳ ರಕ್ಷಕನಾದ ಯೇಸು ಕ್ರಿಸ್ತನ ಐಕ್ಯಕ್ಕೆ ಪಾತ್ರನಾಗಿ ಇದ್ದಾನೆ.

೫. ರಾತ್ರಿಭೋಜನವನ್ನು ಸಾಮಾನ್ಯವಾದ ಊಟವೆಂದು ಅಸಡ್ಡೆ ಮಾಡುವವನಾಗಿ.

೬. ಆಜ್ಞೋನಿರ್ಣಯವೇನೆಂದರೆ: ರಾತ್ರಿಭೋಜನವನ್ನು ಅಸಡ್ಡೆ ಮಾಡುವವರಿಗೆ ನಾನಾ ತರದ ಶಿಕ್ಷೆ ಇಹದಲ್ಲಿ ಬರುತ್ತದೆಂದು, ಮುವ್ವತ್ತೆರಡನೇ ವಚನದಲ್ಲಿ ತೋರುತ್ತದೆ. ಆದರೆ ಅಂಥಾ ಶಿಕ್ಷೆಗೆ ವಾಳಗಾಗದ ಹಾಗೆ, ರಾತ್ರಿಭೋಜನಕ್ಕೆ ಬಾರದೆ ಇರುವ ತಪ್ಪು ದಾಡ್ಡದು.

ಲಘುಮನಸ್ಸಿನಿಂದ ರಾತ್ರಿಭೋಜನವನ್ನು ಆಚರಿಸುವ ನಿಮಗೆ ಶಿಕ್ಷೆ ಬಂತಲ್ಲ?

ವ. ೩೦. ನಿಮ್ಮಲ್ಲಿ ಹಲಬರು ರೋಗದಲ್ಲಿ ಬಿದ್ದು, ಕೆಲವರು ಸತ್ತು ಹೋದದ್ದೇ, ಪರಿಶುದ್ಧ ರಾತ್ರಿಭೋಜನದ ಅಯೋಗ್ಯವಾದ ಆಚರಣೆಯು ನಿಮ್ಮಲ್ಲಿ ವಾಡಿಕೆ ಆದದ್ದಕ್ಕೆ ನಿಮ್ಮನ್ನು ಬೆದರಿಸಿ ಸಾಧಿಸ ತಕ್ಕ ನ್ಯಾಯವಾದ ಶಿಕ್ಷೆಯಾಗಿದೆ. ೩೧. ಯಾಕೆಂದರೆ ನಮ್ಮನ್ನು ನಾವೇ ಶೋಧಿಸಿ ಕೊಂಡು, ಲಘುಮನಸ್ಸಿನಿಂದ ಮಾಡಿದ ಪಾಪಕ್ಕೆ ಪಶ್ಚಾತ್ತಾಪ ಪಟ್ಟದ್ದೆ ಆದರೆ, ದೇವರು ನಮಗೆ ನ್ಯಾಯತೀರಿಸಿ, ಶಿಕ್ಷೆ ಕೊಡುವದು

ಅವಶ್ಯವಿರದಲ್ಲ. ೨೨. ಆದಾಗ್ಯೂ ಈ ಶಿಕ್ಷೆಗಳ ಉದ್ದಿಶ್ಯವೇನೆಂದರೆ: ಕ್ರಿಸ್ತನು ದಿವ್ಯ ಪ್ರೀತಿಯ ಆಸಕ್ತಿಯಿಂದ ತನ್ನ ಭಕ್ತರನ್ನು ಇಹದಲ್ಲಿ ದಂಡಿಸಿ, ಅವರು ದೇವರ ಕೃಪೆಯನ್ನೂ ಶಿಕ್ಷೆಯನ್ನೂ ಪೂರ್ಣವಾಗಿ ಅಸಡ್ಡೆ ಮಾಡುವ ಅವಿಶ್ವಾಸಿಗಳೊಡನೆ ಪರದಲ್ಲಿ ಅತಿ ಭಯಂಕರವಾದ ಆಜ್ಞಾನಿರ್ಣಯಕ್ಕೆ ಒಳಗಾಗದ ಹಾಗೆ ಎಚ್ಚರಿಸುತ್ತಾನೆ.

ಅಕ್ರಮವನ್ನು ಬಿಟ್ಟು, ಕ್ರಮವನ್ನು ಕೈಕೊಳ್ಳ ತಕ್ಕ ಕಟ್ಟಳೆಯನ್ನು ವಿಧಿಸುತ್ತಾನೆ.

ವ. ೨೩. ಹಾಗಾದರೆ ಸಭೆಯವರು ಎಲ್ಲರೂ ಕೂಡಿ ಬರುವ ಪರ್ಯಂತ ಕಾದು ಕೊಂಡು, ಎಲ್ಲರೂ ಒಟ್ಟಾಗಿ ಪ್ರೀತಿಭೋಜನವನ್ನು ಮಾಡಿ, ಹಣವಂತರು ಬಡವರಿಗೆ ಹಂಚಿ ಕೊಡಲಿ. ೨೪. ಹೆಚ್ಚು ಉಣ್ಣಾಬೇಕೆಂಬ ಅಪೇಕ್ಷೆಯುಳ್ಳವನು ಮನೆಯಲ್ಲಿ ಉಣ್ಣಲಿ; ಸಭೆಯು ಆಚರಿಸುವ ಪ್ರೀತಿಭೋಜನದ ಉದ್ದಿಶ್ಯ ಬೇರೆಯಾಗಿದೆ. ಇದನ್ನು ಮರತು ಬಿಟ್ಟರೆ, ಸಭೆಯ ಭೋಜನದಿಂದ ಅವಗುಣವೆ ಹೊರತು ಗುಣವಾಗುವದಿಲ್ಲ; ಯಾಕೆಂದರೆ ದೇವರ ನಿರ್ಣಯಕ್ಕೂ ಶಿಕ್ಷೆಗೂ ಗುರಿಯಾಗುತ್ತೀರಿ. ಪಕ್ಷಭೇದಗಳು ಮುಂತಾದದ್ದನ್ನು ಕುರಿತು ಪತ್ರಿಕೆಯಲ್ಲಿ ಬರೆಯುವದು ಸಾಲದೆ ಇರುವದರಿಂದ, ನಾನೆ ಬಂದು ತಕ್ಕ ಕ್ರಮವನ್ನು ಸ್ಥಾಪಿಸುತ್ತೇನೆ.

೩) ಆತ್ಮವರಗಳ ಯುಕ್ತ ಪ್ರಯೋಗವು. ಸ. ೧೨. ೧೩. ೧೪.

ಪ್ರಥಮ ಪಂಚಾಶದ್ದಿವಸ ಮೊದಲು ಗೊಂಡು ಅಪೊಸ್ತಲರ ಕಾಲದ ಸಭೆಯಲ್ಲಿ ನಂಬಿದವರಿಗೆ ದೊರಕಿದ ಪರಿಶುದ್ಧಾತ್ಮದ ಪ್ರಸಾದಕ್ಕೆ ಈಗಿನವರಾದ ನಮಗೆ ಪೂರ್ಣ ಅನುಭವವಿಲ್ಲದ ಅದ್ಭುತವಾದ ಲಕ್ಷಣಗಳು ಕೂಡುತ್ತಾ ಇದ್ದವು (ಅಪೊ. ಕ್ರಿ. ೨. ೪. ೧೦. ೧೫.) ಈ ಅದ್ಭುತ ಲಕ್ಷಣಗಳು ಎರಡು ವಿಧವಾಗಿದ್ದವು. ಪರಿಶುದ್ಧಾತ್ಮವನ್ನು ಹೊಂದಿದವರಲ್ಲಿ ಜ್ಞಾನ, ವಿವೇಕ, ಬೋಧೆ, ಪಾಲನೆ ಶಿಕ್ಷೆಗಳ ಸಾಮರ್ಥ್ಯ, ಮುಂತಾದ ಸ್ವಾಭಾವಿಕ ಚಾತುರ್ಯ ವಿಶೇಷಗಳು ಅತಿಶಯ ನೃದ್ಧಿಯಾದವು. ಇದಲ್ಲದೆ ರೋಗ ನಿವಾರಣ, ಅದ್ಭುತಬಲ, ಪ್ರವಾದನೆ, ಭಾಷಾಭೇದ ಮುಂತಾದ ಅದ್ಭುತ ಕರಣಶಕ್ತಿಗಳು ಮಾನಸಾಂತರ ಪಟ್ಟವರಲ್ಲಿ ಕಾಣಿಸಿ ಕೊಂಡು, ಪರಿಶುದ್ಧಾತ್ಮದ ದಿವ್ಯ ತ್ರಾಣವನ್ನು ಪ್ರಕಟ ಮಾಡಿದವು. ಈ ಅದ್ಭುತ ಕರಣದ ವರಗಳು ಕೊರಿಂಥದವರ ಸಭೆಯಲ್ಲಿ ವಿಶೇಷ ವೃದ್ಧಿಯಾಗಿ, ಸರ್ವೋತ್ತಮ ವರಗಳೆಂದು ಹೆಸರು ಪಡೆಕೊಂಡವು. ಬಳಿಕ ಆ ವರಗಳನ್ನು ಹೊಂದಿದವರು ಉಬ್ಬಿ ಕೊಂಡು, ಡಾಂಭಿಕರಾಗಿ, ಅಟ್ಟಹಾಸ ಮಾಡುತ್ತಾ, ಉಳಿದವರನ್ನು ಅಸಡ್ಡೆ ಮಾಡುತ್ತಾ ಇದ್ದರು. ಆದ್ದರಿಂದ ಅಪೊಸ್ತಲನು ೧೨. ೧೩. ೧೪ನೆ ಸಂಧಿಗಳಲ್ಲಿ ಸಭೆಯಲ್ಲಿ ಹುಟ್ಟಿದ ದೋಷವನ್ನು ಪರಿಹರಿಸುವದಕ್ಕೆ ಯುಕ್ತವಾದ ಬೋಧನೆಯನ್ನು ವಿವರಿಸುತ್ತಾನೆ, ಹ್ಯಾಗೆಂದರೆ.

೧. ಆತ್ಮವರಗಳ ಭಾವ ಭೇದ ಮುಂತಾದ್ದನ್ನು ಚನ್ನಾಗಿ ತಿಳಿದು ಕೊಳ್ಳ ಬೇಕು. ಸ. ೧೨.,

೨. ಎಲ್ಲಾ ವರಗಳಲ್ಲಿ ಉತ್ತಮವಾದ ಪ್ರೀತಿಯು ಸ. ೧೩., ಅಳಿ ಕೊಳ್ಳುವಂಥಾದ್ದಾಗಿ,

೩. ಪರವಶ ಭಾಷೆ, ಪ್ರವಾದನೆಗಳ ಪ್ರಯೋಗದ ಕ್ರಮವನ್ನು ಸ್ಥಾಪಿಸ ಬೇಕು. ಸ. ೧೪.

ಸ. ೧೨.

ಪರಿಪರಿ ವಿಧ ವರಗಳಿಗೆ ಮೂಲವಾದ ಆತ್ಮದ ವಿಕ್ಷಣವು.

೧) ಪರಿಪರಿವಿಧದಲ್ಲಿ ಯಿರುವ ವಿಕತ್ವವು.

ಒಂದೇ ಆತ್ಮವು ನಾನಾ ವಿಧ ವರಗಳಲ್ಲಿ ಪ್ರಕಟವಾಗುತ್ತದೆ. ವ. ೧—೧೧.

ಅ) ಎಲ್ಲಾ ಆತ್ಮವರಗಳ ವಿಷಯವಾದ ಸೂತ್ರ.

ವ. ೧. ಆತ್ಮವರಗಳ ವಿಷಯವಾಗಿ ಅವಶ್ಯವಾದದ್ದನ್ನು ನಿಮಗೆ ತಿಳಿಸುತ್ತೇನೆ. ೨. ಮಾತು ಗಿಲ್ಲದ ಪ್ರತಿಮೆಗಳ ಬಳಿಗೆ ನಡಿಸಲ್ಪಟ್ಟ ಪ್ರಕಾರ ೧) ವಹಿಶಿ ಕೊಳ್ಳುವ ಜನಗಳವರಾಗಿ ಗಿದ್ದಿರೆಂದು ೨) ಬಲ್ಲಿರಿ. ೩. ಅದು ಕಾರಣ ನಾನು ನಿಮಗೆ ತಿಳಿಸುವದು ಯೇನೆಂದರೆ ೩)—ದೈವರ ಆತ್ಮದಿಂದ ಮಾತನಾಡುವ ಯಾವನಾದರೂ ಯೇಸು ಶಾಪಗ್ರಸ್ತನೆಂದು ಹೇಳನು ೪); ಮತ್ತು ಪರಿಶುದ್ಧಾತ್ಮದಿಂದಲ್ಲದೆ, ಯಾವನಾದರೂ ಯೇಸು ಕರ್ತನೆಂದು ಹೇಳಲಾರನು ೫).

೧. ಜನಗಳವರು ದೇವರಿಗೆ ಭೇದವಾಗಿರುವದರಿಂದ, ದೇವರ ಆತ್ಮವನ್ನು ಪಡಾಂದದೆ, ಆತ್ಮವರಗಳು ಯೇನು ಯಂದು ಅರಿಯದವರಾಗಿದ್ದಾರೆ.

೨. ಜನಗಳವರು ಪೂಜಿಸುವ ಪ್ರತಿಮೆಗಳಿಗೆ ಜೀವವೂ ಚೈತನ್ಯವೂ ಇಲ್ಲ. ಅವುಗಳಿಗೆ ಮಾಡುವ ಪೂಜೆಯಲ್ಲಿ ಬುದ್ಧಿಯೂ ಫಲವೂ ಇಲ್ಲ. ಎಲ್ಲಾ ಪೂರ್ವ ಸಂಪ್ರದಾಯದ ಪ್ರಕಾರ ನಡೆಯುತ್ತದೆ ಅಷ್ಟೆ. ಯೇಸು ಕ್ರಿಸ್ತನನ್ನು ನಂಬಿ ಜೀವವುಳ್ಳ ದೇವರನ್ನು ತಿಳಿಯದವರೆಲ್ಲರು ನಿರರ್ಥಕವಾದ ಆರಾಧನೇ ಮಾಡುತ್ತಾರೆ.

೩. ಆದ್ದರಿಂದ ನಿಜವಾದ ಆತ್ಮವರಗಳ ಮುಖ್ಯವಾದ ಒಂದು ಲಕ್ಷಣವನ್ನು ನಿಮಗೆ ತಿಳಿಸುತ್ತೇನೆ.

೪. ಮನುಷ್ಯಪುತ್ರನಾಗಿ ಯೆಹೂದರಲ್ಲಿ ಪುಟ್ಟಿ, ಬದುಕಿ, ಸತ್ತು, ಮರಣದಿಂದ ಎದ್ದ ಯೇಸುವನ್ನು ಪಗೆ ಮಾಡಿ ದೂಷಿಸುವದು ದೇವವಿರೋಧವಾದ ಆತ್ಮದ ಲಕ್ಷಣವಾಗಿದೆ.

೫. ಬಾಯ ಮಾತಿನಿಂದ ಮಾತ್ರವಲ್ಲ, (ಮತ್ತಾ. ೭, ೨೧.) ಪೃದಯದ ನೆಲದಿಂದಲೆ, ನಿಂದೆ ಹಿಂಸೆ ಮುಂತಾದ್ದಕ್ಕೆ ಪೆದರದೆ, ತಾನು ಕ್ರಿಸ್ತಭಕ್ತನೆಂದು ಖಂಡಿತವಾಗಿ ಅರಿಕೆ ಮಾಡುವದು ಸತ್ಯಾತ್ಮದ ಲಕ್ಷಣವಾಗಿದೆ.

ಇ) ಆತ್ಮವರಗಳ ಸಾಮಾನ್ಯವಾದ ಮೂಲ.

ವ. ೪. ವರಗಳ ವ್ಯತ್ಯಾಸಗಳುಂಟು; ಆದರೆ ಒಂದೆ ಆತ್ಮವು. ೫. ಸೇವೆಗಳ ವ್ಯತ್ಯಾಸಗಳುಂಟು; ಒಬ್ಬನೇ ಕರ್ತನು. ೬. ಯತ್ನಗಳ ವ್ಯತ್ಯಾಸಗಳುಂಟು; ಆದರೆ ಎಲ್ಲರಲ್ಲಿ ಎಲ್ಲಾ ಯತ್ನೈಸುವವನು ಒಬ್ಬನೆ ದೇವರು.

ಪರಿಶುದ್ಧ ತ್ರೈಕತ್ವದಲ್ಲಿ ಐಕ್ಯವಾದ ಪ್ರತ್ಯೇಕ ಪ್ರತ್ಯೇಕ ಪುರುಷರಿಗೆ ಸಂಬಂಧವಾಗಿರುವ ವರಗಳೂ ಸೇವೆಗಳೂ ಯತ್ನಗಳೂ ವಿಕವಾಗಿದ್ದರೂ, ಭೇದವಾಗಿವೆ. ಹ್ಯಾಗೆಂದರೆ ಪರಿಶುದ್ಧಾತ್ಮವು ವರದಾಯಕನಾಗಿದ್ದಾನೆ; ದೈವತ್ವದ ಅಂತರಾಂತರ್ಯಗಳನ್ನು ಪ್ರಕಟಿಸುವಂಥಾ, ಭಕ್ತರಲ್ಲಿ ಹೊಸ ಜೀವವನ್ನು

೧ ಕೊರಿ. ೧೨, ೭—೧೧.

ಹುಟ್ಟಿಸುವಂಥಾ, ಪರಿಶುದ್ಧತ್ವ ಜ್ಞಾನಗಳ ಆತ್ಮವು ೧ ಕೊರಿ. ೨, ೧೦., ಜ್ಞಾನ ಬುದ್ಧಿ ವಿಶ್ವಾಸ ಮುಂತಾದ ಉತ್ತಮ ಆತ್ಮವರಗಳನ್ನು ಭಕ್ತರಿಗೆ ಕೊಟ್ಟು, ಆ ವರ ಹೊಸ ಭಾವವನ್ನು ಬೇರೆ ಬೇರೆಯೋಗಿ ವಿಶೇಷಿಸುತ್ತಾನೆ. ಸಭೆಯ ಆಡಿಳಿತೆಗೂ ಪರಸ್ಪರ ಸಹಾಯಕ್ಕೂ ವ. ೨೮. ಅವಶ್ಯವಾದ ಸೇವೆಗಳನ್ನು ದೇವರಾಜ್ಯದ ಅರಸನಾದ ಕ್ರಿಸ್ತನು ಆಯಾ ಭಕ್ತರಿಗೆ ಅವರವರ ಭಾವಕ್ಕೂ ವರಗಳಿಗೂ ಅನುಕೂಲವಾದ ಉದ್ಯೋಗಗಳನ್ನು ನೇಮಿಸಿ ವಿಂಗಡಿಸುತ್ತಾನೆ. ವರಗಳಲ್ಲಿಯೂ ಸೇವೆಗಳಲ್ಲಿಯೂ ಫಲಫಲಿಸುವ ಯತ್ನಗಳ ಚೈತನ್ಯವು ತಂದೆಯಾದ ದೇವರ ಸರ್ವತ್ರಾಣದಿಂದ ಬರುತ್ತದೆ.

ಅ) ವರಗಳ ಸಾಮಾನ್ಯವಾದ ಉದ್ದಿಶ್ಯ.

ವ. ೭. ಸಭೆಯ ಪ್ರಯೋಜನವೆ ಆತ್ಮವರಗಳ ಉದ್ದಿಶ್ಯವಾಗಿದೆ. ೮. ಅಪೊಸ್ತಲನು ವರಗಳನ್ನು ಮೂರು ವಿಧವೆಂದು ವರ್ಣಿಸುತ್ತಾನೆ. ಬೇರೆ ಬೇರೆ ವಿಧವನ್ನು ವಿವರಿಸ ತೊಡಗುವಲ್ಲಿ ಹೆತೆರೊಸ್ ಎಂಬ ಶಬ್ದವನ್ನು ಪ್ರಯೋಗಿಸುತ್ತಾನೆ. ಮೊದಲನೆ ವಿಧವಾದ ಧರ್ಮಬೋಧೆ ಜ್ಞಾನಬೋಧೆ ಯೆಂಬ ಬುದ್ಧಿವರಗಳು ಬೋಧಕರ (ಎಫೆ. ೪, ೧೧.) ಹಿರೀನಾಯಕರ (೧ ತಿಮೊ. ೫, ೧೭.) ಉದ್ಯೋಗಾಚರಣೆಗೆ ಅವಶ್ಯವಾಗಿವೆ. ೯. ಎರಡನೆ ವಿಧದ ವಿಶ್ವಾಸ ಶಕ್ತಿ ವರಗಳು [ವಿಶ್ವಾಸ ಯೆಂಬದಕ್ಕೆ ದೇವರ ವಾಕ್ಯದಲ್ಲಿ ಎರಡು ಅರ್ಥ: ಜಗದ್ರಕ್ಷಕನಾದ ಯೇಸು ಕ್ರಿಸ್ತನನ್ನು ಆತ್ಮರಕ್ಷಣೆಗಾಗಿ ನಂಬುವ ವಿಶ್ವಾಸವು ನಿಜ ಕ್ರೈಸ್ತರೆಲ್ಲರಿಗೆ ಸಾಮಾನ್ಯವಾಗಿದೆ. ಇದರ ಹೊರತು ದೇವರನ್ನು ಅತಿಶಯವಾದ ಭರವಸದಿಂದ ನಂಬುವ ಪ್ರಾರ್ಥನೆಯ ಬಲದಿಂದ ವಿಘ್ನಗಳನ್ನೆಲ್ಲಾ ಗೆಲ್ಲುವ ಅದ್ಭುತವಾದ ವರಕ್ಕೂ ವಿಶ್ವಾಸವೆಂಬ ಹೆಸರು ಬರುತ್ತದೆ. ಮತ್ತಾ. ೧೭, ೧೫. ಅಪೊ. ಕ್ರಿ. ೬, ೫. ೮. ೧ ಕೊರಿ. ೧೩, ೨.] ಈ ವಿಧದಲ್ಲಿ ಶೇರುವ ವರಗಳು ಯಾವವೆಂದರೆ—ರೋಗನಿವರ್ತಕ ತ್ರಾಣವು, ೧೦. ಬೇರೆ ಅದ್ಭುತ ಕ್ರಿಯೆಗಳನ್ನು ನಡಸುವ ಶಕ್ತಿಯು, ಆತ್ಮಾವೇಶವಾಗಿ, ಆತ್ಮ ವರವತವಾಗಿ, ಜ್ಞಾನದೃಷ್ಟಿಯನ್ನು ಪಡ ಕೊಂಡು, ಕರ್ತನ ವಾಕ್ಯವನ್ನು ಉತ್ಕೃಷ್ಟ ರೀತಿಯಿಂದಲೂ ಬಲದಿಂದಲೂ ಸಾರಿ, ಕೇಳುವವರ ಹೃದಯಗಳನ್ನು ಕಳವಳ ಗೊಳ್ಳಿಸುವ ಪ್ರವಾದನೆಯು, ದೇವಾತ್ಮ ಪ್ರೇರಿತ ಪ್ರವಾದನೆಯನ್ನೂ ದೆವ್ವ ಪ್ರೇರಿತ ಪ್ರವಾದನೆಯನ್ನೂ ವಿಶೇಷಿಸುವ ವಿವೇಕವು. ಮೂರನೆ ವಿಧದಲ್ಲಿ ಅನ್ಯ ಭಾಷಾವಾದವೂ, ಅನ್ಯ ಭಾಷಾವಾದದ ವ್ಯಾಖ್ಯಾನವೂ ಶೇರುತ್ತವೆ. ಇದರ ವಿವರವು ಮುಂದೆ ಬರುತ್ತದೆ. ೧೧. ಈ ವರಗಳೆಲ್ಲಾ ಬೇರೆ ಬೇರೆಯೋಗಿ ವಿಭಾಗಿಸಿ ಅವೆ; ಆದರೆ ಒಂದೆ ಆತ್ಮವು ಅವುಗಳನ್ನೆಲ್ಲಾ ಕಲ್ಪಿಸಿ, ಮನಸ್ಸು ಬಂದ ಹಾಗೆ ಭಕ್ತರ ಸಭೆಯಲ್ಲಿ ಹಂಚಿ ಕೊಡುತ್ತದೆ.

ಆ) ಏಕತ್ವದಲ್ಲಿರುವ ಪರಿಪರಿ ವಿಧವು. ಕ್ರಿಸ್ತನ ಸಭೆಯಲ್ಲಿರುವ ಆತ್ಮದ ವರಗಳೆಲ್ಲಾ ಒಂದೇ ಶರೀರದ ಅವಯವಗಳಂತೆ ಪರಸ್ಪರ ಸಂಬಂಧವಾಗಿವೆ. ವ. ೧೨—೩೧.

೧. ನಾವು ಬಂದೇ ಶರೀರವಾಗಿದ್ದೇವೆ. ವ. ೧೨—೧೪.

೨. ಕೀಳಾದ ಅವಯವಗಳು ತಾವು ಕನಿಷ್ಟವೆಂದೆಣಿಸಿ ಕೊಳ್ಳ ಬೇಡ. ವ. ೧೫—೨೦.

೩. ಮೇಲಾದವುಗಳು ತಾವು ಉತ್ತಮವೆಂದೆಣಿಸಿ ಕೊಳ್ಳ ಬೇಡಾ. ವ. ೨೧—೨೬.

೪. ಕ್ರಿಸ್ತನ ಶರೀರದ ಉಪಮೆ. ಕ್ರೈಸ್ತರ ಅನ್ಯೋನ್ಯವು. ವ. ೨೭—೩೧.

ಶೀರ್ಷಿಕೆ— ಅಪೊ. ಪೌ. ೨ನೇ ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಸ್ಥಿತಿ.

೧ ಕೊರಿ. ೧೨, ೧೩—೨೫.

ಅ) ನಾವು ಒಂದೇ ಶರೀರವಾಗಿದ್ದೇವೆ.

ವ. ೧೨. ಒಂದೊಂದು ವರಕ್ಕೂ ಒಂದೊಂದುದ್ಯೋಗಕ್ಕೂ ತಕ್ಕ ಮನ್ನಣೆ ಉಂಟೆಂಬುವದಕ್ಕೆ ಒಂದು ದೃಷ್ಟಾಂತವದೆ. ಮನುಷ್ಯನ ಶರೀರವು ಒಂದೇ ಆಗಿದ್ದರೂ, ನಾನಾ ಅವಯವಗಳುಳ್ಳದ್ದಾಗಿ ಇದೆ; ಅವಯವಗಳು ಹಲವಾಗಿ ಇದ್ದರೂ, ಶರೀರವು ಒಂದೆ. ಅದೇ ಪ್ರಕಾರ ಕ್ರಿಸ್ತನ ಸಭೆಯು ಆತನ ಆತ್ಮಿಕ ಶರೀರವಾಗಿದ್ದು, ಅನೇಕೈಕ ಭಾವವಾಗಿದೆ. ೧೩. ಹ್ಯಾಗೆಂದರೆ, ನಾವೆಲ್ಲರು ಸ್ನಾನದಲ್ಲಿ ಒಂದೇ ವರಿ ಶುದ್ಧಾತ್ಮವನ್ನು ಹೊಂದಿ, ಒಂದೇ ಕ್ರಿಸ್ತನ ಶರೀರದ ಸಂಬಂಧದಲ್ಲಿ ಅಭೇದವಾಗಿ ಸೇರಿದ್ದೇವೆ; ರಾತ್ರಿಭೋಜನದಲ್ಲಿ ಕ್ರಿಸ್ತನ ರಕ್ತದ ಅನ್ಯೋನ್ಯವಾದ ಪಾತ್ರದ ಪಾನ ಮಾಡಿದರಿಂದ ಒಂದೇ ಆತ್ಮವಾಗಿದ್ದೇವೆ. ನಮ್ಮಲ್ಲಿ ಇರುವ ಆತ್ಮಿಕ ಜೀವದ ಉತ್ಪತ್ತಿ ಪಾಲನೆಗಳು ಒಂದೆ; ಜಾತಿ ಸ್ಥಿತಿ ಮುಂತಾದವುಗಳ ಭೇದದಿಂದ ಆತ್ಮಿಕವಾದ ಅನ್ಯೋನ್ಯವು ಕೆಡುವದಿಲ್ಲ, ಗಲ. ೩, ೨೮. ೧೪. ಯಾಕೆಂದರೆ ಅನೇಕ ಅವಯವಗಳುಳ್ಳ ಮನುಷ್ಯನ ಶರೀರವು ಏಕ ಶರೀರವಾಗಿರುವ ಪ್ರಕಾರ, ಕ್ರಿಸ್ತನ ಶರೀರದ ನಾನಾ ವಿಧವಾದ ಅವಯವಗಳು ಒಂದಾಗಿವೆ.

ಆ) ಕೀಳಾದ ಅವಯವಗಳಲ್ಲಿ ಹೊಟ್ಟೆಕಿಚ್ಚು ಹುಟ್ಟು ಬಾರದು.

ವ. ೧೫. ಕಡಮೆಯಾದ ವರಗಳನ್ನು ಹೊಂದಿದವನೊಬ್ಬನು ಹೊಟ್ಟೆಕಿಚ್ಚಿನಿಂದ ಜೇಸರ ಗೊಂಡರೆ, ಕಾಲು: ನಾನು ಕೈಯಲ್ಲ, ಇಲ್ಲ. ಕಿವಿಯು: ನಾನು ಕಣ್ಣಲ್ಲ, ಆದ್ದರಿಂದ ನಾನು ಶರೀರದ ಅಂಗವಲ್ಲಾಯೆಂದು ಹೇಳಿದ ಹಾಗಾದೀತು. ಅವು ಶರೀರದ ಅಂಗಗಳೇ ಸರಿ. ೧೭. ನಾನಾ ಅಂಗಗಳಲ್ಲಿಯೂ ಇಂದ್ರಿಯ ಕರಣಗಳಲ್ಲಿಯೂ ಪ್ರಯೋಜನವಿಲ್ಲದ್ದೂ ಅವಶ್ಯವಿಲ್ಲದ್ದೂ ಒಂದೂ ಇಲ್ಲ. ೧೮. ಮನುಷ್ಯನ ಶರೀರದಲ್ಲಿಯೂ ಕ್ರಿಸ್ತನ ಸಭೆಯಲ್ಲಿಯೂ ಒಂದೊಂದು ಅಂಗಕ್ಕೆ ಅದರದರ ಸ್ಥಾನೋದ್ಯೋಗಗಳನ್ನು ನೇಮಿಸಿದ ದೇವರ ಉಚಿತವಾದ ಕೃಪೆಯನ್ನೂ ಬುದ್ಧಿಯನ್ನೂ ತಿದ್ದುವದಕ್ಕೆ ಯಾರಿಗೆ ಅಧಿಕಾರವದೆ? ೧೯. ಎಲ್ಲಾ ಅವಯವಗಳು ಸಮಾನವಾಗಿದ್ದರೆ, ಶರೀರ ಇರುವದು ಹ್ಯಾಗೆ? ೨೦. ಆದರೆ ಅವಯವಗಳ ವಿವಿಧತ್ವದಿಂದಲೇ ಶರೀರದ ಐಕ್ಯವು ಸಂಪೂರ್ಣವಾಗುತ್ತದೆ.

ಇ) ಮೇಲಾದವರು ಹಿಗ್ಗ ಬಾರದು.

ವ. ೨೧. ಮೇಲಾದದ್ದಕ್ಕೆ ಕೀಲಾದದ್ದು ಬೇಕು; ಕಣ್ಣು ಕೈಯನ್ನು, ತಲೆಯು ಕಾಲುಗಳನ್ನು ಅಸಡ್ಡೆ ಮಾಡುವದಿಲ್ಲ. ಅದೇ ಪ್ರಕಾರ ಸಭೆಯಲ್ಲಿ ಹಿರಿಯರು ಕಿರಿಯರನ್ನು ಉದಾಸೀನ ಮಾಡ ಬಾರದು. ೨೨. ಅವಯವಗಳಲ್ಲಿ ಬಲವೂ ಮಾನವೂ ಇಲ್ಲದವುಗಳು ಅತ್ಯವಶ್ಯವಾಗಿವೆ. ೨೩. ಕುಂದು ಬಂದ ಅವಯವಗಳನ್ನು ಹೆಚ್ಚಾಗಿ ಕಾಪಾಡಿ, ಚಲುವಿಕೆಯಿಲ್ಲದವುಗಳನ್ನು ಅತಿ ಜಾಗ್ರತೆಯಾಗಿ, ಮುಚ್ಚಿಕೊಂಡು, ಅಲಂಕರಿಸುವದು ವಾಡಿಕೆ. ೨೪. ಮೇಲಾದವುಗಳಿಗೆ ಅದೆಲ್ಲಾ ಬೇಡಾ. ಹೀಗೆ ದೇವರು ಶರೀರವನ್ನು ನಾನಾ ಅಂಗವಾಗಿ ನಿರ್ಮಿಸಿ, ಕೀಳಾದ ಅಂಗಗಳಿಗೆ ಹೆಚ್ಚಾದ ಕಾಪಾಡಿಕೆ ಆಗುವಂತೆ ನೇಮಿಸಿರುವದರಿಂದ, ೨೫. ಒಂದು ಅಂಗದ ನಷ್ಟದಿಂದ ವಿಶಿಷ್ಟ ಶರೀರಕ್ಕೆ ಮೋಸವಾಗದ ಹಾಗೆ, ಅಂಗಗಳೆಲ್ಲಾ ಪರಸ್ಪರ ಸಹಾಯ ಮಾಡುತ್ತಾ ಇರಲಾಗಿ,

೧ ಕೊರಿ. ೧೨, ೨೬—೫೧.

ಶರೀರವು ಬಾಳುತ್ತದೆ. ೨೬. ಬಂದು ಅಂಗವು ನೊಂದರೆ ಎಲ್ಲಾ ನೋಯುತ್ತದೆ; ಒಂದು ಕ್ಷೇಮವಾಗಿದ್ದರೆ, ಎಲ್ಲಾದಕ್ಕೂ ಒಳ್ಳೇದು.

ಎ) ಈ ಸಾಮ್ಯವು ಕ್ರಿಸ್ತನ ಶರೀರವೆಂಬ ಸಭೆಗೆ ಒಪ್ಪುತ್ತದೆ.

ವ. ೨೭. ಪರಸ್ಪರ ಸಂಬಂಧವಾಗಿರುವ ರೀತಿಯು ಮನುಷ್ಯನ ಶರೀರದಲ್ಲಿ ಸ್ವಾಭಾವಿಕವಾದ ನೇಮವಾಗಿ ತೋರುತ್ತದೆ. ಆದರೆ ಕ್ರೈಸ್ತ ಸಭೆಯವರಾದ ನಾವೆಲ್ಲರು ಕ್ರಿಸ್ತನ ಶರೀರವಾಗಿರುವದರಿಂದ, ಮೇಲನಾಗಲಿ ಕೀಳ್ಗನಾಗಲಿ, ಒಬ್ಬೊಬ್ಬನು ಈ ಶರೀರದ ಅಂಗವಾಗಿ ತನ್ನ ತನ್ನ ಸ್ಥಾನವನ್ನೂ ಉದ್ಯೋಗವನ್ನೂ ಹೊಂದಿದ್ದಾನೆ. ೨೮. ಹ್ಯಾಗೆಂದರೆ ದೇವರು ಸರ್ವ ಕ್ರೈಸ್ತ ಸಭೆಯ ಬೋಧನಾಧರ್ಮ ಸ್ಥಾಪಕರಾದ ಅಪೊಸ್ತಲರನ್ನು ಸಭೆಯಲ್ಲಿ ಮೊದಲಿಗರಾಗಿ, ದೇವೋಕ್ತಗಳನ್ನು ಸಾರುವ ಪ್ರವಾದಿಗಳನ್ನು ಎರಡನೆಯವರಾಗಿ, ಉಪದೇಶ ಕೊಡುವ ಬೋಧಕರನ್ನು ಮೂರನೆಯವರಾಗಿ ನೇಮಕ ಮಾಡಿದ್ದಾನೆ. ಮತ್ತೊಬ್ಬರಿಗೆ ದುಷ್ಟರನ್ನು ದಂಡಿಸುವದಕ್ಕೂ (ಪೇತ್ರನು ಅನನೀಯನನ್ನೂ ಸೀಮೋನನನ್ನೂ ಶಿಕ್ಷಿಸಿದ್ದು ಅಪೊ. ಕ್ರಿ. ೫, ೫. ೧೦, ೧೧ ಲ್ಲಿ, ಪೌಲನು ಬಾರ್‌ಯೇಹುವನ್ನು ಶಿಕ್ಷಿಸಿದ್ದು ಅಪೊ. ಕ್ರಿ. ೧೩, ೯ ಲ್ಲಿ ಬರದದೆ.) ದೆವ್ವಗಳನ್ನು ಹೊರಡಿಸುವದಕ್ಕೂ ಅದ್ಭುತ ಕರಣ ಶಕ್ತಿಯನ್ನು, ಮತ್ತೊಬ್ಬರಿಗೆ ಹೃದಯದಲ್ಲಿ ನಂಬುವವರ ರೋಗಗಳನ್ನು ಪರಿಹರಿಸುವ ಶಕ್ತಿ ವರವನ್ನು, ಮತ್ತೊಬ್ಬರಿಗೆ ದರಿದ್ರರು ರೋಗಿಗಳು ಮುಂತಾದವರನ್ನು ಕಾಪಾಡುವದಕ್ಕೆ ಪರೋಪಕಾರಿತ್ವದ ವರವನ್ನು, ಮತ್ತೊಬ್ಬರಿಗೆ ಸಭೆಯ ಆಡಳಿತೆಯನ್ನು ನಡಿಸುವದಕ್ಕೆ ಬೇಕಾದ ಆಳ್ವಿಕೆಯ ವರವನ್ನು, ಇನ್ನೊಬ್ಬರಿಗೆ ಅನ್ಯ ಭಾಷಾವರಗಳನ್ನು ಕೊಟ್ಟು ಇದ್ದಾನೆ. ಈ ಕಡೆ ವರಗಳನ್ನು ಕೊರಿಂಥದವರು ಅಧಿಕಾಧಿಕವಾಗಿ ಗಣನೆ ಮಾಡಿದರು; ಆದರೆ ಅವು ಸಭೆಯ ಆತ್ಮವೃದ್ಧಿಗೆ ವಿಶೇಷ ಪ್ರಯೋಜನವಾಗಿರದೆ, ಅವುಗಳನ್ನು ಹೊಂದಿದ ಆಯಾ ಭಕ್ತರಿಗೆ ಮಾತ್ರ ಉಪಯೋಗವಾಗಿದ್ದದರಿಂದ, ಅಪೊಸ್ತಲನು ಅವುಗಳನ್ನು ಕಡೇ ಸ್ಥಳದಲ್ಲಿ ಶೇರಿಸಿದ್ದು ಯುಕ್ತವಾಗಿದೆ. ೨೯. ೩೦. ಎಲ್ಲರಿಗೆ ಎಲ್ಲಾ ವರವು ದೊರಕುವದು ಇಲ್ಲ; ಒಬ್ಬರಿಗೆ ಒಂದು, ಮತ್ತೊಬ್ಬರಿಗೆ ಮತ್ತೊಂದು ವರ ದೊರಕುತ್ತದೆ. ಹೀಗಿರಲಾಗಿ ಒಬ್ಬರು ಬಬ್ಬರಿಗೆ ಬೇಕು, ಒಬ್ಬರು ತಮ್ಮ ತಮ್ಮ ವರದಿಂದ ಮತ್ತೊಬ್ಬರಿಗೆ ಸೇವೆ ಮಾಡಲವಶ್ಯವಾಗಿದೆ. ೩೧. ಮತ್ತೊಬ್ಬರ ಆತ್ಮವೃದ್ಧಿಗೆ ಪ್ರಯೋಜನವಾದ ಉತ್ತಮ ವರಗಳನ್ನು ಪಡ ಕೊಳ್ಳುವದಕ್ಕೆ ಪ್ರಾರ್ಥನೆಯಿಂದಲೂ, ಆತ್ಮ ಸಾಧನೆಯಿಂದಲೂ ಎಸಗಿರಿ. ಸರ್ವೋತ್ತಮ ವರದ ಮಾರ್ಗವನ್ನು ಈಗ ನಿಮಗೆ ತೋರಿಸುತ್ತೇನೆ.

೫. ೧೩.

ಪ್ರೀತಿಯು.

೧. ಪ್ರೀತಿಯ ಆವಶ್ಯಕವು. ವ. ೧—೩.
೨. ಪ್ರೀತಿಯ ಲಕ್ಷಣಗಳು. ವ. ೪—೭.
೩. ಪ್ರೀತಿಯ ನಿತ್ಯತ್ವವು. ವ. ೮—೧೩.

೫೬೫೮ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಪ್ರೀ.

೧ ಕೌರಿ. ೧೩, ೧—೪.

೧) ಪ್ರೀತಿಯ ಆವಶ್ಯಕವು. ಅದಿಲ್ಲದಿದ್ದರೆ, ಉಳಿದ ವರಗಳೆಲ್ಲಾ ಶೂನ್ಯವಾಗಿವೆ.

ವ. ೧—೩.

ವ. ೧. ಮನುಷ್ಯ ಭಾಷೆಗಳಲ್ಲಿಯೂ ದೂತ ಭಾಷೆಗಳಲ್ಲಿಯೂ ನುಡಿಯುತ್ತಾ ಇದ್ದು ೧) ನಾನು ಪ್ರೀತಿ ಇಲ್ಲದವನಾಗಿದ್ದರೆ ೨), ಧ್ವನಿ ಗೈಯುವ ಹಿತ್ತಾಳೆಯೂ ಘಣ ಘಣಿಸುವ ಕೈತಾಳವೂ ಆದ್ದೇನು ೩). ೨. ಮತ್ತು ಪ್ರವಾದನೆಯುಳ್ಳವನಾಗಿಯೂ, ಎಲ್ಲಾ ಮರ್ಮಗಳನ್ನೂ ಎಲ್ಲಾ ಜ್ಞಾನವನ್ನೂ ಅರಿತವನಾಗಿಯೂ ಇದ್ದರೂ ೪), ಬೆಟ್ಟಗಳನ್ನು ಕಿತ್ತು ಇಡುವ ಹಾಗೆ ೫) ಎಲ್ಲಾ ವಿಶ್ವಾಸವುಳ್ಳವನಾಗಿ ಇದ್ದು, ಪ್ರೀತಿ ಇಲ್ಲದವನಾಗಿದ್ದರೆ, ಏನೂ ಅಲ್ಲವಾಗಿದ್ದೇನೆ. ೩. ಮತ್ತು ನನ್ನ ಸೊತ್ತುಗಳನ್ನೆಲ್ಲಾ ತಿನ್ನಿಸಿದರೂ, ನನ್ನ ಮೈ ಸುಡಲ್ಕೊಸಿದರೂ ೬), ಪ್ರೀತಿ ಇಲ್ಲದವನಾಗಿದ್ದರೆ, ನನಗೇನೂ ಪ್ರಯೋಜನವಿಲ್ಲಾ.

೧. ನಿಮ್ಮಲ್ಲಿ ಪೆಚ್ಚಾಗಿ ಪೆಸರುವಾಸಿಯಾದ ಭಾಷಾವರದಲ್ಲಿ ಸಂಪೂರ್ಣ ಸಿದ್ಧಿ ಪಡಕಾಂಡು, ಈ ಭಾಷೆಗಳನ್ನು ಬಿಟ್ಟು, ದಿವ ಭಾಷೆಯನ್ನಾಡಿದರೂ.—

೨. ಇದು ಆಶ್ಚರ್ಯವಾದ ಮಾತಲ್ಲ? ಈ ಮುಂತಾದ ವರಗಳನ್ನು ಪಡೆಂದ ತಕ್ಕ ವಿಶ್ವಾಸವು ಪ್ರೀತಿ ಇಲ್ಲದವನಲ್ಲಿ ಇರ ಬಹುದಾ? ಈ ವರಗಳನ್ನು ಆದಿಯಿಂದ ಶಕ್ತಿಯಿಲ್ಲದ ಮನುಷ್ಯನು ಪಡೆಂದಲಾರನೆಂಬುವದು ಸರಿ. ಆದರೆ ವಿಶ್ವಾಸದಿಂದ ಆತ್ಮವನ್ನು ಪಡಕಾಂಡವನಾಬ್ಬನು ಕ್ರಿಸ್ತನಲ್ಲಿ ಇರುವ ದೇವರ ಪ್ರೀತಿಯಲ್ಲಿ ನೆಲೆಯಾಗಿ ಬೆಳಯದೆ ಇದ್ದರೆ, ತಾನು ಪಡೆಂದಿದ ವರಗಳಿಗಾಗಿ ಹಿಗ್ಗ ತಾಡಗಿ, ಡಂಭಾಚಾರದಲ್ಲಿಯೂ ಅಪ್ರೀತಿಯಲ್ಲಿಯೂ ಬಿದ್ದು, ಮೋಸ ಪಡೆಂಗುತ್ತಾನೆ; ಪಡೆಂಗೆಂದರೆ ಪ್ಯಾದಯಾಂತರ್ಯದಲ್ಲಿ ದೇವರಿಂದ ತಾಲಗಿದವನಾಗಿ, ಸ್ವಲ್ಪ ಕಾಲಕ್ಕೆ ಕೃಪಾ ವರಗಳನ್ನು ಬಳಸುತ್ತಾ, ಕಪಟಿಯಾಗಿ ಶಾಪಕ್ಕೆ ಗುರಿಯಾಗುತ್ತಾನೆ.

೩. ಹಿತ್ತಾಳೆ ಕೈತಾಳ ಮುಂತಾದವುಗಳು ಎಷ್ಟು ಶಬ್ದ ಮಾಡಿದಾಗ್ಯೂ, ಅವುಗಳಿಗೆ ಶ್ರಾತ್ರವೂ ಅನುಭವವೂ ಇಲ್ಲಾ.

೪. ನಾನು ಪ್ರವಾದನೆಯ ವರವನ್ನು ಪಡೆಂದಿ, ದೇವಭಾವದ ಮರ್ಮವನ್ನು ದೇವರ ಗುಪ್ತಾಲೋಚನೆಗಳನ್ನು ಬಲ್ಲವನಾಗಿ, ಶಿಷ್ಯರಿಗೆ ಉತ್ಕೃಷ್ಟ ರೀತಿಯಿಂದ ಉಪದೇಶ ಮಾಡುವ ಸಾಮರ್ಥ್ಯವುಳ್ಳವನಾಗಿ ಇದ್ದರೂ.

೫. ಸ. ೧೨, ೯. ನೋಡ ಬೇಕು.

೬. ಪ್ರೀತಿ ಇಲ್ಲದ ಪುಣ್ಯಕಾರ್ಯಗಳೆಲ್ಲಾ ಗರ್ವ ಕಪಟ ಮುಂತಾದ ದೋಷಾನ್ವಿತವಾಗಿವೆ. ಸ್ವಾರ್ಥವಾದ ಕ್ರಿಯೆಗಳಿಗೆಲ್ಲಾ ದೋಷ ಉಂಟು; ಪ್ರೀತಿಯೇ ಸ್ವಾರ್ಥವಿಲ್ಲದ್ದು. ಆದ್ದರಿಂದ ಪ್ರೀತಿಯ ಬಲಿಯಲ್ಲದೆ, ಯಾವ ಬಲಿಯೂ ದೇವರಿಗೆ ಹಿತವಾಗಿರದು.

೨) ಸತ್ಯವಾದ ಪ್ರೀತಿಯ ಲಕ್ಷಣಗಳು. ವ. ೪—೭.

ವ. ೪. ಪ್ರೀತಿಯು ದೀರ್ಘ ಶಾಂತಿಯಾಗಿದ್ದು ೧), ದಯಾಳುವಾಗಿದೆ ೨): ಪ್ರೀತಿಯು ಹುರುಡಿಸುವದಿಲ್ಲ ೩): ಪ್ರೀತಿಯು ಬಿಂಕವಾಡುವದಿಲ್ಲ ೪), ಉಬ್ಬಿ ಕೊಳ್ಳುವ

೧ ಕೊರಿ. ೧೩, ೫—೮.

ದಿಲ್ಲ[೫]), ೫. ಮರ್ಯಾದೆ ಮೀರುವದಿಲ್ಲ[೬]), ಸ್ವಾರ್ಥ ಹುಡುಕುವದಿಲ್ಲ[೭]), ಲೆಕ್ಕ ಮಾಡುವದಿಲ್ಲ[೮]), ಕೇಡು ಬಗೆಯುವದಿಲ್ಲ[೯]). ೬. ಅನ್ಯಾಯಕ್ಕೆ ಮೆಚ್ಚದೆ[೧೦]), ಸತ್ಯಕ್ಕೆ ಒಪ್ಪಿ ಮೆಚ್ಚುತ್ತದೆ[೧೧]). ೭. ಎಲ್ಲಾನ್ನು ಮನ್ನಿಸುತ್ತದೆ[೧೨]), ಎಲ್ಲಾನ್ನು ನಂಬುತ್ತದೆ[೧೩]), ಎಲ್ಲಾನ್ನು ಆಶಿಸುತ್ತದೆ[೧೪]), ಎಲ್ಲಾನ್ನು ತಾಳ್ಕುತ್ತದೆ[೧೫]).

ಈ ಸ್ಥಳದಲ್ಲಿ ಮೊದಲು ಪ್ರೀತಿಯ ಎರಡು ಗುಣಗಳೂ, ಬಳಿಕ ಒಂದು ವೇಳೆ ಕೊರಿಂಥದವರಲ್ಲಿ ವಾಡಿಕೆಯಾದ, ಪ್ರೀತಿಯ ದೀನತ್ವಕ್ಕೂ ಶಾಂತಿಗೂ ವಿರೋಧವಾದ, ಎಂಟು ದುರ್ಗುಣಗಳೂ, ಕಡೆಯಲ್ಲಿ ಪ್ರೀತಿಯ ಸಿದ್ಧಿಯೂ ವರ್ಣಿಸಿ ಅವೆ.

೧. ಕೇಡಿಗೆ ಬೇಗ ಶಿಟ್ಟು ಮಾಡುವದಿಲ್ಲ.

೨. ಮೇಲು ಮಾಡುವದಕ್ಕೆ ಆಸಕ್ತವಾಗಿದೆ. ಪರಾಪಕಾರಿತ್ವವು ಪ್ರೀತಿಗೆ ಸಹಜವಾದ ಗುಣ.

೩. ತಾನು ಗೆಲ್ಲ ಬೇಕೆಂದು ಬಯಸುವದಿಲ್ಲ.

೪. ಮತ್ತಾಬ್ಬರ ಅವಗುಣಗಳನ್ನೂ ತನ್ನ ಗುಣಗಳನ್ನೂ ತಾರತಮ್ಯಿಸುವ ಚೇಷ್ಟೆ ಮಾಡುವದಿಲ್ಲ.

೫. ಮನಸ್ಸಿನಲ್ಲಿ ಉಬ್ಬಿಕಾಂಡು ಗರ್ವ ತಾರತಮ್ಯಿಸುವದಿಲ್ಲ.

೬. ದೇವರಿಗೆ ಭಯ ಪಟ್ಟು, ದೇವರ ದೃಷ್ಟಿ ತಮ್ಮ ಮೇಲೆ ಅದೆ ಯೆಂದು ನೆನವರಿಕೆ ಮಾಡಿ, ದೇವರನ್ನು ಮೆಚ್ಚಿಸ ಬೇಕೆಂದಿರುವವರು ಮರ್ಯಾದಸ್ಥರಾಗಿದ್ದಾರೆ.

೭. ಸ್ವಂತ ಕೀರ್ತಿ ಅಧಿಕಾರ ಬಲ ಸ್ವತಂತ್ರ ಮುಂತಾದದ್ದನ್ನು ಬಯಸುವದಿಲ್ಲ.

೮. ಪ್ರೀತಿಗೆ ಕಾರಣವು ವಿರೋಧವಾದದ್ದು.

೯. ಕೇಡಿಗೆ ಕೇಡು ಮಾಡ ಬೇಕೆಂದು ನೆನಸದೆ, ಮತ್ತಾಬ್ಬರು ಮಾಡಿದ ಅನ್ಯಾಯವನ್ನು ಮನ್ನಿಸಿ, ಬೇಗ ಮರತು ಬಿಡುತ್ತದೆ.

೧೦. ದುಷ್ಟರ ಪಾಪಕ್ಕೆ ಬೇರೆ ದುಷ್ಟರ ಪಾಪದಿಂದ ತಕ್ಕ ಶಿಕ್ಷೆಯಾಗುವದು ಲೋಕದಲ್ಲಿ ವಾಡಿಕೆ. ಆದರೆ ಪ್ರೀತಿಯು ಯಾವ ಪಾಪಕ್ಕೂ ಒಲಿಯುವದಿಲ್ಲ.

೧೧. ಸತ್ಯವನ್ನು ಶಿಳಿದವರಿಗೂ ಹೇಳುವವರಿಗೂ ಕೈಕಾಳ್ಳುವವರಿಗೂ ದೇವರ ಪ್ರೀತಿಯನ್ನು ಅನುಭವಿಸಿ ಕಾಂಡಿರುವ ಭಕ್ತನು ನಿಜ ಸ್ನೇಹಿತನಾಗಿದ್ದು, ಅವರ ಸೌಖ್ಯಕ್ಕೆ ಸಂತೋಷ ಪಡುತ್ತಾನೆ.

೧೨. ದೇವರಿಂದ ಪೂರ್ಣ ಪಾಪ ಪರಿಹಾರವನ್ನು ಪಡದು ಕಾಂಡ ಪ್ರೀತಿಯುಳ್ಳ ಭಕ್ತನು ಪರರು ತನಗೆ ವಿರೋಧವಾಗಿ ಮಾಡಿದ ತಪ್ಪುಗಳನ್ನು, ಹೊಡಿಯಲಾರನು.

೧೩. ಪೂರ್ಣ ಸಂತುಷ್ಟಿಯುಳ್ಳವನಿಗೆ ಸಂಶಯವೂ ಭಯವೂ ದೂರವಾಗಿರುವದರಿಂದ, ಅವನು ಮತ್ತಾಬ್ಬರ ಮಾತು ಬೇಗ ನಂಬುತ್ತಾನೆ.

೧೪. ಮನುಷ್ಯರ ಮೇಲೆ ಇಟ್ಟ ಆಶೆ ಆಗಾಗ್ಗೆ ಭಂಗವಾದರೂ, ಭಕ್ತನು ಪ್ರೀತಿಯ ದೇವರ ಮೇಲೆ ಆಶೆ ಇಡುವದನ್ನು ಬಿಡುವದಿಲ್ಲ. ರೋಮಾ. ೧೪, ೪. ೨ ತಿಮೊ. ೨, ೨೫.

೧೫. ಪರದಲ್ಲಿ ಪೂರ್ಣ ರಕ್ಷಣೆಯನ್ನೂ ಅಪಾರ ಸೌಖ್ಯವನ್ನೂ ತಂದೆಯ ಸನ್ನಿಧಿಯಲ್ಲಿ ಪಡಾಂದು ತ್ಕೇವೆಂದು ನಂಬಿ ಶಿಳಿದು ಕಾಳ್ಳುವ ದೇವರ ಮಕ್ಕಳು ನಾಲ್ಕು ದಿನದ ಬಾಳಿಕೆ ಯೆಂಬ ಇಹದಲ್ಲಿ ಬರುವ ಉಪದ್ರವಗಳನ್ನು ಚನ್ನಾಗಿ ತಾಳ ಶಕ್ತರಾಗಿದ್ದಾರೆ.

೩) ಪ್ರೀತಿಯ ನಿತ್ಯತ್ವ. ವ. ೮—೧೩.

ವ. ೮. ಪ್ರೀತಿಯು ಎಂದಿಗೂ ನಿಂತು ಹೋಗುವದಿಲ್ಲ[೧]); ಆದರೆ ಪ್ರವಾದನೆಗಳಾದರೆ[೨]) ಅಳಿದು ಹೋಗುವವು, ಭಾಷೆಗಳಾದರೆ[೩]) ಶಿರುವವು, ಜ್ಞಾನವಾ

೧ ಕೌರಿ. ೧೩, ೯—೧೨.

ದರೆ, ಅಳಿದು ಹೌಗುವದು ೪). ೯. ಯಾಕೆಂದರೆ ಕ್ಷಣವಾಗಿಯೇ ಕಿಳಿಯುತ್ತೇವೆ, ಮತ್ತು ಕ್ಷಣವಾಗಿ ಪ್ರವಾದಿಸುತ್ತೇವೆ ೫); ೧೦. ಆದರೆ ಸಂಪೂರ್ಣವಾದದ್ದು ಬಂದರೆ, ಆಗಲೇ ಕ್ಷಣವಾದದ್ದು ಅಳಿದು ಹೌಗುವದು ೬). ೧೧. ಬಾಲಕನಾಗಿರುವಾಗ ಬಾಲಕನಂತೆ ಮಾತನಾಡಿದೆನು ೭), ಬಾಲಕನಂತೆ ನೆನಸಿದೆನು, ಬಾಲಕನಂತೆ ಆಲೌಚಿಸಿದೆನು: ಆದರೆ ಪುರುಷನಾದಾಗ ೮) ಬಾಲ್ಯ ಧರ್ಮವನ್ನು ಅಳಿಸಿ ಬಿಟ್ಟೆನು. ೧೨. ಯಾಕೆಂದರೆ ಇಗ ಕನ್ನಡಿಯಿಂದ ೯) ವೌಗಟಾಗಿ ೧೦), ಆಗ ಮುಖಾಮುಖಿಯಾಗಿ ೧೧) ನೌಡುತ್ತೇವೆ. ಇಗ ಕ್ಷಣವಾಗಿ ಕಿಳಿಯುತ್ತೇನೆ, ಆಗ ಕಿಳಿಯಲ್ಪಟ್ಟ ಹಾಗೆ ಕಿಳಿದು ಕೌಳ್ಳುವೆನು.

೧. ದೇವರು ಪ್ರೀತಿಯಾಗಿದ್ದಾನೆ. ೧ಯೌಪೌಾ. ೪, ೧೬. ಆದ್ದರಿಂದ ದೇವರ ಮಕ್ಕಳ ಸ್ವಭಾವ ಸಹಜ ಪ್ರೀತಿಯಲ್ಲದೆ, ಬೇರೆ ಆಗುವದಿಲ್ಲ.

೨. ದೇವರು ಕಾಟ್ಟ ಮಾತುಗಳೆಲ್ಲಾ ನೆರವೇರಿ ಭಕ್ತರೆಲ್ಲರು ಆತ್ಮಸಿದ್ಧಿ ಪಡಕಾಂಡ ಬಳಿಕ, ಪ್ರವಾದನೆಯಿಂದ ಯೇನೂ ಉಪಯೌಗವಿಲ್ಲ. ಯೆರೆ. ೩೧, ೩೧.

೩. ಅನ್ಯ ಭಾಷಾವರವು ಅಪೌಸ್ತಲರ ಕಾಲದಲ್ಲಿ ನಿಂತು ಪೌಾದದ್ದಾಗಿ ಕಾಣುತ್ತದೆ. ಆದರೆ ಪರದ ದೇವರಾಜ್ಯದಲ್ಲಿ ಪಾಪದಿಂದ ಪುಟ್ಟಿದ ಭಾಷಾ ಭೇದವಿಲ್ಲದೆ, ಒಲ್ಲರಿಗೂ ಏಕ ಭಾಷೆ ಇರುವದು.

೪. ಜ್ಞಾನ ದೃಷ್ಟಿಯ ವರವು ಸ. ೧೨, ಲ. ಮುಗಿಯುವದಲ್ಲದೆ, ಇಹ ಜ್ಞಾನವು ಪರಕ್ಕೆ ಯುಕ್ತವಾದದ್ದಲ್ಲಾ.

೫. ಪಂಚೇಂದ್ರಿಯ ಮಾರ್ಗವಾಗಿ ಮನುಷ್ಯನಿಗೆ ಇಹದಲ್ಲಿ ಬರುವ ಕಿಳುವಿಕೆ ಸಂಪೂರ್ಣವಾದದ್ದಲ್ಲ; ಅಪೂರ್ಣವಾಗಿ ಕಿಳಿದು ಕಾಂಡದ್ದನ್ನು ಪೂರ್ಣವಾಗಿ ಕಿಳಿಸ ಕೂಡದು.

೬. ಯೇಸು ಕ್ರಿಸ್ತನು ಕಿರಿಗಿ ಬಂದು, ತನ್ನ ರಾಜ್ಯವನ್ನು ಜಯ ತೇಜಸ್ಸಿನಿಂದ ಭೂಮಿಯಲ್ಲಿ ಸ್ಥಾಪಿಸುವಂದಿನಿಂದ ಸಂಪೂರ್ಣ ಸಿದ್ಧಿಯುಂಟಾಗುವದು. ಪ್ರಕ. ೨೦, ೩—೬.

೭. ಈ ಸಾಮ್ಯವನ್ನು ಪ್ರಯೌಗಿಸುವದರಿಂದ ಅಪೌಸ್ತಲನು ತಾವು ವಿಶೇಷ ಜ್ಞಾನಿಗಳೆಂದು ಭಾವಿಸಿ ಕಾಂಡ ಕಾರಿಂಥದವರಿಗೆ, ನಿಮ್ಮ ಬುದ್ಧಿ ಬಾಲ ಬುದ್ಧಿಯೇ ಎಂದು ಜಾಡೆಯಾಗಿ ಸೂಚಿಸುತ್ತಾನೆ.

೮. ಪ್ರಾಯವು ಪೆಚ್ಚುತ್ತಾ ಪೆಚ್ಚುತ್ತಾ ಬರಲಾಗಿ, ಬುದ್ಧಿಯು ವೃದ್ಧಿಯಾಗುವದರಿಂದ ಮನುಷ್ಯ ಶೀಲ ದೃಢವಾಗುವ ಪ್ರಕಾರ, ಕಾರಿಂಥದವರು ಅದ್ಭುತ ವರಗಳಿಗೆ ಅಧಿಕವಾಗಿ ಆಶ್ಚರ್ಯ ಪಟ್ಟು ಮೆಚ್ಚುವ ಬಾಲ್ಯ ಬುದ್ಧಿಯನ್ನು ಬಿಟ್ಟು ಬಿಡ ಬೇಕೆಂದು ಸೂಚಿಸುತ್ತಾನೆ.

೯. ಬಹಿಃಪದಾರ್ಥಗಳು ನಮ್ಮ ಬುದ್ಧಿಗೆ ಪ್ರತ್ಯಕ್ಷವಾಗಿ ಕಾಣದೆ, ಪಂಚೇಂದ್ರಿಯಗಳೆಂಬ ಕಂನಡಿಯಲ್ಲಿ ಬೀಳುವ ಪ್ರತಿ ಬಿಂಬದಿಂದಲೇ ಗೌಚರವಾಗುತ್ತವೆ. ಪಾಪವೆಂಬ ದೌಷದಿಂದ ಈ ಕನ್ನಡಿಯ ನಿರ್ಮಲತ್ವವು ಕೆಟ್ಟು ಪೌಾದ್ದರಿಂದ, ಮನುಷ್ಯನ ಕಿಳುವಿಕೆಗೆ ನಾನಾ ತರದ ಕಾರತೆ ಉಂಟಾಗುತ್ತದೆ.

೧೦. ದೇವರು ವಾಕ್ಯದಿಂದಲೇ ತನ್ನನ್ನೂ ತನ್ನ ನ್ಯಾಯವನ್ನೂ ಚಿತ್ತವನ್ನೂ ಕಿಳಿಸುತ್ತಾನೆ. ಮನುಷ್ಯನ ಬುದ್ಧಿಗೆ ದೇವರ ವಾಕ್ಯವು ವಾಗಟು ಮಾತಾಗಿ ತಾರುತ್ತದೆ; ಯಾಕೆಂದರೆ, ಅದರ ಅಚಿಪ್ರಾಯವನ್ನು ಪೂರ್ಣವಾಗಿ ಗ್ರಹಿಸುವದಕ್ಕೆ ಅವನ ಸಾಮರ್ಥ್ಯವು ಈಗ ಸಾಲದು. ದೇವರ ಆತ್ಮವನ್ನು ಪೌಾಂದಿದ ಭಕ್ತರಿಗೆ ವಿಶೇಷವಾದ ಕಿಳುವಿಕೆ ಪ್ರಾಪ್ತವಾಗುವದು ೪ ಮೋಶೆ. ೧೨, ೬—೮. ೫ ಮೋಶೆ. ೩೦, ೧೨. ೧೩. ಯೌಪೌಾ. ೧, ೧೮. ೧ ಯೌಪೌಾ. ೨, ೨೦.

೧ ಕೊರಿ. ೧೫, ೧೬.

೧ ಪೇತ್ರ. ೧, ೧೨. ಯೋಹಾ. ೧೭, ೩. ಆದಾಗ್ಯೂ ನಾವು ದೃಷ್ಟಿಯಿಂದಲ್ಲ, ವಿಶ್ವಾಸದಿಂದಲೇ ನಡದು ಕಾಳ್ಕುತ್ತೇವೆಂಬ (೨ ಕೊರಿ. ೫, ೭.) ಕಟ್ಟಳೆ ರೂಢಿಯಾಗಿದೆ.

೧೧. ಮಹಿಮಾವಸ್ಥೆಯಲ್ಲಿ ಶೇರಿದ ಭಕ್ತರು ದೇವರನ್ನು ಇದ್ದ ಹಾಗೆ ಕಂಡು, ದಿವ್ಯ ಭಾವಾನ್ವಿತವಾದ ಜ್ಞಾನವನ್ನು ಪಡದು ಕಾಳ್ಳುವರು.

ಶುದ್ಧೀಮಾತು.

ವ. ೧೬. ಆದರೆ ಇಗ೧) ವಿಶ್ವಾಸವು೨) ಆಶೆಯೂ೩) ಪ್ರೀತಿಯೂ ಇ ಮೂರು ನಿರುತ್ತವೆ೪); ಇವುಗಳಲ್ಲಿ ದಾಡ್ಡದು೫) ಪ್ರೀತಿಯೇ.

೧. ಇಹದಲ್ಲಿ.

೨. ವಿಶ್ವಾಸವು ಯೇಸು ಕ್ರಿಸ್ತನಿಂದ ಉಂಟಾದ ರಕ್ಷಣೆಯನ್ನು ಕೈಕಾಂಡು ಅನುಭವಿಸುತ್ತದೆ.

೩. ಪರದ ಮಹಿಮೆಯು ಆಶೆಯ ವಿಷಯವಾಗಿದೆ. ವಿಶ್ವಾಸದಿಂದ ಭಕ್ತನು ಸಂತೃಪ್ತನಾದರೂ, (ಯೋಹಾ. ೪, ೧೩.) ಪರದಲ್ಲಿ ಆಗುವ ಸಿದ್ಧಿಯ ಆಶೆಯು ಪೃದಯದಲ್ಲಿ ಪುಟ್ಟಿದಂದಿನಿಂದ ಸಂಪೂರ್ಣವಾಗುವ ವರೆಗೂ ಬೆಳಿಯುತ್ತಾ ಇರುವದು. ಲೂಕ. ೬, ೨೧. ರೋಮಾ. ೮, ೨೪. ೨೫. ವಿಶ್ವಾಸದಿಂದ ವಿಶ್ವಾಸಿಸುವವರಿಗೆ ಕ್ರಿಸ್ತನ ಆತ್ಮವು ಪ್ರಾಪ್ತವಾಗುವದು. ಆಶೆಯಿಂದ ನಮಗೆ ದಾರಕಿದ ಆತ್ಮವು ಮುಂದಣ ಮಹಿಮೆಯ ಸಂಚಕಾರವೇ ಎಂದು ೨ ಕೊರಿ. ೧, ೨೨. ಭಾವಿಸಿ ಕಾಳ್ಳುತ್ತೇವೆ.

೪. ಅಪರೂಪವಾದ ಕೃಪಾವರಗಳು ತಾತ್ಕಾಲಿಕವು. ಕ್ರೈಸ್ತ ಭಾವದ ಗುಣಗಳು ಸಾರ್ವಕಾಲಿಕವು.

೫. ವಿಶ್ವಾಸವು ದೃಷ್ಟಿಯಿಂದ ಸಿದ್ಧಿಯನ್ನು ಪಡಾಂದಿ ಶೀರಿ ಪಡಾಗುವದು. ಆಶೆಯು ಅನುಭವದಿಂದ ಸಿದ್ಧಿಯನ್ನು ಪಡದು ಶೀರಿ ಪಡಾಗುವದು. ನಿರಂತರವಾದ ದೇವರ ವಿಷಯವುಳ್ಳ ಪ್ರೀತಿಯು ನಿರಂತರವಾದದ್ದು.

೫. ೧೪.

ಭಾಷಾವರವನ್ನು ಕುರಿತಂಥಾ ಬೋಧನೆ.

೧. ಪ್ರವಾದನೆಯು ಭಾಷಾವರದ ಪ್ರಯೋಗಕ್ಕಿಂತ ಉತ್ತಮವಾದದ್ದು. ವ. ೧—೧೨.

೨. ಆದ್ದರಿಂದ ಟೀಕು ಇಲ್ಲದೆ ಭಾಷಾವರದ ಪ್ರಯೋಗವು ಆಗ ಬಾರದು. ವ. ೧೩—೨೫.

೩. ಸಭಾಸಮಾಗಮಗಳಲ್ಲಿ ಎಲ್ಲಾ ಕೆಲಸ ಕ್ರಮದಿಂದ ನಡೆಯ ಬೇಕು. ವ. ೨೬—೪೯.

ಪ್ರವಾದನೆಯು ಭಾಷಾವರದ ಪ್ರಯೋಗಕ್ಕಿಂತ ಉತ್ತಮವಾದದ್ದು.

ಕರ್ತನು ಶಿಷ್ಯರಿಗೆ ಮಾರ್ಕ. ೧೬, ೧೭ಲ್ಲಿ ವಾಗ್ದತ್ತ ಮಾಡಿದ ವರಗಳಲ್ಲಿ ನೂತನ ಭಾಷೇ ಲಕ್ಷಣವು ಒಂದಾಗಿತ್ತು. ಅದು ಪಂಚಾಶತ್ತಿನ ಹಬ್ಬದಲ್ಲಿ ಮೊದಲು ಕಾಣಿಸಿ ಕೊಂಡು, ಹೊಸ್ತಾಗಿ ನಡದ ಅದ್ಭುತ ಕಾರ್ಯಗಳನ್ನು ಹೊಸ ಬಗೆಯಿಂದ ಪ್ರಕಟಿಸುವದಕ್ಕೂ, ಆಗ ಯೆರೂಸಲೇಮಿನಲ್ಲಿ ಕೂಡಿದ ಅನೇಕ ಪರದೇಶಸ್ಥರಿಗೆ ಅವರವರ ದೇಶಭಾಷೆಗಳಲ್ಲಿ ಸುವಾರ್ತೆಯನ್ನು ಸಾರಿಸುವದಕ್ಕೂ, ನರಜಾತಿಯಲ್ಲಿ ಹುಟ್ಟಿದ ಭಾಷಾಭೇದವು ಸುವಾರ್ತೆಯ ಮುಖಾಂತರ ಕಳದು ಹೋಗ ಬೇಕು ಯಂಬುವದನ್ನು ಸೂಚಿಸುವದಕ್ಕೂ

ಉಪಯೋಗವಾಗಿತ್ತು. ಇದಲ್ಲದೆ ಅಪೊಸ್ತಲರ ಕಾಲದಲ್ಲಿ ವಿಶ್ವಾಸಿಗಳು ಪರಿಶುದ್ಧಾತ್ಮಕ್ಕೆ ವಶವಶವಾಗಿ, ಮೈ ಮರತು, ನೂತನ ಭಾಷೆಯಿಂದ ದೇವರನ್ನು ಪ್ರಾರ್ಥಿಸಿ, ಸ್ತುತಿಸುವ ಅದ್ಭುತವು ವಾಡಿಕೆಯಾಗಿತ್ತು. ಆಶ್ಚರ್ಯವಾದ ಈ ಭಾಷಾವರಕ್ಕೆ ಕೊರಿಂಥದ ಸಭೆಯವರು ಬಹಳ ಹೆಚ್ಚಳ ಪಟ್ಟದರಿಂದ, ಅಪೊಸ್ತಲನು ಅವರಿಗೆ ಬುದ್ಧಿ ಹೇಳಿ, ಯಾರಿಗೂ ಗೊತ್ತಿಲ್ಲದ ಮಾತು ಆಡುನದು ನಿಷ್ಪ್ರಯೋಜನವಾಗಿರುವದರಿಂದ, ಪ್ರವಾದನೆಯೂ ವ್ಯಾಖ್ಯಾನವೂ ಇಲ್ಲದೆ ಭಾಷಾವರವನ್ನು ಪ್ರಯೋಗಿಸ ಬಾರದೆಂದು ತಿಳಿಸುತ್ತಾನೆ.

ಈ ಸಂಗತಿಯ ಪೂರ್ವೋತ್ತರವು ಈಗಿನವರಾದ ನಮಗೆ ಪೂರ್ಣವಾಗಿ ತಿಳಿಯುವದಿಲ್ಲಾ. ಅದರೂ ನಾವು ಗೊತ್ತು ಮಾಡ ತಕ್ಕದ್ದೇನೆಂದರೆ: ೧) ಲೌಕಿಕ ವರಗಳನ್ನು ದೇವರಿಂದ ಪಡೆಯುವದು ಯುಕ್ತವಾಗಿದೆ. ೨) ಆದರೆ ಸಭೆಯ ಲೌಕಿಕ ವೃದ್ಧಿಯ ಉದ್ದಿಶ್ಯ ಮುಖ್ಯವಾಗಿರ ಬೇಕು. ೩) ಭಾಷಾವರದ ಪ್ರಯೋಗವು ಬಹಳ ಉಪಯೋಗವಾಗಿರಲಿಲ್ಲ. ಯಾಕೆಂದರೆ ನೂತನ ಭಾಷೆಆಡುವವರು ವ. ೪. ಯೋಗ ಧ್ಯಾನ ಮಗ್ನರಾಗಿ, ಮೈ ಮರತು, ಯಾರಿಗೂ ತಿಳಿಯದಂಥಾ, ವ. ೫. ಕೇಳುವವರಿಗೆ ಒಂದು ವೇಳೆ ಹುಚ್ಚರ ರಗಳೆಯೋಪಾದಿಯಲ್ಲಿ ತೋರುವಂಥಾ ವ. ೨೩., ನಾನಾ ಭಾಷೆಗಳ ಮಾತುಗಳನ್ನು, ಆಗಾಗ್ಯೆ ಆತ್ಮೋದ್ಘಾಟನಾರೂಪವಾದ ಶಬ್ದಗಳನ್ನು ಮಾತ್ರ ಉಚ್ಚರಿಸಿ, ವೇಳೆ ವೇಳೆಗೆ ತಾವು ಆತ್ಮಕ್ಕೆ ಪರವಶರಾಗಿ ನುಡಿದ ಮಾತುಗಳ ಅಭಿಪ್ರಾಯವನ್ನು ಅರಿಯದವರಾಗಿದ್ದರು ವ. ೧೪. ೧೫. ಕೇಳುವವರು ಕಳವಳಗೊಳ್ಳುವದು, ಪರರು ಬೆರಗುವದು; ಆದರೆ ತಿಳಿಯದವರು ನಕ್ಕು ಹಾಸ್ಯಾ ಮಾಡುವದು ಸಹಜವಾಗಿತ್ತು. ಪಂಚಾಶತ್ತಿನಲ್ಲಿ ಅಪೊಸ್ತಲರು ಪ್ರಯೋಗಿಸಿದ ಭಾಷಾವರವು ಅತಿಶಯವಾಗಿ ನೆರವೇರಿತು. ಹ್ಯಾಗೆಂದರೆ, ಬೇರೆ ಬೇರೆ ಅಪೊಸ್ತಲರು ಬೇರೆ ಬೇರೆ ದೇಶಗಳ ಭಾಷೆಗಳಲ್ಲಿ ಪ್ರಸಂಗಿಸಿದರಿಂದ, ನಾಲ್ಕು ದಿಕ್ಕಿನಿಂದ ಬಂದ ಜನರು ತಮ್ಮ ತಮ್ಮ ಭಾಷೆಗಳಲ್ಲಿ ಪ್ರಸಂಗವನ್ನು ಕೇಳಿ, ಸುವಾರ್ತೆಯ ಅಭಿಪ್ರಾಯವನ್ನು ಸುಲಭವಾಗಿ ತಿಳಿದು ಕೊಂಡರು. ಕೊರಿಂಥದವರ ಸಭೆಯಲ್ಲಿ ಭಾಷಾವರದ ಪ್ರಯೋಗವು ಅನ್ಯ ಭಾಷೆಗಳಿಂದಲೂ ಅಪರೂಪವಾದ ಶಬ್ದಗಳಿಂದಲೂ ಆತ್ಮಕ್ಕೆ ಪರವಶರಾದವರು ಮಾಡುವ ಪ್ರಸಂಗದ ಅಭಿಪ್ರಾಯವನ್ನು ತಿಳಿಸುವ ವ್ಯಾಖ್ಯಾನವಿಲ್ಲದೆ ಲಗ್ಯಾಗ್ಯೆ ನಡೆಯುತ್ತಿತ್ತೆಂದು ವ. ೨೪ಲ್ಲಿ ತೋರುತ್ತದೆ. ವ್ಯಾಖ್ಯಾನದ ಸಾಮರ್ಥ್ಯವು ಅಷ್ಟು ಹೆಸರುವಾಶಿಯಾಗಿಲ್ಲದಿದ್ದರೂ ಸಭಾವೃದ್ಧಿಗೆ ಕೇವಲ ಉಪಯೋಗವಾಗಿತ್ತು. ದೇವರ ಮರ್ಮಗಳನ್ನು ಪ್ರವಾದಿಯಾಗಿ ಸಾರುವ ಪ್ರವಾದನೆ ಯೆಂಬ ವರವು ಭಾಷಾವರಕ್ಕಿಂತ ಅಧಿಕ ಪ್ರಯೋಜನವಾಗಿತ್ತು. ಪ್ರವಾದಿಗಳು ಮುಂದಣ ಕಾಲದಲ್ಲಿ ದೇವರು ಮಾಡ ತಕ್ಕ ಕಾರ್ಯಗಳನ್ನು ಸಾರುವದಲ್ಲದೆ, ದೇವರು ಪ್ರಕಟಿಸಿದ ವಾಕ್ಯದಿಂದ ಸಭೆಯವರು ಈಗ ಅನುಸರಿಸ ತಕ್ಕ ದೇವರ ಆಜ್ಞೆಗಳನ್ನು ತಿಳಿಸುತ್ತಾ, ಆತ್ಮಭರಿತರಾಗಿ ಪ್ರಬಲವಾಗ ಮಾತುಗಳಿಂದ ಕೇಳುವವರ ಹೃದಯಗಳನ್ನು ತಿವಿದು, ಮನಸ್ಸುಗಳನ್ನು ಕಳವಳ ಗೊಳ್ಳಿಸುತ್ತಾ ಇದ್ದರು ವ. ೨೪. ಪ್ರವಾದನೆಯು, ವ. ೬. ಪ್ರಕಾರ, ವಿಶೇಷ ಪ್ರಕಟನೆಯಿಂದಲೂ, ೧೪, ೩೦. ದಿವ್ಯ ಪ್ರೇರಣೆಯಿಂದಲೂ ಉಂಟಾಗುತ್ತಿತ್ತು. ಪ್ರವಾದಿಗಳ ಬೋಧನೆಯು, ನಮಗೂ ಇರುವ ಸಾಧಾರಣವಾದ ಕ್ರಿಸ್ತ ಜ್ಞಾನದಿಂದ ವ. ೬. ಹುಟ್ಟುತ್ತಾ ಇತ್ತು. ಪ್ರವಾದನಾವರಕ್ಕೂ ಕಪಟ ಗರ್ವ ಮುಂತಾದ ಮಾನುಷದೋಷಗಳು ಬೆರಕೆ ಆಗ ಬಹುದಾದ್ದರಿಂದ, ಭಾಷಾವರವೂ ವ್ಯಾಖ್ಯಾನ ವರವೂ ಜೋಡಾಗಿದ್ದ ಪ್ರಕಾರ, ಪ್ರವಾದನಾವರಕ್ಕೆ ಆತ್ಮಶೋಧನಾವರವು ಕೂಡ ಬೇಕಾಗಿತ್ತು ಸ. ೧೨, ೧೦. ೧೪, ೨೯.

೧ ಕೊರಿ. ೧೪, ೧—೧೪.

ಅಪೊಸ್ತಲನು ಆತ್ಮ ವರಗಳ ತಾರತಮ್ಯವನ್ನು ಅವುಗಳಿಂದ ಸಭೆಗೆ ಬರುವ ಪ್ರಯೋಜನದ ಪ್ರಕಾರ ನಿರ್ಣೈಸುತ್ತಾನೆ.

ವ. ೧. ಪರಮೋತ್ತಮವಾದ ಕ್ರೈಸ್ತ ಗುಣವಾಗಿರುವ ಪ್ರೀತಿಯನ್ನು ಭಕ್ತಿಯ ಪ್ರಾಮುಖ್ಯ ಲಕ್ಷಣ ವೆಂದು ಅರಸಿರಿ. ಆತ್ಮವರಗಳಲ್ಲಿ ಸಭಾವೃದ್ಧಿಗೆ ಹೆಚ್ಚು ಉಪಯೋಗವಾದ ಆತ್ಮಭರಿತ ಬುದ್ಧಿಯ ಪ್ರಸಂಗವೆಂಬ ಪ್ರವಾದನಾವರವನ್ನು ಹೆಚ್ಚಾಗಿ ಬಯಸಿರಿ. ವ. ೨. ಯಾಕೆಂದರೆ ದೇವರ ಆತ್ಮಕ್ಕೆ ಪರವಶ ನಾಗಿ ಮರ್ಮಗಳನ್ನು ನೂತನ ಭಾಷೆಯಿಂದ ಉಚ್ಚರಿಸುವವನು ದೇವರ ಸಂಗಡ ಸಂಭಾಷಣೆ ಮಾಡು ವವನಾಗಿದ್ದಾನೆ; ಮನುಷ್ಯರು ಅವನ ಅಭಿಪ್ರಾಯವನ್ನು ತಿಳಿದು ಕೊಳ್ಳುವದಿಲ್ಲ; ಯಾಕೆಂದರೆ, ಅವನು ಆತ್ಮಭರಿತನಾಗಿ, ಮೈ ಮರತು, ಪರರಿಗೆ ಮರ್ಮವಾದವುಗಳನ್ನು ನುಡಿಯುತ್ತಾನೆ. ವ. ೩. ಆದರೆ ಪ್ರವಾ ದಿಸುವವನು ಸಭೆಯವರನ್ನು ಎಚ್ಚರಿಸಿ, ಮನುಷ್ಯರ ಭಕ್ತಿಯನ್ನೂ ಅಂತರ್ಜೀವವನ್ನೂ ಬಲ ಪಡಿಸುವದ ರಿಂದ, ವ. ೪. ಸಮಸ್ತ ಸಭೆಗೆ ಉಪಯೋಗವಾಗಿದ್ದಾನೆ; ನೂತನ ಭಾಷೆಯಾಡುವವನು ತನಗೆ ಮಾತ್ರ ಉಪಯೋಗವಾಗಿದ್ದಾನೆ. ವ. ೫. ನೀವೆಲ್ಲರೂ ನೂತನ ಭಾಷೆಯಾಡ ಶಕ್ತರಾಗಿದ್ದರೆ ನನಗೆ ಸಂತೋಷ. (ಯಾಕೆಂದರೆ ನಾನು ವರವನ್ನಲ್ಲಿ ವರದ ದುಪ್ಪ್ರಯೋಗವನ್ನೇ ನಿಲ್ಲಿಸ ಬೇಕೆಂದಿದ್ದೇನೆ;) ಆದರೆ ನೂತನ ಭಾಷೆಯಲ್ಲಿ ನುಡಿದ ಅಭಿಪ್ರಾಯವನ್ನು ವಾಡಿಕೆಯಾದ ದೇಶದ ಭಾಷೆಯಲ್ಲಿ ಸಭೆಯ ಉಪಯೋಗಕ್ಕಾಗಿ ವಿವರಿಸುವ ವ್ಯಾಖ್ಯಾನವಿಲ್ಲದಿದ್ದರೆ, ಪ್ರವಾದನೆಯು ಬಹಳ ವಾಸಿ. ವ. ೬. ನಾನು ವಿಶೇಷವಾದ ಆತ್ಮಪ್ರಕಟಣೆ ಯಿಂದ ಅಥವಾ ಸಾಧಾರಣವಾದ ಜ್ಞಾನದಿಂದ ವಾಡಿಕೆಯಾದ ಭಾಷೆಯಲ್ಲಿ ನೀವು ಚನ್ನಾಗಿ ತಿಳಿಯ ತಕ್ಕ ಬೋಧನೆಯನ್ನು ಪ್ರವಾದಿಸದೆ, ನಿಮ್ಮಲ್ಲಿ ನೂತನ ಭಾಷೆಯಾಡಿದರೆ, ನಿಮಗೆ ಬಹಳ ಪ್ರಯೋಜನ ಉಂಟಾ ಗುವದಿಲ್ಲ. ವ. ೭. ಇದಕ್ಕೆ ನಿರ್ಜೀವವಾದ ವಾದ್ಯಗಳು ದೃಷ್ಟಾಂತವಾಗಿವೆ. ಹ್ಯಾಗೆಂದರೆ, ಪಿಲ್ಲಂಗೊಳ ವಿಯ ಅಥವಾ ವೀಣೆಯ ಸ್ವರಭೇದ ತಿಳಿಯದಿದ್ದರೆ, ಪ್ರಯೋಜನವೇನು? ವ. ೮. ಮತ್ತು ತುತೂರಿಯ ಧ್ವನಿ ಸ್ಪಷ್ಟವಾಗಿ ಕೇಳಿಸದಿದ್ದರೆ, ನಿರರ್ಥಕವಾಗಿರುವದು. ವ. ೯. ಅದೇ ಪ್ರಕಾರ ನೀವೂ ಆಡುವ ನೂತನ ಭಾಷೆಯು ಕೇಳುವವರ ಮನಸ್ಸಿಗೂ ಬುದ್ಧಿಗೂ ತಗಲದಿದ್ದರೆ, ನೀವು ಅಸ್ಪಷ್ಟವಾಗಿ ಹೇಳು ವಂಥಾದ್ದು ಫೂಳಿ ನುಡಿದ ಹಾಗೆ ಆಗುವದು. ವ. ೧೦. (ತಿಳಿವಿಕೆಯೇ ಮುಖ್ಯವಾದದ್ದು.) ನಾನಾ ಭಾಷೆ ಗಳು ಲೋಕದಲ್ಲಿ ಉಂಟು; ಅವುಗಳಲ್ಲಿ ಅರ್ಥವಿಲ್ಲದ ಸ್ವರವುಳ್ಳದ್ದೊಂದೂ ಇಲ್ಲ. ಅದು ಅರ್ಥವಿಲ್ಲದಿ ರುವದು ಭಾಷೆಯ ಪ್ರಯೋಜನಕ್ಕೆ ವಿರೋಧವಾದದ್ದು. ವ. ೧೧. ಶಬ್ದಗಳ ಅಭಿಪ್ರಾಯ ತಿಳಿಯದಿದ್ದರೆ, ಮಾತನಾಡುವವನೂ ನನಗೂ ಗೋಷ್ಟಿ ಇಲ್ಲದ ಕಾರಣ, ನಾನು ಅವನಿಗೆ ಅವನು ನನಗೆ ಬರ್ಬರನು. ವ. ೧೨. ಹಾಗೆ ನಿಮ್ಮಲ್ಲಿ ಆಗುತ್ತದೆ. ನೀವು ಟೀಕು ಇಲ್ಲದೆ ನೂತನ ಭಾಷೆಯಾಡಿದರೆ, ಪ್ರಯೋಜನವಿಲ್ಲಾ. ನೀವು ಆತ್ಮವರಗಳಿಗಾಸಕ್ತರಾಗಿದ್ದೀರಲ್ಲ; ಹಾಗಾದರೆ ಸಭಾವೃದ್ಧಿಗೆ ಉಪಯೋಗವಾದವುಗಳನ್ನು ಬಯಸಿರಿ; ಇದರಿಂದ ನಿಮಗೆ ಗುಣವಾಗುವದು.

ನೂತನ ಭಾಷೆಗೆ ಯಾವಾಗಲೂ ವ್ಯಾಖ್ಯಾನವು ಕೂಡ ಬೇಕು.

ವ. ೧೩. ಪ್ರಾರ್ಥನೆಯನ್ನಾಗಲಿ ಪ್ರಸಂಗವನ್ನಾಗಲಿ ನೂತನ ಭಾಷೆಯಲ್ಲಿ ಮಾಡುವವನು ತನ್ನ ಮಾತು ಗಳ ಅಭಿಪ್ರಾಯವನ್ನು ವಾಡಿಕೆಯಾದ ಭಾಷೆಯಲ್ಲಿಯೂ ಹೇಳಲಿ. ವ. ೧೪. ಯಾಕೆಂದರೆ, ಭಾಷಾವರ

೧ ಕೊರಿ. ೧೪, ೧೫—೨೫.

ವನ್ನು ಪ್ರಯೋಗಿಸಿ ಪ್ರಾರ್ಥನೆ ಮಾಡುವವನ ಅಂತರಾತ್ಮವು ದೇವರ ಬಳಿಗೆ ಏರಿ ಹೋದರೂ, ಬುದ್ಧಿಯಿಂದ ಗ್ರಹಿಸದೇ ಇರುವದನ್ನು ಪರರಿಗೆ ತಿಳಿಸ ಕೂಡದು. ವ. ೧೫. ಎರಡೂ ಜೋಡಾಗಿರ ಬೇಕು: ಪರಿಶುದ್ಧಾತ್ಮಾನ್ವಿತವಾದ ಗಾಯನವೂ ಪ್ರಾರ್ಥನೆಯೂ ಬೇಕು, ಮತ್ತೆ ಸ್ಪಷ್ಟವಾದ ವ್ಯಾಖ್ಯಾನವೂ ಬೇಕು. ವ. ೧೬. ಇಲ್ಲದಿದ್ದರೆ ಅನ್ಯ ಭಾಷೆಯಿಂದ ಪ್ರಾರ್ಥನೆಯನ್ನುಚ್ಚರಿಸುವವನಿಗೆ ಸಾಮಾನ್ಯ ಸಭೆಯವರು ಒಪ್ಪಿಕೊಂಡು, ಅವನು ಮಾಡುವ ಸ್ತೋತ್ರಕ್ಕೆ ಖರೆ ಯೆಂದು ಹೇಳಲಾರದೆ ಇರುವದರಿಂದ, ಪ್ರಾರ್ಥನೆಯ ಏಕ ಮತ್ಯವು ಭಂಗವಾಗುವದು. ವ. ೧೭. ಕೃತಜ್ಞತಾವಾದವು ಬಹಳ ಚಲೋದಾಗಿದ್ದೀತು ಅಷ್ಟೆ. ಆದರೆ ಮತ್ತೊಬ್ಬರಿಗೆ ವಿಹಿತವಾಗಿರುವದಿಲ್ಲ. ವ. ೧೮. ನಾನು ದೇವರ ಕೃಪೆಯಿಂದ ಭಾಷಾವರವನ್ನು ನಿಮ್ಮೆಲ್ಲರಿಗಿಂತ ವಿಶೇಷವಾಗಿ ಹೊಂದಿದ್ದೇನೆ. ವ. ೧೯. ಆದರೆ ಸಭೆಯಲ್ಲಿ ಆತ್ಮಕ್ಕೆ ಪರವಶವಾಗಿ, ಅಭಿಪ್ರಾಯ ತಿಳಿಯದ ಹತ್ತು ಸಾವಿರ ಮಾತುಗಳನ್ನು ನುಡಿಯುವದಕ್ಕಿಂತ ವಾಡಿಕೆಯಾದ ಭಾಷೆಯಲ್ಲಿ ಅರ್ಥ ಮಯವಾದ ಐದು ಮಾತುಗಳನ್ನು ಆಡುವದು ವಾಸಿ ಯೆಂದೆಣಿಸುತ್ತೇನೆ.

ಭಾಷಾವರವು ಅಧಿಕ ಕೃಪಾವಸ್ಥೆಯ ಲಕ್ಷಣವಾಗಿರುವದಿಲ್ಲ.

ವ. ೨೦. ಸಹೋದರರೇ, ತಮ್ಮನುಡಿ ಸಾರ್ಥಕವಾದದ್ದೋ ನಿರರ್ಥಕವಾದದ್ದೋ ಯೆಂಬ ಆಲೋಚನೆ ಇಲ್ಲದ ಮಕ್ಕಳ ಹಾಗೆ ಇರಬೇಡಿರಿ. ದುಷ್ಟತ್ವದಲ್ಲಿಯೂ ಡಂಭಾಚಾರದಲ್ಲಿಯೂ ಮಕ್ಕಳನ್ನು ಹೋಲುತ್ತಾ ಅವರಂತೆ ಭೋಳೆಯರೂ ದೀನರೂ ಆಗಿದ್ದು, ಜ್ಞಾನದಲ್ಲಿ ಪೂರ್ಣ ಸಿದ್ಧಿ ಪರ್ಯಂತ ಬೆಳೆಯಿರಿ. ವ. ೨೧. ಯೆಸಾ. ೨೮, ೧೧ರಲ್ಲಿ ದೇವರು ತನ್ನ ಭಾಷೆಯಾಡುವ ಪ್ರವಾದಿಗಳ ಮಾತುಗಳನ್ನು ಕೇಳಲೊಲ್ಲದ ಇಸ್ರಯೇಲನ ಜನಾಂಗಕ್ಕೆ ಬೆದರಿಸಿ ಹೇಳುವದೇನೆಂದರೆ: ಪರದೇಶಸ್ಥರ ಪರಿಮುಖವಾಗಿ ಅನ್ಯಭಾಷೆಯಿಂದ ನಿಮ್ಮ ಸಂಗಡ ಮಾತನಾಡಿದರೂ, ನನಗೆ ಕಿವಿ ಕೊಡದೆ ಹೋಗುವಿರಿ. ವ. ೨೨. ಹಾಗಾದರೆ ದೇವರು ಪೂರ್ವದಲ್ಲಿ ತನ್ನ ಪ್ರಜೆಗಳ ಅವಿಶ್ವಾಸದ ಶಿಕ್ಷೆಗಾಗಿ ಅನ್ಯ ಭಾಷಾಪ್ರಯೋಗದ ಮಾತು ಎತ್ತಿ ಹೆದರಿಸುತ್ತಾನೆ. ಪಂಚಾಶದ್ದಿವಸದಲ್ಲಿಯೂ ಅನ್ಯ ಭಾಷಾಲಕ್ಷಣವೂ ಎದುರಾಳಿಗಳಿಗೆ ಭಯಂಕರವಾದ ಸಂಜ್ಞೆಯಾಗಿತ್ತು. ಕೊರಿಂಥದವರ ಸಭೆಯಲ್ಲಿ ಸಹ ನೂತನ ಭಾಷಾಪ್ರಯೋಗವು ಅವಿಶ್ವಾಸಿಗಳನ್ನು ಕಳವಳಗೊಳ್ಳಿಸ ತಕ್ಕ ಅದ್ಭುತವಾಗಿತ್ತು. ಪ್ರತಿ ಕ್ರಿಸ್ತನಾದ ಪಾವನ ಪಕ್ಷದ ಸಭೆಯಲ್ಲಿ ಅಯ್ಯಗಳು ಜನರಿಗೆ ತಿಳಿಯದ ಲತೀನ ಭಾಷೆಯಲ್ಲಿ ಜಪ ಮಾಡುವದು ಸಾಮಾನ್ಯವಾದ ಕಟ್ಟಳೆಯಾಗಿದೆ. ಆದರೆ ಪ್ರವಾದನೆಯು ಭಕ್ತರ ಆತ್ಮನೃದ್ಧಿಗೂ ಪರರ ಮಾನಸಾಂತರಕ್ಕೂ ಪ್ರಯೋಜನವಾಗಿದೆ. ವ. ೨೩. ಉಭಯವರಗಳ ಫಲವು ಸಹ ಬೇರೆ ಬೇರೆಯಾಗಿದೆ. ಒಂದು ಸಭಾಸಮಾಗಮದಲ್ಲಿ ಏನು ತಿಳಿಯದ ಬಬ್ಬ ಪರ ಮನುಷ್ಯನು ಶೇರಿ ನೀವೆಲ್ಲರು ನೂತನ ಭಾಷೆಯಾಡುವದನ್ನು ಕೇಳಿದರೆ, ನಿಮಗೆ ಹುಚ್ಚು ಹಿಡಿಯಿತೆಂದು, ನೆನಸದೆ ಇರುವನೊ? ವ. ೨೪. ಆದರೆ ಎಲ್ಲರು ಪ್ರವಾದಿಸುವ ವೇಳೆಯಲ್ಲಿ ತಿಳಿಯದವನೊಬ್ಬನು ಅಥವಾ ಕ್ರೈಸ್ತನಲ್ಲದವನು ಶೇರಿದರೆ, ಬಲವಾದ ಪ್ರಸಂಗದಿಂದ ತಿವಿದ ಮನಸ್ಸಾಕ್ಷಿಯುಳ್ಳವನಾಗಿ ತನ್ನ ಅವಿಶ್ವಾಸವನ್ನು ತಿಳಿದು, (ಯೋಹ. ೧೬, ೮.) ತನ್ನ ಪಾಪವನ್ನೂ ಕೃಪೆಯ ಆವಶ್ಯಕವನ್ನೂ ಗ್ರಹಿಸಿಕೊಂಡು ವ. ೨೫. ನಿಜ ಹೃದಯದ ರಹಸ್ಯಗಳನ್ನರಿತು, ದೇವರನ್ನು ಪೂಜಿಸಿ, ಅಡ್ಡ ಬಿದ್ದು, ಪ್ರಾರ್ಥಿಸಿ, ದೇವರ ಬಲವು ನಿಮ್ಮ ಆತ್ಮವರಗಳಲ್ಲಿಯೂ ಸಭಾಸಮಾಗಮಗಳಲ್ಲಿಯೂ ಪ್ರತ್ಯಕ್ಷವಾಗಿದೆಂಬದಕ್ಕೆ ಸಾಕ್ಷಿ ಕೊಡುವನು.

೧ ಕೊರಿ. ೧೪, ೨೬—೩೫.

ಸಭಾಸಮಾಗಮಗಳ ಕ್ರಮವು.

ವ. ೨೬. ನಾನಾ ವಿಧವಾದ ನಿಮ್ಮ ವರಗಳನ್ನೆಲ್ಲಾ ಸಭಾವೃದ್ಧಿಗಾಗಿ ಪ್ರಯೋಗಿಸ ಬೇಕು. ಒ ಬ್ಬೊಬ್ಬನಿಗೆ ಒಂದೊಂದು ವರವದೆ: ಒಬ್ಬನಿಗೆ ಸ್ತೋತ್ರಗಾಯನವು (ಕೊಲೊ. ೩, ೧೬.), ಎರಡನೆ ಯವನಿಗೆ ಕ್ರೈಸ್ತ ಧರ್ಮಬೋಧನೆಯು, ಮೂರನೆಯವನಿಗೆ ನೂತನ ಭಾಷೆಯ ವಚನವು, ನಾಲ್ಕನೆಯವ ನಿಗೆ ವಿಶೇಷ ಪ್ರಕಟಣೆಯ ಪ್ರವಾದನೆಯು, ಐದನೆಯವನಿಗೆ ನೂತನ ಭಾಷಾವಚನದ ವ್ಯಾಖ್ಯಾನವು ಉಂಟು. ಸಭಾವೃದ್ಧಿಯು ಬಂದೇ ಎಲ್ಲಾದಕ್ಕೂ ಉದ್ದಿಶ್ಯವಾಗಿರ ಬೇಕು. ೨೭. ನೂತನ ಭಾಷೆಯಾಡುವವರು ಇಬ್ಬರು, ಹೆಚ್ಚಾದರೆ ಮೂವರು ಇರಲಿ; ಬಳಿಕ ಒಬ್ಬನು ಅವರು ನುಡಿದದ್ದನ್ನು ವ್ಯಾಖ್ಯಾನಿಸಲಿ. ೨೮. ಈ ವರವುಳ್ಳವನೊಬ್ಬನಿಲ್ಲದಿದ್ದರೆ, ಅವರು ಸಭೆಯಲ್ಲಿ ಮೌನವಾಗಿದ್ದು ತಮ್ಮೊಳಗೆ ತಾವೇ ಪ್ರಾರ್ಥನೇ ಮಾಡಿ ಕೊಳ್ಳಲಿ. ೨೯. ದೇವರ ಮರ್ಮಗಳನ್ನು ಸಾರುವ ಪ್ರವಾದನೆಯ ವರವುಳ್ಳವರಲ್ಲಿ ಇಬ್ಬರು ಅಥವಾ ಮೂವರು ಪ್ರಸಂಗ ಮಾಡಲಿ ಉಳಿದವರು ಆತ್ಮ ವಿಶೇಷಕ ವರವನ್ನು ಪ್ರಯೋಗಿಸಲಿ. ೧ ಥೆಸ. ೫, ೧೯—೨೧. ೧ ಯೋಹಾ. ೪, ೧. ೩೦. ಒಬ್ಬ ಪ್ರವಾದಿ ಮಾತನಾಡುವ ವೇಳೆಯಲ್ಲಿ ಮತ್ತೊಬ್ಬನಿಗೆ ಆತ್ಮದ ಪ್ರಕಟಣೆ ಯೂ ಪ್ರೇರಣೆಯೂ ಉಂಟಾದರೆ, ಮೊದಲನೆಯವನು ಸ್ವಸ್ಥವಾಗಿ ಎರಡನೆಯವನನ್ನು ಮಾತನಾಡಿಸಲಿ. ೩೧. ಎಲ್ಲರು ಪ್ರಸಂಗ ಸಾಧನೆಯಿಂದ ಕಲಿತು ಬಲ ಗೊಳ್ಳುವ ಹಾಗೆ, ವಿಶಿಷ್ಟ, ಸಭೆಯವರು ಒಬ್ಬರ ಮೇಲೆ ಒಬ್ಬರು ದೇವರ ಮರ್ಮಗಳನ್ನು ಪ್ರಸಂಗಿಸ ಬಹುದು. ೩೨. ಪ್ರವಾದಿಗಳಲ್ಲಿ ಉದ್ಯುಕ್ತವಾದ ಆ ತ್ಮವು ಅವರಿಗೆ ವಶವಾಗಿದ್ದು ಮಾತನಾಡುವದಕ್ಕಾದರೂ ಮೌನವಾಗಿರುವದಕ್ಕಾದರೂ ಅಂಕೆ ಮಾಡದೆ ಇರು ವದರಿಂದ, ಒಬ್ಬೊಬ್ಬನು ಸ್ವೇಚ್ಛಾನುಸಾರವಾಗಿ ತಾನು ಮೌನವಾಗಿ ಮತ್ತೊಬ್ಬನನ್ನು ಮಾತನಾಡಿಸ ಬಹು ದು. ೩೩. ಯಾಕೆಂದರೆ ದೇವರು ಅಕ್ರಮಕ್ಕೆ ಮೆಚ್ಚ ದೆ, ನಿಮ್ಮಲ್ಲಿಯೂ ಎಲ್ಲಾ ಸಭೆಗಳಲ್ಲಿಯೂ ಸಮಾ ಧಾನವಿರ ಬೇಕೆಂದು ಅಪೇಕ್ಷಿಸುತ್ತಾನೆ. ೩೪. ಹೆಂಗಸರು ಸಭಾ ಸಮಾಗಮಗಳಲ್ಲಿ ಮೌನವಾಗಿರ ಬೇಕು; ಯಾಕೆಂದರೆ ಕೇಳುವವರ ಮೇಲೆ ಹ್ಯಾಗೂ ಬಂದು ಪ್ರಕಾರವಾಗಿ ಧೊರೆತನ ಮಾಡುವ ಬೋಧಕೋ ದ್ಯೋಗವು ಅವರಿಗೆ ಆಗುವದಿಲ್ಲ. ಸ್ವಭಾವದ ಪದ್ಧತಿ ಮಾತ್ರವಲ್ಲ, ದೇವರ ವಾಕ್ಯದ ಕಟ್ಟಳೆ ಸಹ ನಿರ್ನೈ ಸುವ ಪ್ರಕಾರ ಅವರು ಪರಾಧೀನರಾಗಿರ ಬೇಕು. ೧ ಮೋಶೆ. ೩, ೧೬. ೧ ತಿಮೊ. ೨, ೧೨. ೪೫. ಬೋ ಧನೆಯನ್ನು ಹೊಂದುವ ಹಾಗೆ ಪ್ರಶ್ನೆ ಕೇಳುತ್ತೇವಷ್ಟೆ ಎಂಬ ನೆವವನ್ನು ಸಹಾ ಹೇಳದೆ, ತಮ್ಮ ಮನೆಗಳಲ್ಲಿ ತಮ್ಮ ಗಂಡಂದಿರಿಗೆ ಪ್ರಶ್ನೆಗಳನ್ನು ಕೇಳಲಿ. ಯಾಕೆಂದರೆ ಬಹಿರ್ವಾದವು ಸ್ತ್ರೀಯರಿಗೆ ಯುಕ್ತವಾದದ್ದಲ್ಲಾ. ೩೬. ಇಲ್ಲವೆ ನೀವು ಒಬ್ಬರೇ ಅಥವಾ ಮೊದಲಿನವರಾಗಿ ದೇವವಾಕ್ಯವನ್ನು ಪಡದು ಕೊಂಡಿರೆಂಬ ಹಾಗೆ, ಬೇರೆ ಸಭೆಗಳು ನಿಮ್ಮನ್ನು ಅನುಸರಿಸ ಬೇಕೆಂದು, ನೆನಸುತ್ತೀರೊ?

ಬುದ್ಧಿ ಹೇಳುವ ಕಾನೇಮಾತು.

ವ. ೩೭. ನಿಮ್ಮಲ್ಲಿ ಪ್ರವಾದಿಯಾಗಲಿ, ಬೇರೆ ಆತ್ಮವರಾನ್ವಿತನಾಗಲಿ, ಅನ್ನಿಸಿ ಕೊಳ್ಳುವವನು ನಾನು ಬರೆಯುವಂಥಾದೆಲ್ಲಾ ಕ್ರಿಸ್ತನ ಆಜ್ಞೆಯಾಗಿದೆ ಎಂಬುವದಕ್ಕೆ ಒಪ್ಪಿ ಕೊಳ್ಳುವದರಿಂದಲೇ, ತಾನು ಅಧಿಕಾ ರಿ ಎಂಬುವದನ್ನು ತೋರಿಸಲಿ. ೩೮. ಯಾರಾದರೂ ತನಗೆ ನಿಶ್ಚಯ ಕಾಣುವದಿಲ್ಲವೆಂದು, ಹೇಳಿ ಬಿಟ್ಟರೆ, ಹೇಳಲಿ. ಅವನು ಅಜ್ಞಾನಿಯಾಗಿಯೇ ಇದ್ದು, ಅಜ್ಞಾನದ ಫಲವನ್ನೂ ಅನುಭವಿಸಲಿ. ೩೯. ಬಂದೇ

೫೪೬ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ.

೧ ಕೌರಿ. ೧೪, ೪೦—೧೫, ೧—೨.

ಮಾತು: ಏನೆಂದರೆ ನವ ಭಾಷಾವಾದವನ್ನು ತಡಿನದೆ, ಪ್ರವಾದನಾವರಕ್ಕಿಂತ ಅಲ್ಪವೆಂದು ತಿಳಿದು ಕೊಳ್ಳಬೇಕು. ೪೦. ಹ್ಯಾಗಾದರೂ ಎಲ್ಲಾ ಕೆಲಸವು ಸಭೆಯಲ್ಲಿ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯ ಬೇಕು.

ಪತ್ರಿಕೆಯ ೪ನೆ ಭಾಗವು.

ಪ. ೧೫.

ಸತ್ತವರ ಪುನರುತ್ಥಾನವು.

ಸತ್ತವರ ಪುನರುತ್ಥಾನ ಬೋಧನೆಗಿಂತ ಪರಜನರಾದ ಗ್ರೇಕರಿಗೂ ಅದ್ವೈತಮತಿಗಳಾದ ಇಂದಿನ ಜ್ಞಾನಿಗಳಿಗೂ ಹೆಚ್ಚಾಗಿ ಅನುಚಿತವಾದದ್ದು ಕ್ರೈಸ್ತತ್ವದ ಬೋಧನೆಗಳಲ್ಲಿ ಬಂದೂ ಇಲ್ಲ. ಈ ಮಾತು ಅಥೇನೆ ಪಟ್ಟಣದ ಪರಜನರಾದ ಗ್ರೇಕರಿಗೆ ಕಡು ಹೇಸಿಗೆಯಾಗಿತ್ತು ಅಪೊ. ಕ್ರಿ. ೧೭, ೩೨. ಹೀಗೆ ಇರಲಾಗಿ, ಸಭೆಯಲ್ಲಿ ಶೇರಿದವರ ಮನಸ್ಸುಗಳಲ್ಲಿ ಆಗ್ಯಾಗ್ಯೆ ಪೂರ್ವ ಬುದ್ಧಿಯ ವಾಸನೆ ಹುಟ್ಟಿದ್ದು ಚೋದ್ಯವಲ್ಲಾ. ಕೊರಿಂಥದ ಸಭೆಯಲ್ಲಿ ಕೆಲವರು ಪುನರುತ್ಥಾನವನ್ನು ಅಲ್ಲಗಳಿದರೆಂದು ತೋರುತ್ತದೆ. ಅವರು ಕ್ರೈಸ್ತರಾಗಿದ್ದರಿಂದ, ಸದ್ದುಕಾಯರಂತೆ ಮತ್ತಾ. ೨೨, ೨೩. ಪರದ ಜೀವವಿಲ್ಲವೆಂದು ಸ್ಥಾಪಿಸಿದರೆಂತ ನೆನಸ ಕೆಲಸವಿಲ್ಲಾ; ಆದರೆ ಹುಮೆನಾಯ ಫಿಲೇತರಂತೆ ೨ ತಿಮೊ. ೨, ೧೪. ಸುವಾರ್ತೆಯನ್ನು ಕೇಳಿ ನಂಬಿದ ಮನುಷ್ಯರಲ್ಲಿ ಆಗುವ ಪುನರ್ಜನ್ಮವೇ ಸತ್ತವರ ಪುನರುತ್ಥಾನವೆಂದು ಬೋಧಿಸಿ, ಅದು ಕ್ರೈಸ್ತರಲ್ಲಿ ಆಗಿ ಹೋಯಿತೆಂದು ಹೇಳಿದರು, ಅಥವಾ ಪ್ರಾಣಕ್ಕೆ ಅಮರತ್ವವಿದ್ದರೂ, ಶರೀರಕ್ಕೆ ಪುನರುತ್ಥಾನವಿಲ್ಲವೆಂತ, ತರ್ಕಿಸಿದರು. ಅಪೊಸ್ತಲನು ಅನ್ಯಾರ್ಥವನ್ನು ತಳ್ಳಿ ಕ್ರಿಸ್ತನು ಪುನರುತ್ಥಾನವಾಗದೆ ಇದ್ದನಾದರೆ, ಕ್ರೈಸ್ತತ್ವವೆಲ್ಲಾ ವ್ಯರ್ಥ ಕನಸಾಗುವದೆಂದೂ, ಸತ್ತವರ ಪುನರುತ್ಥಾನವು ಸುವಾರ್ತೆಯ ಮೂಲಸೂತ್ರವಾಗಿದೆಂದೂ, ಪ್ರಮಾಣಿಸುತ್ತಾನೆ. ಈ ಪ್ರಮಾಣಕ್ಕೆ ಎರಡು ಭಾಗ. ವ. ೧—೩೪ಲ್ಲಿ ಸತ್ತವರು ತಿರಿಗಿ ಬದುಕುತ್ತಾರೆಂಬುವದನ್ನು ವಿವರಿಸುತ್ತಾನೆ. ವ. ೩೫—೫೮ಲ್ಲಿ ಪುನರುತ್ಥಾನದ ರೀತಿಯನ್ನು ಹೇಳುತ್ತಾನೆ.

I ನಮ್ಮ ಪುನರುತ್ಥಾನದ ನಿಶ್ಚಯವು ವ. ೧—೩೪.

೧. ಕ್ರಿಸ್ತನ ಪುನರುತ್ಥಾನದ ನಿಶ್ಚಯವು ನಮ್ಮ ಪುನರುತ್ಥಾನದ ನಿಶ್ಚಯಕ್ಕೆ ನೆಲವಾಗಿದೆ. ವ. ೧—೧೯.

ಅ) ಅದು ಸುವಾರ್ತೆಯ ಸಾರವಾಗಿದೆ. ವ. ೧—೪.

ವ. ೧. ಇದಲ್ಲದೆ, ಸಹೋದರರೇ, ನಾನು ನಿಮಗೆ ಪ್ರಸಂಗಿಸಿದ ಸುವಾರ್ತೆಯನ್ನು ೧) ನಿಮಗೆ ತಿಳಿಸುತ್ತೇನೆ; ಅದನ್ನೇ ಹೌದಿದಿರಿ ೨); ಅದರಲ್ಲಿ ನಿಂತಿರುತ್ತೀರಿ. ೨. ಅದರಿಂದಲೇ, ಯಾವ ವಾಕ್ಯದಿಂದ ನಿಮಗೆ ಪ್ರಸಂಗ ಮಾಡಿದೆನೋ ಆ ಅದನ್ನು ಹಿಡಿದು ಕೊಂಡರೆ ೩), ವ್ಯರ್ಥವಾಗಿ ೪) ವಿಶ್ವಾಸಿಸದೆ ಇದ್ದರೆ, ರಕ್ಷಿಸಲ್ಪಡುತ್ತೀರಿ.

೧ ಕೊರಿ. ೧೫, ೩—೪.

೧. ಅಪಾಸ್ತಲನಾದ ಪೌಲನು ಕಾರಿಂಥಕ್ಕೆ ಬಂದು, ಪುನರುತ್ಥಾನವಾಗಿ ತನಗೆ ಕಾಣಿಸಿ ಕಾಂಡ ಯೇಸು ಕ್ರಿಸ್ತನ ಅಪ್ಪಣೆಗೆ ಅನುಸಾರವಾಗಿ, ಎಲ್ಲಾ ಮನುಷ್ಯರಿಗೆ ಯೇಸು ಕ್ರಿಸ್ತನಿಂದುಂಟಾದ ರಕ್ಷಣೆಯನ್ನು ಸಾರಿದ್ದನು.

೨. ಪೌಲನು ಮೊದಲು ಸಾರಿದ ಸುವಾರ್ತೆಯನ್ನು ಯೆಹೂದರೂ ಯೆಹೂದ ಮತಕ್ಕೆ ಶೇರಿದವರೂ ಗ್ರೇಕರೂ ಆದ ಅನೇಕರು ಯಥಾರ್ಥವಾಗಿ ನಂಬಿದ್ದರಿಂದ, ಒಂದೂವರೆ ವರ್ಷದ ಒಳಗೆ ದಾಡ್ಡ ಕ್ರೈಸ್ತ ಸಭೆಯು ಉಂಟಾಯಿತು. ಕಾರಿಂಥದ ಸಭೆಯವರು ನಂಬಿ ಅನುಭವಿಸಿ ಕಾಂಡ ಪುನರುತ್ಥಾನವಾದ ಕ್ರಿಸ್ತನ ಸುವಾರ್ತೆಯ ಬಲವನ್ನು ಪೌಲನು ಅವರಿಗೆ ಹೀಗೆ ಜ್ಞಾಪಿಸುತ್ತಾನೆ.

೩. ತಾನು ಕಾರಿಂಥದವರಿಗೆ ಸಾರಿದ ಸುವಾರ್ತೆಯ ವಾಕ್ಯವನ್ನು ಅನ್ಯಬಾಧೆಯಿಂದ ಬೆರಕೆ ಮಾಡಿದರೆ, ನಿಜ ಸುವಾರ್ತೆಯನ್ನು ವಿಸರ್ಜಿಸಿದ ದೋಷವು ಪಾತ್ರುತ್ತದೆಂದು, ಸಭೆಯವರನ್ನು ಎಚ್ಚರಿಸುತ್ತಾನೆ. ಪಾಲಿಗೆ ಪೆಪ್ಪು ಪಾತ್ರಾಕಿದರೆ, ಎಲ್ಲಾ ಪುಳಿಯಾಗಿ ಮೊಸರಾಗುತ್ತದೆ.

೪. ವ್ಯರ್ಥವಾಗಿ ವಿಶ್ವಾಸಿಸುವಂಥಾದ್ದು ಇಲ್ಲವೆ ಇಲ್ಲ. ಅನರ್ಥವಾದ ವಿಶ್ವಾಸವು ಬರಿ ಭ್ರಾಂತಿ.

೩. ೩. ಯಾಕೆಂದರೆ ನಾನು ಹೌದಿಂದಿದ್ದನ್ನೆ ೧) ಮೊದಲಾಗಿಯೆ ೨) ನಿಮಗೆ ಒಪ್ಪಿಸಿದೆನು. ಏನಂದರೆ—(ಕ್ರಿಸ್ತನು ಬರಹಗಳ ಪ್ರಕಾರ ೩) ನಮ್ಮ ಪಾಪಗಳ ನಿಮಿತ್ತ ಸತ್ತನು ೪); ೪. ಮತ್ತು ಹೂಳ್ಪಟ್ಟನು ೫); ಮತ್ತು ಬರಹಗಳ ಪ್ರಕಾರ ೬) ಮೂರನೆ ದಿವಸದಲ್ಲಿ ಎದ್ದನು.

೧. ದೇವವಾಕ್ಯವನ್ನು ಸರಿಯಾಗಿ ಸಾರುವವನು ಮುಖ್ಯಾರ್ಥವನ್ನು ಪೂರ್ಣಹೃದಯದ ಆಸಕ್ತಿಯಿಂದ ಮೊದಲೆ ಹೇಳುವನು.

೨. ಪೌಲನು ಈ ಪತ್ರಿಕೆಯ ೧೫ನೆ ಸಂಧಿಯ ೩ನೆ ವಚನದಲ್ಲಿ ರಾತ್ರಿಭೋಜನದ ವಿಷಯವಾಗಿ ನಿಮಗೆ ಒಪ್ಪಿಸಿದ್ದನ್ನೇ ಕರ್ತನಿಂದ ಪಡೆದಿದೆನು! ಎಂದು, ಬರಹದ ಪ್ರಕಾರ, ಇಲ್ಲಿ ಸೂಚಿಸಿ ಇರುವ ಸುವಾರ್ತೆಯ ಸಾರವಾದ ಮಾತುಗಳನ್ನು ಸಹ ಮನುಷ್ಯರಾದ ಅಪಾಸ್ತಲರ ಬಾಯಿಂದ ಕೇಳದೆ, ತನಗೆ ಆಗಾಗ್ಗೆ ಪ್ರತ್ಯಕ್ಷವಾದ ಯೇಸು ಕ್ರಿಸ್ತನ ಉಪದೇಶದಿಂದಲೆ ತಿಳಿದು ಕಾಂಡನೆಂದು, ಇಲ್ಲಿ ಕಾಣುತ್ತದೆ.

೩. ತಾನು ಸಾಯದೆ ಪಡೆದಾದರೆ, ಹೀಗೆ ಆಗಬೇಕೆಂಬ ಬರಹಗಳು ಪೂರ್ತಿಗೆ ಈಡೇರುವವು ಎಂದು, ಯೇಸು ಕ್ರಿಸ್ತನು ತಾನಿಟದಲ್ಲಿ ಶಿಷ್ಯರಿಗೆ ಹೇಳಿದನು ಮತ್ತಾ. ೨೬, ೫೪. ಪುನರುತ್ಥಾನದ ಮೇಲೆ ಎಮಪುವೆಂಬ ಗ್ರಾಮಕ್ಕೆ ಪೋಗುವ ಇಬ್ಬರಿಗೆ: ಓ ಬುದ್ಧಿಹೀನರೇ, ಪ್ರವಾದಿಗಳು ಹೇಳಿದವುಗಳನ್ನೆಲ್ಲಾ ನಂಬುವದಕ್ಕೆ ಮಂದ ಹೃದಯ ಉಳ್ಳವರೇ, ಕ್ರಿಸ್ತನು ಈ ಶ್ರಮಗಳನ್ನು ಪಟ್ಟು, ತನ್ನ ಮಹಿಮೆಯಲ್ಲಿ ಪ್ರವೇಶಿಸಬೇಕಾಗಿರಲಿಲ್ಲವಾ? ಎಂದು ಹೇಳಿ, ಮೋಶೆಯಿಂದಲೂ ಪ್ರವಾದಿಗಳೆಲ್ಲರಿಂದಲೂ ಆರಂಭಿಸಿ, ಸಮಸ್ತ ಬರಹಗಳಲ್ಲಿ ತನ್ನ ವಿಷಯವಾದ ವುಗಳನ್ನು ಅವರಿಗೆ ವಿವರಿಸಿದನೆಂದು, ಲೂಕ. ೨೪, ೨೫—೨೭ರಲ್ಲಿ ಬರದದೆ. ಯೆಶಾ. ಸ. ೫೩. ಕೀರ್ತ. ೧೬. ೨೨. ದನಿ. ೯, ೨೬. ಸಕ. ೧೨, ೧೦. ಈ ಮೊದಲಾದ ಸ್ಪಷ್ಟವಾದ ಪ್ರವಾದನೆಗಳ ಪ್ರಕಾರತು, ಪಶು ಕುರಿಯ ಆಚರಣೆ (ಯಾಜಕಾ. ೧೯, ೩೬.) ಪೂರ್ವನಿರ್ಧಾರದ ವಿಶಿಷ್ಟ ಬಲಿನೇಮವು, ಸಕ. ೧೩, ೭ರಲ್ಲಿ ವರ್ಣಿಸಿ ಇರುವ ಇಬ್ಬರು ಪುರುಷರು ಮುಂತಾದ ಮುಂಗುರ್ತುಗಳು ಯೇಸು ಕ್ರಿಸ್ತನ ಶ್ರಮ ಮರಣ ಪುನರುತ್ಥಾನಾದಿಗಳನ್ನು ಮುಂತಿಳಿಸಿದವು.

೪. ಇದೆ ಅಭಿಪ್ರಾಯವು: ೨ ಕೊರಿ. ೫, ೧೫ರಲ್ಲಿ ಬರದದೆ. ಕ್ರಿಸ್ತನು ನಮ್ಮ ಅಕ್ರಮಗಳಿಗಾಸ್ಕರ ಒಪ್ಪಿಸಲ್ಪಟ್ಟನು ರೋಮಾ. ೪, ೨೫., ನಮ್ಮ ಪಾಪಾಣಿಗಾರನಾಗಿ ತನ್ನ ಪ್ರಾಣವನ್ನು ಬಲಿಯಾಗಿ ಕಾಟ್ಟು,

೧ ಕೊರಿ. ೧೫, ೫—೯.

ನಮಗೆ ಪಾಪ ವಿಮೋಚನೆ ಮಾಯಿದನು ಮತ್ತಾ. ೨೦, ೨೮. ೨೬, ೨೮. ಲೂಕ. ೨೨, ೧೯. ರೋಮಾ. ೫, ೮. ೧೦. ನಮಗಾಗಿ ವಿಮೋಚನೇ ಬಲಿಯಾದನು ೧ ಪೇತ್ರ. ೧, ೧೯. ೨ ಕೊರಿ. ೫, ೨೧. ೧ ತಿಮೊ. ೨, ೬. ಗಲ. ೩, ೧೩. ನಮಗಾಗಿ ಶಾಪವಾದನು ೨ ಪೇತ್ರ. ೨, ೧. ನಮ್ಮ ಪಾಪಗಳಿಗಾಗೇಸ್ಕರ ಶಾಂತಿ ಬಲಿಯಾದನು ೧ ಯೋಹಾ. ೨, ೨. ೪, ೧೦. ತನ್ನನ್ನು ತಾನೆ ಬಲಿಯಾಗಿ ಕಾಟ್ಟ ಪ್ರಧಾನಯಾಜಕನಾದನು ಇಬ್ರಿ. ೨, ೧೭. ೫, ೧. ೯, ೮.

೫. ಯೇಸು ಕ್ರಿಸ್ತನು ಕ್ರೂಜೆಯಲ್ಲಿ ಸತ್ತ ಬಳಿಕ, ಗುಂಡಿಯಲ್ಲಿ ಇಡಲ್ಪಟ್ಟಿದ್ದು ಅವನ ಮರಣಕ್ಕೂ ಪುನರುತ್ಥಾನಕ್ಕೂ ಪ್ರಮಾಣವಾಗಿದೆ.

೬. ಬರಪಾವು ಪುನರುತ್ಥಾನವನ್ನು ಮುಂತಿಳಿಸಿತೆಂಬುವದನ್ನು ಯೇಸು ಮತ್ತಾ. ೧೨, ೪೦. ೧೬, ೪. ಯೋನನ ಗುರ್ತಿನಿಂದ ತಾನೇರಿಸುತ್ತಾನೆ, ಪೇತ್ರನು ಸಪಾ ಅಪಾ. ಕ್ರಿ. ೨, ೨೫ಲ್ಲಿಯೂ, ೩, ೧೫ಲ್ಲಿಯೂ ೧೬ನೆ ಕೀರ್ತನೆಯಿಂದ ಪ್ರಮಾಣಿಸುತ್ತಾನೆ.

ಇ) ಅದಕ್ಕೆ ದೃಢವಾದ ಸಾಕ್ಷಿಯುಂಟು ವ. ೫—೧೧.

ವ. ೫. ಮತ್ತು ಕೇಫನಿಗೂ ೧), ಶರುವಾಯ ಹನ್ನೆರಡು ಮಂದಿಗೂ ೨), ಕಾಣಿಸಿಕೊಂಡನು. ೬. ಆ ಶರುವಾಯ ಐನೂರರ ಮೇಲೆ ಹೆಚ್ಚಾದ ಸಹೋದರರಿಗೆ ಒಂದೇ ಮೇಳೆ ಕಾಣಿಸಿಕೊಂಡನು ೩); ಇವರಲ್ಲಿ ಬಹು ಜನ ಇಂದಿಗೂ ಇದ್ದಾರೆ ೪), ಕೆಲವರು ನಿದ್ದೆ ಹೊಂದಿಗಿದ್ದಾರೆ. ೭. ಆ ಶರುವಾಯ ಯಾಕೋಬನಿಗೂ ೫), ಶರುವಾಯ ಅಪಾಸ್ತಲರಿಗೂ ೬),

೧. ಲೂಕ. ೨೪, ೩೬. ತಾನು ಮಾಯಿದ ಪಾಪಕ್ಕಾಗಿ ಚಿಂತಾಕ್ರಾಂತನಾದ ಪೇತ್ರನಿಗೆ ಈ ಕೃಪಾತಿಶಯವು ಪ್ರಾಪ್ತವಾಯಿತು. ಪುನರುತ್ಥಾನವಾದ ಯೇಸುವನ್ನು ಮೊದಲೆ ಕಂಡ ಮರೀಯ ಮುಂತಾದ ಸ್ತ್ರೀಯರ ಹೆಸರುಗಳನ್ನು ಪೌಲನು ನೆನಪರಿಕೆ ಮಾಡುವದಿಲ್ಲ; ಗಂಡಸರ ಸಾಕ್ಷಿ ಅಧಿಕವಾದದ್ದು.

೨. ಯೂದನು ಸತ್ತ ಮೇಲೆ, ಹನ್ನಾಂದು ಮಂದಿಯೇ ಉಳಿದರು. ಯೇಸು ಅಪಾಸ್ತಲರಿಗೆ ಮೊದಲು ಕಾಣಿಸಿಕೊಂಡಾಗ, ತಾಮನು ಸಪಾ ಕೂಡಾ ಇರಲಿಲ್ಲ. ಆದರೆ ಹನ್ನೆರಡು ಮಂದಿ ಎಂಬುವದು ಅಪಾಸ್ತಲರು ಎಂಬುವದಕ್ಕೆ ಸರಿಯಾದ ಹೆಸರಾಗಿ ಹೋಗಿತ್ತು. ಯೇಸು ಅಪಾಸ್ತಲರಿಗೆ ವಾಡಿಕೆಯಾದ ಸಭಾಸ್ಥಳದಲ್ಲಿ ಎರಡು ಸಾರಿ ಕಾಣಿಸಿಕೊಂಡ ವಿವರವು ಯೋಹಾ. ೨೦, ೧೯. ಲೂಕ. ೨೪, ೩೬. ಯೋಹಾ. ೨೦, ೨೬ಲ್ಲಿ ಬರದದೆ.

೩. ಇದು ಗಲಿಲಾಯದಲ್ಲಿ ಸಂಭವಿಸಿತೆಂದು, ತೋರುತ್ತದೆ. ಮತ್ತಾ. ೨೮, ೧೭. ಆ ಶಿಮೆಯಲ್ಲಿ ಯೇಸುವಿನ ಶಿಷ್ಯರಲ್ಲಿ ಹೆಚ್ಚು ಮಂದಿ ಇದ್ದರು.

೪. ಈ ಮಾತು ಪುನರುತ್ಥಾನದ ಬಳಿಕ ಹೆಚ್ಚು ಕಡಮೆಯಾಗಿ ಇಪ್ಪತ್ತಮೂರು ವರುಷ ಕಳಿದ ಮೇಲೆ ಬರೆಯಲಾಯಿತು.

೫. ಈ ಯಾಕೋಬನು ಕರ್ತನ ತಮ್ಮನೂ ಯೆರೂಸಲೇಮಿನ ಸಭೆಯ ಘನತೆಯುಳ್ಳ ಅಧ್ಯಕ್ಷನೂ ಆಗಿದ್ದನು ಗಲ. ೨, ೯. ಅಪಾ. ಕ್ರಿ. ೧೫, ೧೩.

೬. ಇಲ್ಲಿ ಸೂಚಿಸಿ ಇರುವ ಸಂಗತಿ ಲೂಕ. ೨೪, ೫೫ಲ್ಲಿ ವಿವರಿಸಿ ಅದೆ.

೮. ಆದರೆ ಕಟ್ಟ ಕಡೆಯಲ್ಲಿ ಬಿದ್ದ ಬಸುರಿನ ೧) ಹಾಗಾದ ನನಗೂ ಕಾಣಿಸಿಕೊಟ್ಟನು. ೯. ಯಾಕಂದರೆ ನಾನು ಅಪಾಸ್ತಲರಲ್ಲಿ ಚಿಕ್ಕವನು, ದೇವರ ಸಭೆಯನ್ನು

ಹಿಂಸೆ ಮಾಡಿದ್ದರಿಂದ ೨), ಅಪಾಸ್ತಲನೆಂದು ಕರೆಯಲ್ಪಡ ಯೋಗ್ಯನಲ್ಲ. ೧೦. ಆದರೆ ಏನಾಗಿದ್ದೇನ್ಯಾ, ದೇವರ ಕೃಪೆಯಿಂದ ೩) ಇದ್ದೇನೆ; ಮತ್ತು ನನ್ನಲ್ಲಿದ್ದ ಅವನ ಕೃಪೆಯು ವ್ಯರ್ಥವಾಗದೆ ೪), ಅವರೆಲ್ಲರಿಗಿಂತ ಹೆಚ್ಚಾಗಿ ಕಷ್ಟ ಪಟ್ಟೆನು. ಆದರೆ ನಾನಲ್ಲ, ನನ್ನ ಸಂಗಡ ಇದ್ದ ದೇವರ ಕೃಪೆಯೇ. ೧೧. ಹಾಗಾದರೆ, ನಾನಾಗಲಿ, ಅವರಾಗಲಿ, ಹೀಗೆ ಸಾರುತ್ತೇವೆ ೫); ಮತ್ತು ಹೀಗೆ ವಿಶ್ವಾಸಿಸಿದಿರಿ.

೧. ಸತ್ತು ಹುಟ್ಟಿದ ಮಗುವಿನಂತೆ ನಿಷ್ಪ್ರಯೋಜಕನೆಂಬ ಅರ್ಥ. ಪೌಲನೂ ಬರ್ನಬನೂ ಚಿಕ್ಕತನದಿಂದ ಗೆಳೆಯರಾಗಿದ್ದರೆಂದು, ತೋರುತ್ತದೆ ಅಪಾ. ಕ್ರಿ. ೯, ೨೭. ಇಬ್ಬರು ಬಹಳ ವರ್ಷ ಯೆರೂಸಲೇಮಿನಲ್ಲಿ ವಾಸವಾಗಿದ್ದರು ಅಪಾ. ಕ್ರಿ. ೨೨, ೩. ೪, ೩೬. ೩೭. ಬರ್ನಬನ ಸಹೋದರಿಯೂ ಮಾರ್ಕನ ತಾಯಿಯೂ ಆದ ಮರೀಯಳ ಮನೆಯು ಯೆರೂಸಲೇಮಿನ ಸಭೆಯವರಿಗೆ ಆರಂಭದಲ್ಲಿಯೇ ಸಭಾ ಸಮಾಗಮ ಸ್ಥಳವಾಗಿತ್ತು. ಅಪಾ. ಕ್ರಿ. ೧೨, ೧೨. ಪೌಲನ ಸಹೋದರಿಯು ಸಹ ಯೆರೂಸಲೇಮಿನಲ್ಲಿ ವಾಸವಾಗಿದ್ದಳು ಅಪಾ. ಕ್ರಿ. ೨೩, ೧೬. ಅವಳ ಮನೆಯಲ್ಲಿ ಪೌಲನು ಉಳು ಕಾಳ್ಳುಶ್ತಿದ್ದನೆಂದು, ತೋರುತ್ತದೆ. ಬರ್ನಬನು ಆರಂಭದ ಶಿಷ್ಯರಲ್ಲಿ ಒಬ್ಬನಾಗಿದ್ದರಿಂದ ಅಪಾಸ್ತಲನೆಂಬ ಪೆಸರ್ಗಾಂಡನು ೧ ಕೊರಿ. ೯, ೫. ೬. ಪೌಲನು ಕ್ರಿಸ್ತನನ್ನು ಯೆರೂಸಲೇಮಿನಲ್ಲಿ ಕಂಡನು ೨ ಕೊರಿ. ೫, ೧೬. ಆದರೆ ಬರ್ನಬನು ಯೇಸು ಕ್ರಿಸ್ತನನ್ನು ಕಂಡು, ನಂಬಿ, ಮೊದಲಿನ ಶಿಷ್ಯರಲ್ಲಿ ಒಬ್ಬನಾದನು. ಪೌಲನು ಯೇಸುವಿನ ಶತ್ರುವಾಗಿ, ಸಹೋಪಿಂಸಕನಾದನು ಅಪಾ. ಕ್ರಿ. ೯, ೫. ಆದ್ದರಿಂದ ತನ್ನನ್ನು ತಾನೇ ಹೀಗೆ ನಿಂದಿಸಿಕೊಳ್ಳುತ್ತಾನೆ.

೨. ತನಗೆ ಪರಿಹಾರವಾದ ಪಾಪವನ್ನು ಚಕ್ಕನು ಎಂದಿಗೂ ಮರೆಯುವದಿಲ್ಲ. ಪೌಲನು ತಾನು ಸಭೆಗೆ ಮಾಡಿದ ಹಿಂಸೆಯನ್ನು ಆಗಾಗ್ಗೆ ನೆನಸಿಕೊಳ್ಳುತ್ತಾನೆ ಅಪಾ. ಕ್ರಿ. ೨೨, ೪. ೫. ೧೯. ೨೦. ೨೬, ೯—೧೧. ೧ ತಿಮೊ. ೧, ೧೩.

೩. ತನ್ನ ಮಹಾ ಪಾತಕಕ್ಕಿಂತ ಪ್ರಬಲವಾದ ದೇವರ ಕೃಪೆಯನ್ನು ಖಂಡಿತವಾಗಿ ಹೊಗಳುವದು ಪೌಲನಿಗೆ ಯುಕ್ತವಾದದ್ದು.

೪. ದೇವರ ಕೃಪೆಯನ್ನು ಸತ್ಯವಾಗಿ ಪಡೆಕೊಂಡ ಚಕ್ಕನಲ್ಲಿ ಅದು ನಿಷ್ಫಲವಾಗಿರಲಾರದು. ಪೌಲನು ಅಜ್ಞಾನ ಕಾಲದಲ್ಲಿ ಎಷ್ಟು ಆಸಕ್ತಿಯಿಂದ ವೈರಿಯಾಗಿದ್ದನೋ, ಅಷ್ಟು ಆಸಕ್ತಿಯಿಂದ ಶಿಷ್ಯನಾಗಿ ಸೇವೆ ಮಾಡಿದನು.

೫. ನನಗೂ ಬೇರೆ ಬೇರೆ ಅಪಾಸ್ತಲರಿಗೂ ನಾನಾ ಬಗೆಯಿಂದ ಎಷ್ಟು ಹೊಚ್ಚ ಕಡಮೆ ಇದ್ದರೂ, ನಮ್ಮ ಬಾಧನೆಯಲ್ಲಿ ಹೊಚ್ಚ ಕಡಮೆ ಇಲ್ಲ. ನಾವೆಲ್ಲರೂ ಸತ್ಯವರಾಳಗಿಂದ ಎದ್ದ ಯೇಸು ಕ್ರಿಸ್ತನ ಸುವಾರ್ತೆಯನ್ನು ಒಂದೇ ಪ್ರಕಾರವಾಗಿ ಸಾರುತ್ತೇವೆ.

೧೨. ಆದರೆ ಸತ್ಯವರಾಳಗಿಂದ ಎಬ್ಬಿಸಲ್ಪಟ್ಟನೆಂದು, ಕ್ರಿಸ್ತನು ಸಾರಲ್ಪಟ್ಟರೆ, ನಿಮ್ಮಲ್ಲಿ ಕೆಲವರು ಸತ್ತವರ ಪುನರುತ್ಥಾನವು ಇಲ್ಲವೆಂದು ಹೇಳುವದು ಹ್ಯಾಗೆ ೧)? ೧೩. ಆದರೆ ಸತ್ತವರ ಪುನರುತ್ಥಾನವು ಇಲ್ಲದಿದ್ದರೆ ೨), ಕ್ರಿಸ್ತನು ಸಹ ಎಬ್ಬಿಸಲ್ಪಡಲಿಲ್ಲ ೩). ೧೪. ಮತ್ತು ಕ್ರಿಸ್ತನು ಎಬ್ಬಿಸಲ್ಪಡದಿದ್ದರೆ, ನಮ್ಮ ಪ್ರಸಂಗವು ೪) ವ್ಯರ್ಥವೇ ಸರಿ; ನಿಮ್ಮ ವಿಶ್ವಾಸವು ಸಹ ವ್ಯರ್ಥವೇ ೫).

೧ ಕೌರಿ. ೧೫೫, ೧೫೬—೧೫೮.

೧. ಈ ಜನರು ಯೇಸು ಕ್ರಿಸ್ತನು ಸತ್ತವರಾಳಗಿಂದ ಏಳಲಿಲ್ಲವೆಂದು, ಹೇಳಲಿಲ್ಲ; ಆದರೆ ಮನುಷ್ಯರು ಸತ್ತು, ಶವಗಳು ನಾಶವಾದ ಮೇಲೆ, ಮಣ್ಣಾದ ಶರೀರಗಳು ತಿರಿಗಿ ಎದ್ದು ಬರುವದು ಅಸಾಧ್ಯವೆಂದು, ಅಥವಾ ದೇವರಿಗೆ ಅಸಮರ್ಪಕವಾದದ್ದೆಂದು, ಹೇಳಿದರು. ಈ ಮಾತು ನಿಜವಾದರೆ, ಮನುಷ್ಯನಾಗಿದ್ದ ಯೇಸು ಸತ್ತು ಎದ್ದನೆಂಬುವದು ಸುಳ್ಳಾಗುತ್ತದೆಂದು, ಅವರು ಗ್ರಹಿಸಲಿಲ್ಲವೆಂಬದಾಗಿ ಕಾಣುತ್ತದೆ. ಸುವಾರ್ತೆಯ ಬೋಧನೆಯಲ್ಲಿ ಒಂದು ಮಾತು ಬಿಟ್ಟರೆ ಸರ್ವವೂ ಪೂರ್ಣವಾಗುತ್ತದೆ.

೨. ವಿಲಾಯತಿಯ ಜ್ಞಾನಿಗಳಲ್ಲಿ ಜೀವಾತ್ಮವು ಮರಣದ ಮೇಲೆ ಶರೀರ ರಹಿತವಾಗಿ ಉಳಿಯುತ್ತದೆಂಬ ಜ್ಞಾನವೆ ಬಹಳ ವಾಡಿಕೆಯಾಗಿ ಬರುತ್ತದೆ. ಇದು ದೇವರ ವಾಕ್ಯದ ಜ್ಞಾನಕ್ಕೆ ವ್ಯತ್ಯಾಸವಾದ ಬೀಜ ಮಾತಾಗಿದೆ. ಶರೀರವು ಬರಿ ಬೀಡು ಅಲ್ಲಾ, ಅದು ಮನುಷ್ಯ ಜೀವಾಂಶವಾಗಿದೆ. ಸತ್ತ ಮೇಲೆ ಮನುಷ್ಯನು ತಿರಿಗಿ ಬದುಕ ಬೇಕಾದರೆ, ಆತ್ಮ ಪ್ರಾಣ ಶರೀರಗಳುಳ್ಳ ತ್ರೈಯೇಕ ಜೀವದವನಾಗಿ ಏಳ ಬೇಕು. ಮನುಷ್ಯನಾದ ಯೇಸು ಸಶರೀರಿಯಾಗಿ ಸಮಾಧಿಯಿಂದ ಎದ್ದು, ದೇವರ ಬಳಿಯಲ್ಲಿ ಅನಾದಿ ಮಹಿಮೆಯಲ್ಲಿ ಸರ್ವಾಧಿಕಾರಿಯಾಗಿ ಶೋಭಿದ ಪ್ರಕಾರ, ಆತನ ಐಕ್ಯದಲ್ಲಿ ವಿಶ್ವಾಸದಿಂದ ಶೋಭಿದ ಜನರು ಆತನ ದಿವಸದಲ್ಲಿ ಪೂರ್ಣ ಮನುಷ್ಯಜೀವದವರಾಗಿ ನೂತನ ಲೋಕದಲ್ಲಿ ಪುನರುತ್ಥಾನದಿಂದ ಶೋಭಿ, ಮಂಗಳರಾಗಿ ಬಾಳುವರು.

೩. ಕ್ರಿಸ್ತನು ದೇವರ ಮಗನಾಗಿದ್ದರಿಂದಲೇ ಪುನರುತ್ಥಾನವಾದನೆಂದು, ಹೇಳಲಾಗದು. ಆತನು ನಿಜ ಮನುಷ್ಯನಾಗಿ ಹುಟ್ಟಿ, ಸತ್ತು, ಎದ್ದು ಇದ್ದಾನೆ. ಮನುಷ್ಯ ಜೀವಕ್ಕೆ ಪುನರುತ್ಥಾನವಿಲ್ಲದಿದ್ದರೆ, ಯೇಸು ಎಂಬ ಮನುಷ್ಯನು ಸಹ ಪುನರುತ್ಥಾನವಾಗಲಾರನು. ಕ್ರಿಸ್ತನು ವ. ೨೦. ಸತ್ತವರಲ್ಲಿ ಪ್ರಥಮ ಫಲವಾದನು. ತಲೆ ಎಂಬವನು ಎದ್ದದರಿಂದ, ಅವಯವಗಳು ಎಂಬುವವರು ಏಳುತ್ತಾರೆಂತ, ದೇವರ ವಾಕ್ಯವು ಸ್ಪಷ್ಟವಾಗಿ ಬೋಧಿಸುತ್ತದೆ.

೪. ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತು, ನಮ್ಮ ನೀತಿಗಾಗಿ ಎದ್ದನೆಂಬ ಪ್ರಸಂಗದ ಸಾರವು ಸುಳ್ಳಾಗದೀತು.

೫. ಸುಳ್ಳಾದ ಪ್ರಸಂಗದಿಂದ ಹುಟ್ಟಿದ ವಿಶ್ವಾಸವು ಒಂದು ಪ್ರಕಾರದ ಭ್ರಾಂತಿಯೇ ಸರಿ. ಲೋಕಕ್ಕೆ ಅಸಾಧ್ಯವಾದದ್ದನ್ನು ಸಾಧಿಸಿ, ಪಾಪವನ್ನು ಗೆಲ್ಲುವ ಬಲವನ್ನು ಮನುಷ್ಯನಲ್ಲಿ ಉಂಟು ಮಾಡುವ ವಿಶ್ವಾಸವನ್ನು ಹುಟ್ಟಿಸುವ ಪ್ರಸಂಗವು ದೇವರ ಸತ್ಯವಲ್ಲದೆ, ನರಕಲ್ಪನೆಯಾಗಿರ ಕೂಡದು.

೧೫. ಇದಲ್ಲದೆ ಸತ್ತವರು ಎಬ್ಬಿಸಲ್ಪಡದ ಪಕ್ಷದಲ್ಲಿ, ಅವನು ಎಬ್ಬಿಸದ ಕ್ರಿಸ್ತನನ್ನು ಎಬ್ಬಿಸಿದನೆಂದು ದೇವರನ್ನು ಕುರಿತು ಸಾಕ್ಷಿಹೇಳಿ, ದೇವರ ಅಪಸಾಕ್ಷಿಗಳಾಗಿ ೧) ಶಿಕ್ಕಿ ಕಾಂಡ್ಯೇವು. ೧೬. ಯಾಕಂದರೆ ಸತ್ತವರು ಎಬ್ಬಿಸಲ್ಪಡದಿದ್ದರೆ ೨), ಕ್ರಿಸ್ತನು ಎಬ್ಬಿಸಲ್ಪಡಲಿಲ್ಲ. ೧೭. ಮತ್ತು ಕ್ರಿಸ್ತನು ಎಬ್ಬಿಸಲ್ಪಡದಿದ್ದರೆ, ನಿಮ್ಮ ವಿಶ್ವಾಸವು ವ್ಯರ್ಥವೇ ೩); ಇನ್ನು ನಿಮ್ಮ ಪಾಪಗಳಲ್ಲಿ ಇದ್ದೀರಿ ೪). ೧೮. ಹಾಗಾದರೆ, ಕ್ರಿಸ್ತನಲ್ಲಿ ನಿದ್ದೆ ಹೊಂದಿದವರು ನಾಶವಾಗಿದಾರೆ ೫). ೧೯. ನಾವು ಈ ಜೀವದಲ್ಲಿ ಮಾತ್ರ ಕ್ರಿಸ್ತನಲ್ಲಿ ನಿರೀಕ್ಷಿಸಿದವರಾಗಿದ್ದರೆ ೬), ಎಲ್ಲಾ ಮನುಷ್ಯರಿಗಿಂತ ನಿಕೃಷ್ಟರಾಗಿದ್ದೇವೆ.

೧. ಪುನರುತ್ಥಾನವಾದ ಯೇಸು ಕ್ರಿಸ್ತನ ಸುವಾರ್ತೆಯು ರಕ್ಷಣ್ಯಕರವಾದ ದೇವರ ಬಲವು ಎಂಬುವದನ್ನು ಹೃದಯಾನುಭವದಿಂದ ತಿಳಿದು ಕಾಂಡವರಿಗೆ ಸಲ್ಲುವ ಪ್ರಮಾಣಕ್ಕೆ ಪೌಲನು ಈಗ ಎರಡನೇದನ್ನು

ಜ್ಞಾಪಿಸುತ್ತಾನೆ. ಅದೇನಂದರೆ: ಪುನಾಗಾದರೆ ನಾನು, ನನ್ನ ಜಾತಿಗಾರರೂ, ಅಪಾಸ್ತಲರೆಲ್ಲರೂ ದೇವರ ವಿಷಯವಾಗಿ ಸುಳ್ಳಾಡುವ ಅತಿ ದುಷ್ಟ ವಂಚಕರಾಗಿದ್ದೇವೆ. ಯಾಕಂದರೆ ದೇವರು ಕ್ರಿಸ್ತನನ್ನು ಸತ್ತವರಾಳಗಿಂದ ಎಬ್ಬಿಸದೆ ಇದ್ದರೆ, ಎಬ್ಬಿಸಿದನೆಂದು ಸಾಕ್ಷಿಯಾಗಿ ಪೇಳುವವನು ದೇವರ ಪೆಸರಿನಲ್ಲಿ ದೇವರ ಮೇಲೆ ಸುಳ್ಳಾಡುವ ಮೋಸಗಾರನಾಗಿದ್ದಾನೆ. ಅಪಾಸ್ತಲರ ಸಚ್ಚರಿತ್ರವನ್ನು ಕೆಲವು ವರುಷದ ಪುನಾಕ್ಕು ಬಳಿಕೆಯಿಂದ ತಿಳಿದವರಿಗೆ ಈ ಪ್ರಮಾಣ ಸಾಕಾಗಿರುತ್ತದೆ.

೨. ಪೌಲನು ಮುಖ್ಯವಾದ ಆಕ್ಷೇಪಣೆಯನ್ನು ತಿರಿಗಿ ಪೇಳಿ ದೃಢ ಪಡಿಸುತ್ತಾನೆ.

೩. ಅಪಾಸ್ತಲನು ಈಗ ಕಾರಿಂಥದವರ ಮನಸ್ಸುಗಳಲ್ಲಿ ಪೂರ್ಣ ನಿಶ್ಚಯವಾಗ ತಕ್ಕ ಅನುಪಲಬ್ಧಿ ಅ ಸಂಖವ ಪ್ರಮಾಣಗಳನ್ನು ಶೇರಿಸುತ್ತಾನೆ. ಅ) ಪುನಾಗಾದರೆ ನಿಮ್ಮ ನಂಬಿಕೆ ಬರಿ ಪುಚ್ಚು;

೪. ಇ) ಪುನಾಗಾದರೆ ನೀವು ಪಾಪಪರಿಪುನಾರವಿಲ್ಲದವರಾಗಿ, ಪಾಪ ಬಂಧದಲ್ಲಿ ಇರ ಬೇಕು.

೫. ಉ) ಪುನಾಗಾದರೆ ಯೇಸು ಕ್ರಿಸ್ತನನ್ನು ನಂಬಿ, ನಿತ್ಯ ಜೀವಾಶೆಯುಳ್ಳವರಾಗಿ ಸತ್ತವರು ಮೋಸ ಪುನಾಗಿದ್ದಾರೆ.

೬. ಎ) ಪುನಾಗಾದರೆ ಯೇಸು ಕ್ರಿಸ್ತನನ್ನು ನಂಬುವವರಾದ ನಮಗೆ ಯೇಸು ಕ್ರಿಸ್ತನಲ್ಲಿ ಸಾಯುಚ್ಚು ಪುನರುತ್ಥಾನವಿಲ್ಲದ ಪಕ್ಷದಲ್ಲಿ, ನಾವು ಇಪುದಲ್ಲಿ ವ್ಯರ್ಥ ಆತ್ಮತಾಡಕರಾದ ಭ್ರಾಂತರಾಗಿದ್ದು, ಪರದಲ್ಲಿ ನಿತ್ಯಾಶಾಭಂಗರಾಗಿದ್ದೇವೆ.

೨. ಕ್ರಿಸ್ತನ ಪುನರುತ್ಥಾನವು ನಮ್ಮ ಪುನರುತ್ಥಾನಕ್ಕೂ ದೇವರಾಜ್ಯಸಂಸಿದ್ಧಿಗೂ ಸಂಚಕಾರವಾಗಿದೆ. ವ. ೨೦—೩೪.

೨೦. ಆದರೆ ಇಗ ಕ್ರಿಸ್ತನು ಸತ್ತವರಾಳಗಿಂದ ಎಬ್ಬಿಸಲ್ಪಟ್ಟು, ನಿದ್ದೆ ಹಾಯ್ದವರಲ್ಲಿ ಪ್ರಥಮ ಫಲವಾದನು ೧). ೨೧. ಯಾಕಂದರೆ ಮನುಷ್ಯನಿಂದ ಮರಣವು ಬಂದ ಕಾರಣ, ಸತ್ತವರ ಪುನರುತ್ಥಾನವು ಮನುಷ್ಯನಿಂದಲೇ ೨). ೨೨. ಹಾಗಂದರೆ, ಯಾವ ಪ್ರಕಾರ ಆದಮನಲ್ಲಿ ೩) ಎಲ್ಲರು ಸಾಯುತ್ತಾರಾಯ್ತೋ, ಅದೇ ಪ್ರಕಾರ ಕ್ರಿಸ್ತನಲ್ಲಿ ೪) ಎಲ್ಲರು ೫) ಬದುಕಿಸಲ್ಪಡುವರು.

ಅ) ಕ್ರಿಸ್ತನ ಪುನರುತ್ಥಾನವು ನಮ್ಮ ಪುನರುತ್ಥಾನದ ಮೂಲವಾಗಿದೆ.

೧. ಯಾಯಿರನ ಮಗಳೂ, ನಾಯಿನ್ ಊರಿನ ಯೌವನಸ್ಥನೂ, ಲಾಜರನೂ ಯೇಸು ಕ್ರಿಸ್ತನ ಅಪ್ಪಣೆಯಿಂದ ತಿರಿಗಿ ಬದುಕಿದ ಮೇಲೆ, ಬಳಿಕ ಬೇರೆ ಮನುಷ್ಯರ ಪ್ರಕಾರ ಸತ್ತರು. ಯೇಸು ಕ್ರಿಸ್ತನು ತಾನೆ ಮೊದಲನೆಯವನಾಗಿ ಮರಣದಿಂದೆದ್ದು, ನಿರ್ಲಯ ಶರೀರ ಉಳ್ಳವನಾಗಿ ಮಹಿಮೆಯಲ್ಲಿ ಶೇರಿದನು. ಅವನು ಭೂಮಿಯಲ್ಲಿ ಬಿದ್ದ ಗಾಢಧೀಕಾಳಿನಂತೆ, ಸತ್ತು, ಮೊಳಿತು, ಬಪಳ ಫಲವನ್ನು ಫಲಿಸಿದನು ಯೋಪುನಾ. ೧೨, ೨೪. ಪ್ರಥಮ ಫಲದ ಕಂತೆ ೨ ಮೋಸೆ. ೨೩, ೧೦. ವಿಶಿಷ್ಟವಾದ ಬೆಳೆಯ ಆರಂಭವಾಗಿ, ದೇವರಿಗೆ ಅರ್ಪಿತವಾದ ಪ್ರಕಾರ, ಸತ್ತವರಾಳಗಿಂದ ಎದ್ದ ಕ್ರಿಸ್ತನು ಸಾಮಾನ್ಯವಾದ ಪುನರುತ್ಥಾನದ ಆರಂಭವಾಗಿ, ದೇವರ ಸನ್ನಿಧಿಯಲ್ಲಿ ಶೇರಿದನು.

೨. ಮರಣವು ಪುನಾಗೋ ಪುನಾಗೆಯೆ ಪುನರುತ್ಥಾನವು ಒಬ್ಬನಿಂದ ತಾಡಗಿ, ಸಂಬಂಧದವರಿಗೆಲ್ಲಾ ಪ್ರಾಪ್ತವಾಗ ಬೇಕೆಂಬುವದು ದೇವರ ಕಟ್ಟಳೆ. ನಮ್ಮ ಜಾತಿಯವನಾದ ಒಬ್ಬನಿಂದ ಕೆಟ್ಟು ಪುನಾದ ನಮಗೆ, ನಮ್ಮ ಜಾತಿಯವನಾದ ಮತ್ತಾಬ್ಬನಿಂದ ಗುಣವಾಗ ಬೇಕೆಂದು, ದೇವರ ಪ್ರೀತಿಯ ಚಿತ್ತವಾಯಿತು. ಆದ ಮನೂ ಕ್ರಿಸ್ತನೂ ಈ ಸ್ಥಳದಲ್ಲಿಯೂ, ಮತ್ತು ಪೆಚ್ಚು

ವಿವರವಾಗಿ ೪೭. ೪೮. ೪೯ನೆ ವಚನಗಳಲ್ಲಿಯೂ ರೋಮಾ. ೫, ೧೨ ಮುಂತಾದ ವಚನಗಳಲ್ಲಿಯೂ ನರಜಾತಿಯ ಮೂಲಪಿತೃಗಳಾಗಿ ವರ್ಣಿಸಿರುತ್ತಾರೆ.

೩. ಇದು ರೋಮಾ. ೫, ೧೨ಲ್ಲಿ ಪೂರ್ಣವಿವರವಾಗಿ ಪೇಳಿ ಇದೆ. ಪಾಪವೆಂದರೆ ಆದಮನಿಂದ ಸ್ವಾಭಾವಿಕ ರೀತಿಯಾಗಿ ಪುಟ್ಟಿದ ಮನುಷ್ಯರೆಲ್ಲರೂ ಸ್ವಚಿತ್ತದಿಂದ ದೇವರ ಆಜ್ಞೆಗಳನ್ನು ಮೀರಿ ಪಾಪಿಗಳಾದ್ದರಿಂದ, ಎಲ್ಲಾ ಮನುಷ್ಯರು ಮರಣಕ್ಕೆ ಒಳಗಾದರು; ಯಾಕೆಂದರೆ ಅವರು ಪಾಪದಿಂದ ದೇವರ ಮಹಿಮೆಯನ್ನು ಕಳಕೊಂಡ ಕಾರಣ, ದೇಹಮರಣಕ್ಕೂ ವಶವಾದರು.

೪. ಕ್ರಿಸ್ತನನ್ನು ನಂಬಿ, ಆತನ ಆತ್ಮದಿಂದ ಪುನರ್ಜನ್ಮವನ್ನು ಪಡದು ಕೊಂಡವರೆಲ್ಲರು, ಆತನು ಪುನರುತ್ಥಾನದಿಂದ ಮೊದಲನೆಯವನಾಗಿ ಪ್ರವೇಶಿಸಿದ ಆತ್ಮ ಶರೀರಗಳ ನೂತನ ಮಹಿಮೆಯುಳ್ಳ ನಿರ್ಣಯವಾದ ಜೀವದಲ್ಲಿ ಆತನ ನೀತಿಯ ಮೂಲಕದಿಂದ ಶೇರುತ್ತಾರೆ.

೫. ಎಲ್ಲರು ಆದಮನಿಂದ ಪುಟ್ಟಿದ ಮರಣವೆಂಬ ವಿಷಯವನ್ನು ಸ್ವಕರ್ಮದಿಂದಲೂ ಸ್ವಚಿತ್ತದಿಂದಲೂ ಅನುಭವಿಸಿ ಕೊಂಡ ಪ್ರಕಾರ, ಕ್ರಿಸ್ತನ ಜೀವಾನ್ಯೋನ್ಯದಲ್ಲಿ ವಿಶ್ವಾಸದಿಂದ ಶೇರಿ, ಆತನ ಅಧಿಕಾರಕ್ಕೆ ಒಳಗಾದರೆ, ಆತನ ಮುಖಾಂತರ ಆತ್ಮ ಶರೀರಗಳ ಜೀವವನ್ನು ಪಡದು ಕೊಳ್ಳುತ್ತಾರೆ.

ಇ) ದೇವರು ನೇಮಕ ಮಾಡಿದ ಕ್ರಮದಿಂದಾಗುವ ಸರ್ವ ಸಂಸಿದ್ಧಿಯು.

–೨೩. ಆದರೆ ಒಬ್ಬೊಬ್ಬನು ಸ್ವಂತ (ಕ್ರಮದಲ್ಲಿ೧); ಪ್ರಥಮ ಫಲ ಕ್ರಿಸ್ತನು; ತರುವಾಯ ಅವನ ಬರುವಿಕೆಯಲ್ಲಿ೨) ಕ್ರಿಸ್ತನವರು. –೨೪. ಆ ಮೇಲೆ ಅಂತ್ಯವು೩)—ಅವನು ಎಲ್ಲಾ ದಾರೆತನವನ್ನು, ಎಲ್ಲಾ ಅಧಿಕಾರ ಬಲಗಳನ್ನು ತೆಗೆದು ಹಾಕಿ೪), ತಂದೆಯಾದ ದೇವರಿಗೆ ರಾಜ್ಯವನ್ನು ಒಪ್ಪಿಸಿದಾಗಲೇ೫). –೨೫. ಯಾಕಂದರೆ ಎಲ್ಲಾ ಶತ್ರುಗಳನ್ನು ಅವನ ಪಾದಗಳ ಕೆಳಗೆ ಇಡುವ ಮಟ್ಟಿಗೂ, ಅವನು ರಾಜ್ಯವಾಳ ಬೇಕು೬). –೨೬. ಮರಣವು ಕಡೇ೭) ಶತ್ರುವಾಗಿ ಲಯ ಮಾಡಲ್ಪಡುವದು. –೨೭. ಯಾಕಂದರೆ ಎಲ್ಲವುಗಳನ್ನು ಅವನ ಪಾದಗಳ ಕೆಳಗೆ ಇಟ್ಟಿದಾನೆ೮). ಆದರೆ ಎಲ್ಲವುಗಳು ಕೆಳಗೆ ಇಟ್ಟವೆ೯) ಎಂದು ಹೇಳುವಾಗ, ಎಲ್ಲವುಗಳನ್ನು ಅವನ ಕೆಳಗೆ ಇಟ್ಟವನು ಹೊರ್ತು ಎಂಬುವದು ತಾತ್ಪರ್ಯವಾಗಿರುತ್ತದೆ. –೨೮. ಮತ್ತು ಎಲ್ಲವುಗಳು ಅವನ ಕೆಳಗಾದಾಗ, ದೇವರು ಎಲ್ಲವುಗಳಲ್ಲಿ೧೦) ಎಲ್ಲಾ ಆಗುವ ಹಾಗೆ, ಎಲ್ಲವುಗಳನ್ನು ಕೆಳಗಾಗ ಮಾಡಿದವನಿಗೆ ಮಗನು ತಾನೇ೧೧) ಕೆಳಗಾಗುವನು.

೧. ದೇವರಾಜ್ಯಕಾರ್ಯವೆಲ್ಲಾ ಕ್ರಮದಿಂದ ನಡೆಯುತ್ತದೆ. ಆದರೆ ಒಂದಾಂದು ಕಾರ್ಯವು, ತಡೆಯಲಾಲ್ಲದ ಮನುಷ್ಯರ ಬಯಕೆ ಪ್ರಕಾರ ಘಕ್ಕನೆ ಆಗದೆ, ದೇವರ ನಿರ್ಣಯದ ಪ್ರಕಾರ ತಕ್ಕ ಕಾಲಕ್ಕೆ ತಪ್ಪದೆ ನೆರವೇರುತ್ತದೆ.

೨. ಕ್ರಿಸ್ತನು ತಿರಿಗಿ ಬಂದ ಕೂಡಲೆ, ಅಂದಿನ ಮುಟ್ಟಿಗೂ ನಿದ್ದೆ ಪೂರ್ತಾದ ಭಕ್ತರು ಏಳುವರು. ೧ ಥೆಸ್ಸ. ೪, ೧೬. ೨ ಥೆಸ್ಸ. ೧, ೭; ೨, ೮. ಇದು ಮೊದಲನೇ ಪುನರುತ್ಥಾನ ಪ್ರಕ. ೨೦, ೪.

೩. ಕ್ರಿಸ್ತನು ತಿರಿಗಿ ಬಂದು, ಪ್ರತಿ ಕ್ರಿಸ್ತನ ರಾಜ್ಯ

ವನ್ನು ನಾಶ ಮಾಡಿ, ಸತ್ತವರೆಲ್ಲರನ್ನು ಎಬ್ಬಿಸಿ, ಸರ್ವ ಲೋಕಕ್ಕೆ ನ್ಯಾಯ ತೀರಿಸುವ ದಿವಸವು ಈಗ ನಡೆಯುವ ಯುಗದ ಸಮಾಪ್ತವಾಗಿದೆ.

೪. ಯೇಸು ಕ್ರಿಸ್ತನು ಮನುಷ್ಯನ ಮಗನಾಗಿ ತಂದೆಯಾದ ದೇವರಿಂದ ಪಡೆದಿರುವ ಸರ್ವಾಧಿಕಾರವನ್ನು, ತಾನು ಶ್ರಮ ಮರಣಾದಿಗಳಿಂದ ಊಳಲಾಕದಲ್ಲಿ ಸ್ವತಂತ್ರಿಸಿ ಕಾಂಡ ಮಧ್ಯಸ್ಥ ರಾಜ್ಯದ ಉದ್ದಿಶ್ಯವಾದ ಪಾಪ ಮರಣಗಳ ಜಯವನ್ನು ಪೂರೈಸಿದ ಮೇಲೆ, ಎಲ್ಲಾನೂ ತಂದೆಗೆ ಒಪ್ಪಿಸುವನು. ದೇವರ ಮಗನು ಮನುಷ್ಯನ ಮಗನಾಗಿ ಆಳಿಕಾಂಡ ರಾಜ್ಯಕ್ಕೆ ಆರಂಭವೂ ಅಂತ್ಯವೂ ಇದ್ದರೂ, ಆತನು ದೇವರಾಗಿ ತಂದೆ ಸಹಿತವಾಗಿ ಆಳುವ ರಾಜ್ಯವು ನಿರಂತರವಾದದ್ದು.

೫. ಅಂದರೆ, ಮಹಾ ಶತ್ರುವಾದ ಸೈತಾನನಿಗೆ ವಶವಾದ ಎಲ್ಲಾ ಬಲವನ್ನು ಸಂಹಾರ ಮಾಡಿದಾಗ, ಪ್ರಕ. ೨೦, ೧೦. ಮತ್ತಾ. ೨೫, ೪೧.

೬. ೧೧ನೆ ಕೀರ್ತನೆಯಲ್ಲಿ ಬರದದ್ದೆಲ್ಲಾ ಸಂಪೂರ್ಣವಾಗ ಬೇಕು. ದೇವರ ವೈರಿಯಾದ ಸೈತಾನನು ಪಾಪದ ಮುಖಾಂತರ ಊಳಲಾಕದಲ್ಲಿ ಧಾರೆತನವನ್ನು ಸ್ಥಾಪಿಸಿದ್ದರಿಂದ, ದೇವರ ಮಗನು ಊಳಲಾಕದಲ್ಲಿ ಹುಟ್ಟಿ, ದೇವರಾಜ್ಯವನ್ನು ಸ್ಥಾಪಿಸಬೇಕಾಯಿತು. ಈ ರಾಜ್ಯದ ಯುಗವು ಶತ್ರುಗಳೆಲ್ಲಾ ಅಪಜಯವಾಗುವ ಪರ್ಯಂತ ನಡೆಯುತ್ತದೆ.

೭. ಯೇಸು ಕ್ರಿಸ್ತನು ನಿಜ ರಕ್ತಧಾರೆಯಿಂದ ಪಾಪವನ್ನು ಪರಿಹಾರಾ ಮಾಡಿ, ನಿಜ ಮರಣದಿಂದ ಮರಣದ ಒಡೆಯನಾದ ಸೈತಾನನ್ನು ಜಯಿಸಿ ಇಬ್ರಿ. ೨, ೧೪., ನಿಜ ಆತ್ಮದಿಂದ ಭಕ್ತರಲ್ಲಿ ಪಾಪವನ್ನು ಜಯಿಸುತ್ತಾ ಬರುತ್ತಾನೆ. ಆದಾಗ್ಯೂ ಕ್ರಿಸ್ತನ ಪುನರುತ್ಥಾನದ ಇತ್ತಲಾಗಿ ಸಹ ಲೋಕದಲ್ಲಿ ಹುಟ್ಟಿದವರೆಲ್ಲರ ಮೇಲೆ ಮರಣದ ಧಾರೆತನವು ನಡೆಯುತ್ತದೆ. ಸರ್ವ ಪುನರುತ್ಥಾನದಿಂದಲೇ ಅದು ಕಳದುಹಾಕಾಗುವದು. ಪುನರುತ್ಥಾನದ ದಿವಸದಲ್ಲಿ ಪಾಪಪತನದಿಂದ ಹುಟ್ಟಿದ ಎಲ್ಲಾ ನಷ್ಟದ ಒಂದು ಛಾಯೆಯಾದರೂ ಕಾಣದು.

೮. ಈ ಮಾತು ಲನೆ ಕೀರ್ತನೆಯಲ್ಲಿ ಬರದದೆ. ಈ ಕೀರ್ತನೆಯಲ್ಲಿ ದೇವರ ಸಾರೂಪ್ಯನಾಗಿ ಹುಟ್ಟಿ, ಜೀವರಾಶಿಗೆಲ್ಲಾ ಒಡೆಯನಾಗಿರುವ ಮನುಷ್ಯನ ಮಹಿಮೆ ವರ್ಣಿಸಿ ಅದೆ. ಆದ್ದರಿಂದ ಕೀರ್ತನೆಯ ಅಖಿಪ್ರಾಯವು ಮೊದಲನೆ ಆದಮನಿಗೆ ಮಾತ್ರವಲ್ಲಾ, ಎರಡನೆ ಆದಮನಾದ ಕ್ರಿಸ್ತನಿಗೆ ವಿಶೇಷವಾಗಿ ಒಪ್ಪುತ್ತದೆ.

೯. ಅಂದರೆ ಮನುಷ್ಯನ ಮಗನಿಗೆ.

೧೦. ಯೇಸು ಕ್ರಿಸ್ತನು ಮಧ್ಯಸ್ಥಾದ್ಯೋಗದ ವಿಮೋಚನಾಕಾರ್ಯಗಳನ್ನೆಲ್ಲಾ ಮುಗಿಸಿ, ಮಧ್ಯಸ್ಥ ರಾಜ್ಯದ ಜಯಸಿದ್ಧಿ ಪಡದು ಕಾಂಡ ಮೇಲೆ, ಆತನ ಆತ್ಮವನ್ನು ಹೊಂದಿ, ದಿವ್ಯ ಹಾಮದ ಮಹಿಮೆಯನ್ನು ಪುನರುತ್ಥಾನದಲ್ಲಿ ಧರಿಸಿದ ಆತನ ಸಹಾಯಾದರಿಗೆ ೨ ಪೇತ್ರ. ೧, ೪. ೧ ಯೋಹಾ. ೩, ೧. ಮಧ್ಯಸ್ಥನ ಸಹಾಯವು ಅವಶ್ಯವಾಗಿರುವದಿಲ್ಲಾ. ಆಗ ಯೇಸುವಿನ ಮಧ್ಯಸ್ಥ ರಾಜ್ಯವು ಮುಗಿಯುವದು.

೧೧. ಈ ಮಾತಿನ ಅಖಿಪ್ರಾಯವನ್ನು ಅನೇಕರು ಚನ್ನಾಗಿ ಗ್ರಹಿಸದೆ, ಪೌಲನು ಕಟ್ಟ ಕಡೆಯಲ್ಲಿ ಎಲ್ಲರು, ದೇವರ ಆಜ್ಞೆ ನಿರ್ಣಯಕ್ಕೆ ಒಳಗಾದವರು ಸಹ, ದೇವರ ಅನ್ಯಾಯನೃದಲ್ಲಿ ಶೇರಿ ಮಂಗಳರಾಗುವರೆಂದು, ಸೂಚಿಸುತ್ತಾನೆಂಬದಾಗಿ ನೆನಸುತ್ತಾರೆ. ಇದು ದಾಡ್ಡ ತಪ್ಪು. ಪೌಲನು ಯೇಸು ಕ್ರಿಸ್ತನ ಸಖೆಯ ಮುಂದಣ ಗತಿಯನ್ನು ವಿವರಿಸುತ್ತಾನಲ್ಲದೆ, ದುಷ್ಟರ ಗತಿಯ ವಿಷಯವಾಗಿ ಬಾಧನೆ ಹೇಳುವದಿಲ್ಲಾ. ದುಷ್ಟರಿಗೆ ಕಡೆಯಲ್ಲಿ ಯೇನು ಆಗುತ್ತದೆಂದು ಪೌಲನು ಬೇರೆ ಸ್ಥಳದಲ್ಲಿ ೨ ಥೆಸ್ಸ. ೧, ೯. ಸ್ಪಷ್ಟವಾಗಿ ತಿಳಿಸುತ್ತಾನೆ.

ಉ) ಈ ಸಂಸಿದ್ಧಿ ಇಲ್ಲದಿದ್ದರೆ, ಕ್ರೈಸ್ತರಾದ ನಾವು ದಿಕ್ಕಿಲ್ಲದವರಾದೇವು.

೨೯. ಇಲ್ಲದಿದ್ದರೆ, ಸತ್ತವರು ಎಂದಿಗೂ ಏಳದಿದ್ದರೆ, ಸತ್ತವರ ನಿಮಿತ್ತ೧) ಸ್ನಾನ ಹೊಂದುವವರು ಏನು ಮಾಡುವರು? ೩೦. ಇನ್ನು ಸತ್ತವರ ನಿಮಿತ್ತ ಸ್ನಾನ ಹೊಂ

ದುವದು ಯಾಕೆ ೭)? ಇದಲ್ಲದೆ, ನಾವು ಘಳಿಗೆ ಘಳಿಗೆಗೂ ಗಂಡಾಂತರದಲ್ಲಿರುವದು ಯಾಕೆ? ೫೧. ನಮ್ಮಕರ್ತನಾದ ಕ್ರಿಸ್ತಯೇಸುವಿನಲ್ಲಿ ನನಗೆ ಉಂಟಾಗಿರುವ ನಿಮ್ಮಹೆಚ್ಚಳದ ಸಾಕ್ಷಿಯಾಗಿ, ದಿನಾಲು ಸಾಯುತ್ತೇನೆ ೮). ೫೨. ನಾನು ಮನಷ್ಯನ (ಪ್ರಕಾರ ೯) ಎಫೆಸದಲ್ಲಿ ಮೃಗಯುದ್ಧ ೧೦) ಮಾಡಿದ್ದಾಗ್ಗೂ, ಸತ್ತವರು ಏಳದ ಪಕ್ಷದಲ್ಲಿ, ನನಗೆ (ಪ್ರಯೋಜನವೇನು? ಉಣ್ಣುವಾ, ಕುಡಿಯುವಾ ೧೧), ನಾಳೆ ಸಾಯುತ್ತೇವೆ. ೫೩. ಶಪ್ಪಿ ಹೋಗ ಬೇಡಿರಿ ೧೨); ಕೆಟ್ಟ ಸಂಗಾಷಣೆಗಳು ಒಳ್ಳೆ ಮರ್ಯಾದೆಗಳನ್ನು ಕೆಡಿಸುತ್ತವೆ. ೫೪. ತಕ್ಕ ಹಾಗೆ ಎಚ್ಚರಿಕೆಯಾಗಿರಿ, ಪಾಪ ಮಾಡ ಬೇಡಿರಿ; ಯಾಕಂದರೆ ದೇವರನ್ನು ಕುರಿತು ಕೆಲವರಿಗೆ ಅಜ್ಞಾನ ಉಂಟು ೧೩). ನಿಮ್ಮನ್ನು ನಾಚಿಕೆ ಪಡಿಸ ಇದನ್ನು ಹೇಳುತ್ತೇನೆ.

೧. ಅನೇಕರು ಸಾಯುವದಕ್ಕಿಂತ ಮುಂಚಿತವಾಗಿಯೇ ವಿಶ್ವಾಸಿಸಿ, ಸ್ನಾನ ತೆಗದು ಕಾಳ್ಳುವದನ್ನೂ, ಅನೇಕರು ಸ್ನಾನ ತೆಗದು ಕಾಂಡರೆ ಪ್ರಾಣ ಪೋಸೆ ಆಗುವದೆಂದು ತಿಳದಾಗ್ಗೂ, ಪೋಂಜರಿಯದೆ ಇರುವದನ್ನೂ, ಯೇಸು ಕ್ರಿಸ್ತನ ಪೆಸರಿನಲ್ಲಿ ಸ್ನಾನ ತೆಗದು ಕಾಳ್ಳುವವನು ತನಗಾಗಿ ಸತ್ತ ರಕ್ಷಕನ ಮರಣದ ಐಕ್ಯದಲ್ಲಿ ಶೇರ ಬೇಕಾದದ್ದನ್ನೂ ನೆನಸಿ ಕಾಂಡು, ಸತ್ತವರ ನಿಮಿತ್ತ ಸ್ನಾನ ತೆಗದು ಕಾಳ್ಳಾಣವೆಂಬ ಮಾತನ್ನು ಪೌಲನು ಪ್ರಯೋಗಿಸುತ್ತಾನೆ.

೨. ಇಕ್ಕರಲ್ಲಿ ಅನೇಕರಿಗೆ ಆದ ಪ್ರಾಣಪೋಸೆತ ಮಗೂ ಬಂದೀತೆಂದು ತಿಳದಾಗ್ಗೂ, ಯಾಕೆ ಸ್ನಾನಾ ತೆಗದು ಕಾಳ್ಳುತ್ತಾರೆ? ಪುನರುತ್ಥಾನವನ್ನು ನಿಸ್ಸಂಶಯವಾಗಿ ನಂಬುವದರಿಂದಲೇ.

೩. ಜೋಗ ಸ್ವಾರ್ಥಾದಿಗಳನ್ನು ಸಾಯುವವನಂತೆ ನೀಗುತ್ತಾ, ಅನುದಿನವು ಪ್ರಾಣ ಸಂಕಟದಲ್ಲಿ ಇದ್ದೇನೆ.

೪. ಲೋಕದವರಲ್ಲಿ ವಾಡಿಕೆಯಾದ ಮನಸ್ಸುಳ್ಳವನಾಗಿ.

೫. ಈ ಮಾತು ಎಫೆಸದಲ್ಲಿ ಪುಟ್ಟಿದ ಕಲಪವನ್ನು ಅಪೌ. ಕ್ರಿ. ೧೯, ೨೮. ಸೂಚಿಸುವದಿಲ್ಲಾ. ಯಾಕೆಂದರೆ ಪೌಲನು ಪಟ್ಟಣವನ್ನು ಸಂಗಡಲೆ ಬಿಟ್ಟು ಪೋಗಿರಟನು. ಪೌಲನು ಅಲ್ಲಿ ಉಳಿದು ಕಾಂಡ ಕಾಲದಲ್ಲಿ ಪುಲವು ಎದುರಾಳಿಗಳು ಇದ್ದರೆಂದು ಸಂ. ೧೬, ೧೯ ರಲ್ಲಿ ಬರದದೆ. ಅವರು ಮೃಗಚರ್ಯರಂತೆ ಇದ್ದರೆಂದು, ತೀರುತ್ತದೆ ಕೀರ್ತ. ೩೨, ೯; ೨೨, ೧೨. ೧೩. ೧೬. ೨೦. ೨೧. ರೋಮಾಯರು ಪ್ರಾಣ ಶಿಕ್ಷೆಗೆ ಒಳಗಾದವರನ್ನು ಆಗ್ಗಾಗ್ಗೆ ಪುಲಿ ಮುಂತಾದ ಮೃಗಗಳ ಬೋನಿನಲ್ಲಿ ಪೋಗಿಸಿ, ಮೃಗಗಳ ಸಂಗಡ ಪೋರಾಡಿಸಿದ್ದನ್ನು ಅಪೋಸ್ತಲನು ಇಲ್ಲಿ ಸೂಚಿಸುತ್ತಾನೆ.

೬. ಈ ಮಾತು ಪ್ರವಾದಿಯಾದ ಯೆಶಾಯನ ೨೨, ೧೩ನೆಯಿಂದ ಎತ್ತಿ ಅದೆ. ಪೂರ್ಣ ಪಾಪ ಸಂಪೋಕಾರ, ಮಹಿಮೆಯುಳ್ಳ ಶರೀರ ಪುನರುತ್ಥಾನಗಳ ಆಶೆಯಿಲ್ಲದವನು ಇಹ ಜೋಗಾಸಕ್ತನಾಗಿದ್ದು, ಪೋನ್ನು ಪೆಣ್ಣು ಮಣ್ಣು ಮುಂತಾದವುಗಳನ್ನು ತಳ್ಳಲಾರನು.

೭. ಜ್ಞಾನಿಗಳನ್ನಿಸಿ ಕಾಳ್ಳುವ ಗ್ರೀಕರು ಪುನರುತ್ಥಾನದ ಮಾತಿಗೆ ಪೋಸ್ಯ ಮಾಡಿದರೆಂದು, ಅಪೌ. ಕ್ರಿ. ೧೭, ೩೨ರಲ್ಲಿ ಬರದದೆ. ಅದೇ ದುರ್ಬುದ್ಧಿಯಿಂದ ಸಭೆಯಲ್ಲಿ ಶೇರಿದ ಕೆಲವರು ಶರೀರ ಪುನರುತ್ಥಾನವನ್ನು ಅಲ್ಲಗಳದರೆಂದು, ತೀರುತ್ತದೆ. ಈ ವಚನದಲ್ಲಿ ಒಂದು ಪದ ಶೇರಿ ಅದೆ. ಅದು ಗ್ರೀಕ ಕವಿಯಾದ ಮೆನಂದ್ರನದು. ಅಪೋಸ್ತಲನಾದ ಪೌಲನು ಪುಡುಗನಾಗಿ ತರ್ಸ ಪಟ್ಟಣದ ಪ್ರಸಿದ್ಧವಾದ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಇರುವ ಕಾಲದಲ್ಲಿ ಗ್ರೀಕರ ಮತ್ತು ರೋಮಾಯರ ಗ್ರಂಥಗಳ

ನ್ನು ಅತ್ಯಾಸಕ್ತಿಯಿಂದ ಪಾಠ ಮಾಡಿದನೆಂದು, ಕಾಣುತ್ತದೆ. ಇದರ ಚಿಪ್ಪುಗಳು ಕೆಲವು ಕಡೆಯಲ್ಲಿ ದಾರ ಕುತ್ತವೆ. ಪುನಾಗೆಂದರೆ ಈ ವಚನದಲ್ಲಿ ಮೆನಂದ್ರನ ಪದ ಬಂದು ಇರುತ್ತದೆ. ಪೌಲನು ಅಥೇನೆ ಪಟ್ಟಣದಲ್ಲಿ ಮಾಡಿದ ಪ್ರಸಂಗದಲ್ಲಿ ಗ್ರೀಕ ಕವಿಯಾದ ಅರತನ ಒಂದು ಪದವನ್ನು ಅಪಾ. ಕ್ರಿ. ೧೭, ೨೮ಲ್ಲಿಯೂ ರಾಮಿಯಾಯ ಕವಿಯಾದ ಲುಕ್ರೇತಿಯನ ಪದವನ್ನು ೨೫ಲ್ಲಿಯೂ ಶೇರಿಸಿದನು. ೧ ಕೊರಿ. ೧೪, ೧೫ಲ್ಲಿ ರಾಮಿಯಾಯ ಕವಿಯಾದ ಒವೀದ್ಯನ ಒಂದು ಪದದ ಭಾಷಾಂತರ ತಾರುತ್ತದೆ. ಶೀತನ ಪತ್ರಿಕೆಯ ಮೊದಲನೆ ಸಂಧಿಯ ೧೨ಲ್ಲಿ ಎಪಿಮೆನಿದೆಯನ ಒಂದು ಪದವು ಬರದದೆ. ಈ ಕವಿಗಳ ಪದಗಳನ್ನು ಅಪಾಸ್ತಲನು ತನ್ನ ವಿದ್ಯಾಪ್ರೌಢಿಮೆಯನ್ನು ತೋರಿಸ ಬೇಕೆಂದು ಪ್ರಯೋಗಿಸಿದನೆಂತ ನೆನಸ ಕೆಲಸವಿಲ್ಲ. ಪ್ರಸ್ತಾವಾನುಸಾರವಾಗಿ ಬಂದದ್ದನ್ನು ಬಳಸುತ್ತಾನೆ.

೮. ಒಂದೇ ಅಬದ್ಧ ಬೋಧನೆಗಾಗಿ ಪೌಲನು ಸಭೆಯವರನ್ನು ಬಹಳ ಚಾರದಿಂದ ಗದರಿಸಿ, ಸುವಾರ್ತೆಯ ಒಂದು ಮಾತಾದರೂ ಕೆಡಿಸುವವರು ದೇವರ ಜ್ಞಾನವಿಲ್ಲದವರೆಂದು, ಖಂಡಿಸುತ್ತಾನೆ.

II. ಪುನರುತ್ಥಾನವು ಸಂಭವ್ಯವಾದದ್ದು.

೧. ಶವವೆಂಬ ಬೀಜದಿಂದ ಪುನರುತ್ಥಾನ ಶರೀರವು ದೇವರ ಸೃಷ್ಟಿಶಕ್ತಿಯ ಮೂಲಕವಾಗಿ ಪುಟ್ಟುವದು.

೫೫. ಆದರೆ ಸತ್ತವರು ಹ್ಯಾಗೆ ಎಬ್ಬಿಸಲ್ಪಡುತ್ತಾರೆ? ಯಾವ ಶರೀರದಿಂದ ಬರುತ್ತಾರೆ? ಎಂದು ಒಬ್ಬನು ಹೇಳುವನು. ೫೬. ಮೂಢನೇ [೧]), ನೀನು ಬಿತ್ತುವಂಥಾದ್ದು, ಸತ್ತರೆ ಹೊತ್ತರ್ಜು, ಬದುಕಿಸಲ್ಪಡದು. ೫೭. ಮತ್ತು ನೀನು ಬಿತ್ತುವಂಥಾದ್ದು, ಉಂಟಾಗುವ ಶರೀರವನ್ನಲ್ಲ [೨]), ಬರೇ ಕಾಳನ್ನೇ, ಒಂದು ವೇಳೆ ಗೋಧಿಯಾಗಲಿ, ಮಿಕ್ಕಾದವುಗಳಲ್ಲಿ ಒಂದು ಆಗಲಿ, ಬಿತ್ತುತ್ತೀ. ೫೮. ಆದರೆ ದೇವರು ತನ್ನಮನಸ್ಸಿಗೆ ಬಂದ ಹಾಗೆ ಅದಕ್ಕೆ ಶರೀರವನ್ನು—ಒಂದೊಂದು ಬೀಜಕ್ಕೆ ಸ್ವಂತ ಶರೀರವನ್ನು—ಕೊಡುತ್ತಾನೆ. ೫೯. ಎಲ್ಲಾ ಮಾಂಸವು ಒಂದೇ ಮಾಂಸವಲ್ಲ [೩]). ಆದರೆ ಮನುಷ್ಯನ ಮಾಂಸವು ಬೇರೆ, ಪಶುಗಳ ಮಾಂಸವು ಬೇರೆ, ಮೀನುಗಳದು ಬೇರೆ, ಪಕ್ಷಿಗಳದು ಬೇರೆ.

೧. ಶರೀರ ಪುನರುತ್ಥಾನವು ಅಸಂಭಾವ್ಯವೆಂಬುವದನ್ನು ಅಪಾಸ್ತಲನು ೩೬ನೆಯಲ್ಲಿ ಕ್ಷಪ್ತವಾಗಿ ಆಕ್ಷೇಪಿಸುತ್ತಾನೆ. ಪುನ್ಯಾಗಂದರೆ ಮನುಷ್ಯರು ಬಿತ್ತುವ ಬೀಜವು ಕಾಳತ ಮೇಲೆ ಅದರಿಂದ ಪುನಾಸ ಮೊಳಿಕೆ ಉಂಟಾಗುವದನ್ನು ಬುದ್ಧಿಯಿಂದ ಪರಾಮರಿಸುವವನು, ಮಣ್ಣಾದ ಮನುಷ್ಯನ ಶರೀರದಿಂದ ಪುನಾಸ ಶರೀರವು ಪುಟ್ಟುವದು ಸಪುಜವಾದದ್ದೆಂದು ಗ್ರಹಿಸಿ ಕಾಳ್ಳ ತಕ್ಕದ್ದು. ಮರಣವೇ ಜೀವೋತ್ಪತ್ತಿ ಎಂಬುವದು ಸಾಮಾನ್ಯವಾದ ಸೃಷ್ಟಿಯ ನಿಯಮವಾಗಿದೆ.

೨. ಇಲ್ಲಿ ಶರೀರ ಪುನರುತ್ಥಾನವು ಸಂಭಾವ್ಯವಾದದ್ದೆಂಬುವ ವಿವರವು ತಾಡಗುತ್ತದೆ. ಇಪು ಶರೀರಕ್ಕೂ ಪರ ಶರೀರಕ್ಕೂ ಇರುವ ಸಂಬಂಧವು ಸಪು ಚನ್ನಾಗಿ ಕಾಣುತ್ತದೆ. ಏನಂದರೆ ಪುನಾಲದಲ್ಲಿ ಬಿತ್ತಿದ

ಬೀಜದ ಸ್ಥೂಲ ಶರೀರವು ಕಾಳತು ನಾಶವಾಗುವಲ್ಲಿ ಮುಂಚೆ ಅದರಲ್ಲಿ ದೃಷ್ಟಿಗೆ ಅಗಾೋಚರವಾಗಿ ಇದ್ದ ಸೂಕ್ಷ್ಮ ಶರೀರವು ಮೊಳಿಕೆಯಾಗಿ ಬರುತ್ತದೆ. ಇದು ಬೀಜದಿಂದ ಪುಟ್ಟಿದರೂ, ರೂಪ ಭೇದವು ಅತಿಶಯವಾಗಿದೆ; ಆದ್ದರಿಂದ ವ. ೩೮. ಅದು ದೇವರ ಸೃಷ್ಟಿ ಶಕ್ತಿಯಿಂದುಂಟಾಗುವ ನವನಿರ್ಮಾಣವೆಂದು, ಪೌಳಿ ಅದೆ. ಅದೇ ಪ್ರಕಾರವಾಗಿ ನಮ್ಮ ಮರ್ತ್ಯ ಶರೀರದಲ್ಲಿ ಪುನರುತ್ಥಾನ ಶರೀರಕ್ಕೆ ಮೂಲವಾದ ಒಂದು ಭೂತ ವಸ್ತು ಅಗಾೋಚರವಾಗಿದ್ದು, ಪುನರುತ್ಥಾನದಲ್ಲಿ ದೇವರ ಸೃಷ್ಟಿಶಕ್ತಿಯ ಚೈತನ್ಯದಿಂದ ಇಪು ಶರೀರಕ್ಕೆ ಅಪಾರ ಭೇದವಾಗಿ ನೂತನ ನಿರ್ಮಾಣವಾಗುತ್ತದೆ.

೩. ಜೀವರಾಶಿಗಳಲ್ಲಿ ಅನಂತ ದೇಪಭೇದವು ತಾೋರುವದಲ್ಲದೆ, ದೇಪಾಂತರವೂ ಪಕ್ಕಿ ಮೀನು ಪುಳ ಮುಂತಾದವುಗಳಲ್ಲಿ ಸಾಧಾರಣವಾಗಿದೆ. ಲೆಖ್ಖವಿಲ್ಲದ ಆ ದೇಪಗಳನ್ನು ಉಂಟು ಮಾಡುತ್ತಾ ಬರುವ ಕರ್ತನು ಮನುಷ್ಯ ಜಾತಿಗೆ ಪುನರುತ್ಥಾನವೆಂಬ ದೇಪಾಂತರವನ್ನು ನೇಮಕ ಮಾಡಿದ್ದಕ್ಕೆ ಬೆರಗ ಕೆಲಸವಿಲ್ಲ.

೪೦. ಇದಲ್ಲದೆ, ಆಕಾಶದ ಶರೀರಗಳು ಉಂಟು ೧), ಭೂಮಿಯ ಶರೀರಗಳು ಉಂಟು. ಆದರೆ ಆಕಾಶದವುಗಳ ಮಹಿಮೆ ಬೇರೆ, ಭೂಮಿಯವುಗಳದು ಬೇರೆ. ೪೧. ಸೂರ್ಯನ ಮಹಿಮೆ ಬೇರೆ ೨), ಚಂದ್ರನ ಮಹಿಮೆ ಬೇರೆ, ನಕ್ಷತ್ರಗಳ ಮಹಿಮೆ ಬೇರೆ; ಯಾಕಂದರೆ, ನಕ್ಷತ್ರಕ್ಕೆ ನಕ್ಷತ್ರ ಮಹಿಮೆಯಲ್ಲಿ ಹೆಚ್ಚು ಕಡಿಮೆ ಆಗಿದೆ. ಹಾಗೆಯೇ ಸತ್ತವರ ಪುನರುತ್ಥಾನವು ೩). ೪೨. ಲಯವಾಗಿ ಬಿತ್ತಲ್ಪಡುವದು, ನಿರ್ಲಯವಾಗಿ ಎಬ್ಬಿಸಲ್ಪಡುವದು; ೪೩. ಅವಮಾನದಲ್ಲಿ ಬಿತ್ತಲ್ಪಡುವದು, ಮಹಿಮೆಯಲ್ಲಿ ಎಬ್ಬಿಸಲ್ಪಡುವದು, ಅಶಕ್ತಿಯಲ್ಲಿ ಬಿತ್ತಲ್ಪಡುವದು, ಬಲದಲ್ಲಿ ಎಬ್ಬಿಸಲ್ಪಡುವದು; ೪೪. ಪ್ರಾಣಿ ಜೀವದ ಶರೀರವು ೪) ಬಿತ್ತಲ್ಪಡುವದು, ಆತ್ಮಜೀವದ ಶರೀರವು ೫) ಎಬ್ಬಿಸಲ್ಪಡುವದು.

೧. ಭೂಮಿಯಲ್ಲಿರುವ ನಕ್ಷತ್ರಾದಿಗಳ ರೂಪಭೇದವು ಎರಡನೆ ದೃಷ್ಟಾಂತವಾಗಿ ಇಲ್ಲಿ ಬರುತ್ತದೆ.

೨. ಸೂರ್ಯನಿಗೂ, ಚಂದ್ರಮುಂತಾದ್ದಕ್ಕೂ, ಸ್ಥಿರ ನಕ್ಷತ್ರವೆಂಬುವುಗಳಿಗೂ ಬಹಳ ಭೇದವದೆ. ಸೂರ್ಯನು ಸ್ವಜ್ಯೋತಿಯಿಂದ ಪಾಳಿಯುತ್ತಾನೆ; ಚಂದ್ರನು ಸೂರ್ಯನ ಬೆಳಕಿನಿಂದ ಮೆರೆಯುತ್ತಾ, ಸೂರ್ಯನನ್ನು ವರ್ಷಕ್ಕೆ ಒಮ್ಮೆ ಸುತ್ತುವ ಪೃಥ್ವಿಯನ್ನು ತಿಂಗಳಿಗಾ ಮ್ಮೆ ಸುತ್ತಿ, ಆಕಾಶಾಯನ ಮಾಡುತ್ತಾನೆ. ಭೂಮಿಗೆ ಅತ್ಯಂತ ದೂರವಾಗಿರುವ ಸ್ಥಿರ ನಕ್ಷತ್ರಗಳಿಗೆಲ್ಲಾ ಸ್ವಂತ ಪ್ರಕಾಶವದೆ.

೩. ಮೇಲಿನ ದೃಷ್ಟಾಂತಗಳಿಂದ ಪುಟ್ಟುವ ಅನುಮಾನವೇನಂದರೆ: ನಮ್ಮ ಇಪು ಶರೀರವು ಜೀವವಿರುವ ವೇಳೆಯಲ್ಲಿಯೆ ಲಯವೂ ನೀಚವೂ ಲಜ್ಜೆಯೂ ಆದದ್ದಾಗಿದ್ದು, ಫಿಲಿ. ೩, ೨೧. ರಾಮಿಾ. ೭, ೨೪. ರಾೋಗ ಮುಪ್ಪು ಮುಂತಾದ ಕಷ್ಟಗಳಿಂದ ಕೆಡುತ್ತಾ, ಅಸುವಳಿದ ಮೇಲೆ ಕಾಳತು ಪಾೋಗಿ, ಮಲವೂ ಮಣ್ಣೂ ಆಗುತ್ತದೆ. ಪುನರುತ್ಥಾನ ಶರೀರಕ್ಕೆ ನಿರ್ಲಯವೂ ಮಹಿಮಾರೂಪವೂ ಅಮರ ಶಕ್ತಿಯೂ ಉಳ್ಳ ಜೀವ ಉಂಟು.

೪. ಇಪು ಶರೀರಕ್ಕೂ ಪರ ಶರೀರಕ್ಕೂ ಇರುವ ವ್ಯತ್ಯಾಸವು ಪ್ರಾಣಜೀವ ಆತ್ಮಜೀವವೆಂಬದಾಗಿ ಸೂಚಿಸಿ ಇರುತ್ತದೆ. ಪ್ರಾಣಜೀವವೆಂಬ ಶರೀರವೇನೆಂದರೆ: ಭೂಮಿಯಲ್ಲಿರುವ ಜೀವರಾಶಿಗಳಿಗೆಲ್ಲಾ ಸಾಮಾನ್ಯ ಜೀವದಮರ್ತ್ಯ ಶರೀರವು. ಆತ್ಮಜೀವವೆಂಬ ಶರೀರವೇನೆಂದರೆ: ಯೇಸು ಕ್ರಿಸ್ತನ ಮಹಿಮಾ ಶರೀರಕ್ಕೆ ಸಾರೂಪ್ಯವಾದ ಬೆಳಕೂ ಆತ್ಮಕೆಯೂ ಉಳ್ಳ ಆತ್ಮಮಯ ಶರೀರವು.

೫. ದೇವಾತ್ಮವನ್ನು ಪಡೆದಿರುವ ಮನುಷ್ಯನಿಗೆ ಪುನರ್ಜನ್ಮಕ್ಕೆ ಅನುಕೂಲವಾದ ಆತ್ಮಿಕ ಶರೀರವು ಪುನರುತ್ಥಾನದಲ್ಲಿ ಉಂಟಾಗುವದು ಎಂಬುವದು ಬಲ್ಲವರಿಗೆ ಸಹಜವಾಗಿ ತೋರುತ್ತದೆ.

೨) ನೂತನ ಶರೀರೋತ್ಪತ್ತಿಗೆ ಕ್ರಿಸ್ತನು ಮೂಲವಾಗಿದ್ದಾನೆ.
ವ. ೪೫—೫೦.

೪೫. ಪ್ರಾಣಿಕಾವದ ಶರೀರ ಉಂಟು, ಆತ್ಮಿಕಾವದ ಶರೀರ ಉಂಟು. ಮತ್ತು ಹೀಗೆ ಬರದದೆ—ಮೊದಲನೇ ಮನುಷ್ಯನಾದ ಆದಮನು ೧) ಬದುಕುವ ಪ್ರಾಣಿವಾದನು; ಕಡೇ ಆದಮನು ೨) ಬದುಕಿಸುವ ಆತ್ಮವಾದನು. ೪೬. ಆದರೆ ಆತ್ಮಿಕಾವದ್ದು ಮೊದಲನೇದಲ್ಲ ೩), ಪ್ರಾಣಿಕಾವದ್ದೇ; ತರುವಾಯ ಆತ್ಮಿಕಾವದ್ದು. ೪೭. ಮೊದಲನೇ ಮನುಷ್ಯನು ಭೂಮಿಯಿಂದ ಉಂಟಾದ ಮಣ್ಣಿನವನು; ಎರಡನೇ ಮನುಷ್ಯನು ಪರಲೋಕದಿಂದ ಬಂದ ಕರ್ತನು ೪). ೪೮. ಮಣ್ಣಿನವನು ಎಂಥವನೋ, ಅಂಥವರೇ ಮಣ್ಣಿನವರು; ಪರಲೋಕದವನು ಎಂಥವನೋ, ಅಂಥವರೇ ಪರಲೋಕದವರು. ೪೯. ಮತ್ತು ಮಣ್ಣಿನವನ ಹೋಲಿಕೆಯನ್ನು ವಹಿಸಿದ ಹಾಗೆ, ಪರಲೋಕದವನ ಹೋಲಿಕೆಯನ್ನು ಸಹ ವಹಿಸುವೆವು. ೫೦. ಆದರೆ, ಸಹೋದರರೇ, ನಾನು ಹೇಳುವದೇನಂದರೆ ೫)—ರಕ್ತ ಮಾಂಸಗಳು ದೇವರರಾಜ್ಯವನ್ನು ಸ್ವಶಂಕ್ರಿಸಿ ಕೊಳ್ಳಲಾರವು; ಮತ್ತು ಲಯವು ನಿರ್ಲಯವನ್ನು ಸ್ವಶಂಕ್ರಿಸಿ ಕೊಳ್ಳದು.

೧. ಈ ಶರೀರಭಾವಭೇದದ ಕಾರಣವು ಆದಮನಲ್ಲಿಯೂ ಕ್ರಿಸ್ತನಲ್ಲಿಯೂ ಉಂಟು. ಆದಮನು ಜೀವಿಸುವ ಪ್ರಾಣವಾದನೆಂದು ೧ ಮೋಶೆ. ೨, ೭ ಲ್ಲಿ ಹೇಳಿ ಅದೆ. ಇದರ ಅರ್ಥವೇನೆಂದರೆ: ಅವನು ಮಾಂಸಶರೀರಾನ್ವಿತ ಪ್ರಾಣಿಯಾದನು. ಪಾಪಪತನಕ್ಕಿಂತ ಮುಂಚಿತವಾಗಿ ಆದಮನ ಶರೀರವೂ ಆತ್ಮವೂ ಪೂರ್ಣ ಐಕ್ಯವಾಗಲಿಲ್ಲಾ; ಅವನು ದೇವರಿಂದ ಪಡದುಕೊಂಡ ಆತ್ಮದ ಚೈತನ್ಯವು ಅವನ ದೇಹವನ್ನು ಪೂರ್ಣ ವಶಾ ಮಾಡಿ ಕೊಂಡು ಮಹಿಮೆ ಪಡಿಸ ಬೇಕಾಗಿತ್ತು. ಈ ರೀತಿಯಿಂದ ಮನುಷ್ಯನು ಕ್ರಮ ಕ್ರಮವಾಗಿ ಜೀವಾಂತರ ಪಡದು ಕೊಂಡು, ದಿವ್ಯ ಮಹಿಮೆಯ ಸ್ಥಿತಿಯಲ್ಲಿ ಶೇರ ಬಹುದಾಗಿತ್ತು. ಆದರೆ ಪಾಪಪತನದಿಂದ ದೇಹಕ್ಕೂ ಆತ್ಮಕ್ಕೂ ಭೇದ ಉಂಟಾಯಿತು. ಹೇಗಂದರೆ ದೇಹವು ಆತ್ಮದ ಧೀನತನಕ್ಕೆ ತಪ್ಪಿಸಿ ಕೊಂಡಿತು. ಹೀಗಿರಲಾಗಿ ಮನುಷ್ಯನ ಜೀವವು ಪೂರ್ಣ ಜೈವಿಕವಾಗಿಯೂ ಮಾಂಸವಿಕಾರವಾಗಿಯೂ ಹೋಗಿ, ಆತ್ಮವು ಮಾಂಸಕ್ಕೆ ಅಧೀನವಾಯಿತು. ಹೀಗಿರಲಾಗಿ ದೇವರಾತ್ಮವನ್ನು ಅಗಲಿದ ಪ್ರಾಣವು ದೇಹವನ್ನು ಬದುಕಿಸುವ ತ್ರಾಣವನ್ನು ಕಳದು ಕೊಂಡದರಿಂದ, ಆತ್ಮದ ಚೈತನ್ಯವೂ ಜೀವವೂ ಇಲ್ಲದ ಪ್ರಾಣಿಕ್ಕೆ ಅಧೀನವಾದ ಶರೀರವು ಪ್ರಾಣಿಕಾವಪಾದದ್ದೆಂದು ಪೌಸರ್ಗಾಂಡದೆ.

೨. ಎರಡನೇ ಆದಮನೆಂಬ ಕ್ರಿಸ್ತನು ಪೂರ್ವಾಸನರಜಾತಿಯ ಪ್ರಜಾಪಿತನಾಗಿದ್ದು, ತನ್ನಲ್ಲಿರುವ ಅಮರಜೀವವನ್ನು ತನ್ನ ಆತ್ಮದ ಮುಖಾಂತರ ಪಾಪದಿಂದ ಮೃತವಾದ ಪ್ರಾಣಿಗಳಿಗೂ ಶರೀರಗಳಿಗೂ ಕೊಟ್ಟು, ತನ್ನ ಐಕ್ಯದಲ್ಲಿ ಶೇರಿಪ ಭಕ್ತರನ್ನು ಮಹಿಮೆ ಪಡಿಸುತ್ತಾನೆ.

೧ ಕೌರಿ. ೧೫೯, ೫೧೧—೫೧೫.

೩. ನಾವು ಈಗ ಮಾಂಸವಿಕಾರವಾದ ದೇಹದಲ್ಲಿ ಬದುಕುವದು ಚಾೀದ್ಯವಾದದ್ದಲ್ಲ. ಕೀಳಾದದರ ಮೇಲೆ ಮೇಲಾದದ್ದು ಬರುವದು ದೇವರ ಆಡಿಳತೆಯ ಒಂದು ಕಟ್ಟಳೆಯಾಗಿದೆ. ಚೂವಾನಿಗಳಾಗಿ ಈ ನೀಚ ಶರೀರದಲ್ಲಿ ಉಳಿದು ಕಾಳ್ಳುವವರಾದ ನಾವು ಗರ್ವ ಚಾವನೆಯಲ್ಲಾ ಬಿಟ್ಟು ವಿಡತಕ್ಕದ್ದು.

೪. ಆದಮನಿಗೂ ಕ್ರಿಸ್ತನಿಗೂ ಇರುವ ವ್ಯತ್ಯಾಸವು ಬಹಳ ದಾಡ್ಡದಾಗಿದೆ. ಆದಮನು ಚೌಮಿಕನೂ ನಿರ್ಬಲನೂ ಮರ್ತ್ಯನೂ ಆಗಿದ್ದಾನೆ. ಕ್ರಿಸ್ತನು ದೈವಿಕನೂ ದಿವಿಜರೆಲ್ಲರಿಗೆ ಒಡೆಯನೂ ಆಗಿದ್ದಾನೆ. ಈ ಉಚಯ ಪ್ರಜಾಪಿತರಿಂದ ಅವರ ಚಾವಗಳ ಪ್ರಕಾರ ಎರಡು ಜಾತಿಗಳು ಪುಟ್ಟುತ್ತವೆ. ಆದಮನ ಜಾತಿಯವರು ಚೌಮಿಕರಾಗಿ ಪುಟ್ಟಿ, ಆತ್ಮ ಶರೀರಗಳಿಂದ ಮರಣಕ್ಕೆ ವಶವಾಗಿದ್ದಾರೆ. ಕ್ರಿಸ್ತನ ಆತ್ಮದಿಂದ ಪುನರ್ಜನ್ಮವನ್ನು ಪಡದು ಕಾಂಡವರು ಕ್ರಿಸ್ತನ ಚಾವವನ್ನು ಧರಿಸಿ ಕಾಂಡು, ಪುನರುತ್ಥಾನದಲ್ಲಿ ಮಹಿಮಾಶರೀರಿಗಳಾಗಿ ಎದ್ದು, ಆತನಿಗೆ ಸಾರೂಪ್ಯರಾಗುತ್ತಾರೆ.

೫. ದೇವರಾಜ್ಯಸಂಸಿದ್ಧಿಯು ನೂತನ ಚೂವರ ಲೌಕಗಳಲ್ಲಿ ಉಂಟಾಗುತ್ತದೆ, ಆದ್ದರಿಂದ ಮಾಂಸರಕ್ತವೆಂಬ ಇಹ ನರಚಾವವು ಅದರಲ್ಲಿ ಶೇರಲಾರದು. ಶೇರ ತಕ್ಕವರಿಗೆ ಚಾವಾಂತರವು ಅವಶ್ಯಕವಾದದ್ದು. ಈ ಯುಗದಲ್ಲಿ ಚಕ್ಕರು ಸತ್ತು ಚಾವಾಂತರವಾಗುತ್ತಾರೆ; ಕರ್ತನ ದಿವಸದಲ್ಲಿ ಚೌಮಿಕವಾದ ಚಕ್ಕರ ಚಾವವು ಕ್ಷಣ ಮಾತ್ರದಲ್ಲಿ ದೈವಿಕವಾಗುತ್ತದೆ.

III. ಚಾವಾಂತರ ಸಂಸಿದ್ಧಿಗಳ ಸೂಚನೆಯು. ವ. ೫೧೧—೫೧೯.

೫೧೧. ಇಗೌೀ, ಮರ್ಮವನ್ನು ೧) ನಿಮಗೆ ಹೇೀಳುತ್ತೇನೆ—ಎಲ್ಲರು ನಿದ್ದೆ ಹೌೀಗೆವು ೨), ೫೨. ಆದರೆ ಕ್ಷಣದಲ್ಲಿ ೩), ರೆಪ್ಪೆ ಬಡಿಯುವದರಲ್ಲಿ, ಕಡೇ ತುತೂರಿಯಲ್ಲಿ ೪), ಎಲ್ಲರು ಮಾರ್ಪಡುವೆವು. ಯಾಕಂದರೆ ತುತೂರಿಯು ಧ್ವನಿಯಾಗುವದು; ಆಗ ಸತ್ತವರು ನಿರ್ಜಯವಾಗಿ ೫) ಎಬ್ಬಿಸಲ್ಪಡುವರು; ಮತ್ತು ನಾವು ೬) ಮಾರ್ಪಡುವೆವು. ೫೫. ಯಾಕಂದರೆ ಇ ಲಯವಾದದ್ದು ೭) ನಿರ್ಜಯವನ್ನು ಧರಿಸಿ ಕೌಳ್ಳಬ್ಯೇಕು; ಮತ್ತು ಇ ಮರ್ತ್ಯವಾದದ್ದು ಅಮರತ್ವವನ್ನು ಧರಿಸಿ ಕೌಳ್ಳಬ್ಯೇಕು.

೧. ಅಪಾಸ್ತಲನು ಇಲ್ಲಿ ಪ್ರಕಟಿಸುವ ಸಂಗತಿಯನ್ನು ತಾನೇ ವಿಶೇಷವಾದ ಪ್ರಕಟಣೆಯಿಂದ ತಿಳಿದು ಕಾಂಡನೆಂದು, ತಾೀರುತ್ತದೆ. ಗಲ. ೧, ೧೨. ೧ ಥೆಸ್ಸ. ೪. ೨ ಕಾರಿ. ೫. ಪ್ರಕ. ೨೦, ೪.

೨. ಯೇಸು ಕ್ರಿಸ್ತನು ತಿರಿಗಿ ಬರುವ ದಿವಸದಲ್ಲಿ ಬದುಕುವ ಚಕ್ಕರು ಸಾಯದೆ, ಚಾವಾಂತರವಾಗುವರು. ಕರ್ತನ ದಿವಸದ ಕಾಲವು ತಿಳಿಯದೆ ಇರಲಾಗಿ, ಪೌಲನು ಬಹು ವಚನದ ಪ್ರಥಮ ಪುರುಷಕ್ಕೆ ಉತ್ತಮ ಪುರುಷ ಪ್ರಯೌೀಗಿಸುತ್ತಾನೆ.

೩. ಸತ್ತವರ ಪುನರುತ್ಥಾನವೂ ಬದುಕುವವರ ರೂಪಾಂತರವೂ ಒಂದೆ ಸಮಯದಲ್ಲಿ ಆಗುವದರಿಂದ, ಒಬ್ಬರು ಒಬ್ಬರಿಗೆ ಮುಂದಾಗುವದಿಲ್ಲ.

೪. ತುತೂರಿಯ ಶಬ್ದವು ಯುದ್ಧಕ್ಕೂ ಸಮಾಗಮಕ್ಕೂ ಸನ್ನೆ ಆಗುವದು. ಕಡೇ ತುತೂರಿಯ ಧ್ವನಿಯು ಕಡೇ ಎದುರಾಳಿಯನ್ನು ಸಂಹಾರ ಮಾಡುವ ಯುದ್ಧಕ್ಕೂ, ದೇವಪ್ರಜಾಸಮಾಗಮಕ್ಕೂ, ದೈವಿಕಗಣಗಳನ್ನು ಎಚ್ಚರಿಸುವದು.

೫. ಅಮರ ಶರೀರಿಗಳಾಗಿ.

೬. ಇಲ್ಲಿ ಸಹ ೫೨ನೆ ವಚನದ ಪ್ರಕಾರ ಪ್ರಥಮ

ಮನುಷ್ಯಕ್ಕೆ ಪ್ರತಿಯಾಗಿ ಉತ್ತಮ ಪುರುಷ ಪ್ರಯೋಗವಾಗಿದೆ.

೭. ಈ ಮಹಾ ರೂಪಾಂತರದ ಉದ್ದಿಶ್ಯ ವೇನೆಂದರೆ: ಲಯವಾದ ಸತ್ತವರ ಶರೀರವು ನಿರ್ಲಯವಾಗಬೇಕು; ಬದುಕುವವರ ಮರ್ತ್ಯ ಶರೀರವು ಅಮರವಾಗಬೇಕು.

೫೪. ಆದರೆ ಈ ಲಯವಾದದ್ದು ನಿರ್ಲಯವನ್ನು ಧರಿಸಿ ಕೊಂಡಾಗಲೂ, ಈ ಮರ್ತ್ಯವಾದದ್ದು ಅಮರತ್ವವನ್ನು ಧರಿಸಿ ಕೊಂಡಾಗಲೂ, ಬರೆದ ಮಾತು ಉಂಟಾಗುವದು. ೫೫. ಏನಂದರೆ, ಮರಣವು ಜಯದಲ್ಲಿ ನುಂಗಲ್ಪಟ್ಟಿದೆ ೧). ಮರಣವೇ, ನಿನ್ನ ಕೊಂಡಿಯು ೨) ಎಲ್ಲಿ? ಪಾತಾಳವೇ ೩), ನಿನ್ನ ಜಯವು ಎಲ್ಲಿ? ೫೬. ಮರಣದ ಕೊಂಡಿಯು ೪) ಪಾಪವೇ; ಪಾಪದ ಬಲವು ೫) ನ್ಯಾಯಪ್ರಮಾಣವೇ. ೫೭. ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲವಾಗಿ ನಮಗೆ ಜಯವನ್ನು ಕೊಡುವ ದೇವರಿಗೆ ಸ್ತೋತ್ರವು ೬). ೫೮. ಆದದರಿಂದ, ನನ್ನ ಪ್ರಿಯ ಸಹೋದರರೇ, ನಿಮ್ಮ ಪ್ರಯಾಸವು ಕರ್ತನಲ್ಲಿ ವ್ಯರ್ಥವಲ್ಲವೆಂದು ತಿಳಿದು ಕೊಂಡು ೭), ಸ್ಥಿರವಾದವರಾಗಿಯೂ, ಕದಲದವರಾಗಿಯೂ, ಕರ್ತನ ಕೆಲಸದಲ್ಲಿ ಯಾವಾಗಲೂ ಹೆಚ್ಚುವವರಾಗಿಯೂ ೮), ಇರ್ರಿ.

೧. ಮುಕ್ತರು ಆಗ ಹಾಡುವ ಜಯಗೀತದ ಅರ್ಥವೇನೆಂದರೆ: ಜೀವವು ಮರಣವನ್ನು ನುಂಗಿ ಬಿಟ್ಟಿದ್ದರಿಂದ, ಅದು ಸರ್ವದಾ ಸಂಹಾರವಾಗಿದೆ; ದೇವರು ಉಂಟುಮಾಡಿದ ಸೃಷ್ಟಿಯಲ್ಲೆಲ್ಲಾ ಮರಣದ ಮೇಲೆ ಜೀವಕ್ಕೆ ನಿತ್ಯ ಜಯ ಉಂಟಾಗಿದೆ. ಯೆಶಾ. ೨೫, ೮ರಲ್ಲಿ ಅವನು ಮರಣವನ್ನು ಯುಗಯುಗಾಂತರಕ್ಕೆ ನುಂಗುವನೆಂದು, ಬರದದೆ. ಎಪ್ಪತ್ತರ ಭಾಷಾಂತರದಲ್ಲಿ ಯುಗಯುಗಾಂತರಕ್ಕೆ ಎಂಬುವದಕ್ಕೆ ಪ್ರತಿಯಾಗಿ ಪರಾಕ್ರಮದಿಂದ ಎಂದು ಬರದದೆ. ಪೌಲನು ಜಯದಲ್ಲಿ ಎಂದು ಹೇಳುತ್ತಾನೆ. ಈ ಮೂರು ಮಾತು ತದನುಸಾರವಾಗಿವೆ; ಯಾಕೆಂದರೆ ಮರಣವನ್ನು ಗೆಲ್ಲುವ ಪರಾಕ್ರಮವಾದ ಜೀವದ ಜಯವು ನಿರಂತರವಾದದ್ದು.

೨. ಮೃತಿಯು ಚೇಳಿನ ಹಾಗೆ ಎಂಬುವದು ಇಲ್ಲಿ ಜಾಡೆಯಾಗಿ ತಾರುತ್ತದೆ. ನಿನ್ನ ವಿಷಕ್ಕೆ ಬಲವಿಲ್ಲ. ಪಾಪಕ್ಕೆ ಇದ್ದ ಕಾಲ್ಲುವ ತ್ರಾಣ ಕಳದು ಹಾಗಾಗಿದೆ.

೩. ಪುನರುತ್ಥಾನವಾದವರು ಪಾತಾಳದ ತೆರೆಗೆ ಒಳಗಾಗುವದಿಲ್ಲ. ಇಲ್ಲಿ ಬರದ ಮಾತು ಹಾಗಾಶೆಯನ ಒಂದು ಮಾತಿಗೆ ಒಪ್ಪುತ್ತದೆ; ಅದೇನೆಂದರೆ ಮೃತಿಯೇ, ನಿನಗೆ ವಿಷವಾಗುತ್ತೇನೆ. ಪಾತಾಳವೇ ನಿನಗೆ ದಾಹ್ಡ ರಾಗವಾಗುತ್ತೇನೆ. ಇಲ್ಲಿ ಸಹ ಯೇಸು ಕ್ರಿಸ್ತನ ರಾಜ್ಯದ ಸಂನಿಧ್ಯ ಅತಿಪ್ರಾಯವನ್ನು ಹಿಡಿದು ಕಾಂಡು, ವ್ಯಾಖ್ಯಾನ ಮಾಡ ಬೇಕು. ನಾಶವಾಗುವವರ ಸಂಗತಿ ಇಲ್ಲಿ ಶೇರುವದಿಲ್ಲ.

೪. ಪಾಪದ ದೆಶೆಯಿಂದ ಮರಣಕ್ಕೆ ಮನುಷ್ಯರು ಒಳಗಾದರು; ಪಾಪವಿಲ್ಲದವರು ಸಾಯುತ್ತಿದ್ದಿಲ್ಲಾ ರೋಮಾ. ೫, ೧೨—೧೪. ೬, ೨೩.

೫. ಪಾಪವು ನಿಯಮದಿಂದ ಬಲಗಾಳ್ಳುತ್ತದೆಂಬುವದನ್ನು ಅಪಾಸ್ತಲನು ರೋಮಾ. ೫, ೨೦. ೨೧; ೭, ೭—೧೪ಳಲ್ಲಿ ಹೆಚ್ಚಾಗಿ ವಿವರಿಸುತ್ತಾನೆ. ಇಲ್ಲಿ ಅದನ್ನು ಕೃಪೆಯ ಮಹಿಮೆಯನ್ನು ಹೆಚ್ಚಾಗಿ ವರ್ಣಿಸುವದಕ್ಕಾಗಿಯೇ ಕ್ಷಪ್ತವಾಗಿ ಸೂಚಿಸುತ್ತಾನೆ.

೬. ನಿಯಮ ಮುಂತಾದದ್ದೆಲ್ಲಾ ಪಾಪಿಗಳಾದ ನಮ್ಮನ್ನು ಮರಣದ ಗುಂಡಿಯಲ್ಲಿ ಹೆಚ್ಚು ಹೆಚ್ಚಾಗಿ ಮುಳುಗುಸುತ್ತದೆ. ಆದ್ದರಿಂದ ಚಕ್ತರಾದ ಕ್ರೈಸ್ತ

ರು ತಮ್ಮನ್ನು ವಿಮೋಚನೆ ಮಾಡಿದ ರಕ್ಷಕನಿಗೆ ಅತಿಶಯವಾದ ಸಂತೋಷದಿಂದ ಸ್ತೋತ್ರ ಮಾಡ ತಕ್ಕದ್ದು.

೭. ಪರದ ಫಲದ ನೆನವರಿಕೆಯಿಂದ ಕ್ರೈಸ್ತನ ಧೈರ್ಯವೂ ತಡೆಗಳನ್ನೆಲ್ಲಾ ತಳ್ಳುವ ಜಯಶಕ್ತಿಯೂ ವೃದ್ಧಿಯಾಗುತ್ತವೆ.

೮. ದೇವರ ಬಲವಾದ ಕೃಪೆಯನ್ನು ಪೊಚ್ಚಾಗಿ ಬಲ್ಲವರಲ್ಲಿ ಚಕ್ತಿಯ ಆಸಕ್ತಿ ಪೊಚ್ಚುವದು.

ಸ. ೧೬.

ಪತ್ರಿಕೆಯ ಅಂತ್ಯವು.

೧) ಧರ್ಮದ್ರವ್ಯಸಂಗ್ರಹದ ಮಾತು.

ವ. ೧. ಯೆರೂಸಲೇಮಿನಲ್ಲಿರುವ ಬಡವರಾದ ಭಕ್ತರಿಗಾಗಿ ಧರ್ಮದ ಹಣವನ್ನು ಕೂಡಿಸಿ ಇಡಬೇಕೆಂದು, ನಾನು ಗಲತ ಶೀಮೆಯಲ್ಲಿದ್ದಾಗ, ಅಲ್ಲಿರುವ ಸಭೆಯವರಿಗೆ ಅಪ್ಪಣೆ ಕೊಟ್ಟ ಪ್ರಕಾರ, ನೀವು ಸಹ ಮಾಡಿರಿ. ೨. ಅಪೊ. ಕ್ರಿ. ೨೦, ೭. ಪ್ರಕ. ೧. ೧೦ರ ಪ್ರಕಾರ ಆಗಲೇ ಸಭಾಸವಾಗಮದ ದಿವಸವಾಗಿತ್ತೆಂದು ತೋರುವ ಒಂದೊಂದು ಸಪ್ತಕದ ಮೊದಲನೆ ವಾರದಲ್ಲಿ ಒಬ್ಬೊಬ್ಬನು ಏನಾದರೂ ಇಟ್ಟುಕೊಂಡು, ನಾನು ಬಂದ ಮೇಲೆಯೇ ದ್ರವ್ಯಸಂಗ್ರಹವಾಗದ ಹಾಗೆ, ಕೈಲಾದ ಮಟ್ಟಿಗೂ ಧರ್ಮದ ಹಣವನ್ನು ಕೂಡಿಸಿ ಕೊಳ್ಳಲಿ. ೩. ಬಳಿಕ ಬಂದ ಮೇಲೆ ನೀವು ನೇಮಕಾ ಮಾಡಿದವರಿಗೆ ಪತ್ರಿಕೆಗಳನ್ನು ಕೊಟ್ಟು, ನಿಮ್ಮ ದಾನವನ್ನು ಯೆರೂಸಲೇಮಿಗೆ ಕೊಂಡು ಹೋಗುವದಕ್ಕೆ ಕಳುಹಿಸುತ್ತೇನೆ. ೪. ಆದರೆ ನೀವು ಧಾರಾಳವಾಗಿ ಹೆಚ್ಚು ಹಣ ಕೂಡಿಸಿದ್ದಾದರೆ, ಅವರನ್ನು ಕರದು ಕೊಂಡು ನಾನೂ ಹೋಗುತ್ತೇನೆ. ಇದು ಅಧಿಕ ದಾತೃತ್ವ ಮಾಡ ಬೇಕೆಂಬ ಜಾಡೆಯ ಮಾತಾಗಿದೆ.

೨) ಪ್ರಯಾಣವರ್ತಮಾನಗಳು.

ವ. ೫. ನಾನು ಈಗ ಸಂಚಾರಾ ಮಾಡುವ ಮಕೆದೊನ್ಯ ದೇಶದ ಮಾರ್ಗವಾಗಿ ನಿಮ್ಮ ಬಳಿಗೆ ಬರುತ್ತೇನೆ. ೬. ಆದರೆ ನಿಮ್ಮ ಬಳಿಯಲ್ಲಿ ಹೆಚ್ಚು ಕಾಲ, ಒಂದು ವೇಳೆ ಹಿಮಕಾಲವೆಲ್ಲಾ, ತಳಗುತ್ತೇನೆ. ಬಳಿಕ ನೀವು ನನ್ನನ್ನು ಸಾಗ ಕಳುಹಿಸಿದರೆ ಆದೀತು. ೭. ಯಾಕೆಂದರೆ ಈ ಬಾರಿ ನಿಮ್ಮನ್ನು ಪಯಣಗತಿಯಿಂದಲೆ ನೋಡದೆ, ಕರ್ತನ ಅಪ್ಪಣೆಯಾದರೆ, ಕೆಲವು ಕಾಲ ನಿಮ್ಮಲ್ಲಿ ಉಳಕೊಳ್ಳುತ್ತೇನೆ. ೮. ಎಫೆಸದಲ್ಲಿ ಪಂಚಾಶದ್ದಿವಸದ ಮಟ್ಟಿಗೂ ಇರುತ್ತೇನೆ. ೯. ಈ ಪಟ್ಟಣವನ್ನು ಬೇಗ ಬಿಡಲಾರೆನು; ಯಾಕೆಂದರೆ ಇಲ್ಲಿ ನನಗೆ ಮಹಾ ಕಾರ್ಯಪ್ರವೇಶ ಪ್ರಾಪ್ತವಾಗಿದೆ. ಮತ್ತು ಭಕ್ತರಿಗೆ ಹಲವು ಎದುರಾಳಿಗಳಿಗೆ ವಿರೋಧವಾಗಿ ಕೈ ಕೊಡ ಬೇಕು. ೧೦. ಸದ್ಯಕ್ಕೆ ತಿಮೊಥೆಯನು ನನಗೆ ಪ್ರತಿಯಾಗಿ ಬರುತ್ತಾನೆ. ಇವನನ್ನು ಎರಸ್ತನ ಸಂಗಡಲೂ ಈ ಪತ್ರಿಕೆಯನ್ನು ಕೊಂಡು ಹೋಗುವ ಬೇರೊಬ್ಬರ ಸಂಗಡಲೂ ಕೊರಿಂಥದ ಮಾರ್ಗವಾಗಿ ಮಕೆದೊನ್ಯಕ್ಕೆ ಕಳುಹಿಸುತ್ತೇನೆ. ಇವನು ಅಪೊಸ್ತಲನ ಉದ್ಯೋಗದವನಾಗಿರುವದರಿಂದಲೂ, ಅಧಿಕ ಸಂಕೋಚ ಗುಣವುಳ್ಳವನಾಗಿರುವದರಿಂದಲೂ, ನಿಮ್ಮಲ್ಲಿ ನಿರ್ಭಯನಾಗಿರುವ ಹಾಗೆ, ಅವನನ್ನು ಪ್ರೀತಿಯಿಂದ ಆದರಿಸಿರಿ; ಯಾಕೆಂದರೆ ಅವನು ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ. ೧೧. ಯಾರೂ ಅವನನ್ನು (ಚಿಕ್ಕ ಪ್ರಾಯದವನೆಂದು ೧ ತಿಮೊ. ೪, ೧೨.) ಉದಾಸೀನಾ ಮಾಡ ಬಾರದು. ಅವನು ಮಕೆದೊ

೧ ಕೊರಿ. ೧೬, ೧೨—೨೧.

ನ್ಯಕ್ಕೆ ಹೋಗುವ ಹಾಗೆ ಸಹಾಯ ಮಾಡಿರಿ; ಅಲ್ಲಿ ನಾನು ಜೊತೆ ಪ್ರಯಾಣಸ್ಥರಾದವರ ಸಂಗಡ ಇದ್ದು, ಅವನನ್ನು ಕಾದು ಕೊಳ್ಳುತ್ತೇನೆ. (ತಿಮೊಥೆಯನು ಕೊರಿಂಥಕ್ಕೆ ಬರಲಿಲ್ಲ. ಪೌಲನು ಎರಡನೆ ಕೊರಿಂಥದ ವರ ಪತ್ರಿಕೆಯನ್ನು ಬರದ ಕಾಲದಲ್ಲಿ ತಿಮೊಥೆಯನು ೨ ಕೊರಿ. ೧, ೧. ಅವನ ಸಂಗಡಲಿದ್ದನು. ಪೌಲನು ಎಫೆಸದಿಂದ ಹೊರಡುವದಕ್ಕಿಂತ ಮುಂಚಿತವಾಗಿಯೇ ತಿಮೊಥೆಯನಿಗೆ ಬದಲಾಗಿ ತೀತನನ್ನು ಕೊರಿಂಥಕ್ಕೆ ಕಳುಹಿಸಿದನೆಂದು, ಊಹಿಸ ತಕ್ಕದ್ದು) ೧೨. ನೀವು ಬಹಳವಾಗಿ ಬಯಸುವ ಅಪೊಲ್ಲೋವನಿಗೆ ಈ ಸಹೋದರರ ಸಂಗಡ ನಿಮ್ಮ ಬಳಿಗೆ ಹೋಗ ಬೇಕೆಂದು, ಬಹಳವಾಗಿ ಹೇಳಿದೆನು. ಆದರೆ ಸದ್ಯಕ್ಕೆ ಎಷ್ಟು ಮಾತ್ರವೂ ಮನಸ್ಸಿಲ್ಲದವನಾಗಿದ್ದಾನೆ. ಆದರೆ ಸಮಯೋಚಿತವಾಗಿ ಬಂದಾನು.

ವ. ೧೩. ಎಚ್ಚರಿಕೆಯಾಗಿರ್ರಿ; ವಿಶ್ವಾಸದಲ್ಲಿ ನಿಲ್ಲಿರಿ; ಪೌರುಷವಾಗಿರ್ರಿ; ತ್ರಾಣವಾಗಿರ್ರಿ. ೧೪. ನಿಮ್ಮವ್ವುಗಳೆಲ್ಲಾ ಪ್ರೀತಿಯಿಂದ ಆಗಲಿ.

ತಿಮೊಥೆಯನೂ ಅಪೊಲ್ಲೋವನೂ ಅಪೊಸ್ತಲನು ತಾನೂ ಅವರಿಗೆ ಹೇಳ ತಕ್ಕ ಬೋಧನೆಯ ಸಾರವು ಈ ಮಾತಿನಲ್ಲಿ ಅಡಕವಾಗಿದೆ. ಈ ಪತ್ರಿಕೆಯ ಸರ್ವಾಭಿಪ್ರಾಯವೇನೆಂದರೆ: ದುರ್ಬೋಧಕರಾದ ನಾನಾ ತರದ ಮೋಸಗಾರರಿಗೆ ಒಳಗಾಗದ ಹಾಗೆ ನೋಡಿ ಕೊಳ್ಳಿರಿ, ವಿಶ್ವಾಸಯುದ್ಧದಲ್ಲಿ ಗಂಡಾಗಿರಿ, ಪ್ರೀತಿಯನ್ನು ಕಾಪಾಡಿರಿ.

೪) ಗುಣವರ್ಣನೆಗಳು, ವಂದನೆಗಳು. ಸಮಾಪ್ತಿಯು.

ವ. ೧೫. ಸ್ತೆಫನಾಸನೂ ಅವನ ಮನೆಯವರೂ ಕೊರಿಂಥವು ಪ್ರಾಮುಖ್ಯ ಪಟ್ಟಣವಾದ ಅಕಾಯ ದೇಶದಲ್ಲಿ ಪ್ರಥಮ ಸಂವರ್ತಿಗಳಾಗಿದ್ದು, ದರಿದ್ರರು ರೋಗಿಗಳು ಪರಸ್ಥಳದವರು ಇವರ ಪರಾಮರಿಕೆಯ ಉದ್ಯೋಗದಲ್ಲಿ ಉಚಿತವಾಗಿ ಶ್ರಮಿಸಿದರೆಂಬುವದು ನಿಮಗೆ ಗೊತ್ತಾಗಿದೆ. ೧೬. ಪರೀಕ್ಷಿತರಾದ ಇಂಥಾ ಸಭೆಯವರಿಗೂ, ಪ್ರೀತಿಯ ಉದ್ಯೋಗಗಳನ್ನು ನಡಿಸುವರೆಲ್ಲರಿಗೂ ಸಂತೋಷದಿಂದ ಒಳಗಾಗಿದ್ದು, ಸಹಾಯ ಮಾಡ ಬೇಕೆಂದು, ನಿಮ್ಮನ್ನು ಎಚ್ಚರಿಸುತ್ತೇನೆ. ೧೭. ಸ್ತೆಫನಾಸನೂ ಫೊರ್ತುನಾತನೂ ಅಕಾಯಕನೂ ದರ್ಶನಕ್ಕೆ ಬಂದದ್ದು ಸಂತೋಷವಾಯಿತು; ನಿಮ್ಮನ್ನು ಕಾಣದ ವ್ಯಸನವು ಅವರನ್ನು ಕಂಡದರಿಂದ ಪರಿಹಾರವಾಯಿತು. ೧೮. ನಿಮ್ಮಲ್ಲಿ ಹುಟ್ಟಿದ ಮತಭೇದಗಳಿಗಾಗಿ ನನಗೆ ಬಂದ ಚಿಂತೆ ಮುಂತಾದ ಉಪದ್ರವಗಳಿಂದ ಕುಗ್ಗಿದ ನನ್ನ ಹೃದಯವನ್ನು ಅವರು ಸಂಪ್ರಾಣಿಸಿದರು; ಇದರಿಂದ ನಿಮಗೂ ಗುಣವಾಯಿತು. ಅವರು ಉತ್ತಮರೆಂದು ತಿಳಿದು, ಅಂಥಾ ಶೀಲದವರನ್ನು ಸನ್ಮಾನಿಸಿರಿ. ೧೯. ಸಣ್ಣ ಆಸ್ಯದವರಾದ ಕ್ರೈಸ್ತರು, ವಿಶೇಷವಾಗಿ ನಿಮ್ಮ ಪರಿಚಿತರಾದ ಪ್ರಿಸ್ಕಿಲ್ಲ ಆಕ್ವಿಲರು ಅಪೊ. ಕ್ರಿ. ೧೮, ೧. ಅವರ ಮನೆಯಲ್ಲಿ ಕೂಡುವ ಸಭೆಯ ಸಹಿತವಾಗಿ ನಿಮ್ಮನ್ನು ವಂದಿಸುತ್ತಾರೆ. ೨೦. ಉಳಿದ ಸಭೆಯವರೆಲ್ಲರೂ ಸಹ ನಿಮ್ಮನ್ನು ವಂದಿಸುತ್ತಾರೆ. ಸರ್ವ ಭೇದಪರಿಹಾರದ ಗುರ್ತಿಗಾಗಿ ಪರಿಶುದ್ಧ ಮರ್ಯಾದೆಯ ಪ್ರಕಾರ ಒಬ್ಬರಿಗೊಬ್ಬರು ಮುದ್ದಿಟ್ಟು ವಂದನೆ ಮಾಡಿರಿ. ೨೧. ಪೌಲನಾದ ನಾನು ಸ್ವಂತ ಕೈಯಿಂದ ವಂದನೆಯ ಮಾತು ಬರೆಯುತ್ತೇನೆ.

೫೬—೨ ಅಪೊ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ.

೧ ಕೊರಿ. ೧೬, ೨೨—೨೪. ಅಪೊ. ಕ್ರಿ. ೧೯, ೨೧—೨೪.

ವ. ೨೨. ಒಬ್ಬನು ಕರ್ತನಾದ ಯೇಸು ಕ್ರಿಸ್ತನನ್ನು ಪ್ರೀತಿ ಮಾಡದಿದ್ದರೆ, ಶಾಪವಾಗಲಿ ೧); ನಮ್ಮ ಕರ್ತನು ಬರುತ್ತಾನೆ ೨). ೨೩. ಕರ್ತನಾದ ಯೇಸು ಕ್ರಿಸ್ತನ ಕೃಪೆಯು ೩) ನಿಮ್ಮ ಸಂಗಡ ಇರಲಿ. ೨೪. ಕ್ರಿಸ್ತ ಯೇಸುವಿನಲ್ಲಿ ನನ್ನ ಪ್ರೀತಿಯು ೪) ನಿಮ್ಮೆಲ್ಲರ ಸಂಗಡ ಇರಲಿ.

೧. ಆಸಕ್ತ ಭಕ್ತನ ಪ್ರೀತಿಯು ಕಾಲಿಗ್ರಿದ ಮಾತಿಗೂ ಹಿಂದಾಗುವದಿಲ್ಲ.

೨. ಮೂಲ ಗ್ರಂಥದಲ್ಲಿ ಮರನಥಾ ಎಂಬ ಅರಮಿ ಭಾಷೆಯ ಮಾತು ಬರದದೆ. ಪೌಲನು ಅದನ್ನು ಕಾರಿಂಥದಲ್ಲಿ ವಾಡಿಕೆಯಾಗಿ ಉಚ್ಚರಿಸಿದ್ದರಿಂದ, ಅದರ ಅರ್ಥ ಕಾರಿಂಥದವರಿಗೆ ಗೊತ್ತಾಗಿತ್ತೆಂದು, ನೆನಸ ಬಹುದು.

೩. ಪತ್ರಿಕೆಯ ಆರಂಭದಲ್ಲಿಯೂ ಅಂತ್ಯದಲ್ಲಿಯೂ ಕೃಪೆ ಯಂಬುವದು ಬರದದೆ. ದೇವರ ಕೃಪೆಯು ಕ್ರೈಸ್ತನಿಗೆ ಆದ್ಯಂತದಲ್ಲಿಯೂ ಅತ್ಯಾವಶ್ಯಕವಾದ ಒಡವೆಯಾಗಿದೆ.

೪. ಬಹಳ ಗದರಿಕೆಯ ಮಾತುಗಳುಳ್ಳ ಈ ಪತ್ರಿಕೆಯನ್ನು ಅಪೊಸ್ತಲನು ತನ್ನ ಹೃದಯದಲ್ಲಿರುವ ಅತಿಶಯವಾದ ಪರಿಶುದ್ಧವಾದ ಕ್ರಿಸ್ತನಲ್ಲಿ ಬೇರೂರಿದ ಮಮತೆಯ ಆಶೀರ್ವಾದವಿಲ್ಲದೆ ಮುಗಿಸ ಕೂಡದು.

೬. ಎಫೆಸದಲ್ಲಿ ಉಂಟಾದ ಕಲಹ. ಅಪೊ. ಕ್ರಿ. ೧೯, ೨೧—೪೦.

ವ. ೨೧. ಅಪೊಸ್ತಲನು ಎಫೆಸದಲ್ಲಿ ಸಭೆಯನ್ನು ದೃಢವಾಗಿ ಸ್ಥಾಪಿಸಿದ ಮೇಲೆ, ಕೊರಿಂಥದವರಿಗೆ ೧ ಕೊರಿ. ೧೬, ೫ಲ್ಲಿ ಬರದ ಪ್ರಕಾರ ಅಪೊಸ್ತಲತನದ ವೃತ್ತಿಯ ಗತಿಯಿಂದ ದೇವರ ಹೆಸರಿನಲ್ಲಿ ಮಕೆದೊನ್ಯ ಮಾರ್ಗವಾಗಿ ಅಕಾಯಕ್ಕೆ, ಅಕಾಯದಿಂದ ಯೆರೂಸಲೇಮಿಗೆ ಪಯಣ ಮಾಡ ಬೇಕೆಂದು ನಿಶ್ಚೈಸಿಕೊಂಡನು. ಇದಲ್ಲದೆ ರೋಮಪುರಕ್ಕೆ ಹೋಗುವ ಆಲೋಚನೆ ಸಹ ಅವನ ಮನಸ್ಸಿನಲ್ಲಿ ಹುಟ್ಟಿ ಇತ್ತು ಎಂದು, ನೆನಸ ಬಹುದು. ಆದರೆ ಈ ವೇಳೆಯಲ್ಲಿ ರೋಮಪುರದ ದರ್ಶನವು ಯಾವ ಮಾರ್ಗವಾಗಿ ತನಗೆ ಪ್ರಾಪ್ತವಾಗ ಬೇಕೆಂದು ಅವನಿಗೆ ತಿಳಿಯಲಿಲ್ಲ. ೨೨. ತಿಮೊಥೆಯನನ್ನೂ ಎರಸ್ತನನ್ನೂ ತನ್ನ ಪತ್ರಿಕೆ ಕೊಂಡು ಹೋಗ ತಕ್ಕ ಬೇರೊಬ್ಬರನ್ನೂ ಮುಂದಾಗಿ ಮಕೆದೊನ್ಯಕ್ಕೂ ಅಲ್ಲಿಂದ ಕೊರಿಂಥಕ್ಕೂ ಕಳುಹಿಸಿದನು. ಆದರೆ ತಿಮೊಥೆಯನು ಮತ್ತೊಬ್ಬರ ಸಂಗಡ ಕೊರಿಂಥಕ್ಕೆ ತಲಪಲಿಲ್ಲ; ಅವನಿಗೆ ಬದಲಾಗಿ ತೀತನು ಅಲ್ಲಿಗೆ ಬಂದನು. ಪೌಲನು ತಾನೇ ಹೆಚ್ಚು ಕಾಲ ಎಫೆಸದಲ್ಲಿ ಇರ ಬೇಕೆಂದು ಇದ್ದನು. ಆದರೆ ಬೇಗ ಹೊರಟು ಹೋಗುವದಕ್ಕೆ ಒಂದು ಹೇತುವು ಪ್ರಾಪ್ತವಾಯಿತು. ೨೩. ಏನಂದರೆ ಸುವಾರ್ತೆಯ ಅಭಿವೃದ್ಧಿಯ ನಿಮಿತ್ತ ಆ ಪಟ್ಟಣದಲ್ಲಿ ಮಹಾ ಕಲಹ ಹುಟ್ಟಿತು. ೨೪. ಯಾಕೆಂದರೆ ದೇಮೇತ್ರಿಯನೆಂಬ ಒಬ್ಬ ಅಕ್ಕಸಾಲಿಗನು ಪ್ರಖ್ಯಾತವಾದ ದಿಯಾನಾದೇವಸ್ಥಾನದ ರೌಪ್ಯ ಪ್ರತಿಮೆಗಳನ್ನು ರಚಿಸಿ ಕೊಂಡು, ಭಾರಿ ವ್ಯಾಪಾರಾ ನಡಸುತ್ತಾ, ತನ್ನ ಕಡೆಯ ಪಂಚಾಲರನ್ನೆಲ್ಲಾ ಚನ್ನಾಗಿ ಪೋಷಿಸುತ್ತಾ ಬಂದನು. ಗ್ರೀಕರಲ್ಲಿ ಅರ್ತೆಮಿಸೆಂದು ಹೆಸರು ಗೊಂಡ ದಿಯಾನಾದೇವಿಯ ಗುಡಿ ಎಫೆಸ ಪಟ್ಟಣದಲ್ಲಿ ಶಿರೋಮಣಿಯಾಗಿದ್ದು, ಪೂರ್ವ ಲೋಕದ ಸಪ್ತ ಅದ್ಭುತ ಕೃತಿಗಳಲ್ಲಿ ಒಂದಾಗಿ ಹೆಸರ್ವಾಸಿಯಾಗಿತ್ತು. ಈ ಗುಡಿಗೆ ನಾಲ್ವತ್ತು ಮೊಳ ಉದ್ದವಾದ ೧೨೭ ಸ್ತಂಭಗಳಿದ್ದವು. ಹೆರೊಸ್ತ್ರತನೆಂಬವನು ಹೆಸರು ಪಡದು ಕೊಳ್ಳ ಬೇಕೆಂದು,

ಅಪೌ. ಕ್ರಿ. ೧೫, ೨೫–೫೫.

ಅದನ್ನು ಕೊಂಡ ಅಲೆಕ್ಸಂದ್ರನು ಹುಟ್ಟಿದ ರಾತ್ರಿಯಲ್ಲಿ ಸುಟ್ಟು ಬಿಟ್ಟನು. ಎಫೆಸದವರು ಅವನನ್ನು ಹಿಡಿದು, ಅತಿಕ್ರೂರವಾಗಿ ಪೀಡಿಸಿ, ಕೊಂದು ಹಾಕಿ, ಸಣ್ಣ ಆಸ್ಯದವರೆಲ್ಲರ ಸಹಾಯದಿಂದ ಆ ಗುಡಿಯನ್ನು ಮುಂಚಿಗಿಂತ ಅತ್ಯಲಂಕೃತವಾಗಿ ಜೀರ್ಣೋದ್ಧಾರ ಮಾಡಿದರು. ಅದರಲ್ಲಿ ಆಕಾಶದಿಂದ ಬಿದ್ದದ್ದಾಗಿ ಸುದ್ದಿಯುಳ್ಳ ದೇವಿಯ ವಿಗ್ರಹವನ್ನು ಅತಿ ಪೂಜ್ಯವೆಂದು ಆರಾಧಿಸುತ್ತಾ ಇದ್ದರು. ಅದು ಅನೇಕ ಸ್ತನವೂ ಮಾರ್ಗೈಯೂ ಉಳ್ಳ ಕರಿಮರದ ಗೊಂಬೆಯಾಗಿದ್ದು, ಸರ್ವಮಾತೃವಾದ ಕಾಳರಾತ್ರಿ ಯೆಂಬ ಪ್ರಕೃತಿ ದೇವಿಯ ವಿಗ್ರಹವಾಗಿತ್ತು. ಎಫೆಸದಲ್ಲಿ ಮಂತ್ರ ಯಂತ್ರ ಮುಂತಾದ ರಹಸ್ಯಚರ್ಯಗಳು ಬಹಳ ಪ್ರಬಲವಾಗಿದ್ದವು. ದಿಯಾನಾ ಗುಡಿಯ ರೌಪ್ಯ ಪ್ರತಿಮೆಗಳನ್ನು ಕೊಂಡು ಹೋದಲ್ಲಿ ಪ್ರಯಾಣಸ್ಥರು ಯುದ್ಧಸ್ಥರು ಮುಂತಾದವರಿಗೆ ಇಷ್ಟಾರ್ಥ ಸಿದ್ಧಿಯುಂಟಾಗುವದೆಂಬ ನಂಬಿಕೆ ಎಲ್ಲಾ ಕಡೆಯಲ್ಲಿಯೂ ವಾಡಿಕೆಯಾಗಿತ್ತು. ದೆಮೇತ್ರಿಯನು ಕ್ರೈಸ್ತಮತ ವಿಸ್ತಾರವಾದರೆ, ತನ್ನ ಆದಾಯ ಕಡಮೆಯಾದೀತೆಂದು, ನೆನಸಿದ್ದು ತಪ್ಪಲ್ಲಾ. ೨೫. ಅದ್ದರಿಂದ ತನ್ನ ಕಡೆಯ ವಂಚಾಲರನ್ನೆಲ್ಲಾ ಕೂಡಾ ಕರದು, ತಮ್ಮ ವ್ಯಾಪಾರದಿಂದ ಹುಟ್ಟುವ ಲಾಭಕ್ಕೆ ಪೌಲನಿಂದ ನಷ್ಟವಾದೀತೆಂದು ಬೋಧಿಸಿ, ೨೬. ಲೋಕಪೂಜ್ಯವಾದ ದಿಯಾನಾ ಎಂಬ ಮಹಾದೇವಿಯ ಆರಾಧನೆ ಬಿದ್ದು ಹೋದೀತೆಂಬ ಮಾತಿನಿಂದ ಅವರ ಭಕ್ತ್ಯಾಸಕ್ತಿ ಯೆಂಬ ಅಗ್ನಿಯನ್ನು ಜ್ವಲನೆ ಮಾಡಿದನು. ಈ ಮಾತು ಸಾರ್ಥಕವಾಯಿತು; ಯಾಕೆಂದರೆ ದುರ್ಭಕ್ತಿಯ ಆಸಕ್ತಿಗಿಂತ ಹೆಚ್ಚಾದದ್ದು ಇಲ್ಲಾ. ಎಲ್ಲರೂ ಕೋಪ ಪೂರಿತರಾಗಿ ಎಫೆಸದವರ ದಿಯಾನಾದೇವಿ ದೊಡ್ಡವಳೆಂದು ಕೂಗಿದರು. ೨೯. ಪಟ್ಟಣವೆಲ್ಲಾ ಅಲ್ಲೋಲಕಲ್ಲೋಲವಾಗಿ, ಜನರೆಲ್ಲರು ಪೌಲನ ಸಂಗಡಿಗರಾದ ಅಕಾಯ ಅರಿಸ್ತರ್ಕರೆಂಬ ಇಬ್ಬರು ಮಕೆದೊನ್ಯರನ್ನು ಎಳಕೊಂಡು, ಪಟ್ಟಣಸಭಾಸಮಾಗಮಸ್ಥಳವಾದ ನಾಟ್ಯಸ್ಥಾನಕ್ಕೆ ಹೋದರು. ೩೦. ಪೌಲನು ತಾನೇ ಜನರ ಬಳಿಗೆ ಹೋಗ ಬೇಕೆಂದಿರಲಾಗಿ, ಸ್ನೇಹಿತರು ತಡಿಸಿದರು. ೩೧. ಮತ್ತು ಪರಸ್ಥಳದವರಾದ ಕೆಲವು ಹೆಗ್ಗಡೆಗಳು ಪ್ರೀತಿಯಿಂದ ಪೌಲನ ಸಮೀಪಕ್ಕೆ ಜನರನ್ನು ಕಳುಹಿಸಿ, ರಂಗಸ್ಥಾನಕ್ಕೆ ಬರಬಾರದೆಂದು, ತಿಳಿಸಿದರು. ೩೨. ಆ ರಂಗಸ್ಥಾನದಲ್ಲಿ ಅತ್ಯಂತ ಕೋಲಾಹಲವಾಗಿ, ಒಬ್ಬರು ಹೀಗೆ, ಒಬ್ಬರು ಹಾಗೆ ಕೂಗಿ, ಹೆಚ್ಚು ಜನರು ಅಲ್ಲಿಗೆ ಬಂದ ಕಾರಣವೇನೆಂದು, ಅರಿಯದೆ ಇದ್ದರು. ೩೩. ಆಗ ಯೆಹೂದರು ತಮ್ಮ ಕಡೆಯವನಾದ ಅಲೆಕ್ಸಂದ್ರನನ್ನು ವಿಗ್ರಹಾರಾಧನಾವೈರಿಗಳೆಂದು ಹೆಸರ್ಗೊಂಡ ಯೆಹೂದರ ಮೇಲೆ ಬಿದ್ದ ಗುಂಪಿನವರ ಕೋಪೋದ್ರೇಕವನ್ನು ಕ್ರೈಸ್ತರ ಮೇಲೆ ತಿರುಗಿಸುವದಕ್ಕಾಗಿ ಜನರಿಗೆ ಭಾಷಣ ಮಾಡುವ ಹಾಗೆ, ಗುಂಪಿನಿಂದ ಹೊರಗೆ ತಂದರು. ಅಲೆಕ್ಸಂದ್ರನು ಕೈಯಿಂದ ಸುಮ್ಮನಿರ್ರಿ ಯಂತ ಸಂಜ್ಞೆ ಮಾಡಿ, ಮಾತಾಡಲೆಸಗಲು, ೩೪. ಅವನಿಗೆ ಮಾತಿಗೆ ಅವಕಾಶವಾಗಲಿಲ್ಲಾ; ಯಾಕೆಂದರೆ ಗುಂಪಿನವರು ಅವನು ಯೆಹೂದನೆಂದು ಗುರುತು ತಿಳಿದು, ಕೋಪಭ್ರಷ್ಟರಾಗಿ ಒಂದೇ ಬಾಯಿಂದ: ಎಫೆಸದವರ ದಿಯಾನಾದೇವಿ ದೊಡ್ಡವಳೆಂದು, ಕೂಗುತ್ತಾ ಇದ್ದರು. ೩೫. ಮುಖ್ಯಾಧಿಪತಿಯಾದ ಪಟ್ಟಣಶೆಟ್ಟಿ ಬಂದು, ಜನಸಮೂಹವನ್ನು ಯುಕ್ತಿಯಿಂದ ಸಂತೈಸಿದನು. ಹ್ಯಾಗೆಂದರೆ: ಅವರನ್ನು ನಯದಿಂದ ಬೋಳ್ಕವಿಸಿ, ಪಟ್ಟಣದ ಶಿರೋಮಣಿಯಾದ ದಿಯಾನಾದೇವಿಯ ಲೋಕ ಪ್ರಸಿದ್ಧ ಪೂಜೆಯನ್ನೂ ಆಕಾಶದಿಂದ ಬಿದ್ದ ವಿಗ್ರಹವೆಂಬ ಅತುಲ್ಯವಾದ ಒಡವೆಯನ್ನೂ ವರ್ಣಿಸಿ, ೩೬. ಹೀಗಿರಲಾಗಿ ನಿಷ್ಪ್ರಯೋಜಕವಾದ ಬುದ್ಧಿ ಇಲ್ಲದ ವ್ಯವಹಾರದಲ್ಲಿ ಶೀರ ಬಾರದೆಂದು ಎಚ್ಚರಿಸಿ, ೩೭. ಜನರು ಅನ್ಯಾಯದಿಂದ ಕೈಹಾಕಿದವರ ಮೇಲೆ ಅಪರಾಧವಿಲ್ಲವೆಂದು ತೋರಿಸಿ, ೩೮. ೩೯. ದೆಮೇತ್ರಿಯನು ಕ್ರಮದಿಂದ ನ್ಯಾಯ ಸಭೆಗೆ ಬಂದು ವ್ಯಾಜ್ಯವನ್ನು ನಡಿಸ

ಅಪೌ. ಕ್ರಿ. ೧೫, ೪೦.

ಬೇಕೆಂದು ಆಜ್ಞಾಪಿಸಿ, ೪೦. ಕಾರಣವಿಲ್ಲದೆ ಹುಟ್ಟಿದ ಕಲಹಕ್ಕೆ ಮಹಾರಾಜನು ಶಿಕ್ಷೆ ಕೊಟ್ಟಾನೆಂದು ಹೆದರಿಸಿದನು. ಅವನ ಮಾತಿಗೆ ಜನರು ಕಿವಿಕೊಟ್ಟು, ಅವನ ಅಪ್ಪಣೇ ಪ್ರಕಾರ ಸಮಾಧಾನವಾಗಿ ತಮ್ಮ ತಮ್ಮ ಮನೆಗಳಿಗೆ ಹೋದರು.

೭. ಕಾರಿಂಥದವರ ಎರಡನೆ ಪತ್ರಿಕೆಯು.

ಬೇಗ ಹುಟ್ಟಿದ ಕಲಹವು ಬೇಗ ನಿಂತು ಹೋದರೂ, ಹೆಚ್ಚು ದಿವಸ ಎಫೆಸದಲ್ಲಿ ಉಳಿದು ಕೊಂಡರೆ, ಬಂದು ವೇಳೆ ಹೊಸ ಗುಬಾರು ಉಂಟಾದೀತೆಂದು ಎಣಿಸಿ ಕೊಂಡು, ಪೌಲನು ಅವಸರದಿಂದ ಪ್ರಯಾಣಕ್ಕೆ ಹೊರಡ ಬೇಕೆಂದು, ಸಭೆಯವರನ್ನು ಇನ್ನೊಂದು ಸಾರಿ ಕೂಡಾ ಕರದು, ಅವರ ಅಪ್ಪಣೆ ತೆಗದು ಕೊಂಡು, ತ್ರೊಯ ಪಟ್ಟಣಕ್ಕೆ ಹೋದನು. ಮೊದಲನೇ ಪತ್ರಿಕೆಯನ್ನು ತೀತನ ಕೈಯಿಂದ ಕೊರಿಂಥಕ್ಕೆ ಕಳುಹಿಸಿ, ಕೊರಿಂಥದ ಸಭೆಯವರು ಪತ್ರಿಕೆಯನ್ನು ಹ್ಯಾಗೆ ಅಂಗೀಕರಿಸುತ್ತಾರೆಂದು ತಿಳಿಸುವದಕ್ಕೆ ತಾನೂ ಪ್ರಯಾಣಾ ಮಾಡಿ, ತಂಗ ತಕ್ಕ ತ್ರೊಯ ಪಟ್ಟಣದಲ್ಲಿ ತನ್ನನ್ನು ತಿರಿಗಿ ಕಾಣಿಯ ಬೇಕೆಂಬ ಅಪ್ಪಣೆಯ ಪ್ರಕಾರ, ತೀತನು ಬಂದನೆಂದು ನೆನಸಿ, ಪೌಲನು ತ್ರೊಯಕ್ಕೆ ಬಂದಾಗ, ತೀತನು ಬರಲಿಲ್ಲವೆಂದು ತಿಳಿದು ಕೊಂಡನಂತರ, ಕೊರಿಂಥದ ವರ್ತಮಾನ ಸಿಕ್ಕದ ಕಾರಣ, ಸಮಾಧಾನವಿಲ್ಲದೆ, ತಿಮೊಥೆಯನ ಸಂಗಡ ತಡವಿಲ್ಲದೆ ಮುಂದೆ ಹೋದನು. ಮಕೆದೊನ್ಯದಲ್ಲಿ, ಫಿಲಿಪ್ಪಿಯಲ್ಲಿಯೋ ಥೆಸ್ಸಲೋನಿಕೆಯಲ್ಲಿಯೋ ಬೆರೋಯದಲ್ಲಿಯೋ ತೀತನು ಕೊರಿಂಥದಿಂದ ಬಂದು, ಪೌಲನನ್ನು ಕಲತು, ಅವನಿಗೆ ಕೊರಿಂಥದ ಸಭೆಯ ವಿಷಯವಾಗಿ ಸಂತೋಷ ವ್ಯಸನಕರವಾದ ವರ್ತಮಾನಗಳನ್ನು ತಿಳಿಸಿದನು. ಮೊದಲನೆ ಪತ್ರಿಕೆಯು ಕೊರಿಂಥದ ಸಭೆಯ ಮನಸ್ಸಿಗೆ ಬಲವಾಗಿ ತಗಲಿತು. ಆದ್ದರಿಂದ ಅಗಮ್ಯಗಮನ ಮಾಡಿದವನನ್ನು, ಪತ್ರಿಕೆಯನ್ನು ಓದಿದ ಕೂಡಲೆ, ಸಭೆಯಿಂದ ಹೊರಗೆ ಹಾಕಿದರು. ಸಭೆಯಲ್ಲಿ ಉತ್ತಮರು ಪೌಲನು ಕೊರಿಂಥಕ್ಕೆ ಬರುವದನ್ನು ಬಯಕೆಯಿಂದ ಇದುರು ನೋಡುತ್ತಾ ಇದ್ದರು. ಆದರೆ ಅಪೊಸ್ತಲನ ಎದುರಾಳಿಗಳು ತಮ್ಮ ವೈರ ವೃತ್ತಿಯನ್ನು ಬಿಡದೆ, ಹೊಸ್ತಾಗಿ ಬಂದ ಪತ್ರಿಕೆಯನ್ನು ಸಹ ತಮ್ಮ ಪ್ರಯೋಜನಕ್ಕೆ ಬಳಸಿ, ಕೊರಿಂಥಕ್ಕೆ ಬರುತ್ತೇನೆಂದು ಕೆಲವು ಸಾರಿ ಅದರಲ್ಲಿ ಬರದ ಮಾತು ಕೈ ಕೊಳ್ಳಲಿಲ್ಲವೆಂತ ಚಾಂಚಲ್ಯದ ತಪ್ಪು ಪೌಲನ ಮೇಲೆ ಹೊರಿಸಿ, ಮುಂಚೆ ತಮ್ಮೊಳಗೆ ವಾಸಾ ಮಾಡಿದಾಗ ಸಾಧು ಗುಣವನ್ನು ತೋರಿಸಿದ ಮೇಲೆ, ಈಗ ಪತ್ರಿಕೆಯಲ್ಲಿ ಗರ್ವದಿಂದಲೆ ಕಠಿಣವಾಗಿ ಗದರಿಸುತ್ತಾನೆಂದೂ, ಲೋಭದಿಂದಲೆ ಧರ್ಮದ್ರವ್ಯಸಂಗ್ರಹದ ವಿಷಯವಾಗಿ ಅಷ್ಟು ಜಾಗ್ರತೆಯಾಗಿ ವಿಧಿಸುತ್ತಾನೆಂದೂ, ಪೌಲನು ನಿಜ ಅಪೊಸ್ತಲನಲ್ಲವೆಂದೂ ಹೇಳುತ್ತಿದ್ದರು. ಪೌಲನು ಈ ವೃತ್ತಾಂತಗಳನ್ನೆಲ್ಲಾ ತೀತನ ವಾಕ್ಯದಿಂದ ಕೇಳಿದನಂತರ, ಬೇಗ ಕೊರಿಂಥಕ್ಕೆ ಹೋದರೆ ಬಗ್ಗೈದಲ್ಲವೆಂದು ತಿಳಿದು ಕೊಂಡು ಎರಡನೇ ಪತ್ರಿಕೆಯನ್ನು ಬರದು, ತನಗೆ ಮುಂಚಿತವಾಗಿ ತೀತನ ಮತ್ತು ಬೇರೆ ಇಬ್ಬರ ಕೈಗೆ ಒಪ್ಪಿಸಿ ಸು. ೪, ೧೬—೨೪., ಮಕೆದೊನ್ಯದಿಂದ ಕೊರಿಂಥಕ್ಕೆ ಕಳುಹಿಸಿದನು. ಈ ಪತ್ರಿಕೆ ೫೭ನೆ ವರ್ಷದ ಗ್ರೀಷ್ಮ ಕಾಲದಲ್ಲಿ ಕೊರಿಂಥಕ್ಕೆ ಮುಟ್ಟಿತೆಂದು, ಎಣಿಕೆ ಮಾಡ ಬಹುದು. ಸಂಕೋಚ ವಾಕ್ಯಲಕ್ಷ್ಯದಲ್ಲಿ ತೋರುವ ಮನಃಕ್ಷೋಭದಿಂದ ಸಭೆಯಲ್ಲಿ ಹುಟ್ಟಿದ ಭೇದಗಳನ್ನು ಸೂಚಿಸಿ, ಎದುರಾಳಿಗಳು ತನ್ನ ಮೇಲೆ ಹಾಕಿದ ದೂರುಗಳನ್ನು ಅಲ್ಲಗಳದು, ತನ್ನ ಅಪೊಸ್ತಲತ್ವದ ಅಧಿಕಾರವನ್ನು ಸ್ಥಾಪಿಸಿ, ಅನೇಕವಾದಿಗಳಿಗೆ ವಿರೋಧವಾಗಿ ಕ್ರೈಸ್ತಬೋಧಕೋದ್ಯೋಗದ ಘನತ್ವವನ್ನು ಪರಿಷ್ಕಾರವಾಗಿ ವರ್ಣಿಸುತ್ತಾನೆ.

೨ ಕೊರಿ. ೧, ೧.

ಮೇಲೆ ಹೇಳಿರುವ ಮುಖ್ಯಾಭಿಪ್ರಾಯವು ವಿಶಿಷ್ಟ ಪತ್ರಿಕೆಯಲ್ಲಿಯೂ ಕಾಣುವದರಿಂದ ಈ ಪತ್ರಿಕೆಯ ಭಾಗಗಳನ್ನು ವಿಶೇಷಿಸುವದು ಪ್ರಯಾಸವಾಗಿದೆ. ಆದರೂ ಮೂರು ಭಾಗ ಮಾಡ ಬಹುದು. ೧) ಸ. ೧—೭. ೨) ಸ. ೮. ೯. ೩) ಸ. ೧೦—೧೩.

ಮೊದಲನೆ ಭಾಗದಲ್ಲಿ ಅಪೊಸ್ತಲನು ಅತಿಶಯವಾದ ಮಮತೆಯ ಮಾತುಗಳಿಂದ ಸಭೆಯ ಉತ್ತಮರಿಗೆ ನುಡಿದು, ತಾನು ಅನುಭವಿಸಿದ ಶ್ರಮ ಪ್ರಾಣಸಂಕಟಗಳನ್ನೂ, ತಾನು ಕೊರಿಂಥಕ್ಕೆ ಬಾರದೆ ಇದ್ದ ಕಾರಣವನ್ನೂ, (ಸ. ೧. ೨.) ವಿವರಿಸಿ, ಪಶ್ಚಾತ್ತಾಪ ಪಟ್ಟ ಪಾತಕಿಯನ್ನು ತಿರಿಗಿ ಸಭೆಯಲ್ಲಿ ಶೇರಿಸ ಬೇಕೆಂದು ಬುದ್ಧಿ ಹೇಳಿ, ಸುವಾರ್ತಾಪ್ರಸಂಗೋದ್ಯೋಗದ ಭಾವವನ್ನೂ, ತಾನು ಅಪೊಸ್ತಲನ ವೃತ್ತಿ ನಡಿಸುವ ಪ್ರಮಾಣವನ್ನೂ ಬಹು ಘನವಾದ ರೀತಿಯಿಂದ (ಸ. ೩—೭.) ವರ್ಣಿಸುತ್ತಾನೆ.

ಎರಡನೆ ಭಾಗದ ೮ನೆ ೯ನೆ ಸಂಧಿಗಳು ಕೊರಿಂಥದಲ್ಲಿ ಚನ್ನಾಗಿ ನಡೆಯದೆ ಇದ್ದ ಧರ್ಮದ್ರವ್ಯ ಸಂಗ್ರಹದ ವಿಷಯವಾಗಿವೆ.

ಮೂರನೆ ಭಾಗದಲ್ಲಿ ಪೌಲನು ವಿಶೇಷವಾಗಿ ಎದುರಾಳಿಗಳನ್ನು ಕಠಿಣವಾಗಿ ಗದರಿಸಿ, ಅವರ ದೂರುಗಳನ್ನು ತಳ್ಳಿ, ದೇವರು ತನಗೆ ಕೊಟ್ಟ ವಿಶೇಷವಾದ ಕೃಪೆಯನ್ನು ಸ್ತುತಿಸಿ, ಗುಣವಾಗಲೊಲ್ಲದವರಿಗೆ ಕೊರಿಂಥಕ್ಕೆ ಬಂದನಂತರ ಚನ್ನಾಗಿ ಶಿಕ್ಷೆ ಮಾಡುತ್ತೇನೆಂದು ಹೆದರಿಸುತ್ತಾನೆ.

ಈ ಪತ್ರಿಕೆಯು ಅಪೊಸ್ತಲನಾದ ಪೌಲನ ಉದ್ಯೋಗಶ್ರಮಗಳನ್ನೂ ಸೇವಾಶೀಲವನ್ನೂ ವಿಶೇಷವಾಗಿ ಪ್ರಕಟ ಮಾಡುವದರಿಂದ, ಪೌಲನನ್ನು ಅನುಸರಿಸ ಬೇಕೆಂಬ ಮನಸ್ಸುಳ್ಳ ಸುವಾರ್ತೆಯ ಬೋಧಕರಿಗೆಲ್ಲಾ ಅದರ ಅಭ್ಯಾಸವು ಅತಿ ಪ್ರಯೋಜನವುಳ್ಳದ್ದಾಗಿದೆ.

ಮೊದಲನೆ ಭಾಗವು. ಸ. ೧—೭.

೧) ಉಪದ್ರವದಲ್ಲಿ ಬಂದ ಶಾಂತಿಯು ವಿಷಯವಾದ ಕೃತಜ್ಞಾಪನೆ. ೧, ೧—೧೧. ೨) ಮೊದಲು ಮಾಡಿದ ಪ್ರಯಾಣಾಲೋಚನೆಯನ್ನು ಬಿಟ್ಟ ಕಾರಣದ ವಿವರವು, ೧, ೧೨—೨, ೧೩. ೩) ಸುವಾರ್ತೋದ್ಯೋಗವು. ೨, ೧೪—೩, ೧೪. ೪) ಸುವಾರ್ತಾಸೇವಕನ ಉನ್ನತತ್ವವೂ ನ್ಯೂನತ್ವವೂ. ಸ. ೪. ೫) ಕ್ರಿಸ್ತ ಸೇವಕನ ಆಶೆಯೂ ಅದರಿಂದ ಹುಟ್ಟುವ ಯಾಥಾರ್ಥ್ಯವೂ. ಸ. ೫. ೬) ಕೊರಿಂಥದವರಿಗೆ ಪೌಲನು ಹೇಳುವ ಬೋಧನೆಯ ಶಿಕ್ಷೆಯ ಮಾತುಗಳು. ಸ. ೬. ೭) ಮುಂಚಿನ ಪತ್ರಿಕೆಯ ಸತ್ಫಲದ ಸೂಚನೆ. ಸ. ೭.

ವಿವರಣೆ.

ವಂದನೆ. ಉಪದ್ರವದ ಕಾಲದಲ್ಲಿ ಪ್ರಾಪ್ತವಾದ ಶಾಂತಿಗಾಗಿ ಮಾಡುವ ದೇವರ ಸ್ತೋತ್ರವು.

ಸ. ೧, ೧—೧೧.

ವಂದನೆ.

ವ. ೧. ಮೊದಲನೆ ಕೊರಿಂಥದವರ ಪತ್ರಿಕೆಯ ಆರಂಭದ ವಂದನೆಯಲ್ಲಿ ಸೋಸ್ಥೆನೆಯನ ಹೆಸರು ಪೌಲನ ಹೆಸರಿಗೆ ಜೋಡಾಗಿರುವ ಪ್ರಕಾರ, ಇಲ್ಲಿ ತಿಮೊಥೆಯನ ಹೆಸರು ಶೇರಿಯದೆ. ಪೌಲನು ಮೊದಲನೆ ಪತ್ರಿಕೆಯನ್ನು ಬರದಾಗ ತಿಮೊಥೆಯನು, ತಾನು ಕೊರಿಂಥಕ್ಕೆ ಹೋಗುವದಕ್ಕೆ ನೇಮಕವಾದ್ದರಿಂದ, ವಂದನೆ

ಮಾಡಲಿಲ್ಲ. ಇಲ್ಲಿ ಸೋಸ್ಥೆನೆಯನ ವಂದನೆ ಕಾಣುವದಿಲ್ಲ; ಅವನು ಬಂದು ವೇಳೆ ಈ ಪತ್ರಿಕೆಯನ್ನು ಕೇಳಿ ಬರದು, ಅದನ್ನು ತೀತನ ಸಂಗಡ ಕೊರಿಂಥಕ್ಕೆ ಕೊಂಡು ಹೋಗುವದಕ್ಕೆ ನೇಮಕವಾಗಿದ್ದನು. ಪೌಲನು ಕೊರಿಂಥ ಪಟ್ಟಣದಲ್ಲಿ ಮಾತ್ರವಲ್ಲ, ಅಕಾಯ ಸೀಮೆಯಲ್ಲಿಯೂ ಇರುವ ಸಭೆಯವರನ್ನು ವಂದಿಸುವದರಿಂದ, ಸುವಾರ್ತೆಯು ಆಗ ಆ ಕಡೆಯಲ್ಲಿ ಹೆಚ್ಚು ವಿಸ್ತಾರವಾಯಿತೆಂದು, ತೋರುತ್ತದೆ. ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಸಮಾಧಾನವೂ ಆಗಲಿ ಎಂಬ ವಂದನೆಯ ಮಾತು ಹೇಳಿದನಂತರ, ಪೌಲನು ಪತ್ರಿಕೆಯನ್ನು ತೊಡಗಿಸುವದು ಹ್ಯಾಗಂದರೆ:

ಉಪದ್ರವದಲ್ಲಿ ಪ್ರಾಪ್ತವಾದ ಶಾಂತಿಗಾಗಿ ಮಾಡುವ ಸ್ತೋತ್ರವು. ವ. ೩—೭.

೩. ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ ೧) ದೇವರಿಗೆ ಸ್ತೋತ್ರವು ೨); ಅವನು ಕನಿಕರಗಳ ತಂದೆಯೂ ಎಲ್ಲಾ ಆದರಣೆಯ ದೇವರೂ ಆಗಿದ್ದು ೩), ೪. ನಾವೇ ದೇವರಿಂದ ಆದರಿಸಲ್ಪಡುವ ಆದರಣೆಯ ಮೂಲವಾಗಿ ಎಲ್ಲಾ ಉಪದ್ರವದಲ್ಲಿ ಇರುವವರನ್ನು ಆದರಿಸಲು ೪) ಶಕ್ತರಾಗುವ ಹಾಗೆ, ನಮ್ಮನ್ನು ನಮ್ಮ ಎಲ್ಲಾ ಉಪದ್ರವದಲ್ಲಿ ಆದರಿಸುತ್ತಾನೆ ೫). ೫. ಯಾಕಂದರೆ ಕ್ರಿಸ್ತನ ಶ್ರಮೆಗಳು ೬) ನಮ್ಮಲ್ಲಿ ಹೆಚ್ಚುವ ಪ್ರಕಾರವೇ, ನಮ್ಮ ಆದರಣೆಯು ಕ್ರಿಸ್ತನ ೭) ಮುಖಾಂತ್ರ ಹೆಚ್ಚುತ್ತದೆ. ೬. ಆದರೆ ನಾವು ಉಪದ್ರವ ಪಟ್ಟರೆ, ನಾವು ಪಡುವ ಅದೇ ಶ್ರಮೆಗಳ ತಾಳ್ಮೆಯಲ್ಲಿ ಬಲವಾಗಿರುವ ನಿಮ್ಮ ಆದರಣೆ ರಕ್ಷಣೆಗಳಿಗಾಗಿಯೇ ಸರವೇ; ಆದರಣೆ ಪಟ್ಟರೆ, ನಿಮ್ಮ ಆದರಣೆ ರಕ್ಷಣೆಗಳಿಗಾಗಿಯೇ ಸರವೇ. ೭. ಮತ್ತು ಶ್ರಮೆಗಳಲ್ಲಿ ಹಾಗೆಯೇ ಆದರಣೆಯಲ್ಲಿಯೂ ಪಾಲುಗಾರರಾಗಿದ್ದೀರೆಂದು ೮) ತಿಳಿದಿರುವದರಿಂದ, ನಮ್ಮ ನಿರೀಕ್ಷೆಯು ನಿಮ್ಮ ವಿಷಯವಾಗಿ ದೃಢವಾಗಿದೆ.

೧. ಯೇಸು ಕ್ರಿಸ್ತನ ತಂದೆಯಂಬ ದೇವರ ಪೆಸರು ಕ್ರೈಸ್ತರಲ್ಲಿ ಅತಿಶ್ಲಾಘ್ಯವಾಗಿಯೂ ರೂಢಿಯಾಗಿಯೂ ಇದೆ. ದೇವರು ತನ್ನ ಸ್ವರೂಪನಾದ ಕ್ರಿಸ್ತನೆಂಬ ಕರ್ತನಲ್ಲಿ ಲೋಕಕ್ಕೆ ಪ್ರತ್ಯಕ್ಷನಾದ ಕಾರಣ, ಕ್ರಿಸ್ತನ ಸ್ಮರಣೆ ಇಲ್ಲದ ದೇವರ ಜ್ಞಾನವನ್ನೆ ಕ್ರೈಸ್ತರ ಮನಸ್ಸಿನಲ್ಲಿ ಪುಟ್ಟುವದಿಲ್ಲ.

೨. ಆಸ್ಯದಲ್ಲಿ ತನಗೆ ಬಂದ ಕಾಟಲೆ ಕಾರಿಂಥದವರಿಗೆ ತಿಳಿಸಲೆಸಗುತ್ತಾ, ಮೊದಲಾಗಿ ಕಾಟಲೆಯೇ ದೇವರ ಅನುಗ್ರಹವೆಂದು, ಮನಃಪೂರ್ವಕ ಸ್ತೋತ್ರ ಮಾಡುತ್ತಾನೆ. ಪ್ರಯಾಸಕ್ಕಾದರೂ ಪ್ರಸ್ತುತಿ ಮಾಡುವದು ಅಪಾಸ್ತಲನಿಗೆ ವಿಹಿತವಾದದ್ದು.

೩. ಅಂದರೆ ದೇವರು ಕರುಣೆಗೂ ಎಲ್ಲಾ ಆದರಣೆಗೂ ಏಕ ಮೂಲವಾಗಿದ್ದಾನೆ. ಆತನಿಂದ ಪ್ರಾಪ್ತವಾಗದ ಆದರಣೆ ಎಲ್ಲಾ ವ್ಯರ್ಥವಾಗಿದೆ. ಇದನ್ನು ತಾನು ಅನುಭವದಿಂದ ತಿಳಿದು ಕಾಂಡೆನೆಂದು, ಪೌಲನು ಮುಂದಿನ ವಚನಗಳಲ್ಲಿ ವಿವರಿಸುತ್ತಾನೆ.

೪. ತನಗೂ ತಾನು ಸ್ಥಾಪಿಸಿದ ಸಭೆಯವರಿಗೂ ಉಂಟಾದ ಪ್ರೀತಿಯ ಅನ್ಯೋನ್ಯದ ನಿಮಿತ್ತ ಪೌಲನು ತನಗೆ ಪ್ರಾಪ್ತವಾದ ಅನುಗ್ರಹವೆಲ್ಲಾ ತನಗೆ ಮಾತ್ರವಲ್ಲ, ತನಗೆ ಅತಿ ಪ್ರಿಯರಾದ ಸಭೆಯವರಿಗೂ ದಾರಕಿದಂಥಾದ್ದೆಂದು ತಿಳಿದು ಕಾಳ್ಳುತ್ತಾನೆ. ಸಭೆಗೆ ಬಂದ ಎಲ್ಲಾ ಉಪದ್ರವ ಶ್ರಾಧನೆಗಳ ಭಾರವು ಎ

೨ ಕೊರಿ. ೧, ೪—೧೧.

ಳೆ ಸನಿ ತಾಟಗಳಂತೆ ಇದ್ದ ಸಖೆಗಳ ಪಾಲಕರಾಗಿದ್ದ ಅಪಾಸ್ತಲರ ತಲೇ ಮೇಲೆ ವಿಶೇಷವಾಗಿ ಬಿತ್ತು. ಆದರೆ ಅವರಿಗೆ ಪ್ರಾಪ್ತವಾದ ಆದರಣೆಯಲ್ಲಿ ಸಖೆಯವರು ಸಪಾ ಪಾಲುಗಾರರಾದರು. ಬಾಧಕರಿಗೂ ಸಖೆಯವರಿಗೂ ಇಂಥಾ ಅನ್ಯೋನ್ಯವು ಅತ್ಯಾವಶ್ಯಕವಾದದ್ದು. ಕೃಪೆಯ ಸ್ವಾನುಭವವಿಲ್ಲದ ಬಾಧಕನು ನಿಷ್ಪ್ರಯೋಜಕನಾಗಿದ್ದಾನೆ.

೫. ಧೈರ್ಯವನ್ನು ಕಾಡುವದರಿಂದಲೂ ಸಪಾಯ ಮಾಡುವದರಿಂದಲೂ ಆದರಿಸುತ್ತಾನೆ.

೬. ಅಂದರೆ ಕ್ರಿಸ್ತನಿಗಾಗಿಯೂ ಕ್ರಿಸ್ತನ ಪಾಗೆಯೂ ಅನುಭವಿಸುವ ಶ್ರಮಗಳು ಗಲ. ೬, ೧೭. ಫಿಲಿ. ೩, ೧೦. ಮಪಾ ಪ್ರಧಾನಯೋಜಕನು ಶಾಧನೆಪಟ್ಟದ್ದರಿಂದ, ಕರುಣೆಯುಳ್ಳವನಾದ ಪ್ರಕಾರ ಇಬ್ರಿ. ೪, ೧೫., ಸುವಾರ್ತೆಯ ಯಾಜಕಾದ್ಯೋಗಕ್ಕೆ ನೇಮಕವಾದ ಕ್ರಿಸ್ತನ ಸೇವಕರು ನಾನಾ ಶಾಧನೆಗಳಲ್ಲಿ ಶೇರಿ, ಕರುಣಾಗುಣವುಳ್ಳವರಾಗ ಬೇಕು. ದೇವರ ಮಾರ್ಗಗಳಲ್ಲಿ ಪುಟ್ಟಿದ ಕೃಪೆಯ ಸ್ವಾನುಭವದಿಂದಲೆ ರಾ೧ ಮಿ. ೮, ೧೭. ಕಾಲಾ. ೧, ೨೪. ಬಾಧಕರು ಆದರಿಸುವ ಸಾಮರ್ಥ್ಯವನ್ನು ಪಡದು ಕಾಳ್ಳ ಬೇಕು. ಕ್ರಿಸ್ತನ ಶ್ರಮಗಳು ಅವನ ಖಕ್ತರಿಗೂ ಬರುತ್ತವೆ.

೭. ನಮ್ಮ ವಿಮೋಚಕನೂ ಮಧ್ಯಸ್ಥನೂ ಅಗ್ರಗಾಮಿಯೂ ಕರ್ತನೂ ಆದ ಕ್ರಿಸ್ತನಿಂದ.

೮. ಸುವಾರ್ತಾಸೇವಕನ ಶ್ರಮಗಳೂ ಆದರಣೆಯೂ ಸಖೆಗಳಿಗೆ ಕ್ಷೇಮಕರವಾಗಿವೆ. ಯುದ್ಧಾಗ್ರೇಸರನ ಶ್ರಮಗಳಿಂದ ಅವನಲ್ಲಿ ಪುಟ್ಟುವ ತಾಳ್ಮೆಯು ಉಳಿದವರಲ್ಲಿ ಸಮಾನವಾದ ತಾಳ್ಮೆಯನ್ನು ಪುಟ್ಟಿಸ ತಕ್ಕದ್ದು. ಜಾತೆಯ ಯುದ್ಧಸ್ಥರು ಅವನನ್ನು ನಾಟಿ, ಧೈರ್ಯಶಾಲಿಗಳಾಗ ಬೇಕು. ದೇವರ ಕೃಪೆಯಿಂದ ಅವನಿಗೆ ಪ್ರಾಪ್ತವಾಗುವ ಆದರಣೆಯು ಸಖೆಯವರಿಗೂ ಆದರಣೆಯನ್ನು ಕಾಟ್ಟು ಕ್ಷೇಮಕರವಾಗ ಬೇಕು.

ಶ್ರಮಮಪತ್ವವು ಸಪಾಯರೀತಿಯು, ಇವುಗಳ ವಿವರವು. ವ. ೪—೧೧.

ವ. ೪. ನಾವು ಹೇಳುವ ಶ್ರಮಗಳು ಎಂಥಾವುಗಳೆಂದು, ನೀವು ತಿಳಿದು ಕೊಳ್ಳುವ ಹಾಗೆ, ನಾನು ಎಫೆಸದಲ್ಲಿದ್ದು, ನನ್ನ ಮುಂಚಿನ ಪತ್ರಿಕೆಯನ್ನು (೧ ಕೊರಿ. ೧೫, ೩೨.) ಸಹೋದರರಿಗೆ ಒಪ್ಪಿಸಿ ಕಳುಹಿಸಿದ ಬಳಿಕ, ಹೆಚ್ಚಾದ ಉಪದ್ರವವನ್ನು ತಾಳಿದೆನೆಂದು ನಿಮಗೆ ತಿಳಿಸುತ್ತೇನೆ. ಹ್ಯಾಗಂದರೆ ಮನಸ್ಸಿನಲ್ಲಿ ಅತಿ ವ್ಯಾಕುಲ ಪಡುವದಲ್ಲದೆ, ಪ್ರಾಣಸಂಕಟದಲ್ಲಿ ಬಿದ್ದೆನು. ೯. ನಾನು ಮರಣಕ್ಕೆ ಸಿದ್ಧನಾಗಿದ್ದದ್ದೇ ಸರಿ. ಸ್ವಂತ ಭರವಸವನ್ನೆಲ್ಲಾ ಬಿಟ್ಟು, ಸತ್ತವರನ್ನು ಎಬ್ಬಿಸುವಂಥ, ಪ್ರಾಣ ಸಂಕಟದಲ್ಲಿ ಬಿದ್ದವರನ್ನು ರಕ್ಷಿಸುವಂಥ, ದೇವರ ಸರ್ವ ಶಕ್ತಿಯಿಂದಲೆ ಪ್ರಾಣವನ್ನುಳಿಸಿ ಕೊಂಡೆನೆಂದು, ತಿಳಿಯಲಾಯಿತು. ೧೦. ಈ ಪ್ರಾಣ ಸಂಕಟಕ್ಕೆ ನನ್ನನ್ನು ತಪ್ಪಿಸಿದವನು ಅನುದಿನವು ನನ್ನನ್ನು ತಪ್ಪಿಸುತ್ತಾನೆ, ಇನ್ನು ಮುಂದೆಯೂ ತಪ್ಪಿಸುವನು.

೧೧. ನೀವು ಸಹ, ಅನೇಕರ ಮುಖಾಂತರವಾಗಿ ನಮಗಾದ ಉಪಕಾರಕ್ಕಾಸ್ಕರ ಅನೇಕರಿಂದ ನಮ್ಮ ವಿಷಯ ಸ್ತೋತ್ರ ಉಂಟಾಗುವ ಹಾಗೆ, ನಮಗಾಸ್ಕರ ಬೇಡಿಕಾಂಡು, ಸಹಾಯ ಮಾಡುತ್ತೀರಲ್ಲಾ?

ಈ ಮಾತಿನಿಂದ ಪೌಲನು ಬೋಧಕರಿಗೋಸ್ಕರ ವಿಶೇಷವಾಗಿ ವಿಜ್ಞಾಪನೆ ಮಾಡುವ ಧರ್ಮವೃತ್ತಿ ಘನವಾದದ್ದೆಂದು ಕ್ರೈಸ್ತರಿಗೆ ಜ್ಞಾಪಿಸುತ್ತಾನೆ. ನಮ್ಮ ಸಹಾಯದಿಂದ ದೇವರು ತನ್ನ ರಾಜ್ಯವನ್ನು ಹೆಚ್ಚು ಹೆಚ್ಚಾಗಿ ಕಟ್ಟಿ ಕೊಳ್ಳ ಮನಸ್ಸುಳ್ಳವನಾಗಿದ್ದಾನೆ; ನಮ್ಮ ಪ್ರಾರ್ಥನಾನುಸಾರವಾಗಿ ಆತನ ನಾಮವು ಪರಿಶುದ್ಧವಾಗ ಬೇಕೆಂದೂ, ಆತನ ರಾಜ್ಯವು ಬರಬೇಕೆಂದೂ, ಆತನ ಚಿತ್ತವು ಆಗ ಬೇಕೆಂದೂ, ನೇಮಕವಾಗಿದೆ.

೫೬೮೮ ಅಪೊ. ಚ. ೨೦. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

೨ ಕೊರಿ. ೧, ೧೨—೨೦.

ಕ್ರಿಸ್ತನ ಅವಯವಗಳಾದವರೆಲ್ಲರೂ ಅನುಭವಿಸಿದ ಕಷ್ಟವು ಪರಿಹಾರವಾದಲ್ಲಿ ಎಲ್ಲರಲ್ಲಿಯೂ ಅಗಾಧವಾದ ಕೃತಜ್ಞತೆಯು ಹುಟ್ಟುತ್ತದೆ.

ಕೊರಿಂಥಕ್ಕೆ ಬರ ಬೇಕೆಂದು ತಾನು ಮೊದಲು ಮಾಡಿದ ಆಲೋಚನೆಯ ಪ್ರಕಾರ ಯಾಕೆ ಬರಲಿಲ್ಲವೆಂಬುವದನ್ನು ಅಪೊಸ್ತಲನು ತಿಳಿಸುತ್ತಾನೆ. ಸ. ೧, ೧೨—೨, ೧೩.

ಅ) ಅಪೊಸ್ತಲನು ಚಾಂಚಲ್ಯದಿಂದ ಕೊರಿಂಥಕ್ಕೆ ಬರಲಿಲ್ಲವೆಂದು ನೆನಸಲಾಗದು. ಸ. ೧, ೧೨—೨೨.

ವ. ೧೨. (ಇಷ್ಟು ಧೈರ್ಯವಾಗಿ, ದೇವರ ಸಹಾಯದಿಂದಲೂ ಕ್ರೈಸ್ತರ ವಿಜ್ಞಾಪನೆಯಿಂದಲೂ ನನಗೆ ರಕ್ಷಣೆಯುಂಟಾಯಿತೆಂದು, ಹೇಳುವದು ನನಗೆಯುಕ್ತವಾಗಿದೆ. ವ. ೧೧.) ಯಾಕೆಂದರೆ ಸ್ವಾರ್ಥಭಾವನೆಯಿಲ್ಲದೆ, ಆತ್ಮಗಳ ರಕ್ಷಣೆಯನ್ನೆ ಬಯಸುತ್ತಾ, ನರಯುಕ್ತಿ ಚಮತ್ಕೃತಿಯಿಂದ ಅಲ್ಲ, ದೇವರ ಕೃಪೆಯಿಂದಲೇ ಗೆಲ್ಲುತ್ತಾ, ದೇವರ ಆತ್ಮದಿಂದ ಹುಟ್ಟಿ ಆತನಿಗೆ ಸಮರ್ಪಕವಾದ ಯಥಾರ್ಥದಿಂದಲೂ ಮನಶ್ಶುದ್ಧಿಯಿಂದಲೂ ಎಲ್ಲಾ ಕಡೆಯಲ್ಲಿ, ವಿಶೇಷವಾಗಿ ನಿಮ್ಮಲ್ಲಿ, ನಡದು ಕೊಂಡೆನೆಂಬದಾಗಿ ನನ್ನ ಮನಸ್ಸು ನನಗೆ ಸಾಕ್ಷಿಯಾಗುತ್ತದೆಂದು ಹೇಳ ಬಹುದು. ೧೩. ನಾನು ಇಲ್ಲಿ ಬರದ ಮಾತುಗಳು ಸತ್ಯವೆಂದು, ನಿಮ್ಮಲ್ಲಿ ವಾಸ ಮಾಡಿ ಉದ್ಯೋಗವನ್ನು ಮಾಡಿದ ನನ್ನ ನಡತೆಯನ್ನು ನೆನವು ಮಾಡಿ ಕೊಂಡು ಒಪ್ಪಿ ಕೊಳ್ಳುವಿರಿ; ನಿಮ್ಮ ಹೃದಯಗಳಲ್ಲಿಯೂ ನಾನು ಇಂಥವನೆ ಎಂದು ನಿಶ್ಚಯವಾಗಿ ತಿಳಿಯುತ್ತೀರಿ. ಅಂತ್ಯದವರಿಗೂ ಈ ಪರಸ್ಪರ ಸನ್ಮಾನ ಪ್ರೀತಿಗಳ ಸಂಬಂಧವು ಕಡಿಮೆಯಾಗದೆ, ಧೃಢವಾಗಿರುವದೆಂದು ಕೋರುತ್ತೇನೆ. ೧೪. ಯೇಸು ಕ್ರಿಸ್ತನ ದಿವಸದಲ್ಲಿ ನಾನು ನಂಬಿಕೆಯುಳ್ಳ ಬೋಧಕನಾಗಿ ನಿಮ್ಮನ್ನು ಕ್ರಿಸ್ತನ ಸಮಾವಕ್ಕೆ ಕರದು ಕೊಂಡು ಬಂದೆನೆಂದು, ನೀವು ನನ್ನನ್ನು ಹೊಗಳುತ್ತಾ ಸಂತೋಷಿಸುವಿರಿ; ಮತ್ತು ನನಗೆ ನನ್ನ ವೃತ್ತಿ ಫಲವಾದ ನಿಮ್ಮಿಂದ ಆ ಮಹಾ ದಿವಸದಲ್ಲಿ ಸಂತೋಷವೂ ಮಾನವೂ ಉಂಟಾಗುವದು. ೧೫. ನಾನು ನಂಬಿಕೆಯುಳ್ಳ ಬೋಧಕನೆಂದು ನೀವು ತಿಳಿಯುತ್ತೀರೆಂಬ ಭರವಸದಿಂದ, ಸಂವರ್ತನವೆಂಬ ಮೊದಲನೆ ಕೃಪೆಯನ್ನು ನಿಮಗೆ ಕೊಟ್ಟನಂತರ, ವಿಶ್ವಾಸ ದೃಢೀಕರಣವೆಂಬ ಎರಡನೆ ಕೃಪೆಯನ್ನು ಕೊಡುವದಕ್ಕೆ ನಿಮ್ಮ ದರ್ಶನಕ್ಕೆ ಬರ ಬೇಕೆಂಬ ಮನಸ್ಸುಳ್ಳವನಾಗಿದ್ದೆನು. ೧೬. ಆಗ ನಿಮ್ಮಲ್ಲಿಂದ ಹೊರಟು ಮಕೆದೊನ್ಯವನ್ನು ಸಂಚರಿಸಿ, ಮತ್ತೆ ತಿರಿಗಿ ಕೊರಿಂಥಕ್ಕೆ ಬಂದು, ನನ್ನನ್ನು ಸಾಗ ಕಳುಹಿಸುವ ಕೆಲವರೊಡನೆ ಯೆರೂಸಲೇಮಿಗೆ ಪ್ರಯಾಣ ಮಾಡುವ ಆಲೋಚನೆಯಿಂದಿದ್ದೆನು. ೧೭. ಈ ವಿಷಯವನ್ನು ಲಘು ಮನಸ್ಸಿನಿಂದಲೂ ಅನಾಲೋಚನೆಯಿಂದಲೂ ನಿಶ್ಚೈಸಿದೆನೆಂದು, ನನ್ನ ಎದುರಾಳಿಗಳು ಹೇಳುವ ದೂರು ಸತ್ಯವೋ? ಅಥವಾ ಏನಾದರೂ ನಿಶ್ಚೈಸಿದ ಮೇಲೆ, ಪ್ರಥಮಾಲೋಚನೆಯನ್ನು ಬಿಡುವ ಹೇತುವು ಬಂದಲ್ಲಿ, ಚಂಚಲನಾಗಿ ಕಾಣಬಾರದೆಂಬ ಫಲವುಳ್ಳವನಾಗಿ ನಡದು ಕೊಳ್ಳ ಬೇಕೋ? ೧೮. ಹ್ಯಾಗಾದರೂ ನಿಮ್ಮಲ್ಲಿ ನಾನು ಮಾಡಿದ ಪ್ರಸಂಗವು ಎಷ್ಟು ಮಾತ್ರವೂ ಬೇರೆ ಆಗಲಿಲ್ಲವೆಂಬುವಕ್ಕೆ ದೇವರು ಸಾಕ್ಷಿ. ೧೯. ಯಾಕಂದರೆ, ನಾನು ಸಿಲ್ವಾನ ತಿಮೊಥೆಯರ ಸಂಗಡ ನಿಮಗೆ ಸಾರಿದ ದೇವರ ಮಗನಾದ ಯೇಸು ಕ್ರಿಸ್ತನ ವಾಕ್ಯವು ಬೇರೆ ಬೇರೆ ಆಗುವಂಥಾದಲ್ಲ. ನೀವು ನಂಬಿದ ಕೂಡಲೆ ನಂಬಿದ ವಾಕ್ಯವು ನಿಮ್ಮಲ್ಲಿ ನೆರವೇರಲಿಲ್ಲವೋ? ೨೦. ದೇ

ವರು ಕೊಟ್ಟ ವಾಗ್ದತ್ತಗಳೆಲ್ಲಾ ಯೇಸು ಕ್ರಿಸ್ತನಲ್ಲಿ ಪೂರ್ತಿಯಾಗಿ, ಆತನ ಮುಖಾಂತರ ಎಲ್ಲಾ ಕಡೆಯಲ್ಲಿಯೂ ಸಂಪೂರ್ಣವಾಗುತ್ತಾ ಬರುತ್ತವೆ.

೨೧. ಆದರೆ ನಮ್ಮನ್ನು ನಿಮ್ಮ ಸಂಗಡ ಕ್ರಿಸ್ತನಲ್ಲಿ ಸ್ಥಿರ ಪಡಿಸುವವನೂ ೧) ನಮ್ಮನ್ನು ಅಭಿಷೇಕಿಸಿದವನೂ ೨) ದೇವರೇ; ನಮಗೆ ಮುದ್ರೆಹಾಕಿದವನೂ, ೨೨. ಆತ್ಮದ ಮುಂಗಡವನ್ನು ೩) ನಮ್ಮ ಹೃದಯಗಳಲ್ಲಿ ಕೊಟ್ಟವನೂ, ಅವನೇ.

೧. ತನ್ನ ಮಗನಲ್ಲಿ ವಾಗ್ದತ್ತಗಳನ್ನೆಲ್ಲಾ ನೆರವೇರಿಸಿದ ದೇವರೆ ಕ್ರಿಸ್ತನನ್ನು ನಂಬುವ ಭಕ್ತರನ್ನೆಲ್ಲಾ ಕ್ರಿಸ್ತನು ತಲೆಯಾಗಿರುವ ಶರೀರದ ಅನ್ಯೋನ್ಯತೆಯಲ್ಲಿ ಜೋಡಿಸಿ ದೃಢ ಪಡಿಸುತ್ತಾನೆ.

೨. ಅಭಿಷಿಕ್ತನೆಂಬ ಕ್ರಿಸ್ತನಾದ ತನ್ನ ಮಗನಿಗೆ ದೇವರು ಸಂಪೂರ್ಣವಾಗಿ ಕೊಟ್ಟ ಅಪೊ. ಕ್ರಿ. ೧೦, ೩೮. ಪರಿಶುದ್ಧಾತ್ಮವನ್ನೆ ನಮಗೂ ಕೊಟ್ಟಿದ್ದಾನೆ. ಪತ್ರಕ್ಕೆ ಮುದ್ರಿಕೆ ಪೊಳಕುವಂತೆ ೧ ಯೋಹಾ. ೨, ೨೦. ಎಫೆ. ೧, ೧೩., ನಮಗೆ ಅದೆ ಆತ್ಮವನ್ನು ಕೊಟ್ಟು, ನಾವು ಮಕ್ಕಳೆಂಬುವದನ್ನು ದೃಢ ಪಡಿಸಿದ್ದಾನೆ.

೩. ಪುಣ ಸಲ್ಲಿಸುತ್ತೇನೆಂಬ ಮಾತನ್ನು ಮುಂಗಡವಿಂದ ದೃಢ ಪಡಿಸುವ ಪ್ರಕಾರ, ದೇವರು ನಮಗೆ ಇಹಪದಲ್ಲಿ ಪರಿಶುದ್ಧಾತ್ಮವೆಂಬ ಮುಂಗಡವನ್ನು ಕೊಟ್ಟು, ನಾವು ಆತನ ಮಕ್ಕಳಾಗಿ ಆತನ ರಾಜ್ಯದ ಮಹಿಮೆಯನ್ನು ಸ್ವತಂತ್ರಿಸಿ ಕೊಳ್ಳ ತಕ್ಕವರೆಂಬುವದನ್ನು ಸ್ಥಿರ ಪಡಿಸುತ್ತಾನೆ.

೧) ಅಗಮ್ಯಗಮನ ಮಾಡಿದವನು ಸತ್ಯತಾಪವುಳ್ಳವನಾದ ಮೇಲೆ ಸಭೆಯಲ್ಲಿ ತಿರಿಗಿ ಶೇರುವದಕ್ಕೆ ಯೋಗ್ಯನಾದ್ದರಿಂದ, ಕಳದು ಹೋದಂಥ ಪ್ರಯಾಣಾಲೋಚನಾಭೇದದ ನಿಜವಾದ ಹೇತುವನ್ನು ಪೌಲನು ವಿವರಿಸುತ್ತಾನೆ. ಸ. ೧, ೨೩—೨, ೧೧.

ವ. ೨೩. ನಿಮ್ಮನ್ನು ಕನಿಕರಿಸಿದ್ದರಿಂದಲೆ ನಾನು ಕೊರಿಂಥಕ್ಕೆ ಬರಲಿಲ್ಲವೆಂಬುವದಕ್ಕೆ ದೇವರ ಆಣೆ.

ಟಿಪ್ಪಣಿ. ದೇವರ ಮಾನ ಕಾಯಿಂಥದವರ ಆತ್ಮಕ್ಷೇಮ ಇವುಗಳ ಉದ್ದಿಶ್ಯವಾಗಿಯೇ ಅಪಾಸ್ತಲನು ಇಲ್ಲಿ ಆಗೆ ಇಡುವದರಿಂದ, ನುಮ್ಮನೆ ಅಥವಾ ಪ್ರಪಂಚ ವ್ಯವಹಾರದಲ್ಲಿ ಆಗೆ ಇಡ ಬಾರದೆಂದು, ಯೇಸು ಕ್ರಿಸ್ತನು ಮತ್ತಾ. ೫, ೩೭ಲ್ಲಿ ಶಿಷ್ಯರಿಗೆ ಆಜ್ಞಾಪಿಸುವ ಮಾತಿನ ಅಭಿಪ್ರಾಯವನ್ನು ಮೀರಿದ ಹೊಗಾಗಲಿಲ್ಲಾ.

ವ. ೨೪. ನಿಮ್ಮನ್ನು ಕನಿಕರಿಸಿದೆನೆಂದು, ನಿಮ್ಮ ಮೇಲೆ ಧೊರೆತನ ಮಾಡ ಬೇಕೆಂಬ ಹಾಗೆ ಹೇಳುವದಿಲ್ಲಾ. ನೀವು ನನ್ನ ಮುಖಾಂತರ ವಿಶ್ವಾಸವನ್ನು ಹೊಂದಿದ್ದರಿಂದ, ನಿಮ್ಮ ಸಂತೋಷಕ್ಕೆ ಸಹಾಯಕನಾಗಿರ ಬೇಕೆಂದು ಬಯಸಿ, ನಿಮ್ಮನ್ನು ದುಃಖ ಪಡಿಸಲೊಲ್ಲದೆ ಇದ್ದದರಿಂದಲೆ ಹಾಗೆ ಬರದೆನು.

ಸ. ೨, ೧. ನನಗಾಗಿಯೂ ನಿಮ್ಮ ಬಳಿಗೆ ಬರುವ ಆಲೋಚನೆಯನ್ನು ಬಿಟ್ಟಿನು; ಯಾಕಂದರೆ ನಿಮ್ಮಲ್ಲಿ ಒಬ್ಬನನ್ನು ದಂಡಿಸುವದರಿಂದ ನನ್ನಲ್ಲಿಯೂ ನಿಮ್ಮಲ್ಲಿಯೂ ದುಃಖ ಹುಟ್ಟಿಸಲೊಲ್ಲದಿದ್ದೆನು. ೨. ಯಾಕಂದರೆ ನೀವಲ್ಲದೆ ನನಗೆ ಅತ್ಯವಶ್ಯವಾದ ಆದರಣೆಯನ್ನು ಕೊಡ ತಕ್ಕವರು ಇನ್ಯಾರು?. ಆದರೆ ನಾನು ನಿಮ್ಮನ್ನು ದುಃಖ ಪಡಿಸಿದರೆ, ನೀವು ನನ್ನನ್ನು ಆದರಿಸುವದು ಹ್ಯಾಗೆ?. ೩. ಆದ್ದರಿಂದ ದುಃಖಕರವಾದ ಸಂಗತಿಯನ್ನು ನನ್ನ ಮುಂಚಿನ ಕಾಗದದಲ್ಲಿ ನಿರ್ಣೈಸಿ, ನಾನು ಬಂದ ಬಳಿಕ ಹುಟ್ಟ ತಕ್ಕ ದುಃಖದ ಹೇತುವನ್ನು ಪರಿಹರಿಸಿದೆನು. ಮತ್ತು ನನಗೆ ಸಂತೋಷವಾದರೆ, ನಿಮ್ಮೆಲ್ಲರಿಗೂ ಸಂತೋಷವಾಗುವದೆಂದು ನಂಬುತ್ತೇನೆ; ೪.

ನಿಮ್ಮನ್ನು ದುಃಖ ಪಡಿಸುವದಕ್ಕಲ್ಲ, ನಿಮ್ಮ ಮೇಲಿರುವ ನನ್ನ ಅತಿಶಯವಾದ ಪ್ರೀತಿಯೆನ್ನು ನೀವು ತಿಳಿಯುವ ಹಾಗೆಯೇ, ಬಹಳವಾಗಿ ಕಳವಳಗೊಳ್ಳುತ್ತಾ ಅಳುತ್ತಾ ಬರೆದೆನು.

ಟಿಪ್ಪಣಿ. ಕ್ರೈಸ್ತರು ಕ್ರೈಸ್ತರನ್ನು ಶಿಕ್ಷಿಸ ತಕ್ಕ ಮನೋಭಾವವೆಯು ಎಂಥಾದೆಂದು, ಇಲ್ಲಿ ನಾಡ ಬಹುದು. ಸತ್ಯನಾವ ಉತ್ತಮಾಲಕನು ಶಿಷ್ಯರಲ್ಲಿ ಕಣ್ಣೀರು ಬೀಳಿಸುವದಕ್ಕಿಂತ ಮುಂಚಿತವಾಗಿ, ತಾನೆ ಕಣ್ಣೀರು ಬಿಟ್ಟು, ಅವರಲ್ಲಿ ಹುಟ್ಟಿಸುವ ದುಃಖಿಂತ ಪೂರ್ವದ ದುಃಖವನ್ನು ತಾನೇ ಅನುಭವಿಸುತ್ತಾನೆ.

ವ. ೫. ಅಗಮ್ಯಗಮನಾ ಮಾಡಿದವನು ನನ್ನನ್ನು ಮಾತ್ರವಲ್ಲ, ನಿಮ್ಮೆಲ್ಲರನ್ನು, ಅಥವಾ ಹ್ಯಾಗಾದರೂ ನಿಮ್ಮಲ್ಲಿ ಕೆಲವರನ್ನು ದುಃಖ ಪಡಿಸಿದ್ದಾನೆ. ೬. ಅವನಿಗಾದ ಶಿಕ್ಷೆ ಸಾಕು, ಯಾಕಂದರೆ ಅವನು ಸಭೆಯಿಂದ ಬಹಿಷ್ಕೃತನಾದ್ದರಿಂದ, ಅತ್ಯಂತ ವ್ಯಾಕುಲ ಪಟ್ಟಿದ್ದಾನೆ. ೭. ಆದ್ದರಿಂದ ಅವನು ತಾಳಲಾರದ ದುಃಖದಿಂದ ನಿರಾಶೆಯಾಗದ ಹಾಗೆ, ಅವನನ್ನು ಕ್ಷಮಿಸಿ ಆದರಿಸ ಬೇಕು. ೮. ಅದುಕಾರಣ ಅವನಿಗೆ ಈಗ ಅಧಿಕವಾದ ಪ್ರೀತಿಯನ್ನು ತೋರಿಸಿರಿ. ೯. ಯಾಕಂದರೆ ನಿಮ್ಮ ವಿಧೇಯತ್ವವನ್ನು ಪರೀಕ್ಷಿಸುವದಕ್ಕೂ ನಿಮಗೆ ಹಾಗೆ ಬರದಿದ್ದೇನೆ. ಈ ಪರೀಕ್ಷೆ ನೆರವೇರಿತು; ಹ್ಯಾಗಂದರೆ ನೀವು ವಿಧೇಯರಾಗಿರುವಂಥಾದ್ದು ಸ್ಪಷ್ಟವಾಯಿತು. ೧೦. ನೀವು ಅವನನ್ನು ಈಗ ಕ್ಷಮಿಸಿದರೆ, ನಾನು ಒಪ್ಪಿ ಕೊಳ್ಳುತ್ತೇನೆಂದು, ಮುಂಚಿತವಾಗಿಯೆ ಹೇಳುತ್ತೇನೆ; ಯಾಕಂದರೆ ನಾನು ಏನಾದರೂ ಕ್ಷಮಿಸ ಬೇಕಾದರೆ, ನಿಮಗಾಗಿ, ನಿಮ್ಮನ್ನು ಪ್ರೀತಿ ಮಾಡುವ ನಿಮಿತ್ತವಾಗಿಯೂ ಕ್ರಿಸ್ತನ ಹೆಸರಿನಲ್ಲಿಯೂ, ಕ್ಷಮಿಸುತ್ತೇನೆ. ೧೧. ಸೈತಾನನು ಈ ಅಪರಾಧಿಯನ್ನು ಯೂದನ ಪ್ರಕಾರ ನಾಶನ ಮಾಡಿ, ಅವನ ಆತ್ಮವನ್ನು ನಮ್ಮಿಂದ ಅಪಹರಿಸದ ಹಾಗೆ, ಇಷ್ಟು ತಾಳ್ಮೆ ತೋರಿಸುವದು ಯುಕ್ತವಾಗಿದೆ; ಯಾಕಂದರೆ ಸೈತಾನನು ಯಾವಾಗಲೂ ಕುತಂತ್ರ ನಡಿಸುತ್ತಾ ಬರುವ ಕಾರಣ, ನಿಷ್ಕರುಣವಾದ ಕಾಠಿಣ್ಯವೃತ್ತಿಯಿಂದ ಮೋಸವಾದೀತೆಂದು, ಬಲ್ಲೆವು.

ಊ) ಪ್ರಯಾಣದಲ್ಲಿ ನಡದ ಸಂಗತಿಯ ಸೂಚನೆಯು. ವ. ೧೨. ೧೩.

ವ. ೧೨. ತ್ರೋಯದಲ್ಲಿ ಪ್ರಸಂಗ ಮಾಡುವದಕ್ಕೆ ಉಚಿತ ಸಮಯ ದೊರಕಿದರೂ, ನಿಮ್ಮನ್ನು ನೋಡುವ ಅತಿಶಯವಾದ ಬಯಕೆಯಿಂದ ಅಲ್ಲಿ ತಂಗದೆ, ೧೩. ನಿಮ್ಮಿಂದ ವರ್ತಮಾನವನ್ನು ತರ ತಕ್ಕ ಸಹೋದರನಾದ ತೀತನು ತಲಪದೆ ಇದ್ದ ಕಾರಣ, ಸಂಗಡಲೆ ಅಲ್ಲಿ ಅವರ ಅಪ್ಪಣೆ ತೆಗದು ಕೊಂಡು ಮಕೆದೊನ್ಯಕ್ಕೆ ಮುಂದೆ ಹೋದೆನು.

ಅಪೊಸ್ತಲನು ಮಕೆದೊನ್ಯಕ್ಕೆ ಬಂದ ಮೇಲೆ, ಕೊರಿಂಥದಿಂದ ಬಂದ ತೀತನು ತಿಳಿಸಿದ ಒಳ್ಳೆ ವರ್ತಮಾನದಿಂದ ಪೂರ್ಣ ಸಂತುಷ್ಟನಾಗಿ, ಈ ಪತ್ರಿಕೆಯನ್ನು ಕೊರಿಂಥದವರಿಗೆ ಬರೆಯುವ ವೇಳೆಯಲ್ಲಿ ಮಕೆದೊನ್ಯದಲ್ಲಿ ತನ್ನ ವೃತ್ತಿಯನ್ನು ಬಹಳ ಆಸಕ್ತಿಯಿಂದಲೂ ಆನಂದದಿಂದಲೂ ನಡಿಸುತ್ತಾ ಇದ್ದನೆಂದು ನೆನಸ ಬಹುದು. ಹೀಗಿರಲಾಗಿ, ಇಲ್ಲಿ ಅಪೊಸ್ತಲನಾದ ಪೌಲನು ತನ್ನ ಪ್ರಸಂಗೋದ್ಯೋಗವರ್ಣನೆಯನ್ನು ಶೇರಿಸುವದು ಸಮಯೋಚಿತವಾಗಿತ್ತು. ಆದ್ದರಿಂದ ಸ. ೨, ೧೨—೫, ೨೧ ವರೆಗೂ ಈ ಸಂಗತಿಯನ್ನು ವಿವರಿಸಿ, ನೇಮದ ಉದ್ಯೋಗಕ್ಕಿಂತ ಬಹಳ ಅತಿಶಯವಾದ ಸುವಾರ್ತೋದ್ಯೋಗದ ಮಹಿಮೆಯನ್ನು ಸ. ೪, ೬ ವರೆಗೂ, ಈ ದಿವ್ಯವಾದ ಉದ್ಯೋಗವು ಉದ್ಯೋಗಸ್ಥರ ಬಲಹೀನತ್ವದಲ್ಲಿಯೂ ಪ್ರಸಿದ್ಧವಾಗುವದೆಂಬುವದನ್ನು ಸ. ೭, ೨೧ ವರೆಗೂ ಉದಾಹರಿಸುತ್ತಾನೆ.

೨ ಕೊರಿ. ೨, ೧೪—೩, ೧—೩.

ಸುವಾರ್ತೆಯ ಉದ್ಯೋಗವು.

ಅ) ಅದರ ಜಯವೃತ್ತಿಯು. ಸ. ೨, ೧೪—೩, ೩.

ವ. ೧೪. ಆದರೆ ನನಗೆ ಕ್ರಿಸ್ತನಲ್ಲಿ ಜಯವನ್ನು ಕೊಟ್ಟು, ಬಂದೇ ನಿಜದೇವರಾಗಿರುವ ಕ್ರಿಸ್ತನ ತಿಳುವಿಕೆಯನ್ನು ನಾಲ್ಕು ಕಡೆಯಲ್ಲಿಯೂ ಪಸರಿಸುವಂಥ ತಿಗಡಿಸುವ ಪರಿಮಳದಂತೆ ಎಲ್ಲೆಲ್ಲಿಯೂ ನನ್ನ ಮುಖಾಂತರವಾಗಿ ಪ್ರಕಟಿಸುವ ದೇವರಿಗೆ ಸ್ತೋತ್ರವಾಗಲಿ. ೧೫. ಅಪೊಸ್ತಲರಾದ ನಾವು ಸುವಾಸನೆಯಾಗಿ ದೇವರ ಬಳಿಗೆ ಏರುವಂಥ, (೧ ಮೋಸೆ. ೮, ೨೧. ೩ ಮೋಸೆ. ೧, ೯. ೧೭. ೪ ಮೋಸೆ. ೧೫, ೭. ಫಿಲಿ. ೪, ೧೮.) ದೇವರಿಗೆ ಅರ್ಪಿತವಾದಂಥ, ಕ್ರಿಸ್ತನ ನಿಮಿತ್ತ ಸಮರ್ಪಕವಾದಂಥ ಹೋಮವಾಗಿದ್ದೇವೆ. ನಮ್ಮ ಪ್ರಸಂಗವು ರಕ್ಷಣೆಯನ್ನು ಹೊಂದುವವರಲ್ಲಿಯೂ ನಾಶವಾಗುವವರಲ್ಲಿಯೂ (ಯೋಹಾ. ೧೨, ೪೮.) ಸಾರ್ಥಕವಾಗುತ್ತದೆ. ೧೬. ಅವಿಶ್ವಾಸಿಗಳು ಸುವಾರ್ತೆಯನ್ನು ಮರಣದಂತೆ ಹಗೆ ಮಾಡಿ, ಅದರಿಂದ ಮರಣ ಹೊಂದುತ್ತಾರೆ; ಏನಂದರೆ ಅದನ್ನು ಹೇಸಿ, ತಮ್ಮ ಹೃದಯಗಳನ್ನು ಘಟ್ಟಿ ಮಾಡಿ ಕೊಂಡು, ಆತ್ಮಮೃತಸ್ಥಿತಿಯಲ್ಲಿ ಹೆಚ್ಚು ಹೆಚ್ಚಾಗಿ ಮುಳುಗುತ್ತಾರೆ. ಯೋಹಾ. ೫, ೫೬. ವಿಶ್ವಾಸಿಗಳಲ್ಲಿ ಅದು ಜೀವವಾಗಿದೆ; ಹ್ಯಾಗಂದರೆ, ಅವರು ಅದು ಜೀವವೆಂದು ತಿಳಿಯುವದರಿಂದ, ಅದು ಅವರ ಆತ್ಮಗಳಿಗೆ ಪ್ರಕಾಶವನ್ನೂ ಪಾವನತ್ವವನ್ನೂ ನಿತ್ಯ ರಕ್ಷಿಣ್ಯವನ್ನೂ ಉಂಟು ಮಾಡಿ, ಜೀವಕರವಾಗಿದೆ. ಪ್ರತಿ ಬೋಧಕನು ತಾನು ಈ ವೃತ್ತಿಗೆ ಯೋಗ್ಯನೋ ಅಲ್ಲವೋ ಎಂದು, ಚನ್ನಾಗಿ ಪರೀಕ್ಷಿಸಿ ಕೊಳ್ಳಲಿ. ೧೭. ಅನೇಕ ಕಳ್ಳ ಅಪೊಸ್ತಲರ ಪ್ರಕಾರ ದೇವರ ವಾಕ್ಯವನ್ನು ಬೆರಕೆ ಮಾಡದೆ, ಕ್ರಿಸ್ತನ ಅನ್ಯೋನ್ಯದಲ್ಲಿದ್ದು, ದೇವರನ್ನು ಮೆಚ್ಚಿಸ ಮನಸ್ಸುಳ್ಳವನಾಗಿ, ದೇವರ ಬಲದಿಂದ, ಸ್ವಾರ್ಥವಿಲ್ಲದೆ ಶುದ್ಧವಾಗಿ ಸುವಾರ್ತೆಯನ್ನು ಪ್ರಸಂಗಿಸುತ್ತಾ ಇರುವದರಿಂದ ನಾನೂ ಯೋಗ್ಯನೆಂದನಿಸಿ ಕೊಳ್ಳುತ್ತೇನಷ್ಟೆ.

ಸ. ೩, ೧. ನನ್ನನ್ನು ನಾನೆ ತಿರಿಗಿ ಹೊಗಳಿಕೊಳ್ಳುತ್ತೆನೋ? ಅದಾಗದು. ನನ್ನನ್ನು ನಾನೇ ಪ್ರತಿಷ್ಟೆ ಮಾಡಿಕೊಳ್ಳುವದಾಗಲಿ, ಯೆರೂಸಲೇಮಿನವರ ಕೈಯಿಂದ ಪ್ರತಿಷ್ಟೇಪತ್ರಗಳನ್ನು ತೆಗದು ಕೊಂಡು ನಿಮ್ಮ ಬಳಿಗೆ ಬಂದಂಥ, ನಿಮ್ಮ ಕೈಯಿಂದ ಪ್ರತಿಷ್ಟೇಪತ್ರಗಳನ್ನು ತೆಗದು ಕೊಂಡು ಹೋದಂಥ ಕೆಲವರ ಪ್ರಕಾರ ಮತ್ತೊಬ್ಬರಿಂದ ಪ್ರತಿಷ್ಟೆಯಾಗುವದಾಗಲಿ ನನಗೆ ಬೇಡ. ೨. ನನ್ನ ಮುಖಾಂತರ ಸಂವರ್ತಿಗಳಾಗಿ ಆತ್ಮದ ವರಗಳನ್ನು ಪಡಕೊಂಡವರಾದ ನೀವು ನನ್ನ ಹೃದಯದಲ್ಲಿ ಬರದಿರುವಂಥ, ಎಲ್ಲರೂ ಓದಿ ತಿಳಿಯ ತಕ್ಕಂಥ ನನ್ನ ಪ್ರತಿಷ್ಟೇಪತ್ರವಾಗಿದ್ದೀರಿ. ೩. ನೀವು ಕ್ರಿಸ್ತನು ಬರದಪತ್ರವೇಸರಿ. ಆ ಕಳ್ಳ ಬೋಧಕರ ಪ್ರತಿಷ್ಟೇಪತ್ರಗಳು ನರರಚಿತವಾಗಿವೆ; ನನ್ನದನ್ನು ದೇವರ ಆತ್ಮವು ತಾನೆ ಬರದಿದ್ದಾನೆ. ನೇಮವು ಸಹ ದೇವರು ಮನುಷ್ಯರಿಗೆ ಬರದ ಪತ್ರದೋಪಾದಿಯಾಗಿತ್ತು; ಏಕೆ ಅದು ದೇವರ ಬೆರಳಿನಿಂದ ಕಲ್ಲಿನ ಹಲಿಗೆಗಳಲ್ಲಿಯೆ ಕೆತ್ತಿದ್ದಾಗಿತ್ತು. ನಿಮ್ಮಂಥ ಕ್ರೈಸ್ತ ಸಭೆಯು ಹೃದಯವೆಂಬ ಹಲಿಗೆಯಲ್ಲಿ ಬರದ ಪತ್ರವಾಗಿದೆ. ಹ್ಯಾಗಂದರೆ, ಜೀವವುಳ್ಳ ದೇವರ ಆತ್ಮವು ನಿಮ್ಮಲ್ಲಿ ಶೇರಿ, ಹೃದಯವೆಂಬ ಮಾಂಸಶಾಸನಗಳಲ್ಲಿ (ಹೆಸೆ. ೧೧, ೧೯; ೩೬, ೨೬. ಯೆರೆ. ೩೧, ೩೧.) ವಜ್ರಲೇಪವಾದ ತಾತ್ಪರ್ಯವನ್ನು ರಚಿಸಿದ್ದಾನೆ. ಆದ್ದರಿಂದ ಕಳ್ಳ ಬೋಧಕರು ಬರಸಿ ಕೊಳ್ಳುವ ಎಲ್ಲಾ ಪ್ರತಿಷ್ಟೇಪತ್ರಗಳಿಗಿಂತ ಮಾತ್ರವಲ್ಲ, ಅವರು ಯಾವಾಗಲೂ ತಮ್ಮ ಉತ್ತಮ ಪ್ರತಿಷ್ಟೇಪತ್ರವೆಂದು ಹೊಗಳುತ್ತಾ ಬರುವ ದೇವರ ನ್ಯಾಯಕ್ಕಿಂತಲೂ ನಿಮ್ಮ ಸಭೆಯು ಅಧಿಕ ಗಣ್ಯವಾದ ಪ್ರತಿಷ್ಟೇಪತ್ರವಾಗಿದೆ.

೫) ಸುವಾರ್ತೆಯ ಉದ್ಯೋಗಕ್ಕೂ ನೇಮದ ಉದ್ಯೋಗಕ್ಕೂ ಇರುವ ಮಹಿಮೆಯ ವ್ಯತ್ಯಾಸವು. ವ. ೪—೧೪.

೪. ಇಂಥ ನಂಬಿಕೆ ಕ್ರಿಸ್ತನ ಮುಖಾಂತರ ೧) ದೇವರಲ್ಲಿ ನಮಗೆ ಉಂಟು; ೫. ನಮ್ಮಿಂದಲೇ ಎಂದು ಒಂದಾದರೂ ನೆನಸಿ ಕೊಳ್ಳ ನಂಮಷ್ಟಿಕ್ಕೆ ನಾವೇ ಯೋಗ್ಯರಂತಲ್ಲ ೨); ೬. ನಮ್ಮ ಯೋಗ್ಯತೆಯು ದೇವರಿಂದಲೇ. ಅಕ್ಷರದಲ್ಲ ೩), ಆತ್ಮದ ಗಿರುವ ಹೊಸ ಒಡಂಬಡಿಕೆಯ ಸೇವಕರಾಗಿರುವ ಹಾಗೆ ಅವನೇ ನಮ್ಮನ್ನು ಯೋಗ್ಯ ಮಾಡಿದನು ೪); ಯಾಕಂದರೆ ಅಕ್ಷರವು ಕೊಲ್ಲುತ್ತದೆ ೫), ಆತ್ಮವು ಬದುಕಿಸುತ್ತದೆ.

೧. ಕೊರಿಂಥದ ಸಭೆಯು ತನ್ನ ಪ್ರತಿಷ್ಠೇಪತ್ರವೆಂದು ಹೇಳುವ ಧೈರ್ಯವು ಪೌಲನಲ್ಲಿ ಅಹಂಕಾರದಿಂದಲ್ಲ, ಮಧ್ಯಸ್ಥನಾದ ಕ್ರಿಸ್ತನ ಮುಖಾಂತರ ದೇವರಲ್ಲಿಡುವ ವಿಶ್ವಾಸದಿಂದಲೇ ಹುಟ್ಟಿರಲಾಗಿ, ಉದ್ಯೋಗ ಮಹಿಮಾವರ್ಣನೆಯನ್ನು ಮಾಡಿದ ಕೂಡಲೇ, ಪೂಜ್ಯನೂವಾದ ದೀನತ್ವದಿಂದ ದೇವರಿಗೆ ಮಾತ್ರವೇ ಸ್ವಾತ್ರವಾಗ ತಕ್ಕದ್ದೆಂದು ಹೇಳುತ್ತಾನೆ.

೨. ಪೌಲನಲ್ಲಿದ್ದ ಚರವಸದ ಕಾರಣವೇನಂದರೆ: ನಮ್ಮ ಯೋಗ್ಯತೆ ಸ್ವಪುಣ್ಯದಿಂದ ಹುಟ್ಟಿದ್ದಲ್ಲ; ಒಳ್ಳೇದೇನಾದರೂ ನೆನಸಲಶಕ್ತನಾದ ಮನುಷ್ಯನು ಮಾಡುವದಕ್ಕೆ ಪೂರ್ಣ ಅಶಕ್ತನಾಗಿದ್ದಾನೆ.

೩. ಗ್ರೀಕ ಭಾಷೆಯ ಶಬ್ದವಾವ ಗ್ರಮ್ಮ ಎಂಬದಕ್ಕೆ ಇಲ್ಲಿ ಬರವಣಿಗೆ ಎಂದು ಭಾಷಾಂತರ ಮಾಡಿದರೆ ವಾಶಿ. ಅಕ್ಷರವೆಂಬದರ ಮೂಲಾಜಿಪ್ರಾಯವಾದ ನಿರ್ಣಯವಾದ ವಸ್ತು ಈ ಸ್ಥಳದಲ್ಲಿ ಪ್ರಕೃತವಾದದ್ದಲ್ಲ. ದೇವರ ಆಜ್ಞೆಯನ್ನು ಮನುಷ್ಯನಿಗೆ ಪ್ರಕಟಿಸಿ, ಅವನ ಹೃದಯವನ್ನು ಬೇರೇ ಮಾಡದಂಥ ನಿಯಮಕ್ಕೆ ಬರವಣಿಗೆ ಯಂದು ಹೆಸರು. ನಂಬುವವನನ್ನು ದೇವರ ಅನ್ಯೋನ್ಯದ ಸಂಸರ್ಗದಲ್ಲಿ ಸೇರಿಸಿ, ಬದುಕಿಸುಂಥ ಆತ್ಮವನ್ನು ಹೊಂದಿಸುವ ಸುವಾರ್ತೆಗೆ ಆತ್ಮವೆಂದು ಹೆಸರು. ದೇವರ ವಾಕ್ಯದ ಬರವಣಿಗೆಯನ್ನು ಅಸಡ್ಡೆ ಮಾಡಿ, ತಮ್ಮ ಬುದ್ಧಿಗೆ ತೋರುವ ಆತ್ಮವೇ ಮುಖ್ಯವಾದದ್ದು ಎಂದು ಹೇಳುವವರ ಮಾತು ನಿರರ್ಥಕವಾದದ್ದೆಂಬುವದು ಈ ವ್ಯಾಖ್ಯಾನದಿಂದ ಕಾಣುತ್ತದೆ. ಹೇಗಾಗಂದರೆ, ಸುವಾರ್ತೆಯ ಬರವಣಿಗೆ ಎಲ್ಲಾ ಆತ್ಮಮಯವಾಗಿದೆ. ಏನಂದರೆ ಬರವಣಿಗೆಯಲ್ಲಿ ಇರುವ ಬರಹದ ಆತ್ಮವು ಬರವಣಿಗೆಯನ್ನು ಜಾಗ್ರತೆಯಾಗಿ ಶೋಧಿಸಿ ಅಭ್ಯಾಸ ಮಾಡುವ ಜನಕ್ಕೆ ಮಾತ್ರ ತಿಳಿಯ ಬರುತ್ತದೆ. ವಿಶ್ವಾಸವೂ ಸ್ವಾನುಭವವೂ ಇಲ್ಲದೆ, ಪಠನ ಮಾಡುವವರಿಗೆ ದೇವರ ವಾಕ್ಯವು ಬರೀ ಬರವಣಿಗೆಯೇ ಆಗಿರುತ್ತದೆ. ಸ್ವಾನುಭವಿಗಳಾದ ಜನರಿಗೆ ಅದು ಆತ್ಮಮಯವಾಗಿದೆ.

೪. ಹೊಸ ಒಡಂಬಡಿಕೆಯ ಉಗೋಗದವನಾಗುವ ಯೋಗ್ಯತೆಯನ್ನು ಆತನು ನನಗೆ ಉಚಿತವಾಗಿ ದಯ ಮಾಡಿದ್ದೇ ಸರಿ.

೫. ನಿಯಮವು ಅಪರಾಧಿಗಳಾದ ಮನುಷ್ಯರಿಗೆ ಆಜ್ಞೆಯ ನಿರ್ಣಯವನ್ನು ಪ್ರಕಟಿಸುವದರಿಂದ ಕೊಲ್ಲುತ್ತದೆಂದು ಬರದದೆ; ನಂಬಿ ಆತ್ಮವನ್ನು ಪಡದು ಕಾಳ್ಳುವ ಜನರನ್ನು ಕ್ರಿಸ್ತನ ಸುವಾರ್ತೆಯು ಬದುಕಿಸುತ್ತದೆ.

೬. ಆದರೆ ಅಕ್ಷರಗಳಿಂದ ಕಲ್ಲುಗಳ ಮೇಲೆ ಕೆತ್ತಲ್ಪಟ್ಟ ಮರಣದ ಸೇವೆಯು ೧), ಇಸ್ರಾಯೇಲನ ಮಕ್ಕಳು ಮೋಶೆಯ ಮುಖವನ್ನು, ೭. ಅವನ ಮುಖದ ಇಲ್ಲದೆ

೨ಕೊರಿ. ೩, ೯—೧೧.

ಹಾಗ್ಯಾಗುವ ಮಹಿಮೆಯ ನಿಮಿತ್ತ, ದೃಷ್ಟಿಸ ಕೂಡದ ಹಾಗೆ ಮಹಿಮೆಯುಳ್ಳದ್ದಾದರೆ, ಆತ್ಮದ ಸ್ತೋವೆಯು ಹೆಚ್ಚಾಗಿ ಮಹಿಮೆ ಇಲ್ಲದೆ ಇರುವದು ಹಾಗ್ಹಾಗೆ ೫)? ೯. ಯಾಕಂದರೆ ಶಿಕ್ಷೆಯ ನಿರ್ಣಯದ ಸ್ತೋವೆ ೪) ಮಹಿಮೆಯಾಗಿದ್ದರೆ, ನೀತಿಯ ಸ್ತೋವೆ ಬಹು ಅಧಿಕವಾಗಿ ಮಹಿಮೆಯಲ್ಲಿ ಹೆಚ್ಚುವದು. ೧೦. ಯಾಕಂದರೆ ಇ ಪಕ್ಷದಲ್ಲಿ ಮಹಿಮೆ ಪಟ್ಟದ್ದು ೫) ಹೆಚ್ಚಾಗಿರುವ ಮಹಿಮೆಯ ನಿಮಿತ್ತ ಮಹಿಮೆ ಪಟ್ಟದಲ್ಲ. ೧೧. ಯಾಕಂದರೆ ಇಲ್ಲದೆ ಹಾಗ್ಯಾಗುವಂಥಾದ್ದು ೬) ಮಹಿಮೆಯಿಂದಿದ್ದರೆ, ನೆಲೆಯಾದದ್ದು ಬಹು ಹೆಚ್ಚಾಗಿ ಮಹಿಮೆಯುಳ್ಳದ್ದು.

ಟಿಪ್ಪಣಿ. ಈ ಸ್ಥಳದ ಮುಖ್ಯಾರ್ಥವೇನಂದರೆ: ಮರಣವನ್ನೂ ಆಜ್ಞೆಯ ನಿರ್ಣಯವನ್ನೂ ಪ್ರಕಟ ಮಾಡುವ ಉದ್ಯೋಗವು ಇಷ್ಟು ಮಹಿಮೆಯುಳ್ಳದ್ದಾಗಿದ್ದರೆ, ಆತ್ಮವನ್ನು ದಯ ಮಾಡಿ ಭಕ್ತನನ್ನು ನೀತಿ ಹೊಂದಿಸುವ ಸುವಾರ್ತೆಯನ್ನು ಸಾರುವ ಉದ್ಯೋಗದ ಮಹಿಮೆಯು ಎಷ್ಟೋ ದೊಡ್ಡದಾಗಿರ ಬೇಕು! ಪೌಲನು ಇಲ್ಲಿ ೨ ಮೋಶೆ. ೩೪, ೧೨; ೩೪, ೧. ೫ ಮೋಶೆ. ೧೦, ೧ ಲ್ಲಿ ಬರದ ಸಂಗತಿಯನ್ನು ಸೂಚಿಸುತ್ತಾನೆ. ಯೆಹೋವನ ಸಮೀಪದಲ್ಲಿದ್ದು, ಆತನ ಸಂಗಡ ಸಂಭಾಷಣೆ ಮಾಡಿದ ಮೋಶೆಯು ಸೀನಾಯಿ ಬೆಟ್ಟದಿಂದ ಇಳಿದು ಬರುವಾಗ, ಅವನ ಮುಖದ ತೇಜಸ್ಸನ್ನು ಇಸ್ರಯೇಲನವರು ನೋಡಲಾರದೆ ಇದ್ದ ಕಾರಣ, ಅವನು ಮುಖಕ್ಕೆ ಮುಸುಕು ಹಾಕಿ ಕೊಂಡನು. ಹಳೆ ಒಡಂಬಡಿಕೆಯ ನಿಯಮದ ಉಳ್ಳಿಗದವನಾದ ನಿಯಮದಾತನೆಂಬವನ ಮಹಿಮೆಯನ್ನು ಅಪೊಸ್ತಲನು ಇಲ್ಲಿ ಪ್ರಯೋಗಿಸುತ್ತಾನೆ.

೭. ನಿಯಮದ ಉದ್ಯಾಗವು ಮರಣದ ಉದ್ಯಾಗವೆಂಬದರ ಅರ್ಥವೇನಂದರೆ: ಎಲ್ಲರು ಪಾಪಿಗಳಾಗಿದ್ದು, ಆಜ್ಞೆಗಳನ್ನು ಮೀರುವ ಮನುಷ್ಯರಿಗೆ ನೇಮಕವಾದ ಮರಣದ ಶಿಕ್ಷೆಯನ್ನು ಅದು ಅವರಿಗೆ ಪ್ರಕಟಿಸುತ್ತದೆ; ನಿಯಮವು ಆತ್ಮದಿಂದ ಪ್ರೀದಯಗಳಲ್ಲಿ ಲಿಖಿತವಾಗಿರದೆ, ನಿಯಮದ ಪಲಿಗೆಗಳಾದ ಕಲ್ಲುಗಳಲ್ಲಿಯೆ ಕೆತ್ತಿದ್ದಾಗಿತ್ತು.

೮. ಆದಾಗ್ಯೂ ಅದಕ್ಕಿದ್ದ ಅತಿಶಯವಾದ ಮಹಿಮೆಯು ನಿಯಮದಾತನ ಶರೀರದಲ್ಲಿಯೂ ಪ್ರತ್ಯಕ್ಷವಾಯಿತು. ಮೋಶೆಯ ತೇಜೋಮಯವಾದ ಮುಖವು ಜನರೆಲ್ಲರಿಗೆ ಮಹಾ ಮಹಿಮೆಯಾಗಿ ಕಾಣಿಸಿತು; ಆದರೆ ಆ ತೇಜಸ್ಸು ಕಳದು ಹಾಗಾಗುವಂಥ ಮಹಿಮೆಯಾಗಿದ್ದು, ಸ್ವಲ್ಪ ಕಾಲದ ಮೇಲೆ ಕಾಣದೆ ಹಾಗಾಯಿತು. ಆದಾಗ್ಯೂ ಮೋಶೆಯಲ್ಲಿ ಪ್ರತ್ಯಕ್ಷವಾದ ದಿವ್ಯ ತೇಜಸ್ಸನ್ನು ಇಸ್ರಯೇಲನವರು ದೃಷ್ಟಿಸಲಾರದೆ ಹಾಗಾದರು. ದೇವರ ನಿಯಮವು ಪಾಪಿಯಾದ ಮನುಷ್ಯನಿಗೆ ನಿತ್ಯ ಜೀವವನ್ನು ಕಾಡದೆ ಇದ್ದರೂ, ಅದರಲ್ಲಿರುವ ದಿವ್ಯ ಮಹಿಮೆಯು ಮನುಷ್ಯನ ಬುದ್ಧಿಗೆ ಗ್ರಾಪ್ಯವಾಗುತ್ತದೆ.

೯. ಹೀಗಿರಲಾಗಿ, ಮನುಷ್ಯನಲ್ಲಿ ಜೀವಾಂತರವನ್ನುಂಟು ಮಾಡಿ, ದೇವರ ಮುಂದೆ ಸಲ್ಲುವ ನೀತಿಯನ್ನೂ ನಿತ್ಯಜೀವವನ್ನೂ ಭಕ್ತನಿಗೆ ದಯ ಮಾಡುವ ಪಾವಾನ ಒಡಂಬಡಿಕೆಯ ಮಹಿಮೆಯು ಅಧಿಕಾಧಿಕವಾಗಿರ ಬೇಕಲ್ಲ?

೧೦. ಪಾಪಿಗೆ ನಿಯಮವು ಶಾಪವನ್ನು, ಸುವಾರ್ತೆಯು ಕೃಪೆಯನ್ನು ಸಾರುತ್ತದೆ.

೧೧. ಚಂದ್ರ ನಕ್ಷತ್ರಾದಿಗಳು ರಾತ್ರಿ ಕಾಲದಲ್ಲಿ ಚನ್ನಾಗಿ ಪ್ರಕಾಶಿಸಿದರೂ, ಸೂರ್ಯೋದಯವಾದನಂತರ ಮರೆಯಾಗುವ ಪ್ರಕಾರ, ನಿಯಮದ ಮಹಿಮೆಯು ಸುವಾರ್ತೆಯ ಮಹಿಮೆಗೆ ಎಷ್ಟು ಮಾತ್ರವೂ ಸದೃಶವಾದದ್ದಲ್ಲಾ.

೧೨. ಮೋಶೆಯ ಮುಖದ ಪ್ರಕಾಶವು ಕಳದು

ಪೌಲಾದಿಗಳಾಗಿರಲಿಲ್ಲ. ಪೌಲನ ಒಡಂಬಡಿಕೆಯು ನಿತ್ಯವಾದದ್ದು. ನಿತ್ಯವಾದ ಸುವಾರ್ತೆಯ ಮಹಿಮೆಯು ನಿರ್ಲಯವಾದದ್ದು.

ವ. ೧೨. ಉದ್ಯೋಗವೃತ್ತಿಯಲ್ಲಿ ದೇವರು ನನಗೆ ಸಹಾಯಕನೆಂಬ ಭರವಸವುಳ್ಳವನಾಗಿ, ನನ್ನ ಉದ್ಯೋಗದ ಮಹಿಮೆಯನ್ನು ದೃಢವಾಗಿ ತಿಳಿದು ಕೊಂಡಿರುವ ಕಾರಣ, ಪೂರ್ಣ ಧೈರ್ಯದಿಂದಲೂ ಸ್ಪಷ್ಟವಾದದಿಂದಲೂ ನಡದು ಕೊಳ್ಳುತ್ತೇನೆ. ೧೩. ಕುಂದುವಂಥ ಮುಖಪ್ರಕಾಶವನ್ನು ಇಸ್ರಯೇಲನವರು ನೋಡದ ಹಾಗೆ ಮೋಶೆಯು ಮುಸುಕು ಹಾಕಿ ಕೊಂಡ ಪ್ರಕಾರ ನಾನು ಮಾಡುವದಿಲ್ಲ. ಆ ಪೂರ್ವ ಕಾಲದ ಸಂಗತಿಯು ಇಂದು ನಡೆಯುವ ಕಾರ್ಯವನ್ನೂ ಸೂಚಿಸಿತು. ೧೪. ಏನಂದರೆ, ಹಳ್ಳೆ ಒಡಂಬಡಿಕೆಯ ಗ್ರಂಥಗಳನ್ನು ಯೆಹೂದರು ಪಠಣ ಮಾಡುವ ವೇಳೆಯಲ್ಲಿ ನಿಜಾಭಿಪ್ರಾಯವೂ ಉದ್ದಿಶ್ಯವೂ ಗೊತ್ತಾಗದ ಹಾಗೆ, ಅವರ ಕಣ್ಣು ಕಟ್ಟಿದಂತೆ ಇದೆ. ಕ್ರಿಸ್ತನೊಬ್ಬನೇ ಅವರಿಗೆ ದೃಷ್ಟಿಯನ್ನುಂಟು ಮಾಡ ಬಲ್ಲನು. ಹಳ್ಳೆ ಒಡಂಬಡಿಕೆಯು ಕ್ರಿಸ್ತನಿಂದ ಸಂಪೂರ್ಣವಾದ್ದರಿಂದ, ಕ್ರಿಸ್ತನಲ್ಲಿ ಮುಗಿಯುತ್ತದೆಂದು, ಅರಿಯದವರಾಗಿದ್ದಾರೆ. ೧೫. ಅವರ ಹೃದಯದ ಮೇಲೆ ಮುಸುಕು ಬಿದ್ದಿರುವದರಿಂದ, (ಅಂದರೆ ಅವರು ತಿಳಿಯ ಮನಸ್ಸಿಲ್ಲದವರಾಗಿರುವದರಿಂದ) ನಿಯಮ ಪಠಣದಲ್ಲಿ ಅವರಿಗೆ ಬುದ್ಧಿ ಹುಟ್ಟುವದಿಲ್ಲ. ೧೬. ಇಸ್ರಯೇಲನವರ ಜನಾಂಗವು ಕ್ರಿಸ್ತನಲ್ಲಿ ಶೇರಿ ಕೊಂಡರೆ, ಮೋಶೆಯು ದೇವರ ಕಡೆಗೆ ಮುಖವನ್ನು ತಿರುಗಿಸುವಾಗ ಮುಸುಕು ತೆಗದು ಹಾಕಿದಂತೆ, ಅವರ ಮೇಲೆ ಇರುವ ಮುಸುಕು ಬೀಳುತ್ತಿತ್ತು.

೧೭. ಇದಲ್ಲದೆ ಕರ್ತನೇ ಆ ಆತ್ಮವು ೧). ಕರ್ತನ ಆತ್ಮವು ಎಲ್ಲಿಯಾಗಿ, ಅಲ್ಲಿ ಬಿಡುಗಡೆಯು. ೧೮. ಆದರೆ ನಾವೆಲ್ಲರು ತೆರೆದ ಮುಖದಿಂದ ಕರ್ತನ ಮಹಿಮೆಯನ್ನು ಕನ್ನಡಿಯಲ್ಲಿ ನೋಡಿ ೨), ಆತ್ಮವಾದ ಕರ್ತನಿಂದಾದ ಹಾಗೆ ೩), ಅದೇ ಹೋಲಿಕೆಯಾಗಿ ಮಹಿಮೆಯಿಂದ ಮಹಿಮೆಗೆ ಮಾರ್ಪಡುತ್ತೇವೆ ೪).

೧. ಇಸ್ರಯೇಲನವರು ಸಂವರ್ತಿಗಳಾಗಿ ಕರ್ತನಿಗೆ ವಶವಾದರೆ, ನಿಯಮಾಧೀನತ್ವದಿಂದ ಬಿಡುಗಡೆಯಾಗುವರು; ಯಾಕಂದರೆ, ಕರ್ತನು ತಾನೇ ಬದುಕಿಸುವ ಆತ್ಮವಾಗಿದ್ದಾನೆ. ವ. ೬. ಆತನಲ್ಲಿ ಶೇರುವವರು ರಕ್ಷಿಸಲ್ಪಡುವಿಲ್ಲದ ಮೃತಸ್ಥಿತಿಯಲ್ಲಿರದೆ, ಆತನಿಂದಲೇ ಆತ್ಮವನ್ನೂ ಜೀವವನ್ನೂ ಪೌಲಾಂದಿ, ಪಾಪಕ್ಕೂ ಮರಣಕ್ಕೂ ಸಂಬಂಧವಾದ ನಿಯಮದಿಂದ ಬಿಡುಗಡೆಯಾಗಿ, ಪುತ್ರಸ್ವೀಕಾರದ ಆತ್ಮವನ್ನು ಪಡದು ಕಾಳ್ಳುತ್ತಾರೆ. ರೋಮಾ. ೮, ೨. ೩. ೧೫. ಯೋಹಾ. ೪, ೨೪.

೨. ಹಳೆ ಒಡಂಬಡಿಕೆಯಲ್ಲಿ ಮೋಶೆಯ ಮುಖದಲ್ಲಿ ಮಾತ್ರವೇ ಕರ್ತನ ಮಹಿಮೆ ಕಾಣಿಸಿ ಕಾಂಡು, ಇಸ್ರಯೇಲನವರು ಅದನ್ನು ದೃಷ್ಟಿಸಿ ನೋಡಲಾರದೆ ಇದ್ದಕಾರಣ, ಅದು ಮುಸುಕಿನಿಂದ ಮರೆಯಾಗ ಬೇಕಾಯಿತು. ಪೌಲಾಸ ಒಡಂಬಡಿಕೆಯಲ್ಲಿ ಕರ್ತನ ಮಹಿಮೆಯ ಪ್ರತಿಕಾಂತಿ ಮರೆ ಇಲ್ಲದೆ ಕಾಣಿಸಿ ಕಾಳ್ಳುತ್ತದೆ; ಏನಂದರೆ ನಾವೆಲ್ಲರು ಕರ್ತನ ಮಹಿಮೆಯನ್ನು ಮರೆ ಮಾಡುವ ಸಾಮ್ಯಗಳಿಲ್ಲದೆ ಪ್ರತ್ಯಕ್ಷವಾಗಿ ನೋಡುವದಲ್ಲದೆ, ಕ್ರೈಸ್ತರ ಆತ್ಮಿಕ ಜೀವವು ದಿವ್ಯ ಮಹಿಮೆಯ ಕಿರಣಗಳಿಂದಲೇ ಮೆರೆಯುತ್ತದೆ.

೩. ಅದು ಕ್ರಿಸ್ತನಿಂದಲೇ ಆಗುತ್ತದೆ; ದಿವ್ಯ ತ್ರಾಣದಿಂದ ಆಂತರ್ಯದಲ್ಲಿ ಶೇರಿ, ಅದನ್ನು ಬಲವಾಗಿ ನೂತನ ಪಡಿಸುವ ಆತ್ಮವಾದ ಕರ್ತನಿಂದಲೇ ಈ ಕಾರ್ಯವು ಉಂಟಾಗ ಬೇಕು.

೨ ಕೊರಿ. ೪, ೧—೬.

೪. ದೇವರ ಸ್ವರೂಪವು ಋಕ್ತನ ಪ್ರಾಣವೆಂಬ ಕನ್ನಡಿಯಲ್ಲಿ ಬೀಳುವದರಿಂದ, ಅವನು ಆ ಸ್ವರೂಪವನ್ನು ಧರಿಸಿ ಕೊಂಡು, ಕ್ರಮ ಕ್ರಮವಾಗಿ ದಿವ್ಯ ಮಹಿಮಾನ್ವಿತನಾಗಿ, ಕ್ರಿಸ್ತನಿಗೆ ಅಧಿಕಾಧಿಕ ಸದೃಶನಾಗುವದೇ ಸರಿ.

ಸುವಾರ್ತೆಯ ಸೇವಕರು. ಸ. ೪.

ಅ) ಅವರ ದಿವ್ಯ ಬಲವು. ವ. ೧—೬.

ವ. ೧. ದೇವರ ಕರುಣೆಯಿಂದ ಇಷ್ಟು ಮಹಿಮೆಯುಳ್ಳ ಉದ್ಯೋಗವನ್ನು ಹೊಂದಿದವರಾದ ನಾವು ಅದರ ವೃತ್ತಿಯಲ್ಲಿ ದಣಿಯದೆ ಮನಕುಂದದೆ ಇದ್ದೇವೆ. ೨. ನಾಚಿಕೆ ಪಡ ತಕ್ಕ ರಹಸ್ಯ ಚರಣಗಳನ್ನೆಲ್ಲಾ ಬಿಟ್ಟು, ನನ್ನ ಉದ್ಯೋಗವನ್ನು ನರಭಯಭಾವನೆಯಿಂದಲೂ ನಶೇಛ್ಛಾಪೂರಣೆಯಿಂದಲೂ ಸತ್ಯವನ್ನು ಅಡಿಗಿಸುವಂಥ, ಮರೆಮೂಲೆಗಳನ್ನು ಹುಡುಕುವಂಥ ಯುಕ್ತಿ ಇಲ್ಲದೆ ನಡಿಸುತ್ತೇನೆ. ದೇವರ ವಾಕ್ಯವನ್ನು ಕಳ್ಳ ಬೋಧಕರು ಮಾಡುವ ಪ್ರಕಾರ, ಯೆಹೂದರ ಮತಕ್ಕೆ ಬೆರಸಿ ಕೆಡಿಸದೆ, ಪ್ರತಿ ಮನುಷ್ಯನ ಮನಸ್ಸಾಕ್ಷಿಯಲ್ಲಿ ದೃಢವಾಗುವ ಶುದ್ಧ ಸತ್ಯವನ್ನು ದೇವರ ಮುಂದೆ ಹೇಳಿ, ನನ್ನ ವಾಕ್ಯವು ಸತ್ಯವೆಂದೂ, ನಾನೂ ಸತ್ಯವಂತನೆಂದೂ, ಕೇಳುವವರಲ್ಲಿ ಒಬ್ಬೊಬ್ಬನು ತಿಳಿದು ಕೊಳ್ಳುವನೋ ಏನೋ ಎಂಬ ಸಂಶಯಗ್ರಸ್ತನಾಗಿರುವದಿಲ್ಲ. ೩. ನಾನು ಸಾರುವ ಸುವಾರ್ತೆಯಾದ ಈ ನನ್ನ ಬೋಧನೆಯು ಹ್ಯಾಗಾದರೂ ತಿಳಿಯಬಾರದ ಮರ್ಮವೆಂದು ನೆನಸುವವನು ಅವಿಶ್ವಾಸದಿಂದ ಆತ್ಮ ರಕ್ಷಿಣ್ಯವನ್ನು ತಳ್ಳುವ ಮನುಷ್ಯನೇ ಸರಿ. ೪. ಇಂಥಾ ಅವಿಶ್ವಾಸಿಯು, ವಿಶ್ವಾಸವಿಲ್ಲದ ಮನುಷ್ಯರು ಮರುಳಾಗಿ ಪೂಜಿಸುವ ಸೈತಾನನಿಂದ ಕಣ್ಣು ಕಟ್ಟಿದವನಾಗಿದ್ದಾನೆ. ಸೈತಾನನು ಲೋಕದವರನ್ನು ಮರುಳುಗೊಳ್ಳಿಸದಿದ್ದರೆ, ದೇವಪ್ರೇಷಿತನೂ ದೇವಪ್ರಕಾಶಿತನೂ ಆಗಿರುವದಲ್ಲದೆ, ದೇವಸ್ವರೂಪವೇ ಆದ ಯೇಸು ಕ್ರಿಸ್ತನ ಸುವಾರ್ತೆಯ ಮಹಿಮಾಕಾಂತಿಯು ಅವರ ಇಂದ್ರಿಯಗಳಿಗೂ ಹೃದಯಗಳಿಗೂ ಗೋಚರವಾಗ ಬೇಕಾಗಿತ್ತು.

೫. ಯಾಕಂದರೆ ನಮ್ಮನ್ನುನಾವೇ ಅಲ್ಲ ೧), ಕ್ರಿಸ್ತ ಯೇಸುವನ್ನು ಕರ್ತನೆಂದೂ, ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂದೂ ೨), ಸಾರುತ್ತೇವೆ. ೬. ಯಾಕಂದರೆ ಕತ್ತಲೆಯಲ್ಲಿಂದ ಬೆಳಕು ಪ್ರಕಾಶಿಸಲೆಂದು ೩) ಹೇಳಿದ ದೇವರು ತಾನೇ, ಯೇಸು ಕ್ರಿಸ್ತನ ಮುಖದಲ್ಲಿರುವ ದೇವರ ಮಹಿಮೆಯ ತಿಳುವಿಕೆಯ ಬೆಳಕು ೪) ಆಗುವದಕ್ಕೆ, ನಮ್ಮ ಹೃದಯಗಳಲ್ಲಿ (ಪ್ರಕಾಶಿಸಿದ್ದಾನೆ ೫).

೧. ದೇವಸ್ವರೂಪನ ವಾಕ್ಯವನ್ನು ಸಾರುವ ನಮ್ಮ ಮಾತನ್ನು ಅವರು ನಂಬಿದೆ ಹೋದರೆ, ನಮ್ಮ ಮೇಲೆ ತಪ್ಪು ಇಲ್ಲ.

೨. ಸುವಾರ್ತಾಪ್ರಸಂಗಿಯ ದೀನತ್ವವೂ ಉನ್ನತತ್ವವೂ ಈ ಮಾತಿನಲ್ಲಿ ಅಡಕವಾಗಿದೆ; ಅವನು ಸ್ವಂತ ಮಾನವನ್ನು ಬಯಸುವವನಲ್ಲ; ಅವನು ಎಂಥವನಾಗಿದ್ದರೂ ಚಿಂತೆ ಇಲ್ಲ; ಅವನು ಆಳೇ ಸರಿ, ಆದರೆ ಮಹೋನ್ನತನಾದ ಕರ್ತನಾಗಿರುವ ಯೇಸು ಕ್ರಿಸ್ತನನ್ನು ಸೇವಿಸುವ ಆಳಾಗಿದ್ದಾನೆ.

೩. ಲೋಕ ಸೃಷ್ಟಿಯಲ್ಲಿ ಆದ ಪ್ರಕಾರ, ದೇವರು ಪುನರ್ಜನ್ಮವೆಂಬ ನೂತನ ಸೃಷ್ಟಿಯಲ್ಲಿ ಬೆಳಕಾಗಲಿ ಎಂದು ಕತ್ತಲಾಗಿದ್ದ ಹೃದಯಗಳನ್ನು ಬೆಳಗಿಸಿ, ತನ್ನ

೨ ಕೌರಿ. ೪, ೭—೧೦.

ಆತ್ಮದ ಮುಖಾಂತರ ಚಕ್ಕನಿಗೆ ಸತ್ಯವನ್ನು ಪ್ರಕಟ ಮಾಡುತ್ತಾನೆ.

೪. ಅಂದರೆ ಸುವಾರ್ತೆಯು ನಮ್ಮ ಪ್ರಸಂಗದಿಂದ ಲೋಕದಲ್ಲಿ ಪ್ರಸಿದ್ಧವಾಗಿ, ನಂಬುವವರಿಗೆ ತೇಜೋಮಯವಾದ ಕ್ರಿಸ್ತನ ಆತ್ಮವು ಪ್ರಾಪ್ತವಾಗುವ ಪರಿಗಾಗಿ.

೫. ಈ ಸ್ವಾನುಭವವನ್ನು ಪಡೆದಿರುವವರು ಪರರಿಗೂ ಸತ್ಯವನ್ನು ಪ್ರಕಟ ಮಾಡಬಲ್ಲರು.

೪) ಸುವಾರ್ತೋದ್ಯೋಗದ ಮಹಿಮೆಯು ಭೌಮಿಕ ಮನುಷ್ಯನ ಬಲಹೀನತ್ವದಲ್ಲಿಯೂ ಮೃತತ್ವದಲ್ಲಿಯೂ ಜಯವಾಗಿ ಪ್ರಸಿದ್ಧವಾಗುತ್ತದೆ.

ವ. ೭—೧೪.

೭. ಆದರೆ ಬಲದ ಹೆಚ್ಚುವಿಕೆ ನಮ್ಮಿಂದಲ್ಲ, ದೇವರದಾಗಿರುವ ಹಾಗೆ ೧) ಈ ನಿಕ್ಷೇಪವು ೨) ಮಣ್ಣಿನ ಪಾತ್ರೆಗಳಲ್ಲಿ ೩) ನಮಗೆ ಉಂಟು. ೮. ಎಲ್ಲಾದರಲ್ಲಿ ಇರಿಕಿಸಲ್ಪಡುವವರಾಗಿ ೪) ಇಕ್ಕಟ್ಟು ಪಡದೆ, ೯. ದಿಕ್ಕು ಕಾಣದವರಾಗಿ ದಿಕ್ಕಿಲ್ಲದವರಾಗಿರದೆ, ಹಿಂಸೆ ಪಡುವವರಾಗಿ ಕೈಬಿಡಲ್ಪಡದೆ, ಕೆಡವಲ್ಪಡುವವರಾಗಿ ಕೆಡದೆ, ೧೦. ಯೇಸುವಿನ ಜೀವವು ೫) ನಮ್ಮ ಶರೀರದಲ್ಲಿ ಪ್ರಕ್ಷಕ್ಷವಾಗುವ ಹಾಗೆ, ಎಂದಿಗೂ ಕರ್ತನಾದ ಯೇಸುವಿನ ಸಾಯುವಿಕೆಯನ್ನು ೬) ಶರೀರದಲ್ಲಿ ಹೊತ್ತು ತಿರುಗುತ್ತೇವೆ.

೭. ಯಾವ ಉದ್ದಿಶ್ಯಕ್ಕಂದರೆ, ಈ ಶ್ರೇಷ್ಠ ಪ್ರಸಾದವಾದ ಸುವಾರ್ತಾದ್ಯೋಗದ ವೃತ್ತಿಯೂ ಕ್ರಿಸ್ತ ಚಕ್ಕನ ಎಲ್ಲಾ ಬಲ ಪುಣ್ಯಗಳೂ ಮನುಷ್ಯನ ಸಂಪತ್ತಲ್ಲ, ದೇವರು ಒಮ್ಮೆ ಕಾಟ್ಟು ಬಿಟ್ಟ ಪ್ರಸಾದವಾಗಿರದೆ, ಎಡೆ ಬಿಡದೆ ಆತನಿಂದ ಬರುತ್ತಾ ಇರುವ ಶಕ್ತಿಯಾಗಿ, ದೇವರದೆಂದು ನಮಗೂ ಪರರಿಗೂ ಕಾಣಿಸುತ್ತಾ ಇರಲಾಗಿ, ನಾವು ಕಿಂಕರಭಾವದಲ್ಲಿ ನೆಲೆಯಾಗಿ, ಆತ್ಮಸ್ತುತಿಯೂ ಆತ್ಮತೋಷವೂ ಇಲ್ಲದವರಾಗಿರುವ ಪರಿಗಾಗಿ ಈ ಪ್ರಕಾರವಾಗುತ್ತದೆ.

೭. ಅಂದರೆ, ಮಂಗಳಕರವಾದ ದೇವರ ತಿಳುವಿಕೆಯೂ ಇಲ್ಲಿ ವರೆಗೂ ವಿವರಿಸಿರುವ ದೇವವಾಕ್ಯಪ್ರಸಂಗದ ಉನ್ನತವಾದ ಉದ್ಯೋಗವೂ, ನಾವುಗಳ ನಿಕ್ಷೇಪವು ಅಪಾಸ್ತಲರು ಮೊದಲಾದ ಕ್ರಿಸ್ತ ಚಕ್ಕರಿಗೆಲ್ಲಾ ಕಾಟ್ಟದೆ.

೩. ಕಾರಿಂಥ ಪಟ್ಟಣದಲ್ಲಿದ್ದ ಕುಶಲಿಗಳಾದ ಕುಲಾಲರು ಅತಿ ಚಮತ್ಕೃತವಾದ ಬಹು ಬೆಲೆಯುಳ್ಳ ಮೃತ್ತಿಕಾಪಾತ್ರಗಳ ರಚನೆಯಿಂದ ಸರ್ವ ಲೋಕದಲ್ಲಿಯೂ ಪೆಸರುವಾಸಿಯಾಗಿರುವದನ್ನು ಪೌಲನು ನೆನಸಿಕಾಂಡು, ಈ ಸಾದೃಶ್ಯವನ್ನು ಕಾರಿಂಥದವರ ಪತ್ರಿಕೆಯಲ್ಲಿ ಪ್ರಯೋಗಿಸಿದ್ದು ಯುಕ್ತವಾಗಿದೆ. ಅದರ ಅರ್ಥವೇನಂದರೆ: ಸರ್ವೋತ್ತಮ ಕುಲಾಲನಾಗಿರುವ ಮನುಷ್ಯನಿರ್ಮಾಣಿಕನಾದ ದೇವರು ಉಂಟು ಮಾಡಿದ ಚಕ್ಕನ ಶರೀರದಲ್ಲಿ ಪರಿಶುದ್ಧಾತ್ಮವೆಂಬ ನಿಕ್ಷೇಪವು ಇಟ್ಟಿರುತ್ತದೆ. ಈ ನಿಕ್ಷೇಪವು ನಿರ್ಲಯವಾದ ದಿವ್ಯ ಒಡವೆ. ಆದರೆ ಅದು ಇಟ್ಟಿರುವ ಪಾತ್ರವಾದ ಶರೀರವು ಎಷ್ಟು ವಿಚಿತ್ರಕರವಾಗಿದ್ದರೂ, ಬೇಗ ಒಡದು ಪೋಗುವಂಥಾದ್ದು.

೪. ಕ್ರೈಸ್ತ ಸಭೆಯಲ್ಲಿಯೂ, ಸ್ವಜಾತಿಯವರಾದ ಯೆಹೂದರಲ್ಲಿಯೂ ಪರಜನರಲ್ಲಿಯೂ, ಭೂಮಿಯಲ್ಲಿಯೂ ಸಮುದ್ರದಲ್ಲಿಯೂ, ಶರೀರದಲ್ಲಿಯೂ ಪ್ರಾಣದಲ್ಲಿಯೂ, ಪೌಲನು ನಾನಾ ವಿಧವಾದ ಉಪದ್ರವಗಳನ್ನು ಯಾವಾಗಲೂ ಸಹಿಸುತ್ತಾ ಇದ್ದನು.

೫. ಯೇಸು ಕ್ರಿಸ್ತನು ಒಳ್ಳೆ ಉಗಿಗದವನಾದ ಪೌಲನನ್ನು ನಾನಾ ತರದ ಪ್ರಾಣಸಂಕಟಗಳಿಗೆ ಆಶ್ಚರ್ಯರೀತಿಯಿಂದ ತಪ್ಪಿಸಿ, ಅವನಿಗೆ ಅತಿಶಯವಾದ ಆತ್ಮತ್ರಾಣವನ್ನು ದಯ ಮಾಡುವದರಿಂದ,

ತನ್ನ ನಿರ್ಬಯವಾದ ಜೀವ ಬಲವನ್ನು ಸಾತು ಪುಗಾದ ಶರೀರವುಳ್ಳ ಆಸಕ್ತ ದಾಸನಲ್ಲಿ ಪ್ರವಿಷ್ಟೆ ಮಾಯಿದನು.

೬. ಯೇಸುವಿನ ನಿಮಿತ್ತ ಶ್ರಮ ಪಡುವದಲ್ಲದೆ, ಯೇಸುವಿನ ಮರಣ ಶ್ರಮಕ್ಕೆ ಸದೃಶವಾದ ಶ್ರಮಗಳನ್ನು ಪೌಲನು ತಾಳುತ್ತಾ ಇದ್ದನು. ಅಪಾ. ಕ್ರಿ. ೧೪, ೧೯. ೨೦. ೨ಕೊರಿ. ೧, ೧೦; ೬, ೯.

೧೧. ಯಾಕಂದರೆ ನಮ್ಮ ಮರ್ತ್ಯಮಾಂಸದಲ್ಲಿ ಯೇಸುವಿನ ಜೀವವೂ ಪ್ರತ್ಯಕ್ಷವಾಗುವ ಹಾಗೆ, ಜೀವಿಸುವ ನಾವು ಎಂದಿಗೂ ಯೇಸುವಿನ ನಿಮಿತ್ತ ಮರಣಕ್ಕೆ ಒಪ್ಪಿಸಲ್ಪಡುತ್ತೇವೆ ೧). ೧೨. ಹೀಗಿರಲಾಗಿ ಮರಣವು ನಮ್ಮಲ್ಲಿ ಬಲವಾಗಿದೆ, ಆದರೆ ನಿಮ್ಮಲ್ಲಿ ಜೀವವು ೨). ೧೩. ಇದಲ್ಲದೆ, ವಿಶ್ವಾಸಿಸಿದೆನು, ಆದದರಿಂದ ಮಾತಾಡಿದೆನು, ಎಂದು ಬರೆದ ಪ್ರಕಾರ ೩), ಅದೇ ವಿಶ್ವಾಸದ ಆತ್ಮವುಳ್ಳವರಾಗಿ, ನಾವೂ ವಿಶ್ವಾಸಿಸುತ್ತೇವೆ, ಆದದರಿಂದ ಮಾತಾಡುತ್ತೇವೆ. ೧೪. ಹ್ಯಾಗಂದರೆ ಕರ್ತನಾದ ಯೇಸುವನ್ನು ಎಬ್ಬಿಸಿದವನು ನಮ್ಮನ್ನೂ ಯೇಸುವಿನ ಮುಖಾಂತರ ಎಬ್ಬಿಸಿ ೪), ನಿಮ್ಮ ಸಂಗಡ ಮುಂದೆ ನಿಲ್ಲಿಸುವನೆಂದು ಬಲ್ಲೆವು. ೧೫. ಯಾಕಂದರೆ ಅಧಿಕವಾಗುವ ಕೃಪೆಯು ಅನೇಕರ ಸ್ತೋತ್ರದಿಂದ ದೇವರ ಮಹಿಮೆಗಾಗಿ ಹೆಚ್ಚುವ ಹಾಗೆ, ಎಲ್ಲಾ ನಿಮಗೋಸ್ಕರವೇ ೫). ೧೬. ಆದದರಿಂದ ದಣಿಯೆವು; ಆದರೆ ನಮ್ಮ ಹೊರಗಿನ ಮನುಷ್ಯನು ನಾಶವಾದರೂ, ಒಳಗಿನವನು ದಿನದಿನಕ್ಕೆ ಹೊಸಬನಾಗುತ್ತಾನೆ.

೧. ಅಪಾಸ್ತಲನು ಒಂದು ಪ್ರಾಣಸಂಕಟಕ್ಕೆ ತಪ್ಪಿಸಿ ಕಾಂಡನಂತರ ಮತ್ತಾಂದರಲ್ಲಿ ಬೀಳುವದು ವಾಡಿಕೆಯಾಗಿತ್ತು.

೨. ನಿಮ್ಮಲ್ಲಿ ಆತ್ಮಿಕ ಜೀವಾಭ್ಯುದಯವಾಗುವ ಉದ್ದಿಶ್ಯವಾಗಿ, ಉದ್ಯೋಗವನ್ನು ಜಾಗ್ರತೆಯಾಗಿ ನಡಿಸಿ, ಹಿಂಸೆ ಮುಂತಾದ ಶ್ರಮಗಳನ್ನು ಅನುಭವಿಸುತ್ತಾ ಬರುವ ನನಗೆ ಆಗ್ಯಾಗೈ ಮರಣಾವಸ್ಥೆ ಪ್ರಾಪ್ತವಾಗುತ್ತದೆ.

೩. ಈ ಯಥೋಕ್ತವು ಕೀರ್ತ. ೧೧೬, ೧೦ರಿಂದ ಎತ್ತಿಯದೆ. ಪೌಲನ ಅಭಿಪ್ರಾಯವೇನೆಂದರೆ: ನಾನು ವಿಶ್ವಾಸಿಯಾದ್ದರಿಂದ, ಶ್ರಮ ಹಿಂಸೆ ಮರಣ ಸಂಕಟಗಳು ಬಂದಾಗ್ಯೂ, ಸುವಾರ್ತೆಯ ಪ್ರಸಂಗವನ್ನು ಬಿಡಲಾರೆನು.

೪. ಅಂದರೆ ಯೇಸು ಕ್ರಿಸ್ತನ ಪುನರುತ್ಥಾನದಲ್ಲಿ ಪ್ರತ್ಯಕ್ಷವಾದ ದೇವರ ಸರ್ವಶಕ್ತಿಯ ಸಹಾಯದಿಂದ ಸುರಕ್ಷಿತನಾಗಿ ನಿಮ್ಮ ಬಳಿಗೆ ಬರುವೆನು.

೫. ನಾನು ತಾಳುವ ಶ್ರಮಗಳೂ ಪಡಕಾಳ್ಳುವ ರಕ್ಷಣೆಯೂ ಎಲ್ಲಾ ನಿಮ್ಮ ಪ್ರಯೋಜನಕ್ಕಾಗಿಯೂ ಸರ್ವಸಜಾಪ್ರಯೋಜನಕ್ಕಾಗಿಯೂ ನನಗೆ ಪ್ರಾಪ್ತವಾಗುತ್ತದೆ.

೬. ನನ್ನ ಶ್ರಮಗಳಿಂದ ಇಂಥ ಉತ್ತಮವಾದ ಫಲ ಪುಟ್ಟುತ್ತದೆಂದೂ, ಕರ್ತನು ನನಗೆ ಸರ್ವಶಕ್ತ ಸಹಾಯಕನೆಂದೂ, ಅನುಭವದಿಂದ ತಿಳಿದುಕಾಂಡು, ಶರೀರಾಪದ್ರವಗಳನ್ನೂ ನಿರ್ಬಲವನ್ನೂ ಚಿಂತಿಸದೆ, ಅನುದಿನವೂ ನವವಿಶ್ವಾಸದಿಂದ ದೇವರಲ್ಲಿ ಬಲ ಪುಗಾಂದುತ್ತಾ ಬರುತ್ತೇನೆ.

೧೭. ಯಾಕಂದರೆ ಕ್ಷಣಮಾತ್ರದ ಹೊರವಾದ ೧) ನಮ್ಮ ಉಪದ್ರವು ಹೆಚ್ಚಿಗಿಂತ ಹೆಚ್ಚಾದ ನಿತ್ಯ ಮಹಿಮೆಯ ಭಾರವನ್ನು ನಮಗೆ ಉಂಟು ಮಾಡುತ್ತದೆ ೨);

ಕಾಣುವವುಗಳನ್ನಲ್ಲ, ಕಾಣದವುಗಳನ್ನೇ ದೃಷ್ಟಿಸುತ್ತೇವಲ್ಲವೆ)? ೧೪. ಯಾಕಂದರೆ ಕಾಣುವವುಗಳು ತಾತ್ಕಾಲಿಕವು, ಕಾಣದವುಗಳು ನಿತ್ಯವು ಳ).

೧. ನಿತ್ಯವಾದ ಪರದ ಮಹಿಮೆಯನ್ನು ಧ್ಯಾನಿಸುವವನು ಹೀಗೆ ಚಾವಿಸುತ್ತಾನೆ.

೨. ಯೇಸುವು ಶ್ರಮಮಾರ್ಗದಿಂದ ನಿರಂತರ ಮಹಿಮೆಯಲ್ಲಿ ಶೇರಿದಂತೆ, ಆತನ ಚಕ್ಕರೂ ವಿಶ್ವಾಸದಿಂದ ಸಹಿಸುವ ಶ್ರಮಗಳ ಸಾಧನೆಯಿಂದಲೇ ದಿವ್ಯ ಮಹಿಮೆಯ ಬಾಧ್ಯತೆಗೆ ಯೋಗ್ಯರಾಗುತ್ತಾರೆ. ಪೊನ್ನನ್ನು ಬೆಂಕಿಯಿಂದ ಚೊಕ್ಕಟವಾಗುವಂತೆ ಯೂ, ಕಾಯಿಗಳು ಬಿಸಿಲಿನಿಂದ ಪಕ್ವಾಗುವಂತೆಯೂ, ಚಕ್ಕನು ಶ್ರಮದಿಂದ ಸಿದ್ಧನಾಗುತ್ತಾನೆ.

೩. ಈ ಚಾವನೆಯು ದೈವಿಕ ಮನಸ್ಸಿನಿಂದಲೇ ಪುಟ್ಟಿ ತಕ್ಕದ್ದು. ಈ ಮನಸ್ಸು ನಮ್ಮಲ್ಲಿ ಉಂಟು. ಅದೃಶ್ಯನಾದ ದೇವರ ಪ್ರೀತಿಯಿಂದ ಅದೃಶ್ಯವಾದ ದೇವರ ಮಹಿಮೆಯ ಆಶೆಯು ಇಹದಲ್ಲಿ ಪುಟ್ಟುತ್ತದೆ.

೪. ಇಬ್ರಿ. ೧೧, ೧. ಅದೃಶ್ಯವಾದದ್ದೇ ವಿಶ್ವಾಸಕ್ಕೆ ವಿಷಯವಾಗಿದೆ.

ಸ. ೫.

ಪರದ ಮಹಿಮೆಯ ಆಶೆಯಿಂದಲೂ ನ್ಯಾಯನಿರ್ಣಯದ ನಿರೀಕ್ಷಣೆಯಿಂದಲೂ ಕ್ರಿಸ್ತನ ಸೇವಕನಲ್ಲಿ ಹುಟ್ಟುವ ಮನಸ್ಸಾಕ್ಷಿಯು.

ಅ) ಮಹಿಮೆಯ ಆಶೆಯಿಂದ ಹುಟ್ಟಿ ತಕ್ಕ ಫಲವು. ಮಹಿಮೆಯ ಆಶೆಯು. ವ. ೧—೫.

೧. ಯಾಕಂದರೆ ೧) ಗುಡಾರವಾಗಿರುವ ನಮ್ಮ ಭೂಲೋಕವಾವವಾದ ಮನೆಯು ೨) ಬಿಚ್ಚಲ್ಪಟ್ಟರೆ, ಕೈಕೆಲಸವಲ್ಲದ ನಿತ್ಯ ಮನೆಯಾಗಿರುವ ದೇವರಿಂದಾದ ಕಟ್ಟುವಿಕೆಯು ಆಕಾಶಗಳಲ್ಲಿ ನಮಗುಂಟೆಂದು ಬಲ್ಲೆವು. ೨. ಹ್ಯಾಗಂದರೆ ಪರಲೋಕದಿಂದಿರುವ ನಮ್ಮ ನಿವಾಸವನ್ನು ಮೇಲೆ ಹಾಕ್ಕಿದ್ದು ಕಾಳ್ಳಿ ಅಪೇಕ್ಷಿಸಿ, ಇದರಲ್ಲಿ ಮೂಲುಗುತ್ತೇವೆ ೩); ೩. ನಾವು ಹಾಕ್ಕಿದ್ದು ಕಾಂಡು ಬತ್ತಲೆಯಲ್ಲದವರಾಗಿ ಕಾಣಿಸಲ್ಪಟ್ಟರೆ ೪), ಸೆರೆ. ೪. ಯಾಕಂದರೆ ಗುಡಾರದಲ್ಲಿರುವ ನಾವು ಭಾರ ಹೊತ್ತು ಮೂಲುಗುತ್ತೇವೆ; ಏನಂದರೆ ವಸ್ತ್ರ ತೆಗೆಯುವದಕ್ಕಲ್ಲ ೫), ಮರ್ತ್ಯವಾದದ್ದು ಜೀವದಿಂದ ನುಂಗಲ್ಪಡುವ ಹಾಗೆ ಮೇಲೆ ಹಾಕ್ಕಿದ್ದು ಕಾಳ್ಳುವದಕ್ಕೆ ಇಚ್ಛೆಪಡುತ್ತೇವೆ. ೫. ಇದಲ್ಲದೆ ಇದಕ್ಕಾಗಿಯೇ ನಮ್ಮನ್ನು ಸಿದ್ಧ ಮಾಡಿದವನು, ಆತ್ಮದ ಮುಂಗಡವನ್ನು ೬) ನಮಗೆ ಕೊಟ್ಟ ದೇವರೇ.

೧. ಅಪೊಸ್ತಲನು ಶ್ರಮವು ಯಾವ ಕಾರಣದಿಂದ, ಯಾವ ರೀತಿಯಿಂದ ಮಹಿಮೆಯ ಮಾರ್ಗವಾಗಿದೆಂದು, ವಿವರಿಸುತ್ತಾನೆ.

೨. ಲೌಕಿಕವಾದ ಈ ಶರೀರಗೃಹವು ಮರಣದಿಂದ ಅಳಿದು ಪೊನ್ನಾದನಂತರ, ಮನುಷ್ಯರ ಕೈಕಟ್ಟಿದ ಮನೆಯ ಹಾಗೆ ಅಸ್ಥಿರವಲ್ಲದ ಪೊನ್ನಾಸ್ತಾದ

೨ ಕೊರಿ. ೫, ೬—೧೦.

ದೈವಿಕವಾದ ಪುನರುತ್ಥಾನಶರೀರವನ್ನು ಪಡೆಯಾಂದು ವೆವು.

೩. ಅಪಾಸ್ತಲನು ಇಲ್ಲಿ ತನ್ನ ವಿಷಯವಾಗಿಯೂ, ತನ್ನ ಪಟ್ಟಾಗೆ ಅಪುರೂಪವಾಗಿ ಪುನರುತ್ಥಾನಶರೀರವೆಂಬ ಪಟ್ಟಾದಿಕೆಯನ್ನು ಉಳಿದವರಿಗಿಂತ ಮುಂಚಿತವಾಗಿ ಪಡೆಯಾಂದ ತಕ್ಕವರ ವಿಷಯವಾಗಿಯೂ ಮಾತ್ರ ನುಡಿಯುತ್ತಾನೆ. ಇದಕ್ಕೆ ೧೨ನೆ ಸಂಧಿಯನ್ನು ಪ್ರಕ. ೧೨, ೨ರ ಟಿಪ್ಪಣಿಯನ್ನು ಸರಿ ನಾೀಡ ಬೇಕು.

೪. ಐಹಿಕವಾದ ಈ ಶರೀರದಲ್ಲಿ ವಾಸವಾಗಿರುವ ವೇಳೆಯಲ್ಲಿ ಕ್ರಿಸ್ತನ ನೀತಿ ಎಂಬ ವಸ್ತ್ರವನ್ನು ಪಡೆಯಾದ್ದು ಕಾಂಡು, ಪಾಪಭಾವದ ನಗ್ನತ್ವಕ್ಕೆ ತಪ್ಪಿಸಿ ಕಾಂಡವರಿಗೆ ಮಾತ್ರ ಮಹಿಮಾಶರೀರವು ಸಿಕ್ಕುವದು. ವಿಶ್ವಾಸದಿಂದ ಭಕ್ತರ ಆತ್ಮಕ್ಕೆ ಇಹದಲ್ಲಿ ಪ್ರಾಪ್ತವಾದ ಕ್ರಿಸ್ತನ ನೀತಿ ಎಂಬ ಪಟ್ಟುವಸ್ತ್ರದಿಂದ ಪರಿಶುದ್ಧಾತ್ಮವು ಅವರ ಶರೀರಕ್ಕೆ ನಿರ್ಣಯವಾದ ಪುನರುತ್ಥಾನವಸ್ತ್ರವನ್ನು ಪಡಾಂಡಿಸುತ್ತದೆ.

೫. ಪಾಪದ ಜೀತವಾದ ಮರಣಕ್ಕೆ ಸ್ವಾಭಾವಿಕ ಮನಸ್ಸು ಅಳುಕಿ, ಪೌನಾಕ ಎಲಿಯರಿಗೆ ಪ್ರಾಪ್ತವಾದ ಪ್ರಕಾರ ಮರಣಾನುಭವವಿಲ್ಲದೆ ಐಹಿಕವಾದ ಈ ಶರೀರವನ್ನು ಬಿಡುತ್ತಲೆ, ದೈವಿಕ ಶರೀರವನ್ನು ಪಡದು ಕಾಳ್ಳುವದು ಪಾಸಿ ಎಂದು, ನೆನಸುತ್ತದೆ. ಐಹಿಕವಾದ ಆದಮನ ಶರೀರವು ೧ ಕೊರಿ. ೧೫, ೪೭. ಕ್ರಮ ಕ್ರಮದಿಂದ ಆತ್ಮಭಾವವನ್ನು ಧರಿಸಿ ಕಾಳ್ಳುತ್ತಾ, ಮರಣದಿಂದ ವಿಚ್ಛಿನ್ನವಾಗದೆ ಮಹಿಮಾವಿಕಾರವಾಗುವದು ಮನುಷ್ಯಭಾವದ ಆದಿನಿಯಮವಾಗಿತ್ತೆಂದು, ನೆನಸ ಬಹುದು.

೬. ಈ ಬಯಕೆ ಸ್ವಾಭಾವಿಕಮಾರ್ಗದಿಂದ ನೆರವೇರದೆ, ಆತ್ಮವನ್ನು ಪಡಾಂದಿದವರಲ್ಲಿಯೇ ಆತ್ಮಶಕ್ತಿಯಿಂದ ಸಂಪೂರ್ಣವಾಗುವದು. ರಾೀಮಾ. ೮, ೧೦.

ಈ ಆಶೆಯ ಫಲವು. ವ. ೬—೧೦.

೬. ಹೀಗಿರಲಾಗಿ ಯಾವಾಗಲೂ ಧೈರ್ಯ ಪಟ್ಟು ೧), ಶರೀರದಲ್ಲಿ ಸ್ವವಾಸವಾಗಿ ಕರ್ತನಿಗೆ ಪರವಾಸವಾಗಿದ್ದೇವೆಂದು ೨) ತಿಳಿದು, ೭. ದೃಷ್ಟಿಯಿಂದಲ್ಲ ೩) ವಿಶ್ವಾಸದಿಂದಲೇ ನಡೆದು ಕಾಳ್ಳುವವರಾಗಿದ್ದು, ೮. ಹಾಗಾದರೂ ಧೈರ್ಯ ಪಟ್ಟು, ಶರೀರಕ್ಕೆ ಪರವಾಸವಾಗಿ ಕರ್ತನ ಬಳಿಯ ಸ್ವವಾಸವಾಗ ಬಹು ಹೆಚ್ಚಾಗಿ ಅಪೇಕ್ಷಿಸುತ್ತೇವೆ ೪). ೯. ಆದದರಿಂದ ಸ್ವವಾಸವಾಗಿದರೂ, ಪರವಾಸವಾಗಿದ್ದರೂ, ಅವನನ್ನು ಮೆಚ್ಚಿಸುವ ಮಾನವನ್ನು ಆಶಿಸುತ್ತೇವೆ ೫). ೧೦. ಯಾಕಂದರೆ ಒಬ್ಬಾಬ್ಬನು ಶರೀರದಲ್ಲಿ ಆದವುಗಳನ್ನು, ಒಳ್ಳೇದಾಗಲಿ ಕೆಟ್ಟದಾಗಲಿ, ಮಾಡಿದ ಪ್ರಕಾರ ಹಾಂದುವ ಹಾಗೆ, ನಾವೆಲ್ಲರು ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿ ಕಾಳ್ಳ ಬೇಕು.

೧. ಎಷ್ಟು ಕಾಟಲೆ ಬಂದಾಗ್ಯೂ, ಈ ಆಶೆಯುಳ್ಳವರ ಎದೇಗುಂದಿಗೆ ಇಳಿಯುವದಿಲ್ಲ; ಯಾಕಂದರೆ ಅವರಿಗೆ ಮರಣವು ಅಹಿತವಾಗಿರುವದಿಲ್ಲ.

೨. ಕರ್ತನಿಗೆ ಅಪರೋಕ್ಷವಾದ ಇಹಸ್ಥಿತಿಗೆ ಅವರು ಮೆಚ್ಚುವದಿಲ್ಲ.

೩. ಅವರು ನಂಬುವಂಥಾದ್ದು ಇಹದಲ್ಲಿ ಕಾಣದೆ ಇರುವದರಿಂದ, ಬಯಕೆ ನೆರವೇರಲಿಲ್ಲವೆಂದು ಅಸಂತುಷ್ಟರಾಗಿದ್ದಾರೆ.

೪. ಸತ್ತು ಕರ್ತನ ಬಳಿಗೆ ಪಟ್ಟಾಗ ಬೇಕೆಂಬುವದು ಅವರ ದಾಡ್ಡ ಬಯಕೆಯಾಗಿದೆ. ಫಿಲಿ. ೧, ೨೩.

೨ ಕೌರಿ. ೫, ೧೧—೧೫.

೫. ಕರ್ತನ ಮೆಚ್ಚಿಗೆಯೇ ಚಕ್ಕರ ಮುಖ್ಯಾಪೇಕ್ಷೆ. ಪಾವನತರಶಿಷ್ಯರಾದರೂ, ಕರ್ತನ ನ್ಯಾಯಪೀಠದ ಮುಂದಕ್ಕೆ ಬರ ಬೇಕು. ಆದ್ದರಿಂದ ಅವರ ಹೃದಯದಲ್ಲಿರುವ ಪ್ರೀತಿಗೂ ಬಯಕೆಗೂ ಪರಿಶುದ್ಧ ಪರೀಷಣೆಯು ಬೆರೆಯುತ್ತದೆ ಫಿಲಿ. ೨, ೧೨. ನಿಜ ಚಕ್ಕರಿಗೆ ತಮ್ಮ ಪಾಪವೆಲ್ಲಾ ಪರಿಹಾರವಾಯಿತೆಂಬ ದೃಢವೂ, ದೇವರಾಜ್ಯಬಾಧ್ಯತೆಯ ನಿಸ್ಸಂಶಯವಾದ ಆಶೆಯೂ ಉಂಟು. ಆದಾಗ್ಯೂ ಅವರಿಗೂ ನ್ಯಾಯ ವಿಚಾರವಾಗುತ್ತದೆ. ಅವರವರಿಗೆ ಪ್ರಾಪ್ತವಾಗುವ ಪರದ ಮಹಿಮೆಯ ತಾರತಮ್ಯವು ಇಹದ ವೃತ್ತಿಗೆ ಅನುಸಾರವಾಗುತ್ತದೆ.

ಇ) ಅಪೊಸ್ತಲನು ಬರುವ ನ್ಯಾಯನಿರ್ಣಯವನ್ನು ಧ್ಯಾನಿಸಿ, ದೇವರ ಮುಂದೆ ದೇವರನ್ನು ಸೇವಿಸಿ, ಕ್ರಿಸ್ತನ ಪ್ರೀತಿಯನ್ನು ಕೈಕೊಳ್ಳುತ್ತಾನೆ. ವ. ೧೧—೧೭.

೧೧. ಹೀಗಿರುವದರಿಂದ ಕರ್ತನ ಭಯವನ್ನರಿತು, ಮನುಷ್ಯರನ್ನು ಸಮ್ಮತಿ ಪಡಿಸುತ್ತೇವೆ [೧]); ಆದರೆ ದೇವರಿಗೆ (ಪ್ರತ್ಯಕ್ಷವಾಗಿದ್ದೇವೆ [೨]); ಮತ್ತು ನಿಮ್ಮ ಮನಸ್ಸಾಕ್ಷಿಗಳಲ್ಲಿಯೂ (ಪ್ರತ್ಯಕ್ಷವಾಗಿದ್ದೇವೆಂದು [೩]) ನಂಬುತ್ತೇನೆ. ೧೨. ಯಾಕಂದರೆ ತಿರಿಗಿ ನಮ್ಮನ್ನು ನಿಮಗೆ (ಪ್ರಕಟಿಸಿ ಮಾಡಿ ಕೊಳ್ಳುವದಿಲ್ಲ [೪]); ಆದರೆ ಹೃದಯದಿಂದಲ್ಲ, ಮುಖದಿಂದಲೇ ಹೆಚ್ಚಳ ಪಡುವವರಿಗೆ [೫]) ಎದುರಾಗಿ ನಿಮಗೆ ಮಾತು ಇರುವ ಹಾಗೆ, ನಮಗಾಶ್ರಯಸ್ಥರ ಹೆಚ್ಚಳ ಪಡುವ ಹಾಗೆ [೬]) ಅವಕಾಶವನ್ನು ಕೊಡುತ್ತೇವೆ. ೧೩. ಯಾಕಂದರೆ ನಾವು ಪರವಶವಾಗಿದ್ದರೆ, ದೇವರಿಗೆ [೭]); ಸ್ವಸ್ಥ ಬುದ್ಧಿಯಿಂದಿದ್ದರೆ, ನಿಮಗೆ.

೧. ಅಂದರೆ ನನಗಿರುವ ಅಪಾಸ್ತಲತನದ ಅಧಿಕಾರವನ್ನು ಮನುಷ್ಯರಿಗೆ ಪ್ರಮಾಣಿಸುತ್ತೇನೆ.

೨. ನಾನು ಗರ್ವದಿಂದ ಸುಳ್ಳಾಡದೆ, ದೇವರ ಸನ್ನಾನಾಸಕ್ತಿಯಿಂದ ಸತ್ಯವನ್ನು ಪೇಳುತ್ತೇನೆಂತ, ದೇವರು ಬಲ್ಲನು.

೩. ನಾನು ವಂಚಕನಾದ ಅಪಹಂಕಾರಿಯಲ್ಲವೆಂದು, ನಿಮ್ಮ ಹೃದಯಗಳಿಗೂ ಗೊತ್ತಾಗಿದೆ.

೪. ವ್ಯರ್ಥವಾದ ಗರ್ವದಿಂದ ನಾನು ಆತ್ಮ ಸ್ತುತಿ ಮಾಡುವವನಲ್ಲ.

೫. ಕಾರಿಂಥದಲ್ಲಿ ಶೇರಿದ ಕಳ್ಳ ಬಾಧಕರು ತಾವು ಯೆರೂಸಲೇಮಿನಲ್ಲಿರುವ ಪೇತ್ರ ಮುಂತಾದ ಅಪಾಸ್ತಲರ ಪರಿಚಿತರೆಂದೂ, ಮೊದಲಿನ ಶಿಷ್ಯರ ಲೆಕ್ಖದಲ್ಲಿ ಶೇರಿದವರೆಂದೂ, ಯೆರೂಸಲೇಮಿನ ಸಭೆಯಲ್ಲಿ ಪ್ರಸಿದ್ಧರೆಂದೂ ಪೇಳಿ, ತಮ್ಮನ್ನು ತಾವೇ ಪ್ರತಿಷ್ಠಿಸಿಕೊಂಡಾಗ್ಯೂ, ತಾವು ಪೂರ್ಣ ಹೃದಯದಿಂದ ಯೇಸು ಕ್ರಿಸ್ತನನ್ನು ನಂಬುತ್ತೇವೆಂದೂ, ಪೂರ್ಣ ಹೃದಯದಿಂದ ಕಾರಿಂಥದವರನ್ನು ಪ್ರೀತಿ ಮಾಡುತ್ತೇವೆಂದೂ, ಪೌಲನಂತೆ ಸತ್ಯವಾಗಿ ಪೇಳಲಾರದವರಾಗಿದ್ದರು.

೬. ನಾನು ಅವರಿಗಿಂತ ಉತ್ತಮನೆಂದು ನೀವು ತಿಳಿಕೊಂಡು, ಅವರ ಗರ್ವವನ್ನು ತಗ್ಗಿಸುವದಕ್ಕೆ ಸಮರ್ಥರಾಗುವ ಹಾಗೆ.

೭. ನನ್ನ ಉದ್ಯೋಗದ ಮಹಿಮೆಯನ್ನು ಹೊಗಳುವದರಲ್ಲಿ ಮಿತಿ ಮೀರುತ್ತೇನೆಂದು, ನಿಮಗೆ ತೋಚಿದರೆ, ದೇವರ ಸನ್ನಾನಾಸಕ್ತಿಯಿಂದಲೇ ಹೀಗೆ ಮಾತನಾಡುತ್ತೇನೆಂದು, ತಿಳಿದು ಕೊಳ್ಳ ಬೇಕು. ಆದರೆ ಈಗ ನಿಮಗಾಗಿ ಹೆಚ್ಚಿಗೆ ಮಾತು ನುಡಿಯದೆ ತಗ್ಗಿ ಮಾತನಾಡಿದ್ದೇನೆ.

೨ ಕೊರಿ. ೫, ೧೪—೨೦.

೧೪. ಯಾಕಂದರೆ ಕ್ರಿಸ್ತನ ಪ್ರೀತಿಯು ನಮ್ಮನ್ನು ಇರಿಕಿಸುತ್ತದೆ [೧]; ಯಾಕಂದರೆ ಒಬ್ಬನು ಎಲ್ಲರಿಗೋಸ್ಕರ ಸತ್ತನಾದರೆ [೨], ಎಲ್ಲರು ಸತ್ತರು ಸರಿ; ೧೫. ಮತ್ತು ಬದುಕುವವರು ಇನ್ನೂ ತಮಗಲ್ಲ [೩], ತಮಗೋಸ್ಕರ ಸತ್ತು ಎಬ್ಬಿಸಲ್ಪಟ್ಟವನಿಗೆ ಬದುಕುವ ಹಾಗೆ, ಅವನು ಎಲ್ಲರಿಗೋಸ್ಕರ ಸತ್ತನು ಎಂದು ನಿರ್ಣಯಿಸುತ್ತೇವೆ.

೧. ಕ್ರಿಸ್ತನ ಪ್ರೀತಿಗೆ ಪರವಶನಾಗಿ, ಸ್ವಾರ್ಥವನ್ನೆಲ್ಲಾ ಮರತು, ಸಹೋದರರಾದ ನಿಮ್ಮ ಪ್ರಯೋಜನವನ್ನೇ ಹುಡುಕುತ್ತೇನೆ.

೨. ಕ್ರಿಸ್ತನು ನಮ್ಮ ಪಾಪಪರಿಹಾರನಾಗಿ ಸತ್ತದರಿಂದ ನಾವು ಸತ್ತು ಪಾಪಕ್ಕೆ ಆಯಿತು.

೩. ಆತನು ತನ್ನ ಜೀವವನ್ನು ನಮಗಾಗಿ ಕೊಟ್ಟ ಕಾರಣ ನಮ್ಮ ಜೀವವೂ ಅವನ ಅಧೀನವಾಯಿತು.

೧೬. ಹೀಗಿರುವದರಿಂದ ನಾವು ಇಂದಿನಿಂದ ಯಾವನನ್ನೂ ಮಾಂಸದ ಪ್ರಕಾರ ಅರಿಯೆವು [೧]; ಕ್ರಿಸ್ತನನ್ನು ಸಹ ಮಾಂಸದ ಪ್ರಕಾರ ಅರಿತಿದ್ದರೂ, ಇಗ ಇನ್ನೂ ಅರಿಯೆವು. ೧೭. ಹಾಗಾದರೆ ಒಬ್ಬನು ಕ್ರಿಸ್ತನಲ್ಲಿದ್ದರೆ, ಹೊಸ ಸೃಷ್ಟಿಯೇ; ಹಳೇಯವುಗಳು ಕಳೆದು ಹೋದವು; ಇಗೋ, ಎಲ್ಲಾ ಹೊಸದಾಯಿತು [೨]. ೧೮. ಈದರೆ ಎಲ್ಲಾ ನಮ್ಮನ್ನು ಯೇಸು ಕ್ರಿಸ್ತನ ಮುಖಾಂತರ ತನಗೆ ಅನ್ಯೋನ್ಯ ಮಾಡಿ, ಅನ್ಯೋನ್ಯದ ಸೇವೆಯನ್ನು ನಮಗೆ ಕೊಟ್ಟ ದೇವರಿಂದಲೇ [೩].

೧. ಪರಿಶುದ್ಧಾತ್ಮದಿಂದ ಆತ್ಮಿಕ ಜೀವವನ್ನು ಪಡೆದಿದ ಕಾರಣ ನಾನು ಮಾಂಸಾನುಕೂಲವಾದ ಜಾವನೆಗಳನ್ನೆಲ್ಲಾ ತಳ್ಳಿದ್ದೇನೆ. ಕ್ರಿಸ್ತನನ್ನು ಸಹ ಸಮ್ಮುಖವಾಗಿ ನೋಡಿದ್ದನ್ನು ಈಗ ಲಕ್ಷ್ಯ ಮಾಡುವದಿಲ್ಲ. ನಜರೇತಿನವರಂತೆ ಮತ್ತಾ. ೧೩, ೫೪. ಆತನನ್ನೂ ಕಂಡು, ಆತನು ಲೌಕಿಕ ರಾಜ್ಯವನ್ನು ಸ್ಥಾಪಿಸುವನೆಂದು ನಾನು ಮಾಡಿದ ಆಶೆಯು ನಿರರ್ಥಕವಾದದ್ದೆಂದು ತಿಳಿದು ಕಾಂಡು, ಪುನರುತ್ಥಾನವಾದಂಥ, ಪರಿಶುದ್ಧಾತ್ಮದಿಂದ ದೇವರ ಮಗನಾಗಿ ಪ್ರಕಟವಾದಂಥ ರಾಜಮಿಾ. ೧, ೪. ೧ ತಿಮೊ. ೩, ೧೬. ಕರ್ತನನ್ನು ಕಂಡು ನಂಬಿದಂದಿನಿಂದ ಅಜ್ಞಾನ ಕಾಲದ ಪರಿಚಿತಿಯನ್ನು ಮರತು ಬಿಟ್ಟೆನು.

೨. ಕ್ರಿಸ್ತನ ಐಕ್ಯದಲ್ಲಿ ಶೇರಿದವನು ನೂತನ ಮನುಷ್ಯನಾಗುತ್ತಾನೆಂದು, ಸ್ವಾನುಭವದಿಂದಲೇ ತಿಳಿದಿದ್ದೇನೆ. ಇಂಥವನಿಗೆ ಸರ್ವವು ಬೇರೆ ಆಯಿತೆಂದೂ ಎಲ್ಲಾ ಪಾಪಾಸದಾಯಿತೆಂದೂ ತಾತ್ಪರ್ಯವಾಗುತ್ತದೆ. ಯೆಶಾ. ೪೩, ೧೮. ಪ್ರಕ. ೨೧, ೫.

೩. ಇದರಲ್ಲಿ ನರಪುನ್ಯಾಖಾವನೆ ಶೇರುವದಿಲ್ಲಾ; ಕ್ರಿಸ್ತನ ಮುಖಾಂತರ ಲೋಕ ವಿಮೋಚನೆಯನ್ನುಂಟು ಮಾಡಿ, ವಿಮೋಚನೆಯ ಪ್ರಸಂಗದ ಉದ್ಯೋಗವನ್ನು ಅಪೊಸ್ತಲರಿಗೆ ಒಪ್ಪಿಸಿದ ದೇವರ ಉಚಿತವಾದ ಕೃಪೆಯಿಂದಲೇ ಎಲ್ಲಾ ಆಗುತ್ತದೆ.

೧೯. ಏನಂದರೆ ದೇವರು [೧] ಕ್ರಿಸ್ತನಲ್ಲಿದ್ದು [೨], ಲೋಕವನ್ನು ತನಗೆ ಅನ್ಯೋನ್ಯ ಮಾಡಿ [೩], ಅವರ ಅಕ್ರಮಗಳನ್ನು ಅವರಿಗೆ ಎಣಿಸದೆ [೪], ಅನ್ಯೋನ್ಯದ ಮಾತನ್ನು ನಮ್ಮಲ್ಲಿ ಇಟ್ಟಿದ್ದಾನೆ [೫]. ೨೦. ಹಾಗಾದರೆ ದೇವರು ನಮ್ಮ ಮುಖಾಂತರ ಬುದ್ಧಿ

೫ಕೆ೮ ೩. ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ಲ.

೨ ಕೌರಿ. ೫, ೨೧.

ಹೇಳುವ ಪ್ರಕಾರ, ಕ್ರಿಸ್ತನಿಗಾಸ್ಕರ ರಾಯಭಾರಿಗಳಾಗಿದ್ದೇವೆ [೬]; ದೇವರಿಗೆ ಅನ್ಯಾನ್ಯವಾಗಿರೆಂದು [೭], ಕ್ರಿಸ್ತನಿಗೆ ಬದಲಾಗಿ ಬೇಡಿ ಕೊಳ್ಳುತ್ತೇವೆ [೮]. ೨೧. ಯಾಕಂದರೆ ನಾವು ಅವನಲ್ಲಿ ದೇವರ ನೀತಿಯಾಗುವ ಹಾಗೆ [೯], ಪಾಪವನ್ನರಿಯದವನನ್ನು ನಮಗಾಸ್ಕರ ಪಾಪವಾಗ ಮಾಡಿದನು [೧೦].

೧. ೧ಲನೆ ವಚನದ ತಾತ್ಪರ್ಯವನ್ನು ಪೌಲನು ಈಗ ಪೆಚ್ಚಾಗಿ ವಿವರಿಸಿ, ವಿಮೋಚನೆಯ ವಿಷಯವಾಗಿಯೂ ಪ್ರಸಂಗಾದ್ಯಾಗದ ವಿಷಯವಾಗಿಯೂ ನಿಜ ಸುವಾರ್ತಾಬಾಧನೆಯನ್ನು ಸ್ಥಾಪಿಸಿ, ತನ್ನ ಜೀವವೃತ್ತಿಯ ನೆಲವನ್ನು ತಾರಿಸುತ್ತಾನೆ.

ಅ) ವಿಮೋಚನಾವಿಷಯವಾದ ಬಾಧನೆಯ ಸಾರವೇನಂದರೆ:

ದೇವರು ಲಾಕವಿಮೋಚನೆಯನ್ನುಂಟು ಮಾಡಿದ್ದಾನೆ; ಏನಂದರೆ ತಂದೆಯಾದ ದೇವರು ವಿಮೋಚನಾಕರ್ತನಾಗಿದ್ದು, ತನಗೂ ಪಾಪಕ್ಕೆ ಒಳಗಾದ ಲಾಕಕ್ಕೂ ಹುಟ್ಟಿದ ದ್ವೇಷವನ್ನು ಪರಿಹರಿಸ ಬೇಕೆಂದು, ಲಾಕ ವಿಮೋಚನಾಬಲಿಗೆ ಬೇಕಾದ ಪರಿಶುದ್ಧವಾದ ಕುರಿಯನ್ನು ತಾನೇ ದಯ ಮಾಡಿ, ಅದರ ಮೇಲೆ ನಮ್ಮ ಪಾಪವನ್ನೆಲ್ಲಾ ಇಟ್ಟು, ವಿಮೋಚನಾಬಲಿಯಾಗ ತಕ್ಕ ತನ್ನ ಮಗನು ನಾನಾ ಶ್ರಮಗಳನ್ನು ಅನುಭವಿಸಿ ನಿಜ ರಕ್ತವನ್ನು ಧಾರೆಯಾಗಿ ಹಾಯ್ಕು ಬೇಕೆಂದು, ನೇಮಿಸಿದನು.

೨. ತಾನು ತಂದೆಯಲ್ಲಿ ತಂದೆ ತನ್ನಲ್ಲಿ ಉಂಟೆಂದೂ, ತಾನು ಏನೂ ಸ್ವೇಚ್ಛೆಯಿಂದ ಮಾಡದೆ, ಎಲ್ಲಾನ್ನು ತಂದೆಯ ಆಜ್ಞಾನುಸಾರವಾಗಿ ಮಾಡುತ್ತೇನೆಂದೂ, ಸತ್ಯವಾಗಿ ಹೇಳಿದ ಕ್ರಿಸ್ತನು ವಿಮೋಚನಾಕರಣವಾದನು.

೩. ಕ್ರಿಸ್ತನು ಪಾಪ ಬಲಿಯಾಗುವದರಿಂದಲೇ ಲಾಕವಿಮೋಚನೆಯನ್ನು ದೇವರು ಉಂಟು ಮಾಡಿದನು ರಾಮಾ. ೩, ೨೫. ವ. ೨೧.

೪. ಈತನು ನಮ್ಮ ಹಾಣಿಗಾರನಾಗಿ ಲಾಕದ ಪಾಪಕ್ಕೆ ಅಪಾರ ಪ್ರಾಯಶ್ಚಿತ್ತವನ್ನು ಮಾಡಿದ್ದರಿಂದ, ದೇವರು ನಮ್ಮ ಪಾಪವನ್ನು ಎಣಿಕೆ ಮಾಡುವದಿಲ್ಲ.

೫. ಈ ಸುವಾರ್ತೆ ಲಾಕದಲ್ಲಿ ಪ್ರಖ್ಯಾತವಾಗುವ ಹಾಗೆ, ದೇವರು ವಿಶೇಷವಾದ ಉದ್ಯಾಗವನ್ನು ನೇಮಕಾ ಮಾಡಿ, ದೇವರಿಗೆ ಅನ್ಯಾನ್ಯವಾಗ ಬೇಕೆಂದು ಮನುಷ್ಯರನ್ನು ಸುವಾರ್ತಿಕರ ವಚನದಿಂದ, ಬೇಡುತ್ತಾನೆ.

ಆ) ೨ನೆ ವಚನದಲ್ಲಿ ಪ್ರಸಂಗಾದ್ಯಾಗದ ವಿಷಯವಾಗಿ ಕೆಲವು ಸೂತ್ರಗಳು ಬರದವೆ.

೬. ಕ್ರಿಸ್ತನ ರಾಯಭಾರಿಗಳಾದ ಸುವಾರ್ತಿಕರ ಮುಖಾಂತರ ದೇವರು ನುಡಿಯುತ್ತಾನೆ.

೭. ಅವರು ಬೇಡುವವರಾಗಿ ಸಾರುವ ಮುಖ್ಯಾಭಿಪ್ರಾಯವೇನಂದರೆ: ದೇವರಿಗೆ ಅನ್ಯಾನ್ಯರಾಗಿರಿ; ನಿಮಗೆ ದಾರಕುವ ಕೃಪೆಯನ್ನು ತೆಗದು ಕಾಳ್ಗಿರಿ.

೮. ಶಿಕ್ಷಿಸುವದಲ್ಲ, ಬೇಡುವದೇ ಅವರ ಕೆಲಸವಾಗಿದೆ.

ಇದಕ್ಕೆ ಅತಿ ಬಲವಾದ ಪ್ರವೃತ್ತಿನಿಮಿತ್ತವು ೨ಗನೆ ವಚನದಲ್ಲಿ ಉದಾಹರಿಸಿ ಇದೆ.

ಇ) ಪ್ರಸಂಗದ ಮುಖ್ಯಾರ್ಥವು. ವ. ೨೧.

೯. ಪೂರ್ಣರಾಗಿ, ನಾವು ದೇವರ ನೀತಿಯಾಗ ಬೇಕು, ಅಂದರೆ ಕ್ರಿಸ್ತನ ಮುಖಾಂತರವಾಗಿಯೂ ಕ್ರಿಸ್ತನಲ್ಲಿಯೂ ದೇವರ ಮುಂದೆ ನೀತಿವಂತರಾಗ ಬೇಕು.

೧೦. ದೇವರು ನಿಷ್ಕಾಪನಾದ ಕ್ರಿಸ್ತನಿಗೆ ೧ ಪೇತ್ರ. ೨, ೨೨. ನಮ್ಮ ನಿಮಿತ್ತವಾಗಿ, ಪಾಪಿಗಳಾದ ನಮ್ಮೆಲ್ಲರಿಗೂ ಆಗ ತಕ್ಕ ಮರಣ ಶಿಕ್ಷೆಯಾದ ಶಾಪವನ್ನು ಕಾಟ್ಟಿದ್ದಾನೆ.

೨ ಕೊರಿ. ೬, ೧—೭.

ಪ್ರಸಂಗಾದ್ಯಾಗದ ಬಾಧನೆಯ ಪ್ರಯೋಗವು. ದಾರಕಿದ ಕೃಪೆಯು ವೃರ್ಥವಾಗ ಬಾರದು ಎಂಬ ಇತ್ಯಾದ್ಯುದ್ಬಾಧನೆ. ಸ. ೬. ೭.

ಸ. ೬.

ಯೆಚರಿಸುವ ಪೂರ್ವ ಬಾಧೆಯು.

ಅ) ಅಪೊಸ್ತಲರು ಲೋಕಕ್ಕೆ ವಿರೋಧವಾದ ಯುದ್ಧ ಶ್ರಮ ಜಯಗಳಲ್ಲಿ ಅಗ್ರಗಾಮಿಗಳಾಗಿದ್ದಾರೆ. ವ. ೧—೧೦.

೧. ಇದಲ್ಲದೆ ಅವನ ಕೂಡ ಕೆಲಸ ಮಾಡುವವರಾಗಿ[೧], ನೀವು ದೇವರ ಕೃಪೆಯನ್ನು ವ್ಯರ್ಥವಾಗಿ ಹೊಂದದ ಹಾಗೆ, ಬುದ್ಧಿ ಹೇಳುತ್ತೇವೆ[೨]. ೨. ಯಾಕಂದರೆ ತಕ್ಕ ಸಮಯದಲ್ಲಿ ನಿನ್ನನ್ನು ಆಲೈಸಿ, ರಕ್ಷಣೆಯ ದಿನದಲ್ಲಿ ನಿನ್ನ ಸಹಾಯಕ್ಕೆ ಬಂದೆನೆಂದು ಹೇಳುತ್ತಾನೆ[೩]. ಇಗೋ, ಇಂಗಲೇ ಒಳ್ಳೇ ತಕ್ಕ ಸಮಯವು; ಇಗೋ, ಇಂಗಲೇ ರಕ್ಷಣೆಯ ದಿನವು.

೧. ದೇವರ ರಾಯಭಾರಿಗಳಾಗಿ ಆತನಿಗೆ ಅನ್ಯಾಯವಾಗ ಬೇಕೆಂದು ಬೇಡಿ ಕಾಂಡು.

೨. ನೀವು ದೇವರ ಕೃಪೆಯನ್ನು ಪಡೆಂದಿದ ಮೇಲೆ, ಅದು ನಿಮ್ಮಲ್ಲಿ ವ್ಯರ್ಥವಾಗ ಬಾರದೆಂದು ಎಚ್ಚರಿಸುತ್ತೇವೆ.

೩. ಯಾಕಂದರೆ ತಂದೆಯಾದ ದೇವರು ಯೆಶಾಳ, ಲಲ್ಲಿ ವಾಗ್ದತ್ತನಾದ ರಕ್ಷಕನಾಗಿರುವ ತನ್ನ ಸೇವಕನಿಗೂ ಅವನ ಐಕ್ಯದಲ್ಲಿ ಶೇರಿದ ಅವನ ಜಕ್ಕ ರೆಲ್ಲರಿಗೂ: ತಕ್ಕ ಸಮಯದಲ್ಲಿ ನಿನ್ನನ್ನು ಆಲೈಸಿ, ರಕ್ಷಣೆಯ ದಿನದಲ್ಲಿ ನಿನ್ನ ಸಹಾಯಕ್ಕೆ ಬಂದೆನೆಂದು, ಹೇಳುತ್ತಾನೆ. ಅದೇನಂದರೆ, ನಿನ್ನನ್ನು ಆಲೈಸಿ, ನಿನಗೆ ಸಹಾಯ ಮಾಡುವದಕ್ಕೆ ರಕ್ಷಣೆಯ ದಿನವಾದ ಸುಕಾಲವನ್ನು ನೇಮಕಾ ಮಾಡಿದ್ದೇನೆ; ಅದರಲ್ಲಿ ನನ್ನ ಒಲವಿನಿಂದ ನನ್ನ ಕೃಪೆಯನ್ನು ಕೃತ್ಯದಿಂದ ನಿನಗೆ ತೋರಿಸುತ್ತೇನೆ.

ಟಿಪ್ಪಣಿ. ೩ನೆ ವಚನದಿಂದ ೧೦ರ ವರೆಗೂ ತನ್ನ ಉದ್ಯೋಗವೃತ್ತಿಯನ್ನು ವರ್ಣಿಸಿ, ಅದನ್ನು ಅವರಿಗೆ ಮಾದ್ರಿಯಾಗಿ ವಿವರಿಸುತ್ತಾನೆ.

೩. ನ್ಯೋವೆಯು ನಿಂದೆ ಪಡದ ಹಾಗೆ, ನಾವು ಯಾವದರಲ್ಲಿಯೂ ಅಡಂಕವೈನೂ ಕೊಡದೆ[೧], ೪. ಬಹು ತಾಳ್ಮೆಯಲ್ಲಿಯೂ, ಉಪದ್ರವಗಳಲ್ಲಿಯೂ, ಸಂಕಟಗಳಲ್ಲಿಯೂ, ಇಕ್ಕಟ್ಟುಗಳಲ್ಲಿಯೂ ೫. ಪೆಟ್ಟುಗಳಲ್ಲಿಯೂ, ಶೆರೆಗಳಲ್ಲಿಯೂ, ಕಲಹಗಳಲ್ಲಿಯೂ, ಕಷ್ಟಗಳಲ್ಲಿಯೂ, ಜಾಗರಗಳಲ್ಲಿಯೂ, ಉಪವಾಸಗಳಲ್ಲಿಯೂ[೨], ೬. ನಿರ್ಮಲತೆಯಲ್ಲಿಯೂ, ತಿಳುವಿಕೆಯಲ್ಲಿಯೂ, ದೀರ್ಘಶಾಂತಿಯಲ್ಲಿಯೂ, ದಯದಲ್ಲಿಯೂ[೩], ಪರಿಶುದ್ಧಾತ್ಮದಲ್ಲಿಯೂ[೪], ೭. ಕಪಟವಿಲ್ಲದ ಪ್ರೀತಿಯಲ್ಲಿಯೂ[೫], ಸತ್ಯದ ವಾಕ್ಯ

ದಲ್ಲಿಯೂ, ದೇವರ ಬಲದಲ್ಲಿಯೂ, ಎಡ ಬಲ ಕೈಗಳ ನೀತಿಯ ಆಯುಧಗಳಿಂದ ಲೂ [೬]), ೪. ಮಾನ ಅಪಮಾನಗಳಿಂದಲೂ, ಕೀರ್ತಿ ಅಪಕೀರ್ತಿಗಳಿಂದಲೂ, ಮೋಸಗಾರರ ಹಾಗಿದ್ದು ಸತ್ಯವಂತರಾಗಿಯೂ [೭]), ೯. ಅಪರಿಚಿತರ ಹಾಗಿದ್ದು ಪರಿಚಿತರಾಗಿಯೂ [೮]), ಸಾಯುವವರ ಹಾಗಿದ್ದು ಇಗೋ ಬದುಕುತ್ತೇವೆ [೯]), ಶಿಕ್ಷೆ ಪಡುವವರಾಗಿದ್ದು ಕೊಲ್ಲಲ್ಪಡದವರಾಗಿಯೂ [೧೦]), ೧೦. ದುಃಖ ಪಡುವವರಾಗಿದ್ದು ಎಂದಿಗೂ ಸಂತೋಷ ಪಡುವವರಾಗಿಯೂ [೧೧]), ದರಿದ್ರರಾಗಿದ್ದು ಅನೇಕರಿಗೆ ಐಶ್ವರ್ಯ ಕೊಡುವವರಾಗಿಯೂ [೧೨]), ಏನೂ ಇಲ್ಲದವರಾಗಿದ್ದು ಎಲ್ಲಾ ಉಂಟಾದವರಾಗಿಯೂ [೧೩]), ಎಲ್ಲಾದರಲ್ಲಿ ನಮ್ಮನ್ನು ದೇವರ ಸೇವಕರೆಂದು ಪ್ರತಿಷ್ಠೆ ಮಾಡಿಕೊಳ್ಳುತ್ತೇವೆ.

೧. ನಾವು ಎಲ್ಲಾ ವಿಷಯವಾಗಿ ದೇವರ ಸೇವಕರಿಗೆ ಯುಕ್ತವಾದ ರೀತಿಯಿಂದ ನಡದು ಕಾಳ್ಳುತ್ತೇವೆ.

೨. ಪರಕೀಯ ಸ್ವಕೀಯ ಶ್ರಮಗಳಲ್ಲಿ ಬಹಳವಾಗಿ ತಾಳ್ಮೆಯನ್ನು ತೋರಿಸಿ ಅಪಾ. ಕ್ರಿ. ೧೬, ೧೯. ೨೩. ೨ ಕೊರಿ. ೨೩—೨೭. ಅಪಾ. ಕ್ರಿ. ೧೪, ೧೯; ೧೯, ೨೩—೪೧.

೩. ಕ್ರೈಸ್ತ ನೀತಿವೃತ್ತಿಯನ್ನು ಸಾಧಿಸಿ,

೪. ಪರಿಶುದ್ಧಾತ್ಮವು ಸರ್ವ ಸದಾಚಾರಕ್ಕೆ ಮೂಲವಾಗಿದೆ.

೫. ಪ್ರೀತಿಯು ಸರ್ವ ಸದ್ಗುಣ ಸಿದ್ಧಿಯಾಗಿದೆ.

೬. ಎಡ ಕೈಯಲ್ಲಿ ಒಡ್ಡಣ್ಣವನ್ನು ಹಿಡಿದು ಕಾಂಡು, ಬಲಕೈಯಲ್ಲಿ ಕತ್ತಿ ಬೀಸುವ ಚಟನಂತೆ, ಪೌಲನು ವಿಶ್ವಾಸವೆಂಬ ಗುರಾಣಿಯಿಂದಲೂ ದೇವರ ವಾಕ್ಯವೆಂಬ ಖಡ್ಗದಿಂದಲೂ ಆತ್ಮಿಕ ಯುದ್ಧವನ್ನು ಮಾಡಿದನು.

೭. ಯೆಹೂದರೂ ಪರಜನರೂ ನಾನಾ ಪ್ರಕಾರವಾದ ಸುಳ್ಳು ದೂರುಗಳನ್ನು ಪೌಲನ ಮೇಲೆ ಹೇಳಿದರೂ, ತಾನು ನಿಜ ಯೆಹೂದನಿಗೂ ರೋಮಾಯನಾದ ಒಳ್ಳೆ ಗೃಹಸ್ಥನಿಗೂ ಅಯುಕ್ತವಾದದ್ದು ಯಾವದನ್ನೂ ಮಾಡದೆ, ಸತ್ಯವನ್ನು ಕೈಕಾಂಡನೆಂದು ಶುದ್ಧ ಮನಸ್ಸಾಕ್ಷಿಯಿಂದ ಹೇಳುತ್ತಾನೆ.

೮. ಲೋಕದಲ್ಲಿ ನಮಗೆ ಕೀರ್ತಿ ಇಲ್ಲ; ಯೆಹೂದರೂ ನಿಜ ವಿಶ್ವಾಸವಿಲ್ಲದ ಸಭೆಯವರೂ ನನ್ನ ಪೃದಯ ವಾಕ್ಯ ವೃತ್ತಿಗಳನ್ನು ತಿಳಿದು ಕಾಳ್ಳುವದಿಲ್ಲಾ; ಆದರೆ ನಿಜ ಸಹೋದರರಲ್ಲಿಯೂ ದೇವರ ದೃಷ್ಟಿಯಲ್ಲಿಯೂ ಪೂರ್ಣವಾಗಿ ಪ್ರಕಟವಾಗಿದ್ದೇನೆ.

೯. ನಾನಾ ತರವಾದ ಪ್ರಾಣಸಂಕಟಗಳಲ್ಲಿ ಆಗಾಗ್ಗೆ ಬಿದ್ದು, ವ್ಯಾಧಿ ಬಾಧೆ ಮುಂತಾದ್ದರಿಂದ ಸಾಯುವವನಂತೆ ನಿರ್ಬಲನಾಗಿದ್ದರೂ, ತಿರಿಗಿ ತಿರಿಗಿ ಪ್ರಾಣವನ್ನುಳಿಸಿ ಕಾಂಡು, ಪರಿಶುದ್ಧಾತ್ಮದ ಪೂರ್ಣ ಶಕ್ತಿಯುಳ್ಳವನಾಗಿ ಸುವಾರ್ತೆಯನ್ನು ಸಾರಿ, ಉದ್ಯೋಗವನ್ನು ನಡಿಸಿ, ಜಯೋತ್ಸವ ಮಾಡುತ್ತೇನೆ.

೧೦. ಯೆಹೂದರಾದ ಅಧಿಕಾರಿಗಳೂ, ರೋಮಾಯರ ಅಧಿಪತಿಗಳೂ, ಅಲ್ಲಲ್ಲಿ ನನ್ನ ಮೇಲೆ ಬೀಳುವ ಯೆಹೂದರ ಪರಜನರ ಗುಂಪುಗಳೂ, ನನ್ನನ್ನು ಎಷ್ಟು ವಿಧದಿಂದ ಬಾಧಿಸಿದಾಗ್ಯೂ, ನನ್ನ ಕೊಲ್ಲುವದಕ್ಕೆ ಎಷ್ಟು ಸಾರಿ ಎಸಗಿದರೂ, ಕರ್ತನು ನನ್ನ ಪ್ರಾಣವನ್ನು ಈ ವರಿಗೂ ರಕ್ಷಿಸಿದ್ದಾನೆ.

೧೧. ಯೋಹಾ. ೧೬, ೨೨.

೧೨. ಅಪಾಸ್ತಲನು ಇಲ್ಲಿ ಸೂಚಿಸುವ ದಾರಿದ್ರ್ಯವು ಲೌಕಿಕವಾದದ್ದು, ಐಶ್ವರ್ಯವು ದೈವಿಕವಾದದ್ದು.

೧೩. ಸತ್ಯ ವಿಶ್ವಾಸದಿಂದ ಎಲ್ಲಾನ್ನು ಬಿಟ್ಟು, ದೇವರ ಐಕ್ಯದಲ್ಲಿ ಶೇರಿದ ಮಗುವಿಗೆ ತಂದೆಯದೆಲ್ಲಾ ಬಾಧ್ಯತೆಯಾಗಿ ಸಿಕ್ಕುವದು. ರೋಮಾ. ೮, ೨೮. ೧ ಕೊರಿ. ೩, ೨೨. ರೋಮಾ. ೮, ೩೨.

೨ ಕೊರಿ. ೬, ೧೧—೭, ೧.

ಇ) ಅವಿಶ್ವಾಸಿಗಳ ಹೊಕ್ಕುಬಳಿಕೆಯಲ್ಲಿ ಶೇರ ಬಾರದೆಂಬ ವಿಧಾನ ಮುಂತಾದ ಮಮತೋದ್ಬೋಧನೆಗಳು. ಸ. ೬, ೧೧—೭, ೧.

೧೧. ನಮ್ಮ ಬಾಯಿ ನಿಮ್ಮ ಕಡೆಗೆ ತೆರೆದದೆ, ಕೊರಿಂಥದವರೇ; ನಮ್ಮ ಹೃದಯವು ವಿಸ್ತಾರವಾಯಿತು ೧), ೧೨. ನಂಮಲ್ಲಿ ನೀವು ಇಕ್ಕಟ್ಟು ಪಡುವದಿಲ್ಲ, ನಿಮ್ಮ ಕರುಳುಗಳಲ್ಲಿಯೇ ಇಕ್ಕಟ್ಟು ಪಡುತ್ತೀರಿ ೨). ೧೩. ಈದರೆ ಅದ್ಕೇ ಪ್ರತಿಫಲಕ್ಕಾಗಿ, ನೀವು ಸಹ ವಿಸ್ತರಿಸಿ ಕೊಳ್ಳಿರಿ ೩); ನನ್ನ ಮಕ್ಕಳಿಗೆಂದು ಹೇಳುತ್ತೇನೆ. ೧೪. ಅವಿಶ್ವಾಸಿಗಳ ಕೂಡ ಇಜ್ಜಾಡು ನೊಗದಲ್ಲಿರ ಬೇಡಿರಿ ೪). ಯಾಕಂದರೆ ನೀತಿಗೂ ಅನೀತಿಗೂ ಗೌಡಿವೆ ಏನು? ಬೆಳಕಿಗೆ ಕತ್ತಲೆಯ ಸಂಗಡ ಅನ್ಯೋನ್ಯವೇನು ೫)? ೧೫. ಕ್ರಿಸ್ತನಿಗೂ ಬೆಲಿಯಾಳನಿಗೂ ಒಪ್ಪಿಗೆ ಏನು ೬)? ವಿಶ್ವಾಸಿಸುವವನಿಗೆ ಅವಿಶ್ವಾಸಿಯ ಸಂಗಡ ಪಾಲು ಏನು? ದೇವರ ಮಂದಿರಕ್ಕೆ ವಿಗ್ರಹಗಳ ಸಂಗಡ ಒಡಂಬಡಿಕೆ ಏನು ೭)? ೧೬. ಯಾಕಂದರೆ ನಾನು ಅವರಲ್ಲಿ ವಾಸ ಮಾಡಿ ಸಂಚರಿಸುವೆನು; ಮತ್ತು ಅವರ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು, ಎಂದು ದೇವರು ಹೇಳಿರುವ ಪ್ರಕಾರ ೮) ನೀವು ಜೀವವುಳ್ಳ ದೇವರ ಮಂದಿರವಾಗಿದ್ದೀರಿ. ೧೭. ಆದದರಿಂದ ಕರ್ತನು ಹೇಳುವದೇನಂದರೆ; ಅವರ ಮಧ್ಯದಲ್ಲಿಂದ ಹೊರಟು ಬಂದು, ಅಗಲಿ, ಅಶುದ್ಧವಾದದ್ದನ್ನು ಮುಟ್ಟದೆ ಇರ್ರಿ ೯), ಆಗ ನಾನು ನಿಮ್ಮನ್ನು ಅಂಗೀಕರಿಸುವೆನು ೧೦), ೧೮. ಮತ್ತು ನಿಮಗೆ ತಂದೆಯಾಗಿರುವೆನು, ನೀವು ನನಗೆ ಕುಮಾರ ಕುಮಾರ್ತಿಗಳು ಆಗಿರುವಿರಿ, ಎಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ ೧೧). ೭, ೧. ಹಾಗಾದರೆ, ಪ್ರಿಯರೇ, ಈ ವಾಗ್ದತ್ತಗಳನ್ನು ಹೊಂದಿದವರಾಗಿ, ಮಾಂಸ ಆತ್ಮಗಳ ಎಲ್ಲಾ ಕಲ್ಮಷದಿಂದ ನಮ್ಮನ್ನು ಶುಚಿ ಮಾಡಿ ಕೊಂಡು ೧೨), ಪರಿಶುದ್ಧತ್ವವನ್ನು ದೇವರ ಭಯದಲ್ಲಿ ಪೂರೈಸುವಾ.

೧. ಅಂದರೆ ಸೂರ್ಯದೃಷ್ಟಿಯಿಂದ ಅರಳಿದ ಕಮಲದಂತೆ, ನನ್ನ ಹೃದಯವು ಮಮತಾಭಾವನೆಯಿಂದ ಉಂಪಾದ್ದರಿಂದ, ನನ್ನ ಅಭಿಪ್ರಾಯಗಳನ್ನೆಲ್ಲಾ ಯಥಾರ್ಥವಾಗಿ ವಿವರಿಸಿದ್ದೇನೆ.

೨. ಈ ವಚನದ ಅರ್ಥವೇನಂದರೆ: ನಿಮ್ಮೆಲ್ಲರನ್ನು ಸಂತೋಷವಾಗಿ ಶೇರಿಸಿ ಕಾಳ್ಳುವ ಪ್ರೀತಿ ನನ್ನಲ್ಲಿ ಪ್ರಬಲವಾಗಿದೆ; ಆದರೆ ನೀವು ನನ್ನ ಮೇಲೆ ತಕ್ಕಷ್ಟು ಪ್ರೀತಿಯನ್ನೂ ಆದರವಸವನ್ನೂ ಇಡುವದಿಲ್ಲ.

೩. ನನ್ನ ಪ್ರೀತಿಯ ಮಟ್ಟು ತಿಳಕೊಂಡು, ನನ್ನನ್ನು ಸಂಪೂರ್ಣವಾಗಿ ಪ್ರೀತಿ ಮಾಡಿರಿ.

೪. ೫ಮೋಶೆ. ೨೨, ೧೦ ಲ್ಲಿ ಬರದ ಕಟ್ಟಳೆಯ ಪ್ರಮಾಣಾನುಸಾರವಾಗಿ ಅವಿಶ್ವಾಸಿಗಳ ಅನ್ಯೋನ್ಯದಲ್ಲಿ ಶೇರದೆ ಇರ್ರಿ.

೫. ಕ್ರಿಸ್ತನನ್ನು ನಂಬಿದ್ದರಿಂದ ನೀವು ಬೆಳಕಾಗಿ, ದೇವರ ಪ್ರೀತಿಯನ್ನೂ ನೀತಿಯನ್ನೂ ಪಡಕೊಂಡಿದ್ದೀರಿ. ಪರಜನರು ಪಾಪದಲ್ಲಿಯೂ, ಕತ್ತಲೆಯಲ್ಲಿಯೂ ಮುಳಿಗಿರುತ್ತಾರೆ.

೬. ಬೆಲಿಯಾಳನು ಎಂಬದು ಸೈತಾನನ ಪೆಸರು. ಅವನು ಆದಿ ಮಿಥ್ಯಾವಾದಿಯೂ, ನರಘಾತಿಯೂ ಆಗಿದ್ದು, ಯೋಹಾ. ೮, ೪೪. ಪಾಪಿಗಳಾದ ಮನುಷ್ಯರಿಗೆಲ್ಲಾ ಒಡೆಯನಾಗಿ, ವಿಶ್ವಾಸದಿಂದ ದೇವರ ಅನ್ಯಾಯ್ಯದಲ್ಲಿ ಶೇರದೆ ಇರುವವರಲ್ಲಿಯೂ, ಅವರ ಮುಖಾಂತರ ಲೋಕದಲ್ಲಿಯೂ ಧಾರೆತನವನ್ನು ನಡಸುತ್ತಾನೆ. ೧ ಯೋಹಾ. ೫, ೧೯; ೨, ೧೫. ಅಪಾ. ಕ್ರಿ. ೨೬, ೧೭. ಎಫೆ. ೨, ೨. ವಿಶ್ವಾಸಿಗಳಿಗೂ ಅವಿಶ್ವಾಸಿಗಳಿಗೂ ಇರುವ ಜೀವ ವೃತ್ತಿಗಳಿಗೆ ಅತ್ಯಂತ ವೃತ್ಯಾಸವಿದೆ.

೭. ಈ ಲೋಕದ ದೇವರನ್ನು ಪೂಜಿಸುವ ಅವಿಶ್ವಾಸಿಗಳು ಎಫೆ. ೫, ೫. ೨ ಕೊರಿ. ೪, ೪. ದೇವರ ಸಭೆಯಲ್ಲಿರುವದು ಅಯುಕ್ತವಾಗಿದೆ.

೮. ೩ ಮೋಶೆ. ೨೬, ೧೧. ೧೨. ಯೋಹಾ. ೪, ೨೩.

೯. ಯೆಶಾ. ೫೨, ೧೧ ಲ್ಲಿ ಬಾಬೆಲ್ ಪಟ್ಟಣದಿಂದ ಪೌರಟು ಪೌಲ್ ತಕ್ಕ ಯಾಜಕರಿಗೂ, ಲೇವಿ ಕುಲದವರಿಗೂ ಮೇಳಿ ಇರುವ ಆಜ್ಞೆಯನ್ನು ಕರ್ತನಿಗೆ ನಿಜ ಯಾಜಕರಾದ ಕ್ರೈಸ್ತರು ಆತ್ಮಿಕವಾದ ಅಭಿಪ್ರಾಯಾನುಸಾರವಾಗಿ ಕೈಕಾಳ್ಳ ಬೇಕು.

೧೦. ಅಂದರೆ ನನ್ನ ಪರಿಶುದ್ಧಾನ್ಯಾಯ್ಯದಲ್ಲಿ ಶೇರಿಸುವೆನು.

೧೧. ಯೆರೆ. ೩೧, ೧. ೯. ೩೩ ಮುಂತಾದ ಅನೇಕ ಸ್ಥಳಗಳಲ್ಲಿ ಇಲ್ಲಿ ಬರದ ಮಾತಿನ ಅಭಿಪ್ರಾಯ ತಾರುತ್ತದೆ.

೧೨. ಅಪಾಸ್ತಲನಾದ ಪೌಲನು ಇಲ್ಲಿ ಮೇಳುವ ಬೋಧನೆಗೂ, ಅಪಾಸ್ತಲನಾದ ಯೋಹಾನನು ೧ ಯೋಹಾ. ೩, ೧—೬ ಲ್ಲಿ ಬರದ ನೀತಿವಾಕ್ಯಕ್ಕೂ ಸಂಪೂರ್ಣವಾದ ಒಪ್ಪಿಗೆ ಅದೆ. ಯೋಹಾನನ ವಾಕ್ಯವು ಪೌಲನು ಬರದ ಈ ವಚನಕ್ಕೆ ವ್ಯಾಖ್ಯಾನವಾಗಿದೆ.

ಸ. ೭.

ಪತ್ರಿಕೆಯ ಪ್ರಥಮ ಭಾಗದ ಸಮಾಪ್ತಿಯು.

ಅ) ತನ್ನಲ್ಲಿ ಪೂರ್ಣ ಭರವಸವಿಡ ಬೇಕೆಂಬ ಬಿನ್ನಹ. ವ. ೨—೪.

೨. ನಮ್ಮನ್ನು ಅಂಗೀಕರಿಸಿರಿ[೧]; ನಾವು ಯಾವನಿಗೂ ಅನ್ಯಾಯ ಮಾಡಲಿಲ್ಲ, ಯಾವನಿಗೂ ನಷ್ಟ ಮಾಡಲಿಲ್ಲ, ಯಾವನಿಗೂ ಮೋಸ ಮಾಡಲಿಲ್ಲ[೨]. ೩. ಆಜ್ಞೆ ನಿರ್ಣಯಕ್ಕಾಗಿ ನಾನು ಮಾತಾಡುವದಿಲ್ಲ[೩]; ಯಾಕಂದರೆ ಕೂಡ ಸಾಯುವದಕ್ಕೂ ಕೂಡ ಬದುಕುವದಕ್ಕೂ ನಮ್ಮ ಹೃದಯಗಳಲ್ಲಿ ಇದ್ದೀರೆಂದು, ಮುಂಚೆ ಹೇಳಿದ್ದೇನೆ. ೪. ನಿಮ್ಮ ಕಡೆಗೆ ನನಗೆ ಬಹಳ ಧೈರ್ಯವು, ನಿಮಗೋಸ್ಕರ ನನಗೆ ಬಹಳ ಹೆಚ್ಚಳ ಉಂಟು. ಆದರಣೆಯಿಂದ ತುಂಬಿದವನಾಗಿದ್ದೇನೆ, ನಮ್ಮ ಎಲ್ಲಾ ಉಪದ್ರವದಲ್ಲಿ ಸಂತೋಷದಿಂದ ಅತಿ ಪೂರಿತನಾಗಿದ್ದೇನೆ.

೧. ಈ ಮಾತು ಸ. ೬, ೧೩ಕ್ಕೆ ಸರಿಯಾದದ್ದು.

೨. ಪೌಲನು ವೈರಿಗಳು ತನ್ನ ಮೇಲೆ ಮೇಳಿದ ದೂರುಗಳನ್ನು ಇಲ್ಲಿ ಬರೆಯುತ್ತಾನೆ.

೩. ಅಂದರೆ ನಾನು ಅತಿಶಯವಾದ ಮಮತೆಯುಳ್ಳವನಾಗಿದ್ದು, ಆ ದೂರುಗಳನ್ನು ಮೇಳಿದವರ ಮೇಲಾದರೂ, ಕೇಳಿ ನಂಬಿದವರ ಮೇಲಾದರೂ ಅಪರಾಧ ಮಾರಿಸುವದಿಲ್ಲ.

೨ ಕೊರಿ. ೭, ೫—೧೧.

ಇ) ಅಪೊಸ್ತಲನ ಮಮತೆಯ ಪ್ರಮಾಣವು. ವ. ೫—೭.

೫. ಹ್ಯಾಗಂದರೆ ನಾವು ಮಕೆದೌನ್ಯಕ್ಕೆ ಬಂದಾಗ, ನಮ್ಮ ಮಾಂಸಕ್ಕೆ ಏನೂ ವಿಶ್ರಾಂತಿ ಇಲ್ಲದೆ, ಎಲ್ಲಾದರಲ್ಲಿ ಉಪದ್ರ ಪಡುತ್ತಿದ್ದೆವು ೧); ಹೊರಗೆ ಯುದ್ಧಗಳು, ಒಳಗೆ ಭಯಗಳು ಇದ್ದವು. ೬. ಆದರೆ ದೀನರನ್ನು ಆದರಿಸುವ ದೇವರು, ತೀತನು ಬಂದದರಿಂದ, ಅವನು ಬಂದದರಿಂದ ಮಾತ್ರವಲ್ಲ, ಅವನು ನಿಮ್ಮಲ್ಲಿ ಹೊಂದಿದ ಆದರಣೆಯಿಂದಲೂ, ನಮ್ಮನ್ನು ಆದರಿಸಿದನು. ೭. ಏನಂದರೆ ನಿಮ್ಮ ಅತ್ಯಾಶೆಯನ್ನೂ, ನಿಮ್ಮ ಗೋಳಾಟವನ್ನೂ, ನನ್ನ ವಿಷಯವಾದ ನಿಮ್ಮ ಆಸಕ್ತಿಯನ್ನೂ, ನಮಗೆ ತಿಳಿಸಿದನು ೨), ಆದದರಿಂದ ಹೆಚ್ಚಾಗಿ ಸಂತೋಷ ಪಟ್ಟೆನು.

೧. ಸ. ೨, ೧೩ಲ್ಲಿ ಸೂಚಿಸಿದ್ದನ್ನು ಇಲ್ಲಿ ಕಾರಿಂಥದವರ ಮೇಲೆ ತಾನು ಇಟ್ಟ ಅತಿಶಯವಾದ ಪ್ರೀತಿಯ ಪ್ರಮಾಣವಾಗಿ ವಿವರಿಸುತ್ತಾನೆ.

೨. ಕಾರಿಂಥದವರು ಪೌಲನಿಂದ ಕಲ್ಪಿತ ಪತ್ರಿಕೆಯನ್ನು ಓದಿ ತಿಳಿದು ಕಾಂಡನಂತರ, ಪೌಲನನ್ನು ನೋಡ ಬೇಕೆಂದು ಬಹಳವಾಗಿ ಬಯಸಿ, ಅಪಾಸ್ತಲನ ದುಃಖಕ್ಕೆ ಮನಃಪೂರ್ವಕವಾಗಿ ವ್ಯಸನ ಪಟ್ಟು, ಪೌಲನು ಬರದ ಆಜ್ಞೆಗಳನ್ನು ಬೇಗ ಅನುಸರಿಸ ಬೇಕೆಂದು, ಆಸಕ್ತರಾಗಿರುವದನ್ನು ತೀತನು ನೋಡಿ, ಪೌಲನನ್ನು ಕಲತ ಮೇಲೆ, ತಾನು ಕಾರಿಂಥದಲ್ಲಿ ಕಂಡಂಥಾದ್ದನ್ನೆಲ್ಲಾ ಪೌಲಿದನು.

ಈ) ಆತ್ಮಿಕ ಶೋಕದ ಸತ್ಫಲವು. ವ. ೮—೧೨.

೮. ಹ್ಯಾಗಂದರೆ ನಾನು ಪತ್ರಿಕೆಯಿಂದ ನಿಮ್ಮನ್ನು ದುಃಖ ಪಡಿಸಿದಾಗ್ಯೂ, ಪಶ್ಚಾತ್ತಾಪ ಪಟ್ಟಿದ್ದರೂ ೧), ಪಶ್ಚಾತ್ತಾಪ ಪಡುವದಿಲ್ಲ ೨); ಯಾಕಂದರೆ ಆ ಪತ್ರಿಕೆ ಘಳಿಗೆಯಾದರೂ ನಿಮ್ಮನ್ನು ದುಃಖ ಪಡಿಸಿತೆಂದು ನೋಡುತ್ತೇನೆ. ೯. ಇಗ ನೀವು ದುಃಖ ಪಟ್ಟದರಿಂದಲ್ಲ, ಮಾನಸಾಂತರಕ್ಕೆ ದುಃಖ ಪಟ್ಟದರಿಂದ, ಸಂತೋಷ ಪಡುತ್ತೇನೆ; ಯಾಕಂದರೆ ನಿಮ್ಮಿಂದ ಯಾವದರಲ್ಲಿಯೂ ನಷ್ಟ ಪಡದ ಹಾಗೆ, ದೇವರಿಗೆ ಅನುಕೂಲವಾಗಿ ದುಃಖ ಪಟ್ಟಿರಿ ೩). ೧೦. ಯಾಕಂದರೆ ದೇವರಿಗೆ ಅನುಕೂಲವಾದ ದುಃಖವು ೪) ರಕ್ಷಣೆಗಾಗಿ ಪಶ್ಚಾತ್ತಾಪವಿಲ್ಲದ ಮಾನಸಾಂತರವನ್ನು ಹುಟ್ಟಿಸುತ್ತದೆ; ಆದರೆ ಲೌಕಿಕದ ದುಃಖವು ಮರಣವನ್ನು ಹುಟ್ಟಿಸುತ್ತದೆ ೫). ೧೧. ಹ್ಯಾಗಂದರೆ, ಇಗೋ, ನೀವು ದೇವರಿಗೆ ಅನುಕೂಲವಾದ ದುಃಖ ಪಟ್ಟದ್ದೇ, ನಿಮ್ಮಲ್ಲಿ ಎಂಥ ಜಾಗ್ರತೆಯನ್ನು, ಎಂಥ (ಪ್ರತ್ಯುತ್ತರವನ್ನು ೬), ಎಂಥ ಕರ್ಕರೆಯನ್ನು ೭), ಎಂಥ ಭಯವನ್ನು ೮), ಎಂಥ ಅತ್ಯಾಶೆಯನ್ನು ೯), ಎಂಥ ಆಸಕ್ತಿಯನ್ನು ೧೦), ಎಂಥ

(ಪ್ರತಿ ದಂಡನೆಯನ್ನು ೧೧), ಹುಟ್ಟಿಸಿತು! ಇಷ್ಟ ಕಾರ್ಯದಲ್ಲಿ ನಿಮ್ಮನ್ನು ಎಲ್ಲಾ ವಿಷಯವಾಗಿ ನಿರ್ಮಲರೆಂದು ಸ್ಥಾಪಿಸಿ ಕೊಂಡಿದ್ದೀರಿ.

೧. ಪೌಲನು ಕೊರಿಂಥದವರಿಗೆ ದುಃಖಕರವಾದ ಪತ್ರಿಕೆಯನ್ನು ಬರದ ಮೇಲೆ, ತನಗೆ ಅತಿ ಪ್ರಿಯರಾದ ಸಖೆಯವರಿಗೆ ಪತ್ರಿಕೆಯನ್ನು ನಾಡುವದರಿಂದ ಪುಟ್ಟ ತಕ್ಕ ದುಃಖವನ್ನು ನೆನಸಿ ತಾನು ದುಃಖ ಪಟ್ಟನು.

೨. ಕೊರಿಂಥದವರು ಸತ್ಯವಾಗಿ ಪಶ್ಚಾತ್ತಾಪ ಪಟ್ಟು, ಗುಣವಾದದ್ದನ್ನು ತಿಳಿದು ಕೊಂಡನಂತರ, ಪಶ್ಚಾತ್ತಾಪವಿಲ್ಲದೆ ಸಂತೋಷ ಪಟ್ಟನು.

೩. ಅಂದರೆ ದೇವರ ಆತ್ಮಕ್ಕೆ ವಿಧೇಯರಾಗಿ ನಿಮ್ಮ ಪಾಪವನ್ನು ತಿಳಿದು ಕೊಂಡು, ಅರಿಕೆ ಮಾಡಿ, ಅಸಹ್ಯಿಸಿ, ತಾಲಗಿಸಿ, ದೇವರಿಗೆ ಇಷ್ಟವಾದ ರೀತಿಯಿಂದ ದುಃಖ ಪಟ್ಟಿರಿ.

೪. ದೇವರ ಆತ್ಮದಿಂದ ಪುಟ್ಟುವಂಥ, ದೇವರಿಗೆ ಅನುಕೂಲವಾದಂಥ, ದುಃಖವು ಯಾವದೆಂದರೆ: ದೇವರಿಗೆ ವಿರೋಧವಾಗಿ ಪಾಪ ಮಾಡಿದ್ದೇವೆಂಬ ಮನಸ್ತಾಪವು. ಇದು ರಕ್ಷಣೆಯ ಮಾರ್ಗದಲ್ಲಿ ಮನುಷ್ಯರನ್ನು ಶೇರಿಸುವ ಮಾನಸಾಂತರದ ಆರಂಭವಾಗಿದೆ.

೫. ಲೌಕದ ದುಃಖವು ಏನಂದರೆ: ದೇವರ ವಾಕ್ಯವನ್ನು ನಂಬಲಾಲ್ಲದ ಮನುಷ್ಯರು ತಮ್ಮ ಪಾಪಗಳಿಂದ ಪುಟ್ಟಿದ ದುರವಸ್ಥೆಯಲ್ಲಿ ಶಿಕ್ಕಿ ಕೊಂಡರೆ, ಸೌಲ ಯೂದರ ಪ್ರಕಾರ ನಿರಾಶೆಯಾಗಿ ಸ್ವಪ್ರಾಣಘಾತಕರಾಗುತ್ತಾರೆ; ಅಥವಾ ಸ್ವಾನುಭವಕ್ಕೆ ಪುರಸ್ಕಾರಗಾಗ ಬೇಕೆಂದು, ವಿಷಯಾಡಂಬರವುಳ್ಳವರಾಗಿ, ಪಾಪಗಳಲ್ಲಿ ಮುಳಿಗಿ ಪುರಸ್ಕಾರಗುತ್ತಾರೆ.

೬. ನೀವು ಆ ಪಾತಕಕ್ಕೆ ಒಪ್ಪಿ ಕೊಳ್ಳಲಿಲ್ಲವೆಂಬ ಪ್ರತಿವಾದವನ್ನು.

೭. ಆ ಪಾಪವು ನಿಮಗೆ ಮರೆಯಾಗಿ ಸಖೆಯಲ್ಲಿ ನಡೆಯಿತೆಂಬ ಚಿಂತೆಯನ್ನು.

೮. ಆ ದ್ರೋಷಕ್ಕಾಗಿ ದೇವರು ನಿಮ್ಮ ಸಖೆಯನ್ನು ತಿರಸ್ಕರಿಸುವನೆಂಬ ಅಂಜಿಕೆಯನ್ನು.

೯. ಅಪೊಸ್ತಲನು ಆಜ್ಞಾಪಿಸಿದ್ದನ್ನೆಲ್ಲಾ ಬೇಗ ಕೈಕೊಳ್ಳ ಬೇಕೆಂಬ ಮನಃಪೂರ್ವಕವಾದ ಬಯಕೆಯನ್ನು.

೧೦. ದೇವರ ಮಾನವನ್ನು ಕಾಪಾಡ ಬೇಕೆಂಬ ಆತುರವನ್ನು.

೧೧. ಅಪರಾಧಿಗೆ ಪೌಲನು ನೇಮಕ ಮಾಡಿದ ಶಿಕ್ಷೆಯನ್ನು ಕೂಡಲೆ ಕೊಡುವ ಉಗ್ರವನ್ನು. ಸ. ೨, ೬.

ವ. ೧೨. ಹೀಗಿರಲಾಗಿ ಸಭೆಯಲ್ಲಿ ನಡದ ಒಂದು ಪಾತಕಕ್ಕೆ ಆಗ ತಕ್ಕ ದಂಡನೆಯಾದರೂ, ನಾನು ಅಗಮ್ಯಗಾಮಿಗೆ ದ್ವೇಷ ಮಾಡ ಬೇಕೆಂದಾದರೂ, ಅನ್ಯಾಯ ಹೊಂದಿದವನಿಗೆ ಪ್ರತೀಕಾರವಾಗ ಬೇಕೆಂಬ ಅಪೇಕ್ಷೆಯಾದರೂ ಅಲ್ಲ, ಸಮಸ್ತ ಸಭೆಯ ಶುದ್ಧೀಕರಣವೇ ನನ್ನ ಶಿಕ್ಷಾಪತ್ರಿಕೆಯ ಉದ್ದಿಶ್ಯವಾಗಿತ್ತೆಂದು, ನೋಡುತ್ತೀರಿ.

ಎ) ಒಳ್ಳೆ ವರ್ತಮಾನದಿಂದ ಹುಟ್ಟಿದ ಸಂತೋಷವು. ವ. ೧೩—೧೬.

ವ. ೧೩. ಆದ್ದರಿಂದ ನೀವು ತಿರಿಗಿ ಸಮಾಧಾನ ಉಳ್ಳವರಾಗಿದ್ದೀರೆಂದು ಕೇಳಿ, ನಾನು ಸಮಾಧಾನವಾಗಿದ್ದೇನೆ; ಇದಲ್ಲದೆ ಚಿಂತಾಕ್ರಾಂತನಾಗಿ ಪ್ರಯಾಣಕ್ಕೆ ಹೊರಟು ಹೋದ ತೀತನು ನಿಮ್ಮಲ್ಲಿ ಉಪಶಮನವನ್ನು ಹೊಂದಿದ ಸಂತೋಷಕ್ಕೆ ನಾನು ಅತ್ಯಧಿಕ ಸಂತೋಷ ಪಡುತ್ತೇನೆ. ೧೪. ಯಾಕಂದರೆ, ನಾನು ನಿಮ್ಮನ್ನು ಹೊಗಳಿ ತೀತನಿಗೆ ಹೇಳಿದ ಮಾತಿನ ಸತ್ಯತ್ವವನ್ನು ನೀವು ಅವನಿಗೆ ಪ್ರಮಾಣಿಸಿದಿರಿ. ಮತ್ತು ನಾನು ನಿಮ್ಮಲ್ಲಿ ಸತ್ಯವನ್ನೇ ನುಡಿಯುತ್ತಾ ಬಂದ ಪ್ರಕಾರ, ನಿಮ್ಮ ವಿಷಯವಾಗಿಯೂ ನಾನು ಸತ್ಯವನ್ನು

೨ ಕೊರಿ. ೭, ೧೫—೯, ೨.

ಹೇಳಿದೆನೆಂದು, ತೀತನು ನೋಡಿ ತಿಳಿದು ಕೊಂಡನು. ೧೫. ಈಗ ಅವನು ನಿಮ್ಮ ವಿಧೇಯತ್ವವನ್ನೂ, ದೀನತ್ವವನ್ನೂ, ಪೂಜ್ಯವೃದ್ಧಿಯನ್ನೂ ನೆನಸಿ, ಹೆಚ್ಚಾದ ಅತಿಶಯವಾದ ಮಮತೆಯನ್ನು ನಿಮಗೆ ಮಾಡುತ್ತಾನೆ. ೧೬. ಎಲ್ಲಾ ವಿಷಯದಲ್ಲಿಯೂ ನೀವು ಉತ್ತಮರಾಗಿ ಕಾಣಿಸಿ ಕೊಳ್ಳುವಿರೆಂಬ ಕೋರಿಕೆಯಿಂದ ಸಂತೋಷ ಪಡುತ್ತೇನೆ. (ಈ ಪ್ರಸ್ತಾವಾನುಸಾರವಾಗಿ, ಯೆಹೂದ ದೇಶದ ಬಡವರಾದ ಭಕ್ತರಿಗಾಗಿ, ಆಗುವ ಧರ್ಮದ್ರವ್ಯಸಂಗ್ರಹದಲ್ಲಿ ಔದಾರ್ಯವನ್ನು ತೋರಿಸ ಬೇಕೆಂದು, ಕೊರಿಂಥದವರನ್ನು ಪೌಲನು ಎಚ್ಚರಿಸುತ್ತಾನೆ.)

೫ ಶ್ರಿಕೆಯ ಎರಡನೇ ಭಾಗವು.

ಪಲೆಸ್ತೀನದಕ್ಕೆ ಸ್ತುರ ಉದ್ದಿಶ್ಯವಾದ ಧರ್ಮದ್ರವ್ಯಸಂಗ್ರಹವು. ಸ. ೮. ೯.

ಪರಸ್ಪರ ವಿಶ್ವಾಸವನ್ನು ಅಭ್ಯಂತರಿಸುವ ಎಡತಡೆಗಳನ್ನೆಲ್ಲಾ ಹೋಗಲಾಡಿಸಿದ ಮೇಲೆ, ೧ ಕೊರಿ. ೧೬ನೆ ಸಂಧಿಯಲ್ಲಿ ಜ್ಞಾಪಕ ಮಾಡಿದ ಧರ್ಮದ್ರವ್ಯಸಂಗ್ರಹದ ವಿಷಯವಾಗಿ ಅಪೊಸ್ತಲನು ಕೊರಿಂಥದವರನ್ನು ಎಚ್ಚರಿಸುತ್ತಾನೆ. ಇವರು ಆತ್ಮತೋಷಾಸಕ್ತರಾಗಿ, ಜ್ಞಾನವನ್ನೂ, ಅದ್ಭುತಕರಣವರಗಳನ್ನೂ ಬಯಸುತ್ತಾ, ತಮ್ಮಲ್ಲಿ ತರ್ಕವಾದಗಳನ್ನು ನಡಿಸುತ್ತಾ, ಕ್ರೈಸ್ತ ಔದಾರ್ಯವನ್ನು ಸಾಧಾರಣ ಧರ್ಮವೆಂದು ಅಸಡ್ಡೆ ಮಾಡಿದರೆಂದು, ತೋರುತ್ತದೆ. ಆದ್ದರಿಂದ ಐಶ್ವರ್ಯ ಉಳ್ಳ ವ್ಯಾಪಾರಪಟ್ಟಣನಿವಾಸಿಗಳಾದ ಈ ಸಭೆಯವರು ಮಕೆದೊನ್ಯ ದೇಶದ ಬಡವರಾದ ಭಕ್ತರ ಶೀಲಕ್ಕೆ, ಬಹಳ ಹೆಚ್ಚಾಗಿ ಕೃಪಾಂಬುಧಿಯಾದ ಯೇಸುವಿನ ಬಡತನಕ್ಕೆ ನಾಚಿಕೊಳ್ಳ ಬೇಕಾಯಿತು.

೧. ಕೊರಿಂಥದವರಿಗೆ ಮಾದ್ರಿಯಾಗ ತಕ್ಕ ಮಕೆದೊನ್ಯದವರ ಔದಾರ್ಯವು. ಸ. ೮, ೧—೧೫.

೨. ಕೊರಿಂಥದವರು ಉದಾರಿಗಳಾಗುವ ಹಾಗೆ, ಅಪೊಸ್ತಲನು ದೇವರಿಂದ ಪ್ರಾಪ್ತವಾದ ವರಗಳನ್ನು ಭಕ್ತಿಯಿಂದ ಬಳಸ ಬೇಕೆಂದು, ಬೋಧಿಸುತ್ತಾನೆ. ವ. ೧೬—೨೪.

೩. ಪೌಲನು ಕೊರಿಂಥದವರನ್ನು ತಾನು ಮಕೆದೊನ್ಯದವರಿಗೆ ಹೇಳಿದ ಗುಣವರ್ಣನೆಯನ್ನು ಸುಳ್ಳು ಮಾಡ ಬಾರದೆಂದು, ಬೇಡಿ ಕೊಳ್ಳುತ್ತಾನೆ. ಸ. ೯.

ಸ. ೮.

೧. ಕೊರಿಂಥದವರಿಗೆ ಮಾದ್ರಿಯಾಗ ತಕ್ಕ ಮಕೆದೊನ್ಯದವರ ಔದಾರ್ಯವು. ವ. ೧—೧೫.

ಅ) ಮಕೆದೊನ್ಯದವರ ಔದಾರ್ಯವು.

೧. ಇದಲ್ಲದೆ, ಸಹೋದರರೇ, ಮಕೆದೊನ್ಯದ ಸಭೆಗಳಲ್ಲಿ ಕೊಡಲ್ಪಟ್ಟಿರುವ ದೇವರ ಕೃಪೆಯನ್ನು ನಿಮಗೆ ತಿಳಿಸುತ್ತೇವೆ. ೨. ಏನಂದರೆ ಉಪದ್ರವದ ಬಹಳ ಪರೀಕ್ಷೆ

ಯಲ್ಲಿ ಅವರ ಸಂತೋಷದ ಹೆಚ್ಚುವಿಕೆಯೂ ೧), ಅವರ ಅಗಾಧವಾದ ಬಡತನವೂ ೨), ಅವರ ಉದಾರತ್ವದ ಐಶ್ವರ್ಯಕ್ಕಾಗಿ ಹೆಚ್ಚಿತು. ೩. ನಾನು ಸಾಕ್ಷಿಯಾಗಿ, ಅವರು, ಸಾಮರ್ಥ್ಯದ ಪ್ರಕಾರವೂ ಸಾಮರ್ಥ್ಯ ಮೀರಿಯೂ, ಸ್ವಚಿತ್ತದಿಂದ, ೪. ನಾವು ದಾನವನ್ನೂ ಪರಿಶುದ್ಧರಿಗಾಗಿರುವ ಸೇವೆಯ ಧರ್ಮವನ್ನೂ ಕೈಗೆದು ಕೊಳ್ಳಿ ಬಹಳ ಬಿನ್ನಹದಿಂದ ನಮ್ಮನ್ನುಬ್ಬೇಡಿಕೊಂಡು, ೫. ನಾವು ಕೊರಿದ ಹಾಗಲ್ಲ, ತಮ್ಮನ್ನೇ ೩) ಮೊದಲು ಕರ್ತನಿಗೂ, ದೇವರ ಚಿತ್ತದಿಂದ ನಮಗೂ, ಕೊಟ್ಟರು. ೬. ಆದದರಿಂದ ೪) ನಾವು ತೀತನಿಗೆ, ಅವನು ಮುಂತೊಡಗಿದ ಪ್ರಕಾರ, ಈ ಕೃಪೆಯನ್ನು ಸಹ ನಿಮ್ಮಲ್ಲಿ ತೀರಿಸ ೫) ಬೇಕೆಂದು ಬೇಡಿ ಕೊಂಡೆವು.

೧. ಈ ವಚನದ ಅಭಿಪ್ರಾಯವೇನಂದರೆ: ಅವರ ಉಪದ್ರವಗಳು ಬಹಳ ಹೆಚ್ಚಾಗಿದ್ದರೂ, ವಿಶ್ವಾಸದಿಂದ ಸಂತೋಷಪೂರಿತರಾಗಿ, ತಮ್ಮ ಬಡತನವನ್ನು ಲೆಕ್ಕಿಸದೆ, ಕ್ರಿಸ್ತನಲ್ಲಿ ಪುಷ್ಟಿಸುತ್ತಾ, ಕೈಗೆ ಶಿಕ್ಕಿದ್ದನ್ನೆಲ್ಲಾ ಧರ್ಮವಾಗಿ ಕಾಟ್ಟರು.

೨. ಬಡವರು ಐಶ್ವರ್ಯವಂತರಿಗಿಂತ ಉದಾರಿಗಳಾಗಿರುವದು ಸಾಧಾರಣವಾಗಿದೆ. ಐಶ್ವರ್ಯವಂತರಲ್ಲಿ ಲೋಭವು ಹೆಚ್ಚು. ಕೈಯಲ್ಲಿರುವ ಪುಣ್ಯದ ಅರವಾಸಿ ಧರ್ಮಾರ್ಥವಾಗಿ ಕಾಡುವ ಬಡವರು ಪುಲವರು; ತನ್ನ ಐಶ್ವರ್ಯದ ಅರವಾಸಿ ಧರ್ಮಾರ್ಥವಾಗಿ ಕಾಡುವ ಧನಿಕರು ಕೆಲವರೆ. ಆದಾಗ್ಯೂ, ಲೋಕದಲ್ಲಿ ಬಡವರಿಗೆ ಲೆಖ್ಖವೇ ಶಿಕ್ಕುವದಿಲ್ಲವಾದ್ದರಿಂದ ಧರ್ಮವೃದ್ಧಿಗೆ ನ್ಯೂನವಾಗುವದಿಲ್ಲ. ಬಡವರ ಧರ್ಮಗಳೆಂಬ ಮಳೆಪುನಿಗಳಿಂದ ದಾಂಡ್ಡ ನದಿಗಳೂ ತುಂಬುತ್ತವೆ.

೩. ತನ್ನನ್ನು ಸತ್ಯವಾಗಿ ಕರ್ತನಿಗೆ ಒಪ್ಪಿಸುವ ಚಕ್ತನು ತನ್ನದೆಲ್ಲವೂ ಕರ್ತನದೇ ಎಂದು ತಿಳಿದು ಕಾಳ್ಳುತ್ತಾನೆ.

೪. ಅಂದರೆ ಧರ್ಮದ್ರವ್ಯಸಂಗ್ರಹದ ಭಾರವು ಬಡವರಾದ ಮಕೆದೊನ್ಯದವರ ಮೇಲೆ ಮಾತ್ರವಲ್ಲ, ಹೆಚ್ಚಾಗಿ ಧನಿಕರಾದ ಅಕಾಯದವರ ಮೇಲೆ ಸಹ ಬೀಳುವದು ಯುಕ್ತವೆಂದು ನೆನಸಿದ್ದರಿಂದ.

೫. ಕೊರಿಂಥದವರು ಧರ್ಮಸಂಗ್ರಹವನ್ನು ಮುಂಚೆಯೇ ತಾವಗಿಸಿದ್ದರು; ಆದರೆ ಪೌಲನು ಅವರೆಲ್ಲರು ಒಟ್ಟುಕೂಡಿ ಹೆಚ್ಚು ಕಾಡುವದು ಯುಕ್ತವೆಂದು ನೆನಸಿ, ಔದಾರ್ಯಗುಣವೆಂಬ ಕೃಪೆಯ ವೃದ್ಧಿಗಾಗಿ ಅವರನ್ನು ಎಚ್ಚರಿಸ ಬೇಕೆಂದು, ತೀತನಿಗೆ ಆಜ್ಞಾಪಿಸಿದನು. ಪೌಲನು ಔದಾರ್ಯಕ್ಕೆ ಯಾಥಾರ್ಥವೆಂಬ ಮೂಲಾರ್ಥ ಉಳ್ಳ ಶಬ್ದವನ್ನು ಗ್ರೀಕ ಭಾಷೆಯಲ್ಲಿ ಪ್ರಯೋಗಿಸುತ್ತಾನೆ; ಯಾಕಂದರೆ: ಎರಡು ಬಗೆಯದೆ, ತಾನು ದೇವರಿಂದ ಪಡೆದಿದ್ದನ್ನು ಲೋಭ ಗರ್ವ ಮುಂತಾದ ಚಿಂತೆ ಇಲ್ಲದವನಾಗಿ, ಧರ್ಮಾರ್ಥವಾಗಿ ಕಾಡುವವನೇ ನಿಜವಾದ ಉದಾರಿಯು.

೪) ಮಕೆದೊನ್ಯದವರ ಮಾದ್ರಿಯನ್ನು ಅನುಸರಿಸ ಬೇಕೆಂಬ ಉದ್ಬೋಧನೆ.

೭. ಆದರೆ ವಿಶ್ವಾಸದಲ್ಲಿಯೂ, ವಾಕ್ಯದಲ್ಲಿಯೂ, ತಿಳುವಿಕೆಯಲ್ಲಿಯೂ, ಎಲ್ಲಾ ಜಾಗ್ರತೆಯಲ್ಲಿಯೂ, ನಿಮ್ಮಿಂದ ನಮಗಾಗುವ ಪ್ರೀತಿಯಲ್ಲಿಯೂ, ಎಲ್ಲಾದರಲ್ಲಿ ಹೆಚ್ಚಿರುವ ಪ್ರಕಾರ ಈ ಕೃಪೆಯಲ್ಲಿಯೂ ನೀವು ಹೆಚ್ಚುವ ಹಾಗೆ, ೮. ಆಜ್ಞೆಯ ಪ್ರಕಾರ

ವಲ್ಲ, ಮತ್ತಾಬ್ಬರ ಜಾಗ್ರತೆಯನ್ನು ನೋಡಿ, ನಿಮ್ಮ ಪ್ರೀತಿಯ ಸತ್ಯವನ್ನು ಪರೀಕ್ಷಿಸುವದಕ್ಕೆ ಹೇಳುತ್ತೇನೆ. ೯. ಯಾಕಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯನ್ನು ತಿಳಿಯುತ್ತೀರಿ; ಏನಂದರೆ ಅವನು ಐಶ್ವರ್ಯವಂತನಾಗಿದ್ದು ೧), ನೀವು ಅವನ ಬಡತನದಿಂದ ಐಶ್ವರ್ಯವಂತರಾಗುವ ಹಾಗೆ ೨), ನಿಮಗಾಗಿ ಬಡವನಾದನು ೩).

೧. ಯೇಸು ಕ್ರಿಸ್ತನು ದೇವಚಾಪದ ತದ್ರೂಪನೂ, ದೇವಜ್ಯೋತಿಯ ಪ್ರತಿಕಾಂತಿಯೂ ಆದ ದೇವಪುತ್ರನಾಗಿದ್ದು, ದಿವದ ನಿಧಿಗೆಲ್ಲಾ ಒಡೆಯನಾಗಿದ್ದಾನೆ.
೨. ಚಕ್ತರು ಯೇಸು ಕ್ರಿಸ್ತನಿಂದ ಇಹಪದಲ್ಲಿ ಆತನ ಕೃಪಾನಿಧಿ ಯೆಂಬ ಆತ್ಮಿಕವಾದ ಐಶ್ವರ್ಯವನ್ನೂ, ಪರದಲ್ಲಿ ಆತನ ಮಹಿಮಾರಾಜ್ಯದ ಬಾಧ್ಯತೆಯನ್ನೂ ಪಡದು ಕಾಳ್ಳುತ್ತಾರೆ. ಎಫೆ. ೧, ೫. ಹೀಗಿರಲಾಗಿ ಕ್ರಿಸ್ತನ ಪ್ರೀತಿಗೆ ಕೃತಜ್ಞತೆಯುಳ್ಳ ಚಕ್ತನು ಕ್ರಿಸ್ತನನ್ನು ಮೆಚ್ಚಿಸ ಬೇಕೆಂದು ಅಪೇಕ್ಷಿಸಿ, ಸ್ವಾರ್ಥವನ್ನು ಬಿಟ್ಟು, ಆತ್ಮಿಕ ದೈಹಿಕ ಪರೋಪಕಾರಾರ್ಥವಾಗಿ ತನ್ನದನ್ನು, ತನ್ನನ್ನು ಸಹ, ಸಂತೋಷದಿಂದ ವೆಚ್ಚ ಮಾಡುವನು.
೩. ಮನುಷ್ಯನಾಗಿ ಹುಟ್ಟಿ, ಬಡವನಾದನು. ಫಿಲಿ. ೨, ೭.

೧೦. ಮತ್ತು ಇದರಲ್ಲಿ ಆಲೋಚನೆ ಹೇಳುತ್ತೇನೆ; ಯಾಕಂದರೆ ಹೋದ ವರುಷದಿಂದ ಮಾಡುವದನ್ನಲ್ಲದೆ, ಇಚ್ಛಿಸುವದನ್ನು ೧) ಸಹ, ಮುಂತೊಡಗಿದವರಾದ ನಿಮಗೆ ಇದು ಒಳ್ಳೇದು ೨). ೧೧. ಆದರೆ ಇಚ್ಛೈಸುವ ಮನಸ್ಸು ಇದ್ದ ಪ್ರಕಾರವೇ, ಉಂಟಾದದರಾಳಿಗಿಂದ ಪೂರೈಸುವಿಕೆಯು ಆಗುವ ಹಾಗೆ, ಇಗ ಮಾಡುವದನ್ನು ಸಹ ಪೂರೈಸಿರಿ ೩). ೧೨. ಯಾಕಂದರೆ ಒಬ್ಬನಿಗೆ ಸಿದ್ಧ ಮನಸ್ಸು ಉಂಟಾಗಿದ್ದರೆ, ಇಲ್ಲದ ಪ್ರಕಾರವಲ್ಲ ಇದ್ದ ಪ್ರಕಾರವೇ, ಹಿತವಾಗಿದೆ ೪). ೧೩. ಯಾಕಂದರೆ ಮತ್ತಾಬ್ಬರಿಗೆ ಲಘುವೂ, ನಿಮಗೆ ಉಪದ್ರವೂ, ಆಗ ಬೇಕೆಂದಲ್ಲ ೫), ಸಮಸ್ಥದ ಪ್ರಕಾರ, ೧೪. ಇಗಿನ ಕಾಲದಲ್ಲಿ ನಿಮ್ಮ ಹೆಚ್ಚುವಿಕೆ ಅವರ ಕೊರತೆಗೂ, ೧೫. ಸಮಸ್ಥವು ಆಗುವದಕ್ಕೆ, ಬಹಳ ಕೂಡಿಸಿದವನಿಗೆ ಹೆಚ್ಚು ಇರಲಿಲ್ಲ, ಸ್ವಲ್ಪ ಕೂಡಿಸಿದವನಿಗೆ ಕಡಿಮೆ ಇರಲಿಲ್ಲ ೬), ಎಂದು ಬರೆದಿರುವ ಪ್ರಕಾರ, ಅವರ ಹೆಚ್ಚುವಿಕೆ ನಿಮ್ಮ ಕೊರತೆಗೂ, ಆಗ ಬೇಕು.

೧. ಮತ್ತಾಬ್ಬರು ನಿಮಗೆ ಪೋಳಿದ್ದರಿಂದ ಮಾತ್ರವಲ್ಲ, ಸ್ವಂತ ಪ್ರಿಯದಯದ ಅಪೇಕ್ಷೆಯಿಂದಲೂ, ಧರ್ಮದ ಪಣ ಕೂಡಿಸುವದನ್ನು.
೨. ಹೀಗೆ ಮಾಡಿದರೆ, ದೇವರಿಗೂ, ಮನುಷ್ಯರಿಗೂ ಪಿತಕಾರಿಗಳಾಗುವಿರಿ.
೩. ಈ ವಚನದ ಅಭಿಪ್ರಾಯವೇನಂದರೆ: ಪೂರ್ವದ ವರ್ಷದಲ್ಲಿ ತಾಡಗಿದಂತೆ, ಈಗ ನಿಮ್ಮಲ್ಲಿ ಒಬ್ಬಾಬ್ಬನು ಕೈಲಾದಷ್ಟು ಧರ್ಮದ್ರವ್ಯವನ್ನು ಕಾಟ್ಟು, ಕ್ರೈಸ್ತರಿಗೆ ತಕ್ಕ ಔದಾರ್ಯವನ್ನು ತೋರಿಸಿರಿ.
೪. ಔದಾರ್ಯ ಮನಸ್ಸೆ ಮುಖ್ಯವಾದದ್ದು; ಕೈಲಾಗುವಷ್ಟು ಕಾಡುವ ಬಡವನು ಕೈಲಾಗುವಷ್ಟು ಕಾಡುವ ಧನಿಕನಿಗಿಂತ ಕಡಮೆಯಾದವನಲ್ಲ.
೫. ಕ್ರೈಸ್ತ ಸಭೆಯಲ್ಲಿರುವ ಔದಾರ್ಯನಿಯಮದಿಂದ ನಿಮ್ಮ ಮೇಲೆ ಪೆಚ್ಚು ಚಾರ ಬೀಳುವದೆಂದು, ನೆ

ನಸ ಬೇಡಿ; ನಿಮಗೆ ಸಾಲದ ಪಾಗೆ ಪೆಚ್ಚಾಗಿ ಕಾಡ ಬೇಕೆಂಬ ನಿಯಮವಿಲ್ಲ.

೬. ೨ ಮೋಶೆ. ೧೬, ಲಲ್ಲಿ ಬರದ ಪ್ರಕಾರ, ಮನ್ನವೆಂಬುವದನ್ನು ಕೂಪಿಸಿದ ಇಸ್ರಯೇಲನವರಲ್ಲಿ ೭ ಬ್ಬಾಬ್ಬನು ನ್ಯೂನಾಧಿಕವಿಲ್ಲದೆ ತಕ್ಕಷ್ಟು ಅದ್ಭುತ ಕಾರ್ಯಾನುಸಾರವಾಗಿ ಪಾಂಯಿದ ಪ್ರಕಾರ, ಕ್ರೈಸ್ತರ ಔದಾರ್ಯದಿಂದ ಯಾರಿಗೂ ಕಾರತೆ ಇಲ್ಲದಂತೆ, ಸಭೆಯವರೆಲ್ಲರು ತೃಪ್ತರಾಗ ಬೇಕು.

೨. ಅಧಿಕ ತ್ಯಾಗವಾಗಿ ಧರ್ಮ ಕಾಡುವ ಮನಸ್ಸನ್ನು ಕಾರಿಂಥದವರಲ್ಲಿ ಪುಟ್ಟಿಸ ತಕ್ಕ ಬೇರೆ ಕೆಲವು ಪ್ರಸ್ತಾಪಗಳು.

೧೬. ಆದರೆ ನಿಮಗಾ್ಯಸ್ಕರ ಅದ್ಯೇ ಜಾಗ್ರತೆಯನ್ನು [೧] ತೀತನ ಹೃದಯದಲ್ಲಿ ಕೊಟ್ಟ ದ್ಯೇವರಿಗೆ ಸ್ತುತಿ. ೧೭. ಏನಂದರೆ ಅವನು ಮಾತನ್ನು [೨] ಕ್ಯೋಳಿ, ಮತ್ತು ಹೆಚ್ಚು ಜಾಗ್ರತೆಯುಳ್ಳವನಾಗಿದ್ದು, ಸ್ವಯಿಚ್ಛೆಯಿಂದ ನಿಮ್ಮ ಬಳಿಗೆ ಹಾ್ಯಗ ಹಾರಟನು. ೧೮. ಅವನ ಸಂಗಡ ಸುವಾರ್ತೆಯಲ್ಲಿ ಸಕಲ ಸಭೆಗಳಾಳಿಗೆ ಹೊಗಳ್ಪಡುವದಲ್ಲದೆ, ಕರ್ತನ ಮಹಿಮೆಗಾ್ಯಸ್ಕರವೂ, ೧೯. ನಿಮ್ಮ ನಿದ್ದ ಮನಸ್ಸಿಗಾ್ಯಸ್ಕರವೂ, ನಮ್ಮಿಂದ ನ್ಯೋಮಿಸಲ್ಪಡುವ ಈ ದಾನದ ಸಂಗಡ ನಮ್ಮ ಜತೆಪ್ರಯಾ್ಯಣಿಕನಾಗಿ ಸಭೆಗಳಿಂದ ಆರಿಸಿ ನ್ಯೋಮಿಸಲ್ಪಟ್ಟ ಸಹಾ್ಯದರನನ್ನು [೩] ಕಳುಹಿಸಿದ್ದೇವೆ. ೨೦. ನಮ್ಮಿಂದ ನ್ಯೋಮಿಸಲ್ಪಡುವ ಈ ಮಹಾ ದಾನದ ವಿಷಯವಾಗಿ ಯಾರಾಬ್ಬನೂ ನಮ್ಮಲ್ಲಿ ದಾ್ಯಷ ಕಾಣದ ಹಾಗೆ ಎಚ್ಚರಿಕೆಯಾಗಿದ್ದು, ಕರ್ತನ ಮುಂದೆ ಮಾತ್ರವಲ್ಲ, ಮನುಷ್ಯರ ಮುಂದೆಯೂ ಒಳ್ಳೆಯವುಗಳನ್ನು ಮುನ್ನೆನಸಿದೆವು [೪]. ೨೧. ಮತ್ತು ಬಹಳ ಕಾರ್ಯಗಳಲ್ಲಿ ಬಹಳ ಸಾರಿ ಜಾಗ್ರತೆಯುಳ್ಳವನೆಂದೂ, ಈಗ ನಿಮ್ಮ ಮೇಲೆ ಇಡುವ ಬಹಳ ನಂಬಿಕೆಗಾ್ಯಸ್ಕರ ಬಹು ಹೆಚ್ಚಾಗಿ ಜಾಗ್ರತೆಯುಳ್ಳವನೆಂದೂ, ನಾವು ಪರೀ್ಕ್ಷಿಸಿದ ನಮ್ಮ ಸಹಾ್ಯದರನನ್ನು [೫] ಅವರ ಸಂಗಡ ಕಳುಹಿಸಿದ್ದೇವೆ. ೨೨. ತೀತನನ್ನು ಕುರಿತಾದರೆ, ಅವನು ನನ್ನ ಜತೆಗಾರನೂ, ನಿಮಗಾಗಿ ಜತೆ ಕೆಲಸದವನೂ; ನಮ್ಮ ಸಹಾ್ಯದರರಾದರೆ [೬], ಅವರು ಸಭೆಗಳ ಅಪಾಸ್ತಲರೂ, ಕ್ರಿಸ್ತನ ಮಹಿಮೆಯೂ ಆಗಿದ್ದಾರೆ. ೨೩. ಹಾಗಾದರೆ, ನಿಮ್ಮ ಪ್ರೀತಿಯೂ ನಿಮಗಾ್ಯಸ್ಕರವಾದ ನಮ್ಮ ಹೆಚ್ಚಳವೂ, ಇವುಗಳ ದೃಷ್ಟಾಂತವನ್ನು ಅವರಿಗೂ ಸಭೆಗಳ ಸಮ್ಮುಖದಲ್ಲಿಯೂ [೭] ತಾ್ಯರಿಸಿರಿ.

೧. ಅಂದರೆ ನನ್ನಲ್ಲಿರುವ ಜಾಗ್ರತೆಗೆ ಸದೃಶವಾದ ಜಾಗ್ರತೆಯನ್ನು.

೨. ಕಾರಿಂಥದವರ ಬಳಿಗೆ ತಿರಿಗಿ ಪಾ್ಯಗ ಬೇಕೆಂದು, ಪೌಲನು ಪೇಳಿದ ಮಾತನ್ನು.

೩. ಒಂದು ವೇಳೆ ಲೂಕನು ಈ ಸಹಾ್ಯದರನಾಗಿದ್ದನು. ಇವನು ಅಪಾ. ಕ್ರಿ. ೫೦, ೧. ಮೊದಲುಗಾಂಡು ೫೮ ವರೆಗೆ ಚರಿತ್ರ ಬರದಿರುವ ಕಾಲದಲ್ಲಿ ಅಪಾಸ್ತಲನ ಸಂಗಡ ಇರಲಿಲ್ಲವೆಂದು, ಪ್ರ

೨ ಕೊರಿ. ೯, ೧—೭.

ಥಮ ಪುರುಷದ ಪ್ರಯೋಗದಿಂದ ಜಾಡೆಯಾಗಿ ತೋರುತ್ತದೆ. ಪೌಲನು ಮಕೆದೊನ್ಯವನ್ನು ಸಂಚರಿಸಿ, ಈ ಪತ್ರಿಕೆಯನ್ನು ಬರದ ಕಾಲವು ಈ ಮಾತಿಗೆ ಸರಿ ಬೀಳುತ್ತದೆ.

೪. ಮಕೆದೊನ್ಯದವರೂ, ಅಕಾಯದವರೂ, ಕಾಟ್ಟಿ ಅಧಿಕ ಧರ್ಮದ್ರವ್ಯಸಂಗ್ರಹವನ್ನು ಯೆರೂಸಲೇಮಿನ ಸಭೆಯವರಿಗೆ ತಂದು ಒಪ್ಪಿಸುವದಕ್ಕೆ ಬೇರೆ ಬೇರೆ ಸಭೆಗಳಲ್ಲಿ ಪೌಸರು ವಾಸಿಯಾದ ಸಹೋದರರನ್ನು ತನ್ನ ಕೂಡಾ ಜಾತೆಯಾಗಿ ಬರುವ ಹಾಗೆ ಮೊದಲೇ ನೇಮಿಸಿದ ಕಾರಣವೇನಂದರೆ: ಎದುರಾಳಿಗಳಲ್ಲಿ ಯಾರಾದರೂ, ತದನಂತರ ಪೌಲನು ಈ ಧರ್ಮದ್ರವ್ಯದಲ್ಲಿ ಒಂದು ಪಾಲು ಅಪಹರಿಸಿದನೆಂಬ ಇಲ್ಲದಂಥ ಅಪವಾದ ಉಂಟು ಮಾಡುವದಕ್ಕಾಗಲಿ, ಸಂಶಯವನ್ನು ಹುಟ್ಟಿಸುವದಕ್ಕಾಗಲಿ, ಮಾರ್ಗವಿಲ್ಲದ ಹಾಗೆ, ಹೀಗೆ ಮಾಡಿದನು.

೫. ಇವನು ಶಿಮೊಥೆಯನಾಗಿದ್ದನೆಂದು ತೋರುತ್ತದೆ.

೬. ಅಂದರೆ ಲೂಕನು ಮತ್ತೂ ಶಿಮೊಥೆಯನು.

೭. ಈ ಸಹೋದರರು ಕಾರಿಂಥದಲ್ಲಿ ಕಂಡು ಕೇಳಿದ್ದನ್ನು ತಮ್ಮನ್ನು ಕಳುಹಿಸಿದ ಸಭೆಯವರಿಗೆ ತಿಳಿಸತಕ್ಕವರಾಗಿದ್ದ ಕಾರಣ, ಸಭೆಗಳ ಸಮ್ಮುಖದಲ್ಲಿ ಎಂದು, ಅಪೊಸ್ತಲನು ಬರೆಯುತ್ತಾನೆ.

ಸ. ೯.

೩. ಪೌಲನು ತನ್ನನ್ನು ನಾಚಿಕೆ ಪಡಿಸ ಬಾರದೆಂದು ಪ್ರಾರ್ಥಿಸಿ, ಔದಾರ್ಯವೃತ್ತಿಯ ಬೇರೆ ಕೆಲವು ಪೇತುಗಳನ್ನು ಕಾರಿಂಥದವರಿಗೆ ಬೋಧಿಸುತ್ತಾನೆ.

ಅ) ಮಕೆದೊನ್ಯದವರ ಮುಂದೆ ನನ್ನನ್ನು ನಾಚಿಕೆ ಪಡಿಸ ಬೇಡಿರಿ. ವ. ೧—೫.

ವ. ೧. ಪರಿಶುದ್ಧರಿಗೆ ಲಿಸ ತಕ್ಕ ಈ ಸೇವೆ ವಿಷಯವಾಗಿ ಹೆಚ್ಚು ಬರೆಯ ಕೆಲಸವಿಲ್ಲವೆಂದು, ತೋರುತ್ತದೆ. ೨. ಯಾಕಂದರೆ ನೀವು ಸಿದ್ಧ ಮನಸ್ಸುಳ್ಳವರಾಗಿದ್ದೀರೆಂದು ತಿಳಿದು ಕೊಂಡು, ಈ ಮಕೆದೊನ್ಯದ ಸಭೆಯವರಿಗೆ ಅಕಾಯವು ಹೋದ ವರ್ಷದಲ್ಲಿ ಧರ್ಮದ್ರವ್ಯಸಂಗ್ರಹವನ್ನು ತೊಡಗಿಸಿತ್ತೆಂದು ಹೇಳಿ, ನಿಮ್ಮನ್ನು ಅನುಸರಿಸುವ ಆಸಕ್ತಿಯನ್ನು ಅನೇಕರಲ್ಲಿ ಹುಟ್ಟಿಸಿದ್ದೇನೆ. ೩. ಆದಾಗ್ಯೂ ಮಕೆದೊನ್ಯದ ಸಭೆಯವರಲ್ಲಿ ಕೆಲವರು ನನ್ನ ಸಂಗಡ ಬರುವ ಪಕ್ಷದಲ್ಲಿ, ನೀವು ನಾಚಿಕೆ ಪಡದ ಹಾಗೆ ಎಂದು, ನಾನು ಹೇಳುವದಿಲ್ಲ, ನಿಮ್ಮ ವಿಷಯವಾಗಿ ಹೆಚ್ಚಾಯದ ಮಾತನಾಡಿದವನಾದ ನನಗೆ ನಾಚಿಕೆಯುಂಟಾಗದ ಹಾಗೆ, ಈ ಸಹೋದರರನ್ನು, ನಿಮ್ಮನ್ನು ಸಿದ್ಧ ಮಾಡುವದಕ್ಕೆ, ಮುಂದಾಗಿಯೇ ಕಳುಹಿಸಿದ್ದೇನೆ. ೪. ಮಕೆದೊನ್ಯದವರಿಗೆ ನಾನು ಮುಂತಿಳಿಸಿದ ನಿಮ್ಮ ಧರ್ಮದ್ರವ್ಯಸಂಗ್ರಹವನ್ನು, ಅದು ಲೋಭಿಗಳು ಅಂಕೆಯಿಂದ ಕೊಟ್ಟ ಹಣವಾಗಿ ಕಾಣದೆ, ಸ್ವೇಚ್ಛೆಯಾದ ಪ್ರೀತಿಯ ಔದಾರ್ಯತ್ಯಾಗವಾದ ನಿಜ ಧರ್ಮವಾಗಿ ತೋರುವ ಹಾಗೆ, ಪೂರೈಸುವದಕ್ಕೆ ಈ ಸಹೋದರರನ್ನು ಮುಂದಾಗಿ ಕಳುಹಿಸಲವಶ್ಯವೆಂದೆಣಿಸಿದೆನು.

ಇ) ದೇವರನ್ನು ನೆನಸಿ, ಕೃತಜ್ಞತೆಯಿಂದಲೂ, ವಿಶ್ವಾಸದಿಂದಲೂ, ಧರ್ಮ ಕೊಡಿರಿ. ವ. ೬—೧೧.

೬. ಇದು ಮಾತ್ರ—ಕಿಂಚಿತವಾಗಿ ಬಿತ್ತುವವನು ಕಿಂಚಿತವಾಗಿಯೇ ಕೊಯ್ವುವನು೧); ೭. ಮತ್ತು ಬಹಳವಾಗಿ ಬಿತ್ತುವವನು ಬಹಳವಾಗಿಯೇ ಕೊಯ್ವುವ

ನು ೨); ಒಬ್ಬೌಬ್ಬನು ಹೃದಯದಲ್ಲಿ ಮುಂಕೌಳ್ಳುವ ಪ್ರಕಾರವೇ, ದುಃಖದಿಂದಲಾದರೂ ಅಗತ್ಯದಿಂದಲಾದರೂ ಅಲ್ಲ; ಯಾಕಂದರೆ ಸಂತೋಷವಾಗಿ ಕೊಡುವವನನ್ನು ದೇವರು ಪ್ರೀತಿ ಮಾಡುತ್ತಾನೆ ೩). ೪. ಇದಲ್ಲದೆ ಬೆಲ್ಲಿದನು, ಬಡವರಿಗೆ ಕೊಟ್ಟನು, ಅವನ ನೀತಿಯು ಎಂದೆಂದಿಗೂ ನೆಲೆಯಾಗಿದೆ, ಎಂದು ಬರೆದಿರುವ ಪ್ರಕಾರ ೪), ೯. ನೀವು ಎಲ್ಲಾದರಲ್ಲಿ ಎಂದಿಗೂ ಎಲ್ಲಾ ತೃಪ್ತಿಯುಳ್ಳವರಾಗಿ ಎಲ್ಲಾ ಸತ್ಕ್ರಿಯೆಗಾಗಿ ಹೆಚ್ಚುವ ಹಾಗೆ, ದೇವರು ಎಲ್ಲಾ ಕೃಪೆಯನ್ನು ನಿಮಗಾಗಿ ಹೆಚ್ಚಿಸ ಬಲ್ಲನು. ೧೦. ಈದರೆ ನಮ್ಮ ಮುಖಾಂತರ ದೇವಗೆ ಸ್ತೋತ್ರವನ್ನು ಉಂಟು ಮಾಡುವ ಎಲ್ಲಾ ಉದಾರತೆಕಾಗಿ ಎಲ್ಲಾದರಲ್ಲಿ ನೀವು ಐಶ್ವರ್ಯವಂತರಾಗುವ ಹಾಗೆ, ೧೧. ಬಿತ್ತುವವನಿಗೆ ಬೀಜವನ್ನು ತಂದು ಕೊಡುವವನು, ಉಣ್ಣುವದಕ್ಕೆ ರೊಟ್ಟಿಯನ್ನು ತಂದು ೫), ನೀವು ಬಿತ್ತಿದ್ದನ್ನು ಹೇರಳ ಮಾಡಿ, ನಿಮ್ಮ ನೀತಿಯ ೬) ಬೆಳೆಗಳನ್ನು ವೃದ್ಧಿ ಮಾಡಲಿ.

೧. ಅಂಗಲಾಗಿ ಬಿತ್ತಿದ್ದು ಅಗಲವಾಗಿ ಬೆಳುವದು ಎಂಬ ಕನ್ನಡ ಗಾದೆಗೆ ಸರಿಯಾದ ಈ ಮಾತು ಇಹದಲ್ಲಿಯೂ ಪರದಲ್ಲಿಯೂ ಸಲ್ಲುವದು.

೨. ಬಹಳವಾಗಿ ಎಂಬದಕ್ಕೆ ಮೂಲ ಗ್ರಂಥದಲ್ಲಿ ಆಶೀರ್ವಾದಗಳಿಗಾಗಿ ಎಂಬ ಶಬ್ದ ಬರದದೆ. ಪೌಲನ ಅಭಿಪ್ರಾಯವೇನಂದರೆ: ತನಗೆ ಇದ್ದದ್ದೆಲ್ಲಾ ದೇವರ ಆಶೀರ್ವಾದವೆಂದು ತಿಳಕಾಂಡು, ತಾನೂ ಸಂತುಷ್ಟನಾಗಿ, ಪರರಿಗೂ ಸಂತೋಷ ಪೂರಕನಾಗಿ, ಆಶೀರ್ವಾದ ಸಹಿತವಾಗಿ ಧರ್ಮ ಮಾಡುವ ಭಕ್ತನಿಗೆ ಸಂತೋಷ ಪಡುವ ಉಪಕೃತರಿಂದಲೂ, ಕೃತಜ್ಞತೆಯುಳ್ಳವರಿಗೆ ಮೆಚ್ಚುವ ದೇವರಿಂದಲೂ ಅತಿಶಯವಾದ ಆಶೀರ್ವಾದ ಪ್ರಾಪ್ತವಾಗುವದು.

೩. ಈ ಮಾತು ಸಾಲಾಮೋನನ ಗಾದೆಗಳ ಸ. ೨೨, ೮ರಿಂದ ಎತ್ತಿದ ಯಥೋಕ್ತವಾಗಿದೆ.

೪. ಈ ಅಭಿಪ್ರಾಯವು ಕೀರ್ತ. ೧೧೨, ೯ಲ್ಲಿ ದೃಢಕುತ್ತದೆ.

೫. ಈ ಮಾತು ಯೆಶಾ. ೫೫, ೧೦ಲ್ಲಿ ಬರದದೆ.

೬. ಉಚಿತವಾಗಿ ಕೊಡಾಣಿ ಎಂಬದಕ್ಕೆ ಹಿಂದೂ ಜನರು ಪುಣ್ಯದ ಹಾವನೆಯಿಂದ ಧರ್ಮವೆಂದು ಹೆಸರು ಇಟ್ಟರು. ಇಬ್ರೀಯರು ಅದೆ ಅಭಿಪ್ರಾಯದಿಂದ ಅದಕ್ಕೆ ನೀತಿ ಎಂದು ಹೇಳಿದರು. ಗ್ರೀಕ ಮೊದಲಾದ ವಿಲಾಯತಿ ಖಂಡದ ಕ್ರೈಸ್ತ ಜನಾಂಗಗಳು ಅದಕ್ಕೆ ಕರುಣೆ ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ಇದು ವಾಸಿ; ಯಾಕಂದರೆ, ಪಾಪಿಗಳಾದ ಮನುಷ್ಯರು ದೇವರ ದೃಷ್ಟಿಯಲ್ಲಿ ಪುಣ್ಯವಾಗಿ ತೋರುವಂಥಾ ಸತ್ಕೃತ್ಯವನ್ನು ಮಾಡಲಾರರು.

ಊ) ಉಪಕೃತರ ಕೃತಜ್ಞತೆಗಾಗಿ ಧರ್ಮ ಮಾಡಬೇಕು. ವ. ೧೨—೧೫.

ವ. ೧೨. ಯಾಕಂದರೆ, ಈ ಧರ್ಮವೃತ್ತಿಯು ಕ್ರೈಸ್ತರ ಕೊರತೆಯನ್ನು ಪೂರೈಸುವದಲ್ಲದೆ, ಅನೇಕರ ಕೃತಜ್ಞತೆಯಿಂದ ದೇವರ ಮಾನಕ್ಕೆ ಪಾತ್ರವಾಗುವದು. ೧೩. ಹ್ಯಾಗಂದರೆ ಈ ಧರ್ಮದ್ರವ್ಯಸಂಗ್ರಹದಿಂದ ನೀವು ಅರಿಕೆ ಮಾಡುವ ಕ್ರಿಸ್ತನ ಸುವಾರ್ತೆಗೆ ವಿಧೇಯರಾಗಿದ್ದೀರೆಂದೂ, ತಮ್ಮ ಸಂಗಡಲೂ, ಕ್ರೈಸ್ತರೆಲ್ಲರ ಸಂಗಡಲೂ ಪ್ರೀತಿಯ ಅನ್ಯೋನ್ಯದಲ್ಲಿರುವದನ್ನು ಔದಾರ್ಯದಿಂದ ಪ್ರಮಾಣಿಸುತ್ತೀರೆಂದೂ ನೋಡಿ, ದೇವರನ್ನು ಸ್ತುತಿಸಿ, ೧೪. ನಿಮ್ಮಲ್ಲಿ ಕಾಣುವ ದೇವರ ಅತಿಶಯವಾದ ಕೃಪೆಗಾಗಿ ನಿಮ್ಮನ್ನು ಬಹ

ಳವಾಗಿ ಜಯಿಸಿ, ನಿಮಗೋಸ್ಕರ ಮಾಡುವ ಪ್ರಾರ್ಥನೆಯಿಂದ ದೇವರನ್ನು ಮಹಿಮೆ ಪಡಿಸುತ್ತಾರೆ. ೧೫. ಎಲ್ಲಾ ದಾನಗಳಿಗೂ, ಎಲ್ಲಾ ಆಶೀರ್ವಾದಕ್ಕೂ ಮೂಲವಾದ ಕ್ರಿಸ್ತನೆಂಬ ಅವಾಚ್ಯ ದಾನಕ್ಕಾಗಿ ದೇವರಿಗೆ ಸ್ತೋತ್ರ ವಾಗಲಿ! ಇಲ್ಲಿ ಪತ್ರಿಕೆಯ ಎರಡನೆ ಭಾಗ ಮುಗಿಯಿತು.

ಪತ್ರಿಕೆಯ ಮೂರನೇ ಭಾಗವು.

ಪೌಲನು ಕಳ್ಳ ಅಪಾಸ್ತಲರ ಸುಳ್ಳು ದೂರುಗಳನ್ನು ತಳ್ಳುತ್ತಾನೆ. ಸ. ೧೦—೧೩.

೧೦.

ಅಪಾಸ್ತಲನ ನಿಜವಾದ ಬಲವು.

ಅ) ಉನ್ಮತ್ತ ಭಾಷೆಯ ವಾದಕ್ಕೆ ಪ್ರತಿವಾದವು. ವ. ೧—೧೧.

ವ. ೧. ಪೌಲನಾದ ನಾನು ಬಹಳ ಧೈರ್ಯವಾಗಿ ನಿಮ್ಮನ್ನು ಎಚ್ಚರಿಸುತ್ತೇನೆ ಗಲ. ೫, ೨. ಫಿಲೆ. ೯., ನಾನು ಪರೋಕ್ಷವಾಗಿ ಸಭಾಭೀತನಾಗಿದ್ದು, ಅಪರೋಕ್ಷವಾಗಿಯೆ ದಾರ್ಢ್ಯವಾದಿಯಾಗಿದ್ದೇನೆಂದು, ಚಾಡಿ ಗಳು ನನ್ನನ್ನು ನಿಂದಿಸುವಂಥ, ನನ್ನಲ್ಲಿದ್ದು ನಾನು ಕೈಕೊಳ್ಳುವಂಥ, ಕ್ರಿಸ್ತನ ಶಾಂತಿ ನಮ್ರತೆಗಳ ಆಣೆ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ರೋಮಾ. ೧೫, ೧. ೨. ನಾನು ಬಳಸುತ್ತೇನೆಂದು, ಅವರು ಹೇಳುವ ಸ್ವಮತನಿಷ್ಠವಾದ ದಾರ್ಢ್ಯವನ್ನು ಪರೋಕ್ಷವಾಗಿ ನಿಮ್ಮಲ್ಲಿ ನಡಿಸಿ, ನಾನು ದೇವರ ಆತ್ಮದ ಸಹಾಯ ಪ್ರೇರಣೆಗಳಿಲ್ಲದೆ, ಮನಸ್ಸು ಬಂದ ಹಾಗೆ ನಡದು ಕೊಳ್ಳುತ್ತೇನೆಂತ ನೆನಸುವ ಕೆಲವರನ್ನು ದಂಡಿಸುವ ಹಾಗೆ, ನನಗೆ ಅಂಕೆ ಮಾಡ ಬೇಡವೆಂದು, ಪ್ರಾರ್ಥಿಸುತ್ತೇನೆ. ೩. ಯಾಕಂದರೆ: ನಾನು ದೇಹದಲ್ಲಿ ಬೇರೆ

ಮನುಷ್ಯರ ಪ್ರಕಾರ ಬಲವಿಲ್ಲದವನಾಗಿದ್ದರೂ, ಸತ್ಯದ ಎದುರಾಳಿಗಳ ಯುದ್ಧದಲ್ಲಿ ಮಾನುಷ ನಿರ್ಬಲದಿಂದ ನಾನು ಸೋಲುವವನಲ್ಲ. ೪. ಯಾಕಂದರೆ: ನಾನು ಕಾದುವ ಆಯುಧಗಳು ಮಾನುಷ ಬಲಹೀನತ್ವವಿಲ್ಲದೆ, ನನ್ನ ಸಹಾಯಕನಾದ ದೇವರು ಸುವಾರ್ತೆಗೆ ವಿರೋಧವಾಗಿ ಎಷ್ಟೊ ದಿಟ್ಟವಾಗಿಯಾದರೂ, ನಿಲ್ಲುವಂಥಾದ್ದನ್ನೆಲ್ಲಾ ಸಂಹಾರ ಮಾಡುವದಕ್ಕೆ ಪ್ರಯೋಗಿಸುವ ಬಲವಾದ ಕರಣಗಳಾಗಿವೆ. ೫. ದೇವರ ತಿಳುವಿಕೆಗೆ ವಿರೋಧವಾಗಿ ಎದ್ದು ಬರುವ ಉನ್ನತ್ತ ಭಾವನೆಗಳನ್ನೆಲ್ಲಾ ಕೆಡವಿ ಹಾಕಿ, ಮನುಷ್ಯರ ಬುದ್ಧಿವಂತಿಕೆಗಳನ್ನೆಲ್ಲಾ ಕ್ರಿಸ್ತನ ವಿಧೇಯತ್ವಕ್ಕೆ ೧ ಕೊರಿ. ೧, ೨. ಒಳಗೆ ಮಾಡಿ, ೬. ಉತ್ತಮರಾದ ನೀವು ಪೂರ್ಣ ವಿಧೇಯರಾದ ಕೂಡಲೆ ಎಲ್ಲಾ ಅವಿಧೇಯರನ್ನು ದಂಡಿಸುವದಕ್ಕೆ ಸಿದ್ಧನಾಗಿದ್ದೇನೆ. ೭. ಬಹಿರ್ಲಕ್ಷಣಗಳನ್ನು ನೋಡಿ ಕೊಳ್ಳುತ್ತೀರೋ? ಆ ಕಳ್ಳ ಅಪೊಸ್ತಲರಲ್ಲಿ ಯಾರಾದರೂ, ತಾನು ಕ್ರಿಸ್ತದಾಸನನಿಸಿ ಕೊಂಡರೆ, ನಾನು ಸಹ ನಿಜ ಕ್ರಿಸ್ತದಾಸನಾಗಿದ್ದೇನೆ. ೮. ಇದನ್ನುಳಿದು, ನಾನು ವಿಶೇಷವಾಗಿ ಹೊಂದಿದ ಅಪೊಸ್ತಲೋದ್ಯೋಗಾಧಿಕಾರವನ್ನು ಸತ್ಯದಿಂದ ವರ್ಣಿಸ ಬಹುದು. ಅದನ್ನು ನಿಮ್ಮ ನಷ್ಟಕ್ಕಲ್ಲ, ನಿಮ್ಮ ಪ್ರಯೋಜನಕ್ಕೆ ಹೊಂದಿದ್ದೇನೆಂದು ತಿಳಿದು ಕೊಂಡು, ವ್ಯರ್ಥವಾಗಿ ಬಳಸಲೊಲ್ಲೆನು; ಆದಾಗ್ಯೂ, ಈ ಅಧಿಕಾರವನ್ನು ನಾನು ಕೀರ್ತಿಸ ಮನಸ್ಸುಳ್ಳವನಾಗಿದ್ದರೆ, ಯಾರೂ ನನ್ನನ್ನು ಹೀನೈಸ ಕೂಡದು ೧ ಕೊರಿ. ೪, ೨೧; ೫, ೪೫. ೯. ಆದ್ದರಿಂದ ನಾನು ಪತ್ರಿಕೆಗಳಿಂದ ನಿಮ್ಮನ್ನು ಸುಮ್ಮನೆ ಹೆದರಿಸುತ್ತೇನೆಂತಲೂ, ಬರದು ಹೆದರಿಸಿದ ಮಾತುಗಳನ್ನು ಕೈಕೊಂಡು ನಡಿಸಲಾರೆನೆಂತಲೂ, ನೆನಸ ಬೇಡಿ. ೧೦. ಅವನ ಪತ್ರಿಕೆಗಳು ಘನವೂ, ಬಲವೂ ಉಳ್ಳವುಗಳೇ ಸರಿ. ತಾನು ಬಂದರೆ ಸಭಾಭೀತನೂ, ನಿರ್ಬಲವಾದಿಯೂ ಆಗಿದ್ದಾನೆಂದು, ನನ್ನ ಎದುರಾಳಿಗಳು ನನ್ನನ್ನು ತಿರಸ್ಕರಿಸುತ್ತಾರಲ್ಲಿ? ೧೧. ಹೀಗೆ ಮಾತಾಡುವವನು, ನಾನು ಪತ್ರಿಕೆಗಳಲ್ಲಿ ಮಾತುಗಳಿಂದ ಎಂಥವನಾಗಿ ಕಾಣುತ್ತೇನೋ, ಅಂಥವನಾಗಿಯೇ ಪರೋಕ್ಷದಲ್ಲಿ ಕೃತ್ಯದಿಂದ ಕಾಣಲ್ ಸಮರ್ಥನಾಗಿದ್ದೇನೆಂದು, ತಿಳಿದು ಕೊಳ್ಳಲಿ.

ಇ) ವಂಚಕರು ತಮ್ಮನ್ನು ತಾವೇ ಯಥೇಷ್ಟವಾಗಿ ಹೊಗಳಿ ಕೊಳ್ಳುತ್ತಾರೆ; ಅಪೊಸ್ತಲನು ತಾನು ಕರ್ತನಿಂದಲೇ ಹೊಂದಿದ ಉದ್ಯೋಗವನ್ನು ಸತ್ಯದಿಂದ ವರ್ಣಿಸ ಬಹುದು. ವ. ೧೨—೧೮.

ವ. ೧೨. ಸ್ವಪ್ರತಿಷ್ಠಾವಾದವನ್ನು ಅಸಹ್ಯಿಸುವದರಿಂದ ತಮ್ಮನ್ನು ತಾವೇ ಪ್ರತಿಷ್ಠೆ ಮಾಡಿ ಕೊಳ್ಳುವಂಥಾ, ತಾವೇ ಪ್ರಸಂಗೋದ್ಯೋಗವನ್ನು ಪಡದು ಕೊಂಡಂಥಾ ಜನರ ಲೆಖ್ಖದಲ್ಲಿ ಶೇರುವದಕ್ಕಾದರೂ, ಅವರಿಗೆ ನನ್ನನ್ನು ಹೋಲಿಸಿ ಕೊಳ್ಳುವದಕ್ಕಾದರೂ, ನನಗೆ ಮನಸ್ಸಿಲ್ಲಾ. ಆದರೆ ತಮ್ಮೊಳಗೆ ತಾವೆ ಅಳತೆ ಹೋಲ್ವಿಕೆಗಳನ್ನು ನೋಡಿ ಕೊಂಡು, ಬುದ್ಧಿ ಇಲ್ಲದ ಆತ್ಮಸ್ತುತಿದೋಷಕ್ಕೆ ಪಾತ್ರರಾಗುತ್ತಾರೆ. ೧೩. ಆದರೆ ನಾನು ನನ್ನನ್ನು ಮಿತಿ ಮೀರಿ ಹೊಗಳಿ ಕೊಳ್ಳುವವನಲ್ಲ; ದೇವರು ನನಗೆ ನೇಮಿಸಿದ ಉದ್ಯೋಗದ ಪ್ರಮಾಣವನ್ನು ಹಿಡಿದು, ಮಾತನಾಡುತ್ತೇನೆ. ಅದರ ಪ್ರಕಾರ ನಿಮ್ಮ ವರೆಗೂ, ಬಂದು ಇರುತ್ತೇನೆ. ೧೪. ಈ ಮಾತು ಹೆಚ್ಚಿಗೆಯಲ್ಲ; ಕ್ರಿಸ್ತನ ಸುವಾರ್ತೆಯನ್ನು ನಿಮ್ಮ ಮಟ್ಟಿಗೂ, ಸಾರುತ್ತಾ ಬಂದಿರುವದು ಪ್ರಸಿದ್ಧವಾಗಿದೆ. ೧೫. ಹೀಗಿರಲಾಗಿ, ನಾನು ಸ್ಥಾಪಿಸಿದ ಕೊರಿಂಥದ ಸಭೆಯಲ್ಲಿ ಡಂಭಾಚಾರ ನಡಿಸುವ ಕಳ್ಳ ಬೋಧಕರಂತೆ, ಪರರ ಕಷ್ಟ ಮೂಲಕವಾಗಿ ನನ್ನನ್ನು ನಾನೆ ಅಮಿತವಾಗಿ, ಹೊಗಳಿ ಕೊಳ್ಳೆನು; ವಿಶ್ವಾಸವು ನಿಮ್ಮಲ್ಲಿ ಬಲಗೊಂಡ ಮೇಲೆ, ದೇವರು ನನಗೆ ನೇಮಿಸಿದ ಉದ್ಯೋಗಪ್ರದೇಶವನ್ನು ಬಹಳವಾಗಿ

೨ ಕೊರಿ. ೧೦, ೧೬—೧೧, ೬.

ವಿಸ್ತರಿಸ ಬೇಕೆಂಬ ಆಶೆಯುಳ್ಳವನಾಗಿದ್ದೇನೆ. ೧೬. ಪರರ ಉದ್ಯೋಗಪ್ರದೇಶದಲ್ಲಿ ಹೊಕ್ಕು, ಮುಂಚೆ ಸ್ಥಾಪಿತವಾದ ಸಭೆಗಳಲ್ಲಿ ಸುಲಭವಾದ ಕೆಲಸವನ್ನು ನಡಿಸುವ ಆತ್ಮಸ್ತುತಿಪ್ರೀಯರಾದ ವಂಚಕರ ಪದ್ಧತಿ ನನಗೆ ಹಿತವಾದದ್ದಲ್ಲ. ಮೂಡಣ ದಿಕ್ಕಿನ ಈ ಸೀಮೆಗಳನ್ನು ದಾಟಿ, ಪಡವಳ್ಳಲ್ಲಿರುವ ಇಲ್ಲುರ್ಯ ಇತಲ್ಯ ಸ್ಪನ್ಯ ಮುಂತಾದ ದೇಶಗಳಲ್ಲಿಯೂ, ಸುವಾರ್ತೆಯನ್ನು ಸಾರ ಬೇಕೆಂದು, ಬಯಸುತ್ತೇನೆ. ೧೭. ಹೊಗಳಿ ಕೊಳ್ಳುವವನು ಕರ್ತನು ತನ್ನನ್ನು ಕರದು ಉದ್ಯೋಗವೃತ್ತಿಗೆ ತನ್ನನ್ನು ಹವಣಿಸಿದ್ದಾನೆಂಬ ದಾಗಿ ಹೊಗಳಿ ಕೊಳ್ಳಲಿ. ೧೪. ಯಾಕಂದರೆ: ತನ್ನನ್ನು ತಾನು ಹೊಗಳಿ ಕೊಳ್ಳುವವನಲ್ಲ, ಕರ್ತನು ಹೊಗಳುವವನೇ ಯೋಗ್ಯನು.

೫. ೧೧.

ಅಪೊಸ್ತಲನು ಕಳ್ಳ ಬೋಧಕರ ವಾದವನ್ನು ಖಂಡಿಸುವದಕ್ಕಾಗಿ,

೧) ತನ್ನ ಕ್ರಿಸ್ತ ಜ್ಞಾನ ಅಸ್ವಾರ್ಥಗಳನ್ನು ಸಾಕ್ಷಿ ಮಾಡುತ್ತಾನೆ. ವ. ೧—೧೫.

ಅ) ಪ್ರಸ್ತಾವನ. ಕೊರಿಂಥದವರು ಮೋಸ ಹೋಗದ ಹಾಗೆ, ಇಂಥಾ ಪ್ರತಿವಾದ ಅವಶ್ಯಕವಾದ್ದು.

ವ. ೧. ಅಪೊಸ್ತಲನಾದ ನನ್ನ ಭೂಷಣಗಳನ್ನು ಅವಶ್ಯಕದಿಂದಲೆ ಈಗ ವಿವರಿಸುವ ಬುದ್ಧಿಹೀನತ್ವವನ್ನು ದಯ ಮಾಡಿ, ಸ್ವಲ್ಪ ಸೈರಿಸಿರಿ. ಸೈರಿಸೀರೆಂದು, ನೆನಸುತ್ತೇನೆ. ೨. ಯಾಕಂದರೆ: ಬೇಕೆಂದು ನನ್ನ ಪ್ರಯೋಜನಕ್ಕಾಗಿ ನಾನು ಆತ್ಮಸ್ತುತಿ ಮಾಡಿದರೆ, ಅಪ್ರಬುದ್ಧಮಾನಾಭಿಲಾಷೆಯೇ ಸರಿ; ಆದರೆ ದೇವರ ಮಾನವನ್ನೂ, ನ್ಯಾಯವನ್ನೂ ಸಭೆಯವರ ಮುಂದೆ ಸ್ಥಾಪಿಸುವದಕ್ಕೆ, ಶ್ರದ್ಧಾಸಕ್ತಿಯಿಂದಲೇ ಮಾತನಾಡುವದು ವಿಹಿತವಾಗಿದೆ. ನಾನು ಗೆಳೆಯನಾಗಿದ್ದು ಯೋಹಾ. ೩, ೨೯. ನಿಮ್ಮ ಸಭೆಯಂಬ ಮದುವಣಗಿತ್ತಿಯನ್ನು ಮದುವಣಿಗನಾದ ಕ್ರಿಸ್ತನಿಗೆ ಕರದು ಕೊಂಡು ಬಂದು, ಒಪ್ಪಿಸಿದ್ದರಿಂದ, ಅವಳನ್ನು ದೋಷವಿಲ್ಲದ ಕನ್ನಿಕೆಯಾಗಿ ಕಾಪಾಡ ಬೇಕು. ೩. ಆದರೆ ಪೂರ್ವ ಸರ್ಪನೆಂಬ, ಪ್ರಕ. ೧೨, ೯. ಸೈತಾನನ ಕರಣವಾದ ಹಾವು ಹವ್ವಳನ್ನು ತಂತ್ರದಿಂದ ಮೋಸ ಗೊಳ್ಳಿಸಿದ ಪ್ರಕಾರ, ನಿಮ್ಮ ಬುದ್ಧಿಯು ಸೈತಾನನ ಯತ್ನದಿಂದ ಮೋಸ ಹೋಗಿ, ಯಥಾರ್ಥವಾದ ಕ್ರಿಸ್ತನ ವಿಶ್ವಾಸದಿಂದ ತೊಲಗೀತೆಂದು, ಭಯ ಪಡುತ್ತೇನೆ. ೪. ಯಾಕಂದರೆ: ಯಾರಾದರೂ, ಒಬ್ಬ ಹೊಸಬನು ಬಂದು, ಬೇರೊಬ್ಬ ರಕ್ಷಕನನ್ನೂ, ಬೇರೊಂದು ಆತ್ಮವನ್ನೂ, ಬೇರೊಂದು ಸುವಾರ್ತೆಯನ್ನೂ ನಿಮಗೆ ತಿಳಿಸಿದರೆ, ಚಂಚಲ ಮನಸ್ಸುಳ್ಳವರಾದ ನೀವು ನಾನು ಈ ವರೆಗೂ, ಬೊಧಿಸಿದ್ದನ್ನು ಬಿಟ್ಟು, ಅವನನ್ನು ನಂಬಲಿಕ್ಕೆ ಸಾಕು. ಆದ್ದರಿಂದ ನಾನು ಬುದ್ಧಿಹೀನನಂತೆ ಹೇಳುವ ಮಾತನ್ನೂ ಸೈರಿಸಿರಿ.

ಇ) ಪೌಲನು ತನ್ನ ಜ್ಞಾನವನ್ನೂ, ಅಸ್ವಾರ್ಥವನ್ನೂ ಸ್ಥಾಪಿಸುತ್ತಾನೆ.

ವ. ೫. ನಿಮ್ಮನ್ನು ಮೋಸ ಗೊಳ್ಳಿಸುವಂಥಾ, ಸುಳ್ಳಾಗಿ ಅಪೊಸ್ತಲರನಿಸಿ ಕೊಳ್ಳುವಂಥಾ (೧೨, ೧೧.) ಆ ಅತಿ ಶ್ರೇಷ್ಟರಿಗಿಂತ ನಾನು ಕಡಮೆಯವನಲ್ಲವೆಂದು, ಎಣಿಸುತ್ತೇನೆ. ೬. ನಾನು ಅವರಷ್ಟು ಸ. ೧೦, ೧೦. ವಾಚಾಳನಲ್ಲದಿದ್ದರೂ, ವಾಕ್ಚತುರ್ಯಕ್ಕಿಂತ ಘನವಾದ ಸತ್ಯದ ತಿಳುವಿಕೆಯಲ್ಲಿ ನನಗೆ ಕುಂದು ಇಲ್ಲ. ನನ್ನನ್ನು

ಅಪೌ. ಪ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

೨ ಕೌರಿ. ೧೧, ೭—೨೧.

ತಿಳಿದಿದ್ದೀರಲ್ಲ? ನಿಜ ಅಪೊಸ್ತಲನಾಗಿ ಎಲ್ಲಾ ವಿಷಯವಾಗಿಯೂ, ನಿಮ್ಮಲ್ಲಿ ಪ್ರವರ್ತಿಸಿದ್ದೇನಲ್ಲ? ೭. ಸುವಾರ್ತೆಯನ್ನು ನಿಮಗೆ ಸಂಬಳವಿಲ್ಲದೆ ಪ್ರಸಂಗಿಸಿ, ದೇವರ ಅನ್ಯೋನ್ಯಕ್ಕೆ ನಿಮ್ಮನ್ನು ಎತ್ತರಿಸುವದಕ್ಕೆ ಬಡವನಾಗಿ ಬದುಕಿ, ನನ್ನನ್ನು ತಗ್ಗಿಸಿ ಕೊಂಡದ್ದು ತಪ್ಪೋ? ೮. ಫಿಲಿಪ್ಪಿಯವರು ಸ. ಳ, ೧೫. ಮೊದಲಾದ ಸಭೆಯವರಿಂದ ಹಣ ತೆಗದು ಕೊಂಡು, ಅವರ ಸಹಾಯದಿಂದ, ನಿಮ್ಮನ್ನು ಸೇವಿಸುವ ವೇಳೆಯಲ್ಲಿ, ಬದುಕಿದೆನು. ೯. ಮತ್ತು ನಿಮ್ಮಲ್ಲಿದ್ದ ಕಾಲದಲ್ಲಿ ಕೊರತೆಯುಳ್ಳವನಾಗಿದ್ದರೂ, ನಿಮ್ಮಲ್ಲಿ ಯಾರಿಗೂ, ಭಾರವನ್ನು ಕೊಡಲಿಲ್ಲ; ಯಾಕಂದರೆ: ಮಕೆದೋನ್ಯದಿಂದ ಬಂದ ಸಹೋದರರು ನನ್ನ ಕೊರತೆಯನ್ನು ಹೋಗಲಾಡಿಸಿದರು. ಎಲ್ಲಾದರಲ್ಲಿಯೂ ನಿಮಗೆ ತೊಂದರೆ ಕೊಡದೆ, ನಡದು ಕೊಳ್ಳುತ್ತಾ ಬಂದೆನು; ಇನ್ನು ಮುಂದೆಯೂ ಹೀಗೆ ನಡದು ಕೊಳ್ಳುವೆನು. ೧೦. ನನ್ನಲ್ಲಿರುವ ಕ್ರಿಸ್ತನ ಸತ್ಯದ ಆಣೆ, ಈ ಅಸ್ವಾರ್ಥದ ಕೀರ್ತಿಯು ಕೊರಿಂಥದಲ್ಲಿಯೂ, ಸಮಸ್ತ ಅಕಾಯದಲ್ಲಿಯೂ ನನಗೆ ತಪ್ಪ ಬಾರದು. ೧೧. ಯಾಕೆ? ನನಗೆ ಪ್ರೀತಿ ಇಲ್ಲವಾದ್ದರಿಂದಲ್ಲ, ದೇವರು ಬಲ್ಲನು. ೧೨. ನನ್ನಂತೆ ಕ್ರಿಸ್ತನ ದೂತರೆಂದು ಕಾಣಿಸಿ ಕೊಳ್ಳಬೇಕೆಂಬ, ಆಶೆಯುಳ್ಳವರ ನೆವವನ್ನು ಹ್ಯಾಗಾದರೂ, ಈ ವಿಷಯದಲ್ಲಿ ಅಲ್ಲಗಳೆಯುವ ಅಪೇಕ್ಷೆಯಿಂದಲೇ ಹೀಗೆ ನಡೆಯುತ್ತೇನೆ. ೧೩. ಯಾಕಂದರೆ: ಇಂಥಾ ಕಳ್ಳ ಅಪೊಸ್ತಲರಾದ ಮೋಸದ ಕೆಲಸದವರು ಕ್ರಿಸ್ತನ ಅಪೊಸ್ತಲತನದ ವ್ಯಾಜವನ್ನು ಮಾಡುತ್ತಾರೆ. ೧೪. ಇದಕ್ಕೆ ಬೆರಗ ಕೆಲಸವಿಲ್ಲ; ಯಾಕಂದರೆ: ಅವರ ಗುರುವಾದ ಸೈತಾನನು ತಾನೇ ತೇಜೋದೂತನ ವೇಷವನ್ನು ಧರಿಸುತ್ತಾನೆ. ೧೫. ಆದ್ದರಿಂದ ಅವನ ಆಳುಗಳು ನೀತಿಯ ಸೇವಾ ವ್ಯಾಜವನ್ನು ಮಾಡಿದರೆ, ಏನು ವಿಶೇಷ? ಆದರೆ ಕಡೆಯಲ್ಲಿ ಅವರು ವೇಷನಶ್ಯರಾಗಿ, ನ್ಯಾಯವಾದ ಶಿಕ್ಷೆಗೆ ಒಳಗಾಗುತ್ತಾರೆ.

೨) ತನ್ನ ಶ್ರಮ ಹಿಂಸಾದಿಗಳು ಮುಂತಾದ ಬೇರೆ ವಿಶೇಷಗಳು.

ವ. ೧೬—೩೩.

ವ. ೧೬. ಇನ್ನೊಂದು ಸಾರಿ ಹೇಳುತ್ತಾನೆ. ನಾನು ಅಪ್ರಬುದ್ಧ ಆತ್ಮಸ್ತುತಿಪರನಾಗಿರುವದರಿಂದ, ನನ್ನ ಭೂಷಣಗಳನ್ನು ಹೆಚ್ಚಾಗಿ ವಿವರಿಸುತ್ತೇನೆಂದು, ನೆನಸ ಬೇಡಿ. ಅದರೆ ನಾನು ಅಪ್ರಬುದ್ಧನಾಗಿ ತೋರಿದಾಗ್ಯೂ, ನೀವು ನನ್ನ ಎದುರಾಳಿಗಳಿಗೆ ಹ್ಯಾಗೂ ಹಾಗೆಯೆ ನನಗೂ ಒಂದಾವರ್ತಿ ಅಪ್ರಬುದ್ಧನಾಗಿ ನಿಮ್ಮ ಸಂಗಡ ಮಾತನಾಡುವದಕ್ಕೆ ಬಿಡಿ. ೧೭. ನಾನು ಈಗ ನುಡಿಯುವದನ್ನು ಕರ್ತನ ಮನಸ್ಸಿನ ಪ್ರಕಾರ ನುಡಿಯದೆ, ಎದುರಾಳಿಗಳು ಅಂಕೆ ಮಾಡುವದರಿಂದಲೇ ನನ್ನನ್ನು ಅಧಿಕ ಧೈರ್ಯದಿಂದ ಹೊಗಳಿ ಕೊಂಡು, ಬುದ್ಧಿ ಶೂನ್ಯನಂತೆ ಮಾತನಾಡುತ್ತೇನೆ. ೧೮. ಅವರು ಬಹಿರ್ವಿಷಯಗಳಿಗೆ ಹೆಚ್ಚಿಸಿ ಕೊಳ್ಳುವದರಿಂದ, ನಾನೂ ಹಾಗೆ ಮಾಡುತ್ತೇನೆ. ೧೯. ಅತಿ ಬುದ್ಧಿವಂತರೆನಿಸಿ ಕೊಳ್ಳುವ ನಿಮಗೆ ಬುದ್ಧಿಹೀನರನ್ನು ಸಹಿಸುವದು ದೊಡ್ಡದಲ್ಲ. ೨೦. ಯಾರಾದರೂ, ನಿಮ್ಮ ಮೇಲೆ ಧೊರೆತನವನ್ನು ನಡಸಿ, ನಿಮ್ಮ ಕ್ರೈಸ್ತ ಸ್ವಾತಂತ್ರವನ್ನು ಅಪಹರಿಸುವದನ್ನು ಚನ್ನಾಗಿ ಸಹಿಸುತ್ತೀರಿ. ಕಂಡವರು ಬಂದು ನಿಮ್ಮ ಆತಿಥ್ಯದ ಅಸಾಧೂಪಭೋಗದಿಂದ ನಿಮ್ಮ ಅರ್ಥವನ್ನು ತಿಂದರೆ, ನೀವು ತಾಳುತ್ತೀರಿ. ಅಪಹರಿಸುವವರಿಗೆ ನೀವು ಕೊಡುತ್ತೀರಿ. ನಿಮ್ಮನ್ನು ಅತ್ಯಂತ ನಿಕೃಷ್ಟಿಸುವವರಿಗೆ ಅವಕಾಶ ಕೊಡುತ್ತೀರಿ. ೨೧. ಇಂಥಾ ದೌಷ್ಟ್ಯವನ್ನು ನಡಿಸುವದಕ್ಕೆ ನನಗೆ ಸಾಮರ್ಥ್ಯವಿರಲಿಲ್ಲವೆಂದು, ನಾಚಿಕೆಯಿಂದ ಹೇಳಲೊ? ಆದಾಗ್ಯೂ, ಅವರಂತೆ ನಾನು

೨ ಕೊರಿ. ೧೧, ೨೨—೫೫.

ಸಹ ಆತ್ಮಸ್ತುತಿ ಮಾಡ ಬಲ್ಲೆನೆಂದು, ಬುದ್ಧಿ ಶೂನ್ಯನಾಗಿ ಹೇಳುತ್ತೇನೆ. ೨೨. ಅವರು ದೇವ ಜನಾಂಗ ದವರಾಗಿ ಹುಟ್ಟಿದ್ದಾರಾದರೆ, ನಾನೂ ಅಂಥವನೇ; ಅವರು ಅಬ್ರಹಾಮನು ಮೊದಲುಗೊಂಡು, ನಿಜ ಇಸ್ರಯೇಲನವರ ಸಂತತಿಯಾಗಿ ಹುಟ್ಟಿದ್ದರೆ, ನಾನೂ ಹಾಗೆಯೇ. ೨೩. ಅವರು ಕ್ರಿಸ್ತನ ಸೇವಕರಾಗಿದ್ದರೆ, ನಾನು ಹೆಚ್ಚಾಗಿ ಇದ್ದೇನೆಂದು, ಈ ವಿಷಯದಲ್ಲಿ ತಾರತಮ್ಯವಿಲ್ಲವೆಂಬದನ್ನು ತಿಳಿಯದ ಬುದ್ಧಿಶೂನ್ಯನಂತೆ, ಹೇಳುತ್ತೇನೆ; ಯಾಕಂದರೆ: ಕಷ್ಟ ಪೆಟ್ಟು ಶಿಕ್ಷೆ ಪ್ರಾಣಸಂಕಟ ಮುಂತಾದದ್ದನ್ನು ಅವರಿಗಿಂತ ಹೆಚ್ಚಾಗಿ ಅನುಭವಿಸಿರುತ್ತೇನೆ. ೨೪. ಐದಾವರ್ತಿ ಯೆಹೂದರ ಕೈಯಿಂದ ೩೯ ಪೋನೆ. ೨೫, ೩೫ರಲ್ಲಿ ಬರದ ಕಟ್ಟಳೆಯ ಪ್ರಕಾರ ಒಂದು ಕಡಮೆ ನಾಲ್ವತ್ತು ಪೆಟ್ಟು ತಿಂದೆನು. ೨೫. ರೋಮಾಯರು ನನ್ನನ್ನು ಮೂರಾವರ್ತಿ ಕೋಲಿನಿಂದ ಹೊಡಿಸಿದರು (ಫಿಲಿಪ್ಪಿಯಲ್ಲಿ ಹೀಗಾಯಿತೆಂದು ಅಪೊ. ಕ್ರಿ. ೧೬, ೨೨ರಲ್ಲಿ ಬರದದೆ.) ಒಂದು ಸಾರಿ ಜನರು ನನ್ನನ್ನು ಕೊಲ್ಲುವದಕ್ಕೆ ಕಲ್ಲು ಹಾಕಿದರು (ಲುಸ್ತ್ರದಲ್ಲಿ ಅಪೊ. ಕ್ರಿ. ೧೪.) ಮೂರು ಸಾರಿ ನೌಭಂಗನಾದೆನು; ಆ ಮೂರರಲ್ಲಿ ಬಂದಾವರ್ತಿ ಹಗಲಿರಳು ಸಮುದ್ರದಲ್ಲಿ ತೇಲಿದೆನು. ೨೬. ಅನೇಕಾವರ್ತಿ ಪ್ರಯಾಣಸ್ಥನಾಗಿ ನದಿಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಅರಣ್ಯಗಳಲ್ಲಿಯೂ, ಕಡಲಲ್ಲಿಯೂ, ಕಳ್ಳರು ಯೆಹೂದರು ಪರಜನರು ಸುಳ್ಳು ಕ್ರೈಸ್ತರು ಇವರುಗಳ ಕೆಡೆಯಿಂದ ಭಯಾವಸ್ಥೆ ಪ್ರಾಪ್ತವಾಯಿತು. ೨೭. ಅನೇಕಾವರ್ತಿ ನಿದ್ರಾಭಂಗ ಹಸಿವೆ ಬಾಯಾರಿಕೆ ಉಪವಾಸ ಥಳಿ ಶೆತ್ತಲೆತನ ಮುಂತಾದ ೧ ಕೊರಿ. ೪, ೧೧. ರೋಮಾ. ೮, ೩೫. ಶ್ರಮಗಳನ್ನು ತಾಳಿದೆನು. ೨೮. ಇದರ ಹೊರ್ತು ಪರರ ಶೋಧನೆಗಳ ಸಹಾನುಭವವನ್ನು ಪಡ ಕೊಂಡು, ಅನುದಿನವೂ ಮೇಲುಬಿದ್ದು ಬರುವವರಿಗೆ ಸಹಾಯ ಮಾಡಿ, ಎಲ್ಲಾ ಸಭೆಗಳಿಗಾಗಿ ಚಿಂತಿಸ ಬೇಕು. ೨೯. ಶ್ರಮ ಪಡುವ ಯಾವನಿಗೆ ಜೊತೆಯಾಗಿ ನಾನು ಶ್ರಮ ಪಡುವದಿಲ್ಲ?. ವಿಶ್ವಾಸದಲ್ಲಿ ಚಂಚಲನಾದ ಯಾವನ ಅವಸ್ಥೆಯನ್ನು ತಿಳಿದು ನಾನು ದುಃಖದಿಂದಲೂ, ಸಹಾಯ ಮಾಡುವ ಆಸಕ್ತಿಯಿಂದಲೂ ಹೊಟ್ಟಿಉರಿ ಪಡುವದಿಲ್ಲ? ೩೦. ಹ್ಯಾಗಾದರೂ, ನನ್ನನ್ನು ಹೊಗಳಿ ಕೊಳ್ಳ ಬೇಕಾದರೆ, ನನ್ನ ಶ್ರಮಗಳಿಗಾಗಿ ಹೊಗಳಿ ಕೊಳ್ಳುತ್ತೇನೆ; ಯಾಕಂದರೆ: ನಾನಾ ವಿಧ ಶ್ರಮ ಪರಿಹಾರದಲ್ಲಿ ಕರ್ತನ ಬಲವೂ, ಸೇವಕನ ವಿಶ್ವಾಸ ಪ್ರೀತಿ ಭಕ್ತಿಗಳೂ, ಅತಿಶಯವಾಗಿ ಕಾಣುತ್ತವೆ. ೩೧. ಸರ್ವದಾಸ್ತುತ್ಯನಾದ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರು ನಾನು ಈ ವರೆಗೂ ವಿವರಿಸಿದ್ದೆಲ್ಲಾ ಸತ್ಯವೆಂದು, ಬಲ್ಲನು. ೩೨. ೩೩. ನಾನು ಮಾನಸಾಂತರವಾದ ಸ್ವಲ್ಪ ಕಾಲದ ಮೇಲೆ, ಪ್ರಾಣಕಂಟಕದಲ್ಲಿ ಬಿದ್ದೆನು ಹ್ಯಾಗಂದರೆ: ಆಗ ಹೆರೋದನ ಸಂಗಡ ಯುದ್ಧ ಮಾಡುತ್ತಾ ಇದ್ದ ಅರಬ್ಬಿ ಸ್ಥಾನದ ಅರಸನಾದ ಅರೇತನ ಸುಭೇದಾರನು ದಮಸ್ಕಪಟ್ಟಣವನ್ನು ಆಕ್ರಮಿಸಿ ಕೊಂಡು, ಯೆಹೂದರನ್ನು ಮೆಚ್ಚಿಸುವದಕ್ಕೆ ನನ್ನನ್ನು ಹಿಡಿಯ ಬೇಕೆಂದು, ದ್ವಾರಗಳನ್ನು ಬಿಗಿಮಾಡಿಸಿದನು. ಆದರೆ ಪಟ್ಟಣದ ಗೋಡೆಯಲ್ಲಿ ಇದ್ದ ಬಂದು ಮನೆಯ ಕಿಟಿಕಿಯಿಂದ ಪುಟ್ಟಿಯಲ್ಲಿ ಇಳಿದು, ತಪ್ಪಿಸಿ ಕೊಂಡೆನು.

ಸ. ೧೨.

೩) ಅಪಾಸ್ತಲನು ದೇವರ ಮಹಿಮೆಯುಳ್ಳ ಪ್ರಕಟಣೆಯನ್ನು ಪೊಂದಿದ್ದೇನೆಂದು, ತನ್ನನ್ನು ಪೊಗಳಿ ಕಾಳ್ಳ ಬಪುದಾದರೂ, ತನ್ನ ಬಲಹೀನತ್ವವನ್ನು ಪೊಗಳುವದು ವಾಸಿ ಎಂದೆಣಿಸುತ್ತಾನೆ. ವ. ೧—೧೦.

ಟಿಪ್ಪಣಿ. ಹಿಂದಿನ ಸಂಧಿಯಲ್ಲಿ ಅಪೊಸ್ತಲನು ದೇವರ ಬಲವು ಪ್ರಕಟವಾಗುವ ತನ್ನ ಶ್ರಮ ನಿರ್ಬಲತ್ವಗಳಿಗಾಗಿ, ತನ್ನನ್ನು ಹೊಗಳಿ ಕೊಳ್ಳುವದು ಕ್ರಿಸ್ತನ ನಿಜ ಸೇವಕನಿಗೆ ಯುಕ್ತವಾದದ್ದೆಂದು, ಸೂಚಿಸುತ್ತಾನೆ. ಇದು ಸತ್ಯ ತೇಜೋಮಯವಾದ ಕ್ರೈಸ್ತರಿಗೆ ವಿಹಿತವೇ ಸರಿ; ಕೊರಿಂಥದವರಂತೆ ಮಹಾತ್ಮ್ಯಲಕ್ಷಣಗಳನ್ನೂ, ಅದ್ಭುತಕಾರ್ಯಗಳನ್ನೂ ಕೇಳಲಿಚ್ಛೈಸುವವರಿಗೆ ವಿಹಿತವಲ್ಲ. ಇಂಥವರಿಗಾಗಿ, ತಾನು ಬಹಳ ವರುಷಕ್ಕೆ ಮುಂಚೆ ತನಗಾದ ತನ್ಮಯಾವಸ್ಥೆಯನ್ನು ವಿವರಿಸುತ್ತಾನೆ; ಆದರೆ ಸಂಗಡಲೇ ಕೂಜೆಯು ಕ್ರಿಸ್ತನ ಮಹಿಮೆ ಯೆಂದು, ತನಗೆ ಬೋಧಿಸಿದ ತನ್ನ ನಿರ್ಬಲತ್ವವನ್ನೂ, ಕಠಿಣವಾದ ಒಂದು ಶ್ರಮವನ್ನೂ ತಿರಿಗಿ ಪ್ರಸ್ತಾವಿಸುತ್ತಾನೆ. ಇದಕ್ಕಾಗಿಯೇ ಇನ್ನು ಮುಂದೆ ತನ್ನನ್ನು ಹೊಗಳಿ ಕೊಂಡು, ಕೊರಿಂಥದವರನ್ನು, ತನ್ನ ನಿರ್ಬಲತ್ವವನ್ನು ಹೇಸದೆ, ಅದು ನಿಜ ಕ್ರೈಸ್ತನಿಗೂ, ಅಪೊಸ್ತಲನಿಗೂ ಸತ್ಯಲಕ್ಷಣವೆಂದು, ತಿಳಿದು ಕೊಳ್ಳ ಬೇಕೆಂಬದಾಗಿ, ಎಚ್ಚರಿಸುತ್ತಾನೆ.

ವ. ೧. ನನ್ನನ್ನು ಹೊಗಳಿ ಕೊಳ್ಳುವದಕ್ಕೆ ನನಗೆ ಮನಸ್ಸಿಲ್ಲವೆಂದು ಮುಂಚೆ ಹೇಳಿ, ನನಗಾದ ಅಚ್ಚರ್ಯವಾದ ತನ್ಮಯಾವಸ್ಥೆಯನ್ನು ಈಗ ವಿವರಿಸುತ್ತೇನೆ.

೨. ಕ್ರಿಸ್ತನಲ್ಲಿರುವ ೧) ಮನುಷ್ಯನನ್ನು ೨) ಬಲ್ಲೆನು; ಹದಿನಾಲ್ಕು ವರುಷಗಳ ಹಿಂದೆ—ಶರೀರದಲ್ಲಿಯಾ? ನಾನರಿಯೆ; ಶರೀರದ ಹೊರಗೆಯಾ? ನಾನರಿಯೆ; ದೇವರು ಬಲ್ಲನು—ಅಂಥವನು ಮೂರನೇ ಆಕಾಶದ ಪರ್ಯಂತರಕ್ಕೂ ೩) ಹಿಡಿದು ಮೈಯ್ಸಲ್ಪಟ್ಟನು. ಅಂಥ ಮನುಷ್ಯನು—ಶರೀರದಲ್ಲಿಯಾ? ಶರೀರದ ಹೊರಗೆಯಾ ೪)? ನಾನರಿಯೆ; ದೇವರು ಬಲ್ಲನು—ಅವನು ಪರದೈಸಕ್ಕೆ ೫) ಮೈಯ್ಸಲ್ಪಟ್ಟು, ಮನುಷ್ಯನು ಹೇಳಲಾಗದ ಅವಾಚ್ಯವಾಕ್ಯಗಳನ್ನು ೬) ಕೇಳಿದನೆಂದು ಬಲ್ಲೆನು.

೧. ತಾನು ಕ್ರಿಸ್ತನಲ್ಲಿರುವ ಒಬ್ಬ ಮನುಷ್ಯನು ಎಂದು ಪೇಳಿ, ಈ ಸಂಗತಿ ಸ್ವಾಭಾವಿಕವಾದದ್ದಲ್ಲ, ಆತ್ಮಿಕವಾದ ರಹಸ್ಯಕಾರ್ಯವೆಂದು, ಸೂಚಿಸುತ್ತಾನೆ.

೨. ಈ ಅದ್ಭುತವಾದ ಸಂಗತಿಯನ್ನು ವರ್ಣಿಸಿ, ತನ್ನನ್ನು ಪೊಗಳಿ ಕಾಳ್ಳುವದಕ್ಕೆ ಮನಸ್ಸಿಲ್ಲದವನಾಗಿರುವದರಿಂದ ತನ್ನ ಪೆಸರನ್ನು ಬರೆಯದೆ, ಒಬ್ಬ ಮನುಷ್ಯನೆಂದು ಪೌಲನು ಪ್ರಥಮ ಪುರುಷವನ್ನು ಪ್ರಯೋಗಿಸುತ್ತಾನೆ.

೩. ಮೂರನೆ ಆಕಾಶವೇನಂದರೆ, ಮೇಘ ಮಂಡಲಕ್ಕೂ ನಕ್ಷತ್ರ ಮಂಡಲಕ್ಕೂ ಮೇಗಣ್ಣಾವಾಪಂಥಾ, ದೇವರ ಮಹಿಮೆಯು ಅತಿಶಯವಾಗಿ ಪ್ರಕಟವಾಗುವಂಥಾ, ದೇವರ ಸಿಂಹಾಸನಸ್ಥಾನವಾದಂಥಾ ಆತ್ಮ ಲೋಕವು. ಅಪಾಸ್ತಲನು ಅಪಾ. ಕ್ರಿ. ೨೨, ೧೭ಲ್ಲಿ ಬರದದ್ದನ್ನು ಇಲ್ಲಿ ಸೂಚಿಸುತ್ತಾನಾ ಯೇನಾ ತಿಳಿಯುವದಿಲ್ಲ.

೪. ಈ ತನ್ಮಯಾವಸ್ಥೆ ನಿಜವಾದ್ದಾಗಿ ತಾನಿದ್ದ

ರಿಂದ, ಪೌಲನು ತನ್ನ ಶರೀರವು ಋಮಿಯಲ್ಲಿ ಇತ್ತೋ ಇರಲಿಲ್ಲವೋ ಎಂದು, ತಿಳಿಯಲಿಲ್ಲ.

೫. ಇದು ಎರಡನೆ ತನ್ಮಯಾವಸ್ಥೆ. ಪರದೈಸವು ಎರಡನೆ ಆಕಾಶಕ್ಕೆ ಚೇದವಾಗಿದೆ.

೬. ಹೀಗಾದರೆ ಪೌಲನಿಗೆ ಆಗ ಯಾವ ಮರ್ಮಗಳು ಪ್ರಕಟವಾದವೋ ಅವುಗಳನ್ನು ನಾವು ಈಗ ಊಹಿಸಲಾರೆವು.

೫. ಅಂಥವನನ್ನುಕುರಿತು ಹೆಚ್ಚಳ ಪಡುವೆನು; ನನ್ನನ್ನುಕುರಿತಾದರೆ, ನನ್ನಬಲಹೀನತ್ವಗಳಲ್ಲಿಯೇ ಹೊರತು, ಹೆಚ್ಚಳ ಪಡೆನು ೧). ೬. ಯಾಕಂದರೆ ಹೆಚ್ಚಳ ಪಡನನಗೆ ಮನಸ್ಸಿದ್ದರೂ, ಬುದ್ಧಿ ಹೀನನಾಗಿರೆನು; ಯಾಕಂದರೆ ಸತ್ಯವನ್ನು ಹೇಳುವೆನು; ಆದರೆ ಯಾವನಾದರೂ ನಂಬಲ್ಲಿ ಕಾಣುವದಕ್ಕಿಂತಲಾದರೂ, ನನ್ನಿಂದ ಕೇಳುವದಕ್ಕಿಂತಲಾದರೂ, ಹೆಚ್ಚು ನನ್ನನ್ನುಕುರಿತು ಎಣಿಸದ ಹಾಗೆ, ಸುಮ್ಮನಿರುತ್ತೇನೆ. ೭. ಮತ್ತು ಪ್ರಕಟಣೆಗಳ ಹೆಚ್ಚುತಿಕೆಯಿಂದ ೨) ನಾನು ಅಧಿಕವಾಗಿ ಹೆಚ್ಚಿಸಿಕೊಳ್ಳದ ಹಾಗೆ, ನನಗೆ ಮಾಂಸ ತಿವಿಯುವ ದಶೆಯಾಯಿತು ೩)—ಅದೇನಂದರೆ, ನಾನು ಅಧಿಕವಾಗಿ ಹೆಚ್ಚಿಸಿಕೊಳ್ಳದ ಹಾಗೆ, ನನ್ನನ್ನು ಹೊಡೆಯುವ ಸೈತಾನನ ದೂತನು. ೮. ಇದರ ನಿಮಿತ್ತ, ಅದು ನನ್ನನ್ನು ಬಿಟ್ಟು ಹೋಗುವ ಹಾಗೆ, ಮೂರು ಸಾರಿ ಕರ್ತನನ್ನುಬೇಡಿಕೊಂಡೆನು ೪). ೯. ಮತ್ತು ಅವನು, ನನ್ನ ಕೃಪೆಯು ನಿನಗೆ ಸಾಕು ೫); ಯಾಕಂದರೆ ನನ್ನ ಬಲವು ಅಶಕ್ತಿಯಲ್ಲಿ ಸಂಪೂರ್ಣವಾಗುವದು ೬) ಎಂದು, ನನಗೆ ಹೇಳಿದ್ದಾನೆ. ಹೀಗಿರುವದರಿಂದ ಕ್ರಿಸ್ತನ ಬಲವು ನನ್ನಮೇಲೆ ವಾಸವಾಗಿರುವ ಹಾಗೆ, ನನ್ನಬಲಹೀನತ್ವಗಳಲ್ಲಿ ಪರಮ ಸಂತೋಷದಿಂದ ಹೆಚ್ಚಳ ಪಡುವೆನು. ೧೦. ಆದದರಿಂದ ಕ್ರಿಸ್ತನ ನಿಮಿತ್ತ ಬಲಹೀನತ್ವಗಳಲ್ಲಿ, ನಿಂದೆಗಳಲ್ಲಿ, ಸಂಕಟಗಳಲ್ಲಿ, ಹಿಂಸೆಗಳಲ್ಲಿ, ಇಕ್ಕಟ್ಟುಗಳಲ್ಲಿ, ಸಂತೋಷವಾಗಿದ್ದೇನೆ. ಯಾಕಂದರೆ ಬಲಹೀನನಾಗಿರುವಾಗಲೇ ಬಲವುಳ್ಳವನಾಗಿದ್ದೇನೆ ೭).

೧. ಅಪಾಸ್ತಲನು ಪರಲೋಕದ ಪರಮಾನಂದವನ್ನೂ, ಪಾತಾಳದ ಪರಮ ಯಾತನೆಗಳನ್ನೂ ಹೀಗೆ ಅನುಭವದಿಂದ ತಿಳಿದು ಕಾಂಡು, ಕ್ರಿಸ್ತನಂತೆ, ವಿಧೇಯತ್ವವನ್ನು ಕಲಿತು ಕಾಂಡನು.

೨. ಮನುಷ್ಯರಿಗೆ ಮಹಾತ್ಮೃವೆಂದು ಕಾಣಿಸತಕ್ಕ ಅತಿಶಯವಾದ ಉದ್ಯೋಗ ವೃತ್ತಿಗಿಂತ ತಾನು ತನ್ನಲ್ಲಿಯೇ ಅನುಭವಿಸಿ ಕಾಂಡ ಮಹಿಮೆಯು ಪೌಲನಿಗೆ ಅಧಿಕವಾದ ಸ್ವಾಭಿಮಾನಹೇತುವಾಗಿತ್ತು.

೩. ಇದು ತೀಕ್ಷ್ಣ ಶ್ರಮದ ಸಾದೃಶ್ಯವು. ಅದೆಂಥಾದ್ದೆಂದು ನಮಗೆ ತಿಳಿಯುವದಿಲ್ಲ. ಒಂದು ವೇಳೆ ಗಲ್ಲ. ೪, ೧೪ಲ್ಲಿ ಸೂಚಿತವಾದ ಶರೀರಶ್ರಮವು. ಹೀಗಾದರೂ ಅದು ಆತ್ಮ ಶ್ರಮ ಸಹಿತವಾಗಿತ್ತು. ಯಾಕಂದರೆ: ನನ್ನನ್ನು ಹೊಡೆಯುವ ಸೈತಾನನ ದೂತನೆಂಬ ಮಾತು ಆತ್ಮಿಕವಾದ ಶಾಸ್ತ್ರನೆಯನ್ನು ಸೂಚಿಸುತ್ತದೆ.

೪. ತನಗೆ ಬಂದ ನಾನಾ ವಿಧವಾದ ಬೇರೆ ಶ್ರಮಗಳು ಪರಿಹಾರವಾಗ ಬೇಕೆಂದು, ಅಪಾಸ್ತಲನು ಪ್ರಾರ್ಥಿಸಲಿಲ್ಲ. ಅವಗಳನ್ನು ಸಹಜವಾಗಿ ಸಹಿಸಿ

ದನು. ಆದರೆ ಈ ಶ್ರಮದ ವಿಷಯವಾಗಿ ಸಾಥನೆಯಿಂದಲೇ ತಾಳ್ಮೆಯನ್ನು ಕಲಿತು ಕಾಳ್ಳ ಬೇಕಾಯಿತು.

೫. ಇದು ಮನಾಪಾರವಾದ ಶಿಕ್ಷೇ ಮಾತು. ಪೌಲನಿಗೆ ಕ್ರಿಸ್ತನ ಕೃಪೆ ತಾನೇ ಅಲ್ಲಾ, ಅದರ ಅನುಭವ ಮಾತ್ರವೇ ತಪ್ಪಿ ಪೂರ್ಣವಾಯಿತು. ಲುಥರನ ವಾಖ್ಯಾನವೇನಂದರೆ: ಈ ಮಾತಿನಿಂದ ಕ್ರಿಸ್ತನು ಶ್ರಮಿಗಳನ್ನೆಲ್ಲಾ ಸಂತೈಸುತ್ತಾನೆ; ಯಾಕಂದರೆ: ನಾವು ಶ್ರಮಿಗಳಾಗಿ ನಿರ್ಬಲರಾಗದೆ ಪೂರ್ಣರಾದರೆ, ಆತನು ತನ್ನ ಬಲವನ್ನು ನಮ್ಮಲ್ಲಿ ಪ್ರಶಿಷ್ಟೆ ಮಾಡ ಕೂಡದು.

೬. ಆದ್ದರಿಂದ ತನ್ನನ್ನು ಬಲ ಪಡಿಸುವ ಕ್ರಿಸ್ತನ ಕೃಪೆಯ ಅನುಭವವನ್ನು ಬಯಸುವ ಭಕ್ತನು ತಾನು ನಿರ್ಬಲನೆಂದು, ಶಿಳಿಯುವ ದೀನಭಾವಕ್ಕೆ ಸಂತಾಪಿಸ ಬೇಕು.

೭. ಸ್ವಂತ ನಿರ್ಬಲತ್ವದ ಅನುಭವದಲ್ಲಿ ಕ್ರಿಸ್ತನ ಬಲದಿಂದ ಪರಾಕ್ರಮಿಯಾಗಿದ್ದೇನೆ.

೪) ಕಾರಿಂಥದವರಲ್ಲಿ ಪ್ರತಿಷ್ಟೆ ಮಾಡಿದ ಅಪೂಸ್ತಲಾದ್ಯಾಗಾಧಿಕಾರವನ್ನು ಪ್ರಮಾಣಿಸುತ್ತಾನೆ. ವ. ೧೧—೨೧.

ವ. ೧೧. ಹ್ಯಾಗೂ, ಈಗ ಬುದ್ಧಿ ಹೀನನಂತೆ, ಹೊಗಳಿ ಕೊಂಡೆನಲ್ಲಾ? ಅಂಕೆ ಮಾಡಿದವರು ನೀವೆ; ಯಾಕಂದರೆ ನಾನು ಕ್ರಿಸ್ತನ ಹೊರ್ತಾಗಿ ನನ್ನಲ್ಲಿಯೆ ಏನೂ ಅಲ್ಲದಿದ್ದರೂ, ಆ ಗರ್ವಿಗಳಾದ ಅಪೊಸ್ತಲರಿಗಿಂತ ಸ. ೧೧, ೫. ಕಡಿಮೆಯಲ್ಲದೆ ಇರುವ ಕಾರಣ, ನೀವೇ ನನ್ನನ್ನು ಹೊಗಳ ಬೇಕಾಗಿತ್ತು. ೧೨. ನಾನಾ ವಿಧ ಶ್ರಮಗಳ ತಾಳ್ಮೆ ನಾನಾ ವಿಧ ಆಶ್ಚರ್ಯ ಮುಂತಾದ ಅಪೊಸ್ತಲಲಕ್ಷಣಗಳನ್ನು ನಿಮ್ಮಲ್ಲಿ ತೋರಿಸಿದೆನು. (ಈ ಆಶ್ಚರ್ಯಗಳು ದೇವಪ್ರೇರಣಪ್ರಮಾಣಗಳಾಗಿ ಸುರ್ತುಗಳೆಂದೂ, ಅಪರೂಪವಾದ ಕಾರ್ಯಗಳಾಗಿ ಅದ್ಭುತಗಳೆಂದೂ, ದೇವತ್ರಾಣಪ್ರಕಟನೆಗಳಾಗಿ ಬಲಗಳೆಂದೂ, ಹೆಸರ್ಕೊಂಡವೆ.) ೧೩. ನೀವು ಬೇರೆ ಸಭೆಯವರಿಗಿಂತ ಕಡಿಮೆಯವರಲ್ಲ. ಒಂದು ವಿಷಯದಲ್ಲಿ ನೀವು ಕಡಿಮೆಯವರೆಂದು, ಹೇಳ ಬಹುದು; ಯಾವದರಲ್ಲಿ ಅಂದರೆ, ನಾನು ನಿಮಗೆ ಭಾರ ಹೊರಿಸ ಕೊಡಲಿಲ್ಲ. ಇದು ಅನ್ಯಾಯವಾಗಿದ್ದರೆ, ನನ್ನನ್ನು ಕ್ಷಮಿಸ ಬೇಕು. ೧೪. ಆದರೆ ನಿಮ್ಮ ಬಳಿಗೆ ಬರ ಬೇಕೆಂದು, ಈಗ ಮೂರನೆ ಸರ್ತಿ ನಿಶ್ಚೈಸಿದ ಪ್ರಕಾರ ನಾನು ಬಂದರೆ, ತಿರಿಗಿ ಹಾಗೆಯೇ ಮಾಡುತ್ತೇನೆ; ಯಾಕಂದರೆ ನಿಮ್ಮದನ್ನಲ್ಲ ನಿಮ್ಮನ್ನೆ ಬಯಸುತ್ತೇನೆ; ಮಕ್ಕಳು ಹೆತ್ತವರಿಗಾಗಿ ಅಲ್ಲ, ಹೆತ್ತವರು ಮಕ್ಕಳಿಗಾಗಿ ಅರ್ಥಗುಳಿಸುವದು ಲೋಕರೂಢಿ. ೧೫. ಬಹು ಮಮತೆಯುಳ್ಳ ನನಗೆ ನೀವು ಅಲ್ಪಮಮತೆ ಮಾಡಿದಾಗ್ಯೂ, ನಾನು ನನ್ನದನ್ನೆಲ್ಲಾ ವೆಚ್ಚ ಮಾಡುವದಲ್ಲದೆ, ನನ್ನನ್ನು ಸಹ ನಿಮ್ಮ ಆತ್ಮರಕ್ಷಣೆಗಾಗಿ, ವೆಚ್ಚ ಮಾಡ ಮನಸ್ಸುಳ್ಳವನಾಗಿದ್ದೇನೆ. ೧೬. ಆದರೆ ನಾನೇ ನಿಮಗೆ ಭಾರ ಮಾಡದಿದ್ದಾಗ್ಯೂ ಕಡು ಮೋಸದಿಂದ ಇತರ ಮೂಲಕವಾಗಿ ನಿಮ್ಮಲ್ಲಿ ಧರ್ಮದ್ರವ್ಯಸಂಗ್ರಹ ಮಾಡಿಸಿ, ನಿಮ್ಮ ಹಣವನ್ನು ಅಪಹರಿಸಿ, ಕಪಟಕೃತ್ಯವನ್ನು ನಡಸಿದನೆಂದು, ನನ್ನ ಎದುರಾಳಿಗಳು ನುಡಿದಾರು. ೧೭. ಹಾಗಾದರೆ ನಾನು ಕಳುಹಿಸಿದವರಲ್ಲಿ ಬಬ್ಬನು ನಿಮಗೆ ನಷ್ಟ ಮಾಡಿದ್ದುಂಟೋ? ೧೮. ತೀತನಿಗೆ ನಿಮ್ಮ ಬಳಿಗೆ ಹೋಗ ಬೇಕೆಂದು, ಅಜ್ಞಾಪಿಸಿದೆನು; ಅವನ ಸಂಗಡ ನಿಮಗೆ ಪರಿಚಿತನಾದ ಸಹೋದರನನ್ನು ಕಳುಹಿಸಿದೆನು. ಅವನು ನಿಮ್ಮಲ್ಲಿ ಲಾಭ ಮಾಡಿ ಕೊಂಡನೋ? ನಾವು ಏಕ ಮನಸ್ಸಾಗಿಯೂ, ಅಸ್ವಾರ್ಥರಾಗಿಯೂ ನಿಮ್ಮಲ್ಲಿ ನಡೆದು ಕೊಳ್ಳಲಿಲ್ಲವೇ? ೧೯. ನಾನು ನಿಮ್ಮ ಮುಂದೆ ಪ್ರತಿವಾದಿಸುತ್ತೇನೆಂದು ತಿರಿಗಿ ನೆನಸುತ್ತೀರಾ? ಅಲ್ಲ; ದೇವರ ಮುಂದೆ ಕ್ರಿಸ್ತನಲ್ಲಿ ಮಾತನಾಡುತ್ತೇನೆ. ಎಲೋ ಪ್ರಿಯರೇ!

೨ ಕೊರಿ. ೧೨, ೨೦—೧೩, ೫.

ನಿಮ್ಮ ಆತ್ಮಪ್ರಯೋಜನಕ್ಕೆ ಮಾಡುತ್ತೇನೆ. ೨೦. ಯಾಕಂದರೆ ನಾನು ಬಂದರೆ, ನೀವು ನನಗೆ ಅಹಿತ ರೆಂದೂ, ಮತ್ತೂ ನಿಮಗೆ ನಾನು ಅಹಿತನೆಂದೂ ಕಾಣಿಸುವೆನೆಂತಲೂ, ನಾನಾ ತರದ ದ್ವೇಷ ತರ್ಕ ದೂರು ಚಾಡಿ ಡಂಭಾಚಾರ ಮುಂತಾದ ಅಕ್ರಮವು ನಿಮ್ಮಲ್ಲಿ ನಡಿಯುವದೆಂತಲೂ, ಅಂಜುತ್ತೇನೆ. ೨೧. ಹಾಗಾ ದರೆ ನಾನು ಬರುವದಕ್ಕಿಂತ ಮುಂಚಿತವಾಗಿ, ಪಾಪ ಮಾಡಿ ತನ್ನು ಹಾದರ ವ್ಯಭಿಚಾರ ದುಂದುತನಗಳಿಗೆ ಪಶ್ಚಾತ್ತಾಪ ಪಡದೆ ಇರುವ ಅನೇಕರಿಗಾಗಿ, ನನಗೆ ಹುಟ್ಟಿ ತಕ್ಕ ಶೋಕದಿಂದ ದೇವರು ನನ್ನನ್ನು ತಿರಿಗಿ ತಗ್ಗಿಸ್ಯಾನು.

ಸ. ೧೩.

ತಾನು ಬಂದಾಗ ಶಿಕ್ಷ್ಟವಾದ ಸಖತಾಶಿಕ್ಷೆಯನ್ನು ವಿಧಿಸುತ್ತೇನೆಂದು, ಬೆದರಿಸುತ್ತಾನೆ.

ಸಮಾಪ್ತಿಯು.

ವ. ೧. ಈಗ ಮೂರನೆ ಸಾರಿ ನಿಮ್ಮ ಬಳಿಗೆ ಬರುವವನಾಗಿದ್ದೇನೆ; ಬಂದರೆ, ೫ ಮೋಸೆ. ೫, ೧೯ರ ಪ್ರಕಾರ ವ್ಯವಹಾರಗಳೆಲ್ಲಾ ಎರಡು ಮೂರು ಸಾಕ್ಷಿಗಳಿಂದ ದೃಢವಾಗಿ ತಿರ್ಪಾಗ ಬೇಕು. ೨. ಮುಂಚೆ ನಿಮಗೆ ಬರದ ಪ್ರಕಾರ ೧ ಕೊರಿ. ೪, ೧೫. ಈಗ ಅಪರೋಕ್ಷನಾಗಿದ್ದಾಗ್ಯೂ, ಎರಡನೆ ಸಾರಿ ನಿಮ್ಮ ಬಳಿಗೆ ಬರುವದಕ್ಕೆ ನಿಶ್ಚೈಸಿ ಕೊಂಡು, ಪಾಪ ಮಾಡಿದವರಿಗೂ, ಉಳಿದ ನಿಮ್ಮೆಲ್ಲರಿಗೂ ಈಗ ತಿರುಗಿ ಬಂದಲ್ಲಿ ಕ್ಷಮಿಸದೆ ಶಿಕ್ಷೆ ಕೊಡುತ್ತೇನೆಂತ, ಮುಂತಿಳಿಸುತ್ತೇನೆ. ೩. ಯಾಕಂದರೆ: ನಿಮ್ಮಲ್ಲಿ ಈ ವರೆಗೂ ನಿರ್ಬಲ ನಾಗಿ ಅಲ್ಲ, ತನ್ನ ಆತ್ಮಜೈತನ್ಯ ಮೂಲಕವಾಗಿ, ಬಲಿಷ್ಟನಾಗಿ ಕಾಣಿಸಿ ಕೊಂಡಂಥಾ, ನನ್ನ ಮುಖಾಂತರ ವಾಗಿ ನುಡಿಯುವಂಥಾ, ಕ್ರಿಸ್ತನ ಪರೀಕ್ಷೆಯನ್ನು ನೋಡ ಬೇಕೆಂದು, ಇಚ್ಛೈಸುತ್ತೀರಲ್ಲ?

೪. ಹ್ಯಾಗಂದರೆ ಅವನು ಬಲಹೀನತ್ವದಿಂದ ಕ್ರೂಜೆಗೆ ಹಾಕಲ್ಪಟ್ಟಾಗ್ಹೂ(೧), ದೇವರ ಬಲದಿಂದ ಬದುಕುತ್ತಾನೆ. ಹಾಗೆ ನಾವೂ ಅವನಲ್ಲಿ ಬಲಹೀನರಾಗಿದ್ದರೂ(೨), ದೇವರ ಬಲದಿಂದ ಅವನ ಸಂಗಡ ನಿಮಗಾಗಿ ಬದುಕುವೆವು. ೫. ವಿಶ್ವಾಸದಲ್ಲಿ ದ್ದೀರೋನ್ಹೋ, ನಿಮ್ಮನ್ನು ಶೋಧಿಸಿ ಕೊಳ್ಳಿರಿ; ನಿಮ್ಮನ್ನು ಪರೀಕ್ಷಿಸಿ ಕೊಳ್ಳಿರಿ. ನೀವು ಅಗದವರಲ್ಲದಿದ್ದರೆ(೩), ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂದು, ನಿಮ್ಮನ್ನು ನೀವೇ ತಿಳುಕೊಳ್ಳುವದಿಲ್ಲವೋ?

೧. ಕ್ರಿಸ್ತನು ಅಗಾಧ ಅಂತಃಕರಣದಿಂದ ಕ್ರೂಜೆಯಲ್ಲಿ ಸತ್ತು ಪೂರ್ತಾದಾಗ್ಯೂ, ನಮಗೆ ಸತ್ತವನಲ್ಲ; ದೇವರ ಬಲದಿಂದ ಬದುಕುವಂಥ, ಉತ್ಕೃಷ್ಟ ಚೈತನ್ಯವುಳ್ಳ ರಕ್ಷಕನಾಗಿದ್ದಾನೆ.

೨. ನಾನು ಅದೇ ಪ್ರಕಾರ ಆತನ ಶ್ರಮಗಳ ಅನುಸರಣೆಯಲ್ಲಿ ನಿರ್ಬಲನಾಗಿ ಕಾಣಿಸಿ ಕಾಂಡರೂ, ದೇವರ ಬಲದಿಂದ ಕ್ರಿಸ್ತ ಸಹಿತವಾಗಿ ಬಲಿಷ್ಠನಾಗಿ ನಿಮ್ಮಲ್ಲಿ ಪ್ರತಿಷ್ಠೆಯನ್ನು ಪೂರ್ತಾಯಮಾಡುವೆನು.

೨ ಕೌರಿ. ೧೩, ೬—೧೩.

೩. ಅಂದರೆ ಕ್ರಿಸ್ತನನ್ನೂ, ಆತನ ಉಗಿಗದವನನ್ನೂ ಪರೀಕ್ಷಿಸುವದನ್ನು ಬಿಟ್ಟು, ನಿಜಕಕ್ಕರಾಗಿ ಕ್ರಿಸ್ತನ ಐಕ್ಯದಲ್ಲಿದ್ದೀರಾ ಏನಾ ಎಂದು, ನಿಮ್ಮನ್ನು ಪರೀಕ್ಷಿಸಿ ಕಾಳ್ಳುವದು ವಾಸಿ.

೪. ಅವರು ಪರೀಕ್ಷೆಯಲ್ಲಿ ತಾವು ಕ್ರಿಸ್ತನಿಲ್ಲದ ಅಬದ್ಧ ಕ್ರೈಸ್ತರೆಂದು, ಕಾಣಿಸಿ ಕಾಳ್ಳುವರೆಂತ ಮುಂಚೆ ತಿಳಿದು ಕಾಳ್ಳುವ ಪಕ್ಷದಲ್ಲಿ ಮಾತ್ರ, ಅದು ಅವಶ್ಯವಾಗಿರುವದಿಲ್ಲವೆಂದು, ಪೌಲನು ಸೂಚಿಸುತ್ತಾನೆ. ಹಾಗಾದರೆ ಕ್ರಿಸ್ತನು ತಮ್ಮಲ್ಲಿದ್ದು ಯತ್ನೈಸುತ್ತಾನೆಂಬ ಸ್ವಾನುಭವವಿಲ್ಲದವರು ಅಬದ್ಧ ಕ್ರೈಸ್ತರಾಗಿದ್ದಾರೆ.

ವ. ೬. ನಾನು ಕಳ್ಳ ಅಪೊಸ್ತಲನಲ್ಲವೆಂದು, ನೀವು ತಿಳಿದು ಕೊಳ್ಳುತ್ತೀರೆಂತ, ನೆನಸುತ್ತೇನೆ. ೭. ಆದರೆ ನಾನೇ ಯೋಗ್ಯನಾಗಿ ಕಾಣಿಸಿ ಕೊಳ್ಳ ಅಪೇಕ್ಷಿಸದೆ, ನೀವು ಸತ್ಕರ್ಮಿಗಳಾಗಿರುವ ಪಕ್ಷದಲ್ಲಿ ಪೂರ್ಣ ಅಲಕ್ಷ್ಯನಾಗಿರ ಲಿಚ್ಛಿಸಿ, ನೀವು ಪಾಪವನ್ನು ಮಾಡಿ, ನನಗೆ ದಂಡಿಸುವ ಆಸ್ಪದವನ್ನು ಕೊಡದ ಹಾಗೆ, ದೇವರನ್ನು ಪ್ರಾರ್ಥಿಸುತ್ತೇನೆ. ೮. ಯಾಕಂದರೆ: ಕ್ರಿಸ್ತನಿಂದ ನನಗೆ ಪ್ರಾಪ್ತವಾದ ಅಧಿಕಾರ ಬಲವನ್ನು ಸತ್ಯವನ್ನನುಸರಿಸುವವರಿಗೆ ವಿರೋಧವಾಗಿ ಅಲ್ಲ, ಸತ್ಯವು ಜಯವನ್ನು ಹೊಂದಿ ಥೊರೆತನ ಮಾಡುವ ಹಾಗೆ ಬಳಿಸ ಬಲ್ಲೆನು. ೯. ನೀವು ಸನ್ಮಾರ್ಗದಲ್ಲಿ ಬಲಿಷ್ಠರಾಗಿ, ನಾನು ನನಗಿರುವ ಅಪೊಸ್ತಲೋದ್ಯೋಗದ ಬಲವನ್ನು ಬಳಿಸಲಾರದೆ, ನಿರ್ಬಲನಾಗಿ ಕಾಣಿಸಿ ಕೊಂಡರೆ, ನನಗೆ ಸಂತೋಷ. ನಾನು ನಿಮ್ಮ ಸಿದ್ಧಿಯನ್ನಲ್ಲದೆ ಮತ್ತ್ಯಾವದನ್ನೂ, ಬಯಸುವದಿಲ್ಲ. ೧೦. ಅದ್ದರಿಂದ ನಾನು ಬಂದು, ಕೆಡವುವದಕ್ಕಲ್ಲ ಕಟ್ಟುವದಕ್ಕೆಯೇ ಕರ್ತನು ನನಗೆ ಕೊಟ್ಟ ಅಧಿಕಾರದಿಂದ ಕೌರ್ಯವನ್ನು ನಡಿಸಲವಶ್ಯವಾಗದ ಹಾಗೆ, ದೂರದಲ್ಲಿಯೆ ಇದ್ದು ಇದನ್ನು ಬರದಿದ್ದೇನೆ. ೧೧. ಕಡೇದು ನನ್ನ ಸಹೋದರರೆ! ಸಂತೋಷ ಪಡಿರಿ. ಕೋಮಿಾ. ೧೨, ೧೨; ೧೪, ೧೭. ಫಿಲಿ. ೪, ೪. ಸಿದ್ಧಿಗೆ ಉದ್ಯುಕ್ತರಾಗಿರ್ರಿ. ಒಬ್ಬರನ್ನೊಬ್ಬರು ಉದ್ಬೋಧಿಸಿರಿ. ಏಕಮನಸ್ಸಾಗಿರ್ರಿ. ಸಮಾಧಾನವಾಗಿರ್ರಿ. ಆಗ ತನ್ನ ಸಮಾಧಾನವನ್ನು ಭಕ್ತರಿಗೆ ಕೊಡುವದಕ್ಕೆ ಮೆಚ್ಚುವ ಪ್ರೀತಿಯಾಗಿರುವ ದೇವರು ನಿಮ್ಮ ಸಂಗಡಲಿರುವನು. ೧೨. ಒಬ್ಬರನ್ನೊಬ್ಬರು ಪರಿಶುದ್ಧವಾದ ಮುದ್ದಿನಿಂದ ವಂದಿಸಿರಿ. ೧ ಕೊರಿ. ೧೬, ೨೦. ಇತ್ತ ಕಡೆಯಲ್ಲಿರುವ ಕ್ರೈಸ್ತರೆಲ್ಲರೂ ನಿಮ್ಮನ್ನು ವಂದಿಸುತ್ತಾರೆ.

೧೩. ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ೧), ದೇವರ ಪ್ರೀತಿಯೂ ೨), ಪರಿಶುದ್ಧಾತ್ಮದ ಅನ್ಯೋನ್ಯವೂ ೩), ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

೧. ಪಾಪಪರಿಹಾರವನ್ನುಂಟು ಮಾಡಿ, ದೇವರ ಕೃಪೆಯ ಒಡಂಬಡಿಕೆಯಲ್ಲಿ ಶೇರಿಸಿ ಕಾಳ್ಳುವ ಯೇಸು ಕ್ರಿಸ್ತನ ಒಲುಮೆಯಿಂದಲೇ ಆಶೀರ್ವಾದವೆಲ್ಲಾ ಮನುಷ್ಯನಿಗೆ ಬರುತ್ತದೆ.

೨. ತನ್ನ ಮಗನನ್ನು ನಮಗೆ ಕಳುಹಿಸಿ ಕಾಟ್ಟಿ ತಂದೆಯ ಪ್ರೀತಿಯು ಈ ಒಲುಮೆಯ ಒರ್ತೆಯಾಗಿದೆ.

೩. ದೇವರ ಸಂಗಡಲೂ, ಕ್ರಿಸ್ತನ ಸಂಗಡಲೂ ಒಬ್ಬಾಬ್ಬರ ಸಂಗಡಲೂ ನಮ್ಮನ್ನು ಒಂದಾಗಿ ಮಾಡುವ ಪರಿಶುದ್ಧಾತ್ಮದ ಆವಾಸದಿಂದ ಸಿದ್ಧಿ ಪುಟ್ಟುತ್ತದೆ.

೮. ರಾಮಿಾಯರಿಗೆ ಬರದ ಪತ್ರಿಕೆ.

(ಅಪೊಸ್ತಲರ ಕ್ರಿಯೆಗಳ. ೨೦, ೨.)

ಕೊರಿಂಥದವರ ಎರಡನೆಪತ್ರಿಕೆ ರಚಿತವಾದ ಮಕೆದೋನ್ಯದಲ್ಲಿ ಪೌಲನು ೫೭ನೆ ವರುಷದ ಗ್ರೀಷ್ಮ ವರ್ಷಕರತ್ಯಾಲಗಳನ್ನು ಪತ್ರಿಕಾಕಾರ್ಯಸಾಧನೋದ್ದಿಶ್ಯವಾದ ಅವಕಾಶವನ್ನು ಕೊಡ ಬೇಕೆಂದು ಕಳ್ದು,

ರೂಮಿಯಾಯರ ಪತ್ರಿಕೆ.

ಮತ್ತೊಂದು ಪಯಣಕ್ಕೆ ಹೊರಟು, ಆದ್ರಿಯ ಸಮುದ್ರದ ಕೊಲ್ಲಿಯಾದಂಥಾ ಇಂದಿನ ದಲ್ಮಾತ್ಯಕ್ಕೆ ಹೆಚ್ಚು ಕಡಿಮೆಯಾಗಿ ಸರಿಯಾದಂಥ ಉಪಶ್ಲಿಷ್ಟವಾದ ಇಲ್ಲುರ್ಯವನ್ನು ರೋಮಿಯಾ. ೧೫, ೧೦. ಸಂಚರಿಸಿದನಂತರ ವೇ ಕೊರಿಂಥಕ್ಕೆ ತಲಪಿ, ಅಲ್ಲಿ ಹಿಮಕಾಲ ತಳ್ಳುಗಿದನು. ಅವನ ಆಸಕ್ತವೃತ್ತಿಯು ಅಲ್ಲಿ ಇಷ್ಟಾರ್ಥವಾಗಿ ಸಾರ್ಥಕವಾಯಿತೆಂಬುವದು ಸ್ಪಷ್ಟವಾಗಿ ಬರದಿರುವದಿಲ್ಲ ಸರಿ; ಆದರೆ ಏನೂ ಬರೆಯದೆ ಇರುವದರಿಂದಲೇ, ಮತ್ತು ಪೌಲನು ಕೊರಿಂಥದಲ್ಲಿ ಬಹಳ ದಿವಸ ವಾಸ ಮಾಡಿದ್ದರಿಂದ, ಈ ಪ್ರಕಾರವಾಗಿ, ಊಹಿಸ ಬಹುದು.

ರೋಮಪುರದಲ್ಲಿ ಕ್ರೈಸ್ತ ಸಭೆಯು ಹ್ಯಾಗೆ ಸ್ಥಾಪಿತವಾಯಿತೆಂದು, ತಿಳಿಯುವದಿಲ್ಲ. ಅನೇಕ ವರ್ಷಗಳಿಂದ ಯುದ್ಧಗೃಹೀತರಾದ ಹೇರಳ ಯೆಹೂದರು ರೋಮಪುರಕ್ಕೆ ಬಂದು ಮನೆಯಾಳುಗಳಾಗಿ ಬದುಕುತ್ತಾ ಇದ್ದರು. ಆದರೆ ತಮ್ಮ ನೇಮ ನಿಷ್ಠೆಗಳನ್ನು ಚನ್ನಾಗಿ ಕೈಕೊಳ್ಳುತ್ತಾ ತಮ್ಮ ಧನಿಗಳಿಗೆ ಅನುಕೂಲರಾಗಿಲ್ಲದೆ ಇದ್ದದ್ದರಿಂದ, ಅವರಲ್ಲಿ ಹೆಚ್ಚು ಮಂದಿ ಬಿಡುಗಡೆಯನ್ನೈದಿದರು. ಔಗುಸ್ತನೆಂಬ ಮಹಾರಾಜನು ಅವರಿಗೆ ತಿಬರ ಹೊಳ್ಳೆಯ ಆಚೆಲಿ ಬೇಕೆಯಾದ ಬಂದು ಕೇರಿಯನ್ನು ನೇಮಿಸಿದನು. ಅಲ್ಲಿ ಅವರು ಸಭಾಸಮಾಗಮ ಮಂದಿರಗಳನ್ನು ಕಟ್ಟಿದರು. ಅಲ್ಲಿಗೆ ಬಹಳ ರೊಮಿಯಾಯರು, ವಿಶೇಷವಾಗಿ ಹೆಂಗಸರು ಬರುತ್ತಾ ಇದ್ದರು. ರೋಮಪುರನಿವಾಸಿಗಳಾದ ಯೆಹೂದರು ಸ್ವದೇಶದಲ್ಲಿರುವ ಕುಲದವರ ಸಂಗಡ ಬಹಳ ಹೊಕ್ಕುಬಳಿಕೆಯಾದ ನಿತ್ಯ ಸಂಸರ್ಗವನ್ನು ನಡಿಸುತ್ತಾ ಇದ್ದರು. ಹೀಗಿರಲಾಗಿ, ಒಂದು ವೇಳೆ ಪಂಚಾಶತ್ತಿನ ಹಬ್ಬಕ್ಕೆ ಬಂದ ಅಪೊ. ಕ್ರಿ. ೨, ೧೦. ರೋಮ ಪುರದವರಾದ ಯೆಹೂದರು, ಅಥವಾ ತದನಂತರ ಅಂದ್ರೊನೀಕನೂ, ಯೂನಿಯನೂ ರೋಮಿಯಾ. ೧೬, ೭. ಸುವಾರ್ತೆ ಯೆಂಬ ಬೀಜವನ್ನು ಅಲ್ಲಿಗೆ ತಂದ ಬಳಿಕ, ಆಕ್ವಿಲ ಪ್ರಿಸ್ಕಿಲ್ಲರು ಅದನ್ನು ವೃದ್ಧಿ ಹೊಂದಿಸಿದರು. ಆದರೆ ಈ ಸಭೆಯು ತಕ್ಕ ಕಾಲದಲ್ಲಿ ಸ್ಥಾಪಿತವಾಗಿದ್ದು ಸ. ೧, ೪; ೧೬, ೫. ರಾಜಧಾನಿಯ ಸಭೆಯಾದ ಕಾರಣ, ಸರ್ವಸಾಮ್ರಾಜ್ಯದಲ್ಲಿ ಪ್ರಖ್ಯಾತವಾದಾಗ್ಯೂ, ದೃಢೀಕರಣಕ್ಕೆ ಬೇಕಾದ ಅಪೊಸ್ತಲನು ಹೇಳ ತಕ್ಕ ಸಮೂಲವಾದ ಬೋಧನೆಯನ್ನು ಈ ವರೆಗೂ ಪಡೆಯದೆ ಇತ್ತು. ಆದ್ದರಿಂದ ಪೌಲನು ರೋಮಪುರಕ್ಕೆ ಹೋಗ ಬೇಕೆಂದು ಬಯಸಿ, ಸ. ೧, ೧೧., ಗ್ರೀಕ ದೇಶದಲ್ಲಿ ಮಾಡಿದ ಧರ್ಮದ್ರವ್ಯಸಂಗ್ರಹದ ಹಣವನ್ನು ಯೆರೂಸಲೇಮಿಗೆ ತೆಗದು ಕೊಂಡು ಹೋದ ಕೂಡಲೇ ಅಪೊ. ಕ್ರಿ. ೧೯, ೨೧. ಅಲ್ಲಿಗೆ ಪ್ರಯಾಣಾಲೋಚನೆಯಲ್ಲಿದ್ದನು. ಆದರೆ ಕೊರಿಂಥದಲ್ಲಿ ಇರುವ ವೇಳೆಯಲ್ಲಿಯೇ ರೋಮಪುರದ ಸಭೆಯ ಸಂಸರ್ಗದಲ್ಲಿ ಶೇರುವ ಮಾರ್ಗ ದೊರಕ್ಕಿದ್ದಕ್ಕೆ ಸಂತೋಷ ಪಟ್ಟನು. ಹ್ಯಾಗಂದರೆ ಕೆಂಕ್ರೆಯದ ಸಭಾಸೇವಕಿಯಾದ ಫೊಯಿಬೆಯೆಂಬವಳು ಸ್ವಂತ ಕಾರ್ಯಾರ್ಥವಾಗಿ ರೋಮ ಪುರಕ್ಕೆ ಪ್ರಯಾಣಸ್ಥಳಾಗಿ, ಪೌಲನ ಪತ್ರಿಕೆಯನ್ನು ತನಗೆ ಉಚಿತವಾದ ಪ್ರತಿಷ್ಟಾಪತ್ರವೆಂದು, ಕೊಂಡು ಹೋದಳು. ಸ. ೧೬, ೧. ೨.

ಪತ್ರಿಕೆಯ ತಾತ್ಪರ್ಯವು.

ಪೌಲನ ಪತ್ರಿಕೆಗಳೆಲ್ಲೆಲ್ಲಾ ರೋಮಿಯಾಯರದು ಮುಖ್ಯವೆಂದು, ಹೇಳ ಬಹುದು. ಯಾಕಂದರೆ: ಸಮಯೋಚಿತವಾಗಿ ಬರದಂಥ ಉಳಿದ ಪತ್ರಿಕೆಗಳಂತೆ, ಸುವಾರ್ತೆಯ ಆಯಾ ಬೋಧನೆಗಳನ್ನು ಪ್ರಸ್ತಾವಾನುಸಾರವಾಗಿ ಸೂಚಿಸದೆ, ವಾಕ್ಪ್ರಸಂಗಕ್ಕೆ ಸರಿಯಾಗಿ ಸುವಾರ್ತೆಯ ಬೋಧನಾಸಮೂಹವನ್ನು ವಿವರಿಸು

ರೋಮಾಯರ ಪತ್ರಿಕೆ.

ತ್ತದೆ. ಕ್ರೈಸ್ತ ಸಭೆಯ ಆದಿ ಕಾಲದಲ್ಲಿ ಸುವಾರ್ತೆಯನ್ನು ಸರ್ವ ಲೋಕದಲ್ಲಿ ಸಾರುವದಲ್ಲದೆ ಯೆಹೂದರಾದ ಕ್ರೈಸ್ತರಿಗೂ, ಪರಜನರಾದ ಕ್ರೈಸ್ತರಿಗೂ ಇರ ತಕ್ಕ ಅನ್ಯೋನ್ಯವನ್ನು ಸ್ಥಾಪಿಸುವದು ಮುಖ್ಯ ಕಾರ್ಯವಾಗಿತ್ತು. ರೋಮಪುರದಲ್ಲಿಯೂ ಇದು ಅತ್ಯಾವಶ್ಯಕವಾಗಿತ್ತು; ಯಾಕಂದರೆ ರೋಮಪುರದ ಸಭೆಯವರು ಅರೆವಾಸಿ ಯೆಹೂದರೂ, ಅರೆವಾಸಿ ಪರಜನರೂ ಆಗಿದ್ದರು; ಆದ್ದರಿಂದ ಅವರ ಉದ್ದಿಶ್ಯವಾಗಿ, ಸ. ೨, ೧೭—೩, ೧೪; ೪, ೧. ೧೨; ೭, ೧—೪., ಇವರ ಉದ್ದಿಶ್ಯವಾಗಿ, ಸ. ೧, ೧೩. ೧೬—೩೨; ೫, ೨೪. ೩೦; ೧೧, ೧೩—೨೫; ೧೪, ೧—೧೫. ಬರದದೆ.

ಈ ಪತ್ರಿಕೆಯು ಇದೆ ತರ್ಕಗಳನ್ನು ಮುಖ್ಯವಾಗಿ ವಿವರಿಸುವ ಗಲತರ ಪತ್ರಿಕೆಗೆ ಅನೇಕ ಪ್ರಕಾರವಾಗಿ ಸದೃಶವಾಗಿದ್ದು, ಅದಕ್ಕಿಂತ ಅಧಿಕ ವಿಸ್ತಾರವುಳ್ಳದ್ದಾಗಿಯೂ, ಮೂಲಬೋಧನಾಸೂಚಕವಾಗಿಯೂ ಅದೆ.

ಮತ್ತೊಂದು ವಿಷಯವಾಗಿ ಈ ಪತ್ರಿಕೆಯು ಅತಿಶಯವಾಗಿದೆ; ಏನಂದರೆ ಪಾಪನಿಗೆ ವಶವಾಗಿರುವ ರೋಮಾಯ ಸಭೆಯಲ್ಲಿ ಪ್ರಬಲವಾದ ಮುಖ್ಯ ದುರ್ಬೋಧನೆಗಳನ್ನು ಪ್ರತಿಖಂಡಿಸುವ ಸತ್ಯ ಸುವಾರ್ತೆಯ ಬೋಧನೆಯ ಮುಖ್ಯ ಸೂತ್ರಗಳು ಇದರಲ್ಲಿ ಪರಿಷ್ಕಾರವಾಗಿ ವಿವರಿಸಿರುತ್ತವೆ.

ಸೂಚನೆಯು.

I. ಜ್ಞಾನ ಬೋಧಕವಾದ ಪ್ರಥಮ ಭಾಗವು. ಸ. ೧—೧೧.

ಪೀಠಿಕೆ. ಸ. ೧, ೧—೧೭.

೧) ರಕ್ಷಣೋಪಾಯನೀತಿಗಳನ್ನು ಪಡೆಯ ತಕ್ಕ ಒಂದು ಮಾರ್ಗದ ಅವಶ್ಯಕವು. ಸ. ೧, ೧೪—೩, ೨೦.

ಅ) ಪರಜನರಿಗಾಗಿ. ಸ. ೧, ೧೪—೩೨.

ಇ) ಯೆಹೂದರಿಗಾಗಿ. ಸ. ೨—೩, ೨೦.

೨) ಕ್ರಿಸ್ತನಲ್ಲಿರುವ ರಕ್ಷಣೆಯು. ಸ. ೩, ೨೧—೩೧.

೩) ಪುಳೆ ಒಡಂಬಡಿಕೆಯಲ್ಲಿಯೂ ಪ್ರಕಟವಾದ ರಕ್ಷಣೆಯ ಹೇತುವಾದ ವಿಶ್ವಾಸವು. ಸ. ೪.

೪) ಆದಮನಿಂದ ಪುಟ್ಟಿದ ದುರವಸ್ಥೆಗಿಂತ ಯೇಸು ಕ್ರಿಸ್ತನಲ್ಲಿರುವ ರಕ್ಷಣೆಯು ಅಧಿಕವಾದದ್ದೂ, ವಿಸ್ತಾರವಾದದ್ದೂ ಆಗಿದೆ. ಸ. ೫.

೫) ಕ್ರಿಸ್ತನಲ್ಲಿರುವ ಕೃಪೆಯ ಪರಿಶುದ್ಧಿಯೂ ಮಹಿಮೆಯೂ. ಸ. ೬—೮.

೬) ಯೆಹೂದರ ಅವಿಶ್ವಾಸವು. ಸ. ೯—೧೧.

II. ಧರ್ಮಬೋಧಕವಾದ ದ್ವಿತೀಯ ಭಾಗವು. ಸ. ೧೨—೧೬.

೧) ನಾನಾ ಕ್ರೈಸ್ತ ಗುಣಾಚರಣೋಪದೇಶನೆಗಳು. ಸ. ೧೨. ೧೩.

೨) ದೇವ ಭಕ್ತಿಯು. ಸಹಕ್ರೈಸ್ತರಿಗೂ, ಎಲ್ಲಾ ಮನುಷ್ಯರಿಗೂ ವಿಶೇಷವಾಗಿ ಸರಕಾರದವರಿಗೂ ತಾರೀಸ ತಕ್ಕ ದೀನವಾದ ಪ್ರೀತಿಯು. ಸ. ೧೪.

ರೋಮಾ. ೧, ೧—೭.

೩) ನಿರ್ಬಲರಿಗೆ ತಾರಿಸ ತಕ್ಕ ತಾಳ್ಮೆಯ ವಿಷಯವಾದ ವಿಶೇಷ ಬೋಧನಾವಾಕ್ಯಗಳು. ಸ. ೧೫.

ಸಮಾಪ್ತಿಯು. ಸ. ೧೬.

ಪೀಠಿಕೆ. ೧—೧೭.

ವಂದನೆ. ವ. ೧—೭.

೧. ಮಾಂಸದ (ಪ್ರಕಾರ ೧) ದಾವೀದನ ಬೀಜದಿಂದ ಹುಟ್ಟಿ, ಪರಿಶುದ್ಧತ್ವದ ಆತ್ಮನ (ಪ್ರಕಾರ ೨) ೨. ದೇವರ ಮಗನೆಂದು ಸತ್ಯವರ ಪುನರುತ್ಥಾನದಿಂದ ೩) ಬಲವಾಗಿ ನಿರ್ಣಯಿಸಲ್ಪಟ್ಟ ನಮ್ಮ ಕರ್ತನಾದ ೪) ಯೇಸು ಕ್ರಿಸ್ತನೆಂಬ ತನ್ನ ಮಗನನ್ನು ಕುರಿತು, ೩. ದೇವರು ಪರಿಶುದ್ಧವಾದ ಬರಹಗಳಲ್ಲಿ ತನ್ನ ಪ್ರವಾದಿಗಳ ಮುಖಾಂತರ ಪೂರ್ವದಲ್ಲಿ ವಾಗ್ದತ್ತ ಮಾಡಿದ ೫) ಸುವಾರ್ತೆಗೆ ವಿರ್ಪಡಿಸಲ್ಪಟ್ಟಂಥ ೬), ೪. ಕರೆಯಲ್ಪಟ್ಟ ಅಪೊಸ್ತಲನಾದಂಥ, ಯೇಸು ಕ್ರಿಸ್ತನ ದಾಸನಾದ ೭) ಪೌಲನು ೮), ೫. ರೋಮದಲ್ಲಿರುವ ದೇವರ ಪ್ರಿಯರೂ ಕರೆಯಲ್ಪಟ್ಟ ಪರಿಶುದ್ಧರೂ ಆಗಿರುವವರೆಲ್ಲರಿಗೆ—ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಸಮಾಧಾನವೂ ಆಗಲಿ. ೬. ಅವನ ಹೆಸರಿನ ನಿಮಿತ್ತ ಎಲ್ಲಾ ಜನಾಂಗಗಳಲ್ಲಿ ವಿಶ್ವಾಸದ ವಿಧೇಯತ್ವಕ್ಕಾಗಿ ೯) ಅವನ ಮುಖಾಂತರ ಕೃಪೆಯನ್ನೂ ೧೦) ಅಪೊಸ್ತಲತನವನ್ನೂ ಹೊಂದಿದ್ದೇವೆ. ೭. ಅವರಲ್ಲಿ ಯೇಸು ಕ್ರಿಸ್ತನಿಂದ ಕರೆಯಲ್ಪಟ್ಟವರಾದ ನೀವು ಸಹ ಇದ್ದೀರಿ.

೧. ಅಂದರೆ, ಮನುಷ್ಯಚಿತ್ತದ ಪ್ರಕಾರ. ಯೇಸು ಕ್ರಿಸ್ತನು ನಮ್ಮಂಥ ನಿರ್ಬಲ ಮರ್ತ್ಯಚಿತ್ತವುಳ್ಳವನಾಗಿ ಹುಟ್ಟಿದನು. ಪುನರುತ್ಥಾನದಿಂದಲೇ ಅವನ ಶರೀರ ಸಹ ಚಿತ್ತಾಂತರವಾಗಿ ಅಮರವಾಯಿತು.

೨. ಯೇಸು ಕ್ರಿಸ್ತನ ನರಚಿತ್ತವನ್ನು ಹುಟ್ಟಿಸಿದಂಥ ಮಾನುಷವಾದದ್ದನ್ನು ಶುದ್ಧ ಮಾಡಿ, ದಿವ್ಯ ಸ್ಥಿತಿಯಲ್ಲಿ ಶೇರಿಸುವಂಥ ಸ್ವಾಧೀನವಾದ ದೇವರ ಶಕ್ತಿ ಇಲ್ಲಿ ಸೂಚಿಸಿರುತ್ತದೆ. ಆತ್ಮವೆಂಬುವದಕ್ಕೆ ೧ ಪೇತ್ರ. ೩, ೧೮. ೧ ತಿಮೊ. ೩, ೧೬. ೨ ಕೊರಿ. ೩, ೧೭. ಇಬ್ರಿ. ೯, ೧೪. ಇದೇ ಅಭಿಪ್ರಾಯ.

೩. ಪುನರುತ್ಥಾನದಲ್ಲಿ ಯೇಸು ಕ್ರಿಸ್ತನ ಶರೀರ ಸಹ ಆತ್ಮಮಯವಾಯಿತು.

೪. ಯೇಸು ಲೋಕದ ಅರಸನೂ, ನ್ಯಾಯಾಧಿಪತಿಯೂ ಆಗಿರುವದರಿಂದ ಕರ್ತನೆಂದು ಪೌಸರ್ಗಾಂಡಿದ್ದಾನೆ.

೫. ಯೇಸುವಿನ ಪ್ರಕಾರ, ಅಪೊಸ್ತಲರು ಸಹ ಪಾಳೆ ಪೌಲಾಸ ಒಡಂಬಡಿಕೆಗಳ ವಿಕಮತ್ಕರ್ತವನ್ನು ವಾಡಿಕೆಯಾಗಿ ಸೂಚಿಸುತ್ತಾರೆ. ಅಪೊ. ಕ್ರಿ. ೨೪, ೧೪; ೨೬, ೬. ೨೨.; ೨೮, ೨೩. ೀತ. ೧, ೨. ಕ್ರಿಸ್ತನ ಪ್ರತ್ಯಕ್ಷತ್ವ ಶ್ರಮ ಮಹಿಮೆಗಳೂ ಆತನ ರಕ್ಷಣೆಯು ಎಲ್ಲಾ ಜನಾಂಗಗಳಲ್ಲಿ ವಿಸ್ತಾರವಾಗಿಯೂ ಯೆಶಾ. ೨೧, ೧೦. ಮುಂತಾದ ಪ್ರವಾದಿಗಳ ವಾಕ್ಯಗಳಿಂದ ಮುಂತಿಳಿಸಲ್ಪಟ್ಟಿತು.

೬. ಯೆರೆಮಿಾಯನ ಪ್ರಕಾರ, ಯೆರೆ. ೧, ೫. ಪೌ

ಲನು ತಾಯ ಗರ್ಭದಿಂದ ಗಲ. ೧, ೧೫. ಗಾತ್ಮಾಗಿ, ಬಳಿಕ ಆಶ್ಚರ್ಯವಾದ ರೀತಿಯಿಂದ ಅಪಾಸ್ತಲಾತ್ಯಾದ್ಯಾಗಕ್ಕೆ ನೇಮಕವಾದನು. ಅಪಾ. ಕ್ರಿ. ೯, ೧೫; ೧೩, ೨. ಸುವಾರ್ತೆಯು ದೇವರಿಂದಲೇ ಹುಟ್ಟುವದರಿಂದ ದೇವರ ಸುವಾರ್ತೆ ಯೆಂದು ಹೇಳಿ ಆದೆ. ಸ. ೧೫, ೧೬. ೧ ಥೆಸ್ಸ. ೨, ೨.

೭. ದೇವರ ಮತ್ತೂ ಕ್ರಿಸ್ತನ ಉಗಳಿಗದವರೆಂಬ ಹೆಸರು ಎಲ್ಲಾ ಕ್ರೈಸ್ತರಿಗೆ ಸಾಮಾನ್ಯವಾದದ್ದು. ೧ ಪೇತ್ರ. ೨, ೧೬. ಎಫೆ. ೬, ೬. ಪ್ರಕ. ೭, ೩. ಆದರೆ ಅದು ವಿಶೇಷವಾಗಿ ಹಳೆ ಒಡಂಬಡಿಕೆಯ ದೇವರಾಜ್ಯಾದ್ಯಾಗಸ್ಥರಿಗೂ, ೫ ಮೋಶೆ. ೩೪, ೫. ಯೀಶು. ೧, ೧. ಯೆರೆ. ೨೫, ೪. ಅಮೊ. ೩, ೫., ಹಳಾಸ ಒಡಂಬಡಿಕೆಯ ಅಪಾಸ್ತಲರಿಗೂ, ಸುವಾರ್ತಿಕರಿಗೂ ಗಲ. ೧, ೧೦. ತೀತ. ೧, ೧. ಯಾಕಾ. ೧, ೧. ೨ ಪೇತ್ರ. ೧, ೧. ಕಾಲಾ. ೪, ೧೨. ಸಲ್ಲುತ್ತದೆ.

೮. ಪೌಲನು ಈ ಪತ್ರಿಕೆಯ ಆರಂಭದಲ್ಲಿ ರೋಮಪುರದ ಸಭೆಯವರಿಗೆ ಸುವಾರ್ತೆಯ ಬೋಧನಾಸಾರವನ್ನು ವಿವರಿಸಲಾರಂಭಿಸುವದಕ್ಕಿಂತ ಮುಂಚೆಯೇ ಯೇಸು ಕ್ರಿಸ್ತನ ವಾಕ್ಯಮೂಲವನ್ನು ಸೂಚಿಸಿ, ತನ್ನ ಅಪಾಸ್ತಲಾತ್ಯಾದ್ಯಾಗವನ್ನು ವಿಶೇಷವಾಗಿ ವರ್ಣಿಸುತ್ತಾನೆ.

೯. ಅಂದರೆ, ದೇವರ ಕೃಪಾನಿಯಮಕ್ಕೆ ವಿಧೇಯವಾದ ವಿಶ್ವಾಸಕ್ಕಾಗಿಸ್ಕರ.

೧೦. ಮಾನಸಾಂತರದ ಕೃಪೆಯನ್ನು ಇಕ್ತರೆಲ್ಲರಿಗೆ ಸಾಮಾನ್ಯವಾಗಿ ದೇವರಿಂದ ಪಡದು ಕಾಂಡ ಪೌಲನು ಅಪಾಸ್ತಲಾತ್ಯಾದ್ಯಾಗವನ್ನು ವಿಶೇಷ ಬಿರುದಾಗಿ, ೧ ತಿಮೊ. ೧, ೧೨. ಪರಜನರನ್ನು ವಿಶ್ವಾಸಕ್ಕೆ ತಿರುಗಿಸುವ ನಿಮಿತ್ತವಾಗಿ ಹೇಳಾಂದಿದನು.

ಅಪಾಸ್ತಲನು ರೋಮಾಯರ ವಿಶ್ವಾಸಕ್ಕೆ ಮೆಚ್ಚಿ, ಅವರನ್ನು ನಾಡ ಬೇಕೆಂದು, ಬಯಸುತ್ತಾನೆ. ಪ. ೮—೧೫.

೮. ಮೊದಲಾಗಿಯೇ ನಿಮ್ಮ ವಿಶ್ವಾಸವು ಲೋಕಪ್ರಖ್ಯಾತವಾಯಿತೆಂಬುವದಕ್ಕೆ (ರಾಜಧಾನಿಯಲ್ಲಿ ನಡಿಯುವಂಥಾದೆಲ್ಲಾ ಸರ್ವ ರಾಜ್ಯಕ್ಕೂ ಬೇಗ ಪ್ರಸಿದ್ಧವಾಗುತ್ತದೆ,) ದೇವರ ಉಪಕಾರಗಳನ್ನೆಲ್ಲಾ ನಮಗೆ ಬರ ಮಾಡಿ, ನಮ್ಮ ಹೃದಯಗಳಲ್ಲಿ ಪೂರ್ಣ ಕೃತಜ್ಞತೆಯನ್ನು ಹುಟ್ಟಿಸಿ ಸಿದ್ಧಿಸುವ ಯೇಸು ಕ್ರಿಸ್ತನ ಮುಖಾಂತರ ಸ. ೭, ೨೫. ಕೊಲೊ. ೩, ೧೭. ಇಬ್ರಿ. ೧೩, ೧೫. ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ. ೯. ಯಾಕಂದರೆ ಬಹಿರಾಚರಣೆಯಿಂದಲ್ಲ, ಹೃದ್ಗತವಾದ ಆಸಕ್ತಿಯಿಂದ ಸುವಾರ್ತೆಯನ್ನು ಸಾರಿ, ನಾನು ಯಾಜಕನಾಗಿ ಸೇವಿಸುವ ದೇವರು, ನಾನು ಎಡೆ ಬಿಡದೆ ನಿಮ್ಮನ್ನು ನೆನಸಿ ಕೊಂಡು, ೧೦. ನಿಮ್ಮ ಬಳಿಗೆ ಬರುವದು ದೇವರ ಚಿತ್ತದಿಂದ ಹ್ಯಾಗೂ ಒಂದಾವರ್ತಿ ಸಾರ್ಥಕವಾಗ ಬೇಕೆಂದು ಯಾವಾಗಲೂ ಪ್ರಾರ್ಥಿಸುತ್ತೇನೆಂತ, ನನಗೆ ಸಾಕ್ಷಿಯಾಗಿದ್ದಾನೆ. ೧೧. ಯಾಕಂದರೆ ನಿಮ್ಮನ್ನು ನೋಡಿ, ಬೋಧನೆ, ವೃದ್ಧಿವಾದ ಮುಂತಾದ ಆತ್ಮಿಕವರಪ್ರದಾನದಿಂದ ನಿಮ್ಮನ್ನು ದೃಢೀಕರಿಸ ಬೇಕೆಂದೂ, ೧೨. ಮತ್ತು ಅನ್ಯೋನ್ಯವಾದ ನಮ್ಮ ವಿಶ್ವಾಸದ ಪರಸ್ಪರ ಸಂಭಾಷಣೆಗಳಿಂದ ನಿಮ್ಮ ಕೂಡಾ ಧೈರ್ಯವನ್ನೂ, ದೃಢವನ್ನೂ ಪಡದು ಕೊಳ್ಳ ಬೇಕೆಂದು, ಇಷ್ಟೈಸುತ್ತೇನೆ. ೧೩. ನೀವು ಸಹ ಬೇರೆ ಪರಜನರಂತೆ, ದೇವರಾಜ್ಯಾರ್ಥವಾಗಿ ಕೊಡುವ ಫಲಗಳನ್ನು ಕೂಡಿಸುವದಕ್ಕೆ ನಿಮ್ಮ ಬಳಿಗೆ ಬರ ಬೇಕೆಂದು, ಬಹುಶಾ ಮುಂಕೊಂಡರೂ, ತಿರಿಗಿ ತಿರಿಗಿ ತಡೆಯಾಯಿತೆಂದು, ಸ. ೧೫, ೨೨., ನಿಮಗೆ ಗೊತ್ತಾಗಲಿ, ನನ್ನ ಸಹೋದರರೆ. ೧೪. ಗ್ರೇಕರಿಗೂ, ಬರ್ಬರರಿಗೂ, ಕಲ್ತವರಿಗೂ ಕಲಿಯದವರಿಗೂ, ಸರ್ವ ಲೋಕಕ್ಕೆ ಪ್ರಸಂಗ ಮಾಡುವ ಹಂಗಿನಲ್ಲಿದ್ದೇನೆ.

ರೋಮಾ. ೧, ೧೫—೧೭.

೧೫. ಅದ್ದರಿಂದ ನನ್ನ ಕೈಲಾದಶ್ಟು, ರೋಮಪುರದವರಾದ ನಿಮಗೂ ಸುವಾರ್ತೆಯನ್ನು ಸಾರುವದಕ್ಕೆ ಸಿದ್ಧನಾಗಿದ್ದೇನೆ.

ಪತ್ರಿಕೆಯ ಮುಖ್ಯೋಕ್ತಿ. ವ. ೧೬. ೧೭.

೧೬. ಯಾಕಂದರೆ ಕ್ರಿಸ್ತನ ಸುವಾರ್ತೆಗೆ ನಾಚಿಕೆ ಪಡೆನು ೧). ಅದು ವಿಶ್ವಾಸಿಸುವವರೆಲ್ಲರಿಗೆ, ಮೊದಲು ಯೆಹೂದನಿಗೆ ೨), ಗ್ರೀಕನಿಗೆ ಸಹ, ರಕ್ಷಣೆಗೋಸ್ಕರವಾದ ೩) ದೇವರ ಬಲವಾಗಿದೆ ೪). ೧೭. ಹ್ಯಾಗಂದರೆ, ನೀತಿವಂತನು ವಿಶ್ವಾಸದಿಂದ ಬದುಕುವನೆಂದು ಬರೆದಿರುವ ಹಾಗೆ ೫), ದೇವರ ನೀತಿಯು ೬) ಅದರಲ್ಲಿ ವಿಶ್ವಾಸದಿಂದ ೭) ವಿಶ್ವಾಸಕ್ಕೆ ಪ್ರಕಟವಾಗುತ್ತಾ ಇದೆ ೮).

೧. ಶಕ್ತಿ ಇಲ್ಲದವನು ಸುವಾರ್ತೆಗೆ ನಾಚಿಕೆ ಪಡುತ್ತಾನೆ. ಯಾಕಂದರೆ ತಾನು ದಿಕ್ಕಿಲ್ಲದ ಪಾಪಿಯಂದೂ, ಕ್ರಿಸ್ತನ ಕ್ರೂಜೆಯೆ ರಕ್ಷಣೋಪಾಯಸಾಧಕವೆಂದೂ, ಕೇಳಲಾಲ್ಲನು ೧ ಕೊರಿ. ೧, ೨೩. ಸಕಲ ವಿದ್ಯಾಭಿವೃದ್ಧಿಯಾದ ಅಲೆಕ್ಸಾಂದ್ರಿಯದವರಲ್ಲಿ ಈ ರಕ್ಷಣೆಯನ್ನು ಅರಸುವ ದೀನತ್ವವೂ, ಅದನ್ನು ಸಾರುವ ಧೈರ್ಯವೂ ಪ್ರಯಾಸವಾಗಿದ್ದವು.

೨. ಯೆಹೂದರೂ, ಪರಜನರೂ ಒಂದೇ ದುರವಸ್ಥೆಯಲ್ಲಿದ್ದು, ಒಂದೇ ರಕ್ಷಣೆ ಬೇಕಾದವರಾಗಿದ್ದಾರೆ. ಆದರೆ ಯೆಹೂದರು ಪೂರ್ವ ಕಾಲದ ಪ್ರಕಟಣೆಗಳಿಂದ ಸಿದ್ಧರಾಗಿ, ಮೊದಲೇ ಸುವಾರ್ತಾಪ್ರಸಂಗವನ್ನು ಕೇಳುವ ವಿಶೇಷಾಧಿಕಾರಿಗಳಾಗಿದ್ದಾರೆ. ಯೋಹಾ. ೪, ೨೨. ರೋಮಾ. ೯, ೫; ೧೧, ೨೪. ಅಪೊ. ಕ್ರಿ. ೧, ೮; ೧೩, ೪೬.

೩. ಸುವಾರ್ತೆಯನ್ನು ನಂಬುವವನು ಪಾಪದ ಶಾಪದಿಂದ ಮಾತ್ರವಲ್ಲ, ಅದರ ಅಧಿಕಾರದಿಂದಲೂ ಬಿಡುಗಡೆಯಾಗಿ, ದೇವರ ನೀತಿಯನ್ನೂ, ಸಮಾಧಾನವನ್ನೂ ಪಡೆಯುತ್ತಾನೆ.

೪. ಅದು ದೇವರ ಬಲವಾಗಿರುವದರಿಂದ, ಅದನ್ನು ವಿಶ್ವಾಸದಿಂದ ಪಡಕೊಂಡಿದವನು ವಿಶ್ವಾಸಿಸುತ್ತಲೇ ಜೀವಾಂತರವನ್ನೈದುತ್ತಾನೆ; ಪಡಕೊಳ್ಳಗಂದರೆ ದೇವಾತ್ಮ ಚೈತನ್ಯದಿಂದ ಪುನರ್ಜನ್ಮವನ್ನು ಪಡೆಯುತ್ತಾನೆ. ಈ ಅನುಭವವಿಲ್ಲದವರಲ್ಲಿ ನಿಜ ವಿಶ್ವಾಸವಿಲ್ಲ.

೫. ಪೂಬ. ೨, ಳಲ್ಲಿ ಬರದ ಮಾತು ದೇಶದಲ್ಲಿ ಒಳನುಗ್ಗಿದ ಕಲ್ದೆಯರ ಕೈಯಿಂದ ಬಂದ ಶಿಕ್ಷಾರೂಪ ದ್ರವದಿಂದ ಆಗ ತಕ್ಕ ರಕ್ಷಣೆಯನ್ನು ಸೂಚಿಸುತ್ತದೆ ಸರಿ; ಆದರೆ ಅದು ದೇವ ಶಿಕ್ಷಾರೂಪದ್ರವಗಳಿಂದೆಲ್ಲಾ, ಅಂತ್ಯ ದಿವಸದ ಶಿಕ್ಷೆಗಳಿಂದ ಸಹ ರಕ್ಷಣಾಕರವಾದ ಒಂದೇ ಸಾಧಕವಾಗಿ, ಅಲ್ಲಿ ಮುಂಗುರ್ತಾಗಿ ಸೂಚಿಸಿರುತ್ತದೆ. ವಿಶ್ವಾಸವಿಲ್ಲದವನಿಗೆ ದೇವರ ಅನ್ಯೋನ್ಯದಲ್ಲಿರುವ ಜೀವವೂ, ನೀತಿಯೂ, ಮುಕ್ತಿಯೂ, ಯಾವತ್ತೂ ಇಲ್ಲ.

೬. ದೇವರ ಸ್ವಾಭಾವಿಕವಾದಂಥಾ, ಕ್ರಿಸ್ತನಲ್ಲಿರುವಂಥಾ, ದೇವರಿಂದ ಕ್ರಿಸ್ತನ ಮುಖಾಂತರ ನಮ್ಮಲ್ಲಿ ಪುಟ್ಟುವಂಥಾ, ದೇವರ ಮುಂದೆ ಸಲ್ಲುವಂಥಾ, ಸಂಪೂರ್ಣವಾದ ನಿಜ ನೀತಿಯೇ. ಅದು ಮನುಷ್ಯನಿಗೆ ಸಹಜವಾದದ್ದಲ್ಲ; ಉಚಿತವಾದ ಕೃಪೆಯಿಂದಲೇ ಪಾಪಿಗೆ ಪ್ರಾಪ್ತವಾಗಿ, ಕ್ರಿಸ್ತನ ಅನ್ಯೋನ್ಯದಲ್ಲಿ ಶೇರಿದ ಭಕ್ತನನ್ನು ನೂತನ ಪಡಿಸಿ, ಫಲ ಫಲಿಸುವ ಮರದಂತೆ, ಯುಕ್ತವಾದ ಸತ್ಕಾರ್ಯಗಳನ್ನು ಪುಟ್ಟಿಸುತ್ತದೆ.

೭. ವಿಶ್ವಾಸವೇ ಆದ್ಯಂತವಾದ ಒಂದೇ ಆವಶ್ಯಕವು. ನೀತಿಯು ವಿಶ್ವಾಸದಿಂದ ಬರುತ್ತದೆ; ಪಡಕೊಳ್ಳಗಂದರೆ, ದೇವರು ಅದನ್ನು ವಿಶ್ವಾಸಿಸುವವನಿಗೆ ಉಚಿತ ಕೃಪಾಪ್ರಸಾದವಾಗಿ ಕೊಡುತ್ತಾನೆ. ಸ. ೩, ೨೨. ವಿಶ್ವಾಸಿಸುವವನು ಕ್ರಮ ಕ್ರಮದಿಂದ ಜ್ಞಾನವೂ, ಬಲವೂ ಉಳ್ಳ ವಿಶ್ವಾಸದಲ್ಲಿ ಬೆಳೆಯುತ್ತಾನೆ.

೬. ವಿಶ್ವಾಸಿಸುವವನು ಸುವಾರ್ತೆಯ ಮುಖಾಂತರ ದೇವರ ನೀತಿಯ ತಿಳುವಿಕೆಯನ್ನು ಮಾತ್ರವಲ್ಲ, ಅದರ ಅನುಭವವನ್ನು ಸಹ ಪಡೆಯುತ್ತಾನೆ. ಪಾಳೆ ಒಡಂಬಡಿಕೆಯ ಭಕ್ತರು ಸಹ ವಿಶ್ವಾಸದಿಂದ ನೀತಿವಂತರಾದದ್ದೇ ಸರಿ; ಆದರೆ ನೀತಿಸಾಧಕಪ್ರಮಾಣವು ಅವರಿಗೆ ವಾಗ್ದತ್ತರೂಪವಾಗಿಯೇ ಪ್ರಕಟವಾದ್ದರಿಂದ, ಅವರು ಅದರ ಮರ್ಮವನ್ನು ಪೂರ್ಣವಾಗಿ ಗ್ರಹಿಸಲಿಲ್ಲ.

ಜ್ಞಾನ ಬೋಧಕವಾದ ಪ್ರಥಮ ಭಾಗವು. ಸ. ೧—೧೧.

೧) ರಕ್ಷಣಾನೀತಿಗಳನ್ನು ಪಡೆಯ ತಕ್ಕ ಒಂದು ಮಾರ್ಗದ ಆವಶ್ಯಕವು.
ಸ. ೧, ೧೪.—೩, ೨೦.

ಅ) ಪರಜನರಿಗಾದ ಆವಶ್ಯಕವು. ಸ. ೧, ೧೪.—೩೨.

ಪಾಪ ಮೋಹದಿಂದಲೂ, ಕೃತಘ್ನತೆಯಿಂದಲೂ, ಅವರು ದೇವರ ಆದಿ ಪ್ರಕಟಣೆಯನ್ನು ಅಲಕ್ಷ್ಯ ಮಾಡಿದ ಕಾರಣ, ದೇವರು ಅವರನ್ನು ಬುದ್ಧಿಶೂನ್ಯವಾದ ವಿಗ್ರಹಪೂಜೆಯಲ್ಲಿಯೂ, ಅಸಹ್ಯವಾದ ಸ್ವಭಾವವಿರುದ್ಧ ದುರಾಚರಣೆಗಳಲ್ಲಿಯೂ ಬೀಳಲೀಸಿ, ಶಿಕ್ಷಿಸಿದ್ದಾನೆ.

ಆದಿದೇವ ಜ್ಞಾನಭ್ರಷ್ಟತ್ವವು.

೧೪. ಯಾಕಂದರೆ ದೇವರ ಕೋಪವು ೧) ಸತ್ಯವನ್ನು ಅನೀತಿಯಿಂದ ೨) ಹಿಡಿದು ಕೊಳ್ಳುವ ಮನುಷ್ಯರ ಸಕಲ ಭಕ್ತಿಹೀನತ್ವದ ೩) ಮೇಲೆಯೂ ಅನೀತಿಯ ಮೇಲೆಯೂ ಪರಲೋಕದಿಂದ ೪) ಪ್ರಕಟವಾಗುತ್ತಾ ಇದೆ. ೧೯. ಯಾಕಂದರೆ ದೇವರನ್ನು ಕುರಿತು ತಿಳಿಯ ತಕ್ಕದ್ದು ೫) ಅವರಲ್ಲಿ ತೋರಿ ಇದೆ; ಯಾಕಂದರೆ ದೇವರು ಅದನ್ನು ಅವರಿಗೆ ತೋರಿಸಿದ್ದಾನೆ. ೨೦. ಹ್ಯಾಗಂದರೆ ಲೋಕಸೃಷ್ಟಿಯಿಂದ ಅವನ ಅದೃಶ್ಯವಾದವುಗಳು, ಅವನ ನಿತ್ಯ ಬಲವೂ ದೈವತ್ವವೂ ನಿರ್ಮಾಣಗಳಿಂದ ಗ್ರಹಿಸಲ್ಪಟ್ಟು, ಪ್ರತ್ಯಕ್ಷವಾಗಿವೆ ೬); ಆದದರಿಂದ ನೆವವಿಲ್ಲದವರಾಗಿದ್ದಾರೆ ೭).

೧. ಅಂದರೆ, ಪಾಪವನ್ನು ಸಹಿಸಲಾರದೆ, ಅತ್ಯಂತಾಸಕ್ತಿಯಿಂದ ದ್ವೇಷಿಸಿ ಶಿಕ್ಷಿಸುವ, ಎಫೆ. ೨, ೩. ದೇವರ ಪರಿಶುದ್ಧ ನೀತಿಯು.

೨. ಪಾಪಾಚರಣೆಗಳಿಂದ ಸತ್ಯವನ್ನು ಗ್ರಹಿಸುವ ಬುದ್ಧಿ ಮಂದವಾಗುತ್ತದೆ.

೩. ಪಾಪವು ದೇವರಿಗೆ ವಿರೋಧವಾದ ಭಕ್ತಿಹೀನತ್ವ; ಮನುಷ್ಯರಿಗೆ ವಿರೋಧವಾದ ಅನ್ಯಾಯವೃತ್ತಿ; ಈ ಎರಡು ವಿಧವಾಗಿದೆ. ಸಕಲ ಎಂಬುವದು ಪಾಪದ ನಾನಾವಿಧತ್ವವನ್ನು ಸೂಚಿಸುತ್ತದೆ.

೪. ಅಂದರೆ, ಪರಲೋಕದ ಕೆಳಗೆ ಇರುವವರೆಲ್ಲರ ಮೇಲೆ ಸರ್ವಾಧಿಕಾರವನ್ನು ನಡಿಸುವ ಸರ್ವಶಕ್ತನಾದ ದೇವರಿಂದ ಲೂಥರನ ವ್ಯಾಖ್ಯಾನ: ಅದು ಪರಲೋಕದಿಂದ ಪ್ರಕಟವಾಗದಿದ್ದರೆ, ಸರ್ವ ಲೋಕಕ್ಕೂ ಮರೆಯಾಗುತ್ತಿತ್ತು.

೫. ಸ್ವಾಭಾವಿಕ ಬುದ್ಧಿಗೆ ವಿಶೇಷವಾದ ದೇವರ ಬೋಧನೆ ಇಲ್ಲದೆ ಗ್ರಾಹ್ಯವಾದದ್ದು ಪರಜನರಿಗೂ ಗೋತ್ತಾಗಿದೆ.

೬. ಸರ್ವತ್ರಾಣ ಮುಂತಾದ ದೇವರ ಗುಣಗಳು ದೇವರ ಕೃತ್ಯಗಳಿಂದ ಕಾಣಿಸುತ್ತವೆ. ಕೀರ್ತ. ೧೯. ೧೦೪. ೧೪೮. ಎಸ. ೪೦, ೨೬. ಇಲ್ಲಿ ಸ್ವಾಭಾವಿಕ

ರ್ಯಾಮಿಾ. ೧, ೨೧—೨೩.

ದೇವಜ್ಞಾನದ ವಿಷಯವಾಗಿ ಉದಾಪಗಿಸಿರುವ ಅಭಿಪ್ರಾಯವೇನಂದರೆ: ೧. ಅಗಾೋಚರವಾದ ದೇವರನ್ನು ಗ್ರಹಿಸುವದಕ್ಕೆ ನರಬುದ್ಧಿಗೆ ಅಳವಲ್ಲಾ. ೨. ದೇವರು ಸೃಷ್ಟಿ ಕೃತ್ಯಗಳಿಂದ ತನ್ನನ್ನು ತಾನೆ ಪ್ರಕಟಿಸಿಕಾಳ್ಳುತ್ತಾನೆ. ೩. ಈ ದೇವಪ್ರಕಟಣೆಯು ಕಣ್ಣಿಗೆ ಕಾಣದೆ, ಬುದ್ಧಿಗೆ ಮಾತ್ರ ಗಾೋಚರವಾಗುತ್ತದೆ. ೪. ಈ ಶಕ್ತಿಯನ್ನು ದೇವರು ಆರಂಭದಲ್ಲಿಯೇ ನರ ಜಾವಕ್ಕೆ ಕಾಟ್ಟಿದ್ದಾನೆ.

೨. ಪಾಗಾದರೆ ಕ್ರಿಸ್ತನಲ್ಲಿರುವ ಸಂಪೂರ್ಣ ದೇವಪ್ರಕಟಣೆಯಿಂದ ಸತ್ಯವಾದ ದೇವರನ್ನು ತಿಳಿದುಕಾಂಡು, ಭಜಿಸಲಾಲ್ಲದವರು ಏನು ಪೋಳ್ಯಾರು?.

ಕೃತಘ್ನತೆಯ ಫಲವೂ, ಶಿಕ್ಷೆಯೂ ಆದ ವಿಗ್ರಹಾರಾಧನೆ.

೨೧. ಯಾಕಂದರೆ ೧) ದೇವರನ್ನು ತಿಳಿದು, ಅವನನ್ನು ದೇವರೆಂದು ಮಹಿಮೆಪಡಿಸದೆ, ಸ್ತುತಿಸದೆ ೨), ತಮ್ಮ ಯೌೋಚನೆಗಳಲ್ಲಿ ನಿಷ್ಪ್ರಯೌೋಜಕರಾಗಿ ೩), ಅವರ ಬುದ್ಧಿ ಇಲ್ಲದ ಹೃದಯವು ಅಂಧಕಾರವಾಯಿತು. ೨೨. ತಾವು ಜ್ಞಾನಿಗಳೆಂದು ಅಂದುಕಾಂಡು ೪), ಹುಚ್ಚರಾದರು ೫). ೨೩. ಮತ್ತು ಲಯವಿಲ್ಲದ ದೇವರ ಮಹಿಮೆಯನ್ನು, ಲಯವಾಗುವ ನರ ಪಕ್ಷಿ ಚತುಷ್ಪಾದ ಕ್ರಿಮಿಗಳಿಗೆ ಸಮಾನ ರೂಪವಾಗಿ ಮಾರ್ಪಡಿಸಿದರು.

೧. ಅವರ ಅಪರಾಧವೇನಂದರೆ: ಅವರು ದೇವರು ಉಂಟು ಎಂಬುವದನ್ನು ತಿಳಿದರೂ, ಆತನನ್ನು ತಕ್ಕ ಪಾಗೆ ಭಜಿಸದೆ, ಆತನ ದಯೆಯನ್ನು ನೆನಸದೆ, ಪಾಾದರು. ಪೋಗೆ ಭಕ್ತಿಯನ್ನು ಬಿಟ್ಟು, ವಿಷಯಲಂಪಟರಾಗಿ, ಮುಂದೆ ಬರದಿರುವ ಪಾಪಗಳಲ್ಲಿ ಮುಳುಗಿದರು.

೨. ಸೃಷ್ಟಿಯಲ್ಲಿ ಪ್ರತ್ಯಕ್ಷವಾದ ದಿವ್ಯ ಗುಣ ಮಹಿಮೆಯನ್ನು ತಿಳಿದು ದೇವರನ್ನು ಸ್ತುತಿಸುವದೂ, ಆತನ ಉಪಕಾರಗಳನ್ನು ಅನುಭವಿಸಿ ಆತನಿಗೆ ಕೃತಜ್ಞಾಪನೆ ಮಾಡುವದೂ, ಭಕ್ತರಿಗೆ ವಿಹಿತವಾಗಿದೆ.

೩. ಕೃತಘ್ನತೆಯು ಮೂಲ ಪಾಪವಾದ ವಿಗ್ರಹಾರಾಧನೆ ಮುಂತಾದ ನಷ್ಟಕ್ಕೆಲ್ಲಾ ಪೋತುವಾಗಿದೆ; ಪಾಾಗಂದರೆ: ಮನುಷ್ಯರು ತಮ್ಮನ್ನು ನಿರ್ಮಿಸಿ ಸಾಕುತ್ತಾ ಬರುವ ದೇವರಿಗೆ ಕೃತಜ್ಞತಾಸ್ತೋತ್ರವನ್ನೂ, ಭಕ್ತಿಯ ಪ್ರಾರ್ಥನೆಯನ್ನೂ ಅರ್ಪಿಸಿ, ಮನಃಪೂರ್ವಕವಾಗಿ ಆತನನ್ನು ಸೇವಿಸುವ ಆಸಕ್ತಿಯನ್ನು ಬಿಟ್ಟಿಂದಿನಿಂದ, ಪಾಾಗಾದರೂ ಪೂಜೆ ಆಗ ಬೇಕೆಂತ, ಇಷ್ಟಾಕಲ್ಪಿತಭಜನೆಯನ್ನು ಸ್ಥಾಪಿಸಿ, ದೇವರ ಬಲವನ್ನೂ, ಸುತೇಜಸ್ಸನ್ನೂ ಪ್ರಕಟಿಸುವ ಸೃಷ್ಟಿಪದಾರ್ಥಗಳನ್ನು ಪೂಜಿಸ ತಾಡಗಿದರು.

೪. ಈ ನರಪೂಜೆಗಳನ್ನೂ, ಮೃಗಪೂಜೆಗಳನ್ನೂ ಸ್ಥಾಪಿಸಿದವರಲ್ಲಿ ಪೋರಳ ಜನರು ಅತಿಶಯವಾದ ದಿವ್ಯಜ್ಞಾನವುಳ್ಳವರೆನಿಸಿ ಕಾಳ್ಳುವ ಯಾಜಕರಾಗಿದ್ದರು. ಪೋಂದು, ಮಿಚ್ರ, ಗ್ರೋಕ ದೇಶಗಳ ನಿವಾಸಿಗಳಾದ ಪೂರ್ವ ಕಾಲದಲ್ಲಿ ಸಕಲ ವಿದ್ಯಾಭಿವೃದ್ಧಿಯಿಂದ ಪೆಸರ್ವಾಸಿಗಳಾದ ಜನಗಳು ಅಧಿಕ ವಿಗ್ರಹಾರಾಧನಾಸಕ್ತರಾಗಿದ್ದು, ತಮ್ಮ ತಮ್ಮ ದೇವತಾಪೂಜೆಗಳ ಮಹಿಮೆಗೆ ಪಿಗ್ಗುತ್ತಾ ಇದ್ದರು.

೫. ನಾನಾ ವಿಗ್ರಹಗಳ ರಚನೆ ಇಂದಲೇ ದೇವರ ವಿಷಯವಾದ ಅಜ್ಞಾನದ ಮರುಳು ಪೂರ್ಣವಾಗಿ ಪ್ರಕಟವಾಯಿತು; ಪಾಾಗಂದರೆ: ತಮ್ಮ ತಮ್ಮ ದೇವತೆಗಳ ಪ್ರತಿಮೆಗಳನ್ನು ಮರ್ತ್ಯಮನುಷ್ಯರೂಪಕ್ಕೆ ಮಾತ್ರವಲ್ಲ, ಮೃಗರೂಪಕ್ಕೂ, ಅತಿ ನಿಕೃಷ್ಟವಾದ ಜಂತುರೂಪಕ್ಕೂ ಸರಿಯಾಗಿ ರಚಿಸಿದರು. ಗ್ರೋಕರು ವಿಶೇಷವಾಗಿ ನರರೂಪವಾದ ವಿಗ್ರಹಗಳಿಗೆ, ಮಿಚ್ರದವರೂ ಪೋಂದು ಜನರೂ ಕಾನನ್ ದೇಶದವರೂ ನಾನಾ

ತರದ ಮೃಗಗಳಿಗೆ ಪೂಜೆ ಮಾಡಿದರು. ಆದರೂ, ಈ ಪೂಜೆಗಳಿಗಿಂತ ಇಂದಿನ ಜ್ಞಾನಿಗಳಿಗೆ ಹಿತವಾದ ಆತ್ಮಪೂಜೆಯೂ, ಪ್ರಪಂಚಪೂಜೆಯೂ ವಾಸಿಯಂದು ಹೇಳ ಕೂಡದು.

ವಿಗ್ರಹಾರಾಧನೆಗೆ ನೇಮಕವಾದ ಭಯಂಕರ ಆಜ್ಞೆಯ ನಿರ್ಣಯವು.
ಅಸಹ್ಯವಾದ ಜಾರತ್ವವು. ವ. ೨೪—೨೭.

ಈ ಪಾಪಿಗಳನ್ನು ದೇವರು ಅತಿಭಯಂಕರ ಶಿಕ್ಷೆಯಾದ ಪಾಪದಿಂದಲೇ ದಂಡಿಸಿ, ತಮ್ಮ ಪಾಪಗಳಲ್ಲಿಯೇ ಮುಳುಗಿಸಿದನು. ಈ ಪಾಪಗಳಲ್ಲಿ ವಿಗ್ರಹಾರಾಧನೆಗೆ ನಿತ್ಯ ಸಂಬಂಧವಾದ ಜಾರತ್ವವು ಮುಖ್ಯವಾದದ್ದು. ಈ ಪಾಪವು ಮನುಷ್ಯನನ್ನು ಪೂರ್ಣ ಪದಭ್ರಷ್ಟ ಮಾಡುವಂಥಾದ್ದಾಗಿ, ಎಲ್ಲಾದಕ್ಕಿಂತ ಕೆಟ್ಟದ್ದಾಗಿದೆ. ೪ ಮೋಶೆ. ೨೫, ೧. ೫ ಮೋಶೆ. ೧೪. ಆತ್ಮವಾಗಿರುವ ದೇವರ ಆತ್ಮಿಕವಾದ ಭಜನೆಯಿಂದ ತೊಲಗಿದ ಮನುಷ್ಯನು ದೇವಾತ್ಮದ ಶಿಕ್ಷೆಗೆ ಬೇಸರಗೊಂಡು, ಮಾಂಸಕ್ಕೆ ವಿಹಿತವಾದ ವೃತ್ತಿಯಲ್ಲಿ ಶೇರಿ, ಜಾರತ್ವ ಸಹಿತವಾದ ಪೂಜೆಗಳನ್ನು ಸ್ಥಾಪಿಸುತ್ತಾನೆ. ಈ ಪದ್ಧತಿ ಹುಟ್ಟಿದ ಮೇಲೆ, ಜಾರತ್ವವು ಸರ್ವ ಪಾಪ ಪ್ರಮಾಣದ ಪ್ರಕಾರ ಸರ್ವದಾ ಅಭಿವೃದ್ಧಿ ಹೊಂದುತ್ತಾ, ಹೊಸ ಹೊಸದಾದ ದುರಾಚಾರಗಳನ್ನು ಸಾಧಿಸುತ್ತಾ, ಅಧಿಕ ಸ್ವಭಾವವಿರೋಧವಾದ ದುಷ್ಕೃತ್ಯಗಳಿಗೆ ಅತ್ಯಂತವಾಗಿ ಮೆಚ್ಚುತ್ತಾ ಮಿತಿ ಮೀರದೆ ಮಾಣದು.

ವ. ೨೪. ಆದ್ದರಿಂದ ದೇವರು ಅವರನ್ನು ತನ್ನ ಲೋಕರಾಜ್ಯ ನೀತಿಯ ಸ್ವಾಭಾವಿಕ ಧರ್ಮಕ್ಕೆ ಅನುಸಾರವಾಗಿ, ಅವರನ್ನು ಅಂಕೆ ಇಲ್ಲದ ಹೃದಯದ ದೂರಾಶೆಗಳಿಗೆ, ವಿಶೇಷವಾಗಿ ಮೋಹಾತುರಕ್ಕೆ ಒಪ್ಪಿಸುವ ಕಾರಣ, ಅವರು ತಮ್ಮ ದೇಹಗಳನ್ನು ಸ್ವಭಾವವಿರೋಧವಾದ ಕಾಮಕೃತ್ಯದಿಂದ ಕೆಡಿಸಿ, ತಮ್ಮ ಮಾನುಷಮಾನವನ್ನು ಭಂಗ ಮಾಡಿದರು. ೨೫. ಸತ್ಯವಾದ ನಿಜ ದೇವರನ್ನು ಬಿಟ್ಟು, ಇಚ್ಛಾಕಲ್ಪಿತವಾದ ವಿಗ್ರಹಗಳನ್ನು ಪೂಜಿಸಿ, ನಿರ್ಮಾಣಿಕನಿಗಿಂತ ನಿರ್ಮಾಣವನ್ನು ಹೆಚ್ಚಾಗಿ ಸನ್ಮಾನಿಸಿದವರಿಗೆ ಈ ಶಿಕ್ಷೆ ನೇಮಕವಾಯಿತು (ಈ ದುಷ್ಕೃತ್ಯಗಳ ವಿವರದ ನಡುವೆಯಲ್ಲಿ ಪೌಲನು ಕರ್ತನಾದ ದೇವರ ಸ್ತೋತ್ರವನ್ನು ನೋಹನ ಪ್ರಕಾರವಾಗಿಯೂ, ೧ ಮೋಶೆ. ೯, ೨೬., ಮೆಲ್ಕಿಜೇದೆಕನ ಪ್ರಕಾರವಾಗಿಯೂ. ೧ ಮೋಶೆ. ೧೪, ೨೦., ಎಲಿಯೇಜರನ ಪ್ರಕಾರವಾಗಿಯೂ. ೧ ಮೋಶೆ. ೨೪, ೨೭., ಮಾಡಿ, ತನ್ನ ಹೃದಯವನ್ನು ಸಂತೈಸುತ್ತಾನೆ. ಈ ಸ್ತೋತ್ರಕ್ಕೆ ಸರಿಯಾದದ್ದು ರೋಮಿಯಾ. ೯, ೫. ಗಲಾ. ೧, ೫.) ೨೬. ಆದ್ದರಿಂದ ದೇವರು ಅವರನ್ನು ಅತ್ಯಸಹ್ಯವಾದ ಕಾಮವೃತ್ತಿಗಳಿಗೆ ಒಪ್ಪಿಸಿದನು. ಹೀಗಿರಲಾಗಿ, ಅತಿ ಸಾಧ್ವಿಗಳಾಗಿ ಇರ ತಕ್ಕ ಹೆಂಗಸರು ಲಜ್ಜಾರಹಿತರಾಗಿ, ಸ್ವಾಭಾವಿಕ ಪುರುಷಸಂಭೋಗವನ್ನು ಬಿಟ್ಟು, ಸ್ವಭಾವವಿರೋಧವಾದದ್ದನ್ನು ನಡಿಸಿದರು. ೨೭. ಅದೆ ಪ್ರಕಾರವಾಗಿ ಗಂಡಸರು ಸ್ವಾಭಾವಿಕವಾದ ಸ್ತ್ರೀಸಂಭೋಗವನ್ನು ಬಿಟ್ಟು, ಕಾಮಾತುರದಿಂದ ಪುರುಷಮೈಥುನವನ್ನು ಮಾಡುತ್ತಾ ಪರಸ್ಪರವಾಗಿ ಕೆಟ್ಟು ಹೋದರು.

ಸರ್ವ ಧರ್ಮನಾಶಕರವಾದ ಬೇರೆ ಪಾಪಗಳು. ವ. ೨೮—೩೨.

ವ. ೨೮. ಮತ್ತು ಅವರು ತಮ್ಮಲ್ಲಿ ದೇವರ ತಿಳುವಿಕೆಯನ್ನು ಅಸಡ್ಡೆ ಮಾಡಿ ದೇವರನ್ನು ತಳ್ಳಿದ ಕಾರಣ, ದೇವರು ಅವರನ್ನು ಮಾನುಷಮಾನವನ್ನು ಕೆಡಿಸುವ ಕರ್ಮಗಳನ್ನು ನಡಿಸುವ ದುರ್ಬುದ್ಧಿಗೆ ಒಳಗೊಳ್ಳಿಸಿದನು. ೨೯. ಅವರು ನಾನಾ ವಿಧದ ದುರ್ವೃತ್ತಿಗಳನ್ನು ನಡಿಸುತ್ತಾರೆ; ಅವಾವವೆಂದರೆ: ಜಾರತ್ವವು

ರೋಮಾ. ೧, ೩೦—೨, ೨.

ಸ್ವಪ್ರಯೋಜನಕ್ಕಾಗಲಿ ಸ್ವಪ್ರಯೋಜನವನ್ನು ಅರಸದ ದುಷ್ಟತ್ವ ಮಾತ್ರದಿಂದಾಗಲಿ ಮಾಡುವ ಅನ್ಯಾಯವು, ಹೊಟ್ಟಿಕಿಚ್ಚು, ಕೊಲೆಯು, ಜಗಳವು, ಮೋಸವು, ಕುತಂತ್ರವು, ಇತ್ಯಾದಿ. ೩೦. ಅವರು ಕಿವಿನುಲಿಯುವವರೂ, ದೂರುಗಾರರೂ, ಕಾಯಕವಾಚಕದಿಂದ ದೇವದ್ವೇಷಿಗಳೂ, ಬಲಾತ್ಕಾರಿಗಳೂ, ಹೆಮ್ಮೆಯವರೂ, ಯಶೋಭಿಲಾಷಿಗಳೂ, ನವಪಾಪಕಲ್ಪಕರೂ, ತಂದೆ ತಾಯಿಗಳಿಗೆ ಅವಿಧೇಯರೂ, ೩೧. ಸ್ವಛಂದಿಗಳಾದ ಅವಿವೇಕಿಗಳೂ, ಅಪ್ರಾಮಾಣಿಕರೂ, ವಾತ್ಸಲ್ಯಹೀನರೂ, ನಿಷ್ಕರುಣಿಗಳೂ ಆಗಿದ್ದು. ೩೨. ದೇವರ ನ್ಯಾಯಾನುಸಾರವಾಗಿ ಈ ಪಾಪಗಳ ದೆಸೆಯಿಂದೆಲ್ಲಾ ತಮಗೆ ನಿತ್ಯಾಜ್ಞಾನಿರ್ಣಯವು ಬರುವದೆಂದು ತಿಳಿದು ಕೊಂಡಾಗ್ಯೂ, ಅವುಗಳನ್ನು ರಾಗಪರವಶರಾಗಿ ತಾವು ಮಾಡುವದಲ್ಲದೆ, ತಾವು ವಿಷಯಾಸಕ್ತರಲ್ಲದ ಕಾಲದಲ್ಲಿ ಪರರ ದುರಾಚಾರಕ್ಕೆ ಮೆಚ್ಚಿ, ಲಜ್ಜೆಯೂ ಪಶ್ಚಾತ್ತಾಪವೂ ಇಲ್ಲದವರಾಗಿದ್ದಾರೆ.

ಇ) ಯೆಹೂದರೂ, ಪಾಪಿಗಳಾಗಿದ್ದು ರಕ್ಷಣಾವಶ್ಯಕರಾಗಿದ್ದಾರೆ. ಸ. ೨, ೧—೩, ೨೦.

ಒಳ್ಳೆದನ್ನು ತಿಳಿಯುವವನೇ ಸತ್ಯದ ಪ್ರಕಾರ ನ್ಯಾಯ ತೀರಿಸುವ ದೇವರ ದೃಷ್ಟಿಯಲ್ಲಿ ನಿರಪರಾಧಿಯಾಗುವದಿಲ್ಲ. ವ. ೧—೧೧.

ಯೆಹೂದರಿಗೂ, ಪರಜನರಿಗೂ ಅವರವರ ತಿಳುವಿಕೆ ಶಕ್ತಿವ್ಯತ್ಯಾಸಗಳ ಪ್ರಕಾರ ತೀರ್ಪು ಆಗುವದು. ವ. ೧೨—೧೬.

ಹೀಗಿರಲಾಗಿ, ಯೆಹೂದರು ದೇವರ ದೃಷ್ಟಿಯಲ್ಲಿ ನೀತಿಯ ಪ್ರಕಾರ ಪರಜನರಿಗಿಂತ ಅಧಿಕರಲ್ಲ. ವ. ೧೭—೨೯.

ಯೆಹೂದರಿಗೆ ಸ್ಥಿರವಾದ ವಿಶೇಷಾಧಿಕಾರಗಳು ಉಂಟು ಸರಿ. ಸ. ೩, ೧—೮.

ಆದಾಗ್ಯೂ, ಯೆಹೂದರೂ, ಪರಜನರೂ, ಸಾಮಾನ್ಯವಾಗಿ ಶಿಕ್ಷಾಪಾತ್ರರೂ, ರಕ್ಷಣಾವಶ್ಯಕರೂ ಆಗಿದ್ದಾರೆ. ೯—೨೦.

ಈಗ ಅಪೊಸ್ತಲನು ಧರ್ಮ ಕರ್ಮ ವಿಷಯವಾಗಿ ವಿಶೇಷ ತಿಳುವಿಕೆಯುಳ್ಳವರಾಗಿದ್ದರೂ, ಕರ್ಮಕ್ಕೆ ಮೆಚ್ಚುವ ಪರಜನರ ಮಾತನ್ನು ಮೆಲ್ಲಗೆ ಬಿಟ್ಟು, ಕರ್ಮಕ್ಕೆ ಮೆಚ್ಚದೆ, ಕರ್ಮಿಗಳನ್ನು ದೂಷಿಸಿದಾಗ್ಯೂ ಕರ್ಮ ಮಾಡುವ ಯೆಹೂದರ ಮಾತಿಗೆ ಶೇರುತ್ತಾನೆ. ಹ್ಯಾಗಂದರೆ:

ಒಳ್ಳೆದನ್ನು ತಿಳಿಯುವವನೇ ಸತ್ಯದ ಪ್ರಕಾರ ನ್ಯಾಯ ತೀರಿಸುವ ದೇವರ ದೃಷ್ಟಿಯಲ್ಲಿ ನಿರಪರಾಧಿಯಾಗುವದಿಲ್ಲ. ಸ. ೨. ವ. ೧—೧೧.

ವ. ೧. ಆದ್ದರಿಂದ ದೇವರ ನ್ಯಾಯದ ಸತ್ಯವಾದ ತೀರ್ಪು ಬಲ್ಲವನಾದ ನೀನು ಅದೇ ಪಾಪ ಮಾಡಿದರೆ, ಪ್ರತಿವಾದಾಸಕ್ತನಾಗಿದ್ದೀ. ೨. ಯಾಕಂದರೆ: ದೇವರು ಸತ್ಯದ ಪ್ರಕಾರ ತೀರ್ಪು ಮಾಡುತ್ತಾನೆಂದು,

೬೧೪ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.
ರೌಮಾ. ೨, ೩--೧೪.

ಬಲ್ಲೆವು. ೩. ಆದರೆ ಪರರಿಗೆ ನ್ಯಾಯ ತೀರಿಸುವ ಮನುಷ್ಯನಾದ ನೀನು ಅವರಂತೆ ಪಾಪ ಮಾಡಿದ್ದಲ್ಲಿ, ದೇವರ ತೀರ್ಪಿಗೆ ತಪ್ಪಿಸಿ ಕೊಳ್ಳಲಾಪೆ ಯಂತ, ನೆನಸುತ್ತೀಯೋ? ೪. ಇಲ್ಲವೇ ತನ್ನ ಪ್ರಸಾದಗಳನ್ನು ನಮಗೆ ನೀಡಿ, ಪ್ರತಿಫಲಕ್ಕಾಗಿ ಶೇನೆ ಹೊತ್ತು ಕಾದು ಕೊಂಡು ಪಾಪಿಯನ್ನು ಸಹಿಸುತ್ತಾ, ಶಿಕ್ಷೆಯನ್ನು ತಡಿಯುತ್ತಾ ಇರುವ ದೇವರ ಕೃಪೆಯ ಔದಿಕ್ಯವನ್ನು ಅಸಡ್ಡೆ ಮಾಡುತ್ತೀಯೊ? ದೇವರ ಈ ಕೃಪೆ ನಿನ್ನಲ್ಲಿ ಪಶ್ಚಾತ್ತಾಪ ಹುಟ್ಟಿಸಲುದ್ದಿಶ್ಯವಾದದ್ದೆಂದು, ಅರಿಯೆಯಾ? ೫. ಪಶ್ಚಾತ್ತಾಪ ವಿಲ್ಲದ ನಿಶ್ಚಿಂತ ಹೃದಯವುಳ್ಳ ನೀನು ಯೇಸುವಿನ ಪುನರಾಗಮನದಲ್ಲಿ ದೇವರು ಎಲ್ಲರಿಗೂ, ದೂತರ ಮುಂದೆಯೂ, ಮನುಷ್ಯರ ಮುಂದೆಯೂ ನ್ಯಾಯ ತೀರಿಸುವಾಗ ನಿನ್ನ ಮೇಲೆ ಬೀಳ ತಕ್ಕ ಶಿಕ್ಷೆಯನ್ನು ಹೆಚ್ಚಿಸುತ್ತಾ, ಬರುತ್ತಿಯೊ? ೬. ಆಗ ಒಬ್ಬೊಬ್ಬನಿಗೆ ಇಹವೃತ್ತ್ಯನುಸಾರವಾದ ಫಲ ಶಿಕ್ಕುವದು ವ. ೧೨. ಲೂಕ. ೧೨, ೪೭. ೪೮. ಮತ್ಥಾ. ೧೧, ೨೦. ಇತ್ಯಾದಿ. ೭. ಸತ್ಕರ್ಮನಿರತರಾಗಿ ದೇವರ ಅನ್ವೇಷ್ಯದಲ್ಲಿಯೇ ಅನುಭವಿಸ ತಕ್ಕ ಮಹಿಮೆಯನ್ನೂ, ಮಾನವನ್ನೂ, ನಿರ್ಯವನ್ನೂ ಅರಸಿದವರಿಗೆ ದೇವರು ನಿತ್ಯಜೀವವನ್ನೂ, ಅದಕ್ಕೆ ಸಂಬಂಧವಾದ ನಿತ್ಯ ಮಹಿಮೆಯನ್ನೂ ದಯ ಮಾಡುವನು. ೮. ಧರ್ಮದ್ವೇಷ ದೇವದ್ರೋಹ ದೇವಜ್ಞಾನ ಪರಿತ್ಯಾಗಗಳನ್ನು ನಡಿಸುವವರಿಗೆ ಜಾಜ್ವಲ್ಯಮಾನ ರೌದ್ರವು ಪ್ರಾಪ್ತವಾಗುವದು. ೯. ದುಷ್ಕರ್ಮ ನಿರತರಿಗೆಲ್ಲಾ, ವಿಶೇಷವಾಗಿ ಅಧಿಕ ಪ್ರಾಪ್ತರಾಗಿದ್ದು, ಅಧಿಕವಾದ ಲೆಖ್ಖವನ್ನು ಒಪ್ಪಿಸ ತಕ್ಕ ಯೆಹೂದರಿಗೆ, ಮತ್ತು ಪರಜನರಿಗೆ ಸಹ, ಕರುಣಾರಹಿತವಾದ ಬಹಿರಾಂತರ್ಯ್ಯಾಪದ್ರವವು ಉಂಟಾಗುವದು. ೧೦. ಆದರೆ ಮಾನ, ಮಹಿಮೆ, ಸಮಾಧಾನ, ಆಶೀರ್ವಾದ, ಜೀವ ಮುಂತ್ತಾದ ಪ್ರಸಾದಗಳು ಸತ್ಕರ್ಮಿಗಳಿಗೆಲ್ಲಾ, ದೇವರ ಮಾರ್ಗವನ್ನು ಸ್ಪಷ್ಟವಾಗಿ ತಿಳಿದು ಚನ್ನಾಗಿ ಕೈಕೊಳ್ಳ ತಕ್ಕ ಯೆಹೂದರಿಗೆ ವಿಶೇಷವಾಗಿ, ಮತ್ತು ಪರಜನರಿಗೂ, ಪ್ರಾಪ್ತವಾಗುವವು. ೧೧. ಯಾಕಂದರೆ ದೇವರಲ್ಲಿ ಮುಖದಾಕ್ಷಿಣ್ಯವಿಲ್ಲಾ. ೫ ಮೋಶೆ. ೧೦, ೧೭. ೧ ಸಮು. ೧೬, ೭. ೨ ನಪ. ೧೯, ೭. ಈಯೊಬ ೩೪, ೧೯. ಅಪೊ. ಕ್ರಿ. ೧೦, ೩೪. ಗಲ. ೨, ೬. ದೇವರು ಬಹಿರ್ವಿಷಯಗಳ ಪ್ರಕಾರವಲ್ಲ, ಧರ್ಮಾಧರ್ಮವೆಂಬ ಆಂತರೀಯ ಯೋಗ್ಯತಾಯೋಗ್ಯತೆಗಳ ಪ್ರಕಾರ, ಮನುಷ್ಯರಿಗೆ ನ್ಯಾಯ ತೀರಿಸುತ್ತಾನೆ.

ಯೆಹೂದರಿಗೂ, ಪರಜನರಿಗೂ ಅವರವರ ತಿಳುವಿಕೆ ಪ್ರಕ್ರಿಯೆ ಸ್ಥಿತಿಗಳ ಪ್ರಕಾರ ಶಿಕ್ಷೆಯು ಆಗುವದು. ಮ. ೧೨--೧೬.

೧೨. ಹ್ಯಾಗಂದರೆ ನ್ಯಾಯಪ್ರಮಾಣವಿಲ್ಲದೆ ಪಾಪ ಮಾಡಿದವರಷ್ಟು ನ್ಯಾಯಪ್ರಮಾಣವಿಲ್ಲದೆ ನಾಶವಾಗುವರು ೧). ಆದರೆ ನ್ಯಾಯಪ್ರಮಾಣದಾಳಿಗೆ ಪಾಪ ಮಾಡಿದವರಷ್ಟು ೨) ನ್ಯಾಯಪ್ರಮಾಣದಿಂದ ಶಿಕ್ಷೆಯನ್ನು ಹೊಂದುವರು. ೧೩. ಯಾಕಂದರೆ ನ್ಯಾಯಪ್ರಮಾಣ ಕೇಳಿದವರು ದೇವರ ಮುಂದೆ ನೀತಿವಂತರಲ್ಲ ೩), ನ್ಯಾಯಪ್ರಮಾಣ ಮಾಡುವವರೇ ನೀತಿನಿರ್ಣಯ ಪಡುವರು. ೧೪. ಹ್ಯಾ

ರೌಮಿಯಾ. ೨, ೧೫. ೧೬.

ಗಂದರೆ ನ್ಯಾಯಪ್ರಮಾಣವಿಲ್ಲದ ಜನಾಂಗಗಳು ಸ್ವಭಾವದಿಂದ ನ್ಯಾಯಪ್ರಮಾಣದವುಗಳನ್ನು ಮಾಡುವಾಗ ೪), ಅವರು ನ್ಯಾಯಪ್ರಮಾಣವಿಲ್ಲದವರಾಗಿದ್ದು, ತಮಗೆ ತಾವೇ ನ್ಯಾಯಪ್ರಮಾಣವಾಗಿದ್ದಾರೆ. ೧೫. ಅವರ ಮನಸ್ಸಾಕ್ಷಿ ೫) ಕೂಡ ಸಾಕ್ಷಿ ಕೊಟ್ಟು, ಅವರ ಯೋಚನೆಗಳು ಒಂದಕ್ಕೊಂದು ತಪ್ಪು ಹೊರಿಸುತ್ತಾ, ಇಲ್ಲವೆ ಪ್ರಶ್ನೋತ್ತರ ಕೊಡುತ್ತಾ, ಇರುವದರಿಂದ, ಅವರು ತಮ್ಮ ಹೃದಯಗಳಲ್ಲಿ ಬರೆದಿರುವ ನ್ಯಾಯಪ್ರಮಾಣದ ಕ್ರಿಯೆಯನ್ನು ೬) ತೋರಿಸುತ್ತಾರೆ. ೧೬. ದೇವರು ಮನುಷ್ಯರ ರಹಸ್ಯವಾದವುಗಳನ್ನು ಕುರಿತು, ನನ್ನ ಸುವಾರ್ತೆಯ ಪ್ರಕಾರ, ಯೇಸು ಕ್ರಿಸ್ತನ ಮುಖಾಂತರ ನ್ಯಾಯ ತೀರಿಸುವ ದಿವಸದಲ್ಲಿಯೇ ೭).

೧. ಯೆಹೂದರಿಗೂ ಪರಜನರಿಗೂ ಅವರವರ ನ್ಯಾಯಾನುಸಾರವಾಗಿ ತೀರ್ಪು ಆಗುವಲ್ಲಿ, ಎಲ್ಲರು ಅಪರಾಧಿಗಳಾಗಿ ಕಾಣಿಸುವರು. ಮೋಶೆಯ ನಿಯಮ ವಿಲ್ಲದ ಪರಜನರು ೧ ಕೊರಿ. ೯, ೨೧. ಅದರ ಪ್ರಕಾರವಲ್ಲ, ಮನಸ್ಸಾಕ್ಷಿಯ ನಿಯಮದ ಪ್ರಕಾರ ತೀರ್ಪನ್ನು ಪಡೆಯಾಂವಿ, ಅಷ್ಟು ಕಠಿಣವಲ್ಲದ ಶಿಕ್ಷೆಗೆ ಗುರಿಯಾಗಿದ್ದಾರೆ.

೨. ಅಂದರೆ ನಿಯಮವುಳ್ಳವರಾಗಿದ್ದು. ಅವರಿಗೆ ಪ್ರಕಟವಾದ ದೇವರ ಆಜ್ಞೆಯು ಅವರಿಗೆ ವಿರೋಧವಾಗಿ, ಸಾಕ್ಷಿ ಕೊಡುವದು. ಪೌಲನು ಮೋಶೆಯ ನಿಯಮಕ್ಕೆ ನಿಯಮವೆಂದು, ಗೊತ್ತು ಮಾಡುತ್ತಾನೆ. ಎಲ್ಲಾ ಮನುಷ್ಯರಿಗೂ, ಸಾಮಾನ್ಯವಾದ ನಿಯಮ ಉಂಟೆಂದು, ಪೌಲನು ಈ ಸಂಧಿಯಲ್ಲಿಯೂ ಸೂಚಿಸುತ್ತಾನೆ. ಆದಾಗ್ಯೂ ಅದು ಪರಜನರಲ್ಲಿ ಸಾರ್ಥಕವಲ್ಲದ್ದರಿಂದ, ಅದಕ್ಕೆ ನಿಯಮವೆಂದು ಹೇಳುವದಿಲ್ಲ.

೩. ಈ ವಚನದಲ್ಲಿ ಪೌಲನು ಎಹೂದರ ಧರ್ಮಗರ್ವವನ್ನು ತಗ್ಗಿಸುವದಕ್ಕೆ ನಿಯಮವುಳ್ಳ ಎಹೂದರು ನಿಯಮವನ್ನು ಮೀರಿದರೆ, ನಿಯಮವಿಲ್ಲದವರಾಗುತ್ತಾರೆಂತಲೂ, ಮೋಶೆಯ ನಿಯಮವಿಲ್ಲದ ಪರಜನರು ಮನಸ್ಸಾಕ್ಷಿನಿಯಮವನ್ನು ಕೈಕೊಂಡಲ್ಲಿ, ನಿಯಮವಂತರಾಗುತ್ತಾರೆಂತಲೂ, ಸ್ಥಾಪಿಸುತ್ತಾನೆ.

೪. ಮೀರುವವರಿಗೆ ತೀರ್ಪು ಮಾಡುವ, ನ್ಯಾಯಾನ್ಯಾಯ ಭೇದವನ್ನು ತಿಳಿಸುವ ಒಂದು ನಿಯಮವು ಅವರ ಅಂತಃಕರಣದಲ್ಲಿ ಉಂಟೆಂಬುವದು ಅವರ ನಡತೆಯಿಂದಲೆ ಕಂಡು ಬರುತ್ತದೆ.

೫. ಮನಸ್ಸಾಕ್ಷಿಯಂದರೆ, ನ್ಯಾಯಾನ್ಯಾಯ ಭೇದದ ಸ್ವಾಭಾವಿಕವಾದ ತಿಳುವಿಕೆ. ಈ ತಿಳುವಿಕೆಯುಳ್ಳ ಮನುಷ್ಯನು ಪಾಪ ಮಾಡಿದರೆ, ತನ್ನನ್ನು ತಾನೇ ಸಂತೈಸ ಬೇಕೆಂದು, ನಾನಾ ವಿಧವಾದ ವ್ಯಾಜಗಳನ್ನು ಕಲ್ಪಿಸುತ್ತಾ, ಮತ್ತೂ ಅವು ಅಸಂಗತವೆಂದು ತಿಳಿಯುತ್ತಾ, ಆಂತರ್ಯವಾದವನ್ನು ನಡಿಸುತ್ತಾನೆ.

೬. ಅಂದರೆ, ಮನುಷ್ಯನ ನ್ಯಾಯವಾದ ನಡತೆಯಾವದೆಂಬ ಸಹಜ ಜ್ಞಾನವು ಗುರುಬೋಧೆಯಾದರೂ, ಶಾಸ್ತ್ರವಾದರೂ ಇಲ್ಲದವರಿಗೂ ಉಂಟು.

೭. ಮನುಷ್ಯರ ಮನಸ್ಸಾಕ್ಷಿಯಲ್ಲಿ ಇಹದಲ್ಲಿ ನಡದವಾದವೆಲ್ಲಾ ನನ್ನ ಪ್ರಸಂಗಾನುಸಾರವಾಗಿ ದೇವರು ಯೇಸು ಕ್ರಿಸ್ತನ ಮುಂಖಾಂತರ ಅಪಾ. ಕ್ರಿ. ೧೦, ೪೨; ೧೭, ೩೧. ೧ ಪೇತ್ರ. ೪, ೫. ಲೋಕಕ್ಕೆ ನ್ಯಾಯ ತೀರಿಸುವ ದಿವಸದಲ್ಲಿ ಪೂರ್ಣ ಪ್ರಕಟವಾಗುವದು. ಯಾಕಂದರೆ: ಆತನು ಕ್ರೈಸ್ತರಿಗೆ ಮಾತ್ರವಲ್ಲ, ತಾನು ಸಾಮಾನ್ಯವಾದ ಕೃಪೆಯ ಸಾಧನೆಯಿಂದ ತನ್ನ ರಾಜ್ಯದ ಬಾಧ್ಯತೆಗಾಗಿ ಹುಡುಕಿಸುತ್ತಾ ಬಂದ ಪರಜನರಿಗೂ, ವಿಶೇಷವಾದ ಕೃಪೆಯ ತಾಳಗದಿಂದ ಸಾಧಿಸುತ್ತಾ ಬಂದ ಎಹೂದರಿಗೂ ಅರಸನೂ, ನ್ಯಾಯಾಧಿಪತಿಯೂ ಆಗಿದ್ದಾನೆ.

ಎಹೂದರು ದೇವರ ದೃಷ್ಟಿಯಲ್ಲಿ ನೀತಿಯ ಪ್ರಕಾರ ಪರಜನರಿಗಿಂತ ಅಧಿಕರಲ್ಲಾ.
ವ. ೧೭—೨೯.

ಎಹೂದರ ವಿಶೇಷಾಧಿಕಾರಗಳು.

ವ. ೧೭. ಎಹೂದನಾದ ನಿನಗೆ ವಿಶೇಷ ಲಕ್ಷಣಗಳುಂಟು; ಯಾವಾವೆಂದರೆ: ಪೂರ್ವದ ಮಹಾಕಾರ್ಯಗಳ ಜ್ಞಾಪಕಾರ್ಥವಾದ ಹೆಸರು, ನಿಯಮವು, ದೇವಜನಾಂಗವೆಂಬ ಶ್ರೇಷ್ಟತ್ವವು. ೧೮. ನಿಯಮದಿಂದ ದೇವರ ಚಿತ್ತವನ್ನು ಕಲಿತು ಕೊಂಡು, ನಿಯಮದ ದುರ್ಗ್ರಾಹ್ಯಸ್ಥಳಗಳ ವಿಷಯವಾದ ಬೋಧಕರ ತರ್ಕವಾದಗಳ ಭೇದಗಳನ್ನು ವಿಶೇಷಿಸ ಬಲ್ಲೆ. ೧೯. ಇದಲ್ಲದೆ, ನೀವು ಹೆಮ್ಮೆಯ ಹೆಚ್ಚಿಕೆಯಿಂದ ಹೇಳಿಕೊಳ್ಳುವ ಪ್ರಕಾರ, ಕುರುಡರನ್ನು ನಡಿಸುವವನಾಗಿಯೂ, ಕತ್ತಲೆಯಲ್ಲಿರುವವರ ಬೆಳಕಾಗಿಯೂ, ೨೦. ಅಂದರೆ, ಮೂಢರ ಉಪಾಧ್ಯಾಯನಾಗಿಯೂ, ಭೋಳೆಯರ ಬೋಧಕನಾಗಿಯೂ, ಇದ್ದೇನೆಂಬ ಅಹಂಕಾರವನ್ನು ನಿಯಮದಲ್ಲಿ ನಿನಗೆ ಸತ್ಯವೇದವುಂಟಾಯಿತೆಂಬುವದರಿಂದ ಸ್ಥಾಪಿಸುತ್ತಿ.

ಅವುಗಳಿಗೆ ಅಯೋಗ್ಯರಾಗಿದ್ದಾರೆ.

ವ. ೨೧. ಆದರೆ ನೀನು ಮತ್ತೊಬ್ಬರನ್ನು ಬೋಧಿಸುತ್ತಾ ನಿನ್ನನ್ನು ನೀನೆ ಬೋಧಿಸುವದಿಲ್ಲ; ಮತ್ತೊಬ್ಬರಿಗೆ ಮಾಡ ಬಾರದೆಂದು ನೀನು ಹೇಳುವ ಚೌರ್ಯ, ೨೨. ವ್ಯಭಿಚಾರ, ದೇವಸ್ವಾಪಹಾರ ಮತ್ತಾ. ೨೧, ೧೩. ಮುಂತಾದ ಪಾಪಗಳನ್ನು ನೀನೇ ಮಸೆಯಾಗಿ ನಡಿಸುತ್ತಿ. ೨೩. ನಿಯಮಾ ಅಭಿಮಾನಿಯಾಗಿ, ನಿಯಮಾತಿಕ್ರಮಣದಿಂದ ದೇವರನ್ನು ಅವಮಾನ ಪಡಿಸುತ್ತಿ. ೨೪. ನಿಮಗಾಗಿ ದೇವರ ನಾಮವು ಪರಜನರಲ್ಲಿ ದೂಷ್ಯವಾಗುತ್ತದೆಂದು, ನಿಮ್ಮ ಸ್ವಂತ ಪರಿಶುದ್ಧ ಬರಹವು ನಿಮ್ಮ ಮೇಲೆ ಅಪರಾಧ ಹೊರಿಸುತ್ತದಲ್ಲ? ಎಶಾ. ೫೨, ೫. ಹೆಜೆ. ೩೬, ೨೦—೨೩. ೨ ಸಮು. ೧೨, ೧೪. ಆಗಿನ ಯೆಹೂದರಿಗೆ ಈಗಿನ ಕ್ರೈಸ್ತರು ಸದೃಶರಾಗಿದ್ದಾರ ಕಟಾ!

ಆದ್ದರಿಂದ ಈ ವಿಶೇಷಾಧಿಕಾರಗಳೆಲ್ಲಾ ನಿರರ್ಥಕವಾಗಿವೆ.

ವ. ೨೫. ಆದರೆ ದೇವಜನಾಂಗದ ಬಹಿರನ್ಯೋನ್ಯಚಿನ್ಹೆಯಾದ ಪರಿಛೇದನೆಯು ಅದಕ್ಕೆ ಸಂಬಂಧವಾದ ನಿಯಮವನ್ನು ಕೈಕೊಳ್ಳುವ ಪಕ್ಷದಲ್ಲಿಯೇ ಸಾರ್ಥಕವಾಗಿದೆ. ನಿಯಮವನ್ನು ಕೈಕೊಳ್ಳದಿದ್ದರೆ, ದೇವರ ಜನಾಂಗಕ್ಕೆ ಪರನಾಗಿದ್ದು ಪರಿಛೇದನೆ ಇಲ್ಲದ ಪರಜನರವನಿಗಿಂತ ನೀನು ಅಧಿಕನಲ್ಲ. ೨೬. ಆದರೆ ಪರಿಛೇದನೆ ಇಲ್ಲದವನು ನಿಯಮಧರ್ಮವನ್ನು ಕೈಕೊಂಡರೆ, ಅವನು ನಿರ್ದಾರ ಜನಾಂಗದಲ್ಲಿ ಶೇರಿದ ಹಾಗಾಯಿತಲ್ಲ? ೨೭. ಹಾಗಾದರೆ ದೇವರ ಲಿಖಿತ ನಿಯಮವನ್ನೂ, ಆತನ ನಿರ್ದಾರ ಚಿನ್ಹೆಯನ್ನೂ ಹೊಂದಿ, ಆತನ ಆಜ್ಞೆ ಮೀರುವವನಾದ ನಿನಗೆ ವಿರೋಧವಾಗಿ ಜನ್ಮದಿಂದ ದೇವಜನಾಂಗಕ್ಕೆ ಹೊರಗಾಗಿದ್ದು, ನಿಯಮವನ್ನು ಕೈಕೊಳ್ಳುವವನು ಸಾಕ್ಷಿ ಕೊಡುವನು. ೨೮. ಯಾಕಂದರೆ: ಬಹಿರಂಗಮಾತ್ರದವನು ನಿಜ ಇಸ್ರಯೇಲನವನೂ, ನಿಜ ಕ್ರೈಸ್ತನೂ ಅಲ್ಲ; ದೇಹಕ್ಕೆ ಮಾತ್ರ ಆಗುವಂಥಾದ್ದು ನಿಜವಾದ ಪರಿಛೇದನೆಯೂ, ಸ್ನಾನವೂ ಅಲ್ಲ. ೨೯. ಆಂತರ್ಯಹೃದಯದ ಗುಪ್ತಭಾವನೆ ಪ್ರಕಾರ ದೇವಪರಿಗಣಿತ ಜನಾಂಗದವನೂ, ಅಬ್ರಹಾಮ ಇಸ್ರಯೇಲರ ಮಗನೂ ಆಗಿರುವವನೇ ನಿಜ ಯೆಹೂದನಾಗಿದ್ದಾನೆ. ನಿಯಮದ

ರೋಮಾ. ೩, ೧—೪.

ಬಹಿರಾಚರಣೆಯಿಂದಾಗುವ ಪರಿಚ್ಛೇದನವಲ್ಲ, ದೇವರ ಆತ್ಮದಿಂದ ಅದ್ಭುತ ರೀತಿಯಾಗಿ ಉಂಟಾಗುವ ಹೃತ್ಪರಿಚ್ಛೇದನವೇ ನಿಜವಾದದ್ದು. ಸ. ೬, ೧೪; ೭, ೬. ಕೊಲೊ. ೨, ೧೧. ಈ ಪ್ರಕಾರ. ೫ ಮೋಶೆ. ೧೦, ೧೬; ೩೦, ೬ಲ್ಲಿ ನೇಮಕವಾದ ಹೃತ್ಪರಿಚ್ಛೇದನವು ಆಗುತ್ತದೆ. ನಿಜವಾದ ಇಂಥಾ ಇಸ್ರಯೇಲನವ ನೇ ದೇವರ ದೃಷ್ಟಿಯಲ್ಲಿ ಶ್ಲಾಘ್ಯನಾಗಿದ್ದಾನೆ.

ಯೆಹೂದರಿಗೆ ಸ್ಥಿರವಾದ ವಿಶೇಷಾಧಿಕಾರಗಳು ಉಂಟೇ ಸರಿ.

ಸೆ. ೩, ೧—೮.

ಅವಿಶ್ವಾಸದ ಪ್ರತಿಕಕ್ಷಿವಾದವು ವ್ಯರ್ಥವಾದದ್ದು.

ವ. ೧. ಹಾಗಾದರೆ ಯೆಹೂದರ ಶ್ರೇಷ್ಠತ್ವವು ಎಲ್ಲಿ? ಪರಿಚ್ಛೇದನೆಯ ಪ್ರಯೋಜನವೇನು? ೨. ಅದು ಎಲ್ಲಾ ವಿಷಯವಾಗಿ ಅಧಿಕವಾದದ್ದು; ಯಾಕಂದರೆ: ಕೃಪೆಯ ಒಡಂಬಡಿಕೆಯ ಆಶೀರ್ವಾದವು ಜೀವನವೃತ್ತಿಗಳಿಗೆಲ್ಲಾ ಬರುತ್ತದೆ. ಪ್ರಥಮವಾದ ಮೂಲಶ್ರೇಷ್ಠತ್ವವು ಸ. ೯, ೪. ೫. ಏನಂದರೆ ದೇವರ ಪ್ರಕಟನೆಗಳೂ ವಾಗ್ದತ್ತಗಳೂ ಅವರಿಗೆ ಒಪ್ಪಿಸಿರುತ್ತವೆ.

೩. ಯಾಕಂದರೆ, ಕೆಲಬರು ೧) ನಂಬದೆ ಹೋಗಿದ್ದರೆ, ಏನು? ಅವರ ಅಪನಂಬಿಕೆಯು ೨) ದೇವರ ನಂಬಿಕೆಯನ್ನು ವ್ಯರ್ಥ ಮಾಡುವದಾಯ್ತೆ? ೪. ಆಗದು. ೪. ದೇವರು ಸತ್ಯವಂತನಾಗಿರಲಿ ೩); ಆದರೆ ಎಲ್ಲಾ ಮನುಷ್ಯರು ಸುಳ್ಳುಗಾರರು—ನೀನು ನಿನ್ನ ವಾಕ್ಯಗಳಲ್ಲಿ ನೀತಿನಿರ್ಣಯ ಪಡುವ ಹಾಗೆಯೂ, ನಿನಗೆ ನ್ಯಾಯಶಿರ್ವಿಕೆ ಆಗುವಾಗ್ಯೆ ಜಯಿಸುವ ಹಾಗೆಯೂ ಎಂದು ಬರೆದಿರುವ ಪ್ರಕಾರ ೪).

೧. ಪರಜನರವನಾಗಿದ್ದ ಕ್ರೈಸ್ತನು ಒಂದು ವೇಳೆ ಯೆಹೂದರಲ್ಲಿ ಹೆಚ್ಚು ಮಂದಿ ನಂಬದೆ ಹೋದಾದರೆಂದು, ಹೇಳುತ್ತಿದ್ದನು. ಆದರೆ ಪೌಲನು ಸ. ೧೧, ೧೭. ೧ ಕೊರಿ. ೧೦, ೭. ೧ ಥೆಸ್ಸಲೋ. ೪, ೧. ಮುಂತಾದ ಸ್ಥಳಗಳಿಗೆ ಅನುಸಾರವಾಗಿ, ದೇವರು ತನ್ನ ಜನಾಂಗವನ್ನು ತಳ್ಳಿ ಬಿಡದೆ, ಅದರ ವಿಷಯವಾಗಿ ವಿಶೇಷ ರಕ್ಷಣಾಕಾರ್ಯಗಳನ್ನು ಪೂರೈಸುವ ಆಲಾಚನೆಯಲ್ಲಿದ್ದಾನೆಂಬುವದನ್ನು (ಇದು ೧೧ನೆ ಸಂಧಿಯಲ್ಲಿ ಹೆಚ್ಚಾಗಿ ವಿವರಿಸಿ ಅದೆ.) ಸೂಚಿಸುವದಕ್ಕೆ, ಅವಿಶ್ವಾಸಿಗಳು ಸ್ವಲ್ಪ ಮಂದಿಯಾಗಿದ್ದಾರೆಂದು, ಬರೆಯುತ್ತಾನೆ.

೨. ಗ್ರೀಕ ಭಾಷೆಯಲ್ಲಿ ಪಿಸ್ತಿಸ್ ಎಂಬ ಶಬ್ದಕ್ಕೆ ಪ್ರಾಮಾಣಿಕತ್ವವು, ವಿಶ್ವಾಸವು ಎಂಬ ಎರಡು ಅರ್ಥ ಉಂಟು. ಮನುಷ್ಯರ ಅಪ್ರಾಮಾಣಿಕತ್ವದಿಂದ ದೇವ ಪ್ರಾಮಾಣಿಕತ್ವವು ವಿಶೇಷವಾಗಿ ಪ್ರಕಾಶಿಸುತ್ತದೆ.

೩. ದೇವರು ಸತ್ಯವಂತನೆ ಸರಿ, ಮನುಷ್ಯರು ಪಾಪಿಗಳಾದ್ದರಿಂದ ಸತ್ಯವಂತರಲ್ಲ. ಆದರೆ ದೇವರು ಇಂಥಾ ವಂಚಕರಾದ ಅಪ್ರಾಮಾಣಿಕರಿಗೆ ಪ್ರಾಮಾಣಿಕನಾಗಿಯೂ ಸತ್ಯವಂತನಾಗಿಯೂ ಇದ್ದಾನೆಂಬುವದು ಪ್ರಕಟವಾಗುವದರಿಂದಲೇ ಆತನ ಮಹಿಮೆ ಅಧಿಕ ಪ್ರತಿಷ್ಠೆಯನ್ನು ಪಡೆಯುತ್ತದೆ.

೪. ಇದು ದಾವೀದನ ಮಾನಸಾಂತರವಾಕ್ಯವು. ಕೀರ್ತ. ೫೧, ೬. ಮನುಷ್ಯನ ಪಾಪವು ಪಾಪಿಯ ಶಿಕ್ಷೆಯಿಂದಲಾಗಲಿ ಮಾನಸಾಂತರದಿಂದಲಾಗಲಿ ದೇವರ ಬುದ್ಧಿ ಬಲ ನೀತಿ ಪ್ರೀತಿಗಳು ಪ್ರಕಾಶಿಸುವದಕ್ಕೆ ಹೇತುವಾಗುತ್ತದೆ.

೬೧೮ ಅಪೌ. ಚಿ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.

ರೌಮಿಗ. ೩, ೨೩—೨೦.

ಲಘು ಮನಸ್ಸಿನ ಪ್ರತಿಕಕ್ಷಿವಾದವು ವ್ಯರ್ಥವಾದದ್ದು.

ವ. ೨೩. ಆದರೆ ನಮ್ಮ ಅನೀತಿಯಿಂದ ದೇವರ ನೀತಿಯು ಅತಿಶಯ ಪ್ರತಿಷ್ಠೆಯಾಗುವದಾದರೆ, ಅಂಕೆ ಇಲ್ಲದ ದುಷ್ಟನೊಬ್ಬನು, ಹಾಗಾದರೆ ದೇವರು ಪಾಪಿಗೆ ಕೋಪ ಮಾಡುವದು ಅನ್ಯಾಯವೆಂದು ಪಾಪ ಮಯವಾದ ವಂಚಕ ಬುದ್ಧಿಯಿಂದ ಹೇಳ್ಯಾನು. ೬. ಈ ಮಾತು ಆಗದು. ಹಾಗಾದರೆ ದೇವರು ಲೋಕ ನ್ಯಾಯಾಧಿಪತಿಯಾಗಿದ್ದು, ಸರ್ವಲೋಕರಾಜ್ಯಭಾರ ಮಾಡುವವನಾಗಿ, ಅನ್ಯಾಯವನ್ನು ಶಿಕ್ಷಿಸುವದು ಹ್ಯಾಗೆ? ೭. ಯಾಕಂದರೆ: ಪ್ರತಿ ದುರಾತ್ಮನು, ನನ್ನ ಮಿಥ್ಯದಿಂದ ದೇವರ ಸತ್ಯವು ಪ್ರತಿಷ್ಟೆಯಾಗುವದಾದರೆ, ನನಗೆ ನನ್ನ ಪಾಪದ್ದೆಸೆಯಿಂದ ಆಜ್ಞಾನಿರ್ಣಯವಾಗ ಬಾರದೆಂದು, ಹೇಳ್ಳ ಬಹುದು. ೮. ಇದಲ್ಲದೆ, ಹಾಗಾಗಿದ್ದರೆ, ನಾವು ಖೋಧಿಸುತ್ತೇವೆಂದು, ದೂಷಕರು ಸುಳ್ಳಾಗಿ ಹೇಳ್ಳುವ ಪ್ರಕಾರ, ಮೇಲು ಹುಟ್ಟುವ ಹಾಗೆ ಕೇಡು ಮಾಡುವಾ ಯೆಂಬದು ಬದ್ಧವಾಗುವದು. ಆದರೆ ಈ ಭಾವನೆ ಅಸಹ್ಯವಾದದ್ದೇ ಸರಿ.

ಆದಾಗ್ಯೂ ಯೆಹೂದರೂ, ಪರಜನರೂ ಸಾಮಾನ್ಯ ಶಿಕ್ಷಾಪಾತ್ರರೂ, ರಕ್ಷಣಾವಶ್ಯಕರೂ ಆಗಿದ್ದಾರೆ. ಸ. ೩, ೯—೨೦.

ವ. ೯. ಹೀಗಿರಲಾಗಿ ಯೆಹೂದರೂ ದೇವರ ಮುಂದೆ ಸಲ್ಲುವ ನೀತಿ ಯಂಬ ಮುಖ್ಯ ಕಾರ್ಯದಲ್ಲಿ ಶ್ರೇಷ್ಟತ್ವವಿಲ್ಲದವರು ಯೆಹೂದರೂ, ಪರಜನರೂ ಸಾಮಾನ್ಯವಾಗಿ ಪಾಪಕ್ಕೊಳಗಾಗಿದ್ದಾರೆ ಎಂಬುವದು ಬುದ್ಧಿಸಿದ್ಧಾಂತವಾಗಿದೆ. ೧೦. ಇದಕ್ಕೆ ಬರಹದ ಸಿದ್ಧಾಂತ ಸಹ ಒಪ್ಪುತ್ತದೆ. ಹ್ಯಾಗಂದರೆ: ನಾನಾ ಕಾಲ ದಲ್ಲಿ ರಚಿತವಾದ ಪರಿಶುದ್ಧ ಲೇಖನಸ್ರಂಥಗಳು ಯೆಹೂದರು ಮೊದಲಾದ ಜನರ ಸಾಮಾನ್ಯವಾದ ಸ್ಥಿತಿಯನ್ನು ವಿವರಿಸುವ ಸ್ಥಳಗಳಲ್ಲಿ ಎಲ್ಲರೂ, ಪಾಪಿಗಳೆಂಬದಕ್ಕೆ ಸಾಕ್ಷಿಯಾಗುತ್ತವೆ. ಕೀರ್ತ. ೧೪, ೩; ೫೩, ೪ರಲ್ಲಿ ನೀತಿವಂತನೊಬ್ಬನೂ ಇಲ್ಲವೆಂದು, ಬರದದೆ. ೧೧. ಕೀರ್ತ. ೧೧೧, ೧೦. ಬುದ್ಧಿವಂತನೊಬ್ಬನೂ ಇಲ್ಲ; ದೇವರನ್ನರಸುವವ ಬಬ್ಬನೂ ಇಲ್ಲ. ೧೨. ಕೀರ್ತ. ೫೩, ೪. ಎಲ್ಲರೂ, ದೇವರಿಂದ ತೊಲಗಿದವರಾಗಿ ನಿಷ್ಪ್ರಯೋಜಕರಾದರು; ಒಳ್ಳೇದನ್ನು ಮಾಡುವವನೊಬ್ಬನೂ ಇಲ್ಲ. ೧೩. ೧೪. ಕೀರ್ತ. ೫, ೧೦; ೧೪., ೪; ೧೦ರಲ್ಲಿ ಪರರಿಗೆ ಮಾತಿನಿಂದ ಮೋಸ ಮಾಡ ಬೇಕೆಂದು ಗಂಟಲು ನಾಲಿಗೆ ತುಟಿಗಳಿಂದ ಇಚ್ಛಕ ನುಡಿಗಳನ್ನು ಹುಟ್ಟಿಸುವ ಮನುಷ್ಯರ ದ್ವೇಷಭಾವವು ವರ್ಣಿಸಿ ಅದೆ. ೧೫. ೧೬. ಸೊಲೊ. ಗಾ. ೧, ೧೬. ಯೆಶಾ. ೫೯, ೭. ರಲ್ಲಿ ಹಿಂಸಾಭಿಸಂಧಾನವೂ, ಪರನಷ್ಟತೋಷವೂ ವರ್ಣಿಸಿ ಅವೆ. ೧೭. ೧೮. ಮನುಷ್ಯರು ಸಮಾಧಾನವೂ ಭಕ್ತಿಯೂ ಇಲ್ಲದವರಾಗಿರುವದು ಎಲ್ಲಾ ಪಾಪಕ್ಕೆ ಮೂಲವಾಗಿದೆ. ೧೯. ಸಾ ಮಾನ್ಯ ಪಾಪಿತ್ವವರ್ಣನೋಕ್ತಿಗಳಾದ ಈ ವಚನಗಳು ಯೆಹೂದರ ಪರಿಶುದ್ಧ ಲೇಖನಗಳಿಂದ ಎತ್ತಿ ಅವೆ. ಆದ್ದರಿಂದ ಪರಜನರು ಮಾತ್ರವಲ್ಲ, ಯೆಹೂದರು ಸಹ ಎಲ್ಲರು ಪಾಪಿಗಳಾಗಿದ್ದು, ದೇವರ ನ್ಯಾಯದಲ್ಲಿ ಅಪರಾಧಿಗಳಾಗಿ ಕಾಣಿಸಿ ಕೊಂಡು, ಬಾಯಿ ಮುಚ್ಚಿ ಕೊಳ್ಳ ಬೇಕೆಂಬುವದು ಸ್ಥಾಪಿತವಾಗಿದೆ. ೨೦. ಈ ಗಿನ ಪಾಪಪತನಸ್ಥಿತಿಯಲ್ಲಿ ೧ ಮೋಶೆ. ೬, ೫. ಯೋಹಾ. ೫, ೬. ಯಾವ ಮನುಷ್ಯನಾದರೂ ಅಂತರ್ಯ ನಿಯಮವನ್ನಾಗಲಿ ಲಿಖಿತ ನಿಯಮವನ್ನಾಗಲಿ ಕೈಕೊಳ್ಳುವದರಿಂದ ದೇವರ ಮುಂದೆ ನೀತಿವಂತನಾಗ ಕೂಡದು; ಯಾಕಂದರೆ ನಿಯಮದಿಂದ ಪಾಪದ ತಿಳುವಿಕೆ ಹುಟ್ಟುತ್ತದೆ. ಏನಂದರೆ: ನಿಯಮವು ಮನುಷ್ಯನಿಗೆ

ರೌಮಿಯಾ. ೩, ೨೧—೨೬.

ಮಾಡ ತಕ್ಕದ್ದನ್ನು ತೋರಿಸಿ, ಮನುಷ್ಯನು ಅದನ್ನು ಪೂರ್ಣವಾಗಿ ಅನುಸರಿಸಲಶಕ್ಯನಾಗಿರುವದರಿಂದ, ಅವನಿಗೆ ಅವನ ನಿರ್ಬಲತ್ವವನ್ನೂ ಅಪರಾಧಿತ್ವವನ್ನೂ ರಕ್ಷಣಾವಶ್ಯಕತೆಯನ್ನೂ ಪ್ರಮಾಣಿಸುತ್ತದೆ.

೨) ಕ್ರಿಸ್ತನ ವಿಮೋಚನಾಬಲಿಯಿಂದಾಗುವ ನೀತಿಯ ಮಾರ್ಗವು.
ಸ. ೩, ೨೧—೩೧.

೨೧. ಈದರೆ ನ್ಯಾಯಪ್ರಮಾಣದಿಂದಲೂ ಪ್ರವಾದಿಗಳಿಂದಲೂ ಸಾಕ್ಷಿಗೊಂಡ ದೇವರ ನೀತಿಯು ಇಗ ೧) ನ್ಯಾಯಪ್ರಮಾಣವಿಲ್ಲದೆ ೨) ಪ್ರಕಟವಾಯಿತು. ೨೨. ವಿಶ್ವಾಸಿಸುವ ಎಲ್ಲರಿಗೂ, ಎಲ್ಲರ ಮೇಲೆಯೂ ೩), ಯೇಸು ಕ್ರಿಸ್ತನ ವಿಶ್ವಾಸದಿಂದಾಗುವ ದೇವರ ನೀತಿಯೇ ೪). ಯಾಕಂದರೆ ವ್ಯತ್ಯಾಸವಿಲ್ಲ. ೨೩. ಎಲ್ಲರು ಪಾಪ ಮಾಡಿ, ದೇವರ ಮಹಿಮೆಗೆ ಶಪ್ತಿ ೫), ೨೪. ಇಗಿನ ಕಾಲದಲ್ಲಿ ತನ್ನ ನೀತಿಯನ್ನು ತೋರಿಸ ಬೇಕೆಂದು, ಯೇಸುವಿನಲ್ಲಿರುವ ವಿಶ್ವಾಸ ಉಳ್ಳವನನ್ನು ನೀತಿನಿರ್ಣಯ ಪಡಿಸುವದರಲ್ಲಿ ತಾನು ನೀತಿವಂತನಾಗಿರುವ ಹಾಗೆ, ೨೫. ದೇವರ ತಾಳ್ಮೆಯಲ್ಲಿ ಮುಂಚೆ ಆದ ಪಾಪಗಳ ಪರಿಹಾರವನ್ನು ಕುರಿತು ತನ್ನ ನೀತಿಯನ್ನು ೬) ತೋರಿಸುವದಕ್ಕೆ ಅವನ ರಕ್ತದಲ್ಲಿರುವ ವಿಶ್ವಾಸದಿಂದ ಶಾಂತಿಕರಣವಾಗಿ ೭), ೨೬. ದೇವರು ಮುಂದಿಟ್ಟ, ಯೇಸು ಕ್ರಿಸ್ತನಿಂದಾದ ವಿಮೋಚನೆಯ ಮುಖಾಂತರ ೮), ಅವನ ಕೃಪೆಯಿಂದ ಉಚಿತವಾಗಿ ನೀತಿನಿರ್ಣಯ ಪಡುತ್ತಾರೆ.

ಇಲ್ಲಿ ಸ. ೧, ೧೭ಲ್ಲಿ ಸೂಚಿತವಾದ ಪತ್ರಿಕಾಮುಖ್ಯಾಭಿಪಾಯ ಬರದದೆ.

೧. ಈಗಿನ ನಮ್ಮ ಕಾಲದಲ್ಲಿ ನೂತನವಾದ ದಿವ್ಯ ರಕ್ಷಣಾಪ್ರಕಟಣೆಯಂತಾಯಿತು; ದೇವರು ನಿಯಮದಿಂದುಂಟಾಗಲಾರದ ನೀತಿಯನ್ನು ಮನುಷ್ಯರಿಗೆ ಕಾಟ್ಟಿದ್ದಾನೆ. ಸ. ೧, ೧೭.

೨. ಅದು ನಿಯಮವಿಲ್ಲದೆ ಮನುಷ್ಯರಿಗೆ ಪ್ರಾಪ್ತವಾಗಿದ್ದರೂ, ಪೂರ್ವಕಾಲದಲ್ಲಿ ದೇವರು ನೇಮಕ ಮಾಡಿದ ರಕ್ಷಣಾಮಾರ್ಗಕ್ಕೆ ಪೂರ್ಣಾನುಸಾರವಾಗಿದ್ದು ಸ್ಪಷ್ಟವಾದ ಪ್ರವಾದನೆಗಳಿಂದಲೂ ೧ ಮೋಶೆ. ೩. ೫ಮೋಶೆ. ೧೮. ಯೆಶಾ. ೫೩. ಸರ್ವ ೪ ಮೋಶೆ. ೨೧., ವಿಮೋಚನಾಬಲಿಗಳು ಮೊದಲಾದ ಮುಂಗುರ್ತುಗಳಿಂದ ಸೂಚಿತವಾಗಿದೆ.

೩. ಎಲ್ಲರಿಗೆ ಬಂದು, ಎಲ್ಲರನ್ನು ಮುಳುಗಿಸುವ ಕೃಪಾಬ್ಧಿಯ ಋರ್ತಿಯಂತೆ.

೪. ಮನುಷ್ಯನು ತನ್ನಿಂದ ತಾನೆ ಅಲ್ಲ, ವಿಶ್ವಾಸದಿಂದಲೇ ನೀತಿವಂತನಾಗುತ್ತಾನೆಂಬುವದನ್ನು ಪೆಚ್ಚು ಷಟ್ಟಿಯಾಗಿ ಸ್ಥಾಪಿಸತಕ್ಕ ಪುನರುಕ್ತಿಯು.

೫. ಮನುಷ್ಯರು ಪಾಪದಲ್ಲಿ ಬಿದ್ದು ಕಳಕಾಂಡ ದೇವಾನ್ಯೋನ್ಯದಲ್ಲಿರುವ ಮಹಿಮೆಯು.

೬. ದೇವಪ್ರೀತಿಯು ದೇವರು ಮನುಷ್ಯರಿಗೆ ಮಾಡುವ ಪ್ರೀತಿ ಮನುಷ್ಯರು ದೇವರಿಗೆ ಮಾಡುವ ಪ್ರೀತಿ ಈ ಯೆರಡು ಅರ್ಥ ಉಳ್ಳದ್ದಾಗಿರುವ ಪ್ರಕಾರ, ದೇವನೀತಿ ಯಂಬುವದು ಸಪ್ತದ್ವಂದ್ವಾರ್ಥವಾಗಿದೆ. ಏನಂದರೆ ಸ. ೧, ೧೭; ೩, ೨೨ಲ್ಲಿ ದೇವನೀತಿ ಯಂಬುವದಕ್ಕೆ ದೇವರು ಪಾಪಿಯನ್ನು ನೀತಿವಂತನೆಂದು ನಿರ್ಣೈಸುವಂಥಾ, ದೇವರ ಮುಂದೆ ಸಲ್ಲುವಂಥಾ, ನೀತಿ ಯಂಬ ಅರ್ಥವಾಗುತ್ತದೆ; ಇಲ್ಲಿ ದೇವರ ಪರಿಶುದ್ಧತ್ವವಾದ ನೀತಿ ಯಂಬ ಅರ್ಥವಾಗುತ್ತದೆ. ದೇವರು ಮುಂಚಿನ ಕಾಲದಲ್ಲಿ ಮನುಷ್ಯರ ಪಾಪಗ

ಳನ್ನು ತಾಳಿ, ಈಗಿನ ಕಾಲದಲ್ಲಿ ಅವುಗಳನ್ನು ಕ್ಷಮಿಸುವದರಿಂದ, ದೇವರ ನೀತಿಗೂ, ಪರಿಶುದ್ಧತ್ವಕ್ಕೂ ದೋಷ ಉಂಟಾಗುತ್ತದೆಂದು, ಕಾಣಬಹುದಾಗಿತ್ತು. ದೇವರು ಕ್ರಿಸ್ತನ ಮುಂಚಿನ ಕಾಲದಲ್ಲಿ ಮನುಷ್ಯರ ಪಾಪದುರವಸ್ಥೆಯನ್ನು ಲಕ್ಷಿಸಲಿಲ್ಲವೆಂದು ತೋರುತ್ತಾ ಇತ್ತು. ಆದರೆ ಯೇಸುವಿನ ವಿಮೋಚನಾರ್ಥದ ಮರಣದಿಂದ ದೇವರ ಕೃಪೆಯು ಪುನಸ್ಥಾಪಿತವಾದ್ದಲ್ಲದೆ, ಆತನ ನೀತಿಗೂ, ಪರಿಶುದ್ಧತ್ವಕ್ಕೂ ತೃಪ್ತಿಯುಂಟಾಯಿತು.

೭. ಶಾಂತೀಕರಣವಾಗಿ ಯಂಬುವದಕ್ಕೆ ಮೂಲ ಗ್ರಂಥದಲ್ಲಿ ಕೃಪಾಸನವೆಂದು ಬರದದೆ. ಏನಂದರೆ: ನಿಯಮದ ಪಲಿಗೆಗಳು ಇಟ್ಟಿರುವ ಸಾಕ್ಷಿಪೆಟ್ಟಿಗೆಯ ಹಂಗಾರದ ಮುಚ್ಚಳಕ್ಕೆ ಈ ಪೇಸರು ಇತ್ತು. ಪ್ರಧಾನ ಯಾಜಕನು ವಿಮೋಚನೆಯ ಪಬ್ಬದಲ್ಲಿ ವಿಮೋಚನಾಬಲಿಯ ರಕ್ತವನ್ನು ಅದಕ್ಕೆ ತಳಿಸುವದರಿಂದ ಇಸ್ರಯೇಲನವರಿಗೆ ಪಾಪವಿಮೋಚನೆ ಮಾಡಿದನು. ೨ ಮೋಶೆ. ೨೫, ೧೭. ೩ ಮೋಶೆ. ೧೬, ೧೪. ಇಬ್ರಿ. ೯, ೭. ಜನರ ಪಾಪವನ್ನು ಪ್ರಕಟಿಸುವ ನಿಯಮದ ಪಲಿಗೆಗಳನ್ನು ಕೃಪಾಸನವೆಂಬ ಮುಚ್ಚಳವು ಅಡಗಿಸಿದಂತೆ ಯೇಸು ಕ್ರಿಸ್ತನು ನಮ್ಮ ಪಾಪವಿಮೋಚನಾರ್ಥವಾಗಿ ಸತ್ತು, ತನ್ನ ರಕ್ತವನ್ನು ಚಲ್ಲಿದ್ದರಿಂದ ಆತನನ್ನು ನಂಬುವವರ ಅಪರಾಧಗಳು ಕಳದು ಪೋಗಿವೆ.

೮. ಯೇಸು ಕ್ರಿಸ್ತನಿಂದ ವಿಮೋಚನೆಯಾದದ್ದೇ ಸರಿ; ಪೋಗಂದರೆ ಆತನು ನಮಗಾಗಿ ತನ್ನ ರಕ್ತವೆಂಬ ವಿಮೋಚನಾಮೌಲ್ಯವನ್ನು ಸಲಿಸಿದ್ದಾನೆ. ಮತ್ತಾ. ೨೦, ೨೮. ಎಫೆ. ೧, ೭. ಪಾಪವಿಲ್ಲದವನಾದ ಯೇಸು ಕ್ರಿಸ್ತನು ಪಾಪಿಗಳಾದ ನಮಗಾಗಿ ಸತ್ತು ಪೋದ್ದರಿಂದ, ಸರ್ವಸಾರ್ಥಕವಾದ ಈ ಪಾಪಬಲಿಯು ಲೋಕದ ಪಾಪವನ್ನು ಪರಿಹರಿಸಿತೆಂದು ನಂಬುವವನು ದೇವರ ಕೃಪೆಯನ್ನೂ ಪುತ್ರತ್ವವನ್ನೂ ಪಡದು ಕಾಂಡು, ಪರಿಶುದ್ಧಾತ್ಮವನ್ನು ಪೋಂದಿ, ನೂತನ ಜೀವಾಧಿಕಾರಿಯಾಗುತ್ತಾನೆ. ಈಕ್ರಮಿಗೆ ಪ್ರಾಪ್ತವಾಗುವ ನೀತಿಯು ಪಾಪಕ್ಷಮೆ ಪುನರ್ಜನ್ಮವೆಂಬ ಎರಡು ಕಾರಣದಿಂದ ಪುಟ್ಟುತ್ತದೆಂದೂ, ಅದು ದೇವಗಣಿತವಾಗಿಯೂ ಸ್ವಸಂಪಾದಿತವಾಗಿಯೂ ಎರಡು ವಿಧವಾದದ್ದೆಂದೂ ನೆನಸ ಕೆಲಸವಿಲ್ಲ. ಯೇಸು ಕ್ರಿಸ್ತನ ಮುಖಾಂತರ ನಮಗೆ ಪ್ರಾಪ್ತವಾದ ದೇವರ ಉಚಿತವಾದ ಕೃಪೆಯೇ ನಮ್ಮ ನೀತಿಯ ಮೂಲವಾಗಿದೆ.

೨೭. ಹಾಗಾದರೆ, ಹೆಚ್ಚಳ ಎಲ್ಲಿ ೧)? ತಳ್ಳಲ್ಪಟ್ಟಿತು. ಯಾವ ನ್ಯಾಯಪ್ರಮಾಣದಿಂದ? ಕ್ರಿಯೆಗಳದರಿಂದಲೋ? ಅಲ್ಲ; ವಿಶ್ವಾಸದ ನ್ಯಾಯಪ್ರಮಾಣದಿಂದಲೇ ೨). ೨೮. ಆದದರಿಂದ ಮನುಷ್ಯನು ನ್ಯಾಯಪ್ರಮಾಣದ ಕ್ರಿಯೆಗಳಿಲ್ಲದೆ ವಿಶ್ವಾಸದಿಂದ ೩) ನೀತಿನಿರ್ಣಯ ಪಡುತ್ತಾನೆಂದು, ಶಾಸ್ತ್ರಿಸುತ್ತೇವೆ. ೨೯. ಅವನು ಯೆಹೂದರಿಗೆ ಮಾತ್ರ ೪) ದೇವರೋ? ಜನಾಂಗಗಳಿಗೂ ಸಹ ಅಲ್ಲವೋ? ಹೌದು, ಜನಾಂಗಗಳಿಗೂ ಸಹ. ೩೦. ಯಾಕಂದರೆ ಪರಿಛ್ಛೇದನೆಗೆ ವಿಶ್ವಾಸದಿಂದಲೂ, ಅಪರಿಛ್ಛೇದನೆಗೆ ವಿಶ್ವಾಸದ ಮುಖಾಂತರವಾಗಿಯೂ, ನೀತಿನಿರ್ಣಯಿಸುವವನು ಒಬ್ಬನೇ ದೇವರು. ೩೧. ಹಾಗಾದರೆ ವಿಶ್ವಾಸದಿಂದ ನ್ಯಾಯಪ್ರಮಾಣವನ್ನು ೫) ವ್ಯರ್ಥ ಮಾಡುತ್ತೇವೋ? ಅಗದು. ನ್ಯಾಯಪ್ರಮಾಣವನ್ನ ಸ್ಥಾಪಿಸುತ್ತೇವೆ.

೧. ಯೆಹೂದರು ಪರಜನರಂತೆಯೇ ಕ್ರಿಸ್ತನಲ್ಲಿರುವ ಕೃಪೆಯಿಂದ ನೀತಿ ಪಡುವ ಕಾರಣ, ತಾವು ಅವರಿಗೆ ಅಧಿಕರೆಂದು, ನೆನಸ ಕೆಲಸವಿಲ್ಲ.

೨. ಪಾಪಿಗಳು ವಿಶ್ವಾಸಿಸ ಬೇಕೆಂಬುವದು ದೇವರ ಕಟ್ಟಳೆಯಾಗಿರುವದರಿಂದ, ಪೌಲನು ಇಲ್ಲಿ ವಿಶ್ವಾಸದ ನ್ಯಾಯಪ್ರಮಾಣವೆಂಬ, ಇಲ್ಲವೇ ವಿಶ್ವಾಸ

ನೇಮವೆಂಬ, ಸಮಾಸಪದವನ್ನು ಪ್ರಯೋಗಿಸುತ್ತಾನೆ. ೧ ಕಾರಿ. ೯, ೨೧ರಲ್ಲಿ ಬರದಿರುವ ಕ್ರಿಸ್ತನ ನೇಮವೆಂಬುವದಕ್ಕೆ ಸದೃಶವಾದ ಅಭಿಪ್ರಾಯವದೆ.

೩. ಕೃಪಾಪ್ರಾಪ್ತನುನವವಿಧೇಯತ್ವ ಉಳ್ಳವನಾಗಿ ಕ್ರಿಸ್ತನ ಪ್ರೀತಿಯಿಂದ ದೇವರಿಗೆ ಸಮರ್ಪಕವಾದ ಕ್ರಿಯೆಗಳನ್ನು ನಡಿಸುವದು ಸರಿ; ಆದರೆ ಅವನ ನೀತಿಯು ಅವನ ಸತ್‌ಕ್ರಿಯೆಗಳಿಂದ ಪುಟ್ಟುವಂಥಾದ್ದಲ್ಲ. ಆದ್ದರಿಂದ ಸತ್‌ಕ್ರಿಯೆಗಳು ಮುಕ್ತಿ ಪಡಿಯುವದಕ್ಕಾಗಿ ಅಗತ್ಯವಾಗಿವೆ ಎಂಬುವದನ್ನು ಲುಥರನು ಮುಂತಾದ ಪ್ರತೃಥ್ರಿಗಳು ಅಲ್ಲಗಳೆದದ್ದು ನ್ಯಾಯ. ಸತ್‌ಕ್ರಿಯೆಗಳು ಅಪವಾದವಿಲ್ಲದೆ ನಿಜ ವಿಶ್ವಾಸದಿಂದ ಪುಟ್ಟುವಂಥಾದ್ದು ಸರಿ; ಆದರೆ ದೋಷವಿಲ್ಲದ ಸತ್‌ಕ್ರಿಯೆಗಳನ್ನು ದೇವಖ್ರಾತೃ ಪ್ರೀತಿಯಿಂದ ತಪ್ಪದೆ ನಡಿಸ ಶಕ್ತನಿಲ್ಲ; ಇದ್ದರೂ, ಅವನು ನಡಿಸುವ ಸತ್‌ಕ್ರಿಯೆಗಳು ತತ್ಕಾಲಕ್ಕೆ ಯೋಗ್ಯವೇ ಪೂರ್ತಿ ಪಾಪಪರಿಹಾರಕ ಬಲವಿಲ್ಲದವುಗಳಾಗಿವೆ.

೪. ಯೆಹೂದರಿಗೆ ಮಾತ್ರ ಕಾಟ್ಟಿರುವ ನಿಯಮವು ದೇವರ ಕೃಪೆಯನ್ನು ದಾರಕಿಸುವ ಒಂದೇ ಮಾರ್ಗವಾಗಿದ್ದರೆ, ದೇವರು ಯೆಹೂದರಿಗೆ ಮಾತ್ರ ಕೃಪಾಳುವಾಗಿ ಕಾಣಿಸುತ್ತಿದ್ದನು. ಆದರೆ ಆತನು ಸರ್ವರಿಗೂ ಪ್ರೀತಿಕರನಾಗಿದ್ದರಿಂದ, ಸರ್ವ ಮನುಷ್ಯರಿಗಾಗಿ ಕೃಪಾಸಾಧನಮಾರ್ಗವನ್ನು ಸ್ಥಾಪಿಸದೆ ಇರಲಾರನು.

೫. ಪೂರ್ಣಾದರೆ ನೇಮಕ್ಕೆ ಸಂಬಂಧವಾದ ಪೂರ್ವ ಒಡಂಬಡಿಕೆಯ ಧರ್ಮವೆಲ್ಲಾ ಆವಶ್ಯಕವೂ, ಅಧಿಕಾರವೂ ಇಲ್ಲದ್ದೆಂಬ ವಾದವನ್ನು ಖಂಡಿಸುವದಕ್ಕೆ ಪೂರ್ವ ಒಡಂಬಡಿಕೆಯ ಅಭಿಪ್ರಾಯವು ಪೂರ್ಣಾನ ಒಡಂಬಡಿಕೆಯ ವಿಶ್ವಾಸಬೋಧೆಗೆ ಅನುಸಾರವಾದದ್ದೆಂದು ಮುಂದಿನ ವಚನಗಳಲ್ಲಿ ವಿವರಿಸುತ್ತಾನೆ.

೩) ವಿಶ್ವಾಸವು ರಕ್ಷಣಾಪೇಕ್ಷಿತವಾಗಿದೆ.

ಅ) ಅಬ್ರಹಾಮ ದವೀದರು ವಿಶ್ವಾಸದಿಂದಲೇ ನೀತಿ ಪಟ್ಟರು. ಸ. ೪, ೧—೨೩.

ಅಪೊಸ್ತಲನು ಈವರೆಗೂ, ವಿವರಿಸಿದ್ದನ್ನು ಹಳೆ ಒಡಂಬಡಿಕೆಯ ಉದಾಹರಣೆಗಳಿಂದ ದೃಢೀಕರಿಸಿ, ನೀತಿ ಪಡಿಸುವ ವಿಶ್ವಾಸಭಾವವನ್ನು ಸಹ ಚನ್ನಾಗಿ ಸೂಚಿಸುತ್ತಾನೆ. ಕ್ರಿಸ್ತನಲ್ಲಿಯೇ ಪೂರ್ಣ ಪ್ರಕಟವಾದ ದೇವರ ಹಂಗಿಲ್ಲದ ಕೃಪೆಯೆಂಬ ವಿಷಯವಾದ ವಿಶ್ವಾಸವು ಅಬ್ರಹಾಮನಲ್ಲಿಯೂ, ದವೀದನಲ್ಲಿಯೂ ಇತ್ತು. ದೇವರು ಮನುಷ್ಯರಿಗೆ ನೇಮಿಸಿದ ಕೃಪೆಯ ಮಾರ್ಗಾರಂಭದಿಂದ ತಮಗೆ ಪ್ರಕಟವಾದ ದೇವರ ಕೃಪೆಯ ವಿಶ್ವಾಸದಿಂದಲೇ ಭಕ್ತರು ದೇವರಿಗೆ ಸಮರ್ಪಕರಾಗುತ್ತಾ ಬಂದರು; ಯಾಕಂದರೆ ಸ್ವಂತ ಪುಣ್ಯಭಾವನೆ ಇಲ್ಲದೆ ಮಾನವನ್ನೆಲ್ಲಾ ದೇವರಿಗೆ ಕೊಡುವ ಭಕ್ತನೇ ದೇವರನ್ನು ಮೆಚ್ಚಿಸ ಬಲ್ಲನು. ಅಬ್ರಹಾಮ ದವೀದರು ಇಂಥವರಾಗಿದ್ದರು. ಪರಿಚ್ಛೇದನವೂ ವಾಗ್ದತ್ತವೂ ಪ್ರಾಪ್ತವಾದ ಕೃಪೆಯ ವಿಶ್ವಾಸಗಳ ಕಾರಣಗಳಲ್ಲ, ಫಲಗಳು ಮಾತ್ರವೇ ಆಗಿದ್ದವು. ಆದ್ದರಿಂದ ಅಬ್ರಹಾಮನು ಯೆಹೂದರಿಗೂ, ಪರಜನರಿಗೂ ಸಾಮಾನ್ಯ ಸಂಬಂಧಿಯಾಗಿದ್ದಾನೆ. ಗಲ. ೩, ೧೪ ಇತ್ಯಾದಿ.

ವಿಶ್ವಾಸದಿಂದ ವಾಗ್ದತ್ತವನ್ನು ಪೂರ್ಣಾದಿದ ಅಬ್ರಪೂರ್ಣಾಮನ ದೃಷ್ಟಾಂತ.

ವ. ೧. ಅಬ್ರಹಾಮನು ಸಹ ದೇವರ ದೃಷ್ಟಿಯಲ್ಲಿ ನೀತಿಯನ್ನೂ ವಾಗ್ದತ್ತಗಳನ್ನೂ ನಿರ್ಮಲ ಮಾನುಷಭಾವಪುಣ್ಯದಿಂದ ಪಡದದ್ದಲ್ಲ. ೨. ಅವನಿಗೆ ಸ್ವಂತ ಪುಣ್ಯದಿಂದ ಮನುಷ್ಯರ ಮುಂದೆ ಬಹುಮಾನ ಉಂಟಾದಾಗ್ಯೂ, ಸರ್ವಜ್ಞನಾದ ದೇವರ ಮುಂದೆ ಉಂಟಾಗುತ್ತಿದ್ದಿಲ್ಲ. ೩. ಬರಹವು ೧ ಮೋಶೆ. ೧೫,

೬—೨೨ ಅಪಾ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ರ.
ರೋಮಾ. ೪, ೪—೧೪.

೬ಲ್ಲಿ, ಅಬ್ರಹಾಮನು ದೇವರ ಮಾತು ನಂಬಿದನು; ಇದು ಅವನಿಗೆ ನೀತಿ ಯೆಂದು ಎಣಿಕೆಯಾಯಿತು ಎಂದು, ಸ್ಪಷ್ಟವಾಗಿ ಹೇಳುತ್ತದಲ್ಲ. ೪. ಆದರೆ ತಾನೇ ದುಡಿದ ಪುಣ್ಯವುಳ್ಳವನು ಕೃಪೆಯಿಂದಲ್ಲ, ಹಂಗಿನಿಂದಲೇ ಯೋಗ್ಯವಾದ ಫಲವನ್ನು ಹೊಂದುತ್ತಾನೆ. ೫. ಪುಣ್ಯಕ್ರಿಯೆ ಇಲ್ಲದೆ, ಪಾಪಿಗಳನ್ನು ನೀತಿಪಡಿಸುವ ದೇವರನ್ನು ವಿಶ್ವಾಸಿಸುವವನಿಗೆ ಅವನ ವಿಶ್ವಾಸವೇ ನೀತಿ ಯೆಂದು ಎಣಿಕೆಯಾಗುತ್ತದೆ ಎಂಬುವದು ಅಬ್ರಹಾಮನ ಚರಿತ್ರದಲ್ಲಿಯೂ ಕಾಣಬರುತ್ತದೆ.

ವಿಶ್ವಾಸದಿಂದ ಪಾಪಪರಿಹಾರವನ್ನು ಪಡೆದಾಂದಿದ ದವೀದನ ದೃಷ್ಟಾಂತವು.

ವ. ೬. ದವೀದನು ಸಹ ತಿನೆ ಕೀರ್ತನೆಯಲ್ಲಿ ರಕ್ಷಣೆಯು ಅದರ ಮೂಲವಾದ ದೇವದೃಷ್ಟಿನೀತಿಯೂ ಕರ್ಮಸಂಪಾದಿತವಾದದ್ದಲ್ಲ, ಕೃಪಾಸಂಪಾದಿತವಾದದ್ದೆಂದು ತೋರಿಸುತ್ತಾನೆ. ೭. ಹ್ಯಾಗಂದರೆ ಪಾಪಪರಿಹಾರವನ್ನು ಹೊಂದಿದವರು, ೮. ಕರ್ತನು ಯಾರ ಪಾಪವನ್ನು ಎಣಿಕೆ ಮಾಡುವದಿಲ್ಲವೊ ಅವರು ಮಂಗಲರೆಂದು ಹೇಳುತ್ತಾನೆ.

ಈ ಉದಾಹರಣೆಗಳಿಂದ ಉಂಟಾಗ ತಕ್ಕ ಅನುಮಾನಾಕ್ಷೇಪಗಳು.

ವ. ೯. ನೀತಿ ಪಡುವ ಈ ಮಾರ್ಗವು ಯೆಹೂದರಿಗೆ ಮಾತ್ರ ನೇಮಕವಾದದ್ದೋ? ಅಥವಾ ಪರಜನರಿಗೂ ನೇಮಕವಾದದ್ದೊ? ಅಬ್ರಹಾಮನ ದೃಷ್ಟಾಂತವನ್ನು ನೋಡುವಾ. ಅವನ ವಿಶ್ವಾಸವು ಅವನಿಗೆ ನೀತಿ ಯೆಂದು ಎಣಿಕೆಯಾದದ್ದು ಯಾವ ಕಾಲದಲ್ಲಿ ಅಂದರೆ, ೧೦. ಪರಿಚ್ಛೇದನ ಮಾಡಿ ಕೊಳ್ಳುವದಕ್ಕಿಂತ ಮುಂಚಿತವಾಗಿಯೇ. ೧೧. ಪರಿಚ್ಛೇದನವಿಲ್ಲದವನಾಗಿ ವಿಶ್ವಾಸದಿಂದಲೇ ಹೊಂದಿದ ಕೃಪೆಯ ದೃಶ್ಯವಾದ ಮುದ್ರಿಕೆಯಾಗಿ, ಅವನು ತದನಂತರವೇ ಪರಿಚ್ಛೇದನವನ್ನು ಹೊಂದಿದನು. ಈ ಪ್ರಕಾರವಾಗಿ ಅಬ್ರಹಾಮನು ದೇವರ ಸಂಗಡಲಿರುವ ಮುಂಚಿನ ಬಡಂಬಡಿಕೆ ಇಲ್ಲದೆ, ವಿಶ್ವಾಸದಿಂದ ನೀತಿಯನ್ನು ಕೃಪಾಪ್ರಸಾದವಾಗಿ ಹೊಂದುವ ರೀತಿಯಿಂದ, ವಿಶ್ವಾಸಿಸುವ ಪರಜನರಿಗೆ ಅಗ್ರಗಾಮಿಯಾಗಿರುವ ಆತ್ಮಿಕ ಪಿತೃವಾಗುವ ಬಹುಮಾನವು ಅಬ್ರಹಾಮನಿಗೆ ದೇವರ ಚಿತ್ತದಿಂದುಂಟಾಯಿತು. ೧೨. ಆದರೆ ಬಡಂಬಡಿಕೆಯ ಗುರ್ತಾದ ಪರಿಚ್ಛೇದನವನ್ನು ದೇಹದಲ್ಲಿ ಹೊಂದುವದಲ್ಲದೆ, ತಂದೆಯಾದ ಅಬ್ರಹಾಮನ ವಿಶ್ವಾಸವನ್ನು ಸಹ ಅನುಸರಿಸುವ ಪರಿಚ್ಛೇದನದವರಿಗೂ, ಅವನು ತಂದೆಯಾಗಿದ್ದಾನೆ. ಪರಿಚ್ಛೇದನಾಚರಣೆಯಿಂದ ಇಸ್ರಯೇಲನವರು ನೇಮನಿರ್ಧಾರಪ್ರವೇಶ ಮಾಡುತ್ತಾರಾದ್ದರಿಂದ, ಅಬ್ರಹಾಮನ ಚರಿತ್ರದಲ್ಲಿ ನೇಮಸಂಗತಿಯಲ್ಲ, ಕೃಪಾಸಂಗತಿಯೇ ಮುಖ್ಯವಾಗಿತ್ತೆಂದು ತೋರುತ್ತದೆ.

೩) ನೇಮಭಾವದಿಂದಲೂ ರಕ್ಷಣೆಯ ಸರ್ವ ಸಮಾನತ್ವದಿಂದಲೂ, ಅದೆ ಅನುಮಾನಪ್ರಮಾಣ ಹುಟ್ಟುತ್ತದೆ. ಸ. ೪, ೧೩—೧೬.

೧೩. ಯಾಕಂದರೆ ೧) ಅಬ್ರಹಾಮನಿಗಾದರೂ, ಅವನ ಬೀಜಕ್ಕಾದರೂ, ಅವನು ಲೌಕಿಕಬಾಧ್ಯನಾಗಿ ೨) ಇರುವನೆಂಬುವ ವಾಗ್ದತ್ತವು ನ್ಯಾಯಪ್ರಮಾಣದಿಂದಲ್ಲ, ವಿಶ್ವಾಸದ ನೀತಿಯಿಂದಲ್ಲೆ, ಆಯಿತು. ೧೪. ಯಾಕಂದರೆ ನ್ಯಾಯಪ್ರಮಾಣದವರು ೩)

ರೋಮಾ. ೪, ೧೫—೧೯.

ಬಾಧ್ಯರಾದರೆ, ವಿಶ್ವಾಸವು ಬರ್ಕಿದಾಯಿತು, ವಾಗ್ದತ್ತವೂ ವ್ಯರ್ಥವಾಯಿತು. ೧೫. ಯಾಕಂದರೆ ನ್ಯಾಯಪ್ರಮಾಣವು ಕೋಪವನ್ನು ಉಂಟು ಮಾಡುತ್ತದೆ ೪); ಹ್ಯಾಗಂದರೆ ನ್ಯಾಯಪ್ರಮಾಣವು ಇಲ್ಲದ ಪಕ್ಷದಲ್ಲಿ ಮೀರುವಿಕೆಯು ಇಲ್ಲ. ೧೬. ಆದಕಾರಣ ವಾಗ್ದತ್ತವು ೫) ಬೀಜಕ್ಕೆಲ್ಲಾ—ನ್ಯಾಯಪ್ರಮಾಣವುಳ್ಳದಕ್ಕೆ ಮಾತ್ರವಲ್ಲ, ಅಬ್ರಹಾಮನ ವಿಶ್ವಾಸವುಳ್ಳದಕ್ಕೂ ಸ್ಥಿರವಾಗಿರುವ ಹಾಗೆ, ಕೃಪೆಯ ಪ್ರಕಾರವಾಗುವದಕ್ಕೆ, ವಿಶ್ವಾಸದಿಂದಲ್ಕೆ ಆಯಿತು. ೧೭. ನಿನ್ನನ್ನು ಅನ್ಯೇಕ ಜನಾಂಗಗಳಿಗೆ ತಂದೆಯಾಗಿ ೬) ನೇಮಿಸಿದ್ದೇನೆಂದು ಬರೆದಿರುವ ಪ್ರಕಾರ, ಅವನು ಸತ್ತವರನ್ನು ಬದುಕಿಸುವಂಥ, ಇಲ್ಲದವುಗಳನ್ನು ೭) ಉಂಟಾಗಿರಲ್ಕೆ ಎಂದು ಕರೆಯುವಂಥ, ತಾನು ವಿಶ್ವಾಸಿಸಿದ ದೇವರ ಮುಂದೆ ನಮ್ಮೆಲ್ಲರಿಗೆ ತಂದೆಯಾಗಿದ್ದಾನೆ.

೧. ಪರಿಚ್ಛೇದನನಿರ್ಧಾರವು ದೇವರ ನಿಯಮಧರ್ಮದ ಆದಿಯೂ, ನೇಮಪ್ರಜೆಗೆ ನಿರ್ಧಾರಚಿನ್ಹೆಯೂ ಆಗಿದ್ದರಿಂದ, ಅಪಾಸ್ತಲನು ಪರಿಚ್ಛೇದನ ಪ್ರಸ್ತಾವಾನೀಚಿತವಾಗಿ ನಿಯಮವರ್ಣನೆಗೆ ಬರುತ್ತಾನೆ.

೨. ಈ ಮಾತು ಅಬ್ರಹಾಮನಿಗೆ ಪ್ರಾಪ್ತವಾದ ಎಲ್ಲಾ ವಾಗ್ದತ್ತಗಳ ೧ ಮೋಶೆ. ೧೩, ೧೫; ೧೫, ೫; ೧೭, ೫; ೧೧, ೧೨; ೨೨, ೧೭. ೧೮. ಗಲ. ೩, ೧೪. ಕ್ಷಪ್ತಸಂಗ್ರಹವಾಗಿದೆ. ವಂಶಾಭಿವೃದ್ಧಿಯೂ, ಕನಾನ ದೇಶದ ಸ್ವಾತಂತ್ರವೂ, ಮುಖ್ಯವಾಗಿ ಎಲ್ಲಾ ಜನಾಂಗಗಳ ಮೇಲೆ ಬರ ತಕ್ಕ ಆಶೀರ್ವಾದವೂ ಸ. ೨೨, ೧೮. ಅದರಲ್ಲಿ ಸೂಚಿತವಾಗಿವೆ. ಕನಾನ ದೇಶವು ನೂತನ ಪೃಥ್ವಿಯ ಮುಂಗುರ್ತಾಗಿದೆ. ಅಬ್ರಹಾಮನ ವಂಶಶಿರೋಮಣಿಯಾದ ಗಲ. ೩, ೧೮. ಕ್ರಿಸ್ತನಲ್ಲಿ ಅಬ್ರಹಾಮನ ವಂಶವು ಭೂಮಿಯನ್ನೆಲ್ಲಾ ತುಂಬುವದೆಂಬ ವಾಗ್ದತ್ತವು ನೆರವೇರುತ್ತದೆ.

೩. ಅಂದರೆ, ನೇಮವುಳ್ಳವರೆ ಬಾಧ್ಯಸ್ಥರಾದರೆ, ನಿಯಮವಿಲ್ಲದವರಿಗೆ ಬಾಧ್ಯತೆ ಇಲ್ಲವೇ ಇಲ್ಲ. ಹೀಗಾದರೆ ವಿಶ್ವಾಸಕ್ಕೂ, ವಾಗ್ದತ್ತಕ್ಕೂ ಸ್ವಾರಸ್ಯವು ಇಲ್ಲ.

೪. ನೇಮದಿಂದ ಅದನ್ನು ಮೀರುವ ಪಾಪಿಗಳಾದ ನಮಗೆ ದೇವರ ಅಕೃಪೆಯೇ ಬರುತ್ತದೆ. ನೇಮವಿಲ್ಲದಲ್ಲಿ ಪಾಪವುಂಟೇ ಸರಿ; ಆದಾಗ್ಯೂ ಅದರ ಶಿಳುವಿಕೆಯೂ, ಅನುಭವವೂ ಇರುವದಿಲ್ಲ. ನಿಯಮಜ್ಞಾನದಿಂದ ಪಾಪದ ನಷ್ಟವು ಅಧಿಕಾಧಿಕವಾಗಿ ಪ್ರಕಟವಾಗುತ್ತದೆ.

೫. ವಾಗ್ದತ್ತವು ಕೃಪಾಪ್ರಸಾದವಾಗಿರುವ ಪಕ್ಷದಲ್ಲಿಯೇ ಯೆಹೂದರೂ, ಪರಜನರೂ ಆದ ವಿಶ್ವಾಸಿಗಳಿಗೆಲ್ಲಾ ಸಾಮಾನ್ಯವಾಗಿ ಸಲ್ಲುವದು.

೬. ೧೭ ಮೋಶೆ. ೧೭, ೫. ಅಬ್ರಹಾಮನ ನಾಮಾಂತರವು ದೇವರ ವ್ಯಾಖ್ಯಾನದ ಪ್ರಕಾರ ಜನಾಂಗಸಮೂಹಪಿತೃವೆಂಬದನ್ನು ಸೂಚಿಸಿತು.

೭. ಮನುಷ್ಯ ದೃಷ್ಟಿಯಲ್ಲಿ ಆ ಜನಾಂಗಗಳು ಹುಟ್ಟದೆ ಇದ್ದ ಕಾಲದಲ್ಲಿ ದೇವರು ಅವುಗಳ ವಿಷಯವಾಗಿ ಅಬ್ರಹಾಮನಿಗೆ ಭಾಷೆಯನ್ನಿತ್ತನು.

ಉ) ನಮಗೆ ಮಾದ್ರಿಯಾಗ ತಕ್ಕ ಅಬ್ರಹಾಮನ ವಿಶ್ವಾಸದ ವರ್ಣನೆಯು.

ಸ. ೪, ೧೪—೨೫.

೧೪. ನಿನ್ನ ಬೀಜವು ಹೀಗಾಗುವದೆಂಬ ದೇವೋಕ್ತಿಯ ಪ್ರಕಾರ, ಅನ್ಯೇಕ ಜನಾಂಗಗಳಿಗೆ ತಂದೆಯಾಗುವದನ್ನು ಅವನು ಆಶೆಯಿಲ್ಲದೆ ಆಶೆ ಮಾಡಿ ೧)

ವಿಶ್ವಾಸಿಸಿದನು. ೧೯. ಮಶ್ತು ವಿಶ್ವಾಸದಲ್ಲಿ ಬಲಹೀನನಾಗಿರದೆ, ತಾನು ಹೆಚ್ಚು ಕಡಿಮೆ ನೂರು ವರುಷದವನಾಗಿದ್ದು, ತನ್ನ ಶರೀರವು ಆಗಲೇ ಮರಣವಾದದ್ದನ್ನೂ, ಸಾರಳ ಗರ್ಭದ ಮರಣಶ್ಥಿತಿಯನ್ನೂ ೭) ಲಕ್ಷ್ಯ ಮಾಡಲಿಲ್ಲ. ೨೦. ಆದರೆ ದೇವರ ವಾಗ್ದತ್ತವನ್ನು ಕುರಿತು ಅವಿಶ್ವಾಸದಿಂದ ಅನುಮಾನ ಪಡದೆ, ವಿಶ್ವಾಸದಲ್ಲಿ ಬಲಿಷ್ಠನಾಗಿ, ೨೧. ದೇವರಿಗೆ ಮಹಿಮೆ ಕೊಟ್ಟು, ವಾಗ್ದತ್ತ ಮಾಡಿದ್ದನ್ನು ನಡಿಸುವದಕ್ಕೆ ಬಲವುಳ್ಳವನಾಗಿದ್ದಾನೆಂದು, ಶುಂಬ ಭರವಸವುಳ್ಳವನಾಗಿದ್ದನು. ೨೨. ಆದದರಿಂದ ಅದು ಅವನಿಗೆ ನೀತಿಯೆಂದು ಎಣಿಸಲ್ಪಟ್ಟಿತು. ೨೩. ಆದರೆ, ಅವನಿಗೆ ಎಣಿಸಲ್ಪಟ್ಟಿತೆಂಬುವದು, ಅವನ ಸಲವಾಗಿ ೮) ಮಾತ್ರವಲ್ಲ, ನಮ್ಮ ಸಲವಾಗಿ ಸಹ ಬರೆಯಲ್ಪಟ್ಟಿತು. ೨೪. ನಮ್ಮ ಕರ್ತನಾದ ಯೇಸುವನ್ನು ಸತ್ತವರಾಳಗಿಂದ ಎಬ್ಬಿಸಿದವನ ಮೇಲೆ ೯) ವಿಶ್ವಾಸಿಸುವ ನಮಗೂ ಎಣಿಸಲ್ಪಡುವದಕ್ಕಿರುವದು. ೨೫. ಅವನು ನಮ್ಮ ಅಕ್ರಮಗಳಿಗಾಗಿ ಒಪ್ಪಿಸಲ್ಪಟ್ಟು ೫), ನಮ್ಮ ನೀತಿನಿರ್ಣಯಕ್ಕಾಗಿ ಎಬ್ಬಿಸಲ್ಪಟ್ಟನು ೬).

೧. ದೇವರು ಅವನಿಗೆ ೧೫ ಮೋಶೆ. ೧೫, ೫. ನಿನ್ನ ಬೀಜವು ನಕ್ಷತ್ರಗಳಂತೆ ಲೆಕ್ಕವಿಲ್ಲದ್ದಾಗುವದೆಂದು ಹೇಳುವ ವೇಳೆಯಲ್ಲಿ ನೂರು ವರುಷದವನಾದ ತನಗೆ ಮಗನು ಹುಟ್ಟುವದು ಸ್ವಾಭಾವಿಕ ಧರ್ಮದಿಂದ ಅಸಾಧ್ಯವಾಗಿ ತೋರಿದಾಗ್ಯೂ, ದೇವರು ಹೇಳಿದ್ದು ಅಸಾಧ್ಯವಲ್ಲವೆಂದು ನೆನಸಿದನು.

೨. ಸಾರಳು ತಾಂಬತ್ತು ವರುಷದವಳಾಗಿದ್ದದರಿಂದ, ಅವಳು ಮಗನನ್ನು ಹೆರುವದು ಅಸ್ವಾಭಾವಿಕವಾಗಿತ್ತು.

೩. ಅಂದರೆ, ಅವನ ವಿಶ್ವಾಸದ ಕೀರ್ತಿಗಾಗಿ.

೪. ಅಬ್ರಹಾಮನ ಸತ್ತ ಶರೀರದಲ್ಲಿ ಉಂಟಾದ ಅದ್ಭುತ ಕಾರ್ಯಕ್ಕಿಂತ ಅಶಿಮಹಿಮೆಯುಳ್ಳ ರೀತಿಯಿಂದ ದೇವರ ಸರ್ವಶಕ್ತಿಯು ಯೇಸು ಕ್ರಿಸ್ತನ ಪುನರುತ್ಥಾನದಿಂದ ಪ್ರತಿಷ್ಠೆಯಾಯಿತು. ಅಬ್ರಹಾಮನು ತಾನು ಸತ್ತವನ ಹಾಗಿದ್ದರೂ, ದೇವರು ತನ್ನಿಂದ ಮಗನನ್ನು ಹುಟ್ಟಿಸುವನೆಂದು, ನಂಬಿದ ಪ್ರಕಾರ, ದೇವರು ಸತ್ತವನಾದ ಯೇಸು ಕ್ರಿಸ್ತನನ್ನು ಮರಣದಿಂದ ಪುನರುತ್ಥಾನ ಮಾಡಿದನೆಂದು, ಕ್ರಿಸ್ತ ಭಕ್ತರಾದ ನಾವು ನಂಬುತ್ತೇವೆ.

೫. ದೇವರ ನಿರಂತರವಾದ ನೀತಿಗೆ ತೃಪ್ತಿಯಾಗುವ ಹಾಗೆ ಕ್ರಿಸ್ತನು ಪಾಪಿಗಳಾದ ನಮಗಾಗಿ ಸತ್ತನು.

೬. ಯೇಸು ಪುನರುತ್ಥಾನದಿಂದ ಆತ್ಮದಲ್ಲಿ ನೀತಿಪಟ್ಟನು ೧ ತಿಮೊ. ೩, ೧೬. ಏನಂದರೆ ದೇವರು ಈ ಮಹಾ ಅದ್ಭುತಕಾರ್ಯದಿಂದ ಯೇಸು ಕ್ರಿಸ್ತನ ವಿಮೋಚನಾಬಲಿಯು ಸಾರ್ಥಕವೆಂದು, ಪ್ರತಿಷ್ಠೆ ಮಾಡಿದನು. ಪುನರುತ್ಥಾನವಾಗಿ ಮಹಿಮೆಯಲ್ಲಿ ಶೋಭಿಸಿದ ರಕ್ಷಕನು ತನ್ನನ್ನು ನಂಬುವವರನ್ನು ತಾನು ಮರಣವನ್ನು ಜಯಿಸಿದ ಜಯದಲ್ಲಿ ಪಾಲುಗಾರರಾಗ ಮಾಡುತ್ತಾನೆ. ಕ್ರಿಸ್ತನ ಪುನರುತ್ಥಾನ ದಿವಾರಾತ್ರೆಹಬ್ಬಗಳು ಆತನ ರಕ್ಷಣಾಕ್ರಿಯಾಸಿದ್ಧಿಯೂ ಭಕ್ತರಕ್ಷಣಾಪ್ತಿಯೂ ಆಗಿವೆ.

ರ್ಯಾಮಿಾ. ೫, ೧—೫.

೪) ಆದಮನಿಂದ ಹುಟ್ಟಿದ ದುರವಸ್ಥೆಗಿಂತ ಯೇಸು ಕ್ರಿಸ್ತನಲ್ಲಿರುವ ರಕ್ಷಣೆಯು ಅಧಿಕವಾದದ್ದೂ, ವಿಸ್ತಾರವಾದದ್ದೂ ಆಗಿದೆ. ಸ. ೫.

೧. ಯೇಸು ಕ್ರಿಸ್ತನ ಮುಖಾಂತರ ನೀತಿ ಪಟ್ಟವರಲ್ಲಿ ದೇವರ ಮೇಲೆ ಮಂಗಳವಾದ ಭರವಸವು ಹುಟ್ಟುತ್ತದೆ. ವ. ೧—೧೧.

೨. ಕ್ರಿಸ್ತನಲ್ಲಿರುವ ರಕ್ಷಣೆಗೂ ಆದಮನಿಂದುಂಟಾದ ದುರವಸ್ಥೆಗೂ ಇರುವ ವೃತ್ಯಾಸ: ಕೃಪಾ ಬಲವು ಪಾಪಬಲಕ್ಕಿಂತಾ ಅಧಿಕವಾದದ್ದು. ವ. ೧೨—೨೧.

ಅಪೊಸ್ತಲನು ಈ ವರೆಗೂ ಕ್ರಿಸ್ತ ವಿಶ್ವಾಸಾವಶ್ಯಕವನ್ನು ವರ್ಣಿಸಿದನಂತರ, ಇಲ್ಲಿಂದ ಅನೆ ಸಂಧಿಯ ವರೆಗೂ ವಿಶ್ವಾಸ ಮೂಲಕವಾಗಿ ನಮಗೆ ಪ್ರಾಪ್ತವಾಗುವ ರಕ್ಷಣೆಯ ಆಧಿಕ್ಯವನ್ನೂ ಘನತೆಯನ್ನೂ ವಿವರಿಸುತ್ತಾನೆ. ಕ್ರಿಸ್ತನ ಮುಖಾಂತರ ನೀತಿ ಪಟ್ಟವರು ದೇವರ ಸಂಗಡ ಸಮಾಧಾನವನ್ನೂ, ಆತನ ಕೃಪೆಯಲ್ಲಿ ಪ್ರಸ್ತುತ ಪ್ರವೇಶವನ್ನೂ, ಮುಂದಣ ಮಹಿಮೆಯ ದೃಢವಾದ ಆಶೆಯನ್ನೂ, ಹೊಂದುತ್ತಾರೆ. ಭಕ್ತನಿಗೆ ಬರುವ ಉಪದ್ರವಗಳು ಸಹ ಅವನನ್ನು ಮಹಿಮೆಗಾಗಿ ಹವಣಿಸುತ್ತಾ ಇರುವದರಿಂದ, ಅವುಗಳಿಗಾಗಿಯೂ ದೇವರ ಪ್ರೀತಿಯನ್ನು ಸಂತೋಷದಿಂದ ಸ್ತುತಿಸುತ್ತಾನೆ. ಇದೆಲ್ಲಾ ಕ್ರಿಸ್ತನಲ್ಲಿರುವ ದೇವರ ಹಂಗಿಲ್ಲದ ಕೃಪೆಯಿಂದಲೇ ಹುಟ್ಟುತ್ತದೆ. ಈ ಕೃಪೆಯ ಆಧಿಕ್ಯವನ್ನು ಚನ್ನಾಗಿ ತಿಳುಕೊಳ್ಳ ಬೇಕಾದರೆ, ಆದಮನಿಂದುಂಟಾದ ಪಾಪ, ಯೇಸು ಕ್ರಿಸ್ತನಿಂದುಂಟಾದ ನೀತಿ ಇವುಗಳ ಫಲಗಳನ್ನು ಸರಿ ನೋಡ ಬೇಕು. ಈ ವಿಚಾರವನ್ನು ಮಾಡುವವನು, ಪಾಪವು ಈ ಆಶ್ಚರ್ಯವಾದ ನೀತಿ ಪಡಿಸುವಿಕೆಯ ಉಪಾಯದಿಂದ ಪೂರ್ಣ ಪರಾಜಯವಾದದ್ದನ್ನೂ, ಮರಣಹೇತುವಾದ ಪಾಪ ಶಾಪಗಳಿಗಿಂತ ಜೀವಹೇತುವಾದ ಕೃಪೆ ನೀತಿಗಳು ಅಧಿಕ ಬಲವಾದದ್ದನ್ನೂ, ಗ್ರಹಿಸಿ ಕೊಳ್ಳುತ್ತಾನೆ.

೧. ನೀತಿ ಪಡಿಸುವಿಕೆಯ ಫಲವು. ವ. ೧—೧೧.

೧. ಆದಕಾರಣ ವಿಶ್ವಾಸದಿಂದ ನೀತಿನಿರ್ಣಯ ಪಟ್ಟ ನಮಗೆ ದೇವರ ಸಂಗಡ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ಸಮಾಧಾನ ಉಂಟು ೧). ೨. ಇವನ ಮುಖಾಂತರ ನಾವು ನಿಂತು ಕಾಂಡಿರುವ ಈ ಕೃಪೆಯಲ್ಲಿ (ಪ್ರವೇಶವನ್ನು ೨) ಸಹ ವಿಶ್ವಾಸದಿಂದ ಹೊಂದಿ, ದೇವರ ಮಹಿಮೆಯ ಆಶೆಯಲ್ಲಿ ೩) ಹೆಚ್ಚಳ ಪಡುತ್ತೇವೆ. ೩. ಅದು ಮಾತ್ರವಲ್ಲ, ಉಪದ್ರಗಳಲ್ಲಿಯೂ ಹೆಚ್ಚಳ ಪಡುತ್ತೇವೆ ೪). ೪. ಉಪದ್ರವು ತಾಳ್ಮೆಯನ್ನು ೫), ತಾಳ್ಮೆಯು ಪರೀಕ್ಷೆಯನ್ನು, ಪರೀಕ್ಷೆಯು ಆಶೆಯನ್ನು ೬), ಉಂಟು ಮಾಡುತ್ತವೆ ಎಂದು ತಿಳಿದಿರುವದರಿಂದಲೇ. ೫. ಆಶೆಯಾದರೆ, ನಾಚಿಕೆ ಪಡಿಸುವದಿಲ್ಲ. ಯಾಕಂದರೆ ದೇವರ (ಪ್ರೀತಿಯು ೭) ನಮಗೆ ಕೊಡಲ್ಪಟ್ಟ ಪರಿಶುದ್ಧಾತ್ಮನಿಂದ ನಮ್ಮ ಹೃದಯಗಳಲ್ಲಿ ಹೊಯ್ಯಲ್ಪಟ್ಟಿದೆ.

ರ್ಯಾಮಿಾ. ೫, ೬—೧೧.

೧. ದೇವರು ತನ್ನ ಮಗನ ಮರಣದಿಂದ ನಮಗೆ ಅನ್ಯಾಯನಾದನೆಂದೂ, ಸ. ೩, ೨೫; ೫, ೧೫. ಈ ಕೃಪೆಯ ವಿಶ್ವಾಸವು ನಮಗೆ ನೀತಿಯಾಗಿ ಎಣಿಕೆಯಾಗುತ್ತದೆಂದೂ ನಂಬುವವರಲ್ಲಿ ದೇವರ ಕೋಪದ ಭಯವು ಪರಿಹಾರವಾಗುವದು.

೨. ಇದರಿಂದಲೇ ಅಡ್ಡಿ ಇಲ್ಲದ ದೇವಸಾನ್ನಿಧ್ಯ ಪ್ರವೇಶವು ತನ್ನಷ್ಟಕ್ಕೆ ಹುಟ್ಟುತ್ತದೆ. ಹಾಗಾಗಿದಂದರೆ: ಭಯ ಪರಿಹಾರವಾದನಂತರ ಭಕ್ತನು ಪ್ರಾರ್ಥನೆಯಿಂದ ದೇವರ ಸಮೀಪಕ್ಕೆ ಬಂದು, ಇಬ್ರಿ. ೪, ೧೪—೧೬, ಅಧಿಕಾಧಿಕವಾದ ಕೃಪೆಯನ್ನು ಹಾಗಾಂದುವ ಭರವಸವುಳ್ಳವನಾಗುತ್ತಾನೆ.

೩. ಅಂದರೆ, ಪಾಪದಿಂದ ಕಳದು ಹಾಗಾದ ಸ. ೩, ೨೩. ಮಹಿಮೆಯನ್ನು ಶಿರಿಗಿ ಹಾಗಾಂದುವ ಆಶೆಯಲ್ಲಿ.

೪. ಉಪದ್ರವಗಳು ಪಾಪ ಫಲವಾದ ಶಿಕ್ಷೆಯಾಗಿರುವದರಿಂದ, ದೇವರ ಕೃಪೆಯಲ್ಲಿ ನಿಸ್ಸಂಶಯವಾದ ಭರವಸವಿಲ್ಲದವನಲ್ಲಿ ದಿಗಲು ಹುಟ್ಟಿಸದೆ ಇರುವದಿಲ್ಲ. ಆದರೆ ಭಕ್ತನಿಗೆ ಅವು ಪ್ರಯೋಜನವಾದ ಶಿಕ್ಷೆಯೂ, ಪರೀಕ್ಷೆಯೂ ಆಗಿದ್ದು, ಅವನನ್ನು ದೇವರ ಅತ್ಯಂತ ಸಮೀಪಕ್ಕೆ ತಂದು, ದೇವರ ಮಹಿಮೆಗಾಗಿ ಹುರಣಿಸುತ್ತವೆ. ಸ. ೮, ೧೮. ೨ಥೆಸ್ಸ. ೪, ೧೭. ಇಬ್ರಿ. ೪, ೬.

೫. ತಾಳ್ಮೆ ಎಂಬದಕ್ಕೆ ಕಷ್ಟದ ನಿದಾನವಾದ ಸಹನವೆಂಬ ಅರ್ಥ ಮಾತ್ರವಲ್ಲಾ ನಿಶ್ಚಂಚಲವಾದ ದೃಢ ಬುದ್ಧ್ಯರ್ಥವೂ ಉಂಟು. ಲೂಕ. ೮, ೧೫; ೨೧, ೧೯.

೬. ಉಪದ್ರವಗಳೆಂಬ ಯುದ್ಧದಲ್ಲಿ ಶಿರಿಗಿ ಶಿರಿಗಿ ಪರೀಕ್ಷಿತವಾಗುವ ವಿಶ್ವಾಸದಾರ್ಢ್ಯದಿಂದ ಆರಂಭದಲ್ಲಿ ಭಕ್ತರ ಹೃದಯದಲ್ಲಿ ಹುಟ್ಟಿದ ದೇವಮಹಿಮಾಶೆಯು ಅಧಿಕಾಧಿಕ ಸ್ಥಿರವಾಗಿ ಜಯೋತ್ಸವವನ್ನು ಪಡೆಯುತ್ತದೆ.

೭. ಮನುಷ್ಯರಲ್ಲಿ ಹುಟ್ಟುವ ತರತರವಾದ ಕೃಪಾನುಭವಗಳಲ್ಲಾ, ಭರದಿಂದ ಹರಿಯುವ ಹಾಳೆಯಂತೆ ಭಕ್ತರ ಹೃದಯಗಳನ್ನು ತುಂಬಿ, ಸಂಭ್ರಮ ಪಡಿಸುವ ದೇವರ ಪ್ರೀತಿಯೇ ಮಹಿಮಾಶೆ ಭಂಗವಾದ ಕಾರಣವಾಗಿದೆ. ಇದರಲ್ಲಿ ನಮ್ಮ ಪುತ್ರತ್ವದ ಮುದ್ರೆಯೂ, ಸಂಚಕಾರವೂ ಆದ ಪರಿಶುದ್ಧಾತ್ಮದ ಚೈತನ್ಯವು ಕಾಣುತ್ತದೆ ಸ. ೮, ೧೫. ೨ಕಾರಿ. ೧, ೨೨. ಗಲ. ೪, ೬; ೪, ೬. ಎಫೆ. ೧, ೧೪.

ವ. ೬. ನಾವು ಪಾಪಿಗಳಾಗಿ ನಿರ್ಬಲರಾಗಿರುವಾಗ, ದೇವರ ಕರುಣೆಯಿಂದ ನೇಮಕವಾದ ಕಾಲದಲ್ಲಿ ಗಲ. ೪, ೪. ದೇವರ ಹಿತರಾದ ನಮಗಾಗಿ ಸತ್ತನಲ್ಲ. ೭. ಆದರೆ ನೀತಿವಂತನಿಗಾಗಿಯೂ ಹಂಗಿಲ್ಲದವನೊಬ್ಬನು ಸಾಯುವದು ಅತಿ ದುರ್ಘಟನಾಗಿದೆ; ಒಳ್ಳೆಯವನೆಂಬ ಉಪಕಾರಿಗಾಗಿ ಒಂದು ವೇಳೆ ಯಾರಾದರೂ, ಸಾಯದಿಟ್ಟನಾದಾನು. ೮. ಆದ್ದರಿಂದ ಇನ್ನು ಪಾಪಿಗಳಾಗಿರುವ ನಮಗಾಗಿ ಕ್ರಿಸ್ತನು ಸತ್ತದರಿಂದ, ದೇವರು ತನ್ನ ಪ್ರೀತಿಯ ಆಧಿಕ್ಯವನ್ನು ನಮಗೆ ಪ್ರತಿಷ್ಠೆ ಮಾಡುತ್ತಾನೆ. ೯. ಹೀಗಿರಲಾಗಿ ಆತನ ರಕ್ತದ ಮೂಲಕದಿಂದ ನೀತಿ ಪಟ್ಟವರಾಗಿದ್ದು, ಆತನ ಮುಖಾಂತರ ಬಹು ಹೆಚ್ಚಾಗಿ ಕೋಪದಿಂದ ರಕ್ಷಿತರಾಗುವೆವು. (ದೇವರು ಪಾಪಿಗಳಾದ ಶತ್ರುಗಳಿಗೆ ಮಹೋಪಕಾರಿಯಾಗಿದ್ದರೆ, ಕ್ರಿಸ್ತನ ಮರಣ ಮೂಲಕವಾಗಿ ವಿಮುಕ್ತರಾಗಿ ನೀತಿ ಪಟ್ಟ ಪ್ರಿಯ ಮಕ್ಕಳಿಗೆ ಅತ್ಯಂತೋಪಕಾರಿಯಾಗದಿರನು) ೧೦. ನಾವು ಶತ್ರುಗಳಾಗಿದ್ದು ದೇವರ ಮಗನ ಮರಣದಿಂದ ದೇವರಿಗೆ ಅನ್ಯೋನ್ಯರಾದನಂತರ, ಅನ್ಯೋನ್ಯರಾಗಿದ್ದು ಪುನರುತ್ಥಾನದಿಂದಲೂ ಪಾಪ ಮರಣಗಳ ಮೇಲೆ ಮಾಡಿದ ಜಯೋತ್ಸವದಿಂದಲೂ ಸರ್ವಾಧಿಕಾರವನ್ನು ಪಡದು ಕೊಂಡ ಕ್ರಿಸ್ತನ ಜೀವದಿಂದ ಬಹು ಹೆಚ್ಚಾಗಿ ರಕ್ಷಿತರಾಗುವೆವು. ದೇವರಿಗೆ ಅನ್ಯೋನ್ಯರಾದವರ ರಕ್ಷಣೆಯನ್ನೂ ಸಿದ್ಧಿಯನ್ನೂ ಜಯೋತ್ಸವವಾಗಿ ಪುನರುತ್ಥಾನನಾದವನು ಸಾಧಿಸುವನು. ೧೧. ಹಾಗಾದರೆ ಮುಂದಣ ರಕ್ಷಣೆಯನ್ನು ವ. ೯. ನಂಬುವದಲ್ಲದೆ, ಈಗಲೇ ಯೇಸು ಕ್ರಿಸ್ತನ ಮುಖಾಂತರ ನಮ್ಮ ದೇವರಲ್ಲಿಯೂ, ಆತನು ಕೊಡುವ ಮಹಿಮೆಯಲ್ಲಿಯೂ, ಅದನ್ನು ಪಡದು ಕೊಂಡಂತೆ, ಹಿಗ್ಗಿ ಕೊಳ್ಳುವದು ಯುಕ್ತವಾಗಿದೆ.

ರ್ತಾಮಿಾ. ೫, ೧೨—೧೫.

೨. ಕ್ರಿಸ್ತನಿಗೂ, ಆದಮನಿಗೂ ಇರುವ ಹೆಚ್ಚು ಕಡಮೆ ವ. ೧೨—೨೧.

ಮುಂದಿನ ವಚನಗಳಲ್ಲಿ ಅಪೊಸ್ತಲನು ದೇವರ ಕೃಪೆಯನ್ನು ಆದಮನಿಂದುಂಟಾದ ನಷ್ಟಕ್ಕೆ ಹೋಲಿಸಿ ವರ್ಣಿಸುತ್ತಾನೆ. ಮುಖ್ಯಾಭಿಪ್ರಾಯವೇನಂದರೆ: ಆದಮನಿಂದ ಪಾಪವೂ ಮರಣವೂ ಅವನಿಂದ ಹುಟ್ಟಿದ ಎಲ್ಲಾ ಮನುಷ್ಯರಿಗೆ ಹತ್ತಿದ ಪ್ರಕಾರ, ಕ್ರಿಸ್ತನಿಂದ ಮನುಷ್ಯ ಜಾತಿಗೆಲ್ಲಾ ಬೇಕಾದ ಕೃಪೆಯೂ, ನೀತಿಯೂ ಹುಟ್ಟಿ ಅವೆ; ಆದರೆ ಬಂದರಿಂದಲೇ ನರಲೋಕವನ್ನೆಲ್ಲಾ ಕೆಡಿಸಿದ ಆದಮನ ಪಾಪಕ್ಕಿಂತ ಆದಮನೂ, ಅವನ ಮಕ್ಕಳೆಲ್ಲರೂ ಮಾಡಿದ ಎಲ್ಲಾ ಪಾಪಗಳನ್ನು ಪರಿಹರಿಸಿದ ಕ್ರಿಸ್ತನ ಕೃಪೆಯು ಅತ್ಯಧಿಕ ಬಲವುಳ್ಳದ್ದಾಗಿದೆ.

೧೨. ಆದದರಿಂದ ೧) ಒಬ್ಬ ಮನುಷ್ಯನಿಂದ ಪಾಪವೂ ೨), ಪಾಪದಿಂದ ಮರಣವೂ ೩), ಲೋಕದಲ್ಲಿ ಪ್ರವೇಶಿಸಿ, ೪ ಪ್ರಕಾರ ಎಲ್ಲರು ಪಾಪ ಮಾಡಿದ್ದಲ್ಲಿ ೫), ಮರಣವು ಎಲ್ಲರ ಮೇಲೆ ವ್ಯಾಪಿಸಿದ ಹಾಗಿರುವದು ೬).

೧. ಪೀಗಿರಲಾಗಿ ಯೇಸು ಕ್ರಿಸ್ತನಿಂದುಂಟಾದ ರಕ್ಷಣೆಯು ಆದಮನಿಂದುಂಟಾದ ನಷ್ಟಕ್ಕೆ ಪ್ರತಿಯಾಗಿದೆ. ನರಜಾತಿಗೆಲ್ಲಾ ಅದು ನೂತನ ಗತಿಯಾಯಿತು.

೨. ಆದಮನು ಒಂದೇ ಪಾಪಕೃತ್ಯದಿಂದ ಪಾಪಿಯಾದನಂತರ, ಅವನಿಂದ ಹುಟ್ಟಿದವರೆಲ್ಲರೂ ಪಾಪಿಗಳಾದರು. ಪಾಪಿಗಳೆಲ್ಲರ ಪಾಪಗಳಿಗೆಲ್ಲಾ ಆದಮನು ಮಾಡಿದ ಮೊದಲನೆ ಪಾಪವು ಮೂಲವಾಗಿದೆ.

೩. ಅಪಾಸ್ತಲನು ಇಲ್ಲಿ ದೈಹಿಕ ಮರಣ ಆತ್ಮಿಕ ಮರಣವೆಂಬ ಭೇದವನ್ನು ಬಗೆಯುವದಿಲ್ಲಾ. ಎರಡಕ್ಕೂ ಕರಣ ಒಂದೆ, ಅಂದರೆ ಪಾಪವು; ಕಾರಣ ಒಂದೆ, ಅಂದರೆ ದೇವಾನ್ಯಾಯನ್ಯ ಭೇದವು.

೪. ಅಂದರೆ ಎಲ್ಲರೂ ಪಾಪಿಗಳಾಗಿರುವಲ್ಲಿ ಸ. ೩, ೨೩. ಪಾಪಕೃತ್ಯಗಳಿಗೆಲ್ಲಾ ಪಾಪಭಾವವೆ ಮೂಲ ಯಾಕೋಬಾ. ೩, ೬. ಒಬ್ಬಾಬ್ಬ ಮನುಷ್ಯನು ಪಾಪಿಯಾದ ಆದಮನ ಮಗನಾಗಿರುವದರಿಂದಲೂ, ತಾನು ಪಾಪಿಯಾಗಿರುವದರಿಂದಲೂ ಪಾಪಕ್ಕೆ ಒಳಗಾಗಿದ್ದಾನೆ.

೫. ಈ ಪೂರ್ವ ವಾಕ್ಯಕ್ಕೂ ೧೪ನೆ ವಚನದ ಉತ್ತರ ವಾಕ್ಯಕ್ಕೂ ನಡುವೆ ೧೩—೧೪ಳಲ್ಲಿ ಸಾಮಾನ್ಯ ಪಾಪವು ಆದಮನಿಂದ ಬಂತು ಎಂಬುವದು, ೧೫ರಿಂದ ೧೭ ವರೆಗೆ ಕ್ರಿಸ್ತನೂ, ಆದಮನೂ ಮೂಲಕರಾಗಿದ್ದು, ಪರಸ್ಪರ ಸದೃಶರಾಗಿದ್ದರೂ, ಬಲಾಧಿಕ್ಯದ ಪ್ರಕಾರ ಅತ್ಯಂತ ವೃತ್ಯಸ್ತರಾಗಿದ್ದಾರೆಂಬುವದು ಬರದದೆ.

೧೩ರಿಂದ ೧೭ ವರೆಗೂ ಪೌಲನು ವಿಸ್ತಾರವಾದ ಮಧ್ಯೋಕ್ತಿಯಲ್ಲಿ ೧, ಆದಮನಿಂದಲೇ ಪಾಪವು ಎಲ್ಲಾ ಮನುಷ್ಯರ ಮೇಲೆ ಬಂತೆಂದು ಸ್ಥಾಪಿಸಿ, ೨, ಕ್ರಿಸ್ತನಿಗೂ, ಆದಮನಿಗೂ ಇರುವ ವ್ಯತ್ಯಾಸವನ್ನು ಸ್ಥಾಪಿಸುತ್ತಾನೆ.

ವ. ೧೩. ಪಾಪವು ನಿಯಮಾತಿಕ್ರಮಣವಾದರೆ, ನಿಯಮಸ್ಥಾಪನಕ್ಕಿಂತ ಮುಂಚೆ ಪಾಪವಿರಲಿಲ್ಲವೆಂದು ಪ್ರತಿಕಕ್ಷಿಸಲಾಗದು. ಯಾಕಂದರೆ: ಮೋಶೆಗಿಂತ ಮುಂಚಿತವಾಗಿ ಪಾಪವು ಉಂಟಾಗಿತ್ತು; ಆದರೆ ನಿಯಮವಿಲ್ಲದ ಪಕ್ಷದಲ್ಲಿ ಅದು ಚನ್ನಾಗಿ ಎಣಿಕೆಯಾಗಲಿಲ್ಲ. ೧೪. ಇದಕ್ಕೆ ಪಾಪಫಲವಾದ ಮರಣವು ಎಲ್ಲರಿಗೂ, ಉಂಟಾದದ್ದು ದೃಷ್ಟಾಂತವಾಗಿದೆ. ಆದಮನಿಂದ ಮೋಶೆ ಪರಿಯಂತ ತಂದೆಯಂತೆ, ಸ್ಪಷ್ಟವಾದ ದೇವರ ಕಟ್ಟಳೆಯನ್ನು ವಿಾರದ ಶಿಶುಗಳು ಮುಂತಾದ ಆದಮನ ಮಕ್ಕಳೆಲ್ಲರ ಮೇಲೆ ಮರಣವು ಧೊರೆತನ ಮಾಡಿತು. ಹಾಗಾದರೆ ಆದಮನಿಂದ ಅವರಿಗೆ ಬಾಧ್ಯವಾಗಿ ಬಂದ ಪಾಪದ ದೆಸೆಯಿಂದ ಸತ್ತರು. ಆದಮನು ಎರಡನೆ ಆದಮನೆಂಬ ಕ್ರಿಸ್ತನ ಮುಂಗುರ್ತಾಗಿದ್ದಾನೆ. ೧೫. ಆದರೆ ಕ್ರಿಸ್ತನು ಮುಂಗುರ್ತಿನವನಿಗಿಂತ ಅಧಿ

೬—೨೪ ಅಪೌ. ಪಿತೃ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತನ.
ರೌಮಿಯಾ. ೫, ೧೬—೨೧.

ಕನು. ಕೃಪೆಯು ಪಾಪಕ್ಕಿಂತ ಬಲವಾದದ್ದು. ಕ್ರಿಸ್ತನಲ್ಲಿರುವ ಕೃಪೆಯಿಂದ ಪ್ರಾಪ್ತವಾಗುವ ರಕ್ಷಣೆ ಜೀವಗಳು ಪಾಪದಿಂದ ಹುಟ್ಟಿದ ದುರವಸ್ಥೆಗೆ ಸರಿಯಲ್ಲ, ಬಹು ಹೆಚ್ಚಾಗಿವೆ. ಯಾಕಂದರೆ: ಒಬ್ಬನ ಪಾಪದಿಂದ ಅನೇಕರು (ಅಂದರೆ ಎಲ್ಲರು) ಮರಣಕ್ಕೆ ಒಳಗಾದದ್ದೆ ಸರಿ. ಆದರೆ ಯೇಸು ಕ್ರಿಸ್ತನೆಂಬ ಒಬ್ಬ ಮನುಷ್ಯನಿಂದ ಅತ್ಯಧಿಕವಾದ ಕೃಪೆಯು ಎಲ್ಲರ ಮೇಲೆ ವ್ಯಾಪಿಸಿ ಅದೆ. ೧೬. ಅ) ಯೇಸು ಕ್ರಿಸ್ತನಲ್ಲಿ ಪ್ರಾಪ್ತವಾದ ಕೃಪೆಯು ಸರ್ವ ನಷ್ಟ ಮೂಲಕವಾದ ಆದಮನ ಒಂದೇ ಪಾಪವನ್ನಲ್ಲ, ಎಲ್ಲಾ ಪಾಪಗಳನ್ನು ಪರಿಹರಿಸಿತು. ದೇವರ ನ್ಯಾಯವಾದ ಶಿಕ್ಷಾನಿರ್ಣಯದ ಪ್ರಕಾರ ಒಂದೇ ಪಾಪದಿಂದ ಎಲ್ಲರ ಮೇಲೆ ಆತ್ಮಿಕ ಮರಣವೆಂಬ ಶಾಪವು ಬಂತು. ಕ್ರಿಸ್ತನಿಂದುಂಟಾದ ರಕ್ಷಣೆಯು ಆ ಒಂದೆ ಮೂಲಪಾಪವನ್ನು ಮಾತ್ರವಲ್ಲಾ, ಅದರಿಂದ ಹುಟ್ಟಿದಂಥಾ ಸಹಜ ಸ್ವಕೃತ್ಯ ಪಾಪಗಳನ್ನೆಲ್ಲಾ ಸಹ ಪರಿಹರಿಸಿ, ನಿಯಮಕ್ಕನುಸಾರವಾದ ನೀತಿಯನ್ನೆ ಪಾಪದಲ್ಲಿ ಬಿದ್ದ ಮನುಷ್ಯನಲ್ಲಿ ಹುಟ್ಟಿಸುತ್ತದೆ. ೧೭. ಇ) ಆದಮನ ಪಾಪದಿಂದ ಮರಣವು ಥೊರೆತನ ಮಾಡಿತು; ಆದರೆ ಪಾಪದ ಪೂರ್ಣತೆಯನ್ನು ಹೊಂದಿದವರಲ್ಲಿ ಅನು ಅಧಿಕ ಬಲವಾಗಿರುವದರಿಂದ, ಅವರು ಕೃಪೆಯ ಮುಖಾಂತರ ನಿತ್ಯಜೀವರಾಜ್ಯದಲ್ಲಿ ರಾಜರಾಗಿ ಪ್ರಕ. ೫, ೧೦; ೧, ೬. ೧ ಪೇತ್ರ. ೨, ೯. ಆಳಿಕೊಳ್ಳುವರು. ೧೮. ಆದ್ದರಿಂದ ಒಬ್ಬನ ಅತಿಕ್ರಮಣದಿಂದ ಪಾಪದುರವಸ್ಥೆಯ ಶಾಪವು ಎಲ್ಲಾ ಮನುಷ್ಯರ ಮೇಲೆ ಬಂದಂತೆ, ಒಬ್ಬನ ನೀತಿಯಿಂದ ಜೀವಸಾಧಕವಾದ ನೀತಿ ಪಡಿಸುವಿಕೆ ಎಲ್ಲರಿಗೂ ಆಯಿತು. ೧೯. ಇದು ದೇವರ ನೀತಿಗೆ ಅನುಕೂಲವಾದದ್ದು; ಯಾಕಂದರೆ: ಆದಮನ ಅವಿಧೇಯತ್ವದಿಂದ ಅನೇಕರೆಂಬ ಎಲ್ಲರು ಪಾಪಿಗಳಾಗಿ ಪ್ರತಿಷ್ಠೆಯಾದ ಪ್ರಕಾರ, ಕ್ರಿಸ್ತನ ವಿಧೇಯತ್ವದಿಂದ ಆತನನ್ನು ನಂಬುವ ಅನೇಕರೆಂಬ ಎಲ್ಲರು ನೀತಿವಂತರಾಗಿ ಪ್ರತಿಷ್ಠೆಯಾಗುತ್ತಾರೆ. ೨೦. ನಿಯಮವು ಪಾಪದ ಅಸಹ್ಯತ್ವವು ಪೂರ್ಣ ಪ್ರಕಟವಾಗುವ ಉದ್ದಿಶ್ಯವಾಗಿಯೇ ನಡುವೆ ಬಂತು. ಆದರೆ ಪಾಪವು ತನ್ನ ಪೂರ್ಣ ಬಲವನ್ನು ತೋರಿಸಿದಲ್ಲಿ ಕೃಪೆಯು ಅತಿಬಲವಾಗಿ ಕಾಣುತ್ತದೆ, ಅಂದರೆ ತಮ್ಮ ದುರವಸ್ಥೆಯನ್ನು ಹೆಚ್ಚಾಗಿ ತಿಳಿದ್ದರಿಂದ ಅಧಿಕ ಕೃಪಾಭಿಲಾಷಾನ್ವಿತರಾದವರಲ್ಲಿ. ೨೧. ಹೀಗಿರಲಾಗಿ ನಿಯಮವು ಅತಿಕ್ರಮಣವನ್ನು ತಡಿಸದೆ, ಅದನ್ನು ಹೆಚ್ಚೆಚ್ಚಾಗಿ ಪ್ರಕಟಿಸಿ, ಅಧಿಕ ಬಲವಾದ ಕೃಪಾಪ್ರಕಟನೆಗೆ ಮಾರ್ಗವನ್ನು ಸಿದ್ಧ ಮಾಡಿದ್ದರಿಂದ, ದೇವರ ಲೋಚನೆಯು ಸಾರ್ಥಕವಾಯಿತು: ಯಾವ ಪ್ರಕಾರ ಪಾಪವು ಸರ್ವಲೋಕವ್ಯಾಪ್ತವಾದ ಮರಣದಿಂದ ಥೊರೆತನ ಮಾಡಿತೊ, ಅದೇ ಪ್ರಕಾರ ಪಾಪವನ್ನು ನೋಲಿಸಿದ ಕೃಪೆಯು ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ನಂಬುವವರಿಗೆ ಪ್ರಾಪ್ತವಾಗುವ ನೀತಿಯಿಂದ ಅವರನ್ನು ನಿತ್ಯಜೀವದಲ್ಲಿ ಶೇರಿಸಿ ಜಯೋತ್ಸವ ಮಾಡುತ್ತದೆ.

೫) ಕ್ರಿಸ್ತನಲ್ಲಿರುವ ಕೃಪೆಯ ಪರಿಶುದ್ಧಿಯೂ ಮಹಿಮೆಯೂ ಸ. ೬—೮.

ಪರಿಶುದ್ಧೀಕರಣ ಸ. ೬.

ಅ) ಭಕ್ತನು ನೀತಿ ಪಡೋಣದರಿಂದ ಕ್ರಿಸ್ತನಿಗೆ ಅನ್ಯೋನ್ಯನಾಗಿ ಪರಿಶುದ್ಧನಾಗುತ್ತಾನೆ. ವ. ೧—೧೧.

ಇ) ಕೃಪಾಪ್ರಾಪ್ತನು ಪಾಪಸೇವಾತ್ಯಕ್ತನಾಗಿ ನೀತಿಸೇವಾಸ್ವೇಚ್ಛಾಧೀನನಾಗುತ್ತಾನೆ. ವ. ೧೨—೧೯.

ಉ) ಪಾಪನೀತಿಗಳ ಫಲದ ಭಾವನೆ ಶುದ್ಧೀಕರಣಕ್ಕೆ ಹೇತುವಾದದ್ದು. ವ. ೨೦—೨೩.

ರೋಮಾ. ೬, ೧—೪.

ಅ) ಭಕ್ತನು ನೀತಿ ಪಡೋಣದರಿಂದ ಕ್ರಿಸ್ತನಿಗೆ ಅನ್ಯೋನ್ಯನಾಗಿ ಪರಿಶುದ್ಧನಾಗುತ್ತಾನೆ. ವ. ೧—೧೧.

ಕೃಪಾಬಾಧೆಯು ಪಾಪವ ನಡತೆಗೆ ಇಂಬು ಕಾಡುತ್ತದೆಂಬ ವಾದವ
ಕ್ಷಪ್ತ ಖಂಡನೆ. ವ. ೧—೨.

೧. ಹಾಗಾದರೆ, ಏನು ಹೇಳುವ ೧)? ಕೃಪೆಯು ಹೆಚ್ಚುವ ಹಾಗೆ ಪಾಪದಲ್ಲಿ ನಿಲ್ಲೋಣವೋ ೨)? ಆಗದು. ೨. ಪಾಪಕ್ಕೆ ಸತ್ತವರಾದ ನಾವು ಇನ್ನು ಹ್ಯಾಗೆ ಅದರಲ್ಲಿ ಬದುಕುವೆವು ೩)?

೧. ಅಂದರೆ ನಮ್ಮ ಬಾಧೆಯ ಸ್ವಾರಸ್ಯವೇನು? ಈ ರೀತಿಯಿಂದ ಪೌಲನು ಮನುಷ್ಯನು ಪುಣ್ಯದಿಂದಲೇ ಮುಕ್ತಿ ಪಡೆಯ ಬೇಕೆಂದು ಹೇಳಿ, ದೇವರ ಪುಂಗಿಲ್ಲದ ಕೃಪೆಯಿಂದಲೇ ರಕ್ಷಣೆಯಾಗುವದೆಂಬ ಬಾಧೆನೆ ನೀತಿಗೆ ವಿರೋಧವಾವದ್ದೆಂದು ತಿರಸ್ಕರಿಸಿ, ತನ್ನ ಅಭಿಪ್ರಾಯವನ್ನು ತಲೆ ಕೆಳಗಾಗಿ ಮಾಡುವವರ ದೂರು ಶೇರಿಸುತ್ತಾನೆ.

೨. ಪೌಲನು ಹೀಗೆ ಬಾಧಿಸುತ್ತಾನೆಂದು, ಎ ದುರಾಳಿಗಳು ಅವನ ಮೇಲೆ ಅಪವಾದವನ್ನು ಹೇಳಿದರು.

೩. ಪಾಪಕ್ಕಾಗಿ ತನ್ನ ದೇಹ ರಕ್ತಗಳನ್ನು ಬಲಿಯಾಗಿ ಅರ್ಪಿಸಿ, ಸತ್ತ ರಕ್ಷಕನ ಅನ್ಯೋನ್ಯದಲ್ಲಿ ವಿಶ್ವಾಸದಿಂದ ಶೇರಿದ ಪಾಪಿಗಳು ಕ್ರಿಸ್ತನ ಆತ್ಮದಿಂದ ಚಾವಾಂತರವನ್ನೈದಿ, ಪಾಪಕ್ಕೆ ಪ್ರಾಣವೈರಿಗಳಾಗಿ, ಬೇಕೆಂದು ಪಾಪ ಮಾಡುವದಕ್ಕಿಂತ ಸಾಯುವದು ಲೇಸೆಂದು, ಪ್ರಯದಲ್ಲಿ ಚಾವಿಸುವರು.

ಕೃಪೆಯು ಪಾಪವೃತ್ತಿಗೆ ಇಂಬು ಕಾಡುವದಿಲ್ಲವೆಂಬ ವಿವರವು. ವ. ೩—೧೧.
ಸ್ನಾನವು ಪುಳೆಮನುಷ್ಯನ ಸಾವು. ವ. ೩. ೪.

೩. ಏನು? ಕ್ರಿಸ್ತ ಯೇಸುವಿಗಾಗಿ ಸ್ನಾನ ಹೊಂದಿದವರಷ್ಟು ೧) ಅವನ ಮರಣಕ್ಕಾಗಿ ೨) ಸ್ನಾನ ಹೊಂದಿದೆವೆಂದು ಅರಿಯರಾ? ೪. ಹಾಗಾದರೆ, ಯಾವ ಪ್ರಕಾರ ಕ್ರಿಸ್ತನು ತಂದೆಯ ಮಹಿಮೆಯಿಂದ ೩) ಸತ್ತವರಾಳಗಿಂದ ಎಬ್ಬಿಸಲ್ಪಟ್ಟನೋ, ಅದ್ರೀ ಪ್ರಕಾರ ನಾವು ಸಹ ಹೊಸ ಜೀವದಲ್ಲಿ ೪) ನಡೆದು ಕೊಳ್ಳುವ ಹಾಗೆ ೫), ಅವನ ಸಂಗಡ ಸ್ನಾನದಿಂದ ಮರಣಕ್ಕಾಗಿ ಹೂಣಲ್ಪಟ್ಟೆವು ೬).

೧. ಇದು ಎರಡನೆ ಪಂಚನವ ಮಾತಿಗೆ ಪ್ರಮಾಣವಾಗಿದೆ. ಸತ್ಯವಾಗಿ ಸ್ನಾನ ಪೊಂದಿದವರು ಸತ್ತು ಪೂಣಲ್ಪಟ್ಟ ಕ್ರಿಸ್ತನ ಸಾಯುಜ್ಯದಲ್ಲಿ ಶೇರುತ್ತೇವೆಂದು, ಸ್ನಾನವಲ್ಲಿ ನೀರಾಳಗೆ ಮುಳುಗುತ್ತಾರೆ. ಸ್ನಾನ ಪೊಂದಿದವರಲ್ಲಿ ಪೇಚ್ಚು ಜನರು ಯೇಸು ಕ್ರಿಸ್ತನ ಅನ್ಯೋನ್ಯವಿಲ್ಲದವರಾಗಿರುವದು ಪೌಲನು ಇಲ್ಲಿ ಬರವ ಮಾತನ್ನು ಬಂಧಿಸುವದಿಲ್ಲ; ಯಾಕಂದರೆ ಪೌಲನು ಸತ್ಯವಾಗಿ ಸ್ನಾನ ಪೊಂದಿದವರ ವಿಷಯವಾಗಿಯೇ ಉದಾಹರಿಸುತ್ತಾನೆ.

೨. ಸ್ನಾನವಿಂದ ಕ್ರಿಸ್ತನ ಐಕ್ಯದಲ್ಲಿ ಗಲ. ೩, ೨೬. ಶೇರಿದವರು ಆತನ ಪದವಿಯನ್ನು ಪಡೆಯುತ್ತಾರೆ. ನಿಜವಾದ ಸ್ನಾನದಿಂದ ಭಕ್ತನು ಕ್ರಿಸ್ತನ ಮರಣ

ಫಲವನ್ನು ಸ್ವಂತವಾಗಿ ಅನುಭವಿಸುತ್ತಾನೆ. ಬಳಿಕ ಕ್ರಿಸ್ತನ ಕೂಡಾ ಪಾಪಕ್ಕಾಗಿ ಸತ್ತು, ಆತನ ಮರಣದ ಪಾಲುಗಾರನಾಗುತ್ತಾನೆ.

೫. ಕ್ರಿಸ್ತನ ಪುನರುತ್ಥಾನವು ತಂದೆಯಾದ ದೇವರ ಮಹಿಮೆಯ ವಿಶೇಷವಾದ ಪ್ರತಿಷ್ಠೆಯಾಗಿತ್ತು; ಯಾಕಂದರೆ ೧) ಅದು ಆತನ ದೇವಪುತ್ರ ಜೀವ ನವೀಕರಣ ಪಾತ್ರವಲ್ಲಾ, ಆತನ ಪೂರ್ಣ ಮಹಿಮಾಕರದ ಆದಿಯು ಆಗಿತ್ತು; ೨) ಕ್ರಿಸ್ತನು ಎರಡನೆ ಆದಮನಾಗಿದ್ದ ಕಾರಣ, ಆತನ ಪುನರುತ್ಥಾನವು ಆತನಿಗೆ ಮಾತ್ರವಲ್ಲ, ಆತನ ದೇಹವಾಗಿರುವ ಸರ್ವ ಸಭೆಗೂ, ಸಮಸ್ತ ನರಜಾತಿಗೂ ಜೀವ ಪುನಸ್ಥಾಪನೆಯಾಗಿತ್ತು; ಆದ್ದರಿಂದ ೪ಲ್ಲಿಯೂ ಎಫೆ. ೧. ೯ಲ್ಲಿಯೂ ಘನವಾದ ಶಬ್ದಗಳು ಪ್ರಯೋಗವಾಗಿವೆ.

೪. ಮೂಲಗ್ರಂಥದಲ್ಲಿ ಜೀವದ ನೂತನತ್ವದಲ್ಲಿ ಸ. ೭, ೬. ೨ಕೊರಿ. ೧೫. ಎಂದು ಬರದದೆ. ವಿಶ್ವಾಸವಿಲ್ಲದ ಸ್ಥಿತಿ ಮರಣಾಪಸ್ಥೆಯಾಗಿತ್ತು. ಕ್ರಿಸ್ತನ ಮರಣಕ್ಕಾಗಿ ಸ್ನಾನ ಪಡೆಯುವವರು ಆತ್ಮಿಕ ಮರಣ ಉಳ್ಳವರಾಗಿ ಪ್ರತಿಷ್ಠಿಸಿ ಕೊಂಡು, ಕ್ರಿಸ್ತನ ಪುನರುತ್ಥಾನದ ಪಾಲುಗಾರರಾಗಿ, ಆತ್ಮಿಕ ಪುನರುತ್ಥಾನವನ್ನೈದುತ್ತಾರೆ.

೫. ಇದರಲ್ಲಿ ನಿಜವಾಗಿ ನೀತಿ ಪಟ್ಟ ಚಕ್ತಸ್ವಭಾವವು ಸೂಚಿತವಾಗಿದೆ. ಅವನು ಕ್ರಿಸ್ತನ ಪುನರುತ್ಥಾನತ್ರಾಣವನ್ನನುಭವಿಸಿ ಕೊಂಡದ್ದರಿಂದ, ತಾನು ತಾನೇ ಅಲ್ಲ, ಅವನಲ್ಲಿರುವ ಕ್ರಿಸ್ತನು ಬದುಕುತ್ತಾನೆ. ಗಲ. ೨, ೧೯. ಕೊಲೊ. ೩, ೧೨.

೬. ಪೂರ್ವಜ್ಞಾನದರಿಂದ ಸತ್ತದ್ದು ಸ್ಥಿರವಾಗುವದು. ಪ್ರಾಥಮಿಕ ಸಭೆಯವರು ನೀರಿನಲ್ಲಿ ಮುಳುಗಿ ಸ್ನಾನ ಪಡೆಯುತ್ತಾ ಇದ್ದರು. ಪೌಲನು ಈ ಸಾದೃಶ್ಯವನ್ನು ಸೂಚಿಸಿ ಪೂರ್ಣಪ್ಪಟ್ಟೆವೆಂದು ಹೇಳುತ್ತಾನೆ. ಇತ್ತಲಾಗಿ ಈ ಪದ್ಧತಿ ಬೇರೆ ಬೇರೆ ದೇಶಗಳಲ್ಲಿ ಭೇದವಾದದ್ದು ಹೆಚ್ಚಾದದ್ದಲ್ಲ. ಜನರು ಅನೇಕ ವಿಧವಾಗಿ ಸ್ನಾನ ಮಾಡುವಂತೆ, ಕ್ರೈಸ್ತ ಸಭೆಯ ಪ್ರಥಮಾಚರಣೆಯಾದ ಸ್ನಾನವು ಸಹ ನಾನಾ ಪ್ರಕಾರವಾಗಿ ನಡೆಯ ಬಹುದು. ದೇಹವನ್ನು ಶುದ್ಧ ಮಾಡುವ ನೀರಿನಲ್ಲಿ ಸ್ನಾನ ಮಾಡ ತಕ್ಕದ್ದು ಮುಖ್ಯವಾದದ್ದು ಹೌದೆ. ೩೬, ೨೫. ಮತ್ತಾ. ೩, ೧೧. ಎಫೆ. ೫, ೨೬. ಕೊಲೊ. ೨, ೧೨. ೨ತೀತ. ೩, ೫. ಇಬ್ರಿ. ೧೦, ೨೨. ೧ಪೇತ್ರ. ೩, ೨೧.

ಆದ್ದರಿಂದ ಕ್ರಿಸ್ತನ ಮರಣ ಜೀವಗಳ ಅನ್ಯೋನ್ಯದಲ್ಲಿದ್ದೇವೆ. ವ. ೫—೧೧.

೫. ಯಾಕಂದರೆ ಅವನ ಮರಣದ ಹೋಲಿಕೆಯಾಗಿ ೧) ಕೂಡ ನೆಡಲ್ಪಟ್ಟವರಾಗಿದ್ದರೆ, ಅವನ ಪುನರುತ್ಥಾನದ ಹೋಲಿಕೆಯಾಗಿಯೂ ಇರುವೆವು ೨). ೬. ಪಾಪ ಶರೀರವು ೩) ನಾಶವಾಗಿ, ನಾವು ಪಾಪಕ್ಕೆ ಇನ್ನು ನ್ಯೋವೆ ಮಾಡದ ಹಾಗೆ ೪), ನಮ್ಮ ಹಳೇ ಮನುಷ್ಯನು ಕೂಡ (ಕ್ರೂಜಿತವಾಗಿದೆಂಬುವದನ್ನು ೫) ತಿಳಿದಿದ್ದೇವೆ. ೭. ಯಾಕಂದರೆ ಸತ್ತವನು ಪಾಪದಾಳಗಿಂದ ನೀತಿನಿರ್ಣಯ ಪಟ್ಟಿದ್ದಾನೆ ೬).

೧. ಅಂದರೆ ಆತನ ಸಾಯುಚ್ಚುದಲ್ಲಿ ನಾವು ಶೇರಿ ಆತನ ಪಾಲಿಗೆ ಸತ್ತರೆ, ಕ್ರಿಸ್ತನ ದೇಹಮರಣ ನಮ್ಮ ಆತ್ಮಿಕಮರಣಕ್ಕೆ, ಆತನ ದೇಹಪುನರುತ್ಥಾನ ನಮ್ಮ ಆತ್ಮಿಕಪುನರುತ್ಥಾನಕ್ಕೆ ಮುಂಗುರ್ತಾಗಿದೆ. ಪೌಲನು ಇಲ್ಲಿ ಉದಾಹರಿಸುವ ಪ್ರಾಸ ಉಪಮಾನವೇನಂದರೆ: ವಿಶ್ವಾಸದಿಂದ ಕ್ರಿಸ್ತನಲ್ಲಿ ಐಕ್ಯನಾದ ಚಕ್ತನು ಕಶಮಾಡುವ ಕಾಂಬೆಯಲ್ಲಿ ಒಂದಾಗಿ ಪಾಲಾಂದುವ ಬಿಗುರಿನ ಪಾಲಾಗಿದ್ದಾನೆ.

೨. ಚಕ್ತನಲ್ಲಿ ಉಂಟಾದ ಪುನರ್ಜನ್ಮದ ಸಿದ್ಧಿಯಾಗಿರುವ ದೇಹಪುನರುತ್ಥಾನವು ವಿಶ್ವಾಸ ಆಶೆಗಳ ವಿಷಯವಾಗಿದೆ.

೩. ಪಾಪವೂ, ಬೇರೆ ಬೇರೆ ದುರಾಶೆಗಳೂ ಒಂ

ದೇ ಅಂಗವಾದ ಶರೀರರೂಪವಾಗಿದೆ. ಪಾಪಕ್ಕೆಲ್ಲಾ ಒಟ್ಟಾಗಿ ಯುದ್ಧವಾಗ ಬೇಕು.

೪. ಪಾಪವು ಪೂರ್ಣ ನಾಶವಾಗದಿದ್ದರೂ, ಕ್ರಿಸ್ತರಲ್ಲಿ ಪಳೇ ಮನುಷ್ಯನು ಕ್ರೂಜಿತನಾದ ಕಾರಣ, ಅವರು ಪಾಪ ಸೇವೆಯಿಂದ ತಾಲಗಿದ್ದಾರೆ. ಅವರು ಯುದ್ಧ ಮಾಡುತ್ತಾ ಇದ್ದರೂ, ಸಾತು ಪಾತ್ರಾಗರು; ಅವರು ಪಾಪದ ಪಾತ್ರಾಸ ಪಾತ್ರಾಸದಾದ ಆಕ್ರಮಣಗಳಲ್ಲಿ ಎಡವುತ್ತಾ ಬೀಳುತ್ತಾ ಇದ್ದಾಗ್ಯೂ, ಎಂದಿಗೂ ಪೂರ್ಣ ಅಪಜಯರಾಗಿ ಸಾಯುವದಿಲ್ಲ.

೫. ಪಾಪದಿಂದ ಕೆಟ್ಟು ಪಾತ್ರಾದ ಪಳೇ ಮನುಷ್ಯನು ತಿದ್ದುಪಾಟು ಆಗುವದು ಸಾಲದು; ಕ್ರಿಸ್ತನು ಸ್ವನೀತಿಚರವಸವನ್ನೆಲ್ಲಾ ಬಿಟ್ಟು ದೇವರಿಗೆ ತನ್ನನ್ನು ಒಪ್ಪಿಸಿ ಕಾಡುವದರಿಂದ ಸಾಯ ಬೇಕು. ಏನಂದರೆ ನಷ್ಟವಾದ ಪಳೆ ಜಾವವು ಮಾನಸಾಂತರ ದುಃಖದಿಂದ ಕ್ರಿಸ್ತನ ಮರಣದಲ್ಲಿ ಶೇರಿ, ಎಡೆ ಬಿಡದ ಪಾತ್ರಾರಾಟದಲ್ಲಿ ಕಾಲೆಯಾಗ ಬೇಕು.

೬. ಅಪರಾಧಿ ಶಿಕ್ಷೆ ಪಾತ್ರಾಂದಿದ ಮೇಲೆ ಬಿಡುಗಡೆಯಾಗುವ ಪ್ರಕಾರವಾಗಿಯೂ, ಸತ್ತವನು ಯಾವ ಕೇಡನ್ನಾದರೂ ಮಾಡಲೂ, ತಾಳಲೂ ಅಶಕ್ತನಾಗಿರುವ ಪ್ರಕಾರವಾಗಿಯೂ, ಕ್ರಿಸ್ತನಿಗೆ ಆಗುತ್ತದೆ. ಅವನು ಪಾಪಕ್ಕೆ ತಕ್ಕ ಶಿಕ್ಷೆಯನ್ನು ಸೈರಿಸಿ ಪ್ರಾಯಶ್ಚಿತ್ತ ಮಾಪಿ ಕಾಂಡವನಾಗಿ, ಪಾಪದ ಪಾಂಗಿಗೆ ತಪ್ಪಿಸಿ ಕಾಂಪಿದ್ದಾನೆ; ಯಾಕಂದರೆ ಪಾಪದ ಫಲವಾದ ಮರಣವನ್ನು ಸಹಿಸಿದ್ದಾನೆ. ಕ್ರಿಸ್ತನು ನಮಗಾಗಿ ಸತ್ತ ದ್ದರಿಂದಲೂ, ನಾವು ಆತನ ಮರಣದ ಐಕ್ಯದಲ್ಲಿ ಶೇರಿದ್ದರಿಂದಲೂ, ಕ್ರಿಸ್ತನಲ್ಲಿ ತಕ್ಕ ಶಿಕ್ಷೆಯನ್ನು ತಾಳಿದವರಾಗಿ ಉಳಿದ ಶಿಕ್ಷೆಗಳಿಂದಲೂ, ಅಸಹ್ಯವಾದ ಪಾಪಸೇವೆಯಿಂದಲೂ, ಬಿಡುಗಡೆಯಾಗಿದ್ದೇವೆ.

೮. ನಾವು ಕ್ರಿಸ್ತನ ಸಂಗಡ ಸತ್ತವರಾದರೆ, ಅವನ ಸಂಗಡ ಬದುಕುವೆವೆಂದು ೧) ನಂಬುತ್ತೇವೆ. ೯. ಕ್ರಿಸ್ತನು ಸತ್ತವರಾಳಗಿಂದ ಎಬ್ಬಿಸಲ್ಪಟ್ಟು, ಇನ್ನು ಸಾಯನೆಂದು ಬಲ್ಲೆವು. ೧೦. ಮರಣವು ಇನ್ನು ಅವನನ್ನು ಆಳುವದಿಲ್ಲ. ಯಾಕಂದರೆ ಅವನು ಸತ್ತದ್ದು, ಒಂದೇ ಸಾರಿ ಪಾಪಕ್ಕೆ ಸತ್ತನು; ಆದರೆ, ಅವನು ಬದುಕುವದು, ದೇವರಿಗೆ ಬದುಕುತ್ತಾನೆ ೨). ೧೧. ಹಾಗೆಯೇ ನೀವೂ ನಿಮ್ಮನ್ನು ಪಾಪಕ್ಕೆ ಸತ್ತವರೆಂದೂ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ದೇವರಿಗೆ ಬದುಕುವವರೆಂದೂ, ಎಣಿಸಿಕಾಳ್ಳಿರಿ ೩).

೧. ಇಹದಲ್ಲಿ ಆತನ ಸಂಗಡ ಸಾಯುವದರಿಂದ ಬದುಕಲಾರಂಭಿಸಿ, ಪರದಲ್ಲಿ ಪಾಪಶರೀರವು ಪೂರ್ಣ ನಾಶವಾದನಂತರ ಪಾತ್ರಾಸ ಶರೀರವು ನಮಗೆ ಪ್ರಾಪ್ತವಾದ ಮೇಲೆ, ಪೂರ್ಣ ಮಹಿಮಾನ್ವಿತರಾಗಿ, ನಿರಂತರವಾದ ಜೀವದಲ್ಲಿ ಶೇರುತ್ತೇವೆಂದು ನಂಬುತ್ತೇವೆ.

೨. ನಮ್ಮಲ್ಲಿ ಉಂಟಾದ ಜೀವವು ಎಂದಿಗೂ ಮುಗಿಯಲಾರದೆಂಬ ಆಶೆಗೆ ನಾವು ಕ್ರಿಸ್ತನ ಸಾರೂಪ್ಯವನ್ನೈದಿದ್ದೇ ಆಸ್ಪದವಾಗಿದೆ. ಪುನರುತ್ಥಾನದ ಇತ್ತಲಾಗಿನ ಕ್ರಿಸ್ತನ ನೂತನ ಜೀವಕ್ಕೆ ಮರಣಭಯವಿಲ್ಲವೇ ಇಲ್ಲ. ಯಾಕಂದರೆ ಮರಣವು ಪಾಪ ಫಲವಾದ ಶಿಕ್ಷೆಯಾಗಿರುವದಲ್ಲದೆ, ಮತ್ತೇನೂ ಅಲ್ಲ. ಕ್ರಿಸ್ತನು ಪಾಪಾತೀತ್ಯಶೂನ್ಯವಾಗಿಯೂ, ಪಾಪ ಬಲದಿಂದಲೂ, ಪಾಪ ಬಲಿಯಾಗಿಯೂ, ಅದರ ಶಿಕ್ಷೆಯನ್ನನುಭವಿಸಿ ಅದರ ಅಧಿಕಾರವನ್ನು ಸಂಪಾರಿಸ ಬೇಕೆಂದು ಒಮ್ಮೆ ಸತ್ತು, ಈಗ ದೇವರ ಸನ್ನಿಧಿಯಲ್ಲಿರುವ ಸರ್ವಾಧಿಕಾರಿಯಾಗಿಯೂ, ದೇವರ ಸ್ವಕೀಯನಾಗಿಯೂ, ದೇವರ ಇಷ್ಟಾರ್ಥಕರನಾಗಿಯೂ, ದೇವರ ಸ್ವಾತ್ಯಂತ್ರಕಾರಿಯಾಗಿಯೂ ದೈವಿಕ ಮಹಿಮೆಯಲ್ಲಿ ದೇವಾತೀತ್ಯಶೂನ್ಯನಾಗಿ ಬದುಕುತ್ತಾನೆ. ಯಥಾದೇವ ಸ್ವಧಾಶಕ್ತಿ ಎಂಬ ಗಾದೆಯ ಪ್ರಕಾರ, ಕ್ರಿಸ್ತನ ಪದವಿಗೆ ಕ್ರೈಸ್ತನದು ಸರಿಯಾಗ ಬೇಕು.

೩. ಗರ್ವಪೀತುವಾದ ತಪಸ್ಸಾಧನಕ್ಕಿಂತ ಪಾಪಕ್ಕೆ ಸತ್ತೆನೆಂಬ ಚಕ್ತನ ಚಾವನೆಯು ಅಧಿಕ ಬಲವಾದ ಪಾಪನಾಶಕ ವಿಷವಾಗಿದೆ. ಕ್ರಿಸ್ತನ ಮರಣೈಕ್ಯದಿಂದ ದುರ್ಭಸನಗಳು ಮಾತ್ರವಲ್ಲ, ಮನುಷ್ಯನ ಆತ್ಮಸ್ತುತಿಯೂ ಚಂಗವಾಗುತ್ತದೆ.

ಇ) ಕೃಪಾಪ್ರಾಪ್ತನು ಪಾಪಸೇವಾತ್ಯಕ್ತನಾಗಿ ನೀತಿಸೇವಾಸ್ವೀಕೃತಾಧೀನನಾಗುತ್ತಾನೆ.
ವ. ೧೨—೧೫.

ಕೃಪಾಧೀನನು ಪಾಪಸೇವೆಯಿಂದ ಬಿಡುಗಡೆಯಾಗುತ್ತಾನೆ. ವ. ೧೨—೧೪.

೧೨. ಹಾಗಾದರೆ ೧), ಪಾಪವು ನಿಮ್ಮ ಮರ್ತ್ಯ ಶರೀರದಲ್ಲಿ ೨)—ನೀವು ಅದರ ಆಶೆಗಳಿಗೆ ವಿಧೇಯರಾಗುವ ಹಾಗೆ ೩)—ಆಳದೆ ಇರಲಿ. ೧೩. ಮಕ್ತು, ನಿಮ್ಮ ಅಂಗಗಳನ್ನು ಅನೀತಿಯ ಆಯುಧಗಳಾಗಿ ೪) ಪಾಪಕ್ಕೆ ಒಪ್ಪಿಸದೆ, ನಿಮ್ಮನ್ನು ದೇವರಿಗೆ ಪತ್ಯವರಾಳಿಗಿಂದ ಬದುಕುವವರಾಗಿಯೂ, ನಿಮ್ಮ ಅಂಗಗಳನ್ನು ದೇವರಿಗೆ ನೀತಿಯ ಆಯುಧಗಳಾಗಿಯೂ, ಒಪ್ಪಿಸಿರಿ. ೧೪. ಯಾಕಂದರೆ ೫) ಪಾಪವು ನಿಮ್ಮನ್ನು ಆಳುವದಿಲ್ಲ; ಯಾಕಂದರೆ ನ್ಯಾಯಪ್ರಮಾಣಕ್ಕಾಳಗಾಗಿರದೆ ೬), ಕೃಪೆಗಾಳಗಾಗಿದ್ದೀರಿ.

೧. ಕ್ರಿಸ್ತನಲ್ಲಿ ಪೂರ್ಣವಿದ ಕೃಪೆಯ ತ್ಯಾಗವು ನಡತೆಯಿಂದ ಪರೀಕ್ಷಿತವಾಗ ಬೇಕು.

೨. ಪಾಪಶರೀರವು ಮರಣಾಧೀನವಾಗಿ ನಿರ್ಬಲವಾಗಿರುವದಲ್ಲದೆ, ದುರ್ಭಸನಸ್ಥಾನವಾಗಿದೆ.

೩. ಚಕ್ತರು ಸಹ ವಿಷಯಾನ್ವಿತ ಶರೀರವುಳ್ಳವರಾಗಿದ್ದಾರೆ; ಆದರೆ ಅವರು ಪರಿಶುದ್ಧ ಆತ್ಮವನ್ನು ಪೂರ್ಣವಿದಿ ಪಾಪವೈರಿಗಳಾಗಿದ್ದು, ಪಾಪ ಕರ್ಮಗಳಿಗೆ ಮಾತ್ರವಲ್ಲ, ಪಾಪಜಾಪನೇ ಮನಸ್ಸು ಮರ್ಯಾದೆಗಳಿಗೂ ಪೇಸುತ್ತಾರೆ.

೪. ಇದು ಯುದ್ಧ ಸಂಬಂಧವಾದ ಸಾದೃಶ್ಯವು. ಕ್ರೈಸ್ತರ ಜೀವನವು ಯುದ್ಧವಾಗಿದೆ; ಅವರು ದೇವರ ಚಟರಾಗಿ ಆತ್ಮ ಶರೀರಗಳ ಶಕ್ತಿಗಳನ್ನೆಲ್ಲಾ ತಮ್ಮ ಒಡೆಯನ ಸೇವಾರ್ಪಿಶ್ಯವಾಗಿಯೇ ಬಳಸ ಬೇಕು.

೫. ಸತ್ಯದಿಂದ ಕೃಪಾಧೀನರಾದವರು ದೇವಾನ್ಯಾನ್ಯದಲ್ಲಿ ಶೇರಿ ಕ್ರಿಸ್ತನ ಪುನರುತ್ಥಾನ ಶಕ್ತಿಯನ್ನು ಧರಿಸಿ ಕಾಂಡು ಇರುವದರಿಂದ, ಆಗ್ಯಾಗೈ ಪಾತಕ ಪೂರ್ಣವಿದರೂ, ಪಾಪವಶರಾಗಲಾರರು.

೬. ನಿಯಮದಿಂದ ಯಾರೂ ದೇವರ ದೃಷ್ಟಿಯಲ್ಲಿ ನೀತಿ ಪಡಲಾರರೆಂದು, ಅಪಾಸ್ತಲನು ಇನೆಸಂಥಿಯಲ್ಲಿ ಸ್ಥಾಪಿಸಿದ ಮಾತಿಗೆ ಅನುಸಾರವಾಗಿ, ಇಲ್ಲಿ ಕೃಪಾಧೀನರಿಗೆ ಪೂರ್ವಾರ್ಜ ನಿಯಮಾಧೀನರಿಗೆ ಪರಿಶುದ್ಧತ್ವ ಅಸಾಧ್ಯವಾದದ್ದೆಂದು ಸೂಚಿಸುತ್ತಾನೆ.

ವಿಶ್ವಾಸವಿಧೇಯತ್ವದಿಂದ ಪರಿಶುದ್ಧತ್ವವು ಪುಟ್ಟುತ್ತದೆ. ವ. ೧೫—೧೯.

೧೫. ಹಾಗಾದರೇನು? ನ್ಯಾಯ ಪ್ರಮಾಣಕ್ಕಾಳಗಾಗಿರದೆ, ಕೃಪೆಗಾಳಗಾಗಿರುವದರಿಂದ ಪಾಪ ಮಾಡೋಣವೋ? ಆಗದು. ೧೬. ನಿಮ್ಮನ್ನು ಯಾವದಕ್ಕೆ ದಾಸರಾಗಿ ವಿಧೇಯತ್ವಕ್ಕಾಗಿ ಒಪ್ಪಿಸುತ್ತೀರೋ—ಮರಣಕ್ಕಾಗಿ ಪಾಪಕ್ಕಾದರೂ, ನೀತಿಗಾಗಿ

ರೋಮಾ. ೬, ೧೭—೨೩.

ವಿಧೇಯಶಕ್ತರಾದರೂ—ಯಾವದಕ್ಕೆ ವಿಧೇಯರಾಗಿದ್ದೀರ್ಕಾ, ಅದಕ್ಕೆ ದಾಸರಾಗಿದ್ದೀರೆಂದು ಅರಿಯೆರಾ? ೧೭. ಆದರೆ ನೀವು ಪಾಪದ ದಾಸರಾಗಿದ್ದವರಾದರೂ, ನಿಮಗೆ ವಾಪ್ಪಿಸಲ್ಪಟ್ಟ ಬೋಧನೆಯ ಪ್ರಮಾಣಕ್ಕೆ ಹೃದಯದಿಂದ ವಿಧೇಯರಾದದರಿಂದ, ದೇವರಿಗೆ ಸ್ತೋತ್ರವು. ೧೮. ಮತ್ತು ಪಾಪದಿಂದ ಬಿಡಿಸಲ್ಪಟ್ಟು, ನೀತಿಗೆ ದಾಸರಾದಿರಿ. ೧೯. ನಿಮ್ಮ ಮಾಂಸದ ಅಶಕ್ತಿಯ ನಿಮಿತ್ತ, ಮನುಷ್ಯರೀತಿಯಾಗಿ ಹೇಳುತ್ತೇನೆ. ಹಾಗಂದರೆ, ಯಾವ ಪ್ರಕಾರ ನಿಮ್ಮ ಅಂಗಗಳನ್ನು ಅನ್ಯಾಯಕ್ಕಾಗಿ ಅಶುದ್ಧತೆಕೂ, ಅನ್ಯಾಯಕ್ಕೂ ದಾಸರಾಗಿ ಒಪ್ಪಿಸಿದಿರ್ಕಾ, ಅದೇ ಪ್ರಕಾರ, ಈಗ ನಿಮ್ಮ ಅಂಗಗಳನ್ನು ಪರಿಶುದ್ಧವಾಗುವದಕ್ಕಾಗಿ, ನೀತಿಗೆ ದಾಸರಾಗಿ ಒಪ್ಪಿಸಿರಿ.

ಅಪೊಸ್ತಲನ ಅಭಿಪ್ರಾಯವೇನಂದರೆ: ಮನಃಪೂರ್ವಕವಾದ ಅಭಿಲಾಷೆಯಿಂದ ಸುವಾರ್ತೆಯನ್ನು ನಂಬಿದ್ದರಿಂದಲೇ ನೀವು ನೀತಿಭಟರಾಗಿ ನೀತಿವೃತ್ತಿಯ ಹಂಗಿನಲ್ಲಿದ್ದೀರಿ; ಯಾಕಂದರೆ ಆಳು ಒಡೆಯನ ಆಜ್ಞಾಧೀನನಾಗಿರಬೇಕು; ಹಾಗಾದರೆ ನೀತಿಭಟನು ನೀತಿವಶನಾಗಿರಬೇಕು. ಕ್ರಿಸ್ತನ ಅಧೀನನಾಗಿರುವದು ಅಥವಾ ಪಾಪಾಧೀನನಾಗಿರುವದು ಈ ಯರಡು ಮಾರ್ಗ ಉಂಟು. ಅವು ಪರಸ್ಪರ ವಿಮುಖವಾಗಿರುವದರಿಂದ, ಮನುಷ್ಯನು ಎರಡನ್ನು ಅನುಸರಿಸಲಶಕ್ಯನು. ಹೀಗಿರಲಾಗಿ, ನೀತಿಯಿಂದ ಬಿಡುಗಡೆಯಾಗಿ ಪಾಪಕ್ಕೂ, ಮರಣಕ್ಕೂ, ಅಧೀನರಾಗಿರುವ ಗತಿಯನ್ನು, ಅಥವಾ ಪಾಪದಿಂದ ಬಿಡುಗಡೆಯಾಗಿ ದೇವಸೇವಾಧೀನರಾಗಿ ನಿತ್ಯ ಜೀವವನ್ನು ಪಡದು ಕೊಳ್ಳುವ ಗತಿಯನ್ನು ಆರಿಸಿ ಕೊಳ್ಳಿರಿ.

ಉ) ಪಾಪ ನೀತಿಗಳ ಫಲದ ಭಾವನೆಯು ಶುದ್ಧೀಕರಣಕ್ಕೆ ಹೇತುವಾದದ್ದು. ವ. ೨೦—೨೩.

೨೦. ಯಾಕಂದರೆ, ನೀವು ಪಾಪಕ್ಕೆ ದಾಸರಾಗಿರುವಾಗ್ಗೆ, ನೀತಿಗೆ ಬಿಡುಗಡೆಯಾಗಿದ್ದಿರಿ ೧). ೨೧. ಹಾಗಾದರೆ, ಯಾವವುಗಳಿಗೆ ಈಗ ನಾಚಿಕೆ ಪಡುತ್ತೀರ್ಕಾ ೨), ಅವುಗಳಿಂದ ಆಗ ಏನು ಫಲವನ್ನು ಹೊಂದಿದಿರಿ? ಯಾಕಂದರೆ ಅವುಗಳ ಅಂತ್ಯವು ಮರಣವ್ಯೇ ೩). ೨೨. ಆದರೆ ಈಗ ಪಾಪಕ್ಕೆ ಬಿಡುಗಡೆಯಾಗಿ, ದೇವರಿಗೆ ದಾಸರಾಗಿ, ನಿಮ್ಮ ಫಲವನ್ನು ಪರಿಶುದ್ಧತೆಕಾಗಿ ೪) ಹೊಂದುತ್ತೀರಿ; ಅಂತ್ಯವಾ, ನಿತ್ಯ ಜೀವವ್ಯೇ ೫). ೨೩. ಯಾಕಂದರೆ ಪಾಪದ ಸಂಬಳವು ಮರಣವು ೬); ಆದರೆ ದೇವರ ಕೃಪೆಯ ವರವು ನಮ್ಮ ಕರ್ತನಾದ ಯೇಸುವಿನಲ್ಲಿರುವ ನಿತ್ಯ ಜೀವವು.

೧. ನೀತಿಯ ಪಂಗಿಲ್ಲದವರಾಗಿದ್ದೇವೆಂದು ನೆನಸಿದಿರಿ. ಪಾಪಾಧೀನರು ಸ್ವೇಚ್ಛಾಕಾರಿಗಳೆಂದು ಅನಿಸಿಕಾಳ್ಳುತ್ತಾರೆ. ಇದು ಒಂದು ಪ್ರಕಾರದ ಭ್ರಾಂತಿ; ಯಾಕಂದರೆ ಪಾಪ್ಯಾಗೂ ಮನುಷ್ಯರೆಲ್ಲರು ದೇವರ ನಿಯಮಕ್ಕೆ ಒಳಗಾಗಿದ್ದಾರೆ. ಇದಲ್ಲದೆ ಪಾಪಿಗಳು ಪಾಪಪರವಶರಾಗಿದ್ದು ಎಷ್ಟು ಮಾತ್ರವೂ ಸ್ವೇಚ್ಛೆ ಇಲ್ಲದವರಾಗಿದ್ದಾರೆ.

೨. ಪಾಪದ ಫಲವೂ, ಸಂಬಳವೂ, ಏನೆಂದು ನೆನಸುತ್ತಲೇ ಋತ್ತನು ಕೃಪೆಯನ್ನು ಅನುಪಯೋಗಿಸುವ ಅಪದ್ಧಸ್ವಾತಂತ್ರಕ್ಕೆ ನಾಚಿ ಪೇಸುವನು.

ರೋಮಾ. ೭, ೧—೫.

೩. ಸ. ೧, ೩೨; ೫, ೧೨—೨೧. ಅಂದರೆ, ಆಪಾದಮರಣ ಪರಮರಣ ಎಂಬ ಎರಡು ವಿಧವಾದ ಮರಣವು ಪಾಪಸೇವಕನಿಗೆ ನೇಮಕವಾಗಿದೆ.

೪. ಅಂದರೆ, ಪರಿಶುದ್ಧರಾಗಿ ನಡದು ಕಾಂಡು ಪರಿಶುದ್ಧ ವೃತ್ತಿಯಲ್ಲಿ ದಿಟ್ಟರಾಗುವದಕ್ಕೆ. ಒಂದು ಪಾಪಜಯದಿಂದ ಮತ್ತೊಂದು ಪುಟ್ಟುತ್ತದೆ.

೫. ದೇವಸೇವಾಫಲವು ಏನಂದರೆ, ಆಪದಲ್ಲಿ ಪೆಚ್ಚುತ್ತಾ ಪೆಚ್ಚುತ್ತಾ ಬಂದು, ಪರದಲ್ಲಿ ಸಿದ್ಧಿ ಪಡೆದುವ ಪರಿಶುದ್ಧತ್ವವು. ಪರಿಶುದ್ಧತ್ವದ ಸಿದ್ಧಿಯು ಸರ್ವಜೀವಮೂಲವಾದ ದೇವರ ಸಂಗದ ಪೂರ್ಣ ಚಾವಾನ್ಯಾನ್ಯಸಿದ್ಧಿಯಾಗಿರುವ ಮನುಷ್ಯನ ನಿಜವಾದ ನಿತ್ಯ ಜೀವವಾಗಿದೆ.

೬. ಪಾಪವು ಪೋಳುವ ಸಂಬಳವೇನಂದರೆ, ಸ್ವೇಚ್ಛಾಸ್ವಾತಂತ್ರವು; ಕಾಡುವಂಥಾದ್ದೇನಂದರೆ, ಮರಣವು. ಮರಣವು ಪಾಪಿಗೆ ಶುದ್ಧ ನ್ಯಾಯದಿಂದ ಪ್ರಾಪ್ತವಾಗುವದು; ನಿತ್ಯ ಜೀವವು ದೇವರ ಪುಂಗಿಲ್ಲದ ಕೃಪೆಯ ಪ್ರಸಾದವಾಗಿದ್ದು, ಕ್ರಿಸ್ತರಲ್ಲಿ ಯಾವನಿಗಾದರೂ, ಪುಣ್ಯದಿಂದ ಸಂಪಾದಿತವಾದ ಸಂಬಳವಾಗಿ ತಾ೧ರುವದಿಲ್ಲ; ಯಾಕಂದರೆ ನೀತಿಯೂ ಪರಿಶುದ್ಧತ್ವವೂ ದೇವರಿಂದಲೇ ಉಂಟಾಗುತ್ತವೆ. ಎಫೆ. ೨, ೮—೧೦. ಕೃಪಾಪ್ರಸಾದವಾದ ಪಾಪಪರಿಹಾರವನ್ನೂ, ಪರಿಶುದ್ಧತ್ವವನ್ನೂ, ಪಡಾಂದಿದವರಿಗೆ ದೇವರ ಕರುಣೆಯು ನಿತ್ಯಜೀವವೆಂಬ ನೂತನ ಪ್ರಸಾದವನ್ನು ದಯ ಮಾಡುತ್ತದೆ. ಕ್ರಿಷ್ಟರು ತಮ್ಮೊಳಗೆ ತಾವೇ ನಾಶವಾದೆವೆಂದು, ಮುಕ್ತರು ತಮ್ಮಿಂದ ತಾವೇ ಏನೂ ಪಡೆಯಲಿಲ್ಲವೆಂದು, ದೇವರ ನೀತಿ ಕೃಪೆಗಳ ಸ್ತೋತ್ರಕ್ಕಾಗಿ ಅರಿಕೆ ಮಾಡ ಬೇಕು.

ಪರಿಶುದ್ಧತೆಯ ವಿಷಯವಾದ ಪೂರ್ವಗಾ. ಸ. ೬, ೧—೪, ೧೬.

ಮುಖ್ಯೋಕ್ತಿ:

ಕ್ರೈಸ್ತನು ನಿಯಮದಿಂದ ಪೂರ್ಣವಾಗಿ ಬಿಡುಗಡೆಯಾದ ಸ್ವಾತಂತ್ರ್ಯವು ಅವನ ಶುದ್ಧೀಕರಣಾಭಿವೃದ್ಧಿಗೆ ಪೋತುವಾಗಿದೆ. ವ. ೧—೬.

ವ. ೧. ಕ್ರೈಸ್ತರಾದ ನೀವು ಹ್ಯಾಗಾದರೂ ಮೋಶೆಯ ನಿಯಮದ ಒಳ್ಳೆ ತಿಳುವಿಕೆ ಇರುವವರಾಗಿರುವದರಿಂದ, ಮನುಷ್ಯನು ನ್ಯಾಯದಿಂದ ಅದರ ಅಧಿಕಾರದೊಳಗಾಗಿದ್ದಾನೆಂದೂ, ಅವನು ಜೀವವೃತ್ತಿಯ ಎಲ್ಲಾ ವಿಷಯವಾಗಿ ಅದನ್ನು ಕೈಕೊಳ್ಳುವ ಹಂಗಿನಲ್ಲಿದ್ದಾನೆಂದೂ, ಮತ್ತೂ ಅದರ ಅಧಿಕಾರವು ಈ ಜೀವವನ್ನು ಅತಿಕ್ರಮಿಸುವದಿಲ್ಲವೆಂದೂ, ಬಲ್ಲಿರಿ. ೨. ನಿಯಮದ ವಿಶೇಷವಾದ ಒಂದು ಉದಾಹರಣೆಯನ್ನು ಪ್ರಯೋಗಿಸಿದೆ, ದಂಪತಿವೃತ್ತಿಯ ಒಂದು ದೃಷ್ಟಾಂತವನ್ನು ಸೂಚಿಸುತ್ತೇನೆ. ಏನಂದರೆ, ಪತಿವ್ರತೆಯಾದ ಹೆಂಡತಿ ಗಂಡನು ಜೀವಿಸುವ ವರೆಗೂ ನ್ಯಾಯವಾಗಿ ಅವನ ಅಧೀನದಲ್ಲಿದ್ದಾಳೆ; ಗಂಡನು ಸತ್ತನಂತರ ಆ ಪೂರ್ವ ಸಂಬಂಧವು ನ್ಯಾಯಪ್ರಕಾರ ಭಂಗವಾಗುತ್ತದೆ. ೩. ಗಂಡನು ಜೀವಿಸುವಾಗ ಪರ ಸಂಬಂಧಿಯಾದರೆ, ವ್ಯಭಿಚಾರಿಯಾಗುತ್ತಾಳೆ; ಗಂಡನು ಸತ್ತನಂತರ ನೂತನ ಲಗ್ನನಾದಾಗ್ಯೂ ನಿರ್ದೋಷಿಯಾಗಿದ್ದಾಳೆ. ೪. ಈ ದೃಷ್ಟಾಂತದ ಪ್ರಯೋಜನವೇನಂದರೆ: ನಾವು ಹೆಂಡತಿ, ನೇಮವು ಪ್ರಥಮ ಪತಿ. ಹೀಗಿರಲಾಗಿ ಮರಣದಿಂದ ಲಗ್ನಭಂಗವಾಯಿತು. ಸತ್ಯವನು ಯಾರೆಂದರೆ, ನಿಯಮವೆಂಬ ಪತಿಯಲ್ಲ, ಕ್ರಿಸ್ತನ ಮರಣೈಕ್ಯವನ್ನೈದಿದ ನಮ್ಮ ಪ್ರಾಥಮಿಕ ಜನ್ಮಭಾವವು ಪೂರ್ವ ಲಗ್ನಭಂಗವಾದನಂತರ, ಕ್ರಿಸ್ತನ ಪುನರುತ್ಥಾನವನ್ನೈದಿದ ನಮ್ಮ ಪುನರ್ಜನ್ಮಭಾವವು ಆತ್ಮಿಕ ಲಗ್ನದಿಂದ ಕ್ರಿಸ್ತನಿಗೆ ಅಧೀನವಾದರೆ, ಅನ್ಯಾಯವಾಗುವದಿಲ್ಲ. ೫. ಯಾಕಂದರೆ: ನಾವು ಕೃಪೆ ಇಲ್ಲದ ಪಾಪಿಗಳಾಗಿ ಸ್ವಾಭಾವಿಕ ಸ್ಥಿತಿ

ರೌಮಾ. ೭, ೬—೧೩.

ಯಲ್ಲಿದ್ದಾಗ, ನಿಯಮದಿಂದಲೇ ಅಧಿಕ ಉದ್ಯುಕ್ತವಾದ ಪಾಪಭ್ರಷ್ಟ ಭಾವದ ದುರ್ವ್ಯಸನಗಳು ನಮ್ಮಲ್ಲಿ ಪ್ರಬಲವಾಗಿ, ಪಾಪ ಶಾಪಗಳನ್ನೇ ಸಾಧಿಸುತ್ತಾ ಬಂದೆವು. ೬. ಆದರೆ ಈಗ ಪ್ರಥಮ ಜನ್ಮಭಾವದ ಮರಣ ದಿಂದ ನ್ಯಾಯ ತೀರಿಸುವ ನಿಯಮದ ಅಧಿಕಾರಕ್ಕೆ ತಪ್ಪಿಸಿ ಕೊಂಡು, ಪರಿಶುದ್ಧಾತ್ಮದಿಂದುಂಟಾದ ನೂತನ ಜೀವಸ್ಥಿತಿಯಲ್ಲಿ ದೇವರನ್ನು ಸೇವಿಸ ಬೇಕು. ಕ್ರಿಸ್ತನಿಂದ ಹೊಂದಿದ ಆತ್ಮವು ಭಕ್ತರನ್ನು ಆತ್ಮಿಕ ಮನು ಷ್ಯರಾಗಿ ಮಾಡುವದರಿಂದ, ಅವರು ನೂತನ ಆತ್ಮವನ್ನು ಕೊಡಲಾರದೆ, ಎಲ್ಲಾನ್ನೂ ಇದ್ದಂತೆ ಇರಲೀಸುವ ೨ಕೊರಿ. ೩, ೬. ಅಕ್ಷರವೆಂಬ ನೇನುದ ಹಳ್ಳೇ ಪದ್ಧತಿಯನ್ನು ಕೈಕೊಳ್ಳುವ ಹಂಗಿನಲ್ಲಿರುವದಿಲ್ಲ.

ವಿವರವು. ಸ. ೭, ೭—೮, ೧೭.

ನಿಯಮಾಧೀನವಾದ ಪಾಪಸೇವೆಯು ಸ. ೭, ೭—೨೪.

ನಿಯಮವು ಪರಿಶುದ್ಧವಾದದ್ದೇ ಸರಿ ವ. ೭—೧೩.

೭. ಹಾಗಾದರೆ, ಏನು ಹೇಳುವ ೧)? ನ್ಯಾಯಪ್ರಮಾಣವು ಪಾಪವೌ? ಆಗದು. ಆದರೆ ನ್ಯಾಯಪ್ರಮಾಣದಿಂದಲೇ ಹೌರ್ದು, ಪಾಪವನ್ನು ಅರಿಯದೆ ಇದ್ದೆನು ೨). ಹ್ಯಾಗಂದರೆ ನ್ಯಾಯಪ್ರಮಾಣವು, ನೀನು ಆಶಿಸ ಬೇಡವೆಂದು ಹೇಳದೆ ಇದ್ದರೆ, ಆಶೆಯನ್ನು ಅರಿಯದೆ ಇದ್ದೆನು ೩). ೮. ಆದರೆ ಪಾಪವು ಕಟ್ಟ ಳೆಯಿಂದ ಸಮಯ ಶಕ್ತವಾಂಡು, ನಂನಲ್ಲಿ ಸಕಲ ವಿಧವಾದ ಆಶೆಗಳನ್ನು ಉಂಟು ಮಾಡಿತು. ಯಾಕಂದರೆ ನ್ಯಾಯಪ್ರಮಾಣವಿಲ್ಲದೆ ಪಾಪವು ಸತ್ತಿದೆ. ೯. ನಾ ನೇ ಒಂದು ಕಾಲದಲ್ಲಿ ನ್ಯಾಯ ಪ್ರಮಾಣವಿಲ್ಲದೆ ಬದುಕುತ್ತಿದ್ದೆನು; ಆದರೆ ಕಟ್ಟಳೆ ಬಂದಾಗ, ಪಾಪವು ತಿರಿಗಿ ಬದುಕಿತು ೪); ನಾನು ಸತ್ತೆನು ೫). ೧೦. ಹೀಗೆ ಜೀವ ಕ್ಕಾದ ಕಟ್ಟಳೆಯೇ ಮರಣಕ್ಕಾಯಿತೆಂದು, ನಾನು ಕಂಡು ಕೌಂಡೆನು. ೧೧. ಹ್ಯಾಗಂ ದರೆ ೬), ಪಾಪವು ಕಟ್ಟಳೆಯಿಂದ ಸಮಯ ಶಕ್ತವಾಂಡು, ನನ್ನನ್ನು ವಂಚಿಸಿ, ಅದರಿಂದ ನನ್ನನ್ನು ಕೌಂದು ಹಾಕಿತು. ೧೨. ಆದದರಿಂದ ನ್ಯಾಯಪ್ರಮಾಣವು ಪರಿಶುದ್ಧ ವಾದದ್ದು ೭), ಕಟ್ಟಳೆಯು ಪರಿಶುದ್ಧವಾಗಿಯೂ, ನ್ಯಾಕಿಯಾಗಿಯೂ, ಒಳ್ಳೇದಾಗಿಯೂ ಅದೆ. ೧೩. ಹಾಗಾದರೆ, ಒಳ್ಳೇದು ನನಗೆ ಮರಣವಾಯಿತೌ? ಆಗದು. ಪಾಪವೇ, ಒಳ್ಳೇದರಿಂದ ನನಗೆ ಮರಣವನ್ನು ಉಂಟು ಮಾಡಿ, ಪಾಪವೆಂದು ತೌರುವ ಹಾಗೆಯೂ ೮), ಪಾಪವು ಕಟ್ಟಳೆಯಿಂದ ಬಹು ಹೆಚ್ಚಾಗಿ ಪಾಪವುಳ್ಳದಾಗುವ ಹಾಗೆಯೂ, ಹೀಗಾಯಿತು.

೧. ಪೌಾಗಾದರೆ ನಿಯಮದಿಂದ ದುರ್ವ್ಯಸನಗಳು ಉದ್ಯುಕ್ತವಾದರೆ, ಪಾಪಕ್ಕೆ ಆಸ್ಪದವಾದ ನಿಯಮ | ದ್ಯಾಷಾನ್ವಿತವಾದದ್ದೆಂಬ ವಾದವನ್ನು ಅಪಾಸ್ತ್ಲ ನು ಈಗ ಖಂಡಿಸುತ್ತಾನೆ.

೨. ನಿಯಮಕ್ಕೂ, ಪಾಪಕ್ಕೂ, ಇರುವ ಗಾಢವೆ ಯಾವದೆಂದರೆ: ನಿಯಮದಿಂದ ಪಾಪದ ತಿಳುವಿಕೆ ಬರುತ್ತದೆ ಅಷ್ಟೆ ಸ. ೩, ೨೦. ಈ ಸಂಗತಿ ಯೆಲ್ಲಾ ನಡೆಯುವ ರೀತಿ ಯೇನಂದರೆ: ಅ) ಮನುಷ್ಯನು ಪುಟ್ಟಿದಂದಿನಿಂದ ಪಾಪಿಯಾಗಿರುವದರಿಂದಲೇ ಪಾಪರಹಿತ ಸ್ಥಿತಿಯ ವಾಸನೆ ಇಲ್ಲದವನಾಗಿ, ತನ್ನಲ್ಲಿರುವ ಪಾಪವನ್ನು ತಿಳಿಯದೆ, ನಿಶ್ಚಿಂತನಾಗಿ ಬಾಳುತ್ತಾನೆ. ವ. ೯. ಈ ಸ್ಥಿತಿಯಲ್ಲಿರುವ ಮನುಷ್ಯನ ಪಾಪವು ನಿರ್ಜೀವವಾಗಿದೆ. ವ. ೮.; ಆ) ಆದರೆ, ಪರಿಶುದ್ಧ ಮಹಿಮೆಯುಳ್ಳ ದೇವರ ನಿಯಮವು ಮನುಷ್ಯನಿಗೆ ಪ್ರಕಟವಾದರೆ, ಅವನು ಸತ್ಕರ್ಮ ದುಷ್ಕರ್ಮ ಭೇದವನ್ನು ತಿಳಿಯುವದಲ್ಲದೆ, ಪಾಪಾಂತರ್ಯಮೂಲವಾದ ಪೈಜ್ಞನ ವ್ಯಸನವು ತ್ಯಾಜ್ಯವಾದದ್ದೆಂದು ಗ್ರಹಿಸಿ ಕಾಳ್ಳುತ್ತಾನೆ. ವ. ೭. ಇ) ಇದರ ಬಳಿಕವೇ ಮನುಷ್ಯನ ಅಂತಃಕರಣದಲ್ಲಿರುವ ದೇವದ್ವೇಷವು ಚನ್ನಾಗಿ ಕಾಣ ಬರುತ್ತದೆ; ಪರ್ಯಾಗಂದರೆ: ಪುರದ ವಿಷಯವಾದ ನಿಷೇಧವನ್ನು ಕೇಳಿದನಂತರ, ಮೂಲ ಪಿತೃಗಳಲ್ಲಿ ಪುಟ್ಟಿದ ವ್ಯಸನ ವೊದಲಾದ ದುರಾಶೆಗಳ ಸಮುದಾಯಕ್ಕೆ ಒಳಗಾಗಿ, ದೇವರ ಆಜ್ಞೆಯನ್ನು ಮೀರುತ್ತಾ, ಬರುತ್ತಾನೆ.

೩. ಅಪಾಸ್ತಲನು ಇಲ್ಲಿ ಉತ್ತಮ ಪುರುಷ ಪ್ರಯೋಗಿಸುತ್ತಾನೆ; ಯಾಕಂದರೆ: ಮನುಷ್ಯಜಾವದ ಸಾಮಾನ್ಯ ಸ್ಥಿತಿಯ ಉದಾಹರಣೆಗಾಗಿ ಸಂಪರ್ಕನಕ್ಕೆ ಮುಂಚಿನ ತನ್ನ ಸ್ವಂತ ವೃತ್ತಾಂತವನ್ನು ವಿವರಿಸುತ್ತಾನೆ.

೪. ಹೀಗೆ ಪಾಪವು ಮನುಷ್ಯನಲ್ಲಿ ಬದುಕ ತಾಡಗುತ್ತದೆ. ವ. ೯. ಪ್ರಾಥಮಿಕರಲ್ಲಿ ಪರ್ಯಾಗಾಪರ್ಯಾಗೆಯೇ ಈಗಲೂ ಒಬ್ಬಾಬ್ಬನಲ್ಲಿ ಜೀವವನ್ನು ಪರ್ಯಾಂಯತ್ತದೆ. ಒಬ್ಬಾಬ್ಬನು ತನ್ನಲ್ಲಿ ತಾನೇ ಅದರ ಬಲವನ್ನು ಪರ್ಯಾಸ್ತಾಗಿ ಅನುಭವಿಸುತ್ತಾನೆ.

೫. ಪೌಲನು ಯೆಹೂದರಾದ ತಂದೆ ತಾಯಿಗಳಿಂದ ಪುಟ್ಟಿದ ಯೆಹೂದನಾಗಿದ್ದರೂ, ತಂದೆಯಿಂದಲಾ ಅಜ್ಜನಿಂದಲಾ ರೋಮಾಯ ಗೃಹಸ್ಥನೆಂಬ ಬಿರುದವನನ್ನು ಪರ್ಯಾಯನಿರ್ವಹನಾಗಿಯೂ, ವಿದ್ಯಾಶಾಲಾಮೂಲಸ್ಥಾನವಾಗಿ ಪೆಸರುವಾಸಿಯಾದ ಥರ್ಸವೆಂಬ ಜನ್ಮಪಟ್ಟಣದಲ್ಲಿ ೧೩—೧೪ನೆ ವರ್ಷದ ವರೆಗೂ ವಾಸ ಮಾಡಿ, ಗ್ರೀಕ ರೋಮಾಯ ವಿದ್ಯಾಸಂಗ್ರಹಾಸಕ್ತನಾಗಿಯೂ, ರೋಮಾಯರೂ, ಗ್ರೀಕರೂ, ಆಪ ಕವಿಗಳ ಜ್ಞಾನಿಗಳ ಗ್ರಂಥಗಳನ್ನು ಅತ್ಯುದ್ಯುಕ್ತನಾಗಿ ಅಭ್ಯಾಸ ಮಾಡಿದ ಕಾಲವನ್ನು ನೆನಸಿಕೊಂಡು, ತಾನು ಆಗ ಮೋಶೆಯ ನಿಯಮ ಮುಂತಾದ ದೇವರ ವಾಕ್ಯವನ್ನು ಲಕ್ಷಿಸದೆ ಇದ್ದ ಕಾರಣ, ನಿಯಮವನ್ನು ತಿಳಿಯದ ಪರಜನರವನಂತೆ ಇದ್ದು, ಬಾಳಿದೆನೆಂದೂ, ಬಳಿಕ ಯೆರೂಸಲೇಮಿಗೆ ಬಂದು, ಆಸಕ್ತನಾಗಿ ನಿಯಮಾಭ್ಯಾಸ ಮಾಡಿ, ದೇವರ ನೀತಿಯ ಪರಿಶುದ್ಧತ್ವವನ್ನೂ, ತಾನು ಪಾಪಿಯಾಗಿ ಶಾಪಕ್ಕೆ ಒಳಗಾಗಿದ್ದೇನೆಂಬದನ್ನೂ, ತಿಳುಕೊಂಡು ಶೋಕಾಕ್ರಾಂತನಾಗಿ ಸತ್ಯವನಂತೆಯೇ ಆದೆನೆಂದೂ ಸೂಚಿಸುತ್ತಾನೆ. ದೇವರ ನಿಯಮವು ಪರಿಶುದ್ಧವಾದದ್ದೆಂದೂ, ತಾನು ಅದಕ್ಕೆ ಅಧೀನವಾದ ಪಾಪಿಯಾಗಿದ್ದೇನೆಂದೂ, ತಿಳಿದು ಕಾಳ್ಳುವವನು ಮಾಡ ಬೇಕೆಂದು ಇಚ್ಛೈಸುವವನ್ನು ಮಾಡಲಾರದೆ, ತಾನು ಮಾಡುವದು ದುಷ್ಕೃತ್ಯವೆಂದು ಗ್ರಹಿಸುತ್ತಾ, ಮರಣಾವಸ್ಥೆಯುಳ್ಳವನಾಗಿರುವದೇ ಸರಿ.

೬. ಈ ಸಂಗತಿಯ ಮೂಲವೇನಂದರೆ: ಪೈದಯದಲ್ಲಿರುವ ಪಾಪವು. ಇದು ನಿಷೇಧದ ಆಸ್ಪದವನ್ನು ಹಿಡಿದು, ನಿಷೇಧಿತವಾದದ್ದು ಅಖಿಲಾಷಿಸ ತಕ್ಕ ಒಡವೆಯಂಬ ಭಾವನೆಯಿಂದ ದುರ್ವ್ಯಸನವನ್ನು ಪುಟ್ಟಿಸಿತು. ಇದೆಲ್ಲಾ ವಂಚನೆಯೇ ಸರಿ. ಏನಂದರೆ: ಸೌಖ್ಯವಲ್ಲ, ಜೀವಮೂಲವಾದ ದೇವಾನ್ಯೋನ್ಯ ಭೇದದಿಂದ ಆತ್ಮಿಕ ಮರಣವು, ದೇವರ ನಿಯಮದಿಂದ ಶಾಪವು, ಇವುಗಳೆ ನನಗೆ ಪಾಪದಿಂದ ಪ್ರಾಪ್ತವಾದವು. ಆದಮ ಪುರ್ವರಿಗೂ, ಹೀಗೆ ಆಯಿತೆಂದು ಬರಹದಲ್ಲಿ ಕಂಡು ಬರುತ್ತದೆ.

೭. ಪಾಪಮಯವಾದ ನರಜಾವದ ಪೂರ್ಣ ನಷ್ಟವನ್ನು ಪ್ರಕಟ ಮಾಡುವ ದೇವನಿಯಮದ ಪರಿಶುದ್ಧತ್ವವು ಅಪ್ರತಿತರ್ಕ್ಯವಾಗಿದೆ. ವಿಶಿಷ್ಟನಿಯಮವೂ, ಒಂದಾನೊಂದು ವಿಧಿಯೂ, ಪರಿಶುದ್ಧವಾಗಿಯೂ, ಉತ್ಕೃಷ್ಟವಾಗಿಯೂ ಇವೆ.

ರ್ಯಾಮಿಾ. ೭, ೧೪—೨೫.

ಅ. ಪಾಪವು ಬರೆ ತಪ್ಪು ಅಲ್ಲ, ಸತ್ಯನಾಶಕ ಜೀವವುಳ್ಳ ಅತ್ಯಸಹ್ಯವಾದ ದ್ರಾೀಪವಾಗಿದೆಂದು, ಉತ್ತಮವಾದ್ದರ ಅನುಪಯೋಗದಿಂದಲೇ ಪ್ರಕಟವಾಗ ಬೇಕು.

ನಿಯಮಾಧೀನವಾದ ಆತ್ಮಮಾಂಸ ಯುದ್ಧ. ವ. ೧೪—೨೩.

ರಕ್ಷಣಾರ್ಥವಾದ ದುಃಖಾೀಭ್ಯಾಸವು. ವ. ೨೪.

೭. ಆ ಐಗುಪ್ತ್ಯನು ಇನ್ನು ಪೆಚ್ಚು ಗುಂಪು ಕೂಡಿಸಿ, ಇಪ್ಪೆ ಗುದ್ದದಲ್ಲಿ ನಿಂತು, ಪೂರ್ವ ಕಾಲದಲ್ಲಿ ಯೆರಿಕಾ ಪಟ್ಟಣದ ಗಾಡೆಗಳು ಬಿದ್ದ ಪ್ರಕಾರ ಯೆರೂಸಲೇಮಿನ ಗಾಡೆಗಳು ಬೀಳುವ ಪೂಗೆ, ತುತೂರಿಗಳನ್ನು ಊದಿಸಿದನು. ಆದರೆ ದೇಶಾಧಿಪತಿಯಾದ ಫೆಲಿಕ್ಸನು ದಂಡಿನಿಂದ ಬಂದು ಆ ಪುಂಡನ್ನು ಬೇಗ ನಿಲ್ಲಿಸಿದನು.

ಉ) ಪೌಲನ ಪ್ರತಿವಾದವು. ಸ. ೨೨—೨೬.

ಅಅ) ಯೆಹೂದ ಜನರ ಮುಂದೆ. ಸ. ೨೨. ಇಇ) ಯೆಹೂದ ಮುಖ್ಯಸ್ಥರ ಮುಂದೆ ಸ. ೨೩.
ಉಉ) ಫೇಲಿಕ್ಸನ. ಸ. ೨೪. ಫೆಸ್ತನ. ಸ. ೨೫. ಅಗ್ರಿಪ್ಪನ ಮುಂದೆ. ಸ. ೨೬.

ಸ. ೨೨.

ಪೌಲನು ಜನರ ಮುಂದೆ ಮಾಡಿದ ಪ್ರತಿವಾದವು.

I. ಪೌಲನ ಭಾಷಣೀವು. ವ. ೧—೨೧.

ವ. ೧. ಸಮೂಹದವರು ತನಗೆ ಮಾಡಿದ ಅನ್ಯಾಯವನ್ನು ಪೌಲನು ಬೇಗ ಮರತು, ಪೂರ್ಣ ತಾಳ್ಮೆಯಿಂದಲೂ, ದೀನತ್ವದಿಂದಲೂ, ಪ್ರೀತಿಯಿಂದಲೂ ಭಾಷಣವನ್ನು ತೊಡಗಿ: ಸಹೋದರರೂ, ತಂದೆಗಳೂ ಆದ ಜನರೇ, ಈಗ ನಾನು ನಿಮಗೆ ಮಾಡುವ ಪ್ರತಿವಾದವನ್ನು ಕೇಳಿರಿ ಎಂದು, ೨. ಇಬ್ರಿಯ ಭಾಷೆಯಿಂದ ಪ್ರಸಂಗ ಮಾಡುವದನ್ನು ಕೇಳಲು, ಸರ್ವರೂ ಬಹಳ ಮೌನವಾದರು. ಗುಲ್ಲಿನಲ್ಲಿ ಶೇರಿದವರಲ್ಲಿ ಹೆಚ್ಚು

ಮಂದಿ ಅದರ ಕಾರಣವನ್ನು ತಿಳಿಯಲಿಲ್ಲ. ಆದ್ದರಿಂದ ಹೊಸಗೆಯ ಬಯಕೆಯಿಂದಲಾದರೂ ಪೌಲನು ಹೇಳುವದನ್ನು ಕೇಳುವದಕ್ಕೆ ಮನಸ್ಸುಳ್ಳವರಾಗಿದ್ದರು. ಪೌಲನು ತನ್ನ ಮುಂಚಿನ ವೃತ್ತಾಂತವನ್ನೂ, ಬಳಿಕ ಸಂಭವಿಸಿದ ಸಂವರ್ತನವನ್ನೂ ವಿವರಿಸಿ, ತಾನು ಮುಂಚೆ ಅತ್ಯಂತ ನೇಮಾಸಕ್ತನಾಗಿದ್ದು, ತನಗೆ ಪ್ರತ್ಯಕ್ಷನಾದ ಯೇಸು ಕ್ರಿಸ್ತನಿಗೆ ಪೂರ್ಣಾಧೀನನಾಗಿ, ಪರಜನರಲ್ಲಿ ಸುವಾರ್ತೆಯನ್ನು ಸಾರುವ ಉದ್ಯೋಗದಲ್ಲಿ ಹ್ಯಾಗೆ ಶೇರಿದೆನೆಂಬದನ್ನು ತಿಳಿಸುತ್ತಾನೆ. ಈ ಭಾಷಣಕ್ಕೆ ಮೂರು ಭಾಗಗಳು ಉಂಟು.

ಅ) ಪೌಲನು ಮುಂಚೆ ಅತ್ಯಂತ ನೇಮಾಸಕ್ತ ಯೆಹೂದನಾಗಿದ್ದನು. ವ. ೩—೫.

೩. ತರುವಾಯ ಅವನು ಹ್ಯೇಳಿದ್ದೇನಂದರೆ, ನಾನು ಯೆಹೂದ್ಯ ಮನುಷ್ಯನಾಗಿ, ಕಿಲಿಕ್ಯದ ತರ್ಸದಲ್ಲಿ ಹುಟ್ಟಿ, ಈ ಪಟ್ಟದಲ್ಲಿ ಗಮಾಲಿಯೇಲನ ಪಾದಗಳ ಬಳಿಯ ಸಾಕಲ್ಪಟ್ಟು ೧), ಪಿತೃಗಳ ನ್ಯಾಯಪ್ರಮಾಣದ ನಿಷ್ಠೆಯಲ್ಲಿ ಉಪದೇಶಿಸಲ್ಪಟ್ಟು, ನೀವೆಲ್ಲರೂ ಈ ಹೊತ್ತು ಇರುವ ಪ್ರಕಾರ ದೇವರಿಗೋಸ್ಕರ ಆಸಕ್ತಿ ಪಡುವವನಾಗಿದ್ದು ೨), ೪. ಗಂಡಸರನ್ನೂ ಹೆಂಗಸರನ್ನೂ ಕಟ್ಟಿ ಹಾಕಿ, ಶೆರೆಮನೆಗಳಲ್ಲಿ ಒಪ್ಪಿಸಿ, ಈ ಮಾರ್ಗವನ್ನು ಮರಣದ ವರಿಗೂ ಹಿಂಸಿಸಿದೆನು. ೫. ಈ ಮೇರೆಗೆ ಪ್ರಧಾನ ಯಾಜಕರೂ, ಸಮಸ್ತ ಹಿರಿಯ ಸಭೆಯೂ ನನಗೆ ಸಾಕ್ಷಿ ಕೊಡುವರು ೩). ಅವರಿಂದ ನಾನು, ಅಲ್ಲಿಯೂ ಇರುವವರನ್ನು ಕಟ್ಟಿಸಿ, ಶಿಕ್ಷಿಸುವದಕ್ಕೆ ಯೆರೂಸಲೇಮಿಗೆ ತರಬೇಕೆಂದು, ಸಹೋದರರಿಗೆ ಬರೆದ ಕಾಗದಗಳನ್ನು ಹೊಂದಿ, ದಮಸ್ಕಕ್ಕೆ ಹೊರಟು ಹೋದೆನು.

೧. ಪೌಲನು ಚಿಕ್ಕತನದಲ್ಲಿ, ಪೆಚ್ಚು ಕಡಿಮೆ ೧೩. ೧೪. ವರುಷದವನಾಗಿ ಯೆರೂಸಲೇಮಿಗೆ ಬಂದು, ಆಗ ಅತಿಶಯ ಕೀರ್ತಿಯುಳ್ಳವನಾಗಿದ್ದ ಗಮಾಲಿಯೇಲನ ವಿದ್ಯಾಶಾಲೆಯಲ್ಲಿ ಶೇರಿದನೆಂದು, ಈ ಮಾತಿನಿಂದ ಜಾಡೆಯಾಗಿ ಕಾಣುತ್ತದೆ. ಅವನು ಪೆಚ್ಚು ಪ್ರಾಯದವನಾಗಿ ಗಮಾಲಿಯೇಲನ ಶಿಷ್ಯನಾದದ್ದಾದರೆ, "ಸಾಕುವದು" ಎಂಬ ಮಾತು ಪ್ರಯೋಜನವಾಗುತ್ತಿದ್ದಿಲ್ಲ.

೨. ಯೇಸು ಯೋಹಾ. ೧೬, ೨೨ಲ್ಲಿ ಹೇಳಿದ ಮಾತು ಪೌಲನಲ್ಲಿ ನೆರವೇರಿತು. ಆದರೆ ತಾನು ದೇವಸೇವೆ ಎಂದು ನೆನಸಿದ್ದು ದೇವದ್ವೇಷವಾಗಿತ್ತೆಂದು ತಿಳಿದಂದಿನಿಂದ ಸಾಯುವ ವರೆಗೂ ಪಶ್ಚಾತ್ತಾಪ ಪಟ್ಟನು.

೩. ಪೌಲನು ಯೇಸು ಕ್ರಿಸ್ತನ ಮರಣದ ಕಾಲದಲ್ಲಿಯೂ, ಅದರ ಮೇಲೆಯೂ, ಅತ್ಯಂತ ಮತಾಸಕ್ತರಾದ ಫರಿಸಾಯರಲ್ಲಿ ಒಬ್ಬನಾಗಿದ್ದು, ಕ್ರೈಸ್ತ ಸಭೆಯ ಆದಿ ಕಾಲದಲ್ಲಿ ಅದನ್ನು ಹಿಂಸಿಸುವ ಯೆಹೂದರಲ್ಲಿ ಅಗ್ರಗಾಮಿಯಾಗಿದ್ದರಿಂದ, ಗಲ. ೧, ೧೩. ೧೪. ಅವನ ಚರಿತ್ರವು ಈ ವರೆಗೂ ಯೆರೂಸಲೇಮಿನಲ್ಲಿದ್ದ ಅನೇಕರಿಗೆ ನೆರೆಗಾತ್ತಾಗಿತ್ತು.

ಇ) ಪೌಲನ ಆಶ್ಚರ್ಯ ಸಂವರ್ತನವು. ವ. ೬—೧೬.

೬. ಆದರೆ ನಾನು ಪ್ರಯಾಣವಾಗಿ, ಹೆಚ್ಚು ಕಡಿಮೆ ಮಧ್ಯಾಹ್ನ ಸಮಯದಲ್ಲಿ ದಮಸ್ಕಕ್ಕೆ ಸಮೀಪಿಸುತ್ತಿರಲಾಗಿ, ಪಕ್ಕನೆ ಆಕಾಶದಿಂದ ದೊಡ್ಡ ಬೆಳಕು ನನ್ನ ಸುತ್ತಲು

ಮಿಂಬಿತು. ೭. ನೆಲಕ್ಕೆ ಬಿದ್ದು, ಸೌಲನ್ಯೇ, ಸೌಲನ್ಯೇ, ನನ್ನನ್ನು ಯಾಕೆ ಹಿಂಸಿಸುತ್ತಿ? ಎಂದು ನನಗೆ ಹೇಳುವ ಶಬ್ದವನ್ನು ಕೇಳಿದೆನು. ೮. ಆಗ ನಾನು, ಕರ್ತನ್ಯೇ, ನೀನು ಯಾರು? ಎಂದು ಉತ್ತರ ಕೊಡಲಾಗಿ, ಅವನು ನನಗೆ, ನಾನು, ನೀನು ಹಿಂಸಿಸುವ ನಜರೇತಿನವನಾದ ಯೇಸುವೇ ೧), ಅಂದನು. ೯. ನನ್ನ ಸಂಗಡ ಇದ್ದವರು ಬೆಳಕನ್ನು ನೋಡಿ, ಭಯಸ್ಥರಾದರು; ಆದರೆ ನನ್ನ ಸಂಗಡ ಮಾತಾಡುವವನ ಶಬ್ದವನ್ನು ಕೇಳಲಿಲ್ಲ ೨). ೧೦. ಆಗ ನಾನು, ಕರ್ತನ್ಯೇ, ಏನು ಮಾಡ ಬೇಕು? ಅನ್ನಲಾಗಿ, ಕರ್ತನು ನನಗೆ, ನೀನು ಎದ್ದು, ದಮಸ್ಕಕ್ಕೆ ಹೋಗು; ಅಲ್ಲಿ ನೀನು ಮಾಡುವದಕ್ಕೆ ನೇಮಿಸಲ್ಪಟ್ಟ ಎಲ್ಲವುಗಳ ವಿಷಯವಾಗಿ ನಿನಗೆ ಹೇಳಲ್ಪಡುವದು, ಅಂದನು. ೧೧. ಆಗ ಆ ಬೆಳಕಿನ ಮಹಿಮೆಯಿಂದ ಕಣ್ಣು ಕಾಣದೆ ಇದ್ದ ಕಾರಣ, ನನ್ನ ಸಂಗಡ ಇದ್ದವರ ಕೈಯಿಂದ ನಡಿಸಲ್ಪಟ್ಟು, ದಮಸ್ಕಕ್ಕೆ ಬಂದೆನು. ೧೨. ಅಲ್ಲಿ ವಾಸವಾಗಿರುವ ಯೆಹೂದ್ಯರೆಲ್ಲರಿಂದ ಸಾಕ್ಷಿಗೊಂಡ, ನ್ಯಾಯಪ್ರಮಾಣದ ಪ್ರಕಾರ ಭಕ್ತಿಯುಳ್ಳವನಾದ, ಅನನ್ಯಿಯನೆಂಬವನು ೩) ನನ್ನ ಬಳಿಗೆ ಬಂದು, ೧೩. ನಿಂತು ಕೊಂಡು, ನನಗೆ, ಸಹೋದರನಾದ ಸೌಲನ್ಯೇ, ಮೇಲೆ ನೋಡು, ಅಂದನು. ೧೪. ಅದೇ ಕ್ಷಣದಲ್ಲಿ ಅವನ ಮೇಲೆ ದೃಷ್ಟಿ ಇಟ್ಟೆನು. ಮತ್ತು ಅವನು ಹೇಳಿದ್ದು, ನಮ್ಮ ಪಿತೃಗಳ ದೇವರು ೪) ತನ್ನ ಚಿತ್ತವನ್ನು ತಿಳಿಯುವದಕ್ಕೂ ೫), ಆ ನೀತಿವಂತನನ್ನು ನೋಡುವದಕ್ಕೂ, ಅವನ ಬಾಯಿಯಿಂದ ಶಬ್ದವನ್ನು ಕೇಳುವದಕ್ಕೂ, ನಿನ್ನನ್ನು ಮುನ್ನೇ ಮಿಸಿದ್ದಾನೆ ೬); ೧೫. ಯಾಕಂದರೆ, ಅವನಿಗೆ ಸಾಕ್ಷಿಯಾಗಿ, ನೀನು ನೋಡಿ, ಕೇಳಿದವುಗಳನ್ನು ಸಮಸ್ತ ಮನುಷ್ಯರಿಗೆ ಹೇಳ ಬೇಕು. ೧೬. ಇಗ ಯಾಕೆ ತಡ ಮಾಡುತ್ತಿ? ಎದ್ದು, ಸ್ನಾನ ಹೊಂದಿ ೭), ಕರ್ತನ ಹೆಸರನ್ನು ಕರೆದು ೮), ನಿನ್ನ ಪಾಪಗಳನ್ನು ತೊಳೆದು ಬಿಡು.

೧. ಈ ಮಾತಿಗೆ ವಾಚಕೆಯಾದ ವ್ಯಾಖ್ಯಾನವು ಸಂಪೂರ್ಣವಾಗಿರುವದಿಲ್ಲ. ಸಚಾಪಿಂಸಕನು ಕ್ರಿಸ್ತ ಪಿಂಸಕನೆಂದು ಪೇಳುವದಕ್ಕೆ, ಕರ್ತನು ಮತ್ತಾ. ೨೫, ೪೦ರಲ್ಲಿ ಪೇಳಿದ ವಾಕ್ಯವು ಆಧಾರವಾಗಿರುವದೇ ಸರಿ. ಆದಾಗ್ಯೂ ನಜರೇತಿನವನಾದ ಯೇಸು ಎಂಬದರಿಂದ ಕರ್ತನಿಗೂ ಪೌಲನಿಗೂ ಇದ್ದ ಮುಖಪರಿಚಿತಿಯು ಸೂಚಿತವಾಗುತ್ತದೆಂದು ನೆನಸ ತಕ್ಕದ್ದು. ಮತ್ತು ಆರಂಭದ ಅಪಾಸ್ತಲರ ಪಾಠಾಕ್ಕುಬಳಿಕೆಯಲ್ಲಿದ್ದ ಬರ್ನಬನಿಗೆ ಪ್ರಾಣಸ್ನೇಹಿತನಾಗಿದ್ದು, ಯೇಸು ಕ್ರಿಸ್ತನ ಉದ್ಯೋಗ ವೃತ್ತಿ ಮರಣಗಳ ಕಾಲದಲ್ಲಿ ಯೆರೂಸಲೇಮಿನಲ್ಲಿ ವಾಸವಾಗಿದ್ದ ಪೌಲನು ಯೇಸುವನ್ನು ನೋಡದಿದ್ದರೆ, ಬಹಳ ಆಶ್ಚರ್ಯ ಪಡಬೇಕು.

೨. ದಮಸ್ಕದ ಸಮೀಪದಲ್ಲಿ ಸಂಭವಿಸಿದ ಅದ್ಭುತ ಕಾರ್ಯದ ವೃತ್ತಾಂತವನ್ನು ಈ ಸ್ಥಳದಲ್ಲಿಯೂ, ೯ನೆ ಸಂಧಿಯಲ್ಲಿಯೂ ಸೂಕ್ಷ್ಮವಾಗಿ ವಿಚಾರಿಸಿದರೆ, ಗ್ರಂಥಕರ್ತನಾದ ಲೂಕನು ಬರದ ಚರಿತ್ರಕ್ಕೂ, ಆ ಪಾಸ್ತಲನಾದ ಪೌಲನು ಈ ಭಾಷಣದಲ್ಲಿ ಪೇಳು

ವ ಕಥೆಗೂ ವೃತ್ತಾಂಸ ತಾರುತ್ತದೆ. ಏನಂದರೆ: ಸ. ೯, ೭ಲ್ಲಿ ಅವನ ಸಂಗಡ ಪ್ರಯಾಣ ಮಾಡುವ ಜನರು ಶಬ್ದವನ್ನು ಕೇಳಿ, ಯಾರನ್ನೂ ನಾಡದೆ, ಮೂಕರಾಗಿ ನಿಂತರು. ಪಾಗಾದರೆ ಪರಿವಾರದವರು ಶಬ್ದವನ್ನು ಕೇಳಿದರೆಂದು ಲೂಕನು ಪೇಳಲು, ಪೌಲನು ತಾನೇ, ಅವರು ತನ್ನ ಸಂಗಡ ಮಾತಾಡುವವನ ಶಬ್ದವನ್ನು ಕೇಳಲಿಲ್ಲವೆಂದು ಪೇಳುತ್ತಾನೆ; ಮತ್ತು ಪರಿವಾರದವರು ಯಾರನ್ನೂ ನಾಡಲಿಲ್ಲವೆಂತ ಲೂಕನು ಪೇಳಲು, ಪೌಲನು, ಅವರು ಬೆಳಕನ್ನು ನಾಟಿದರೆಂದು, ಪೇಳುತ್ತಾನೆ. ಇದು ಪರಸ್ಪರ ವೃತ್ತಾಂಸವಲ್ಲವಾ? ವೃತ್ತಾಂಸವೇ ಸರಿ; ಆದರೆ, ಶಬ್ದಭೇದವೇ ಪಾರ್ತು ಅಭಿಪ್ರಾಯಭೇದವಿಲ್ಲ. ಸಂಭವಿಸಿದ್ದು ಏನಂದರೆ: ಪರಿವಾರದವರು ಬೆಳಕನ್ನು ನಾಟಿದರೂ, ಬೆಳಕಿನಲ್ಲಿ ಪೌಲನಿಗೆ ಪ್ರತ್ಯಕ್ಷವಾದ ಕ್ರಿಸ್ತನನ್ನು ನಾಡಲಿಲ್ಲ. ಮತ್ತು ಅವರು ಶಬ್ದವನ್ನು ಕೇಳಿದರೂ, ಕ್ರಿಸ್ತನು ಪೌಲನಿಗೆ ಪೇಳಿದ ಮಾತುಗಳನ್ನು ಕೇಳಿ ಗ್ರಹಿಸಲಿಲ್ಲ. ಈ ತರದ ಪರಸ್ಪರ ವೃತ್ತಾಂಸವಾಗಿ ಕಾಣಿಸುವ ಅಭಿಪ್ರಾಯೈಕ್ಯವು ಸಂಶಯಚಯ ರಹಿತವಾಗಿ ರಚಿತವಾದ ಗ್ರಂಥದ ಯಾಥಾರ್ಥ್ಯಕ್ಕೆ ಉತ್ತಮ ಪ್ರಮಾಣವಾಗಿದೆ. ಯಾಕಂದರೆ ಯುಕ್ತಿಚಮತ್ಕೃತಿಯಿಂದ ಗ್ರಂಥವನ್ನು ಕಲ್ಪಿಸುವವನು ಇಂಥಾ ಸ್ಥಳಗಳಲ್ಲಿ ಭೇದಸಂಶಯವು ಪುಟ್ಟಿದ ಪಾಗೆ ಶಬ್ದಗಳನ್ನೆಲ್ಲಾ ಸರಿ ಮಾಡ್ಯಾನು.

೩. ಯೆಹೂದರೆಲ್ಲರಿಂದ ಸಾಕ್ಷಿಗಾಂಡ, ನಿಯಮದ ಪ್ರಕಾರ, ಭಕ್ತಿಯುಳ್ಳವನಾದ ಎಂಬ ಅನನೀಯನ ಲಕ್ಷಣವನ್ನು ಪೌಲನು ವ. ೧೨ಲ್ಲಿ ತನ್ನ ಭಾಷಣವನ್ನು ಕೇಳುವ ಯೆಹೂದರ ಉದ್ದಿಶ್ಯವಾಗಿ, ಬೇಕೆಂದು ಶೇರಿಸುತ್ತಾನೆ.

೪. ಈ ಮಾತು ಭಕ್ತನಾದ ಯೆಹೂದನಾಗಿರುವ ಅನನೀಯನಿಗೆ ಅತ್ಯುಚಿತವಾದದ್ದು. ತನಗೆ ಕಿವಿ ಕಾಡುವ ಯೆಹೂದರು, ವಿಶೃಗಳಿಗೆ ಪ್ರಾಪ್ತವಾದ ಪ್ರಕಟಣೆಗಳು ತನ್ನಿಂದಲಾದರೂ, ಅನನೀಯನಿಂದಲಾದರೂ ಅಲಕ್ಷ್ಯವಾಗಲಿಲ್ಲವೆಂದು, ತಿಳಿದು ಕಾಳ್ಳುವಂತೆ, ಅದನ್ನು ಹೀಗೆ ವಿವರಿಸುತ್ತಾನೆ.

೫. ಸುವಾರ್ತಾಬೋಧಕರು ತಮ್ಮ ಉದ್ಯೋಗಕ್ಕೆ ಈ ರೀತಿಯಿಂದ ಸಿದ್ಧವಾಗುವದು ಯುಕ್ತವಾಗಿದೆ. ದೇವರ ವಾಕ್ಯದಿಂದಲೇ ಆತನ ಚಿತ್ತವನ್ನು ಪೂರ್ಣವಾಗಿಯೂ ಸತ್ಯವಾಗಿಯೂ ತಿಳಿಯಬೇಕು. ಮತ್ತು ವಿಶ್ವಾಸದಿಂದ ಯೇಸುವನ್ನು ದೃಷ್ಟಿಸಿ, ಆತನ ವಾಕ್ಯದ ಬಲವನ್ನು ಹೃದಯದಲ್ಲಿ ಪಾಗಾಂದಿದ ಅನುಭವವು ಇರಬೇಕು. ಪಾಗಾದರೆ ಪೌಲನೂ, ಇತರ ಅಪಾಸ್ತಲರೂ ಮುಂತಾದ ಸಾಕ್ಷಿಗಳೆಲ್ಲರೂ ತಾವು ಕಂಡು ಕೇಳಿದ್ದನ್ನೇ ಪ್ರಮಾಣಿಸಬೇಕು.

೬. ಇದು ಪೌಲನಿಗೆ ಪುನ್ಶ್ಚಚಿತವಾದ ಸಮಾಧಾನವಾಕ್ಯವಾಗಿತ್ತೆಂದು, ಅವನ ಎಲ್ಲಾ ಪತ್ರಿಕೆಗಳ ಆರಂಭದಲ್ಲಿ ತಾರುತ್ತದೆ.

೭. ಇದರಿಂದ ಅಪಾಸ್ತಲರ ಕಾಲದ ಸಭೆಯಲ್ಲಿ ಸ್ನಾನಕ್ಕೆ ಇದ್ದ ಘನತೆ ಚನ್ನಾಗಿ ಸೂಚಿತವಾಗಿದೆ. ದೇವರಿಂದ ನೇಮಕವಾದ ಸ್ನಾನವು ದೇವರ ವಾಕ್ಯಕ್ಕೆ ಸರಿಯಾಗಿ ಕೃಪಾಸಾಧಕವಾಗಿದೆ. ಆದಾಗ್ಯೂ ನಂಬುವವರ ಹೃದಯಗಳಲ್ಲಿ ಮಾತ್ರ ದೇವರ ಕೃಪೆಯು ಸಾರ್ಥಕವಾಗುತ್ತದೆ. ಶೀತ. ೩, ೫. ರೋಮಾ. ೬.

೮. ಕರ್ತನು ಎಂಬದು ಪಾಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನಿಗೆ ರೂಢಿಯಾದ ಪೆಸರು. ಸ. ೯, ೧೪. ೨೧. ೧ ಕಾರಿ. ೧, ೨. ಇತ್ಯಾದಿ. ಯೇಸು ಕ್ರಿಸ್ತನನ್ನು ದೇವರೆಂದು ಭಜಿಸುವದು ಆದಿ ಕ್ರೈಸ್ತರ ವಿಶೇಷ ಲಕ್ಷಣವಾಗಿತ್ತು.

ಬ) ಯೇಸು ಕ್ರಿಸ್ತನು ಪೌಲನನ್ನು ಪರಜನರ ಅಪೊಸ್ತಲನಾಗಿ ನೇಮಿಸಿದ್ದು. ವ. ೧೭—೨೧.

೧೭. ತರುವಾಯ ಯೆರೂಸಲೇಮಿಗೆ ತಿರಿಗಿ ಬಂದು, ದೇವಾಲಯದಲ್ಲಿ ಪ್ರಾರ್ಥಿಸುವಾಗ ೧), ಆದದ್ದೇನಂದರೆ, ನಾನು ಪರವಶನಾಗಿ, ೧೮. ಅವನು ನ್ನಿನು

ಅಪೌ. ಕ್ರಿ. ೬೦, ೧೯—೨೫.

ಕ್ಷರೆ ಪಟ್ಟು, ಶೀಘ್ರವಾಗಿ ಯೆರೂಸಲೇಮಿನಿಂದ ಹೊರಟು ಹೋಗು; ಯಾಕಂದರೆ ನೀನು ನನಗೋಸ್ಕರ ಕೊಡುವ ಸಾಕ್ಷಿಯನ್ನು ಅವರು ಹೊಂದರೆಂದು, ನನಗೆ ಹೇಳುವದನ್ನುಕಂಡೆನು. ೧೯. ಆಗ ನಾನು, ಕರ್ತನೇ, ನಿನಲ್ಲಿ ವಿಶ್ವಾಸವಿಡುವವರಂತು ಎಲ್ಲಾ ಸಭೆಮನೆಗಳಲ್ಲಿ ಶರೆ ಹಿಡಿದು. ಹೊಡಿಸಿ, ಮತ್ತು ನಿನ್ನ ಸಾಕ್ಷಿಯಾದ ಸ್ತೆಫನನ ರಕ್ತವು ಚೆಲ್ಲಲ್ಪಡುವಾಗ, ೨೦. ನಾನು ಹತ್ತರ ನಿಂತು ಕೊಂಡು, ಅವನನ್ನು ಕೊಲೆದು ಹಾಕುವದಕ್ಕೆ ಸಮ್ಮತಿ ಪಟ್ಟು, ಅವನನ್ನು ಕೊಲ್ಲುವವರ ವಸ್ತ್ರಗಳನ್ನು ಕಾಯುತ್ತಾ ಇದ್ದದ್ದನ್ನುಬಲ್ಲರು, ಅಂದನು ೭). ೨೧. ಆಗ ಅವನು ನನಗೆ ಹೋಗು; ಯಾಕಂದರೆ ನಿನ್ನನ್ನು ಜನಾಂಗಗಳ ಬಳಿಗೆ ದೂರ ಕಳುಹಿಸುವೆನು ೫), ಅಂದನು.

೧. ಪೌಲನು, ನಿಜ ಇಸ್ರಯೇಲನವನಿಗೆ ತಕ್ಕಹಾಗೆ, ಪ್ರಾರ್ಥಿಸುವದಕ್ಕೆ ಶೇರಿದ ದೇವಾಲಯದಲ್ಲಿಯೇ ಯೇಸು ಕ್ರಿಸ್ತನು ಅವನಿಗೆ ಕಾಣಿಸಿಕೊಂಡು, ಯೆರೂಸಲೇಮಿನವರು ಅವನು ಕೊಡುವ ಸಾಕ್ಷಿಯನ್ನು ನಂಬದೆ ಇರುವರೆಂದು, ಆ ಪಟ್ಟಣವನ್ನು ಬಿಟ್ಟು ಬಿಡ ಬೇಕೆಂತ ಆಜ್ಞಾಪಿಸಿದನು.

೨. ಪೌಲನು ಸಲಿಗೆಯಿಂದ ಮಾತನಾಡಿ, ತಾನು ಮುಖ್ಯ ಶತ್ರುವಾಗಿ ಪೆಸವರ್ಣಿಯಾದ ಈ ಸ್ಥಳದಲ್ಲಿ ಯೇಸು ಕ್ರಿಸ್ತನ ಸುವಾರ್ತೆಯನ್ನು ಪ್ರಸಂಗಿಸಿದರೆ, ತನ್ನ ಸಾಕ್ಷಿಯು ಯೆರೂಸಲೇಮಿನವರಲ್ಲಿ ಪೆಚ್ಚಾಗಿ ಸಾರ್ಥಕವಾಗುವದೆಂದು ತಾವಿಸಿದ ಆಲೋಚನೆಯನ್ನು ಯಥಾರ್ಥವಾಗಿ ಪೇಳುತ್ತಾನೆ. ಪೌಲನು ತಾನು ಯೆಹೂದರಿಗೆ ವಿಶೇಷವಾಗಿ ಯೋಗ್ಯನಾವ ಸುವಾರ್ತಿಕನೆಂದು ನೆನಸಿದನು. ಆದರೆ ಕರ್ತನು ಅವನನ್ನು ಸ್ವಾಭಾವಿಕ ಬುದ್ಧ್ಯಾಲೋಚನೆಗೆ ವಿರೋಧವಾಗಿ ಪರಜನರ ಅಪೊಸ್ತಲನಾಗಿ ನೇಮಿಸಿದನು.

೩. ಯೇಸುವು ಅವನ ಮಾತಿಗೆ ಸಮ್ಮತಿ ಪಡದೆ, ಸ್ವದೇಶವನ್ನು ಬಿಟ್ಟು ದೂರದಲ್ಲಿರುವ ಪರಜನರಿಗೆ ಸುವಾರ್ತೆಯನ್ನು ಪ್ರಸಂಗಿಸಿದರೆ, ಪೌಲನ ಉದ್ಯೋಗವೃತ್ತಿಯಿಂದ ಅಧಿಕ ಫಲವುಂಟಾಗುವದೆಂದು ತಿಳಿದು, ಆ ಪ್ರಕಾರ ಆಜ್ಞಾಪಿಸಿದನು.

II. ಕೈಷಣೋತ್ತರ ನಡದದ್ದು. ವ. ೨೨—೩೦.

೨೨. ಈ ಮಾತಿನ ಪರ್ಯಂತ ೧) ಅವನಿಗೆ ಕಿವಿ ಕೊಟ್ಟು, ತಮ್ಮ ಶಬ್ದವನ್ನೆತ್ತಿ, ಇಂಥವನನ್ನು ಭೂಮಿಯಿಂದ ತೆಗೆದು ಹಾಕು; ಅವನು ಬದುಕುವದು ಯುಕ್ತವಲ್ಲ, ಅಂದರು. ೨೩. ಅವರು ಕೂಗಿ, ವಸ್ತ್ರಗಳನ್ನು ಹರು ಕೊಂಡು, ಆಕಾಶಕ್ಕೆ ಧೂಳನ್ನು ಹಾಕುವಾಗ ೨), ೨೪. ಸಹಸ್ರಾಧಿಪತಿಯು ಅವನನ್ನು ಕೋಟೆಯೊಳಗೆ ಕರ ಕೊಂಡು ಹೋಗಲಾಜ್ಞಾಪಿಸಿ, ಅವರು ಇವನಿಗೆ ವಿರೋಧವಾಗಿ ಈ ಪ್ರಕಾರ ಕೂಗುವ ಕಾರಣವ್ಯೇನೆಂದು, ತಿಳಿಯುವ ಹಾಗೆ ಹೊಡೆದು, ವಿಚಾರಿಸ ಬೇಕೆಂದು ೩) ಹೇಳಿದನು. ೨೫. ಆದದರಿಂದ ಅವನನ್ನು ಬಾರುಗಳಿಂದ ಕಟ್ಟುವಾಗ, ಪೌಲನು, ರೋಮಾಯನಾದ ಮನುಷ್ಯನನ್ನು ೪) ನ್ಯಾಯ ತಿರಿಸದೆ, ಹೊಡೆಯುವದು ನಿಮಗೆ

ನ್ಯಾಯವಾ? ಎಂದು, ಹತ್ತರ ನಿಂತಿರುವ ಶತಾಧಿಪತಿಗೆ ಹೇಳಿದನು. ೨೬. ಶತಾಧಿಪತಿಯು ಅದನ್ನು ಕೇಳಿ, ಬಂದು, ಸಹಸ್ರಾಧಿಪತಿಗೆ ತಿಳಿಸಿ, ನೀನು ಮಾಡಲಿರುವದೇನೆಂದು, ನೋಡು; ಯಾಕಂದರೆ ಈ ಮನುಷ್ಯನು ರೋಮಿಯಾಯನು [೫]), ಅಂದನು. ೨೭. ಆಗ ಸಹಸ್ರಾಧಿಪತಿಯು ಹತ್ತರ ಬಂದು, ನೀನು ರೋಮಿಯಾಯನಾ? ನನಗೆ ಹೇಳು, ಎಂದು ಅವನಿಗೆ ಹೇಳಿದಾಗ, ಅವನು, ಹೌದಂದನು. ೨೮. ಆಗ ಸಹಸ್ರಾಧಿಪತಿಯು, ನಾನು ಈ ಪೌರವಾಸವನ್ನು ಬಹಳ ಹಣದಿಂದ ಸಂಪಾದಿಸಿಕೊಂಡೆನೆಂದು ಹೇಳುವಾಗ, ಪೌಲನು, ನಾನು ಅಂಥವನಾಗಿ ಹುಟ್ಟಿದೆನು [೬]), ಅಂದನು. ೨೯. ಹೀಗಿರುವದರಿಂದ ಅವನನ್ನು ವಿಚಾರಿಸುವದಕ್ಕೆ ಇದ್ದವರು ಸಂಗಡಲೇ ಅವನನ್ನು ಬಿಟ್ಟರು. ಮತ್ತು ಸಹಸ್ರಾಧಿಪತಿಯು, ಅವನು ರೋಮಿಯಾಯನೆಂದು ತಿಳಿದು, ಅವನನ್ನು ಕಟ್ಟಿಸಿದ್ದರಿಂದ ಭಯ ಪಟ್ಟನು. ೩೦. ಮಾರನೇ ದಿವಸ ಯೆಹೂದರು ಅವನ ಮೇಲೆ ಹೇಳುವ ದೂರು ಏನೆಂದು, ನಿಶ್ಚಯವಾಗಿ ತಿಳಿಯ ಇಚ್ಛಿಸಿ, ಅವನ ಬಂಧಗಳನ್ನು ಬಿಚ್ಚಿ, ಪ್ರಧಾನ ಯಾಜಕರನ್ನೂ ಅವರ ಸಮಸ್ತ ಸಭೆಯನ್ನೂ ಬರ ಆಜ್ಞಾಪಿಸಿ [೭]), ಇಳಿದು ಹೋಗಿ, ಪೌಲನನ್ನು ಕರ ಕೊಂಡು, ಅವರ ಮುಂದೆ ನಿಲ್ಲಿಸಿದನು.

೧. ಪೌಲನು ಸ. ೨೧, ೧೯ಲ್ಲಿ ತನ್ನ ಸಹೋದರರಾದ ಸಭೆಯವರಿಗೆ, ಕರ್ತನು ತನಗೆ ನೇಮಿಸಿದ ಉದ್ಯೋಗವೃತ್ತಿಯು ಪರಜನರಲ್ಲಿ ಸಫಲವಾದ ವೃತ್ತಾಂತವನ್ನು ತಿಳಿಸಿದ ಪ್ರಕಾರ ಇಲ್ಲಿ ಕೂಡಿದ ಸಮೂಹಕ್ಕೆ ವಿವರಿಸುವದಕ್ಕೆ ಮನಸ್ಸಾಗಿದ್ದನೆಂದು ಕಾಣುತ್ತದೆ. ಆದರೆ ಯೆಹೂದರು ಪರಜನರ ಬಳಿಗೆ ಎಂಬ ಶಬ್ದವನ್ನು ಕೇಳುತ್ತಲೇ, ತಿರಿಗಿ ಕೋಪಾವಿಷ್ಟರಾಗಿ, ಈಗ ಕಾಲ್ಲುವದಕ್ಕೆ ಆಗುವದಿಲ್ಲವೆಂಬ ವ್ಯಸನಾಕ್ರಾಂತರಾಗಿ, ಅವನನ್ನು ಭೂಮಿಯಲ್ಲಿ ಇರಲೀಸ ಬಾರದೆಂಬ ಕೂಗನ್ನು ಎಬ್ಬಿಸಿದರು.

೨. ಹಿಂದೂ ದೇಶದಲ್ಲಿಯೂ ಸುವಾರ್ತೆಯ ಪ್ರಸಂಗವನ್ನು ಸಹಿಸಲಾರದೆ, ಕೋಪಾವಿಷ್ಟರಾದ ಜನರ ಗುಂಪು ಇದೇ ಪ್ರಕಾರ ಮಾಡುವದು ಸಾಧಾರಣವಾಗಿದೆ.

೩. ಪೌಲನು ಯೆಹೂದನೆಂದು ತಿಳಿದು ಕೊಂಡು, ಸಹಸ್ರಾಧಿಪತಿಯು ಯೆಹೂದನಾದ ಒಬ್ಬನನ್ನು ಅಂಕೆಯಿಂದಲೂ, ಅನ್ಯಾಯದಿಂದಲೂ ವಿಚಾರಿಸುವದು ದಾಡ್ಡದಲ್ಲವೆಂದು ನೆನಸಿದನು.

೪. ರೋಮಿಯರ ಸಾಮ್ರಾಜ್ಯದಲ್ಲಿ ವಿಶೇಷವಾಗಿ ಸುವಾರ್ತೆಯನ್ನು ಸಾರುವ ಉದ್ಯೋಗವನ್ನು ಪೊಂದಿದ ಪೌಲನಿಗೆ ರೋಮಿಯಗೃಹಸ್ಥಾಧಿಕಾರವು ಬಹಳ ಉಪಯೋಗವಾಗಿತ್ತು. ಫಿಲಿಪ್ಪಿಯಲ್ಲಿ. ಸ. ೧೬. ಪರಜನರಿಂದ ಅನ್ಯಾಯವಾಗಿ ಪೆಟ್ಟು ಬೀಳುವ ಸಮಯದಲ್ಲಿ ತಾನು ರೋಮಿಯ ಗೃಹಸ್ಥನೆಂದು ಹೇಳದೆ, ಎಲ್ಲಾ ತಾಳ್ಮೆಯಾಗಿ ಸೈರಿಸಿದನು. ಇಲ್ಲಿ ರೋಮಿಯ ಸರದಾರರಿಂದ ಅನ್ಯಾಯವನ್ನು ತಾಳುವದು ಪ್ರಯೋಜನವಿಲ್ಲವೆಂತ ತಿಳಿದು, ಬಾಯಿ ತೆರದನು.

೫. ಅನ್ಯ ಜನರು ಹಿಂದೂ ದೇಶ ಮೊದಲಾದ ಅನೇಕ ದೇಶಗಳನ್ನು ಆಳಿ ಕಾಳ್ಳುವ ಪ್ರಕಾರ, ಆ ಕಾಲದಲ್ಲಿ ರೋಮಿಯರು ಲೋಕಾಧಿಪತಿಗಳಾಗಿ ಮೆಡಿಸಮುದ್ರದ ಸುತ್ತಲಿರುವ ವಿಲಾಯತಿಯ ಆಸ್ಯದ

ಅಪೊ. ಕ್ರಿ. ೬೩, ೧—೫.

ಅಫ್ರಿಕದ ದೇಶಗಳನ್ನೆಲ್ಲಾ ಆಕ್ರಮಿಸಿ ಕೊಂಡು ಆಳಿದ್ದರಿಂದ, ರೋಮಾಯಗೃಹಸ್ಥನೆಂಬ ಬಿರುದು ದೊಡ್ಡದಾಗಿತ್ತು.

೬. ರೋಮಾಯರಾದ ಮುಖ್ಯಸ್ಥರಲ್ಲಿ ಪೌಲನ ಪಿತೃಪಿತಾಮಹರು ಇರುವಾಗ್ಗೆ ನಡದ ರಾಜ್ಯಖೇದಮಹಾಯುದ್ಧಗಳಲ್ಲಿ ತರ್ಸಪಟ್ಟಣದವರು ಕಪೆಯಲ್ಲಿ ಮಹಾರಾಜನಾದ ಔಗುಸ್ತನ ಪಕ್ಷದಲ್ಲಿ ಶೇರಿದ್ದರಿಂದ, ಅವನ ಶತ್ರುಗಳಾದ ಕಸ್ಸಿಯನು ಮುಂತಾದವರು ತರ್ಸದವರನ್ನು ಅತಿ ಕ್ರೂರವಾಗಿ ಶಿಕ್ಷಿಸಿ, ದ್ರವ್ಯವನ್ನು ಅಪಹರಿಸಿ, ಗೃಹಸ್ಥರಲ್ಲಿ ಅನೇಕರನ್ನು ಸಂಸಾರಸಹಿತವಾಗಿ ಮಾರಿದರು. ತದನಂತರ ಔಗುಸ್ತನು ಜಯಿಸಿದ ಮೇಲೆ, ತನಗಾಗಿ ಬಹಳ ಶ್ರಮಪಟ್ಟ ಪಟ್ಟಣದ ಮೇಲೆ ಅತಿಶಯವಾದ ದಯವನ್ನು ಇಟ್ಟು ಗೃಹಸ್ಥರನ್ನೆಲ್ಲಾ ರೋಮಪುರದ ಕುಲಗಳಲ್ಲಿ ಶೇರಿಸಿ, ರೋಮಾಯಗೃಹಸಾಧಿಕಾರವನ್ನು ಅವರಿಗೆ ಕೊಟ್ಟನು. ಪೌಲನ ವಂಶದವರು ರೋಮಪುರದಲ್ಲಿ ಬಹಳ ಪ್ರಖ್ಯಾತವಾದ ಪೌಲರ ವಂಶದಲ್ಲಿ ಶೇರಿದರೆಂಬ ಉಪಾಯು ಸಹಜವಾದದ್ದು.

೭. ಸಹಸ್ರಾಧಿಪತಿಯು ಪೌಲನಿಗಾಗಿ ಹುಟ್ಟಿದ ಗುಲ್ಲಿಗೆ ಮತಸಂಬಂಧವಾದ ಒಂದು ತರ್ಕವು ಕಾರಣವಾಯಿತೆಂದು ತಿಳಿದು, ಹೇಗಾದರೂ ಈ ಕಾರ್ಯದ ಮೂಲವನ್ನು ಕಾಣಬೇಕೆಂದು, ಯೆಹೂದರ ಮುಖ್ಯಸ್ಥರ ಮುಂದೆ ವಿಚಾರ ಮಾಡಿದರೆ, ಕೆಲಸ ನೆರವೇರುವದೆಂದು ಆಲೋಚಿಸಿ, ಯೆಹೂದರ ಮುಂ ಶ್ರಿಸಭೆಯನ್ನು ಕೂಡಿಸಿದನು.

ಸ. ೬೩.

ಪೌಲನು ಮುಂಶ್ರಿ ಸಭೆಯ ಮುಂದೆ ನಿಂತದ್ದು.

ಪೌಲನು ಮತ್ತು ಪ್ರಧಾನಯಾಜಕನು. ಪ. ೧—೫.

೧. ಆಗ ಪೌಲನು ಮುಂಶ್ರಿಸಭೆಯ ಮೇಲೆ ಕಣ್ಣೆಟ್ಟು ೧), ಸಹೋದರರಾದ ಜನರ್ಸ್ರೀ, ನಾನು ಇಂದಿನ ವರಿಗೂ ಪೂರ್ಣ ಒಳ್ಳೆ ಮನಸ್ಸಾಕ್ಷಿಯಿಂದ ದೇವರ ಎದುರಿನಲ್ಲಿ ನಡೆದು ಕೊಂಡಿದ್ದೇನೆ, ಅಂದನು. ೨. ಆಗ ಪ್ರಧಾನಯಾಜಕನಾದ ಅನನ್ರೀಯನು, ಅವನ ಬಾಯಿ ಹೊಡೆಯ ಬೇಕೆಂದು ೨), ಅವನ ಹತ್ತರ ನಿಂತು ಕೊಂಡವರಿಗೆ ಆಜ್ಞಾಪಿಸಿದನು. ೩. ಪೌಲನು ೩) ಅವನಿಗೆ, ಕಾಡೆದ ಗೋಡೆಯ್ರೋ ೪), ದೇವರು ನಿನ್ನನ್ನು ಹೊಡೆಯುವನು; ನೀನು ನ್ಯಾಯಪ್ರಮಾಣದ ಪ್ರಕಾರ ನನಗೆ ನ್ಯಾಯ ತೀರಿಸುವದಕ್ಕೆ ಕೂತು ಕೊಂಡು, ನ್ಯಾಯಪ್ರಮಾಣವನ್ನು ಮೀರಿ ೫), ನನ್ನನ್ನು ಹೊಡೆಯುವದಕ್ಕೆ ಆಜ್ಞಾಪಿಸುತ್ತೀಯೋ? ಅಂದನು. ೪. ಹತ್ತರ ನಿಂತಿದ್ದವರು ದೇವರ ಪ್ರಧಾನಯಾಜಕನನ್ನು ದೂಷಿಸುತ್ತೀಯೋ? ಅನ್ನಲಾಗಿ, ೫. ಪೌಲನು ೬), ಸಹೋದರರ್ಸ್ರೀ, ಅವನು ಪ್ರಧಾನಯಾಜಕನೆಂದು ನನಗೆ ತಿಳಿಯಲಿಲ್ಲ ೭). ಯಾಕಂದರೆ, ನಿನ್ನ ಜನರ ಅಧಿಕಾರಿಯನ್ನು ೮) ಕುರಿತು ಕೆಟ್ಟ ಮಾತು ಹೇಳ ಬೇಡೆಂದು ಬರೆದದೆ, ಅಂದನು.

ಅಪೌ. ಕ್ರಿ. ೨೫.

೧. ಪ್ರಧಾನಯಾಜಕನಾದ ಅನನೀಯನು ಮುಂತಾದ ಈ ಸಭೆಯವರಲ್ಲಿ ಅನೇಕರು ನಾನಾ ಅಪರಾಧಗಳನ್ನು ನಡಿಸಿದ ದುಷ್ಟ ಮನುಷ್ಯರಾಗಿದ್ದರು. ಪೌಲನು ಮೊದಲು ಸ್ವಲ್ಪ ಪುಗಾತ್ತು ಮೌನನಾಗಿದ್ದು, ಮಂತ್ರಿಸಭೆಯವರು ಪ್ರಶ್ನೆ ಕೇಳುವರಾ ಏನಾ ಕಾದು ಕಾಂಡು, ಪೂರ್ಣ ಯಾಥಾರ್ಥ್ಯದಿಂದ ದೇವರನ್ನು ಸೇವಿಸುವ, ಆಸಕ್ತ ಕ್ರಿಸ್ತದಾಸನಿಗೆ ಸಹಜವಾದ ಧೈರ್ಯದಿಂದ ಸುತ್ತಲಿರುವ ಎಲ್ಲರನ್ನು ನಾಡಿ, ಯಾರೂ ವಿಚಾರಿಸುವದಿಲ್ಲವೆಂದು ತಿಳಿದು, ತಾನು ಮಾತನಾಡ ತಾಡಗುತ್ತಾನೆ.

೨. ಸತ್ಯದ ವೈರಿಗಳು, ಚಕ್ಕರಿಗೆ ವಿರಾಧವಾಗಿ ಮಾತನಾಡುವದಕ್ಕೆ ಮಾರ್ಗ ಕಾಣದಿದ್ದರೆ, ಕೈಯಿಂದ ಪುಗಾಡೆಯುವದು ಸಾಧಾರಣವಾಗಿದೆ. ಕರ್ತನಾದ ಯೇಸು ಕ್ರಿಸ್ತನಿಗೂ ಹೀಗೆ ಮಾಡಿದರು. ಯೋಪುಗಾ. ೧೮, ೨೨. ಆದರೆ ಅನನೀಯನ ಶಿಟ್ಟಿಗೆ ವಿಶೇಷ ಕಾರಣವಿತ್ತೆಂದು ನೆನಸ ತಕ್ಕದ್ದು. ಅವನು ಲಂಚ ತಿಂದು, ಜನರನ್ನು ಪೀಡಿಸುವ ಅಪರಾಧಕ್ಕೆ ಒಳಗಾಗಿ ಮುಂಚೆ ಉದ್ಯೋಗದಿಂದ ರಹಿತನಾದನು. ಅವನು ತಿರಿಗಿ ಪ್ರಧಾನಯಾಜಕಾದ್ಯೋಗವನ್ನು ಪಡೆದು ಕಾಂಡರೂ, ಅವನಿಗೆ ಒಳ್ಳೆಯವನೆಂದು ಪೌಸರು ಬರಲಿಲ್ಲ. ಆದ್ದರಿಂದ ಪೌಲನು ತಾನು ನಿರಪರಾಧಿ ಯಂಬುವದನ್ನು ಪೂರ್ಣ ಧೈರ್ಯದಿಂದ ಸಾರಲು, ಇವನ ಮನಸ್ಸಿನಲ್ಲಿ ವ್ಯಸನ ಪುಟ್ಟಿದ್ದು ಆಶ್ಚರ್ಯವಲ್ಲ.

೩. ಪೌಲನು ನ್ಯಾಯಸಭೆಯವರ ಅನ್ಯಾಯದಿಂದ ಪಕ್ಕನೆ ಪುಟ್ಟಿದ ಶಿಟ್ಟಿನಿಂದ ಮಾತನಾಡಿದಾಗ್ಯೂ, ಅವನು ಪೇಳಿದ್ದು ಪ್ರವಾದನೆಯಾಗಿ ಬದ್ಧವಾಯಿತು. ಪುಗಾಗಂದರೆ ಅನನೀಯನು ಕೆಲವು ವರುಷದ ಮೇಲೆ ಯೆಹೂದರಿಗೂ, ರಾಮಿಯಾರಿಗೂ ಪುಟ್ಟಿದ ಯುದ್ಧದ ಆರಂಭದಲ್ಲಿ ಕತಾರಿಯವರು ಎಂಬವರ ಕೈಯಿಂದ ಪುತವಾದನು.

೪. ಅನನೀಯನು ಪ್ರಧಾನ ಯಾಜಕನ ಬಿಳೀ ವಸ್ತ್ರವನ್ನು ಧರಿಸಿ ಕಾಂಡು ಪೀಠದಲ್ಲಿ ಕೂತು ಕಾಂಡನು. ಅವನು ಮುದುಕನಾದ್ದರಿಂದ ಅವನ ತಲೇ ಕೂದಲು ಸಹ ಬಿಳುಪಾಗಿತ್ತೆಂದು ನೆನಸ ತಕ್ಕದ್ದು.

೫. ನ್ಯಾಯಾಧಿಪತಿಯು ಪಕ್ಷಪರಪಕ್ಷ ನಾಡಬಾರದೆಂದು, ೪ ಮೋಶೆ. ೧೯, ೧೫. ೫ ಮೋಶೆ. ೧೭, ೪. ಬರದಿದೆ.

೬. ಈ ಮಾತಿನಿಂದ ಪೌಲನು ತಾನು ತಪ್ಪು ಮಾಡಿದೆನೆಂದು ಅರಿಕೆ ಮಾಡಿ, ಅನನೀಯನು ತನ್ನ ಉದ್ಯೋಗಕ್ಕೆ ಅಯೋಗ್ಯವಾಗಿ ನಡದು ಕಾಂಡನೆಂದು ಸೂಚಿಸಿ, ಮಂತ್ರಿಸಭೆಯವರನ್ನು, ಸಪುರೋದರೇ ಎಂದು ಸಂಬೋಧಿಸುವದರಿಂದಲೂ, ನಿಯಮವಾಕ್ಯೋಪನ್ಯಾಸ ಮಾಡುವದರಿಂದಲೂ, ಸಂತೈಸಿದನು.

೭. ಅನನೀಯನ ಗುರ್ತು ಪೌಲನಿಗೆ ಇತ್ತು; ಯಾಕಂದರೆ ಸ. ೨೨. ೫ಲ್ಲಿ ಅವನ ಸಾಕ್ಷಿಯನ್ನು ಪ್ರಮಾಣಿಸಿದನು. ದಮಸ್ಕಕ್ಕೆ ಪುಗಾಗುವ ಪೌಲನಿಗೆ ಸ. ೯, ೨. ಪ್ರತಿಷ್ಠಾಪತ್ರವನ್ನು ಕಾಟ್ಟಿ ಪ್ರಧಾನಯಾಜಕನು ಅನನೀಯನೇ. ಆದಾಗ್ಯೂ ಆ ಕಾಲದಲ್ಲಿ ಪ್ರಧಾನ ಯಾಜಕಾದ್ಯೋಗವು ಒಬ್ಬನಲ್ಲಿ ಸ್ಥಿರವಾಗದೆ, ಒಂದಾಂದು ವರುಷದಲ್ಲಿ ಪರಿವರ್ತನವು ಉಂಟಾದ್ದರಿಂದಲೂ (ಈ ಕಾಲಕ್ಕೆ ಮುಂಚೆ ದೇಶಾಧಿಪತಿಯಾದ ಕ್ವದ್ರಾತನು ಅನನೀಯನನ್ನು ಉದ್ಯೋಗದಿಂದ ತೆಗದು, ಅಗ್ರಿಪ್ಪನು ಅವನಿಗಾಗಿ ಪ್ರಾರ್ಥಿಸಿದರಿಂದ, ತಿರಿಗಿ ಅದರಲ್ಲಿ ಸ್ಥಾಪಿಸಿದನು) ಆ ದಿವಸದ ಸಭೆಯಲ್ಲಿ ಬಹಳ ಗಲಿಬಿಲಿಯಾದ್ದರಿಂದಲೂ, ಪೌಲನಂತೆ ಪುಗಾಸ್ತಾಗಿ ಬಂದವನು ಸದ್ಯದಲ್ಲಿ ಆಳುವ ಪ್ರಧಾನಯಾಜಕನು ಯಾರೆಂದು ಚನ್ನಾಗಿ ತಿಳಿಯದೆ ಇರುವದು, ಚೋದ್ಯವಲ್ಲ. ಆದರೆ ಪೌಲನು ಅನನೀಯನ ಗುರ್ತು ಚನ್ನಾಗಿ ಬಲ್ಲವನಾದರೆ, ನನಗೆ ತಿಳಿಯಲಿಲ್ಲವೆಂಬ ಅವನ ಮಾತಿಗೆ ಬೇರೆ ಅಭಿಪ್ರಾಯ ಮಾಡುವದು ಯುಕ್ತವೆಂದು ತೋರುತ್ತದೆ; ಏನಂದರೆ: ಯಾಜಕಾದ್ಯೋಗವನ್ನು ಮನಃಪೂರ್ವಕವಾಗಿ ಸನ್ಮಾನಿಸುತ್ತೇನೆ. ಅದನ್ನು ದೇವರ ನ್ಯಾಯಕ್ಕೆ ವಿರಾಧವಾಗಿ ನಡಿಸುವ ಮನುಷ್ಯನನ್ನು ಮಾತ್ರ ಗದರಿಸುತ್ತೇನೆ. ಪುಗಾಗಾದರೆ ನನಗೆ ತಿಳಿಯಲಿಲ್ಲವೆಂಬದಕ್ಕೆ ನಾನು ಜ್ಞಾಪಕ ಮಾಡಿ ಕಾಳ್ಳಲಿಲ್ಲವೆಂಬ ಅಭಿಪ್ರಾಯವದೆ. ಕೆಲವರು ಪ್ರಧಾನಯಾಜಕನು ಮಂತ್ರಿಸಭಾಸಮಾಗಮಗಳಲ್ಲಿ ಯಾವಾಗಲೂ ಪೀಠದಲ್ಲಿ ಕೂರದೆ, ಆಗ್ಯಾಗ್ಗೆ ಮಂತ್ರಿಸಭೆಯವರ ಪಂಚ್ತಿ

ಅಪಾ. ಕ್ರಿ. ೨೫, ೬—೧೦.

ಯಲ್ಲಿಯೇ ಕೂರುವದರಿಂದ, ಪೌಲನು ಅನನೀಯನ ಗುರ್ತು ಬೇಗ ತಿಳಿಯಲಿಲ್ಲವೆಂತ ಪೇಳುತ್ತಾರೆ.

೮. ಉದ್ಯೋಗಸ್ಥರು ಕೆಟ್ಟವರಾಗಿದ್ದರೂ, ಉದ್ಯೋಗದ ಪರಿಶುದ್ಧತ್ವವನ್ನು ಅಲಕ್ಷ್ಯ ಮಾಡ ಬಾರದೆಂಬ ಆಜ್ಞೆ ದಾಖಲಾದ್ದದು.

ಮಂತ್ರಿಸಭೆಯಲ್ಲಿ ನಡದ ಸಂಗತಿ ವ. ೬—೧೦.

೬. ತರುವಾಯ ಪೌಲನು, ಒಂದು ಪಾಲು ಸದ್ದುಕಾಯರೂ, ಒಂದು ಪಾಲು ಫರಿಸಾಯರೂ ಆಗಿದ್ದಾರೆಂದು ತಿಳಿದು ೧), ಮಂತ್ರಿಸಭೆಯಲ್ಲಿ, ಸಹೋದರರಾದ ಜನರೇ, ನಾನು ಫರಿಸಾಯನೂ, ಫರಿಸಾಯನ ಮಗನೂ; ಸತ್ತವರ ಪುನರುತ್ಥಾನದ ವಿಷಯವಾಗಿಯೂ, ನಿರೀಕ್ಷೆಯ ವಿಷಯವಾಗಿಯೂ ೨) ವಿಚಾರಿಸಲ್ಪಡುತ್ತೇನೆಂದು ಕೂಗಿದನು. ೭. ಇದನ್ನು ಅವನು ಹೇಳಿದಾಗ, ಫರಿಸಾಯರಿಗೂ ಸದ್ದುಕಾಯರಿಗೂ ಕಲಹ ಉಂಟಾಗಿ, ಸಮೂಹವು ಭೇದವಾಯಿತು ೩). ೮. ಹ್ಯಾಗಂದರೆ ಸದ್ದುಕಾಯರು, ಪುನರುತ್ಥಾನವು ಇಲ್ಲವೆಂದೂ, ದೂತನೂ ಆತ್ಮವೂ ಇಲ್ಲವೆಂದೂ, ಹೇಳುತ್ತಾರೆ ೪). ಆದರೆ ಫರಿಸಾಯರು, ಎರಡೂ ಉಂಟೆಂದು ಒಪ್ಪುತ್ತಾರೆ. ಆಗ ದೊಡ್ಡ ಗುಲ್ಲು ಉಂಟಾಯಿತು. ೯. ಮತ್ತು ಫರಿಸಾಯರ ಪಕ್ಷದವರಾದ ಶಾಸ್ತ್ರಿಗಳು ಎದ್ದು, ಈ ಮನುಷ್ಯನಲ್ಲಿ ನಾವು ಕೆಟ್ಟದ್ದೇನೂ ಕಾಣೆವು ೫); ಆತ್ಮವಾದರೂ, ದೂತನಾದರೂ ಅವನ ಸಂಗಡ ಮಾತಾಡಿದ್ದಾದರೆ, ದೇವರ ಸಂಗಡ ಯುದ್ಧ ಮಾಡ ಆರೆವೆಂದು, ವಿವಾದ ಮಾಡಿದರು. ೧೦. ಆದರೆ ಕಲಹವು ಬಹಳವಾದಾಗ, ಅವರು ಪೌಲನನ್ನು ಹರಿದು ಬಿಟ್ಟಾರೆಂದು ೬), ಸಹಸ್ರಾಧಿಪತಿಯು ಭಯ ಪಟ್ಟು, ರಾಣುವೆಯವರಿಗೆ, ನೀವು ಇಳಿದು, ಅವನನ್ನು ಅವರ ಮಧ್ಯದಿಂದ ಹಿಡುಕೊಂಡು ಹೊಯ್ಗಿ, ಕೋಟೆಗೆ ತರ ಬೇಕೆಂದು ಆಜ್ಞಾಪಿಸಿದನು.

೧. ಪೌಲನು ಮಂತ್ರಿಸಭೆಯಲ್ಲಿ ಇರುವ ಮತಭೇದವು ತನಗೆ ಸಹಾಯಕರವಾದದ್ದೆಂದು, ಕೂಡಲೆ ತಿಳಿದು ಕೂಗಿ, ಶೀಘ್ರಬಾಧನಾಗುಣದಿಂದ ತಾನು ಫರಿಸಾಯನಾಗಿದ್ದೇನೆಂದು ವಾದವನ್ನು ತಾಡಗಿದನು.

೨. ಇದು ನೆವವಾಗಿ ಪೇಳಿದ ಮಾತಾಗಿರದೆ ಪೌಲನ ಸುವಾರ್ತಾಪ್ರಸಂಗದ ಮೂಲವಾಕ್ಯವೆಂದು, ೧ ಕೊರಿ. ೧೫, ೧೫—೨೦ರಲ್ಲಿ ಜನ್ಮಾಗಿ ಪ್ರಸಿದ್ಧವಾಗಿದೆ.

೩. ಫರಿಸಾಯರಾದ ಮಂತ್ರಿಸಭೆಯವರು ಪೌಲನ ಬಾಧನೆ ತಮ್ಮ ಮತಕ್ಕೆ ಅನುಸಾರವಾದದ್ದೆಂದು ಅಲೋಚಿಸಿ, ಸುವಾರ್ತೆಗಿಂತ ಸದ್ದುಕಾಯರ ಮತವನ್ನು ಪಕ್ಷಾಗಿ ಪಗೆ ಮಾಡಿದರಿಂದ, ಪೌಲನ ಸಹಾಯಕ್ಕೆ ಬಂದರು.

೪. ಪೇಳುತ್ತಾರೆ ಎಂಬದರಿಂದ ಈ ಗ್ರಂಥವು ಯೆರೂಸಲೇಮಿನ ನಾಶಕ್ಕೆ ಮುಂಚಿತವಾಗಿ ರಚಿತವಾಯಿತೆಂದು ಸಿದ್ಧಾಂತವಾಗಿದೆ. ಯಾಕಂದರೆ ರೋಮಾಯರು ಯೆರೂಸಲೇಮಿನ ಪಟ್ಟಣವನ್ನೂ, ದೇವಾಲಯವನ್ನೂ, ಯೆಹೂದರ ಜನಾಂಗವನ್ನೂ ಎಲ್ಲಾ ಹಾಳು ಮಾಡಿದ ಮೇಲೆ, ಮತತರ್ಕಗಳೆಲ್ಲಾ ನಿಂತವು.

೫. ಫರಿಸಾಯರು ಸದ್ಯಕ್ಕೆ ಪೌಲನ ಪಕ್ಷಕ್ಕೆ ಸದ್ದು ಕಾಯರ ದ್ವೇಷದಿಂದ ಮಾತನಾಡಿದರೂ, ಬೇರೆ ಸಮಯದಲ್ಲಿ, ನಿಯಮಕೃತ್ಯಗಳಿಂದಲ್ಲ, ಯೇಸು ಕ್ರಿಸ್ತನ ವಿಶ್ವಾಸದಿಂದಲೇ ಜಕ್ತನಿಗೆ ರಕ್ಷಣೆ ಪ್ರಾಪ್ತವಾಗುತ್ತದೆಂಬ ಪೌಲನ ಸುವಾರ್ತೆಗೆ ಅತ್ಯಂತ ವಿರೋಧಿಗಳಾಗಿದ್ದರು.

೬. ಘನವಾದ ಮಂತ್ರಿಸಚಿವೋತ್ತಮರು ಮತತರ್ಕದಿಂದ ಮೈಮರತು, ಭ್ರಾಂತರಾಗಿ, ಬೀದಿಯ ಜಗಳವಾಡುವ ಪೋಟರಿಗೆ ಸಮಾನರಾದರು. ನಿಜಭಕ್ತಿರಹಿತರಾದ ಮತಾಸಕ್ತರಿಗೆ ಇದು ಸಹಜವಾಗಿದೆ.

ಪೌಲನ ಪ್ರಾಣಹಿಂಸಾಲೋಚನೆಯು. ಪ. ೧೧—೨೨.

೧೧. ಆ ರಾತ್ರಿಯಲ್ಲಿ ಕರ್ತನು ಅವನ ಹತ್ತಿರ ನಿಂತು ಕೊಂಡು, ಪೌಲನೇ ಧೈರ್ಯವಾಗಿರು [೧]; ನೀನು ಯೆರೂಸಲೇಮಿನಲ್ಲಿ ನನ್ನ ವಿಷಯವಾಗಿ ಸಾಕ್ಷಿ ಕೊಟ್ಟ ಪ್ರಕಾರವೇ, ರೋಮದಲ್ಲಿಯೂ ಸಾಕ್ಷಿ ಕೊಡ ಬೇಕು [೨], ಅಂದನು. ೧೨. ಬೆಳಗಾದ ಮೇಲೆ ಯೆಹೂದ್ಯರಲ್ಲಿ ಕೆಲವರು ಕೂಟ ಕೂಡಿಸಿ, ತಾವು ಪೌಲನನ್ನು ಕೊಲ್ಲುವ ಪರ್ಯಂತ ಉಣ್ಣುವದೂ ಕುಡಿಯುವದೂ ಇಲ್ಲವೆಂದು [೩], ಶಪಥವನ್ನು ಮಾಡಿ ಕೊಂಡರು. ೧೩. ಈ ಪ್ರಕಾರ ಆಣೆ ಇಟ್ಟು ಕೊಂಡವರು ನಾಲ್ವತ್ತು ಮಂದಿಗಿಂತ ಹೆಚ್ಚಾಗಿದ್ದರು. ೧೪. ಅವರು ಪ್ರಧಾನಯಾಜಕರ ಬಳಿಗೂ ಹಿರಿಯರ ಬಳಿಗೂ ಬಂದು, ನಾವು ಪೌಲನನ್ನು ಕೊಲ್ಲುವ ಪರ್ಯಂತ ಯಾವದನ್ನೂ ರುಚಿ ನೋಡುವದಿಲ್ಲವೆಂದು, ಶಪಥವನ್ನು ಮಾಡಿ ಕೊಂಡಿದ್ದೇವೆ; ೧೫. ಆದದರಿಂದ, ಅವನ ವಿಷಯವಾದವುಗಳನ್ನು ಇನ್ನು ಚನ್ನಾಗಿ ತಿಳಿಯ ಬೇಕೆಂಬುವ ಹಾಗೆ, ಅವನನ್ನು ನಾಳೆ ನಿಮ್ಮ ಬಳಿಗೆ ಇಳಿಸಿ ತರ ಬೇಕೆಂದು, ಮಂತ್ರಿಸಭೆ ಸಹಿತವಾಗಿ ನೀವು ಸಹಸ್ರಾಧಿಪತಿಗೆ ತಿಳಿಸ ಬೇಕು. ಅವನು ಸಮೀಪಿಸುವದಕ್ಕೆ ಮುಂಚೆ, ನಾವು ಅವನನ್ನು ಕೊಲ್ಲ ಸಿದ್ಧವಾಗಿದ್ದೇವೆ, ಅಂದರು. ೧೬. ಆದರೆ ಪೌಲನ ಸಹೋದರಿಯ ಮಗನು ಅವರು ಹೊಂಚುವದನ್ನು ಕೇಳಿ, ಕೋಟೆಯೊಳಗೆ ಹೋಗಿ, ಪೌಲನಿಗೆ ತಿಳಿಸಿದನು. ೧೭. ಆಗ ಪೌಲನು ಶತಾಧಿಪತಿಗಳಲ್ಲಿ ಒಬ್ಬನನ್ನು ಕರೆದು, ಈ ಯೌವನಸ್ಥನನ್ನು ಸಹಸ್ರಾಧಿಪತಿಯ ಬಳಿಗೆ ಕರ ಕೊಂಡು ಹೋಗು; ಯಾಕಂದರೆ ಅವನಿಗೆ ತಿಳಿಸುವದಕ್ಕೆ ಒಂದು ಮಾತು ಉಂಟು, ಅಂದನು. ೧೮. ಇವನು ಅವನನ್ನು ಕರಕೊಂಡು, ಸಹಸ್ರಾಧಿಪತಿಯ ಬಳಿಗೆ ಬಂದು, ಶೆರೆಯವನಾದ ಪೌಲನು ನನ್ನನ್ನು ಕರೆದು, ನಿನಗೆ ಒಂದು ಮಾತು ಹೇಳ ಬೇಕಾಗಿರುವ ಈ ಯೌವನಸ್ಥನನ್ನು ನಿನ್ನ ಬಳಿಗೆ ಕರಕೊಂಡು ಹೋಗ ಬೇಕೆಂದು, ಬೇಡಿ ಕೊಂಡನು, ಅಂದನು. ೧೯. ಆಗ

ಅಪೌ. ಕ್ರಿ. ೬೩, ೨೦—೨೪.

ಸಹಸ್ರಾಧಿಪತಿಯು ಅವನ ಕೈ ಹಿಡಿದು ೫), ವಿಕಾಂತವಾದ ಸ್ಥಳಕ್ಕೆ ಹೋಗಿ, ನೀನು ನನಗೆ ತಿಳಿಸ ಬೇಕಾಗಿರುವದೇನು? ಎಂದು ಕೇಳಿದನು. ೨೦. ಅವನು, ಯೆಹೂದ್ಯರು, ಪೌಲನ ವಿಷಯವಾಗಿ ಇನ್ನು ಚನಾಗಿ ತಿಳಿಯ ಬೇಕೆಂಬುವ ಹಾಗೆ, ಅವ ನನ್ನು ನಾಳೆ ಮಂತ್ರಿಸಭೆಗೆ ಇಳಿಸಿ ತರ ಬೇಕೆಂದು, ನಿನ್ನನ್ನು ಬೇಡಿ ಕೊಳ್ಳುವದಕ್ಕೆ ಕೂಡ ಆಲೋಚಿಸಿದ್ದಾರೆ; ೨೧. ಆದದರಿಂದ ನೀನು ಅವರಿಗೆ ಸಮ್ಮತಿಸ ಬೇಡ; ಯಾಕಂದರೆ ಅವರೊಳಗೆ ನಾಲ್ವತ್ತಕ್ಕಿಂತ ಹೆಚ್ಚು ಮಂದಿ, ಅವನನ್ನು ಕೊಲ್ಲುವ ಮಟ್ಟಿಗೂ ಉಣ್ಣುವದೂ ಕುಡಿಯುವದೂ ಇಲ್ಲವೆಂದು, ಶಪಥವನ್ನು ಮಾಡಿ ಕೊಂಡು, ಅವನಿಗಾಗಿ ಕಾದು ಕೊಂಡು, ಇಗಲೇ ಸಿದ್ಧವಾಗಿದ್ದಾರೆ, ಅಂದನು. ೨೨. ಆದದರಿಂದ ಸಹಸ್ರಾಧಿಪತಿಯು, ಇವುಗಳನ್ನು ನನಗೆ ತಿಳಿಸಿದಿ ಎಂದು, ಯಾರಿಗೂ ಹೇಳ ಬೇಡೆಂದು ಎಚ್ಚರಿಸಿ, ಯೌವನಸ್ಥನನ್ನು ಕಳುಹಿಸಿ ಬಿಟ್ಟನು.

೧. ಅಂದರೆ: ನೀನು ಪುಕಾತ್ಮಾಗಿ, ನನ್ನ ಚಿತ್ತವಿಲ್ಲದೆ, ಶರೆಯಲ್ಲಿ ಬಿದ್ದೆನೆಂದು ಪೆದರ ಬೇಡ. ನಾನು ನಿನ್ನನ್ನು ಕಾಯುತ್ತೇನೆ.

೨. ನೀನು ರಾಮಪುರಕ್ಕೆ ಪುಣ್ಯಾಗಿ, ಅಲ್ಲಿ ಸುವಾರ್ತೆಯನ್ನು ಸಾರ ಬೇಕೆಂದು, ನೀನು ಮಾಡಿದ ಆಲೋಚನೆಯು ನನಗೆ ಹಿತವಾಗಿದೆ. ಅದನ್ನು ನಾನು ನೆರವೇರಿಸುತ್ತೇನೆ. ರಾಮಪುರಪ್ರಯಾಣಕ್ಕೆ ಈ ಬಂಧನವು ದ್ವಾರವಾಗಿದೆ.

೩. ಉಭಯತ್ರರಲ್ಲಿ ಪುಣ್ಯಾಗಾದರೂ ಒಬ್ಬನು ಸಾಯ ಬೇಕೆಂಬ ಪ್ರಾಣದ್ವೇಷವನ್ನು ಪುಟ್ಟಿಸುವ ಮತಾಸಕ್ತಿಯು ಪ್ರೀತಿಗುಣವುಳ್ಳ ದೇವಭಕ್ತಿಗೆ ಸಂಬಂಧವಾದದ್ದಲ್ಲ.

೪. ಪೌಲನ ಸಪುತ್ರಾದರಿಯಾಬ್ಬಳು ಯೆರೂಸಲೇಮಿನಲ್ಲಿ ವಸತಿಯಾಗಿದ್ದಳೆಂದು ಇಲ್ಲಿ ಸೂಚಿತವಾಗಿದೆ. ಪೌಲನು ಗಮಾಲಿಯೇಲನ ವಿದ್ಯಾಶಾಲೆಯಲ್ಲಿ ಅಭ್ಯಾಸ ಮಾಡುತ್ತಾ ಇದ್ದ ಕಾಲದಲ್ಲಿ ಇವಳ ಮನೆಯಲ್ಲಿ ಇದ್ದನೆಂದು ಊಹಿಸ ತಕ್ಕದ್ದು.

೫. ಪೌಲನು ರಾಮಿಯಾಯ ಗೃಪುಸ್ಥನಾಗಿದ್ದಾನೆಂದು ಸಪುಸ್ರಾಧಿಪತಿಯು ತಿಳಿದಂದಿನಿಂದ, ಪೌಲನು ತನಗೆ ಸಮಾನನೆಂದು, ಕೈಲಾದ ಮಟ್ಟಿಗೂ ಅವನು ಸಪುಣ್ಯಾಯ ಮಾಡಿದನು.

ಪೌಲನು ಕೈಸರಯಕ್ಕೆ ಕಳುಹಿಸಲ್ಪಟ್ಟಿದ್ದು. ಪ. ೨೩—೩೫.

೨೩. ತರುವಾಯ ಅವನು ಶತಾಧಿಪತಿಗಳಲ್ಲಿ ಇಬ್ಬರನ್ನುಕರೆದು, ರಾತ್ರಿಯ ಮೂರನೇ ತಾಸಿನಲ್ಲಿ ಕೈಸರಯಕ್ಕೆ ೧) ಹೋಗುವದಕ್ಕೆ, ಇನ್ನೂರು ರಾಗುವೆಯವರನ್ನೂ, ಎಪ್ಪತ್ತು ರಾಹುತರನ್ನೂ, ಇನ್ನೂರು ಚಲ್ಲೆಯವರನ್ನೂ ಸಿದ್ಧ ಮಾಡಿರಿ; ೨೪. ಪೌಲನನ್ನು ಹತ್ತಿಸಿ, ಭದ್ರವಾಗಿ ಅಧಿಪತಿಯಾದ ಫೇಲಿಕ್ಸನ ಬಳಿಗೆ ಕಳುಹಿಸಿಕೊಂಡು ಹೋಗುವ

ದಕ್ಕೆ ಪಶುಗಳನ್ನು ಸಹ ಸಿದ್ಧ ಮಾಡ ಬೇಕು, ಅಂದನು. ೨೫೯. ಮತ್ತು ಕಾಗದವ
ನ್ನು ಬರೆದನು. ಅದರಲ್ಲಿದ್ದ ಅಖಿ ಪ್ರಾಯವೇನಂದರೆ, ೨೬. ಶ್ರೀಮತ್ ಅಧಿಪತಿ
ಯಾದ ಫೇಲಿಕ್ಸನಿಗೆ, ಕ್ಲೌದ್ಯ ಲೂಸ್ಯನು, ಶುಭವಾಗಲಿ. ೨೭. ಈ ಮನುಷ್ಯನು
ಯೆಹೂದ್ಯರಿಂದ ಹಿಡಿಯಲ್ಪಟ್ಟು, ಅವರಿಂದ ಕೊಲ್ಲಲ್ಪಡುವದಕ್ಕಿದ್ದಾಗ, ಅವನು ರೋ
ಮಾಯನೆಂದು ನಾನು ತಿಳಿದು ೨), ರಾಣುವೆಯವರ ಸಂಗಡ ಬಂದು, ಅವನನ್ನು
ತಪ್ಪಿಸಿದೆನು. ೨೮. ಮತ್ತು ಅವರು ಅವನ ಮೇಲೆ ಹಾರಿಸುವ ಅಪರಾಧವನ್ನು
ತಿಳಿಯ ಇಚ್ಛೆಪಟ್ಟು, ಅವನನ್ನು ಅವರ ಮಂ ತ್ರಿಸಭೆಗೆ ಕರಕೊಂಡು ಹೋಗಿ, ೨೯. ಅವನ
ಮೇಲೆ, ಅವರ ನ್ಯಾಯಪ್ರಮಾಣದ ತರ್ಕಗಳ ವಿಷಯವಾದ ದೂರೇ ಹೊರತು,
ಮರಣಕ್ಕಾದರೂ ಬಂಧಗಳಿಗಾದರೂ ತಕ್ಕ ಯಾವ ಅಪರಾಧವೂ ಇಲ್ಲವೆಂದು,
ಕಂಡೆನು. ೩೦. ಈದರೆ, ಯೆಹೂದ್ಯರು ಇ ಮನುಷ್ಯನಿಗಾಗಿ ಸರ್ಕಾರ ಹಾಕಿಬಿ ಕಾಯ್ದು
ವದಕ್ಕಿದ್ದಾರೆಂದು ನನಗೆ ತಿಳಿಸಲ್ಪಟ್ಟಾಗ, ಸಂಗಡಲೇ ಅವನನ್ನು ನಿನ್ನ ಬಳಿಗೆ ಕಳುಹಿ
ಸಿ, ದೂರು ಹೇಳುವವರಿಗೆ ಸಹ, ಅವನ ವಿಷಯವಾದವುಗಳನ್ನು ನಿನ್ನ ಮುಂದೆ
ಹೇಳ ಬೇಕೆಂದು, ಆಜ್ಞಾಪಿಸಿದ್ದೇನೆ. ಕ್ಷೇಮವಾಗಲಿ. ೩೧. ಆದದರಿಂದ ರಾಣು
ವೆಯವರು, ತಮಗಾದ ಅಪ್ಪಣೆಯ ಪ್ರಕಾರ, ಪೌಲನನ್ನು ಕರಕೊಂಡು ೩), ರಾತ್ರಿ
ಯಲ್ಲಿ ಅಂತಿಪತ್ರಿಗೆ ೪) ಹೋದರು. ೩೨. ಮಾರನೇ ದಿವಸ ಅವರು ರಾಹುತರನ್ನು
ಅವನ ಸಂಗಡ ಹೋಗ ಗೊಡಿಸಿ ೫), ಕೋಟೆಗೆ ತಿರಿಗಿ ಬಂದರು. ೩೩. ಅವರು ಕೈಸ
ರಯಕ್ಕೆ ಬಂದು, ಕಾಗದವನ್ನು ಅಧಿಪತಿಗೆ ಕೊಟ್ಟು, ಪೌಲನನ್ನು ಸಹ ಅವನ
ಮುಂದೆ ನಿಲ್ಲಿಸಿದರು. ೩೪. ಅಧಿಪತಿಯು ಅದನ್ನು ಓದಿ, ಪೌಲನು ಯಾವ ಪ್ರಾ
ಮೆಯವನೆಂದು ಕೇಳಿ, ಅವನು ಕಿಲಿಕ್ಯದವನೆಂದು ತಿಳುಕೊಂಡು, ೩೫. ನಿನ್ನ ಮೇ
ಲೆ ದೂರು ಹೇಳುವವರು ಬಂದ ತರುವಾಯ, ನಿನ್ನನ್ನು ಕೇಳುವೆನು, ಅಂದನು.
ಮತ್ತು, ಹೆರೋದನ ನ್ಯಾಯಸ್ಥಾನದಲ್ಲಿ ೬) ಅವನನ್ನು ಕಾಯ ಬೇಕೆಂದು, ಅಪ್ಪಣೆ
ಕೊಟ್ಟನು.

೧. ಕೈಸರಯವು ರೋಮಾಯರಾದ ದೇಶಾಧಿಪತಿ
ಗಳ ಸ್ಥಾನವಾಗಿತ್ತು. ಅದು ಸಮುದ್ರತೀರದ ದಾಡ್ಡ
ಪಟ್ಟಣವಾಗಿದ್ದು, ರಾಜಧಾನಿಗೆ ಯೋಗ್ಯವಾಗಿತ್ತು.

೨. ಈ ಮಾತು ಸ್ವಲ್ಪ ಅಬದ್ಧವಾಗಿದೆ; ಏನಂದರೆ:
ರೋಮಾಯ ತಾಳ್ಮೆದವರು ದೇವಾಲಯದಲ್ಲಿ ಎದ್ದ
ಗುಲ್ಲಿಗಾಗಿ ಕೋಟೆಯಿಂದ ಇಳಿದು ಬಂದು, ಪೌಲ
ನನ್ನು ಹಿಡಿದು ಕೊಂಡು ಹೋದಾಗ, ಸರದಾರರಿ
ಗೆ, ಪೌಲನು ರೋಮಾಯನೆಂದು ತಿಳಿಯಲಿಲ್ಲ.
ಆದರೆ ಹೆಚ್ಚು ವಿವರವಾಗಿ ಬರೆಯುವದು ಅವಶ್ಯ
ವಿಲ್ಲವೆಂದು ನೆನಸಿ, ರೋಮಾಯನಾದ ಪೌಲನಿ
ಗೂ ಮತಾಸಕ್ತರಾದ ಯೆಹೂದರಿಗೂ ಹುಟ್ಟಿದ
ತರ್ಕದಲ್ಲಿ ಪೌಲನಿಗೆ ಅನ್ಯಾಯವಾಗ ಬಾರದೆಂಬ

ಅಪಾ. ಕ್ರಿ. ೨೪, ೧—೭.

ದು ಮುಖ್ಯವೆಂದು ಸೂಚಿಸಿದರೆ ಸಾಕು ಎಂತ ಆಲೋಚಿಸಿ, ಸಪಾಸ್ರಾಧಿಪತಿಯು ಹೀಗೆ ಬರದಿರ ಬಹುದು.

೩. ಆ ರಾತ್ರಿಯಲ್ಲಿ ರಾಣುವೆಯವರು ಇಪ್ಪತ್ತು ಮೈಲಿನ ದೂರಕ್ಕೆ ಅವಸರದಿಂದ ಹೊಕ್ಕಾದರು.

೪. ಪೌರಾದನು ಈ ಪಟ್ಟಣವನ್ನು ತಂದೆಯಾದ ಅಂತಿಪತ್ರನ ಹೆಸರಿಟ್ಟು, ಯೆರೂಸಲೇಮಿಗೂ, ಕೈಸರಯಕ್ಕೂ ಮಧ್ಯದಲ್ಲಿ ಕಟ್ಟಿಸಿದ್ದನು.

೫. ಯೆಹೂದರು ಪುಂಡಾಟ ನಡಿಸ್ಯಾರೆಂಬ ಭಯಕ್ಕೆ ಕಾರಣವಿಲ್ಲದ್ದರಿಂದ, ಪಾಯಿದಳವು ಯೆರೂಸಲೇಮಿಗೆ ಹಿಂದಿರುಗಿತು.

೬. ದಾಡ್ಡ ಪೌರಾದನು ಕೈಸರಯದಲ್ಲಿ ಕಟ್ಟಿಸಿದ ದಾಡ್ಡ ಅರಮನೆಯಲ್ಲಿ ರ್ಕ್ಯಾಮಾಯರಾದ ದೇಶಾಧಿಪತಿಗಳು ವಾಸ ಮಾಡುತ್ತಾ ಇದ್ದರು. ಅದರಲ್ಲಿ ಮುಖ್ಯವಾದ ಬಂಧನಗ್ರಹ ಸಹ ಇತ್ತು.

ಪೌಲನು ರ್ಕ್ಯಾಮಾಯರಾದ ನ್ಯಾಯಾಧಿಪತಿಗಳ ಮುಂದೆ ನಿಂತಿದ್ದು.

ಸ. ೨೪—೨೬.

ಫೆಲಿಕ್ಸನ ಮುಂದೆ ಸ. ೨೪.

೧) ನ್ಯಾಯವಿಮರ್ಶನೆ. ವ. ೧—೨೩.

ಅ) ತೆರ್ತುಲ್ಲನ ವಾದವು. ವ. ೧—೧೦.

೧. ಐದು ದಿವಸಗಳ ಮೇಲೆ, ಪ್ರಧಾನಯಾಜಕನಾದ ಅನನೀಯನೂ, ಹಿರಿಯರೂ, ಪ್ರಸಂಗಿಯಾದ ತೆರ್ತುಲ್ಲನೆಂಬವನು ಸಹಿತವಾಗಿ, ಇಳಿದು ಹೊಕ್ಕಾಗಿ, ಪೌಲನ ವಿಷಯವಾವವುಗಳನ್ನು ಅಧಿಪತಿಗೆ ತಿಳಿಸಿದರು ೧). ೨. ಅವನು ಕರೆಯಲ್ಪಟ್ಟಾಗ, ತೆರ್ತುಲ್ಲನು ಅವನ ಮೇಲೆ ದೂರು ಹೇಳಲಾರಂಭಿಸಿ, ಶ್ರೀಮತ್ ಫೆಲಿಕ್ಸನೆ, ನಿನ್ನಮುಖಾಂತರ ನಮಗೆ ಬಹಳ ಸಮಾಧಾನ ಉಂಟು. ನಿನ್ನ ಪರಾಮರಿಕೆಯಿಂದ ಈ ಜನಾಂಗಕ್ಕೆ ಉಪಕಾರಗಳು ಆಗುತ್ತವೆ. ೩. ಆದದರಿಂದ ಈ ದಯವನ್ನು ಎಂದೂ ಎಲ್ಲಿಯೂ ಪೂರ್ಣ ಸ್ವೀಕಾರದಿಂದ ಅನುಭವಿಸುತ್ತಾ ಇದ್ದೇವೆ ೨). ೪. ಆದರೆ ನಿನ್ನನ್ನು ಹೆಚ್ಚಾಗಿ ಬೇಸರಗೊಳಿಸದ ಹಾಗೆ, ನಿನ್ನ ತಾಳ್ಮೆಯಿಂದ ನಮ್ಮ ಸಂಕ್ಷೇಪವಾದ ಮಾತಿಗೆ ಕಿವಿ ಕೊಡ ಬೇಕೆಂದು ಬೇಡಿ ಕೊಳ್ಳುತ್ತೇನೆ. ೫. ಏನಂದರೆ, ಈ ಮನುಷ್ಯನನ್ನು ಕುಂಟನಾಗಿಯೂ, ಲೋಕದಲ್ಲಿರುವ ಯೆಹೂದ್ಯರೆಲ್ಲರಲ್ಲಿ ಕಲಹ ಎಬ್ಬಿಸುವವನಾಗಿಯೂ, ನಜರೇತಿನವರ ಪಾಷಂಡದಲ್ಲಿ ಮುಖ್ಯಸ್ಥನಾಗಿಯೂ ೩), ಕಂಡೆವು. ೬. ಅವನು ದ್ಯೇವಾಲಯವನ್ನು ಹೊಲೆ ಮಾಡುವದಕ್ಕೆ ಪ್ರಯತ್ನಮಾಡಿದನು. ನಾವು ಅವನನ್ನು ಹಿಡಿದು, ನಮ್ಮ ನ್ಯಾಯಪ್ರಮಾಣದ ಪ್ರಕಾರ ನ್ಯಾಯ ವಿಚಾರಿಸ ಬೇಕೆಂದಿದ್ದೆವು. ೭. ಆಗ ಸಹಸ್ರಾಧಿಪತಿಯಾದ ಲೂಸ್ಯನು ಬಂದು, ಬಹಳ ಬಲಾತ್ಕಾರವಾಗಿ ನಮ್ಮ ಕೈಗಳೊಳಗಿಂದ ಅವನನ್ನು ತೆಗೆದು ಕೊಂಡು ಹೊಕ್ಕಾಗಿ,

೭೨೨ ಅಪೌ. ಚ. ೨. ಪೌಲ್ಯೋದ. ಪರಜನರಲ್ಲಿ ಕ್ರೈಸ್ತಶ್ಚ.
ಅಪೌ. ಕ್ರಿ. ೨೪, ೪—೧೪.

೪. ಅವನ ಮೇಲೆ ದೂರು ಹೇಳುವವರು ನಿನ್ನ ಬಳಿಗೆ ಹಾಗಾಗ ಬೇಕೆಂದು, ಅಪ್ಪ
ಗೆ ಕಾಟ್ಟನು. ನಾವು ಇವನ ಮೇಲೆ ದೂರು ಹೇಳುವ ಎಲ್ಲವುಗಳ ವಿಷಯವಾಗಿ
ನೀನು ಇವನಿಂದ ವಿಚಾರಿಸಿ, ತಿಳಿದು ಕಾಳ್ಳಿ ಬಹುದು, ಅಂದನು. ೫. ಆಗ ಯೆ
ಹೂದ್ಯರು ಸಹ, ಇವು ಹೀಗೆಯೇ ಹೌದು, ಎಂದು ಸಮ್ಮತಿಸಿದರು ೪). ೧೦. ಆಗ
ಅಧಿಪತಿಯು ಪೌಲನಿಗೆ ಮಾತಾಡುವದಕ್ಕೆ ಸೌಜ್ಞೆ ಮಾಡಿದಾಗ, ಅವನು ಪ್ರ
ಶ್ನೋತ್ತರವಾಗಿ, ಬಹಳ ವರುಷಗಳಿಂದ ೫) ನೀನು ಇ ಜನಾಂಗಕ್ಕೆ ಅಧಿಪತಿಯಾಗಿ
ರುತ್ತೀ ಎಂದು ತಿಳಿದು, ಆತ ಧೈರ್ಯದಿಂದ ನನ್ನ ಕಾರ್ಯಗಳನ್ನು ಕುರಿತು ಉತ್ತರ
ಕಾಡುತ್ತೇನೆ.

೧. ಪೌಲನನ್ನು ನಾಶ ಮಾಡ ಬೇಕೆಂಬ ಅತ್ಯಂತ ದ್ವೇಷದಿಂದ ಪ್ರಧಾನಯಾಜಕನು ಮಂತ್ರಿಸಭೆಯ ವರ ಸಂಗಡ ಅಧಿಪತಿಯಾದ ಫೇಲಿಕ್ಸನ ಬಳಿಗೆ ಬಂದು, ಅಧಿಪತಿಯ ಸ್ವಚಾಷೆಯಲ್ಲಿ ವಾದ ಮಾಡ ಯೋಗ್ಯನಾದ ತೆರ್ತುಲ್ಲನೆಂಬ ರಾಮಿಯಾನಾದ ವಕೀಲನನ್ನು ಸಹಾಯಕ್ಕೆ ಮಾಡಿ ಕಾಂಡರು.

೨. ಇದು ಸುಳ್ಳು ಪಾಗಾಗಳಿಕೆ. ಫೇಲಿಕ್ಸನು ಅಧಿಪ
ತ್ಯದ ಆರಂಭದಲ್ಲಿ ದೇಶದಲ್ಲಿ ಪ್ರಬಲವಾದ ಕಳ್ಳರನ್ನು
ನಾಶ ಮಾಡಿದ್ದರಿಂದ ಜನರಿಗೆ ಉಪಕಾರಿಯಾಗಿದ್ದನು.
ಆದರೆ ತದನಂತರ ಘೋರ ಕಾಮಾಚಾರವೃತ್ತಿಯಿಂದ
ಲೂ, ಅತ್ಯಂತ ಕ್ರೌರ್ಯದಿಂದಲೂ ಜನರನ್ನು ಪೀಡಿಸು
ತ್ತಾ ಇದ್ದನು. ಕಡೆಯಲ್ಲಿ ಯೆಹೂದರು ಮಹಾ
ರಾಜನ ಮುಂದೆ ಅವನ ಮೇಲೆ ಅಪರಾಧ ಪಾಗಾರಿಸಿ
ಪ್ರಮಾಣಿಸಿದ್ದರಿಂದ, ಅವನು ಶಿಕ್ಷೆಗೆ ಒಳಗಾದನು.

೩. ಇವರು ಕ್ರೈಸ್ತರಿಗೆ ನಜರೇತಿನವರೆಂಬ ಪೆಸರ
ನ್ನು ನಿಂದೆಗಾಗಿ ಇಟ್ಟರು. ಯೇಸು ಕ್ರಿಸ್ತನಿಗೆ ನಜರೇ
ತಿನವನಾದ ಯೇಸು ಎಂಬ ಪೆಸರಿಟ್ಟ ಪ್ರಕಾರ, ಅತ
ನ ಶಿಷ್ಯರಿಗೂ ಇಟ್ಟರು. ಪೌಲನು ಆ ಕಾಲದಲ್ಲಿ ಅ
ಪಾಸ್ತಲರಲ್ಲಿ ಶ್ರೇಷ್ಠನೆಂದು ಯೆಹೂದರಲ್ಲಿ ಪೆಸ
ರ್ಗಾಂಡನೆಂದು ಕಾಣುತ್ತದೆ.

೪. ತೆರ್ತುಲ್ಲನು ಲತೀನ ಭಾಷೆಯಲ್ಲಿ ಮಾಡಿದ
ವಾದದಲ್ಲಿ ಪೇಳಿದ್ದಕ್ಕೆ ಯೆರೂಸಲೇಮಿನಿಂದ ಬಂದ
ವರೆಲ್ಲರೂ ಮುಂಚೆ ಮಾಡಿದ ಆಲಾಪನೆಯ ಪ್ರಕಾ
ರ ಸಾಕ್ಷಿ ಕಾಟ್ಟರು.

೫. ಫೇಲಿಕ್ಸನು ಯೆಹೂದದೇಶದ ಅಧಿಪತಿಯಾ
ಗಿ ಆರು ವರುಷ ಕಳದು ಪಾಗಾಗಿತ್ತು.

೪) ಪೌಲನ ಪ್ರತಿವಾದವು. ವ. ೧೧—೨೩.

ವ. ೧೧—೧೩ರಲ್ಲಿ ತಾನು ಕಲಹಿ ಅಲ್ಲವೆಂಬುವದನ್ನು ಸ್ಪಷ್ಟವಾಗಿ ಸ್ಥಾಪಿಸುವದು ಹ್ಯಾಗಂದರೆ: ತಾನು ಯೆರೂಸಲೇಮಿಗೆ ದೂರ ದೇಶದಿಂದ ಬಂದು ೧೨ ದಿವಸವಾಯಿತು. ಈ ಕಾಲದಲ್ಲಿ ತಾನು ಯಾರ ಸಂಗ ಡಲಾದರೂ ದೇವಾಲಯದಲ್ಲಿ ಸಂಭಾಷಣೆ ಮಾಡಿದ್ದಕ್ಕೂ, ಸಭೆಮನೆಗಳಲ್ಲಾಗಲಿ ಪಟ್ಟಣದಲ್ಲಿಯಾಗಲಿ ತಾನು ಜನರನ್ನು ಕೂಡಿಸಿದ್ದಕ್ಕೂ ಸಾಕ್ಷಿ ಯಾರೂ ಇಲ್ಲ. ಇಲ್ಲಿಗೆ ಬಂದವರು ಬಾಯಿಂದ ದೂರು ಹೇಳು ವದೇ ಹೊರ್ತು, ದೃಷ್ಟಾಂತ ಕೊಡಲಾರರು.

ವ. ೧೪—೨೧ರಲ್ಲಿ ನಡದ ಸಂಗತಿಯನ್ನು ಯಥಾರ್ಥವಾಗಿ ಹೇಳುತ್ತಾನೆ. ಹ್ಯಾಗಂದರೆ: ೧) ತಾನು ಕ್ರೈಸ್ತನಾದೆನು ಎಂಬುವದು ಸರಿ. ಆದರೆ ಕ್ರಿಸ್ತವಿಶ್ವಾಸವು ಪಾಷಂಡಮತವಲ್ಲ; ಯಾಕಂದರೆ ಕ್ರೈಸ್ತರು

ಪಿತೃಗಳ ದೇವರನ್ನೂ, ಆತನ ಪ್ರಕಟನೆಗಳನ್ನೂ ನಿಜವಾಗಿ ನಂಬುತ್ತಾರೆ; ಮತ್ತು ಸತ್ತವರ ಪುನರುತ್ಥಾನದ ಆಶೆಯನ್ನು ನಿಜವಾಗಿ ಕೈಕೊಳ್ಳುತ್ತಾರೆ. ೨) ತಾನು ದೇವರ ಮುಂದೆಯೂ, ಮನುಷ್ಯರ ಮುಂದೆಯೂ ನ್ಯಾಯವಾಗಿ ನಡೆಯುವದಕ್ಕೆ ಆಸಕ್ತನಾಗಿದ್ದೇನೆ. ೩) ಬಹಳ ವರುಷ ಪರದೇಶಗಳಲ್ಲಿ ಸಂಚರಿಸಿದನಂತರ, ಬಡವರಾದ ಸ್ವಜನರಿಗೆ ಧರ್ಮದ್ರವ್ಯವನ್ನು ತರುವ ಉದ್ದಿಶ್ಯನಾಗಿಯೂ, ಹರಿಕೆ ಸಲ್ಲಿಸುವ ಉದ್ದಿಶ್ಯವಾಗಿಯೂ, ಯೆರೂಸಲೇಮಿಗೆ ಬಂದೆನು. ೪) ಈ ಕಾರ್ಯಕ್ಕೆ ದೇವಾಲಯದಲ್ಲಿ ಶೇರಿದ ನನ್ನನ್ನು ಆಸ್ಯದಿಂದ ಬಂದ ಕೆಲವು ಯೆಹೂದರು ಕಂಡರು. ಇವರು ಗುಲ್ಲು ಎಬ್ಬಿಸಿದರು. ಇವರು ಇಲ್ಲಿಗೆ ಬಂದು, ನನ್ನ ಮೇಲೆ ದೂರು ಹೇಳ ಬೇಕಾಗಿತ್ತು. ಇವರು ಬರಲಿಲ್ಲ. ಇಲ್ಲಿಗೆ ಬಂದ ಪ್ರಧಾನಯಾಜಕನೂ, ಮಂತ್ರಿಸಭೆಯವರೂ ನನ್ನ ಮೇಲೆ ಯೆರೂಸಲೇಮಿನಲ್ಲಿ ಕೂಡಿದ ಮಂತ್ರಿಸಭೆಯಲ್ಲಿ ಯಾವ ತಪ್ಪನ್ನೂ ಸ್ಥಾಪಿಸಲಿಲ್ಲ. ನಾನು ಸತ್ತವರ ಪುನರುತ್ಥಾನವನ್ನು ನಂಬುತ್ತೇನೆಂದು ಹೇಳಿದನಂತರ ಮಂತ್ರಿಸಭೆಯಲ್ಲಿ ದೊಡ್ಡ ಗುಲ್ಲು ಮಾತ್ರ ಹುಟ್ಟಿತು. ವ. ೨೨. ೨೩. ಫೇಲಿಕ್ಸನು ಕ್ರೈಸ್ತಸಭೆಯ ಸಂಗತಿಯನ್ನು ಚನ್ನಾಗಿ ತಿಳಿದವನಾಗಿ, ಪೌಲನು ನಿರಪರಾಧಿಯೆಂದು ಗ್ರಹಿಸಿ ಕೊಂಡಾಗ್ಯೂ, ಯಥಾರ್ಥವಾಗಿ ನ್ಯಾಯ ತೀರಿಸುವದಕ್ಕೆ ಮನಸ್ಸಿಲ್ಲದವನಾಗಿದ್ದು, ಲೂಸ್ಯನು ಬಂದ ಮೇಲೆ ಚನ್ನಾಗಿ ವಿಚಾರಿಸುತ್ತೇನೆಂದು ಹೇಳಿ, ತಡ ಮಾಡಿದನು. ಅಷ್ಟು ಪರ್ಯಂತ ಪೌಲನು ಅರಮನೆಯಲ್ಲಿ ಇರ ಬೇಕೆಂದು ಆಜ್ಞಾಪಿಸಿ, ಅವನ ಸ್ನೇಹಿತರಲ್ಲಿ ಯಾರಾದರೂ ಅವನಿಗೆ ಸೇವಿಸುವದಕ್ಕೆ ಬಂದಲ್ಲಿ ಅವರಿಗೆ ಅಡ್ಡಿ ಮಾಡ ಕೆಲಸವಿಲ್ಲವೆಂತ, ಅಪ್ಪಣೆ ಕೊಟ್ಟನು. (ಆಗ ಈ ಗ್ರಂಥವನ್ನು ರಚಿಸಿದ ಲೂಕನು ಸಹ ಪೌಲನ ಸನ್ನಿವಾದಲ್ಲಿ ಇದ್ದನೆಂದು ನೆನಸ ತಕ್ಕದ್ದು.)

೨) ಫೇಲಿಕ್ಸನಿಗೂ ಪೌಲನಿಗೂ ಆದ ಸಂಭಾಷಣೆಯು. ವ. ೨೪—೨೭.

ವ. ೨೪. ಫೇಲಿಕ್ಸನಿಂದ ಪೌಲನ ಸಮಾಚಾರವನ್ನು ಕೇಳಿದ ಅವನ ಎರಡನೆ ಹೆಂಡತಿಯಾದ, ಹೆರೋದ ಅಗ್ರಿಪ್ಪನ ಮಗಳಾದ, ದ್ರುಸಿಲ್ಲಳು ಯೆಹೂದ ಮತಸ್ಥಳಾಗಿದ್ದು, ಮೆಸ್ಸೀಯನ ಮಾತು ಕೇಳುವದಕ್ಕೆ ಅಪೇಕ್ಷಿತಳಾಗಿದ್ದರಿಂದ, ಫೇಲಿಕ್ಸನು ಕೆಲವು ದಿವಸದ ಮೇಲೆ ಪೌಲನನ್ನು ಕರಿಸಿದನು. ಆಗ ಕ್ರಿಸ್ತನ ವಿಶ್ವಾಸದ ವಿಷಯವಾಗಿ ಇಬ್ಬರೂ ಅವನನ್ನು ಕೇಳ ತೊಡಗಿದರು. ವ. ೨೫. ದ್ರುಸಿಲ್ಲಳು ತನ್ನ ಗಂಡನಾದ, ಎಮೆಸದ ರಾಜನಾದ, ಅಜೀಜನನ್ನು ಬಿಟ್ಟು, ಫೇಲಿಕ್ಸನನ್ನು ಕೂಡಿ ಕೊಂಡು ಇದ್ದಳು. ವ್ಯಭಿಚಾರಿಗಳಾದ ಈ ಲೌಕಿಕ ಜನಗಳಿಗೆ ಪೌಲನು ಸುವಾರ್ತೆಯ ಸಮಾಧಾನದ ವಾಕ್ಯವನ್ನು ಹೇಳದೆ, ಅವರ ಮನಸ್ಸಾಕ್ಷಿಯನ್ನು ಎಚ್ಚರಿಸುವದಕ್ಕಾಗಿ ನೀತಿಯನ್ನೂ, ಸಂಯಮವನ್ನೂ, ಬರುವ ನ್ಯಾಯತೀರುವಿಕೆಯನ್ನೂ ಕುರಿತು ಪ್ರಸಂಗ ಮಾಡಿದನು. ಫೇಲಿಕ್ಸನು ಹೃದಯದಲ್ಲಿ ಅಂಜಿದಾಗ್ಯೂ, ದೇವರ ವಾಕ್ಯಕ್ಕೆ ಕಿವಿ ಕೊಟ್ಟು, ಕೃಪೆಯ ಕಾಲದಲ್ಲಿ ಮಾನಸಾಂತರವನ್ನೈದಲೊಲ್ಲದೆ, ಲೌಕಿಕ ಮನುಷ್ಯರ ರೀತಿಯಿಂದ ಮನಸ್ಸಾಕ್ಷಿಗೆ ತಗಲುವ ವಾಕ್ಯವನ್ನು ಮರ್ಯಾದೆಯಿಂದಲೇ ನಿವಾರಿಸಿ, ಈಗ ಹೋಗು; ತಕ್ಕ ಸಮಯದಲ್ಲಿ ನಿನ್ನನ್ನು ತಿರಿಗಿ ಕರಿಸುತ್ತೇನೆಂದು, ಪೌಲನಿಗೆ ಅಪ್ಪಣೆ ಕೊಟ್ಟನು. ೨೬. ಪೌಲನ ಬಳಿಗೆ ಹೋಗಿ ಬರುತ್ತಾ ಇರುವ ಜನಗಳು ಅವನನ್ನು ಬಿಡುಗಡೆ ಮಾಡುವದಕ್ಕೆ ತನಗೆ ಲಂಚ ಕೊಡ ಬೇಕೆಂದು, ಲೋಭದಿಂದ ಅಪೇಕ್ಷಿಸಿ, ಪೌಲನನ್ನೂ ಆಗ್ಗಾಗ್ಗೆ ಕರಿಸಿ ಸಂಭಾಷಣೆ ಮಾಡುತ್ತಾ ಇದ್ದನು. (ಇಬ್ರಿ. ೬, ೧೦ಲ್ಲಿ ಬರದ ಮಾತು ಪಲೆಸ್ತೀನದ ಸಭೆಯವರು ಈ ಕಾಲದಲ್ಲಿ ಪೌಲನಿಗೆ ತೋರಿಸಿದ ಪ್ರೀತಿಯನ್ನು ಸೂಚಿಸುತ್ತದೆಂದು ನೆನಸ ತಕ್ಕದ್ದು.)

೭—೨೪ ಅಪಾ. ಚ. ೨೫. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಪ್ರ.
ಅಪಾ. ಕ್ರಿ. ೨೪, ೨೭—೨೫ಕೀ, ೧೨.

೨೭. ಪೌಲನು ಈ ಅನ್ಯಾಯ ಮಾರ್ಗದಿಂದ ಬಿಡುಗಡೆಯಾಗುವದು ಉಚಿತವಲ್ಲವೆಂದು ನೆನಸಿ, ಲಂಚ ಕೊಡದೆ ಇದ್ದ ಕಾರಣ, ಫೇಲಿಕ್ಸನು ಅವನನ್ನು ಬಿಡುಗಡೆ ಮಾಡದೆ, ಮುಂಚಿತವಾಗಿ ತನ್ನಿಂದ ಬಹಳ ಅನ್ಯಾಯವನ್ನು ಹೊಂದಿದ ಯೆಹೂದರನ್ನು ಕಟ್ಟುಕಡೆಯಲ್ಲಿ ಮೆಚ್ಚಿಸ ಬೇಕೆಂದು ಅಪೇಕ್ಷಿಸಿ, ಅವನನ್ನು ಬಂಧನದಲ್ಲಿ ಇಟ್ಟು, ತನಗೆ ಬದಲಾಗಿ ಬಂದ ಅಧಿಪತಿಯಾದ ಪೊರ್ಕಿಯ ಫೆಸ್ತನಿಗೆ ಒಪ್ಪಿಸಿದನು. ಆದರೆ ಫೇಲಿಕ್ಸನ ಆಲೋಚನೆಯು ನೆರವೇರಲಿಲ್ಲ. ಅವನು ರೋಮಪುರಕ್ಕೆ ತಿರಿಗಿ ಬಂದ ಕೂಡಲೇ, ಯೆಹೂದರು ಮಹಾರಾಜನ ಮುಂದೆ ಬಂದು, ಅವನ ಮೇಲೆ ಅಪರಾಧವನ್ನು ಸ್ಥಾಪಿಸಿದರು. ಮಹಾರಾಜನ ಸ್ನೇಹಿತನಾದ ಪಲ್ಲಸ್ ಎಂಬ ಸಹೋದರನ ಸಹಾಯದಿಂದ ಅವನು ಸದ್ಯಕ್ಕೆ ಬಿಡುಗಡೆಯಾದಾಗ್ಯೂ, ಸ್ವಲ್ಪ ಕಾಲದಲ್ಲಿಯೇ ಯೋಗ್ಯವಾದ ಶಿಕ್ಷೆಗೆ ಒಳಗಾಗಿ, ಸಂಸಾರ ಸಹಿತವಾಗಿ ಗಡೀಪಾರಾದನು. ತದನಂತರ ಫೇಲಿಕ್ಸನಿಂದ ತನ್ನಲ್ಲಿ ಜನಿಸಿದ ಮಗನ ಸಹಿತವಾಗಿ ದ್ರುಸಿಲ್ಲಳು ವೆಸೂವಿಯವೆಂಬ ಜ್ವಾಲಾಮುಖೀಪರ್ವತದ ಅಗ್ನಿ ಪ್ರವಾಹದಲ್ಲಿ ಮೃತಳಾದಳು.)

ಪೌಲನು ಫೆಸ್ತನ ಮುಂದೆ. ಸ. ೨೫ಕೀ.

೧. ಪೌಲನು ಫೆಸ್ತನ ಕಡೆಯಿಂದ ಮಹಾರಾಜನಿಗೆ ಮೊರೆ ಇಟ್ಟದ್ದು.
ವ. ೧—೧೨.

ವ. ೧. ಫೆಸ್ತನು ೩ನೆ ವರುಷದಲ್ಲಿ ಕೈಸರಯಕ್ಕೆ ಬಂದು, ಅಧಿಪತ್ಯದಲ್ಲಿ ಶೇರಿದ ಕೂಡಲೇ, ದೇಶದ ಪ್ರಾಮುಖ್ಯ ಪಟ್ಟಣವಾದ ಯೆರೂಸಲೇಮಿಗೆ ಹೋಗಿ, ಅಧಿಪತಿಯಾದ ತನ್ನನ್ನು ಪರಜನರ ಮುಂದೆ ಪ್ರತಿಷ್ಠಿಸಿ ಕೊಳ್ಳ ಬೇಕೆಂದು ನಿಶ್ಚೈಸಿ, ಮೂರು ದಿವಸದ ಮೇಲೆ ಹೊರಟನು. ೨. ಅಲ್ಲಿ ಯೆಹೂದರ ಮುಖ್ಯಸ್ಥರು ಬೇಗ ಅಧಿಪತಿಯನ್ನು ಕಾಣಿಸಿ ಕೊಂಡು, ಪೌಲನಿಗೆ ವಿರೋಧವಾಗಿ ವಾದ ಮಾಡಿ, ಅವನನ್ನು ಯೆರೂಸಲೇಮಿಗೆ ಕರಿಸ ಬೇಕೆಂದು ಬೇಡಿದರು. ೩. ಫೆಸ್ತನು ಅವನನ್ನು ಕರಿಸಿದ ಪಕ್ಷದಲ್ಲಿ, ಅವನನ್ನು ಮಾರ್ಗದಲ್ಲಿ ಕೊಂದು ಹಾಕುವದಕ್ಕೆ ಹೊಂಚು ಹಾಕಿ ಕೊಂಡು ಇದ್ದರು. ೪. ಫೆಸ್ತನು ಅವರ ಬಿನ್ನಹಕ್ಕೆ ಒಪ್ಪದೆ, ೫. ತಾನು ಬೇಗ ಕೈಸರಯಕ್ಕೆ ಹೋಗುತ್ತೇನೆ; ನಿಮ್ಮಲ್ಲಿ ಬರ ತಕ್ಕವರು ನಮ್ಮ ಸಂಗಡ ಬಂದು, ಪೌಲನ ಮೇಲೆ ತಪ್ಪು ಹೊರಿಸಲಿ ಎಂದು ಆಜ್ಞಾಪಿಸಿದನು. ೬. ಅವನು ಹತ್ತು ಹನ್ನೆರಡು ದಿವಸ ಯೆರೂಸಲೇಮಿನಲ್ಲಿ ಇದ್ದನಂತರ, ಕೈಸರಯಕ್ಕೆ ಇಳಿದು ಹೋಗಿ, ಮಾರನೆ ದಿವಸ ಪೌಲನನ್ನು ನ್ಯಾಯಸ್ಥಾನಕ್ಕೆ ಕರಿಸಿದನು. ೭. ಯೆರೂಸಲೇಮಿನಿಂದ ಬಂದವರು ಪೌಲನ ಮೇಲೆ ಅನೇಕ ದೂರುಗಳನ್ನು ಹೇಳಿದಾಗ್ಯೂ, ಬಂದಕ್ಕೂ ದೃಷ್ಟಾಂತ ಕೊಡಲಾರದೆ ಹೋದರು. ೮. ಆದರೆ ಪೌಲನು ತಾನು ಯೆಹೂದರ ನಿಯಮಕ್ಕಾದರೂ, ದೇವಾಲಯಕ್ಕಾದರೂ, ಮಹಾರಾಜನಿಗಾದರೂ ವಿರೋಧವಾಗಿ ಪಾಪ ಮಾಡಲಿಲ್ಲವೆಂದು ಸ್ಪಷ್ಟವಾಗಿ ಸ್ಥಾಪಿಸಿದನು. ೯. ಫೆಸ್ತನು ಯೆಹೂದರನ್ನು ಮೆಚ್ಚಿಸ ಬೇಕೆಂದು, ಪೌಲನಿಗೆ ಈ ನ್ಯಾಯವಾದವು ಯೆರೂಸಲೇಮಿನ ಮಂತ್ರಿಸಭೆಯಲ್ಲಿ ನನ್ನ ಮುಂದೆ ತೀರ್ಪು ಆಗುವದಕ್ಕೆ ಒಪ್ಪುತ್ತೀಯೋ ಎಂದು ಕೇಳಲು, ೧೦. ಪೌಲನು ಹೀಗೆ ಆದರೆ ಮೋಸವಾದೀತೆಂದು ಊಹಿಸಿ, ಶತ್ರುಗಳ ಬಲೆಗಳನ್ನೆಲ್ಲಾ ಖಂಡಿಸುವದಕ್ಕೆ, ೧೧. ತನ್ನನ್ನು ಅನ್ಯಾಯವಾಗಿ ಯೆಹೂದರ ನ್ಯಾಯಸ್ಥಾನಕ್ಕೆ ಒಪ್ಪಿಸುವದಕ್ಕೆ ಮನಸುಳ್ಳ ಅಧಿಪತಿಯ ಕಡೆಯಿಂದ, ರೋಮಪುರದ ಗ್ರಹಸ್ಥನಾದ ತನಗಿರುವ ಅಧಿಕಾರದ ಪ್ರಕಾರ, ಮಹಾರಾಜನಿಗೆ ಮೊರೆ ಇಟ್ಟನು. ೧೨. ಫೆಸ್ತನು,

ಅಪೌ. ಶ್ರೀ. ೨೫, ೧೩—೨೫.

ನ್ಯಾಯಸ್ಥಾನದ ಅಲೋಚನೇಕರ್ತರ ಸಂಗಡ ಸಂಭಾಷಣೆ ಮಾಡಿದ ಮೇಲೆ, ಪೌಲನು ರೋಮಪುರಕ್ಕೆ ಹೋಗ ಬೇಕೆಂದು ಅಪ್ಪಣೆ ಕೊಟ್ಟನು. (ಈ ಪ್ರಕಾರವಾಗಿ ಪೌಲನ ಹೃದಯದಲ್ಲಿ ಮುಂಚಿತವಾಗಿದ್ದ ಬಯಕೆಯು, ಸ. ೧೯, ೨೧; ೨೩, ೧೧. ರೋಮಾ. ೧೦. ಅವನ ಸ್ವಂತ ಪ್ರಯತ್ನ ಬಂದೂ ಇಲ್ಲದೆ, ವ್ಯಾಜ್ಯಮಾರ್ಗವಾಗಿ ನೆರವೇರಿತು.)

೨. ಪೌಲನು ಅಗ್ರಿಪ್ಪನೆಂಬ ಅರಸನ ಮುಂದೆ ನಿಂತದ್ದು. ವ. ೧೩—೨೭.

ವ. ೧೩. ಸ್ವಲ್ಪ ಕಾಲದ ಮೇಲೆ ಅರಸನಾದ ಎರಡನೆ ಹೆರೋದ ಅಗ್ರಿಪ್ಪನು ಫೊಲೆಮೊ ಎಂಬ ಕಿಲಿಕ್ಯದ ಅರಸನ ಪರಿತ್ಯಕ್ತ ಹೆಂಡತಿಯಾದ ತನ್ನ ತಂಗಿ ಬೆರ್ನಿಕೆಯ ಸಂಗಡ ಹೊಸ ಅಧಿಪತಿಯ ಪ್ರಥಮ ದರ್ಶನಕ್ಕೆ ಬಂದನು. (ಈ ಎರಡನೆ ಹೆರೋದ ಅಗ್ರಿಪ್ಪನ ತಂದೆ ಸತ್ತ ಮೇಲೆ, ಕ್ಲೌದ್ಯನೆಂಬ ಮಹಾರಾಜನು ಮೊದಲು ಕಲ್ಕಿಸೆಂಬ ಸೀಮೆಯನ್ನು, ಬಳಿಕ ಫಿಲಿಪ್ಪ ಲುಸಾನ್ಯರ ಚತುರಾಧಿಪತ್ಯಗಳನ್ನು ಲೂಕ. ೩, ೧., ಪರೆಸ್ತೀನದ ಪ್ರಾಂತ್ಯವಾದ ಈ ದೇಶಗಳನ್ನು ಅವನಿಗೆ ಒಪ್ಪಿಸಿದ್ದನು.) ೧೪. ಅವರು ಕೆಲವು ದಿವಸ ಫೆಸ್ತನ ಬಳಿಯಲ್ಲಿ ಇದ್ದನಂತರ, ಅವನು ಈ ಸಂಗತಿಗಳನ್ನು ಚನ್ನಾಗಿ ತಿಳಿಯ ತಕ್ಕ ಯೆಹೂದನಾಗಿರುವ ಅರಸನ ಸಂಗಡ ಪೌಲನ ವ್ಯವಹಾರವನ್ನು ಪ್ರಸ್ತಾಪಿಸಿದನು. ನೀತಿವಂತನಾದ ನ್ಯಾಯಾಧಿಪತಿಯೂ ಒಳ್ಳೆ ಥೊರೆಯೂ ಎನ್ನಿಸಿ ಕೊಳ್ಳುವ ಫೆಸ್ತನು, ಲೌಕಿಕ ಮನುಷ್ಯನಿಗೆ ಸಹಜವಾದ ಔದಾಸೀನ್ಯಬುದ್ಧಿಯಿಂದ ಪೌಲನ ಸಂಗತಿಯನ್ನು ಅರಸನಿಗೆ ತಿಳಿಸಿ, ಫೇಲಿಕ್ಸನು ಹೆಸರಿಲ್ಲದ ಒಬ್ಬ ಬಂಧನದವನನ್ನು ಇಲ್ಲಿ ನನಗೆ ಬಿಟ್ಟು ಇದ್ದಾನೆ. ೧೫. ನಾನು ಯೆರೂಸಲೇಮಿಗೆ ಹೋದಾಗ, ಮಂತ್ರಿಸಭೆಯವರು ನನ್ನ ಮುಂದೆ ಬಂದು, ಅವನಿಗೆ ಶಿಸ್ತೆಯನ್ನು ನಿರ್ಣ್ಯಸ ಬೇಕೆಂದು ಬಿನ್ನೈಸಿದರು. ೧೬. ಆದರೆ ನಾನು ವಿಚಾರಣೆ ಇಲ್ಲದೆ ಒಬ್ಬನಿಗೆ ತೀರ್ಪು ಮಾಡುವದು ರೋಮಾಯರ ಪದ್ಧತಿಗೆ ವಿರೋಧವೆಂದು ಹೇಳಿದೆನು. ೧೭. ೧೮. ತದನಂತರ ನನ್ನ ಮುಂದೆ ನಡದ ವ್ಯಾಜ್ಯದಲ್ಲಿ ನಾನು ನೆನಸಿದ ಅಪರಾಧಗಳಲ್ಲಿ ಯಾವದಾದರೂ ಅವನ ಮೇಲೆ ಸ್ಥಾಪಿತವಾಗಲಿಲ್ಲ. ೧೯. ತಮ್ಮ ಭಕ್ತಿಯ ವಿಷಯವಾಗಿಯೂ, ಸತ್ತು ಹೋದಂಥಾ, ಬದುಕುತ್ತಾನೆಂದು ಪೌಲನು ಹೇಳುವಂಥಾ, ಯೇಸು ಎಂಬ ಒಬ್ಬನ ವಿಷಯವಾಗಿಯೂ, ಅವನ ಸಂಗಡ ತರ್ಕಿಸಿದರು ಅಷ್ಟೆ. ೨೦. ಇಂಥಾ ತರ್ಕಗಳನ್ನು ನಾನು ತಿಳಿಯದವನಾಗಿರುವದರಿಂದ, ಯೆರೂಸಲೇಮಿಗೆ ಹೋಗಿ, ಅಲ್ಲಿ ತೀರ್ಪು ಹೊಂದುವದಕ್ಕೆ ನಿನಗೆ ಮನಸ್ಸುಂಟೋ ಎಂದು ಅವನನ್ನು ಕೇಳಿದೆನು. (ತಾನು ಯೆಹೂದರನ್ನು ಮೆಚ್ಚಿಸ ಬೇಕೆಂದು, ಹೀಗೆ ಮಾತಿದ್ದನ್ನು ಸತ್ಯದ ಪ್ರಕಾರ ಅರಸನಿಗೆ ಫೆಸ್ತನು ತಿಳಿಸಲಿಲ್ಲ.) ೨೧. ಆದರೆ ಪೌಲನು ಮಹಾರಾಜನಿಗೆ ಮೊರೆ ಇಟ್ಟದರಿಂದ, ಅವನನ್ನು ರೋಮಪುರಕ್ಕೆ ಕಳುಹಿಸುವ ಪರ್ಯಂತ ಇಲ್ಲಿ ಕಾವಲಿನಲ್ಲಿ ಇಟ್ಟಿನೆಂದು ಹೇಳಿದನು. ೨೨. ಆಗ ಅಗ್ರಿಪ್ಪನು, ಈ ಮನುಷ್ಯನನ್ನು ಕೇಳುವದಕ್ಕೆ ನನಗೂ ಮನಸ್ಸುಂಟೆಂದು ಫೆಸ್ತನಿಗೆ ಹೇಳಲಾಗಿ, ಇವನು, ನಾಳೆ ಕೇಳ ಬಹುದೆಂದು, ಹೇಳಿದನು. ೨೩. ಮಾರನೆ ದಿವಸ ಅಗ್ರಿಪ್ಪನೂ ಬೆರ್ನಿಕೆಯೂ ಬಹಳ ಅಟ್ಟಹಾಸದಿಂದ ಬಂದು, ಸಹಸ್ರಾಧಿಪತಿಗಳ ಸಂಗಡಲೂ ಪಟ್ಟಣದ ಶ್ರೇಷ್ಠರ ಸಂಗಡಲೂ ಸಭಾಸ್ಥಾನದಲ್ಲಿ ಶೇರಿದಾಗ, ಫೆಸ್ತನು ಪೌಲನನ್ನು ಕರಿಸಿದನು. ೨೪. ಆಗ ಫೆಸ್ತನು, ಯೆಹೂದರೆಲ್ಲರೂ ಇವನಿಗೆ ಪ್ರಾಣದ್ವೇಷಿಗಳಾಗಿದ್ದಾರೆ. ೨೫. ಆದರೆ ನಾನು ಅವನಲ್ಲಿ ಅಪರಾಧವನ್ನು ತಿಳಿಯದೆ ಇರುವದರಿಂದಲೂ, ಅವನು ಮಹಾರಾಜನಿಗೆ ಮೊರೆ ಇಟ್ಟದ್ದರಿಂದಲೂ, ಅವನನ್ನು ರೋಮಪುರಕ್ಕೆ ಕಳುಹಿಸ ಬೇ

ಕೆಂದು ನಿಶ್ಚೈಸಿದ್ದೇನೆ. ೨೬. ಆದರೆ ಅವನ ವಿಷಯವಾಗಿ ಧೊರೆಗೆ ಹ್ಯಾಗೆ ಬರೆಯ ಬೇಕೆಂದು ನನಗೆ ತಿಳಿಯುವದಿಲ್ಲ. ಆದ್ದರಿಂದ ಏನಾದರೂ ಬರೆಯುವದಕ್ಕೆ ನಿಕ್ಕುವ ಹಾಗೆ, ಅವನನ್ನು ನಿಮ್ಮ ಮುಂದೆ, ಮುಖ್ಯವಾಗಿ ಅರಸನಾದ ಅಗ್ರಿಪ್ಪನೇ ನಿನ್ನ ಮುಂದೆ, ವಿಚಾರ ಮಾಡುವದಕ್ಕಾಗಿ ಕರಿಸಿದ್ದೇನೆ. ೨೭. ಯಾಕಂದರೆ ಶೆರೆಯವನನ್ನು ಕಳುಹಿಸಿ, ಅವನನ್ನು ಕಳುಹಿಸುವ ಕಾರಣವನ್ನು ತೋರಿಸದೆ ಇರುವದು ಅನುಚಿತವಾದದ್ದು.

ಪೌಲನು ಅಗ್ರಿಪ್ಪನ ಮುಂದೆ. ಸ. ೨೬.

೧. ಪೌಲನ ಪ್ರಾಷಣವು ವ. ೧—೨೩.

ವ. ೧. ಪೌಲನು, ಮತ್ತಾ. ೧೦, ೧೪. ಮಾರ್ಕ. ೧೩, ೯ಲ್ಲಿ ಬರದ ಮಾತಿನ ಪ್ರಕಾರ, ಅರಸನ ಮುಂದೆಯೂ, ಅಧಿಪತಿಗಳ ಮುಂದೆಯೂ ಪ್ರತಿವಾದ ಮಾಡ ಬೇಕಾಗಿರಲಾಗಿ, ನಿರ್ಭಯನಾಗಿಯೂ, ಸಂತುಷ್ಟನಾಗಿಯೂ ಕೈಚಾಚಿ, ಮಾತನಾಡ ತೊಡಗಿದನು. ಅಗ್ರಿಪ್ಪನು, ತನಗಾಗಿ ಪ್ರತಿವಾದ ಮಾಡ ಬೇಕೆಂದು ಪೌಲನಿಗೆ ಅಪ್ಪಣೆ ಕೊಟ್ಟನು. ಆದರೆ ಪೌಲನು ಅಗ್ರಿಪ್ಪನಲ್ಲಿ ಯೇಸು ಕ್ರಿಸ್ತನ ಮೇಲೆ ವಿಶ್ವಾಸ ಹುಟ್ಟುವ ಉದ್ದಿಶ್ಯವಾಗಿಯೇ ಮಾತಾಡ ಬೇಕೆಂದು ಇಷ್ಟೈಸಿ, ಮೊದಲು ದೀನಭಾವದಿಂದಲೂ ಮರ್ಯಾದೆಯಿಂದಲೂ ಈ ವ್ಯವಹಾರದಲ್ಲಿ ಯೆಹೂದರಲ್ಲಿರುವ ಸಕಲ ಸಂಪ್ರದಾಯಗಳನ್ನೂ, ತರ್ಕಗಳನ್ನೂ ಬಲ್ಲವನಾದ ನಿನ್ನ ಮುಂದೆ ಭಾಷಣ ಮಾಡುವ ಸಮಯವು ನನಗೆ ದೊರಕಿದ್ದಕ್ಕೆ ಅತಿ ಸಂತುಷ್ಟನಾಗಿದ್ದೇನೆಂದು ಹೇಳಿ, ತಾಳ್ಮೆಯಿಂದ ಕಿವಿ ಕೊಡ ಬೇಕೆಂದು ಬೇಡಿ ಕೊಂಡು, (ವ. ೨. ಷಿ.) ಬಳಿಕ ತನ್ನ ಸಂವರ್ತನದ ವೃತ್ತಾಂತವನ್ನು ವಿವರಿಸಿ ಹೇಳುವದೇನಂದರೆ: ವ. ೪—೮. ನಾನು ನಿಜ ಭಕ್ತನಾದ ಯೆಹೂದನಾಗಿದ್ದೇನೆ. ನಮ್ಮ ಪಿತೃಗಳಿಗೆ ದೇವರು ಕೊಟ್ಟ ವಾಗ್ದತ್ತವು ಪುನರುತ್ಥಾನವಾದ ಯೇಸು ಕ್ರಿಸ್ತನ ಮುಖಾಂತರ ನೆರವೇರಿತೆಂದು ನಂಬುವದರಿಂದಲೇ ವಾದಿಗಳು ನನ್ನ ಮೇಲೆ ಅಪರಾಧವನ್ನು ಹೊರಿಸುತ್ತಾರೆ. ಆದರೆ ದೇವರು ಸತ್ತವರನ್ನು ಎಬ್ಬಿಸುತ್ತಾನೆಂಬದನ್ನು ನಂಬುವದು ಭಕ್ತನಾದ ಯೆಹೂದನಿಗೆ ಅನುಚಿತವಾದದ್ದಲ್ಲ. ತರುವಾಯ ವ. ೯—೨೩. ಯೇಸು ಕ್ರಿಸ್ತನ ಪುನರುತ್ಥಾನಕ್ಕೆ ಬಲವಾದ ಸಿದ್ಧಾಂತವಾಗಿ ತನ್ನ ಸಂವರ್ತನವೃತ್ತಾಂತವನ್ನು ೨೨ನೆ ಸಂಧಿಗಿಂತ ವಿವರವಾಗಿಯೂ ಸ್ಪಷ್ಟವಾಗಿಯೂ ತಿಳಿಸುತ್ತಾನೆ. ವ. ೯—೧೧. ತಾನು ಮೊದಲು ಅತ್ಯಂತ ದ್ವೇಷಿಯಾದ ಕ್ರೈಸ್ತಹಿಂಸಕನಾಗಿದ್ದೆನೆಂದು ಹೇಳಿ, ದಮಸ್ಕಕ್ಕೆ ಹೋಗುವ ಮಾರ್ಗದಲ್ಲಿ ತನಗೆ ಸಂಭವಿಸಿದ್ದನ್ನು ವಿವರಿಸುತ್ತಾನೆ. ಇಲ್ಲಿ ಪರಾಮರಿಸ ತಕ್ಕ ವಿಶೇಷ ಸಂಗತಿಗಳು ಯಾವವೆಂದರೆ: ೧) ಫಕ್ಕನೆ ಕಾಣಿಸಿದ ಮಹಾ ಪ್ರಕಾಶವು ಅತಿ ಭಯಂಕರವಾದ್ದರಿಂದ, ಪೌಲನ ಪರಿವಾರದವರು ಸಹ ಮೊದಲು ನೆಲಕ್ಕೆ ಬಿದ್ದರು. ಸ. ೯, ೬ಲ್ಲಿ ಪರಿವಾರದವರು ತಿರಿಗಿ ಎದ್ದು ನಿಂತು, ಪ್ರಕಾಶವನ್ನು ನೋಡಿ, ಶಬ್ದವನ್ನು ಕೇಳಿದರೆಂದು, ತೋರುತ್ತದೆ. ೨) ಪೌಲನು ಇಲ್ಲಿ ಗ್ರೀಕ ಭಾಷೆಯಲ್ಲಿ ಮಾತನಾಡಿ, ಯೇಸು ಇಬ್ರಿಯ ಭಾಷೆಯಲ್ಲಿ ನುಡಿದನೆಂದು, ವಿಶೇಷವಾಗಿ ಹೇಳುತ್ತಾನೆ. ೨೨ನೆ ಸಂಧಿಯಲ್ಲಿ ಮಾಡಿದ ಇಬ್ರಿಯ ಭಾಷಾಪ್ರಸಂಗದಲ್ಲಿ ಇದನ್ನು ವಿಶೇಷವಾಗಿ ಹೇಳುವದು ಅನವಶ್ಯವಾಗಿತ್ತು. ೩) ಅನನೀಯನ ಸಂಗತಿಯನ್ನು ಪೌಲನು ಅಗ್ರಿಪ್ಪನಿಗೆ ವಿವರಿಸುವದಿಲ್ಲ. ಆದರೆ ಕರ್ತನು ದಮಸ್ಕದ ಸಮೀಪದಲ್ಲಿ ತನಗೆ ನುಡಿದದ್ದನ್ನೂ, ದಮಸ್ಕದಲ್ಲಿ ಅನನೀಯನ ಮುಖಾಂತರ ತಿಳಿಸಿದ್ದನ್ನೂ, ತದನಂತರ ಯೆರೂಸಲೇಮಿನ ದೇವಾಲಯದಲ್ಲಿ ತನಗೆ ಕಾಣಿಸಿ ಕೊಂಡು ಹೇಳಿದ್ದನ್ನೂ, ಒಟ್ಟು ಕೂಡಿಸಿ ಪ್ರಸ್ತಾಪಿಸುತ್ತಾನೆ. ಹ್ಯಾಗಂದರೆ:

ಅಪೊ. ಕೃ. ೨೬, ೧೫—೧೯.

೧೫. ಆಗ ನಾನು, ಕರ್ತನೇ, ನೀನು ಯಾರು? ಅನ್ನಲಾಗಿ, ನಾನು, ನೀನು ಹಿಂಸಿಸುವ ಯೇಸುವೇ; ೧೬. ಆದರೆ ನೀನು ಎದ್ದು, ಕಾಲೂರಿ ನಿಂಶುಕ್ಕೋ; ಯಾಕಂದರೆ ಪಾಪಪರಿಹಾರವನ್ನೂ, ನಂನಲ್ಲಿ ಇಡುವ ವಿಶ್ವಾಸದಿಂದ ಪರಿಶುದ್ಧರಾದವರಲ್ಲಿ ಬಾಧ್ಯತೆಯನ್ನೂ, ಹೌಂದುವದಕ್ಕೋಸ್ಕರ, ಅವರ ಕಣ್ಣುಗಳನ್ನು ತೆರೆದು ೧), ಅವರನ್ನು ಕತ್ತಲೆಯಾಳಗಿಂದ ಬೆಳಕಿಗೂ, ೧೭. ಸೈತಾನನ ಅಧಿಕಾರದಾಳಗಿಂದ ದೇವರ ಕಡೆಗೂ, ತಿರುಗಿಸುವದಕ್ಕೆ, (ಪ್ರಜೆಗೂ ನಾನು ಇಗ ನಿನ್ನನ್ನು ಕಳುಹಿಸುವ ಜನಾಂಗಗಳಿಗೂ ನಿನ್ನನ್ನು ತಪ್ಪಿಸಿ ೨), ೧೮. ನೀನು ನೋಡಿದವುಗಳಿಗೂ, ನಾನು ತೋರಿಸಿ ಕೊಂಡು, (ಪ್ರತ್ಯಕ್ಷವಾಗಿ ನಿನಗೆ ತಿಳಿಸುವದಕ್ಕಿರುವ ಕಾರ್ಯಗಳಿಗೂ ೩), ಸಾಕ್ಷಿಯಾಗಿಯೂ ಉಳಿಗದವನಾಗಿಯೂ ನಿನ್ನನ್ನು ಮುನ್ನೇಮಿಸ ಬೇಕೆಂದು ೪), ನಿನಗೆ ಪ್ರತ್ಯಕ್ಷವಾಗಿದ್ದೇನೆ, ಅಂದನು.

೧. ಈ ವಚನದಲ್ಲಿ ಸುವಾರ್ತಾಪ್ರಸಂಗಾದ್ಯಾಗದ ಪರ್ಣನೆ ಕ್ಷಪ್ತವಾಗಿ ಸೂಚಿತವಾಗಿದೆ. ಈ ವಿಷಯದಲ್ಲಿ ಮುಖ್ಯ ವಾಕ್ಯಗಳು ಮೂರು: ೧) ಮೂಲ ಕರ್ತನು ದೇವರೇ. ಆದಾಗ್ಯೂ, ಆತನು ತನ್ನ ಕೃಪಾಶಕ್ತಿಯಿಂದಲೇ ಎಲ್ಲಾ ಸಾಧಿಸಿದರೂ, ತನ್ನ ವಾಕ್ಯಸೇವಕರು ದೇವರ ಆತ್ಮಬಲದಿಂದ ನೆರವೇರಿಸುವಂಥಾದ್ದೆಲ್ಲಾ ಅಮಿತ ಕರುಣೆಯಿಂದ ಅವರ ಲೆಖ್ಖಕ್ಕೆ ಸೇರಿಸುತ್ತಾನೆ. ೨) ಕಾರ್ಯದ ಕ್ರಮವೇನಂದರೆ: ಅ) ಸತ್ಯವನ್ನು ತಿಳಿದು, ಸ್ವಂತ ಪಾಪವನ್ನೂ, ರಕ್ಷಣೆಯನ್ನೂ ಗ್ರಹಿಸಿ ಕಾಳ್ಳುವ ಪರ್ಯಾಗೆ, ಕಣ್ಣು ತೆರೆಯಾಣ. ಆ) ಈ ಆರಂಭದ ತಿಳುವಿಕೆಯೂ, ಅನುಭವವೂ ಸಾಲದು. ನಿಜವಾದ ಮಾನಸಾಂತರವು ಉಂಟಾಗ ಬೇಕು; ಪರ್ಯಾಗಂದರೆ: ಮನುಷ್ಯನು ಮುಂಚೆ ಪೋತವಾಗಿದ್ದ ಅಂಧಕಾರದಿಂದ ಬೆಳಕಿಗೆ ತಿರುಗಿ ಕಾಂಡು, ಪಾಪಕ್ಕೆ ಪೋಸಿ, ಸತ್ಯವನ್ನೂ ನೀತಿಯನ್ನೂ ಬಯಸ ತಾಡಗಿ, ಬಳಿಕ ತನ್ನ ಅಂಧಕಾರವು ಸ್ವಾಭಾವಿಕ ಮಾತ್ರವಾದದ್ದು ಅಲ್ಲ; ಸೈತಾನ ಬಲಸಂಬಂಧವಾದದ್ದು ಎಂದು ತಿಳಿದು, ಸೈತಾನನ್ನು ಬಿಟ್ಟು, ಜೀವವುಳ್ಳ ದೇವರನ್ನು ಆಶ್ರಯಿಸಿ ಕಾಳ್ಳ ಬೇಕು. ಇ) ದೇವರನ್ನು ಸತ್ಯವಾಗಿ ಮರೆ ಪರ್ಯಾಕ್ಕ ಚಕ್ತನು ಪಾಪ ಪರಿಪರ್ಯಾರದ ಸಮಾಧಾನವನ್ನೂ, ಯೇಸು ಕ್ರಿಸ್ತನಲ್ಲಿರುವ ಕೃಪಾಸಂತೃಪ್ತಿಯನ್ನೂ ಪರ್ಯಾಂದುತ್ತಾನೆ. ಈ) ಬಳಿಕ ವಿಶೇಷವಾಗಿ ಪರಿಶುದ್ಧರ ಅನ್ಯಾಯನ್ಯವೆಂಬ ಶರೀರದ ಅಂಗರೂಪವಾದ ಸಿದ್ಧಿಯುಂಟಾಗುತ್ತದೆ. ೩) ಪಾಪ ವಿಸರ್ಜನವನ್ನೂ, ದೇವಾನ್ಯಾಯನ್ಯವನ್ನೂ, ಪಾಪಪರಿಪರ್ಯಾರದ ಅನುಭವವನ್ನೂ, ಪರಿಶುದ್ಧವಾದ ಸಿದ್ಧಿಯನ್ನೂ, ಮುಕ್ತಿಯನ್ನೂ ನೆರವೇರಿಸುವ ಕ್ರಿಸ್ತ ವಿಶ್ವಾಸವು ಸರ್ವಕ್ಕೂ ಕಾರಣವಾಗಿದೆ. ಸಾಮಾನ್ಯವಾದ ಈ ಕೃಪಾಕರಣವು ಕ್ರಿಸ್ತ ಸೇವಕರ ಕೈಗೆ ಒಪ್ಪಿಸಿ ಅದೆ.

೨. ಕರ್ತನಾದ ಯೇಸುವು ಈ ಸೇವೆಗೆ ನೇಮಕ ಮಾಡಿದ ಮನುಷ್ಯರಿಗೆ ಅಕ್ಷಯಪತ್ರವಾದ ಒಂದು ರಪರ್ಯಾದಾರಿ ಕಾಡುತ್ತಾನೆ. ಏನಂದರೆ: ಕರ್ತನು ಅವರಿಗೆ ನೇಮಕ ಮಾಡಿದ ಕೆಲಸವನ್ನು ಅವರು ತೀರಿಸುವ ಪರ್ಯಂತ, ಅವರನ್ನು ನಾಶ ಮಾಡುವದಕ್ಕೂ, ಅವರ ವೃತ್ತಿಯ ತಡಿಸುವದಕ್ಕೂ ಲೌಕದಲ್ಲಿ ಯಾರಿಗೂ ಶಕ್ತಿಯಿರುವದಿಲ್ಲ. ಪೌಲನು ಇದೇ ರೀತಿಯಾಗಿ ಯೆಪೂದರಲ್ಲಿಯೂ, ಪರಜನರಲ್ಲಿಯೂ ಅವನಿಗೆ ಬಂದ ಲೆಕ್ಕವಿಲ್ಲದ ಕಂಟಕಗಳಿಗೆ ಕರ್ತನ ಸಪರ್ಯಾಯದಿಂದ ತಪ್ಪಿಸಿ ಕಾಂಡನು.

೩. ಕರ್ತನನ್ನು ಕಂಡವನು ಆತನನ್ನು ತಿರಿಗಿ ತಿರಿಗಿ ಕಾಣ ಬೇಕು. ಯೇಸು ಕ್ರಿಸ್ತನನ್ನು ತಿಳಿದು ಕಾಂಡವನು ಆತನನ್ನು ಪೆಚ್ಚು ಪೆಚ್ಚಾಗಿ ತಿಳಿದು ಕಾಳ್ಳ ಬೇಕು. ಭಕ್ತನಲ್ಲಿ ಕೃಪೆಯೂ, ಅನುಭವವೂ ಅನುದಿನ ವೃದ್ಧಿಯಾಗ ಬೇಕು.

೭—೨೮ ಅಪೊ. ಚ. ೨೬. ಪೌಲನ ಪ್ರತಿವಾದ. ಪೌಲನು ಅರಸನಲ್ಲಿ ಕ್ರೈಸ್ತತ್ವ.
ಅಪೊ. ಕ್ರಿ. ೬೬, ೧೫—೨೩.

೪. ಪೌಲನನ್ನು ಅವನ ಉದ್ಯೋಗಕ್ಕೆ ನೇಮಿಸಿದ ಯೇಸು ಕ್ರಿಸ್ತನು ೧೮ರಿಂದ ಪರ್ಯಂತ ತನ್ನ ನಿಜ ಸೇವಕರನ್ನು ಅವರವರ ಉದ್ಯೋಗಕ್ಕೆ ನೇಮಿಸುತ್ತಾ ಬರುತ್ತಾನೆ. ಮನುಷ್ಯರಿಂದ ಮಾತ್ರ ಉದ್ಯೋಗಾಧಿಕಾರವನ್ನು ಪಡೆದಿರುವವರು, ಪೌಲರಿಗೆ ಸಹೋದ್ಯೋಗಿಗಳಾಗಿದ್ದರೂ, ಸತ್ಯವಾದ ಆತ್ಮಿಕ ಅಧಿಕಾರವಿಲ್ಲದವರಾಗಿದ್ದಾರೆ.

ಬಳಿಕ ಅಪೊಸ್ತಲನು ತನ್ನ ಉದ್ಯೋಗವನ್ನು ದೇವರ ಆಜ್ಞಾನುಸಾರವಾಗಿ ಈ ವರೆಗೂ ನಡಿಸುತ್ತಾ ಬಂದ ವೃತ್ತಾಂತವನ್ನು ವ. ೧೯—೨೩ ಹೇಳುತ್ತಾನೆ. ವ. ೧೯. ಈ ದೈವಿಕ ದರ್ಶನಕ್ಕೆ ವಿಧೇಯವಾಗಿ, ೨೦. ಅಂದಿನಿಂದ ಯೆಹೂದರಿಗೂ, ಪರಜನರಿಗೂ ಪಶ್ಚಾತ್ತಾಪವನ್ನೂ, ಮಾನಸಾಂತರವನ್ನೂ, ಅದರಿಂದ ಹುಟ್ಟಿ ತಕ್ಕ ನೀತಿಯನ್ನೂ ಸಾರುತ್ತಾ ಬಂದೆನು. ೨೧. ಈ ಒಂದೇ ಕಾರಣದಿಂದ ಯೆಹೂದರು ನನ್ನನ್ನು ಕೊಲ್ಲ ಬಯಸುತ್ತಾರೆ. ೨೨. ಆದರೆ ದೇವರು ನನ್ನನ್ನು ರಕ್ಷಿಸುತ್ತಾ ಬಂದ ಕಾರಣ, ಇದು ವರೆಗೂ ಉಳಿದವನಾಗಿ, ಹಿರಿಕಿರಿಯರಿಗೂ, ಅರಸನಾದ ಅಗ್ರಿಪ್ಪನೇ, ನಿನಗೂ, ನನ್ನ ಸುವಾರ್ತೆಯ ಮುಖ್ಯಾರ್ಥವನ್ನು ಸಪ್ರಮಾಣವಾಗಿ ಹೇಳುತ್ತೇನೆ. ಈ ಸುವಾರ್ತೆಯು ಪೂರ್ವ ಕಾಲದಲ್ಲಿಯೆ ಪ್ರೇಷೆಯಿಂದಲೂ, ಪ್ರವಾದಿಗಳಿಂದಲೂ ಸೂಚಿತವಾಯಿತು. ಲೂಕ. ೨೪, ೨೭. ಏನಂದರೆ. ೨೩. ಶ್ರಮ ಪಟ್ಟು ಪುನರುತ್ಥಾನವಾದ ಕ್ರಿಸ್ತನ ರಕ್ಷಣೆಯು ಯೆಹೂದರ ಉದ್ದಿಶ್ಯವಾಗಿ ಮಾತ್ರವಲ್ಲ, ಪರಜನೋದ್ದಿಶ್ಯವಾಗಿಯೂ ನೇಮಕವಾಗಿದೆ.

೨. ಪೌಲನ ಜಾಷಣದ ಫಲವು. ವ. ೨೪—೩೨.

ವ. ೨೪. ಕೋವಿಯಾಯನಾದ ಫೆಸ್ತನಿಗೆ ಇದೆಲ್ಲಾ ಅತ್ಯಂತ ಜೋದ್ಯವಾಗಿ ತೋರಿತು. ಆದರೆ ಪೌಲನು ಸತ್ಯವಂತನು, ಅವನು ಹೇಳಿದ ವೃತ್ತಾಂತವು ಯಥಾರ್ಥವಾದದ್ದು ಎಂಬುವದನ್ನು ಅಲ್ಲಗಳೆಯಲಾರದೆ ಇದ್ದರೂ, ಯೇಸು ಕ್ರಿಸ್ತನ ಕೂಜೆಗೆ ಅಧೀನನಾಗಲೊಲ್ಲದೆ ಇದ್ದ ಕಾರಣ, ಇಂದಿನ ವರೆಗೂ ಲೌಕಿಕರಲ್ಲಿ ವಾಡಿಕೆಯಾದ ಯುಕ್ತಿಯಿಂದ, ಇದು ಅಮಿತ ಭಕ್ತ್ಯಾಸಕ್ತಿಯ ಕಾರ್ಯವೆಂದು ಸೂಚಿಸಿ, ಪೌಲನಿಗೆ, ನೀನು ಮರುಳಾದಿ; ಬಹು ಗ್ರಂಥಪಾರಾಯಣದಿಂದ ನಿನಗೆ ಬುದ್ಧಿಯ ಸ್ಥೈರ್ಯ ತಪ್ಪಿತೆಂದು ಕಾಣುತ್ತದೆಂತ ಹಾಸ್ಯದಿಂದ ಹೇಳಿದನು. ೨೫. ಪೌಲನು ಹಾಸ್ಯಕ್ಕೆ ಪ್ರತಿಹಾಸ್ಯವನ್ನು ಮಾಡದೆ, ಫೆಸ್ತನಿಗೆ ಸತ್ಯವನ್ನು ನಮ್ರತೆಯಿಂದ ಸ್ಥಿರಪಡಿಸಿ, ೨೬. ಲೋಕಪ್ರಖ್ಯಾತವಾದ ಈ ಕಾರ್ಯಗಳಿಗೆ ಅಗ್ರಿಪ್ಪನು ಸಾಕ್ಷಿಯಾಗಿದ್ದಾನೆಂದು ಹೇಳಿ, ೨೭. ಅರಸನನ್ನು ನೋಡಿ, ಅಗ್ರಿಪ್ಪನೇ, ಪ್ರವಾದಿಗಳನ್ನು ನಂಬುತ್ತೀಯೊ? ನಂಬುತ್ತೀಯಂದು ನಾನು ಬಲ್ಲೆನು ಅಂದನು. ೨೮. ಅಗ್ರಿಪ್ಪನು ಪೌಲನಿಗೆ ಮೆಚ್ಚಿ, ನಾನು ಕ್ರಿಸ್ತನವನಾಗುವ ಹಾಗೆ, ನೀನು ನನ್ನನ್ನು ಕೊಂಚ ಕೊರತೆಯಾಗಿ ಸಮ್ಮತಿ ಪಡಿಸುತ್ತಿ ಅಂದನು. ೨೯. ಆಗ ಪೌಲನು ನೀನು ಮಾತ್ರವಲ್ಲ, ಈ ಹೊತ್ತು ನನ್ನ ಮಾತು ಕೇಳುವವರೆಲ್ಲರೂ ಈ ಸಂಕೋಲೆಗಳ ಹೊರತು ಕೊಂಚ ಕೊರತೆಯಾಗಿ ಮಾತ್ರವಲ್ಲ, ಪೂರ್ಣವಾಗಿ ನನಗೆ ಸಮಾನರಾಗ ಬೇಕೆಂತ, ದೇವರ ಮುಂದೆ ಅಪೇಕ್ಷಿಸುತ್ತೇನೆ ಅಂದನು. ೩೦. ಇದರಲ್ಲಿ ಪೌಲನು ಕೃತಾರ್ಥನಾಗಲಿಲ್ಲ. ಯಾಕಂದರೆ: ಪರಿವಾರದವರು ಸಹಿತವಾಗಿ ಆ ಥೊರೆಗಳ್ಳು, ಸಾಕಾಯಿತೆಂದು, ಎದ್ದು ಹೋದರು. ೩೧. ಆದಾಗ್ಯೂ ಪೌಲನಿಗೆ ಒಲಿದು, ಇವನು ಮರಣಕ್ಕೂ ಬಂಧನಕ್ಕೂ ಕಾರಣವಾದದ್ದೇನೂ ಮಾಡಲಿಲ್ಲವೆಂತ, ಪರಸ್ಪರವಾಗಿ ಮಾತನಾಡಿದರು. ೩೨. ಅಗ್ರಿಪ್ಪನು, ಇವನು ಮಹಾರಾಜನಿಗೆ ಮೊರೆ ಇಡದಿದ್ದರೆ, ಅವನನ್ನು ಈಗಲೇ ಬಿಡುಗಡೆ ಮಾಡುವದು ನ್ಯಾಯವೆಂದು ಹೇಳಿದನು.

ಅಪೌ. ಕ್ರಿ. ೨೭, ೧—೪.

ಹಾಗಾದರೆ ಪೌಲನು ನಿರಪರಾಧಿಯೆಂಬುವದು ಎಲ್ಲರಿಗೂ ಪ್ರತ್ಯಕ್ಷವಾಯಿತು. ಆದರೆ ಪೌಲನು ತಾನು ರೋಮಪುರಕ್ಕೆ ಹೋಗ ಬೇಕೆಂದು ಅಪೇಕ್ಷಿಸಿದರಿಂದ, ಮಹಾರಾಜನಿಗೆ ಮೊರೆ ಇಡುವದಿಲ್ಲವೆಂತ ಹೇಳಲಿಲ್ಲ.

ಎ) ಕೈಸರಯದಿಂದ ರೋಮಪುರಕ್ಕೆ ಮಾಡಿದ ಪ್ರಯಾಣವು. ಸ. ೨೭. ೨೪.

೧. ಕ್ರೈತಕ್ಕೆ ಸುರಕ್ಷಿತವಾಗಿ ತಲಪಿದ್ದು. ಸ. ೨೭, ೧—೪೪.
೨. ಕಂಟಕವು. ವ. ೯—೨೬.
೩. ನೌಭಂಗವು. ವ. ೨೭—೪೪.
೪. ಮೆಲಿತೆ ದ್ವೀಪದಲ್ಲಿ ಉಳಿದು ಕಾಂಡದ್ದು. ಸ. ೨೮, ೧—೧೦.
೫. ರ್ಯೋಮಪುರಕ್ಕೆ ಶೇರಿದ ಪ್ರಯಾಣ. ವ. ೧೧—೧೬.
೬. ರ್ಯೋಮಪುರದ ಯೆಹೂದರು. ವ. ೧೭—೩೧.

೧. ಕ್ರೈತಕ್ಕೆ ಸುರಕ್ಷಿತವಾಗಿ ತಲಪಿದ್ದು. ಸ. ೨೭, ೧—೪೪.

೧. ಆದರೆ, ನಾವು ಇತಾಲ್ಯಕ್ಕೆ ಹಡಗ ಮಾರ್ಗವಾಗಿ ಹೌಗ ಬ್ಯೇಕೆಂದು, ನಿಶ್ಚಯಿಸಲ್ಪಟ್ಟಾಗ, ಪೌಲನನ್ನೂ ಬ್ಯೇರೆ ಕೆಲವು ಶೆರೆಯವರನ್ನೂ ಮಹಾರಾಜನದೆಂದು ಕರೆಯಲ್ಪಟ್ಟ ರಾಗುವೆಗೆ ೧) ಶತಾಧಿಪತಿಯಾದ ಯೂಲ್ಯನೆಂಬವನ ಕೈಗೆ ಒಪ್ಪಿಸಿದರು. ೨. ಹೀಗಿರಲಾಗಿ, ಅದ್ರಮುತ್ತಿಯದ ೨) ಹಡಗವನ್ನೇರಿ, ಆಸ್ಪದ ಶೀಮೆಗಳ ಕಡೆಗೆ ಹೌಗ ಬ್ಯೇಕೆಂದು, ಹೌರಟೆವು. ಥೆಸ್ಸಲೊನೀಕದಿಂದ ಬಂದ ಮಕೆದ್ಯೋನ್ಯದವನಾದ ಅರಿಸ್ತಿರ್ಕನು ೩) ನಮ್ಮ ಸಂಗಡ ಇದ್ದನು. ಮಾರನೇ ದಿವಸ ಸಿದೊನಿಗೆ ಶೇರಿದೆವು. ೪. ಯೂಲ್ಯನು ಪೌಲನಿಗೆ ಉಪಚಾರ ಮಾಡಿ, ಸ್ನೇಹಿತರ ಬಳಿಗೆ ಹೌಗಿ, ವಿಶ್ರಮಿಸಿ ಕೌಳ್ಳ ಬಹುದೆಂದು, ಅಪ್ಪಣೆ ಕೌಟ್ಟನು ೪). ೪. ಅಲ್ಲಿಂದ ಹೌರಟು, ಘಾಳಿಗಳು ಎದುರಾಗಿದ್ದ ಕಾರಣ ೫), ಕುಪ್ರದ ಕೆಳಗಾಗಿ ಹಡಗವನ್ನು ನಡಿಸಿದೆವು. ೫. ಮತ್ತು ಕಿಲಿಕ್ಯಕ್ಕೂ ಪಂಫುಲ್ಯಕ್ಕೂ ಎದುರಾಗಿರುವ ಸಮುದ್ರವನ್ನು ದಾಟಿ, ಲೂಕ್ಯದಲ್ಲಿರುವ ಮುರಕ್ಕೆ ೬) ಬಂದೆವು. ೬. ಅಲ್ಲಿ ಶತಾಧಿಪತಿಯು ಇತಾಲ್ಯಕ್ಕೆ ಹೌಗುವ ಅಲೆಕ್ಸಂದ್ರಿಯದ ಹಡಗವನ್ನು ಕಂಡು, ನಮ್ಮನ್ನು ಅದರ ಮೇಲೆ ಏರಿಸಿದನು. ೭. ಬಹು ದಿವಸಗಳು ಮೆಲ್ಲಗೆ ಹೌಗಿ, ಕ್ನಿದಕ್ಕೆ ೭) ಎದುರಾಗಿ ಬರುವದಕ್ಕೆ ಪ್ರಯಾಸ ಪಟ್ಟದರಿಂದ, ಘಾಳಿಯು ನಮ್ಮನ್ನು ತಡೆಯುವ ಕಾರಣ, ಕ್ರೇತದ ಕೆಳಗಾಗಿ ಸಲ್ಮೋನದ ೮) ಕಡೆಗೆ ಹಡಗವನ್ನು ನಡಿಸಿದೆವು. ೮. ಪ್ರಯಾಸದಿಂದ ಅದನ್ನು ದಾಟಿ, ಒಳ್ಳೇ ರೇವುಗಳೆಂಬ ಒಂದು ಸ್ಥಳಕ್ಕೆ ಬಂದೆವು. ಅದರ ಹತ್ತರ ಲಸಾಯ ಪಟ್ಟಣವು ೯) ಉಂಟು.

ಅಪೌ. ಕ್ರಿ. ೨೭, ೯—೧೫.

೧. ಪಲೆಸ್ತೀನದಲ್ಲಿ ಶಾಂತಿವಾಗಿದ್ದ ಒಂದು ಚಿಕ್ಕ ದಂಡಿಗೆ ಮಹಾರಾಜನ ರಾಣುವೆ ಎಂಬ ಪೆಸರಿತ್ತು. ಅದು ಒಂದುವೇಳೆ ಮುಂಚೆ ಮಹಾರಾಜರಲ್ಲಿ ಒಬ್ಬರಿಗೆ ಮೈಗಾವಲಾಗಿರ ಬಹುದು.

೨. ಅದ್ರಮುತ್ತಿಯವು ಮುಸ್ಸದೇಶದ ತೀರದಲ್ಲಿದ್ದ ವ್ಯಾಪಾರಪಟ್ಟಣವಾಗಿತ್ತು.

೩. ಈ ಅರಿಸ್ತರ್ಕನು ಎಫೆಸದಲ್ಲಿ ಹುಟ್ಟಿದ ಕಲಹದ ಕಾಲದಲ್ಲಿ ಪೌಲನ ಜಾತೆಯಲ್ಲಿದ್ದು ಸ. ೧೯, ೨೯., ತದನಂತರ ರಾಮಪುರದಲ್ಲಿಯೂ ಪೌಲನ ಸಂಗಡ ಬಂಧನದಲ್ಲಿದ್ದನು. ಕಾಲಾ. ೪, ೧೦. ಲೂಕನು ಸಹ ಈ ಕಾಲದಲ್ಲಿ ಪೌಲನ ಜಾತೆಯಲ್ಲಿದ್ದನೆಂದು, ಗ್ರಂಥಕರ್ತನನ್ನು ಸೂಚಿಸುವ ನಮ್ಮ ಸಂಗಡ ಎಂಬುದರಿಂದ ಕಾಣುತ್ತದೆ.

೪. ಮಹಾರಾಜನಿಗೆ ಮೊರೆ ಇಟ್ಟದರಿಂದಲೇ ಪೌಲನು ರಾಮಪುರಕ್ಕೆ ಕಳುಹಿಸಲ್ಪಡುತ್ತಾನೆಂದೂ, ಅವನು ರಾಮಪುರದ ಗೃಹಸ್ಥನೆಂದೂ ಯೂಲ್ಯನು ತಿಳಿದರಿಂದ, ಅಪಾಸ್ತಲನಿಗೆ ಸಹಜವಾಗಿ ಮಾನ ಮರ್ಯಾದೆ ಮಾಡುತ್ತಿದ್ದನು.

೫. ಕನ್ಯಾಸಂಕ್ರಮಣ ಆದನಂತರ ಮಧ್ಯ ಸಮುದ್ರದಲ್ಲಿ ಪಶ್ಚಿಮ ದಿಕ್ಕಿನ ಘಾಳಿಗಳು ಪ್ರಬಲವಾಗುವದರಿಂದ, ಪಶ್ಚಿಮ ಮುಖವಾಗಿ ಪ್ರಾಣಿಗುವ ಪಡಗುಗಳಿಗೆ ಬಹಳ ತೊಂದರೆ ಉಂಟಾಗುತ್ತದೆ. ಸರಿಯಾದ ಘಾಳಿ ಬೀಸಿದರೆ, ಅವರು ಕುಪ್ರದ್ವೀಪದ ಬಲಗಡೆಯಲ್ಲಿ ಪಡಗನ್ನು ನಡಿಸ ಬಹುದಾಗಿತ್ತು. ಆದರೆ ಘಾಳಿ ಎದುರಾವ್ವರಿಂದ, ದ್ವೀಪದ ಎಡಕಡೆಯಲ್ಲಿ, ಥಡವನ್ನು ಅನುಸರಿಸಿ, ಪ್ರಾಣಿಗ ಬೇಕಾಯಿತು.

೬. ಮುರಪಟ್ಟಣವು ಲೂಕ್ಯದ ತೀರದಲ್ಲಿ ಪ್ರಖ್ಯಾತವಾದ ವ್ಯಾಪಾರಪಟ್ಟಣವಾಗಿತ್ತು. ಈಗ ಆ ಸ್ಥಳದಲ್ಲಿ ಪುರಾಳು ಗೋಡೆಗಳು ಪುರಾತರ್ು ಮತ್ತೇನೂ ಕಾಣುವದಿಲ್ಲ.

೭. ಕ್ನೀದವು ಕಾರ್ಯದೇಶದ ತುದಿಯಲ್ಲಿದ್ದ ಪಟ್ಟಣವು.

೮. ಸಲ್ಮೋನವು ಕ್ರೇತದ್ವೀಪದ ಪೂರ್ವ ಥಡದಲ್ಲಿರುವ ಒಂದು ಮುಂಬೆಟ್ಟವು.

೯. ಲಸಾಯವೆಂಬ ಪಟ್ಟಣವು, ಇತ್ತಲಾಗಿ ಅಲ್ಲಿ ಖೂಮಿಯು ತಗ್ಗಿದ್ದರಿಂದ, ಸಮುದ್ರದಲ್ಲಿ ಅಡಗಿದೆ.

೨. ಕಂಟಕವು. ವ. ೯—೨೬.

೯. ಬಹು ಕಾಲ ಕಳೆದ ಮೇಲೆ, ಉಪವಾಸದ ಕಾಲ೧) ಗತಿಸಿ ಹಾಯ್ದ ಕಾರಣ, ಹಡಗದ ಪ್ರಯಾಣ ಗಂಡಾಂತರವಾದದರಿಂದ, ಪೌಲನು ಎಚ್ಚರಿಸಿ೨), ಅವರಿಗೆ, ೧೦. ಜನರೇ, ನಮ್ಮ ಪ್ರಯಾಣದಿಂದ ಹಡಗಕ್ಕೂ ಅದರ ಹಾರೆಗೂ ಮಾತ್ರವಲ್ಲ, ನಮ್ಮ ಪ್ರಾಣಿಗಳಿಗೂ ಸಹ, ಮೋಸವೂ ಬಹಳ ನಷ್ಟವೂ ಆಗುವದೆಂದು ನಾನಾಡುತ್ತೇನೆ, ಅಂದನು. ೧೧. ಆದರೆ ಶತಾಧಿಪತಿಯು ಪೌಲನು ಹೇಳಿದ ಮಾತುಗಳಿಗಿಂತ ಹಡಗವನಾಳುವವನೂ ಅದರ ಯಜಮಾನನೂ ಹೇಳುವದನ್ನು ನಂಬಿದನು. ೧೨. ಮತ್ತು ಹಿಮಕಾಲ ಕಳೆಯುವದಕ್ಕೆ ಆ ರೇವು ಒಳ್ಳೇದಲ್ಲದ ಕಾರಣ, ಅನೇಕರು, ಆ ಸ್ಥಳವನ್ನು ಬಿಟ್ಟು ಹಾಗಾದರೂ ಫಾಯಿನಿಕೆಗೆ೩) ಶೀರಿ ಹಿಮಕಾಲ ಕಳೆಯಬೇಕೆಂದು, ಆಲಾಯ್ಚನೆ ಹೇಳಿದರು. ಅದು ನೈರುತ್ಯ/ ವಾಯವ್ಯ/ ದಿಕ್ಕುಗಳಿಗೆ ಎದುರಾಗಿರುವಂಥ ಕ್ರೇತೆಯ ರೇವು ಆಗಿದೆ. ೧೩. ದಕ್ಷಿಣ ಘಾಳಿ ಮೆಲ್ಲಗೆ ಬೀಸುವಾಗ, ತಮ್ಮ ಆಲಾಯ್ಚನೆ ಪ್ರಾಪ್ತವಾಯಿತೆಂದು ನೆನಸಿ, ಲಂಗರವನ್ನು ಎಳೆದು,

ಕ್ರೈತೆಗೆ ಸಮೀಪವಾಗಿ ಹ್ಯಾದರು. ೧೪. ಸ್ವಲ್ಪ ಹೌತ್ತಾದ ಮ್ಯೇಲೆ, ಯುರಾಕ್ಲು ದ್ಯಾನೆಂಬ ೪) ಬಿರು ಘಾಳಿಯು ಹಡಗಕ್ಕೆ ಎದುರಾಗಿ ಬಡಿಯಿತು. ೧೫. ಹಡಗವು ಸಹ ಶಿಕ್ಕಿ ಕೌಂಡು, ಘಾಳಿಯನ್ನು ಎದುರಿಸಲಾರದೆ ಇದ್ದದರಿಂದ, ಚುಕಾಣಿ ಬಿಟ್ಟು, ಮೈಯಲ್ಪಟ್ಟೆವು. ೧೬. ಮತ್ತು ಕ್ಲೌದೆ ೫) ಎಂಬ ದ್ವೀಪದ ಕೆಳಗಾಗಿ ಓಡಿ, ಪ್ರಯಾಸದಿಂದ ದ್ಯಾಣಿಯನ್ನು ಹಿಡಿದು ಕೌಂಡೆವು. ೧೭. ಅದನ್ನು ಎತ್ತಿ, ಸಾಧನಗಳನ್ನು ಮಾಡಿ ಕೌಂಡು, ಹಡಗವನ್ನು ಕೆಳಗಿನಿಂದ ಬಿಗಿ ಕಟ್ಟಿದರು. ಮತ್ತು ಕಳ್ಳುಸುಬಿನಲ್ಲಿ ಬಿದ್ದೇವೆಂದು ಭಯ ಪಟ್ಟು, ಪಠಗಳನ್ನಿಳಿಸಿ, ಹಾಗೆ ಬಡೆಯಲ್ಪಟ್ಟು ಹ್ಯಾದರು. ೧೮. ಮತ್ತು ಬಹು ಘಾಳಿ ನಮ್ಮನ್ನು ಬಡೆಯುವ ಕಾರಣ, ಮಾರನೆ ದಿವಸ ಸಾಮಾನು ಬಿಸಾಟು ಬಿಟ್ಟರು. ೧೯. ಮೂರನ್ಯೇ ದಿವಸದಲ್ಲಿ ಸ್ವಂತ ಕೈಗಳಿಂದ ಹಡಗದ ಸಾಮಗ್ರಿಯನ್ನು ಬಿಸಾಟು ಬಿಟ್ಟೆವು. ೨೦. ಮತ್ತು ಬಹು ದಿವಸಗಳಿಂದ ಸೂರ್ಯನನ್ನಾದರೂ ನಕ್ಷತ್ರಗಳನ್ನಾದರೂ ಕಾಣದೆ, ನಮ್ಮ ಮ್ಯೇಲೆ ಬಹು ಬಿರು ಘಾಳಿ ಬಿದ್ದಿರುವಾಗ, ರಕ್ಷಿಸಲ್ಪಡುವ ನಂಬಿಕೆ ಏನೂ ಕಾಣದೆ ಹ್ಯಾಯಿತು.

೧. ಮಪಸಾ ಪಾಪವಿಮೋಚನೆಯ ಪಬ್ಬಕ್ಕೆ ಕೂಡಿದ ಉಪವಾಸವು ಇಲ್ಲಿ ಸೂಚಿತವಾಗಿದೆ. ಆ ಪಬ್ಬವು ೭ನೆ ತಿಂಗಳಲ್ಲಿ ಆಗುತ್ತಾ ಇತ್ತು. ಅದು ಆಶ್ವೀಜ ಮಾಸಕ್ಕೆ ಸರಿಯಾಗುತ್ತದೆ.

೨. ಪೌಲನು ಮುಂಚಿತವಾಗಿ ಬಹಳವಾಗಿ ಸಮುದ್ರಪ್ರಯಾಣ ಮಾಡಿದವನಾದ್ದರಿಂದ ೨ ಕಾರಿ. ೧೧, ೨೫. ಪಾಡಗು ನಡಿಸುವವರಿಗಿಂತ ಬಲ್ಲವನಾಗಿ, ತಕ್ಕ ಕಾಲಕ್ಕೆ ಬುದ್ಧಿ ಹೇಳಿದನು.

೩. ಘಾಯಿನಿಕೆಯಂಬ ರೇವು ಕ್ರೇತ ದ್ವೀಪದ ಪಶ್ಚಿಮ ದಿಕ್ಕಿನಲ್ಲಿತ್ತು.

೪. ಯುರಾಕ್ಲುದಾನೆಂಬ ಹೆಸರಿನ ಅಚಿಪ್ರಾಯವೇನಂದರೆ: ಸಮುದ್ರದ ತೆರೆಗಳನ್ನು ಎಬ್ಬಿಸುವ ಪೂರ್ವ ಘಾಳಿಯು.

೫. ಇದು ಕ್ರೇತಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಚಿಕ್ಕ ದ್ವೀಪ. ಇದಕ್ಕೆ ಈಗ ಗಾಜ್ಡಾ ಎಂಬ ಹೆಸರು.

೨೧. ಆದರೆ ಬಹು ಕಾಲ ಅವರು ಆಹಾರವಿಲ್ಲದೆ ಇದ್ದಾಗ, ಪೌಲನು ಅವರ ಮಧ್ಯದಲ್ಲಿ ನಿಂತು ಕೌಂಡು, ಓ ಜನರ್ಕ್ಯೇ, ನನ್ನ ಮಾತು ಕ್ಯೇಳಿ, ಕ್ರೇತೆಯನ್ನು ಬಿಟ್ಟು ಹ್ಯಾಗದೆ, ಈ ಮ್ಯೇಸದಲ್ಲಿಯೂ ನಷ್ಟದಲ್ಲಿಯೂ ಬ್ಯೇಳದೆ ಇರ ಬ್ಯೇಕಾಗಿತ್ತು ೧). ೨೨. ಆದಾಗ್ಯೂ ಇಗ ಧೈರ್ಯವಾಗಿರಿಂದು, ನಿಮ್ಮನ್ನು ಬ್ಯೇಡಿ ಕೌಳ್ಳುತ್ತ್ಯೇನೆ; ಯಾಕಂದರೆ ಹಡಗದ ನಷ್ಟವ್ಯೇ ಹೌರ್ತು, ನಿಮ್ಮೌಳಗೆ ಯಾರ ಪ್ರಾಣಕ್ಕೂ ನಷ್ಟವಾಗುವದಿಲ್ಲ. ೨೩. ಯಾಕಂದರೆ ನಾನು ವಶವಾಗಿದ್ದು ಸ್ಯೇವಿಸುವ ೨) ದ್ಯೇವರ ದೂತನು ಇ ರಾತ್ರಿಯಲ್ಲಿ ನನ್ನ ಹತ್ತರ ನಿಂತು ಕೌಂಡು ೩), ೨೪. ಪೌಲನ್ಯೇ, ಭಯ ಪಡಬ್ಯೇಡ; ನೀನು ಕೈಸರನ ಮುಂದೆ ನಿಲ್ಲ ಬ್ಯೇಕು; ಮತ್ತು, ಇಗೌ, ದ್ಯೇವರು

ನಿನ್ನ ಸಂಗಡ ಹಡಗದಲ್ಲಿರುವವರೆಲ್ಲರನ್ನು ನಿನಗೆ ದಯಪಾಲಿಸಿದ್ದಾನೆ[೪]), ಅಂದನು. ೨೫. ಆದದರಿಂದ, ಜನರೇ, ಧೈರ್ಯವಾಗಿರಿ; ಯಾಕಂದರೆ, ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು, ದೇವರನ್ನು ನಂಬುತ್ತೇನೆ; ೨೬. ಆದರೆ ಒಂದು ದ್ವೀಪದಲ್ಲಿ ನಾವು ಬೀಳ ಬೇಕಾಗಿದೆ[೫]), ಅಂದನು.

೧. ಪೌಲನು ತನ್ನ ಬುದ್ಧಿವಂತಿಕೆಯನ್ನು ಸ್ಥಾಪಿಸುವದಕ್ಕೆ, ಅವರು ಮುಂಚೆ ತನ್ನ ಮಾತು ಕೇಳದೆ ಹೋದದ್ದು, ತಪ್ಪು ಎಂತ ಹೇಳುತ್ತಾನೆಂದು ನೆನಸ ಬಾರದು. ಇಂಥಾ ಬೀಯ ಹೆಮ್ಮೆ ಪೌಲನಲ್ಲಿರಲಿಲ್ಲ. ಅವರು ಮುಂಚೆ ಮಾಡಿದ ತಪ್ಪು ನೆನಸಿಕಾಂಡು, ಈಗ ತನ್ನ ಆಲೋಚನೆಗೆ ವಿಧೇಯರಾಗುವ ಹಾಗೆಯೇ ಈ ಪ್ರಕಾರ ಎಚ್ಚರಿಸುತ್ತಾನೆ.

೨. ಈ ಜಾಡು ಮಾತು ಅಪಾಸ್ತಲನ ಹೃದಯವೃತ್ತಿಗಳ ಸಾರ ಭೂತವಾಗಿದೆ. ಅವನ ಹಾಗೆ ಸತ್ಯದಿಂದ ಹೀಗೆ ಹೇಳ ತಕ್ಕವನು ಜಾಗ್ರತಂತನಾಗಿದ್ದಾನೆ. ಆದರೆ ಇದು ಭಿನ್ನವಾಗದ ಜಾಡು; ಏನಂದರೆ: ಮನಃಪೂರ್ವಕವಾದ ಸೇವೆ ಮಾಡುವದು ಪೂರ್ಣ ಹೃದಯದಿಂದ ಕರ್ತನಿಗೆ ವಶವಾಗದವನಿಗೆ ಅಸಾಧ್ಯವಾದದ್ದೂ, ವಶವಾದವನಿಗೆ ಸಹಜವಾದದ್ದೂ ಆಗಿದೆ.

೩. ಕರ್ತನು ಭಕ್ತರಿಗೆ ತಾತ್ಕಾಲಿಕ ಸಹಾಯವನ್ನೇ ಮಾಡುತ್ತಾನೆಂಬದಕ್ಕೆ ಈ ಸಂಗತಿ ಒಳ್ಳೇ ಉದಾಹರಣೆಯಾಗಿದೆ. ಮುಂಚಿನ ಕಷ್ಟಗಳಲ್ಲಿಯೂ ಕಂಟಕಗಳಲ್ಲಿಯೂ ಪೌಲನು ಹಡಗದಲ್ಲಿದ್ದವರೆಲ್ಲರಿಗೆ ಸಮಾನನಾಗಿದ್ದನು. ಈಗ ಮಾತ್ರ ಮನುಷ್ಯ ಯತ್ನವೆಲ್ಲಾ ವ್ಯರ್ಥವಾದ ಅಂತ್ಯ ವಿಪತ್ತಿನಲ್ಲಿ, ಕರ್ತನು ಆಶ್ಚರ್ಯರೀತಿಯಿಂದ ಪೌಲನಿಗೆ ಅವನ ವಿಷಯವಾಗಿಯೂ, ಹಡಗಿನಲ್ಲಿರುವವರೆಲ್ಲರ ವಿಷಯವಾಗಿಯೂ ಅಭಯದ ಮಾತು ತಿಳಿಸುತ್ತಾನೆ. ಆದರೆ ಪೌಲನು ಕಂಟಕವು ಬಹಳ ಹೆಚ್ಚಾದ ಕಾಲದಲ್ಲಿಯಾದರೂ, ತಾನು ಕರ್ತನ ಮಾತಿನ ಪ್ರಕಾರ ರೋಮಪುರಕ್ಕೆ ಶೀರುತ್ತೇನಾ ಏನಾ ಎಂಬ ಸಂಶಯರಹಿತನಾಗಿದ್ದನೆಂದು ನೆನಸ ತಕ್ಕದ್ದು. ಅವನ ವಿಶ್ವಾಸವು ಚಂಚಲವಾಗದ ಹಾಗೆ ಯುಕ್ತ ಸಮಯದಲ್ಲಿಯೇ ವಿಶೇಷವಾದ ಆದರಣೆಯು ಅವನಿಗೆ ಪ್ರಾಪ್ತವಾಗುತ್ತದೆ.

೪. ಹೀಗಾದರೆ ಪೌಲನಿಗಾಗಿಯೇ ಹಡಗಿನಲ್ಲಿದ್ದವರೆಲ್ಲರ ಪ್ರಾಣವು ಉಳಿಯಿತೆಂದು ಕಾಣುತ್ತದೆ. ೧ ಮೋಶೆ. ೧೮. ಸಾದಾಮಿನಲ್ಲಿ ಹತ್ತು ಮಂದಿ ನೀತಿವಂತರು ಇದ್ದದ್ದಾದರೆ, ಆ ಪಟ್ಟಣವು ನಾಶವಾಗುತ್ತಿದ್ದಿಲ್ಲ. ಸಂಪೂರ್ಣ ನೀತಿವಂತನಾದ ಯೇಸು ಕ್ರಿಸ್ತನು ತನ್ನನ್ನು ಲೋಕಪಾಪಬಲಿಯಾಗಿ ಅರ್ಪಿಸಿದರಿಂದ ಲೋಕವು ಇಂದಿನ ವರೆಗೂ ಉಳಿದದೆ.

೫. ಇಂಥಾದ್ದೆ ದ್ವೀಪವೆಂದು ಪೌಲನಿಗೂ ತಿಳಿಯಲಿಲ್ಲ. ಹಡಗಿನವರಿಗೂ ಸಮುದ್ರದ ಇಂಥಾ ಕಡೆಯಲ್ಲಿಯೇ ಇದ್ದೇವೆಂದು ಗೊತ್ತಾಗಿರಲಿಲ್ಲ.

೩. ನೌಭಂಗವು. ವ. ೨೭—೪೪.

೨೭. ಹದಿನಾಲ್ಕನೇ ರಾತ್ರಿ ಆದಾಗ[೧]), ನಾವು ಆದ್ರಿಯ ಸಮುದ್ರದಲ್ಲಿ[೨]) ಅಲೆದು ಮೈಯ್ಸಲ್ಪಡುತ್ತಿರಲಾಗಿ, ಮಧ್ಯ ರಾತ್ರಿಯಲ್ಲಿ ನಾವಿಕರು, ಒಂದು ದೇಶದ ಹತ್ತಿರ ಬಂದೆವೆಂದು ನೆನಸಿ, ೨೯. ಅಳತೆ ಗುಂಡನ್ನು ಹಾಕಿ, ಇಪ್ಪತ್ತು ಮಾರು ಎಂದು ಕಂಡರು. ಇನ್ನೂ ಸ್ವಲ್ಪ ದೂರ ಹೋದ ಮೇಲೆ, ತಿರಿಗಿ ಹಾಕಿ,

ಅಪೌ. ಕ್ರಿ. ೬೭, ೬೮—೬೯.

ಹದಿನೈದು ಮಾರು ಎಂದು ಕಂಡರು. ೬೮. ಆಗ ಕೌರಕಲಾದ ಸ್ಥಳದಲ್ಲಿ ಬಿದ್ದೇವೆಂದು ಭಯ ಪಟ್ಟು, ಹಿಂಭಾಗದಲ್ಲಿಂದ ೪) ನಾಲ್ಕು ಲಂಗರುಗಳನ್ನು ಹಾಕಿ, ಬೆಳಕಾಗ ಬ್ಯೇಕೆಂದು ಅಪ್ಯೇಕ್ಷಿಸಿದರು. ೩೦. ಆದರೆ ನಾವಿಕರು ಹಡಗದಾಳಗಿಂದ ಓಡಿ ಹ್ಯೋಗ ಹುಡುಕಿ, ತಾವು ಮುಂಭಾಗದಲ್ಲಿಂದ ಲಂಗರುಗಳನ್ನು ಹಾಕ ಬ್ಯೇಕೆಂಬುವ ಹಾಗೆ ಹ್ಯೇಳಿ, ೩೧. ಡಾಯ್ಗೀಯನ್ನು ಸಮುದ್ರದಲ್ಲಿ ಇಳಿಸುವಾಗ, ಪೌಲನು ಶತಾಧಿಪತಿಗೂ ರಾಗುವೆಯವರಿಗೂ, ಇವರು ಹಡಗದಲ್ಲಿ ಇದ್ದರೆ ಹೌರ್ಯ ೫) ನ್ವೀವು ಶಪ್ಪಿಸಿ ಕೌಳ್ಳಲಾರಿರಿ, ಅಂದನು. ೩೨. ಆಗ ರಾಗುವೆಯವರು ದಾಯ್ಗೀಯ ಹಗ್ಗಗಳನ್ನು ಕೌಯಿದು, ಅದನ್ನ ಬ್ಯೀಳ ಗೌಡಿಸಿದರು.

೧. ಅವರು ಕ್ರೇತ ದ್ವೀಪವನ್ನು ಬಿಟ್ಟಂದಿನಿಂದ ಲೂಕನು ಇಲ್ಲಿ ಲೆಖ್ಖವನ್ನು ಮಾಡುತ್ತಾನೆ. ಯೆಹೂದರಿಗೆ ಸೂರ್ಯಾಸ್ತವೇ ದಿವಸಕ್ಕೆ ಆರಂಭವಾದ್ದರಿಂದ ಕಾಲವನ್ನು ರಾತ್ರಿಗಳ ಪ್ರಕಾರ ಲೆಖ್ಖ ಮಾಡಿದರು.

೨. ಗ್ರೇಕದೇಶದ ಪಶ್ಚಿಮದಲ್ಲಿಯೂ, ಇತಲಿಯ ದೇಶದ ಪೂರ್ವದಲ್ಲಿಯೂ ಇರುವ ಸಮುದ್ರಕ್ಕೆ ಆಡ್ರಿಯವೆಂದು ಹೆಸರು. ಹಡಗ ತಾಗಿ ಒಡದು ಹೋದ ಮೆಲಿತೆಯಂಬ ದ್ವೀಪವು ಆಡ್ರಿಯಸಮುದ್ರದ ದ್ವೀಪವಾಗಿದ್ದರೆ, ಪೌಲನ ಹಡಗು ಸಿಸಿಲಿ ಎಂಬ ದ್ವೀಪದ ದಕ್ಷಿಣದಲ್ಲಿರುವ ಈಗಿನ ಮಲ್ತದ್ವೀಪಕ್ಕೆ ಬಂತೆಂಬ ಮಾತಿಗೆ ಸಂಶಯ ಹುಟ್ಟುತ್ತದೆ.

೩. ಈಗಿನ ನಾವಿಕರು ಅಂಥಾ ಸಮಯದಲ್ಲಿ ಪಾಡಗನ್ನು ನಿಲ್ಲಿಸ ಬೇಕಾದರೆ, ಮುಂಭಾಗದಲ್ಲಿರುವ ಚಾರಿ ಲಂಗರವನ್ನು ಇಳಿಸುವರು.

೪. ರಾತ್ರಿಯಲ್ಲಿ ಪೌಲನ ಸಂಗಡ ಮಾತನಾಡಿದ ದೂತನು, ಹಡಗಿನಲ್ಲಿರುವವರೆಲ್ಲರು ನಿನ್ನ ಕೂಡಾ ರಕ್ಷಿತರಾಗುವರೆಂದು ಅವನಿಗೆ ತಿಳಿಸಿದ್ದರಿಂದ, ಅವನು ಈ ಆಲ್ಯೋಚನೆ ಹೇಳಿದನು. ನಾವಿಕರು ಓಡಿ ಹೋದರೆ, ಹಡಗಿನಲ್ಲಿ ಉಳಿದ ಜನರೆಲ್ಲರ ಮನಸ್ಸು ಗಲಿಬಿಲಿಯಾಗುತ್ತಿತ್ತು. ಇದಲ್ಲದೆ ಎಲ್ಲರ ಪ್ರಾಣ ಉಳಿಯುವ ಹಾಗೆ ದ್ವೀಪದ ಕರೆಯ ಸಮೀಪಕ್ಕೆ ಹಡಗನ್ನು ನಡಿಸುವದಕ್ಕೆ ಅವಶ್ಯವಾದ ಕೆಲಸವನ್ನು ಮಾಡತಕ್ಕ ಜನರು ಇಲ್ಲದೆ ಹೋಗುತ್ತಿದ್ದರು.

೩೩. ಮತ್ತು ಬೆಳಕಾಗುವಷ್ಟರಲ್ಲಿ ಪೌಲನು, ಊಟ ಮಾಡ ಬ್ಯೇಕೆಂದು, ಎಲ್ಲರನ್ನು ಬ್ಯೇಡಿ ಕೌಂಡು, ಇಂ ಹೌತ್ತು ನ್ವೀವು ಕಾದು ಕೌಂಡು, ವಿನೂ ಉಣ್ಣದೆ, ಈ ಹಾರವಿಲ್ಲದೆ ಕಳೆದ ಹದಿನಾಲನ್ಕೇ ದಿವಸವಾಯಿತು. ೩೪. ಆದದರಿಂದ ಆಹಾರ ತಕ್ಕೌಳ್ಳ ಬ್ಯೇಕೆಂದು, ನಿಮ್ಮನ್ನು ಬ್ಯೇಡಿ ಕೌಳ್ಳುತ್ತೀನೆ. ಇದು ನಿಮ್ಮ ಕ್ಷೇಮಕ್ಕೌಸ್ಕರ ಅವಶ್ಯವಾದದ್ದು. ಯಾಕಂದರೆ ನಿಂಮಲ್ಲಿ ಯಾರ ತಲೆಯಿಂದಾದರೂ ಒಂದು ಕೂದಲು ಬ್ಯೀಳುವದಿಲ್ಲ ೧), ಅಂದನು. ೩೫. ಇಪ್ಪುಗಳನ್ನು ಹ್ಯೇಳಿ, ರೌಟ್ಟಿಯನ್ನು ತೆಗದು ಕೌಂಡು, ಎಲ್ಲರ ಮುಂದೆ ದ್ಯೇವರಿಗೆ ಸ್ತೋತ್ರ ಮಾಡಿ, ಮುರಿದು, ತಿನ್ನಲಾರಂಭಿಸಿದನು. ೩೬. ಆಗ ಎಲ್ಲರು ಧೈರ್ಯ ಪಟ್ಟು, ತಾವು ಸಹ ಆಹಾರವನ್ನು ತಕ್ಕೌಂಡರು. ೩೭. ಹಡಗಿನಲ್ಲಿದ್ದ ನಾವೆಲ್ಲರು ೨) ಇನ್ನೂರು ಇಪ್ಪತ್ತಾರು ಮಂದಿಯಾಗಿದ್ದೆವು.

೭೫೪ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ಚ.

ಅಪೌ. ಕ್ರಿ. ೨೭, ೫೯—೪೪.

೫೯. ಶ್ಚಪ್ತಿ ಉದ ಮೇಲೆ, ಧಾನ್ಯವನ್ನು ಸಮುದ್ರದಲ್ಲಿ ಬಿಸಾಟು, ಹಡಗನ್ನು ಹೌರ ಮಾಡಿದರು. ೬೦. ಬೆಳಕಾದ ಮೇಲೆ ಆ ಭೂಮಿಯ ಗುರುತನ್ನು ಅರಿಯದೆ ಇದ್ದರು. ಆದರೆ ಇಳಿಜಾರಾದ ಒಂದು ಕಾಲ್ದಿಯನ್ನು ನೋಡಿ, ಸಾಧ್ಯವಾದರೆ, ಹಡಗವನ್ನು ಅದರಾಳಿಗೆ ನೂಕ ಬೇಕೆಂದು ಇಚ್ಛೆಪಟ್ಟರು. ೪೦. ಆಗ ಲಂಗರುಗಳನು ಕಾಯಿದು, ಸಮುದ್ರದಲ್ಲಿ ಬಿಟ್ಟು ಬಿಟ್ಟು, ಚುಕಾಣಿಯ ಕಟ್ಟುಗಳನ್ನು ಬಿಚ್ಚಿ, ದಾಂಡ್ಡ ಪಠವನ್ನು ಘಾಳಿಗೆ ಸರಿಯಾಗಿ ಎತ್ತಿ, ಹಡಗನ್ನು ಧಡದ ಕಡೆಗೆ ನಡಿಸಿದರು ೩). ೪೧. ಆದರೆ ಎರಡು ಸಮುದ್ರದ ಶಳಗಳು ಕೂಡುವ ಸ್ಥಳದಲ್ಲಿ ಬಿದ್ದು, ಹಡಗಂನು ತಗಲಿಸಿದ್ದರಿಂದ, ಮುಂಭಾಗವು ಶಿಕ್ಕಿ ಕಾಂಡು, ಅಲ್ಲಾಡದೆ ನಿಂತಿತು. ಹಿಂಭಾಗವು ತೆರೆಗಳ ಬಲದಿಂದ ಬಿಚ್ಚಿ ಹೌಯಿತು.

೧. ಜಯಗ್ರಸ್ತರಾದ ಜನರಲ್ಲಿ ಧೈರ್ಯವನ್ನು ಪುಟ್ಟಿಸುವದಕ್ಕಾಗಿ ಪೌಲನು ಇಷ್ಟು ಧೈರ್ಯದಿಂದ ಪೂರ್ಣ ನಿರ್ಣಯದ ಮಾತು ಹೇಳುತ್ತಾನೆ. ಇಂಥಾ ಪ್ರಮಾದದಲ್ಲಿ ಅಂಜದೆ ಇರುವವನು ಅರಸನಂತೆ ಮತ್ತಾಬ್ಬರನ್ನು ಆಳಿ ಕಾಳ್ಳುವನು.

೨. ನಾವು ಎಂಬದರಿಂದ ಗ್ರಂಥ ಕರ್ತನಾದ ಲೂಕನು ತಾನು ಸಹ ಪುಡಗಿನಲ್ಲಿದ್ದನೆಂಬದನ್ನು ತಿರಿಗಿ ಸೂಚಿಸುತ್ತಾನೆ.

೩. ಈ ಸಮಯದಲ್ಲಿ, ನಾವಿಕರು ಪುಡಗಿನಲ್ಲಿ ನಿಲ್ಲುವದು ಎಷ್ಟು ಆವಶ್ಯಕವಾಗಿತ್ತೆಂದು, ಕಾಣ ಬಂತು.

೪೨. ಆಗ ರಾಗುಮೆಯವರು, ತೆರೆಯವರಲ್ಲಿ ಯಾವನಾದರೂ ಇಟಿ, ಓಡಿ ಹೌಗದ ಹಾಗೆ, ಅವರನ್ನು ಕಾಲ್ದ ಬೇಕೆಂದು, ಆಲೋಚನೆ ಹೇಳಿದರು ೧). ೪೩. ಆದರೆ ಶತಾಧಿಪತಿಯು, ಪೌಲನನ್ನು ಸಂರಕ್ಷಿಸ ಬೇಕೆಂದು ೨), ಅವರ ಆಲೋಚನೆಗೆ ಅಡ್ಡಿ ಮಾಡಿ, ಇಟಿ ಬಲ್ಲವರು ಮೊದಲು ದುಮಿಕಿ, ಭೂಮಿಗೆ ಶೇರ ಬೇಕೆಂದೂ, ಮಿಕ್ಕಾದವರಲ್ಲಿ ಕೆಲವರು ಹಲಿಗೆಗಳ ಮೇಲೆಯೂ, ೪೪. ಕೆಲವರು ಹಡಗದಿಂದ ತೇಲುವ ತುಂಡುಗಳ ಮೇಲೆಯೂ, ಶೇರ ಬೇಕೆಂದೂ, ಅಪ್ಪಣೆ ಕೊಟ್ಟನು. ಇ ಪ್ರಕಾರ ಎಲ್ಲರು ರಕ್ಷಿಸಲ್ಪಟ್ಟು ೩) ಭೂಮಿಗೆ ಶೇರಿದರು.

೧. ಅಧಿಪತಿಯಾದ ಫೆಸ್ತನು ತಮಗೆ ಒಪ್ಪಿಸಿದ ಬಂಧನದವರನ್ನೆಲ್ಲಾ ರೋಮಪುರದ ಅಧಿಕಾರಿಗಳಿಗೆ ಒಪ್ಪಿಸದೆ ಇದ್ದರೆ, ತಮಗೆ ದೋಷ ಬಂದೀತೆಂದು ಆಲೋಚಿಸಿ, ಓಡಿ ಪೋಗುವ ತೆರೆಯವರನ್ನು ಕಾಂದು ಪೂರ್ವಕ ತಕ್ಕ ಸೈನ್ಯ ಪದ್ಧತಿಯ ಪ್ರಕಾರ ಇವರು ಈಗ ಮಾಡ ಬೇಕೆಂದು ನೆನಸಿದರು.

೨. ಭಕ್ತಿಯಿಂದಲೋ, ಪ್ರೀತಿಯಿಂದಲೋ, ಪೌಲನು ರೋಮಾಯಗೃಹಸ್ತನೆಂಬ ಭಾವನೆಯಿಂದಲೋ, ಯಾವ ಕಾರಣದಿಂದ ಶತಾಧಿಪತಿಯು ಹೀಗೆ ಮಾಡಿದನೆಂದು, ಸೂಚಿತವಾಗಿರುವದಿಲ್ಲ.

೩. ಪುಡಗಿನಲ್ಲಿದ್ದ ಜನರು ಪೌಲನ ಮಾತು ನಂಬಿ, ಅವನಿಗೆ ವಿಧೇಯವಾಗಿ ನಡದು ಕಾಂಡದರಿಂದ, ಅಪಾಸ್ತಲನು ಅವರಿಗೆ ಹೇಳಿದ ಅಭಯ ವಾಕ್ಯವು ನೆರವೇರಿತು. ಹೀಗಿರಲಾಗಿ ವಿಶ್ವಾಸವೂ ವಿಧೇಯತ್ವವೂ ಈ ಜನರ ಜೀವವು ಉಳಿದದ್ದಕ್ಕೆ ಹೇತುವಾದವೆಂದು ಕಾಣುತ್ತದೆ.

ಅಪಾ. ಕ್ರಿ. ೨೮, ೧—೪.

೪. ಪೌಲನು ಮೆಲಿತೆ ದ್ವೀಪದಲ್ಲಿ ಉಳಿದು ಕಾಂಡದ್ದು. ಸ. ೨೮, ೧—೧೦.

೧. ಮತ್ತು ರಕ್ಷಿಸಿ ಕೊಂಡ ಮೇಲೆ, ಈ ದ್ವೀಪದ ಹೆಸರು ಮೆಲಿತೆ ೧) ಎಂದು, ತಿಳು ಕೊಂಡರು. ೨. ಅಲ್ಲಿರುವ ಬರ್ಬರರು ೨) ಅಪರೂಪವಾದ ದಯವನ್ನು ನ ಮಗೆ ತ್ಕೋರಿಸಿ, ಆಗ ಬೀಳುವ ಮಳೆಗ್ಕೊಸ್ಕರವೂ ಛಳಿಗ್ಕೊಸ್ಕರವೂ ಬೆಂಕಿ ಹಾಕ್ತಿಸಿ, ನಂಮೆಲ್ಲರನ್ನು ಶ್ಕೆರಿಸಿ ಕೊಂಡರು. ೩. ಆದರೆ ಪೌಲನು ಕಟ್ಟಿಗೆ ರಾಶಿಯನ್ನು ಕೂ ಡಿಸಿ, ಬೆಂಕಿಯ ಮೇಲೆ ಹಾಕುವಾಗ, ಒಂದು ಹಾವು ಶೆಖೆಯಿಂದ ಹೊರಗೆ ಬಂ ದು, ಅವನ ಕೈ ಕಟ್ಟಿತು ೩). ೪. ಆ ಬರ್ಬರರು ಅವನ ಕೈಯಿಂದ ಜೂಗಾಡುವ ಜಂತನ್ನು ನ್ಕೋಡಿ, ಈ ಮನುಷ್ಯನು ಕೊಲೆಗಾರನ್ಕೋ ಸರಿ; ಇವನು ಸಮುದ್ರಕ್ಕೆ ತಪ್ಪಿಸಿ ಕೊಂಡಾಗ್ಕೂ, ನ್ಯಾಯವು ಅವನನ್ನು ಬದುಕಲ್ಕೀಸದು ಎಂದು, ತಮ್ಕೊಳಗೆ ಹ್ಕೇಳಿ ಕೊಂಡರು. ೫. ಆದರೆ ಅವನು ಈ ಜಂತನ್ನು ಬೆಂಕಿಯೊಳಗೆ ಝಾಡಿಸಿ ಹಾಕಿ, ಏನೂ ನಷ್ಟ ಪಡಲಿಲ್ಲ. ೬. ಅವನು ಬಾತು ಹ್ಕೋಗುವನೊ? ಇಲ್ಲವೆ ಥೆಪ್ಪನೆ ಬಿದ್ದು ಸಾಯುವನೊ? ಎಂದು ಅವರು ಕಾದು ಕೊಂಡರು. ಬಹಳ ಹೊತ್ತು ಕಾದು ಕೊಂಡ ಮೇಲೆ, ಅವನಿಗೆ ಏನೂ ಕ್ಕೇಡು ಸಂಭವಿಸಲಿಲ್ಲವೆಂದು ನ್ಕೋಡಿ, ಬ್ಕೇರೆ ಯ್ಕೋಚನೆ ಮಾಡಿ, ಅವನು ದ್ಕೇವರು, ಅಂದರು.

೧. ಈ ಮೆಲಿತೆ ಈಗಿನ ಮಲ್ತವೆಂಬ ದ್ವೀಪವೆಂ ದು, ಅನೇಕರು ನೆನಸುತ್ತಾರೆ. ಅದು ಫೀನಿಕಾ ಏನೀ ಎಂಬದು ಪೂರ್ಣ ನಿಶ್ಚಯವಾಗಿರುವದಿಲ್ಲ. ಮಲ್ತದ್ವೀಪವು ಸಿಸಿಲಿಗೂ ಅಫ್ರಿಕಕ್ಕೂ ನಡುವೆಯ ಲ್ಲಿರುವ ಪಾಷಾಣಮಯವಾದ ದ್ವೀಪವಾಗಿದೆ. ಮು ನ್ನೂರು ವರುಷಕ್ಕೆ ಮುಂಚೆ ಯ್ಕೋಪೊನನವರು ಆ ಥವಾ ಮಲ್ತದವರು ಎಂದು ಪೆಸರ್ಗಾಂಡ ಮಠ ವಾಸಿ ಯುದ್ಧಶಾಲಿಗಳು ಅದನ್ನು ಆಕ್ರಮಿಸಿ ಕಾಂ ಡರು. ೧೪೧೪ನೆ ವರುಷದಲ್ಲಿ ಅದು ಅಂಗ್ಲದೇ ಶಸ್ಥರಿಗೆ ವಶವಾಯಿತು. ಇತ್ತಲಾಗಿ ಮಥು ಸ ಮುದ್ರಪ್ರದೇಶನಿವಾಸಿಗಳಿಗೆ ಬಹಳ ಉಪಯೋ ಗವಾದ ಕ್ರೈಸ್ತವಿದ್ಯಾಶಾಲೆ ಅದರಲ್ಲಿ ಸ್ಥಾಪಿತವಾ ಯಿತು.

೨. ಆ ಜನರು ಗ್ರೇಕರಾಗಲಿ ರಾಮಿಯಾಯರಾಗಲಿ ಅಲ್ಲದ ಕಾರಣ ಬರ್ಬರರೆಂದು ಪೆಸರ್ಗಾಂಡರು. ಪೂರ್ವ ಕಾಲದಲ್ಲಿ ಆ ದ್ವೀಪವು ಕರ್ಥಾಗಾಪಟ್ಟ ಣದವರಿಗೆ ವಶವಾಗಿದ್ದರಿಂದ, ಅಫ್ರಿಕದಲ್ಲಿ ಪುಟ್ಟಿದ ಜನರು ಅಲ್ಲಿ ವಸತಿಯಾದರು.

೩. ಮಲ್ತದ್ವೀಪದಲ್ಲಿ ವಿಷದ ಪಾವು ಒಂದೂ ಈಗ ಕಾಣುವದಿಲ್ಲ. ಆದ್ದರಿಂದ ಅನೇಕರು, ಇಲ್ಲಿ ಬರದ ಸಂಗತಿಯು ಪೌಲನು ಮಲ್ತ ದ್ವೀಪಕ್ಕೆ ಬಂದ ನೆಂಬುವದಕ್ಕೆ ಸರಿ ಬೀಳುವದಿಲ್ಲವೆಂದು ಹೇಳುತ್ತಾರೆ.

೭. ಆ ಸ್ಥಳಕ್ಕೆ ಸಮೀಪವಾಗಿ, ದ್ವೀಪದ ಶ್ರೇಷ್ಠನಾದ ಪಾಪ್ಲಿಯ ೧) ನೆಂಬವನ ಭೂಮಿ ಇತ್ತು. ಇವನು ನಮ್ಮನ್ನು ಅಂಗ್ಕೀಕರಿಸಿ, ಮೂರು ದಿವಸ ಉಪಚರಿಸಿ, ಆ ತಿಥ್ಯ ಮಾಡಿದನು ೨). ೮. ಮತ್ತು ಪಾಪ್ಲಿಯನ ತಂದೆಯು ಜ್ವರದಿಂದಲೂ ಉಚ್ಚಾ ಟದಿಂದಲೂ ಉಪದ್ರ ಪಟ್ಟು ಬಿದ್ದಿರಲಾಗಿ, ಪೌಲನು ಅವನ ಬಳಿಗೆ ಪ್ರವ್ಕೇಶಿಸಿ,

ಪ್ರಾರ್ಥನೆ ಮಾಡಿ, ಅವನ ಮೇಲೆ ಕೈಗಳನ್ನಿಟ್ಟು ೩), ಅವನನ್ನು ಸ್ವಸ್ಥ ಮಾಡಿದನು. ೯. ಇದು ಸಂಭವಿಸಿದ್ದರಿಂದ, ದ್ವೀಪದಲ್ಲಿದ್ದ ಮಿಕ್ಕಾದ ರೋಗಿಷ್ಠರು ಸಹ ಬಂದು, ಗುಣವಾದರು. ೧೦. ಇವರು ಬಹಳ ಮಾನಗಳಿಂದ ನಮ್ಮನ್ನು ಸನ್ಮಾನಿಸಿ, ನಾವು ಹೊರಡುವಾಗ, ಬೇಕಾದವುಗಳನ್ನು ನಮಗೆ ತಂದು ಕೊಟ್ಟರು.

೧. ಈ ಪಾಪ್ಲಿಯನು ದ್ವೀಪದ ಅಧಿಪತಿಯಾಗಿದ್ದನೋ ರೋಮಾಯಗೃಪುಸ್ಥನಾಗಿದ್ದ ಕಾರಣ ಆ ದ್ವೀಪದವರಲ್ಲಿ ಶ್ರೇಷ್ಠನಾಗಿದ್ದನೋ, ಇಲ್ಲಿ ಸ್ಪಷ್ಟವಾಗಿ ಸೂಚಿಸಿರುವದಿಲ್ಲ.

೨. ರೋಮಾಯನಾದ ಇವನಿಗೆ ನೌಕಂಗವಾದ ರೋಮಾಯರನ್ನು ಈ ಪ್ರಕಾರ ಉಪಚರಿಸುವದು ಯೋಗ್ಯವೇ ಸರಿ. ಮೂರು ದಿವಸದನಂತರ ಶತಾಧಿಪತಿಯು ತನ್ನ ಸಂಗಡ ಬಂದ ಬಂಧನಸ್ಥರನ್ನು ಸರಕಾರದ ಧ್ರವ್ಯದಿಂದ ಪೋಷಿಸುವದಕ್ಕೆ ಉಪಕ್ರಮಿಸಿದನೆಂದು ಕಾಣುತ್ತದೆ.

೩. ಅಪಾಸ್ತಲನು ಇಂಥಾ ಅದ್ಭುತ ಕಾರ್ಯಗಳನ್ನು ವಾಡಿಕೆಯಾಗಿ ಮಾಡಲಿಲ್ಲ. ಇದಲ್ಲದೆ ಅವನು ಮಾಡಿದ ಅದ್ಭುತ ಕಾರ್ಯಗಳನ್ನೆಲ್ಲಾ ವಿವರಿಸ ಕೆಲಸವಿಲ್ಲವೆಂತ ಲೂಕನು ತಿಳಿದನು. ಆದರೆ ರೋಮಪುರಕ್ಕೆ ಪ್ರಯಾಣಮಾಡುವ ಮಾರ್ಗದಲ್ಲಿ ಪೌಲನಿಗೆ ವಿಶೇಷವಾಗಿ ಸಂಭವಿಸಿದ್ದನ್ನೆಲ್ಲಾ ಪೂರ್ಣ ವಿವರವಾಗಿ ಬರೆದನು.

೫. ರೋಮಕ್ಕೆ ಶೇರಿದ ಪ್ರಯಾಣವು. ವ. ೧೧—೧೬.

೧೧. ಮತ್ತು ಮೂರು ತಿಂಗಳಾದ ಮೇಲೆ ೧), ಮಿಥುನವೆಂಬ ಧ್ವಜವುಳ್ಳ ೨), ೧೨. ಈ ದ್ವೀಪದಲ್ಲಿ ಹಿಮಕಾಲವನ್ನು ಕಳೆದ ಅಲೆಕ್ಸಂಡ್ರಿಯದ ಹಡಗನ್ನೇರಿ, ಹೊರಟು, ಸುರಕೂಸಕ್ಕೆ ೩) ಬಂದು, ಮೂರು ದಿವಸ ನಿಂತೆವು. ಅಲ್ಲಿಂದ ಸುತ್ತಿ ಕೊಂಡು, ರೇಗಿಯಕ್ಕೆ ೪) ಶೇರಿದೆವು. ೧೩. ಒಂದು ದಿನವಾದ ಮೇಲೆ, ದಕ್ಷಿಣ ಘಾಳಿ ಬೀಸುವಾಗ, ಎರಡು ದಿನ ಪ್ರಯಾಣವಾಗಿ ಪೌತಿಯೊಲಕ್ಕೆ ೫) ಬಂದೆವು. ೧೪. ಅಲ್ಲಿ ನಮಗೆ ಶಿಕ್ಷಿದ ಸಹೋದರರು, ತಮ್ಮ ಸಂಗಡ ಏಳು ದಿವಸ ಇರ ಬೇಕೆಂದು ೬), ಬೇಡಿ ಕೊಂಡರು. ಮತ್ತು ಇ ಪ್ರಕಾರ ರೋಮಕ್ಕೆ ಬಂದೆವು. ೧೫. ಅಲ್ಲಿರುವ ಸಹೋದರರು ನಮ್ಮ ಸಮಾಚಾರವನ್ನು ಕೇಳಿ, ಅಪ್ಪಿಯ ಪೇಟೆಯ ೭) ಪರ್ಯಂತರಕ್ಕೂ, ತ್ರಿಛತ್ರದ ೮) ಪರ್ಯಂತರಕ್ಕೂ, ನಮಗೆದುರು ಹೊರಟು ಬಂದರು. ಪೌಲನು ಅವರನ್ನು ನೋಡಿ, ದೇವರಿಗೆ ಸ್ತೋತ್ರ ಮಾಡಿ, ಧೈರ್ಯ ಗೊಂಡನು. ೧೬. ಮತ್ತು ನಾವು ರೋಮಕ್ಕೆ ಬಂದಾಗ, ಶತಾಧಿಪತಿಯು ಸೆರೆಯವರನ್ನು ಸೈನ್ಯಾಧಿಪತಿಗೆ ೯) ಒಪ್ಪಿಸಿದನು. ಆದರೆ ತನ್ನನ್ನು ಕಾಯುವ ರೋಮನೆಯವನ ಸಂಗಡ ಪ್ರತ್ಯೇಕವಾಗಿ ಇರ ಬಹುದೆಂದು, ಪೌಲನಿಗೆ ಅಪ್ಪಣೆ ಆಯಿತು.

೧. ಹಿಮಕಾಲವೆಲ್ಲಾ ಆ ದ್ವೀಪದಲ್ಲಿ ವಾಸ ಮಾಡಿದರು. ಈಗ ವಿಳಾಯತಿಯ ಪಡಗುಗಳು ಮೃಸಮುದ್ರಸಂಚಾರವನ್ನು ಯಾವ ಕಾಲದಲ್ಲಿಯೂ ಬಿಡುವದಿಲ್ಲ.

ಅಪೌ. ಕ್ರಿ. ೫೯, ೧೭.

೨. ಮಿಥುನವೆಂಬದಕ್ಕೆ ಗ್ರೀಕಗ್ರಂಥದಲ್ಲಿ ದೇವ ಕುಮಾರರು ಎಂದು ಬರದದೆ. ಕಸ್ತಾರಪಾಲ್ಲುಕ್ಸರು ಲೇದಳೆಂಬ ತಾಯಿಗೆ ಜವಳಿ ಮಕ್ಕಳಾಗಿ ಪುಟ್ಟಿ, ಒಬ್ಬನು ಪಾತಾಳದಲ್ಲಿರುವ ವೇಳೆಯಲ್ಲಿ ಮತ್ತಾಬ್ಬ ನು ಭೂಮಿಯಲ್ಲಿದ್ದಾನೆಂಬ ಕಥೆಯನ್ನು ಪೂರ್ವ ಗ್ರೀ ಕರು ನಂಬಿ, ಮಿಥುನರಾಶಿಗೆ ಇವರ ಪೆಸರಿಟ್ಟರು. ಮತ್ತು ನಾವಿಕರು ರಾತ್ರಿ ಪಗಲು ಕಾಯ ತಕ್ಕವರೆಂದು ಈ ದೇವರುಗಳಿಗೆ ಪೂಜೆ ಮಾಡುತ್ತಾ ಇದ್ದರು.

೩. ಸುರಕೂಸವು ಸಿಸಿಲಿದ್ವೀಪಕ್ಕೆ ರಾಜಧಾನಿಯಾ ಗಿತ್ತು. ಅದು ದ್ವೀಪದ ದಕ್ಷಿಣ ಕಾನೆಗೆ ಸಮೀಪವಾ ದ ಪೂರ್ವ ಥಡದ ಮೂಲೆಯಲ್ಲಿತ್ತು.

೪. ರೇಗಿಯವು ಇತಲಿಯದ ದಕ್ಷಿಣ ತುದಿಯ ಪಶ್ಚಿ ಮದಲ್ಲಿಯೂ, ಸಿಸಿಲಿ ದ್ವೀಪದ ಪೂರ್ವ ಥಡದ ಉ ತ್ತರ ಚಾಗದ ಪೂರ್ವದಲ್ಲಿಯೂ, ಶೇರುವ ಸಮು ದ್ರದ್ವಾರದ ಪಟ್ಟಣಗಳಲ್ಲಿ ಒಂದು. ಅದು ಇತಲಿ ಯದ ತೀರದಲ್ಲಿದೆ.

೫. ಪಾತಿಯಾಲವು ನೆಯಪಾಲಿ ಪಟ್ಟಣಕ್ಕೆ ಸಮೀಪವಾದದ್ದು.

೬. ಈ ಸಹೋದರರು ಯೆಹೂದರಾಗಿದ್ದರೆಂದು ತಾತ್ಪರ್ಯವಿದೆ. ಪೌಲ, ಲೂಕ, ಅರಿಸ್ತರ್ಕ ಮುಂ ತಾದವರು ಎರಡು ಸಬ್ಬತ್ ದಿವಸ ಇರಬೇಕೆಂದು ಅಪೇಕ್ಷಿಸಿದರು.

೭. ಈ ಊರು ರ್ಯಾಮಪುರಕ್ಕೆ ಇಪ್ಪತ್ತು ಮೈಲು ದೂರವಾಗಿತ್ತು.

೮. ಇದು ರ್ಯಾಮಪುರಕ್ಕೆ ಏಳೂವರೆ ಮೈಲು ದೂರವಾಗಿತ್ತು.

೯. ರ್ಯಾಮಪುರದ ಸಮೀಪದಲ್ಲಿ ಸೈನ್ಯ ವಾಸ ವಾದ ದಾಡ್ಡ ಕಾಟೆ ಇತ್ತು. ಅದು ರ್ಯಾಮಪುರ ದ ರಾಜುವೆಯಪರಿಗೆ ಮುಖ್ಯ ಸ್ಥಾನವಾಗಿತ್ತು. ಮು ಖ್ಯ ಸೈನ್ಯಾಧಿಪತಿ ಸಹ ಅದರಲ್ಲಿ ವಾಸವಾಗಿದ್ದನು. ಪೌಲನು ರ್ಯಾಮಪುರಕ್ಕೆ ಬಂದ ಕಾಲದಲ್ಲಿ ಬುರ್ಹ ನು ಮಹಾರಾಜ ನೇರೋನನ ಕೆಳಗೆ ಈ ಉದ್ಯೋ ಗದಲ್ಲಿದ್ದನು. ಇವನು ಜ್ಞಾನಿಯಂದು ರ್ಯಾಮಿಯ ರಲ್ಲಿ ಪೆಸರ್ವಾಸಿಯಾದ ಸೆನೆಕನ ಆಪ್ತನಾಗಿದ್ದ ನು. ಅದೇ ಕಾಲದಲ್ಲಿ ಅಂಗ್ಲದ್ವೀಪದ ಅರಸನಾದ ಕರಕ್ತಕನು ಸಂಸಾರಸಹಿತವಾಗಿ ಆ ಸೈನ್ಯಸ್ಥಾನದ ಲ್ಲಿ ಬಂಧನದಲ್ಲಿದ್ದನು. ಸೆನೆಕನಿಗೂ, ಕರಕ್ತಕನಿಗೂ ಪೌಲನ ಪರಿಚಿತಿಯುಂಟಾಯಿತೋ ಏನೋ ತಿಳಿಯು ವದಿಲ್ಲ. ಸೆನೆಕನು ಅಪಾಸ್ತಲನಾದ ಪೌಲನಿಂದ ಸುವಾರ್ತೆಯನ್ನು ಕೇಳಿ ನಂಬಿ, ಕ್ರೈಸ್ತನಾದನೆಂದು, ಪೂರ್ವಕಾಲದಲ್ಲಿ ಒಂದು ಸುದ್ದಿ ಪುಟ್ಟಿತು. ಅದು ಪ್ರಾಮಾಣ್ಯವಾದದ್ದಲ್ಲ. ಗ್ರೀಕ ರ್ಯಾಮಿಯ ಗ್ರಂಥ ಕರ್ತರೆಲ್ಲರಲ್ಲಿ ಸೆನೆಕನು ಕ್ರೈಸ್ತಬೋಧನೆಗೆ ಬಹಳ ಅನುಕೂಲವಾದ ನೀತಿಯ ಮಾತುಗಳನ್ನು ಬರದದ್ದೇ ಸರಿ. ಪೌಲನ ಪತ್ರಿಕೆಗಳಲ್ಲಿ ಬರದಿರುವ ವಾಕ್ಯಗಳಿ ಗೆ ಸರಿ ಸಮಾನವಾದ ಕೆಲವು ಸೆನೆಕನ ಗ್ರಂಥಗಳಲ್ಲಿ ದಾರಕುತ್ತವೆ. ಆದ್ದರಿಂದ ಅವನು ಪೌಲನನ್ನು ಕಂ ಡು, ಅವನ ಪರಿಚಿತಿ ಮಾಡಿ ಕಾಂಡನೆಂದು ನೆನಸು ವದು ಅಯುಕ್ತವಾದದ್ದಲ್ಲ. ಆದರೆ ಅವನು ಕ್ರೈಸ್ತ ನಾದನೆಂಬುವದು ಅಬದ್ಧವಾಗಿದೆ. ಯಾಕಂದರೆ: ಅ ವನು ಮಹಾ ಲಾಂಛಿಯಾಗಿದ್ದನೆಂಬುವದು ಪ್ರಸಿ ದ್ಧವಾಗಿದೆ. ಮತ್ತು ಅತ್ಯಂತ ದುಷ್ಟ ಶಿಷ್ಯನಾದ ನೇರೋ ಎಂಬ ಮಹಾರಾಜನ ಅಪ್ಪಣೆಯಿಂದ ತನ್ನನ್ನು ತಾನೇ ಪ್ರಾಣಹಿಂಸೆ ಮಾಡಿ ಕಾಂಡನು.

೬. ರ್ಯಾಮಪುರದ ಯೆಹೂದರ ಸಂಗಡ ಪೌಲನಿಗೆ ನಡದ ಸಂಗತಿ. ವ. ೧೭—೩೧.

೧೭. ಮತ್ತು ಮೂರು ದಿವಸಗಳಾದ ಮೇಲೆ, ಆದದ್ದೇನಂದರೆ, ಪೌಲನು ಯೆಹೂದ್ಯರ ಶ್ರೇಷ್ಠರನ್ನು ಕೂಡ ಕರಿಸಿದನು[೧]. ಅವರು ಕೂಡಿ ಬಂದ ಮೇಲೆ ಅವರಿಗೆ, ಸಹೋದರರಾದ ಜನರೇ, ನಾನು ಜನರಿಗಾದರೂ ಪಿತೃಗಳ ಸಂಪ್ರದಾ

ಯಗಳಿಗಾದರೂ ವಿರೋಧವಾದದ್ದೇನೂ ಮಾಡದೆ, ಯೆರೂಸಲೇಮಿನಿಂದ ರೋಮಾಯರ ಕೈಗೆ ಶರೆಯವನಾಗಿ ಒಪ್ಪಿಸಲ್ಪಟ್ಟೆನು ೭). ೧೪. ಇವರು ನನ್ನನ್ನು ವಿಚಾರಿಸಿ, ನಂನಲ್ಲಿ ಮರಣದ ಅಪರಾಧ ವೇನೂ ಇಲ್ಲದ್ದರಿಂದ, ನನ್ನನ್ನು ಬಿಡ ಬೇಕೆಂದಿದ್ದರು. ೧೫. ಆದರೆ ಯೆಹೂದ್ಯರು ಅಡ್ಡಿ ಮಾತಾಡುವದರಿಂದ, ನಾನು ಕೈಸರನಿಗೆ ಮೊರೆ ಇಡ ಬೇಕಾಯಿತು; ಆದರೆ ನನ್ನ ಜನಾಂಗಕ್ಕೆ ವಿರೋಧವಾಗಿ ನಾನು ವೇನಾದರೂ ದೂರು ಹೇಳ ಬೇಕೆಂತಲ್ಲ. ೧೬. ಇದಕ್ಕೆ ನಿಮ್ಮನ್ನು ಕಂಡು, ಮಾತಾಡುವದಕ್ಕೆ ಕರಿಸಿದ್ದೇವೆ; ಯಾಕಂದರೆ ಇಸ್ರಾಯೇಲಿನ ನಿರೀಕ್ಷೆಗಾಸ್ಕರ ಇ ಸಂಕೋಲೆಯಿಂದ ಬಂಧಿಸಲ್ಪಟ್ಟಿದ್ದೇನೆ, ಅಂದನು. ೧೭. ಆಗಲವರು ಅವನಿಗೆ, ನಮಗೆ ಯೆಹೂದದಿಂದ ನಿನ್ನ ವಿಷಯವಾದ ಕಾಗದಗಳು ಬರಲಿಲ್ಲ ೫); ಸಹೋದರರಲ್ಲಿ ಯಾವನಾದರೂ ಬಂದು, ನಿನ್ನವಿಷಯವಾಗಿ ಕೆಟ್ಟದ್ದೇನಾದರೂ ತಿಳಿಸಿದ್ದೂ ಮಾತಾಡಿದ್ದೂ ಇಲ್ಲ. ೧೮. ಆದರೆ ನೀನು ನೆನಸುವವುಗಳನ್ನುನಿನ್ನಿಂದ ಕೇಳ ಬೇಕೆಂದಿದ್ದೇವೆ; ಯಾಕಂದರೆ ಇ ಹೊಸ ಮತಕ್ಕೆ ಎಲ್ಲಿಯೂ ಅಡ್ಡಿ ಮಾತಾಡುತ್ತಾರೆಂದು, ನಮಗೆ ತಿಳಿದದೆ ೬) ಅಂದರು.

೧. ರೋಮಪುರ ನಿವಾಸಿಗಳಾದ ಯೆಹೂದರಿಗೆ ತೀಬೆರಿಯಾಳೆಯ ಆಚೆಯಲ್ಲಿ ಪ್ರತ್ಯೇಕವಾಗಿ ಒಂದು ಪ್ರದೇಶವಿತ್ತು. ಪೌಲನು ಅಂತ್ಯಾಕ್ಯದಲ್ಲಿಯೂ, ಲುಸ್ತ್ರದಲ್ಲಿಯೂ, ಫಿಲಿಪ್ಪಿಯಲ್ಲಿಯೂ, ಥೆಸ್ಸಲೋನೀಕೆಯಲ್ಲಿಯೂ, ಕೊರಿಂಥದಲ್ಲಿಯೂ ಮಾಡಿದ ಪ್ರಕಾರ, ರೋಮಪುರದಲ್ಲಿ ಸಹ ಮೊದಲು ಯೆಹೂದರ ಸಂಗಡ ಪ್ರಸಂಗ ಮಾಡ ಬೇಕೆಂದು ಅಪೇಕ್ಷಿಸಿದನು.

೨. ತನ್ನ ಬಳಿಗೆ ಬಂದ ಯೆಹೂದರಿಗೆ ಪೌಲನು ಸುವಾರ್ತೆಯನ್ನು ಹೇಳುವದಕ್ಕಿಂತ ಮುಂಚೆ, ತಾನು ಬಂಧನದಲ್ಲಿದ್ದರೂ ನಿರಪರಾಧಿ ಯಂಬುವದನ್ನೂ, ಯೆರೂಸಲೇಮಿನವರು ತನಗೆ ಹಗೆ ಮಾಡಿದರೂ ತಾನು ಯೆಹೂದರಿಗೆ ಶತ್ರುವಲ್ಲವೆಂಬುವದನ್ನೂ, ತಿಳಿಸ ಬೇಕಾಯಿತು.

೩. ಪೌಲನು ಹಿಮಕಾಲಕ್ಕೆ ಮುಂಚಿತವಾಗಿಯೇ ಪಲೆಸ್ತೀನವನ್ನು ಬಿಟ್ಟು, ಹಿಮಕಾಲ ಕಳದ ಕೂಡಲೇ ರೋಮಪುರಕ್ಕೆ ತಲಪಿದ್ದರಿಂದ, ಈ ಮಾತು ಸಹಜವಾಗಿ ತಾರುತ್ತದೆ. ಯಾಕಂದರೆ: ಇಷ್ಟರಾಳಗೆ ಯೆರೂಸಲೇಮಿನಿಂದ ನೂತನ ವರ್ತಮಾನವು ಬರಲಿಲ್ಲವಾದರೆ ಚೋದ್ಯವಲ್ಲ. ಇದಲ್ಲದೆ ಆ ಕಾಲದಲ್ಲಿ ನಾನಾ ಪ್ರಕಾರವಾದ ತರ್ಕಗಳೂ, ಕಲಹಗಳೂ ಪಲೆಸ್ತೀನದ ಯೆಹೂದರಾಳಗೆ ನಡದದರಿಂದ, ಅವರು ಒಂದು ವೇಳೆ ದೂರ ದೇಶಕ್ಕೆ ಹೋದ ಪೌಲನ ಸಂಗತಿಯನ್ನು ಮರತಿರ ಬಹುದು.

೪. ರೋಮಪುರದ ಯೆಹೂದರು ಹೊಸ ಮತವೆಂದು ಹೊಸಗಾರ್ಯಂಡ ಕ್ರೈಸ್ತಸಭೆಯು ಉಂಟಾಯಿತೆಂಬದನ್ನು ತಿಳಿದು ಕಾಂಡಾಗ್ಯೂ, ಈ ಕಾಲಕ್ಕೆ ಮುಂಚೆ ರೋಮಪುರದಲ್ಲಿಯೂ ಸ್ಥಾಪಿತವಾದ ಕ್ರೈಸ್ತಸಭೆಯ ಹೊಸಾಕ್ಕು ಬಳಿಕೆಯಲ್ಲಿ ಶೇರಲಿಲ್ಲ; ಹೊಸ್ಯಾಗಾದರೂ ಪೌಲನು ರೋಮಪುರದ ಸಭೆಯವರಿಗೆ ಕೊರಿಂಥದಿಂದ ಬರದು ಕಳುಹಿಸಿದ ಪತ್ರಿಕೆಯನ್ನು ಓದಲಿಲ್ಲವೆಂದು, ಈ ಮಾತಿನಿಂದ ಸೂಚಿತವಾಗಿದೆ.

೨೫. ಆಗಲವನಿಗೆ ಒಂದು ದಿವಸವನ್ನು ನೇಮಿಸಿ, ಬಹಳ ಮಂದಿ ಅವನ ಬಳಿಗೆ ಅವನ ಮನೆಗೆ ಬಂದರು. ಅವನು ಬೆಳಿಗ್ಗೆಯಿಂದ ಸಂಜೆಯ ಪರ್ಯಂತ ದೇವರ

ಅಪೌ. ಕ್ರಿ. ೬೮, ೬೪—೬೧.

ರಾಜ್ಞಕ್ಕೆ ಸಾಕ್ಷಿ ಕೊಟ್ಟು, ಮೋಶೆಯ ನ್ಯಾಯಪ್ರಮಾಣದಿಂದಲೂ ಪ್ರವಾದಿಗಳಿಂದಲೂ ಯೇಸು ಕ್ರಿಸ್ತನ ವಿಷಯಗಳನ್ನು, ಅವರನ್ನು ಸಮ್ಮತಿ ಪಡಿಸ ಬೇಕೆಂದು, ವಿವರಿಸಿದನು ೧). ೨೪. ಮತ್ತು ಕೆಲವರು ಹೇಳಿದವುಗಳಿಗೆ ಸಮ್ಮತಿ ಪಟ್ಟರು; ಕೆಲವರು ವಿಶ್ವಾಸಿಸಲಿಲ್ಲ. ೨೫. ಹೀಗೆ ತಮ್ಮಲ್ಲಿ ಒಪ್ಪಿ ಕೊಳ್ಳದೆ, ಹೊಗಿ ಬಿಡುವಾಗ, ಪೌಲನು ಒಂದು ಮಾತು ಹೇಳಿದನು; ಏನಂದರೆ, ಪರಿಶುದ್ಧಾತ್ಮವು ಪ್ರವಾದಿಯಾದ ಯೆಶಾಯನ ಮುಖಾಂತರ ೨) ನಮ್ಮ ಪಿತೃಗಳಿಗೆ ಚನ್ನಾಗಿ ಹೇಳಿದ್ದು ಏನಂದರೆ, ೨೬. ಈ ಜನರ ಬಳಿಗೆ ಹೊಗಿ, ಕಿವಿಯಿಂದ ಕೇಳಿ, ಗ್ರಹಿಸದೆ ಇರುವಿರಿ; ಕಣ್ಣಿನಿಂದ ಕಂಡು, ನೋಡದೆ ಇರುವಿರಿ, ಎಂದು ಹೇಳು; ೨೭. ಯಾಕಂದರೆ ಅವರು ಕಣ್ಣುಗಳಿಂದ ಕಾಣದೆ, ಕಿವಿಗಳಿಂದ ಕೇಳದೆ, ಹೃದಯದಿಂದ ಗ್ರಹಿಸದೆ, ತಿರುಗಿ ಕೊಳ್ಳದೆ, ನಾನು ಅವರನ್ನು ಸ್ವಸ್ಥ ಮಾಡದೆ ಇರುವ ಹಾಗೆ, ಈ ಜನರ ಹೃದಯವು ಕೊಬ್ಬಾಯಿತು. ಕಿವಿಗಳಿಂದ ಮಂದವಾಗಿ ಕೇಳುತ್ತಾರೆ; ಮತ್ತು ತಮ್ಮ ಕಣ್ಣುಗಳನ್ನು ಮುಚ್ಚಿ ಕೊಂಡಿದ್ದಾರೆ. ೨೮. ಹೀಗಿರುವದರಿಂದ, ದೇವರ ರಕ್ಷಣೆಯು ಜನಾಂಗಗಳಿಗೆ ಕಳುಹಿಸಲ್ಪಟ್ಟಿದೆ ೩), ಎಂದು ನಿಮಗೆ ತಿಳಿದಿರಲಿ; ಅವರೇ ಕೇಳುವರು. ೨೯. ಈ ವುಗಳನ್ನು ಅವನು ಹೇಳಿದಾಗ, ಯೆಹೂದ್ಯರು ತಮ್ಮೊಳಗೆ ಬಹಳ ತರ್ಕ ಮಾಡಿ ಕೊಳ್ಳುತ್ತಾ ಹೊಗಿ ಬಿಟ್ಟರು. ೩೦. ಮತ್ತು ಪೌಲನು ಎರಡು ವರುಷಗಳು ಪೂರಾ ತಾನು ಮಾಡಿ ಕೊಂಡ ಬಾಡಿಗೆ ಮನೆಯಲ್ಲಿ ಇದ್ದು ೪), ತನ್ನ ಬಳಿಗೆ ಬರುವವರೆಲ್ಲರನ್ನು ಶೇರಿಸಿ ಕೊಂಡು, ೩೧. ತಡೆ ಇಲ್ಲದೆ, ಪೂರ್ಣ ಧೈರ್ಯದಿಂದ ದೇವರ ರಾಜ್ಞವನ್ನು ಸಾರಿ, ಕರ್ತನಾದ ಯೇಸು ಕ್ರಿಸ್ತನ ವಿಷಯಗಳನ್ನು ಬೋಧಿಸುತ್ತಾ ಇದ್ದನು ೫).

೧. ಯೇಸು ಕ್ರಿಸ್ತನು ಪುನರುತ್ಥಾನದ ಮೇಲೆ, ಪುಳೆ ಒಡಂಬಡಿಕೆಯ ಗ್ರಂಥಗಳಲ್ಲಿ ತನ್ನ ವಿಷಯವಾಗಿ ಬರದ ಪ್ರವಾದನೆಗಳನ್ನೆಲ್ಲಾ ಶಿಷ್ಯರಿಗೆ ವ್ಯಾಖ್ಯಾನಿಸಿ, ತನ್ನಲ್ಲಿ ನೆರವೇರಿದ್ದನ್ನೆಲ್ಲಾ ವಿವರವಾಗಿ ಬೋಧಿಸಿದನೆಂದು, ಲೂಕನ ಸುವಾರ್ತೆಯ ೨೪ನೆ ಸಂಧಿಯಲ್ಲಿ ಬರದದೆ. ಆಗ ಕರ್ತನು ಬೋಧಿಸಿದ್ದನ್ನೆಲ್ಲಾ ಪೌಲನು ಬರ್ನಬನಿಂದಲೂ, ಬೇರೆ ಅಪಾಸ್ತಲರಿಂದಲೂ ಚನ್ನಾಗಿ ತಿಳಿದು ಕಾಂಡನೆಂದು ನೆನಸ ತಕ್ಕದ್ದು. ಇದಲ್ಲದೆ ಪೌಲನು ಗಮಾಲಿಯೇಲನ ಶಿಷ್ಯನಾಗಿ, ದೇವವಾಕ್ಯವಿದ್ಯಾಸಕ್ತನಾಗಿದ್ದು, ಪುಳೆ ಒಡಂಬಡಿಕೆಯ ಗ್ರಂಥಗಳನ್ನು ಬಹಳ ವರುಷ ರಾತ್ರಿ ಹಗಲು ಬಾಯಿಪಾಠವಾಗುವ ಪರ್ಯಂತ ಅಚ್ಚಾಗಿ ಸಿಸುತ್ತಾ ಇದ್ದನೆಂಬ ಊಹೆಯು ಸಹಜವಾಗಿದೆ. ಅಜ್ಞಾನ ಕಾಲದಲ್ಲಿ ಪ್ರವಾದನೆಯ ನಿಜ ಅಭಿಪ್ರಾಯವನ್ನು ಗ್ರಹಿಸದೆ ಇದ್ದರೂ, ಮಾನಸಾಂತರವನ್ನೈದಿದನಂತರ ಅದನ್ನು ಆದ್ಯಂತ್ಯದ ವರೆಗೂ ಸಂಪೂರ್ಣವಾಗಿ ತಿಳಿದನೆಂದು, ಇಬ್ರಿಯರ ಪತ್ರಿಕೆಯಲ್ಲಿ ವಿಶೇಷವಾಗಿ ಪ್ರಾಮಾಣ್ಯವಾಗಿದೆ. ಮತ್ತು ಅವನಿಗೆ ಪ್ರಾಪ್ತವಾದ ಕ್ರಿಸ್ತನ ವಿಶೇಷ ಪ್ರಕಟನೆಗಳಿಂದಲೂ, ತಾನು ಪೂರ್ವದಿಂದ ಪರಿಶುದ್ಧಾತ್ಮದ ಬೋಧನೆಯಿಂ

ದಲೂ, ಪೌಲನು ದೇವವಾಕ್ಯಜ್ಞಾನನಿಧ್ಯಿಯನ್ನು ಸಂಪೂರ್ಣವಾಗಿ ಪಡೆದಿದವನಾಗಿ, ರೋಮಪುರದ ಯೆಹೂದರಿಗೆ ಆ ದಿವಸದಲ್ಲಿ ಉದಯಾಸ್ತದವರೆಗೂ ಜಿಜ್ಞಾಸೆ ಇಲ್ಲದೆ ದೇವರಾಜ್ಯಬೋಧನೆಯನ್ನು ನಿಶ್ಶೇಷವಾಗಿ ಹೇಳಿದನೆಂದು ಕಾಣುತ್ತದೆ.

೨. ಈ ಮಾತು ಯೆಶಾ. ೬, ೯. ೧೦ಲ್ಲಿ ಬರದದೆ. ಯೇಸು ಕ್ರಿಸ್ತನು ತಾನೇ ಮತ್ತಾ. ೧೩, ೧೩. ೧೪. ೧೫ಲ್ಲಿ ಯೆಹೂದರ ವಿಷಯವಾಗಿ ಅದನ್ನು ಉಪನ್ಯಾಸ ಮಾಡಿದನು. ಯೋಹಾನನು ಸಹ ಸ. ೧೨, ೪೯. ಇದರ ಅಭಿಪ್ರಾಯವನ್ನು ಅದೇ ಪ್ರಕಾರವಾಗಿ ಹೇಳುತ್ತಾನೆ. ರೋಮಾಯರ ಪತ್ರಿಕೆಯಲ್ಲಿಯೂ ಸ. ೧೧, ೮ಲ್ಲಿ ಯೆಶಾಯನ ಇದೇ ಯಥಾಕ್ತವು ಸೂಚಿತವಾಗಿದೆ.

೩. ಇಲ್ಲಿ ಪರಜನರ ಅಪಾಸ್ತಲನ ಉದ್ಯೋಗವನ್ನು ತಾನು ಪಡೆದಿದೆನೆಂಬ ಪೃತ್ಪಚಿತ ಚಾವನೆಯನ್ನು ಪಳೇ ಒಡಂಬಡಿಕೆಯ ಪ್ರವಾದನೆಗಳ ವ್ಯಾಖ್ಯಾನವನ್ನು ಆ ದಿವಸದಲ್ಲಿ ಪೂರ್ಣವಾಗಿ ಕೇಳಿದವರಿಗೆ ಖಂಡಿತವಾಗಿ ಹೇಳುತ್ತಾನೆ.

೪. ಯಾರೂ ಅವನ ಮೇಲೆ ಅಪರಾಧ ಪಡಿಸದೆ ಇದ್ದ ಕಾರಣ, ಪೌಲನ ಬಂಧನವು ಅತಿ ಲಘುವಾಯಿತು. ಆದರೆ ಮಹಾರಾಜನು ತಾನೇ ಶೀರ್ಪು ಮಾಡ ಬೇಕಾದ್ದರಿಂದ, ಅವನು ಬಿಡುಗಡೆಯನ್ನು ಪಡೆದುಕೊಳ್ಳುವದಕ್ಕೆ ಎರಡು ವರುಷ ಸಾವಕಾಶವಾಯಿತು.

೫. ಹೀಗೆ ಲೂಕನು ತನ್ನ ಗ್ರಂಥವನ್ನು ಮುಗಿಸುತ್ತಾನೆ. ಅವನು ತನ್ನ ಸ್ನೇಹಿತನಾದ ಪೌಲನ ಚರಿತ್ರವನ್ನು ಬರೆಯುವ ಆಲೋಚನೆಯಲ್ಲಿದ್ದದ್ದಾದರೆ, ಗ್ರಂಥವನ್ನು ಇಲ್ಲಿಗೆ ಮುಗಿಸುವದು ಅನುಚಿತವಾಗಿತ್ತು. ಆದರೆ ಈ ಗ್ರಂಥರಚನೆಯ ಉದ್ದಿಶ್ಯವು ಬೇರೆ. ಯೇಸು ಕ್ರಿಸ್ತನ ಸುವಾರ್ತೆಯು ಯೆರೂಸಲೇಮಿನಿಂದ ಪಡೆದಾರಟು, ಅಂತ್ಯಾಕ್ಯದಲ್ಲಿ ಪ್ರಬಲವಾಗಿ, ಸಣ್ಣಆಸ್ಯದಲ್ಲಿಯೂ, ಮಕೆದಾನ್ಯದಲ್ಲಿಯೂ, ಅಕಾಯದಲ್ಲಿಯೂ ವಸತಿಯಾದ ಗ್ರೇಕರಲ್ಲಿ ಪ್ರಖ್ಯಾತವಾಗಿ, ಕಡೆಯಲ್ಲಿ ಲೋಕರಾಜಧಾನಿಯಾದ ರೋಮಪುರಕ್ಕೆ ಶೇರಿದ ಚರಿತ್ರವನ್ನು ಬರೆಯ ಬೇಕೆಂದು ಲೂಕನು ಈ ಗ್ರಂಥವನ್ನು ರಚಿಸಿದ್ದರಿಂದ, ಹೀಗೆ ಮುಗಿಸುವದು ಯುಕ್ತವೇ ಸರಿ.

ಬ) ಪೌಲನು ರೋಮಪುರದಲ್ಲಿ ನಡಿಸಿದ ವೃತ್ತಿ.

೧. ಕಾಲೊಸ್ಸೆಯರ ಪತ್ರಿಕೆ.
೨. ಫಿಲೇಮೋನನ ಪತ್ರಿಕೆ.
೩. ಎಫೆಸದವರ ಪತ್ರಿಕೆ.
೪. ಫಿಲಿಪ್ಪಿಯರ ಪತ್ರಿಕೆ.

ಪೌಲನ ಮತ್ತು ಬೇರೆ ಅಪೊಸ್ತಲರ ಉಳಿದ ವೃತ್ತಾಂತವನ್ನು ತಿಳಿದು ಕೊಳ್ಳ ಬೇಕಾದರೆ, ಅವರು ಬರದ ಪತ್ರಿಕೆಗಳಲ್ಲಿ ಅಲ್ಲಲ್ಲಿ ಸೂಚಿಸಿರುವ ಸಂಗತಿಗಳನ್ನೆಲ್ಲಾ ಸಂಗ್ರಹಿಸಿ, ಇತ್ತಲಾಗಿ ರಚಿತವಾದ ಪೂರ್ವ ಸಭೆಯ ಗ್ರಂಥಕರ್ತರ ಪುಸ್ತಕಗಳನ್ನು ವಿಚಾರಿಸ ಬೇಕು. ಪೌಲನು ರೋಮಪುರದ ಬಂಧನದಲ್ಲಿ ತನ್ನ ಉದ್ಯೋಗವೃತ್ತಿಯನ್ನು ತಡೆಯಿಲ್ಲದೆ ನಡಸಿದನೆಂಬದನ್ನು ಕಂಡಿದ್ದೇವೆ. ಕುಲೀನರಾದ ರೋಮಾಯರಲ್ಲಿಯೂ ಅನೇಕರು ಪೌಲನ ಬಾಯಿಂದ ಸುವಾರ್ತೆಯನ್ನು ಕೇಳಿದರೆಂದು ಕಾಣುತ್ತದೆ. ಲೂಕನ ಸುವಾರ್ತೆಯ ಆರಂಭದಲ್ಲಿ ಸೂಚಿತನಾದ ಥೆಯೊಫಿಲನು ಇವರಲ್ಲಿ ಒಬ್ಬನಾಗಿದ್ದನೆಂದು ತೋರುತ್ತದೆ. ಅರಮನೆಯ ಉದ್ಯೋಗಸ್ಥರಲ್ಲಿಯೂ ಕೆಲವರು ವಿಶ್ವಾಸಿಸಿ, ಸಭೆಯಲ್ಲಿ ಶೇರಿದರು. ಫಿಲಿ. ೧, ೧೩; ೪, ೨೨. ಪೌಲನ ಜನ್ಮಪಟ್ಟಣವಾದ ತರ್ಸದ ಪ್ರಸಿದ್ಧರಾದ ಕೆಲವು ವಿದ್ವಾಂಸರು ಈ ಕಾಲಕ್ಕೆ ಮುಂಚೆ

ಪೌಲನು ರೋಮಪುರದಲ್ಲಿ ನಡಿಸಿದ ವ್ಯಕ್ತಿ.

ಮಹಾರಾಜರ ಬಳಿಯಲ್ಲಿ ಘನವಾದ ಉದ್ಯೋಗಗಳಲ್ಲಿದ್ದರು. ತರ್ಸದವನಾದ ಅಥೆನೊದೋರನು ಮೊದಲನೆ ಮಹಾರಾಜನಾದ ಔಗುಸ್ತನಿಗೆ ಬಾಲ್ಯೋಪಾಧ್ಯಾಯನಾಗಿದ್ದನು. ಅವನು ೮೨ ವರುಷದವನಾಗಿ ಕ್ರಿಸ್ತ ಶಕದ ೫೯ ವರುಷದಲ್ಲಿ, ತರ್ಸಪಟ್ಟಣದ ಅಧಿಪತಿಯಾಗಿದ್ದು, ಸತ್ತನು. ತನ್ನ ತಂಗಿಯಾದ ಒಕ್ತಾವಿಯಳ ಮಗನಾದ ಮರ್ಕೆಲ್ಲನಿಗೆ ಔಗುಸ್ತನು ತರ್ಸದವನಾದ ನೆಸ್ತೊರನನ್ನು ಉಪಾಧ್ಯಾಯನಾಗಿ ನೇಮಿಸಿದನು. ಅಥೆನೊದೋರನ ಮರಣದನಂತರ ಔಗುಸ್ತನು ನೆಸ್ತೊರನಿಗೆ ತರ್ಸದ ಆಧಿಪತ್ಯವನ್ನು ಕೊಟ್ಟನು. ಪೌಲನು ಅಥೆನೊದೋರನ ಕಾಲದಲ್ಲಿ ಹುಟ್ಟಿದನೋ, ನೆಸ್ತೊರನ ಆಧಿಪತ್ಯದ ಆರಂಭದಲ್ಲಿ ಹುಟ್ಟಿದನೋ ಎಂಬದನ್ನು ನಿರ್ಣೈಸುವದು ಪ್ರಯಾಸವಾಗಿದೆ. ಪೌಲನು ಕ್ರಿಸ್ತ ಶಕದ ೪೧ನೆ ವರುಷದಲ್ಲಿ ತರ್ಸಪಟ್ಟಣಕ್ಕೆ ತಿರಿಗಿ ಬಂದಾಗ, ನೆಸ್ತೊರನು ಬದುಕಿದನೋ ಏನೋ ತಿಳಿಯುವದಿಲ್ಲ. ತರ್ಸದವನಾದ ಬೇರೊಬ್ಬ ನೆಸ್ತೊರನು ಎರಡನೆ ಮಹಾರಾಜನಾದ ತಿಬೇರಿಯನ ಬಾಲ್ಯೋಪಾಧ್ಯಾಯನಾಗಿದ್ದನು. ತರ್ಸದವನಾದ ಬೇರೊಬ್ಬ ಅಥೆನೊದೋರನು ಕ್ಲೌದಿಯನೆಂಬ ಮಹಾರಾಜನ ಬಾಲ್ಯೋಪಾಧ್ಯಾಯನಾಗಿದ್ದನು. ಹೀಗಿರಲಾಗಿ ರೋಮಾಯ ಮಹಾರಾಜರ ಅರಮನೆಯು ತರ್ಸಪಟ್ಟಣದ ವಿದ್ವಜ್ಜನಗಳಿಗೆ ಬಂಧುಗೃಹದ ಹಾಗಾಯಿತು. ಪೌಲನು ತರ್ಸಪಟ್ಟಣದವನಾಗಿಯೂ ವಿದ್ವಾಂಸನಾಗಿಯೂ ಕುಲೀನನಾಗಿಯೂ ಇದ್ದ ಕಾರಣ, ರೋಮಪುರದ ಅರಮನೆಯಲ್ಲಿ ಯೇಸು ಕ್ರಿಸ್ತನ ಸುವಾರ್ತೆಯನ್ನು ಪ್ರಕಟಿಸುವದಕ್ಕೆ ಪೂರ್ಣ ಯೋಗ್ಯನಾಗಿದ್ದನು. ಮಹಾರಾಜನಾದ ನೆರೋನನ ಸ್ನೇಹಿತನೂ, ಸೇವಕನೂ ಆದ ನರ್ಕಿಸ್ಸನ ಮನೆಯವರಲ್ಲಿ ಕೆಲವರು ಕ್ರೈಸ್ತರಾಗಿದ್ದರೆಂದು, ರೋಮಾ. ೧೬, ೧೧ರಲ್ಲಿ ಕಾಣುತ್ತದೆ. ಪ್ರಖ್ಯಾತ ಸೈನ್ಯಾಧಿಪತಿಯಾದ ಪ್ಲಾತಿಯನ ಹೆಂಡತಿಯಾದ ಪೊಂಪೊನಿಯಳು ಈ ಕಾಲಕ್ಕೆ ಕೆಲವು ವರುಷ ಮುಂಚೆ ಕ್ರೈಸ್ತಳಾದ್ದರಿಂದ, ಬಹಳ ಉಪದ್ರವದಲ್ಲಿ ಬಿದ್ದಳೆಂದು, ಕೊರ್ನೇಲಿಯ ತಕಿತನ ಚರಿತ್ರದಲ್ಲಿ ಸೂಚಿತವಾಗಿದೆ. ಅದೇ ಚರಿತ್ರದಲ್ಲಿ ನೆರೋನನ ಹೆಂಡತಿಯಾದ ಪೊಪ್ಪೇಯಳು ಯೆಹೂದಳಾಗಿದ್ದಳೆಂದು ಬರದದೆ. ಅವಳು ಕ್ರೈಸ್ತಳಾಗಿದ್ದಳೆಂದು ನೆನಸಿದರೆ, ಒಂದು ವೇಳೆ ತಪ್ಪು ಇಲ್ಲ. ಪೌಲನು ರೋಮಪುರದ ಈ ಪ್ರಥಮ ಬಂಧನದಲ್ಲಿದ್ದಾಗ ಅವನ ಜೊತೆ ಕೆಲಸದವರಲ್ಲಿಯೂ ಶಿಷ್ಯರಲ್ಲಿಯೂ ಅನೇಕರು ಅವನ ಹತ್ತರ ಬಂದು ಅವನಿಗೆ ಸಹಾಯವನ್ನೂ, ಸೇವೆಯನ್ನೂ ಮಾಡುತ್ತಾ ಇದ್ದರು. ಅವರ ಹೆಸರುಗಳು ಮೇಲೆ ಬರದಿರುವ ಪ್ರಥಮ ಬಂಧನದ ನಾಲ್ಕು ಪತ್ರಿಕೆಗಳಲ್ಲಿ ಅಲ್ಲಲ್ಲಿ ಅನಾಲೋಚಿತವಾಗಿ ಶೇರುತ್ತವೆ. ತಿಮೊಥೆಯನ ಹೆಸರು ಫಿಲಿ. ೧, ೧. ಕೊಲೊ. ೧, ೧. ಫಿಲೇ. ೧. ಕಾಣುತ್ತದೆ. ಪೌಲನು ಮೂಡಣವಲ್ಲಿರುವ ಸಭೆಗಳಿಗೆ ಪತ್ರಿಕೆಗಳನ್ನು ಬರೆಯುವದಕ್ಕಿಂತ ಮುಂಚೆ ತಿಮೊಥೆಯನು ಅವನ ಹತ್ತರ ಬಂದನೆಂದು, ಅವನ ಹೆಸರು ಮೂರು ಪತ್ರಿಕೆಗಳ ಆರಂಭದಲ್ಲಿ ಪೌಲನ ಹೆಸರಿಗೆ ಜೊತೆಯಾಗಿ ಶೇರಿರುವದರಿಂದ, ಪ್ರಾಮಾಣ್ಯವಾಗಿದೆ. ಕೊಲೊಸ್ಸೆಯಲ್ಲಿ ಕ್ರೈಸ್ತಸಭೆಯನ್ನು ಸ್ಥಾಪಿಸಿದವನಾದ ಎಪಫ್ರನ ಹೆಸರು ಕೊಲೊ. ೧, ೭; ೪, ೧೨. ಫಿಲೇ. ೨೩ ಬರದದೆ. ಪೌಲನ ಜೊತೆ ಪ್ರಯಾಣಸ್ಥರಾದ ಲೂಕ ಅರಿಸ್ತರ್ಕರು, ಮರ್ಕನು, ಯುಸ್ತನೆಂಬ ಯೇಸುವು, ದೇಮನು, ಇವರ ಹೆಸರುಗಳು ಕೊಲೊ. ೪, ೧೦—೧೪. ಫಿಲೇ. ೨೪. ಬರದವೆ. ಎಫೆಸದವರ ಕೊಲೊಸ್ಸೆಯವರ ಪತ್ರಿಕೆಗಳ ವಾಹಕನಾದ ತುಕಿಕನು, ಒನೇಸಿಮನು ಇವರ ಹೆಸರುಗಳು ಕೊಲೊ. ೪, ೯. ಫಿಲೇ. ೯. ಬರದವೆ. ಈ ಒನೇಸಿಮನು ಕೊಲೊಸ್ಸೆಯಲ್ಲಿರುವ ಉತ್ತಮ ಸಭೆಯವನಾದ ಫಿಲೇಮೋನನ ಮನೆಯಾಳಾಗಿದ್ದು, ಏನೋ ಒಂದು ತಪ್ಪಿನಿಂದ ಓಡಿ ಹೋಗಿ, ರೋಮಪುರಕ್ಕೆ ಬಂದು, ಪೌಲನಿಂದ ಸುವಾರ್ತೆಯನ್ನು

ರೋಮಪುರದಲ್ಲಿ ಬರೆದ ಪತ್ರಿಕೆಗಳು.

ಕೇಳಿ, ಕ್ರೈಸ್ತನಾದನು. ಅರಿಸ್ತರ್ಕನೂ (ಕೊಲೊ. ೪, ೧೦.) ಎಪಫ್ರನೂ ಫಿಲೇಮೋನನ ಪತ್ರಿಕೆಯಲ್ಲಿ ಪೌಲನ ಸಹಬಂಧನದವರೆಂದು ಬರದದೆ. ಅವರು ರೋಮಿಯರಿಂದ ಬಂಧಿತರಾದರೆಂದು ನೆನಸ ಕೆಲಸ ವಿಲ್ಲ. ಯಾಕಂದರೆ: ಆ ಪ್ರಕಾರವಾಗಿದ್ದರೆ, ಅವರು ಸ್ವಂತ ಗೃಹದಲ್ಲಿರುವ ಪೌಲನ ಸಂಗಡ ವಾಸ ಮಾಡು ತ್ತಿದ್ದಿಲ್ಲ. ಯೆಹೂದರಾದ ಸ್ನೇಹಿತರು ಪೌಲನ ಸಂಗಡ ಅನೇಕರು ಇರಲಿಲ್ಲ. ಕೊಲೊ. ೪, ೧೧. ರೋಮ ಪುರದಲ್ಲಿದ್ದ ಯೆಹೂದಕ್ರೈಸ್ತರು ಪೌಲನು ರೋಮಿಯರ ಪತ್ರಿಕೆಯಲ್ಲಿ ಅವರಿಗೆ ತೋರಿಸಿದ ಮಮತಾ ಸೂಚಕವಾದ ಮರ್ಯಾದೆ ಮುಂತಾದ್ದನ್ನು ಅಸಡ್ಡೆ ಮಾಡಿ, ಫಿಲಿ. ೧, ೧೫—೧೮ಲ್ಲಿ ಕಾಣುವ ಪ್ರಕಾರ, ಪೌಲನನ್ನು ಉಪದ್ರವ ಪಡಿಸುವ ಉದ್ದಿಶ್ಯವಾಗಿ, ಸುವಾರ್ತೆಯನ್ನು ಸಾರುತ್ತಾ ಇದ್ದರು. ಏನಂದರೆ: ತಮ್ಮ ಪ್ರಸಂಗದಿಂದ ರೋಮಪುರದ ಯೆಹೂದರಲ್ಲಿ ಗುಲ್ಲು ಹುಟ್ಟಿದರೆ, ಪೌಲನ ಮೇಲೆ ತಪ್ಪು ಬರುತ್ತದೆಂದು ತಿಳಿದರೂ, ಅದಕ್ಕೆ ಚಿಂತಿಸದೆ, ಹಾಗಾದರೆ ಉತ್ತಮವೆಂದು ನೆನಸಿದರು. ಆದರೆ ಪೌಲನು ಅವರ ಪ್ರಸಂಗ ದಿಂದ ಯೆಹೂದಕ್ರೈಸ್ತರಲ್ಲಿಯೂ, ಯೆಹೂದರಲ್ಲಿಯೂ ಹುಟ್ಟುವ ತರ್ಕಗಳ ನಿಮಿತ್ತ ತಾನು ಬಿಡುಗಡೆ ಯಾಗುವದಕ್ಕೆ ಅಡ್ಡಿಯಾದರೂ, ಚಿಂತೆಯಿಲ್ಲವೆಂತಲೂ, ಹ್ಯಾಗಾದರೂ ಕ್ರಿಸ್ತನ ಸುವಾರ್ತೆಯು ರೋಮ ಪುರದಲ್ಲಿ ವಿಶೇಷವಾಗಿ ಪ್ರಖ್ಯಾತವಾದರೆ ವಾಸಿ ಎಂತಲೂ ನೆನಸಿದನು. ಆಗ್ಗಾಗ್ಗೆ ತಾನು ಬಂಧನದಿಂದ ಬಿಡುಗಡೆಯಾಗದೆ, ಬೇಗ ಸಾಯ ಬೇಕೆಂದು, ಪೌಲನು ಊಹಿಸುತ್ತಾ ಇದ್ದನೆಂದು, ಫಿಲಿ. ೧, ೨೦ಲ್ಲಿ ಜಾಡೆಯಾಗಿ ಕಾಣುತ್ತದೆ. ಆದರೆ ಬೇರೆ ಸಮಯದಲ್ಲಿ, ತಾನು ಬಿಡುಗಡೆಯಾಗುತ್ತೇನೆಂದು ನೆನಸಿ, ಫಿಲಿ. ೧, ೨೫; ೨, ೨೪. ಕೊಲೊಸ್ಸೆಯಲ್ಲಿ ತನಗೆ ಬಿಡಾರವನ್ನು ಸಿದ್ಧ ಮಾಡ ಬೇಕೆಂದು, ಫಿಲೇಮೋನನಿಗೆ ವ. ೨೨ಲ್ಲಿ ಬರದನು.

ಅಪೊಸ್ತಲನು ರೋಮಪುರದ ಪ್ರಥಮ ಬಂಧನದಲ್ಲಿ ಬರದ ಪತ್ರಿಕೆಗಳು.

ಎಫೆಸದವರಿಗೂ ಕೊಲೆಸ್ಸೆಯವರಿಗೂ ಫಿಲೇಮೋನನಿಗೂ ಫಿಲಿಪ್ಪಿಯವರಿಗೂ ಪೌಲನು ಬರದ ನಾಲ್ಕು ಪತ್ರಿಕೆಗಳು ಒಂದೇ ಕಾಲದಲ್ಲಿಯೂ ಸ್ಥಳದಲ್ಲಿಯೂ ರಚಿತವಾಗಿವೆಂದು, ಅದೇ ಜನರೂ, ಸಂಗತಿಗಳೂ ಅವೆಲ್ಲವುಗಳಲ್ಲಿ ಸೂಚಿತವಾಗಿರುವದರಿಂದ, ಪ್ರಾಮಾಣ್ಯವಾಗಿದೆ. ಪೌಲನು ಈ ಪತ್ರಿಕೆಗಳನ್ನು ಕೈಸರ ಯದ ಬಂಧನದಲ್ಲಿ ಬರದನೆಂದು, ಈಗಿನ ವ್ಯಾಖ್ಯಾನಿಗಳಲ್ಲಿ ಕೆಲವರು ಹೇಳುವಂಥಾದ್ದು ಅಬದ್ಧವಾಗಿದೆಂದು, ಹಿಂದಿನ ಸಂಧಿಯಲ್ಲಿ ಸೂಚಿತವಾದ ಮಹಾರಾಜನ ಅರಮನೆಯಲ್ಲಿರುವ ಭಕ್ತರ ಹೆಸರುಗಳಿಂದ ಫಿಲಿ. ೧, ೧೩; ೪, ೨೨. ಸಿದ್ಧಾಂತವಾಗಿದೆ. ಸುವಾರ್ತೆಯನ್ನು ಸಾರುವದಕ್ಕೆ ಉಚಿತವಾದ ಸಮಯ ತನಗೆ ಉಂಟೆಂದು, ಪೌಲನು ಎಫೆ. ೬, ೧೯. ೨೦ಲ್ಲಿ ಬರದ ಮಾತು ಸಹ ಕೈಸರಯದ ಬಂಧನಕ್ಕೆ ಚನ್ನಾಗಿ ಒಪ್ಪುವದಿಲ್ಲ.

ಅತಿ ಪ್ರಿಯರಾದ ಫಿಲಿಪ್ಪಿಯವರಿಗೆ ಪೌಲನು ಒಂದು ಪತ್ರಿಕೆಯನ್ನು ಬರೆಯುವದಕ್ಕೆ, ಅವರು ಕಳುಹಿಸಿ ಕೊಟ್ಟ ಧರ್ಮದ್ರವ್ಯಕ್ಕಾಗಿ ಸ. ೪, ೧೦. ೧೫. ಹೃಜ್ಜನ್ಯ ಕೃತಜ್ಞಾಪನವನ್ನೂ ವಂದನೆಯನ್ನೂ ಮಾಡ ಬೇಕೆಂಬ ಅಪೇಕ್ಷೆಯಲ್ಲದೆ, ವಿಶೇಷ ಕಾರಣವಿರಲಿಲ್ಲ.

ಫಿಲೇಮೋನನಿಗೆ ಬರದ ಪತ್ರಿಕೆಯ ಹೇತುವೇನಂದರೆ: ಫಿಲೇಮೋನನ ಮನೆಯಾಳಾದ ಒನೇಸಿಮನೆಂ ಬವನು ಯೆಜಮಾನನ ಮನೆಯಿಂದ ಓಡಿ ಹೋಗಿ, ರೋಮಪುರಕ್ಕೆ ಬಂದನು. ಅಲ್ಲಿ, ನಮಗೆ ಗೊತ್ತಿಲ್ಲದ ಮಾರ್ಗವಾಗಿ, ಅವನು ಪೌಲನನ್ನು ಕಂಡು ಕೊಂಡು, ಅವನಿಂದ ಸುವಾರ್ತೆಯನ್ನು ಕೇಳಿ, ಮಾನಸಾಂತರ

ರೋಮಪುರದಲ್ಲಿ ಬರೆದ ಪತ್ರಿಕೆಗಳು.

ವನ್ನೈದಿ, ಪೌಲನಿಗೆ ಕೆಲವು ಕಾಲ ಸೇವಿಸುತ್ತಾ ಇದ್ದನು. ಬಳಿಕ ಸಮಯ ದೊರಕಿದಾಗ ಅಪೊಸ್ತಲನು ಆಳು ಯಜಮಾನನ ಬಳಿಗೆ ತಿರಿಗಿ ಹೋಗಿ ಶೇರುವದು ಉತ್ತಮವೆಂದು ತಿಳಿದು, ಫಿಲೇಮೋನನು ಒನೇಸಿಮನನ್ನು ಪ್ರೀತಿಯಿಂದ ಸೇರಿಸಿ ಕೊಳ್ಳುವ ಹಾಗೆ, ಅನುಕೂಲ ಪತ್ರಿಕೆಯನ್ನು ಬರದು ಇವನ ಕೈಗೆ ಒಪ್ಪಿಸಿ ಕಳುಹಿಸಿದನು.

ಕೊಲೊಸ್ಸೆಯಲ್ಲಿ ಸಭೆಯನ್ನು ಸ್ಥಾಪಿಸಿದ ಎಪಫ್ರನು ಪೌಲನ ಬಳಿಗೆ ಬಂದು, ಆ ಪಟ್ಟಣದಲ್ಲಿಯೂ ಪ್ರದೇಶದಲ್ಲಿಯೂ ನೂತನಾನ್ಯತಬೋಧೆಗಳು ಹುಟ್ಟಿದ ಸಮಾಚಾರವನ್ನು ತಿಳಿಸಿದನು. ಕೊಲೊಸ್ಸೆ ಫ್ರುಗ್ಯದೇಶದ ಪಟ್ಟಣವಾಗಿತ್ತು. ಆ ದೇಶಸ್ಥರಲ್ಲಿ ಮಂತ್ರ ಯಂತ್ರ ಮುಂತಾದ ರಹಸ್ಯ ವಿದ್ಯಾಭ್ಯಾಸವು ಪೂರ್ವದಿಂದ ಪ್ರಚಾರವಾಗಿತ್ತು. ಯೆಹೂದರಾದ ವಂಚಕರು ಕೊಲೊಸ್ಸೆಯವರ ಗುಟ್ಟು ತಿಳಿದು, ಕ್ರೈಸ್ತ ಜ್ಞಾನದಲ್ಲಿ ನವೀನಾಭ್ಯಾಸಿಗಳಾದ ಜನರ ಬುದ್ಧಿಯನ್ನು ರಹಸ್ಯವಿದ್ಯಾಬೋಧೆಯ ಆಶೆ ತೋರಿಸಿ, ಸಾಧಾರಣವಾದ ಸುವಾರ್ತಾಬೋಧನೆಯಿಂದ ತಿರಿಗಿಸಿದ್ದರು. ಆ ಯೆಹೂದರು ತಾವು ಕ್ರಿಸ್ತಭಕ್ತರೆಂದು ಅನ್ನಿಸಿಕೊಂಡು, ಮುಕ್ತಿಪದವಿಗೆ ಅಧಿಕಾರಿಯಾಗುವದಕ್ಕೆ ಮನಸ್ಸುಳ್ಳವನು ದೇವರ ಮಗನಾದ ಯೇಸು ಕ್ರಿಸ್ತನ ಸುವಾರ್ತೆಯನ್ನು ಅವಶ್ಯವಾಗಿ ನಂಬ ಬೇಕು. ಆದರೆ ದೇವರು ಮೋಶೆಯ ಮುಖಾಂತರ ಇಸ್ರಯೇಲನವರಿಗೆ ಪೂರ್ವಕಾಲದಲ್ಲಿ ಕೊಟ್ಟ ನಿಯಮದ ಜ್ಞಾನವು ಸುವಾರ್ತೆಗಿಂತ ಘನವಾದದ್ದು. ತತ್ವಜ್ಞಾನವನ್ನೂ, ಷಟ್ಪ್ರಯೋಗಸಿದ್ಧಿಯನ್ನೂ ಪಡೆಯ ಬೇಕಾದರೆ, ನಿಯಮವಿದ್ಯಾಭ್ಯಾಸವೂ, ತದನುಷ್ಠಾನವೂ ಅವಶ್ಯಕವಾಗಿವೆಂತಾ ಬೋಧಿಸಿದರೆಂದು ಊಹಿಸ ತಕ್ಕದ್ದು. ಈ ವಂಚಕರ ಮಾತು ನಂಬಿದವರಿಗೆ ನಾನಾತರದ ಮೋಸವಾಯಿತು: ೧. ಅವರು ಪೂರ್ಣವಾಗಿ ಯೆಹೂದರ ಸಂಪ್ರದಾಯದಲ್ಲಿ ಶೇರಿ, ಅದರಲ್ಲಿ ಶೇರದ ಕ್ರೈಸ್ತರ ಹೊಕ್ಕುಬಳಿಕೆಯನ್ನು ಬಿಡ ಬೇಕಾಯಿತು. ೨. ಅವರು ಯೇಸು ಕ್ರಿಸ್ತನಲ್ಲಿ ಇಡ ತಕ್ಕ ಮನಃಪೂರ್ವಕವಾದ ವಿಶ್ವಾಸವು ರಕ್ಷಣೈಕಸಾಧಕವೆಂಬದನ್ನು ಮರತು ಬಿಟ್ಟರು. ೩. ತತ್ವಜ್ಞಾನ ಷಟ್ಪ್ರಯೋಗ ಸಿದ್ಧಿಗಳ ಅಭ್ಯಾಸದಿಂದ ಭ್ರಾಂತವಿದ್ಯಾಗರ್ವವು ಹುಟ್ಟಿತು. ೪. ನಿಯಮಾನುಷ್ಠಾನವು ಮುಖ್ಯವಾದದ್ದೆಂಬ ಭಾವನೆಯಿಂದ ಸತ್ಯ ನೀತಿ ಮಾರ್ಗವು ಅಲಕ್ಷ್ಯವಾಯಿತು. ವಂಚಕರಾದ ಯೆಹೂದರ ಉಪದೇಶಕ್ಕೆ ವಶವಾದವರು ಯೆಹೂದರಲ್ಲಿಯೂ ಪರಜನರಲ್ಲಿಯೂ ಆ ಕಾಲದಲ್ಲಿ ಅತ್ಯಂತ ಪ್ರಬಲವಾದ ಹಾದರ, ಹಗೆ, ಹುಸಿ ಮುಂತಾದ ಕಡುಕೆಟ್ಟ ದುರಾಚಾರಗಳಲ್ಲಿ ಮುಳುಗಿದರು. ಪೌಲನು ಮುಂಚಿನ ಸುವಾರ್ತಾಪ್ರಸಂಗ ಪರ್ಯಟಣಗಳಲ್ಲಿ ಫ್ರುಗ್ಯದೇಶವನ್ನು ಎರಡು ಸಾರಿ ದಾಟಿ ಹೋಗಿದ್ದಾಗ್ಯೂ, ದಕ್ಷಿಣ ಫ್ರುಗ್ಯದಲ್ಲಿದ್ದ ಕೊಲೊಸ್ಸೆ ಲವ್ದೊದಿಕಯ ಮುಂತಾದ ಊರುಗಳ ಸಭೆಗಳನ್ನು ತಾನು ನೋಡದ ಕಾರಣ, ಎಪಫ್ರನು ತಿಳಿಸಿದ ಸಮಾಚಾರಕ್ಕೆ ಅತ್ಯಂತ ಚಿಂತಾಪರವಶನಾಗಿ, ಆ ಸಭೆಗಳಿಗೆ ತಿಳಿಯಲತ್ಯಾವಶ್ಯಕವಾದ ಬೋಧನೆಗಳನ್ನು ಪೂರ್ಣ ದೃಢೀಕರಿಸ ತಕ್ಕ ಪತ್ರಿಕೆಯನ್ನು ಬರದು, ತುಕಿಕನ ಕೈಗೆ ಒಪ್ಪಿಸಿ, ಕೊಲೊ. ೪, ೮. ಕೊಲೊಸ್ಸೆಗೆ ಕಳುಹಿಸಿದನು. ಈ ಪತ್ರಿಕಾಸಾರಾಂಶವೇನಂದರೆ: ತಂದೆಯಾದ ದೇವರ ನಿಜ ಸ್ವರೂಪವಾಗಿಯೂ ದೇವತ್ವದ ಸರ್ವ ಸಂಪೂರ್ಣತ್ವಕ್ಕೆ ನಿಜ ಸ್ಥಾನವಾಗಿಯೂ ಇರುವ ಯೇಸು ಕ್ರಿಸ್ತನ ಮಹಿಮೆಯು ಅಪ್ರತಿಮವಾದದ್ದು. ಸ. ೧, ೧೫; ೨, ೯. ಆತನಿಂದುಂಟಾದ ರಕ್ಷಣೆಯನ್ನು ಅನುಭವಿಸುವ ಹಾಗೆ, ಸರ್ವಕ್ಕೂ ತಲೆಯಾಗಿರುವ ಆತನಲ್ಲಿ ನೆಲೆಯಾಗಿರಬೇಕು. ಆತನು ಸಭೆಯನ್ನು ಪರಿಶುದ್ಧ ಶರೀರವಾಗಿ ಸ್ಥಾಪಿಸಿದ್ದಾನೆ. ಅದರ ಅವಯವಗಳಾದ ಪರಜನಕ್ರೈಸ್ತರಿಗೂ ಯೆಹೂದಕ್ರೈಸ್ತರಿಗೂ ಭೇದ ಹುಟ್ಟ ಬಾರದು. ರಕ್ಷಣೆ

ರ್ಯಾಮಪುರದಲ್ಲಿ ಬರೆದ ಪತ್ರಿಕೆಗಳು.

ಯ ಫಲವನ್ನು ಹಗೆ, ಜಗಳ, ಹುಚ್ಚಿ ಮುಂತಾದ ದುರಾಚಾರಗಳಲ್ಲಿ ಮುಳುಗುವದರಿಂದ ಕಳೆದು ಕೊಳ್ಳಬಾರದು. ಈ ಪತ್ರಿಕೆಯನ್ನು ಬರದನಂತರ, ತುಕಿಕನು ಪ್ರಯಾಣ ಮಾಡಿ ಹೋಗುವ ಎಫೆಸದಲ್ಲಿಯೂ ಸಮಸ್ತ ಸಣ್ಣಾಸ್ಯದಲ್ಲಿಯೂ ಇರುವ ಸಭೆಗಳಿಗೆ ಅದೇ ತರದ ಉದ್ಬೋಧನೆಗಳು ಉಪಯೋಗವಾಗಿರುವವೆಂಬ ಆಲೋಚನೆಯು ಅಪೊಸ್ತಲನಿಗೆ ಬಂತೆಂದು ತೋರುತ್ತದೆ. ಯಾಕಂದರೆ ಆ ಸಭೆಗಳೆಲ್ಲೆಲ್ಲಾ ಅದೇ ಮೋಸ ಗಳಿಗೆ ಆಸ್ಪದವಾಗ ತಕ್ಕಂಥಾ, ಮುಂದಿನ ಅಧ್ಯಾಯಗಳಲ್ಲಿ ಕಾಣುವ ಪ್ರಕಾರ, ತದನಂತರ ಆಸ್ಪದವಾದಂ ಥಾ, ಅತಿಶಯ ಜ್ಞಾನದ ಆಸಕ್ತಿಯು ಪ್ರಬಲವಾಗಿತ್ತು. ಆದ್ದರಿಂದ ಇನ್ನೊಂದು ಪತ್ರಿಕೆಯನ್ನು ಬರದು, ಅದನ್ನು ಸಹ ತುಕಿಕನ ಕೈಗೆ ಕೊಟ್ಟು, ಅದನ್ನು ಎಫೆಸದಲ್ಲಿಯೂ, ಅದರ ಪ್ರದೇಶದಲ್ಲಿಯೂ ಇರುವ ಸಭೆ ಗಳಲ್ಲಿ ಓದಿಸ ಬೇಕೆಂದು ಆಜ್ಞಾಪಿಸಿದನು. ಕೊಲೊಸ್ಸೆಯವರ ಪತ್ರಿಕೆಯ ಮುಖ್ಯಾಭಿಪ್ರಾಯವು ಇದರಲ್ಲಿ ವಿಶೇಷವಾಗಿ ವಿವರಿಸಿ ಅದೆ. ಆದರೆ ಆ ಬೇರೆ ಸಭೆಗಳಲ್ಲಿ ಕಳ್ಳ ಬೋಧಕರು ಶೇರಿದರೆಂಬ ವರ್ತಮಾನವು ಅಪೊಸ್ತಲನಿಗೆ ಬಾರದೆ ಇದ್ದ ಕಾರಣ, ಅವರ ವಿಷಯವಾದ ಉದ್ಬೋಧನೆಯನ್ನು ಬರೆಯುವದಕ್ಕೆ ತಕ್ಕ ಕಾಲವಲ್ಲವೆಂತ ಬರೆಯಲಿಲ್ಲ. ಈ ಪ್ರಕಾರವಾಗಿ ವ್ಯಾಖ್ಯಾನಿಗಳು ಪೂರ್ವಕಾಲದಿಂದ ಲಕ್ಷಿಸಿದಂಥಾ, ಉಭ ಯ ಪತ್ರಿಕೆಗಳಲ್ಲಿ ಕಾಣುವಂಥಾ, ಅಪರೂಪವಾದ ಶಬ್ದಸಾಮ್ಯದ ಕಾರಣವು ಏನೆಂದು ತಿಳಿದು ಕೊಳ್ಳ ಬಹುದು. ಉಭಯ ಪತ್ರಿಕೆಗಳಲ್ಲಿ ಪ್ರಥಮವಾದದ್ದು ಯಾವದೆಂದು, ಸೂಚಿತವಾಗಿರುವದಿಲ್ಲ. ಆದ್ದರಿಂದ ವ್ಯಾಖ್ಯಾನಿಗಳಲ್ಲಿ ಒಬ್ಬರು: ಪೌಲನು ಕೊಲೊಸ್ಸೆಯವರಿಗೆ ಒಂದು ಬೋಧನಾಪತ್ರಿಕೆಯನ್ನು ಸಹಜವಾದ ರೀತಿಯಿಂದ ಬರದು, ಆ ಸಭೆಯ ಸ್ಥಿತಿಗತಿಗೆ ಉಚಿತವಾದ ವಿಶೇಷ ಉದ್ಬೋಧನೆಗಳನ್ನು ಪರಿಚಿತರಾದ ಜನರಿಗೆ ತಿಳಿಸ ತಕ್ಕ ವಿಧದಿಂದ ಶೇರಿಸಿದನು; ಬಳಿಕ ತನಗೆ ಪರಿಚಿತರಿಲ್ಲದ ಅನೇಕ ಸಭೆಗಳು ಓದ ತಕ್ಕ ಅದೇ ಅಭಿಪ್ರಾಯದ ಮತ್ತೊಂದು ಪತ್ರಿಕೆಯನ್ನು ರಚಿಸಿ, ಅದರಲ್ಲಿ ಬೋಧನೆಯ ಮಾತುಗಳನ್ನು ವಿವರವಾಗಿ ಬರದು, ವಿಶೇಷ ಸಂಗತಿಗಳನ್ನು ಸೂಚಿಸಲಿಲ್ಲ; ಈ ಪತ್ರಿಕೆಯು ಎಫೆಸದವರದೆಂದು ಹೆಸ ರ್ಕೊಂಡದೆ ಎಂಬದಾಗಿ ಸ್ಥಾಪಿಸುತ್ತಾರೆ. ಮತ್ತೊಬ್ಬರು: ಅಪೊಸ್ತಲನು ಎಫೆಸದವರದೆಂದು ಹೆಸರ್ಕೊಂಡ ಪರಿವರ್ತನಪತ್ರದಲ್ಲಿ ಮುಖ್ಯವಾದ ಬೋಧನೆಗಳನ್ನು ವಿಸ್ತಾರವಾಗಿ ಬರದು, ತದನಂತರ ತನಗೆ ಪರಿಚಿತ ರಾದ ಕೊಲೊಸ್ಸೆಯವರಿಗೆ ಪ್ರತ್ಯೇಕವಾದ ಪತ್ರಿಕೆಯನ್ನು ರಚಿಸಿ, ಅದರಲ್ಲಿ ಪರಿವರ್ತನಪತ್ರಿಕೆಯ ಬೋಧ ನೆಗಳನ್ನು ಕ್ಷಪ್ತವಾಗಿ ಶೇರಿಸಿ, ಪರಿಚಿತರಿಗೆ ತಿಳಿಸ ತಕ್ಕ ವಿಶೇಷೋದ್ಬೋಧನೆಗಳನ್ನು ಸಹ ಕೂಡಿಸಿದನೆಂದು ಹೇಳುತ್ತಾರೆ. ಈ ಉಭಯ ತಾತ್ಪರ್ಯವೂ ಸಂಭಾವ್ಯವಾದ್ದು. ಆದರೆ ಎಫೆ. ೬, ೨೧ರಲ್ಲಿ ಬರದದ್ದನ್ನೂ, ಕೊಲೊ. ೪, ೭ರಲ್ಲಿ ಬರದದ್ದನ್ನೂ ಸರಿ ನೋಡಿದರೆ, ಎಫೆಸದವರ ಪತ್ರಿಕೆ ಎರಡನೇದೆಂದು ಕಾಣುತ್ತದೆ. ಹ್ಯಾ ಗಂದರೆ: ಕೊಲೊಸ್ಸೆಯವರಿಗೆ ಪೌಲನು: ನನ್ನ ಸ್ಥಿತಿಯನ್ನೆಲ್ಲಾ ತುಕಿಕನು ನಿಮಗೆ ತಿಳಿಸುವನೆಂದು ಬರೆಯು ತ್ತಾನೆ. ಎಫೆಸದವರ ಪತ್ರಿಕೆಯಲ್ಲಿ: ನೀವು ಸಹ ತಿಳಿಯುವ ಹಾಗೆ, ತುಕಿಕನು ನಿಮಗೆಲ್ಲಾ ತಿಳಿಸುವನೆಂದು ಬರದದೆ. ಹಾಗಾದರೆ ಪೌಲನ ವರ್ತಮಾನ ಮೊದಲು ಕೊಲೊಸ್ಸೆಯವರಿಗೆ ದೊರಕಿತೆಂದು ನೆನಸ ತಕ್ಕದ್ದು. ಆದಾಗ್ಯೂ ಪೂರ್ಣ ನಿಶ್ಚಯ ತೋರುವದಿಲ್ಲ.

ಫಿಲೇಮೋನನ ಪತ್ರಿಕೆಯನ್ನು ತುಕಿಕನ ಸಂಗಡ ಪ್ರಯಾಣ ಮಾಡಿದ ಒನೇಸಿಮನು ಕೊಲೊ. ೪, ೯. ತನ್ನ ಯಜಮಾನನಿಗೆ ಒಪ್ಪಿಸ ತಕ್ಕ ಅನುಕೂಲ ಪತ್ರಿಕೆಯಾಗಿತ್ತು.

ಹೀಗಿರಲಾಗಿ ಕೊಲೊಸ್ಸೆಯವರ, ಎಫೆಸದವರ, ಫಿಲೇಮೋನನ ಪತ್ರಿಕೆಗಳು ಒಂದೇ ಕಾಲದಲ್ಲಿ ರಚಿತ

ಕೊಲೊಸ್ಸೆಯವರ ಪತ್ರಿಕೆ.

ವಾದವುಗಳೆಂದು ಪೂರ್ಣ ಪ್ರಾಮಾಣ್ಯವಾಗಿದೆ. ಫಿಲಿಪ್ಪಿಯವರದು ತದನಂತರ ರಚಿತವಾಯಿತೆಂದು ಅನೇಕರು ನೆನಸುತ್ತಾರೆ. ಆದರೆ ಅದು ಫಿಲೇಮೋನನ ಪತ್ರಿಕೆಗಿಂತ ಪೂರ್ವವಾದದ್ದೆಂದು ತೋರುತ್ತದೆ. ಯಾಕಂದರೆ: ಪೌಲನು ಫಿಲಿಪ್ಪಿಯವರಿಗೆ, ಒಂದು ವೇಳೆ ಬೇಗ ಸಾಯುತ್ತೇನೆಂದು, ಒಂದುವೇಳೆ ಶರೆಯಿಂದ ಬಿಡುಗಡೆಯಾಗಿ ನಿಮ್ಮ ಬಳಿಗೆ ಬರುತ್ತೇನೆಂತ ಭರವಸವಾಗಿದ್ದೇನೆಂದು ಬರೆಯುತ್ತಾನೆ. ಫಿಲೇಮೋನನಿಗೆ ವ. ೨೨. ತನಗೆ ಬಿಡಾರವು ಸಿದ್ಧ ಮಾಡ ಬೇಕೆಂದು, ಪೂರ್ಣ ನಿಶ್ಚಯದಿಂದ ಬರೆಯುತ್ತಾನೆ. ಆದರೆ ಈ ವಿಷಯವಾಗಿಯೂ ತರ್ಕ ಮಾಡ ಬೇಕಾದರೆ, ಮಾಡ ಬಹುದು.

ಹ್ಯಾಗಾದರೂ ಈ ನಾಲ್ಕು ಪತ್ರಿಕೆಗಳು ಒಂದೇ ಹೂವಿನಲ್ಲಿ ಒಟ್ಟಾಗಿ ಹುಟ್ಟಿದ ನಾಲ್ಕು ದಳಗಳೆಂಬುವದಕ್ಕೆ ಏನೇನೂ ಸಂಶಯವಿಲ್ಲ.

ಕೊಲೊಸ್ಸೆಯವರ ಪತ್ರಿಕೆಯು.

೧) ಪತ್ರಿಕಾಕರ್ತೃ. ಈ ಪತ್ರಿಕೆಗೂ ಎಫೆಸದವರದಕ್ಕೂ ಇರುವ ಪರಸ್ಪರಸಂಬಂಧವು.

ಕೊಲೊಸ್ಸೆಪಟ್ಟಣವು ಲಾವೊದಿಕಯ ಹಿಯೆರಪೊಲಿ ಪಟ್ಟಣಗಳಂತೆ ಫ್ರುಗ್ಯದೇಶದ್ದಾಗಿತ್ತು. ಅದು ಮೆಯಂದ್ರ ನದಿಗೆ ಕೂಡುವ ಲುಕ ಹೊಳೆಯು ನೆಲದಲ್ಲಿ ಅಂತರ್ಗತವಾಗುವ ಸ್ಥಳದಲ್ಲಿತ್ತು. ಈಗ ಕೊನಸ ಎಂಬ ತುರುಕರ ಕೋಟೆ ಇರುವ ಬಹಳ ಎತ್ತರವಾದ ಕದ್ಮಬೆಟ್ಟದ ಬುಡದಲ್ಲಿ ಕಟ್ಟಿ ಇತ್ತು. ಆ ದೇಶವು ಸೊಂಪಾಗಿಯೂ ಫಲಭರಿತವಾಗಿಯೂ ಇದ್ದದರಿಂದಲೂ, ಅದರಲ್ಲಿ ಹೋಗುವ ರೋಮಿಯಾಯ ರಾಜಮಾರ್ಗವು ವ್ಯಾಪಾರಕ್ಕೆ ಬಹಳ ಅನುಕೂಲವಾದ್ದರಿಂದಲೂ, ಕೊಲೊಸ್ಸೆಯು ಐಶ್ವರ್ಯ ಸಹಿತವಾದ ದೊಡ್ಡ ಪಟ್ಟಣವಾಗಿತ್ತು. ಆದರೆ ಅಪೊಸ್ತಲನು ಈ ಪತ್ರಿಕೆಯನ್ನು ಬರದು ಹೆಚ್ಚುಕಡಮೆ ಎರಡು ವರುಷವಾದನಂತರ ದೊಡ್ಡ ಭೂಕಂಪದಿಂದ ಲವೊದಿಕಯ ಹಿಯೆರಪೊಲಿ ಕೊಲೊಸ್ಸೆ ಪಟ್ಟಣಗಳು ಹಾಳಾದವು. ತರುವಾಯ ಕೊಲೊಸ್ಸೆಪಟ್ಟಣ ಹೊಸದಾಗಿ ಕಟ್ಟಿದ್ದಾಗ್ಯೂ, ಪೂರ್ವದಂತೆ ವೃದ್ಧಿಯಾಗಲಿಲ್ಲ. ಈ ಸಭೆಗಳು ಸ್ಥಾಪಿತವಾದ ಸ್ವಲ್ಪ ಕಾಲದ ಒಳಗೆ ನಿಯಮಾಸಕ್ತರಾದ ಯೆಹೂದರ ದುರ್ಬೋಧನೆಯಿಂದ ಮಾತ್ರವಲ್ಲ, ಫ್ರುಗ್ಯದೇಶದವರ ವಿಶೇಷ ಸ್ವಭಾವದಿಂದ ಕಂಟಕವು ಹುಟ್ಟಿತು. ಫ್ರುಗ್ಯದವರು ಪೂರ್ವಕಾಲದಲ್ಲಿ ಅದ್ಭುತಕೃತ್ಯ ರಹಸ್ಯವಿದ್ಯಾಭ್ಯಾಸಕ್ತರಾಗಿ ಸರ್ವ ಲೋಕದಲ್ಲಿಯೂ ಪ್ರಖ್ಯಾತರಾಗಿದ್ದರು. ಆ ದೇಶದದಲ್ಲಿ ರೂಢಿಯಾದ ಬಹಳ ಪುರಾಣಕಥೆಗಳಿಂದ ಈ ಗುಣವು ವೃದ್ಧಿ ಹೊಂದುತ್ತಾ ಬಂತು. ಯೆಹೂದರಾದ ಕಳ್ಳ ಬೋಧಕರು, ಫ್ರುಗ್ಯದವರ ಮನಸ್ಸನ್ನು ತಿಳಿದು ಕೊಂಡು, ಯೇಸು ಕ್ರಿಸ್ತನ ಕೃಪೆಯಲ್ಲಿ ದೃಢವಾಗದೆ ಇದ್ದ ಕೊಲೊಸ್ಸೆಯ ಸಭೆಯವರನ್ನು ಯೆಹೂದಸಂಪ್ರದಾಯಗಳೆಂಬ ಬಲೆಯಲ್ಲಿ ಶಿಕ್ಕಿಸುವದಕ್ಕೆ ಯತ್ನಮಾಡಿದರೆಂದು, ಮೇಲೆ ಸೂಚಿತವಾಗಿದೆ.

ಎಫೆಸ ಮುಂತಾದ ಸಣ್ಣಾಸ್ಯದ ಪಟ್ಟಣಗಳಲ್ಲಿದ್ದ ಎಲ್ಲಾ ಸಭೆಗಳು ಅಧಿಕ ಜ್ಞಾನಾಸಕ್ತವಾಗಿದ್ದದರಿಂದ, ಕೊಲೊಸ್ಸೆಯವರ ಪತ್ರಿಕೆಯ ಸಾರಾಂಶವನ್ನು ಆ ಸಭೆಗಳಿಗೆಲ್ಲಾ ತಿಳಿಸುವದು ಪೌಲನಿಗೆ ಸಮಯೋಚಿತವಾದದ್ದೆಂದು ತೋರಿತು. ಆ ಸಭೆಗಳಲ್ಲಿ ಎಫೆಸದವರದು ಪ್ರಾಮುಖ್ಯವಾದ್ದರಿಂದ, ಅವರ ಹೆಸರು ಪತ್ರಿಕೆಗೆ

ಅಪಾ. ಪ. ಎ. ಪೌಲ್ಸ್ಕೆದ. ಪರಜನರಲ್ಲಿ ಕ್ರೈಸ್ತಸ್ಥ.

ಕೊಲೊಸ್ಸೆಯವರ ಪತ್ರಿಕೆ.

ಇಂತು. ಹೀಗಿರಲಾಗಿ, ಕ್ರಿಸ್ತನ ದೇವತ್ವದ ವಿಷಯವಾದ ಸೂತ್ರಗಳು ಎಫೆಸದವರ ಪತ್ರಿಕೆಯಲ್ಲಿಯೂ ಅತಿ ವಿವರವಾಗಿ ಬರದವೆ. ಕ್ರಿಸ್ತನು ಭಕ್ತನಲ್ಲಿದ್ದಾನೆಂಬದು ಮಾತ್ರವೇ ಇದರಲ್ಲಿ ವಿಶೇಷವಾಗಿ ಸೂಚಿತವಾಗಿದೆ. ಎರಡು ಪತ್ರಿಕೆಗಳಲ್ಲಿ ಇರುವ ಬೋಧನಾಪರಸ್ಪರಸಾದೃಶ್ಯವನ್ನು ವಿದ್ಯಾರ್ಥಿಯು ಚನ್ನಾಗಿ ತಿಳಿಯುವ ಹಾಗೆ, ಒಂದು ಅನುಕ್ರಮಣಿಕೆಯು ಉಪಯೋಗವಾದೀತು.

ಬೋಧನಾಪರಸ್ಪರಸಂಬಂಧದ ಅನುಕ್ರಮಣಿಕೆಯು.

ತಾತ್ಪರ್ಯಾನುಕ್ರಮಣಿಕೆಯು.	ಎಫೆಸದವರ ಪತ್ರಿಕೆ.	ಕೊಲೊಸ್ಸೆಯವರ ಪತ್ರಿಕೆ.
ಸಭೆಯ ಸ್ಥಿತಿಗಾಗಿ ಮಾಡುವ ಕೃತಜ್ಞಾಪನೆ.		
ಕ್ರಿಸ್ತನ ಮಹಿಮಾಪೂರ್ಣ ಜ್ಞಾನಕ್ಕಾಗಿ ಮಾಡುವ ವಿಜ್ಞಾಪನೆ.	೧, ೧೫—೨೩.	೧, ೯—೨೩.
ಕ್ರಿಸ್ತನು ನಮ್ಮ ವಿಮೋಚಕನು.	೨, ೧—೧೦.	೧, ೨೧—೨೩.
ಪೌಲನು ಆತನ ಸೇವಕನು.	೩, ೭.	೧, ೨೫.
ಲೌಕಮರ್ಮದ ಪ್ರಕಟಣೆಯು.	೯—೧೦.	೨೬—೨೭.
ಆತನಲ್ಲಿ ಬೇರೂರಿರಿ!	೧೭.	೨, ೭.
ಸಭೆಯು ಕ್ರಿಸ್ತನ ಶರೀರವಾಗಿದೆ.	೪, ೧೫. ೧೬.	೧೯.
ಸುಳ್ಳಾಡ ಬೇಡಿರಿ.	೨೫.	೩, ೯.
ಪುರಾಣ ಮನುಷ್ಯನು.	೨೨—೨೪.	೯. ೧೦.
ನಿರ್ದ್ವೇಷ ಗುಣವು.	೩೨.	೧೨.
ಸ್ತುತಿಗಾಯನವು.	೫, ೧೯. ೨೦.	೧೬. ೧೭.
ಗೃಹಧರ್ಮವು.	೨೧. ಸ. ೬, ೬—೯.	೧೮—೨೨. ಸ. ೪, ೧.
ಕಾಲೋಚಿತವಾಗಿ ನಡದು ಕಾಪಾಡುವದು.	೧೬.	೪, ೫.
ವಿಜ್ಞಾಪನೆಯು.	೬, ೧೮. ೧೯.	೩.
ತುಕಿಕನು.	೨೧.	೭.

ಉಭಯ ಪತ್ರಿಕೆಗಳಲ್ಲಿ ಮುಖ್ಯ ಭೇದವೇನಂದರೆ: ಕೊಲೊಸ್ಸೆಯವರ ಪತ್ರಿಕೆಯು ಎರಡನೆ ಸಂಧಿಯಲ್ಲಿ ಕಳ್ಳ ಬೋಧಕರ ವಿಷಯವಾಗಿ ಬರದ ಪ್ರಸ್ತಾಪವು ಎಫೆಸದವರ ಪತ್ರಿಕೆಯಲ್ಲಿ ಕಾಣುವದಿಲ್ಲ. ಆದರೆ ಇದರಲ್ಲಿ ಸಭೆಯು ಕ್ರಿಸ್ತನ ಶರೀರವೆಂಬ ಬೋಧನೆಯು ಹೆಚ್ಚು ವಿವರವಾಗಿ ಬರದದೆ. ಕೊಲೊಸ್ಸೆಯವರ ಪತ್ರಿಕೆಯ ಮೊದಲನೆ ಸಂಧಿಯ ವಾಕ್ಯವು ಎಫೆಸದವರ ಪತ್ರಿಕೆಯಲ್ಲಿ ಮೂರು ಸಂಧಿಯಾಯಿತು. ಉದ್ದೇಶಬೋಧನಾಸೂಚಕವಾದ ಎರಡನೆ ಭಾಗದಲ್ಲಿ ಎಫೆಸದವರ ಪತ್ರಿಕೆಯಲ್ಲಿ ಸಭೆಯ ಪರಿಶುದ್ಧ ಐಕ್ಯವು, ಕೊಲೊಸ್ಸೆಯವರ ಪತ್ರಿಕೆಯಲ್ಲಿ ದೈವಿಕ ಭಾವವು ಮೂಲವಾಕ್ಯವಾಗಿದೆ. ಮುಂದಿನ ಕ್ರಮವು ಎರಡು ಪತ್ರಿಕೆಗಳಲ್ಲಿಯೂ ಒಂದೇ. ಎಫೆಸದವರ ಪತ್ರಿಕೆಯಲ್ಲಿ ಮಾತ್ರ ವಿಶೇಷವಾದ ಎರಡು ಪ್ರಸ್ತಾವ ಶೇರಿಯದೆ: ಸ. ೫, ೨೦. ವಿವಾಹವು ಕ್ರಿಸ್ತನಿಗೂ, ಸಭೆಗೂ ಇರುವ ಸಂಬಂಧದ ಸಾದೃಶ್ಯವಾಗಿದೆಂಬುವದು. ಸ. ೬, ೧೦—೧೭. ಕ್ರೈಸ್ತನ ಆತ್ಮಿಕಯುದ್ಧದ ಸನ್ನಾಹೋದ್ಬೋಧನೆಯು.

ಕೊಲೊಸ್ಸೆಯವರ ಪತ್ರಿಕೆ.

೨) ಕೊಲೊಸ್ಸೆಯವರ ಪತ್ರಿಕೆಯ ತಾತ್ಪರ್ಯವು.

ಇದು ಸಹ ಎಫೆಸದವರ ಪತ್ರಿಕೆ ಮುಂತಾದ ಪೌಲನ ಎಲ್ಲಾ ಪತ್ರಿಕೆಗಳ ಪ್ರಕಾರ ದ್ವಿಭಾಗವಾಗಿದೆ. ಸ. ೧. ೨ರ ಮೊದಲನೆ ಭಾಗವು ವಿಶ್ವಾಸೋದ್ದಿಶ್ಯವಾದದ್ದು, ಎರಡನೇದು ಧರ್ಮೋದ್ದಿಶ್ಯವಾದದ್ದು. ಎರಡು ಭಾಗಗಳ ಮುಖ್ಯಾರ್ಥವೇನಂದರೆ: ಕರ್ತನೂ, ತಲೆಯೂ ಆದ ಕ್ರಿಸ್ತನನ್ನೂ, ಆತನ ಕೃಪಾಪ್ರಸಾದಗಳ ಅಪಾರವಾದ ಐಶ್ವರ್ಯವನ್ನೂ ಹೊಗಳಿ, ಆತನಿಗೆ ಪೂರ್ಣಾಧೀನರಾಗಿ, ಆತನ ಮುಖಾಂತರ ವಿರೋಧವಾದದ್ದನ್ನೆಲ್ಲಾ ಹೋಗಲಾಡಿಸ ಬೇಕು. ಆತನ ಸರ್ವಾರ್ಥವಾದ ವಿಮೋಚನಾಫಲವನ್ನು ಯಾವ ವೋಸದಿಂದಲಾದರೂ ಕಳಕೊಳ್ಳ ಬಾರದು. ಅಪೊಸ್ತಲನು ಕೊಲೊಸ್ಸೆಯವರ ಸ್ಥಿತಿಗತಿಗೆ ಉಚಿತ ಮಾತುಗಳಿಂದ ಆರಂಭ ಮಾಡಿ, ಸುವಾರ್ತೆಯ ಮುಖ್ಯ ಬೋಧನೆಗಳನ್ನು ವಿವರಿಸುವದರಿಂದ ಉಪದೇಶಿಸುತ್ತಾನೆ. ಬೋಧನೆಯ ಕ್ರಮವೇನಂದರೆ:

ಮೊದಲನೆ ಭಾಗವು. ಸ. ೧. ಅ) ಅಪೊಸ್ತಲನು ಕೊಲೊಸ್ಸೆ ಸಭೆಯವರ ವಿಷಯವಾಗಿ ಅವರ ಬೋಧಕನಾದ ಎಪಫ್ರನ ಮುಖಾಂತರ ತಿಳಿದ ವರ್ತಮಾನಗಳಿಗಾಗಿ, ಸ್ತೋತ್ರ ಮಾಡುತ್ತಾನೆ. ಸ. ೧, ೧—೮;

ಆ) ಅವರು ಸರ್ವಸೃಷ್ಟಿಗಿಂತ ಮಹೋನ್ನತನಾದ ದೇವರ ಮಗನಿಂದುಂಟಾದ ರಕ್ಷಣೆಯ ಮಹಿಮೆಯ ನಿಜ ಜ್ಞಾನದಿಂದ ಹೆಚ್ಚು ಹೆಚ್ಚಾಗಿ ತುಂಬಲಿ ಎಂದು ಪ್ರಾರ್ಥಿಸುತ್ತಾನೆ. ವ. ೯—೨೩;

ಇ) ಈ ವಿಷಯದಲ್ಲಿ, ತನ್ನ ಶ್ರಮಗಳನ್ನೂ, ತನ್ನ ಉದ್ಯೋಗದ ಮಹಿಮೆಯನ್ನೂ ಸೂಚಿಸುವದರಿಂದ, ಅವರನ್ನು ಸ್ಥಿರ ಪಡಿಸುತ್ತಾನೆ. ವ. ೨೪—೨೯.

ಎರಡನೆ ಸಂಧಿಯಲ್ಲಿ ಅಪೊಸ್ತಲನು ಕೊಲೊಸ್ಸೆಯ ಸಭೆಯಲ್ಲಿ ಹಬ್ಬುವ ಅಬದ್ಧಬೋಧನೆಗಳನ್ನು ಖಂಡಿಸುವದಕ್ಕಾಗಿ, ತನಗೆ ಅವರಲ್ಲಿರುವ ಮಮತೆಯನ್ನೂ, ಸಂಪೂರ್ಣ ಜ್ಞಾನನಿಧಿಯಾದ ಯೇಸು ಕ್ರಿಸ್ತನ ಮಹಿಮೆಯನ್ನೂ ವರ್ಣಿಸುತ್ತಾನೆ. ಯೇಸು ಕ್ರಿಸ್ತನ ಜ್ಞಾನದ ತತ್ವಬೋಧನೆಗಳನ್ನು ವಿವರಿಸಿ ಅಪೊಸ್ತಲನು ಪ್ರತಿತರ್ಕಿಸುವ ಅಬದ್ಧ ಬೋಧನೆಗಳು ಯಾವವಂದರೆ: ಅ) ವ. ೪. ಜ್ಞಾನವೆನ್ನಿಸಿ ಕೊಳ್ಳುವ ಸುಳ್ಳು ಅರುವಿನ ಶೋಧನೆಗಳು. ಇವುಗಳಿಗೆ ವಿರೋಧವಾಗಿ ಸಮಸ್ತ ಜ್ಞಾನನಿಧಿಯಾದ ಕ್ರಿಸ್ತನ ಮಹಿಮೆಯನ್ನು ವರ್ಣಿಸುತ್ತಾನೆ. ಇ) ವ. ೧೧. ೧೬. ಪರಿಚ್ಛೇದನ ಆಹಾರಾದ್ಯಾಚರಣೆಯ ಪದ್ಧತಿಗಳನ್ನು ಕೈಕೊಳ್ಳುವ ಯೆಹೂದ ನಿಯಮಾಸಕ್ತಿಯು. ಉ) ವ. ೧೨—೨೦. ಶಕ್ತಿ ಮುಂತಾದವುಗಳ ವಶೀಕರಣಾರ್ಥವಾದ ಆಹಾರಪಾನಾದಿಪರಿತ್ಯಾಗದ ತಪಸ್ಸುಗಳನ್ನು ನಡಿಸುವ ಅಜ್ಞಾನ ದೇಹದಂಡನವು.

ಎರಡನೆ ಭಾಗವನ್ನು ಹೊಸ ಭಾಗವೆಂದು ಸೂಚಿಸದೆ, ೩ನೆ ಸಂಧಿಯಲ್ಲಿ ನೀತಿಯೆ ನಿಜಸಾಧನವನ್ನು ಬೋಧಿಸಿ, ವ. ೧—೪. ದೈವಿಕ ಮನಸ್ಸನ್ನೂ, ವ. ೫—೧೭. ಷಡ್ವರ್ಗಸಂಗವಾದ ಹಳೇಮನುಷ್ಯನೆಂಬ ಲೌಕಿಕಭಾವಪರಿತ್ಯಾಗವನ್ನೂ ಬೋಧಿಸಿ, ವಿಶೇಷವಾಗಿ ೫ನೆ ವಚನದಲ್ಲಿ ಸುಳ್ಳಾಡುವಂಥಾದ್ದನ್ನು ಶಿಕ್ಷಿಸಿ, ೧೦ನೇ ವಚನದಲ್ಲಿ ನೂತನ ಭಾವಧಾರಣೆಯನ್ನು ಸೂಚಿಸುತ್ತಾನೆ. ಈ ಪ್ರಕಾರವಾಗಿ ಮನಃಪೂರ್ವಕಾನ್ಯೋನ್ಯವೂ, ಪ್ರೀತಿಯೂ, ಸಮಾಧಾನವೂ, ಪರಿಶುದ್ಧ ಸಂತೋಷವೂ ಹುಟ್ಟುತ್ತವೆಂಬುವದನ್ನು ಸಾಧಾರಣವಾಗಿ ಪ್ರಸ್ತಾಪಿಸಿ, ವಿಶೇಷವಾದ ಗೃಹಧರ್ಮಬೋಧನೆಗಳನ್ನು ಸ. ೩, ೧೪—೪, ೧. ಅತ್ಯಾವಶ್ಯಕ

ವೆಂದು ವಿವರಿಸುತ್ತಾನೆ. ಳನೇ ಸಂಧಿಯಲ್ಲಿ ಮೊದಲು ಅಂತ್ಯೋದ್ಭೋಧೆಯು; ವ. ೭—೧೪. ವಂದನೆಗಳೂ ಸ್ವಹಸ್ತಲಿಖಿತ ಅಂತ್ಯವಾದವೂ ಬರದವೆ.

ಬೌಧನಾರ್ಥವಾದ ಮೊದಲನೆ ಭಾಗವು. ಸ. ೧. ೨.

೧) ಕ್ರಿಸ್ತನಿಗೂ, ಆತನಲ್ಲಿರುವ ರಕ್ಷಣೆಗೂ ಇರುವ ಮಹಿಮೆಯು. ಸ. ೧.

ಅ) ವಂದನೆಯು. ಸಭೆಯ ಮನೋಹರವಾದ ಸ್ಥಿತಿಗಾಗಿ ಮಾಡುವ ಕೃತಜ್ಞಾಪನೆಯು. ವ. ೧—೪.

ವ. ೧. ಬಂಧನದಲ್ಲಿ ರಚಿತವಾದ ಫಿಲಿಪ್ಪಿಯವರ ಮತ್ತು ಫಿಲೇಮೋನನ ಪತ್ರಿಕೆಗಳ ವಂದನಾವಾಕ್ಯದಲ್ಲಿ ಪೌಲ ತಿಮೊಥೆಯರ ಹೆಸರು ಕೂಡಿರುವ ಪ್ರಕಾರ, ಇದರಲ್ಲಿಯೂ ಇಬ್ಬರ ಹೆಸರುಗಳು ಬರುತ್ತವೆ. ೨. ಕೊಲೊಸ್ಸೆಯಲ್ಲಿರುವ ಭಕ್ತರಿಗೆ (ರೋಮಪುರದ ಕ್ರೈಸ್ತರಿಗೆ ರೋಮಾ. ೧೬, ೧೫., ಕೊರಿಂಥದವರಿಗೆ ೧ಕೊರಿ. ೧, ೨. ೨ ಕೊರಿ. ೧, ೧., ಎಫೆಸದವರಿಗೆ ಎಫೆ. ೧, ೧., ಫಿಲಿಪ್ಪಿಯವರಿಗೆ ಫಿಲಿ. ೧, ೧., ಯೆರೂಸಲೇಮಿನ ಕ್ರೈಸ್ತರಿಗೆ ರೋಮಾ. ೧೫, ೨೬. ಅಪೊ. ಕ್ರಿ. ೨೬, ೧೦., ಮಾಡುವ ಪ್ರಕಾರ) ಪರಿಶುದ್ಧರೆಂದು ಹೆಸರಿಟ್ಟು, ವಂದಿಸಿ, ವಾಡಿಕೆಯ ಪ್ರಕಾರ, ಕರ್ತನ ಕೃಪೆಯು, ಅದರಿಂದ ಹುಟ್ಟುವ ಅಂತರಂಗ ಸಮಾಧಾನವು, ಇವುಗಳ ಅನುಭವವಾಗಲಿ ಎಂದು ಆಶೀರ್ವದಿಸುತ್ತಾನೆ. ೩. ಬಳಿಕ ಕೊರಿಂಥದವರು, ಫಿಲಿಪ್ಪಿಯವರು, ಥೆಸಲೊನೀಕೆಯವರು ಮುಂತಾದವರ ಪತ್ರಿಕೆಗಳ ಪ್ರಕಾರ, ತಾನು ಅವರಿಗಾಗಿ ಮಾಡುವ ಪ್ರಾರ್ಥನೆಗಳಲ್ಲಿ ದೇವರಿಗೆ ಯಾವಾಗಲೂ ೪. ಅವರು ವಿಶ್ವಾಸ, ಸಹೋದರಪ್ರೀತಿ, ಆಶೆ, ಈ ಮೂರು ಕ್ರೈಸ್ತ ಮೂಲಗುಣಗಳಲ್ಲಿ ದೃಢವಾಗಿರುವದರಿಂದ, ಕೃತಜ್ಞಾಪಿಸುತ್ತೇನೆಂದು, ಅಂತಃಕರಣವಾಕ್ಯವನ್ನು ತೊಡಗುತ್ತಾನೆ. ೫. ಅವರು ದಿವದಲ್ಲಿ ಇಟ್ಟಿರುವಂಥಾ, ಸುವಾರ್ತೆಯ ಸತ್ಯವಾದ ಮಾತಿನಿಂದ ವಾದ್ದತ್ತವಾದಂಥಾ, ನಿಕ್ಷೇಪಗಳ ಆಶೆಯಿಂದ ಕೈಕೊಳ್ಳುವ ವಿಶ್ವಾಸ ಪ್ರೀತಿಗಳ ವರ್ತಮಾನಕ್ಕಾಗಿ ಕೃತಜ್ಞಾಪಿಸಿ, ೬. ಸರ್ವ ಲೋಕದಲ್ಲಿಯೂ ಆದ ಪ್ರಕಾರ, ವ. ೨೩., ಅವರಲ್ಲಿಯೂ, ೭. ಕ್ರಿಸ್ತನಿಗೆ ನಂಬಿಕೆಯುಳ್ಳ ಸೇವಕನಾಗಿರುವಂಥಾ, ೮. ಮುಖಪರಿಚಿತಿಯಿಲ್ಲದವರನ್ನು ಸಹ ಅನ್ಯೋನ್ಯ ಮಾಡುವ ಪರಿಶುದ್ಧಾತ್ಮ ಮೂಲಕವಾದ ಅವರ ಪ್ರೀತಿಯ ಒಳ್ಳೆ ಸಮಾಚಾರವನ್ನು ತನಗೆ ಕೊಟ್ಟುಂಥಾ, ಎವಫ್ರನ ಪ್ರಸಂಗದಿಂದ ದೇವರ ಕೃಪೆಯು ಅವರಿಗೆ ನಿಜವಾಗಿ ಗೊತ್ತಾದಂದಿನಿಂದ, ಫಲವನ್ನು ಹುಟ್ಟಿಸುವ ಸುವಾರ್ತೆಯನ್ನು ವರ್ಣಿಸುತ್ತಾನೆ.

ಇ) ಯೇಸು ಕ್ರಿಸ್ತನ ದಿವ್ಯ ಮಹಿಮೆಯ ತಿಳುವಿಕೆಯು ಕೊಲೊಸ್ಸೆಯವರಿಗೆ ಸಂಪೂರ್ಣವಾಗಿ ಪ್ರಾಪ್ತವಾಗ ಬೇಕೆಂಬ ಅಪೊಸ್ತಲನ ಪ್ರಾರ್ಥನೆಯು. ವ. ೯—೨೩.

ವ. ೯. ನೀವು ಭಕ್ತಿಯ ನೆಲದಲ್ಲಿ ಅಷ್ಟು ಸ್ಥಿರವಾಗಿರುವದರಿಂದ, ನಾನು ಈ ವರೆಗೂ ಎಡೆ ಬಿಡದೆ ನಿಮಗಾಗಿ ಪ್ರಾರ್ಥಿಸಿ, ಯೇಸು ಕ್ರಿಸ್ತನಿಂದುಂಟಾದ ರಕ್ಷಣೆಯ ವಿಷಯವಾದ ದೇವಾಲೋಚನೆಯ ಸಂಪೂರ್ಣವಾದ ತಿಳುವಿಕೆಯು ನಿಮ್ಮ ವಿಶ್ವಾಸಕ್ಕೆ ಕೂಡುವದರಿಂದ, ನೀವು ಸತ್ಯವನ್ನೂ, ಕ್ರೈಸ್ತಬುದ್ಧಿಯನ್ನೂ ಹೇಳ್ಳ ಹೆಚ್ಚಾಗಿ ಕಲಿತು, ಬದ್ಧಾಬದ್ಧವನ್ನೂ, ಪ್ರಾಣಕ್ಷೇಮಾಕ್ಷೇಮಕಾರ್ಯಗಳನ್ನೂ ಚನ್ನಾಗಿ

ಕೊಲೊ. ೧, ೧೦—೧೨.

ವಿಶೇಷಿಸಿ, ೧೦. ಎಲ್ಲಾ ವಿಷಯದಲ್ಲಿಯೂ ಕರ್ತನ ದಾಸರಿಗೆ ಯೋಗ್ಯವಾಗಿಯೂ, ಕರ್ತನಿಗೆ ಮನೋಹಿತವಾಗಿಯೂ ನಡದು ಕೊಂಡು, ಸರ್ವವಿಧ ಸತ್ಕ್ರಿಯೆಗಳೆಂಬ ಫಲಗಳನ್ನೆಲ್ಲಾ ಫಲಿಸಿ, ೧೧. ದೇವರ ಪೂರ್ಣ ಜ್ಞಾನದಲ್ಲಿ ಅಧಿಕಾಧಿಕ ವೃದ್ಧಿಯಾಗಿ, ಆತನ ಮಹಿಮೈಶ್ವರ್ಯದಿಂದ ಪೂರ್ಣ ಬಲವನ್ನು ಹೊಂದಿ, ಶತ್ರುಬಾಧೆಗಳನ್ನೂ, ಸಹೋದರರ ತಪ್ಪುಗಳನ್ನೂ ಸಂತೋಷದಿಂದ ತಾಳುವದಕ್ಕೆ ಶಕ್ತರಾಗ ಬೇಕೆಂದು, ಬೇಡಿ ಕೊಳ್ಳುತ್ತೇನೆಂತ ಬರೆಯುತ್ತಾನೆ. ೧೨. ಅವರು ಈ ಅನುಭವಭರಿತರಾದರೆ, ಹಳ್ಳೀ ಒಡಂಬಡಿಕೆಯ ಜನಾಂಗಕ್ಕೆ ಬಾಧ್ಯತೆಯಾಗಿ ಕೊಟ್ಟ, ಕನಾನ ದೇಶವನ್ನಲ್ಲ, ಇಹದಲ್ಲಿ ಪ್ರಕಾಶತ್ವವನ್ನೂ, ಪರಿಶುದ್ಧತ್ವವನ್ನೂ, ಪರದಲ್ಲಿ ತನ್ನ ಮಹಿಮೆಯ ದೃಷ್ಟಿಯನ್ನೂ, ಅನುಭೋಗವನ್ನೂ ಕೊಟ್ಟು, ಬೆಳಕಿನಲ್ಲಿರುವ ಪರಿಶುದ್ಧರ ಕೃಪಾಸ್ತಿಯ ಅಸಂಪಾದಿತವಾಗಿ ನ್ಯಾಯವಾದ ಅತ್ಯುತ್ತಮ ಬಾಧ್ಯತೆಯನ್ನು ಹೊಂದುವದಕ್ಕೆ, ತನ್ನ ಮಕ್ಕಳನ್ನು ಸಿದ್ಧ ಮಾಡುವ ತಂದೆಯಾದ ದೇವರಿಗೆ ಅಧಿಕಾಧಿಕವಾದ ಜೀವಾನ್ವಿತ ಕೃತಜ್ಞತೆಯಲ್ಲಿ ಬೆಳೆಯುವರೆಂದು ಭಾವಿಸುತ್ತಾನೆ.

ಈ ಪತ್ರಿಕೆಯಲ್ಲಿಯೂ, ಎಫೆಸದವರ ಪತ್ರಿಕೆಯಲ್ಲಿಯೂ ಅಪೊಸ್ತಲನು ಪ್ರಥಮ ಸಂಧಿಗಳಲ್ಲಿ ತನ್ನ ಮನಸ್ಸಿನಲ್ಲಿ ಒಟ್ಟಾಗಿ ಹುಟ್ಟಿದ ಭಾವನಾವಿಶಿಷ್ಟವನ್ನು ಒಟ್ಟಿಗೆ ಉಚ್ಚರಿಸುವದಕ್ಕೆ ಎಸಗಿ, ಪ್ರಾರ್ಥನಾರೂಪವಾಗಿ ತೊಡಗಿ, ಬೋಧನಾರೂಪವಾಗಿ ಮುಗಿಸುತ್ತಾನೆ. ದೇವರು ಕೊಲೊಸ್ಸೆಯವರಲ್ಲಿ ತಮ್ಮ ರಕ್ಷಣೆಗಾಗಿ ಕೃತಜ್ಞವಾದ ಮನಸ್ಸನ್ನು ಕೊಡ ಬೇಕೆಂದು ಪ್ರಾರ್ಥಿಸಿ, ರಕ್ಷಕನಾದ ಕ್ರಿಸ್ತನ ಮಹಿಮೆಯನ್ನು ಬೋಧಿಸುತ್ತಾನೆ. ಕೊಲೊಸ್ಸೆಯವರಿಗೆ ವಿಶೇಷವಾಗಿ ಬರುವ ಕಂಟಕಗಳನ್ನು ನೆನಸಿ, ಈ ವಿಷಯದಲ್ಲಿ ತತ್ವಬೋಧನೆಯನ್ನು ಅವರಿಗೆ ಕೊಡುತ್ತಾನೆ. ಮುಂಚಿತವಾಗಿ ನಮಗೆ ಗೊತ್ತಾದ, ಪೌಲನ ಪೂರ್ವ ವೈರಿಗಳಾದ, ಯೆಹೂದಕ್ರೈಸ್ತರು ಮೋಶೆಯ ಆಚರಣಾ ನಿಯಮ ಸಂಪ್ರದಾಯಗಳೆಂಬ ಎಲ್ಲೆಯನ್ನು ಕಾಯುವದಕ್ಕೆ ಆಸಕ್ತರಾಗಿದ್ದರೂ, ಯೇಸು ಅಭಿಷಿಕ್ತರಾಜನೆಂದು ನಂಬಿದ ಮೇಲೆ, ೨ನೆ, ೧೧೦ನೆ ಕೀರ್ತನೆಗಳಲ್ಲಿ ಸೂಚಿತವಾದ ಆತನ ದೇವತ್ವಕ್ಕೆ ಸಂಶಯ ಪಡದೆ, ಹ್ಯಾಗಾದರೂ ಚರ್ಚಿಸದೆ ಇದ್ದರು. ಆದರೆ ಕೊಲೊಸ್ಸೆಯ ಸಭೆಯಲ್ಲಿ ಹೊಕ್ಕ ಕಳ್ಳಬೋಧಕರು ತತ್ವಜ್ಞಾನವೆಂಬ ತಮ್ಮ ಅಜ್ಞಾನದ ಪ್ರಕಾರ, ಕ್ರಿಸ್ತನು ಪರಮವಸ್ತುವೆಂದು ಹೇಳಿದಾಗ್ಯೂ, ಆತನು ದೇವತ್ವಮನುಷ್ಯತ್ವೈಕ್ಯವಾದ ದೇವಮನುಷ್ಯನಾಗಿದ್ದಾನೆಂಬದಕ್ಕೆ ಒಪ್ಪಿ ಕೊಳ್ಳದೆ, ಇಂದಿನ ಅವಿಶ್ವಾಸಿಗಳಾದ ಅಜ್ಞಾನಿಗಳ ಪ್ರಕಾರ ನಾನಾ ತರದ ವ್ಯರ್ಥ ವಾದಗಳನ್ನು ಮಾಡುತ್ತಾ ಇದ್ದರು. ಆದ್ದರಿಂದ ಅಪೊಸ್ತಲನು ಈ ಪತ್ರಿಕೆಯಲ್ಲಿ ಈ ಸೂತ್ರವನ್ನು ಕೂಲಂಕುಷವಾಗಿ ಸ್ಥಾಪಿಸುತ್ತಾನೆ. ಈ ಸ್ಥಳದಲ್ಲಿಯೂ, ಎಫೆ. ೧, ೨೦—೨೩ರಲ್ಲಿಯೂ, ಫಿಲಿ. ೨, ೬—೧೧ರಲ್ಲಿಯೂ ಕ್ರಿಸ್ತಭಾವವಿಷಯವಾದ ಪೌಲನ ಬೋಧನೆಯು ಮುಖ್ಯವಾಗಿ ಪ್ರಕಟವಾಗಿದೆ. ಆ ದುರ್ಬೋಧೆಯು ಆ ಸೀಮೆಗಳಲ್ಲಿ ಹೆಚ್ಚು ಪ್ರಬಲವಾದನಂತರ ಅಪೊಸ್ತಲನಾದ ಯೋಹಾನನು ಸಹ ಪಿತೃಪುತ್ರಭಾವೈಕ್ಯವೆಂಬ ಸೂತ್ರವನ್ನು ತನ್ನ ಗ್ರಂಥಗಳಲ್ಲಿ ವಿಶೇಷವಾಗಿ ವಿವರಿಸಿದನು. ಯೋಹಾನನ ಸುವಾರ್ತೆಯ ಆದಿ ವಾಕ್ಯಕ್ಕೆ ಪೂರ್ಣಾನುಸಾರವಾಗಿ, ಪೌಲನು ಇಲ್ಲಿ ಕ್ರಿಸ್ತನ ವೃತ್ತಿ, ಕ್ರಿಸ್ತನ ಮುಖಾಂತರ ಪ್ರಾಪ್ತವಾಗುವ ದೇವರ ಕೃಪಾಪ್ರಸಾದಗಳು, ಇವುಗಳ ವಿಷಯವಾದ ಪ್ರಸ್ತಾವನ್ನು ತೀರಿಸಿದನಂತರ, ಆತನ ಭಾವವನ್ನು ವರ್ಣಿಸಿ, ಯೇಸು ಕ್ರಿಸ್ತನು ಸರ್ವ ಸೃಷ್ಟಿ ಕರ್ತನೂ, ವ. ೧೫. ೧೬., ಸರ್ವ ಲೋಕ ಕರ್ತನಾದ ಪೌಲಕನೂ ವ. ೧೬., ಸಭಾಶಿರಸ್ಸೂ ದಿವದಲ್ಲಿಯೂ ಭೂಮಿಯಲ್ಲಿಯೂ ಇರುವ ದೇವರ ವಿಶಿಷ್ಟ ಸಭಾಪುನ

೭೫೦ ಅಪಾ. ಚ. ೨೬. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ.

ಕೊಲಾ. ೧, ೧೨—೧೭.

ಸ್ಥಾಪಕನೂ ವ. ೧೪—೨೦ ಆಗಿದ್ದಾನೆಂದು ಬೋಧಿಸುತ್ತಾನೆ. ಬಳಿಕ ಮೊದಲಿನ ಮಾತಿಗೆ ತಿರುಗಿ ಕೊಂಡು, ಕೊಲೊಸ್ಸೆಯವರಿಗೆ ಪ್ರಾಪ್ತವಾದ ಕೃಪೆಯನ್ನು ಜ್ಞಾಪಕ ಮಾಡಿ, ದೃಢವಾಗಿರ ಬೇಕೆಂದು ಎಚ್ಚರಿಸುತ್ತಾನೆ.

೧೨. ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆಯ ಭಾಗಕ್ಕಾಗಿ ನಮ್ಮನ್ನು ಸಿದ್ಧ ಮಾಡಿದ ತಂದೆಗೆ ಸ್ತೋತ್ರ ಮಾಡಿರಿ. ೧೩. ಅವನು ೧) ಅಂಧಕಾರದ ಅಧಿಕಾರದಾಳಿಗಿಂದ ೨) ನಮ್ಮನ್ನು ತಪ್ಪಿಸಿ, ತನ್ನ ಪ್ರೀತಿಯ ಮಗನ ರಾಜ್ಯದಾಳಿಗೆ ೩) ತಂದಿಟ್ಟಿದ್ದಾನೆ ೪). ೧೪. ಇವನಲ್ಲಿ ಅವನ ರಕ್ತದಿಂದಾಗುವ ವಿಮೋಚನೆಯಾದ ಪಾಪಗಳ ಪರಿಹಾರವು ನಮಗುಂಟು ೫). ೧೫. ಅವನು ಅದೃಶ್ಯನಾದ ದೇವರ ಪ್ರತಿರೂಪವು ೬), ಎಲ್ಲಾ ಸೃಷ್ಟಿಯ ಚೊಚ್ಚಲವನೂ ೭), ಆಗಿದ್ದಾನೆ. ೧೬. ಯಾಕಂದರೆ ೮) ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ, ಇರುವ ದೃಶ್ಯಾದೃಶ್ಯವಾದವುಗಳೂ ಎಲ್ಲಾ ಅವನಿಂದ ಸೃಷ್ಟಿಸಲ್ಪಟ್ಟವು; ಸಿಂಹಾಸನಗಳಾಗಲಿ, ಒಡೆತನಗಳಾಗಲಿ, ದಾರೆತನಗಳಾಗಲಿ, ಅಧಿಕಾರಗಳಾಗಲಿ, ಎಲ್ಲವುಗಳು ಅವನಿಂದಲೂ ೯) ಅವನಿಗಾಗಿಯೂ ಸೃಷ್ಟಿಸಲ್ಪಟ್ಟವು; ೧೭. ಮತ್ತು ಅವನು ಎಲ್ಲವುಗಳ ಮುಂಬೆ ೧೦) ಇದ್ದಾನೆ; ಅವನಲ್ಲಿ ಎಲ್ಲವುಗಳು ಸ್ಥಾಪಿಸಲ್ಪಟ್ಟವೆ;

೧. ಈ ಯಥಾಕ್ತದ ವಾಕ್ಯಗಳಲ್ಲಿ ಕ್ರಮವಾಗಿ ಪೂರ್ವ ವಾಕ್ಯವನ್ನು ಉತ್ತರ ವಾಕ್ಯವು ವಿವರಿಸುತ್ತದೆ. ದೇವರು ನಮ್ಮನ್ನು ದೈವಿಕ ಪದವಿಗೆ ಬಾಧ್ಯಸ್ಥರಾಗಿ ಮಾಡಿದ್ದಾನೆ. ವ. ೧೨. ಹ್ಯಾಗಂದರೆ: ೧) ನಾವು ಸ್ವಭಾವದಿಂದ ವಶವಾಗಿದ್ದ ಅಂಧಕಾರದ ಬಲದಿಂದ ನಮ್ಮನ್ನು ಬಿಡಿಸಿ, ೨) ಅದಕ್ಕೆ ಪ್ರತಿಕೂಲವಾದ ಯೇಸು ಕ್ರಿಸ್ತನ ರಾಜ್ಯದಲ್ಲಿ ಶೇರಿಸಿದ್ದಾನೆ. ವ. ೧೩. ಅದು ಹ್ಯಾಗಂದರೆ: ಕ್ರಿಸ್ತನು ತನ್ನ ಮರಣದಿಂದ ನಮಗಾಗಿ ಪಾಪಪರಿಹಾರವನ್ನು ಸಂಪಾದಿಸಿದ್ದಾನೆ. ವ. ೧೪. ಆತನ ಮರಣವು ಇಷ್ಟು ಸಾರ್ಥಕವಾದದ್ದು ಹ್ಯಾಗಂದರೆ: ಆತನು ದೇವೈಕ ಜೀವದವನಾಗಿದ್ದಾನೆ. ವ. ೧೫. ಆತನ ಜೀವವು ಇಂಥಾದ್ದೇ, ಯಾಕಂದರೆ: ೧) ಸೃಷ್ಟಿಯೂ, ವ. ೧೬. ೨) ಲೋಕಪಾಲನೆಯೂ, ವ. ೧೭. ೩) ಸಭೆಯ ಉಳ್ವಿಕೆಯೂ ಪಿತವಾದ ಸರ್ವ ಸೃಷ್ಟಿಯ ದೇವೈಕೀಕಾರವೂ ವ. ೧೮—೨೦. ಎಲ್ಲಾ ಆತನ ಕೆಲಸವಾಗಿದೆ.

೨. ಅಪಾ. ಕ್ರಿ. ೨೬, ೧೮ಲ್ಲಿ ಸೈತಾನನ ಅಧಿಕಾರವೆಂಬದಕ್ಕೆ ಅದೇ ಅಭಿಪ್ರಾಯವದೆ. ಪೌಲನು ಇಲ್ಲಿ ೧೨ನೆ ವಚನದ ಬೆಳಕಿಗೆ ಪ್ರತಿಕೂಲವಾಗಿ ಅಂಧಕಾರ ಶಬ್ದವನ್ನು ಪ್ರಯೋಗಿಸುತ್ತಾನೆ. ಈ ಶಬ್ದವು ಇಹಪರದ ಆತ್ಮಿಕ ದೈವಿಕ ದುರವಸ್ಥೆಯನ್ನೆಲ್ಲಾ ಸೂಚಿಸುತ್ತದೆ. ಎಫೆ. ೨, ೪—೮ರ ಪ್ರಕಾರ, ನಾವು ಸ್ವಭಾವದಿಂದ ಈ ಅಧಿಕಾರಕ್ಕೆ ಒಳಗಾಗಿದ್ದೇವೆ. ಪಾಪವೂ, ಅದರಿಂದ ಹುಟ್ಟುವ ದುರವಸ್ಥೆಯೂ, ಇವು ಒಬ್ಬಾಬ್ಬ ಮನುಷ್ಯನಲ್ಲಾಬ್ಬರೂ, ನರಜಾತಿವಿಶಿಷ್ಟದಲ್ಲಾಬ್ಬರೂ ಹುಟ್ಟುವದು ಮಾತ್ರವಲ್ಲ, ದೇವರಾಜ್ಞಾನಾಶಾದ್ಯಿಶ್ಯವಾಗಿಯೂ, ಸರ್ವಸೃಷ್ಟಿರಕ್ಷಣಾನಾಶಾದ್ಯಿಶ್ಯವಾಗಿಯೂ ಯತ್ನ ಮಾಡುವ ಬಲಿಷ್ಠ ಸಂಸ್ಥಾನವಾದ ಒಂದು ಭಯಂಕರ ರಾಜ್ಯವಾಗಿದೆ. ಇದರ ಸಂಗದ ನಡೆಯುವ ಕಾಳಗವು ಕಠಿಣವಾದದ್ದು. ಯೇಸು ಕ್ರಿಸ್ತನಿಂದುಂಟಾದ ವಿಮೋಚನೆಯಿಂದ ಅದು ಅನಾವಶ್ಯಕವಾಗಿ ಹ್ಯಾದದ್ದಲ್ಲ.

ಚಕ್ತರು ಅಂಧಕಾರದ ಬಲದಿಂದ ಬಿಡುಗಡೆಯಾದ ಕಾರಣ ಅದಕ್ಕೆ ವಿರೋಧವಾಗಿ ಪುನಾರಾಡುವದಕ್ಕೆ ಶಕ್ತಿಯನ್ನು ಪಡದಿದ್ದಾರೆ ಅಷ್ಟೆ. ಯಾರಾಬ್ಬನು ರಕ್ಷಣೆಯನ್ನು ಪುನಾಂದ ಬೇಕೆಂದು ಮನಃಪೂರ್ವಕವಾಗಿ ಬಯಸಿದರೆ, ಅವನ ಆಶೆಯನ್ನು ಯೇಸು ಕ್ರಿಸ್ತನಿಂದ ಪರಾಜಿತವಾದ ಅಂಧಕಾರರಾಜ್ಯದ ಬಲವೆಲ್ಲಾ ಚಂಗ ಮಾಡಲಾರದು.

೩. ಪ್ರೀತಿಯ ಮಗನೆಂಬದರಿಂದ ದೇವರಿಗೂ, ಆತನ ಮಗನಿಗೂ, ಆತನ ಮುಖಾಂತರ ನಮಗೂ ಇರುವ ಸಂಬಂಧವು ಚನ್ನಾಗಿ ಸೂಚಿತವಾಗಿದೆ. ಎಫೆ. ೧, ೬. ಮತ್ತಾ. ೩, ೧೭. ಈ ರಾಜ್ಯದಲ್ಲಿ ಶೇರಿದ ಪರೆಲ್ಲರೂ ದೇವರ ಮಕ್ಕಳಾಗಿದ್ದಾರೆ.

೪. ಪುನಾರ್ಗಂದರೆ: ಪುನರ್ಜನ್ಮದಿಂದ ನಮ್ಮನ್ನು ಶೇರಿಸಿದ್ದಾನೆ. ಇದು ಆತನಿಂದುಂಟಾಯಿತು. ಮನುಷ್ಯಸಾಧನದಿಂದ ಅದು ಆಗುವದಿಲ್ಲ.

೫. ದೇವಪುತ್ರತ್ವದ ಪದವಿಯು ವಿಮೋಚನೆಯಿಂದ ಸಾಧ್ಯವಾಯಿತು. ಅ) ವಿಮೋಚನೆಯು ನಮಗುಂಟು. ಅದು ನಮ್ಮಿಂದ ಸಾಧಿಸ ತಕ್ಕದ್ದಲ್ಲ. ಇ) ಪೂರ್ವ ಕಾಲದ ಬಲಿಯರ್ಪಣೆಗಳ ಛಾಯೆಯಿಂದ ಸೂಚಿತವಾದ ಆತನ ರಕ್ತಧಾರೆಯು ಎಫೆ. ೧, ೭. ಅದರ ಕಾರಣವಾಗಿದೆ. ಉ) ಇನ್ನು ಲೆಖ್ಖಕ್ಕೆ ಬಾರದ ಪಾಪಗಳ ಪರಿಪುನಾರವು ೨ ಕೊರಿ. ೫, ೧೯. ವಿಮೋಚನೆಯಾಗಿದೆ.

೬. ಅದೃಶ್ಯನಾದ ದೇವರು ಯೇಸು ಕ್ರಿಸ್ತನಲ್ಲಿ ದೃಶ್ಯನಾಗಿ ಪ್ರತ್ಯಕ್ಷನಾದನು. ಆತನು ಅವತಾರವನ್ನೆತ್ತಿ ನಮಗೆ ತಿಳಿಸಿದ್ದಾನೆ. ಯೋಹಾ. ೧, ೧೮. ಮುಂದಿನ ವಚನಗಳಲ್ಲಿ ಅಪಾಸ್ತಲನು ದೇವರ ವಾಕ್ಯವೆಂಬ ಯೋಹಾ. ೧, ೧. ಮಗನು ಲೋಕಕ್ಕಿಂತ ಮುಂಚಿತವಾಗಿದ್ದನೆಂದು ಪೇಳಿ, ಆತನ ಅನಿರ್ಮಿತ ಚಾವವನ್ನು ವರ್ಣಿಸುತ್ತಾನೆ.

೭. ಆತನು ಸಮಸ್ತ ಸೃಷ್ಟಿಗಿಂತ ಮುಂಚೆ ಇದ್ದನು. ಏನಂದರೆ: ಆತನು ಅನಿರ್ಮಿತನಾಗಿದ್ದು, ಅನಾದಿಯಿಂದ ತಂದೆಯ ಚಾವದವನಾಗಿದ್ದಾನೆ.

೮. ಮಗನು ಸಮಸ್ತ ಸೃಷ್ಟಿಗಿಂತ ಮುಂಚಿತವಾಗಿ ತಂದೆಯ ಚಾವದಿಂದ ಪುಟ್ಟಿದವನಾಗಿರ ಬೇಕು; ಯಾಕಂದರೆ: ಆತನಿಗಾಗಿಯೂ ಆತನ ಮುಖಾಂತರವಾಗಿಯೂ ನಿರ್ಮಿತವಾದ ಸರ್ವವು ಆತನಲ್ಲಿ ನಿರ್ಮಿತವಾಗಿದೆ. ಆತನು ಕರಣ ಮಾತ್ರವಲ್ಲ, ಸೃಷ್ಟಿಶಕ್ತಿಯ ಕರ್ತನಾಗಿದ್ದಾನೆ. ಆತನು ಸೃಷ್ಟಿಯ ಉದ್ದಿಶ್ಯವೂ ಆಗಿದ್ದಾನೆ; ಕ್ರಿಸ್ತನ ಪುನಾರ್ತು ಸೃಷ್ಟಿ ಇಲ್ಲ. ಪರಲೋಕವೂ, ಭೂಲೋಕವೂ ಎಂಬದು (೧ ಮೋಶೆ. ೧, ೧ರ ಪ್ರಕಾರ) ಸರ್ವ ಸೃಷ್ಟಿಯನ್ನೂ ಸೂಚಿಸುತ್ತದೆ. ಅದು ದೃಶ್ಯಾದೃಶ್ಯವಾದ್ದಾಗಿ ಎರಡು ಪಾಗವಾಗಿದೆ. ಅದೃಶ್ಯ ಲೋಕಸಂಬಂಧವಾದ ಕೆಲವು ಮುಖ್ಯಾಧಿಕಾರಗಳ ಪೆಸರುಗಳು ಬರದವೆ. ರೋಮಾ. ೮, ೩೮. ೧ ಕೊರಿ. ೧೫, ೨೪. ಎಫೆ. ೧, ೨೧; ೩, ೧; ೬, ೧೨. ೧ ಪೇತ್ರ. ೩, ೨೨. ಸಪುಅವು ಬರದವೆ. ಅವುಗಳ ವಿದ್ಯಮಾನ ನಮಗೆ ತಿಳಿಯುವದಿಲ್ಲ. ಆದಾಗ್ಯೂ ಮಪುನಾನ್ನತವಾದದ್ದು ಕ್ರಿಸ್ತನಿಂದ ಉಂಟಾಗಿದ್ದರೆ, ನ್ಯೂನವಾದದ್ದೆಲ್ಲಾ ಆತನಿಂದಲೇ ಉಂಟಾಯಿತೆಂದು, ಈ ಮಾತಿನಿಂದ ತಿಳಿಯುತ್ತೇವೆ.

೯. ಈ ಪುನರುಕ್ತಿಯಿಂದ ಅಪಾಸ್ತಲನು ಮೊದಲು ಬರದದ್ದನ್ನು ಪೀಚ್ಚು ದೃಢ ಪಡಿಸುತ್ತಾನೆ. ಆತನು ಸರ್ವ ಸೃಷ್ಟಿಯ ಉದ್ದಿಶ್ಯವೂ, ಸಮಾಪ್ತಿಯೂ ಆಗಿದ್ದಾನೆ.

೧೦. ಆತನು ಸೃಷ್ಟಿಕರ್ತನಾಗಿದ್ದು ವ. ೧೬; ನಿರ್ಮಿತವಾದ ಎಲ್ಲಾ ವಸ್ತುಗಳಿಗಿಂತ ಪೂರ್ವೀಕನೂ, ಅಧಿಕನೂ ಆಗಿದ್ದಾನೆ. ಯೋಪುನಾ. ೧, ೩೦. ಆದರೆ ಸೃಷ್ಟಿ ಮಾತ್ರವಲ್ಲ, ಲೋಕದ ಪಾಲನೆಯೂ ಆತನ ಕೆಲಸವಾಗಿದೆ. ಇಬ್ರಿ. ೧, ೩. ಆತನು ಸರ್ವಕ್ಕೂ ಸರ್ವದಾಸರ್ವತ್ರ ಯತ್ನೈಸುವ ಮೂಲಶಕ್ತಿಯಾಗಿದ್ದಾನೆ. ಕಾಲಾಸ್ಯೆಯ ಜ್ಞಾನಿಗಳಿಗೆ ಮಾತ್ರವಲ್ಲ, ಲೌಕಿಕಜ್ಞಾನಿಗಳಿಗೆಲ್ಲಾ ದೇವತ್ವಮನುಷ್ಯತ್ವೈಕ್ಯಚಾವವುಳ್ಳ ಯೇಸು ಕ್ರಿಸ್ತನ ಅವಾಚ್ಯವಾದ ಮಹಿಮೆಯು ಅಖಿತವಾಗಿದೆ. ಆದ್ದರಿಂದ ಲೋಕಜ್ಞಾನಾನುಸಾರವಾಗಿ ಈ ಸ್ಥಳದ ಅಚಿಪ್ರಾಯವನ್ನು ಟೀಕಿಸಿದ ವ್ಯಾಖ್ಯಾನಿಗಳು ನಾನಾ ಪ್ರಕಾರವಾದ ಯುಕ್ತಿಗಳನ್ನು ಕಲ್ಪಿಸಿದರು. ಅನೇಕರು ಪೌಲನು ಸೂಚಿಸಿದ ಅದೃಶ್ಯ ಲೋಕಾಧಿಕಾರಗಳ ನಾಲ್ಕು ಪೆಸರುಗ

ಳಲ್ಲಿ ಎರಡು ಸಖೆಯ ಅಧಿಕಾರಗಳನ್ನು, ಎರಡು ರಾಜ್ಯಾಧಿಕಾರಗಳನ್ನು ಸೂಚಿಸುತ್ತವೆಂದು ಪೇಳಿದರು. ಕಾತಿ ಚಟ್ಟ ಷಟ್ಪದ್ದೇ ಮುಪೂರ್ತವೆಂಬ ಗಾದೆಯ ಪ್ರಕಾರ ತಿಳಿಯದವರು ಬಲ್ಲವರಂತೆ ಮಾತನಾಡುವದು ಲೌಕಿಕವಾಡಿಕೆಯಾಗಿದೆ. ಇಂಥಾ ಅಜ್ಞಾನವ್ಯಾಖ್ಯಾನಗಳನ್ನು ಪ್ರತಿತರ್ಕಿಸುವದು ವ್ಯರ್ಥವಾಗಿದೆ.

೧೪. ಮತ್ತು ಅವನು ಸಖೆ ಎಂಬ ಶಬ್ದದ ತಲೆಯಾಗಿದ್ದಾನೆ[೧]; ಅವನೇ ಆದಿಯೂ[೨], ಸತ್ಯವಾಕ್ಯಗಳಿಂದ ಚಾಚಿಬಲವನೂ ಆಗಿದ್ದಾನೆ; ತಾನು[೩] ಎಲ್ಲವುಗಳಲ್ಲಿ ಪ್ರಥಮನಾಗುವ ಹಾಗೆಯೇ. ೧೫. ಯಾಕಂದರೆ ಅವನಲ್ಲಿ ಸಮಸ್ತ ಸಂಪೂರ್ಣತೆಯು ವಾಸವಾಗಿರುವದೂ; ೨೦. ಅವನ ಶಿಲುಬೆಯ ರಕ್ತದಿಂದ ಸಮಾಧಾನ ಮಾಡಿ, ಅವನ ಮೂಲವಾಗಿ ಭೂಲೌಕಿಕದಲ್ಲಿರುವವುಗಳಾಗಲಿ, ಪರಲೌಕಿಕದಲ್ಲಿರುವವುಗಳಾಗಲಿ, ಸರ್ವವನ್ನು[೪] ಅವನ ಮೂಲವಾಗಿಯೇ ತನ್ನ ಸಂಗಡ ಅನ್ಯೋನ್ಯ ಮಾಡುವದೂ, ಸುಯೌಕ್ತಿಚನೆಯಾಯಿತು[೫]. ೨೧. ಮತ್ತು ನೀವು[೬] ವಿಶ್ವಾಸದಲ್ಲಿ ನಿಂತು, ನೆಲೆಗೊಂಡು, ಸ್ಥಿರವಾಗಿದ್ದು, ನೀವು ಕೇಳಿದಂಥ, ಆಕಾಶದ ಕೆಳಗಿರುವ ಸರ್ವ ಸೃಷ್ಟಿಗೆ[೭] ಸಾರಲ್ಪಟ್ಟಂಥ ಪೌಲನಾದ ನಾನು ಸೇವಕನಾದಂಥ ಸುವಾರ್ತೆಯ ಆಶೆಯಿಂದ ಚಲಿಸಲ್ಪಡದಿದ್ದರೆ, ೨೨. ನಿಮ್ಮನ್ನು ಅವನ ಮುಂದೆ ಪರಿಶುದ್ಧರಾಗಿಯೂ, ನಿರ್ಮಲರಾಗಿಯೂ, ನಿರಪರಾಧಿಗಳಾಗಿಯೂ, ನಿಲ್ಲಿಸುವ ಹಾಗೆ[೮], ೨೩. ಮುಂಬೆ ಪರರಾಗಿಯೂ, ನಿಮ್ಮ ಬುದ್ಧಿಯಲ್ಲಿ[೯] ದುಷ್ಟ ಕ್ರಿಯೆಗಳಿಂದ ಶತ್ರುಗಳಾಗಿಯೂ[೧೦], ಇದ್ದ ನಿಮ್ಮನ್ನು[೧೧], ಇಗಲೇ ಅವನ ಮಾಂಸದ ಶರೀರದಲ್ಲಿ[೧೨], ಮರಣದ ಮೂಲವಾಗಿ ಅನ್ಯೋನ್ಯ ಮಾಡಿದನು.

೧. ಇಲ್ಲಿ ಬರಪ ವರ್ಣನೆಯು ಕ್ರಿಸ್ತನ ಮನುಷ್ಯಾವತಾರವನ್ನೂ, ಅದರಲ್ಲಿ ಆತನು ಪೂರೈಸಿದ ವಿಮೋಚನಾಕಾರ್ಯವನ್ನೂ, ಸೂಚಿಸುತ್ತದೆ. ಈ ಕಾರ್ಯದ ವಿಶಿಷ್ಟವೇನಂದರೆ: ಆತನು ರಕ್ಷಣೆಯನ್ನೂ, ಶುದ್ಧೀಕರಣವನ್ನೂ ಪಡಾಂದಿ, ತಮ್ಮಲ್ಲಿಯೂ, ಆತನಲ್ಲಿಯೂ, ಅವರು ಶರೀರವೆಂದು ೧ ಕಾರಿ. ೧೨, ೧೩. ಎಫೆ. ೧, ೨೨., ಆತನು ತಲೆ ಯೆಂದು, ಪೌಸರ್ಗಾಳ್ಳುವದು ಯುಕ್ತವಾಗುವ ಪಡಾಗೆ, ಪೂರ್ವಾನ್ಯಾಯನೃವಾದವರ ಸಖೆಯನ್ನು ಸ್ಥಾಪಿಸಿದ್ದಾನೆ.

೨. ಆತನು ಆರಂಭದಲ್ಲಿ ಸರ್ವವನ್ನು ಉಂಟು ಮಾಡಿದ ಪ್ರಕಾರ, ದೇವರು ನೇಮಕ ಮಾಡಿದ ಕೃಪೆಯ ಕಾಲದಲ್ಲಿ ನೂತನ ಜೀವಕ್ಕೂ, ನೂತನ ಸೃಷ್ಟಿಗೂ ಆದಿ ಪುರುಷನಾದನು. ಇಬ್ರಿ. ೨, ೧೦; ೧೨, ೨. ಇದು ಪಡಾಗಾಯಿತೆಂದರೆ: ಆತನು ಮರಣವನ್ನನುಭವಿಸಿ, ಪುನರುತ್ಥಾನವನ್ನೈದಿ, ಆತನನ್ನನುಸರಿಸುವ ಅನೇಕ ಸಪಡಾದರರಲ್ಲಿ ಪ್ರಥಮನಾದನು. ರೋಮಾ. ೮, ೨೯. ಇಬ್ರಿ. ೧, ೬. ಚಾಚ್ಚಲು ಮಗನೆಂಬದು ಆತನ ಬಳಿಕ ಪುನರುತ್ಥಾನವಾಗುವ ವರೆಲ್ಲರ ಮೇಲೆ ಶ್ರೇಷ್ಠನಾಗಿದ್ದು, ಆತನ ಸಪಡಾದರರಾದವರಿಗೆ ಸಮಾನನಾಗಿದ್ದಾನೆಂದು, ಸೂಚಿಸುತ್ತದೆ.

೩. ಆತನು ಸರ್ವಕ್ಕೂ ಕರ್ತನಾಗಿದ್ದು, ಮನುಷ್ಯತ್ವದ ವಿಷಯವಾಗಿಯೂ ಅಗ್ರಗಣ್ಯನಾಗ ಬೇಕಾಯಿತು. ಕೃಸಾಸ್ತಾಮನು ಪೇಳಿದ ಪ್ರಕಾರ, ಅವನು ದಿವದಲ್ಲಿಯೂ, ಭೂಲೌಕಿಕದ ಸಖೆಯಲ್ಲಿಯೂ, ಪುನರುತ್ಥಾನದಲ್ಲಿಯೂ ಸರ್ವತ್ರ ಪ್ರಧಾನನಾಗಿದ್ದಾನೆ.

೪. ದಿವದಲ್ಲಿಯೂ, ಪೃಥ್ವಿಯಲ್ಲಿಯೂ ಇರುವ ಸರ್ವಸೃಷ್ಟಿಯು ಕ್ರೂಜೆಯಲ್ಲಿ ಸುರಿದ ಕ್ರಿಸ್ತನ ರಕ್ತದ ಮುಖಾಂತರ ವಿಮೋಚನೆಯಾಗಿ ಎಫೆ. ೧, ೧೦., ತಲೆಯಾಗಿರುವ ಆತನ ಕೆಳಗೆ ಏಕೀಕಾರವಾಗ ಬೇಕು. ದೇವದೂತರಿಗೆ ಪತಿತ ಮನುಷ್ಯರಂತೆ ವಿಮೋಚನೆಯ ಪಡೆಯಾದುವದು ಅವಶ್ಯವಾಗಿರಲಿಲ್ಲ; ಆದರೆ ಸೃಷ್ಟಿಯು, ಒಂದು ಅಂಗನಾದರೆ ಎಲ್ಲಾ ಅಂಗಗಳು ನಾಂದು ಕಾಳ್ಗುವ, ದಾಡ್ಡ ಶರೀರವಾಗಿರುವದರಿಂದ, ಅಸ್ವಸ್ಥವಾದ ಅಂಗಗಳಿಗೆ ಬರುವ ಕ್ಷೇಮವು ಸ್ವಸ್ಥವಾಗಿರುವ ಅಂಗಗಳಿಗೂ ಉಪಯೋಗವಾಗಿದೆ. ಕ್ರಿಸ್ತನಿಂದುಂಟಾದ ರಕ್ಷಣೆಯು ಪರಲೋಕ ಭೂಲೋಕಗಳಿಗೆ, ಕಡೆಯಲ್ಲಿ ಜೀವರಾಶಿ ಮುಂತಾದ ಸೃಷ್ಟಿಗೆ ಸಹ ರೋಮಾ. ೮, ೧೭. ಸರ್ವಸಾರ್ಥಕವಾಗಿದೆ. ಮೇಗಣ ಕೆಳಗಣ ಸಖೆ ಎಲ್ಲಾ ಅದರಿಂದ ನೂತನವಾದ ಅಧಿಕ ಮಹಿಮೆಯುಳ್ಳ ದೇವಾನ್ಯೋನ್ಯದಲ್ಲಿ ಶೇರುತ್ತದೆ. ಈ ಸ್ಥಳದಲ್ಲಿಯೂ, ಅದಕ್ಕೆ ಸರಿಯಾದ ಎಫೆ. ೧, ೧೦ನೇ ವಚನದಲ್ಲಿಯೂ, ಸರ್ವ ಪುನಸ್ಥಾಪನೆಯೂ, ಕಡೆಯಲ್ಲಿ ದೇವಭಕ್ತಿ ಇಲ್ಲದವರು ಸಹ ಸಂಪರ್ತನವನ್ನೈದುವರೆಂಬುವದೂ, ಅವಿವಾದನೀಯವಾಗಿ ಸೂಚಿತವಾಗಿದೆಂದು, ಅನೇಕರು ಪೇಳುತ್ತಾರೆ. ದೇವರ ಪ್ರೀತಿಯ ಆಲೋಚನೆಯು ಇವರನ್ನು ಸಹ ವಿಷಯೀಕರಿಸುವದರಿಂದ, ಅವರೂ ಕ್ರಿಸ್ತನ ಕ್ರೂಜೆಯ ಮುಖಾಂತರ ರಕ್ಷಿತರಾಗ ಬಹುದೆಂಬುವದು ನಿಶ್ಚಯವೇ ಸರಿ. ಆದರೆ ಈ ದೇವಪ್ರೀತ್ಯಾಲೋಚನೆಯು ತಮ್ಮಲ್ಲಿ ಸಾರ್ಥಕವಾಗ ಬೇಕೆಂಬ ಮನಸ್ಸುಳ್ಳವರಾಗುವರೋ ಏನೋ ಎಂಬುವದನ್ನು ಅಮಿತ ಬುದ್ಧಿಯುಳ್ಳ ದೇವರು ಇಲ್ಲಿಯಾದರೂ, ಬೇರೆ ಮತ್ತೊವಸ್ಥಳದಲ್ಲಾದರೂ ಸ್ಪಷ್ಟವಾಗಿ ಪ್ರಕಟಿಸಲಿಲ್ಲ.

೫. ದೇವರ ಪುಂಗಿಲ್ಲದ ಕೃಪಾಲೋಚನೆಯ ಪ್ರಕಾರವಾಗಿಯೂ, ದೇವರ ಪ್ರೀತಿಯ ಅನಾದಿಯಾದ ರಕ್ಷಣಾನಿರ್ಣಯದ ಪ್ರಕಾರವಾಗಿಯೂ, ಯೇಸು ಎಂಬ ಮನುಷ್ಯನಲ್ಲಿ ದೇವಜೀವಶಕ್ತಿಗಳ ವಿಶಿಷ್ಟ ಸಂಪೂರ್ಣತ್ವವು ವಾಸವಾಗಿದ್ದ ಕಾರಣ ಸ. ೨, ೯. ಕ್ರಿಸ್ತನು ಮಹಿಮಾಚಾವಾಂತರವಾದ ಮನುಷ್ಯತ್ವದ ಪ್ರಕಾರವಾಗಿಯೂ ಸರ್ವಾನ್ನತನಾಗಿದ್ದಾನೆ. ಅಪಾಸ್ತಲನು ಕಾಲಾಸ್ಸೆಯ ಸಖೆಯಲ್ಲಿದ್ದ ಕಳ್ಳ ಬಾಧಕರ ನಿಮಿತ್ತ ಸಂಪೂರ್ಣತ್ವವೆಂಬ ಪದವನ್ನು ಬೇಕೆಂದು ಪ್ರಯೋಗಿಸಿದ್ದು ಅಸಂಚಾವ್ಯವಾಗಿರುವದಿಲ್ಲ. ಇವರೇ ಆ ಪದವನ್ನು ವಿಶೇಷಾಚಿಪ್ರಾಯದಿಂದ ಪ್ರಯೋಗಿಸಿದರೆಂಬದು ನಿಶ್ಚಯವಿಲ್ಲದಿದ್ದರೂ, ತದನಂತರ ಆ ನೀಮೆಗಳಲ್ಲಿ ವಿಶೇಷವಾಗಿ ಪ್ರಬಲವಾದ ಜ್ಞಾನವಾದಿಗಳೆಂಬ ಕ್ಶೈಸ್ತ ಪಾಷಂಡಿಗಳು ಹೀಗೆ ಮಾಡಿದರೆಂದು ಗಾತ್ಯಾಗಿದೆ. ಅವರು ದೈವವು ಅಮೂಲವೆಂದು ಪೇಳಿ, ಅದರಿಂದ ಪ್ರತೈಕ ಪ್ರತೈಕ ಆಕಾರವಾಗಿ ಪುಟ್ಟಿದ ಸೃಷ್ಟಿಶಕ್ತಿಗಳ ವಿಶಿಷ್ಟವು ದೈವಸಂಪೂರ್ಣತ್ವವೆಂತಲೂ, ದೈವವೆಂಬ ಅಮೂಲದ ಸಂಪೂರ್ಣತ್ವದಿಂದ ಸೃಜವಾದ ಅನೇಕ ಶಕ್ತಿಗಳಲ್ಲಿ ಒಂದು ಯೇಸು ಎಂಬ ಮನುಷ್ಯನಲ್ಲಿ ತಾತ್ಕಾಲಿಕ ವಾಸಮಾಡಿ, ಪುನಃಸಂಪೂರ್ಣತ್ವದಲ್ಲಿ ಶೇರಿತೆಂತಲೂ, ಬಾಧಿಸಿದರು. ಈ ಅಜ್ಞಾನಬಾಧನೆಗೆ ವಿರೋಧವಾಗಿ ಅಪಾಸ್ತಲನು ದೇವರ ಸರ್ವ ಮಹಿಮೆಯಾದ, ದಿವ್ಯ ಗುಣಶಕ್ತಿಗಳ ವಿಶಿಷ್ಟವಾದ, ಸರ್ವ ಸಂಪೂರ್ಣತ್ವವು ಯೇಸುವಿನಲ್ಲಿ ದೇಹಾಕಾರವಾಗಿ ಸ. ೨, ೯. ವಾಸವಾಗಿತ್ತೆಂದು ಪ್ರಸ್ತಾಪಿಸುತ್ತಾನೆ.

೬. ಈ ಉದ್ದಿಶ್ಯವು ವಿಶ್ವಾಸಮೂಲವಾದ ಕ್ರಿಸ್ತನಲ್ಲಿ ನೆಲೆಗಾಂಡು, ದುರ್ಬೋಧನೆಗಳಿಂದ ಚಂಚಲರಾಗದ ಪಾಗೆ ಸ್ಥಿರವಾಗಿದ್ದು, ಹಿಂಸಾದಿ ಶ್ರಮಗಳಿಂದ ಮಹಿಮೆಯ ಆಶೆಯಲ್ಲಿ ಕದಲದ ಪಾಗೆ ದೃಢವಾಗಿರುವವರಲ್ಲಿಯೇ ಸಾರ್ಥಕವಾಗುವದು.

೭. ಕರ್ತನು ಮರ್ಕ. ೧೬, ೧೫ರಲ್ಲಿ ಆಜ್ಞಾಪಿಸಿದ ಪ್ರಕಾರ, ಅಪಾಸ್ತಲರು ಪಾದ ಎಲ್ಲಾ ಸ್ಥಳಗಳಲ್ಲಿಯೂ, ಯೆಹೂದರೂ, ಪರಜನರೂ ಎಂಬ ಭೇದವನ್ನು ನಾಡದೆ, ಎಲ್ಲಾ ಮನುಷ್ಯರಿಗೆ ಸುವಾರ್ತೆಯನ್ನು ಸಾರಿದರು. ಆದರೆ ಅವರು ಎಲ್ಲಾ ದೇಶಗಳಿಗೆ ಪಾಗಿ, ಕ್ರಿಸ್ತನ ಆಜ್ಞೆಯನ್ನು ಪೂರೈಸಲಾಗಲಿಲ್ಲವೆಂತಲೂ, ಅದು ಇಂದಿನ ವರೆಗೂ ಪೂರ್ತಿಯಾಗಲಿಲ್ಲವೆಂತಲೂ, ಎಲ್ಲರಿಗೂ ಗಾತ್ಯಾಗಿದೆ. ಇದಕ್ಕೆ ರೋಮಾ. ೧೦, ೧೮ರಲ್ಲಿ ಬರದದ್ದು ಶೇರುತ್ತದೆ.

೮. ಸಖೆಯಲ್ಲಿ ಶೇರಿದವರೆಲ್ಲರ ಪೂರ್ಣ ಶುದ್ಧೀಕರಣವು ರಕ್ಷಣೆಯ ಉದ್ದಿಶ್ಯವೂ, ಸಮಾಪ್ತಿಯೂ ಆಗಿದೆ. ಎಫೆ. ೧, ೪. ಅವರು ಸರ್ವಜ್ಞನಾದ ಆತನ

ದೃಷ್ಟಿಯಲ್ಲಿ ದೇವರ ವಿಷಯವಾಗಿ ಪರಿಶುದ್ಧರಾಗಿಯೂ, ತಮ್ಮ ನಡತೆ ಗುಣಗಳ ವಿಷಯವಾಗಿ ನಿರ್ಮಲರಾಗಿಯೂ, ನೆರೆಹೊರೆಯವರ ಪಾಪಾಕ್ಕು ಬಳಿಕೆ ವಿಷಯವಾಗಿ ನಿರಪರಾಧಿಗಳಾಗಿಯೂ, ಅಂದರೆ ಬಹಿರಂತರಂಗಶುದ್ಧರಾಗಿ ಕಾಣ ಬೇಕು.

೯. ಅಂದರೆ, ಅಂತಃಕರಣದಲ್ಲಿ. ಅವರು ಪರಿಚ್ಛೇದನ ಮುಂತಾದ ಆಚರಣೆಗಳನ್ನು ಕೈಕಾಳ್ಳದೆ ಇದ್ದದ್ದು ದಾಡ್ಡದಲ್ಲ; ದುಷ್ಕರ್ಮಗಳಲ್ಲಿ ಪ್ರಕಟವಾಗುವ ದುಷ್ಟ ಮನಸ್ಸೇ ಮುಖ್ಯವಾದದ್ದು.

೧೦. ಇದೇ ಅಭಿಪ್ರಾಯವು ಎಫೆ. ೪, ೧೮ಲ್ಲಿಯೂ ರೋಮಾ. ೫, ೧೦ಲ್ಲಿಯೂ ಬರದದೆ.

೧೧. ಕ್ರಿಸ್ತನಿಂದುಂಟಾದ ವಿಮೋಚನೆಯು ಸರ್ವ ಸಾಮಾನ್ಯವಾಗಿದ್ದರೆ, ಪರಜನರು ಸಹ ಅದರಲ್ಲಿ ಅಂಶಿಗಳಾಗುವದೇ ಸರಿ.

೧೨. ಪೌಲನು ವ. ೧೮ಲ್ಲಿ ಸಖೆಯು ಕರ್ತನ ಆತ್ಮಿಕಶರೀರವೆಂದು ಹೇಳಿದ್ದರಿಂದ, ಬೇರೆ ಕಡೆಯಲ್ಲಿ ಪ್ರಯೋಗಿಸಿದ ವಿಶೇಷಣವನ್ನು ಇಲ್ಲಿ ಶೇರಿಸುತ್ತಾನೆ. ಕ್ರಿಸ್ತನು ಲೌಕಿಕವಾದ ತನ್ನ ಮಾನುಷದೇಹವನ್ನು ಮರಣಕ್ಕೆ ಒಪ್ಪಿಸಿದ್ದರಿಂದ ನಮ್ಮನ್ನು ವಿಮೋಚನೆ ಮಾಡಿದ್ದಾನೆ.

ಉ) ಕ್ರಿಸ್ತನ ಸುವಾರ್ತೆಯ ಪ್ರಸಂಗವೇ ಅಪೊಸ್ತಲನ ಸುಖದುಃಖಾನ್ವಿತ ಮಹಾ ಉದ್ಯೋಗದ ಉದ್ದಿಶ್ಯವಾಗಿದೆ. ವ. ೨೪—೨೫.

ಹಿಂದಿನ ವಚನದ ಅಂತ್ಯದಲ್ಲಿ ಅಪೊಸ್ತಲನು ಪತ್ರಿಕಾವಲೋಕಿಕರಿಗೆ ಸವಿಾಪಸ್ಥನಾಗುವ ಹಾಗೆಯೂ, ಅವರ ತಪ್ಪುಗಳನ್ನು ವಿವರಿಸುವದಕ್ಕಿಂತ ಮುಂಚೆ ಅವರ ಹೃದಯಗಳನ್ನು, ತಾನು ಅವರಲ್ಲಿಡುವ ಪ್ರೀತಿಯ ತಿಳುವಿಕೆಯಿಂದ, ಶೆಳ್ಳೆಯುವ ಹಾಗೆಯೂ, ಕ್ರಿಸ್ತನ ಸುವಾರ್ತೆಯ ಪ್ರಸ್ತಾಪೋಚಿತವಾಗಿ ಅದರ ಪ್ರಸಂಗಿಯಾದ ತನ್ನ ವಿಷಯವಾಗಿ ಮಾತನಾಡ ತೊಡಗಿ, ಮುಂದೆ ಪ್ರಸ್ತಾಪಿಸುವದೇನಂದರೆ:

೨೪. ಇಗ ನಾನು ನಿಮ್ಮನಿಮಿತ್ತ ಪಡುವ ಶ್ರಮಗಳಲ್ಲಿ ೧) ಸಂತೋಷ ಪಟ್ಟು, ನನ್ನ ಮಾಂಸದಲ್ಲಿ ಕ್ರಿಸ್ತನ ಉಪದ್ರವಗಳ ಶೇಷವನ್ನು ಸಖೆಯಾಗಿರುವ ಅವನ ಶರೀರಕ್ಕಾಗಿ ಪೂರ್ತಿ ಮಾಡುತ್ತೇನೆ. ೨೫. ಅದಕ್ಕೆ ನಾನು ನಿಮಗಾಗಿ, ನನಗೆ ಕೊಡಲ್ಪಟ್ಟ ದೇವರ ಮನವರ್ತೆಯ ಪ್ರಕಾರ, ದೇವರ ವಾಕ್ಯವನ್ನು ಪೂರೈಸುವದಕ್ಕೆ ೨) ಸೇವಕನಾದೆನು. ೨೬. ಅದೇನಂದರೆ ಯುಗಗಳಾರಭ್ಯವು ೩), ತಲಾಂತರಗಳಾರಭ್ಯವು ೪), ಮರೆಯಾಗಿದ್ದು, ಇಗ ಅವನ ಪರಿಶುದ್ಧರಿಗೆ ಪ್ರಕಟವಾದ ಮರ್ಮವೇ. ೨೭. ಇವರಿಗೆ ದೇವರು ಇ ಮರ್ಮದ ಮಹಿಮೆಯ ಐಶ್ವರ್ಯವು ಜನಾಂಗಗಳಲ್ಲಿ ಏನೆಂದು ತಿಳಿಸ ಮನಸ್ಸಾಗಿದ್ದನು; ಅದು ಮಹಿಮೆಯ ಆಶೆಯಾದಂಥ, ನಿಮ್ಮಲ್ಲಿ ಇರುವಂಥ ೫) ಕ್ರಿಸ್ತನೇ. ೨೮. ಅವನನ್ನು ನಾವು ಸಾರಿ ೬), ಪ್ರತಿ ಮನುಷ್ಯನಿಗೆ ೭) ಬುದ್ಧಿ ಹೇಳಿ, ಪ್ರತಿ ಮನುಷ್ಯನನ್ನು ಕ್ರಿಸ್ತ ಯೇಸುವಿನಲ್ಲಿ ಸಂಪೂರ್ಣನಾಗಿ ನಿಲ್ಲಿಸುವ ಹಾಗೆ, ಪ್ರತಿ ಮನುಷ್ಯನಿಗೆ ಸಕಲ ಜ್ಞಾನದಲ್ಲಿ ಬೋಧ

ಕೊಲೊ. ೧, ೨೯—೨, ೨.

ಧಿಸ್ತುತ್ತೀವೆ. ೨೯. ಇದಕ್ಕಾಸ್ಕರ ನಂನಲ್ಲಿ ಬಲವಾಗಿ ಯತ್ನಿಸುವ ಅವನ ಯತ್ನದ ಪ್ರಕಾರ, ಹೌರಾಡಿ ಕಷ್ಟ ಪಡುತ್ತೀನೆ.

೧. ಪೌಲನು ತನ್ನ ಶ್ರಮಗಳಲ್ಲಿ ಸಂತೋಷ ಪಡುವ ಕಾರಣವೇನಂದರೆ: ಕ್ರಿಸ್ತನ ಮನಸ್ಸಿಗೆ ಅನುಸಾರವಾದ ತಾಳ್ಮೆಯ ಸ್ಥೈರ್ಯವನ್ನು ತನ್ನಲ್ಲಿ ಕಂಡು, ಕ್ರಿಸ್ತನ ನಿಜ ಸೇವಕನಿಗೆ ಕರ್ತನ ಆದರಣೆಯೂ, ಸಹಾಯವೂ ಶ್ರಮಗಳಲ್ಲಿ ತಪ್ಪುವದಿಲ್ಲವೆಂದು ನಾಡುವದು ಸಂತೆಯವರಿಗೆ ಉಪಯೋಗವಾಗಿದೆಂತಲೂ, ಇದರಿಂದ ಅವರಲ್ಲಿಯೂ ತಕ್ಕ ಕಾಲದಲ್ಲಿ ಶ್ರಮ ಮಾರ್ಗವಾಗಿ ಮಹಿಮೆಯಲ್ಲಿ ಶೇರುವದಕ್ಕೆ ನಿರ್ಣಯವಾದ ಆಸಕ್ತಿ ಹುಟ್ಟುವದೆಂತಲೂ, ಚಾವಿನಿ ಕಾಂಡು ಸಂತುಷ್ಟನಾಗಿದ್ದನು. ಕ್ರಿಸ್ತನಿಗಾಗಿ ತಾಳುವ ಉಪದ್ರವಗಳು ಕ್ರಿಸ್ತನ ಉಪದ್ರವಗಳೆಂದು ಹೇಳುವದು ಸಹಜವಾಗಿದೆ. ಕ್ರಿಸ್ತನ ಸುವಾರ್ತೆಯನ್ನು ಲೋಕದಲ್ಲಿ ಪ್ರಕಟಿಸುವದರಿಂದ ಕ್ರಿಸ್ತನ ಸೇವಕರ ಮೇಲೆ ಬೀಳುವ ಕಷ್ಟಗಳು ಲೋಕರಕ್ಷಣಾರ್ಥವಾದ ಕ್ರಿಸ್ತನ ಕಷ್ಟವಿಶಿಷ್ಟದಲ್ಲಿ ಶೇರುತ್ತವೆಂದು, ಅವರು ತಿಳಿದು ಕಾಂಡು, ಪೂರ್ಣ ಸಂತುಷ್ಟರಾಗಿರ ತಕ್ಕದ್ದು.

೨. ವಾಕ್ಯವನ್ನು ಪೂರೈಸುವದೆಂದರೆ: ಅದನ್ನು ಎಲ್ಲಾ ಕಡೆಯಲ್ಲಿಯೂ ನಿಶ್ಶೇಷವಾಗಿ ಸಾರುವದು.

೩. ಈ ಪದವು ದೂತರ ವಿಷಯವಾಗಿ ಬರದದೆ.

೪. ಇದು ಮನುಷ್ಯರ ವಿಷಯವಾಗಿ ಬರದದೆ.

೫. ಕ್ರಿಸ್ತನಲ್ಲಿ ಮಹಿಮೆಯ ಆಶೆಯು ತೃಪ್ತಿಯಾಗುವದು. ಆತನು ಮಹಿಮೆಯ ಆತ್ಮವೆಂಬ ಪರಿಶುದ್ಧಾತ್ಮದ ಮುಖಾಂತರ ಚಕ್ರರ ಹೃದಯಗಳಲ್ಲಿ ವಾಸವಾಗಿದ್ದಾನೆ.

೬. ಸುವಾರ್ತೆಯ ನಿಜ ಪ್ರಸಂಗಿಯ ವೃತ್ತಿ ಏನಂದರೆ: ೧) ಕ್ರಿಸ್ತನಲ್ಲಿರುವ ದೇವರ ಕೃಪೆಯ ಮರ್ಮವನ್ನು ಸಾರುತ್ತಾನೆ. ೨) ಎಲ್ಲಾ ಪಾಪಿಷ್ಠರನ್ನು, ಮಾನಸಾಂತರ ಪಡ ಬೇಕೆಂದು, ಎಚ್ಚರಿಸುತ್ತಾನೆ; ಅತ್ಯಲ್ಪ ಬುದ್ಧಿಯುಳ್ಳವರನ್ನೂ ಬೋಧಿಸುತ್ತಾನೆ; ಒಬ್ಬನಾದರೂ ಅನಧಿಕಾರಿಯಾಗ ಬಾರದೆಂದು, ಎಲ್ಲರನ್ನು ಸಿದ್ಧಿ ಪಡಿಸುವದಕ್ಕೆ ಆಸಕ್ತನಾಗಿದ್ದಾನೆ; ಯಾವ ವಿಷಯದಲ್ಲಾದರೂ ತನ್ನಲ್ಲಿ ಆಗಲಿ, ಮತ್ತಾಬ್ಬರಲ್ಲಿ ಆಗಲಿ, ಸಾಕೆಂದು ನೆನಸುವದಿಲ್ಲ; ತನ್ನ ಉದ್ಯೋಗವೃತ್ತಿಯಲ್ಲಿ ಕಷ್ಟವೂ ಪರಿಶ್ರಮವೂ ತನಗೆ ನೇಮಕವಾಗಿದೆಂದು ತಿಳಿದು ಕಾಳ್ಳುತ್ತಾನೆ; ವಾಗ್ದತ್ತವಾದ ಸರ್ವ ಸಾರ್ಥಕವಾಗಿರುವ ದೇವರ ಬಲದಲ್ಲಿಯೇ ಭರವಸವಿಟ್ಟು, ದೇವರಿಗೆ ಎಲ್ಲಾ ವಿಷಯವಾಗಿಯೂ ಮನಃಪೂರ್ವಕವಾಗಿ ಸ್ತೋತ್ರ ಮಾಡುತ್ತಾನೆ.

೭. ಪೌಲನು ಪ್ರತಿ ಮನುಷ್ಯನೆಂದು ಮೂರಾವರ್ತಿ ಬರೆಯುವದರಿಂದ ಯೆಹೂದರೂ ಪರಜನರೂ ಎಂಬ ಭೇದವು ಪರಿಹಾರವಾಗಿ, ಕ್ರಿಸ್ತನ ಕೃಪೆಯು ಎಲ್ಲಾ ಜನಾಂಗಗಳಲ್ಲಿ ಸಾರ್ಥಕವಾಗ ತಕ್ಕದ್ದೆಂದು, ಸೂಚಿಸುತ್ತಾನೆ.

೨. ಕ್ರಿಸ್ತನ ಜ್ಞಾನಕ್ಕೆ ವಿರೋಧವಾದ ಅಜ್ಞಾನವನ್ನು ಖಂಡಿಸುತ್ತಾನೆ. ಸ. ೨.

ಅ) ಮುಖ್ಯಾರ್ಥವು: ಕ್ರಿಸ್ತನಲ್ಲಿ ದೃಢವಾಗಿರ ಬೇಕು. ಆತನು ಕೃಪೆಯ ಐಶ್ವರ್ಯದ ನಿಧಿಯಾಗಿದ್ದಾನೆ. ವ. ೧—೧೫.

೧. ಹ್ವಾಗಂದರೆ ನಿಮಗಾಸ್ಕರವೂ, ಲವಾದಿಕ್ಯೆಯದಲ್ಲಿರುವವರಿಗಾಸ್ಕರವೂ, ಮಾಂಸದಲ್ಲಿ ನನ್ನ ಮುಖವನ್ನು ನೋಡದವರೆಲ್ಲರಿಗಾಸ್ಕರವೂ ೧), ೨. ಕಂದೆಯಾದ ದೇವರೂ, ಬುದ್ಧಿ ಶಿಳುವಿಕೆಗಳ ೨) ನಿಕ್ಷೇಪಗಳೆಲ್ಲಾ ಅಡಗಿರುವ ೩) ಕ್ರಿಸ್ತನೂ ೪), ಇವರ ಮರ್ಮವನ್ನು ಅವರು ತಿಳಿಯುವದಕ್ಕೆ ವಿವೇಕದ ಪೂರ್ಣ ನಿಶ್ಚಯದ

ಸಕಲ ಐಶ್ವರ್ಯಕ್ಕಾಗಿಯೂ, ಪ್ರೀತಿಯಲ್ಲಿಯೂ, ಜ್ಞಾನಿಸಲ್ಪಟ್ಟು, ೫. ಅವರ ಹೃದಯಗಳು ಉದರಿಸಲ್ಪಡುವ ಹಾಗೆ, ನನಗೆ ಎಂಥ ಹೋರಾಟ ಉಂಟೆಂದು [೫]), ನೀವು ತಿಳಿದು ಕೊಳ್ಳ ಇಚ್ಛಿಸುತ್ತೇನೆ. ೪. ಉದರೆ ಯಾವನಾದರೂ ಇಚ್ಛಕದ ಮಾತುಗಳಿಂದ ನಿಮ್ಮ ಬುದ್ಧಿಯನ್ನು ಕೆಡಿಸಿದ ಹಾಗೆ [೪]), ಇದನ್ನು ಹೇಳುತ್ತೇನೆ. ೫. ಯಾಕಂದರೆ ಮಾಂಸದಿಂದ ದೂರವಾಗಿದ್ದರೂ, ಆತ್ಮದಿಂದ ನಿಮ್ಮ ಸಂಗಡ ಇದ್ದು, ನಿಮ್ಮ ಕ್ರಮವನ್ನೂ, ನೀವು ಕ್ರಿಸ್ತನಲ್ಲಿಡುವ ವಿಶ್ವಾಸದ ದೃಢತ್ವವನ್ನೂ ನೋಡಿ [೫]), ಸಂತೋಷಿಸುತ್ತೇನೆ. ೬. ಹಾಗಾದರೆ, ನೀವು ಕರ್ತನಾದ ಕ್ರಿಸ್ತ ಯೇಸುವನ್ನು ಹೊಂದಿದ ಪ್ರಕಾರ [೬]), ಅವನಲ್ಲಿ ನಡೆದು ಕೊಳ್ಳಿರಿ. ೭. ಅವನಲ್ಲಿ ಬೇರೂರಿ, ಕಟ್ಟಲ್ಪಟ್ಟು, ವಿಶ್ವಾಸದಲ್ಲಿ ಸ್ಥಿರ ಮಾಡಲ್ಪಟ್ಟು, ನೀವು ಬೋಧಿಸಲ್ಪಟ್ಟ ಪ್ರಕಾರ, ಅದರಲ್ಲಿ ಸ್ತೋತ್ರ ಮಾಡಿ ಹೆಚ್ಚಿರಿ [೭]). ೮. ಕ್ರಿಸ್ತನ ಪ್ರಕಾರವಲ್ಲ [೧೦]), ಲೋಕದ ಸೂತ್ರಗಳ ಪ್ರಕಾರವೂ, ಮನುಷ್ಯರ ಸಂಪ್ರದಾಯದ ಪ್ರಕಾರವೂ, ಜ್ಞಾನಬೋಧೆಯಿಂದಲೂ ವ್ಯರ್ಥ ಮೋಸದಿಂದಲೂ ಒಬ್ಬನಾದರೂ ನಿಮ್ಮನ್ನು ಸುಲುಕೊಳ್ಳದ ಹಾಗೆ, ನೋಡಿಕೊಳ್ಳಿರಿ.

೧. ಎಫೆಸದ ಸಭೆಯ ಪೌರ್ವಾರ್ಯ ಸಣ್ಣ ಆಸ್ಯದ ಸಭೆಗಳ ಸಂಗಡ ಪೌಲನಿಗೆ ಮುಖಪರಿಚಿತ ಇರಲಿಲ್ಲವೆಂದು, ಇಲ್ಲಿ ತೋರುತ್ತದೆ. ಆದರೆ ಪೌಲನು ಮುಂಚೆ ಕೊಲೊಸ್ಸೆಗೆ ಬಾರದೆ ಇದ್ದಾಗ್ಯೂ, ಈ ಸಭೆಯಲ್ಲಿ ಶ್ರೇಷ್ಠ ಗೃಹಸ್ಥನಾದ ಫಿಲೇಮೋನನ ಸಲಿಗೆಯಲ್ಲಿದ್ದನು. ಮತ್ತು ಕೊಲೊಸ್ಸೆಯಲ್ಲಿ ಸಭೆಯನ್ನು ಸ್ಥಾಪಿಸಿದವನಾದ ಎಪಫ್ರನು ಪೌಲನಿಗೆ ಆಸಕ್ತ ಶಿಷ್ಯನಾಗಿದ್ದನು. ಆದ್ದರಿಂದ ಕೊಲೊಸ್ಸೆಯ ಸಭೆಯ ಸ್ಥಿತಿ ಗತಿಗಳನ್ನೆಲ್ಲಾ ಕಣ್ಣಿಂದ ಕಂಡವನಂತೆ ತಿಳಿದು ಕೊಂಡನು.

೨. ಬುದ್ಧಿಗೂ, ತಿಳುವಿಕೆಗೂ ವ್ಯತ್ಯಾಸ ಉಂಟು. ಬುದ್ಧಿ ಏನಂದರೆ: ತಾನು ಮಾಡುವದಕ್ಕೆ ಉಚಿತವಾದದ್ದನ್ನು ತಿಳಿದು ಕೊಳ್ಳುವದು. ಕ್ರಿಸ್ತನನ್ನು ಬಲ್ಲವನು ತನ್ನ ಜೀವದ ಉದ್ದಿಶ್ಯವನ್ನೂ, ಗುರಿಯನ್ನೂ, ಸಾಧನೆಯ ಮಾರ್ಗವನ್ನೂ, ಬಲ್ಲನು. ತಿಳುವಿಕೆ ಯೇನಂದರೆ: ದೇವರು ನಡಿಸುವ ಲೋಕದ ಆಡಳಿತೆಯ ಮರ್ಮಗಳ ಅರಿವು.

೩. ಸ್ವಾಭಾವಿಕ ಬುದ್ಧಿಗೂ, ಸ್ವಂತ ಜ್ಞಾನವನ್ನು ನಂಬುವ ಲೌಕಿಕ ಜ್ಞಾನಿಗೂ ಮರೆಯಾದದ್ದು ವಿಶ್ವಾಸಿಸುವ ಶಿಶುಗಳಿಗೆ ಪ್ರಕಟವಾಗಿದೆ. ಮತ್ತಾ. ೧೧, ೨೭.

೪. ಸ. ೧, ೨೨ರ ಪ್ರಕಾರ ಕ್ರಿಸ್ತನು ತಾನೇ ಸತ್ಯ ಜ್ಞಾನದ ವಿಷಯವಾಗಿದ್ದಾನೆ. ಆತನ ತಿಳುವಿಕೆ ನಿತ್ಯ ಜೀವವಾಗಿದೆ. ಯೋಹಾ. ೧೭, ೩. ಆದ್ದರಿಂದ ಯೇಸು ಕ್ರಿಸ್ತನನ್ನು ನಿಜ ಪ್ರೀತಿಯಿಂದ ನಂಬುವ ಶಿಶು ಪ್ರಾಯದ ಜನ್ಮನು ಲೌಕಿಕ ಜ್ಞಾನಿಗಳಲ್ಲಿ ಶ್ರೇಷ್ಠರಿಗಿಂತ ಸತ್ಯವನ್ನು ಉತ್ತಮವಾಗಿ ಅರಿತವನಾಗಿದ್ದಾನೆ.

೫. ಈ ಪೌರೋಹಿತ್ಯವೇನಂದರೆ: ಪೌಲನು ಬೇರೆ ಸ್ಥಳಗಳಲ್ಲಿಯೂ, ಪರಜನಕ್ರೈಸ್ತರಿಗೂ, ಯೆಹೂದ ಕ್ರೈಸ್ತರಿಗೂ ಭೇದವಿಲ್ಲದ ಸುವಾರ್ತೆಯನ್ನು ಸಾರುವ ನಿಮಿತ್ತ ಯೆಹೂದರು ತನಗೆ ಮಾಡಿದ ಉಪದ್ರವಗಳೆಲ್ಲಾ ತಾನು ಪರಜನರ ರಕ್ಷಣೋದ್ದಿಶ್ಯವಾಗಿ ಸಹಿಸುವ ಶ್ರಮಗಳೆಂದು ಸೂಚಿಸುತ್ತಾನೆ. ಆದ್ದರಿಂದ ಬಂಧನದಲ್ಲಿದ್ದು, ತಾನು ಪರಜನರಾದ ಜನ್ಮರಿಗಾಗಿ ಬಂಧನಗ್ರಸ್ತನೆಂದು ಬರೆಯುತ್ತಾನೆ. ತನಗೆ ಬಂದ ಕಷ್ಟವು ಯುಕ್ತವೆಂದು ಭಾವಿಸುವ ವೇಳೆಯಲ್ಲಿ ನಿಮಗಾಗಿ ನಾನು ಪೌರೋಹಿತ್ಯ ಮಾಡುತ್ತೇನೆಂದು ಬರೆಯುತ್ತಾನೆ.

ಕೌಲಾ. ೨, ೯—೧೫.

೬. ತಾನು ಅವರಲ್ಲಿಡುವ ಅಶಿಶಯವಾದ ಪ್ರೀತಿಯನ್ನು ಅವರು ಸರಿಯಾಗಿ ತಿಳಿದು ಕಾಂಡು, ಮನಃಪೂರ್ವಕವಾದ ಪ್ರೀತಿಯಿಂದ ತನಗೆ ಅಧೀನರಾಗಿದ್ದರೆ, ತನ್ನ ದ್ವೇಷಿಗಳಾದ ಯೆಹೂದಕ್ರೈಸ್ತ ದುರ್ಬಾಧಕರ ಮೋಸಗಳನ್ನು ನಂಬದೆ ಇರುವರೆಂಬ ಭಾವನೆಯಿಂದ ಅಪಾಸ್ತಲನು ಈ ಸಂಧಿಯ ಆರಂಭದಲ್ಲಿ ವಿವರಿಸಿದ್ದನ್ನು ಬರದನು.

೭. ರ್ಯಾಮಪುರದಲ್ಲಿದ್ದ ಪೌಲನು ಕಾಲಾಸ್ಸೆಯವರ ಸಭೆಯನ್ನು ನೀಡಿದ್ದು ಪತ್ರಾಗೆಯಂದು ವಾಡಿಕೆಯಾದ ಬುದ್ಧಿಯಿಂದ ತಿಳಿದು ಕಾಳ್ಳ ಕೂಡದು. ಅದನ್ನು ಶೋಧಿಸ ಬೇಕಾದರೆ, ೨ ಅರ. ೫, ೨೬ಲ್ಲಿ ಬರದದ್ದನ್ನು ಚನ್ನಾಗಿ ವಿಚಾರಿಸ ಬೇಕು.

೮. ಅಂದರೆ, ಕ್ರಿಸ್ತ ಯೇಸುವಿನಲ್ಲಿ ವಿಶ್ವಾಸವಿಟ್ಟು, ಆತನ ಐಕ್ಯದಲ್ಲಿ ಶೇರಿದವರಿಗೆ ಯುಕ್ತವಾಗಿ ಆತನ ಆತ್ಮಕ್ಕೆ ಅಧೀನರಾಗಿ ನಡ ಕಾಳ್ಳಿರಿ.

೯. ನಿಜ ವಿಶ್ವಾಸದ ಮುಖ್ಯವಾದ ಎರಡು ಲಕ್ಷಣಗಳು ಯಾವವೆಂದರೆ: ನಿತ್ಯ ಸಂತೃಪ್ತಿಯು ನಿತ್ಯ ಕೃತಜ್ಞತೆಯು, ಇವುಗಳು. ಸತ್ಯವಾದ ವಿಶ್ವಾಸವು ಕ್ರಿಸ್ತನಲ್ಲಿರುವ ದೇವರ ಕೃಪೆಯ ಐಶ್ವರ್ಯವನ್ನು ಅನುಭವಿಸುತ್ತಾ, ಅದಕ್ಕಾಗಿ ಪೂರ್ಣ ಸಂತುಷ್ಟಿಯಿಂದ ಸ್ತೋತ್ರ ಮಾಡುತ್ತಾ, ವೃದ್ಧಿಯಾಗುತ್ತದೆ.

೧೦. ಅಂದರೆ ಯೇಸು ಕ್ರಿಸ್ತನ ಯಥಾರ್ಥವಾದ ಸುವಾರ್ತೆಯ ಬೋಧನೆಗೂ ಆತನ ಆತ್ಮಕ್ಕೂ ವೃತ್ತಾಸವಾಗಿ.

೯. ಯಾಕಂದರೆ ೧) ಅವನಲ್ಲಿ ದೈವತ್ವದ ಸಮಸ್ತ ಸಂಪೂರ್ಣತೆಯು ೨) ಶರೀರವಾಗಿ ೩) ವಾಸ ಮಾಡುತ್ತದೆ. ೧೦. ಮತ್ತು ಸಕಲ ದಾರೆತನಕ್ಕೂ ೪) ಅಧಿಕಾರಕ್ಕೂ ತಲೆಯಾಗಿರುವ ಅವನಲ್ಲಿ ಸಂಪೂರ್ಣರಾಗಿದ್ದೀರಿ ೫). ೧೧. ಅವನಲ್ಲಿಯೇ ಕ್ರಿಸ್ತನ ಪರಿಛ್ಛೇದನೆಯಿಂದ ೬) ಮಾಂಸದ ಪಾಪಗಳ ಶರೀರವನ್ನು ತೆಗದು ಹಾಕುವ, ಕೈಕೆಲಸವಲ್ಲದ ಪರಿಛ್ಛೇದನೆಯಿಂದ ಪರಿಛ್ಛೇದಿಸಲ್ಪಟ್ಟು, ೧೨. ಸ್ನಾನದಲ್ಲಿ ೭) ಅವನ ಕೂಡ ಹೂಣಿಲ್ಪಟ್ಟು, ಅದರಲ್ಲಿ ಅವನನ್ನು ಸತ್ತವರಾಳಗಿಂದ ಎಬ್ಬಿಸಿದ ದೇವರ ಯತ್ನದ ೮) ವಿಶ್ವಾಸದಿಂದ ಕೂಡ ಎಬ್ಬಿಸಲ್ಪಟ್ಟಿದ್ದೀರಿ. ೧೩. ಮತ್ತು ಅಕ್ರಮಗಳಲ್ಲಿಯೂ, ನಿಮ್ಮ ಮಾಂಸದ ಅಪರಿಛ್ಛೇದನೆಯಲ್ಲಿಯೂ, ಸತ್ತವರಾಗಿದ್ದ ನಿಮ್ಮನ್ನು ಅವನ ಕೂಡ ಬದುಕಿಸಿ, ಅಕ್ರಮಗಳನ್ನೆಲ್ಲಾ ನಮಗೆ ಮನ್ನಿಸಿ, ೧೪. ನಮಗೆ ವಿರೋಧವಾಗಿದ್ದಂಥ, ನಮಗೆ ಎದುರಾದಂಥ ಆಜ್ಞೆಗಳ ೯) ಕೈಬರಹವನ್ನು ಅಳಿಸಿ, ಅದನ್ನು ಮಧ್ಯದಿಂದ ತೆಗದು ಹಾಕಿ, ಅದನ್ನು ಶಿಲುಬೆಗೆ ಹಾಕಿ ಜಡಿದು ೧೦), ೧೫. ದಾರೆತನಗಳನ್ನೂ ಅಧಿಕಾರಗಳನ್ನೂ ಸುಲುಕಾಂಡು ೧೧), ಬಹಿರಂಗವಾಗಿ ನೋಟ ಮಾಡಿ ೧೨), ಅವುಗಳ ಮೇಲೆ ತನ್ನಲ್ಲಿ ಜಯೋತ್ಸವ ಮಾಡಿದನು.

೧. ಕ್ರಿಸ್ತನನ್ನು ಬಿಟ್ಟು ಬಿಡ ಬಾರದು. ಯಾಕಂದರೆ ಆತನಲ್ಲಿ ನಿಮಗೆ ಅಮೌಲ್ಯವಾದ ಪದವಿಯುಂಟು. ಏನಂದರೆ ವ. ೯. ೧೦. ಕ್ರಿಸ್ತನು ದೇವತ್ವದ ಸರ್ವಾಂಶನಾಗಿದ್ದಾನೆ; ವ. ೧೧—೧೫ ಸ್ನಾನವನ್ನೂ, ಪುನರ್ಜನ್ಮವನ್ನೂ ಕೃಪಾಪ್ರಸಾದಗಳಾಗಿ ಕಾಡುತ್ತಾನೆ; ಇದೆಲ್ಲಾದಕ್ಕೂ ಆತನಿಂದುಂಟಾದ ವಿಮೋಚನೆಯು ಮೂಲವಾಗಿದೆ.

೨. ವಿಶೇಷವಾಗಿ ಆತನು ದೇವರ ಬುದ್ಧಿಸ್ವರೂಪನಾಗಿದ್ದಾನೆ. ಸ. ೧, ೧೯. ಯೋಪೌಲಾ. ೧, ೧೪.

೩. ಯೇಸು ಕ್ರಿಸ್ತನು ನಿಜ ಮನುಷ್ಯನಾಗಿ ಪು

ಟ್ಟಿದರಿಂದ, ದೇವರ ಮಹಿಮೆಯ ಪೂರ್ಣತ್ವವು ನರ ಜಾವದ ನಿತ್ಯೈಕ್ಯದಲ್ಲಿ ಶೇರಿಯದೆ. ಕ್ರಿಸ್ತನು ಸಶರೀರಿಯಾಗಿ ಸಮಾಧಿಯಿಂದ ಎದ್ದು, ದಿವಕ್ಕೇರಿ, ದೇವರ ಸನ್ನಿಧಿಯಲ್ಲಿ ಪ್ರವೇಶಿಸಿ, ಮನುಷ್ಯಪುತ್ರನಾಗಿ ಸರ್ವಾಧಿಕಾರವನ್ನು ಪಡದು ನಡಿಸುತ್ತಾ ಬಂದು, ಯುಗಯುಗಾಂತರದ ವರೆಗೂ ಜಾವಾಂತರವನ್ನೈದುವದಿಲ್ಲ.

೪. ನಿಶ್ಚಯಜ್ಞಾನರಹಿತರಾದ ಕಾಲಾಸ್ಸೆಯ ದುರ್ಬೋಧಕರು, ಪ್ರಧಾನದೂತ ಮುಂತಾದ ಶಕ್ತಿಗಳ ವಿಷಯವಾಗಿ, ವ್ಯರ್ಥವಾದ ಬಾಧನೆ ಪೇಳುತ್ತಾ ಇದ್ದರು. ಸತ್ಯ ಜ್ಞಾನವನ್ನು ಪುರಸ್ಕರಿಂದ ಪೌಲನು ಕ್ಷಪ್ತವಾಗಿ ಸಾರಂಶವನ್ನು ಸೂಚಿಸುತ್ತಾನೆ.

೫. ಯೇಸು ಕ್ರಿಸ್ತನ ಐಕ್ಯದಲ್ಲಿ ಸತ್ಯವಾಗಿ ಶೇರಿದ ಪರಿಶುದ್ಧಾತ್ಮಪ್ರಾಪ್ತನಾದ ಭಕ್ತನಿಗೆ ಯೇಸು ಕ್ರಿಸ್ತನಲ್ಲಿ ದೇವರ ಕೃಪಾಮಹಿಮೆಗಳ ಅನುಭವವೂ, ಬಾಧ್ಯತೆಯೂ ಉಂಟು.

೬. ಆ ಕಳ್ಳಬೋಧಕರು ಯೆಹೂದಸಂಪ್ರದಾಯಾನುಸಾರವಾದ ಪರಿಚ್ಛೇದನೆಯು ಉಪಯೋಗವಾಗಿಯೂ, ಅವಶ್ಯವಾಗಿಯೂ ಅದೆಯಂದು, ಪೇಳುತ್ತಾ ಇದ್ದರು. ಪೌಲನು ಇವರು ಮಾಡುವ ಮಾಂಸಪರಿಚ್ಛೇದನೆಯು ನಿರರ್ಥಕವಾಗಿದೆಂದೂ, ಕ್ರಿಸ್ತನ ಆತ್ಮದಿಂದುಂಟಾಗುವ ಪರಿಚ್ಛೇದನೆಯೇ ಸಾರ್ಥಕವಾಗಿದೆಂದೂ, ಸೂಚಿಸುತ್ತಾನೆ.

೭. ಇದಕ್ಕೆ ರೋಮಾ. ೬, ೬. ಸರಿಯಾಗಿದೆ.

೮. ಇದಕ್ಕೆ ಅನುಕೂಲವಾದ ಅಭಿಪ್ರಾಯವು ರೋಮಾ. ೮, ೧೧ಲ್ಲಿ ಬರದದೆ.

೯. ರೋಮಾ. ೩, ೨೦. ನಿಯಮದಿಂದ ಪಾಪಿಯ ಪಾಪವು ಪೆಚ್ಚಾಗಿ ಪ್ರಕಟವಾಗುತ್ತದೆ ಅಷ್ಟೆ. ಆದರೆ ಪಾಪರಹಿತನಾದ ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ನೀತಿಯು, ಆತನು ನಿಯಮವನ್ನೆಲ್ಲಾ ಪೂರ್ಣವಾಗಿ ಕೈಕಾಂಡದರಿಂದ, ಪೂರ್ಣ ಪ್ರಕಟವಾಯಿತು. ಆತನು ಪಾಪ ರುಣದಲ್ಲಿ ಮುಳುಗಿದ ನಮ್ಮನ್ನು ರಕ್ಷಿಸುವದಕ್ಕೆ ತನ್ನ ದೇಹ ಜೀವ ರಕ್ತಗಳೆಂಬ ದ್ರವ್ಯವನ್ನು ಸಲ್ಲಿಸಿ, ನಮ್ಮ ಮೇಲೆ ಇದ್ದ ರುಣಪತ್ರವನ್ನು, ತನ್ನ ರಕ್ತದಿಂದ ಅಳಿಸಿದಂತೆ, ನಿರಾಕರಿಸಿದನು.

೧೦. ೨ ಕೊರಿ. ೫, ೨೧ಲ್ಲಿ ಬರದ ಪ್ರಕಾರ ಕ್ರಿಸ್ತನು ನಮಗಾಗಿ ಪಾಪವಾದನು ಎಂದು, ಪೌಲನು ಬರದಿದ್ದಾನೆ. ಪುರಾಗಾದರೆ ಇಲ್ಲಿ, ಆತನು ಕ್ರೂಜೆಯಲ್ಲಿ ಸತ್ತಾಗ, ನಮ್ಮ ರುಣವಾದ ಪಾಪವು ಬಹಿರಂಗವಾಗಿ ಸಂಪುರಾರವಾಯಿತೆಂಬ ಮಾತು ಸಹ ಉಚಿತವಾದದ್ದು.

೧೧. ಇಬ್ರಿ. ೨, ೧೪ಲ್ಲಿಯೂ ೯ಲ್ಲಿಯೂ ಯೇಸು ಮರಣವನ್ನೂ, ಸೈತಾನನನ್ನೂ ಪುರ್ಬಾಗೆ ಜೈಯಿಸಿದನೆಂದು, ಸೂಚಿತವಾಗಿದೆ.

೧೨. ಇದೇ ಅಭಿಪ್ರಾಯವು ಎಫೆ. ೪, ೮ಲ್ಲಿಯೂ ಕೀರ್ತ. ೬೮, ೧೮ಲ್ಲಿಯೂ ಸೂಚಿತವಾಗಿದೆ.

ಇ) ಅನಾವಶ್ಯಕವಾದದ್ದನ್ನೂ, ನಷ್ಟಕರವಾದದ್ದನ್ನೂ ತೊಲಗ ಬೇಕು. ವ. ೧೬—೨೩.

೧. ಯೆಹೂದ ಸಂಪ್ರದಾಯಗಳು. ವ. ೧೬. ೧೭.
೨. ದೂತಪೂಜೆ. ವ. ೧೮. ೧೯.
೩. ವ್ಯರ್ಥವಾದ ಇಂದ್ರಿಯನಿಗ್ರಹವು. ವ. ೨೦. ೨೩.

ವ. ೧೬. ಆದ್ದರಿಂದ ನೀವು ಆಹಾರಪದ್ಧತಿಗಳನ್ನೂ ಇಬ್ರಿ. ೧೩, ೯. ೧ ತಿಮೊ. ೪, ೩. ನಿತ್ಯಮಾಸಸಂವತ್ಸರೋತ್ಸವಗಳನ್ನು ಹಳೆ ಒಡಂಬಡಿಕೆಯ ಕಟ್ಟಳೆಯ ಪ್ರಕಾರ (ಗಲ. ೪, ೧೦. ಕೋಲೊ. ೧೩, ೧—೬.) ಜಾಗ್ರತೆಯಾಗಿ ಕೈಕೊಳ್ಳದಿದ್ದರೆ, ರಕ್ಷಿತರಾಗ ಕೂಡದೆಂದು ಹೇಳುವವರನ್ನು ಲಕ್ಷಿಸ ಬಾರದು. ೧೭. ಪೂರ್ವಸಂಪ್ರದಾಯಗಳೆಲ್ಲಾ ಯೇಸು ಕ್ರಿಸ್ತನಲ್ಲಿ ಉಂಟಾದ ರಕ್ಷಣೆಯ ಪೂರ್ವಸೂಚಕವಾಗಿವೆ

ಕೊಲೊ. ೨, ೧೪—೨೩.

ಅಷ್ಟೆ. ಪ್ರತ್ಯಕ್ಷ ಸತ್ವತತ್ವಗಳು ಕ್ರಿಸ್ತನೇ. ಇಬ್ರಿ. ೨, ೫; ೯, ೯; ೧೦, ೧. ವ. ೧೪. ಕ್ರಿಸ್ತನಲ್ಲಿ ನಿಮಗೆ ಪ್ರಾಪ್ತವಾದ ದೈವಿಕಾಹ್ವಾನವು ನಿಮ್ಮ ಆಶಾವಿಷಯವಾಗಿರಲಿ. ಫಿಲಿ. ೩, ೧೪. ದೇವರು ಅತ್ಯುನ್ನತನೆಂದು ಹೇಳಿ, ಕಪಟದೀನತ್ವದಿಂದ ನಮ್ಮಂಥಾವರಿಗೆ ದೂತರಾದ ಮಧ್ಯಸ್ಥರು ಬೇಕೆಂದು ಬೋಧಿಸಿ, ತಿಳಿಯದವರಾಗಿ ದೂತರ ಆರಾಧನೆ ನಡಿಸುವವರಿಗೆ ಕಿವಿ ಕೊಡ ಬಾರದು. ಈ ದೀನತ್ವವೆಲ್ಲಾ ಗರ್ವವೇ ಸರಿ. ಈ ಜ್ಞಾನಿಗಳು ಯೋಗಿಗಳಂತೆ ಮಾತನಾಡಿದರೂ ಭೋಗಿಗಳೇ ಸರಿ. ೧೫. ಸರ್ವಶಿರಸ್ಸಾಗಿದ್ದು, ಸರ್ವ ಶರೀರವನ್ನು ಪಾಲಿಸುವ ಜೀವಮೂಲವಾದ ಕ್ರಿಸ್ತನನ್ನು ಇವರು ಬಿಟ್ಟು, ದೇವರ ಆತ್ಮಕ್ಕೆ ಅವಿಧೇಯರಾಗಿದ್ದಾರಲ್ಲ.

ಟಿಪ್ಪಣಿ. ಈ ವಾಕ್ಯಕ್ಕೆ ಸಮಾನವಾದದ್ದು ಎಫೆ. ೪, ೧೬ರಲ್ಲಿ ತಲೆಗೂ, ಅವಯವಗಳಿಗೂ ಇರುವ ಸಂಬಂಧದಲ್ಲಿ ಪ್ರೀತಿಯಿಂದ ನೆಲೆಯಾಗಿರ ಬೇಕೆಂಬ ಉದ್ಬೋಧನೆಯಾಗಿ ಪ್ರಯೋಗವಾಗಿದೆ. ಇಲ್ಲಿ ಅಪೊಸ್ತಲನು ಭಕ್ತರನ್ನು, ಸರ್ವ ಶರೀರಕ್ಕೂ ಆಶೀರ್ವಾದಪ್ರವಾಹಮೂಲವಾದ ಕೃಪಾನಿಧಿಯಾಗಿರುವ ಸಭಾಶಿರಸ್ಸಾಗಿರುವ ಕ್ರಿಸ್ತನಿಗೆ ದುರ್ಬೋಧನೆಯ ಮೋಸದಿಂದ ಭೇದವಾಗ ಬಾರದೆಂದು, ಎಚ್ಚರಿಸುತ್ತಾನೆ.

ವ. ೨೦. ಮತ್ತು ನೀವು ಕ್ರಿಸ್ತನ ಐಕ್ಯದಲ್ಲಿ ಆತನ ಮರಣಕ್ಕಾಗಿ ಸ್ನಾನ ಹೊಂದಿದರಿಂದ ವ. ೧೨. ರೋಮಾ. ೬, ೪. ಶೇರಿ ಬಾಲ್ಯ ಶಿಕ್ಷಾಧರ್ಮಕ್ಕೆ ವ. ೪. ಬಿಡುಗಡೆಯಾದನಂತರ, ಇನ್ನೂ ಪೂರ್ವ ಸ್ಥಿತಿಯಲ್ಲಿದ್ದ ಹಾಗೆ, ಯಾಕೆ ತಿರಿಗಿ ಸಂಪ್ರದಾಯಗಳಿಗೆ ಬಳಗಾಗಿದ್ದು, ೨೧. ತಿನ್ನುವದರಿಂದಲೂ, ಸವಿಯುವದರಿಂದಲೂ, ಮುಟ್ಟುವದರಿಂದ ಸಹ ಹೊಲೆಗಲಿಸುವದೆಂಬ ಲೇವಿಯರ ಕಟ್ಟಳೆಗಳನ್ನು ಕೈಕೊಳ್ಳುತ್ತೀರಿ. ೨೨. ಇದೆಲ್ಲಾ ಯೇಸು ಮತ್ತಾ. ೧೫, ೧೬ರಲ್ಲಿ ಹೇಳಿದ ಪ್ರಕಾರ (೧ ಕೊರಿ. ೬) ಲಯವಾದ ಸೃಷ್ಟಿಗೆ ಸಂಬಂಧವಾಗಿದ್ದು, ಆತ್ಮಿಕಜೀವಕ್ಕೆ ಭಿನ್ನವಾಗಿದೆ. ಆದ್ದರಿಂದ ಈ ಕಟ್ಟಳೆಗಳೆಲ್ಲಾ ಇಚ್ಛಾಕಲ್ಪಿತ ಮಾನುಷಪದ್ಧತಿಗಳಾಗಿವೆ. ೨೩. ಈ ಮಾರ್ಗವೆಲ್ಲಾ ಜ್ಞಾನಾತಿಶಯವಾಗಿಯೂ, ಪುಣ್ಯಾಸಕ್ತಿಯುಳ್ಳ ದೇವಭಕ್ತಿಯಾಗಿಯೂ, ದೇಹದಂಡನೆಯಾಗಿಯೂ, ತೋರಿದ್ದಾಗ್ಯೂ, ಸತ್ಯದ ಪ್ರಕಾರ ಮಾಂಸಿಕಗರ್ವವನ್ನು ಬೆಳಸಿ, ಮಾಂಸಪೋಷಣಾರ್ಥವಾದ ವ್ಯರ್ಥ ಆಚಾರವಾಗಿದೆ.

೧. ಟಿಪ್ಪಣಿ. ೨೩ನೆ ವಚನದ ಭಾಷಾಂತರವೂ ವ್ಯಾಖ್ಯಾನವೂ ಸ್ವಲ್ಪ ಪ್ರಯಾಸವಾಗಿದೆ. ಯುಕ್ತವಾದ ಶಾಬ್ದಿಕಭಾಷಾಂತರವಾಗಿ ನಮಗೆ ಕಾಣುವಂಥಾದ್ದೇನಂದರೆ: ಅವು (ಆ ಆಚರಣೆಗಳು) ಗಣ್ಯವಾದದರಲ್ಲಿ ಅಲ್ಲ, ಇಚ್ಛಾಪೂಜೆಯಲ್ಲಿಯೂ ಮನೋದೀನತ್ವದಲ್ಲಿಯೂ ದೇಹಾನಭಿಮಾನದಲ್ಲಿಯೂ ಜ್ಞಾನದ ತೋರ್ಮಣವುಳ್ಳವಾಗಿದ್ದಾಗ್ಯೂ, ಮಾಂಸ ತೃಪ್ತ್ಯುದ್ದಿಶ್ಯವಾಗಿವೆ. ಇದರ ಅಭಿಪ್ರಾಯವೇನೆಂದರೆ: ಇವರು, ನಿಷ್ಪ್ರಯೋಜಕವಾದ ದೂತಪೂಜೆಯನ್ನೂ, ದೇಹಸಾಖ್ಯಚಿಂತಾರಹಿತವಾದ ತಪಸ್ಸುಗಳನ್ನೂ ನಡಿಸಿ, ಯೋಗಿಗಳಾಗಿ ಕಾಣಿಸಿ ಕೊಂಡಾಗ್ಯೂ, ಗರ್ವ ಮುಂತಾದ ದುರ್ಗುಣಾಧೀನರಾಗಿದ್ದು, ಮಾಂಸಿಕರಾಗಿದ್ದಾರೆ.

೨. ಟಿಪ್ಪಣಿ. ಅಪೊಸ್ತಲನಾದ ಪೌಲನು ಇಲ್ಲಿ ಬರದ ಬೋಧನೆಯು ಪ್ರತಿ ಕ್ರೈಸ್ತ ಕೋಮಿಯ ಸಭೆಯಲ್ಲಿ ಅತಿಶ್ಲಾಘ್ಯವಾದ ಮಠವಾಸ, ಅವಿವಾಹ್ಯ, ಉಪವಾಸಾದಿ, ತಪಸ್ಸು ಮುಂತಾದದ್ದು ಪುಣ್ಯಕಾರ್ಯವೆಂಬ ಬೋಧನೆಗೆ ಶುದ್ಧ ವಿರೋಧವಾಗಿದೆಂದು, ಯಥಾರ್ಥ ಬುದ್ಧಿಯುಳ್ಳವರಿಗೆ ತನ್ನಷ್ಟಕ್ಕೆ ಕಾಣುತ್ತದೆ.

ಕೊಲೊ. ೩, ೧—೫.

ಉದ್ಬೋಧನಾರ್ಥವಾದ ಎರಡನೆ ಭಾಗವು. ಸ. ೩, ೪.

ಸಾಮಾನ್ಯೋದ್ಬೋಧನೆಗಳು. ಸ, ೩, ೧—೧೭.

ಮೂಲವು: ದೈವಿಕ ಮನಸ್ಸು. ಸ. ೩, ೧—೪.

೧. ಆದದರಿಂದ, ನೀವು ಕ್ರಿಸ್ತನ ಸಂಗಡ ಎಬ್ಬಿಸಲ್ಪಟ್ಟವರಾಗಿದ್ದರೆ ೧), ಮೇಲೆ ಇರುವವುಗಳನ್ನು ಹುಡುಕಿರಿ. ಅಲ್ಲಿ ಕ್ರಿಸ್ತನು ದೇವರ ಬಲಕಡೆಯಲ್ಲಿ ಕೂತು ಕೊಂ ಡಿದ್ದಾನೆ ೨). ೨. ಭೂಲೋಕದವುಗಳಂತಲ್ಲ, ಮೇಲಿನವುಗಳನ್ನೇ ಚಿಂತಿಸಿರಿ ೩). ೩. ಯಾಕಂದರೆ ನೀವು ಸತ್ತವರಾಗಿದ್ದೀರಿ ೪); ಮತ್ತು ನಿಮ್ಮ ಜೀವವು ಕ್ರಿಸ್ತನ ಸಂಗಡ ದೇವರಲ್ಲಿ ಅಡಗಿ ಅದೆ. ೪. ನಮ್ಮ ಜೀವವಾದ ಕ್ರಿಸ್ತನು ಪ್ರತ್ಯಕ್ಷವಾಗುವಾಗ್ಗೆ ೫), ನೀವು ಸಹ ಅವನ ಸಂಗಡ ಮಹಿಮೆಯಲ್ಲಿ ಪ್ರತ್ಯಕ್ಷವಾಗುವಿರಿ.

೧. ತಮ್ಮ ಪಾಪಗಳಿಗಾಗಿ ಸತ್ತು, ತಮ್ಮ ನೀತಿಗಾಗಿ ಎದ್ದ ಯೇಸು ಕ್ರಿಸ್ತನ ಐಕ್ಯದಲ್ಲಿ ವಿಶ್ವಾಸದಿಂದ ಶೇರಿ, ಆತನ ಪೌಸರಿನಲ್ಲಿ ಆಚರಿಸಿದ ಸ್ನಾನದಲ್ಲಿ ಮುಳುಗಿ ಎದ್ದ ಸ. ೨, ೧೨. ರೋಮಾ. ೬, ೪. ಭಕ್ತರು, ಪುನರುತ್ಥಾನವಾಗಿ ದಿವಕ್ಕೇರಿದ ಕ್ರಿಸ್ತನ ಅನ್ಯೋನ್ಯದಲ್ಲಿ ವಿಶ್ವಾಸದಿಂದ ದೃಢವಾಗಿದ್ದು, ದೈವಿಕ ಜೀವವನ್ನು ಧರಿಸ ತಕ್ಕದ್ದು.

೨. ಇದು ವಿಶ್ವಾಸಾಶಾಲಕ್ಷ್ಯಭೂತವಾದ ಮಹೋನ್ನತ ಸ್ಥಾನವಾಗಿದೆ. ಅಲ್ಲಿರುವ ಕ್ರಿಸ್ತನು ಆಸಕ್ತಿಭಕ್ತರನ್ನು ಸರ್ವಜಿತ ಕೃಪೆಯಿಂದ ಆದರಿಸುತ್ತಾನೆ.

೩. ಮೊದಲನೆ ವಚನದಲ್ಲಿ ಬರದ "ಹುಡುಕಿರಿ" ಯಂಬ ಪದವು ನಡತೆಯನ್ನು, ಇಲ್ಲಿ ಬರದ "ಚಿಂತಿಸಿರಿ" ಯಂಬದು ಮನಸ್ಸನ್ನು ಸೂಚಿಸುತ್ತದೆ. ನಿಜ ಭಕ್ತನ ಮನಸ್ಸು ಕ್ರಿಸ್ತನಲ್ಲಿಯೇ ದೃಢವಾಗಿರ ತಕ್ಕದ್ದು. ಕ್ರಿಸ್ತನ ಅನ್ಯೋನ್ಯವೇ ನಿಜ ಯೋಗವಾಗಿದೆ. ಕಾಲಾಸ್ಪೆಯ ದುರ್ಬೋಧಕರು ಮುಂತಾದ ಜ್ಞಾನಿಗಳು ಯೋಗವೆಂದು ಹೇಳುವಂಥಾದ್ದು ಕನಸಿನ ಕೆಲಸವಾಗಿದೆ. ವ್ಯರ್ಥವಾದ ಷಡ್ವರ್ಗಪ್ರಯೋಗಸಿದ್ಧಿಗಿಂತ ಸಾರ್ಥಕವಾದ, ನಿಜ ಮಂತ್ರವಾಗಿರುವ, ಕ್ರಿಸ್ತಭಕ್ತನ ಪ್ರಾರ್ಥನೆಯು ಉತ್ತಮವಾಗಿದೆ.

೪. ಪಾಪಬಲಿಯಾಗಿ ಸತ್ತ ಕ್ರಿಸ್ತನಿಗೆ ಐಕ್ಯನಾದ ಭಕ್ತನು ಪಾಪಕ್ಕೆ ಸತ್ತು, ಕ್ರಿಸ್ತನ ಮುಖಾಂತರ ದೇವಸಾಯುಜ್ಯವನ್ನೈದಿದ್ದಾನೆ. ಆದರೆ ಕ್ರಿಸ್ತನ ಮಹಿಮೆಯು ಈಗ ಅದೃಶ್ಯವಾಗಿರುವ ಪ್ರಕಾರ, ಮಹಿಮೆಯ ಆತ್ಮವಾದ ಪರಿಶುದ್ಧಾತ್ಮನನ್ನು ಪೌಲಾಂದಿದ ಭಕ್ತನ ಜೀವವು ಮರ್ಮವಾಗಿದೆ.

೫. ಅಂತರ್ಮಹಿಮೆಯೂ ಬಹಿರ್ನೀತತ್ವವೂ ಎಂಬ ದ್ವಂದ್ವಸ್ಥಿತಿಯು, ಕ್ರಿಸ್ತನು ಮಹೋದ್ಧಾರಕಾರ್ಯಸಮಾಪ್ತಿಗಾಗಿ ಶಿರುಗಿ ಬಂದು, ಮಹಿಮೆಯಿಂದ ಪ್ರತ್ಯಕ್ಷವಾಗುವ ದಿವಸದಲ್ಲಿ ಮುಗಿಯುವದು. ೨ ಥೆಸ್ಸ. ೧, ೧೦. ೧ ಪೇತ್ರ. ೧, ೭. ೧ ಯೋಹಾ. ೩, ೨. ಇದನ್ನು ನಿಜವಾಗಿ ತಿಳಿದು ಕಾಂಡ ಭಕ್ತನಲ್ಲಿ ದೈವಿಕಮನಸ್ಸು ಹುಟ್ಟುತ್ತದೆ.

ಫಲವು: ೧. ಪೂರ್ವಪಾಪವೃತ್ತಿಪರಿತ್ಯಾಗ. ವ. ೫—೯.

೫. ಆದದರಿಂದ, ಜಾರತ್ವವು, ಅಶುದ್ಧತ್ವವು, ಮೋಹವು, ದುರಾಶೆಯೂ, ವಿಗ್ರಹಾರಾಧನೆಯಾಗಿರುವ ೧) ಲೌಕಿಕವು, ಭೂಮಿಯ ಮೇಲಾದ ಇವು ನಿಮ್ಮ

ಕೊಲೊ. ೩, ೬—೧೪.

ಅಂಗಗಳನ್ನು೭) ಕೊಲ್ಲಿರಿ೫). ೬. ಇವುಗಳಿಗಾಗಿಯೇ ದೇವರ ಕೋಪವು ಅವಿಧೇಯತ್ವದ ಮಕ್ಕಳ ಮೇಲೆ ಬರುತ್ತದೆ೪). ೭. ನೀವು ಸಹ ಅವುಗಳಲ್ಲಿ ಬದುಕುವಾಗ೫), ಅವುಗಳಲ್ಲಿ ಒಂದು ಕಾಲ ನಡೆದು ಕೊಂಡಿರಿ. ೮. ಆದರೆ ಇಗ ನೀವು ಕೋಪ, ಶಿಟ್ಟು, ಕೆಟ್ಟತನ, ದೂಷಣೆ, ನಿಮ್ಮ ಬಾಯಿಂದ ಹೊರಡುವ ಕೆಟ್ಟ ಮಾತು, ಇವುಗಳನ್ನೆಲ್ಲಾ ತೆಗೆದು ಹಾಕಿರಿ. ೯. ಒಬ್ಬರಿಗೊಬ್ಬರು ಸುಳ್ಳು ಹೇಳ ಬೇಡಿರಿ; ಹಳೇ ಮನುಷ್ಯನನ್ನು ಅವನ ಕ್ರಿಯೆಗಳ ಸಂಗಡ ತೆಗೆದು ಹಾಕಿರಿ೬).

೧. ಲೋಭವು ಧನಪೂಜೆಯಂದು, ಮತ್ತಾ. ೬, ೨೪ಲ್ಲಿ, ಸರ್ವ ದುರಾಚಾರ ಮೂಲವೆಂದು; ೧ ತಿಮೊ. ೬, ೧೦ಲ್ಲಿ ಬರದದೆ.

೨. ಪಾಪಸಮೂಹವು ಒಂದು ಶರೀರವೆಂದು, ಬೇರೆ ಬೇರೆ ಪಾಪಗಳು ಅದರ ಅಂಗಗಳೆಂದು, ಇಲ್ಲಿ ಸೂಚಿತವಾಗಿದೆ.

೩. ಪಾಪ ಮಾಡುವದಕ್ಕಿಂತ ಸಾಯುವದೇ, ವಾಸಿಯಂದು, ಹೃದಯದಲ್ಲಿ ಚಾಪಿಸಿ ಕಾಳ್ಕುವ ಪಾಪದ್ವೇಷಿಯಾದ ಚಕ್ತನಲ್ಲಿ ಪಾಪಚಾಪವೆಂಬ ಶರೀರವು ಸತ್ತ ಪೋಗಾಗಿದೆ. ಆದರೆ ಅನುದಿನದ ನಡತೆಯಲ್ಲಿ ಬೇರೆ ಬೇರೆ ಪಾಪದ ಸಂಗಡ ಆಗುವ ಯುದ್ಧವು ಪಾಪಗಳೆಂಬ ಅವಯವಗಳನ್ನು ಕಾಲ್ಲಾಣಾವೆಂದು, ಅಪಾಸ್ತಲನು ಇಲ್ಲಿ ಉದಾಹರಿಸುತ್ತಾನೆ.

೪. ಪಾಪಾಚರಣೆಯಿಂದ ಇಹದಲ್ಲಿಯೂ ಮನುಷ್ಯನಿಗೆ ಆಗ್ಗಾಗ್ಗೆ ದೇವರ ಶಿಕ್ಷೆಯುಂಟಾಗುತ್ತದೆ. ಎಫೆ. ೫, ೬.

೫. ನೀವು ಮಾನಸಾಂತರ ಪಡುವದಕ್ಕಿಂತ ಮುಂಚಿತವಾಗಿ ಲೋಕದಲ್ಲಿ ವಾಡಿಕೆಯಾದ ಪಾಪಗಳಿಗೆ ಅಧೀನರಾಗಿ ನಡದು ಕಾಂಡಿರಿ.

೬. ಪಾಪಿಯಾದ ಆದಮನಿಂದ ಪುಟ್ಟಿದ ಮನುಷ್ಯರ ಚಾವವು ಪಾಪದಿಂದ ಪೂರ್ಣವಾಗಿ ಕೆಟ್ಟು ಪೋಗಿದೆ. ನಮ್ಮ ಚಾವವು ಪುಟ್ಟಿದಂದಿನಿಂದ ಕೆಟ್ಟದಾಗಿರುವದರಿಂದ, ಅದಕ್ಕೆ ಪುಳೆ ಮನುಷ್ಯನೆಂದು ಪೆಸರು ಇಟ್ಟದೆ. ವಿಶ್ವಾಸದಿಂದ ಮಾನಸಾಂತರವಾದ ಚಕ್ತನು ಚಾವಾಂತರವನ್ನೈದಿದ ಕಾರಣ, ಅವನಲ್ಲಿ ಪುಳೆ ಮನುಷ್ಯನು ಸತ್ತನೆಂದು, ಪೌಳಿ ಅದೆ.

೨. ಸರ್ವಸದ್ಗುಣಾನ್ವಿತ ನೂತನ ಪ್ರೀತಿಯ ವೃತ್ತಿಯು. ವ. ೧೦—೧೩.

೧೦. ಅವನನ್ನು ಸೃಷ್ಟಿಸಿದವನ ಹೋಲಿಕೆಯ ಪ್ರಕಾರ ತಿಳುವಿಕೆಗಾಗಿ೧) ನೂತನವಾಗುವ೨) ಹೊಸಬನನ್ನು ಧರಿಸಿ ಕೊಂಡಿರಲ್ಲಾ? ೧೧. ಅಲ್ಲಿ ಗ್ರೀಕನೂ, ಯೆಹೂದ್ಯನೂ, ಪರಿಛ್ಛೇದನೆಯೂ, ಅಛ್ಛೇದನೆಯೂ, ಬರ್ಬರನೂ, ಸ್ಕುಥನೂ, ದಾಸನೂ, ಸ್ವತಂತ್ರನೂ, ಇಲ್ಲ೩); ಆದರೆ ಎಲ್ಲವೂ ಎಲ್ಲರಲ್ಲಿಯೂ ಕ್ರಿಸ್ತನೇ೪). ೧೨. ಆದ ಕಾರಣ, ದೇವರು ಆದು ಕೊಂಡವರೂ೫) ಪರಿಶುದ್ಧರೂ ಪ್ರಿಯರೂ ಆಗಿರುವವರಾಗಿ ಕನಿಕರಗಳ ಕರುಳುಗಳನ್ನೂ, ದಯವನ್ನೂ, ದೀನ ಮನಸ್ಸನ್ನೂ, ಸಾತ್ವಿಕತ್ವವನ್ನೂ, ದೀರ್ಘಶಾಂತಿಯನ್ನೂ ಧರಿಸಿ ಕೊಂಡು, ೧೩. ಒಬ್ಬರನ್ನೊಬ್ಬರು ತಾಳಿ ಕೊಂಡು, ಒಬ್ಬನಿಗೆ ಮತ್ತೊಬ್ಬನ ಮೇಲೆ ತಪ್ಪು ಹೊರಿಸುವ ಕಾರಣವಿದ್ದರೆ, ಕ್ರಿಸ್ತನು ಹ್ವಾಗೆ ನಿಮಗೆ ಮನ್ನಿಸಿದನಾಗಿ, ಹಾಗೆಯೇ ನೀವು ಒಬ್ಬರಿಗೊಬ್ಬರು ಮನ್ನಿಸಿರಿ. ೧೪. ಇ

ವೆಲ್ಲವುಗಳ ಮೇಲೆ [೬]) ಸಂಪೂರ್ಣತೆಯ ಬಂಧವಾದ [೭]) ಪ್ರೀತಿಯನ್ನು ಧರಿಸಿ ಕೊಳ್ಳಿರಿ. ೧೫. ಮತ್ತು ದೇವರ ಸಮಾಧಾನವು [೮]) ನಿಮ್ಮ ಹೃದಯಗಳಲ್ಲಿ ಆಳಲಿ; ಅದಕ್ಕೆ ಒಂದೇ ಶರೀರದಲ್ಲಿ ಕರೆಯಲ್ಪಟ್ಟಿರಿ. ಮತ್ತು ಕೃತಜ್ಞರಾಗಿರಿ [೯]). ೧೬. ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಕಲ ಜ್ಞಾನದಿಂದ ಐಶ್ವರ್ಯವಾಗಿ ವಾಸ ಮಾಡಲಿ; ಒಬ್ಬರಿಗೊಬ್ಬರು ಬೋಧಿಸುತ್ತಾ, ಬುದ್ಧಿ ಹೇಳುತ್ತಾ, ಕೀರ್ತನೆಗಳಿಂದಲೂ, ಗೀತಗಳಿಂದಲೂ, ಆತ್ಮಿಕವಾದ ಹಾಡುಗಳಿಂದಲೂ, ನಿಮ್ಮ ಹೃದಯದಾಳಗೆ ಕರ್ತನಿಗೆ ಇಂಪಾಗಿ ಹಾಡಿರಿ. ೧೭. ಮತ್ತು ನೀವು ಮಾತಿನಿಂದಾಗಲಿ, ಕ್ರಿಯೆಯಿಂದಾಗಲಿ, ಏನು ಮಾಡಿದರೂ, ಎಲ್ಲವನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿ [೧೦]) ಮಾಡಿ, ಅವನ ಮುಖಾಂತರ [೧೧]) ತಂದೆಯಾದ ದೇವರನ್ನು ಸ್ತುತಿಸಿರಿ [೧೨]).

೧. ಮಾನಸಾಂತರನಾದ ಜಕ್ಕನು ದೇವರ ಅನ್ಯಾಯನೃದಲ್ಲಿದ್ದು, ದೇವರ ತಿಳುವಿಕೆಯಲ್ಲಿ ವೃದ್ಧಿ ಪಾಯಾಂದುತ್ತಾ ಬರುತ್ತಾನೆ. ದೇವರ ತಿಳುವಿಕೆ ಅವನಲ್ಲಿ ಹೆಚ್ಚಾಗುವ ಪ್ರಕಾರ, ನೀತಿಯೂ, ಪರಿಶುದ್ಧತ್ವವೂ ಹೆಚ್ಚುತ್ತವೆ. ಎಫೆ. ೪, ೨೪. ರಕ್ಷಣಾಕಾರ್ಯವು ಸಂಪೂರ್ಣವಾಗುವ ಕರ್ತನ ದಿವಸದಲ್ಲಿ ಪಾಪಪತಿತ ಆದಮನ ಚಾಪವು ಜಕ್ಕರಲ್ಲಿ ಪೂರ್ಣವಾಗಿ ಕಳಿದು ಪಾಯಾಗಲು, ಅವರು ಆದಿ ಚಾಪವನ್ನು ತಿರಿಗಿ ಪಡದು ಕಾಂಡು, ದೇವರಿಗೆ ಸಾರೂಪ್ಯರಾಗಿರುವರು.

೨. ದೇವರ ಆತ್ಮದಿಂದ ಪುಟ್ಟಿದ ನೂತನ ಚಾವವು ಆತ್ಮಿಕ ಶರೀರವಾಗಿದ್ದು ಜಕ್ಕನ ದೇಪಾವನ್ನು ಸಪಾತನಿಗೆ ಅಧೀನ ಮಾಡುತ್ತಾ ಬರುವದರಿಂದ ಅದಕ್ಕೆ ಪಾಯಾಸ ಮನುಷ್ಯನೆಂಬ ಪೆಸರದೆ. ಪಾಯಾಸ ಮನುಷ್ಯನು ಪರಿಶುದ್ಧಾತ್ಮದಿಂದ ನಿತ್ಯವಾಗಿ ನೂತನವಾಗುತ್ತಾ ಬದುಕುತ್ತಾನೆ.

೩. ಈ ವಚನದ ಅಭಿಪ್ರಾಯವೇನಂದರೆ: ಮನುಷ್ಯನಲ್ಲಿ ಆದಿ ದೇವಸ್ವರೂಪವು ಪುನಸ್ಥಾಪಿತವಾದರೆ, ಇತ್ತಲಾಗಿ ಪುಟ್ಟಿದ ಜಾತಿ, ಧರ್ಮ, ವಿದ್ಯಾ, ರಾಜ್ಯಪದ್ಧತಿಗಳ ವಿಷಯವಾದ ಭೇದಗಳು ನಾಶವಾಗುತ್ತವೆ. ಯೇಸು ಕ್ರಿಸ್ತನ ಐಕ್ಯದಲ್ಲಿ ಶೇರಿದವರೆಲ್ಲರೂ, ದೇವರ ಮಕ್ಕಳಾದ ಸಪಾಯಾದರರಾಗಿದ್ದಾರೆ. ಸರ್ವ ವಿಧ ಮನುಷ್ಯರು ವಿಶ್ವಾಸದಿಂದ ಈ ಪದವಿಗೆ ಅಧಿಕಾರಿಗಳಾಗುತ್ತಾರೆ. ಗಲ. ೩, ೨೮.

೪. ಎಲ್ಲಾ ಕ್ರಿಸ್ತನಲ್ಲಿದೆ. ಕ್ರಿಸ್ತನಲ್ಲಿರುವದು ಅತ್ಯಂತ ಮಹಿಮಾಪದವಿಯಾಗಿದೆ. ಕ್ರಿಸ್ತನು ನಂಬುವವರೆಲ್ಲರಲ್ಲಿದ್ದಾನೆ. ಆತನು ಒಬ್ಬನನ್ನಾದರೂ ಉದಾಸೀನ ಮಾಡದೆ, ಜಕ್ಕರೆಲ್ಲರಲ್ಲಿ ತನ್ನ ಕೃಪೆಯ ಆಲಾಚನೆಯನ್ನು ಪೂರೈಸುತ್ತಾನೆ.

೫. ಜಕ್ಕರ ರಕ್ಷಣಾಮೂಲವೇನಂದರೆ: ಅಪರನ್ನು ಅನಾದಿಯಿಂದ ಆದು ಕಾಂಡು, ತಾನು ನೇಮಕ ಮಾಡಿದ ಕಾಲದಲ್ಲಿ ಸುವಾರ್ತೆಯ ವಾಕ್ಯದಿಂದ ಅವರನ್ನು ಲಾಕದಾಳಗಿಂದ ಕರದು, ಪರಿಶುದ್ಧಾತ್ಮದ ಬಲದಿಂದ ಸ್ವಕೀಯರಾಗಿ ಮಾಡಿದ ದೇವರ ಪ್ರೀತಿಯು.

೬. ಪ್ರೀತಿಯು ಸದ್ಗುಣಗಳೆಂಬ ವಸ್ತ್ರಗಳನ್ನೆಲ್ಲಾ ಬಿಗಿ ಮಾಡುವ ನಡು ಕಟ್ಟೆಂಬ ಸಾದೃಶ್ಯವು ಇಲ್ಲಿ ಪ್ರಯೋಗವಾಗಿದೆ.

೭. ಪ್ರೀತಿಯು ಸರ್ವ ಸಿದ್ಧಿಸಾರವೂ, ಸರ್ವ ಸದ್ಗುಣಮೂಲವೂ ಆಗಿದೆ.

೮. ಯೇಸು ಕ್ರಿಸ್ತನ ಮುಖಾಂತರ ದೇವರಿಗೆ ಅನ್ಯಾನ್ಯನಾದ ಜಕ್ಕನು ನಿಜವಾದ ಸಮಾಧಾನವನ್ನು ಹೃದಯದಲ್ಲಿ ಅನುಭವಿಸಿ, ಅದೇ ಅನ್ಯಾನ್ಯದಲ್ಲಿ ಶೇರಿದವರೆಲ್ಲರ ಸಂಗಡ ಸಮಾಧಾನವಾಗಿದ್ದಾನೆ.

೯. ಪ್ರಾರ್ಥನಾಕೃತಜ್ಞಾಪನಾಚರಣೆಯಿಂದ ಜಕ್ಕರಲ್ಲಿ ದೇವಾನ್ಯಾನ್ಯವು ವೃದ್ಧಿಯಾಗುವದು.

೧೦. ಯೇಸುವಿನ ವಿಶ್ವಾಸಾನ್ಯಾನ್ಯದಲ್ಲಿರುವವನಿಗೆ ಯೇಸುವಿನ ಮಹಿಮೆಯು ಮುಖ್ಯಾಪೇಕ್ಷಾವಿ

ಕೌಲಾ. ೩, ೧೪—೨೧.

ಷಯವಾಗಿದೆ. ಯೇಸುವಿನ ಮಹಿಮೆಯ ಉದ್ದಿಶ್ಯವಿಲ್ಲ ದ ಉಂಟಾಗುವ ಸರ್ವಕ್ಕೂ, ಕ್ರಿಸ್ತನು ಆದ್ಯಂತ್ಯವಾಗಿ
ದ್ದೆಲ್ಲಾ ನ್ಯೂನವಾಗಲಿ ಅಧಿಕವಾಗಲಿ ಪಾಪವಾಗಿದೆ. ಕಾರಣವಾಗಿದ್ದಾನೆ.
೧೧. ಋಕ್ತನಿಗಿರುವ ದೇವಾನ್ಯಾನೃಕ್ಕೂ, ಅದರಿಂ ೧೨. ಕೃತಜ್ಞತೆಯು ಋಕ್ತನ ಆದಿ ಗುಣವಾಗಿದೆ.

ವಿಶ್ಲೇಷಣ್ಯಾದ್ಯಾಧನೆಗಳು. ಸು. ೩, ೧೪—೪, ೧.

ಗೃಪಾಥರ್ಮಗಳು.

ಅಪೊಸ್ತಲನು ವ. ೧೧ಲ್ಲಿ ಪ್ರೀತಿಯ ಅನ್ಯೋನ್ಯದಲ್ಲಿರುವ ಕ್ರೈಸ್ತರ ಸ್ವಾತಂತ್ರ್ಯ ಸಮಾನತ್ವಗಳನ್ನು ಬೋಧಿಸಿದನಂತರ, ಇಲ್ಲಿ ಮೊದಲನೆ ತಿಮೊಥೆಯನ ಪತ್ರಿಕೆಯಲ್ಲಿಯೂ, ತೀತನ ಪತ್ರಿಕೆಯಲ್ಲಿಯೂ, ಹೆಚ್ಚು ಕಡಿಮೆಯಾಗಿ ಅದೇ ಶಬ್ದಗಳಿಂದ ಎಫೆ. ೫, ೧೪ಲ್ಲಿಯೂ ಮಾಡಿದ ಪ್ರಕಾರ, ಈ ಸ್ವಾತಂತ್ರ್ಯದ ದುಪ್ರಯೋಗವನ್ನು ನಿಲ್ಲಿಸ ತಕ್ಕ ಉದ್ಬೋಧನೆಯನ್ನು ಬರೆಯುತ್ತಾನೆ. ಆ ಕಳ್ಳಬೋಧಕರು ಗೃಹ ಧರ್ಮವನ್ನು ಸಹ ಕೆಡಿಸಿದರೋ ಏನೋ ಎಂದು, ಅರಿಯೆವು; ಅದು ಸೂಚಿತವಾಗಿರುವದಿಲ್ಲ.

ದೇವರಿಗೆ ಯೇಸು ಕ್ರಿಸ್ತನಲ್ಲಿ ಸಾಮಾನ್ಯವಾಗಿ ಕೃತಜ್ಞರಾದ ಸಭೆಯವರು ಕ್ರೈಸ್ತಶಿಕ್ಷಾನುಸಾರವಾಗಿ, ಒಬ್ಬರಿಗೊಬ್ಬರು ಅಧೀನರಾಗಿರ ಬೇಕು. ಹೆಂಗಸರು, ಮಕ್ಕಳು, ಆಳುಗಳು ಮುಂತಾದವರು ಕ್ರಿಸ್ತನ ಭಕ್ತ್ಯಾನುಸಾರವಾಗಿ ಹಿರಿಯರಿಗೆ ವಿಧೇಯರಾಗಿರ ಬೇಕು. ಕರ್ತನ ಹೆಸರಿನಲ್ಲಿ ಆಳುವ ಅಧಿಕಾರಿಗಳಾದ ಗಂಡಸರು, ತಂದೆಗಳು, ಯಜಮಾನರು ಮುಂತಾದವರು ತಾವು ಹಿರಿಯನಾದ ಕರ್ತನನ್ನು ಸೇವಿಸ ಬೇಕೆಂಬ ಭಾವನೆಯಿಂದ ಎಲ್ಲಾ ಅನ್ಯಾಯಕ್ಕೂ, ಅಪ್ರೀತಿಗೂ ದೂರವಾಗಿರ ಬೇಕು. ಈ ಬೋಧನಾವಾಕ್ಯಗಳಲ್ಲಿ ಪ್ರಕಟವಾದ ಬುದ್ಧಿಯನ್ನು ಸರಿಯಾಗಿ ಗಣನೆ ಮಾಡುವ ಹಾಗೆ, ಆಗಿನ ಲೋಕದ ಸ್ಥಿತಿಗತಿಗಳನ್ನು ಜ್ಞಾಪಿಸಿ ಕೊಳ್ಳ ಬೇಕು. ಪೂರ್ವ ಕಾಲದ ಜನಾಂಗಗಳಲ್ಲೆಲ್ಲಾ ಹೆಂಗಸರು ಪೂರ್ಣವಾಗಿ ಪರಾಧೀನರಾಗಿದ್ದರು; ಮಕ್ಕಳು ಪ್ರಾಣಸಹಿತವಾಗಿ ತಂದೆಯ ಕೈವಶವಾಗಿದ್ದರು; ಮನೆಯಾಳುಗಳು ದನಗಳಂತೆ ಕ್ರಯ ವಿಕ್ರಯವನ್ನೈದುತ್ತಿದ್ದರು; ಇದು ಕ್ರೈಸ್ತಧರ್ಮಕ್ಕೆ ಪ್ರತಿಕೂಲವಾಗಿತ್ತು. ಹ್ಯಾಗಂದರೆ ಕ್ರೈಸ್ತಸಭೆಯಲ್ಲಿ ಸ್ಥಾಪಿತವಾದ ಆತ್ಮಿಕ ಸಾಮ್ಯಸ್ವಾತಂತ್ರ್ಯಗಳು ಅನ್ಯಾಯವಾದ ಪರತಾಪವು ಲೋಕದಲ್ಲಿ ಪರಿಹಾರವಾಗುವ ಮಾರ್ಗವನ್ನು ಹವಣಿಸಿದವು. ಆದರೆ ಅಪೊಸ್ತಲರು ಯಾರಿಗೂ ಅಂಕೆ ಮಾಡಲೊಲ್ಲದೆ, ಹಿರಿಯರಿಗೂ ಕಿರಿಯರಿಗೂ, ಅವರು ತಮಗಿರುವ ಬಲವನ್ನು ದುಪ್ರಯೋಗ ಮಾಡದ ಹಾಗೆಯೂ, ಇವರು ತಮ್ಮ ನೀಚ ಸ್ಥಿತಿಯನ್ನು ತಾತ್ಸ್ಮೈಯಿಂದ ಸೈರಿಸುವ ಹಾಗೆಯೂ, ಪ್ರೀತಿಯಿಂದ ಶಿಕ್ಷೆ ಹೇಳಿದರು. ಈ ಪ್ರಕಾರವಾಗಿ ಗಂಡಸರಿಗೂ, ತಂದೆಗಳಿಗೂ ಇದ್ದ ಅತಿಶಯವಾದ ಬಲವು, ಮತ್ತು ವಿಶೇಷವಾಗಿ ಕ್ರೈಸ್ತಧರ್ಮಕ್ಕೆ ವಿರೋಧವಾದ ಮನೆಯಾಳುತನವು, ಕ್ರೈಸ್ತಧರ್ಮಭಾವದಿಂದ ಕ್ರಮ ಕ್ರಮವಾಗಿ ಪರಿಹಾರವಾಗ ಬೇಕಾಯಿತು.

೧೪. ಹೆಂಗಸರ್ಕೀ, ಕರ್ತನಲ್ಲಿ ಯೋಗ್ಯವಾದ ಪ್ರಕಾರ, ನ್ತಂತ ಗಂಡಂದಿರಿಗೆ ಒಳಗಾಗಿರ್ರಿ. ೧೫. ಗಂಡಸರ್ಕೀ, ಹೆಂಡರನ್ನು ಪ್ರೀತಿ ಮಾಡಿ, ಅವರಿಗೆ ಕಹಿಯಾಗಿರ ಬ್ಯೇಡಿರಿ ೧). ೨೦. ಮಕ್ಕಳ್ಕೀ, ಎಲ್ಲಾದರಲ್ಲಿ ೨) ಹೆತ್ತವರಿಗೆ ವಿಧ್ಯೇಯರಾಗಿರ್ರಿ; ಇದ್ಕೀ ಕರ್ತನಿಗೆ ಆನಂದಕರವಾದ್ದು. ೨೧. ತಂದೆಗಳ್ಕೀ, ನಿಮ್ಮ ಮಕ್ಕಳು ಮನಗುಂದದ ಹಾಗೆ, ಅವ

ರಿಗೆ ಕೊಪವನ್ನೆಬ್ಬಿಸ ಬೇಡಿರಿ ೩). ೨೦. ದಾಸರೇ, ಮನುಷ್ಯರನ್ನು ಮೆಚ್ಚಿಸುವವರಾ ಗಿ ಕಣ್ಣು ನೋವೆಯನ್ನು ಮಾಡದೆ, ದೇವರಿಗೆ ಭಯ ಪಟ್ಟು, ಮಾಂಸ (ಪ್ರಕಾರದ ೪) ಯಜಮಾನರಾದವರಿಗೆ ಎಲ್ಲಾದರಲ್ಲಿ ಹೃದಯದ ಯಥಾರ್ಥದಿಂದ ವಿಧೇಯರಾ ಗಿರ್ರಿ. ೨೩. ಮಕ್ಕು ಮಾಡುವದಂನೆಲ್ಲಾ ಮನುಷ್ಯರಿಗೆಂದಲ್ಲ, ಕರ್ತನಿಗೆಂದು ಹೃದ ಯದಿಂದ ಮಾಡಿರಿ ೫). ೨೪. ಕರ್ತನಿಂದ ಬಾಧ್ಯತೆಯ (ಪ್ರತಿಫಲವನ್ನು ಹೊಂದು ವಿರೆಂದು ಶಿಳಿದು ಕೊಳ್ಳುತ್ತೀರಲ್ಲ? ಯಾಕಂದರೆ ಕರ್ತನಾದ ಕ್ರಿಸ್ತನಿಗೆ ೬) ದಾಸರಾಗಿ ದ್ದೀರಿ. ೨೫. ಆದರೆ ಅನ್ಯಾಯ ಮಾಡುವವನು ಮಾಡಿದ ಅನ್ಯಾಯದ ಫಲ ವನ್ನು ಹೊಂದುವನು; ಮುಖದಾಕ್ಷಿಣ್ಯವು ಇಲ್ಲ ೭). ೪, ೧. ಯಜಮಾನರೇ, ನಿ ಮಗೂ ಪರಲೋಕದಲ್ಲಿ ಯಜಮಾನನು ಇದ್ದಾನೆಂದು ಶಿಳಿದು, ನ್ಯಾಯವಾದದ್ದ ನ್ನೂ ಸರಿಯಾದದ್ದನ್ನೂ ದಾಸರಿಗೆ ಕೊಡಿರಿ.

೧. ಕಪಿಯಾಗಿರುವದೆಂದರೆ: ಕಾಪ ಕೌರ್ಯ ಗರ್ವ ಮುಂತಾದ ದುರಾಚಾರದಿಂದ ಬೀಡಿಸು ವದು.

೨. ಅಂದರೆ ದೇವರ ವಾಕ್ಯಕ್ಕೆ ಅನುಕೂಲವಾದ ಎಲ್ಲಾ ಕಾರ್ಯಗಳಲ್ಲಿ.

೩. ಮಿತಿ ಮೀರುವ ಶಿಕ್ಷೆ ಕೊಡುವದರಿಂದ, ಮ ಕ್ಕಳಿಗೆ ಗುಣವಾಗುವದಿಲ್ಲ. ತಂದೆ ಯಾವಾಗ ಶಿ ಟ್ಟು ಮಾಡಿ ಪುಸಾದೆಯುತ್ತಾನೆಂದು ನೆನಸಿ, ಭಯ ಸ್ಥರಾದ ಮಕ್ಕಳು ಮೊಂಡರಾಗಿ ಕೆಡುವದು ವಾಡಿಕೆ ಯಾಗಿದೆ.

೪. ಅಂದರೆ ಸ್ವಾಭಾವಿಕ ಲೌಕ ಸ್ಥಿತಿಗತಿಯ ಪ್ರ ಕಾರ. ಸಭೆಯಲ್ಲಿರುವವರೆಲ್ಲರು ಆತ್ಮದ ಪ್ರಕಾರ, ಸ ಪುಸಾದರರಾಗಿದ್ದಾರೆ.

೫. ನಿಜ ಕ್ರೈಸ್ತರು ಆಳುಗಳಾಗಿದ್ದರೆ, ತಮ್ಮ ಸೇವೆ ಯನ್ನೆಲ್ಲಾ ಕರ್ತನನ್ನು ಮೆಚ್ಚಿಸುವ ಮನಸ್ಸಿನಿಂದ ಮಾಡಿ, ಸರ್ವಜ್ಞನಾದ ದೇವರ ದೃಷ್ಟಿಯಲ್ಲಿ ನಡದು ಕೊಂಡು, ಉಳಿಗವನ್ನೆಲ್ಲಾ ಯಥಾರ್ಥವಾಗಿ ನಡಿಸು ತ್ತಾರೆ. ಇದೇ ಅಭಿಪ್ರಾಯವು ಎಫೆ. ೬, ೭. ೧ ಪೇತ್ರ. ೨, ೧೮. ಬರದದೆ.

೬. ತಾನು ಕ್ರಿಸ್ತನಿಗೆ ಆಳೆಂದು ಶಿಳಿಯುವ ಭಕ್ತನು ತನಗಾಗಿ ಪ್ರೀತಿಯಿಂದ ಸತ್ತ ಕರ್ತನ ಪ್ರೀತಿಯಿಂದ ಆತನ ಮನಸ್ಸಿಗೆ ಅನುಕೂಲವಾದ ಕೆಲಸವನ್ನೆಲ್ಲಾ ಅತ್ಯಾದರಣೆಯಿಂದ ಮಾಡುತ್ತಾನೆ.

೭. ಅಂದರೆ ಸರ್ವಜ್ಞನಾಗಿರುವ ನೀತಿಯುಳ್ಳ ದೇ ವರ ನ್ಯಾಯಸ್ಥಾನದಲ್ಲಿ.

ಅಂತ್ಯೋದ್ಬೋಧನೆಗಳು. ವರ್ತಮಾನಗಳು. ವಂದನೆಗಳು.

ಸು. ೪, ೨—೧೮.

ಪ್ರಾರ್ಥನೆಯ ವಿಷಯವಾದ ಉದ್ಬೋಧನೆಯು. ವ. ೨—೪.

೨. ಪ್ರಾರ್ಥನೆಯಲ್ಲಿ ೧) ನಿಲಿಗಾಳ್ಕಿರಿ; ಅದರಲ್ಲಿ ಸ್ತೋತ್ರ ಮಾಡಿ ಎಚ್ಚರವಾ ಗಿರ್ರಿ ೨). ೩. ನಾನು ಬಂಧಿಸಲ್ಪಟ್ಟ ಕಾರಣವಾದ ೩) ಕ್ರಿಸ್ತನ ಮರ್ಮವನ್ನು ಮಾ ತಾಡುವದಕ್ಕೆ ದೇವರು ನಮಗೆ ವಾಕ್ಯದ ಬಾಗಲನ್ನು ೪) ತೆರೆಯುವ ಹಾಗೆಯೂ,

ಕೊಲೊ. ೪, ೪—೬.

೪. ನಾನು ಮಾತಾಡ ಶಕ್ಕ (ಪ್ರಕಾರ ೫) ಅದನ್ನು (ಪ್ರಸಿದ್ಧಿ ಮಾಡುವ ಹಾಗೆಯೂ, ನಮಗಾಸ್ಕರ ಕೂಡ (ಪ್ರಾರ್ಥಿಸಿರಿ.

೧. ದೇವರ ಅನ್ಯೋನ್ಯದಲ್ಲಿರುವವರು ತಾವು ಕಣ್ಣಿನಿಂದ ನಾಡದೆ ಇರುವ ಕರ್ತನ ಸಂಗಡ ತಮ್ಮ ಎಲ್ಲಾ ಅಂತರ್ಬಹಿರಂಗ ಸ್ಥಿತಿಗತಿಗಳ ವಿಷಯವಾಗಿ ಎಡೆ ಬಿಡದೆ ಮಾಡುವ ಸಂಭಾಷಣೆಯು ಪ್ರಾರ್ಥನೆಯೆಂದು ಪೌಸರ್ಗಾಂಡದೆ.

೨. ಶ್ರಮಗಳ ದಣುವಿನಿಂದಲೂ, ವಿಷಯಾದಿ ಭೋಗಗಳಿಂದಲೂ, ಸೈತಾನನ ಮಾಟಗಳಿಂದಲೂ, ಆತ್ಮಿಕ ನಿದ್ದೆ ಬಾರದ ಪಾಗೆ, ಕರ್ತನ ಅನ್ಯೋನ್ಯದಲ್ಲಿ ದೃಢವಾಗಿರ ಬೇಕು.

೩. ಪೌಲನು ಪರಜನರಿಗೂ, ಯೆಹೂದರಿಗೂ ಯೇಸು ಕ್ರಿಸ್ತನು ಸಮವಾಗಿ ರಕ್ಷಕನಾಗಿದ್ದಾನೆಂದೂ, ಉಭಯತ್ರರಿಗೆ ಸಭೆಯಲ್ಲಿ ಭೇದವಿಲ್ಲದ ಐಕ್ಯವು ಇರ ಬೇಕೆಂದೂ, ಖಂಡಿತವಾಗಿ ಪ್ರಸಂಗಿಸಿದರಿಂದ, ಯೆಹೂದರು ಅವನಿಗೆ ಮಾಡಿದ ಪಗೆಯು ಅವನ ಬಂಧನಕ್ಕೆ ಹೇತುವಾಯಿತು.

೪. ಅಂದರೆ ಸುವಾರ್ತೆಯನ್ನು ತಡೆ ಇಲ್ಲದೆ ಪ್ರಸಂಗಿಸುವ ಮಾರ್ಗವನ್ನು. ಈ ಮಾತು ಶೆರೆಯಲ್ಲಿರುವವನ ಸ್ಥಿತಿಗೆ ಉಚಿತವಾದದ್ದು.

೫. ನಿಯಮಾಸಕ್ತರಾದ ಯೆಹೂದರ ಮನಸ್ಸಿನ ಪ್ರಕಾರವಲ್ಲ, ಯೇಸು ಕ್ರಿಸ್ತನಿಂದುಂಟಾದ ಸರ್ವಲೋಕರಕ್ಷಣೆಗೆ ಅನುಸಾರವಾದ ರೀತಿಯಿಂದ ಪೌಲನು ಸುವಾರ್ತೆಯನ್ನು ಸಾರ ಬೇಕೆಂದು ಅಪೇಕ್ಷಿಸಿದನು.

ಸಭೆಯಲ್ಲಿ ಶೇರದೆ ಇರುವವರ ಪಾಕ್ಕು ಬಳಿಕೆಯಲ್ಲಿ ಬುದ್ಧಿಯಿಂದ ನಡಕಾಳ್ಳ ಬೇಕೆಂಬ ಉದ್ಬೋಧನೆಯು. ವ. ೫. ೬.

೫. ಕಾಲವನ್ನು ಕೊಂಡು ಕೊಂಡು ೧), ಹೊರಗಿನವರ ಕಡೆಗೆ ಜ್ಞಾನವಾಗಿ ನಡೆದು ಕೊಳ್ಳಿರಿ ೨). ೬. ಯಾರಾಬ್ಬನಿಗೆ ಹ್ಯಾಗೆ ಉತ್ತರ ಕೊಡ ೩) ಬೇಕೆಂದು ತಿಳಿಯುವ ಹಾಗೆ, ನಿಮ್ಮ ಮಾತು ಯಾವಾಗಲೂ ಇಂಪಾಗಿಯೂ ಉಪ್ಪಿನಿಂದ ರುಚಿಯಾದದ್ದಾಗಿಯೂ ಇರಲಿ ೪).

೧. ಕಾಲವು ಕ್ರಯಕ್ಕೆ ತೆಗದು ಕೊಳ್ಳುವ ಒಡವೆಯಂತೆ ಪ್ರಿಯವೆಂದೆಣಿಸಿ, ತಕ್ಕ ಸಮಯದಲ್ಲಿ ತಕ್ಕ ಕೆಲಸ ಮಾಡುವದಕ್ಕೆ ಉದ್ಯುಕ್ತವಾಗಿರ ಬೇಕು.

೨. ಸಭೆಯಲ್ಲಿ ಶೇರದೆ, ಪರಿಶುದ್ಧಾತ್ಮವನ್ನು ಪಡೆಯದೆ ಇರುವ ಅವಿಶ್ವಾಸಿಗಳು ಕಟ್ಟರ ಗಾಳಿ ಶಿಳಿಯದೆ ಇದ್ದಾಗ್ಯೂ, ತಮ್ಮ ನಡತೆಯಲ್ಲಿ ತಪ್ಪು ಹಿಡಿಯದ ಪಾಗೆ, ಕ್ರೈಸ್ತರು ಜಾಗರೂಕರಾಗಿರ ಬೇಕು.

೩. ಆ ಕಾಲದ ಕ್ರೈಸ್ತರು ನಿಯಮಕರ್ಮಗಳಿಂದಲ್ಲ, ಯೇಸು ಕ್ರಿಸ್ತನ ವಿಶ್ವಾಸದಿಂದಲೇ ರಕ್ಷಣೆಯುಂಟಾಗುತ್ತದೆಂಬದನ್ನು ಯೆಹೂದರಿಗೆ, ಯೇಸು ಕ್ರಿಸ್ತನನ್ನು ನಂಬಿ ಆತನಿಗೆ ಪ್ರೀತಿಯಿಂದ ವಿಧೇಯರಾಗಿರುವವರಿಗೆ ರಕ್ಷಣೆಯುಂಟೆಂಬುವದನ್ನು ಪರಜನರಿಗೆ ಪ್ರಮಾಣಿಸಿ, ತರ್ಕಿಸುವವರ ಸಂಗಡ ಪ್ರತಿತರ್ಕಿಸ ಬೇಕಾಯಿತು. ಈ ಕಾಲದಲ್ಲಿ ಸುವಾರ್ತೆಯ ಸತ್ಯವನ್ನು ಬೇರೆ ವಿಧವಾಗಿ ಸ್ಥಾಪಿಸ ಬೇಕು.

೪. ಪ್ರೀತಿಯ ಮಾತು ಮಧುರ ರಸವಾದದ್ದೆಂದು, ಅಜ್ಞಾನ ಪಾಪಗಳ ದ್ವೇಷಾಸಕ್ತಿಯ ಮಾತು ಲವಣ ರಸವಾದದ್ದೆಂದು, ಪೌಲನು ಸೂಚಿಸುತ್ತಾನೆ.

ಕಾಲಾ. ೪, ೭—೧೬.

ವರ್ತಮಾನಗಳು. ವ. ೭—೯.

೭. ನನ್ನಸ್ಥಿತಿಯಂನೆಲ್ಲಾ ಪ್ರಿಯ ಸಹೋದರನಾಗಿಯೂ, ನಂಬಿಕೆಯುಳ್ಳ ನೇವಕನಾಗಿಯೂ, ಕರ್ತನಲ್ಲಿ ಜೊತೆ ಆಳಾಗಿಯೂ, ಇರುವ ತುಕಿಕನು [೧]) ನಿಮಗೆ ತಿಳಿಸುವನು. ೮. ಇವನನ್ನು, ನಿಮ್ಮವಿಷಯಗಳನ್ನುತಿಳಿದು, ನಿಮ್ಮಹೃದಯಗಳನ್ನು ಆದರಿಸುವದಕ್ಕಾಗಿಯೇ [೨]), ೯. ನಿಮ್ಮವನಾಗಿರುವ ನಂಬಿಕೆಯುಳ್ಳ ಪ್ರಿಯ ಸಹೋದರನಾದ ಒನೇಸಿಮನ ಸಂಗಡ ನಿಮ್ಮಬಳಿಗೆ ಕಳುಹಿಸಿದ್ದೇನೆ. ಇವರು ಇಲ್ಲಿ ಆಗುವವುಗಳಂನೆಲ್ಲಾ ನಿಮಗೆ ತಿಳಿಸುವರು.

೧. ಇಲ್ಲಿ ಬರದಿರುವ ತುಕಿಕನ ಸುಲಕ್ಷಣಗಳು ಮೂರು: ೫ನಂದರೆ ಅವನು ಸಖೆಯ ವಿಷಯವಾಗಿ ಪ್ರಿಯ ಸಹೋದರನು; ಪೌಲನಿಗೆ ಸತ್ಯವಾದ ಮಮತೆಯಿಂದ ಸಹಾಯ ಮಾಡುವವನು; ಕರ್ತನಿಗೆ ಪೌಲನಂತೆ ಚಕ್ಕನಾದ ನಿಜ ಜೊತೆನು.

೨. ಇದೇ ಮಾತು ಸ. ೨, ೩ಲ್ಲಿ ಬರದದೆ. ಕಾಲಾಸ್ಸೆಯವರು ತುಕಿಕನಿಂದ ಪೌಲನ ಸಂಗತಿಗಳನ್ನೆಲ್ಲಾ ಕೇಳಿ, ಅವನ ಬಂಧನಾಪದ್ರವವನ್ನೂ, ಕರ್ತನಿಂದ ಅವನಿಗೆ ಯಾವಾಗಲೂ ಆಗುವ ಸಹಾಯವನ್ನೂ, ತಿಳಿದು ಕಾಳ್ಳುವದರಿಂದ ವಿಶ್ವಾಸದಲ್ಲಿ ಧೈರ್ಯಗಾಳ್ಳ ಬೇಕಾಯಿತು.

ವಂದನೆಗಳು. ವ. ೧೦—೧೪.

೧೦. ನನ್ನಜೊತೆಶೆರೆಯವನಾದ [೧]) ಅರಿಸ್ತರ್ಕನೂ, ಬರ್ನಬನ ಅಳಿಯನಾದ ಮರ್ಕನೂ [೨]) ನಿಮ್ಮನ್ನು ವಂದಿಸುತ್ತಾರೆ. ಇವನನ್ನು ಕುರಿತು ಅಪ್ಪಣೆ ಹೊಂದಿದಿರಿ; ನಿಮ್ಮಹತ್ತರ ಬಂದರೆ, ಅವನನ್ನುಅಂಗೀಕರಿಸಿರಿ. ೧೧. ಯುಸ್ತನೆಂಬ ಯೇಸುವು ಸಹ ವಂದಿಸುತ್ತಾನೆ. ಇವರು ಪರಿಛೇದನೆಯವರೇ; ಇವರು ಮಾತ್ರ [೩]) ದೇವರ ರಾಜ್ಯಕ್ಕಾಗಿ ನನ್ನಜೊತೆಕೆಲಸದವರಾಗಿದ್ದು, ನನಗೆ ಆದರಣೆಯಾಗಿದ್ದರು. ೧೨. ನಿಮ್ಮವನಾಗಿರುವ ಕ್ರಿಸ್ತನ ದಾಸನಾದ ಎಪಫ್ರನು [೪]) ನಿಮ್ಮನ್ನುವಂದಿಸುತ್ತಾನೆ. ನೀವು ದೇವರ ಸಮಸ್ತ ಚಿತ್ತದಲ್ಲಿ ಸಂಪೂರ್ಣರಾಗಿಯೂ ತುಂಬಿದವರಾಗಿಯೂ ನಿಲ್ಲಬೇಕೆಂದು, ಯಾವಾಗಲೂ ನಿಮಗಾಸ್ತರ ಪ್ರಾರ್ಥನೆಗಳಲ್ಲಿ ಹೋರಾಡುತ್ತಾನೆ. ೧೩. ಅವನು ನಿಮಗಾಸ್ತರವೂ, ಲವಾದಿಕಯದವರಿಗಾಸ್ತರವೂ, ಹಿಯರಪೊಲಿಯವರಿಗಾಸ್ತರವೂ, ಬಹು ಆಸಕ್ತಿ ಪಡುತ್ತಾನೆಂದು, ಅವನಿಗೆ ಸಾಕ್ಷಿ ಕೊಡುತ್ತೇನೆ [೫]). ೧೪. ಮೃದುವಾದ ಪ್ರಿಯ ಲೂಕನೂ, ದೇಮನೂ [೬]) ನಿಮ್ಮನ್ನು ವಂದಿಸುತ್ತಾರೆ. ೧೫. ಲವಾದಿಕಯದಲ್ಲಿರುವ ಸಹೋದರರನ್ನೂ [೭]), ನುಂಫನನ್ನೂ, ಅವನ ಮನೆಯಲ್ಲಿರುವ ಸಭೆಯನ್ನೂ ವಂದಿಸಿರಿ. ೧೬. ಮತ್ತು ಈ ಪತ್ರಿಕೆಯು ನಿಮ್ಮಲ್ಲಿ ಓದಿ

ಕೊಲೊ. ೪, ೧೭—೧೯.

ಈದ ಮೇಲೆ, ಲವಾದಿಕಯದವರ ಸಭೆಯಲ್ಲಿ ಓದಲ್ಪಡುವ ಹಾಗೆಯೂ, ಲವಾದಿಕೈಯದ್ದನ್ನು ನೀವು ಸಹ ಓದುವ ಹಾಗೆಯೂ, ಮಾಡಿರಿ. ೧೭. ಮತ್ತು ಅರ್ಕಿಪ್ಪನಿಗೆ[೪], ನೀನು ಕರ್ತನಲ್ಲಿ ಹೊಂದಿದ ಸೇವೆಯನ್ನು ಪೂರೈಸುವ ಹಾಗೆ ನೋಡು, ಎಂದು ಹೇಳಿರಿ. ೧೮. ಪೌಲನೆಂಬ ನನ್ನ ಸ್ವಂತ ಕೈಯಿಂದ[೧೦] ವಂದನೆಯು. ನಂನ ಬಂಧಗಳನ್ನು ಜ್ಞಾಪಕ ಮಾಡಿಕೊಳ್ಳಿರಿ[೧೧]. ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

೧. ಅರಿಸ್ತರ್ಕನು ಅಪೊ. ಕ್ರಿ. ೨೦, ೪. ತುಕಿಕನ ಪ್ರಕಾರ ಪೌಲನನ್ನು ಕಾರಿಂಥದಿಂದ ಅನುಸರಿಸಿ, ಯೆರೂಸಲೇಮಿಗೂ, ಕೈಸರಯಕ್ಕೂ, ರಾಮಕ್ಕೂ ಅವನ ಜಾತೆಯಲ್ಲಿ ಬಂದನು.

೨. ಅಪೊ. ಕ್ರಿ. ೧೫, ೩೭ರಲ್ಲಿ ಸೂಚಿತವಾದ ತರ್ಕವು ಇಷ್ಟರಾಳಗೆ ಪೂರ್ಣ ಪರಿಹಾರವಾಗಿ, ಮರ್ಕನು ಪೌಲನಿಗೆ ಅತಿ ಪ್ರಿಯನಾದನೆಂದು, ಇಲ್ಲಿ ತೋರುತ್ತದೆ. ಮರ್ಕನು ಯೆರೂಸಲೇಮಿನಲ್ಲಿ, ಅಥವಾ ಕೈಸರಯದಲ್ಲಿ, ಅಪೊಸ್ತಲನ ಜಾತೆಯಲ್ಲಿ ಶೇರಿದನೆಂಬ, ನೆನಸ ತಕ್ಕದ್ದು. ಬರ್ನಬನ ಅಳಿಯನಾದ ಮರ್ಕನು ಪೌಲನ ಅಳಿಯನಿಗೆ ಅಪೊ. ಕ್ರಿ. ೨೩, ೧೬. ಸ್ನೇಹಿತನಾಗಿದ್ದನೋ ಏನೋ, ತಿಳಿಯುವದಿಲ್ಲ.

೩. ಫಿಲೆ. ೧, ೧೩. ೧೫ರ ಪ್ರಕಾರ ಆಗ ರಾಮಪುರದಲ್ಲಿದ್ದ ಉಳಿದ ಯೆಹೂದಕ್ರೈಸ್ತರೆಲ್ಲರೂ ಪೌಲನಿಗೆ ಅಪಕಾರಿಗಳಾದರು.

೪. ಎಪಫ್ರನು ಫಿಲೆ. ೨, ೨೩. ಫಿಲಿಪ್ಪಿಯರ ಪತ್ರಿಕೆಯ ವಾಹಿಯಾದನು. ಅವನು ಅರಿಸ್ತರ್ಕ ತುಕಿಕ ಒನೇಸಿಮರ ಕೂಡಾ ಪೌಲನಿಂದ ಅಪ್ಪಣೆ ತೆಗದು ಕಾಂಡು ಪೋದನೋ ಏನೋ, ಗೊತ್ತಿಲ್ಲ. ಇಲ್ಲವಾದರೆ ಫಿಲಿಪ್ಪಿಯರ ಪತ್ರಿಕೆಯು ಕಾಲಾನ್ಸೆ ಎಫೆಸ ಸಭೆಗಳ ಪತ್ರಿಕೆಗಳ ಮೇಲೆ ರಚಿತವಾಯಿತೆಂದು, ನೆನಸ ಬೇಕು.

೫. ಈ ಶಬ್ದವು ಕಾಲಾನ್ಸೆಯವರಿಗೆ ಆದ ಪೋರಾಟವನ್ನು ಸೂಚಿಸುತ್ತದೆ.

೬. ಬಪುಕಾಲ ತನಗೆ ಜಾತೇಶರೆಯವನಾಗಿದ್ದು, ಅನುದಿನವು ತನ್ನ ಸಂಗಡ ಪ್ರಾರ್ಥನೇ ಮಾಡುತ್ತಾ ಬಂದ ಸಹೋದರನಿಗೆ ಹೀಗೆ ಸಾಕ್ಷಿ ಕೊಡುವದು ಉಚಿತವಾಗಿದೆ.

೭. ಇವನು ತದನಂತರ ವಿಶ್ವಾಸದ್ರೋಹಿಯಾದನೆಂದು, ೨ ತಿಮೊ. ೪, ೧೦ರಲ್ಲಿ ಬರದದೆ.

೮. ಎಫೆಸರದೆಂಬ ಪರಿವರ್ತನಪತ್ರಿಕೆಯಲ್ಲಿ ವಂದನಗಳನ್ನು ಶೇರಿಸದೆ ಇದ್ದ ಕಾರಣ, ಅವುಗಳನ್ನು ಇಲ್ಲಿ ಬರೆಯುತ್ತಾನೆ.

೯. ಇವನ ಪೆಸರು ಫಿಲೇ. ೨ರಲ್ಲಿಯೂ ಬರದದೆ.

೧೦. ಪೌಲನು ಮತ್ತಾಬ್ಬನ ಕೈಯಿಂದ ಬರಿಸಿದ ಪತ್ರಿಕೆಗೆ ಅಂಕಿತವನ್ನು ಮಾತ್ರ ತಾನು ಬರದನು. ಅವನಿಗೆ ಕಣ್ಣು ನೋವು ಇದ್ದ ಕಾರಣ, ಗಲತರ ಪತ್ರಿಕೆಯ ಪೂರ್ತಿ ಉಳಿದವುಗಳನ್ನು ಪುಸ್ತಕರಿಂದ ಬರಿಸಿ, ಕಡೆಯಲ್ಲಿ ಮಾತ್ರ ಸ್ವಂತ ಕೈಯಿಂದ ಪೆಸರು ಬರಿಯುತ್ತಾ ಇದ್ದನು. ೨ ಥೆಸ್ಸ. ೩, ೧೭.

೧೧. ಅಂದರೆ, ನಾನು ಬಿಡುಗಡೆಯಾಗ ಬೇಕೆಂದು, ಪ್ರಾರ್ಥನೇ ಮಾಡಿರಿ.

ಫಿಲೆಮೋನನ ಪತ್ರಿಕೆಯು.

ಪೀಠಿಕೆಯು.

ಪತ್ರಿಕೆಯ ಕಾರಣವೂ ತಾತ್ಪರ್ಯವೂ.

ಅಪೊಸ್ತಲನು ಕೊಲೊ. ೩, ೧೪. ಮುಂತಾದ ವಚನಗಳಲ್ಲಿ ಆಳೊಡೆಯರ ಧರ್ಮದ ವಿಷಯವಾಗಿ ಬರದ ಬೋಧನೆಗೆ ಈ ಪತ್ರಿಕೆಯು ಯುಕ್ತವಾದ ಉದಾಹರಣೆಯಾಗಿದೆ. ಕೊಲೊಸ್ಸೆ ಪಟ್ಟಣದ ಧನವುಳ್ಳ

ಫಿಲೇಮೋನನ ಪತ್ರಿಕೆ.

ಗೃಹಸ್ಥನಾದ ಫಿಲೆಮೋನನೆಂಬವನ ಮನೆಯಾಳಾದ ಒನೇಸಿಮನು ಒಂದು ಮೋಸದ ನಿಮಿತ್ತ ವ. ೧೮. ಓಡಿ ಹೋಗಿ, ರೋಮಪುರಕ್ಕೆ ಬಂದು, ಅಪೊಸ್ತಲನಾದ ಪೌಲನ ಬಳಿಯಲ್ಲಿ ಶೇರಿ, ಸಂವರ್ತಿಯಾದನು. ಹೀಗಾದ ಮೇಲೆ, ತಿರಿಗಿ ಒಡೆಯನಲ್ಲಿ ಹೋಗುವದು ನ್ಯಾಯವಾಗಿತ್ತು. ಆದ್ದರಿಂದ ಇಂಥಾ ಸೇವಾನಿರತನಾದ ನಂಬಿಕೆಯುಳ್ಳ ಚಾಕರನು ಅತಿಪ್ರಯೋಜಕನೆಂದು, ಅವನನ್ನು ತನ್ನ ಬಳಿಯಲ್ಲಿ ಇಟ್ಟು ಕೊಳ್ಳುವದಕ್ಕೆ ಪೌಲನು ಬಹಳ ಮನಸ್ಸುಳ್ಳವನಾಗಿದ್ದರೂ, ತುಕಿಕನ ಸಂಗಡ ಕೊಲೊಸ್ಸೆಗೆ ಹೋಗುವ ಸಮಯ ದೊರಕಿದ ಕೂಡಲೇ, ಅವನನ್ನು ಧಣಿಯ ಮನೆಗೆ ತಿರಿಗಿ ಕಳುಹಿಸಿದನು. ತುಕಿಕನು ಕೊಲೊಸ್ಸೆಸಭೆಯನ್ನು ನೋಡುವದಕ್ಕೂ, ಅಪೊಸ್ತಲನ ಪತ್ರಿಕೆಯನ್ನು ಅದಕ್ಕೆ ಒಪ್ಪಿಸುವದಕ್ಕೂ ಪ್ರಯಾಣಕ್ಕೆ ಹೊರಟಾಗ, ಅವನ ಸಂಗಡ ಹೋಗುವ ಒನೇಸಿಮನನ್ನು ಪ್ರೀತಿಯಿಂದ ಶೇರಿಸಿ ಕೊಳ್ಳಿ ಬೇಕೆಂದು, ಪೌಲನು ಕೊಲೊ. ೪, ೯. ಸಭಾಪತ್ರಿಕೆಯಲ್ಲಿ ಬರದದ್ದಲ್ಲದೆ, ಅವನ ಧಣಿಯಾದ ಫಿಲೇಮೋನನಿಗೆ ವಿಶೇಷವಾದ ಅನುಕೂಲ ಪತ್ರಿಕೆಯನ್ನು ಬರದು, ಆಳು ಮಾಡಿದ ತಪ್ಪನ್ನು ಮನ್ನಿಸಿ, ಸ್ನೇಹದಿಂದ ಅಂಗೀಕರಿಸ ಬೇಕೆಂದು, ಬೇಡಿ ಕೊಂಡನು. ಬೇರೆ ಬೇರೆ ಸಭೆಗಳ ಕಾರ್ಯ್ಯಗಳಲ್ಲಿಯೂ, ಸರ್ವ ಕ್ರೈಸ್ತಸಭೆಯ ಕಾರ್ಯ್ಯಗಳಲ್ಲಿಯೂ, ಬಹಳ ಪ್ರಯಾಸ ಪಡುತ್ತಾ ಇದ್ದರೂ ಅತ್ಯಲ್ಪ ಜನರಾದ ಭಕ್ತರ ಉಪಯೋಗಗಳನ್ನು ಸಹ ಮಮತೆಯಿಂದ ಚಿಂತಿಸುತ್ತಾ ಇರುವ ಅಪೊಸ್ತಲನ ರಮಣೀಯವಾದ ಚಿತ್ರಪಟವೂ, ಕ್ರೈಸ್ತರಿಗೆ ಉಚಿತವಾದ, ಹೃದಯವನ್ನು ಕರಗಿಸುವ, ಅತಿಮೃದುವಾದ ಬೇಡುವಿಕೆಯ ಉತ್ತಮ ಮಾದ್ರಿಯೂ, ಕ್ರೈಸ್ತಮಾರ್ಗ್ಗಾನುಸಾರವಾಗ ತಕ್ಕ ಆಳೊಡೆಯರ ಧರ್ಮಬೋಧನಾಸೂಚನೆಯೂ ಈ ಪತ್ರಿಕೆಯಲ್ಲಿ ತೋರುತ್ತವೆ. ಆದ್ದರಿಂದ ಅದು ಅಲ್ಪವಾಗಿ ಕಾಣುವ ಗೃಹಕೃತ್ಯೋದ್ದಿಶ್ಯವಾದ ಬಹಳ ಚಿಕ್ಕ ಪತ್ರವಾಗಿದ್ದರೂ, ಲೇಖಿಕನ ನಿಮಿತ್ತ ಮಾತ್ರವಲ್ಲ, ಘನವಾದ ತಾತ್ಪರ್ಯ್ಯದ ನಿಮಿತ್ತವಾಗಿಯೂ, ಹೊಸ ಒಡಂಬಡಿಕೆಯ ಪರಿಶುದ್ಧ ಗ್ರಂಥಗಳಲ್ಲಿ ಶೇರಿ, ಉಳಿದವುಗಳಂತೆ ಅತಿಲಕ್ಷ್ಯವಾಗಿದೆ.

ತಾತ್ಪರ್ಯ್ಯವು.

೧) ಮೇಲ್‌ವಿಲಾಸವೂ ವಂದನೆಯೂ ವ. ೧—೩.

೨) ವ. ೪—೭. ಅಪೊಸ್ತಲನು ಸಭಾಪತ್ರಿಕೆಗಳ ವಾಡಿಕೆಯ ಪ್ರಕಾರ, ಒಬ್ಬನಿಗೆ ಬರದ ಈ ಪತ್ರಿಕೆಯಲ್ಲಿಯೂ, ಅವನ ಭಕ್ತಿಯನ್ನೂ ಅವನು ಅತಿಥಿಗಳಾದ ಕ್ರೈಸ್ತರಿಗೆ ಮಾಡುವ ಆತಿಥ್ಯವನ್ನೂ ದಯಾರಸದಿಂದ ಹೊಗಳುತ್ತಾನೆ. ಈ ಪ್ರಕಾರವಾಗಿ ಅವನ ಮನಸ್ಸನ್ನು ಸೆಳೆದು, ಒನೇಸಿಮನನ್ನು ನಿರ್ದ್ದಯದಿಂದ ಶೇರಿಸಿಕೊಳ್ಳುವದು ಪೂರ್ವ ಗುಣಕ್ಕೆ ವಿಪರೀತವಾದೀತೆಂದು, ಮುಂಚಿತವಾಗಿಯೇ ಜಾಡೆಯಾಗಿ ಸೂಚಿಸುತ್ತಾನೆ.

೩) ವ. ೮—೨೧. ಪತ್ರಿಕೆಯ ಮುಖ್ಯೋದ್ದಿಶ್ಯವು: ಒನೇಸಿಮನಿಗಾಗಿ ಆತುರದಿಂದ ಮಾಡುವ ಬಿನ್ನಹವು. ಇದರಲ್ಲಿ ಪೌಲನು ಫಿಲೇಮೋನನು ತನ್ನ ಹಂಗಿನಲ್ಲಿರುವದನ್ನೂ, ಒನೇಸಿಮನ ಗುಣವರ್ಣ್ಣನೆಯನ್ನೂ, ಜ್ಞಾಪಕ ಮಾಡಿ, ಅವನನ್ನು ತನ್ನ ಕರುಳಿನಂತೆ ಶೇರಿಸಿ ಕೊಳ್ಳಿ ಬೇಕೆಂದು ಬೇಡಿ ಕೊಳ್ಳುತ್ತಾನೆ. ಕಡೆಯಲ್ಲಿ

೪) ವ. ೨೨—೨೫. ಬಿಡಿದೀಮನೆಯನ್ನು ತನಗಾಗಿ ಸಿದ್ಧ ಮಾಡ ಬೇಕೆಂದು ಬರದನಂತರ, ವಾಡಿಕೆಯಾದ ಅಂತ್ಯೋಕ್ತಿಯು ಬರುತ್ತದೆ.

ಫಿಲೆ್ಮೋ. ವ. ೧–೯.

೧. ಕ್ರಿಸ್ತ ಯೇಸುವಿನ ಬಂಧದವನಾದ ಪೌಲನೂ, ಸಹೋದರನಾದ ತಿಮೊಥೆಯನೂ, ನಮ್ಮ ಪ್ರಿಯನೂ ಜೊತೆಕೆಲಸದವನೂ ೧), ಈದ ಫಿಲೆ್ಮೋನನಿಗೂ, ೨. ಪ್ರಿಯ ಅಪ್ಫಿಯಳಿಗೂ ೨), ನಮ್ಮ ಜೊತೆ ದಂಡಿನವನಾದ ಅರ್ಕಿಪ್ಪನಿಗೂ, ನಿನ್ನ ಮನೆಯಲ್ಲಿರುವ ಸಭೆಗೂ--೩. ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ ೩).

೧. ಫಿಲೇಮೋನನು ಕಾಲೊಸ್ಸೆಯಲ್ಲಿ ಅಲ್ಲ, ಬೇರೆ ಒಂದು ಸ್ಥಳದಲ್ಲಿ ಪೌಲನನ್ನು ಕಲತು, ಅವನ ಬೋಧನೆಯನ್ನು ಕೇಳಿ, ಸಂವರ್ತಿಯಾಗಿ ವ. ೧೯. ಸುವಾರ್ತಾಪ್ರಸಂಗದಲ್ಲಿ ಅವನಿಗೆ ಆಗಲೇ ಸಹಾಯ ಮಾಡಿದನೆಂದು, ತಾ೧ರುತ್ತದೆ.

೨. ಅಪ್ಫಿಯಳು ಫಿಲೇಮೋನನ ಪೆಂಡತಿಯಾಗಿದ್ದಳು. ಮನೆಯಾಳಾದ ಒನೇಸಿಮನ ಉದ್ದಿಶ್ಯವಾಗಿ ಬರದ ಅನುಕೂಲ ಪತ್ರಿಕೆಯ ವಂದನಾಸ್ಥಳದಲ್ಲಿ ಮನೆಯಜಮಾನಿಯ ಪೆಸರನ್ನು ಶೇರಿಸುವದು ಯುಕ್ತವಾಗಿದೆ.

೩. ೧ಕೊರಿ. ೧೬ರಲ್ಲಿಯೂ ೧ ಥೆಸ್ಸ. ೧ರಲ್ಲಿಯೂ ಅದೇ ಆಶೀರ್ವಾದವು ಬರದದೆ.

೪. ನೀನು ಕರ್ತನಾದ ಯೇಸು ಕ್ರಿಸ್ತನ ಮೇಲೆಯೂ ಪರಿಶುದ್ಧರೆಲ್ಲರ ಮೇಲೆಯೂ ೫. ಇಡುವ ಪ್ರೀತಿಯನ್ನೂ ವಿಶ್ವಾಸವನ್ನೂ ಕೇಳಿ ೧), ನಿನ್ನ ವಿಶ್ವಾಸದ ಅನ್ಯೋನ್ಯವು ಯೇಸು ಕ್ರಿಸ್ತನಿಗಾಗಿ ನಿಮಿತ್ತವಿರುವ ೬. ಎಲ್ಲಾ ಒಳ್ಳೇದರ ತಿಳುವಿಕೆಯಲ್ಲಿ ಬಲವಾಗಿರ ಬೇಕೆಂದು, ನಾನು ನನ್ನ ಪ್ರಾರ್ಥನೆಗಳಲ್ಲಿ ಯಾವಾಗಲೂ ನಿನ್ನನ್ನು ನೆನಪು ಮಾಡಿ ೨), ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ. ೭. ಯಾಕಂದರೆ, ಸಹೋದರನ್ಯೇ, ನಿನ್ನಿಂದ ಪರಿಶುದ್ಧರ ಕರುಳುಗಳು ತೃಪ್ತಿಯಾದದರಿಂದ ೩) ನಿನ್ನ ಪ್ರೀತಿಗೌತ್ಕರ ನಾವು ಬಹು ಆನಂದವನ್ನೂ ಆದರಣೆಯನ್ನೂ ಹೊಂದಿದ್ದೇವೆ.

೧. "ಕೇಳಿ" ಎಂಬದರಿಂದ ಫಿಲೇಮೋನನು ಪೌಲನ ಬಳಿಯಲ್ಲಿದ್ದು ಸಂವರ್ತಿಯಾದನಂತರ ಕಾಲೊಸ್ಸೆಗೆ ಪುನಾಃ ವಸತಿಯಾದನೆಂದು ತಾ೧ರುತ್ತದೆ. ಇತ್ತಲಾಗಿನ ಅವನ ಸಮಾಚಾರವನ್ನೆಲ್ಲಾ ಒನೇಸಿಮನು ತನಗೆ ತಿಳಿಸಿದನೆಂದೂ, ಮನೇ ಯಜಮಾನನ ಸದ್ಗುಣವನ್ನು ಮನೆಯಾಳು ತಿಳಿಸಿದನೆಂದೂ, ಅಪಾಸ್ತಲನು ಸೂಚಿಸುತ್ತಾನೆ.

೨. "ನಿನ್ನನ್ನು" ಎಂಬ ಶಬ್ದವನ್ನು ತೂಗಿ ಆಲೋಚಿಸಿದರೆ, ಅಪಾಸ್ತಲನಿಗೆ ಫಿಲೇಮೋನನ ಪೆಂಡತಿಯ ಮುಖಪರಿಚಿತಿ ಇರಲಿಲ್ಲವೆಂದು, ಜಾಡೆಯಾಗಿ ಕಾಣುತ್ತದೆ. ಪೌಲನು ಅವಳನ್ನು ಕಂಡವನಾಗಿದ್ದರೆ, ನಿಮ್ಮನ್ನೂ ಎಂದು ಬರೆಯುತ್ತಿದ್ದನೆಂದು, ನೆನಸ ತಕ್ಕದ್ದು.

೩. ಅಂದರೆ ಪ್ರಯಾಣಸ್ಥರಾದ ಕ್ರೈಸ್ತರಿಗೆ ಫಿಲೇಮೋನನು ಬಹಳ ಅತಿಥಿಪ್ರೀತಿಯನ್ನು ತಾ೧ರಿಸಿ, ಅವರನ್ನು ವಿಶೇಷವಾಗಿ ಸತ್ಕರಿಸುತ್ತಾನೆಂಬುವದನ್ನು ಪೌಲನ ಬಳಿಗೆ ಬಂದವರು ತಿಳಿಸಿದರೆಂದು, ಕಾಣುತ್ತದೆ.

೮. ಈದಕಾರಣ ಯಾಜ್ಞಾವಾದದ್ದನ್ನು ನಿನಗೆ ಆಜ್ಞಾಪಿಸುವದಕ್ಕೆ ಕ್ರಿಸ್ತನಲ್ಲಿ ೧) ಬಹು ಧೈರ್ಯವಿದ್ದರೂ, ಅದನ್ನು ಬಿಟ್ಟು, ೯. ಮುದುಕನಾದ ಪೌಲನಂಥವನಾಗಿ

ಫಿಲ್ಕೀ. ವ. ೧೦—೨೧.

ಯೂ, ಇಗ ಯೇಸು ಕ್ರಿಸ್ತನ ಬಂಧದವನಾಗಿಯೂ ಇದ್ದು, ಪ್ರೀತಿಗಾತ್ಕರ ಬೇಡಿ ಕೊಳ್ಳುತ್ತೇನೆ. ೧೦. ಮುಂಚೆ ನಿನಗೆ ನಿಷ್ಪ್ರಯೋಜಕನಾಗಿದ್ದು, ಇಗ ನಿನಗೂ ನನಗೂ ಪ್ರಯೋಜಕನಾಗಿರುವಂಥ, ೧೧. ನಾನು ಕಿರಿಗಿ ಕಳುಹಿಸಿದಂಥ, ನನ್ನ ಬಂಧಗಳಲ್ಲಿ ನಾನು ಪಡದ, ನನ್ನ ಮಗನಾದ ಒನೇಸಿಮನ [೨] ವಿಷಯ ನಿನ್ನನ್ನು ಬೇಡಿ ಕೊಳ್ಳುತ್ತೇನೆ. ೧೨. ನೀನು ಅವನನ್ನು ನನ್ನ ಕರುಳುಗಳೆಂದು ಅಂಗೀಕರಿಸು. ೧೩. ಅವನು ಸುವಾರ್ತೆಯ ಬಂಧಗಳಲ್ಲಿ ನಿನಗೆ ಬದಲಾಗಿ ನನಗೆ ಸೇವಿಸುವ ಹಾಗೆ, ಅವನನ್ನು ನನ್ನ ಹತ್ತರ ಇಟ್ಟು ಕೊಳ್ಳ ಇಚ್ಛಿಸಿದೆನು. ೧೪. ಆದರೆ ನಿನ್ನ ಉಪಕಾರವು ಅಗತ್ಯದ ಪ್ರಕಾರವಲ್ಲ, ಉಚಿತದ ಪ್ರಕಾರ ಇರುವ ಹಾಗೆ, ನಿನ್ನ ಚಿತ್ತವಿಲ್ಲದೆ ಏನೂ ಮಾಡ ಮನಸ್ಸಿಲ್ಲದೆ ಇದ್ದೆನು. ೧೫. ಯಾಕಂದರೆ ನೀನು ಅವನನ್ನು ಇನ್ನು ದಾಸನಾಗಿ ಅಲ್ಲ, ೧೬. ದಾಸನಿಗಿಂತ ಉತ್ತಮನಾಗಿ ಮಾಂಸದಲ್ಲಿಯೂ ಕರ್ತನಲ್ಲಿಯೂ [೩], ವಿ ಶೇಷವಾಗಿ ನನಗೆ, ಎಷ್ಟು ಹೆಚ್ಚಾಗಿ ನಿನಗೆ, ಪ್ರಿಯ ಸಹೋದರನಾಗಿ ಎಂದೆಂದಿಗೂ ಹೊಂದುವ ಹಾಗೆ, ಅವನು ಇಳಿಗೆ ಮಾ ತ್ರ ಅಗಲಿಸಲ್ಪಟ್ಟನೇನೋ [೪]? ೧೭. ಆದ ಕಾರಣ ನೀನು ನನ್ನನ್ನು ಪಾಲುಗಾರನೆಂದು ನೆನಸಿದರೆ, ಅವನನ್ನು ನಾನೇ ಎಂದು, ಅಂಗೀಕರಿಸು. ೧೮. ಇದಲ್ಲದೆ ಅವನು ನಿನಗೆ ಏನಾದರೂ ಅನ್ಯಾಯವನ್ನಾಗಲಿ ಸಾಲವನ್ನಾಗಲಿ ಮಾಡಿ ಇದ್ದರೆ [೫], ಅದನ್ನು ನನ್ನ ಲೆಕ್ಕಕ್ಕೆ ಶೇರಿಸು. ೧೯. ಪೌಲ ನಾದ ನಾನು ಸ್ವಂತ ಕೈಯಿಂದ [೬] ಬರೆದಿದ್ದೇನೆ; ನಾನೇ ಸಲ್ಲಿಸುವೆನು. ನಿನ್ನನ್ನು ಸಹ ನನಗೆ ಕೊಡ ಹಂಗಿನಲ್ಲಿದ್ದೀ ಎಂದು [೭] ನಿನಗೆ ಹೇಳಲಾತ್ಕೀ? ೨೦. ಹೌದು, ಸಹೋದರನೇ, ನಾನು ನಿನ್ನಿಂದ ಕರ್ತನಲ್ಲಿ ಸಂತೋಷ ಪಡ ಬೇಕು [೮]. ನನ್ನ ಕರು ಳುಗಳನ್ನು ಕರ್ತನಲ್ಲಿ ಉಪಶಮನ ಮಾಡು. ೨೧. ನಾನು ಹೇಳುವದಕ್ಕಿಂತ ಹೆಚ್ಚಾ ದದ್ದನ್ನುಮಾಡುವಿ [೯] ಎಂದು ತಿಳಿದು, ನಿನ್ನವಿಧೇಯತ್ವವನ್ನುನಂಬಿ, ನಿನಗೆ ಬರೆದಿದ್ದೇನೆ.

೧. ಕ್ರಿಸ್ತನಿಂದ ನನಗೆ ಪ್ರಾಪ್ತವಾದ ಅಪಾಸ್ತೊಲಾದ್ಯೋಗದ ಅಧಿಕಾರವನ್ನು ನೆನಸಿದರೆ, ನೀನು ನನ್ನ ಆಜ್ಞಾಧೀನನಾಗಿರ ಬೇಕು.

೨. ಒನೇಸಿಮನೆಂಬ ಶಬ್ದದ ಪ್ರಯೋಜಕನೆಂಬ ಅರ್ಥವನ್ನು ಪೌಲನು ಇಲ್ಲಿ ಚಮತ್ಕಾರವಾಗಿ ಸೂಚಿಸುತ್ತಾನೆ.

೩. ಅಂದರೆ ನಿನ್ನ ಮನೆಯಲ್ಲಿ ಹುಟ್ಟಿದರಿಂದ; ಕರ್ತನಲ್ಲಿ ಅಂದರೆ ಪರಿಶುದ್ಧಾತ್ಮದ ಮುಖಾಂತರ ಹುಟ್ಟಿದರಿಂದ.

೪. ಪೌಲನ ಅಭಿಪ್ರಾಯವೇನಂದರೆ: ಒನೇಸಿಮನು ಮೋಸ ಮಾಡಿದ ಭಯದಿಂದ ಓಡಿ ಹೋದದ್ದು ಅವನಿಂದ ತಪ್ಪೇ ಸರಿ. ಆದಾಗ್ಯೂ ಅವನು ಈ ಮಾರ್ಗವಾಗಿ ನನ್ನ ಬಳಿಗೆ ಬಂದು ಸಂಪರ್ಕಿಯಾದನೆಂಬದನ್ನು ಆಲೋಚಿಸಿದರೆ, ಅವನ ತಪ್ಪಿನಿಂದಲಾದರೂ ದೇವರ ಕೃಪೆಯ ಚಿತ್ತವು ಸಾರ್ಥಕವಾಯಿತೆಂದು ನೆನಸ ಬೇಕು.

೫. ಈ ಮಾತಿನಿಂದ ಒನೇಸಿಮನು ಫಿಲೇಮೋನನ ಮನೆಯಲ್ಲಿ ಏನೋ ದ್ರೋಹ ಮಾಡಿದನು ಎಂದು,

ಜಾಡೆಯಾಗಿ ತಾರುತ್ತದೆ. ಒನೇಸಿಮನು ಪೌಲನಿಗೆ ನಡದ ಸಂಗತಿಯನ್ನೆಲ್ಲಾ ಸತ್ಯವಾಗಿ ತಿಳಿಸಿದನೆಂದು, ನೆನಸ ಬೇಕು. ಆದರೆ ಫಿಲೆಮೋನನು ಒನೇಸಿಮನ ಮೋಸವನ್ನು ಹೀಗೆ ಎಣಿಕೆ ಮಾಡುತ್ತಾನೆಂದು, ಪೌಲನಿಗೆ ನಿಶ್ಚಯ ತಿಳಿಯದೆ ಇದ್ದ ಕಾರಣ, ಖಂಡಿತವಾಗಿ ಬರೆಯುವದಿಲ್ಲ.

೬. ಬೇರೆ ಅನೇಕ ಪತ್ರಿಕೆಗಳನ್ನು ಇತರರ ಕೈಯಿಂದ ಬರಿಸಿದ ಪೌಲನು ಅತಿ ಪ್ರಿಯರಾದ ಫಿಲೇಮೋನ ಒನೇಸಿಮರ ಕಾರ್ಯದಲ್ಲಿ ಬಹಳ ಅವಸರ ಪಟ್ಟದರಿಂದಲೂ, ಫಿಲೇಮೋನನಿಗೆ ವಿಶೇಷ ಮಾನ ತಾರಿಸ ಬೇಕೆಂದಿದ್ದರಿಂದಲೂ, ಸ್ವಂತ ಕೈಯಿಂದ ಬರದನು.

೭. ಅಂದರೆ ನೀನು ನನ್ನ ಸೇವೆಯಿಂದ ಆತ್ಮರಕ್ಷಣೆಯನ್ನೂ, ದೇವರಾಜ್ಯಬಾಧ್ಯತೆಯನ್ನೂ ಪಡಾಂದ್ಧೀಯಂದು, ನೆನಪು ಮಾಡಿ ಕಾಂಡರೆ, ನಾನು ಈಗ ಪ್ರಾರ್ಥಿಸುವದು ದಾಡ್ಡದೆಂದು ನೆನಸ ತಕ್ಕದ್ದಲ್ಲ. ಎಲ್ಲಾನ್ನು ನನಗೆ ಕಾಡುವದು ಯುಕ್ತವಾದೀತು.

೮. ಸಂತೋಷ ಪಡಬೇಕೆಂಬದು ಸಪಗ ಒನೇಸಿಮನ ಪೆಸರನ್ನು ಸೂಚಿಸುತ್ತದೆ. ಮೂಲ ಗ್ರಂಥದಲ್ಲಿ ಅದಕ್ಕೆ ಒನೈಮೆನ್ ಎಂದು ಬರದದೆ.

೯. ಫಿಲೇಮೋನನು ಮನೆಯಾಳಾಗಿದ್ದ ಒನೇಸಿಮನನ್ನು ಪೂರ್ವವೃತ್ತಿಯಿಂದ ಬಿಡಿಸ ಬೇಕೆಂಬ ಅಪೇಕ್ಷೆಯನ್ನು ಪ್ರೀತಿಭಾವದಿಂದ ಜಾಡೆಯಾಗಿ ತಾರಿಸುತ್ತಾನೆ.

೨೨. ಮಶ್ತು ನನಗೆ ಬಿಡುದಿಯನ್ನು ಸಿದ್ಧ ಮಾಡು ೧); ಯಾಕಂದರೆ ನಿಮ್ಮ ಪ್ರಾರ್ಥನೆಗಳಿಂದ ನಾನು ನಿಮಗೆ ದಯಪಾಲಿಸಲ್ಪಡುವೆನೆಂದು ನಿರೀಕ್ಷಿಸುತ್ತೇನೆ. ೨೩. ಕ್ರಿಸ್ತ ಯೇಸುವಿನಲ್ಲಿ ನನ್ನ ಜಾತಿ ಶರೆಯವನಾದ ಎಪಫ್ರನೂ ೨), ನನ್ನ ಜಾತಿ ಕೆಲಸದವರಾದ ಮರ್ಕನೂ, ೨೪. ಅರಿಸ್ತರ್ಕನೂ, ದೇಮನೂ, ಲೂಕನೂ, ನಿನ್ನನ್ನು ವಂದಿಸುತ್ತಾರೆ. ೨೫. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮನ ಸಂಗಡ ೩) ಇರಲಿ. ಆಮೆನ್.

೧. ಫಿಲಿ. ೧, ೨೫ರಲ್ಲಿ ಅಪಾಸ್ತಲನು ಬರದ ಆ ಶೆಯು ಈ ಪತ್ರಿಕೆಯನ್ನು ಬರದ ವೇಳೆಯಲ್ಲಿ ಅಪಾಸ್ತಲನ ಮನಸ್ಸಿನಲ್ಲಿ ಹೆಚ್ಚು ದೃಢವಾಗಿತ್ತು.

೨. ಕಾಲಾ. ೧, ೭; ೪, ೧೨. ಇವನ ಪೆಸರು ಬರದದೆ. ಅವನು ಕಾಲಾಸ್ಸೆಯಲ್ಲಿಯೂ ಫಿಲಿಪ್ಪಿಯಲ್ಲಿಯೂ ಪೌಲನಿಗೆ ಉತ್ತಮ ಸಹಾಯಕನಾಗಿದ್ದನು.

೩. ಗಲ. ೬, ೧೮ರಲ್ಲಿ ಇದೇ ಮಾತು ಬರದದೆ. ಯೇಸು ಕ್ರಿಸ್ತನ ಪೆಸರಿನಿಂದ ತಾಡಗಿದ ಪತ್ರಿಕೆಯು ಆ ಪೆಸರಿನಿಂದಲೇ ಮುಗಿಯುವದರಿಂದ ಈ ಪೆಸರೇ ಪೌಲನ ಪೃದಯದಲ್ಲಿ ನೆಲೆಯಾಗಿತ್ತೆಂದು ಕಾಣುತ್ತದೆ.

ಎಫೆಸದವರ ಪತ್ರಿಕೆಯು.

ಪೌಲನು ರೋಮಪುರದ ಬಂಧನದಲ್ಲಿ ಬರದ ಪತ್ರಿಕೆಗಳ ವ್ಯಾಖ್ಯಾನದ ಪೀಠಿಕೆಯಲ್ಲಿಯೂ, ಕೊಲೊಸ್ಸೆಯ ಪತ್ರಿಕೆಯ ವಿಶೇಷ ಪೀಠಿಕೆಯಲ್ಲಿಯೂ, ಈ ಪತ್ರಿಕೆಯ ಉದ್ದಿಶ್ಯ ತಾತ್ಪರ್ಯ ಕ್ರಮ ರಚನಾದಿಗಳ ವಿಷಯವಾಗಿ ವಿವರಿಸಿದ್ದನ್ನು ತಿರಿಗಿ ಬರೆಯ ಕೆಲಸವಿಲ್ಲ. ಆ ಸ್ಥಳಗಳಲ್ಲಿ ವಿಶದವಾದದ್ದನ್ನು ಈಗ ತಿರಿಗಿ ಅವಲೋಕಿಸುವದು ಉಪಯೋಗವಾಗುತ್ತದೆ. ಈ ಪತ್ರಿಕೆಯ ಮುಖ್ಯಾಭಿಪ್ರಾಯವೇನಂದರೆ: ೧) ಕ್ರಿಸ್ತನ ರಕ್ಷಣಾಕಾರ್ಯದ ಮಹಿಮೆಯು, ೨) ಆತನ ಶರೀರವೆಂಬ ಕ್ರೈಸ್ತಸಭೆಯಲ್ಲಿ ಯೆಹೂದರಿಗೂ,

ಎಫೆಸದವರ ಪತ್ರಿಕೆ.

ಪರಜನರಿಗೂ ಉಂಟಾದ ಮಹಾ ಅನ್ಯೋನ್ಯವು. ೩) ಪ್ರಾಪ್ತವಾದ ರಕ್ಷಣೆಯ ಧರ್ಮದ ಪ್ರಕಾರ ದುರ್ವಿಷಯರಹಿತವಾಗಿಯೂ, ನೀತಿಯಿಂದಲೂ, ಭಕ್ತಿಯಿಂದಲೂ ನಡದು ಕೊಂಡು, ವಿಶೇಷವಾಗಿ ಪ್ರೀತಿಯನ್ನು ಹ್ಯಾಗಾದರೂ ಮಿಾರ ಬಾರದೆಂಬ ಉದ್ಬೋಧನೆಯು.

ಇಂದಿನ ವಿದ್ವಾಂಸರಲ್ಲಿ ಕೆಲವರು ಎಫೆಸದವರ ಪತ್ರಿಕೆಯು ಸ್ವನಿರ್ಮಿತವಾದದ್ದಲ್ಲವೆಂದು ಹೇಳಿ, ಇದಕ್ಕಾಗಿ ಉದಾಹರಿಸುವ ಪ್ರಮಾಣಗಳು ಯಾವವೆಂದರೆ: ೧) ಅಪೊ. ಕ್ರಿ. ೧೫, ೪. ೧೦ಲ್ಲಿ ಪೌಲನು ಎರಡು ವರೆ ವರುಷ ಎಫೆಸದಲ್ಲಿ ವಸತಿಯಾಗಿದ್ದು, ಸಭೆಯನ್ನು ಸ್ಥಾಪಿಸಿ, ತನ್ನ ಉದ್ಯೋಗವನ್ನು ನಡಿಸಿದನೆಂದು ಬರದದೆ. ೨) ಅಪೊ. ಕ್ರಿ. ೨೦, ೧೭. ಮುಂತಾದ ವಚನಗಳಲ್ಲಿ ಎಫೆಸದಿಂದ ಕರೆಯ ಕಳುಹಿಸಿದ ಆ ಸಭೆಯ ಹಿರಿಯರಿಗೆ ಮಿಲೇತದಲ್ಲಿ ಮಾಡಿದ ಪ್ರಯಾಣಭಾಷಣದಲ್ಲಿ ಪೌಲನು ಆ ಸಭೆಯ ಸ್ಥಿತಿಗಳನ್ನೆಲ್ಲಾ ಸಂಪೂರ್ಣವಾಗಿ ಬಲ್ಲವನಾಗಿದ್ದನೆಂದು ಸೂಚಿತವಾಗಿದೆ. ಆದರೆ ೩) ಎಫೆ. ೧, ೧೫ಲ್ಲಿ ಪತ್ರಿಕಾಕರ್ತನು ಪತ್ರಿಕಾವಲೋಕಿಕರಿಗೆ ತಾನು ಅವರ ವಿಶ್ವಾಸದ ವಿಷಯವಾಗಿ ಕೇಳಿದನೆಂದು, ಮತ್ತು ೪) ಸ. ೩, ೨ಲ್ಲಿ ಅವರು ತನ್ನ ಅಪೊಸ್ತಲೋದ್ಯೋಗದ ವಿಷಯವಾಗಿ ಕೇಳಿದರೆಂದು ಬರೆಯುತ್ತಾನೆ. ಪೌಲನು ಈ ಪತ್ರಿಕೆಯನ್ನು ತನಗೆ ೧. ೨ರ ಪ್ರಕಾರ ಪೂರ್ಣ ಪರಿಚಿತರಾದ ಎಫೆಸದವರಿಗೆ ಬರದು ಕಳುಹಿಸಿದನೆಂದು ನಂಬುವದಕ್ಕೆ ೩. ೪ರಲ್ಲಿ ಸೂಚಿತವಾದ ಪೂರ್ಣ ಅಪರಿಚಿತ ಜಿಹ್ನೆಗಳು ಅತ್ಯಂತ ಅಸಂಗತವಾಗಿವೆ. ಈ ಶಂಕಾಪರಿಹಾರಕ್ಕಾಗಿ ತಿಳಿಯ ತಕ್ಕದ್ದೇನಂದರೆ: ನಮ್ಮ ಪತ್ರಿಕೆಯು ಅಪೊಸ್ತಲನಾದ ಪೌಲನು ಎಫೆಸದವರ ಸಭೆಗೆ ವಿಶೇಷವಾಗಿ ಬರದ ಪತ್ರಿಕೆಯಲ್ಲ, ಆಸ್ಯವೆಂಬ ಸೀಮೆಯಲ್ಲಿದ್ದ ಎಫೆಸ, ಲವೊದಿಕಯ, ಹಿಯೆರಪೊಲಿ ಮುಂತಾದ ಪಟ್ಟಣಗಳ ಸಭೆಗಳ ಬೋಧನೋದ್ದಿಶ್ಯವಾಗಿ ರಚಿತವಾದ ಪರಿವರ್ತನಪತ್ರವಾಗಿದೆ. ಆದ್ದರಿಂದ ತಾನು ಸ್ಥಾಪಿಸಿದ ಎಫೆಸದ ಸಭೆಗೆ ಮಾತ್ರವಲ್ಲ, ತನಗೆ ಮುಖ ಪರಿಚಿತಿ ಇಲ್ಲದ ಅನೇಕ ಸಭೆಗಳಿಗೂ ಬರದು ಕಳುಹಿಸಿದ ಪರಿವರ್ತನಪತ್ರದಲ್ಲಿ ಸಾಮಾನ್ಯ ಬೋಧನಾತಾತ್ಪರ್ಯವಲ್ಲದೆ ಪರಿಚಿತಿಸೂಚಕವಾದ ವಿಶೇಷ ಸಂಗತಿಗಳು ಕಾಣದೆ ಇರುವದು ಸಹಜವಾದದ್ದೇ ಸರಿ. ಈ ಪರಿವರ್ತನಪತ್ರಿಕೆಯನ್ನು ಹೊಂದ ತಕ್ಕ ಸಭೆಗಳಲ್ಲಿ ಲವೊದಿಕಯದವರದು ಒಂದಾಗಿತ್ತು. ಲವೊದಿಕಯವು ಕೊಲೊಸ್ಸೆಗೆ ಸವಿಾಪವಾದ್ದರಿಂದ ಕೊಲೊ. ೪, ೧೬ಲ್ಲಿ ಪೌಲನು ಕೊಲೊಸ್ಸೆಯವರಿಗೆ, ತಮಗೆ ಬಂದ ಪತ್ರಿಕೆಯನ್ನು ಲವೊದಿಕಯದವರಿಗೆ ನೋಡುವದಕ್ಕೆ ಕಳುಹಿಸಿ, ಅವರಿಗೆ ಬಂದ ಪರಿವರ್ತನಪತ್ರವನ್ನು ತರಿಸಿ ಕೊಳ್ಳಬೇಕೆಂದು ಬರೆಯುತ್ತಾನೆ. ಹೀಗಿರಲಾಗಿ ನಮ್ಮ ಪತ್ರಿಕೆಯು ಪರಿವರ್ತನಪತ್ರಿಕೆಯಾಗಿದ್ದರೂ, ಎಫೆಸದ ಸಭೆಯು ಆ ದೇಶದಲ್ಲಿ ಮುಖ್ಯವಾದ್ದಾದ ಕಾರಣ ಅದರ ಹೆಸರೇ ಈ ಪತ್ರಿಕೆ ಇತ್ತ್ಯಲಾಗಿ ರೂಢಿಯಾಯಿತು. ಪೌಲನು ರೋಮಪುರದಲ್ಲಿಯೇ ಈ ಪತ್ರಿಕೆಯನ್ನು ರಚಿಸಿದನಂತರ, ಬೇರೆ ಬೇರೆ ಸಭೆಗಳ ಉದ್ದಿಶ್ಯವಾಗಿ ಬೇರೆ ಬೇರೆ ಪ್ರತಿಗಳನ್ನು ಬರಿಸಿದನೋ ತುಕಿಕನು ಒಂದೇ ಮೂಲಪತ್ರಿಕೆಯನ್ನು ತೆಗದು ಕೊಂಡು ಹೋಗಿ, ಒಂದೊಂದು ಸಭೆಯಲ್ಲಿ ತೋರಿಸಿ ಅಲ್ಲಿ ಒಂದೊಂದು ನಕಲನ್ನು ಉಂಟು ಮಾಡಿಸಿದನೋ, ಈ ಸಂಗತಿ ನಿಶ್ಚಯವಾಗಿ ಹೀಗೇ ಎಂದು ತಿಳಿಯುವದಿಲ್ಲ. ಈಗ ನಾವು ವಿವರಿಸಿದ ಪ್ರಸ್ತಾವಕ್ಕೆ ಸಭಾಚರಿತ್ರದಿಂದ ತಿಳಿದಿರುವ ಎರಡು ಸಂಗತಿಗಳು ಚನ್ನಾಗಿ ಸಂಗತವಾಗುತ್ತವೆ. ಏನಂದರೆ ೩೭೯ನೆ ವರುಷದಲ್ಲಿ ನವಕೈಸರಯದಲ್ಲಿ ಮೃತ ಪಟ್ಟ ಸಭಾಪಿತನಾದ ಬಸೀಲಿಯನು ಮೇಲ್ವಿಲಾಸದಲ್ಲಿ ಪ್ರತ್ಯೇಕ ಹೆಸರಿಲ್ಲದೆ ಪರಿಶುದ್ಧರಾಗಿಯೂ ಕ್ರಿಸ್ತ ಯೇಸುವಿನಲ್ಲಿ ವಿಶ್ವಾಸಿಗಳಾಗಿಯೂ ಇರುವವರಿಗೆ ಎಂದು ಬರದಿರುವ ಎಫೆಸದವರ ಪತ್ರಿಕೆಯ ಹಳೆ ಪ್ರತಿಗಳನ್ನು ತಾನು

ಎಫೆ. ೧, ೧.

ಕಂಜೆನೆಂದು ಬರದಿದ್ದಾನೆ. ಮತ್ತು ೨೦ನೆ ವರುಷದಲ್ಲಿ ಸತ್ತ ತೆರ್ತುಲ್ಲಿಯಾನನು, ಎರಡನೆ ಶತಮಾನದಲ್ಲಿ ದ್ದ ಜ್ಞಾನವಾದಿಯಾದ ಮರ್ಕಿಯೋನನು ಎಫೆಸದವರ ಪತ್ರಿಕೆಗೆ ಲವೊದಿಕೆಯದ ಪತ್ರಿಕೆಯಂದು ಹೆಸರಿ ಟ್ಟನೆಂದು ಬರದಿದ್ದಾನೆ.

ನಮ್ಮ ಪತ್ರಿಕೆಯು ಪೌಲನದೆಂಬುವದಕ್ಕೆ ಯೇನೇನೂ ಸಂಶಯವಿಲ್ಲ.

ಕೊಲೊಸ್ಸೆಯ ಪತ್ರಿಕೆಯ ಪ್ರಕಾರ ಇದು ಸಹ ಎರಡು ಭಾಗವಾದದ್ದು ತಾತ್ಪರ್ಯಕ್ರಮವೇನಂದರೆ:

I. ಬೋಧನಾಸೂಚಕವಾದ ಮೊದಲನೆ ಭಾಗವು. ಸ. ೧—೩.

೧. ಕ್ರಿಸ್ತನ ಮಹಾ ರಕ್ಷಣೆಯು. ಸ. ೧.

೧) ಕ್ರಿಸ್ತನ ಮುಖಾಂತರ ಆಪದಲ್ಲಿ ಪ್ರಾಪ್ತವಾಗುವ ಆತ್ಮಿಕವಾದ ಆಶೀರ್ವಾದವು. ವ. ೩—೧೪.

೨) ಸಭೆಯವರಿಗಾಗಿ ಕರದ ರಕ್ಷಣೆಯ ತಿಳುವಿಕೆಯ ವಿಷಯವಾಗಿ ಮಾಡುವ ವಿಜ್ಞಾಪನೆ. ವ. ೧೫—೨೩.

೨. ಕ್ರೈಸ್ತ ಸಭೆಗೆ ಕರೆಯಲ್ಪಟ್ಟವರ ಮಹಿಮೆಯು. ಸ. ೨.

೧) ಪಾಪಗಳಲ್ಲಿ ಸತ್ತವರ ಪುನರ್ಜೀವವು. ವ. ೧—೧೦.

೨) ಯೆಹೂದರೂ, ಪರಜನರೂ ಕೂಡಿದ ಏಕ ಸಭಾನ್ಯಾಯವು. ವ. ೧೧—೨೨.

೩. ಪರಜನರ ಅಪೊಸ್ತಲ್ಯಾದ್ಯೋಗದ ಮಹಿಮೆಯು. ಸ. ೩.

೧) ಸ್ವೀಯಪರ್ತಮಾನವೂ, ಉದ್ಯೋಗವೃತ್ತಿಯೂ. ವ. ೧—೧೩.

೨) ಪರಜನರಾದ ಸಭೆಯವರಿಗಾಗಿ ಪೌಲನು ಮಾಡುವ ವಿನ್ನಪವು. ವ. ೧೪—೨೧.

II. ಉದ್ಬೋಧನಾಸೂಚಕವಾದ ಎರಡನೆ ಭಾಗವು. ಸ. ೪—೬.

೧) ಆತ್ಮಿಕ ಐಕ್ಯವು. ಸ. ೪, ೧—೧೬.

೨) ಸರ್ವಕ್ರೈಸ್ತ ಶೀಲಾನ್ವಿತ ನೂತನ ಜೀವವು. ಸ. ೪, ೧೭—೩೫, ೨೦.

೩) ವಿಶೇಷ ಗೃಹಧರ್ಮವು. ಸ. ೫, ೨೧—೬, ೯.

೪) ಆತ್ಮಿಕಯುದ್ಧವು. ಅಂತ್ಯೋಕ್ತಿಯು. ಸ. ೬, ೧೦—೨೪.

I. ಬೋಧನಾಸೂಚಕವಾದ ಮೊದಲನೆ ಭಾಗವು. ಸ. ೧—೩.

ಕ್ರಿಸ್ತನ ಮಹಾ ರಕ್ಷಣೆಯು. ಸ. ೧.

ಆಶೀರ್ವಾದವು. ವ. ೧. ೨.

೧. ದೇವರ ಚಿತ್ತದಿಂದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು ೧) ಎಫೆಸದಲ್ಲಿರುವ ಪರಿಶುದ್ಧರಾಗಿಯೂ, ಕ್ರಿಸ್ತ ಯೇಸುವಿನಲ್ಲಿ ವಿಶ್ವಾಸಿಗಳಾಗಿಯೂ ೨),

೨. ಇರುವವರಿಗೆ—ನಮ್ಮತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ, ಸಮಾಧಾನವೂ ಆಗಲಿ).

೧. ಈ ಪತ್ರಿಕೆಯ ಆಶೀರ್ವಾದವಾಕ್ಯದಲ್ಲಿ ಪ್ರಥಮಬಂಧನದ ಬೇರೆ ಮೂರು ಪತ್ರಿಕೆಗಳಲ್ಲಿ ಬರದಿರುವ ತಿಮೊಥೆಯನ ಹೆಸರು ಪೌಲನ ಹೆಸರಿಗೆ ಜಾತೆಯಾಗಿ ಕಾಣುವದಿಲ್ಲ. ಇದು ಪರಿವರ್ತನಪತ್ರಿಕೆಯಾದ್ದರಿಂದಲಾ, ಪೌಲನು ಈ ಪತ್ರಿಕೆಯನ್ನು ಬರೆಯುವ ಕಾಲದಲ್ಲಿ ತಿಮೊಥೆಯನು ಇಲ್ಲವಾದ್ದರಿಂದಲಾ? ಯಾಕೆ ಹೀಗೆ ಆಯಿತೆಂದು ತಿಳಿಯುವದಿಲ್ಲ.

೨. ಪೌಲನು ಎಫೆಸ ಮುಂತಾದ ಸಭೆಯವರಿಗೆ ಪರಿಶುದ್ಧರೂ, ವಿಶ್ವಾಸಿಗಳೂ ಎಂದು, ಹೆಸರಿಡುತ್ತಾನೆ. ಇತರ ಪತ್ರಿಕೆಗಳಲ್ಲಿಯೂ ಹೀಗೆ ಬರದದೆ. ಒಂದು ವೇಳೆ ಪರಿಶುದ್ಧರೆಂಬುವದು ದೇವರು ಸ್ವಚ್ಛನರಾಗಿ ಆಮು ಕಾಂಡ ಯೆಹೂದರಾದ ಸಭೆಯವರನ್ನು, ವಿಶ್ವಾಸಿಗಳೆಂಬುವದು ಪರಜನರಾದ ಸಭೆಯವರನ್ನು ಸೂಚಿಸುತ್ತದೆ.

೩. ಪೌಲನು ಗ್ರೀಕರಲ್ಲಿ ರೂಢಿಯಾದ ಕೃಪೆಯಂಬ ಆಶೀರ್ವಾದವಾಕ್ಯವನ್ನೂ, ಯೆಹೂದರಲ್ಲಿ ರೂಢಿಯಾದ ಸಮಾಧಾನವೆಂಬ ಆಶೀರ್ವಾದವಾಕ್ಯವನ್ನೂ, ಜಾತೆಯಾಗಿ ಪ್ರಯೋಗಿಸುತ್ತಾನೆ.

ಕ್ರಿಸ್ತನಲ್ಲಿ ಪ್ರಾಪ್ತವಾದ ರಕ್ಷಣೆಯ ನಿಮಿತ್ತವಾಗಿ ಮಾಡುವ ಸ್ತುತಿಯು.

೧. ಪರಿಗಣನೆಯ ಅನಾದಿ ನಿರ್ಣಯವು. ವ. ೩—೬.

೨. ಲೌಕಿವಿಮೋಚನೆಗಾಗಿ ಯೇಸು ಸತ್ತುದರಿಂದ ಸಂಪೂರ್ಣವಾದರಕ್ಷಣಾಕಾರ್ಯವು. ವ. ೭. ೮.

೩. ಸುವಾರ್ತೆಯ ಸಾಮಾನ್ಯವಾದ ಪ್ರಸಂಗವು. ವ. ೯. ೧೦. ಅದನ್ನು ಎಲ್ಲಾ ಮನುಷ್ಯರು ವ. ೧೧. ೧೨., ವಿಶೇಷವಾಗಿ ಪರಜನರು ವ. ೧೩. ೧೪. ಅಂಗೀಕರಿಸ ತಕ್ಕದ್ದು.

೩. ನಮ್ಮಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರಿಗೆ ೧) ಸ್ತೋತ್ರವಾಗಲಿ. ಅವನು ಆತ್ಮಿಕವಾದ ಸಕಲ ಆಶೀರ್ವಾದದಿಂದ ೨), ಪರಲೋಕದವುಗಳಲ್ಲಿ ಕ್ರಿಸ್ತನಲ್ಲಿ ನಮ್ಮನ್ನು ಆಶೀರ್ವದಿಸಿದಾನೆ ೩). ೪. ಹಾಗಂದರೆ ಪ್ರಿಯವಾದವನಲ್ಲಿ, ನಮಗೆ ದಯ ಮಾಡಿದ ತನ್ನ ೪) ಕೃಪೆಯ ಮಹಿಮೆಯ ಸ್ತೋತ್ರಕ್ಕಾಗಿ, ನಾವು ಪ್ರೀತಿಯಲ್ಲಿ ೫) ತನ್ನಮುಂದೆ ಪರಿಶುದ್ಧರೂ, ನಿರ್ಮಲರೂ ಆಗಿರುವ ಹಾಗೆ, ೫. ನಮ್ಮನ್ನು ಅವನಲ್ಲಿ ಜಗದುತ್ಪತ್ತಿಗೆ ಮುಂಚೆ ಆದು ಕೊಂಡು ೬), ತನ್ನಚಿತ್ತದ ಸುಯೋಚನೆಯ ಪ್ರಕಾರ, ಪುತ್ರಸ್ವೀಕಾರಕ್ಕಾಗಿ ೭. ತನಗೋಸ್ಕರ ನಮ್ಮನ್ನು ಯೇಸು ಕ್ರಿಸ್ತನ ಮುಖಾಂತರ ಮುನ್ನೇಮಿಸಿದಾನೆ ೭). ೭. ಅವನಲ್ಲಿ ಅವನ ರಕ್ತದಿಂದಾದ ವಿಮೋಚನೆಯಾಗಿರುವ ೮) ಅಕ್ರಮಗಳ ಪರಿಹಾರವು ೯) ನಮಗುಂಟು; ೮. ಅವನ ಕೃಪೆಯ ಐಶ್ವರ್ಯದ ಪ್ರಕಾರವೇ; ಇದನ್ನು ಸಕಲ ೧೦) ಜ್ಞಾನದಲ್ಲಿಯೂ, ವಿವೇಕದಲ್ಲಿಯೂ ನಮಗಾಗಿ ಹೆಚ್ಚಿಸಿದಾನೆ.

೧. ದೇವರೆಂಬುವದು ಸಾಮಾನ್ಯವಾಚಿ; ಯೇಸು ಕ್ರಿಸ್ತನ ತಂದೆಯಂಬುವದು ವಿಶೇಷವಾದ ಕ್ರೈಸ್ತಜ್ಞಾನವಾಚಿ. ೨ಕೊರಿ. ೧, ೩. ರೋಮಾ. ೧೫, ೩. ಕೊಲೊ. ೧, ೩. ೧ಕೊರಿ. ೧೫, ೨೪.

೨. ಇದರಲ್ಲಿ ಕ್ರಿಸ್ತನ ಮುಖಾಂತರ ನಮಗೆ ದೇವರಿಂದ ಪ್ರಾಪ್ತವಾದದ್ದೆಲ್ಲಾ ಕ್ಷಿಪ್ರವಾಗಿ ಸೂಚಿತವಾಗಿದೆ. ಪಾಪಪರಿಹಾರವು, ದೇವಸಮಾಧಾನವು, ದೇವಜ್ಞಾನವು, ನಾನಾ ವಿಧ ಆತ್ಮವರಗಳು, ನಿತ್ಯಜೀವವು ಮುಂತಾದ ಅನೇಕ ಕೃಪಾಪ್ರಸಾದಗಳು ಭಕ್ತರಿಗೆ ದೇವರು ದಯ ಮಾಡುವ ಪರಿಶುದ್ಧಾತ್ಮದ ಮುಖಾಂತರ ಅವರಿಗೆ ದಾರಕುತ್ತವೆ. ಅವು ಪರಲೋಕಸಂಬಂಧವಾದವುಗಳು. ದಿವದಲ್ಲಿ ಸಿದ್ಧಿಯನ್ನು ಹೊಂದ ತಕ್ಕ ಶಾಪವುಳ್ಳ ದೇವರ ಮಕ್ಕಳ ಜೀವಕ್ಕೆ ದಿವದಿಂದ (ದೇವರ ಬಳಿಯಿಂದ) ಬರುವ ಆತ್ಮಿಕ ಆಶೀರ್ವಾದವು ಆಧಾರವಾಗಿದೆ.

೩. ಗ್ರೀಕ ಭಾಷೆಯಲ್ಲಿ ಆಶೀರ್ವಾದವೆಂಬುವದಕ್ಕೂ ಸ್ತೋತ್ರವೆಂಬುವದಕ್ಕೂ ಒಂದೇ ಶಬ್ದವಿದೆ. ಅದು ದೇವರು ಮಾಡುವದನ್ನು ಸೂಚಿಸಿದರೆ, ಅದಕ್ಕೆ ಆಶೀರ್ವಾದವೆಂಬ ಅರ್ಥವು, ಭಕ್ತನು ಮಾಡುವದನ್ನು ಸೂಚಿಸಿದರೆ, ಸ್ತೋತ್ರವೆಂಬ ಅರ್ಥವು ಬರುತ್ತದೆ.

೪. ರಕ್ಷಣಾಕಾರ್ಯದಲ್ಲಿಯೂ ಸೃಷ್ಟಿಕಾರ್ಯದಲ್ಲಿಯೂ ದೇವರ ಮಾನವು ಅಂತ್ಯೋದ್ದಿಶ್ಯವಾಗಿದೆ. ಅದು ಭಕ್ತರಲ್ಲಿ ಕೃಪಾಮಾರ್ಗವಾಗಿ, ಕೃಪೆಯನ್ನು ತಿರಸ್ಕರಿಸುವ ಅವಿಶ್ವಾಸಿಗಳಲ್ಲಿ ಶಿಕ್ಷಾಮಾರ್ಗವಾಗಿ ನೆರವೇರುತ್ತದೆ.

೫. ಸಿದ್ಧಿಯು ಪುಣ್ಯವೆಂಬ ಕೃತ್ಯಾಚರಣೆಯಲ್ಲ, ಪ್ರೀತಿಪಾತ್ರವೇ. ಕೊಲೊ. ೩, ೧೪.

೬. ರೋಮಾ. ೮, ೨೯ರ ಪ್ರಕಾರ ಇಲ್ಲಿ ಸಫಲ ರಕ್ಷಣಾಮಾರ್ಗಕ್ರಮವು ಉದಾಹರಿಸಿಯದೆ. ಎಲ್ಲಾ ಆಶೀರ್ವಾದ ಮೂಲವು ನಮ್ಮ ಪುಣ್ಯವಲ್ಲ, ನಾವು ಪಾಪದಲ್ಲಿ ಬೀಳುವದಕ್ಕಿಂತ ಮುಂಚಿತವಾಗಿ ದೇವರು ಕ್ರಿಸ್ತನಲ್ಲಿ ಮಾಡಿದ ಪರಿಗಣನಾನಿರ್ಣಯವೇ. ಪರಿಗಣನೆಯ ಪ್ರಥಮೋದ್ದಿಶ್ಯವೇನಂದರೆ: ನಮ್ಮ ಗತಿಯು ಶಾಶ್ವತವಾದದ್ದೆಂದು, ನಾವು ನಿಶ್ಚಿಂತರಾಗಿಯೂ, ಸೌಖ್ಯವಾಗಿಯೂ ಬದುಕುವಂಥಾದ್ದಲ್ಲ, ಕಪಟದಿಂದ ಕಣ್ಣು ಕಟ್ಟಿ ಕೂಡದ ಸರ್ವಜ್ಞನಾದ ದೇವರ ದೃಷ್ಟಿಯಲ್ಲಿ ನಾವು ಮೊದಲು ನೀತಿನಿರ್ಣಯದಿಂದ, ಬಳಿಕ ಪರಿಶುದ್ಧೀಕರಣದಿಂದ, ಪಾಪವೂ, ಅಪರಾಧವೂ ಇಲ್ಲದೆ ನಡದು ಕಾಳ್ಳುವಂಥಾದ್ದು. ಆದ್ದರಿಂದ, ಮನೋವಾಕ್ಕಾಯಕರ್ಮಗಳನ್ನೆಲ್ಲಾ ದೇವರ ಮುಂದೆ ನಡಿಸುವ ಅಚ್ಚರಿಸವು ಪರಿಗಣಿತ ಭಕ್ತನ ನಿಸ್ಸಂಶಯವಾದ ಲಕ್ಷಣವಾಗಿದೆ.

೭. ೫ನೆ ೬ನೆ ವಚನಗಳಲ್ಲಿ ದೇವರ ಕೃಪೆಯ ಮಹತ್ತು ಹೆಚ್ಚಾಗಿ ವರ್ಣಿಸಿಯದೆ. ಹೇಗಾಗಿಂದರೆ ಶತ್ರುಗಳಾಗಿದ್ದ ನಾವು ತನ್ನ ಮಕ್ಕಳಾಗ ಬೇಕೆಂದು, ರೋಮಾ. ೮, ೧೫. ೨೩. ಗಲ. ೪, ೫. ದೇವರು ನಿರ್ಣೈಸಿದ್ದಾನೆ. ಈ ಕೃಪಾಲೋಚನೆಯು ಯೇಸು ಕ್ರಿಸ್ತನ ಮುಖಾಂತರ ಪೂರ್ತಿಯಾಗುವದು; ಅದರ ಮೂಲಕಾರಣ ದೇವರಲ್ಲಿ ಅದೆ, ಯಾಕಂದರೆ ನಾವು ಮಾಡಿದ ಯಾವದಾಂದು ಪುಣ್ಯಕೃತ್ಯದ ನಿಮಿತ್ತವಲ್ಲ, ಏನೂ ಪುಂಗಿಲ್ಲದ ಕೃಪಾಮಯವಾದ ಸುಯೋಚನೆಯಿಂದಲೇ ನಮನ್ನು ರಕ್ಷಿಸ ಬೇಕೆಂದು ನಿರ್ಣೈಸಿದ್ದಾನೆ.

೮. ತನ್ನ ರಕ್ತವನ್ನು ನಮಗಾಗಿ ಚಲ್ಲಿ, ಈ ಸಂಪೂರ್ಣವಾದ ವಿಮೋಚನಾದ್ರವ್ಯವನ್ನು ಕಾಟ್ಟು, ಪಾಪಬಂಧದಿಂದ ನಮ್ಮನ್ನು ಬಿಡಿಸಿದ ಮತ್ತಾ. ೨೦. ೨೮. ೧ಕೊರಿ.೬, ೨೦. ಗಲ. ೩, ೧೩. ೧ತಿಮೊ. ೨, ೬. ೧ಪೇತ್ರ. ೧, ೧೮. ಯೇಸು ಕ್ರಿಸ್ತನ ಮುಖಾಂತರ ನಮ್ಮ ಪುತ್ರಸ್ವೀಕಾರವೆಂಬ ದೇವರ ಕೃಪಾನಿರ್ಣಯವು ಪೂರ್ತಿಯಾಯಿತು. ಬಲಿಪಶುರಕ್ತಧಾರೆಯು ಮುಂಗುರ್ತಾಗಿದ್ದ (೩ ಮೋಶೆ. ೧೭, ೧೧.) ನಿರ್ದಾಷವಾದ ಕುರಿಮರಿಯಂಬ ಕ್ರಿಸ್ತನ ರಕ್ತಧಾರೆಯಿಂದ (೧ ಪೇತ್ರ. ೧, ೧೮. ೧೯.) ಪಾಪಿಗಳ ಪ್ರಾಣಗಳಿಗೆ ವಿಮೋಚನೆಯುಂಟಾಯಿತು.

೯. ದೇವರ ಕೃಪೆಯ ಐಶ್ವರ್ಯಕ್ಕೆ ತಡೆಯಾಗಿರುವ ಶಾಪವು ಪಾಪಪರಿಹಾರದಿಂದ ಒದವನಂತರ, ದೇವಕೃಪಾಬ್ಧಿಚರ್ಶಿಯು ಮನುಷ್ಯನ ಪ್ರಾಣದ ಮೇಲೆ ಬರುತ್ತದೆ. ಆದ್ದರಿಂದ ಪಾಪಪರಿಹಾರವು ನಮ್ಮ ರಕ್ಷಣೆಯ ಆದಿಕಾರ್ಯವಾಗಿದೆ. ಆದರೆ ಅದು ರಕ್ಷ

ಗೆಯ ಮೂಲಪೀತುವಾಗಿರುವದರಿಂದ, ಆರಂಭದಿಂದ ಅಂತ್ಯದ ವರೆಗೂ ಆತ್ಮಿಕ ಜೀವಕ್ಷೇಮಕ್ಕೆ ಪೂರ್ಣ ಆವಶ್ಯಕವಾಗಿದೆ. ಪಾಪಪರಿಹಾರವನ್ನು ಪಡೆದಿರುವ ಪ್ರತಿಯೊಬ್ಬನಿಗೆ ಅದರ ಅನುಭವವು ಅನುದಿನವು ಪೂರ್ಣವಾಗಿ ಪರಿಶುದ್ಧಾತ್ಮದ ಮುಖಾಂತರ ಪ್ರಾಪ್ತವಾಗಬೇಕು.

೧೦. ಅಂದರೆ, ನಿತ್ಯರಕ್ಷಣೆಯ ಸಂಪಾದನೆಗೆ ಸಲ್ಲುವಂಥಾ ಜ್ಞಾನವಿಳುವಿಕೆಗಳನ್ನೆಲ್ಲಾ ನಮಗೆ ದಯಮಾಡಿದ್ದರಿಂದ. ದೇವರು ತನ್ನ ಮಕ್ಕಳಿಗೆಲ್ಲಾ ನಿತ್ಯಜೀವಕ್ಕಾಗಿ ಬೇಕಾದ ಜ್ಞಾನವನ್ನೂ ಬುದ್ಧಿಯನ್ನೂ ಪರಿಶುದ್ಧಾತ್ಮದ ಮುಖಾಂತರ ಕಾಡುವದರಿಂದ ಲೂಕ. ೧, ೧೭. ೭೭., ಅವರಿಗೆ ಲೌಕಜ್ಞಾನಿಗಳ ಉಪದೇಶ ಬೇಡ. —ಈಗ ದೇವರು ಸುವಾರ್ತೆಯ ಪದವಿಯನ್ನು ನಮಗೆ ತಿಳಿಸುವದಕ್ಕೂ, ಕಾಡುವದಕ್ಕೂ ಮಾಡಿದ ಕಾರ್ಯದ ವಿವರವು ತಾಡಗುತ್ತದೆ.

೯. ಹಾಗಂದರೆ ತಂನಲ್ಲಿ ನಿಷ್ಕರ್ಷೆ ಮಾಡಿದ ತನ್ನ ಸುಯೋಚನೆಯ ಪ್ರಕಾರ ತನ್ನ ಚಿತ್ತದ ಮರ್ಮವನ್ನು ನಮಗೆ ತಿಳಿಸಿದ್ದಾನೆ[೧]). ೧೦. ಅದ್ಯೋನಂದರೆ, ಕಾಲಗಳ ಸಂಪೂರ್ಣತೆಯ ಮನೆವಾರ್ತೆಗಾಗಿ[೨]), ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಇರುವ ಎಲ್ಲವುಗಳನ್ನು[೩]) ಕ್ರಿಸ್ತನಲ್ಲಿ ಒಮ್ಮೊಗ ಮಾಡಬೇಕೆಂಬುವದು. ೧೧. ಅವನಲ್ಲಿಯೇ ಕ್ರಿಸ್ತನಲ್ಲಿ ಮುಂಕಾರಿದವರಾದ ನಾವು, ಅವನ ಮಹಿಮೆಯ ಸ್ತೋತ್ರಕ್ಕಾಗಿರುವ ಹಾಗೆ, ತನ್ನ ಚಿತ್ತದ ಆಲೋಚನೆಯ ಪ್ರಕಾರ ಎಲ್ಲವುಗಳನು ಯತ್ನಿಪಿಸುವವನ ನಿರ್ಣಯದ ಪ್ರಕಾರ ಮುಂನೇಮಿಸಲ್ಪಟ್ಟು, ಬಾಧ್ಯತೆಯನ್ನು ಸಹ ಹೊಂದಿದೆವು[೪]). ೧೨. ಅವನಲ್ಲಿ ನೀವು ಸಹ[೫]) ನಿಮ್ಮ ರಕ್ಷಣೆಯ ಸುವಾರ್ತೆಯಾದ ಸತ್ಯದ ವಾಕ್ಯವನ್ನು ಕೇಳಿ, ೧೩. ಅವನಲ್ಲಿ ವಿಶ್ವಾಸಿಸಿ, ವಾಗ್ದತ್ತದ ಪರಿಶುದ್ಧವಾದ ಆತ್ಮನಿಂದ ಮುದ್ರೆ ಹೊಂದಿದಿರಿ. ೧೪. ಇವನು ಅವನ ಮಹಿಮೆಯ ಸ್ತೋತ್ರಕ್ಕೆ ಸಂಪಾದನೆಯ ವಿಮೋಚನೆಗಾಗಿ ನಮ್ಮ ಬಾಧ್ಯತೆಯ ಮುಂಗಡವಾಗಿದ್ದಾನೆ[೬]).

೧. ದೇವರು ತನ್ನ ಚಿತ್ತದ ಮರ್ಮವೆಂಬ ಗುಪ್ತ ಕೃಪಾನಿರ್ಣಯವನ್ನು ಚಕ್ತುಲಿಗೆ ತನ್ನ ವಾಕ್ಯದಿಂದ ಪ್ರಕಟ ಮಾಡಿದರಿಂದ, ಅವರಿಗೆ ಸತ್ಯದ ತಿಳುವಿಕೆ ಪ್ರಾಪ್ತವಾಗಿದೆ. ಪೌಲನು ಕೃಪಾನಿರ್ಣಯದ ಪ್ರಕಟಣೆಯು ಸಹ ಏನೂ ಪಡಿಗಿಲ್ಲದ ಕೃಪೆಯಿಂದಲೇ ಉಂಟಾಯಿತೆಂದು, ಅತಿ ಖಂಡಿತವಾಗಿ ಸ್ಥಾಪಿಸುತ್ತಾನೆ.

೨. ಕಾಲಗಳ ಸಂಪೂರ್ಣತೆಯ ಮನೆವಾರ್ತೆ ಅಂದರೆ: ದೇವರು ಆದಿಯಿಂದ ನೇಮಕ ಮಾಡಿದಂಥಾ, ಲೋಕಕ್ಕೆ ಅತ್ಯಂತ ಅವಸರ ಪುಟ್ಟಿದಂಥಾ, ಕಾಲದಲ್ಲಿ ಪ್ರತ್ಯಕ್ಷನಾದ ಲೋಕರಕ್ಷಕನಾಗಿರುವ ಯೇಸು ಕ್ರಿಸ್ತನಿಂದ ಸ್ಥಾಪಿತವಾದ ಪೂರ್ಣ ಒಡಂಬಡಿಕೆಯ ಕೃಪೆ ಮಹಿಮೆಗಳ ಆಡಳಿತೆಯು.

೩. ಮಹಾ ಮರ್ಮದ ಅಭಿಪ್ರಾಯವೇನಂದರೆ: ದಿವದಲ್ಲಿಯೂ, ಭೂಮಿಯಲ್ಲಿಯೂ ಇರುವಂಥಾದ್ದೆಲ್ಲಾ ಕ್ರಿಸ್ತನ ರಾಜ್ಯಕ್ಕೆ ಅಧೀನವಾಗ ಬೇಕೆಂಬುದು ಕಾಲಾ. ೧, ೨೦.

೪. ಪೌಲನು ಇಲ್ಲಿ ಸೂಚಿಸುವ ಅಭಿಪ್ರಾಯವೇನಂದರೆ: ಯೆಹೂದರಾದ ನಾವು ಚೌಮಿಕವಾದದ್ದಲ್ಲ, ದೈವಿಕವಾದ ಕನಾನವೆಂಬ ಬಾಧ್ಯತೆಯನ್ನು ಕ್ರಿಸ್ತನ ಐಕ್ಯದಲ್ಲಿ ಪಡದು ಕಾಳ್ಳುವದಕ್ಕೆ ಮೊದಲಿನವರಾಗಿದ್ದೇವೆ. ಪುಳೆ ಒಡಂಬಡಿಕೆಯ ಚರಿತ್ರದ ಮುಖಾಂತರ ನಾವು ಅದಕ್ಕೆ ಬಾಧ್ಯಸ್ಥರಾಗಿದ್ದೇವೆ. ಆದಾಗ್ಯೂ ನಮ್ಮ ಶ್ರೇಷ್ಠತ್ವವು ನ್ಯಾಯದಿಂದಲೂ ಪುಣ್ಯದಿಂದಲೂ ಅಲ್ಲ, ಎಲ್ಲಾನ್ನು ನಡಿಸುವ ದೇವರ ಪಡಿಗಿಲ್ಲದ ಕೃಪೆಯಿಂದಲೇ ಪುಟ್ಟಿಯದೆ.

ಎಫೆ. ೧, ೧೫—೨೦.

೧೫. ಮೊದಲನೆ ಕರಪತ್ರವನ್ನು ಪಠಿಸಿದ ಯೆಹೂದರಲ್ಲಿ ಪರಜನರು ಶೇರ ಬೇಕು. ಇವರಿಗೆ ಪ್ರವಾದಿಗಳ ಮುಖಾಂತರ ಆಶಾವಾಕ್ಯವು ಪ್ರಾಪ್ತವಾಗಲಿಲ್ಲ. ಆದ್ದರಿಂದ ಇವರಿಗೆ ನೇಮಕವಾದ ಮಾರ್ಗವು ಬೇರೆಯಾಗಿತ್ತು; ಯಾವದಂದರೆ: ರಕ್ಷಣೋತ್ಸವಾರ್ತೆಯಂಬ ಗಲ. ೩, ೧೩. ೧ಥೆಸ್ಸ. ೧, ೧೦. ಪಿಕರಕ್ಷಣೋತ್ಸಾಹಪಾಯವಾದ ಸತ್ಯದ ವಾಕ್ಯಪ್ರಸಂಗವನ್ನು ಕೇಳಿದ ಬಳಿಕ, ಅದನ್ನು ನಂಬಿ, ಕ್ರಿಸ್ತನ ಐಕ್ಯದಲ್ಲಿ ಶೇರಿ, ನಾವು ದೇವರ ಮಕ್ಕಳಾಗಿದ್ದೇವೆಂಬ ಅಂತಸ್ಸಾಕ್ಷಿಯಾದ ಮುದ್ರೆಯನ್ನು ಹೃದಯದಲ್ಲಿ ಒತ್ತುವ ವಾಗ್ದತ್ತವಾದ ಪರಿಶುದ್ಧಾತ್ಮವನ್ನು ಪಡೆದಿರಿ.

೧೪. ಅಂದರೆ, ಪರಿಶುದ್ಧಾತ್ಮವು ಪರದಲ್ಲಿ ಕ್ರಿಸ್ತನಿಂದ ಉಂಟಾಗ ತಕ್ಕ ಸ್ವಕೀಯ ಜನರ ಸಂಪೂರ್ಣ ವಿಮೋಚನೆಯಾದ (ಇಬ್ರಿ. ೯, ೨೮. ೧ಪೇತ್ರ. ೨, ೯. ೨ತೀತ. ೨, ೧೪.) ನಮ್ಮ ನಿತ್ಯರಕ್ಷಣೋತ್ಸಾಹಬಾಧ್ಯತೆಯ ಸಂಚಕಾರವಾಗಿದೆ. ಇದು ಭಕ್ತರಿಗೆ ಇಹದಲ್ಲಿ ದಾರಕುವದು. ೨ಕೊರಿ. ೧, ೨೨.

ಪೂರ್ಣರಕ್ಷಣೋತ್ಸಾಹ ವಿಷಯವಾಗಿ ಅಪಾಸ್ತಲನು ಸಭೆಗಳಿಗಾಗಿ ಸ್ತೋತ್ರ ಮಾಡುವ ವಿಜ್ಞಾಪನೆ. ವ. ೧೫—೨೩.

ಕೊಲೊಸ್ಸೆಯ ಪತ್ರಿಕೆಯಲ್ಲಿ ಅಪೊಸ್ತಲನು ಕೃತಜ್ಞತಾಸ್ತುತಿಯಿಂದಲೂ, ಪ್ರಾರ್ಥನೆಯಿಂದಲೂ ತೊಡಗಿ, ಬಳಿಕ ಬೋಧಸಾತಾತ್ಪರ್ಯದಲ್ಲಿ ಶೇರುತ್ತಾನೆ. ಇದರಲ್ಲಿ ಮಹಾ ರಕ್ಷಣಾನಿರ್ಣಯವಿಶಿಷ್ಟವನ್ನು, ಅನಾದಿಯಲ್ಲಾಗಿ ದೇವರಲ್ಲಿ ಹುಟ್ಟಿದಂದಿನಿಂದ ಮಹಿಮಾಸಮಾಪ್ತಿಪರ್ಯಂತ ವರ್ಣಿಸಿದನಂತರ, ಪ್ರಾರ್ಥನೆಯ ವಾಕ್ಯಕ್ಕೆ ಶೇರುತ್ತಾನೆ. ಈ ಕ್ರಮವು ಪರಿವರ್ತನಪತ್ರಿಕೆಗೆ ಯುಕ್ತವಾದದ್ದು. ಮೊದಲನೆ ಸಂಧಿಯಲ್ಲಿ ಕ್ರೈಸ್ತಬೋಧನಾಮೂಲಸೂತ್ರಗಳನ್ನು ಸ್ಥಾಪಿಸಿದ ಮೇಲೆ, ಎರಡನೆ ಸಂಧಿಯಲ್ಲಿ ಸಣ್ಣಏಸ್ಯದ ಸಭೆಗಳಲ್ಲಿ ಪರಜನರಾಗಿದ್ದ ಭಕ್ತರಿಗೆ ಯೇಸು ಕ್ರಿಸ್ತನ ಮಹಿಮೆಯುಳ್ಳ ಅನ್ಯೋನ್ಯದಲ್ಲಿ ಶೇರಿದ ಮಾರ್ಗವನ್ನು ಜ್ಞಾಪಕ ಮಾಡುತ್ತಾನೆ.

೧೫. ಆದದರಿಂದ ೧) ನಾನು ಸಹ, ನೀವು ಕರ್ತನಾದ ಯೇಸುವಿನಲ್ಲಿ ಇಡುವ ವಿಶ್ವಾಸವನ್ನೂ, ೧೬. ಪರಿಶುದ್ಧರೆಲ್ಲರ ಮೇಲೆ ಮಾಡುವ ಪ್ರೀತಿಯನ್ನೂ ಕೇಳಿ ೨), ನಿಮಗಾಗಿ ಸರ ಬಿಡದೆ ಸ್ತೋತ್ರ ಮಾಡಿ, ನನ್ನ ಪ್ರಾರ್ಥನೆಗಳಲ್ಲಿ ನಿಮ್ಮನ್ನು ನೆನಸಿಬೇಡುವದ್ದೇನಂದರೆ, ೧೭. ಅವನ ಕರೆಯುವಿಕೆಯ ನಿರೀಕ್ಷೆ ಏನೆಂದೂ, ಪರಿಶುದ್ಧರಲ್ಲಿರುವ ಅವನ ಬಾಧ್ಯತೆಯ ಮಹಿಮೆಯ ಐಶ್ವರ್ಯವೇನೆಂದೂ, ವಿಶ್ವಾಸಿಸುವವರಾದ ನಮಗಾಗಿರುವ ಅವನ ಬಲದ ಅತ್ಯಧಿಕವಾದ ಮಹತ್ತು ಅವನ ಶಕ್ತಿಯ ತ್ರಾಣದ ಯತ್ನದ ಪ್ರಕಾರವಾಗಿ ಏನೆಂದೂ ೩), ೧೯. ನೀವು ನಂಬಿಯಾಡುವ ಹಾಗೆ, ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರಾದ ೪) ಮಹಿಮೆಯ ತಂದೆಯು ತನ್ನಿಂದ ಕುರಿತ ೫) ತಿಳುವಿಕೆಯಲ್ಲಿರುವ ಜ್ಞಾನಪ್ರಕಟನೆಗಳ ಆತ್ಮವನ್ನೂ ೬), ನಿಮ್ಮ ಬುದ್ಧಿಯ ಕಣ್ಣುಗಳು ಬೆಳಕಾಗುವದನ್ನೂ, ನಿಮಗೆ ಕಾಡ ಬೇಕು. ೨೦. ಈ ಯತ್ನದಿಂದ ಅವನು ಕ್ರಿಸ್ತನಲ್ಲಿ ಯತ್ನಿಸಿ, ಅವನನ್ನು ಸತ್ತವರಾಳಿಗಿಂದ ಎಬ್ಬಿಸಿ ೭), ೨೦. ಪರ

ಎಫೆ. ೧, ೨೧—೨೩.

ಲೌಕಿಕವುಗಳಲ್ಲಿ, ತನ್ನ ಬಲಪಾರ್ಶ್ವದಲ್ಲಿ, ಸಕಲ ದಾರೆಶನ, ಅಧಿಕಾರ, ಬಲ, ಒಡೆತನಗಳಿಗೂ, ೨೧. ಇಹದಲ್ಲಿ ಮಾತ್ರವಲ್ಲ, ಪರದಲ್ಲಿಯೂ, ೨೨. ಹೆಸರ್ಗೊಂಡ ಎಲ್ಲಾ ಹೆಸರಿಗೂ, ಮೇಲಾಗಿ ಕುಂದ್ರಿಸಿ ೪), ೨೩. ಎಲ್ಲವುಗಳನ್ನು ಅವನ ಪಾದಗಳ ಕೆಳಗೆ ಇಟ್ಟು, ಅವನ ಶರೀರವು ೫), ಎಲ್ಲವನ್ನು ಎಲ್ಲವುಗಳಲ್ಲಿ ತುಂಬಿಸುವವನ ೧೦) ಸಂಪೂರ್ಣತೆಯೂ ೧೧), ಆಗಿರುವ ಸಭೆಗೆ ಅವನನ್ನು ಎಲ್ಲಾದರ ಮೇಲೆ ತಲೆಯಾಗಿ ಕೊಟ್ಟಿದ್ದಾನೆ.

೧. ದೇವರು ಪುಂಗಿಲ್ಲದ ಕೃಪೆಯ ನಿಧಿಯಿಂದ ಅಷ್ಟು ಅತಿಶಯವಾದ ಮಹಿಮೆಯನ್ನು ಚಕ್ತರಿಗೆ ದಯ ಮಾಡಿದ್ದಾನೆಂದು, ಅಪಾಸ್ತಲನು ತಿಳಿಕಾಂದದ್ದರಿಂದ, ದೇವರ ಕೃಪಾನಿರ್ಣಯವು ಸಭೆಗಳಲ್ಲಿ ಕಾರತೆ ಇಲ್ಲದೆ ನೆರವೇರ ಬೇಕೆಂದು, ಬಹಳವಾಗಿ ಬಯಸುತ್ತಾ ಇದ್ದನು.

೨. ಈ ಶಬ್ದ ಈ ಪತ್ರಿಕಾವಲಾಂಕಿಕರಲ್ಲಿ ಅನೇಕರು ಪೌಲನ ಮುಖಪರಿಚಿತಿಯಿಲ್ಲದವರಾಗಿದ್ದರೆಂದು, ಸೂಚಿಸುತ್ತದೆ.

೩. ಈ ಸ್ಥಳದಲ್ಲಿ ತ್ರಾಣವೆಂಬ ಅರ್ಥವುಳ್ಳ ಅನೇಕ ಶಬ್ದಗಳನ್ನು ಬೇಕೆಂದು ಗುಂಪಾಗಿ ಶೇರಿಸಿದ್ದಾನೆ. ಯಾಕಂದರೆ ಯೇಸು ಕ್ರಿಸ್ತನ ವಾಕ್ಯವನ್ನು ನಂಬಿ, ಪುನರ್ಜನ್ಮವನ್ನು ಪಡಾಂದುವ ಚಕ್ತನ ಆತ್ಮ ಪ್ರಾಣ ಶರೀರಗಳಲ್ಲಿಯೂ, ಅವನ ಇಹವಾಸವಾದ ಭೂಮಿಯಲ್ಲಿಯೂ, ಪರದಲ್ಲಿ ಅವನ ಬಾಧ್ಯತೆಯಾದ ದಿವದಲ್ಲಿಯೂ, ಅವನ ನಿಮಿತ್ತ ದೇವರಿಂದ ಉಂಟಾಗುವದನ್ನೆಲ್ಲಾ, ಮತ್ತು ವಿಶೇಷವಾಗಿ ಅಂಧಕಾರರಾಜ್ಯದ ಸಂಗಡ ಅವನಿಗೆ ನಡೆಯುವ ಯುದ್ಧದಲ್ಲಿ ದೇವರಿಂದ ಬರುವ ನಾನಾ ವಿಧ ಸಹಾಯವನ್ನು ನೆನಸಿ ಕಾಂಡು, ರಕ್ಷಣಾಕಾರ್ಯವು ಸೃಷ್ಟಿ ಕಾರ್ಯಕ್ಕೆ ಸಮಾನವಾದ ಸರ್ವತ್ರಾಣದ ಕೃತ್ಯವೆಂದು, ಬಲ್ಲವನಿಗೆ ಯುಕ್ತವಾಗಿ ಮಾತನಾಡುತ್ತಾನೆ.

೪. ಯೇಸು ಕ್ರಿಸ್ತನು ತಾನು ಯಾಕಹಾ. ೨೦, ೧೭ಲ್ಲಿ ದೇವರಿಗೆ, ನನ್ನ ದೇವರೆಂದು, ಹೇಳಿದ ಮಾತಿಗೆ ಇದು ಪೂರ್ಣ ಅನುಕೂಲವಾಗಿದೆ.

೫. ೧ ಕಾರಿ. ೨, ೧೦. ದೇವರು (ಪರದ ಪದವಿಯ ವಿಷಯವಾದವುಗಳನ್ನು) ತನ್ನ ಆತ್ಮದಿಂದ ನಮಗೆ ಪ್ರಕಟ ಮಾಡಿದ್ದಾನೆ. ಯಾಕಂದರೆ ಆತ್ಮವು ಎಲ್ಲಾನ್ನೂ ಶೋಧಿಸುತ್ತದೆ. ದೇವರ ಅಗಾಧಗಳನ್ನು ಸಹ. ೧೧. ಹೇಗಾಗಿಯಂದರೆ ಮನುಷ್ಯನವುಗಳನ್ನು, ಅವನಲ್ಲಿರುವ ಮನುಷ್ಯಾತ್ಮವೇ ಹೊರತು, ಮನುಷ್ಯರಲ್ಲಿ ಯಾವನು ತಿಳಿಯುತ್ತಾನೆ? ಹಾಗೆಯೇ ದೇವರವುಗಳನ್ನು ದೇವಾತ್ಮವೇ ಹೊರತು, ಯಾವನೂ ತಿಳಿಯನು ಎಂದು, ಬರದ ಮಾತಿಗೆ ಇಲ್ಲಿ ಬರದದ್ದು ಸರಿ ಬೀಳುತ್ತದೆ.

೬. ರೋಮಪುರದ ಸಭೆಯವರಿಗೆ ರೋಮಾ. ೮, ೧೫. ಪೌಲನು ಪುತ್ರಸ್ವೀಕಾರದ ಆತ್ಮವನ್ನು ಹೊಂದಿದ್ದೀರೆಂದು, ತಿಮೊಥೆಯನಿಗೆ ೨ ತಿಮೊ. ೧, ೭. ಬಲ ಪ್ರೀತಿ ಮನಸ್ಸಾಸ್ವಸ್ಥಗಳ ಆತ್ಮವನ್ನು ದೇವರು ನಮಗೆ ಕೊಟ್ಟಿದ್ದಾನೆಂದು, ಕೊರಿಂಥದವರಿಗೆ ೨ ಕೊರಿ. ೪, ೧೩ಲ್ಲಿ ಅದೇ ವಿಶ್ವಾಸದ ಆತ್ಮವುಳ್ಳವರಾಗಿ ನಾವು ಸಹ ವಿಶ್ವಾಸಿಸುತ್ತೇವೆಂದು, ಬರದ ಪ್ರಕಾರ ಇಲ್ಲಿ ಸಣ್ಣ ಆಸ್ಯದ ಸಭೆಯವರಿಗೆ ದೇವರು ಜ್ಞಾನ ಪ್ರಕಟನೆಗಳ ಆತ್ಮವನ್ನು ಕೊಡ ಬೇಕೆಂದು ಪ್ರಾರ್ಥಿಸುತ್ತಾನೆ.

೭. ಚಕ್ತನ ಪುನರ್ಜನ್ಮದಲ್ಲಿಯೂ ಯೇಸು ಕ್ರಿಸ್ತನ ಪುನರುತ್ಥಾನದಲ್ಲಿಯೂ ನಮ್ಮ ಮುಂದಣ ಶರೀರ ಪುನರುತ್ಥಾನದಲ್ಲಿಯೂ ಪರಿಶುದ್ಧಾತ್ಮದ ಒಂದೇ ತ್ರಾಣವು ಪ್ರತ್ಯಕ್ಷವಾಗುತ್ತದೆಂಬ ಅಭಿಪ್ರಾಯ ರೋಮಾ. ೮, ೧೧ಲ್ಲಿ ಸಹ ಸ್ಪಷ್ಟವಾಗಿ ಬರದದೆ.

೮. ಯೇಸು ಕ್ರಿಸ್ತನು ಮತ್ತಾ. ೨೮, ೧೮ರ ಪ್ರಕಾರ ದಿವಾರೋಹಣಕ್ಕಿಂತ ಮುಂಚೆ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸಮಸ್ತ ಅಧಿಕಾರವು ನನಗೆ ಕೊಟ್ಟಿದೆ ಎಂದು, ಶಿಷ್ಯರಿಗೆ ಹೇಳಿದನು. ಅ

ಎಫೆ. ೨, ೧—೫.

ಪಾ. ಕ್ರಿ. ೭, ೫೫. ೫೬ಲ್ಲಿ ಕ್ರಿಸ್ತನ ದಿವಾರಾಜಪಟ್ಟಾಭಿಷೇಕದ ಮೇಲೆ ಆತನ ಪೌರೋಹಿತ್ಯಕ್ಕಾಗಿ ಸತ್ತವರಲ್ಲಿ ಮೊದಲಿನವನಾದ ಸ್ತೆಫನನು ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಆಕಾಶವನ್ನು ದೃಷ್ಟಿಸಿ ದೇವರ ಮಹಿಮೆಯನ್ನೂ, ದೇವರ ಬಲಪಾರ್ಶ್ವದಲ್ಲಿ ಯೇಸು ನಿಂತು ಕಾಯುತ್ತಿರುವದನ್ನೂ ನೋಡಿ, ಇಗೋ ದಿವವು ತೆರೆದಿರುವದನ್ನೂ, ಮನುಷ್ಯನ ಮಗನು ದೇವರ ಬಲಪಾರ್ಶ್ವದಲ್ಲಿ ನಿಂತು ಕಾಯುತ್ತಿರುವದನ್ನೂ ನೋಡುತ್ತೇನೆ ಯಂದನೆಂದು, ಬರದದೆ. ಇಬ್ರಿ. ೨, ೮ಲ್ಲಿಯೂ ಇದೇ ಅಭಿಪ್ರಾಯ ಸೂಚಿತವಾಗಿದೆ.

೯. ಕ್ರೈಸ್ತ ಸಭೆಯು ಪ್ರತ್ಯೇಕ ಪ್ರತ್ಯೇಕ ವೃತ್ತಿಯೂ, ಮಾನವೂ ಉಳ್ಳ ನಾನಾ ವಿಧ ಅವಯವಗಳು ಒಟ್ಟು ಕೂಡಿದ ವಿಶಿಷ್ಟವಾದ ಒಂದು ಶರೀರವಾಗಿದೆಯೆಂಬ, ೧ ಕೊರಿ. ೧೨, ೧೨ ಮುಂತಾದ್ದರಲ್ಲಿ ಪರಿಷ್ಕಾರವಾಗಿ ವರ್ಣಿಸಿದೆ. ಕ್ರಿಸ್ತನು ಎಲ್ಲಾ ಅವಯವಗಳನ್ನು ಸ್ವಕೀಯ ಬಲದಿಂದ ತುಂಬಿ, ಶರೀರವನ್ನೆಲ್ಲಾ ಆಳುವಂಥ ತಲೆಯಾಗಿರುವದರಿಂದ, ಕಾಲಾ. ೧, ೧೮., ಅದು ಕ್ರಿಸ್ತನ ಶರೀರವಾಗಿದೆ.

೧೦. ಸ. ೪, ೧೦. ಸರ್ವವನ್ನೂ ತುಂಬಿಸುವಾತನಾಗಿ ಕ್ರಿಸ್ತನು ಎಲ್ಲಾ ಆಕಾಶಗಳ ಮೇಲೆ ಏರಿಹೋದನೆಂದು, ಸೂಚಿಸಿರುವ ಅಭಿಪ್ರಾಯವು ಇಲ್ಲಿಯೂ ತೋರುತ್ತದೆ. ಸರ್ವವನ್ನು ಸೃಷ್ಟಿಸಿದ ವಾಕ್ಯವು ಮನುಷ್ಯನ ಮಗನಾಗಿ ಭೂಮಿಯಲ್ಲಿ ಹುಟ್ಟಿ, ಲೋಕ ರಕ್ಷಣಾರ್ಥಕಾರ್ಯವನ್ನೆಲ್ಲಾ ಪೂರೈಸಿದನಂತರ, ತಂದೆಯಾದ ದೇವರ ಸನ್ನಿಧಿಯಲ್ಲಿ ಶೇರಿ ಸರ್ವಾಧಿಕಾರಿಯಾದದ್ದು ಯುಕ್ತವಾಗಿದೆ. ದೇವಜೀವಬಲ ಪೂರ್ಣತ್ವವೆಲ್ಲಾ ಆತನಲ್ಲಿ ದೇಹರೂಪವಾಗಿ ವಸತಿಯಾಗಿದೆ. ಕಾಲಾ. ೧, ೧೯; ೨, ೯. ಆತನು ತನ್ನ ಶರೀರವೆಂಬ ಸಭೆಯಲ್ಲಿ ತನ್ನ ಆತ್ಮದ ಮುಖಾಂತರ ವಾಸವಾಗಿರುವದರಿಂದ, ಆತನ ಮಹಿಮೆ ಎಲ್ಲಾ ಸಭೆಗೂ ಪ್ರಾಪ್ತವಾಗುತ್ತದೆ.

೧೧. ಇಲ್ಲಿ ಸೂಚಿತವಾಗಿರುವ ಕ್ರಿಸ್ತನ ಸಭೆಯ ಮಹಿಮೆಯನ್ನು ಈಗ ಯಾರೂ ತಿಳಿದು ಕಾಳ್ಳುವದಿಲ್ಲ. ಯೇಸು ಕ್ರಿಸ್ತನ ದಿವ್ಯ ಮಹಿಮೆಯು, ಆತನು ಮನುಷ್ಯನ ಮಗನಾಗಿ ಭೂಮಿಯಲ್ಲಿ ವಾಸವಾಗಿದ್ದ ಕಾಲದಲ್ಲಿ, ಮರೆಯಾಗಿದ್ದ ಪ್ರಕಾರ ಆತನ ಸಂಪೂರ್ಣತ್ವವೆಂಬ ಸಭೆಯ ದಿವ್ಯ ಮಹಿಮೆಯು ಇಹದಲ್ಲಿ ಮರೆಯಾಗಿದೆ.

ಕ್ರಿಸ್ತನ ಸಭೆಗೆ ಕರೆಯಲ್ಪಟ್ಟವರ ಮಹಿಮೆಯು. ಸ. ೨.

೧. ಪಾಪಗಳಲ್ಲಿ ಸತ್ತವರ ಪುನರ್ಜೀವವು ದೇವರ ಕೃಪೆಯಿಂದ ಉಂಟಾಗುತ್ತದೆ. ವ. ೧—೧೦.

೧. ಮತ್ತು ಅಕ್ರಮಗಳಲ್ಲಿಯೂ ಪಾಪಗಳಲ್ಲಿಯೂ ಸತ್ತವರಾಗಿದ್ದ೧) ನಿಮ್ಮನ್ನು೨) ಬದುಕಿಸಿದ್ದಾನೆ. ೨. ಇವುಗಳಲ್ಲಿ ಇ ಲೋಕದ೩) ಬಳಿಕೆಯ ಪ್ರಕಾರವಾಗಿ, ಅವಿಧ್ಯೇಯತ್ವದ ಮಕ್ಕಳಲ್ಲಿ ಇಗ ಯತ್ನಿಸುವ ಆತ್ಮವಾಗಿರುವ ಆಕಾಶದ ಅಧಿಕಾರದ ಪ್ರಭುವಿನ ಪ್ರಕಾರವಾಗಿ೪), ಮುಂಚೆ ನಡೆದು ಕೊಂಡಿರಿ೫). ೩. ಇವರಲ್ಲಿ ನಾವೆಲ್ಲರು೬) ಸಹ ಮಾಂಸವು, ಮನಸ್ಸು, ಇವುಗಳ ಇಷ್ಟಗಳನ್ನು೭) ನಡಿಸಿ, ನಮ್ಮ ಮಾಂಸದ ಆಶೆಗಳಲ್ಲಿ ಮುಂಚೆ ಪ್ರವರ್ತಿಸಿ, ಮಿಕ್ಕಾದವರ ಹಾಗೆಯೇ ಸ್ವಭಾವದಿಂದ೮) ಕೋಪದ ಮಕ್ಕಳಾಗಿದ್ದೆವು೯). ೪. ಆದರೆ೧೦) ಕರುಣೆಯಲ್ಲಿ ಐಶ್ವರ್ಯವುಳ್ಳ ದೇವರು, ತಾನು ನಮಗೆ ಮಾಡಿದ ಬಹಳವಾದ ಪ್ರೀತಿಗಾಗಿಯೂ, ೫. ಅಕ್ರ

ಎಫೆ. ೨, ೬—೧೦.

ಮಗಳಲ್ಲಿ ಸತ್ಕ್ರಮವಾಗಿದ್ದ ನಮ್ಮನ್ನು ಕ್ರಿಸ್ತನ ಸಂಗಡ ಬದುಕಿಸಿದ್ದಾನೆ ೧೧)—೬. ಕೃಪೆಯಿಂದಲೇ ರಕ್ಷಿಸಲ್ಪಟ್ಟಿದ್ದೀರಿ ೧೨)—ಮತ್ತು ಕ್ರಿಸ್ತ ಯೇಸುವಿನಲ್ಲಿ ನಮ್ಮ ಮೇಲೆ ಮಾಡುವ ದಯದಿಂದ, ೭. ತನ್ನ ಕೃಪೆಯ ಅಧಿಕವಾದ ಐಶ್ವರ್ಯವನ್ನು ಮುಂದೆ ಬರುವ ೧೩) ಯುಗಗಳಲ್ಲಿ ತೋರಿಸುವ ಹಾಗೆ, ಕ್ರಿಸ್ತ ಯೇಸುವಿನಲ್ಲಿ ನಮ್ಮನ್ನು ಕೂಡ ಎಬ್ಬಿಸಿ, ಪರಲೋಕದವುಗಳಲ್ಲಿ ಕೂಡ ಕುಂದ್ರಿಸಿದ್ದಾನೆ. ೮. ಯಾಕಂದರೆ ೧೪) ಕೃಪೆಯಿಂದಲೇ, ವಿಶ್ವಾಸದ ಮೂಲವಾಗಿ, ರಕ್ಷಿಸಲ್ಪಟ್ಟಿದ್ದೀರಿ; ಅದು ನಿಮ್ಮಿಂದಲ್ಲ ೧೫), ದೇವರ ವರವೇ. ೯. ಯಾವನಾದರೂ ಹೆಚ್ಚಳ ಪಡದ ಹಾಗೆ, ಅದು ಕ್ರಿಯೆಗಳಿಂದಲ್ಲ. ೧೦. ಹ್ಯಾಗಂದರೆ ನಾವು ಅವುಗಳಲ್ಲಿ ನಡೆದು ಕಾಲ್ಳುವ ಹಾಗೆ, ದೇವರು ಸಿದ್ಧ ಮಾಡಿದ ಸತ್‌ಕ್ರಿಯೆಗಳಿಗಾಗಿ, ಯೇಸು ಕ್ರಿಸ್ತನಲ್ಲಿ ನಿರ್ಮಿಸಲ್ಪಟ್ಟುಂಥ, ಅವನ ನಿರ್ಮಾಣವಾಗಿದ್ದೇವೆ ೧೬).

೧. ಕಳದು ಪೋದ ಮಗನಂತೆ ಲೂಕ. ೧೫, ೨೪. ೩೨., ದೈವಿಕ ಜೀವ ನೀತಿ ಬಲಗಳಿಲ್ಲದೆ, ಆಂತರ್ಯ ಅಸಮಾಧಾನ, ಮರಣ, ಭಯ, ಶಾಪಾನುಭವಗಳುಳ್ಳ ಪಾಪಿಯ ನೈಜಿಕವಾದ ಜೀವವೆಂಬದು ಜೀವವಲ್ಲ, ಮೃತಸ್ಥಿತಿಯೇ. ಈ ಸ್ಥಿತಿಯಲ್ಲಿರುವವರು ದೇವರನ್ನಗಲಿದವರಾಗಿ, ಮನೋವಾಕ್ಕಾಯ ಪಾಪಗಳಿಗೆ ವಶವಾಗಿದ್ದಾರೆ.

೨. ಅಂದರೆ, ಪರಜನರಾಗಿದ್ದ ನಿಮ್ಮನ್ನು. ಇಲ್ಲಿ ತಾಡಗಿದ ಮಾತು ೫. ೬. ೭ನೆ ವಚನದಲ್ಲಿ ಮುಗಿಯುತ್ತದೆ. ಪೌಲನ ಅಭಿಪ್ರಾಯವೇನಂದರೆ: ಯೇಸು ಕ್ರಿಸ್ತನ ಪುನರುತ್ಥಾನದಲ್ಲಿ ಪ್ರತ್ಯಕ್ಷವಾದ ದೇವರ ಬಲವು ಭಕ್ತರ ಪುನರ್ಜನ್ಮದಲ್ಲಿಯೂ ಪ್ರತ್ಯಕ್ಷವಾಗಿದೆ. ತಲೆಯ ಮಹಿಮೆಯು ಅವಯವಗಳಲ್ಲಿಯೂ ಪೂರ್ಣಳೆಯುತ್ತದೆ.

೩. ಆಯಾಯ ದೇಶದಲ್ಲಿಯೂ, ಆಯಾಯ ಕಾಲದಲ್ಲಿಯೂ ಲೋಕದ ಜನರು ಬೇರೆ ಬೇರೆ ಪ್ರಕಾರವಾದ ನಡತೆಗಳನ್ನೂ, ಮರ್ಯಾದೆಗಳನ್ನೂ ನಡಿಸುತ್ತಾರೆ. ಆದಾಗ್ಯೂ ಎಲ್ಲೆಲ್ಲಿಯೂ, ಯಾವಾಗಲೂ ಲೌಕಿಕರಾಗಿದ್ದಾರೆ. ಸ. ಳ, ೧೯. ೧ ಪೇತ್ರ. ಳ, ೩.

೪. ಈ ಪ್ರಭು ಸೈತಾನನೇ. ಯೋಹಾ. ೧೨, ೩೧ರಲ್ಲಿ ಅವನಿಗೆ ಈ ಲೋಕದ ಅಧಿಪತಿಯಂಬ ಪೆಸರಿಟ್ಟಿದೆ. ಇಲ್ಲಿ ಬರದಿರುವ ಅಂತರಿಕ್ಷದ ಅಧಿಕಾರದ ಪ್ರಭು ಎಂಬ ಪೆಸರಿನಿಂದ ಅಂತರಿಕ್ಷವು ದುರಾತ್ಮಗಳ ಸ್ಥಾನವೆಂದು ಕಂಡು ಬರುತ್ತದೆ. ಸೈತಾನನು ಮಾಡಿದ ದೇವದ್ರೋಹದಲ್ಲಿ ಶೇರಿದ ದುಷ್ಟ ದೂತರು ದಿವದ ಗಡೀಪಾರಾಗಿ, ಭೂವಾಸಿಗಳಾಗದೆ, ಅಂತರಿಕ್ಷದಲ್ಲಿ ಇರುತ್ತಾರೆಂದು, ಇಲ್ಲಿ ಸೂಚಿತವಾಗಿದೆ. ಯೂದನ ಪತ್ರಿಕೆಯ ೬ರಲ್ಲಿ ಬರದದ್ದನ್ನು ಇದಕ್ಕೆ ಸರಿನೋಡ ಬೇಕು. ದುಷ್ಟ ದೂತರ ಸ್ಥಿತಿಯ ವರ್ತಮಾನಕ್ಕಿಂತ ಅವರ ವೃತ್ತಿಯ ವರ್ತಮಾನವು ನಮಗೆ ಅತ್ಯುಪಯೋಗವಾಗಿದೆ. ಇದರ ವಿಷಯವಾಗಿ ಬರದಿರುವುದೇನಂದರೆ: ಸೈತಾನನು ಅವಿಧೇಯತ್ವದ ಮಕ್ಕಳಾದ ಲೋಕದವರಲ್ಲಿ ಯತ್ನಿಸುವ ಆತ್ಮವಾಗಿದ್ದಾನೆ. ಅವಿಧೇಯತ್ವದ ಮಕ್ಕಳಂದರೆ: ಅವಿಶ್ವಾಸಿಗಳು. ಇವರು ಸುವಾರ್ತಾಶೀರ್ವಾದರಹಿತರಾಗಿ, ಅಂಧಕಾರ ರಾಜ್ಯದ ಒಡೆಯನಾದ ಸೈತಾನನಿಗೆ ವಶವಾಗಿದ್ದು, ದುರ್ವಿಷಯ ದುರಾಚಾರಗಳಿಂದ ಜ್ಯೋತಿರ್ಮೀಯವಾದ ದೇವರಾಜ್ಯಕ್ಕೆ ವಿರೋಧವಾಗಿ ನಿಷ್ಫಲ ಕಠಿಣ ಕಾಳಗವನ್ನು ನಡಿಸುವಂಥ, ರಕ್ತಮಾಂಸಚರವಿಗಳಾದ ಅಲ್ಪ ಬಲದ ಮನುಷ್ಯರಿಗಿಂತ ಅತ್ಯಂತ ಶಕ್ತಿಯುಳ್ಳ ಸಂಸ್ಥಾನಕ್ಕೆ ಆಳುಗಳಾಗಿದ್ದಾರೆ.

೫. ನಡದು ಕಾಂಪಿರಿ ಎಂಬ ಪದವು ರೂಢಿಯಾದ ಪಾಪಾಚರಣೆಯನ್ನು ಸೂಚಿಸುತ್ತದೆ.

೬. ಯೆಹೂದರಾದ ನಾವು ಸಹ ಪರಜನರಾದ

ಮತ್ತಾಬ್ಬರಿಗಿಂತ ಉತ್ತಮರಾಗಿರಲಿಲ್ಲ. ರೋಮಾ. ೨, ೧೪.

೭. ಪಾಪಭಾವವು ದುರ್ವಿಷಯಾನ್ವಿತ ನಡತೆಯಲ್ಲಿ ಮಾತ್ರವಲ್ಲ, ದೇವರ ಸತ್ಯಕ್ಕೆ ವಿರೋಧವಾದ ಭಾವನೆಗಳಲ್ಲಿಯೂ ಪ್ರವರ್ತಿಸುತ್ತದೆ.

೮. ೨ನೆ ವಚನದಲ್ಲಿ ಅವಿಧೇಯತ್ವದ, ೩ನ್ನೆವೆ ಅವಿಶ್ವಾಸದ, ಮಕ್ಕಳೆಂಬ ಪದವು; ಮರಣದ ಮಗನು ಎಂಬ ಪದವು ಕೀರ್ತ. ೭೯, ೧೧; ೧೦೨, ೨೧. ೨ ಸಮು. ೧೨, ೫ಲ್ಲಿ, ನಾಶನದ ಮಗನೆಂಬ ಪದವು ೨ ಥೆಸ್ಸ. ೨, ೩ಲ್ಲಿ, ನರಕದ ಮಗನೆಂಬಿದು ಮತ್ತಾ. ೩, ೧೫ಲ್ಲಿ ಬರದದೆ; ಈ ಪೆಸರುಗಳಿಗೆಲ್ಲಾ ಒಂದೇ ತರದ ಅಭಿಪ್ರಾಯವದೆ. ಕಾಪದ ಮಗನೆಂಬದರ ಅಭಿಪ್ರಾಯವೇನಂದರೆ: ಕಾಪಕ್ಕೆ ಒಳಗಾಗ ತಕ್ಕವನಲ್ಲ, ಒಳಗಾದವನೇ. ಆತ್ಮಿಕ ಮೃತಸ್ಥಿತಿಯಲ್ಲಿ ೫ರುವ ಮನುಷ್ಯರು ಎಲ್ಲರೂ ೫ಂಥವರಾಗಿದ್ದಾರೆ.

೯. ಕೃಪಾರಹಿತರಾದ ಮನುಷ್ಯರೆಲ್ಲರಿಗೆ ದೇವರಿಂದ ಆದಿಯಲ್ಲಿ ನಿರ್ದಾೕಷವಾಗಿ ನಿರ್ಮಾಣವಾದಂಥ, ತದನಂತರ ಪಾಪಪತನದಿಂದ ಕೆಟ್ಟು ಪೂರ್ಣವಾದಂಥ, ಒಂದೇ ಸ್ವಭಾವ ಉಂಟು. ಸಹಜವಾದ ಸ್ಥಿತಿಯಲ್ಲಿದ್ದ ಯೆಹೂದರಿಗೆ ಮೋಶೆಯ ನಿಯಮವು ಗಲ. ೨, ೧೫., ಪರಜನರಿಗೆ ಸಹಜವಾದ ಸ್ಥಿತಿಯಲ್ಲಿ ಮನಸ್ಸಾಕ್ಷಿಯಂಬ ನಿಯಮವು ಉಂಟಾಗಿದ್ದರೂ ರೋಮಾ. ೨, ೧೪., ಉಭಯತ್ರರು ತಮ್ಮ ಪಾಪ ಬಂಧವನ್ನು ಕತ್ತರಿಸ ಶಕ್ತರಾಗಿರಲಿಲ್ಲ.

೧೦. ವ. ೪—೭ ಈ ದುರವಸ್ಥೆಯಿಂದ ದೇವರು ಜಕ್ತರನ್ನು ರಕ್ಷಿಸಿದ್ದಾನೆ. ಆತನು ಪಾಪಿಗಳ ಸಂಕಷ್ಟವನ್ನು ಕರುಣಿಸಿ, ಅವರನ್ನು ರಕ್ಷಿಸ ಬೇಕೆಂದು ಪ್ರೀತಿಯಿಂದಲೇ ಅಪೇಕ್ಷಿಸಿದ್ದು ಮನುಷ್ಯರ ರಕ್ಷಣೆಗೆ ಪೇತುವಾಯಿತು. ೧ ಯೋಹಾ. ೪, ೧೯.

೧೧. ೫ದರ ಕ್ರಮವು, ಕ್ರಿಸ್ತನಲ್ಲಿ ದೈವಿಕವಾದ ಪ್ರಕಾರ, ನಮ್ಮಲ್ಲಿ ಆತ್ಮಿಕವಾಗಿದೆ. ಪೂರ್ಣಾಗಂದರೆ: ೧) ಪಾಪಿಯು ಸುವಾರ್ತಾವಾಕ್ಯದಿಂದ ಎಚ್ಚರವಾಗುತ್ತಾನೆ. ೨) ವ. ೬; ಅವನು ಪರಿಶುದ್ಧಾತ್ಮದಿಂದ ಪುನರ್ಜನ್ಮವನ್ನೈದುತ್ತಾನೆ. ರೋಮಾ. ೬, ೪; ೫ದಕ್ಕೆ ಶರೀರಪುನರುತ್ಥಾನವು ಸಂಬಂಧವಾಗಿದೆ. ರೋಮಾ. ೮, ೧೧. ೩) ಅವನು ಪರದ ಮಹಿಮೆಯ ಆಶೆಯನ್ನು ಪೂರ್ಣಾಂದಿ ರೋಮಾ. ೮, ೩೦., ಆತ್ಮದಿಂದ ದಿವವಾಸಿಯಾಗಿದ್ದಾನೆ ಫಿಲಿ. ೩, ೨೦. ಈ ಕಾರ್ಯವು ಕ್ರಿಸ್ತನಲ್ಲಿ ಸಂಪೂರ್ಣವಾಗಿದ್ದು, ನಮ್ಮಲ್ಲಿ ತಾಡಗಿದೆ ಅಷ್ಟೆ. ಆದಾಗ್ಯೂ ಜಕ್ತನಿಗೆ ೫ಪದಲ್ಲಿ ದೇವಸಮಾಧಾನವೂ ನಿತ್ಯಜೀವವೂ ದೇವರ ನೀತಿಯೂ ಉಂಟು.

೧೨. ೫ನೆ ವಚನದಲ್ಲಿ ಅಪಾಸ್ತಲನು ಪ್ರಸ್ತುತ ವಾಕ್ಯಸಂಗತಿಯನ್ನು ನಿಲ್ಲಿಸಿ, ತನ್ನ ಪೃದ್ಭಾವನಾಸಾರವನ್ನು ಅಕಸ್ಮಾತ್ತಾಗಿ ಜ್ಞಾಪಕ ಮಾಡಿದ ಮೇಲೆ, ಪೂರ್ವವಾಕ್ಯವನ್ನು ಮುಗಿಸುತ್ತಾನೆ. ಕೃಪೆಯೇ ರಕ್ಷಣಾಮೂಲಕವಾದದ್ದೆಂಬುವದು ಪೌಲನಲ್ಲಿ ಸರ್ವದಾ ಪೃದ್ಧತವಾಗಿತ್ತು.

೧೩. ಕ್ರಿಸ್ತನ ಮುಖಾಂತರ ಪ್ರವಹಿಸುವ ದಯೆಯಿಂದ ತನ್ನ ಕೃಪೆಯ ಐಶ್ವರ್ಯವನ್ನು ಜಕ್ತರಿಗೆ ದೇವರಾಜ್ಯದ ಮುಂದಣ ಚರಿತ್ರದಲ್ಲಿ, ವಿಶೇಷವಾಗಿ ಪರದ ಮಹಿಮಾಸ್ಥಿತಿಯಲ್ಲಿ, ಪ್ರಕಟಿಸುವದು ನೂತನ ಜೀವ ನಿರ್ಮಾಣದಲ್ಲಿ ದೇವರ ಉದ್ದಿಶ್ಯವಾಗಿತ್ತು. ನಮ್ಮ ಕಾಲವು ಸಪು ಈ ಕೃಪೆಯ ಕಾಲಗಳಲ್ಲಿ ಶೇರಿದ್ದಕ್ಕೆ ಸಂತೋಷ ಪಡ ಬೇಕು. ಆದರೆ ಪರದಲ್ಲಿ ದೇವರ ಕೃಪೆಯು ಅತ್ಯಂತ ಮಹಿಮೆಯಿಂದ ಪ್ರಸಿದ್ಧವಾಗುವದು. ದೈವಿಕವರದಾತ ದೇವರ ಕೃಪೆಗೆ ದಯೆಯಂದು ಪೆಸರು.

೧೪. ಅಪಾಸ್ತಲನು ಕೃಪೆಯನ್ನು ಪೂರ್ವ ವಚನಗಳಲ್ಲಿ ಘನವಾಗಿ ವರ್ಣಿಸಿದ ಕಾರಣವನ್ನು ಈ ಶಬ್ದದಿಂದ ಸೂಚಿಸುತ್ತಾನೆ.

೧೫. ಈ ಪುನರುಕ್ತಿಯಿಂದ ಪೌಲನು ಸ್ವಪುಣ್ಯದ ಜೀವನೆಯನ್ನು ತಳ್ಳಿ, ರಕ್ಷಣಾಕಾರಣವಾದ ದೇವರ ಕೃಪೆಗೆ ರಕ್ಷಣಾಕರಣವಾದ ವಿಶ್ವಾಸವನ್ನು ಶೇರಿಸುತ್ತಾನೆ. ಮತ್ತು ವಿಶ್ವಾಸವಾದರೂ ನಮ್ಮ ಕೃತ್ಯವೆಂಬ ಜೀವನೆಯನ್ನು ನಿರಾಕರಿಸುವದಕ್ಕೆ ನಿಷೇಧನಿವಾರಣಾೕಕ್ತಿಯನ್ನು ಪ್ರಯೋಗಿಸಿ ಅದನ್ನು ಕ್ರಿಯೆಯಿಂದಲ್ಲ ಎಂಬದರಿಂದ ೯ನೆ ವಚನದಲ್ಲಿ ದೃಢ ಪಡಿಸುತ್ತಾನೆ. ನಮ್ಮ ರಕ್ಷಣಾವಿಶಿಷ್ಟವು, ಅದರ ಕಾ

ರಣ, ಮೂಲ, ವೃದ್ಧಿ, ಮುಂತಾದದ್ದೆಲ್ಲಾ, ನಮ್ಮ ಪುಣ್ಯ ಸತ್ಕರ್ಮ ಸದ್ಗುಣಗಳಿಂದ ಎಷ್ಟು ಮಾತ್ರವು ಪುಟ್ಟುವದಿಲ್ಲ. ಆದ್ದರಿಂದ ಯಾರಾದರೂ ತಾನೇ ಯಾಗ್ಯನೆಂದು, ಅಪಹಂಕಾರ ಪಡ ಬಾರದು. ರಾಮಿಾ. ೩, ೨೩; ೪, ೨. ೧ ಕಾರಿ. ೧, ೨೯.

೧೬. ನಾವು ಸ್ವಕರ್ಮದಿಂದ ಪುಣ್ಯವನ್ನು ಪಡದು ಕಾಳ್ಳುವದಕ್ಕೆ ಶಕ್ತರಾಗಿರುವದಿಲ್ಲ; ನಾವೇ ದೇವರ ಕರ್ಮವಾಗಿದ್ದೇವೆ. ವಿಶ್ವಾಸಕ್ಕೂ ಸತ್ಕರ್ಮಕ್ಕೂ ಇರುವ ಸಂಬಂಧವೇನಂದರೆ: ಅ) ನಾವು ನಮ್ಮನ್ನು ನಾವೇ ಪೂರ್ಣಾಸ್ತಾಗಿ ನಿರ್ಮಿಸುವವರಲ್ಲ; ದೇವರು ನಮ್ಮನ್ನು ಕ್ರಿಸ್ತನಲ್ಲಿ ಪೂರ್ಣಾಸ್ತಾಗಿ ಪುಟ್ಟಿಸುತ್ತಾನೆ. ಇ) ದೇವರಿಂದುಂಟಾದ ನೂತನ ಜೀವದಿಂದಲೇ ದೇವರಿಗೆ ಮನಾಪೂರವಾದ ನಿಜ ಸತ್ಕರ್ಮಗಳು ಪುಟ್ಟುತ್ತವೆ. ಉ) ಇದು ನಮ್ಮಲ್ಲಿ ಆಗ ಬೇಕೆಂಬುವದು ವಿಶೇಷವಾದ ದೇವರ ಚಿತ್ತವಾಗಿದೆ. ಆತನು ನಮ್ಮನ್ನು ರಕ್ಷಣೆಗಾಗಿಯೂ, ನಿತ್ಯ ಸತ್ಕರ್ಮಾಚರಣೆಗಾಗಿಯೂ ನೇಮಕ ಮಾಡಿದ್ದಾನೆ.

೨. ಯೆಹೂದರೂ, ಪರಜನರೂ ಏಕ ಸಭೆಯಲ್ಲಿ ಅನ್ಯೋನ್ಯವಾದದ್ದು. ವ. ೧೧—೨೨.

ಪರಜನಕ್ರೈಸ್ತರು ಕ್ರಿಸ್ತನಿಂದ ತಮಗೆ ಪ್ರಾಪ್ತವಾದ ಪದವಿಯನ್ನು ಯೋಗ್ಯವಾಗಿ ಗಣನೆ ಮಾಡುವ ಹಾಗೆ, ಅಪೊಸ್ತಲನು ಅವರ ಪೂರ್ವ ದುರವಸ್ಥೆಯನ್ನೂ, ಕ್ರೈಸ್ತರಾದ್ದರಿಂದ ಹೊಂದಿದ ಮಹಿಮೆಯನ್ನೂ ಜ್ಞಾಪಕ ಮಾಡಿ, ಅವರನ್ನು ಎಚ್ಚರಿಸುವದಕ್ಕೆ ಹೇಳುವದೇನಂದರೆ: ಅವರು ಮುಂಚೆ ದೇವರಿಗೆ ಶತ್ರುಗಳಾಗಿ, ಇಸ್ರಯೇಲನವರಿಗೆ ಪ್ರಾಪ್ತವಾದ ವಿಶೇಷ ಕೃಪೆಯ ಪ್ರಸಾದಗಳಿಲ್ಲದವರಾಗಿದ್ದರು. ವ. ೧೧—೧೪. ಈಗ ದೇವರಿಗೆ ಅನ್ಯೋನ್ಯರಾಗಿ, ಆತನ ನಿರ್ದಾರಜನಾಂಗದಲ್ಲಿ ಶೇರಿದ್ದಾರೆ. ಹೀಗೆ ಭೇದವು ಪರಿಹಾರವಾದ್ದರಿಂದ, ಆತ್ಮಿಕವಾದ ಏಕ ದೇವಾಲಯವು ಉಂಟಾಯಿತು. ವ. ೧೫—೨೨. ಪರಜನಕ್ರೈಸ್ತರು ಕ್ರೈಸ್ತ ಸಭಾನ್ಯೋನ್ಯದಲ್ಲಿ ಮನಃಪೂರ್ವಕವಾಗಿ ಶೇರ ಬೇಕೆಂಬುವದು ಈ ಪತ್ರಿಕೆಗೆ ಮುಖ್ಯೋದ್ದಿಶ್ಯವಾಗಿದೆ.

೧೧. ಆದಕಾರಣ ಕೈಯಿಂದ ಮಾಂಸದಲ್ಲಿ ಆಗುವ ಪರಿಛ್ಛೇದನೆ ಎಂಬುವದರಿಂದ, ಅಪರಿಛ್ಛೇದನೆ ಎಂದು ಕರೆಯಲ್ಪಟ್ಟವರಾದ ೧) ನೀವು, ಮುಂಚೆ ಮಾಂಸದಲ್ಲಿ ಜನಾಂಗಗಳವರಾಗಿದ್ದಿರೆಂದೂ, ೧೨. ಆ ಕಾಲದಲ್ಲಿ ಕ್ರಿಸ್ತನಿಲ್ಲದೆಯೂ ೨), ಇಸ್ರಯೇಲಿನ ಪೌರತ್ವಾಸಕ್ಕೆ ೩) ಪರರಾಗಿಯೂ, ವಾಗ್ದತ್ತದ ಒಡಂಬಡಿಕೆಗಳಿಗೆ ೪) ಅನ್ಯರಾಗಿಯೂ, ನಿರೀಕ್ಷೆಯಿಲ್ಲದವರಾಗಿಯೂ ೫), ಲೌಕಿಕದಲ್ಲಿ ದೇವರಿಲ್ಲದವರಾಗಿಯೂ ೬), ಇದ್ದಿರೆಂದು, ಜ್ಞಾಪಕ ಮಾಡಿ ಕಾಳ್ಳಿರಿ. ೧೩. ಆದರೆ ಇಗ, ಮುಂಚೆ ದೂರವಾಗಿದ್ದ ನೀವು, ಕ್ರಿಸ್ತ ಯೇಸುವಿನಲ್ಲಿ ಕ್ರಿಸ್ತನ ರಕ್ತದಿಂದ, ಸಮೀಪವಾದಿರಿ ೭).

೧. ಪರಜನಕ್ರೈಸ್ತರನ್ನು ಉದಾಸೀನ ಮಾಡುವ ಮನಸ್ಸು ತನ್ನಲ್ಲಿ ಇಲ್ಲವೇ ಇಲ್ಲವೆಂದು, ಪೌಲನು ಈ ಭಾಗದ ಆರಂಭದಲ್ಲಿ ಸೂಚಿಸುತ್ತಾನೆ.

೨. ಇಸ್ರಯೇಲನವರನ್ನೂ, ಸರ್ವಲೋಕಜನರನ್ನೂ ರಕ್ಷಿಸಿ ಆಳುವದಕ್ಕೆ ಬರ ತಕ್ಕ ಅಭಿಷಿಕ್ತನ ವಾಕ್ಯವೂ, ವಿಶ್ವಾಸವೂ ನಿಮಗಿರಲಿಲ್ಲ.

೩. ಇಲ್ಲಿ ಬರಪ ಗ್ರೀಕ ಶಬ್ದದ ಅರ್ಥವು ಸ್ವಲ್ಪ ಬೇರೆಯಾಗಿದೆ. ರಾಜ್ಯಕ್ಕೆ ಎಂದು ಭಾಷಾಂತರ ಮಾ

ಡಿದರೆ, ವಾಸಿ. ಮಾಡಿನ ಅಭಿಪ್ರಾಯವೇನಂದರೆ: ದೇವರು ಇಸ್ರಯೇಲನವರಲ್ಲಿ ಸ್ಥಾಪಿಸಿದ ರಾಜ್ಯದಲ್ಲಿ ಶೇರದವರಾಗಿ.

೪. ದೇವರು ಅಬ್ರಹಾಮನಿಗೆ ಕೊಟ್ಟ ಕೃಪಾ ಚಾಷೆಯೂ, ಮೋಶೆಯ ಮುಖಾಂತರ ಇಸ್ರಯೇಲನವರ ಸಂಗಡ ಮಾಡಿದ ಒಡಂಬಡಿಕೆ ವಾಕ್ಯವೂ ಈ ವೆರಡು ಅವರಿಗೆ ಗೊತ್ತಾಗಿರಲಿಲ್ಲ.

೫. ಮೋಶೆಯಿಂದಲೂ, ದಾವೀದನಿಂದಲೂ ಪ್ರವಾದಿಗಳಿಂದಲೂ ಪ್ರಕಟವಾದ ವಾಗ್ದತ್ತಗಳನ್ನು ತಿಳಿಯದೆ ಇದ್ದ ಕಾರಣ ಆಶಾರಹಿತರಾಗಿದ್ದರು.

೬. ನಾನಾ ದೇವತೆಗಳಿಗೆ ಪೂಜೆ ಮಾಡುತ್ತಾ ಬಂದರೂ, ನಿಜವಾದ ಏಕ ದೇವನ ಭಜನೆಯನ್ನೂ, ಧರ್ಮವನ್ನೂ, ವಾಕ್ಯವನ್ನೂ ತಿಳಿಯದೆ ಇದ್ದ ಕಾರಣ ದೇವರು ಇದ್ದಾಗ್ಯೂ, ಅವರ ಚಾಗಕ್ಕೆ ಇಲ್ಲವಾಯಿತು.

೭. ದೇವರ ಐಕ್ಯದಲ್ಲಿಯೂ ಸಭೆಯ ಐಕ್ಯದಲ್ಲಿಯೂ ಶೇರಿದ್ದೀರಿ.

೧೪. ಯಾಕಂದರೆ ಅವನು ನಮ್ಮ ಸಮಾಧಾನವಾಗಿದ್ದಾನೆ[೧]; ೧೫. ಸಮಾಧಾನ ಮಾಡುವವನಾಗಿ, ಇಬ್ಬರಾದವರನ್ನು ತನ್ನಲ್ಲಿ ಒಬ್ಬ ಹೊಸ ಮನುಷ್ಯನಾಗ ನಿರ್ಮಿಸಿ, ತನ್ನಲ್ಲಿ ಹಗೆಯನ್ನು ಕೊಂದು, ಶಿಲುಬೆಯಿಂದ ಇಬ್ಬರನ್ನು ಒಂದು ಶರೀರದಲ್ಲಿ ದೇವರಿಗೆ ಅನ್ಯೋನ್ಯ ಮಾಡುವ ಹಾಗೆ, ೧೬. ಅವನು ಎರಡಾಗಿದ್ದದ್ದನ್ನು ಒಂದಾಗ ಮಾಡಿ, ಅಡ್ಡಿಯಾದ ನಡುಗೋಡೆಯನ್ನು[೨] ಕೆಡವಿ, ಆಜ್ಞೆಗಳಲ್ಲಿರುವ ಕಟ್ಟಳೆಗಳನ್ವಯ(ಪ್ರಮಾಣವಾದ[೩]) ಹಗೆಯನ್ನು ತನ್ನ ಮಾಂಸದಲ್ಲಿ[೪]) ತೆಗೆದು ಹಾಕಿದನು. ೧೭. ಮತ್ತು ಬಂದು, ದೂರವಾದ ನಿಮಗೂ, ಸಮೀಪವಾದವರಿಗೂ, ಸಮಾಧಾನವನ್ನು ಪ್ರಸಂಗಿಸಿದನು[೫]). ೧೮. ಯಾಕಂದರೆ[೬]) ಅವನ ಮುಖಾಂತರ ಇಬ್ಬರಾದ ನಮಗೆ ಒಂದೇ ಆತ್ಮದಲ್ಲಿ ತಂದೆಯ ಬಳಿಗೆ ಪ್ರವೇಶ ಉಂಟು.

೧. ಈ ಶಬ್ದವನ್ನು ಚನ್ನಾಗಿ ಪರಾಮರ್ಶಿಸ ಬೇಕು. ಅದು ಅಭಿಪ್ರಾಯಗರ್ಭಿತವಾಗಿದೆ. ಆತನು ಸಮಾಧಾನವನ್ನುಂಟು ಮಾಡಿದ್ದಾನೆಂದು ಮಾತ್ರವಲ್ಲ, ತಾನೇ ನಮ್ಮ ಸಮಾಧಾನವಾಗಿದ್ದಾನೆಂದು, ಪೌಲನು ಸೂಚಿಸುತ್ತಾನೆ. ಆತನು ನಮಗಿದ್ದರೆ, ಅಂದರೆ ನಾವು ಆತನಲ್ಲಿದ್ದರೆ, ನಮಗೆ ಸಮಾಧಾನ ಉಂಟು; ಇಲ್ಲದಿದ್ದರೆ ಇಲ್ಲ. ಆತನು ನಿಜ ಸಮಾಧಾನಕರ್ತ ಕಾರಣ ಕಾರ್ಯವಾಗಿದ್ದಾನೆ. ದೇವಮನುಷ್ಯನಾದ ಆತನಲ್ಲಿ ದೇವಮನುಷ್ಯೈಕ್ಯವು ಉಂಟಾಯಿತು. ಆದರೆ ಪರಿಶುದ್ಧ ದೇವರಿಗೂ ಪಾಪಿಗಳಾದ ಮನುಷ್ಯರಿಗೂ ಇದ್ದ ಭೇದವು ಪರಿಹಾರವಾದದ್ದಲ್ಲದೆ, ಆತನು ಎಲ್ಲಾ ಮನುಷ್ಯರಿಗಾಗಿ ಚಲ್ಲಿದ ರಕ್ತವಿಂದುಂಟಾದ ವಿಮೋಚನೆಯ ಮುಖಾಂತರ ಭಕ್ತರೆಲ್ಲರೂ ಕ್ರಿಸ್ತನ ಸಭೆಯ ಶರೀರವ ಅಂಗಗಳಾಗುವದರಿಂದ, ಮತ ಜಾತಿ ಮುಂತಾದ ಭೇದಗಳು ಪರಿಹಾರವಾಗಿವೆ.

೨. ಯೆರೂಸಲೇಮಿನ ದೇವಾಲಯದಲ್ಲಿ ಪರಜನರದೆಂಬ ಪ್ರಾಕಾರಕ್ಕೂ, ಯೆಹೂದರದೆಂಬ ಪ್ರಾಕಾರಕ್ಕೂ ಮಧ್ಯದಲ್ಲಿದ್ದ ಗಾಡೆಯ ಪ್ರಕಾರ ಮೋಶೆಯ ನಿಯಮವು ಯೆಹೂದರ ಪರಜನರ ಅನ್ಯೋನ್ಯವನ್ನು ತಡಿಸಿದ್ದರಿಂದ, ನಡುಗಾಡೆಯಂಬದು ಇಲ್ಲಿ ಪ್ರಯೋಗವಾಯಿತು.

೩. ಇದೇ ಅಭಿಪ್ರಾಯ ಕೊಲೊ. ೨, ೧೪ಲ್ಲಿ ಬರದದೆ. ಇದೇ ಪ್ರಕಾರವಾದ ಅಭಿಪ್ರಾಯ ಬೇರೆ ಸ್ಥಳಗಳಲ್ಲಿಯೂ ತೋರುತ್ತದೆ. ರೋಮಾ. ೪, ೨೫. ೨ಕೊರಿ. ೫, ೯. ಆದರೆ ಯೇಸು ಕ್ರಿಸ್ತನು ದೇವರ ನಿಯಮವನ್ನು ಭಂಗ ಮಾಡಿದನೆಂದು, ನೆನಸ ಬಾರದು. ಅದನ್ನು ಪೂರೈಸಿ ಸ್ಥಾಪಿಸಿದ್ದಾನೆ. ಮತ್ತಾ.

೫, ೧೭. ಪೌಲನು ಇಲ್ಲಿ ಸೂಚಿಸುವದೇನಂದರೆ: ದೇವರಿಗೂ, ಮನುಷ್ಯರಿಗೂ ನಿಯಮದ ವಿಷಯವಾಗಿ ಪುಟ್ಟಿದ ವಿರೋಧವನ್ನು ತೆಗದು ಪೂರ್ಣಾಕಿದನು. ಪೂರ್ಣಾಗಂದರೆ: ನಿಯಮವನ್ನು ಮೀರಿದ ಮನುಷ್ಯರಿಗೆ ದೇವರಿಂದ ಬರುವ ಶಾಪವನ್ನು ಕ್ರಿಸ್ತನು ಪರಿಹರಿಸಿದನು. ಮತ್ತು ಆತನ ಆತ್ಮವನ್ನು ಪೂರ್ಣಾಂದಿದ ಜಕ್ತರಲ್ಲಿ ದೇವರ ನಿಯಮವನ್ನು ಕೈಕಾಳ್ಳುವದಕ್ಕೆ ಮನಸ್ಸೂ, ತ್ರಾಣವೂ ಪುಟ್ಟುತ್ತದೆ.

೪. ದೇವರಿಗೂ, ಮನುಷ್ಯರಿಗೂ ಇದ್ದ ಭೇದವನ್ನು ಕ್ರಿಸ್ತನು, ಕ್ರೂಜೆಯಲ್ಲಿ ಸತ್ತದರಿಂದಲೂ, ಜಕ್ತರನ್ನೆಲ್ಲಾ ಒಂದೇ ಶರೀರವಾಗಿ ಅನ್ಯೋನ್ಯ ಮಾಡುವದರಿಂದಲೂ, ಪರಿಹರಿಸಿದ್ದಾನೆ.

೫. ನಿಜವಾದ ಸುವಾರ್ತೆಯ ಪ್ರಸಂಗವು ತನ್ನ ಆತ್ಮದ ಮುಖಾಂತರ ತನ್ನ ನಿಜ ಸೇವಕರಿಂದ ತನ್ನ ವಾಕ್ಯವನ್ನು ಪ್ರಕಟಿಸುವ ಕ್ರಿಸ್ತನಿಂದಲೇ ಆಗುತ್ತದೆ. ಸುವಾರ್ತಾಪ್ರಸಂಗಿಗಳು ಆತನ ರಾಯಭಾರಿಗಳೇ. ೨ ಕೊರಿ. ೫, ೨೦. ಸಖಾಬಾಧ್ಯಕರು ಆತನ ಆಳುಗಳೇ. ಆತನು ಬರುತ್ತಾ ಇದ್ದಾನೆಂಬದು ೧ ಯೋಹಾ ಪೂರ್ಣಾ. ೫, ೬ಲ್ಲಿ ಸೂಚಿತವಾಗಿದೆ. ಸಮಾಧಾನಪ್ರಸಂಗದ ಆಜ್ಞೆಯು ಯೋಹಾಪೂರ್ಣಾ. ೨೦, ೧೯; ೨೧, ೨೩ಲ್ಲಿ ಬರದದೆ.

೬. ಕ್ರಿಸ್ತನು ಸ್ಥಾಪಿಸಿ ಸಾರಿಸುವ ಸಮಾಧಾನಕ್ಕೆ ಜಕ್ತರಿಗೆಲ್ಲಾ ತಂದೆಯ ಬಳಿಯಲ್ಲಿರುವ ಪ್ರವೇಶವೂ ರೋಮಾ. ೫, ೨., ಸರ್ವಕ್ರೈಸ್ತಸಖೆಯ ಇರುವಿಕೆಯೂ, ಸಾಕ್ಷಿಯಾಗಿವೆ.

೧೯. ಹೀಗಿರುವದರಿಂದ ಇನ್ನು ಅನ್ಯರೂ ಪರವಾಸಿಗಳೂ ೧) ಅಲ್ಲ, ಪರಿಶುದ್ಧರ ಸಂಗಡ ಪಟ್ಟವಾಸಿಗಳೂ, ದೇವರ ಮನೆತನದವರೂ ಆಗಿ, ೨೦. ಅಪೊಸ್ತಲರ, ಪ್ರವಾದಿಗಳ ೨) ಅಸ್ತಿವಾರದ ೩) ಮೇಲೆ ಕಟ್ಟಲ್ಪಟ್ಟವರಾಗಿದ್ದೀರಿ; ಯೇಸು ಕ್ರಿಸ್ತನು ತಾನೇ ಮೂಲೆ ಕಲ್ಲಾಗಿದ್ದಾನೆ. ೨೧. ಅವನಲ್ಲಿ ೪) ಕಟ್ಟುವಿಕೆ ಎಲ್ಲಾ ಚನ್ನಾಗಿ ಜೋಡಿಸಲ್ಪಟ್ಟು, ಕರ್ತನಲ್ಲಿ ಪರಿಶುದ್ಧ ಮಂದಿರವಾಗ ಬೆಳೆಯುತ್ತದೆ ೫); ೨೨. ಅವನಲ್ಲಿ ನೀವೂ ೬), ದೇವರಿಗೆ ಆತ್ಮದಿಂದ ವಾಸಸ್ಥಾನವಾಗುವ ಹಾಗೆ, ಕೂಡ ಕಟ್ಟಲ್ಪಟ್ಟಿದ್ದೀರಿ.

೧. ಅನ್ಯರು ಎಂಬುವದರಿಂದ ದೇವರ ರಾಜ್ಯದಲ್ಲಿ ಶೇರದೆ ಇರುವವರ ಸ್ಥಿತಿಯು, ಪರವಾಸಿಗಳೆಂಬುವದರಿಂದ ದೇವರ ಮನೆತನದಲ್ಲಿ ಶೇರದೆ ಇರುವವರ ಸ್ಥಿತಿಯು ಸೂಚಿತವಾಗುತ್ತದೆ.

೨. ಈ ಸ್ಥಳದಲ್ಲಿ ಪ್ರವಾದಿಗಳೆಂಬ ಪದವು ಪಳೆ ಒಡಂಬಡಿಕೆಯ ಪ್ರವಾದಿಗಳನ್ನಲ್ಲ, ಪೂರ್ಣಾಸ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮದಿಂದ ದೇವರ ವಾಕ್ಯವನ್ನು ಸಾರುವವರನ್ನು ಸೂಚಿಸುತ್ತದೆ. ಸ. ೩, ೫; ೪, ೧೧. ೧ ಕೊರಿ. ೧೨, ೨೮.

೩. ಇಲ್ಲಿ ಕ್ರೈಸ್ತಸಖೆಗೆ ಅಲಂಕಾರಮಯವಾದ ಸಾಮ್ಯವು ಪ್ರಯೋಗಿಸಿಯದೆ. ಅಪೊಸ್ತಲರು ಸುವಾರ್ತಾಪ್ರಸಂಗದಿಂದ ಕ್ರೈಸ್ತಸಖೆಯನ್ನು ಸ್ಥಾಪಿಸಿದ್ದು ಪೂರ್ಣಾದು. ಆದರೆ ಇಲ್ಲಿ ಸೂಚಿಸಿದ ಅಭಿಪ್ರಾವೇನಂದರೆ: ಅಪೊಸ್ತಲರು ಸಖೆಯಂಬ ದೇವಾಲಯದ ತಳಪಾಯಿ ಕಲ್ಲುಗಳು; ಯೆಹೂದಕ್ರೈಸ್ತರ ಸಮೂಹವೂ ಪರಜನಕ್ರೈಸ್ತಸಮೂಹವೂ ದೇವಾಲಯದ ಬೇರೆ ಬೇರೆ ಗಾಡೆಗಳು; ಆಯಾಯ ಜಕ್ತರು ಗಾಡೆಗಳಲ್ಲಿ ಕಟ್ಟಿದ ಕಲ್ಲುಗಳು; ಸಖೆಯನ್ನು ಪೂರೈಯುವಂಥ, ಒಟ್ಟಾಗಿ ಕೂಡಿಸುವಂಥ ಕ್ರಿಸ್ತನು ದೇವಾಲಯದ ಮೂಲೆ ಕಲ್ಲು. ಯೆಶಾ. ೨೮, ೧೬. ಕೀರ್ತ. ೧೧೮, ೨೨. ಮತ್ತಾ. ೨೧, ೪೨. ೧ ಪೇತ್ರ. ೨, ೪.

೪. ಅಂದರೆ, ಯೇಸು ಕ್ರಿಸ್ತನಲ್ಲಿ.

೫. ಲೋಕದ ಅಂತ್ಯದ ವರೆಗೂ ಕ್ರೈಸ್ತಸಖೆಯು

ಎಫೆ. ೩, ೧—೯.

ಬೆಳಿಯುತ್ತಾ ಬರುತ್ತದೆ. ಎಲ್ಲಾ ಜನಾಂಗಗಳಿಂದ ಆಯಾಯ ಕಾಲದಲ್ಲಿ ಸುವಾರ್ತೆಯನ್ನು ಕೇಳಿ ವಿಶ್ವಾಸಿಸುವವರು ಶೇರುತ್ತಾರೆ. ಹೀಗೆ ಎಲ್ಲಾ ದೇಶಗಳಲ್ಲಿ ನಿಜವಾದ ಆತ್ಮಿಕ ದೇವಾಲಯವು ಸ್ಥಾಪಿತವಾಗುತ್ತದೆ. ಅದು ಪರಿಶುದ್ಧಾತ್ಮದ ಸ್ಥಾನವಾಗಿದ್ದು, ಪರಿಶುದ್ಧವಾಗಿದೆ.

೬. ಒಬ್ಬಾಬ್ಬ ಭಕ್ತನು ಒಂದು ಪರಿಯಾಗಿ ಸಭೆಯಂಬ ದೇವಾಲಯದಲ್ಲಿ ಒಂದು ಕಲ್ಲಾಗಿದ್ದಾನೆ; ಮತ್ತಾಂದು ಪರಿಯಾಗಿ ತಾನೇ ದೇವಾಲಯವಾಗಿದ್ದಾನೆ. ೧ ಕೊರಿ. ೬, ೧೯; ೩, ೧೬. ೧೭. ಯೋಹಾ. ೪, ೨೩. ೨೪.

ಸ. ೩.

ಅಪೊಸ್ತಲನು ಮೊದಲನೆ ಸಂಧಿಯಲ್ಲಿ ಕ್ರಿಸ್ತನ ಮಹಾತ್ಮ್ಯವನ್ನು, ಎರಡನೆ ಸಂಧಿಯಲ್ಲಿ ಪರಜನರಿಗೆ ಪ್ರಾಪ್ತವಾದ ಕ್ರಿಸ್ತಸಭಾಹ್ವಾನದ ಮಹಿಮೆಯನ್ನು ವಿವರಿಸಿದನಂತರ, ಈ ಸಂಧಿಯಲ್ಲಿ ತನ್ನ ಸ್ವಕೀಯ್ಯ ಸಂಗತಿಗಳನ್ನು ಮುಖಪರಿಚಿತಿಯಿಲ್ಲದ ಸಭೆಗಳವರಿಗೆ ತಿಳಿಸಿ, ಅವರನ್ನೆಲ್ಲಾ ಸಭೆಯ ಅನ್ಯೋನ್ಯಕ್ಕೂ, ಸಭೆಯಲ್ಲಿ ನಿಕ್ಷೇಪವಾಗಿಟ್ಟು ಇರುವ ದೇವರ ಕೃಪೆಯ ಅಮಿತವಾದ ಐಶ್ವರ್ಯಕ್ಕೂ ಎಳೆಯಲಾಸಕ್ತವಾದ ಹೃದಯದಿಂದ ಅವರಿಗಾಗಿ ವಿಜ್ಞಾಪಿಸುತ್ತಾನೆ.

ಪರಜನರ ಅಪೊಸ್ತಲೋದ್ಯೋಗದ ಮಹಿಮೆಯು.

೧. ಪೌಲನಿಗೆ ಪ್ರಾಪ್ತವಾದ ಉದ್ಯೋಗವು. ವ. ೧—೧೩.

೧. ಇದರ ನಿಮಿತ್ತ ಪೌಲನಾದ ನಾನು ಜನಾಂಗಗಳಾದ ನಿಮಗಾಗಿ ಕ್ರಿಸ್ತಯೇಸುವಿನ ಬಂಧನದವನು. ೨. ನಿಮಗಾಗಿ ನನಗೆ ಕೊಡಲ್ಪಟ್ಟ ದೇವರ ಕೃಪೆಯ ಮನವಾರ್ತೆಯನ್ನು ೧) ನೀವು ಕೇಳಿದಿರಲ್ಲಾ ೨)? ೩. ಏನಂದರೆ, ನಾನು ಮುಂಚೆ ಸ್ವಲ್ಪವಾಗಿ ಬರೆದ ಪ್ರಕಾರ, ಪ್ರಕಟನೆಯಿಂದ ಮರ್ಮವನ್ನು ನನಗೆ ತಿಳಿಸಿದನು ೩). ೪. ಅದರಿಂದ ನೀವು ಓದಿ, ಕ್ರಿಸ್ತನ ಮರ್ಮದಲ್ಲಿರುವ ನನ್ನ ಗ್ರಹಿಕೆಯನ್ನು ತಿಳುಕೊಳ್ಳಬಹುದು. ೫. ಆ ಮರ್ಮವು ಈಗ ಅವನ ಪರಿಶುದ್ಧ ಅಪೊಸ್ತಲರಿಗೂ, ಪ್ರವಾದಿಗಳಿಗೂ ಆತ್ಮನಿಂದ ಪ್ರಕಟವಾದ ಪ್ರಕಾರ, ಬೇರೆ ತಲಾಂತರಗಳಲ್ಲಿ ಮನುಷ್ಯರ ಮಕ್ಕಳಿಗೆ ತಿಳಿಸಲ್ಪಡಲಿಲ್ಲ ೪). ೬. ಯಾವದಂದರೆ ಜನಾಂಗಗಳು ಕ್ರಿಸ್ತನಲ್ಲಿ ಏಕ ಬಾಧ್ಯತೆಯೂ ಏಕ ಶರೀರವೂ ಉಳ್ಳವರಾಗಿಯೂ, ಅವನ ವಾಗ್ದತ್ತದಲ್ಲಿ ಕೂಡ ಪಾಲುಗಾರರಾಗಿಯೂ, ಸುವಾರ್ತೆಯ ಮೂಲವಾಗಿ ಇರುವರೆಂಬುವದೇ; ೭. ಅದಕ್ಕೆ ನಾನು, ಅವನ ಬಲದ ಯತ್ನದ ಪ್ರಕಾರ ನನಗೆ ೫) ಕೊಡಲ್ಪಟ್ಟ ದೇವರ ಕೃಪೆಯ ವರದ ಪ್ರಕಾರ, ಸೇವಕನಾದೆನು. ೮. ಅವನ ವಿಶ್ವಾಸದಿಂದ ಧೈರ್ಯವೂ, ನಿಸ್ಸಂಶಯವಾದ ಪ್ರವೇಶವೂ ನಮಗೆ ಉಂಟಾದ ೯. ನಮ್ಮ ಕರ್ತನಾದ ಕ್ರಿಸ್ತ

ಯೇಸುವಿನಲ್ಲಿ ಅವನು ಮಾಡಿದ ಅನಾದಿ ನಿರ್ಣಯದ ಪ್ರಕಾರ [೬]), ೧೦. ಇಗ
ಪರಲೋಕದವುಗಳಲ್ಲಿರುವ ದೌರೆಶನಗಳಿಗೂ, ಅಧಿಕಾರಗಳಿಗೂ [೭]), ಸಭೆಯ ಮೂ
ಲವಾಗಿ ದೇವರ ನಾನಾ ವಿಧವಾದ ಜ್ಞಾನವು ತಿಳಿಯ ಬರುವ ಹಾಗೆ, ೧೧. ಪರಿ
ಶುದ್ಧರೆಲ್ಲರಲ್ಲಿ ಕೇವಲ ಚಿಕ್ಕವನಾದ ನನಗೆ [೮]) ಈ ಕೃಪೆಯು ಕೊಡಲ್ಪಟ್ಟಿದೆ; ೧೨. ಏ
ನಂದರೆ ಕ್ರಿಸ್ತನ ಅಶಾರ್ಚ್ಯವಾದ ಐಶ್ವರ್ಯವನ್ನು ಜನಾಂಗಗಳಲ್ಲಿ ಪ್ರಸಂಗಿಸುವದೂ,
ಯೇಸು ಕ್ರಿಸ್ತನ ಮುಖಾಂತರ ಸರ್ವವನ್ನು ನಿರ್ಮಿಸಿದ ದೇವರಲ್ಲಿ ಯುಗಗಳಾರಭ್ಯ
ಮರೆಯಾಗಿದ್ದಂಥ ಮರ್ಮದ ಅನ್ಯೋನ್ಯವು [೯]) ಏನೆಂದು ಎಲ್ಲರಿಗೆ ತಿಳಿಸುವದೂ.
೧೩. ಆದದರಿಂದ ನಾನು ನಿಮಗಾಗಿ ಸಂಕಟ ಪಡುವ ಉಪದ್ರವಗಳಲ್ಲಿ ದಿಗೆಯ ಬೇ
ಡಿರೆಂದು [೧೦]) ಬೇಡಿ ಕೊಳ್ಳುತ್ತೇನೆ; ಅವೇ ನಿಮ್ಮ ಮಹಿಮೆ.

೧. ತಾನು ಪರಜನರ ಅಪಾಸ್ತಲನೆಂಬುವದನ್ನು ಈ ಮಾತಿನಿಂದ ಪೌಲನು ಸೂಚಿಸುತ್ತಾನೆ. ಸುವಾರ್ತೆಯನ್ನು ಸಾರುವಂಥ, ಅಥವಾ ಸಭೆಯನ್ನು ಆಳುವಂಥ, ಅಧಿಕಾರವನ್ನು ಪರಿಶುದ್ಧಾತ್ಮದ ಮುಖಾಂತರ ದೇವರಿಂದ ಪಡಕೊಂಡಿದವರಿಗೆ ಮನೆವಾರ್ತೆ ಕೆಲಸದವರೆಂದು ಅನೇಕ ಸ್ಥಳಗಳಲ್ಲಿ ಪೌಸರು ಇಟ್ಟಿದೆ. ೧ಕೊರಿ. ೪, ೧. ೨. ೧ಪೇತ್ರ. ೪, ೧೦. ತೀತ. ೧, ೭.

೨. ಪತ್ರಿಕಾವಲೋಕಕರೆಲ್ಲರು ಮುಖಪರಿಚಿತರಾಗಿದ್ದರಾದರೆ, ಅಪಾಸ್ತಲನು ಈ ಪದವನ್ನು ಪ್ರಯೋಗಿಸುತ್ತಿದ್ದಿಲ್ಲ.

೩. ಈ ಮರ್ಮ ಯಾವದಂದರೆ: ಸರ್ವ ಲೋಕ ರಕ್ಷಣೆಯು ಕ್ರಿಸ್ತನಿಂದುಂಟಾದ್ದರಿಂದ, ಪರಜನರೂ, ಯೆಹೂದರೂ ಒಟ್ಟು ಕೂಡಿ ಕ್ರೈಸ್ತಸಭಾನ್ಯಾಯದಲ್ಲಿ ಶೇರ ಬೇಕೆಂಬುವದು.

೪. ಅದು ಪಾಳೆ ಒಡಂಬಡಿಕೆಯ ಗ್ರಂಥಗಳಲ್ಲಿ ನಾನಾ ಪ್ರಕಾರವಾಗಿ ಸೂಚಿತವಾಗಿತ್ತು. ಆದ್ದರಿಂದ ಪೌಲನು ಮಾತ್ರವಲ್ಲ, ಕರ್ತನು ತಾನು ಸಹ ಸುವಾರ್ತೆಯ ಮುಖ್ಯ ಬೋಧನೆಗಳನ್ನು ಪೂರ್ವ ದೇವವಾಕ್ಯಪ್ರಮಾಣಗಳಿಂದ ಸ್ಥಾಪಿಸುತ್ತಾ ಇದ್ದರು. ಆದಾಗ್ಯೂ ಪೂರ್ವ ಕಾಲದಲ್ಲಿ ತಮಗೆ ಪ್ರಕಟವಾದ ದೇವರ ವಾಕ್ಯವನ್ನು ಕೇಳಿದ ಜನರು ಮಾತ್ರವಲ್ಲ, ಅದನ್ನು ಪರಿಶುದ್ಧಾತ್ಮದ ಪ್ರೇರಣೆಯಿಂದ ಪೇಳಿದವರು ಸಹ, ಅದರ ಅಭಿಪ್ರಾಯವನ್ನು ಪೂರ್ಣವಾಗಿ ಗ್ರಹಿಸಲಿಲ್ಲ.

೫. ಯೇಸು ಕ್ರಿಸ್ತನು ಅವನಿಗೆ ದಮಸ್ಕದ ಸಮೀಪದಲ್ಲಿ ಪ್ರತ್ಯಕ್ಷವಾದ್ದರಿಂದ, ಪೌಲನು ಸಂಗಡಲೇ ಹಿಂಸಕನಾದ ಪೈರಿಯ ವೃತ್ತಿಯನ್ನು ಬಿಟ್ಟು, ಸಂಪೂರ್ಣಿಯಾಗಿ, ಯೇಸು ಕ್ರಿಸ್ತನಿಗೆ ಹೃದಯಾಸಕ್ತದಾಸನಾಗಿ ಪರಜನರ ಅಪಾಸ್ತಲನ ಉದ್ಯೋಗದಲ್ಲಿ ಶೇರಿದನು. ಆ ದಿವಸದಲ್ಲಿ ಸಂಚಯಿಸಿದ ಅದ್ಭುತವನ್ನು ಪೌಲನು ಸಾಯುವವರೆಗೂ ಒಂದು ವೇಳೆಯಾದರೂ ಮರತು ಬಿಡಲಿಲ್ಲವೆಂದು ತೋರುತ್ತದೆ.

೬. ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ದೇವರು ಅನಾದಿಯಿಂದ ನಿಶ್ಚೈಸಿದ ಆಲೋಚನೆಯನ್ನು ಪೌಲನು ೨ ತಿಮೊ. ೧, ೯ಲ್ಲಿ ಸಹ ಸೂಚಿಸುತ್ತಾನೆ.

೭. ೧ ಪೇತ್ರ. ೧, ೧೨ಲ್ಲಿ ಸಹ ಮರ್ಮವಾದ ಈ ಸಂಗತಿಯು ಜಾಡೆಯಾಗಿ ಕಾಣುತ್ತದೆ.

೮. ಕೊರಿಂಥದ ಸಭೆಯವರಿಗೂ ಪೌಲನು ೧ ಕೊರಿ. ೧೫, ೮. ೯. ತಾನು ಮುಂಚೆ ಹಿಂಸಕನಾಗಿದ್ದು, ತದನಂತರ ಅಪಾಸ್ತಲನಾದದ್ದನ್ನು ಯಥಾರ್ಥವಾದ ವಿನಯದಿಂದ ಜ್ಞಾಪಿಸುತ್ತಾನೆ.

೯. ಇದು ಮೂರನೆ ವಚನದಲ್ಲಿ ಬರದ ಮಾತಿನ ಪುನರುಕ್ತಿಯಾಗಿದೆ.

೧೦. ಪೌಲನ ಅಭಿಪ್ರಾಯವೇನಂದರೆ: ನಾನು ಪರಜನರಲ್ಲಿ ಸಾಮಾನ್ಯ ರಕ್ಷಣೋಪಾಸುವಾರ್ತೆಯನ್ನು ಯೆ

ಎಫೆ. ೩, ೧೪—೨೧.

ಪೂರ್ವದ ಸಂಪ್ರದಾಯವಾಸನೆ ಇಲ್ಲದೆ ಸಾರುತ್ತಾ ಬರುವ ನಿಮಿತ್ತ ಯೆಹೂದರು ನನಗೆ ಮಾಡಿದ ಪಿಡೆಯಿಂದ ನಾನು ಶರೆಯಲ್ಲಿ ಬಿದ್ದಿದ್ದೇನೆ. ಅಪಾಸ್ತಲನಾದ ನನಗೆ ಇಂಥಾ ಕಷ್ಟವು ಉಂಟಾದದ್ದು ಅನುಚಿತವೆಂದು, ಯಾರೂ ನೆನಸ ಬಾರದು. ಮನುಷ್ಯರಿಗಾಗಿ ಶ್ರಮ ಪಟ್ಟು ಸತ್ಯ ಕರ್ತನಿಗೆ ನಾನು ಆಳು ಅಲ್ಲವಾ? ಪರಜನರಿಗೆ ಸಾರಿದ ಸುವಾರ್ತೆಗಾಗಿ ಬಂಧನಗ್ರಸ್ತನಾದ ನನ್ನನ್ನು ನೆನಸುವಾಗೆಲ್ಲಾ, ಪರಜನರಾದ ನಿಮಗೆ ದಾರಕಿದ ಕೃಪೆಗಾಗಿ ದೇವರನ್ನು ಸ್ತುತಿಸಿ, ನಿಮ್ಮ ಅಪಾಸ್ತಲನಾದ ನನ್ನನ್ನು ಅನುಸರಿಸಿ, ಶ್ರಮ ಮಾರ್ಗವಾಗಿ ಮಹಿಮೆಯಲ್ಲಿ ಶೇರು ಪಂಥಾದ್ದು ಪರಮ ಪದವಿಯಂದು, ತಿಳಿಯ ತಕ್ಕದ್ದು.

೨. ಅಪಾಸ್ತಲನು ಸಖೆಗಳಿಗಾಗಿ ದೇವರಿಗೆ ಮಾಡುವ ವಿಜ್ಞಾಪನೆಯು.

ಪ. ೧೪—೨೧.

೧೪. ಇದರ ನಿಮಿತ್ತ ೧) ಪರಲೋಕ ಭೂಲೋಕಗಳಲ್ಲಿ ಇರುವ ಎಲ್ಲಾ ಕುಟುಂಬಕ್ಕೆ ಹೆಸರಿಡುವಂಥ ೨) ೧೫. ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಗೆ ನನ್ನ ಮೊಣಕಾಲೂರಿ, ೧೬. ಬೇಡಿ ಕೊಳ್ಳುವದೇನಂದರೆ—ನೀವು ಅವನ ಐಶ್ವರ್ಯದ ಮೂಲವಾಗಿ ಒಳ ಮನುಷ್ಯನಲ್ಲಿ ಬಲದಿಂದ ತ್ರಾಣವಾಗುವ ಹಾಗೆಯೂ ೩), ೧೭. ಕ್ರಿಸ್ತನು ೪) ನಿಮ್ಮ ಹೃದಯಗಳಲ್ಲಿ ವಿಶ್ವಾಸದಿಂದ ನಿವಾಸಿಸುವ ಹಾಗೆಯೂ, ನೀವು ಪ್ರೀತಿಯಲ್ಲಿ ಬೇರೂರಿ ನೆಲೆಗೊಂಡು, ಅಗಲವೂ, ಉದ್ದವೂ, ಆಳವೂ, ಎತ್ತರವೂ, ಏನೆಂದು, ೧೮. ಪರಿಶುದ್ಧರೆಲ್ಲರ ಸಂಗಡ, ಗ್ರಹಿಸ ಶಕ್ತರಾಗುವ ಹಾಗೆಯೂ ೫), ದೇವರ ಸಮಸ್ತ ಸಂಪೂರ್ಣತೆಯಿಂದ ಸಂಪೂರ್ಣರಾಗುವದಕ್ಕೆ ೬), ತಿಳುವಿಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳಿದು ಕೊಳ್ಳುವ ಹಾಗೆಯೂ ೭), ೧೯. ಅವನು ತನ್ನ ಮಹಿಮೆಯ ಐಶ್ವರ್ಯದ ಪ್ರಕಾರ ನಿಮಗೆ ದಯ ಮಾಡ ಬೇಕು. ೨೦. ಮತ್ತು ನಮ್ಮಲ್ಲಿ ಯಶ್ಶಿಸುವ ಬಲದ ಪ್ರಕಾರ, ನಾವು ಬೇಡುವದಕ್ಕಿಂತಲೂ ನೆನಸುವದಕ್ಕಿಂತಲೂ ಎಲ್ಲಾದರ ಮೇಲೆ ಬಹು ಹೆಚ್ಚಾಗಿ ೮) ೨೧. ಮಾಡ ಶಕ್ತನಾಗಿರುವವನಿಗೆ, ಸಖೆಯಾಳಗೆ ೯) ಕ್ರಿಸ್ತ ಯೇಸುವಿನಲ್ಲಿ ಯುಗ ಯುಗಾಂತರಗಳ ಎಲ್ಲಾ ತಲಾಂತರಗಳಿಗೂ ಅವನಿಗೆ ಮಹಿಮೆ ಆಗಲಿ. ಆಮೆನ್.

೧. ಪೌಲನು ಮೊದಲನೆ ವಚನದಲ್ಲಿ ತಾತ್ಪರ್ಯವೆಂಬ ನೂಲನ್ನು ಕತ್ತರಿಸಿ, ಅವಲೋಕಿಕರಲ್ಲಿ ಯುಕ್ತವಾದ ಚರಿತವನ್ನು ಪುಟ್ಟಿಸುವದಕ್ಕೆ ತನ್ನ ಉದ್ಯೋಗವನ್ನೂ, ವೃತ್ತಾಂತವನ್ನೂ, ಶ್ರಮಗಳನ್ನೂ ವಿವರಿಸಿದನಂತರ, ಅದನ್ನು ತಿರಿಗಿ ಕೂಡಿಸಿ, ತಂದೆಯಾದ ದೇವರಲ್ಲಿಡುವ ಪೂರ್ಣ ಧೈರ್ಯವಾದ ವಿಶ್ವಾಸದಿಂದಲೂ ಸಖೆಗಳ ಮೇಲೆ ಇಡುವ ಅತ್ಯಂತ ಪ್ರೀತ್ಯಾಸಕ್ತಿಯಿಂದಲೂ ಪ್ರಾರ್ಥಿಸಲೆಸಗುತ್ತಾನೆ. ಬೇರೆ ಪತ್ರಿಕೆಗಳಲ್ಲಿಯೂ ಪೌಲನು ಇಂಥಾ ಪ್ರಾರ್ಥನೆಗಳನ್ನು ಶೇರಿಸುತ್ತಾನೆ, ಮತ್ತು ಸಖೆಯವರು ಸಪ್ರತನಗಾಗಿ ವಿಜ್ಞಾಪನೆ ಮಾಡ ಬೇಕೆಂದು ಬರೆಯುತ್ತಾನೆ; ಆದರೆ ತಾನು ಮೊಣಕಾಲೂರಿ ಪ್ರಾರ್ಥನೇ ಮಾಡುತ್ತೇನೆಂದು, ಬೇರೆ ಸ್ಥಳದಲ್ಲಿ ಬರೆಯುವದಿಲ್ಲ. ಇದು ಮಹದಾಸಕ್ತಿಲಕ್ಷಣವಾಗಿದೆ.

೨. ದೇವರು ಪುಳೆ ಒಡಂಬಡಿಕೆಯ ಕಾಲದಲ್ಲಿ ಸ್ವಕೀಯ ಜನರೆಂದು ಆದು ಕಾಂಡ ಇಸ್ರಯೇಲನವರ ಜನಾಂಗದಲ್ಲಿ ಬೇರೆ ಬೇರೆ ಪೆಸರುಳ್ಳ ೧೨, ೧೩ ಕುಲಗಳು ಇದ್ದ ಪ್ರಕಾರ, ಪೌಸ್ತಾಸ ಒಡಂಬಡಿಕೆಯ ದೇವಸಖೆಯು ಆಯಾಯ ಕಾಲದಲ್ಲಿ ಆಯಾ ದೇಶಗಳಲ್ಲಿ ಪುಟ್ಟಿ ಬೆಳದು, ಬೇರೆ ಬೇರೆ ಕೃಪಾಪ್ರಸಾದಗಳನ್ನು ದೇವರಿಂದ ಪೌಂದಿ, ಬೇರೆ ಬೇರೆ ಭಾಷೆಗಳಲ್ಲಿ ದೇವರ ವಾಕ್ಯವನ್ನು ಸಾರಿ ದೇವರನ್ನು ಪ್ರಾರ್ಥಿಸಿ ಸ್ತುತಿಸಿ, ಬೇರೆ ಬೇರೆ ಕ್ರಮದಿಂದ ನಡದು ಕಾಂಡು, ಅನೇಕ ಪ್ರಕಾರವಾಗಿ ಖೇದವಾಗಿದೆ. ಲೋಕದಲ್ಲಿರುವ ಬೇರೆ ಬೇರೆ ನಿಜವಾದ ಕ್ರೈಸ್ತಸಖೆಗಳಿಗೆ, ಬೇರೆ ಬೇರೆ ದೇವರ ಕುಟುಂಬಗಳೆಂದು ಪೌಲನು ಇಲ್ಲಿ ಬರದ ಮಾತಿಗೆ ಅನುಸಾರವಾಗಿ, ಪೇಳುವದು ಯುಕ್ತವಾಗಿದೆ. ನಿಜ ಸಖೆಗಳಿಗೆಲ್ಲಾ ದೇವಸಖೆಯಂಬ ಪೆಸರು ಉಚಿತವಾದದ್ದು. ಆದರೆ ಅಪಾಸ್ತಲನು ಇಲ್ಲಿ ಭೂಲೋಕದಲ್ಲಿರುವ ಕುಟುಂಬಗಳ ಪೌರ್ತು ದಿವದ ಕುಟುಂಬಗಳನ್ನು ಸಪಾ ಸೂಚಿಸುತ್ತಾನೆ. ಈ ತಾತ್ಪರ್ಯವು ದೇವರ ವಾಕ್ಯದ ಬೇರೆ ಯಾವ ಸ್ಥಳದಲ್ಲಿಯೂ ಸ್ಪಷ್ಟವಾಗಿ ತೋರುವಂಥಾದ್ದಲ್ಲ. ಪೌಲನ ಅಭಿಪ್ರಾಯ ಇಲ್ಲಿಯೂ ಜಾಡೆಯಾಗಿಯೇ ಕಾಣುತ್ತದೆ. ದಿವದಲ್ಲಿರುವ ದೇವದೂತಗಣವೆಲ್ಲಾ ಒಂದು ಕುಟುಂಬವೋ, ಭೂಲೋಕದ ಸಖೆಯು ನಾನಾ ಖೇದವಾಗಿರುವ ಪ್ರಕಾರ ದೇವದೂತಗಣದಲ್ಲಿಯೂ ಖೇದವುಂಟೋ, ದೇವದೂತರ ಪೌರ್ತು ದಿವದಲ್ಲಿ ಪೌಲನು ದೇವರ ಕುಟುಂಬವೆಂದು ಸೂಚಿಸುವ ಇತರ ಕೂಟಗಳುಂಟೋ, ಈ ಪ್ರಶ್ನೆಗಳಿಗೆ ನಮಗೆ ಉತ್ತರ ಪೇಳಲಿಲ್ಲವಲ್ಲ.

೩. ತಿಳುವಿಕೆಯಲ್ಲಿಯೂ, ಜ್ಞಾನದಲ್ಲಿಯೂ, ಬೇರೆ ಕೃಪಾವರಗಳಲ್ಲಿಯೂ ಬೆಳೆಯುವದಕ್ಕೆ ಪರಿಶುದ್ಧಾತ್ಮದಿಂದ ಪುಟ್ಟಿದ ಅಂತರ್ಮನುಷ್ಯನ ಕ್ಷೇಮವೂ, ವೃದ್ಧಿಯೂ ಅಪಶ್ಯವಾಗಿವೆ. ಇದಕ್ಕೆ ಮೂಲವೇನಂದರೆ: ಯಥಾರ್ಥವಾಗಿ ವಿಶ್ವಾಸಿಸಿ, ಪ್ರೀತಿಯಲ್ಲಿ ನೆಲೆಗಾಂಡು, ಅವಾಚ್ಯ ಕೃಪೆಯ ಐಶ್ವರ್ಯವನ್ನು ಪೂರ್ಣವಾಗಿ ತಿಳಿದು ಕಾಳ್ಳುವ ಭಕ್ತನ ಹೃದಯದಲ್ಲಿರುವ ಕ್ರಿಸ್ತನ ವಾಸವು.

೪. ಕ್ರಿಸ್ತನು ವಿಶ್ವಾಸದ ಮುಖಾಂತರ ಭಕ್ತನ ಹೃದಯದಲ್ಲಿ ವಾಸಿಸಿದರೆ, ಇವನಲ್ಲಿ ತನ್ನನ್ನು ಮೊದಲು ಪ್ರೀತಿ ಮಾಡಿದ ರಕ್ಷಕನ ಪ್ರೀತಿಯು ಪುಟ್ಟಿ ಬೇರೂರಿ ಬೆಳೆಯುವದರಿಂದ, ಅವನು ಕ್ರಿಸ್ತನ ಐಕ್ಯದಲ್ಲಿ ಪೆಚ್ಚು ಪೆಚ್ಚಾಗಿ ಶೇರುತ್ತಾನೆ.

೫. ಪ್ರೀತಿಯಿಂದಲೇ ಎಲ್ಲಾ ಕಡೆಯಲ್ಲಿ ಅಮಿತವಾದ ದೇವರ ಪ್ರೀತಿಯ ನಿಜವಾದ ತಿಳುವಿಕೆಯು ಪುಟ್ಟುತ್ತದೆ. ಅಗಲವೆಂಬ ಪದವು, ಎಲ್ಲಾ ಸ್ಥಳಗಳ ನಿವಾಸಿಗಳ ಮೇಲೆ ವ್ಯಾಪಿಸಿರುವ ದೇವರ ಕೃಪಾನಿರ್ಣಯವನ್ನು; ಉದ್ದವೆಂಬ ಪದವು, ಅದು ಸರ್ವಕಾಲಗಳಲ್ಲಿಯೂ ನಡೆಯುವದನ್ನು; ಆಳವೆಂಬುವ ಪದವು, ಮಪಾಸ್ತಾ ಕರುಣೆ ಬುದ್ಧಿಗೆ ಅಶಾಕ್ಯವಾದ ಅಗಾಧವನ್ನು; ಎತ್ತರವೆಂಬ ಪದವು, ದೇವರು ನಮ್ಮನ್ನು ಏರಿಸ ಬೇಕೆಂದು ಅಪೇಕ್ಷಿಸುವ ಉನ್ನತವಾದ ಮಹಿಮೆಯನ್ನು ಸೂಚಿಸುತ್ತದೆ.

೬. ಕಾಲಾ. ೧, ೧೯; ೨, ೯. ದಿವ್ಯ ಗುಣ ವಿಶಿಷ್ಟವೆಲ್ಲಾ ಕ್ರಿಸ್ತನಲ್ಲಿದ್ದು, ಎಫೆ. ೧, ೨೩ರ ಪ್ರಕಾರ ಆತನ ಮುಖಾಂತರ ಸಖೆಯಲ್ಲಿ ವಾಸಿಸ ಬೇಕು. ಹೀಗೆ ಸಖೆಗಳು ಆತ್ಮಸಿದ್ಧಿ ಪಡದು ಕಾಳ್ಳ ಬೇಕೆಂದು, ಅಪಾಸ್ತಲನು ಪೂರ್ಣ ಹೃದಯಾಸಕ್ತಿಯಿಂದ ಅಪೇಕ್ಷಿಸುತ್ತಾನೆ. ೨ಕಾರಿ. ೩, ೧೮.

೭. ಕ್ರಿಸ್ತನನ್ನು ಮನಃಪೂರ್ವಕವಾಗಿ ಪ್ರೀತಿ ಮಾಡಿ, ಆತನಿಗೆ ಪೂರ್ಣಾಧೀನನಾಗಿರುವ ಭಕ್ತನಿಗೆ ಕರ್ತನ ಸಂಗಡ ಪೂರ್ಣ ಐಕ್ಯವುಂಟು. ಕರ್ತನದೆಲ್ಲಾ ಭಕ್ತನದಾಗಿದೆ. ಈ ಮಹಿಮೆಯನ್ನು ಬುದ್ಧಿಯಿಂದ ಗ್ರಹಿಸುವದಕ್ಕೆ ಇಹದಲ್ಲಿ ಯಾವನೂ ಶಕ್ತನಾಗುವದಿಲ್ಲ. ಆದರೆ ಸಂಪೂರ್ಣವಾದ ಪ್ರೀತಿಯಲ್ಲಿ ಕರ್ತನ ಕೃಪೆ ಮಹಿಮೆಗಳ ಪೂರ್ಣಾನುಭವವುಂಟು. ೧ಕಾರಿ. ೮, ೩; ೧೩, ೮—೧೨.

೮. ಇಲ್ಲಿ ಪ್ರಾರ್ಥನೆಯು ಸ್ತೋತ್ರದಿಂದ ಮುಗಿಯುತ್ತದೆ; ಯಾಕಂದರೆ ದೇವರು ಬೇಡುವವನಿಗೆ ಕಾಡುತ್ತಾನೆಂಬುವದಕ್ಕೆ ಅತ್ಯಂತ ಕೃಪೆಯುಳ್ಳ ಕರ್ತನು ಸರ್ವ ಶಕ್ತ ದೇವರಾಗಿದ್ದಾನೆಂದು ತಿಳಿದು ಕಾಳ್ಳುವ ಪೌಲನ ಮನಸ್ಸಿನಲ್ಲಿ ಏನೂ ಸಂಶಯವಿರಲಿಲ್ಲ.

೯. ದೇವರು ನಿರ್ಮಾಣ ಮಾಡಿದ ಜೀವರಾಶಿಯೆಲ್ಲಾ

ಎಫೆ. ೪, ೧—೬.

ದೇವರನ್ನು ಸ್ತುತಿಸುವದು ಯುಕ್ತವಾಗಿದೆ; ಆದರೆ ದೇವರ ಮಹಿಮೆಯ ಪ್ರತಿಕಾಂತಿಯಾದ ಯೇಸು ಕ್ರಿಸ್ತನಿಗೆ ಐಕ್ಯವಾಗಿದ್ದು, ಮಹಿಮೆಯ ಆತ್ಮವಾದ ಪರಿಶುದ್ಧಾತ್ಮನನ್ನು ಪಡೆದಿಂದ ಸಭೆಯಲ್ಲಿ ಪಾಪ | ದಿಂದಲೂ, ಸೈತಾನನ ಮೋಸದಿಂದಲೂ ಕೆಟ್ಟು ಪೂರ್ಣವಾದ ಭೂಮಿಯ ಮೇಲೆ ದೇವರ ಸ್ತೋತ್ರವು ನಿರಂತರವಾಗಿ ನಡೆಯ ಬೇಕು.

II. ಉದ್ದೇಶನಾಸೂಚಕವಾದ ಎರಡನೇ ಭಾಗವು. ಪ. ೪—೬.

ಪರಜನಕ್ರೈಸ್ತರಿಗೆ ಪೌಲನು ಬರೆದ ಬೇರೆ ಪತ್ರಿಕೆಗಳಲ್ಲಿಯೂ, ಇದರಲ್ಲಿಯೂ ಪ್ರಧಾನಾಭಿಪ್ರಾಯವಾದ, ಯೆಹೂದರಿಂದಲೂ, ಪರಜನರಿಂದಲೂ ಕ್ರಿಸ್ತನಲ್ಲಿ ನೂತನ ನಿರ್ಮಾಣವಾದ ದೇವರ ಸಭೆಯಂಬ ಪ್ರಸ್ತಾಪಾನುಸಾರವಾಗಿ, ಅಪೊಸ್ತಲನು ೧) ಪ್ರೀತಿಯ ವಿಷಯವಾಗಿ ಮೊದಲು ಉದ್ಬೋಧನೆಯನ್ನು ಬರೆಯುತ್ತಾನೆ. ಈ ಸದ್ಗುಣವು, ವರಗಳ ನಾನಾ ವಿಧಗಳನ್ನೆಲ್ಲಾ ಒಂದೇ ಆತ್ಮದಲ್ಲಿ ಭೇದವಿಲ್ಲದೆ ಹಿಡಿಯುವದರಿಂದ, ಮಹಿಮೆಯುಳ್ಳ ಸಭಾನ್ಯೋನ್ಯಕ್ಕೆ ಆಧಾರವಾಗಿದೆ. ಪ. ೪, ೧—೧೬. ೨) ತರುವಾಯ ಕೊಲೊಸ್ಸೆಯ ಪತ್ರಿಕೆಯ ಎರಡನೆ ಭಾಗದ ಆರಂಭದಲ್ಲಿ ಶೇರಿದ ನೂತನ ಜೀವನದ ವಿಷಯವಾದ ಸಾಮಾನ್ಯೋದ್ಬೋಧನೆಯು ಬರುತ್ತದೆ. ವ. ೧೭—೨೪. ೩) ಅದು ಅನುದಿನದ ವೃತ್ತಿಯ ನಾನಾ ಸಾಧನೆಗಳಲ್ಲಿ ದೃಢವಾಗ ಬೇಕೆಂಬುವದು. ವ. ೨೫—೪, ೨೧. ೪) ಗೃಹಧರ್ಮದ ವಿಧಿಗಳು ಕೊಲೊಸ್ಸೆಯ ಪತ್ರಿಕೆಗಿಂತ ಸ್ವಲ್ಪ ವಿವರವಾಗಿ ಇಲ್ಲಿ ಬರದವೆ. ಪ. ೪, ೨೨—೬, ೯. ೪) ಆತ್ಮಿಕಯುದ್ಧ ಪ್ರಾರ್ಥನೆಗಳ ಉದ್ಬೋಧನೆ. ಪ. ೬, ೧೦—೨೦. ಕಡೆಯಲ್ಲಿ ವಾಡಿಕೆಯಾದ ಅಂತ್ಯೋಕ್ತಿಯಿಂದ ಪತ್ರಿಕೆಯು ಮುಗಿಯುತ್ತದೆ.

೧. ಆತ್ಮಿಕೈಕ್ಯೋದ್ಬೋಧನೆ. ಪ. ೪, ೧—೧೬.

ಸಾಮಾನ್ಯವಾದ ಅಸ್ತಿವಾರ ವ. ೧—೬.

೧. ಹೀಗಿರಲಾಗಿ, ಕರ್ತನ ಬಂಧದವನಾದ ೧) ನಾನು ನಿಮ್ಮನ್ನು ಬೇಡಿ ಕೊಳ್ಳುವದೇನಂದರೆ—೨. ನೀವು ಕರೆಯಲ್ಪಟ್ಟ ಕರೆಯುವಿಕೆಗೆ ೨) ಯೋಗ್ಯವಾಗಿ ನಡೆದು ಕೊಂಡು, ೩. ಎಲ್ಲಾ ಮನೋದ್ದೀನತ್ವ ೩) ಸಾತ್ವಿಕತ್ವಗಳಿಂದಲೂ, ದೀರ್ಘ ಶಾಂತಿಯಿಂದಲೂ, ಒಬ್ಬರನ್ನೊಬ್ಬರು ಪ್ರೀತಿಯಿಂದ ಸಹಿಸಿ, ೪. ಆತ್ಮನ ಐಕ್ಯವನ್ನು ೪) ಸಮಾಧಾನದ ಬಂಧದಲ್ಲಿ ಕಾಪಾಡ ಜಾಗ್ರತೆ ಪಡ ಬೇಕು. ೪. ಶರೀರವೂ ಒಂದೇ, ಆತ್ಮವೂ ಒಂದೇ ೫)—ನೀವು ನಿಮ್ಮ ಕರೆಯುವಿಕೆಯ ಒಂದೇ ನಿರೀಕ್ಷೆಯಲ್ಲಿ ಕರೆಯಲ್ಪಟ್ಟ ಹಾಗೆಯೇ—೫. ಕರ್ತನೂ ೬) ಒಬ್ಬನೇ, ವಿಶ್ವಾಸವೂ ಒಂದೇ, ಸ್ನಾನವೂ ಒಂದೇ, ೬. ಎಲ್ಲರ ತಂದೆಯಾದ ದೇವರು ಒಬ್ಬನೇ ೭); ಅವನು ಎಲ್ಲರ ಮೇಲೆಯೂ, ಎಲ್ಲರ ಮೂಲವಾಗಿಯೂ, ನಿಮ್ಮೆಲ್ಲರಲ್ಲಿಯೂ ಇದ್ದಾನೆ.

೧. ತಾನು ಸುವಾರ್ತಾಪ್ರಸಂಗಾದ್ಯೋಗ ನಿಯಮಕ್ಕೂ, ಕ್ರಿಸ್ತನ ಆತ್ಮಕ್ಕೂ ವಿಧೇಯನಾಗಿ ಬಂಧನಶ್ರ | ಮಗಳನ್ನು ತಾಳುತ್ತಾ ಇರುವದರಿಂದ ಆಸ್ಯದ ಸಖೆಗಳಿಗೆ ವಿಧೇಯತ್ವವನ್ನೂ, ಸ್ವಾರ್ಥಪರಿತ್ಯಾಗವನ್ನೂ

ತ್ಕಾರಿಸ ಬೇಕೆಂದು ಆಜ್ಞಾಪಿಸ ತಕ್ಕವನೆಂದು ಪೌಲನು ಸೂಚಿಸುತ್ತಾನೆ. ಮುಂಚೆ ಮನಃಪೂರ್ವಕವಾಗಿ ಪ್ರಾರ್ಥನೆ ಮಾಡಿದನಂತರ, ಈಗ ತಾನು ಮಾಡುವ ಉದ್ಬೋಧನೆ ಸಫಲ ಸಾರ್ಥಕವಾದೀತೆಂದು ಹಾವಿಸಿ ಕಾಳ್ಳುತ್ತಾನೆ. ಮುಂಚಿತವಾಗಿ ಆಸಕ್ತಿಯಿಂದ ಪ್ರಾರ್ಥನೇ ಮಾಡಿದವರ ಉದ್ಬೋಧನೆಯನ್ನು ಮನಸ್ಸಿಗೆ ತೆಗದು ಕಾಂಡು, ಪ್ರಾರ್ಥನೆಯ ಮೂಲವಾಗಿ ಆತ್ಮಾಭಿಷೇಕವನ್ನು ಪಡೆಂದಿದ ವಾಕ್ಯಕ್ಕೆ ಒಪ್ಪಿ ಕಾಳ್ಳುವದಕ್ಕೆ ಪರರು ಸಿದ್ಧರಾಗಿದ್ದಾರೆ.

೨. ಅಪಾಸ್ತಲನು ಸಖೆಯವರಿಗೆ ಪ್ರಾಪ್ತವಾದ ದೈವಿಕಾಪಾಶ್ವಾನವನ್ನೂ, ಅದಕ್ಕೆ ಸಂಬಂಧವಾದ ಕೃಪೆಯನ್ನೂ ಪುರ್ವಗತವಾಗಿ ವರ್ಣಿಸಿದನಂತರ, ಅದಕ್ಕೆ ಯೋಗ್ಯರಾಗಿ ನಡದು ಕಾಳ್ಳ ಬೇಕೆಂದು, ಈಗ ಎಚ್ಚರಿಸುತ್ತಾನೆ. ಬೋಧಕನು ಕ್ರಿಸ್ತನ ಕೃಪೆಯನ್ನು ಪಡೆಂದಿದವರಿಗೆ, ಅವರು ಆತನ ಐಶ್ವರ್ಯದ ಉತ್ತಮವಾದ ಒಡವೆಗಳನ್ನು ಪಡಕಾಂಡವರೆಂದು ಸಾಕ್ಷಿ ಕಾಟ್ಟಾಗ್ಯೂ, ಅವರು ಉದ್ಬೋಧನೆಯ ವಾಕ್ಯವನ್ನು ತಮಗೆ ಪೇಳ ಕಿಲಸವಿಲ್ಲವೆಂದು ನೆನಸ ಬಾರದು. ಯಾಕಂದರೆ ದೇವರ ಮಹಿಮೆಗೆ ಬೇಕಾದ ಯೋಗ್ಯತೆಯನ್ನು ಆಪಾಶ್ವಾನದಿಂದ ಪಡೆಂದಿದವರು ತಮ್ಮನ್ನು ಶುದ್ಧ ಮಾಡಿ ಕಾಳ್ಳುವ ಪಂಗಿನಲ್ಲಿದ್ದಾರೆ.

೩. ದೀನ ಮನುಷ್ಯನು ತನ್ನ ನ್ಯೂನತ್ವವನ್ನು ತಿಳಿದು ಕಾಂಡು, ತನ್ನನ್ನು ತಗ್ಗಿಸಿ ಕಾಳ್ಳುತ್ತಾನೆ. ಸಾತ್ವಿಕನು ಮತ್ತಾಬ್ಬರ ಮೇಲೆ ಅಧಿಕ ಚಾರವನ್ನು ಪಡೆಸಿಸುವದಕ್ಕೂ ಅವರನ್ನು ದಂಡಿಸುವದಕ್ಕೂ ಮನಸ್ಸಿಲ್ಲದವನಾಗಿದ್ದಾನೆ. ದೀರ್ಘಶಾಂತನು ಪರರ ನಿಂದೆಗಳನ್ನೂ ಅನ್ಯಾಯಗಳನ್ನೂ ಸಹಿಸುತ್ತಾನೆ. ಪ್ರೀತಿಯು ಪರರ ತಪ್ಪುಗಳನ್ನೂ, ದಾಷಗಳನ್ನೂ ತಾಳುತ್ತದೆ.

೪. ಕ್ರೈಸ್ತರು ಒಬ್ಬರಿಗಾಬ್ಬರು ಪ್ರೀತಿ ಮಾಡ ಬೇಕಾದದ್ದಲ್ಲದೆ, ಒಂದೇ ಸಖೆಯಾಗಿದ್ದು ಮನಸ್ಸಿನಲ್ಲಿಯೂ, ವೃತ್ತಿಯಲ್ಲಿಯೂ, ವಿಶ್ವಾಸದಿಂದಲೂ ಜೀವನದಿಂದಲೂ ಕಾಣುವ ಸಾಮಾನ್ಯಾತ್ಮಗುಣಗಳಲ್ಲಿಯೂ ಐಕ್ಯರಾಗಿರ ಬೇಕು. ಆತ್ಮಿಕೈಕ್ಯವನ್ನು ಪುಟ್ಟಿಸಲಶಕ್ಯವಾಗಿರುವದಿಲ್ಲ; ಒಂದೇ ಆತ್ಮವನ್ನು ಪಡೆಂದಿದವರಲ್ಲಿ ಅದು ಉಂಟು. ಅದು ನಾಶವಾಗದ ಪರಿಗೆ ನಾಡ ಬೇಕು ಅಷ್ಟೆ. ಜ್ಞಾನಮನಾನೈವಾಕ್ಯೈಕ್ಯವು ಅದರ ಮೂಲವಲ್ಲ, ಅದರ ಫಲವೇ; ಸಮಾಧಾನಬಂಧವೇ ಇರ ಬೇಕು, ಅದೇನಂದರೆ ಸಮಾಧಾನವನ್ನು ಕಾಪಾಡುವ ಬಂಧವಾದ ಸಫಲಾದರಾನ್ಯೋನ್ಯ ಪ್ರೀತಿಯು.

೫. ಇಪುದಲ್ಲಿ ಸೌಖ್ಯವಾದಂಥ, ಪರದಲ್ಲಿ ಮಹಿಮಾಮಯವಾಗುವಂಥ, ದೇವರ ಮತ್ತು ಕ್ರಿಸ್ತನ ಅನ್ಯೋನ್ಯವೆಂಬ ವಿಕಾಂದ್ಧಿಶಕ್ತಿಗೆ ಕರದಿರುವ ಏಕ್ಯರು ಕ್ರಿಸ್ತನ ಆತ್ಮವಾದ ಒಂದೇ ಆತ್ಮಕ್ಕೆ ಅಧೀನವಾದ ವಿಕ ಶರೀರವಾಗಿದ್ದು, ಪರಸ್ಪರೈಕ್ಯದಲ್ಲಿರ ಬೇಕು. ಇದು ವಿಶ್ವಾಸಿಗಳಿಗೆ ಮಾತ್ರ ಸಾಧ್ಯವಾಗಿದೆ.

೬. ೧ ಕಾರಿ. ೮, ೬ ಎಲ್ಲರನ್ನು ಕಾಂಡು ಕಾಂಡು ಸ್ವಕೀಯರಾಗಿ ಮಾಡಿದ ಕ್ರಿಸ್ತನೂ, ಎಲ್ಲರೂ ಈ ಕರ್ತನಲ್ಲಿಡುವ ವಿಶ್ವಾಸವೂ, ಎಲ್ಲರೂ ಪಡೆಂದಿದ ವಿಶ್ವಾಸ ವಿಧೇಯತ್ವಗಳ ಮುದ್ರೆಯಾದ ಸ್ನಾನವೂ, ಇವು ಕ್ರೈಸ್ತರೆಲ್ಲರಿಗೆ ಸಾಮಾನ್ಯವಾಗಿವೆ.

೭. ಪರಜನರೂ, ಯೆಹೂದರೂ ಆಗಿದ್ದ ನಿಮ್ಮೆಲ್ಲರಿಗೆ ದೇವರೂ, ತಂದೆಯೂ ಆಗಿರುವನು ಒಬ್ಬನೇ ರೋಮಾ. ೧೧, ೩೬. ೧ ಕಾರಿ. ೮, ೬. ಆತನು ಎಲ್ಲರ ಮೇಲೆ ಉನ್ನತನಾಗಿದ್ದು, ಸರ್ವವನ್ನು ಆಳಿ ಕಾಳ್ಳುತ್ತಾ, ನಂಬುವರೆಲ್ಲರ ಮುಖಾಂತರ ತನ್ನ ವೃತ್ತಿಯನ್ನು ನಡಿಸಿ ೧ ಕಾರಿ. ೧೨, ೫., ತನ್ನ ಪರಿಶುದ್ಧಾತ್ಮದಿಂದ ಎಲ್ಲರಲ್ಲಿಯೂ ವಾಸ ಮಾಡುತ್ತಾನೆ.

ವರಗಳ ನಾನಾ ವಿಧವು. ವ. ೭—೧೨.

೭. ಆದರೆ ನಿಮ್ಮಲ್ಲಿ ಒಬ್ಬೊಬ್ಬನಿಗೆ, ಕ್ರಿಸ್ತನ ವರದ ಅಳತೆಯ ಪ್ರಕಾರ೧), ಕೃಪೆಯು ಕಾಡಲ್ಪಟ್ಟಿದೆ. ೮. ಆದದರಿಂದ ಉನ್ನತಕ್ಕೆ ಏರಿ೨), ಶೆರೆಯನ್ನು ಶೆರೆ ಹಿ

ಎಫೆ. ೪, ೯—೧೨.

ಡಿದು, ಮನುಷ್ಯರಿಗೆ ವರಗಳನ್ನು ಕೊಟ್ಟಿದ್ದಾನೆಂದು, ಹೇಳುತ್ತಾನೆ ಸಿ). ೯. ಆದರೆ ಏರಿದನೆಂಬುವದು ಳ), ಅವನು ಮೊದಲು ಭೂಮಿಯ ಅಧೋ ಭಾಗಗಳಿಗೆ ಇಳಿದನಲ್ಲದೆ, ಮತ್ತೇನು? ೧೦. ಇಳಿದವನು ಸರ್ವವನ್ನು ತುಂಬಿಸುವ ಹಾಗೆ ಶಿ), ಎಲ್ಲಾ ಆಕಾಶಗಳ ಮೇಲೆ ಟ) ಏರಿ ಹೋದವನೇ. ೧೧. ಮತ್ತು ನಾವು ಇನ್ನು ಮನುಷ್ಯರ ಕಪಟದಿಂದಲೂ ಠ), ಮೋಸದ ಉಪಾಯ ಮಾಡುವ ತಂತ್ರದಿಂದಲೂ, ಬೋಧನೆಯ ಎಲ್ಲಾ ಗಾಳಿಗಳಿಂದ ಲ) ಒಡಿಯಲ್ಪಟ್ಟು ಹೊರಳಾಡುವ ಬಾಲಕರಾಗಿರದೆ ಗ), ಪ್ರೀತಿಯಲ್ಲಿ ಸತ್ಯವಂತರಾಗಿದ್ದು ೧೦), ಎಲ್ಲವುಗಳಲ್ಲಿ ತಲೆಯಾದ ಕ್ರಿಸ್ತನಾಳಗಾಗಿ ಬೆಳೆಯುವ ಹಾಗೆ, ೧೨. ಅವನು ಕೆಲವರನ್ನು ಅಪಾಸ್ತಲರಾಗಿಯೂ ೧೧), ಕೆಲವರನ್ನು ಪ್ರವಾದಿಗಳಾಗಿಯೂ, ಕೆಲವರನ್ನು ಸುವಾರ್ತಿಕರಾಗಿಯೂ, ಕೆಲವರನ್ನು ಕುರುಬರಾಗಿಯೂ, ಬೋಧಕರಾಗಿಯೂ, ಪರಿಶುದ್ಧರ ಪೂರ್ಣಸುವಿಕೆಗಾಗಿಸ್ತರವೂ, ಸೇವೆಯ ಕೆಲಸಕ್ಕಾಗಿಸ್ತರವೂ, ಕ್ರಿಸ್ತನ ಶರೀರದ ಕಟ್ಟುವಿಕೆಗಾಗಿಸ್ತರವೂ ೧೨) ಕೊಟ್ಟಿದ್ದಾನೆ.

೧. ಅಪಾಸ್ತಲನು ಇಲ್ಲಿ, ಪರಿಶುದ್ಧಾತ್ಮದ ವರಗಳೂ, ಕ್ರೈಸ್ತಸಭೆಯ ಉದ್ಯೋಗಗಳೂ ನಾನಾ ವಿಧವಾಗಿರುವದರಿಂದ, ಆತ್ಮಿಕಕ್ಷೇಮಕ್ಕೆ ನ್ಯೂನತ್ವವಿಲ್ಲದೆ ವೃದ್ಧಿಯೇ ಆಗುತ್ತದೆಂದು, ೧ ಕಾರಿ. ೧೨ಲ್ಲಿ ವಿವರಿಸಿದ ಪಾಠವನ್ನೇ, ಉದಾಹರಿಸುತ್ತಾನೆ. ಕ್ರಿಸ್ತನು ಕೊಡುವ ವರದ ಅಳತೆಯ ಪ್ರಕಾರ, ಆಯಾ ಭಕ್ತನಿಗೆ ಕೃಪೆಯು ದಾರಕುತ್ತದೆ. ಸ್ನಾನದಾತನಾದ ಯೋಹಾನನು ಸಭೆ ಯೋಹಾ. ೩, ೨೭ಲ್ಲಿ ಉಚ್ಚರಿಸಿದ ಈ ವಾಕ್ಯವನ್ನು ಚನ್ನಾಗಿ ಗ್ರಹಿಸಿ ಕಾಳ್ಳುವವನು ಐಕ್ಯಕ್ಕೆ ವಿಷಪ್ರಾಯವಾದ ಸ್ವಾಧಿಕೃಗರ್ವನಾಪಾಂಕಾರವು ಪಾಟ್ಟೆಕಿಚ್ಚು ಇವೆರಡಕ್ಕೂ ದೂರವಾಗಿದ್ದಾನೆ. ವರಭೇದಕ್ಕೆ ಕ್ರಿಸ್ತನ ಚಿತ್ತವೇ ಕಾರಣವಾಗಿದೆ.

೨. ಕೃಪಾವರಗಳು ಕ್ರಿಸ್ತನಿಂದ ಬರುತ್ತವೆಂಬದನ್ನು ಈ ಕೀರ್ತನೆಯ ವಚನದ ವಿಚಿತ್ರವಾದ ವ್ಯಾಖ್ಯಾನದಿಂದ ಪ್ರಮಾಣಿಸುತ್ತಾನೆ. ಪಾಠ್ಯಗಂದರೆ ಇಬ್ರಿಯ ಗ್ರಂಥದ ವಾಕ್ಯಕ್ಕೆ ಸ್ವಲ್ಪ ಭೇದವಾಗಿ, ವರಗಳನ್ನು ಪಾಠಾಂದಿದಿ ಎಂಬದಕ್ಕೆ ವರಗಳನ್ನು ಕಾಟ್ಟಿಯಂದು ಬರೆಯುತ್ತಾನೆ. ಕ್ರಿಸ್ತನು ಸ್ವಕೀಯ ಜನರಿಗೆ ಮೊದಲು ಕಾಟ್ಟದ್ದನ್ನು ಮನಃಪೂರ್ವಕವಾದ ಬಲಿಯಾಗಿ ತಿರಿಗಿ ಅವರಿಂದ ತೆಗದು ಕಾಳ್ಳುತ್ತಾನೆ. ಆತನು ನಮಗೆ ಕಾಡುವ ಕೃಪಾವರಗಳನ್ನು ತಂದೆಯಾದ ದೇವರಿಂದ ಪಾಠಾಂದಿ, ಭಕ್ತರಿಗೆ ಪಾಂಚಿ ಕಾಡುತ್ತಾನೆ. ವ. ೭. ವಾಗ್ದತ್ತವಾದ ಪರಿಶುದ್ಧಾತ್ಮವನ್ನು ಸಭೆ ತಂದೆಯಿಂದ ಪಾಠಾಂದಿ, ಶಿಷ್ಯರ ಮೇಲೆ ಪಾಠಾಯಿದನು. ಅಪಾ. ಕ್ರಿ. ೨, ೩೩. ಈ ಪ್ರಕಾರವಾಗಿ ಅಪಾಸ್ತಲನು ಭಾಷಾಂತರಭೇದದಿಂದಲೇ ಅಗಾಧವಾದ ಅಭಿಪ್ರಾಯವುಳ್ಳ ಕೆಲವು ತಾತ್ಪರ್ಯಗಳನ್ನು ವಿವರವಾದ ವ್ಯಾಖ್ಯಾನವಿಲ್ಲದೆ ಸೂಚಿಸುತ್ತಾನೆ: ೧) ಪರಿಶುದ್ಧಾತ್ಮದ ವರಗಳು ಕ್ರಿಸ್ತನ ಜಯೋತ್ಸವದಿವಾರೋಹಣದ ಫಲವಾದ ಆತನ ಜಯಧ್ವಜವಾಗಿವೆ. ೨) ಭಕ್ತರು ಅವುಗಳನ್ನು ಪಾಠಾಂದ ಬೇಕಾದರೆ, ಮೊದಲು ತಮ್ಮನ್ನು ತಾವೇ ಆತನ ವಶಕ್ಕೆ ಕಾಡ ಬೇಕು. ೩) ಇದು ಸಭೆ ಕೃಪೆಯಾಗಿದೆ. ೪) ಪಾಠಾಂದಿವವನು ಪೆಚ್ಚು ಪಾಠಾಂದುತ್ತಾನೆ. ಆದ್ದರಿಂದ ಕ್ರಿಸ್ತನ ಭಕ್ತರು ತಾವು ಕಾಡುವದಕ್ಕಿಂತ ಬಹಳ ಪೆಚ್ಚಾದದ್ದನ್ನು ಪಾಠಾಂದುವದು ವಾಡಿಕೆಯಾಗಿದೆ.

೩. ಪೇಳುವವನು ಯಾರಂದರೆ: ದವೀದನು, ಕೀ

ರ್ಥ. ೬೮, ೧೯ಲ್ಲಿ. ಪೌಾಗೆಯೇ ಗಲ. ೩, ೧೬. ೧ ಕಾರಿ. ೬, ೧೬. ಯಾಕಾ. ೪, ೬. ಅಪಾ. ಕ್ರಿ. ೧೩, ೩೫. ಇಬ್ರಿ. ೧೦, ೫.

೪. ಈ ಯಥಾೀಕ್ತವು ಕ್ರಿಸ್ತನನ್ನು ಸೂಚಿಸುತ್ತದೆಂಬ ಸಿದ್ಧಾಂತವೇನಂದರೆ: ದೇವರು ಏರಿದನೆಂದು ಬರದದ್ದಾದರೆ, ಆತನು ಮೊದಲು ಇಳಿದವನಾಗಿರಬೇಕು. ಇದು ಈ ಅಥಾೀ ಲಾೀಕಕ್ಕೆ ಇಳಿದು, ಮನುಷ್ಯನಾಗಿ ಪುಟ್ಟಿ, ಬಳಿಕ ಸರ್ವಾೀನ್ನತ ಸ್ಥಾನಕ್ಕೆ ಏರಿದ ಕ್ರಿಸ್ತನಲ್ಲಿ ಅತಿ ಸಂಪೂರ್ಣವಾಗಿ ನೆರವೇರಿತು. ಇದರಿಂದ, ಫಿಲಿ. ೨, ೫ಕ್ಕೆ ಸರಿಯಾಗಿ, ಕ್ರಿಸ್ತನು ಉತ್ತಮ ಮಾಧ್ರಿಯಾಗಿರುವ ದೀನತ್ವವನ್ನು ವ. ೨. ಕೈಕಾಳ್ಳ ಬೇಕೆಂಬ ಉದ್ಬಾೀಧನೆ ಪುಟ್ಟುತ್ತದೆ.

೫. ಕರ್ತನು ಅದೇ ಪ್ರಕಾರ ಯೆರೆ. ೨೩, ೨೪ಲ್ಲಿ ದಿವಮನ್ನೂ, ಭೂಮಿಯನ್ನೂ ತುಂಬುವವನು ನಾನಲ್ಲವಾ? ಎಂದು ಪೇಳುತ್ತಾನೆ. ಆತನು ಎಲ್ಲಾನ್ನು ಸರ್ವ ವ್ಯಾಪ್ತವಾದ ತನ್ನ ಶಕ್ತಿಯಿಂದ ತುಂಬುತ್ತಾನೆ.

೬. ಅಥಾೀತರವಾದ ಅಥದಿಂದ ಉನ್ನತತರವಾದ ಉನ್ನತಸ್ಥಾನಕ್ಕೆ ಏರಿದ್ದಾನೆ. ಆತನು ದಿವಕ್ಕೆಮಾತ್ರವಲ್ಲ. ಮರ್ಕ. ೧೬, ೧೯., ದಿವದ ಮೇಗಣ ಸ್ಥಳಕ್ಕೆ ಏರಿದ್ದಾನೆ. ಇಬ್ರಿ ೪, ೧೪. ೨ ಕಾರಿ. ೧೨, ೨.

೭. ಮನುಷ್ಯರನ್ನು ಕ್ರಿಸ್ತನಿಂದ ಅಗಲಿಸುವ ಯಾವದಾಂದು ದುರ್ಬಾೀಧನೆಯು ಪಾಪವೆಂದು, ಅಪಾಸ್ತಲನು ತಿಳಿದು ಕಾಳ್ಳುತ್ತಾನೆ. ಸುವಾರ್ತೆಯಲ್ಲಿ ನಿರ್ಮಲವಾದ ಬೆಳಕು ಮೂಡಿದ ಮೇಲೆ, ದೇವರಿಂದ ನಿರ್ಮಾಣನಾದ ಮನುಷ್ಯನು ಸತ್ಯವನ್ನು ಉಪೇಕ್ಷಿಸಿ, ಮಿಥ್ಯವನ್ನು ಅಂಗೀಕರಿಸಿದರೆ, ಪಾಪ ಮಾಡುತ್ತಾನೆ.

೮. ಕ್ರಿಸ್ತನ ತಿಳುವಿಕೆಗೆ ತಾರದ ಬಾೀಧನೆಯೆಲ್ಲಾ ಘಾಳಿಯಂದು ಪೌಲನು ಸೂಚಿಸುತ್ತಾನೆ. ಅಜ್ಞಾನ ಮತಗಳು ಘಾಳಿಯಾೀಪಾಡಿಯಲ್ಲಿ ಅಸ್ಥಿರವಾಗಿವೆಂದು, ಪ್ರತ್ಯಕ್ಷವಾಗಿದೆ.

೯. ಕ್ರಿಸ್ತನಲ್ಲಿರುವ ವಯಃಪಕ್ವತ್ವಯು ೧೪ನೆ ವಚನದಲ್ಲಿ ವಿರಾೀಧ ಸೂಚಕಾೀಕ್ತಿಯಿಂದ, ೧೫ನೆ ವಚನದಲ್ಲಿ ಪ್ರಾಪ್ತಿಸಾಧಕಗಳಿಂದ ಉದಾಹರಿಸಲಾಗಿದೆ. ಅದಕ್ಕೆ ವಿರಾೀಧವಾದದ್ದೇನಂದರೆ: ನಾನಾ ವಿಧವಾದ, ಬೇರೆ ಬೇರೆಯಾಗುವಂಥಾ ನರಬಾೀಧನೆಗಳಲ್ಲಿ ಉರುಳಾಡುವ ಶಿಶು ಚಾವವು. ಎಷ್ಟು ಕಲಿತವರಾಗಿದ್ದರೂ, ದೇವರ ಮಗನ ನಂಬಿಕೆ ತಿಳುವಿಕೆಗಳಲ್ಲಿ ದೃಢವಿಲ್ಲದವರಿಗೆ ಅಪಾಸ್ತಲನು ಶಿಶುಗಳೆಂದು ಪೆಸರಿಡುತ್ತಾನೆ. ಕ್ರಿಸ್ತಾನಭಿಜ್ಞರೇ ಬಾಲಕರೆಂಬುವದು ಸರಿ.

೧೦. ಅಂದರೆ, ಸತ್ಯದಲ್ಲಿ ದೃಢರಾಗಿದ್ದು, ಆತನ ಐಕ್ಯದಲ್ಲಿ ಪೆಚ್ಚು ಪೆಚ್ಚಾಗಿ ಶೇರುವದಕ್ಕೆ ಪ್ರೀತಿಯಿಂದ ಆಸಕ್ತರಾಗಿರಬೇಕು. ಕ್ರಿಸ್ತನಲ್ಲಿರುವ ವಯಃಪಕ್ವತ್ವಯನ್ನು ಪೌಾಂದುವದಕ್ಕೆ ಸತ್ಯಸಾಧಕವೇನಂದರೆ: ಕಾಲಿಲ್ಲಿವಿಲ್ಲದ ಪ್ರೀತ್ಯನ್ವಿತ ಯಥಾರ್ಥವಾದ ಸತ್ಯದ ಆಸಕ್ತಿಯು.

೧೧. ಯೇಸುವು ತಾನೇ ಕರದ ಕ್ರೈಸ್ತಸಭಾಸ್ಥಾಪಕರಾದ ಅಪಾಸ್ತಲರು ಅಪಾ. ಕ್ರಿ. ೧, ೨೨. ಪ್ರವಾದಿಗಳಾಗಿಯೂ, (ಸ. ೨, ೨೦; ೩, ೫. ಅಪರ ಜಾತಿಯಲ್ಲಿ ಶೇರಿದ್ದಾರೆ.) ಸುವಾರ್ತಿಕರಾಗಿಯೂ ಇದ್ದರು; ಆದರೆ ಇಲ್ಲಿ ವೃತ್ತಕ್ರಮವಾಗುವದಿಲ್ಲ. ತಮಗೆ ಪ್ರಾಪ್ತವಾದ ವಿಶೇಷ ಪ್ರಕಟಣೆಗಳನ್ನು ಆತ್ಮಮಯವಾದ ಭಾಷಣಗಳಿಂದ ಸಾರುವವರು ಪ್ರವಾದಿಗಳು ೧ ಕಾರಿ. ೧೪. ರಕ್ಷಣಾಚರಿತ್ರವನ್ನು, ವಿಶೇಷವಾಗಿ ಯೇಸುವಿನ ವೃತ್ತಾಂತವನ್ನು, ಸಾರುತ್ತಾ ಪರ್ಯಟಣ ಮಾಡುವ ಪ್ರಸಂಗಿಗಳಿಗೂ, ಬಳಿಕ ಸುವಾರ್ತಾಚರಿತ್ರಗ್ರಂಥಗಳನ್ನು ರಚಿಸಿದವರಿಗೂ, ಸುವಾರ್ತಿಕರೆಂಬ ಪೆಸರುಂಟಾಯಿತು. ಈ ಮೂರು ಉದ್ಯೋಗಗಳು ಕ್ರೈಸ್ತಸಭಾಸ್ಥಾಪನೆಗಾಗಿ ಅವಶ್ಯವಾಗಿದ್ದವು. ಈ ಉದ್ಯೋಗಗಳನ್ನು ನಡಿಸುವವರು ಒಂದೇ ಸ್ಥಳದಲ್ಲಿ ವಾಸ ಮಾಡ ಬೇಕಾದವರಲ್ಲ. ಆದರೆ ವಿಕ್ತವಾಸ ಮಾಡ ತಕ್ಕವರು ಯಾರಂದರೆ: ಸಭೆಯ ಲೌಕಿಕ ಕಾರ್ಯಗಳ ಆಡಳಿತೆಯನ್ನೂ, ಸಭಾಶಿಕ್ಷೆಯನ್ನೂ ನಡಿಸುವ ಕುರುಬರೆಂಬವರು; ಸಾಧಾರಣವಾದ ದೇವವಾಕ್ಯೋಪದೇಶ ಮಾಡುವ ಬಾೀಧಕರೆಂಬವರು. ಕ್ರೈಸ್ತಸಭೆಯು ಲಾೀಕದಲ್ಲಿ ಸ್ಥಾಪಿತವಾದನಂತರ ಪ್ರಥಮವಾದ ಆ ಮೂರು ಉದ್ಯೋಗಗಳು ನಿಂತು ಪೌಾದದ್ದು ಸಪಜವಾಗಿದೆ. ಅವು ನಿಂತು ಪೌಾದದ್ದು ದಾೀಷವೆಂದೂ, ಸಭೆಗೆ ಗುಣವಾಗುವ ಪೌಾಗೆ ಅವು ತಿರಿಗಿ ನಡೆಯ ಬೇಕೆಂದೂ, ಪೇಳುವ ಇರ್ವಿಂಗನವರ ಬಾೀಧನೆಯು ಭ್ರಮಾಮೂಲಕವಾದದ್ದು.

ಎಫೆ. ೪, ೧೩—೧೬.

೧೨. ಸಖೆಯವರನ್ನೆಲ್ಲಾ ತಮ್ಮ ತಮ್ಮ ಸೇವೆಗಾಗಿ, ವಿಶೇಷವಾಗಿ ಬಾಧಕಾದ್ಯೌಗಕ್ಕಾಗಿ ಪುಷ್ಟಿಗೊಸಿ, | ಕ್ರಿಸ್ತನ ಶರೀರವೆಂಬ ಸಖೆಯ ಬಹಿರಾಂತರ್ಯ ಕ್ಷೇಮ ವೃದ್ಧಿಯು ಸಖಾದ್ಯೌಗಗಳ ಉದ್ದಿಶ್ಯವಾಗಿದೆ.

ಸಾಮಾನ್ಯವಾದ ಗುರಿಯು. ವ. ೧೩—೧೬.

೧೩. ವಿಶ್ವಾಸವು, ದೇವರ ಮಗನ ತಿಳುವಿಕೆಯು, ಇವುಗಳ ಐಕ್ಯಕ್ಕೂ ೧), ಪೂರ್ಣ ಗಂಡಸುತನಕ್ಕೂ ೨), ಕ್ರಿಸ್ತನ ಸಂಪೂರ್ಣತೆಯ ನೀಳದ ಪ್ರಮಾಣಕ್ಕೂ ನಾವೆಲ್ಲರು ಕೂಡ ಶೇರುವ ಪರ್ಯಂತರ—ಕೌಟ್ಟಿದಾನೆ. ೧೪. ಅವನ ದೆಸೆಯಿಂದ ೩) ಶರೀರವೆಲ್ಲಾ ೪) ಸಹಾಯ ಮಾಡುವ ಸಕಲ ಕೀಲುಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು, ೧೫. ಒಂದೊಂದು ಅಂಗವು ತನ್ನ ಪ್ರಮಾಣದ ಹಾಗೆ ಯಶ್ನಿಪಿಸುವ ಪ್ರಕಾರ, ೧೬. ತನ್ನನ್ನು ಪ್ರೀತಿಯಲ್ಲಿ ಹೆಚ್ಚಿಸುವದಕ್ಕೋಸ್ಕರ ಶರೀರದ ಅಭಿವೃದ್ಧಿ ಮಾಡಿ ಕೊಳ್ಳುತ್ತದೆ.

೧. ಸಖೆಯವರೆಲ್ಲರು ದೇವರ ಮಗನ ಒಂದೇ ತಿಳುವಿಕೆಗೆ ವಿಶ್ವಾಸದ ಮುಖಾಂತರ ಬರ ಬೇಕೆಂಬುವದು ಕ್ರೈಸ್ತಸಖೆಯ ಗುರಿಯಾಗಿದೆ. ಆದರೆ ಈ ತಿಳುವಿಕೆಯು ಬರಿ ಮಾತಲ್ಲ, ಕ್ರಿಸ್ತನ ಬಲವನ್ನು ಅಂತಃಕರಣದಲ್ಲಿ ಅನುಭವಿಸಿ ಕಾಂಡವನಲ್ಲಿ ಪುಟ್ಟುವ ನಿಜ ಜ್ಞಾನವು. ಕ್ರಿಸ್ತನ ಸತ್ಯವಾದ ತಿಳುವಿಕೆಯು ನಿಜ ಸಂವರ್ತನವಿಲ್ಲದವರಿಗೆ ದಾರಕಲಾರದು. ಹೀಗಿರಲಾಗಿ ಈ ನಂಬಿಕೆ ತಿಳುವಿಕೆಗಳ ಐಕ್ಯದಲ್ಲಿ ಬೇರೆ ಬೇರೆ ಕ್ರಮವುಂಟು. ನಂಬಿಕೆ ತಿಳುವಿಕೆಗಳ ಮೂಲವಾದ ಆತ್ಮದ ಐಕ್ಯವು ನಿಜ ಸಖೆಯವರೆಲ್ಲರಲ್ಲಿಯುಂಟು. ಆದರೆ ಆಯಾ ಸಖೆಯವರಲ್ಲಿಯೂ, ಸರ್ವ ಸಖೆಯಲ್ಲಿಯೂ ಆತ್ಮಜನ್ಯ ವಿಶ್ವಾಸದಿಂದ, ನಂಬಿಕೆ ತಿಳುವಿಕೆಗಳ ಚಿಕ್ಕದಾದ್ದದಾದ ಹೆಚ್ಚು ಕಡಮೆಯನ್ನು ಪುನಾಗಲಾಡಿಸುವ, ಕ್ರಿಸ್ತಜ್ಞಾನ ಸಂಪೂರ್ಣ ಸಿದ್ಧಿಯುಂಟಾಗಬೇಕು. ಪೌಲನು ಫಿಲಿ. ೩, ೧೩ಲ್ಲಿ ತನ್ನನ್ನು ಸಫಲ ಸಿದ್ಧಿಯನ್ನು ಬಯಸುವವರಲ್ಲಿ ಶೇರಿಸಿಕಾಳ್ಳುತ್ತಾನೆ. ಸರ್ವ ಸಖೆಯವರೆಲ್ಲರೂ ಈ ಸಿದ್ಧಿಯನ್ನು ಪುನಾಂದುವ ಸಮಾಪ್ತಿಯು ಇನ್ನು ಎಷ್ಟಾವೇ ದೂರವಾಗಿದೆ!

೨. ಶಿಶುವು ಬುದ್ಧಿಯಲ್ಲಿಯೂ ಮೈನೀಳದಲ್ಲಿಯೂ ಸ್ವಾಭಾವಿಕವಾಗಿ ಬೆಳೆಯುವ ಪ್ರಕಾರ ಕ್ರೈಸ್ತಸಖೆಯು ಜ್ಞಾನವೆಂಬ ಸಂಪೂರ್ಣ ಪೌರುಷತ್ವವನ್ನು ಆತ್ಮಿಕರೀತಿಯಿಂದ ಪುನಾಂದ ತಕ್ಕದ್ದು. ಈ ಪೌರುಷತ್ವವು ಏನೆಂದು, ತತ್ಕ್ಷಣದಲ್ಲಿ ಸೂಚಿಸಿಯದೆ. ಅದೇನಂದರೆ: ಕ್ರಿಸ್ತಾತ್ಮಬಲವಿಶಿಷ್ಟ ಸ್ವೀಕಾರ್ಯಸಿದ್ಧಿಯು. ಸ. ೧, ೧೩; ೩, ೧೯. ಕರ್ತನ ಮಹಿಮೆಯು ಸಖೆಯಲ್ಲಿ ಪೂರ್ಣವಾಗಿ ಪ್ರತ್ಯಕ್ಷವಾಗ ಬೇಕು. ಈ ಸಮಾಪ್ತಿಯು ಪರದಲ್ಲಿಯೇ ಉಂಟಾಗ ಬೇಕು; ಆದರೆ ಅದರ ಆಶೆಯು, ತಮ್ಮ ಕೆಲಸವು ಕರ್ತನಲ್ಲಿ ವ್ಯರ್ಥವಾಗುವದಿಲ್ಲವೆಂದು ೧ ಕಾರಿ. ೧೫, ೫೮., ತಿಳಿದು ಕಾಳ್ಳುವ ಚಕ್ತರೆಲ್ಲರ ಹೃದಯದಲ್ಲಿ ಈಗಲೇ ಉಂಟು.

೩. ನಾವು ಕ್ರಿಸ್ತನ ಐಕ್ಯದಲ್ಲಿ ಬೆಳದರೆ, ಸರ್ವ ಸಿದ್ಧಿಪರ್ಯಂತ ಆಗಾಗ್ಗೆ ಬೇಕಾದ ಪೆಚ್ಚಾದ ಜೀವ ಶಕ್ತಿಗಳು ನಮಗೆ ಪ್ರಾಪ್ತವಾಗುತ್ತವೆ.

೪. ಕ್ರೈಸ್ತಸಖೆಯು ಕ್ರಿಸ್ತನೆಂಬ ತಲೆಗೆ ಒಳಗಾಗಿರುವ ನಾನಾ ಅವಯವಗಳುಳ್ಳ ಮಹಾ ಶರೀರವಾಗಿದೆ. ತಲೆಯಾದ ಕ್ರಿಸ್ತನು ವಾಕ್ಯವು ಮರ್ಮಾಚರಣೆಗಳು ಮುಂತಾದ ದಿವ್ಯ ಕೃಪಾಕರಣಗಳಿಂದಲೂ, ಪಾರ್ಥನೆ ಸಮಾಧಾನಾಕ್ತಿ ಪ್ರೀತಿ ಕೃತ್ಯಗಳಿಂದಲೂ, ಆಯಾ ಅವಯವಕ್ಕೆ ಅದರದರ ಅಭಿವೃದ್ಧಿಗೆ ಬೇಕಾದ ಬಲವನ್ನು ಕಾಡುತ್ತಾನೆ. ಇದರಿಂದ ವಿಶಿಷ್ಟ ಶರೀರವು ಪ್ರೀತಿಯಂಬ ರಸದಿಂದ ಸೌಖ್ಯವಾಗಿ ಬೆಳೆಯುತ್ತದೆ. ಹೀಗೆ ಶಿಶುಭಾವದ ದೀಪವು ವ. ೧೪. ಪೆಚ್ಚು ಪೆಚ್ಚಾಗಿ ಕುಂದಲಾಗಿ, ಸಖೆಯು ಪರದಲ್ಲಿ

ಎಫೆ. ೪, ೧೭—೨೪.

ಪೌಲಾಂದ ತಕ್ಕ ಸಿದ್ಧಿಗಾಗಿ ಪಕ್ವವಾಗುತ್ತದೆ. ಕಾಲಾ. ೨, ೧೯ಲ್ಲಿಯೂ ಕಾಂಚ ವೃತ್ಯಾಸವಾಗಿ ಅದೇ ಮಾ | ತುಗಳು ತಲೆಯನ್ನು ಪಿಡಿಯ ಬೇಕೆಂಬ ಉದ್ಬಾಥ ನೆಯಲ್ಲಿ ಶೇರಿ ಅವೆ.

೨. ನೂತನ ಜೀವನದ ವಿಷಯವಾದ ಸಾಮಾನ್ಯೋದ್ಬಾಥನೆಯು.

ಸ. ೪, ೧೭—೨೪.

೧೭. ಹೀಗಿರುವದರಿಂದ ನಾನು ಕರ್ತನಲ್ಲಿ ಸಾಕ್ಷಿ ಕೊಟ್ಟು ಹೇಳುವದೇನಂದರೆ ೧), ಮಿಕ್ಕಾದ ಜನಾಂಗಗಳು ತಮ್ಮ ಬುದ್ಧಿಯ ವ್ಯರ್ಥತ್ವದಲ್ಲಿ ೨) ನಡೆದು ಕೊಳ್ಳುವ ಪ್ರಕಾರ, ನೀವು ಇನ್ನು ನಡೆದು ಕೊಳ್ಳಬೇಡಿರಿ; ೧೮. ಅವರು ಬುದ್ಧಿಯಲ್ಲಿ ಕುರುಡರಾಗಿ ೩) ತಮ್ಮಲ್ಲಿರುವ ಅಜ್ಞಾನದಿಂದಲೂ, ತಮ್ಮ ಹೃದಯದ ಕಾಠಿಣ್ಯದಿಂದಲೂ ೪), ದೇವರ ಜೀವವನ್ನು ಅಗಲಿದವರಾಗಿದ್ದಾರೆ ೫). ೧೯. ಅವರು ಮೊಂಡರಾಗಿದ್ದು, ಅತ್ಯಾಶೆಯಲ್ಲಿ ಸಕಲ ಅಶುದ್ಧತ್ವವನ್ನು ನಡಿಸುವದಕ್ಕೆ ತಮ್ಮನ್ನು ಬಂಡುತನಕ್ಕೆ ಒಪ್ಪಿಸಿದ್ದಾರೆ. ೨೦. ಆದರೆ ನೀವು ಈ ಪ್ರಕಾರ ಕ್ರಿಸ್ತನನ್ನು ೬) ಕಲಿಯಲಿಲ್ಲ—೨೧. ಯೇಸುವಿನಲ್ಲಿರುವ ಸತ್ಯದ ಪ್ರಕಾರ ಅವನನ್ನು ಕೇಳಿ, ಮುಂಬಿನ ನಡತೆಯ ವಿಷಯವಾಗಿ ೭) ಮೋಸದ ಆಶೆಗಳ ಪ್ರಕಾರ ೮) ಕೆಟ್ಟು ಹೋದ ೯) ಹಳೇ ಮನುಷ್ಯನನ್ನು ತೆಗದು ಹಾಕಿ ೧೦), ೨೩. ನಿಮ್ಮ ಬುದ್ಧಿಯ ಆತ್ಮದಲ್ಲಿ ೧೧) ಹೊಸ ಬರಾಗಿ ೧೨), ದೇವರ ಪ್ರಕಾರ ನೀತಿಯಲ್ಲಿಯೂ ಸತ್ಯದ ಪರಿಶುದ್ಧತ್ವದಲ್ಲಿಯೂ ೧೩) ೨೪. ನಿರ್ಮಿಸಲ್ಪಟ್ಟ ಹೊಸ ಮನುಷ್ಯನನ್ನು ೧೪) ಧರಿಸಿ ಕೊಳ್ಳ ಅವನಿಂದ ಬ್ಯಾಧಿಸಲ್ಪಟ್ಟಿರಲ್ಹವ್ಯಾ?

೧. ಇದೇ ಮಾತು ೧ ತಿಮೊ. ೫, ೨೧. ೨ ತಿಮೊ. ೨, ೧೪; ೪, ೧. ಗಲ. ೫, ೩. ೨ ಥೆಸ್ಸ. ೪, ೧. ಬರದದೆ.

೨. ಪೌಲನು ಇಲ್ಲಿ ಸೂಚಿಸುವ ಬುದ್ಧಿಯ ವ್ಯರ್ಥತ್ವವನ್ನು ಪುರಂದರದಾಸನು ಚನ್ನಾಗಿ ವರ್ಣಿಸುವದು ಪಾಕ್ಯಾಗಂದರೆ: ಸುಳಿದೆ ಮನೆ ಮನೆ ಕಳಿದೆ ಕಾಲವ, ಉಳಿದ ಯಾಚನೆ ಮಾಡದೆ. ಬೆಳದೆ ತಾಳೆಯ ಮರದ ತೆರದಲಿ, ಉಳಿವ ಬಗೆಯನು ನಾ೦ಡದೆ. ಯೆಳೆಯ ಇಳೆಯ ನಿಳೆಯ ಜನರಾಳು ಬಳಕೆ ಮಾತುಗಳಾಯಿದೆ. ಕಳಿದೆ ಈ ಪರಿಯಿಂದ ಕಾಲವ, ದೇವರೆ ನಿನ್ನ ನೆನೆಯದೆ. ಎಡೆಬಿಡದೆ ಅನುದಿನದಿ ಪಾಪದ ಕಡಲಾಳಗೆ ನಾಬಿದ್ದೆನು. ದೃಢವ ಕಾಣದೆ ಮಥ್ಯದಲಿ ಯನ್ನಾಡಲಾಳಗೆ ನಾನಾಂದೆನು. ದೇವರನ್ನು ನೆನಸದೆ, ಆತನಿಗೆ ಭಯ ಪಡದೆ, ತನ್ನನ್ನು ತಾನೇ ಶಿಕ್ಷಿದು ಕಾಳ್ಳದೆ, ವಿಚಾರಿಸದೆ, ಮುಂದಣ ಮಾರ್ಗವನ್ನು ಪುಡುಕದೆ, ಅಂದಿಗೆ ಆ ಸುಖ ಇಂದಿಗೆ ಈ ಸುಖ ಅಂದು ಕಾಂಡು, ಮನಸ್ಸು ಬಂದ ಪಾಗೆ ನಡದು ಕಾಳ್ಳುವ ವೃಥ್ಥ ಬುದ್ಧಿಯು ಎಲ್ಲಾ ದುರಾಚಾರಕ್ಕೆ ಮೂಲವಾಗಿದೆ.

೩. ಇದರ ಕಾರಣ ೨ ಕೊರಿ. ೪, ೪ಲ್ಲಿ ಬರದದೆ.

೪. ಎಲ್ಲಾ ಪ್ರೀತಿಯ ಮೂಲವಾದ ದೇವರ ಪ್ರೀತಿಯಿಲ್ಲದ ಮನುಷ್ಯನ ಹೃದಯವು ಹೆಚ್ಚು ಹೆಚ್ಚಾಗಿ ಕಠಿಣವಾಗುತ್ತದೆ.

೫. ಯಾಪಾ. ೧೭, ೩ಲ್ಲಿ ನಿತ್ಯ ಜೀವವೇನಂದರೆ

ಒಬ್ಬನೇ ನಿಜವಾದ ದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿದ ಯೇಸು ಕ್ರಿಸ್ತನನ್ನೂ ಅರಿಯುವದೇ ಎಂದು, ಬರದದೆ. ಅವಿಶ್ವಾಸಿಗಳಾದ ಪರಜನರು ಈ ಜೀವವನ್ನು ಅಗಲಿದವರಾಗಿದ್ದಾರೆ.

೬. ಅಂದರೆ, ಕ್ರಿಸ್ತನ ವಾಕ್ಯವನ್ನೂ, ಮಾರ್ಗವನ್ನೂ ಕಲಿಯಲಿಲ್ಲ. ಯೇಸು ಕ್ರಿಸ್ತನ ಸುವಾರ್ತೆಯನ್ನು ನಂಬುವವನು ಕ್ರಿಸ್ತನ ಸಲಿಗೆಯಲ್ಲಿ ಶೇರು ತ್ತಾನೆ.

೭. ಅಂದರೆ, ಎಫೆಸದವರ ಮುಂಚಿನ ನಡತೆಯು ಪರಜನರಲ್ಲಿ ವಾಡಿಕೆಯಾದ ನಾನಾ ದುಷ್ಕರ್ಮವೃತ್ತಿಯಾಗಿತ್ತು. ಆದರೆ ಸ್ವಭಾವದ ಪ್ರಕಾರ ಪರಜನರಾಗಲಿ, ಯೆಹೂದರಾಗಲಿ, ಪೆಸರಿಗೆ ಕ್ರೈಸ್ತರಾಗಲಿ, ಇರುವ ಮನುಷ್ಯರೆಲ್ಲರೂ ಏಕ ಸ್ಥಿತಿಯಲ್ಲಿದ್ದಾರೆ. ಎಫೆ. ೨, ೨.

೮. ದುರಾಶೆಗಳಿಗೆ ಮೋಸದ ಆಶೆಗಳೆಂದು ಪೆಸರದೆ. ೨ ಪೇತ್ರ. ೧, ೧೪ಲ್ಲಿ ನಾಶನದ ಆಶೆಗಳೆಂದು ಬರದದೆ. ದುರ್ವಿಷಯಾಸಕ್ತನಾದ ಮನುಷ್ಯನು ವಿಚಿತ್ರವಾದ ಸೌಖ್ಯವನ್ನನುಭವಿಸುವೆನೆಂದು, ಚಾವಿಸಿ ಕಾಳ್ಳುತ್ತಾನೆ. ಆದರೆ ದುರಾಶೆಯು ಗರ್ಭವನ್ನು ಧರಿಸಿ ಕಾಂಡು, ಪಾಪವನ್ನು ಪೆರುತ್ತದೆ; ಪಾಪವು ಸಂಪೂರ್ಣವಾದ ಮೇಲೆ, ಮರಣವನ್ನು ಪಡೆಯುತ್ತದೆ. ಯಾಕಾ. ೧, ೧೫. ಇದಲ್ಲದೆ, ದುರಾಶೆಗಳು ಒಳ್ಳೆ ಪೆಸರುಗಳನ್ನು ಧರಿಸಿ ಕಾಂಡು, ಮೋಸ ಮಾಡುತ್ತವೆ. ಪರ್ಯಾಗಂದರೆ, ನೆಲಕಲತನವು ಅಲ್ಪ ವ್ಯಯವೆಂದು, ದುರ್ವ್ಯಯವು ತ್ಯಾಗವೆಂದು, ಕಾಮ ವಿಕಾರವು ಸುಖಾಂಗವೆಂದು, ಚಾಪಿ ಮಾತು ಸತ್ಯಾಕ್ರಿಯಂದು ಅನ್ನಿಸಿ ಕಾಳ್ಳುತ್ತದೆ, ಇತ್ಯಾದಿ.

೯. ದುರಾಚಾರದ ಅಂತ್ಯವೇನಂದರೆ: ದೈಹಿಕ ಆತ್ಮಿಕವಾದ ಇಹ ಪರದ ಆತ್ಮನಷ್ಟವು.

೧೦. ಕ್ರಿಸ್ತನ ಐಕ್ಯದಲ್ಲಿ ಶೇರಿದ ಚಕ್ಕರು ಇದನ್ನು ಕಲಿತು ಕಾಂಡಿರ ಬೇಕು. ಆತನು ಪೃದಯದ ಯಾಥಾರ್ಥ್ಯದಿಂದಲೂ, ನಡತೆಯ ನೈರ್ಮಲ್ಯದಿಂದಲೂ, ಸತ್ಯದಲ್ಲಿ ನೆಲೆಯಾಗಿದ್ದ ಪ್ರಕಾರ, ಆತನನ್ನು ಅನುಸರಿಸಿ ಕಾಳ್ಳುವ ಚಕ್ಕರು ಕ್ರೂಜೆಯಲ್ಲಿ ಸತ್ತು, ಸತ್ತವರಾಳಗಿಂದ ಎದ್ದ ಕ್ರಿಸ್ತನನ್ನು ನಂಬಿ, ಪಾಪಕ್ಕೆ ಸಾಯದೆ ಯೇಸುವು ನಡದ ಪ್ರಕಾರ ನಡೆಯಲಾಲ್ಲದೆ ಇರುವ, ಅಸತ್ಯವನ್ನು ತಳ್ಳ ಬೇಕು.

೧೧. ಇದೇ ಮಾತು ೧ ಕಾರಿ. ೧೪, ೧೫ಲ್ಲಿ ಬರದದೆ. ಚಕ್ಕನು ಪೃದಯದ ಅಂತರಂಗದಲ್ಲಿ ತಾನು ತಿಳಿದು ಕಾಂಡ ಸತ್ಯದ ಪ್ರಕಾರ ಪರಿಶುದ್ಧಾತ್ಮಕ್ಕೆ ಅಧೀನನಾಗುತ್ತೇನೆಂದು, ದೇವರ ಕೃಪಾಬಲದಿಂದ ನಿರ್ಶ್ಚೈಸಿ ಕಾಳ್ಳುತ್ತಾನೆ. ವಿಶ್ವಾಸವಿಲ್ಲದ ಮನುಷ್ಯನಿಗೆ ಸಹಜ ಆತ್ಮವುಂಟು. ದೇವರನ್ನು ಬಯಸುವದು ಅವನ ಜೀವವಾಗಿದೆ. ಆದಾಗ್ಯೂ ಪಾಪವಶವಾದ ಮನುಷ್ಯನಲ್ಲಿ ಅದು, ಮೂರ್ಛೆಯಾದ ಪ್ರಕಾರ, ಪೂರ್ಣ ನಿರ್ಬಲವಾಗಿದೆ. ಪರಿಶುದ್ಧಾತ್ಮದ ಮುಖಾಂತರ ಅದಕ್ಕೆ ನೂತನ ಜೀವವು ಬರ ಬೇಕು.

೧೨. ಸಂವರ್ತನವನ್ನೈದಿದ ಮನುಷ್ಯನು ಜೀವಾಂತರನಾಗಿ ಪೂರ್ವ ಜೀವವನ್ನು ಪರಿತ್ಯಾಗ ಮಾಡುತ್ತಾನೆ. ಅಪಾಸ್ತಲನಿಂದ ಪರಿಶುದ್ಧರೆಂದು ಪೆಸರ್ಗೊಂಡ ಸಖೆಯವರಲ್ಲಿ ಈ ಜೀವಭೇದವುಂಟಾಗಿತ್ತು. ಆದರೆ ಪೌಸಬರಾಗಿರಿ ಎಂಬ ಉದ್ಬೋಧನಾವಾಕ್ಯದಿಂದ, ಮಾನಸಾಂತರ ವಿಶ್ವಾಸಗಳಿಂದ ಆರಂಭದಲ್ಲಿ ಉಂಟಾದ ಮೂಲನವೀಕರಣವು ಅನುದಿನವು ತಿರಿಗಿ ಉಂಟಾಗ ಬೇಕೆಂದು, ಸೂಚಿತವಾಗಿದೆ.

೧೩. ಪೌಸ ಮನುಷ್ಯನು ಅಂದರೆ: ದೇವರು ಕ್ರಿಸ್ತನ ಮುಖಾಂತರ ಪರಿಶುದ್ಧಾತ್ಮದಿಂದ ಪುಟ್ಟಿಸಿದಂಥ, ಪೂರ್ವ ಜೀವದ ಮನಾಗುಣೇಚ್ಛಾವೃತ್ತಿಗಳಿಗೆ ಎಲ್ಲಾ ವಿಷಯವಾಗಿಯೂ ಪೂರ್ಣ ಪ್ರತಿಕೂಲವಾದ ನೂತನಜೀವವು.

೧೪. ಕಾಲಾ. ೩, ೧೦ಲ್ಲಿ ಪೌಸ ಮನುಷ್ಯನು ಸೃಷ್ಟಿಸಿದವನ ಪೌಲಿಕೆ ಪ್ರಕಾರ ತಿಳುವಿಕೆಗಾಗಿ ನೂತನನಾಗುತ್ತಾನೆಂದು, ಬರದದೆ. ಆ ಮಾತು ಈ ಸ್ಥಳಕ್ಕೆ ಚನ್ನಾಗಿ ಒಪ್ಪುತ್ತದೆ; ಪರ್ಯಾಗಂದರೆ, ಪರಿಶುದ್ಧಾತ್ಮದ ಮುಖಾಂತರ ನಿಜ ಜ್ಞಾನವನ್ನು ಪೌಂದಿದ ಮನುಷ್ಯನಲ್ಲಿ ಪುಟ್ಟುವ ನೂತನ ಜೀವದ ಮುಖ್ಯ ಲಕ್ಷಣಗಳು ಇವೆರಡು: ಮನುಷ್ಯರ ವೆಪಪೌಕಾರಗಳಲ್ಲಿ ಕಾಣುವ ನೀತಿಯು, ದೇವರ ದೃಷ್ಟಿಯಲ್ಲಿ ಕಾಣುವ ಪರಿಶುದ್ಧತ್ವವು.

೭೯೬ ಅಪೊ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಧ.

ಎಫೆ. ೪.

ಈ ಮುಂತಾದ ಅಪೊಸ್ತಲರ ಉದ್ಬೋಧನೆಗಳೆಲ್ಲಾ, ಕೃಪಾಪ್ರಾಪ್ತನಾದ ಕ್ರೈಸ್ತನ ನೂತನ ಭಾವಕ್ಕೂ, ಪೂರ್ವ ಭಾವದಿಂದ ಹುಟ್ಟುವ ಆತ್ಮಕಂಟಕಕರವಾದ ಪಾಪಗಳಿಗೂ ಅತಿಶಯವಾದ ವ್ಯತ್ಯಾಸವು ಕಾಣುತ್ತದೆಂದು, ಚನ್ನಾಗಿ ಧ್ಯಾನ ಮಾಡಿದರೆ, ಮನೋವ್ಯಥೇ ಹುಟ್ಟ ತಕ್ಕದ್ದು. ವ. ೧೭. ೧೪ರ ಪ್ರಕಾರ ಹಾದರ, ಶಿಟ್ಟು, ಕಳವು ಮುಂತಾದ ಪಾಪಗಳನ್ನು ಬಿಟ್ಟು ಬಿಡ ಬೇಕೆಂಬ ಉದ್ಬೋಧನೆಯನ್ನು ಕ್ರೈಸ್ತರಿಗೆ ಹೇಳುವದು ಅವಶ್ಯವಾದದ್ದೋ?—ಅವಶ್ಯವಿಲ್ಲದಿದ್ದರೆ, ಅಪೊಸ್ತಲನು ಈ ಉದ್ಬೋಧನೆಗಳನ್ನು ಬರೆಯುತ್ತಿದ್ದಿಲ್ಲ. ಈ ವಿಷಯವಾಗಿ ಮೂರು ಪ್ರಸ್ತಾಪ ಮಾಡುವದು ಉಚಿತವಾಗಿ ತೋರುತ್ತದೆ. ೧) ದೇವರ ವಾಕ್ಯವನ್ನು ತಿಳಿಯದೆ ಇರುವ ಪರಜನರಿಗೆ ಹಾದರ, ಹುಸಿ, ಸ್ವಾರ್ಥ ಮುಂತಾದ ಪಾಪಗಳು ಅವಮಾನಕರವಾದ್ದೆಂದು ತೋರುವದಿಲ್ಲ. ಆದ್ದರಿಂದ ಅಂಥಾ ಜನರಲ್ಲಿ ಸ್ವಾಭಾವಿಕ ಪಾಪಗಳ ವೃದ್ಧಿಗೆ ಅಡ್ಡಿಯಿಲ್ಲದಿರುವದರಿಂದ ಹೆಚ್ಚಾದ ಜನರು ಪೂರ್ಣವಾಗಿ ಕೆಟ್ಟು ಹೋಗುತ್ತಾರೆ. ಅಂಥಾವರಲ್ಲಿ ಯಾರಾದರೂ ಸುವಾರ್ತೆಯನ್ನು ಕೇಳಿ, ಯೇಸು ಕ್ರಿಸ್ತನನ್ನು ನಂಬಿ ಪರಿಶುದ್ಧಾತ್ಮದಿಂದ ಪುನರ್ಜನ್ಮವನ್ನು ಹೊಂದಿದರೆ, ಅವರಲ್ಲಿ ಹೊಸಮನಸ್ಸು ನಿಜವಾಗಿ ಹುಟ್ಟಿದ್ದರೂ, ಪೂರ್ವ ಪಾಪಗಳ ವಾಸನೆಯಿಂದ ನಾನಾ ಪ್ರಕಾರವಾದ ಕಂಟಕವು ಆಗ್ಗಾಗ್ಗೆ ಹುಟ್ಟುತ್ತದೆ. ೨) ಆದರೆ ಪರಜನರಾಗಿದ್ದವರಿಗೆ ಮಾತ್ರ ಈ ವಿಧವಾದ ಉದ್ಬೋಧನೆಗಳು ಅವಶ್ಯವಾಗಿವೆಂದು, ನೆನಸಲಾಗದು. ದೇವರ ನಿಯಮವನ್ನು ಹೊಂದಿದ ಯೆಹೂದರಲ್ಲಿಯೂ ಸುವಾರ್ತೆಯನ್ನು ಹೊಂದಿದ ಕ್ರೈಸ್ತರಲ್ಲಿಯೂ ಹುಟ್ಟಿದವರು ಸಹ ಪಾಪಿಗಳಾಗಿಯೇ ಹುಟ್ಟಿದ್ದಾರೆ. ಎಲ್ಲರು ಪಾಪಗಳಲ್ಲಿ ಸತ್ತವರೆಂದು, ಎಫೆ. ೨, ೨ ರಲ್ಲಿ ಬರದದೆ. ಭಕ್ತರಿಗೂ ಯಾವಾಗಲೂ ಪಾಪಕಂಟಕವು ಬರುತ್ತದೆಂದು, ಇಬ್ರಿ. ೧೨, ೧ ರಲ್ಲಿ ತೋರುತ್ತದೆ. ಆದ್ದರಿಂದ ಇಂಥಾ ಉದ್ಬೋಧನೆಗಳನ್ನು ಓದುವ ಪ್ರತಿಭಕ್ತನು ಅವು ತನ್ನನ್ನು ಎಚ್ಚರಿಸುವ ಉದ್ದಿಶ್ಯವಾಗಿ ಬರದವೆಂದು ನೆನಸಿ, ಪಾಪದಲ್ಲಿ ಬೀಳದ ಹಾಗೆ ಜಾಗರೂಕನಾಗ ಬೇಕು. ೩) ಈ ಉದ್ಬೋಧನಾಭಾಗಗಳಲ್ಲಿ ಕಾಣುವಂಥ, ಸಭೆಯವರಲ್ಲಿಯೂ ಉಳಿದಿರುವಂಥ, ಪಾಪದ ಹೆಚ್ಚಿಗೆಯನ್ನು ಯುಕ್ತವಾಗಿ ಧ್ಯಾನಿಸಿದರೆ, ಅತಿ ಬಲವಾದ ಆದರಣೆಯು ಸಹ ಹುಟ್ಟುತ್ತದೆ. ಯಾಕಂದರೆ ತನ್ನ ಸುವಾರ್ತೆಯನ್ನು ನಂಬಿ, ಸ್ನಾನವನ್ನು ಹೊಂದಿ, ಸಭೆಯಲ್ಲಿ ಶೇರಿದ ಮನುಷ್ಯರಲ್ಲಿ ಕರ್ತನು ನಾನಾ ವಿಧವಾದ ದೋಷಗಳನ್ನೂ, ದುರಾಚಾರಗಳನ್ನೂ ನೋಡಿದಾಗ್ಯೂ, ಅವರನ್ನು ಅಸಂಹಿಸಿ ತಳ್ಳದೆ, ಅತ್ಯಂತ ತಾಳ್ಮೆಯಿಂದ ಶಿಕ್ಷಿಸುತ್ತಾ, ಜೀವದ ಮಾರ್ಗದಲ್ಲಿ ನಡಿಸುತ್ತಾ ಬರುತ್ತಾನೆಂದು, ತಿಳುಕೊಳ್ಳುವವನ ಹೃದಯದಲ್ಲಿ ಯೇಸುವಿನ ಅಪಾರ ಕೃಪೆಯಲ್ಲಿಡತಕ್ಕ ನಿಶ್ಚಂಚಲವಾದ ವಿಶ್ವಾಸವು ಹುಟ್ಟುವದು. ಹೀಗಿರಲಾಗಿ ನಿಯಮರೂಪವಾದ ಉದ್ಬೋಧನಾಸೂಚಕವಾದ ಅಪೊಸ್ತಲರ ಪತ್ರಿಕೆಗಳ ಭಾಗಗಳು ಸಹ ಸುವಾರ್ತಾಭರಿತವಾಗಿವೆಂದು, ಪ್ರಸಿದ್ಧವಾಗಿವೆ.

೩. ಬೇರೆ ಬೇರೆ ಪಾಪಗಳನ್ನು ಬಿಟ್ಟು ಬಿಡ ಬೇಕೆಂದೂ, ಬೇರೆ ಬೇರೆ ಕ್ರೈಸ್ತಸದ್ಗುಣಗಳನ್ನು ಕೈಕಾಳ್ಳ ಬೇಕೆಂದೂ, ಅಪೊಸ್ತಲನು ಮಾಡುವ ಉದ್ಬೋಧನೆಯು.

ಸ. ೪, ೨೫—೫, ೨೦.

೧) ನೆರೆಪಕಾರೆಯವರ ಪಕ್ಕಾಕ್ಕುಬಳಿಕೆಯ ವಿಷಯವಾದ ಧರ್ಮಾಧರ್ಮವು. ಸ. ೪, ೨೫—೫, ೨. ತಳ್ಳ ಬೇಕಾದದ್ದೇನಂದರೆ: ವ. ೨೫. ಹುಸಿ ಮಾತು, ವ. ೨೬. ೨೭. ಸೈತಾನನಿಗೆ ಇಂಬು ಕೊಡುವ

ಎಫೆ. ೪, ೨೫—೫, ೨.

ಶಿಟ್ಟಿನ ಉರಿಯು, ೨೪. ಪರಾರ್ಥಾಪಹಾರವು, ೨೫. ೫೦. ಪರಿಶುದ್ಧಾತ್ಮವನ್ನು ನೊಯಿಸುವ ಕೊಳ್ಳತ ಮಾತು, ೫೧. ಯಾವದೊಂದು ವಿಧವಾದ ದ್ವೇಷವಚನವು. ಈ ಪಾಪಗಳು ಹೋಗಿ, ಸಹೋದರರ ತಪ್ಪುಗಳನ್ನು ಮನ್ನಿಸುವ ಪ್ರೀತಿಯು ಎಲ್ಲಾ ವಿಷಯವಾಗಿಯೂ ಆಳಿ ಕೊಳ್ಳಬೇಕು. ಸಭೆಯ ವೃದ್ಧ್ಯಾದ್ಧಿಕ್ಯವಾಗಿರ ಚಿತವಾದ ಈ ಪತ್ರಿಕೆಯ ಭಾವಕ್ಕೆ ಅನುಸಾರವಾಗಿ, ಅಪೊಸ್ತಲನು ಮೊದಲು ಸಭಾಕ್ಷೇಮಕ್ಕೆ ನಷ್ಟಕರವಾದ ಬೇರೆ ಬೇರೆ ಪಾಪಗಳನ್ನು ಉದಾಹರಿಸಿ, ಯಾವಾಗಲೂ ಅದರ ವೃದ್ಧಿಯನ್ನು ವಿಶೇಷವಾಗಿ ಲಕ್ಷಿಸುತ್ತಾನೆ. ೨೫ನೆ ವಚನದಲ್ಲಿ ಯಾಥಾರ್ಥ್ಯವನ್ನಾಜ್ಞಾಪಿಸಿ ಪಾಲನು ಹೇಳುವದೇನಂದರೆ: ಕ್ರೈಸ್ತರ ಪರಸ್ಪರ ವೃತ್ತಿಯಲ್ಲಿ ಒಬ್ಬರನ್ನೊಬ್ಬರು ವಂಚಿಸಿದರೆ, ಬಂದೇ ಶರೀರದ ಅವಯವಗಳಲ್ಲಿ ಬಂದು ಮತ್ತೊಂದಕ್ಕೆ ಮೋಸ ಮಾಡಿದ ಹಾಗಾದೀತು. ೨೬ನೆ ವಚನದಲ್ಲಿ ೪ನೆ ಕೀರ್ತನೆಯ ೫ನೆ ವಚನವನ್ನು ಪ್ರಯೋಗಿಸಿ, ಭಕ್ತರು ಶಿಟ್ಟನ್ನು ಅಣಗಿಸ ಬೇಕೆಂದು ಹೇಳಿ, ೫೧. ೨೭ಲ್ಲಿ ಮಾತ್ರ, ಎಲ್ಲಾ ಶಿಟ್ಟನ್ನು ಪೂರ್ಣವಾಗಿ ಬಿಡ ಬೇಕೆಂದು, ಆಜ್ಞಾಪಿಸುತ್ತಾನೆ. ಒಬ್ಬನಲ್ಲಿ ಶಿಟ್ಟು ಫಕ್ಕನೆ ಹುಟ್ಟಿದಾಗ್ಯೂ, ಹ್ಯಾಗೂ ಶಿಟ್ಟಿನಿಂದ ಏನೂ ಮಾಡ ಬಾರದೆಂದೂ, ಹೊತ್ತು ಮುಳುಗುವದಕ್ಕಿಂತ ಮುಂಚೆ ಶಿಟ್ಟಿನ ಉರಿಯನ್ನೆಲ್ಲಾ ನೊಂದಿಸ ಬೇಕೆಂದೂ, ಆಜ್ಞಾಪಿಸುತ್ತಾನೆ. ಮೊದಲು ಈ ಕೇಡಿನ ಫಲಗಳನ್ನು ಎದುರಿಸಿ, ತದನಂತರ ಅದರ ಬೇರನ್ನು ಸಹ ಕತ್ತರಿಸುತ್ತಾನೆ. ೨೭ಲ್ಲಿ ಪಾಲನು ಚಾಡಿಗೆಲ್ಲಾ ತಂದೆಯಾಗಿರುವ ಸೈತಾನನಿಗೆ ಪಾಪಾನ್ವಿತ ಕೋಪದಿಂದ ಒಳಗಾಗ ಬಾರದೆಂದು, ಸಭೆಯವರಿಗೆ ಬುದ್ಧಿ ಹೇಳುತ್ತಾನೆ. ೨೮ಲ್ಲಿ ಕಳ್ಳತನ ಮಾಡ ಬಾರದೆಂದು ಗದರಿಸಿ, ನ್ಯಾಯವಾಗಿ ಹಣವನ್ನು ದುಡಿದು, ಪರರ ಒಡವೆಗಳನ್ನು ಅಪಹರಿಸುವ ಬಗೆಯನ್ನು ಬಿಟ್ಟು ಬಿಟ್ಟು, ಪರರಿಗೆ ಧರ್ಮ ಮಾಡುವದನ್ನು ಅಭ್ಯಾಸಿಸ ಬೇಕೆಂದು ಉದ್ಬೋಧಿಸುತ್ತಾನೆ. ೨೯ಲ್ಲಿ ನಾಚಿಕೆಯಾದ ಕೆಟ್ಟ ಮಾತುಗಳು ಮಾತ್ರವಲ್ಲ, ಬುದ್ಧಿಯೂ, ಪ್ರಯೋಜನವೂ ಇಲ್ಲದ ವ್ಯರ್ಥ ಮಾತುಗಳು ಸಹ ಕ್ರೈಸ್ತರ ಬಾಯಲ್ಲಿರ ಬಾರದೆಂದೂ, ಭಕ್ತರು ಪರಸ್ಪರಸಂಭಾಷಣೆಯಲ್ಲಿಯೂ ಸಹೋದರರ ಕೃಪಾಭಿವೃದ್ಧಿಯನ್ನು ಚಿಂತಿಸ ತಕ್ಕದ್ದು. ೫೦. ಕೆಟ್ಟ ಮಾತುಗಳು ಮನುಷ್ಯರಿಗೆ ಮೋಸ ಮಾಡುವದಲ್ಲದೆ, ಪರದಲ್ಲಿ ಆಗುವ ಪೂರ್ಣ ವಿಮೋಚನೆಯ ಸಂಚಕಾರವಾಗಿ ಭಕ್ತರಿಗೆ ಪ್ರಾಪ್ತವಾದ ಪರಿಶುದ್ಧಾತ್ಮವನ್ನು ಸಹ ನೋಯಿಸುವದರಿಂದ ಪರದ ಪದವಿಯ ಆಶೆಯನ್ನು ಭಂಗ ಮಾಡ್ಯಾವು. ೫೧. ಸ್ವಾರ್ಥದಿಂದ ಹುಟ್ಟುವ ಶಿಟ್ಟಿನ ಭಾವವೂ, ಅದರಿಂದ ಹುಟ್ಟುವ ಎಲ್ಲಾ ದುರ್ವ್ಯಾಪಾರವೂ, ಕ್ರೈಸ್ತರಿಗೆ ದೂರವಾಗಿರ ಬೇಕು. ೫೨. ಅವರು ಪರಸ್ಪರವ್ಯವಹಾರದಲ್ಲಿ ತಾವೇ ಕ್ರಿಸ್ತನಿಂದ ಅನುಭವಿಸಿದ ದಯಾನ್ವಿತವಾದ ಪ್ರೀತಿಯನ್ನು ಒಬ್ಬರಿಗೊಬ್ಬರು ತೋರಿಸ ಬೇಕು. ೫, ೧. ದೇವರಿಗೆ ಪ್ರಿಯ ಮಕ್ಕಳಾಗಿದ್ದು, ತಮ್ಮ ನಡತೆಯಲ್ಲಿ ತಂದೆಯನ್ನು ಅನುಸರಿಸ ಬೇಕೆಂಬದರಲ್ಲಿ (ಮತ್ತಾ. ೫, ೪೮.) ಈ ಉದ್ಬೋಧನಾಸಾರಾಂಶವು ಕ್ಲಪ್ತವಾಗಿ ಸೂಚಿತವಾಗಿದೆ.

೨. ಮಶ್ತು ಕ್ರಿಸ್ತನು ಸಹ ತನ್ನನ್ನು ಸುವಾಸನೆಯಾದ ಪರಿಮಳಕ್ಕಾಗಿ ೧) ನಮಗಾಸ್ತರ ಕಾಣಿಕೆಯಾಗಿಯೂ ೨), ಬಲಿಯಾಗಿಯೂ ೩) ದೇವರಿಗೆ ಒಪ್ಪಿಸಿ ಕೊಟ್ಟು, ನಮ್ಮನ್ನು ಪ್ರೀತಿ ಮಾಡಿದ ಪ್ರಕಾರ ಪ್ರೀತಿಯಿಂದ ನಡೆದು ಕೊಳ್ಳಿರಿ.

೧. ೧ ಮೋಶೆ. ೮, ೨೧. ೨ ಮೋಶೆ. ೨೯, ೧೮. ೩ ಮೋಶೆ. ೧, ೧; ೨, ೧೨. ೧೭. ಮುಂತಾದ | ಸ್ಥಳಗಳ ಪ್ರಕಾರ, ದೇವರು ಪಾಳೆ ಒಡಂಬಡಿಕೆಯಲ್ಲಿ ಯಥಾರ್ಥವಾದ ಮನಸ್ಸಿನಿಂದ ಅರ್ಪಿತವಾದ ಬಲಿ

ಗಳಿಗೆ ಮೆಚ್ಚಿದ ಪೂಜೆಗೆ, ಪರಮ ಪ್ರೀತಿಯ ಪ್ರಕಟಣೆಯಾದ ಕ್ರಿಸ್ತನ ಪ್ರಾಣಬಲಿಯು ದೇವರಿಗೆ ಅತ್ಯುಲ್ಲಾಸಮನಾಪೂರವಾಗಿತ್ತು. ಅದೇ ಪ್ರಕಾರವಾಗಿ ನಾವು ಪ್ರೀತಿಯಿಂದ ನಡದು ಕಾಂಡರೆ, ನಮ್ಮ ನಡತೆ ದೇವರಿಗೆ ಪ್ರಿತವಾಗುತ್ತದೆ. ಪ್ರೀತಿಯಿಲ್ಲದೆ ದೇವರನ್ನು ಮೆಚ್ಚಿಸಲಾರೆವು.

೨. ಯೇಸು ಕ್ರಿಸ್ತನು ನಮ್ಮ ಮಾದ್ರಿಯಾಗಿಯೂ ಅಗ್ರಗಾಮಿಯಾಗಿಯೂ ಇದ್ದು, ನಿಯಮವನ್ನು ಸಾಯುವ ವರೆಗೂ ಕೈಕಾಂಡು, ಸ್ವೇಚ್ಛಾಪರಿತ್ಯಾಗ ಮಾಡಿ, ತನ್ನನ್ನು ನಮಗಾಶ್ಚರ್ಯ ದೇವರಿಗೆ ಸ್ವಾತ್ಪ್ರಬಲಿಯಾಗಿ ಅರ್ಪಿಸಿದ್ದರಿಂದ, ನಾವು ಸಹ ನಮ್ಮನ್ನು ನಾವೇ ಸ್ವಾತ್ಪ್ರಬಲಿಯಾಗಿ ಅರ್ಪಿಸುವದಕ್ಕೆ ವಿಶ್ವಾಸದಿಂದ ಅಧಿಕಾರಿಗಳಾಗ ಬಹುದು.

೩. ಅಂದರೆ, ಪಾಪಬಲಿಯಾದ ಪೂರ್ಣಮವಾಗಿ. ಪೂರ್ಣಗಂದರೆ, ಕ್ರಿಸ್ತನು ಶ್ರಮವ ಸಹಿಸುವ ವಿಧೇಯತ್ವದಿಂದ ನಮ್ಮ ಮೇಲೆ ಬೀಳ ತಕ್ಕ ಶಿಕ್ಷೆಯನ್ನೆಲ್ಲಾ ತಾಳಿ, ಪಾಪಿಗಳಾದ ಮನುಷ್ಯರ ವ್ಯಾಜ್ಯವನ್ನು ಮಹೋನ್ನತ ನ್ಯಾಯಸ್ಥಾನದಲ್ಲಿ ನಮ್ಮ ಗುಣಕ್ಕಾಗಿ ತೀರಿಸಿದನು.

೨) ಸ್ವಕೀಯ ವಿಷಯವಾದ ಧರ್ಮಾಧರ್ಮವು. ಸ. ೫, ೩—೧೪.

೩. ಆದರೆ ಪರಿಶುದ್ಧರಿಗೆ ತಕ್ಕ ಹಾಗೆ, ಜಾರತ್ವವು, ಎಲ್ಲಾ ಅಶುದ್ಧತ್ವವು, ಲೌಕಿಕವು[೧], ಇವುಗಳ ಹೆಸರಾದರೂ[೨], ನಿಮ್ಮಲ್ಲಿ ಇರ ಬಾರದು. ೪. ಮತ್ತು ನೀಚತನವೂ, ಹುಚ್ಚು ಮಾತೂ, ಕುಚೋದ್ಯವೂ, ಇಂ ಅಯೋಗ್ಯವಾದವುಗಳನ್ನು ಬಿಟ್ಟು[೩], ಸ್ತೋತ್ರವನ್ನೇ ಮಾಡಿರಿ. ೫. ಯಾಕಂದರೆ ಯಾವ ಜಾರನಿಗಾಗಲಿ, ಅಶುದ್ಧನಿಗಾಗಲಿ, ವಿಗ್ರಹಾರಾಧಕನಾಗಿರುವ[೪] ಲೌಕಿಕನಿಗಾಗಲಿ, ಕ್ರಿಸ್ತನು ದೇವರು, ಇವರ ರಾಜ್ಯದಲ್ಲಿ ಬಾಧ್ಯತೆಯಿಲ್ಲವೆಂದು ಬಲ್ಲಿರಿ. ೬. ವ್ಯರ್ಥ ವಾಕ್ಯಗಳಿಂದ ಯಾವನಾದರೂ ನಿಮಗೆ ಮೋಸ ಮಾಡದಿರಲಿ[೫]; ಯಾಕಂದರೆ ಅಂಥವುಗಳ ನಿಮಿತ್ತ ದೇವರ ಕೋಪವು ಅವಿಧೇಯತ್ವದ[೬] ಮಕ್ಕಳ ಮೇಲೆ ಬರುತ್ತದೆ. ೭. ಹೀಗಿರುವದರಿಂದ ಅವರ ಸಂಗಡ ಪಾಲುಗಾರರಾಗದಿರ್ರಿ. ೮. ಯಾಕಂದರೆ ಮುಂಚೆ ಕತ್ತಲೆಯಾಗಿದ್ದಿರಿ[೭], ಆದರೆ ಇಗ ಕರ್ತನಲ್ಲಿ ಬೆಳಕಾಗಿದ್ದೀರಿ; ಬೆಳಕಿನ ಮಕ್ಕಳಾಗಿ ನಡೆದು ಕಾಳ್ಳಿರಿ. ೯. ಯಾಕಂದರೆ ಆತ್ಮದ ಫಲವು ಸಕಲ ಒಳ್ಳೇತನ ನೀತಿ ಸತ್ಯಗಳಲ್ಲಿ ಇರುತ್ತದೆ[೮]. ೧೦. ಕರ್ತನಿಗೆ ಮನೋಹರವಾದದ್ದು ಏನೆಂದು ಪರೀಕ್ಷಿಸಿರಿ[೯]. ೧೧. ಮತ್ತು ಕತ್ತಲೆಯ ನಿಷ್ಫಲವಾದ ಕ್ರಿಯೆಗಳ ಸಂಗಡ ಅನ್ಯೋನ್ಯವಾಗಿರದೆ, ಅವುಗಳನ್ನು ಶಿಕ್ಷಿಸಿರಿ[೧೦]. ೧೨. ಯಾಕಂದರೆ ಅಂತರಂಗವಾಗಿ ಅವರಿಂದ ಮಾಡಲ್ಪಡುವವುಗಳನ್ನು ಹೇಳುವದೇ ನಾಚಿಕೆಯಾಗಿದೆ. ೧೩. ಆದರೆ ಶಿಕ್ಷಿಸಲ್ಪಡುವಂಥಾದ್ದೆಲ್ಲಾ ಬೆಳಕಿನಿಂದ ತೋರ ಬರುವದು. ಹ್ಯಾಗಂದರೆ ತೋರ ಬರುವಂಥಾದ್ದೆಲ್ಲಾ ಬೆಳಕಾಗಿದೆ. ೧೪. ಆದದರಿಂದ ಎಚ್ಚರವಾಗು, ನಿದ್ದೆ ಮಾಡುವವನೇ, ಸತ್ತವರಾಳಗಿಂದ ಏಳು; ಕ್ರಿಸ್ತನು ನಿನಗೆ ಪ್ರಕಾಶವಾಗುವನೆಂದು ಹೇಳುತ್ತಾನೆ[೧೧].

ಎಫೆ. ೫, ೧೫—೧೪.

೧. ಇಲ್ಲಿ ಬರದಿರುವ ಗ್ರೇಕ ಶಬ್ದವು ಸ. ೪, ೧೯ಲ್ಲಿಯೂ ಬರದದೆ. ಅಲ್ಲಿ ಅದು ಅತ್ಯಾಶೆಯಂದು ಚಾಷಾಂತರವಾಯಿತು. ಆದರೆ ಅಲ್ಲಿ ಸಹ ಲೋಚಪವೆಂತಲೇ ಚಾಷಾಂತರ ಮಾಡ ಬೇಕೆಂದು, ಕೆಲವು ವ್ಯಾಖ್ಯಾನಿಗಳು ಪೇಳುವಂಥಾದ್ದು ವಿಹಿತವೆಂದು, ತಾ೯ರುತ್ತದೆ.

೨. ಈ ಮಾತಿಗೆ ಎರಡು ಅಚಿಪ್ರಾಯವಿರ ಬಹುದು. ೧) ಇಂಥಾ ಪಾಪಗಳು ನಿಮ್ಮಲ್ಲಿ ನಡೆಯುತ್ತವೆಂಬ ಸುದ್ದಿಯಾದರೂ ಹುಟ್ಟ ಬಾರದು. ೨) ಇಂಥಾ ಪಾಪಗಳ ವಿಷಯವಾಗಿ ನುಮ್ಮನೆ ಮಾತನಾಡ ಬಾರದು. ಪೂರ್ಣ ದ್ವೇಷಿಯಾದವನ ಪೆಸರನ್ನು ಸಹ ಉಚ್ಚರಿಸುವದಿಲ್ಲ; ಇಂಥಾ ಪಾಪದ್ವೇಷವು ಭಕ್ತನಲ್ಲಿರ ಬೇಕು.

೩. ಭಕ್ತನ ಶರೀರವು ದೇವರಿಗೆ ಬಲಿಯಾಗಿ ಅರ್ಪಿತವಾದನಂತರ ಅವನ ಬಾಯಿ ಸಹ ದೇವರ ಮಾನಾಸಕ್ತವಾಗಿರ ಬೇಕು.

೪. ಅದೇ ಅಚಿಪ್ರಾಯ ಕಾಲಾ. ೩, ೫ಲ್ಲಿಯೂ ಬರದದೆ. ಮತ್ತಾ. ೬, ೨೪. ಫಿಲಿ. ೩, ೧೯. ೧ ಯೋಪಾ. ೨, ೧೫. ಲೋಚಿಯು ಪಾನ್ನು ಪಾಣ ಮುಂತಾದದ್ದಕ್ಕೆ ಪರವಶನಾಗಿದ್ದು, ವಿಗ್ರಹಗಳಿಗೆ ಪೂಜೆ ಮಾಡುವವರಂತೆ, ದೇವರನ್ನು ಅಸಡ್ಡೆ ಮಾಡಿ, ದೇವಪ್ರೀತಿ ಪರಪ್ರೀತಿಯಂಬ ಮುಖ್ಯವಾದ ನಿಯಮದ ಕಟ್ಟಳೆಗಳನ್ನು ಮೀರಿ, ಸ್ವಾರ್ಥದಲ್ಲಿ ಮುಳುಗುತ್ತಾನೆ.

೫. ಪರಜನರಲ್ಲಿ ವಾಡಿಕೆಯಾದ ಪಾಪಗಳನ್ನು ನಡಿಸಿದರೂ, ದೇವರ ರಾಜ್ಯಕ್ಕೆ ಮನುಷ್ಯನು ಬಾಧ್ಯನಾಗಿರ ಬಹುದೆಂಬದು ಮೋಸದ ಮಾತಾಗಿದೆ.

೬. ಅವಿಧೇಯತ್ವದ, ಇಲ್ಲವೇ ಅವಿಶ್ವಾಸದ ಮಕ್ಕಳೆಂಬದು ದೇವರ ವಾಕ್ಯದಲ್ಲಿ ಪರಜನರಿಗೆ ವಾಡಿಕೆಯಾದ ಪೆಸರು. ಇಲ್ಲಿ ಪ್ರಯೋಗವಾದ ಗ್ರೇಕಪದಕ್ಕೆ ಅವಿಧೇಯತ್ವ ಅವಿಶ್ವಾಸವೆಂಬ ಉಚಯಾರ್ಥ ಉಂಟು.

೭. ದೇವರಿಗೆ ಖೇದವಾದ ಮನುಷ್ಯರ ಚಾಪವು ಪೂರ್ಣವಾಗಿ ಕೆಟ್ಟು ಪೋಗುವದರಿಂದ, ಪೌಲನು ಕತ್ತಲೆಯಲ್ಲಿದ್ದಿರಿ ಯೆಂಬುವದಕ್ಕೆ ಕತ್ತಲೆಯಾಗಿದ್ದಿರಿ ಎಂದು, ಬರೆಯುತ್ತಾನೆ.

೮. ಮೇಲೆ ಬರದಿರುವ ಪಾಪಗಳಿಗೆ ವಿರೋಧವಾದ ಸದ್ಗುಣತ್ರಯವು ಇಲ್ಲಿ ಸೂಚಿತವಾಗಿದೆ.

೯. ದೇವರನ್ನು ಎಲ್ಲಾ ವಿಷಯವಾಗಿಯೂ ಕೈಲಾದ ಮಟ್ಟಿಗೆ ಮೆಚ್ಚಿಸ ಬೇಕೆಂಬದು ಭಕ್ತನ ಮುಖ್ಯಾಪೇಕ್ಷೆಯಾಗಿರ ಬೇಕು.

೧೦. ಪೂರ್ಣ ಪಾಪದ್ವೇಷವು ಮನುಷ್ಯನ ಹೃದಯದಲ್ಲಿ ಹುಟ್ಟಿದನಂತರ, ತಾನು ಪಾಪಾಚರಣೆಯನ್ನು ಬಿಡುವದಲ್ಲದೆ, ಲೋಕದಲ್ಲಿ ವಾಡಿಕೆಯಾದ ಪಾಪಗಳನ್ನು ಸಹ ನೀತಿಯ ಆಸಕ್ತಿಯಿಂದ ಧೈರ್ಯವಾಗಿ ಖಂಡಿಸುತ್ತಾನೆ. ಶಿಕ್ಷಾರ್ಥವಾಗಿ ಪಾಪಗಳ ವಿಷಯವಾಗಿ ಮಾತನಾಡುವದು ಯುಕ್ತವಾಗಿದೆ. ಸತ್ಯವಾಗಿ ಪಶ್ಚಾತ್ತಾಪ ಪಡುವವನು ತಾನು ಮಾಡಿದ ಪಾಪಗಳನ್ನು ದೇವರ ಮುಂದೆ, ಅಥವಾ ತಾನು ಅನ್ಯಾಯ ಮಾಡಿದ ಮನುಷ್ಯರ ಮುಂದೆ, ಅರಿಕೆ ಮಾಡುವದು ಪಾಪಪರಿಹಾರಾರ್ಥವಾಗಿ ಅವಶ್ಯವಾಗಿದೆ.

೧೧. ಇಲ್ಲಿ ಯಥೋಕ್ತರೂಪವಾಗಿ ಶೇರಿದ ವಾಕ್ಯದ ಅಚಿಪ್ರಾಯ ಯೆಶಾ. ೨೬, ೧೯; ೬೦, ೧ ಮುಂತಾದ ಸ್ಥಳಗಳಲ್ಲಿ ಕಾಣುತ್ತದೆ. ಎಫೆ. ೨, ೨. ಮತ್ತಾ. ೮, ೨೩.

೩) ದೇವರ ವಿಷಯವಾದ ಧರ್ಮಾಧರ್ಮವು. ಸ. ೫, ೧೫—೨೦.

೧೫. ಹೀಗಿರುವದರಿಂದ, ಅಜ್ಞಾನಿಗಳ ಹಾಗಲ್ಲ, ಜ್ಞಾನಿಗಳ ಹಾಗೆಯೇ, ೧೬. ದಿನಗಳು ಕೆಟ್ಟವುಗಳಾಗಿರುವದರಿಂದ ೧), ಕಾಲವನ್ನು ಕೊಂಡು ಕೊಂಡು ೨), ಜಾಗ್ರತೆಯಿಂದ ನಡೆದು ಕೊಳ್ಳುವ ಹಾಗೆ, ನೋಡಿ ಕೊಳ್ಳಿರಿ. ೧೭. ಆದದರಿಂದ ಬುದ್ಧಿಯಿಲ್ಲದವರಾಗಿರದೆ, ಕರ್ತನ ಚಿತ್ತವ್ಯೇನೆಂದು ೩) ಗ್ರಹಿಸಿ ಕೊಳ್ಳಿರಿ. ೧೮. ಮತ್ತು ಹೊ

ಎಫೆ. ೫, ೧೯—೨೫.

ಟ್ಟೆಬಾಕಶನಕ್ಕೆ ಆಸ್ಪದವಾಗಿರುವ ದ್ರಾಕ್ಷಿಯ ರಸದಿಂದ ಮತ್ತರಾಗದೆ, ಆತ್ಮದಿಂದ ತುಂಬಿ ಕೊಂಡು ೪), ೧೯. ಕೀರ್ತನೆಗಳಿಂದಲೂ, ಗೀತಗಳಿಂದಲೂ, ಆತ್ಮಿಕವಾವ ವಾದ ಹಾಡುಗಳಿಂದಲೂ, ಒಬ್ಬರ ಸಂಗಡಲೊಬ್ಬರು ಮಾತಾಡಿ ಕೊಂಡು, ನಿಮ್ಮ ಹೃದಯದಲ್ಲಿ ಕರ್ತನಿಗೆ ಹಾಡಿ ಬಾರಿಸಿ ೫), ೨೦. ಯಾವಾಗಲೂ, ಎಲ್ಲಾದಕ್ಕಾಗಿ ಸ್ತೋತ್ರ ಮಾಡಿ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿ,

೧. ಈ ಮಾತಿನ ಅಭಿಪ್ರಾಯವೇನೆಂದರೆ: ನಾನಾ ವಿಧವಾದ ದುರಾಚಾರವು ಯೆಹೂದರಲ್ಲಿಯೂ ಪರಜನರಲ್ಲಿಯೂ ಬಹಳ ಪ್ರಬಲವಾಗಿದೆ. ಮತ್ತು ಸುವಾರ್ತೆಯನ್ನು ನಂಬಿ, ಯೇಸು ಕ್ರಿಸ್ತನಿಗೆ ವಿಧೇಯರಾಗಿ ನಡದು ಕಾಳ್ಳುವವರಿಗೆ ಸ್ವಜಾತಿಯವರೂ, ಪರರೂ ನಾನಾ ಪ್ರಕಾರವಾಗಿ ಹಿಂಸೆ ಮಾಡುತ್ತಾರೆ. ಅಂಥಾ ಕಾಲದಲ್ಲಿ ಭಕ್ತರು ವಿಶೇಷ ಜಾಗರೂಕರಾಗಿರ ಬೇಕು.

೨. ಇದೇ ಮಾತು ಕಾಲಾ. ೪, ೫ಲ್ಲಿ ಬರದದೆ.

೩. ಯಾವ ಕೆಲಸವನ್ನಾದರೂ ಮನಸ್ಸು ಬಂದ ಹಾಗೆ ಮಾಡದೆ, ಕರ್ತನ ಮನಸ್ಸಿಗೆ ಪೂರ್ಣಾನುಕೂಲವಾದ ನಡತೆ ಯಾವದೆಂದು, ವಿಚಾರಿಸುವ ಅಭ್ಯಾಸವು ಭಕ್ತನಲ್ಲಿ ದೃಢವಾಗ ಬೇಕು.

೪. ಇದೇ ಅಭಿಪ್ರಾಯ ರೋಮಾ. ೧೪, ೧೭ಲ್ಲಿ ಸೂಚಿತವಾಗಿದೆ. ಯೇಸು ಕ್ರಿಸ್ತನ ಶಿಷ್ಯರು ದೇವರ ಸಂಪೂರ್ಣ ಕೃಪೆಯ ಅನುಭವದಿಂದ ಅತ್ಯಂತ ಸಂತುಷ್ಟರಾಗಿ ಬಾಳ ತಕ್ಕದ್ದು. ಆದರೆ ಅವರು ಆತ್ಮಿಕರಾಗಿರುವದರಿಂದ, ಅವರಿಗೆ ಆತ್ಮಿಕಭಾಗ್ಯ ಆವಶ್ಯಕವಾದದ್ದು. ಮಾಂಸಿಕವಾದದ್ದು ಹಿತವಾದದ್ದಲ್ಲ.

೫. ಈ ಸ್ಥಳಕ್ಕೆ ಕಾಲಾ. ೩, ೧೭. ಒಪ್ಪುತ್ತದೆ.

೪) ಗೃಹಧರ್ಮೋದ್ಬೋಧನೆಗಳು. ಸ. ೫, ೨೧—೬, ೯.

ಸಾಮಾನ್ಯವಾದ ಉದ್ಬೋಧನೆಗಳನ್ನು ತೀರಿಸಿದನಂತರ, ಅಪೊಸ್ತಲನು ಕೊಲೊ. ೩, ೧೪ರ ಪ್ರಕಾರ ಗೃಹಧರ್ಮವಿಧಿಗಳನ್ನು ಉದಾಹರಿಸಿ, ಭಕ್ತರು ದೇವರ ಭಯದಲ್ಲಿ ಪರಸ್ಪರಾಧೀನರಾಗಿ ನಡದು ಕೊಳ್ಳಬೇಕೆಂಬ ಸೂತ್ರವನ್ನು ಸ್ಥಾಪಿಸಿ, ಅದಕ್ಕೆ ಅನುಸಾರವಾಗಿ ಗಂಡಸರಿಗೂ, ಹೆಂಗಸರಿಗೂ, ವ. ೨೨—೩೩., ಮಕ್ಕಳಿಗೂ, ೬, ೧—೪., ಆಳುಗಳಿಗೂ ೫—೯. ನೀತಿಯ ಉಪದೇಶವನ್ನು ಕೊಲೊಸ್ಸೆಯ ಪತ್ರಿಕೆಗಿಂತ ಸ್ವಲ್ಪ ವಿವರವಾಗಿ ಬರೆಯುತ್ತಾನೆ. ವಿವಾಹಧರ್ಮದ ವಿಷಯವಾಗಿ, ಅದು ಕರ್ತನಿಗೂ ಸಭೆಗೂ ಇರುವ ಸಂಬಂಧದ ಸಾದೃಶ್ಯವೆಂಬ ಅತಿ ಲಕ್ಷ್ಯವಾದ ಪ್ರಸ್ತಾಪವು ಈ ಪತ್ರಿಕೆಯಲ್ಲಿ ವಿಶೇಷವಾಗಿ ಬರದದೆ.

ವಿವಾಹವು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧದ ಸಾದೃಶ್ಯವಾಗಿದೆ.

ವ. ೨೨—೨೪.

೨೨. ದೇವರ ಭಯದಲ್ಲಿ ೧) ಒಬ್ಬರಿಗೊಬ್ಬರು ಅಧೀನರಾಗಿರ್ರಿ ೨). ೨೩. ಸ್ತ್ರಿಯರೇ, ಸ್ವಂತ ಗಂಡಂದಿರಿಗೆ, ಕರ್ತನಿಗೆಂದು ೩) ಅಧೀನರಾಗಿರ್ರಿ. ೨೩. ಯಾಕಂದರೆ ಗಂಡನು ಹೆಂಡತಿಯ ತಲೆಯಾಗಿದ್ದಾನೆ—ಕ್ರಿಸ್ತನು ಸಭೆಯ ತಲೆಯಾಗಿರುವ ಪ್ರ

ಕಾರವ್ಯೇ ೪); ಮಶ್ತು ಅವನ್ಯೇ ಶರೀರವ ರ್ಕ್ಷಕನು ೫). ೨೪. ಆದರೆ ಸಭೆಯು ಕ್ರಿಸ್ತನಿಗೆ ಹಾಗಾರ್ಾ, ಹಾಗೆಯೇ ಹೆಂಡತಿಯರು ಸ್ವಂತ ಗಂಡಂದಿರಿಗೆ ಎಲ್ಲಾವರಲ್ಲಿ ೬) ವಿಧೇಯರಾಗಿರಲಿ.

೧. ಪುಸ್ತಲಿಖಿತವಾದ ಕೆಲವು ಪೂರ್ವ ಗ್ರಂಥಗಳಲ್ಲಿ ಇಲ್ಲಿ ಕ್ರಿಸ್ತನ ಚಯದಲ್ಲಿ ಎಂದು ಬರದದೆ. ಪುರ್ಾಗಾಪರೂ, ಅಚಿಪ್ರಾಯ ಒಂದೇ. ಚಕ್ತರು ಪರಸ್ಪರಾಧೀನವಾಗಿರುವ ಧರ್ಮಕ್ಕೆ ದೇವಾಧೀನವಾಗಿರುವದು ಮೂಲವಾಗಿದೆ. ಒಡೆಯನ ಅಪ್ಪಣೆಯಿಂದ ಮತ್ತಾ ಬ್ಬನಿಗೆ ಊಳಿಗವನ್ನು ಮಾಡುವ ಆಳು ಇವನಿಗಲ್ಲ, ಅಪ್ಪಣೆ ಕಾಟ್ಟ ಒಡೆಯನಿಗೆ ಸೇವೆ ಮಾಡುತ್ತೇನೆಂದು ಚಾವಿನಿ ಕಾಳ್ಳುತ್ತಾನೆ. ಮಕ್ಕಳು ಪ್ರಿಯ ತಂದೆಗೆ ಚಯ ಪಡುವ ಪ್ರಕಾರ, ದೇವರ ಮಕ್ಕಳು ಕರ್ತನಿಗೆ ಪ್ರೀತಿಯಿಂದ ಚಯ ಪಡುತ್ತಾರೆ. ಈ ಚಯಕ್ಕೂ ಕೇಡಿನ ಚಾಪನಾನ್ವಿತವಾದ ಪೆದರಿಕೆಗೂ ಬಪಾಳ ವ್ಯತ್ಯಾಸವದೆ.

೨. ಪರರಿಗೆ ಮಾನಮರ್ಯಾದೆ ಮಾಡುವ ದೀನ ಮನಸ್ಸು ನಿಜಕ್ರೈಸ್ತರೆಲ್ಲರಿಗೆ ಸಪಾಜವಾಗಿದೆ. ರಾೀಮಾ. ೧೨, ೧೦ ಇತ್ಯಾದಿ, ಫಿಲಿ. ೨, ೩. ಗಲ. ೩, ೨೬. ೧ ಪೇತ್ರ. ೪, ೧೦. ಈ ಧರ್ಮಪಚನವು ಗ್ರಪಾಧರ್ಮದಲ್ಲಿ ವಿಶೇಷವಾಗಿ ಸಲ್ಲುತ್ತದೆ. ಕೃತಜ್ಞನಾದವನು ತನ್ನ ಸ್ಥಿತಿಗತಿಗೆ ಅನುಸಾರವಾದ ವಿಧೇಯತ್ವವನ್ನು ಕ್ರೈಕಾಳ್ಳುವದಕ್ಕೆ ಮನಸ್ಸುಳ್ಳವನಾಗಿರುವದರಿಂದ, ಈ ವಚನವು ಹಿಂದಿನ ತಾತ್ಪರ್ಯಕ್ಕೂ ಮುಂದಿನ ತಾತ್ಪರ್ಯಕ್ಕೂ ಯೋಗ್ಯವಾವ ಮಧ್ಯೋಕ್ತಿಯಾಗಿದೆ.

೩. ಕ್ರೈಸ್ತರಾದ ಹೆಂಡತಿಯರು ಕರ್ತನನ್ನು ಸೇವಿಸುವ ವಿಧೇಯತ್ವದಿಂದ ಗಂಡಂದಿರಿಗೆ ಒಳಗಾಗಿದ್ದಾರೆ. ಯಾಕಂದರೆ ಗಂಡನು ವಿವಾಹ ಸಂಬಂಧದಲ್ಲಿ ಕ್ರಿಸ್ತನ ಸ್ಥಳದಲ್ಲಿದ್ದಾನೆ. ೧ ಕೊರಿ. ೧೧, ೩. ಕೊಲೊ. ೩, ೧೮. ೧ ತಿಮೊ. ೨, ೧೨. ೧ ಪೇತ್ರ. ೩, ೧. ೫. ೬.

೪. ಕ್ರಿಸ್ತನು ಸಚಾಶಿರಸ್ಸಾಗಿರುವ ಪ್ರಕಾರ, ಗಂಡನು ಹೆಂಡತಿಗೆ ತಲೆಯಾಗಿದ್ದಾನೆಂಬ ವಾಕ್ಯವು ಚಕ್ತಿ ಇಲ್ಲದ ಮನುಷ್ಯರ ಲೌಕಿಕ ಸಂಸಾರಗತಿಗೆ ಅನಾನುಕೂಲವಾಗಿದ್ದರೂ, ಕ್ರಿಸ್ತನ ಆತ್ಮಕ್ಕೆ ಅಧೀನರಾದ ಚಕ್ತರ ವಿವಾಹಧರ್ಮಕ್ಕೂ, ದೇವರ ವಾಕ್ಯದ ವಿವಾಹಬಾಧನೆಗೂ ಯುಕ್ತವಾಗಿದೆ. ಅದೇನಂದರೆ: ೧) ದೇವರು ಸೃಷ್ಟಿಯಲ್ಲಿಯೇ ಮನುಷ್ಯರನ್ನು ತನ್ನ ಸ್ವರೂಪದ ಪ್ರಕಾರವಾಗಿ ನಿರ್ಮಿಸಿದ್ದರಿಂದ, ಅವರಿಗೂ ತನಗೂ, ಒಂದು ವಿಧವಾಗಿ ಸಾಮಾನ್ಯವಾದ ಅನ್ಯೋನ್ಯವನ್ನು ಸ್ಥಾಪಿಸಿದ್ದಾನೆ. ೨) ವಿಶೇಷವಾಗಿ ತನಗೂ, ಸ್ವಕೀಯ ಜನರಾದ ಇಸ್ರಾಯೇಲನವರಿಗೂ ಇರುವ ಸಂಬಂಧವು ವಿವಾಹವೆಂದು, ಹೇಳುತ್ತಾನೆ. ಕೀರ್ತ. ೪೫, ೧೦. ಪುರ್ಾನೆಯ. ೨, ೧೯. ಯೆಶಾ. ೫೪, ೫; ೬೨, ೪. ಯೆರೆ. ೩, ೨; ೩, ೮—೧೪. ೩) ಆದರೆ ಮನುಷ್ಯನಾಗಿ ಹುಟ್ಟಿದರಿಂದ ಕರ್ತನು ಮನುಷ್ಯರಿಗೆ ಸಜಾತೀಯವನಾಗಿ, ಅವರ ರಕ್ಷಣ್ಯಾರ್ಥವಾಗಿ ಸತ್ತು, ಆತನ ಶರೀರವೆಂದು ಹೆಸರ್ಗೊಂಡ ಸಭೆಯನ್ನು ಸ್ಥಾಪಿಸಿ, ತನ್ನ ಐಕ್ಯದಲ್ಲಿ ಶೇರಿಸಿದ್ದಾನೆ. ೪) ತನ್ನ ಆತ್ಮವನ್ನು ಕಾಟ್ಟು, ತನ್ನ ಶರೀರದಿಂದಲೂ ರಕ್ತದಿಂದಲೂ ಪೋಷಿಸಿ, ಅದರ ಮೂಲಜೀವವಾಗಿದ್ದಾನೆ. ಇದಕ್ಕೆ ಅನುಕೂಲವಾದ ವಿವಾಹಧರ್ಮವೇನಂದರೆ: ೧) ಗಂಡನೂ, ಹೆಂಡತಿಯೂ ಏಕ ಶರೀರವಾಗಿದ್ದಾರೆ. ೨) ಮನೆವಾರ್ತೆಯ ಸ್ಥಾಪಕನೂ, ಮೂಲಕನೂ ಆಗಿರುವ ಗಂಡನು ಈ ಶರೀರಕ್ಕೆ ತಲೆಯಾಗಿದ್ದಾನೆ. ೩) ಲೌಕಿಕ ಆತ್ಮಿಕವಾದ ಗೃಹಜೀವವು ಗಂಡನಿಂದಲೇ ಉಂಟಾಗ ಬೇಕು. ಅವನು ಕ್ರಿಸ್ತನಿಗೆ ಸದೃಶನಾಗಿಯೇ ಗೃಹರಕ್ಷಕನಾಗಿರುವದಿಲ್ಲ; ಯಾಕಂದರೆ ತಾನು ಹೆಂಡತಿಯ ಪ್ರಕಾರ ರಕ್ಷಣ್ಯಾವಶ್ಯಕನಾದ ಪಾಪಿಯಾಗಿದ್ದಾನೆ; ಆದರೆ ಮನೆಗೆ ಬಾೀಧಕನಾಗಿಯೂ ಯಾಜಕನಾಗಿಯೂ ಇದ್ದು, ಕರ್ತನ ದಿವಸದಲ್ಲಿ ತನ್ನ ಮನೆಯಲ್ಲಿ ಹುಟ್ಟಿದ ಎಲ್ಲಾ ಜೀವಗಳ ಲೆಖ್ಖವನ್ನು ಒಪ್ಪಿಸ ಬೇಕು — ಇದು ಗಂಡಸರ ಧರ್ಮವನ್ನು ಸೂಚಿಸುವ ಮುಂದಿನ ವಚನಗಳಲ್ಲಿ ಹೆಚ್ಚು ವಿವರವಾಗಿ ಬಾೀಧಿತವಾಗುತ್ತದೆ. ಹೆಂಗಸರ ಧರ್ಮವನ್ನು ಸೂಚಿಸುವ ಈ ಸ್ಥಳದ ತಾತ್ಪರ್ಯಕ್ಕೆ ಅನುಕೂಲವಾಗಿ, ಗಂಡನ ಅಧಿಕಾರವು ಮೊದಲು ಉದಾಹರಣ್ಯವಾಗುತ್ತದೆ.

೫. ಮುಂಚೆ ಹೇಳಿದ ಪ್ರಕಾರ, ಕ್ರಿಸ್ತನುತಾನು ರಕ್ಷಿಸಿದ ಸಭೆಯಂಬ ಶರೀರಕ್ಕೆ ತಲೆಯಾಗಿದ್ದಾನೆ. ಇದು ವಿವಾಹದಲ್ಲಿಯೂ ಹೆಚ್ಚು ಹೆಚ್ಚಾಗಿ ನೆರವೇರಬೇಕು.

೬. ಇದರಿಂದ ಹೆಂಡತಿಯರು ತಮ್ಮ ಗಂಡಂದಿರಿಗೆ ಅದೇ ಪ್ರಕಾರ ವಿಧೇಯರಾಗಿರ ಬೇಕೆಂಬ ವಿಧಿಯು ಹುಟ್ಟುತ್ತದೆ. ಈ ವಿಷಯವಾಗಿ ಪೂರ್ಣ ಸಾದೃಶ್ಯವು ತಾರುವದಿಲ್ಲ. ಆದರೆ ಕ್ರಿಸ್ತನು ಗಂಡನಿಗಿಂತ ಅತಿಶ್ರೇಷ್ಠನಾಗಿದ್ದಾಗ್ಯೂ, ಉಭಯತ್ರರಿಗೆ ಇರುವ ಸಾದೃಶ್ಯವು ಪೂರ್ಣವಾಗಿ ಪರಿಹಾರಗುವದಿಲ್ಲ. ಹೆಂಡತಿಯರು ತಮ್ಮ ಮನಸ್ಸಿಗೆ ವಿರೋಧವಾದ ಕಾರ್ಯಗಳಲ್ಲಿ ಸಹ ವಿಧೇಯರಾಗಿರ ಬೇಕು. ಮನುಷ್ಯರಿಗಿಂತ ದೇವರಿಗೆ ಹೆಚ್ಚಾಗಿ ವಿಧೇಯವಾಗಿರ ಬೇಕೆಂಬ (ಅಪಾ. ಕೃ. ೫, ೨೯.) ಅಪವಾದವು ಉಂಟು. ಆದ್ದರಿಂದ ನ್ಯಾಯಪ್ರಕಾರ ಆಳುವವನ ಅಪ್ಪಣೆಯು ದೇವರ ವಾಕ್ಯದ ಅಪ್ಪಣೆಗೆ ವಿರೋಧವಾಗಿ ತಾರುವಲ್ಲಿ ಹೆಂಡತಿಯು ಗಂಡನಿಗೆ ವಿಧೇಯಳಾಗಿ ನಡದು ಕಾಳ್ಳ ಬಾರದು. ಆದರೆ ಇದನ್ನು ಇಲ್ಲಿ ಹೇಳಲಿಕ್ಕೆ ಅಪಾಸ್ತಲನಿಗೆ ಕೆಲಸವಿರಲಿಲ್ಲ; ಯಾಕಂದರೆ ಅವನು ಕ್ರೈಸ್ತ ಗೃಹಧರ್ಮವನ್ನೇ ಉದಾಹರಿಸುತ್ತಾನೆ. ನಿಜಕ್ರೈಸ್ತನಾದ ಗಂಡನು ಹೆಂಡತಿಗೆ ದೇವರ ಆಜ್ಞೆಗೆ ವಿರೋಧವಾದ ಅಪ್ಪಣೆಯನ್ನು ಕಾಡದೆ ಇರುವದರಿಂದ, ಹೆಂಡತಿಯು ಅವನಿಗೆ ಎಲ್ಲಾ ವಿಷಯವಾಗಿ ವಿಧೇಯಳಾಗಿ ನಡದು ಕಾಳ್ಳ ಬಹುದು.

೨೫. ಪುರುಷರೇ, ನಿಮ್ಮ ಹೆಂಡತಿಯರನ್ನು (ಪ್ರೀತಿ ಮಾಡಿರಿ ೧)—ಕ್ರಿಸ್ತನು ಸಭೆಯನ್ನು (ಪ್ರೀತಿ ಮಾಡಿ ೨), ೨೬. ಅದನ್ನು ವಾಕ್ಯದಲ್ಲಿ ನೀರಿನ ತೊಳೆಯುವಿಕೆಯಿಂದ ಶುಚಿಸಿ ೩), ೨೭. ಪರಿಶುದ್ಧ ಮಾಡುವದಕ್ಕೂ, ಅದನ್ನುಕಳಂಕವೂ ಸುಕ್ಕೂ ಮೊದಲಾದವುಗಳಿಲ್ಲದೆ ೪), ಪರಿಶುದ್ಧವೂ ನಿರ್ಮಲವೂ ಆಗಿರುವ ಸಭೆಯಂನು ತನ್ನಮುಂದೆ ಮಹಿಮೆಯುಳ್ಳದಾಗಿ ನಿಲ್ಲಿಸುವದಕ್ಕೂ ೫), ಅದಕ್ಕ್ಯಾಸ್ಕರ ತನ್ನನ್ನು ಕೊಟ್ಟ ಹಾಗೆಯೇ. ೨೮. ಸ್ವಂತ ಶರೀರಗಳ ಹಾಗೆಯೇ ೬) ಗಂಡಸರು ತಮ್ಮ ಹೆಂಡತಿಯರನ್ನು ಪ್ರೀತಿ ಮಾಡ ತಕ್ಕದ್ದು ೭). ತನ್ನ ಹೆಂಡತಿಯನ್ನು ಪ್ರೀತಿ ಮಾಡುವವನು ತನ್ನನ್ನು ಪ್ರೀತಿ ಮಾಡುತ್ತಾನೆ. ೨೯. ಯಾಕಂದರೆ ಯಾವನಾದರೂ ತನ್ನ ಮಾಂಸವನ್ನು ಎಂದೂ ಹಗೆ ಮಾಡಿದ್ದು ಇಲ್ಲ; ಆದರೆ ಅದನ್ನು ಪೋಷಿಸಿ, ಕಾಪಾಡುತ್ತಾನೆ—ಕರ್ತನು ಸಭೆಗೆ ಮಾಡುವ ಪ್ರಕಾರವೇ ೮). ೩೦. ಯಾಕಂದರೆ ಅವನ ಮಾಂಸದವರಾಗಿಯೂ, ಅವನ ಎಲುಬಿನವರಾಗಿಯೂ ಇದ್ದು, ಅವನ ಶರೀರದ ಅಂಗಗಳಾಗಿದ್ದೇವೆ. ೩೧. ಇದಕ್ಕ್ಯಾಸ್ಕರ ಮನುಷ್ಯನು ತನ್ನ ತಂದೆ ತಾಯಿಗಳನ್ನು ಬಿಟ್ಟು, ತನ್ನ ಹೆಂಡತಿಗೆ ಕೂಡಿ ಕೊಳ್ಳುವನು; ಮತ್ತು ಅವರಿಬ್ಬರು ಒಂದೇ ಮಾಂಸವಾಗಿರುವರು. ೩೨. ಈ ಮರ್ಮವು ದೊಡ್ಡದಾಗಿದೆ ೯); ಆದರೆ ನಾನು ಕ್ರಿಸ್ತನನ್ನು ಕುರಿತೂ ಸಭೆಯನ್ನು ಕುರಿತೂ ಹೇಳುತ್ತೇನೆ. ೩೩. ಆದರೂ ನೀವೆಲ್ಲರು ೧೦) ಒಬ್ಬೊಬ್ಬನು ತನ್ನ ಹೆಂಡತಿಯನ್ನು ತನ್ನ ಹಾಗೆಯೇ ಪ್ರೀತಿ ಮಾಡಲಿ; ಮತ್ತು ಹೆಂಡತಿಯು ಗಂಡನಿಗೆ ಭಯ ಪಡಲಿ.

ಎಫೆ. ೫.

೧. ಅಬಲೆಯರು ವಿಧೇಯರಾಗಿರ ಬೇಕೇ ಸರಿ. ಆದರೆ ಬಲಿಷ್ಠರಾದ ಗಂಡಸರು ಪ್ರೀತಿಯಿಂದ ದೀನರಾಗಬೇಕು. ಸಭಾಶಿರಸ್ಸಾಗಿರುವ ಕ್ರಿಸ್ತನಿಗೆ ಅಧಿಕಾರದಲ್ಲಿ ಸದೃಶರಾಗಿರುವ ಪ್ರಕಾರ, ಸ್ವಾರ್ಥಪರಿತ್ಯಾಗ ಮಾಡುವ ಪ್ರೀತಿ ಇಲ್ಲಿ ಸಭಾ ಅವರು ಆತನಿಗೆ ಸದೃಶರಾಗಬೇಕು.

೨. ಕ್ರಿಸ್ತನು ಸಚಾರಕ್ಷಣ್ಯಾರ್ಥವಾಗಿ ಪ್ರಾಣಪರಿತ್ಯಾಗ ಮಾಡುವ ಪ್ರೀತಿಯನ್ನು ತೋರಿಸಿದ ಪ್ರಭಾಗೆ, ಗಂಡಸರು ಸಭಾ ಪೆಂಡತಿಯರಿಗೆ ಸಂಪೂರ್ಣವಾದ ಆತ್ಮಿಕ ಪ್ರೀತಿಯನ್ನು ಮಾಡ ತಕ್ಕದ್ದು. ಪೆಂಡತಿಯು ಚಕ್ತಿಯಿಲ್ಲದವಳೂ, ಬುದ್ಧಿಯಿಲ್ಲದವಳೂ, ಚಂಡಿಯೂ ಆಗಿದ್ದಾಳೆಂಬ ನೆವವು ಸಲ್ಲುವದಿಲ್ಲ; ಯಾಕಂದರೆ ಸಖೆಯು ಸಭಾ ಕ್ರಿಸ್ತನ ಪ್ರೀತಿಗೆ ಅಯೋಗ್ಯವಾಗಿದೆಂಬದು ಪ್ರತ್ಯಕ್ಷವಾಗಿದೆ.

೩. ತಾನು ಸಂಪೂರ್ಣ ಸಿದ್ಧಿಯಲ್ಲಿ ಶೇರಿಸ ಬೇಕೆಂದು ನಿಶ್ಚೈಸಿದ ಸಖೆಯ ಶುದ್ಧೀಕರಣವು ಯೇಸು ಕ್ರಿಸ್ತನ ಮಮತಾತ್ಮಿಶ್ಯವಾಗಿದೆ. ಅದನ್ನು ಸ್ನಾನವೆಂಬ ನೀರಿನಿಂದ ತಾಳದು (೧ ಕಾರಿ. ೬, ೧೧. ತೀತ. ೩, ೫.) ಶುದ್ಧ ಮಾಡಿದ್ದಾನೆ. (ಕರ್ತನು ಪುತ್ಥಾ. ೨೮. ಮರ್ಕ. ೧೬. ಕಾಟ್ಟ ಆಜ್ಞೆಯೂ, ಭಾಷೆಯೂ ಸ್ನಾನವ ಶಕ್ತಿಯಾಗಿವೆ.) ಕ್ರಿಸ್ತನ ಪುಣ್ಯದಿಂದ ನೀತಿಕೃಪೆಯನ್ನು ಪಡಾಂದಿದ ಸಖೆಯು ಆತನ ಆತ್ಮದಿಂದ ನೀತಿಸಿದ್ಧಿಯನ್ನು ಪಡದು ಕಾಳ್ಳುತ್ತದೆ.

೪. ಅದೇಪ್ರಕಾರ ಪೆಂಡತಿಯು ಕಾರತೆಯೂ, ಮಚ್ಚೆಯೂ ಇಲ್ಲದ ಪರಿಶುದ್ಧತ್ವವನ್ನು ಪಡಾಂದುವ ಪರ್ಯಂತ ಗಂಡನ ಪ್ರೀತಿಯು ಸಂತುಷ್ಟವಾಗಿರ ಬಾರದು.

೫. ಈ ಮಾತಿನಿಂದ ಕ್ರಿಸ್ತನ ರಕ್ಷಣ್ಯಾಕಾರ್ಯದ ಅಂತ್ಯೋದ್ದಿಶ್ಯವು ಸೂಚಿತವಾಗಿದೆ. ಅದೇನಂದರೆ: ಕ್ರಿಸ್ತಸಖೆಯು ಪರಿಶುದ್ಧತ್ವವೂ, ಮಹಿಮೆಯೂ ಉಳ್ಳದ್ದಾಗಿ, ದೇವರ ಸಾನ್ನಿಧ್ಯದಲ್ಲಿ ಪ್ರತ್ಯಕ್ಷವಾಗ ಬೇಕೆಂಬುವದು. ಈ ಎರಡು ಗುಣ ಜಾತೀದಾಗಿವೆ, ಪಾಠಾಗಂದರೆ, ಮಹಿಮೆಯು ಬಹಿಃಪರಿಶುದ್ಧತ್ವವಾಗಿದೆ, ಪರಿಶುದ್ಧತ್ವವು ಅಂತರ್ಮಹಿಮೆಯಾಗಿದೆ.

೬. ಪೆಂಗಸು ಆದಿಯಲ್ಲಿ ಗಂಡಸಿನಿಂದ ಹುಟ್ಟಿದ ವೃತ್ತಾಂತತ್ವವು. ೧ ಮೋಶೆ. ೨ಲ್ಲಿ ಬರದಪೆ. ೧ ಕಾರಿ. ೭, ೪. ಸ್ತ್ರೀ ನಿರ್ಮಾಣದ ಸಂಗತಿಯು ಕೃ ಎಂಬದರಿಂದ ಹುಟ್ಟಿದನಾರೀ ಎಂಬ ಪದದಿಂದ ಸಂಸ್ಕೃತ ಭಾಷೆಯಲ್ಲಿ ಸಭಾ ಜಾಡೆಯಾಗಿ ಕಾಣುತ್ತದೆ. ಅವರಿಬ್ಬರು ಎರಡು ಅಲ್ಲ, ಒಂದೇ ದೇಹವಾಗಿದ್ದಾರೆ. ಮತ್ತಾ. ೧೯, ೬. ಹೀಗಿರಲಾಗಿ ನಿಜ ದೇಹದ್ವೇಷವು ಸ್ವಭಾವವಿರೋಧವಾಗಿರುವ ಪ್ರಕಾರ, ಪತಿಗೆ ಸತಿಯಲ್ಲಿ ಪ್ರೀತಿಯಿಲ್ಲದೆ ಇರುವದು ಸ್ವಭಾವವಿರೋಧವಾಗಿರುವದು.

೭. ಪ. ೨೮—೩೨. ಅಪಾಸ್ತಲನು ಕ್ರಿಸ್ತನಿಗೂ, ಸಖೆಗೂ ಇರುವ ಅನ್ಯೋನ್ಯದ ಸಾದೃಶ್ಯದಿಂದ ದಂಪತಿಗಳ ಪ್ರೀತಿಧರ್ಮವನ್ನು ಸ್ಥಾಪಿಸುತ್ತಾನೆ.

೮. ಕ್ರಿಸ್ತನಿಗೂ, ಸಖೆಗೂ ಇರುವ ಐಕ್ಯವು ಆತ್ಮಿಕವಾಗಿ ಮಾತ್ರವಲ್ಲ, ದೈಹಿಕವಾಗಿಯೂ ಆದೆ.

೯. ಈ ಮಹಾ ಮರ್ಮವು ಯಾವದಂದರೆ: ಕ್ರಿಸ್ತನಿಗೂ, ಸಖೆಗೂ ಇರುವ ಐಕ್ಯವು ವಿವಾಹಸಾದೃಶ್ಯವೆಂಬುವದು. ದೇವಪಾಕ್ಯ ಬೋಧನೆಯನ್ನು ಚನ್ನಾಗಿ ಬಲ್ಲವರು ಮಾತ್ರ ಅದನ್ನು ತಿಳಿದು ಕಾಳ್ಳ ಅಧಿಕಾರಿಗಳಾಗಿದ್ದಾರೆ. ರೋಮಾಯರ ಪ್ರತಿ ಕ್ರೈಸ್ತ ಸಖೆಯು, ಸನ್ಯಾಸಿಗಳನ್ನಿಸಿ ಕಾಳ್ಳುವ ಯಾಜಕರ ಅಧಿಕಾರವನ್ನು ಮರ್ಮಾಚರಣೆಗಳ ಆಧಿಕ್ಯದಿಂದ ಪೆಚ್ಚಿಸುವ ಉದ್ದಿಶ್ಯವಾಗಿ ವಿವಾಹಪದ್ಧತಿಯು ಮರ್ಮಾಚರಣೆಯೆಂದು, ಬೋಧಿಸುತ್ತದೆ. ಆದರೆ ಪೌಲನು ವಿವಾಹಧರ್ಮವು ಮರ್ಮಾಚಿಪ್ರಾಯ ಉಳ್ಳದೆಂದು ಉದಾಹರಿಸಿದರೂ, ಅದು ದೇವಾನ್ಯೋನ್ಯಮೂಲಕವಾದ, ದೇವನಿದೇಶಿತ, ದೃಶ್ಯಚಿಪ್ಪೆಗಳುಳ್ಳ, ಮರ್ಮಾಚರಣೆಯಂದು ಪೇಳುವದು ನರಕಲ್ಪಿತ ಬೋಧನೆಯಾಗಿದೆ. ಸ್ನಾನ ರಾತ್ರಿಭೋಜನ ಇವೆರಡೇ ನಿಜ ಮರ್ಮಾಚರಣೆಗಳಾಗಿವೆ.

೧೦. ಈ ಮಾತಿನಿಂದ ಅಪಾಸ್ತಲನು ೨೨ನೆ ವಚನದಲ್ಲಿ ತಾಡಗಿದ ದಂಪತಿಗಳ ಉದ್ಬೋಧನೆಯನ್ನು ಮುಗಿಸುತ್ತಾನೆ. ಅದರ ಸಾರಾಂಶವೇನಂದರೆ: ಪತಿಯು ಪ್ರೀತಿಯಿಂದ ಸತಿಗೆ ಪೂರ್ಣಾನ್ಯೋನ್ಯನಾಗಬೇಕು; ಆದರೆ ಸತಿಯು ಪತಿಗೆ ಅನ್ಯೋನ್ಯಳಾಗಿದ್ದರೂ, ತನಗೂ, ಅವನಿಗೂ ಇರುವ ತಾರತಮ್ಯವನ್ನು ಮರೆಯದೆ, ಪತಿಯಲ್ಲಿ ಕ್ರಿಸ್ತಭಾವನೆಯಿಟ್ಟು ಮಾನ ಮರ್ಯಾದೆಯಿಂದ ವಿಧೇಯಳಾಗಿರ ಬೇಕು.

೯೦೪ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಪ್ರೀ.

ಎಫೆ. ೬, ೧—೪.

ಪಿತೃಪುತ್ರರ, ಆಳಾಡೆಯರ, ಧರ್ಮವು. ಸ. ೬, ೧—೯.

೧. ಮಕ್ಕಳ್ಳೇ, ನಿಮ್ಮ ಹೆತ್ತವರಿಗೆ ಕರ್ತನಲ್ಲಿ [೧] ವಿಧೇಯರಾಗಿರ್ರಿ, ಯಾಕಂದರೆ ಅದು ನ್ಯಾಯವೇ [೨]. ೨. ನಿನಗೆ ಒಳ್ಳೇದಾಗುವ ಹಾಗೆಯೂ, ನೀನು ಭೂಮಿಯ ಮೇಲೆ ದೀರ್ಘಾಯುಷ್ಮದವನಾಗುವ ಹಾಗೆಯೂ [೩], ೩. ನಿನ್ನ ತಂದೆಯನ್ನೂ ತಾಯಿಯನ್ನೂ ಸನ್ಮಾನಿಸು. ಇದು ವಾಗ್ದತ್ತವುಳ್ಳ ಮೊದಲನೇ ಆಜ್ಞೆಯಾಗಿದೆ [೪].

೧. ಇದು ಕರ್ತನ ಅಪ್ಪಣೆಯಿಂದಲೂ, ಕರ್ತನ ಮನಸ್ಸಿನ ಪ್ರಕಾರವಾಗಿಯೂ, ಕರ್ತನ ಅನ್ಯೋನ್ಯದಲ್ಲಿಯೂ, ಕರ್ತನ ಬಲದಿಂದಲೂ ಆಗ ಬೇಕು.

೨. ದೇವರು ಅದನ್ನು ಆಜ್ಞಾಪಿಸುವದಲ್ಲದೆ, ಕಾಲಾ. ೩, ೨೦., ಅದು ಸ್ವಾಭಾವಿಕ ಧರ್ಮವಾಗಿದೆ.

೩. ಪಾತ್ರ ಆಜ್ಞೆಗಳಲ್ಲಿ ಬರದಿರುವದೇನಂದರೆ: ನಿನ್ನ ದೇವರಾದ ಕರ್ತನು ನಿನಗೆ ಕಾಡುವ ದೇಶದಲ್ಲಿ, ಅಂದರೆ ಕನಾನ ದೇಶದಲ್ಲಿ. ಪೌಲನು ಇದಕ್ಕೆ ಪ್ರತಿಯಾಗಿ ಭೂಮಿಯಲ್ಲಿ ಎಂದು ಬರೆಯುತ್ತಾನೆ. ಯಾಕಂದರೆ ಕ್ರೈಸ್ತರು ಪ್ರತ್ಯೇಕವಾದ ದೇಶದಲ್ಲಿ ವಾಸ ಮಾಡ ತಕ್ಕ ಪ್ರತ್ಯೇಕ ಜನಾಂಗವಾಗಿರುವದಿಲ್ಲ. ಈ ಆಜ್ಞೆಯನ್ನು ಕೈಕಾಳ್ಳುವವರಿಗೆ ಸಪಾಸ್ರತರವಾಗಿ ನೆರವೇರಿದ ಈ ವಾಗ್ದತ್ತದ ಪ್ರಕಾರ ಆಶೀರ್ವಾದವು, ಮೀರುವವರಿಗೆ ಶಾಪವು ಬರುತ್ತದೆ ಎಂಬ ಬಾಧ್ಯತೆಯನ್ನು ಮಕ್ಕಳಿಗೆ ಪೇಳುವದು ಯುಕ್ತವಾಗಿದೆ. ಗಾದೆ. ೩೬, ೧೭; ೧೯, ೨೬. ಪುರಂದರದಾಸನು ಸಪಾ, ತಂದೆ ತಾಯಿಗಳ ವಂದಿಸಲಾಂದು ಸ್ವಾನವೆಂದು, ಪೇಳುತ್ತಾನೆ. ಆದರೆ ದೇವರ ವಾಗ್ದತ್ತಗಳನ್ನು ಯಥಾರ್ಥವಾದ ವಿಶ್ವಾಸದಿಂದಲೂ, ಪಿನಯವಾದ ಬುದ್ಧಿಯಿಂದಲೂ ತಿಳಿಯ ತಕ್ಕದ್ದು. ಈ ವಾಕ್ಯದ ಪ್ರಕಾರ ಆಗುವದು ಸಾಧಾರಣವಾದದ್ದೆಂದು, ಲೌಕಪ್ರಖ್ಯಾತವಾದ್ದೇ ಸರಿ. ಆದರೆ ಪೂರ್ವ ವಯಸ್ಸಿನಲ್ಲಿ ಸಾಯುವವರು ತಂದೆ ತಾಯಿಗಳನ್ನು ಸನ್ಮಾನಿಸಲಿಲ್ಲವೆಂದು ಉಪಮಾನಪ್ರಮಾಣ ಮಾಡ ಕೂಡದು. ವಿಶ್ವಾಸದಿಂದ ಕ್ರಿಸ್ತನ ಮುಖಾಂತರ ದೇವರ ಕೃಪಾಪ್ರಸಾದವನ್ನು ಪಡೆದಿದವರು ಪೂರ್ವ ವಯಸ್ಸಿನಲ್ಲಿ ಸತ್ತಾಗ್ಯೂ, ಅವರು ಶಪಿತರೆಂದು, ನೆನಸ ಕೆಲಸವಿಲ್ಲ. ಯಾಕಂದರೆ ಇಹವನ್ನು ಬೇಗ ಬಿಟ್ಟು, ಕ್ರಿಸ್ತನ ಬಳಿಯಲ್ಲಿ ಶೇರುವದು ಇಕ್ಕನಿಗೆ ನಷ್ಟವಲ್ಲ.

೪. ೨ ಮೋಶೆ. ೨೦, ೬. ಮೊದಲನೆ ಆಜ್ಞೆಗೆ ಒಂದು ಜಯಪ್ರದರ್ಶನವಾಕ್ಯವೂ, ನನ್ನನ್ನು ಪ್ರೀತಿ ಮಾಡುವ ಸಪಾಸ್ರ ಸಪಾಸ್ರ ಜನರಿಗೆ ಕರುಣೆಯನ್ನು ತೋರಿಸುತ್ತೇನೆಂಬ ವಾಗ್ದತ್ತವೂ, ಶೇರುತ್ತವೆ. ಆದರೆ ಈ ವಾಕ್ಯವು ಸಾಮಾನ್ಯಾಭಿಪ್ರಾಯವುಳ್ಳದ್ದಾಗಿದೆ. ವಿಶೇಷವಾದ ಮೊದಲನೆ ವಾಗ್ದತ್ತವು ತಂದೆ ತಾಯಿಗಳನ್ನು ಸನ್ಮಾನಿಸು ಎಂಬ ಆಜ್ಞೆಯನ್ನು ಬಲಪಡಿಸುವದಕ್ಕಾಗಿ ಕಾಟ್ಟದೆ.

೪. ಮಕ್ಕು, ತಂದೆಗಳ್ಳೇ [೧], ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ [೨], ಅವರಂನು ಕರ್ತನ ಶಿಕ್ಷೆಯಲ್ಲಿಯೂ ಉಪದೇಶದಲ್ಲಿಯೂ ಬೆಳಿಸಿರಿ [೩].

೧. ತಂದೆಗಳು ಮಕ್ಕಳನ್ನು ಶಿಕ್ಷಿಸುವ ಪಂಗಿನಲ್ಲಿರುವದರಿಂದ, ಪೌಲನು ಅವರಿಗೆ ಈ ಉದ್ಯೋಗವನ್ನು ಚನ್ನಾಗಿ ನಡಿಸುವದಕ್ಕೆ ಬೇಕಾದ ಬುದ್ಧಿಯನ್ನು ಕ್ಷಪ್ತವಾಗಿ ಪೇಳುತ್ತಾನೆ.

೨. ಮಕ್ಕಳನ್ನು ತಿದ್ದುಪಾಟು ಮಾಡುವವರಿಗೆ ಕಾಠಿಣ್ಯವು ಅಲ್ಲ, ಪ್ರೀತಿಯೇ ವಿಶೇಷಾವಶ್ಯಕವಾಗಿದೆ. ಮಕ್ಕಳನ್ನು ಪೆಚ್ಚಾಗಿ ದಂಡಿಸಿದರೆ, ಮೊಂಡರಾಗಿ ಪರಿಣಾಮಗುತ್ತಾರೆ. ಮಕ್ಕಳಿಗೆ ಗುಣವಾಗ ಬೇಕಾದರೆ, ಅವರು ಹಿರಿಯರಿಗೆ ಪ್ರೀತಿಯಿಂದಲೇ ವಿಧೇಯರಾಗಬೇಕು. ಆದರೆ ಪ್ರೀತಿಯು ಪ್ರೀತಿಯಿಂದ ಮಾತ್ರವೇ

ಎಫೆ. ೬, ೫—೯.

ಪುಟ್ಟುತ್ತದೆ. ದೇವರು ಸಪು ಪಾಪಿಗಳಾದ ಮನುಷ್ಯರ ಪೃದಯಗಳನ್ನು ಪ್ರೀತಿಯ ಸುವಾರ್ತೆಯಿಂದಲೇ ಶೆಳೆಯುತ್ತಾನೆ.

೩. ಕ್ರೈಸ್ತರು ತಮ್ಮ ಮಕ್ಕಳಿಗೆ ಪ್ರೀತಿಯ ಆಸಕ್ತಿಯಿಂದ ಯೇಸು ಕ್ರಿಸ್ತನ ವಾಕ್ಯವನ್ನೂ, ಆತನ ಪ್ರೀತಿಯ ಮರ್ಮವನ್ನೂ ಶಿಳಿಸುವದು ಉತ್ತಮ ಬುದ್ಧಿ ಸಾಧನೆಯೆಂದು ಶಿಳಿದು ಕಾಳ್ಳ ತಕ್ಕದ್ದು. ಕ್ರಿಸ್ತನನ್ನು ಪ್ರೀತಿ ಮಾಡುವ ಮಕ್ಕಳು ತಂದೆ ತಾಯಿಗಳನ್ನು ಸಪು ಪ್ರೀತಿ ಮಾಡುವರು.

೫. ದಾಸರ್ಯೆ, ಮಾಂಸದ ಪ್ರಕಾರ್ವಾದ ಯಜಮಾನರಿಗೆ೧) ಭಯದಿಂದಲೂ, ನಡುಗಿನಿಂದಲೂ ೨), ನಿಮ್ಮ ಹೃದಯಗಳ ಯಥಾರ್ಥದಲ್ಲಿ೩) ಕ್ರಿಸ್ತನಿಗೆಂದು ೪) ವಿಧ್ಯೆಯರಾಗಿರ್ರಿ. ೬. ಕಣ್ಣುಸ್ಯೆವೆಯಿಂದ ಮನುಷ್ಯರನ್ನು ಮೆಚ್ಚಿಸುವವರಾಗಿ ಅಲ್ಲ, ೭. ಕ್ರಿಸ್ತನ ದಾಸರಾಗಿ ದ್ಯೆವರ ಚಿತ್ತವನ್ನು೫) ಹೃದಯದಿಂದ ಮಾಡಿ, ಸುಚಿತ್ತದಿಂದ ಮನುಷ್ಯರಂನಲ್ಲ, ೮. ಕರ್ತನನ್ನು೬) ನ್ಯೋಪಿಸಿ, ದಾಸನಾಗಲಿ, ಸ್ವತಂತ್ರನಾಗಲಿ, ಒಬ್ಬೊಬ್ಬನು ಒಳ್ಳೆಯದ್ಯೋನಾದರೂ ಮಾಡುವನ್ಯೊ೭), ಅದನ್ನು ಕರ್ತನಿಂದ ಹೊಂದುವನೆಂದು ಶಿಳಿದು ಕಾಳ್ಳಿರಿ. ೯. ಮತ್ತು, ಯಜಮಾನರ್ಯೆ, ಹೆದರಿಸುವದನ್ನು ಬಿಟ್ಟು ೮), ನಿಮಗೂ ಯಜಮಾನನು೯) ಪರಲ್ಯೋಕದಲ್ಲಿ ಇದ್ದಾನೆಂದೂ, ಅವನ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲವೆಂದೂ ಶಿಳಿದು, ಅವರಿಗೆ ಹಾಗೆಯೆ೧೦) ಮಾಡಿರಿ.

೧. ಕ್ರೈಸ್ತರಾದ ಆಳುಗಳಿಗೂ ಒಡೆಯರಿಗೂ ದೇವರು ಯಜಮಾನನಾಗಿದ್ದಾನೆ. ವ. ೯. ಆದರೆ ಆಳುಗಳಿಗೆ ಭೂಮಿಯಲ್ಲಿಯೂ ಯಜಮಾನರು ಇದ್ದಾರೆ. ಇವರ ಸೇವೆಯಿಂದ ದಿವದಲ್ಲಿರುವ ಯಜಮಾನನಿಗೆ ಮಾಡುವ ಸೇವಾಸಕ್ತಿಯನ್ನು ತಾಳಿರಿಸ ಬೇಕು.

೨. ಚಕ್ಕರಾದ ಆಳುಗಳು ಕಳ್ಳರಂತೆ ಪೆದರದೆ, ತಮ್ಮ ಒಡೆಯರನ್ನು ಪ್ರೀತಿ ಮಾಪಿದರೂ, ಅವರು ಸರ್ವಯಜಮಾನನಾದ ದೇವರ ಸ್ಥಾನಪಲ್ಲಿದ್ದಾರೆಂದೂ, ತಮ್ಮ ಸೇವಾವೃಶಿಯು ದೇವರ ದೃಷ್ಟಿಯಲ್ಲಿ ನಡಿಯುತ್ತದೆಂದೂ, ಯಾವಾಗಲೂ ಚಾವಿಸಿ ಕಾಳ್ಳುತ್ತಾರೆ. ೧ ತಿಮೊ. ೬, ೧ ಇತ್ಯಾದಿ. ತೀತ. ೨, ೯. ೧ ಪೇತ್ರ. ೨, ೧೮.

೩. ಅಂದರೆ, ಎರಡು ಬಗೆಯದೆ.

೪. ಇದೇ ಮಾತು ಪೌಂಗಸರ ಉದ್ಬಾಧನೆಯಲ್ಲಿ ಶೇರಿಯದೆ. ಸ. ೫, ೨೨. ಆ ಕಾಲದಲ್ಲಿ ಮನೆಯಾಳುಗಳ ಅವಸ್ಥೆ ಬಪಳ ಕಠಿಣವಾಗಿತ್ತು. ಆದಾಗ್ಯೂ ಅಪಾಸ್ತಲನು ಅದನ್ನು ತಿದ್ದಲೆಸಗುವದರ ಪಾರ್ಶ್ವ ಅದನ್ನು ಬೇಗ ಪರಿಹರಿಸುವದಕ್ಕೆ ಯತ್ನೈಸುವದಿಲ್ಲ. ಪಾಗಾದರೆ ಈ ಕಾಲದಲ್ಲಿರುವ ಆಳುಗಳು ತಮ್ಮ ಸ್ಥಿತಿಯು ಬಪಳ ಲಘುವಾಯಿತೆಂದು, ಸಂತೋಷದಿಂದ ದೇವರನ್ನು ಸ್ತುತಿಸಿ, ಯಜಮಾನರಿಗೆ ಯಥಾರ್ಥವಾಗಿ ಸೇವೆ ಮಾಡ ಬೇಕು.

೫. ತಾವು ದೇವರ ಚಿತ್ತದ ಪ್ರಕಾರ ಮನೆಯಾಳುಗಳಾಗಿ ಪುಟ್ಟಿದ್ದೇವೆಂದು, ಚಕ್ಕರಾದ ಆಳುಗಳು ನೆನಸಿ ಕಾಂಡು, ತಮ್ಮ ಸೇವೆಯಿಂದ ದೇವರನ್ನು ಮೆಚ್ಚಿಸುವದಕ್ಕೆ ಯಜಮಾನರ ಅಪ್ಪಣೆಗಳನ್ನು ದೇವರ ಆಜ್ಞೆಯಂತೆ ಕೈಕಾಳ್ಳ ತಕ್ಕದ್ದು.

೬. ದೇವರು ಪೃದಯಜ್ಞನಾಗಿದ್ದಾನೆ. ೧ ಪೇತ್ರ. ೨, ೧೮—೨೦.

೭. ದೇವರಿಗಾಗಿ ಮಾಡಿದ ಕೆಲಸದ ಫಲವು ಸಪು ದೇವರಿಂದ ಬರುತ್ತದೆ. ಕಾಲಾ. ೩, ೨೪. ಇದನ್ನು ಮುಖಸೇವೆ ಮಾಡುವವರು ನೆನಸುವದಿಲ್ಲ.

೮. ಆಳುಗಳನ್ನು ಭಯದಿಂದಲೇ ನಡಿಸುವ ಒಡೆಯರಲ್ಲಿ ಬಾಯಿಂದಲೂ, ಕೈಯಿಂದಲೂ ಪೆದರಿಸುವ ಅಭ್ಯಾಸವು ಪೆಚ್ಚು ಪೆಚ್ಚಾಗುವದು.

ಎಫೆ. ೬, ೧೦—೧೩.

೯. ಒಡೆಯರು ತಮಗೂ, ತಮ್ಮ ಆಳುಗಳಿಗೂ ಒಂದೇ ನ್ಯಾಯದ ಪ್ರಕಾರ ತೀರ್ಪು ಮಾಡುವ ಒಬ್ಬನೇ ಯಜಮಾನನಿದ್ದಾನೆಂಬ ಜಾವನೆಯಿಂದ ದೇವರ ವಾಕ್ಯಾನುಸಾರವಾಗಿ ನಡದು ಕಾಳ್ಳ ಬೇಕು.

೧೦. ನೀವು ಸಭಾ ನಿಯಮಾಧಿಕಾರವನ್ನು ನಡಿಸುವದರಲ್ಲಿ ಯಾವಾಗಲೂ ಒಡೆಯನಾದ ಕರ್ತನನ್ನು ನೆನಸಿ ಕಾಂಡು, ಅವರನ್ನು ನ್ಯಾಯವಾಗಿ ಆಳಿ ಕಾಳ್ಳ ಬೇಕು.

೫) ಆತ್ಮಿಕ ಯುದ್ಧಾದ್ಭಾಧನೆಯು. ಸ. ೬, ೧೦—೨೦.

ಯುದ್ಧವು.

೧೦. ಕಡೆಯಲ್ಲಿ, ನನ್ನ ಸಹೋದರರ್ಯ, ಕರ್ತನಲ್ಲಿಯೂ ಅವನ ಶಕ್ತಿಯ ತ್ರಾಣದಲ್ಲಿಯೂ ಬಲಗೊಳ್ಳಿರಿ ೧). ೧೧. ನೀವು ಪಿಶಾಚನ ಉಪಾಯಗಳಿಗೆ ೨) ಎದುರು ನಿಲ್ಲಶಕ್ತರಾಗುವ ಹಾಗೆ, ದೇವರ ಸರ್ವಾಯುಧಗಳನ್ನು ೩) ಧರಿಸಿ ಕೊಳ್ಳಿರಿ. ೧೨. ಯಾಕಂದರೆ ರಕ್ತ ಮಾಂಸಕ್ಕೆ ವಿರೋಧವಾಗಿ ಅಲ್ಲ ೪), ದೌರೆಶನಗಳಿಗೂ ೫), ಅಧಿಕಾರಗಳಿಗೂ, ಈ ಯುಗದ ಅಂಧಕಾರದ ಲೋಕಾಧಿಪತಿಗಳಿಗೂ, ಆಕಾಶಗಳಲ್ಲಿರುವ ದುಷ್ಟವಾದ ಆತ್ಮಗಳಿಗೂ ೬) ವಿರೋಧವಾಗಿ, ನಮಗೆ ಹೋರಾಟ ಉಂಟು. ೧೩. ಆದದರಿಂದ, ಕೆಟ್ಟ ದಿನದಲ್ಲಿ ೭) ಎದುರು ನಿಲ್ಲಲೂ, ಎಲ್ಲವುಗಳನ್ನು ಜೈಸಿ ನಿಲ್ಲಲೂ, ಶಕ್ತರಾಗುವ ಹಾಗೆ, ದೇವರ ಸರ್ವಾಯುಧಗಳನ್ನು ತೆಗದು ಕೊಳ್ಳಿರಿ.

೧. ಅಪೊಸ್ತಲನು ಪತ್ರಿಕೆಯ ಅಂತ್ಯದಲ್ಲಿ ಮೊದಲು ಸಖೆಯವರಿಗೆ ಸಭೋದರರೆಂದು ಹೇಳುತ್ತಾನೆ. ಈ ಸಂಬೋಧನವು ಯುದ್ಧದಲ್ಲಿ ಜಾತೆಗಾರರನ್ನು ಧೈರ್ಯ ಪಡಿಸುವ ಚಟನಿಗೆ ಉಚಿತವಾಗಿದೆ. ಕ್ರೈಸ್ತಧರ್ಮಾಚರಣೆಯು ಅಂಧಕಾರರಾಜ್ಯಬಲದ ಸಂಗಡ ನಡೆಯುವ ಕಾಳಗವೆಂದು, ಚನ್ನಾಗಿ ತಿಳಿದು ಕಾಂಡು ಕಾಲಾ. ೨, ೧; ೧, ೨೯; ೪, ೧೨. ಫಿಲಿ. ೧, ೩೦. ೧ ಥೆಸ್ಸ. ೨, ೨. ೧ ತಿಮೊ. ೬, ೧೨. ೨ ತಿಮೊ. ೪, ೭. ೧ ಕೊರಿ. ೯, ೨೫. ಇಬ್ರಿ. ೧೨, ೧., ಪೌಲನು ಯುದ್ಧವೆಂಬ ಪದವನ್ನು ಅನೇಕ ಸ್ಥಳಗಳಲ್ಲಿ ಪ್ರಯೋಗಿಸುತ್ತಾನೆ. ಆ ಸ್ಥಳಗಳಲ್ಲಿ ಬರಪದ್ದು ಉಪಮಾನೋಕ್ತಿಯಲ್ಲ, ಸಭಾಜೋಕ್ತಿಯಂದು, ಯುದ್ಧದಲ್ಲಿ ಶೇರಿದವರಿಗೆ ತಿಳಿಯುತ್ತದೆ.

೨. ಸೈತಾನನು ಮನುಷ್ಯರನ್ನು ವಶ ಮಾಡಿ ಕಾಳ್ಳುವ ಸಾಮದಾನ ಭೇದ ದಂಡಾದಿಗಳು ನಾನಾ ವಿಧವಾಗಿವೆ. ಆಗೈ ಕೆಟ್ಟದ್ದು ಒಳ್ಳೇದೆಂದು ನೆನಸುವ ಭ್ರಾಂತಿಯನ್ನು, ಆಗೈ ದೇವರ ವಾಕ್ಯಕ್ಕೆ ವಿರೋಧವಾದದ್ದು ತತ್ಕಾಲಕ್ಕೆ ಅನಿಷಿದ್ಧವಾದದ್ದೆಂಬ ಜಾವನೆಯನ್ನು, ಆಗೈ ಅವಿಶ್ವಾಸದ ಸಂಶಯಗಳನ್ನು, ಆಗೈ ವ್ಯರ್ಥ ಭಯವನ್ನು, ಆಗೈ ಇಂದ್ರಜಾಲವಾದ ಆಶೆಯನ್ನು, ತನ್ನ ಮಾತಿಗೆ ಕಿವಿ ಕಾಡುವವರ ಮನಸ್ಸಿನಲ್ಲಿ ಹುಟ್ಟಿಸುತ್ತಾನೆ. ಅವನು ನಡಿಸುವದೆಲ್ಲಾ ಸುಳ್ಳು; ಸುಳ್ಳೆಲ್ಲಾ ಅವನಲ್ಲಿ ಶೇರುತ್ತದೆ. ಸತ್ಯದಲ್ಲಿ ನೆಲೆಯಾದವನ ಮೇಲೆ ಮಾತ್ರ ಅವನಿಗೆ ಬಲವಿಲ್ಲ.

೩. ಸರ್ವಾಯುಧವು ದೇವರದೆಂದು ಹೇಳಿದೆ; ಯಾಕಂದರೆ ಅದು ಮನುಷ್ಯನಿಗೆ ಸಹಜವಾದದ್ದಲ್ಲ, ಅವನ ಸಾಧನೆಯಿಂದ ಸಂಪಾದ್ಯವಾದದ್ದಲ್ಲ. ಅದನ್ನು ಉಂಟು ಮಾಡಿ, ಕೃಪೆಯಿಂದ ಚಕ್ತನಿಗೆ ಕಾಡುವವನು ದೇವರೇ. ಅದು ವಿಶ್ವಾಸಯುದ್ಧದಲ್ಲಿ ಕೆಡದೆ, ಚಟನನ್ನು ರಕ್ಷಿಸುತ್ತದೆ. ದೇವರ ಪದ್ಧತೀ ಪ್ರಕಾರ ಅದು ಬೇಡುವವರಿಗೆ ಶಿಕ್ಕುವದು.

೪. ಅಂದರೆ, ಮಾಂಸ ಜಾವದವರಾದ ಮರ್ತ್ಯ ಮನುಷ್ಯರ ಸಂಗಡ.

ಎಫೆ. ೬, ೧೪—೨೦.

೫. ಶತ್ರುಗಳ ಅರಸನ ಪೆಸರು ೧೧ನೆ ಪದ್ಯದಲ್ಲಿ ಬರದದೆ. ಇದರಲ್ಲಿ ಅವನ ರಾಜ್ಯದ ವಿಶೃಮಾನವು ಕಾಂಚ ಸೂಚಿತವಾಗಿದೆ. ಅಂಧಕಾರರಾಜ್ಯವ ನಾಯಕರು ಪಶಿತ ದೂತರಾಗಿರುವದರಿಂದಲೂ, ಸೈತಾನನು ಆ ರಾಜ್ಯವನ್ನು ದೇವರಂತೆ ಆಳುತ್ತಾ ಬರುವದರಿಂದಲೂ, ಸೈತಾನನ ರಾಜ್ಯದಲ್ಲಿ ದೇವರಾಜ್ಯಕ್ರಮಕ್ಕೆ ಸದೃಶವಾದ ಅಧಿಕಾರ ಉದ್ಯಾಗಗಳ ಪೆಸರುಗಳು ಪ್ರಯೋಗವಾಗಿವೆ. ಸ. ೧, ೨೧; ೨, ೧೨. ಕಾಲಾ. ೧, ೧೬.

೬. ಗ್ರೀಕದಲ್ಲಿ "ದಿವದ ಸ್ಥಾನಗಳಲ್ಲಿ" ಎಂದು ಸೂಚಿಸುವ ಪದವು ಬರದದೆ. ಇದರ ಅಭಿಪ್ರಾಯವು ಮರ್ಮವಾಗಿದೆ. ಪೌಲನು ಅವರು ದಿವದ ಸ್ಥಾನಗಳಲ್ಲಿ ಇದ್ದಾರೆಂದು ತಿಳಿಸುತ್ತಾನೋ, ಇದ್ದರೆಂದು ತಿಳಿಸುತ್ತಾನೋ, ಇದರ ನಿಶ್ಚಯವು ತಾರುವದಿಲ್ಲ. ಅವರು ಪೂರ್ಣವಾಗಿ ಸ್ಥಾನಭ್ರಷ್ಟರಾಗುವದು ಪ್ರಕ. ೧೨, ೯ಲ್ಲಿ ಬರದದೆ.

೭. ಅಂದರೆ, ವಿಶೇಷವಾದ ದ್ರಾಪಶಾಧನೆಯ ಸಮಯದಲ್ಲಿ. ಚಕ್ತನ ಜೀವಕಾಲವೆಲ್ಲಾ ಕಾಳಗಕಾಲವಾಗಿದೆ; ಆದರೆ ಆಗಾಗ್ಗೆ ವಿಶೇಷ ಕಂಟಕ ಸಮಯವು ಬರುತ್ತದೆ.

ಸರ್ವಾಯುಧವು.

೧೪. ಹಾಗಾದರೆ ಸತ್ಯದಿಂದ ೧) ನಿಮ್ಮ ನಡುವನ್ನು ಕಟ್ಟಿ, ೧೫. ನ್ಯೀತಿಯ ಕವಚವನ್ನು ೨) ತೊಟ್ಟು, ಸಮಾಧಾನದ ಸುವಾರ್ತೆಯ ಸನ್ನಾಹವನ್ನು ೩) ಪಾದಗಳಿಗೆ ಮೆಟ್ಟಿ, ೧೬. ಎಲ್ಲಾದರ ಮೇಲೆ ೪) ದುಷ್ಟನ ಉರಿಬಾಣಗಳನ್ನು ೫) ಆರಿಸಿ ಶಕ್ಕಂಥ, ವಿಶ್ವಾಸದ ಗುರಾಣಿಯನ್ನು ಹಿಡಿದು, ೧೭. ರಕ್ಷಣೆಯ ಶಿರಸ್ತ್ರಾಣವನ್ನೂ ೬) ದೇವರ ವಾಕ್ಯವಾಗಿರುವ ಆತ್ಮದ ಕತ್ತಿಯನ್ನೂ ೭) ತೆಗದು ಕೊಂಡು, ೧೮. ನಿಂತು ೮) ಸಕಲ ಪ್ರಾರ್ಥನೆ ವಿಜ್ಞಾಪನೆಗಳಿಂದ ಸರ್ವಕಾಲ ಆತ್ಮದಲ್ಲಿ ಪ್ರಾರ್ಥಿಸಿ, ಇದಕ್ಕಾಗಿಯೇ ಸಕಲ ಪರಿಶುದ್ಧರಿಗೋಸ್ಕರ ಸಕಲ ನಿರಕ್ಷದಿಂದಲೂ ವಿಜ್ಞಾಪನೆಯಿಂದಲೂ ಎಚ್ಚರವಾಗಿರಿ. ೧೯. ನನಗೋಸ್ಕರ ಸಹ ೯), ಧೈರ್ಯವಾಗಿ ನನ್ನ ಬಾಯಿ ತೆರೆದು, ಸುವಾರ್ತೆಯ ಮರ್ಮವನ್ನು ತಿಳಿಸುವದಕ್ಕೆ, ನನಗೆ ವಾಕ್ಯವು ಕೊಡಲ್ಪಡುವ ಹಾಗೆಯೂ, ೨೦. ಯಾವದಕ್ಕೋಸ್ಕರ ಬಂಧಕದಲ್ಲಿ ರಾಯಭಾರಿಯಾಗಿದ್ದೇನೋ ೧೦), ಅದರಲ್ಲಿ ಮಾತಾಡ ಶಕ್ತ ಪ್ರಕಾರ ಧೈರ್ಯವಾಗಿ ಮಾತಾಡುವ ಹಾಗೆಯೂ, ಬೇಡಿ ಕೊಳ್ಳಿರಿ.

೧. ಈ ಸರ್ವಾಯುಧ ವರ್ಣನೆಗೆ ದೇವರ ವಾಕ್ಯದ ಬೇರೆ ಕೆಲವು ಸ್ಥಳಗಳು ಅನುಸಾರವಾಗಿವೆ. ಯೆಶಾ. ೫೯, ೧೭. ೨ ಕೊರಿ. ೧೦, ೪. ೧ ಥೆಸ್ಸ. ೫, ೮. ಆಯುಧಗಳನ್ನು ಧರಿಸಿ ಕೊಳ್ಳುವವನು ಮೊದಲು ನಡುಕಟ್ಟು ಕಟ್ಟ ಬೇಕು. ನಡುಕಟ್ಟು ಇಲ್ಲದಿದ್ದರೆ, ವಸ್ತ್ರ ಮುಂತಾದದ್ದು ಸಡಲಿ, ಚಟುವಿಗೆ ತಡೆಯಾಗುತ್ತದೆ. ಸತ್ಯವು ಚಕ್ತನಾದ ಚಟುವನ ನಡುಕಟ್ಟೆಂದು, ಪೌಲನು ಸೂಚಿಸುತ್ತಾನೆ. ಅದೇನಂದರೆ: ಮನೋದೃಢಕ್ಕೆ ಸತ್ಯವು ಅವಶ್ಯವಾಗಿದೆ. ಯಾಥಾರ್ಥ್ಯವಿಲ್ಲದವನ ಬುದ್ಧಿಯು ಸ್ಥಿರವಾದದ್ದಲ್ಲ. ಯಾಕಂದರೆ ತನ್ನನ್ನು ತಾನೇ ವಿಚಾರಿಸಿ ಕೊಂಡು ಸತ್ಯವಾಗಿ ತಿಳಿದು ಕೊಳ್ಳದೆ ಇರುವವನ ಮನಸ್ಸು ಯಾವಾಗಲೂ ಬೇರೆ ಬೇರೆ ಘಾಳಿಗಳಿಂದ ಅಲ್ಲಾಲೋಲಕಲ್ಲೋಲವಾಗುವ ತೆರೆಗಳಲ್ಲಿ ತೇಲಾಡುವ ದಾಕ್ಷಿಯಾಪಾದಿಯಾಗಿ ವ್ಯರ್ಥವಾದ ಆಶೆ, ಭಯ, ಗರ್ವ, ಅನಾಥ ಜಾಪನೆ ಮುಂತಾದ ವ್ಯಾಪಾರಗಳಲ್ಲಿ ಚಂಚಲವಾ

ಗುತ್ತದೆ. ಮಿತ್ಯಾಗುಣದವನು, ದೇವರ ವಾಕ್ಯವು ಸತ್ಯವೆಂಬದನ್ನು ನಂಬಲಾರದೆ ಇರುವದರಿಂದ, ಕಂಟಕ ಕಾಲದಲ್ಲಿ ಅಧೈರ್ಯ ಪಟ್ಟು, ಉಪದ್ರವಗಳಿಂದ ಸಾತು ಪೋಗಿ, ಪಾಪಶಾಧನೆಯಲ್ಲಿ ಬೀಳುತ್ತಾನೆ.

೨. ಪುರಂದರದಾಸನು, "ನಿನ್ನ ಕರುಣ ಕವಚವೆನ್ನ ಪೊರಣಕ್ಕೆ ತಾಪಿಸಾ" ಎಂದು, ಪೇಳುವ ಪದವು ಪೌಲನು ಇಲ್ಲಿ ಬರದ ಮಾತಿಗೆ ಒಪ್ಪುತ್ತದೆ. ಆದರೆ ಪೌಲನ ಅಭಿಪ್ರಾಯವು ಬೇರೆ ವಿಧವಾಗಿದೆ; ಏನಂದರೆ: ಯೇಸು ಕ್ರಿಸ್ತನ ರಕ್ತದ ಮೂಲಕವಾಗಿ ಉಂಟಾದ ವಿಮೋಚನೆಯನ್ನು ನಂಬುವ ಚಕ್ತನಿಗೆ ಪ್ರಾಪ್ತವಾಗುವ ದೇವರ ನೀತಿಯು ರೋಮಾ. ೫, ೧. ಅವನ ಪ್ರಾಣಸ್ಥಾನವಾದ ಪೃದಯವನ್ನು ರಕ್ಷಿಸುವ ಕವಚವೆಂದು, ಸೂಚಿಸುತ್ತಾನೆ. ಸೈತಾನನು ಚಕ್ತನ ಮೇಲೆ ವಾದ ಮಾಡಿ, ಅವನು ಮಾಡಿದ ಪಾಪಗಳನ್ನು ಅವನ ಮೇಲೆ ಪೊರಿಸಿ, ನೀನು ಕೆಟ್ಟ ಪಾಪಿ; ನಿನಗೆ ಗತಿಯಿಲ್ಲವೆಂದು ಪೆದರಿಸಲು, ಅವನು: ನಾನು ಪಾಪಿಯೇ ಸರಿ, ಆದರೆ ಮನುಷ್ಯರಾದ ಪಾಪಿಗಳಿಗೆ ದೇವರ ಮಗನಾದ ಕ್ರಿಸ್ತನು ರಕ್ಷಕನಾಗಿದ್ದಾನೆಂದು ಪ್ರತಿವಾದಿಸಿ, ಸೈತಾನನು: ಕ್ರಿಸ್ತನು ಲೋಕರಕ್ಷಕನೆಂಬುವದು ಸರಿ; ಆದರೆ ನೀನು ಆ ರಕ್ಷಣೆಗೆ ಅಯೋಗ್ಯನಾಗಿದ್ದೀ ಯೆಂಬುವದು ನೀನು ಸಂವರ್ತನಕಾಲದಿಂದ ಈ ವರೆಗೂ ಮಾಡುತ್ತಾ ಬಂದ ಪಾಪಗಳಿಂದ ಪ್ರತ್ಯಕ್ಷವಾಗಿದೆಂತ ತರ್ಕಿಸಲು, ಅವನು: ನಾನು ಸ್ವಂತ ನೀತಿಯನ್ನಲ್ಲ, ಯೇಸುವಿನ ನೀತಿಯನ್ನು ಕಟ್ಟಕಡೆಗೂ ನಂಬುತ್ತೇನೆಂದು ಪ್ರತಿತರ್ಕಿಸಿ, ಯೇಸು ಕ್ರಿಸ್ತನ ರಕ್ತದ ಮೂಲವಾಗಿ ಶುದ್ಧವಾದ ಮನಸ್ಸಾಕ್ಷಿಯಿಂದ ದೇವರ ಕೃಪೆಯಲ್ಲಿ ದೃಢವಾಗಿದ್ದು, ಕವಚ ತಾಟ್ಟವನಂತೆ ನಿರ್ಭಯನಾಗಿದ್ದಾನೆ.

೩. ಅಂದರೆ, ದೇವರ ಸಮಾಧಾನವನ್ನು ಚಕ್ತನಿಗೆ ತಿಳಿಸಿ ಕಾಡುವ ಸುವಾರ್ತೆಯ ವೃತ್ತಿಗೆ ಸಿದ್ಧವಾಗಿರುವದು ಪಾದರಕ್ಷೆಯಂಬ ಒಳ್ಳೇ ಮೆಟ್ಟು ಮೆಟ್ಟಿಕಾಂಡ ಪೋಗಾಗಿದೆ. ಒಳ್ಳೇ ಮೆಟ್ಟು ಕಾಳಗದಲ್ಲಿ ಸ್ಥಿರವಾಗಿ ನಿಲ್ಲುವದಕ್ಕೂ, ಮುಳ್ಳು ಕಲ್ಲು ಮುಂತಾದ್ದರಿಂದ ದುರ್ಘಟವಾದ ನೆಲದಲ್ಲಿ ನಡೆಯುವದಕ್ಕೂ ಉಪಯೋಗವಾಗಿದೆ. ಸುವಾರ್ತೆಯನ್ನು ತಿಳಿದವನು ಅದನ್ನು ಪರರಿಗೆ ತಿಳಿಸುವ ಪೂರ್ಣನಲ್ಲಿದ್ದಾನೆ. ಯೋಗ್ಯವಾದ ವೃತ್ತಿಯನ್ನು ನಡಿಸುವವನು ನಿರ್ಭಯನಾಗಿದ್ದಾನೆ.

೪. ನಿಜವಿಶ್ವಾಸವು ಚಕ್ತನೆಂಬ ಆಳಿನ ಇಡೀ ಮೈ ಮರೆ ಮಾಡುವ ಪೂರ್ಣಗೆಯಂದು, ಪೌಲನು ಸೂಚಿಸುತ್ತಾನೆ. ಸೈತಾನನು ಮೊದಲಾದ ಎಲ್ಲಾ ಎದುರಾಳಿಗಳ ಕತ್ತಿಗಳ ಪೂರ್ವಪಡಕ್ಕೆ ತಡೆಯಾದ ಪೂರ್ಣಗೆಯಂಬ ನಿಜ ವಿಶ್ವಾಸದ ಭಾವವನ್ನು ಪೌಲನು ರೋಮಾ. ೮, ೩೮—೩೯ಲ್ಲಿ ಪರಿಷ್ಕಾರವಾಗಿ ವರ್ಣಿಸಿದ್ದಾನೆ. ಆ ಸ್ಥಳವನ್ನು ಚನ್ನಾಗಿ ಓದಿ ಧ್ಯಾನಿಸಬೇಕು.

೫. ಬೆಂಕಿ ಕಟ್ಟಿದ ಬಾಣಕ್ಕೂ ವಿಷಸಂಯುಕ್ತವಾದ ಬಾಣಕ್ಕೂ ಉರಿಬಾಣವೆಂದು ಪೆಸರು ಉಂಟು. ಇದರ ಅಭಿಪ್ರಾಯವೇನಂದರೆ: ಸೈತಾನನು ನಾನಾ ಉಪಾಯಗಳಿಂದ ದುರ್ವ್ಯಸನ, ಅವಿಶ್ವಾಸ, ಸಂಶಯ, ನಿರಾಶೆ ಮುಂತಾದ ಭಾವನೆಗಳನ್ನು ಮನುಷ್ಯರ ಮನಸ್ಸಿನಲ್ಲಿ ಪೂರ್ತಾತ್ಮಾಗಿ ಪುಟ್ಟಿಸುತ್ತಾನೆ. ನಿಜ ವಿಶ್ವಾಸವಿಲ್ಲದವನು, ಪೂರ್ಣಗೆಯಿಲ್ಲದ ಚಟನಂತೆ, ಘಾಯಮಯವಾಗುವನು.

೬. ೧ ಥೆಸ್ಸ. ೫, ೮ರ ಪ್ರಕಾರ ನಿತ್ಯ ರಕ್ಷಣೆಯ ಆಶೆಯು ಶಿರಸ್ತ್ರಾಣದಿಂದ ಸೂಚಿತವಾಗಿದೆ. ಈ ಆಶೆಯುಳ್ಳವನು ಕ್ರೂರ ಯುದ್ಧದಲ್ಲಿಯಾದರೂ ಸಾತು ಪೋಗನು. ಜಯಿಸಿದವನಿಗೆ ಆಶೆಯಂಬ ಶಿರಸ್ತ್ರಾಣಕ್ಕೆ ಬದಲಾಗಿ ನಿತ್ಯಜೀವಕಿರೀಟವು. ೧ ತಿಮೊ. ೪, ೭. ೮. ಲ. ಶಿಕ್ಕವದು.

೭. ಅಂದರೆ, ದೇವರ ಆತ್ಮವು ಚಕ್ತನಿಗೆ ಕಾಟ್ಟು ಅದರ ಪ್ರಯೋಗವನ್ನು ಬೋಧಿಸುವ ದೇವವಾಕ್ಯವು ಇಬ್ರಿ. ೪, ೧೨.

೮. ನಿಂತು ಕಾಳ್ಳುವದೇ ಯುದ್ಧದಲ್ಲಿ ಮುಖ್ಯವಾದದ್ದು. ಓದುವವನು ಪೇಳಿಯು; ಬೀಳುವವನು ಸಾಯುತ್ತಾನೆ.

೯. ಸಖೆಗಳಿಗಾಗಿ ಎಡೆಬಿಡದೆ ಪ್ರಾರ್ಥನೇ ಮಾಡುತ್ತಾ ಬಂದ ಪೌಲನಿಗೆ ಸಖೆಯವರು ತನಗಾಗಿ ವಿನ್ನಪ ಮಾಡ ಬೇಕೆಂದು ಆಜ್ಞಾಪಿಸುವದು ನ್ಯಾಯವಾಗಿತ್ತು.

ಎಫೆ. ೬, ೨೧—೨೪.

೧೦. ಶರೆಯಲ್ಲಿ ಬಿದ್ದರೂ, ರಾಯಚಾರಿಯ ಘನತೆಯು ಕುಂದುವದಿಲ್ಲವೆಂದು, ಪೌಲನು ನೆನಸಿ, ಧೈರ್ಯವಾಗಿದ್ದದ್ದಲ್ಲದೆ, ಬಂಧನದಲ್ಲಿಯಾದರೂ ತನ್ನ ಉದ್ಯೋಗವೃತ್ತಿಗೆ ಅಡ್ಡಿಯಿಲ್ಲವೆಂದು ನೋಡಿ, ಪೂರ್ಣ ಸಂತುಷ್ಟನಾಗಿದ್ದನು.

ಪತ್ರಿಕಾಸಮಾಪ್ತಿಯು. ವ. ೨೧—೨೪.

೨೧. ಆದರೆ ನೀವು ಸಹ ೧) ನನ್ನ ವಿಷಯವಾದವುಗಳನ್ನೂ, ನಾನು ಮಾಡುವದನ್ನೂ ತಿಳಿಯುವ ಹಾಗೆ, ಪ್ರಿಯ ಸಹೋದರನೂ ಕರ್ತನಲ್ಲಿ ನಂಬಿಕೆಯುಳ್ಳ ನೋವಕನೂ ಆಗಿರುವ ತುಕಿಕನು ನಿಮಗೆ ಎಲ್ಲಾ ತಿಳಿಸುವನು. ೨೨. ನೀವು ನಮ್ಮ ಸಂಗತಿಗಳನ್ನು ತಿಳಿಯುವ ಹಾಗೆಯೂ, ಅವನು ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ, ಇದ್ದೇ ಕೆಲಸಕ್ಕಾಗಿ ಅವನನ್ನು ನಿಮ್ಮ ಬಳಿಗೆ ಕಳುಹಿಸಿದ್ದೇನೆ ೨). ೨೩. ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ ಸಮಾಧಾನವೂ, ಪ್ರೀತಿಯೂ ವಿಶ್ವಾಸದ ಸಂಗಡ ೩) ಸಹೋದರರಿಗೆ ಉಂಟಾಗಲಿ. ೨೪. ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ಪ್ರೀತಿ ಇಡುವವರೆಲ್ಲರ ಸಂಗಡ ನಿರ್ಲಯವಾದ ಕೃಪೆಯು ೪) ಆಗಲಿ. ಆಮೆನ್.

೧. ಇದಕ್ಕೆ ಕಾಲಾ. ೪, ೭. ನೋಡಬೇಕು.

೨. ಆಸ್ಯದ ಸಭೆಗಳವರೆಲ್ಲರು ಪೌಲನು ಯಾಗಕ್ಷೇಮಗಳನ್ನು ತಿಳಿದು ಕಾಳ್ಳುವದಕ್ಕೆ ಬಹಳವಾಗಿ ಬಯಸಿದರಿಂದಲೂ, ಪೌಲನು ತುಕಿಕನನ್ನು ಈ ಉದ್ದಿಶ್ಯವಾಗಿ ಅವರ ಬಳಿಗೆ ಕಳುಹಿಸಿದರಿಂದಲೂ, ಪೌಲನಿಗೂ, ಆ ಸಭೆಯವರಿಗೂ ಇದ್ದ ಮಮತಾನ್ಯೋನ್ಯವು ಚನ್ನಾಗಿ ಪ್ರಕಟವಾಗಿದೆ.

೩. ವಿಶ್ವಾಸವು ಸಮಾಧಾನಕ್ಕೂ ಪ್ರೀತಿಗೂ ಮೂಲವಾಗಿದೆ.

೪. ನಿರ್ಲಯವಾದ ಎಂಬ ನಾಮವಿಶೇಷಣವು ಕೃಪೆಯಂಬ ಪದಕ್ಕೆ ಶೇರಿಸತಕ್ಕದ್ದು. ಆದರೆ ಪರಿಶುದ್ಧಾತ್ಮಜನ್ಯವಾದ, ದಾನಷವೂ, ನ್ಯೂನವೂ ಇಲ್ಲದ, ಕೃಪೆಯಿಂದ ನಿಷ್ಕಳಂಕ ಪ್ರೀತಿಯು ಪುಟ್ಟುತ್ತದೆ.

ಫಿಲಿಪ್ಪಿಯರ ಪತ್ರಿಕೆಯು.

ರೋಮಪುರದ ಪ್ರಥಮ ಬಂಧನದವುಗಳೆಂಬ ನಾಲ್ಕು ಪತ್ರಿಕೆಗಳು ಪೌಲನ ಬಂಧನದ ಆರಂಭ ಕಾಲದಲ್ಲಿ ರಚಿತವಾಗಲಿಲ್ಲವೆಂಬದು ಪ್ರಾಮಾಣ್ಯವಾಗಿದೆ. ಯಾಕಂದರೆ: ಫಿಲೇಮೋನನ ಪತ್ರಿಕೆಯ ವಾಹಿಯಾದ ಒನೇಸಿಮನು ಕೊಲೆಸ್ಸೆಯಿಂದ ಓಡಿ ಹೋಗಿ, ಮಧ್ಯಸಮುದ್ರವನ್ನು ದಾಟಿ, ರೋಮಪುರಕ್ಕೆ ಬಂದು, ಪೌಲನಲ್ಲಿ ಶೇರಿ, ಸಂವರ್ತನವನ್ನೈದಿ, ಪೌಲನಿಗೆ ಕೆಲವು ಕಾಲ ಸೇವೆ ಮಾಡಿದ್ದೂ, ಕೊಲೊಸ್ಸೆಯವನಾದ ಎಪಫ್ರನು ಕೊಲೊಸ್ಸೆಯಿಂದ ರೋಮಪುರಕ್ಕೆ ಬಂದು, ಪೌಲನ ಸಂಗಡ ತಕ್ಕ ಕಾಲ ಇದ್ದದ್ದೂ, ಈ ಎರಡು ಸಂಗ

ಫಿಲಿಪ್ಪಿಯರ ಪತ್ರಿಕೆ.

ತಿಗಳನ್ನು ಮಾತ್ರ ಎಣಿಕೆ ಮಾಡಿದರೆ, ಅಪೊಸ್ತಲನು ಹ್ಯಾಗೂ ಬಂದು ವರುಷ ರೋಮಪುರದಲ್ಲಿ ಕಳಿದನಂತರ, ಕೊಲೊಸ್ಸೆಗೆ ಕಳುಹಿಸಿದ ಪತ್ರಿಕೆಯನ್ನು ಬರದನೆಂದು, ಸಂಶಯ ಪಡಕೂಡದು. ಫಿಲಿಪ್ಪಿಯರ ಪತ್ರಿಕೆಯು ಅದೇ ಕಾಲದಲ್ಲಿ ರಚಿತವಾಯಿತೋ ಏನೋ ಎಂಬದನ್ನು ನಿಶ್ಚೈಯಿಸುವದು ಕಷ್ಟವಾಗಿದೆ. ಹ್ಯಾಗಾದರೂ ಅದು ಅಪೊಸ್ತಲನ ಬಂಧನದ ಎರಡನೆ ವರುಷದ ಅಂತ್ಯ ಕಾಲದಲ್ಲಿ ಲಿಖಿತವಾಯಿತೆಂದು, ನೆನಸುವದು ವಿಹಿತವಾಗಿ ತೋರುತ್ತದೆ. ಯಾಕಂದರೆ ಪೌಲನು ಅದರಲ್ಲಿ ಸೈನ್ಯಸ್ಥಾನದಲ್ಲಿಯೂ, ಅರಮನೆಯಲ್ಲಿಯೂ ಸಂವರ್ತಿತ ಶಿಷ್ಯರು ಇರುವದನ್ನೂ, ತನ್ನ ಉದ್ಯೋಗವೃತ್ತಿಗೆ ಒಳ್ಳೆ ಫಲವು ಬಂದದ್ದನ್ನೂ, ಅಲ್ಲಲ್ಲಿ ಸೂಚಿಸುತ್ತಾನೆ. ಸ. ೧, ೧೨. ೧೩. ೧೪; ೪, ೨೨. ಇದಲ್ಲದೆ ಸ. ೨, ೧೩ಲ್ಲಿ ತನ್ನ ವ್ಯವಹಾರವು, ಬೇಕಾದ ಕಾಲ ಕಳಿದನಂತರ, ಕಡೆಯಲ್ಲಿ ತೀರ್ಪಾಗುವದೆಂದು, ನೆನಸುತ್ತೇನೆಂತ ಸಭೆಯವರಿಗೆ ತಿಳಿಸುತ್ತಾನೆ. ಮತ್ತು ಫಿಲಿಪ್ಪಿಯವರು ರೋಮಪುರಕ್ಕೆ ಬಂದ ಪೌಲನ ವರ್ತಮಾನವನ್ನು ಕೇಳಿ, ಅವನ ಸಹಾಯಕ್ಕೆ ಕೂಡಿಸಿದ ಧರ್ಮದ್ರವ್ಯವನ್ನು ಅವನಿಗೆ ತಂದು ಒಪ್ಪಿಸಿದ ಎಪಫ್ರೊದಿತನು ರೋಮಪುರದಲ್ಲಿ ರೋಗಿಯಾಗಿ ಪ್ರಾಣಾಂತ್ಯಕ್ಕೆ ಬಂದು, ತಿರಿಗಿ ಸ್ವಸ್ಥವಾದ ಮೇಲೆ, ಈ ಪತ್ರಿಕೆಯನ್ನು ಫಿಲಿಪ್ಪಿಗೆ ತೆಗದು ಕೊಂಡು ಹೋದನು. ಸ. ೨, ೨೫—೩೦.

ಶ್ರಮಕಾಲದಲ್ಲಿ ಸ್ಥಾಪಿಸಿದ ಫಿಲಿಪ್ಪಿಯ ಸಭೆಯ ಮೇಲೆ ಪೌಲನು ಆರಂಭದಿಂದ ಈ ಪತ್ರಿಕೆಯನ್ನು ಬರೆಯುವ ಪರ್ಯಂತ ಅತಿಶಯವಾದ ಮಮತೆಯನ್ನಿಟ್ಟನು. ಅದು ವಿಲಾಯತಿಯ ಸಭೆಗಳಲ್ಲಿ ಮೊದಲನೇದಾಗಿತ್ತು. ಪೌಲನು ಮೂರಾವರ್ತಿ ಮಾತ್ರ ಆಗ್ಗಾಗ್ಯೆ ಸ್ವಲ್ಪ ಕಾಲ, (ಕಡೆಯಲ್ಲಿ ಅಂತ್ಯವಾದ ಯೆರೂಸಲೇಮಿನ ಪ್ರಯಾಣಸ್ಥನಾಗಿ ಅಪೊ. ಕ್ರಿ. ೨೦, ೬.) ತಂಗಿದಾಗ್ಯೂ ಅವನಿಗೂ, ಆ ಸಭೆಗೂ ಇದ್ದ ಪ್ರೀತ್ಯನ್ಯೋನ್ಯವು ಆರಂಭದಿಂದ ಅಂತ್ಯದ ವರೆಗೂ ಸಜೀವವಾಗಿತ್ತು. ಥೆಸ್ಸಲೊನೀಕೆಯವರ ಕೈಯಿಂದಲಾದರೂ, ೧ ಥೆಸ್ಸ. ೨, ೬., ಐಶ್ವರ್ಯವುಳ್ಳ ಕೊರಿಂಥದವರ ಕೈಯಿಂದಲಾದರೂ, ೧ ಕೊರಿ. ೯, ೨. ೨ ಕೊರಿ. ೧೧, ೭., ದ್ರವ್ಯಸಹಾಯವನ್ನು ಅಂಗೀಕರಿಸದೆ ಇದ್ದಾಗ್ಯೂ ಫಿಲಿಪ್ಪಿಯವರು ತನಗೆ ಆಗ್ಗಾಗ್ಯೆ ಕಳುಹಿಸಿದ ಹಣವನ್ನು ಸಂತೋಷದಿಂದ ತೆಗದು ಕೊಳ್ಳುವ ಹಾಗೆ, ಅವರ ಮೇಲೆ ಅಮಿತ ಭರವಸವುಳ್ಳ ಪ್ರೀತಿಯನ್ನಿಟ್ಟನು. ಸ. ೪, ೧೦ ಇತ್ಯಾದಿ. ಫಿಲಿಪ್ಪಿಯ ಸಭೆಯಲ್ಲಿ ಲುದಿಯಳೆಂಬ ರಕ್ತದ್ರವ್ಯವ್ಯಾಪಾರಸ್ಥಳು ಐಶ್ವರ್ಯವಂತಳಾಗಿದ್ದಳೆಂದೂ, ಸಂವರ್ತಿಯಾದ ಶೆರೆಯಜಮಾನನು ಸಹ ಆಸ್ತಿವಂತನಾಗಿದ್ದನೆಂದೂ, ನೆನಸ ಯೋಗ್ಯವಾಗಿದೆ. ಆದರೆ ಉಳಿದವರು ಬಡವರಾಗಿದ್ದರೆಂದು ತೋರುತ್ತದೆ. ಪೌಲನು ಸಭೆಯನ್ನು ಸ್ಥಾಪಿಸಿದ ಸ್ವಲ್ಪ ಕಾಲದೊಳಗೆ ಫಿಲಿಪ್ಪಿಯನ್ನು ಬಿಟ್ಟಾಗ, ಲೂಕನು ಅಲ್ಲಿ ನಿಂತನು. ಈಗ ಇವನು ಎಪಫ್ರೊದಿತನ ಜೊತೆಯಾಗಿ ತಿರಿಗಿ ಫಿಲಿಪ್ಪಿಗೆ ಹೋದನೆಂದು, ಜಾಡೆಯಾಗಿ ಕಾಣುತ್ತದೆ. ಹ್ಯಾಗಂದರೆ ಕೊಲೊಸ್ಸೆಯ ಪತ್ರಿಕೆಯಲ್ಲಿ ಸ. ೪, ೧೪. ಅವನ ಪೆಸರು ವಂದನೆ ಮಾಡುವವರಲ್ಲಿ ಶೇರಿದೆ; ಆದರೆ ಈ ಪತ್ರಿಕೆಯಲ್ಲಿ ಅದು ಕಾಣುವದಿಲ್ಲ. ಮತ್ತು ಸ. ೨, ೨೧. ಪೌಲನು ತಿಮೊಥೆಯನ ಹಾಗೆ ತನಗೆ ಒಳ್ಳೆ ಸಹಾಯಕನು ಇಲ್ಲವೆಂದು, ಬರೆಯುತ್ತಾನೆ. ಹೀಗಿರಲಾಗಿ ಲೂಕನು ಪೌಲನನ್ನು ಎಪಫ್ರೊದಿತನ ಸಂಗಡ ಬಿಟ್ಟು, ಫಿಲಿಪ್ಪಿಗೆ ಪಯಣ ಮಾಡಿದನೆಂದು, ನೆನಸುವದು ಯುಕ್ತವಾಗಿದೆ.

ಕಳುಹಿಸಿ ಕೊಟ್ಟ ಧರ್ಮದ್ರವ್ಯಕ್ಕಾಗಿ ಫಿಲಿಪ್ಪಿಯರಿಗೆ ಕೃತಜ್ಞಾಪಿಸುವದು ಪತ್ರಿಕಾಸಮಯೋಚಿತೋದ್ದಿಶ್ಯವಾಗಿತ್ತು; ಆದರೆ ಅಪೊಸ್ತಲನ ಪ್ರೀತಿ ಪೂರಿತ ಹೃದಯದ ಒರತೆಯಿಂದ ಹೊರಡುವ ನಾನಾ ಪ್ರಸ್ತಾ

ಫಿಲಿ. ೧, ೧—೨.

ಪವೆಂಬ ನೀರು ಪತ್ರಿಕೆಯೆಂಬ ಕೊಳ್ಳವನ್ನು ತುಂಬಿತು. ಅಪೊಸ್ತಲನು ಮೊದಲು ಸಭೆಯ ಕ್ಷೇಮವರ್ತಮಾನದಿಂದ ತನ್ನಲ್ಲಿ ಹುಟ್ಟಿದ ಸಂತೋಷವನ್ನು ಉಚ್ಚರಿಸಿ, ತನ್ನ ಪ್ರಿಯರಾದ ಫಿಲಿಪ್ಪಿಯವರನ್ನು ಅಂತರ್ಬಹಿಃ ಕಂಟಕಕ್ಕೆ ಎಚ್ಚರಿಸಿ ಭದ್ರ ಪಡಿಸುತ್ತಾನೆ. ಆ ಬಹಿಃಕಂಟಕಗಳು ಯಾವವಂದರೆ, ವೈರಿಗಳಾದ ಯೆಹೂದರೂ, ೧, ೨೭. ಅವರ ಜೊತೆಯಲ್ಲಿ ಶೇರಿದ ಪರಜನರೂ ಮಾಡಿದ ಹಿಂಸೆಯು. ಅಂತಃಕಂಟಕವು ಯಾವದಂದರೆ, ತಾವು ಪ್ರೀತಿ ಮುಂತಾದ ಸದ್ಗುಣಭರಿತರಾಗಿದ್ದೇವೆಂಬ ಲೌಕ್ಯಿಕ ಗರ್ವವೂ, ಅದರಿಂದ ಹುಟ್ಟುವ ತರ್ಕಗಳೂ ಸ. ೨, ೩; ೩, ೧೫. ಇದಲ್ಲದೆ ಯೆಹೂದ ಕ್ರೈಸ್ತರಾದ ದುರ್ಬೋಧಕರು ಫಿಲಿಪ್ಪಿಗೆ ಸಹ ಬಂದು ಮೋಸ ಮಾಡ್ಯಾರೆಂಬ ಭಯದಿಂದ ಅವರ ವಿಷಯವಾಗಿ ಖಂಡನಾವಾಕ್ಯವನ್ನು ೩ನೆ ಸಂಧಿಯಲ್ಲಿ ಬರೆಯುತ್ತಾನೆ. ವಿಶೇಷವಾದ ಬೋಧನೆಯ ವಿವರವು ಸಮಯೋಚಿತವಾದ ಈ ಪತ್ರಿಕೆಯಲ್ಲಿ ತೋರುವದಿಲ್ಲ. ಅದರ ಮುಖ್ಯಾಭಿಪ್ರಾಯವನ್ನು ಎರಡು ಮಾತಿನಿಂದ ಹೇಳ ಬಹುದು: ನಾನು ಸಂತೋಷವಾಗಿದ್ದೇನೆ. ಸ. ೧. ೨. ನೀವು ಸಹ ಸಂತೋಷವಾಗಿರ್ರಿ. ಸ. ೩. ೪. ಪ್ರಸ್ತಾವ ಕ್ರಮವೇನಂದರೆ:

೧. ಕೃತಜ್ಞಾಪನೆಯು. ಪ್ರಾರ್ಥನೆಯು. ಸ. ೧, ೧—೧೧.

೨. ಸ್ವಕೀಯ ವರ್ತಮಾನಗಳನ್ನೂ, ಅವರನ್ನು ಶಿರಿಗಿ ನಾಡುವ ಆಶೆಯನ್ನೂ ಬರೆಯುತ್ತಾನೆ. ೧೨—೨೬.

೩. ಶಿಂಸೆಗಳಲ್ಲಿ ದೃಢವಾಗಿರ ಬೇಕೆಂದೂ, ೨೭—೩೦. ಒಬ್ಬರನ್ನೊಬ್ಬರು ಪ್ರೀತಿ ಮಾಡಿ, ತನ್ನ ಪೆಚ್ಚಳಕ್ಕಾಗಿ ವಿಶ್ವಾಸದಲ್ಲಿ ಸ್ಥಿರವಾಗಿರ ಬೇಕೆಂದೂ, ಉದ್ಬೋಧಿಸುತ್ತಾನೆ. ಸ. ೨, ೧—೧೮.

೪. ಎಪಫ್ರಾದಿತ ಶಿಮೊಥೆಯರ ಪ್ರೇಷಣೆಯು. ೧೯—೩೦.

೫. ಯೆಹೂದಕ್ರೈಸ್ತ ದುರ್ಬೋಧಕರಿಗೆ ಎಚ್ಚರಿಕೆಯಾಗಿರ ಬೇಕು. ಸ. ೩,

೬. ಅಂತ್ಯೋದ್ಬೋಧನೆಯು. ಅಂಗೀಕೃತವಾದ ಧರ್ಮಪ್ರವೃತ್ತಿ ಕೃತಜ್ಞಾಪನೆಯು. ವಂದನೆಗಳು. ಸ. ೪.

೧. ಕೃತಜ್ಞಾಪನೆಯು. ಪ್ರಾರ್ಥನೆಯು. ಸ. ೧, ೧—೧೧.

೧. ಯೇಸು ಕ್ರಿಸ್ತನ ದಾಸರಾದ ೧) ಪೌಲನೂ ಶಿಮೋಥೆಯನೂ, ಫಿಲಿಪ್ಪಿಯಲ್ಲಿರುವಂಥ, ಕ್ರಿಸ್ತಯೇಸುವಿನಲ್ಲಿ ಪರಿಶುದ್ಧರಾದವರೆಲ್ಲರಿಗೆ, ಅಧ್ಯಕ್ಷರಿಗೂ ಸೇವಕರಿಗೂ ಸಹ ೨)—೨. ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ೩) ಆಗಲಿ.

೧. ಪೂರ್ಣ ಪರಸ್ಪರ ಪರಿಚಿತರಾದ ಅತಿ ಪ್ರಿಯರಾದ ಫಿಲಿಪ್ಪಿಯರ ಪತ್ರಿಕೆಯ ಆರಂಭದಲ್ಲಿ ಪೌಲನು ತಾನು ಅಪಾಸ್ತಲನೆಂದು ಬರೆಯದೆ, ಮೊದಲು ತನ್ನ ಜಾತೆಯಲ್ಲಿ ಫಿಲಿಪ್ಪಿಗೆ ಬಂದ ಶಿಮೊಥೆಯನ ಅಪಾ. ಕ್ರಿ. ೧೬, ೩. ೧೨. ಪೆಸರನ್ನು ತನ್ನ ಪೆಸರಿಗೆ ಜಾತೆಯಾಗಿ ಬರೆಯುವದು ಸಪ್ರಚಿವಾಗಿದೆ.

೨. ಪುನ್ನಾಂದು ಪರುಷಕ್ಕೆ ಮುಂಚಿತವಾಗಿ ಸ್ಥಾಪಿತವಾದ ಸಭೆಯಲ್ಲಿ ಅಪಾಸ್ತಲರ ಪದ್ಧತಿಗೆ ಅನುಸಾರವಾದ ಅಧ್ಯಕ್ಷರೂ, ಸೇವಕರೂ ಎಂಬವರ ಮುಖ್ಯ ಸಹಾಯಾದ್ಯೋಗಗಳ ವೃತ್ತಿಯು ನಡಿಯುತ್ತಿತ್ತೆಂದು, ಇಲ್ಲಿ ತಾರುತ್ತದೆ. ಆದರೆ ಸಭೆಯು ಸಭೆಯ ಉದ್ಯೋಗಸ್ಥರಿಗಿಂತ ಘನವಾದದ್ದೆಂದು, ಸೂಚಿಸುವದ

ಕ್ಕೆ ಸಖೆಯವರಿಗೆ ಮೊದಲು ವಂದಿಸುತ್ತಾನೆ. ಇದು ರೋಮಾಯರಾದ ಪ್ರತಿಕ್ರೈಸ್ತರ ಧರ್ಮಕ್ಕೆ ಅತ್ಯಂತ ವಿರೋಧವಾಗಿದೆ. ಪರಿಶುದ್ಧರಂದರೆ, ಪರಿಶುದ್ಧ ದೇವರಿಗೆ ಸ್ವಕೀಯರಾದವರು.

೩. ಇದು ಪೌಲನಿಗೆ ರೂಢಿಯಾದ ಆಶೀರ್ವಾದವು. ರೋಮಾ. ೧, ೫. ೧ ಕೊರಿ. ೧, ೩. ೧ ಥೆಸ್ಸ. ೧, ೧. ಎಫೆ. ೧, ೨; ೬, ೨೩. ೨೪. ಕೃಪೆಯು ತಂದೆಯಾದ ದೇವರಿಂದ ಬರುತ್ತದೆ; ಸಮಾಧಾನವು ಯೇಸು ಕ್ರಿಸ್ತನಿಂದ ಉಂಟಾಗುತ್ತದೆ.

೩. ನಿಮ್ಮನ್ನು ಜ್ಞಾಪಕ ಮಾಡಿ ಕೊಳ್ಳುವಾಗೆಲ್ಲಾ ಸುವಾರ್ತೆಗಾಗಿ ಮೊದಲನ್ನೇ ದಿವಸದಿಂದ ೧) ಇಂಗಿನ ವರೆಗೂ ನಿಮಗಿದ್ದ ಅನ್ಯೋನ್ಯಕ್ಯಾನ್ಸರ ನನ್ನ ದ್ಯೇವರಿಗೆ ಸ್ತೋತ್ರಮಾಡಿ, ೪. ಯಾವಾಗಲೂ ನಿಂಮೆಲ್ಲರಿಗ್ಯಾನ್ಸರ ೨) ಮಾಡುವ ಎಲ್ಲಾ ವಿಜ್ಞಾಪನೆಯಲ್ಲಿ, ೫. ಸಂತೋಷದಿಂದ ವಿಜ್ಞಾಪನೆ ಮಾಡುತ್ತೇನೆ. ೬. ಒಳ್ಳೇ ಕೆಲಸವನ್ನು ನಿಂಮಲ್ಲಿ ಆರಂಭಿಸಿದವನು, ಯೇಸು ಕ್ರಿಸ್ತನ ದಿನದ ಮಟ್ಟಿಗೂ ೩), ಅದನು ಪೂರೈಸುವನೆಂಬುವದನ್ನೇ ನಂಬಿ ಕೊಂಡಿದ್ದೇನೆ. ೭. ಹ್ಯಾಗಂದರೆ ನನ್ನ ಬಂಧಗಳಲ್ಲಿಯೂ, ಸುವಾರ್ತೆಯ ಪ್ರತ್ಯುತ್ತರದಲ್ಲಿಯೂ, ಸ್ಥಾಪನೆಯಲ್ಲಿಯೂ, ನಾನು ನಿಂಮೆಲ್ಲರನ್ನು ಕೃಪೆಯಲ್ಲಿ ನನ್ನ ಸಂಗಡ ಪಾಲುಗಾರರೆಂದು ನನ್ನ ಹೃದಯದಲ್ಲಿ ಇಟ್ಟು ಕೊಂಡಿರುವದರಿಂದ ೪), ನಿಂಮೆಲ್ಲರ ವಿಷಯದಲ್ಲಿ ಅದನ್ನೇ ನೆನಸುವದು ನನಗೆ ನ್ಯಾಯವಾಗಿದೆ. ೮. ಯಾಕಂದರೆ ಯೇಸು ಕ್ರಿಸ್ತನ ಅಂತಃಕರಣಗಳಲ್ಲಿ ೫) ನಿಂಮೆಲ್ಲರನ್ನು ಹ್ಯಾಗೆ ಬಯಸುತ್ತೇನೆಂಬುವದಕ್ಕೆ ದ್ಯೇವರು ನನಗೆ ಸಾಕ್ಷಿಯಾಗಿದ್ದಾನೆ.

೧. ಪೌಲನ ವಿಶ್ವಾಸಲೆಖ್ಖವು ಯಾವಾಗಲೂ ಸಂವರ್ತನದಿವಸದಿಂದ ಕ್ರಿಸ್ತನ ದಿನದ ವರೆಗೂ ಗಣನವಾಗುತ್ತದೆ. ಮೃತ ಸ್ಥಿತಿಯಾದ ಪೂರ್ವ ಕಾಲವು ಲೆಖ್ಖಕ್ಕೆ ಬರುವದಿಲ್ಲ. ಕ್ರಿಸ್ತನ ದಿನಕ್ಕೆ ಅಂತ್ಯವಿಲ್ಲ. ಫಿಲಿಪ್ಪಿಯವರ "ಮೊದಲನೆ ದಿವಸದಿಂದ" ಪೌಲನು ಈ ಪತ್ರಿಕೆಯನ್ನು ಬರದು ಅವರಿಗೆ ಕಳುಹಿಸುವ ಪರ್ಯಂತ ಹೆಚ್ಚು ಕಡಿಮೆಯಾಗಿ ಹನ್ನಾಂದು ಹನ್ನೆರಡು ವರ್ಷ ಕಳಿದು ಹೋಗಿತ್ತು.

೨. ಈ ಮಾತಿನಿಂದ, ಪೌಲನು ಸಾಮಾನ್ಯವಾಗಿ ಸಖೆಗಾಗಿ ಮಾಡಿದ ಪ್ರಾರ್ಥನೆಯ ಹೊರತು ತನಗೆ ಪರಿಚಿತರಾದ ಎಲ್ಲಾ ಸಖೆಯವರಿಗಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಪ್ರಾರ್ಥನೆ ಮಾಡಿದನೆಂದು, ತಾತ್ಪರ್ಯವಾಗುತ್ತದೆ.

೩. ಕ್ರಿಸ್ತನ ದಿನವು ಒಕ್ಕನಿಗೂ ಸರ್ವ ಸಖೆಗೂ ಸಿದ್ಧಿದಿವಸವಾಗಿದೆ. ಅದರ ನೆನಪು ನಾಳೇ ದಿವಸದಂತೆ ಸರ್ವದಾ ಪೌಲನ ಧ್ಯಾನ ವಿಷಯವಾಗಿತ್ತು. ಇದು ಕ್ರೈಸ್ತನಿಗೆ ಯುಕ್ತವಾದ ಮನೋಚಿತವೆಯು.

೪. ಪೌಲನ ಹೃದಯದಲ್ಲಿ ಫಿಲಿಪ್ಪಿಯವರ ಮೇಲಿದ್ದ ಅತಿಶಯವಾದ ಪ್ರೀತಿಯು ಅವನಿಗೆ ಫಿಲಿಪ್ಪಿಯವರ ರಕ್ಷಣೆಯ ವಿಷಯವಾಗಿ ತನ್ನಲ್ಲಿರುವ ಆಶೆಯು ನೆರವೇರುತ್ತದೆಂಬ ಒಳ್ಳೆ ಪ್ರಮಾಣವಾಗಿ ಕಾಣಿಸಿತು.

೫. ಗ್ರೀಕಪಲ್ಲಿ "ಕ್ರಿಸ್ತನ ಕರುಳುಗಳಲ್ಲಿ" ಎಂದು ಬರದದೆ. ಇದರ ಅಭಿಪ್ರಾಯವೇನಂದರೆ: ಸಜೀವವಾಗಿ ಕ್ರಿಸ್ತನ ಐಕ್ಯದಲ್ಲಿ ಶೇರಿದವನಲ್ಲಿ ಹುಟ್ಟುವ ಆತ್ಮಿಕ ಸುಖ ದುಃಖ ಆಶೆ ಭಯ ಮಮತಾದ್ವೇಷ ಮುಂತಾದದ್ದು ನಿಜವಾಗಿ ಕ್ರಿಸ್ತನದೆಂದು, ತಿಳಿಯ ತಕ್ಕದ್ದು.

ಫಿಲಿ. ೧, ೯—೧೮.

೯. ಮತ್ತು ನೀವು ಹೆಚ್ಚು ಕಡಿಮೆಯಾದವುಗಳನ್ನು ಪರೀಕ್ಷಿಸುವದಕ್ಕೆ ನಿಮ್ಮ ಪ್ರೀತಿಯು ೧) ಶಿಳುವಿಕೆಯಲ್ಲಿಯೂ ಸಕಲ ಅನುಭವದಲ್ಲಿಯೂ ಅಧಿಕಾಧಿಕವಾಗಿ ಹೆಚ್ಚಿ, ೧೦. ನೀವು ದೇವರ ಮಹಿಮೆ ಸ್ತೋತ್ರಗಳಿಗಾಗಿ ಯೇಸು ಕ್ರಿಸ್ತನಿಂದುಂಟಾಗುವ ನೀತಿಯ ಫಲಗಳಿಂದ ೨) ತುಂಬಿದವರಾಗಿ, ೧೧. ಕ್ರಿಸ್ತನ ದಿನದ ವರೆಗೂ ಕಪಟವುಗಿ ಆಟಂಕವುಗಿ ೩) ಇಲ್ಲದವರಾಗಿರುವ ಹಾಗೆ, ಪ್ರಾರ್ಥಿಸುತ್ತೇನೆ.

೧. ಪ್ರೀತಿಯು ನಿಜ ವಿವೇಕಕ್ಕೂ, ಶಿಳುವಿಕೆಗೂ, ಜ್ಞಾನಕ್ಕೂ ಮೂಲವಾಗಿದೆ. ಪ್ರೀತಿಯಿಲ್ಲದೆ ದೇವರನ್ನಾದರೂ, ಮನುಷ್ಯನನ್ನಾದರೂ ತಿಳಿದು ಕಾಳ್ಳ ಕೂಡದು. ಈ ಸ್ಥಳಕ್ಕೆ ರೋಮಾ. ೨, ೨೮; ೧೨, ೨. ಒಪ್ಪುತ್ತವೆ.

೨. ನೀತಿಯ ಫಲಗಳು ಅಂದರೆ, ಕ್ರಿಸ್ತನ ಆತ್ಮದಿಂದ ವಿಶ್ವಾಸ ಮುಖಾಂತರ ಚಕ್ಕರಲ್ಲಿ ಪುಟ್ಟುವ ಪ್ರೀತಿಕೃತ್ಯಗಳು.

೩. ಈ ಮಾತಿನಲ್ಲಿ ದುರ್ಬೋಧಕರಿಂದ ಬರುವ ಕಂಟಕದ ಭಯವು ಜಾಡೆಯಾಗಿ ತೋರ ತಾಡಗುತ್ತಿದೆ. ಪೌಲನು ಅದನ್ನು ಸ್ಪಷ್ಟವಾಗಿ ೩ನೆ ಸಂಧಿಯಲ್ಲಿ ವ. ೧೮. ೧೯ಲ್ಲಿ ಬರೆಯುತ್ತಾನೆ.

೨. ಸ್ವಕೀಯ ವರ್ತಮಾನಗಳನ್ನೂ, ಅವರನ್ನು ತಿರಿಗಿ ನೋಡುವ ಆಶೆಯನ್ನೂ ಬರೆಯುತ್ತಾನೆ. ೧೨—೨೬.

೧೨. ಇದಲ್ಲದೆ, ಸಹೋದರರ್ಯೇ, ನಾನು ನಿಮಗೆ ತಿಳಿಸ ಬೇಕಾದದ್ದೇನಂದರೆ, ನನ್ನ ಸಂಗತಿಗಳು ೧) ಸುವಾರ್ತೆಯ ಹೆಚ್ಚಾದ ವೃದ್ಧಿಗೆ ಆದವು. ೧೩. ಹೇಗಂದರೆ ಕ್ರಿಸ್ತನಲ್ಲಿ ನನ್ನ ಬಂಧಗಳು ೨) ಸಮಸ್ತ ಅರಮನೆಯಲ್ಲಿಯೂ ೩) ಮಿಕ್ಕಾದವರೆಲ್ಲರಿಗೂ ಪ್ರಸಿದ್ಧಿಯಾಗಿವೆ. ೧೪. ಮತ್ತು ಕರ್ತನಲ್ಲಿರುವ ಸಹೋದರರಲ್ಲಿ ಬಹು ಜನರು ನನ್ನ ಬಂಧಗಳಿಂದ ದೃಢ ಪಟ್ಟು, ಭಯವಿಲ್ಲದೆ ದೇವರ ವಾಕ್ಯವನ್ನು ಮಾತಾಡ ಹೆಚ್ಚಾಗಿ ಧೈರ್ಯವಾಗಿದ್ದಾರೆ. ೧೫. ಕೆಲವರು ಹೊಟ್ಟೆಕಿಚ್ಚಿನಿಂದಲೂ ೪), ಜಗಳದಿಂದಲೂ, ಕೆಲವರು ಸುಬುದ್ಧಿಯಿಂದಲೂ ಕ್ರಿಸ್ತನನ್ನು ಸಾರುತ್ತಾರೆ. ೧೬. ಅವರು ನನ್ನ ಬಂಧಗಳ ಮೇಲೆ ಉಪದ್ರವವನ್ನು ತರ ಬೇಕೆಂದು, ಶುದ್ಧವಾಗಿ ಅಲ್ಲ, ವಾಗ್ವಾದ ಕ್ಕಾಗಿಸ್ತರ; ೧೭. ಇವರು, ನಾನು ಸುವಾರ್ತೆಯ ಪ್ರತ್ಯುತ್ತರಕ್ಕಾಗಿ ಇರಿಸಲ್ಪಟ್ಟಿದ್ದೇನೆಂದು ತಿಳಿದು, ಪ್ರೀತಿಯಿಂದ ಕ್ರಿಸ್ತನನ್ನು ಪ್ರಸಂಗಿಸುತ್ತಾರೆ. ೧೮. ಆದರೇನು? ಹೇಗಾವರೂ, ನೆವದಿಂದಾಗಲಿ ನಿಜದಿಂದಾಗಲಿ, ಕ್ರಿಸ್ತನು ಪ್ರಸಂಗಿಸಲ್ಪಡುತ್ತಾನೆ ೫). ಇದರಲ್ಲಿ ಸಂತೋಷ ಪಡುತ್ತೇನೆ; ಇನ್ನೂ ಸಂತೋಷ ಪಡುವೆನು.

೧. ತಾನು ಬಂಧನದಲ್ಲಿ ಬಿದ್ದದ್ದು ಸುವಾರ್ತೆಯ ಪ್ರಸಿದ್ಧಿಗೆ ಉಪಯೋಗವಾಯಿತೆಂಬ ವರ್ತಮಾನವು ತಮ್ಮ ಪ್ರಿಯ ಅಪೊಸ್ತಲನಿಗಾಗಿ ಚಿಂತಾಕ್ರಾಂತರಾಗಿದ್ದ ಫಿಲಿಪ್ಪಿಯವರಿಗೆ ಸಂತೋಷಕರವಾದದ್ದೆಂದು

ಶಿಳಿದು, ಈ ಸಂತೋಷಪತ್ರಿಕೆಯನ್ನು ಅದರಿಂದಲೇ ತಾಡಗುತ್ತಾನೆ.

೨. ಪೌಲನ ಬಂಧನಗಳು ಕ್ರಿಸ್ತನಲ್ಲಿ ಪ್ರಸಿದ್ಧವಾದದ್ದೇನಂದರೆ: ಪೌಲನು ಯಾವದಾಂದು ಅಪರಾಧದ ನಿಮಿತ್ತವಲ್ಲ, ಕ್ರಿಸ್ತನಿಗೆ ಆಸಕ್ತಸೇವಕನಾಗಿದ್ದು, ಎಲ್ಲಾ ಕಡೆಯಲ್ಲಿಯೂ ಕ್ರಿಸ್ತನು ಸರ್ವಲೋಕರಕ್ಷಕನೆಂಬುವದನ್ನು ಸಾರಿದರಿಂದ ಯೆಹೂದರು ಅವನಿಗೆ ಮಾಡಿದ ದ್ವೇಷದ ನಿಮಿತ್ತ ಶೆರೆಯಲ್ಲಿ ಬಿದ್ದನೆಂದು, ಎಲ್ಲರಿಗೂ ತಿಳಿಯಲಾಯಿತು. ಇದಲ್ಲದೆ ಅವನು ಮಿನೂ ತಡೆಯಿಲ್ಲದೆ ರಾಮಪುರದ ಶ್ರೇಷ್ಠ ಜನರಿಗೆ ಕ್ರಿಸ್ತನ ವಾಕ್ಯವನ್ನು ಪೇಳುವದಕ್ಕೆ ಉತ್ತಮ ಸಮಯವು ದಾರಕಿತು.

೩. ಗ್ರೀಕ ಗ್ರಂಥದ ಮಾತಿಗೆ ಅಚಿಪ್ರಾಯ ಬೇರೆ; ಮಿನಂದರೆ: ಸೈನ್ಯಸ್ಥಾನವು. ಅರಮನೆಯವರನ್ನು ಅ ಪೊಸ್ತಲನು ೪, ೨೨ಲ್ಲಿ ಜ್ಞಾಪಕ ಮಾಡುತ್ತಾನೆ.

೪. ಯೆಹೂದಕ್ರೈಸ್ತರಲ್ಲಿ ಅನೇಕರು, ತಡೆಯಿಲ್ಲದೆ ಕ್ರೈಸ್ತಸಭೆಯಲ್ಲಿ ವಿಶ್ವಾಸದಿಂದ ಶೇರಿ, ಉಚಿತವಾದ ರಕ್ಷಣೆಯನ್ನು ನಿಯಮಾಚರಣೆಯಿಲ್ಲದೆ ಪಡಾಂಯಿ, ಆನುಚವಿಸುವ ಪರಜನರಾದ ಚಕ್ಕರಲ್ಲಿಯೂ, ಬಲವಾದ ಸುವಾರ್ತಾಪ್ರಸಂಗದಿಂದ ರಾಮಪುರದಲ್ಲಿಯೂ ಪೇರಳ ಜನರ ಪೃದಯಗಳನ್ನು ಶೆಳದು, ಯೇಸು ಕ್ರಿಸ್ತನ ಪೆಸರನ್ನು ಮಹಿಮೆ ಪಡಿಸುವ ಪೌಲನಲ್ಲಿಯೂ, ಪಡಾಟ್ಟೆಕಿಚ್ಚು ಮಾಡುತ್ತಾ ಇದ್ದರು.

೫. ಲೋಕ ರಕ್ಷಕನಾದ ಕ್ರಿಸ್ತನ ವಾಕ್ಯವು ಶಾಪಕ್ಕೆ ಒಳಗಾದ ಎಲ್ಲಾ ಪಾಪಿಗಳಿಗೆ ಸರ್ವಲೋಕದಲ್ಲಿಯೂ ಪ್ರಕಟವಾಗ ಬೇಕೆಂಬದೇ ಪೌಲನ ಏಕ ಮುಖ್ಯಚಿಲಾಷೆಯಾಗಿತ್ತು. ತಾನು ಶರೆಯಲ್ಲಿರುವದೂ, ಬಿಡುಗಡೆಯಾಗುವದೂ, ಬದುಕುವದೂ, ಸಾಯುವದೂ ಅವನಿಗೆ ಗಣ್ಯವಾಗಿರಲಿಲ್ಲ.

೧೫. ಯಾಕಂದರೆ ೧) ನಿಮ್ಮ ಬಿನ್ನಹದಿಂದಲೂ, ಯೇಸು ಕ್ರಿಸ್ತನ ಆತ್ಮದ ಸಹಾಯದಿಂದಲೂ, ಇದು ನನ್ನ ರಕ್ಷಣೆಗೆ ಬರುವದೆಂದು ಬಲ್ಲೆನು. ೨೦. ನಾನು ಯಾವದರಲ್ಲಿಯೂ ನಾಚಿಕೆ ಪಡೆನು, ಆದರೆ ಸಕಲ ಧೈರ್ಯದಲ್ಲಿ ೨), ಯಾವಾಗಲೂ ಆದ ಹಾಗೆ, ಇಗಲೂ, ಕ್ರಿಸ್ತನು ನನ್ನ ಶರೀರದಲ್ಲಿ ೩), ಜೀವದಿಂದಾಗಲಿ, ಮರಣದಿಂದಾಗಲಿ, ಮಹಿಮೆಯನ್ನು ಹೊಂದುವನೆಂಬ ನನ್ನ ಅಖಿಲಾಷೆ ನಿರೀಕ್ಷೆಗಳ (ಪ್ರಕಾರವೇ ೪). ೨೧. ಯಾಕಂದರೆ ನನಗೆ ಜೀವಿಸುವದು ಕ್ರಿಸ್ತನೇ ೫), ಸಾಯುವದು ಲಾಭವೇ. ೨೨. ಮಾಂಸದಲ್ಲಿ ೬) ಬದುಕುವದಾದರೆ, ಇದೇ ನನಗೆ ಕೆಲಸದ ಫಲವು; ಮತ್ತು ಮಿನು ಆರಿಸಿ ಕೊಳ್ಳಬೇಕೋ, ಅರಿಯೆನು. ೨೩. ಹೇಗಂದರೆ ಇ ಎರಡರ ಇಕ್ಕಟಿನಲ್ಲಿ ಇದ್ದೇನೆ ೭), ಬಿಟ್ಟು ಹೋಗಿ ಕ್ರಿಸ್ತನ ಸಂಗಡ ೮) ಇರ ನನಗೆ ಅಪೇಕ್ಷೆ ಉಂಟು; ಅದು ಬಹು ಉತ್ತಮೋತ್ತಮವೇ. ೨೪. ಆದರೆ ಮಾಂಸದಲ್ಲಿ ಉಳಿ ಕೊಳ್ಳುವದು ನಿಮಗಾಗಿ ಅತ್ಯಾವಶ್ಯಕವು. ೨೫. ಮತ್ತು ನಾನು ಶಿರಿಗಿ ನಿಮ್ಮ ಬಳಿಗೆ ಬರುವದರಿಂದ ನನ್ನ ವಿಷಯವಾದ ನಿಮ್ಮ ಹೆಚ್ಚಳವು ಕ್ರಿಸ್ತ ಯೇಸುವಿನಲ್ಲಿ ಅಧಿಕವಾಗುವ ಹಾಗೆ, ೨೬. ನಿಮ್ಮ ವಿಶ್ವಾಸದ ಅಭಿವೃದ್ಧಿಗಾಗಿಯೂ ಸಂತೋಷಕ್ಕಾಗಿಯೂ ಉಳಿದು, ನಿಮ್ಮೆಲ್ಲರ ಸಂಗಡ ಇರುವೆನೆಂದು, ನಂಬಿಕೊಂಡು ಬಲ್ಲೆನು ೯).

ಫಿಲಿ. ೧, ೨೭—೨೫.

೧. ತಾನು ಆಗಲೇ ಹಿಡಿಯುವ ಮಾರ್ಗವು ರಕ್ಷಣಾಪಥವೆಂಬ ತಿಳುವಿಕೆಯಿಂದ ಪೌಲನ ಮನಸ್ಸಿನಲ್ಲಿ ಪೂರ್ಣ ಸಂತುಷ್ಟಿ ಹುಟ್ಟಿತು.

೨. ಪೌಲನು ಕಂಟಕಗಳಿಗೆ ಎಷ್ಟು ಮಾತ್ರವೂ ಹೆದರದೆ, ಸುವಾರ್ತೆಯನ್ನು ಎಲ್ಲರಿಗೂ ಸಾರುವದರಲ್ಲಿ ದೃಢವಾಗಿದ್ದನು.

೩. ಅಂದರೆ, ಸುವಾರ್ತಾಪ್ರಸಂಗವೃತ್ತಿಯಲ್ಲಿ ಜೀವಕಾಲವನ್ನು ಕಳಿಯುವದರಿಂದಾಗಲಿ, ಬಂಧನಗ್ರಸ್ತನಾಗಿರುವದರಿಂದಾಗಲಿ, ಜೀವವನ್ನು ಬಿಡುವದರಿಂದಾಗಲಿ.

೪. ಕ್ರಿಸ್ತಾಧೀನರಿಗೆ ಎಲ್ಲಾ ಅಧೀನವಾಗಿದೆಂಬದು ಬಂಧನಗ್ರಸ್ತನಾದ ಪೌಲನ ಸಂತೋಷಪೂರ್ಣತನದಿಂದ (ರೋಮಾ. ೮, ೨೮.) ಪ್ರಮಾಣೀಭವಾಗಿದೆ. ಪೌಲನ ಮಾತಿನ ಪ್ರಕಾರ ಅದರ ಅಭಿಪ್ರಾಯವನ್ನು ತಿಳಿದು ಕಾಂಡರೆ, ಆಶೆಗೆ ನಾಶವಿಲ್ಲವೆಂಬ ಗಾದೆಯು ಉತ್ತಮವಾಗಿದೆ.

೫. ಅಂದರೆ, ಕ್ರಿಸ್ತನ ಪುನಾರ್ತು ಜೀವವು ಜೀವವೆಂದು ತೋರುವದಿಲ್ಲ; ಮರಣವು ಮರಣವೆಂದು ತೋರುವದಿಲ್ಲ; ಯಾಕಂದರೆ ಕ್ರಿಸ್ತನ ಐಕ್ಯದಲ್ಲಿ ಶೇರಿದವನು ಶರೀರಖೇದದಿಂದ ನಷ್ಟ ಪುನಾಂದುವದಿಲ್ಲ. ಬದುಕಿದರೂ, ಸತ್ತರೂ ಕ್ರಿಸ್ತನಲ್ಲಿಯೇ ನೆಲೆಯಾಗಿದ್ದಾನೆ. ರೋಮಾ. ೧೪, ೭. ೧ ಕೊರಿ. ೬, ೧೭. ಗಲ. ೨, ೨೦.

೬. ಈ ಮಾತಿನ ಅಭಿಪ್ರಾಯವೇನಂದರೆ: ಇಪುದಲ್ಲಿ ಬದುಕುವದರಿಂದ ನನಗೆ ಹಿತವಾದ ಒಂದು ಫಲ ಬರುತ್ತದೆ. ಅದೇನಂದರೆ: ಕರ್ತನಾದ ಕ್ರಿಸ್ತನಿಗೆ ಹೆಚ್ಚಾಗಿ ಸೇವೆ ಮಾಡ ಬಹುದು. ಕೆಲಸದ ಫಲವೆಂಬದಕ್ಕೆ ಇದೇ ಅಭಿಪ್ರಾಯ.

೭. ನನ್ನ ಮನಸ್ಸು ಎರಡು ಕಡೆಗೂ ಶೆಳೆಯುತ್ತದೆ. ಪುನ್ಯಾಗಂದರೆ, ನನ್ನ ಸೌಖ್ಯವನ್ನು ಹಾವಿಸಿದರೆ, ಸಾಯುವದು ಲೇಸು; ಸಹಾಸೌಖ್ಯವನ್ನು ಹಾವಿಸಿದರೆ, ಬದುಕುವದು ವಾಸಿ.

೮. ಇದಕ್ಕೆ ೨ ಕೊರಿ. ೫, ೧—೧೦; ೧೨, ೪. ಸರಿ ನೋಡ ಬೇಕು.

೯. ಪೌಲನು ಈಗ ಹೆಚ್ಚಾದ ಧೈರ್ಯದಿಂದ ಫಿಲಿಪ್ಪಿಯವರಿಗೆ ಸಂತೋಷಕರವಾದ ಮಾತು ಬರದು, ತನ್ನನ್ನು ಶೆರೆಯಿಂದ ಬಿಡಿಸುವ ಕರ್ತನಿಗೆ ಮಾನ ಉಂಟಾಗುವದೆಂಬ ಹಾವನೆಯಿಂದ ತಾನೂ ಸಂತೋಷಪಟ್ಟು, ಇದನ್ನು ಫಿಲಿಪ್ಪಿಯವರಿಗೆ ವಿಶ್ವಾಸದಿಂದ ಮುಂತಿಳಿಸುತ್ತಾನೆ.

೩. ಎದುರಾಳಿಗಳಿಗೆ ವಿರೋಧವಾಗಿ ದೃಢವಾಗಿದ್ದು, ಒಬ್ಬರಿಗೊಬ್ಬರು ದೀನ
ಹಾವದ ಪ್ರೀತಿಯನ್ನು ತೋರಿಸಿ, ನಂಬಿಕೆಯುಳ್ಳವರಾಗಿ ನಡದು
ಕಾಳ್ಳ ಬೇಕೆಂಬ ಉದ್ಬೋಧನೆಯು. ಸ. ೧, ೨೭—೨, ೧೮.

ಅ) ಎದುರಾಳಿಗಳಿಗೆ ವಿರೋಧವಾದ ದಾರಾಢ್ಯವು. ಸ. ೧, ೨೭—೩೦.

೨೭. ನಾನು ಬಂದು ನಿಮ್ಮನ್ನು ನೋಡಿದರೂ, ದೂರದಲ್ಲಿದ್ದರೂ, ಒಂದೇ ಆತ್ಮದಲ್ಲಿ[೧] ನಿಂತು ಕೊಂಡು, ಒಂದೇ ಮನಸ್ಸಿನಿಂದ ಸುವಾರ್ತೆಯ ವಿಶ್ವಾಸಕ್ಕಾಗಿ ಸ್ಪರ್ಧೆ[೨] ಕೂಡ ಹೋರಾಡುತ್ತಿರೆಂದೂ, ಯಾವದರಲ್ಲಾದರೂ ಶತ್ರುಗಳಿಂದ[೩] ಹೆದರಿಸಲ್ಪಡುವದಿಲ್ಲವೆಂದೂ, ನಾನು ನಿಮ್ಮನ್ನು ಕುರಿತು ಕೇಳುವ ಹಾಗೆ, ಸುವಾರ್ತೆಗೆ ತಕ್ಕ ಪ್ರಕಾರ ಮಾತ್ರ ನಡೆದು ಕಾಳ್ಳಿರಿ. ೨೮. ಅದು ಅವರಿಗೆ ನಾಶನಕ್ಕಾಗಿಯೂ, ನಿಮಗೆ ರಕ್ಷಣೆಗಾಗಿಯೂ, ದೇವರಿಂದಲೇ ಗುರುತಾಗಿದೆ. ೨೯. ಯಾಕಂದರೆ ಕ್ರಿಸ್ತನಿಗಾಗಿಸ್ತರ ಅವನಲ್ಲಿ ವಿಶ್ವಾಸವಿಡುವದಕ್ಕೆ ಮಾತ್ರವಲ್ಲ, ಅವನಿಗಾಗಿಸ್ತರ

೯೧೬ ಅಪಾ. ಚ. ೨೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಪ್ರ.

ಫಿಲಿ. ೧, ೩೦—೨, ೪.

ಶ್ರಮೆ ಪಡುವದಕ್ಕೂ ನೀವು ಕೃಪೆಯನ್ನು ಹೊಂದಿದ್ದೀರಿ. ೩೦. ನೀವು ನಂನಲ್ಲಿ ನ್ಯೋಡಿದಂಥ, ಇಗ ನಂನಲ್ಲಿ ಕೇಳುವಂಥ, ಅದೇ ಹೋರಾಟ ೪) ನಿಮಗುಂಟಾ ಗಿದೆ.

೧. ಯೇಸು ಕ್ರಿಸ್ತನ ಆತ್ಮವಾದ ಪರಿಶುದ್ಧಾತ್ಮವನ್ನು ಒಂದೇ ಪ್ರಕಾರವಾಗಿ ಪೊಂದಿದವರಲ್ಲಿ ಎಫೆ. ೪, ೩. ಒಂದೇ ಮನಸ್ಸು ಸಪಾ ಇರ ಬೇಕು.

೨. ಯಥಾರ್ಥವಾದ ಸರ್ವಲೋಕರಕ್ಷಣೋ ಪಾರ್ಥೆಯ ನಿಮಿತ್ತ ಪೌಲನು ಯುದ್ಧ ಮಾಡು ತ್ತಾ ಬಂದ ಪ್ರಕಾರ, ಅದನ್ನು ಪೌಲನಿಂದ ಕೇಳಿ ನಂಬಿದ ಫಿಲಿಪ್ಪಿಯರು ಸಪಾ ಪೊರಾಡ ಬೇಕಾ ಯಿತು.

೩. ಈ ಎದುರಾಳಿಗಳು ಯಾರಂದರೆ: ಯೆಹೂದ ರೂ, ಯೆಹೂದರಿಗೆ ಸಪಾಯಕರಾದ ಪರಜನರೂ. ದೇವರು ತಮ್ಮ ಪಕ್ಷದಲ್ಲಿದ್ದಾನೆಂದು ತಿಳಿದು ಕಾಂಡು, ಮರಣಕ್ಕೆ ಭಯ ಪಡದೆಯಿರುವ ಭಕ್ತರು ಮನುಷ್ಯರಾ ದ ಶತ್ರುಗಳಿಗೆ ಪೆದರ ಕೆಲಸವಿಲ್ಲ. ಮತ್ತಾ. ೧೦, ೨೮—೩೩.

೪. ಪೌಲನು ಮೊದಲು ಫಿಲಿಪ್ಪಿಗೆ ಬಂದಾಗ, ಅಪಾ. ಕ್ರಿ. ೧೬, ೧೨. ಇತ್ಯಾದಿ, ಅವನು ಸುವಾ ರ್ತೆಗಾಗಿ ಪೆಟ್ಟು ತಿಂದು ಶೆರೆಯಲ್ಲಿ ಬಿದ್ದದ್ದನ್ನು ನೋ ಡಿದ ಪ್ರಕಾರ, ಅವನು ಈ ಪರ್ಯಂತ ಶ್ರಮ ಪಡು ತ್ತಾ ಬರುತ್ತಾನೆಂಬದನ್ನು ಕೇಳುತ್ತಾ ಇದ್ದರು.

೪) ಫಿಲಿಪ್ಪಿಯವರು ಏಕ ಮತ್ಯವನ್ನೂ, ದೀನಭಾವವನ್ನೂ, ವಿಶ್ವಾಸದೃಢವನ್ನೂ ಕೈಕೊಂಡು, ಪೌಲನನ್ನು ಸನ್ಮಾನಿಸ ಬೇಕೆಂಬ ಉದ್ಯೋಗನೆಯು. ಸ. ೨, ೧—೧೪.

೧. ಆದದರಿಂದ, ಕ್ರಿಸ್ತನಲ್ಲಿರುವ ಯಾವ ಆದರಣೆಯೂ, ಯಾವ ಪ್ರೀತಿಯ ಸಂತೈಸುವಿಕೆಯೂ, ಯಾವ ಆತ್ಮನ ಅನ್ಯೋನ್ಯವೂ, ಯಾವ ಅಂತಃಕರಣಗಳೂ ಕನಿಕರಗಳೂ ೧) ಇದ್ದರೆ ೨), ೨. ಒಂದೇ ಮನಸ್ಸಾಗಿ, ಒಂದೇ ಪ್ರೀತಿ ಉಂಟಾಗಿ, ಒಂದೇ ಜೀವವಾಗಿಯೂ ಏಕ ಮನಸ್ಸುಳ್ಳವರಾಗಿಯೂ ಇದ್ದು, ನನ್ನ ಸಂತೋಷವ ನ್ನು ೩) ಪೂರೈಸಿರಿ. ೩. ಜಗಳದಿಂದಾಗಲಿ, ಡಂಭಾಚಾರದಿಂದಾಗಲಿ ೪), ಏನೂ ನಡಿಸದೆ, ದೀನ ಮನಸ್ಸಿನಿಂದ ಒಬ್ಬರನ್ನೊಬ್ಬರು ತಮಗಿಂತ ಶ್ರೇಷ್ಠರೆಂದು ಎಣಿಸಿರಿ ೫). ೪. ಒಬ್ಬೊಬ್ಬನು ತನ್ನವುಗಳಂನಲ್ಲ, ಬೇರೊಬ್ಬರವುಗಳನ್ನು ಸಹ ಒಬ್ಬೊಬ್ಬನು ನೋ ಡಲಿ ೬).

೧. ಬಂಧನಗ್ರಸ್ತನಾದ ತನ್ನ ಶ್ರಮವನ್ನು ನೆನಸಿ, ತನ್ನನ್ನು ಕರುಣಿಸಿ, ಫಿಲಿಪ್ಪಿಯಪರು ತಮ್ಮ ಸಭೆಯ ಲ್ಲಿ ಪರಸ್ಪರಪ್ರೀತಿಯ ಐಕ್ಯವು ವೃದ್ಧಿಯಾಗಿದೆಂಬ ವರ್ತಮಾನದಿಂದ ತನಗೆ ಪೂರ್ಣ ಸಂತುಷ್ಟಿಯನ್ನು ಪುಟ್ಟಿಸ ಬೇಕೆಂದು, ಪೌಲನು ಸೂಚಿಸುತ್ತಾನೆ.

೨. ಇದರಲ್ಲಿ ಸಂಶಯಚಾವನೆ ತಾಗಿರುವದಿಲ್ಲ; ಪೌಲನ ಅಭಿಪ್ರಾಯವೇನಂದರೆ: ನಿಮ್ಮಲ್ಲಿಗುವ ಸ ದ್ಗುಣಗಳನ್ನೆಲ್ಲಾ ನನಗೆ ಮನಾಪೂರವಾವ ನಡತೆ ಯಿಂದ ಪ್ರಮಾಣಿಸಿರಿ.

೩. ತಾನು ಅವರಿಗಾಗಿ ಅನುಭವಿಸುವ ಸಂತಾಪ ವನ್ನು ೧, ೪ಲ್ಲಿ ಸೂಚಿಸಿದನು.

೪. ಪ್ರೀತಿಯ ಐಕ್ಯದಲ್ಲಿರ ತಕ್ಕವರಲ್ಲಿ ಪುಟ್ಟುವ ತರ್ಕಗಳಿಗೆ ಡಂಭಾಚಾರಾನ್ವಿತ ಗರ್ವವೇ ಹೇತು ವಾಗಿದೆ.

ಫಿಲಿ. ೨, ೫—೧೧.

೫. ಇದು ನಿಜ ಚಕ್ತರಿಗೆ ಸಹಜವಾದ ಅಚ್ಯಾಸವು. ಅವರು ತಮ್ಮನ್ನು ತಾವೇ ಶಿಳಿದು ಕಾಂಡು, ತಮ್ಮ ಪಾಪಗಳನ್ನೂ, ದುರ್ಗುಣಗಳನ್ನೂ ನೆನಪು ಮಾಡಿ ಕಾಂಡು, ತಮ್ಮನ್ನು ತಗ್ಗಿಸಿ ಕಾಂಡು, ಸಹಾಯಾದರರು ಪಡಾಂದಿದ ಕೃಪೆಯನ್ನು ನಾಡಿ, ಅವರನ್ನು ಸಂತಾಷದಿಂದ ಸನ್ಮಾನಿಸುತ್ತಾರೆ. ತನ್ನನ್ನು ತಾನೇ ಶಿಳಿಯದವನು ತಾನು ಉತ್ತಮನೆಂದು ಜಾವಿಸುತ್ತಾನೆ; ಪೂರ್ಣವಾಗಿ ಶಿಳಿದವನು ತಾನು ಎಲ್ಲರಿಗಿಂತ ಕಮ್ಮಿಯಾದವನೆಂದು ಗ್ರಹಿಸುತ್ತಾನೆ.

೬. ಸ್ವಾರ್ಥವಿಲ್ಲದ ಪ್ರೀತಿಯು ಸಹಾಯಾದರರ ಪ್ರಯೋಜನವು ಸ್ವಪ್ರಯೋಜನವೆಂದು ನೆನಸಿ, ಪಡಾಟ್ಟಿಕಿಚ್ಚು ಇಲ್ಲದೆ, ಅದರ ವೃದ್ಧಿಗೆ ಮೆಚ್ಚುತ್ತದೆ.

೫. ಕ್ರಿಸ್ತ ಯೇಸುವಿನಲ್ಲಿಯೂ ಇದ್ದ ೧) ಮನಸ್ಸೇ ನಿಮ್ಮಲ್ಲಿ ಇರಲಿ ೨). ೬. ಅವನು ದೇವರ ರೂಪದಲ್ಲಿದ್ದು ೩), ದೇವರಿಗೆ ಸಮಾನವಾಗಿರುವದು ಕಾಳ್ಳೆ ಎಂದು ಎಣಿಸದೆ ೪), ೭. ದಾಸನ ರೂಪ ತಕ್ಕಾಂಡು ೫), ಮನುಷ್ಯರ ಹಾಂಲಿಕೆಯಾದವನಾಗಿ, ತನ್ನನ್ನು ಬರಿದು ಮಾಡಿ ಕಾಂಡನು ೬). ೮. ಮತ್ತು ಆಕಾರದಲ್ಲಿ ಮನುಷ್ಯನಾಗಿ ಕಾಣಿಪ್ಪಟ್ಟು, ಮರಣದ ಪರ್ಯಂತರ, ಶಿಲುಬೆಯ ಮರಣದ ಪರ್ಯಂತರವೇ ವಿಧೇಯನಾಗಿ, ತನ್ನನ್ನು ತಗ್ಗಿಸಿ ಕಾಂಡನು ೭). ೯. ಆದದರಿಂದ ೮) ದೇವರು ಅವನನ್ನು ಮೇಲಕ್ಕೆ ಮೇಲಾಗಿ ಎತ್ತಿ, ೧೦. ಯೇಸುವಿನ ಹೆಸರಿನಲ್ಲಿ ೯) ಪರಲೋಕದಲ್ಲಿಯೂ ಭೂಮಿಯಲ್ಲಿಯೂ ಭೂಮಿಯ ಕೆಳಗೆಯೂ ಇರುವವರ ಮೊಣಕಾಲುಗಳೆಲ್ಲಾ ಬಾಗ್ಗಿ, ೧೧. ಯೇಸು (ಕ್ರಿಸ್ತನು ಕರ್ತನೆಂದು, ಎಲ್ಲಾ ನಾಲಿಗೆಗಳು ತಂದೆಯಾದ ದೇವರ ಮಹಿಮೆಗಾಗಿ ೧೦) ಅರಿಕೆ ಮಾಡುವ ಹಾಗೆ ೧೧), ಎಲ್ಲಾ ಹೆಸರಿನ ಮೇಲಿನ ಹೆಸರನ್ನು ೧೨) ಅವನಿಗೆ ದಯ ಮಾಡಿದನು.

೧. ಈ ಸ್ಥಳದಲ್ಲಿ ದೀನತ್ವವಿಷಯವಾದ ಸಾಧಾರಣಾಪದ್ಧಾಧನಾಸಮಯೋಚಿತವಾಗಿ ಮಾತ್ರ ಕ್ರಿಸ್ತನು ಸೂಚಿತನಾಗಿದ್ದರೂ, ವ್ಯಾಖ್ಯಾನಿಗಳು ಅದು ಕ್ರಿಸ್ತನ ದೇವಮನುಷ್ಯತ್ವದ ಪ್ರಮಾಣೋಕ್ತಿಗಳಲ್ಲಿ ಅತಿಶ್ಲಾಘ್ಯವಾದ ಒಂದು ವಾಕ್ಯವಾಗಿದೆಂದು, ಪೂರ್ವ ಕಾಲದಿಂದ ಉದಾಹರಿಸುತ್ತಾ ಬಂದರು. ಕ್ರಿಸ್ತ ಬೋಧನೆಯಲ್ಲಿ ರೂಢಿಯಾದ ಕ್ರಿಸ್ತನ ನ್ಯೂನ ಮಹಿಮಾಸ್ಥಿತಿಗಳ ಖೇದವರ್ಣನೆಗೆ ಈ ಯಥೋಕ್ತವೇ ಮೂಲವಾಗಿದೆ. ಅದರಲ್ಲಿ ಮೂರು ತಾತ್ಪರ್ಯವು ಸೂಚಿತವಾಗಿದೆ: ೧) ಆತನ ಲೋಕಪೂರ್ವಿಕ ಮಹಿಮೆಯು ವ. ೬. ೨) ಆತನ ಮಾನುಷೋತ್ಪತ್ತಿಯೂ, ಆತನು ತನ್ನನ್ನು ಕ್ರಮೇಣ ಮರಣದ ಪರ್ಯಂತ ತಗ್ಗಿಸಿ ಕಾಂಡ ನ್ಯೂನತ್ವವೂ ವ. ೭. ೮. ೩) ಆತನು ದಿವಾರೋಹಣದಿಂದ ತಿರಿಗಿ ತಂದೆಯಲ್ಲಿ ಶೇರಿದ ಮಹಿಮೆಯು ವ. ೯—೧೧.

೨. ಇದು ಕ್ರೈಸ್ತಧರ್ಮದ ತತ್ವಬೋಧನೆಯು. ಇದಕ್ಕಿಂತ ಉತ್ಕೃಷ್ಟವಾದಂಥ, ಮತ್ತು ಉತ್ಕೃಷ್ಟ ಜಾವವನ್ನು ಪುಟ್ಟಿಸುವಂಥ ಬೇರಾಂದು ಉದ್ಬೋಧನೆಯಿಲ್ಲ.

೩. ಕ್ರಿಸ್ತನು ಅನಾದಿಯಿಂದ ಅದೃಶ್ಯ ದೇವನ ತದ್ರೂಪನೂ, ಕಾಲಾ. ೧, ೧೫. ಆತನ ಮಹಿಮೆಯ ಪ್ರಶಿ ಕಾಂಶಿಯೂ, ದೇವಜಾವವುಳ್ಳವನಾಗಿಯೂ, ದೇವಸದೃಶನಾಗಿಯೂ ಇದ್ದನು. ತನ್ನನ್ನು ದೇವನಾಗಿ ಪ್ರಕಟಿಸುವ ದೇವಗುಣಪೂರ್ಣತ್ವಕ್ಕೆ ದೇವರೂಪವೆಂದು ಪೆಸರು. ಯೋಹಾನನ ಸುವಾರ್ತೆಯ ಮೊದಲನೆ ಸಂಧಿಯಲ್ಲಿಯೂ, ಕಾಲಾಸ್ಸೆಯವರ ಪ

ಶ್ರಿಕೆಯ ಮೊದಲನೆ ಸಂಧಿಯಲ್ಲಿಯೂ ಇದೇ ಅಭಿಪ್ರಾಯವು ವರ್ಣಿಸಿಯದೆ. ಲೌಕಪೂರ್ವಿಕ ಮಹಿಮೆಯು ಕರ್ತನಾದ ಯೇಸುವು ತಾನು ಲೌಕಾತ್ಪ ತ್ರಿಗೆ ಮುಂಚಿತವಾಗಿ ತನಗೆ ತಂದೆಯ ಬಳಿಯಲ್ಲಿದ್ದ ಮಹಿಮೆಯ ವಿಷಯವಾಗಿ ಯೋಹಾ. ೧೭, ೫ಲ್ಲಿ ಹೇಳಿದ ಮಾತಿನಿಂದ ಸೂಚಿತವಾಗಿದೆ.

೪. ಕಾಳ್ಳೆ ಮಾಡಿದವನು ತಾನು ಅಪಹರಿಸಿದ ಒಡವೆಯನ್ನು ಪರರಿಗೆ ಕಾಡದೆ, ತಾನೇ ಅದನ್ನು ಅನುಭವಿಸಿ, ಮೆರವಣಿಗೆ ಮಾಡಿಸಿ ಕಾಳ್ಳುವ ಜಯಶಾಲಿಯಂತೆ, ಅದರಿಂದ ಆಡಂಬರ ಮಾಡುತ್ತಾನೆ. ದೇವೈಕಪುತ್ರನು ಹೀಗೆ ಮಾಡಲಿಲ್ಲ. ದೇವಸಾಮ್ಯದಿಂದ ಹಿಗ್ಗಿ ಕಾಳ್ಳುವ ಸ್ವಾರ್ಥರಹಿತನಾಗಿದ್ದನು.

೫. ಆತನ ದೇವಮಹಿಮಾಪರಿತ್ಯಾಗವು ಮೂರು ವಿಧವಾದದ್ದು: ಅ) ಆತನು ಸೇವಕನ ವೇಷವನ್ನು ಮಾತ್ರ ಧರಿಸಿ ಕಾಳ್ಳದೆ, ನಿರ್ಮಾಣಿಕನ ಚಿತ್ತಕ್ಕೆ ಪೂರ್ಣ ಅಧೀನನಾದ ಸೇವಕನಾದನು. ಈ ಸೇವಕಸ್ಥಿತಿಯಲ್ಲಿ ಶೇರುವ ಬಗೈ, ಆತನು ದೇವದೂತ ಜಾವವನ್ನು ಧರಿಸಿ ಕಾಳ್ಳದೆ ಇಬ್ರಿ. ೨, ೧೬., ಇ) ಮಿಕ್ಕಾದ ಮನುಷ್ಯರಿಗೆ ಸದೃಶನಾದ ಮನುಷ್ಯನಾಗಿ ಹುಟ್ಟಿದನು. ಮನುಷ್ಯರಲ್ಲಿಯೂ ಮಹಾ ಪುರುಷನಾಗಿ ಕಾಣಿಸಿ ಕಾಳ್ಳದೆ, ಉ) ಅನ್ನ, ವಸ್ತ್ರ, ಜೀವನ, ಸಂಚಾರಣ, ಜೆಷ್ಟಾ ಈ ಮುಂತಾದವುಗಳಲ್ಲಿ ಸಾಧಾರಣ ಮನುಷ್ಯನಾಗಿಯೇ ಕಾಣಿಸಿ ಕಾಂಡನು.

೬. ಮಾನುಷಾತ್ಪತ್ತಿಯಲ್ಲಿ ದೇವಬಲ ಅಧಿಕಾರಗಳೆಂಬ ಮಹಿಮೆಯನ್ನು ಪರಿತ್ಯಾಗಾ ಮಾಡಿದನು. ಆತನ ಸಲಿಗೆಯಲ್ಲಿದ್ದ ಪ್ರೀತ್ಯಾಸ್ಕರಾದ ಶಿಷ್ಯರು ಯೋಹಾ. ೧, ೧೪. ಆತನ ಮಹಿಮೆಯನ್ನು ಏಕ ಪುತ್ರನ ಮಹಿಮೆಯಂದು ನೋಡಿ ತಿಳಿದು ಕಾಂಡಾಗ್ಯೂ, ಅದು ಉಳಿದವರಿಗೆ ವಾಡಿಕೆಯಾಗಿ ಮರೆಯಾಗಿತ್ತು. ತಂದೆಯ ಆಜ್ಞೆಗೆ ಪೂರ್ಣವಾಗಿ ಅಧೀನನಾಗಿ, ಸ್ವೇಚ್ಛಾಪರಿತ್ಯಾಗ ಮಾಡಿದನು. ಸರ್ವಜ್ಞತೆಯನ್ನು ಸಹ ಪರಿತ್ಯಾಗ ಮಾಡಿದನು ಮರ್ಕ. ೧೩, ೩೨. ಅದ್ಭುತ ಕೃತ್ಯಗಳನ್ನು ದೇವಸರ್ವಶಕ್ತಿಯಿಂದಲ್ಲ, ವಿಶ್ವಾಸದಿಂದ ತಂದೆಯ ಬಲದ ಮುಖಾಂತರ ನಡಿಸಿದನು. ಯೋಹಾ. ೧೧, ೪೧. ಈ ಪ್ರಕಾರವಾಗಿ ಆತನ ಬಹಿಸ್ಥಿತಿಯಲ್ಲಿ ದೇವಮಹಿಮೆಯು ಕಾಣಲಿಲ್ಲ.

೭. ಸಾಧಾರಣ ಮನುಷ್ಯನಾಗಿ ಹುಟ್ಟಿ ಬದುಕುವದಲ್ಲದೆ, ತನ್ನನ್ನು ತಗ್ಗಿಸಿ ಕಾಳ್ಳುವ ಸಂಪೂರ್ಣ ವಿಧೇಯತ್ವವನ್ನು ಕೈಕಾಂಡು, ಬಡತನವನ್ನೂ, ನೀಚತ್ವವನ್ನೂ, ಅವಮಾನವನ್ನೂ, ಮಿತ್ರ ಶತ್ರುಗಳ ಅನ್ಯಾಯವನ್ನೂ ತಾಳಿ ಕಾಂಡು, ಕಡೆಯಲ್ಲಿ ಅತ್ಯಂತ ನಿಂದಾಪೀಡಾಮಯವಾದ ಕ್ರೂಜೆಯ ಮರಣವನ್ನು ಸಹಿಸಿದನು.

೮. ಇದು ದೇವರ ಮಗನಿಗೆ ಲೌಕಸೃಷ್ಟಿಗಿಂತ ಮುಂಚಿತವಾಗಿ ದೇವರಲ್ಲಿದ್ದ ಮಹಿಮೆಯನ್ನು ಮನುಷ್ಯನ ಮಗನಾದ ಯೇಸು ಪಡದು ಕಾಂಡು ದೇವಸಿಂಹಾಸನಾರೂಢವಾದ ಕಾರಣವಾಗಿದೆ.

೯. ದಿವದಲ್ಲಿರುವ ಪರಿಶುದ್ಧ ದೂತರೂ, ಭೂಮಿಯಲ್ಲಿರುವ ಮನುಷ್ಯರೂ, ಭೂಮಿಯ ಕೆಳಗಿರುವ ಭೂತ ಪ್ರೇತಗಳೂ ಲೂಕ. ೮, ೩೧. ೨ ಪೇತ್ರ. ೨, ೪. ಪ್ರಕ. ೫, ೧೩; ೨೦, ೧. ೩., ನಮಗೆ ಪ್ರಕಟವಾದಂಥಾ, ತಂದೆಯು ಆತನಿಗೆ ಕಾಟ್ಟಿಂಥಾ ಮಹಿಮೆಯ ಪೌಸರನ್ನು ತಿಳಿದು, ಮನುಷ್ಯನ ಮಗನಾದ ಯೇಸುವಿನ ಮುಂದೆ ಮಂಡಿಗಾಲೂರಿ ನಮಿಸ ಬೇಕು. ಮಂಡಿಕಾಲೂರಿ ನಮಿಸುವದು ದೇವಾರಾಧನಾರೀತಿಯಂದು, ರೋಮಾ. ೧೪, ೧೧ಲ್ಲಿಯೂ ಯೆಶಾ. ೪೫, ೨೩ಲ್ಲಿಯೂ ಕಾಣುತ್ತವೆ. ಹೀಗಿರಲಾಗಿ ಯೇಸು ದೇವರೆಂದು ಜಾವಿಸಿ ಕಾಂಡು, ಆತನನ್ನು ಪ್ರಾರ್ಥಿಸುವದು ಕ್ರೈಸ್ತರಿಗೆ ಉಚಿತವಾಗಿದೆ. ಆತನ ಪೌಸರನ್ನು ಉಚ್ಚರಿಸುವ ವೇಳೆಯಲ್ಲಿ ಮೊಣಕಾಲೂರುವ ಪದ್ಧತಿಯು ಅನೇಕ ಸಭೆಗಳಲ್ಲಿ ವಾಡಿಕೆಯಾಗಿದೆ. ಅದು ಬಹಿರಾಚರಣೆ ಮಾತ್ರವೆಂಬುವದು ಸರಿ, ಆದರೆ ಅದು ಕ್ರೈಸ್ತಭಕ್ತಿಯ ಮೂಲಬೋಧನೆಯಾದ ನಮ್ಮ ರಕ್ಷಕನ ದೇವಮನುಷ್ಯತ್ವದ ಅತಿಶಯನವಾದ ಮರ್ಮವನ್ನು ಜ್ಞಾಪಿಸುವ ಸಭೆಯ ಉತ್ತಮ ಪದ್ಧತಿಯಾಗಿದೆ.

೧೦. ಯೇಸುವಿನ ಆರಾಧನೆಯು ತಂದೆಗೆ ಅವ

ಮಾನಕರವಾದದ್ದಲ್ಲ, ದೇವಮನುಷ್ಯನಲ್ಲಿ ಪ್ರಕಟವಾದ ತಂದೆಯ ಮಹಿಮೆಯನ್ನು ಪೂಜಿಸುವ, ಆತನ ಆಜ್ಞಾನುಸಾರವಾದ ಭಜನೆಯಾಗಿದೆ.

೧೩. ಅವರು ಸ್ವೇಚ್ಛೆಯಿಂದ ಇದನ್ನು ಮಾಡುತ್ತಾರೆಂತಲೂ, ಪೂರ್ಣವಾದರೆ, ಕಡೆಯಲ್ಲಿ ಎಲ್ಲರೂ ರಕ್ಷಿತರಾಗುತ್ತಾರೆಂತಲೂ, ಇಲ್ಲಿ ಸೂಚಿತವಾಗಿರುವದಿಲ್ಲ. ಯೇಸು ಭೂಮಿಯಲ್ಲಿದ್ದಾಗ, ದುರಾತ್ಮಗಳು ಆತನನ್ನು ಮನಸ್ಸಿಲ್ಲದೆ ಸನ್ಮಾನಿಸಿದರು ಮತ್ತಾ. ೮, ೨೯. ಲೂಕ. ೮, ೨೮. ಆತನ ದಿವ್ಯಾರಾಧಿಸಿದ ಇತ್ತಲಾಗಿ ಸಫಲವಾಗಿ ಆಗುತ್ತದೆ. ಸೈತಾನನು ಮುಂತಾದ ದುರಾತ್ಮಗಳ ಸಂವರ್ತನವು ೧೫ಕಾರಿ. ೧೫, ೨೮ಲ್ಲಿ ಬರದ ಮಾತಿನ ನೆರವೇರುವಿಕೆಯಲ್ಲಿ ಶೇರುತ್ತದೆಂಬದು ದೇವರ ವಾಕ್ಯದ ಒಂದು ಸ್ಥಳದಲ್ಲಾದರೂ ಸೂಚಿತವಾಗಿರುವದಿಲ್ಲ. ಆದ್ದರಿಂದ ಈ ಭಾವನೆಯು ನಿರರ್ಥಕವಾದದ್ದೆಂದು, ತಿಳಿದು ಕಾಳ್ಳಬೇಕು.

೧೨. ಅಂದರೆ, ದಿವ್ಯಪೃಥ್ವಿಗಳ ಸರ್ವಾಧಿಕಾರಿಯಂಬದು. ಅಪಾ. ಕ್ರಿ. ೨, ೩೬. ಮತ್ತಾ. ೨೮, ೧೮.

೧೨. ಆದಕಾರಣ ೧) ನನ್ನ ಪ್ರಿಯರೇ, ಯಾವಾಗಲೂ ವಿಧೇಯರಾಗಿದ್ದ ಪ್ರಕಾರ, ನಾನು ಸಮೀಪದಲ್ಲಿದ್ದಾಗ ಮಾಡಿದ ಹಾಗೆ ಮಾತ್ರವಲ್ಲ, ಬಹು ಹೆಚ್ಚಾಗಿ ಇಗ ನಾನು ದೂರದಲ್ಲಿರುವಾಗ, ಭಯದಿಂದಲೂ ನಡುಗಿನಿಂದಲೂ ೨) ನಿಮ್ಮ ರಕ್ಷಣೆಯನ್ನು ೩) ಉಂಟು ಮಾಡಿ ಕಾಳ್ಳಿರಿ ೪). ೧೩. ಯಾಕಂದರೆ ಇಚ್ಛೆಪಡುವದನ್ನೂ ಯಶಸ್ಸಿಪಡುವದನ್ನೂ ತನ್ನ ಸುಯೋಚನೆಯ ಪ್ರಕಾರ ನಿಮ್ಮಲ್ಲಿ ಯಶಸ್ಸಿಪಡುವವನು ದೇವರೇ ೫).

೧. ಪ್ರಸ್ತಾಪಸಂಬಂಧವೇನಂದರೆ: ಯೇಸು ಅತ್ಯಂತ ಪ್ರೀತಿಯಿಂದ ತನ್ನನ್ನು ಅಧೀನವಾಗಿ ತಗ್ಗಿಸಿ ಕಾಂಡನಂತರ ಉನ್ನತ ಮಹಿಮಾಪದವಿಯನ್ನು ಪೂರೈಂದಿಪನೆಂದು ನೆನಸಿ, ದೀನವಿಧೇಯತ್ವವು ಕ್ರಿಸ್ತ ಧರ್ಮದ ಮೂಲಸೂತ್ರವೆಂದು ತಿಳಿದು, ನಾನು ನಿಮಗೆ ಪೇಳುವ ದೀನ ಪ್ರೀತ್ಯುದ್ಭಾವನೆಗೆ ಒಳಗಾಗಿರಿ. ನೀವು ಸದ್ಗುಣಚರಿತರಾಗಿರುವದರಿಂದ ಸಿದ್ಧಿಯನ್ನು ಪೂರೈಂದಿದೆವೆಂದು, ನೆನಸ ಬೇಡಿರಿ.

೨. ಅಂದರೆ, ದೀನಭಾವಾನ್ವಿತ ನಿತ್ಯಾಸಕ್ತ್ಯಿಯಿಂದ.

೩. ಒಬ್ಬಾಬ್ಬನು ಸಫಲಾದರರ ತಪ್ಪುಗಳನ್ನು ನೋಡಿ ಪೆಮ್ಮೆ ಮಾಡುವದನ್ನು ಬಿಟ್ಟು, ತಾನೇ ಪೋಸ ಪೂರೈಗದ ಪೂರೈ ಎಚ್ಚರಿಕೆಯಾಗಿರ ಬೇಕು.

೪. ಸಖೆಯವರು ತಮ್ಮ ಬಾಧಕರನ್ನು ಪೆಚ್ಚಾಗಿ ಪ್ರೀತಿ ಮಾಡಿದರೆ, ಅವರು ಸಮೀಪವಾಗಿರುವ ವೇಳೆಯಲ್ಲಿ ಅವರನ್ನು ಮೆಚ್ಚಿಸುವ ಬಯಕೆಯಿಂದ ಜಾಗ್ರತೆಯಾಗಿ ನಡದು ಕಾಂಡು, ಅವರು ದೂರದಲ್ಲಿರುವಾಗ ಅಲಸರಾಗುವದು ಅಸಾಧಾರಣವಾದದ್ದಲ್ಲ. ಹೀಗೆ ನಿಮ್ಮಲ್ಲಿ ಆಗ ಬಾರದೆಂದು, ಪೌಲನು ಫಿಲಿಪ್ಪಿಯವರನ್ನು ಎಚ್ಚರಿಸುತ್ತಾನೆ.

೫. ಅಂದರೆ, ದೇವರು ಇಚ್ಛೆಯನ್ನೂ, ಕೃತ್ಯವನ್ನೂ ಉಂಟು ಮಾಡುವದರಿಂದ ರಕ್ಷಣೆಯನ್ನು ಪೂರೈಂದದೆ ಇರುವವರಿಗೆ ನೆವವಿಲ್ಲವೆಂದು ತಿಳಿದು, ಪೂರ್ಣ ನೀತ್ಯಾಸಕ್ತ್ಯಿಯಿಂದ ನಡದು ಕಾಳ್ಳಬೇಕು; ಆದರೆ ತಾವು ಪುಣ್ಯದಿಂದಲ್ಲ, ಉಚಿತವಾದ ದೇವರ ಕೃಪೆಯಿಂದಲೇ ರಕ್ಷಣೆಯನ್ನು ಪೂರೈಂದುತ್ತೇವೆಂದು, ತಿಳಿಯುವ ಭಕ್ತರಿಗೆ ದೀನಭಾವವು ಸಫಲವಾದದ್ದು.

೧೪. ನಾನು ಸುಮ್ಮನೆ ಓಡಲಿಲ್ಲ ೧), ಸುಮ್ಮನೆ ಕಷ್ಟ ಪಡಲಿಲ್ಲವೆಂದು, ಕ್ರಿಸ್ತನ ದಿವಸದಲ್ಲಿ ಹೆಚ್ಚಳ ಪಡುವದಕ್ಕೆ ೨) ಜೀವದ ವಾಕ್ಯವನ್ನು ೩) ಹಿಡಿದು ಕಾಂಡು, ೧೫. ಲೋಕದ ಬೆಳಕುಗಳ ಹಾಗೆ ೪) ಪ್ರಕಾಶಿಸುವ ನೀವು, ಡೊಂಕಾದ ಮೂರ್ಖ

ಸಂತಶಿಯ ಮಧ್ಯದಲ್ಲಿ[ಖ]) ೧೬. ನಿಷ್ಕಳಂಕರೂ ನಿರ್ದೋಷಿಗಳೂ ದೇವರ ನಿರ್ಮಲವಾದ ಮಕ್ಕಳೂ ಆಗುವ ಹಾಗೆ, ಗುಣುಗುಟ್ಟುಗಳೂ ತರ್ಕಗಳೂ ಇಲ್ಲದೆ, ಎಲ್ಲಾ ಮಾಡಿರಿ. ೧೭. ಇದಲ್ಲದೆ, ನಿಮ್ಮ ವಿಶ್ವಾಸದ ಬಲಿಯ ಮೇಲೆಯೂ ಸೇವೆಯ ಮೇಲೆಯೂ ನಾನು ಹೌಯ್ದಲ್ಪಟ್ಟರೂ[ಗ]), ಸಂತೋಷಿಸಿ, ನಿಂಮೆಲ್ಲರ ಸಂಗಡ ಸಂತೋಷಿಸುವೆನು. ೧೮. ಅದಕ್ಕೋಸ್ಕರವೇ ನೀವು ಸಹ ಸಂತೋಷಿಸಿ, ನನ್ನ ಸಂಗಡ ಸಂತೋಷಿಸಿರಿ.

೧. ೧ಕೊರಿ. ೯, ೨೪—೨೭. ಗಲ. ೨, ೨; ೪, ೧೧. ೧ಥೆಸ್ಸ. ೩, ೫. ಈ ಸ್ಥಳಗಳಲ್ಲಿ ಪೌಲನು ಬೇರೆ ಸಭೆಗಳ ವಿಷಯವಾಗಿಯೂ ಇದೇ ಅಭಿಪ್ರಾಯವನ್ನು ಸೂಚಿಸುತ್ತಾನೆ.

೨. ಸ. ೧, ೬. ೨ಕೊರಿ. ೧, ೧೪. ೧ಥೆಸ್ಸ. ೨, ೧೯. ಸರಿ ನಾಡ ಬೇಕು.

೩. ಜೀವದ ವಾಕ್ಯವು ಬೆಳಕೆಂದು, ಪೇತ್ರನು ೨ಪೇತ್ರ. ೧, ೧೯ಲ್ಲಿ ಬರೆಯುತ್ತಾನೆ. ಅದು ಯಾರ ಪೃದಯದಲ್ಲಿ ವಸತಿಯಾಗಿದೆಯೋ ಅವರು ಲೋಕದ ಬೆಳಕಾದ ಕ್ರಿಸ್ತನ ಐಕ್ಯದಲ್ಲಿದ್ದು ಬೆಳಕಾಗುತ್ತಾರೆ.

೪. ಸಕಲ ಒಳ್ಳೇತನ, ನೀತಿ, ಸತ್ಯಗಳೆಂಬ ಆತ್ಮಫಲವನ್ನು ಫಲಿಸುವದರಿಂದ ಋಕ್ತರು ಬೆಳಕಿನ ಮಕ್ಕಳಿಗೆ ಯೋಗ್ಯವಾಗಿ ನಡೆದು ಕಾಳ್ಳುತ್ತಾರೆ. ಎಫೆ. ೫, ೮—೧೪.

೫. ೫ಮೋಶೆ. ೩೨, ೫ಲ್ಲಿ ಇಸ್ರಯೇಲನವರ ವಿಷಯವಾಗಿ ಬರದ ಮಾತನ್ನು ಪೌಲನು ಇಲ್ಲಿ ಅ ವಿಶ್ವಾಸಿಗಳಾದ ಜನರ ವಿಷಯವಾಗಿ ಸಾಧಾರಣವಾಗಿ ಪ್ರಯೋಗಿಸುತ್ತಾನೆ.

೬. ಅಪಾಸ್ತಲನು ರೋಮಾ. ೧೫, ೧೬ಲ್ಲಿ ತಾನು ದೇವರ ಸುವಾರ್ತೆಯಲ್ಲಿ ಯಾಜಕಸೇವೆ ಮಾಡುತ್ತಾ, ಪರಜನರಲ್ಲಿ ಯೇಸು ಕ್ರಿಸ್ತನ ಸೇವಕನಾಗಿದ್ದೇನೆಂದು, ಬರದ ಅಭಿಪ್ರಾಯಕ್ಕೆ ಅನುಕೂಲವಾಗಿ, ತಾನು ದೇವರಿಗೆ ಯೇಸುವಿನ ಪೌಸರಿನಲ್ಲಿ ಅರ್ಪಿಸುವ ಪರಜನರ ಸಭೆಯಂಬ ಬಲಿಯ ಸಂಗಡ ತನ್ನ ಪ್ರಾಣವನ್ನು ಸಹ ಅರ್ಪಿಸುವ ಅಭಿಮಾನವು ತನಗೆ ದಾರಕಿದರೆ, ತಾನು ಅತ್ಯಂತ ಸಂತುಷ್ಟನಾಗುವೆನೆಂದೂ, ತನಗೆ ಅತಿ ಪ್ರಿಯರಾದ ಫಿಲಿಪ್ಪಿಯರು ಸಹ ತನ್ನ ಸಂಗಡ ಮನಃಪೂರ್ವಕ ಸಂತೋಷ ಪಡಬೇಕೆಂದೂ, ೧ಕೊರಿ. ೧೫, ೫೪—೫೭ಲ್ಲಿ ಬರದ ಚಾವನೆಯುಳ್ಳವನಾಗಿ ಬರೆಯುತ್ತಾನೆ.

೪. ತಿಮೊಥೆಯ ಎಪಫ್ರಾದಿತರ ಪ್ರೇಷಣೆಯು ಸ. ೨, ೧೯—೨೪; ೨೫—೩೦.

೧೯. ಇದಲ್ಲದೆ, ನಿಮ್ಮ ಸಂಗತಿಗಳನ್ನು ತಿಳಿದು, ನಾನೂ ಮನಸ್ಸಾಸುಖ ಪಡುವ ಹಾಗೆ, ತಿಮೊಥೆಯನನ್ನು ನಿಮ್ಮ ಬಳಿಗೆ ಬೇಗ ಕಳುಹಿಸ ಕರ್ತನಾದ ಯೇಸುವಿನಲ್ಲಿ ನಿರೀಕ್ಷಿಸುತ್ತೇನೆ[ಘ]). ೨೦. ಯಾಕಂದರೆ ನಿಮ್ಮ ವಿಷಯಗಳನ್ನು ನಿಜವಾಗಿ ಚಿಂತಿಸುವವನಾದ ಸಮಾನ ಮನಸ್ಸುಳ್ಳವನು[ಙ]) ನನಗೆ ಒಬ್ಬನೂ ಇಲ್ಲ. ೨೧. ಎಲ್ಲರೂ[ಚ]) ಯೇಸು ಕ್ರಿಸ್ತನವುಗಳಂನಲ್ಲ, ತಮ್ಮವುಗಳನ್ನೇ ಹುಡುಕುತ್ತಾರೆ. ೨೨. ಆದರೆ, ಮಗನು[ಛ]) ತಂದೆಗೆ ಮಾಡುವ ಪ್ರಕಾರ, ಅವನು ನನ್ನ ಸಂಗಡ ಸುವಾರ್ತೆಗಾಗಿ ಸೇವೆ ಮಾಡಿದನೆಂದು, ಅವನ ಪರೀಕ್ಷೆಯನ್ನು ಬಲ್ಲಿರಿ. ೨೩. ನನ್ನ ಸಂಗತಿಗಳನ್ನು[ಜ])

ಫಿಲಿ. ೨, ೨೪—೨೫.

ಕಂಡಾಗಲ್ಲೇ, ಇವನನ್ನು ಕಳುಹಿಸ ನಿರೀಕ್ಷಿಸುತ್ತೇನೆ. ೨೪. ಮತ್ತು ನಾನು ಸಹ ಬೇಗ ಬರುವೆನೆಂದು, ಕರ್ತನಲ್ಲಿ ನಂಬಿ ಕೊಂಡಿದ್ದೇನೆ[೬].

೧. ೨೩ನೆ ವಚನವನ್ನು ನೋಡಿದರೆ, ಈ ಮಾತಿನ ಅಭಿಪ್ರಾಯ ಹೆಚ್ಚಾಗಿ ತಿಳಿಯ ಬರುತ್ತದೆ; ಅದೇನಂದರೆ: ಮಫುರಾರಾಜನು ತನಗೆ ಮಾಡುವ ಶೀರ್ಪು ಯಾವದೆಂದು ಗೊತ್ತಾದ ಕೂಡಲೇ ತಿಮೊಥೆಯನನ್ನು ಫಿಲಿಪ್ಪಿಗೆ ಕಳುಹಿಸ ಬೇಕೆಂದು ನಿಶ್ಚೈಸಿ, ತನಗೆ ಬೇಗ ಶೀರ್ಪು ಆಗುವ ಹಾಗೆ ಪ್ರಾರ್ಥನೆ ಮಾಡಿ, ತನ್ನ ಪ್ರಾರ್ಥನೆ ನೆರವೇರುವದೆಂದು, ಅಪೊಸ್ತಲನು ನೆನಸುತ್ತಾನೆ.

೨. ಅಂದರೆ, ನಿಮ್ಮಲ್ಲಿ ಇಡುವ ಮಮತೆಯಲ್ಲಿ ನನಗೆ ಈಡಾಗಿರುವವನು.

೩. ಲೂಕ, ತುಕಿಕ ಮುಂತಾದವರು ಕೊಲೊ. ೪, ೧೦. ರೋಮಪುರವನ್ನು ಬಿಟ್ಟನಂತರ ಉಳಿದವರೆಲ್ಲರು ಇಂಥವರೆಂದು ನೆನಸುತ್ತಾನೆ. ೨ ತಿಮೊ. ೪, ೧೦.

೪. ಬಾಲ್ಯದಿಂದ ಪೌಲನಿಗೆ ಪರಿಚಿತನಾಗಿದ್ದ ೨ ತಿಮೊ. ೧, ೫. ಎಳೆ ಪ್ರಾಯದವನಾಗಿ ಪೌಲನ ಸಂಗಡ ಸುವಾರ್ತಾಪ್ರಸಂಗಪರ್ಯಟಣೆಕ್ಕೆ ಹೊರಟಿ ೨ ತಿಮೊ. ೩, ೧೧. ಅಪೊ. ಕೃ. ೧೩, ೪೫. ೫೦; ೧೪, ೨. ೫; ೧೪, ೧೯ ಇತ್ಯಾದಿ., ತರುವಾಯ ಅಪೊ. ಕೃ. ೧೬, ೩. ಜಾತಿಕೆಲಸದವನಾಗಿ ಪೌಲನ ಉದ್ಯೋಗವೃತ್ತಿಯಲ್ಲಿ ಶೇರಿ, ಯಾವಾಗಲೂ ಪ್ರೀತಿಯಿಂದ ಅವನಿಗೆ ಅಧೀನನಾಗಿದ್ದ ತಿಮೊಥೆಯನು ಅವನಿಗೆ ಅತಿ ಪ್ರಿಯನಾಗಿದ್ದದ್ದು ಚೋದ್ಯವಲ್ಲ.

೫. ಮಫುರಾರಾಜನಾದ ನೇರೊ ಅನೇಕ ಪೈಶಾಚಗಳನ್ನು ನ್ಯಾಯದ ಪ್ರಕಾರವಲ್ಲ, ಆಯಾಯ ದಿವಸದಲ್ಲಿ ಮನಸ್ಸು ಬಂದ ಪ್ರಕಾರ, ಶೀರ್ಪು ಮಾಡುತ್ತಾ ಬಂದನು. ಆದ್ದರಿಂದ ಪೌಲನಂತೆ ಪೂರ್ಣ ನಿರಪರಾಧಿಯಾದವನು ಸಹ ತನಗೆ ಹೀಗೆ ಶೀರ್ಪು ಆಗುವದೆಂದು, ಮುಂಚಿತವಾಗಿ ತಿಳಿಯುವದಕ್ಕೆ ಅಸಾಧ್ಯವಾಗಿತ್ತು.

೬. ಪೌಲನು ಇಲ್ಲಿ ಬರೆಯುವ ಆಶೆಯು ಭಂಗವಾಗಲಿಲ್ಲ. ಅವನು ಈ ಪತ್ರಿಕೆಯನ್ನು ಬರೆದ ಬಳಿಕ ಬಿಡುಗಡೆಯಾಗಿ, ಫಿಲಿಪ್ಪಿ ಎಫೆಸ ಕೊಲೊಸ್ಸೆ ಮುಂತಾದ ಮೂಡಣ ದಿಕ್ಕಿನ ಸಭೆಗಳ ದರ್ಶನ ಮಾಡಿದನು.

೨೫. ಆದರೆ ನನ್ನ ಸಹೋದರನೂ, ಜತೆ ಕೆಲಸದವನೂ, ಸಮಯುದ್ಧಸನೂ, ನಿಮ್ಮ ಅಪೊಸ್ತಲನೂ, ನನ್ನ ಅವಸರಕ್ಕೆ ನೇವಕನೂ, ಆಗಿರುವ ಎಪಫ್ರೊದಿತ ನನ್ನು ನಿಮ್ಮ ಬಳಿಗೆ ಕಳುಹಿಸುವದು ಅಗತ್ಯವೆಂದು ನೆನಸಿದೆನು[೧]. ೨೬. ಯಾಕಂದರೆ ಅವನು ನಿಮ್ಮೆಲ್ಲರನ್ನು ನೋಡ ಅಪೇಕ್ಷಿಸಿ, ಅವನು ರೋಗಿಯಾಗಿರುವದನ್ನು ನೀವು ಕೇಳಿದ್ದರಿಂದ[೨] ವ್ಯಸನ ಪಟ್ಟನು. ೨೭. ಯಾಕಂದರೆ ಅವನು ರೋಗದಲ್ಲಿದ್ದು, ಮರಣಕ್ಕೆ ಸಮೀಪವಾದನು[೩]; ಆದರೆ ನನಗೆ ದುಃಖದ ಮೇಲೆ ದುಃಖ ಬಾರದ ಹಾಗೆ, ದೇವರು ಅವನನ್ನು ಕರುಣಿಸಿದನು; ೨೮. ಅವನನ್ನು ಮಾತ್ರವಲ್ಲ, ನನ್ನನ್ನು ಸಹ. ಹೀಗಿರುವದರಿಂದ ನೀವು ಅವನನ್ನು ತಿರಿಗಿ ನೋಡಿ ಸಂತೋಷಪಡುವ ಹಾಗೆಯೂ, ನನಗೆ ದುಃಖ ಕಡಿಮೆ ಆಗುವ ಹಾಗೆಯೂ, ಅವನನ್ನು ಅಧಿಕ ಜಾಗ್ರತೆಯಿಂದ ಕಳುಹಿಸಿದೆನು. ೨೯. ಹಾಗಾದರೆ, ಅವನನ್ನು ಸಕಲ ಸಂ

೯೨೨ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತತ್ವ.
ಫಿಲಿ. ೨, ೫೦.

ತ್ಯೌಷದಿಂದ ಕರ್ತನಲ್ಲಿ ಅಂಗ್ಯೀಕರಿಸಿರಿ ೪). ಮತ್ತು ಅಂಥವರನ್ನು ಸನ್ಮಾನಿಸಿರಿ ೫). ೫೦. ಯಾಕಂದರೆ ನೀವು ನನಗೆ ಮಾಡ ತಕ್ಕ ಸೇವೆಯ ಕೊರತೆಯನ್ನು ಪೂರೈಸುವ ಹಾಗೆ, ಪ್ರಾಣದ ಆಶೆ ಬಿಟ್ಟು ೬), ಕ್ರಿಸ್ತನ ಕೆಲಸಕ್ಕೋಸ್ಕರ ಮರಣಕ್ಕೆ ಸಮೀಪವಾದನು.

೧. ಅವನನ್ನು ತಿರಿಗಿ ಕಳುಹಿಸುವದು ಅಗತ್ಯವೆಂದು, ನೆನಸದೆ ಇದ್ದನಾದರೆ, ಪೌಲನು ಎಪಫ್ರಾದಿ ತನ್ನನ್ನು ತನ್ನ ಬಳಿಯಲ್ಲಿ ಇಟ್ಟು ಕಾಳ್ಳುವದಕ್ಕೆ ಬಹು ಳವಾಗಿ ಬಯಸುತ್ತಿದ್ದನು. ಆದರೆ ಫಿಲಿಪ್ಪಿಯರ ಅತಿ ಶಯವಾದ ಪ್ರೀತಿಯಿಂದ ಸ್ವಂತ ಪ್ರಯೋಜನವನ್ನು ನೋಡಲಿಲ್ಲ.

೨. ಅವನು ತನ್ನ ರೋಗಕ್ಕಾಗಲಿ, ಬೇರೆ ಯಾವ ಉಪದ್ರವಕ್ಕಾಗಲಿ, ಹೆಚ್ಚು ಚಿಂತಿಸದೆ, ಫಿಲಿಪ್ಪಿಯ ಸಭೆಯವರು ತಾನು ರೋಗಿಯಾಗಿ ಪ್ರಾಣಸಂಕಟದಲ್ಲಿ ಬಿದ್ದನೆಂಬ ವರ್ತಮಾನವನ್ನು ಕೇಳಿದ ಅವರ ಚಿಂತೆಗೆ ಚಿಂತಾಕ್ರಾಂತನಾಗಿದ್ದನು. ಅವರಲ್ಲಿದ್ದ ಪರಸ್ಪರ ಪ್ರೀತಿಗೆ ಇದು ಉತ್ತಮ ದೃಷ್ಟಾಂತವಾಗಿದೆ.

೩. ಐತುಕನನ್ನು ತಿರಿಗಿ ಬದುಕಿಸಿದ ಪ್ರಕಾರ, ಪೌಲನು ಇವನನ್ನು ಅದ್ಭುತರೀತಿಯಿಂದ ಪಕ್ಕನೆ ಗುಣ ಮಾಡಲಿಲ್ಲ. ಅಪೊಸ್ತಲರು ಮನಸ್ಸು ಬಂದ ಹಾಗೆ ಸಾಧಾರಣವಾಗಿ ಅದ್ಭುತ ಕಾರ್ಯಗಳನ್ನು ನಡಿಸಲಿಲ್ಲವೆಂದು, ಈ ಮುಂತಾದ ಸ್ಥಳಗಳಲ್ಲಿ ತೋರುತ್ತದೆ.

೪. ಇದಕ್ಕೆ ಸರಿಯಾದ ಮಾತು ರೋಮಾ. ೧೬, ೨೩ರಲ್ಲಿ ಬರದದೆ.

೫. ಅಬದ್ಧಬೋಧಕರು ಹೆಚ್ಚಿದರೆ, ಸತ್ಯವಂತರು ಹೆಚ್ಚಾಗಿ ಪ್ರಿಯರಾಗುವದು ಯುಕ್ತವಾಗಿದೆ.

೬. ಎಪಫ್ರಾದಿತನು ಫಿಲಿಪ್ಪಿಯವರ ಧರ್ಮದ್ರವ್ಯವನ್ನು ಪೌಲನಿಗೆ ಬೇಗ ತಂದು ಕಾಡ ಬೇಕೆಂಬ ಅವಸರದಿಂದ ದುಷ್ಕಾಲದಲ್ಲಿ ಮಧ್ಯಸಮುದ್ರಪ್ರಯಾಣವನ್ನು ಮಾಡಿ, ಕಂಟಕದಲ್ಲಿಯೂ, ರೋಗದಲ್ಲಿಯೂ ಬಿದ್ದನೆಂದು, ನೆನಸ ತಕ್ಕದ್ದು. ಇದಕ್ಕೆ ಅವನು ವಸಂತಕಾಲದಲ್ಲಿ ರೋಮಪುರಕ್ಕೆ ಬಂದನೆಂದು, ಜಾಡೆಯಾಗಿ ಸೂಚಿಸುವ ಸ. ೪, ೧೦ರ ಮಾತು ಒಪ್ಪುತ್ತದೆ.

೫. ಯೆಹೂದಕ್ರೈಸ್ತ ದುರ್ಬೋಧಕರ ಖಂಡನಕ್ಕಾಗಿ ಅಪೊಸ್ತಲನು ತನ್ನ ಬೋಧನೆ ನಡತೆಗಳ ಮಾದ್ರಿಯನ್ನು ವರ್ಣಿಸುತ್ತಾನೆ. ಸ. ೩.

ಈ ಸಂಧಿಯಲ್ಲಿ ಪೌಲನು ಫಿಲಿಪ್ಪಿಯ ಸಭೆಯ ಸ್ಥಿತಿಗತಿಗೆ ಉಚಿತವಾದ ವಿಶೇಷ ತಾತ್ಪರ್ಯಗಳನ್ನು ದುರ್ಬೋಧಕರಿಗೆ ವಿರೋಧವಾಗಿ ಬರೆಯುತ್ತಾನೆ; ಹ್ಯಾಗಂದರೆ: ವ. ೧. ಫಿಲಿಪ್ಪಿಯವರನ್ನು ಕ್ರಿಸ್ತರಿಗೆ ತಕ್ಕ ಸಂತೋಷಾತಿಶಯಕ್ಕಾಗಿ ಎಚ್ಚರಿಸುತ್ತಾನೆ. ವ. ೨. ದುರ್ಬೋಧಕರನ್ನು ಕಠಿಣವಾಗಿ ಖಂಡಿಸುತ್ತಾನೆ. ವ. ೩. ಇವರ ಡಂಭಾಚಾರಕ್ಕೆ ಪ್ರತಿಯಾಗಿ ಕ್ರಿಸ್ತನ ರಕ್ಷಣೆಯ ನಿಜ ಮಹಿಮೆಯನ್ನು ವರ್ಣಿಸುತ್ತಾನೆ. ವ. ೪—೬. ತನಗೆ ಯೆಹೂದರಲ್ಲಿ ಅತ್ಯುತ್ತಮಾಭಿಮಾನಗಳು ಇದ್ದಾಗ್ಯೂ ವ. ೭—೧೧., ಕ್ರಿಸ್ತನ ಐಕ್ಯವನ್ನು ಹೊಂದುವ ಬಗ್ಗೆ, ಎಲ್ಲಾನ್ನು ತಳ್ಳಿ ಬಿಟ್ಟೆನೆಂತಲೂ ವ. ೧೨—೧೪., ಆದಾಗ್ಯೂ ತಾನು ಸಿದ್ಧಿ ಪ್ರಾಪ್ತನೆಂದು ನೆನಸದೆ, ಸಿದ್ಧ್ಯಾಸಕ್ತನಾಗಿದ್ದೇನೆಂತಲೂ ವ. ೧೫. ೧೬., ತನ್ನನ್ನು ಅನುಸರಿಸ ಬೇಕೆಂದು, ಫಿಲಿಪ್ಪಿಯವರನ್ನು ಎಚ್ಚರಿಸಿ ವ. ೧೭—೧೯., ದುರ್ಬೋಧಕರ ದುರ್ನಡತೆಯನ್ನು ತಿರಿಗಿ ಗದರಿಸಿ ವ. ೨೦. ೨೧., ಭಕ್ತರು ಲೌಕಿಕಭಾವಕ್ಕೆ ಯುಕ್ತವಾಗಿ ಲೋಕದಲ್ಲಿ ಪ್ರವರ್ತಿಸ ಬೇಕೆಂದು, ಉದ್ಬೋಧಿಸುತ್ತಾನೆ.

ಫಿಲಿ. ೩, ೧—೬.

ಅ) ವಿಶ್ವಾಸದಿಂದಣ ನೀತಿಯು ಸು. ೩, ೧—೧೧.

೧. ಕಡೆಯಲ್ಲಿ ನನ್ನಸಹೋದರರೇ, ಕರ್ತನಲ್ಲಿ ಸಂತೋಷಪಡಿರಿ ೧). ಅದೇ ಮಾತುಗಳನ್ನು ನಿಮಗೆ ಬರೆಯುವದು ನನಗೆ ತೊಂದರೆ ಅಲ್ಲ, ನಿಮ್ಮನ್ನು ಭದ್ರ ಮಾಡುವದು. ೨. ನಾಯಿಗಳಿಗೆ ೨) ಎಚ್ಚರಿಕೆಯಾಗಿರ್ರಿ; ದುಷ್ಟ ಕೆಲಸದವರಿಗೆ ಎಚ್ಚರಿಕೆಯಾಗಿರ್ರಿ; ಸಂಛೇದನೆಯವರಿಗೆ ೩) ಎಚ್ಚರಿಕೆಯಾಗಿರ್ರಿ. ೩. ಯಾಕಂದರೆ ಆತ್ಮದಿಂದ ದೇವರಿಗೆ ಸೇವೆ ಮಾಡಿ, ಕ್ರಿಸ್ತಯೇಸುವಿನಲ್ಲಿ ಹೆಚ್ಚಳ ಪಟ್ಟು, ಮಾಂಸದಲ್ಲಿ ನಂಬಿಕೆ ಇಡದೆ ಇರುವವರಾದ ನಾವು ಪರಿಚ್ಛೇದನೆಯಾಗಿದ್ದೇವೆ ೪). ೪. ಊದಾಗ್ಯೂ ಮಾಂಸದಲ್ಲಿಯೂ ನಂಬಿಗೆ ಇಡುವದಕ್ಕೆ ನನಗೆ ಉಂಟು. ಬೇರೆ ಯಾವನಾದರೂ ತಾನು ಮಾಂಸದಲ್ಲಿ ನಂಬಿಕೆ ಇಡ ಬಹುದೆಂದು ನೆನಸಿದರೆ, ನಾನು ಹೆಚ್ಚಾಗಿ; ೫. ಎಂಟನೇ ದಿವಸದಲ್ಲಿ ಪರಿಚ್ಛೇದನೆ ಹೊಂದಿ, ಇಸ್ರಾಯೇಲನ ವಂಶದವನಾಗಿ, ಬೆನ್ಯಮೀನನ ೪) ಕುಲದವನಾಗಿ, ಇಬ್ರಿಯರಿಂದ ಹುಟ್ಟಿದ ಇಬ್ರಿಯನಾಗಿ, ನ್ಯಾಯಪ್ರಮಾಣದ ಪ್ರಕಾರ ಫರಿಸಾಯನಾಗಿ, ೬. ಆಸಕ್ತಿಯ ಪ್ರಕಾರ ಸಭೆಯ ಹಿಂಸಕನಾಗಿ, ನ್ಯಾಯಪ್ರಮಾಣದಲ್ಲಿರುವ ನೀತಿಯ ಪ್ರಕಾರ ತಪ್ಪಿಲ್ಲದವನಾಗಿ ಇದ್ದೆನಲ್ಲ?

೧. ಯೇಸು ಕ್ರಿಸ್ತನ ಮುಖಾಂತರ ಪಾಪಪರಿಹಾರವನ್ನೂ, ಪರಿಶುದ್ಧಾತ್ಮನನ್ನೂ, ದೇವರ ಮಹಿಮಾರಾಜ್ಯಬಾಧ್ಯತೆಯ ಆಶೆಯನ್ನೂ ಪಡೆಂದಿ, ಯಥಾರ್ಥವಾದ ಪ್ರೀತಿಯ ವೃತ್ತಿಯಲ್ಲಿಯೂ, ಅನುಭವದಲ್ಲಿಯೂ ನೆಲೆಯಾಗಿರುವವರು ಅಮಿತ ಸುಖಿಗಳಾಗಿರ ಬೇಕು.

೨. ಪ್ರಕ. ೨೨, ೧೫. ಮತ್ತಾ. ೭, ೬. ೨ ಕೊರಿ. ೧೧, ೧೩. ಈ ಸ್ಥಳಗಳನ್ನು ವಿಚಾರಿಸಿದರೆ, ಪೌಲನು ಇಂಥಾ ಜನಗಳಿಗೆ ಇಂಥಾ ಪೆಸರಿಡುವದು ನ್ಯಾಯವೆಂದು, ತಿಳಿಯ ಬಹುದು.

೩. ಪೌಲನು ದುರ್ಬೋಧಕರ ನಿರರ್ಥಕವಾದ ಪರಿಚ್ಛೇದನಾವಶ್ಯಕವಾದದ್ದೆಂಬ ಬೋಧನೆಯನ್ನು ಶಬ್ದಪರ್ಯಾಯದಿಂದ ಇವರಿಗೆ ಸಂಭೇದನ ವಿಹಿತವಾದದ್ದೆಂದು ಪೇಳಿ, ಅವರಿಗೆ ಮಾಡಿದ ಆತ್ಮಿಕ ದ್ವೇಷವನ್ನು ಚಮತ್ಕಾರವಾಗಿ ಸೂಚಿಸುತ್ತಾನೆ.

೪. ಸ್ನಾನವು ನಿಜ ಪರಿಚ್ಛೇದನವೆಂದು, ಪೌಲನು ತಿಳಿಯುತ್ತಾನೆ. ಕೊಲೊ. ೨, ೧೧. ಆತ್ಮಸ್ನಾನ ಪಡೆಂದಿದವರು ಕ್ರಿಸ್ತನ ಪಡೆತರ್ು ಯಾತರಲ್ಲಿಯೂ ಭರವಸವಿಡುವದಿಲ್ಲ. ೧ ಕೊರಿ. ೧, ೨೯—೩೧.

೫. ಬೆನ್ಯಮೀನಕುಲವು ೫ ಮೋಶೆ. ೩೩, ೧೨. ಶ್ರೇಷ್ಠ ಕುಲಗಳಲ್ಲಿ ಒಂದಾಗಿತ್ತು; ಯಾಕಂದರೆ ಬೆನ್ಯಮೀನನು ಯಾಕೋಬನಿಗೆ ಅತಿ ಪ್ರಿಯಳಾದ ಗರ್ತಿ ರಾಹೇಲಳ ಮಗನಾಗಿದ್ದನು; ಇಸ್ರಾಯೇಲನವರ ಮೊದಲನೇ ಅರಸನಾದ ಸೌಲನು ಈ ಕುಲದವನಾಗಿದ್ದನು; ಬೆನ್ಯಮೀನಕುಲವು ಯಾವಾಗಲೂ ರಾಜಕುಲವಾದ ಯೂದಕುಲಕ್ಕೆ ನಿಜವಾಗಿ ಶೇರಿದ್ದಾಗಿತ್ತು; ಪ್ರಾಮುಖ್ಯ ಪಟ್ಟಣವಾದ ಯೆರೂಸಲೇಮು ಈ ಕುಲದ ಸೀಮೆಯಾಳಗಿತ್ತು.

೮೨೪ ಅಪೊ. ಚ. ೨೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಕ್ಯ.

ಫಿಲಿ. ೩, ೭—೧೧.

೭. ಆದರೆ ೧) ನನಗೆ ಲಾಭವಾಗಿದ್ದವುಗಳನ್ನು ೨) ಕ್ರಿಸ್ತನಿಗ್ಸಾಸ್ಕರ ನಷ್ಟವೆಂದೆಣಿಸಿದ್ದೇನೆ. ೮. ಹೌದು ೩), ನಿಶ್ಚಯವಾಗಿ ನನ್ನ ಕರ್ತನಾದ ಕ್ರಿಸ್ತ ಯೇಸುವಿನ ಜ್ಞಾನದ ಹೆಚ್ಚುವಿಕೆಗ್ಸಾಸ್ಕರ ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಅವನಿಗ್ಸಾಸ್ಕರ ಎಲ್ಲಾದರ ನಷ್ಟ ಪಟ್ಟೆನು ೪). ೯. ಮತ್ತು ಕ್ರಿಸ್ತನನ್ನು ಲಾಭ ಮಾಡಿ ಕ್ಸಾಳ್ಳುವ ಹಾಗೆಯೂ, ನ್ಸಾಯಪ್ರಮಾಣದಿಂದಾದ ನನ್ನನ್ಸೀತಿಯಂನಲ್ಲ ೫), ಕ್ರಿಸ್ತನ ವಿಶ್ವಾಸದಿಂದಿರುವಂಥ, ವಿಶ್ವಾಸದ ಮೂಲವಾಗಿ ದೇವರಿಂದಾಗಿರುವಂಥ, ನ್ಸೀತಿಯಂನು ಹೌಂದಿದವನಾಗಿ, ಅವನಲ್ಲಿ ಕಾಣಲ್ಪಡುವ ಹಾಗೆಯೂ ೬), ೧೦. ಅವನಂನೂ, ಅವನ ಪುನರುತ್ಥಾನದ ಬಲವನ್ನೂ, ಅವನ ಶ್ರಮೆಗಳ ಅನ್ಸಾ್ಯನ್ಸವನ್ನೂ, ಅವನ ಮರಣಕ್ಕೆ ಸಾರೂಪ್ಸ್ಯವಾದವನಾಗಿ, ತಿಳಿಯುವ ಹಾಗೆಯೂ ೭), ೧೧. ನತ್ರ್ತುವರ ಪುನರುತ್ಥಾನಕ್ಕೆ ಶ್ಯೇರುವೆನ್ಯೋನ್ಸಾ್ಯ ೮)? ಎಂದು ಎಲ್ಲವನ್ನು ಕಸವೆಂದೆಣಿಸುತ್ತೇನೆ ೯).

೧. ಪೌಲನು ಸಂವರ್ತನಕ್ಕಿಂತ ಮುಂಚಿತವಾಗಿ ನಿಯಮಾಸಕ್ತನಾದ ಫರಿಸಾಯನಾಗಿದ್ದು, ದೇವರ ನೀತಿಯನ್ನು ಪುಣ್ಯಮಾರ್ಗವಾಗಿ ಪಡದು ಕ್ಸಾಳ್ಳ ಬೇಕೆಂದು, ಅತ್ಯಂತ ಪ್ರಯಾಸದಿಂದ ಸಾಧಿಸುತ್ತಾ ಇದ್ದಾಗ್ಯೂ ಯೆಹೂದಜಾತಿ, ಬೆನ್ಯಮಿನಕುಲ, ನಿರ್ದಾಷಗಾತ್ರ ಮುಂತಾದ ಅಭಿಮಾನಗಳಿಂದ ಹೆಚ್ಚಿಸಿ ಕ್ಸಾಂಡನು. ಆದರೆ ಕ್ರಿಸ್ತನ ತಿಳುವಿಕೆಯಿಂದ ಆ ತರದ ಹೆಮ್ಮೆಯು ಪೂರ್ಣವಾಗಿ ಕರಗಿ ಹೋಗ್ಸಾಯಿತು. ಪೌಲನು ವ. ೭—೧೧ರ ಪರ್ಯಂತ ಕ್ರೈಸ್ತಧರ್ಮದ ಇಹದ ಪದವಿಯನ್ನು, ೧೨—೧೪ರ ಪರ್ಯಂತ ಅದರ ಪರದ ಪದವಿಯನ್ನು ಉದಾಹರಿಸುತ್ತಾನೆ. ಇಹದಲ್ಲಿ ಭಕ್ತನು ಸ್ವಂತ ನೀತಿ ಮುಂತಾದ ಅಹಂಕಾರವನ್ನು ಬಿಟ್ಟು ಬಿಟ್ಟು ವ. ೭. ಲ., ವಿಶ್ವಾಸದಿಂದಲೆ ನೀತಿಯನ್ನು ಹೊಂದಿ ವ. ೯., ಯೇಸುವಿನ ವೃತ್ತಿ, ಶ್ರಮ, ಮರಣ, ಪುನರುತ್ಥಾನಾಶೆಗಳ ಐಕ್ಯದಲ್ಲಿ ಶೇರಿ, ಕರ್ತನ ಅನುಭವಗ್ಸಾಪ್ತಿಯಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾನೆ. ವ. ೧೦. ೧೧.

೨. ಅಂದರೆ, ಲೌಕಿಕ ಮನಸ್ಸಿಗೂ ಪುಣ್ಯಾಪಾಂಕಾರಕ್ಕೂ ಅದೆಲ್ಲಾ ಶ್ರೇಷ್ಠ ಲಕ್ಷಣವೆಂದು, ತಾ್ಯರಿತು. ಆದರೆ ಬಹಿರ್ಲಕ್ಷಣಗಳು ಮಾತ್ರವಲ್ಲ, ಪುಣ್ಯಾರ್ಥವಾದ ಸತ್ಕ್ರಿಯೆಗಳು ಸಹ ಪಾಪಿಗಳ ರಕ್ಷಣೆಗಾಗಿ ನಿಷ್ಪ್ರಯ್ಸಾಜನವಾಗಿವೆ. ಅವುಗಳಲ್ಲಿ ಭರವಸ ವನ್ನಿಟ್ಟರೆ, ಅವೇ ನಾಶನಕ್ಕೆ ಹೇತುವಾಗುತ್ತವೆ.

೩. ಅಂದರೆ, ಮಾನಸಾಂತರವಾದ ಪ್ರಥಮ ಕಾಲದಲ್ಲಿ ನನ್ನಲ್ಲಿ ಹುಟ್ಟಿದ ಮನಸ್ಸು ಇಂದಿನ ಮಟ್ಟಿಗೂ ನನ್ನಲ್ಲಿ ದೃಢವಾಗಿದೆ. ಕ್ರಿಸ್ತ ಯೇಸುವಿನ ತಿಳುವಿಕೆಯು ಪರಮ ಸುಖವೂ, ಅತುಲ್ಯ ಮಹಿಮೆಯೂ, ನಿತ್ಯ ಜೀವವೂ ಆಗಿದೆಯೆಂದು, ತಿಳಿದಿದ್ದೇನೆ.

೪. ಪೌಲನು ಪೂರ್ವ ಕಾಲದ ಶ್ರೇಷ್ಠ ಲಕ್ಷಣ ಜಾವನೆಯನ್ನೆಲ್ಲಾ ವ್ಯರ್ಥ ಕನಸಿನಂತೆ ಮನಸ್ಸಿನಿಂದ ತಳ್ಳಿದನು.

೫. ಯೇಸುಕ್ರಿಸ್ತನು ದೇವನೀತಿಸ್ವರೂಪನಾಗಿದ್ದಾನೆ. ಆತನ ಪೂರ್ತಾರ್ತು ನಿಜವಾದ ನೀತಿಯಿಲ್ಲ. ಆತನಲ್ಲಿರುವವರು ನೀತಿವಂತರು. ರೋಮಾ. ೧,೧೭. ಗಲ. ೩, ೨೬.

೬. ಅಂದರೆ, ಆತನ ಐಕ್ಯದಲ್ಲಿ ಶೇರಿ, ಆತನಲ್ಲಿರುವವನಾಗಿ ದೇವರ ದೃಷ್ಟಿಯಲ್ಲಿ ಕಾಣುವ ಹೊಗೆ.

೭. ಕ್ರಿಸ್ತನ ಆತ್ಮವನ್ನು ಹೊಂದಿದ ಭಕ್ತನು ಕ್ರಿಸ್ತನ ಪುನರುತ್ಥಾನಮೂಲಕವಾದ ಆತ್ಮದ ಜಾವವನ್ನೂ, ತ್ರಾಣವನ್ನೂ ಹೆಚ್ಚು ಹೆಚ್ಚಾಗಿ ಅನುಭವಿಸಿ, ತಿಳಿದು, ಶ್ರಮಮಾರ್ಗವಾಗಿ ಮಹಿಮೆಯಲ್ಲಿ ಶೇರಿದ ಮಹಿಮೆಯ ಕರ್ತನನ್ನು ಮರಣದ ಪರ್ಯಂತ ಅನುಸರಿಸುವದಕ್ಕೆ ಆಸಕ್ತನಾಗುತ್ತಾನೆ. ೧ ಪೇತ್ರ. ೪, ೧೩. ರೋಮಾ. ೮, ೧೭.

೪. ಇದು ಮರ್ಮಾಚಿಪ್ರಾಯದ ಮಾತು. ಇದಕ್ಕೆ ೨ ಕಾರಿ. ೫, ೧—೯. ಸರಿ ನಾನಿಡ ಬಹುದು. | ೯. ಮನೆಯಿಂದ ಗುಡಿಸಿ ಹಾಕುವ ಕಸದಂತೆ ನಿಕೃಷ್ಟವಾದದ್ದು.

೩) ಕ್ರೈಸ್ತಧರ್ಮಾಚರಣೆಯು. ದೈವಿಕ ಭಾವವು. ವ. ೧೨—೨೧.

೧೨. ಇಗಲೇ ಹಾಂದಿದೆನು ೧), ಇಲ್ಲವೆ ಇಗಲೇ ಸಂಪೂರ್ಣನಾಗಿದ್ದೇನೆ ಅಂತಲ್ಲ ೨), ಆದರೆ ಯಾವದಕ್ಕಾಸ್ಕರ ಕ್ರಿಸ್ತ ಯೇಸುವಿನಿಂದ ಹಿಡಿಯಲ್ಪಟ್ಟೆನಾಸ್ಕಾ, ಅದನ್ನು ಹಿಡಿದು ಕಾಳ್ಳ ಬೇಕೆಂದು ಹಿಂದಟ್ಟುತ್ತೇನೆ ೩). ೧೩. ಸಹಾದರರೇ ೪), ನಾನು ಹಿಡಿದವನೆಂದು ನನ್ನನ್ನು ನೆನಸಿ ಕಾಳ್ಳುವದಿಲ್ಲ. ಒಂದೇ ಮಾತ್ರ ೫)—ಹಿಂದಿನವುಗಳನ್ನು ಮರತು, ಮುಂದಿನವುಗಳಿಗೆ ಅಂದಿ ಕಾಳ್ಳ ಬೇಕೆಂದು, ೧೪. ಕ್ರಿಸ್ತ ಯೇಸುವಿನಲ್ಲಿ ದೇವರಿಂದಾದ ಮೇಗಳ ಕರೆಯುವಿಕೆಯ ಬಹುಮಾನವನ್ನು ಗುರಿ ಇಟ್ಟು, ಹಿಂದಟ್ಟುತ್ತೇನೆ ೬).

೧೨. ಅಂದರೆ, ಜೀವಕಿರೀಟವೆಂಬ ಒಡವೆಯನ್ನು. ತಾನು ಸಿದ್ಧಿಯನ್ನು ಪಡಾಂದಿದವನಲ್ಲವೆಂಬ ಅಭಿಪ್ರಾಯವನ್ನು ಪೌಲನು ಮೊದಲು ಈ ಸಾದೃಶ್ಯೋಕ್ತಿಯಿಂದ, ಬಳಿಕ ಸ್ಪಷ್ಟ ವಾಕ್ಯದಿಂದ ಸೂಚಿಸುತ್ತಾನೆ. ಕ್ರೈಸ್ತನ ಸಿದ್ಧಿಯಾದ ಯೇಸು ಕ್ರಿಸ್ತನ ಸಾರೂಪ್ಯವು ಕ್ರಿಸ್ತನು ಇಕ್ಕರಿಗೆ ಪ್ರತ್ಯಕ್ಷವಾಗುವ ಮಹಿಮಾದಿವಸದಲ್ಲಿ ಉಂಟಾಗುವದು. ೧ ಯೋಹಾ. ೩, ೨. ಕಾಲಾ. ೩, ೪. ಕ್ರಿಸ್ತನ ಮರಣಕ್ಕೆ ಸಾರೂಪ್ಯರಾದವರು ಆತನ ಮಹಿಮಾಜೀವಕ್ಕೂ ಸಾರೂಪ್ಯರಾಗುತ್ತಾರೆ.

೨. ಅಪಾಸ್ತಲನು ಯೆಹೂದಮತದ ಅಹಂಕಾರವನ್ನು ಬಿಟ್ಟ ಪ್ರಕಾರ, ಕ್ರೈಸ್ತಮತದ ಅಹಂಕಾರಕ್ಕೂ ದೂರವಾಗಿದ್ದು, ನಿಯಮಾಚರಣೆಗಳ ಮೂಲವಾಗಿ ಸಿದ್ಧಿಯನ್ನು ಪಡಾಂದ ಬಹುದೆಂದು, ಸುಳ್ಳಾದ ಉಪದೇಶವನ್ನು ಮಾಡಿದ ದುರ್ಬೋಧಕರನ್ನು ಮಾತ್ರವಲ್ಲ, ಆತ್ಮಿಕ ಅಹಂಕಾರವನ್ನು ಪೂರ್ಣವಾಗಿ ತಳ್ಳದೆಯಿದ್ದ ಸ. ೨, ೩. ಫಿಲಿಪ್ಪಿಯರನ್ನು ಸಹ ಈ ಮಾತಿನಿಂದ ಚಾಡೆಯಾಗಿ ಗದರಿಸುತ್ತಾನೆ.

೩. ದೀನಭಾವದವನು ಜಯಸ್ಥನಾಗಿರದೆ, ಸಿದ್ಧಿಯನ್ನು ಸಾಧಿಸುವದರಲ್ಲಿ ಅಧಿಕ ಧೈರ್ಯವೂ, ಆಸಕ್ತಿಯೂ ಉಳ್ಳವನಾಗುತ್ತಾನೆ. ಸಿದ್ಧಿಗೆ ಮೂಲವಾದ ಸಂವರ್ತನದಲ್ಲಿ ಕ್ರಿಸ್ತನು ತನ್ನನ್ನು ಹಿಡಿದು ಕಾಂಡನೆಂಬ ಜ್ಞಾಪನೆಯಿಂದ ಜಕ್ತನಲ್ಲಿ ಧೈರ್ಯವೂ, ಜಾಗರೂಕವಾದ ಆಸಕ್ತಿಯೂ ಪುಟ್ಟುತ್ತವೆ. ಯಾಕಂದರೆ ಕ್ರಿಸ್ತನು ತಾಡಗಿದ ಕೆಲಸವನ್ನು ನೆರವೇರಿಸುವನೆಂದು ಸ. ೧, ೬., ವಿಶ್ವಾಸದಿಂದ ಜ್ಞಾವಿಸಿ ಕಾಳ್ಳುತ್ತಾನೆ. ಲುಥರನು: ಕ್ರಿಸ್ತನು ನನ್ನನ್ನು ಕರದು, ತನ್ನ ಕೃಪಾಪ್ರಸಾದವನ್ನು ನನಗೆ ಕಾಟ್ಟು, ನನ್ನನ್ನು ಹಿಡಿದು ಕಾಂಡವರಿಂದ, ನಾನು ಸಹ ಆತನನ್ನು ಹಿಡಿದು ಕಾಂಡು ಮೆಚ್ಚಿಸುವದಕ್ಕೆ ಮನಸ್ಸುಳ್ಳವನಾಗಿದ್ದೇನೆ.

೪. ಅಪಾಸ್ತಲನು ಫಿಲಿಪ್ಪಿಯವರಿಗೆ ಸಹಾನಾದರರೆಂದು ಹೇಳಿ, ತಾನು ಸಿದ್ಧಿಯನ್ನು ಪಡಾಂದಿದವನಲ್ಲವೆಂದು ಇನ್ನಾಂದಾವರ್ತಿ ಜ್ಞಾಪಿಸುವದರಿಂದ ದೀನಭಾವದ ಮಾದ್ರಿಯನ್ನು ತಾರಿಸುತ್ತಾನೆ.

೫. ಒಂದು ಮಾತನ್ನು ಮಾತ್ರ ನನ್ನ ವಿಷಯವಾಗಿ ಹೇಳ ಬಹುದು. ಅದೇನಂದರೆ: ಮುಂದಾನಡುವದಕ್ಕೆ ಆಸಕ್ತನಾಗಿದ್ದೇನೆ. ಈ ಅಭಿಪ್ರಾಯವನ್ನು ಜೂಜಿನ ಓಟದ ಉಪಮಾನದಿಂದ (೧ ಕಾರಿ. ೯, ೨೪—೨೭ರ ಪ್ರಕಾರವೇ) ಉದಾಹರಿಸುತ್ತಾನೆ. ಜೂಜಿನಲ್ಲಿ ಓಡುವವನು ತಾನು ಎಷ್ಟು ಬಂದೆನೆಂದು ಹಿಂದಕ್ಕೆ ನೋಡದೆ, ಜಯಪ್ರವ್ಯಾಪೇಕ್ಷೆ ಮಾತ್ರವುಳ್ಳವ

ನಾಗಿ, ಮುಂದಕ್ಕೆ ನಾನಾದುತ್ತಾ, ಬಗ್ಗಿದ ಶರೀರದಿಂದಲೂ ಚಾಚಿದ ಕೈಯಿಂದಲೂ ಇಕ್ಕಡೆಯ ತಡೆಯ ನಡುವೆಯಲ್ಲಿ ಲಕ್ಷ್ಯಸ್ತಂಭದ ಬಳಿಗೆ ಓಡುವ ಪ್ರಕಾರ ಕ್ರೈಸ್ತನು ದೇವರಾಜ್ಯಬಾಧ್ಯತೆಯಂಬ ಜಯದ್ರವ್ಯದ ಮೇಲೆಯೇ ದೃಷ್ಟಿಯಿಟ್ಟು, ಮುಖವನ್ನು ಇತ್ತತ್ತ ತಿರಿಗಿಸದೆ, ನೆಟ್ಟಗೆ ಮುಂದಾದುತ್ತಾ, ತಾನು ಪಡದು ಕಾಂಡ ಕೃಪೆಯ ಧ್ಯಾನದಿಂದ ಸಂತುಷ್ಟನಾಗದೆ, ತಾನು ತಾಳಿದ ಶ್ರಮಗಳ ನೆನಪಿನಿಂದ ಅಲಸನಾಗದೆ, ತನಗೂ ಸಿದ್ಧಿಸಮಾಪ್ತಿಗೂ ಇರುವ ದೂರವನ್ನು ಮಾತ್ರ ಲಕ್ಷಿಸುತ್ತಾನೆ. ಹಿಂದಿನವುಗಳಂದರೆ, ಖಕ್ತನು ಅಗಲಿದ ಪ್ರಪಂಚವೂ ಪಾಪವೂ ಮಾತ್ರವಲ್ಲ, ಅವನು ಪಡಾಂದಿದ ಶೀಲವು ಸಹ; ಯಾಕಂದರೆ ತಾನು ಪಡದು ಕಾಂದ ಯೋಗ್ಯತೆಗೆ ಮೆಚ್ಚಿಕಾಂಡರೆ, ತನ್ನ ನ್ಯೂನತ್ವವನ್ನೆಲ್ಲಾ ಮರತು, ಆತ್ಮಸ್ತುತಿಯಿಂದ ಮೋಸ ಪಡಾದಾನು.

೬. ನಾನು ಲಕ್ಷ್ಯಸ್ತಂಭದ ಮೇಲೆ ದೃಷ್ಟಿಯಿಟ್ಟು, ದೇವರು ಕ್ರಿಸ್ತನ ಮುಖಾಂತರ ನಮಗೆ ದಯ ಮಾಡಿದ ದೈವಿಕಾಪೇಕ್ಷಾನದಿಂದ ನಮ್ಮ ಮುಂದೆ ಇಟ್ಟಿರುವ ಜೂಜಿನ ಜಯದ್ರವ್ಯದ ಬಳಿಗೆ ೨ತಿಮೊ. ೪, ೮. ನೆಟ್ಟಗೆ ಓಡುತ್ತೇನೆ. ಕ್ರೈಸ್ತನು ದೈವಿಕಾಪೇಕ್ಷಾನವನ್ನು ಪಡಾಂದಿ ಶೇರಿದ ವಿಶ್ವಾಸಮಾರ್ಗದಲ್ಲಿ ಮಹಿಮೆಯ ಆಶೆಯ ಬಲದಿಂದ ಓಡುತ್ತಾನೆ.

೧೫. ಹಾಗಾದರೆ, ಸಂಪೂರ್ಣರಾದವರೆಷ್ಟು ೧) ಇ ಮನಸ್ಸಾಗಿರುವ. ಮತ್ತು ಯಾವದರಲ್ಲಿಯೂ ಬೇರೆ ಮನಸ್ಸಾಗಿದ್ದರೆ ೨), ಅದನ್ನು ಸಹ ದೇವರು ನಿಮಗೆ ತಿಳಿಸುವನು ೩). ೧೬. ಆದರೆ ನಾವು ಶೇರಿ ಕಾಂಡಿರುವ ಅದ್ಯೇ ಪ್ರಮಾಣದಿಂದ ೪) ನಡಕಾಂಡು, ಒಂದೇ ಮನಸ್ಸಾಗಿರುವ. ೧೭. ಸಹೋದರರೇ, ನನ್ನನ್ನು ಕೂಡ ಅನುಸರಿಸುವವರಾಗಿ, ನಾವು ನಿಮಗೆ ಮಾದರಿಯಾಗಿರುವ ಪ್ರಕಾರ ನಡೆದು ಕಾಳ್ಳುವವರನ್ನು ಗುರುತಿಡಿರಿ ೫). ೧೮. ಯಾಕಂದರೆ ಅನ್ಯೇಕರು ನಡೆದು ಕಾಳ್ಳುತ್ತಾರೆ—ಅವರನ್ನು ಕುರಿತು ಕ್ರಿಸ್ತನ ಶಿಲುಬೆಯ ಶತ್ರುಗಳಾಗಿದ್ದಾರೆಂದು ೬), ಅನ್ಯೇಕ ಸಾರಿ ನಿಮಗೆ ಹ್ಯೇಳಿದೆನು; ಮತ್ತು ಇಗ ಅಳುತ್ತಾ ಹ್ಯೇಳುತ್ತೇನೆ. ೧೯. ಅವರ ಅಂತ್ಯವು ನಾಶನವೇ; ಅವರ ದೇವರು ಹೊಟ್ಟೆಯೇ; ಅವರ ಮಹಿಮೆಯು ಅವರ ನಾಚಿಕೆಯಲ್ಲಿಯೇ; ಅವರು ಭೂಲೌಕಿಕದವುಗಳ ಮೇಲೆ ಮನಸ್ಸಿಡುತ್ತಾರೆ ೭). ೨೦. ಯಾಕಂದರೆ ೮), ನಮ್ಮ ಪಟ್ಟವಾಸವು ೯) ಪರಲೌಕಿಕದಲ್ಲಿ ಉಂಟು; ಅಲ್ಲಿಂದಲೇ ೧೦) ಕರ್ತನಾದ ಯೇಸು ಕ್ರಿಸ್ತನೆಂಬ ರಕ್ಷಕನು ಬರುವದನ್ನು ಎದುರು ನೋಡುತ್ತೇವೆ. ೨೧. ಅವನು ೧೧) ತನಗೆ ಎಲ್ಲವನ್ನು ಅಧೀನ ಮಾಡ ಬಹುದಾದ ಯತ್ನದ ಪ್ರಕಾರ ೧೨), ನಮ್ಮ ನೀಚತನದ ಶರೀರವನ್ನು ತನ್ನ ಮಹಿಮೆಯ ಶರೀರಕ್ಕೆ ಸಾರೂಪ್ಯವಾಗುವ ಹಾಗೆ, ಮಾರ್ಪಡಿಸುವನು.

೧. ಕ್ರಿಸ್ತನ ಐಕ್ಯದಲ್ಲಿ ವಿಶ್ವಾಸದಿಂದ ಶೇರಿ, ಆತನ ಆತ್ಮವನ್ನು ಪಡಾಂದಿ, ಕ್ರಿಸ್ತನ ದಿವಸದಲ್ಲಿ ಪ್ರಾಪ್ತವಾಗುವ ಸಿದ್ಧಿಯ ಮೇಲೆ ಪೂರ್ಣ ಮನಸ್ಸಿಡುವವರು ಸಂಪೂರ್ಣರೆಂದು, ಪೌಲನು ಸೂಚಿಸುತ್ತಾನೆ.

೨. ಅಂದರೆ, ಯಾವನಾದರೂ ಪೂರ್ಣ ಬುದ್ಧಿಯಂಬ ಪೌರುಷವನ್ನು ಪಡಾಂದದೆ, ಬಾಲ್ಯವಾಸನೆಯುಳ್ಳವನಾಗಿದ್ದರೆ. ೧ಕಾರಿ. ೧೪, ೨೦.

೩. ದೇವರ ಆತ್ಮವನ್ನು ಪಡಾಂದಿದವನು ಅದಕ್ಕೆ

ವಿಧೇಯನಾದರೆ, ಸತ್ಪವನ್ನೆಲ್ಲಾ ಶಿಕ್ಷೆಯ ಅಧಿಕಾರಿಯಾಗಿದ್ದಾನೆ. ಯೋಪೊಸ್ತಾ. ೧೬, ೧೩.

೪. ಅಂದರೆ, ಕ್ರಿಸ್ತನನ್ನು ಪೂರ್ಣ ಪ್ರೀತಿಯಿಂದ ನಂಬಿ, ಸಹೋದರರನ್ನು ಪೂರ್ಣ ಪ್ರೀತಿಯಿಂದ ಪ್ರೀತಿ ಮಾಡುವ ಕಟ್ಟಳೆಯನ್ನು ಕೈಕೊಂಡು.

೫. ಮತ್ತಾ. ೨೩, ೮. ೧ ಪೇತ್ರ. ೨, ೨೧. ಮತ್ತಾ. ೭, ೧೫—೨೦.

೬. ಆ ದುರ್ಬೋಧಕರು ಯೇಸು ಕ್ರಿಸ್ತನು, ಕ್ರೂಜೆಯಲ್ಲಿ ಸತ್ತು ತನ್ನ ಪ್ರಾಣವನ್ನು ಬಲಿಯಾಗಿ ಅರ್ಪಿಸಿದರಿಂದ, ಲೋಕಕ್ಕೆ ಪಾಪವಿಮೋಚನೆಯನ್ನುಂಟು ಮಾಡಿದ್ದಾನೆಂಬದಕ್ಕೆ ವಿರೋಧವಾಗಿ ತರ್ಕ ಮಾಡದೆ, ಯೇಸು ಕ್ರಿಸ್ತನ ವಿಶ್ವಾಸವು ರಕ್ಷಣೋದ್ದಿಶ್ಯವಾಗಿ ಅವಶ್ಯವಾದದ್ದೆಂಬದಕ್ಕೆ ಒಪ್ಪಿ ಕೊಂಡು, ಸಿದ್ಧಿಗಾಗಿ ನಿಯಮಾಚರಣೆಯು ಸಹ ಬೇಕೆಂದು ಬೋಧಿಸಿ, ಪರಿಛೇದನೇ ಮಾಡಿ ಕೊಂಡು, ರೋಮಾಯರಾಜ್ಯದಲ್ಲಿ ಅನುಜ್ಞಾತಮತವಾದ ಯೆಹೂದಮತದಲ್ಲಿ ಶೇರಿದವರನ್ನಿಸಿ ಕೊಳ್ಳುವದರಿಂದ ಹಿಂಸೆಗೆ ತಪ್ಪಿಸಿ ಕೊಳ್ಳುವ ಮಾರ್ಗವನ್ನು ತೋರಿಸಿದರು. ಅವರು ಲೌಕಿಕರಾಗಿದ್ದು, ಭಕ್ತಿಯ ಮಾತುಗಳನ್ನಾಡಿದರೂ, ಲೌಕಿಕರಂತೆ ನಡದು ಕೊಳ್ಳುತ್ತಾ ಇದ್ದರು. ೧ ಕೊರಿ. ೧, ೧೭. ೧ಲ. ಗಲ. ೨, ೧೪; ೫, ೧೧. ೨ಪೇ; ೬, ೧೨. ೧ಲ.

೭. ಸಿದ್ಧಿಬೋಧನೆಯು ಅವರ ಬಾಯಲ್ಲಿಯೇ; ಮನಸ್ಸಿನಲ್ಲಿ ಇಹಲೋಕೇಚ್ಛೆಯಿಲಾಷೆಯು.

೮. ಪೌಲನು ಇಲ್ಲಿ ಕ್ರೈಸ್ತರಲ್ಲಿ ಇರ ತಕ್ಕ ಇಹಲೋಕದ್ವೇಷಮೂಲವನ್ನು ಸೂಚಿಸುತ್ತಾನೆ.

೯. ದೈವಿಕ ಯೆರೂಸಲೇಮಿನ ಗೃಹಸ್ಥಾಧಿಕಾರವನ್ನು ಹೊಂದಿದವರು ದೇವಪಟ್ಟಣದ ನ್ಯಾಯವನ್ನೂ, ಪದ್ಧತಿಗಳನ್ನೂ ಕೈಕೊಂಡು, ಲೋಕದಲ್ಲಿ ಪರವಾಸಿಗಳಾಗಿದ್ದಾರೆ. ಕೀರ್ತ. ೩೯, ೧೩.

೧೦. ದೇವಪಟ್ಟಣದ ಗೃಹಸ್ಥಾಧಿಕಾರವನ್ನು ಹೊಂದಿದವರಿಗೆ ಎಲ್ಲಾ ಕೇಡಿನಿಂದ ತನ್ನ ಜನರನ್ನು ಬಿಡಿಸುವದಕ್ಕೆ ಅಲ್ಲಿಂದ ತಿರಿಗಿ ಬರುವ ಕರ್ತನ ದಿವಸದ ಆಶೆಯು ಸಹಜವಾದದ್ದು. ೨ ತಿಮೊ. ೪, ೧೮. ಲೂಕ. ೨೧, ೨೮. ಎಫೆ. ೪, ೩೦. ರೋಮಾ. ೮, ೨೩.

೧೧. ಭಕ್ತನ ಪ್ರೀತಿಯದಲ್ಲಿರುವ ಪೂರ್ಣ ದುರವಸ್ಥೆಯ ಪರಿಹಾರದ ಆಶೆಯು ಕರ್ತನ ದಿವಸದಲ್ಲಿ ನೆರವೇರುವದಲ್ಲದೆ, ಕರ್ತನ ಮಹಿಮೆಯು ಸಹ ಅವನಿಗೆ ಪ್ರಾಪ್ತವಾಗುವದು. ಕೊಲೊ. ೩, ೪. ಭಕ್ತನಿಗೆ ನಾನಾ ಪ್ರಕಾರವಾಗಿ ಭಾರವಾದ ಈ ಭೌಮಿಕ ಶರೀರವು ಕ್ರಿಸ್ತನ ಮಹಿಮಾಶರೀರಕ್ಕೆ ಸಾರೂಪ್ಯವಾದರೆ ೧ ಕೊರಿ. ೧೫, ೪೫—೪೦. ೨ ಕೊರಿ. ೫, ೧., ಅದು ಪೂರ್ಣ ಸಿದ್ಧವಾದ ಆತ್ಮಕರಣವಾಗುವದು. ಆಗ ಪಾಪದ ಬಿಸ್ನೆಯು ಕಿಂಚಿತ್ತಾದರೂ ಕಾಣುವದಿಲ್ಲ.

೧೨. ಇದು ಆಗುವದೆಂಬದಕ್ಕೆ ಏನೂ ಸಂಶಯವಿಲ್ಲ. ಭಕ್ತನಿಗೆ ಭಾಷಾವಚನವನ್ನು ಕೊಟ್ಟ ಕರ್ತನಾದ ಯೇಸು ಕ್ರಿಸ್ತನ ಸರ್ವ ಶಕ್ತಿಯು ಭಕ್ತನ ಆಶೆಗೆ ಆಧಾರವಾಗಿರುವದರಿಂದ, ಅದು ಎಂದಿಗೂ ಭಂಗವಾಗಲಾರದು.

ಸ. ೪, ೧. ಆದದರಿಂದ ೧), ಪ್ರಿಯರೂ ಇಷ್ಟರೂ ೨) ಆದ ನನ್ನ ಸಹೋದರರೇ, ನನ್ನ ಸಂತೋಷವು ೩) ಕಿರೀಟವು ಆಗಿರುವವರೇ, ಹೀಗೆ ಕರ್ತನಲ್ಲಿ ನೆಲೆಯಾಗಿರ್ರಿ, ಪ್ರಿಯರೇ.

೧. ಅಂದರೆ, ಇಷ್ಟು ಅತಿಶಯವಾದ ಪದವಿಯು ನಿಮಗೆ ನೇಮಕವಾಗಿರುವದರಿಂದ, ಕ್ರಿಸ್ತನ ಮಹಿಮೆಯನ್ನು ಹೊಂದುವದಕ್ಕೆ ಮನಸ್ಸುಳ್ಳವರು ಕರ್ತನಾದ ಯೇಸುವಿನ ಅನ್ಯೋನ್ಯದಲ್ಲಿ ಸ್ಥಿರವಾಗಿರ ಬೇಕೆಂದು, ಈಗ ನಾನು ನಿಮಗೆ ಬರದ ಉದ್ಬೋಧನೆಯನ್ನು ಚನ್ನಾಗಿ ಕೈಕೊಳ್ಳಿರಿ.

೨. ಇಲ್ಲಿ ಬರದಿರುವ ಗ್ರೀಕ ಪದದ ಅಭಿಪ್ರಾಯವೇನಂದರೆ: ನಾನು ಹೆಚ್ಚಾಗಿ ಬಯಸುವಂಥ.

೩. ಅಂದರೆ, ನಿಮ್ಮ ವಿಶ್ವಾಸವನ್ನು ಕಂಡು ಸ. ೧, ೫., ಈಗ ಸಂತುಷ್ಟನಾಗಿದ್ದೇನೆ; ಕ್ರಿಸ್ತನ ಮಹಿಮಾದಿವಸದಲ್ಲಿ ನಿಮ್ಮ ಮಹಿಮೆಯು ನನ್ನ ವೃತ್ತಿಯ ಫಲವಾಗಿ ಕಾಣಿಸಿ ಕೊಂಡು ಸ. ೨, ೧೬. ೨ ಕೊರಿ.

೪೨೪ ಅಪೌ. ಚ. ೨. ಪರಿಚ್ಛೇದ. ಪರಜನರಲ್ಲಿ ಕ್ರೈಸ್ತಶ್ಚ.
ಫಿಲಿ. ೪, ೨—೫.

೧, ೧೪. ೧ ಥೆಸ್ಸ. ೨, ೧೯., ನನಗೆ ಮಹಾ ಆಶಿ | ರಲ್ಲಿ ಅತಿಶಯವಾದ ನೀತಿ ಕುತೂಹಲವನ್ನು ಪು
ಮಾನವಾಗುವದು. ಈ ಉದ್ಬೋಧನಾವಾಕ್ಯವು ಅ | ಟ್ಟಿಸ ಯುಕ್ತವಾಗಿತ್ತು.
ತಿ ಮೃದುತರ ಮಮತಾಭಿವ್ಯಕ್ತಿಯಾಗಿದ್ದು, ಸಖೆಯವ |

ಸ. ೪.

೬. ಬೇರೆ ಬೇರೆ ಸಖೆಯವರಿಗೂ, ಒಟ್ಟಾಗಿ ಎಲ್ಲರಿಗೂ, ಹೇಳುವ
ಅಂತ್ಯೋದ್ಬೋಧನೆಗಳು.

ಸಮಾಧಾನವು ನಿಮ್ಮಲ್ಲಿರಲಿ. ವ. ೨—೫.
ಧರ್ಮದ್ರವ್ಯಕ್ಕಾಗಿ ಪ್ರಾರ್ಥನೆಯು. ವ. ೧೦—೧೫.
ಸಮಾಪ್ತಿಯು. ವ. ೨೦—೨೩.

ಅ) ದೇವಸಮಾಧಾನವನ್ನು ಬಹಿರಾಂತರ್ಯದಲ್ಲಿ ಕಾಪಾಡ ಬೇಕೆಂಬ ಅಂತ್ಯೋದ್ಬೋಧನೆಗಳು.
ಸ. ೪, ೨—೫.

೨. ಕರ್ತನಲ್ಲಿ ಅದ್ಯೇ ಮನಸ್ಸಾಗಿರ ಬೇಕೆಂದು, ಯುವಸ್ತ್ರೀದ್ವಳನ್ನು ಬೇಡಿ ಕಾ
ಳ್ಳುತ್ತೇನೆ, ಸುಂತಕೆಯನ್ನು ಬೇಡಿ ಕಾಳ್ಳುತ್ತೇನೆ೧). ೩. ಮತ್ತು, ನಿಜ ಜಾತಿಗಾರನ್ಯೇ೨),
ಅವರಿಗೆ ಸಹಾಯ ಮಾಡು, ಎಂದು ನಿನ್ನನ್ನು ಕೇಳಿ ಕಾಳ್ಳುತ್ತೇನೆ. ಅವರು ಕ್ಲೆಮೆಂ
ತನ ಸಂಗಡಲೂ, ಮಿಕ್ಕಾದ ನನ್ನಜಾತಿ ಕೆಲಸದವರ ಸಂಗಡಲೂ ಸುವಾರ್ತೆಯಲ್ಲಿ
ನನ್ನಕೂಡ ಕಷ್ಟ ಪಟ್ಟರು; ಅವರ ಹೆಸರುಗಳು ಜೀವದ ಪುಸ್ತಕದಲ್ಲಿ ಅವೆ೩). ೪. ಕರ್ತ
ನಲ್ಲಿಯಾವಾಗಲೂ ೪) ಸಂತೋಷಿಸಿರಿ, ಸಂತೋಷಿಸಿರಿ, ಎಂದು ತಿರಿಗಿ ಹೇಳುತ್ತೇನೆ. ೫. ನಿ
ಮ್ಮನಿರ್ಮಿಕ್ಷತ್ವವು೫) ಎಲ್ಲಾ ಮನುಷ್ಯರಿಗೆ ತಿಳಿಯಲ್ಪಡಲಿ; ಕರ್ತನು ಸಮೀಪವಾಗಿದ್ದಾ
ನೆ೬). ೬. ಯಾವದಕ್ಕೂ ಚಿಂತೆ ಪಡ ಬೇಡಿರಿ೭); ಆದರೆ ಎಲ್ಲಾದರಲ್ಲಿ ಪ್ರಾರ್ಥನೆಯಿಂ
ದಲೂ ವಿಜ್ಞಾಪನೆಯಿಂದಲೂ ನಿಮ್ಮ ಬಿನ್ನಹಗಳು ಸ್ತೋತ್ರದ ಸಂಗಡ ದೇವರಿಗೆ
ಅರಿಕೆಯಾಗಲಿ; ೭. ಆಗ೮) ಎಲ್ಲಾ ಬುದ್ಧಿಯನ್ನು ಮೀರುವ೯) ದೇವರ ಸಮಾ
ಧಾನವು ೧೦) ನಿಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ೧೧) ಕ್ರಿಸ್ತ ಯೇಸುವಿನಲ್ಲಿ೧೨)
ಕಾಪಾಡುವದು. ೮. ಕಡೆಯಲ್ಲಿ೧೩), ಸಹೋದರರೇ, ಸತ್ಯವಾದವುಗಳು ಯಾವ
ವೋ, ಘನವಾದವುಗಳು ಯಾವವೋ, ನ್ಯಾಯವಾದವುಗಳು ಯಾವವೋ,
ಪವಿತ್ರವಾದವುಗಳು ಯಾವವೋ, ಪ್ರಿಯಕರವಾದವುಗಳು ಯಾವವೋ, ಸುಕೀ
ರ್ತಿಯಾದವುಗಳು ಯಾವವೋ, ಯಾವ ಸದ್ಗುಣವಿದ್ದರೆ, ಯಾವ ಸ್ತೋತ್ರವಿದ್ದರೆ,
ಅವುಗಳನ್ನೇ ಆಲೋಚಿಸಿರಿ. ೯. ನೀವು ಕಲಿತು, ಗ್ರಹಿಸಿ, ಕೇಳಿ ನಂಬಲ್ಲಿ ನಾಡಿ

ಫಿಲಿ. ೪.

ದವುಗಳು ಯಾವವಾ್ಯ, ಅವುಗಳನ್ನೆ ಮಾಡಿರಿ; ಆಗ ಸಮಾಧಾನದ ದೈವರು (೧೪) ನಿಮ್ಮ ಸಂಗಡ ಇರುವನು.

೧. ಈ ಸ್ತ್ರೀಯರಿಬ್ಬರು ತಮ್ಮೊಳಗೆ ವಾಗ್ವಾದ ಮಾಡುವದನ್ನು ಬಿಡ ಬೇಕೆಂದು, ಪೌಲನು ಇಲ್ಲಿ ಬರೆಯುತ್ತಾನೆ ಅಷ್ಟೆ. ಹೆಚ್ಚು ಬರೆಯುವದು ಅವಶ್ಯವಾಗಿರಲಿಲ್ಲ. ಯಾಕಂದರೆ ಪೌಲನಿಗೆ ಈ ವರ್ತಮಾನಗಳನ್ನೆಲ್ಲಾ ತಿಳಿಸಿದ ಎಪಫ್ರಾದಿತನು ತಾನು ಈ ಪತ್ರಿಕೆಯನ್ನು ಫಿಲಿಪ್ಪಿಗೆ ತೆಗದು ಕಾಂಡು ಪೋ್ಗದನು. ಅವರು ಲುದಿಯಳಂತೆ ದಾಡ್ಡ ಮನೆತನದವರಾಗಿದ್ದರೆಂದು ತಾ್ಕರುತ್ತದೆ.

೨. ಈ ಮಾತನ್ನು ಪೌಲನು ಎಪಫ್ರಾದಿತನ ಸಪೋ್ಗಯಕ್ಕೆ ಇಲ್ಲಿ ಶೇರಿಸುತ್ತಾನೆ. ಫಿಲಿಪ್ಪಿಯವರು ಅದನ್ನು ಓದಿ, ಎಪಫ್ರಾದಿತನ ಮಾತಿಗೆ ಅಧಿಕ ವಿಧೇಯರಾಗ ಬೇಕಾಯಿತು.

೩. ನನ್ನ ಕೂಡಾ ಕಷ್ಟ ಪಟ್ಟವರೆಂಬುವದು ಅಪಾ. ಕ್ರಿ. ೧೬, ೧೯ಲ್ಲಿ ಬರದ ಘಂಸೆಯನ್ನು ಸೂಚಿಸುತ್ತದೆ. ಬೇರೆ ಚಕ್ಕರ ಮೇಲೆ ಆಗ ಬಿದ್ದ ಉಪದ್ರವವು ಅಪಾಸ್ತಲರ ಕ್ರಿಯೆಗಳೆಂಬ ಗ್ರಂಥದಲ್ಲಿ ಬರದಿರುವದಿಲ್ಲ. ಅವರ ಪೆಸರುಗಳು ಜೀವದ ಪುಸ್ತಕದಲ್ಲಿ ಅವೆ ಎಂಬದು (ಲೂಕ. ೧೦, ೨೦. ಪ್ರಕ ೩, ೮; ೧೩, ೮.) ಅವರಲ್ಲಿ ಕೆಲವರು ಈ ಪತ್ರಿಕೆಯು ರಚಿತವಾಗುವದಕ್ಕಿಂತ ಮುಂಚೆ ಸತ್ತು ಪೋ್ಗದರೆಂದು, ಜಾಡೆಯಾಗಿ ತಾ್ಕರಿಸುತ್ತ್ತದೆ.

೪. ಕ್ರಿಸ್ತನ ಐಕ್ಯದಲ್ಲಿದ್ದು, ದೇವಮಹಿಮಾಬಾಧ್ಯಸ್ಥರಾದ ಚಕ್ಕರಲ್ಲಿ ಸಂತೋಷ ಗುಂ್ಗಾಚ್ಯಾಸವಿರಬೇಕು. ಶೆರೆಯಲ್ಲಿದ್ದರೂ, ಬಿಡುಗಡೆಯಾಗಿದ್ದರೂ, ರೋ್ಗದಲ್ಲಿದ್ದರೂ, ಕ್ಷೇಮವಾಗಿದ್ದರೂ, ಬದುಕಿದರೂ, ಸತ್ತರೂ, ಎಲ್ಲಾ ತಮಗೆ ಕ್ರೈಕೂಡಿ ಬರುತ್ತದೆಂದು ನಿತ್ಯ ಸಂತುಷ್ಟರಾಗಿದ್ದಾರೆ.

೫. ಕರ್ಕರೆಯಿಂದ ಶಿಟ್ಟು, ಸಂತೋಷದಿಂದ ಸಾಧುಗುಣವು ಪುಟ್ಟುತ್ತದೆ.

೬. ಕ್ರಿಸ್ತನ ಆತ್ಮವನ್ನು ಪೋ್ಗಂದಿ, ಆತ್ಮಬೋ್ಧತರಾದ ಚಕ್ಕರಿಗೆ, ಎಲ್ಲರಿಗೂ ನ್ಯಾಯತೀರಿಸುವದಕ್ಕೂ, ತನ್ನವರನ್ನು ತನ್ನ ಮಹಿಮೆಯಲ್ಲಿ ಶೇರಿಸುವದಕ್ಕೂ ಬರುವ ಕರ್ತನ ದಿವಸವು ನಾಳೇ ದಿವಸದಂತೆ ಸಮೀಪವಾಗಿದೆಂಬ ಜಾವನೆಯು ಸಪೂಜವಾದದ್ದು. ಆದ್ದರಿಂದ ಅನ್ಯಾಯಿಗಳಾದರೂ ಕೋಪ ಮಾಡದೆ, ಎಲ್ಲಾನ್ನು ಕರ್ತನಿಗೆ ಒಪ್ಪಿಸುತ್ತಾರೆ. ಯಾಕಾ. ೫, ೯.

೭. ಪ್ರಾರ್ಥನೆಯು ಎಲ್ಲಾ ಚಿಂತೆಗಳನ್ನು ಪೋ್ಗಗಲಾಡಿಸುವದಕ್ಕೆ ಉತ್ತಮ ಉಪಾಯವಾಗಿದೆ.

೮. ಅಂದರೆ, ಮನುಷ್ಯರ ದ್ವೇಷದಿಂದಲಾದರೂ, ಚಿಂತೆಗಳ ಕ್ಲೇಶಗಳಿಂದಲಾದರೂ ಕೆಡದೆ, ಸಾಧುತ್ವದಲ್ಲಿಯೂ, ಪ್ರಾರ್ಥನಾಚ್ಯಾಸದಲ್ಲಿಯೂ ಸ್ಥಿರವಾದ ಸಂತೋಷವುಳ್ಳ ಪೃದಯದಲ್ಲಿ ದೇವರ ಸಮಾಧಾನವು ನೆಲೆಯಾಗಿದೆ.

೯. ಅದರ ಮಟ್ಟು ಮನುಷ್ಯನ ಬುದ್ಧಿಗೆ ತಿಳಿಯತಕ್ಕದ್ದಲ್ಲ. ಆದಾಗ್ಯೂ ಅನುಚವಿಗಳು ಅದೇನೆಂದು ಚನ್ನಾಗಿ ಬಲ್ಲರು. ರೋಮಾ. ೫, ೧; ೮, ೩೫.

೧೦. ಯೇಸು ಕ್ರಿಸ್ತನ ಐಕ್ಯದಲ್ಲಿರುವವರಿಗೆ ದೇವರು ಅದನ್ನು ದಯ ಮಾಡುವದರಿಂದ ಯೋ್ಗಪೋ್ಗ. ೧೪, ೨೭. ಅದಕ್ಕೆ ದೇವಸಮಾಧಾನವೆಂದು ಪೆಸರಾಯಿತು.

೧೧. ಗ್ರೀಕದಲ್ಲಿ ಮನಸ್ಸುಗಳು ಎಂಬದಕ್ಕೆ ಆಲೋಚನೆ, ಜಾವನೆ, ನೆನಪು ಮುಂತಾದ ಅಬಿಪ್ರಾಯವುಳ್ಳ ಪದವು ಬರದದೆ. ಪೃದಯವು ಮೂಲವಾಗಿದೆ. ಅದರ ಸ್ಥಿತಿಯ ಪ್ರಕಾರ ಮನುಷ್ಯನ ಬುದ್ಧಿಯು. ಬುದ್ಧಿಯಿಂದ ಪೃದಯದ ಜಾವವು ಬೇರೆ ಆಗುವದಿಲ್ಲ; ಆದರೆ ನೂತನ ಪೃದಯದಿಂದ ನೂತನ ಬುದ್ಧಿಯು ಪುಟ್ಟುತ್ತದೆ.

೧೨. ಅಂದರೆ, ಆತನ ನಿಜವಾದ ಐಕ್ಯದಲ್ಲಿ.

೧೩. ಈ ಮಂಗಳವಾದ ಐಕ್ಯದಲ್ಲಿ ಸ್ಥಿರವಾಗುವದಕ್ಕೆ ನೀತ್ಯಾಸಕ್ತಿಯು ಅವಶ್ಯವಾದದ್ದು. ಸತ್ಯವು ಪಾಪಜಾವದಲ್ಲಿ ಯಾವಾಗಲೂ ಶೇರುವ ಪುಸಿಗೆ ವಿರೋಧವಾದದ್ದು. ಎಫೆ. ೪, ೨೨. ನಡತೆಯ ಪಾನತ್ವವೂ, ರೋಮಾ. ೧೩, ೩. ನ್ಯಾಯವೃತ್ತಿಯೂ

ಫಿಲಿ. ೪, ೧೦—೧೯.

ಎಫೆ. ೫, ೯. ಪರರ ವಿಷಯವಾದ ಧರ್ಮಕ್ಕೆ ಮೂಲವಾಗಿವೆ. ಪವಿತ್ರವೆಂಬ ಪದವು ಕಾಮವಿಕಾರಪರಿತ್ಯಾಗವನ್ನು ಸೂಚಿಸುತ್ತದೆ. ಅಪುಂಕಾರದಿಂದಲ್ಲ, ಪರಪ್ರೀತಿಯಿಂದಲೇ ಕ್ರೈಸ್ತನು ಒಳ್ಳೆ ಪೌಸರನ್ನು ಪಡದು ಕಾಳ್ಳ ಬೇಕೆಂದಿಳ್ಳೈಸಿ, ನಿಷ್ಕಳಂಕನಾಗಿ ನಡದು ಕಾಳ್ಳುವದರಿಂದ, ಇಪುವ್ಯಾಪಾರಗಳಲ್ಲಿಯೂ ಅವಿಶ್ವಾಸಿಗಿಂತ ಉತ್ತಮನಾಗಿದ್ದಾನೆ.

೧೪. ಇದಕ್ಕೆ ರೋಮಾ. ೧೫, ೩೩; ೧೬, ೨೦. ಸರಿ ನೋಡ ಬೇಕು.

೧೦. ಈದರೆ, ಇಗಲಾದರೂ ನನ್ನ ವಿಷಯವಾದ ನಿಮ್ಮ ಚಿಂತೆಯು ತಿರಿಗಿ ಚಿಗುರಿತೆಂದು ೧) ಕರ್ತನಲ್ಲಿ ಮಹಾ ಸಂತೋಷ ಪಟ್ಟೆನು. ೧೧. ಇ ಚಿಂತೆಯಲ್ಲಿ ಇದ್ದಿರಿ; ಈದರೆ ಸಮಯವಾಗಲಿಲ್ಲ ೨). ಕೊರತೆಯಿಂದ ನಾನು ಹೇಳಿದ ಹಾಗಲ್ಲ; ಯಾಕಂದರೆ ಇದ್ದ ಸ್ಥಿತಿಯಲ್ಲಿ ತೃಪ್ತನಾಗಿರ ನಾನು ಕಲಿತಿದ್ದೇನೆ ೩); ೧೨. ದೀನನಾಗಿರ ಬಲ್ಲೆನು; ಹೆಚ್ಚಲೂ ಬಲ್ಲೆನು; ಎಲ್ಲೆಲ್ಲಿಯೂ, ಎಲ್ಲವುಗಳಲ್ಲಿಯೂ, ತೃಪ್ತಿ ಹೊಂದಲೂ, ಹಸಿವೆ ಪಡಲೂ, ಹೆಚ್ಚಲೂ, ಕೊರತೆ ಪಡಲೂ, ಪೂರ ಶಿಕ್ಷಿತನಾಗಿದ್ದೇನೆ; ೧೩. ನನ್ನನ್ನು ಬಲ ಪಡಿಸುವ ಕ್ರಿಸ್ತನಿಂದ ಎಲ್ಲಕ್ಕೆ ೪) ಶಕ್ತನಾಗಿದ್ದೇನೆ.

೧. ಫಿಲಿಪ್ಪಿಯವರ ಧರ್ಮದ್ರವ್ಯವನ್ನು ಅಪಾಸ್ತಲನಿಗೆ ತಂದು ಕೊಟ್ಟ ಎಪಫ್ರೊದಿತನು ವಸಂತ ಕಾಲದಲ್ಲಿ ರೋಮಪುರಕ್ಕೆ ಬಂದದರಿಂದ, ಪೌಲನು ನಿಮ್ಮ ಪ್ರೀತಿಯಂಬ ಮರದಲ್ಲಿ ಧರ್ಮದ್ರವ್ಯವೆಂಬ ಎಲೆಯು ಚಿಗುರಿತೆಂಬ ವಸಂತ ಕಾಲಾನುಕೂಲವಾದ ಸಾದೃಶ್ಯವನ್ನು ಪ್ರಯೋಗಿಸಿದನೆಂದು, ತೋರುತ್ತದೆ.

೨. ಅಂದರೆ, ನೀವು ಯಾವಾಗಲೂ ನನಗೆ ಸಹಾಯ ಮಾಡುವದಕ್ಕೆ ಮನಸ್ಸುಳ್ಳವರಾಗಿದ್ದಿರಿ; ಆದರೆ ಕೈಸರಯಕ್ಕಾದರೂ ರೋಮಪುರಕ್ಕಾದರೂ ನನಗೆ ಪಾಲಾವನ್ನು ಕಳುಹಿಸುವದಕ್ಕೆ ಮಾರ್ಗವಾಗಲಿಲ್ಲ.

೩. ಪೌಲನು. ೧ ತಿಮೊ. ೬, ೬ಲ್ಲಿ ಸೂಚಿಸಿದ ಮನಸ್ಸುಳ್ಳ ಜಕ್ತನು ತಕ್ಕ ಕಾಲದಲ್ಲಿ ತನಗೆ ಬೇಕಾದದ್ದನ್ನು ದೇವರಿಂದ ಪಡೆಯಾಂದುತ್ತಾನೆಂಬದಕ್ಕೆ ಸಂಶಯವಿಲ್ಲ. ಮತ್ತಾ. ೬, ೩೧. ೩೩.

೪. ಏನಾದರೂ ಮಾಡುವದಕ್ಕೂ, ಸಹಿಸುವದಕ್ಕೂ ಬೇಕಾದ ಬಲವನ್ನು ಕ್ರಿಸ್ತನು ನನಗೆ ಕಾಡುತ್ತಾನೆ.

೪) ಧರ್ಮದ್ರವ್ಯಕೃತಜ್ಞಾಪನೆಯು. ವ. ೧೦—೧೯.

೧೪. ಈದಾಗ್ಯೂ ಉಪದ್ರವದಲ್ಲಿ ೧) ನನಗೆ ಸಹಾಯ ಕೊಟ್ಟು ಚನ್ನಾಗಿ ಮಾಡಿದಿರಿ. ೧೫. ಇವಲ್ಲದೆ, ಫಿಲಿಪ್ಪಿಯರೇ, ಸುವಾರ್ತೆಯ ಆರಂಭದಲ್ಲಿ ನಾನು ಮಕೆದಾನ್ಯದಿಂದ ಹೊರಟಾಗ, ನೀವೇ ಹೊರತು, ಬೇರೆ ಯಾವ ಸಭೆಯಾದರೂ ನನಗೆ ಕೊಳ್ಳ ಕೊಡೋಣಗಳ ವಿಷಯ ೨) ಸಹಾಯ ಮಾಡಲಿಲ್ಲವೆಂದು, ನೀವೇ ಬಲ್ಲಿರಿ. ೧೬. ಏನಂದರೆ ಥೆಸ್ಸಲೊನೀಕದಲ್ಲಿಯೂ ಒಂದೆರಡು ಸಾರಿ ನನ್ನ ಅವಸರಕ್ಕೆ ಕಳುಹಿಸಿದಿರಿ ೩). ೧೭. ನಾನು ದಾನವನ್ನು ಹುಡುಕಿದ ಹಾಗಲ್ಲ, ಈದರೆ ನಿಮ್ಮ ಲೆಕ್ಕಕ್ಕೆ ಹೆಚ್ಚುವ ಫಲವನ್ನು ಹುಡುಕುತ್ತೇನೆ ೪). ೧೮. ಈದರೆ ಸುವಾಸನೆಯ ಪರಿ

ಫಿಲಿ. ೪, ೧೫—೨೩.

ಮಳವೂ, ದ್ಯೋವರನ್ನು ಮೆಚ್ಚಿಸುವ ಸಮರ್ಪಕವಾದ ಬಲಿಯೂ ಆಗಿರುವ ನಿಮ್ಮ ವುಗಳನ್ನು ಎಪ್ರಫ್ರಾದ್ಯಿಕನಿಂದ ತೆಗೆದು ಕೊಂಡು, ಎಲ್ಲಾ ಹೊಂದಿದ್ದೇನೆ, ಹೆಚ್ಚಿ ದ್ದೇನೆ, ತುಂಬಿದ್ದೇನೆ. ೧೯. ಆದರೆ ನನ್ನದ್ಯೋವರು, ಕ್ರಿಸ್ತ ಯೇಸುವಿನಿಂದ ತನ್ನ ಮ ಹಿಮೆಯ ಐಶ್ವರ್ಯದ ಪ್ರಕಾರ, ನಿಮ್ಮ ಅವಸರವಂನೆಲ್ಲಾ ೫) ಪೂರೈಸುವನು.

೧. ಪೌಲನು ಕೊರಿಂಥದಲ್ಲಿಯೂ (ಅಪೊ. ಕ್ರಿ. ೧೮, ೩. ೧ ಕೊರಿ. ೪, ೧೨.) ಥೆಸ್ಸಲೊನೀಕೆಯಲ್ಲಿ ಯೂ (೧ ಥೆಸ್ಸ. ೨, ೯. ೨ ಥೆಸ್ಸ. ೩, ೮.) ಎಫೆಸ ದಲ್ಲಿಯೂ (ಅಪೊ. ಕ್ರಿ. ೨೦, ೩೪.) ಸ್ವಂತ ಕೈಕಷ್ಟ ದಿಂದ ಜೀವನ ಮಾಡಿ ಕೊಂಡು, ತನಗೂ, ತನ್ನ ಸಂ ಗಡಲಿದ್ದವರಿಗೂ ಬೇಕಾದದ್ದನ್ನು ದುಡಿದನು. ಆದರೆ ಬಂಧನಗ್ರಸ್ತನಾಗಿದ್ದಾಗ, ಈ ಜೀವನೋಪಾಯಮಾ ರ್ಗವು ಶಿಕ್ಕಲಿಲ್ಲ. ಅಂಥಾ ಸಮಯದಲ್ಲಿ ಫಿಲಿಪ್ಪಿಯ ವರು ಅವನಿಗೆ ಧರ್ಮದ್ರವ್ಯ ಕಳುಹಿಸಿದ್ದು ಬಹಳ ಉಪಯೋಗವಾಯಿತು.

೨. ಈ ಮಾತಿನ ಅಭಿಪ್ರಾಯವು ೧ ಕೊರಿ. ೯, ೧೧. ರೋಮಾ. ೧೫, ೨೭. ಕೊಡುತ್ತದೆ. ಫಿಲಿಪ್ಪಿಯವ ರು ಅಪೊಸ್ತಲನಿಂದ ಆತ್ಮಿಕದ್ರವ್ಯವನ್ನು ಪೊಂದಿ, ಅವನಿಗೆ ಧರ್ಮದ್ರವ್ಯವನ್ನು ಕಾಡುತ್ತಾ ಇದ್ದರು.

೩. ಇದು ೨ ಕೊರಿ. ೧೧, ೯ಲ್ಲಿಯೂ ಬರದದೆ.

೪. ನಿಮ್ಮ ಪೊಗಳವನ್ನು ನಾನು ಬಯಸುವವನಲ್ಲ; ಆದರೆ ನೀವು ಕ್ರಿಸ್ತನ ಹೆಸರಿನಲ್ಲಿ ನನಗೆ ಉಚಿತವಾ ಗಿ ಕಳುಹಿಸಿ ಕೊಟ್ಟ ಧರ್ಮದ್ರವ್ಯಕ್ಕೆ ದೇವರು ನಿಮಗೆ ಅತಿಶಯವಾದ ಕೃಪಾಪ್ರಸಾದವನ್ನು ಕಾಡುವನೆಂದು ನಂಬಿ, ನಿಮಗಾಗಿ ನಾನು ಸಂತೋಷ ಪಡುತ್ತೇನೆ.

೫. ನಿಮ್ಮ ಆತ್ಮಗಳಿಗೆ ಮಾತ್ರವಲ್ಲ, ನಿಮ್ಮ ಶರೀ ರಗಳಿಗೆ ಇಹದಲ್ಲಿ ಬೇಕಾದದ್ದನ್ನು ಸಹ ದೇವರು ಅತಿಶಯವಾಗಿ ಕೊಡುವನು.

ಊ) ಅಂತ್ಯೋಕ್ತಿಯು. ವ. ೨೦—೨೩.

೨೦. ಇದಲ್ಲದೆ ನಮ್ಮ ತಂದೆಯಾದ ೧) ದ್ಯೋವರಿಗೆ ಎಂದೆಂದಿಗೂ ಮಹಿಮೆ ಆಗ ಲಿ. ಆಮೆನ್. ೨೧. ಕ್ರಿಸ್ತ ಯೇಸುವಿನಲ್ಲಿರುವ ಪರಿಶುದ್ಧರೆಲ್ಲರನ್ನು ೨) ವಂದಿಸಿರಿ. ನನ್ನ ಸಂಗಡ ಇರುವ ಸಹೋದರರು ನಿಮ್ಮನ್ನು ವಂದಿಸುತ್ತಾರೆ. ೨೨. ಪರಿಶುದ್ಧರೆ ಲ್ಲರು, ಮುಖ್ಯವಾಗಿ ಕೈಸರನ ಮನೆಯವರು ೩), ನಿಮ್ಮನ್ನು ವಂದಿಸುತ್ತಾರೆ. ೨೩. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

೧. ಅಂದರೆ, ನಿಮ್ಮನ್ನೂ ನನ್ನನ್ನೂ ಯೇಸು ಕ್ರಿಸ್ತ ನಲ್ಲಿ ಪ್ರಿಯ ಮಕ್ಕಳೆಂದು ಅತಿಶಯವಾದ ಕೃಪೆಯಿಂದ ಸಾಕುತ್ತಾ ಬರುವ ದೇವರಿಗೆ ನಾವು ಯಾವಾಗಲೂ ಕೃತಜ್ಞರಾಗಿ ಸ್ತೋತ್ರ ಮಾಡುತ್ತಾ ಬರ ಬೇಕು.

೨. ಫಿಲಿಪ್ಪಿಯಲ್ಲಿಯೂ, ಅದರ ಸಮೀಪದಲ್ಲಿ ಯೂ ಇರುವ ಸಖೆಯವರೆಲ್ಲರನ್ನೂ, ಪರಸ್ಥಳಗಳಿಂ ದ ಫಿಲಿಪ್ಪಿಗೆ ಬರುವವರೆಲ್ಲರನ್ನೂ ವಂದಿಸ ಬೇಕು.

೩. ನೆರೋ ಎಂಬ ಮಹಾರಾಜನ ಅರಮನೆಯ ಉದ್ಯೋಗಸ್ಥರಲ್ಲಿ ಸಹ ಕೆಲವರು ಯೇಸು ಕ್ರಿಸ್ತನನ್ನು ನಂಬಿ ಕ್ರೈಸ್ತ ಸಖೆಯಲ್ಲಿ ಶೇರಿದ್ದು ಚೋದ್ಯವಾಗಿತ್ತು. ಫಿ ಲಿಪ್ಪಿಯು ರೋಮಾಯರ ರಾಜ್ಯದಲ್ಲಿದ್ದ ಶ್ರೇಷ್ಠ ವಾದಂ ಥಾ ಉಪಪಟ್ಟಣಗಳಲ್ಲಿ ಒಂದಾಗಿತ್ತು. ಮಹಾರಾ ಜನ ಅರಮನೆಯ ಉದ್ಯೋಗಸ್ಥರಲ್ಲಿ ರೋಮಾ. ೧೬, ೧೧ರಲ್ಲಿ ಸೂಚಿತನಾದ ನರ್ಕಿಸ್ಸನು ಒಬ್ಬನಾಗಿದ್ದನು.

ಅಪಾಸ್ತಲರ ಚರಿತ್ರೆಯ ಮೂರನೇ ಭಾಗವು.

ಅಪಾಸ್ತಲರು ಉದ್ಯೋಗವನ್ನು ನಡಿಸಿದ ಅಂತ್ಯಚರಿತ್ರವು.

(ಸರ್ವಸಭಾಪತ್ರಿಕೆಗಳು; ಇಬ್ರಿಯರ ಪತ್ರಿಕೆಯು; ಸಭಾಪಾಲನಾಪತ್ರಿಕೆಗಳು;—ಯೋಹಾನನ ಪ್ರಕಟಣೆಯು ಪ್ರತ್ಯೇಕವಾಗಿ ವ್ಯಾಖ್ಯಾನವಾಗುವದು.)

ಸರ್ವಸಭಾಪತ್ರಿಕೆಗಳೆಂಬ ಸಾಮಾನ್ಯವಾದ ಪತ್ರಿಕೆಗಳ ವಿಷಯವಾದ ಪೀಠಿಕೆಯು.

ಅ) ಹೊಸ ಒಡಂಬಡಿಕೆಯ ಗ್ರಂಥದಲ್ಲಿ ಶೇರಿದ ಸರ್ವಸಭಾಪತ್ರಿಕೆಗಳ ಲೆಖ್ಖ ನಾಮ ಕ್ರಮಗಳು.

ಯಾಕೋಬನ ಪತ್ರಿಕೆ, ಪೇತ್ರನ ಎರಡು ಪತ್ರಿಕೆ, ಯೂದನ ಪತ್ರಿಕೆ, ಯೋಹಾನನ ಮೂರು ಪತ್ರಿಕೆ, ಇವೇಳು ಸರ್ವಸಭಾಪತ್ರಿಕೆಗಳು ಅಥವಾ ಸಾಮಾನ್ಯಪತ್ರಿಕೆಗಳು ಎಂದು ಪೆಸರ್ಗೊಂಡವೆ. ಸರ್ವಸಭಾಪತ್ರಿಕೆಯಂಬ ಪೆಸರಿನ ಅಭಿಪ್ರಾಯವೇನಂದರೆ: ವಿಶೇಷ ಸಮಯೋಚಿತವಾಗಿಯೂ, ಪ್ರತ್ಯೇಕವಾದ ಸಭೆಯ ಉದ್ದಿಶ್ಯವಾಗಿಯೂ ಅಲ್ಲ, ಸಾಮಾನ್ಯವಾಗಿ ಸಭೆಯ ಬೋಧನೆಗಾಗಿಯೇ ರಚಿತವಾದದ್ದು. ಈವರೆಗೂ ವ್ಯಾಖ್ಯಾನವಾದ ಪೌಲನ ಪತ್ರಿಕೆಗಳಿಗೆ ಪ್ರತ್ಯೇಕಸಭಾಪತ್ರಿಕೆಗಳೆಂಬ ಪೆಸರಾಯಿತು. ಆದರೆ ಸೂಕ್ಷ್ಮವಾಗಿ ನೋಡಿದರೆ, ಪ್ರತ್ಯೇಕಸಭಾಪತ್ರಿಕೆ, ಸರ್ವಸಭಾಪತ್ರಿಕೆಯಂಬ ನಾಮಭೇದವು ಪೂರ್ಣ ಯುಕ್ತವಾಗಿ ತೋರುವದಿಲ್ಲ; ಏಕ್ಕಾಗಂದರೆ, ಪೌಲನ ಪತ್ರಿಕೆಗಳಲ್ಲಿ ಎಫೆಸರದೆಂಬದು ಸಂವರ್ತನಪತ್ರಿಕೆಯಂದು ತಿಳಿದಿದ್ದೇವೆ. ಸರ್ವಸಭಾಪತ್ರಿಕೆಗಳಲ್ಲಿ ಶೇರಿದ ಇಬ್ರಿಯರದು ಪ್ರತ್ಯೇಕ ವಿಧವಾದ ಕ್ರೈಸ್ತರ ಉದ್ದಿಶ್ಯವಾಗಿ ರಚಿತವಾದದ್ದೆಂದು ಮುಂದೆ ತಿಳಿಯುವೆವು. ಅದೇ ಪ್ರಕಾರ ಪೇತ್ರನ ಮೊದಲನೇ ಪತ್ರಿಕೆಯು ಸಣ್ಣ ಆಸ್ಯದ ಸಭೆಗಳ ಉದ್ದಿಶ್ಯವಾಗಿಯೇ, ಯಾಕೋಬನ ಪತ್ರಿಕೆಯು ಇಸ್ರಯೇಲನವರಾದ ಹನ್ನೆರಡು ಕುಲದವರಾಗಿರುವ ಕ್ರೈಸ್ತರ ಬೋಧನಾರ್ಥವಾಗಿಯೇ ಬರೆಯಲಾಯಿತು. ಪೇತ್ರನ ಎರಡನೇ ಪತ್ರಿಕೆ, ಯೂದನ ಪತ್ರಿಕೆ, ಯೋಹಾನನ ಮೊದಲನೆ ಪತ್ರಿಕೆ, ಈ ಮೂರು ಸರ್ವ ಸಭೆಯ ಉಪಯೋಗಕ್ಕಾಗಿ ಅಲ್ಲ,

ಪ್ರತ್ಯೇಕವಾದ ಅವಲೋಕಿಕರ ಸಮೂಹಗಳಾದ್ದಿಶ್ಯವಾಗಿಯೇ ರಚಿತವಾಗಿವೆ. ಯೋಹಾನನ ಎರಡನೆ ಮೂರನೆ ಪತ್ರಿಕೆಗಳಲ್ಲಿ ಅವಲೋಕಿಕರ ಪೆಸರುಗಳು ಸ್ಪಷ್ಟವಾಗಿ ಬರದವೆ.

ಪೌಸ ಒಡಂಬಡಿಕೆಯ ಗ್ರಂಥದಲ್ಲಿ ಅಪೊಸ್ತಲರ ಕ್ರಿಯೆಗಳೆಂಬ ಪುಸ್ತಕದ ಮೇಲೆ ಪೌಲನ ಪತ್ರಿಕೆಗಳು, ಬಳಿಕ ಯಾಕೋಬನ ಪತ್ರಿಕೆಯು, ತದನಂತರ ಪೇತ್ರನ ಎರಡು ಪತ್ರಿಕೆಗಳು, ತರುವಾಯ ಯೋಹಾನನ ಮೂರು ಪತ್ರಿಕೆಗಳು, ಇವುಗಳ ಹಿಂದೆ ಯೂದನ ಪತ್ರಿಕೆಯು, ಕಡೆಯಲ್ಲಿ ಪ್ರಕಟಣೆಯ ಪುಸ್ತಕವು ಶೇರುವ ಕ್ರಮವು ರೂಢಿಯಾಗಿದೆ. ನಾವು ಈ ಭಾಗದಲ್ಲಿ ಮೊದಲು ಯಾಕೋಬನ ಪತ್ರಿಕೆಯನ್ನು, ತರುವಾಯ ಇಬ್ರಿಯರ ಪತ್ರಿಕೆಯನ್ನು, ಬಳಿಕ ಪೌಲನು ಶೀತ ತಿಮೊಥೆಯರಿಗೆ ಬರದ ಸಭಾಪಾಲನಾಪತ್ರಿಕೆಗಳನ್ನು, ಆ ಮೇಲೆ ಪೇತ್ರನ ಮೊದಲನೆ ಪತ್ರಿಕೆಯನ್ನು, ತಿಮೊಥೆಯನ ಎರಡನೆ ಪತ್ರಿಕೆಯನ್ನು, ಪೇತ್ರನ ಎರಡನೆ ಪತ್ರಿಕೆಯನ್ನು, ಯೂದನ ಪತ್ರಿಕೆಯನ್ನು, ಯೋಹಾನನ ಮೊದಲನೆ ಎರಡನೆ ಮೂರನೆ ಪತ್ರಿಕೆಗಳನ್ನು, ರಚನಾಕಾಲಾನುಸಾರವಾಗಿ ವ್ಯಾಖ್ಯಾನಿಸಿ, ಕಡೆಯಲ್ಲಿ ಪ್ರಕಟಣೆಯ ಪುಸ್ತಕವನ್ನು ಟೀಕಿಸುತ್ತೇವೆ.

೫) ಗ್ರಂಥಕರ್ತರು.

ಪೇತ್ರನ ಮೊದಲನೆ ಪತ್ರಿಕೆಯು ಅಪೊಸ್ತಲನಾದ ಪೇತ್ರನಿಂದ, ಯೋಹಾನನ ಮೊದಲನೆ ಪತ್ರಿಕೆಯು ಅಪೊಸ್ತಲನಾದ ಯೋಹಾನನಿಂದ ರಚಿತವಾದವೆಂಬುವದಕ್ಕೆ ನಿಸ್ಸಂಶಯವಾದ ಪೂರ್ವ ಸಭೆಯ ಸಾಕ್ಷಿಯುಂಟು. ಇದಲ್ಲದೆ ಈ ಪತ್ರಿಕೆಗಳ ತಾತ್ಪರ್ಯವು ಸುವಾರ್ತೆಗಳಲ್ಲಿಯೂ, ಅಪೊಸ್ತಲರ ಕ್ರಿಯೆಗಳಲ್ಲಿಯೂ ಸೂಚಿತವಾದ ಪೇತ್ರ ಯೋಹಾನರ ಸ್ವಭಾವಗುಣಗಳಿಗೆ ಚನ್ನಾಗಿ ಸರಿ ಬೀಳುತ್ತದೆ. ವಿಶೇಷವಾಗಿ ಯೋಹಾನನ ಸುವಾರ್ತೆಯ ಆರಂಭವೂ, ಮೊದಲನೆ ಪತ್ರಿಕೆಯ ಪ್ರಥಮ ಪದನಗಳೂ ಏಕ ಗ್ರಂಥ ಕರ್ತನ ರಚನೆಯಾಗಿ ಕಾಣುತ್ತವೆ. ಇದಲ್ಲದೆ ಯೋಹಾನನ ಮೊದಲನೆ ಪತ್ರಿಕೆಯು ಯೋಹಾನನ ಸುವಾರ್ತೆಯ ಜಾತಪತ್ರವಾಗಿತ್ತೆಂಬ ಚಿನ್ಹೆಯು ಅದರ ಆದಿಯಲ್ಲಿ ತೋರುತ್ತದೆ. ಯಾಕೋಬ ಯೂದರ ಪತ್ರಿಕೆಗಳ ಕರ್ತರೂ, ಪೇತ್ರನ ಎರಡನೆ ಪತ್ರಿಕೆಯನ್ನೂ, ಯೋಹಾನನ ಎರಡನೆ ಮೂರನೆ ಪತ್ರಿಕೆಗಳನ್ನೂ ಬರದವರೂ ಯಾರು ಎಂಬಿದರ ವಿಷಯವಾಗಿ ಎರಡನೆ ಮೂರನೆ ಶತಮಾನಗಳಲ್ಲಿ ಎಲ್ಲಾ ಸಭೆಗಳು ಏಕ ಮತ್ಯವಾಗದಿದ್ದರೂ, ನಾಲ್ಕನೆ ಶತಮಾನದ ಪೂರ್ವ ಪಶ್ಚಿಮ ದಿಕ್ಕುಗಳ ಸಭೆಗಳಿಗೆಲ್ಲಾ ಈ ಪತ್ರಿಕೆಗಳ ವಿಷಯವಾದ ಸಂಶಯವು ಸಾಧಾರಣವಾಗಿ ಪರಿಹಾರವಾಯಿತು; ಆದ್ದರಿಂದ ಈ ಗ್ರಂಥಗಳೆಲ್ಲಾ ದೇವರ ವಾಕ್ಯಸಂಗ್ರಹವೆಂಬ ಕಾನೋನಿನಲ್ಲಿ ಶೇರಿಸಲ್ಪಟ್ಟವು.

ಪೌಸ ಒಡಂಬಡಿಕೆಯೆಂಬ ಸಂಗ್ರಹದಲ್ಲಿ ಶೇರಿದ ಈ ಗ್ರಂಥಗಳೆಲ್ಲಾ ದೇವರ ವಾಕ್ಯವೆಂಬುವದು ಸರಿ. ಯಾಕಂದರೆ: ಅವು ನರಬುದ್ಧಿಯಿಂದ ಕಲ್ಪಿತವಾಗದೆ, ದೇವರ ಆತ್ಮದಿಂದ ಉತ್ಪನ್ನವಾಗಿವೆ. ಇದನ್ನು ಅಪೊಸ್ತಲನಾದ ಪೇತ್ರನು ಸ್ಪಷ್ಟವಾಗಿ ಬೋಧಿಸುವದು, ಪೌಃಭಾಗಂದರೆ: ಬರಹದಲ್ಲಿರುವ (ದೇವರ ವಾಕ್ಯವೆಂಬ ಸಂಗ್ರಹದಲ್ಲಿ ಶೇರಿರುವ) ಯಾವ ಪ್ರವಾದನೆಯಾದರೂ ಸ್ವಂತ ವ್ಯಾಖ್ಯಾನಕ್ಕೆ ಬರುವದಿಲ್ಲವೆಂದು, ಮೊದಲು ತಿಳಿದಿದ್ದೀರಿ. ಯಾಕಂದರೆ ಪ್ರವಾದನೆಯು ಎಂದೂ ಮನುಷ್ಯನ ಇಚ್ಛೆಯಿಂದ ಆಗಲಿಲ್ಲ. ಆದರೆ ದೇವರ ಪರಿಶುದ್ಧ ಮನುಷ್ಯರು, ಪರಿಶುದ್ಧಾತ್ಮದಿಂದ ಪ್ರೇರೇಪಿಸಲ್ಪಟ್ಟು, ಮಾತನಾಡಿದರು ೨ ಪೇತ್ರ. ೧, ೨೦. ೨೧. ಇದಕ್ಕೆ ಅಪೊಸ್ತಲನಾದ ಪೌಲನ ಬೋಧನೆ ಸಹ ಒಪ್ಪುತ್ತದೆ: ಬರಹವೆಲ್ಲಾ ದೈವಪ್ರೇರಿತ

ವಾಗಿದ್ದು, ಬೋಧನೆಗೂ, ಖಂಡನೆಗೂ, ಶಿದ್ದುಪಾಟಿಗೂ, ನೀತಿಯ ಉಪದೇಶಕ್ಕೂ, ದೇವರ ಮನುಷ್ಯನು ಎಲ್ಲಾ ಸತ್‌ಕ್ರಿಯೆಗಳಿಗೆ ಸಿದ್ಧನಾಗಿ ಆಯತ್ತನಾಗುವದಕ್ಕೂ ಪ್ರಯೋಜನವಾಗಿದೆ. ದೇವರ ವಾಕ್ಯವೆಂಬ ಬರಹವನ್ನು ಯುಕ್ತವಾಗಿ ಪರಿಶೋಧಿಸಿದರೆ, ಅದರ ಛಾಪವು ನರಬುದ್ಧಿರಚಿತವಾದ ಎಲ್ಲಾ ಪುಸ್ತಕಗಳ ಛಾಪಕ್ಕೆ ಭೇದವಾಗಿರುವದೆಂದು, ಸ್ಪಷ್ಟವಾಗಿ ಕಾಣುತ್ತದೆ. ಮುಖ್ಯಾಗಂದರೆ ಅದರಲ್ಲಿರುವ ಜ್ಞಾನಬೋಧನೆಯು ಲೋಕದ ಜ್ಞಾನಿಗಳೆಲ್ಲರ ಪ್ರವೀಣತ್ವವನ್ನು ಮೀರಿದಾಗ್ಯೂ, ಸ್ವಸ್ಥಮತಿಯುಳ್ಳ ಬಾಲಕರ ಬುದ್ಧಿಗೆ ಸಹ ಸರಿ ಬೀಳುತ್ತದೆ; ಅದರ ಧರ್ಮಬೋಧನೆಯು ಮನುಷ್ಯರೆಲ್ಲರ ಮನಸ್ಸನ್ನೂ ನಡತೆಯನ್ನೂ ಕೆಡಿಸುವ ಪಾಪಗುಣಕ್ಕೆ ವಿರೋಧವಾಗಿದ್ದರೂ, ಮನುಷ್ಯರೆಲ್ಲರ ಮನಸ್ಸಾಕ್ಷಿಗೆ ಒಪ್ಪಿ, ಸತ್ಯ ನೀತಿ ವಾಕ್ಯವಾಗಿ ತೋರುತ್ತದೆ; ಇದಲ್ಲದೆ ಅದು ಲೋಕದಲ್ಲಿ ಹುಟ್ಟಿದ ಎಲ್ಲಾ ಮತಗಳನ್ನೂ, ಆಯಾ ಜನಾಂಗಗಳಲ್ಲಿ ಪಾರಂಪರ್ಯವಾಗಿ ನಡೆದು ಬಂದ ಸಂಪ್ರದಾಯಗಳನ್ನೂ ಖಂಡಿಸಿ ನಿರ್ಮೂಲ ಮಾಡಿದರೂ, ಸರ್ವ ಲೋಕದಲ್ಲಿಯೂ ಪ್ರಬಲವಾಗಿ, ಸರ್ವ ಲೋಕಭಾಷೆಗಳಲ್ಲಿ ಭಾಷಾಂತರವಾಗಿ, ಎಲ್ಲಾ ಜನಾಂಗಗಳಲ್ಲಿ ಅಂಗೀಕೃತವಾಗುತ್ತದೆ. ದೇವರ ವಾಕ್ಯವೆಂಬ ಬರಹದ ಸಂಗ್ರಹದಲ್ಲಿ ಶೇರಿದ ಗ್ರಂಥಗಳಿಗೆ ಅಪ್ರತಿತರ್ಕ್ಯವಾದ ಅನನ್ಯ ಸಾಧಾರಣಭಾವಲಕ್ಷಣವುಂಟು; ಅದೇನಂದರೆ, ಸಹಜಾಪೂರ್ವಲಕ್ಷಣವು. ಈ ಮಾತಿನ ಅಭಿಪ್ರಾಯವೇನಂದರೆ: ಯೇಸು ಕ್ರಿಸ್ತನೂ, ಪರಿಶುದ್ಧಾತ್ಮ ಪ್ರೇರಣೆಯಿಂದ ದೇವರ ವಾಕ್ಯವೆಂಬ ಗ್ರಂಥಗಳನ್ನು ರಚಿಸಿದ ಅಪೊಸ್ತಲರು ಪ್ರವಾದಿಗಳು ಮುಂತಾದವರೂ, ಪ್ರಕಟ ಮಾಡಿದ ವಾಕ್ಯವು ಮೊದಲು ತಿಳಿದು ಕಾಳ್ಳುವರೆಲ್ಲರಿಗೂ ಪುರಾಸ್ಕಾರಿಯೂ, ಅಪೂರ್ವವಾಗಿಯೂ ಕಾಣಿಸಿದರೂ, ಬಳಿಕ ದೇವನಿರ್ಮಿತರಾದ ಮನುಷ್ಯರ ಸಹಜವಾದ ಬುದ್ಧಿಗೆ ಅನುಕೂಲವಾದದ್ದಾಗಿ ಪ್ರಾಮಾಣ್ಯವಾಗುತ್ತದೆ. ಈ ವಿಶೇಷ ಲಕ್ಷಣವು ಯಾವ ಗ್ರಂಥಗಳಲ್ಲಿ ತೋರುತ್ತದಾಗೆ ಅವು ದೇವಾತ್ಮಾತ್ಪನ್ನವಾದ ದೇವವಾಕ್ಯವೆಂದು ಪೊಸಗರ್ಣಳ್ಳ ಯೋಗ್ಯವಾಗಿವೆ. ಈ ಲಕ್ಷಣವು ದೇವವಾಕ್ಯದ ಕಾನೋನಿನಲ್ಲಿ ಶೇರಿದ ಎಲ್ಲಾ ಗ್ರಂಥಗಳಲ್ಲಿ ತೋರಿ, ಲೋಕದಲ್ಲಿರುವ ಬೇರೆ ಯಾವ ಪುಸ್ತಕಗಳಲ್ಲಿಯೂ ತೋರುವದಿಲ್ಲ. ಪೂರ್ವ ಕಾಲದ ಕ್ರೈಸ್ತಸಭೆಯವರು ದೇವವಾಕ್ಯದ ಕಾನೋನಿನ ಈ ನಿಜವಾದ ವಿಧಿಯನ್ನು ಬಿಟ್ಟು, ಪೇತ್ರನು ಬರದ ಪ್ರಮಾಣದ ಮಾತನ್ನು ತಕ್ಕ ಪುರಾಗೆ ಲಕ್ಷಿಸದೆ, ಅಪೊಸ್ತಲರೂ, ಪ್ರವಾದಿಗಳೂ ಬರದ ಗ್ರಂಥಗಳು ದೇವವಾಕ್ಯದ ಕಾನೋನಿನಲ್ಲಿ ಶೇರುವದಕ್ಕೆ ಯೋಗ್ಯವಾಗಿವೆ, ಇತರರು ರಚಿಸಿದ ಗ್ರಂಥಗಳು ಅಯೋಗ್ಯವಾಗಿವೆ ಎಂದು, ಸ್ಥಾಪಿಸಿದರು. ಈ ತಪ್ಪಿನಿಂದ ದೇವವಾಕ್ಯದ ಕಾನೋನಿನ ವಿಷಯವಾದ ಬೋಧನೆಯಲ್ಲಿ ದೋಷ ಉಂಟಾಯಿತು. ಮುಖ್ಯಾಗಂದರೆ, ಪುರಾಣ ಒಡಂಬಡಿಕೆಯ ಕಾನೋನಿನ ನಾಲ್ಕು ಸುವಾರ್ತೆಗಳಲ್ಲಿ ಎರಡು ಅಪೊಸ್ತಲರಲ್ಲದ ಲೂಕ ಮರ್ಕರಿಂದ ರಚಿತವಾಗಿವೆ. ಇದು ಸಾಧಾರಣವಾದ ಕಾನೋನಿನ ಬೋಧನೆಗೆ ಅಪವಾದವಾದದ್ದು. ಈ ಅಪವಾದವನ್ನು ಪರಿಹರಿಸುವದಕ್ಕೆ ಸಭೆಯಲ್ಲಿ ರೂಢಿಯಾದ ನೆವದ ಮಾತು ಏನಂದರೆ: ಲೂಕನೂ ಮರ್ಕನೂ ಅಪೊಸ್ತಲರಲ್ಲದಿದ್ದರೂ, ಮರ್ಕನು ಅಪೊಸ್ತಲನಾದ ಪೇತ್ರನ ಜಾತೆಗಾರನೂ, ಲೂಕನು ಅಪೊಸ್ತಲನಾದ ಪೌಲನ ಜಾತೆಗಾರನೂ ಆದ ಕಾರಣ, ಅವರ ಸುವಾರ್ತೆಗಳು, ಈ ಇಬ್ಬರು ಅಪೊಸ್ತಲರಿಂದ ರಚಿತವಾದ ಪ್ರಕಾರ ಕಾನೋನಿನಲ್ಲಿ ಶೇರ ತಕ್ಕವುಗಳು. ಈ ಪ್ರಮಾಣವು ಪೇತ್ರನು ಬರದ ವಿಧಿಯ ಪ್ರಕಾರ ಅನಾವಶ್ಯಕವಾದದ್ದು. ಲೂಕ ಮರ್ಕರು ಪರಿಶುದ್ಧಾತ್ಮ ಪ್ರೇರಿತ ದೇವರ ಮನುಷ್ಯರಾಗಿದ್ದು, ಸುವಾರ್ತೆಗಳನ್ನು ದೇವಾತ್ಮಪ್ರೇರಣೆಯಿಂದ ಬರದರೆಂಬುವದು ಮತ್ತಾಯ ಯೋಹಾನರ ಸುವಾರ್ತೆಗಳಿಗೆ ತುಲ್ಯ

ವಾದ ಅವರ ಗ್ರಂಥಗಳ ಚಾವಡಿಂದಲೇ ಪ್ರತ್ಯಕ್ಷವಾಗಿದೆ. ಆದ್ದರಿಂದ ಅವು ದೇವವಾಕ್ಯವೆಂಬುವದಕ್ಕೆ ಸಂಶಯವಿಲ್ಲ. ಈಗ ನಮ್ಮ ಮುಂದೆ ಇರುವ ಪತ್ರಿಕೆಗಳಲ್ಲಿ ಎರಡರ ವಿಷಯವಾಗಿಯೂ ಮೇಲೆ ಸೂಚಿಸಿದ ವಿಧದ ಅಬದ್ಧವಾದ ಮಾತು ಸಭೆಯಲ್ಲಿ ಸಾಧಾರಣವಾದ ಕಾನ್ಯಾನಿನ ಪ್ರಮಾಣದಿಂದ ಪುಟ್ಟಿತು; ಪುಣ್ಯಾಗಂದರೆ, ಯಾಕ್ಯಾಬನ ಪತ್ರಿಕೆಯೂ, ಯೂದನ ಪತ್ರಿಕೆಯೂ ಪುಣ್ಯಾಸ ಒಡಂಬಡಿಕೆಯ ಕಾನ್ಯಾನಿನಲ್ಲಿ ಶೇರಿದ್ದರಿಂದ, ಅವುಗಳನ್ನು ಬರದ ಯಾಕ್ಯಾಬ ಯೂದರು ಅಪಾಸ್ತಲರಾಗಿರ ಬೇಕೆಂದು ನೆನಸಿ, ಕ್ರೈಸ್ತಸಭೆಯ ವಿದ್ವಾಂಸರು ಅವರು ಅಪಾಸ್ತಲರಾಗಿದ್ದರೆಂದು, ಅವಿಚಾರಿತವಾಗಿ ಸ್ಥಾಪಿಸಿದರು. ಇದು ಅಬದ್ಧವಾದದ್ದೇ ಸರಿ; ಯಾಕಂದರೆ ಪತ್ರಿಕೆಯನ್ನು ಬರದ ಯೂದನು ತಾನು ಯಾಕ್ಯಾಬನ ಸಹೋದರನೆಂದು ಅನ್ನಿಸಿ ಕಾಳ್ಳು ತ್ತಾನೆ. ಈ ಯಾಕ್ಯಾಬನು ಯಾಕ್ಯಾಬನ ಪತ್ರಿಕೆಯಂಬದನ್ನು ರಚಿಸಿದಂಥ, ಯೆರೂಸಲೇಮಿನ ಸಭೆಯಲ್ಲಿ ಮುಖ್ಯಸ್ಥನಾಗಿದ್ದಂಥ, ಅಪಾ. ಕ್ರಿ. ೧೨, ೧೭; ೧೫, ೧೩. ಗಲ. ೧, ೧೯; ೨, ೯. ಯೇಸು ಕ್ರಿಸ್ತನ ಸಹೋದರನೆಂದು ಪೌಸರ್ಗಾಂಡವನಾಗಿದ್ದನೆಂದು, ಸಂದೇಹ ಪಡ ಕೆಲಸವಿಲ್ಲ. (ಕೆಲವು ವಿದ್ವಾಂಸರು ಅವಸರದಿಂದ ಕಲ್ಪಿಸಿದ ಮಾತು ಯಾವದಂದರೆ: ಪತ್ರಿಕಾಕರ್ತನಾದ ಯೂದನು ಯಾಕ್ಯಾಬನ ಯೂದ ನೆಂದು ಪೌಸರ್ಗಾಂಡ ಅಪಾಸ್ತಲನಾದ ಅಲ್ಫಾಯನ ಮಗನಾದ ಕಿರಿಯಾಕ್ಯಾಬನ ತಮ್ಮನಾಗಿದ್ದನೆಂಬು ವದು. ಹೀಗಾದರೆ ಸಭೆಯಲ್ಲಿ ಸಾಧಾರಣವಾದ ಕಾನ್ಯಾನಿನ ಬಾಧೆನೆಗೆ ದಾಷವುಂಟಾಗುವದಿಲ್ಲ. ಆದರೆ ಇದಕ್ಕಿಂತ ದಾಡ್ಡ ದಾಷ ಪುಟ್ಟುತ್ತದೆ. ಯಾಕಂದರೆ, ಈ ಮಾತು ನಿಜವಲ್ಲ; ಯಾಕ್ಯಾಬನ ಯೂದನೂ ಎಂಬುವದಕ್ಕೆ ಯಾಕ್ಯಾಬನ ಮಗನಾದ ಯೂದನು ಎಂಬ ಅಭಿಪ್ರಾಯ ಪುಣ್ಯಾರ್ಥ ಯಾ ಕ್ಯಾಬನ ತಮ್ಮನೆಂಬ ಇಲ್ಲ.) ಕರ್ತನ ಸಹೋದರರೆಂದು ಪೌಸರ್ಗಾಂಡವರಲ್ಲಿ ಯೂದನೆಂಬವನಾಬ್ಬನು ಇದ್ದನು. ಮತ್ತಾ. ೧೩, ೫೫. ಹೀಗಿರಲಾಗಿ ಕರ್ತನ ಸಹೋದರರೆಂದು ಪೌಸರ್ಗಾಂಡ ಯಾಕ್ಯಾಬನೂ, ಯೂದನೂ ಈ ಎರಡು ಪತ್ರಿಕೆಗಳನ್ನು ಬರದರೆಂದು, ನೆನಸುವದು ಯುಕ್ತವಾಗಿದೆ.

ಊ) ರಚನಾಕಾಲ ಸ್ಥಳಗಳು.

ಸರ್ವಸಭಾಪತ್ರಿಕೆಗಳಲ್ಲಿ ಮೊದಲಿನವುಗಳೂ, ಪೌಲನ ಪತ್ರಿಕೆಗಳಲ್ಲಿ ಕಡೆಯಲ್ಲಿ ವ್ಯಾಖ್ಯಾನವಾದ ಬಂಧನಪತ್ರಿಕೆಗಳೂ, ಏಕ ಕಾಲದವುಗಳೆಂದು ತಾರುತ್ತದೆ. ಇಬ್ರಿಯರ ಪತ್ರಿಕೆಯ ಸ. ೧೩, ೨೩. ೨ಳಲ್ಲಿ ಬರದದ್ದನ್ನು ಸ. ೧೦, ೩ಳಕ್ಕೆ ಸರಿ ನ್ಯಾಯಿದರೆ, ಪೌಲನು ಪ್ರಥಮ ಬಂಧನದಿಂದ ಬಿಡುಗಡೆಯಾದ ಮೇಲೆ, ಇತಲಿಯ ದೇಶದ ಯಾವದಾಂದಾ ಸ್ಥಳದಲ್ಲಿ ವಸತಿಯಾಗಿದ್ದು, ಇಬ್ರಿಯರ ಪತ್ರಿಕೆಯನ್ನು ಬರದ ನೆಂದು ಕಾಣುತ್ತದೆ. ಇದಕ್ಕೆ ಫಿಲಿ. ೧, ೨೫. ಒಪ್ಪುತ್ತದೆ. ಕಾಲ್ಯಾ. ೧, ೧. ಫಿಲಿ. ೧, ೧ರ ಪ್ರಕಾರ ಬಂಧನಗ್ರಸ್ತನಾದ ಪೌಲನ ಬಳಿಯಲ್ಲಿದ್ದ ತಿಮೊಥೆಯನು, ಇಬ್ರಿಯರ ಪತ್ರಿಕೆಯು ರಚಿತವಾದ ಕಾಲದಲ್ಲಿ, ಪೌಲನ ಸಮೀಪದಲ್ಲಿರಲಿಲ್ಲ. ಅವನು ಸಹ ಬಂಧನದಲ್ಲಿದ್ದು, ಪೌಲನ ಮೇಲೆ ಬಿಡುಗಡೆಯಾದನೆಂದು, ಇಬ್ರಿ. ೧೩, ೨೩ಲ್ಲಿ ಸೂಚಿತವಾಗಿದೆ. ಪೌಲನು ಅಲ್ಲಿ, ಇವನು ತನ್ನ ಜಾತೆಯಲ್ಲಿ ಶೇರಿದ ಬಳಿಕ ತಾನು ಅವನ ಸಂಗಡ ಪತ್ರಿಕಾವಲ್ಯಾಕಿಕರ ದರ್ಶನಕ್ಕೆ ಬರುತ್ತೇನೆಂತ, ಬರೆಯುತ್ತಾನೆ. ಹೀಗಿರಲಾಗಿ ಇಬ್ರಿಯರ ಪತ್ರಿಕೆಯು ೬೨ನೆ ವರುಷದ ಅಂತ್ಯದಲ್ಲಿ, ಅಥವಾ ೬೩ನೆ ವರುಷದ ಆರಂಭದಲ್ಲಿ ರಚಿತವಾಯಿತೆಂದು, ಎಣಿಸ ಬೇಕು.

ಯೆರೂಸಲೇಮಿನ ಸಭೆಯ ಅಧ್ಯಕ್ಷಿಯಾದ, ಕರ್ತನ ಸಹೋದರನೆಂಬ ಯಾಕ್ಯಾಬನು ೬೨ನೆ ವರು

ಷದಲ್ಲಿ ಸತ್ತು ಪೌಾದ್ದರಿಂದ, ಅವನ ಪತ್ರಿಕೆಯು ಅದಕ್ಕಿಂತ ಮುಂಚಿತವಾಗಿ ರಚಿತವಾಯಿತೆಂಬದು ನಿಶ್ಚಯವಾಗಿದೆ. ಒಂದು ವೇಳೆ ಪೌಲನು ಯಾಕಾೀಬನ ಮರಣಾದಿಂದಲೂ, ಆ ಕಾಲದಲ್ಲಿ ಪುಟ್ಟಿದ ಹಿಂಸೆಗಳಿಂದಲೂ, ದುಃಖಾಕ್ರಾಂತರಾದ ಇಬ್ರಿಯರೆಂಬ ಪಲೆಸ್ತೀನದೇಶದವರಾದ ಯೆಹೂದಕ್ರೈಸ್ತರನ್ನು ವಿಶ್ವಾಸದಲ್ಲಿ ದೃಢ ಪಡಿಸುವ ಬಗ್ಗೆ ಇಬ್ರಿಯರ ಪತ್ರಿಕೆಯನ್ನು ಬರದನು.

ಪೌಲನು ಇಬ್ರಿಯರ ಪತ್ರಿಕೆಯ ಅಂತ್ಯದಲ್ಲಿ ಸೂಚಿಸಿದ ಪ್ರಯಾಣಾಲಾೀಚನೆಯನ್ನು ನೆರವೇರಿಸುವದಕ್ಕೆ ಏನೂ ಅಡ್ಡಿ ಇರಲಿಲ್ಲ. ಅವನು ರಾೀಮಪುರದ ಬಂಧನದಿಂದ ಬಿಡುಗಡೆಯಾದನಂತರ ಮೂಪಣ ದೇಶಸಂಚಾರ ಮಾಡಿದನೆಂದು, ಪೂರ್ವ ಸಭಾಚರಿತ್ರಗ್ರಂಥಗಳಲ್ಲಿ ಸೂಚಿತವಾಗಿದೆ. ಕಾಲಾ. ಳ, ೧೦ರ ಪ್ರಕಾರ ಮರ್ಕನು ಪ್ರಥಮ ಬಂಧನಕಾಲದಲ್ಲಿ ಪೌಲನ ಸಂಗಡಲಿದ್ದನು; ೧ ಪೇತ್ರ. ೫, ೧೩ರ ಪ್ರಕಾರ ತದನಂತರ ಪೇತ್ರನ ಸಂಗಡ ಬಬುಲಾೀನಲ್ಲಿದ್ದನು. ಆದ್ದರಿಂದ ಮರ್ಕನು ಪೌಲನ ಜಾತಿಯಲ್ಲಿ ಮೂಡಣ ದೇಶಗಳಿಗೆ ಪೌಾೀಗಿ, ಬಬುಲಾೀನವಲ್ಲಿದ್ದ ಪೇತ್ರನನ್ನು ಕಲತು ಕಾಂಡನೆಂದು ತಾೀರುತ್ತದೆ. ಪೌಲನು ಸುರ್ಯದೇಶಕ್ಕೆ ಪೌಾೀಗಿ, ಇಬ್ರಿಯರ ದರ್ಶನ ಮಾಡಿದ ಮೇಲೆ, ಕ್ರೇತದ್ವೀಪಕ್ಕೆ ಪಯಣ ಮಾಡಿ, ಅಲ್ಲಿ ತೀತನನ್ನು ಅಧ್ಯಕ್ಷಿಯಾಗಿ ಇಟ್ಟು ಕಾಂಡು, ಮತ್ತು ಎಫೆಸಕ್ಕೆ ಪೌಾೀಗಿ, ಪೂರ್ವ ವೃತ್ತಿಯ ಸ್ಥಳವಾದ ಆ ಪಟ್ಟಣದಲ್ಲಿ ಸ್ವಲ್ಪ ಕಾಲ ತಂಗಿ, ತಿರಿಗಿ ಪ್ರಯಾಣಕ್ಕೆ ಪೌಾರಟಾಗ, ತಿಮೊಥೆಯನನ್ನು ಅಲ್ಲಿ ಬಿಟ್ಟನೆಂಬ ಗಣನೆಗೆ ಮೊದಲನೆ ತಿಮೊಥೆಯನ ಪತ್ರಿಕೆಯಲ್ಲಿಯೂ ಸ. ೧, ೩; ೩, ೧೪. ತೀತನ ಪತ್ರಿಕೆಯಲ್ಲಿಯೂ ಸ. ೧, ೫; ೩, ೧೨. ಕಾಣುವ ಚಿನ್ಹೆಗಳು ಚನ್ನಾಗಿ ಒಪ್ಪುತ್ತವೆ. ಕ್ರೇತದ್ವೀಪದ ಸಭೆಯಲ್ಲಿ ಅಧ್ಯಕ್ಷಿಯಾದ ತೀತನಿಗೆ ಪೌಲನು ತೀತನ ಪತ್ರಿಕೆಯಂಬದನ್ನು ಎಫೆಸದಲ್ಲಿ ತಂಗಿದ ಕಾಲದಾಳಗೆ ಬರದಿರಬಹುದು. ಆದರೆ ತೀತ. ೩, ೧೨ಲ್ಲಿ ನಿಕಾಪಾಲಿಯಲ್ಲಿ ಹಿಮಕಾಲ ಕಳಿಯುವ ಆಲಾೀಚನೆಯು ಸೂಚಿತವಾಗಿರುವದರಿಂದಲೂ, ೧ ತಿಮೊ. ೩, ೧೪; ೪, ೧೨ಲ್ಲಿ ಪೌಲನು ಸ್ವಲ್ಪ ಕಾಲದ ಮೇಲೆ ಎಫೆಸಕ್ಕೆ ತಿರಿಗಿ ಕಾಂಡನೆಂದು ಕಾಣುವದರಿಂದಲೂ, ಅದು ಇತ್ತಲಾಗಿ ರಚಿತವಾಯಿತೆಂದು ನೆನಸುವದು ವಾಸಿ.

ಆಸ್ಯದಲ್ಲಿದ್ದ ಸಭೆಗಳ ಸ್ಥಿತಿಗತಿಗಳನ್ನು ತಿಳಿದು ಕಾಂಡನಂತರ, ಮಕೆದಾನ್ಯದ ಸಭೆಗಳನ್ನು ಸಹ ವಿಚಾರಿಸಬೇಕೆಂದು ಪೌಲನು ಎಫೆಸದಿಂದ ಪೌಾರಟು, ಪೂರ್ವ ಪ್ರಯಾಣದ ಮಾರ್ಗದಿಂದ ತ್ರಾಯಕ್ಕೆ ಪೌಾೀಗಿ, ಅಲ್ಲಿ ಯಾವದಾಂದಾೀ ಕಾರಣದಿಂದ ತನ್ನಲ್ಲಿದ್ದ ಗ್ರಂಥಗಳನ್ನೂ ಒಂದು ಕಂಬಳಿಯನ್ನೂ ಬಿಟ್ಟು, (ಈ ಸಂಗತಿ ಮಕೆದಾನ್ಯದಿಂದ ಹಿಂತಿರಿಗಿದ ಪಯಣಕ್ಕೆ ಸಹ ಶೇರಿಸಬಹುದು.) ೨ ತಿಮೊ. ೪, ೧೨. ೨೦. ಮಕೆದಾನ್ಯದ ಸಭೆಗಳ ದರ್ಶನ ಮಾಡಿ, ತಿರಿಗಿ ಎಫೆಸಕ್ಕೆ ಬಂದು, ಮಿಲೇತ ಕಾರಿಂಥಗಳ ಮಾರ್ಗವಾಗಿ ನಿಕಾಪಾಲಿಗೆ ಬಂದು, ಅಲ್ಲಿಂದ ವಸಂತ ಕಾಲದಲ್ಲಿ ಇತಲಿಯ ದೇಶಕ್ಕೆ ಸಮುದ್ರಮಾರ್ಗವಾಗಿ ಪೌಾೀದನು. ಅಲ್ಲಿಂದ ಹಿಸ್ಪನ್ಯಕ್ಕೆ ಪೌಾೀಗಿ, ಪೂರ್ವಾಲಾೀಚನೆಯ ಪ್ರಕಾರ (ರಾೀಮಾ. ೧೫, ೨೪.) ಸುವಾರ್ತೆಯನ್ನು ಸಾರಿದನಾೀ, ಪೂರ್ವ ಸುದ್ದಿಯ ಪ್ರಕಾರ ಅಂಗ್ಲದ್ವೀಪಕ್ಕೆ ಸಹ ಪಯಣ ಮಾಡಿದನಾೀ ಏನಾೀ ನಿಶ್ಚಯವಾಗಿರುವದಿಲ್ಲ. ಪೌಾಗಾದರೂ ಪೌಲನು ಪಶ್ಚಿಮ ದೇಶಗಳಿಗೆ ತಿರಿಗಿ ಬಂದ ಸ್ವಲ್ಪ ಕಾಲದಾಳಗೆ ಎರಡನೆ ಸಾರಿ ಶೆರೆಯಲ್ಲಿ ಬಿದ್ದನು.

ಪೌಲನು ಮೂಡಣ ದೇಶಗಳ ಸಭೆಗಳನ್ನು ಬಿಟ್ಟನಂತರ, ಅಪಾಸ್ತಲನಾವ ಪೇತ್ರನು ಆ ಕಡೆಯ ಸಭೆಯವರನ್ನು ವಿಶ್ವಾಸದಲ್ಲಿ ದೃಢ ಪಡಿಸುವದಕ್ಕಾಗಿ ಸಣ್ಣ ಆಸ್ಯದ ಪಟ್ಟಣಗಳಲ್ಲಿ ಅಲ್ಲಲ್ಲಿ ಸ್ಥಾಪಿತವಾದ ಸಭೆಗಳಿಗೆ ಬಬುಲಾೀನದಿಂದ ಮೊದಲನೆ ಪತ್ರಿಕೆಯನ್ನು ಬರದು ಕಳುಹಿಸಿದನು.

ಎರಡನೆ ಬಂಧನದಲ್ಲಿ ಸಿಕ್ಕಿ ಕಾಂಡ ಪೌಲನು, ಜೀವದ ಅಂತ್ಯವು ಸಮೀಪವಾಯಿತೆಂದು ತಿಳಿದು, ಎಫೆಸದಲ್ಲಿರುವ ತಿಮೊಥೆಯನಿಗೆ ಎರಡನೆ ಪತ್ರಿಕೆಯನ್ನು ಬರದು, ತಾನು ಸಾಯುವದಕ್ಕಿಂತ ಮುಂಚೆ ಇನ್ನಾಂದಾವರ್ತಿ ತನ್ನ ಬಳಿಗೆ ಬರ ಬೇಕೆಂತಲೂ, ಮರ್ಕನನ್ನು ಸಹಕರದು ಕಾಂಡು ಬರ ಬೇಕೆಂತಲೂ, ಪ್ರಾರ್ಥಿಸುತ್ತಾನೆ. ಪೇತ್ರನು ಸಹ ಮರ್ಕನ ಸಂಗಡ ರೋಮಪುರಕ್ಕೆ ಬಂದು, ಕೆಲವು ಕಾಲ ಪೌಲನ ಸಂಗಡಲಿದ್ದನೆಂದು ಪೂರ್ವಸುದ್ದಿಯುಂಟು.

ಪೇತ್ರನು ಮರಣಕಾಲ ಬಂತೆಂದು ತಿಳಿದು ೨ ಪೇತ್ರ. ೧, ೧೪., ಆಸ್ಯದ ಸಭೆಗಳಿಗೆ ಎರಡನೆ ಪತ್ರಿಕೆಯನ್ನು ಅನುಜ್ಞಾಪತ್ರವಾಗಿ ಬರದು, ವಿಶೇಷವಾಗಿ ಬಾಧೆನೆಯಲ್ಲಿಯೂ ವೃತ್ತಿಯಲ್ಲಿಯೂ ಮೋಸ ಹೋಗಿ ಮೋಸ ಮಾಡುವ ದುರ್ಬೋಧಕರಿಗೆ ಎಚ್ಚರಿಕೆಯಾಗಿರ ಬೇಕೆಂದು, ಭಕ್ತರನ್ನು ಉದ್ಬೋಧಿಸುತ್ತಾನೆ. ಅದೇ ಸಭೆಯವರಿಗೆ ಯಾಕೋಬನ ತಮ್ಮನಾದ ಯೂದನು, ಎರಡನೆ ಪತ್ರಿಕೆಯಲ್ಲಿ ಪೇತ್ರನು ಮುಂತಿಳಿಸಿದ್ದು ನೆರವೇರಿದ ಮೇಲೆ, ಅದೇ ತರದ ಉದ್ಬೋಧನೆಯನ್ನು ಅಧಿಕ ಕಂಟಕಮಯ ಕಾಲೋಚಿತವಾಗಿ ಅಧಿಕ ಕಠಿಣವಾದ ರೀತಿಯಿಂದ ಜ್ಞಾಪಕ ಮಾಡಿದನು.

ಪೇತ್ರನೂ, ಪೌಲನೂ ೬೭ನೆ ವರುಷದಲ್ಲಿ ರೋಮಪುರದಲ್ಲಿ ಸತ್ತರು. ಅಪೊಸ್ತಲನಾದ ಯೋಹಾನನು ಪ್ರಥಮ ಶತಮಾನದ ಅಂತ್ಯಪರ್ಯಂತ ಎಫೆಸದಲ್ಲಿ ವಸತಿಯಾಗಿ, ಆಸ್ಯದ ಸಭೆಗಳಿಗೆ ಮಾತ್ರವಲ್ಲ, ಸರ್ವ ಕ್ರೈಸ್ತಸಭೆಗೆ ಮುಖ್ಯ ಬಾಧಕನಾಗಿ, ಅಪೊಸ್ತಲೋದ್ಯೋಗವನ್ನು ನಡಿಸುತ್ತಾ ಇದ್ದನು. ಅವನು ಕ್ರಿಸ್ತನ ಪ್ರಕಟನೆಯನ್ನೂ, ಸುವಾರ್ತೆಯನ್ನೂ, ಸುವಾರ್ತೆಗೆ ಅನುಬಂಧವಾದ ಮೂರು ಪ್ರತಿಕೆಗಳನ್ನೂ ಬರದು, ಸಭೆಯವರನ್ನು ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ ಉದ್ಧರಿಸಿ, ಭಕ್ತರನ್ನು ಪ್ರತಿ ಕ್ರೈಸ್ತರಾದ ದುರ್ಬೋಧಕರ ಮೋಸಗಳಿಗೆ ತಪ್ಪಿಸುವ ಉದ್ದಿಶ್ಯವಾಗಿ ಪ್ರಕಟ ಮಾಡಿ, ಮಕ್ಕಳೇ, ಒಬ್ಬರನ್ನೊಬ್ಬರು ಪ್ರೀತಿ ಮಾಡಿರಿ ಎಂದು ಶಿಷ್ಯರಿಗೆ ಹೇಳುತ್ತಾ, ಶ್ವಾಸವನ್ನು ಬಿಟ್ಟನು.

೨) ಸರ್ವಸಭಾಪತ್ರಿಕೆಗಳ ತಾತ್ಪರ್ಯ, ಭಾವ, ಪ್ರಯೋಗಗಳು. ಇವುಗಳಿಗೂ, ಪೌಲನ ಪತ್ರಿಕೆಗಳಿಗೂ ಇರುವ ಭೇದಾಭೇದವು.

ಪೇತ್ರನು ವಿಶ್ವಾಸಾಶೆಗಳ ಅಪೊಸ್ತಲನೆಂದು, ಯೋಹಾನನು ಪ್ರೀತಿಯ ಅಪೊಸ್ತಲನೆಂದು, ಸಾಧಾರಣವಾಗಿ ಹೆಸರ್ಗೊಂಡದ್ದು ವಿಹಿತವಾಗಿದೆ; ಯಾಕಂದರೆ: ಅವರಿಬ್ಬರು ಬರದ ಪತ್ರಿಕೆಗಳ ಅಭಿಪ್ರಾಯಗಳು ಈ ಹೆಸರುಗಳಿಗೆ ಅನುಕೂಲವಾಗಿವೆ. ಪೇತ್ರನು ಮೊದಲನೆ ಪತ್ರಿಕೆಯ ಆರಂಭದಲ್ಲಿಯೇ ಪುನರ್ಜಾತಕ್ರೈಸ್ತನ ಮಂಗಳವಾದ ಆಶಾವಿಷಯವಾದಂಥಾ, ಭಕ್ತರಿಗಾಗಿ ದಿವದಲ್ಲಿ ಇಟ್ಟಿರುವಂಥಾ ಮಹಿಮೆಯುಳ್ಳ ಬಾಧ್ಯತೆಯನ್ನು ವರ್ಣಿಸಿ, ಮೊದಲನೆ ಸಂಧಿಯಲ್ಲಿ ಯೇಸು ಕ್ರಿಸ್ತನು ಪ್ರತ್ಯಕ್ಷವಾಗುವ ದಿವಸದಲ್ಲಿ ನಮಗೆ ಪ್ರಾಪ್ತವಾಗ ತಕ್ಕ ಕೃಪೆಯ ಮೇಲೆ ಮನಃಪೂರ್ವಕವಾಗಿ ಆಶೆಯನ್ನು ಇಡ ಬೇಕೆಂದು, ಭಕ್ತರನ್ನು ಎಚ್ಚರಿಸಿ, ಎರಡನೆ ಸಂಧಿಯಲ್ಲಿ ಕ್ರಿಸ್ತನೆಂಬ ತಳಪಾಯದಲ್ಲಿ ಕಟ್ಟಿಸಿ ಕಾಳ್ಳುವ ವಿಶ್ವಾಸದ ಫಲವನ್ನು ಉದಾಹರಿಸಿ, ಅನೇಕ ಸ್ಥಳಗಳಲ್ಲಿ ಈ ವಿಶ್ವಾಸವನ್ನು ದೃಢವಾದ ತಾಳ್ಮೆಯಿಂದಲೂ ಅನೇಕ ವಿಧವಾದ ಸದಾಚಾರದಿಂದಲೂ ತೋರಿಸ ಬೇಕೆಂದು, ಉದ್ಬೋಧಿಸುತ್ತಾನೆ.

ಪ್ರೀತಿಯ ಅಪೊಸ್ತಲನೆಂಬ ಯೋಹಾನನು ಮೊದಲನೆ ಪತ್ರಿಕೆಯ ಎರಡನೆ ಸಂಧಿಯ ಐದನೆ

ವಚನದಲ್ಲಿ ಪ್ರೀತಿಯ ಬಾಧನೆಯನ್ನು ಪತ್ರಿಕಾಮುಖ್ಯಾರ್ಥವಾಗಿ ಸೂಚಿಸಿ, ೩ನೆ ಸಂಧಿಯಲ್ಲಿ ಅದನ್ನು ವಿಶೇಷವಾಗಿ ಉದಾಹರಿಸಿ, ೪ನೆ ಸಂಧಿಯಲ್ಲೆಲ್ಲಾ ವಿವರಿಸುತ್ತಾನೆ. ಅವನ ಎರಡನೆ ಮೂರನೆ ಪತ್ರಿಕೆಗಳಲ್ಲಿ ಇದೇ ಅಭಿಪ್ರಾಯವುಂಟು. ಬೆಳಕಿನಲ್ಲಿ ನಡದು ಕಾಳ್ಳುವದು, ಪರಸ್ಪರಾನ್ಯೋನ್ಯವಾಗಿರುವದು, ದೇವಜ್ಞಾನವು, ದೇವೈಕ್ಯವು ಮುಂತಾದ ಅವನ ಬಾಧನೆಗಳು ಪ್ರೀತ್ಯುದ್ಬಾಧನಾಸಂಬಂಧವಾಗಿವೆ.

ಸತ್‌ಕೃತ್ಯಗಳ ಅಪಾಸ್ತಲನೆಂಬ ಯಾಕೋಬನು ವಿಶ್ವಾಸಪುಷ್ಪಫಲವಾದ ಸತ್‌ಕೃತ್ಯಗಳ ಬಾಧನೆಯನ್ನು ವಿಶೇಷವಾಗಿ ಪ್ರಯೋಗಿಸುತ್ತಾನೆ. ಇವು ಪುಟ್ಟ ತಕ್ಕ ಮರದ ಕಾಂಬೆಗಳಾದ ದೇವ, ಕ್ರಿಸ್ತ, ಸಪೋದರ, ಪರರ ಪ್ರೀತಿಯನ್ನು ಯೋಹಾನನು ವಿಶೇಷವಾಗಿ ಬಾಧಿಸುತ್ತಾನೆ. ಈ ಮರದ ಸ್ತಂಭವೂ ಬೇರೂ ಆದ ವಿಶ್ವಾಸವನ್ನು ಸ್ಥಾಪಿಸುವದಕ್ಕೆ ಪೇತ್ರನು ಉದ್ಯುಕ್ತನಾಗಿದ್ದಾನೆ.

ವಿಶ್ವಾಸದ ಮೂಲದಿಂದ ಪುಟ್ಟುವ ಕ್ರೈಸ್ತಧರ್ಮದ ಸಿದ್ಧಿಯಾದ ಆಶೆಯ ಪ್ರಸ್ತಾಪವು ಪೇತ್ರನ ಎರಡನೆ ಪತ್ರಿಕೆಯಲ್ಲಿಯೂ, ಯೂದನ ಪತ್ರಿಕೆಯಲ್ಲಿಯೂ ಮುಖ್ಯ ವಿಷಯವಾಗಿದೆ. (ಪೌಲನು ಸಹ ಅನೇಕ ಸ್ಥಳಗಳಲ್ಲಿ ಆಶೆಯನ್ನು ಚಕ್ಕರ ವಿಶ್ವಾಸ, ಪ್ರೀತಿ, ತಾಳ್ಮೆಗಳ ಮೂಲವೆಂದು ವರ್ಣಿಸಿ, ಒಂದು ಸ್ಥಳದಲ್ಲಿ ಅದು ಕ್ರೈಸ್ತಚಿಟನ ಶಿರಸ್ತ್ರಾಣವೆಂದು ಹೇಳುತ್ತಾನೆ.) ನಿಜವಾದ ನಂಬಿಕೆಯೂ ಪ್ರೀತಿಯೂ ತಾಳ್ಮೆಯೂ ಉಳ್ಳ ಚಕ್ಕನ ಹೃದಯದಲ್ಲಿಯೇ ನಿಜವಾದ ಆಶೆಯು ಪುಟ್ಟಿ ಬೆಳೆಯ ಬಹುದು.

ಪೇತ್ರ ಯೋಹಾನ ಯಾಕೋಬ ಯೂದರು ತಮ್ಮ ತಮ್ಮ ಪತ್ರಿಕೆಗಳಲ್ಲಿ ಕ್ರೈಸ್ತಧರ್ಮಾಚಾರದ ನಾಲ್ಕು ಮೂಲಗುಣಗಳಾದ ಸತ್‌ಕೃತ್ಯಾನ್ವಿತ ವಿಶ್ವಾಸ, ಪ್ರೀತಿ, ಆಶೆ, ತಾಳ್ಮೆಗಳನ್ನು ವಿಶೇಷವಾಗಿ ಬಾಧಿಸುವ ಪ್ರಕಾರ, ಜ್ಞಾನದ ಅಪಾಸ್ತಲನೆಂಬ ಪೌಲನು ವಿಶೇಷವಾಗಿ ಜ್ಞಾನಬಾಧನಾನ್ಯುಕ್ತನಾಗಿದ್ದಾನೆ. ಇವನಲ್ಲಿ ಜ್ಞಾನಬಾಧನೆಯು, ಅವರಲ್ಲಿ ಧರ್ಮಬಾಧನೆಯು ಪ್ರಮುಖವಾಗಿದೆ. ಆದ್ದರಿಂದ ಸರ್ವ ಸಹಾ ಪತ್ರಿಕೆಗಳೆಂಬವುಗಳು ಪೌಲನ ಪತ್ರಿಕೆಗಳನಂತರ ಬರುವ ಕ್ರಮವು ಯುಕ್ತವಾದದ್ದು. ಯಾಕಂದರೆ ಧರ್ಮಬಾಧನೆಯು ಜ್ಞಾನಬಾಧನೆಯಿಂದಲೇ ಪುಟ್ಟ ಬೇಕು. ಯಾಕೋಬನು ಪೌಲನಿಗೆ ವಿರೋಧಿಯಾಗಿದ್ದಾನೆಂಬದು ಅಪ್ರಬುದ್ಧರ ವಾದವಾಗಿದೆ. ಯಾಕೋಬನು ಪೌಲೀಯ ವಿಶ್ವಾಸವನ್ನಲ್ಲ, ವ್ಯರ್ಥ ವಿಶ್ವಾಸವನ್ನೇ ಪ್ರತಿತರ್ಕಿಸುತ್ತಾನೆ.

ಸರ್ವಸಹಾಪತ್ರಿಕೆಗಳ ಆಸಕ್ತ ಪಠನವು ವಿಶ್ವಾಸ ಪ್ರೀತಿ ಆಶೆ ತಾಳ್ಮೆ ಸದಾಚಾರಗಳ ವೃದ್ಧಿಗೆ ಉಪಯೋಗವಾಗಲಿ.

ಸರ್ವಸಹಾಪತ್ರಿಕೆಗಳ ತಾತ್ಪರ್ಯಾನುಕ್ರಮಣಿಕೆಯು:

ಯಾಕೋಬನ ಪತ್ರಿಕೆ.

೧. ಉದ್ಬೋಧನಾಖ್ಯಾಗವು. ಸು. ೧, ೧—೨೫.

ಅ) ನಾನಾ ಉಪದ್ರವಗಳಲ್ಲಿ ಕ್ರೈಸ್ತನು ಕೈ ಕೊಳ್ಳ ತಕ್ಕ ನಡತೆಯು. ೧, ೨—೪.

ಇ) ಬುದ್ಧಿಯನ್ನು ಬೇಡಿ ಕೊಳ್ಳುವದು. ೧, ೫—೮.

ಉ) ದಾರಿದ್ರ್ಯೈಶ್ವರ್ಯಗಳ ವಿಷಯವಾದ ಯುಕ್ತಭಾವನೆಯು. ೧, ೯—೧೨.

ಎ) ದುರ್ವಿಷಯಶೋಧನೆಯ ವಿಷಯವಾದ ಬೋಧನೆಯು. ೧, ೧೩—೧೪.

ಏ) ಕೃಪಾಶಿಕ್ಷಾವಾಕ್ಯದ ವಿಧೇಯತ್ವವು. ೧, ೧೫—೨೧.

ಐ) ಕೇಳಿದ ವಾಕ್ಯವನ್ನು ಕೈಕೊಳ್ಳುವ ನಿಜ ದೇವಾರಾಧನೆಯು. ೧, ೨೨—೨೫.

೨. ಶಿಕ್ಷಾಖಚಿತಾಗವು. ಸು. ೧, ೨೬—೫, ೬.

ಅ) ಬಹಿರಂಗ ಮಾತ್ರದ ದೇವಾರಾಧನೆಯು. ಸು. ೧, ೨೬. ೨೭.

ಇ) ಮುಖದಾಕ್ಷಿಣ್ಯವು. ೨, ೧—೯.

ಉ) ಅಪೂರ್ಣ ನಿಯಮಾಚಾರವು. ೨, ೧೦—೧೩.

ಎ) ಕೃತ್ಯವಿಲ್ಲದ ಸತ್ತ ನಂಬಿಕೆಯು. ೨, ೧೪—೨೬.

ಏ) ಬೋಧಕೋದ್ಯೋಗಕ್ಕೆ ಅನಾಹಾತ ಪ್ರವೇಶವು. ಸು. ೩.

ಐ) ತರ್ಕ, ಜಗಳ, ಲೌಕಿಕಭಾವಗಳು. ೪, ೧—೧೦.

ಒ) ಚಾಡಿಮಾತು. ೪, ೧೧. ೧೨.

ಓ) ದೇವಪೂರ್ಣ ವಶತ್ವದ ವಿಸ್ಮೃತಿಯು. ೪, ೧೩—೧೭.

ಔ) ಐಶ್ವರ್ಯ ಭರವಸವು. ಐಶ್ವರ್ಯವಂತರು ಮಾಡುವ ಪರತಾಪವು. ೫, ೧—೬.

೩. ವಿಶೇಷಾಶ್ಚರ್ಯಾಧನಾಶ್ಚರ್ಯೋಪದೇಶಖಚಿತಾಗವು. ೫, ೭—೨೦.

ಅ) ತಾತ್ಪರ್ಯದ ಉದ್ಬೋಧನೆಯು. ೫, ೭—೧೧.

ಇ) ಪ್ರಮಾಣ ನಿಷಿದ್ಧೋದ್ಬೋಧನೆಯು. ೫, ೧೨.

ಉ) ಕ್ಷೇಮಾಕ್ಷೇಮ ಕಾಲೋಪದೇಶವು. ವ. ೧೩—೧೫.

ಎ) ಪಾಪಭಾರಪರಿಹಾರೋಪದೇಶವು. ವ. ೧೬—೧೯.

ಐ) ಪರಸ್ಪರಾತ್ಮಿಕಕ್ಷೇಮಚಿಂತೋದ್ಬೋಧನೆಯು. ವ. ೧೯. ೨೦.

ಗನೆ ಪ್ರೇಶ್ರನ ಪತ್ರಿಕೆಯು.

ವಂದನಾಕ್ತಿಯು. ೧, ೧. ೨.

ಪೀಠಿಕೆ: ಪತ್ರಿಕಾವಲೋಕಿಕರ ಕೃಪಾಸ್ಥಿತಿಯ ವಿಷಯವಾದ ಕೃತಜ್ಞಾಪನೆಯು. ೧, ೩—೧೨.

೧. ಕ್ರೈಸ್ತಕೃಪಾಸ್ಥಿತಿಯು. ೧, ೧೩—೨, ೧೦.

ಅ) ಶುದ್ಧೀಕರಣವು. ೧, ೧೩—೨೧.

ಇ) ಪ್ರೀತಿಯು. ೧, ೨೨—೨೫.

ಉ) ಕ್ರಿಸ್ತವಿಶ್ವಾಸದೃಢೀಕರಣವು. ಕ್ರಿಸ್ತನಿಗೆ ಮಾಡ ತಕ್ಕ ಯಾಜಕಸೇವೆಯು. ೨, ೧—೧೦.

೨. ಕ್ರೈಸ್ತ ಕೃಪಾಸ್ಥಿತಿಗೆ ಅನುಸಾರವಾದ ವಿಶೇಷ ಧರ್ಮವಿಧಿಗಳು. (ಗೃಹಧರ್ಮವು.) ೨, ೧೧—೫, ೯.

ಅ) ಅಕ್ರೈಸ್ತರಾದ ಪರಜನರ ವಿಷಯವಾದ ಧರ್ಮವು. ೨, ೧೧. ೧೨.

೯೪೦ ಅಪಾ. ಚ. ೫. ಪರಿಚ್ಛೇದ. ಅಪಾಸ್ತಲರ ಅಂತ್ಯಪ್ರವೃತ್ತಿ.
ಯಾಕೊ. ೧, ೧.

ಇ) ಅರಸರು ಅಧಿಕಾರಿಗಳು ಇವರ ವಿಷಯವಾದ ಧರ್ಮವು. ೨, ೧೩—೧೭.

ಉ) ಮನೇಯಜಮಾನರ ವಿಷಯವಾದ ಧರ್ಮವು. ೨, ೧೮—೨೫.

ಎ) ದಂಪತಿಗಳ ಧರ್ಮವು. ೫, ೧—೭.

ಏ) ತಮ್ಮ ಮಿತ್ರರ ವಿಷಯವಾದ ಧರ್ಮವು. ೫, ೮—೪, ೯.

ಐ) ಉದ್ಯೋಗಧರ್ಮವು. ೪, ೧೦—೫, ೪.

ಒ) ಸಭೆಯ ಮುಖ್ಯಸ್ಥರ ವಿಷಯವಾದ ಧರ್ಮವು. ೫, ೫.

ಅಂತ್ಯೋದ್ಯೋಗಪ್ರಾರ್ಥನೆಯು. ಅಂತ್ಯಾಶೀರ್ವಾದವು. ವಂದನೋಕ್ತಿಯು. ೫, ೫—೧೪.

ಯೂದನ ಚಿಕ್ಕ ಪತ್ರಿಕೆಯ ತಾತ್ಪರ್ಯವು ಅದರ ವ್ಯಾಖ್ಯಾನದಲ್ಲಿ ಕಾಣುತ್ತದೆ.

೨ನೆ ಪ್ರೇತ್ರನ ಪತ್ರಿಕೆಯು.

ವಂದನಾಕ್ತಿಯು. ೧, ೧. ೨.

ಉದ್ಬೋಧನಾಕ್ತಿಯು. ೧, ೩—೧೧.

ಬೋಧನಾಕ್ತಿಯು. ೧, ೧೨—೨೧.

ಸ್ಪರ್ಶೋಕ್ತಿಯು. ಸ. ೨.

ಪ್ರವಾದನಾಕ್ತಿಯು. ಸ. ೩.

೧ನೆ ಯೋಹಾನನ ಪತ್ರಿಕೆಯು.

೧. ಪಿತೃಪುತ್ರಾನ್ಯೋನ್ಯವು. ೧, ೧—೨, ೨.

೨. ಯೇಸುವಿನ ತಿಳುವಿಕೆಯು. ಆತನಲ್ಲಿಯೂ, ಆತನ ಮುಖಾಂತರ ದೇವರಲ್ಲಿಯೂ ಇರುವ ಐಕ್ಯವು. ೨, ೩—೧೧.

೩. ಪತ್ರಿಕಾವಲೋಕಿಕರ ಸ್ಥಿತಿಗತಿಗಳು. ೨, ೧೨—೨೮.

೪. ದೇವರಿಂದ ಪುಟ್ಟಿದವರ ದೇವಪುತ್ರತ್ವವು. ೨, ೨೯—೩, ೨೪.

೫. ಪ್ರೀತಿಯು. ಸ. ೪.

೬. ವಿಶ್ವಾಸವು. ಸ. ೫.

೨ನೆ ೩ನೆ ಯೋಹಾನನ ಪತ್ರಿಕೆಗಳ ತಾತ್ಪರ್ಯವನ್ನು ಅವುಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

ಯೆರೂಸಲೇಮಿನ ಸಭೆಯ ಅಧ್ಯಕ್ಷನಾದ ಯಾಕೋಬನ ಪತ್ರಿಕೆಯು.

ಸ. ೧.

೧. ದೇವರಿಗೂ, ಕರ್ತನಾದ ಯೇಸು ಕ್ರಿಸ್ತನಿಗೂ ೧) ದಾಸನಾದ ಯಾಕೋಬನು ಚದರಿರುವ ಹನ್ನೆರಡು ಕುಲಗಳಿಗೆ ೨) ಶುಭವಾಗಲಿ.

ಯಾಕೋ. ೧, ೨—೬.

೧. ಯೇಸು ಕ್ರಿಸ್ತನ ಪೌಸರು ಈ ಪತ್ರಿಕೆಯಲ್ಲಿ ಎರಡೇ ಸಾರಿ ಬರದದೆ. ಮತ್ತು ಎರಡು ಸಾರಿ ಅದಕ್ಕೆ ಕರ್ತನಾದ ಎಂಬದು (ಈ ಪದವು ಯೆಹೂದರಲ್ಲಿ ಯೆಹೋವನೆಂಬ ದೇವರ ಪೌಸರಾಗಿ ರೂಢಿಯಾಗಿತ್ತು.) ವಿಶೇಷಣವಾಗಿ ಶೇರಿಯದೆ. ಇದು ಯೇಸು ಕ್ರಿಸ್ತನ ಸಹೋದರನೆಂಬವನಿಗೆ ವಿಹಿತ ಪ್ರಯೋಗವಾಗಿತ್ತು. ಯಾಕಂದರೆ ಅವನು ಪೂರ್ವಾಗಾದರು ಯೇಸುವಿನ ಮನೆಯವನಾಗಿದ್ದಾಗ್ಯೂ, ಉಳಿದ ಶಿಷ್ಯರೆಲ್ಲರ ಪ್ರಕಾರ, ಆತನು ದೇವರೆಂದು ತಿಳಿದು ಭಜಿಸುತ್ತಾ ಇದ್ದನು. ಆದರೆ ಯೇಸು ಕ್ರಿಸ್ತನ ಸಹೋದರನೆಂದು ಪೌಸರ್ಗಾಂಡದರಿಂದ ಅಪಾಂಕಾರವುಳ್ಳವನಾಗಿ ಕಾಣದ ಪೂರ್ವಾಗೆ, ಆತನ ಪೌಸರನ್ನು ಪೌಚ್ಚಾಗಿ ಬರೆಯ ಮನಸ್ಸಿಲ್ಲದವನಾಗಿದ್ದನು.

೨. ಯಾಕೋಬನು ಕ್ರೈಸ್ತರಾದ ಯೆಹೂದರಿಗೆ ಈ ಪತ್ರಿಕೆಯನ್ನು ಬರದು, ಕ್ರೈಸ್ತಸಭೆಯ ವಿಶ್ವಾಸಕ್ಕೂ, ನಿಜ ಇಸ್ರಾಯೇಲನವರ ವಿಶ್ವಾಸಕ್ಕೂ ಭೇದವಿಲ್ಲವೆಂದು, ಸೂಚಿಸುವದಕ್ಕಾಗಿ ಪೂರ್ವದಲ್ಲಿ ರೂಢಿಯಾದ ಪೌಸರನ್ನು ಪ್ರಯೋಗಿಸುತ್ತಾನೆ. ಯೆಹೂದರು ರೋಮಾಯಸಾಮ್ರಾಜ್ಯದ ಎಲ್ಲಾ ದೇಶಗಳಲ್ಲಿಯೂ ವ್ಯಾಪಾರಕ್ಕಾಗಿ ವಸತಿಯಾಗಿರುತ್ತಿದ್ದರು.

೧. ಉದ್ಬೋಧನಾತ್ಮಕಾಗವು. ಸು. ೧, ೧—೨೫.

ಅ) ನಾನಾ ಉಪದ್ರವಗಳಲ್ಲಿ ಕ್ರೈಸ್ತರಿಗೆ ತಕ್ಕ ಹಾಗೆ ನಡದು ಕೊಳ್ಳಬೇಕು. ಸು. ೧, ೨—೪.

೨. ನನ್ನ ಸಹೋದರರೇ, ನಿಮ್ಮ ವಿಶ್ವಾಸದ ಪರೀಕ್ಷೆಯು ತಾಳ್ಮೆಯನ್ನು ೧) ಉಂಟು ಮಾಡುತ್ತದೆಂದು ತಿಳಿದು ೨), ೩. ನಾನಾ ಶೋಧನೆಗಳಲ್ಲಿ ೩) ಬಿದ್ದರೆ, ಪೂರ್ಣ ಸಂತೋಷವೆಂದೆಣಿಸಿರಿ ೪). ೪. ಆದರೆ ನೀವು ಸಿದ್ಧವಾದರೂ ಸಂಪೂರ್ಣರೂ ಯಾವದರಲ್ಲಿಯೂ ಕಡಿಮೆ ಇಲ್ಲದವರೂ ೫) ಆಗಿರುವ ಹಾಗೆ, ತಾಳ್ಮೆಗೆ ಸಂಪೂರ್ಣ ಕೆಲಸವಿರಲಿ.

೧. ಸಂತುಷ್ಟವಾದ ತಾಳ್ಮೆಯನ್ನು ಪುಟ್ಟಿಸುವ ವಿಶ್ವಾಸವೇ ಯಥಾರ್ಥವಾದದ್ದು. ರಕ್ಷಣಾಸಪೇಕ್ಷವಾದ ನಿಜವಾದ ವಿಶ್ವಾಸವು ಉಪದ್ರವಗಳಲ್ಲಿ ಪರೀಕ್ಷಿತವಾಗುವದೆಂದು, ಭಕ್ತರು ತಿಳಿದು, ಉಪದ್ರವಗಳಿಗೆ ಸಂತೋಷ ಪಡ ತಕ್ಕದ್ದು.

೨. ಈ ತಿಳುವಿಕೆಯು ಸತ್ಯವಾದ ಭಕ್ತಿಯುಳ್ಳವರಲ್ಲಿಯೇ ದೃಢವಾಗಿದೆ. ಈ ತಾತ್ಪರ್ಯವನ್ನು ಅಪಾಸ್ತಲನಾದ ಪೌಲನು ರೋಮಾ. ೫, ೧—೫ರಲ್ಲಿ ಚನ್ನಾಗಿ ಉದಾಹರಿಸುತ್ತಾನೆ.

೩. ಇಯ್ಯೋಬ. ೫, ೧೯ರಲ್ಲಿ ಬರದದ್ದನ್ನು ಬಲ್ಲವನಾದ ಭಕ್ತನು ಎಲ್ಲಾ ಉಪದ್ರವಗಳನ್ನು ಸಹಿಸಶಕ್ತನಾಗಿದ್ದಾನೆ.

೪. ಈ ಗುಣದ ಉತ್ತಮವಾದ ಮಾದ್ರಿಯು ಅಪಾಸ್ತಲನಾದ ಪೌಲನಲ್ಲಿ ತೋರುತ್ತದೆ. ಫಿಲಿ. ೧, ೧೮. ೨೬—೨೯; ೨, ೭. ೧೮; ೩, ೧; ೪, ೪.

೫. ತಾಳುವವನು ಬಾಳ್ವನು ಎಂಬುವದು ಯಾಕೋಬನ ಮನಸ್ಸಿಗೆ ವಿಹಿತವಾದದ್ದು. ಕಡೆಗೂ ಸ್ಥಿರವಾದ ತಾಳ್ಮೆಯೇ ನಿಜವಾದದ್ದು.

ಇ) ಬುದ್ಧಿಯನ್ನು ದೇವರಿಂದ ಬೇಡಿ ಕೊಳ್ಳಬೇಕು. ವ. ೫—೮.

೫. ಆದರೆ ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ೧), ಹಂಗಿಸದೆ ೨) ಎಲ್ಲರಿಗೂ ಉಚಿತವಾಗಿ ಕೊಡುವ ೩) ದೇವರ ಹತ್ತರ ಬೇಡಿ ಕೊಳ್ಳಲಿ; ಆಗ ಅವನಿಗೆ ಕೊಡಲ್ಪಡುವದು. ೬. ಆದರೆ ಏನೂ ಸಂದೇಹ ಪಡದೆ, ವಿಶ್ವಾಸವಾಗಿ

೯೪೨ ಅಪೌ. ಚ. ೫. ಪರಿಚ್ಛೇದ. ಅಪೌಸ್ತಲರ ಅಂಶ(ಪ್ರವೃತ್ತಿ.
ಯಾಕೌ. ೧, ೭—೧೨.

ಬೇಡಿ ಕೊಳ್ಳಲಿ; ಯಾಕಂದರೆ ಸಂದೇಹ ಪಡುವವನು ಘಾಳಿಯಿಂದ ಬಡಿಯಲ್ಪಟ್ಟು ಕದಲುವ ಸಮುದ್ರದ ತೆರೆಗೆ ಸಮಾನನಾಗಿದ್ದಾನೆ ೪). ೭. ಆ ಮನುಷ್ಯನು ಕರ್ತನಿಂದ ಏನಾದರೂ ಹೊಂದುವೆನೆಂದು ನೆನಸದಿರಲಿ. ೮. ಎರಡು ಮನಸ್ಸುಳ್ಳವನು ತನ್ನ ಸಕಲ ಮಾರ್ಗಗಳಲ್ಲಿ ಚಂಚಲನಾಗಿದ್ದಾನೆ.

೬. ಅಂದರೆ, ಋಕ್ತನಿಗೆ ಸಂಪೂರ್ಣವಾದ ತಾಳ್ಮೆಯು ಇರ ಬೇಕೆಂಬದನ್ನು ಚನ್ನಾಗಿ ತಿಳಿಯದೇ ಇದ್ದರೆ, ಇದರಿಂದ ಯಾಕೋಬನು, ನಿಜ ವಿಶ್ವಾಸವು ನಿಜ ಜ್ಞಾನಾನ್ವಿತವಾದದ್ದೆಂದು, ಸೂಚಿಸುತ್ತಾನೆ.

೭. ಇಲ್ಲಿ ಬರುವ ಗ್ರೀಕ ಪದಕ್ಕೆ "ನಿಂದಿಸದೆ" ಎಂಬ ಅಭಿಪ್ರಾಯವಿದೆ. ಕನ್ನಡದಲ್ಲಿ ರೂಢಿಯಾದ ಪೂಂಗಿಸುವದೆಂಬ ಪದವು ಈ ಸ್ಥಳಕ್ಕೆ ತಕ್ಕ ಅರ್ಥವನ್ನು ಸೂಚಿಸುತ್ತದೆ.

೮. ಈ ಮಾತಿಗೆ ಯೇಸು ಕ್ರಿಸ್ತನು (ಲೂಕ. ೧೧, ೧೩ರಲ್ಲಿಯೂ ಮತ್ತಾ. ೭, ೭. ೮. ೧೧ರಲ್ಲಿಯೂ) ಪೇಳಿದ್ದು ಆಧಾರವಾಗಿದೆ.

೪. ವಿಶ್ವಾಸರಹಿತನಾದ ಮನುಷ್ಯನ ಹೃದಯವು ಸ್ಥಿರವಾದದ್ದಲ್ಲ. ಇದಕ್ಕೆ "ದೃಢಬುದ್ಧಿ ಇಲ್ಲದವನು ಕಡು ಮೂರ್ಖನೈಯ್ಯಾ" ಎಂಬ ಪುರಂದರದಾಸನ ಮಾತು ಒಪ್ಪುತ್ತದೆ.

ಊ) ದಾರಿದ್ರ್ಯೈಶ್ವರ್ಯಗಳ ವಿಷಯವಾದ ಯುಕ್ತ ಭಾವನೆಯು. ವ. ೯—೧೭.

೯. ದೀನನಾದ ಸಹೋದರನು ೧) ತನ್ನ ದಾಡ್ಡಸ್ತಿಕೆಯಲ್ಲಿಯೂ, ಐಶ್ವರ್ಯವಂತನು ತನ್ನ ದೈನ್ಯದಲ್ಲಿಯೂ ಹೆಚ್ಚಳ ಪಡಲಿ. ೧೦. ಯಾಕಂದರೆ ಹುಲ್ಲಿನ ಹೂವಿನ ಹಾಗೆಯೇ ಕಳೆದು ಹೋಗುವನು. ೧೧. ಹೇಗಂದರೆ ಸೂರ್ಯನು ಬಿಸಲಿನೊಂದಿಗೆ ಎದ್ದು, ಹುಲ್ಲನ್ನು ಬಾಡಿಸಲಾಗಿ, ಅದರ ಹೂವು ಬಿದ್ದು, ಅದರ ಮುಖದ ಸೌಂದರ್ಯವು ನಾಶವಾಗುವದು. ಹಾಗೆಯೇ ಐಶ್ವರ್ಯವಂತನು ೨) ತನ್ನ ಹಾದಿಗಳಲ್ಲಿ ಕುಂದಿ ಹೋಗುವನು. ೧೨. ಶೋಧನೆಯನ್ನು ತಾಳಿ ಕೊಳ್ಳುವ ಮನುಷ್ಯನು ಭಾಗ್ಯವಂತನು; ಯಾಕಂದರೆ ಅವನು ಪರೀಕ್ಷಿತನಾದ ಮೇಲೆ ೩), ಕರ್ತನು ತನ್ನನ್ನು (ಪ್ರೀತಿ ಮಾಡುವವರಿಗೆ ೪) ವಾಗ್ದತ್ತ ಮಾಡಿದಂಥ ಜೀವದ ಕಿರೀಟವನ್ನು ೫) ಹೊಂದುವನು.

೯. ಉಪದ್ರವಗಳನ್ನು ಚನ್ನಾಗಿ ತಾಳುವ ದೃಢವಾದ ಮನಸ್ಸು ಬಡತನದ ಚಿಂತೆಗಳಿಂದಲೂ, ಐಶ್ವರ್ಯದ ಭೋಗಗಳಿಂದಲೂ ಕೆಡುತ್ತದೆಂದು, ಯಾಕೋಬನು ಪತ್ರಿಕಾವಲೋಕಿಕರ ಸ್ಥಿತಿಗತಿಗಳಿಗೆ (ಸ. ೨, ೧ ಇತ್ಯಾದಿ. ೪, ೧೩ ಇತ್ಯಾದಿ. ೫, ೧ ಇತ್ಯಾದಿ.) ಉಚಿತವಾದ ಪ್ರಕ್ಷಿಪ್ತಾಪ್ರಧಾನವಾಕ್ಯದಿಂದ ೯. ೧೦. ೧೧ರಲ್ಲಿ ಸೂಚಿಸುತ್ತಾನೆ. ಬಡವನಾದ ಕ್ರೈಸ್ತನು, ತಾನು ದೇವರಾಜ್ಯಮಹಿಮಾಬಾಧ್ಯಸ್ಥನೆಂಬುವದನ್ನು ಮರೆಯದೆ, ವಿಶ್ವಾಸಧೈರ್ಯವನ್ನು ಕೈಕಾಳ್ಳಬೇಕು.

೧೦. ಕೃಪೆಯಿಲ್ಲದ ಐಶ್ವರ್ಯವಂತನು ಬಡವನೇ ಸರಿ. ತಾನು ಪೂರ್ಣಾಗುವಾಗ ಒಂದನ್ನಾದರೂ ಕಾಂಡು ಪೂರ್ಣಾಗಲಾರನು. "ಜಾಕೆ ತಪ್ಪಿದ ಬಳಿಕ ಅರ್ಥ ವ್ಯರ್ಥ" ಎಂದು, ಪುರಂದರದಾಸನು ಪೇ

ಳುವದು ಯುಕ್ತವೇ. ಆದರೆ ಜಾಕೆ ತಪ್ಪುವದಕ್ಕಿಂತ ಮುಂಚೆ ಸಹ ಅದು ವ್ಯರ್ಥವಾಗಿದೆ; ಯಾಕಂದರೆ ನಿಜವಾದ ಸಂತುಷ್ಟಿಯು ಅದರಿಂದ ಪುಟ್ಟುವದಿಲ್ಲ.

೩. ಅಂದರೆ, ಕಡೆಪರೆಗೂ ತಾಳಿಸಿದ ತಾಳ್ಮೆಯಿಂದ ತನ್ನ ವಿಶ್ವಾಸವನ್ನು ಪ್ರಮಾಣಿಸಿದ ಮೇಲೆ.

೪. ದೇವಪ್ರೀತಿಯು ನಿಜ ವಿಶ್ವಾಸಕ್ಕೆ ಅಚ್ಚೇದವಾಗಿದೆ. ದೇವರನ್ನು ಪ್ರೀತಿ ಮಾಡುವವರ ಪದವಿಯನ್ನು ಅಪಾಸ್ತಲನಾದ ಪೌಲನು ರೋಮಾ. ೮. ೨೮—೩೦ಲ್ಲಿಯೂ ೧ ಕೊರಿ. ೨, ೯ಲ್ಲಿಯೂ ಇದೇ ಪ್ರಕಾರ ವರ್ಣಿಸುತ್ತಾನೆ.

೫. ಕ್ರಿಸ್ತನ ಕೂಡಾ ಶ್ರಮ ಪಟ್ಟರೆ, ಕ್ರಿಸ್ತನ ಕೂಡಾ ಬಾಧ್ಯರಾಗಿದ್ದೇವೆಂದು, ಪೌಲನು ರೋಮಾ. ೮, ೧೭ಲ್ಲಿ ಬರೆಯುತ್ತಾನೆ. ೨ ತಿಮೊ. ೨, ೧೨. ಪ್ರಕ. ೫, ೧೦; ೨೦, ೬; ೨೨, ೫.

ಎ) ದುರ್ವಿಷಯಶೋಧನೆಯ ವಿಷಯವಾದ ಬೋಧನೆಯು. ವ. ೧೩—೧೮.

೧೩. ಯಾವನಾದರೂ, ಶೋಧಿಸಲ್ಪಡುವಾಗ ೧), ದೇವರಿಂದ ಶೋಧಿಸಲ್ಪಡುತ್ತೇನೆಂದು ಹೇಳದಿರಲಿ ೨). ಯಾಕಂದರೆ ದೇವರು ಕೆಟ್ಟದರಿಂದ ಶೋಧಿಸಲ್ಪಡದವನು; ತಾನೂ ಒಬ್ಬನನ್ನೂ ಶೋಧಿಸುವದಿಲ್ಲ ೩). ೧೪. ಆದರೆ ಒಬ್ಬೊಬ್ಬನು ಸ್ವಂತ ಇಚ್ಛೆಯಿಂದ ಎಳೆಯಲ್ಪಟ್ಟು, ೧೫. ಮರುಳುಗೊಂಡು, ಶೋಧಿಸಲ್ಪಡುತ್ತಾನೆ. ಆಮ್ಯೇಲೆ ಇಚ್ಛೆಯು ಗರ್ಭವನ್ನು ಧರಿಸಿಕೊಂಡು ೪), ಪಾಪವನ್ನು ಹೆರುತ್ತದೆ; ಪಾಪವು ಸಂಪೂರ್ಣವಾದ ಮ್ಯೇಲೆ, ಮರಣವನ್ನು ಹಡಿಯುತ್ತದೆ ೫). ೧೬. ನಂನ ಪ್ರಿಯ ಸಹೋದರರ್ಯೇ, ಮೋಸ ಹೋಗ ಬ್ಯೇಡಿರಿ ೬). ೧೭. ಎಲ್ಲಾ ೭) ಒಳ್ಳೇ ವರಗಳೂ, ಎಲ್ಲಾ ಸಂಪೂರ್ಣ ದಾನಗಳೂ ಮ್ಯೇಲಿನಿಂದ ಉಂಟಾಗಿ, ಬೆಳಕುಗಳ ೮) ತಂದೆಯಿಂದ ಇಳಿದು ಬರುತ್ತವೆ; ಅವನಲ್ಲಿ ಮಾರ್ಪಡುವಿಕೆಯೂ, ತಿರುಗಾಟದ ನೆರಳೂ ೯) ಇಲ್ಲ. ೧೮. ಅವನ ಸೃಷ್ಟಿಗಳಲ್ಲಿ ನಾವು ಒಂದು ಪ್ರಥಮ ಫಲವಾಗಿರುವ ಹಾಗೆ ೧೦), ಅವನು ಮನಸ್ಸು ಮಾಡಿ ೧೧), ಸತ್ಯದ ವಾಕ್ಯದಿಂದ ನಮ್ಮನ್ನು ಪಡೆದಿದ್ದಾನೆ.

೧. ಯಾಕೋಬನು ಇಲ್ಲಿ ಶ್ರಮಶೋಧನೆಯನ್ನು ಬಿಟ್ಟು, ದುರ್ವಿಷಯಶೋಧನೆಗೆ ಬರುತ್ತಾನೆಂದು, ೧೪ನೆ ವಚನದಲ್ಲಿ ತಾತ್ಪರ್ಯವಾಗುತ್ತದೆ.

೨. ಈ ಮಾತು ಸಹಜವಾದ ಬುದ್ಧಿಗೆ ವಿರೋಧವಾದದ್ದೇ ಸರಿ. ಆದರೆ ತಮ್ಮ ಪಾಪವನ್ನು ಸತ್ಯವಾಗಿ ತಿಳಿದು ಕೊಳ್ಳದೆ ಮಾನಸಾಂತರವಿಲ್ಲದವರೆಲ್ಲರು ನಾನಾ ನೆವಗಳನ್ನು ಕಲ್ಪಿಸಿ, ಕಡೆಯಲ್ಲಿ ದೇವರ ಮೇಲೆ ತಪ್ಪು ಹೊರಿಸುತ್ತಾರೆ. ಪ್ರಥಮ ಪಾಪಿಯಾದ ಆದಮನು ಇದರಲ್ಲಿಯೂ ಪಾಪಿಗಳಿಗೆಲ್ಲಾ ಮಾದ್ರಿಯಾಗಿದ್ದಾನೆ. ೧ ಮೋಶೆ. ೩, ೧೨.

೩. ಈ ಮಾತಿನ ಅಭಿಪ್ರಾಯವೇನಂದರೆ: ದೇವರು ನಿಷ್ಪಾಪಿಯಾದ್ದರಿಂದ, ಯಾರನ್ನೂ ಪಾಪಕ್ಕಾಗಿ ಶೋಧಿಸುವದಿಲ್ಲ. ಆದರೆ ಆತನು ಚಕ್ಕರ ವಿಶ್ವಾಸವನ್ನು ನಾನಾ ಪ್ರಕಾರವಾಗಿ ಪರೀಕ್ಷಿಸುತ್ತಾನೆಂಬುವದು ದೇವರ ವಾಕ್ಯದ ಅನೇಕ ಸ್ಥಳಗಳಲ್ಲಿ ಬರದದೆ.

೪. ಈ ಸಾದೃಶ್ಯ ವಾಕ್ಯದಲ್ಲಿ ದುರಿಚ್ಛೆಯು ತಾಯಿಯಂದು, ಅದನ್ನು ಪುಟ್ಟಿಸುವ ವಿಷಯವು ತಂದೆಯಂದು ಸೂಚಿತವಾಗಿದೆ.

೫. ಅಪಾಸ್ತಲನಾದ ಪೌಲನು ಇದೇ ಅಭಿಪ್ರಾ

ಯವನ್ನು ರೌಮಿ. ೬, ೨೩ಲ್ಲಿ ಬರೆಯುತ್ತಾನೆ. ೧ ಪೋಶೆ. ೨, ೧೭. ರೌಮಿ. ೫, ೧೨.

೬. ಅಂದರೆ, ದೇವರ ಮೇಲೆ ತಪ್ಪು ಪುಸ್ಕಾರಿಸ ಬೇಡಿರಿ. ಪಾಪವು ದೇವರಿಂದ ಅಲ್ಲ, ನಮ್ಮ ಸ್ವೇಛ್ಛೆಯಿಂದಲೇ ಪುಟ್ಟುತ್ತದೆ.

೭. ಪರಮೋತ್ತಮನಾದ ದೇವರಿಂದ ಬರುವಂಥಾದ್ದೆಲ್ಲಾ ಉತ್ತಮವೇ. ಇದು ೧೩ನೆ ವಚನದ ಪ್ರಮಾಣವಾಗಿದೆ.

೮. ಇದರ ಕಾರಣವನ್ನು ಯಾಕೋಬಾನನು ವಿಶೇಷವಾಗಿ ಉದಾಹರಿಸುತ್ತಾನೆ. ೧ ಯಾಕೋಬಾ. ೧, ೫. ೭. ಯಾಕೋಬಾ. ೧, ೯. ೮. ೧೨; ೧೨, ೩೫. ೩೬. ೧ ಪೋಶೆ. ೧, ೩.

೯. ಜ್ಞಾನವಾದಿಗಳು ದೇವರು ಅಂಧಕಾರಕ್ಕೂ ಮೂಲವಾಗಿದ್ದಾನೆಂದು, ಹೇಳುವ ಮಾತನ್ನು ಯಾಕೋಬನು ಇಲ್ಲಿ ನಿರಾಕರಿಸುತ್ತಾನೆ. ಈ ವಚನದ ಆರಂಭದಲ್ಲಿ ಶೇರಿದ ಗ್ರೇಕ ಪದವು ಯಾವ ಗ್ರಂಥದ ಯಥಾಕ್ತವೆಂದು ತಿಳಿಯುವದಿಲ್ಲ.

೧೦. ಇದಕ್ಕೆ ೧ ಕಾರಿ. ೧೫, ೨೦. ೨೩. ಸರಿ ನಾಡ ಬೇಕು. ಕಾಲಾ. ೧, ೧೫.

೧೧. ಅಪಾಸ್ತಲನಾದ ಪೇತ್ರನು ದೇವರ ಕರುಣೆಯು ಮೂಲಕಾರಣವಾಗಿದೆಂದು, ೧ ಪೇತ್ರ. ೧, ೩ಲ್ಲಿ ಬರೆಯುತ್ತಾನೆ.

೨) ಕೃಪಾಶಿಕ್ಷಾವಾಕ್ಯವನ್ನು ವಿಧೇಯತ್ವದಿಂದ ಅಂಗೀಕರಿಸ ಬೇಕು. ವ. ೧೯—೨೧.

೧೯. ಆದಕಾರಣ೧), ನನ್ನ ಪ್ರಿಯ ಸಹೋದರರೇ, ಪ್ರತಿ ಮನುಷ್ಯನು ಕೇಳುವದಕ್ಕೆ ಶೀಘ್ರವಾಗಿಯೂ, ಮಾತಾಡುವದಕ್ಕೆ ನಿದಾನವಾಗಿಯೂ, ಕೋಪಕ್ಕೆ ನಿದಾನವಾಗಿಯೂ, ಇರಲಿ೨). ೨೦. ಯಾಕಂದರೆ ಮನುಷ್ಯನ ಕೋಪವು ದೇವರ ನೀತಿಯನ್ನು ನಡಿಸುವದಿಲ್ಲ. ೨೧. ಆದದರಿಂದ ಸಕಲ ಮೈಲಿಗೆಯನ್ನೂ, ಕೆಟ್ಟತನದ ಅಧಿಕ್ಯವನ್ನೂ, ತೆಗೆದು ಹಾಕಿ, ನಿಮ್ಮ ಪ್ರಾಣಗಳನ್ನು ರಕ್ಷಿಸ ಸಾಮರ್ಥ್ಯವುಳ್ಳ, ಒಳ ನೆಟ್ಟ ವಾಕ್ಯವನ್ನು೩) ಶಾಂತಿಯಿಂದ ಅಂಗ್ರೀಕರಿಸಿರಿ.

೧. ಅಂದರೆ, ದೇವವಾಕ್ಯವು ಪುನರ್ಜನ್ಮದ ಮೂಲವಾಗಿರುವ ಕಾರಣ.

೨. ದೇವವಾಕ್ಯ ಶಿಕ್ಷೆಗೆ ಪ್ರತಿಕೂಲವಾದಮನುಷ್ಯನ ಸ್ವಭಾವದಿಂದ ಕೋಪವು ಸಹಜವಾಗಿ ಪುಟ್ಟುತ್ತದೆ.

೩. ಅಂದರೆ, ಹೃದಯದಲ್ಲಿ ಬೇರೂರಿದ ವಾಕ್ಯವು ಪುನರ್ಜನ್ಮದ ಹೇತುವಾಗಿದೆ. ೧ ಪೇತ್ರ. ೧, ೨೩. ೨೫.

೩) ಕೇಳಿದ ವಾಕ್ಯವನ್ನು ಕೈಕೊಳ್ಳುವದು ನಿಜ ದೇವಾರಾಧನೆಯೆಂದಾಗಿದೆ. ವ. ೨೨—೨೫.

೨೨. ಇದಲ್ಲದೆ ನಿಮ್ಮನ್ನು ನೀವೇ ಮೋಸಗೊಳಿಸಿ೧) ವಾಕ್ಯವನ್ನು ಕೇಳುವವರು ಮಾತ್ರವಲ್ಲ, ಅದನ್ನು ಮಾಡುವವರು ಆಗಿರಿ. ೨೩. ಯಾಕಂದರೆ ಯಾವನಾದರೂ ವಾಕ್ಯವನ್ನು ಮಾಡುವವನಲ್ಲ, ಕೇಳುವವನಾಗಿದ್ದರೆ, ಅವನು ತನ್ನ ಹುಟ್ಟು ಮುಖವನ್ನು ಕನ್ನಡಿಯಲ್ಲಿ ನೋಡುವ ಮನುಷ್ಯನಿಗೆ ಸಮಾನವಾಗಿದ್ದಾನೆ.

ಯಾಕೋ. ೧, ೨೪—೨, ೨.

೨೪. ಹಾಗಾದರೆ ತನ್ನನ್ನು ನಾಶಿಮಾಡಿ, ಹಾಳುಬಿದ್ದು ಹೋಗಿ, ಸಂಗಡಲೇ ತಾನು ಏನೂ ಇಲ್ಲವನೆಂದು ಮರಳಿ ಬಿಡುವನು. ೨೫. ಆದರೆ ಬಿಡುಗಡೆಯ ಸಂಪೂರ್ಣ ನಾಶನದ ಪ್ರಮಾಣದಲ್ಲಿ ೨) ಕಣ್ಣಿಟ್ಟು ನಾಶಮಾಡಿ ೩) ನೆಲೆಯಾಗಿರುವವನು ೪), ಮರೆಯುವ ಕೇಳುವವನಾಗಿರದೆ, ಕ್ರಿಯೆ ಮಾಡುವವನಾಗಿರುವದರಿಂದ, ತಾನು ಮಾಡುವದರಲ್ಲಿ ಭಾಗ್ಯವಂತನಾಗಿರುವನು ೫).

೧. ಕೇಳಿದ ವಾಕ್ಯವನ್ನು ಕೈಕಾಳ್ಜದವನು ತನ್ನನ್ನು ತಾನೇ ತಿಳಿದು ಕಾಳ್ಜದೆ, ಭಕ್ತನನ್ನಿಸಿ ಕಾಂಡರೂ, ನಿಜಭಕ್ತಿಯಿಲ್ಲದವನಾಗಿರುವದರಿಂದ ಮೋಸ ಪೂರ್ತಾಗುತ್ತಾನೆ.

೨. ಅದೇನಂದರೆ, ಸುವಾರ್ತೆಯ ವಾಕ್ಯವು. ಅದನ್ನು ಸತ್ಯವಾಗಿ ನಂಬುವವನು ಪಾಪದಿಂದಲೂ, ಶಾಪದಿಂದಲೂ ಬಿಡುಗಡೆಯಾಗುತ್ತಾನೆ. ಯೋಪೂರ್ತಾ. ೮, ೨೨. ೨೩. ೨೬. ರೋಮಾ. ೬, ೧೮. ೨೨; ೮, ೨. ಗಲ. ೫, ೧.

೩. ಅಂದರೆ, ಪೂರ್ಣವಾಗಿ ಗ್ರಹಿಸಿ ಕಾಳ್ಜುವವನು.

೪. ಈ ಸ್ಥೈರ್ಯವು ಪರಿಶುದ್ಧಾತ್ಮದಿಂದಲೇ ಪುಟ್ಟುವದು.

೫. ಇದು ೨೨ನೆ ವಚನದಲ್ಲಿ ಸೂಚಿತವಾದ ಮೋಸಕ್ಕೆ ಪ್ರತಿಕೂಲವಾದದ್ದು.

೨. ಶಿಕ್ಷಾಭಾಗವು. ಪೆ. ೧, ೨೬—೨೯, ೬.

ಅ) ಬಹಿರಂಗ ಮಾತ್ರದ ದೇವಾರಾಧನೆಯು. ಸ. ೧, ೨೬. ೨೭.

೨೬. ನಿಮ್ಮಲ್ಲಿ ಯಾವನಾದರೂ ತನ್ನ ನಾಲಿಗೆಗೆ ಕಡಿವಾಣವಿಡದೆ, ತನ್ನ ಹೃದಯವನ್ನು ಮೋಸಗಾಳ್ಜಿಸಿ, ತಾನು ಭಕ್ತನೆಂದನ್ನಿಸಿ ಕಾಂಡರೆ, ಇವನ ಭಕ್ತಿಯು ವ್ಯರ್ಥ. ೨೭. ತಂದೆಯಾದ ದೇವರ ಸನ್ನಿಧಿಯಲ್ಲಿ ಶುದ್ಧವೂ ನಿಷ್ಕಳಂಕವೂ ಆಗಿರುವ ಭಕ್ತಿಯು ಇದ್ದೇ—ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಅವರ ಉಪದ್ರವದಲ್ಲಿ ಪರಾಮರಿಸಿ, ಲೋಕದಿಂದ ತನ್ನನ್ನು ಕಳಂಕವಿಲ್ಲದೆ ಕಾಪಾಡಿ ಕಾಳ್ಜುವದೇ.

ಈ ಸ್ಥಳದಲ್ಲಿ ಕ್ರೈಸ್ತಧರ್ಮಸಾರವು ಕ್ಲಪ್ತವಾಗಿ ಹೇಳಿಯದೆ. ಅದರ ಮುಖ್ಯ ವಿಧಿಗಳು ಮೂರು: ೧) ಸಂಯಮವು. ಸ. ೩, ೧ ಇತ್ಯಾದಿ. ೨) ಲೋಕಪರಿತ್ಯಾಗವು. ೩) ಪ್ರೀತಿವೃತ್ತಿಯು.

ಇ) ಮುಖದಾಕ್ಷಿಣ್ಯ ಮಾಡಬಾರದು. ಸ. ೨, ೧—೯.

೧. ನನ್ನ ಸಹೋದರರೇ ೧), ಮಹಿಮೆಯುಳ್ಳ ನಮ್ಮ ಕರ್ತನಾಗಿರುವ ಯೇಸು ಕ್ರಿಸ್ತನ ವಿಶ್ವಾಸವನ್ನು ಮುಖದಾಕ್ಷಿಣ್ಯಗಳ ಸಂಗಡ ಇಟ್ಟು ಕಾಳ್ಜಬ್ಯಾಡಿರಿ ೨). ೨. ಹಾಗಾ

೪೪೬ ಅಪೌ. ಚ. ೫. ಪರಿಚ್ಛೇದ. ಅಪೌಸ್ತಲರ ಅಂಶ(ಪ್ರಮೃ ೫.
ಯಾಕೌ. ೨, ೫—೯.

ಗಂದರೆ ಚಿನ್ನದ ಉಂಗರ ಉಳ್ಳ ಮನುಷ್ಯನು ಮಿಂಚುವ ವಸ್ತ್ರವನ್ನು ಧರಿಸಿ ಕೊಂಡು ನಿಮ್ಮ ಸಭೆಗೆ ಬರಲು ೫), ಮತ್ತು ಬಡವನು ಮೈಲಿಗೆ ವಸ್ತ್ರವನ್ನು ೪) ಧರಿಸಿ ಕೊಂಡು ಬರಲು, ೫. ನೀವು ಮಿಂಚುವ ವಸ್ತ್ರ ಧರಿಸಿ ಕೊಂಡವನ ಮೇಲೆ ಲಕ್ಷ್ಯವಿಟ್ಟು, ಅವನಿಗೆ—ನೀವು ಸುಖವಾಗಿ ಇಲ್ಲಿ ಕೂಡು ಕೊಳ್ಳಿ! ಎಂದು ಹೇಳಿ, ಬಡವನಿಗೆ—ನೀನು ಅಲ್ಲೇ ನಿಂತುಕೊ! ೬. ಇಲ್ಲವೆ ಇಲ್ಲಿ ನನ್ನ ಪಾದ ಪೀಠದ ಹತ್ತರ ಕೂಡು ಕೊ ಅಂದರೆ, ನಿಮ್ಮಲ್ಲಿ ಪಕ್ಷಪಾತ ಮಾಡಿ ಕೊಂಡು, ದುರಾಲೋಚನೆಗಳ ನ್ಯಾಯಾಧಿಪತಿಗಳಾದಿರಲ್ಲಾ ೫)? ೭. ಕೇಳಿರಿ, ನನ್ನ ಪ್ರಿಯ ಸಹೋದರರೇ, ದೇವರು ಈ ಲೋಕದ ಬಡವರನ್ನು ವಿಶ್ವಾಸದಲ್ಲಿ ಐಶ್ವರ್ಯವಂತರಾಗಿಯೂ, ತನ್ನನ್ನು ಪ್ರೀತಿ ಮಾಡುವವರಿಗೆ ವಾಗ್ದತ್ತ ಮಾಡಿದ ರಾಜ್ಯಕ್ಕೆ ಬಾಧ್ಯಸ್ಥರಾಗಿಯೂ, ಆದು ಕೊಳ್ಳಲಿಲ್ಲವಾ ೬)? ೮. ಆದರೆ ನೀವು ಬಡವನನ್ನು ಅವಮಾನ ಮಾಡಿದ್ದೀರಿ. ಐಶ್ವರ್ಯವಂತರು ನಿಮ್ಮನ್ನು ಬಲಾತ್ಕರಿಸುತ್ತಾರಲ್ಲ? ೯. ಅವರೇ ನಿಮ್ಮನ್ನು ನ್ಯಾಯಸ್ಥಾನಗಳಿಗೆ ಎಳೆಯುತ್ತಾರಲ್ಲ? ನಿಮ್ಮ ಮೇಲೆ ಹೇಳಲ್ಪಟ್ಟ ಒಳ್ಳೇ ಹೆಸರನ್ನು ಅವರೇ ದೂಷಿಸುತ್ತಾರಲ್ಲಾ ೭)? ೧೦. ಆದರೆ, ಬರಹದ ಪ್ರಕಾರ, ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡು ಎಂಬ ರಾಜಾಜ್ಞೆಯನ್ನು ೮) ಪೂರೈಸಿದರೆ, ಚನ್ನಾಗಿ ಮಾಡುತ್ತೀರಿ; ೧೧. ಆದರೆ ಮುಖದಾಕ್ಷಿಣ್ಯ ಮಾಡಿದರೆ, ಪಾಪ ಮಾಡುತ್ತೀರಿ. ಮತ್ತು ಮೀರಿದವರಂತೆ ನ್ಯಾಯಪ್ರಮಾಣದಿಂದ ಖಂಡಿಸಲ್ಪಡುತ್ತೀರಿ.

೧. ಈ ಸಂಬೋಧನದಿಂದ ಯಾಕೋಬನು, ತದಭಿಪ್ರಾಯಾನುಕೂಲವಾಗಿ, ಕ್ರೈಸ್ತರೆಲ್ಲರೂ ಸಮಾನಾದರರಾಗಿದ್ದಾರೆಂಬುವದನ್ನು ಜ್ಞಾಪಿಸುತ್ತಾನೆ.

೨. ದೇವರ ಮಹಿಮೆಯನ್ನು ನಮಗಾಗಿ ಬಿಟ್ಟು,ಬಡ ಮನುಷ್ಯನಾಗಿ ಲೋಕದಲ್ಲಿ ಹುಟ್ಟಿಬದುಕಿದ ಕ್ರಿಸ್ತನಲ್ಲಿರುವ ನಿಜವಿಶ್ವಾಸವು ದರಿದ್ರೈಶ್ವರ್ಯ ತಾರತಮ್ಯನಾಡುವ ಲೌಕಿಕ ಮನಸ್ಸಿಗೆ ಅತ್ಯಂತವಿರುದ್ಧವಾಗಿದೆ.

೩. ಇವನು ಸಭೆಯವನಾಗಿರದೆ, ಇದ್ದಕ್ಕಿದ್ದ ಹಾಗೆ ಸಭೆಮನೆಗೆ ಬಂದವನಾಗಿ ತೋರುತ್ತಾನೆ.

೪. ಕ್ರೈಸ್ತನು ಬಡವನಾಗಿದ್ದರೂ, ತನ್ನ ವಸ್ತ್ರ ಒಗದು ಕೊಂಡು ಸಭೆಮನೆಗೆ ಬರ ತಕ್ಕದ್ದು. ಆದರೆ ಹಳೆದಾದ ಬಡಪನ ವಸ್ತ್ರವು ಐಶ್ವರ್ಯವಂತನ ನೂತನ ಶುಭ್ರವಸ್ತ್ರದ ಬಳಿಯಲ್ಲಿ ಮೈಲಿಗೆಯಾಗಿ ತೋರುವದು.

೫. ಇದರ ಅಭಿಪ್ರಾಯವೇನಂದರೆ: ದುರಾಲೋಚನೆಯುಳ್ಳ ಶಕ್ತಿಯಿಲ್ಲದ ಐಶ್ವರ್ಯವಂತನು ಉತ್ತಮನೆಂದು, ತಿಳಿದವರಾಗಿ ಕಾಣುತ್ತೀರಿ.

೬. ಲೂಕ. ೬, ೨೦. ೧ ಕೊರಿ. ೧, ೨೬. ೨೮.

೭. ಅಪೊಸ್ತಲನು ಪರಜನರಾದ ಐಶ್ವರ್ಯವಂತರನ್ನು ಇಲ್ಲಿ ಸೂಚಿಸುತ್ತಾನೆ. ಗಾದೆ. ೩೦, ೯. ೧ ಪೇತ್ರ. ೪, ೧೪; ೨, ೧೨.

೮. ಅಂದರೆ, ಪ್ರೀತಿಯಾಗಿರುವ ಸರ್ವೋನ್ನತನಾದ ಅರಸನ ನಿಯಮವು. ಆತನಲ್ಲಿ ಮುಖದಾಕ್ಷಿಣ್ಯವಿಲ್ಲ; ಆತನು ತನ್ನ ಜನರಿಗೆಲ್ಲಾ ಸ್ವಾತಂತ್ರ್ಯವನ್ನೂ, ರಾಜ್ಯಬಾಧ್ಯತೆಯನ್ನೂ ಕೊಟ್ಟು, ಮುಖದಾಕ್ಷಿಣ್ಯ ಮಾಡುವವರ ಗರ್ವವನ್ನು ಅಳಿಸುತ್ತಾನೆ.

ಯಾಕೋ. ೨, ೧೦—೧೬.

ಬ) ಅಪೂರ್ಣ ನಿಯಮಾಚಾರವು. ವ. ೧೦—೧೩.

೧೦. ಯಾಕಂದರೆ ೧) ಯಾವನಾದರೂ ಸಮಸ್ತ ನ್ಯಾಯಪ್ರಮಾಣವನ್ನು ಕೈಕೊಂಡು, ಒಂದರಲ್ಲಿ ತಪ್ಪಿದರೆ, ಸಮಸ್ತಕ್ಕೂ ಅಪರಾಧಿಯಾದನು ೨). ೧೧. ಹ್ಯಾಗಂದರೆ ವ್ಯಭಿಚಾರ ಮಾಡಬೇಡೆಂದು ಹೇಳಿದವನೇ, ಕೊಲ್ಲಬೇಡೆಂದು ಸಹ ಹೇಳಿದ್ದಾನೆ. ಹೀಗಿರಲಾಗಿ ನೀನು ವ್ಯಭಿಚಾರ ಮಾಡದವನಾಗಿ, ಕೊಂದರೆ, ನ್ಯಾಯಪ್ರಮಾಣವನ್ನು ಮೀರುವವನಾದಿ. ೧೨. ಬಿಡುಗಡೆಯ ನ್ಯಾಯಪ್ರಮಾಣದಿಂದ ನ್ಯಾಯಶಿಕ್ಷಿಕೆಯನ್ನು ಹೊಂದಲಿರುವವರಿಗೆ ೩) ಶಕ್ತ ಹಾಗೆಯೇ ಮಾತಾಡಿರಿ; ಹಾಗೆಯೇ ಮಾಡಿರಿ. ೧೩. ಯಾಕಂದರೆ ೪) ಕರುಣೆ ತೋರಿಸದವನಿಗೆ ೫) ನ್ಯಾಯಶಿಕ್ಷಿಕೆಯು ಕರುಣೆ ಇಲ್ಲದೆ ಇರುವದು; ಊದರೆ ಕರುಣೆಯು ನ್ಯಾಯಶಿಕ್ಷಿಕೆಯ ಮೇಲೆ ಹೆಚ್ಚಳ ಪಡುತ್ತದೆ.

೧. ಮುಖದಾಕ್ಷಿಣ್ಯಕ್ಕೆ ವಿರೋಧವಾದ ಸರ್ವಸಾಮಾನ್ಯ ಪ್ರೀತಿಯ ಚಾವನೆಯಿಂದ ಪೂರ್ಣ ನಿಯಮಾಚಾರವು ಅವಶ್ಯವಾದದ್ದೆಂಬ ಮಾತು ಸಹಜವಾಗಿ ಹುಟ್ಟುತ್ತದೆ. ಮುಖದಾಕ್ಷಿಣ್ಯ ಮಾಡುವವನು "ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡು" ಎಂಬ ಕಟ್ಟಳೆಯನ್ನು ಹಾಳಾಗಾದರೂ ಕೈಕಾಳ್ಳುವವನಲ್ಲ.

೨. ಗ್ರೀಕದಲ್ಲಿ ಎಲ್ಲವುಗಳ (ಎಲ್ಲಾ ಕಟ್ಟಳೆಗಳ) ರುಜುದಲ್ಲಿದ್ದಾನೆ. ಹಾಗಾದರೆ ಒಂದು ಕಟ್ಟಳೆ ಮೀರಿದ ಮನುಷ್ಯನು, ಈ ತಪ್ಪು ಮಾಡಿದವನಾಗಿದ್ದರೂ, ನಾನು ಬೇರೆ ಕಟ್ಟಳೆಗಳನ್ನು ಚನ್ನಾಗಿ ಕೈಕೊಂಡಿದ್ದೇನೆ. ನಾನು ನ್ಯಾಯಾತಿಕ್ರಾಂತ ಗುಣದವನಲ್ಲವೆಂದು ಹೇಳಿದರೆ ಸಾಲದು; ಯಾಕಂದರೆ: ನ್ಯಾಯದಲ್ಲಿ ಒಂದು ಆಜ್ಞೆಯ ಮೀರಿದವನು ಸಮಯೋಚಿತವಾಗಿ ಮತ್ತೊಂದನ್ನು ಸಹ ಮೀರುವನು. ಆದ್ದರಿಂದ ಆಜ್ಞಾತಿಕ್ರಮಿಯು ನ್ಯಾಯಾತಿಕ್ರಮಿಯಂಬುವದು ಯುಕ್ತವಾಗಿದೆ.

೩. ಅಂದರೆ, ಸುವಾರ್ತೆಯ ನ್ಯಾಯವೆಂಬ ಪ್ರೀತಿಯ ನಿಯಮಕ್ಕೆ ಒಳಗಾಗಿರುವವರಿಗೆ ಯುಕ್ತವಾದ ಗುಣವನ್ನು ನುಡಿನಡೆಯಲ್ಲಿ ತೋರಿಸ ಬೇಕೆಂದು ಅಪಾಸ್ತಲನು ಶಿಷ್ಯರನ್ನು ಎಚ್ಚರಿಸುತ್ತಾನೆ.

೪. ಈ ಅವ್ಯಯಪದದ ಪ್ರಯೋಗವೇನಂದರೆ: ಮುಖದಾಕ್ಷಿಣ್ಯವಿಲ್ಲದ ಪ್ರೀತಿಯ ಉದ್ಬೋಧನೆಯನ್ನು ಯಾರೂ ಅಸಡ್ಡೆ ಮಾಡ ಬಾರದು; ಯಾಕಂದರೆ ಅಸಡ್ಡೆ ಮಾಡುವವರಿಗೆ ಘೋರವಾದ ಶಿಕ್ಷೆಯು ಬರುತ್ತದೆ.

೫. ಇದಕ್ಕೆ ಸರಿಯಾದ ಅಭಿಪ್ರಾಯವು ಪರ್ವತ ಪ್ರಸಂಗದಲ್ಲಿ ಸ್ಪಷ್ಟವಾಗಿ ಹೇಳಿಯದೆ. ಮತ್ತಾ. ೫, ೭. ೨. ಪ್ರೀತಿಯಿಲ್ಲದವನ ಶಾಪವು. ೧ ಯೋಹಾ. ೩, ೧೪ರಲ್ಲಿ ಬರದದೆ.

ಎ) ಕೃತ್ಯವಿಲ್ಲದ ವಿಶ್ವಾಸವು ನಿರ್ಜೀವವಾದದ್ದು. ವ. ೧೪—೨೬.

೧೪. ನನ್ನ ಸಹೋದರರೇ, ಒಬ್ಬನು, ತನಗೆ ವಿಶ್ವಾಸ ಉಂಟೆಂದು ಹೇಳಿ, ಕ್ರಿಯೆಗಳಿಲ್ಲದೆ ಇದ್ದರೆ, ಪ್ರಯೋಜನವೇನು? ಆ ವಿಶ್ವಾಸವು ಅವನನ್ನು ರಕ್ಷಿಸೀತೋ? ೧೫. ಆದರೆ ಸಹೋದರನಾಗಲಿ, ಸಹೋದರಿಯಾಗಲಿ, ಬೆತ್ತಲೆಯಾಗಿಯೂ ಅನುದಿನದ ಆಹಾರದಲ್ಲಿ ಕೊರತೆ ಪಡುವವರಾಗಿಯೂ ಇರಲಾಗಿ, ೧೬. ನಿಮ್ಮಲ್ಲಿ ಒಬ್ಬನು—

ಸಮಾಧಾನವಾಗಿ ಹೋಗಿರಿ; ಬೆಂಕಿ ಕಾಸಿ ಕೊಳ್ಳಿರಿ; ತೃಪ್ತಿಯಾಗಿರಿ, ಎಂದು ಅವರಿಗೆ ಹೇಳಿ, ಶರೀರಕ್ಕೆ ಅವಶ್ಯವಾದವುಗಳನ್ನು ಕೊಡದೆ ಇದ್ದರೆ, ಪ್ರಯೋಜನವೇನು ೧)? ೧೭. ಅದೇ ಪ್ರಕಾರ ವಿಶ್ವಾಸವು, ಕ್ರಿಯೆಗಳಿಲ್ಲದ್ದಾಗಿದ್ದರೆ, ತಂನಲ್ಲಿ ಸತ್ತದ್ದಾಗಿದೆ. ೧೮. ಆದರೆ ಒಬ್ಬನು—ನಿನಗೆ ವಿಶ್ವಾಸ ಉಂಟು; ನನಗೆ ಕ್ರಿಯೆಗಳುಂಟು ೨). ಕ್ರಿಯೆಗಳಿಲ್ಲದೆ ನಿನ್ನ ವಿಶ್ವಾಸವನ್ನು ೩) ನನಗೆ ತೋರಿಸು; ಮತ್ತು ನಾನು ನನ್ನ ಕ್ರಿಯೆಗಳಿಂದ ನನ್ನ ವಿಶ್ವಾಸವನ್ನು ನಿನಗೆ ತೋರಿಸುವೆನು ೪), ಎಂದು ಹೇಳ್ವನು ೫).

೧. ನಿರರ್ಥಕವಾದದ್ದಾಗಿ ಸ್ಪಷ್ಟವಾಗಿ ತೋರುವಂಥಾ, ಕೃತ್ಯವಿಲ್ಲದ ವಿಶ್ವಾಸದ ಉದಾಪಗೊಳೆಯನ್ನು ಹೇಳಿದನಂತರ, ಯಾಕೋಬನು ೧೮ರಲ್ಲಿ ವಿಶ್ವಾಸವೂ ಕೃತ್ಯಗಳೂ ಅಚ್ಛೇದ್ಯವಾಗಿವೆಂದು ಸ್ಥಾಪಿಸಿ, ೧೯—೨೬ರಲ್ಲಿ ಕೃತ್ಯವಿಲ್ಲದ ವಿಶ್ವಾಸವು ನಿರ್ಜೀವವಾದದ್ದೆಂಬುದನ್ನು ಪ್ರಮಾಣಿಸುತ್ತಾನೆ.

೨. ಈ ಮಾತು ನಿಜ ವಿಶ್ವಾಸವುಳ್ಳವನ ಮನಸ್ಸಿಗೆ ಒಪ್ಪುತ್ತದೆ. ಅಂದರೆ, ನನ್ನ ವಿಶ್ವಾಸದ ಫಲವನ್ನು ನಿನಗೆ ತೋರಿಸುತ್ತೇನೆ; ಫಲವಿಲ್ಲದ ನಿನ್ನ ವಿಶ್ವಾಸದ ದೃಷ್ಟಾಂತವೇನು?

೩. ಅದು ಅಸಾಧ್ಯವೆಂಬ ಭಾವನೆಯು ಇಲ್ಲಿ ಅನುಕ್ತವಾಗಿದೆ.

೪. ಅಪೌಸ್ತಲನಾದ ಪೌಲನು ಫಿಲಿಪ್ಪಿಯರ ಪತ್ರಿಕೆಯಲ್ಲಿ ತನ್ನ ನಡತೆಯನ್ನು ಮಾದ್ರಿಯಾಗಿ ಸಭೆಯವರಿಗೆ ತೋರಿಸಿದ ಪ್ರಕಾರ ಫಿಲಿ. ೩, ೧೭., ಯಾಕೋಬನು ಸಹ ಯೆರೂಸಲೇಮಿನ ಸಭೆಯವರಿಗೆ ಕ್ರೈಸ್ತಧರ್ಮದಲ್ಲಿ ಅಗ್ರಗಾಮಿಯಾಗಿ ಪೌಸರ್ವಾನಿಯಾಗಿದ್ದನು.

೫. ವಿಶ್ವಾಸವನ್ನೂ, ಕೃತ್ಯಗಳನ್ನೂ ಛೇದ ಮಾಡುವವನನ್ನು ನಿರಾಕರಿಸುವದಕ್ಕೆ ಇದು ಯುಕ್ತವಾದದ್ದು.

೧೯. ದೇವರು ಒಬ್ಬನೇ ಎಂದು ನೀನು ನಂಬುತ್ತೀ; ಚೆನ್ನಾಗಿ ಮಾಡುತ್ತೀ; ದೆವ್ವಗಳು ಸಹಾ ನಡುಗಿ ನಂಬುತ್ತವೆ ೧). ೨೦. ಆದರೆ, ಓ ವ್ಯರ್ಥ ಮನುಷ್ಯನೇ ೨)! ಕ್ರಿಯೆಗಳಿಲ್ಲದ ವಿಶ್ವಾಸವು ಸತ್ತದ್ದೆಂದು ತಿಳಿಯ ನಿನಗೆ ಮನಸ್ಸುಂಟೋ? ೨೧. ನಮ್ಮ ತಂದೆಯಾದ ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಬಲಿಪೀಠದ ಮೇಲೆ ಅರ್ಪಿಸಿ ೩), ಕ್ರಿಯೆಗಳಿಂದ ನೀತಿನಿರ್ಣಯ ಪಡಲಿಲ್ಲವೋ? ೨೨. ವಿಶ್ವಾಸವು ಅವನ ಕ್ರಿಯೆಗಳ ಸಂಗಡ ಯತ್ನಿಸಿತೆಂದೂ ೪), ಕ್ರಿಯೆಗಳಿಂದ ಅವನ ವಿಶ್ವಾಸವು ಸಂಪೂರ್ಣವಾಯಿತೆಂದೂ ೫), ನೋಡುತ್ತೀ. ೨೩. ಇದಲ್ಲದೆ ಅಬ್ರಹಾಮನು ದೇವರನ್ನು ವಿಶ್ವಾಸಿಸಿದನು; ಅದು ಅವನಿಗೆ ನೀತಿ ಎಂದು ಎಣಿಸಲ್ಪಟ್ಟಿತು, ಎಂಬ ಬರಹವು ಇದ್ದೀತು ೬). ಮತ್ತು ದೇವರ ಸ್ನೇಹಿತನೆಂದು ಕರೆಯಲ್ಪಟ್ಟನು ೭). ೨೪. ಹಾಗಾದರೆ, ವಿಶ್ವಾಸ ಮಾತ್ರದಿಂದಲ್ಲ, ಕ್ರಿಯೆಗಳಿಂದ ಮನುಷ್ಯನು ನೀತಿನಿರ್ಣಯ ಪಡುತ್ತಾನೆಂದು ನೋಡುತ್ತೀರಿ ೮). ೨೫. ಅದೇ ಮೇರೆಗೆ ಸೂಳೆಯಾದ ರಹಾಬಳು ಸಹಾ ದೂತರನ್ನು ಶೋಧಿಸಿ ಕೊಂಡು, ಬೇರೆ ಮಾರ್ಗದಿಂದ ಹೊರಗೆ ಕಳು

ಯಾಕೋ. ೨, ೨೬.

ಹಿಸಿ೯), ಕ್ರಿಯೆಗಳಿಂದ ನೀತಿನಿರ್ಣಯ ಪಡಲಿಲ್ಲವೋ? ೨೬. ಹ್ಯಾಗಂದರೆ, ಆತ್ಮವಿಲ್ಲದ ಶರೀರವು ಹ್ಯಾಗೆ ಸತ್ತದ್ದಾಗಿದೆಯೋ, ಹಾಗೆಯೇ ಕ್ರಿಯೆಗಳಿಲ್ಲದ ವಿಶ್ವಾಸವು ಸತ್ತದ್ದು೧೦).

೧. ಕೃತ್ಯವಿಲ್ಲದ ವಿಶ್ವಾಸವು ಸಾಲದೆಂಬದಕ್ಕೆ ಯಾಕೋಬನು ದೆವ್ವಗಳಲ್ಲಿರುವ ವಿಶ್ವಾಸವನ್ನು ಪ್ರಮಾಣವಾಗಿ ಉದಾಹರಿಸುತ್ತಾನೆ. ಅವರು ದೇವರು ಒಬ್ಬನೇ ಎಂಬದನ್ನು ನಂಬಿದಾಗ್ಯೂ, ಆತನಿಗೆ ಸೇವೆ ಮಾಡದೆ, ವಿಶ್ವಾಸಕೃತ್ಯಗಳಿಲ್ಲದವರಾಗಿ, ನಿತ್ಯನಾಶಕ್ಕೆ ಗುರಿಯಾಗಿದ್ದಾರೆ. ಅವರು ರಕ್ಷಣಾಬಾಧ್ಯಸ್ಥರಲ್ಲ. ದೆವ್ವಗಳಲ್ಲಿರುವ ನಂಬಿಕೆಯು ಆಶಾರಹಿತವಾಗಿರುವದರಿಂದ ನಿಜವಾದ ನಂಬಿಕೆಯಲ್ಲವೆಂದು, ಹೇಳಬಹುದು. ಆದರೆ ಅವಿಧೇಯರಾದ ಮನುಷ್ಯರಲ್ಲಿಯೂ ಇರುವ ಆಶೆಯಿಲ್ಲದ ನಂಬಿಕೆಯು ಅದೇ ಪ್ರಕಾರ ನಿಜವಾದ ನಂಬಿಕೆಯಲ್ಲ.

೨. ಕೃತ್ಯಪ್ರಸಿದ್ಧವಲ್ಲದ ವಿಶ್ವಾಸವುಳ್ಳ ಮನುಷ್ಯನು ನಿಃಸತ್ವನೆಂದು ಯಾಕೋಬನು ಖಾವಿಸುತ್ತಾನೆ.

೩. ಅಬ್ರಹಾಮನ ನೀತಿಯ ಹೇತುವಾದ ಕೃತ್ಯಗಳು ವಿಶ್ವಾಸದಿಂದಲೇ ಹುಟ್ಟಿದವು. ಆ ವಿಶ್ವಾಸನಿಮಿತ್ತ ದೇವರ ನೀತಿಯು ಅಬ್ರಹಾಮನಿಗೆ ಪ್ರಾಪ್ತವಾಯಿತೆಂದು, ೧ ಮೋಶೆ. ೧೫, ೬ಲ್ಲಿ ಬರದದೆ. ಕೃತ್ಯಾನ್ವಿತವಾದ ಅಬ್ರಹಾಮನ ವಿಶ್ವಾಸವುಳ್ಳವರಿಗೆ ದೇವರ ನೀತಿಯೂ, ರಕ್ಷಣೆಯೂ ಪ್ರಾಪ್ತವಾಗುತ್ತವೆ.

೪. ನಿಜವಾದ ವಿಶ್ವಾಸವು ಕೃತ್ಯವಿಲ್ಲದ್ದಾಗಿರಲಾರದು.

೫. ಕೃತ್ಯಪ್ರಸಿದ್ಧವಲ್ಲದ ವಿಶ್ವಾಸವು ನ್ಯೂನವಾಗಿಯೂ, ಅಸತ್ಯವಾಗಿಯೂ ಅದೆ. ಅಬ್ರಹಾಮನು ಇಸಾಕನನ್ನು ಬಲಿಯಾಗಿ ಅರ್ಪಿಸುವದಕ್ಕಿಂತ ಮುಂಚಿತವಾಗಿ, ದೇವರು ಅವನನ್ನು ವಿಶ್ವಾಸದ ನಿಮಿತ್ತ ನೀತಿವಂತನೆಂತ ಎಣಿಸಿದನೆಂಬದಾಗಿ ಬರದದೆ. ಆದರೆ ಅಬ್ರಹಾಮನಲ್ಲಿದ್ದ ವಿಶ್ವಾಸವು ಪೂರ್ಣ ವಿಧೇಯತ್ವವೆಂಬ ಫಲವನ್ನು ಫಲಿಸುವಂಥಾದ್ದಾಗಿತ್ತು. ೧ ಪೇತ್ರ. ೧, ೬. ೭. ರೋಮಾ. ೫, ೩—೫; ೧೦, ೯. ೧೦.

೬. ಅಬ್ರಹಾಮನ ವಿಶ್ವಾಸವು ನಿಜವಾದದ್ದೆಂದು, ಅವನು ಕೃತ್ಯವನ್ನು ಮಾಡುವದಕ್ಕಿಂತ ಮುಂಚೆ ದೇವರು ತಿಳಿದು ಕಾಂಡದದರಿಂದ, ಇಸಾಕನನ್ನು ಬಲಿಯಾಗಿ ಅರ್ಪಿಸುವದಕ್ಕಿಂತ ಮುಂಚೆ ಅವನನ್ನು ನೀತಿವಂತನೆಂದು ಅಂಗೀಕರಿಸಿದನು.

೭. ಇದು ಯಥಾರ್ಥವಾದ ಮಾತು ಅಲ್ಲ. ಅಬ್ರಹಾಮನ ವಿಶ್ವಾಸವು ಆ ಬಲಿಯರ್ಪಣೆಯಿಂದ ಪ್ರಾಮಾಣ್ಯವಾದಂದಿನಿಂದ ಅವನ ಕೃಪಾಸ್ಥಿತಿಯು ದೃಢವಾಯಿತೆಂದು, ಸೂಚಿಸುವದಕ್ಕೆ ೨ ನಡ. ೨೦, ೭ಲ್ಲಿಯೂ ಯೆಶಾ. ೪೧, ೮ಲ್ಲಿಯೂ ಅಬ್ರಹಾಮನ ವಿಷಯವಾಗಿ ಬರದದ್ದನ್ನು ಯಾಕೋಬನು ಜ್ಞಾಪಿಸುತ್ತಾನೆ.

೮. ಅಂದರೆ, ಕೃತ್ಯವಿಲ್ಲದ ಅಸತ್ಯವಾದ ವಿಶ್ವಾಸದಿಂದಲ್ಲ, ಕೃತ್ಯಸ್ಥಿತ ಸತ್ಯವಾದ ವಿಶ್ವಾಸದಿಂದಲೇ ದೇವರ ನೀತಿಯು ಪ್ರಾಪ್ತವಾಗುವದು.

೯. ಅಪಾಸ್ತಲನು ಇಲ್ಲಿ ಸೂಚಿಸುವ ಚರಿತ್ರವು ಯೋಶುವನ ಪುಸ್ತಕದ ೨ನೆ ಸಂಧಿಯಲ್ಲಿ ಬರದದೆ. ರಹಾಬಳು ಯೆಹೋವನನ್ನು ವಿಶ್ವಾಸಿಸಿದರಿಂದ, ಅವನ ಇಕ್ಕರಾದ ಜನರನ್ನು ಸ್ವದೇಶಸ್ಥರ ಕೈಗೆ ತಪ್ಪಿಸಿದ ಕಾರಣ, ಅವಳಿಗೆ ರಕ್ಷಣೆಯು ಪ್ರಾಪ್ತವಾಯಿತು.

೧೦. ಕೃತ್ಯವಿಲ್ಲದ ವಿಶ್ವಾಸವು ಸತ್ತದ್ದು ಎಂಬದರ ಅಭಿಪ್ರಾಯವೇನಂದರೆ: ನಿಜ ವಿಶ್ವಾಸದಿಂದ ಕೃತ್ಯವು ಹುಟ್ಟದೆ ಮಾಣದು. ಆದಾಗ್ಯೂ ವಿಶ್ವಾಸ ಹುಟ್ಟಿದ ಕೂಡಲೇ ಅದರಿಂದ ಹುಟ್ಟ ತಕ್ಕ ಕೃತ್ಯವು ಪ್ರತ್ಯಕ್ಷವಾಗಲವಶ್ಯವಾಗಿರುವದಿಲ್ಲ. ವಿಶ್ವಾಸವೆಂಬ ಬೀಜವು ಕ್ಷಣದಲ್ಲಿ ಮನುಷ್ಯನ ಹೃದಯಕ್ಕೆ ಶೇರ ಬಹುದು. ಕೃತ್ಯವೆಂಬ ಮೊಳಕೆ ಗಿಡ ಮರಗಳು ಉಂಟಾಗುವದಕ್ಕೆ ಹೊತ್ತು ಹೊತ್ತಾಗುವದು ಸಹಜವಾದದ್ದು.

೮೫೦ ಅಪೌ. ಚ. ೫. ಪರಿಚ್ಛೇದ. ಅಪೌಸ್ತಲರ ಅಂಶ್ವಪ್ರವೃತ್ತಿ.

ಯಾಕೌ. ೫, ೧—೬.

೪) ಪೌಲಕೊಡ್ಯೋಗಕ್ಕೆ ಅನಾಹಾತಪ್ರವೇಶವು. ಸು. ೫.

೧. ನನ್ನ ಸಹೌದರರೇ, ನಮಗೆ ಹೆಚ್ಚಾದ ಉಜ್ಜಿ ಆಗುವದೆಂದು ತಿಳಿದು ೧), ಅನೇಕರು ಬೌಧಕರಾಗ ಬೇಡಿರಿ. ೨. ಯಾಕಂದರೆ ನಾವೆಲ್ಲರು ಬಹಳ ತಪ್ಪುತ್ತೇವೆ; ಒಬ್ಬನು ವಾಕ್ಯದಲ್ಲಿ ತಪ್ಪದೆ ಇದ್ದರೆ ೨), ಅವನು ಶರೀರಕ್ಕೆಲ್ಲ ಕಡಿವಾಣ ಹಾಕಿ ನಡಿಸ ಸಮರ್ಥನಾಗಿರುವ ಸಂಪೂರ್ಣನಾದ ೩) ಮನುಷ್ಯನಾಗಿದ್ದಾನೆ. ೩. ಇಗೋ, ಅವು ನಮಗೆ ವಿಧೇಯವಾಗುವ ಹಾಗೆ, ಕುದುರೆಗಳ ಬಾಯಿಗಳಲ್ಲಿ ಕಡಿವಾಣಗಳನು ಹಾಕಿ, ಅವುಗಳ ಶರೀರವನ್ನೆಲ್ಲಾ ತಿರುಗಿಸುತ್ತೇವೆ. ೪. ಇಗೋ, ಅಷ್ಟು ದೊಡ್ಡವುಗಳಾಗಿದ್ದು, ಬಿರು ಗಾಳಿಗಳಿಂದ ವೈಯಲ್ಪಡುವ ಹಡಗಗಳು ಸಹ ಬಹು ಸಣ್ಣ ಚುಕಾಣಿಯಿಂದ ನಡಿಸುವವನ ಮನಸ್ಸು ಬಂದಲ್ಲಿಗೆ ತಿರುಗಿಸಲ್ಪಡುತ್ತವೆ. ೫. ಅದೇ ಪ್ರಕಾರ ನಾಲಿಗೆ ಸಣ್ಣ ಅಂಗವಾಗಿದೆ; ಆದರೆ ತನ್ನನ್ನು ಬಹಳವಾಗಿ ಹೆಚ್ಚಿಸಿ ಕೌಳ್ಳುತ್ತದೆ ೪). ಇಗೋ ೫), ಸ್ವಲ್ಪ ಬೆಂಕಿಯು ಎಷ್ಟು ದೊಡ್ಡ ಅಡವಿಯನ್ನು ಹೊತ್ತಿಸುತ್ತದೆ. ೬. ನಾಲಿಗೆಯು ಸಹ ಬೆಂಕಿಯೂ ಅನ್ಯಾಯದ ಲೋಕವು ೬) ಆಗಿದೆ. ಹೀಗೆ ನಾಲಿಗೆಯು ಶರೀರವನ್ನೆಲ್ಲಾ ಕಳಂಕ ಮಾಡುವಂಥಾದ್ದಾಗಿಯೂ, ಜನ್ಮಚಕ್ರವನ್ನು ೭) ದಹಿಸುವಂಥಾದ್ದಾಗಿಯೂ, ನರಕದಿಂದ ೮) ದಹಿಸಲ್ಪಡುವಂಥಾದ್ದಾಗಿಯೂ, ನಮ್ಮ ಅಂಗಗಳೊಳಗೆ ಇರುತ್ತದೆ.

೧. ಮತ್ತಾ. ೧೨, ೩೬ಲ್ಲಿ ಬರದ ಮಾತು ನೆನಪು ಮಾಡಿ ಕಾಂಡರೆ, ಇಲ್ಲಿ ಬರದ ಅಭಿಪ್ರಾಯ ತಿಳಿಯುವದು. ತಮ್ಮ ಉದ್ಯೋಗವನ್ನು ವಿಶೇಷವಾಗಿ ಮಾತಿನಿಂದ ನಡಿಸುವ ಬೋಧಕರಿಗೆ ನಾಲಿಗೆಯಿಂದ ತಪ್ಪು ಮಾಡುವ ಕಂಟಕವು ಹೆಚ್ಚಾಗಿದೆ.

೨. ಯಾಕೋಬನು ಅಪಾಸ್ತಲರು ಸಹ ತಪ್ಪಿಲ್ಲದವರಲ್ಲವೆಂದು, ಖಂಡಿತವಾಗಿ ಹೇಳುತ್ತಾನೆ. ಯೋಹಾನನು ಸಹ ೧ ಯೋಹಾ. ೧, ಲಲ್ಲಿ ಇದೇ ಅಭಿಪ್ರಾಯವನ್ನು ಸೂಚಿಸುತ್ತಾನೆ. ಪೂರ್ಣ ನಿಷ್ಕಾಪಿಯಾದ ಯೇಸು ಕ್ರಿಸ್ತನು ಮಾತ್ರ ಮಾತಿನಲ್ಲಿಯೂ ತಪ್ಪು ಮಾಡಲಿಲ್ಲ.

೩. ನಾಲಿಗೆಯನ್ನು ಸಹ ಪೂರ್ಣವಾಗಿ ತನ್ನ ಸ್ವಾಧೀನದಲ್ಲಿ ಇಟ್ಟು ಕಾಯಿರುವ ಮನುಷ್ಯನು ಪೂರ್ಣ ಸಂಯಮವನ್ನು ಹೊಂದಿ, ಸಿದ್ಧಿಯನ್ನು ಪಡಕಾಂಡಿದ್ದಾನೆ. ಯಾಕಂದರೆ ಮಾತಿನಲ್ಲಿ ತಪ್ಪಿಲ್ಲದಿದ್ದರೆ ಬುದ್ಧಿಯಲ್ಲಿಯೂ ಹೃದಯದಲ್ಲಿಯೂ ತಪ್ಪು ಇರುವದಿಲ್ಲ.

೪. ದೇವರು ಉಚ್ಚರಿಸಿದ ವಾಕ್ಯದಿಂದ ಲೋಕ ನಿರ್ಮಾಣವುಂಟಾಯಿತು. ಮನುಷ್ಯರು ಸಾರುವ ಸುವಾರ್ತೆಯ ವಾಕ್ಯದಿಂದ ನಂಬುವವರೆಲ್ಲರಿಗೆ ರಕ್ಷಣೆಯು ಪ್ರಾಪ್ತವಾಗುತ್ತದೆ. ಸೈತಾನನು ಆದಿದ ಮಾತಿನಿಂದ ಪ್ರಥಮ ಮನುಷ್ಯರು ಮೋಸ ಹೋಗಿ, ಪಾಪದಲ್ಲಿ ಬಿದ್ದರು. ನರಜಾತಿಯ ಲೌಕಿಕವ್ಯವಹಾರಗಳಲ್ಲಿಯೂ ವಿಶೇಷ ಕಾರ್ಯಗಳು ಮಾತಿನಿಂದಲೇ ನಡೆಯುತ್ತವೆ. ಗ್ರೀಕ ಕವಿಯಾದ ಹೋಮೇರನು ಮನುಷ್ಯರಿಗೆ ನುಡಿಯುವರೆಂಬ ವಿಶೇಷಣವನ್ನು ಕಾಟ್ಟು, ವಾಗ್ಬಲವೆಂಬ ವಿಶೇಷ ಲಕ್ಷಣವುಳ್ಳ ಮನುಷ್ಯರು ಎಲ್ಲಾ ಪ್ರಾಣಿಗಳಿಗಿಂತ ಶ್ರೇಷ್ಠರೆಂದು ಸೂಚಿಸುತ್ತಾನೆ.

೫. ಅಭಿಪ್ರಾಯ ಸಂಬಂಧವೇನಂದರೆ: ಮುಂಚೆ ಹೇಳಿದ ಎರಡು ಸಾದೃಶ್ಯಗಳ ಪ್ರಕಾರ ನಾಲಿಗೆಯು

ಯಾಕ್ಕೋ. ೩, ೭—೧೨.

ಚಿಕ್ಕ ಅಂಗವಾಗಿದ್ದರೂ, ಅದು ದೊಡ್ಡ ಕಾರ್ಯವನ್ನು ಸಾಧಿಸುವದಕ್ಕೆ ಶಕ್ತವಾಗಿರುವದು ಸರಿ; ಆದರೆ ಅದರಿಂದ ಒಳ್ಳೇ ಕಾರ್ಯಗಳಲ್ಲ, ವಿಶೇಷವಾಗಿ ದುಷ್ಕಾರ್ಯಗಳೇ ಹುಟ್ಟುವದು ರೂಢಿಯಾಗಿ ಕಾಣುತ್ತದಕಟ.

೬. ಮಹಾಲೋಕಕ್ಕೆ ಸೂಕ್ಷ್ಮಲೋಕವಾಗಿರುವ ಮನುಷ್ಯನ ಜೀವದಲ್ಲಿ ನಾಲಿಗೆಯು ಸೂಕ್ಷ್ಮಲೋಕವಾಗಿರುವದೆಂದು ಸೂಚಿಸಿ, ಅದು ದೇವರ ನ್ಯಾಯಕ್ಕೆ ಅನಧೀನವಾಗಿರುವದರಿಂದ, ಅನ್ಯಾಯದ ಲೋಕವೆಂದು ಹೇಳುತ್ತಾನೆ.

೭. ಜನ್ಮಚಕ್ರವೆಂಬ ಪದದಿಂದ ಒಂದು ಮರ್ಮಬಾಧೆನೆಯು ಜಾಡೆಯಾಗಿ ಸೂಚಿತವಾಗಿದೆ. ಸರ್ವಸೃಷ್ಟಿಯಲ್ಲಿಯೂ, ಸೃಷ್ಟಿಗಿಂತ ಅತ್ಯುನ್ನತವಾದ ದೇವಮಹಿಮೆಯಲ್ಲಿಯೂ, ಜೀವಮೂಲವಾದ ಚಕ್ರಪರಿವರ್ತನ ವಿಧಿಯು ಮುಖ್ಯವಾದದ್ದೆಂದು, ದೇವರ ವಾಕ್ಯದ ಕೆಲವು ಸ್ಥಳಗಳಲ್ಲಿ ಕಾಣುತ್ತದೆ. ಕೀರ್ತ. ೭೭, ೧೯. ದನಿ. ೭, ೯. ಪ್ರಸ. ೧೨, ೨. ಪೆಸೆ. ಸ. ೧೧. ಮನುಷ್ಯಜೀವದ ಚಕ್ರಗಳಲ್ಲಿ ಪ್ರಾಣವು ಮುಖ್ಯವಾದ ಮೂಲಚಕ್ರಕ್ಕೆ ಯಾಕ್ಕೋಬನು ಜನ್ಮಚಕ್ರವೆಂದು ಪೆಸರಿಡುತ್ತಾನೆ.

೮. ದುಷ್ಟ ಮನುಷ್ಯರಿಗೂ, ಸೈತಾನನಿಗೂ ಇರುವ ಸಂಬಂಧವನ್ನು ಯೇಸುವು ಯೋಹಾ. ೮,೪೪ಲ್ಲಿ, ಯೋಹಾನನು ೧ ಯೋಹಾ. ೩, ೧೪ಲ್ಲಿ ಸೂಚಿಸುತ್ತಾರೆ. ಆದ್ದರಿಂದ ಪಾಪವು ಸೈತಾನನ ಕೃತ್ಯವೆಂದು ಬರದದೆ. ಎಫೆ. ೨, ೨. ಯೋಹಾ. ೮, ೪೪. ಎಫೆ. ೪, ೨೭; ೬, ೧೧. ಯಾಕ್ಕೋ. ೪, ೭. ೧ ಪೇತ್ರ. ೫, ೮. ೧ ಯೋಹಾ. ೩, ೮. ೧೦.

೭. ಯಾಕಂದರೆ ಮೃಗ, ಪಕ್ಷಿ, ಕ್ರಿಮಿ, ಜಲಜಂತುಗಳ ಜಾತಿಯೆಲ್ಲಾ ಮನುಷ್ಯ ಜಾತಿಯಿಂದ ಸಾಧು ಮಾಡಲ್ಪಡುತ್ತದೆ, ಮತ್ತು ಸಾಧು ಮಾಡಲ್ಪಟ್ಟಿದೆ; ೮. ಆದರೆ ನಾಲಿಗೆಯನ್ನು ಮನುಷ್ಯರಲ್ಲಿ ಯಾವನೂ ಸಾಧು ಮಾಡಲಾರನು ೧); ಅದು ಸ್ವಾಧೀನವಾಗದ ಕೇಡು; ಮರಣಕರವಾದ ವಿಷದಿಂದ ತುಂಬಿ ಅದೆ ೨). ೯. ಅದರಿಂದ ತಂದೆಯಾದ ದೇವರನ್ನು ಆಶೀರ್ವದಿಸುತ್ತೇವೆ; ಅದರಿಂದಲೇ ದೇವರ ಹೋಲಿಕೆಯ ಪ್ರಕಾರ ಹುಟ್ಟಿದ ಮನುಷ್ಯರನ್ನು ಶಪಿಸುತ್ತೇವೆ. ೧೦. ಅದೇ ಬಾಯಿಂದ ಆಶೀರ್ವಾದವೂ ಶಾಪವೂ ಹೊರಡುತ್ತವೆ. ನನ್ನ ಸಹೋದರರೇ, ಇವು ಹಾಗಿರ ಬಾರದು. ೧೧. ಬುಗ್ಗೆಯು ಒಂದೇ ಬಾಯಿಂದ ಶ್ರೀಯಂನೂ ಕಹಿಯನ್ನೂ ಹರಿಯ ಮಾಡುವದುಂಟೇ? ೧೨. ನನ್ನಸಹೋದರರೇ, ಅಂಜೂರದ ಮರವು ಆಪ್ರೈ ಕಾಯಿಗಳನ್ನೂ, ದ್ರಾಕ್ಷೆಯ ಬಳ್ಳಿಯು ಅಂಜೂರದ ಫಲಗಳನ್ನೂ, ಫಲಿಸಲಾಗುವದಾಗೆ? ಹಾಗೆಯೇ ಯಾವ ಬುಗ್ಗೆಯಾದರೂ ಉಪ್ಪು ನೀರನ್ನೂ ಶಿನೀರನ್ನೂ ಕೊಡಲಾರದು ೩).

೧. ಅಂದರೆ, ಮನುಷ್ಯರು ಪರರ ನಾಲಿಗೆಗಳನ್ನು ಸ್ವಾಧೀನ ಮಾಡಿ ಕಾಳ್ಳುವದು ಪೂರ್ಣ ಅಸಾಧ್ಯವಾಗಿದೆ. ಒಬ್ಬನು ತನ್ನ ನಾಲಿಗೆಯನ್ನು ಸ್ವಾಧೀನ ಪಡಿಸಿ ಕಾಳ್ಳುವದು ಅಪರೂಪವಾಗಿದೆ.

೨. ರೋಮಾ. ೩, ೧೩. ೧೪. ಸೈತಾನನಿಗೆ ವಶವಾದ (ಯೋಹಾ. ೮, ೪೪.) ನಾಲಿಗೆಯ ಗುಣಾಂಶ

೩. ಅಂದರೆ, ಸತ್ಯ ನೀತಿಗಳ ವಾಕ್ಯಕರಣವಾಗುವ ಉದ್ದಿಶ್ಯ ದೇವರು ನಿರ್ಮಿಸಿದ ನಾಲಿಗೆಯು ಅನೃತ ದ್ವೇಷಗಳ ಮಾತುಗಳನ್ನು ನುಡಿಯ ಬಾರದು.

೮೫೬ ಅಪೌ. ಚ. ೩. ಪರಿಚ್ಛೇದ. ಅಪೌಸ್ತಲರ ಅಂಶ(ಪ್ರಮೃ ೨೨.

ಯಾಕೌ. ೩, ೧೩—೧೭.

೧೩. ನಿಮ್ಮಲ್ಲಿ ಜ್ಞಾನಿಯೂ ಬುದ್ಧಿವಂತನೂ ಯಾವನು? ಒಳ್ಳೇ ನಡತೆಯಿಂದ ಜ್ಞಾನದ ಸಾತ್ವಿಕತ್ವದಲ್ಲಿ೧) ತನ್ನ ಕ್ರಿಯೆಗಳನ್ನು೨) ತೋರಿಸಲಿ.

೧. ಅಂದರೆ, ಸತ್ಯವಾದ ಜ್ಞಾನದಿಂದ ಪುಟ್ಟುವ ಸಾತ್ವಿಕತ್ವದಲ್ಲಿ. ಈ ಅಭಿಪ್ರಾಯವನ್ನು ಯಾಕೋಬನು ಸ. ೪, ೧೭ ಇತ್ಯಾದಿ, ಮತ್ತು ಈ ಸಂಧಿಯ ೧೪—೧೫ಲ್ಲಿ ವಿವರಿಸುತ್ತಾನೆ.

೨. ಒಳ್ಳೆ ನಡತೆಯೇ ನಿಜವಾದ ಜ್ಞಾನ ಬುದ್ಧಿಗಳ ಅನುಮಾನವಿಲ್ಲದ ಉತ್ತಮ ದೃಷ್ಟಾಂತವಾಗಿದೆ. ಳನೆ ಸಂಧಿಯ ಪ್ರಕಾರ ಈ ಪತ್ರಿಕಾವಲೋಕಿಗಳು ಈ ವಿಷಯವಾಗಿ ಸುಶೀಲರಾಗಿರಲಿಲ್ಲ.

೧೪. ಆದರೆ ಕಹಿಯಾದ ಹೊಟ್ಟೆಕಿಚ್ಚೂ ಜಗಳವೂ೧) ನಿಮ್ಮ ಹೃದಯದಲ್ಲಿದ್ದರೆ೨), ಸತ್ಯಕ್ಕೆ ವಿರೋಧವಾಗಿ ಹೆಚ್ಚಳ ಪಡದೆ, ಸುಳ್ಳಾಡದೆ, ಶಾಸ್ತ್ರಿ೩). ೧೫. ಈ ಜ್ಞಾನವು೪) ಮೇಲಿನಿಂದ ಇಳಿಯುವಂಥಾದ್ದಲ್ಲ, ಭೂಮಿಗೂ, ಪ್ರಾಣಿಸ್ವಭಾವಕ್ಕೂ೫), ದೆವ್ವಗಳಿಗೂ೬) ಸಮ್ಮಂಧವಾದದ್ದೇ. ೧೬. ಹ್ಯಾಗಂದರೆ ಹೊಟ್ಟೆಕಿಚ್ಚೂ ಜಗಳವೂ ಎಲ್ಲಿಯಿದ್ದಾ, ಅಲ್ಲಿ ಗಲಿಬಿಲಿಯೂ ಎಲ್ಲಾ ದುಷ್ಕ್ರಿಯೆಗಳೂ ಇರುವವು.

೧. ಇವು ೧೩ನೆ ವಚನದಲ್ಲಿ ಬರದ ಸಾತ್ವಿಕತ್ವಕ್ಕೆ ವಿರೋಧವಾಗಿವೆ.

೨. ನುಡಿ ನಡೆಯಿಂದ ಪ್ರಕಟವಾಗದಿದ್ದರೂ.

೩. ಅಂದರೆ, ಸತ್ಯಕ್ಕೂ ದೇವರ ವಾಕ್ಯಕ್ಕೂ ವಿರೋಧವಾಗಿ ನೀವು ಬುದ್ಧಿವಂತರೆಂದು ಅನಿಸಿ ಕಾಳ್ಳ ಬಾರದು.

೪. ಅಂದರೆ, ಪುಸ್ತಾಟ್ಟಿಕಿಚ್ಚು ಜಗಳಗಳಿಗೆ ಕೂಡಿದ ಜ್ಞಾನವು.

೫. ಮನುಷ್ಯಭಾವಜನ್ಯ ಸ್ವಂತ ಬುದ್ಧಿಯಿಂದ ಪುಟ್ಟಿದ್ದು; ಒಳ್ಳೇ ವರವೆಲ್ಲಾ ಮೇಲಿನಿಂದ ಬರುತ್ತದೆ. ಸ. ೧, ೧೭.

೬. ಇಂಥಾ ಜ್ಞಾನವು ದೆವ್ವಗಳಿಗೆ ಸಹಜವಾದದ್ದು. ಸ. ೨, ೧೯.

೧೭. ಆದರೆ ಮೇಲಿನಿಂದಾದ ಜ್ಞಾನವು೧) ಮೊದಲು ನಿರ್ಮಲವೂ, ಆ ಮೇಲೆ೨) ಸಮಾಧಾನ ಶಾಂತಿ ಸಮ್ಮತಿ ಉಳ್ಳದ್ದೂ, ಕರುಣೆಯಿಂದಲೂ ಒಳ್ಳೇ ಫಲಗಳಿಂದಲೂ ಪೂರಿತವಾದದ್ದೂ, ಮುಖದಾಕ್ಷಿಣ್ಯ/ ಕಪಟಗಳಿಲ್ಲದ್ದೂ, ಆಗಿದೆ.

೧. ಅಂದರೆ, ಪರಿಶುದ್ಧಾತ್ಮದ ಮುಖಾಂತರ ದೇವರಿಂದ ಬರುವ ಜ್ಞಾನವು ಚಕ್ತನಲ್ಲಿ ಪುಟ್ಟಿಸ ತಕ್ಕ ಸದ್ಗುಣಗಳು ಯಾವವಂದರೆ.

೨. ಮೊದಲು, ಆ ಮೇಲೆ ಎಂಬ ಪದಗಳಿಂದ ಯಾಕೋಬನು ಕ್ರೈಸ್ತಧರ್ಮದ ಸ್ವಕೀಯ ಪರಕೀಯ ಸದ್ಗುಣ ಭೇದವನ್ನು ಸೂಚಿಸುತ್ತಾನೆ. ಸ್ವಕೀಯದಲ್ಲಿ ಸಂಯಮವು ಮೂಲವಾದದ್ದು. ಅದಕ್ಕೆ ಇಲ್ಲಿ ನಿರ್ಮಲತ್ವವೆಂಬ ಪೆಸರು. ಪರಕೀಯವನ್ನು ಪೌಚ್ಚಾಗಿ ವಿವರಿಸುತ್ತಾನೆ: ೧) ಸಮಾಧಾನಪ್ರೀತಿಯು, ೨) ಪುಟಿರಹಿತವಾದ ಶಾಂತಿಯು, ೩) ಪರರನ್ನು ಸಮ್ಮತಿ ಪಡಿಸುವ ನಮ್ರತೆಯು, ೪) ನಾನಾ ವಿಧ ಪ್ರೀತಿಯ ಸೇವೆಗಳಲ್ಲಿ ಉದ್ಯುಕ್ತವಾದ ಕರುಣಾಗುಣವು, ೫) ಮುಖದಾಕ್ಷಿಣ್ಯವಿಲ್ಲದ ಸರ್ವ ಸಾಮಾನ್ಯ ಸಹೋದರ ಪ್ರೀತಿಯು, ೬) ಎರಡು ಬಗೆಯದೆ, ಕಾಟ್ಟ ಮಾತು ಮಾರದೆ ಇರುವ ಯಾಥಾರ್ಥ್ಯವು,.

ಯಾಕೋ. ೩, ೧೪—೪, ೪.

ಅಭಿಪ್ರಾಯ ಸಂಬಂಧವೇನಂದರೆ: ನಿಜಜ್ಞಾನಚಿನ್ಹೆ ಲಕ್ಷಣಗಳಿಲ್ಲದವನು ಬೋಧಕನಾಗ ಬಾರದು; ಅವುಗಳುಳ್ಳವನು ಬೋಧಕೋದ್ಯೋಗ ಮಾನದ ಹೊರ್ತು ಮತ್ತೊಂದು ಉತ್ಕೃಷ್ಟವಾದ ಫಲವುಂಟೆಂದು ತಿಳಿಯ ಬೇಕು.

೧೪. ಮಿಶ್ರ ನೀತಿಯ ಫಲವು ಸಮಾಧಾನ ಮಾಡುವವರಿಗೆ ಸಮಾಧಾನದಲ್ಲಿ ಬಿತ್ತಲ್ಪಡುತ್ತದೆ.

ಈ ಮಾತಿನ ಅಭಿಪ್ರಾಯವೇನಂದರೆ: ಸತ್ಯಜ್ಞಾನವನ್ನು ಹೊಂದಿದವರು ದೇವರ ಸಮಾಧಾನವನ್ನು ಅನುಭವಿಸಿ ಕೊಂಡು, ಸಹೋದರರ ಸಂಗಡಲೂ, ಕೈಲಾದ ಮಟ್ಟಿಗೂ ಎಲ್ಲಾ ಮನುಷ್ಯರ ಸಂಗಡಲೂ, ಸಮಾಧಾನವಾಗಿದ್ದು, ನೀತಿಸಿದ್ಧಿಯಾದ ಪ್ರೀತಿಯನ್ನು ಕೈಕೊಂಡು, ಮಹಿಮಾಸಿದ್ಧಿಗೆ ಅಧಿಕಾರಿಗಳಾಗು ತ್ತಾರೆ.

೫) ತರ್ಕ ಜಗಳ ಲೌಕಿಕಭಾವಗಳ ವಿಷಯವಾದ ಉದ್ಬೋಧನೆಯು. ಸ. ೪, ೧—೧೦.

೧. ಯುದ್ಧಗಳೂ ಜಗಳಗಳೂ ನಿಮ್ಮಲ್ಲಿ ಎಲ್ಲಿಂದ ಬರುತ್ತವೆ? ನಿಮ್ಮ ಅಂಗಗಳಲ್ಲಿ ಜಗಳಾಡುವ ನಿಮ್ಮ ಅಶೆಗಳಿಂದಲ್ಲವೋ[೧]? ೨. ನೀವು ಆಶಿಸಿ, ಹೊಂದುವದಿಲ್ಲ[೨]; ಕೊಲ್ಲುತ್ತೀರಿ[೩], ಹೊಟ್ಟೆಕಿಚ್ಚು ಪಡುತ್ತೀರಿ; ಸಂಪಾದಿಸಲಾರಿರಿ; ಹೋರಾಡಿ ಯುದ್ಧ ಮಾಡುತ್ತೀರಿ; ನೀವು ಬೇಡಿ ಕೊಳ್ಳದ ಕಾರಣ, ನಿಮಗೆ ಶಿಕ್ಕುವದಿಲ್ಲ. ೩. ಬೇಡಿ ಕೊಂಡರೂ, ನಿಮ್ಮ ಆಶೆಗಳಲ್ಲಿ ವೆಚ್ಚ ಮಾಡುವ ಹಾಗೆ, ತಪ್ಪಾಗಿ ಬೇಡಿ ಕೊಳ್ಳುವ ಕಾರಣ[೪], ನೀವು ಹೊಂದುವದಿಲ್ಲ.

೧. ಅಸಮಾಧಾನದ ಮೂಲಕಾರಣವು ಮನುಷ್ಯನ ಹೃದಯದಲ್ಲಿದೆ. ಆಂತರ್ಯದಲ್ಲಿ ಮಾಂಸವು ಆತ್ಮದ ಸಂಗಡ ಮಾಡುವ ಯುದ್ಧವೂ, ಪರಸ್ಪರ ವಿರೋಧವಾದ ದುರಾಶೆಗಳು ತಮ್ಮೊಳಗೆ ನಡಿಸುವ ಕಾಳಗವೂ, ಮನುಷ್ಯನನ್ನು ಕಾಡಿಸುವ ವೇಳೆಯಲ್ಲಿ, ಅವನು ಪರರ ಸುಖ ದುಃಖವನ್ನು ಚಿಂತಿಸಿ, ನೆರೆಹೊರೆಯವರ ಸಲಿಗೆಯಲ್ಲಿ ಸಮಾಧಾನವನ್ನು ಕೈಕೊಳ್ಳುವದು ಅಸಾಧ್ಯವಾಗಿದೆ.

೨. ಅನ್ಯಾಯಿಗಳಿಗೆ ಮಿತ್ರರು ಸಹ ಶತ್ರುಗಳಾಗುವದರಿಂದ ಅವರಿಗೆ ನಾನಾ ಪ್ರಕಾರವಾದ ನಷ್ಟ ಬರುತ್ತದೆ.

೩. ಈ ಮಾತಿನ ಅಭಿಪ್ರಾಯವನ್ನು ೧ ಯೋಹಾ. ೩, ೧೫ರ ಪ್ರಕಾರ ತಿಳಿದು ಕೊಳ್ಳ ಬೇಕು.

೪. ಬೇಡುವವರಿಗೆ ಶಿಕ್ಕುವದೆಂಬ ವಾಕ್ಯವು ದೇವರನ್ನು ನಂಬಿ, ತಂದೆಯನ್ನೂ, ಸಹೋದರರನ್ನೂ ಪ್ರೀತಿ ಮಾಡುವ, ಮಕ್ಕಳಿಗೆ ನೆರವೇರುವದೇ ಹೊರ್ತು, ದುಷ್ಟರಿಗೆ ಪ್ರಾಪ್ತವಾಗುವದಿಲ್ಲ.

೪. ಜಾರರೇ, ಜಾರೆಯರೇ[೧], ಲೋಕದ ಸ್ನೇಹವು ದೇವರಿಗೆ ಶತ್ರುತ್ವವೆಂದು ಅರಿಯರಾ? ಹಾಗಾದರೆ, ಲೋಕಕ್ಕೆ ಸ್ನೇಹಿತನಾಗ ಬೇಕೆಂಬುವವನು ದೇವರಿಗೆ ಶತ್ರುವಾಗಿದ್ದಾನೆ[೨].

ಯಾಕೌ. ೪, ೫೯—೧೦.

೧. ದೇವರಿಗೆ ವಶವಾಗ ತಕ್ಕ ಮನುಷ್ಯನು ಆತನಿಗೆ ಅವಿಧೇಯನಾಗಿ, ಆತನ ನ್ಯಾಯವನ್ನು ಮೀರುವ ದ್ರಾೞಿಯಾದರೆ, ಅವನು ಪಾತಿವ್ರತ್ಯ ಮೀರಿದ ಪೆಂಗಸಿನಂತೆ ವ್ಯಭಿಚಾರಿಯಂಬ ಸಾದೃಶ್ಯೋಕ್ತಿಯು ದೇವರ ವಾಕ್ಯದಲ್ಲಿ ಸಾಧಾರಣವಾಗಿದೆ. ಇಲ್ಲಿ ಬರದ ಮಾತನ್ನು ಇದೇ ರೀತಿಯಾಗಿ ತಿಳಿಯ ಬೇಕು. ದೇವರನ್ನು ಬಿಟ್ಟು, ಪ್ರಪಂಚಾಸಕ್ತರಲ್ಲಿ ಖೇದಕರವಾದ ದುರ್ವಿಷಯಗಳು ಪ್ರಬಲವಾಗುವದಲ್ಲದೆ, ಕಡೆಯಲ್ಲಿ ದೇವಶತ್ರುಗಳಾಗುತ್ತಾರೆ.

೨. ಪ್ರಪಂಚಾಸಕ್ತಿಯಿಂದ ಕಡೆಯಲ್ಲಿ ಈ ಅಘೋರವಾದ ನಷ್ಟ ಪುಟ್ಟುತ್ತದೆಂದು, ಆರಂಭದಲ್ಲಿಯೇ ನೆನಸ ಬೇಕು.

೪. ಇಲ್ಲವೆ ೧), ನಂಮಲ್ಲಿ ವಾಸವಾಗಿರುವ ಆತ್ಮವು ಹೊಟ್ಟೆಕಿಚ್ಚಾಗಿ ಆಶೆ ಮಾಡುತ್ತದೆಂದು ೨), ಬರಹವು ಸುಮ್ಮನೆ ಹೇೞುತ್ತದೆಂಬದಾಗಿ, ನೆನಸುತ್ತೀರಾ? ಆದರೆ ಅಧಿಕವಾದ ಕೃಪೆಯನ್ನು ೩) ಕೊಡುತ್ತಾನೆ ೪). ೬. ಆದದರಿಂದ ದೇವರು ಗರ್ವಿಷ್ಠರನ್ನು ಎದುರಿಸಿ ೫), ದೀನರಿಗೆ ೬) ಕೃಪೆಯನ್ನು ಕೊಡುತ್ತಾನೆಂದು, ಹೇೞುತ್ತದೆ ೭).

೧. ಅಪಾಸ್ತಲನು ಈಗ ಲೌಕಪ್ರೀತಿಯು ದೇವವೈರವಾಗಿರುವದನ್ನು ಬರಪಡಿಂದ, ಪೌಲನು ಗಲ. ೫, ೧೭ ಇತ್ಯಾದಿಗಳಲ್ಲಿ, ಪೇತ್ರನು ೧ ಪೇತ್ರ. ೨, ೧—೫ಲ್ಲಿ ಬರದದ್ದನ್ನು ಸೂಚಿಸಿ, ಸ್ಥಾಪಿಸುತ್ತಾನೆ.

೨. ಇದು ಗಲ. ೫, ೨೭ಕ್ಕೆ ಒಪ್ಪುತ್ತದೆ. ಪೌಟ್ಟೆಕಿಚ್ಚು ಮಾಂಸದ ದುರ್ವ್ಯಾಪಾರಗಳಲ್ಲಿ ಮುಖ್ಯವಾದ್ದರಿಂದ, ಅದು ಇಲ್ಲಿ ಅಭಿಪ್ರಾಯ ಸಂಬಂಧವೀಚಿತವಾಗಿ ಮಾಂಸವೆಂಬದಕ್ಕೆ ಪ್ರತಿಯಾಗಿ ಶೇರುತ್ತದೆ.

೩. ಪ್ರಪಂಚಾಸಕ್ತರ ಆಶೆಗಳ ವಿಷಯವಾದ ಒಡವೆಗಳಿಗಿಂತ ಕೃಪೆಯ ಒಡವೆಗಳು ಅತಿ ಶ್ಲಾಘ್ಯವಾಗಿವೆ. ಅವು ಯಾವವಂದರೆ: ಬೆಳಕು, ಜೀವವು, ಸಮಾಧಾನವು, ಇತ್ಯಾದಿ.

೪. ಕೊಡುವವನ್ಯಾರಂದರೆ: ಚಕ್ಕನ ಪ್ರುದಯದಲ್ಲಿ ಜಯವನ್ನು ಪೌಂದಿಸಿದ ಪರಿಶುದ್ಧಾತ್ಮವು.

೫. ಈ ಶಬ್ದವು ಇಲ್ಲಿ ಲೌಕಿಕ ಡಂಬಾಚಾರಾಸಕ್ತರನ್ನು ಸೂಚಿಸುತ್ತದೆ.

೬. ಲೌಕದಲ್ಲಿ ದಾಡ್ಡವರಾಗ ಬೇಕೆಂಬ ಅಭಿಲಾಷೆಯಿಲ್ಲದ ಸಾಧು ಚಕ್ತರಿಗೆ.

೭. ಇಯ್ಯೂಬ. ೨೨, ೨೯. ಮತ್ತಾ. ೨೩, ೧೨.

೭. ಹಾಗಾದರೆ, ದೇವರಿಗೆ ಒಳ ಬ್ಯಿಳಿರಿ ೧). ಪಿಶಾಚನನ್ನು ಎದುರಿಸಿರಿ ೨); ಆಗ ನಿಮ್ಮ ಬಳಿಯಿಂದ ಓಡಿ ಹೌೀಗುವನು. ೮. ದೇವರ ಸಮೀಪಕ್ಕೆ ಬನ್ನಿರಿ ೩); ಆಗ ನಿಮ್ಮ ಸಮೀಪಕ್ಕೆ ಬರುವನು ೪). ಪಾಪಿಷ್ಠರೇ, ಕೈಗಳನ್ನು ಶುಚಿ ಮಾಡಿಕೊೞ್ಳಿರಿ ೫). ಎರಡು ಮನಸ್ಸುಳ್ಳವರೇ ೬), ಹೃದಯಗಳನ್ನು ಶುದ್ಧ ಮಾಡಿಕೊೞ್ಳಿರಿ ೭). ೯. ವ್ಯಥೆ ಪಡಿರಿ, ದುಃಖ ಪಡಿರಿ, ಅೞಿರಿ; ನಿಮ್ಮ ನಗುವು ದುಃಖಕ್ಕೂ, ಸಂತೋಷವು ಕರೆಕರೆಗೂ ೮), ಬದಲಾಗಲಿ. ೧೦. ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊೞ್ಳಿರಿ ೯); ಆಗ ನಿಮ್ಮನ್ನು ಎತ್ತುವನು ೧೦).

೧. ಅಂದರೆ, ದೇವರ ಆತ್ಮದ ಶಿಕ್ಷೆಗೆ ಒಳಗಾಗಿದ್ದು, ದೇವರು ನಿಮಗೆ ಕೊಡುತ್ತಾ ಬರುವ ಅನ್ನವಸ್ತ್ರಾದಿಗಳನ್ನು ಅನುಭವಿಸಿ, ಸಂತುಷ್ಟರಾಗಿರಿ. ಈ ಸಂತುಷ್ಟಿಯೂ ಆತ್ಮಶಿಕ್ಷಾಧೀನತ್ವವೂ ಜಾತೆಯಾಗಿವೆ.

೨. ದುರ್ವಿಷಯಗಳಿಂದ ನಿಮ್ಮನ್ನು ಕೆಡಿಸುವದಕ್ಕೆ ಎತ್ತುಗಡೆ ಮಾಡುವ ಸೈತಾನನಿಗೆ ಮಾಂಸಪ್ರೇಷಿಯಾದ ಆತ್ಮದ ಬಲದಿಂದ ಎದುರು ನಿಲ್ಲಿರಿ.

೩. ಉತ್ತಮವಾದ ಕೃಪಾವರಗಳನ್ನು ಬೇಡುತ್ತಾ, ದೀನಮನಸ್ಸಿನಿಂದ ದೇವರ ಬಳಿಗೆ ತಿರುಗಿ ಕಾಳ್ಳಿರಿ.

೪. ಅರಸುವಂಗರಸುವದು ಎಂಬ ಗಾದೆಯ ಪ್ರಕಾರ, ದೇವರು ಆಸಕ್ತ ಚಕ್ತರನ್ನು ತೃಪ್ತಿ ಪಡಿಸುತ್ತಾನೆ.

೫. ಲೌಕಿಕ ವ್ಯವಹಾರಗಳಲ್ಲಿ ಕೈಹಾಕಿದರೆ, ಬೇಗ ದಾಸ್ಯ ಹುತ್ತುತ್ತದೆ.

೬. ದೇವರಿಗೂ, ಲೌಕಕ್ಕೂ ಕೂಡ ಸೇವೆ ಮಾಡ ಬೇಕೆಂದು ಎಸಗುವವರೇ!

೭. ದುರ್ವಿಷಯ ಪರಿತ್ಯಾಗದಿಂದ.

೮. ದುಃಖವು ಮಾನಸಾಂತರಾರಂಭವಾಗಿದೆ. ಹಿಂದೆ ಮಾಡಿದ ಪಾಪದಿಂದ ಹುಟ್ಟಿದ ದುಃಖಕ್ಕೆ ಪಶ್ಚಾತ್ತಾಪವೆಂಬ ಪೆಸರು. ಇದಕ್ಕೆ ಕರಕರೆಯಂದು ಇಲ್ಲಿ ಬರದದೆ.

೯. ಇದು ನಿಜವಾದ ಮಾನಸಾಂತರ ಗುಣವಾಗಿದೆ.

೧೦. ಇದು ಪಾಪಪರಿಹಾರ, ಪರಿಶುದ್ಧಾತ್ಮ ಮುಂತಾದ ಕೃಪಾವರಗಳನ್ನು ಸೂಚಿಸುತ್ತದೆ.

ಬ) ಚಾಡಿಮಾತು. ಸ. ೪, ೧೧. ೧೨.

೧೧. ಸಹೋದರರೇ, ಒಬ್ಬರನ್ನೊಬ್ಬರು ನಿಂದಿಸ ಬೇಡಿರಿ. ಸಹೋದರನನ್ನು ನಿಂದಿಸಿ, ಸಹೋದರನಿಗೆ ನ್ಯಾಯಶಿಕ್ಷಿಸುವವನು ನ್ಯಾಯಪ್ರಮಾಣವನ್ನು ನಿಂದಿಸಿ, ನ್ಯಾಯಪ್ರಮಾಣಕ್ಕೆ ನ್ಯಾಯ ಶಿಕ್ಷಿಸುತ್ತಾನೆ[೧]. ಆದರೆ ನೀನು ನ್ಯಾಯಪ್ರಮಾಣಕ್ಕೆ ನ್ಯಾಯ ಶಿಕ್ಷಿಸಿದರೆ, ನ್ಯಾಯಪ್ರಮಾಣವನ್ನು ಮಾಡುವವನಲ್ಲ, ಅದರ ನ್ಯಾಯಾಧಿಪತಿಯಾಗಿರುತ್ತೀ[೨]. ೧೨. ರಕ್ಷಿಸಲೂ ಕೆಡಿಸಲೂ ಶಕ್ತನಾದ ನ್ಯಾಯಕರ್ತನು ಒಬ್ಬನೇ; ಬೇರೊಬ್ಬನಿಗೆ ನ್ಯಾಯ ಶಿಕ್ಷಿಸುವ ನೀನು ಯಾರು[೩]?

೧. ಅಂದರೆ, ಅನ್ಯಾಯವಾಗಿ ಸಹೋದರರನ್ನು ನಿಂದಿಸುವವನು ನಿಯಮ ನಿಂದಕನೆಂದು, ಅಧಿಕಾರವಿಲ್ಲದೆ ಸಹೋದರರಿಗೆ ನ್ಯಾಯ ಶಿಕ್ಷಿಸುವವನು ನಿಯಮಾತಿಕ್ರಮಿಯಂದು, ಯಾಕೋಬನು ಬರೆಯುತ್ತಾನೆ. ನಮ್ಮ ಆಜ್ಞಾನಿರ್ಣಯವು ನ್ಯಾಯಕ್ಕೆ ವಿರೋಧವಾಗದಿದ್ದರೂ, ಸಹೋದರರಿಗೆ ನ್ಯಾಯ ಶಿಕ್ಷಿಸುವ ಅಧಿಕಾರವು ನಮಗಿಲ್ಲವಾದ್ದರಿಂದ, ನ್ಯಾಯ ಶಿಕ್ಷಿಸುವದು ಹೊಣೆಗೂ ತಪ್ಪಾಗಿದೆ.

೨. ನ್ಯಾಯಪ್ರಮಾಣದ ವಿಷಯವಾಗಿ ಚಕ್ತನಿಗೆ ಒಂದೇ ಕಟ್ಟಳೆಯು ಕಾಟ್ಟಿದೆ; ಅದೇನಂದರೆ, ಅದನ್ನು ವಿಚಾರಿಸುವದು, ತಿದ್ದುವದು, ಪಾಠ ಮಾಡುವದು ಅಲ್ಲ, ಅದನ್ನು ಕೈಕೊಳ್ಳುವದು.

೩. ಸರ್ವಶಕ್ತನೂ, ಸರ್ವಜ್ಞನೂ ಆದ ದೇವರೊಬ್ಬನೇ ಮನುಷ್ಯರಿಗೆ ನ್ಯಾಯಾಧಿಪತಿಯಾಗಿದ್ದಾನೆ. ಆತನಿಗೆ ಜಯ ಪಟ್ಟು, ಆತನು ಕಾಟ್ಟಿ ನಿಯಮವನ್ನು ಪೂರ್ಣವಾಗಿ ಕೈಕೊಳ್ಳುವದಕ್ಕೆ ಆಸಕ್ತನಾದ ಚಕ್ತನು, ತನ್ನನ್ನು ತಾನೇ ವಿಚಾರಿಸುವದಲ್ಲದೆ, ನೆರೆಹೊರೆಯವರಿಗೆ ನ್ಯಾಯ ಶಿಕ್ಷಿಸುವದಕ್ಕೆ ಮನಸ್ಸಿಲ್ಲದವನಾಗಿದ್ದಾನೆ.

ಬಿ) ನಾವು ದೇವರಿಗೆ ಪೂರ್ಣವಾಗಿ ವಕೆವಾಗಿರುವದನ್ನು ಮರೆಯ ಬಾರದು. ಸ. ೪, ೧೩—೧೬.

೧೩. ಬನ್ನಿರಿ ಇಂಗ, ಇಂ ಹೊತ್ತು, ನಾಳೆ, ಇಂಥಿಂಥ ಪಟ್ಟಣಕ್ಕೆ ಹೋಗಿ, ಅಲ್ಲಿ ಒಂದು ವರುಷ ಇದ್ದು, ವ್ಯಾಪಾರ ಮಾಡಿ, ಲಾಭ ಮಾಡಿ ಕಾಳ್ಳೋಣ, ಅಂಬುವ

ವರ್ಕ್ಸ್, ಕ್ಯೋರಿ. ೧೪. ನಾಳೆ ಆಗುವಂಥಾದ್ದು ನಿಮಗೆ ತಿಳಿಯದು. ಯಾಕಂದರೆ ನಿಮ್ಮ ಜೀವವೇನು? ಸ್ವಲ್ಪ ಹೊತ್ತು ಕಾಣಿಸಿ, ಆ ಮೇಲೆ ಕಾಣದೆ ಹೋಗುವ ಹಬೆಯಾಗಿದೆ. ೧೫. ಇದನ್ನು ಬಿಟ್ಟು—ಕರ್ತನ ಚಿತ್ತವಾದರೆ, ನಾವು ಬದುಕಿ, ಇದನ್ನೂ ಅದನ್ನೂ ಮಾಡ್ತೇವೆಂದು ೧) ಹೇಳ ಬೇಕಾಗಿತ್ತು. ೧೬. ಆದರೆ ಇಗ ನಿಮ್ಮ ಡಂಭಕಗಳಲ್ಲಿ ೨) ಹೆಚ್ಚಳ ಪಡುತ್ತೀರಿ; ಅಂಥ ಹೆಚ್ಚಳವೆಲ್ಲಾ ಕೆಟ್ಟದ್ದಾಗಿದೆ. ೧೭. ಹಾಗಾದರೆ ಒಳ್ಳೇದನ್ನು ಮಾಡ ತಿಳಿದು ಮಾಡದವನಿಗೆ ಪಾಪ ಉಂಟು ೩).

೧. ಚಕ್ತನು ಲೌಕಿಕ ವ್ಯವಹಾರಗಳನ್ನು ನಡಿಸುವದರಲ್ಲಿಯೂ ದೇವರನ್ನು ನೆನಸಿ ಕಾಂಡು, ತನ್ನ ಜೀವವು ಆತನಿಗೆ ಅಧೀನವಾಗಿದೆಂದು, ಧ್ಯಾನ ಮಾಡಬೇಕು.

೨. ದೇವರನ್ನು ಮರತು, ತಾನು ಮಾಡಿದ ಆಲೋಚನೆಯನ್ನು ತನ್ನ ಬುದ್ಧಿಯಿಂದಲೂ, ಬಲದಿಂದಲೂ ನೆರವೇರಿಸುತ್ತೇನೆಂದು, ಜಾವಿಸಿ ಕಾಳ್ಳುವದು ತೃಣಮಾತ್ರದ ಮನುಷ್ಯನಿಗೆ ಅಯುಕ್ತವಾದ ಡಂಭಾಚಾರವೆಂದು, ಅಪಾಸ್ತಲನಿಗೆ ಕಾಣುತ್ತದೆ.

೩. ಇಲ್ಲಿ ಸಮಯೋಚಿತವಾಗಿ ಶೇರಿದ ವಾಕ್ಯವು ಇಲ್ಲಿಯ ಅಭಿಪ್ರಾಯಪ್ರಕಾರ ಮಾತ್ರವಲ್ಲ, ಸಾಮಾನ್ಯವಾಗಿ ಸರ್ವ ವಿಷಯವಾಗಿಯೂ ಸಲ್ಲುತ್ತದೆ.

೫) ಐಶ್ವರ್ಯ ಭರವಸವು ವ್ಯರ್ಥವಾದದ್ದು. ಸ. ೫, ೧—೩. ಐಶ್ವರ್ಯವಂತರು ಕೂಲಿಯವರು ಮುಂತಾದ ಬಡವರಿಗೂ (ವ. ೪.) ನೀತಿವಂತರಾದ ಭಕ್ತರಿಗೂ (ವ. ೬.) ಮಾಡುವ ಅನ್ಯಾಯದ ನಿಮಿತ್ತವಾಗಿಯೂ, ಲೌಕಿಕ ವೈಭವದ ನಿಮಿತ್ತವಾಗಿಯೂ (ವ. ೫.) ಶಿಕ್ಷೆಗೆ ಗುರಿಯಾಗುತ್ತಾರೆ.

೩. ವಿಶೇಷೋದ್ಬೋಧನೋಪದೇಶಭಾಗವು. ಸ. ೫, ೭—೨೦.

ಅ) ತಾಳ್ಮೆಯ ಉದ್ಬೋಧನೆಯು. ಸ. ೫, ೭—೧೧.

೭. ಹಾಗಾದರೆ, ಸಹೋದರರೇ ೧), ಕರ್ತನ ಬರುವಿಕೆಯ ಪರ್ಯಂತ ೨) ತಾಳಿ ಕಾಳ್ಳಿರಿ. ಇಗೋ, ವಕ್ಕಲಿಗನು ಮುಂಗಾರಿ ಹಿಂಗಾರಿ ಹೊಂದುವ ಪರ್ಯಂತ ೩) ತಾಳಿ ಕಾಂಡು, ಭೂಮಿಯ ಪ್ರಿಯವಾದ ಫಲಕ್ಕೋಸ್ಕರ ಕಾದು ಕೊಂಡಿರುವನು. ೮. ನೀವು ಸಹ ತಾಳಿ ಕಾಂಡು, ನಿಮ್ಮ ಹೃದಯಗಳನ್ನು ದೃಢ ಪಡಿಸಿರಿ; ಯಾಕಂದರೆ ಕರ್ತನ ಬರುವಿಕೆಯು ಸಮೀಪವಾಗಿದೆ ೪). ೯. ಸಹೋದರರೇ, ನೀವು ಅಜ್ಞೆ ನಿರ್ಣಯ ಪಡದ ಹಾಗೆ, ಒಬ್ಬರ ಮೇಲೊಬ್ಬರು ಗುಣಗುಟ್ಟ ಬೇಡಿರಿ. ಇಗೋ, ನ್ಯಾಯಾಧಿಪತಿಯು ಕದಗಳ ಮುಂದೆ ನಿಂತಿದ್ದಾನೆ. ೧೦. ನನ್ನ ಸಹೋದರರೇ, ಕರ್ತನ ಹೆಸರಿನಲ್ಲಿ ಮಾತಾಡಿದ ಪ್ರವಾದಿಗಳನ್ನು ಶ್ರಮೆಯ ತಾಳ್ಮೆ ದೀರ್ಘ ಶಾಂತಿಗಳ ಮಾದರಿಯಾಗಿ ೫) ತಕ್ಕೊಳ್ಳಿರಿ. ೧೧. ಇಗೋ, ತಾಳಿ ಕಾಳ್ಳುವವರು ಭಾಗ್ಯವಂತರೆಂದು ಹೇಳುತ್ತೇವೆ; ಯಾಕೋ

ಬನ ತಾಳ್ಮೆಯನ್ನು ಕೆಳಿದ್ದೀರಿ; ಮತ್ತು ಕರ್ತನ ಅಂತ್ಯವನ್ನು[ಟ] ನೋಡಿದ್ದೀರಿ; ಏನಂದರೆ ಕರ್ತನು ಬಹು ಅಂತಃಕರಣವೂ ಕನಿಕರವೂ ಉಳ್ಳವನಾಗಿದ್ದಾನೆ.

೧. ಮೊದಲಿನ ವಚನವು ಸಂಬೋಧನವು ಐಶ್ವರ್ಯವಂತರೇ ಎಂದು, ಬೇರೆಯಾಗಿತ್ತು. ಈಗ ಯಾಕೋಬನು ಐಕ್ಯರಿಗೆ ಉದ್ಬೋಧನೇ ಮಾಡಿ, ತಿರಿಗಿ ಸಹೋದರರೇ ಎಂಬ ಸಂಬೋಧನವನ್ನು ಪ್ರಯೋಗಿಸುತ್ತಾನೆ.

೨. ಯೋಹಾನ ಪೇತ್ರ ಪೌಲರ ಪ್ರಕಾರ ಯಾಕೋಬನು ಸಹ ಕರ್ತನ ದಿವಸವನ್ನು ನಿತ್ಯಧ್ಯಾನಿಸಿದನೆಂದು, ಇಲ್ಲಿ ಕಾಣುತ್ತದೆ.

೩. ಯಾಕೋಬನು ಇಲ್ಲಿ ಬೋಧಿಸುವ ತಾಳ್ಮೆಯಂಬ ಕ್ರೈಸ್ತ ಗುಣದ ಪೀಠಿಕೆಯೆಂದು ಒಕ್ಕಲಿಗನ ಸಾದೃಶ್ಯವು ಸೂಚಿತವಾಗಿದೆ. ಲೋಕದಲ್ಲಿರುವ ಎಲ್ಲಾ ಒಕ್ಕಲಿಗರು ವರುಷ ವರುಷಕ್ಕೆ ಪೀಗೆ ತಾಳ್ಮೆಯನ್ನು ಸಾಧಾರಣವಾಗಿ ತೋರಿಸುತ್ತಾ ಬಂದರೆ, ಕ್ರೈಸ್ತರಾದ ಚಕ್ಕರಲ್ಲಿ ಅದು ಕಾಣದೇ ಪೋಗ ಬಾರದು.

೪. ಇದು ತಾಳ್ಮೆಯ ಎರಡನೆ ಪೀಠಿಕೆಯಾಗಿದೆ. ಯಾವಾಗಲೂ ಕರ್ತನ ಬರುವಿಕೆಯು ಸಮೀಪವಾಗಿರುವದನ್ನು ಧ್ಯಾನಿಸುವವನು ಇಹದ ಸುಖ ದುಃಖಗಳು ಕ್ಷಣಮಾತ್ರದವುಗಳೆಂದೂ, ನಾಳೆಯಂತ ಸಮೀಪವಾದ ಕಾಲದಲ್ಲಿ ತನಗೂ ಎಲ್ಲಾ ಮನುಷ್ಯರಿಗೂ ಕರ್ತನು ನ್ಯಾಯ ತೀರಿಸುತ್ತಾನೆಂದೂ, ನೆನಪು ಮಾಡಿ ಕಾಳ್ಗುಪ ಮನುಷ್ಯನು ಸಹಜವಾಗಿ ತಾಳ್ಮೆಯುಳ್ಳವನಾಗುತ್ತಾನೆ.

೫. ಪಾಳೆ ಒಡಂಬಡಿಕೆಯ ಪ್ರವಾದಿಗಳ, ಮತ್ತು ಯೋಬನ ಮಾದ್ರಿಯು ತಾಳ್ಮೆಯ ಮೂರನೆ ಪೀಠಿಕೆವಾಗಿ ಸೂಚಿತವಾಗಿದೆ.

೬. ಕರ್ತನ ಅಂತ್ಯವೇನಂದರೆ: ದೇವರು ಕಡೆಯಲ್ಲಿ ಯೋಬನ ರೋಗ ದಾರಿದ್ರ್ಯ ಅಪಕೀರ್ತಿ ಮುಂತಾದ ಉಪದ್ರವಗಳನ್ನೆಲ್ಲಾ ಪರಿಹರಿಸಿ, ಅವನಿಗೆ ದಯ ಮಾಡಿದ ಅತಿಶಯವಾದ ಸೌಖ್ಯವು.

ಇ) ಪ್ರಮಾಣನಿಷೇಧೋದ್ಬೋಧನೆಯು. ವ. ೧೨.

೧೨. ಆದರೆ ಎಲ್ಲಾದರ ಮೊದಲು, ನನ್ನ ಸಹೋದರರ್ಯೇ, ಆಗ ಇಡ ಬೇಡಿರಿ. ಆಕಾಶದ ಮೇಲಾಗಲಿ, ಭೂಮಿಯ ಮೇಲಾಗಲಿ, ಬೇರೆ ಯಾವ ಆಣೆಯಾಗಲಿ, ಬೇಡ. ನೀವು ಅಜ್ಞೆಗಾಳಗಾಗದ ಹಾಗೆ, ನೀವು ಹೌದಂದರೆ, ಹೌದಾಗಲಿ, ಅಲ್ಲವಂದರೆ, ಅಲ್ಲವಾಗಲಿ.

ಆಣೆ ಇಡ ಬಾರದೆಂಬ ಉದ್ಬೋಧನೆಯು ಯಾಕೋಬನಿಗೆ ಪ್ರಾಮುಖ್ಯವಾದದ್ದೆಂದು ತೋರುವ ಕಾರಣವೇನಂದರೆ: ದೇವರ ಹೆಸರನ್ನು ವ್ಯರ್ಥವಾಗಿ ಉಚ್ಚರಿಸುವವನ ಹೃದಯದಲ್ಲಿ ದೇವರ ಭಯವಿಲ್ಲ. ಅಂಥವನಲ್ಲಿ ನಿಜ ಭಕ್ತಿಯೂ ಇಲ್ಲ. ಇಲ್ಲಿ ಬರುವ ವಾಕ್ಯವು ಯೇಸು ಕ್ರಿಸ್ತನು ಪರ್ವತಪ್ರಸಂಗದಲ್ಲಿ ಹೇಳಿದ್ದಕ್ಕೆ ಪೂರ್ಣವಾಗಿ ಒಪ್ಪುತ್ತದೆ.

ಈ) ಕ್ಷೇಮಾಕ್ಷೇಮಕಾಲೋಪದೇಶವು. ವ. ೧೩—೧೫.

೧೩. ನಿಮ್ಮಲ್ಲಿ ಒಬ್ಬನು ಶ್ರಮೆ ಪಡುತ್ತಾನಾ? (ಪ್ರಾರ್ಥಿಸಲಿ[೧]); ಒಬ್ಬನು ಸುಖವಾಗಿದ್ದಾನಾ? ಕೀರ್ತನೆ ಹಾಡಲಿ[೨].. ೧೪. ನಿಮ್ಮಲ್ಲಿ ಒಬ್ಬನು ರೋಗಿಷ್ಠನಾ

೯೫೪೪ ಅಪಾ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಶ(ಪ್ರೂವ್ ಶ್ರಿ.
ಯಾಕೊ. ೫೩, ೧೫೩—೧೭.

ಗಿದ್ದಾನಾ? ಸಭೆಯ ಹಿರಿಯರನ್ನು ಕರೆ ಕಳುಹಿಸಲಿ ೩). ಅವರು ಕರ್ತನ ಹೆಸರಿನಲ್ಲಿ ಅವನಿಗೆ ಎಣ್ಣೆ ಹಚ್ಚಿ ೪), ಅವನಿಗಾಸ್ಕರ ಪ್ರಾರ್ಥನೆ ಮಾಡಲಿ ೫). ೧೫. ಆಗ ವಿಶ್ವಾಸದ ಪ್ರಾರ್ಥನೆಯು ೬) ರೋಗಿಷ್ಠನನ್ನು ರಕ್ಷಿಸುವದು ೭). ಮತ್ತು ಕರ್ತನು ಅವನನ್ನು ಎಬ್ಬಿಸುವನು. ಅವನು ಪಾಪಗಳನ್ನು ಮಾಡಿದವನಾದರೆ ೮), ಅವನಿಗೆ ಮನ್ನಿಸಲ್ಪಡುವವು ೯).

೧. ತುಟಿಗಳಿಂದಲ್ಲ, ಹೃದಯದಿಂದ ಆಗುವ ಯಥಾರ್ಥವಾದ ಪ್ರಾರ್ಥನೆಯು ಆದರಣಾಧೈರ್ಯ ಬಲಗಳಿಗೆ ಉತ್ತಮ ಉಪಾಯವಾಗಿದೆ.

೨. ಸಂತುಷ್ಟನಾದ ಭಕ್ತನು ದೇವರು ಕಾಟ್ಟಿ ಸುಖಕ್ಕೆ ಕೃತಜ್ಞನಾಗಿ, ಆತನನ್ನು ಆನಂದದಿಂದ ಸ್ತುತಿಸಿ, ಕೀರ್ತನೆಗಳ ಹಾಡುವದು ಯುಕ್ತವಾಗಿದೆ. ಸೌಖ್ಯವು ವಿಶೇಷ ಕಂಟಕಸ್ಥಿತಿಯಾಗಿದೆಂದು, ಭಕ್ತನು ನೆನಸ ಬೇಕು.

೩. ಒಳ್ಳೆ ಸಹಾಬಾಧಕರೂ, ಅನುಭವವುಳ್ಳ ಬೇರೆ ಭಕ್ತರೂ, ರೋಗಿಷ್ಠರಿಗೆ ಮಾಡುವ ಸಹಾಯವು ವೈದ್ಯರಿಗಿಂತ ಅನೇಕಾವರ್ತಿ ವಾಸಿಯಾಗಿದೆ.

೪. ರೋಗಿಷ್ಠರಿಗೆ ಎಣ್ಣೆ ಪುಚ್ಚುವದು ಆ ಕಾಲದಲ್ಲಿ ಸುರ್ಯ ಮುಂತಾದ ದೇಶಗಳಲ್ಲಿ ಬಹಳ ವಾಡಿಕೆಯಾಗಿತ್ತು. ಆದ್ದರಿಂದ ರೋಗದಲ್ಲಿ ಬಿದ್ದವರು ವಾಡಿಕೆಯಾದ ಔಷಧಗಳನ್ನು ಪ್ರಯೋಗಿಸುವದು ಯುಕ್ತವೆಂದು ತೋರುತ್ತದೆ. ಪ್ರತಿ ಕ್ರೈಸ್ತ ರೋಮಿಯರ ಸಭೆಯು ಅಂತ್ಯತೈಲಾಭಿಷೇಕವೆಂಬ ಮಮಾರ್ಚರಣೆಯ ಪದ್ಧತಿಯನ್ನು ಸ್ಥಾಪಿಸಿ, ಅದು ಇಲ್ಲಿ ಬಾಧಿತವಾಗಿದೆಂದು, ಸುಳ್ಳಾಗಿ ಹೇಳುತ್ತಾರೆ. ಯಾಕಂದರೆ ಯಾಕೋಬನ ವಾಕ್ಯವು ಅವರ ಪದ್ಧತಿಗೆ ಪೂರ್ಣ ಪ್ರತಿಕೂಲವಾಗಿದೆ. ಹ್ಯಾಗಂದರೆ ರೋಗಿಯು ಸಾಯುತ್ತಾನೆಂದು, ತಿಳಿದನಂತರ ಅವರು ತೈಲಾಭಿಷೇಕ ಮಾಡುತ್ತಾರೆ. ಯಾಕೋಬನು ರೋಗಿಯು ಸ್ವಸ್ಥವಾಗುವ ಹಾಗೆ ತೈಲಾಭಿಷೇಕವನ್ನು ಮಾಡಬೇಕೆಂದು, ಬರೆಯುತ್ತಾನೆ.

೫. ರೋಗಿಯು ತನ್ನ ಪಾಪಗಳನ್ನು ಅರಿಕೆ ಮಾಡುವದಕ್ಕಲ್ಲ, ತನಗಾಗಿ ಪ್ರಾರ್ಥನೇ ಮಾಡುವದಕ್ಕೆ ಹಿರಿಯರನ್ನು ಕರೇ ಕಳುಹಿಸ ಬೇಕೆಂದು, ಯಾಕೋಬನು ಆಜ್ಞಾಪಿಸುತ್ತಾನೆಂಬದನ್ನು ಲಕ್ಷಿಸ ಬೇಕು. ಇದು ಸಹಾ ರೋಮಿಯರ ಬಾಧನೆಗೆ ವಿರೋಧವಾಗಿದೆ.

೬. ಅಂದರೆ, ಸಹಾಯಕ್ಕೆ ಬಂದ ಹಿರಿಯರೂ, ರೋಗಿಯು ತಾನೂ, ಮಾಡುವ ಪ್ರಾರ್ಥನೆಯು.

೭. ಔಷಧಗಳ ಪ್ರಯೋಗವು ವೃರ್ಥವಾದದ್ದಲ್ಲ. ಆದರೆ ವಿಶ್ವಾಸವುಳ್ಳ ಪ್ರಾರ್ಥನೆಯು ಅಧಿಕ ಸಾರ್ಥಕವಾಗಿದೆಂದು, ಇಲ್ಲಿ ಸೂಚಿತವಾಗಿದೆ.

೮. ರೋಗವು ವಿಶೇಷವಾದ ಪಾಪಗಳ ನಿಮಿತ್ತ ಹುಟ್ಟಿದ ಪಕ್ಷದಲ್ಲಿ.

೯. ಪಾಪಪರಿಹಾರವು ಹಿರಿಯರಿಂದ ಆಗುತ್ತದೆಂದು, ಇಲ್ಲಿ ತೋರುವದಿಲ್ಲ. ಈ ಮಾತು ಸಹಾ ಪ್ರತಿಕ್ರೈಸ್ತರಾದ ರೋಮಿಯರ ಬಾಧನೆಗೆ ವಿರೋಧವಾದದ್ದು.

ಎ) ಪಾಪಭಾರಪರಿಹಾರೋಪದೇಶವು. ವ. ೧೬—೧೯.

೧೬. ವಾಶಿಯಾಗುವ ಹಾಗೆ ೧), ನೀವು ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡಿ ೨), ಒಬ್ಬರಿಗಾಸ್ಕರ ಒಬ್ಬರು ಪ್ರಾರ್ಥನೆ ಮಾಡಿರಿ. ನೀತಿವಂತನ ಬಿರುಕಾದ ಪ್ರಾರ್ಥನೆಯು ಬಹು ಶಕ್ತಿಯುಳ್ಳದ್ದಾಗಿದೆ. ೧೭. ಎಲ್ಯೀಯನು ನಮಗೆ ಸಮಾನ

ವಾದಸ್ಪಷ್ಟವಾವುಳ್ಳ ಮನುಷ್ಯನಾಗಿದ್ದನು; ಅವನು ಮಳೆ ಬೀಳದ ಹಾಗೆ ಪ್ರಾರ್ಥನೆ ಮಾಡಲಾಗಿ ೨), ಮೂರು ವರುಷ ಆರು ತಿಂಗಳು ಭೂಮಿಯ ಮೇಲೆ ೪) ಮಳೆ ಬೀಳಲಿಲ್ಲ. ೧೪. ಅವನು ತಿರಿಗಿ ಪ್ರಾರ್ಥಿಸಲಾಗಿ, ಆಕಾಶವು ಮಳೆಯನ್ನು ಕೊಟ್ಟಿತು; ಭೂಮಿಯು ತನ್ನ ಫಲವನ್ನು ಫಲಿಸಿತು.

೧. ವ. ೧೪. ೧೫ಲ್ಲಿ ದೇಹಕ್ಷೇಮವು ಸೂಚಿತವಾಗಿರುವದರಿಂದ, ೧೬ಲ್ಲಿ ಆತ್ಮಕ್ಷೇಮವು ಸೂಚಿತವಾಗಿದೆಯೆಂದು, ತಿಳಿಯ ತಕ್ಕದ್ದು.

೨. ರೋಮಾಯರ ಬಾಧನೆಯ ಪ್ರಕಾರ ಸಖೆಯ ವನು ಪಾದ್ರಿಗೆ ತನ್ನ ಪಾಪಗಳನ್ನು ಅರಿಕೆ ಮಾಡ ಬೇಕು. ಅಪಾಸ್ತಲನ ಬಾಧನೆಯ ಪ್ರಕಾರ ಸಖೆಯವರು ಒಬ್ಬರಿಗಾಬ್ಬರು ತಮ್ಮ ಪಾಪಗಳನ್ನು ಅರಿಕೆ ಮಾಡ ಬೇಕು. ೧೬ದು ಪರಸ್ಪರಸಹಾಯಕ್ಕೆ ಮಾಡುವ ಪ್ರಾರ್ಥನಾಪದ್ಧಿಶ್ಯವಾಗಿ ಅವಶ್ಯವಾದದ್ದು.

೩. ಈ ಸಂಗತಿಯು ೧ ಅರ. ೧೭ನೆ ೧೮ನೆ ಸಂಧಿಗಳಲ್ಲಿ ಬರದದೆ.

೪. ಅಂದರೆ, ಸೂರ್ಯದೇಶದ ಮೇಲೆ.

೬) ಪರಸ್ಪರಾತ್ಮಿಕಕ್ಷೇಮಚಿಂತೋದ್ಬೋಧನೆಯು. ವ. ೧೯. ೨೦.

೧೯. ಸಹೋದರರೇ, ನಿಮ್ಮಲ್ಲಿ ಒಬ್ಬನು ಸತ್ಯ ಬಿಟ್ಟು ತಪ್ಪಿ ಹೋಗಲಾಗಿ ೧), ಮತ್ತೊಬ್ಬನು ಅವನನ್ನು ತಿರುಗಿಸಿದರೆ, ೨೦. ಪಾಪಿಷ್ಠನನ್ನು ಅವನ ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣದಿಂದ ರಕ್ಷಿಸಿ ೨), ಪಾಪಗಳ ಸಮೂಹವನ್ನು ಅಡಗಿಸುವನೆಂದು ೩), ತಿಳಿದಿರಲಿ.

೧. ಸತ್ಯವನ್ನು ಬಿಡುವದು ತಪ್ಪಿನ ಆರಂಭವು.

೨. ಅಂದರೆ, ಆತ್ಮಿಕವಾದ ನಿತ್ಯ ಮರಣದಿಂದ. ೧೬ದು ಅತ್ಯುತ್ತಮವಾದ ಉಪಕಾರವು.

೩. ಪೌಲ್ಯಾಗಂದರೆ, ಮಾನಸಾಂತರವನ್ನೈದಿದವನು ಪೂರ್ಣ ಪಾಪಪರಿಹಾರವನ್ನು ಪಡೆಯುವದರಿಂದ ಈ ಮಾತು ನೆರವೇರುವದು.

ಪೌಲನು ಹೀಬ್ರಿಯದಲ್ಲಿ ವಸಕಿಯಾಗಿ, ಬರದ

ಹೀಬ್ರಿಯರ ಪತ್ರಿಕೆಯು.

ಪೀಠಿಕೆಯು.

ಪತ್ರಿಕೆಯ ಹೆಸರು.

ಇಬ್ರಿಯರ ಪತ್ರಿಕೆಯೆಂಬ ಹೆಸರು ಇಬ್ರಿಯರಿಂದ ಹುಟ್ಟಿದ ಯೆಹೂದಕ್ರೈಸ್ತರಾದ ಪತ್ರಿಕಾವಲೋಕಿಕರನ್ನು ಸೂಚಿಸುತ್ತದೆ. ಇಂಥಾ ಸಭೆಯವರ ಉದ್ದಿಶ್ಯವಾಗಿ ಪೌಲನು ಈ ಪತ್ರಿಕೆಯನ್ನು ಬರದನೆಂದು,

ಇಬ್ರಿಯರ ಪತ್ರಿಕೆ.

ಪತ್ರಿಕೆಯ ತಾತ್ಪರ್ಯದಿಂದ ಸಹ ಕಾಣುತ್ತದೆ. ಈ ಸಭೆಗಳು ಯಾವ ದೇಶದಲ್ಲಿ ಇದ್ದವೆಂದು, ಪತ್ರಿಕೆಯಲ್ಲಿ ಬರದಿರುವದಿಲ್ಲ, ಆದರೆ ಅವರು ಇಬ್ರಿಯಭಾಷೆಯನ್ನು ಆಡಿದರೆಂಬುವದು ಹೆಸರಿಗೆ ಅನುಕೂಲವಾಗಿದೆ. ಹಾಗಾದರೆ ಅವರು ಪಲೆಸ್ತೀನದ ನಿವಾಸಿಗಳೆಂದು ತೋರುತ್ತದೆ. ಅವರು ಯೆರೂಸಲೇಮಿನಲ್ಲಿ ನಡಿಯುವ ದೇವಾರಾಧನೆಯಲ್ಲಿ ಆಸಕ್ತರಾಗಿದ್ದ ಚಿನ್ಹೆಯೂ, (ಸ. ೯, ೪.,) ಪರಜನಕ್ರೈಸ್ತರ ಸಂಗತಿಯು ಪತ್ರಿಕೆಯ ಯಾವ ಸ್ಥಳದಲ್ಲಿಯೂ ಕಾಣದೆ ಇರುವ ಲಕ್ಷಣವೂ (ಸ. ೨, ೧೬ ಸರಿ ನೋಡ ಬೇಕು.) ಇದಕ್ಕೆ ಒಪ್ಪುತ್ತವೆ. ಪತ್ರಿಕೆಯು ಗ್ರೀಕಭಾಷೆಯಲ್ಲಿ ಲಿಖಿತವಾದದ್ದು ಅದಕ್ಕೆ ಪ್ರತಿಕೂಲವಾಗಿರುವದಿಲ್ಲ; ಯಾಕಂದರೆ ಗ್ರೀಕಭಾಷೆಯು ಆ ಕಾಲದ ಯೆಹೂದರಲ್ಲಿ ಬಹಳ ವಾಡಿಕೆಯಾಗಿತ್ತು. ಪಲೆಸ್ತೀನದ ಯೆಹೂದರು ಸಹ ಸಪ್ತತಿ ಎಂಬ ದೇವವಾಕ್ಯದ ಗ್ರೀಕಭಾಷಾಂತರವನ್ನು ಸಾಧಾರಣವಾಗಿ ಪ್ರಯೋಗಿಸುತ್ತಾ ಇದ್ದರು.

ಪತ್ರಿಕಾಕರ್ತನು. ರಚನೆಯು.

ಈ ಪತ್ರಿಕೆಯು ಪೌಲನಿಂದುಂಟಾಯಿತೆಂಬುವದಕ್ಕೆ ಅನೇಕರು ಪ್ರತಿತರ್ಕಿಸಿದರೂ, ಅದು ಪೌಲನದು ಎಂಬುವದಕ್ಕೆ ಬಲವಾದ ಆಧಾರವುಂಟು. ಅಪೊಸ್ತಲನು ಪರಜನರ ಸೇವೆಯಲ್ಲಿ ಜೀವಕಾಲವನ್ನು ಎಲ್ಲಾ ಕಳಿದರೂ, ಸ್ವಜನರಾದ ಇಸ್ರಯೇಲನವರ ಮೇಲೆ ಯಾವಾಗಲೂ ಅತ್ಯಂತ ಮಮತೆಯುಳ್ಳವನಾಗಿದ್ದನು. ಅನೇಕ ಪತ್ರಿಕೆಗಳನ್ನು ಪರಜನಕ್ರೈಸ್ತರಾದ ಸಭೆಯವರ ಉಪಯೋಗಕ್ಕಾಗಿ ಬರದನಂತರ, ತನಗೆ ಅತಿ ಪ್ರಿಯರಾದ ಇಸ್ರಯೇಲನವರ ಬೋಧನಾರ್ಥವಾಗಿ ಒಂದು ಪತ್ರಿಕೆಯನ್ನು ಬರೆಯುವದು ಅವನಿಗೆ ಬಹಳ ಯುಕ್ತವಾಗಿತ್ತು. ಅಂಥಾದ್ದನ್ನು ಪೌಲನು ಬರದರೆ, ಪೂರ್ವಸೂಚಕವಾದ ಹಳ್ಳೇ ಒಡಂಬಡಿಕೆಯ ಪ್ರವಾದನೆ, ನಿಯಮ, ಬಲಿಯರ್ಪಣೆ, ಯಾಜಕತ್ವ ಮುಂತಾದದ್ದೆಲ್ಲಾ ಯೇಸು ಕ್ರಿಸ್ತನಲ್ಲಿ ಸಂಪೂರ್ಣವಾಯಿತೆಂಬ ಪತ್ರಿಕಾಮುಖ್ಯಾರ್ಥವಾದ ಬೋಧನೆಗಿಂತ ಹಳ್ಳೇ ಒಡಂಬಡಿಕೆಯ ದೇವವಾಕ್ಯದ ವಿದ್ಯೆಯಲ್ಲಿ ಪಾರಂಗತನಾದ ಪೌಲನಿಗೂ, ಹಳ್ಳೇ ಒಡಂಬಡಿಕೆಯ ಪದ್ಧತಿಗಳಲ್ಲಿ ಆಸಕ್ತರಾದ ಪತ್ರಿಕಾವಲೋಕಿಕರಿಗೂ ಅತ್ಯುಚಿತವಾದದ್ದು ಮತ್ತ್ಯಾವದೂ ಇರಲಿಲ್ಲ. ಬೇರೆ ಪತ್ರಿಕೆಗಳಲ್ಲಿ ಮಾಡಿದ ಪ್ರಕಾರ, ಇದರಲ್ಲಿಯೂ ತನ್ನ ಹೆಸರು ಬರೆಯುವದನ್ನು ಅತಿಶಯವಾದ ಪ್ರೀತಿಯ ಆಲೋಚನೆಯಿಂದ ಬಿಟ್ಟನು. ಯಾಕಂದರೆ: ಯೆಹೂದಕ್ರೈಸ್ತರಲ್ಲಿ ಅನೇಕರು ಅಬದ್ಧಸುದ್ದಿಗಳನ್ನು ನಂಬಿ, ಪೌಲನು ಯೆಹೂದಧರ್ಮವೈರಿಯೆಂದು ನೆನಸಿದ ಕಾರಣ, ಅವನ ಹೆಸರು ಪರಿವರ್ತನಪತ್ರಿಕೆಯ ಮೇಲ್ವಿಳಾಸದಲ್ಲಿ ಕಾಣಿಸಿದರೆ, ಓದುವದಕ್ಕೆ ಅನುಮಾನ ಪಡುತ್ತಿದ್ದರು. ಪೌಲನು ಈ ಪತ್ರಿಕೆಯನ್ನು ಸ್ವಹಸ್ತದಿಂದ ಬರೆಯಲಿಲ್ಲ; ಅದನ್ನು ಪರಹಸ್ತದಿಂದ ಅನುಪೂರ್ವಿಯಾಗಿ ಶಬ್ದ ಶಬ್ದವಾಗಿ ಹೇಳಿ ಬರಿಸಿದನೋ, ಆಪ್ತನಾದ ಶಿಷ್ಯನಿಗೆ ಅಭಿಪ್ರಾಯವನ್ನು ಪೂರ್ಣವಾಗಿ ತಿಳಿಸಿ, ಅದನ್ನು ಪತ್ರಿಕೆಯಲ್ಲಿ ವಿವರಿಸಿ ಬರೆಯ ಬೇಕೆಂದು ಅಪ್ಪಣೆ ಕೊಟ್ಟನೋ, ನಿಶ್ಚಯವು ತೋರುವದಿಲ್ಲ.

ಈ ಪತ್ರಿಕೆಯು ಪೌಲನದೆಂದು ಪ್ರಮಾಣಿಸುವ ಎರಡು ಬಹಿಶ್ಚಿನ್ಹೆಗಳುಂಟು. ಸ. ೧೦, ೩೨— ೩೪ಲ್ಲಿ ಸೂಚಿತವಾದದ್ದು ಅಪೊ. ಕೃ. ೨೪, ೨೩. ೨೬ಲ್ಲಿ ಕಾಣುವ ಸಂಗತಿಗೆ ವಿಶೇಷವಾಗಿ ಒಪ್ಪುತ್ತದೆ. ಮತ್ತು ಸ. ೧೩, ೨೩ಲ್ಲಿ ತಿಮೊಥೆಯನ ವಿಷಯವಾಗಿ ಬರದದ್ದು ಪತ್ರಿಕಾಕರ್ತನು ಪೌಲನೇಯೆಂಬುವದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಹೀಗಿರಲಾಗಿ, ಬೇರೊಬ್ಬ ಯಾವನಾದರೂ ಈ ಪತ್ರಿಕೆಯನ್ನು ರಚಿಸಿದ್ದಾದರೆ, ಅವನು ಆ ಎರಡು ಸ್ಥಳಗಳಲ್ಲಿ ಪೌಲನಿಗೆ ಸಹಜವಾದ ಚಿನ್ಹೆಗಳನ್ನು ಜೋರತೇಖಿಕ ಯುಕ್ತಿಯಿಂದ ಕಲ್ಪಿಸಿ,

ಎ. ಇತಲದಲ್ಲಿ ಪೌಲನ ಪ್ರವೃತ್ತಿ. "ಕ್ರಿಸ್ತನೂ ದೂತರೂ." ೪೬೧

ಇಬ್ರಿ. ೧, ೧—೫.

ಶೇರಿಸಿದನೆಂದು ನೆನಸ ಬೇಕು. ಹಾಗಾದರೆ ಈ ಪತ್ರಿಕೆಯು ಜೋಕಪತ್ರಿಕೆಯೇ ಸರಿ. ಆದರೆ ಈ ಮಾತಿಗೆ ಸಮ್ಮತರಾಗುವವರು ಯಾರು?

ರಚನಾಕಾಲ ಸ್ಥಳಗಳ ವಿಷಯವಾಗಿ ಈ ಭಾಗದ ಪೀಠಿಕೆಯಲ್ಲಿ ಬೇಕಾದದ್ದನ್ನು ವಿವರಿಸಿದ್ದೇವೆ.

ತಾತ್ಪರ್ಯವು.

ಪೌಲನು ರಕ್ಷಕನಾದ ಯೇಸು ಕ್ರಿಸ್ತನ ಮಹಿಮೆಯನ್ನೂ, ಆತನಿಂದುಂಟಾದ ರಕ್ಷಣೆಯ ಮಹಿಮೆಯನ್ನೂ ಯೆಹೂದಕ್ರೈಸ್ತರಿಗೆ ಹಳೆ ಒಡಂಬಡಿಕೆಯ ಗ್ರಂಥಗಳಿಂದ ಪ್ರಮಾಣಿಸಿ ಬೋಧಿಸುತ್ತಾನೆ. ಈ ಅಭಿಪ್ರಾಯಕ್ಕೆ ಅನುಕೂಲವಾಗಿ ವಿಶ್ವಾಸದಲ್ಲಿ ಧೈರ್ಯವೂ, ಸ್ಥೈರ್ಯವೂ ಉಳ್ಳವರಾಗಿರ ಬೇಕೆಂದು ಸಭೆಯವರನ್ನು ಎಚ್ಚರಿಸುತ್ತಾನೆ. ಹೀಗಿರಲಾಗಿ, ಈ ಪತ್ರಿಕೆಗೂ ಎರಡು ಭಾಗವುಂಟು.

I. ಬೌದ್ಧಿಕವಾಖ್ಯಾನಭಾಗವು. ಕ್ರೈಸ್ತಧರ್ಮದ ಮಹಿಮೆಯು.

೧. ಯೇಸು ಕ್ರಿಸ್ತನ ಮಹಿಮೆಯು.

ಅ. ಆತನು ದೇವದೂತರಿಗಿಂತ ಅಧಿಕನು. ಸ. ೧. ೨.

ಆ. ಆತನು ಮೋಶೆಗಿಂತ ಅಧಿಕನು. ಸ. ೩. ೪.

೨. ಕ್ರಿಸ್ತನ ಯಾಜಕತ್ವದ ಮಹಿಮೆಯು. ಸ. ೫, ೧—೧೦, ೧೪.

II. ಉದ್ಬೌದ್ಧಿಕವಾಖ್ಯಾನಭಾಗವು. ಸ. ೧೦, ೧೫—೧೩, ೧೫.

ಅ. ವಿಶೇಷವಾದ ಸ್ಥೈರ್ಯೋದ್ಬೋಧನೆಯು. ಸ. ೧೦, ೧೬—ಸ. ೧೨.

ಆ. ಬೇರೆ ಬೇರೆ ಉದ್ಬೋಧನೆಗಳು. ಸ. ೧೩, ೧—೧೬.

ಅಂತ್ಯೋಕ್ತಿಯು. ಸ. ೧೩, ೨೦—೨೫.

ಕ್ರೈಸ್ತಧರ್ಮದ ಮಹಿಮೆಯು.

ಯೇಸು ಕ್ರಿಸ್ತನ ಮಹಿಮೆಯು.

ದೇವದೂತರು ಮುಂತಾದ ಸರ್ವ ಸೃಷ್ಟಿಗಿಂತ ಉತ್ಕೃಷ್ಟವಾದ ಕ್ರಿಸ್ತನ ಶ್ರೇಷ್ಠತ್ವವು. ಸ. ೧. ೨.

ಈ ತಾತ್ಪರ್ಯದ ಸೂಚನೆಯು. ಸ. ೧.

೧. ಪೂರ್ವದಲ್ಲಿ ಅನೇಕ ಭಾಗವಾಗಿಯೂ ೧), ಅನೇಕ ವಿಧವಾಗಿಯೂ ೨), ಪ್ರವಾದಿಗಳಿಂದ ೩) ಪಿತೃಗಳ ಸಂಗಡ ೪) ಮಾತಾಡಿದ ದೇವರು, ಈ ಅಂತ್ಯ ದಿವಸಗಳಲ್ಲಿ ೫) ನಮಗೆ ಮಗನಿಂದ ನಮ್ಮ ಸಂಗಡ ಮಾತಾಡಿದ್ದಾನೆ. ಎ. ಇವನನ್ನು ಸರ್ವಕ್ಕೆ ಬಾಧ್ಯಸ್ತನಾಗಿ ೬) ನೇಮಿಸಿದನು; ಇವನಿಂದ ಲೋಕಗಳನ್ನು ಉಂಟು ಮಾಡಿದನು ೭); ಇವನು, ಅವನ ಮಹಿಮೆಯ ಪ್ರತಿಕಾಂತಿಯಾಗಿಯೂ, ೩. ಅವನ

ಇಬ್ರಿ. ೧.

ಸ್ವಭಾವದ (ಪ್ರತಿ ರೂಪವಾಗಿಯೂ [೮]), ತನ್ನ ಬಲದ ವಾಕ್ಯದಿಂದ [೯] ಸರ್ವಕ್ಕೆ ಆಧಾರಕನಾಗಿಯೂ ಇದ್ದು, ತನ್ನಿಂದ ತಾನೇ ನಮ್ಮ ಪಾಪಗಳ ಶುದ್ಧೀಕರಣವನ್ನು ಮಾಡಿ, ಉನ್ನತವಾದವುಗಳಲ್ಲಿರುವ ಮಹತ್ತಿನ ಬಲಪಾರ್ಶ್ವದಲ್ಲಿ ಕೂತು ಕೊಂಡನು [೧೦].

೧. ನರಜಾತೃತ್ವತ್ತಿ ಮೊದಲುಗೊಂಡು ಮಲಕಿಯನ ಪರ್ಯಂತ ಮನುಷ್ಯರಿಗೆ ಪ್ರಾಪ್ತವಾದ ದಯಾಳುವಾಗಿರುವ ದೇವರ ಪ್ರಕಟಣೆಗಳು ಪರಿಶುದ್ಧ ಬರಪುವೆಂಬ ಗ್ರಂಥದಲ್ಲಿ ಲೌಕಿಕೋಪದೇಶಾರ್ಥವಾಗಿ ಬರದವೆ. ಪರಿಶುದ್ಧ ಬರಪುವನ್ನು ಬಲ್ಲವರ ಉದ್ದಿಶ್ಯವಾಗಿ ಈ ಪತ್ರಿಕೆಯು ರಚಿತವಾಗಿದೆ.

೨. ಅಂದರೆ, ದೇವರು ದರ್ಶನಗಳಿಂದಲೂ, ಸ್ವಪ್ನಗಳಿಂದಲೂ, ದೂತಪ್ರತ್ಯಕ್ಷಗಳಿಂದಲೂ, ದೇವಪ್ರತ್ಯಕ್ಷಗಳಿಂದಲೂ ಪೆದರಿಸುವವನಾಗಿಯೂ, ಶಿಕ್ಷಿಸುವವನಾಗಿಯೂ, ಮನಾಪಾರವಾದ ಆಶಾವಾಕ್ಯ ಕಾಡುವವನಾಗಿಯೂ ಸಮಯೋಚಿತವಾಗಿ ತನ್ನನ್ನು ಪ್ರಕಟಿಸಿ ಕೊಂಡನು.

೩. ಪ್ರವಾದಿಗಳೆಂಬ ಪೆಸಗರ್ಕಾಂಡವರಿಂದ ಮಾತ್ರವಲ್ಲ, ಅಬ್ರಪಾಮ ಮೋಶೆ ಮುಂತಾದವರಿಂದ ಸಪಾ. ೧೫ಮೋಶೆ.೪, ೨೬; ೧೨, ೮; ೧೩, ೧೮. ಈರೀತಿಯಾಗಿ ದೇವರು ಯೆಪೂದರನ್ನುಮಾತ್ರವಲ್ಲ, ಬೇರೆ ಜನರನ್ನುಸಪಾ ಯೇಸು ಕ್ರಿಸ್ತನಲ್ಲಿ ಉಂಟಾದ ಅತ್ಯಂತಮಪಾಮೆಯುಳ್ಳ ಅಂತ್ಯಪ್ರಕಟಣೆಗಾಗಿ ಪಾವಣಿಸಿದನು.

೪. ಅಂದರೆ, ಅಬ್ರಪಾಮ ಇಸಾಕ ಯಾಕೋಬರು ಮುಂತಾದ ಇಸ್ರಯೇಲನವರ ಪೂರ್ವಿಕರ ಸಂಗಡ.

೫. ಯೇಸು ಕ್ರಿಸ್ತನು ಬಂದಂದಿನಿಂದ ಲೌಕಾಂತ್ಯದವರೆಗೂ ನಡೆಯುವ ಕಾಲಕ್ಕೆ ಅಂತ್ಯದಿವಸಗಳೆಂಬ ಪೆಸರದೆ. ಯಾಕಂದರೆ: ಯೇಸು ಕ್ರಿಸ್ತನಿಂದುಂಟಾದ ದೇವಪ್ರಕಟಣೆಯು ಶ್ರೇಷ್ಠವಾದದ್ದೂ ಅಂತ್ಯವಾದದ್ದೂ ಆಗಿದೆ.

೬. ತಂದೆಯದೆಲ್ಲಾ ಮಗನದಾಗಿದೆ. ಸರ್ವವು ಮಗನಿಗೆ ಅಧೀನವಾಗಿದೆ. ಸ. ೨, ೮.

೭. ಇದು ಯೋಪಾ. ೧, ೩ಲ್ಲಿಯೂ ಸ್ಪಷ್ಟವಾಗಿ ವಿವರಿಸಿಯದೆ.

೮. ಇದಕ್ಕೆ ಯೋಪಾ. ೧೪, ೬—೧೧. ಸರಿನೋಡ ಬೇಕು.

೯. ಸರ್ವಶಕ್ತವಾದ ಸೃಷ್ಟಿಕರ್ತನ ಬಲವು ನಿರ್ಮಾಣವಾದವ್ವನ್ನೆಲ್ಲಾ ಉದ್ಧರಿಸುತ್ತಾ ಬರುತ್ತದೆ.

೧೦. ಆತನು ಸರ್ವಾಧಿಕಾರಿಯಾಗಿ ಲೌಕವನ್ನು ಕಾರಿ. ೧೫, ೨೫ಲ್ಲಿ ಸೂಚಿತವಾದ ಸಮಾಪ್ತಿವರೆಗೂ ಆಳುತ್ತಾನೆ.

ಆತನು ದೂತರಿಗಿಂತ ಸಹ ಶ್ರೇಷ್ಠನಾಗಿದ್ದಾನೆ. ಇದಕ್ಕೆ ದೇವರ ವಾಕ್ಯದಲ್ಲಿ ಆತನಿಗೆ ಪ್ರತ್ಯೇಕ ಹೆಸರಾದ ದೇವರ ಮಗನು ಎಂಬುವದು ಪ್ರಮಾಣವಾಗಿದೆ. ತಂದೆಯಾದ ದೇವರು: "ನೀನು ನನ್ನ ಮಗನು; ಇಂದು ನಿನ್ನನ್ನು ಪಡದಿದ್ದೇನೆ" ಎಂದು (ಕೀರ್ತ. ೨, ೭.) ದೂತರಲ್ಲಿ ಯಾರಿಗೂ ಹೇಳಲಿಲ್ಲ. ೨ ಸಮು. ೭, ೧೪ ಇತ್ಯಾದಿಯಲ್ಲಿ ಸಹ ಇದೇ ಅಭಿಪ್ರಾಯ ಕಾಣುತ್ತದೆ: ನಾನು ಅವನಿಗೆ ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು ಎಂಬ ಮಾತು ದವೀದನ ಮಗನಾದ ಸೊಲೊಮೋನನನ್ನು ಸೂಚಿಸಿದರೂ, ಅವನು ಮೆಸ್ಸೀಯನ ಮುಂಗುರ್ತಾದ್ದರಿಂದ, ಮೆಸ್ಸೀಯನಿಗೆ ಸಹ ಬರುತ್ತದೆ. ಮತ್ತು ಕೀರ್ತ. ೯೭, ೭ಲ್ಲಿ, ದೇವದೂತರೆಲ್ಲರೂ ಆತನಿಗೆ ಅಡ್ಡ ಬೀಳ ಬೇಕೆಂದು ಬರದದೆ; ಹಾಗಾದರೆ ದೇವದೂತರು ಸಹ ಮನುಷ್ಯರ ಪ್ರಕಾರ ಮಗನಿಗೆ ಸೇವೆ ಮಾಡ ಬೇಕು. ಮತ್ತು ಕೀರ್ತ. ೧೦೪, ೪ಲ್ಲಿ ದೂತರ ವಿಷಯವಾಗಿ: ತನ್ನ ದೂತರನ್ನು ಘಾಳಿಗಳಾಗಿ, ತನ್ನ ಸೇವಕರನ್ನು ಅಗ್ನಿಜ್ವಾಲೆಗಳಾಗಿ ಮಾಡುತ್ತಾನೆಂದು ಬರದದೆ. (ಅವರು ಘಾಳಿ ಶಿಶ್ಯಗಳಂತೆ ದೇವರ ಅಪ್ಪಣೆಗಳನ್ನು ನಡಿಸುತ್ತಾರೆ) ಆದರೆ ಮಗನಿಗೆ ಕೀರ್ತನೆಗಳ ಎರಡು ಸ್ಥಳಗಳಲ್ಲಿ ದೇವರೆಂದು ಹೆಸರಿಟ್ಟಿದೆ. ಕೀರ್ತ. ೪೫, ೬ಲ್ಲಿ ಬರದದ್ದೇನಂದರೆ: ದೇವರೇ, ನಿನ್ನ ಸಿಂಹಾಸನವು ಯುಗ

ಯುಗಕ್ಕೂ ಇರುವದು; ನಿನ್ನ ರಾಜ್ಯವು ನೀತಿಯುಳ್ಳದ್ದಾಗಿದೆ. ನೀನು ನೀತಿಯನ್ನು ಪ್ರೀತಿ ಮಾಡಿ, ಅನ್ಯಾಯವನ್ನು ಹಗೆ ಮಾಡುತ್ತೀ ಆದ್ದರಿಂದ, ಓ ದೇವಕೆ, ನಿನ್ನ ದೇವರು ನಿನಗೆ ಅತಿಶಯವಾದ ಆತ್ಮಾಭಿಷೇಕವನ್ನು ಮಾಡಿದ್ದಾನೆ. ಕೀರ್ತ. ೨, ೨೬ ಇತ್ಯಾದಿಗಳಲ್ಲಿ ನೀನು ಆದಿಯಲ್ಲಿ ಭೂಮಿಯನ್ನೂ, ಆಕಾಶವನ್ನೂ ಉಂಟು ಮಾಡಿದ್ದೀ. ಅವು ನಾಶವಾದರೆ, ನೀನು ನೆಲೆಯಾಗಿರುತ್ತೀ ಎಂದು ಬರದದೆ. ಮತ್ತು ಕೀರ್ತ. ೧೧೦ರಲ್ಲಿ ತಂದೆಯಾದ ದೇವರು ಅವನನ್ನು ಜೊತೆಯ ರಾಜ್ಯಾಧಿಕಾರಿಯಾಗಿ ನೇಮಕ ಮಾಡುತ್ತಾನೆ. ದೂತರ ಉದ್ಯೋಗ ಬೇರೆ; ಅವರೆಲ್ಲರು. ವ. ೧೪. ರಕ್ಷಣೆಯನ್ನು ಹೊಂದ ತಕ್ಕವರಿಗಾಗಿ ಸೇವಕರಾಗಿ ನೇಮಕವಾದ ಉಳಿಗದ ಆತ್ಮಗಳಾಗಿದ್ದಾರೆ.

ಆದ್ದರಿಂದ ಆತನ ವಿಶ್ವಾಸದಲ್ಲಿ ದೃಢವಾಗಿರ ಬೇಕು. ಸ. ೩, ೧—೪.

೧. ಆದದರಿಂದ, ಒಂದು ವೇಳೆ ಜಾರಿ ಹೋಗದ ಹಾಗೆ೧), ನಾವು ಕೇಳಿದವುಗಳ ಮೇಲೆ ಅಧಿಕ ಜಾಗ್ರತೆಯಾಗಿ ಮನಸ್ಸಿಡ ಶಕ್ತದ್ದು. ೨. ಯಾಕಂದರೆ ದೂತರ ಮುಖಾಂತರ ಹೇಳಲ್ಪಟ್ಟ ವಾಕ್ಯವು ಸ್ಥಿರವಾಗಿದ್ದು, ಒಂದಾಂದು ಮೀರುವಿಕೆಯೂ, ಅವಿಧೇಯತ್ವವೂ, ೩. ನ್ಯಾಯವಾದ ಪ್ರತಿಫಲವನ್ನು೨) ಹೊಂದಿದ್ದಾದರೆ, ಅಷ್ಟು ದೊಡ್ಡ ರಕ್ಷಣೆಯನ್ನು ಅಲಕ್ಷ್ಯ ಮಾಡಿದರೆ, ನಾವು ತಪ್ಪಿಸಿ ಕೊಳ್ಳುವದು ಹ್ಯಾಗೆ? ಳ. ಅದು ಕರ್ತನಿಂದ ಹೇಳಲ್ಪಡಲಾರಂಭಿಸಿ, ದೇವರು ಸಹ ಲಕ್ಷಣಗಳಿಂದಲೂ, ಅದ್ಭುತಗಳಿಂದಲೂ, ನಾನಾ ಬಲವಾದ ಕ್ರಿಯೆಗಳಿಂದಲೂ ಪರಿಶುದ್ಧಾತ್ಮದ ಸ್ವಚಿತ್ತಾನುಸಾರವಾದ ಹಂಚುವಿಕೆಗಳಿಂದಲೂ ಸಾಕ್ಷಿ ಕೊಡಲಾಗಿ, ಕೇಳಿದವರ ಮೂಲವಾಗಿ೩) ನಮಗೆ ಸ್ಥಾಪಿಸಲ್ಪಟ್ಟದ್ದಲ್ಲವೇ?

೧. ಅಂದರೆ, ಅವಿಶ್ವಾಸದಿಂದ ಮೋಸ ಹೋಗಿ, ನಾಶವಾಗದ ಹಾಗೆ.

೨. ಹುತ್ತು ಆಜ್ಞೆಗಳನ್ನು ಮೀರಿದವರು ಪ್ರಾಣ ಶಿಕ್ಷೆಗೆ ಒಳಗಾದರು.

೩. ಈ ಮಾತಿನಿಂದ ಅಪಾಸ್ತಲನಾದ ಪೌಲನು ತನ್ನನ್ನು ಪ್ರಥಮ ಅಪಾಸ್ತಲರ ಸಮುದಾಯದಲ್ಲಿ ಶೇರಿಸಿ ಕೊಳ್ಳದೆ, ಪತ್ರಿಕಾವಲೋಕಿಕರಿಗೆ ಸಮಾನ ಮಾಡಿ ಕೊಳ್ಳುತ್ತಾನೆ. ಈ ಸಾತ್ವಿಕ ವೃತ್ತಿಯಿಂದ ಅವರ ಮನಸ್ಸನ್ನು ತನ್ನ ವಶ ಮಾಡಿ ಕೊಳ್ಳುತ್ತಾನೆ.

ಕ್ರಿಸ್ತನ ನೀಚಸ್ಥಿತಿಯೂ ಶ್ರಮಕಾಲವೂ ಆತನ ಮಹಿಮೆಯನ್ನು ನಿರಾಕರಿಸುವದಿಲ್ಲ. ಯಾಕಂದರೆ, ದೇವಮಹಿಮೆಯುಳ್ಳ ಮೆಸ್ಸೀಯನು ಒಂದು ಕಾಲ ತಗ್ಗಿಸಿ ಕೊಳ್ಳಬೇಕೆಂದು, ಆನೆ ಕೀರ್ತನೆಯಲ್ಲಿ ಪೂರ್ವಸೂಚಿತವಾಗಿದೆ. ಸ. ೨, ೫—೯.

೫. ಯಾಕಂದರೆ ನಾವು ಹೇಳುವ ಮುಂದಿನ ಲೋಕವನ್ನು೧) ಅವನು ದೂತರಿಗೆ ಅಧೀನ ಮಾಡಲಿಲ್ಲ. ೬. ಆದರೆ ಒಬ್ಬನು ಒಂದು ಸ್ಥಳದಲ್ಲಿ ಸಾಕ್ಷಿಯಾಗಿ

೯೬೪ ಅಪೌ. ಚ. ೩. ಪರಿಚ್ಛೇದ. ಅಪೌಸ್ತಲರ ಅಂಶ/ಪ್ರೂವ್ ೪ತ್ತಿ.

ಇಬ್ರಿ. ೨, ೭—೧೦.

ಹೇಳುವದ್ಯೇನಂದರೆ ೭), ನೀನು ಅವನನ್ನು ನೆನಸುವದಕ್ಕೆ, ಮನುಷ್ಯ/ನು ಯಾರು? ಇಲ್ಲವೆ ಅವನನ್ನು ಪರಾಮರಿಸುವದಕ್ಕೆ ಮನುಷ್ಯ/ನ ಮಗನು ಯಾರು? ಅವನಂನು ದೂತರಿಗಿಂತ ಸ್ವಲ್ಪ ಕಡಿಮೆ ೮) ಮಾಡಿದಿ; ೭. ಮಹಿಮೆ ಮಾನಗಳ ಕಿರೀಟವಾನು ಅವನ ಮೇಲೆ ಇಟ್ಟಿ; ನಿನ್ನ ಕೈಕೆಲಸಗಳ ಮೇಲೆ ಅವನನ್ನು ಇರಿಸಿದಿ; ೮. ಅವನ ಪಾದಗಳ ಕೆಳಗೆ ಸಮಸ್ತವನ್ನು ಅಧೀನ ಮಾಡಿದಿ. ಯಾಕಂದರೆ ಸರ್ವವನ್ನು ಅವನಿಗೆ ಅಧೀನ ಮಾಡಿದ್ದರಲ್ಲಿ ಅವನಿಗೆ ಅಧೀನವಾಗದ ಒಂದನ್ನಾದರೂ ಬಿಡಲಿಲ್ಲ. ಆದರೆ ಸರ್ವವು ಅವನಿಗೆ ಅಧೀನವಾದದ್ದನ್ನು ಇಗಲ್ಯೇ ಕಾಣೆವು. ೯. ಆದರೆ ದ್ಯೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ರುಚಿ ನೋಡುವದಕ್ಕಾಗಿ, ದೂತರಿಗಿಂತ ಸ್ವಲ್ಪ ಕಡಿಮೆ ಮಾಡಲ್ಪಟ್ಟವನಾದ ಯೇಸು ಮರಣದ ಶ್ರಮ ಪಟ್ಟದ್ದಕ್ಕೋಸ್ಕರ, ಮಹಿಮೆ ಮಾನಗಳ ಕಿರೀಟವಿಡಲ್ಪಟ್ಟದ್ದನ್ನು ನೋಡುತ್ತೇವೆ ೪).

೧. ಸುವಾರ್ತೆಯು ನೂತನ ಚೂಪರಲೋಕಗಳಲ್ಲಿ ಸಂಪೂರ್ಣವಾಗುವ ದೇವರಾಜ್ಯವನ್ನು ಸಾರುತ್ತದೆ. ಅದರ ಸರ್ವಾಧಿಕಾರವು ದೂತರಿಗಲ್ಲ, ದೇವರ ಮಗನಿಗೆ ನೇಮಕವಾಗಿದೆ. ಇದು ಲನೆ ಕೀರ್ತನೆಯಲ್ಲಿ ಸೂಚಿತವಾಗಿದೆ.

೨. ಅಂದರೆ, ದವೀದನು ಲನೆ ಕೀರ್ತನೆಯಲ್ಲಿ. ಅದರಲ್ಲಿ ಸರ್ವಾಧಿಕಾರಿಯಾದ ಮನುಷ್ಯನ ಮಗನು ತಗ್ಗಿಸಿ ಕಾಳ್ಳ ಬೇಕೆಂಬದು ಸೂಚಿತವಾಗಿದೆ.

೩. ದೇವರ ಮಗನು ಮನುಷ್ಯನಾಗಿ ಪುಟ್ಟಿ, ಶ್ರಮ ಪಟ್ಟು, ಸತ್ತು ಕಾಲದಲ್ಲಿ ದೂತರಿಗಿಂತ ಕಡಿಮೆಯವನಾಗಿ ಕಾಣಿಸಿ ಕಾಂಡನು. ಆದಾಗ್ಯೂ ತಂದೆಯಾದ ದೇವರು ಅವನಿಗೆ ಸಮಸ್ತವನ್ನು ಅಧೀನ ಮಾಡಿದ್ದಾನೆಂದು ಬರದದೆ.

೪. ಅವನು ಶ್ರಮಮಾರ್ಗವಾಗಿ ದೇವಮಹಿಮೆಯಲ್ಲಿ ಶೇರಿದ್ದಾನೆಂಬದನ್ನು, ದೇವರ ಸನ್ನಿಧಿಯಲ್ಲಿ ಶೇರಿದ ದೇವರ ಮಗನು ಇಕ್ಕರಿಗೆ ಕಾಡುವ, ಮಹಿಮೆಯ ಆತ್ಮವನ್ನು ಪಡೆದಿದವರು ಕಣ್ಣಾರೆ ಕಂಡಂತೆ ಪೂರ್ಣ ನಿಶ್ಚಯವಾಗಿ ತಿಳಿದು ಕಾಳ್ಳುತ್ತಾರೆ.

ಮಹಿಮೆಯ ಅರಸನಾದ ದೇವರ ಮಗನು ಮನುಷ್ಯರಿಗೆ ಕರುಣೆಯುಳ್ಳ ಪ್ರಧಾನ ಯಾಜಕನಾಗುವ ಹಾಗೆ, ಮನುಷ್ಯನಾಗಿ ಪುಟ್ಟಿ ಅವರಿಗಾಗಿ ಶ್ರಮ ಪಟ್ಟು ಸಾಯ ಬೇಕಾದದ್ದು ದೇವರ ವಾಕ್ಯದ ಅನೇಕ ಸ್ಥಳಗಳಲ್ಲಿ ಬರದದೆ.

ಸ. ೨, ೧೦—೧೮.

೧೦. ಯಾಕಂದರೆ ಸರ್ವವು ಯಾವನಿಗೋಸ್ಕರವೋ, ಸರ್ವವು ಯಾವನಿಂದ ಆಯ್ತೋ, ಅವನಿಗೆ, ಅನೇಕ ಮಕ್ಕಳನ್ನು ಮಹಿಮೆಗೆ ತೇರಿಸುವದರಲ್ಲಿ ೧) ಅವರ ರಕ್ಷಣೆಯ ನಾಯಕನನ್ನು ಶ್ರಮಗಳಿಂದ ಸಂಪೂರ್ಣ ಮಾಡುವದು ೨), ಶಕ್ತದಾಗಿತ್ತು ೩). ೧೧. ಯಾಕಂದರೆ ಪರಿಶುದ್ಧ ಮಾಡುವವನೂ, ಪರಿಶುದ್ಧರಾಗುವವರೂ, ಎಲ್ಲರೂ ಒಬ್ಬನಿಂದಲೇ ೪). ೧೨. ಇದಕಾರಣದಿಂದ, ಅವನು ಅವರನ್ನು ಸಹೋದರ

೨. ಇತರದಲ್ಲಿ ಪೌಲನ ಪ್ರೌಢಸ್ಥಿತಿ. "ಕ್ರಿಸ್ತನೂ ಮೋಶೆಯೂ." ೪೬೫ ಇಬ್ರಿ. ೩, ೧ಕಿ—೧೪.

ರೆಂದುಕರೆಯುವದಕ್ಕೆ ನಾಚಿಕೆ ಪಡದೆ, ನಿನ್ನ ಹೆಸರನ್ನು ನನ್ನ ಸಹೋದರರಿಗೆ ತಿಳಿಸಿ [೫]), ಸಭೆಯ ಮಧ್ಯದಲ್ಲಿ ನಿನ್ನನ್ನು ಕೀರ್ತಿಸುವೆನೆಂದೂ [೬]), ೧೩. ಮತ್ತು ನಾನು ಅವನಲ್ಲಿ ನಂಬಿಕೆಯಾಗಿರುವೆನೆಂದೂ [೭]), ಮತ್ತು, ಇಗೋ, ನಾನೂ, ದೇವರು ನನಗೆ ಕೊಟ್ಟಿರುವ ಮಕ್ಕಳೂ, ಎಂದು ಹೇಳುತ್ತಾನೆ [೮]). ೧೪. ಹಾಗಾದರೆ, ಮಕ್ಕಳು ರಕ್ತ ಮಾಂಸಗಳಲ್ಲಿ ಪಾಲುಗಾರರಾಗಿರುವದರಿಂದ [೯]), ಅವನು ಸಹ ಅದ್ಕೇ ಮೈರೆಗೆ ಮರಣದಿಂದ ಮರಣದ ಅಧಿಕಾರವುಳ್ಳವನಾದ ಪಿಶಾಚನನ್ನು [೧೦]) ಲಯ ಮಾಡಿ, ೧೫. ಬದುಕುವ ಕಾಲವೆಲ್ಲಾ ಮರಣಭಯದಿಂದ ದಾಸತ್ವಕ್ಕೊಳಗಾಗಿ [೧೧]) ಇದ್ದವರನ್ನೆಲ್ಲ ಬಿಡಿಸುವ ಹಾಗೆ [೧೨]), ಅವುಗಳಲ್ಲಿ ಭಾಗಸ್ತನಾದನು. ೧೬. ಯಾಕಂದರೆ ನಿಶ್ಚಯವಾಗಿ ದೂತರನ್ನು ಸ್ವೀಕರಿಸದೆ, ಅಬ್ರಹಾಮನ ಬೀಜವನ್ನೇ ಸ್ವೀಕರಿಸುತ್ತಾನೆ [೧೩]). ೧೭. ಆದದರಿಂದ, ಜನರ ಪಾಪಗಳಿಗೋಸ್ಕರ ಶಾಂತಿ ಮಾಡುವದಕ್ಕೆ, ದೇವರ ಕಾರ್ಯಗಳಲ್ಲಿ ಕರುಣೆಯೂ, ನಂಬಿಕೆಯೂ ಉಳ್ಳ ಪ್ರಧಾನ ಯಾಜಕನಾಗಿರುವ ಹಾಗೆ, ಅವನು ಎಲ್ಲಾದರಲ್ಲಿ ಸಹೋದರರಿಗೆ ಸಮಾನ ಮಾಡಲ್ಪಡ ಬೇಕಾಗಿತ್ತು. ೧೮. ಯಾಕಂದರೆ ತಾನು ಶೋಧಿಸಲ್ಪಟ್ಟು, ಶ್ರಮ ಹೊಂದಿದ್ದರಲ್ಲಿ, ಶೋಧಿಸಲ್ಪಡುವವರಿಗೆ [೧೪]) ಸಹಾಯ ಮಾಡ ಬಲ್ಲನು.

೧. ಮನುಷ್ಯರಲ್ಲಿ ಅನೇಕರಿಗೆ ಮಹಿಮೆಯ ಆಶ್ರದ ಮುಖಾಂತರ ಪ್ರಾಪ್ತವಾದ ಮಹಿಮೆಯು, ರಕ್ಷಣೆಯ ಅಗ್ರಗಾಮಿಯು ಶ್ರಮಮಾರ್ಗವಾಗಿ ದೇವ ಮಹಿಮೆಯಲ್ಲಿ ಶೇರಿದ್ದರಿಂದಲೇ, ಸಾಥ್ಯವಾಯಿತು. ಇದು ದೇವರ ನ್ಯಾಯದ ಪ್ರಕಾರ ಅವಶ್ಯವಾಗಿತ್ತು.

೨. ಮನುಷ್ಯನಾಗಿ ತೋರಿಸ ಬೇಕಾದ ವಿಧೇಯತ್ವದ ಸಿದ್ಧಿಯನ್ನು ಪಡದು ಕಾಳ್ಳುವದಕ್ಕೆ ಆತನು ಶ್ರಮವನ್ನು ತಾಳಿ, ಸಾಯ ಬೇಕಾಯಿತು. ಇದು ಮುಂದಿನ ವಚನಗಳಲ್ಲಿ ವಿವರವಾಗಿ ಉದಾಪರಿಸಿಯದೆ.

೩. ಇದು ವಿಶಿಷ್ಟ ದೇವಗುಣವೃತ್ತಿಗಳಿಗೆ ಪೂರ್ಣ ಯೋಗ್ಯವಾಗಿತ್ತು.

೪. ಮನುಷ್ಯನಾದ ಯೇಸುವು ಸೃಷ್ಟಿಕರ್ತನೂ ಒಡೆಯನೂ ಆದ ತಂದೆಗೆ ಮಿಕ್ಕಾದ ಮನುಷ್ಯರ ಪ್ರಕಾರ ಒಳಗಾಗಿದ್ದನು.

೫. ಕ್ರಿಸ್ತನು ಇಲ್ಲಿ, ತಾನು ದೇವರ ತಿಳುವಿಕೆಗೆ ತರುವ, ದೇವಸಭೆಯ ಸ್ಥಾಪಕನಾಗಿ ನುಡಿಯುತ್ತಾನೆ.

೬. ಈ ಮಾತು ಕೀರ್ತ. ೨೨, ೨೩ಲ್ಲಿ ಬರದದೆ.

೭. ಯೇಸು ದೇವರಲ್ಲಿ ನಂಬಿಕೆಯಿಡುವದರಿಂದ ಮನುಷ್ಯರಿಗೆ ಸಮಾನನಾಗಿ ಕಾಣಿಸಿ ಕಾಳ್ಳುತ್ತಾನೆ. ಯೆಶಾ. ೮, ೧೭.

೮. ಯೆಶಾ. ೮, ೧೮. ಕ್ರಿಸ್ತನು ಇಲ್ಲಿ, ಮನುಷ್ಯರು ತನಗೆ ದೇವರು ಕೊಟ್ಟಂಥಾ, ತನಗೆ ಸಜಾತಿಯಾದಂಥಾ ಕುಟುಂಬವೆಂದು ಜಾವಿಸುತ್ತಾನೆ. ಈ ಲೌಕವಾಸಪ್ರವಾದನಾದ್ಯೋಗವೃತ್ತಿಗಳ ಕಾಲದಲ್ಲಿ ಶಿಷ್ಯರ ಜಾತೆಯಲ್ಲಿದ್ದ ಮೆಸ್ಸೀಯನಿಗೆ ಯೆಶಾಯನೂ ಅವನ ಮಕ್ಕಳೂ ಮುಂಗುರ್ತಾಗಿದ್ದರು.

೯. ಪಾಪಕ್ಕೂ, ಶ್ರಮಗಳಿಗೂ ಮರಣಕ್ಕೂ ಅಧೀನವಾದ ನಿರ್ಬಲವಾದ ನರಜಾವವು ಈ ಮಾತಿನಿಂದ ಸೂಚಿತವಾಗಿದೆ.

೧೦. ಯೋಪಾ. ೧೨, ೩೧ಲ್ಲಿಯೂ ೧ ಯೋಪಾ. ೩, ೮ಲ್ಲಿಯೂ ಯೇಸುವು ಮರಣವನ್ನನುಚವಿಸಿದರಿಂದ ಸೈತಾನನನ್ನೂ, ನಾವು ವಶವಾದ ಮರ

ಇಬ್ರಿ. ೩, ೧—೬.

ಣವನ್ನೂ ಜೈಸಿ, ನಮ್ಮನ್ನು ಮರಣಭಯದಿಂದ ಬಿಡಿಸಿದನೆಂಬ ಲಕ್ಷ್ಯವಾದ ತಾತ್ಪರ್ಯವು ಈ ಸ್ಥಳಕ್ಕೆ ಅನುಸಾರವಾಗಿ ಕಾಣುತ್ತದೆ.

೧೫. ಅಂದರೆ, ತಮ್ಮ ಜೀವಕಾಲವೆಲ್ಲಾ ಮರಣಕ್ಕೆ ಹೆದರಿ, ಆಳುಗಳಂತೆ ಪೀಡಿಗಳಾಗಿದ್ದ ಮನುಷ್ಯರನ್ನು ಬಿಡುಗಡೆ ಮಾಡಿದನು. ಹಳೆ ಒಡಂಬಡಿಕೆಯ ವಿಶ್ವಾಸಿಗಳು ಮರಣದಲ್ಲಿ ನಿರಾಶೆಯಾಗದಿದ್ದರೂ, ಪೌಲಾಸ ಒಡಂಬಡಿಕೆಯ ಚಕ್ಕರಂತೆ, ಇಹವನ್ನು ಬಿಟ್ಟರೆ, ದೇವರ ಸನ್ನಿಧಿಯಲ್ಲಿ ಶೇರುತ್ತೇವೆಂಬದನ್ನು ತಿಳಿಯದೆ ಇದ್ದದರಿಂದ, ಚಯರಹಿತರಾಗಿರಲಿಲ್ಲ.

೧೬. ಅಂದರೆ, ತಾನು ಸತ್ತು ಅವರನ್ನು ಬಿಡಿಸುವ ಪೌಲಾಗೆ.

೧೩. ಅಂದರೆ, ಆತನು ದೂತರ ರಕ್ಷಕನಾಗಿ, ದೂತಚಾವವನ್ನು ಧರಿಸಿ ಕಾಂಡನೆಂಬುವದು ಎಲ್ಲಿಯೂ ಬರದಿರುವದಿಲ್ಲ.

೧೪. ತಾನು ನಮ್ಮ ನಿರ್ಬಲವನ್ನು ಅನುಭವಿಸಿ ಕಾಂಡು, ನಮ್ಮ ದುರವಸ್ಥೆಯನ್ನು ಸ್ವಾನುಭವದಿಂದ ತಿಳಿದು, ನಮ್ಮ ಮೇಲೆ ಕರುಣೆಯುಳ್ಳವನಾಗುವ ಪೌಲಾಗೆ, ಮನುಷ್ಯನಾಗಿ ಪುಟ್ಟ ಬೇಕಾಯಿತು. ಇದಕ್ಕೆ ಸ. ೪, ೧೫. ಸರಿ ನಾೀಡ ಬೇಕು.

ಕ್ರಿಸ್ತನು ಮೋಶೆಗಿಂತ ಅಧಿಕನು. ಸ. ೩. ೪.

ಮೋಶೆಯು ದೇವರ ಸೇವಕರಲ್ಲಿ ಶ್ರೇಷ್ಠನಾಗಿದ್ದನು ಅಷ್ಟೆ; ಆದರೆ ಕ್ರಿಸ್ತನು ಮಗನಾಗಿದ್ದಾನೆ. ಸ. ೩, ೧—೬.

೧. ಆದದರಿಂದ, ಪರಿಶುದ್ಧ ಸಹೋದರರೇ೧), ಪರಲೌಕಿಕದ ಕರೆಯುವಿಕೆಯ ಪಾಲುಗಾರರೇ೨), ನಮ್ಮ ಅರಿಕೆಯ ಅಪೌಸ್ತಲನಾಗಿಯೂ, ಪ್ರಧಾನಯಾಜಕನಾಗಿಯೂ, ಇರುವ ಕ್ರಿಸ್ತ ಯೇಸುವನ್ನು೩) ಆಲೋಚಿಸಿರಿ; ೨. ಇವನು, ಅವನ ಮನೆ ಎಲ್ಲಾದರಲ್ಲಿ ಮೋಶೆ ಇದ್ದ ಹಾಗೆಯೇ, ತನ್ನನ್ನು ಇಟ್ಟವನಿಗೆ ನಂಬಿಕೆಯುಳ್ಳವನು. ೩. ಆದರೆ ಮನೆಗಿಂತ ಅದನ್ನು ಕಟ್ಟಿದವನು ಎಷ್ಟಧಿಕ ಮಾನವುಳ್ಳವನಾಗಿ,ಮೋಶೆಗಿಂತ೪) ಇವನು ಅಷ್ಟಧಿಕಮಹಿಮೆಗೆಯೋಗ್ಯನಾದನು. ೪. ಯಾಕಂದರೆ ಒಂದಾಂದು ಮನೆ ಯಾರಿಂದಲಾದರೂ ಕಟ್ಟಲ್ಪಡುವದು; ಆದರೆ ಸರ್ವವನ್ನು ಕಟ್ಟಿದವನು ದೇವರೇ. ೫. ಮತ್ತು ಮೋಶೆಯು ಹೇಳಲ್ಪಡಲಿರುವವುಗಳಿಗೆ ಸಾಕ್ಷಿಗಾಗಿ, ಸೇವಕನಾಗಿ ತನ್ನ ಮನೆಯೆಲ್ಲಾದರಲ್ಲಿ ನಂಬಿಗಸ್ತನು. ೬. ಆದರೆ ಕ್ರಿಸ್ತನು ಮಗನಾಗಿ ತನ್ನ ಮನೆಯ ಮೇಲೆ ಅಧಿಕಾರಿಯು. ಅವನ ಮನೆಯು ನಾವೇ; ನಿರೀಕ್ಷೆಯ ಖಚರವಸವನ್ನೂ, ಹೆಚ್ಚಳವನ್ನೂ, ಕಡೇ ವರಿಗೂ ಘಟ್ಟಿಯಾಗಿ ಹಿಡಿದು ಕಾಂಡರೆ೫).

೧. ಕ್ರಿಸ್ತನ ಐಕ್ಯದಲ್ಲಿ ಶೇರಿ, ಲೌಕಿಕ್ಕೆ ಖೇದವಾಗಿ, ದೇವರ ಸ್ವಕೀಯ ಜನರಾದ ಚಕ್ಕರಿಗೆ ಪರಿಶುದ್ಧ ಸಹೋದರರೆಂದು ಪೆಸರಿಟ್ಟದೆ. ಅವರನ್ನು ಕ್ರಿಸ್ತನು ಸ. ೨, ೧೧ರ ಪ್ರಕಾರ ಈ ಪೆಸರಿನಿಂದ ಕರೆಯುವದಕ್ಕೆ ನಾಚಿಕೆ ಪಡುವದಿಲ್ಲ.

೨. ಈ ಆಹ್ವಾನವು ದಿವದಿಂದ ಬಂದು, ದಿವದ ಮಹಿಮೆಗೆ ಕರೆಯುತ್ತದೆ.

೩. ಹಳೆ ಒಡಂಬಡಿಕೆಯ ಚಕ್ಕರು ಮೋಶೆಯು ಪ್ರವಾದಿಯಾಗಿದ್ದಾನೆಂದು ತಿಳಿದು, ಅವನನ್ನು ಅನುಸರಿಸಿ ಸನ್ಮಾನಿಸ ಬೇಕಾಯಿತು; ಪೌಲಾಸ ಒಡಂಬಡಿ

೨. ಇಕ್ಕಟ್ಟಿನಲ್ಲಿ ಪೌಲನ ಪ್ರಾರ್ಥನೆ. "ಕ್ರಿಸ್ತನೂ ಮೋಶೆಯೂ." ೪–೭

ಇಬ್ರಿ. ೩, ೭—೧೯.

ಕೆಯ ಒಕ್ಕರು ಯೇಸುವು ರಕ್ಷಕನೂ ದೇವರೂ ಆಗಿದ್ದಾನೆಂದು ತಿಳಿದು, ಆತನಿಗೆ ಪೂರ್ಣ ವಿಶ್ವಾಸದಿಂದ ಅಧೀನರಾಗಿರ ಬೇಕು.

೪. ಕ್ರಿಸ್ತನು ಸಭೆಯಂಬ ದೇವಾಲಯವನ್ನು ಕಟ್ಟಿಸಿದ ದೇವರಾಗಿದ್ದು, ಸಭೆಯ ಅಂಶವಾದ ಮೋಶೆಗಿಂತ ಅತ್ಯಂತ ಮಹಿಮೆಯುಳ್ಳವನಾಗಿದ್ದಾನೆ.

೫. ಇದು ಪರಿಶುದ್ಧಾತ್ಮದಿಂದ ಹುಟ್ಟಿದ ನಿಜ ವಿಶ್ವಾಸದ ಪ್ರಮಾಣವಾಗಿದೆ.

ವಿಶ್ವಾಸಸ್ಥೈರ್ಯಾರ್ಥವಾದ ಪ್ರಾರ್ಥನೆಯು. ಸ. ೩, ೭—೪, ೧೩.

೭. ಆದದರಿಂದ, ಪರಿಶುದ್ಧಾತ್ಮವು ಹೇಳುವ ಪ್ರಕಾರ ೧), ಇಂದಾದರೆ ಅವನ ಶಬ್ದವನ್ನು ಕೇಳಿದರೆ, ೮. ಕಾಪಾಪವೆಬ್ಬಿಸುವದರಲ್ಲಿ, ಅರಣ್ಯದಲ್ಲಾದ ಶೋಧನೆಯ ದಿವಸದಲ್ಲಿ ಇದ್ದ ಹಾಗೆ ೨), ನಿಮ್ಮ ಹೃದಯಗಳನ್ನು ಕಠಿಣ ಪಡಿಸ ಬೇಡಿರಿ. ೯. ಅಲ್ಲಿ ನಿಮ್ಮ ಪಿತೃಗಳು ನಾಲ್ವತ್ತು ವರುಷ ನನ್ನನ್ನು ಶೋಧಿಸಿ ೩), ನನ್ನನ್ನು ಪರೀಕ್ಷಿಸಿ, ನಂಬ ಕ್ರಿಯೆಗಳನ್ನು ನೋಡಿದರು. ೧೦. ಆದಕಾರಣ, ನಾನು ಆ ಸಂತತಿಯಿಂದ ಬೇಸರ ಗೊಂಡು, ಯಾವಾಗಲೂ ಹೃದಯದಲ್ಲಿ ತಪ್ಪುತ್ತಾರೆ; ೧೧. ಅವರು ನನ್ನ ಮಾರ್ಗಗಳನ್ನು ಅರಿಯರು; ಆದದರಿಂದ ನನ್ನ ವಿಶ್ರಾಂತಿಯಲ್ಲಿ ೪) ಪ್ರವೇಶಿಸರೆಂದು, ನಂಬ ಕೋಪದಲ್ಲಿ ಆಣೆ ಇಟ್ಟೆನು, ಅಂದನು.

೧. ಈ ಮಾತು ೪೫ನೆ ಕೀರ್ತನೆಯ ೭—೮ಲ್ಲಿ ಬರಪದೆ.

೨. ಇಲ್ಲಿ ಸೂಚಿತವಾದ ಸಂಗತಿ ಮೆರಿಬದಲ್ಲಿ ಆಯಿತು.

೩. ದೇವರು ತಮ್ಮನ್ನು ಸಂರಕ್ಷಿಸ ಶಕ್ತನಾ, ಮನಸ್ಸುಳ್ಳವನಾ ಎಂದು ಸಂಶಯ ಪಡುತ್ತಾ ಇದ್ದರು.

೪. ಅಂದರೆ, ನಾನು ಅವರಿಗೆ ಕಾಡುತ್ತೇನೆಂತ, ಆಶೆಯ ವಾಕ್ಯವನ್ನು ಕಾಟ್ಟಿ ದೇಶದಲ್ಲಿ ಕುರಿಮಂದೆಯಂತೆಯಿರುವ (ಕೀರ್ತ. ೪೫, ೭.) ದೇವಪ್ರಜೆಗೆ ವಿಶ್ರಾಂತಿಯ ಸ್ಥಿತಿಯು ಪರಮ ಸೌಖ್ಯವಾಗಿದೆ. ಕೀರ್ತ. ೨೩, ೨.

೧೨. ಸಹೋದರರೇ, ಜೀವವುಳ್ಳ ದೇವರನ್ನು ಬಿಟ್ಟು ಹೋಗುವಂಥ ಅವಿಶ್ವಾಸವುಳ್ಳ ಕೆಟ್ಟ ಹೃದಯವು ೧) ನಿಮ್ಮೊಳಗೆ ಒಬ್ಬನಲ್ಲಿ ಇರದ ಹಾಗೆ, ನೋಡಿ ಕಾಳ್ಕಿರಿ. ೧೩. ಆದರೆ ನಿಮ್ಮಲ್ಲಿ ಯಾರಾದರೂ ಪಾಪದ ಮೋಸದಿಂದ ೨) ಕಠಿಣವಾಗದ ಹಾಗೆ, ಇಂದಾತ್ತೆಂಬು ಹೇಳಲ್ಪಡುವ ಮಟ್ಟಿಗೂ ೩), ದಿನದಿನಕ್ಕೆ ಒಬ್ಬರಿಗೊಬ್ಬರು ಬುದ್ಧಿ ಹೇಳುತ್ತಾ ಇರ್ರಿ. ೧೪. ಯಾಕಂದರೆ ನಮ್ಮಿಚ್ಛೆಯಸದ ಆರಂಭವನ್ನು ಕಡೇವರೆಗೂ, ನಾವು ಘಟ್ಟಿಯಾಗಿ ಹಿಡಿದು ಕೊಂಡರೆ, ಕ್ರಿಸ್ತನಲ್ಲಿ ಪಾಲುಗಾರರಾಗಿರುತ್ತೇವೆ ೪). ೧೫. ಇಂದಾತ್ತೆಂಬು ಅವನ ಶಬ್ದವನ್ನು ಕೇಳಿದರೆ, ಎಂದು ಹೇಳಲ್ಪಡುವಾಗ, ಕಾಪಾಪವೆಬ್ಬಿಸುವದರಲ್ಲಿ ಆದ ಹಾಗೆ, ನಿಮ್ಮ ಹೃದಯಗಳನ್ನು ಕಠಿಣ ಪಡಿಸ ಬೇಡಿರಿ. ೧೬. ಯಾಕಂದರೆ ಯಾರು ಕೇಳಿ ಕೋಪವೆಬ್ಬಿಸಿದರು? ಮೋಶೆಯ ಮು

೪೬೮ ಅಪೌ. ಚ. ೩. ಪರಿಚ್ಛೇದ. ಅಪೌಸ್ತಲರ ಅಂಶ್ವಪ್ರೃವೃತ್ತಿ.

ಇಬ್ರಿ. ೩, ೧೭—೪, ೪.

ಖಾಂತರ ಐಗುಪ್ತದಿಂದ ಹೌರಟವರೆಲ್ಲರು ಅಲ್ಲ. ೧೭. ಆದರೆ ನಾಲ್ವತ್ತು ವರುಷ ಯಾರಿಂದ ಬೈಸರಗೌಂಡನು? ಯಾರ ಹೆಣಗಳು ಅರಣ್ಯದಲ್ಲಿ ಬಿದ್ದವ್ಯಾ, ಆ ಪಾಪಿಷ್ಠರಿಂದಲ್ಲವ್ಯಾ? ೧೮. ಮತ್ತು ತನ್ನ ವಿಶ್ರಾಂತಿಯಲ್ಲಿ ಪ್ರವೇಶಿಸರೆಂದು, ಯಾರಿಗೆ ಆಣೆ ಇಟ್ಟನು? ೧೯. ಅವಿಧ್ಯೇಯರಿಗಲ್ಲವ್ಯಾ? ಹಾಗಾದರೆ, ಅವಿಶ್ವಾಸದಿಂದ ಪ್ರವೇಶಿಸಲಾರದೆ ಹೌದರೆಂದು ನ್ಯಾಡುತ್ತೇವೆ ೫೫).

೧. ಕ್ರಿಸ್ತನು ಪೂರ್ಣ ನಂಬಿಕೆಯುಳ್ಳವನಾಗಿದ್ದಾನೆ; ಮನುಷ್ಯಹೃದಯವು ದೃಢವಿಲ್ಲದ್ದಾಗಿದೆ; ಆದ್ದರಿಂದ ಕ್ರಿಸ್ತರು ಯಾವಾಗಲೂ ತಮ್ಮ ವಿಷಯವಾಗಿಯೂ ಸಹೋದರರ ವಿಷಯವಾಗಿಯೂ ಜಾಗರೂಕರಾಗಿರ ಬೇಕು.

೨. ಅತ್ಯಂತ ನಷ್ಟಕರವಾದ ಮುಖ್ಯವಾದ ಪಾಪವು ಯಾವದಂದರೆ: ಅವಿಶ್ವಾಸವು. ಯೋಹಾ. ೮, ೨೪; ೧೬, ೯. ೨ಪೆ. ೬, ೧೩.

೩. ಈ ಕೃಪಾಕಾಲಕ್ಕೆ ಅಂತ್ಯವು ಬರುತ್ತದೆ. ಹೀಗಾದರೂ ಒಬ್ಬಾಬ್ಬ ಮನುಷ್ಯನು ಸಾಯುವಾಗ, ಅದು ಮುಗಿಯುತ್ತದೆ. ಸಾಯುವ ಕಾಲ ತಿಳಿಯದೆ ಇರುವದರಿಂದ, ಕೃಪಾಕಾಲ ಯಾವಾಗ ಮುಗಿಯುತ್ತದೆಂದು ತಿಳಿಯುವದಿಲ್ಲ.

೪. ಮನುಷ್ಯನ ಹೃದಯದಲ್ಲಿ ಸಹಜವಾಗಿ ಹುಟ್ಟುವ ನಂಬಿಕೆಯು ತಾತ್ಕಾಲಿಕವಾದದ್ದು. ಪರಿಶುದ್ಧಾತ್ಮದಿಂದ ಹುಟ್ಟುವಂಥಾದ್ದೇ ಸಾರ್ವಕಾಲಿಕವಾದದ್ದು. ಆದ್ದರಿಂದ ಪರಿಶುದ್ಧಾತ್ಮದಲ್ಲಿ ಪಾಲುಗಾರರಾಗಿರುವವರೇ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದಾರೆ.

೫. ಪೌಲನ ಅಭಿಪ್ರಾಯವೇನಂದರೆ: ಹಳೆ ಒಡಂಬಡಿಕೆಯ ಜನರಲ್ಲಿ ಹೆಚ್ಚು ಮಂದಿ ಅವಿಶ್ವಾಸದಿಂದ ಕೆಟ್ಟು ಹೋಗಿ, ವಾಗ್ದತ್ತವಾದ ದೇಶದಲ್ಲಿ ಶೇರಿಲಿಲ್ಲವೆಂಬುವದು ಪ್ರಸಿದ್ಧವಾಗಿದೆ. ಆದ್ದರಿಂದ ಹೊಸ ಒಡಂಬಡಿಕೆಯ ಸಭೆಯಲ್ಲಿ ಶೇರಿದವರಲ್ಲಿ ಸಹ ಅನೇಕರು ಅವಿಶ್ವಾಸದಿಂದ ರಕ್ಷಣೆಗೆ ತಪ್ಪುವರೆಂಬ ಭಯಕ್ಕೆ ಹೇತುವಾಗುತ್ತದೆ.

ಸ. ೪.

೧. ಆದದರಿಂದ ಅವನ ವಿಶ್ರಾಂತಿಯಲ್ಲಿ ಪ್ರವೇಶಿಸುವ ವಾಗ್ದತ್ತವು ಇನ್ನು ಇರಲು, ನಿಮ್ಮಲ್ಲಿ ಯಾವನಾದರೂ ಹಿಂದಾದವನಾಗಿ ತೋರದ ಹಾಗೆ, ಭಯ ಪಡೋಣ ೧). ೨. ಯಾಕಂದರೆ ಅವರಿಗೆ ಸುವಾರ್ತೆ ಪ್ರಸಂಗಿಸಲ್ಪಟ್ಟ ಹಾಗೆ ೨), ನಮಗೂ ಪ್ರಸಂಗಿಸಲ್ಪಟ್ಟಿದೆ. ಆದರೆ ಕೇಳಿದ ವಾಕ್ಯವು ಕೇಳಿದವರಲ್ಲಿ ವಿಶ್ವಾಸದ ಸಂಗಡ ಕಲಿಸಲ್ಪಡದ ಕಾರಣ ೩), ಅವರಿಗೆ ಪ್ರಯೋಜನವಾಗಲಿಲ್ಲ. ೩. ವಿಶ್ವಾಸಿಸಿದವರಾದ ನಾವೇ ಆ ವಿಶ್ರಾಂತಿಯಲ್ಲಿ ಪ್ರವೇಶಿಸುತ್ತೇವೆ. ಅವರು ನನ್ನ ವಿಶ್ರಾಂತಿಯಲ್ಲಿ ಪ್ರವೇಶಿಸರಂತ, ನನ್ನ ಕೋಪದಲ್ಲಿ ಆಣೆ ಇಟ್ಟೆನೆಂದು ಹೇಳಿದ ಪ್ರಕಾರವೇ. ಆದಾಗ್ಯೂ ಜಗದುತ್ಪತ್ತಿ ಮೊದಲುಗೊಂಡು ಕೆಲಸಗಳು ಮುಗಿಸಲ್ಪಟ್ಟಿದ್ದವು. ೪. ಮತ್ತು ಒಂದು ಸ್ಥಳದಲ್ಲಿ ಏಳನೇ ದಿವಸವನ್ನು ಕುರಿತು ಅವನು ಹೇಳಿದ್ದೇನಂದರೆ, ದೇವರು ತನ್ನ ಕೆಲಸಗಳಿಂದೆಲ್ಲಾ ಕ್ಷೀರಿಸಿ, ಏಳನೇ ದಿವಸದಲ್ಲಿ ವಿಶ್ರಮಿಸಿ ಕೊಂ

ಇಬ್ರಿ. ೪, ೫೫—೧೨.

ದನು. ೫೫. ಇದಲ್ಲದೆ ಇ ಸ್ಥಳದಲ್ಲಿಯೂ ನನ್ನ ವಿಶ್ರಾಂತಿಯಲ್ಲಿ ಪ್ರವೇಶಿಸರೆಂದು ಹೇಳಿದನು. ೬. ಹಾಗಾದರೆ, ಕೆಲವರು ಅದರಲ್ಲಿ ಪ್ರವೇಶಿಸುವದು ಇನ್ನು ಇರುವದರಿಂದಲೂ ೪), ಮೊದಲು ಸುವಾರ್ತೆ ಕೇಳಿದವರು ಅವಿಧೇಯತ್ವದಿಂದ ಪ್ರವೇಶಿಸದೆ ಹೋದದರಿಂದಲೂ; ೭. ಮತ್ತು ಒಂದು ದಿವಸವನ್ನು ಗೊತ್ತು ಮಾಡಿ, ಇ ಹೊತ್ತೆಂದು, ಬಹಳ ಕಾಲದ ಮೇಲೆ, ದಾವೀದನಲ್ಲಿ ೫) ಹೇಳುತ್ತಾನೆ. ಇಹೊತ್ತು ಅವನ ಶಬ್ದವನ್ನು ಕೇಳಿದರೆ, ನಿಮ್ಮ ಹೃದಯಗಳನ್ನು ಕಠಿಣ ಪಡಿಸ ಬೇಡಿರೆಂದು ಹೇಳಲ್ಪಟ್ಟ ಪ್ರಕಾರವೇ. ೮. ಯಾಕಂದರೆ ಯೆಹೋಶುವನು ಅವರನ್ನು ವಿಶ್ರಮಿಸಿ ಕಾಯ್ದು ಮಾಡಿದ್ದರೆ, ತರುವಾಯ ಇನ್ನೊಂದು ದಿವಸವನ್ನು ಕುರಿತು ಮಾತಾಡುತ್ತಿದ್ದಿಲ್ಲ. ೯. ಆದದರಿಂದ, ದೇವರ ಜನರಿಗೆ ಸಬ್ಬತಿನ ವಿಶ್ರಾಂತಿ ಇನ್ನುಳುಂಟು. ೧೦. ಯಾಕಂದರೆ ಅವನ ವಿಶ್ರಾಂತಿಯಲ್ಲಿ ಪ್ರವೇಶಿಸಿದವನು, ದೇವರು ತನ್ನವುಗಳಿಂದ ವಿಶ್ರಮಿಸಿ ಕಾಯ್ದಂತೆ ಹಾಗೆ, ತಾನು ತನ್ನ ಕೆಲಸಗಳಿಂದ ವಿಶ್ರಮಿಸಿ ಕಾಯ್ದಿದ್ದಾನೆ. ೧೧. ಆದದರಿಂದ, ಅದೇ ಅವಿಧೇಯತ್ವದ ಮಾದರಿಯ ಪ್ರಕಾರ ಯಾರಾದರೂ ಬೀಳದ ಹಾಗೆ, ಆ ವಿಶ್ರಾಂತಿಯಲ್ಲಿ ಪ್ರವೇಶಿಸ ಜಾಗ್ರತೆ ಪಡೋಣ.

೧. ಅನೇಕರಿಗೆ ನಷ್ಟವಾಯಿತೆಂಬ ತಿಳುವಿಕೆಯಿಂದ ಭಯವು ಸಹಜವಾಗಿ ಹುಟ್ಟ ತಕ್ಕದ್ದು. ಆದರೆ ದೇವರು ತನ್ನ ಭಕ್ತರಿಗೆ ಕಾಟ್ಟ ವಾಕ್ಯವು ಲಾಕಡ ಅವಿಶ್ವಾಸದಿಂದಲೂ ಅವಿಧೇಯತ್ವದಿಂದಲೂ ಭಂಗವಾಗದ ಕಾರಣ, ಭಕ್ತನು ನಿರಾಶೆಯಾಗ ಬಾರದು. ಕಡೇ ವರೆಗೂ ವಿಶ್ವಾಸದಲ್ಲಿ ದೃಢರಾಗಿರುವವರು ವಾಗ್ದತ್ತವಾದ ವಿಶ್ರಾಂತಿಯನ್ನು ಅನುಭವಿಸುವರು ಎಂಬದಕ್ಕೆ ಸಂಶಯವಿಲ್ಲ.

೨. ಹೊಸ ಒಡಂಬಡಿಕೆಯ ಸಭೆಗೆ ಹಳೆ ಒಡಂಬಡಿಕೆಯ ಸಭೆಯು ಸದೃಶವಾದ ಮುಂಗುರ್ತಾಗಿದೆಂಬುವದು ಈ ಸ್ಥಳದ ಮೂಲಾಭಿಪ್ರಾಯವು.

೩. ದೇವರ ವಾಕ್ಯವೆಂಬ ಬೀಜವು ಸಫಲವಾಗುವ ಹಾಗೆ, ಮನುಷ್ಯನ ಹೃದಯದಲ್ಲಿ ವಿಶ್ವಾಸವೆಂಬ ಸಾರವು ಅದಕ್ಕೆ ಜೋರ ಬೇಕು.

೪. ಪೂರ್ವ ಕಾಲದ ಇಸ್ರಾಯೇಲನವರಲ್ಲಿ ಲಕ್ಷಾಂತರ ಜನರು ದೇವರ ವಾಗ್ದತ್ತಾನುಭವಕ್ಕೆ ತಪ್ಪಿದರಿಂದ, ಅವರು ತಳ್ಳಿದ ಕೃಪೆಯನ್ನು ಹೊಂದುವದಕ್ಕೆ ಇತರರು ಅಧಿಕಾರಿಗಳಾಗ ಬಹುದೆಂದು, ಪೌಲನು ಸೂಚಿಸುತ್ತಾನೆ.

೫. ಅಂದರೆ, ಇತಿನೆ ಕೀರ್ತನೆಯಲ್ಲಿ. ದೇವರ ವಾಗ್ದತ್ತವಾದ ವಿಶ್ರಾಂತಿಯು ಯೋಶುವನಿಂದ ಇಸ್ರಾಯೇಲನವರಿಗೆ ದೊರಕಿದ್ದಕ್ಕೂ, ದಾವೀದನ ಕಾಲದಲ್ಲಿ ಅವರಿಗೆ ಪ್ರಾಪ್ತವಾದ ಸೌಖ್ಯಕ್ಕೂ, ಭೇದ ಉಂಟೆಂಬುವದಕ್ಕೆ ಮುಂದಿನ ವಿಶ್ರಾಂತಿಯ ವಿಷಯವಾಗಿ ದೇವರು ದಾವೀದನ ಬಾಯಿಂದ ಪ್ರಕಟ ಮಾಡಿದ ಪ್ರವಾದನೆಯು ಪ್ರಮಾಣವಾಗಿದೆ.

೧೨. ಯಾಕಂದರೆ ೧) ದೇವರ ವಾಕ್ಯವು ಜೀವವುಳ್ಳದ್ದು, ಬಲುರುಕಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲಾದರೂ ೨) ಹದವಾದದ್ದು, ಪ್ರಾಣ, ಆತ್ಮ ೩), ಕೀಲು,

೯೭೦ ಅಪೌ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಶ/ಪ್ರಾರ್ಥನೆ.

ಇಬ್ರಿ. ೪, ೧೩. ೧೪.

ಮೆದಳುಗಳ[೪]) ಚ್ಛೇದನ ಮರಿಗೂ ಶ್ಯೇರುವಂಥಾದ್ದು, ಹೃದಯದ ಇಚ್ಛೆಗಳನ್ನೂ, ಆಲೋಚನೆಗಳನ್ನೂ ಶೋಧಿಸುವಂಥಾದ್ದು[೫]). ೧೩. ಮತ್ತು ಅವನ ಸಮ್ಮುಖದಲ್ಲಿ ಪ್ರತ್ಯಕ್ಷವಾಗದಿರುವ ಸೃಷ್ಟಿಯೂ ಇಲ್ಲ; ಆದರೆ ಯಾರ ಸಂಗಡ ನಮಗೆ ಕಾರ್ಯ ಉಂಟೋ[೬]), ಅವನ ಕಣ್ಣುಗಳಿಗೆ ಸಮಸ್ತವು ಬೆತ್ತಲೆಯಾಗಿಯೂ, ತೆರೆದದ್ದಾಗಿಯೂ ಇದೆ[೭]).

೧. ತಾತ್ಪರ್ಯಸಂಬಂಧವೇನಂದರೆ: ಕರ್ತನು ಅವಿಶ್ವಾಸಿಗಳನ್ನೂ, ವಿಶ್ವಾಸಿಗಳನ್ನೂ ಚನ್ನಾಗಿ ವಿಶೇಷಿಸ ಬಲ್ಲನು. ಮತ್ತು ನಮ್ಮ ವಿಶ್ವಾಸವನ್ನು ನಾವೇ ಸತ್ಯವಾಗಿ ಪರೀಕ್ಷಿಸಿ ಕಾಳ್ಳುವದಕ್ಕೆ ಮನಸ್ಸುಳ್ಳವರಾಗಿದ್ದರೆ, ಸತ್ಯವನ್ನು ತಿಳಿದು ಕಾಳ್ಳುವದಕ್ಕೆ ಉತ್ತಮ ಸಹಾಯವಾದ ದೇವರ ವಾಕ್ಯವು ನಮಗೂ ಉಂಟು. ಯಾಕಂದರೆ ಇತ್ಯಾದಿ.

೨. ಅದು ಮನುಷ್ಯನ ಅಂತಃಕರಣದಲ್ಲಿರುವಂಥಾದ್ದೆಲ್ಲಾನ್ನು ಪೂರ್ಣವಾಗಿ ಶೋಧಿಸಿ, ಒಳ್ಳೇದನ್ನೂ ಕೆಟ್ಟದ್ದನ್ನೂ, ಸತ್ಯವನ್ನೂ ಅಸತ್ಯವನ್ನೂ, ಚೇದಿಸುತ್ತದೆ.

೩. ದೇವವಾಕ್ಯವು ಮನುಷ್ಯನ ಪ್ರಾಣದಲ್ಲಿ ಶೇರಿದಾಗ, ಅದು ಒಳಗಾಗದೆ ವಾಕ್ಯವನ್ನು ಎದುರಿಸಿದರೆ, ಆತ್ಮವೆಂಬದು ಅದರಿಂದ ಚೇದವಾಗುತ್ತದೆ. ಪೋಗಾದರೆ ಪ್ರಾಣವು, ಸತ್ಯ ನೀತಿಗಳ ರಸವನ್ನು ತಿಳಿಯದೆ, ಆತ್ಮರಹಿತವಾಗಿ ಜೀವಚ್ಛೈತನ್ಯವನ್ನು ಕಳದು ಕಾಳ್ಳುತ್ತದೆ. ೨ ಕಾರಿ. ೨, ೧೬.

೪. ಪ್ರಾಣಸಂಬಂಧವಾದ ದೇಹಧಾತುಗಳಿಗೂ, ಪ್ರಾಣವನ್ನು ಪರಿಶೋಧಿಸುವ ದೇವವಾಕ್ಯದ ಬಲವು ಗೋಚರವಾಗುತ್ತದೆ.

೫. ದೇವವಾಕ್ಯವು ಹೃದಯದ ಇಚ್ಛೆಗಳನ್ನೂ, ಆಲೋಚನೆಗಳನ್ನೂ ಶೋಧಿಸುತ್ತದೆ. ದೇವರ ವಾಕ್ಯವನ್ನು ವಿರೋಧಿಸುವ ಅವಿಶ್ವಾಸದಿಂದ ಅವು ಕೆಟ್ಟವುಗಳೆಂಬುವದು ಪ್ರಮಾಣ್ಯವಾಗಿದೆ.

೬. ಪೋಗಿರುವದರಿಂದ ನಾವು ಜಾಗ್ರತೆಯಿಂದಲೂ, ಚಕ್ತಿಯಿಂದಲೂ ನಡದು ಕಾಳ್ಳಬೇಕು.

೭. ಯಾವನೂ ತನ್ನ ಅಂತರಾಂತರ್ಯವನ್ನು ದೇವರಿಗೆ ಮರೆ ಮಾಡ ಕೂಡದು.

ಕ್ರಿಸ್ತನ ಪ್ರಧಾನಯಾಜಕತ್ವದ ಮಹಿಮೆಯು. ಸ. ೪, ೧೪—೧೦, ೧೪.

೧. ಮುಖ್ಯ ವಾಕ್ಯಗಳು.

ದೇವರ ಮಗನಾದ ನಮ್ಮ ಪ್ರಧಾನಯಾಜಕನು ಲೇವಿಕುಲದವರಾದ ಯೆಹೂದಪ್ರಧಾನಯಾಜಕರಿಗಿಂತ ಶ್ರೇಷ್ಠನಾಗಿದ್ದಾನೆಂಬುವದು ಈ ಭಾಗದಲ್ಲಿ ಉದಾಹರಿಸಲ್ಪಡುತ್ತದೆ. ನಿಜ ಪ್ರಧಾನಯಾಜಕನಾದ ಕ್ರಿಸ್ತನಿಗೆ ಮುಂಗುರ್ತುಗಳಾಗಿದ್ದ ಹಳ್ಳೆ ಒಡಂಬಡಿಕೆಯ ಪ್ರಧಾನಯಾಜಕರಿಗೆ ಅಸಾಧ್ಯವಾದದ್ದನ್ನು ಈತನು ಸಾಧಿಸಿ, ಭಕ್ತರ ಹೃದಯಗಳನ್ನು ಪೂರ್ಣವಾಗಿ ತೃಪ್ತಿ ಪಡಿಸುತ್ತಾನೆ.

ಅ) ಮನುಷ್ಯನಾಗಿದ್ದ ಮಹಾ ಪ್ರಧಾನಯಾಜಕನಾದ ಯೇಸುವಿನ ಕರುಣಾಗುಣವು.

ಸ. ೪, ೧೪—೧೬.

೧೪. ಹಾಗಾದರೆ, ಆಕಾಶಗಳನ್ನು ದಾಟಿದ[೧]) ದೇವರ ಮಗನಾದ ಯೇಸುವೆಂಬ ಮಹಾ ಪ್ರಧಾನಯಾಜಕನು ನಮಗಿರುವದರಿಂದ, ನಮ್ಮ ಅರಿಕೆಯನ್ನು

ಯಾಜಕತ್ವದ ಮುಖ್ಯ ವಾಕ್ಯಗಳು.

ಇಬ್ರಿ. ೪, ೧೫—೫, ೬.

ಘಟ್ಟಿಯಾಗಿ ಹಿಡಿಯೋಣ. ೧೫. ಯಾಕಂದರೆ ನಮ್ಮ ಬಲಹೀನತ್ವಗಳಲ್ಲಿ ಕೂಡ ಚಿಂತಿಸಲಾರದ ೨) ಪ್ರಧಾನಯಾಜಕನಲ್ಲಿ ೩), ಪಾಪವೇ ಹೊರ್ತು ೪), ಸಕಲ ವಿಷಯಗಳಲ್ಲಿ ನಮ್ಮ ಹಾಗೆಯೇ ಶೋಧಿಸಲ್ಪಟ್ಟವನು ನಮಗುಂಟು. ೧೬. ಆದದರಿಂದ, ನಾವು ಕರುಣೆಯನ್ನು ಹೊಂದುವ ಹಾಗೆಯೂ, ಶಕ್ತಾಲದ ಸಹಾಯಕ್ಕಾಗಿ ೫) ಕೃಪೆ ಶಿಕ್ಕುವ ಹಾಗೆಯೂ, ಧೈರ್ಯದಿಂದ ೬) ಕೃಪೆಯ ಸಿಂಹಾಸನದ ಬಳಿಗೆ ೭) ಬರೋಣ.

೧. ಪಾಳೆ ಒಡಂಬಡಿಕೆಯ ಪ್ರಧಾನಯಾಜಕರು ಶುದ್ಧ ಸ್ಥಳವನ್ನು ದಾಟಿ, ಪರಿಶುದ್ಧ ಸ್ಥಳದಲ್ಲಿ ಶೇರಿದ ಪ್ರಕಾರ, ಯೇಸುವು ದಿವಲೋಕಗಳನ್ನೆಲ್ಲಾ ದಾಟಿ, ದೇವರ ಸಿಂಹಾಸನದ ಬಳಿಗೆ ಶೇರಿದನು.

೨. ಅಂದರೆ, ನಾನಾ ವಿಧದ ಬಲಹೀನತ್ವದ ನಿಮಿತ್ತ ದುಃಖಾಕ್ರಾಂತರಾದ ನಮ್ಮ ಸಂಗಡ ದುಃಖ ಪಡಲಾರದ.

೩. ಅಂದರೆ, ನಮ್ಮ ಪ್ರಧಾನಯಾಜಕನು ಎಲ್ಲಾ ದಿವಲೋಕಗಳ ಮೇಲೆ ಏರಿದವನಾಗಿದ್ದರೂ, ಪರದುಃಖ ದುಃಖಿಯಾಗಿ ನಮ್ಮನ್ನು ಕರುಣಿಸುತ್ತಾನೆ.

೪. ನಮಗೆ ಬಹಿರಂತಶತ್ರಾಧೀನೆಗಳು ಬರಲಾಗಿ, ಪಾಪ ಮಾಡುತ್ತೇವೆ. ನಿಷ್ಪಾಪಿಯಾದ ಆತನಲ್ಲಿ ಅಂತಶತ್ರಾಧೀನೆಯು ಪುಟ್ಟಲಿಲ್ಲ. ಆತನಿಗೆ ಬಂದ ಶತ್ರಾಧೀನೆಯು ಬಹಿರಂಗವಾದದ್ದಾಗಿತ್ತು. ನಮ್ಮ ಅಂತರಂಗವು ಕೆಟ್ಟದ್ದಾಗಿರುವದರಿಂದ, ಶತ್ರಾಧೀನೆಗಳನ್ನು ಜಯಿಸುವದಕ್ಕೆ ಅಲ್ಪ ಸಾಮರ್ಥ್ಯವುಳ್ಳವರಾಗಿದ್ದೇವೆಂದು ತಿಳಿದು, ನಮ್ಮ ಮೇಲೆ ಪೂರ್ಣವಾದ ಕರುಣೆ ಇಡುತ್ತಾನೆ.

೫. ವಿಶ್ವಾಸದಲ್ಲಿಯೂ ಪ್ರಾರ್ಥನೆಯಲ್ಲಿಯೂ ನಿಶ್ಚಂಚಲರಾದ ಭಕ್ತರಿಗೆ ಯಾವ ಅವಸರದಲ್ಲಿಯೂ ತಾತ್ಕಾಲಿಕ ಸಹಾಯವು ತಪ್ಪುವದಿಲ್ಲ.

೬. ಮಕ್ಕಳಿಗೆ ಯುಕ್ತವಾದ ಪೂರ್ಣ ಚರವಸದಿಂದ.

೭. ದೇವರ ಸಿಂಹಾಸನವು, ಯೇಸು ಕ್ರಿಸ್ತನು ಮಾಡಿದ ವಿಮೋಚನಾಮೂಲವಾಗಿ, ಕೃಪಾಸಿಂಹಾಸನವಾದದ್ದಾಗಿದೆ.

ಸ. ೫, ೧—೩. ಮನುಷ್ಯರಾಗಿದ್ದ ಪ್ರಧಾನಯಾಜಕರು ಪಾಪ ಮಾಡುವ ಮನುಷ್ಯರನ್ನು ಪರದುಃಖ ದುಃಖಿಗಳಾಗಿ ಕರುಣಿಸುವದಕ್ಕೆ ತಕ್ಕವರಾಗಿದ್ದರು. ಆದರೆ ಅವರು ತಾವು ಪಾಪಿಗಳಾಗಿದ್ದು, ಮೊದಲು ಸ್ವಂತ ಪಾಪಗಳಿಗಾಗಿ ಬಲಿಗಳನ್ನು ಅರ್ಪಿಸ ಬೇಕಾದ್ದರಿಂದ, ಅವರ ಪ್ರಧಾನಯಾಜಕೋದ್ಯೋಗಕ್ಕೆ ನ್ಯೂನತ್ವವುಂಟಾಯಿತು.

ಇ) ಯೇಸುವು ಪ್ರಧಾನಯಾಜಕನಾದ ರೀತಿಯು. ಸ. ೫, ೪—೧೦.

ಅಅ) ದೇವರಿಂದ ನೇಮಕವಾಗಿ,

ವ. ೪. ಯಾವ ಪ್ರಧಾನಯಾಜಕನಾದರೂ ಸ್ವೇಚ್ಛೆಯಿಂದಲೇ ಉದ್ಯೋಗವನ್ನು ಪಡೆಯಲಸಾಧ್ಯವಾಗಿತ್ತು; ದೇವರು ಆರೋನನನ್ನು ಆದು ಕೊಂಡ ಪ್ರಕಾರ, ಕ್ರಿಸ್ತನನ್ನು ಸಹ: "ನೀನು ನನ್ನ ಮಗನು. ಇಂದು ನಿನ್ನನ್ನು ಪಡದಿದ್ದೇನೆ," ಕೀರ್ತ. ೨. ಮತ್ತು "ನೀನು ಮೆಲ್ಕಿಚೇದೆಕನ ತರದ ಪ್ರಕಾರ ಎಂದೆಂದಿಗೂ ಯಾಜಕನಾಗಿದ್ದೀ" ಕೀರ್ತ. ೧೧೦, ೪. ಎಂದು, ಅವನಿಗೆ ಹೇಳಿ, ಅವನನ್ನು ಪ್ರಧಾನಯಾಜಕೋದ್ಯೋಗದಲ್ಲಿ ಇಟ್ಟನು.

೯೭–೨ ಅಪಾ. ಚ. ೫. ಪರಿಚ್ಛೇದ. ಅಪೊಸ್ತಲರ ಅಂಶ(ಪ್ರೂವ್ ೫.
ಇಬ್ರಿ. ೫, ೭. ೫.

ಇಇ) ಶ್ರಮದಲ್ಲಿ ಪೂರ್ಣ ವಿಧೇಯನಾಗಿರುವದರಿಂದ ಯೋಗ್ಯನಾದನು.

೭. ೫ವನು ತನ್ನ ಮಾಂಸದ ದಿವಸಗಳಲ್ಲಿ ೧) ತನ್ನನ್ನು ಮರಣದಿಂದ ರಕ್ಷಿಸ ಸಮರ್ಥನಿಗೆ ೨) ಘಟ್ಟಿಯಾದ ಕೂಗಿನಿಂದಲೂ, ಕಣ್ಣೀರಿನಿಂದಲೂ, ಪ್ರಾರ್ಥನೆಗ ಳನ್ನೂ, ವಿಜ್ಞಾಪನೆಗಳನ್ನೂ ಅರ್ಪಿಸಿ ೩), ತನ್ನ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟು ೪), ೮. ಮಗನಾದಾಗ್ಯೂ, ತಾನು ಪಟ್ಟ ಶ್ರಮಗಳಿಂದ ವಿಧೇಯತ್ವವನ್ನು ಕಲಿತು ಕಾಂ ಡನು ೫). ೯. ಮತ್ತು ಸಂಪೂರ್ಣನಾಗಿದ್ದು, ತನಗೆ ವಿಧೇಯವಾಗುವವರೆಲ್ಲರಿಗೆ ನಿತ್ಯ ರಕ್ಷಣೆಗೆ ಕಾರಣಾವಾದನು ೬). ೧೦. ಅವನು ಮೆಲಿಚ್ಸೆದೆಕನ ಶರದ ಪ್ರಕಾರ ಪ್ರಧಾನಯಾಜಕನೆಂದು ದೇವರಿಂದ ಹೆಸರಿಸಿಕೊಂಡವನು.

೧. ಅಂದರೆ, ಆತನ ನೀಚ ಸ್ಥಿತಿಯ ಕಾಲದಲ್ಲಿ, ವಿಶೇಷವಾಗಿ ಗೆತ್ಸೇಮನೆಯಲ್ಲಿ ಇದ್ದ ರಾತ್ರಿಯಲ್ಲಿ.

೨. ಇದಕ್ಕೆ ಕೀರ್ತ. ೧೬, ೧೦ ಸರಿ ನೋಡ ಬೇಕು.

೩. ಈ ಪ್ರಕಾರ ತನ್ನನ್ನು ತಾನೇ ಪೂರ್ಣವಾಗಿ ತಂದೆಯ ವಶಕ್ಕೆ ಕಾಟ್ಟನು. ಇದು ಲೇವಿಕುಲದವ ರಾದ ಯಾಜಕರ ಪದ್ಧತಿಯ ಪ್ರಕಾರ ಸ್ವಂತ ಪಾಪ ಕ್ಕಾಗಿ ಅರ್ಪಿಸ ಕೆಲಸವಿಲ್ಲದ ಆತನ ಬಲಿಯಾಗಿತ್ತು.

೪. ಯೇಸುವು ಘೋರವಾದ ಪರಿಹಾರಾಟದಲ್ಲಿ ಗೆದ್ದು, ಸಮಾಧಾನವಾಗಿ: "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಉಂಟಾಗಲಿ" ಎಂದು ಪ್ರಾರ್ಥಿಸಿದನು.

೫. ಶ್ರಮದಿಂದ ವಿಧೇಯತ್ವದ ಸಿದ್ಧಿಯನ್ನು ಪರಿಹಾಂ ದಿದನು. ಮೊದಲು ತನ್ನನ್ನು ರಕ್ಷಿಸ ಬೇಕೆಂದು, ದೇ ವರಿಗೆ ಪ್ರಾರ್ಥನೆ ಮಾಡಿದನು. ಬಳಿಕ ಪ್ರಾರ್ಥನಾ ಮೂಲವಾಗಿ ಪರಿಹಾಂಡಿದ ದೈವಿಕ ಬಲದಿಂದ ಬಲ ವಿಲ್ಲದ ನರಜಾವದ ಚಿತ್ತವನ್ನು ಅಳಿಸಿದನು.

೬. ಪುಳೇ ಒಡಂಬಡಿಕೆಯ ಪ್ರಧಾನಯಾಜಕರು ಪರುಷ ಪರುಷಕ್ಕೆ ನೂತನ ಬಲಿಗಳಿಂದ ಮಾಡಿದ ವಿ ಮೋಚನೆಯು ತತ್ಕಾಲಕ್ಕೆ ಸಾರ್ಥಕವಾದ ಪ್ರಕಾರವ ಲ್ಲ; ಯೇಸುವೆಂಬ ಪ್ರಧಾನಯಾಜಕನು ಅರ್ಪಿಸಿದ ವಿಮೋಚನಾಬಲಿಯು ಸರ್ವಕಾಲಕ್ಕೆ ಸಾರ್ಥಕವಾ ಗಿದೆ.

೨. ಮೇಲೆ ಬರದ ಮುಖ್ಯವಾಕ್ಯಗಳ ವಿವರವು. ಸ. ೫, ೧೧ ಇತ್ಯಾದಿ.

ಈ ವಿವರಣೆಯ ಆವಶ್ಯಕವು. ಸ. ೫, ೧೧—ಸ. ೬.

ವ. ೧೧ ಇತ್ಯಾದಿ. ಕ್ರಿಸ್ತನ ರಾಜಪ್ರಧಾನಯಾಜಕೋದ್ಯೋಗದ ವಿಷಯವಾಗಿ ಮಂದಬುದ್ಧಿಗ ಳಾದ ಪತ್ರಿಕಾವಲೋಕಿಕರಿಗೆ ಹೆಚ್ಚಾದ ವಿವರವನ್ನು ಬರೆಯಲಿವಶ್ಯವಾಗಿದೆ. ಅದಕ್ಕಾಗಿ ಅಪೊಸ್ತಲನು ಅವರನ್ನು ಗದರಿಸಿ ಹೇಳುವದೇನಂದರೆ: ನೀವು ಬೋಧಕರಾಗಿರ ತಕ್ಕ ಈ ವೇಳೆಯಲ್ಲಿ ನಿಮಗೆ ದೇವವಾಕ್ಯ ದ ಆದಿಸೂತ್ರಗಳನ್ನು ತಿರಿಗಿ ಬೋಧಿಸ ಬೇಕು. ನೀವು ಹಾಲು ಕುಡಿಸ ಬೇಕಾದ ಕೂಸುಗಳಂತೆ ಇರುವ ದು ಸಮವಲ್ಲ. ನೀವು ಇಷ್ಟರೊಳಗೆ ಘಟ್ಟಿಯಾದ ಆಹಾರವನ್ನು ಉಣ್ಣ ತಕ್ಕ, ಪೂರ್ಣ ಅಭ್ಯಾಸ ಮಾಡಿದ, ಪುರುಷರಾಗ ಬೇಕಾಗಿತ್ತು. ಸ. ೬. ಆದರೆ ಈಗ ಆರಂಭದ ಬೋಧನೆಗಳನ್ನು ಬಿಟ್ಟು, ಸತ್ತ ಕ್ರಿಯೆಗಳನ್ನು ವಿಡುವ ಮಾನಸಾಂತರ, ದೇವರಲ್ಲಿಡುವ ವಿಶ್ವಾಸ, ಕ್ರಿಸ್ತನ ಮತ್ತು ಯೋಹಾನನ ಸ್ನಾನಗಳ ಭೇದ, ಹಸ್ತಕ ಮಸ್ತಕ, ಸತ್ತವರ ಪುನರುತ್ಥಾನ, ನ್ಯಾಯತೀರ್ವಿಕೆ ಮುಂತಾದವುಗಳ ವಿಷಯವಾದ ಬೋಧನೆಗಳನ್ನು

೨. ಕ್ರಿಸ್ತಲದಲ್ಲಿ ಪೌಲನ ಪ್ರವೃತ್ತಿ. ಯೇಸುವಿನ ಪ್ರಧಾನ ಯಾಜಕತ್ವದ ವಿಷಯದಲ್ಲಿ ಹೆಚ್ಚಿಗೆ.

ಇಬ್ರಿ. ೬, ೪. ಇ.

ಬಿಡುತ್ತೇನೆ. ದೇವರು ನಿಮ್ಮನ್ನು ವಿಶ್ವಾಸದೊಳ್ಪೊಪಕ್ಕೆ ತಪ್ಪಿಸಿದರೆ, ಆರಂಭದ ಬೋಧನೆಗಳನ್ನು ಸಹ ತಿರಿಗಿ ವಿವರಿಸ್ಯೇನು; ಆತನು ತಪ್ಪಿಸದೇ ಇದ್ದರೆ, ಅದು ನಿಮ್ಪ್ರಯೋಜನವಾಗಿರುವದು.

೪. ಯಾಕಂದರೆ, ಒಂದು ಸಾರಿ ಬೆಳಕನ್ನು ಹೊಂದಿ, ಪರಲೋಕದ ವರವನ್ನು[೧] ರುಚಿ ನೋಡಿ, ಪರಿಶುದ್ಧಾತ್ಮದಲ್ಲಿ ಪಾಲುಗಾರರಾಗಿ[೨], ೫. ದೇವರ ಒಳ್ಳೇ ಮಾತನ್ನೂ[೩], ಬರುವ ಲೋಕದ ಬಲಗಳನ್ನೂ[೪], ರುಚಿ ನೋಡಿ, ೬. ಜಾರಿ ಬಿದ್ದವರು, ತಮಗೆ ತಾವೇ ದೇವರ ಮಗನನ್ನು ತಿರಿಗಿ (ಕ್ರೂಜೆಗೆ ಹಾಕಿ[೫]), ಅವಮಾನಕ್ಕೆ ಗುರಿಮಾಡುವದರಿಂದ, ಅವರನ್ನು ತಿರಿಗಿ ಮಾನಸಾಂತರಕ್ಕೆ ಹೊಸ ಮಾಡುವದಕ್ಕಾಗುವದಿಲ್ಲ[೬].

೧. ಬೆಳಕನ್ನು ಪಡೆಂದುವದು ಜ್ಞಾನಕ್ಕೆ, ಪರಲೋಕದ ವರವನ್ನು ರುಚಿ ನೋಡುವದು ರಾತ್ರಿಚಾರಿಜನಕ್ಕೆ ಒಪ್ಪುತ್ತದೆ.

೨. ಅಂದರೆ, ಪರಿಶುದ್ಧಾತ್ಮದ ಅದ್ಭುತವಾದ ವರಗಳಲ್ಲಿ ಪಾಲುಗಾರರಾಗಿ.

೩. ಒಳ್ಳೆ ಮಾತು ಅಂದರೆ, ಕೃಪೆಯ ವಾಗ್ದತ್ತಗಳು.

೪. ಮುಂದಣ ಮಹಿಮೆಯ ಆಶೆಯಿಂದ ಪುಟ್ಟುವ ಸಮಾಧಾನವನ್ನೂ ಆಪರಣೆಯನ್ನೂ.

೫. ಆತನು ಏಕ ರಕ್ಷಕನೆಂಬ ತಿಳುವಿಕೆಯನ್ನು ಬಿಟ್ಟು, ಆತನನ್ನು ಕೃತಜ್ಞತೆಯಿಂದ ಖಡಿಸದೆ, ಕೃಪಾಕರಣಗಳನ್ನು ಉದಾಸೀನ ಮಾಡುವದರಿಂದ.

೬. ಅಂದರೆ, ಆ ಆರಂಭದ ಬೋಧನೆಗಳನ್ನು ತಿರಿಗಿ ಹೇಳುವದರಿಂದ. ಯಾಕಂದರೆ ಆ ಬೋಧನೆಗಳಿಂದ ಪಡೆಂದಿವ ತಿಳುವಿಕೆಯ ಬಲವು ವಿಶ್ವಾಸದ್ರೋಹ ಮಾಡಿದವರಲ್ಲಿ ನಿರರ್ಥಕವಾದನಂತರ, ಅವರಿಗೆ ಬೋಧನೆ ಹೇಳಿದರೆ ನಿಷ್ಫಲವಾಗುವದು.

ವ. ೭. ೮. ಯಾಕಂದರೆ ಒಳ್ಳೆ ಮಳೆಯನ್ನು ಕುಡಿದು, ತಕ್ಕ ಬೆಳೆಯನ್ನು ಕೊಡುವ ಭೂಮಿಯು ದೇವರಿಂದ ಆಶೀರ್ವಾದವನ್ನು ಹೊಂದುತ್ತದೆ. ಆದರೆ ಚನ್ನಾಗಿ ವ್ಯವಸಾಯ ಮಾಡಿದವರಿಗೆ ಮುಳ್ಳುಗಳನ್ನೂ, ದತ್ತೂರಿಗಳನ್ನೂ ಬೆಳೆಸಿದರೆ, ಅದು ಕೆಟ್ಟದ್ದೂ ಶಾಪಕ್ಕೆ ಸಮೀಪವಾದದ್ದೂ ಆಗಿದೆ. ಅಂಥಾ ಭೂಮಿಗೆ ಬೆಂಕಿ ಹಾಕಿ, ಅದರಲ್ಲಿ ಹುಟ್ಟಿದ್ದನ್ನೆಲ್ಲಾ ಸುಡುತ್ತಾರೆ. ವ. ೯. ೧೦. ಆದರೆ, ಪ್ರಿಯರೆ, ನಾವು ಹೀಗೆ ಎಚ್ಚರಿಸಿ ನುಡಿದಾಗ್ಯೂ, ರಕ್ಷಣಾರ್ಥವಾದ ಉತ್ತಮ ಮನಸ್ಸು ನಿಮ್ಮಲ್ಲಿ ಉಂಟೆಂದು ನಂಬುತ್ತೇವೆ. ಯಾಕಂಬರೆ ಕೃಪೆಳ್ಳುವಾದ ದೇವರು ಅವನ ಹೆಸರಿಗಾಗಿ ನೀವು ಸಕ್ಕೈಸ್ತರಿಗೆ ಮಾಡುತ್ತಾ ಬರುವ ಪ್ರೀತಿಯ ಸೇವೆಯನ್ನು ಮರತು ಬಿಡುವವನಲ್ಲ. ವ. ೧೧. ೧೨. ಆದರೆ ನೀವು ದಣಿಯದೆ, ವಿಶ್ವಾಸದಿಂದಲೂ, ತಾಳ್ಮೆಯಿಂದಲೂ ವಾಗ್ದತ್ತಗಳನ್ನು ಹೊಂದಿ ಅನುಭವಿಸಿದವರನ್ನು ಅನುಸರಿಸಿ, ಕಡೇವರೆಗೂ ಆಶೆಯ ಪೂರ್ಣ ನಿಶ್ಚಯಕ್ಕಾಗಿ ಜಾಗರೂಕರಾಗುವ ಹಾಗೆ, ನಿಮ್ಮನ್ನು ಹೀಗೆ ಗದರಿಸಿದ್ದೇನೆ. ವ. ೧೩—೨೦. ೧೩—೨೦. ಹೇರಳ ಜನರು ತನ್ನಿಂದ ಹುಟ್ಟುವರೆಂದು, ದೇವರಿಂದ ಹೊಂದಿದ ವಾಗ್ದತ್ತವನ್ನು ಅಬ್ರಹಾಮನು ನಂಬಿ, ಅದು ನೆರವೇರುವನಕ ತಾಳಿ ಕೊಂಡದ್ದನ್ನು ನೆನಪು ಮಾಡಿ ಕೊಳ್ಳಿ. ಅವನು ದೇವರ ಆಣೆ ವಾಗ್ದತ್ತಗಳ ಮೇಲೆ ಭರವಸವಿಟ್ಟ ಪ್ರಕಾರ, ನಾವು ಸಹ ದೇವರು ಯೇಸು ಕ್ರಿಸ್ತನಿಗೆ ಕೊಟ್ಟ ಸಾಕ್ಷಿಯನ್ನೂ, "ನೀನು ಮೆಲ್ಕಿಜೇದೆಕನ ತರದ ಪ್ರಕಾರ ಎಂದೆಂದಿಗೂ ಪ್ರಧಾನಯಾಜಕನಾಗಿದ್ದೀ" ಎಂದು ಆತನ ವಿಷಯವಾಗಿ ಇಟ್ಟ ಆಣೆಯನ್ನು, ದೃಢವಾಗಿ ನಂಬಿ, ನಮ್ಮನ್ನು ರಕ್ಷಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೆಂಬ ಆಶೆಯನ್ನು

ಇಬ್ರಿ. ೭, ೧—೨೨.

ಭದ್ರವಾಗಿ ಹಿಡಿದು, ಯೇಸು ಅಗ್ರಗಾಮಿಯಾಗಿ ಶೇರಿದ ದೇವರ ಸನ್ನಿಧಿಯ ಮಹಿಮೆಯ ನೆಲದಲ್ಲಿ ಪ್ರಾಣದ ಲಂಗರು ಹಾಕಿದಂತೆ, ಸ್ಥಿರವಾಗಿರ ತಕ್ಕದ್ದು.

ವಿವರಣೆಯು. ಸು. ೭, ೧ ಇತ್ಯಾದಿ.

ಕ್ರಿಸ್ತನ ಯಾಜಕತ್ವವು ಲೇವಿಯವರ ಯಾಜಕತ್ವಕ್ಕಿಂತ ಘನವಾದದ್ದೆಂಬದರ ಪ್ರಮಾಣಗಳು:

ಅ) ಮೆಲ್ಕಿಚೇದೆಕನ ಅಪುರೂಪವಾದ ವೃತ್ತಾಂತವು. ವ. ೧—೧೦. ಅದೇನಂದರೆ:

ದೇವರ ಯಾಜಕನಾದ ಮೆಲ್ಕಿಚೇದೆಕನು, ೧ ಮೋಶೆ. ೧೪. ಸ್ವಂತ ಹೆಸರಿನ ಅಭಿಪ್ರಾಯದ ಪ್ರಕಾರ, ನೀತಿಯ ಅರಸನೂ, ರಾಜಪಟ್ಟಣದ ಹೆಸರಿನ ಪ್ರಕಾರ, ಸಮಾಧಾನದ ಅರಸನೂ ಆಗಿದ್ದು, ಕ್ರಿಸ್ತನ ಮುಂಗುರ್ತಾಗಿದ್ದಾನೆ. ಅವನ ವಂಶಾವಳಿಯು ಬರದಿರುವದಿಲ್ಲ; ಅವನ ಜನನ ಮರಣ ಕಾಲಗಳು ಸಹ ಬರದಿರುವದಿಲ್ಲ. ಅವನ ಯಾಜಕತ್ವವು ನಿರಂತರವಾದದ್ದು. ಇದಲ್ಲದೆ ಲೇವಿಯವರಾದ ಯಾಜಕರಿಗೆ ಅವರ ಸ್ವಜನರು ನಿಯಮಪ್ರಕಾರ ದಶಮಾಂಶವನ್ನು ಕೊಡುತ್ತಾ ಇದ್ದರು; ಆದರೆ ಲೇವಿಕುಲದಲ್ಲಿ ಹುಟ್ಟದೆ ಬಿರುವ ಮೆಲ್ಕಿಚೇದೆಕನಿಗೆ ಅಬ್ರಹಾಮನು ಕೊಳ್ಳೆಯ ದಶಮಾಂಶವನ್ನು ಕೊಟ್ಟು, ಅವನಿಂದ ಆಶೀರ್ವಾದವನ್ನು ಹೊಂದಿದನು. ಹಾಗಾದರೆ ಮೆಲ್ಕಿಚೇದೆಕನು ಅಬ್ರಹಾಮನಿಗಿಂತಲೂ, ಅವನಿಂದ ಹುಟ್ಟಿದ ಲೇವಿಗಿಂತಲೂ, ಇವನ ಮಕ್ಕಳಾದ ಯಾಜಕರೆಲ್ಲರಿಗಿಂತಲೂ, ಶ್ರೇಷ್ಠನಾಗಿದ್ದನು.

ಆ) ಯೇಸುವು ಎರಡನೆ ಮೆಲ್ಕಿಚೇದೆಕನಾಗಿ, ೧೧೦ನೆ ಕೀರ್ತನೆಯ ಪ್ರಕಾರ ರಾಜಯಾಜಕತ್ವವನ್ನು ಹೊಂದಿ, ಲೇವಿಯವರ ಯಾಜಕತ್ವದ ಪರ್ಯಾಯದಲ್ಲಿ ಶೇರಿದ್ದು. ವ. ೧೧—೧೯.

ಲೇವಿಯವರ ಯಾಜಕತ್ವದ ಮೂಲವಾಗಿ ಇಸ್ರಯೇಲನವರು ಪಾಪದ ಆಳುತನದಿಂದ ಬಿಡುಗಡೆಯಾಗಲಿಲ್ಲವಾದ್ದರಿಂದ, ಬೇರೆ ಕುಲದವನಾದ ಯಾಜಕನು ಬರ ಬೇಕಾಯಿತು. ಅವನು, ಮುಂಚೆ ಯಾಜಕರು ಹುಟ್ಟದೆ ಇದ್ದ, ಯೂದಕುಲದಲ್ಲಿ ಹುಟ್ಟಿದನು. ಇದರಿಂದ ಲೇವಿಯರ ಯಾಜಕತ್ವವು ಭಂಗವಾಯಿತು. ಆರೋನನ ವಂಶದವರಾದ ಪ್ರಧಾನಯಾಜಕರು ಜನ್ಮದಿಂದಲೇ ತಮ್ಮ ಉದ್ಯೋಗಕ್ಕೆ ಯೋಗ್ಯರಾದರು; ಎರಡನೆ ಮೆಲ್ಕಿಚೇದೆಕನು ನಿರ್ಜಯವಾದ ಜೀವದ ಆತ್ಮಿಕ ಬಲದಿಂದ ತನ್ನ ನಿತ್ಯ ದೇವಭಾವದ ಮೂಲವಾಗಿ ನಿರಂತರನಾದ ಪ್ರಧಾನಯಾಜಕನಾದ ಅರಸನಾಗಿದ್ದಾನೆ. ನಿಯಮದಿಂದ ಮುಕ್ತಿಯುಂಟಾಗಲಿಲ್ಲ, ಆದರೆ ಯೇಸುವಿನ ಮುಖಾಂತರ ನಿಜವಾಗಿ ದೇವರ ಬಳಿಯಲ್ಲಿ ಶೇರುತ್ತೇವೆ.

ಇ) ಉದ್ಯೋಗಸ್ಥಾಪನಾರೀತಿಯು. ವ. ೨೦—೨೨.

ಯಾಕಂದರೆ: ದೇವರು ಆತನನ್ನು ಆಣೆಯಿಟ್ಟು ಯಾಜಕೋದ್ಯೋಗದಲ್ಲಿ ಸ್ಥಾಪಿಸಿದನು. ಲೇವಿಯವರು ಇಷ್ಟು ಸಮ್ಮಾನಿತರಾಗಿ ಉದ್ಯೋಗದಲ್ಲಿ ಶೇರಲಿಲ್ಲ. "ನೀನು ಮೆಲ್ಕಿಚೇದೆಕನ ತರದ ಪ್ರಕಾರ ಎಂದೆಂದಿಗೂ ಯಾಜಕನಾಗಿದ್ದೀ" ಎಂದು, ಕರ್ತನು ಅವನಿಗೆ ಆಣೆ ಇಟ್ಟು ಪಶ್ಚಾತ್ತಾಪ ಪಡನು. ಕೀರ್ತ. ೧೧೦, ೪.

೨. ಇತರಲದ್ಲಿ ಪೌಲನ ಪ್ರೌವ ಕ್ರಿ. ಯೇಸುವಿನ ಪ್ರಧಾನ ೪೭೫೫ ಯಾಜಕತ್ವದ ವಿಷಯದಲ್ಲಿ ಹೆಚ್ಚಿಗೆ.

ಇಬ್ರಿ. ೭, ೨೫—೨೮.

ಎ) ಯೇಸುವು ನಿತ್ಯನಾದ ಏಕ ಪ್ರಧಾನಯಾಜಕನು. ವ. ೨೫—೨೫.

೨೫. ಮತ್ತು ಅವರು ಇರುವದಕ್ಕೆ ಮರಣದಿಂದ ತಡೆಯಲ್ಪಟ್ಟ ಕಾರಣ, ಅನೇಕ ಯಾಜಕರಾಗಿದ್ದರು. ೨೪. ಆದರೆ ಇವನು ಎಂದೆಂದಿಗೂ ಇರುವದರಿಂದ, ಇವನಿಗೆ ಬದಲಾಗದ ಯಾಜಕತ್ವ ಉಂಟು. ೨೫. ಆದಕಾರಣ ತನ್ನ ಮುಖಾಂತರ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸ ಬಲ್ಲನು ೧); ಯಾಕಂದರೆ ಅವರಿಗಾಗಿ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುತ್ತಾನೆ ೨).

೧. ಅನೇಕತ್ವದಿಂದ ವಿಶ್ವಾಸಕ್ಕೆ ವಿಘ್ನವಾಗುತ್ತದೆ; ನಿರಂತರನಾದ ಒಬ್ಬನ ಮೇಲೆ (ಸ. ೧೩.) ಪೂರ್ಣ ಭರವಸವಿಡುವದು ಸುಲಭವಾಗಿದೆ.

೨. ಆತನಿಗೆ ನಿತ್ಯ ಯಾಜಕತ್ವವಿರುವದರಿಂದ, ನಮ್ಮ ರಕ್ಷಣೆಯನ್ನು ಸಂಪೂರ್ಣ ಮಾಡ ಬಲ್ಲನು.

ಬಿ) ಆತನು ಸಂಪೂರ್ಣ ಪರಿಶುದ್ಧನು. ವ. ೨೬—೨೮.

೨೬. ಯಾಕಂದರೆ ಇಂಥ ಪ್ರಧಾನಯಾಜಕನು ನಮಗೆ ಶಕ್ತನು ೧)—ಪರಿಶುದ್ಧನೂ ೨), ನಿರ್ದೋಷಿಯೂ ೩), ನಿಷ್ಕಳಂಕನೂ ೪), ಪಾಪಿಗಳಿಂದ ಪ್ರತ್ಯೇಕನೂ ೫), ಆಕಾಶಗಳಿಗಿಂತ ಉನ್ನತನೂ ೬), ಆಗಿರುವವನೇ. ೨೭. ಪ್ರಧಾನಯಾಜಕರ ಹಾಗೆ ಮುಂಚೆ ಸ್ವಂತ ಪಾಪಗಳಿಗಾಗಿಯೂ, ತರುವಾಯ ಜನರ ಪಾಪಗಳಿಗಾಗಿಯೂ, ದಿನದಿನಕ್ಕೆ ಬಲಿಗಳನ್ನು ಅರ್ಪಿಸುವದು ಇವನಿಗೆ ಅಗತ್ಯವಿಲ್ಲ. ಯಾಕಂದರೆ ತನ್ನನ್ನು ಅರ್ಪಿಸಿ, ಇದನ್ನು ಒಂದು ಸಾರಿ ಮಾಡಿದನು ೭). ೨೮. ನ್ಯಾಯಪ್ರಮಾಣವು ಬಲಹೀನರಾದ ಮನುಷ್ಯರನ್ನು ಪ್ರಧಾನಯಾಜಕರಾಗಿ ಇರಿಸುವದು. ಆದರೆ ನ್ಯಾಯಪ್ರಮಾಣದ ತರುವಾಯ ಉಂಟಾದ ಆಣೆಯ ವಾಕ್ಯವು ಎಂದೆಂದಿಗೂ ಸಂಪೂರ್ಣ ಮಾಡಲ್ಪಟ್ಟ ೮) ಮಗನನ್ನೇ ಇರಿಸುತ್ತದೆ.

೧. ಪಾಪಿಗಳಾದ ಮನುಷ್ಯರಿಗೆ ನಿರಂತರ ಬಲವುಳ್ಳ ಪ್ರಧಾನಯಾಜಕನು ಬೇಕು.

೨. ದೇವೈಕ್ಯವು ಪರಿಶುದ್ಧತ್ವದ ಮೂಲವು.

೩. ಅಂದರೆ, ಅಂತರ್ದೋಷರಹಿತ.

೪. ಅಂದರೆ, ಬಹಿರ್ದೋಷರಹಿತ.

೫. ಮನುಷ್ಯನಾಗಿ ಹುಟ್ಟಿದರೂ, ಪಾಪವಿಲ್ಲದವನಾದ್ದರಿಂದ, ಪಾಪಿಗಳಾದ ಎಲ್ಲಾ ಮನುಷ್ಯರಿಗೆ ಬೇರೆಯಾಗಿದ್ದನು.

೬. ನಮ್ಮ ಮಧ್ಯಸ್ಥಗಾರನಾಗಿ ನಮ್ಮ ವಿಮೋಚನಾಕ್ರಿಯೆಯನ್ನು ತೀರಿಸಿ ಸ. ೧, ೩. ಮಹೋನ್ನತವಾದ ಮಹಿಮಾಸಿಂಹಾಸನದಲ್ಲಿ ಸರ್ವಾಧಿಕಾರಿಯಾಗಿ ಕೂತು ಕಾಂಡಿದ್ದಾನೆ.

೭. ಸರ್ವಸಾರ್ಥಕವಾದ ಬಲಿಯು ಒಂದೇ ಸರಿ. ಅಸಾರ್ಥಕವಾದ ಬಲಿಗಳನ್ನು ಅಸಂಖ್ಯವಾಗಿ ಅರ್ಪಿಸಿದಾಗ್ಯೂ ಕಾರ್ಯ ನೆರವೇರುವದಿಲ್ಲ.

ಇಬ್ರಿ. ೪, ೧—೫, ೧೦.

ಐ) ಆತನು ದೈವಿಕ ದೇವಾಲಯದಲ್ಲಿ ಉದ್ಯೋಗವನ್ನು ನಡಿಸುತ್ತಾನೆ. ಸ. ೪, ೧—೬.

ಇದರಲ್ಲಿ ಮುಖ್ಯವಾದದ್ದೇನಂದರೆ: ದೇವರ ಸಿಂಹಾಸನದಲ್ಲಿ ಶೇರಿ, ನೆರಳೂ, ಮುಂಗುರ್ತೂ ಆದ ಭೌಮಿಕ ಸ್ಥಾನದಲ್ಲಿ ಅಲ್ಲ, ದೇವನಿರ್ಮಿತ ನಿರಂತರವಾದ ನಿಜ ದೇವಾಲಯದಲ್ಲಿ ವೃತ್ತಿಯೆನ್ನು ನಡಿಸುವ ಪ್ರಧಾನಯಾಜಕನು ನಮಗುಂಟು. ಭೌಮಿಕ ಪ್ರಧಾನಯಾಜಕನು ಬಲಿಗಳನ್ನರ್ಪಿಸಿದಂತೆ, ಕ್ರಿಸ್ತನು ಸಹ ಒಂದು ಬಲಿಯನ್ನರ್ಪಿಸಿದ್ದಾನೆ. (ಈ ಅಭಿಪ್ರಾಯವು ೮ನೆ ಸಂಧಿಯಲ್ಲಿ ವಿವರವಾಗಿ ಬರದದೆ.) ಆತನು ಸಾಧಾರಣ ಮನುಷ್ಯನಾಗಿರುತ್ತಿದ್ದರೆ, ಲೇವಿಕುಲದಲ್ಲಿ ಹುಟ್ಟಿದ ಕಾರಣ, ಯಾಜಕನಾಗ ಕೂಡದಿತ್ತು; ಯಾಕಂದರೆ: ಲೇವಿಕುಲದವರೇ ಮೋಶೆಯು ದೇವರ ಅಪ್ಪಣೆಯ ಪ್ರಕಾರ ಸಿನಯಿಪರ್ವತದ ಬಳಿಯಲ್ಲಿ ಕಟ್ಟಿಸಿದ, ದೈವಿಕ ದೇವಾಲಯದ ಪ್ರತಿರೂಪವಾದ, ಸಾಕ್ಷೀಗುಡಾರವೆಂಬದರಲ್ಲಿ ಯಾಜಕಸೇವೇ ಮಾಡುವದಕ್ಕೆ ಅಧಿಕಾರಿಗಳಾಗಿದ್ದರು.

ಒ) ಹಳ್ಳೆ ಒಡಂಬಡಿಕೆಯಲ್ಲಿ ಸಂಪೂರ್ಣವಾದ ಹೊಸ ಒಡಂಬಡಿಕೆಯ ವಾಗ್ದತ್ತವು ಉಂಟಾದ್ದರಿಂದ, ಹಳ್ಳೇದು ಸಂಪೂರ್ಣವಾದದ್ದಲ್ಲವೆಂದು ತೋರುತ್ತದೆ. ಸ. ೪, ೭—೧೩.

ಯೇಸುವಿನ ಯಾಜಕತ್ವವು ಅತಿ ಸಾರ್ಥಕವಾದ ಒಡಂಬಡಿಕೆಗೂ, ವಿಮೋಚನೆಗೂ ಕಾರಣವಾಗಿರುವದರಿಂದ, ಲೇವಿಯರ ಯಾಜಕತ್ವಕ್ಕಿಂತ ಶ್ರೇಷ್ಠವಾಗಿದೆ. ಯಾಕಂದರೆ ಪೂರ್ವನಿರ್ಧಾರವು ಮನುಷ್ಯರ ವಿಮೋಚನೆಗಾಗಿ ಪೂರ್ಣ ಸಾರ್ಥಕವಾಗಿತ್ತಾದರೆ, ಅದಕ್ಕೆ ಪರ್ಯಾಯ ಉಂಟಾಗುತ್ತಿದ್ದಿಲ್ಲ; ಆದರೆ ಕರ್ತನು ಅದು ಸಾಲದೆಂದು ಕಂಡು, ಹೊಸ ನಿರ್ಧಾರದ ಆಶೆಯ ವಾಕ್ಯವನ್ನು ಕೊಟ್ಟನು. ಅದರ ಕಾಲದಲ್ಲಿ ಕರ್ತನ ಚಿತ್ತವು ಭಕ್ತರೆಲ್ಲರ ಹೃದಯಗಳಲ್ಲಿ ಲಿಖಿತವಾಗುವದು, ಮತ್ತು ಎಲ್ಲರ ಪಾಪವು ಪರಿಹಾರವಾಗುವದೆಂದು, ಯೆರೆ. ೩೧, ೩೧—೩೪ರಲ್ಲಿ ಬರದದೆ.

ಓ) ಯೇಸುವು ನಿಜ ಪಾಪವಿಮೋಚನೆಗಾಗಿ ತನ್ನನ್ನು ತಾನೇ ಒಮ್ಮೆ ಬಲಿಯಾಗಿ ಅರ್ಪಿಸಿ, ಉತ್ತಮ ಕೃಪಾಪ್ರಸಾದವನ್ನು ಭಕ್ತರಿಗೆ ಕೊಡಲಧಿಕಾರಿಯಾದನು. ಸ. ೯.

ಅಭಿಪ್ರಾಯಸಂಬಂಧವು: ಪೂರ್ವ ಕಾಲದ ಒಡಂಬಡಿಕೆಯ ಗುಡಾರವು ವ. ೧—೫. ಬಹಳ ಮಹಿಮೆಯುಳ್ಳದ್ದಾಗಿದ್ದರೂ, ಪರಂಪರೆಯಾದ ಬಲ್ಯರ್ಪಣೆಯ ಪದ್ಧತಿಯು ಪೂರ್ಣ ಗುಡಾರದ ಕಾಲದಲ್ಲಿ ನಿಜ ದೇವಪ್ರವೇಶವೂ, ನಿಜ ಮನಸ್ಸಾಕ್ಷಿಯ ಶುದ್ಧಿಯೂ ಸಿದ್ಧವಾಗಲಿಲ್ಲವೆಂಬದನ್ನು ಬಲ್ಲವರಿಗೆ ಚನ್ನಾಗಿ ಸೂಚಿಸುವ ಲಕ್ಷಣವಾಗಿತ್ತು. ವ. ೬—೧೦. ಮತ್ತು ಬಲಿಪಶುಗಳನ್ನು ನೆನಸಿದರೆ, ಕ್ರಿಸ್ತನ ಬಲಿಯು ಅತ್ಯಂತ ಮಹಿಮೆಯುಳ್ಳದ್ದೆಂದು, ಪ್ರಸಿದ್ಧವಾಗಿದೆ. ವ. ೧೧—೨೩. ಒಂದೇ ಬಲಿಯನ್ನು ಅರ್ಪಿಸುವ ಪ್ರಧಾನಯಾಜಕನಾಗಿ, ಮಹೋನ್ನತವಾದ ನಿಜ ದೇವಾಲಯದಲ್ಲಿ ಶೇರುವದಕ್ಕಾಗಿ, ಕ್ರಿಸ್ತನು ತನ್ನನ್ನು ತಾನೇ ಅರ್ಪಿಸಿಕೊಳ್ಳುವದು ಅವಶ್ಯವಾಯಿತು. ವ. ೨೪—೨೮.

೧೧. ಆದರೆ ಕ್ರಿಸ್ತನು ಆಗುವ ಒಳ್ಳೆಯವುಗಳ ೧) ಪ್ರಧಾನಯಾಜಕನಾಗಿ ಬಂದು, ಕೈ ಕೆಲಸದ್ದು—ಅಂದರೆ, ೫ನೆ ಸೃಷ್ಟಿಯದು ೨)—ಆಗಿರದೆ, ೧೨. ಅಧಿಕವಾದಂಥ ಸಂಪೂರ್ಣ ತರವಾದಂಥ ಗುಡಾರದಿಂದ ೩) ಹಾಯ್ತ ಹಾಯ್ರಿಗಳ ರಕ್ತ

ಯಾಜಕತ್ವದ ವಿಷಯದಲ್ಲಿ ಹೆಬ್ಬಿಗೆ.

ಇಬ್ರಿ. ೯, ೧೩--೧೬.

ದಿಂದ ಅಲ್ಲ, ಸ್ವಂತ ರಕ್ತದಿಂದಲೇ ೪), ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡು ೫), ಒಂದೇ ಸಾರಿ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸಿದನು. ೧೩. ಯಾಕಂದರೆ ಗೂಳಿ ಹೋತಗಳ ರಕ್ತವೂ, ಹಾಲೆಯಾದವರ ಮೇಲೆ ಚಿಮಿಕಿಸಲ್ಪಟ್ಟ ಕಡಸಿನ ಬೂದಿಯೂ, ಮಾಂಸವನ್ನು ಶುಚಿ ಮಾಡುವ ಹಾಗೆ ಪರಿಶುದ್ಧ ಮಾಡಿದರೆ, ೧೪. ಎಷ್ಟು ಅಧಿಕವಾಗಿ ನಿತ್ಯ ಆತ್ಮದಿಂದ ತನ್ನನ್ನು ದೇವರಿಗೆ ಕಳಂಕವಿಲ್ಲದವನಾಗಿ ಅರ್ಪಿಸಿದ ೬) ಕ್ರಿಸ್ತನ ರಕ್ತವು, ಜೀವವುಳ್ಳ ದೇವರನ್ನು ಆರಾಧಿಸುವದಕ್ಕಾಗಿ ೭), ನಿಮ್ಮ ಮನಸ್ಸಾಕ್ಷಿಯನ್ನು ಸತ್ತ ಕ್ರಿಯೆಗಳಿಂದ ೮) ಶುಚಿ ಮಾಡುವದು? ೧೫. ಮತ್ತು ಇದರ ನಿಮಿತ್ತ ಮೊದಲನೇ ಒಡಂಬಡಿಕೆಯ ಕಾಲದಲ್ಲಿ ನಡೆದ ೯) ಅಕ್ರಮಗಳ ವಿಮೋಚನೆ ಆಗುವದಕ್ಕಾಗಿಸ್ಕರ ಮರಣ ಉಂಟಾಗಿ, ಕರೆಯಲ್ಪಟ್ಟವರು ನಿತ್ಯ ಬಾಧ್ಯದ ವಾಗ್ದತ್ತವನ್ನು ಹೊಂದುವ ಹಾಗೆ, ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ.

೧. ಪರದ ರಕ್ಷಣೆಗೆ ಸಂಬಂಧವಾದ ಒಳ್ಳೇ ವರಗಳು ಯಾವವಂದರೆ: ಪೂರ್ಣ ಪಾಪಪರಿಹಾರವು, ನಿರ್ವಿಘ್ನವಾದ ದೇವಪ್ರವೇಶವು, ದೇವಾನ್ಯಾನ್ಯತವು, ಇತ್ಯಾದಿ.

೨. ಅಂದರೆ, ಪೂರ್ವ ಕಾಲದ ಒಡಂಬಡಿಕೆಯ ಗುಡಾರದಂತೆ, ಮನುಷ್ಯರು ಐಹಿಕವಾದ ವಸ್ತುಗಳಿಂದ ಉಂಟು ಮಾಡದಂಥ, ನಿಜ ದೇವಾಲಯದಲ್ಲಿ ಯೇಸುವು ದಿವ್ಯಲೋಕಗಳನ್ನೆಲ್ಲಾ ದಾಟಿ, ಶೇರಿದ್ದಾನೆ.

೩. ಸೃಷ್ಟಿಶೀತಾಳೆಯವು ಇಲ್ಲಿ ಸೂಚಿತವಾಗಿದೆ. ಸ. ೪, ೧೪.

೪. ಸ್ವಕೀಯ ರಕ್ತವನ್ನು ಪರಿಶುದ್ಧಾತ್ಮದ ಮುಖಾಂತರ ಅರ್ಪಿಸಿದನು. ೧ ಪೇತ್ರ. ೧, ೧೯.

೫. ಪುಳೆ ಒಡಂಬಡಿಕೆಯ ವಿಮೋಚನಾಕ್ರಿಯೆಯು ತಿರಿಗಿ ತಿರಿಗಿ ಆಗ ಬೇಕಾಯಿತು; ಪುರಾಣ ಒಡಂಬಡಿಕೆಯದು ಸಾರ್ವದಾ ಸಾರ್ಥಕವಾದದ್ದು.

೬. ಕ್ರಿಸ್ತನು ನಿತ್ಯ ಆತ್ಮದ ಬಲದಿಂದ ಮಹಿಮಾಚಾವಾಂತರನಾಗಿ, ಮಹೋನ್ನತವಾದ ದೇವಾಲಯದಲ್ಲಿ ಶೇರಿದನು.

೭. ಸತ್ಯದಲ್ಲಿಯೂ ಯಥಾರ್ಥವಾದ ವಿಧೇಯತ್ವದಲ್ಲಿಯೂ ದೃಢವಾದ ಭಕ್ತರು ಈ ಸೇವೆಗೆ ಯೋಗ್ಯರಾಗಿದ್ದಾರೆ. ಲೂಕ. ೧, ೭೫. ಇತ್ಯಾದಿ.

೮. ಅಂತರ್ಮನುಷ್ಯನನ್ನು ಪಾಪದ ಕಲ್ಮಷದಿಂದ ಶುಚಿ ಮಾಡುವದು.

೯. ಆತನ ಮರಣವು, ಪುಳೆ ಒಡಂಬಡಿಕೆಯಲ್ಲಿ ನಿಜವಾಗಿ ಪರಿಹಾರವಾಗದ ಅಪರಾಧಗಳನ್ನು ವಿಮೋಚನೆ ಮಾಡುವದರಿಂದ, ನಿತ್ಯವಾದ ಬಾಧ್ಯತಾಯೋಗ್ಯತೆಯನ್ನು ಭಕ್ತರಲ್ಲಿ ಉಂಟು ಮಾಡುತ್ತದೆ. ಈ ನಿಮಿತ್ತವಾಗಿಯೇ ಆತನು ಪುರಾಣ ಒಡಂಬಡಿಕೆಯ ಮಧ್ಯಸ್ಥನಾಗಿದ್ದಾನೆ.

ವ. ೧೬. ಮರಣಜಾತಕದಲ್ಲಿ ಲಿಖಿತವಾದ ಕೃಪಾನಿರ್ಧಾರವೇ ಸಾರ್ಥಕವಾದದ್ದು. ಮರಣಜಾತಕದಲ್ಲಿ ಬರದದ್ದು ಬರದವನ ಮರಣದ ಬಳಿಕ ಬಾಧ್ಯನಿಗೆ ಪ್ರಾಪ್ತವಾಗುವದು; ಹಳೆ ಒಡಂಬಡಿಕೆಗೆ ಸಹ ಮೋಶೆಯ ಅಪ್ಪಣೆಯ ಪ್ರಕಾರ ರಕ್ತದ ಮುದ್ರೆಯು ವಾಡಿಕೆಯಾಗಿತ್ತು. ೨ ಮೋಶೆ. ೨೪, ೬—೮. ವ. ೨೨. ರಕ್ತಧಾರೆಯಿಲ್ಲದೆ ಪರಿಹಾರವಿಲ್ಲ; ಅದುಕಾರಣ ಮೋಶೆಯ ನಿಯಮದಲ್ಲಿ ರಕ್ತ ರಕ್ತಧಾರೆಗಳ ಮಾತು ಬಹಳ ಬಳಕೆಯಾಗಿದೆ.

ಇಬ್ರಿ. ೯,—೧೦, ೧೩.

ವ. ೨೩. ದೈವಿಕ ವಸ್ತುಗಳ ಪ್ರತಿರೂಪಗಳು ಬಲಿಪಶುರಕ್ತದಿಂದ ಶುಚಿಯಾಗ ಬೇಕಾಯಿತು; ಆದರೆ ದೈವಿಕ ದೇವಸ್ಥಾನವು ತಾನೇ ಆ ರಕ್ತಕ್ಕಿಂತ ಉತ್ತಮವಾದ ಕ್ರಿಸ್ತನ ರಕ್ತದಿಂದ, ಪಾಪಿಗಳಾದ ನಾವು ಅದೇ ರಕ್ತಧಾರೆಯಿಂದ ಪೂತರಾಗಿ ಶೇರುವ ಹಾಗೆ, ಸಿದ್ಧವಾಗ ಬೇಕಾಯಿತು. ೨೪. ಯಾಕಂದರೆ: ಭೌಮಿಕ ದೇವಾಲಯವು, ನಮ್ಮ ಏಕ ಮಧ್ಯಸ್ಥನೂ, ನಿರಂತರ ಯಾಜಕನೂ ಆದ ಕ್ರಿಸ್ತನು ವ. ೨೫. ಬಂದೇ ಬಲ್ಯರ್ಪಣೆಯಿಂದ ಶೇರಿದ, ದೈವಿಕ ದೇವಾಲಯದ ಪ್ರತಿರೂಪವಾಗಿದೆ ಅಷ್ಟೆ. ಅರ್ಥಸೂಚಕವಾದ ಬಲಿಗಳು ಸಾರ್ಥಕವಾಗದೆ ಇದ್ದ ಕಾರಣ ಲೇವಿಕುಲದವನಾದ ಪ್ರಧಾನಯಾಜಕನು ಅವುಗಳನ್ನು ವರುಷ ವರುಷಕ್ಕೆ ಹೊಸ್ತಾಗಿ ಅರ್ಪಿಸ ಬೇಕಾಯಿತು. ವ. ೨೬. ಅನ್ಯಥಾ ಆತನು ಲೋಕಾರಂಭದಿಂದ ಬಹುಶಃ ಶ್ರಮ ಪಡ ಬೇಕಾಗುತ್ತಿತ್ತು; ಆದರೆ ಈಗ ಪೂರ್ವ ಕಾಲ ಸಮಾಪ್ತಿಯಲ್ಲಿ (ಗಲ. ೪, ೪.) ಒಮ್ಮೇ ಪ್ರತ್ಯಕ್ಷನಾಗಿ ಸ್ವಕೀಯ ಬಲಿಯಿಂದ ಪಾಪವನ್ನು ಹೋಗಲಾಡಿಸಿದ್ದಾನೆ. ೨೭. ಮತ್ತು ಒಂಮೇ ಸಾಯುವದು, ಇದರ ಬಳಿಕ ನ್ಯಾಯತೀರ್ಪಿಕೆಯು ಮನುಷ್ಯರಿಗೆ ನೇಮಕವಾಗಿರುವ ಪ್ರಕಾರ, ಕ್ರಿಸ್ತನು ಒಮ್ಮೇ ಬಲಿಯರ್ಪಣಾರ್ಥವಾಗಿ ಸತ್ತು, (ಮನುಷ್ಯರೆಲ್ಲರಿಗೆ ಒಮ್ಮೆಯೇ ಸಾಯುವ ಕಟ್ಟಳೆ ಇರುವ ಪ್ರಕಾರವೇ ಕ್ರಿಸ್ತನೂ ಒಮ್ಮೆಯೇ ಸತ್ತನು) ಅನೇಕರೆಂಬ ಸರ್ವ ಲೋಕದ ಪಾಪವನ್ನು (ಮತ್ತಾ. ೨೦, ೨೮. ಕೊಲೊಸ್ಸಾ. ೫, ೧೫.) ಹೊತ್ತು ಕೊಂಡು ಕ್ರೂಜೆಯೆಂಬ ಬಲಿಪೀಠದ ಮೇಲೆ ಇಟ್ಟನು. ೧ ಪೇತ್ರ. ೨, ೨೪. ಆತನು ನ್ಯಾಯತೀರಿಸುವದಕ್ಕೆ ಎರಡನೇ ಸರ್ತಿ ಬರುವಾಗ, ಪಾಪವಿಮೋಚನಾರ್ಥವಾಗಿ ಅಲ್ಲ, ಆತನ ಬಲ್ಯರ್ಪಣೆಯಲ್ಲಿ ವಿಶ್ವಾಸವಿಟ್ಟ ಭಕ್ತರ ಮಹಿಮಾರ್ಥವಾಗಿ ಪ್ರತ್ಯಕ್ಷವಾಗುವನು.

೮) ೪೦ನೆ ಕೀರ್ತನೆಯಲ್ಲಿಯೂ ಯೆರೆವಿಾಯನ ೩೧ನೆ ಸಂಧಿಯಲ್ಲಿಯೂ ಕಾಣುವ ಪ್ರಮಾಣವು. ಸ. ೧೦, ೧—೧೪.

ಹಳ್ಳೇ ಒಡಂಬಡಿಕೆಯ ಪೂರ್ವ ಸೂಚಕಭಾವವು, ಪರಂಪರೆಯಾದ ಬಲಿಯರ್ಪಣೆಯ ಪದ್ಧತಿಯು, ಹಳ್ಳೇ ಒಡಂಬಡಿಕೆಯ ಬಲಿಗಳ ವಿಧವು, ಇವು ಆ ಬಲಿಗಳು ಪಾಪಪರಿಹಾರಾರ್ಥವಾದವುಗಳಲ್ಲ, ಪಾಪಸ್ಮರಣಾರ್ಥವಾದವುಗಳೆಂಬದನ್ನು ಸ್ಥಾಪಿಸುತ್ತವೆಂದು, ಮೊದಲು ಹೇಳಿಯದೆ. ವ. ೧—೩. ಆದರೆ ಇದಕ್ಕೆ ವಿಶೇಷವಾದ ಪ್ರಮಾಣವು ನಾಲ್ವತ್ತನೆ ಕೀರ್ತನೆಯಲ್ಲಿ ತೋರುತ್ತದೆ. ಕೀರ್ತ. ೪೦, ೬—೮. ಕ್ರಿಸ್ತನು ದೇವರು ಬಲಿಗಳಿಗೆ ಮೆಚ್ಚುವದಿಲ್ಲವೆಂದು ತಾನು ತಿಳಿದು, ದೇವರ ಚಿತ್ತವನ್ನು ಮಾಡುವದಕ್ಕೆ, ಪುಸ್ತಕದ ಸುರಳಿಯಲ್ಲಿ (ಮೋಶೆಯ ಐದು ಗ್ರಂಥಗಳಲ್ಲಿ) ತನ್ನನ್ನು ಕುರಿತು ಬರದಿರುವ ಪ್ರಕಾರ, ಬರುತ್ತೇನೆಂತ ಹೇಳುತ್ತಾನೆ. ಆದ್ದರಿಂದ ದೇವರ ಚಿತ್ತವನ್ನು ಪೂರೈಸಿದ ಕ್ರಿಸ್ತನ ಸ್ವಾರ್ಪಣೆಯ ಮೂಲವಾಗಿ ಪರಿಶುದ್ಧರಾದವರಾಗಿದ್ದೇವೆ.

೧೧. ಮತ್ತು, ಒಬ್ಬೊಬ್ಬ ಯಾಜಕನು ದಿನದಿನಕ್ಕೆ ಸೇವೆ ಮಾಡುತ್ತಾ, ಪಾಪಗಳನ್ನು ಪರಿಹರಿಸಲಾರದಂಥ ಅದ್ದೇ ಬಲಿಗಳನ್ನು ಅನೇಕ ಸಾರಿ ಅರ್ಪಿಸುತ್ತಾ, ನಿಲ್ಲುವನು. ೧೨. ಆದರೆ ಇವನು ಪಾಪಗಳಿಗಾಸ್ತರ ಒಂದ್ದೇ ಬಲಿಯನ್ನು ಅರ್ಪಿಸಿ, ಸದಾಕಾಲಕ್ಕೆ ದೇವರ ಬಲಪಾರ್ಶ್ವದಲ್ಲಿ ಕೂತು ಕೊಂಡು ೧೩, ೧೩. ಇನ್ನು ಮೇಲೆ ತನ್ನ ಶತ್ರುಗಳು ತನ್ನ ಪಾದ ಪೀಠವಾಗಿ ಇರಿಸಲ್ಪಡುವ ಪರ್ಯಂತ ಎದುರು ನೋ

ಎ. ಇಕಲದಲ್ಲಿ ಪೌಲನ ಪ್ರಮತ್ತಿ. ಸ್ಥೈರ್ಯಕ್ಕೆ ಉದ್ಬಾಧನೆ. ೪೭ನೇ ಇಬ್ರಿ. ೧೦, ೧೪—೨೩.

ಡುತ್ತಾ ಇದ್ದಾನೆ. ೧೪. ಯಾಕಂದರೆ ಒಂದೇ ಅರ್ಪಣೆಯಿಂದ ೭) ಪರಿಶುದ್ಧ ಮಾಡಲ್ಪಡುವವರನ್ನು ಸದಾಕಾಲಕ್ಕೆ ಸಂಪೂರ್ಣ ಮಾಡಿದ್ದಾನೆ.

೧. ಚಾಮಿಕಯಾಜಕನು ಪೂರ್ವ ಸೂಚಕವಾದ ಬಲಿಗಳನ್ನು ಅನುದಿನವು ಅರ್ಪಿಸುವ ಸ. ೯, ೨೫. ವೃತ್ತಿಯನ್ನು ಪುನಾರಾಗುತ್ತಾ ಬರುತ್ತಾ ನಡಿಸಿ ನಿಲ್ಲುತ್ತಾನೆ. ದೈವಿಕ ಪ್ರಧಾನಯಾಜಕನು ಒಂದೇ ಬಲಿಯ ಅರ್ಪಣೆಯಿಂದ ಕಾರ್ಯವನ್ನು ಸಾರ್ವದಾ ಪೂರೈಸಿದವನಾಗಿ ವಿಶ್ರಮಿಸಿ ಕಾಂಯಿದ್ದಾನೆ.

೨. ಪುಳೆ ಒಡಂಬಡಿಕೆಯ ಬಲಿಗಳು ಲೆಖ್ಖವಿಲ್ಲದ ಬೇರೆ ಬೇರೆ ಪಾಪಗಳ ನಿಮಿತ್ತ ಅನಂತವಾಗಿ ಅರ್ಪಿಸಲ್ಪಡುತ್ತಾ ಇದ್ದವು; ಈ ಬಲಿಯು, ದೇವರ ದೃಷ್ಟಿಯಲ್ಲಿ ಏಕ ಮಪುರಾ ಪಾಪವಾಗಿ ಕಾಣುವ, ನರಜಾತಿಯ ಎಲ್ಲಾ ಪಾಪಗಳ ನಿಮಿತ್ತ ಅರ್ಪಿತವಾಯಿತು. ತನ್ನ ಮುಖಾಂತರ ಪರಿಶುದ್ಧರಾಗುವವರೆಲ್ಲರಿಗೆ ಆತನು ಒಂದೇ ಬಲಿಯಿಂದ ಸರ್ವಸಂಪೂರ್ಣ ವಿಮೋಚನೆಯನ್ನುಂಟು ಮಾಡಿದ್ದಾನೆ.

ವ. ೧೫—೧೭. ಈ ಕ್ರಿಸ್ತನ ಬಲಿಯು ಪೂರ್ಣ ಪರಿಹಾರಸಾರ್ಥಕವಾಗಿದೆಂಬುವದನ್ನು, ಪೌಲನು ಸ. ೯, ೧೦ರಲ್ಲಿ ಹೊಸ ಒಡಂಬಡಿಕೆಯ ಪೂರ್ವಸೂಚನೆಯ ಪ್ರಮಾಣವಾಗಿ ಯಥೋಕ್ತವಾಗಿ ಎತ್ತಿದ ಯೆರೆವಿಾಯನ (೩೧, ೩೩ ಇತ್ಯಾದಿ) ಸ್ಥಳವು ಸ್ಥಾಪಿಸುತ್ತದೆ.

ಉದ್ಬಾಧನಾಖ್ಯಾಗವು. ಸ. ೧೦, ೧೯—೩೩, ೧೯.

ವಿಶೇಷವಾಗಿ ಶ್ರಮಕಾಲದಲ್ಲಿ ತಾರಿಸ ತಕ್ಕ ಸ್ಥೈರ್ಯದ ವಿಷಯವಾದ ಉದ್ಬಾಧನೆಯು. ಸ. ೧೦, ೧೯—ಸ. ೧೨.

ಅ) ಕೃಪಾಸಿಂಹಾಸನದ ಬಳಿಗೆ ಹೋಗುವವರಿಗೆ ನಿರ್ವಿಘ್ನವಾದ ಪ್ರವೇಶವುಂಟೆಂಬ ಕಾರಣವು. ಸ. ೧೦, ೧೯—೨೩.

೧೯. ಹಾಗಾದರೆ, ಸಹೋದರರೇ, ಯೇಸುವಿನ ರಕ್ತದ ಮೂಲವಾಗಿ, ೨೦. ಅವನು ತೆರೆಯಿಂದ—ಅಂದರೆ, ತನ್ನ ಮಾಂಸದಿಂದ ೧)—ನಮಗೆ ಪ್ರತಿಷ್ಠೆ ಮಾಡಿದ ಜೀವವುಳ್ಳ ೨) ಹಾದಿ ೩) ಮಾರ್ಗವಾಗಿ ಪರಿಶುದ್ಧ ಸ್ಥಳದಲ್ಲಿ (ಪ್ರವೇಶಿಸುವದಕ್ಕೆ, ಧೈರ್ಯವುಳ್ಳ ೪), ೨೧. ದೇವರ ಮನೆಯ ೫) ಮೇಲಾಗಿರುವ ಮಹಾ ಯಾಜಕನೂ, ನಮಗೆ ಉಂಟಾಗಿರುವದರಿಂದ, ೨೨. ಸಶ್ವವಾದ ಹೃದಯದಿಂದಲೂ ೬) ವಿಶ್ವಾಸದ ಪೂರ್ಣ ನಿಶ್ಚಯದಿಂದಲೂ, ಕೆಟ್ಟ ಮನಸ್ಸಾಕ್ಷಿಯ ಪರಿಹಾರಕ್ಕಾಗಿ ಚಿಮಿಕಿಸಲ್ಪಟ್ಟ ಹೃದಯಗಳುಳ್ಳವರಾಗಿಯೂ ೭), ನಿರ್ಮಲವಾದ ನೀರಿನಿಂದ ತೊಳೆಯಲ್ಪಟ್ಟ ಶರೀರವುಳ್ಳವರಾಗಿಯೂ ೮), ಶರೀರಾಗಿ ೯). ೨೩. ನಿರೀಕ್ಷೆಯ ಅರಿಕೆಯನ್ನು ಚಪಲವಿಲ್ಲದೆ ಹಿಡಿಯೋಣಾಗಿ; ಯಾಕಂದರೆ ವಾಗ್ದತ್ತ ಮಾಡಿದವನು ನಂಬಿಕೆಯುಳ್ಳ

೯೪೦ ಅಪೌ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಶ(ಪ್ರವೃತ್ತಿ.

೧(ಬ್ರಿ. ೧೦, ೨೪—೨೯.

ವನು ೧೦). ೨೪. ಮತ್ತು (ಪ್ರೀತಿಗೂ ೧೧) ಸತ್‌ಕ್ರಿಯೆಗಳಿಗೂ ೧೨) (ಪ್ರೋತ್ಸಾಹಿಸುವದಕ್ಕೆ ಒಬ್ಬರನ್ನೊಬ್ಬರು ಆಲೋಚಿಸೋಣ ೧೩). ೨೫. ಕೆಲವರಿಗೆ ವಾಡಿಕೆ ಇರುವ (ಪ್ರಕಾರ, ನಾವು ಕೂಡಿ ಬರುವದನ್ನು ಬಿಡದೆ ೧೪), ಬುದ್ಧಿ ಹೇಳೋಣ. ಮತ್ತು ಆ ದಿನವು ಸಮೀಪಿಸುವದನ್ನು ೧೫) ನೀವು ನೋಡುವಷ್ಟು ಅಧಿಕವಾಗಿಯೇ.

೧. ಅಂದರೆ, ಆತನ ಔತ್ತಮಿಕ ನರಜಾವದಿಂದ. ಅದು ಶುದ್ಧ ಸ್ಥಳಕ್ಕೂ, ಪರಿಶುದ್ಧ ಸ್ಥಳಕ್ಕೂ ನಡುವೆಯಲ್ಲಿದ್ದ ತೆರೆಯೋಪಾದಿಯಾಗಿತ್ತು. ಆತನೂ, ಆತನ ಹಿಂಬಳಿಯಲ್ಲಿ ನಾವೂ, ದೇವರ ಸನ್ನಿಧಿಯಲ್ಲಿ ಪ್ರವೇಶಿಸುವ ಹಾಗೆ ಅದು ಚಿನ್ನವಾಗ ಬೇಕಾಯಿತು.

೨. ಕ್ರಿಸ್ತನು ತಾನೇ ಮಾರ್ಗವಾಗಿದ್ದಾನೆ.

೩. ಯೇಸುವಿನ ರಕ್ತದಿಂದಲೇ ಅದು ಸ್ಥಿರವಾದ ಕಾರಣ ಹೊಸದೆಂದು ಹೇಳಿಯದೆ.

೪. ಇಲ್ಲಿ ಉದಾಹರಿಸಿರುವ ಅಭಿಪ್ರಾಯದ ತಿಳುವಿಕೆಯಿಂದ ಈ ಧೈರ್ಯವು ಹುಟ್ಟುತ್ತದೆ.

೫. ಅಂದರೆ, ಸಭೆಯೆಂಬದೇವಾಲಯವು.

೬. ಕೃಪಾಚಿಲಾಷೆಯುಳ್ಳ ನಿಷ್ಕಪಟವಾದ ಹೃದಯದಿಂದ.

೭. ಮೋಶೆಯು (೨ ಮೋಶೆ. ೨೪ರಲ್ಲಿ) ಪೀಠವನ್ನೂ, ಜನರನ್ನೂ ರಕ್ತ ತಳಿಸಿ ಶುದ್ಧ ಮಾಡಿದ ಪ್ರಕಾರ, ಕ್ರಿಸ್ತನ ರಕ್ತದ ಮೂಲವಾಗಿ ಚಕ್ಕನ ಹೃದಯವು ಪೂತವಾಗಿ, ದುರ್ಮನಸ್ಸಾಕ್ಷಿಯಿಂದ ಬಿಡುಗಡೆಯಾಗುತ್ತದೆ.

೮. ಪಾವನ ನವೀಕರಣಾರ್ಥವಾದ ಮರ್ಮಾಚರಣೆಯಾದ ಸ್ನಾನವು ಇದರಿಂದ ಸೂಚಿತವಾಗಿದೆ.

೯. ಅಂದರೆ, ದೇವರ ಪರಿಶುದ್ಧವಾದ ಸಾನ್ನಿಧ್ಯದಲ್ಲಿ.

೧೦. ಇದನ್ನು ಅನೇಕಾನೇಕ ವಾಗ್ದತ್ತಗಳ ಪೂರೈಸುವಿಕೆಯಿಂದ ಪ್ರಮಾಣಿಸಿದ್ದಾನೆ.

೧೧. ಆಸಕ್ತನು ಪುರುಡುಳ್ಳವನಾಗುತ್ತಾನೆ. ಕ್ರಿಸ್ತನಲ್ಲಿ ಪ್ರತ್ಯಕ್ಷವಾದ ದೇವರ ಪ್ರೀತಿಯನ್ನು ತಿಳಿದು ಕಾಂಡವನು ಕೃತಜ್ಞನಾಗುತ್ತಾನೆ. ೧ ಯೋಹಾ. ೩, ೪. ೧೪. ೧೬; ೪, ೧೧.

೧೨. ಇವು ನಿಜವಾದ ಪ್ರೀತಿಯ ಉತ್ತಮ ದೃಷ್ಟಾಂತಗಳಾಗಿವೆ.

೧೩. ಅಂದರೆ, ಒಬ್ಬರನ್ನೊಬ್ಬರು ನೋಡಿ ಉದ್ಬೋಧಿಸಿ ಕಾಳ್ಗುವಾ.

೧೪. ಸಭಾಸಮಾಗಮಗಳಿಗೆ ಬರುವದು ಚಕ್ಕನಿಗೆ ಅವಶ್ಯವಾದದ್ದು. ಇದರಿಂದ ತನ್ನಲ್ಲಿರುವ ವಿಶ್ವಾಸವನ್ನು ಪ್ರಕಟವಾಗಿ ವಿಜ್ಞಾಪಿಸುವದಲ್ಲದೆ ಚದ್ರವಾಗಿ ಕಾಪಾಡುತ್ತಾನೆ.

೧೫. ನಿಜ ಶಿಷ್ಯರು ಯಾವಾಗಲೂ ಎದುರು ನೋಡುವ ಕ್ರಿಸ್ತನ ಪುನರಾಗಮನದಿವಸವು ಸರ್ವಸಭೆಯ ನಿರೀಕ್ಷೆಯ ಗುರಿಯಾಗಿದೆ.

೧) ಪುನಃಪತನಕ್ಕಾಗಿ ಭಾರಶಿಕ್ಷೆಯು ಯಾಕೆಂಬ ಕಾರಣವು. ಸ. ೧೦, ೨೬—೩೧.

೨೬. ಯಾಕಂದರೆ ನಾವು ಸತ್ಯದ ತಿಳುವಿಕೆಯನ್ನು ಹೊಂದಿದ ಮೇಲೆ ೧) ಬೇಕಾಗಿ ಪಾಪ ಮಾಡಿದರೆ, ಪಾಪಗಳಿಗಾಗಿಸ್ಕರ ಬಲಿಯು ಇನ್ನು ಇರುವದಿಲ್ಲ ೨); ೨೭. ಆದರೆ ನ್ಯಾಯತೀರ್ಪಿಕೆಯನ್ನೂ, ವಿರೋಧಿಗಳನ್ನು ಭಕ್ಷಿಸಲಿರುವ ಕೋಪಾಗ್ನಿಯನ್ನೂ ಎದುರು ನೋಡುವ ಒಂದು ಭಯವೇ. ೨೮. ಒಬ್ಬನು ಮೋಶೆಯ

೨. ಇತಲದಲ್ಲಿ ಪೌಲನ ಪ್ರಮತ್ತಿ. ನೆಪರ್ಯಕ್ಕೆ ಉದ್ಘಾಟನೆ. ೪೪೧
ಇಬ್ರಿ. ೧೦, ೨೫—೩೯.

ನ್ಯಾಯ ಪ್ರಮಾಣವನ್ನು ಅಸಡ್ಡೆ ಮಾಡಿದರೆ ೫), ಇಬ್ಬರ ಮೂವರ ಸಾಕ್ಷಿಯಿಂದ ಕನಿಕರವಿಲ್ಲದೆ ಸಾಯುವನು. ೨೯. ದೇವರ ಮಗನನ್ನು ತುಳಿದು ಬಿಟ್ಟು ೬), ತನ ನ್ನು ಪರಿಶುದ್ಧ ಮಾಡಿದ ೭) ಒಡಂಬಡಿಕೆಯ ರಕ್ತವನ್ನು ಸಾಧಾರಣವೆಂದೆಣಿಸಿ ೮), ಕೃಪೆಯ ಆತ್ಮನನ್ನು ತಿರಸ್ಕಾರ ಮಾಡಿದವನು ೯) ಎಷ್ಟು ಅಧಿಕವಾದ ದಂಡನೆಗೆ ಪಾತ್ರನಾಗಿ ಎಣಿಸಲ್ಪಡುವನೆಂದು ನೆನಸುತ್ತೀರಿ? ೩೦. ಯಾಕಂದರೆ ಮುಯ್ಯಿಗೆ ಮುಯ್ಯಿ ಕೊಡುವದು ನನ್ನದು; ನಾನು ಬದಲು ಕೊಡುವೆನೆಂಬದಾಗಿ ಕರ್ತನು ಹೇಳುತ್ತಾನೆಂದೂ ೧೦), ಮತ್ತು ಕರ್ತನು ತನ್ನ ಜನರಿಗೆ ನ್ಯಾಯ ತೀರಿಸುವನೆಂದೂ ೧೧), ಹೇಳಿದವನನ್ನು ಬಲ್ಲೆವು. ೩೧. ಜೀವವುಳ್ಳ ದೇವರ ಕೈಗಳಲ್ಲಿ ಬೀಳುವದು ಭಯಂ ಕರವಾದದ್ದು.

೧. ತಿಳಿಯದವನ ಪಾಪವನ್ನು ಕ್ಷಮಿಸ ಬಹುದು. ತಿಳಿದು ಪಾಪ ಮಾಡಿದವನು ನೆಪವನ್ನು ಹೇಳಲಾ ರನು.

೨. ಸರ್ವಸಾರ್ಥಕವಾದ ಏಕ ಬಲಿಯನ್ನು ತಿರ ಸ್ಕರಿಸಿದವನಿಗೆ ಗತಿಯಿಲ್ಲವೇ ಇಲ್ಲ.

೩. ನಿರ್ಭಯವಾದ ಗರ್ವದಿಂದ ನೇಮವನ್ನು ಮಾ ರಿದವನಿಗೆ ಪ್ರಾಣ ಶಿಕ್ಷೆಯು ನೇಮಕವಾಗಿತ್ತು. ೪ಮೋ ಶೆ. ೨೪, ೧೬.

೪. ಇದರ ಅಭಿಪ್ರಾಯವು ಮುಂದಿನ ಮಾತಿನಿಂ ದ ಉದಾಹರಿಸಿಯದೆ.

೫. ಅಂದರೆ, ದೇವಾನ್ಯಾಯದಲ್ಲಿ ಶೇರಿಸಿದ.

೬. ಕ್ರಿಸ್ತನು ಲೋಕಪಾಪಪರಿಹಾರಾರ್ಥವಾಗಿ ಮರಣವನ್ನು ಹೊಂದಿದನೆಂದು, ನಂಬದೆ ಇರುವ ವನು, ಆತನು ಅಪರಾಧಿಯಾಗಿ ಸತ್ತನೆಂದು, ನೆನಸ ಬೇಕು.

೭. ಪರಿಶುದ್ಧಾತ್ಮದಿಂದ ತನ್ನಲ್ಲಿ ಹುಟ್ಟಿದ ವಿಶ್ವಾ ಸವನ್ನು ಜ್ಞಾಂತಿಯಂದು ತಿರಸ್ಕರಿಸುವವನು ಪರಿಶು ದ್ಧಾತ್ಮದೂಷಕನಾಗಿದ್ದಾನೆ.

೮. ೫ಮೋಶೆ. ೩೨, ೩೫. ೩೬.

೯. ಕೀರ್ತ. ೫೦, ೪.

ವ. ೩೨. ಆದರೆ ಹಿಂದಿನ ಕಾಲದ ಚರಿತ್ರವನ್ನು ನೆನಸಿ ಕೊಂಡು, ನೀವು ಬೆಳಕನ್ನು ಹೊಂದಿದನಂತರ, ವ. ೩೩. ನಿಂದೆಗಳನ್ನೂ ಶ್ರಮಗಳನ್ನೂ ತಾಳಿ, ವ. ೩೪. ಬಂಧನದಲ್ಲಿ ಶಿಕ್ಕಿ ಕೊಂಡ ನನಗಾಗಿ ಆಸ್ತಿಯ ಅ ಪಹಾರವನ್ನು (ಅದು ಅಪೊ. ಕ್ರಿ. ೨೪, ೨೩. ೨೬ಲ್ಲಿ ಸೂಚಿತವಾದ ಸಂಗತಿಗಳಿಗೆ ಒಪ್ಪುತ್ತದೆ,) ಧೈರ್ಯಕ ಐ ಶ್ವರ್ಯದ ಆಶೆಯ ಸಂತುಷ್ಟಿಯಿಂದ ನಿಶ್ಚಿಂತರಾಗಿ ಸಹಿಸಿದಿರಲ್ಲ? ವ. ೩೫. ಹಾಗಾದರೆ ಆಗ ನಿಮ್ಮಲ್ಲಿದ್ದ ಆಶೆಯನ್ನು ಈಗ ತಳ್ಳಿ ಬಾರದು; ಅದಕ್ಕೆ ಘನವಾದ ಫಲವುಂಟು. ವ. ೩೬. ಯಾಕಂದರೆ: ವೃತ್ತಿ ನಡಿಸು ವದರಲ್ಲಿಯೂ, ಶ್ರಮ ತಾಳುವದರಲ್ಲಿಯೂ ದೇವರ ಚಿತ್ತವನ್ನು ಕೈಕೊಳ್ಳುವವರಿಗೆ ವಾಗ್ದತ್ತವಾದ ಮಹಿಮೆ ಯು ಪ್ರಾಪ್ತವಾಗುವದು. ವ. ೩೭. ಈಗ ತಾಳ್ಮೆಯು ಅತ್ಯಾವಶ್ಯಕವಾಗಿದೆ; ಯಾಕಂದರೆ ಬರುವ ಕರ್ತನು ಬೇಗ ಬರುವನು. ವ. ೩೮. ಆಗ ನಂಬಿದವನೇ ನೀತಿವಂತನಾಗಿ ಕಾಣಿಸಿ, ಬದುಕುವನು. (ಹಬ. ೨, ೪.) ಆದರೆ ಕ್ರಿಸ್ತನಿಗಾಗಿ ತಾಳ ತಕ್ಕ ಶ್ರಮಕ್ಕೆ ಹಿಂಜರಿದವನಿಗೆ ದೇವರು ಮೆಚ್ಚನು. ವ. ೩೯. ಆದರೆ ನಾವು ನಾ ಶವಾಗುವ ಚಂಚಲರಲ್ಲಿ ಶೇರದೆ, ಎಲ್ಲಾ ಕಳೆದು ಕೊಂಡವನು ಎಲ್ಲಾ ಸ್ವತಂತ್ರಿಸಿ ಕೊಳ್ಳುವನೆಂಬ ವಿಶ್ವಾಸ ದಲ್ಲಿ ದೃಢರಾಗಿದ್ದು, ರಕ್ಷಣೆಯನ್ನು ಹೊಂದೋಣ.

೪೮೨ ಅಪಾ. ಚ. ೪. ಪರಿಚ್ಛೇದ. ಅಪಾಸ್ತಲರ ಅಂಶ/ಪ್ರೊವ ೪.

ಇಬ್ರಿ. ೧೧, ೧—೬.

ಉ) ಹಳೆ ಒಡಂಬಡಿಕೆಯಲ್ಲಿ ನಿಜ ವಿಶ್ವಾಸದ ಅನೇಕ ಮಾದ್ರಿಗಳು ಕಾಣುತ್ತವೆಂಬ ಕಾರಣವು. ಸ. ೧೧.

ವ. ೧. ವಿಶ್ವಾಸವುಳ್ಳವನು ತನ್ನ ಆಶೆಯ ವಿಷಯವನ್ನು ಹೊಂದಿದವನಾಗಿ, ಕಾಣದಂಥಾದ್ದನ್ನು ಕಂಡಂತೆ, ನಿಶ್ಚಯವುಳ್ಳವನಾಗಿದ್ದಾನೆ. ಇದು ನಿಜವಾದ ವಿಶ್ವಾಸವು; ಇತರವಾದದ್ದು ಅಸತ್ಯವಾಗಿದೆ. ವ. ೨. ಹಿರಿಯರು ಈ ವಿಶ್ವಾಸವುಳ್ಳವರಾದ್ದರಿಂದ, ದೇವರಿಗೆ ಹಿತರಾದ ಭಕ್ತರೆಂದು ಹೆಸರ್ಗೊಂಡಿದ್ದಾರೆ.

೪. ವಿಶ್ವಾಸದಿಂದ, ಕಾಣಿಲ್ಪಡುವವುಗಳು ತೌರುವಂಥವುಗಳಿಂದ ಉಂಟು ಮಾಡಲ್ಪಡದೆ, ಲೌಕಿಕಗಳು ದೇವರ ವಾಕ್ಯದಿಂದ ಸಿದ್ಧ ಮಾಡಲ್ಪಟ್ಟವೆಂದು ಗ್ರಹಿಸುತ್ತೇವೆ ೧). ೪. ವಿಶ್ವಾಸದಿಂದ ಹೇಬೆಲನು ೨) ಕಾಯಿನನಿಗಿಂತ ಅಧಿಕವಾದ ಬಲಿಯನ್ನು ದೇವರಿಗೆ ಅರ್ಪಿಸಿದನು; ಅದರಿಂದ ಅವನು, ದೇವರು ಅವನ ಕಾಣಿಕೆಗಳನ್ನು ಕುರಿತು ಸಾಕ್ಷಿ ಕೊಡಲಾಗಿ, ನೀತಿವಂತನೆಂದು ೩) ಸಾಕ್ಷಿಗೊಂಡನು. ಮತ್ತು ಅದರಿಂದ ಅವನು ಸತ್ತವನಾಗಿದ್ದು, ಇನ್ನು ಮಾತಾಡುತ್ತಾನೆ. ೫. ವಿಶ್ವಾಸದಿಂದ ಹನೋಕನು ೪) ಮರಣವನ್ನು ನೋಡದ ಹಾಗೆ ಎತ್ತಲ್ಪಟ್ಟನು; ದೇವರು ಅವನನ್ನು ಎತ್ತಿದ್ದರಿಂದ ಶಿಕ್ಕದೆ ಹೋದನು. ಯಾಕಂದರೆ ಅವನು ಎತ್ತಲ್ಪಡುವದಕ್ಕಿಂತ ಮುಂಚೆ, ದೇವರು ಅವನಲ್ಲಿ ಮೆಚ್ಚಿದನೆಂದು ಸಾಕ್ಷಿಗೊಂಡನು. ೬. ಆದರೆ ವಿಶ್ವಾಸವಿಲ್ಲದೆ ಅವನನ್ನು ಮೆಚ್ಚಿಸುವದಕ್ಕಾಗುವದಿಲ್ಲ ೫). ಯಾಕಂದರೆ ದೇವರ ಬಳಿಗೆ ಬರುವವನು, ಅವನು ಇದ್ದಾನೆಂದೂ ೬), ಅವನನ್ನು ಜಾಗ್ರತೆಯಾಗಿ ಹುಡುಕುವವರಿಗೆ ಫಲ ಕೊಡುವವನಾಗಿದ್ದಾನೆಂದೂ, ವಿಶ್ವಾಸಿಸಿ ಬೇಕು.

೧. ಈ ವಚನವು ಮೊದಲನೆ ವಚನದ ಅಭಿಪ್ರಾಯವನ್ನು ಹೆಚ್ಚಾಗಿ ವಿವರಿಸುತ್ತದೆ; ಳನೆ ಮೊದಲಾದ ವಚನಗಳಲ್ಲಿ ಎರಡನೆ ವಚನದ ವಿಪರವಾದ ವ್ಯಾಖ್ಯಾನವು ಬರದದೆ. ಲೌಕಗಳು ಎಂಬದಕ್ಕೆ ಗ್ರೇಕದಲ್ಲಿ ಯುಗಗಳೆಂಬ ಅರ್ಥವುಳ್ಳ ಶಬ್ದವು ಪ್ರಯೋಗವಾಗಿದೆ. ಯಾಕಂದರೆ ಆಯಾಲೌಕಕ್ಕೆ ಆಯಾಯುಗವು ನೇಮಕವಾಗಿದೆ. ಹಿಂದೂ ಜನರಲ್ಲಿಯೂ ಗ್ರೇಕರಲ್ಲಿಯೂ ರೂಢಿಯಾದ ನಾಲ್ಕು ಯುಗದ ಸಂಪ್ರದಾಯವು ಲೌಕದ ಆದಿಸ್ಥಿತಿಯು ಇತ್ತಲಾಗಿನದಕ್ಕಿಂತ ಉತ್ತಮವಾಗಿತ್ತೆಂಬ ಸ್ಮೃತಿಯಿಂದ ಪುಟ್ಟಿದ ಇಥ್ಥಾ ಕಲ್ಪನೆಯಾಗಿದೆ.

೨. ಹೇಬೆಲನು ವಿಶ್ವಾಸದಿಂದ ಅರ್ಪಿಸಿದ ಪಾಠವು ದೇವರಿಗೆ ಹಿತವಾಗಿತ್ತೆಂದು, ಕಾಯಿನನಿಗೂ ಕಾಣಿಸುವ ಸಂಜ್ಞೆಯಿಂದ ಪ್ರಕಟವಾಯಿತು. ಈ ಪ್ರಕಾರ ದೇವರು ತಾನು ಹೇಬೆಲನಿಗೆ ಮೆಚ್ಚಿದ್ದನ್ನು ತೋರಿಸಿದನು. ಅವನು ಸತ್ತವನಾಗಿದ್ದು ಮಾತಾಡುತ್ತಾನೆಂಬದಕ್ಕೆ ಸ. ೧೨, ೨೪. ಸರಿ ನೋಡ ಬೇಕು.

೩. ನೀತಿವಂತನೆಂಬ ಪೆಸರು ಹೇಬೆಲನಿಗಲ್ಲ, ನೋಹನಿಗೆ ೧ ಮೋಶೆ. ೬, ೯ಲ್ಲಿ ಮೊದಲು ಇಟ್ಟದೆ. ಆದರೂ ದೇವರು ಅವನ ಬಲಿಯನ್ನು ಅಂಗೀಕರಿಸಿದ್ದರಿಂದ, ಅವನು ನೀತಿವಂತನೆಂದು ಪ್ರಸಿದ್ಧವಾಯಿತು.

೪. ಹನೋಕನ ವಿಷಯವಾಗಿ ೧ ಮೋಶೆ. ೫, ೨೨. ೨೪ಲ್ಲಿ, ಅವನು ದೇವರ ಸಂಗಡ ನಡದು ಕಾಣದನೆಂದು ಬರದದೆ. ಇದಕ್ಕೆ ಪ್ರತಿಯಾಗಿ ಸಪ್ತತಿ ಚಾ

೭. ಇತಲದಲ್ಲಿ ಪೌಲನ ಪ್ರಾಮುಖ್ಯತೆ. ಸ್ತೆಫನ್ಯನಿಗೆ ಉದ್ಗಾರನೆ. ೪೫-೫೩

ಇಬ್ರಿ. ೧೧, ೭—೧೩.

ಷಾಂತರದಲ್ಲಿ, ದೇವರು ಅವನಿಗೆ ಮೆಚ್ಚಿದನೆಂದು, ಬರದದೆ. ಪೌಲನು ಇಲ್ಲಿ ಚಾಷಾಂತರದ ವಾಕ್ಯವನ್ನು ಪ್ರಯೋಗಿಸಿ, ಹನಾನೀಕನನ್ನು ದೇವರಿಂದ ಉತ್ತಮರೆಂದು ಸಾಕ್ಷಿ ಗಾಂಡವರ ಲೆಖ್ಖದಲ್ಲಿ ಶೇರಿಸುತ್ತಾನೆ.

೫. ಪೌಲನು ಹನಾನೀಕನ ವಿಶ್ವಾಸವನ್ನು ಅನುಮಾನಪ್ರಮಾಣವಾಗಿ ಅವನು ಸಾಯದೆ ಲೌಕಾಂತರವನ್ನೈದಿದನೆಂಬುವದರಿಂದ ಸ್ಥಾಪಿಸುತ್ತಾನೆ.

೬. ಹನಾನೀಕನು ದೇವರನ್ನು ಪ್ರತ್ಯಕ್ಷವಾಗಿ ಕಾಣಲಿಲ್ಲವೆಂದು, ಈ ಮಾತಿನಿಂದ ತಾತ್ಪರುತ್ತದೆ. ಮನುಷ್ಯರೆಲ್ಲರು ದೇವರು ಇದ್ದಾನೆಂಬ ಮಾತಿಗೆ ಒಪ್ಪಿಕಾಂದರೂ, ಆತನನ್ನು ಕಂಡ ಹಾಗೆ ನಂಬುವವರು (ವ. ೧.) ಸ್ವಲ್ಪ ಮಂದಿಯಾಗಿದ್ದಾರೆ.

೭. ವಿಶ್ವಾಸದಿಂದ ನೋಹನು ಇನ್ನು ಕಾಣದವುಗಳನ್ನು ಕುರಿತು ೧) ದೈವೋಕ್ತರವನ್ನು ಹೊಂದಿ, ಭಯಸ್ತನಾಗಿ, ತನ್ನ ಮನೆಯ ರಕ್ಷಣೆಗಾಗಿ ನಾವೆಯಂನು ಸಿದ್ಧ ಮಾಡಿದನು; ಅದರಿಂದ ಲೋಕಕ್ಕೆ ಆಜ್ಞೆ ನಿರ್ಣಯಿಸಿ ೨) ವಿಶ್ವಾಸದ ಪ್ರಕಾರವಾದ ನೀತಿಗೆ ಬಾಧ್ಯನಾದನು ೩). ೮. ವಿಶ್ವಾಸದಿಂದ ಅಬ್ರಹಾಮನು ತಾನು ಆಸ್ತಿಯಾಗಿ ಹೊಂದಲಾಗಿದ್ದ ಸ್ಥಳಕ್ಕೆ ಹೊರಡುವದಕ್ಕೆ ಕರೆಯಲ್ಪಟ್ಟಾಗ, ವಿಧ್ಯೆಯನಾಗಿದ್ದು, ಎಲ್ಲಿಗೆ ಹೋಗುತ್ತಿದ್ದನೆಂದರಿಯದೆ ೪), ಹೊರಟನು. ೯. ವಿಶ್ವಾಸದಿಂದ ಅವನು ವಾಗ್ದತ್ತ ದೇಶದಲ್ಲಿ ಅನ್ಯ ದೇಶದಲ್ಲಿದ್ದ ಹಾಗೆ ಪರವಾಸ ಮಾಡಿ, ತನ್ನ ಕೂಡ ಅದೇ ವಾಗ್ದತ್ತಕ್ಕೆ ಬಾಧ್ಯಸ್ತರಾಗಿದ್ದ ಇಸಾಕನ ಸಂಗಡಲೂ, ಯಾಕೋಬನ ಸಂಗಡಲೂ ಗುಡಾರಗಳಲ್ಲಿ ವಾಸ ಮಾಡಿದನು ೫). ೧೦. ಯಾಕಂದರೆ ಅಸ್ತಿವಾರಗಳುಳ್ಳ ಪಟ್ಟಣವನ್ನು ೬) ಎದುರು ನೋಡಿ ಕೊಂಡಿದ್ದನು. ಅದನ್ನು ಕಟ್ಟಿ ಉಂಟು ಮಾಡುವವನು ದೇವರೇ ೭). ೧೧. ವಿಶ್ವಾಸದಿಂದ ಸಾರಳು ತಾನೇ, ವಾಗ್ದತ್ತ ಮಾಡಿದವನು ನಂಬಿಕೆಯುಳ್ಳವನೆಂದು ಎಣಿಸಿದ್ದರಿಂದ, ಗರ್ಭ ಧರಿಸಿಕೊಳ್ಳಬಲವನ್ನು ಹೊಂದಿ, ಶಕ್ತ ಪ್ರಾಯ ಮೀರಿದವಳಾಗಿ ೮) ಹೆತ್ತಳು. ೧೨. ಆದದರಿಂದ ಸತ್ತ ಹಾಗಿದ್ದ ಒಬ್ಬನಿಂದಲೇ ೯), ಆಕಾಶದ ನಕ್ಷತ್ರಗಳ ಹಾಗೆ ಗುಂಪಾಗಿಯೂ, ಸಮುದ್ರದ ಧಡದ ಲಿರುವ ಲೆಕ್ಕವಿಲ್ಲದ ಮರಳಿನ ಹಾಗೆಯೂ, ಹುಟ್ಟಿದರು. ೧೩. ಇವರೆಲ್ಲರು ವಾಗ್ದತ್ತಗಳನ್ನು ಹೊಂದದೆ ೧೦), ದೂರದಿಂದ ಅವುಗಳನ್ನು ಕಂಡು, ನಿಶ್ಚಯಿಸಿ ಕೊಂಡು, ಅಂಗೀಕರಿಸಿ, ಭೂಮಿಯ ಮೇಲೆ ಅನ್ಯರಾಗಿಯೂ ಪರದೇಶಸ್ಥರಾಗಿಯೂ ಇದ್ದೇವೆಂದು ೧೧) ಅರಿಕೆ ಮಾಡಿ ಕೊಂಡು, ವಿಶ್ವಾಸದಲ್ಲಿ ಸತ್ತರು. ೧೪. ಯಾಕಂದರೆ, ಇಂಥ ವುಗಳನ್ನು ಹೇಳುವವರು ಸ್ವದೇಶವನ್ನು ಹುಡುಕುತ್ತೇವೆಂದು ಕಾಣಿಸ ಮಾಡುತ್ತಾರೆ. ಮತ್ತು ಬಿಟ್ಟು ಬಂದ ದೇಶದ ಮೇಲೆ ಜ್ಞಪ್ತಿ ಇದ್ದರೆ, ತಿರಿಗಿ ಹೋಗುವದಕ್ಕೆ ಸಮಯ ಉಂಟಾಗುತ್ತಿತ್ತು. ೧೫. ಆದರೆ ಇಗ ಉತ್ತಮವಾದದ್ದನ್ನು—ಅಂದರೆ, ಪರಲೋಕ

ಇಬ್ರಿ. ೧೧, ೧೬—೧೯.

ಕವಾದದ್ದನ್ನು—ಅಪೇಕ್ಷಿಸುತ್ತಾರೆ; ಆದದರಿಂದ ದೇವರು ಅವರ ದೇವರೆಂದು ಕರೆಯಲ್ಪಡುವದಕ್ಕೆ ೧೨) ಅವರಿಗೆ ನಾಚಿಕೆ ಪಡುವದಿಲ್ಲ. ೧೬. ಯಾಕಂದರೆ ಅವರಿಗೆ ಪಟ್ಟಣವನ್ನು ಸಿದ್ಧ ಮಾಡಿದ್ದಾನೆ ೧೩).

೧. ಅಂದರೆ, ಜಲಪ್ರಳಯವು ಬರುವದಕ್ಕಿಂತ ೧೨೦ ವರುಷ ಮುಂಚೆ ಅದರ ವಿಷಯವಾದ ದೇವರ ವಾಕ್ಯವನ್ನು ಕೇಳಿ ನಂಬಿ, ನಾಶನಕ್ಕೆ ತಪ್ಪಿಸಿ ಕಾಳ್ಳ ಬೇಕೆಂದು, ನಾವೆಯನ್ನು ಕಟ್ಟಿಸಿದನು. ಈ ಚರಿತ್ರವು ಮಿಂದೂ ಜನರಿಗೂ ಪೂರ್ವದಲ್ಲಿ ಗಾತ್ತಾಯಿತು. ಮೋಶೆಯ ಮೊದಲನೆ ಪುಸ್ತಕದಲ್ಲಿ ಬರದ ನೋಪಾ ನ ಕಥೆಯು ಕೆಲವು ಅಬದ್ಧ ಮಾತುಗಳಿಂದ ಬೆರದು ಮತ್ಸ್ಯೋಪಾಖ್ಯಾನದಲ್ಲಿ ಹೋಳಿಯದೆ. ನೋಪಾನಿಗೆ ಅಲ್ಲಿ ಸತ್ಯವ್ರತನೆಂದು ಹೆಸರದೆ.

೨. ನೋಪಾನಿಗೆ ಬಂದ ದೇವರ ವಾಕ್ಯವು ಎಲ್ಲರಿಗೂ ಪ್ರಕಟವಾಯಿತು; ಆದರೆ ನೋಪಾನ ಪಾರ್ತು ಯಾರೂ ಅದನ್ನು ನಂಬಲಿಲ್ಲ. ಆದ್ದರಿಂದ, ನೋಪಾನ ವಿಶ್ವಾಸವು ಉಳಿದವರ ಅವಿಶ್ವಾಸಕ್ಕೆ ಆಜ್ಞೆ ನಿರ್ಣೈಸುತ್ತದೆಂದು, ಇಲ್ಲಿ ಬರದದೆ.

೩. ಈ ಮಾತು ೧ ಮೋಶೆ. ೭, ೧ಲ್ಲಿ ಬರದದ್ದನ್ನು ಸೂಚಿಸುತ್ತದೆ.

೪. ಅಬ್ರಹಾಮನು ಮೊದಲನೆ ವಚನದಲ್ಲಿ ಸೂಚಿತವಾದ ವಿಶ್ವಾಸವುಳ್ಳವನಾಗಿದ್ದು, ದೇವರು ಹೇಳಿದ ದೇಶವನ್ನು ನೋಡದೆ, ತಿಳಿಯದೆ ಇದ್ದರೂ, ದೃಢವಾದ ವಿಶ್ವಾಸವನ್ನು ದೇವರ ವಾಕ್ಯದ ಮೇಲೆ ಇಟ್ಟು, ಸ್ವದೇಶವನ್ನು ಬಿಟ್ಟನು.

೫. ಅವನು ಕನಾನ ದೇಶಕ್ಕೆ ಬಂದನಂತರ, ಅದು ಅವನಿಗೆ ಸ್ವಾಸ್ತ್ಯಿಯಾಗಿ ಶಿಕ್ಕಯಿದ್ದರೂ, ಅದು ತನ್ನದಾಗುವದೆಂಬದಕ್ಕೆ ಸಂದೇಹ ಪಡದೆ, ಇಸಾಕ ಯಾಕೋಬರ ಸಂಗಡ ವಾಗ್ದತ್ತವು ಪೂರ್ತಿಯಾಗುವದನ್ನು ತಾಳ್ಮೆಯಾಗಿ ಎದುರು ನೋಡುತ್ತಾ ಇದ್ದನು.

೬. ಪ್ರಕ. ೨೧, ೧ಳಲ್ಲಿ ಈ ಪಟ್ಟಣದ ವರ್ಣನೆಯು ಬರದದೆ.

೭. ಅಬ್ರಹಾಮನು ದೈವಿಕ ಪಟ್ಟಣವನ್ನು ಮಾತ್ರವಲ್ಲ, ಅದರ ಕರ್ತನನ್ನು ಸಹ ವಿಶ್ವಾಸದಿಂದ ನೋಡಿದನೆಂದು, ಯೋಪಾ. ೮, ೫೬ಲ್ಲಿ ಬರದದೆ.

೮. ಇದಕ್ಕೆ ರೋಮಾ. ೪, ೧೯. ಸರಿ ನೋಡಬೇಕು.

೯. ಅಂದರೆ, ಅಬ್ರಹಾಮನಿಂದ ಸಾರಳ ಮುಖಾಂತರ ಇಸಾಕನು, ಇಸಾಕನಿಂದ ಯಾಕೋಬನು, ಯಾಕೋಬನಿಂದ ೧೨ ಕುಲದ ಪಿತರರು, ಅವರಿಂದ ಇಸ್ರಯೇಲನವರೆಲ್ಲರೂ ಹುಟ್ಟಿದರು.

೧೦. ಅಂದರೆ, ದೇವರ ವಾಗ್ದತ್ತಗಳು ಅವರ ಕಾಲದಲ್ಲಿ ನೆರವೇರಲಿಲ್ಲ; ಆದಾಗ್ಯೂ ಅವರು ಸಂಶಯ ಪಡಲಿಲ್ಲ.

೧೧. ಈ ಮಾತು ೧ ಮೋಶೆ. ೨೩, ೪; ೪೭, ೯ಲ್ಲಿ ಬರದದೆ.

೧೨. ೨ ಮೋಶೆ. ೩, ೬.

೧೩. ಅಂದರೆ, ತನ್ನ ವಾಸಸ್ಥಾನವಾದ ಪಟ್ಟಣವನ್ನು. ಪ್ರಕ. ೨೨, ೩.

೧೭. ವಿಶ್ವಾಸದಿಂದ ಅಬ್ರಹಾಮನು ಶೋಧಿಸಲ್ಪಟ್ಟವನಾಗಿ, ಇಸಾಕನನ್ನು ಅರ್ಪಿಸಿದನು; ವಾಗ್ದತ್ತಗಳನ್ನು ಅಂಗೀಕರಿಸಿದವನು, ಏಕ ಪುತ್ರನನ್ನು ಅರ್ಪಿಸಿದನು ೧). ೧೮. ಅವನನ್ನು ಕುರಿತು ಇಸಾಕನಲ್ಲಿ ನಿನಗೆ ಬೀಜವು ಕರೆಯಲ್ಪಡುವದೆಂದು ಹೇಳಲ್ಪಟ್ಟಿತು. ೧೯. ದೇವರು ಅವನನ್ನು ಸತ್ತವರಾಳಗಿಂದಲೇ ಎಬ್ಬಿಸಬಲ್ಲನೆಂದು ಎಣಿಸಿಕೊಂಡನು. ಅದರಿಂದ ಅವನನ್ನು ಉಪಮಾನವಾಗಿ ಸಂಪಾ

೨. ಇಶಲದಲ್ಲಿ ಪೌಲನ ಪ್ರೌಢತ್ವ. ನಂಬಿಕೆಗೆ ಉದ್ಬೋಧನೆ. ೪೮೫
ಇಬ್ರಿ. ೧೧, ೨೦—೨೭.

ದಿಸಿದನು ೨). ೨೦. ವಿಶ್ವಾಸದಿಂದ ಇಸಾಕನು ಆಗುವವುಗಳನ್ನು ಕುರಿತು ಯಾ
ಕೋಬನನ್ನೂ ಎಸಾವನನ್ನೂ ಆಶೀರ್ವದಿಸಿದನು ೩). ೨೧. ವಿಶ್ವಾಸದಿಂದ ಯಾ
ಕೋಬನು ಸಾಯುತ್ತಿರುವಾಗ, ಯೋಸೇಫನ ಇಬ್ಬರ ಮಕ್ಕಳನ್ನು ಆಶೀರ್ವದಿಸಿ
ದನು ೪). ಮತ್ತು ತನ್ನ ಕೋಲಿನ ಕಾನೆಯ ಮೇಲೆ ನಮಸ್ಕರಿಸಿದನು. ೨೨. ವಿಶ್ವಾ
ಸದಿಂದ ಯೋಸೇಫನು ತೀರಿ ಹೋಗುವಾಗ, ಇಸ್ರಾಯೇಲನ ಮಕ್ಕಳು ಹೊರಡುವ
ದನ್ನು ಕುರಿತು ನೆನಪು ಮಾಡಿ ಕೊಂಡು, ತನ್ನ ಎಲುವುಗಳನ್ನು ಕುರಿತು ಅಪ್ಪಣೆ
ಕೊಟ್ಟನು ೫).

೧. ಇದರಲ್ಲಿ ವಿಶ್ವಾಸಿಗಳ ತಂದೆಯಂದು ಪೆಸ
ರ್ಗೊಂಡ ಅಬ್ರಹಾಮನು, ತನ್ನ ಏಕ ಪುತ್ರನನ್ನು
ಲಾಕರಕ್ಷಣಾರ್ಥವಾಗಿ ಮರಣಕ್ಕೆ ಒಪ್ಪಿಸಿದ, ತಂ
ದೆಯಾದ ದೇವರಿಗೆ ಮುಂಗುರ್ತಾಗಿದ್ದನು.

೨. ದೇವರು ಕೊಟ್ಟ ವಾಗ್ದತ್ತವನ್ನು ನಿಸ್ಸಂಶಯ
ವಾಗಿ ನಂಬಿ, ತಾನು ದೇವರ ಅಪ್ಪಣೆಯ ಪ್ರಕಾರ
ಇಸಾಕನನ್ನು ಬಲಿಯಾಗಿ ಅರ್ಪಿಸಿದರೆ, ದೇವರು ಅವ
ನನ್ನು ತಿರಿಗಿ ಬದುಕಿಸುವನೆಂದು, ಊಹಿಸಿದನು. ಅ
ವನು ಊಹಿಸಿದ ಪ್ರಕಾರವೇ ಆಗಲಿಲ್ಲ; ಆದರೆ
ಇಸಾಕನನ್ನು ಬಲಿಯರ್ಪಣೆಗಾಗಿ ಕೊಂದು ಪ್ರಾಕು
ವದಕ್ಕಿಂತ ಮುಂಚೆ ಅವನ ವಿಶ್ವಾಸಪರೀಕ್ಷೆಯು ನೆರ
ವೇರಿತು. ಮಗನಾದ ಇಸಾಕನನ್ನು ಅಬ್ರಹಾಮ
ನು, ಅವನು ಸತ್ತು ತಿರಿಗಿ ಬದುಕಿದಂತೆ, ಪ್ರಾಸ್ತಾ
ಗಿ ಪಡದು ಕೊಂಡನು. ರೋಮಾ. ೪, ೧೭. ೨೧.

೩. ಇಸಾಕನು ದೇವರ ವಾಗ್ದತ್ತವನ್ನು ಪೂರ್ಣ
ವಾಗಿ ನಂಬಿ, ತಾನು ಪ್ರಾಣಿಂದದೆ ಇದ್ದರೂ, ಪ್ರಾಣಿಂ
ದುತ್ತೇನೆಂದು ವಿಶ್ವಾಸಿಸಿದ ಬಾಧ್ಯತೆಯನ್ನು ಯಾ
ಕೋಬನಿಗೂ, ಎಸಾವನಿಗೂ ಒಪ್ಪಿಸಿದನು.

೪. ೧ ಮೋಶೆ. ೪೭, ೩೯; ೪೮, ೧೦. ೧೪.

೫. ೧ ಮೋಶೆ. ೫೦, ೨೫. ಈ ಪ್ರಕಾರ ಯೋಸೆ
ಫನ ಶವವು ಇಸ್ರಾಯೇಲನವರಿಗೆ ಮುಂದಣ ರಕ್ಷಣೆ
ಯ ಸಂಚಿಕಾರವಾಯಿತು. ಇಸ್ರಾಯೇಲನವರು ಮಿಚ್ರ
ದೇಶದಿಂದ ಪ್ರಾರಟು ಪ್ರಾಣದಾಗ, ಯೋಸೆಫನು
ಕೆಲವು ನೂರು ವರುಷಕ್ಕಿಂತ ಮುಂಚೆ ಕೊಟ್ಟ ಅಪ್ಪ
ಣೆಯನ್ನು ಕೈಕೊಂಡರು.

೨೩. ವಿಶ್ವಾಸದಿಂದ ಮೋಶೆ ಹುಟ್ಟಿದಾಗ, ಅವನ ಹೆತ್ತವರಿಂದ ಮೂರು ತಿಂಗ
ಳು ಬಚ್ಚಿಡಲ್ಪಟ್ಟನು. ಯಾಕಂದರೆ ಕೂಸು ಚಲುವಾದದ್ದೆಂದು ನೋಡಿದರು ೧); ಅರ
ಸಿನ ಕಟ್ಟಳೆಗೆ ಭಯ ಪಡಲಿಲ್ಲ. ೨೪. ವಿಶ್ವಾಸದಿಂದ ಮೋಶೆ ದೊಡ್ಡವನಾದಾಗ,
ಫರೋನನ ಮಗಳ ಮಗನೆಂದು ಹೇಳಲ್ಪಡಲೊಲ್ಲದೆ, ೨೫. ಸ್ವಲ್ಪ ಕಾಲಕ್ಕಿರುವ
ಪಾಪಭೋಗವನ್ನು ಹೊಂದುವದಕ್ಕಿಂತ ೨), ೨೬. ದೇವರ ಜನರ ಸಂಗಡ ಕಷ್ಟ
ಪಡುವದನ್ನು ಆದು ಕೊಂಡು, ಐಗುಪ್ತದಲ್ಲಿರುವ ದ್ರವ್ಯಗಳಿಗಿಂತ, ಕ್ರಿಸ್ತನ ನಿಂದೆ
ಯು ೩) ಅಧಿಕ ಐಶ್ವರ್ಯವೆಂದು ಎಣಿಸಿದನು; ಯಾಕಂದರೆ ಬರುವ ಪ್ರತಿಫಲವನು
ಎದುರು ನೋಡಿದನು. ೨೭. ವಿಶ್ವಾಸದಿಂದ ಅರಸಿನ ಕೋಪಕ್ಕೆ ಭಯ ಪಡದೆ,
ಐಗುಪ್ತವನ್ನು ಬಿಟ್ಟನು. ಯಾಕಂದರೆ ಅದೃಶ್ಯನಾದವನನ್ನು ದೃಷ್ಟಿಸಿದ ಹಾಗೆ ೪) ದೃಢ

ವಾಗಿದ್ದನು. ೨೪. ವಿಶ್ವಾಸದಿಂದ ಬೌಚಲ ಮಕ್ಕಳನ್ನು ಸಂಹರಿಸಿದವನು ಅವರನ್ನುಮುಟ್ಟಿದ ಹಾಗೆ, ಪಸ್ಕವನ್ನೂ ರಕ್ತ ಚೆಲ್ಲುವಿಕೆಯನ್ನೂ ನಡಿಸಿದನು ೫). ೨೫. ವಿಶ್ವಾಸದಿಂದ ಕೆಂಪು ಸಮುದ್ರವನ್ನು ಒಣ ಭೂಮಿಯ ಹಾಗೆ ದಾಟಿದರು. ಐಗುಪ್ತ್ಯರು ಅದನ್ನು ಮಾಡ ಯತ್ನಿಸಿ ೬), ಮುಣಿಗಿ ಹೋದರು. ೩೦. ವಿಶ್ವಾಸದಿಂದ ಯೆರಿಕ್ಕೋವಿನ ಗೋಡೆಗಳು ಏಳು ದಿವಸಗಳ ಮಟ್ಟಿಗೂ ಬಳಿಸಲ್ಪಟ್ಟು, ಬಿದ್ದು ಹೋದವು ೭). ೩೧. ವಿಶ್ವಾಸದಿಂದ ಸೂಳೆಯಾದ ರಹಾಬಳು ೮) ಚಾರರನ್ನು ಸಮಾಧಾನವಾಗಿ ಶೇರಿಸಿದ್ದರಿಂದ, ಅವಿಧ್ಯೇಯರ ಸಂಗಡ ನಾಶವಾಗಲಿಲ್ಲ.

೧. ಅವನ ಪೆತ್ತವರು ಕೂಸಿನ ಚಲುವಿಕೆಯನ್ನು ನೋಡಿ, ಅವನು ತನ್ನ ಜನರನ್ನು ರಕ್ಷಿಸ ಸಮರ್ಥನಾದ ಮಹಾ ಪುರುಷನಾಗುವನೆಂದು ನಂಬಿ, ಗಂಡು ಕೂಸುಗಳನ್ನು ಕಾಲ್ಲ ಬೇಕೆಂಬ ಅರಸಿನ ಕಟ್ಟಳೆಯನ್ನು ಮೀರಿದರು.

೨. ಮೋಶೆಯು ತನ್ನ ಜನರ ಪಕ್ಷದಲ್ಲಿ ಶೇರದೆ, ಮಿಚ್ರದವರಲ್ಲಿ ರಾಜಪುತ್ರನಾಗಿ ಬದುಕಿದ್ದರೆ, ಆ ವೈಭವವೆಲ್ಲಾ ಅವನಿಗೆ ಪಾಪವಾಗುತ್ತಿತ್ತು.

೩. ೧ಸ್ರಯೇಲನವರು ಮಿಚ್ರದವರಿಗೆ ಅತಿ ನೀಚರಾಗಿದ್ದರು. ಆದರೆ ಮೋಶೆಯು ಅವರು ಯೆಹೂವನ ಜನರೆಂದು ತಿಳಿದು ಕಾಂಡು, ಅವರ ಮಹಿಮೆಯು ಮಿಚ್ರ ದೇಶದ ಮಹಿಮೆಗಿಂತ ಅಧಿಕವಾದದ್ದೆಂದು, ವಿಶ್ವಾಸದಿಂದ ಗ್ರಹಿಸಿದನು.

೪. ಈ ಮಾತು ಮೊದಲನೆ ವಚನಕ್ಕೆ ಪೂರ್ಣವಾಗಿ ಒಪ್ಪುತ್ತದೆ.

೫. ೧ಷದು ೨ಮೋಶೆ. ೧೨ಲ್ಲಿ ವಿವರವಾಗಿ ಬರದದೆ.

೬. ೧ಸ್ರಯೇಲನವರು ಮಾಡಿದ ಹಾಗೆ ಮಾಡುವದನ್ನು ವಿಶ್ವಾಸದಿಂದಲ್ಲ, ವಿಷಮಸಾಹಸದಿಂದ ಮುಂಗಾಂಡು ನಾಶವಾದರು.

೭. ಈ ಕಥೆಯು ಯೋಶುವನ ೬ನೆ ಸಂಧಿಯಲ್ಲಿ ಬರದದೆ.

೮. ೧ವಳ ಸಂಗತಿ ಯೋಶುವನ ೨ನೆ ಸಂಧಿಯಲ್ಲಿ ಬರದದೆ.

೩೨. ಮತ್ತೇನು ಹೇಳಲಿ? ಗಿದ್ಪೋನನನ್ನೂ, ಬಾರಕನನ್ನೂ, ಸಮ್ಸೋನನನ್ನೂ, ಯೆಪ್ತಾಹನನ್ನೂ, ದಾವೀದನನ್ನೂ, ಸಮುವೇಲನನ್ನೂ, ಪ್ರವಾದಿಗಳನ್ನೂ ಕುರಿತು ವಿವರಿಸುವದಕ್ಕೆ ಹೌತ್ತು ಸಾಲದು. ೩೩. ೧ವರು ವಿಶ್ವಾಸದಿಂದ ರಾಜ್ಯಗಳನ್ನು ಜಯಿಸಿದರು; ನ್ಯಾಯವನ್ನು ಮಾಡಿದರು; ವಾಗ್ದತ್ತಗಳನ್ನು ಹೌಂದಿದರು; ಸಿಂಹಗಳ ಬಾಯಿಗಳನ್ನು ಮುಚ್ಚಿದರು ೧); ೩೪. ಬೆಂಕಿಯ ಬಲವನ್ನು ಆರಿಸಿದರು ೨); ಕತ್ತಿ ಬಾಯಿಗೆ ತಪ್ಪಿಸಿ ಕೊಂಡರು ೩); ಶಕ್ತಿಹೀನರಾಗಿದ್ದು, ಬಲಗೊಂಡರು; ಯುದ್ಧದಲ್ಲಿ ಶಕ್ತರಾದರು ೪); ಅನ್ಯರ ದಂಡುಗಳನ್ನು ಓಡಿಸಿ ಬಿಟ್ಟರು; ೩೫. ಹೆಂಗಸರು ತಮ್ಮ ಸತ್ತವರನ್ನು ೫) ಪುನರುತ್ಥಾನದಿಂದ ಹೌಂದಿದರು; ಮತ್ತೊಬ್ಬರು ಉತ್ತಮವಾದ ಪುನರುತ್ಥಾನವನ್ನು ಹೌಂದುವ ಹಾಗೆ, ಬಿಡುಗಡೆಯನ್ನು ಅಂಗೀಕರಿಸದೆ, ಬಾಧಿಸ

ಲ್ಪಟ್ಟರು [೬]); ೩೬. ಬ್ಯೆರೌಬ್ಬರು ದೂಷಣೆಗಳನ್ನೂ, ಬಡುಕುಗಳನ್ನೂ, ಮತ್ತು ಬಂ
ಧಕಗಳನ್ನೂ [೭]), ಶರೆಯನ್ನೂ ಅನುಭವಿಸಿದರು; ಪಾಷಾಣಾಹತರಾದರು [೮]). ೩೭. ಗರ
ಗಸದಿಂದ ಕೊಯ್ಸಲ್ಪಟ್ಟರು; ಶೋಧಿಸಲ್ಪಟ್ಟರು; ಕತ್ತಿ ಕೊಲೆಯಿಂದ ಸತ್ತರು; ಕುರಿಚ
ರ್ಮಗಳನ್ನೂ, ಮ್ಯೇಕೆಯ ತೊಗಲುಗಳನ್ನೂ ಹಾಕಿ ಕೊಂಡು ತಿರುಗಾಡಿದರು; ಕೊರ
ತೆಯಾದವರಾಗಿಯೂ, ಉಪದ್ರವ ಪಡುವವರಾಗಿಯೂ, ಕೇಡು ಅನುಭವಿಸುವ
ವರಾಗಿಯೂ ಇದ್ದರು; ೩೮. ಲೋಕವು ಅವರಿಗೆ ಅಪಾತ್ರವಾಗಿತ್ತು; ಅರಣ್ಯಗಳಲ್ಲಿ
ಯೂ, ಬೆಟ್ಟಗಳಲ್ಲಿಯೂ, ಗವಿಗಳಲ್ಲಿಯೂ, ಭೂಮಿಯ ಗುಹೆಗಳಲ್ಲಿಯೂ ಅಲೆಯು
ವವರಾಗಿದ್ದರು. ೩೯. ಇವರೆಲ್ಲರು ವಿಶ್ವಾಸದಿಂದ ಸಾಕ್ಷಿಗೊಂಡು [೯]), ವಾಗ್ದತ್ತವ
ನ್ನು [೧೦]) ಸಂಪಾದಿಸಲಿಲ್ಲ. ೪೦. ಯಾಕಂದರೆ ನಾವು ಹೊರ್ತು ಅವರು ಸಂಪೂರ್ಣರಾ
ಗದ ಹಾಗೆ, ದೇವರು ನಮಗಾಗ್ಯಸ್ಕರ ಉತ್ತಮವಾದದ್ದನ್ನು [೧೧]) ಮುನ್ನೋಡಿಸಿ ಇದ್ದನು.

೧. ದನಿಯೇಲನು ಸಿಂಹಗಳ ಬಾಯಿಗೆ ತಪ್ಪಿಸಿ ಕೊಂಡದ್ದು ದನಿ. ೬, ೨೨ಲ್ಲಿ ಬರದದೆ.

೨. ಈ ಕಥೆಯು ದನಿಯೇಲನ ೩ನೆ ಸಂಥಿಯಲ್ಲಿ ವಿವರವಾಗಿ ಬರದದೆ.

೩. ೧ ಅರ. ೧೯.

೪. ೧ ಸಮು. ೧೪, ೧೨ ಇತ್ಯಾದಿ.

೫. ೧ ಅರ. ೧೭, ೧೭. ೨ ಅರ. ೪, ೨೨.

೬. ಈ ಮಾತು ಮಕ್ಕಬೇಯರ ಪುಸ್ತಕಗಳಲ್ಲಿ ಬರದ ಚರಿತ್ರಗಳನ್ನು ಸೂಚಿಸುವದಾಗಿ ತೋರುತ್ತದೆ.

೭. ಯೆರೆ. ೩೭, ೩೮.

೮. ೧ ಅರ. ೨೧.

೯. ಅಂದರೆ, ಅವರು ವಿಶ್ವಾಸದ ನಿಮಿತ್ತ ನೀತಿವಂತರೆಂದು ಪೇಸರ್ಗೊಂಡರು.

೧೦. ವಾಗ್ದತ್ತವಾದ ಮಹಿಮೆಯನ್ನು ಅವರು ಪೊಂದಲಿಲ್ಲ.

೧೧. ಯೇಸು ಕ್ರಿಸ್ತನಲ್ಲಿ ನಮಗೆ ಪ್ರಾಪ್ತವಾದ ಕೃಪೆಯ ಅಮಿತವಾದ ಐಶ್ವರ್ಯವನ್ನು ಪೂರ್ವ ಕಾಲದ ವಿಶ್ವಾಸಿಗಳು ಅನುಭವಿಸಲಿಲ್ಲ; ಪೀಗಿರಲಾಗಿ ಪೂರ್ಣ ಕೃಪಾನುಭವವನ್ನು ಪೊಂದಿದವರಾದ ನಮ್ಮ ವಿಶ್ವಾಸದಿಂದ ಅತಿಶಯವಾದ ಧರ್ಮವೃತ್ತಿಯು ಪುಟ್ಟುವದು ಯುಕ್ತವಾಗಿದೆ.

೨) ಕ್ರಿಸ್ತನ ಮಾದ್ರಿಯು. ಸ. ೧೨, ೧—೩.

೧. ಆದದರಿಂದ ಸಾಕ್ಷಿಯವರ ಅಷ್ಟು ದೊಡ್ಡ ಮೇಘವು [೧]) ನಮ್ಮನ್ನು ಸುತ್ತಲಿರು
ವದರಿಂದ, ಸಕಲ ಭಾರವನ್ನೂ [೨]), ನಮ್ಮನ್ನು ಮುತ್ತಿ ಕೊಳ್ಳುವ ಪಾಪವನ್ನೂ, ತೆಗೆದು
ಹಾಕಿ, ವಿಶ್ವಾಸದ ನಾಯಕನೂ [೩]) ಪೂರ್ತಿಸುವವನೂ ಆದಂಥ ಯೇಸುವಿನ ಮೇಲೆ
ಕಣ್ಣೊಟ್ಟು, ನಮ್ಮಮುಂದೆ ಇಟ್ಟಿರುವ ಓಟವನ್ನು ತಾಳ್ಮೆಯಿಂದ [೪]) ಓಡೋಣ. ೨. ಅ
ವನು ತನ್ನಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ [೫]) ಶಿಲುಬೆಯನ್ನು ತಾಳಿ ಕೊಂಡು,
ನಾಚಿಕೆಯನ್ನು ಅಸಡ್ಡೆ ಮಾಡಿ, ದೇವರ ಸಿಂಹಾಸನದ ಬಲಪಾರ್ಶ್ವದಲ್ಲಿ ಕೂತು

೯೪೪ ಅಪಾ. ಚ. ೫. ಪರಿಚ್ಛೇದ. ಅಪಾಸ್ತಲರ ಅಂಶ್ಪ್ರಪ್ರವ್ತ್ತಿ.

ಇಬ್ರಿ. ೧೨, ೫—೧೦.

ಕಾಂಡಿದ್ದಾನೆ. ೫. ನೀವು ನಿಮ್ಮ ಮನಸ್ಸುಗಳಲ್ಲಿ ಆಯಾಸ ಪಟ್ಟು, ದಣಿದು ಹಾಗೆ ಗದ ಹಾಗೆ, ಪಾಪಿಗಳಿಂದ ತನಗೆ ಉಂಟಾದ ಇಂಥ ವಿರೋಧವನ್ನು a) ತಾಳಿ ಕಾಂಡವನನ್ನು ಧ್ಯಾನಿಸಿ ಕಾಳ್ಗಿರಿ.

೧. ದೇವವಾಕ್ಯಚರಿತ್ರೆಗಳಲ್ಲಿ ವಿಶ್ವಾಸವನ್ನು ದೃಢವಾಗಿ ಹಿಡಿದು ಕಾಂಡು, ದೇವರ ವಾಗ್ದತ್ತವು ಸತ್ಯವೆಂಬದಕ್ಕೆ ಸಾಕ್ಷಿ ಕಾಟ್ಟ ಚಕ್ಕರ ದಾಡ್ಡ ಸಮೂಹವು ತಾವಿರುತ್ತದೆ.

೨. ಪಂಥದಲ್ಲಿ ಓಡುವವನು ಪಾರಾವೆಯನ್ನು ಪಾರಾತ್ತರೆ ಸಾಲುತ್ತಾನೆ. ೧ ಕಾರಿ. ೯, ೨೪. ಫಿಲಿ. ೩, ೧೩. ಪಾಪವು ಮಾತ್ರವಲ್ಲ, ಸಾಧಾರಣವಾಗಿ ಅನುಜ್ಞಾತವಾದ ಚಾಲಿಗಳು ಸಹ ಚಕ್ಕನ ವೃದ್ಧಿಗೆ ತಡೆಯಾಗುತ್ತವೆ.

೩. ವಿಶ್ವಾಸಮಾರ್ಗದಲ್ಲಿ ನಮಗೆ ಅಗ್ರಗಾಮಿಯಾದ.

೪. ಚಂಚಲರಹಿತವಾದ ಸ್ಥೈರ್ಯದಿಂದ.

೫. ತಂದೆಯಾದ ದೇವರು ತನಗೆ ನೇಮಕ ಮಾಡಿದ ಅತಿಶಯವಾದ ಮಹಿಮೋದ್ದಿಶ್ಯವಾಗಿ, ಯೋಹಾ. ೧೨, ೨೮; ೧೭, ೧. ೪.

೬. ಶಿಷ್ಯರು ಕರ್ತನನ್ನು ಬಿಟ್ಟು ಓಡಿ ಪಾರಾದದ್ದು, ಯೂದನು ಬಾಧಕನನ್ನು ಮಾರಿ ಬಿಟ್ಟದ್ದು, ಸ್ವಜನರು ಅರಸನಾದ ರಕ್ಷಕನನ್ನು ಧಿಕ್ಕರಿಸಿದ್ದು, ಪ್ರಧಾನಯಾಜಕರು ಮುಂತಾದವರು ಪ್ರಾಣದ್ವೇಷ ಮಾಡಿದ್ದು, ಇವು ಮೊದಲಾದದ್ದೆಲ್ಲಾ ಇದಕ್ಕೆ ಶೇರುತ್ತದೆ.

a) ಶ್ರಮದ ಫಲವು. ಸ. ೧೨, ೪—೧೧.

೪. ನೀವು ಪಾಪಕ್ಕೆ ವಿರೋಧವಾಗಿ ಹೋರಾಡಿ b), ಇನ್ನು ರಕ್ತದ ಮಟ್ಟಿಗೂ c) ಎದುರಿಸಲಿಲ್ಲ. ೫. ಮತ್ತು ನನ್ನ ಮಗನೇ, ಕರ್ತನ ಶಿಕ್ಷೆಯನ್ನು ಅಲ್ಪವಾಗಿ ಎಣಿಸದೆ d), ಅವನಿಂದ ಗದರಿಸಲ್ಪಡುವಾಗ ಆಯಾಸ ಪಡದೆ e) ಇರು. ೬. ಯಾಕಂದರೆ ಕರ್ತನು (ಪ್ರೀತಿ ಮಾಡುವವನನ್ನು ಶಿಕ್ಷಿಸುತ್ತಾನೆ f). ಮತ್ತು ತಾನು ಶ್ಯೇರಿಸಿಕಾಳ್ಳುವ g) ಒಬ್ಬೊಬ್ಬ ಮಗನನ್ನು ಹೊಡೆಯುತ್ತಾನೆಂದು ಮಕ್ಕಳಿಗೆ ಬುದ್ಧಿ ಹೇಳುವ ಮೇರೆಗೆ ನಿಮಗೆ ಬೋಧಿಸಲ್ಪಟ್ಟದ್ದನ್ನು ಮರತು ಹೋಗಿದ್ದೀರಿ. ೭. ನೀವು ಶಿಕ್ಷೆಯನ್ನು ತಾಳಿ ಕಾಂಡರೆ, ದೇವರು ನಿಮಗೆ ಮಕ್ಕಳಿಗೆಂದು h) ನಡಿಸುತ್ತಾನೆ. ತಂದೆ ಶಿಕ್ಷಿಸದ ಮಗನು ಎಲ್ಲಿ? ೮. ಮತ್ತು, ಎಲ್ಲರು ಪಾಲು ಹೊಂದುವ ಶಿಕ್ಷೆಯನ್ನು ನೀವು ಹೊಂದದೆ ಇದ್ದರೆ, ಮಕ್ಕಳಲ್ಲ, ಪರಸ್ತ್ರೀಯಿಂದ ಹುಟ್ಟಿದವರೇ i). ೯. ನಮ್ಮನ್ನು ಶಿಕ್ಷಿಸಿದ ನಮ್ಮ ಮಾಂಸದ ತಂದೆಗಳನ್ನು ಸನ್ಮಾನಿಸಿದೆವು. ಹಾಗಾದರೆ, ನಾವು ಬದುಕುವ ಹಾಗೆ, ಆತ್ಮಗಳ ತಂದೆಗೆ j) ಒಳ ಬೀಳುವದು ಇನ್ನು ಬಹು ಅಗತ್ಯವಲ್ಲವೋ? ೧೦. ಯಾಕಂದರೆ ಅವರು ಕೆಲವು ದಿವಸ k) ತಮಗೆ ತೋಚಿದ ಹಾಗೆ l) ಶಿಕ್ಷಿಸಿದರು. ಆದರೆ ಅವನು, ನಾವು ಅವನ ಪರಿಶುದ್ಧತ್ವದಲ್ಲಿ ಪಾಲು ಹೊಂದುವ

೨. ಶಿಕ್ಷಲಪಲ್ಲಿ ಪೌಲನ ಪ್ರೊತ್ಸಾಹನೆ. ೪೪೯
ಶಿಕ್ರಿ. ೧–೨, ೧೧—೧೫.

ಹಾಗೆ೧೨), ನಮ್ಮ ಪ್ರಯತ್ನಾಜನಕ್ಕಾಸ್ಪರವೇ. ೧೧. ಎಲ್ಲಾ ಶಿಕ್ಷೆಯು ತತ್ಕಾಲಕ್ಕೆ ಸಂತೋಷಕರವಾದದ್ದಲ್ಲ, ದುಃಖಕರವಾದದ್ದೆಂದು೧೩) ತೋರಬಹುದು. ಆದರೆ ತರುವಾಯ ಅದರಿಂದ ಸಾಧಿಸಲ್ಪಟ್ಟಿರುವವರಿಗೆ೧೪) ಸಮಾಧಾನವುಳ್ಳ ನೀತಿಫಲವನ್ನು ಕೊಡುವದು.

೧. ಇದಕ್ಕೆ ಮೊದಲನೆ ವಚನದ ಎರಡನೆ ವ್ಯಾಖ್ಯಾನ ನಾಡ ಬೇಕು.

೨. ಪ್ರಾಣಭಯ ಹುಟ್ಟುವ ಹಾಸ್ಯಾರಾಟದಲ್ಲಿ ಇನ್ನು ಹೆಚ್ಚಾದ ಸ್ಥೈರ್ಯವು ಬೇಕು. ನಿಜವಿಶ್ವಾಸಿಗಳೇ ಕ್ರಿಸ್ತನನ್ನು ಬಿಡುವದಕ್ಕಿಂತ ಪ್ರಾಣವನ್ನು ಬಿಡುವದೇ ವಾಸಿಯೆಂದು ತಿಳಿಯುತ್ತಾರೆ.

೩. ಕರ್ತನ ಶಿಕ್ಷೆಯನ್ನು ಲಘುವಾದ ಮನಸ್ಸಿನಿಂದ ಅಲಕ್ಷ್ಯ ಮಾಡ ಬಾರದು. ಅದಕ್ಕೆ ಭಯ ಪಡ ಬೇಕು.

೪. ಶಿಕ್ಷೆಯು ತಿರಸ್ಕಾರದ ಗುರ್ತು ಎಂದು ನೆನಸಿ, ನಿರಾಶೆಯಾಗ ಬಾರದು.

೫. ತನಗೆ ಪ್ರಿಯವಾದ ಮಕ್ಕಳ ಪಾಪಗಳನ್ನು ತಂದೆಯು ಹೆಚ್ಚಾಗಿ ಅಸಹ್ಯಿಸುತ್ತಾನೆ.

೬. ಪಾಪಿಯು ದೇವರ ಕಡೆಗೆ ತಿರಿಗಿ ಕಾಳ್ಳುವ ಆರಂಭದಲ್ಲಿ ಮಾನಸಾಂತರದ ದುಃಖವು ವಿಶೇಷವಾಗಿದೆ. ಆದರೆ ಭಕ್ತನು ಬದುಕುವನಕ ಅದು ನಿಲ್ಲುವದಿಲ್ಲ. ಆತ್ಮದ ಶಿಕ್ಷೆಯಿಂದ ಅದು ಆಗಾಗ್ಗೆ ಹುಟ್ಟುತ್ತಾ ಹುಟ್ಟುತ್ತದೆ.

೭. ಆತನು ನಿಮಗೆ ಶಿಕ್ಷೆ ಕೊಟ್ಟು ನಿಮ್ಮನ್ನು ಶುದ್ಧ ಮಾಡುವಂಥಾದ್ದು ಆತನ ಪ್ರೀತಿಯ ಸಾಕ್ಷಿಯಾಗಿದೆ.

೮. ಅಂದರೆ, ಬಾಧಿಸಿ ಸಾಧಿಸುವ ತಂದೆಯಿಲ್ಲದವರಂತೆ.

೯. ನಮ್ಮ ಆತ್ಮವನ್ನು ಉಂಟು ಮಾಡಿದವನು ನಮ್ಮನ್ನು ಸಾಕಿ ಸಾಧಿಸುವದರಲ್ಲಿ ಅತ್ಯಂತ ಬುದ್ಧಿಶಾಲಿಯಾಗಿದ್ದಾನೆ.

೧೦. ಅಂದರೆ, ಮೂರು ದಿನದ ಬಾಳಿಕೆಯಾದ ಇಹದಲ್ಲಿ.

೧೧. ತಮ್ಮ ಬುದ್ಧಿಯ ಪ್ರಕಾರ, ಅನೇಕಾವರ್ತಿ ತಪ್ಪು ಮಾಡುತ್ತಾ.

೧೨. ಮಕ್ಕಳ ಶುದ್ಧೀಕರಣವು ತಂದೆಯಾದ ದೇವರ ಶಿಕ್ಷೆಯ ಉದ್ದಿಶ್ಯವಾಗಿದೆ. ವಿಧೇಯರಾದವರೆಲ್ಲರಲ್ಲಿಯೂ ಅದು ಒದಗುವದು.

೧೩. ಇದು ಹೀಗೆಯಂದು, ಬರಹವು ಕರುಣಾಭಾವದಿಂದ ಸೂಚಿಸುತ್ತದೆ. ಗಾಳಾ. ೩, ೩೨. ೩೩. ಆದರೆ ಈಗಿನ ದುಃಖದಿಂದ ಮುಂದಿನ ಸುಖವು ಹುಟ್ಟುತ್ತದೆಂಬುವದನ್ನು ಮರೆಯ ಬಾರದು.

೧೪. ಸಾಧ್ಯರಲ್ಲಿ ಆಗುವ ಫಲವೇನಂದರೆ: ನೀತಿಯೂ, ಅದರಿಂದ ಹುಟ್ಟುವ ಸಮಾಧಾನವೂ.

೪) ಪುನಃಪತಿತರು ಸುಣವಾಗಲಾರರು. ಸ. ೧೨, ೧೨—೧೭.

೧೨. ಆದಕಾರಣ ಜೋಲುಬಿದ್ದ ಕೈಗಳನ್ನೂ, ಸ್ಖಲವಾದ ಮೊಣಕಾಲುಗಳನ್ನೂ ನೆಟ್ಟಗೆ ಮಾಡಿರಿ. ೧೩. ಮುಕ್ತು ಕುಂಟಾದದ್ದು ತಪ್ಪದೆ, ವಾಸಿಯಾಗುವ ಹಾಗೆ೧), ನಿಮ್ಮ ಕಾಲುಗಳಿಗೆ ಸರಿಯಾದ ಹಾದಿಗಳನ್ನು ಮಾಡಿರಿ. ೧೪. ಎಲ್ಲರ ಸಂಗಡ ಸಮಾಧಾನವಾಗಿರುವದನ್ನು ಹಿಂದಟ್ಟಿರಿ೨). ಪರಿಶುದ್ಧತೆಯನ್ನು ಸಹ; ಇದು ಇಲ್ಲದೆ ಒಬ್ಬನಾದರು ಕರ್ತನನ್ನು ಕಾಣನು. ೧೫. ಯಾರಾದರೂ ದೇವರ ಕೃಪೆಗೆ ಹಿಂದಾಗದ ಹಾಗೆಯೂ, ಯಾವ ಕಹಿಯಾದ ಬೇರಾದರೂ೩) ಮೊಳಿತು ತೊಂದರೆ

ಇಬ್ರಿ. ೧೦, ೧೬—೨೩.

ಮಾಡುವದರಿಂದ ಅನ್ಯೋಕರು ಕಳಂಕವಾಗದ ಹಾಗೆಯೂ, ಯಾವ ಜಾರನಾದರೂ, ೧೬. ಒಂದೇ ಊಟಕ್ಕೌಸ್ಕರ ತನ್ನ ಚಾಒಚಲತನವನ್ನು ಕೌಟ್ಟು ಬಿಟ್ಟ ಏಸಾವನ ಹಾಗೆ (ಭ್ರಷ್ಟನಾದರೂ ಇರದ ಹಾಗೆಯೂ ೪), ಚನ್ನಾಗಿ ನಾಯ್ತಿ ಕೌಳ್ಳಿರಿ. ೧೭. ಯಾ ಕಂದರೆ ತರುವಾಯ ಅವನು ಆಶೀರ್ವಾದವನ್ನು ಬಾಧ್ಯವಾಗಿ ಹೌಂದುವದಕ್ಕೆ ಇಚ್ಛಿಪಿಸಿ, ಆಗದವನಾದನೆಂದು ಬಲ್ಲಿರಿ; ಕಣ್ಣೀರಿಟ್ಟು ಅದನ್ನು ಜಾಗ್ರತೆಯಾಗಿ ಹು ಡುಕಿದಾಗ್ಯೂ, ಮಾನಸಾಂತರಕ್ಕೆ ಸ್ಥಳ ಶಿಕಲಿಲ್ಲ ೫).

೧. ಅಂದರೆ, ನಿಮ್ಮ ಸಭೆಗಳಲ್ಲಿ ಕುಂಟರಂತೆ ಎಡವುವ ನಿರ್ಬಲರಾದ ಭಕ್ತರು ಇದ್ದರೆ, ಅವರು ಬಿದ್ದು ಕೆಟ್ಟು ಪೌಣಾಗದೆ, ಆತ್ಮಸ್ವಾಸ್ಥ್ಯವನ್ನು ಪೌಂದುವ ಪೌಗೆ ಜಾಗರೂಕರಾಗಿರ್ರಿ.

೨. ಸಭೆಯ ಕ್ಷೇಮಕ್ಕೆ ಸಮಾಧಾನವಾದ ಅನ್ಯೋನ್ಯವು ಅತ್ಯವಶ್ಯವಾಗಿದೆ; ಯಾಕಂದರೆ ದ್ವೇಷದಿಂದ ಎಲ್ಲಾ ಕೆಡುತ್ತದೆ. ಆದರೆ ಮನಸ್ಸೂ ನಡತೆಯೂ ಪರಿಶುದ್ಧವಾಗದಿದ್ದರೆ, ಪ್ರೀತಿಯ ಅನ್ಯೋನ್ಯವು ಅಸಾಧ್ಯವಾಗಿದೆ.

೩. ಪ್ರಪಂಚವೋಪಾದೂ, ಪಾಪಪ್ರೀತಿಯೂ ಕೆಲವರಲ್ಲಿ ಕಪಿಯಾದ ಬೇರಿನಂತೆ ಶೇರಿದರೆ, ಅದು ಬೆಳೆದು, ಪುಟ್ಟಿ, ಸಭೆಯನ್ನೆಲ್ಲಾ ಕೆಡಿಸುವ ಕಂಟಕವು ಉಂಟಾಗುತ್ತದೆ.

೪. ಏಸಾವನು ಚಾಚ್ಚಲಪುತ್ರತ್ವವನ್ನು ಮಾರಿದ್ದರಿಂದ, ಚಾಚ್ಚಲಪುತ್ರನಿಗೆ ಬರ ತಕ್ಕ ಆಶೀರ್ವಾದವನ್ನು ಕಳದು ಕಾಂಡ ಪ್ರಕಾರ, ವಿಶ್ವಾಸದಿಂದ ಪೌಂದಿದ ದೇವರ ಮಕ್ಕಳಾಗುವ ಅಧಿಕಾರವನ್ನು ಯಾರೂ ದುರ್ವಿಷಯಾದಿಗಳಿಂದ ಕಳದು ಕಾಳ್ಳ ಬಾರದು.

೫. ಯಾಕಾಬನು ಚಾಚ್ಚಲಪುತ್ರನ ಆಶೀರ್ವಾದವನ್ನು ಪೌಂದಿದನಂತರ, ಅದು ಏಸಾವನಿಗೆ, ಎಷ್ಟು ದುಃಖಾಕ್ರಾಂತನಾಗಿ ಬೇಡಿದಾಗ್ಯೂ, ಶಿಕ್ಕ ಕೂಡದಿತ್ತು.

ಒ) ಕ್ರೈಸ್ತನಿಗೆ ನೇಮಕವಾದ ರಕ್ಷಣಾಮಹಿಮೆಯನ್ನು ಚನ್ನಾಗಿ ಲಕ್ಷಿಸ ಬೇಕು.

ಸ. ೧೨, ೧೪—೨೪.

೧೪. ಯಾಕಂದರೆ ಮುಟ್ಟಲ್ಪಡುವ ಪರ್ವತಕ್ಕೂ, ಉರಿಯುವ ಬೆಂಕಿಗೂ, ಮೋಡಕ್ಕೂ, ಕತ್ತಲೆಗೂ, ಬಿರು ಪಾಳಿಗೂ, ತುತೂರಿಯ ಧ್ವನಿಗೂ, ಮಾತುಗಳ ಶಬ್ದಕ್ಕೂ, ನೀವು ಬರಲಿಲ್ಲ; ೧೫. ಅದನ್ನು ಕೇಳಿದವರು, ವಾಕ್ಯವು ತಮಗೆ ಇನ್ನು ಹೇಳಲ್ಪಡದ ಹಾಗೆ ಬೇಡಿ ಕಾಂಡರಲ್ಲ? ೨೦. ಯಾಕಂದರೆ ಮೃಗವಾದರೂ ಪರ್ವತಕ್ಕೆ ತಗಲಿದರೆ, ಕಲ್ಲೆಸೆಯಲ್ಪಡುವದು, ಇಲ್ಲವೆ ಇಟಿಯಿಂದ ತಿವಿಯಲ್ಪಡುವದು, ಎಂಬ ಕಟ್ಟಳೆಯನ್ನು ಸಹಿಸಲಾರದೆ ಹಾಯ್ತಿದರು. ೨೧. ಇದಲ್ಲದೆ, ನಾಯ್ತಟವು ಅಷ್ಟು ಭಯಂಕರವಾಗಿರುವದರಿಂದ, ಬಹು ಭಯಸ್ತನಾಗಿ ನಡುಗುತ್ತೇನೆಂದು ಮೋಶೆಯೂ ಹೇಳಿದನು. ೨೨. ಆದರೆ ಚಿಯಾನ್ ಪರ್ವತಕ್ಕೂ ೧), ಜೀವವುಳ್ಳ ದೇವರ ಪಟ್ಟಣಕ್ಕೂ, ಪರಲೌಕದ ಯೆರೂಸಲೇಮಿಗೂ ೨), ದೂತರ ಸಹ ಸ್ರ ಸಹ ಸ್ರಗಳಿಗೂ ೩), ೨೩. ಪ

ಇಬ್ರಿ. ೧೨, ೨೪—೨೯.

ರಲೋಕದಲ್ಲಿ ಬರೆಯಲ್ಪಟ್ಟಿರುವ ೪) ಚೊಚ್ಚಲವರ ಸರ್ವಸಂಘಕ್ಕೂ, ಸಭೆಗೂ, ಎಲ್ಲರ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ೫), ಸಂಪೂರ್ಣ ಮಾಡಲ್ಪಟ್ಟ ನೀತಿವಂತರ ಆತ್ಮಗಳ ಬಳಿಗೂ ೬), ೨೪. ಹೊಸ ಒಡಂಬಡಿಕೆಯ ಮಧ್ಯಸ್ಥನಾದ ಯೇಸುವಿನ ಬಳಿಗೂ, ಹೇಬೆಲನ ರಕ್ತಕ್ಕಿಂತ ೭) ಉತ್ತಮವಾದದ್ದನ್ನು ಮಾತಾಡುವ ಚಿಮಿಕಿಸುವ ರಕ್ತಕ್ಕೂ, ಬಂದಿದ್ದೀರಿ ೮).

೧. ದೇವರ ಕೃಪಾಸಿಂಹಾಸನವು ಸ್ಥಾಪಿತವಾದ, ದಿವದಲ್ಲಿರುವ, ಚಿಯೋನ್ ಪರ್ವತಕ್ಕೆ. ಪ್ರಕ. ೧೪, ೧.

೨. ದೇವರ ಪರಿಶುದ್ಧ ಚಕ್ತರಿಗೆ ವಾಸಸ್ಥಾನವಾದ ದೈವಿಕ ಯೆರೂಸಲೇಮಿಗೆ. ಪ್ರಕ. ೨೧, ೨. ೭.

೩. ಗ್ರೀಕದಲ್ಲಿ ದಶಸಹಸ್ರ ದೂತರಿಗೆ ಎಂದು ಬರದದೆ. ಅವರು ಪರಿಶುದ್ಧ ದೇವರನ್ನು ಎಡೆಬಿಡದೆ ಸ್ತುತಿಸುತ್ತಾ ಇದ್ದಾರೆ.

೪. ಅಂದರೆ, ದಿವದಲ್ಲಿ ಜಯೋತ್ಸವ ಮಾಡುವ ಮಹಿಮಾಸಭೆಗೆ. ಅವರಲ್ಲಿ ಅನೇಕರು, ಈಗ ಭೂಮಿಯಲ್ಲಿ ಯುದ್ಧ ಮಾಡುವಂಥಾ ಸಭೆಯವರಾಗಿದ್ದು, ದಿವಪಟ್ಟಣದ ಗೃಹಸ್ಥಾಧಿಕಾರದ ಆಶೆಯಲ್ಲಿಯೇ ಸಂತೋಷ ಪಡುತ್ತಾರೆ.

೫. ಆತನು ಅವಿಧೇಯರಿಗೆ ಶೀಘ್ರ ಮಾಡುವ ನ್ಯಾಯಾಧಿಪತಿಯಾಗಿದ್ದರೂ, ಎಲ್ಲರಿಗೂ ಕೃಪಾಳುವಾದ ದೇವರಾಗಿರ ಬೇಕೆಂದು ಅಪೇಕ್ಷಿಸುತ್ತಾನೆ. ಪುನಾಗಾದರೆ, ಮಹಿಮಾಶೆಯುಳ್ಳವರು ಸಹ ನೀತ್ಯಾಸಕ್ತಿಯನ್ನು ಬಿಡ ಬಾರದು. ೧ ಪೇತ್ರ. ೧, ೧೭.

೬. ಪುಳೆ ಒಡಂಬಡಿಕೆಯ ವಿಶ್ವಾಸವೀರರು ಸ. ೧೧. ಜಯಶಾಲಿಗಳಾಗಿದ್ದು, ಕ್ರಿಸ್ತನು ತಿರಿಗಿ ಬರುವ ದಿವಸದಲ್ಲಿ ಸರ್ವಸಭೆಯ ಸಂಗಡ ಜಯದ ಬಿರುದನ್ನು ಪಡೆಯುತ್ತಾರೆ.

೭. ಯೇಸುವಿನ ರಕ್ತವು ಪ್ರತೀಕಾರವಾದವನ್ನಲ್ಲ, ಕರುಣಾವಾದವನ್ನೇ ಸೂಚಿಸುತ್ತದೆ.

೮. ಅಂದರೆ, ನಿಮಗೆ ಅಲ್ಲಿ ವಿಶ್ವಾಸದಿಂದ ಪ್ರವೇಶವುಂಟು.

೨೫. ಮಾತಾಡುವವನನ್ನು ಅಸಡ್ಡೆ ಮಾಡದ ಹಾಗೆ, ನೋಡಿ ಕಾಳ್ಗಿರಿ. ಯಾಕಂದರೆ, ಭೂಮಿಯ ಮೇಲೆ ದೈವಚಿತ್ತ ತಿಳಿಸಿದವನನ್ನು ಅಸಡ್ಡೆ ಮಾಡಿದವರು ತಪ್ಪಿಸಿಕೊಳ್ಳದಿದ್ದರೆ, ಬಹು ಅಧಿಕವಾಗಿ, ಪರಲೋಕದಿಂದ ಬಂದವನನ್ನು ಬಿಟ್ಟು ತಿರುಗುವ ನಾವು. ೨೬. ಅವನ ಶಬ್ದವು ಆಗ ಭೂಮಿಯನ್ನು ಕದಲಿಸಿತು; ಆದರೆ ಇಗ ಅವನು ವಾಗ್ದತ್ತ ಮಾಡಿ ಹೇಳಿದ್ದೇನಂದರೆ ೧), ಇನ್ನು ಒಂದು ಸಾರಿ ನಾನು ಭೂಮಿಯನ್ನು ಮಾತ್ರವಲ್ಲ, ಆಕಾಶವನ್ನು ಸಹ ಅದರಿಸುತ್ತೇನೆ. ೨೭. ಇನ್ನು ಒಂದು ಸಾರಿ ಅಂಬುವದು, ಕದಲದವುಗಳು ನೆಲೆಯಾಗಿರುವ ಹಾಗೆ, ಕದಲುವವುಗಳು ಮಾಡಲ್ಪಟ್ಟವುಗಳಾಗಿರುವದರಿಂದ ಮಾರ್ಪಡುವವೆಂದು ತಾತ್ಪರಿಸುತ್ತದೆ. ೨೮. ಆದದರಿಂದ ಕದಲದ ರಾಜ್ಯವನ್ನು ೨) ಹೊಂದುವ ನಾವು ವಿನಯದಿಂದಲೂ ಭಯಭಕ್ತಿಯಿಂದಲೂ ೩) ದೇವರನ್ನು ಸಮರ್ಪಕವಾಗಿ ಆರಾಧಿಸುವ ಹಾಗೆ, ಕೃಪೆಯನ್ನು ಹೊಂದಿರೋಣ. ೨೯. ಯಾಕಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ ೪).

೮೯೨ ಅಪಾ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಶ/ಪ್ರವೃತ್ತಿ.

ಇಬ್ರಿ. ೧೩, ೧—೯.

೧. ಈ ಮಾತು ಪುಗ್ಗಾಯಿ. ೨, ೭. ಬರದದೆ.
೨. ಚಕ್ಕರು ಬಾಧ್ಯರಾದ ದೇವರಾಜ್ಯವು ಪುನರ್ಜಾವಾಂತರವಾಗದ ನೂತನಭೂಮಿಯಲ್ಲಿ ಸ್ಥಾಪಿತವಾಗುವದು. ಅದರಲ್ಲಿ ಶೇರಿದವರಸ್ಥಿತಿಯು ನಿರಂತರವಾದದ್ದು.
೩. ಇದೇ ಅಭಿಪ್ರಾಯವು ಫಿಲಿ. ೨, ೧೨ಲ್ಲಿಯೂ ಕೀರ್ತ. ೨, ೧೧ಲ್ಲಿಯೂ ಸೂಚಿತವಾಗಿದೆ.
೪. ದೇವರು ಪ್ರೀತಿಯೂ ಬೆಳಕೂ ಆಗಿದ್ದಾನೆಂಬದನ್ನು ಚಕ್ಕರು ಅತ್ಯಂತ ಪೂರ್ಣವಿಂದ ಅನುಭವಿಸುತ್ತಾರೆ. ಆದರೆ ಅವಿಧೇಯರಾದ ಅವಿಶ್ವಾಸಿಗಳಿಗೆ ಅಗ್ನಿಶಿಕ್ಷೆಯು ನೇಮಕವಾಗಿದೆ. ಮತ್ತಾ. ೨೫, ೪೧.

ಪ್ರತ್ಯೇಕ ಪ್ರತ್ಯೇಕಾದ್ಯಾಧಿಕಾರಗಳು. ಸ. ೧೩, ೧—೧೯.

೧. ಸಹೋದರ ಸ್ನೇಹವು ನೆಲೆಯಾಗಿರಲಿ ೧). ಆತಿಥ್ಯ ಮಾಡ ಮರಿಬ ಹಾಗಾಗಿ ಬೇಡಿರಿ. ೨. ಯಾಕಂದರೆ ಇದರಿಂದ ಕೆಲವರು ೨) ತಿಳಿಯದೆ, ದೂತರಿಗೆ ಆತಿಥ್ಯ ಮಾಡಿದ್ದಾರೆ. ೩. ಕೂಡ ಬಂಧಿಸಲ್ಪಟ್ಟ ಹಾಗೆ ೩) ಬಂಧಿಸಲ್ಪಟ್ಟವರನ್ನೂ, ನೀವೇ ಶರೀರದಲ್ಲಿ ಇದ್ದೀರೆಂದು, ಕೇಡು ಅನುಭವಿಸುವವರನ್ನೂ, ಜ್ಞಾಪಕ ಮಾಡಿ ಕೊಳ್ಳಿರಿ. ೪. ಮದುವೆ ಎಲ್ಲರಲ್ಲಿ ಮಾನವುಳ್ಳದ್ದು, ಹಾಸಿಗೆಯು ನಿಷ್ಕಳಂಕವಾದದ್ದು; ಆದರೆ ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯ ತೀರಿಸುವನು. ೫. ನಡತೆಯು ದ್ರವ್ಯಾಶೆಯಿಲ್ಲದ್ದಾಗಿರಲಿ. ನಿಮಗೆ ಉಂಟಾದವುಗಳು ಸಾಕೆಂದಿರ್ರಿ; ಯಾಕಂದರೆ ನಾನು ನಿನ್ನನ್ನು ಬಿಟ್ಟು ಬಿಡೆನೆಂದೂ, ನಿನ್ನನ್ನು ಕೈಬಿಡೆನೆಂದೂ, ಅವನು ಹೇಳಿದ್ದಾನೆ ೪). ೬. ಆದಕಾರಣ ಕರ್ತನು ನನಗೆ ಸಹಾಯಕನು, ಭಯ ಪಡೆನು; ಮನುಷ್ಯನು ನನಗೆ ಏನು ಮಾಡುವನು ೫)? ಎಂದು ನಾವು ಧೈರ್ಯವಾಗಿ ಹೇಳಿ ಬಹುದು. ೭. ನಿಮಗೆ ದೇವರ ವಾಕ್ಯವನ್ನು ಹೇಳಿದ ನಿಮ್ಮ ಮುಖ್ಯಸ್ಥರಂನು ಜ್ಞಾಪಕ ಮಾಡಿ ಕೊಳ್ಳಿರಿ. ಅವರ ಪ್ರವರ್ತನೆಯ ಅಂತ್ಯವನ್ನು ೬) ಚನ್ನಾಗಿ ನೋಡಿ, ಅವರ ವಿಶ್ವಾಸವನ್ನು ಅನುಸರಿಸಿರಿ. ೮. ಯೇಸು ಕ್ರಿಸ್ತನು ನಿನ್ನೆ, ಈ ಹೊತ್ತು, ಎಂದೆಂದಿಗೂ ೭) ಹಾಗೆಯೇ ಇದ್ದಾನೆ. ೯. ನಾನಾ ಅನ್ಯೋಪದೇಶಗಳಿಂದ ೮) ಬಹಳ ಪಡದೆ ಇರ್ರಿ. ಯಾಕಂದರೆ ಇವುಗಳಲ್ಲಿ ಅಭ್ಯಾಸಿಸಿರುವವರಿಗೆ ೯) ಪ್ರಯೋಜನವಾಗದ ಊಟಗಳಿಂದಲ್ಲ ೧೦), ಕೃಪೆಯಿಂದ ಹೃದಯವು ದೃಢವಾಗುವದು ಒಳ್ಳೇದು ೧೧).

೧. ಸಹೋದರರ ಪ್ರೀತಿಯು ಕ್ರಿಸ್ತಶಿಷ್ಯರ ಮುಖ್ಯ ಲಕ್ಷಣವಾಗಿದೆ.
೨. ಅಂದರೆ, ಅಬ್ರಹಾಮ ಲಾಟರು ಮುಂತಾದವರು.
೩. ಪರದುಃಖ ದುಃಖಿಗಳಿಗೆ ಯೋಗ್ಯವಾದ ಪ್ರಕಾರ.
೪. ಇದು ಯೆಶಾ. ೧, ೫ಲ್ಲಿಯೂ ೧ ಮೋಶೆ. ೨೮, ೧೫ಲ್ಲಿಯೂ ಬರದದೆ.

೨. ಇಬ್ರಿಯಲ್ಲಿ ಪೌಲನ ಪ್ರಮುಖ ವಿವಿಧ ಉದ್ಧಾರಣೆಗಳು. ೪೯೫ ಇಬ್ರಿ. ೧೩, ೧೦—೧೬.

೫. ಈ ಮಾತುಗಳು ಕೀರ್ತ. ೧೧೮, ೬ಲ್ಲಿಯೂ ೫೬, ೫. ೧೨ಲ್ಲಿಯೂ ದಾಖಲಾಗಿವೆ.

೬. ನಿಮ್ಮ ಮುಖಂಡರು, ಇಲ್ಲವೆ ನಡಿಸುವವರು, ಅಂದರೆ, ಬೋಧಕರು ಸಾಯುವ ಪರ್ಯಂತ ವಿಶ್ವಾಸದಲ್ಲಿ ದೃಢವಾಗಿದ್ದು, ನಿಮಗೆ ತೋರಿಸಿದ ಮಾದ್ರಿಯನ್ನು ಅನುಸರಿಸಿರಿ.

೭. ಪೌಲನ ಅಭಿಪ್ರಾಯವೇನಂದರೆ: ನಿಮ್ಮ ಬೋಧಕರು ಸದಾಕಾಲ ಏಕ ರೀತಿಯಾಗಿರುವ ಯೇಸು ಕ್ರಿಸ್ತನ ಪೆಸರನ್ನು ಸ್ತುತಿಸಿ, ಆತನ ವಾಕ್ಯವನ್ನು ಸತ್ಯವಾಗಿ ಸಾರಿದರೆ, ಅವರು ನಿಮ್ಮ ಪೂರ್ಣ ಚರವಸಕ್ಕೆ ಯೋಗ್ಯರಾಗಿದ್ದಾರೆ.

೮. ಕ್ರಿಸ್ತನನ್ನು ಪೂರ್ಣ ಪ್ರಿದಯದಿಂದ ನಂಬದೆ, ಆತನ ವಾಕ್ಯವನ್ನು ಯಥಾರ್ಥವಾಗಿ ಸಾರದೆ ಇರುವವರ ಬೋಧನೆಗಳಿಗೆ ಅನ್ಯೋಪದೇಶಗಳೆಂದು ಪೆಸರಿಟ್ಟಿದೆ.

೯. ಇದಕ್ಕೆ ಸ. ೭, ೧೮ ನೋಡ ಬೇಕು.

೧೦. ಯೆಹೂದರ ಸಂಪ್ರದಾಯಗಳಾದ ಆಹಾರ, ಉಪವಾಸ ಮುಂತಾದ ವಿಷಯವಾದ ಪದ್ಧತಿಗಳನ್ನು ಕೈಕಾಳ್ಳುವದರಿಂದ ಪ್ರಿದಯವು ಚಾವಾಂತರವಾಗುವದಿಲ್ಲ.

೧೧. ಯೇಸುವಿನ ಐಕ್ಯದಲ್ಲಿ ಸ್ಥಿರವಾಗುವ ಗುಣವು ಆತನ ಕೃಪೆಯಿಂದಲೇ ಉಂಟಾಗುವದು.

೧೦. ನಮಗೆ ಬಲಿಪೀಠ ಉಂಟು ೧); ಅದರಿಂದ ಉಣ್ಣಲು, ಗುಡಾರದ ಸೇವೆ ಮಾಡುವವರಿಗೆ ೨) ಅಧಿಕಾರವಿಲ್ಲ. ೧೧. ಹ್ಯಾಗಂದರೆ, ಯಾವ ಜೀವಿಗಳ ರಕ್ತವು ಪ್ರಧಾನಯಾಜಕನಿಂದ ಪರಿಶುದ್ಧ ಸ್ಥಳದಲ್ಲಿ ಪಾಪಕ್ಕಾಗಿಸ್ತರ ತರಲ್ಪಟ್ಟಿತ್ತೋ, ಅವುಗಳ ಶರೀರಗಳು ದಂಡಿನ ಹೊರಗೆ ಸುಟ್ಟು ಬಿಡಲ್ಪಟ್ಟವು ೩). ೧೨. ಆದಕಾರಣ ಯೇಸು ಸಹ, ಜನರನ್ನು ಸ್ವಂತ ರಕ್ತದಿಂದ ಪರಿಶುದ್ಧ ಮಾಡುವ ಹಾಗೆ, ಬಾಗಲ ಹೊರಗೆ ೪) ಶ್ರಮ ಪಟ್ಟನು. ೧೩. ಹೀಗಿರುವದರಿಂದ ಅವನ ನಿಂದೆಯನ್ನು ಹೊತ್ತುಕೊಂಡು ೫), ದಂಡಿನ ಹೊರಗೆ ಅವನ ಬಳಿಗೆ ಹೋಗೋಣ. ೧೪. ಯಾಕಂದರೆ ನೆಲೆಯಾಗಿರುವ ಪಟ್ಟಣವು ಇಲ್ಲಿ ನಮಗಿಲ್ಲ; ಆದರೆ ಆಗುವಂಥಾದ್ದನ್ನು ಹುಡುಕುತ್ತೇವೆ ೬). ೧೫. ಹಾಗಾದರೆ, ಅವನ ಮುಖಾಂತರ ೭) ದೇವರಿಗೆ ಸ್ತೋತ್ರದ ಬಲಿಯನ್ನು ೮) ಯಾವಾಗಲೂ ಅರ್ಪಿಸೋಣ—ಅದ್ಯೇನಂದರೆ, ಅವನ ನಾಮಕ್ಕೆ ಅರಿಕೆ ಮಾಡುವ ೯) ಶುಟಿಗಳ ಫಲವೇ. ೧೬. ಮತ್ತು ಸತ್‌ಕ್ರಿಯೆಯನ್ನೂ ಧರ್ಮವನ್ನೂ ಮರತು ಹೋಗ ಬೇಡಿರಿ. ಯಾಕಂದರೆ ಅಂಥ ಬಲಿಗಳನ್ನು ದೇವರು ಮೆಚ್ಚುತ್ತಾನೆ ೧೦).

೧. ನಾವು ವಿಶ್ವಾಸದಿಂದ ಆತ್ಮದ ಮುಖಾಂತರವಾಗಿ ನಮ್ಮ ಪಾಪಪರಿಹಾರಾರ್ಥವಾಗಿ ಅರ್ಪಿತವಾದ ಕ್ರಿಸ್ತನ ದೇಹವೆಂಬ ಬಲಿಯ ಮಾಂಸವನ್ನು ಅನುಭವಿಸುತ್ತೇವೆ. ಇದಕ್ಕೆ ಯೇಸು ಕ್ರಿಸ್ತನು ಯೋಹಾ. ೬ಲ್ಲಿ ನಿತ್ಯಜೀವದ ರಾಟ್ಟಿಯೆಂದು ಪೆಸರಿಡುತ್ತಾನೆ.

೨. ಲೇವಿಯವರಾದ ಯಾಜಕರಿಂದ ಉಂಟಾಗುವ ಶುದ್ಧೀಕರಣಾಚರಣೆಗಳಲ್ಲಿ ನಂಬಿಕೆಯಿಡುವವರು ಕ್ರಿಸ್ತನ ವಿಮೋಚನಾಬಲಿಯಲ್ಲಿ ಪಾಲುಗಾರರಾಗಲಾರರು.

೩. ಅವುಗಳನ್ನು ತಿನ್ನುವದು ಅಯುಕ್ತವಾಗಿತ್ತು. ೩ ಮೋಶೆ. ೧೬, ೨೭. ಆ ಪಾಪಬಲಿಪಶುಗಳ ರಕ್ತ

ವು ಪಾಪಬಲಿಯ ರಕ್ತವಾಗಿ, ದೈವಿಕ ದೇವಾಲಯ ದಾಳಗೆ ತರಲ್ಪಟ್ಟ ಕ್ರಿಸ್ತನ ರಕ್ತಕ್ಕೆ ಪೂರ್ವಸೂಚಕ ವಾದ್ದರಿಂದ, ಪಾಳೇ ಒಡಂಬಡಿಕೆಯ ಋಕ್ತರಾದ ಅವಿ ಶ್ವಾಸಿಗಳು ಕ್ರಿಸ್ತನ ಕೃಪಾನಿಧಿಯನ್ನು ಅನುಭವಿಸಲಾ ರರು.

೪. ಆತನು ಅಪವಿತ್ರನೆಂದು ಬಹಿಷ್ಕೃತನಾದನು.

೫. ಯೇಸುವು ನಮ್ಮ ವಿಮೋಚನಾರ್ಥಿಶ್ಯವಾಗಿ ಅಲ್ಲಿ ಸಹಿಸಿದ ನಿಂದೆಯನ್ನು ನೆನಸಿ, ಆತನ ಅನುಸಾ ರಿಗಳಾಗಿ, ಲೌಕದ ನಿಂದೆಯನ್ನು ಸಂತೋಷವಾಗಿ ತಾಳ ತಕ್ಕದ್ದು.

೬. ನಾವು ಆತನ ಪ್ರಕಾರ ಜೀವದಿಂದ ಸಹ ಬ ಹಿಷ್ಕೃತರಾದರೆ, ಆತನ ಬಳಿಯಲ್ಲಿ ನಮಗೆ ದೈವಿಕ ಸ್ವಸ್ಥಾನವುಂಟು.

೭. ಆತನು ನಮ್ಮ ನಿತ್ಯಪ್ರಧಾನಯಾಜಕನಾಗಿ ದ್ದಾನೆ.

೮. ಬಹಿರಂಗವಾದ ಕೃತಜ್ಞತಾಬಲಿಗಳನ್ನು ನಂ ಬದೆ, ಆತ್ಮಿಕ ಕೃತಜ್ಞತಾಬಲಿಗಳನ್ನರ್ಪಿಸ ಬೇಕು.

೯. ಮನೋವಾಕ್ಕಾಯದಿಂದ ಆತನ ಕೃಪೆಗೆ ಕೃತ ಜ್ಞರಾಗಿದ್ದು, ಆತನು ನಮ್ಮ ರಕ್ಷಕನಾಗಿದ್ದಾನೆಂಬದ ನ್ನು ಲೌಕದಲ್ಲಿ ವಿಜ್ಞಾಪಿಸ ಬೇಕು.

೧೦. ಲೇವಿಯವರ ಬಲಿಗಳಿಗಿಂತ ಅತ್ಯುತ್ತಮವಾ ದ ಈ ಕೃತಜ್ಞತಾಬಲಿಯರ್ಪಣೆಯಲ್ಲಿ ಸಹೋದರ ರಿಗೆ ಧರ್ಮಸಹಾಯ ಮಾಡುವ ಕರುಣೆಯುಳ್ಳ ಪ್ರೀತಿಯ ವೃತ್ತಿಯು ಶೇರುತ್ತದೆ. ೧ ಯೋಹಾ. ೪, ೭. ೧೧; ೩, ೧೭. ೧೮.

೧೭. ನಿಮ್ಮನ್ನು ನಡಿಸುವವರಿಗೆ, ಅವರು ಲೆಕ್ಕ ಒಪ್ಪಿಸ ಬೇಕಾದವರಾಗಿ ನಿಮ ಪ್ರಾಣಿಗಳನ್ನು ಕುರಿತು ಎಚ್ಚರ್ತು ಇರುವದರಿಂದ, ವಿಧೇಯರಾಗಿದ್ದು ಒಳ ಬ್ಯಿಳಿರಿ. ಅವರು ಮೂಲುಗುವಿಕೆಯಿಂದಲ್ಲ, ಅದು ನಿಮಗೆ ಪ್ರಯೋಜನವಿಲ್ಲ. ೧೮. ನಮ ಗೋಸ್ಕರ ಪ್ರಾರ್ಥನೆ ಮಾಡಿರಿ. ಯಾಕಂದರೆ ಸಕಲ ವಿಷಯಗಳಲ್ಲಿ ಚನ್ನಾಗಿ ನಡೆ ದು ಕೊಳ್ಳುವದಕ್ಕೆ ಇಚ್ಛೆಯುಳ್ಳವರಾಗಿದ್ದು, ಒಳ್ಳೇ ಮನಸಾಕ್ಷಿ ನಮಗೆ ಉಂಟೆಂದು ನಿಶ್ಚಯಿಸಿ ಕೊಂಡಿದ್ದೇವೆ ೨). ೧೯. ನಾನು ಬೇಗ ನಿಮಗೆ ಶರಿಗಿ ಕೊಡಲ್ಪಡುವ ಹಾಗೆ, ಇದನ್ನು ಮಾಡ, ನಿಮ್ಮನ್ನು ಅಧಿಕವಾಗಿ ಬೇಡಿ ಕೊಳ್ಳುತ್ತೇನೆ.

೧. ಕ್ರಿಸ್ತನ ಸುವಾರ್ತಾಪ್ರಸಂಗಾಪಿಧೇಯರಿಗೆ ದೇ ವರ ಕೃಪೆಯಲ್ಲ, ಶಿಕ್ಷೆಯೇ ಪ್ರಾಪ್ತವಾಗುವದು. ೧ಥೆ ಸ್ಸ. ೫, ೧೨ ಇತ್ಯಾದಿ.

೨. ಈ ಮಾತಿನಿಂದ ಪೌಲನ ಮೇಲೆ ವೈರಿಗಳು ಎಬ್ಬಿಸಿದ ಚಾಡೀಮಾತುಗಳನ್ನು ಈ ಪತ್ರಿಕಾವಲೋ ಕಿಕರು ಕೇಳಿ ನಂಬಿದರೆಂದು, ಪೌಲನು ತಿಳಿದು ಕಾಂ ಡದ್ದು ಜಾಡೆಯಾಗಿ ತೋರುತ್ತದೆ. ಅಪೊಸ್ತಲನು ಪಲೆಸ್ತೀನದಲ್ಲಿ ಶೆರೆಯವನಾಗಿದ್ದ ಕಾಲದಲ್ಲಿ ಎರಡು ಸಾರಿ ಪ್ರಯೋಗಿಸಿದ ಒಳ್ಳೆ ಮನಸ್ಸಾಕ್ಷಿಯ ಪ್ರಸ್ತಾಪ ವು ಅಪೊ. ಕ್ರಿ. ೨೩, ೧; ೨೪, ೧೬. ಪಲೆಸ್ತೀನ ನಿವಾಸಿಗಳಾದ ಇಬ್ರಿಯರಿಗೆ ಬರದ ಪತ್ರಿಕೆಯಲ್ಲಿಯೂ ಲಿಖಿತವಾದದ್ದು ಲಕ್ಷ್ಯವಾಗಿದೆ.

ಪತ್ರಿಕಾ ಬಾಧನಾನುಕೂಲವಾದ ಅಂತ್ಯಾಶೀರ್ವಾದವು. ವ. ೨೦. ೨೧.

೨೦. ಮತ್ತು ನಿತ್ಯ ಒಡಂಬಡಿಕೆಯ ರಕ್ತದಿಂದ ಕುರಿಗಳ ದೊಡ್ಡ ಕುರುಬನಾಗಿರು ವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ತಿರಿಗಿ ಬರ ಮಾಡಿದ ೩) ಸ ಮಾಧಾನದ ದೇವರು, ಅವನ ಚಿತ್ತವನ್ನು ಮಾಡುವ ಹಾಗೆ, ೨೧. ನಿಮ್ಮನ್ನು

ಸಭಾಪಾಲನಾಪತ್ರಿಕೆಗಳು.

ಇಬ್ರಿ. ೧೩, ೨೦—೨೫.

ಸಕಲ ಸತ್‌ಕ್ರಿಯೆಗಳಲ್ಲಿ ಸಂಪೂರ್ಣರಾಗ ಮಾಡಿ, ತನ್ನ ಸಮ್ಮುಖದಲ್ಲಿ ಸಮರ್ಪಕವಾದದ್ದನ್ನು ನಿಮ್ಮಲ್ಲಿ ಯೇಸು ಕ್ರಿಸ್ತನ ಮುಖಾಂತರ ಉಂಟು ಮಾಡಲಿ೫). ಅವನಿಗೆ ಯುಗ ಯುಗಾಂತರಗಳಿಗೂ ಮಹಿಮೆ ಆಗಲಿ. ಆಮೆನ್.

೧. ದೇವರು ಆತನನ್ನು ಸತ್ತವರ ಸ್ಥಳವಾದ ಸಮಾಧಿಯಿಂದ ಮಿವಕ್ಕೇರಿಸಿದ್ದಾನೆ. ಅಲ್ಲಿ ಆತನು ವಿಮೋಚನಾರಕ್ತಸಹಿತವಾಗಿ ದೇವರ ಸಾನ್ನಿಧ್ಯದಲ್ಲಿ ಶೇರಿದ್ದಾನೆ. ಆತನು ಸ್ಥಾಪಿಸಿದ ನಿರ್ಧಾರವು ಲಯವಾಗುವಂಥಾದಕ್ಕೆ ಪರ್ಯಾಯವಾದ ನಿರ್ಲಯವಾದ ನಿರ್ಧಾರವಾಗಿದೆ. ಇದೇ ರಕ್ತದ ನಿಮಿತ್ತ ಕುರಿಗಳ ದಾಡ್ಡ ಕುರುಬನೆಂಬ ಪೇಸರನ್ನು ಪಡಾಂಡಿದ್ದಾನೆ.

೨. ಈ ಪತ್ರಿಕೆಯ ಬೇರೆ ಕಡೆಯಲ್ಲಿ ಉದಾಹರಿಸದೇ ಇರುವ ಪುನರುತ್ಥಾನವು ಈ ಕಡೇ ಸ್ಥಳದಲ್ಲಿ ಸೂಚಿತವಾಗಿದೆ.

೩. ದೇವರು ಚಕ್ಕರಲ್ಲಿ ಒಳ್ಳೆದನ್ನೆಲ್ಲಾ ಪರಿಶುದ್ಧಾತ್ಮದ ಮುಖಾಂತರವಾಗಿ ಉಂಟು ಮಾಡುತ್ತಾನೆ.

ಅಂತ್ಯೋಕ್ತಿಯು. ವ. ೨೨—೨೫.

೨೨. ಮತ್ತು, ಸಹೋದರರೇ, ಬುದ್ಧಿವಾಕ್ಯವನ್ನು ಸಹಿಸಿಕೊಳ್ಳಿರೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ೧). ಯಾಕಂದರೆ ಸಂಕ್ಷೇಪವಾಗಿ ನಿಮಗೆ ಪತ್ರಿಕೆ ಬರೆದಿದ್ದೇನೆ. ೨೩. ಸಹೋದರನಾದ ತಿಮೊಥೆಯನು ಬಿಡಿಸಲ್ಪಟ್ಟಿದ್ದಾನೆಂದು ತಿಳುಕೊಳ್ಳಿರಿ೨). ಅವನು ಬೇಗ ಬಂದರೆ, ಅವನ ಸಂಗಡ ನಿಮ್ಮನ್ನು ನೋಡುವೆನು. ೨೪. ನಿಮ್ಮ ನಡಿಸುವವರೆಲ್ಲರನ್ನೂ ಪರಿಶುದ್ಧರೆಲ್ಲರನ್ನೂ ವಂದಿಸಿರಿ. ಇತಾಲ್ಯದವರು ನಿಮ್ಮನ್ನು ವಂದಿಸುತ್ತಾರೆ. ೨೫. ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

೧. ಪೌಲನು ಬಹಳ ಮರ್ಯಾದೆಯಿಂದ ಪತ್ರಿಕಾವಲೋಕಿಕರನ್ನು ಸನ್ಮಾನಿಸುತ್ತಾನೆ.

೨. ಪತ್ರಿಕಾವಲೋಕಿಕರು ತಿಮೊಥೆಯನು ಬಂಧನಗ್ರಸ್ತನಾದನೆಂಬ ವರ್ತಮಾನವನ್ನು ಕೇಳಿದರೆಂದು, ಪೌಲನು ತಿಳಿದು ಕೊಂಡದ್ದು ಇಲ್ಲಿ ತೋರುತ್ತದೆ. ತಿಮೊಥೆಯನು ಅವರಿಗೆ ವಿಶೇಷ ಪರಿಚಿತನಾಗಿದ್ದನೆಂದು ಕಾಣುತ್ತದೆ.

ಪೌಲನು ತಿರಿಗಿ ಮೂಡಣ ದೇಶ ಸಂಚಾರ ಮಾಡಿದ ಕಾಲದಲ್ಲಿ ತೀತನಿಗೂ ತಿಮೊಥೆಯನಿಗೂ ಬರದ ಪತ್ರಿಕೆಗಳು.

ಅಪಾಸ್ತಲನಾದ ಪೌಲನ ಸಭಾಪಾಲನಾಪತ್ರಿಕೆಗಳ ವಿಷಯವಾದ ಸಾಮಾನ್ಯ ಪೀಠಿಕೆಯು.

ಪೌಲನು ಹಿರೀಕುರುಬನಾದ ಯೇಸು ಕ್ರಿಸ್ತನ ಮಂದೆಯೆಂಬ ದೇವರ ಸಭೆಯನ್ನು ಮೇಯಿಸುವ ಉದ್ಯೋಗವನ್ನು ಯೋಹಾ. ೨೧, ೧೫ ಇತ್ಯಾದಿ, ಅಪೊ. ಕ್ರಿ. ೨೦, ೨೮. ೨೯. ಹೊಂದಿ, ಕುರುಬನೆಂಬ

ಸಭಾಪಾಲನಾಪತ್ರಿಕೆಗಳು.

ಬೋಧಕರಾಗಿ ನೇಮಕವಾದ ಇಬ್ಬರು ಯೌವನಸ್ಥರಿಗೆ ಕ್ರೈಸ್ತಬೋಧಕೋದ್ಯೋಗ ಧರ್ಮಪ್ರಚಾರಣೆಗಳನ್ನು ಬೋಧಿಸುವ ಉದ್ದಿಶ್ಯವಾಗಿ ಬರದ ತಿಮೊಥೆಯನ ಎರಡು, ತೀತನ ಬಂದು, ಪತ್ರಿಕೆಗಳಿಗೆ ಸಭಾಪಾಲನಾಪತ್ರಿಕೆಗಳೆಂಬ ಹೆಸರುಂಟಾಯಿತು. ಸುವಾರ್ತಾಸೇವಾ ಶ್ರಮಗಳಿಂದ ಪರಿಶೋಧಿತನಾಗಿ, ನೆರೆ ಬಲ್ಲ ನುಭವಿಯೊದ, ಅತಿಶ್ಲಾಘ್ಯನಾದ ಅಪೊಸ್ತಲನು ತಾನು ಸ್ಥಾಪಿಸಿದ ಅನೇಕ ಸಭೆಗಳ ಮೇಲ್ವಿಚಾರಕರಾಗಿ ಇಟ್ಟ ಯೌವನಸ್ಥರಾದ ಜೊತೆಗಾರರಿಗೆ ತನ್ನ ಉದ್ಯೋಗ ಪ್ರಚಾರಣ ಬುದ್ಧಿಯಂಬ ನಿಕ್ಷೇಪದಿಂದ ಕ್ರಿಸ್ತ ಯೇಸುವಿನಲ್ಲಿರುವ ದೇವರ ಋಣರಹಿತವಾದ ಕೃಪೆಯ ಪ್ರಸಂಗದಿಂದ ಅಬದ್ಧಬೋಧಕರನ್ನು ಸಮಾಚೀನವಾಗಿ ಜ್ಞೆಸಿ, ಅವರ ಚಾಡೀಮಾತುಗಳನ್ನು ಪರಿಶುದ್ಧ ನಡತೆಯಿಂದ ಪೂರ್ಣವಾಗಿ ನಿರಾಕರಿಸುವ ಬೋಧನೆಯನ್ನು ಮಾಡುವದು ಯುಕ್ತವೆಂದೆಣಿಸಿದನು. ಕ್ರಿಸ್ತಸಾಕ್ಷಿಯಲ್ಲಿ ಇರ ತಕ್ಕ ನಿರ್ಭಯಮನಸ್ಸು, ವಿಶ್ವಾಸಪ್ರೀತಿಭಾವವು, ದೇವರಾಜ್ಯಶತ್ರುಗಳ ಕ್ರೂರವಾದ ದ್ವೇಷವು, ಈ ರಸಗಳಿಂದ ತುಂಬಿದ ಸಭಾಪಾಲನಾಪತ್ರಿಕೆಗಳು ದಿವರಾಜ್ಯಸ್ಥಾಪನೆಯಲ್ಲಿ ದೇವರಿಗೆ ಜೊತೆಕೆಲಸದವರಾದ ಸಭಾಬೋಧಕರಿಗೆಲ್ಲಾ ಬೋಧನೋದ್ಬೋಧನಾದರಣೆಗಳ ನಿರಂತರವಾದ ದ್ರವ್ಯವಾಗಿವೆ. ಇದಲ್ಲದೆ ಸಭಾದೇವಾರಾಧನಾಚರಣೆಯ ವಿಷಯವಾಗಿಯೂ, ಸಭೋದ್ಯೋಗಸ್ಥರ ಪರಿಗಣನೆಯ ವಿಷಯವಾಗಿಯೂ, ೧ ತಿಮೊ. ಸ. ೨. ಸ. ೩. ತೀತ. ಸ. ೧ಲ್ಲಿ ಅತಿ ಲಕ್ಷ್ಯವಾದ ಬುದ್ಧಿಯ ಮಾತುಗಳು ಅವುಗಳಲ್ಲಿ ದೊರಕುತ್ತವೆ.

ಈ ಪತ್ರಿಕೆಗಳ ರಚನೆಯ ಕಾಲವು ಯಾವದೆಂಬುವದನ್ನು ಮೇಲೆ ವಿವರಿಸಿದ್ದೇವೆ. ಪೌಲನು ಅವುಗಳನ್ನು ಕ್ರಿಸ್ತಶಕದ ೬೫ನೆ ೬೭ನೆ ವರುಷಗಳಲ್ಲಿ ಬರದನೆಂಬದಕ್ಕೆ ಸಂಶಯವಿಲ್ಲ. ರೋಮಪುರದ ಪ್ರಥಮ ಬಂಧನದಿಂದ ಬಿಡುಗಡೆಯಾದನಂತರ, ಮೂಡಣ ದೇಶಗಳಲ್ಲಿ ಸಂಚಾರ ಮಾಡುತ್ತಾ, ಕ್ರೇತದ್ವೀಪದಲ್ಲಿ ತೀತನನ್ನು ಸಭಾಧ್ಯಕ್ಷನಿಯಾಗಿ ಬಿಟ್ಟು, ಎಫೆಸಕ್ಕೆ ಹೋಗಿ, ಕೆಲವು ಕಾಲ ಉಳಿದು ಕೊಂಡು, ಬಳಿಕ ಮಕೆದೊನ್ಯಕ್ಕೆ ಪಯಣ ಮಾಡಿ, ಈ ಪಯಣದಲ್ಲಿ ತಾನು ಎಫೆಸದಲ್ಲಿ ಬಿಟ್ಟು ಬಂದ ತಿಮೊಥೆಯನಿಗೆ ಮೊದಲನೆ ಪತ್ರಿಕೆಯನ್ನು ಬರದನು. ೧ ತಿಮೊ. ೧, ೩. ತರುವಾಯ ತಿರಿಗಿ ಎಫೆಸಕ್ಕೆ ಬಂದು, ಅಲ್ಲಿಂದ ಹೊರಟು, ಗ್ರೇಕದೇಶಸಂಚಾರ ಮಾಡುವ ಕಾಲದಲ್ಲಿ ತೀತನಿಗೆ ಬಂದು ಪತ್ರಿಕೆಯನ್ನು ಬರದನು. ತದನಂತರ, ಯಾವದೊಂದು ಕಾರಣದಿಂದಲೋ ತಿರಿಗಿ ಬಂಧನಸ್ರಸ್ತನಾಗಿ, ರೋಮಪುರಕ್ಕೆ ಬಂದು, ಸಮೀಪವಾದ ಸಾಕ್ಷಿಮರಣದ ಆಶೆಯ ಸಂತೋಷರಸವುಳ್ಳ ಎರಡನೆ ತಿಮೊಥೆಯನ ಪತ್ರಿಕೆಯನ್ನು ಬರದನು.

ತಿಮೊಥೆಯನ ಮೊದಲನೆ ಪತ್ರಿಕೆಯು.

ಪೀಠಿಕೆಯು.

ತಿಮೊಥೆಯನು ಅಪೊಸ್ತಲನಾದ ಪೌಲನಿಗೆ ಅತಿ ಪ್ರಿಯ ಶಿಷ್ಯನೂ, ಜೊತೆಪ್ರಯಾಣಸ್ಥನೂ ಆಗಿದ್ದನು. ಪೌಲನು ಅವನಿಗೆ ಸ. ೧, ೨ಲ್ಲಿ ವಿಶ್ವಾಸದಲ್ಲಿ ನಿಜ ಮಗನೆಂದು ಹೆಸರಿಡುತ್ತಾನೆ. ಲುಕವೊನ್ಯದ ಸಂಚಾರ ಮಾಡಿ, ದೆರ್ಬೆಯಲ್ಲಿಯೂ ಲುಸ್ತ್ರದಲ್ಲಿಯೂ ಇರುವ ಅಪೊಸ್ತಲನನ್ನು ಅಪೊ. ಕ್ರಿ. ೧೬, ೧. ಶೇರುವದಕ್ಕಿಂತ ಮುಂಚೆ, ಅವನ ಸಂಗಡ ಸುವಾರ್ತಾಪ್ರಸಂಗಪರ್ಯಟಣ ಮಾಡಿದ್ದನು. ೨ ತಿಮೊ. ೩, ೧೧.

೩. ಮೂವತ್ತೈದನೆಯ ಸ್ಥಿತಿಯಲ್ಲಿ ಪೌಲನ ಪುನಃಪ್ರಾಪ್ತಿ. ೪೯೭
ತಿಮೊಥೆಯನ ಮೊದಲನೆ ಪತ್ರಿಕೆಯ ಪೀಠಿಕೆ.

ತಿಮೊಥೆಯನ ತಂದೆಯು ಪರಜನರವನಾದ ಗ್ರೀಕನಾಗಿದ್ದನು; ಅವನ ತಾಯಿಯಾದ ಐನೀಕೆಯೂ ಅವನ ಅಜ್ಜಿಯಾದ ಲೋವಿಯೂ ೨ ತಿಮೊ. ೧, ೫. ಯೆಹೂದರಾಗಿ ಹುಟ್ಟಿ, ಸಂವರ್ತಿಕರಾಗಿ, ಕ್ರೈಸ್ತರಾದರು. ಇವರಿಂದ ಅವನು ಭಕ್ತಿಶಿಕ್ಷಿತನಾಗಿ, ಕ್ರಿಸ್ತನ ವಿಶ್ವಾಸವನ್ನು ಹೊಂದಿದ್ದನು. ೨ ತಿಮೊ. ೩, ೧೫. ಪೌಲನು ಅವನಿಗೆ ಪೂರ್ಣವಾಗಿ ಸುವಾರ್ತೆಯನ್ನು ಬೋಧಿಸಿ, ೨ ತಿಮೊ. ೩, ೧೪. ಕ್ರೈಸ್ತ ಬೋಧಕೋದ್ಯೋಗದಲ್ಲಿ ಶೇರಿಸಿ, ೨ ತಿಮೊ. ೧, ೬. ೧ ತಿಮೊ. ೪, ೧೪; ೬, ೧೨. ಜೊತೆಕೆಲಸಕ್ಕಾಗಿ ಪ್ರಯಾಣಕ್ಕೆ ಕರದುಕೊಂಡು ಹೋಗಿ ಅಪೊ. ಕ್ರಿ. ೧೬, ೩., ಯೆಹೂದರು ಅವನನ್ನು ತಿರಸ್ಕರಿಸದ ಹಾಗೆ ಅವನಿಗೆ ಪರಿಚ್ಛೇದನವನ್ನು ಮಾಡಿಸಿದನು. ಆ ಕಾಲದಿಂದ ಅವನು ಪೌಲನ ಜೊತೆಪ್ರಯಾಣಸ್ಥನಾಗಿ ಪರ್ಯಟಣ ಮಾಡುತ್ತಾ, ಆಗ್ಗಾಗ್ಗೆ ಅವನ ಅಪ್ಪಣೆಯಿಂದ ಆಯಾ ಸಭೆಗಳಿಗೆ ಹೋಗುತ್ತಾ, ಸುವಾರ್ತಾಸೇವೆಯನ್ನು ನಡಿಸುತ್ತಾ ಇದ್ದನು. ಅವನು ಪೂರ್ಣ ವಿಶ್ವಾಸ ಪ್ರೀತಿಗಳ ಅನ್ಯೋನ್ಯದಲ್ಲಿದ್ದು ಪೌಲನಿಗೆ ಎಲ್ಲರಿಗಿಂತ ಅತಿ ಪ್ರಿಯ ಮಗನಂತೆ ಇದ್ದನು. ಆದ್ದರಿಂದ ಪೌಲನು ಅವನನ್ನು ಅಥೇನೆಯಿಂದ ಥೆಸ್ಸಲೊನೀಕೆಗೆ ೧ ಥೆಸ್ಸ. ೩, ೧—೫. ಕಳುಹಿಸಿ, ಆ ಸಭೆಯನ್ನು ವಿಶ್ವಾಸದಲ್ಲಿ ದೃಢಪಡಿಸಿ, ಅದರ ಸ್ಥಿತಿಗತಿಗಳ ವೃತ್ತಾಂತವನ್ನು ತನಗೆ ತಿಳಿಸುವ ಅಪ್ಪಣೆಯನ್ನು ಕೊಟ್ಟು, ಈ ತರದ ಅತಿ ಘನವಾದ ಕೆಲಸಗಳನ್ನು ಅವನಿಗೆ ಒಪ್ಪಿಸಿದನು. ಅವನು ಥೆಸ್ಸಲೊನೀಕೆಯಿಂದ ಕೊರಿಂಥಕ್ಕೆ ಬಂದು ಅಪೊ. ಕ್ರಿ. ೧೮, ೧—೫., ಪೌಲನ ಸಂಗಡ ಅಲ್ಲಿ ಸುವಾರ್ತೆಯನ್ನು ಪ್ರಸಂಗಿಸುತ್ತಾ ಇದ್ದನು. ೨ ಕೊರಿ. ೧, ೧೯. ತದನಂತರ ಪೌಲನ ಸಂಗಡ ಎಫೆಸದಲ್ಲಿ ಉಳಿದು ಕೊಂಡನು. ಅಲ್ಲಿಂದ ಅಪೊಸ್ತಲನು ಅವನನ್ನು ಮಕೆದೊನ್ಯಕ್ಕೆ ಮುಂಕಳುಹಿಸಿ, ಅಪೊ. ಕ್ರಿ. ೧೯, ೨೨. ೧ ಕೊರಿ. ೪, ೧೭; ೧೬, ೧೦., ಮಕೆದೊನ್ಯದಲ್ಲಿ ಕಲತನು. ಬಳಿಕ ಅಲ್ಲಿಯೂ ಕೊರಿಂಥದಲ್ಲಿಯೂ ಪೌಲನ ಜೊತೆಯಲ್ಲಿದ್ದನು. ೨ ಕೊರಿ. ೧, ೧. ರೋಮಾ. ೧೬, ೨೧. ಅಪೊಸ್ತಲನು ಯೆರೂಸಲೇಮಿಗೆ ಮಾಡಿದ ಐದನೆ ಪ್ರಯಾಣದಲ್ಲಿ ಅವನ ಸಂಗಡ ಸಣ್ಣ ಆಸ್ಯವ ಪರ್ಯಂತ ಹೋದನು. ಪೌಲನು ರೋಮಪುರದ ಮೊದಲನೆ ಬಂಧನದಲ್ಲಿದ್ದು, ಕೊಲೊಸ್ಸೆಯವರಿಗೂ ಫಿಲಿಪ್ಪಿಯವರಿಗೂ ಫಿಲೇಮೋನನಿಗೂ ಪತ್ರಿಕೆಗಳ ಬರದ ಕಾಲದಲ್ಲಿ ತಿಮೊಥೆಯನು ಅವನ ಹತ್ತರ ಇದ್ದನು. ಆ ಬಂಧನವು ಕಳದಾಗ, ಪೌಲನು ತಿಮೊಥೆಯನ ಸಂಗಡ ಮೂಡಣ ದೇಶಸಂಚಾರ ಮಾಡಿ, ಅವನನ್ನು ಎಫೆಸದಲ್ಲಿ ಬಿಟ್ಟು ೧ ತಿಮೊ. ೧, ೩., ಮಕೆದೊನ್ಯ ದೇಶದ ಸಂಚಾರದಲ್ಲಿ ಅವನನ್ನು ಪತ್ರಿಕಾಮೂಲಕವಾಗಿ ಸಭಾಧ್ಯಕ್ಷನಿಯಾಗಿ ನೇಮಿಸಿ, ಒಳ್ಳನುಗ್ಗಿದ ಅಬದ್ಧ ಬೋಧಕರನ್ನು ಅಣಗಿಸಿ, ಸಭಾಕ್ರಮವನ್ನು ಕಾಪಾಡಿ ಸ್ಥಿರಪಡಿಸಿ, ಯೋಗ್ಯರಾದ ಜನರನ್ನು ಬೋಧಕೋದ್ಯೋಗದಲ್ಲಿ ಶೇರಿಸಿ, ದೇವಾರಾಧನೆಯನ್ನು ಯುಕ್ತವಾಗಿ ನಡಿಸಿ, ತನ್ನ ಉದ್ಯೋಗ ಪ್ರಚಾರಣೇ ಮಾಡುವದನ್ನು ಬೋಧಿಸುವ ಉದ್ದಿಶ್ಯವಾಗಿ ಈಗ ನಮ್ಮ ಮುಂದೆ ಇರುವ ಮೊದಲನೆ ಪತ್ರಿಕೆಯನ್ನು ಬರದನು. ಶುದ್ಧ ಸುವಾರ್ತಾಬೋಧನೆಯಿಂದ ಪರಾಜಿತರಾಗ ತಕ್ಕ ಅಬದ್ಧ ಬೋಧಕರು, ಕ್ರೈಸ್ತಸಭೆಯವರೆಲ್ಲರೂ ಮೋಶೆಯ ನಿಯಮವನ್ನೆಲ್ಲಾ ಕೈಕೊಳ್ಳುವ ಹಂಗಿನಲ್ಲಿದ್ದಾರೆಂದೂ, ಕ್ರೈಸ್ತಸಿದ್ಧಿಗೂ, ಪರಿಶುದ್ಧತ್ವಕ್ಕೂ ಅವಶ್ಯವಾದ ವಿಧವಿಧ ಆಹಾರವರಿತ್ಯಾಗ, ನಿರ್ವಿವಾಹ ಮುಂತಾದ ದೇಹದಂಡನೆಗಳು ಬಹಳ ಉಪಯೋಗವಾಗಿವೆಂದೂ, ಹೇಳುತ್ತಾ ಇದ್ದರು. ತಿಮೊಥೆಯನು ಎಫೆಸದ ಸಭೆಯ ಅಧ್ಯಕ್ಷನಿಯಾಗಿದ್ದು, ಅಲ್ಲಿ ಸಾಕ್ಷಿ ಮರಣವನ್ನು ತಾಳಿದನೆಂದು, ಸಭಾಚರಿತ್ರಗಾರರು ಬರದಿದ್ದಾರೆ. ೨ ತಿಮೊ. ೪, ೫ಲ್ಲಿ ಬರದದ್ದು ಈ ಮಾತಿಗೆ ವಿರೋಧವಾಗಿರುವದಿಲ್ಲ.

೧ ತಿಮೊ. ೧, ೧—೩.

೩ ಪತ್ರಿಕೆಗೆ ಹತ್ತು ಭಾಗಗಳು.

೧. ನಿಯಮದ ಸಾರಾಂಶವೂ ಸುವಾರ್ತಾನುಸಾರವಾದ ಪ್ರಯಾಣಜನವೂ. ಸ. ೧.
೨. ಕ್ರೈಸ್ತ ಮುಖ್ಯ ಕಾರ್ಯವಾದ ಪರಾರ್ಥಪ್ರಾರ್ಥನೆಯೂ, ಸಭಾಪ್ರಾರ್ಥನಾಕ್ರಮವೂ. ಸ. ೨.
೩. ಅಧೃಕ್ಷದ್ಯಾಗವೂ, ಸಭಾಸೇವಕಾದ್ಯಾಗವೂ. ಸ. ೩, ೧—೧೫.
೪. ಸತ್ಯದ ಸ್ತಂಭವೂ, ತಳಪಾಯವೂ. ಸ. ೩, ೧೫. ೧೬.
೫. ಅಬದ್ಧಬೋಧಕರು. ೪, ೧—೧೧.
೬. ತಿಮೊಥೆಯನಿಗೆ ಪೌಲನು ಸಾಮಾನ್ಯೋಪದೇಶವು. ಸ. ೪, ೧೨—೧೬.
೭. ಹಿರಿಯರ ಮತ್ತು ವಿಧವೆಗಳ ವಿಷಯವಾದ ಉಪದೇಶವು. ಸ. ೫.
೮. ಆಳುಗಳ ವಿಷಯವಾದ ಉಪದೇಶವು. ಸ. ೬, ೧. ೨.
೯. ಅಬದ್ಧಬೋಧಕರ ವಿಷಯವಾಗಿ ಪುನರುಪದೇಶವು. ಸ. ೬, ೩. ೫.
೧೦. ನಿಜವಾದ ದೈವಿಕಮನಸ್ಸು. ಅಂತ್ಯೋಕ್ತಿಯು. ಸ. ೬, ೬—೨೨.

ವಂದನೆಯು. ಸ. ೧, ೧. ೨.

ವಂದನಾವಾಕ್ಯವು ಪೂರ್ಣ ವಿಶ್ವಾಸಾನ್ಯೋನ್ಯದಲ್ಲಿದ್ದ ತಿಮೊಥೆಯನ ಮೇಲೆ ಅತಿಶ್ಲಾಘ್ಯನಾದ ನಮ್ಮ ಅಪೊಸ್ತಲನು ಇಟ್ಟ ಪಿತೃಭಾವದ ಮಮತೆಯನ್ನು ಸೂಚಿಸುತ್ತದೆ. ಪೌಲನು ಅತಿಪ್ರಿಯ ಶಿಷ್ಯನಿಗೆ: ತಂದೆಯಾದ ದೇವರಿಂದಲೂ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಿಂದಲೂ ಕೃಪೆಯೂ, ಕರುಣೆಯೂ, ಸಮಾಧಾನವೂ ನಿನಗಿರಲಿ ಎಂದು, ಬರೆಯುತ್ತಾನೆ. ಸಭಾಪಾಲನಾಪತ್ರಿಕೆಗಳಲ್ಲಿ ಪೌಲನು ದೇವರಿಗೆ ರಕ್ಷಕನೆಂದು ಸ. ೨, ೩; ೪, ೧೦. ತೀತ. ೧, ೩; ೩, ೪., ಯೇಸು ಕ್ರಿಸ್ತನಿಗೆ ನಮ್ಮ ಆಶೆಯಂದು ಸ. ೧, ೧. ಹೆಸರಿಡುತ್ತಾನೆ. ಕಠಿಣ ಯುದ್ಧವನ್ನು ನಡಿಸಿದ ಅಪೊಸ್ತಲನು ಸಮಾಪ್ತಿಯು ಸವಿೂಪವಾಗುತ್ತದೆಂದು ತಿಳಿದ ಕಾಲದಲ್ಲಿ ನಮ್ಮ ರಕ್ಷಣೆಯ ಆದಿಮೂಲವಾದ ಕೃಪೆಯಲ್ಲಿ ಅಧಿಕ ದೃಢವಾದ ವಿಶ್ವಾಸವನ್ನಿಟ್ಟು, ನಮ್ಮ ಆಶೆಯ ಏಕ ವಿಷಯವನ್ನು ಅಧಿಕ ಆಸಕ್ತಿಯಿಂದ ನಿರೀಕ್ಷಿಸುತ್ತಾನೆ. ತನ್ನ ಪ್ರಿಯ ತಿಮೊಥೆಯನಿಗೂ, ತೀತನಿಗೂ ತೀತ. ೧, ೪. ಕರುಣೆ ಇರ ಬೇಕೆಂದು ವಿಶೇಷವಾಗಿ ಅಪೇಕ್ಷಿಸುತ್ತಾನೆ; ಯಾಕಂದರೆ: ಕ್ರಿಸ್ತನ ಸೇವಕನಿಗೆ ಬೋಧನೋದ್ಯೋಗವೃತ್ತಿಯಲ್ಲಿ ದೇವರ ಮತ್ತು ಯೇಸುವಿನ ಕರುಣಾನ್ವಿತ ಪ್ರೀತಿಯಿಂದ ಉದ್ಯೋಗಪ್ರಕಾರಣಾಬಲವನ್ನು ಹೊಂದುವ ಹಾಗೆಯೂ, ತನ್ನ ಪರಾಮರಿಕೆಯಲ್ಲಿರುವ ಸಭೆಯವರ ಬಲಹೀನತ್ವಗಳನ್ನು ಪರದುಃಖದುಃಖಿಯಾದ ಪ್ರೀತಿಯಿಂದ ಚನ್ನಾಗಿ ಸಹಿಸುವ ಹಾಗೆಯೂ, ಅದು ವಿಶೇಷವಾಗಿ ಅವಶ್ಯವಾಗಿದೆ. ವ. ೧೩. ೧೬. ೨ ಕೊರಿ. ೪, ೧. ಇಬ್ರಿ. ೨, ೧೭.

ನಿಯಮದ ಸಾರಾಂಶವೂ ಸುವಾರ್ತಾನುಸಾರವಾದ ಪ್ರಯಾಣಜನವೂ.
ಸ. ೧, ೩—೧೧.

೩. ನಾನು ಮಕೆದಾನ್ಯಕ್ಕೆ ಹಾರಡುವಾಗ ೧), ಅನ್ಯಬೋಧನೆ ಹೇಳ ಬೇಡೆಂದೂ ವಿಶ್ವಾಸದಲ್ಲಿರುವ ದಿವ್ಯ ಕಟ್ಟುವಿಕೆಗಿಂತ ತರ್ಕಕ್ಕೆ ಹೆಚ್ಚಾಗಿ ಉಪ್ಪದವಾಗುವ

೩. ಮೂಡಣ ಸೀಮೆಯಲ್ಲಿ ಪೌಲನ ಪುನಃಪ್ರೂವ ೨ನೆ. ನಿಯಮದ ಅಗಸ್ತ ಸುವಾರ್ತಾನುಸಾರವಾದ ಪ್ರಯಾಜನ.

೧ ತಿಮೊ. ೧, ೪—೧೩.

ಕಟ್ಟುಕಥೆಗಳನ್ನೂ, ೪. ಶಿರದ ವಂಶಾವಳಿಗಳನ್ನೂ ೨) ಲಕ್ಷಿಸ ಬೇಡೆಂದೂ, ಕೆಲವರಿಗೆ ೩) ಆಜ್ಞಾಪಿಸುವದಕ್ಕೆ ಎಫೆಸದಲ್ಲಿ ನಿಲ್ಲ ಬೇಕೆಂದು ನಿನ್ನನ್ನು ಬೇಡಿ ಕಾಂಡ ಪ್ರಕಾರ ಮಾಡು. ೫. ಆಜ್ಞೆಯ ಪೂರ್ಣತೆ ವಿನಂದರೆ, ಶುದ್ಧ ಹೃದಯದಿಂದಲೂ, ಒಳ್ಳೆ ಮನಸಾಕ್ಷಿಯಿಂದಲೂ ನಿಷ್ಕಪಟವಾದ ವಿಶ್ವಾಸದಿಂದಲೂ, ಉಂಟಾಗುವ ಪ್ರೀತಿಯೇ. ೬. ಇವುಗಳಿಗೆ ಕೆಲವರು ತಪ್ಪಿ, ಹರಟೆ ಮಾತಿಗೆ ೪) ತಿರುಗಿದ್ದಾರೆ. ೭. ಅವರು ನ್ಯಾಯಶಾಸ್ತ್ರಿಗಳಾಗಿರ ಇಚ್ಛಿಸಿ, ತಾವು ಹೇಳುವದೇನೆಂದೂ, ತಾವು ದೃಢ ಪಡಿಸುವದೇನೆಂದೂ, ತಿಳುಕಾಳ್ಳುವದಿಲ್ಲ. ೮. ಆದರೆ ನ್ಯಾಯಪ್ರಮಾಣವು, ಒಬ್ಬನು ಅದನ್ನು ನ್ಯಾಯವಾಗಿ ಬಳಸಿದರೆ ೫), ಒಳ್ಳೆದೆಂದು ಬಲ್ಲೆವು. ೯. ನ್ಯಾಯಪ್ರಮಾಣವು ನೀತಿವಂತರಿಗಾಸ್ಪದವಲ್ಲ, ಅನೀತಿವಂತರೂ, ಅವಿಧೇಯರೂ, ಭಕ್ತಿಹೀನರೂ, ಪಾಪಿಷ್ಟರೂ, ಅಪವಿತ್ರರೂ, ಅಪಭ್ರಷ್ಟರೂ, ತಂದೆತಾಯಿಗಳ ಕಾಲೆಗಾರರೂ, ನರಹಿಂಸಕರೂ, ಜಾರರೂ, ಪುರುಷಸಂಗಮರೂ, ನರಚೌರ್ಯಕರೂ, ೧೦. ಸುಳ್ಳುಗಾರರೂ, ಅಬದ್ಧ ಪ್ರಮಾಣಿಕರೂ, ಇವರಿಗಾಸ್ಪದವು, ೧೧. ನನಗೆ ಒಪ್ಪಿಸಲ್ಪಟ್ಟ ಭಾಗ್ಯವುಳ್ಳ ದೇವರ ಮಹಿಮೆಯಾದ ಸುವಾರ್ತೆಯ ಪ್ರಕಾರವಾಗಿರುವ ಸ್ವಸ್ಥ ಬೋಧನೆಗೆ ವಿರೋಧವಾಗಿರುವ ಬೇರೆ ಯಾವದಕ್ಕಾಸ್ಪದವು ಇರುತ್ತದೆಂದು ತಿಳಿದು ಕಾಳ್ಳುತ್ತೇವೆ ೬).

೧. ಪೌಲನು ಆಗ ಎಫೆಸದಿಂದ ಪ್ರಸಾರಟನೆಂಬುವದು ಳನೆ ವಚನದಲ್ಲಿ ಸೂಚಿತವಾಗಿದೆ.

೨. ಅಪಾಸ್ತಲನು ದೇವರ ವಾಕ್ಯದಲ್ಲಿ ಬರೆಯದ ದೂತರ ಚರಿತ್ರಗಳು ಕಟ್ಟುಕಥೆಗಳೆಂದು ಹೇಳಿ, ಎಫೆಸದಲ್ಲಿರುವ ಅಬದ್ಧಬೋಧಕರು ಶಿಷ್ಯರಿಗೆ ರಹಸ್ಯ ಬೋಧನೆಯೆಂದು ಹೇಳುತ್ತಾ ಬರುವ ದೂತರ ವಂಶಾವಳಿಗಳ ವರ್ಣನೆಯು ಕೆಲಸಕ್ಕೆ ಬಾರದ ಬರಿದೆಂಬುವೆಂದು ಶಿಕ್ಷಿಸುತ್ತಾನೆ.

೩. ಪೌಲನು ಬೇಕೆಂದು ಅಬದ್ಧಬೋಧಕರ ಹೆಸರುಗಳನ್ನು ಬರೆಯದೆ, ಕೆಲವರಿಗೆಯಂದು ಸಾಮಾನ್ಯವಾಗಿ ಬರೆಯುತ್ತಾನೆ.

೪. ಪ್ರೀತಿಧರ್ಮವನ್ನು ಬಿಟ್ಟ ಜ್ಞಾನೋಪದೇಶವು ಪುರಟೇ ಮಾತು, ಅಂದರೆ ನಿಷ್ಫಲವಾದ ರಗಳೆಯು.

೫. ಇದಕ್ಕೆ ರೋಮಾ. ೩, ೨೦ ಸರಿ ನೋಡ ಬೇಕು.

೬. ಇದರ ಪೂರ್ವಭಾಯು ೧ಲನೆ ಮೊದಲಾದ ವಚನಗಳಲ್ಲಿ ತೋರುತ್ತದೆ.

ಪೌಲನು ಇಲ್ಲಿ ತನಗೆ ನೇಮಕವಾದ ಸುವಾರ್ತಾಸೇವಾದ್ಯೋಗದ ವಿಷಯವಾದ ಸ್ವಕೀಯಮನೋಚಾವನೆಯನ್ನು ಸಮಯೋಚಿತವಾಗಿ ಸೂಚಿಸುತ್ತಾನೆ.

ಸ. ೧, ೧೨—೧೭.

೧೨. ಮತ್ತು ನನ್ನನ್ನು ನಂಬಿಕೆಯುಳ್ಳವನೆಂದೆಣಿಸಿ ೧), ಸೇವೆಯಲ್ಲಿಟ್ಟು ಬಲಪಡಿಸಿದ ನಮ್ಮ ಕರ್ತನಾದ ಕ್ರಿಸ್ತ ಯೇಸುವಿಗೆ ಸ್ತೋತ್ರ ಮಾಡುತ್ತೇನೆ. ೧೩. ಮೊದ

ಲು ದೂಷಕನೂ, ಹಿಂಸಕನೂ, ಬಲಾತ್ಕಾರಿಯೂ ಆಗಿದ್ದೆನು; ಆದರೆ ತಿಳಿಯದೆ ೨) ಅವಿಶ್ವಾಸದಲ್ಲಿ ಮಾಡಿದ್ದರಿಂದ, ಕರುಣಿಸಲ್ಪಟ್ಟೆನು. ೧೪. ಮತ್ತು ನಮ್ಮ ಕರ್ತನ ಕೃಪೆಯು ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸ ಪ್ರೀತಿಗಳ ಸಂಗಡ ಅತಿಶಯವಾಯಿತು ೩).

೧. ಇದು ಪೌಲನಿಗೆ ೧೩ನೆ ವಚನದಲ್ಲಿ ಸೂಚಿಸಿದ ಕಾರಣದಿಂದ ಯಾವಾಗಲೂ ಚಾಂದ್ರವಾಗಿ ತಾರುತ್ತಾ ಇತ್ತು. ಆದಾಗ್ಯೂ ಯೇಸುವು ಆಸಕ್ತರಾದ ವೈರಿಗಳನ್ನು ಅಲಸರಾದ ಚಕ್ತುರಿಗಿಂತ ಉತ್ತಮರೆಂದೆಣಿಸುತ್ತಾನೆಂಬದು ಪ್ರಕ. ೩, ೧೫. ೧೬ರಲ್ಲಿ ಕಾಣುತ್ತದೆ. ಮನಃಪೂರ್ವಕವಾಗಿ ಪಗೆ ಮಾಡುವವನು ಮನಃಪೂರ್ವಕವಾಗಿ ಪ್ರೀತಿ ಮಾಡಬಲ್ಲನು.

೨. ದೇವವಾಕ್ಯವಿದ್ಯೆಯಲ್ಲಿ ಉತ್ಕೃಷ್ಟ ಫರಿಸಾಯನಾಗಿದ್ದ ಪೌಲನು ಚಿಕ್ಕ ಪ್ರಾಯದಿಂದ ಪಾಠ ಮಾಡುತ್ತಾ ಬಂದ ಪಗೆ ಒಡಂಬಡಿಕೆಯ ಗ್ರಂಥದ ಮುಖ್ಯಾಭಿಪ್ರಾಯವನ್ನು ತಿಳಿಯದೇ ಪೋದದ್ದು ಪೂರ್ಣಾಗಂದರೆ: ಮಹಾ ವಿದ್ವಾಂಸನಾಗಿದ್ದರೂ, ವಿಶ್ವಾಸವಿಲ್ಲದ ಮನುಷ್ಯನಲ್ಲಿ ದೇವರ ವಿಷಯವಾದ ಕಾರ್ಯಗಳ ಜ್ಞಾನವು ಎಷ್ಟು ಮಾತ್ರವೂ ಇಲ್ಲ.

೩. ತನಗೆ ತಕ್ಕಿದ ಅತಿಶಯವಾದ ಕೃಪೆಯನ್ನೂ, ತನ್ನ ಹೃದಯದಲ್ಲಿ ಹುಟ್ಟಿದ ವಿಶ್ವಾಸವನ್ನೂ, ಪ್ರೀತಿಯನ್ನೂ, ಈ ಮೂರನ್ನು ಮುಂಚೆ ದೂಷಕನೂ, ಹಿಂಸಕನೂ, ಬಲಾತ್ಕಾರಿಯೂ ಆಗಿದ್ದ ತನ್ನ ಪೂರ್ವದುರ್ಗುಣಗಳಿಗೆ ಎದುರಿಟ್ಟು, ತನ್ನಲ್ಲಿ ಪ್ರತ್ಯಕ್ಷವಾದ ಕ್ರಿಸ್ತನ ಬಲವನ್ನು ಅದ್ಭುತವಾದದ್ದೆಂದು ಸ್ತುತಿಸುತ್ತಾನೆ.

೧೫. ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾದ ೧) ನಂಬಿಕೆಯಾದ ವಾಕ್ಯವು ಇದ್ದೇ—ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬಂದನು ೨). ಅವರಲ್ಲಿ ಮೊದಲಿನವನು ನಾನೇ ೩). ೧೬. ಆದರೆ ಯೇಸು ಕ್ರಿಸ್ತನು ಮೊದಲಿನವನಾದ ನನ್ನಲ್ಲಿ ಸಮಸ್ತ ದೀರ್ಘಶಾಂತಿಯನ್ನು ೪) ನಿತ್ಯ ಜೀವಕ್ಕಾಗಿ ೫) ಅವನ ಮೇಲೆ ವಿಶ್ವಾಸವಿಡಲಿರುವವರಿಗೆ ಮಾದರಿಯಾಗಿ ತೋರಿಸುವ ಹಾಗೆ, ಇದಕ್ಕೋಸ್ಕರವೇ ಕರುಣಿಸಲ್ಪಟ್ಟೆನು. ೧೭. ಆದರೆ ನಿತ್ಯ ಅರಸನೂ, ನಿರ್ಯನೂ, ಅದೃಶ್ಯನೂ, ಒಬ್ಬನೇ ಜ್ಞಾನಿಯೂ, ಆಗಿರುವ ದೇವರಿಗೆ ೬) ಯುಗ ಯುಗಾಂತರಗಳಿಗೂ ಘನವೂ ಮಹಿಮೆಯೂ ಆಗಲಿ. ಆಮೆನ್.

೧. ಅಂದರೆ, ಕೇಳುವವರೆಲ್ಲರು ಪೂರ್ಣ ಹೃದಯದಿಂದ ವಿಶ್ವಾಸಿಸ ತಕ್ಕ.

೨. ಈ ಪ್ರಕಾರವಾಗಿ ಪೌಲನು ಎಲ್ಲಾ ಪಾಪಿಗಳನ್ನು, ಅತಿ ಮಹಾ ಪಾತಕಿಗಳನ್ನು ಸಹ, ರಕ್ಷಿಸುವದಕ್ಕೆ ಮನಸ್ಸುಳ್ಳ ಕ್ರಿಸ್ತ ಯೇಸುವಿನ ಕೃಪೆಯನ್ನು ಸ್ವಾನುಭವಕ್ಕೆ ಅನುಕೂಲವಾಗಿ ವರ್ಣಿಸುತ್ತಾನೆ.

೩. ಪೆಚ್ಚಾದ ಕೃಪೆಯನ್ನು ಪೂರಾಂತಿ, ಪೆಚ್ಚಾಗಿ ಆತ್ಮಬಾಧಿತರಾದ ಚಕ್ತುರು ತಮ್ಮ ಪಾಪಗಳನ್ನು ಅಧಿಕವಾಗಿ ತಿಳಿದು, ಅಸಂಖ್ಯಿಸಿ, ದ್ವೇಷ ಮಾಡಿ, ಸಮಯೋಚಿತವಾಗಿ ವಿಜ್ಞಾಪಿಸುತ್ತಾರೆ.

೪. ಕ್ರಿಸ್ತನು ತನಗೆ ಅತ್ಯಂತ ಕರುಣೆಯನ್ನು ಮಾಡಿ, ಎಲ್ಲರಿಗೂ ಅಮಿತವಾದ ತಾಳ್ಮೆಯ ಮಾದ್ರಿಯನ್ನು ತೋರಿಸಿದ್ದಾನೆಂದು, ಪೌಲನು ಪೇಳುವದು ಯುಕ್ತವೇ. ಈ ಸ್ಥಳದ ವಿಷಯವಾಗಿ ಔಗುಸ್ತೀನನು ಬರೆದದ್ದೇನಂದರೆ: ಕರ್ತನು ತಾಳ್ಮೆಯನ್ನು ಕುರಿಯಾಗ ಮಾಡಿ, ಕುರಿಯನ್ನು ಕುರುಬನಾಗ ಮಾಡಿದ

ಪ್ರಾರ್ಥನೆಯು ಮುಖ್ಯ ಕಾರ್ಯ.

೧ ತಿಮೊ. ೧, ೧೪—೨, ೧.

ಮೇಲೆ, ಎಲ್ಲರು: ಏನು? ಪೌಲನು ಸ್ವಸ್ಥವಾದನಲ್ಲ? ನಾನು ನಿರಾಶೆಯಾಗುವದು ಯಾಕೆ? ಎಂದು ಹೇಳ ತಕ್ಕದ್ದು. ಮಹಾ ವೈದ್ಯನು ಒಂದು ಊರಿಗೆ ಬಂದರೆ, ಆಶಾಭಂಗನಾದ ಒಬ್ಬ ರೋಗಿಯನ್ನು ಹುಡುಕಿ ಸ್ವಸ್ಥ ಮಾಡುತ್ತಾನೆ. ಆ ರೋಗಿಗೆ ವೈದ್ಯ ಸಂಚಾವನೆ ಕಾಡುವದಕ್ಕೆ ಅನುಕೂಲವಿಲ್ಲದಿದ್ದರೂ, ವೈದ್ಯನು ಕೀರ್ತಿಯೇ ವಿದ್ಯಾಫಲವಾಗಿ ತಿಳಿಯುವದರಿಂದ ಸಂಚಾವನೆಯನ್ನು ಅಪೇಕ್ಷಿಸುವದಿಲ್ಲ.

೫. ಅದು ವಿಶ್ವಾಸಮೂಲವಾಗಿ ಪ್ರಾಪ್ತವಾಗುವದು. ರೋಮಾ. ೧, ೧೭.

೬. ಈ ಸ್ತೋತ್ರದ ಅಭಿಪ್ರಾಯವೇನಂದರೆ: ನಿತ್ಯ ಅರಸನು ಎಂಬುವದು, ದೇವರು ಲೌಕಿಕಗಳ ಆಡಳತೆಯನ್ನೆಲ್ಲಾ ಆದಿಯಿಂದ ನಡಿಸುತ್ತಾ ಬಂದು, ತನ್ನ ರಾಜ್ಯಾಲೋಚನೆಯನ್ನು ಅನಾದಿಯಿಂದ ನಿರ್ಣೈಸಿದ್ದಾನೆಂಬದನ್ನು; ನಿರ್ಲಯನು, ಆತನು ನಿರಂತರ ಸಹಾಯಕನಾಗಿರುವದನ್ನು; ಅದೃಶ್ಯನು, ಆತನ ಐಕ್ಯವು ಜ್ಞಾನಮಾರ್ಗದಿಂದಲ್ಲ ವಿಶ್ವಾಸಮಾರ್ಗದಿಂದಲೇ ಪ್ರಾಪ್ತವಾಗುವದನ್ನು; ಒಬ್ಬನೇ ಜ್ಞಾನಿಯು, ಆತನು ಅಮಿತ ಆಶೀರ್ವಾದ ಕೃಪೆಯ ಉಪಾಯ ಉಳ್ಳವನೆಂಬದನ್ನು ಸೂಚಿಸುತ್ತದೆ.

ಶುದ್ಧ ಬೋಧನಾಸ್ಥೈರ್ಯಾರ್ಥವಾದ ಬೋಧನೆಯು. ಸ. ೧, ೧೪—೨೦.
೧೫ನೆ ವಚನದಲ್ಲಿ ನಿಂತ ತಾತ್ಪರ್ಯದ ಪೂರ್ವಾರ್ಧಿಯು.

೧೪. ಮಗನಾದ ತಿಮೊಥೆಯನ್ಕೆ, ನಿನ್ನಮ್ಕೆಲೆ ಮುಂಚೆ ಹೇಳಿದ ಪ್ರವಾದನೆಗಳ ೧) ಪ್ರಕಾರ, ಅವುಗಳಿಂದ ಒಳ್ಳೇ ಯುದ್ಧವನ್ನು ನಡಿಸ ಬೇಕೆಂಬ ಈ ಆಜ್ಞೆಯನ್ನು ನಿನಗೆ ಒಪ್ಪಿಸುತ್ತೇನೆ. ೧೯. ವಿಶ್ವಾಸವನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ೨) ಕೈಕೊಂಡಿರು; ಇದನ್ನು ಕೆಲವರು ೩) ಲಕ್ಷ್ಯ ಮಾಡದೆ, ವಿಶ್ವಾಸದ ವಿಷಯದಲ್ಲಿ ನೌಕ್ಕಂಗವಾದರು ೪). ೨೦. ಅವರಲ್ಲಿ ಹುಮೆನಾಯನೂ, ಅಲೆಕ್ಸಂದ್ರನೂ ೫), ಇದ್ದಾರೆ; ಅವರು ದೂಷಿಸದಿರ ೬) ಕಲಿಸು ಕೊಳ್ಳುವ ಹಾಗೆ, ಅವರನ್ನು ಸೈತಾನನಿಗೆ ಒಪ್ಪಿಸಿದ್ದೇನೆ.

೧. ಇದಕ್ಕೆ ಸ. ೪, ೧೪; ೬, ೧೨. ಅಪಾ. ಕ್ರಿ. ೧೧, ೨೭ಲ್ಲಿ ಬರದದ್ದನ್ನು ಸರಿ ನೋಡಿದರೆ, ಮಾತಿನ ಅಭಿಪ್ರಾಯ ತಾನಾರುವದು.

೨. ಈ ಎರಡು ಇಲ್ಲದೆ, ಸತ್ಯದ ವಿಷಯವಾದ ಯುದ್ಧದಲ್ಲಿ ಶೇರ ಬಾರದು.

೩. ಅಬದ್ಧ ಬೋಧಕರು ದೇವರಕೃಪೆಯನ್ನು ಪರಿತ್ಯಾಗ ಮಾಡಿ, ಮನಸ್ಸಾಕ್ಷಿಯನ್ನು ಸಹಾ ಉದಾಸೀನ ಮಾಡುತ್ತಾರೆ.

೪. ಸತ್ಯದ ತಿಳುವಿಕೆಯೂ ದೇವವಾಕ್ಯಾನುಸಾರವಾದ ನಡತೆಯೂ ಹೇಡವಿಲ್ಲದೆ ಜೋಡಾಗಿವೆ.

೫. ೨ ತಿಮೊ. ೨, ೧೭.

೬. ಅಬದ್ಧ ಬೋಧಕರ ಬೋಧನೆಯು, ದೇವದೂಷಣೆಯಂತೆ, ಅಪಾಸ್ತಲನಿಗೆ ಅಸಹ್ಯವಾದದ್ದು.

ಕ್ರೈಸ್ತ ಮುಖ್ಯಕಾರ್ಯವಾದ ಪರಾರ್ಥಪ್ರಾರ್ಥನೆಯು. ಸಹಾಪ್ರಾರ್ಥನಾಕ್ರಮವು. ಸ. ೨.

೧. ಆದದರಿಂದ ಎಲ್ಲಾದರ ಮೊದಲು ೧), ಬಿನ್ನಹ ಪ್ರಾರ್ಥನೆ ೨) ವಿಜ್ಞಾಪನೆ ೩) ಸ್ತೋತ್ರಗಳನ್ನು ೪), ಎಲ್ಲಾ ಮನುಷ್ಯರಿಗಾಗಿ ಸಲ್ಲಿಸಲವೂ ೫), ಅರಸರಿಗಾಗಿ ಸಲ್ಲಿಸಲವೂ ೬),

೧ ತಿಮೊ. ೨, ೨—೭.

ಅಧಿಕಾರದಲ್ಲಿರುವವರೆಲ್ಲರಿಗಾಶ್ಚಸರವು, ೨. ನಾವು ಸಕಲ ಭಕ್ತಿಯಿಂದಲೂ, ಮರ್ಯಾದೆಯಿಂದಲೂ [೭], ಶಾಂತವಾಗಿಯೂ, ಸಮಾಧಾನವಾಗಿಯೂ, ಕಾಲಕ್ಷೇಪ ಮಾಡುವ ಹಾಗೆ, ಮಾಡ ಬೇಕೆಂದು ಬುದ್ಧಿ ಹೇಳುತ್ತೇನೆ. ೩. ಯಾಕಂದರೆ ಸಕಲ ಮನುಷ್ಯರು ರಕ್ಷಿಸಲ್ಪಟ್ಟು, ಸತ್ಯದ ತಿಳುವಿಕೆಗೆ [೯] ಬರಬೇಚ್ಛಿಸುವ [೮] ಳ. ನಮ್ಮ ರಕ್ಷಕನಾದ [೧೦] ದೇವರ ಮುಂದೆ ಇದು ಒಳ್ಳೇದೂ ಸಮರ್ಪಕವೂ ಆಗಿದೆ.

೧. ಈ ಮಾತಿನಿಂದ ತಾನೇರುವಂಥಾದ್ದೇನಂದರೆ: ಸ್ವಕೀಯ ರಕ್ಷಣೆಗಾಗಿಯೂ, ಪರರ ರಕ್ಷಣೆಗಾಗಿಯೂ ಮಾಡುವ ಪ್ರಾರ್ಥನೆಯೂ ಪರಾರ್ಥಪ್ರಾರ್ಥನೆಯೂ, ಇವು ಕ್ರೈಸ್ತಧರ್ಮದಲ್ಲಿ ಮುಖ್ಯ ಸಾಧನವಾಗಿವೆ.

೨. ಬಿನ್ನಪವೆಂಬದು ಪ್ರತ್ಯೇಕವಾಗಿ ಬೇಡುವದನ್ನು, ಪ್ರಾರ್ಥನೆಯಂಬದು ಸಾಮಾನ್ಯವಾಗಿ ಬೇಡುವದನ್ನು ಸೂಚಿಸುತ್ತದೆ.

೩. ವಿಜ್ಞಾಪನೆಯು, ಅಂದರೆ: ತಮಗಾಗಿ ಪ್ರಾರ್ಥನೆ ಮಾಡದೆ ಇರುವವರಿಗಾಶ್ಚಸರ ವಿಶ್ವಾಸಿಯಾದ ಭಕ್ತರು ಮಾಡುವ ಪ್ರಾರ್ಥನೆಯು.

೪. ದೇವರು ಪರರಿಗೂ ತಾನೇರಿಸುವ ಕೃಪೆಯ ನಿಮಿತ್ತವಾಗಿಯೂ ಸಭೆಯವರು ಸ್ತೋತ್ರ ಮಾಡತಕ್ಕದ್ದು.

೫. ದೇವರು ಯೆಹೂದರಾಗಲಿ, ಪರಜನರಾಗಲಿ, ಒಳ್ಳೆಯವರಾಗಲಿ, ಕೆಟ್ಟವರಾಗಲಿ, ಎಲ್ಲರಿಗೂ ಪ್ರೀತಿಯುಳ್ಳ ತಂದೆಯಾಗಿದ್ದಾನೆಂದೂ, ಎಲ್ಲರಿಗೂ ರಕ್ಷಣೆಯು ಆವಶ್ಯಕವಾದದ್ದೆಂದೂ, ಎಲ್ಲರಿಗೂ ರಕ್ಷಣೆಯು ಸಿದ್ಧವಾಗಿದೆಯೆಂದೂ, ಯೇಸು ಕ್ರಿಸ್ತನು ಲೋಕಕ್ಕೆ ಬರುವದಕ್ಕಿಂತ ಮುಂಚೆ ಮನುಷ್ಯರಲ್ಲಿ ಯಾರೂ ತಿಳಿದು ಕಾಳ್ಳಲಿಲ್ಲ. ಎಫೆಸದಲ್ಲಿದ್ದ ಅಬದ್ಧಬೋಧಕರು ಉಪದೇಶವು ಸರ್ವಲೋಕ ರಕ್ಷಣೋಪಾಸುವಾರ್ತೆಗೆ ವಿರೋಧವಾದದರಿಂದ ಪೌಲನು ಅಧಿಕ ಆಸಕ್ತಿಯಿಂದ ಅವರಿಗೆ ಪ್ರತಿತರ್ಕ ಮಾಡುತ್ತಾನೆ.

೬. ಯೆರೂಸಲೇಮಿನಲ್ಲಿದ್ದ ದೇವಾಲಯದಲ್ಲಿ ಯೆಹೂದರು ತಮ್ಮನ್ನು ಆಳಿ ಕಾಳ್ಳುವ ರೋಮಾಯ ಮಹಾರಾಜರಿಗಾಗಿ ಪ್ರಾರ್ಥನೆ ಮಾಡುತ್ತಾ ಬಂದರು. ಆದರೆ ಯೆರೂಸಲೇಮವು ಹಾಳಾಗುವದಕ್ಕೆ ಸ್ವಲ್ಪ ಕಾಲದ ಮುಂಚೆ ಮಿಥಿ ಮೀರುವ ಪರಜನದ್ವೇಷದಿಂದ ಅದನ್ನು ನಿಲ್ಲಿಸಿದರು. ಅದು ನಿಂತನಂತರ ತಾವೇ ನಾಶವಾದರು.

೭. ಭಕ್ತಿ, ಮರ್ಯಾದೆ, ಶಾಂತಿ, ಸಮಾಧಾನ ಇವು ಕ್ರೈಸ್ತಧರ್ಮಕ್ಕೆ ಪೂರ್ಣ ಅನುಕೂಲವಾಗಿವೆ.

೮. ಎಲ್ಲರಿಗಾಗಿ ಸಭೆಯಲ್ಲಿ ಪ್ರಾರ್ಥನೆಯಾಗ ಬೇಕೆಂಬದರ ಎರಡನೆ ಕಾರಣವನ್ನು ಈಗ ಹೇಳುತ್ತಾನೆ.

೯. ದೇವರು, ಎಲ್ಲಾ ಮನುಷ್ಯರಿಗೆ ರಕ್ಷಣೆಯು ಪ್ರಾಪ್ತವಾಗ ಬೇಕೆಂದು ಇಚ್ಛೈಸುವದರಿಂದ, ಆತನಿಗೆ ವಿಧೇಯರಾದ ಭಕ್ತರು ಎಲ್ಲರಿಗಾಗಿ ಪ್ರಾರ್ಥನೆ ಮಾಡುತ್ತಾರೆ.

೧೦. ಸತ್ಯದ ತಿಳುವಿಕೆಯು ಎಲ್ಲರಿಗೆ ನೇಮಕವಾದ ರಕ್ಷಣೆಯ ಮಾರ್ಗದ್ವಾರವಾಗಿದೆ.

೫. ಯಾಕಂದರೆ [೧], ದೇವರು ಒಬ್ಬನು; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನು, ಮನುಷ್ಯನಾದ ಕ್ರಿಸ್ತ ಯೇಸುವೇ. ೬. ಇವನು ತನ್ನನ್ನು ಎಲ್ಲರಿಗಾಶ್ಚಸರ ಓಲಾಗಿ ಕೊಟ್ಟಿದ್ದಾನೆ; ಇದು ತಕ್ಕ ಕಾಲಗಳಲ್ಲಿ [೨] ಸಾಕ್ಷಿಯಾಗಿರುವದು. ೭. ಅದಕ್ಕೆ ನಾನು ಸಾರುವವನಾಗಿಯೂ, ಅಪೌಸ್ತಲನಾಗಿಯೂ, ವಿಶ್ವಾಸದಲ್ಲಿಯೂ ಸತ್ಯದಲ್ಲಿಯೂ ಜನಾಂಗಗಳ ಬೋಧಕನಾಗಿಯೂ [೩], ನೇಮಿಸಲ್ಪಟ್ಟೆನು. ಸುಳ್ಳಾಡದೆ ಕ್ರಿಸ್ತನಲ್ಲಿ ಸತ್ಯವನ್ನು ಹೇಳುತ್ತೇನೆ.

ಪ್ರಾರ್ಥನೆಯು ಮುಖ್ಯ ಕಾರ್ಯ.

೧ ತಿಮೊ. ೨, ೪—೧೫.

೧. ಎಲ್ಲರೂ ರಕ್ಷಣೆಯನ್ನು ಪಡೆಯಬೇಕಾದ ಕಾರಣವೇನಂದರೆ: ಎಲ್ಲಾ ಜನಾಂಗಗಳಿಗೆ ಕರ್ತನಾಗಿರುವ ದೇವರು ಒಬ್ಬನೇ, ಮತ್ತು ಮನುಷ್ಯರನ್ನು ರಕ್ಷಿಸುವ ಉದ್ದಿಶ್ಯವಾಗಿ ಮನುಷ್ಯನಾಗಿ ಹುಟ್ಟಿ, ಎಲ್ಲರಿಗಾಗಿ ಸತ್ತು, ಎಲ್ಲರ ಪಾಪಶಾಪವಿಮೋಚನೆಗಾಗಿ ಸ್ವಕೀಯ ರಕ್ತಧಾರೆ ಮಾಡಿದ ಮತ್ತಾ. ೨೦, ೨೮. ಲೂಕ ರಕ್ಷಕನು ಒಬ್ಬನೇ.

೨. ದೇವರು ಆಯಾ ಜನಾಂಗಕ್ಕೂ ಆಯಾ ಮನುಷ್ಯನಿಗೂ ನೇಮಕ ಮಾಡಿದ ಕಾಲಗಳು ಬೇರೆ ಬೇರೆಯಾಗಿವೆ.

೩. ತಾನು ಪರಜನರ ಅಪಾಸ್ತೊಲನಾಗಿದ್ದೇನೆಂಬುದನ್ನು ಅಬದ್ಧಬೋಧಕರಿಗೆ ವಿರೋಧವಾಗಿ ಇಷ್ಟು ದೃಢವಾಗಿ ಸ್ಥಾಪಿಸುತ್ತಾನೆ.

೪. ಹಾಗಾದರೆ೧), ಗಂಡಸರು ಎಲ್ಲಾ ಸ್ಥಳಗಳಲ್ಲಿ೨) ಕೋಪವೂ ಸಂಶಯವೂ ಇಲ್ಲದೆ, ಪವಿತ್ರವಾದ೩) ಕೈಗಳನ್ನು ಎತ್ತಿ, ಪ್ರಾರ್ಥಿಸ ಬೇಕೆಂದಿದ್ದೇನೆ—೯. ಅದೇ ಪ್ರಕಾರ ಹೆಂಗಸರು ಶಕ್ತ ಉಡುವು ಉಟ್ಟು ಕೊಂಡು, ೧೦. ಬಿನ್ನ ರತ್ನ ಅಮೂಲ್ಯ ವಸ್ತ್ರಗಳಿಂದಲ್ಲ, ಭಕ್ತಿಯನ್ನು ಅರಿಕೆ ಮಾಡುವ ಹೆಂಗಸರಿಗೆ ಶಕ್ತ ಹಾಗೆ ಸತ್‌ಕ್ರಿಯೆಗಳಿಂದಲ್ಕೇ, ನಾಚಿಕೆಯೂ ಮನಸ್ಸಂಯಮವೂ ಉಳ್ಳವರಾಗಿ, ತಮ್ಮನ್ನು ಅಲಂಕರಿಸಿ ಕೊಳ್ಳಲಿ೪). ೧೧. ಹೆಂಗಸು ಸಮಾಧಾನದಿಂದ ಪೂರ್ಣ ವಿಧೇಯಳಾಗಿ೫) ಕಲಿತು ಕೊಳ್ಳಲಿ. ೧೨. ಆದರೆ ಬೋಧಿಸಲೂ, ಗಂಡನನ್ನು ಸ್ವಾಧೀನ ಮಾಡಿ ಕೊಳ್ಳಲೂ, ಅಲ್ಲ, ಸಮಾಧಾನದಿಂದಿರ ಬೇಕೆಂದು ಹೆಂಗಸಿಗೆ ಆಜ್ಞಾಪಿಸುತ್ತೇನೆ. ೧೩. ಯಾಕಂದರೆ ಆದಮನು ಮೊದಲು ರೂಪಿಸಲ್ಪಟ್ಟನು; ಆ ಮೇಲೆ ಹವ್ವಳು. ೧೪. ಮತ್ತು ಆದಮನು ಮೋಸ ಹೋಗಲಿಲ್ಲ೬); ಆದರೆ ಹೆಂಗಸು ಮೋಸ ಹೋಗಿ ಮೀರುವವಳಾದಳು. ೧೫. ಆದರೆ ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ, ಶುದ್ಧತೆಯಲ್ಲಿಯೂ, ಸಮಾಧಾನಸ್ಥ ಸಹಿತವಾಗಿ, ನೆಲೆಯಾಗಿದ್ದರೆ, ಮಕ್ಕಳನ್ನು ಹೆರುವದರಿಂದ ರಕ್ಷಿಸಲ್ಪಡುವಳು.

೧. ಪೌಲನು ಒನೆ ಪಚನದಲ್ಲಿ ಸ್ಥಾಪಿಸಿದ ಅಪಾಸ್ತೊಲಾಧಿಕಾರದಿಂದಲೇ ಈಗ ಸಭೆಗೆ ಆಜ್ಞಾಪಿಸುತ್ತಾನೆ.

೨. ಅಂದರೆ, ಎಲ್ಲಾ ಸಭಾಸಮಾಗಮನಸ್ಥಳಗಳಲ್ಲಿ.

೩. ಈ ಮಾತು ಸಂಯಮವನ್ನು ಸೂಚಿಸುತ್ತದೆ. ಸಾರ್ಥಕವಾದ ಪ್ರಾರ್ಥನೆಗೆ ವಿರೋಧವಾದ ಮೂರು ದೋಷ ಯಾವದಂದರೆ: ಸಹೋದರರಿಗೆ ಪ್ರತಿಕೂಲವಾದ ಕೋಪವು, ದೇವವಾಕ್ಯಕ್ಕೆ ಪ್ರತಿಕೂಲವಾದ ಸಂಶಯವು, ಪರಿಶುದ್ಧಾತ್ಮಕ್ಕೆ ಪ್ರತಿಕೂಲವಾದ ಅಶುದ್ಧತ್ವವು.

೪. ಹೆಂಗಸರು ತಮ್ಮನ್ನು ಅಲಂಕರಿಸಿ ಕೊಳ್ಳುವ ಉದ್ದಿಶ್ಯವೇನಂದರೆ: ಪರಪುರುಷರಿಗೆ ಕಾಣಿಸ ಬೇಕೆಂಬುವದು. ಈ ಮನಸ್ಸಿನಿಂದ ಸಭಾಸ್ಥಳಕ್ಕೆ ಬಂದು, ಪ್ರಾರ್ಥಿಸುವದು ವ್ಯರ್ಥವಾಗಿದೆ.

೫. ಹೆಂಡತಿಯು ಗಂಡನಿಗೆ ಅಧೀನಳಾಗಿರ ಬೇಕೆಂಬ ಕಟ್ಟಳೆಗೆ ಕಾರಣವೆರಡು: ೧) ಹೆಂಗಸು ಗಂಡಸಿನಿಂದ ಹುಟ್ಟಿದ್ದು. ೨) ಹೆಂಗಸು ಮೊದಲು ಪಾಪದಲ್ಲಿ ಬಿದ್ದದ್ದು.

೬. ಆದಮನು ಹವ್ವಳ ಪ್ರಕಾರ ಸೈತಾನನ ಮಾತನ್ನು ನಂಬಿ, ವಂಚನೆಯಿಂದಲೇ ಪಾಪದಲ್ಲಿ ಬೀಳಲಿಲ್ಲ; ಅವನು ಹೆಂಡತಿಯ ಮಾತಿಗೆ ಕಿವಿ ಕಾಟ್ಟಿದ್ದರಿಂದ ಕೆಟ್ಟನು.

ಅಧ್ಯಕ್ಷ ಸಹಾಸೇವಕರ ಉದ್ಯೋಗವು. ಮೂಲಬೋಧನೆಯು. ಸ. ೩.

೧. ಒಬ್ಬನು ಅಧ್ಯಕ್ಷತ್ವವನ್ನು ಅಪೇಕ್ಷಿಸಿದರೆ, ಒಳ್ಳೇ ಕೆಲಸವನ್ನು[೧] ಅಪೇಕ್ಷಿಸುತ್ತಾನೆಂಬ ಮಾತು ನಿಜವೇ. ೨. ಹಾಗಾದರೆ, ಅಧ್ಯಕ್ಷನು ದೋಷವಿಲ್ಲದವನೂ, ಒಬ್ಬಳ್ಳೇ ಹೆಂಡತಿಯ ಗಂಡನೂ[೨], ಎಚ್ಚರಿಕೆಯುಳ್ಳವನೂ[೩], ಮನಃಸ್ಥಿರನೂ, ಮರ್ಯಾದಸ್ಥನೂ, ಅತಿಥಿಪ್ರಿಯನೂ, ಬೋಧಿಸ ಶಕ್ತನೂ[೪], ಆಗಿರಬೇಕು. ೩. ಮದ್ಯಪಾನಿಯೂ, ಹೊಡದಾಡುವವನೂ, ಲೋಭಿಯೂ, ಆಗಿರದೆ, ಶಾಂತನೂ, ಜಗಳವಿಲ್ಲದವನೂ, ದ್ರವ್ಯಾಶೆಯಿಲ್ಲದವನೂ, ಸ್ವಂತ ಮನೆಯನ್ನು ಚನ್ನಾಗಿ ಆಳುವವನೂ, ೪. ಎಲ್ಲಾ ಘನದಿಂದ ಮಕ್ಕಳನ್ನು ವಿಧೇಯರಾಗಿ ನಡಿಸುವವನೂ, ಆಗಿರಬೇಕು[೫]. ೫. ಯಾಕಂದರೆ, ಒಬ್ಬನು ಸ್ವಂತ ಮನೆಯನ್ನು ಆಳ ತಿಳಿಯದಿದ್ದರೆ, ದೇವರ ಸಭೆಯ ವಿಚಾರಣೆ ಹ್ಯಾಗೆ ಮಾಡುವನು. ೬. ಅವನು ಒಂದು ವೇಳೆ ಗರ್ವಪಟ್ಟು, ಪಿಶಾಚನ ಆಜ್ಞೆಯಾಳಗೆ ಬೀಳದ ಹಾಗೆ, ಹೊಸಬನಾಗಿರಬಾರದು[೬]. ೭. ಮತ್ತು ಪಿಶಾಚನ ನಿಂದೆಯಲ್ಲಿಯೂ ಉರುಲಿನಲ್ಲಿಯೂ ಬೀಳದ ಹಾಗೆ[೭], ಅವನು ಹೊರಗಿನವರಿಂದ ಒಳ್ಳೇ ಸಾಕ್ಷಿ ಹೊಂದಿದವನಾಗಿರಬೇಕು.

೧. ಅಂದರೆ, ಸಭೆಯಲ್ಲಿ ಘನವಾಗಿಯೂ ಪ್ರಯೋಜನವಾಗಿಯೂ ಇರುವ ಕೆಲಸವನ್ನು. ಸಭೆಯ ಉದ್ಯೋಗಸ್ಥರಿಗೆ ಆರಂಭ ಕಾಲದಲ್ಲಿ ಸಂಬಳವಿತ್ತೆಂದು ತೋರುವದಿಲ್ಲ. ಆದ್ದರಿಂದ ಇಂಥಾ ಅಭಿಪ್ರಾಯವನ್ನು ಇಲ್ಲಿ ಮಾಡ ಬಾರದು.

೨. ಪ್ರಥಮ ಕಾಲದಲ್ಲಿ ಮುಂಚೆ ಯೆಹೂದರು ಇಲ್ಲವೆ ಪರಜನರು ಆಗಿದ್ದವರು, ಎರಡು ಮೂರು ಹೆಂಡರನ್ನು ಮದುವೇ ಮಾಡಿ ಕಾಂಡರಾದರೆ, ಸಭೆಯಲ್ಲಿ ಶೇರುವಾಗ, ಹೆಚ್ಚಾದ ಹೆಂಡರನ್ನು ಪರಿತ್ಯಾಗ ಮಾಡಲಿಲ್ಲವೆಂದು, ಇಲ್ಲಿ ತೋರುತ್ತದೆ. ಮದುವೆ ಮಾಡಿ ಕಾಂಡವರನ್ನು ಮನೆಯಿಂದ ಪರಿಹಾರ ಮಾಡಿಸುವದು ಅನ್ಯಾಯವಾಗುತ್ತಿತ್ತು. ಆದರೆ ಬಹು ಪತ್ನಿತ್ವ ಪದ್ಧತಿಯು ದೇವರ ಆದಿನಿಯಮಕ್ಕೂ ಸುವಾರ್ತಾಗುಣಕ್ಕೂ ವಿಪರೀತವಾಗಿರುವದರಿಂದ, ಅದು ಕ್ರೈಸ್ತಸಭೆಯಲ್ಲಿ ನಿಲ್ಲ ಬೇಕಾಯಿತು. ಆದ್ದರಿಂದ ನಡತೆಯಲ್ಲೆಲ್ಲಾ ಸಭೆಯವರಿಗೆ ಮಾದ್ರಿಯಾಗ ತಕ್ಕ ಅಧ್ಯಕ್ಷಿಗಳು ಏಕ ವಿವಾಹಿಗಳಾಗಿರುವದು ಅವಶ್ಯವಾಗಿತ್ತು. ಪ್ರತಿ ಕ್ರೈಸ್ತರಾದ ರಾಜಮಿಯರು ಅಧ್ಯಕ್ಷಿಯು ಏಕ ಪತ್ನಿಧರ್ಮದವನಾಗಿರ ಬೇಕೆಂಬ ಪೌಲನ ಕಟ್ಟಳೆಗೆ ಪ್ರತಿಯಾಗಿ, ಅವನು ನಿರ್ವಿವಾಹಿಯಾಗಿರ ಬೇಕೆಂಬ ಪದ್ಧತಿಯನ್ನು (ದಾಡ್ಡ ಗ್ರೆಗಾರ್ಯನೆಂಬ ಪಾಪನು ೧೦೬೩) ಸ್ಥಾಪಿಸಿ, ನಾನಾ ಪ್ರಕಾರದ ಜಾರತ್ವಕ್ಕೆ ಮಾರ್ಗ ಮಾಡಿದರು.

೩. ಗ್ರೀಕಪಲ್ಲಿ ಅಮತ್ತನೆಂದು ಬರದದೆ.

೪. ಬೋಧನೆಯು ಅವನ ಮುಖ್ಯ ಕೆಲಸವಾಗಿ ತೋರುವದಿಲ್ಲ; ಆದಾಗ್ಯೂ ಬೋಧನೆಯು ಅವನ ಉದ್ಯೋಗದಲ್ಲಿ ಶೇರಿದ್ದರಿಂದ, ಅಧ್ಯಕ್ಷಿಯು ಬೋಧಾ ಶೀಲನಾಗಿರ ಬೇಕೆಂದು, ಪೌಲನು ಬರೆಯುತ್ತಾನೆ. ವಿದ್ವಾಂಸರಲ್ಲಿ ಅನೇಕರು ಬೋಧಿಸ ಬಲ್ಲವರಲ್ಲ; ಅಂಥವರು ಅಧ್ಯಕ್ಷಿಯಾಗ ಕೂಡದು.

೫. ಇಲ್ಲಿಯೂ ೫ನೆ ವಚನದಲ್ಲಿಯೂ, ಸಭೆಯನ್ನು ಆಳುವದು ಅಧ್ಯಕ್ಷಿಗಳ ಮುಖ್ಯ ಕೆಲಸವಾಗಿತ್ತೆಂದು ಕಾಣುತ್ತದೆ.

೬. ಹೊಸಾಸ್ತಾಗಿ ಸಂವರ್ತಿತರಾದ ಜನರುಗಳಿಗೆ

ಮೂಲಬ್ಯಾಧನೆ.

೧ ತಿಮೊ. ೩, ೪—೧೬.

ಗರ್ವದ ಕಂಟಿಕ ಪೆಚ್ಚಾಗಿದೆ; ಯಾಕಂದರೆ: ಪಾಸ್ತಾಗಿ ಪಾಸಾಂದಿದ ಆತ್ಮದ ಬಲವು ಸ್ವಕೀಯವಾದದ್ದೆಂದು ನೆನಸಿ, ತಮ್ಮ ಸ್ವಭಾವದ ಪಾಪವನ್ನು ಸತ್ಯದ ಪ್ರಕಾರ ತಿಳಿಯದಿದ್ದರೆ, ಬೇಗ ಮೋಸ ಪಾಸಾಗುವರು. ಸೈತಾನನು ಗರ್ವದಿಂದಲೇ ದ್ರಾಪು ಮಾಡಿ ಶಾಪಕ್ಕೆ ಒಳಗಾದನೆಂದು, ಇಲ್ಲಿ ಚಾಡೆಯಾಗಿ ಸೂಚಿತವಾಗಿದೆ.

೭ ಅಧ್ಯಕ್ಷಿಯು ಸಭೆಯವರಲ್ಲಿಯೂ ಪಾಸಾರಗಿನವರಲ್ಲಿಯೂ ನಿದರ್ಶನೀಯನಾಗಿ ಕಾಣಿಸಿ ಕಾಳ್ಳ ಬೇಕು. ಅವನಲ್ಲಿ ಯಾವದಾಂದಾದರೂ ದುರ್ನಡತೆಯಿದ್ದರೆ ಸೈತಾನನು ಅದನ್ನು ಪ್ರಕಟ ಮಾಡಿ, ನಿಂದೆಯನ್ನು ಎಬ್ಬಿಸದೆ ಇರುವದಿಲ್ಲ.

೮. ಅದ್ಯೋ ಪ್ರಕಾರ ನ್ಯೋವಕರು ಎರಡು ನಾಲಿಗೆಯುಳ್ಳವರೂ, ಬಹಳ ದ್ರಾಕ್ಷೇರಸದ ಅಭಿಪ್ರಾಸವುಳ್ಳವರೂ, ಅನ್ಯಾಯಿಗಳೂ, ಆಗಿರದೆ, ೯. ಘನವುಳ್ಳವರಾಗಿದ್ದು, ವಿಶ್ವಾಸದ ಮರ್ಮವು ಶುದ್ಧ ಮನಸ್ಸಾಕ್ಷಿಯಲ್ಲಿ ೧) ಉಂಟಾದವರಾಗಿರ ಬೇಕು. ೧೦. ಇವರು ಸಹ ಮೊದಲು ಪರೀಕ್ಷಿಸಲ್ಪಡಲಿ; ಶರುವಾಯ ನಿರಪರಾಧಿಗಳಾಗಿದ್ದರೆ, ನ್ಯೋವಕರಾಗಲಿ. ೧೧. ಅದ್ಯೋ ಪ್ರಕಾರ ಅವರ ಹೆಂಡತಿಯರು ೨) ಚಾಡಿಗಾರ್ತಿಯರಾಗಿರದೆ, ಘನವುಳ್ಳವರೂ, ಎಚ್ಚರಿಕೆಯುಳ್ಳವರೂ, ಎಲ್ಲಾದರಲ್ಲಿ ನಂಬಿಗೆಯುಳ್ಳವರೂ, ಆಗಿರಲಿ. ೧೨. ನ್ಯೋವಕರು ಒಬ್ಬಳ್ಳೋ ಹೆಂಡತಿಯ ಗಂಡರೂ, ಮಕ್ಕಳನ್ನೂ ಸ್ವಂತ ಮನೆಗಳನ್ನೂ ಚನ್ನಾಗಿ ಆಳುವವರೂ, ಆಗಿರಲಿ. ೧೩. ಯಾಕಂದರೆ ಚನ್ನಾಗಿ ನ್ಯೋವೆ ಮಾಡಿದವರು ೩) ತಮಗೆ ಒಳ್ಳೋ ಬಿರುದನ್ನೂ, ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಲ್ಲಿ ಬಹು ಧೈರ್ಯವನ್ನೂ, ಸಂಪಾದಿಸಿ ಕೊಳ್ಳುತ್ತಾರೆ. ೧೪. ನಿನ್ನ ಹತ್ತರ ಬೇಗ ಬರುವದಕ್ಕೆ ನಿರೀಕ್ಷಿಸಿ, ನಾನು ತಡ ಮಾಡಿದರೆ ೪), ೧೫. ಸತ್ಯದ ಸ್ತಂಭವೂ ಆಧಾರವೂ ಆಗಿರುವ, ಜೀವವುಳ್ಳ ದೇವರ ಸಭೆಯಾದ, ದೇವರ ಮನೆಯಲ್ಲಿ ಹಾಗೆ ನಡೆದು ಕೊಳ್ಳ ಬೇಕೆಂದು, ನೀನು ತಿಳಿದು ಕೊಳ್ಳುವ ಹಾಗೆ, ಇವುಗಳನ್ನು ನಿನಗೆ ಬರೆಯುತ್ತೇನೆ ೫).

೧. ಅಶುದ್ಧ ಮನಸ್ಸಿನಲ್ಲಿ ವಿಶ್ವಾಸವು ಪುಟ್ಟುವದಿಲ್ಲ. ಯಾಥಾರ್ಥ್ಯವಿಲ್ಲದವನು, ದೇವರ ಪ್ರೇರಿತ ವಾಕ್ಯವು ಯಥಾರ್ಥವಾದದ್ದೆಂದು, ನಂಬಲಾರನು.

೨. ಸಭಾಸೇವಕರ ಹೆಂಡತಿಯರು ರಾಗಿಷ್ಠರ ಪರಾಮರಿಕೆ ಮುಂತಾದ ಪ್ರೇರಿತ ವೃತ್ತಿಗಳನ್ನು ಮಾಡುವ ಉದ್ಯೋಗವನ್ನು ವಾಡಿಕೆಯಾಗಿ ನಡಿಸುತ್ತಾ ಇದ್ದರು.

೩. ಸಭಾಸೇವಕಾದ್ಯೋಗದಲ್ಲಿ ಪರೀಕ್ಷಿತರು ಅಧ್ಯಕ್ಷಿಗಳಾದರೆಂದು, ಇಲ್ಲಿ ತಾತ್ಪರ್ಯವಿದೆ.

೪. ಅಂದರೆ, ಮಕೆದಾನ್ಯ ದೇಶದ ಸಂಚಾರದಲ್ಲಿ.

೫. ಇಲ್ಲಿ ಬರದದ್ದನ್ನೆಲ್ಲಾ ಅಪಾಸ್ತಲನು ಮುಂಚೆ ತಿಮೊಥೆಯನಿಗೆ ಬಾಯಿಂದ ಹೇಳಿದನೆಂದು ನೆನಸ ಬೇಕು. ಆದರೆ ಈಗ ಅವನಿಗೆ ಜ್ಞಾಪಕಾರ್ಥವಾಗಿಯೂ, ಆಜ್ಞಾಪತ್ರಿಕೆಯಾಗಿಯೂ, ಇದನ್ನು ಬರೆಯುತ್ತಾನೆ.

೧೬. ಭಕ್ತಿಯ ಮರ್ಮವು ೧) ಸಂದೇಹವಿಲ್ಲದೆ ೨) ದಾಡ್ಡದಾಗಿದೆ—ದೇವರು ಮಾಂಸದಲ್ಲಿ ೩) ಪ್ರತ್ಯಕ್ಷವಾಗಿ, ಆತ್ಮದಲ್ಲಿ ನೀತಿನಿರ್ಣಯ ಪಟ್ಟು ೪), ದೂತರಿಗೆ ಕಾ

ಗೊಸಿ ಕಾಂಡು ೫), ಜನಾಂಗಗಳಲ್ಲಿ ಸಾರಲ್ಪಟ್ಟು ೬), ಲೋಕದಲ್ಲಿ ವಿಶ್ವಾಸಿಸಲ್ಪಟ್ಟು ೭), ಮಹಿಮೆಯಲ್ಲಿ ಎತ್ತಲ್ಪಟ್ಟನು ೮).

೧. ಅಂದರೆ, ಚಕ್ರಿಗೆ ಪರಿಶುದ್ಧಾತ್ಮದ ಮುಖಾಂತರ ಪ್ರಕಟವಾಗುವ ಸುವಾರ್ತೆಯ ಅಭಿಪ್ರಾಯವು.

೨. ನಿಜಸಖೆಯವರೆಲ್ಲರು ಸಂಶಯವಿಲ್ಲದೆ ತಿಳಿದು, ಲೋಕದಲ್ಲಿ ವಿಜ್ಞಾಪಿಸುವ ಪ್ರಕಾರ, ದಾಡ್ಡದು.

೩. ದೇವರ ಮಗನು ಮನುಷ್ಯನಾಗಿ ಪುಟ್ಟಿದನು.

೪. ಯೇಸು ಕ್ರಿಸ್ತನು ಸತ್ತ ಬಳಿಕ, ಮೂರನೆ ದಿವಸದಲ್ಲಿ ಪರಿಶುದ್ಧಾತ್ಮದ ತ್ರಾಣದಿಂದ ಪುನರುತ್ಥಾನವಾಗಿ, ದೇವಪುತ್ರಮಹಿಮೆಯುಳ್ಳವನಾಗಿ ಕಾಣಿಸಿ ಕಾಂಡನು.

೫. ಅಂದರೆ, ಕ್ರಿಸ್ತದೂತರಾದ ಅಪಾಸ್ತಲರಿಗೆ ಪುನರುತ್ಥಾನದಿವಸದಿಂದ ದಿವಾರೋಹಣದಿವಸದ ವರೆಗೂ ಯೇಸುವು ಆಗಾಗ್ಗೆ ಶಿಷ್ಯರ ಬಳಿಗೆ ಬಂದು, ಸಂಪೂರ್ಣವಾದ ದೇವರಾಜ್ಯವಾಕ್ಯೋಪದೇಶವನ್ನು ಅವರಿಗೆಕಾಟ್ಟು, ಸರ್ವ ಲೋಕದಲ್ಲಿ ನಡಿಸ ತಕ್ಕ ಉದ್ಯೋಗಕ್ಕಾಗಿ ಅವರನ್ನು ಸಿದ್ಧಮಾಡುತ್ತಾ ಇದ್ದನು.

೬. ಕ್ರಿಸ್ತನು ತಮಗೂ ರಕ್ಷಕನಾಗಿದ್ದಾನೆಂಬುವದು ಪರಜನರಾದ ಕ್ರೈಸ್ತರಿಗೆ ಮುಖ್ಯವಾದ ಒಂದು ವಾಕ್ಯವಾಗಿದೆ. ಎಫೆ. ೩, ೪—೧೧.

೭. ಇದು ಸಫಲ ಸುವಾರ್ತೆಯ ಸತ್ಯತ್ವಕ್ಕೆ ಬಲವಾದ ಪ್ರಮಾಣವಾಗಿದ್ದು, ಮುಂದಣ ಜಯಕ್ಕೆ ಮುಂಗಾಳಾಗಿದೆ.

೮. ಈ ಮಾತು ದಿವಾರೋಹಣವನ್ನು ಸೂಚಿಸಿ, ಇಲ್ಲಿ ಬರದಿರುವ ಕ್ರೈಸ್ತಬೋಧನಾಸಾರವನ್ನು ಮುಗಿಸುತ್ತದೆ.

ಈ ವಚನದಲ್ಲಿ ಕ್ರೈಸ್ತಬೋಧನಾಸಾರಾಂಶವು ಶೇರಿಯದೆ. ಅದರ ಅಭಿಪ್ರಾಯವನ್ನು ಸರಿಯಾಗಿ ತಿಳಿದು ಕೊಂಡವನು ದೇವರ ಅನ್ಯೋನ್ಯದಲ್ಲಿ ಶೇರಿ, ದೇವರ ಪ್ರೀತಿಯನ್ನನುಭವಿಸಿ, ದೇವರ ಜ್ಞಾನವನ್ನು ತಿಳಿದು, ನೂತನ ಲೋಕದಲ್ಲಿ ಪ್ರವೇಶಿಸಿದವನಂತೆ, ಎಲ್ಲಾ ಹೊಸದೆಂದು ಗ್ರಹಿಸಿ, ಆನಂದವಾಗಿದ್ದಾನೆ. ಈ ವಾಕ್ಯವನ್ನು ಘಟ್ಟಿಯಾಗಿ ಹಿಡಿದು ಕೊಳ್ಳುವ ಭಕ್ತನು ಸೈತಾನನ ವಂಚನೆಯಿಂದಲಾದರೂ, ಅಬದ್ಧಬೋಧಕರ ವಂಚನೆಗಳಿಂದಲಾದರೂ, ಸೋತು ಹೋಗುವದಿಲ್ಲ.

ಅಬದ್ಧಬೋಧಕರು. ಸ. ೪, ೧—೧೧.

೧. ಈವರೆ ಆತ್ಮವು ಸ್ಪಷ್ಟವಾಗಿ ಹೇಳುವದೇನಂದರೆ—ಕಡೆ ಕಾಲಗಳಲ್ಲಿ ಕೆಲವರು ೧) ವಿಶ್ವಾಸದಿಂದ ತಿರುಗಿ ಬಿದ್ದು, ಮೋಸಗೊಳಿಸುವ ಆತ್ಮಗಳಿಗೂ, ದೆವ್ವಗಳ ಬೋಧನೆಗಳಿಗೂ ೨), ತಿವಿ ಕಾಡುವರು. ೨. ಅವರು ಕಪಟದಿಂದ ಸುಳ್ಳಾಡುವವರೂ, ಸ್ವಂತ ಮನಸ್ಸಾಕ್ಷಿಯಲ್ಲಿ ಬರೆ ಹಾಕಲ್ಪಟ್ಟವರೂ, ಮದುವೆಗೆ ಅಡ್ಡಿ ಮಾಡುವವರೂ, ೩. ಸತ್ಯವನ್ನು ತಿಳಿದ ವಿಶ್ವಾಸಿಗಳಿಂದ ಸ್ತೋತ್ರದ ಸಂಗಡ ಅನುಭವಿಸಲ್ಪಡುವದಕ್ಕೆ, ದೇವರು ಸೃಷ್ಟಿಸಿದ ಆಹಾರಗಳನ್ನು ಬಿಟ್ಟು ಬಿಡ ಬೇಕೆಂಬುವವರೂ ೩), ಆಗಿರುವರು.

೧. ಸ್ವಲ್ಪ ಮಂದಿಯಲ್ಲ, ಲಕ್ಷಾಂತರ ಮನುಷ್ಯರು ಇಲ್ಲಿ ಹೇಳಿರುವ ಮೋಸಗಳಿಂದ ಕೆಟ್ಟು ಹೋಗುತ್ತಾರೆ. ಆದರೆ ದೇವರ ವಾಕ್ಯವು ಅವರನ್ನು ಗಣ್ಯಮಾಡುವದಿಲ್ಲ. ಅದೇ ಪ್ರಕಾರ ಪೌಲನು, ಅರಿಯ

ಅಬದ್ಧಬ್ಯಾಧಕರು.

೧೫ನೆಯ ಅ. ೪, ೪—೮.

ದಲ್ಲಿ ಸತ್ತು ಪುನಾದ ಲಕ್ಷಾಂತರ ಇಸ್ರಯೇಲನವರ ವಿಷಯವಾಗಿ ೧ ಕಾರಿ. ೧೦ನಲ್ಲಿ ಮಾತಾಡಿ, ಕೆಲವರು ಬಿದ್ದರೆಂದು ಪೇಳುತ್ತಾನೆ.

೨. ಅಸತ್ಯ ಬಾಧನೆಗಳನ್ನು ಮನುಷ್ಯರಲ್ಲಿ ಪುಟ್ಟಿಸುವವರು ತಿಳಿಯದೆ ದುರಾತ್ಮಗಳಿಗೂ ದೆವ್ವಗಳಿಗೂ ಪರವಶರಾಗಿ, ಸೈತಾನನ ವೃತ್ತಿಯನ್ನು ಲೋಕದಲ್ಲಿ ನಡಿಸುತ್ತಾರೆ.

೩. ಪೌಲನು ಇಲ್ಲಿ ಸೂಚಿಸುವ ಲಕ್ಷಣಗಳು ಪ್ರಶಿಕ್ಷಿಸ್ತರಾಮಾಯಸಖೆಯ ಪದ್ಧತಿ ಬಾಧನೆಗಳಿಗೆ ಒಪ್ಪುತ್ತವೆ.

೪. ಈದರೆ ದೇವರು ಸೃಷ್ಟಿಸಿದ್ದೆಲ್ಲಾ ಒಳ್ಳೇದು; ಮತ್ತು ಸ್ತೋತ್ರ ಮಾಡಿ ತೆಗೆದು ಕೊಂಡರೆ, ಏನಾದರೂ ಬಿಸಾಡ ತಕ್ಕದಲ್ಲ. ೫. ಯಾಕಂದರೆ ಅದು ದೇವರ ವಾಕ್ಯದಿಂದಲೂ ವಿಜ್ಞಾಪನೆಯಿಂದಲೂ ಶುದ್ಧವಾಗುತ್ತದೆ.

೧. ಅಂದರೆ, ದೇವರು ಮನುಷ್ಯನ ಅನುಚಾರಕ್ಕೆ ಉಂಟು ಮಾಡಿದ ಆಹಾರವೆಲ್ಲಾ ತನ್ನಲ್ಲಿ ನಿರ್ದೋಷವಾದದ್ದು.

೨. ಮನುಷ್ಯನು ಎಲ್ಲಾನ್ನು ಕೃತಜ್ಞತೆಯಿಂದ ಅನುಭವಿಸ ತಕ್ಕದ್ದು.

೩. ಮೋಶೆಯ ನಿಯಮದಲ್ಲಿ ಬೇರೆ ಬೇರೆ ಆಹಾರಗಳು ಅನನುಜ್ಞಾತವಾಗಿದ್ದವು. ಈ ಕಟ್ಟಳೆಗಳನ್ನು ದೇವರು ಇಸ್ರಯೇಲನವರಿಗೆ ಆತ್ಮಶುದ್ಧೀಕರಣ ಸಹಾಯಕ್ಕಾಗಿ ಕಾಟ್ಟನು. ಹೊಸ ಒಡಂಬಡಿಕೆಯಲ್ಲಿ ಭಕ್ತರಿಗೆ ಪರಿಶುದ್ಧಾತ್ಮವು ಪ್ರಾಪ್ತವಾಗುವದರಿಂದಲೂ, ಸುವಾರ್ತೆಯು ಸರ್ವಲೋಕದಲ್ಲಿಯೂ ವಿಸ್ತಾರವಾಗ ಬೇಕಾಗುವದರಿಂದಲೂ, ಈ ಕಟ್ಟಳೆಗಳು ಅನಾವಶ್ಯಕವಾಗಿವೆ.

೪. ಕರ್ತನು ತಾನು ಅದನ್ನೆಲ್ಲಾ ಶುದ್ಧ ಮಾಡಿದನು. ಮತ್ತಾ. ೧೫, ೧೦. ಅಪಾ. ಕ್ರಿ. ೧೦. ೧೫. ಮತ್ತು ಭಕ್ತನು ಅನುದಿನವು ಮಾಡುವ ಪ್ರಾರ್ಥನೆಯಿಂದ ತಾನು ಅನುಭವಿಸುವದನ್ನೆಲ್ಲಾ ಶುದ್ಧ ಮಾಡುತ್ತಾನೆ.

೬. ಇವುಗಳನ್ನು ಸಹೋದರರಿಗೆ ಹೇಳಿ ಕೊಟ್ಟರೆ, ನೀನು ಹಿಂಬಾಲಿಸಿದ ಸುಬೋಧನೆ ವಿಶ್ವಾಸಗಳ ವಾಕ್ಯಗಳಿಂದ ಪೋಷಿಸಲ್ಪಟ್ಟು, ಯೇಸು ಕ್ರಿಸ್ತನ ಒಳ್ಳೇ ಸೇವಕನಾಗಿರುವಿ. ೭. ಆದರೆ ಅಪಕ್ರಷ್ಟವಾದ ಅಜ್ಜಿ ಕಥೆಗಳನ್ನು ತಳ್ಳಿ ಹಾಕಿ, ಭಕ್ತಿಯ ಅಭ್ಯಾಸ ಮಾಡಿಕೋ. ೮. ಯಾಕಂದರೆ, ಶರೀರದ ಅಭ್ಯಾಸವು ಕೊಂಚಕ್ಕೆ ಪ್ರಯೋಜನವಾದದ್ದು. ಆದರೆ ಭಕ್ತಿಯು ಎಲ್ಲಕ್ಕೂ ಪ್ರಯೋಜನವಾಗಿದೆ. ಅದಕ್ಕೆ ಇಹ ಪರ ಜೀವಗಳ ವಾಗ್ದತ್ತವು ಉಂಟು.

೧. ಅಂದರೆ, ತೃಣಶಾಧನಾತರ್ಕಗಳಲ್ಲಿಯೂ, ಲೌಕಜ್ಞಾನಾಭ್ಯಾಸದಲ್ಲಿಯೂ, ಶೇರಿ ಪೋತ್ತು ಕಳಿಯುವದು ಕ್ರೈಸ್ತನಿಗೆ ಅಯೋಗ್ಯವಾಗಿದೆ. ನಿಜ ಜ್ಞಾನ ಮೂಲವಾದ ದೇವವಾಕ್ಯಾಭ್ಯಾಸವೂ ಭಕ್ತಿಸಾಧನೆಯೂ ಅವನಿಗೆ ಮುಖ್ಯವಾಗಿವೆ.

೨. ಉಪವಾಸನಿಯಮಗಳೂ, ನಿರ್ವಿವಾಹಿತ ಪದ್ಧತಿಯೂ, ಬೇರೆ ಬೇರೆ ಬಹಿರಾಚರಣೆಗಳ ವೃತ್ತಿಯೂ, ಆಗಾಗೈ ಸ್ವಲ್ಪ ಉಪಯೋಗವಾಗಿದ್ದರೂ, ಮನುಷ್ಯನಿಗೆ ಆತ್ಮಶುದ್ಧಿಯನ್ನು ಉಂಟು ಮಾಡುವದಿಲ್ಲ.

೩. ಭಕ್ತನು ಇಹದಲ್ಲಿ ದೇವರಿಗೆ ವಿಧೇಯನಾಗಿಯೂ, ಮನುಷ್ಯರಲ್ಲಿ ಪರೋಪಕಾರಿಯಾಗಿಯೂ, ಆತ್ಮಶರೀರನಾಶಕಪಾಪರಹಿತನಾಗಿಯೂ ಬದುಕಿ, ಸೌಖ್ಯವಾಗಿದ್ದಾನೆ. ದೇವರ ಆಶೀರ್ವಾದವು ಆತನ ಮಕ್ಕಳ ಮೇಲೆ ಇರುವದು. ಮತ್ತು ಪರದಲ್ಲಿ ಭಕ್ತನು ಮಹಿಮಾರಾಜ್ಯಬಾಧ್ಯನಾಗಿದ್ದಾನೆ.

೯೦೮ ಅಪಾ. ಚ. ೩. ಪೌಲ್ಯೆವ. ಅಪಾಸ್ತಲರ ಅಂಶ್ಪ್ರಪ್ರವ್ಯ ೩.

೧ತಿಮೊ. ೪, ೯—೧೬.

೯. ೫ ವಾಕ್ಪವು ನಂಬಿಕೆಯಾಗಿಯೂ, ಎಲ್ಲಾ ಅಂಗೀಕಾರಕ್ಕೆ ಯೋಗ್ಪವಾಗಿಯೂ, ೪ರುತ್ತದೆ. ೧೦. ಯಾಕಂದರೆ ಮನುಷ್ಪರೆಲ್ಲರಿಗೂ, ಮುಖ್ಪವಾಗಿ ೧) ವಿಶ್ವಾಸಿಸುವವರಿಗೂ, ರಕ್ಷಕನಾಗಿರುವ ಜೀವವುಳ್ಳ ದೇವರಲ್ಲಿ ನಿರೀಕ್ಷಿಸಿರುವದರಿಂದ, ಅದಕ್ಕೋಸ್ಕರ ಕಷ್ಟವನ್ನೂ ನಿಂದೆಯನ್ನೂ ಪಡುತ್ತೇವೆ. ೧೧. ೫ವುಗಳನ್ನು ಆಜ್ಞಾಪಿಸಿ ಬೋಧಿಸು ೨).

೧. ದೇವರು ಎಲ್ಲಾ ಮನುಷ್ಯರು ರಕ್ಷಿಸಲ್ಪಡಬೇಕೆಂದಿಚ್ಛೈಸಿ, ಎಲ್ಲರ ರಕ್ಷಣೆಗಾಗಿ ತನ್ನ ಮಗನನ್ನು ಮರಣಕ್ಕೆ ಒಪ್ಪಿಸಿ, ಎಲ್ಲರ ಪಾಪವನ್ನು ಪರಿಹರಿಸಿದ್ದಾನೆ. ಆದರೆ ದೇವರ ಕೃಪಾಲೋಚನೆಯು ವಿಶ್ವಾಸಿಸುವವರಲ್ಲಿ ಮಾತ್ರ ನೆರವೇರುತ್ತದೆ.

೨. ಅಂದರೆ, ೫ಪರ ಜೀವವಾಗ್ದತ್ತವುಳ್ಳ ಕ್ರಿಯಲ್ಲಿ ವಿಶ್ವಾಸದಿಂದ ದೃಢವಾಗಿರ ಬೇಕೆಂದು, ಬಲವಾದ ಆಸಕ್ತಿಯಿಂದ ಸಖೆಯವರನ್ನು ಎಚ್ಚರಿಸುತ್ತಾ ೪ರು.

ಅಪಾಸ್ತಲನು ತಿಮೊಥೆಯನಿಗೆ ಪೋಳುವ ವಿಶೇಷವಾದ ಬುದ್ಧಿವಾದವು. ಸ. ಳ, ೧೨—೧೬.

೧೨. ನಿನ್ನ ಯೌವನವನ್ನು ಯಾರೂ ಅಲಕ್ಷ್ಯ ಮಾಡದಿರಲಿ ೧). ಆದರೆ ಮಾತಿನಲ್ಲಿಯೂ, ನಡತೆಯಲ್ಲಿಯೂ, ಪ್ರೀತಿಯಲ್ಲಿಯೂ, ಆತ್ಮದಲ್ಲಿಯೂ ೨), ವಿಶ್ವಾಸದಲ್ಲಿಯೂ, ನಿರ್ಮಲತ್ವದಲ್ಲಿಯೂ, ವಿಶ್ವಾಸಿಗಳಿಗೆ ಮಾದರಿಯಾಗಿರು. ೧೩. ಓದುವದರಲ್ಲಿಯೂ ೩), ಬುದ್ಧಿ ಹೇಳುವದರಲ್ಲಿಯೂ, ಬೋಧನೆಯಲ್ಲಿಯೂ, ನಾನು ಬರುವ ಪರ್ಯಂತ ಜಾಗ್ರತೆಯಾಗಿರು. ೧೪. ಹಿರಿಯರ ಸಖೆಯ ಕೈಯಿಡುವಿಕೆಯ ಸಂಗಡ ಪ್ರವಾದನೆಯಿಂದ ನಿನಗೆ ಕಾಡಲ್ಪಟ್ಟಿಂಥ, ನಿನ್ನಲ್ಲಿರುವ ವರವನ್ನು ಅಲಕ್ಷ್ಯ ಮಾಡ ಬೇಡ ೪). ೧೫. ನಿನ್ನ ಅಭಿವೃದ್ಧಿಯು ಎಲ್ಲವುಗಳಲ್ಲಿ ತೋರುವ ಹಾಗೆ, ೫ವುಗಳನ್ನು ಚಿಂತಿಸು, ೫ವುಗಳಲ್ಲಿ ೪ರು. ೧೬. ನಿನಗೂ ಬೋಧನೆಗೂ ೫) ನೋಡಿಕೊ; ೫ವುಗಳಲ್ಲಿ ನೆಲೆಯಾಗಿರು. ಯಾಕಂದರೆ ೫ದನ್ನು ಮಾಡಿ, ನಿನ್ನನ್ನೂ, ನಿನ್ನಂತೆ ಕೇಳುವವರನ್ನೂ, ರಕ್ಷಿಸುವಿ.

೧. ತಿಮೊಥೆಯನು ಈ ಪತ್ರಿಕೆಯನ್ನು ಬರೆಯುವದಾಗ, ಬೆಚ್ಚು ಕವಿಮೆ ೩೫, ೩೬ ವರುಷದವನಾಗಿದ್ದನು. ಆದರೆ ೬೦ ವರುಷ ದಾಟಿದ ಪೌಲನಿಗೆ ಆಗಾಗ್ಗೆ ವಿರೋಧಿಗಳಾಗಿದ್ದ ಜನರು ದೀನಭಾವವುಳ್ಳ ತಿಮೊಥೆಯನಿಗೆ ಎದುರು ಮಾತಿನಿಂದ ಉಪದ್ರವ ಕಾಡದ ಹಾಗೆ, ೫ವನಿಗೆ ಅಧಿಕವಾದ ಆತ್ಮಪೌರುಷವೂ, ಗಾಂಭೀರ್ಯವೂ ಆವಶ್ಯಕವಾಗಿದ್ದವು.

೨. ಅಂದರೆ, ಆತ್ಮದ ಬಲದಿಂದಲೂ, ಆಸಕ್ತಿಯಿಂದಲೂ, ನಡಿಸುವ ಉದ್ಯೋಗ ವೃತ್ತಿಯಲ್ಲಿ.

೩. ಹಳೆ ಒಡಂಬಡಿಕೆಯ ಗ್ರಂಥಗಳನ್ನು ಸಭಾಸ್ಥಾನಗಳಲ್ಲಿ ಓದಿ ಪೋಳುವದರಲ್ಲಿ.

೪. ಅಂದರೆ, ಅದನ್ನು ಧೈರ್ಯವಾಗಿಯೂ, ಆಸಕ್ತಿಯಿಂದಲೂ, ಸಂತೋಷದಿಂದಲೂ ಪ್ರಯೋಗಿಸಬೇಕು.

೫. ನಿನ್ನ ನಡತೆಯಲ್ಲಿಯೂ, ಬೋಧಕನಾದ್ಯೋಗವೃತ್ತಿಯಲ್ಲಿಯೂ ದೋಷವು ಕಾಣದ ಹಾಗೆ, ಜಾಗರೂಕನಾಗಿರ ಬೇಕು. ನಡತೆಯೂ ಬೋಧನೆಯೂ ಸಮ್ಮತವಾಗಿರ ಬೇಕು.

ಸಭಾಪಾಲನ.

೧ ತಿಮೊ. ೫, ೧—೮.

ಹಿರಿಯರು ವಿಧವೆಗಳು ಇವರ ವಿಷಯವಾದ ಬೋಧನೆಯು. ಸ. ೫.

ಸಭೆಯವರನ್ನು ಶಿಕ್ಷಿಸುವದರ ವಿಷಯ. ವ. ೧. ೨.

೧. ಹಿರಿಯನನ್ನುಗದರಿಸದೆ ೧), ಅವನಿಗೆ ತಂದೆಗೆಂದು ಬುದ್ಧಿಹೇಳು; ೨. ಕಿರಿಯರಿಗೆ ಸಹೋದರರಿಗೆಂದು ೨); ಹಿರಿಯ ಹೆಂಗಸರಿಗೆ ತಾಯಿಗಳಿಗೆಂದು, ಕಿರಿಯ ಹೆಂಗಸರಿಗೆ ಸಹೋದರಿಗಳಿಗೆಂದು, ಎಲ್ಲಾ ನಿರ್ಮಲತ್ವದಲ್ಲಿಯೇ ೩).

೧. ಅಂದರೆ, ನಂಬಿಸಿ ಎಚ್ಚರಿಸ ಬಾರದು. ಕ್ರೈಸ್ತ ಸಭಾಬೋಧಕರಿಗೆ ಮರ್ಯಾದಸ್ಥಾಚರಣೆಯು ಅತ್ಯಂತಾವಶ್ಯಕವಾದದ್ದು.

೨. ಇಲ್ಲಿ ಲಾಘವವಾದ ಬುದ್ಧಿ ಹೇಳು ಎಂಬದನ್ನು ತಿಳಿದು ಕಾಳ್ಳ ಬೇಕು.

೩. ನಿಜವಾದ ಕ್ರೈಸ್ತಸಭೆಯವರು ಒಂದೇ ಮನೆತನದವರಿಗೆ ಇರುವ ಧರ್ಮದ ಪ್ರಕಾರ ನಡದು ಕಾಳ್ಳ ಬೇಕು. ಹಿರಿಯರನ್ನು ತಂದೆ ತಾಯಿಗಳಂತೆ ಸನ್ಮಾನಿಸುವದು, ಕಿರಿಯರನ್ನು ಮಕ್ಕಳಂತೆ ಪ್ರೀತಿ ಮಾಡುವದು, ಸಮಪ್ರಾಯದವರನ್ನು ಒಡಹುಟ್ಟಿದವರೆಂದು ಲಕ್ಷಿಸುವದು, ಅಬಲೆಯರಿಗೆ ವಿಶೇಷ ಮಾನ ಮರ್ಯಾದೆ ತೋರಿಸುವದು ಮುಂತಾದ ಕಟ್ಟಳೆಗಳು ಕ್ರೈಸ್ತಧರ್ಮಕ್ಕೆ ಸಹಜವಾಗಿವೆ.

ವಿಧವೆಗಳ ಪರಾಮರಿಕೆಯು. ವ. ೩—೮.

೩. ನಿಜ ವಿಧವೆಗಳಾದ ೧) ವಿಧವೆಗಳನ್ನು ಸನ್ಮಾನಿಸು. ೪. ಆದರೆ ಒಬ್ಬ ವಿಧವೆಗೆ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ ಇದ್ದರೆ, ಅವರು ಮೊದಲು ಸ್ವಂತ ಮನೆಯಲ್ಲಿ ಭಕ್ತರಾಗಿರಲೂ, ಹೆತ್ತವರಿಗೆ ಪ್ರತ್ಯುಪಕಾರ ಮಾಡಲೂ, ಕಲಿಸು ಕಾಳ್ಳಲಿ. ಯಾಕಂದರೆ ದೇವರ ಮುಂದೆ ಇದ್ದೇ ಒಳ್ಳೇದಾಗಿಯೂ ಸಮರ್ಪಕವಾಗಿಯೂ ಅದೆ. ೫. ಆದರೆ ಒಂಟಿಗಳಾಗಿರುವ ೨) ನಿಜ ವಿಧವೆಯು ದೇವರಲ್ಲಿ ನಿರೀಕ್ಷಿಸಿ, ರಾತ್ರಿ ಹಗಲು ಪ್ರಾರ್ಥನೆಗಳಲ್ಲಿಯೂ ಬಿನ್ನಹಗಳಲ್ಲಿಯೂ ನೆಲೆಯಾಗಿರುವಳು. ೬. ಆದರೆ ಭೋಗಸ್ತಳು ಬದುಕುವಾಗ್ಗೆ, ಸತ್ತವಳಾಗಿದ್ದಾಳೆ. ೭. ಅವರು ಅಪರಾಧವಿಲ್ಲದೆ ಇರುವ ಹಾಗೆ, ಇವುಗಳನ್ನು ಆಜ್ಞಾಪಿಸು. ೮. ಆದರೆ ಒಬ್ಬನು ಸ್ವಂತ ಜನರಿಗಾಗ್ಯಾಸ್ತರವೂ, ಮುಖ್ಯವಾಗಿ ಮನೆಯವರಿಗಾಗ್ಯಾಸ್ತರವೂ, ಮುಂಬಿಂಕಿಸದಿದ್ದರೆ ೩), ವಿಶ್ವಾಸವನ್ನು ಅಲ್ಲಗಳದು ಅವಿಶ್ವಾಸಿಗಿಂತ ೪) ಕಡೆಯಾಗಿದ್ದಾನೆ.

೧. ಸಭಾಯಕರು ಯಾರು ಇಲ್ಲದಂಥ, ವಿಧವೆಗಳಲ್ಲಿ ಇರ ತಕ್ಕ ಗುಣವುಳ್ಳಂಥ, ವಿಧವೆಗಳೇ ನಿಜ ವಿಧವೆಗಳೆಂದು, ಪೌಲನು ಹೇಳುತ್ತಾನೆ. ದೇವರು ಅಂಥವರನ್ನು ವಿಶೇಷವಾಗಿ ಲಕ್ಷಿಸುತ್ತಾನೆಂದು, ದೇವರ ವಾಕ್ಯದ ಅನೇಕ ಸ್ಥಳಗಳಲ್ಲಿ ಬರದದೆ. ಚಕ್ಕರು ಸಭಾ ಅಂಥವರನ್ನು ವಿಶೇಷವಾಗಿ ಸನ್ಮಾನಿಸುವರು. ಹಿಂದು ದೇಶದಲ್ಲಿ ವಿಧವೆಯಂಬದು ದೂಷಣಾವಾಕ್ಯವಾಗಿರುವದು ಮಹಾ ಅನ್ಯಾಯವಾಗಿ

೧ ತಿಮೊ. ೫, ೯—೧೬.

ದೆ. ಆದರೆ ಈ ವಿಷಯವಾದ ಧರ್ಮವೆಲ್ಲಾ ಹಿಂದು ದೇಶದಲ್ಲಿ ಕೆಟ್ಟು ಹೋಗಿದೆ.

೨. ಮಕ್ಕಳು ಮೊಮ್ಮಕ್ಕಳು ಅಳಿಯರು ಮುಂತಾದವರಿಲ್ಲದ.

೩. ಅಂದರೆ, ತಕ್ಕ ಕಾಲದಲ್ಲಿ ತಕ್ಕ ರೀತಿಯಿಂದ ಕೈಲಾಗುವ ಮಟ್ಟಿಗೂ ಸಹಾಯ ಮಾಡದಿದ್ದರೆ.

೪. ಪರಜನರು ಕೈಕಾಳ್ಳುವ ಸ್ವಾಭಾವಿಕಧರ್ಮವನ್ನು ಮೀರುವವರು ಅವರಿಗಿಂತ ಕಡೆಯಾಗಿದ್ದಾರೆ.

ಸಚಾರಿತ್ರ್ಯಯೋಗ್ಯ ವಿಧವೆಗಳು ಯಾರು? ವ. ೯—೧೬.

೯. ಅರವತ್ತು ವರುಷಕ್ಕೆ ಕಡಿಮೆಯಾಗಿರದವಳೂ, ಒಬ್ಬ ಗಂಡನ ಹೆಂಡತಿಯಾಗಿದ್ದವಳೂ, ೧೦. ಸತ್‌ಕ್ರಿಯೆಗಳಿಂದ ಹೆಸರು ಗಾಂಡವಳೂ, ಮಕ್ಕಳನ್ನು ಸಾಕಿ, ಆತಿಥ್ಯ ಮಾಡಿ, ಪರಿಶುದ್ಧರ ಕಾಲುಗಳನ್ನು ತೊಳೆದು ೧), ಉಪದ್ರವ ಪಡುವವರಿಗೆ ೨) ಸಹಾಯಕಳಾಗಿ, ಎಲ್ಲಾ ಸತ್‌ಕ್ರಿಯೆಗಳನ್ನು ಅನುಸರಿಸಿದವಳೂ ಆಗಿದ್ದರೆ, ವಿಧವೆಗಳ ಲೆಕ್ಕದಲ್ಲಿ ಶ್ರೇಸಿಸಲ್ಪಡಲಿ. ೧೧. ಆದರೆ ಕಡಿಮೆ ಪ್ರಾಯದ ವಿಧವೆಗಳಂತು ಬೇಡೆಂದು ಬಿಡು; ಯಾಕಂದರೆ ಅವರು ಕ್ರಿಸ್ತನಿಗೆ ವಿರೋಧವಾಗಿ ಶುಂಟರಾದಾಗ, ಮದುವೆ ಮಾಡಿಕೊಳ್ಳ ಇಚ್ಛೆಪಡುತ್ತಾರೆ. ೧೨. ಮೊದಲಿನ ವಿಶ್ವಾಸವನ್ನು ೩) ಬಿಟ್ಟದರಿಂದ ಆಜ್ಞೆನಿರ್ಣಯ ಅವರಿಗೆ ಉಂಟು. ೧೩. ಅದಲ್ಲದೆ ಅವರು ಮೈಗಳ್ಳರಾಗಿ, ಮನೆ ಮನೆ ತಿರುಗ ಕಲಿತು ಕೊಳ್ಳುತ್ತಾರೆ; ಮೈಗಳ್ಳರಾಗಿರುವದಲ್ಲದೆ, ಹರಟೆಯವರಾಗಿಯೂ, ತಾಂದರೆಗಾರರಾಗಿಯೂ, ಬಾರದವುಗಳನ್ನು ಮಾತಾಡುವವರಾಗಿಯೂ, ಇದ್ದಾರೆ. ೧೪. ಆದದರಿಂದ ಯೌವನ ಸ್ತ್ರೀಯರು ಮದುವೆ ಮಾಡಿಕೊಂಡು, ಮಕ್ಕಳನ್ನು ಹೆತ್ತು, ಮನ್ಯೇಕೆಲಸ ನಡಿಸಿ, ನಿಂದಿಸುವದಕ್ಕೆ ಯಾವ ಆಸ್ಪದವನ್ನಾದರೂ ಎದುರಾಳಿಗೆ ೪) ಕೊಡದೆ ಇರ ಇಚ್ಛೆಪಡುತ್ತೇನೆ. ೧೫. ಯಾಕಂದರೆ ಇಗಲೇ ಕೆಲವರು ಸೈತಾನನ ಹಿಂದೆ ಮೋಸ ಹೋಗಿದ್ದಾರೆ. ೧೬. ಒಬ್ಬ ವಿಶ್ವಾಸಿಸುವವನಿಗಾದರೂ ವಿಶ್ವಾಸಿಸುವವಳಿಗಾದರೂ ವಿಧವೆಯರಿದ್ದರೆ, ಸಭೆಯು ಭಾರ ಪಡದೆ ೫), ನಿಜ ವಿಧವೆಯರನ್ನು ಸಂರಕ್ಷಿಸುವ ಹಾಗೆ, ಅವರು ಅವರನ್ನು ಸಂರಕ್ಷಿಸಲಿ.

೧. ದಣಿದ ಪಥಿಕರಾದ ಭಕ್ತರನ್ನು ಅತಿಥಿಗಳಾಗಿ ಸತ್ಕರಿಸಿ.

೨. ದಾರಿದ್ರ್ಯದಿಂದಲಾದರೂ, ರೋಗಗಳಿಂದಲಾದರೂ, ಹಿಂಸಾ ಶ್ರಮದಿಂದಲಾದರೂ ಪೀಡಿತರಾದ ಭಕ್ತರಿಗೆ.

೩. ಸಚಾರಿತ್ರ್ಯಯೋಗದಲ್ಲಿ ಶೇರಿ, ಅದಕ್ಕೆ ನಿರ್ವಿವಾಹಿಯಾಗಿರುತ್ತೇನೆಂದು, ಕಾಟ್ಟಿ ಭಾಷೆಯನ್ನು ಮೀರುವದು ಮಹಾ ದೋಷವು.

೪. ಈ ಮಾತು ಮನುಷ್ಯರನ್ನು ಸೂಚಿಸುತ್ತದಾ, ೧೫ನೆ ವಚನದಲ್ಲಿ ಸ್ಪಷ್ಟವಾಗಿ ಬರದಿರುವ ಸೈತಾನನನ್ನು ಸೂಚಿಸುತ್ತದಾ ಎಂಬುವದರ ನಿಶ್ಚಯವು

ಸಭಾಪಾಲನ.

೧ ತಿಮೊ. ೫, ೧೭—೨೧.

ತಾರುವದಿಲ್ಲ. ಆದರೆ ಚಿಂತೆಯಿಲ್ಲ; ಎದುರಾಳಿಗಳೆಲ್ಲಾ ಒಂದೇ ಪಕ್ಷದವರು.

೫. ಒಂದು ಮನೆಯಲ್ಲಿರುವ ವಿಧವೆಗಳನ್ನು ಸಹೆಯ ಪರಾಮರಿಕೆಗೆ ಒಪ್ಪಿಸಿ, ಕೈಲಾಗುವ ಮಟ್ಟಿಗೂ ಅವರಿಗೆ ಸಹಾಯ ಮಾಡದೆ ಇರುವವರು ಕ್ರೈಸ್ತ ಸಜಾತಧರ್ಮವನ್ನು ಮೀರುತ್ತಾರೆ.

ಹಿರಿಯರಿಗೆ ಮಾಡ ತಕ್ಕ ಸಹಾಯವು. ವ. ೧೭. ೧೯.

೧೭. ಚನ್ನಾಗಿ ಅಧಿಕಾರ ನಡಿಸುವ ಹಿರಿಯರು, ಮುಖ್ಯವಾಗಿ ವಾಕ್ಯದಲ್ಲಿಯೂ ಬೋಧನೆಯಲ್ಲಿಯೂ ಕಷ್ಟ ಮಾಡುವವರು 1), ಎರಡಷ್ಟು ಮಾನಕ್ಕೆ ತಕ್ಕವರೆಂದೆಣಿಸಲ್ಪಡಲಿ. ೧೮. ಯಾಕಂದರೆ ಕಣಿ ತುಳಿಯುವ ಎತ್ತಿನ ಬಾಯಿ ಕಟ್ಟಬಾರದೆಂದೂ 2) ಕೆಲಸದವನು ತನ್ನ ಕೂಲಿಗೆ ಯೋಗ್ಯನೆಂದೂ, ಬರಹವು 3) ಹೇಳುತ್ತದೆ.

೧. ಹಿರಿಯರೆಲ್ಲರು ಬೋಧಕರಾಗಿರಲಿಲ್ಲವೆಂದು, ಇಲ್ಲಿ ಸ್ಪಷ್ಟವಾಗಿ ತಾರುತ್ತದೆ. ಯಾಕಂದರೆ ವಾಕ್ಯದಲ್ಲಿಯೂ ಬೋಧನೆಯಲ್ಲಿಯೂ ಕಷ್ಟ ಮಾಡುವವರಿಗೆ ವಿಶೇಷವಾದ ಬಹುಮಾನ ಮಾಡ ಯೋಗ್ಯವಾಗಿದ್ದರೆ, ಬೋಧನೆ ಹೇಳದೆಯಿರುವವರು ಹೆಚ್ಚು ಮಂದಿಯಾಗಿದ್ದರೆಂದು, ನೆನಸ ಬೇಕು.

೨. ಈ ಮಾತು ೫ ಮೋಶೆ. ೨೪, ೪ರಲ್ಲಿ ಬರದದೆ. ೧ ಕೊರಿ. ೯, ೯.

೩. ಈ ಮಾತು ಕರ್ತನು ಹೇಳಿದ ವಾಕ್ಯವಾಗಿದೆ. ಮತ್ತಾ. ೧೦, ೧೦. ಲೂಕ. ೧೦, ೭. ಬರಹವು ಹೇಳುತ್ತದೆಂಬುವದು, ಪೌಲನು ತಿಮೊಥೆಯನ ಮೊದಲನೆ ಪತ್ರಿಕೆಯನ್ನು ಬರದ ಕಾಲದಲ್ಲಿ ರಚಿತವಾಗಿದ್ದ ಮತ್ತಾಯ ಲೂಕರ ಸುವಾರ್ತೆಗಳನ್ನು ಓದಿ ಇದ್ದನೆಂದೂ, ಅವು ಪರಿಶುದ್ಧ ಬರಹವಾಗಿ ಆಗ ಎಣಿಕೆಯಾಗಿದ್ದವೆಂದೂ, ಪ್ರಮಾಣಿಸುತ್ತದೆ.

ಹಿರಿಯರ ಶಿಕ್ಷೆಯು. ವ. ೧೯. ೨೧.

೧೯. ಹಿರಿಯನಿಗೆ ವಿರೋಧವಾಗಿ, ಎರಡು ಮೂರು ಸಾಕ್ಷಿಗಳಿದ್ದರೆ ಹೊರ್ತು, ದೂರನ್ನು ಅಂಗೀಕರಿಸ ಬೇಡ 1). ೨೦. ಮಿಕ್ಕಾದವರು ಸಹ ಹೆದರುವ ಹಾಗೆ, ಪಾಪ ಮಾಡುವವರನ್ನು ಎಲ್ಲರ ಮುಂದೆ ಗದರಿಸು. ೨೧. ದಾಕ್ಷಿಣ್ಯದಿಂದ ಏನೂ ಮಾಡದೆ, ಪಕ್ಷ ಪರಪಕ್ಷವಿಲ್ಲದೆ, ಇವುಗಳನ್ನು ಕೈಕೊಳ್ಳ ಬೇಕೆಂದು, ದೇವರೂ, ಕರ್ತನಾದ ಯೇಸು ಕ್ರಿಸ್ತನೂ, ಆಯಲ್ಪಟ್ಟ ದೂತರೂ 2), ಇವರ ಮುಂದೆ ನಿನಗೆ ಸಾಕ್ಷಿ ಕೊಡುತ್ತೇನೆ.

೧. ಅಧ್ಯಕ್ಷನಾದ ತಿಮೊಥೆಯನಿಗೆ ಸಹೆಯವರೆಲ್ಲರ ಮೇಲೆ ಅಧಿಕಾರವಿತ್ತೆಂದು ಇಲ್ಲಿ ಕಾಣುತ್ತದೆ. ಮೋಶೆಯ ನ್ಯಾಯದ ಪ್ರಕಾರ ವಾದ ಮಾಡುವದಕ್ಕೆ ಏಕ ಸಾಕ್ಷಿ ಸಾಕಾಗಿತ್ತು. ಶಿಕ್ಷೆ ಮಾಡುವದಕ್ಕೆ ಮಾತ್ರ ಎರಡು ಸಾಕ್ಷಿಯು ಅವಶ್ಯವಾಗಿತ್ತು. ಆದರೆ ಹಿರಿಯರಿಗೆ ವಿರೋಧವಾಗಿ ವಾದ ಮಾಡುವದಕ್ಕೆ ಎರಡು ಮೂರು ಸಾಕ್ಷಿಗಳಿಲ್ಲದಿದ್ದರೆ, ವಿಚಾರವನ್ನು ಸಹಾ ಮಾಡ ಬಾರದೆಂದು, ಪೌಲನು ತಿಮೊಥೆ

೧ ತಿಮೊ. ೫, ೨೨.—೬, ೨.

ಯನಿಗೆ ಬರೆಯುತ್ತಾನೆ. ಇಷ್ಟು ವಿಶ್ವಾಸವನ್ನು ಅವರ ಮೇಲೆ ಇಟ್ಟು, ಇಷ್ಟು ಮಾನ ಮಾಡ ಬೇಕೆಂದು, ಪೌಲನು ಸ್ಥಾಪಿಸುತ್ತಾನೆ. ಆದರೆ ಅವರು ಅಪರಾಧಿಗಳಾಗಿ ಕಾಣಿಸಿ ಕಾಂಡರೆ, ಅವರನ್ನು ಸಭೆಯವರೆಲ್ಲರ ಮುಂದೆ ಶಿಕ್ಷಿಸುವದು ಯುಕ್ತವೆಂದೆಣಿಸುತ್ತಾನೆ.

೨. ಅಂದರೆ, ಪೌಲನು ತಿಮೊಥೆಯನಿಗೆ ದೇವರೂ, ಕ್ರಿಸ್ತನೂ, ಪರಿಶುದ್ಧ ದೂತರೂ ಪ್ರತ್ಯಕ್ಷವಾಗುವ ನ್ಯಾಯ ದಿವಸವನ್ನು ಜ್ಞಾಪಿಸಿ, ಆಜ್ಞಾಪಿಸುತ್ತಾನೆ. ೨ ತಿಮೊ. ೪, ೧. ಆದರೆ ಈ ಮಾತಿನಿಂದ ಪೌಲನು ಪ್ರಸ್ತುತ ಕಾಲವನ್ನು ಸೂಚಿಸುವದಿಲ್ಲವೆಂತ ಪೇಳಕೂಡದು ೨ ಕಾರಿ. ೬, ೨೦. ಸ. ೬, ೧೩ ಇತ್ಯಾದಿ.

ಸಚಿವಾದ್ಯೋಗಸ್ಥರ ಪರಿಗಣನೆಯು. ವ. ೨೨—೨೫.

೨೨. ಯಾವನ ಮೇಲಾದರೂ ತ್ವರೆಯಾಗಿ ಕೈಗಳನ್ನು ಇಡದೆ, ಬೇರಾಬ್ಬರ ಪಾಪಗಳಲ್ಲಿ ಪಾಲುಗಾರನಾಗದೆ ೧) ಇರು; ನಿನ್ನನ್ನು ನಿರ್ಮಲನಾಗಿ ಕಾಪಾಡಿಕ್ಕೊ. ೨೩. ಇನ್ನು ಮೇಲೆ ನೀರು ಕುಡಿಯದೆ, ನಿನ್ನ ಹೊಟ್ಟೆಗಾಸ್ಕರವೂ ಅನೇಕ ಸಾರಿ ನಿನಗೆ ಆಗುವ ಬಲಹೀನತ್ವಗಳಿಗಾಸ್ಕರವೂ, ಸ್ವಲ್ಪ ದ್ರಾಕ್ಷಾರಸವನ್ನು ತೆಗೆದುಕ್ಕೊ ೨). ೨೪. ಕೆಲವು ಮನುಷ್ಯರ ಪಾಪಗಳು ಮುಂಚೆ ಪ್ರತ್ಯಕ್ಷವಾಗಿ, ಆಜ್ಞೆನಿರ್ಣಯಕ್ಕೆ ಮುಂಚೆ ಬರುತ್ತವೆ ೩); ಕೆಲವರನ್ನು ಅವು ಹಿಂಬಾಲಿಸುತ್ತವೆ ೪). ೨೫. ಅದೇ ಪ್ರಕಾರ ಒಳ್ಳೇ ಕ್ರಿಯೆಗಳು ಸಹ ಮುಂಚೆ ಪ್ರತ್ಯಕ್ಷವಾಗಿವೆ; ಬೇರೆಯಾಗಿರುವವುಗಳು ೫) ಮರೆಯಾಗಿರಲಾರವು.

೧. ಅಯೋಗ್ಯನನ್ನು ಉದ್ಯೋಗದಲ್ಲಿ ಶೇರಿಸಿದವನು ಅವನಿಂದ ಆಗುವ ಮೋಸಕ್ಕೂ ನಷ್ಟಕ್ಕೂ ಕಾರಣವಾಗುತ್ತಾನೆ. ಆದ್ದರಿಂದ ತಿಮೊಥೆಯನು ಬಹಳ ಜಾಗರೂಕನಾಗಿರ ಬೇಕೆಂದು ಎಚ್ಚರಿಸುತ್ತಾನೆ.

೨. ಈ ವಚನವು ಇದಕ್ಕಿದ್ದ ಹಾಗೆ ಪೂರ್ಣ ವೃತ್ತಾಸವಾದ ಅಭಿಪ್ರಾಯವನ್ನು ಉದಾಹರಿಸುವ ಸ್ಥಳದಲ್ಲಿ ಶೇರಿಯದೆ. ಮುಖಪರಿಚಿತನಾದ ಸ್ನೇಹಿತನಿಗೆ ಬರೆಯುವ ಪತ್ರಿಕೆಯಲ್ಲಿ ಪತ್ರಿಕಾಕರ್ತನು ಫಕ್ಕನೆ ಮನಸ್ಸಿನಲ್ಲಿ ಹುಟ್ಟಿದ ಆಲೋಚನೆಯನ್ನು ಫಕ್ಕನೆ ಬರೆಯುವದು ಉಂಟು. ಆದರೆ ಪೌಲನ ಪೆಸರಿನಲ್ಲಿ ಯಾರಾದರೂ ಒಬ್ಬ ಚಾರಲೇಖಿಕನು ಈ ಪತ್ರಿಕೆಯನ್ನು ಬರದನಾದರೆ, ಇಂಥಾ ಅಪ್ರಸಕ್ತವಾದ ತಾತ್ಪರ್ಯವನ್ನು ಈ ಸ್ಥಳದಲ್ಲಿ ಶೇರಿಸುವಪಕ್ಕೆ ಧೈರ್ಯಪಡುತ್ತಿದ್ದಿಲ್ಲ.

೩. ಅಂದರೆ, ಅವರು ಉದ್ಯೋಗಕ್ಕೆ ಪರಿಗಣಿತರಾಗುವದಕ್ಕಿಂತ ಮುಂಚೆ ಅವರ ಪಾಪಗಳು ಪ್ರಕಟವಾಗುತ್ತವೆ.

೪. ಕೆಲವರ ದುಷ್ಟತ್ವವು ಅವರು ಉದ್ಯೋಗಗಳಲ್ಲಿ ಶೇರಿದನಂತರವೇ ಬೆಳಕಿಗೆ ಬರುತ್ತದೆ.

೫. ಅಂದರೆ, ಪ್ರತ್ಯಕ್ಷವಾಗದಂಥಾ ಸತ್‌ಕೃತ್ಯಗಳು.

ಆಳುಗಳ ವಿಷಯವಾಗಿ. ಸ. ೬, ೧. ೨.

೧. ನೊಗವ ಕೆಳಗಿರುವ ದಾಸರಷ್ಟು ೧), ದ್ಯೇವರ ಹೆಸರೂ ಉಪದ್ಯೇಶವೂ ದೂಷಣೆ ಪಡದ ಹಾಗೆ ೨), ಸ್ವಂತ ಯಜಮಾನರನ್ನು ಸಕಲ ಮಾನಕ್ಕೆ ಶಕ್ತರೆಂದೆಣಿಸಲಿ. ೨. ಆದರೆ ವಿಶ್ವಾಸಿಗಳಾದ ಯಜಮಾನರುಳ್ಳವರು ೩), ಅವರನ್ನು ಸಹೋದರರೆಂದು

ಲ್ಯಾಖಮ್ಮೈರಿದ್ಯೈವಮನಸ್ಸು.

೧ ತಿಮೊ. ೬, ೩—೯.

ಉದಾಸೀನ ಮಾಡದೆ, ಅವರು ವಿಶ್ವಾಸಿಗಳೂ, (ಪ್ರಿಯರೂ, ಉಪಕಾರದಲ್ಲಿ ಪಾಲು ಹೊಂದುವವರೂ ೪) ಆಗಿರುವದರಿಂದ, ಹೆಚ್ಚಾಗಿ ಸ್ರೇವೆ ಮಾಡಲಿ. ಇವುಗಳನ್ನು ಬೋಧಿಸಿ ಉತ್ಸಾಹಪಿಸು.

೧. ಮನೆಯಾಳುಗಳಾದ ಚಕ್ತರು.

೨. ಕ್ರೈಸ್ತರಾದ ಆಳುಗಳು, ಯೇಸು ಕ್ರಿಸ್ತನ ಹೆಸರಿಗೂ ಕ್ರೈಸ್ತಧರ್ಮಕ್ಕೂ ಅವರ ನಡತೆಯಿಂದ ಅವಮಾನವೂ ದೂಷಣೆಯೂ ಪುಟ್ಟಿದ ಹಾಗೆ, ಅತಿ ಜಾಗ್ರತೆಯಾಗಿ ನಡದು ಕಾಳ್ಳ ಬೇಕು.

೩. ಅವರ ಯಜಮಾನರು ಚಕ್ತರಾಗಿದ್ದರೆ, ಅವರನ್ನು ಸಹೋದರರೆಂದು ಅಲಕ್ಷ್ಯ ಮಾಡ ಬಾರದು.

೪. ಗ್ರೀಕದಲ್ಲಿ ಉಳಿಗ ಮಾಡುವವರೆಂಬ ಅಚಿಪ್ರಾಯವುಳ್ಳ ಶಬ್ದವು ಪ್ರಯೋಗವಾಗಿದೆ. ಅಚಿಪ್ರಾಯವೇನಂದರೆ: ಸರ್ವೋಪಕಾರಿಯಾದ ದೇವರ ದಾಯಾಳುತ್ವಕ್ಕೆ ಚಕ್ತರಾದ ಯಜಮಾನರು ಸೇವೆ ಮಾಪಿ, ಮನೆಯವರೆಲ್ಲರಿಗೂ ಉಪಕಾರಿಗಳಾಗುತ್ತಾರೆ.

ಅಬದ್ಧ ಬೋಧಕರ ವಿಷಯವಾದ ಪುನರುಕ್ತಿಯು. ವ. ೩—೫.

೩ ಒಬ್ಬನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ಪಷ್ಟ ವಾಕ್ಯಗಳಿಗೂ ಭಕ್ತಿಯ ಪ್ರಕಾರವಾದ ಉಪದೇಶಕ್ಕೂ ಒಪ್ಪದೆ, ೪ ಬೇರೆ ಬೋಧನೆ ಹೇಳಿದರೆ, ಅಂಥವನು ಗರ್ವಿಸಿ, ಏನೂ ತಿಳಿಯದೆ, ತರ್ಕಗಳನ್ನೂ ವಾಗ್ವಾದಗಳನ್ನೂ ಮಾಡುವ ರೋಗದಲ್ಲಿದ್ದಾನೆ ೧). ೫ ಇವುಗಳಿಂದ ಹೊಟ್ಟೆಕಿಚ್ಚೂ, ಜಗಳವೂ, ದೂಷಣೆಗಳೂ, ಕೆಟ್ಟ ಸಂದೇಹಗಳೂ ೨), ಬುದ್ಧಿ ಕೆಟ್ಟು, ಸತ್ಯವನ್ನು ಕಳಕೊಂಡು, ಲಾಭವೇ ಭಕ್ತಿ ಎಂದು ನೆನಸುವ ಮನುಷ್ಯರ ವ್ಯರ್ಥ ವಾಗ್ವಾದಗಳೂ ಆಗುತ್ತವೆ. ಅಂಥವರಿಗೆ ದೂರವಾಗು ೩).

೧. ಬೋಧಕನ್ನಿಸಿ ಕೊಂಡು, ಸ್ವಸ್ಥ ಸುವಾರ್ತೆಯ ವಾಕ್ಯವನ್ನು ತಿಳಿಯದೆ, ಶಿಷ್ಯರನ್ನು ಮಾಪಿ ಕೊಂಡು ಉಪದೇಶಿಸುವವನು ಅಬದ್ಧಬೋಧನೆಯಂಬ ವಿಷದಿಂದ ಪೂರಿತನಾಗಿದ್ದಾನೆ.

೨. ಅಂಥಾ ದುಷ್ಟ ಬೋಧಕರು ತಮ್ಮ ಮಾತಿಗೆ ಒಪ್ಪದೆ ಇರುವವರ ಮೇಲೆ ನಾನಾ ತರದ ಚಾಪಿ ಮಾತುಗಳನ್ನು ಎಬ್ಬಿಸುವದು ವಾಡಿಕೆಯಾಗಿದೆ.

೩. ಅಂಥವರನ್ನು ಸಭಾನ್ಯಾಯದಲ್ಲಿ ರಗಾಪಿಸ ಬಾರದು, ಅವರ ತರ್ಕಗಳಲ್ಲಿಯೂ ಶೇರ ಬಾರದು.

ಲಾಭಕ್ಕೆ ವಿರೋಧವಾದ ದೈವಿಕ ಮನಸ್ಸು. ಸ. ೬, ೬—೨೧.

೬ ಆದರೆ ತೃಪ್ತಿಯ ಸಹಿತವಾದ ಭಕ್ತಿಯು ೧) ದೊಡ್ಡ ಲಾಭವಾಗಿದೆ ೨). ೭ ಯಾಕಂದರೆ, ನಾವು ಲೋಕದಲ್ಲಿ ಏನೂ ತಕ್ಕೊಂಡು ಬರಲಿಲ್ಲ, ಏನೂ ತಕ್ಕೊಂಡು ಹೋಗಲಾರವೆಂಬುವದು ಪ್ರಕಟವಾಗಿದೆ ೩). ೮ ಆದದರಿಂದ ನಮಗೆ ಅನ್ನ ವಸ್ತ್ರವಿದ್ದರೆ, ಅದು ಸಾಕೆಂದೆಣಿಸುವ ೪). ೯ ಆದರೆ ೫) ಐಶ್ವರ್ಯವಂತ

೧ ತಿಮೊ. ೬, ೧೦—೧೪.

ರಾಗ ಶ್ಚಟ್ಟಿಸುವವರು ಶ್ರೀಧನೆಯಲ್ಲಿಯೂ, ಉರುಲಿನಲ್ಲಿಯೂ, ಬುದ್ಧಿಯಿಲ್ಲದ ನಷ್ಟವುಳ್ಳ ಅನೇಕ ಆಶೆಗಳಲ್ಲಿಯೂ ಬೀಳುತ್ತಾರೆ; ಅವು ಮನುಷ್ಯರನ್ನು ನಾಶನದಲ್ಲಿಯೂ ಲಯದಲ್ಲಿಯೂ ಮುಳುಗಿಸುತ್ತವೆ. ೧೦. ಯಾಕಂದರೆ ದ್ರವ್ಯಾಶೆಯು ಸಕಲ ಕೇಡುಗಳ ಬೇರಾಗಿದೆ[ಟ]. ಅದನ್ನು[ಠ] ಕೆಲವರು[ಲ] ಆಶಿಸಿ ವಿಶ್ವಾಸವನ್ನು ಬಿಟ್ಟು, ಶಪ್ತಿ ಹೊಯ್ಕಿಗೆ[ಳ], ತಮ್ಮನ್ನು ಅನೇಕ ವೇದನೆಗಳಿಂದ ತಿವಿದು ಕೊಂಡಿದ್ದಾರೆ[೧೦].

೧. ನಿಜವಾದ ಭಕ್ತಿಯಿಂದ ತುಷ್ಟಿಯು ಹುಟ್ಟುತ್ತದೆ; ಯಾಕಂದರೆ ನಿಜ ಭಕ್ತನ ಮನಸ್ಸು ಇಹದ ಐಶ್ವರ್ಯವನ್ನಲ್ಲ, ಪರದ ಮಹಿಮೆಯನ್ನು ಬಯಸುತ್ತದೆ.

೨. ಅಬದ್ಧ ಬಾಧಕರು ಜಗಳಗಂಟಿಗರೂ, ಲಾಭಿಗಳೂ ಆಗಿದ್ದರಿಂದ, ಪೌಲನು ಅವರಲ್ಲಿ ಪ್ರಬಲವಾದ ಎರಡು ಪಾಪಗಳನ್ನು ಖಂಡಿಸುತ್ತಾನೆ. ಭಕ್ತಿಯಿಂದ ನಿಜ ಭಕ್ತರಿಗೆ ದೇವರಾಜ್ಯಬಾಧ್ಯತೆಯಂಬ ಅತುಳದ್ರವ್ಯವು ಪ್ರಾಪ್ತವಾಗುವದು.

೩. ಲೌಕವು ನಿಜ ಭಕ್ತನಿಗೆ ಯಾತ್ರೆಸ್ಥಳವಾದ ಪರದೇಶವಾಗಿ ತೋರುತ್ತದೆ. ಬೆತ್ತಲೆಯಾಗಿ ಹುಟ್ಟಿದ ಪ್ರಕಾರ ಬೆತ್ತಲೆಯಾಗಿ ಹೋಗುವದು ಎಲ್ಲರಿಗೂ ಸಿದ್ಧವಾಗಿದೆ. ಪುರಂದರ ದಾಸನು ಸಹ ಹೇಳುವದೇನಂದರೆ: ಫಳಿಸಿ ನಿಕ್ಕಿದ ಅರ್ಥವನು ಸದ್ಯದಲಿ ಅರುಂಬುವರು ಹೇಳು ಮನುಜ| ಲೌಕದಾಳು ಫಳಿಸಿದ ಪುಣ್ಯ ಪಾಪಗಳೆರಡು ಸಾಕಾರವಾಗಿ ಸಂಗಡ ಬಪ್ಪುದಲ್ಲದೆ.

೪. ಜೀವನಕ್ಕೆ ಬೇಕಾದದ್ದು ಇದ್ದರೆ, ಸಾಕೆಂದನ್ನತಕ್ಕದ್ದು.

೫. ಇಲ್ಲಿ ಅನುಕ್ತವಾದ ಅಭಿಪ್ರಾಯವೇನಂದರೆ: ಸಂತುಷ್ಟರಾದ ಭಕ್ತರು ನಿಜ ಸುಖಿಗಳಾಗಿದ್ದು, ಭದ್ರವಾಗಿದ್ದಾರೆ; ಆದರೆ ಇತ್ಯಾದಿ.

೬. ಲೌಕದಿಂದ ಹುಟ್ಟುವ ಕೇಡು ಅಮಿತವಾದದ್ದು. ಈ ವಿಷದ್ರವದಿಂದ ಹುಚ್ಚಾಟ್ಟಕಿಚ್ಚು, ಹಗೆ, ಜಿಪುಣತನ, ಕಳವು, ಕಾಲೆ ಇತ್ಯಾದಿ ಹುಟ್ಟುತ್ತದೆ.

೭. ಅಂದರೆ, ಲೌಕದ ವಿಷಯವಾದ ದ್ರವ್ಯಾದಿಗಳನ್ನು.

೮. ಎಫೆಸದ ಸಭೆಯಲ್ಲಿ ಶೇರಿದವರಲ್ಲಿ ಸಹ ಅನೇಕರು ಅಪಾಸ್ತಲರಲ್ಲಿ ಶೇರಿದ ಯೂದನ ಪ್ರಕಾರ ಲೌಕದಿಂದ ಕೆಟ್ಟರು.

೯. ಅಂದರೆ, ಕ್ರಿಸ್ತನ ವಿಶ್ವಾಸವನ್ನು ತಿರಸ್ಕರಿಸಿ, ತಿರಿಗಿ ಯೂದರನ್ನು ಅಥವಾ ಪರಜನರನ್ನು ಕೂಡಿಕೊಂಡರು.

೧೦. ದ್ರವ್ಯಾಶೆಯಿಂದಲೇ ನಾನಾ ವಿಧದ ಕರ್ಕರೆಯು ಹುಟ್ಟುತ್ತದೆ. ಬಳಿಕ ಅನ್ಯಾಯವಾಗಿ ದ್ರವ್ಯವನ್ನು ಫಳಿಸಿದವನು ತಾನು ಮಾಡಿದ ಪಾಪಗಳ ದೆಸೆಯಿಂದ ಮನಸ್ತಾಪಪೂರ್ಣ ಪಟ್ಟು, ಅಸೌಖ್ಯವಾಗಿರುತ್ತಾನೆ.

೧೧. ಆದರೆ ನೀನು, ಓ ದೇವರ ಮನುಷ್ಯನೇ[೧], ಅವುಗಳನ್ನು ಬಿಟ್ಟು ಹೊಯ್ಗು[ಬ]; ನೀತಿ, ಭಕ್ತಿ, ವಿಶ್ವಾಸ, ಪ್ರೀತಿ, ತಾಳ್ಮೆ, ಸಾತ್ವಿಕಭಾವಗಳನ್ನು[ಭ] ಹಿಂದಟ್ಟು[ಳ], ೧೨. ವಿಶ್ವಾಸದ ಒಳ್ಳೇ ಹೋರಾಟವನ್ನು ಹೋರಾಡು[ಶ]; ನಿತ್ಯ/ಜೀವವನ್ನು ಹಿಡಿದುಕೊ[ಟ]. ಅದಕ್ಕೆ ಕರೆಯಲ್ಪಟ್ಟು, ಅನೇಕ ಸಾಕ್ಷಿಗಳ ಮುಂದೆ[ಬ] ಒಳ್ಳೇ ಅರಿಕೆಯನ್ನು ಅರಿಕೆ ಮಾಡಿದಿ. ೧೩. ಸರ್ವವನ್ನು ಬದುಕಿಸುವ ದೇವರು[ಲ], ಪೊಂತ್ಯ ಪಿಲಾತನ ಕಾಲದಲ್ಲಿ ಒಳ್ಳೇ ಅರಿಕೆಯನ್ನು ಸಾಕ್ಷಿಯಾಗಿ ಮಾಡಿದ ಕ್ರಿಸ್ತ ಯೇಸುವು[ಳ], ೧೪. ಇವರ

ಲೌಕಿಕಮೈರಿದ್ಯೈವಮನಸ್ಸು.

೧ ತಿಮೊ. ೬, ೧೫—೧೬.

ಮುಂದೆ ನಿನಗೆ ಆಜ್ಞಾಪಿಸುವದೇನಂದರೆ ೧೦)—ನೀನು ಆಜ್ಞೆಯನ್ನು ೧೧) ನಿರ್ಮಲವಾಗಿಯೂ ನಿರ್ದೋಷವಾಗಿಯೂ ೧೨) ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವರೆಗೂ ೧೩) ಕೆಡಿಕಾಳ್ಳ ಬೇಕು. ೧೫. ಅದನ್ನು ಸ್ವಂತ ಕಾಲಗಳಲ್ಲಿ ೧೪) ಭಾಗ್ಯವುಳ್ಳ ವಿಕ (ಪ್ರಭುವು, ಅರಸುಗಳ ಅರಸನು ೧೫), ಕರ್ತರ ಕರ್ತನು, ಒಬ್ಬನೇ ಅಮರತ್ವವುಳ್ಳವನು ೧೬), ೧೬. ಅಪ್ರವೇಶ್ಯವಾದ ಬೆಳಕಿನಲ್ಲಿ ವಾಸ ಮಾಡಿ ೧೭), ಮನುಷ್ಯರಲ್ಲಿ ಯಾರಿಗೂ ಕಾಣಿಸದೆ, ಕಾಣಿಸ ಕೂಡದೆ, ಇರುವವನು ತಿರಿಸುವನು ೧೮). ಅವನಿಗೆ ಮಾನವೂ ನಿತ್ಯ ತ್ರಾಣವೂ ಆಗಲಿ. ಆಮೆನ್.

೧೦. ಪೂರ್ಣ ಹೃದಯದಿಂದ ದೇವರ ಸೇವೆಗೆ ನಿನ್ನನ್ನು ನೀನೇ ಒಪ್ಪಿಸಿ ಕಾಂಡವನೇ.

೨. ಚೌಮಿಕವಾದ ಮನಸ್ಸನ್ನು ಅಸಂಖಿಸಿ ಬಿಡು.

೩. ವಿಶ್ವಾಸವನ್ನೂ, ಪ್ರೀತಿಯನ್ನೂ, ತಾಳ್ಮೆಯನ್ನೂ, ಸಾತ್ವಿಕತ್ವವನ್ನೂ ಕೈಕಾಳ್ಳುವನು ಪರರ ಪಾಕ್ಕು ಬಳಕೆಯಲ್ಲಿ ನೀತಿಯುಳ್ಳವನಾಗಿಯೂ, ದೇವರಿಗೆ ಆಸಕ್ತ ಭಕ್ತಿಯುಳ್ಳವನಾಗಿಯೂ ಇರುವನು.

೪. ಪೂರ್ಣ ಹೃದಯಾಚಿಲಾಷೆಯಿಂದ ಕ್ರೈಸ್ತನಿಗೆ ತಕ್ಕ ಸದ್ಗುಣಗಳನ್ನು ಸಾಧಿಸು.

೫. ವಿಶ್ವಾಸಸಾಧನೆಗಳಿಂದ ಪುಟ್ಟುವ ಕಷ್ಟಗಳಿಗೆ ಪೆದರದೆ, ಒಳ್ಳೆ ಕ್ರೈಸ್ತ ಭಟನಾಗು.

೬. ನಿತ್ಯ ಜೀವದ ಜಯಕಿರೀಟವನ್ನು ಪಿಡಿದು, ಯಾರೂ ಅದನ್ನು ಕಸುಕಾಳ್ಳದ ಪಾಗೆ ನಾಟಿಕಾ. ಪ್ರಕ. ೩, ೧೧.

೭. ಈ ಮಾತು, ತಿಮೊಥೆಯನು ಯಾವದಾಂದು ಪಿಂಸಾಕಾಲದಲ್ಲಿ ತನ್ನ ವಿಶ್ವಾಸವನ್ನು ನಿರ್ಭಯನಾಗಿ ಅನೇಕ ಜನರ ಮುಂದೆ (ಒಂದು ವೇಳೆ ರಾಮ ಪುರದಲ್ಲಿ) ವಿಜ್ಞಾಪಿಸಿದ್ದನ್ನು ಸೂಚಿಸುತ್ತದೆಂದು, ತಾರುತ್ತದೆ.

೮. ಅಂದರೆ, ಆತನು ನಿನಗೂ ನಿತ್ಯ ಜೀವವನ್ನು ಕಾಡುವದಕ್ಕೆ ಮನಸ್ಸೂ, ತ್ರಾಣವೂ ಉಳ್ಳವನಾಗಿದ್ದಾನೆ.

೯. ಯೇಸು ಕ್ರಿಸ್ತನು ಮರಣಕ್ಕೆ ಪೆದರದೆ, ಸತ್ಯವನ್ನು ವಿಜ್ಞಾಪಿಸಿ, ಭಕ್ತರಿಗೆ ಉತ್ತಮ ಮಾದ್ರಿಯನ್ನು ತಾರಿಸಿದ್ದಾನೆ.

೧೦. ಅಪಾಸ್ತಲನು ಇಲ್ಲಿ ತನ್ನ ಪ್ರಿಯ ಮಗನಾದ ತಿಮೊಥೆಯನಿಗೆ ಬಹಳ ಆಸಕ್ತಿಯಿಂದ ಸ್ಥೈರ್ಯಾದ್ಭಾಧನೆಯನ್ನು ಮಾಡುತ್ತಾನೆ.

೧೧. ಸಾಮಾನ್ಯವಾದ ಕ್ರೈಸ್ತಧರ್ಮ, ವಿಶೇಷವಾದ ಅಧ್ಯಕ್ಷೃದ್ಯೋಗ ಇವುಗಳ ವಿಷಯವಾದ ಆಜ್ಞೆಯನ್ನು.

೧೨. ಅಂದರೆ, ಯಾವಾಗಲೂ ಮನಃಪೂರ್ವಕವಾಗಿಯೂ, ಪೂರ್ಣವಾಗಿಯೂ.

೧೩. ಯೇಸು ಕ್ರಿಸ್ತನು ಲೌಕಕ್ಕೆ ನ್ಯಾಯ ತೀರಿಸುವನಕ. ಆಗ ನಂಬಿಗಸ್ಥರಾದ ಭಕ್ತರಿಗೂ, ದ್ರೋಹಿಗಳಿಗೂ ಅವರವರಿಗೆ ತಕ್ಕ ಫಲವು ಸಿಕ್ಕುವದು.

೧೪. ಅವನಿಗೆ ಮಾತ್ರ ಗಾತ್ತಾದ, ತಾನು ನೇಮಕ ಮಾಡಿದ ಕಾಲಗಳಲ್ಲಿ.

೧೫. ಸರ್ವಶಕ್ತನಾದ ಒಡೆಯನು. ಆತನಿಗೆ ಇಹಲೋಕದಲ್ಲಿ ಅರಸುಗಳನ್ನಿಸಿ ಕಾಳ್ಳುವರೆಲ್ಲರೂ ಆಳುಗಳಾಗಿದ್ದಾರೆ.

೧೬. ಆತನು ಜೀವವಾಗಿದ್ದು, ಜೀವಕ್ಕೆಲ್ಲಾ ಮೂಲವಾಗಿದ್ದಾನೆ.

೧೭. ಈಗ ಆತನು ನಿರ್ಮಾಣವಾದ ದೃಷ್ಟಿಯು ತಾಳಲಾರದ ಮಹಿಮೆಯುಳ್ಳವನಾಗಿದ್ದು, ಅದೃಶ್ಯನಾಗಿದ್ದಾನೆ. ಆಗ ಪುನರುತ್ಥಾನವಾದ ಮಕ್ಕಳಿಗೆ ಅಮಿತ ಮಹಿಮೆಯಿಂದ ಪ್ರತ್ಯಕ್ಷನಾಗುವನು.

೧೮. ದೃಶ್ಯವಾಗಿ ಬರ ಮಾಡುವನು.

೧ ತಿಮೊ. ೬, ೧೭—೨೧.

೧೭. ಇಹಿನ ಲೌಕಿಕದ ಐಶ್ವರ್ಯವಂತರಿಗೆ ೧) ಉನ್ನತವಾದವುಗಳ ಮೇಲೆ ಮನಸ್ಸಿಡದೆ ೨), ಅಸ್ಥಿರವಾದ ಐಶ್ವರ್ಯದಲ್ಲಿ ಅಲ್ಲ ೩), ಐಶ್ವರ್ಯವಾಗಿ ನಮಗೆ ಎಲ್ಲವನ್ನು ಅನುಭವಿಸುವದಕ್ಕೆ ದಯಪಾಲಿಸುವ ೪) ಜೀವವುಳ್ಳ ದೇವರಲ್ಲಿಯೇ ೫) ನಿರೀಕ್ಷಿಸಿ, ೧೮. ಉಪಕಾರಿಗಳೂ, ಸತ್‌ಕ್ರಿಯೆಗಳಲ್ಲಿ ಐಶ್ವರ್ಯವಂತರೂ ೬), ಧರ್ಮಿಷ್ಠರೂ, ಅನ್ಯೋನ್ಯಪ್ರಿಯರೂ, ಆಗಿದ್ದು, ೧೯. ನಿಜ ಜೀವವನ್ನು ಹಿಡಿದು ಕೊಳ್ಳುವ ಹಾಗೆ ೭), ಬರುವ ಕಾಲಕ್ಕಾಗಿ ತಮಗೆ ಒಳ್ಳೇ ಅಸ್ತಿವಾರವನ್ನು ೮) ಇಟ್ಟು ಕೊಳ್ಳಬೇಕೆಂದು, ಆಜ್ಞಾಪಿಸು. ೨೦. ಓ ತಿಮೊಥೆಯನೇ! ನಿನಗೆ ಒಪ್ಪಿಸಲ್ಪಟ್ಟದ್ದನ್ನು ಕಾಪಾಡು ೯). ಅಪವ್ರಿತ್ತವಾದ ವ್ಯರ್ಥ ಶಬ್ದಗಳಿಗೂ ೧೦), ಸುಳ್ಳು ಹೆಸರುಳ್ಳ ಜ್ಞಾನದ ತರ್ಕಗಳಿಗೂ ೧೧) ದೂರವಾಗಿರು. ೨೧. ಈ ಜ್ಞಾನವನ್ನು ಕೆಲವರು ಹೇಳಿ ಕೊಂಡು, ವಿಶ್ವಾಸದ ವಿಷಯದಲ್ಲಿ ತಪ್ಪಿದರು. ಕೃಪೆಯು ನಿನ್ನ ಸಂಗಡ ಇರಲಿ. ಆಮೆನ್.

೧. ಒನೆ ವಚನದಿಂದ ಅಪಾಸ್ತಲನು ಚಕ್ತರನ್ನು ಎಚ್ಚರಿಸಿ, ಧನವನ್ನು ಬಯಸ ಬಾರದೆಂದು ಬೋಧಿಸಿ, ಈಗ ೧೭ನೆ ೧೮ನೆ ವಚನಗಳಲ್ಲಿ ಸೂಚಿಸಿದ ನಿತ್ಯ ಬಾಧ್ಯತೆಯ ಪ್ರಸ್ತಾವನೋಚಿತವಾಗಿ ಧನವಂತರಿಗೆ ಬುದ್ಧಿ ಹೇಳುತ್ತಾನೆ.

೨. ಅಂದರೆ, ತಾವು ಐಶ್ವರ್ಯವಂತರೆಂದು, ಉಬ್ಬಿ ಕಾಳ್ಳ ಬಾರದು.

೩. ನೀರಿನ ಬಾಬ್ಬುಳಿಯಂತೆ ಆಗಾಗ್ಗೆ ನಾಶವಾಗುವಂಥಾ, ಹೆಚ್ಚಾಗಾದರೂ ಸಾಯುವ ಘಳಿಗೆಯಲ್ಲಿ ತಪ್ಪುವಂಥಾ ಐಶ್ವರ್ಯವನ್ನು ನಂಬ ಬಾರದು.

೪. ದೇವರು ನಿಜ ಚಕ್ತರಿಗೆ ಆತ್ಮ ಶರೀರಗಳಿಗಾಗಿ ಬೇಕಾದದ್ದನ್ನು, ಕಾಂಚವಾಗಿ ಮಾತ್ರವಲ್ಲ, ಯಥೇಷ್ಟವಾಗಿ ಕಾಡುತ್ತಾನೆ.

೫. ನಿರಂತರವಾದ ದೇವರ ಕೃಪೆಯು ಐಶ್ವರ್ಯದ ಪ್ರಕಾರ ಚಂಚಲವಾಗಿರುವದಿಲ್ಲ.

೬. ಧರ್ಮದ ಕೃತ್ಯಗಳಿಂದ ಧರ್ಮಫಲವನ್ನು ಪಡೆಯುವ ಸಾಮರ್ಥ್ಯವು ಐಶ್ವರ್ಯದ ಮುಖ್ಯ ಪ್ರಯೋಜನವಾಗಿದೆ.

೭. ಇದು ಎಲ್ಲಾ ಲೌಕಿಕೋಪಾಗಗಳಿಗಿಂತ ಅತ್ಯುತ್ತಮೋತ್ತಮವಾಗಿದೆ.

೮. ಧರ್ಮಫಲವೆಂಬ ಪರದ ನಿಕ್ಷೇಪವು ನಿರ್ಲಯವಾಗಿದ್ದು, ಪೂರ್ವಾನ್ನು ಪೂರ್ಣ ಮುಂತಾದ ಇಹಪರ ನಿಧಿಗಳಲ್ಲಿ ಅಪ್ರತಿಮವಾದದ್ದು.

೯. ಅಂದರೆ, ನಿನಗೆ ಒಪ್ಪಿಸಿರುವ ಸುವಾರ್ತಾ ನಿಜಜ್ಞಾನವೆಂಬ ದ್ರವ್ಯವನ್ನು ಕಾಪಾಡು. ೧೩ನೆ ವಚನವು ೬ನೆ ಮುಂತಾದ ವಚನಗಳ ತಾತ್ಪರ್ಯಕ್ಕೆ ಸಂಬಂಧವಾಗಿರುವ ಪ್ರಕಾರ, ೨೦ನೆ ವಚನವು ೧೩—೧೬ರಲ್ಲಿ ಬರದ ಬುದ್ಧಿವಾದವನ್ನು ಸೂಚಿಸುತ್ತದೆ.

೧೦. ಜ್ಞಾನಿಗಳನ್ನಿಸಿ ಕಾಳ್ಳುವ ಅಬದ್ಧ ಬೋಧಕರ ವಾಕ್ಯವನ್ನು ಅಪಾಸ್ತಲನು ಪೂರ್ಣ ಪ್ರಾಮಾಣ್ಯದಿಂದ ಹೇಳಿ ಹೀನೈಸುತ್ತಾನೆ.

೧೧. ಜ್ಞಾನವಾದಿಗಳೆಂದು ಹೆಸರಾಗ್ಯಂಡ ಪ್ರತಿಕ್ರೈಸ್ತರಾದ ಗುರುಗಳು ಆಸ್ಯದ ಸಭೆಗಳಲ್ಲಿ ಹುಟ್ಟಿಸಿದ ದುರ್ಬೋಧನೆ ಏನಂದರೆ: ಯೇಸು ಕ್ರಿಸ್ತನನ್ನು ನಂಬಿ, ಸಭೆಯಲ್ಲಿ ಶೇರುವದು ಮುಕ್ತಿ ಪಡೆಯುವ ಮಾರ್ಗದ ಆರಂಭವಾಗಿದೆ. ಸಿದ್ಧಿಯನ್ನು ಪೂರ್ಣಾಂದ ಬೇಕಾದರೆ, ಅಪಾಸ್ತಲರ ಬಾಲಾಪದೇಶವನ್ನು ಬಿಟ್ಟು, ಜ್ಞಾನೋಪದೇಶವನ್ನು ಪಡದು, ದೇವೈಕ್ಯವನ್ನು ಸಾಧಿಸ ಬೇಕು.

ತೀತನ ಪತ್ರಿಕೆಯ ಪೀಠಿಕಾನುಕ್ರಮಣಿಕೆಗಳು.

ಪೌಲನು ತೀತನಿಗೆ ಬರದ ಪತ್ರಿಕೆಯು.

ಪೀಠಿಕೆಯು.

ಈ ಪತ್ರಿಕೆಯು ರಚನಾಕಾಲದ ಲೆಖ್ಖದ ಪ್ರಕಾರ ಸಭಾಪಾಲನಾಪತ್ರಿಕೆಗಳಲ್ಲಿ ಎರಡನೇದೆಂದು, ಸಭಾಪಾಲನಾಪತ್ರಿಕೆಗಳ ಪೀಠಿಕೆಯಲ್ಲಿ ವಿವರಿಸಿದ್ದೇವೆ. ಅಪೊಸ್ತಲನಾದ ಪೌಲನ ಮುಖ್ಯ ಶಿಷ್ಯರಾದ ಸಹಾಯಕರಲ್ಲಿ ಬಬ್ಬನಾದ ತೀತನು ಗ್ರೀಕನಾಗಿ ಹುಟ್ಟಿದನು. ಗಲ. ೨, ೩. ಪೌಲನು ಅವನನ್ನು ಕ್ರೇತದಲ್ಲಿ ಸ್ಥಾಪಿತವಾದ ಕ್ರೈಸ್ತಸಭೆಗಳನ್ನು ಕಾಪಾಡಿ, ಆಯಾ ಸಭೆಗಳಲ್ಲಿ ತನ್ನ ಆಜ್ಞಾನುಸಾರವಾಗಿ ಸಭೋದ್ಯೋಗಸ್ಥರನ್ನು ನೇಮಿಸಿ, ಯುಕ್ತವಾದ ಸಭಾಕ್ರಮವನ್ನು ಸ್ಥಿರ ಪಡಿಸುವ ಉದ್ದಿಶ್ಯ ಕಡೇ ಸಂಚಾರದಲ್ಲಿ ಅಲ್ಲಿ ಅಧ್ಯಕ್ಷನಿಯಾಗಿ ಬಿಟ್ಟು, ತಾನು ಮೂಡಣ ದಿಕ್ಕಿಗೆ ಹೊದನು. ತೀತ. ೧, ೫. ತಿಮೊಥೆಯನ ಮೊದಲನೆ ಪತ್ರಿಕೆಯಲ್ಲಿ ನಾವು ಕಂಡ ಅಬದ್ಧಬೋಧಕರ ವಾದಯುದ್ಧವು ಅದಕ್ಕೆ ಬಹಳ ಸದೃಶವಾದ ಈ ಪತ್ರಿಕೆಯಲ್ಲಿಯೂ ಸೂಚಿತವಾಗಿದೆ. ಕ್ರೇತದ್ವೀಪದವರ ಸಹಜಗುಣವು ಅತಿ ದುಷ್ಟವಾದ್ದರಿಂದ ಸ. ೧, ೧೨., ಅಧ್ಯಕ್ಷ್ಯೋದ್ಯೋಗವು ಬಹಳ ಪ್ರಯಾಸಕರವಾಗಿತ್ತು; ಯಾಕಂದರೆ: ಸಭೆಯಲ್ಲಿ ಶೇರಿದವರಲ್ಲಿಯೂ ಹುಟ್ಟುಗುಣವು ನಿರ್ಮೂಲವಾಗಲಿಲ್ಲ. ಈ ಕಷ್ಟವಾದ ಉದ್ಯೋಗಕ್ಕೆ ತೀತನು ಯೋಗ್ಯನೆಂದು, ನಾನಾವಿಧಪರೀಕ್ಷೆಯಿಂದ ಪೌಲನು ತಿಳಿದು ಕೊಂಡು ಇದ್ದನು. ಸ. ೧, ೪ರಲ್ಲಿ ಅವನಿಗೆ ನಿಜ ಮಗನೆಂದು, ಹೆಸರಿಡುತ್ತಾನೆ. ಅಪೊಸ್ತಲನು ಯೆರೂಸಲೇಮಿನಲ್ಲಿ ಆದ ಸಭಾಕೂಟಕ್ಕೆ ಮಾಡಿದ ಪ್ರಯಾಣದಲ್ಲಿ ತೀತನನ್ನು ಜೊತೆಗಾರನಾಗಿ ಕರದು ಕೊಂಡು ಹೋದನು. ಗಲ. ೨, ೩. ಬಳಿಕ ಅವನನ್ನು ಎಫೆಸದಿಂದ ಕೊರಿಂಥದವರ ಮೊದಲನೆ ಪತ್ರಿಕೆಯ ವಾಹಿಯಾಗಿ ಕೊರಿಂಥಕ್ಕೆ ಕಳುಹಿಸಿ, ಆ ಸಭೆಯ ಸ್ಥಿತಿಯನ್ನು ವಿಚಾರಿಸಿ ತನಗೆ ತಿಳಿಸುವದಕ್ಕೂ, ತನ್ನ ಪತ್ರಿಕೆಯನ್ನು ಬಿದಿದ ಮೇಲೆ ಅವರ ಮನಸ್ಸು ಹ್ಯಾಗಾಯಿತೆಂದು ಹೇಳುವದಕ್ಕೂ, ತನ್ನ ಬಳಿಗೆ ತಿರಿಗಿ ಬರ ಬೇಕೆಂದು, ಆಜ್ಞಾಪಿಸಿದನು. ೨ಕೊರಿ. ೨, ೧೨; ೭, ೬. ೧೩—೧೫. ತದನಂತರ ಯೆಹೂದದೇಶದ ಬಡ ಕ್ರೈಸ್ತರಿಗಾಗಿ ಮಾಡಿದ ಧರ್ಮದ್ರವ್ಯಸಂಗ್ರಹವನ್ನು ಅವನಿಗೆ ಒಪ್ಪಿಸಿ, ಅವನನ್ನು ತಿರಿಗಿ ಕೊರಿಂಥಕ್ಕೆ ಕಳುಹಿಸಿದನು. ೨ಕೊರಿ. ೮, ೬. ೧೬—೨೩. ಈ ಸ್ಥಳದಿಂದ, ಉಳಿದ ಕ್ರೈಸ್ತಸಭೆಯವರು ಸಹ ಅವನಲ್ಲಿ ಬಹಳ ವಿಶ್ವಾಸವಿಟ್ಟರೆಂದು, ತೋರುತ್ತದೆ. ಅನೇಕ ವರುಷದ ಮೇಲೆ, ಅರ್ತೆಮಸ್ ಅಥವಾ ತುಕಿಕನು ಕ್ರೇತಕ್ಕೆ ಬಂದು, ಅವನ ಸ್ಥಳದಲ್ಲಿ ಶೇರಿದ ಬಳಿಕ ತೀತ. ೩, ೧೨., ಪೌಲನು ಅವನನ್ನು ದಲ್ಮಾತ್ಯಕ್ಕೆ ಕಳುಹಿಸಿದನು. ೨ತಿಮೊ. ೪, ೧೦. ಪೂರ್ವಸಭಾಚರಿತ್ರಗಾರರು, ಅವನು ಕ್ರೇತದ್ವೀಪದಲ್ಲಿ ೯೪ ವರುಷದವನಾಗಿ ತೀರಿ ಹೋದನೆಂದು, ಬರದಿದ್ದಾರೆ.

ಪತ್ರಿಕಾತಾತ್ಪರ್ಯಾನುಕ್ರಮಣಿಕೆಯು.

ಸ. ೧. ವಾಡಿಕೆಯಾದ ವಂದನೋಕ್ತಿಯು. ವ. ೧—೪. ಹಿರಿಯರ ಪರಿಗಣನೆಯನ್ನು ಹ್ಯಾಗೆ ಮಾಡ ಬೇಕೆಂಬ ವಿಧಾನವು. ವ. ೫—೯. ಅಬದ್ಧಬೋಧಕರ ವಿಷಯವಾದ ಉದ್ಬೋಧನೆಯು. ವ. ೧೦—೧೬.

ಸ. ೨. ಹಿರಿಯರಿಗೂ, ಮಕ್ಕಳಿಗೂ, ಆಳುಗಳಿಗೂ ಉಪಯೋಗವಾದ ನೀತಿಸೂಚನೆಯು. ವ.

ತ್ರೀತ. ೧, ೧—೫೫.

೧—೧೦. ಕ್ರಿಸ್ತ ಯೇಸುವಿನಲ್ಲಿ ಎಲ್ಲರಿಗೂ ಪ್ರತ್ಯಕ್ಷವಾದ ದೇವರ ಕ್ಷೇಮಕರ ಕೃಪೆಯು ಶುದ್ಧೀಕರಣದ ಮುಖ್ಯ ಹೇತುವಾಗಿರುವದು. ವ. ೧೧—೧೫.

ಸ. ೩. ಸರಕಾರಕ್ಕೆ ವಿಧೇಯವಾಗಿರ ಬೇಕೆಂದೂ, ಪರರಿಗೆ ತಾಳ್ಮೆಯನ್ನು ತೋರಿಸ ಬೇಕೆಂದೂ, ಕ್ರೇತದವರನ್ನು ಎಚ್ಚರಿಸುವದಕ್ಕೆ ವ. ೧. ೨., ಕ್ರಿಸ್ತ ಯೇಸುವಿನಲ್ಲಿರುವ ದೇವರ ಕರುಣೆಯಿಂದ ನಮಗೆ ಪ್ರಾಪ್ತವಾದ ಪಾಪವಿಮೋಚನೆಯೆನ್ನು ಜ್ಞಾಪಕ ಮಾಡಿ, ವ. ೩—೭., ಕಟ್ಟುಕಥೆಗಳನ್ನೂ, ತರ್ಕವಾದಗಳನ್ನೂ ಬಿಟ್ಟು, ದೇವರಿಗೆ ಹಿತವಾದ ನಡತೆಯ ಉಪದೇಶವನ್ನು ಹೇಳ ಬೇಕೆಂದು, ಬೋಧಿಸುತ್ತಾನೆ. ವ. ೯—೧೧. ಬೇರೆ ಬೇರೆ ಅಪ್ಪಣೆಗಳು. ವಂದನೋಕ್ತಿಗಳು. ವ. ೧೨—೧೫.

ಸ. ೧.

ವಂದನಾಕ್ತಿಯು. ವ. ೧—೪.

೧. ದೇವರು ಆದು ಕೊಂಡವರ ವಿಶ್ವಾಸದ ಪ್ರಕಾರವಾಗಿಯೂ, ೨ಕ್ರೈನು ಸಾರವಾದ ನಿಶ್ಚಿದ ತಿಳುವಿಕೆಯ ಪ್ರಕಾರವಾಗಿಯೂ, ೨. ಸುಳ್ಳಾಡದ ದೇವರು ಯುಗ ಕಾಲಗಳ ಮುಂಚೆ ವಾಗ್ದತ್ತ ಮಾಡಿ೧), ೩. ತಕ್ಕ ಸಮಯಗಳಲ್ಲಿ, ನಮ್ಮ ರಕ್ಷಕನಾದ೨) ದೇವರ ಅಪ್ಪಣೆಯ ಪ್ರಕಾರ ನನಗೆ ಒಪ್ಪಿಸಲ್ಪಟ್ಟ, ತನ್ನ ವಾಕ್ಯದ ಪ್ರಸಂಗದಿಂದ ಪ್ರಕಟ ಮಾಡಿದ ನಿತ್ಯ ಜೀವದ ನಿರೀಕ್ಷೆಯಾಗಿಯೂ, ಯೇಸು ಕ್ರಿಸ್ತನ ಅಪೊಸ್ತಲನೂ, ದೇವರ ದಾಸನೂ, ೪. ಆದ ಪೌಲನು ಹುದುವಾದ ವಿಶ್ವಾಸದ೩) ಪ್ರಕಾರ ನಿಜ ಮಗನಾದ ತೀತನಿಗೆ—ತಂದೆಯಾದ ದೇವರಿಂದಲೂ, ನಮ್ಮ ರಕ್ಷಕನಾಗಿರುವ ಕರ್ತನಾದ ಯೇಸು ಕ್ರಿಸ್ತನಿಂದಲೂ, ಕೃಪೆಯೂ ಕರುಣೆಯೂ ಸಮಾಧಾನವೂ ಆಗಲಿ.

೧. ದೇವರು ಆದಿಕಾಲದಲ್ಲಿ, ಪ್ರಥಮ ಮನುಷ್ಯರು ಪಾಪದಲ್ಲಿ ಬಿದ್ದಾಗಲೇ, ರಕ್ಷಣಾಜ್ಞಾಪನೆಯನ್ನು ಕೊಟ್ಟನು.

೨. ಅಂದರೆ, ಸರ್ವ ರಕ್ಷಣಾಮೂಲವಾದ ಅತ್ಯಂತ ಕೃಪೆಯುಳ್ಳ ದೇವರಿಗೆ ಪೌಲನು ನಮ್ಮ ರಕ್ಷಕನೆಂದು ಪೆಸರಿಡುತ್ತಾನೆ. ಈ ಪೆಸರು ಸಚಾಪಾಲನಾಪತ್ರಿಕೆಗಳಲ್ಲಿ ಮಾತ್ರ ಕೆಲವು ಸಾರಿ ಬರಪದೆ.

೩. ಅಂದರೆ, ನಮ್ಮಿಬ್ಬರಲ್ಲಿರುವಂಥ, ನಮ್ಮ ಪ್ರೀತನ್ಯಾನ್ಯ ಆತ್ಮಿಕ ಸಂಬಂಧಿತ್ವಗಳ ಮೂಲವಾದ ವಿಶ್ವಾಸದ ಪ್ರಕಾರ.

ಸಭೆಯ ಹಿರಿಯರ ಪರಿಗಣನಾವಿಧಾನವು. ವ. ೫—೯.

೫. ನಾನು ನಿನಗೆ ಆಜ್ಞಾಪಿಸಿದ ಪ್ರಕಾರ ಮಿಕ್ಕಾದವುಗಳನ್ನು ನೆಟ್ಟಗೆ ಮಾಡಿ, ಪಟ್ಟಣ ಪಟ್ಟಣದಲ್ಲಿ ಹಿರಿಯರನ್ನು ನೇಮಿಸುವದಕ್ಕಾಗಿಯೇ ನಿನ್ನನ್ನು ಕ್ರೇತದಲ್ಲಿ ಬಿಟ್ಟು ಬಂ

ಸಭಾಪರಿಗಣನ ವಿಧಾನ.

ಶೀತ. ೧, ೬—೧೫.

ದೆನು ೧). ೬. ಒಬ್ಬನು ನಿರಪರಾಧಿಯೂ, ಒಬ್ಬಳ್ಳೀ ಹೆಂಡತಿಯ ಗಂಡನೂ, ದುಂದು ತನದ ಅಪಕೀರ್ತಿಯಿಲ್ಲದೆ, ಅವಿಧೇಯರಾಗದೆ ಇರುವ ವಿಶ್ವಾಸಿಗಳಾದ ಮಕ್ಕಳುಳ್ಳ ವನೂ, ಆಗಿದ್ದರೆ ೨), ಇರಿಸು. ೭. ಯಾಕಂದರೆ ಅಧ್ಯಕ್ಷನು, ದೇವರ ಉಗ್ರಾಣಿದ ವನಿಗೆ ತಕ್ಕ ಹಾಗೆ ೩), ಅಪರಾಧವೂ, ಸ್ವಯಿಚ್ಛೆಯೂ ಕೋಪವೂ ಇಲ್ಲದೆ, ಮದ್ಯ ಪಾನಿಯೂ, ಹೊಡದಾಡುವವನೂ, ಲಾಭಾಪೇಕ್ಷಿಯೂ ಆಗಿರದೆ, ೮. ಆತಿಥ್ಯ ಪ್ರಿಯನೂ, ಸಜ್ಜನ ಪ್ರಿಯನೂ, ಮನಸ್ಸಂಯಮನೂ, ನ್ಯಾಯಯುಳ್ಳವನೂ, ಪವಿತ್ರನೂ, ಸಮ್ಯತನೂ, ಆಗಿದ್ದು, ೯. ಸ್ಪಷ್ಟ ಬೋಧನೆಯಿಂದ ಬುದ್ಧಿ ಹೇಳಲೂ, ಎದುರಾ ಡುವವರನ್ನು ಖಂಡಿಸಲೂ ಸಮರ್ಥನಾಗುವ ಹಾಗೆ, ಉಪದೇಶಕ್ಕೆ ಅನುಸಾರವಾ ದ ನಂಬಿಕೆಯಾದ ವಾಕ್ಯವನ್ನು ಕೈಕೊಳ್ಳ ಬೇಕು.

೧. ಪೌಲನು ತೀತನನ್ನು ಕ್ರೇತದ್ವೀಪದಲ್ಲಿ ಪುನಾ ಸ್ಥಾಗಿ ಸ್ಥಾಪಿಸಿದ ಸಭೆಗಳಿಗೆ ಅಧ್ಯಕ್ಷಿಯಾಗಿ ನೇಮಕ ಮಾಡಿ ಬಿಟ್ಟು ಬಂದು, ಉದ್ಯೋಗ ವೃತ್ತಿಗೆ ಬೇಕಾ ದ ಅಧಿಕಾರವನ್ನು ಅವನಲ್ಲಿ ಧೃಢ ಪಡಿಸುವ ಉದ್ದಿ ಶ್ಯವಾಗಿ ಈ ಪತ್ರಿಕೆಯನ್ನು ಬರದಿದ್ದಾನೆಂದು, ಈ ಮಾ ತಿನಿಂದ ಸೂಚಿತವಾಗಿದೆ.

೨. ಅಂದರೆ, ಒಬ್ಬನು ಒಳ್ಳೆ ಕ್ರೈಸ್ತಮನೇ ಯಜಮಾನನಾಗಿ ಪೆಸರ್ವಾಸಿಯಾದರೆ. ಮನೆಯನ್ನು ಚ ನ್ನಾಗಿ ಆಳಿ ಕಾಳ್ಳುವವನು ಕ್ರೈಸ್ತಸಭೆಯನ್ನು ಸಹ ಆ ಳುವದಕ್ಕೆ ಅಧಿಕಾರಿಯಾಗುತ್ತಾನೆ. ಇದಕ್ಕೆ ೧ ತಿಮೊ. ೩, ೧—೧೦ ಸರಿ ನೋಡ ಬೇಕು.

೩. ೧ ಕೊರಿ. ೪, ೧೫ ರಲ್ಲಿ ಇದೇ ಅಭಿಪ್ರಾಯ ಸೂಚಿತವಾಗಿದೆ.

ಅಬದ್ಧ ಬೋಧಕರ ವಿಷಯವಾದ ಉದ್ಬೋಧನೆಯು. ೧೦—೧೬.

೧೦. ಯಾಕಂದರೆ ಅನೇಕರೂ, ಮುಖ್ಯವಾಗಿ ಪರಿಛೇದನೆಯವರೂ ೧), ಅವಿಧೇ ಯರೂ, ಹರಟೆ ಮಾತಿನವರೂ, ಮೋಸಗಾರರೂ, ಆಗಿದ್ದಾರೆ. ೧೧. ಅವರ ಬಾ ಯಿಗಳನ್ನು ಮುಚ್ಚ ಬೇಕು; ಅವರು ದುರ್ಲಾಭಕ್ಕೋಸ್ಕರ ಬಾರದವುಗಳನ್ನು ಬೋಧಿಸಿ, ಪೂರ್ತಿ ಮನೆಗಳನ್ನು ಹಾಳು ಮಾಡುತ್ತಾರೆ. ೧೨. ಅವರಲ್ಲಿ ಅವರ ಸ್ವಂತ ಪ್ರವಾದಿಯಾಗಿರುವ ಒಬ್ಬನು ೨) ಹೇಳಿದ್ದೇನಂದರೆ, ಕ್ರೇತದವರು ಯಾವಾಗಲೂ ಸುಳ್ಳುಗಾರರೂ, ದುಷ್ಟ ಮೃಗಗಳೂ, ಸೋಮಾರಿಯಾದ ಹೊಟ್ಟೆಗಳೂ ಆಗಿದ್ದಾರೆ. ೧೩. ಈ ಸಾಕ್ಷಿಯು ಸತ್ಯವಾಗಿದೆ ೩). ಈ ಕಾರಣದಿಂದ ಅವರು ವಿಶ್ವಾಸದಲ್ಲಿ ಸ್ಥಿರವಾಗಿ, ೧೪. ಯೆಹೂದರ ಕಟ್ಟುಕಥೆಗಳನ್ನೂ, ಸತ್ಯದ ಕಡೆಯಿಂದ ತಿರುಗಿ ಕೊ ಳ್ಳುವ ಮನುಷ್ಯರ ಕಟ್ಟಳೆಗಳನ್ನೂ ೪), ಲಕ್ಷ್ಯ ಮಾಡದ ಹಾಗೆ, ಅವರನ್ನು ಖಂಡಿತ ವಾಗಿ ಗದರಿಸು. ೧೫. ಶುದ್ಧರಿಗೆ ಎಲ್ಲಾ ಶುದ್ಧವೇ ೫); ಆದರೆ ಕಳಂಕಿಗಳಿಗೂ ಅವಿ

ಶ್ರೀಕ. ೧, ೧೬.—೨, ೫.

ಶ್ಚಾಸಿಗಳಿಗೂ ವಿನೂ ಶುದ್ಧವಾಗಿರುವದಿಲ್ಲ; ಅವರ ಬುದ್ಧಿಯೂ ಮನಸ್ಸಾಕ್ಷಿಯೂ ಕಳಂಕವಾಗಿವೆ. ೧೬. ಅವರು ದೇವರನ್ನು ಬಲ್ಲೆವೆಂದು ಹೇಳಿ೮), ಅಸಹ್ಯರಾಗಿಯೂ, ಅವಿಧೇಯರಾಗಿಯೂ, ಸಕಲ ಸತ್‌ಕ್ರಿಯೆಗೆ ಅಪರೀಕ್ಷಿತರಾಗಿಯೂ, ಕ್ರಿಯೆಗಳಿಂದ ಅವನನ್ನು ಅಲ್ಲಗಳೆಯುತ್ತಾರೆ.

೧. ಅಂದರೆ, ಯೆಹೂದ್ಯೆಸ್ತರು. ಯೆಹೂದರು ಪರಜನರಿಗೆ ಸುವಾರ್ತೆಯನ್ನು ಹೇಳುವ ಪೌಲನಿಗೆ ಎಲ್ಲಾ ಕಡೆಯಲ್ಲಿ ಹಿಂಸೆಯನ್ನು ಎಬ್ಬಿಸಿದರು. ಸಭೆಯಲ್ಲಿ ಶೇರಿದ ಯೆಹೂದರಲ್ಲಿ ಅನೇಕರು ತಮ್ಮ ಸಂಪ್ರದಾಯಗಳನ್ನು ಕ್ರೈಸ್ತಸಭೆಯಲ್ಲಿ ಸ್ಥಾಪಿಸ'ಬೇಕೆಂಬ ಆಸಕ್ತಿಯಿಂದ ಶುದ್ಧ ಸುವಾರ್ತಾಬೋಧನೆಯನ್ನು ಕೆಡಿಸಿ, ಸಭೆಯವರನ್ನು ಮೋಸಗಾಳ್ಳಿಸಿ, ಅಪಾಸ್ತಲನಿಗೆ ನಾನಾ ವಿಧವಾದ ತಾಂದರೆಯನ್ನು ಮಾಡುತ್ತಿದ್ದರು.

೨. ಯಾರಂದರೆ, ಗ್ರೀಕಕವಿಯಾದ ಎಪಿಮೆನಿದೆಸ್. ಅವನು ಕ್ರೇತದಲ್ಲಿರುವ ಗ್ನಾಸ್ಸದಲ್ಲಿ ಕ್ರಿಸ್ತಶಕಕ್ಕೆ ಮುಂಚೆ ಏನೆ ಶತಮಾನದಲ್ಲಿ ಹುಟ್ಟಿದನು. ಅವನು ಪ್ರವಾದಿಯಾಗಿ ಹೆಸರ್ವಾಸಿಯಾಗಿದ್ದನು.

೪. ನಾನು ಸಹ, ಅವನು ಹೇಳಿದ್ದು ಸತ್ಯವೆಂದು, ಕಂಡು ತಿಳಿದಿದ್ದೇನೆ.

೪. ಪೌಲನು ಇಲ್ಲಿ ಆ ಯೆಹೂದ್ಯೆಸ್ತರು ದೇವರ ನಿಯಮವೆಂಯ ಹೇಳುತ್ತಾ ಬಂದ ಯೆಹೂದರ ಸಂಪ್ರದಾಯಗಳಿಗೆ ಬೇಕೆಂದು ಮನುಷ್ಯರ ಕಟ್ಟಳೆಗಳೆಂದು ಹೆಸರಿಡುತ್ತಾನೆ. ೧ ತಿಮೊ. ೪, ೩. ಕೊಲಾ. ೨, ೨೧.

೫. ಮನುಷ್ಯರು ಆಹಾರಗಳಿಂದ ಶುದ್ಧಾಶುದ್ಧರಾಗುವದಿಲ್ಲವೆಂದು, ಯೇಸುವು ಮತ್ತಾ. ೧೫, ೧೭—೨೦ಲ್ಲಿ ಹೇಳಿದನು.

೬. ಇದಕ್ಕೆ ಯಾಕೋಬ್ಯಾ. ೧, ೬. ೭. ಸರಿ ನೋಡಬೇಕು.

ಸ. ೨.

ಹಿರಿಯರಿಗೂ ಮಕ್ಕಳಿಗೂ ಆಳುಗಳಿಗೂ ಉಪಯೋಗವಾದ ನೀತಿ ಸೂಚನೆಯು. ವ. ೧—೧೦.

೧. ಆದರೆ ನೀನು ಸ್ವಸ್ಥ ಬೋಧನೆಗೆ ಯೋಗ್ಯವಾದವುಗಳನ್ನು೧) ಮಾತಾಡು. ೨. ವಿನಂದರೆ ಹಿರಿಯರು ಎಚ್ಚರಿಕೆಯುಳ್ಳವರಾಗಿಯೂ, ಘನವುಳ್ಳವರಾಗಿಯೂ, ಮನೋಸ್ವಸ್ಥರಾಗಿಯೂ, ವಿಶ್ವಾಸ ಪ್ರೀತಿ ತಾಳ್ಮೆಗಳಲ್ಲಿ ಆರೋಗ್ಯವುಳ್ಳವರಾಗಿಯೂ, ಇರಬೇಕು. ೩. ಅದೇ ಪ್ರಕಾರ ಹಿರ್ಯೆ ಹೆಂಗಸರು ಪರಿಶುದ್ಧರಿಗೆ ತಕ್ಕ ನಡತೆಯುಳ್ಳವರಾಗಿದ್ದು, ಚಾಡಿಗಾರ್ತಿಯರೂ, ಬಹಳ ದ್ರಾಕ್ಷೇರಸಕ್ಕೆ ವಶವಾದವರೂ, ಆಗಿರದೆ, ೪. ಒಳ್ಳೇದನ್ನು ಬೋಧಿಸುವವರಾಗಿ, ಯೌವನ ಸ್ತ್ರೀಯರಿಗೆ, ೫. ದೇವರ ವಾಕ್ಯವು ದೂಷಿಸಲ್ಪಡದ ಹಾಗೆ, ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿ ಮಾಡಿ, ಮನೋಸ್ವಸ್ಥರೂ, ನಿರ್ಮಲರೂ, ಒಳ್ಳೇ ಸಂಸಾರಿಗಳೂ, ಒಳ್ಳೆಯವರೂ೨), ಸ್ವಂತ ಗಂಡಂದಿರಿಗೆ ಒಳ

ದೇವರ ಕ್ಷೇಮಕರ ಕೃಪೆ.

ತೀತ. ೨, ೬—೧೪.

ಗಾಗುವವರೂ, ಆಗಿರುವದಕ್ಕೆ ಬುದ್ಧಿ ಹೇಳ ಬೇಕು. ೬. ಅದೇ ಪ್ರಕಾರ ಯೌವನಸ್ಥರಿಗೆ, ಮನಸ್ಸಿಸ್ಸವಾಗಿರ ಬೇಕೆಂದು, ಬುದ್ಧಿ ಹೇಳು. ೭. ಎಲ್ಲವುಗಳಲ್ಲಿ ನಿನ್ನನ್ನುಸತ್‌ಕ್ರಿಯೆಗಳ ಮಾದರಿಯಾಗಿ ತೋರಿಸು. ೮. ಎದುರಾಳಿಯು ನಿಮ್ಮಮೇಲೆ ಯಾವ ಕೇಡನ್ನೂ ಹೇಳ ಕೂಡದೆ ನಾಚಿಕೆ ಪಡುವ ಹಾಗೆ, ಬೋಧನೆಯಲ್ಲಿ ನಿರ್ಮಲತ್ವವನ್ನೂ, ಘನತೆಯನ್ನೂ, ಯಥಾರ್ಥತ್ವವನ್ನೂ, ಸ್ಪಷ್ಟವಾದ ತಪ್ಪಿಲ್ಲದ ವಾಕ್ಯವನ್ನೂ, ತೋರಿಸು. ೯. ದಾಸರು ಎಲ್ಲಾದರಲ್ಲಿ ನಮ್ಮ ರಕ್ಷಕನಾದ ದೇವರ ಬೋಧನೆಯನ್ನು ಅಲಂಕರಿಸುವ ಹಾಗೆ೫), ಸ್ವಂತ ಯಜಮಾನರಿಗೆ ಒಳಗಾಗಿದ್ದು, ಎಲ್ಲವುಗಳಲ್ಲಿ ಮೆಚ್ಚಿಸುವವರಾಗಿ೬), ಎದುರು ಮಾತಾಡದೆ, ಕದಿಯದೆ, ೧೦. ಎಲ್ಲಾ ಒಳ್ಳೇ ನಂಬಿಕೆಯನ್ನು ತೋರಿಸ ಬೇಕೆಂದು ಬುದ್ಧಿ ಹೇಳು.

೧. ಅಬದ್ಧಬೋಧಕರು ಸುವಾರ್ತೆಗೆ ವಿಪರೀತವಾಗಿ ಹೇಳುತ್ತಾ ಬರುವ ವ್ಯರ್ಥ ಜ್ಞಾನೋಪದೇಶವನ್ನು ಮಾಡದೆ, ಸಹೆಯವರನ್ನು ಕ್ರೈಸ್ತಧರ್ಮ ಮಾರ್ಗದಲ್ಲಿ ನಡಿಸುವ ಆಸಕ್ತಿಯಿಂದ ನೀತಿಯ ಉಪದೇಶದಲ್ಲಿ ಜಾಗರೂಕನಾಗಿರು.

೨. ಅಂದರೆ, ಪರೋಪಕಾರಿಗಳಾದ ದಯಾಳುಗಳು.

೩. ಚಕ್ಕರ ಒಳ್ಳೆ ನಡತೆಯಿಂದ ಸುವಾರ್ತೆಗೆ ಮಾನವೂ, ಕೀರ್ತಿಯೂ ಬರುತ್ತದೆ.

೪. ಒಳ್ಳೆ ಆಳು, ಯಜಮಾನನು ಕಾಡುವ ಅಪ್ಪಣೆಯನ್ನು ಕೈಕಾಳ್ಳುವದಲ್ಲದೆ, ವಿಶೇಷ ಆಜ್ಞೆಯಿಲ್ಲದೆ ಧಣಿಯನ್ನು ಎಲ್ಲಾದರಲ್ಲಿಯೂ ಮೆಚ್ಚಿಸ ಬೇಕೆಂದು ಉದ್ಯುಕ್ತನಾಗಿದ್ದಾನೆ.

ಕ್ರಿಸ್ತ ಯೇಸುವಿನಲ್ಲಿ ಎಲ್ಲರಿಗೂ ಪ್ರತ್ಯಕ್ಷವಾದ ದೇವರ ಕ್ಷೇಮಕರ ಕೃಪೆಯು ಶುದ್ಧೀಕರಣದ ಮುಖ ಹೇತುವಾಗಿರುವದು. ವ. ೧೧—೧೫.

೧೧. ಯಾಕಂದರೆ೧) ರಕ್ಷಣೆಗಾಗಿರುವ ದೇವರ ಕೃಪೆಯು೨) ಮನುಷ್ಯರೆಲ್ಲರಿಗೆ ಪ್ರಸಿದ್ಧಿಯಾಗಿ೩), ೧೨. ನಾವು ಭಕ್ತಿಹೀನತ್ವವನ್ನೂ ಲೌಕಿಕ ಆಶೆಗಳನ್ನೂ೪) ಬಿಟ್ಟು ಬಿಟ್ಟು, ಮನಸ್ಸಿಸ್ಸವಾಗಿಯೂ ನೀತಿಯಾಗಿಯೂ ಭಕ್ತಿಯಾಗಿಯೂ ಈಗಿನ ಲೋಕದಲ್ಲಿ ಬದುಕಿ೫), ೧೩. ಭಾಗ್ಯವಾದ ನಿರೀಕ್ಷೆಯನ್ನೂ, ಮಹಾ ದೇವರೂ, ನಮ್ಮ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮಹಿಮೆಯ (ಪ್ರತ್ಯಕ್ಷತೆಯನ್ನೂ೬), ಎದುರು ನೋಡುವ ಹಾಗೆ೭), ನಮ್ಮನ್ನು ಉಪದ್ರೇಶಿಸುತ್ತದೆ೮). ೧೪. ಅವನು ಸಕಲ ಅನೀತಿಯಿಂದ ನಮ್ಮನ್ನು ವಿಮೋಚಿಸುವದಕ್ಕೂ೯), ಸತ್‌ಕ್ರಿಯೆಗಳಲ್ಲಿ ಆಸಕ್ತಿಯಾಗಿರುವ ೧೦)ಸ್ವಂತ(ಪ್ರಜೆಯನ್ನು ತನಗೆ ಪರಿಶುದ್ಧ ಮಾಡುವದಕ್ಕೂ, ನಮಗಾಶ್ಚರ್ಯ ತನ್ನಂತು

೯೨೨ ಅಪೌ. ಚ. ೩. ಪರಿಚ್ಛೇದ. ಅಪೌಸ್ತಲರ ಅಂಶ್ವ(ಪ್ರವೃತ್ತಿ.

ಶ್ರೇಷ್ಠ. ೨, ೧೫೯—೫, ೫.

ಕೌಟ್ಟನು ೧೧). ೧೫೯. ೫ವುಗಳನ್ನು ಮಾತಾಡಿ, ಬುದ್ಧಿ ಹೇಳಿ, ಸಕಲ ಅಧಿಕಾರದಿಂದ ಗದರಿಸು. ಯಾವನಾದರೂ ನಿನ್ನನ್ನು ಉದಾಸೀನ ಮಾಡದಿರಲಿ ೧೨).

೧. ೫ಲ್ಲಿ ಆಳುಗಳ ಧರ್ಮಬಾೀಧನಾೀಚಿತವಾಗಿ ಬರದ ಮಾತು ಚಕ್ತರಿಗೆಲ್ಲಾ ಉಪಯೋಗವಾದ ನೀತಿವಾಕ್ಯವಾಗಿದೆ.

೨. ಸೂರ್ಯನು ಅನುದಿನವು ಮೂಡಿ, ಲೌಕಿಕ ನಿವಾಸಿಗಳಿಗೆಲ್ಲಾ ಪ್ರಕಾಶವನ್ನು ಕಾಡುವ ಪ್ರಕಾರ, ಪಾಪಿಗಳನ್ನು ರಕ್ಷಿಸುವ ದೇವರ ಕೃಪೆಯ ಮಹಿಮೆಯು ಯೇಸು ಕ್ರಿಸ್ತನಲ್ಲಿ ಎಲ್ಲರಿಗೂ ಉದಯವಾಯಿತು.

೩. ಅದು ಯೇಸು ಕ್ರಿಸ್ತನ ವಿಮೋಚನಾಕಾರ್ಯದಲ್ಲಿ ಪೂರ್ಣ ಪ್ರಕಟವಾಯಿತು.

೪. ೫ವು ನಿಜಚಕ್ತಿಗೆ ವಿರೋಧವಾಗಿವೆ. ಲೌಕಿಕ ಆಶೆಗಳಿಂದ ದುರ್ವಿಷಯಾಸಕ್ತನಿಗೆ ನಾನಾ ಪ್ರಕಾರದ ನಷ್ಟವು ಪುಟ್ಟುವದಲ್ಲದೆ, ಅವನು ಪರರಿಗೂ ಅನೇಕ ಬಗೆಯಾಗಿ ಅನ್ಯಾಯ ಮಾಡುತ್ತಾನೆ. ಚಕ್ತನು ತಾನು ಸೌಖ್ಯವಾಗಿದ್ದು, ಪರರಿಗೂ ಉಪಕಾರಿಯಾಗುತ್ತಾನೆ.

೫. ೫ಲ್ಲಿ ಬರದ ಮೂರು ಶಬ್ದದಿಂದ ಸ್ವಕೀಯ್ಯ ಪರಕೀಯ್ಯ ದೈವೀಯ್ಯ ನೀತಿಯ ಮೂರು ವಿಧವು ಕ್ಷಪ್ತವಾಗಿ ಸೂಚಿತವಾಗಿದೆ.

೬. ಯೇಸು ಕ್ರಿಸ್ತನಲ್ಲಿ ಪ್ರತ್ಯಕ್ಷವಾದ ದೇವರ ಕೃಪೆಯ ವಿಶ್ವಾಸಕ್ಕೆ ಆತನ ಮಹಿಮೆಯ ದಿವಸದ ಆಶೆಯಿಂದ ಬಲವು ಪುಟ್ಟುತ್ತದೆ.

೭. ಈ ಆಶೆಯು ನಿಜಕ್ರೈಸ್ತಗುಣದ ಮುಖ್ಯ ಚಿನ್ಹೆಯಾಗಿದೆ. ೧ ಥೆಸ್ಸ. ೧, ೧೦. ಫಿಲಿ. ೩, ೨೦.

೮. ಅಂದರೆ ಈ ಉಪದೇಶಕ್ಕೆ ನಾವು ವಿಧೇಯರಾಗಿರ ಬೇಕು.

೯. ಪಾಪಪರಿಹಾರದಿಂದ ಮಾತ್ರವಲ್ಲ, ಶುದ್ಧೀಕರಣದಿಂದ ಸಹ. ಪಾಪಪರಿಹಾರದ ಕೃಪೆಯನ್ನು ಸತ್ಯವಾಗಿ ಪಡಾಂದಿದವನು ತನಗೆ ಪ್ರಾಪ್ತವಾದ ಪರಿಶುದ್ಧಾತ್ಮದಿಂದ ಪರಿಶುದ್ಧನಾಗುತ್ತಾನೆ.

೧೦. ತನಗೆ ವಿಧೇಯವಾದ ಪರಿಶುದ್ಧ ಜನಾಂಗವನ್ನು ಪಡದು ಕಾಳ್ಳುವದು ಯೇಸು ಕ್ರಿಸ್ತನ ರಕ್ಷಣೆಯ ಉದ್ದಿಶ್ಯವೆಂದು, ೫ಲ್ಲಿ ಸೂಚಿತವಾಗಿದೆ.

೧೧. ಅಂದರೆ, ತನ್ನ ಪ್ರಾಣವನ್ನು ನಮ್ಮ ಪಾಪ ಬಲಿಯಾಗಿ ಅರ್ಪಿಸಿದನು.

೧೨. ಸಹಾಬಾೀಧಕನು ಉದ್ಯೋಗವೃತ್ತಿಗೆ ಬೇಕಾದ ಅಧಿಕಾರವನ್ನು ಪಡಾಂದುವ ಬಗ್ಗೆ ಸುವಾರ್ತಾಬಾೀಧನೆಯಲ್ಲಿ ಆಸಕ್ತನಾಗಿರ ಬೇಕು. ಆತ್ಮದಲ್ಲಿ ಚುರುಕಾಗಿರುವನೇ ಆತ್ಮಿಕ ಬಲವನ್ನು ಪಡೆಯುತ್ತಾನೆ.

೨. ೫.

ಅಧ್ಯಕ್ಷೋದ್ಯೋಗ ವೃತ್ತಿಯ ವಿಷಯವಾದ ಬೇರೆ ಬಾೀಧನೆಗಳು.

೧. ಅವರು ದಾರೆತನಗಳಿಗೂ ಅಧಿಕಾರಗಳಿಗೂ ಒಳಗಾಗಿ ೧), ವಿಧ್ಯೇಯರಾಗಿಯೂ ಸಕಲ ಸತ್‌ಕ್ರಿಯೆಗೆ ಸಿದ್ಧರಾಗಿಯೂ ೫ದ್ದು, ೨. ಯಾರನ್ನೂ ದೂಷಿಸದೆ, ಯುಗಳವಾಡದೆ, ಸಾಧುಗಳಾಗಿದ್ದು, ಮನುಷ್ಯರೆಲ್ಲರಿಗೆ ಸಕಲ ಸಾತ್ವಿಕತ್ವವನ್ನು ತೋರಿಸ ಬೇಕೆಂದು ಅವರಿಗೆ ಜ್ಞಾಪಕ ಕೊಡು. ೩. ಹೇಗಂದರೆ ನಾವು ಸಹ ೨) ಪೂರ್ವದಲ್ಲಿ ಬುದ್ಧಿಹೀನರೂ, ಅವಿಧ್ಯೇಯರೂ, ಮಾರ್ಗ ತಪ್ಪಿದವರೂ, ನಾನಾ ಆಶೆ

ದೇವರ ಕ್ಷೇಮಕರ ಕೃಪೆ.

ಶೀತ. ೩, ೪—೭.

ಕ್ರಿಯಾಗಳಿಗೆ ದಾಸರೂ, ಕೆಟ್ಟತನ ಹಾಗೂ ಕೆಚ್ಚುಗಳಲ್ಲಿ ಪ್ರವರ್ತಿಸುವವರೂ, ಅಸಂಹ್ಯರೂ, ಒಬ್ಬರನ್ನೊಬ್ಬರು ಹಗೆ ಮಾಡುವವರೂ, ಆಗಿದ್ದೆವು. ೪. ಆದರೆ ನಮ್ಮ ರಕ್ಷಕನಾದ ದೇವರ ದಯವೂ ಮನುಷ್ಯರ ಮೇಲಿರುವ ಪ್ರೀತಿಯೂ ಪ್ರಸಿದ್ಧಿಯಾದಾಗ ೫), ೫. ನಾವು ಮಾಡಿದ ನೀತಿಯ ಕ್ರಿಯೆಗಳಿಂದಲ್ಲ ೬), ತನ್ನ ಕರುಣೆಯ ಪ್ರಕಾರವೇ, ಪುನರ್ಜನ್ಮದ ೭) ತೊಳೆಯುವಿಕೆಯಿಂದಲೂ, ೬. ತಾನು ನಮ್ಮ ರಕ್ಷಕನಾದ ಯೇಸು ಕ್ರಿಸ್ತನಿಂದ ೮) ಐಶ್ವರ್ಯವಾಗಿ ೯) ನಮ್ಮ ಮೇಲೆ ಹೊಯಿದ ಪರಿಶುದ್ಧಾತ್ಮನ ನವೀಕರಣದಿಂದಲೂ ೧೦), ೭. ನಾವು ಅವನ ಕೃಪೆಯಿಂದ ೧೧) ನೀತಿನಿರ್ಣಯ ಪಟ್ಟು ೧೨), ನಿಶ್ಚಜೀವದ ನಿರೀಕ್ಷೆಯ ಪ್ರಕಾರ ೧೩) ಬಾಧ್ಯಸ್ಥರಾಗುವ ಹಾಗೆ ೧೪), ನಮ್ಮನ್ನು ರಕ್ಷಿಸಿದನು ೧೫).

೧. ಕ್ರೇತದ್ವೀಪದವರು ರೋಮಿಯ ಸರಕಾರಕ್ಕೆ ವಿರೋಧವಾಗಿ ಆಗಾಗ್ಗೆ ಪುಂಡು ಎಬ್ಬಿಸುವವರೆಂದು ಪೌಸರ್ಗಾಂಡಿದ್ದರು. ಸಭೆಯವರಿಗೆ ಈ ತರದ ಅಕ್ರಮವು ಪೂರ್ಣ ಅಯೋಗ್ಯವಾಗಿದೆ. ಅದು ಅನುದಿನವು ಆಗ ತಕ್ಕ ಸಚಾಪ್ರಾರ್ಥನೆಗೆ ವಿರೋಧವಾದದ್ದು. ೧ ತಿಮೊ. ೨, ೧—೩.

೨. ಅಪಾಸ್ತಲನು ಗ್ರೇಕನಾಗಿ ಹುಟ್ಟಿದ ತೀತನನ್ನೂ, ಯೆಹೂದನಾಗಿ ಹುಟ್ಟಿದ ತನ್ನನ್ನೂ ನೆನಸಿ, ಈ ಮಾತಿನಿಂದ ಯೆಹೂದರೂ, ಪರಜನರೂ ಆದ ಎಲ್ಲಾ ನರಜಾತಿಯವರು ಯೇಸು ಕ್ರಿಸ್ತನ ಕೃಪೆಯ ಪಾತ್ರರು ಅರಕ್ಷರಾಗಿದ್ದಾರೆಂದೂ, ಆತನ ಕೃಪೆಯು ದಾರಕೆದರೆ, ಯಾರೂ ಅರಕ್ಷರಲ್ಲವೆಂದೂ, ಸೂಚಿಸುತ್ತಾನೆ.

೩. ಸರ್ವಲೋಕಹಿತನೂ, ದಯಾಳುವೂ ಆದ ದೇವರ ಕೃಪೆಯು ಪ್ರಕಟವಾದಾಗ ಗತಿಯಿಲ್ಲದ ಪಾಪಿಗಳಾದ ನಮಗೂ ರಕ್ಷಣೆಯು ಪ್ರಾಪ್ತವಾಯಿತು. ಈ ರಕ್ಷಣೆಯ ಮೂಲಕಾರಣವೇನೆಂದರೆ: ಅಮಿತ ಲೋಕೋಪಕಾರಿತ್ವವನ್ನು ಹುಟ್ಟಿಸುವ ದೇವರ ದಯಾಳುತ್ವವು.

೪. ಪಾಪಿಗಳಾದ ಮನುಷ್ಯರ ಪುಣ್ಯವು ಪುಣ್ಯವಲ್ಲ; ಪಾಪಿ ಮಾಡುವ ಎಲ್ಲಾ ಕೃತ್ಯಗಳಲ್ಲಿ ಪಾಪದೋಷವು, ಮನುಷ್ಯರಿಗೆ ಗೋಚರವಾಗದಿದ್ದರೂ, ದೇವರಿಗೆ ಕಾಣುತ್ತದೆ. ಮನುಷ್ಯರು ಪೂರ್ಣವಾಗಿ ಕೆಟ್ಟು ಪಾಪಾಧೀನರಿಂದಲೇ ದೇವರು ನಮ್ಮನ್ನು ಕರುಣಿಸಿದ್ದಾನೆ.

೫. ಈ ಮಾತು ಸ್ನಾನವನ್ನು ಸೂಚಿಸುತ್ತದೆ. ಆದ್ದರಿಂದ ಪರಿಶುದ್ಧಾತ್ಮದಿಂದಾಗುವ ನವೀಕರಣವು ಅದಕ್ಕೆ ಜೋಡುಮಾತಾಗಿ ೬ನೆ ವಚನದಲ್ಲಿ ಶೇರಿಯದೆ. ಸ್ನಾನದ ವಿಷಯವಾಗಿ ದೇವರ ಕೃಪೆಯ ನಿಯಮಕ್ಕೆ ಅನುಸಾರವಾದ ಮಾರ್ಗ ಯಾವದಂದರೆ: ಸುವಾರ್ತೆಯನ್ನು ಕೇಳಿದವರು, ದೇವರಿಗೆ ವಿಧೇಯರಾಗಿ, ಅದನ್ನು ನಂಬಿ, ಮಾನಸಾಂತರವಾಗಿ, ಯೇಸು ಕ್ರಿಸ್ತನ ಆಜ್ಞಾನುಸಾರವಾಗಿ ಸ್ನಾನವನ್ನು ತೆಗದು ಕಾಂಡು, ಪರಿಶುದ್ಧಾತ್ಮವನ್ನು ಪಡೆಕಾಂದಿ, ಪಾಪದ ನಿಮಿತ್ತ ಸತ್ತು, ಸತ್ತವರಾಳಗಿಂದ ಎದ್ದ ಯೇಸು ಕ್ರಿಸ್ತನ ಐಕ್ಯದಲ್ಲಿ ಶೇರಿ, ನೂತನ ಮನುಷ್ಯರಾಗುತ್ತಾರೆ.

೬. ಯೇಸುವು ವಿಮೋಚನಾಕಾರ್ಯದ ಮೂಲವಾಗಿ ಪರಿಶುದ್ಧಾತ್ಮವನ್ನು ನಮಗೆ ಕಾಡುವ ಅಧಿಕಾರವನ್ನು ಪಡದಿದ್ದಾನೆ. ಆದ್ದರಿಂದ ಚಕ್ತರು ಪಡೆಕಾಂದುವ ಆತ್ಮಕ್ಕೆ ಕ್ರಿಸ್ತನ ಆತ್ಮವೆಂಬ ಪೆಸರದೆ. ರೋಮಾ. ೮, ೯.

೭. ಅಪಾಸ್ತಲರ ಮೇಲೆಯೂ, ಪ್ರಥಮ ಸಭೆಯವರ ಮೇಲೆಯೂ, ಪರಿಶುದ್ಧಾತ್ಮವು ಅತಿಶಯವಾದ ಬಲದಿಂದ ಇಳಿದು ಬಂದು, ನಾನಾ ವಿಧವಾದ ವರಗಳಿಂದ ತನ್ನ ಮಹಿಮೆಯನ್ನು ಪ್ರಕಟ ಮಾಡಿದನು. ಆದರೆ ಎಲ್ಲಾ ಕಾಲಗಳಲ್ಲಿ ಪೂರ್ಣ ಪ್ರಾಯದಿಂದ

ತೀತ. ೩, ೪—೧೧.

ಯೇಸು ಕ್ರಿಸ್ತನನ್ನು ನಂಬುವವರಿಗೆ ಪರಿಶುದ್ಧಾತ್ಮದ ಕೃಪೆಯು ಐಶ್ವರ್ಯವಾಗಿ ಪ್ರಾಪ್ತವಾಗುವದು.

೬. ಸ್ನಾನದಲ್ಲಿ ಉಂಟಾದ ಕೃಪೆಯ ಕಾರ್ಯವು ಅನುದಿನವು ಚಕ್ಕನಲ್ಲಿ ಆಗುತ್ತದೆ. ಯಾಕಂದರೆ ಪರಿಶುದ್ಧಾತ್ಮದ ಶಕ್ತಿಯು ಕುಂದದೆ ಸದಾನೂತನವಾಗಿದೆ.

೯. ಪರಿಶುದ್ಧಾತ್ಮದಿಂದ ಚಕ್ಕನಲ್ಲಿ ಆಗುವಂಥಾದ್ದೆಲ್ಲಾ ಕ್ರಿಸ್ತನ ಕೃಪಾಪ್ರಸಾದವೆಂದು, ಪೌಲನು ತಿರಿಗಿ ಜ್ಞಾಪಿಸುತ್ತಾನೆ.

೧೦. ಯೇಸು ಕ್ರಿಸ್ತನ ಕೃಪೆಯಿಂದ ಪಾಪಪರಿಹಾರವನ್ನು ಪಡಕೊಂಡಿದವರು ಆತನ ಆತ್ಮದ ಮುಖಾಂತರ ಆತನ ನೀತಿಯನ್ನು ಪಡದು ಕಾಳ್ಳುತ್ತಾರೆ.

೧೧. ಚಕ್ಕನ ಹೃದಯದಲ್ಲಿ ಪರಿಶುದ್ಧಾತ್ಮದ ತ್ರಾಣವು ವೃದ್ಧಿಯಾಗುವ ಪ್ರಕಾರ ನಿತ್ಯ ಜೀವದ ಆಶೆಯು ಹೆಚ್ಚು ಹೆಚ್ಚಾಗಿ ಬಲವಾಗುತ್ತದೆ.

೧೨. ಇದು ದೇವರ ಪೂರ್ಣ ಕೃಪಾಕಾರ್ಯದ ಸಮಾಪ್ತಿಯೂ, ಸಿದ್ಧಿಯೂ ಆಗಿದೆ.

೧೩. ಅಂದರೆ, ನಮ್ಮನ್ನು ರಕ್ಷಣೆಯ ಮಾರ್ಗದಲ್ಲಿ ಶೇರಿಸಿದ್ದಾನೆ. ಆತನಿಂದುಂಟಾದ ರಕ್ಷಣೆಯ ಬಲವನ್ನು ನಮ್ಮ ಹೃದಯಗಳಲ್ಲಿ ಅನುಭವಿಸಿ ಕಾಂಡಿದ್ದೇವೆ.

೮. ನಂಬಿಕೆಯಾದ ವಾಕ್ಯವು ಇದ್ದೀ ೧)—ದೇವರನ್ನು ವಿಶ್ವಾಸಿಸಿದವರು ಸತ್‌ಕ್ರಿಯೆಗಳನ್ನು ನಡಿಸ ಜಾಗ್ರತೆ ಮಾಡುವ ಹಾಗೆ, ಇವುಗಳನ್ನೇ ೨) ನೀನು ಸ್ಥಿರವಾಗಿ ಬೋಧಿಸ ಇಚ್ಛೆಪಡುತ್ತೇನೆ. ಇವು ಮನುಷ್ಯರಿಗೆ ಒಳ್ಳೆಯವುಗಳೂ ಪ್ರಯೋಜನವಾದವುಗಳೂ ಆಗಿವೆ. ೯. ಆದರೆ ಹುಚ್ಚು ಪ್ರಶ್ನೆಗಳಿಗೂ, ವಂಶಾವಳಿಗಳಿಗೂ ೩), ಶರ್ಕಗಳಿಗೂ, ನ್ಯಾಯಪ್ರಮಾಣದ ಝಗಳಗಳಿಗೂ ದೂರವಾಗಿರು. ಯಾಕಂದರೆ ಅವು ನಿಷ್ಪ್ರಯೋಜಕವೂ ವ್ಯರ್ಥವೂ ಆಗಿವೆ. ೧೦. ಸ್ವೇಚ್ಛಾಕಾರಿಯಾದ ೪) ಮನುಷ್ಯನನ್ನು ಒಂದೆರಡು ಸಾರಿ ಬುದ್ಧಿ ಹೇಳಿದ ಮೇಲೆ ತಳ್ಳಿ ಬಿಡು. ೧೧. ಇಂಥವನು ಭಬ್ಬಿಬ್ಬಾಗಿ, ತನಗೆ ತಾನೇ ಆಜ್ಞೆ ಶಿರಿಸಿದವನಾಗಿ, ಪಾಪ ಮಾಡುತ್ತಾನೆಂದು ತಿಳಿದಿರು.

೧. ಈ ಮಾತು ೪—೭ಲ್ಲಿ ಬರದ ಅಭಿಪ್ರಾಯವನ್ನು ಸೂಚಿಸುತ್ತದೆ. ಅಬದ್ಧ ಬಾಧಕರ ಜ್ಞಾನವಾದವು ಅವಿಶ್ವಾಸ ನೀಯವಾದದ್ದೆಂದು, ಪೌಲನು ಜಾಡೆಯಾಗಿ ತಿಳಿಸುತ್ತಾನೆ.

೨. ಯೇಸು ಕ್ರಿಸ್ತನನ್ನು ವಿಶ್ವಾಸಿಸಿದ ಚಕ್ಕನಲ್ಲಿ ಪರಿಶುದ್ಧಾತ್ಮಕ್ಕೂ, ನಿಜ ಸುವಾರ್ತಾವಾಕ್ಯಕ್ಕೂ ಅನುಸಾರವಾದ ಬಾಧನೆಯಿಂದ ಸತ್‌ಕ್ರಿಯೆಗಳೆಂಬ ಫಲವನ್ನು ಸಹಜವಾಗಿ ಫಲಿಸುವ ಬುದ್ಧಿಯು ಪುಟ್ಟುತ್ತದೆ. ಈ ಬುದ್ಧಿಯು ಕ್ರೈತವಪರಾದ ಸಭೆಯವರಲ್ಲಿ ಬೆಳೆಯುವ ಹಾಗೆ, ತೀತನು ಕೈಲಾಗುವ ಮಟ್ಟಿಗೂ ಉದ್ಯುಕ್ತನಾಗಿರ ಬೇಕೆಂದು, ಪೌಲನು ಎಚ್ಚರಿಸುತ್ತಾನೆ.

೩. ಇದಕ್ಕೆ ೧ ತಿಮೊ. ೧, ೪. ಸರಿ ನೋಡ ಬೇಕು.

೪. ಅಂದರೆ, ಅಪಾಸ್ತಲರ ಉಪದೇಶವನ್ನೂ, ಸಭೆಯ ಬಾಧನೆಯನ್ನೂ ಅಸಡ್ಡೆ ಮಾಡಿ, ತಾನು ಸಾರವಾಗಿ ಬಾಧನೆಯನ್ನು ಕಲ್ಪಿಸುವ ಮನುಷ್ಯನು ಸ್ವೇಚ್ಛಾಕಾರಿಯೆಂದು ಪೌಲನು ಹೇಳುತ್ತಾನೆ. ಆದರೆ ದೇವರ ಸತ್ಯವನ್ನು ವಿಸರ್ಜಿಸಿದ ಸಭೆಗಳು ಅಪಾಸ್ತಲರ ಬಾಧನೆಯನ್ನು ಯಥಾರ್ಥವಾಗಿ ನಂಬಿ ಕೈಕಾಳ್ಳುವ ಚಕ್ಕರಿಗೆ ಬಹುಶಃ ಸ್ವೇಚ್ಛಾಕಾರಿಗಳೆಂದು ನಿಂದಿಸಿ ದ್ವೇಷ ಮಾಡಿದವು.

೪. ಬಬುಲೋನಿಯದಲ್ಲಿ ಪೇತ್ರನ ಪ್ರಾಮುಖ್ಯ. ೯–೨೫

ಕೀತ. ೩, ೧೨—೧೯ ಪೇತ್ರ. ೧, ೨.

ಅಂತರ್ವಾಕ್ಯ.

ವ. ೧೨. ಅರ್ತೆಮನಾಗಲಿ ತುಕಿಕನಾಗಲಿ (ಅಪೊ. ಕೃ. ೨೦, ೪. ಎಫೆ. ೬, ೨೧.) ಅಥ್ಯಕ್ಷ್ಯುಬ್ಯೋಗವನ್ನು ನಿನಗೆ ಪ್ರತಿಯಾಗಿ ನಡಿಸುವದಕ್ಕೆ ಕ್ರೇತಕ್ಕೆ ಬಂದನಂತರ, ಬೇಗ ನನ್ನ ಬಳಿಗೆ (ಎಪೀಕದೇಶದ ಪಟ್ಟಣವಾದ) ನಿಕಪೊಲಿಗೆ ಬಾ; ಯಾಕಂದರೆ ಅಲ್ಲಿ ಹಿಮಕಾಲ ಕಳಿಯು ಬೇಕೆಂದಿದ್ದೇನೆ. ವ. ೧೩. (ಯೆಹೂದ ಕ್ರೈಸ್ತನಾದ) ನ್ಯಾಯಶಾಸ್ತ್ರಿಯಾದ ಜೇನನನ್ನೂ, ಅಪೊಲ್ಲೋಸನನ್ನೂ (ಅಪೊ. ಕೃ. ೧೮, ೨೪.), ಅವರ ಪಯಣಕ್ಕೆ ಬೇಕಾದದ್ದೆಲ್ಲಾನ್ನೂ ಕೊಟ್ಟು, ಮುಂಕಳಿಹಿಸು. ವ. ೧೪. ಮತ್ತು ನಮ್ಮ ಸಭೆಯವರಾದ ಕ್ರೇತದವರು ಸಹ ನಿಷ್ಫಲರಾಗಿರದ ಹಾಗೆ ಸುವಾರ್ತಾಸೇವಕರಿಗೆ ಹೀಗೆ ಸಹಾಯ ಮಾಡುವದನ್ನು ಕಲಿತು ಕೊಳ್ಳಬೇಕು. ವ. ೧೫. ನನ್ನ ಸಂಗಡಿಗರೆಲ್ಲರೂ ನಿನ್ನನ್ನು ವಂದಿಸುತ್ತಾರೆ. ನಮ್ಮ ಸ್ನೇಹಿತರಾದ ಭಕ್ತರನ್ನೆಲ್ಲಾ ವಂದಿಸು. ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

ಪೇತ್ರನು ಬಬುಲೋನಿಯದಲ್ಲಿ ಬರೆದ ಪತ್ರಿಕೆಯು.

ಪೇತ್ರನ ಮೊದಲನೇ ಪತ್ರಿಕೆಯು.

ಈ ಪತ್ರಿಕೆಯ ರಚನಾಕಾಲ ಸ್ಥಳಗಳ ವಿಷಯವಾಗಿಯೂ, ಅದರ ತಾತ್ಪರ್ಯೋದ್ದಿಶ್ಯಗಳ ವಿಷಯವಾಗಿಯೂ ತಿಳಿಯ ತಕ್ಕದ್ದನ್ನು ಸರ್ವಸಭಾಪತ್ರಿಕೆಗಳ ಪೀಠಿಕೆಯಲ್ಲಿ ವಿವರಿಸಿದ್ದೇವೆ.

ವಂದನಾವ್ಯಾಕ್ಯ. ಸ. ೧, ೧. ೨.

೧. ಯೇಸು ಕ್ರಿಸ್ತನ ಅಪಾಸ್ತಲನಾದ ಪೇತ್ರನು ಪೊಂತದಲ್ಲಿಯೂ, ಗಲಾತ್ಯದಲ್ಲಿಯೂ, ಕಪ್ಪದಾಕ್ಯದಲ್ಲಿಯೂ, ಆಸ್ಯದಲ್ಲಿಯೂ, ೨. ಬಿಥೂನ್ಯದಲ್ಲಿಯೂ ೧) ಚದರಿರುವಂಥ ೨), ತಂದೆಯಾದ ದೇವರ ಮುಂತಿಳುವಿಕೆಯ ಪ್ರಕಾರ ೩) ಆತ್ಮದ ಶುದ್ಧೀಕರಣದಲ್ಲಿ ವಿಧೇಯಶಕ್ತಿಗಾಗಿಯೂ ಯೇಸು ಕ್ರಿಸ್ತನ ರಕ್ತದ ಬಿಮಿಕಿಸುವಿಕೆಗಾಗಿಯೂ ಆಯಲ್ಪಟ್ಟಂಥ ೪), ಪರದೇಶಸ್ಥರಿಗೆ ೫)—ಕೃಪೆಯೂ, ಸಮಾಧಾನವೂ ೬) ನಿಮಗೆ ಹೆಚ್ಚಿಸಲ್ಪಡಲಿ.

೧. ಪೇತ್ರನು ಬಬುಲೋನಿಯದಲ್ಲಿದ್ದು, ಸಣ್ಣ ಆಸ್ಯದ ದೇಶಗಳಲ್ಲಿದ್ದ ಸಖೆಗಳಿಗೆ ಈ ಪತ್ರಿಕೆಯನ್ನು ಬರೆದನು. ಆ ಸಖೆಗಳು ಮುಖ್ಯವಾಗಿ ಅಪಾಸ್ತಲನಾದ ಪೌಲನಿಂದ ಸ್ಥಾಪಿತವಾಗಿದ್ದವು. ಪೌಲನು ಪ್ರಥಮ ರೋಮಾಪುರಬಂಧನಕಾಲದಲ್ಲಿ ಅವುಗಳಿಗೆ ಎರಡು ಪತ್ರಿಕೆಗಳನ್ನು (ಕೊಲೊ. ಎಫೆ.) ಬರೆದಿದ್ದನು. ಅಪಾಸ್ತಲನಾದ ಪೇತ್ರನು ಲೇಖನಾಭ್ಯಾಸಿಯಾದ ವಿದ್ವಾಂಸನಾಗಿರದೆ, ವೃದ್ಧಾಪ್ಯದ ಮಟ್ಟಿಗೂ ಸುವಾ

ರ್ತಾಚರಿತ್ರಗ್ರಂಥವನ್ನಾದರೂ, ಬಾಧನಾಪತ್ರಿಕೆಯನ್ನಾದರೂ ಬರೆಯದೆ, ಈಗ ಪೆಚ್ಚು ಕವಿಮೆಯಾಗಿ ಎಪ್ಪತ್ತು ವರುಷದವನಾಗಿದ್ದು ಈ ಪತ್ರಿಕೆಯನ್ನು ರಚಿಸಿದ ಕಾರಣವೇನಂದರೆ: ಅಪೌಸ್ತಲನಾದ ಪೌಲನು ಎರಡನೆ ಸಾರಿ ಬಂಧನಗ್ರಸ್ತನಾಗಿ ರೋಮಪುರಕ್ಕೆ ಪೋಗಿ ಬಹಳ ದೂರದಲ್ಲಿದ್ದದರಿಂದಲೂ, ಅಲ್ಲಿ ಅವನಿಗೆ ಏನು ಆಗುವದೆಂದು ತಿಳಿಯದೆ ಇದ್ದದರಿಂದಲೂ, ಸಮೀಪವಾದ ಬಬುಲೋನದಲ್ಲಿ ವಾಸವಾಗಿದ್ದ ಪೇತ್ರನು ಪೂರ್ಣಾತ್ಮನ್ಯೋನ್ಯದಿಂದ ತನಗೆ ಅತಿ ಪ್ರಿಯನಾದ (೨ ಪೇತ್ರ. ೩, ೧೬.) ಜಾತೆ ಅಪೌಸ್ತಲನಾದ ಪೌಲನು ಮುಂಚೆ ಪರಾಮರ್ಶಿಸಿದ ಸಭೆಗಳ ವಿಶ್ವಾಸವನ್ನು ಅವುಗಳಿಗೆ ಬಂದ ಉಪದ್ರವಗಳಲ್ಲಿ ದೃಢ ಪಡಿಸ ಬೇಕೆಂದಿದ್ದನು. ಈ ಸ್ಥಳದಲ್ಲಿ ಬರದ ಪೆಸರುಗಳು ಸಣ್ಣ ಆಸ್ಯದ ಮುಖ್ಯ ದೇಶಗಳ ಪೆಸರುಗಳಾಗಿವೆ. ಪೇತ್ರನು ಈ ಪತ್ರಿಕೆಯನ್ನು ಬರದ ಸ್ವಲ್ಪ ಕಾಲದ ಬಳಿಕ ತಾನೂ ಶೆರೆಯವನಾಗಿ ರೋಮಪುರಕ್ಕೆ ಪೋಗ ಬೇಕಾಯಿತು.

೨. ಅಂದರೆ, ಸರ್ವಲೋಕದಲ್ಲಿ ಚದರಿರುವಂಥ, ಏಕ ಕ್ರೈಸ್ತಸಭೆಯವರಾಗಿದ್ದು, ಪಾಂತದಲ್ಲಿಯೂ ಇತ್ಯಾದಿ ವಾಸವಾಗಿರುವಂಥ.

೩. ಅಪೌಸ್ತಲನು ಸಭೆಯವರ ಪರಿಗಣನೆಯನ್ನು ವಿವರಿಸಿ, ಅ) ಅದರ ಅನಾದಿಯಾದ ಮೂಲವನ್ನು ಸೂಚಿಸುವದರಿಂದ ಅದರ ಘನತ್ವವನ್ನೂ, ದೃಢತ್ವವನ್ನೂ ತೋರಿಸುತ್ತಾನೆ. ಮತ್ತು ಆ) ಅದನ್ನು ನೆರವೇರಿಸುವ ಆತ್ಮದ ಆಂತರ್ಯವೃತ್ತಿಯನ್ನೂ, ಅದರ ಕರಣಗಳಾದ ಕೃಪಾಪ್ರಸಾದಗಳನ್ನೂ ಜ್ಞಾಪಿಸುತ್ತಾನೆ. ಇದಲ್ಲದೆ ಇ) ಅದರಿಂದ ಪುಟ್ಟಿ ತಕ್ಕ ಭಕ್ತಿಯ ನಡತೆಯನ್ನು ಸೂಚಿಸುತ್ತಾನೆ. ಯಾಕಂದರೆ ಪರಿಗಣಿತರಾದವರು ೧. ಸತ್ಯವಾದ ದೇವವಾಕ್ಯವನ್ನು ವಿಧೇಯರಾಗಿ ಅಂಗೀಕರಿಸಿ, ೨. ಮಾನಸಾಂತರವಾಗಿ, ೩. ವಿಶ್ವಾಸದಲ್ಲಿ ದೃಢವಾಗಿರ ಬೇಕು. ಕ್ರಿಸ್ತನ ರಕ್ತದ ತಳಿಸುವಿಕೆಯು ಪರಿಗಣನೆಯ ಮುಖ್ಯ ಕರಣವಾದ ಕೃಪಾಪ್ರಸಾದವಾಗಿದೆ. ಇಬ್ರಿ. ೧೦, ೨೨.

೪. ಅಂದರೆ, ವಿಶಿಷ್ಟ ನರಜಾತಿಯಿಂದ ದೇವರು ಪೆಕ್ಕಿದವರು.

೫. ಈ ಮಾತಿನಿಂದ ಪೇತ್ರನು ಈ ಪತ್ರಿಕೆಯ ಕೆಲವು ಸ್ಥಳಗಳಲ್ಲಿ ಸ. ೧, ೧೩; ೨, ೧೧; ೪, ೭. ಬರದ ತಾತ್ಪರ್ಯವನ್ನು ಸೂಚಿಸುತ್ತಾನೆ. ಅದೇನಂದರೆ: ಪತ್ರಿಕಾವಲೋಕಿಕರು ಪರಿಗಣಿತವಾದ ದೇವರಾಜ್ಯಬಾಧ್ಯಸ್ಥರಾಗಿದ್ದರೂ, ಈಗ ಭೂಲೋಕದಲ್ಲಿ ಪರದೇಶಸ್ಥರಾಗಿದ್ದು, ಪರದೇಶಸಂಚಾರ ಮಾಡುವವರಿಗೆ ಯುಕ್ತವಾಗಿ ನಡದು ಕಾಳ್ಳ ಬೇಕು.

೬. ಆತ್ಮದ ಶುದ್ಧೀಕರಣದಲ್ಲಿಯೂ ವಿಶ್ವಾಸವಿಧೇಯತ್ವದಲ್ಲಿಯೂ ವೃದ್ಧಿಯಾಗುವ ಭಕ್ತರಲ್ಲಿ ಕೃಪೆಯೂ, ಸಮಾಧಾನವೂ ಬೆಳೆಯುತ್ತಾ ಬರುತ್ತವೆ.

ಉಪಕ್ರಮೋಕ್ತಿಯು: ಕ್ರೈಸ್ತರಾದ ಪತ್ರಿಕಾವಲೋಕಿಕರಿಗೆ ಪ್ರಾಪ್ತವಾದ ಕೃಪೆಯ ಸ್ಥಿತಿಯ ವಿಷಯವಾದ ಕೃತಜ್ಞಾಪನೆಯು. ಸ. ೧, ೩—೧೨.

ಅಪೊಸ್ತಲನು ಈ ಕೃಪಾಸ್ಥಿತಿಯನ್ನು ವಿವರಿಸಿ, ಅ. ಮನೋಭಾವದ ವಿಷಯವಾಗಿ ವ. ೩. ಪುನರ್ಜನ್ಮವನ್ನು ವ. ೫. ವಿಶ್ವಾಸದೃಢವನ್ನು, ವ. ೬. (೮.) ನಾನಾ ಉಪದ್ರವಗಳಲ್ಲಿಯೂ ಸ್ಥಿರವಾದ ಲೌಕ್ಯಿಕ ಸಂತೋಷವನ್ನು, ವ. ೮. ಕಾಣದೇ ಇರುವ ಪ್ರಿಯನ ಮೇಲಿರುವ ಪ್ರೀತಿಯನ್ನೂ ದೃಷ್ಟಿರಹಿತವಾದ ವಿಶ್ವಾಸವನ್ನೂ ಇ. ಅದಕ್ಕೆ ಸಂಬಂಧವಾದ ಕೃಪಾಪ್ರಸಾದದ ವಿಷಯವಾಗಿ ೧) ವ. ೩. ೪. ವಚನಗಳ ತಾತ್ಪರ್ಯಾನುಸಾರವಾದ ಮಹಿಮಾಬಾಧ್ಯತೆಯನ್ನೂ, ಅದರ ಜೀವವುಳ್ಳ ಆಶೆಯನ್ನು, ೨) ವ. ೫. ಈ ಪದವಿಯ ಉದ್ದಿಶ್ಯವಾಗಿ ದೇವತ್ರಾಣದಿಂದಾಗುವ ಪರಿಪಾಲನೆಯನ್ನು, ವ. ೭. ಪರದ ಸ್ತೋತ್ರ ಮಹಿಮೆ ಕೀರ್ತಿಗಳನ್ನು, ವ. ೪. ಅವಾಚ್ಯ ಮಹಿಮಾಸಾಖ್ಯವನ್ನು ವ. ೯. ಅಮಿತ ಮಂಗಳವನ್ನು ಸೂಚಿಸುತ್ತಾನೆ. ಇದು

ಕ್ರೈಸ್ತಸ್ಥಿತಿ ಮಹಿಮಾನ್ವಿತವಾದ್ದು.

೧ಪೌಲ್ರ. ೧, ೩—೫.

ವ. ೧೦—೧೨. ಅಪಾರವಾಗಿದೆ. ಪ್ರವಾದಿಗಳು ಸಹ, ಅದು ತಮಗೆ ಇಹದಲ್ಲಿ ಪ್ರಾಪ್ತವಾಗುವದಿಲ್ಲವೆಂದು ತಿಳಿದಾಗ್ಯೂ, ಅದನ್ನು ಧ್ಯಾನಿಸಿ ಪರಿಶೋಧಿಸುತ್ತಾ ಇದ್ದರು. ಮತ್ತು ದೇವದೂತರು ಸಹ ಅದರ ಮರ್ಮವನ್ನು ಗ್ರಹಿಸಲಪೇಕ್ಷಿಸುತ್ತಾರೆ. ಹೀಗೆ ಅಭಿಪ್ರಾಯ ಸಂಬಂಧವನ್ನು ತಿಳಿದು ಕೊಂಡು, ಪ್ರತಿ ವಚನವನ್ನು ಪರೀಕ್ಷಿಸಬೇಕು.

೩. ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರಿಗೆ ಸ್ತೋತ್ರವು. ಅವನು ತನ್ನ ಅಧಿಕವಾದ ಕರುಣೆಯ ಪ್ರಕಾರ, ಯೇಸು ಕ್ರಿಸ್ತನು ಸತ್ತವರಾಳಗಿಂದ ಹೊಂದಿದ ಪುನರುತ್ಥಾನದ ಮೂಲವಾಗಿ ೧), ೪. ನಮ್ಮನ್ನು ಜೀವವುಳ್ಳ ೨) ನಿರೀಕ್ಷೆಗೆ, ಲಯವು ೩) ಕಳಂಕವು ೪) ಕ್ಷಯವು ೫) ಇಲ್ಲದ ಬಾಧ್ಯತೆಗೆ ೬), ತಿರಿಗಿ ಹುಟ್ಟಿಸಿದ್ದಾನೆ ೭). ೫. ಅದು ಕಡೇ ಸಮಯದಲ್ಲಿ ಪ್ರಕಟವಾಗಲಿರುವ ೮) ರಕ್ಷಣೆಗಾಸ್ಪದ ೯) ದೇವರ ಬಲದಿಂದ ವಿಶ್ವಾಸದ ಮೂಲವಾಗಿ ಕಾಪಾಡಲ್ಪಡುವವರಾದ ನಿಮಗೆ ಪರಲೋಕದಲ್ಲಿ ಇಟ್ಟಿದೆ.

೧. ಕ್ರಿಸ್ತನು ತನ್ನ ಪುನರುತ್ಥಾನದಿಂದ ನಮಗೆ ಮಾರ್ಗವನ್ನು ಸಿದ್ಧ ಮಾಡಿದ್ದಾನೆ. ನಮ್ಮ ರಕ್ಷಕನಾದ ಯೇಸುವಿನ ಪುನರುತ್ಥಾನವು ನಮ್ಮ ಪುನರುತ್ಥಾನದ ಆಶೆಗೆ ಮೂಲವಾಗಿರುವದಲ್ಲದೆ, ಆತನು ಪುನರ್ಜಾತರಿಗೆ ತನ್ನ ಆತ್ಮವನ್ನು ಕಾಟ್ಟು, ಈ ಆಶೆಯ ವಿಷಯವಾದ ಪದವಿಗೆ ಅವರನ್ನು ಯೋಗ್ಯರಾಗಿ ಮಾಡುತ್ತಾನೆ.

೨. ಪೂರ್ಣ ದೃಢವಾಗಿರುವ, ಸಂತುಷ್ಟಿಯಾದ, ಬಲವುಳ್ಳ.

೩. ಇದಲ್ಲದೆ ಯಾರೂ ಅದನ್ನು ಅಪಹರಿಸ ಕೂಡದು. ಇತರ ವಿಧವ ದ್ರವ್ಯವು ಮತ್ತಾ. ೬, ೧೯ಲ್ಲಿ ಸೂಚಿತವಾಗಿದೆ.

೪. ಐಹಿಕ ದ್ರವ್ಯವೆಲ್ಲಾ ದೌರ್ಬಲ್ಯಾನ್ವಿತವಾದದ್ದು; ಅದಕ್ಕೆ ಕೂಡಿದ ಅನ್ಯಾಯದಿಂದ ಅದು ಕೆಡುತ್ತದೆ. ದೈವಿಕ ಬಾಧ್ಯತೆಯು ನ್ಯಾಯಪ್ರಾಪ್ತವಾದದರಿಂದ ಪೂರ್ಣ ಸ್ಥಿರವಾಗಿದೆ.

೫. ಐಹಿಕವಾದದ್ದಕ್ಕೆ ಅಪಹಾರವೂ ನಷ್ಟವೂ ಬಾರದಿದ್ದರೂ, ಅದು ಬಾಡಿದ ಪೂವಿನಂತೆ ಕೆಡುತ್ತದೆ, ಅಥವಾ ಪೂರ್ಣಾದರೂ ನಮ್ಮ ಮನಸ್ಸಿಗೆ ಕೆಟ್ಟದೆಂದು ತೋರುತ್ತದೆ. ದೈವಿಕ ಬಾಧ್ಯತೆಯ ಮಹಿಮೆಯು ನಿರಂತರವಾಹದ್ದು.

೬. ಮಕ್ಕಳೇ ಬಾಧ್ಯರು. ದೇವರ ಮಕ್ಕಳು ದೇವರಾಜ್ಯಮಹಿಮೆಗೆ ಬಾಧ್ಯರಾಗಿದ್ದಾರೆ. ಇದರ ತಿಳುವಿಕೆಯಿಂದ ಮಹಿಮೆಯ ಆಶೆಯು ಪುಟ್ಟುತ್ತದೆ.

೭. ಪುನರ್ಜಾತರಿಗೆ ಮಾತ್ರ ಈ ಪದವಿಯುಂಟು. ಒಬ್ಬನು ಮೇಲಿನಿಂದ ಪುಟ್ಟದಿದ್ದರೆ, ದೇವರ ರಾಜ್ಯವನ್ನು ನೋಡಲಾರನು. ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಪುಟ್ಟದಿದ್ದರೆ, ದೇವರ ರಾಜ್ಯದಲ್ಲಿ ಪ್ರವೇಶಿಸಲಾರನು ಎಂದು, ಯೇಸುವು ಹೇಳಿದ್ದಾನೆ. ಯೋಹಾ. ೩, ೩. ೫.

೮. ಅದು ಈಗಲುಂಟು; ಆದರೆ ಯೇಸು ಕ್ರಿಸ್ತನು ಲೌಕಿಕವನ್ನು ಅಗೋಚರವಾಗಿ ಆಳುವ ಕಾಲವು ಮುಗಿಯುವನಕ ಮರೆಯಾಗಿದ್ದು, ಆತನು ಪ್ರತ್ಯಕ್ಷವಾಗುವ ದಿವಸದಲ್ಲಿ ಪ್ರಕಟವಾಗುವದು. ಕೊಲೊ. ೩, ೪. ೧ಯೋಹಾ. ೩, ೨.

೯. ಸರ್ವತ್ರಾಣಿಯಾದ ದೇವರು ಮಕ್ಕಳಿಗೆ ನೇಮಕ ಮಾಡಿದ ಬಾಧ್ಯತೆಯನ್ನೂ, ತನ್ನ ವಾಕ್ಯದ ಮೂಲವಾಗಿ ಅವರಲ್ಲಿ ಪುಟ್ಟಿಸಿದ ಆತ್ಮಿಕಜೀವವನ್ನೂ ಯಾಕೋ. ೧, ೧೮. ಎರಡನ್ನು ಕಾಪಾಡುತ್ತಾ ಇರುವದರಿಂದ, ನಿಜ ಭಕ್ತರು ನಿರ್ಜೀತರಾಗಿರ ತಕ್ಕದ್ದು.

೯೨೮ ಅಪೌ. ಚ. ೩. ಪರಿಚ್ಛೇದ. ಅಪೌಸ್ತಲರ ಅಂಜ್ಞಾಪ್ರವೃತ್ತಿ.

೧ ಪೇತ್ರ. ೧, ೬—೯.

೬. ಅದರಲ್ಲಿ ನೀವು, ಇನ್ನೂಸ್ವಲ್ಪ ಕಾಲ, ಅಗತ್ಯವಿದ್ದರೆ, ನಾನಾ ಶೋಧನೆಗಳಲ್ಲಿ ದುಃಖ ಪಟ್ಟಾಗ್ಯೂ ೧), ಉಲ್ಲಾಸ ಪಡುತ್ತೀರಿ ೨); ೭. ಯಾಕಂದರೆ ಬೆಂಕಿಯಿಂದ ಪರೀಕ್ಷಿಸಲ್ಪಡುವಂಥ ೩), ಲಯವಾಗುವಂಥ, ಚಿನ್ನಾರಕ್ಕಿಂತ ಬಹು ಅಮೂಲ್ಯವಾದ ನಿಮ್ಮ ವಿಶ್ವಾಸದ ಪರೀಕ್ಷೆಯು ೪) ಸ್ತೋತ್ರ ಘನ ಮಹಿಮೆಗಳುಳ್ಳದ್ದಾಗಿ ೫) ಯೇಸು ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಕಾಣಿಸ್ಪಡುವದು.

೧. ಉಪದ್ರವ ಕಾಲದಲ್ಲಿ ಚಕ್ತನು ಮನಸ್ಸಿನಲ್ಲಿ ಟ್ಟು ಕಾಳ್ಳ ತಕ್ಕ ಮೂರು ಆದರಣೆಯ ವಾಕ್ಯವು ಇಲ್ಲಿ ಸೂಚಿತವಾಗಿದೆ: ಇನ್ನು ಅಂದರೆ, ಉಪದ್ರವವನ್ನು ಸಹಿಸುವ ಅಭ್ಯಾಸ ಮಾಡುತ್ತಾ ಬಂದು ಇದ್ದೀರಿ. ಈ ವರೆಗೂ ಬಂದ ಕಷ್ಟದಿಂದ ನೀವು ಕೆಡಲಿಲ್ಲವಲ್ಲಾ? ಸ್ವಲ್ಪ ಕಾಲ ಅಂದರೆ, ಈಗ ದುಃಖಾಕ್ರಾಂತರಾಗಿದ್ದೀರಾದರೂ, ಸದ್ಯದ ಸಂಕಷ್ಟವು ನಿತ್ಯವಾದದ್ದೆಂದು ನೆನಸ ಬೇಡಿ. ಒಂದು ವೇಳೆ ನಿಮಗೆ ಬೇಗ ಉಪಶಮನವು ಬರುತ್ತದೆ. ಈ ಕಷ್ಟವು ಕಳಿದು ಹೋಗದಿದ್ದರೂ, ನಾಲ್ಕು ದಿವಸದಾಳಗೆ ಸತ್ತು ಎಲ್ಲಾ ಕೇಡಿನಿಂದ ಬಿಡುಗಡೆಯಾಗುತ್ತೀರಿ. ಅಗತ್ಯವಿದ್ದರೆ ಅಂದರೆ, ಅತ್ಯಂತ ಬುದ್ಧಿಯೂ, ಅಮಿತ ಪ್ರೀತಿಯೂ ಉಳ್ಳ ನಿಮ್ಮ ತಂದೆಯಾದ ದೇವರು, ನೇಮಕವಾದ ಮಹಿಮೆಯ ಬಾಧ್ಯತೆಯು ನಿಮಗೆ ಪ್ರಾಪ್ತವಾಗುವ ಹಾಗೆ, ಈ ಶ್ರಮಸಹನೆಯು ಅವಶ್ಯವಾಗಿದೆಂದು ತಿಳಿಯುವದರಿಂದಲೇ ನಿಮ್ಮ ಪ್ರಯೋಜನಕ್ಕಾಗಿ ಕಾಂಚ ಕಾಲದ ಕಷ್ಟವನ್ನು ನಿಮ್ಮ ಮೇಲೆ ಬರಲೀಸುತ್ತಾನೆಂದು, ನೆನಪು ಮಾಡಿ ಕಾಳ್ಳಿ.

೨. ಅತ್ಯಂತ ದುಃಖಿತನಾದ ಚಕ್ತನು ಅಂತರಂಗದಲ್ಲಿ ವಿಶ್ವಾಸಚಾಪನೆಯಿಂದ ಸಂತುಷ್ಟನಾಗಿದ್ದಾನೆ; ಯಾಕಂದರೆ ಮುಂದಣ ಮಹಿಮೆಯನ್ನು ಧ್ಯಾನಿಸುತ್ತಾನೆ. ಇಬ್ರಿ. ೧೨, ೨.

೩. ಅಂದರೆ, ಪುಟಕ್ಕೆ ಹಾಕಿದ ಚಿನ್ನಾರಕ್ಕಿಂತ ಪುಟಕ್ಕೆ ಹಾಕಿದ ಚಿನ್ನಾರವು ಹಾಳಾಗೆ ಉತ್ಕೃಷ್ಟವಾ, ಹಾಳಾಗೆಯೇ ಅಪರೀಕ್ಷಿತ ವಿಶ್ವಾಸಕ್ಕಿಂತ ಪರೀಕ್ಷಿತವಾದದ್ದು ಉತ್ತಮವಾಗಿದೆ.

೪. ಅಂದರೆ, ಉಪದ್ರವದಿಂದ ಪರೀಕ್ಷಿತವಾದ ನಿಮ್ಮ ವಿಶ್ವಾಸವು.

೫. ಯೇಸು ಕ್ರಿಸ್ತನು ತಿರಿಗಿ ಬರುವ ದಿವಸದಲ್ಲಿ ಚಕ್ತನಿಗೆ ಮಹಿಮಾಬಾಧ್ಯತೆಯು ಪ್ರಾಪ್ತವಾಗುವದು. ಸ್ತೋತ್ರ ಘನ ಮಹಿಮೆಗಳುಳ್ಳ ಈ ಮೂರು ಪದಗಳು ಳನೆ ವಚನದಲ್ಲಿ ಬರದ ಲಯವೂ, ಕಳಂಕವೂ, ಕ್ಷಯವೂ ಇಲ್ಲದ ಬಾಧ್ಯತೆಯಂಬುವದಕ್ಕೆ ಒಪ್ಪುತ್ತವೆ.

೮. ಅವನನ್ನು ನಾನಾಡದೆ ಪ್ರೀತಿ ಮಾಡುತ್ತೀರಿ ೧); ಅವನನ್ನು ಇಗ ಕಾಣದೆ ವಿಶ್ವಾಸಿಸಿ, ಹೇಳಲಾರದಂಥ, ಮಹಿಮೆಯುಳ್ಳಂಥ, ಸಂತೋಷದಿಂದ ಉಲ್ಲಾಸ ಪಟ್ಟು, ೯. ನಿಮ್ಮ ವಿಶ್ವಾಸಕ್ಕೆ ಅಂತ್ಯವಾದ ೨) ಪ್ರಾಣಗಳ ರಕ್ಷಣೆಯನ್ನು ೩) ಸಂಪಾದಿಸಿಕಾಳ್ಳುತ್ತೀರಿ.

೧. ಅಪಾಸ್ತಲನು ಇಲ್ಲಿ ನಿಜ ಚಕ್ತನ ಮನಾವೃತ್ತಿಯನ್ನು ಚನ್ನಾಗಿ ವಿವರಿಸುತ್ತಾನೆ. ಅ) ಕರ್ತನನ್ನು ನಾನಾಡದಿದ್ದರೂ ಪ್ರೀತಿ ಮಾಡುತ್ತಾನೆ. ಆ) ಆತನನ್ನು ನಾನಾಡದಿದ್ದರೂ ನಂಬುತ್ತಾನೆ. ಇ) ಈಗ ಶ್ರಮಿಯಾಗಿದ್ದರೂ, ಪರದ ಮಹಿಮೆಯ ಆಶೆಯಿಂದ ಅತ್ಯಂತ ಸಂತುಷ್ಟನಾಗಿದ್ದಾನೆ.

ಕ್ರೈಸ್ತನಿಗೆ ಸಾಕ್ಷಿಗಳಾಗಿರುವುದು.

೧ ಪೇತ್ರ. ೧, ೧೦—೧೨.

೨. ಅಂದರೆ, ವಿಶ್ವಾಸ ವಿಷಯವೂ ಸಮಾಪ್ತಿಯೂ ಆದ.

೩. ಈ ರಕ್ಷಣೆಯು ಸ್ವಾತ್ರ್ಯ ಘನ ಮಹಿಮೆಯನ್ವಿತವಾದದ್ದು.

೧೦. ನಿಮಗೆ ಆಗುವ ಕೃಪೆಯನ್ನು ಕುರಿತು ಪ್ರವಾದಿಸಿದ ಪ್ರವಾದಿಗಳು ಈ ರಕ್ಷಣೆಯನ್ನು ಕುರಿತು ೧) ವಿಚಾರಿಸಿ, ಪರಿಶೋಧಿಸಿದ್ದಾರೆ. ೧೧. ಅವರು ಕ್ರಿಸ್ತನಿಗೆ ಬರುವ ಶ್ರಮೆಗಳನ್ನೂ, ಅವುಗಳ ಶರುವಾಯ ಬರುವ ಮಹಿಮೆಗಳನ್ನೂ ೨), ಸಾಕ್ಷಿಯಾಗಿ ಮುಂತಿಳಿಸುವಂಥ, ಅವರೊಳಗಿರುವಂಥ, ಕ್ರಿಸ್ತನ ಆತ್ಮವು ಸೂಚಿಸಿದ ಕಾಲವು ಯಾವದೋ? ಎಂಥಾದ್ದೋ ೩)? ಎಂದು ಶೋಧಿಸಿದರು. ೧೨. ಪರಲೋಕದಿಂದ ಕಳುಹಿಸಲ್ಪಟ್ಟ ೪) ಪರಿಶುದ್ಧಾತ್ಮದಿಂದ ನಿಮಗೆ ಸುವಾರ್ತೆ ಪ್ರಸಂಗಿಸುವವರು ಇಗ ನಿಮಗೆ ೫) ತಿಳಿಸಿದಂಥ, ದೇವದೂತರು ಕಣ್ಣೆತ್ತು ನೋಡುವದಕ್ಕೆ ಅಪೇಕ್ಷಿಸುವಂಥ ೬), ಕಾರ್ಯಗಳಲ್ಲಿ ತಮಗಲ್ಲ, ನಮಗೆ ಸೇವಿಸಿದರೆಂದು ೭), ಅವರಿಗೆ ಪ್ರಕಟವಾಯಿತು.

೧. ಅಪಾಸ್ತಲನು ಚಕ್ಕನೆ ದೇವರಿಂದ ನೇಮಕವಾದ ಮಹಿಮೆಯು ಅಪಾರವಾದದ್ದೆಂದು ಸೂಚಿಸುವಹಕ್ಕೆ ಅದರ ತಿಳುವಿಕೆಯು ಪ್ರವಾದಿಗಳಿಗೂ, ದೇವದೂತರಿಗೂ ಅತ್ಯಂತ ಶ್ಲಾಘ್ಯವಾಗಿ ತೋರುತ್ತದೆಂದು ಹೇಳುತ್ತಾನೆ. ಅ) ನಮಗೆ ಪ್ರಾಪ್ತವಾಗುವ ರಕ್ಷಣೆಯನ್ನು ಪರಿಶುದ್ಧಾತ್ಮದ ಪ್ರೇರಣೆಯಿಂದ ಪ್ರವಾದಿಸಿದ ಪ್ರವಾದಿಗಳು, ಅದರ ಕಾಲವನ್ನು ತಿಳಿಯಬೇಕೆಂದು, ಅತಿಶಯವಾದ ಆಸಕ್ತಿಯಿಂದ ಶೋಧನೆ ಮಾಡುತ್ತಾ ಇದ್ದರು. ದನಿ. ಸ. ೯. ಇ) ಅದು ತಮ್ಮ ಕಾಲದಲ್ಲಿ ಅಲ್ಲ, ನಮ್ಮ ಕಾಲದಲ್ಲಿಯೇ ಲೋಕದಲ್ಲಿ ಪ್ರಕಟವಾಗುವದೆಂದು, ಪರಿಶುದ್ಧಾತ್ಮದ ಬೋಧನೆಯಿಂದ ಗ್ರಹಿಸಿ ಕಾಂಡರು. ಉ) ಮನುಷ್ಯರಿಗೆ ಯೇಸು ಕ್ರಿಸ್ತನ ಮುಖಾಂತರ ಪ್ರಾಪ್ತವಾಗುವ ರಕ್ಷಣೆಯ ಮಹಿಮೆಯನ್ನು ತಮ್ಮದಲ್ಲ, ಮನುಷ್ಯರ ಬಾಧ್ಯತೆಯೇ ಎಂದು ತಿಳಿದಾಗ್ಯೂ, ದೇವದೂತರು ಅದರ ವಿಷಯವಾಗಿ ಅತಿಜಿಜ್ಞಾಸಿಗಳಾಗಿದ್ದಾರೆ. ಅದು ಅವರಿಗೂ ಯಾವದಾಂದು ವಿಧದಿಂದಲಾದರೂ ಪ್ರಯೋಜನಕರವಾದದ್ದೆಂದು, ತೋರುತ್ತದೆ. ಕಾಲಾ. ೧, ೨೦. ಫಿಲಿ. ೨, ೧೦. ಎಫೆ. ೧, ೧೦; ೩, ೧೫. ಕಾಲಾ. ೧, ೧೬. ಪ್ರಕ. ೫, ೧೩; ೮, ೧; ೧೩, ೬; ೧೫, ೫; ೧೯, ೧೪.

೨. ಅಂದರೆ, ಕ್ರಿಸ್ತನ ಮಹಿಮೆಯನ್ನು ಮಾತ್ರವಲ್ಲ, ಆತನ ಮುಖಾಂತರ ನಮಗೆ ತರ ತರವಾಗಿ ಪ್ರಾಪ್ತವಾಗುವ ಮಹಿಮೆಯನ್ನು ಸಹ. ಇದು ಬಹು ಪಚನದಿಂದ ಸೂಚಿತವಾಗಿದೆ.

೩. ಅದಕ್ಕೆ ನೇಮಕವಾದ ಕಾಲವನ್ನು ನಿಶ್ಚಯವಾಗಿ ತಿಳಿಯಲಶಕ್ತರಾಗಿದ್ದರೂ, ಅದನ್ನು ಹೆಚ್ಚು ಕಡಿಮೆಯಾಗಿ ತಿಳಿಯ ಬೇಕೆಂದು, ಬಯಸುತ್ತಿದ್ದರು.

೪. ಇದರಿಂದ ಮಹಿಮಾವಾಕ್ಯದ ನಿಶ್ಚಯವನ್ನೂ, ಅದರ ನೆರವೇರುವಿಕೆಯ ಮಹತ್ತನ್ನೂ ತಿಳಿದು ಕಾಳ್ಜ ಬೇಕು.

೫. ಪ್ರವಾದನೆಯು ಸಂಪೂರ್ಣವಾಯಿತೆಂಬ ವೃತ್ತಾಂತವು ನಿಮಗೆ ಸಿಕ್ಕಿದ್ದು ದಾಡ್ಡ ಅಭಿಮಾನವಾಗಿದೆ.

೬. ಸಂಪೂರ್ಣ ಮಹಿಮೆಯ ಪದವಿಯು ಯೇಸು ಕ್ರಿಸ್ತನಿಂದ ರಕ್ಷಿತರಾವ ಮನುಷ್ಯರಿಗೆ ಪ್ರಾಪ್ತವಾದ ಮೇಲೆ ಮಾತ್ರ, ಅದರ ಮಟ್ಟುಗಟ್ಟು ದೂತರಿಗೆ ತಿಳಿಯ ಬರುತ್ತದೆ. ಇದಕ್ಕೆ ೧ ಕೊರಿ. ೨, ೯. ಸರಿ ನೋಡ ಬೇಕು.

೭. ಅವರ ಪ್ರವಾದನೆಯು ಅದರ ನಿಧ್ಯಯನ್ನು ನೋಡದೆ ಇದ್ದಂಥ ಅವರಿಗಿಂತ ಅದನ್ನು ಹೆಚ್ಚಾಗಿ ಅರಿಯುವಂಥ ನಮಗೆ ವಿಶೇಷ ಪ್ರಯೋಜನವಾಗಿದೆ.

೯೩೦ ಅಪಾ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಶ್ಪ್ರಪ್ರವ ಶ್ರಿ.
೧ಪ್ಯೇತ್ರ. ೧, ೧೩—೨೧.

೧. ಕ್ರೈಸ್ತ ಕ್ರಪಾಸ್ಥಿಯ ದ್ಧಧ್ಯೀಕರಣವು. ಸು. ೧, ೧೩—೨, ೧೦.

ಅ) ಶುದ್ಧೀಕರಣವು. ವ. ೧೩—೨೧.

ಅಪೊಸ್ತಲನು ಇದರ ಮುಖ್ಯ ಕರಣಗಳನ್ನು ವ. ೧೩. ಮುಖ್ಯ ಹೇತುಗಳನ್ನು ನ. ೧೪—೨೧. ಉದಾಹರಿಸಿ, ಅದು ಏನೆಂದು ೧೪ಲ್ಲಿಯೂ ೧೪ಲ್ಲಿಯೂ ಸೂಚಿಸುತ್ತಾನೆ.

ವ. ೧೩. ಶುದ್ಧೀಕರಣಕ್ಕೆ ಅವಶ್ಯವಾದ ಸದ್ಗುಣಗಳು: ಅ) ನಡುಕಟ್ಟುವದು. ಅದೇನಂದರೆ, ಆಸಕ್ತವಾದ ಸಿದ್ಧ ಮನಸ್ಸು. ಇ) ಸಂಯಮವು. ಆತ್ಮವು ಲೋಕ ಪಾಪಗಳ ಮಾಯಾವಿಷಯರಹಿತವಾಗಿರಬೇಕು. ಉ) ಯೇಸು ಕ್ರಿಸ್ತನ ಮುಂದಣ ಪ್ರತ್ಯಕ್ಷತೆಯಲ್ಲಿ ನಮಗೆ ಪ್ರಾಪ್ತವಾಗ ತಕ್ಕ ಕೃಪಾಪ್ರಸಾದದ ಆಶೆಯ ಗುರಿಯ ಸ್ಥಿರ ನಿರೀಕ್ಷೆಯು. ಹೇತುವು ಸಹ ಮೂರು ವಿಧವಾದದ್ದು. ಅ. ವ. ೧೪—೧೬. ದೇವಪುತ್ರಾವಸ್ಥೆಯು. ದೇವರ ಮಕ್ಕಳು ತಂದೆಗೆ ವಿಧೇಯರಾಗಿದ್ದು, ಲೋಕಭೋಗಾದಿಗಳನ್ನು ಬಯಸದೆ, ಪರಿಶುದ್ಧನಾದ ತಂದೆಯನ್ನು ಅನುಸರಿಸ ಬೇಕು. ೩ ಮೋಶೆ. ೧೧, ೪೪. ಇ. ವ. ೧೭. ಪ್ರಿಯ ತಂದೆಯಾಗಿರುವ ಮುಖದಾಕ್ಷಿಣ್ಯವಿಲ್ಲದ ಲೋಕನ್ಯಾಯಾಧಿಪತಿಯ ಭಯದಿಂದ ಹುಟ್ಟ ತಕ್ಕ ಪಾಪದ್ವೇಷವು. ಉ. ವ. ೧೪—೨೧. ಯೇಸು ಕ್ರಿಸ್ತನ ಅಮೌಲ್ಯವಾದ ರಕ್ತದಿಂದುಂಟಾದ ವಿಮೋಚನೆ ಆತನ ಪುನರಾಗಮನಗಳ ಧ್ಯಾನವು.

೧೪. ಯಾಕಂದರೆ ಲಯವಾಗುವ ಬೆಳ್ಳಿಯಿಂದಲೂ ಚಿನ್ನದಿಂದಲೂ ಅಲ್ಲ ೧), ೧೫. ನಿರ್ಮಲವಾಗಿಯೂ ನಿಷ್ಕಳಂಕವಾಗಿಯೂ ಇರುವ ಕುರಿಮರಿಯಾದ ೨) ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ೩) ವಿಶ್ವಾಸಂಪ್ರದಾಯವಾದ ೪) ನಿಮ್ಮ ವ್ಯರ್ಥ ನಡತೆಯಿಂದ ೫) ಬಿಡುಗಡೆಯಾದಿರೆಂದು, ಬಲ್ಲಿರಿ. ೨೦. ಅವನು ಜಗದುತ್ಪತ್ತಿಗೆ ಮುಂಚೆಗುರುತಿಡಲ್ಪಟ್ಟು, ನಿಮ್ಮ ವಿಶ್ವಾಸವೂ ನಿರೀಕ್ಷೆಯೂ ದೇವರ ಮೇಲಿರುವ ಹಾಗೆ, ಅವನನ್ನು ಸತ್ತವರಾಳಗಿಂದ ಎಬ್ಬಿಸಿ, ಮಹಿಮೆಯನ್ನು ಕೊಟ್ಟ ದೇವರಲ್ಲಿ ಅವನ ಮೂಲವಾಗಿ ವಿಶ್ವಾಸಿಸುವವರಾದ ನಿಮಗೋಸ್ಕರ, ಕಡೇ ಕಾಲಗಳಲ್ಲಿ ೬) ಪ್ರತ್ಯಕ್ಷವಾದನು.

೧. ಸೈತಾನನಿಗೆ ವಶವಾದ ಪಾಪಿಗಳನ್ನು ಬಿಡುಗಡೆ ಮಾಡುವದಕ್ಕೆ ಐಹಿಕ ಬೆಳ್ಳಿ ಚಿನ್ನಾದಿ ವಿಮೋಚನಾದ್ರವ್ಯವು ಸಾಲದೆ ಪರಿಹಾಯಿತು.

೨. ಕ್ರಿಸ್ತನ ರಕ್ತಧಾರೆಯು ಸರ್ವ ಸಾರ್ಥಕವಾದದ್ದು; ಯಾಕಂದರೆ: ಅದು ಪೂರ್ಣ ನಿರ್ದೋಷವಾದ ನರಬಲಿಯದಾಗಿದೆ; ಮತ್ತು ತನ್ನನ್ನು ಬಲಿಯಾಗಿ ಅರ್ಪಿಸಿದವನು ದೇವರ ಮಗನು. ಆದ್ದರಿಂದ ಅಪಾ. ಕ್ರಿ. ೨೦, ೨೮. ಪೌಲನು ಸಭೆಯ ವಿಷಯವಾಗಿ, ದೇವರು ಅದನ್ನು ಸ್ವಕೀಯ ರಕ್ತದಿಂದ ವಿಮೋಚನೇ ಮಾಡಿದನೆಂದು, ಎಫೆಸದ ಪಿರಿಯರಿಗೆ ಮಾಡಿದ ಭಾಷಣದಲ್ಲಿ ಪೇಳಿದನು. ಇಬ್ರಿ. ೯, ೧೧. ೧೨. ೧೪.

೩. ಭೂಮಿಯಲ್ಲಿಯೂ, ದಿವದಲ್ಲಿಯೂ ಇದಕ್ಕಿಂತ ಘನವಾದ ವಿಮೋಚನಾದ್ರವ್ಯವು ದಾರಕಲಾರದೆ ಇತ್ತು. ಮನುಷ್ಯರ ವಿಮೋಚನೆಗಾಗಿ ಪಾಪರಹಿತನಾದ ಮನುಷ್ಯನ ರಕ್ತವು ಅವಶ್ಯವಾದದ್ದಲ್ಲದೆ,

೧ ಪೇತ್ರ. ೧, ೨೨—೨೫.

ಎಲ್ಲರ ಶಾಪವನ್ನು ಪರಿಹರಿಸುವದಕ್ಕಾಗಿ ದೇವರ ನ್ಯಾಯದ ಪ್ರಕಾರ ಸರ್ವಲೋಕವಿಮೋಚನೆಗಾಗಿ ಸಲ್ಲುವಂಥ, ದೇವರ ಮಗನ ರಕ್ತವು ಧಾರೆಯಾಗ ಬೇಕಾಯಿತು. ಇಬ್ರಿ. ೧, ೩; ೨, ೯. ೧೦. ೧೪.

೪. ಪಾಪದಾಸತ್ವವು ತಂದೆ ತಾಯಿಗಳ ಮೂಲಕವಾಗಿ ಮಕ್ಕಳಿಗೆ ಉಂಟಾಗಿ, ತಲತಲಾಂತರಕ್ಕೆ ಬರುವ ಸಂಪ್ರದಾಯಗಳಿಂದ ಬಲಗಾಳ್ಳುವ ನರಜಾತಿಯ ನಿತ್ಯ ಬಾಧ್ಯತೆಯಾಗಿದೆಂದು, ಪೇತ್ರನು ಪೇಳುತ್ತಾನೆ. ಸಂಪ್ರದಾಯಗಳು ಮನುಷ್ಯರಿಗೆ ಪ್ರಾಣಕ್ಕಿಂತ ಪ್ರಿಯವಾಗಿವೆ. ಹಿಂದೂ ದೇಶದಲ್ಲಿ ಜಾತಿ ಮುಂತಾದ ಪಿತೃಸಂಪ್ರದಾಯಗಳನ್ನು ವಿಾರಬಾರದೆಂಬ ಮನಾಕ್ಷಮೆಯಿಂದ ಅನೇಕರು ಸುವಾರ್ತೆಗೆ ಕಿವಿಕಾಡುವವಿಲ್ಲ. ಈ ಸಂಪ್ರದಾಯಾಸಕ್ತಿಯಿಂದ ಬಿಡುಗಡೆಯಾಗುವದಕ್ಕೆ ನಿಜ ವಿಶ್ವಾಸವು ಬೇಕು.

೫. ಪುನರ್ಜನ್ಮವಿಲ್ಲದ ಮನುಷ್ಯರ ನಡತೆಯು ವ್ಯರ್ಥವೆಂದು, ಪೇತ್ರನು ಪೇಳುತ್ತಾನೆ; ಯಾಕಂದರೆ: ದೇವರ ವಾಕ್ಯಕ್ಕೆ ವಿಧೇಯರಾಗಿ, ದೇವರನ್ನು ಸತ್ಯದಿಂದಲೂ, ಆತ್ಮದಿಂದಲೂ ಆರಾಧಿಸುವ ನಿಜ ಕ್ರೈಸ್ತರ ಪಾರ್ಶ್ವ, ಉಳಿದವರೆಲ್ಲರೂ ಬುದ್ಧಿಯ ಪ್ರಕಾರವಲ್ಲ, ತಮ್ಮ ತಮ್ಮ ಸಂಪ್ರದಾಯದ ಪ್ರಕಾರವಾಗಿಯೇ ನಡದು ಕಾಳ್ಳುತ್ತಾರೆ. ಇದಲ್ಲದೆ ಅವರ ನಡತೆಯ ಫಲವು ಸಮಾಧಾನವೂ, ಸಂತುಷ್ಟಿಯೂ, ಪಾಪಪರಿಹಾರವೂ ಇಲ್ಲದ ದುರವಸ್ಥೆಯಾಗಿದೆ.

೬. ಯೇಸು ಕ್ರಿಸ್ತನು ಮನುಷ್ಯನಾಗಿ ಹುಟ್ಟಿ, ಲೋಕರಕ್ಷಣಾಕಾರ್ಯವನ್ನು ಉಂಟು ಮಾಡಿದ ಇತ್ತಲಾಗಿನ ಯುಗಕ್ಕೆ ಕಡೆಕಾಲವು, ಇಲ್ಲವೆ ಕಡೆಕಾಲಗಳು ಎಂಬ ಪೆಸರು ಅನೇಕ ಸ್ಥಳದಲ್ಲಿ ಪ್ರಯೋಗವಾಗಿದೆ.

ಇ) ಪ್ರೀತಿಯು. ಸ. ೧, ೨೨—೨೫.

೨೨. ನಿಷ್ಕಪಟವಾದ ಸಹೋದರ ಸ್ನೇಹಕ್ಕಾಗಿ ನಿಮ್ಮ ಪ್ರಾಣಗಳನ್ನು ೧) ಈ ಕ್ಷಣದ ಮೂಲವಾಗಿ ೨) ಸತ್ಯದ ವಿಧೇಯತ್ವದಿಂದ ೩) ಪವಿತ್ರ ಮಾಡಿಕೊಂಡು, ಶುದ್ಧ ಹೃದಯದಿಂದ ೪) ಒಬ್ಬರನ್ನೊಬ್ಬರು ಬಹುಕಾಗಿ ೫) ಪ್ರೀತಿ ಮಾಡಿರಿ. ೨೩. ಲಯವಾಗುವ ಬೀಜದಿಂದಲ್ಲ, ಲಯವಾಗದ್ದರಿಂದಲೇ ೬), ಎಂದೆಂದಿಗೂ ಇರುವ ೭) ಜೀವವುಳ್ಳ ದೇವರ ವಾಕ್ಯದ ಮೂಲವಾಗಿ, ಕಿರಿಗಿ ಹುಟ್ಟಿದಿರಲ್ಲ? ೨೪. ಯಾಕಂದರೆ ಮಾಂಸವೆಲ್ಲಾ ಹುಲ್ಲಿನ ಹಾಗಿದೆ; ಮನುಷ್ಯನ ಮಹಿಮೆಯೆಲ್ಲಾ ಹುಲ್ಲಿನ ಹೂವಿನ ಹಾಗಿದೆ. ೨೫. ಹುಲ್ಲು ಬಾಡಿ ಹೋಗುವದು; ಅದರ ಹೂವು ಉದರಿ ಹೋಗುವದು. ಆದರೆ ಕರ್ತನ ವಾಕ್ಯವು ಎಂದೆಂದಿಗೂ ಇರುತ್ತದೆ ೮). ಅದು ನಿಮಗೆ ಪ್ರಸಂಗಿಸಲ್ಪಟ್ಟ ವಾಕ್ಯವೇ ೯).

೧. ಸ್ವಾರ್ಥವು ಎಲ್ಲಾ ದೋಷಕ್ಕೆ ಮೂಲವಾಗಿದೆ. ಪ್ರಾಣವು ಪವಿತ್ರವಾಗುವ ಪಾಗೆ, ಸ್ವಾರ್ಥವನ್ನು ಪರಿತ್ಯಾಗ ಮಾಡ ಬೇಕು. ಮಾಡದಿದ್ದರೆ, ನಿಷ್ಕಪಟವಾದ ಪ್ರೀತಿಯು ಅಸಾಧ್ಯವಾದದ್ದು.

೨. ಕೃಪೆಯ ಕಾರ್ಯವೆಲ್ಲಾ ಮನುಷ್ಯನಲ್ಲಿ ಪರಿಶುದ್ಧಾತ್ಮದಿಂದುಂಟಾಗ ಬೇಕು.

೩. ಅಂದರೆ, ಸುವಾರ್ತೆಯಂಬ ಸತ್ಯಕ್ಕೆ ವಿಶ್ವಾಸದಿಂದ ವಿಧೇಯನಾದ ಮನುಷ್ಯನ ಹೃದಯದಲ್ಲಿ ಯೇಸು ಕ್ರಿಸ್ತನ ಪ್ರೀತಿಯ ತಿಳುವಿಕೆಯಿಂದಲೂ, ಅನುಭವದಿಂದಲೂ ಆತ್ಮಿಕವಾದ ಸ್ವಾರ್ಥರಹಿತವಾದ ಪ್ರೀತಿಯು ಹುಟ್ಟುತ್ತದೆ.

೪. ಶುದ್ಧವೆಂಬದು ಪವಿತ್ರ ಮಾಡಿಕೊಂಡು ಎಂ

ಬದಕ್ಕೆ ಒಪ್ಪುತ್ತದೆ. ಪ್ರಾಣವನ್ನು ಪವಿತ್ರ ಮಾಪಿ ಕಾಂಡವನು ಸಪಾನ್ಯಾದರರನ್ನು ಶುದ್ಧ ಪೃದಯದಿಂದ ಪ್ರೀತಿ ಮಾಡ ಬಲ್ಲನು.

೩. ಸತ್ಯವಾದ ಪ್ರೀತಿಯು ಆಸಕ್ತಿಯುಳ್ಳದ್ದು. ಮನಃಪೂರ್ವಕವಾಗಿ ಪ್ರೀತಿ ಮಾಡದೆ ಇರುವವನು ಪ್ರೀತಿಯಿಲ್ಲದವನಾಗಿದ್ದಾನೆ. ಯೇಸು ಕ್ರಿಸ್ತನು ದೇವರನ್ನು ಪೂರ್ಣ ಆತ್ಮಪ್ರಾಣಮನಾಬಲಿಗಳಿಂದ ಪ್ರೀತಿ ಮಾಡುವದು ಮೊದಲನೆ ಆಜ್ಞೆಯು ನೆರೆಯವನನ್ನು ನಮ್ಮ ಪಾನಾಗೆಯೇ ಪ್ರೀತಿ ಮಾಡುವದು ಅದಕ್ಕೆ ಸರಿಯಾದ ಎರಡನೆ ಆಜ್ಞೆಯಂದು ಹೇಳಿದ ವಾಕ್ಯವು ಇದಕ್ಕೆ ಪ್ರಮಾಣವಾಗಿದೆ.

೬. ಪೇತ್ರನ ಅಭಿಪ್ರಾಯವೇನಂದರೆ: ದೇವರ ವಾಕ್ಯವೆಂಬ ಒಂದೇ ಬೀಜದಿಂದ ಪುಟ್ಟಿದವರು, ಒಂದೇ ಸ್ವಭಾವದವರಾಗಿದ್ದು, ಸಂಪೂರ್ಣವಾದ ಪ್ರೀತಿನ್ಯಾನ್ಯತೆಯಲ್ಲಿರುವದು ಸಪಾಜ ಧರ್ಮವಾಗಿದೆ.

೭. ದೇವಭಾವವು ನಿರಂತರವಾಗಿರುವದರಿಂದ, ದೇವವಾಕ್ಯವು ಸಪಾ ನಿರಂತರವಾಗಿ ಸಾರ್ವದಾ ಇರುವದು. ಪೇತ್ರನು ಈ ಮಾತು ಬರೆದಾಗ, ತಾನು ಪೂರ್ವದಲ್ಲಿ ಯೇಸು ಕ್ರಿಸ್ತನಿಗೆ ಹೇಳಿದ ಒಂದು ಮಾತನ್ನು ನೆನಪು ಮಾಪಿ ಕಾಂಡನೆಂದು, ನೆನಸ ತಕ್ಕದ್ದು. ಯೌಪಾ. ೬, ೬ಲಲ್ಲಿ ಬರಪದ್ದೇನಂದರೆ: ಸೀಮೊನ್ ಪೇತ್ರನು ಅವನಿಗೆ ಪ್ರತ್ಯುತ್ತರವಾಗಿ, ಕರ್ತನೇ ನಾವು ಯಾರ ಬಳಿಗೆ ಪಾನಾಗಾಣಾ? ನಿನಗೆ ನಿತ್ಯಜೀವದ ವಾಕ್ಯಗಳು ಉಂಟು; ನೀನು ಜೀವವುಳ್ಳ ದೇವರ ಮಗನಾದ ಕ್ರಿಸ್ತನೆಂದು, ನಾವು ನಂಬಿ ತಿಳಿದಿದ್ದೇವೆ, ಅಂದನು.

೮. ದೇವರ ವಾಕ್ಯದ ಬಲವು ಕುಂದದೆ ಇರುವದರಿಂದ, ಅದರ ತ್ರಾಣವು ಚಕ್ತನ ಪೃದಯದಲ್ಲಿಯೂ ದೃಢವಾಗಿದೆ; ಈ ಜಾಪದ ಪ್ರೀತಿಯು ಸಪಾ ಸ್ಥಿರವಾದದ್ದು. ಇದು ಈ ಸ್ಥಳದ ತಾತ್ಪರ್ಯಸಂಬಂಧವಾಗಿ ತಾರುತ್ತದೆ.

೯. ಅಂದರೆ, ಈ ವಾಕ್ಯದ ಪ್ರಸಂಗವನ್ನು ನೀವು ಕೇಳಿ ನಂಬಿದರಿಂದ, ಪುನರ್ಜಾತರಾಗಿ, ನಿತ್ಯ ಜೀವವನ್ನು ಪಾನಾಂದಿದ್ದೀರೆಂದು, ಜ್ಞಾಪಿಸಿ ಕಾಳ್ಕಿರಿ.

ಉ) ನಿಜ ಸಭೆಯವರು ಕ್ರಿಸ್ತನಲ್ಲಿ ನೆಲೆಯಾಗಿದ್ದು, ವೃದ್ಧಿಯಾಗಿ, ಆತನಿಗಾಗಿ ಯಾಜಕ ಸೇವೆ ಮಾಡ ಬೇಕು. ಸ. ೨, ೧—೧೦.

೧. ಹೀಗಿರುವದರಿಂದ ಸಕಲ ಕೆಟ್ಟತನವನ್ನೂ, ಸಕಲ ಮೋಸವನ್ನೂ, ಕಪಟಗಳನ್ನೂ, ಹಾಟಕೆಚ್ಚಿಟ್ಟುಗಳನ್ನೂ, ಸಕಲ ನಿಂದೆಗಳನ್ನೂ, ತೆಗದು ಹಾಕಿ ೧), ೨. ಎಳೆ ಕೂಸುಗಳಂತೆ ೨) ವಾಕ್ಯವೆಂಬ ೩) ಮೋಸವಿಲ್ಲದ ೪) ಹಾಲನ್ನು, ಅದರಿಂದ ಬೆಳೆಯುವ ಹಾಗೆ ೫), ಅಪೇಕ್ಷಿಸಿರಿ. ೩. ಕರ್ತನು ದಯವುಳ್ಳವನೆಂದು ರುಚಿ ನೋಡಿದ್ದೀರಲ್ಲವೋ?

೧. ಇದೇ ಅಭಿಪ್ರಾಯವನ್ನು ಯಾಕೋಬನು ಸ. ೧, ೨೧ಲ್ಲಿ ಇದೇ ರೀತಿಯಿಂದ ಪ್ರಸ್ತಾಪಿಸುತ್ತಾನೆ.

೨. ಎಳೆ ಕೂಸುಗಳು ಪೌತ್ತ ತಾಯ ಪಾಲನ್ನು ಬಾಧೆನೆಯಿಲ್ಲದೆ ಸಪಾಜವಾಗಿ ಬಯಸುವ ಪ್ರಕಾರ, ದೇವರ ಮಕ್ಕಳು ದೇವರ ವಾಕ್ಯವನ್ನು ಬಯಸುವದು ಸ್ವಾಭಾವಿಕವಾಗಿದೆ. ಈ ವಾಕ್ಯವೆಂಬ ಪಾಲನ್ನು ಇವರು ಸಾಯುವ ಪರ್ಯಂತ ಬಿಡುವದಿಲ್ಲ.

೩. ಗ್ರೀಕದಲ್ಲಿ ಇದಕ್ಕೆ ಬುದ್ಧಿಯುಳ್ಳ ಎಂಬ ಅರ್ಥಪ್ರಾಯವಾದ ಶಬ್ದವು ಬರದದೆ.

೪. ನರಬುದ್ಧಿಯಿಂದ ಪುಟ್ಟುವ ಬಾಧೆನೆಯಲ್ಲಿ ತಪ್ಪು, ಸುಳ್ಳು, ಮುಂತಾದ ದಾಷಗಳು ವಾಡಿಕೆಯಾಗಿವೆ. ದೇವರ ವಾಕ್ಯವು ಮಾತ್ರ ಈ ಪ್ರಕಾರವಾಗಿರದೆ ನಿರ್ದಾಷವಾದದ್ದು.

೫. ವಾಕ್ಯದಿಂದ ಪುಟ್ಟಿದವನು ವಾಕ್ಯದ ತಿಳುವಿಕೆಯಿಂದ ಬಲಗಾಳ್ಳುತ್ತಾನೆ.

ಸರ್ವ ಕ್ರೈಸ್ತ ಯಾಜಕತ್ವ.

೧ಪೇತ್ರ. ೨, ೪—೯.

೪. ಇವನು ಮನುಷ್ಯರಿಂದ ತಳ್ಳಲ್ಪಟ್ಟು ೧), ದೇವರ ಮುಂದೆ ಆಯಲ್ಪಟ್ಟ, ಬೆ. ಅಮೂಲ್ಯವಾದ ೨) ಜೀವವುಳ್ಳ ೩) ಕಲ್ಲೆಂದು, ಅವನ ಬಳಿಗೆ ಬಂದು ೪), ೫. ನೀವು ಸಹ ಜೀವವುಳ್ಳ ಕಲ್ಲುಗಳಂತೆ ೫) ಆತ್ಮಿಕಾವವಾದ ಮನೆಯಾಗಿಯೂ ೬), ಯೇಸು ಕ್ರಿಸ್ತನ ಮುಖಾಂತರ ೭) ದೇವರಿಗೆ ಸಮರ್ಪಕವಾದ ಆತ್ಮಿಕಾವವಾದ ಬಲಿಗಳನ್ನು ೮) ಅರ್ಪಿಸುವ ಪರಿಶುದ್ಧ ೯) ಯಾಜಕತ್ವವಾಗಿಯೂ. ಕಟ್ಟಲ್ಪಡಿರಿ.

೧. ಸ್ವಕೀಯ ಜನರಾದ ಯೆಹೂದರಲ್ಲಿ ಪೆಚ್ಚಾದವರು ಯೇಸು ಕ್ರಿಸ್ತನನ್ನು ತಿರಸ್ಕರಿಸಿದ ಪ್ರಕಾರ, ಲೋಕದಲ್ಲಿ ಎಲ್ಲಾ ಕಡೆಯಲ್ಲಿಯೂ ಅನೇಕರು ಯೇಸು ಕ್ರಿಸ್ತನ ವಾಕ್ಯವನ್ನು ಅಸಡ್ಡೆ ಮಾಡುತ್ತಾರೆ.

೨. ಹೀಗಿರುವದರಿಂದ ನಮಗೂ ಅತಿ ಪ್ರಿಯನಾಗಿರ ಬೇಕು.

೩. ಸಾಕ್ಷಿಯಂಬ ದೇವಾಲಯದ ಮೂಲೆಕಲ್ಲೆಂಬ ಪೌಸರಿನ ಅಭಿಪ್ರಾಯವೇನಂದರೆ: ಯೇಸು ಕ್ರಿಸ್ತನು ಸಾಕ್ಷಿಯ ಆಧಾರವೂ ಜೀವವೂ ಆಗಿದ್ದಾನೆ. ಯೇಸು ಕ್ರಿಸ್ತನು ತಾನು ಈ ಸಾಮ್ಯವನ್ನು ತನ್ನ ವಿಷಯವಾಗಿ ಪ್ರಯೋಗಿಸಿದ್ದನ್ನು ಪೇತ್ರನು ಕೇಳಿದ್ದನು. ಲೂಕ. ೨೦, ೧೭.

೪. ವಿಶ್ವಾಸದಿಂದ ಆತನ ಬಳಿಗೆ ಬರುವದು ಕೃಪಾಕಾರ್ಯದ ಆರಂಭವಾಗಿದೆ. ಆತನ ಬಳಿಗೆ ಬಂದವರು ಆತನ ಐಕ್ಯದಲ್ಲಿ ದೃಢರಾಗ ಬೇಕು.

೫. ಅಂದರೆ, ಯೇಸು ಕ್ರಿಸ್ತನ ಮುಖಾಂತರ ಜೀವವನ್ನು ಪಡಾಂಯವವರಾಗಿ.

೬. ಇದಕ್ಕೆ ಎಫೆ. ೨, ೨೦—೨೩. ಸರಿ ನಾಡ ಬೇಕು.

೭. ನಾವು ದೇವರಿಗೆ ನಿರ್ದಾಷವಾದ ಬಲಿಯನ್ನು (ರೋಮಾ. ೧೨, ೧.) ಅರ್ಪಿಸುವದಕ್ಕೆ ಅಶಕ್ತರಾಗಿದ್ದರೂ, ಯೇಸು ಕ್ರಿಸ್ತನ ಮುಖಾಂತರ ವಿಶ್ವಾಸದಿಂದ ಅರ್ಪಿತವಾದದ್ದೆಲ್ಲಾ ದೇವರಿಗೆ ಹಿತವಾಗುವದು.

೮. ವಿಶ್ವಾಸಿಸುವ ಭಕ್ತನ ಆತ್ಮ ಶರೀರಗಳು ದೇವರಿಗೆ ಬಲಿಯಾದನಂತರ, ಆತನು ಮಾಡುವ ಕೃತ್ಯಗಳೆಲ್ಲಾ ಬಲಿಸಂಬಂಧವಾಗಿವೆ.

೯. ಪೌಸ ಒಡಂಬಡಿಕೆಯ ಯಾಜಕರು ಪುನರ್ಜಾತರಾದ್ದರಿಂದ, ಪರಿಶುದ್ಧಾತ್ಮದ ಭಾವವು ಅವರಲ್ಲಿ ಕಾಣ ಬೇಕು.

೪ನೆ ೫ನೆ ವಚನಗಳ ತಾತ್ಪರ್ಯವನ್ನು ಪೇತ್ರನು ೬—೧೦ನ್ನಲ್ಲಿ ವಿವರಿಸಿ, ಮೊದಲು ವ. ೬—೮ನ್ನಲ್ಲಿ ಭಕ್ತರು ದೇವಾಲಯದ ಕಲ್ಲುಗಳಾಗಿದ್ದಾರೆಂಬ ಸಾಮ್ಯಕ್ಕೆ ಅನುಸಾರವಾದ ಉದ್ಬೋಧನೆಯನ್ನು, ಬಳಿಕ ವ. ೯. ೧೦ನ್ನಲ್ಲಿ ಭಕ್ತರು ಯಾಜಕರಾಗಿದ್ದಾರೆಂಬ ಸಾಮ್ಯಕ್ಕೆ ಉಚಿತವಾದ ಉದ್ಬೋಧನೆಯನ್ನು ಪ್ರಸ್ತಾಪಿಸುತ್ತಾನೆ.

೬. ಇವಕ್ಕಾಸ್ಪರ ಬರಹದಲ್ಲಿ ೧) ಇರುವದ್ದೇನಂದರೆ—ಇಗೋ ಚಿಯೋನಿನಲ್ಲಿ ಆಯಲ್ಪಟ್ಟ ಅಮೂಲ್ಯವಾದ ಮೂಲೆ ಕಲ್ಲನ್ನು ಇಡುತ್ತೇನೆ. ಅದರ ಮೇಲೆ ವಿಶ್ವಾಸವಿಡುವವನು ೨) ನಾಚಿಕೆ ಪಡನು ೩). ೭. ಹೀಗಿರುವದರಿಂದ ವಿಶ್ವಾಸಿಸುವವರಾದ ನಿಮಗೆ ೪) ಅಮೂಲ್ಯವಾಗಿದೆ ೫); ಆದರೆ ೬) ಅವಿಧೇಯರಿಗೆ ಮನೆ ಕಟ್ಟುವವರು ೭) ತಳ್ಳಿದ ಕಲ್ಲೂ, ಮೂಲೆ ಕಲ್ಲೂ ೮), ಎಡವುವ ಕಲ್ಲೂ, ಅಟಂಕದ ಬಂಡೆಯೂ ೯), ಆಯಿತು. ೮. ಇವರು ವಾಕ್ಯಕ್ಕೆ ವಿಧೇಯರಾಗದೆ ಎಡವುತ್ತಾರೆ. ಅದಕ್ಕಾಗಿಯೇ ೧೦) ನೇಮಿಸಲ್ಪಟ್ಟರು ೧೧).

೧ಪೇತ್ರ. ೨, ೯—೧೦.

೧. ಯೆಶಾ. ೨೮, ೧೬.

೨. ಆತನು ಮೂಲೆಕಲ್ಲೆಂದು ನಂಬಿ, ಆತನಲ್ಲಿ ನೆಲೆಯಾಗಿರುವವನು.

೩. ಇಹಪದಲ್ಲಿ ಪೂರ್ಣ ಸಮಾಧಾನವನ್ನೂ, ಸಂತುಷ್ಟಿಯನ್ನೂ ಎಲ್ಲಾ ಉಪದ್ರವಗಳಲ್ಲಿಯೂ ಚಂಚಲವಿಲ್ಲದ ಸ್ಥೈರ್ಯವನ್ನೂ, ಪರದಲ್ಲಿ ಅಮಿತ ಮಹಿಮೆಯನ್ನೂ ಪಡೆಯುವನು. ಪೇತ್ರನು ಯೆಶಾಯನ ಗ್ರಂಥದಿಂದ ಎತ್ತಿದ ಯಥೋಕ್ತವನ್ನು ಪ್ರಸ್ತಾಪೋಚಿತವಾಗಿ ವ್ಯಾಖ್ಯಾನಿಸುತ್ತಾನೆ. ಮುಖ್ಯಾಭಿಪ್ರಾಯವೇನಂದರೆ: ಕ್ರಿಸ್ತನು ಮೂಲೆಕಲ್ಲೆಂಬ ಪ್ರವಾದನೆಯು ಪ್ರಾಚೀನವಾದದ್ದು; ಅದು ಅವಿಧೇಯರ ಅವಿಶ್ವಾಸದಿಂದ ನಿರರ್ಥಕವಾಗುವದಿಲ್ಲ.

೪. ಅಂದರೆ, ವಿಶ್ವಾಸದಿಂದ ಆತನಲ್ಲಿ ನೆಲೆಯಾಗಿರುವಪರಾದ ನಿಮಗೆ.

೫. ಗ್ರೀಕದಲ್ಲಿ ಘನವು ಎಂಬ ಅಭಿಪ್ರಾಯವುಳ್ಳ ಪದವು ಬರದದೆ. ಅಂದರೆ, ಘನವು ನಿಮ್ಮ ವಿಶ್ವಾಸದ ಫಲವಾಗಿದೆ. ಇದರ ಅಭಿಪ್ರಾಯವು ೬ನೆಯಲ್ಲಿ ಸೂಚಿತವಾಗಿದೆ.

೬. ಅವಿಶ್ವಾಸಿಗಳ ಗತಿಯು ಬೇರೆ. ಅವರ ಗರ್ವವು, ದೇವರು ನೇಮಕ ಮಾಡಿದ ಕಾಲದಲ್ಲಿ, ಭಂಗವಾಗುವದು.

೭. ಅವಿಶ್ವಾಸಿಗಳಾದ ಯೆಹೂದರ ಮುಖ್ಯಸ್ಥರು.

೮. ಅವರು ಆತನನ್ನು ತಿರಸ್ಕರಿಸಿದಾಗ್ಯೂ, ಆತನು ಮೂಲೆಕಲ್ಲೇ ಸರಿ. ದೇವರ ನೇಮಕವು ವ್ಯರ್ಥ ಮನುಷ್ಯರ ಅವಿಶ್ವಾಸದಿಂದ ನೆರವೇರದೆ ಪೋಗುವದಿಲ್ಲ. ಮತ್ತಾ. ೨೧, ೪೨—೪೪.

೯. ಈ ಮಾತು ಅವಿಶ್ವಾಸಿಗಳ ಹೃದಯದಲ್ಲಿರುವ ಅವಿಧೇಯತ್ವವನ್ನಲ್ಲ, ಅದರ ಶಿಕ್ಷೆಯನ್ನೇ ಸೂಚಿಸುತ್ತದೆ.

೧೦. ಅವಿಶ್ವಾಸಿಗಳ ಅವಿಧೇಯತ್ವವನ್ನು ಸಹ ದೇವರು ಮುಂತಿಳಿದು, ಅದಕ್ಕೆ ತಕ್ಕ ಶಿಕ್ಷೆಯನ್ನು ನೇಮಕ ಮಾಡಿದ್ದಾನೆ.

೧೧. ಅವರ ಅವಿಶ್ವಾಸವಲ್ಲ, ಅದರ ಶಿಕ್ಷೆಯೇ ದೇವರಿಂದ ಬರುತ್ತದೆ.

೯. ಆದರೆ ನೀವು ಆಯಲ್ಪಟ್ಟ ಸಂತತಿಯೂ[೧], ರಾಜಯಾಜಕತ್ವವೂ[೨], ಪರಿಶುದ್ಧ ಜನಾಂಗವೂ[೩], ಸ್ವಂತ ಪ್ರಜೆಯೂ[೪] ಆಗಿದ್ದು, ಕತ್ತಲೆಯಾಳಗಿಂದ ತನ್ನ ಆಶ್ಚರ್ಯವಾದ ಬೆಳಕಿಗೆ ನಿಮ್ಮನ್ನು ಕರೆಯುವನ[೫] ಸದ್ಗುಣಗಳನ್ನು[೬] ಸಾರಲಕ್ಕವರಾಗಿದ್ದೀರಿ[೭]. ೧೦. ಮುಂಚೆ ಪ್ರಜೆಯಾಗಿರದೆ, ಇಗ ದೇವರ ಪ್ರಜೆಯಾಗಿದ್ದೀರಿ[೮]; ಮುಂಚೆ ಕರುಣೆಪಡೆದವರಾಗಿರದೆ, ಇಗ ಕರುಣೆಪಡೆದಿದ್ದೀರಿ.

೯ನೆ ವಚನವು ೫ನೆ ವಚನದ ಎರಡನೆ ಭಾಗದ ಅಭಿಪ್ರಾಯವನ್ನು ವಿವರಿಸುತ್ತದೆ.

೧. ಮೂಲೆಕಲ್ಲಲ್ಲಿ ನೆಲೆಯಾಗಿರುವ ನೀವು ದೇವರಿಗೆ ಪರಿಶುದ್ಧ ಸೇವೆ ಮಾಡುವವರಾಗಿ, ಆ ಮೂಲೆಕಲ್ಲಿನಂತೆ ದೇವರ ದೃಷ್ಟಿಯಲ್ಲಿ ಪರಿಗಣಿತರಾಗಿಯೂ, ಅಮೌಲ್ಯರಾಗಿಯೂ ಇದ್ದೀರಿ.

೨. ರಾಜನೂ, ಪ್ರಧಾನಯಾಜಕನೂ ಆದ ಯೇಸು ಕ್ರಿಸ್ತನ ಐಕ್ಯದಲ್ಲಿ ವಿಶ್ವಾಸದಿಂದ ಸೇರಿದವರು ಆತನ ಮಹಿಮೆಯಲ್ಲಿ ಪಾಲುಗಾರರಾಗಿದ್ದಾರೆ. ಪರಿಶುದ್ಧರಿಗೆ ಯೇಸು ಕ್ರಿಸ್ತನ ಸಂಗಡ ರಾಜ್ಯವನ್ನಾಳುವ ಪದವಿಯು ನೇಮಕವಾಗಿದೆ. ಇಂಥವರಿಗೆ ಯುಕ್ತವಾದ ಗುಣಗಳು ಇಹಪದಲ್ಲಿಯೂ ಇಕ್ಕರಲ್ಲಿ ಕಾಣಬೇಕು.

೩. ಅವರ ಜೀವವೂ ನಡತೆಯೂ ಪರಿಶುದ್ಧವಾಗಿರಬೇಕು.

೪. ಅಂದರೆ, ದೇವರು ತನ್ನ ರಾಜ್ಯದ ಬಾಧ್ಯತೆಗಾಗಿ ಅದು ಕಾಂಡವರು.

೫. ಇದು ಕರ್ತನ ಸದ್ಗುಣಗಳನ್ನು ಸಾರುವ ಕೃತಜ್ಞತೆಗೆ ಪೇತುವಾಗಿದೆ.

೬. ಆತನ ರಕ್ಷಣಾಕಾರ್ಯದಲ್ಲಿ ವಿಶೇಷವಾಗಿ

ಪ್ರಕಟವಾಗುತ್ತಾ ಬರುವ ಆತನ ಪ್ರೀತಿ ಬಲ ಮಹಿಮೆಗಳು.

೭. ಅಂದರೆ, ವಾಕ್ಯದಿಂದಲೂ ಕೃತ್ಯದಿಂದಲೂ. ಬಲಿಯರ್ಪಣೆಯು ಪಾಳೆ ಒಡಂಬಡಿಕೆಗೆ, ಪ್ರಸಂಗವು ಪೌಲಾಸ ಒಡಂಬಡಿಕೆಗೆ ವಿಶೇಷವಾಗಿ ಅನುಸಾರವಾದ ವೃತ್ತಿಯಾಗಿದೆ.

೮. ಈ ಚಾವನೆಯು ಮೇಲೆ ಸೂಚಿತವಾದ ಕೃತಜ್ಞತಾಪೋತುವನ್ನು ಬಲ ಪಡಿಸುತ್ತದೆ. ಮುಂಚೆ ಪರಜನರಾಗಿದ್ದವರಿಗೆ ಸುವಾರ್ತೆಯಿಂದ ಅಶಿಶಯವಾದ ಕೃಪೆಯು ದಾರಕೆಯದೆ.

೨. ಕ್ರೈಸ್ತ ಕ್ಷಮಾಸ್ಥಿತಿಗೆ ಅನುಕೂಲವಾದ ನಾನಾ ವಿಧ ಧರ್ಮಾಚರಣೆಗಳು. (ಕ್ರೈಸ್ತ ಗೃಹಧರ್ಮ ಶಾಸನವು) ಸ. ೨, ೧೧—೫, ೯.

ಅ) ಅಕ್ರೈಸ್ತರಾದ ಪರಜನರ ವಿಷಯವಾದ ಧರ್ಮವು. ಸ. ೨, ೧೧. ೧೨.

ಅಪೊಸ್ತಲನು, ಅವರ ಮುಂದೆ ಕ್ರೈಸ್ತನು, ಪರದೇಶಸಂಚಾರಿಯಾಗಿರುವದರಿಂದಲೂ, ದುರ್ವಿಷಯಗಳಿಂದ ಪ್ರಾಣನಷ್ಟವುಂಟಾಗುವದರಿಂದಲೂ ಅಸಂಹಿಸ ತಕ್ಕ ಮಾಂಸಭೋಗಗಳನ್ನು ಪರಿತ್ಯಾಗ ಮಾಡಿ, ಸನ್ಮಾರ್ಗವನ್ನು ಕೈಕೊಳ್ಳಬೇಕೆಂದು, ಎಚ್ಚರಿಸುತ್ತಾನೆ. ಭಕ್ತರು ಹೀಗೆ ನಡದು ಕೊಂಡರೆ, ಪರಜನರು ಈಗ ದೂಷಿಸುವ ಕ್ರೈಸ್ತರ ನಡತೆಯಿಂದಲೇ ಪರಜನರ ಸಂವರ್ತನಕಾಲದಲ್ಲಿ ದೇವರಿಗೆ ಮಹಿಮೆಯುಂಟಾಗುವದು. ಹ್ಯಾಗಂದರೆ ಅವರು ಆಗ ಸತ್ಯವನ್ನು ತಿಳಿದು ಕೊಂಡು, ತಾವು ಮುಂಚೆ ದೂಷಿಸಿದ್ದು ನಿಜ ಧರ್ಮಾಚರಣೆಯಂದು ಗ್ರಹಿಸಿ ಕೊಳ್ಳುವರು. ಈ ತಿಳುವಿಕೆಯು ಪರಜನರ ಸಂವರ್ತನಕ್ಕೆ ಸಹೇತುವಾದೀತೆಂದು, ಪೇತ್ರನು ಸೂಚಿಸುತ್ತಾನೆ. ಕ್ರೈಸ್ತಸಭೆಯ ಮೊದಲ ಶತಮಾನಗಳಲ್ಲಿ ಅನೇಕಾವರ್ತಿ ಹೀಗಾಯಿತು. ಒಬ್ಬರನೊಬ್ಬರು ಎಷ್ಟೋ ಪ್ರೀತಿ ಮಾಡುತ್ತಾರೆ! ನೋಡಿರಿ ಎಂದು, ಪರಜನರು ವಿಜ್ಞಾಪಿಸ ಬೇಕಾಯಿತು.

ಇ) ರಾಜಾಧಿಕಾರಿಗಳ ವಿಷಯವಾದ ಧರ್ಮವು. ಸ. ೨, ೧೩—೧೭.

೧೩. ಆದದರಿಂದ ೧) ಅತಿ ಶ್ರೇಷ್ಠನಾಗಿರುವ ಅರಸನಿಗಾದರೂ, ಅಕ್ರಮಕಾರರನ್ನು ಶಿಕ್ಷಿಸುವದಕ್ಕೂ, ಒಳ್ಳೆದನ್ನು ಮಾಡುವವರನ್ನು ಹೊಗಳುವದಕ್ಕೂ ೨), ೧೪. ಅವನಿಂದ ಕಳುಹಿಸಲ್ಪಡುವವರಾದ ಅಧಿಪತಿಗಳಿಗಾದರೂ, ಮನುಷ್ಯರ ಅಧಿಕಾರಕ್ಕೆಲ್ಲಾ ೩) ಕರ್ತನಿಗೋಸ್ಕರ ೪) ಒಳಗಾಗಿರಿ. ೧೫. ಯಾಕಂದರೆ ನೀವು ಒಳ್ಳೆದಂನು ಮಾಡಿ ೫), ಬುದ್ಧಿಯಿಲ್ಲದ ಮನುಷ್ಯರ ಅಜ್ಞಾನದ ಬಾಯಿ ಮುಚ್ಚ ಬೇಕೆಂಬುವದೇ ೬) ದೇವರ ಚಿತ್ತವು. ೧೬. ಬಿಡುಗಡೆಯವರಾಗಿದ್ದರೂ ೭), ನಿಮ್ಮ ಬಿಡುಗಡೆಯನ್ನು ಕೆಟ್ಟತನದ ಮುಚ್ಚಳ ಮಾಡದೆ, ದೇವರ ದಾಸರ ಹಾಗೆ ನಡ್ರಿ. ೧೭. ಎಲ್ಲರನ್ನು ಸನ್ಮಾನಿಸಿರಿ. ಸಹೋದರ ಕೂಟವನ್ನು ಪ್ರೀತಿ ಮಾಡಿರಿ. ದೇವರಿಗೆ ಭಯ ಪಡಿರಿ. ಅರಸನನ್ನು ಸನ್ಮಾನಿಸಿರಿ ೮).

೧ಪ್ಯೇತ್ರ. ೨, ೧೪—೨೪.

೧. ಈ ಉದ್ಬೋಧನೆಯು ೧೧ನೆ ೧೨ನೆ ವಚನಗಳ ಅಭಿಪ್ರಾಯದಿಂದ ಸಹಜವಾಗಿ ಹುಟ್ಟುತ್ತದೆ.

೨. ದೇವರು ಲೌಕಾಧಿಕಾರಿಗಳಿಗೆ ನೇಮಕ ಮಾಡಿದ ಉದ್ಯೋಗವು ಈ ಮಾತಿನಿಂದ ಕ್ಷಪ್ತವಾಗಿ ಸೂಚಿತವಾಗಿದೆ.

೩. ಅಂದರೆ, ಮನುಷ್ಯರು ಲೌಕಿಕ ಕಾರ್ಯಗಳ ಉದ್ದಿಶ್ಯವಾಗಿ ಸ್ಥಾಪಿಸಿದ ಕ್ರಮಗಳಿಗೂ, ಅವುಗಳನ್ನು ಕಾಪಾಡುವ ಅಧಿಕಾರಿಗಳಿಗೂ.

೪. ಪೌಲಾಗಾದರೆ ಚಕ್ತರು ಅನ್ಯಾಯಿಗಳಾದ ಅಧಿಕಾರಿಗಳಿಗೆ ವಿರೋಧವಾಗಿ ಕೈಯತ್ತ ಬಾರದೆಂದು, ತಾರುತ್ತದೆ. ಅವರಿಗೆ ವಿರೋಧವಾಗಿ ದೇವರಿಗೆ ಪ್ರಾರ್ಥನೇ ಮಾಡುವದು ಅನನುಜ್ಞಾತವಾದದ್ದಲ್ಲ; ಪ್ರಾರ್ಥನೆಯಲ್ಲಿ ಬಲಿಷ್ಠನಾದ ಕ್ರೈಸ್ತನು ಕಾಟಕಾಯಿ ನಡಿಸುವ ತುಂಟನಿಗಿಂತ ಅಧಿಕ ಜಯಂಕರನಾಗಿದ್ದಾನೆ.

೫. ಅಂದರೆ, ರಾಜ್ಯ ನೀತಿಗೆ ಅನುಕೂಲವಾಗಿಯೂ, ಅಧಿಕಾರಿಗಳಿಗೆ ವಿಧೇಯವಾಗಿಯೂ ನಡದು ಕಾಂಡು.

೬. ನಿಜ ಕ್ರೈಸ್ತರ ಮೇಲೆ ದೂರು ಹೇಳುವವರು, ದೇವರ ವಾಕ್ಯವನ್ನೂ, ಕ್ರೈಸ್ತರ ನೀತಿಯನ್ನೂ ತಿಳಿಯದೆ ಇರುವದರಿಂದ, ಅಥವಾ ದ್ವೇಷ ಮಾಡುವದರಿಂದ, ಚಕ್ತರಿಗೆ ವಿರೋಧವಾಗಿ ಮಾತನಾಡುತ್ತಾರೆ.

೭. ಯೇಸು ಕ್ರಿಸ್ತನ ಮುಖಾಂತರ ಲೌಕ ಪಾಪಗಳ ಸೇವೆಯಿಂದ ವಿಮುಗಡೆಯಾದವನು ಆತನಿಗೆ ಅಧೀನನಾದದರಿಂದ, ಎಲ್ಲಾ ಕೆಟ್ಟತನಕ್ಕೆ ದೂರವಾಗುತ್ತಾನೆ.

೮. ಈ ವಚನದಲ್ಲಿ ಕ್ರೈಸ್ತ ಪರಕೀಯ್ಯ ಧರ್ಮವು ನಾಲ್ಕು ಮಾತುಗಳಿಂದ ಹೇಳಿಯದೆ. ಅವುಗಳಲ್ಲಿ ಮುಖ್ಯವಾದದ್ದು: ದೇವರ ಭಯವು. ದೇವರಿಗೆ ವಿಧೇಯನಾದವನು ಸ್ವಾರ್ಥರಹಿತನಾಗಿ ಸಹೋದರರನ್ನು ಪ್ರೀತಿ ಮಾಡಿ, ವ್ಯರ್ಥ ಗರ್ವರಹಿತನಾಗಿ ಪರರಿಗೆ ಮಾನ ಮರ್ಯಾದೆ ಮಾಡಿ, ದೇವರಿಗಾಗಿ ಆತನಿಂದ ನೇಮಕವಾದ ಲೌಕಾಧಿಕಾರಿಗಳಿಗೆ ಒಳಗಾಗಿದ್ದಾನೆ.

ಊ) ಮನೇಯಜಮಾನರ ವಿಷಯವಾದ ಧರ್ಮವು. ವ. ೧೮—೨೫.

೧೮. ಸೇವಕರೇ, ಒಳ್ಳೆಯವರೂ ಸಾತ್ವಿಕರೂ ಆಗಿರುವ ಯಜಮಾನರಿಗೆ ಮಾತ್ರವಲ್ಲಾ, ಮೂರ್ಖರಿಗೂ ಸಕಲ ಭಯದಲ್ಲಿ ಒಳಗಾಗಿರಿ. ೧೯. ಯಾಕಂದರೆ ಯಾರಾದರೂ ಅನ್ಯಾಯವಾಗಿ ಶ್ರಮ ಪಟ್ಟು, ದೇವರ ವಿಷಯವಾದ ಮನಸ್ಸಾಕ್ಷಿಗಾಗಿ ಸ್ಕರ ದುಃಖಗಳನ್ನು ಸಹಿಸಿಕೊಂಡರೆ, ಇದೇ ಸ್ತೋತ್ರಕ್ಕೆ ಯೋಗ್ಯವಾಗಿದೆ. ೨೦. ಹ್ಯಾಗಂದರೆ ನೀವು ಪಾಪ ಮಾಡಿ ಗುದ್ದಲ್ಪಡುವಾಗ, ತಾಳಿ ಕೊಂಡರೆ, ಕೀರ್ತಿ ಏನು? ಆದರೆ ಒಳ್ಳೇದನ್ನು ಮಾಡಿ ಶ್ರಮ ಪಡುವಾಗ, ತಾಳಿ ಕೊಳ್ಳುವದು ದೇವರ ಮುಂದೆ ಸ್ತೋತ್ರಕ್ಕೆ ಯೋಗ್ಯವಾಗಿದೆ. ೨೧. ಯಾಕಂದರೆ ಇದಕ್ಕಾಗಿಸ್ಕರ ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗಾಗಿಸ್ಕರ[೧] ಶ್ರಮ ಪಟ್ಟು, ನೀವು ಅವನ ಹೆಜ್ಜೆಗಳನ್ನು ಹಿಡಿಯುವ ಹಾಗೆ, ನಿಮಗೆ ಮಾದರಿಯನ್ನು ತೋರಿಸಿದ್ದಾನೆ. ೨೨. ಅವನು ಪಾಪ ಮಾಡಲಿಲ್ಲ; ಅವನ ಬಾಯಿಯಲ್ಲಿ ಮೋಸವು ಕಾಣಿಸಲಿಲ್ಲ[೨]. ೨೩. ಅವನು ಬೈಯ್ಸಲ್ಪಟ್ಟಾಗ, ಬೈಯ್ಸಲಿಲ್ಲ; ಶ್ರಮ ಪಟ್ಟಾಗ, ಬೆದರಿಸಲಿಲ್ಲ; ಆದರೆ ನೀತಿಯಾಗಿ ನ್ಯಾಯ ತೀರಿಸುವವನಿಗೆ ಕಾರ್ಯವನ್ನು ಒಪ್ಪಿಸಿದನು[೩]. ೨೪. ನಾವು ಪಾಪಗಳಿಗೆ ಸತ್ತು, ನೀತಿಗೆ ಬದುಕುವ ಹಾಗೆ[೪]), ಅವನು ತಾನೇ[೫]) ನಮ್ಮ ಪಾಪಗಳ

ಗೃಹಧರ್ಮ.

೧ ಪೇತ್ರ. ೩, ೨೫.—೩, ೪.

ನ್ನು[೬] ತನ್ನ ಶರೀರದಲ್ಲಿ ಮರದ ಮೇಲೆ ಹೊತ್ತುಕೊಂಡನು[೭]. ೨೫. ಅವನ ಪೆಟ್ಟುಗಳಿಂದ ವಾಸಿಯಾದಿರಿ[೮]. ಹ್ಯಾಗಂದರೆ, ತಪ್ಪಿ ಹೋದ ಕುರಿಗಳ ಹಾಗಿದ್ದಿರಿ; ಆದರೆ ಇಗ ನಿಮ್ಮ ಪ್ರಾಣಗಳ ಕುರುಬನೂ ಅಧ್ಯಕ್ಷನೂ ಆಗಿರುವವನ ಕಡೆಗೆ ತಿರುಗಿ ಕೊಂಡಿದ್ದೀರಿ.

೧. ಕ್ರೈಸ್ತರಾದ ಆಳುಗಳ ಧರ್ಮಕ್ಕೆ ಕ್ರಿಸ್ತನ ಮಾದರಿಯು ಪ್ರಮಾಣವಾಗಿದೆಯೆಂದು, ಅಪಾಸ್ತಲನು ಬಾಧಿಸುತ್ತಾನೆ. ಕ್ರಿಸ್ತನು ದುಷ್ಟ ಮನುಷ್ಯರಿಂದ ತನ್ನ ಮೇಲೆ ಬಂದ ಅನ್ಯಾಯವನ್ನು ತಾಳ್ಮೆಯಿಂದ ಸಹಿಸಿದ ಪ್ರಕಾರ, ಕ್ರೈಸ್ತರಾದ ಮನೆಯಾಳುಗಳು ಅನ್ಯಾಯಿಗಳಾದ ಯಜಮಾನರಿಗೆ ವಿರೋಧವಾಗಿ ಬಾಯ ತೆಗೆಯಲೂ, ಕೈಯತ್ತಲೂ, ಬಾರದು. ಅನ್ಯಾಯದಿಂದ ಶ್ರಮ ಪಡುವ ವೇಳೆಯಲ್ಲಿ ಕರ್ತನಿಗೆ ಆವ ಪ್ರಕಾರ ತಮಗೆ ಆಗುವದೆಂದು ಚಕ್ಕರು ನೆನಸಿ, ಸಂತುಷ್ಟರಾಗಿರಬೇಕು.

೨. ಕ್ರಿಸ್ತನು ಕೃತ್ಯದಿಂದಲಾದರೂ ಮಾತಿನಿಂದಲಾದರೂ ತಪ್ಪು ಮಾಡದೆ ಪೂರ್ಣ ನಿರಪರಾಧಿಯಾಗಿದ್ದನು.

೩. ಆತನು ದೇವರನ್ನು ನಂಬಿ, ಪೂರ್ಣ ಸ್ವೇಚ್ಛಾಪರಿತ್ಯಾಗ ಮಾಡಿದನು.

೪. ನಾವು ಪಾಪದಿಂದ ಬಿಡುಗಡೆಯಾಗಿ, ದೇವರ ನೀತಿಯನ್ನು ಪಡಕೊಂಡದ್ದನ್ನು ಎಲ್ಲಾ ವಿಷಯವಾಗಿ ನಮ್ಮ ಸ್ಥಿತಿಗೆ ಅನುಸಾರವಾದ ಧರ್ಮವನ್ನು ಕೈಕೊಳ್ಳುವದರಿಂದಲೇ ಪ್ರಮಾಣಿಸಬೇಕು.

೫. ಅಂದರೆ, ಆತನು ಪಾಪರಹಿತನಾಗಿದ್ದು ಪಾಪಿಗಳಾದ ನಮಗಾಗಿ ತನ್ನನ್ನು ತಾನೇ ಮರಣಕ್ಕೆ ಒಪ್ಪಿಸಿದನು.

೬. ಸ್ವಂತ ಪಾಪವಲ್ಲ, ನಮ್ಮ ಪಾಪವೇ ಆತನ ಶ್ರಮಕ್ಕೆ ಕಾರಣವಾದರೂ, ಎಲ್ಲಾನ್ನು ತಾಳ್ಮೆಯಿಂದ ಸಹಿಸಿದನು.

೭. ನಮ್ಮ ಪಾಪವನ್ನು ತಾನು ಹೊತ್ತುಕೊಂಡು ಕ್ರೂಜೆಯ ಮರದಲ್ಲಿ ಸತ್ತನು.

೮. ಅಪಾಸ್ತಲನ ಅಭಿಪ್ರಾಯವೇನಂದರೆ: ಯೇಸು ಕ್ರಿಸ್ತನು ನಿರಪರಾಧಿಯಾಗಿದ್ದು ನಮ್ಮ ಅಪರಾಧಗಳ ನಿಮಿತ್ತವಾಗಿ ಸತ್ತನೆಂದು, ಯಾವಾಗಲೂ ನೆನಪು ಮಾಡಿಕೊಂಡು, ಮನಃಪೂರ್ವಕವಾದ ಕೃತಜ್ಞತೆಯಿಂದಲೇ ಆತನ ಮಾದ್ರಿಗೆ ಅನುಸಾರವಾಗಿ ನಡದು ಕಾಳ್ಳಬೇಕು. ಯಾಕಂದರೆ ಪಾಪದಿಂದ ನಮ್ಮ ಪ್ರಾಣಕ್ಕೆ ಬಂದ ಘಾಯಗಳು ಆತನು ಘಾಯ ಪೊಂದಿದ್ದರಿಂದ ವಾಸಿಯಾದವು. ನಾವು ವಿಶ್ವಾಸದಿಂದ ಆತನಿಗೆ ಅಧೀನರಾದರೆ, ಆತನು ಉತ್ತಮ ಕುರುಬನೆಂಬ ಅಧ್ಯಕ್ಷನಾಗಿ ಕುರಿಗಳಾದ ನಮ್ಮನ್ನು ಸಂರಕ್ಷಿಸುತ್ತಾನೆ.

ಎ) ಗೃಹಧರ್ಮ ನಿಯಮವು. ಸ. ೩, ೧—೭.

೧. ಅದ್ಹೇ ಪ್ರಕಾರ, ಹೆಂಗಸರ್ಹೇ, ಸ್ವಂತ ಗಂಡಂದಿರಿಗೆ[೧] ಒಳಗಾಗಿರಿ[೨]. ೨. ಕೆಲವರು ವಾಕ್ಯಕ್ಕೆ ವಿಧ್ಹೇಯರಾಗದಿದ್ದರೂ, ನೀವು ಭಯಸ್ಥರಾಗಿಯೂ ನಿರ್ಮಲರಾಗಿಯೂ ನಡೆದು ಕಾಳ್ಳುವದನ್ನು ನೋಡಿ[೩], ಹೆಂಡತಿಯರ ನಡತೆಯಿಂದ ವಾಕ್ಯವಿಲ್ಲದೆ ಸಂಪಾದಿಸಲ್ಪಡುವ ಹಾಗೆ, ಒಳಗಾಗಿರಿ. ೩. ಕೂದಲು ಹೆಣೆಯುವದೂ, ಬಿನ್ನದ ಒಡವೆಗಳನ್ನು ಇಟ್ಟು ಕಾಳ್ಳುವದೂ, ವಸ್ತ್ರಗಳನ್ನು ಧರಿಸಿ ಕಾಳ್ಳುವದೂ, ಈ ಹೊರಗಿನ ಅಲಂಕಾರವು ಬೇಡ; ೪. ಶಾಂತಿಯೂ ಸಮಾಧಾನವೂ ಉಳ್ಳ ಆತ್ಮದ ನಿರ್ಮ

೧ ಪೇತ್ರ. ೩, ೫--೭.

ಯವಾದದರಲ್ಲಿರುವ ಹೃದಯದ ಅಂತರಂಗವಾದ ಮನುಷ್ಯನು ನಿಮಗೆ ೞರ ಬೇಕು ೪). ೫. ಅದ್ಯೇ ದೇವರ ಮುಂದೆ ಬಹು ಬೆಲೆಯುಳ್ಳದ್ದಾಗಿದೆ. ಯಾಕಂದರೆ ಪೂರ್ವದಲ್ಲಿ ದೇವರ ಮೇಲೆ ನಂಬಿಕೆ ೞಟ್ಟ ಪರಿಶುದ್ಧ ಹೆಂಗಸರು ಸಹ, ಸ್ವಂತ ಗಂಡಂದಿರಿಗೆ ಒಳಗಾಗಿದ್ದು, ತಮ್ಮನ್ನು ಅದ್ಯೇ ಮೇರೆಗೆ ಅಲಂಕರಿಸಿ ಕೊಂಡರು. ೬. ಹಾಗೆಯೇ ಸಾರಳು ಅಬ್ರಹಾಮನನ್ನು ಯಜಮಾನನೆಂದು ಕರೆದು, ಅವನಿಗೆ ವಿಧೇಯಳಾಗಿದ್ದಳು. ನೀವು ಒಳ್ಳೇದನ್ನು ಮಾಡಿ, ಯಾವ ದಿಗಲಿಗಾದರೂ ಅಂಜದೆ ೞದ್ದರೆ ೫), ಅವಳ ಮಕ್ಕಳಾಗಿದ್ದೀರಿ. ೭. ಅದ್ಯೇ ಪ್ರಕಾರ, ಗಂಡಸರೇ, ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿ ಆಗದ ಹಾಗೆ, ಜೀವದ ಕೃಪೆಗೆ ಸಮ ಬಾಧ್ಯಸ್ಥರಾಗಿ ೬), ಜ್ಞಾನದ ಪ್ರಕಾರ ಅವಳ ಸಂಗಡ ಒಗತನ ಮಾಡಿ, ಬಲಹೀನ ಪಾತ್ರಕ್ಕೆಂದು ೭) ಹೆಂಗಸಿಗೆ ಮಾನ ಸಲ್ಲಿಸಿರಿ.

೧. ಈ ಬೋಧನೆಯನ್ನು ಕ್ರೈಸ್ತರಾದ ಗಂಡಂದಿರಿಗೆ ಮದುವೆ ಮಾಡಲ್ಪಟ್ಟ ಹೆಂಗಸರಿಗೆ ಹೇಳುವದು ಅತ್ಯಾವಶ್ಯಕವಾಗಿತ್ತು. ೞಂಥವರು ಅವಿಶ್ವಾಸಿಗಳಾದ ಗಂಡಂದಿರನ್ನು ಉದಾಸೀನ ಮಾಡಿ, ಸಜಾಬೋಧಕರು ಮುಂತಾದ ಚಕ್ಕರನ್ನು ಗಂಡಂದಿರಿಗಿಂತ ಹೆಚ್ಚಾಗಿ ಸನ್ಮಾನಿಸುವದು ಕ್ರೈಸ್ತಧರ್ಮಕ್ಕೆ ಪೂರ್ಣ ವಿರೋಧವಾಗಿತ್ತು.

೨. ಹೆಂಗಸು ಆಳುವ ಮನೆಯು ಹಾಳಾಗುವದೆಂದು, ಪರಜನರಾದ ಕವಿಗಳು ಸಹ ಹೇಳಿದರು. ಹೆಂಡತಿ ಹೆಗ್ಗಡತಿಯಾದರೆ, ಗಂಡನು ಮೂಳನಾಯಿಗಿಂತ ಕಡೆ ಎಂದು, ಗಾದೆ ಹೇಳುತ್ತದೆ.

೩. ೞಲ್ಲಿ ಬರದ ಅಭಿಪ್ರಾಯವನ್ನು ಚನ್ನಾಗಿ ತಿಳಿದು ಕಾಳ್ಳ ಬೇಕು. ಅವಿಶ್ವಾಸಿಯಾದ ಗಂಡನ ಹೆಂಡತಿಗೆ ಅಪಾಸ್ತಲನು ೞಲ್ಲಿ ನೀತಿಬೋಧನೆಯನ್ನು ಹೇಳುತ್ತಾನೆ ಅಷ್ಟೆ. ಆದರೆ ಚಕ್ಕಳು ಅವಿಶ್ವಾಸಿಯಾದ ಮನುಷ್ಯನ ಹೆಂಡತಿಯಾಗ ಬಹುದೆಂದು, ಅವನು ಹೇಳುವದಿಲ್ಲ. ಅದಾಗ ಬಾರದೆಂದು, ಪೌಲನು ಸ್ಪಷ್ಟವಾಗಿ ಬೋಧಿಸುತ್ತಾನೆ. ೨ಕಾರಿ. ೬, ೧೪.

೪. ಪರಿಶುದ್ಧಾತ್ಮವನ್ನು ಪಾಲಿಂದವರಿಗೆ ಆತ್ಮಿಕ ಅಲಂಕಾರವೇ ಯುಕ್ತವಾಗಿದೆ.

೫. ಹೆಂಗಸರು ಗಂಡಂದಿರಲ್ಲಿ ವಿಧೇಯರಾಗಿರಬೇಕಾದರೂ, ನೀತಿಯ ನಡತೆಯಲ್ಲಿ ಅವರು ನಿರ್ಭಯರಾಗಿದ್ದು, ಗಂಡನು ಹೆದರಿಸಿದರೂ, ಅನ್ಯಾಯವನ್ನೂ, ಪಾಪವನ್ನೂ ಮಾಡ ಬಾರದು.

೬. ಹೆಂಡತಿಯು ತನ್ನವಳಲ್ಲ, ಕರ್ತನ ಅಧೀನಳಾದವಳೂ ಪರಿಶುದ್ಧಳೂ ಆಗಿದ್ದಾಳೆಂದೂ, ತನ್ನ ಪಾಲಿಗೆ ದೇವರ ಮಕ್ಕಳ ಮಹಿಮೆಗೆ ಬಾಧ್ಯಳಾಗಿದ್ದಾಳೆಂದೂ, ನಿಜ ಕ್ರೈಸ್ತನಾದ ಗಂಡನು ಯಾವಾಗಲೂ ನೆನಸುತ್ತಾ ೞರ ಬೇಕು.

೭. ಆಶ್ರಿತರನ್ನು ಕಾಪಾಡುವ ಧರ್ಮದ ಪ್ರಕಾರ ಹೆಂಡತಿಯನ್ನು ಎಲ್ಲಾ ವಿಷಯವಾಗಿಯೂ ಪ್ರೀತಿಯಿಂದಲೂ, ಬುದ್ಧಿಯಿಂದಲೂ ಪರಿಪಾಲಿಸ ಬೇಕು.

೪) ಮಿತ್ರ ತತ್ತುಗಳ ವಿಷಯವಾದ ಧರ್ಮವು. ಸ. ೩, ೮—೪, ೯.

ಪೇತ್ರನು ಇಲ್ಲಿ ವಿವರಿಸುವ ನೀತಿಯ ಬೋಧನೆಯು ಎಫೆಸರ ಪತ್ರಿಕೆಯ ೪ನೆ ೫ನೆ ಸಂಧಿಗಳಲ್ಲಿಯೂ ಕೊಲೊಸ್ಸೆಯವರ ಪತ್ರಿಕೆಯ ೩ನೆ ಸಂಧಿಯಲ್ಲಿಯೂ ಪೌಲನು ಬರದದ್ದಕ್ಕೆ ಚನ್ನಾಗಿ ಒಪ್ಪುತ್ತದೆ.

ಗೃಹಧರ್ಮ.

೧ಪೇತ್ರ. ೩, ೮—೪, ೫.

೮. ಕಡೆಯಲ್ಲಿ ಎಲ್ಲರು ಏಕ ಮನಸ್ಸು೧), ಸಮಾನಾನುಭವವು, ಸಹೋದರ ಸ್ನೇಹವು, ಅಂತಃಕರುಣೆವು೨), ಸುಹೃದಯವು೩), ಉಳ್ಳವರಾಗಿ, ೯. ಕೇಡಿಗೆ ಕೇಡನ್ನು, ನಿಂದೆಗೆ ನಿಂದೆಯನ್ನು, ಮಾಡದೆ, ಅದಕ್ಕೆ ಬದಲಾಗಿ ಆಶೀರ್ವದಿಸು ವವರಾಗಿರಿ. ಆಶೀರ್ವಾದಕ್ಕೆ ಬಾಧ್ಯಸ್ಥರಾಗುವ ಹಾಗೆಯೇ ಕರೆಯಲ್ಪಟ್ಟಿರೆಂದು, ಶಿಳಿಯುತ್ತಿರಲ್ಲಾ೪)?

೧. ಒಂದೇ ವಿಶ್ವಾಸವೂ, ಒಂದೇ ಕರ್ತನ ಪ್ರೀತಿಯೂ, ಒಂದೇ ಮಹಿಮಾಶೆಯೂ ಉಳ್ಳವರಲ್ಲಿ ಏಕ ಮನಸ್ಸು ಹುಟ್ಟುವದು; ಏಕ ಮನಸ್ಸುಳ್ಳವರು ಒಂದೇ ಆತ್ಮದ ಬಾಧೆಯಿಂದ ಏಕ ಮಶಿಗಳಾಗುತ್ತಾರೆ. ಎಫೆ. ೪, ೧೩. ಫಿಲಿ. ೨, ೨; ೩, ೧೫.

೨. ಈ ಪದಕ್ಕೂ, ಸಮಾನಾನುಭವವು ಎಂಬದಕ್ಕೂ ವ್ಯತ್ಯಾಸವದೆ: ಸಮಾನಾನುಭವವು ಸಂತೋಷಿಗಳ ಸಂಗಡ ಸಂತೋಷ ಪಟ್ಟು, ದುಃಖಿಗಳ ಸಂಗಡ ದುಃಖ ಪಡುವ ಗುಣವನ್ನು, ಅಂತಃಕರಣವು ಶ್ರಮವುಳ್ಳವರನ್ನು ಕರುಣಿಸುವ ಗುಣವನ್ನು ಸೂಚಿಸುತ್ತದೆ.

೩. ಗ್ರೀಕದಲ್ಲಿ ದೀನ ಮನಸ್ಸುಳ್ಳ ಎಂದು ಬರಿದದೆ. ಈ ಗುಣವುಳ್ಳವರು ಪರರಲ್ಲಿ ಮರ್ಯಾದಸ್ಥರಾಗಿದ್ದಾರೆ.

೪. ಆಶೀರ್ವಾದಬಾಧ್ಯಸ್ಥರಿಗೆ ಆಶೀರ್ವಚನವು ರೂಢಿಯಾಗ ಬೇಕೆಂತ, ಅಪಾಸ್ತಲನು ಪೇಳುತ್ತಾನೆ. ಈ ಎರಡು ವಚನಗಳಲ್ಲಿ ಸೂಚಿಸಿದ ಸದ್ಗುಣ ವೃತ್ತಿಯನ್ನು ೪ನೆ ಮುಂತಾದ ವಚನಗಳಲ್ಲಿ, ಐದು ಹೇತುಗಳನ್ನು ವಿಶೇಷಿಸಿ, ಬಾಧಿಸುತ್ತಾನೆ.

೧) ವ. ೧೦—೧೨. ಅದು ನಮಗೆ ಇಹ ಪರ ಪ್ರಯೋಜಕವಾಗಿದೆ. ೨) ವ. ೧೩. ನಾವು ಹೀಗೆ ನಡದು ಕೊಂಡರೆ, ದೇವರ ಅಪ್ಪಣೆಯಿಲ್ಲದೆ ಯಾರೂ ನಮಗೆ ಅನ್ಯಾಯ ಮಾಡ ಕೂಡದು; ಯಾವ ಕೇಡೂ ನಮಗೆ ಬರ ಕೂಡದು. ೩) ವ. ೧೪—೧೬: ನೀತಿಯ ನಿಮಿತ್ತವಾಗಿ ಶ್ರಮ ಪಟ್ಟರೂ, ನಾವು ಭಾಗ್ಯವಂತರು. ಹ್ಯಾಗಾದರೂ ಶತ್ರುಗಳಿಗಲ್ಲ ದೇವರಿಗೆ ಭಯ ಪಟ್ಟು, ವಿಶ್ವಾಸದ ವಿಷಯವಾಗಿ ಸಾತ್ವಿಕತ್ವದಿಂದ ಪ್ರತ್ಯುತ್ತರ ಕೊಡುವದಕ್ಕೆ ಸಿದ್ಧರಾಗಿದ್ದು, ಮನಸ್ಸಾಕ್ಷಿಯನ್ನು ಶುದ್ಧವಾಗಿ ಕಾಪಾಡ ಬೇಕು. ೪) ವ. ೧೭—೨೨. ಅಪರಾಧಿಯಾಗಿ ಶ್ರಮ ಪಡುವದಕ್ಕಿಂತ ನಿರಪರಾಧಿಯಾಗಿ ಶ್ರಮ ಪಡುವದು ವಾಸಿ ಎಂಬದನ್ನು ಯೇಸು ಕ್ರಿಸ್ತನ ದೃಷ್ಟಾಂತದಿಂದ ಅಪೊಸ್ತಲನು ಪ್ರಮಾಣಿಸುತ್ತಾನೆ. ವ. ೧೮. ಕ್ರಿಸ್ತನ ಶ್ರಮವು ತಾತ್ಕಾಲಿಕವಾಗಿತ್ತು; ಮಾಂಸದಲ್ಲಿ ಕೊಲೆಯಾದ ಕೂಡಲೇ ಆತ್ಮದಿಂದ ಬದುಕಿದನು ವ. ೧೯. (ಆತ್ಮದಿಂದ ಆತನು ಹೋಗಿ, ನೋಹನ ದಿವಸಗಳಲ್ಲಿ ಅವಿಶ್ವಾಸಿಗಳಾಗಿದ್ದ ಆತ್ಮಗಳಿಗೆ ಶಿಕ್ಷೆಯೆಂಬ ಸ್ಥಳದಲ್ಲಿ ಪ್ರಸಂಗ ಮಾಡಿದನು. ವ. ೧೯. ೨೦.) ಮತ್ತು ಪುನರುತ್ಥಾನವಾದನು. ವ. ೨೧. (ಆತನ ಶ್ರಮವು ವಿಮೋಚನಾರ್ಥವಾಗಿದ್ದ ಪ್ರಕಾರ ವ. ೧೮., ಆತನ ಪುನರುತ್ಥಾನದ ಮೂಲವಾಗಿ ಸ್ನಾನದಿಂದ ನೀತಿಯನ್ನು ಹೊಂದುತ್ತೇವೆ.) ಕಡೆಯಲ್ಲಿ ದಿವ್ಯ ರೋಹಣವಾಗಿ ವ. ೨೨., ಸರ್ವಾಧಿಕಾರಿಯಾಗಿ ದೇವರ ಬಲಪಾರ್ಶ್ವದಲ್ಲಿ ಕೂತು ಕೊಂಡನು. ೫) ಸ. ೪, ೧—೩. ಅಪೊಸ್ತಲನು ಶ್ರಮವು, ಲೋಕ ಪಾಪಗಳ ಪರಿತ್ಯಾಗಾರ್ಥವಾಗಿರುವದರಿಂದ, ಒಳ್ಳೆದೆಂದು ಬೋಧಿಸುತ್ತಾನೆ. ಇದರ ನಿಮಿತ್ತ ಲೋಕದವರು ಭಕ್ತರಿಗೆ ಕೋಪ ಮಾಡಿದರೂ, ಚಿಂತೆಯಿಲ್ಲ. ಈ ಮನಸ್ಸಿನ ನಿಮಿತ್ತವಾಗಿ ಲೋಕದವರ ಮೇಲೆ ಬದುಕುವವರಿಗೂ ಸತ್ತವರಿಗೂ ನ್ಯಾಯ ತೀರ್ಪಿಕೆಯಾಗುವ ದಿ

ವಸದಲ್ಲಿ ಅಜ್ಞಾನನಿರ್ಣಯವು ಬರುವದು. ಆದ್ದರಿಂದ ಅವರಿಗೆ ಹೆದರಿ, ಲೋಕ ಪಾವಗಳ ಪರಿತ್ಯಾಗದಲ್ಲಿ ಚಂಚಲರಾಗ ಬಾರದು. ಯಾಕಂದರೆ: ಶಕೆಯಲ್ಲಿದ್ದವರು, ತಮ್ಮ ಪಾಪಗಳಿಗಾಗಿ ಶಿಕ್ಷೆಯನ್ನು ಹೊಂದಿದ ಬಳಿಕ, ದೇವರ ಐಕ್ಯದಲ್ಲಿ ಶೇರಿ ಬದುಕುವದೇ ಕ್ರಿಸ್ತನು ಪಾತಾಳದಲ್ಲಿ ಮಾಡಿದ ಪ್ರಸಂಗದ ಉದ್ದಿಶ್ಯವಾಗಿತ್ತು.

ಅಪೊಸ್ತಲನು ಈ ಪ್ರಸ್ತಾವೋಚಿತವಾಗಿ ಶ್ಲಾಘ್ಯವಾದ ಎರಡು ಬೋಧನೆಗಳನ್ನು ಉದಾಹರಿಸುತ್ತಾನೆ; ಅವು ಯಾವವಂದರೆ: ಅ) ಕ್ರಿಸ್ತನ ಪಾತಾಳಾವರೋಹಣವಿಷಯವಾದದ್ದು. ಸ. ೩, ೧೫. ೨೦; ೪, ೬. ಇ) ಸ್ನಾನವಿಷಯವಾದದ್ದು. ಸ. ೩, ೨೧.

ಅ) ಪಾತಾಳಾವರೋಹಣವು ಕ್ರಿಸ್ತನ ಮರಣಕ್ಕೂ ಪುನರುತ್ಥಾನಕ್ಕೂ ಮಧ್ಯಕಾಲದಲ್ಲಿ ಉಂಟಾಯಿತು. ಅದರ ಉದ್ದಿಶ್ಯವನ್ನು ಬರಹವು ಅತಿ ಕ್ಲಪ್ತವಾಗಿ ಸೂಚಿಸುತ್ತದೆ. ಹ್ಯಾಗಂದರೆ ಕ್ರಿಸ್ತನು ನೋಹನ ದಿವಸಗಳಲ್ಲಿ ದೇವವಾಕ್ಯಪ್ರಸಂಗಕ್ಕೆ ಅವಿಧೇಯವಾಗಿದ್ದ ಆತ್ಮಗಳಿಗೆ ಪ್ರಸಂಗ ಮಾಡಿದನೆಂದು, ಬರದದೆ ಅಷ್ಟೆ. ಈ ಪ್ರಸಂಗವು ಸಫಲವಾಯಿತೋ ನಿಷ್ಫಲವಾಯಿತೋ ತೋರುವದಿಲ್ಲ. ಆದ್ದರಿಂದ ಈ ವಿಷಯವಾಗಿ ನಿಶ್ಚಯವಾದ ಬೋಧನೆಯನ್ನು ಸ್ಥಾಪಿಸುವದು, ಅಥವಾ ಅನುಮಾನಪ್ರಮಾಣಮಾರ್ಗವಾಗಿ ದೇವರ ವಾಕ್ಯದಲ್ಲಿ ಲಿಖಿತವಾಗದೆ ಇರುವ ಬೋಧನೆಯನ್ನು ಸ್ಥಾಪಿಸುವದು ಅನುಚಿತವಾಗಿದೆ.

ಇ) ಸ್ನಾನದ ವಿಷಯವಾಗಿ ಅಪೊಸ್ತಲನು ಸ. ೩, ೨೧ರಲ್ಲಿ ಬೋಧಿಸುವದೇನಂದರೆ: ಸ್ನಾನದಿಂದ ಭಕ್ತನಿಗೆ ದೇವರ ನೀತಿಯ ಪ್ರಸಾದದಿಂದ ಶುದ್ಧ ಮನಸ್ಸಾಕ್ಷಿಯೂ, ದೇವಪುತ್ರತ್ವಾಧಿಕಾರವೂ ಪ್ರಾಪ್ತವಾಗುವದು; ಅದನ್ನು ಹೊಂದಿದವನು ದೇವಾಧೀನನಾಗಿರ ಬೇಕೆಂಬುವದು ಸಹಜವಾಗಿದೆ. ಸ್ನಾನವು ಜಲಪ್ರಳಯಕ್ಕೆ ಪ್ರತಿಸುರ್ತು. ಜಲಪ್ರಳಯದಿಂದ ನೋಹನ ಮನೆಯವರು ಹೊರ್ತಾಗಿ ಎಲ್ಲರು ಸತ್ತರು. ಸ್ನಾನವು ವಿಶ್ವಾಸಿಸುವವರನ್ನೆಲ್ಲಾ ಬದುಕಿಸುತ್ತದೆ.

೬ನೆ ವಚನದಲ್ಲಿ ಸೂಚಿತವಾದ, ಬದುಕುವವರಿಗೂ ಸತ್ತವರಿಗೂ ನ್ಯಾಯತೀರ್ಮಿಕೆಯಾಗುತ್ತದೆಂಬ, ಪ್ರಸ್ತಾವೋಚಿತವಾಗಿ ಅಪೊಸ್ತಲನು ೬ನೆ ವಚನದಲ್ಲಿ ಲೋಕಾಂತ್ಯವನ್ನು ಜ್ಞಾಪಿಸಿ, ಸಂಯಮವಾಗಿ ನಡದುಕೊಂಡು, ಪ್ರಾರ್ಥನೆಗೆ ಎಚ್ಚರಿಕೆಯಾಗಿರ ಬೇಕೆಂದು ಉದ್ಬೋಧಿಸಿ, ಸ. ೩, ೮ಲ್ಲಿ ಬರದ ಮಾತಿಗೆ ತಿರುಗಿಕೊಂಡು, ಸಹೋದರಪ್ರೀತಿಯು ಕ್ರೈಸ್ತಧರ್ಮದ ಸಾರಾಂಶವಾಗಿದೆಂದು ಹೇಳಿ. ಯಾಕೊ. ೫, ೨೦ರ ಪ್ರಕಾರ, ಪ್ರೀತಿಯು ಪಾಪಗಳ ಸಮೂಹವನ್ನು ಅಡಗಿಸುವದೆಂದು, ಪ್ರಸ್ತಾಪಿಸುತ್ತಾನೆ. ಈ ಮಾತಿನ ಅಭಿಪ್ರಾಯವೇನಂದರೆ: ನಿಜವಾದ ಪ್ರೀತಿಯು ಸಹೋದರರ ತಪ್ಪುಗಳನ್ನು ತಿರಿಗಿ ತಿರಿಗಿ ಮನ್ನಿಸುವದರಲ್ಲಿ ದಣಿಯುವದಿಲ್ಲ.

ಐ) ಉದ್ಯೋಗ ವೃತ್ತಿಯ ಧರ್ಮವು. ಸ. ೪, ೧೦—೧೫.

ಒಬ್ಬೊಬ್ಬನು ತಾನು ಹೊಂದಿದ ಕೃಪೆಯ ವರದ ಪ್ರಯೋಗದಲ್ಲಿ ನಂಬಿಕೆಯುಳ್ಳವನಾಗಿರ ಬೇಕು. ವ. ೧೦. ಬೋಧಕರೂ, ಸಭಾಸೇವಕರೂ ಈ ರೀತಿಯಾಗಿ ತಮ್ಮ ತಮ್ಮ ಉದ್ಯೋಗಗಳನ್ನು ದೇವರ ಸ್ತೋತ್ರಕ್ಕಾಗಿ ನಡಿಸ ಬೇಕು. ವ. ೧೧. ವಿಶೇಷವಾದ ಉಪದ್ರವಗಳು ಬಂದಲ್ಲಿ ಕ್ರಿಸ್ತನ ಶ್ರಮಗಳಲ್ಲಿ ಪಾಲುಗಾರರಾಗಿದ್ದೇವೆಂದು, ಸಂತೋಷ ಪಡ ಬೇಕು. ವ. ೧೪. ೧೫. ಕ್ರಿಸ್ತನ ಹೆಸರಿಗಾಗಿ ನಿಂದೆಯುಂಟಾದರೆ, ನಿಂದಿತನಾದ ಯೇಸು ಕ್ರಿಸ್ತನ ಆತ್ಮವು ನಿಂದಿತರಲ್ಲಿ ವಿಶ್ರಮಿಸಿಕೊಳ್ಳುತ್ತದೆಂದು, ತಿಳಿದು ವ. ೧೪.,

ತಾರತಮ್ಯ ಧರ್ಮ.

೧ಪ್ರೇತ್ರ. ೪, ೧೭—೫, ೯.

ಇಂಥಾ ನಿಂದೆಯು ಮಹಿಮೆಯಂದೆಣಿಸ ತಕ್ಕದ್ದು. ವ. ೧೫. ೧೬. ಕಡೆಯಲ್ಲಿ ವ. ೧೭—೧೯. ಶ್ರಮವು ಆತ್ಮ ಪ್ರಯೋಜನಾರ್ಥವಾದದ್ದೆಂದೂ, ಅದರಿಂದ ಭಕ್ತರು ನ್ಯಾಯ ತೀರ್ಪಿಕೆಯ ಶಿಕ್ಷೆಗೆ ತಪ್ಪಿಸಿ ಕೊಳ್ಳುವದಕ್ಕೆ ಸಿದ್ಧರಾಗುತ್ತಾರೆಂದೂ, ನೆನಸಿ ಕೊಂಡು, ಶ್ರಮಕಾಲದಲ್ಲಿ ಸತ್‌ಕ್ರಿಯಾವೃತ್ತಿಯಲ್ಲಿ ದೃಢಗೊಂಡು, ನಂಬಿಕೆಯುಳ್ಳ ನಿರ್ಮಾಣಿಕನಾದ ದೇವರಿಗೆ ಪ್ರಾಣವನ್ನು ಒಪ್ಪಿಸ ಬೇಕು.

ಬ) ಸಭೆಯ ಹಿರಿಯರ ವಿಷಯವಾದ ಧರ್ಮವು. ಸ. ೫, ೧—೫.

ಸಭೆಯನ್ನು ಕರ್ತನ ಹೆಸರಿನಲ್ಲಿ ಯುಕ್ತವಾಗಿ ಆಳುವ ಹಿರಿಯರಿಗೆ ಕಿರಿಯರು ವಿಧೇಯರಾಗಿರ ಬೇಕು.

ಅಂತ್ಯೋದ್ಬೋಧನೆಯು. ವಂದನೋಕ್ತಿ ಸಹಿತವಾದ ಅಂತ್ಯಾಶೀರ್ವಾದವು.

ಸ. ೫, ೫—೧೪.

೫. ನೀವೆಲ್ಲರು ಒಬ್ಬರಿಗೊಬ್ಬರು ಒಳಗಾಗಿದ್ದು ೧), ಮನೋದ್ದೀನತ್ವವನ್ನು ಧರಿಸಿ ಕೊಳ್ಳಿರಿ. ಯಾಕಂದರೆ ದೇವರು ಗರ್ವಿಷ್ಠರನ್ನು ಎದುರಿಸಿ, ದೀನರಿಗೆ ಕೃಪೆಯನ್ನು ಕೊಡುತ್ತಾನೆ. ೬. ಹೀಗಿರುವದರಿಂದ ದೇವರು ತಕ್ಕ ಕಾಲದಲ್ಲಿ ನಿಮ್ಮನ್ನು ಹೆಚ್ಚಿಸುವ ಹಾಗೆ, ಅವನ ಶಕ್ತಿವಾದ ಕೈ ಕೆಳಗೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ ೨). ೭. ನಿಮ್ಮ ಚಿಂತೆಯನ್ನೆಲ್ಲಾ ೩) ಅವನ ಮೇಲೆ ಹಾಕಿರಿ; ಯಾಕಂದರೆ ಅವನು ನಿಮಗೊಸ್ಕರ ಚಿಂತಿಸುತ್ತಾನೆ. ೮. ಮಿತಿಯಾಗಿರ್ರಿ; ಎಚ್ಚರಿಕೆಯಾಗಿರ್ರಿ ೪); ಯಾಕಂದರೆ ನಿಮ್ಮ ವಿರೋಧಿಯಾದ ಪಿಶಾಚನು ಗರ್ಜಿಸುವ ಸಿಂಹದ ಹಾಗೆ, ಯಾರನ್ನು ನುಂಗಿ ಬಿಡಲೆಂದು ೫) ಹುಡುಕುತ್ತಾ, ತಿರುಗುತ್ತಾನೆ. ೯. ವಿಶ್ವಾಸದಲ್ಲಿ ದೃಢವಾಗಿದ್ದು ೬), ಅವನನ್ನು ಎದುರಿಸಿರಿ. ಲೋಕದಲ್ಲಿರುವ ನಿಮ್ಮ ಸಹೋದರರ ಕೂಟದಲ್ಲಿ ಅದೇ ಶ್ರಮಗಳು ೭) ಪೂರ್ತಿವಾಗುತ್ತವೆಂದು ತಿಳಿಯುತ್ತೀರಲ್ಲಾ?

೧. ದೀನ ಭಾವವು ಪರಕೀಯ ಧರ್ಮಕ್ಕೆ ಮೂಲವಾಗಿದೆ; ಗರ್ವದಿಂದ ಪರಕೀಯ ಅಧರ್ಮವೆಲ್ಲಾ ಹುಟ್ಟುತ್ತದೆ.

೨. ದೇವರ ಮುಂದೆ ತಮ್ಮನ್ನು ತಗ್ಗಿಸಿ ಕಾಳ್ಳುವವರೇ ಸಹೋದರರ ಸಲಿಗೆಯಲ್ಲಿಯೂ ದೀನ ಭಾವವನ್ನು ತೋರಿಸುವರು. ಅಪೊಸ್ತಲನು ಇಲ್ಲಿ ಶ್ರಮಕಾಲದಲ್ಲಿ ಸ್ವೇಚ್ಛೆಯನ್ನೂ, ಅವಿಧೇಯತ್ವವನ್ನೂ ತಳ್ಳುವ ಮನೋದೈನ್ಯವನ್ನು ವಿಶೇಷವಾಗಿ ಸೂಚಿಸುವದರಿಂದ, ದೇವರು ತಕ್ಕ ಕಾಲದಲ್ಲಿ ನಿಮ್ಮನ್ನು ಹೆಚ್ಚಿಸುವ ಹಾಗೆ ಎಂಬದನ್ನು ವ. ೬. ೭. ಪ್ರಸ್ತಾಪಿಸುತ್ತಾನೆ.

೩. ಶ್ರಮಕಾಲದಲ್ಲಿ ಆತ್ಮ ಶರೀರಗಳ ರಕ್ಷಣೆಯು ಹೋಗಾಗುವದೆಂಬ ಚಿಂತೆಯನ್ನು.

೪. ಶ್ರಮಕಾಲದಲ್ಲಿ ಭಯವು, ಸುಖಕಾಲದಲ್ಲಿ ಮದರ್ಮಿಷಯವು ನಿಮ್ಮನ್ನು ಮೋಸಗಾಳಿಸದ ಹಾಗೆ, ಜಾಗರೂಕರಾಗಿರ್ರಿ.

೫. ಅವನು ವಿಶೇಷವಾಗಿ ಬಹಿಃಶ್ರಮಕಾಲದಲ್ಲಿ ನಿರಾಶೆ ಮುಂತಾದ ಅಂತಃಶ್ರಮಗಳನ್ನು ಹುಟ್ಟಿಸುವದಕ್ಕೆ ಉದ್ಯುಕ್ತನಾಗಿದ್ದಾನೆ.

೬. ಶ್ರಮಕಾಲದಲ್ಲಿ, ಕರ್ತನು ತಾಳಲಾರದ ಹೊರೆಯನ್ನು ನಮ್ಮ ಮೇಲೆ ಹೊರಿಸುವದಿಲ್ಲವೆಂತಲೂ, ನಿರಂತರವಾದ ಮಹಿಮೆಯು ತಾತ್ಕಾಲಿಕ ಶ್ರ

೯೪೨ ಅಪೌ. ಚ. ಕಿ. ಪರಿಚ್ಛೇದ. ಅಪೌಸ್ತಲರ ಅಂಶ್ವ(ಪ್ರಮ್ಮ_ಕ್ಷಿ.
೧ ಪ್ಯೋತ್ರ. ೫, ೧೦—೧೪.

ಮಗಳ ಉದ್ದಿಶ್ಯವಾಗಿದೆಂತಲೂ, ದುರ್ವಿಷಯ ಶಾಸ್ತ್ರಾಧನಾಕಾಲದಲ್ಲಿ, ಕರ್ತನು ಜಯಶಕ್ತಿಯನ್ನು ಕಾಡುತ್ತಾನೆಂತಲೂ, ಜಯಕ್ಕೆ ವಿಶೇಷವಾದ ಫಲವುಂಟೆಂತಲೂ, ನಂಬಬೇಕು.

೭. ನಾವು ಮಾತ್ರ ಶ್ರಮಿಗಳಾಗಿರುವದಿಲ್ಲ; ಸರ್ವಕ್ರೈಸ್ತರೂ ಕ್ರಿಸ್ತನ ಶ್ರಮಗಳಲ್ಲಿ ಭಾಗಸ್ಥರಾಗಿದ್ದಾರೆಂಬ ಭಾವನೆಯು ಶ್ಲಾಘ್ಯವಾದುದ್ದು.

೧೦. ಆದರೆ ಕ್ರಿಸ್ತ ಯೇಸುವಿನಲ್ಲಿರುವ ತನ್ನ ನಿತ್ಯ ಮಹಿಮೆಗೆ ನಮ್ಮನ್ನು ಕರೆದ ಸರ್ವಕೃಪೆಯುಳ್ಳ ದೇವರು ತಾನೇ ಸ್ವಲ್ಪ ಕಾಲ ಶ್ರಮೆ ಪಟ್ಟ ನಿಮ್ಮನ್ನು ಸಂಪೂರ್ಣ ಮಾಡಿ ೧), ಸ್ಥಿರ ಪಡಿಸಿ ೨), ಬಲ ಪಡಿಸಿ ೩), ನೆಲೆಗಾಳಿಸಲಿ ೪). ೧೧. ಅವನಿಗೆ ಯುಗ ಯುಗಾಂತರಗಳ ವರೆಗೂ ಮಹಿಮೆಯೂ ಪ್ರಾಣಿವೂ ಆಗಲಿ ೫). ಆಮೆನ್.

೧. ಮೇಲೆ ಸೂಚಿತವಾದ ಮಹಿಮೆಯ ಬಾಧ್ಯತೆಗಾಗಿ ನಿಮ್ಮನ್ನು ಶ್ರಮಮೂಲವಾಗಿ ಸಿದ್ಧ ಮಾಡಲಿ.
೨. ಶ್ರಮಗಳಲ್ಲಿ ಚಂಚಲರಾಗದ ಹಾಗೆ.
೩. ಶ್ರಮಸಹನೆಯಿಂದಲೇ ಅಂತರ್ಮನುಷ್ಯನು ಬಲಗಾಳ್ಳುತ್ತಾನೆ.
೪. ಕ್ರಿಸ್ತನ ಶ್ರಮಗಳ ಐಕ್ಯದಲ್ಲಿ ಶೇರಿದವರು ಆತನ ಆತ್ಮಾನ್ಯೋನ್ಯದಲ್ಲಿ ಪೂರ್ಣವಾಗಿ ದೃಢರಾಗುತ್ತಾರೆ.
೫. ಸರ್ವವೂ ಆತನಿಗೆ ವಶವಾಗಲಿ.

ವ. ೧೨—೧೪. ವಂದನೋಕ್ತಿಗಳು ಬರದವೆ.

ಅಂತ್ಯಾಶೀರ್ವಾದವು. ವ. ೧೪.

೧೪. ಕ್ರಿಸ್ತ ಯೇಸುವಿನಲ್ಲಿರುವ ನಿಮ್ಮೆಲ್ಲರಿಗೆ ಸಮಾಧಾನವು ಆಗಲಿ. ಆಮೆನ್.

ಕ್ರಿಸ್ತನ ಹಾತರ್ವಾಗಿ ಸಮಾಧಾನವು ಇಲ್ಲ.

ಪೌಲನು ಎರಡನೆ ಸಾರಿ ಬಂಧನಗ್ರಸ್ತನಾಗಿ ರೋಮಪುರಕ್ಕೆ ಬಂದದ್ದು;

ತದನಂತರ ಸ್ವಲ್ಪ ಕಾಲದಲ್ಲಿಯೇ ಪ್ಯೇತ್ರನು ಸಹ ಅಲ್ಲಿಗೆ ಶೇರಿದ್ದು.

ಅ) ೨ ತಿಮೊ. ಇ) ೨ ಪೇತ್ರ. ಉ) ಯೂದನ ಪತ್ರಿಕೆಯು.

ಪೌಲನು ತಿಮೊಥೆಯನಿಗೆ ಬರದ ಎರಡನೆ ಪತ್ರಿಕೆಯು.

ಪೀಠಿಕೆಯು.

ಈ ಎರಡನೆ ಪತ್ರಿಕೆಯನ್ನು ಪೌಲನು ಬಂಧನಗ್ರಸ್ತನಾಗಿ ಎರಡನೆ ಸಾರಿ ರೋಮಪುರಕ್ಕೆ ಬಂದು, ಪ್ರತ್ಯಕ್ಷನ್ಯಾಯವಿಮರ್ಶೆಯಾದನಂತರ ೨ ತಿಮೊ. ೪, ೧೬., ನ್ಯಾಯಸ್ಥಾನದಲ್ಲಿ ತನ್ನ ಸಂಗಡ ಧೈರ್ಯವಾದ

೨ ತಿಮೊ. ೧, ೧—೫.

ವಿಶ್ವಾಸವಿಜ್ಞಾಪನೇ ಮಾಡುವೆಂದು ಮುಂಚಿತವಾಗಿ ನಂಬಿದವರ ಚಾಂಚಲ್ಯಕ್ಕೆ ದುಃಖಾಕ್ರಾಂತನಾಗಿ ೨ ತಿಮೊ. ೪, ೧೦. ೧೪—೧೬., ಶಿಷ್ಯನೂ, ಜೊತೆಗಾರನೂ ಆದ ತಿಮೊಥೆಯನಿಗೆ ಬರದು, ಯಥಾರ್ಥವಾದ ವಿಶ್ವಾಸಸ್ಥೈರ್ಯಕ್ಕೂ, ಧೈರ್ಯವಾದ ವಿಜ್ಞಾಪನೆಗೂ ಅವನನ್ನು ಎಚ್ಚರಿಸಿ, ತನ್ನ ಬಳಿಗೆ ರೋಮಪುರಕ್ಕೆ ಶೀಘ್ರ ಬೇಕೆಂದು ಕರೆಯುತ್ತಾನೆ. ೨ ತಿಮೊ. ೪, ೯. ಈ ಪತ್ರಿಕೆಯು ೬೬ನೆ ವರುಷದಲ್ಲಿ ರಚಿತವಾಯಿತು. ಆಕಾಲದಲ್ಲಿ ಮಹಾರಾಜನಾದ ನೆರೋನನ ಅಪೇಕ್ಷಾನುಸಾರವಾಗಿ ರೋಮಪುರದಲ್ಲಿ ಅತಿ ಕ್ರೂರವಾದ ಕ್ರೈಸ್ತ ಹಿಂಸೆಯುಂಟಾಯಿತು. ಆದ್ದರಿಂದ ಅಪೊಸ್ತಲನು, ಸ್ವಲ್ಪ ಕಾಲದೊಳಗೆ ತನಗೆ ಸಾಕ್ಷಿಮರಣವು ಪ್ರಾಪ್ತವಾಗುವದೆಂದು, ತನ್ನಲ್ಲಿ ನಿಶ್ಚೈಸಿ ಕೊಂಡನು. ಪೌಲನು ರೋಮಪುರಗ್ರಹಸ್ಥನಾಗಿದ್ದು, ಶಿರಶ್ಛೇದನದಿಂದ ಪ್ರಾಣಶಿಕ್ಷೆಯನ್ನು ಹೊಂದಿದನೆಂದು, ಪೂರ್ವ ಸಭಾಚರಿತ್ರಗಾರರು ಬರದಿದ್ದಾರೆ.

ತಾತ್ಪರ್ಯಾನು ಕ್ರಮಣಿಕೆಯು.

ಸ. ೧. ವಂದನಾಕ್ತಿಯು. ವ. ೧. ೨. ದೃಢವಾದ ವಿಶ್ವಾಸಸ್ಥೈರ್ಯಾದ್ಬೋಧನೆಯು. ವ. ೩—೧೪. ಸ್ವೀಯ ಸ್ಥಿತಿಗತಿ ವರ್ತಮಾನವು. ವ. ೧೫—೧೮.

ಸ. ೨. ೧) ವಿಶ್ವಾಸನಿಮಿತ್ತವಾಗಿ ಶ್ರಮವನ್ನು ದೃಢ ಮನಸ್ಸಿನಿಂದ ತಾಳ ಬೇಕೆಂಬ ಉದ್ಬೋಧನೆಯು. ವ. ೧—೧೩. ೨) ಅಬದ್ಧ ಬೋಧಕರಿಗೆ ವಿರೋಧವಾಗಿ ಯುದ್ಧ ಮಾಡುವದರಲ್ಲಿ ಸ್ಥೈರ್ಯವಾಗಿರ ಬೇಕೆಂಬ ಉದ್ಬೋಧನೆಯು. ವ. ೧೪—೨೬.

ಸ. ೩. ೧) ದುಷ್ಟತ್ವದಲ್ಲಿ ಅಭಿವೃದ್ಧರಾಗುವ ಅಬದ್ಧಬೋಧಕರ ಭ್ರಮವಾಕ್ಯಕ್ಕೆ ಎಚ್ಚರಿಕೆಯಾಗಿರ ಬೇಕು. ವ. ೧—೯. ೨) ಪೌಲನಲ್ಲಿ ಕಂಡ ಮಾದ್ರಿಯನ್ನು ಅನುಸರಿಸಿ, ವಿಶ್ವಾಸದಲ್ಲಿ ದೃಢನಾಗಿದ್ದು, ಕ್ರೈಸ್ತಬೋಧನೆಯನ್ನು ಪಾಳೆ ಒಡಂಬಡಿಕೆಯ ಯಥೋಕ್ತ ಪ್ರಮಾಣದಿಂದ ಸ್ಥಾಪಿಸ ಬೇಕು. ವ. ೧೦—೧೭.

ಸ. ೪. ೧) ಅಂತ್ಯವಾದ ಯಥಾರ್ಥಾದ್ಯೋಗಾಚರಣೋದ್ಬೋಧನೆಯು. ೨) ವಿಶೇಷಾಜ್ಞೆಗಳು. ವರ್ತಮಾನಗಳು. ವಂದನಾಕ್ತಿಗಳು.

ಸ. ೧.

ವಂದನಾಕ್ತಿಯು. ವ. ೧. ೨.

ದೇವರ ಚಿತ್ತದಿಂದ ಕ್ರಿಸ್ತ ಯೇಸುವಿನಲ್ಲಿರುವ ಜೀವದ ವಾಗ್ದತ್ತೋದ್ಯೋಗದಲ್ಲಿ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು ಪ್ರಿಯ ಮಗನಾದ ತಿಮೊಥೆಯನಿಗೆ ಮಾಡುವ ಆಶೀರ್ವಾದವು: ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಿಂದಲೂ, ಕೃಪೆಯೂ ಕರುಣೆಯೂ ಸಮಾಧಾನವೂ ಉಂಟಾಗಲಿ.

ನಿಜ ವಿಶ್ವಾಸಾನ್ವಿತ ಜಾಗರೂಕತ್ವೋದ್ಬೋಧನೆಯು. ವ. ೩—೧೪.

ವ. ೩. ನಾನು ರಾತ್ರೆ ಹಗಲು ಮಾಡುವ ಪ್ರಾರ್ಥನೆಗಳಲ್ಲಿ ನಿನ್ನನ್ನು ನೆನಸಿ, ಶುದ್ಧ ಮನಸ್ಸಾಕ್ಷಿಯಾಗಿ (ಧರ್ಮಾಚರಣೆಯ ಲೆಖ್ಖದ ಪ್ರಕಾರ) ನಾನು ಹಿರಿಯರ ಕಾಲದಿಂದ ಸೇವಿಸುವ ದೇವರಿಗೆ ಸ್ತೋತ್ರ

ಮಾಡುತ್ತೇನೆ. ವ. ೪. ನಿನ್ನ ವಿಯೋಗಾಶ್ರುಧಾರೆಯನ್ನು ನೆನಪು ಮಾಡಿ ಕೊಂಡು, ನಿನ್ನನ್ನು ಕಂಡು ಸಂತೋಷ ಪೂರಿತನಾಗ ಬೇಕೆಂದಿಚ್ಛೈಸುತ್ತೇನೆ.

೫. ನಿಂನಲ್ಲಿರುವ ಕಪಟವಿಲ್ಲದ ವಿಶ್ವಾಸವನ್ನು ಜ್ಞಾಪಕ ಮಾಡಿ ಕೊಳ್ಳುತ್ತೇನಲ್ಲ? ಅದು ಮೊದಲು ನಿನ್ನ ಅಜ್ಜಿಯಾದ ಲೋವಿಯಲ್ಲಿ, ಮತ್ತು ನಿನ್ನ ತಾಯಿಯಾದ ಯುನೀಕೆಯಲ್ಲಿ, ವಾಸವಾಗಿತ್ತು ೧). ಅದು ನಿನ್ನಲ್ಲಿ ಸಹ ಇರುತ್ತದೆಂದು ನಂಬುತ್ತೇನೆ. ೬. ಈ ಕಾರಣದಿಂದ ನನ್ನ ಕೈಯಿಡುವಿಕೆಯಿಂದ ನಿನ್ನಲ್ಲಿರುವ ದೇವರ ವರವನ್ನು ಉರಿಯ ಮಾಡ ೨) ನಿನ್ನನ್ನು ಎಚ್ಚರಿಸುತ್ತೇನೆ. ೭. ಯಾಕಂದರೆ ದೇವರು ಹೇಡಿತನದ ಆತ್ಮವನಲ್ಲ ೩), ಬಲ, ಪ್ರೀತಿ, ಮನೋನಿಸ್ಪೃಹಗಳ ಆತ್ಮವನ್ನು ನಮಗೆ ಕೊಟ್ಟಿದ್ದಾನೆ ೪). ೮. ಹೀಗಿರುವದರಿಂದ ನಮ್ಮ ಕರ್ತನ ಸಾಕ್ಷಿಗೂ, ಅವನ ಬಂಧದವನಾದ ನನಗೂ, ನಾಚಿಕೆ ಪಡದೆ, ದೇವರ ಬಲದಿಂದ ಸುವಾರ್ತೆಯ ಶ್ರಮಗಳಲ್ಲಿ ೫) ಪಾಲುಗಾರನಾಗಿರು. ೯. ಅವನು ನಮ್ಮನ್ನು ರಕ್ಷಿಸಿ, ನಮ್ಮ ಕ್ರಿಯೆಗಳ ಪ್ರಕಾರವಲ್ಲ, ತನ್ನ ನಿರ್ಣಯದ ಪ್ರಕಾರವೂ, ಯುಗ ಕಾಲಗಳ ಮುಂಬೆ ಕ್ರಿಸ್ತ ಯೇಸುವಿನಲ್ಲಿ ನಮಗೆ ಕೊಡಲ್ಪಟ್ಟಂಥ, ಮರಣವನ್ನು ಲಯ ಮಾಡಿ, ೧೦. ಸುವಾರ್ತೆಯಿಂದ ಜೀವವನ್ನೂ ನಿರ್ಣಯವನ್ನೂ ಬೆಳಕಿಗೆ ತಂದ, ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯಿಂದ ಇಗಲೇ ಪ್ರತ್ಯಕ್ಷವಾದಂಥ ಕೃಪೆಯ ಪ್ರಕಾರವೂ, ಪರಿಶುದ್ಧ ಕರೆಯುವಿಕೆಯಿಂದ ನಮ್ಮನ್ನು ಕರೆದಿದ್ದಾನೆ ೬). ೧೧. ಆ ಸುವಾರ್ತೆಗೆ ನಾನು ಸಾರುವವನಾಗಿಯೂ, ಅಪೌಸ್ತಲನಾಗಿಯೂ, ಜನಾಂಗಗಳ ಬೋಧಕನಾಗಿಯೂ, ನೇಮಿಸಲ್ಪಟ್ಟೆನು ೭).

೧. ತನ್ನ ಹಿರಿಯರು ಶಕ್ತರಾದ ಯೆಹೂದರಾಗಿದ್ದರೆಂಬ ಸ್ಮರಣೋಚಿತವಾಗಿ ತಿಮೊಥೆಯನ ತಾಯಿಯೂ ಅಜ್ಜಿಯೂ ಯಥಾರ್ಥ ವಿಶ್ವಾಸವುಳ್ಳವರಾಗಿದ್ದರೆಂಬುವದನ್ನು ಪೌಲನು ಜ್ಞಾಪಿಸುತ್ತಾನೆ. ತಿಮೊಥೆಯನ ತಂದೆಯು ಗ್ರೀಕನಾಗಿದ್ದನೆಂದು ಅಪಾ. ಕ್ರಿ. ೧೬ಲ್ಲಿ ಬರದದೆ. ಆದರೆ ಅವನು ಯೆಹೂದ ಮತ ಪ್ರವಿಷ್ಟನಾಗಿದ್ದನೆಂದು, ನೆನಸುವದಕ್ಕೆ ಅಶ್ಚಂತರವಿರುವದಿಲ್ಲ. ಹಿರಿಯರ ಶಕ್ತಿಯೂ ಸ್ವೀಯೈ ಧರ್ಮಾಚರಣೆಯೂ ಅತಿಪ್ರಯತ್ನಾರ್ಜಿತವಾಗಿವೆಂದು, ಪೌಲನು ನೆನಸಿದರೂ, ಅವು ರಕ್ಷಣೋತ್ಪಾದ್ಯಶೂನ್ಯವಾಗಿ ಸಾರ್ಥಕವಾಗಿರದೆ, ಅವುಗಳಲ್ಲಿ ಶರಣವಿಡುವವನಿಗೆ ಆತ್ಮ ನಷ್ಟಕರವಾಗಿವೆಂದು, ಚನ್ನಾಗಿ ತಿಳಿದು ಕಾಂಡನು. ಫಿಲಿ. ೩, ೪—೧೧.

೨. ತಿಮೊಥೆಯನಿಗೆ ಪ್ರಾಪ್ತವಾದ ವರವು ಅಗ್ನಿಯಂದು ಚಾವಿಸಿ ಕಾಂಡು, ಅದನ್ನು ಆಸಕ್ತ ಪ್ರಾರ್ಥನೆಯಿಂದ ಉತ್ಥಾಪಿಸಿ ಜಾಜ್ವಲ್ಯ ಪಡಿಸ ಬೇಕೆಂದು ಸೂಚಿಸುತ್ತಾನೆ.

೩. ಅಂದರೆ, ದೇವರ ಆತ್ಮವನ್ನು ಪಡೆಂದಿದವರಾದ ನಾವು ಉಪದ್ರವಗಳಿಂದ ಮನ ಕುಂದ ಬಾರದು.

೪. ಕ್ರಿಸ್ತನ ಆತ್ಮವನ್ನು ಪಡೆಂದಿದವನು ಶೂರನೂ, ಪ್ರೀತಿ ಪೂರಿತನೂ, ಯಾವಾಗಲೂ ದೃಢ ಬುದ್ಧಿಯುಳ್ಳವನೂ ಆಗಿರ ಬೇಕು.

ನಂಬಿಕಸ್ತಿಕೆ.

೨ತಿಮೊ. ೧, ೧೨—೧೭.

೫. ಅಂದರೆ, ಸುವಾರ್ತಾಸೇವಾನ್ವಿತ ಶ್ರಮಗಳನ್ನು ನನ್ನ ಪಾಲಾಗಿ ದೇವರ ಬಲದಿಂದ ತಾಳು.

೬. ಅಂದರೆ, ಸುವಾರ್ತಾಪ್ರಸಂಗಾರ್ಥವಾಗಿ ನಮ್ಮನ್ನು ಕರದಿದ್ದಾನೆ. ಪೌಲನು ಬಂಧನಗ್ರಸ್ತನಾಗಿದ್ದು, ಬೇಗ ಸಾಯುತ್ತೇನೆಂದು ತಿಳಿದು ಕಾಂದರೂ, ತನ್ನ ಉದ್ಯೋಗವು ಅತ್ಯಂತ ಮಹಿಮೆಯುಳ್ಳದ್ದೆಂದೂ, ತನ್ನ ಗತಿಯು ಅತ್ಯಂತ ಮಂಗಳವಾದದ್ದೆಂದೂ, ತಾವಿಸಿ ಕಾಂಡನು.

೭. ಇಂಥಾ ಮಹಿಮೆಯುಳ್ಳ ಉದ್ಯೋಗವನ್ನು ಪಡದವರು ಪೌರುಷಸ್ಥೈರ್ಯರಾಗಿರ ಬೇಕು. ಇದು ೬ನೆ ವಚನದ ಅಭಿಪ್ರಾಯಕ್ಕೆ ಅನುಸಾರವಾಗಿದೆ.

೧೨. ಈದಕಾರಣ ಇವುಗಳನ್ನು ೧) ಸಹಿಸುತ್ತೇನೆ; ಈದಾಗ್ಯೂ ನಾಚಿಕೆ ಪಡುವದಿಲ್ಲ ೨). ಹ್ಯಾಗಂದರೆ ನಾನು ವಿಶ್ವಾಸಿಸಿದವನನ್ನು ಬಲ್ಲೆನು ೩). ಮತ್ತು ನಾನು ಒಪ್ಪಿಸಿದ್ದನ್ನು ೪) ಆ ದಿನದ ಮಟ್ಟಿಗೂ ಕಾಪಾಡ ಶಕ್ತನಾಗಿದ್ದಾನೆಂದು, ನಿಶ್ಚೈಸಿಕಾಂಡಿದ್ದೇನೆ. ೧೩. ಕ್ರಿಸ್ತಯೇಸುವಿನಲ್ಲಿರುವ ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ ನನ್ನಿಂದ ಕೇಳಿದ ಸ್ವಸ್ಥ ೫) ವಾಕ್ಯಗಳ ಪದ್ಧತಿಯನ್ನು ೬) ಹಿಡಿದುಕಾಳ್ ೭). ೧೪. ನಿನಗೆ ಒಪ್ಪಿಸಲ್ಪಟ್ಟ ಒಳ್ಳೇ ವರವನ್ನು ೮) ನಮ್ಮಲ್ಲಿ ವಾಸ ಮಾಡುವ ಪರಿಶುದ್ಧಾತ್ಮದ ಮೂಲವಾಗಿ ಕಾಪಾಡು.

೧. ಬಂಧನಗ್ರಸ್ತರಿಗೆ ವಾಡಿಕೆಯಾದ ಉಪದ್ರವಗಳನ್ನು.

೨. ನನ್ನ ಧೈರ್ಯವೂ, ಸಂತೋಷವೂ ಕೆಡುವದಿಲ್ಲ.

೩. ನಾನು ನಂಬಿದ ಯೇಸುವು ನಂಬಿಕೆಯುಳ್ಳ ಸರ್ವಶಕ್ತನಾದ ರಕ್ಷಕನಾಗಿದ್ದಾನೆಂದು, ಬಲ್ಲೆನು.

೪. ಅಂದರೆ, ನನ್ನ ವಿಶ್ವಾಸವನ್ನೂ, ಅದರಿಂದ ಉಂಟಾಗುವ ಆತ್ಮರಕ್ಷಣೆಯನ್ನೂ ೧ಪೇತ್ರ. ೧, ೫. ೧ಕಾರಿ. ೧, ೮.

೫. ನಿಜ ಸುವಾರ್ತಾವಾಕ್ಯವು ದೇವರ ಸತ್ಯವಾಗಿದ್ದು, ಭಕ್ತನ ಆತ್ಮಕ್ಕೆ ಕ್ಷೇಮಕರವಾಗಿದೆ.

೬. ಅಂದರೆ, ಸುವಾರ್ತಾಬೋಧನಾಸೂತ್ರಗಳನ್ನು.

೭. ದೇವರು ಭಕ್ತನ ವಿಶ್ವಾಸವನ್ನು ಕಾಪಾಡುತ್ತಾನೆಂದು, ಪೌಲನು ಚನ್ನಾಗಿ ತಿಳಿದು ಕಾಂಡರೂ, ತಿಮೊಥೆಯನನ್ನು ಆಸಕ್ತಿಯಿಂದ ಉದ್ಬೋಧಿಸುತ್ತಾನೆಂದು, ಲಕ್ಷಿಸ ಬೇಕು.

೮. ಅಂದರೆ, ೧೩ನೆ ವಚನದಲ್ಲಿ ಸೂಚಿತವಾದ ವಿಶ್ವಾಸವನ್ನೂ, ಅದಕ್ಕೆ ಸಂಬಂಧವಾದ ರಕ್ಷಣೆಯನ್ನೂ.

ಪ್ರಸ್ತುತಾದ್ಬೋಧನಾನುಕೂಲವಾದ ಸ್ವೀಯ ಸ್ಥಿತಿಗತಿ ವರ್ತಮಾನವು. ೧೫—೧೮.

೧೫. ಫುಗೆಲ್ಲನೂ ಹೆರ್ಮೊಗೆನನೂ ಮೊದಲಾದ ಆಸ್ಯದಲ್ಲಿರುವವರೆಲ್ಲರು ೧) ನನ್ನನ್ನು ಬಿಟ್ಟು ಹ್ಯಾದರೆಂಬುವದನ್ನು ಬಲ್ಲಿ. ೧೬. ಒನೆಸಿಫೊರನ ಮನೆಗೆ ಕರ್ತನು ಕರುಣೆ ಮಾಡಲಿ; ಯಾಕಂದರೆ ಅವನು ಅನೇಕ ಸಾರಿ ನನಗೆ ಉಪಶಮನ ಮಾಡಿ, ೧೭. ನನ್ನ ಸಂಕೋಲೆಗೆ ಲಜ್ಜಿಸದೆ ನಾಚಿಕೆ ಪಡದೆ, ರೋಮದಲ್ಲಿರುವಾಗ ೨)

೨ ತಿಮೊ. ೧, ೧೪--೨, ೭.

ಅತಿ ಜಾಗ್ರತೆಯಿಂದ ನನ್ನನ್ನು ಹುಡುಕಿ, ಕಂಡು ಕೊಂಡನು. ೧೪. ಈ ದಿನದಲ್ಲಿ ಕರ್ತನಿಂದ ಕರುಣೆ ಹೊಂದುವ ಹಾಗೆ, ಕರ್ತನು ಅವನಿಗೆ ದಯ ಪಾಲಿಸಲಿ ೩). ಮತ್ತು ಎಫೆಸದಲ್ಲಿ ಅವನು ಎಷ್ಟು ಸೇವೆ ಮಾಡಿದನೆಂದು, ನಿನಗೆ ಚನ್ನಾಗಿ ತಿಳಿದದೆ.

೧. ಪೌಲನು ಕಡೇ ಸಾರಿ ಎಫೆಸ ಪಟ್ಟಣವನ್ನು ಬಿಟ್ಟು ಬಳಿಕ, ತ್ರೋವದಲ್ಲಿ ಅವನಿಗೆ ಹಿಂಸೆಯುಂಟಾದಾಗ, ಇಲ್ಲಿ ಸೂಚಿಸಿರುವಂಥಾದ್ದು ಸಂಭವಿಸಿತೆಂದು ತಾ೧ರುತ್ತದೆ. ಸ. ೪, ೧೩. ೧೪.

೨. ಒನೆಸಿಫೋರನು ಸಣ್ಣ ಆಸ್ಯದಿಂದ, ಒಂದು ವೇಳೆ ಎಫೆಸದಿಂದ, ಪೌಲನು ರೋಮಪುರಕ್ಕೆ ಶೆರೆಯವನಾಗಿ ಬಂದ ಬಳಿಕ, ಬೇರೆ ಪುಪಕಾರಾರ್ಥವಾಗಿ ಅಲ್ಲಿಗೆ ಪಾ೧ಾಗಿ, ಪೌಲನನ್ನು ಅತಿಜಾಗ್ರತೆಯಿಂದ ಪುಡುಕಿದನು. ಇದು ಅವಶ್ಯವಾಗಿತ್ತು. ಯಾಕಂದರೆ: ಆ ಕಾಲದಲ್ಲಿ ರೋಮಪುರವು ಸರ್ವ ಲೋಕದಲ್ಲಿಯೂ ದೊಡ್ಡ ಪಟ್ಟಣವಾಗಿತ್ತು. ಮೂವತ್ತು ಲಕ್ಷ ಪರ್ಯಂತ ಅದರಲ್ಲಿ ಜನಗಳು ವಾಸವಾಗಿದ್ದವು.

೩. ಈ ಆಶೀರ್ವಾದವು ನೆರವೇರುವದಕ್ಕೆ ಏನೂ ಸಂಶಯವಿಲ್ಲ. ಮತ್ತಾ. ೨೫, ೪೦.

ಸ. ೨.

ವಿಶ್ವಾಸ ನಿಮಿತ್ತವಾಗಿ ಶ್ರಮವನ್ನು ದೃಢ ಮನಸ್ಸಿನಿಂದ ತಾಳ ಬೇಕೆಂಬ ಉದ್ಬೋಧನೆಯು. ವ. ೧—೧೩.

೧. ಆದದರಿಂದ ನೀನು, ನನ್ನ ಮಗನೇ, ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಲ್ಲಿ ಬಲಗೊಳ್ಳು ೧). ೨. ಮತ್ತು ಅನೇಕ ಸಾಕ್ಷಿಗಳ ಮುಖಾಂತರ ನನ್ನಿಂದ ಕೇಳಿದವುಗಳನ್ನೇ, ಬೇರೆಯವರನ್ನು ಸಹ ಉಪದೇಶಿಸ ಶಕ್ತವರಾದ ನಂಬಿಕೆಯುಳ್ಳ ಜನರಿಗೆ ಒಪ್ಪಿಸು. ೩. ಆದದರಿಂದ ನೀನು ಯೇಸು ಕ್ರಿಸ್ತನ ಒಳ್ಳೇ ಯುದ್ಧಸನಾಗಿ ಶ್ರಮವನ್ನು ತಾಳಿಕೊ೧. ೪. ಯಾವ ದಂಡಿನವನಾದರೂ ತನ್ನನ್ನು ದಂಡಿನಲ್ಲಿ ಶೇರಿಸಿದವನನ್ನು ಮೆಚ್ಚಿಸುವ ಹಾಗೆ, ಜೀವನದ ಕೆಲಸಗಳಲ್ಲಿ ಶಿಕ್ಕಿಕೊಳ್ಳುವದಿಲ್ಲ ೨). ೫. ಮತ್ತು ಒಬ್ಬನು ಮಲ್ಲಯುದ್ಧ ಮಾಡಿದರೆ, ನೇಮದ ಪ್ರಕಾರ ಯುದ್ಧ ಮಾಡದಿದ್ದರೆ ೩), ಕಿರೀಟವನ್ನು ಹೊಂದನು. ೬. ಕಷ್ಟ ಮಾಡುವ ಒಕ್ಕಲಿಗನು ೪), ಮೊದಲು ಫಲಗಳಲ್ಲಿ ಪಾಲು ಹೊಂದ ಬೇಕು. ೭. ನಾನು ಹೇಳುವವುಗಳನ್ನು ಆಲೋಚಿಸು; ಕರ್ತನು ಎಲ್ಲವುಗಳಲ್ಲಿ ನಿನಗೆ ವಿವೇಕವನ್ನು ಕೊಡಲಿ.

೧. ಇದಕ್ಕೆ ಸ. ೧, ೯. ಸರಿ ನೋಡ ಬೇಕು.

೨. ಸೈನ್ಯದಲ್ಲಿ ಶೇರಿದವರು ವ್ಯಾಪಾರ ಮುಂತಾದ ಪುಪಕಾರಗಳನ್ನು ನಡಿಸಲಾಗದ ಪ್ರಕಾರ, ಯೇಸು ಕ್ರಿಸ್ತನ ಪೆಸರಿನಲ್ಲಿ ಯುದ್ಧ ಮಾಡುವ ಸಹಾಬಾಧಕರು ಲೌಕಿಕ ಕಾರ್ಯಗಳಲ್ಲಿ ಶೇರ ಬಾರದು.

೩. ಈ ಯುದ್ಧದ ವಿಧ್ಯಮಾನವು ಎಫೆ. ೬, ೧೨. ಮುಂತಾದ ವಚನಗಳಲ್ಲಿ ಬರದದೆ.

೪. ಅಭಿಪ್ರಾಯವೇನಂದರೆ: ಒಕ್ಕಲಿಗನು ಬೆಳೆಯನ್ನು ಪಾ೧ಾಂದುವದಕ್ಕೆ ಕಷ್ಟ ಮಾಡ ಬೇಕಾದ ಪ್ರಕಾರ, ನಾವು ಮಹಿಮೆಯ ಪದವಿಯನ್ನು ಪಾ೧ಾಂದುವದಕ್ಕೆ ಉದ್ಯೋಗವೃತ್ತಿಯಲ್ಲಿ ಶ್ರಮ ಪಡ ಬೇಕು.

೨ ತಿಮೊ. ೨, ೪—೧೩.

೪. ನನ್ನ ಸುವಾರ್ತೆಯ ಪ್ರಕಾರ ದವ್ರೀದನ ಬೀಜದವನೂ, ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನೂ, ಆಗಿರುವ ಯೇಸು ಕ್ರಿಸ್ತನನ್ನು ಜ್ಞಾಪಕ ಮಾಡಿಕೊ ೧). ೯. ಇ ದಕ್ಕಾಗಿಸ್ಕರ ನಾನು ದುಷ್ಕೃತ್ಯದವನ ಹಾಗೆ ಬಂಧಗಳ ಪರ್ಯಂತಕ್ಕೂ ಶ್ರಮ ಪಡುತ್ತೇನೆ. ೧೦. ಆದರೆ ದೇವರ ವಾಕ್ಯವು ಬಂಧಿಸಲ್ಪಟ್ಟಿದ್ದಲ್ಲ. ಅದಕ್ಕಾಗಿ ಆಯಲ್ಪಟ್ಟವರಿಗಾಗಿಸ್ಕರ ೨), ಅವರು ಸಹ ನಿತ್ಯ ಮಹಿಮೆಯ ಸಂಗಡ ಕ್ರಿಸ್ತ ಯೇಸುವಿನಲ್ಲಿರುವ ರಕ್ಷಣೆಯನ್ನು ಹೊಂದುವ ಹಾಗೆ, ಎಲ್ಲವುಗಳನ್ನು ತಾಳಿ ಕೊಳ್ಳುತ್ತೇನೆ.

೧. ಈ ಸ್ಥಳದ ಅಭಿಪ್ರಾಯವೇನಂದರೆ: ಯೇಸು ಕ್ರಿಸ್ತನು ನಿಜ ಮನುಷ್ಯನಾಗಿದ್ದು, ಮರಣಶ್ರಮವನ್ನು ತಾಳಿ, ಪುನರುತ್ಥಾನವನ್ನೈದಿ, ಜೈಸಿದ್ದನ್ನು ನೆನಸಿಕೊಂಡು, ನಿನಗೆ ಬರುವ ಉಪದ್ರವಗಳನ್ನು ಧೈರ್ಯವಾಗಿ ಸಹಿಸು.

೨. ಯೆಹೂದರಲ್ಲಿ ಮಾತ್ರವಲ್ಲ, ಪರಜನರಲ್ಲಿ ಸಹ ದೇವರು ಆದು ಕೊಂಡವರು ನಾನು ಸಾರುವ ಸರ್ವಲೋಕ ರಕ್ಷಣೋಪಾಯವಾರ್ತೆಯನ್ನು ನಂಬಿ, ದೇವರಾಜ್ಯಬಾಧ್ಯಸ್ಥರಾಗುವ ಪ್ರಾಗೈಯೂ, ಎಲ್ಲರಿಗೂ ವಿಶ್ವಾಸಸ್ಥೈರ್ಯದ ಮಾದ್ರಿಯನ್ನು ತೋರಿಸುವ ಪ್ರಾಗೈಯೂ, ಶ್ರಮವನ್ನೆಲ್ಲಾ ಸಂತೋಷವಾಗಿ ತಾಳುತ್ತೇನೆ.

ಪೌಲನು ತಿಮೊಥೆಯನಿಗೆ ಸ್ಥೈರ್ಯವಾದ ಸಹನದ ಮೂಲವಾದ ದೇವರ ಕೃಪೆಯನ್ನೂ, ವ. ೧, ೨., ಸುವಾರ್ತೆಗಾಗಿ ಯುದ್ಧ ಮಾಡುವ ಹಂಗನ್ನೂ, ಕರ್ತನು ನೇಮಕ ಮಾಡಿದ ಜಯದ್ರವ್ಯವನ್ನೂ ವ. ೩—೭., ಯೇಸು ಕ್ರಿಸ್ತನ ಜಯವನ್ನೂ ವ. ೮., ಅಪೊಸ್ತಲನಾದ ತಾನು ತೋರಿಸಿದ ಮಾದ್ರಿಯನ್ನೂ ವ. ೯. ೧೦., ಜ್ಞಾಪಿಸಿದನಂತರ, ವ. ೧೧—೧೩ಲ್ಲಿ, ಅವನಲ್ಲಿ ಯುದ್ಧಾಸಕ್ತಿಯನ್ನು ಹುಟ್ಟಿಸುವದಕ್ಕೆ, ವಿಶ್ವಾಸಸ್ಥೈರ್ಯಕ್ಕೂ ವಿಶ್ವಾಸಪರಿತ್ಯಾಗಕ್ಕೂ ಉಂಟಾಗ ತಕ್ಕ ಭೇದವಾದ ಫಲಗಳನ್ನು ಕುತೂಹಲದಿಂದ ಸೂಚಿಸುತ್ತಾನೆ.

೧೧. ಈ ವಾಕ್ಯವು ನಂಬಿಕೆಯಾದದ್ದು ೧)—ಏನಂದರೆ ಅವನ ಕೂಡ ಸತ್ತರೆ ೨), ಕೂಡ ಬದುಕುವೆವು; ೧೨. ತಾಳಿ ಕೊಂಡರೆ ೩), ಕೂಡ ಆಳುವೆವು ೪); ನಾವು ಅಲ್ಲಗಳೆದರೆ, ಅವನೂ ನಮ್ಮನ್ನು ಅಲ್ಲಗಳೆಯುವನು ೫); ೧೩. ನಾವು ನಂಬದಿದ್ದರೆ, ಅವನು ನಂಬಿಕೆಯುಳ್ಳವನಾಗಿರುತ್ತಾನೆ ೬); ತನ್ನನ್ನು ಅಲ್ಲಗಳೆಯಲಾರನು ೭).

೧. ಅನುಭವದಿಂದ ತಿಳಿದು ಕೊಂಡವನ ಸಾಕ್ಷಿಯು ದೃಢವಾಗಿದೆ.

೨. ೨ಕೊರಿ. ೪, ೧೦. ರೋಮಾ. ೬, ೪—೧೧. ಸರಿ ನಾವಾಡ ಬೇಕು.

೩. ಶ್ರಮಗಳನ್ನು ಬಹುಕಾಲ ಸಹಿಸುವದು ಸಾಯುವದಕ್ಕಿಂತ ಕಷ್ಟವಾಗಿದೆ.

೪. ಶ್ರಮಮಾರ್ಗವಾಗಿ ಮಹಿಮೆಯಲ್ಲಿ ಶೇರಿದ ಅರಸನಿಗೆ ಸೇವೆ ಮಾಡಿ, ಶ್ರಮವನ್ನು ತಾಳುವ ಆಳುಗಳಿಗೆ ಇದು ಯುಕ್ತವಾದ ಪದವಿಯಾಗಿದೆ.

೫. ನಾವು ಕರ್ತನನ್ನು ನರಭಯದಿಂದ ಅಥವಾ ಶ್ರಮಭಯದಿಂದ ವಿಜ್ಞಾಪಿಸದೆ ಇದ್ದ ಪಕ್ಷದಲ್ಲಿ ಕರ್ತನು ನಮ್ಮನ್ನು, ತನ್ನವರಲ್ಲವೆಂದು, ತಿರಸ್ಕರಿಸುವಂಥಾದ್ದು ಎಷ್ಟಾದೀ ಭಯಂಕರವಾದದ್ದು! ಮತ್ತಾ. ೧೦, ೩೩. ಲೂಕ. ೧೩, ೨೫.

೬. ಅಂದರೆ, ನಾವು ನಂಬದಿದ್ದರೂ, ದೇವರು ತಾನು ಕಾಟ್ಟ ಜಯವಾಕ್ಯವನ್ನೂ, ಕೃಪಾವಾಕ್ಯವನ್ನೂ ನೆರವೇರಿಸುತ್ತಾನೆ.

೭. ದೇವರು, ತನ್ನ ಸ್ವಾಭಾವಿಕ ಪರಿಶುದ್ಧತ್ವವನ್ನೂ ನೀತಿಯನ್ನೂ ಮೀರಲಾರದೆ, ದುಷ್ಟರನ್ನು ಶಿಕ್ಷಿಸುವದನ್ನೂ, ಭಕ್ತರಿಗೆ ಮಹಿಮಾಪ್ರದಾನ ಕಾಡುವದನ್ನೂ ಬಿಡುವದಿಲ್ಲ.

ಉದ್ಯೋಗವೃತ್ತಿವಿಷಯವಾದ ವಿಧಿಗಳು (ಇದಕ್ಕೆ ಸ. ಳ, ೧೫ ಇತ್ಯಾದಿ ಸರಿ ನಾಡ ಬೇಕು); ಅಬದ್ಧಬೋಧಕರ ವಿಷಯವಾಗಿ ಆಚರಿಸತಕ್ಕ ಪ್ರಮಾಣವು. ವ. ೧೪—೨೬.

(ಮೊದಲನೆ ಪತ್ರಿಕೆಯಲ್ಲಿ ಸೂಚಿಸಿದ ಅಬದ್ಧಬೋಧಕರ ವಿಷಯವಾಗಿಯೇ ಪೌಲನು ಇಲ್ಲಿ ಸಹ ಉದಾಹರಿಸುತ್ತಾನೆ. ವ. ೧೪ಲ್ಲಿ ಅವರು ಶುದ್ಧ ಕ್ರೈಸ್ತವಿಶ್ವಾಸಕ್ಕೆ ಬೆರಿಕೆ ಮಾಡಿದ ಪ್ರತ್ಯೇಕವಾದ ಅಬದ್ಧಬೋಧನೆಯು ಸೂಚಿತವಾಗಿದೆ.)

ವ. ೧೪. ನಿಷ್ಪ್ರಯೋಜಕವಾದ ನಾಶನಕರ ವಾಗ್ವಾದಗಳನ್ನು ಬಿಟ್ಟು, ಕರ್ತನ ಮುಂದೆ ನಿಜ ಸುವಾರ್ತಾಬೋಧನೆಗೆ ಸಾಕ್ಷಿ ಕೊಟ್ಟು, ವ. ೧೦—೧೩ಲ್ಲಿ ಬರದದ್ದನ್ನು ಜ್ಞಾಪಕ ಮಾಡು. ವ. ೧೫. ದೇವರಿಗೆ ಪರೀಕ್ಷಿತನಾಗಿಯೂ, ನಿರ್ದೋಷಿ ಕೆಲಸದವನಾಗಿಯೂ, ದೇವರ ವಾಕ್ಯವನ್ನು ಸಮಯೋಚಿತವಾಗಿಯೂ ಕೇಳುವವರ ಯೋಗ್ಯತಾನುಸಾರವಾಗಿಯೂ ಬೋಧಿಸುವವನಾಗಿಯೂ, ನಿನ್ನನ್ನು ಪ್ರತಿಷ್ಠೆ ಮಾಡಿ ಕೊಳ್ಳಲು ಎಚ್ಚರಿಕೆಯಾಗಿರು. ೧೬. ಆದರೆ ಅಪಭ್ರಷ್ಟ ವ್ಯರ್ಥವಾದ ಮಾತಾಳಿಗಳಿಗೆ ದೂರವಾಗಿರು; ಯಾಕಂದರೆ: ಅವರು ಹೆಚ್ಚು ಹೆಚ್ಚಾಗಿ ಭಕ್ತಿಹೀನರಾಗುತ್ತಾರೆ. ೧೭. ಅವರ ಮಾತು ಕೊಳೆಕುಹುಣ್ಣಿನ ಹಾಗೆ ತಿನ್ನುವದು. ಹುಮೆನಾಯನೂ, ಫಿಲೇತನೂ ಇಂಥವರಾಗಿದ್ದಾರೆ. ೧೮. ಅವರು ಪುನರುತ್ಥಾನವು ಆಗಿ ಹೋಯಿತೆಂದು ಹೇಳಿ, ತಾವು ಸತ್ಯಕ್ಕೆ ತಪ್ಪಿ, ಮತ್ತೊಬ್ಬರ ವಿಶ್ವಾಸವನ್ನು ಸಹ ಕೆಡಿಸುತ್ತಾರೆ.

೧೯. ಹಾಗಾದರೂ ದೇವರ ಸ್ಥಿರವಾದ ಅಸ್ತಿವಾರವು ನಿಲ್ಲುತ್ತದೆ ಗ), ಅದಕ್ಕೆ ಮುದ್ರೆಯು ಇದ್ದೇ ಘ)—ಕರ್ತನು ತನ್ನವರನ್ನು ಅರಿತಿದ್ದಾನೆ ಙ); ಮತ್ತು ಕ್ರಿಸ್ತನ ಹೆಸರನ್ನು ಹೇಳುವವರೆಲ್ಲರು ಳ) ಅನ್ಯಾಯವನ್ನು ಬಿಟ್ಟು ಬಿಡಲಿ. ೨೦. ಆದರೆ ದಾಡ್ಡ ಮನೆಯಲ್ಲಿ ಬೆಳ್ಳಿ ಕಂಗಾರದ ಪಾತ್ರೆಗಳು ಮಾತ್ರವಲ್ಲ, ಮರದವುಗಳೂ, ಮಣ್ಣಿನವುಗಳೂ, ಕೆಲವು ಮಾನಕ್ಕೂ, ಕೆಲವು ಅಮಮಾನಕ್ಕೂ ಇರುವವು. ೨೧. ಹಾಗಾದರೆ ಒಬ್ಬನು ಇವುಗಳನ್ನು ಬಿಟ್ಟು, ತನ್ನನ್ನು ಶುದ್ಧ ಮಾಡಿಕೊಂಡರೆ, ಪರಿಶುದ್ಧ ಮಾಡಲ್ಪಟ್ಟಂಥ, ಯಜಮಾನನಿಗೆ ಪ್ರಯೋಜನವಾದಂಥ, ಎಲ್ಲಾ ಒಳ್ಳೇ ಕೆಲಸಕ್ಕೆ ಸಿದ್ಧವಾದಂಥ, ಮಾನಕ್ಕಾದಂಥ, ಪಾತ್ರೆಯಾಗಿರುವನು ಶ). ೨೨. ಆದರೆ ಯೌವನದ ಆಶೆಗಳನ್ನು ಬಿಟ್ಟು ಟ) ಓಡಿ ಹೋಗಿ, ಶುದ್ಧ ಹೃದಯದಿಂದ ಕರ್ತನನ್ನು ಸ್ಮರಿಸುವವರ ಸಂಗಡ ನೀತಿ, ವಿಶ್ವಾಸ, ಪ್ರೀತಿ, ಸಮಾಧಾನಗಳನ್ನು ಹಿಂದಟ್ಟು. ೨೩. ಇದಲ್ಲದೆ

ವಿಶ್ವಾಸಾಧಾರ.

೨ ತಿಮೊ. ೨, ೨೪—೫, ೨.

ವಿದ್ವಜ್ಜನಿಷ್ಠದ ಹುಚ್ಚು ತರ್ಕಗಳನ್ನು, ಅವುಗಳಿಂದ ಜಗಳಗಳು ಹುಟ್ಟುತ್ತವೆಂದು ತಿಳಿದು[೨], ಬೇಡೆಂದು ಬಿಡು. ೨೪. ಕರ್ತನ ದಾಸನು ಯುದ್ಧಗಳವನಾಡದೆ, ಎಲ್ಲರ ಕಡೆಗೆ[೯] ಶಾಂತನೂ, ಬೋಧಿಸ ಶಕ್ತನೂ, ತಾಳ್ಮೆಯುಳ್ಳವನೂ, ಆಗಿದ್ದು, ೨೫. ಒಂದು ವೇಳೆ ದೇವರು ಅವರಿಗೆ ಸತ್ಯದ ಅರಿಕೆಗೆ[೯] ಮಾನಸಾಂತರ ಕೊಟ್ಟಾನೆಂದೂ, ೨೬. ತನ್ನ ಚಿತ್ತದ ಪ್ರಕಾರ ಅವರನ್ನು ಶೆರೆ ಹಿಡಿಯುವ ವಿಶಾಚನ ಉರುಲಿನಿಂದ ತಪ್ಪಿ ಎಚ್ಚರವಾದಾರೆಂದೂ[೧೦], ಸಾತ್ವಿಕಶಬ್ದದಲ್ಲಿ ವಿರೋಧಿಗಳನ್ನು ಉಪದೇಶಿಸುವವನಾಗಿರಬೇಕು.

೧. ಸುವಾರ್ತೆಯ ಸತ್ಯವೂ, ಅದರಲ್ಲಿ ನೆಲೆಯಾದ ಕ್ರೈಸ್ತಸಭೆಯೂ, ಅಬದ್ಧಬೋಧಕರ ಗದ್ದಲದಿಂದ ಕದಲುವದಿಲ್ಲ.

೨. ಅಂದರೆ, ಸಭೆಯ ಮೂಲೆಕಲ್ಲಿನಲ್ಲಿ ಈ ಬರಹವು ಚಂಗವಾಗಿದ ಮುದ್ರೆಯಾಗಿ ಕೆತ್ತಿಯದೆ. ಪೌಲನ ಅಭಿಪ್ರಾಯವೇನಂದರೆ: ಅಬದ್ಧಬೋಧಕರು ಕ್ರೈಸ್ತರನಿಸಿಕಾಂಡರೂ, ಪೇಸರಿಗೆ ಮಾತ್ರ ಕ್ರೈಸ್ತರಾಗಿದ್ದಾರೆ. ಕರ್ತನ ಐಕ್ಯದಲ್ಲಿ ಶೇರಿದವರು ಅಬದ್ಧಬೋಧನೆ ದುರ್ನಡತೆಗಳ ಬಲೆಯಲ್ಲಿ ಶಿಕ್ಕಿ ಬೀಳುವದಿಲ್ಲ.

೩. ಕರ್ತನು ಅಂಥವರನ್ನು ಕೃಪೆಯ ಒಡಂಬಡಿಕೆಯಲ್ಲಿ ಶೇರಿಸದೆ, ತನ್ನ ವಾಕ್ಯದ ಮರ್ಮಗಳನ್ನು ಅವರಿಗೆ ತಿಳಿಸುವದಿಲ್ಲ. ಅವರು ಆತನಿಗೆ ಪರರಾಗಿದ್ದಾರೆ.

೪. ಕರ್ತನ ಐಕ್ಯದಲ್ಲಿ ಶೇರ ಬೇಕಾದರೆ, ಪಾಪಕ್ಕೆ ಛೇದವಾಗ ಬೇಕು. ಪಾಪಬಂಧದಲ್ಲಿರುವವನು ಯೇಸು ಕ್ರಿಸ್ತನ ಕೃಪೆಯನ್ನೂ ತಿಳುವಿಕೆಯನ್ನೂ ಪಡಾಂದಲಾರನು.

೫. ಅಂದರೆ, ಮಾನಸಾಂತರವಾಗ ಬೇಕೆಂದಿಚ್ಛೈಸುವವನು ಅವಮಾನಪಾತ್ರಗಳ ಗಾಡಿವೆಯಲ್ಲಿ ಶೇರಬಾರದು.

೬. ಪೌಲನು ಇಲ್ಲಿ ವಿಷಯಲಂಪಟವನ್ನು ಮಾತ್ರವಲ್ಲ, ವ್ಯರ್ಥ ಮಾನಾಪಿಲಾಷೆ, ಲೌಕಜ್ಞಾನಾಪಿಲಾಷೆ ಮುಂತಾದದ್ದನ್ನು ಸಹ ಸೂಚಿಸುತ್ತಾನೆ.

೭. ಅಂದರೆ, ಚಿಗಳಗಳೆಂಬ ಒಂದೇ ಫಲ ಪಡಾರ್ತು ಮತ್ತೊಂದು ಪುಟ್ಟುವದಿಲ್ಲವೆಂತ.

೮. ಅಂದರೆ, ಚಕ್ತರಿಗೆ ಮಾತ್ರವಲ್ಲ, ಎದುರಾಡುವ ಅಬದ್ಧಬೋಧಕರಿಗೂ ಶಾಂತಿಯನ್ನು ತಾರಿಸಬೇಕು. ಯಾಕಂದರೆ ದೇವರ ಸಮಾಧಾನವನ್ನು ಪಡಾಂದಿದವನು ಸ್ವಾಭಾವಿಕವಾಗಿ ಶಾಂತನಾಗಿದ್ದಾನೆ.

೯. ಅಂದರೆ, ಸತ್ಯವನ್ನು ತಿಳಿದು ವಿಜ್ಞಾಪಿಸುವದಕ್ಕೆ.

೧೦. ಸತ್ಯದ ತಿಳುವಿಕೆಯಿಲ್ಲದವರು ನಿದ್ರಾವಶವಾಗಿ ಕನಸು ಕಾಣುವ ಮತ್ತರ ಪಡಾಗೆ ಇದ್ದಾರೆ. ಅವರು, ಗುಣವಾಗ ಬೇಕಾದರೆ, ಮೊದಲು ಜಾಗರೂಕರಾಗ ಬೇಕು.

೨ ತಿ. ೩.

ಅಬದ್ಧಬೋಧಕರ ಜ್ಞಾನಕ್ರಮೆಯಿಂದಲೂ ಪೆಚ್ಚು ಪೆಚ್ಚಾಗುವ ದುಷ್ಟತ್ವದಿಂದಲೂ ಮೋಸ ಪಡಾಗದ ಪಡಾಗೆ ಜಾಗರೂಕನಾಗಿರಬೇಕು. ವ. ೧—೯. (ಇದಕ್ಕೆ ೧ ತಿಮೊ. ೪. ೨ ಥೆಸ್ಸ. ೨. ಮತ್ತಾ. ೨೪, ೧೧. ೧೨. ಸರಿ ನಾಡಬೇಕು.)

೧. ಇದಲ್ಲದೆ ಇದನ್ನು ತಿಳುಕಾ—ಕಡೇ ದಿನಗಳಲ್ಲಿ[೧] ಕಠಿಣವಾದ ಕಾಲಗಳು ಬರುವವು. ೨. ಹ್ಯಾಗಂದರೆ ಮನುಷ್ಯರು ಸ್ವಸ್ನೇಹದವರೂ, ದ್ರವ್ಯಾಶಿಗಳೂ,

೨ ತಿಮೊ. ೩, ೩—೧೭.

ಡಾಂಭಿಕರೂ, ಗರ್ವಿಷ್ಠರೂ, ದೂಷಕರೂ, ಹೆತ್ತವರಿಗೆ ಅವಿಧೇಯರೂ, ಕೃತಜ್ಞತೆಯಿಲ್ಲದವರೂ, ಅಪವಿತ್ರರೂ, ೩. ವಾತ್ಸಲ್ಯವಿಲ್ಲದವರೂ, ಅನ್ಯಾಯವಾಗದವರೂ, ಚಾಡಿಗಾರರೂ, ಅಸಂಯಮರೂ, ಅಸಾಧುಗಳೂ, ಸಜ್ಜನದ್ವೇಷವಿಲ್ಲದವರೂ, ೪. ದ್ರೋಹಿಗಳೂ, ಉತ್ಸುರರೂ, ಉಬ್ಬಿಕೊಂಡವರೂ, ದೇವರಿಗಿಂತ ಹೆಚ್ಚಾಗಿ ಸುಖಗಳನ್ನು ಪ್ರೇಮಿಸುವವರೂ, ಭಕ್ತಿಯ ರೂಪವುಳ್ಳವರಾಗಿ, ೫. ಅದರ ಬಲವನ್ನು ಅಲ್ಲಗಳೆಯುವವರೂ ಆಗಿರುವರು; ಇಂಥವರಿಗೆ ದೂರವಾಗು. ೬. ಯಾಕಂದರೆ ಮನೆಗಳಲ್ಲಿ ಹೊಕ್ಕು, ಪಾಪಗಳಿಂದ ಭರಿತರಾಗಿ, ನಾನಾ ಆಶೆಗಳಿಂದ ವೈಯ್ಯಲ್ಪಟ್ಟು, ೭. ಯಾವಾಗಲೂ ಕಲಿಯುತ್ತಾ, ಎಂದೂ ಸತ್ಯದ ತಿಳುವಿಕೆಗೆ ಶ್ಯೋರಾರದ ಹೆಂಗಸರನ್ನು ಶೆರೆ ಹಿಡಿಯುವವರು ಅಂಥವರಾಗಿದ್ದಾರೆ. ೮. ಯನ್ನನೂ ಯಂಬ್ರನೂ ಮೋಶೆಯನ್ನು ವಿರೋಧಿಸಿದ ಮೇರೆಗೆ, ಇವರು ಸಹ ಬುದ್ಧಿ ಕೆಟ್ಟವರಾಗಿಯೂ, ವಿಶ್ವಾಸದ ವಿಷಯ ಆಗದವರಾಗಿಯೂ, ಸತ್ಯವನ್ನು ವಿರೋಧಿಸುತ್ತಾರೆ. ೯. ಆದರೆ ಅವರು ಅಧಿಕವಾಗಿ ಹೆಚ್ಚರು; ಯಾಕಂದರೆ ಅವರದು ಆದ ಪ್ರಕಾರವೇ, ಇವರ ದುರ್ಬುದ್ಧಿಯು ಎಲ್ಲರಿಗೆ ಪ್ರಸಿದ್ಧಿಯಾಗುವದು.

೧. ಅಂದರೆ, ಕ್ರಿಸ್ತಸಭಾಕಾಲಾಂತ್ಯದಲ್ಲಿ.

೨. ಭಕ್ತರಾಗಿ ಕಾಣಿಸಿ ಕಾಂಡರೂ, ಅವರ ಮನಸ್ಸು ವಿಷಯಾಸಕ್ತವಾಗಿದ್ದು, ದೇವರಿಗೆ ಖೇದವಾಗಿದೆ.

೩. ಮಾನಸಾಂತರವೂ ನೀತಿಸಾಧನೆಯೂ ಇಲ್ಲದವರಾಗಿದ್ದಾರೆ.

೪. ಅವರ ಗಾಯಿವೆಗೆ ಪಥ್ಯಾಗದೆ, ಅವರು ನಿಜ ಸಭೆಯವರಲ್ಲವೆಂದು, ಸಂಬಂಧಪರಿತ್ಯಾಗವಿಂದತೋರಿಸು.

೫. ಇವರಿಬ್ಬರು ಮಿಶ್ರ ದೇಶದ ಮಂತ್ರಗಾರರಲ್ಲಿ ಮುಖ್ಯಸ್ಥರಾಗಿದ್ದರು. ೨ ಮೋಶೆ. ೫, ೧೧ ಇತ್ಯಾದಿ. ಅವರ ಪೌಸರುಗಳು ದೇವರ ವಾಕ್ಯದಲ್ಲಿ ಬರದಿರುವದಿಲ್ಲ, ಪಾರಂಪರ್ಯವಾದ ಶ್ರವಣದಿಂದ ಯೆಹೂದರಿಗೆ ಗೊತ್ತಾಗಿದ್ದವು.

೬. ಆ ಮಂತ್ರಗಾರರು ಮೋಶೆಯಿಂದ ಸೋತು ಪಥ್ಯಾಪ ಪಥ್ಯಾಗೆ.

ಅವರ ಮೋಸಕ್ಕೆ ತಪ್ಪಿಸಿ ಕಾಳ್ಳುವ ಮುಖ್ಯವಾದ ಉಪಾಯವು.

ವ. ೧೦—೧೭. (ಭಕ್ತರ ಅನ್ಯೋನ್ಯವೂ, ದೇವವಾಕ್ಯವಿಶ್ವಾಸವೂ.)

೧೦. ಆದರೆ ನೀನು ನನ್ನ ಬೋಧನೆ, ನಡತೆ, ಅಭಿಪ್ರಾಯ, ವಿಶ್ವಾಸ, ದೀರ್ಘಶಾಂತಿ, ಪ್ರೀತಿ, ತಾಳ್ಮೆಗಳನ್ನೂ, ೧೧. ಅಂತಿಯೊಕ್ಯದಲ್ಲಿಯೂ, ಇಕೊನ್ಯದಲ್ಲಿಯೂ, ಲುಸ್ತ್ರದಲ್ಲಿಯೂ, ನಾನು ಪಟ್ಟ ಹಿಂಸೆ ಶ್ರಮೆಗಳನ್ನೂ ಹಿಂಬಾಲಿಸಿದಿ. ಎಂಥ ಹಿಂಸೆಗಳನ್ನು ತಾಳಿದೆನು! ಅವೆಲ್ಲವುಗಳಿಂದ ಕರ್ತನು ನನ್ನನ್ನು ತಪ್ಪಿಸಿದನು. ೧೨. ಇದಲ್ಲದೆ ಕ್ರಿಸ್ತ ಯೇಸುವಿನಲ್ಲಿ ಭಕ್ತಿಯಾಗಿ ಬದುಕ ಮನಸ್ಸು

ವಿಶ್ವಾಸಾಧಾರ.

೨ ತಿಮೊ. ೩, ೧೩—೧೬.

ಳ್ಳವರೆಲ್ಲರು ಹಿಂಸೆ ಪಡುವರು ೯). ೧೩. ಆದರೆ ದುಷ್ಟ ಮನುಷ್ಯರೂ ಮಂತ್ರಗಾರರೂ ಮೋಸಗಾಳ್ಗಿಸುತ್ತಾ, ಮೋಸ ಹಾಗುತ್ತಾ ೧೦), ಹೆಚ್ಚು ಹೆಚ್ಚಾಗಿ ಕೆಡುವರು ೧೧).

೧. ಪೌಲನು ತಿಮೊಥೆಯನಿಗೆ ತಾನೇ ಪೇಳಿದ ಬಾಧನೆಯನ್ನು ಜ್ಞಾಪಿಸಿ, ದುರ್ಬೋಧಕರ ಮಾತು ಅದಕ್ಕೆ ವಿರೋಧವಾದದ್ದೆಂದು ಸೂಚಿಸುತ್ತಾನೆ.

೨. ಪೌಲನು ತಾನು ಸಾರಿದ ಸುವಾರ್ತೆಗೆ ಅನುಸಾರವಾಗಿ ನಡದು ಕಾಂಡದ್ದಕ್ಕೆ ತಿಮೊಥೆಯನು ಎಳೆ ಪ್ರಾಯದಿಂದ ಸಾಕ್ಷಿಯಾಗಿದ್ದನು. ಅಬದ್ಧ ಬೋಧಕರು ಜ್ಞಾನಿಗಳನಿಸಿ ಕಾಂಡು ವಿಷಯಾಸಕ್ತರಾಗಿದ್ದರು. ಎಲ್ಲಾ ಬಿಟ್ಟು ಋಜು ನೆಟ್ಟನೆಂಬ ಗಾದೆಯು ಇಂಥವರಿಗೆ ಒಪ್ಪುತ್ತದೆ.

೩. ಅಂದರೆ, ನನ್ನ ಉದ್ಯೋಗಪುಶ್ತಿಯ ಉದ್ದಿಶ್ಯ.

೪. ಹಿಂಸಿಸುವ ಶತ್ರುಗಳಿಗೂ, ತಪ್ಪು ಮಾಡಿದ ಸಖೆಯವರಿಗೂ, ತೋರಿಸಿದ ಶಾಂತಿಯು.

೫. ಅಪಾ. ಕ್ರಿ. ೧೩, ೫೦.

೬. ಅಪಾ. ಕ್ರಿ. ೧೪, ೫.

೭. ಅಪಾ. ಕ್ರಿ. ೧೪, ೧೯.

೮. ಯೇಸು ಕ್ರಿಸ್ತನ ಐಕ್ಯದಲ್ಲಿ ಶೇರಿ, ಆತನ ವಾಕ್ಯಾನುಸಾರವಾಗಿ ನಡದು ಕಾಳ್ಳುವವರೆಲ್ಲರು.

೯. ಈ ಗತಿಯು ಋಕ್ತರಿಗೆ ನೇಮಕವಾದದ್ದೆಂದು, ಮತ್ತಾ. ೧೬, ೨೪. ಯೋಪಾ. ೧೮; ೧೭, ೧೪ಳ್ಲಿ ಬರದದೆ. ಆದ್ದರಿಂದ ಉಪದ್ರವವಿಲ್ಲದವನು ತನ್ನ ಋಕ್ತಿಯು ಯಥಾರ್ಥವಾದದ್ದಾ ಖಿನಾ ಚನ್ನಾಗಿ ಪರೀಕ್ಷಿಸಿ ನೋಡ ಬೇಕು.

೧೦. ಮೋಸ ಮಾಡುವವನು ತಾನೇ ಮೋಸ ಹಾಗುತ್ತಾನೆ. ಇದು ಸಹಜವಾದ ಮೋಸದ ಶಿಕ್ಷೆಯಾಗಿದೆ. ಕುರುಡನಿಗೆ ಮಾರ್ಗ ತೋರಿಸುವ ಕುರುಡನು ಅವನ ಕೂಡಾ ಗುಂಡಿಯಲ್ಲಿ ಬೀಳುತ್ತಾನೆ ಮತ್ತಾ. ೧೫, ೧೪. ಲೂಕ. ೬, ೩೯.

೧೧. ವಿಪರೀತ ಮಾರ್ಗದಲ್ಲಿ ಶೇರಿದವನು ಎಷ್ಟು ದೂರಕ್ಕೆ ಹಾಗುತ್ತಾನೋ ಅಷ್ಟು ತಪ್ಪುತ್ತಾನೆ.

೧೪. ಆದರೆ ನೀನು ಕಲಿತು ದೃಢವಾಗಿ ತಿಳುಕಾಂಡವುಗಳಲ್ಲಿ ನೆಲೆಯಾಗಿರು ೧). ೧೫. ಯಾರಿಂದ ಕಲಿತಿ ಎಂದೂ ೨), ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಿಂದ ರಕ್ಷಣೆಗಾಗಿ ನಿನಗೆ ಜ್ಞಾನವನ್ನುಕೊಡ ಶಕ್ತವಾದ ೩) ಪರಿಶುದ್ಧ ಬರಹಗಳನ್ನು ಚಿಕ್ಕಂದಿನಿಂದ ೪) ಅರಿತಿದ್ದೀ ಎಂದೂ, ನಿನಗೆ ತಿಳಿಯುತ್ತದಲ್ಲ? ೧೬. ಬರಹವೆಲ್ಲಾ ದೈವಪ್ರೇರಿತವಾದದ್ದು ೫), ಬೋಧನೆಗೂ ೬), ಖಂಡನೆಗೂ ೭), ಶಿದ್ದುಪಾಟಿಗೂ ೮), ನೀತಿಯ ಉಪದೇಶಕ್ಕೂ ೯), ದೇವರ ಮನುಷ್ಯನು ೧೦) ಎಲ್ಲಾ ಸತ್‌ಕ್ರಿಯೆಗಳಿಗೆ ಸಿದ್ಧನಾಗಿ ೧೧), ಆಯುತ್ತನಾಗುವದಕ್ಕೂ ಪ್ರಯೋಜನವಾಗಿದೆ.

೧. ಅಭಿಪ್ರಾಯಸಂಬಂಧವೇನಂದರೆ: ನೀನು ಕಲಿತು ಕಾಂಡದರಲ್ಲಿ ದೃಢನಾಗಿರು. ಯಾಕಂದರೆ ೧) ಅಪಾಸ್ತಲನಾದ ನಾನೇ ಸುವಾರ್ತಾಬಾಧನೆಯನ್ನು ನಿನಗೆ ಪೇಳಿದ್ದೇನೆ. ೨) ನೀನು ಚಿಕ್ಕಂದಿನಿಂದ ದೇವರ ವಾಕ್ಯಾಭ್ಯಾಸ ಮಾಡುತ್ತಾ ಬಂದ ಕಾರಣ, ನನ್ನ ಬಾಧನೆಯನ್ನು ಪೂರ್ಣವಾಗಿ ಗ್ರಹಿಸಿ ಕಾಳ್ಳುವದಕ್ಕೆ ಯೋಗ್ಯನಾಗಿದ್ದೀ.

೨. ನಾನು ಸತ್ಯವಂತನೆಂದು, ನೀನು ಚನ್ನಾಗಿ ತಿಳಿದಿದ್ದೀಯಲ್ಲ.

೩. ಅಪಾಸ್ತಲನ ಪ್ರಸಂಗಕ್ಕೂ ಬಾಧನೆಗೂ ಪ

ಳೆ ಒಡಂಬಡಿಕೆಯ ಗ್ರಂಥಗಳ ವಾಕ್ಯವು ಪ್ರಾಮಾಣ್ಯವಾಗ ಬೇಕಾಯಿತು. ದೇವವಾಕ್ಯಸಾರವು ಒಂದೇ. ಮೋಶೆಯೂ ದಾವೀದನೂ, ಪ್ರವಾದಿಗಳೂ, ಯೇಸು ಕ್ರಿಸ್ತನೂ, ಆತನ ಅಪಾಸ್ತಲರೂ ನಾನಾ ಕಾಲಗಳಲ್ಲಿಯೂ, ನಾನಾ ವಿಧವಾಗಿಯೂ, ನಾನಾ ಜಾಗವಾಗಿಯೂ ಏಕ ದೇವನ ಏಕ ವಾಕ್ಯವನ್ನು ಮನುಷ್ಯರಿಗೆ ತಿಳಿಸಿದ್ದಾರೆ.

೪. ಅವನ ತಾಯಿ ಐನೀಕೆಯು ಭಕ್ತಳಾಗಿದ್ದು, ಪ್ರಿಯ ಮಗುವಾದ ತಿಮೊಥೆಯನಿಗೆ ಚಿಕ್ಕಂದಿನಿಂದಲೇ ದೇವವಾಕ್ಯವನ್ನು ಬಾೞಿಸುತ್ತಾ ಇದ್ದಳು.

೫. ಗ್ರೀಕದಲ್ಲಿ ದೇವಪ್ರೇರಿತವಾದ ಬರಹವೆಲ್ಲಾ ಎಂದು ಬರದದೆ. ಆದರೆ ಯಥಾಕ್ರಮದಲ್ಲಿ ಕಾಣುವ ಭಾಷಾಂತರವು ಪೌಲನ ಅಭಿಪ್ರಾಯಕ್ಕೆ ಚನ್ನಾಗಿ ಒಪ್ಪುತ್ತದೆ; ಯಾಕಂದರೆ: ಹಳೆ ಒಡಂಬಡಿಕೆಯ ಗ್ರಂಥಗಳ ಹೊರತು ದೇವಪ್ರೇರಿತವಾದ ಬರಹವು ಪೌಲನಿಗೆ ತಿಳಿಯಲಿಲ್ಲ. ಮತ್ತು ಆ ಗ್ರಂಥಗಳು ನರಬುದ್ಧಿಕಲ್ಪಿತವಲ್ಲವೆಂದು ಗ್ರಹಿಸಿ ಕಾಂಡನು.

೬. ರಕ್ಷಣಾರ್ಥವಾದ ಸತ್ಯವನ್ನೆಲ್ಲಾ ಭಕ್ತನು ದೇವವಾಕ್ಯದಿಂದಲೇ ತಿಳಿದು ಕಾಳ್ಳ ಬಹುದು.

೭. ಅಜ್ಞಾನ ಪಾಪಗಳ ನಾನಾ ವಿಧಗಳನ್ನು ದೇವವಾಕ್ಯವು ಪ್ರಕಟಿಸಿ ಖಂಡಿಸುತ್ತದೆ; ಆದ್ದರಿಂದ ಪಾಪಾಸಕ್ತರೂ, ಲೌಕಜ್ಞಾನಾಸಕ್ತರೂ ಅದಕ್ಕೆ ಮೆಚ್ಚುವದಿಲ್ಲ.

೮. ಆದರೆ ನಂಬಿ ಮಾನಸಾಂತರನಾದ ಭಕ್ತನಿಗೆ ಅದು ಅತ್ಯಂತ ಸಹಾಯ ಮಾಡುತ್ತದೆ.

೯. ಅಂದರೆ, ನೀತಿಯ ಮಾರ್ಗದಲ್ಲಿ ಭಕ್ತನನ್ನು ನಡಿಸಿ, ನೀತಿಸಿದ್ಧಿಯನ್ನು ಪೂರೈಸಿಸುತ್ತದೆ.

೧೦. ದೇವರ ಆತ್ಮದಿಂದ ದೇವವಾಕ್ಯಮುಖಾಂತರವಾಗಿ ಪುನರ್ಜಾತನಾಗಿ, ದೇವರಿಗಾಗಿ ಬದುಕುವವನಿಗೆ ಪೌಲನು ದೇವರ ಮನುಷ್ಯನೆಂದು ಹೆಸರಿಡುತ್ತಾನೆ.

೧೧. ಈ ಸಿದ್ಧಿಯು ದೇವವಾಕ್ಯದ ಸಂಪೂರ್ಣ ತಿಳುವಿಕೆಯಿಲ್ಲದೆ ಸಾಧ್ಯವಾಗ ತಕ್ಕದ್ದಲ್ಲ.

ಸ. ೪.

ಬಾೞಿಕಾಲದ್ಬಾೞಿಗಸ್ಥೆಲ್ಯರ್ತಿದ್ದಾಬಾೞಿನೆಯು. (ಸ. ೨, ೧೪—೨೬. ಸರಿ ನಾಡ ಬೇಕು.) ವ. ೧—೪.

೧. ಆದದರಿಂದ ದೇವರ ಮುಂದೆಯೂ, ತನ್ನ ಪ್ರತ್ಯಕ್ಷತೆಯಲ್ಲಿಯೂ ತನ್ನ ರಾಜ್ಯದಲ್ಲಿಯೂ ಬದುಕುವವರಿಗೂ ಸತ್ತವರಿಗೂ ನ್ಯಾಯ ತೀರಿಸಲಿರುವ ಕರ್ತನಾದ ಯೇಸು ಕ್ರಿಸ್ತನ ಮುಂದೆಯೂ, ೨. ನಾನು ಕೊಡುವ ಸಾಕ್ಷಿ ಏನಂದರೆ—ವಾಕ್ಯವನು ಸಾರು; ಸುಕಾಲದಲ್ಲಿಯೂ ಅಕಾಲದಲ್ಲಿಯೂ ಎಡೆಬಿಡದೆ ಇರು; ಸಕಲ ದೀರ್ಘಶಾಂತಿಯಿಂದಲೂ ೧) ಉಪದೇಶದಿಂದಲೂ, ಖಂಡಿಸಿ, ಗದರಿಸಿ, ಎಚ್ಚರಿಸು. ೩. ಯಾಕಂದರೆ ಅವರು ಸ್ವಸ್ಥಬೋಧನೆಯನ್ನು ತಾಳ್ಳದೆ, ಶ್ರೋತಿ ಕಿವಿಗಳ್ಳಾಗಿ ೨), ಸ್ವಂತ ಇಚ್ಛೆಗಳ ಪ್ರಕಾರ ತಮಗೆ ತಲೆಬೇ ಬೋಧಕರನ್ನು ಕೂಡಿಸಿ ಕೊಂಡು, ೪. ಸತ್ಯದ ಕಡೆಯಿಂದ ಕಿವಿಯನ್ನು ತಿರುಗಿಸಿ, ಕಟ್ಟು ಕಥೆಗಳಿಗೆ ೩) ತಿರುಗಿ ಕೊಳ್ಳುವ ಸಮಯವು ಬರುವದು. ೫. ಆದರೆ ನೀನು ಎಲ್ಲವುಗಳಲ್ಲಿ ಎಚ್ಚರ್ತಿದ್ದು, ಶ್ರಮ ತಾಳಿ, ಸುವಾರ್ತಿಕನ ಕೆಲಸ

ವಿಶ್ವಾಸಫಲ.

೨ತಿಮೊ. ೪, ೬—೮.

ವನ್ನುಮಾಡಿ, ನಿನ್ನನ್ನೇವೆಯನ್ನು ಪೂರೈಸು ೪). ೬. ಯಾಕಂದರೆ ಇಗಲೇ ಅರ್ಪಿಸಲ್ಪಡುತ್ತೇನೆ ೫). ನಾನು ಬಿಟ್ಟು ಹೋಗುವ ಸಮಯ ಬಂದಿದೆ ೬).

೧. ತಿಮೊಥೆಯನು ಪೌಲನಲ್ಲಿ ನಾಟಿದ ಮಾದ್ರಿಯ ಪ್ರಕಾರ ನಡದು ಕಾಳ್ಳ ಬೇಕಾದ್ದರಿಂದ, ಈ ಸಂಥಿಯ ಉದ್ಬಾಟನೆಯು ಸ. ೩, ೧೦ಲ್ಲಿ ಬರದ ಅಭಿಪ್ರಾಯಕ್ಕೆ ಅನುಸಾರವಾಗಿದೆ.

೨. ತಮ್ಮ ಮನಸ್ಸಿಗೆ ಅನುಸಾರವಾದ ಪೌಸ ಪೌಸ ಮಾತುಗಳನ್ನು ಸಾರುವ ಬೋಧಕರಿಗೆ ಮಾತ್ರ ಮೆಚ್ಚುವರು. ಇಂಥವರಲ್ಲಿ ಒಂದು ಕಾಲದಲ್ಲಿ ಒಬ್ಬನಿಗೆ, ಒಂದು ಕಾಲದಲ್ಲಿ ಮತ್ತೊಬ್ಬನಿಗೆ, ಸ್ವೇಛ್ಛಾನುಸಾರವಾಗಿ ಕಿವಿ ಕಾಡುವರು.

೩. ದೇವವಾಕ್ಯದ ರುಚಿಯ ಬಿಟ್ಟವರಿಗೆ ನರಕಲ್ಪಿತ ಬೋಧನೆಯಲ್ಲಿ ರುಚಿ ಪುಟ್ಟುತ್ತದೆ. ಬಳಿಕ ಮನುಷ್ಯರ ಮಾತು ನಂಬಿ, ದೇವವಾಕ್ಯವಿಶ್ವಾಸವನ್ನು ತಳ್ಳಿ, ಅದರಲ್ಲಿ ಬರದ ಚರಿತ್ರಗಳನ್ನು ಕಟ್ಟುಕಥೆಗಳೆಂದು ಅಪಹಾಸ್ಯ ಮಾಡುತ್ತಾರೆ. ೧ ತಿಮೊ. ೪, ೧ ಇತ್ಯಾದಿ. ೨ತಿಮೊ. ೩, ೧.

೪. ನಿನ್ನ ಉದ್ಯೋಗದ ಕಾರ್ಯವನ್ನೆಲ್ಲಾ ಪೂರ್ಣವಾಗಿ ತೀರಿಸು. ಈ ವಚನ ಸಪ್ತ ಸ. ೩, ೧೭ಕ್ಕೆ ಅನುಸಾರವಾಗಿದೆ.

೫. ನನ್ನ ಜೀವವನ್ನು ಯೇಸು ಕ್ರಿಸ್ತನಿಗಾಗಿ ಸುವಾರ್ತಾಸೇವೆಯಲ್ಲಿ ದೇವರಿಗೆ ಬಲಿಯಾಗಿ ಅರ್ಪಿಸುವ ಕಾಲವು ಪೂರ್ಣವಾಗುವದರಿಂದ, ನೀನು ನನ್ನ ಸ್ಥಳದಲ್ಲಿ ಶೇರಿ, ನಾನು ಮಾಡುತ್ತಾ ಬಂದ ಕೆಲಸವನ್ನು ಸರಿಯಾಗಿ ನಡಿಸುವದಕ್ಕೆ ಅತ್ಯಾಸಕ್ತನಾಗಿರಬೇಕು.

೬. ಪರದೇಶವನ್ನು ಬಿಟ್ಟು, ಸ್ವದೇಶಕ್ಕೆ ಪುನಾರಾಗುವವನಂತೆ ಅಪಾಸ್ತಲನು ಮಾತನಾಡುತ್ತಾನೆ.

೭. ಒಳ್ಳೇ ಹೋರಾಟವನ್ನು ಹೋರಾಡಿದ್ದೇನೆ ೧); ಓಟವನ್ನು ತೀರಿಸಿದ್ದೇನೆ ೨); ವಿಶ್ವಾಸವನ್ನು ಕೈಕಾಂಡಿದ್ದೇನೆ. ೮. ಇನ್ನು ಮೇಲೆ ನೀತಿಯ ಕಿರೀಟವು ನನಗಾಗಿ ಇಟ್ಟಿದೆ ೩); ಆ ದಿನದಲ್ಲಿ ನೀತಿಯುಳ್ಳ ನ್ಯಾಯಾಧಿಪತಿಯಾದ ಕರ್ತನು ೪) ಅದನು ನನಗೆ ಕೊಡುವನು; ನನಗೆ ಮಾತ್ರವಲ್ಲ, ಅವನ ಪ್ರತ್ಯಕ್ಷತೆಯನ್ನು ಪ್ರೀತಿ ಮಾಡಿರುವವರೆಲ್ಲರಿಗೂ ಸಹ ೫).

೧. ಕರ್ತನ ಮಹಿಮೆಗಾಗಿಯೂ, ಆತ್ಮರಕ್ಷಣೆಗಾಗಿಯೂ, ಪಾಪ, ಲೋಕ, ಸೈತಾನ ಎಂಬ ಶತ್ರುಗಳ ಸಂಗಡ ಚಕ್ತನು ಮಾಡುವ ಯುದ್ಧವು ಒಳ್ಳೇದೇ ಸರಿ. ಅದರ ಜಯಪ್ರಭವು ನಿರಂತರವಾದದ್ದು.

೨. ೧ಕೊರಿ. ೯, ೨೪ಲ್ಲಿಯೂ ಫಿಲಿ. ೩, ೧೪ಲ್ಲಿಯೂ ಅಪಾಸ್ತಲನು ಜೂಜಿನ ಓಟ ಓಡುವವನಂತೆ ಮಾತನಾಡಿದನು. ಈಗ ಲಕ್ಷ್ಯಸ್ಥಂಭವನ್ನು ಪಡೆದವನಂತೆ ಮಾತನಾಡುತ್ತಾನೆ.

೩. ಈ ಮಾತಿನ ಅಭಿಪ್ರಾಯವನ್ನು ಎರಡು ವಿಧವಾಗಿ ತಿಳಿದು ಕಾಳ್ಳಬಹುದು: ೧) ಕಾಟ್ಟ ವಾಕ್ಯವನ್ನು ನೆರವೇರಿಸುವಂಥಾ ನೀತಿಯುಳ್ಳ ಕರ್ತನು ಚಕ್ರನಿಗೆ ಕಾಡುವ ಜಯಪ್ರಭವಾದ ಕಿರೀಟವು. ೨) ನೀತಿಯನ್ನು ಅನುಸರಿಸಿದ ಜಯಶಾಲಿಗಳಾದ ಚಕ್ತರಿಗೆ ನೇಮಕವಾದ ಕಿರೀಟವು. ಕಿರೀಟವು ರಾಜರಿಗೆ ಚೂಷಣವಾಗಿದೆ. ಕ್ರಿಸ್ತನ ಶ್ರಮಗಳಲ್ಲಿ ಪಾಲುಗಾರರಾದವರು ಆತನ ರಾಜ್ಯಾಧಿಕಾರದಲ್ಲಿಯೂ ಪಾಲುಗಾರರಾಗುತ್ತಾರೆ. ಸ. ೨, ೧೨.

೪. ಪಾಪಿಗಳಾದ ಮನುಷ್ಯರನ್ನು ತನ್ನ ಮಗನ ರಕ್ತದ ಮೂಲವಾಗಿ ನೀತಿಯ ಪ್ರಕಾರ ರಕ್ಷಿಸಿದ ದೇವರು, ನೀತಿಯ ಪ್ರಕಾರವಾಗಿಯೇ ಲೋಕ ನ್ಯಾಯ ತೀರಿಸಿ, ಚಕ್ತರಿಗೆ ಸಪ್ತ ಅವರವರ ಕೃತ್ಯಾನುಸಾರವಾದ ಫಲವನ್ನು ಕಾಡುವನು. ಆದರೆ ಯೇಸು ಕ್ರಿಸ್ತನ

ಎಫೆಸಿಮೊ. ೪, ೯—೧೫೯.

ಮರಣದಿಂದ ರಕ್ಷಿತರಾಗಿ, ಆತನ ಆತ್ಮದಿಂದ ಪುನರ್ಜಾತರಾದವರಲ್ಲಿ ಸ್ವಪುಣ್ಯಚಾವನೆಯು ಪುಟ್ಟುವದೇ ಇಲ್ಲ. ಪ್ರಕ. ೪, ೧೦ರಲ್ಲಿ ೨೪ ಹಿರಿಯರು ಸಹ ತಮ್ಮ ಕಿರೀಟಗಳನ್ನು ದೇವರ ಸಿಂಹಾಸನದ ಮುಂದೆ ತೆಗದಿಟ್ಟು, ಆತನಿಗೆ ಮಾತ್ರ ಸ್ತೋತ್ರ ಮಾಡುತ್ತಾರೆ.

೫. ದೇವರ ಕೃಪೆಯಿಂದ ಪಾಪಪರಿಹಾರವನ್ನೂ, ಪರಿಶುದ್ಧಾತ್ಮವನ್ನೂ ಪಡಾಂದಿ, ಇಹದಲ್ಲಿ ಕರ್ತನನ್ನು ಸೇವಿಸಿ, ಆತನ ಮಹಿಮೆಯ ದಿವಸವನ್ನು ಎದುರು ನೋಡುವವರೆಲ್ಲರಿಗೆ ದೇವರಾಜ್ಯಬಾಧ್ಯತೆಯು ಪರದಲ್ಲಿ ಪ್ರಾಪ್ತವಾಗುವದು.

ಬೇರೆ ಬೇರೆ ಆಜ್ಞೆ, ವರ್ತಮಾನ, ವಂದನೆಗಳು. ವ. ೯—೨೨.

೯. ಬ್ಯೇಗ ನನ್ನಹತ್ತರ ಬರ[೧]) ಜಾಗ್ರತೆಯಾಗಿರು. ಯಾಕಂದರೆ ದ್ಯೇಮನು ಇಹಗಿನ ಲೌಕ್ಯಕವನ್ನು ಪ್ರೀತಿ ಮಾಡಿ, ನನ್ನನ್ನು ಬಿಟ್ಟನು. ೧೦. ಅವನು ಥೆಸ್ಸಲೊನೀಕಕ್ಕೂ, ಕ್ರೇಸ್ಕನು ಗಲಾತ್ಯಕ್ಕೂ, ತೀತನು ದಲ್ಮಾತ್ಯಕ್ಕೂ, ಹೋರಟು ಹೋದರು. ೧೧. ಲೂಕನು ಮಾತ್ರ ನನ್ನ ಸಂಗಡ ಇದ್ದಾನೆ. ಮರ್ಕನನ್ನು[೨]) ಕರಕೊಂಡು ಬಾ; ಯಾಕಂದರೆ ಅವನು ನನಗೆ ಸೇವೆಗೌಕ್ಯಕರ ಪ್ರಯೋಜಕನಾಗಿದ್ದಾನೆ[೩]). ೧೨. ತುಕಿಕನನ್ನು[೪]) ಎಫೆಸಕ್ಕೆ ಕಳುಹಿಸಿದ್ದೇನೆ. ೧೩. ನಾನು ತ್ರೋಯದಲ್ಲಿ ಕರ್ಪನ ಹತ್ತರ ಬಿಟ್ಟು ಬಂದ ಮೇಲಂಗಿಯನ್ನೂ, ಪುಸ್ತಕಗಳನ್ನೂ, ಮುಖ್ಯವಾಗಿ ತೊಗಲು ಕಾಗದಗಳನ್ನೂ[೫]), ಬರುವಾಗ, ತೆಗೆದು ಕೊಂಡು ಬಾ. ೧೪. ಕಂಚುಗಾರನಾದ ಅಲೆಕ್ಸಂದ್ರನು[೬]) ನನ್ನನ್ನು ಬಹಳ ತೊಂದರೆ ಪಡಿಸಿದನು. ಅವನ ಕೃತ್ಯಗಳ ಹಾಗೆ, ಕರ್ತನು ಅವನಿಗೆ ಬದಲು ಕೊಡಲಿ. ೧೫. ಅವನಿಗೆ ನೀನು ಸಹ ಎಚ್ಚರವಾಗಿರು. ಯಾಕಂದರೆ ಬಹಳವಾಗಿ ನಮ್ಮ ಮಾತುಗಳನ್ನು ವಿರೋಧಿಸಿದ್ದಾನೆ.

೧. ಪೌಲನು ರೋಮಪುರದಲ್ಲಿದ್ದು, ಈ ಪತ್ರಿಕೆಯನ್ನು ಎಫೆಸದಲ್ಲಿರುವ ತಿಮೊಥೆಯನಿಗೆ ಬರದು ಕಳುಹಿಸಿದನು. ಇವನು ರೋಮಪುರಕ್ಕೆ ಬರುವದಕ್ಕೆ ಪ್ರಯತ್ನಗಾದರೂ ಕೆಲವು ತಿಂಗಳು ಕಳಿಯ ಬೇಕಾಯಿತು. ಅಷ್ಟು ಕಾಲ ತಾನು ಬದುಕುತ್ತೇನೆಂದು, ಅಪಾಸ್ತಲನು ತಿಳಿದು ಕಾಂಡನು.

೨. ಈ ಮರ್ಕನು ಸುವಾರ್ತಾಗ್ರಂಥಕರ್ತನೂ, ಬರ್ನಬನ ಅಳಿಯನೂ ಆದ ಮರ್ಕನೆಂಬ ಯೋಹಾನನು. ಅಪಾ. ಕ್ರಿ. ೧೫, ೩೮. ಕೊಲೊ. ೪, ೧೦. ಫಿಲೆ. ೨೪.

೩. ಪೌಲನು ಒಂದು ವೇಳೆ ಅವನನ್ನು ಕ್ರೈಸ್ತ ತೀರ ಪ್ರಕಾರ ಸಭೆಗಳ ಸ್ಥಿತಿಗತಿಗಳನ್ನು ವಿಚಾರಿಸುವದಕ್ಕೆ ಒಂದು ದೇಶಕ್ಕೆ ಕಳುಹಿಸುವದಕ್ಕೆ ಮನಸ್ಸುಳ್ಳವನಾಗಿದ್ದನು.

೪. ಪೌಲನು ತುಕಿಕನನ್ನು ಕ್ರೇತದ್ವೀಪಕ್ಕೆ ಕಳುಹಿಸ ಬೇಕೆಂದಿದ್ದನೆಂದು, ತೀತ. ೩, ೧೨ರಲ್ಲಿ ತಾತ್ಪರ್ಯವಾಗುತ್ತದೆ. ಒಂದು ವೇಳೆ ಅವನು ಎಫೆಸದ ಮಾರ್ಗವಾಗಿ ಬರುತ್ತಾ ಇದ್ದನು.

೫. ಇವು ಪಾಳೆ ಒಡಂಬಡಿಕೆಯ ಗ್ರಂಥಗಳ ಪತ್ರಗಳಾಗಿ, ಗ್ರೀಕ ಅಥವಾ ರೋಮಾಯ ಭಾಷೆಯ ಗ್ರಂಥಗಳಾಗಿ, ತಿಳಿಯುವದಿಲ್ಲ. ಪ್ರಯತ್ನಗಾದರೂ ಪೌ

ಲನು ಪೂರ್ವಾಪರದ ಪರ್ಯಂತ ವಿದ್ಯಾರ್ಥಿಯಾಗಿಯೇ ಇದ್ದನೆಂದು ತಾರುತ್ತದೆ.

೬. ಇವನ ಪೌಸರು ಅಪಾ. ಕ್ರಿ. ೧೯, ೩೩ಲ್ಲಿ ಬರದದೆ. ಅವನು ಯೆಹೂದಕ್ರೈಸ್ತನಾಗಿದ್ದನೆಂದು ಕಾಣುತ್ತದೆ.

೧೬. ನನ್ನಮೊದಲನೇ ಪ್ರತ್ಯುತ್ತರದಲ್ಲಿ ಯಾರೂ ನನ್ನ ಸಹಾಯಕ್ಕೆ ಬರಲಿಲ್ಲ; ಎಲ್ಲರೂ ನನ್ನನ್ನು ಬಿಟ್ಟು ಹೋದರು ೧). ಅದು ಅವರಿಗೆ ಎಣಿಸಲ್ಪಡದಿರಲಿ. ೧೭. ಆದಾಗ್ಯೂ ಕರ್ತನು ನನ್ನ ಬಳಿಯ ನಿಂತು, ನನ್ನಿಂದ ಪ್ರಸಂಗವು ಪೂರೈಸಲ್ಪಡುವ ಹಾಗೆಯೂ, ಜನಾಂಗಗಳೆಲ್ಲಾ ಕೇಳುವ ಹಾಗೆಯೂ, ನನ್ನನ್ನು ಬಲಪಡಿಸಿದನು ೨); ಮತ್ತು ಸಿಂಹದ ೩) ಬಾಯಿಂದ ತಪ್ಪಿಸಲ್ಪಟ್ಟೆನು.

೧. ರೋಮಪುರದಲ್ಲಿದ್ದ ಕ್ರೈಸ್ತರು, ವಿಶೇಷವಾಗಿ ಅರಮನೆಯ ಉದ್ಯೋಗಗಳಲ್ಲಿದ್ದವರು ಪೌಲನಿಗೆ ತಕ್ಕ ಸಹಾಯ ಮಾಡುವದಕ್ಕೆ ಭಯ ಪಟ್ಟು, ಅವನಿಗೆ ಸಾಕ್ಷಿ ಹೇಳುವದಕ್ಕೆ ಮನಸ್ಸಿಲ್ಲದೆ, ತಪ್ಪಿಸಿ ಕಾಂಡರೆಂದು ತಾರುತ್ತದೆ.

೨. ಪೌಲನು ಮಹಾರಾಜನ ಮುಂದೆ ಮೊದಲನೆ ಸಾರಿ ಪ್ರತಿವಾದವನ್ನು ಹೇಳುವ ಸಮಯದಲ್ಲಿ ವಿಶೇಷವಾದ ದೇವಸಹಾಯದಿಂದ ಮಹಾರಾಜನ ನ್ಯಾಯಸ್ಥಾನದಲ್ಲಿ ಕೂಡಿದ ಎಲ್ಲಾ ಜನರ ಮುಂದೆ ಸಂಪೂರ್ಣವಾಗಿ ಸುವಾರ್ತಾಪ್ರಸಂಗ ಮಾಡಿದನೆಂದು, ಜಾಡೆಯಾಗಿ ತಾರುತ್ತದೆ.

೩. ಅಂದರೆ ಸಿಂಹದಂತೆ ಕ್ರೂರನಾದ ಮಹಾರಾಜನಾದ ನೇರೋನನ ಕೈಯಿಂದ.

೧೮. ಮತ್ತು ಕರ್ತನು ಸಕಲ ದುಷ್ಕ್ರಿಯೆಗಳಿಂದ ೧) ನನ್ನನ್ನು ತಪ್ಪಿಸಿ ಪರಲೋಕದಲ್ಲಿರುವ ತನ್ನ ರಾಜ್ಯದ ವರೆಗೂ ರಕ್ಷಿಸುವನು ೨). ಅವನಿಗೆ ಯುಗ ಯುಗಾಂತರಗಳಿಗೂ ಮಹಿಮೆಯು ಆಗಲಿ ೩). ಆಮೆನ್.

೧. ಅವಿಶ್ವಾಸಿಗಳಾದ ದುಷ್ಟಶತ್ರುಗಳು ಮಾಡುವ ದ್ವೇಷಾಲೋಚನೆಗಳಿಂದ.

೨. ಫಿಲಿ. ೧, ೨೩ಲ್ಲಿ ಪೌಲನು ಬರದ ಅಪೇಕ್ಷೆಯು ನೆರವೇರುವದಕ್ಕೆ ಈಗ ಸಮೀಪವಾಯಿತು.

೩. ಪೌಲನು ಮರಣದ ಜಾವನೆಗೆ ಅತ್ಯಂತ ಸಂತುಷ್ಟನಾಗಿ, ಮಹಿಮಾಶಾಪೂರಿತನಾಗಿ, ಕರ್ತನನ್ನು ಪೂಗಳುತ್ತಾನೆ.

೧೯. ಪ್ರಿಸ್ಕಳನ್ನೂ ಅಕ್ವಿಲನನ್ನೂ ೧) ಒನೆಸಿಫೋರನ ಮನೆಯನ್ನೂ ೨) ವಂದಿಸು. ೨೦. ಎರಸ್ತನು ಕೊರಿಂಥದಲ್ಲಿ ೩) ನಿಂತನು. ತ್ರೊಫಿಮನನ್ನು ೪) ಅಸೌಖ್ಯವಾಗಿ ಮಿಲೇತದಲ್ಲಿ ಬಿಟ್ಟೆನು. ೨೧. ಹಿಮಕಾಲಕ್ಕೆ ಮುಂಚೆ ಬರ ಎಚ್ಚರಿಕೆಯಾಗಿರು. ಯುಬೂಲನೂ, ಪೂದೆಯನೂ, ಲೀನನೂ ೫), ಕ್ಲೌದ್ಯಳೂ, ಸಹೋದರರೆಲ್ಲರೂ ೬) ನಿನ್ನನ್ನು ವಂದಿಸುತ್ತಾರೆ. ೨೨. ಕರ್ತನಾದ ಯೇಸು ಕ್ರಿಸ್ತನು ನಿನ್ನ ಆತ್ಮದ ಸಂಗಡ ಇರಲಿ. ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

೨ ಪೌತ್ರ. ೧, ೧—೩.

೧. ಅಪಾ. ಕ್ರಿ. ೧೮, ೧೮. ಅವರ ಪೆಸರು ಬರದದೆ. ಅವರು ಈಗ ಎಫೆಸದಲ್ಲಿ ವಾಸವಾಗಿದ್ದರು.

೨. ಸ. ೧, ೧೬. ಒನೆಸಿಫಾರನು ತಾನು ಈ ಪರ್ಯಂತ ರಾೀಮಪುರದಲ್ಲಿದ್ದನೆಂದು ಕಾಣುತ್ತದೆ.

೩. ಇವನು, ಪೂರ್ವಕಾಲದಲ್ಲಿ ಮಾಡಿದ ಪ್ರಕಾರ, ಪೌಲನಿಗೆ ಜಾತೆ ಪ್ರಯಾಣಸ್ಥನಾಗಿದ್ದು, ಕಡೇ ಪ್ರಯಾಣದಲ್ಲಿ ಎಫೆಸದಿಂದ ಕಾರಿಂಥದವರೆಗೂ ಪೌಲನ ಸಂಗಡಲಿದ್ದು, ಸ್ವಪಟ್ಟಣವಾದ ಕಾರಿಂಥದಲ್ಲಿಯೇ ಅಪ್ಪಣೆ ತೆಗದು ಕಾಂಡನು. ರಾೀಮಾ. ೧೬, ೨೩. ಅಪಾ. ಕ್ರಿ. ೧೯, ೨೨.

೪. ಅಪಾ. ಕ್ರೆ. ೨೦, ೪ಲ್ಲಿ ಅವನ ಪೆಸರು ಮೊದಲು ಬರದದೆ.

೫. ಇವನು ರಾೀಮಪುರದ ಸಖೆಯ ಪ್ರಥಮ ಅಥೃಷ್ಟಿಯಾಗಿದ್ದನೆಂದು, ಇರೆನಾಯನೂ, ಐಸೇಬಿಯನೂ ಬರದಿದ್ದಾರೆ.

೬. ರಾೀಮಪುರದಲ್ಲಿ ಪೌಲನ ಪುತ್ತರ ಇದ್ದ ಖಕ್ತರೆಲ್ಲರೂ.

ಪೌತ್ರನ ಎರಡನೆ ಪತ್ರಿಕೆಯು.

(ಸರ್ವಸಚಾಪತ್ರಿಕಾ ಪೀಠಿಕೆಯ ಉ. ಲ್ಲಿ (ಲಖೀ) ಬರದದ್ದನ್ನು ನಾೀಡ ಬೇಕು.)

ವಂದನೆಯು. ಸ. ೧, ೧. ೨.

೧. ಯೇಸು ಕ್ರಿಸ್ತನ ದಾಸನೂ, ಅಪಾಸ್ತಲನೂ, ಆಗಿರುವ ಸಿಮೆಯಾನ್ ಪೌತ್ರನು, ನಮ್ಮದೇವರೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನೀತಿಯಿಂದ ೧) ನಮ್ಮಕೂಡ ೨) ಸಮ ಬೆಲೆಯುಳ್ಳ ವಿಶ್ವಾಸವನ್ನು ಹೊಂದಿದವರಿಗೆ ೨.—ದೇವರೂ, ನಮ್ಮ ಕರ್ತನಾದ ಯೇಸುವೂ, ಇವರ ಶಿಳುವಿಕೆಯಿಂದ ೩) ಕೃಪೆಯೂ ಸಮಾಧಾನವೂ ನಿಮಗೆ ಹೆಚ್ಚಲಿ.

೧. ಈ ಮಾತಿನಿಂದ ಅಪಾಸ್ತಲನು, ರಕ್ಷಣಾಕಾರ್ಯವು ದೇವರೂ, ರಕ್ಷಕನೂ ಆದ ಕ್ರಿಸ್ತನ ನೀತಿಯಿಂದ ಪುಟ್ಟುತ್ತದೆಂದು ಸೂಚಿಸುತ್ತಾನೆ. ಈಗಿನ ಕಾಲದಲ್ಲಿ ತನ್ನ ನೀತಿಯನ್ನು ತಾೀರಿಸ ಬೇಕೆಂದು, ಯೇಸುವಿನಲ್ಲಿರುವ ವಿಶ್ವಾಸವುಳ್ಳವನನ್ನು ನೀತಿ ಪಡಿಸುವದರಲ್ಲಿ ದೇವರು ನೀತಿವಂತನಾಗಿದ್ದಾನೆಂದು, ಪೌಲನು ರಾೀಮಾ. ೩, ೨೪ಲ್ಲಿ ಬರದ ಅಭಿಪ್ರಾಯವು ಇದಕ್ಕೆ ಸರಿ ಬೀಳುತ್ತದೆ. ದೇವರ ನೀತಿಯು ನೀತಿವಂತನಾದ ಯೇಸುವನ್ನು ನಂಬುವ ಪಾಪಿಗಳಿಗೆ ಪ್ರಾಪ್ತವಾಯಿತೆಂಬದು ಸುವಾರ್ತಾವಿಶ್ವಾಸದ ಸಾರಾಂಶವಾಗಿದೆ.

೨. ಅಪಾಸ್ತಲರು ಕಂಡು ನಂಬಿದ್ದನ್ನೇ ವ. ೧೬. ೧ ಯಾೀಹಾ. ೧, ೧. ಶಿಷ್ಯರು ಕೇಳಿ ನಂಬುತ್ತಾರೆ.

೩. ಕ್ರಿಸ್ತನ ಶಿಳುವಿಕೆಯು ರಕ್ಷಣಾಸಪೇತುವೆಂದು ವ. ೩. ಲ್ಲಿಯೂ ಸೂಚಿತವಾಗಿದೆ.

ಉದ್ಬೋಧನೆಯು. ಸ. ೧, ೩—೧೧.

೩. ಮಹಿಮೆ ಸದ್ಗುಣಗಳಿಂದ ೧) ನಮ್ಮನ್ನು ಕರೆದವನ ೨) ಶಿಳುವಿಕೆಯ ಮೂಲಕವಾಗಿ ೩) ಜೀವಕ್ಕೂ ೪) ಭಕ್ತಿಗೂ ಸಂಬಂಧವಾದವುಗಳನ್ನೆಲ್ಲಾ ಅವನ ದಿವ್ಯಬಲ

೫. ಪೌತ್ರಸಹಿತ ಪೌಲನ ದ್ವಿತೀಯ ರೋಮಪುರಬಂಧನ.

ಉದ್ಘಾಧನೆ.

ಎ ಪೌತ್ರ. ೧, ೪—೭.

ವು ೫) ನಮಗೆ ಕೊಟ್ಟ (ಪ್ರಕಾರ ೬) ಆ ಮಹಿಮೆ ಸದ್ಗುಣಗಳಿಂದ ೭) ೪. ಬಹು ದಾ ಡ್ಡವುಗಳಾದ ಅಮೂಲ್ಯವಾದ ವಾಗ್ದತ್ತಗಳು ೮), ೫ವುಗಳ ಮುಖಾಂತರ ೯), ನೀ ವು ಲೋಕದಲ್ಲಿರುವ ನಷ್ಟವನ್ನು ತಪ್ಪಿಸಿ ಕೊಂಡವರಾಗಿ, ದಿವ್ಯಸ್ವಭಾವ ದಲ್ಲಿ ಪಾಲುಗಾರರಾಗುವ ಹಾಗೆ ೧೦), ನಮಗೆ ಕೊಡಲ್ಪಟ್ಟಿವೆ. ೫. ೫ದಕ್ಕೋಸ್ಕರ ಎಲ್ಲಾ ಜಾಗ್ರತೆಯನ್ನು ಮಾಡಿ ಕೊಂಡು,

೧. ೫ಂಥಾ ರಾಜ್ಯಕ್ಕೆ ಕರೆಯಲಧಿಕಾರಿಯಾದವನಿಗೆ ದಿವ್ಯ ಮಹಿಮೆಯು ೫ರ ಬೇಕು. ಈ ಮಹಿಮೆಯನ್ನು ಯೇಸುವು ತನ್ನ ನೀತಿಯಿಂದ ವ. ೧ ಪಡದಿದ್ದಾನೆ. ತಾನು ಕರೆದವರನ್ನು ಸಿದ್ಧಿಯನ್ನು ಪೂರ್ತಿಯಾಗಿ ಸಿ, ಅವರ ರಕ್ಷಣೋದ್ಯೋಗಕಾರ್ಯವನ್ನು ಪೂರೈಸುವದಕ್ಕೆ ಅತನಲ್ಲಿರುವ ನಿಶ್ಚಂಚಲವಾದ ನೀತಿಯು ಅವಶ್ಯವಾಗಿದೆ.

೨. ಅಂದರೆ, ತನ್ನ ಸುವಾರ್ತೆಯ ಮೂಲವಾಗಿಯೂ, ಅದರ ವಿಶ್ವಾಸದ ಮೂಲವಾಗಿಯೂ, ತನ್ನ ರಾಜ್ಯಕ್ಕೂ ಅದರ ಮಹಿಮೆಗೂ. ವ. ೧೧.

೩. ಎರಡನೆ ವಚನವನ್ನು ಸರಿ ನೋಡ ಬೇಕು.

೪. ದಿವ್ಯ ಸ್ವಭಾವಾನುಸಾರವಾದ ಪೂರ್ಣ ಸಂತುಷ್ಟಿಯುಳ್ಳ ನಿಜವಾದ ಜೀವಕ್ಕೆ ಕರ್ತನು ನಮ್ಮನ್ನು ಕರೆದಿದ್ದಾನೆ.

೫. ಭಕ್ತನಲ್ಲಿ ಆಗುವ ಕೃಪೆಯ ಕಾರ್ಯವೆಲ್ಲಾ ದಿವ್ಯ ಬಲವುಳ್ಳ ಪರಿಶುದ್ಧಾತ್ಮದಿಂದ ಉಂಟಾಗುತ್ತದೆ.

೬. ಭಕ್ತಿಯನ್ನೂ, ಭಕ್ತಿಯ ನಡತೆಯನ್ನೂ ಕೈಕಾಳ್ಳಬೇಕೆಂಬ ಉದ್ಬೋಧನೆಯ ಆಧಾರವಾಗಿ ಅಪೊಸ್ತಲನು ಪ್ರಸ್ತಾಪಿಸುವದೇನಂದರೆ: ಅ) ಅದಕ್ಕಾಗಿ ಅವಶ್ಯಕವಾದದ್ದೆಲ್ಲಾ ನಮಗುಂಟು. ಆ) ಅತ್ಯಂತ ಘನವುಳ್ಳ ವಾಗ್ದತ್ತಗಳು ಅಧಿಕಾರಿಗಳಾದ ಭಕ್ತರಿಗೆ ನೇಮಕವಾಗಿವೆ. ಇ) ವ. ೮. ೯. ಭಕ್ತಿಯ ನಡತೆಯು ನಮ್ಮ ಶಿಲುವಿಕೆ ವಿಶ್ವಾಸಗಳಿಗೂ, ಪಾಪಪರಿಹಾರ ಕೃಪಾಯೋಗ್ಯತೆಗೂ ಪ್ರಮಾಣವಾಗಿದೆ.

೭. ೫ಪೊನವಲ್ಲಿಯೂ, ವಾಗ್ದತ್ತಗಳಲ್ಲಿಯೂ ಆತನ ಮಹಿಮೆಯೂ ತ್ರಾಣವೂ ಮೂಲಕಾರಣಗಳಾಗಿ ಪ್ರಸಿದ್ಧವಾಗುತ್ತವೆ.

೮. ೫ದಕ್ಕೆ ೧೧ನೆ ವಚನವನ್ನು ಸರಿ ನೋಡ ಬೇಕು.

೯. ಅಂದರೆ, ೫ವುಗಳನ್ನು ದೃಢವಾಗಿ ಹಿಡಿದು ಕಾಳ್ಳುವ ವಿಶ್ವಾಸದ ಬಲದಿಂದ.

೧೦. ಪರಿಶುದ್ಧಾತ್ಮಬೋಧಿತ ಭಕ್ತನು, ಯಥಾರ್ಥ ವಿಶ್ವಾಸದ ಮೂಲವಾಗಿ ದೇವೈಕ್ಯದಲ್ಲಿ ಶೇರಿ, ದಿವ್ಯ ಶಾಪವುಳ್ಳವನಾಗುತ್ತಾನೆ.

೫. ನಿಮ್ಮ ವಿಶ್ವಾಸಕ್ಕೆ ೧) ಸದ್ಗುಣವನ್ನೂ ೨), ಸದ್ಗುಣಕ್ಕೆ ಶಿಲುವಿಕೆಯನ್ನೂ ೩), ಶಿಲುವಿಕೆಗೆ ಸಂಯಮವನ್ನೂ ೪), ಸಂಯಮಕ್ಕೆ ತಾಳ್ಮೆಯನ್ನೂ ೫), ೬. ತಾಳ್ಮೆಗೆ ಭಕ್ತಿಯನ್ನೂ ೬), ೭. ಭಕ್ತಿಗೆ ಸಹೋದರಸ್ನೇಹವನ್ನೂ ೭), ಸಹೋದರಸ್ನೇಹಕ್ಕೆ (ಪ್ರೀತಿಯನ್ನೂ ೮), ಕೂಡಿಸಿರಿ ೯).

೧. ೫ಲ್ಲಿ ಕಾಣುವ ಅಮೌಲ್ಯ ಸದ್ಗುಣರತ್ನಮಾಲೆಯಲ್ಲಿ ವಿಶ್ವಾಸವೆಂಬ ರತ್ನವು ಪ್ರಥಮವಾದದ್ದು. ಅದು ೨ನೆ ವಚನದ ಪ್ರಕಾರ ಕ್ರಿಸ್ತನ ಶಿಲುವಿಕೆಯಿಂದ ಪುಟ್ಟಿ, ಕ್ರಿಸ್ತಸದೃಶ ಮನಸ್ಸನ್ನು ಪುಟ್ಟಿಸುತ್ತದೆ.

೨. ೫ಲ್ಲಿ ಗ್ರೀಕದಲ್ಲಿ ಬರುವ ಪದವನ್ನು ಪೌತ್ರನು ೧ನೆ ಪತ್ರಿಕೆಯ ೧, ೧೦ಲ್ಲಿಯೂ, ೫ಲ್ಲಿಯೂ ಪ್ರಯೋಗಿಸುತ್ತಾನೆ. ಪೌಲನು ಅದನ್ನು ಒಂದು ಸಾರಿ ಫಿಲಿ. ೪, ೮. ಪ್ರಯೋಗಿಸುತ್ತಾನೆ. ಅದು ಪೌತ್ರನ ಒಡಂಬಡಿಕೆಯ ಗ್ರಂಥಗಳಲ್ಲಿ ಬೇರೆ ಎಲ್ಲಿಯೂ ತೋರುವದಿಲ್ಲ. ಗ್ರೀಕ ಪದದ ಅರ್ಥವೇನಂದರೆ: ವೀರ

ಗುಣ, ಪೌರುಷವು. ಅದು ಪೇತ್ರನಲ್ಲಿ ವಿಶೇಷವಾಗಿ ಪ್ರಸಿದ್ಧವಾಯಿತು. ಪೌಲನು ಅದನ್ನು ಎಫೆ. ೬, ೧೨. ಇತ್ಯಾದಿಗಳಲ್ಲಿ ವರ್ಣಿಸುತ್ತಾನೆ.

೩. ಅಂದರೆ, ಲೌಕಿಕ ಚಾಂಗವು ವ್ಯರ್ಥವಾದ ದ್ವೆಂಬ ತಿಳುವಿಕೆಯು. ಇದು ಸತ್ಯವಾದ ಬುದ್ಧಿಗೂ ಜ್ಞಾನಕ್ಕೂ ಮೂಲವಾಗಿದೆ.

೪. ಅಂದರೆ, ವಿಷಯಾಸಕ್ತಿಪರಿತ್ಯಾಗವು. ಇದು ಇಲ್ಲದೆ ಬುದ್ಧಿಸ್ವಾಧೀನತ್ವವು ಪುಟ್ಟುವದಿಲ್ಲ.

೫. ಸ್ವಾಧೀನಬುದ್ಧಿಯುಳ್ಳವನು ಉಪದ್ರವಗಳನ್ನೂ ಶ್ರಮಗಳನ್ನೂ ನಿಶ್ಚಂಚಲನಾಗಿ ತಾಳ ಶಕ್ತನಾಗಿದ್ದಾನೆ.

೬. ಪ್ರಪಂಚಪರಿತ್ಯಾಗಿಯು ದೇವಾಸಕ್ತನಾಗುತ್ತಾನೆ.

೭. ದೇವರಲ್ಲಿ ಸಂತುಷ್ಟನಾದವನು ಪ್ರೀತಿಯುಳ್ಳವನಾಗಿದ್ದಾನೆ; ಯಾಕಂದರೆ: ದೇವರ ಪ್ರೀತಿಯನ್ನು ಅನುಭವಿಸಿ, ದೇವರನ್ನೂ ದೇವರ ಮಕ್ಕಳನ್ನೂ ಸಹಜವಾಗಿ ಪ್ರೀತಿ ಮಾಡುತ್ತಾನೆ.

೮. ಸಹೋದರಪ್ರೀತಿಯು ಸರ್ವರ ಪ್ರೀತಿಗೆ ಪ್ರತಿಕೂಲವಾದದ್ದಲ್ಲ. ಈ ಎರಡು ವಿಧವಾದ ಪ್ರೀತಿಯು ಎಲ್ಲಾ ಮನುಷ್ಯರಿಗೆ ರಕ್ಷಕನಾದ ಕ್ರಿಸ್ತನ ಪ್ರೀತಿಯ ತಿಳುವಿಕೆಯಿಂದ ಪುಟ್ಟುತ್ತದೆ.

೯. ಈ ಮಾರ್ಗವಾಗಿ ಯೇಸು ಕ್ರಿಸ್ತನ ಮುಖಾಂತರ ದೇವೈಕ್ಯದಲ್ಲಿ ಸತ್ಯದಿಂದ ಶೇರಿದ ಜಕ್ತನು ಸಿದ್ಧಿಯನ್ನು ಪಡೆದುಕೊಂಡುತ್ತಾನೆ.

೮. ಯಾಕಂದರೆ ಇವುಗಳು ನಿಮಗೆ ಉಂಟಾಗಿ, ಹೆಚ್ಚಿದರೆ ೧), ಅವು ನಿಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನ ತಿಳುವಿಕೆಯಲ್ಲಿ ಮೈಗಳ್ಳರೂ ನಿಷ್ಫ್ರಯೋಜಕರೂ ಅಲ್ಲದ ಹಾಗೆ, ಮಾಡುವವು ೨). ೯. ಯಾಕಂದರೆ ಇವುಗಳಿಲ್ಲದವನು ಕುರುಡನು ೩), ಮೊಬ್ಬುಗಣ್ಣಿನು ೪), ತನ್ನ ಮುಂಚಿನ ಪಾಪಗಳ ಶುದ್ಧೀಕರಣವನ್ನು ಮರೆತವನು ೫), ಆಗಿದ್ದಾನೆ.

೧. ಉಂಟಾಗಿದ್ದರೆ, ಪೆಚ್ಚಾಗುವದು ಸಹಜವಾದ ಕಟ್ಟಳೆಯಾಗಿದೆ. ಮತ್ತಾ. ೧೩, ೧೨; ೨೫, ೨೯. ಮರ್ಕ. ೪, ೨೫. ಲೂಕ. ೮, ೧೮.

೨. ಅಂದರೆ, ನಿಮ್ಮನ್ನು ಆಸಕ್ತರಾಗಿಯೂ ಸತ್ಕೃತ್ಯ ಚರಿತರಾಗಿಯೂ ಮಾಡುವವು.

೩. ವಾಗ್ದತ್ತಗಳನ್ನು ನಂಬದೆ ಅವನು ಮುಂದಣ ಮಾರ್ಗವನ್ನು ಕಾಣುವದಿಲ್ಲ.

೪. ಆತ್ಮದ ಬೆಳಕು ಇಲ್ಲದವನಾಗಿ, ಪ್ರಸ್ತುತಕಾರ್ಯಗಳಲ್ಲಿ ಅವಿವೇಕಿಯಾಗಿರುತ್ತಾನೆ.

೫. ಸತ್ಯವಾಗಿ ಮಾನಸಾಂತರವನ್ನೈದಿದವನು ದೇವರ ಕೃಪೆಯನ್ನಾದರೂ ತನ್ನ ಪಾಪಗಳನ್ನಾದರೂ ಯಾವಾಗಲೂ ಮರೆಯುವದಿಲ್ಲ.

೧೦. ಆದದರಿಂದ, ಸಹೋದರರೇ, ನಿಮ್ಮ ಕರೆಯುವಿಕೆಯನ್ನೂ ಆಯುವಿಕೆಯನ್ನೂ ಸ್ಥಿರ ಮಾಡುವ ಹಾಗೆ ೧), ಹೆಚ್ಚಾಗಿ ಜಾಗ್ರತೆಯಾಗಿರ್ರಿ. ಯಾಕಂದರೆ ಇವುಗಳನ್ನು ಮಾಡಿದರೆ ೨), ಎಂದಿಗೂ ಎಡವದೆ ಇರುವಿರಿ ೩). ೧೧. ಯಾಕಂದರೆ ಹೀಗೆಯೇ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯ ರಾಜ್ಯದಲ್ಲಿ ನಿಮಗೆ ಪ್ರವೇಶವು ಐಶ್ವರ್ಯವಾಗಿ ೪) ಕೊಡಲ್ಪಡುವದು.

ಬ್ತಾಧನೆ.

ಎ ಪ್ರೇತ್ರ. ೧, ೧ಎ—೧೪.

೧. ಪುರ್ತಾಗಂದರೆ, ಒನೆ ಒನೆ ವಚನಗಳಲ್ಲಿ ಸೂಚಿತವಾದ ಚಕ್ತಿಯ ನಡತೆಯಿಂದ.

೨. ಅಂದರೆ, ನಿಜ ಕ್ತೈಸ್ತರಿಗೆ ತಕ್ಕ ಪುರ್ತಾಗೆ ನಡದು ಕಾಂಡರೆ.

೩. ಸನ್ಮಾರ್ಗದಲ್ಲಿ ದೃಢವಾಗಿ ನಡೆಯುವವರಿಗೆ ಮೋಸ ಬರುವದಿಲ್ಲ.

೪. ಅಂದರೆ, ವಿಘ್ನವೂ ಭಯವೂ ಇಲ್ಲದ ಸಂತೋಷ ಧೈರ್ಯಪೂರ್ಣವಾದ ಪ್ರವೇಶವು.

ಬ್ತಾಧನೆಯು. ಸ. ೧, ೧ಎ—೨೧.

೧ಎ. ಈದದರಿಂದ ನೀವು ಶಿಳಿದವರಾಗಿ ೧), ಇಗಿನ ಸತ್ಸಂದಲ್ಲಿ ಸ್ಥಿರವಾಗಿದ್ದರೂ, ಇವುಗಳನ್ನು ಯಾವಾಗಲೂ ನಿಮಗೆ ಜ್ಞಾಪಕ ಮಾಡುವದರಲ್ಲಿ ಅಚಾಗ್ರತೆಯಾಗಿರೆನು. ೧ಷಿ. ಈದರೆ ನಾನು, ಇ ಗುಡಾರದಲ್ಲಿರುವ ಮಟ್ಟಿಗೂ ೨), ನಿಮಗೆ ಜ್ಞಾಪಕ ಮಾಡಿ ಎಚ್ಚರಿಸುವದು ಶಕ್ಕದ್ದೆಂದು, ಎಣಿಸುತ್ತೀನೆ. ೧ಳ. ಹ್ಯಾಗಂದರೆ, ನಮ್ಮ ಕರ್ತನಾದ ಯೇಸು ಕ್ರಿಸ್ತನೂ ನನಗೆ ತಾರಿಸಿದ ಪ್ರಕಾರ ೩), ನನ್ನ ಗುಡಾರವನ್ನು ತೆಗೆದು ಹಾಕುವ ಕಾಲವು ಬೇಗ ಬರುತ್ತದೆಂದು ಬಲ್ಲೆನು. ನಮ್ಮ ಕರ್ತನಾದ ಯೇಸು ಕ್ರಿಸ್ತನು ಸಹ ಅದನ್ನು ನನಗೆ ತಾರಿಸಿದ್ದಾನೆ. ೧೫. ಇದಲ್ಲದೆ ನಾನು ಹೋದ ಮೇಲೆ ನೀವು ಇವುಗಳನ್ನು ಯಾವಾಗಲೂ ನೆನಸುವ ಹಾಗೆ ೪), ಜಾಗ್ರತೆಯಾಗಿರುವೆನು.

೧. ಅಪಾಸ್ತಲರಾದ ನಾವು ಪೂರ್ಣ ಯಾಥಾರ್ಥ್ಯದಿಂದಲೂ ದಾರ್ಢ್ಯದಿಂದಲೂ ಕ್ರಿಸ್ತನ ವಾಕ್ಯವನ್ನು ಸಾಕ್ಷಿಗಳಾಗಿ ನಿಮಗೆ ಶಿಳಿಸಿದ್ದೇವೆ.

೨. ಪುನರುತ್ಥಾನದ ಆಶೆಯುಳ್ಳವನು ಇಪಾಶರೀರವು ಅಸ್ಥಿರವೆಂಬದನ್ನು ಮರೆಯುವದಿಲ್ಲ.

೩. ಕರ್ತನು ಪೇತ್ರನಿಗೆ ಯಾಪುರಾ. ೨೧, ೧೮—೨೨ಲ್ಲಿ ನೇಮಕವಾದ ಮರಣದ ವಿಷಯವಾಗಿ ಯೌವನಕಾಲದಲ್ಲಿ ಅವನಿಗೆ ಸೂಚಿಸಿದ ಪುರ್ತಾರ್ಥ, ಅವನು ಮುದುಕನಾದನಂತರ ವಿಶೇಷವಾದ ರೀತಿಯಿಂದ ಮರಣಕಾಲ ಸ್ಥಳ ವಿಧಿಗಳನ್ನು ಅವನಿಗೆ ತಿಳಿಸಿದನೆಂದು ತಾತ್ಪರ್ಯವಿರುತ್ತದೆ.

೪. ಪೇತ್ರನು ಈ ಪತ್ರಿಕೆಯನ್ನು ಮರಣಜಾತಕದಂತೆ ಮಕ್ಕಳಾದ ಸಭೆಯವರಿಗೆ ಬಿಟ್ಟನು.

೧೬. ಯಾಕಂದರೆ ೧) ಯುಕ್ತಿಯುಳ್ಳ ಕಟ್ಟು ಕಥೆಗಳನ್ನು ೨) ಅನುಸರಿಸುವವರಾಗಿರದೆ, ಅವನ ಮಹತ್ತಿಗೆ ಕಣ್ಣು ಸಾಕ್ಷಿಗಳಾಗಿದ್ದು ೩), ನಮ್ಮ ಕರ್ತನಾದ ಯೇಸು ಕ್ರಿಸ್ತನ ಬಲವನ್ನೂ ಬರುವಿಕೆಯನ್ನೂ ನಿಮಗೆ ತಿಳಿಸಿದೆವು ೪). ೧೭. ಯಾಕಂದರೆ—ಇವನೇ ನನ್ನ ಪ್ರಿಯ ಮಗನು; ಇವನಲ್ಲಿ ನಾನು ಆನಂದ ಪಡುತ್ತೇನೆ, ಎಂಬುವ ಶಬ್ದವು ಬಹು ಘನವಾದ ಮಹಿಮೆಯಿಂದ ೫) ಅವನಿಗೆ ಬಂದಾಗ ೬), ತಂದೆಯಾದ ದೇವರಿಂದ ಮಾನವನ್ನೂ ಮಹಿಮೆಯನ್ನೂ ಹೊಂದಿದನು. ೧೮. ಆಕಾಶದಿಂದ ಬಂದ ಆ ಶಬ್ದವನ್ನು ನಾವು, ಪರಿಶುದ್ಧ ಪರ್ವತದಲ್ಲಿ ೭) ಅವನ ಸಂಗಡ ಇದ್ದಾಗ, ಕೇಳಿದೆವು.

೧. ತಾನು ಸತ್ಯವಂತನಾದ ಸಾಕ್ಷಿಯಾಗಿದ್ದೇನೆಂದು, ಪೇತ್ರನು ಬಹಳ ಆಸಕ್ತಿಯಿಂದ ಪ್ರಸ್ತಾಪಿಸುತ್ತಾನೆ.

೨. ಅಂದರೆ, ನರಯುಕ್ತಿಯಿಂದ ಹುಟ್ಟಿದ ಪುರಾಣಕಥೆಗಳನ್ನು.

೩. ಇದು ಮತ್ತಾ. ೧೭, ೩ ಇತ್ಯಾದಿ ಮಾರ್ಕ. ೯, ೪ ಇತ್ಯಾದಿ ಲೂಕ. ೯, ೩೦ ಇತ್ಯಾದಿ ಸ್ಥಳಗಳಲ್ಲಿ ಚೆನ್ನಾಗಿ ವಿವರಿಸಿಯದೆ.

೪. ಪೇತ್ರನು ಸಭಾ ಪೌಲನ ಪ್ರಕಾರ ಸುವಾರ್ತಾ ಪ್ರಸಂಗದಲ್ಲಿ, ಯೇಸು ಕ್ರಿಸ್ತನು ಲೋಕಕ್ಕೆ ಬಂದು ಪಾಪೋಚನಾಕಾರ್ಯವನ್ನು ನೆರವೇರಿಸಿದ ವೃತ್ತಾಂತವನ್ನೂ, ಆತನು ಶಿರಿಗಿ ಬಂದು ಮಹಿಮಾರಾಜ್ಯವನ್ನು ಸ್ಥಾಪಿಸುವ ಪ್ರವಾದನೆಯನ್ನೂ, ಜೋಡಿಸಿ ಸಾರಿದನು.

೫. ಅಂದರೆ, ತಂದೆಯಾದ ದೇವರ ಮಹಿಮೆಯಿಂದ. ಆ ಪರ್ವತದಲ್ಲಿ ಕಾಣಿಸಿದ ತೇಜೋಮೇಘವು ಸಾಕ್ಷಿಗುಡಾರದಲ್ಲಿಯೂ ಸಾಲೊಮೋನನ ದೇವಾಲಯದಲ್ಲಿಯೂ ವಾಸವಾಗಿತ್ತು. ದಿವಾರಾಧನೆಯ ವೇಳೆಯಲ್ಲಿಯೂ ಅದು ಕಾಣಿಸಿತು. ಅಪೊ. ಕ್ರಿ. ೧, ೯.

೬. ಪೇತ್ರ ಯೋಹಾನ ಯಾಕೋಬರ ಕಿವಿಯಲ್ಲಿ. ಲೂಕ. ೯, ೨೮.

೭. ಅಪೊಸ್ತಲನಾದ ಪೇತ್ರನಿಗೆ ಆ ಪರ್ವತದಲ್ಲಿ ಪ್ರತ್ಯಕ್ಷವಾದ ಯೇಸು ಕ್ರಿಸ್ತನ ಮಹಿಮೆಯು ಆತನು ಶಿರಿಗಿ ಬರುವ ಮಹಿಮೆಗೆ ಸ್ಥಿರವಾದ ಪೂರ್ವಸೂಚಕವಾಗಿತ್ತು.

೧೯. ಮತ್ತು ಹೆಚ್ಚಾಗಿ ಸ್ಥಿರವಾದ ಪ್ರವಾದನೆಯ ವಾಕ್ಯವು ೧) ನಮಗೆ ಉಂಟು; ದಿವಸವು ಬೆಳಗುವ ಪರಿಯಂತಕ್ಕೂ ೨); ಉದಯನಕ್ಷತ್ರವು ೩) ನಿಮ್ಮ ಹೃದಯಗಳಲ್ಲಿ ಮೂಡುವ ಪರ್ಯಂತಕ್ಕೂ, ೪ಇದನ್ನು ಕತ್ತಲೆಯಾದ ಸ್ಥಳದಲ್ಲಿ ೪) ಪ್ರಕಾಶಿಸುವ ದೀಪವೆಂದೆಣಿಸಿ ೫) ಲಕ್ಷ್ಯ ಮಾಡಿದರೆ, ಚೆನ್ನಾಗಿ ಮಾಡುತ್ತೀರಿ.

೧. ದೇವರಾಜ್ಯಪ್ರವಾದನಾವಾಕ್ಯವು ಆರಂಭದಿಂದಲೇ ಸ್ಥಿರವಾಗಿತ್ತು. ಯಾಕಂದರೆ: ಅದು ದೇವರ ಆತ್ಮದಿಂದ ಪ್ರವಾದಿಗಳ ಮುಖಾಂತರ ಲೋಕದಲ್ಲಿ ಪ್ರಕಟವಾದ ದೇವವಾಕ್ಯವಾಗಿತ್ತು. ಆದರೆ ಯೇಸು ಕ್ರಿಸ್ತನು ಬಂದು, ಪಾಳೆ ಒಡಂಬಡಿಕೆಯ ಪ್ರವಾದನೆಯನ್ನು ನೆರವೇರಿಸ ತಾಡಗಿ, ಕೃಪಾಕಾರ್ಯ ಪ್ರವಾದನೆಯನ್ನೆಲ್ಲಾ ಪೂರೈಸಿದರಿಂದ ಪ್ರವಾದನಾವಾಕ್ಯವು ಹೆಚ್ಚು ದೃಢವಾದ ಮೇಲೆ, ಆತನು ಶಿರಿಗಿ ಬಂದು ಮಹಿಮಾಕಾರ್ಯಪ್ರವಾದನೆಗಳನ್ನೆಲ್ಲಾ ಸಫಲ ಪೂರೈಸುವನೆಂಬದಕ್ಕೆ ಸಂದೇಹ ಪಡ ಕೆಲಸವಿಲ್ಲ.

೨. ಅಂದರೆ, ಯೇಸು ಕ್ರಿಸ್ತನು ಶಿರಿಗಿ ಬರುವ ದಿವಸದಲ್ಲಿ ಆತನನ್ನು ಸಂಪೂರ್ಣವಾಗಿ ತಿಳಿದು ಕಾಳ್ಳುವನಕ.

೩. ಉದಯನಕ್ಷತ್ರವು ಸೂರ್ಯೋದಯಕ್ಕಿಂತ ಮುಂಚಿತವಾಗಿಯೇ ಮೂಡುವ ಪ್ರಕಾರ, ಅವರು ಆತನನ್ನು ಪ್ರತ್ಯಕ್ಷವಾಗಿ ನೋಡುವದಕ್ಕಿಂತ ಮುಂಚೆಯೇ ಕ್ರಿಸ್ತನ ಮಹಿಮೆಯ ಆಶೆಯು ಚಕ್ಕರ ಪೈದ ಯಗಳಲ್ಲಿ ಹುಟ್ಟಿ, ಹೆಚ್ಚು ಹೆಚ್ಚಾಗಿ ಬೆಳೆಯುತ್ತದೆ.

೪. ಅಂದರೆ, ಪ್ರವಾದನೆಯು ಕತ್ತಲೆಯಲ್ಲಿ ಉರಿಯುವ ದೀಪಕ್ಕೆ, ಪ್ರವಾದನೆಯ ಸಂಪೂರ್ತಿಯು ಹಗಲಿಗೆ ಸದೃಶವಾಗಿದೆ.

೫. ಯೇಸು ಕ್ರಿಸ್ತನು ಬರುವದಕ್ಕಿಂತ ಮುಂಚೆ ಪಾಳೆ ಒಡಂಬಡಿಕೆಯ ಚಕ್ಕರು, ಪ್ರವಾದನಾವಾಕ್ಯದ ಬೋಧನೆಯಿಂದ ಆತನ ತಿಳುವಿಕೆಯನ್ನು ಪಡೆಂಡಿ, ಆತನಲ್ಲಿ ವಿಶ್ವಾಸವಿಟ್ಟರು. ಪೌಲ ಒಡಂಬಡಿಕೆಯ ಚಕ್ಕರು ಹೆಚ್ಚಾಗಿ ಪ್ರಕಟವಾದ ದೇವವಾಕ್ಯಪ್ರವಾದನೆಗಳಲ್ಲಿ ಅಧಿಕ ವಿಶ್ವಾಸವನ್ನಿಡ ತಕ್ಕದ್ದು.

೨೦. ಯಾಕಂದರೆ ಬರಹದಲ್ಲಿರುವ ಯಾವ ಪ್ರವಾದನೆಯಾದರೂ ಸ್ವಂತ ವ್ಯಾಖ್ಯಾನಕ್ಕೆ ಬರುವದಿಲ್ಲವೆಂದು, ಮೊದಲು ತಿಳಿದಿದ್ದೀರಿ ೧). ೨೧. ಯಾಕಂದರೆ ೨)

ಭಯವಾಕ್ಯ.

೨ ಪ್ರೇತ್ರ. ೨, ೧—೫೫.

ಪ್ರವಾದನೆಯು ಎಂದೂ ಮನುಷ್ಯನ ಇಚ್ಛೆಯಿಂದ ಆಗಲಿಲ್ಲ. ಆದರೆ ದೇವರ ಪರಿಶುದ್ಧ ಮನುಷ್ಯರು, ಪರಿಶುದ್ಧಾತ್ಮದಿಂದ ಪ್ರೇರೇಪಿಸಲ್ಪಟ್ಟು, ಮಾತಾಡಿದರು.

೧. ದೇವರ ವಾಕ್ಯವನ್ನು ಓದಿ, ಅದರ ಅಭಿಪ್ರಾಯವನ್ನು ಶೋಧಿಸುವಾಗ, ಅದನ್ನು ಪ್ರಕಟಿಸಿದ ಪರಿಶುದ್ಧಾತ್ಮವೇ ಅದರ ಅರ್ಥವನ್ನು ಭಕ್ತನಿಗೆ ಸರಿಯಾಗಿ ತಿಳಿಸ ಬಲ್ಲನೆಂದು, ನೆನಪು ಮಾಡಿ ಕಾಳ್ಳ ಬೇಕು.

೨. ಪ್ರವಾದನೆಯು ನರಬುದ್ಧಿಯಿಂದಲ್ಲ ಪರಿಶುದ್ಧಾತ್ಮದಿಂದಲೇ ಉಂಟಾಯಿತು. ಪ್ರವಾದಿಗಳು ಪರಿಶುದ್ಧಾತ್ಮಪ್ರೇರಣೆಯಿಂದಲೇ ಪ್ರವಾದನೆಯನ್ನು ಹೇಳುವದಕ್ಕೆ ಸಮರ್ಥರಾದರು; ಆದ್ದರಿಂದ ಪರಿಶುದ್ಧಾತ್ಮವನ್ನು ಹೊಂದದೆ ಇರುವವರು ಪ್ರವಾದನೆಯನ್ನು ಗ್ರಹಿಸಲಾರರು.

ಭಯೋತ್ಪಾದಕ ವಾಕ್ಯವು. ಸ. ೨.

೧. ಆದರೆ ಜನರಲ್ಲಿ ಸುಳ್ಳು ಪ್ರವಾದಿಗಳು ಇದ್ದರು [೧]; ಅದ್ಹೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು ನಾಶನಕರವಾದ ಮತ ಭೇದಗಳನ್ನು ಅಂತರಂಗವಾಗಿ ಒಳತಂದು, ತಮ್ಮನ್ನು ಕೊಂಡು ಕೊಂಡ ಯಜಮಾನನಂನು ತಿರಸ್ಕರಿಸಿ [೨], ಶೀಘ್ರನಾಶವನ್ನು ತಮ್ಮ ಮೇಲೆ ಬರ ಮಾಡಿ ಕೊಳ್ಳುವರು. ೨. ಅನೇಕರು ಅವರ ಕೇಡುಗಳನ್ನು ಅನುಸರಿಸುವರು; ಇವರ ಮುಖಾಂತರ ಸತ್ಯದ ಮಾರ್ಗವು ದೂಷಿಸಲ್ಪಡುವದು [೩]. ೩. ಮತ್ತು ದ್ರವ್ಯಾಶೆಯಾಗಿ ಕಲ್ಪನೆ ಮಾತುಗಳಿಂದ ನಿಮ್ಮನ್ನು ಕ್ರಯ ವಿಕ್ರಯ ಮಾಡುವರು; ಅವರಿಗೆ ನ್ಯಾಯಶಿಕ್ಷೆಯು ಪೂರ್ವದಿಂದ ತಡೆಯುವದಿಲ್ಲ, ಅವರ ನಾಶನವು ಜೊಕಡಿಸುವದಿಲ್ಲ.

೧. ಅಪಾಸ್ತಲನಾದ ಪೌಲನು ೧ ತಿಮೊ. ೧ನೇ ಸಂಧಿಯಲ್ಲಿ ಭಯೋತ್ಪಾದಕ ವಾಕ್ಯವಾಗಿ ಇಸ್ರಾಯೇಲನವರು ಅರಣ್ಯದಲ್ಲಿ ಪಾಪ ಮಾಡಿ ಭಯಂಕರವಾದ ಶಿಕ್ಷೆಗಳನ್ನು ಹೊಂದಿದ ಚರಿತ್ರವನ್ನು ಪ್ರಯೋಗಿಸಿದ ಪ್ರಕಾರ, ಪೇತ್ರನು ಇಲ್ಲಿ ಹಾಳೆ ಒಡಂಬಡಿಕೆಯ ಚರಿತ್ರದಲ್ಲಿ ಬರದ ಸುಳ್ಳು ಪ್ರವಾದಿಗಳ ಪಾಪಗಳನ್ನೂ ಶಿಕ್ಷೆಗಳನ್ನೂ ಸೂಚಿಸುತ್ತಾನೆ.

೨. ಪಾಪಿಗಳಾದ ನಮಗೆ ಯೇಸು ಕ್ರಿಸ್ತನ ಬಲ್ಯರ್ಪಣೆಯಿಂದಲೂ, ರಕ್ತಧಾರೆಯಿಂದಲೂ ಪಾಪವಿಮೋಚನೆಯುಂಟಾಯಿತೆಂಬ ಸುವಾರ್ತೆಯನ್ನು ಅಲ್ಲಗಳೆಯುವರು.

೩. ಅವರು ನಿಜ ಕ್ರೈಸ್ತಧರ್ಮಕ್ಕೆ ವಿರೋಧವಾಗಿ ಮಾತನಾಡುವದಲ್ಲದೆ, ಕ್ರೈಸ್ತರೆಂದನಿಸಿ ಕೊಂಡು, ಪರಜನರಲ್ಲಿ ಪಾಪಿಕೆಯಾದ ಪಾಪಗಳಲ್ಲಿ ಮುಳುಗಿ, ತಮ್ಮ ದುರಾಚಾರದಿಂದ ಕ್ರಿಸ್ತನ ಮಾರ್ಗಕ್ಕೆ ದೋಷವನ್ನು ಹುಟ್ಟಿಸುವರು.

೪. ಯಾಕಂದರೆ [೧] ದೇವರು ಪಾಪ ಮಾಡಿದ ದೂತರನ್ನು ಕನಿಕರಿಸದೆ, ಕತ್ತಲೆಯ ಸಂಕೋಲೆಗಳಿಂದ ನರಕದಲ್ಲಿ ತಳ್ಳಿ, ನ್ಯಾಯಶಿಕ್ಷೆಗೆ ಇಡಲ್ಪಟ್ಟವರಾಗಿ ಒಪ್ಪಿಸಿ, ೫. ಪೂರ್ವದ ಲೋಕವನ್ನು ಕನಿಕರಿಸದೆ, ಭಕ್ತಿಹೀನರ ಲೋಕಕ್ಕೆ ಜಲಪ್ರಳಯ

—೨ ಪ್ಯೇತ್ರ. ೨, ೬—೧೨.

ವನ್ನುಬರ ಮಾಡಿ, ನ್ಯೀಕಿಯ ಪ್ರಸಂಗಿಯಾದ ನ್ಯೀಹನು ಮೊದಲಾದ ಎಂಟು ಜನರನ್ನು ಕಾಪಾಡಿ, ೬. ಮತ್ತು ಸಾದಾಮ್ಯಾಮ್ ಗಮೊರ ಪಟ್ಟಣಗಳನ್ನು ಬೂದಿ ಮಾಡಿ, ನಾಶನದಿಂದ ನ್ಯಾಯಶಿರಿಸಿ, ೭. ಇನ್ನು ಮ್ಯೇಲೆ ಭಕ್ತಿಹೀನರಾಗುವವರಿಗೆ ಮಾದರಿ ಇಟ್ಟು, ನ್ಯೀತಿಭ್ರಷ್ಟರ ಬಂಡುತನದಲ್ಲಿ ಇರುವ ನಡತೆಯಿಂದ ವ್ಯಸನ ಪಡುವ ನ್ಯೀತಿವಂತನಾದ ಲಾಟನನ್ನು ತಪ್ಪಿಸಲಿಲ್ಲವೀ? ೮. ಯಾಕಂದರೆ ಈ ನ್ಯೀತಿವಂತನು ಅವರಲ್ಲಿ ವಾಸ ಮಾಡಿ, ನೋಡುವದರಿಂದಲೂ ಕೇಳುವದರಿಂದಲೂ ದಿನದಿನಕ್ಕೆ ಅವರ ಅನ್ಯಾಯವಾದ ಕ್ರಿಯೆಗಳ ನಿಮಿತ್ತ ತನ್ನ ನ್ಯೀತಿಯುಳ್ಳ ಪ್ರಾಣವನು ಕಳವಳಗೊಳಿಸಿದನು. ೯. ಕರ್ತನು ಭಕ್ತರನ್ನು ಶೋಧನೆಯೊಳಗಿಂದ ತಪ್ಪಿಸಲೂ, ದಂಡಿಸಲ್ಪಡುವ ಅನ್ಯೀತಿವಂತರನ್ನು ಮುಖ್ಯವಾಗಿ ಮಾಂಸವನ್ನು ಅನುಸರಿಸಿ, ೧೦. ಅಶುದ್ಧತೆಯ ಇಚ್ಛೆಯಲ್ಲಿ ನಡೆದು, ಒಡೆತನಗಳನ್ನು ತಿರಸ್ಕರಿಸುವವರನ್ನು[೨] ನ್ಯಾಯಶಿರ್ವಿಕೆಯ ದಿನಕ್ಕೆ ಇಡಲೂ, ಬಲ್ಲನು.

೧. ತಾತ್ಪರ್ಯಸಂಬಂಧವೇನಂದರೆ: ದೇವರು ಸುಳ್ಳು ಬೋಧಕರನ್ನು ಕರುಣಿಸದೆ ಭಯಂಕರವಾಗಿ ಶಿಕ್ಷಿಸುವನು. ಆತನು ಪೂರ್ವದಲ್ಲಿ ಮೂರು ಸಾರಿ ದ್ರೋಹಿಗಳಿಗೆ ಅಘೋರವಾದ ಶಿಕ್ಷೆಯನ್ನು ಕೊಟ್ಟ ಪ್ರಕಾರ, ಸುವಾರ್ತೆಯನ್ನು ಕೆಡಿಸುವ ಬೋಧಕರ ಮೇಲೆಯೂ ಶಾಪವನ್ನೂ, ನಾಶನವನ್ನೂ ಬರ ಮಾಡುವನು ೧) ದ್ರೋಹ ಮಾಡಿದ ದೂತರು ಶಿಕ್ಷೆಗೆ ತಪ್ಪಿಸಿ ಕೊಳ್ಳಲಿಲ್ಲ; ಅವರು ಅಂದಿನಿಂದ ನ್ಯಾಯಶಿರ್ವಿಕೆಯ ದಿನದ ವರೆಗೂ ಬಂಧನಗ್ರಸ್ತರಾಗಿರಬೇಕು. ೨) ನೋಹನ ಕಾಲದಲ್ಲಿ ದೇವರು ಎಂಟು ಜೀವಗಳ ಹೊರತು ಕೊಟ್ಟಾನು ಕೋಟಿ ಜನರಾದ ನರಜಾತಿಯನ್ನೆಲ್ಲಾ ಜಲಪ್ರಳಯದಿಂದ ನಾಶ ಮಾಡಿದನು. ೩) ಅಬ್ರಹಾಮನ ಕಾಲದಲ್ಲಿ ಲೋಟನನ್ನೂ, ಅವನ ಇಬ್ಬರು ಮಕ್ಕಳನ್ನೂ ಮಾತ್ರ ರಕ್ಷಿಸಿ, ಸಿದ್ದಿಮ್ ತಗ್ಗಿನಲ್ಲಿದ್ದ ಪಟ್ಟಣಗಳನ್ನು ನಿವಾಸಿಗಳೆಲ್ಲರ ಸಹಿತವಾಗಿ ಹೊಳ್ಳು ಮಾಡಿದನು. ಅವರೆಲ್ಲರ ಅಪರಾಧಕ್ಕಿಂತ ಸುವಾರ್ತೆಯನ್ನು ಕೆಡಿಸುವ ಸುಳ್ಳು ಬೋಧಕರ ಅಪರಾಧವು ಅಧಿಕವಾದದ್ದು.

೨. ಈ ಸುಳ್ಳುಬೋಧಕರ ದುಷ್ಟ ಭಾವದಲ್ಲಿ ಮುಖ್ಯದುರ್ಲಕ್ಷಣಗಳು ಎರಡು: ೧) ಜಾರತ್ವ ಮುಂತಾದ ಪಾಪ ವೃತ್ತಿಯು. ೨) ಲಜ್ಜಾರಹಿತವಾದ ಅವಿಧೇಯತ್ವವು. ಅವರು ಕರ್ತನಾದ ಯೇಸುವಿನ ಅಧಿಕಾರವನ್ನು ತಿರಸ್ಕರಿಸಿದನಂತರ ಸಹಾಧಿಕಾರಿಗಳಿಗಾದರೂ ರಾಜ್ಯಾಧಿಕಾರಿಗಳಿಗಾದರೂ ಒಳಗಾಗಿರಲಾಲ್ಲರು.

೧೧. ಇವರು ಸಾಹಸವೂ ಸ್ಪೋಟೈಯೂ ಉಳ್ಳವರಾಗಿ, ನಡುಗದೆ ಮಹಿಮೆಗಳನ್ನು ದೂಷಿಸುತ್ತಾರೆ[೧]. ಶಕ್ತಿಯಲ್ಲಿಯೂ ಬಲದಲ್ಲಿಯೂ ಶ್ರೇಷ್ಠರಾದ ದೂತರಾದರೂ ಅವುಗಳಿಗೆ ದೂಷಣೆಯಾದ ಶಿರ್ವಿಕೆಯನ್ನು[೨] ತರುವದಿಲ್ಲ. ೧೨. ಆದರೆ ಇವರು, ಹಿಡಿಯಲ್ಪಡುವದಕ್ಕೂ ನಾಶವಾಗುವದಕ್ಕೂ ಹುಟ್ಟಿದ, ಸ್ವಭಾವವಾದ, ಬುದ್ಧಿ ಇಲ್ಲದ, ಮೃಗಗಳ ಹಾಗೆ, ತಿಳಿಯದವುಗಳನ್ನು ದೂಷಿಸಿ, ತಮ್ಮ ನಾಶನದಲ್ಲಿ

ಪ್ರಯವಾಕ್ಯ.

೨. ಪ್ರೇತ್ರ. ೨, ೧೪—೨೦.

ಯೇ ನಾಶವಾಗಿ ಅನ್ಯಾಯದ ಸಂಬಳವನ್ನು ಹೊಂದುವರು. ೧೪. ಅವರು ಹಗಲಿನ ಕ್ಷೋಭೆಯನ್ನು[ಗ] ಸುಖವೆಂದೆಣಿಸಿ, ಕಳಂಕವೂ ಮಲಿನವೂ ಉಳ್ಳವರಾಗಿದ್ದು, ನಿಮ್ಮ ಸಂಗಡ ಊಟ ಮಾಡಿ[ಳ], ತಮ್ಮ ಮೋಸಗಳಲ್ಲಿ ಶ್ಲಾಘ್ಯಕ್ಷೋಭೆ ಮಾಡುವವರಾಗಿಯೂ, ೧೫. ಜಾರತ್ವದಿಂದ ತುಂಬಿದಂಥ, ಪಾಪ ಬಿಡಲಾರದಂಥ, ಕಣ್ಣುಳ್ಳವರಾಗಿಯೂ, ಅಸ್ಥಿರವಾದ ಪ್ರಾಣಿಗಳನ್ನು ಮೋಸಗೊಳಿಸುವವರಾಗಿಯೂ, ಲೋಭಕ್ಕಾಗಿ ಅಭ್ಯಾಸ ಮಾಡಿದ ಹೃದಯವುಳ್ಳವರಾಗಿಯೂ, ೧೫. ಶಾಪದ ಮಕ್ಕಳಾಗಿಯೂ, ಶುದ್ಧ, ಸರಿಯಾದ ಹಾದಿಯನ್ನು ಬಿಟ್ಟು, ತಪ್ಪಿ ಹೋಗಿ, ಬೌಸೋರನ ಮಗನಾದ ಬಿಳಾಮನ ಮಾರ್ಗವನ್ನು ಅನುಸರಿಸಿದ್ದಾರೆ[ಘ]. ೧೬. ಇವನು ಅನ್ಯಾಯದ ಸಂಬಳವನ್ನು ಪ್ರೀತಿ ಮಾಡಿದನು; ಆದರೆ ತನ್ನ ಅಕ್ರಮಕ್ಕೆ ಖಂಡನೆಯಂನು ಹೊಂದಿದನು; ಮೂಕ ಪಶುವು ಮನುಷ್ಯಶಬ್ದದಿಂದ ಮಾತಾಡಿ, ಪ್ರವಾದಿಯ ತಪ್ಪಿದ ಬುದ್ಧಿಗೆ ಅಡ್ಡಿ ಮಾಡಿತು. ೧೭. ಇವರು ನೀರಿಲ್ಲದ ಬುಗ್ಗೆಗಳೂ, ಬಿರುಗಾಳಿ ಬಡಿಯುವ ಮೋಘಗಳೂ, ಆಗಿದ್ದಾರೆ. ಅವರಿಗಾಗಿ ಕತ್ತಲೆಯ ಕಾರ್ಗತ್ತಲು ಎಂದೆಂದಿಗೂ ಸಿದ್ಧಪಡಿಸಲ್ಪಟ್ಟಿದೆ.

೧. ಪೇತ್ರನು ಇಲ್ಲಿ ಜ್ಞಾನವಾದಿಗಳೆಂಬ ಸುವಾರ್ತಾವೈರಿಗಳಾದ ಅಬದ್ಧಬೋಧಕರನ್ನು ಖಂಡಿಸುತ್ತಾನೆ. ಅವರು ಕ್ರೈಸ್ತಸಭೆಯಲ್ಲಿದ್ದು, ದೇವರ ಸತ್ಯಕ್ಕೆ ವಿರೋಧವಾಗಿ ಪರಜನರಲ್ಲಿಯೂ ಯೆಹೂದರಲ್ಲಿಯೂ ಪೂರ್ವದಲ್ಲಿ ಹುಟ್ಟಿದ ರಹಸ್ಯವಿದ್ಯಾಬೋಧನೆಗಳನ್ನು ಪ್ರಸರಣೆ ಮಾಡುತ್ತಾ, ಶಿಷ್ಯರನ್ನು ಕೂಡಿಸಿ, ಮೋಸ ಗಾಳಿಸುವದಕ್ಕೆ ಉದ್ಯುಕ್ತರಾಗಿದ್ದರು. ಅವರು ಅಂತರಂಗದಲ್ಲಿ ಬೋಧಿಸಿದ್ದೂ ಮಾಡಿದ್ದೂ ನಮಗೆ ಗೊತ್ತಿಲ್ಲ. ಪೇತ್ರನು ಚನ್ನಾಗಿ ತಿಳಿದು ಕಠಿಣವಾಗಿ ಗದರಿಸುತ್ತಾನೆ.

೨. ಪೇತ್ರನು ಇಲ್ಲಿ ಜಾಡೆಯಾಗಿ ಸೂಚಿಸಿದ್ದನ್ನು ಯೂದನು ತನ್ನ ಪತ್ರಿಕೆಯ ೯ನೆ ವಚನದಲ್ಲಿ ಸ್ಪಷ್ಟವಾಗಿ ಬರದನು.

೩. ಅಂದರೆ, ಅವರು ಪ್ರೀತಿಯ ಔತಣವೆಂಬ ಊಟಗಳಿಗೆ ಬಂದು, ನಾಚಿಕೆಯಿಲ್ಲದ ಪುಂಡಾಟ್ವೆಬಾಕರಾಗಿ, ಭಕ್ತಿಭಾವನೆಯಿಲ್ಲದ ವೈಭವವನ್ನು ನಡಿಸುತ್ತಾರೆ.

೪. ವಿಶ್ವಾಸಬೋಧನೆಗಳ ಐಕ್ಯವು ಅವರಿಗೆ ಬೇಡ; ಆತ್ಮನಾಶ್ಯೇನ್ಯವು ಅವರಿಗೆ ಆಗದು; ಸಭೆಯ ಔತಣಗಳಿಗೆ ಮಾತ್ರ ಬಂದು, ಪುಂಡಾಟ್ವೆ ತುಂಬಿ ಕಾಳ್ಳುತ್ತಾರೆ.

೫. ಬಿಳಾಮನ ಚರಿತ್ರವು ೪ ಮೋಶೆ. ೨೨ನೆ ೨೩ನೆ ೨೪ನೆ ಸಂಧಿಗಳಲ್ಲಿ ಬರದದೆ.

ವ. ೧೪. ಅವರು ವ್ಯರ್ಥವಾದ ಗರ್ವದ ಮಾತುಗಳನ್ನಾಡಿ, ಭೋಳೆ ಜನರನ್ನು ಮೋಸಗೊಳ್ಳಿಸಿ, ತಮ್ಮ ದುರಾಚಾರಗಳಲ್ಲಿ ಸೇರಿಸುತ್ತಾರೆ. ೧೫. ತಾವು ಪಾಪಕ್ಕೆ ವಶವಾಗಿದ್ದು, ಶಿಷ್ಯರಿಗೆ ಸ್ವಾತಂತ್ರ್ಯ ಮಾರ್ಗವನ್ನು ತೋರಿಸುತ್ತೇವೆಂದು ವಂಚಿಸಿ ಹೇಳುತ್ತಾರೆ. ೧೬. ಅವರಿಗೆ ಕಿವಿಕೊಡುವವರು ಪೂರ್ವಾಜ್ಞಾನಸ್ಥಿತಿಗಿಂತ ಕೆಟ್ಟವರಲ್ಲಿ ಬೀಳುತ್ತಾರೆ. ೧೭. ಯಾಕಂದರೆ ನೀತಿಮಾರ್ಗವನ್ನು ತಿಳಿದವನು ಪರಿಶುದ್ಧ ವಾಕ್ಯವನ್ನು ತಿರಸ್ಕರಿಸಿದರೆ, ಅವನಿಗೆ ಅಧಿಕವಾದ ಶಾಪವು ಬರುವದು. ೨೨. ಇವರ ಭಾವವನ್ನು ಸೊಲೊಮೋನನು

೯೬೪೪ ಅಪೌ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಶ್ಚ(ಪ್ರವ್ರತ್ತಿ.

ಎ. ಪೇತ್ರ. ೩, ೧—೭.

ಗಾದೆ ಪುಸ್ತಕದ ಸ. ೨೬, ೧೧ಲ್ಲಿ ಸೂಚಿಸಿದ್ದಾನೆ. (ಪೇತ್ರನು ಮೊದಲನೆ ಪತ್ರಿಕೆಯಲ್ಲಿ ಸ. ೧, ೭; ೨, ೧೭; ೪, ೯. ೧೪. ಸೊಲೊಮೋನನ ಗಾದೆಗಳನ್ನು ಜ್ಞಾಪಿಸಿದ ಪ್ರಕಾರ, ಇಲ್ಲಿ ಸಹ ಒಂದು ಯಥೋಕ್ತವನ್ನು ಆ ಗ್ರಂಥದಿಂದ ತೆಗದು ಕೊಳ್ಳುತ್ತಾನೆ.)

(ಪ್ರವಾದನಾವಾಕ್ಚವು. ಸ. ೩.

ಪಾಪಾಸೃಗಾರರ ಖಂಡನೆಯು. ವ. ೧—೭.

೧. (ಪ್ರಿಯರ್ಕೆ, ಈ ಎರಡನ್ಕೆ ಪತ್ರಿಕೆಯನ್ನು ನಿಮಗೆ ಈಗ ಬರೆಯುತ್ತ್ತೇನೆ೧). ೨. ಅವುಗಳಲ್ಲಿ ಪರಿಶುದ್ಧ ಪ್ರವಾದಿಗಳಿಂದ ಮುಂಚೆ ಹೇಳಲ್ಪಟ್ಟ ಮಾತುಗಳನ್ನೂ, ಕರ್ತನಾದ ರಕ್ಷಕನ ಅಪಾಸ್ತಲರಾದ ನಮ್ಮ ಕಟ್ಟಳೆಯನ್ನೂ, ನೀವು ಜ್ಞಾಪಕ ಮಾಡಿ ಕೊಳ್ಳುವ ಹಾಗೆ, ನಿಮ್ಮ ನಿಷ್ಕಪಟವಾದ ಬುದ್ಧಿಗೆ ಜ್ಞಾಪಕ ಕೊಟ್ಟು, ಎಚ್ಚರಿಸುತ್ತ್ತೇನೆ. ೩. ಮೊದಲು ಇದನ್ನು ತಿಳುಕೊಳ್ಳಿರಿ, ಏನಂದರೆ—ಕಡೆ ದಿವಸಗಳಲ್ಲಿ ಪರಿಹಾಸ ಮಾಡುವವರು ಬಂದು—ಅವನ ಬರುವಿಕೆಯ ವಾಗ್ದತ್ತವು ಎಲ್ಲಿ ಅದೆ? ೪. ಯಾಕಂದರೆ ಪಿತೃಗಳು ನಿದ್ರೆ ಹೊಂದಿದಂದಿನಿಂದ ಎಲ್ಲವುಗಳು, ಸೃಷ್ಟಿಯಾರಂಭ ಇದ್ದ ಹಾಗೆಯೇ, ನೆಲೆಯಾಗಿವೆ, ಎಂದು ಹೇಳುವರು. ೫. ಯಾಕಂದರೆ ಇವರು ಬೇಕೆಂದು ಇದನ್ನು ತಿಳಿಯದೆ ಇದ್ದಾರೆ, ಏನಂದರೆ—ಪೂರ್ವದಲ್ಲಿ ದೇವರ ವಾಕ್ಚದಿಂದ ಆಕಾಶಗಳೂ ಭೂಮಿಯೂ ನೀರಿನಲ್ಲಿಗಿಂದಲೂ ನೀರಿನಿಂದಲೂ ಸ್ಥಾಪಿಸಲ್ಪಟ್ಟವು. ೬. ಅವುಗಳಿಂದ ಆಗಿನ ಲೋಕವು ನೀರಿನ ಪ್ರಳಯದಿಂದ ನಾಶನವಾಯಿತು೨). ೭. ಆದರೆ ಈಗಿನ ಆಕಾಶಗಳೂ ಭೂಮಿಯೂ ಅದೇ ವಾಕ್ಚದಿಂದ ಭದ್ರವಾಗಿ ಇಡಲ್ಪಟ್ಟು, ಭಕ್ತಿಹೀನ ಮನುಷ್ಯರ ನ್ಯಾಯತೀರ್ಪಿಕೆ ನಾಶನಗಳ ದಿವಸದ ಪರ್ಯಂತ ಬೆಂಕಿಗಾಗಿ ಇಡಲ್ಪಟ್ಟವೆ೩).

೧. ಈ ಪತ್ರಿಕೆಯು ಪೇತ್ರನ ಮೊದಲನೆ ಪತ್ರಿಕೆಯ ಬಳಿಕ ಸ್ವಲ್ಪ ಕಾಲದಾಳಗೆ ರಚಿತವಾಯಿತೆಂದು ತಾ೧ರುತ್ತದೆ. ರಚಿಸಿದವನು ಅಪಾಸ್ತಲನಾದ ಪೇತ್ರನೇ. ಇಲ್ಲವಾದರೆ ಅದು ಚಾರಪತ್ರಿಕೆಯಾಗಿ ಎಣಿಸಬೇಕು. ಅದಾಗದು.

೨. ಅಪಾಸ್ತಲನು ಜಲಾಕಾಶನಿರ್ಮಾಣವಿಷಯವಾಗಿಯೂ, ಜಲಪ್ರಳಯದ ವಿಷಯವಾಗಿಯೂ, ಮೋಶೆಯ ಮೊದಲನೆ ಗ್ರಂಥದಲ್ಲಿ ಬರದ ಚರಿತ್ರಕ್ಕೆ ಸಮ್ಮತವಾಗಿ ಪ್ರಸ್ತಾವಿಸುತ್ತಾನೆ. ಜಲಪ್ರಳಯವು ಬರುತ್ತದೆಂದು, ದೇವಾಕ್ತಿಯ ಪ್ರಕಾರ ನಂಬಿದ ನಾ೧ಪನಿಗೆ ಪಾಪಾಸೃ ಮಾಡಿದ ಅವಿಶ್ವಾಸಿಗಳು ನಾಶವಾದ ಪ್ರಕಾರ, ಈಗಿನ ಅವಿಶ್ವಾಸಿಗಳು ಸಹ ನಾಶವಾಗುವರು.

೩. ಸಾದಾಮ ಗಾಮೊರ್ರ ಮುಂತಾದ ಪಟ್ಟಣಗಳ ಸಂಹಾರವು ಲೋಕಾಂತ್ಯಕ್ಕೆ ಪೂರ್ವಸೂಚಕವಾಗಿದೆಂದು, ಅಪಾಸ್ತಲನು ತಿಳಿದನು.

ಶೀರ್ಷಿಕೋಪದೇಶ.

೨ ಪೇತ್ರ. ೩, ೯—೧೪.

ಶಿಷ್ಯರ ಬಾಧನೆಯು. ವ. ೯—೧೩.

೯. ಆದರೆ, ಪ್ರಿಯರೇ, ಈ ಒಂದು ಮಾತನ್ನು ನೀವು ತಿಳಿಯದೆ ಇರಬಾರದು, ಏನಂದರೆ—ಕರ್ತನಲ್ಲಿ ಒಂದು ದಿವಸವು ಸಾವಿರ ವರುಷಗಳ ಹಾಗೆಯೂ, ಸಾವಿರ ವರುಷಗಳು ಒಂದು ದಿವಸದ ಹಾಗೆಯೂ, ಅವೆ ೧). ೧೦. ತಡವೆಂದು ಕೆಲವರು ನೆನಸುವ ಪ್ರಕಾರ, ಕರ್ತನು ವಾಗ್ದತ್ತವಲ್ಲಿ ತಡ ಮಾಡುವದಿಲ್ಲ; ಆದರೆ ಯಾರೂ ನಾಶನವಾಗ ಬೇಕೆಂದು ಮನಸ್ಸಿಲ್ಲದೆ, ಎಲ್ಲರು ಮಾನಸಾಂತರಕ್ಕೆ ಶರಣ ಬೇಕೆಂದು, ಮನಸ್ಸಾಗಿ, ನಮ್ಮಕಡೆಗೆ ದೀರ್ಘ ಶಾಂತಿಯುಳ್ಳವನಾಗಿದ್ದಾನೆ. ೧೦. ಆದರೆ ಕರ್ತನ ದಿನವು ೨) ರಾತ್ರಿ ಕಳ್ಳನ ಹಾಗೆ ಬರುವದು; ಅದರಲ್ಲಿ ಆಕಾಶಗಳು ಮಹಾ ಘೋಷದಿಂದ ಇಲ್ಲದೆ ಹೋಗುವವು, ಮಹಾಭೂತಗಳು ಉರಿದು, ಕರಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು ೩). ೧೧. ಇವುಗಳೆಲ್ಲಾ ಕರಗಿ ಹೋಗುವದರಿಂದ, ನೀವು, ಆಕಾಶಗಳು ಬೆಂಕಿ ಹತ್ತಿ ಕರಗಿ ಹೋಗುವಂಥ, ೧೨. ಮಹಾಭೂತಗಳು ಉರಿದು ಬೆಂದು ಹೋಗುವಂಥ, ದೇವರ ದಿನವು ಬರುವದನ್ನು ಕಾದುಕೊಂಡು, ನಿರೀಕ್ಷಿಸಿ, ಪರಿಶುದ್ಧವಾದ ನಡತೆಗಳಲ್ಲಿಯೂ ಭಕ್ತಿಗಳಲ್ಲಿಯೂ ಎಂಥವರಾಗಿರ ಬೇಕು? ೧೩. ಆದರೆ ಅವನ ವಾಗ್ದತ್ತದ ಪ್ರಕಾರ ೪) ನೀತಿಯು ವಾಸವಾಗಿರುವ ೫) ಹೊಸ ಆಕಾಶಗಳನ್ನೂ, ಹೊಸ ಭೂಮಿಯಂನೂ ನಿರೀಕ್ಷಿಸುತ್ತೇವೆ.

೧. ಪೇತ್ರನು ಕೀರ್ತ. ೯೦, ೪ಲ್ಲಿ ಬರದದ್ದನ್ನು ಇಲ್ಲಿ ಸೂಚಿಸಿ, ಸದೃಶವಾದ ಅಭಿಪ್ರಾಯ ಉಳ್ಳ ಮತ್ತೊಂದು ವಾಕ್ಯವನ್ನು ಅದಕ್ಕೆ ಕೂಡಿಸುತ್ತಾನೆ. ಕರ್ತನಲ್ಲಿ ಸಾವಿರ ವರುಷಗಳು ಒಂದು ದಿವಸದ ಪ್ರಾಗೆ ಯಂಬದು ಮೋಶೆಯ ವಾಕ್ಯವಾಗಿದೆ; ಒಂದು ದಿವಸವು ಸಾವಿರ ವರುಷಗಳ ಪ್ರಾಗೆ ಯಂಬದು ಪೇತ್ರನದು. ಅಭಿಪ್ರಾಯವೇನಂದರೆ: ದೇವರು ತಡ ಮಾಡುತ್ತಾನೆ, ಇಲ್ಲವೆ ತ್ವರೆ ಪಡುತ್ತಾನೆ ಎಂದು, ಹೇಳುವದು ಅಯುಕ್ತವಾದದ್ದು. ಆದರೆ ನಮಗೆ ನೇಮಕವಾದ ಕೃಪೆಯ ಕಾಲವು ಬೇಗ ಮುಗಿಯದೆ ಇದ್ದರೆ, ದೇವರು ಲೋಕಕ್ಕೆ ಮಾಡುವ ಕರುಣೆಯನ್ನು ಕೃತಜ್ಞರಾಗಿ ಸ್ತುತಿಸ ಬೇಕು.

೨. ಈ ಕಾಲವೂ ಅದರಲ್ಲಿ ಆಗುವ ಕಾರ್ಯಗಳೂ ಪ್ರಕಟನೆಯ ಕಡೇ ಸಂಧಿಗಳಲ್ಲಿ ಸೂಚಿತವಾಗಿವೆ.

೩. ಭೂಲೋಕವು ಆಗ ನಾಶವಾಗುವದಿಲ್ಲ. ಅಗ್ನಿಪ್ರಳಯವಾದನಂತರ ನೂತನ ದಿವವೂ ನೂತನ ಪೃಥ್ವಿಯೂ ಮಹಿಮಾಮಯವಾಗಿ ಕಾಣುತ್ತವೆ.

೪. ಪ್ರಾಸ ಆಕಾಶ ಪ್ರಾಸ ಭೂಮಿಗಳ ವಾಗ್ದತ್ತವು ಯೆಶಾ. ೬೫, ೨೨ಲ್ಲಿ ಬರಪಡೆ. ಬೇರೆ ಪಾಳೆ ಒಡಂಬಡಿಕೆಯ ಗ್ರಂಥಗಳಲ್ಲಿ ಅದು ಬರದಿರುವದಿಲ್ಲ.

೫. ಇದಕ್ಕೆ ಯೆಶಾ. ೬೧, ೩. ೧೧; ೬೦, ೧೭. ೧೮. ಸರಿ ನಾಡ ಬೇಕು.

೧೪. ಆದದರಿಂದ ೧), ಪ್ರಿಯರೇ, ಇವುಗಳನ್ನು ನಿರೀಕ್ಷಿಸುವವರಾಗಿ ಸಮಾಧಾನದಲ್ಲಿ ಅವನಿಗೆ ನಿರ್ಮಲರಾಗಿಯೂ, ನಿಷ್ಕಳಂಕರಾಗಿಯೂ ಕಾಣಿಸ್ಪಡುವ ಹಾಗೆ,

೯೬೬ ಅಪಾ. ಚ. ೩. ಪರಿಚ್ಛೇದ. ಅಪಾಸ್ತಲರ ಅಂಜ್ಞಪ್ರವೃತ್ತಿ.

ಎಪ್ಪೇಕ್ರ. ೩, ೧೫೫—೧೯. ಯೂದ. ೧—೩.

ಜಾಗ್ರತೆಯಾಗಿ ಕ್ರಿ). ೧೫೫. ಮತ್ತು ನಮ್ಮ ಕರ್ತನ ದೀರ್ಘಶಾಂತಿಯನ್ನು ರಕ್ಷಣೆ ಎಂದು ಎಣಿಸಿ ಕೊಳ್ಳಿರಿ. ೧೬. ಅದೇ ಪ್ರಕಾರ ನಮ್ಮ ಪ್ರಿಯ ಸಹೋದರನಾದ ಪೌಲನು ಎಲ್ಲಾ ಪತ್ರಿಕೆಗಳಲ್ಲಿಯೂ, ಇವುಗಳ ವಿಷಯವಾಗಿ ಅವುಗಳಲ್ಲಿ ಮಾತಾಡಿ, ಅವನಿಗೆ ಕೊಡಲ್ಪಟ್ಟ ಜ್ಞಾನದ ಪ್ರಕಾರ ನಿಮಗೆ ಬರೆದಿದ್ದಾನೆ); ಅವು ಗಳಲ್ಲಿ ಕೆಲವು ಕಠಿಣ ಅಭಿಪ್ರಾಯಗಳು ಉಂಟು; ಮಿಕ್ಕಾದ ಬರಹಗಳ ಹಾಗೆ) ಇವುಗಳನ್ನು ಸಹ ಕಲಿಯದವರೂ ಅಸ್ಥಿರರೂ ತಮ್ಮ ಸ್ವಂತ ನಾಶನಕ್ಕೆ ಸಾಟ್ಟಗೆ ಮಾಡುತ್ತಾರೆ. ೧೭. ಹಾಗಾದರೆ, ಪ್ರಿಯರೇ, ನೀವು ಮುಂತಿಳಿದವರಾಗಿದ್ದು, ನೀಚ ಭ್ರಷ್ಟರ ಮೋಸದಲ್ಲಿ ಕೂಡ ಎಳೆಯಲ್ಪಟ್ಟು, ಸ್ವಂತ ನಿರಕ್ಷದಲ್ಲಿಂದ ಬಿದ್ದು ಹೋಗದ ಹಾಗೆ, ನೋಡಿ ಕೊಳ್ಳಿರಿ. ೧೮. ಇದಲ್ಲದೆ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಕೃಪೆಯಲ್ಲಿಯೂ ತಿಳುವಿಕೆಯಲ್ಲಿಯೂ ಬೆಳೆಯಿರಿ. ಅವನಿಗೆ, ಇಗ ಲೂ ಎಂದೆಂದಿಗೂ, ಮಹಿಮೆ ಆಗಲಿ. ಆಮೆನ್.

೧. ಅಂದರೆ, ನೀತಿಯು ವಾಸವಾಗಿರುವ ಪುನಾಸ ತಿವದಲ್ಲಿಯೂ ಪೃಥ್ವಿಯಲ್ಲಿಯೂ ದೇವರಾಜ್ಯಕ್ಕೆ ಬಾ ಧ್ಯಸ್ಥರಾಗಿ ಬದುಕುವ ಆಶೆಯುಳ್ಳವರಾಗಿರುವದರಿಂದ.

೨. ಇದೇ ಅಭಿಪ್ರಾಯವನ್ನು ಅಪಾಸ್ತಲನಾದ ಯೋಪುನಾನು ೧ಯೋಪುನಾ. ೩, ೩ಲ್ಲಿ ಬರೆ ಯುತ್ತಾನೆ.

೩. ಇದು ಶ್ಲಾಘ್ಯವಾದ ಸ್ಥಳವು. ಅಪಾಸ್ತಲ ನಾದ ಪೇತ್ರನು, ಪೌಲನ ಸಂಗಡ ರಾಮಮಪುರದ ಲ್ಲಿದ್ದು, ಅವನು ಸಭೆಗಳಿಗೆ ಬರದ ಪತ್ರಿಕೆಗಳನ್ನು ಓ ದಿ, ವಿಶೇಷವಾಗಿ ಇಬ್ರಿಯರ ಪತ್ರಿಕೆಯ ವಾಕ್ಯವನ್ನು (ಇಬ್ರಿ. ೧೦, ೨೫) ಜ್ಞಾಪಿಸಿ, ಪೌಲನು ಬರದ ಪ ತ್ರಿಕೆಗಳು ಪರಿಶುದ್ಧ ಬರಹದಲ್ಲಿ ಶೇರುತ್ತವೆಂದು ಸ್ಪ ಷ್ಟವಾಗಿ ಸ್ಥಾಪಿಸುತ್ತಾನೆ.

ಯೂದನ ಪತ್ರಿಕೆಯು.

(ಸರ್ವಸಭಾಪತ್ರಿಕೆಗಳ ಪೀಠಿಕೆಯು ಉ.ಲ್ಲಿ (೮೫೫) ಬರದದ್ದನ್ನು ನೋಡ ಬೇಕು.)

೧. ಯೇಸು ಕ್ರಿಸ್ತನ ದಾಸನೂ, ಯಾಕೋಬನ ಸಹೋದರನೂ ೧), ಆಗಿರುವ ಯೂದನು ತಂದೆಯಾದ ದೇವರಲ್ಲಿ ಪರಿಶುದ್ಧ ಮಾಡಲ್ಪಟ್ಟಂಥ, ಯೇಸು ಕ್ರಿಸ್ತನಲ್ಲಿ ಕಾಪಾಡಲ್ಪಟ್ಟಂಥ, ಕರೆಯಲ್ಪಟ್ಟವರಿಗೆ—೨. ಕರುಣೆಯೂ, ಸಮಾಧಾನವೂ, ಪ್ರೀತಿ ಯೂ, ನಿಮಗೆ ಹೆಚ್ಚಿಸಲ್ಪಡಲಿ. ೩. ಪ್ರಿಯರೇ, ಹುದುವಾದ ರಕ್ಷಣೆಯ ವಿಷಯ ವಾಗಿ ನಾನು ನಿಮಗೆ ಬರೆಯ ಪೂರ್ಣ ಜಾಗ್ರತೆ ಮಾಡಲಾಗಿ, ಒಂದು ಸಾರಿ

ಯೂದ. ೪—೧೧.

ಪರಿಶುದ್ಧರಿಗೆ ಒಪ್ಪಿಸಲ್ಪಟ್ಟ ವಿಶ್ವಾಸಕ್ಕಾಗಿ ನಿಮ್ಮ ಪಕ್ಷವಾಗಿ ಹೋರಾಡ ಬೇಕೆಂದು, ನಿಮಗೆ ಬುದ್ಧಿ ಹೇಳಿ ಬರೆಯುವದಕ್ಕೆ ನನಗೆ ಅಗತ್ಯವಾಯಿತು. ೪. ಯಾಕಂದರೆ ಪೂರ್ವದಲ್ಲಿ ಇ ಅಪರಾಧಕ್ಕೆ ಮುಂಬರೆಯಲ್ಪಟ್ಟ ಭಕ್ತಿಹೀನರಾದ ಕೆಲವು ಮನುಷ್ಯರು ನಮ್ಮ ದೇವರ ಕೃಪೆಯನ್ನು ಬಂಡುತನಕ್ಕೆ ಮಾರ್ಪಡಿಸುವವರಾಗಿಯೂ, ಒಬ್ಬನೇ ಯಜಮಾನನಾದ ದೇವರನ್ನೂ, ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನೂ ಅಲ್ಲಗಳೆಯುವವರಾಗಿಯೂ [೫], ಗುಪ್ತವಾಗಿ ಹೊಕ್ಕಿದ್ದಾರೆ.

೧. ತಾನು ಯೇಸು ಕ್ರಿಸ್ತನ ತಮ್ಮನೆಂದು ಹೇಳಿದೆ, ಯಾಕೋಬನ ಸಹೋದರನೆಂದು, ಯೂದನು ದೀನಭಾವದಿಂದ ಬರೆಯುತ್ತಾನೆ.

೨. ಈ ಮಾತು ಸುವಾರ್ತೆಯ ಪ್ರಸಂಗದ ಪ್ರಥಮ ಕಾಲದ ಅಂತ್ಯದಲ್ಲಿ ರಚಿತವಾದ ಪತ್ರಿಕೆಗೆ ಯುಕ್ತವಾಗಿದೆ.

೩. ಈ ಮೋಸಗಾರರು ಕ್ರೈಸ್ತರೆಂಬ ಪೆಸರನ್ನು ತೆಗದು ಕಾಂಡರೂ, ಕ್ರಿಸ್ತನು ದೇವರ ಮಗನಾಗಿದ್ದಾನೆಂಬುವದನ್ನು ಅಲ್ಲಗಳೆಯುತ್ತಾ ಇದ್ದರು. ಇಂಥವರಿಗೆ ವಿರೋಧವಾಗಿ ವಿಶ್ವಾಸಸ್ಥೈರ್ಯದಿಂದ ಹದ್ರವಾಗಿರ ಬೇಕೆಂಬ ಉದ್ಬೋಧನೆಯು ಈ ಪತ್ರಿಕೆಯ ಮುಖ್ಯಾಭಿಪ್ರಾಯವಾಗಿದೆ.

೫. ಆದರೆ, ನೀವು ಒಂದು ಸಾರಿ ತಿಳಿದಾಗ್ಯೂ, ಇದನ್ನು ನಿಮಗೆ ಜ್ಞಾಪಕ ಮಾಡ ಮನಸ್ಸಾಗಿದ್ದೇನೆ, ಏನಂದರೆ—ಕರ್ತನು ಜನರನ್ನು ಐಗುಪ್ತದೇಶದಿಂದ ರಕ್ಷಿಸಿ, ಆ ಮೇಲೆ ವಿಶ್ವಾಸಿಸದವರನ್ನು ನಾಶನ ಮಾಡಿದನು [೧]. ೬. ಮತ್ತು, ತಮ್ಮ ಆದಿ ಸ್ಥಿತಿಯನ್ನು ಕಾಪಾಡದೆ, ಸ್ವಂತ ವಾಸಸ್ಥಾನವನ್ನು ಬಿಟ್ಟ ದೂತರನ್ನು ದೊಡ್ಡ ದಿನದ ನ್ಯಾಯತೀರ್ಪಿಗೆ ನಿತ್ಯ ಬಂಧನಗಳಲ್ಲಿ ಅಂಧಕಾರದ ಕೆಳಗೆ ಇಟ್ಟಿದ್ದಾನೆ [೨]. ೭. ಹೀಗೆ ಸೊದೋಮೂ, ಗೊಮ್ಮೋರವೂ, ಇವುಗಳ ಸುತ್ತಲಿರುವ ಪಟ್ಟಣಗಳೂ, ಇವರಿಗೆ ಸಮಾನ ರೀತಿಯಿಂದ ಕೇವಲ ಜಾರರಾಗಿ, ಬೇರೆ ಮಾಂಸಕ್ಕೆ ಕೂಡಿ ಕೊಂಡು [೩], ನಿತ್ಯ ಅಗ್ನಿಯ ಶಿಕ್ಷೆಯನ್ನು ಅನುಭವಿಸಿ, ಮಾದರಿಯಾಗಿ ಎದುರಿಗೆ ಇಡಲ್ಪಟ್ಟವೆ [೪]. ೮. ಹೀಗೆಯೇ ಇವರು ಸಹ, ಸ್ವಪ್ನಾವಸ್ಥೆಯವರಾಗಿ, ಮಾಂಸವನ್ನು ಮಲಿನ ಮಾಡಿ, ಒಡೆತನವನ್ನು ಅಲಕ್ಷ್ಯ ಮಾಡಿ, ಮಹಿಮೆಗಳನ್ನು ದೂಷಿಸುತ್ತಾರೆ. ೯. ಆದರೆ ಪ್ರಧಾನದೂತನಾದ ಮಿಕಯೇಲನು ಪಿಶಾಚನ ಸಂಗಡ ವ್ಯಾಜ್ಯವಾಡಿ, ಮೋಶೆಯ ಶರೀರಕ್ಕಾಗಿ ತರ್ಕಿಸುವಾಗ, ದೂಷಣೆಯ ನಿರ್ಣಯವನ್ನು ತರಿಸ ಧೈರ್ಯಪಡದೆ—ಕರ್ತನು ನಿನ್ನನ್ನು ಗದರಿಸಲಿ [೫], ಅಂದನು. ೧೦. ಆದರೆ ಇವರು, ತಿಳಿಯದವುಗಳನ್ನು ದೂಷಿಸಿ, ಸ್ವಭಾವದಿಂದ ಬುದ್ಧಿಯಿಲ್ಲದ ಮೃಗಗಳ ಹಾಗೆ ತಿಳಿದವುಗಳಲ್ಲಿ ಕೆಟ್ಟು ಹಾಳಾಗುತ್ತಾರೆ. ೧೧. ಅವರಿಗೆ ಅಯ್ಯೋ! ಯಾಕಂದರೆ ಕಾಯಿನನ

ಮಾರ್ಗದಲ್ಲಿ ನಡೆದು, ಬಿಳಾಮನ ಸಂಬಳದ ಮೋಸದಲ್ಲಿ ಮುಗ್ಗಿ, ಕೌರಹನ ವಿವಾದದಲ್ಲಿ ನಾಶನವಾದರು ೬).

೧. ಅಂದರೆ, ಮಿಚ್ರದೇಶದಿಂದ ಬಿಡುಗಡೆಯಾದ ಜನರು ತದನಂತರ ಅವಿಶ್ವಾಸದಿಂದ ಕೆಟ್ಟು ಪಾಳಾಗಿ, ವಾಗ್ದತ್ತವಾದ ದೇಶದಲ್ಲಿ ಸೇರದೆ, ಅರಣ್ಯದಲ್ಲಿ ಸತ್ತ ಪ್ರಕಾರ, ಯೇಸು ಕ್ರಿಸ್ತನ ಸುವಾರ್ತೆಯನ್ನು ಕೇಳಿ, ಸ್ನಾನದಿಂದ ಸಭೆಯಲ್ಲಿ ಸೇರಿದವರು ವಿಶ್ವಾಸವನ್ನು ಬಿಟ್ಟರೆ, ನಾಶವಾಗುವದು ನ್ಯಾಯವಾಗಿದೆಂದು, ಮರೆಯದೆ ನೆನಸ ಬೇಕು.

೨. ಪರಿಶುದ್ಧರಾಗಿದ್ದ ದೂತರು ದ್ರಾಪಹ ಮಾಡಿದ ಕಾರಣ, ದೇವರ ಶಾಪಕ್ಕೂ ಶಿಕ್ಷೆಗೂ ಒಳಗಾದ ನಂತರ, ವಿಶ್ವಾಸದ್ರಾಪಿಗಳಾದ ಮನುಷ್ಯರ ಗತಿ ಏನಾದೀತು?

೩. ಸಾದಾಮ ಗಾಮೋರ್ರ ಮುಂತಾದ ಪಟ್ಟಣಗಳ ಜನರು ಮಾಡಿದ ಪಾಪಗಳೂ, ಮೇಲೆ ಸೂಚಿಸಿದವಾದ ದೂತರ ಪಾಪವೂ ಒಂದೇ ವಿಧವಾದದ್ದೆಂದು, ಯೂದನು ಸೂಚಿಸುತ್ತಾನೆ. ಮೋಶೆಯ ಮೊದಲನೆ ಪುಸ್ತಕದಲ್ಲಿಯೂ ಹೀಗೇ ತಾತ್ಪರುತ್ತದೆ. ೧ ಮೋಶೆ. ೬, ೨. ೪; ೧೯, ೫.

೪. ಆ ಪಟ್ಟಣಗಳು ಇದ್ದ ಸ್ಥಳವಾದ ಮೃತಸಮುದ್ರಪ್ರದೇಶವು ಈ ಪತ್ರಿಕಾವಲೋಕಿಕರಿಗೆ ಚನ್ನಾಗಿ ಗೊತ್ತಾಗಿತ್ತು.

೫. ಈ ಮಾತಾದರೂ, ಈ ಕಥೆಯಾದರೂ, ದೇವರ ವಾಕ್ಯದಲ್ಲಿ ಬರದಿರುವದಿಲ್ಲ. ಆದರೆ ಪೇತ್ರನು ಸಹ ೨ ಪೇತ್ರ. ೨, ೧೧ರಲ್ಲಿ ಅದನ್ನು ಜಾಡೆಯಾಗಿ ಸೂಚಿಸುತ್ತಾನೆ.

೬. ದೇವರಿಂದ ನಾಶಕ್ಕೆ ನೇಮಕವಾದವರು ನಾಶವಾದವರಾಗಿ ಅಪಾಸ್ತಲರಿಗೆ ಕಾಣಿಸುತ್ತಾರೆ.

೧೨. ಇವರು ನಿಮ್ಮ ಸಂಗಡ ಊಟ ಮಾಡಿ, ನಿರ್ಭಯವಾಗಿ ಶಂಮಾನು ಪೌಷಿಸಿ ಕೊಂಡು, ನಿಮ್ಮ ಪ್ರೀತಿಭೋಜನಗಳಲ್ಲಿ ಕಳಂಕಗಳಾಗಿದ್ದು ೧), ಪಾಳಿಗಳಿಂದ ಬಿಡಿಯಲ್ಪಡುವ ನೀರಿಲ್ಲದ ಮೇಘಗಳೂ ಬಾಡಿದ ಹಣ್ಣುಳ್ಳ, ನಿಷ್ಫಲವಾದ, ಎರಡನೇ ಸಾರಿ ಸತ್ತ, ಬೇರುಕಾಂಡಿಗೆ ಕೀಳಲ್ಪಟ್ಟ, ಮರಗಳೂ, ೧೩. ಸ್ವಂತ ಸಾಹಿಕೆ ಎಂಬ ನೊರೆಯನ್ನು ಕಾರುವ ಸಮುದ್ರದ ಹುಚ್ಚ ತೆರೆಗಳೂ, ಅಲೆಯುವ ನಕ್ಷತ್ರಗಳೂ, ಆಗಿದ್ದಾರೆ. ಅವರಿಗ್ಯಾಸ್ತರ ಕಾರ್ಗತ್ತಲು ಎಂದೆಂದಿಗೂ ಇಡಲ್ಪಟ್ಟಿದೆ. ೧೪. ಇವರನ್ನು ಕುರಿತು ಆದಮನಿಂದ ಏಳನೆಯವನಾದ ಹನೋಕನು ಪ್ರವಾದಿಸಿ, ಹೇಳಿದ್ದೇನಂದರೆ ೨)—೧೫. ಇಗೋ, ಕರ್ತನು ಎಲ್ಲರಿಗೆ ನ್ಯಾಯತೀರಿಸುವದಕ್ಕೂ, ಭಕ್ತಿಹೀನರೆಲ್ಲರಿಗೆ, ಅವರು ಮಾಡಿದ ಎಲ್ಲಾ ಭಕ್ತಿಹೀನ ಕ್ರಿಯೆಗಳಿಗ್ಯಾಸ್ತರವು, ಭಕ್ತಿಹೀನರಾದ ಪಾಪಿಷ್ಠರು ಅವನಿಗೆ ವಿರೋಧವಾಗಿ ೩) ಆಡಿದ ಎಲ್ಲಾ ಕಠಿಣವಾದ ಮಾತುಗಳಿಗ್ಯಾಸ್ತರವೂ, ಖಂಡಿಸುವದಕ್ಕೂ, ಅಯುತಾಯುತ ಪರಿಶುದ್ಧರ ಸಂಗಡ ಬರುತ್ತಾನೆ. ೧೬. ಇವರು ಗುಣುಗುಟ್ಟುವವರೂ, ಅಸಂತುಷ್ಟರೂ, ತಮ್ಮ ಆಶೆಗಳ ಪ್ರಕಾರ ನಡೆಯುವವರೂ, ಆಗಿದ್ದಾರೆ; ಅವರ ಬಾಯಿಯು ಉಬ್ಬಿದ ಮಾತುಗಳನ್ನು ಆಡುತ್ತದೆ; ಲಾಭಕ್ಕ್ಯಾಸ್ತರ ಮುಖದಾಕ್ಷಿಣ್ಯವನ್ನು ಮಾಡುತ್ತಾರೆ.

೧. ಈ ಸ್ಥಳದ ಅಭಿಪ್ರಾಯವು ೨ ಪೇತ್ರ. ೨, ೧೭ಲ್ಲಿ ಬರಪದ್ದಕ್ಕೆ ಸರಿ ಬೀಳುತ್ತದೆ.

೨. ಇಲ್ಲಿ ಬರವಿರುವ ಪುನಾನೀಕನ ಪ್ರವಾದನೆಯು ಪುಳೆ ಒಡಂಬಡಿಕೆಯ ಗ್ರಂಥಗಳಲ್ಲಿ ಲಿಖಿತವಾದದ್ದಲ್ಲ. ಆದರೆ ಅದು ಸತ್ಯವಾದದ್ದೆಂದು ನಂಬುವದಕ್ಕೆ ಯೇನೂ ಅಡ್ಡಿಯಿಲ್ಲ. ಪುನಾನೀಕನ ಪ್ರವಾದನೆಯು ಇನ್ನು ಚವಿಪುತ್ತಾದ್ದಾಗಿಯೂ ಸಾಮಾನ್ಯವಾದದ್ದಾಗಿಯೂ ಇರುವದರಿಂದ, ಅದು ಈ ಪಾಪಿಷ್ಠರಿಗೂ ಬರುವದು.

೩. ದೇವರ ಮುಕ್ಕಳಿಗೂ ಸೇವಕರಿಗೂ ವಿರೋಧವಾಗಿ ಆಡಿದ ಮಾತುಗಳೆಲ್ಲಾ ಆತನಿಗೆ ವಿರೋಧವಾಗಿ ನುಡಿದವುಗಳಾಗಿವೆ. ಇಯ್ಯೋಬ. ೪೨, ೭. ಮಲ. ೩, ೧೩.

೧೭. ಆದರೆ, ಪ್ರಿಯರೇ, ನೀವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಪಾಸ್ತಲರು ಮುಂಚೆ ಹೇಳಿದ ಮಾತುಗಳನ್ನು[೧] ನೆನಪು ಮಾಡಿ ಕೊಳ್ಳಿರಿ. ೧೮. ಏನಂದರೆ, ಕಡೇ ಕಾಲದಲ್ಲಿ ತಮ್ಮ ಭಕ್ತಿಹೀನವಾದ ಆಶೆಗಳ ಪ್ರಕಾರ ನಡೆದು ಕೊಳ್ಳುವ ಕುಚೋದ್ಯಗಾರರು ಇರುವರೆಂದು, ನಿಮಗೆ ಹೇಳಿದರು. ೧೯. ತಮ್ಮನ್ನು ಬೇರೆ ಮಾಡಿ ಕೊಳ್ಳುವವರೂ[೨], ಪ್ರಾಣಿಭಾವದವರೂ, ಆತ್ಮವಿಲ್ಲದವರೂ, ಇವರೇ. ೨೦. ಆದರೆ, ಪ್ರಿಯರೇ, ನೀವು ನಿಮ್ಮ ಅತಿ ಪರಿಶುದ್ಧವಾದ ವಿಶ್ವಾಸದ ಮೇಲೆ ನಿಮ್ಮನ್ನು ಕಟ್ಟಿ ಕೊಂಡು, ಪರಿಶುದ್ಧಾತ್ಮದಲ್ಲಿ ಪ್ರಾರ್ಥಿಸಿ, ೨೧. ನಿತ್ಯ ಜೀವಕ್ಕೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯನ್ನು ಎದುರು ನೋಡುತ್ತಾ, ದೇವರ ಪ್ರೀತಿಯಲ್ಲಿ ನಿಮ್ಮನ್ನು ಕಾಪಾಡಿ ಕೊಳ್ಳಿರಿ. ೨೨. ಮತ್ತು, ತಾರತಮ್ಯ ನೋಡಿ[೩], ಕೆಲವರನ್ನು ಕರುಣಿಸಿರಿ; ೨೩. ಕೆಲವರನ್ನು ಬೆಂಕಿಯಾಳಗಿಂದ ಎಳೆದು, ಭಯದಿಂದ ರಕ್ಷಿಸಿರಿ. ಮಾಂಸದಿಂದ ಮೈಲಿಗೆಯಾದ ಅಂಗಿಯನ್ನು ಸಹ ಹಗೆ ಮಾಡಿರಿ[೪]. ೨೪. ಬೀಳದ ಹಾಗೆ ನಿಮ್ಮನ್ನು ಕಾಪಾಡಿ, ಉಲ್ಲಾಸದಿಂದ ತನ್ನ ಮಹಿಮೆಯ ಸಮ್ಮುಖದಲ್ಲಿ ನಿರ್ಮಲರಾಗಿ ನಿಲ್ಲಿಸ ಶಕ್ತನಾದ, ೨೫. ನಮ್ಮ ರಕ್ಷಕನಾದ, ಒಬ್ಬನೇ ಜ್ಞಾನಿಯಾಗಿರುವ, ದೇವರಿಗೆ, ಇಗಲೂ ಸರ್ವ ಯುಗಗಳ ವರಿಗೂ ಮಹಿಮೆಯೂ, ಘನತೆಯೂ, ತ್ರಾಣವೂ, ಅಧಿಕಾರವೂ ಆಗಲಿ[೫]. ಆಮೆನ್.

೧. ಈ ಮಾತು ಸಹ, ೩ನೆ ವಚನದ ಪ್ರಕಾರ, ಪೆಚ್ಚಾದ ಅಪಾಸ್ತಲರ ಜೀವದ ಅಂತ್ಯಕಾಲದಲ್ಲಿ ಈ ಪತ್ರಿಕೆಯು ರಚಿತವಾಯಿತೆಂಬದಕ್ಕೆ ಒಪ್ಪುತ್ತದೆ. ಮತ್ತು ಪತ್ರಿಕಾಕರ್ತನು ತನ್ನನ್ನು ತಾನೇ ಅಪಾಸ್ತಲರ ಲೆಖ್ಖದಲ್ಲಿ ಶೇರಿಸಿ ಕಾಳ್ಳಲಿಲ್ಲವೆಂದು ತೋರುತ್ತದೆ.

೨. ಇದಕ್ಕೆ ಗಾದೆ. ೧೮, ೧. ಯೆಶಾ. ೬೬, ೫. ಲೂಕ. ೬, ೨೨. ಸರಿ ನೋಡ ಬೇಕು.

೩. ಅಂದರೆ, ವಿಶೇಷವಾಗಿ ಮೋಸ ಮಾಡುವವರನ್ನೂ ಮೋಸ ಪೋಗುವವರನ್ನೂ ಭೇದ ಮಾಡ ಬೇಕು. ಮೋಸಗಾರರನ್ನು ಮೋಸಕ್ಕೆ ತಪ್ಪಿಸುವ ಪ್ರಯತ್ನವು ಸಾಮಾನ್ಯವಾಗಿ ವ್ಯರ್ಥವಾಗಿದೆ. ಮೋಸ

ಪೌಲಾದವರು ಯಥಾರ್ಥವಾದ ಸುವಾರ್ತೆಯ ಪ್ರಸಂಗದಿಂದ ರಕ್ಷಣೆಯನ್ನು ಪೌಲಾಂದುವದು ಅಪರೂಪವಾದದ್ದಲ್ಲ.

೪. ಅವಿಶ್ವಾಸಬಾಧೆಯನ್ನು ನಂಬಿ, ಜಾರತ್ವ ಮುಂತಾದ ಪಾಪಗಳಲ್ಲಿ ಮುಳುಗಿದ ಜನರಿಗೆ ಯೇಸು ಕ್ರಿಸ್ತನ ಸುವಾರ್ತೆಯನ್ನು ಪೌಳಿ, ಆತ್ಮಿಕ ಸಪಾಯ ಮಾಡುವ ಚಕ್ಕರು ಜಾಗರೂಕರಾಗಿರ ಬೇಕು.

ಕೆಟ್ಟು ಪೌಲಾದವರನ್ನು ಪ್ರೀತಿಯಿಂದ ಕರುಣಿಸಿದರೂ, ಅವರ ಪಾಪಗಳನ್ನು ಅಸಂಖಿಸಿ, ಅವರನ್ನು ಮುಟ್ಟುವದಕ್ಕೆ ಅಂಜ ಬೇಕು.

೫. ಈ ಪತ್ರಿಕೆಯ ಅಂತ್ಯವು ೧ ಪೇತ್ರ. ೫, ೧೦. ೧೧ಲ್ಲಿ ಬರದದ್ದಕ್ಕೂ, ೨ ಪೇತ್ರ. ೩, ೧೭. ೧೮ಲ್ಲಿ ಬರದದ್ದಕ್ಕೂ, ಅನುಸಾರವಾಗಿದೆ.

ಯೋಹಾನನು ಎಫೆಸದಲ್ಲಿ ಬರದ ಪತ್ರಿಕೆಗಳು.

ಮೊದಲನೆ ಪತ್ರಿಕೆಯು.

(ಪೂರ್ವ ಗ್ರಂಥಕರ್ತರ ಸಾಕ್ಷಿಯ ಪ್ರಕಾರ ಪ್ರಕಟನೆಯ ಪುಸ್ತಕಕ್ಕೆ ಇತ್ತಲಾಗಿ ರಚಿತವಾದ ಯೋಹಾನನ ಸುವಾರ್ತೆಗೆ ಸಂಬಂಧವಾದ ಯೋಹಾನನ ಮೂರು ಪತ್ರಿಕೆಗಳು ಹೊಸ ಒಡಂಬಡಿಕೆಯ ಕನೋನ ವೆಂಬ ಗ್ರಂಥಸಂಗ್ರಹದಲ್ಲಿ ಶೇರಿದ ಲೇಖನಗಳಲ್ಲಿ ಕಡೇ ಕಾಲದವುಗಳಾಗಿವೆ. ಮೊದಲನೆ ಪತ್ರಿಕೆಯ ಆದಿವಾಕ್ಯವು ಯೋಹಾನನ ಸುವಾರ್ತೆಯ ಆದಿವಾಕ್ಯವನ್ನು ಸೂಚಿಸುತ್ತದೆ. ಈ ಪತ್ರಿಕೆಯು ಭಕ್ತನಿಗೆ ದೇವರ ಸಂಗಡಲೂ ಕ್ರಿಸ್ತನ ಸಂಗಡಲೂ ಇರುವ ಅನ್ಯೋನ್ಯವನ್ನೂ, ಅದರ ಹೇತುಗಳಾದ ಪ್ರೀತಿಯನ್ನೂ ಪ್ರಕಾಶಾಚರಣೆಯನ್ನೂ ವಿವರಿಸಿ, ಅಪೊಸ್ತಲರ ಪತ್ರಿಕೆಗಳೆಲ್ಲಾ ಶ್ಲಾಘ್ಯವಾದ ತತ್ವಬೋಧಕವಾಗಿದೆ. ಮತ್ತು ಆಗ ಸಭೆಯಲ್ಲಿ ಪಸರಿಸುತ್ತಾ ಇದ್ದ ಕ್ರಿಸ್ತನ ವಿಷಯವಾದ ಅಬದ್ಧಬೋಧನೆಗಳನ್ನು ಅದು ಅಲ್ಲಲ್ಲಿ ಖಂಡಿಸುತ್ತದೆ.)

೧) ತಂದೆಯ ಸಂಗಡಲೂ ಮಗನ ಸಂಗಡಲೂ ಇರುವ ಅನ್ಯೋನ್ಯವು.

ಸ. ೧, ೧—೨, ೨.

ಪೀಠಿಕೆಯು.

ತನ್ನ ಸಾಕ್ಷಿಯನ್ನು ಅಂಗೀಕರಿಸುವವರೂ, ಅದನ್ನು ಮುಂಚೆ ಅಂಗೀಕರಿಸಿದರೂ, ಏಕ ಕ್ರೈಸ್ತಸಭೆಯಾಗಿದ್ದು, ತಂದೆಯ ಸಂಗಡಲೂ, ಮಗನ ಸಂಗಡಲೂ ಅನುಭವಿಸ ತಕ್ಕ ಅನ್ಯೋನ್ಯವು ತನ್ನ ಸುವಾರ್ತೆಯಲ್ಲಿಯೂ, ಈ ಪತ್ರಿಕೆಯಲ್ಲಿಯೂ, ಬೇರೆ ಪ್ರಸಂಗದಲ್ಲಿಯೂ ತಾನು ಕೊಟ್ಟ ಸಾಕ್ಷಿಯ ಮುಖ್ಯೋದ್ದಿಶ್ಯವೆಂದು, ಅಪೊಸ್ತಲನು ೩ನೆ ವಚನದಲ್ಲಿ ಹೇಳುತ್ತಾನೆ. ಇದಕ್ಕೆ ಯೋಹಾ. ೨೦, ೩೧. ಒಪ್ಪುತ್ತದೆ. ಈ ಪತ್ರಿಕೆಯನ್ನು, ಶಿಷ್ಯರು (ಬೆಳಕಿನಲ್ಲಿ ನಡದು ಕೊಂಡು, ಪ್ರೀತಿಯಲ್ಲಿ ನೆಲೆಯಾಗಿದ್ದು ಇತ್ಯಾದಿ,) ಸಂಪೂರ್ಣವಾದ ಸಂತೋಷವನ್ನು ಹೊಂದುವ ಹಾಗೆ, ತಾನು ಬರೆಯುತ್ತೇನೆಂದು, ವ. ೪ಲ್ಲಿ ಹೇಳುತ್ತಾನೆ. ಅಪೊಸ್ತಲನು ಸುವಾರ್ತೆಯಲ್ಲಿ ಬರದ ನಿಜವಾದ ಜೀವದ ಪ್ರಸಂಗವನ್ನೂ, ವ. ೧—೩., ಆತನ ಬಾಯಿಂದ

ಮೂಲಾಧಾರ.

೧ ಯೋಹಾ. ೧, ೧—೪.

ತಾನು ಕೇಳಿದ ವಾಕ್ಯದ ಪ್ರಸಂಗವನ್ನೂ ವ. ೫., ವಿಶೇಷಿಸುತ್ತಾನೆ. ಹ್ಯಾಗಂದರೆ: ಪತ್ರಿಕೆಯಲ್ಲಿ ಬರದ ಕೈಸ್ತಬೋಧನೆಗೆ ವಿಶ್ವಾಸಬೋಧನೆಯೂ, ಧರ್ಮಬೋಧನೆಯೂ ಎಂಬ ಎರಡು ಭಾಗಗಳುಂಟು. ನಿಜವಾದ ಜೀವವೆಂಬ ಮಗನು ವಿಶ್ವಾಸಬೋಧನಾವಿಷಯವಾಗಿದ್ದಾನೆ. ಯೇಸುವಿನ ಬಾಯಿಂದ ಬಂದ ಧರ್ಮಬೋಧನೆಯು ದೇವರು ಬೆಳಕಾಗಿದ್ದಾನೆಂಬದನ್ನು ಪ್ರಕಟಿಸುತ್ತದೆ. ವಿಶ್ವಾಸಬೋಧನೆಯು ತಂದೆಯ ಸಂಗಡಲೂ ಮಗನ ಸಂಗಡಲೂ ಇರುವ ಅನ್ಯೋನ್ಯವನ್ನು, ನಾವು ದೇವರಲ್ಲಿ ಶೇರುವ ಹಾಗೆ ಮನುಷ್ಯನಾಗಿ ಹುಟ್ಟಿದ ಜೀವವಾಕ್ಯವು ಪ್ರತ್ಯಕ್ಷವಾದದ್ದೆಂಬ ಪ್ರಸಂಗದಿಂದಲೂ ವ. ೧. ೨., ಭಕ್ತರನ್ನು ಶುದ್ಧ ಮಾಡುವ ವಿಮೋಚನಾರಕ್ತ, ಭಕ್ತರಿಗಾಗಿ ಪ್ರಾರ್ಥಿಸುವ ಪ್ರಧಾನಯಾಜಕೋದ್ಯೋಗವೃತ್ತಿ, ಇವುಗಳ ಪ್ರಸಂಗದಿಂದಲೂ ಸ. ೧, ೭; ೨, ೧. ೨., ಸ್ಥಾಪಿಸುತ್ತದೆ. ಧರ್ಮಬೋಧನೆಯು, ಈ ಅನ್ಯೋನ್ಯವು ಭಂಗವಾಗದ ಹಾಗೆ (ಸ. ೧, ೫—೭; ೨, ೧ರ ಆರಂಭವು) ಭಕ್ತರು ಪ್ರತ್ಯಕ್ಷವಾದ ಜೀವದ ಐಕ್ಯದಲ್ಲಿ ನೆಲೆಯಾಗಿರುವ ಬಗ್ಗೆ ಬೆಳಕಿನಲ್ಲಿ ನಡದು ಕೊಳ್ಳಬೇಕೆಂದು ಆಜ್ಞಾಪಿಸುತ್ತದೆ. ಆದರೆ ಭಕ್ತರು ಈ ಸಿದ್ಧಿಯನ್ನು ಇಹದಲ್ಲಿ ಪೂರ್ಣವಾಗಿ ಹೊಂದದೆ ಇರುವ ಕಾರಣ, ವಿಶ್ವಾಸದ ಆರಂಭದಲ್ಲಿಯೂ ೧, ೧೦. ವೃದ್ಧಿಯಲ್ಲಿಯೂ ೧, ೯. ಪಶ್ಚಾತ್ತಾಪಿಯಾದ ಭಕ್ತನಲ್ಲಿಯೇ ಸಾರ್ಥಕವಾಗುವಂಥಾ, ಪಾಪಿಗಳನ್ನು ಶುದ್ಧ ಮಾಡುವಂಥಾ, ಕ್ರಿಸ್ತನ ರಕ್ತವು ದೇವರ ಸಂಗಡಲಿರುವ ಅನ್ಯೋನ್ಯದ ನಿಜವಾದ ಮೂಲವಾಗಿದೆಂದು ಸೂಚಿಸುತ್ತಾನೆ. ೧, ೭; ೨, ೧. ೨. ವಿಶ್ವಾಸವು ಅವಶ್ಯವಾಗಿದೆಂಬುವದು ಶಿಷ್ಯರಿಗೆ ಗೊತ್ತಾಗಿದೆಂದು ಅಪೊಸ್ತಲನು ನೆನಸಿ, ಈ ವಿಶ್ವಾಸವನ್ನು ೧, ೧—೫. ೭; ೨, ೧. ೨. ದೃಢಪಡಿಸಲೆಸಗುತ್ತಾನೆ.

೧. ಆದಿಯಿಂದ ಇದ್ದದ್ದನ್ನೂ[೧]), ನಾವು ಜೀವ ವಾಕ್ಯದ[೨]) ವಿಷಯವಾಗಿ[೩]) ಕೇಳಿದ್ದನ್ನೂ, ನಮ್ಮ ಕಣ್ಣುಗಳಿಂದ ಕಂಡದ್ದನ್ನೂ[೪]), ನಾವು ನೋಡಿದ್ದನ್ನೂ[೫]), ನಮ್ಮ ಕೈಗಳು ಮುಟ್ಟಿದ್ದನ್ನೂ[೬]), ಬರೆಯುತ್ತೇವೆ. ೨. ಜೀವವು ಪ್ರತ್ಯಕ್ಷವಾಯಿತು, ಮತ್ತು ತಂದೆಯ ಹತ್ತರ ಇದ್ದು, ನಮಗೆ ಪ್ರತ್ಯಕ್ಷವಾದ ನಿತ್ಯ ಜೀವವನ್ನು[೭]) ಕಂಡು, ಸಾಕ್ಷಿ ಕೊಟ್ಟು, ನಿಮಗೆ ಬರೆಯುತ್ತೇವೆ. ೩. ನಿಮಗೂ ನಮ್ಮ ಸಂಗಡ ಅನ್ಯೋನ್ಯವಿರುವ ಹಾಗೆ, ನಾವು ಕಂಡು ಕೇಳಿದ್ದನ್ನೂ ನಿಮಗೆ ಬರೆಯುತ್ತೇವೆ; ಮತ್ತು ನಮಗೆ ಇರುವ ಅನ್ಯೋನ್ಯವು ತಂದೆಯ ಸಂಗಡಲೂ, ಅವನ ಮಗನಾದ ಯೇಸು ಕ್ರಿಸ್ತನ ಸಂಗಡಲೂ[೮]), ಅದೆ. ೪. ಮತ್ತು ನಿಮ್ಮ ಸಂತೋಷವು ಸಂಪೂರ್ಣವಾಗುವ ಹಾಗೆ[೯]), ಇವುಗಳನು ನಿಮಗೆ ಬರೆಯುತ್ತೇವೆ.

೧. ಈ ಮಾತು ಯೋಪೂಾ. ೧, ೧ಲ್ಲಿ ಬರದ ಅಪೂರ್ವವಾದ ವಾಕ್ಯವೆಂಬ ದೇವರ ಅನಾದಿಯಾದ ಮಗನನ್ನು ಸೂಚಿಸುತ್ತದೆ.

೨. ಅಪಾಸ್ತಲನು ಇಲ್ಲಿ ಸೂಚಿಸುವ ಅನಾದಿ ಪುರುಷನು ಜೀವವಾಕ್ಯವೆಂಬವನಾಗಿದ್ದಾನೆ. ಆತನು ವಾಕ್ಯವಾದ (ಯೋಪೂಾ. ೧, ೧ಇತ್ಯಾದಿ) ದೇವಮಹಿಮಾಪ್ರತಿಕಾಂತಿಯಾಗಿದ್ದಾನೆ. (ಇಬ್ರಿ. ೧, ೩.) ಆತನು ಜೀವವಾಗಿದ್ದಾನೆ. ಯೋಪೂಾ. ೧, ೪.

೩. ಅಪಾಸ್ತಲನು ಆತನ ಜೀವವನ್ನು ಮಾತ್ರವಲ್ಲ, ಆತನ ಚರಿತ್ರವನ್ನು ಸಹ ಸುವಾರ್ತಾಗ್ರಂಥ

ದಲ್ಲಿಯೂ ಬಾಯಿಂದ ಮಾಡಿದ ಪ್ರಸಂಗದಲ್ಲಿಯೂ ಪ್ರಕಟಿಸುತ್ತಾ ಇದ್ದನು.

೪. ಕರ್ತನು ಯಾರ್ದನಿನಲ್ಲಿ ಸ್ನಾನ ಪೌಂದಿದಂಯಿನಿಂದಲೇ ಯೌಪೌನನು ಆತನನ್ನು ಕಂಡು ತಿಳಿದು ಕೌಂಡನು; ಆತನ ಮುಂಚಿನ ಚರಿತ್ರವನ್ನು ಅಪಾಸ್ತಲರು ಸಪು ತಾಯಿಯಾದ ಮರಿಯಳ ಬಾಯಿಂದಲೂ ಬೇರೆ ಸಾಕ್ಷಿಗಳ ಬಾಯಿಂದಲೂ ಕೇಳಿ ತಿಳಿಯ ಬೇಕಾಯಿತು.

೫. ಪುಳೆ ಒಡಂಬಡಿಕೆಯಲ್ಲಿ ಪೂರ್ವೀಕರು (ಅಬ್ರಪೌಾಮನು, ಮೋಶೆಯು, ಪ್ರವಾದಿಗಳು ಮುಂತಾದವರು) ದೇವದರ್ಶನವನ್ನು ಪೌಂದಿದ ಪ್ರಕಾರವಲ್ಲ, ನಾವು ಮೂರು ವರುಷ ಆತನ ಸಪುವಾಸ ಮಾಡುತ್ತಾ, ಆತನನ್ನು ನೌೀಡಿದೆವು.

೬. ಈ ಮಾತಿನಿಂದ ಅಪಾಸ್ತಲನು ಯೇಸು ಕ್ರಿಸ್ತನು ನಿಜ ಮನುಷ್ಯನಾಗಿದ್ದನೆಂಬದನ್ನು ಅಲ್ಲಗಳದ ಅಬದ್ಧಬೌಧಕರನ್ನು (ಸ. ೪.) ಪ್ರತಿತರ್ಕಿಸುತ್ತಾನೆ. ಅಪಾಸ್ತಲರು ಯೇಸುವು ಅನಾದಿ ವಾಕ್ಯವಾಗಿದ್ದಾನೆಂಬದನ್ನು ಮಾತ್ರವಲ್ಲ, ಅನಾದಿ ವಾಕ್ಯವು ನಿಜ ಮನುಷ್ಯನಾಗಿ ಪುಟ್ಟಿದ್ದನ್ನು ಸಪು ತಿಳಿದು ಕೌಂಡು ಲೌಕದಲ್ಲಿ ಪ್ರಕಟಿಸಿದರು.

೭. ದೇವವಾಕ್ಯಪ್ರತ್ಯಕ್ಷತ್ವವು ಚಕ್ತರ ಜೀವಮೂಲವಾಗಿದೆ.

೮. ಮನುಷ್ಯರು ಆತನ ಮುಖಾಂತರ ದೇವರ ಐಕ್ಯದಲ್ಲಿ ಶಿರಿಗಿ ಶೇರುವ ಪೌಗೆ, ದೇವರ ಮಗನು ಮನುಷ್ಯನಾದನು. ತಂದೆಯನ್ನು ಕಂಡು ಕಾಳ್ಳ ಬೇಕಾದರೆ, ಮೊದಲು ಮಗನನ್ನು ಕಂಡು ಕಾಳ್ಳ ಬೇಕು. ಈ ಪದವಿಯು ಪ್ರತ್ಯೇಕ ಪ್ರತ್ಯೇಕ ಚಕ್ತರಿಗಲ್ಲ, ಪರಸ್ಪರಾನ್ಯೋನ್ಯವಾದ ಸಂಚಿಗೆ ಪ್ರಾಪ್ತವಾಗುವದು.

೯. ಯೇಸುವಿನಲ್ಲಿಯೂ ಆತನ ಆಜ್ಞೆಗಳಲ್ಲಿಯೂ ನೆಲೆಯಾಗಿರುವವನೇ ಸಂಪೂರ್ಣವಾದ ಸಂತೌಷವನ್ನನುಭವಿಸುತ್ತಾನೆ.

೫. ಮತ್ತು ನಾವು ಅವನಿಂದ ಕೇಳಿ, ನಿಮಗೆ ತಿಳಿಸುವ ಸಂಗತಿ ಏನಂದರೆ—ದೇವರು ಬೆಳಕಾಗಿದ್ದಾನೆ; ಅವನಲ್ಲಿ ಎಷ್ಟು ಮಾತ್ರವೂ ಕತ್ತಲೆ ಇಲ್ಲ. ೬. ಅವನ ಸಂಗಡ ನಮಗೆ ಅನ್ಯೋನ್ಯ ಉಂಟೆಂದು ಹೇಳಿ, ಕತ್ತಲೆಯಲ್ಲಿ ನಡೆದರೆ, ಸುಳ್ಳಾಡಿ, ಸತ್ಯವನ್ನು ಮಾಡದವರಾಗಿದ್ದೇವೆ ೧). ೭. ಆದರೆ ಅವನು ಬೆಳಕಿನಲ್ಲಿರುವ ಪ್ರಕಾರ, ನಾವು ಬೆಳಕಿನಲ್ಲಿ ನಡೆದರೆ, ಒಬ್ಬರ ಸಂಗಡ ಒಬ್ಬರು ಅನ್ಯೋನ್ಯವಾಗಿದ್ದೇವೆ ೨). ಮತ್ತು ೩) ಅವನ ಮಗನಾದ ಯೇಸು ಕ್ರಿಸ್ತನ ರಕ್ತವು ಎಲ್ಲಾ ಪಾಪದಿಂದ ನಮ್ಮನ್ನು ಶುದ್ಧ ಮಾಡುವದು.

೧. ಸುಳ್ಳಾಡಿಯಂಬುವದು ಅವನ ಸಂಗಡ ನಮಗೆ ಅನ್ಯೋನ್ಯವುಂಟೆಂದು ಪೇಳಿಯಂಬದಕ್ಕೆ, ಸತ್ಯವನ್ನು ಮಾಡದವರಾಗಿದ್ದೇವೆ ಎಂಬದು ಕತ್ತಲೆಯಲ್ಲಿ ನಡದರೆ ಎಂಬದಕ್ಕೆ ಒಪ್ಪುತ್ತದೆ. ಬೆಳಕಾಗಿರುವ ದೇವರ ಐಕ್ಯದಲ್ಲಿ ಇದ್ದೇನೆಂದು ಪೇಳುವವನು ಬೆಳಕಿನಲ್ಲಿಯೇ ಇದ್ದು ಬದುಕ ಬೇಕು. ವಾಕ್ಯವೂ ಕೃತ್ಯವೂ ಒಂದೇ ಆಗಿರ ಬೇಕು.

೨. ದೇವೈಕ್ಯದಿಂದ ಸಪುೌದರರ ಐಕ್ಯವು ಪುಟ್ಟುತ್ತದೆ.

೩. ಆದಿ ಪಾಪಪರಿಪೌಾರವು ಮಾನಸಾಂತರ ಪಟ್ಟು ವಿಶ್ವಾಸಿಸುವವನಿಗೆ, ಮೊದಲು ಸತ್ಯದಿಂದ ವಿಶ್ವಾಸಿಸುತ್ತಲೇ, ಪ್ರಾಪ್ತವಾಗುವದು. ಪೌಾಗಂದರೆ: ಯೇಸು ಕ್ರಿಸ್ತನೆ ಮರಣದ ಮುಖಾಂತರ ಎಲ್ಲಾ ಮನುಷ್ಯರಿಗೆ ಉಂಟಾದ ಪಾಪಪರಿಪೌಾರದ ಅನು

ಮೂಲಾಧಾರ.

೧ ಯೋಹಾ. ೧, ೯—೨, ೨.

ಕವು ವಿಶ್ವಾಸಿಸುವವನಿಗೆ ಶಿಕ್ಷೆಯದು. ಆದರೆ ವಿಶ್ವಾಸವಿಲ್ಲದವನಿಗೆ ಅದು ಸರಿಯಾದದು. ವಿಶ್ವಾಸದಲ್ಲಿ ದೃಢವಾಗಿರ ಬೇಕಾದರೆ, ವಿಶ್ವಾಸದಲ್ಲಿ ನಡದು ಕಾಳ್ಳ ಬೇಕು. ಆದ್ದರಿಂದ ಬೆಳಕಿನಲ್ಲಿ ನಡದು ಕಾಳ್ಳ ದವನಿಗೆ ಅನುದಿನವು ಅವಶ್ಯವಾದ ಪಾಪಪರಿಹಾರದ ಅನುಭವವು ಪ್ರಾಪ್ತವಾಗಲಾರದು. ಸ. ೨, ೧. ೨. ೨ ಪೇತ್ರ. ೧, ೯.

೯. ನಮಗೆ ಪಾಪವಿಲ್ಲವೆಂದು ಹೇಳಿದರೆ, ನಮ್ಮನ್ನು ನಾವೇ ಮೋಸಗಾಳಿಸುತ್ತೇವೆ, ಮತ್ತು ಸತ್ಯವು ನಮ್ಮಲ್ಲಿ ಇಲ್ಲ ೧). ೯. ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ, ಅವನು ನಮಗೆ ಪಾಪಗಳನ್ನು ಮನ್ನಿಸಿ, ಎಲ್ಲಾ ಅನ್ಯಾಯದಿಂದ ನಮ್ಮನ್ನು ಶುದ್ಧ ಮಾಡುವ ಹಾಗೆ, ನಂಬಿಕೆಯೂ ನ್ಯಾಯವೂ ಉಳ್ಳವನಾಗಿದ್ದಾನೆ ೨). ೧೦. ನಾವು ಪಾಪ ಮಾಡಿದವರಲ್ಲವೆಂದು ಹೇಳಿದರೆ, ಅವನನ್ನು ಸುಳ್ಳುಗಾರನೆಂದು ಮಾಡುತ್ತೇವೆ; ಮತ್ತು ಅವನ ವಾಕ್ಯವು ನಮ್ಮಲ್ಲಿ ಇಲ್ಲ ೩).

೧. ಸಂಪರ್ತಿಕಚಕ್ಕರು ಸಹ ಪಾಪಿಗಳಾಗಿದ್ದಾರೆ. ಪಾಪವನ್ನು ಪೂರ್ಣ ಹೃದಯದಿಂದ ಹಗೆ ಮಾಡುವವರು ಅದನ್ನು ಅಡಗಿಸುವದಿಲ್ಲ. ಅವರು ತಮ್ಮ ಪಾಪವು ಪಾಪದಿಂದ ಕೆಟ್ಟು ಹೋಗಿದೆಯೆಂದು, ಹೆಚ್ಚು ಹೆಚ್ಚಾಗಿ ತೀವ್ರ ಕಾಂಪು, ತಾವು ಪಾಪಿಗಳಾಗಿದ್ದೇವೆಂದು, ಯಥಾರ್ಥವಾಗಿ ಅರಿಕೆ ಮಾಡುತ್ತಾರೆ.

೨. ಪಶ್ಚಾತ್ತಾಪ ಪಡುವ ಜಕ್ಕನಿಗೆ ಪಾಪಪರಿಹಾರವುಂಟೆಂಬ ವಾಕ್ಯವನ್ನು ಅತನು ನಂಬಿಕೆಯುಳ್ಳವನಾಗಿ ಕೈಕಾಳ್ಳುತ್ತಾನೆ. ಆತನು ನೀತಿಯುಳ್ಳವನಾಗಿದ್ದಾನೆಂಬ ಮಾತಿನ ಅಭಿಪ್ರಾಯವು ಕಾಣಿಸಿ. ೩, ೪ಳಲ್ಲಿ ಕಾಣುತ್ತದೆ. ಪಾಪಪರಿಹಾರವನ್ನು ಸತ್ಯವಾಗಿ ಹೊಂದಿದವನು ಪಾಪದಿಂದ ಬಿಡುಗಡೆಯಾಗುತ್ತಾನೆ. ಒಳಗಿದ ಹಾಪಿಗೆ ನೆಲವೇ ಸಾಕ್ಷಿ.

೩. ತಾನು ಮುಂಚಿನ ಜೀವಕಾಲದಲ್ಲಿಯೂ ಪಾಪ ಮಾಡಲಿಲ್ಲವೆಂದು ಹೇಳುವವನು, ಎಲ್ಲಾ ಮನುಷ್ಯರೂ ಪಾಪಿಗಳಾಗಿದ್ದಾರೆಂಬ ದೇವವಾಕ್ಯವನ್ನು ಸುಳ್ಳು ಮಾಡುತ್ತಾನೆ. ಅಂಥವನು ದೇವರ ವಾಕ್ಯವನ್ನು ಎಷ್ಟು ಮಾತ್ರವೂ ಗ್ರಹಿಸುವದಿಲ್ಲ. ನಂಬುವ ಪಾಪಿಗೆ ಪಾಪಪರಿಹಾರ ಉಂಟೆಂದು ಸಹ ಅವನು ಹೃದಯದಲ್ಲಿ ನಿಶ್ಚಯವಾಗಿ ತಿಳಿಯುವದಿಲ್ಲ.

೨, ೧. ನನ್ನ ಎಳೆ ಮಕ್ಕಳ್ಳಿ, ನೀವು ಪಾಪ ಮಾಡದ ಹಾಗೆ ೧), ಇವುಗಳನ್ನು ನಿಮಗೆ ಬರೆಯುತ್ತೇನೆ; ಮತ್ತು ಯಾರಾದರೂ ಪಾಪ ಮಾಡಿದರೆ ೨), ತಂದೆಯ ಹತ್ತಿರ ನಮಗೆ ನೀತಿವಂತನಾದ ಯೇಸು ಕ್ರಿಸ್ತನೆಂಬ ಕಾರ್ಯಕರ್ತನು ಇದ್ದಾನೆ ೩). ೨. ಇವನು ನಮ್ಮ ೪) ಪಾಪಗಳಿಗಾಗಿಸ್ಕರ ಶಾಂತಿಕರವಾದ ಬಲಿಯಾಗಿದ್ದಾನೆ; ನಮ ಮಾತ್ರವಲ್ಲ, ಸಮಸ್ತ ಲೋಕದವುಗಳಿಗಾಗಿಸ್ಕರ ಸಹ ೫).

೧. ಪಾಪಪರಿತ್ಯಾಗವು ಸುವಾರ್ತೆಯಿಂದ ಪ್ರಕಟವಾದ ರಕ್ಷಣೋದ್ದಿಶ್ಯವಾಗಿದೆ.

೨. ಪಾಪವನ್ನು ಹಗೆ ಮಾಡುವ ಜಕ್ಕನು ಪಾಪದಲ್ಲಿ ಬಿದ್ದರೆ, ದುಃಖಾಕ್ರಾಂತನಾಗುತ್ತಾನೆ; ಆದಾಗ್ಯೂ ಆವನು ನಿರಾಶೆಯಾಗಲಿಕ್ಕೆ ಕೆಲಸವಿಲ್ಲ.

೩. ತನ್ನ ಐಕ್ಯದಲ್ಲಿ ಶೇರಿ ಅದರಲ್ಲಿ ನೆಲೆಯಾಗಿರು

ವ ಪಕ್ಷರಿಗಾಗಿ ಸರ್ವಲೋಕಪಾಪಬಲಿಯಾಗಿ ವ. ೨ ತನ್ನನ್ನು ತಾನೇ ಅರ್ಪಿಸಿದ ಪ್ರಧಾನಯಾಜಕನಾದ ಯೇಸು ಕ್ರಿಸ್ತನು ದೇವರ ಸನ್ನಿಧಿಯಲ್ಲಿ ಜೀವಿಸುತ್ತಾ ಇದ್ದಾನೆ. ಆತನು ತನ್ನವರನ್ನು ಸಂಪೂರ್ಣವಾಗಿ ರಕ್ಷಿಸಬಲ್ಲನು. ಇಬ್ರಿ. ೭, ೨೫.

೪. ಈ ಆಪರಾಧೆಯ ಮಾತು ಯೇಸುವನ್ನು ಸಂ ಬಿ ಪಾಪದ್ವೇಷಿಗಳಾದ ಪಕ್ಷರ ಉದ್ದಿಶ್ಯವಾಗಿ ಬರದಿದೆಯೆಂಬ, ಲಕ್ಷಿಸ ತಕ್ಕದ್ದು.

೫. ಈ ವಾಕ್ಯವು ಪಕ್ಷರ ವಿಶ್ವಾಸಕ್ಕೆ ಅತ್ಯಂತ ಸ್ಥಿರವಾದ ನೆಲೆಯಾಗಿದೆ. ಯೇಸು ಕ್ರಿಸ್ತನು ಎಲ್ಲರಿಗಾಗಿ ಸತ್ತು, ಎಲ್ಲರ ಪಾಪವನ್ನು ಪರಿಹಾರ ಮಾಡಿದ್ದಾನೆಂದು, ಸತ್ಯವಾಗಿ ನಂಬುವವನು ಆಶಾಭಂಗನಾಗುವದಿಲ್ಲ.

೨) ಯೇಸುವನ್ನು ತಿಳಿದು, ಆತನಲ್ಲಿಯೂ ಆತನ ಮುಖಾಂತರ ದೇವರಲ್ಲಿಯೂ ದೃಢವಾಗಿರುವ ವಿಷಯ. ಸ. ೨, ೩—೧೧.

೩. ಮತ್ತು ಅವನ ಕಟ್ಟಳೆಗಳನ್ನು ಕೈಕೊಂಡರೆ, ಇದರಿಂದ ಅವನನ್ನು ತಿಳಿದಿದ್ದೇವೆಂದು ತಿಳುಕೊಳ್ಳುತ್ತೇವೆ. ೪. ಅವನನ್ನು ತಿಳಿದಿದ್ದೇನೆಂದು ಹೇಳಿ ಕೊಂಡು, ಅವನ ಕಟ್ಟಳೆಗಳನ್ನು ಕೈಕೊಳ್ಳದವನು ಸುಳ್ಳುಗಾರನಾಗಿದ್ದಾನೆ; ಇವನಲ್ಲಿ ಸತ್ಯವು ಇಲ್ಲ. ೫. ಆದರೆ ಯಾವನು ಅವನ ವಾಕ್ಯವನ್ನು ಕೈಕೊಳ್ಳುತ್ತಾನೋ, ಅವನಲ್ಲಿ ನಿಜವಾಗಿ ದೇವರ ಪ್ರೀತಿಯು ಸಂಪೂರ್ಣವಾಗಿದೆ. ಅವನಲ್ಲಿದ್ದೇವೆಂದು ಇದರಿಂದ ೧) ತಿಳುಕೊಳ್ಳುತ್ತೇವೆ. ೬. ಅವನಲ್ಲಿ ನೆಲೆಯಾಗಿರುತ್ತೇನೆಂದು ಹೇಳುವವನು, ಅವನು ಹೇಗೆ ನಡೆದನೋ, ಹಾಗೆಯೇ ತಾನು ನಡೆದು ಕೊಳ್ಳಬೇಕು ೨). ೭. ಪ್ರಿಯರೇ, ಹೊಸ ಕಟ್ಟಳೆಯಂತಲ್ಲ, ಆದಿಯಿಂದ ನಿಮಗಿದ್ದ ಹಳೇ ಕಟ್ಟಳೆಯನ್ನು ೩) ನಿಮಗೆ ಬರೆಯುತ್ತೇನೆ. ಆ ಹಳೇ ಕಟ್ಟಳೆಯು ನೀವು ಆದಿಯಿಂದ ಕೇಳಿದ ವಾಕ್ಯವೇ ೪). ೮. ಮತ್ತು ಹೊಸ ಕಟ್ಟಳೆಯನ್ನು ನಿಮಗೆ ಬರೆಯುತ್ತೇನೆ; ಅದು ಅವನಲ್ಲಿಯೂ ನಿಮ್ಮಲ್ಲಿಯೂ ಸತ್ಯವಾಗಿದೆ; ಹೇಗಂದರೆ, ಕತ್ತಲೆಯು ಕಳೆದು ಹೋಗುತ್ತದೆ, ಸತ್ಯವಾದ ಬೆಳಕು ಈಗಲೇ ೫) ಪ್ರಕಾಶಿಸುತ್ತದೆ. ೯. ಬೆಳಕಿನಲ್ಲಿದ್ದೇನೆಂದು ಹೇಳಿ ಕೊಂಡು, ತನ್ನ ಸಹೋದರನನ್ನು ಹಗೆ ಮಾಡುವವನು ಈ ವರೆಗೂ ಕತ್ತಲೆಯಲ್ಲಿದ್ದಾನೆ ೬). ೧೦. ತನ್ನ ಸಹೋದರನನ್ನು ಪ್ರೀತಿ ಮಾಡುವವನು ಬೆಳಕಿನಲ್ಲಿ ನೆಲೆಯಾಗಿದ್ದಾನೆ; ಅಡಿಗಂಕವು ಅವನಲ್ಲಿ ಇಲ್ಲ. ೧೧. ಆದರೆ ತನ್ನ ಸಹೋದರನನ್ನು ಹಗೆ ಮಾಡುವವನು ಕತ್ತಲೆಯಲ್ಲಿದ್ದಾನೆ; ಕತ್ತಲೆಯಲ್ಲಿ ನಡೆದು ಕೊಳ್ಳುತ್ತಾನೆ. ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದ್ದರಿಂದ, ತಾನು ಎಲ್ಲಿ ಹೋಗುತ್ತಾನೋ, ಅರಿಯನು ೭).

೧. ಈ ಮಾತು ಈ ಮೂರು ವಚನಗಳ ಸಾರಾಂಶವಾಗಿದೆ. ಅದೇನಂದರೆ, ಯೇಸು ಕ್ರಿಸ್ತನ ಐಕ್ಯದಲ್ಲಿರುವವನೇ ಆತನನ್ನು ಸತ್ಯವಾಗಿ ತಿಳಿದು ಕೊಳ್ಳುತ್ತಾನೆ. ಇತರ ಜ್ಞಾನವು ಅಜ್ಞಾನವಾಗಿದೆ. ಆತನ ಐಕ್ಯದಲ್ಲಿರುವವನು ಪ್ರೀತಿಯ ನಿಯಮಕ್ಕೆ ಸಂಬಂಧವಾದ ಆತನ ಕಟ್ಟಳೆಗಳನ್ನು ಸಹಜವಾಗಿ ಅನುಸರಿಸಿ, ಆತ

ಆತ್ಮಿಕ ತಾರತಮ್ಯಸ್ಥಿತಿಗಳು.

೧ ಯೋಹಾ. ೨, ೧೨—೧೪.

ನ ಕೃಪೆಯ ವಾಕ್ಯವನ್ನು ನಂಬಿ, ದೇವರ ಪ್ರೀತಿಯಲ್ಲಿ ಪೂರ್ಣ ಸಂತುಷ್ಟಿಯಾಗಿದ್ದಾನೆ.

೨. ಈ ಮಾತು ೧, ೭ಲ್ಲಿ ಬರಪದ್ಧತಿಗೆ ಅನುಸಾರವಾಗಿದೆ. ಅಲ್ಲಿ ದೇವರ ಐಕ್ಯದ ವಿಷಯವಾಗಿ ಬರದದ್ದು ಇಲ್ಲಿ ಯೇಸು ಕ್ರಿಸ್ತನ ಐಕ್ಯದ ವಿಷಯವಾಗಿ ಪ್ರಯೋಗವಾಗಿದೆ.

೩. ಇದು ಪೂರ್ವದೇ ಸರಿ. ಅದು ೫ನೇ ಶತಮಾನ. ೬, ೫. ೧೨. ೩ನೇ ಶತ. ೧೯, ೧೮ರಲ್ಲಿ ಬರಪದ್ಧತಿ.

೪. ಯೇಸು ಕ್ರಿಸ್ತನು ಮತ್ತಾ. ೨೨, ೨೭—೪೦ ರಲ್ಲಿ, ಪ್ರೀತಿಯ ನಿಯಮವು ಮೂಲನಿಯಮವೆಂದು, ಬೋಧಿಸಿದ್ದನ್ನು ಅಪಾಸ್ತಲರು ತಮ್ಮ ಶಿಷ್ಯರಿಗೆ ಮೂಲಧರ್ಮಸೂತ್ರವಾಗಿ ಕಲಿಸಿದರೆಂದು, ಇಲ್ಲಿ ತಾತ್ಪರ್ಯ ರುತ್ತದೆ.

೫. ಲೋಕದ ಬೆಳಕಾದ ದೇವರ ಮಗನಾದ ಯೇಸು ಕ್ರಿಸ್ತನು ಲೋಕದಲ್ಲಿ ಪ್ರತ್ಯಕ್ಷವಾದಂದಿನಿಂದ.

೬. ಪ್ರೀತಿಯಿಲ್ಲದವನು, ಬೆಳಕಾಗಿರುವ ದೇವರ ಐಕ್ಯದಲ್ಲಿರದೆ, ಕತ್ತಲೆಯಲ್ಲಿದ್ದಾನೆ. ೧, ೬.

೭. ರಕ್ಷಣಾಮಾರ್ಗವು ಅವನಿಗೆ ತಿಳಿಯುವದಿಲ್ಲ; ತಾನು ರಕ್ಷಿತನಾಗಿದ್ದೇನೆಂದು ನೆನಸಿ, ನಾಶಕ್ಕೆ ಗುರಿಯಾಗಿದ್ದಾನೆ.

೩) ಪೂರ್ವಾತ್ತರತಾತ್ಪರ್ಯಸಂಬಂಧವಾದ ಪತ್ರಿಕಾಪಲಾಕಿಕರ ಸ್ಥಿತಿಗತಿಗಳ ಸೂಚನೆಯು. ಸ. ೨, ೧೨—೨೮.

೧೨. ಎಳೆ ಮಕ್ಕಳೇ೧), ನಿಮಗೆ ಬರೆಯುತ್ತೇನೆ, ಯಾಕಂದರೆ ಪಾಪಗಳು ಅವನ ಹೆಸರಿನಿಂದ ನಿಮಗೆ ಮನ್ನಿಸಲ್ಪಟ್ಟವೆ೨). ೧೩. ತಂದೆಗಳೇ, ನಿಮಗೆ ಬರೆಯುತ್ತೇನೆ, ಯಾಕಂದರೆ ನೀವು ಆದಿಯಿಂದ ಇರುವವನನ್ನು ತಿಳಿದಿದ್ದೀರಿ೩). ಯೌವನಸ್ಥರೇ, ನಿಮಗೆ ಬರೆಯುತ್ತೇನೆ, ಯಾಕಂದರೆ ನೀವು ಕೆಟ್ಟವನನ್ನು ಜಯಿಸಿದ್ದೀರಿ೪). ಮಕ್ಕಳೇ, ನಿಮಗೆ ಬರೆಯುತ್ತೇನೆ, ಯಾಕಂದರೆ ನೀವು ತಂದೆಯನ್ನು ತಿಳಿದಿದ್ದೀರಿ೫). ೧೪. ತಂದೆಗಳೇ, ನಿಮಗೆ ಬರೆದಿದ್ದೇನೆ, ಯಾಕಂದರೆ ನೀವು ಆದಿಯಿಂದ ಇರುವವನನ್ನು ತಿಳಿದಿದ್ದೀರಿ೬). ಯೌವನಸ್ಥರೇ, ನಿಮಗೆ ಬರೆದಿದ್ದೇನೆ, ಯಾಕಂದರೆ ನೀವು ಶಕ್ತರಾಗಿದ್ದೀರಿ; ದೇವರ ವಾಕ್ಯವು ನಿಮ್ಮಲ್ಲಿ ನೆಲೆಯಾಗಿದೆ; ದುಷ್ಟನನ್ನು ಜಯಿಸಿದ್ದೀರಿ.

೧. ಈ ಮಾತು ಸಖೆಯವರನ್ನೆಲ್ಲಾ ಸೂಚಿಸುತ್ತದೆ. teknía paidía ಎಂಬದು ಮಕ್ಕಳನ್ನು ಸೂಚಿಸುತ್ತದೆ ಪ. ೧೩. ೧೮.

೨. ಇದು ಆತ್ಮಿಕಜ್ಞಾನಮೂಲವಾಗಿದೆ. ಅದು ನಿಜ ವಿಶ್ವಾಸಿಗಳಿಗೆಲ್ಲಾ ಸಾಮಾನ್ಯವಾಗಿ ತಿಳಿದದೆ.

೩. ಯೋಹಾನನ ಸುವಾರ್ತೆಯ ಆರಂಭದಲ್ಲಿ ಸೂಚಿಸಿರುವ ತತ್ವಜ್ಞಾನವನ್ನು ಹಿರಿಯರು ಬಲ್ಲವರಾಗಿದ್ದಾರೆ.

೪. ಯೌವನಸ್ಥರಲ್ಲಿ ಪೌರುಷವೇ ವಿಶೇಷವಾಗಿ ಕಾಣ ತಕ್ಕ ಸುಲಕ್ಷಣವು.

೫. ಮಕ್ಕಳು ಪರಿಶುದ್ಧಾತ್ಮದ ಸಹಜಬೋಧನೆಯಿಂದ ದೇವರು ತಮ್ಮ ತಂದೆಯೆಂದು ಬಲ್ಲರು. ಗಲ. ೪, ೬.

೬. ಅಂದರೆ, ಆತನ ಐಕ್ಯದಲ್ಲಿ ನೆಲೆಗಾಂಡು, ಆತನನ್ನು ತಿಳಿದಿದ್ದೀರಿ. ಪ. ೪. ೫. ತಂದೆಗಳು ಯೌವನಸ್ಥರು ಮಕ್ಕಳು ಎಂಬ ಪದಗಳು ಸ್ವಾಭಾವಿಕ ಪ್ರಾಯವನ್ನು ಸೂಚಿಸುತ್ತವಾ, ಆತ್ಮಿಕ ಪ್ರಾಯವನ್ನು ಸೂಚಿಸುತ್ತವಾ ಎಂಬ ಪ್ರಶ್ನೆಗೆ ಪ್ರತ್ಯುತ್ತರವೇನಂದರೆ: ಚಿಕ್ಕಂದಿನಿಂದ ಯೇಸು ಕ್ರಿಸ್ತನನ್ನು ನಂಬಿ, ಆತನ ಕೃಪೆಯಲ್ಲಿ ಯುಕ್ತವಾಗಿ ಬೆಳೆಯುತ್ತಾ ಬಂದವರಲ್ಲಿ

ಸ್ವಾಭಾವಿಕ ಪ್ರಾಯವೂ ಆತ್ಮಿಕ ಪ್ರಾಯವೂ ಒಂದೇ. ಇತರರಲ್ಲಿ ಪೂರ್ಣವಾಗಿ ವಿಶ್ವಾಸವನ್ನು ಪೂರ್ಣಾಂದಿಸಿದವರು ಶಿಶುಪ್ರಾಯದವರಾಗಿದ್ದಾರೆ; ಮನಃಪೂರ್ವಕವಾಗಿ ಕರ್ತನನ್ನು ಪ್ರೀತಿ ಮಾಡಿ, ಲೌಕಿಕ ಪಾಪ ಸೈತಾನ ಎಂಬ ಶತ್ರುಗಳ ಸಂಗಡ ಧೈರ್ಯವಾಗಿ ಯುದ್ಧ ಮಾಡುವವರು ಯೌವನಸ್ಥರ ಪೂರ್ಣರಾಗಿದ್ದಾರೆ. ಇಹಕ್ಕೆ ಯೋಗ್ಯವಾದ ಸಿದ್ಧಿಯನ್ನು ಪೂರ್ಣಾಂದಿಸಿದ ಬಲ್ಲನುಭವಿಗಳು ತಂದೆಗಳನ್ನಿಸಿಕಾಳ್ಳುತ್ತಾರೆ. ಆದಿ ಸಭೆಯಲ್ಲಿ ಪೌಚ್ಚು ಜನರು ಸಂವರ್ತಿಗಳಾಗಿ ಶೇರಿದ ಪ್ರಾಯಸ್ಥರಾಗಿದ್ದರು. ಆದ್ದರಿಂದ ಆತ್ಮಿಕ ಪ್ರಾಯದ ಅಪೇಕ್ಷಿತ ಪ್ರಾಯವು ಈ ಸ್ಥಳಕ್ಕೆ ಪೌಚ್ಚಾಗಿ ಅನುಕೂಲವಾಗಿದೆಂದು ತೋರುತ್ತದೆ.

೧೫. ಲೌಕಿಕವನ್ನಾದರೂ ೧), ಲೌಕಿಕದಲ್ಲಿರುವವುಗಳನ್ನಾದರೂ ೨), ಪ್ರೀತಿಮಾಡಬೇಡಿರಿ. ಯಾವನಾದರೂ ಲೌಕಿಕವನ್ನು ಪ್ರೀತಿ ಮಾಡಿದರೆ, ಅವನಲ್ಲಿ ತಂದೆಯ ಪ್ರೀತಿಯು ಇಲ್ಲ ೩). ೧೬. ಯಾಕಂದರೆ ಮಾಂಸದ ಆಶೆಯೂ, ಕಣ್ಣುಗಳ ಆಶೆಯೂ, ಬದುಕಿನ ಹಮ್ಮೂ ೪) ಎಂಬ ಲೌಕಿಕದಲ್ಲಿರುವಂಥಾದ್ದೆಲ್ಲಾ ತಂದೆಯಿಂದಲ್ಲ, ಲೌಕಿಕದಿಂದ ಹುಟ್ಟುವದು. ೧೭. ಲೌಕಿಕವೂ, ಅದರ ಆಶೆಯೂ ಕಳೆದು ಹೋಗುತ್ತವೆ ೫); ಆದರೆ ದೇವರ ಚಿತ್ತವನ್ನು ಮಾಡುವವನು ಎಂದೆಂದಿಗೂ ನೆಲೆಯಾಗಿರುತ್ತಾನೆ ೬).

೧. ದೇವರಿಗೆ ಅವಿಧೇಯವಾದ ಲೌಕಿಕ ಜನಗಳ ಸಲಿಗೆಯಲ್ಲಿರಬಾರದು.

೨. ಲೌಕಿಕ ಪೂರ್ಣಕ್ಕೆ ಆಸಕ್ತನಾಗಿರಬಾರದು.

೩. ಲೌಕಿಕವನ್ನು ಪ್ರೀತಿ ಮಾಡುವ ಪೃಥಮಯಲ್ಲಿ ದೇವರ ಪ್ರೀತಿಯು ವಾಸ ಮಾಡಕೂಡದು. ಇದರ ಕಾರಣ ೧೬ನೆ ವಚನದಲ್ಲಿ ಬರಪಡೆ.

೪. ಅಂದರೆ, ೧) ಕಾಮವಿಕಾರವು. ೨) ಧನ ಕನಕ ವಸ್ತು ವಾಹನ ವಸ್ತ್ರಾಲಂಕಾರಭೂಷಣಗಳ ಅತಿಶಯವು. ೩) ಪ್ರಪಂಚದಲ್ಲಿ ಸಾಕ್ಷಿದವರಿಗೆ ಮನಸಾಪೂರ್ಣವಾದ ವೈಭವವು. ಇವು ಕ್ರೈಸ್ತನಿಗೆ ಅಯೋಗ್ಯವಾಗಿವೆ; ಯಾಕಂದರೆ ಅ) ಇದೆಲ್ಲಾ ತಂದೆಯಾದ ದೇವರ ಮನಸ್ಸಿಗೆ ವಿರೋಧವಾಗಿವೆ. ಮತ್ತು

೫. ಇ) ಅದೆಲ್ಲಾ ಐಹಿಕವಾಗಿವೆ. ನಾಲ್ಕು ದಿವಸ ಇದ್ದ ಬಳಿಕ, ನಾಶವಾಗುವ ಸೌಖ್ಯವನ್ನು ಬಯಸುವದು ಪೃರ್ಥವಾಗಿದೆ.

೬. ದೇವರಿಗೆ ವಿಧೇಯನಾಗಿದ್ದು ಆತನ ಐಕ್ಯದಲ್ಲಿರುವವನಿಗೆ ಇಹದಲ್ಲಿಯೂ, ಪರದಲ್ಲಿಯೂ ನಿಜವಾದ ಆತ್ಮಸುಖವು ಪ್ರಾಪ್ತವಾಗುವದು.

೧೮. ಮಕ್ಕಳೇ, ಕಡೇ ಘಳಿಗೆಯಾಗಿದೆ ೧); ಮಶ್ಶು, ಅಂಶಿಕ್ರಿಸ್ತನು ಬರುತ್ತಾನೆಂದು ನೀವು ಕೇಳಿದ ಪ್ರಕಾರ, ಇಗಲೇ ಅಂಶಿಕ್ರಿಸ್ತರು ಅನೇಕರು ಇದ್ದಾರೆ. ಇದ್ದರಿಂದ, ಕಡೇ ಘಳಿಗೆಯಾಗಿದೆ ೨), ಎಂದು ತಿಳುಕಾಳ್ಳುತ್ತೇವೆ. ೧೯. ಅವರು ನಮ್ಮಲ್ಲಿಂದ ಹೊರಟರು, ಆದರೆ ನಮ್ಮವರಾಗಿರಲಿಲ್ಲ. ಯಾಕಂದರೆ ನಮ್ಮವರಾಗಿದ್ದರೆ, ನಮ್ಮ ಸಂಗಡ ನೆಲೆಯಾಗಿರುತ್ತಿದ್ದರು ೩). ಆದರೆ, ಅವರೆಲ್ಲರು ನಮ್ಮವರಲ್ಲವೆಂದು, (ಪ್ರಕಟವಾಗುವ ಹಾಗೆ ೪), ಹೊರಟರು. ೨೦. ಆದರೆ ನೀವು ಪರಿಶುದ್ಧನಿಂದ ಅಭಿಷೇಕವನ್ನು ಹೊಂದಿ, ಎಲ್ಲಾ ಬಲ್ಲರಿ ೫). ೨೧. ನೀವು ಸತ್ಯವನ್ನು ಅರಿಯದೆ

ಆತ್ಮಿಕ ತಾರತಮ್ಯನಿಶ್ಚಿತಗಳು.

೧ ಯೋಹಾ. ೨, ೨೨—೨೫.

ಇರುವದರಿಂದಲ್ಲ, ನೀವು ಅದನ್ನೂ, ಯಾವ ಸುಳ್ಳಾದರೂ ಸತ್ಯದಿಂದಾಗಿರುವದಿಲ್ಲ ವೆಂಬುವದನ್ನೂ, ಅರಿತಿರುವದರಿಂದ [೮]) ನಿಮಗೆ ಬರೆದಿದ್ದೇನೆ. ೨೨. ಯೇಸುವು ಕ್ರಿಸ್ತನಲ್ಲವೆಂದು ಅಲ್ಲಗಳೆಯುವವನು ಹೌರ್ಜ, ಸುಳ್ಳುಗಾರನು ಯಾರು? ಇವನು ತಂದೆಯನ್ನೂ ಮಗನನ್ನೂ ಅಲ್ಲಗಳೆಯುವ ಅಂತಿಕ್ರಿಸ್ತನಾಗಿದ್ದಾನೆ [೯]). ೨೩. ಮಗನನ್ನು ಅಲ್ಲಗಳೆಯುವ ಪ್ರತಿ ಮನುಷ್ಯನು ತಂದೆಯನ್ನು ಸಹ ಹೊಂದದೆ ಇದ್ದಾನೆ [೧೦]). ಮಗನನ್ನು ಅರಿಕೆ ಮಾಡುವವನು ತಂದೆಯನ್ನು ಸಹ ಹೊಂದಿದ್ದಾನೆ. ೨೪. ಆದದರಿಂದ ನೀವು ಆದಿಯಿಂದ ಕೇಳಿದ್ದು ನಿಮ್ಮಲ್ಲಿ ನೆಲೆಯಾಗಿರಲಿ. ನೀವು ಆದಿಯಿಂದ ಕೇಳಿದ್ದು ನಿಮ್ಮಲ್ಲಿ ನೆಲೆಯಾಗಿದ್ದರೆ, ನೀವು ಮಗನಲ್ಲಿಯೂ ತಂದೆಯಲ್ಲಿಯೂ ನೆಲೆಯಾಗಿರುವಿರಿ. ೨೫. ಮತ್ತು ಅವನು ನಮಗೆ [೧೧]) ವಾಗ್ದತ್ತ ಮಾಡಿದ ವಾಗ್ದತ್ತವು ಇದ್ದೇ—ಏನಂದರೆ, ನಿತ್ಯಜೀವವು.

೧. ಈ ಪದಕ್ಕೆ ಇಲ್ಲಿ ವಿಶೇಷವಾದ ಅಭಿಪ್ರಾಯವದೆ; ಅದೇನಂದರೆ: ಅಪಾಸ್ತಲರ ಕಾಲದ ಕಡೇ ದಿವಸಗಳು. ಬೇರೆ ಅಪಾಸ್ತಲರೆಲ್ಲರು ಸತ್ತ ಮೇಲೆ, ಯೋಹಾನನಾಬ್ಬನು ಮಾತ್ರ ಉಳಿದು, ಜೀವದ ಅಂತ್ಯದಲ್ಲಿ ಈ ಪತ್ರಿಕೆಯನ್ನು ಬರದನು. ಅವನು ಆಗ ಸ್ವಲ್ಪ ಕಡಿಮೆಯಾಗಿ ನೂರು ವರುಷದವನಾಗಿದ್ದನು. ೭೦ ವರುಷ ಪರ್ಯಂತ ಅಪಾಸ್ತಲಾದ್ಯೋಗವನ್ನು ನಡಿಸಿ, ಕ್ರೈಸ್ತಸಭೆಯು ಅನೇಕ ದೇಶಗಳಲ್ಲಿ ವಿಸ್ತಾರವಾಗುವದನ್ನು ನೋಡಿದರೂ, ಯೇಸು ಕ್ರಿಸ್ತನ ಪ್ರೀತಿಯೂ ಶಿಕ್ಷೆಯೂ ಚಕ್ಕರಲ್ಲಿ ಕುಂದುತ್ತಾ ಬಂದದರಿಂದಲೂ, ಅಬದ್ಧಬೋಧಕರ ಲೆಖ್ಖವೂ ಲಜ್ಜಾರಹಿತ ಧೈರ್ಯವೂ ಹೆಚ್ಚುತ್ತಾ ಬಂದದರಿಂದಲೂ, ದುಃಖಿತನಾಗಿ, ತಾನು ಸಹ ಸತ್ತ ಮೇಲೆ ಸಭೆಯ ನಷ್ಟವು ವೃದ್ಧಿಯಾದೀತೆಂದು ಜಾವಿಸಿ ಕಾಂಡು, ಕಡೆ ಘಳಿಗೆಯಂಬ ಪದವನ್ನು ಪ್ರಯೋಗಿಸುತ್ತಾನೆ.

೨. ಪ್ರತಿಕ್ರಿಸ್ತನ ಬರುವಿಕೆಯು ಕಡೇ ಕಾಲದ ಲಕ್ಷಣವೆಂದು, ವಿಶೇಷವಾದ ಪ್ರಕಟನೆಯಿಂದ ತಿಳಿದು ಕಾಂಡ ಅಪಾಸ್ತಲನು ಪ್ರತಿಕ್ರಿಸ್ತನ ಮುಂದಾಳುಗಾರರಾದ ಪ್ರತಿಕ್ರಿಸ್ತರು ಎದ್ದದ್ದನ್ನು ಕಂಡು, ಅದು ಪ್ರತಿಕ್ರಿಸ್ತನ ಬರುವಿಕೆಯ ಗುರುತಾಗಿದೆಂದು ತಿಳಿದು, ತಾನೆ ಬಿಟ್ಟವಾಗಿ, ಇದು ಕಡೇ ಘಳಿಗೆಯಂದು ತಿಳಿದು ಕಾಳ್ಳುತ್ತೇವೆಂತ ಬರೆಯುತ್ತಾನೆ.

೩. ಸತ್ಯವಾಗಿ ಯೇಸು ಕ್ರಿಸ್ತನ ಐಕ್ಯದಲ್ಲಿ ಶೇರಿದವರಿಗೆ ಇಂಥಾ ಮೋಸವು ಆಗುವದಿಲ್ಲ. ಆದರೆ ಅರ್ಧ ಮನಸ್ಸಿನಿಂದ ನಂಬಿ, ಯೇಸು ಕ್ರಿಸ್ತನನ್ನು ಪೂರ್ಣಹೃದಯದಿಂದ ಪ್ರೀತಿ ಮಾಡದೆ, ದೇವರಿಗೆ ವಿಧೇಯರಾಗಿರದೆ, ಸಭೆಯ ಪೂರ್ಣಾಕ್ಕುಬಳಿಕೆಯಲ್ಲಿರುವ ಮನುಷ್ಯರಿಗೆ ನಾನಾ ವಿಧವಾದ ಆತ್ಮಿಕ ಕಂಟಕವು ಬರುತ್ತದೆ.

೪. ಪೂರ್ವಾರಟರು ಎಂಬುದು ಗ್ರೀಕದಲ್ಲಿ ಬರದಿರುವದಿಲ್ಲ. ಅದು ಅನುಕ್ತವಾಗಿ ತಿಳಿಯುತ್ತದೆ. ಅಂಥವರು ಸಭೆಯನ್ನು ಬಿಟ್ಟರೆ, ಚಕ್ಕರು ಸಂತೋಷ ಪಡತಕ್ಕದ್ದು.

೫. ಅಂದರೆ, ಸತ್ಯವನ್ನೂ ಅಸತ್ಯವನ್ನೂ ಚೇದ ಮಾಡುವ ವಿವೇಕವನ್ನು ಪರಿಶುದ್ಧಾತ್ಮದಿಂದ ಪೂರ್ಣಾಂದಿದ್ದೀರಿ.

೬. ಸುವಾರ್ತೆಯ ಮರ್ಮವನ್ನು ತಿಳಿದು ಕಾಂಡು, ಯೇಸು ಕ್ರಿಸ್ತನನ್ನು ನಂಬಿ ಪ್ರೀತಿ ಮಾಡುವವರು ಚಾಲೇಯರಾಗಿದ್ದರೂ, ಅಬದ್ಧಬೋಧಕರ ವಂಚನೆಗಳಿಂದ ಮೋಸ ಪೂರ್ಣಾಗುವದಿಲ್ಲ. ಅಪಾಸ್ತಲನು ಅಬದ್ಧಬೋಧಕರನ್ನು ಸತ್ಯವಾದ ವಿಶ್ವಾಸಕ್ಕೆ ಶಿರು

ಗಿಸುವದಕ್ಕೆ ಯತ್ನೈಸುವದಿಲ್ಲ. ಅವರ ಗಾಡವೆಗೆ ಪೌಲಾಗದಿದ್ದರೆ ವಾಸಿ ಎಂದು ತಿಳಿದು ಕಾಳ್ಳುತ್ತಾನೆ.

೭. ಇದು ಪ್ರತಿಕ್ರಿಸ್ತಚಾವದ ನಿಸ್ಸಂಶಯವಾದ ಒಂದು ಲಕ್ಷಣವಾಗಿದೆ.

೮. ದೇವರ ಮಗನನ್ನು ನಂಬಿದೆ ಇರುವವನಲ್ಲಿ ನಿಜವಾದ ಚಕ್ತಿಯು ಎಷ್ಟು ಮಾತ್ರವೂ ಇಲ್ಲ. ಯೇಸು ಕ್ರಿಸ್ತನನ್ನು ನಂಬಿದೆ ಇರುವವರು ದೇವಚಕ್ತಿಯಿಲ್ಲದವರಾಗಿದ್ದಾರೆ. ಕ್ರೈಸ್ತರನಿಸಿ ಕಾಳ್ಳುವ ವಿಲಾಯತಿಯವರು ಮುಂತಾದವರಲ್ಲಿ ಅನೇಕರು, ಕ್ರಿಸ್ತನ ವಿಶ್ವಾಸವನ್ನು ತಿರಸ್ಕರಿಸಿದರೂ, ದೇವಚಕ್ತರಾಗಿದ್ದೇವೆಂದು ಪೇಳುವದು ವಂಚನೆಯಾಗಿದೆಂದು, ಈ ಮಾತಿನಿಂದ ಪ್ರಾಮಾಣ್ಯವಾಗಿದೆ. ವಿಗ್ರಹಾರಾಧಕರಾದ ಪರಜನರಲ್ಲಿ ನಿಜವಾದ ಚಕ್ತಿಯು ಇರಲಾರದು; ಯಾಕಂದರೆ ಏಕ ದೇವನನ್ನು ಚಚಿಸದೆ ಇರುವ ಮನುಷ್ಯನ ಹೃದಯದಲ್ಲಿ ಚಕ್ತಿಯ ಮೂಲವಾದ ವಿಶ್ವಾಸವು ಹುಟ್ಟುವದಿಲ್ಲ.

೯. ಅಂದರೆ, ವಿಶ್ವಾಸದಲ್ಲಿ ಸ್ಥಿರವಾದ ಚಕ್ತರಿಗೆ.

೨೬. ನಿಮ್ಮನ್ನು ಮೋಸಗಾಳಿಸುವವರ ವಿಷಯವಾಗಿ ಇವುಗಳನ್ನು ನಿಮಗೆ ಬರೆದಿದ್ದೇನೆ ೧). ೨೭. ಆದರೆ ನೀವು ಅವನಿಂದ ಹೊಂದಿದ ಅಭಿಷೇಕವು ೨) ನಿಮ್ಮಲ್ಲಿ ನೆಲೆಯಾಗಿದೆ. ಮತ್ತು ಯಾವನಾದರೂ ನಿಮ್ಮನ್ನು ಬೋಧಿಸುವದು ನಿಮಗೆ ಅಗತ್ಯವಿಲ್ಲ ೩), ಆದರೆ ಅದೇ ಅಭಿಷೇಕವು ಸುಳ್ಳು ಅಲ್ಲ, ಸತ್ಯವಾಗಿದ್ದು, ಎಲ್ಲವುಗಳ ವಿಷಯವಾಗಿ ನಿಮಗೆ ಬೋಧಿಸುವ ಪ್ರಕಾರ, ಅದು ನಿಮಗೆ ಬೋಧಿಸಿದ ಪ್ರಕಾರವೇ, ಅವನಲ್ಲಿ ನೆಲೆಯಾಗಿರ್ರಿ. ೨೮. ಮತ್ತು ಇಗ, ಎಳೆ ಮಕ್ಕಳೇ, ಅವನು ಪ್ರತ್ಯಕ್ಷನಾಗುವಾಗ ೪), ನಾವು ಧೈರ್ಯವುಳ್ಳವರಾಗಿ, ಅವನ ಬರುವಿಕೆಯಲ್ಲಿ ಅವನಿಂದ ನಾಚಿಕೆ ಪಡದ ಹಾಗೆ, ಅವನಲ್ಲಿ ನೆಲೆಯಾಗಿರ್ರಿ.

೧. ಯೋಹಾನನು ಸಖೆಯವರನ್ನು ಅಬದ್ಧ ಬೋಧಕರ ಮೋಸಗಳಿಗೆ ತಪ್ಪಿಸುವದಕ್ಕೆ ಪೌಲನ ಬೋಧನೆಯನ್ನು ಪೇಳದೆ, ಸಖೆಯವರು ತಿಳಿದು ಕಾಂಡ ಸತ್ಯದಲ್ಲಿ ಸ್ಥಿರವಾಗಿರ ಬೇಕೆಂದು ಮಾತ್ರ ಎಚ್ಚರಿಸುತ್ತಾನೆ.

೨. ಇದು ೧೦ನೆ ವಚನಕ್ಕೆ ಸರಿಯಾಗಿದೆ.

೩. ಇದಕ್ಕೆ ಸದೃಶವಾದ ತಾತ್ಪರ್ಯವು ೨೭ಲ್ಲಿ ಕಾಣುತ್ತದೆ.

೪. ಅಪಾಸ್ತಲನಾದ ಯೋಹಾನನು ಸಖ, ಪೌಲ ಪೇತ್ರ ಯಾಕೋಬ ಯೂದರ ಪ್ರಕಾರ, ಎಡೆಬಿಡದೆ ಕರ್ತನ ದಿವಸವನ್ನು ಎದುರು ನೋಡುತ್ತಾ ಇದ್ದನೆಂದು, ಇಲ್ಲಿಯೂ ೫ನೆ ಸಂಧಿಯ ಆರಂಭದಲ್ಲಿಯೂ ಸ್ಪಷ್ಟವಾಗಿ ಕಾಣುತ್ತದೆ.

೪) ದೇವಜನ್ಯರ ದೇವಪುತ್ರತ್ವವು. ಸ. ೨, ೨೯—೫, ೨೪.

೨೯. ಅವನು ನೀತಿವಂತನಾಗಿದ್ದಾನೆಂದು, ನೀವು ತಿಳುಕೊಂಡರೆ, ನೀತಿಯನ್ನು ಮಾಡುವ ಪ್ರತಿ ಮನುಷ್ಯನು ಅವನಿಂದ ಹುಟ್ಟಿದ್ದಾನೆಂದು ೧), ತಿಳುಕೊಳ್ಳಿರಿ. ೩, ೧. ಇಗೋ ೨), ನಾವು ದೇವರ ಮಕ್ಕಳೆಂದು ಕರೆಯಲ್ಪಡುವ ಹಾಗೆ ೩), ತಂದೆಯು ನಮ್ಮ ಮೇಲೆ ಎಂಥ ಪ್ರೀತಿ ಇಟ್ಟಿದ್ದಾನೆ! ಅದಕ್ಕಾಗಿಯೇ ಲೋಕವು ನಮ್ಮನ್ನು

ಪುತ್ರಸಂಬಂಧದ ದೃಢತ್ವ.

೧ ಯೌಹಾ. ೩, ೨—೫.

ಅರಿಯದು; ಯಾಕಂದರೆ ಅವನನ್ನು ಅರಿಯದೆ ಇಶ್ರು ೪). ೨. ಪ್ರಿಯರೇ ೫), ಇ ಗ ದೇವರ ಮಕ್ಕಳಾಗಿದ್ದೇವೆ ೬); ಮಶ್ತು ವಿನಾಗಿರುವೆವೌ, ಇನ್ನೂ ಕಾಣಲಿಲ್ಲ ೭); ಆದರೆ, ಅವನು (ಪ್ರತ್ಯಕ್ಷವಾಗುವಾಗ, ಅವನ ೮) ಹಾಗೆ ೯) ಇರುವೆವೆಂದು, ಬಲ್ಲೆವು. ಯಾಕಂದರೆ ೧೦) ಅವನನ್ನು, ಇರುವ (ಪ್ರಕಾರವೇ ೧೧), ನೋಡುವೆವು ೧೨).

೧. ಅಪಾಸ್ತಲನು ದೇವಪುತ್ರತ್ವತಾತ್ಪರ್ಯವನ್ನು ಇಲ್ಲಿ ಉಪಕ್ರಮಿಸಿ, ಎಲ್ಲರಿಗೂ ತಾರುಪಂಥಾಮುಖ್ಯವಾದ ದೇವಪುತ್ರತ್ವಲಕ್ಷಣವನ್ನು ಸೂಚಿಸುತ್ತಾನೆ; ಅದೇನಂದರೆ, ನಿತ್ಯಾನುಸಾರವಾದ ನಡತೆಯು. ಯಾಕಂದರೆ: ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಪ್ರಕಟವಾದ ನೀತಿಯು ಆತನ ಜಾತಿಯವರಾದ ದೇವರ ಮಕ್ಕಳಾದವರೆಲ್ಲರಲ್ಲಿ ಕಾಣಬೇಕು.

೨. ಪಾಪಿಗಳಾದ ಮನುಷ್ಯರಿಗೆ ಪ್ರಾಪ್ತವಾದ ದೇವಪುತ್ರತ್ವದ ಜಾವನೆಯು ೭೦ ವರುಷಕ್ಕಿಂತ ಮುಂಚೆ ಅವನ ಪ್ರೌಢಯದಲ್ಲಿ ಪುಟ್ಟಿದಕಾಲದಲ್ಲಿ ಇದ್ದಂತೆ ೧೦೦ ವರುಷ ಪ್ರಾಯದವನಾದ ಅಪಾಸ್ತಲನಿಗೆ ಈಗಲೂ ಆಶ್ಚರ್ಯಕರವಾಗಿಯೇ ತಾರುತ್ತದೆ. ಆತ್ಮಿಕ ರುಚಿಯು ಹೊಚ್ಚವದೇ ಪೌರ್ವಾರ್ಯ ಶಿಗಡಿಸುವದಿಲ್ಲ.

೩. ಅಂದರೆ, ದೇವರಿಂದ ಪುಟ್ಟಿದವರಾಗಿ, ದೇವರ ಮಕ್ಕಳೆಂಬ ಬಿರುದು ಪೌರಾಣಿಯವ ಪೌರಾಗೆ. ತಂದೆಯಾದ ದೇವರು ತನ್ನ ಮಕ್ಕಳಿಗೆ ಇದಕ್ಕಿಂತ ಉತ್ತಮವಾದ ಮಾನವನ್ನು ಕಾಡಲಾರನು.

೪. ದೇವರ ಮಹಿಮೆಯನ್ನು ತಿಳಿಯದ ಲೌಕವು ದೇವರ ಮಕ್ಕಳ ಮಹಿಮೆಯನ್ನು ತಿಳಿಯದೆ ಇರುವದು ಸಹಜವಾಗಿದೆ.

೫. ಅಪಾಸ್ತಲನು, ತನ್ನ ಶಿಷ್ಯರು ಪರಮ ಸುಖಾನ್ವಿತವಾದ ಪದವಿಯಲ್ಲಿ ಸಮಬಾಧ್ಯಸ್ಥರಾಗಿದ್ದಾರೆಂದು, ನೆನಸಿ ಕಾಂಡು, ಈ ಮಮತಾಸಂಬೋಧನೆಯನ್ನು ಪ್ರಯೋಗಿಸುತ್ತಾನೆ.

೬. ಪರಿಶುದ್ಧಾತ್ಮದಿಂದ ಪುನರ್ಜಾತರಾದ ದೇವರ ಮಕ್ಕಳಾಗಿದ್ದೇವೆ. ಇದು ಅಪಾರವಾದ ಮಹಿಮೆಯಾಗಿದೆ. ಇದು ಭವಿಷ್ಯತ್ತಾದದ್ದಲ್ಲ, ವರ್ತಮಾನವಾದದ್ದು.

೭. ಅಂದರೆ, ದೇವರ ಮಕ್ಕಳಲ್ಲಿ ಕಾಣಶಕ್ಯ ಪರದಮಹಿಮೆಯು ಇಹದಲ್ಲಿ ಲೌಕಕ್ಕೆ ಗೋಚರವಾಗುವದಿಲ್ಲ. ಆದಾಗ್ಯೂ ಪರದ ಬಾಧ್ಯತೆಯ ಸಂಚಕಾರವಾದ ಮಹಿಮೆಯ ಆತ್ಮವು ಅವರಲ್ಲಿ ವಾಸವಾಗಿದೆ.

೮. ಅವನ ಎಂಬ ಪದವು ದೇವರನ್ನು ಸೂಚಿಸುತ್ತದೆ; ಆದರೆ ದೇವರು ಯೇಸು ಕ್ರಿಸ್ತನಲ್ಲಿಯೇ ಪ್ರತ್ಯಕ್ಷವಾಗುತ್ತಾನೆ.

೯. ಇದಕ್ಕೆ ಅತೀತವಾದ ಮಹಿಮೆಯು ಯಾವದೂ ಇಲ್ಲ.

೧೦. ಸಮಾನಚಾವದವರೇ ಪೌರ್ವಾರ್ಯಯಾರೂ ದೇವರನ್ನು ನೋಡಲಾರರು.

೧೧. ಇದೇ ಅಭಿಪ್ರಾಯವನ್ನು ಪೌಲನು ೧ ಕೊರಿ. ೧೩, ೧೨ರಲ್ಲಿ ಬರದಿದ್ದಾನೆ.

೧೨. ಅಂದರೆ, ತಂದೆಯ ಮಹಿಮೆಯ ಪ್ರತಿಕಾಂತಿಯಾದ ಮಗನನ್ನು ಮುಖಾಮುಖಿಯಾಗಿ ನೋಡುವೆವು.

೩. ಮಶ್ತು ಅವನಲ್ಲಿ ಇ ನಿರೀಕ್ಷೆ ಇಡುವ ಪ್ರತಿ ಮನುಷ್ಯನು, ಅವನು ಪವಿತ್ರವಾಗಿರುವ (ಪ್ರಕಾರ ೧) ತನ್ನನ್ನು ಪವಿತ್ರ ಮಾಡಿ ಕೊಳ್ಳುತ್ತಾನೆ ೨). ೪. ಪಾಪವನ್ನು ಮಾಡುವ ಪ್ರತಿ ಮನುಷ್ಯನು ನ್ಯಾಯಪ್ರಮಾಣವನ್ನು ಮೀರುತ್ತಾನೆ. ಪಾಪವು ನ್ಯಾಯಪ್ರಮಾಣದ ಮೀರುವಿಕೆ ಆಗಿದೆ ೩). ೫. ಮಶ್ತು, ನಮ್ಮಪಾಪಗಳ

ನ್ನು ೪ಕ್ಕಾಂಡು ಹೌಗುವ ಹಾಗೆ, ಅವನು ಪ್ರಶ್ನ/ಕ್ಷವಾದನೆಂದು, ಬಲ್ಲಿರಿ೪). ಅವನಲ್ಲಿ ಪಾಪವು ಇಲ್ಲ೫). ೬. ಅವನಲ್ಲಿ ನೆಲೆಯಾಗಿರುವ ಪ್ರತಿ ಮನುಷ್ಯನು ಪಾಪ ಮಾಡನು. ಪಾಪ ಮಾಡುವ ಪ್ರತಿ ಮನುಷ್ಯನು ಅವನನ್ನು ನೌಡಲಿಲ್ಲ, ಅರಿಯಲಿಲ್ಲ೬). ೭. ಎಳೆ ಮಕ್ಕಳ್ಕೀ, ಯಾವನಾದರೂ ನಿಮ್ಮನ್ನು ಮೋಸಗಾಳಿಸದಿ ಇರಲಿ. ಅವನು ನ್ಯೀತಿವಂತನಾಗಿರುವ ಪ್ರಕಾರ೭), ನ್ಯೀತಿಯನ್ನು ಮಾಡುವವನು ನ್ಯೀತಿವಂತನಾಗಿದ್ದಾನೆ. ೮. ಪಾಪ ಮಾಡುವವನು ಪಿಶಾಚನವನಾಗಿದ್ದಾನೆ೮); ಯಾಕಂದರೆ ಆದಿಯಿಂದ ಪಿಶಾಚನು ಪಾಪ ಮಾಡುತ್ತಾನೆ. ಪಿಶಾಚನ ಕ್ರಿಯೆಗಳನ್ನು ಲಯ ಮಾಡುವದಕ್ಕಾಸ್ಕರವೇ ದ್ಯೌವರ ಮಗನು ಪ್ರಶ್ನ/ಕ್ಷವಾದನು. ೯. ದ್ಯೌವರಿಂದ ಹುಟ್ಟಿದ ಪ್ರತಿ ಮನುಷ್ಯನು ಪಾಪ ಮಾಡುವದಿಲ್ಲ೯), ಯಾಕಂದರೆ ಅವನ ಬೀಜವು ಅವನಲ್ಲಿ ನೆಲೆಯಾಗಿದೆ೧೦). ಮತ್ತು ಅವನು, ದ್ಯೌವರಿಂದ ಹುಟ್ಟಿದ ಕಾರಣ, ಪಾಪ ಮಾಡಲಾರನು೧೧). ೧೦. ಇದರಿಂದಲೇ ದ್ಯೌವರ ಮಕ್ಕಳೂ, ಪಿಶಾಚನ ಮಕ್ಕಳೂ ಪ್ರಶ್ನ/ಕ್ಷವಾಗಿದ್ದಾರೆ. ನ್ಯೀತಿಯನ್ನು ಮಾಡದ ಪ್ರತಿ ಮನುಷ್ಯನೂ, ತನ್ನ ಸಹೌದರನನ್ನು ಪ್ರೀತಿ ಮಾಡದವನೂ, ದ್ಯೌವರಿಂದಾದವರಲ್ಲ. ೧೧. ಯಾಕಂದರೆ ನಾವು ಒಬ್ಬರನ್ನೌಬ್ಬರು ಪ್ರೀತಿ ಮಾಡ ಬೇಕೆಂಬುವದು ನೀವು ಆದಿಯಿಂದ ಕೇಳಿದ ಆಜ್ಞೆಯೇ೧೨). ೧೨. ಕಾಯಿನನು ಕೆಟ್ಟವನಿಂದ ಇದ್ದು, ತನ್ನ ಸಹೌದರನನ್ನು ಕೌಂದು ಹಾಕಿದ ಪ್ರಕಾರವಲ್ಲ; ಯಾಕೆ ಅವನನ್ನು ಕೌಂದು ಹಾಕಿದನು? ತನ್ನ ಕ್ರಿಯೆಗಳು ಕೆಟ್ಟವುಗಳೂ, ತನ್ನ ಸಹೌದರನ ಕ್ರಿಯೆಗಳು ನ್ಯೀತಿಯುಳ್ಳವುಗಳೂ, ಆಗಿದ್ದದರಿಂದಲೇ೧೩).

೧. ಸ. ೨, ೨೯ಲ್ಲಿ ಉಪಕ್ರಮಿಸಿದ ತಾತ್ಪರ್ಯವನ್ನು ಅಪಾಸ್ತಲನು ಈ ಮುಂತಾದ ವಚನಗಳಲ್ಲಿ ಪೀಚ್ಚಾಗಿ ವಿವರಿಸುತ್ತಾನೆ. ದೇವರು ನೀತಿವಂತನಾಗಿರುವ ಪ್ರಕಾರ ದೇವರಿಂದ ಪುಟ್ಟಿದವರು ನೀತಿವಂತರಾಗಿರ ಬೇಕೆಂದು, ಮೇಲೆ ಬರಪ ಪ್ರಕಾರ, ಇಲ್ಲಿ ದೇವಪುತ್ರತ್ವಮಹಿಮಾಶೆಯುಳ್ಳ ಚಕ್ತನು ದೇವರ ಮಗನ ಅನ್ಯೂನ್ಯದಲ್ಲಿದ್ದು, ಆತನು ಪವಿತ್ರನಾಗಿರುವ ಪ್ರಕಾರ ಪವಿತ್ರನಾಗ ಬೇಕೆಂದು ಸ್ಥಾಪಿಸುತ್ತಾನೆ.

೨. ಚಕ್ತನಲ್ಲಿರುವ ಮಹಿಮಾಶೆಯು ತನ್ನನ್ನು ಪವಿತ್ರ ಮಾಪಿ ಕಾಳ್ಳುವ ಆಸಕ್ತಿಯ ಮುಖ್ಯ ಪೀತುವಾಗಿದೆ.

೩. ದೇವಮಹಿಮಾಸಕ್ತನಾದ ಚಕ್ತನಲ್ಲಿ ದೇವರ ಚಿತ್ತದ ಪ್ರಕಟೀಕರಣೆಯಾದ ನಿಯಮಕ್ಕೆ ಪೂರ್ಣಾನುಕೂಲವಾದ ಮನಸ್ಸಿರುವವರಿಂದ ನಿಯಮಕ್ಕೆ ವಿರೂಧವಾದ ಪಾಪವು ಅವನ ಮನಸ್ಸಿಗೆ ಪ್ರತಿಕೂಲವಾಗಿದೆ.

೪. ನಮ್ಮ ಪಾಪಗಳನ್ನು ತೆಗೆದು ಪರಿಹಾರಮಾಡುವ ಉದ್ದಿಶ್ಯವಾಗಿ ಪ್ರತ್ಯಕ್ಷನಾದ ಕರ್ತನ ಐಕ್ಯದಲ್ಲಿರುವ ಚಕ್ತನು ಸಹಜವಾಗಿ ಪಾಪವೈರಿಯಾಗಿದ್ದಾನೆ.

೫. ಪಾಪವಿಲ್ಲದವನ ನಿಜವಾದ ಅನ್ಯೂನ್ಯದಲ್ಲಿರುವವನು ಪಾಪ ಮಾಡುವವನಲ್ಲ; ಅಂದರೆ, ಅವನು ತನ್ನಲ್ಲಿ ಪಾಪವಿಲ್ಲವೆಂದು, ಅಥವಾ ತಾನು

ಪುತ್ರ ಸಂಬಂಧದ ದೃಢತ್ವ.

೧ ಯ್ಯೂಹಾ. ೩, ೧೩—೧೪.

ಪಾಪ ಮಾಡಿದವನಲ್ಲವೆಂದು ಸ. ೧, ಲ. ೧೦. ಹಾವಿನಿ ಕಾಳ್ಳವದಿಲ್ಲ. ತನ್ನ ಹಾವದಲ್ಲಿ ಒಳ್ಳೇದೇ ನಾದರೂ ವಾಸವಾಗಿರುವದಿಲ್ಲವೆಂದು ಬಲ್ಲನು. ಆದರೆ ಅಂತರ್ಮನುಷ್ಯನ ಪ್ರಕಾರ ದೇವರ ನಿಯಮದಲ್ಲಿ ಆನಂದ ಪಡುತ್ತಾ, ಪೌಲನು ರೋಮಾ. ೭, ೧೭. ೨೦. ಹೇಳಿದಂತೆ, ಇಲ್ಲಿ ಬರದ ವಾಕ್ಯವು ತನ್ನಲ್ಲಿಯೂ ಸತ್ಯವಾದದ್ದೆಂದು, ಸಾಕ್ಷಿ ಕಾಡ ಬಹುದು.

೬. ಅಂದರೆ, ಪಾಪಕ್ಕೆ ಮೆಚ್ಚಿ ಅದಕ್ಕೆ ಆಳಾಗಿರುವ ಮನುಷ್ಯನು ಕ್ರಿಸ್ತನ ಐಕ್ಯದಲ್ಲಿರುವದಿಲ್ಲ. ಆತನನ್ನು ತಿಳಿದಿದ್ದೇನೆಂದು ಹೇಳಿದರೆ, ಸ. ೨, ೪ರ ಪ್ರಕಾರ ಸುಳ್ಳುಗಾರನಾಗಿದ್ದಾನೆ.

೭. ಈ ವಚನದ ತಾತ್ಪರ್ಯದ ಕಾರಣವು ಸ. ೨, ೫ರಲ್ಲಿ ಕಾಣುತ್ತದೆ.

೮. ಯೇಸು ಕ್ರಿಸ್ತನು ನೀತಿಮೂಲವಾಗಿರುವ ಪ್ರಕಾರ, ಸೈತಾನನು ಪಾಪಮೂಲವಾಗಿದ್ದಾನೆ. ಯೋಹಾ. ೮, ೪೪.

೯. ಇದು ೭ನೆ ವಚನಕ್ಕೂ ಸ. ೨, ೫ಕ್ಕೂ ಒಪ್ಪುತ್ತದೆ. ದೇವರಿಂದ ಹುಟ್ಟಿದವನು ದೇವರ ಮಗನ ಐಕ್ಯದಲ್ಲಿ ನೆಲೆಯಾಗಿದ್ದಾನೆ.

೧೦. ಅಂದರೆ, ದೇವರಿಂದ ಹುಟ್ಟಿದವನು ತಾನು ಹುಟ್ಟಿದ ಮೂಲದಲ್ಲಿಯೇ ಇದ್ದು ಬದುಕುತ್ತಾನೆ.

೧೧. ಪಾಪಾಚರಣೆಯು ಅವನ ಸ್ವಚಿತಾಪಕ್ಕೆ ವಿರೋಧವಾದದ್ದು.

೧೨. ಸ. ೨, ೭. ಸರಿ ನೋಡ ಬೇಕು. ಪ್ರೀತಿಯು ದೇವಪುತ್ರತ್ವಕ್ಕೆ ಎರಡನೆ ಮುಖ್ಯ ಲಕ್ಷಣವಾಗಿದೆ.

೧೩. ಕಾಯಿನನ ದುಷ್ಟತ್ವವೆ ನೀತಿವಂತನಾದ ತಮ್ಮನಿಗೆ ಮಾಡಿದ ದ್ವೇಷಕ್ಕೆ ಕಾರಣವಾಗಿತ್ತು.

೧೩. ನನ್ನ ಸಹೋದರರ್ಕಿ, ಲೋಕವು ನಿಮ್ಮನ್ನು ಹಗೆ ಮಾಡಿದರೆ, ಆಶ್ಚರ್ಯಪಡ ಬೇಡಿರಿ ೧). ೧೪. ನಾವು ಸಹೋದರರನ್ನು ಪ್ರೀತಿ ಮಾಡುವದರಿಂದ, ಮರಣದಾಳ್ಗಿಂದ ಹೊರಟು, ಜೀವದಲ್ಲಿ ಶೇರಿದೆವೆಂದು ಬಲ್ಲೆವು ೨). ಸಹೋದರನನ್ನು ಪ್ರೀತಿ ಮಾಡದವನು ಮರಣದಲ್ಲಿ ನೆಲೆಯಾಗಿದ್ದಾನೆ ೩). ೧೫. ತನ್ನ ಸಹೋದರನನ್ನು ಹಗೆ ಮಾಡುವ ಪ್ರತಿ ಮನುಷ್ಯನು ಕೊಲೆಗಾರನಾಗಿದ್ದಾನೆ. ಮತ್ತು ಕೊಲೆಗಾರನಾದ ಯಾವನಿಗೂ ತನ್ನಲ್ಲಿ ನೆಲೆಯಾಗಿರುವ ನಿತ್ಯಜೀವವಿಲ್ಲವೆಂದು ಬಲ್ಲಿರಿ. ೧೬. ಅವನು ನಮಗಾಗ್ಯಾಸ್ತರ ತನ್ನ ಪ್ರಾಣವನ್ನು ಕೊಟ್ಟದರಿಂದಲೇ ಪ್ರೀತಿಯನ್ನು ತಿಳುಕೊಂಡಿದ್ದೇವೆ. ಮತ್ತು ನಾವು ಸಹೋದರರಿಗಾಗ್ಯಾಸ್ತರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ ೪). ೧೭. ಆದರೆ ಲೋಕದ ಬದುಕು ಉಂಟಾದವನು, ತನ್ನ ಸಹೋದರನಿಗೆ ಕೊರತೆ ಇರುವದನ್ನು ನ್ಯಾಪಿ, ತನ್ನ ಅಂತಃಕರಣವನ್ನು ಅವನಿಗೆ ಮುಚ್ಚಿದರೆ, ಅವನಲ್ಲಿ ದೇವರ ಪ್ರೀತಿಯು ನೆಲೆಯಾಗಿರುವದು ಹ್ಯಾಗೆ ೫)? ೧೮. ನನ್ನ ಎಳೆ ಮಕ್ಕಳ್ಕಿ, ಮಾತಿನಿಂದಲೂ ನಾಲಿಗೆಯಿಂದಲೂ ಅಲ್ಲ, ಕ್ರಿಯೆಯಿಂದಲೂ ಸತ್ಯದಿಂದಲೂ ೬) ಪ್ರೀತಿ ಮಾಡುವಾ.

೧. ಯಾಕಂದರೆ: ನರಚರಿತ್ರದ ಆದಿಯಿಂದಲೇ ಇದು ಲೋಕವಾಡಿಕೆಯಾಯಿತೆಂದು, ದೇವರ ವಾಕ್ಯದ ಆರಂಭದಲ್ಲಿ ಬರದದೆ. ಆದಮನ ಚಾಚ್ಚಲುಮಗನು ಕಾಲೆಗಾರನಾದನು.

೨. ಈ ಲಕ್ಷಣವು ತಾವು ದೇವರ ಮಕ್ಕಳೆಂದು ಭಾವಿಸಿ ಕಾಳ್ಳುವ ಅನೇಕರಲ್ಲಿ ಕಾಣುವದಿಲ್ಲ. ಆದರೆ ಮನುಷ್ಯರ ಭಾವನೆಯಲ್ಲ, ದೇವವಾಕ್ಯದ ಸಾಕ್ಷಿಯೆ ದೃಢವಾದದ್ದು.

೩. ಇದರ ಕಾರಣವು ೧೫ನೆ ವಚನದಲ್ಲಿ ಬರಪದೆ.

೪. ಈ ವಿಧದ ಪ್ರೀತಿಯುಳ್ಳವನು ಸಹಜವಾಗಿ ಸಹೋದರಾಪಕಾರಿಯಾಗಿದ್ದಾನೆ.

೫. ದೇವಪ್ರೀತಿಯುಳ್ಳ ದೇವರ ಮಕ್ಕಳಲ್ಲಿ ನಿಜ ಪ್ರೀತಿಯ ದೃಷ್ಟಾಂತವಾದ ಧನಾನ್ಯೋನ್ಯನಿಯಮವು ನಡೆಯುತ್ತದೆ. ಇದಕ್ಕೆ ಲೂಕ. ೩, ೧೦. ೧೧. ಸರಿ ನೋಡ ಬೇಕು.

೬. ಬರೀ ಮಾತಿಗೆ ಕೃತ್ಯವು, ಕಪಟಿ ನುಡಿಯುವ ನಾಲಿಗೆಗೆ ಸತ್ಯವು ಪ್ರತಿಕೂಲವಾಗಿದೆ.

ಈ ವರೆಗೂ ಉದಾಹರಿಸಿದ ದೇವಪುತ್ರತ್ವಲಕ್ಷಣಗಳ ಪ್ರಕಾರ ಸಭೆಯವರಲ್ಲಿ ಒಬ್ಬೊಬ್ಬನು ತನ್ನನ್ನು ಪರೀಕ್ಷಿಸಿ ಕೊಳ್ಳ ಬೇಕೆಂದು, ಅಪೊಸ್ತಲನು ಸೂಚಿಸಿ, ಈ ಸಂಧಿಯ ಅಭಿಪ್ರಾಯವನ್ನು ಕ್ಲುಪ್ತವಾಗಿ ಅನುವಾದಿಸಿ, ನೀತಿ ಪ್ರೀತಿಗಳ ಲಕ್ಷಣಗಳಿಗೆ ವಿಶ್ವಾಸ, ವ. ೩. ಆತ್ಮ, ವ. ೨೪. ಇವುಗಳ ಲಕ್ಷಣಗಳನ್ನು ಶೋಧಿಸುತ್ತಾನೆ.

೧೫. ಮತ್ತು ಇದರಿಂದ ೧), ನಾವು ಸತ್ಯ/ದಲ್ಲಿದ್ದೇವೆಂದು, ತಿಳಿದು, ಅವನ ಮುಂದೆ ನಮ್ಮ ಹೃದಯಗಳನ್ನು ನಿಶ್ಚಯ ಪಡಿಸುವೆವು. (೨೦. ಹ್ವಾಗಂದರೆ ೨), ನಂಮ ಹೃದಯವು ನಮಗೆ ಆಜ್ಞೆನಿರ್ಣಯ ತಿರಿಸಿದರೆ, ದೇವರು ನಮ್ಮ ಹೃದಯಕ್ಕಿಂತ ದಾಡ್ಡವನಾಗಿದ್ದು, ಎಲ್ಲವುಗಳನ್ನು ತಿಳಿದಿದ್ದಾನೆ. ೨೧. ಪ್ರಿಯರೇ, ನಮ್ಮ ಹೃದಯವು ನಮಗೆ ಆಜ್ಞೆನಿರ್ಣಯ ತಿರಿಸದಿದ್ದರೆ, ದೇವರ ಸನ್ನಿಧಿಯಲ್ಲಿ ನಮಗೆ ಧೈರ್ಯ ಉಂಟು. ಮತ್ತು ಏನು ಬೇಡಿದರೂ ಅವನಿಂದ ಹೊಂದುತ್ತೇವೆ. ೨೨. ಯಾಕಂದರೆ ಅವನ ಕಟ್ಟಳೆಗಳನ್ನು ಕೈಕೊಂಡು ೩), ಅವನ ಮುಂದೆ ಹಿತವಾದವುಗಳಂನು ಮಾಡುತ್ತೇವೆ ೪).) ೨೩. ಅವನ ಕಟ್ಟಳೆಯು ಇದೇ—ಅವನ ಮಗನಾಗಿರುವ ಯೇಸು ಕ್ರಿಸ್ತನ ಹೆಸರಿನಲ್ಲಿ ವಿಶ್ವಾಸವಿಟ್ಟು, ಅವನು ನಮಗೆ ಕಟ್ಟಳೆ ಕೊಟ್ಟ ಪ್ರಕಾರ ೫) ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂಬುವದೇ. ೨೪. ಮತ್ತು ಅವನ ಕಟ್ಟಳೆಗಳನ್ನು ಕೈಕೊಳ್ಳುವವನು ಅವನಲ್ಲಿಯೂ, ಅವನು ಇವನಲ್ಲಿಯೂ ೬), ನೆಲೆಯಾಗಿದ್ದಾರೆ. ಮತ್ತು ಅವನು ನಂಮಲ್ಲಿ ನೆಲೆಯಾಗಿದ್ದಾನೆಂದು ಅವನು ನಮಗೆ ಕೊಟ್ಟ ಆತ್ಮನಿಂದಲೇ ೭) ತಿಳುಕೊಳ್ಳುತ್ತೇವೆ.

೧. ಅಂದರೆ, ೨೩ನೆ ವಚನದಲ್ಲಿ ಬರವಿರುವ ಅವನ ಆಜ್ಞೆಯನ್ನು ಕೈಕೊಳ್ಳುವದರಿಂದ. ೨೦. ೨೧. ೨೨. ವಚನಗಳ ತಾತ್ಪರ್ಯವು ಮಥಾಭೋಕ್ತಿಯಂದು ತಿಳಿಪರೆ, ಮೇಲಿನ ಯಥಾಕ್ರಮದ ಅಭಿಪ್ರಾಯವು ಸುಲಭವಾಗಿ ಕಾಣುತ್ತದೆ.

೨. ಈ ವಚನದ ಅರ್ಥವೇನಂದರೆ· ದೇವರು ನಮ್ಮನ್ನು ಅತಿ ಸೂಕ್ಷ್ಮದೃಷ್ಟಿಯಿಂದ ವಿಚಾರಿಸುತ್ತಾನೆಂಬದನ್ನು ನೆನಸಿ ಕಾಂಡು, ಇಬ್ರಿ. ೪, ೧೨. ಸ್ವಂತ ಹೃದಯಗಳ ಚಾಪನೆಗಳನ್ನು ಬೇಗ ನಂಬ ಬಾರದು.

೩. ವಿಶ್ವಾಸಿಸ ಬೇಕೆಂಬ ಆಜ್ಞೆಯನ್ನು ಸಹೋ. ವ. ೨೩.

೪. ನೀತಿವಂತನಾದ ಯೇಸು ಕ್ರಿಸ್ತನ ಐಕ್ಯದಲ್ಲಿದ್ದು, ತಂಪೆಯನ್ನು ಮೆಚ್ಚಿಸುತ್ತೇವೆ.

ಪ್ರೀತಿವರ್ಣನೆ.

೧ ಯೌಹಾ. ೪, ೧—೬.

೫. ಇದು ಯೋಪೂಹಾ. ೧೩, ೩೪. ಮುಂತಾದ ಸ್ಥಳಗಳಲ್ಲಿ ಬರದಿದೆ.

೬. ಅಂದರೆ, ದೇವಾಜ್ಞಾಚರಣೆಯಿಂದ ದೇವೈಕ್ಯವು ದೃಢವಾಗುವದು.

೭. ಭಕ್ತನಿಗೆ ಪ್ರಾಪ್ತವಾದ ಪರಿಶುದ್ಧಾತ್ಮವು ದೇವೈಕ್ಯಲಕ್ಷಣವಾಗಿದೆ.

ಈ ಸಂಧಿಯ ಅಂತ್ಯದಲ್ಲಿ ಅಪೊಸ್ತಲನು ಸೂಚಿಸಿದ ವಿಶ್ವಾಸವೂ, ಪ್ರೀತಿಯೂ ಎಂಬ ದೇವಪುತ್ರತ್ವ ಲಕ್ಷಣದ್ವಯವನ್ನು ೪ನೆ ೫ನೆ ಸಂಧಿಗಳಲ್ಲಿ ಹೆಚ್ಚಾಗಿ ವಿವರಿಸಿ, ಸ. ೪ಲ್ಲಿ ವಿಶ್ವಾಸದಿಂದ ಹುಟ್ಟುವ (ವ. ೧—೬.) ಪ್ರೀತಿಯ ವರ್ಣನೆಯನ್ನು, ಸ. ೫ಲ್ಲಿ ಪ್ರೀತಿಯನ್ನು ಹುಟ್ಟಿಸುವ (ವ. ೧—೫.) ವಿಶ್ವಾಸದ ವರ್ಣನೆಯನ್ನು ಉದಾಹರಿಸುತ್ತಾನೆ.

೫) ಪ್ರೀತಿಯ ವರ್ಣನೆಯು. ಸ. ೪.

೧. ಪ್ರಿಯರೇ, ಎಲ್ಲಾ ಆತ್ಮಗಳನ್ನು ನಂಬ ಬೇಡಿರಿ; ಆದರೆ, ಅವು ದೇವರಿಂದಿದ್ದಾವೋ? ವಿನೋ? ಆತ್ಮಗಳನ್ನು ಪರೀಕ್ಷಿಸಿರಿ ೧). ಯಾಕಂದರೆ ಅನೇಕ ಸುಳ್ಳು ಪ್ರವಾದಿಗಳು ಲೋಕದಲ್ಲಿ ಹೊರಟಿದ್ದಾರೆ ೨). ೨. ಇದರಿಂದ ದೇವರ ಆತ್ಮನನು ತಿಳುಕೊಳ್ಳಿರಿ—ಯೇಸು ಕ್ರಿಸ್ತನು ಮಾಂಸದಲ್ಲಿ ಬಂದನೆಂದು ಅರಿಕೆ ಮಾಡುವ ಪ್ರತಿ ಆತ್ಮವು ದೇವರಿಂದಾದದ್ದು. ೩. ಮತ್ತು, ಯೇಸು ಕ್ರಿಸ್ತನು ಮಾಂಸದಲ್ಲಿ ಬಂದನೆಂದು, ಅರಿಕೆ ಮಾಡದ ಪ್ರತಿ ಆತ್ಮವು ದೇವರಿಂದಾದದ್ದಲ್ಲ, ಪ್ರತಿ ಕ್ರಿಸ್ತನ ದಾಗಿದೆ; ಅದು ಬರುತ್ತದೆಂದು ಕೇಳಿದ್ದಿರಿ ೩); ಮತ್ತು ಈಗ ಲೋಕದಲ್ಲಿ ಅದೆ ೪). ಎಳೆ ಮಕ್ಕಳೇ, ನೀವು ದೇವರಿಂದಾದವರಾಗಿದ್ದೀರಿ. ೪. ಮತ್ತು ಅವರನ್ನು ಜಯಿಸಿದ್ದೀರಿ ೫). ಯಾಕಂದರೆ ಲೋಕದಲ್ಲಿ ಇರುವವನಿಗಿಂತ ನಿಮ್ಮಲ್ಲಿ ಇರುವವನು ದೊಡ್ಡವನಾಗಿದ್ದಾನೆ. ೫. ಅವರು ಲೋಕದವರಾಗಿದ್ದಾರೆ; ಇದರ ನಿಮಿತ್ತ ಲೋಕದವುಗಳನ್ನು ಮಾತಾಡುತ್ತಾರೆ; ಮತ್ತು ಲೋಕವು ಅವರನ್ನು ಕೇಳುತ್ತದೆ. ೬. ನಾವು ದೇವರಿಂದಾದವರಾಗಿದ್ದೇವೆ. ದೇವರನ್ನು ತಿಳಿದು ಕಾಳ್ಳುವವನು ನಮ್ಮನ್ನು ಕೇಳುತ್ತಾನೆ. ದೇವರಿಂದಲ್ಲದವನು ನಮ್ಮನ್ನು ಕೇಳುವದಿಲ್ಲ. ಇದರಿಂದ ಸತ್ಯದ ಆತ್ಮನನೂ, ಮೋಸದ ಆತ್ಮನನೂ, ತಿಳುಕೊಳ್ಳುತ್ತೇವೆ.

೧. ಅಪಾಸ್ತಲನು ಪ್ರೀತಿಯ ತಾತ್ಪರ್ಯಕ್ಕೆ ಬರುವದಕ್ಕಿಂತ ಮುಂಚೆ, ಪ್ರೀತಿಯ ಮೂಲವಾದ ನಿಜವಾದ ವಿಶ್ವಾಸದ ಚಾಪವನ್ನು ಸಭೆಯವರಿಗೆ ಚ್ಞಾಪಿಸುತ್ತಾನೆ. ಪೌ್ಯಾಗಂದರೆ, ನಿಜ ವಿಶ್ವಾಸವು ಯಥಾರ್ಥವಾದ ಸುವಾರ್ತಾಪ್ರಸಂಗದಿಂದ ಹುಟ್ಟುತ್ತದೆ. ಆದರೆ ಕ್ರೈಸ್ತಬಾಧಕರನ್ನಿಸಿ ಕಾಳ್ಳುವವರೆಲ್ಲರೂ ಕ್ರಿಸ್ತಪಕ್ಷದವರಲ್ಲ; ಅನೇಕರು ಪ್ರತಿಕ್ರಿಸ್ತನವರಾಗಿದ್ದಾರೆ. ಅಂಥವರ ಮಾತಿಗೆ ಕಿವಿ ಕಾಡ ಬಾರದು.

೨. ದೇವರ ವಾಕ್ಯವನ್ನು ಪರಿಶುದ್ಧಾತ್ಮಪ್ರೇರಣೆಯಿಂದ ಪೇಳುವವನು ಪ್ರವಾದಿಯು. ಇತರ ವಾಕ್ಯ

ವನ್ನು ದೇವವಾಕ್ಯವೆಂದು ಇತರಾತ್ಮಪ್ರೇರಣೆಯಿಂದ ಬಾಧಿಸುವವನು ಸುಳ್ಳು ಪ್ರವಾದಿಯು. ಯೇಸು ಕ್ರಿಸ್ತನು ತನ್ನ ಅಪಾಸ್ತಲರನ್ನು ಲೋಕಕ್ಕೆ ಕಳುಹಿಸಿದ ಪ್ರಕಾರ, ಸೈತಾನನು ತನ್ನವರನ್ನು ಕಳುಹಿಸುತ್ತಾನೆ.

೩. ಇದನ್ನು ಸಭೆಯವರು, ಆಗ ಸಭೆಯಲ್ಲಿ ಪ್ರಕಟವಾದ ಸುವಾರ್ತಾಗ್ರಂಥಗಳಲ್ಲಿ ಬರದ, ಯೇಸು ಕ್ರಿಸ್ತನ ಬಾಧನೆಯಿಂದಲೂ, ಆಸ್ಯದ ಸಭೆಗಳಲ್ಲಿ ಪ್ರಸಿದ್ಧವಾದ ಅಪಾಸ್ತಲನಾದ ಪೌಲನ ಪತ್ರಿಕೆಗಳಿಂದಲೂ, ಅಪಾಸ್ತಲನಾದ ಯೋಹಾನನು ಈ ಪತ್ರಿಕೆಗಿಂತ ಬಹಳ ವರುಷಕ್ಕೆ ಮುಂಚಿತವಾಗಿ ರಚಿಸಿದ ಪ್ರಕಟಣೆಯ ಪುಸ್ತಕದಿಂದಲೂ, ತಿಳಿದು ಕಾಳ್ಗ ಬಹುದಿತ್ತು.

೪. ಇದು ೨, ೧೮ಲ್ಲಿ ಬರದದೆ.

೫. ದೇವರ ಆತ್ಮವನ್ನು ಪಡೆಯಾಂದಿದವರು ನಿಶ್ಚಂಚಲ ಪೌರುಷವುಳ್ಳವರಾಗಿ, ಪರಾಜಿತನಾದ ಸೈತಾನನಿಗಾದರೂ, ಅವನ ಪಕ್ಷದವರಾದ ಮನುಷ್ಯರಿಗಾದರೂ ಅಂಜ ಬಾರದು.

೭. ಪ್ರಿಯರೇ, ಒಬ್ಬರನ್ನೊಬ್ಬರು ಪ್ರೀತಿ ಮಾಡುವ. ಯಾಕಂದರೆ ಪ್ರೀತಿಯು ದೇವರಿಂದಾಗಿದೆ ೧); ಮತ್ತು ಪ್ರೀತಿ ಮಾಡುವ ಪ್ರತಿ ಮನುಷ್ಯನು ದೇವರಿಂದ ಹುಟ್ಟಿದವನಾಗಿ ೨), ದೇವರನ್ನು ತಿಳುಕೊಳ್ಳುತ್ತಾನೆ. ೮. ಪ್ರೀತಿ ಮಾಡದವನು ದೇವರನ್ನು ತಿಳಿದವನಲ್ಲ; ಯಾಕಂದರೆ ದೇವರು ಪ್ರೀತಿಯಾಗಿದ್ದಾನೆ. ೯. ಇದರಿಂದ ದೇವರ ಪ್ರೀತಿ ನಮ್ಮಲ್ಲಿ ಪ್ರಕಟವಾಯಿತು--ದೇವರು ತನ್ನ ಒಬ್ಬನೇ ಹುಟ್ಟಿದ ಮಗನನ್ನು, ಅವನ ಮೂಲವಾಗಿ ನಾವು ಬದುಕುವ ಹಾಗೆ, ಲೋಕಕ್ಕೆ ಕಳುಹಿಸಿದ್ದರಿಂದಲೇ ೩). ೧೦. ಇದರಲ್ಲಿ ಪ್ರೀತಿ ಉಂಟು; ನಾವು ದೇವರನ್ನು ಪ್ರೀತಿ ಮಾಡಿದ್ದರಲ್ಲಿ ಅಲ್ಲ; ಅವನು ನಮ್ಮನ್ನು ಪ್ರೀತಿ ಮಾಡಿ, ತನ್ನ ಮಗನನ್ನು ನಮ್ಮ ಪಾಪಗಳ ನಿಮಿತ್ತ ಶಾಂತಿಕರವಾದ ಬಲಿಯಾಗಿ ಕಳುಹಿಸಿದ್ದರಲ್ಲಿಯೇ. ೧೧. ಪ್ರಿಯರೇ, ದೇವರು ಹೀಗೆ ನಮ್ಮನ್ನು ಪ್ರೀತಿ ಮಾಡಿದರೆ, ನಾವು ಸಹ ಒಬ್ಬರನ್ನೊಬ್ಬರು ಪ್ರೀತಿ ಮಾಡುವ ಹಂಗಿನಲ್ಲಿದ್ದೇವೆ. ಯಾವನಾದರೂ ಎಂದಿಗೂ ದೇವರನ್ನು ನೋಡಲಿಲ್ಲ ೪). ೧೨. ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡಿದರೆ, ದೇವರು ನಮ್ಮಲ್ಲಿ ನೆಲೆಯಾಗಿರುತ್ತಾನೆ; ಮತ್ತು ಅವನ ಪ್ರೀತಿಯು ನಮ್ಮಲ್ಲಿ ಸಂಪೂರ್ಣವಾಗಿದೆ. ೧೩. ಅವನು ತನ್ನ ಆತ್ಮದಲ್ಲಿ ನಮಗೆ ಪಾಲನ್ನು ೫) ಕೊಟ್ಟದರಿಂದಲೇ, ನಾವು ಅವನಲ್ಲಿಯೂ, ಅವನು ನಮ್ಮಲ್ಲಿಯೂ, ನೆಲೆಯಾಗಿರುತ್ತೇವೆಂದು ತಿಳುಕೊಳ್ಳುತ್ತೇವೆ.

೧. ದೇವರು ಪ್ರೀತಿಯಾಗಿದ್ದಾನೆ. ಪ. ೮. ಆದ್ದರಿಂದ ನಿಜವಾದ ಪ್ರೀತಿಯುಳ್ಳವನು ದೇವಸಂಬಂಧನಾಗಿದ್ದಾನೆ.

೨. ಪ್ರೀತಿಯು ಪುನರ್ಜನ್ಮದ ಅನ್ವಯವ್ಯತಿರೇಕ ಲಕ್ಷಣವಾದೆ.

೩. ತನ್ನ ಮಗನನ್ನು ನಮ್ಮ ರಕ್ಷಣಾರ್ಥಿಶ್ಚಿತವಾಗಿ ಲೋಕಕ್ಕೆ ಕಳುಹಿಸಿ, ಮರಣಕ್ಕೆ ಒಪ್ಪಿಸಿದ ದೇವರ ಪ್ರೀತಿಯನ್ನು ಸತ್ಯವಾಗಿ ಹೃದಯದಲ್ಲಿ ತಿಳುಕಾಂಡು, ಯೇಸು ಕ್ರಿಸ್ತನ ಮರಣದಿಂದ ತನಗೆ ಉಂಟಾದ ಪಾಪಪರಿಹಾರವನ್ನು ಅನುಭವಿಸಿ, ಪರಿಶುದ್ಧಾತ್ಮದಿಂ

ಪ್ರೀತಿವರ್ಣನೆ.

· ೧ ಯೌಹಾ. ೪, ೧೪—೨೧.

ದ ಜೀವಬಲವನ್ನು ಪಡೆದಾತನು ದೇವರ ಪ್ರೀತಿಯನ್ನು ಮರೆಯಲಾರನು. ಅದು ಅವನಿಗೆ ಅನುದಿನವು ಪೂರ್ಣವಾಗಿ ಹೃದಯದಲ್ಲಿ ಪ್ರಸಿದ್ಧವಾಗುವದರಿಂದ, ಸಪೂರ್ಣಾದರಪ್ರೀತ್ಯಾಸಕ್ತನಾಗುತ್ತಾನೆ.

೪. ಯೋಹಾನನ ಜೀವಾಂತ್ಯಕಾಲದಲ್ಲಿ ಸಭೆಯಲ್ಲಿ ಪೂರ್ಣಕ್ರಿ ಜ್ಞಾನವಾದಿಗಳು ತಾವು ದೇವಜ್ಞಾನಸಿದ್ಧಿಯನ್ನು ಪಡೆದಾಂದಿದವರೆಂದೂ, ದೇವಪೃಷ್ಟಿ ಪಡೆದಾಂದಿದವರೆಂದೂ, ಪೊಚ್ಚಿಸಿ ಕಾಳ್ಳುತ್ತಾ ಇದ್ದರು. ಅವರ ಗರ್ವವಾದವು ನಿರರ್ಥಕವಾದದ್ದೆಂದು, ಯೋಹಾನನು ಈ ಮಾತಿನಿಂದ ನಿರಾಕರಿಸುತ್ತಾನೆ. ೨, ೪ಲ್ಲಿ ಅವರ ಜ್ಞಾನವು ವ್ಯರ್ಥವಾದದ್ದೆಂದು, ಬರೆಯುತ್ತಾನೆ.

೫. ಇದಕ್ಕೆ ೩, ೨೪ ಸರಿ ನೋಡ ಬೇಕು.

೧೪. ಮತ್ತು ತಂದೆಯು ಮಗನನ್ನು ಲೋಕಕ್ಕೆ ರಕ್ಷಕನಾಗಿ ಕಳುಹಿಸಿದನೆಂದು, ನಾವು ನೋಡಿ ಸಾಕ್ಷಿ ಕೊಡುತ್ತೇವೆ[೧]). ೧೫. ಯೇಸುವು ದೇವರ ಮಗನಾಗಿದ್ದಾನೆಂದು, ಅರಿಕೆ ಮಾಡುವವನಾವನೋ, ಅವನಲ್ಲಿ ದೇವರು ನೆಲೆಯಾಗಿರುತ್ತಾನೆ; ಅವನು ಸಹ ದೇವರಲ್ಲಿ ನೆಲೆಯಾಗಿರುತ್ತಾನೆ. ೧೬. ಮತ್ತು ನಮ್ಮಲ್ಲಿರುವ ದೇವರ ಪ್ರೀತಿಯನ್ನು ನಾವು [೨]) ಅರಿತು, ವಿಶ್ವಾಸಿಸಿದ್ದೇವೆ. ದೇವರು ಪ್ರೀತಿಯಾಗಿದ್ದಾನೆ. ಮತ್ತು ಪ್ರೀತಿಯಲ್ಲಿ ನೆಲೆಯಾಗಿರುವವನು ದೇವರಲ್ಲಿ ನೆಲೆಯಾಗಿರುತ್ತಾನೆ; ಅವನಲ್ಲಿಯೂ ದೇವರು ನೆಲೆಯಾಗಿರುತ್ತಾನೆ. ೧೭. ನ್ಯಾಯ ಶಿಕ್ಷಾರ್ಹಿಕೆಯ ದಿವಸದಲ್ಲಿ ನಮಗೆ ಧೈರ್ಯ ಉಂಟಾಗುವ ಹಾಗೆ[೩]), ಇದರಿಂದ ಪ್ರೀತಿಯು ನಮ್ಮಲ್ಲಿ ಸಂಪೂರ್ಣವಾಗಿದೆ. ಯಾಕಂದರೆ ಅವನು ಹ್ಯಾಗೋ, ಹಾಗೆಯೇ ನಾವು ಈ ಲೋಕದಲ್ಲಿ ಇದ್ದೇವೆ. ೧೮. ಪ್ರೀತಿಯಲ್ಲಿ ಭಯವಿಲ್ಲ. ಸಂಪೂರ್ಣವಾದ ಪ್ರೀತಿಯು ಭಯವನ್ನು ಹೊರಗೆ ಹಾಕುತ್ತದೆ. ಯಾಕಂದರೆ ಭಯವು ವೇದನೆಯುಳ್ಳದ್ದು; ಭಯ ಪಡುವವನು ಪ್ರೀತಿಯಲ್ಲಿ ಸಂಪೂರ್ಣವಾಗಿರುವವನಲ್ಲ[೪]). ೧೯. ಅವನು ಮೊದಲು ನಮ್ಮನ್ನು ಪ್ರೀತಿ ಮಾಡಿದ್ದರಿಂದ[೫]), ನಾವು ಅವನನ್ನು ಪ್ರೀತಿ ಮಾಡುತ್ತೇವೆ. ೨೦. ಒಬ್ಬನು ದೇವರನ್ನು ಪ್ರೀತಿ ಮಾಡುತ್ತೇನೆಂದು ಹೇಳಿ[೬]), ತನ್ನ ಸಹೋದರನನ್ನು ಹಗೆ ಮಾಡಿದರೆ, ಸುಳ್ಳುಗಾರನಾಗಿದ್ದಾನೆ. ಹ್ಯಾಗಂದರೆ ತಾನು ಕಂಡ ತನ್ನಸಹೋದರನನ್ನು ಪ್ರೀತಿ ಮಾಡದವನು, ತಾನು ಕಾಣದ ದೇವರನ್ನು ಹ್ಯಾಗೆ ಪ್ರೀತಿ ಮಾಡ ಬಲ್ಲನು? ೨೧. ಮತ್ತು ದೇವರನ್ನು ಪ್ರೀತಿ ಮಾಡುವವನು ತನ್ನಸಹೋದರನನ್ನು ಪ್ರೀತಿ ಮಾಡ ಬೇಕೆಂಬ ಈ ಕಟ್ಟಳೆಯನ್ನು[೭]) ಅವನಿಂದ ಹೊಂದಿದ್ದೇವೆ.

೧. ೧೪. ೧೫. ವಚನಗಳಲ್ಲಿ ಅಪೊಸ್ತಲನು ೧—೬. ಬರದದ್ದನ್ನು ಇಲ್ಲಿ ಕ್ಷಪ್ತವಾಗಿ ಅನುವಾದಿಸುತ್ತಾನೆ.

೨. ಯೋಹಾನನು ತಾನು ೭೦ ವರುಷದ ಅನುಭವದಿಂದ ಪೂರ್ಣ ನಿಶ್ಚಯವಾಗಿ ತಿಳಿದು ಕಾಂಡದ್ದಕ್ಕೆ ಸಭೆಯ ಮುಂದೆ ದೃಢವಾಗಿ ಸಾಕ್ಷಿ ಕೊಡುತ್ತಾನೆ.

೧ಯೌಹಾ. ೫೫, ೧—೫೫.

೩. ದೇವರ ಮಕ್ಕಳಲ್ಲಿ ಪ್ರೀತಿಯಿಂದ ಪುಟ್ಟುವ ನ್ಯಾಯತೀರ್ಪಿಕೆಯ ವಿಷಯವಾದ ನಿರ್ಣಯವನ್ನು ಈ ವಚನವು ದೇವಪುತ್ರತ್ವ ಲಕ್ಷಣಗಳಲ್ಲಿ ಶೇರಿಸುತ್ತದೆ. ದೇವರ ಮಗನು ಪ್ರೀತಿಯುಳ್ಳವನಾಗಿ ಮುಂಚೆ ಋೂಲ್ಯಾಕದಲ್ಲಿ, ಈಗ ದಿವದಲ್ಲಿ, ಪುಣ್ಯಾಗೆ ಇದ್ದಾನಾ, ಪುಣಾಗೆಯೇ ಲ್ಯಾಕದಲ್ಲಿರುವ ದೇವರ ಮಕ್ಕಳು ಪರಸ್ಪರಪ್ರೀತಿಯುಳ್ಳವರಾಗಿದ್ದಾರೆ.

೪. ಅಂದರೆ, ಪ್ರೀತಿಯು ಆನಂದಪೂರಿತವಾಗಿದೆ. ದುಃಖಾನ್ವಿತವಾದ ಶಿಕ್ಷಾಭಯವು ಪ್ರೀತಿಯ ಆನಂದಕ್ಕೆ ವಿರೋಧವಾದದ್ದು. ಪ್ರೀತಿಪೂರ್ಣನು ನಿರ್ಣಯನಾಗಿದ್ದಾನೆ.

೫. ಆತನು ನಮಗೆ ಮಾಡಿದ ಪ್ರೀತಿಯು ನಮ್ಮ ಪ್ರೀತಿಯ ಮೂಲವಾಗಿದೆ.

೬. ಅಂದರೆ, ಸಪುೂೀದರಪ್ರೀತಿ ಇಲ್ಲದವನು ದೇವರ ಪ್ರೀತಿಯಿಲ್ಲದವನಾಗಿದ್ದಾನೆ. ಈಂಥವನು ದೇವರನ್ನು ಪ್ರೀತಿ ಮಾಡುತ್ತೇನೆಂದು, ತನ್ನ ಪ್ರಾಣದಲ್ಲಿ ಹೇಳಿಕಾಂಡರೆ, ಇಲ್ಲವೆ ಮನುಷ್ಯರ ಮುಂದೆ ಹೇಳಿದರೆ, ಅವನ ಜಾಣತನವೂ, ವಚನವೂ ವ್ಯರ್ಥವಾಗಿವೆ.

೭. ವಿಧೇಯತ್ವವು ದೇವಪ್ರೀತಿಪ್ರಮಾಣವಾಗಿದೆ; ಆದ್ದರಿಂದ ದೇವರು ಕಾಟ್ಟಿ ಸಪುೂೀದರಪ್ರೀತಿಯ ಆಜ್ಞೆಗೆ ಅವಿಧೇಯನಾಗಿರುವವನು ದೇವರನ್ನು ಪ್ರೀತಿ ಮಾಡುವದಿಲ್ಲವೆಂದು, ಪ್ರಕಟವಾಗಿದೆ.

೬) ವಿಶ್ವಾಸವು. ಸ. ೫.

೧. ಯೇಸುವು ಕ್ರಿಸ್ತನೆಂದು ವಿಶ್ವಾಸಿಸುವ ಪ್ರತಿ ಮನುಷ್ಯನು ದೇವರಿಂದ ಹುಟ್ಟಿದ್ದಾನೆ. ಹುಟ್ಟಿಸಿದವನನ್ನು ಪ್ರೀತಿ ಮಾಡುವ ಪ್ರತಿ ಮನುಷ್ಯನು ಅವನಿಂದ ಹುಟ್ಟಿದವನನ್ನು ಸಹ ೧) ಪ್ರೀತಿ ಮಾಡುತ್ತಾನೆ. ೨. ನಾವು ದೇವರನ್ನು ಪ್ರೀತಿ ಮಾಡಿ, ಅವನ ಕಟ್ಟಳೆಗಳನ್ನು ಕೈಕಾಂಡರೆ, ದೇವರ ಮಕ್ಕಳನ್ನು ಪ್ರೀತಿ ಮಾಡುತ್ತೇವೆಂದು ತಿಳುಕಾಳ್ಳುತ್ತೇವೆ. ೩. ಯಾಕಂದರೆ ಅವನ ಕಟ್ಟಳೆಗಳನ್ನು ಕೈಕಾಳ್ಳುವದೇ ದೇವರ ಪ್ರೀತಿಯಾಗಿದೆ. ಮತ್ತು ಅವನ ಕಟ್ಟಳೆಗಳು ಭಾರವಾದವುಗಳಲ್ಲ. ೪. ಯಾಕಂದರೆ ದೇವರಿಂದ ಹುಟ್ಟಿದ್ದೆಲ್ಲಾ ಲ್ಯಾಕವನ್ನು ಜಯಿಸುತ್ತದೆ ೨). ಮತ್ತು ನಮ್ಮ ವಿಶ್ವಾಸವೇ ಲ್ಯಾಕವನ್ನು ಜಯಿಸಿದ ಜಯವಾಗಿದೆ ೩). ೫. ಯೇಸುವು ದೇವರ ಮಗನಾಗಿದ್ದಾನೆಂದು ವಿಶ್ವಾಸಿಸುವವನಲ್ಲದೆ, ಮತ್ಯಾರು ಲ್ಯಾಕವನ್ನು ಜಯಿಸುವವನಾಗಿದ್ದಾನೆ.

೧. ವ. ೧—೫ರಲ್ಲಿ ಅಪೌಸ್ತಲನು ನಿಜ ವಿಶ್ವಾಸದ ಎರಡು ಲಕ್ಷಣವನ್ನು ಉದಾಹರಿಸುತ್ತಾನೆ. ಸಪುೂೀದರರ ಪ್ರೀತಿಯು ಮೊದಲನೇದು.

೨. ಲ್ಯಾಕಜಯವು ನಿಜವಿಶ್ವಾಸದ ಎರಡನೆ ಲಕ್ಷಣವು.

೩. ಅಂದರೆ, ಅಪೌಸ್ತಲರಲ್ಲಿಯೂ, ಅವರ ಐಕ್ಯದಲ್ಲಿ ವಿಶ್ವಾಸದಿಂದ ಶೇರಿದವರಲ್ಲಿಯೂ, ಈ ಜಯವು ಸಾರ್ಥಕವಾಯಿತು. ಅವರು ಲ್ಯಾಕಜೀವಾಗಕ್ಕೂ ಲ್ಯಾಕದ್ವೇಷಕ್ಕೂ ಒಳಗಾಗಲಿಲ್ಲ. ದೇವಸಂಬಂಧದಿಂದ ಲ್ಯಾಕಪರಿತ್ಯಾಗವು ಸಹಜವಾಗಿ ಪುಟ್ಟುತ್ತದೆ.

ಮಗನ ಮೇಲಿನ ವಿಶ್ವಾಸ.

೧ ಯೌಹಾ. ೫, ೬—೧೦.

ನಿಜವಿಶ್ವಾಸಲಕ್ಷಣವನ್ನು ಹೇಳಿದನಂತರ, ಅಪೊಸ್ತಲನು ವ. ೬—೧೦. ಅದರ ಮುಮ್ಮಡಿಯಾದ ನಿಶ್ಚಯವನ್ನು, ವ. ೧೧—೧೫. ಅದರ ಆನಂದವನ್ನು, ವ. ೧೬ಲ್ಲಿ ವಿಶ್ವಾಸದ್ರೋಹಿಗಳ ದುರವಸ್ಥೆಯನ್ನು, ವ. ೧೭—೨೦. ಪಾಪಕ್ಕೂ, ವಿಶ್ವಾಸದ್ರೋಹಕ್ಕೂ ತಪ್ಪಿಸಿ ಕೊಳ್ಳಬೇಕೆಂಬ ಉದ್ಬೋಧನೆಯನ್ನು ಪ್ರಸ್ತಾಪಿಸುತ್ತಾನೆ.

೬. ಇವನೇ ನೀರಿನಿಂದಲೂ ರಕ್ತದಿಂದಲೂ ಬಂದವನು ೧); ಯಾವನಂದರೆ—ಕ್ರಿಸ್ತನಾದ ಯೇಸು. ನೀರಿನಿಂದ ಮಾತ್ರವಲ್ಲ, ನೀರಿನಿಂದಲೂ ರಕ್ತದಿಂದಲೂ ೨). ಮತ್ತು ಆತ್ಮನೇ ಸಾಕ್ಷಿಕಾಡುವಂಥಾದ್ದು ೩); ಯಾಕಂದರೆ ಆತ್ಮನು ಸತ್ಯವಾಗಿದೆ ೪). ೭. ಯಾಕಂದರೆ ಪರಲೋಕದಲ್ಲಿ ಸಾಕ್ಷಿ ಕಾಡುವವರು ಮೂವರು ಇದ್ದಾರೆ,—ತಂದೆಯೂ, ವಾಕ್ಯವೂ, ಪರಿಶುದ್ಧಾತ್ಮನೂ; ಮೂವರಾದ ಇವರು ಒಂದಾಗಿದ್ದಾರೆ ೫). ೮. ಮತ್ತು ಭೂಮಿಯಲ್ಲಿ ಸಾಕ್ಷಿ ಕಾಡುವವರು ಮೂವರು ಇದ್ದಾರೆ,—ಆತ್ಮನೂ, ನೀರೂ, ರಕ್ತವೂ; ಇ ಮೂವರು ಒಂದಕ್ಕಾಗಿದ್ದಾರೆ.

೧. ಯೇಸು ಕ್ರಿಸ್ತನು ಯೌರ್ದನದಲ್ಲಿ ಮಾಡಿದ ಸ್ನಾನದಿಂದ ತನ್ನ ಉದ್ಯೋಗವೃತ್ತಿಯನ್ನು ಉಪಕ್ರಮಿಸಿ, ಕ್ರೂಜೆಯಲ್ಲಿ ಮಾಡಿದ ರಕ್ತಧಾರೆಯಿಂದ ಸಮಾಪ್ತಿ ಮಾಡಿದನು. ಸ್ನಾನದ ಸಮಯದಲ್ಲಿ ಆಕಾಶವಾಣಿಯಿಂದ ದೇವರು ಅವನಿಗೆ ಸಾಕ್ಷಿ ಕಾಟ್ಟನು. ಮತ್ತಾ. ೩, ೧೭. ಕ್ರೂಜೆಯಲ್ಲಿ ತಾಳಿದ ಮರಣವು ಯೇಸು ಕ್ರಿಸ್ತನ ವಾಕ್ಯದ ಸತ್ಯತ್ವಕ್ಕೆ ಅತ್ಯುತ್ತಮ ಪ್ರಮಾಣವಾಗಿತ್ತು.

೨. ಯೇಸು ಕ್ರಿಸ್ತನ ಮರಣವು ಆತನು ಮಾಡಿದ ರಕ್ಷಣಾಕಾರ್ಯಸಿದ್ಧಿಯಾಗಿರುವದರಿಂದ, ಅಪಾಸ್ತಲನು ಆತನ ಮರಣವನ್ನು ಅತಿ ಶ್ಲಾಘ್ಯವಾದದ್ದೆಂದು ವಿಶೇಷವಾಗಿ ವರ್ಣಿಸುತ್ತಾನೆ.

೩. ಪರಿಶುದ್ಧಾತ್ಮವು ಕಾಡುವಂಥಾ ಸಾಕ್ಷಿಯು ಆಂತರ್ಯವಾದದ್ದು. ವ. ೧೦.

೪. ಪರಿಶುದ್ಧಾತ್ಮವು ಸತ್ಯವಾಗಿರುವದರಿಂದ ಆಂತರ್ಯವಾದ ಸಾಕ್ಷಿಯನ್ನು ಕಾಡುವದು ಅದರ ಚಾವಕ್ಕೆ ಅನುಕೂಲವಾದದ್ದು. ಪರಿಶುದ್ಧಾತ್ಮದಿಂದ ಮನುಷ್ಯನ ಹೃದಯದಲ್ಲಿ ಹುಟ್ಟುವ ನಿಶ್ಚಯವು ನರಪಿದ್ಯಾಜ್ಞಾನದ ನಿಶ್ಚಯಕ್ಕಿಂತ ಅತ್ಯಂತ ದೃಢವಾಗಿದೆ. ಅದನ್ನು ಹೊಂದಿದವನಿಗೆ ಮರುಪಾದರೂ ಸಂಶಯವಾದರೂ ಬರುವದಿಲ್ಲ.

೫. ವಿದ್ವಾಂಸರಲ್ಲಿ ಅನೇಕರು, ಈ ವಚನವು ಸ್ವಲಿಖಿತವಾದದ್ದಲ್ಲವೆಂದು, ಹೇಳಿ, ಎರಡನೆ ಮೂರನೆ ಶತಮಾನಗಳಲ್ಲಿ ಯಾರೋ ಅದನ್ನು ಇಲ್ಲಿ ಶೇರಿಸಿದ್ದಾರೆಂದು, ಪ್ರಸ್ತಾಪಿಸುತ್ತಾರೆ. ಈ ಮಾತಿಗೆ ಆಧಾರವಿಲ್ಲ; ಯಾಕಂದರೆ ಈ ವಚನದಲ್ಲಿ ಬರುವ ಪುಲ್ಲಿಂಗಪದಗಳು ಮೂಲಪ್ರತಿಯಲ್ಲಿ ಶೇರಲಿಲ್ಲವಾದರೆ, ಈ ವಚನದಲ್ಲಿ ವ್ಯಾಕರಣಪದ್ಧತಿವಿರುದ್ಧವಾಗಿ ಉಂಟಾದ ಪುಲ್ಲಿಂಗಪದಪ್ರಯೋಗವು ಅಗ್ರಾಹ್ಯವಾಯಿತು.

೯. ನಾವು ಮನುಷ್ಯರ ಸಾಕ್ಷಿಯನ್ನು ಅಂಗೀಕರಿಸಿದರೆ, ದೇವರ ಸಾಕ್ಷಿಯು ೧) ಅದಕ್ಕಿಂತ ದಾತ್ತದು. ಯಾಕಂದರೆ ಇದ್ದೇ ದೇವರ ಸಾಕ್ಷಿಯಾಗಿದೆ—ತನ್ನ ಮಗನನ್ನು ಕುರಿತು ಕಾಟ್ಟಿದ್ದೇ. ೧೦. ದೇವರ ಮಗನಲ್ಲಿ ವಿಶ್ವಾಸವಿಡುವವನು ತನ್ನಲ್ಲಿ ಸಾಕ್ಷಿ

ಉಂಟಾದವನಾಗಿದ್ದಾನೆ ೨); ದೇವರನ್ನು ವಿಶ್ವಾಸಿಸದವನು, ದೇವರು ತನ್ನ ಮಗನನ್ನು ಕುರಿತು ಕೊಟ್ಟ ಸಾಕ್ಷಿಯಲ್ಲಿ ವಿಶ್ವಾಸವಿಡದ ಕಾರಣ, ಅವನನ್ನು ಸುಳ್ಳುಗಾರನಾಗ ಮಾಡಿದ್ದಾನೆ ೩). ೧೧. ಆ ಸಾಕ್ಷಿ ಏನಂದರೆ, ದೇವರು ನಮಗೆ ನಿತ್ಯಜೀವವನ್ನು ಕೊಟ್ಟಿದ್ದಾನೆ; ಮತ್ತು ಆ ಜೀವವು ಅವನ ಮಗನಲ್ಲಿ ಉಂಟು, ಎಂಬುವದೇ. ೧೨. ಮಗನನ್ನು ಹೊಂದಿದವನು ಜೀವವನ್ನು ಹೊಂದಿದ್ದಾನೆ ೪). ದೇವರ ಮಗನನ್ನು ಹೊಂದದವನು ಜೀವವನ್ನು ಹೊಂದಿದವನಲ್ಲ.

೧. ಅಂದರೆ, ತಂದೆಯಾದ ದೇವರ ಸಾಕ್ಷಿಯು. ಯೇಸು ಕ್ರಿಸ್ತನು ಸ್ನಾನ ಪಡೆಂದಿದ ಸಮಯದಲ್ಲಿ ಮುಖ್ಯವಾಗಿ ಈ ಸಾಕ್ಷಿಯು ಆತನಿಗೆ ಪ್ರಾಪ್ತವಾಯಿತು.

೨. ಸುವಾರ್ತೆಯ ವಾಕ್ಯವು ನಿಜವಾದದ್ದೆಂದು ಯೇಸು ಕ್ರಿಸ್ತನನ್ನು ವಿಶ್ವಾಸಿಸುವವನ ಹೃದಯದಲ್ಲಿ ಪರಿಶುದ್ಧಾತ್ಮವು ಸಾಕ್ಷಿ ಕೊಡುತ್ತದೆ.

೩. ದೇವರ ವಾಕ್ಯವನ್ನು ನಂಬದೇ ಇರುವವರು ತಮ್ಮ ಅವಿಶ್ವಾಸಕ್ಕೆ ನಾನಾ ನೆವಗಳನ್ನು ಕಲ್ಪಿಸುತ್ತಾರೆ. ಆದಾಗ್ಯೂ ಇಲ್ಲಿ ಸೂಚಿತವಾದ ದೇವದ್ರೋಹವೆಂಬ ಅಪರಾಧವನ್ನು ಹೊತ್ತೇಗಲಾತಿಸಲಾರರು.

೪. ಇದಕ್ಕೆ ಎಫೆ. ೨, ೧. ೫. ಕೊಲೊ. ೨, ೧೩. ಯೋಹಾ. ೫, ೨೪. ಸರಿ ನೋಡ ಬೇಕು.

೧೩. ನಿತ್ಯಜೀವವು ನಿಮಗುಂಟೆಂದು, ನೀವು ತಿಳಿಯುವ ಹಾಗೆಯೂ, ದೇವರ ಮಗನ ಹೆಸರಿನಲ್ಲಿ ವಿಶ್ವಾಸವಿಡುವ ಹಾಗೆಯೂ, ದೇವರ ಮಗನ ಹೆಸರಿನಲ್ಲಿ ವಿಶ್ವಾಸಿಸುವವರಾದ ನಿಮಗೆ ೧) ಇವುಗಳನ್ನು ಬರೆದಿದ್ದೇನೆ. ೧೪. ಮತ್ತು ಅವನ ಕಡೆಗೆ ನಮಗಿರುವ ಧೈರ್ಯವು ೨) ಏನಂದರೆ—ಅವನ ಚಿತ್ತದ ಪ್ರಕಾರ ಯಾವದಂನಾದರೂ ಬೇಡಿ ಕೊಂಡರೆ, ನಮಗೆ ಕಿವಿ ಕೊಡುತ್ತಾನೆ. ೧೫. ಮತ್ತು ನಾವು ಯಾವದನ್ನಾದರೂ ಬೇಡಿ ಕೊಂಡರೆ, ನಮಗೆ ಕಿವಿ ಕೊಡುತ್ತಾನೆಂದು, ನಾವು ತಿಳು ಕೊಂಡರೆ, ಅವನಿಂದ ಬೇಡಿ ಕೊಂಡ ವಿನ್ನಹಗಳನ್ನು ಹೊಂದಿದ್ದೇವೆಂದು, ಬಲ್ಲೆವು.

೧. ಯಥಾರ್ಥವಾಗಿ ನಂಬುವ ಸಭೆಯವರ ಪ್ರಯೋಜನಕ್ಕೆ ಅಪೊಸ್ತಲನು ಬರೆಯುತ್ತಾನೆ. ವಿಶ್ವಾಸದ್ರೋಹಿಗಳಿಗೂ ಬೋಧನೆ ಹೇಳುವದು, ಅಥವಾ ಅಬದ್ಧಬೋಧಕರ ಸಂಗಡ ತರ್ಕ ಮಾಡುವದು ವ್ಯರ್ಥವಾದ ಆಯಾಸವೆಂದು, ತಿಳಿಯುತ್ತಾನೆ.

೨. ಶ್ಲಾಘ್ಯವಾದ ಈ ಫಲವು ನಿಜವಿಶ್ವಾಸದ ಲಕ್ಷಣವಾಗಿದೆ. ವಿಶ್ವಾಸಿಸುವ ಮಕ್ಕಳಿಗೆ ದೇವರು ಅತ್ಯಂತ ಕೃಪಾಳುವಾಗಿದ್ದು, ಅವರು ಪರಿಶುದ್ಧಾತ್ಮಪ್ರೇರಣೆಯಿಂದ ಬೇಡುವದನ್ನು (ಯೇಸು ಮತ್ತಾ. ೭, ೭ಲ್ಲಿ ಹೇಳಿದ ವಾಕ್ಯದ ಪ್ರಕಾರ) ಕೊಡುತ್ತಾನೆ. ಈ ಪ್ರಕಾರವಾಗಿ ಬೇಡುತ್ತಾ ಹೊಂದುತ್ತಾ ಇರುವ ಅಭ್ಯಾಸದಿಂದ ಭಕ್ತರ ವಿಶ್ವಾಸವು ಅಧಿಕಾಧಿಕ ದೃಢವಾಗುವದು.

ಈಗ ಪ್ರಸ್ತಾಪಿಸಿದ ವಾಕ್ಯಕ್ಕೆ ಒಂದು ಅಪವಾದ ಉಂಟು. ವಿಶ್ವಾಸದ್ರೋಹಿಗಳಿಗಾಗಿ ಬೇಡುವದು ನಿರರ್ಥಕವಾಗಿದೆ.

ಮಗನ ಮೇಲಿನ ವಿಶ್ವಾಸ.

೧ ಯೌಹಾ. ೫, ೧೬—೨೧.

೧೬. ಒಬ್ಬನು ತನ್ನ ಸಹೋದರನು ಮರಣಕ್ಕೆ ಪಾತ್ರವಾಗದ ಪಾಪ ೧) ಮಾಡುವದನ್ನು ಕಂಡರೆ, ಬೇಡಿಕೊಳ್ಳಲಿ. ಆಗ ಮರಣಕ್ಕೆ ಪಾತ್ರವಾಗದ ಪಾಪ ಮಾಡುವವರಿಗಾಗಿಯಾದರೆ ಅವನಿಗೆ ಜೀವವನ್ನು ಕೊಡುವನು. ಮರಣಕ್ಕೆ ಪಾತ್ರವಾದ ಪಾಪ ಉಂಟು ೨); ಅದಕ್ಕಾಗಿಯಾದರೆ ಪ್ರಾರ್ಥಿಸ ಬೇಕೆಂದು, ನಾನು ಹೇಳುವದಿಲ್ಲ. ೧೭. ಎಲ್ಲಾ ಅನ್ಯಾಯವು ಪಾಪವಾಗಿದೆ; ಮತ್ತು ಮರಣಕ್ಕೆ ಪಾತ್ರವಾಗದ ಪಾಪ ಉಂಟು.

೧. ಆಂಥಾ ಪಾಪವು ಯಾವದೆಂದು, ವಿಚಾರಿಸಿ ನಿಶ್ಚೈಸ ಕೆಲಸವಿಲ್ಲ. ವಿಶ್ವಾಸಪರಿತ್ಯಾಗ ಮಾಡದೆ ಇರುವವರಿಗಾಗಿ ಪ್ರಾರ್ಥಿಸುವದು ಐಕ್ಯನಿಗೆ ಯುಕ್ತವಾದದ್ದೂ ಪಾಪ ಮಾಡಿದವರಿಗೆ ಪ್ರಯೋಜಕವಾದದ್ದೂ ಆಗಿದೆ. ಇತರರ ಸಹಾಯಕ್ಕೆ ಪ್ರಾರ್ಥನೆ ಮಾಡಿದರೆ, ಅದು ಸಾರ್ಥಕವಾಗುವದಿಲ್ಲ.

೨. ಅಂದರೆ, ವಿಶ್ವಾಸದ್ರೋಹದಿಂದ ಹುಟ್ಟಿದ ಪಾಪವು.

೧೮. ದೇವರಿಂದ ಹುಟ್ಟಿದ ಪ್ರತಿ ಮನುಷ್ಯನು ಪಾಪ ಮಾಡನೆಂದು, ಬಲ್ಲೆವು ೧). ಆದರೆ ದೇವರಿಂದ ಹುಟ್ಟಿದವನು ತನ್ನನ್ನು ಕಾಪಾಡಿಕೊಳ್ಳುತ್ತಾನೆ. ೧೯. ದುಷ್ಟನು ಅವನನ್ನು ಮುಟ್ಟುವದಿಲ್ಲ ೨). ದೇವರಿಂದಾದವರಾಗಿದ್ದೇವೆಂದೂ, ಲೋಕವೆಲ್ಲಾ ದುಷ್ಟನಲ್ಲಿ ಇರುತ್ತದೆಂದೂ, ಬಲ್ಲೆವು ೩). ೨೦. ಆದರೆ ದೇವರ ಮಗನು ಬಂದು, ಸತ್ಯವಾದವನನ್ನು ತಿಳುಕೊಳ್ಳುವ ಹಾಗೆ, ವಿವೇಕವನ್ನು ನಮಗೆ ಕೊಟ್ಟಿದ್ದಾನೆಂದೂ ಅವನ ಮಗನಾದ ಯೇಸು ಕ್ರಿಸ್ತನೆಂಬ ಸತ್ಯವಾದವನಲ್ಲಿ ೪) ಇರುತ್ತೇವೆಂದೂ, ಬಲ್ಲೆವು ೫). ಇವನೇ ೬) ಸತ್ಯ ದೇವರೂ, ನಿತ್ಯ ಜೀವವೂ, ಆಗಿದ್ದಾನೆ. ೨೧. ಎಳೆ ಮಕ್ಕಳೇ, ವಿಗ್ರಹಗಳಿಗೆ ೭) ದೂರವಾಗಿರ ನೋಡಿಕೊಳ್ಳಿರಿ. ಆಮೆನ್.

೧. ಇದು ಸ. ೩, ೯ಲ್ಲಿಯೂ ಬರದದೆ. ೧ ಪೇತ್ರ. ೧, ೨೩.

೨. ಇದಕ್ಕೆ ಯಾಕೋ. ೧, ೨೭. ಸರಿ ನೋಡ ಬೇಕು. ದೇವವೈರಿಯಾದ ಸೈತಾನನಿಂದ ತಮಗೆ ನಷ್ಟವಾಗದ ಹಾಗೆ, ದೇವರ ಐಕ್ಯದಲ್ಲಿಯೇ ನೆಲೆಯಾಗಿರ ಬೇಕು.

೩. ನಾವು ಅಂದರೆ, ಅಪೊಸ್ತಲರೂ ವಿಶ್ವಾಸಿಗಳಾದ ಪತ್ರಿಕಾವಲೋಕಿಗಳೂ ಅದೇ ವಿಶ್ವಾಸವನ್ನು ಹೊಂದಿದವರೆಲ್ಲರೂ; ಆದರೆ ದೇವದ್ರೋಹಿಗಳಾದ ಲೋಕದ ಜನರೆಲ್ಲರೂ ಪಾಪಿಗಳ ಒಡೆಯನಾದ ಸೈತಾನನಿಗೆ ವಶವಾಗಿದ್ದಾರೆ.

೪. ದೇವರ ಮಗನ ಐಕ್ಯದಲ್ಲಿರುವವರು ಸತ್ಯ ದೇವೈಕ್ಯದಲ್ಲಿದ್ದಾರೆ.

೫. ಪಾಪಯುದ್ಧಾದ್ಧಾತನೆಯ ಶ್ಲಾಘ್ಯವಾದ ಪೀಠತುಗಳು ಇಲ್ಲಿ ಬರದವೆ.

೬. ಇವನೇ ಅಂದರೆ, ದೇವರ ಮಗನಾದ ಯೇಸು ಕ್ರಿಸ್ತನು. ಜೀವಮೂಲವಾದ ದೇವರು ಆತನಲ್ಲಿದ್ದಾನೆ.

೭. ಮನುಷ್ಯನಿರ್ಮಿತವಾದ ಮೂರ್ತಿಗಳಿಗೆ ಪೂಜೆ ಮಾಡದೆ ಇರುವದಲ್ಲದೆ, ಸತ್ಯವಾದ ಆತ್ಮಿಕ ದೇವಾರಾಧನೆಯಿಂದ ಮನಸ್ಸನ್ನು ತಿಳಿಯುವಂಥಾದ್ದೆಲ್ಲಾದಕ್ಕೆ ದೂರವಾಗಿರ ಬೇಕು.

೨ ಯೌಹಾ. ಮತ್ತು ೩ ಯೌಹಾ.

ಯೌಹಾನನ ಎರಡನೆ ಪತ್ರಿಕೆಯು.

ಯೋಹಾನನು ಈ ಪತ್ರಿಕೆಯಲ್ಲಿ ತನ್ನ ಹೆಸರಿಗೆ ಪ್ರತಿಯಾಗಿ ಹಿರಿಯನು ಎಂದು ಬರದು, ಪರಸ್ಥಳದ ಸಭೆಯಲ್ಲಿರುವ ಘನವುಳ್ಳ ಭಕ್ತಳಿಗೆ ಕೆಲವು ವಾಕ್ಯಗಳನ್ನು ತಿಳಿಸುತ್ತಾನೆ. ನಿಜ ಭಕ್ತರಿಗೆ ಕೊಡ ಪಕ್ಕ ಆಶೀರ್ವಾದದ ಬಳಿಕ ಅಪೊಸ್ತಲನು ಅವಳ ಮಕ್ಕಳಲ್ಲಿ ಕೆಲವರ ಸತ್ಯವಾದ ಭಕ್ತಿಯನ್ನು ಕಂಡು, ತಾನು ಅತಿ ಸಂತೋಷ ಪಟ್ಟಿನೆಂದು, ಸೂಚಿಸುತ್ತಾನೆ. (ಅವರು ಯೋಹಾನನ ದರ್ಶನಕ್ಕೆ ಬಂದು, ಅಪ್ಪಣೆ ತೆಗದು ಕೊಂಡು ಹೋಗುವಾಗ ಯೋಹಾನನ ಮೂರು ಪತ್ರಿಕೆಗಳನ್ನು ಕೊಂಡು ಹೋದರೆಂದು, ನೆನಸಲನುಚಿತವಾದದ್ದಲ್ಲ.) ಅವರೆಲ್ಲರೂ ಪ್ರೀತಿಯಲ್ಲಿಯೇ ನಡದು ಕೊಳ್ಳುವದಕ್ಕೆ ಜಾಗರೂಕರಾಗಿರ ಬೇಕೆಂದು, ಬೇಡಿ ಕೊಳ್ಳುತ್ತಾನೆ. ಯಾಕಂದರೆ: ಪ್ರೀತಿಯ ಕಟ್ಟಳೆಯು ಆದಿ ನಿಯಮವಾಗಿದೆ. ವ. ೬. ಇದನ್ನು ಮೀರುವಂಥಾ, ಕ್ರಿಸ್ತನು ಮಾಂಸದಲ್ಲಿ ಬಂದದ್ದನ್ನು ಅಲ್ಲಗಳೆಯುವಂಥಾ, ಮೋಸಗಾರರಾದ ಪ್ರತಿಕ್ರೈಸ್ತರಿಗೆ ವ. ೭. ಎಚ್ಚರಿಕೆಯಾಗಿರ ಬೇಕು. ಕ್ರಿಸ್ತನಿಗೆ ಭೇದವಾದವರು ದೇವರಿಗೂ ಭೇದವಾಗಿದ್ದಾರೆಂದು, ನೆನಪು ಮಾಡಿ ಕೊಂಡು, ಅಂಥವರನ್ನು ಅತಿಥಿಗಳಾಗಿ ಸೇರಿಸಿ ಕೊಳ್ಳಲೂ ಶುಭವಾಗಲಿ ಎಂದು ಅವರಿಗೆ ಹೇಳಲೂ ಆಗದು.

ಮತ್ತು, ಸ್ವಲ್ಪ ಕಾಲದೊಳಗೆ ತಾನು ಧೊರೆಸಾನಿಯ ದರ್ಶನಕ್ಕೆ ಬರುತ್ತೇನೆಂದು ಸೂಚಿಸಿ, ಪತ್ರಿಕೆಯನ್ನು ಮುಗಿಸುತ್ತಾನೆ.

ಯೌಹಾನನ ಮೂರನೆ ಪತ್ರಿಕೆಯು.

ಅಪೊಸ್ತಲನು ಗಾಯನೆಂಬವನ ಭಕ್ತ್ಯಾಚರಣೆ ಆತಿಥ್ಯ ಪ್ರೀತಿಗಳ ವಿಷಯವಾಗಿ ಸಹೋದರರಿಂದ ಒಳ್ಳೆ ವರ್ತಮಾನವನ್ನು ಕೇಳಿದ್ದಕ್ಕೆ ಸಂತೋಷ ಪಟ್ಟು, ಈ ಪತ್ರಿಕೆಯನ್ನು ಬರದು, ಹಾಗೆ ನಡದು ಕೊಳ್ಳ ಬೇಕೆಂದೂ, ವಿಶೇಷವಾಗಿ ಪರಿಶುದ್ಧ ಆತಿಥ್ಯಪ್ರೀತಿವೃತ್ತಿಯಲ್ಲಿ ದಣಿಯ ಬಾರದೆಂದೂ, ಈ ವಿಷಯದಲ್ಲಿಯೂ, ಬೇರೆ ಯಾವ ವಿಷಯದಲ್ಲಿಯೂ ಅಪೊಸ್ತಲನಿಗೆ ಹಗೆಗಾರನಾದ ದಿಯೊತ್ರೆಫೆಸ್ ಎಂಬವನಿಗೆ ಕಿವಿ ಕೊಡ ಬಾರದೆಂದೂ, ತಿಳಿಸುತ್ತಾನೆ. ಮತ್ತು, ದೆಮೇತ್ರಿಯನೆಂಬನ ಗುಣವರ್ಣನೆಯನ್ನು ಬರೆಯುತ್ತಾನೆ. ಕಡೆಯಲ್ಲಿ, ತಾನು ಬೇಗ ಗಾಯನ ದರ್ಶನಕ್ಕೆ ಬರುತ್ತೇನೆಂತ, ತಿಳಿಸುತ್ತಾನೆ.

ಪೌಸ ಒಡಂಬಡಿಕೆಯ ಪ್ರವಾದನಾವಾಕ್ಯವು.

(ಹೊಸ ಒಡಂಬಡಿಕೆಯ ಮೂರನೆ ಭಾಗವು.)

ಅಪೊಸ್ತಲನಾದ ಯೋಹಾನನ ಪ್ರಕಟಣೆಯು.

ಪೌಸ ಒಡಂಬಡಿಕೆಯ ಗ್ರಂಥಗಳ ಸಂಗ್ರಹದಲ್ಲಿ, ಯೇಸು ಕ್ರಿಸ್ತನು ತಾನು ಪ್ರೀತಿ ಮಾಡಿದ ಶಿಷ್ಯನ ಮುಖಾಂತರ ನಮಗೆ ಕಾಟ್ಟಿ ಪ್ರಕಟಣೆಯಾದ, ಯೋಹಾನನ ಪ್ರಕಟಣೆಯಂಬ ಗ್ರಂಥವು ಅಂತ್ಯವಾದ ದ್ದಾಗಿದೆ. ಆದಿಸಭೆಯವರು ಈ ಪರಿಶುದ್ಧ ಗ್ರಂಥವು ಅತ್ಯಂತ ಘನವಾದದ್ದೆಂದು ಎಣಿಸಿದರು; ಮತ್ತು ಸಭಾಪಿತನಾದ ಇರೆನೇಯನು, ತನಗೆ ಮುಖಪರಿಚಿತರಾಗಿದ್ದ ಕೆಲವು ಶಿಷ್ಯರಿಗೆ ಯೋಹಾನನು ಅದರ ಅಚಿ ಪ್ರಾಯವನ್ನು ತಾನೇ ವಿವರಿಸುತ್ತಾ ಇದ್ದನೆಂದು, ಸಂತೋಷದಿಂದ ಪ್ರಸ್ತಾಪಿಸುತ್ತಾನೆ. ಮೂರನೇ ಶತ ಮಾನದಲ್ಲಿ ಅನೇಕರು ಈ ಪುಸ್ತಕವನ್ನು ಸ್ವೇಚ್ಛಾಬುದ್ಧಿಯಿಂದಲೂ, ಮಾಂಸಚಾಪನಾನುಸಾರವಾಗಿಯೂ, ದುರ್ವ್ಯಾಖ್ಯಾನಿಸುತ್ತಾ ಇರಲಾಗಿ, ಅಲೆಕ್ಸಂದ್ರಿಯದಲ್ಲಿದ್ದ ದಿಯೋನುಸಿಯನೆಂಬ ಸಭಾಬೋಧಕನಾಬ್ಬನು ದುರ್ವ್ಯಾಖ್ಯಾನವೇಷಾಸ್ತಿಯಿಂದ, ಈ ಪುಸ್ತಕವನ್ನು ತಿರಸ್ಕರಿಸಿದರೆ ಪಾಸಿ ಎಂದು ಭಾವಿಸಿ ಕಾಂಡು, ಅಪೊಸ್ತಲನಾದ ಯೋಹಾನನು ಅದನ್ನು ರಚಿಸಿದನೋ ಏನೋ ಎಂಬ ಸಂಶಯವನ್ನು ಪುಟ್ಟಿಸಿದನು. ಈ ಉದ್ದಿಶ್ಯವಾಗಿ, ಕೆಲವು ಸ್ಥಳಗಳಲ್ಲಿ ಪ್ರಕಟಣಾಗ್ರಂಥವು ಅತ್ಯಂತ ಶ್ಲಾಘ್ಯವೆಂದು ಪೇಳಿದರೂ, ಬೇರೆ ಕಡೆಯಲ್ಲಿ ನಾನಾ ವಿಧವಾದ ಅಲ್ಪ ಸಂದೇಹಗಳನ್ನು ಮಾಡುತ್ತಾನೆ. ಅವನು ಪೌಸರ್ವಾಸಿಯಾಗಿದ್ದ ಕಾರಣ, ಗ್ರೀಕಸಭಾಬೋಧಕರಲ್ಲಿ ಬೇರೆ ಕೆಲವರು ಅವನನ್ನು ಅನುಸರಿಸಿ, ಒಂದಾವರ್ತಿ ಯೋಹಾನನು ಗ್ರಂಥಕರ್ತನೆಂದು, ಮತ್ತಾಂದಾವರ್ತಿ ಅಲ್ಲವೆಂದು, ಪೇಳುತ್ತಾ ಇದ್ದರು. ನಾಲ್ಕನೆ ಶತಮಾನದಲ್ಲಿ ಕಾಂಸ್ತಂತೀನನು ಮಹಾರಾಜನೂ ಕ್ರೈಸ್ತನೂ ಆದಂದಿನಿಂದ ಅಧ್ಯಕ್ಷಿಗಳ ಲೌಕಿಕ ಸೌಖ್ಯವು ವರ್ಧಮಾ ನವಾದ ಕಾರಣ, ಅವರು ಪ್ರಕಟಣಾಗ್ರಂಥವನ್ನು ಓದುವ ಅಭ್ಯಾಸವನ್ನು ಉದಾಸೀನ ಮಾಡಿದರು. ಆದರೆ ಏಳನೆ ಶತಮಾನದಲ್ಲಿ ಮೊಹಮ್ಮದನು ಮೂಡಣ ದಿಕ್ಕಿನ ಅನೇಕ ದೇಶಗಳನ್ನು ಆಕ್ರಮಿಸಿ ಕಾಂಡ ಕಾರಣ ಸಭೆಗೆ ಹಿಂಸಾಕಾಲ ಬರಲಾಗಿ, ಗ್ರೀಕಸಭಾಬೋಧಕರಲ್ಲಿ ನ್ಯೂನ ಭಾಗವು ಪುಟ್ಟಿಸಿದ ಸಂಶಯಗಳು ಕಳದು ಪೋದವು. ಅಂದಿನಿಂದ ಮೂಡಣ ದಿಕ್ಕಿನ ಸಭೆಯು ಸಹ ಯೋಹಾನನ ಪ್ರಕಟಣೆಯು ಸ್ವಲಿಖಿತವಾದದ್ದೆಂದು, ಪಶ್ಚಿಮದಿಕ್ಕಿನ ಸಭೆಗೂ ಮೊದಲಿನ ಶತಮಾನಗಳ ಸಭಾಪಿತರರಿಗೂ ಸಮ್ಮತವಾಗಿ ವಿಜ್ಞಾಪಿಸಿತು.

ಪೂರ್ವಕಾಲದ ಸಚಾಪಿತರಲ್ಲಿ ಒಬ್ಬನು ಪೌಲಿದ್ದು ಖರೆ; ಅದೇನಂದರೆ: ಈ ಗ್ರಂಥವು ಕ್ರೈಜಾ ಗ್ರಂಥವಾಗಿದೆ. ಅದು ಯೌಪಗಾನನಿಗೆ ಹಿಂಸಾಕಾಲದಲ್ಲಿ ಪ್ರಾಪ್ತವಾಯಿತು, ಮತ್ತು ಹಿಂಸಾಕಾಲ ಗಳಲ್ಲಿಯೇ ಚಕ್ತರು ಅದನ್ನು ಅಧಿಕ ಶ್ಲಾಘ್ಯವೆಂದೆಣಿಸಿ, ಅದರ ಅಭಿಪ್ರಾಯವನ್ನು ವಿಶೇಷವಾಗಿ ತಿಳಿದು ಕಾಳ್ಳುತ್ತಾ ಬಂದರು.

ಅದರ ರಚನಾಕಾಲವು, ಸಚಾಪಿತನಾದ ಇರೆನೇಯನು ಪೌಲಿದ ಪ್ರಕಾರ, ಪ್ರಥಮ ಶತಮಾನದ ಅಂತ್ಯವೆಂದು ನೆನಸಲನುಕೂಲವಾಗಿದೆ. ಯೌಪಗಾನನು ಅದನ್ನು ಮಪಗಾರಾಜನಾದ ದಾಮಿತಿಯಾನನ ಅಂತ್ಯಕಾಲದಲ್ಲಿ, ಪೆಚ್ಚು ಕಡಿಮೆಯಾಗಿ ೧೫ನೆ ೧೬ನೆ ವರುಷದಲ್ಲಿ ಬರದನೆಂಬದು ರೂಢಿಯಾಗಿದೆ.

ಪ್ರಕಟಣೆಯು ದುರ್ವಾಖ್ಯೇಯ ಗ್ರಂಥವಾಗಿದೆ; ಯಾಕಂದರೆ ಅದರ ಮುಖ್ಯ ತಾತ್ಪರ್ಯವು ಪ್ರವಾದನೆಯಾಗಿರುವದಲ್ಲದೆ, ಅದರ ವಾಕ್ಸರಣಿಯು ಅತ್ಯುತ್ಕೃಷ್ಟವೂ, ಅತಿ ಕ್ಲಪ್ತವೂ, ಅಲಂಕಾರಮಯವೂ ಆಗಿದೆ. ಮುಂದಿನ ಪತ್ರಗಳಲ್ಲಿ, ಪೂರ್ವಕಾಲದಲ್ಲಿಯೂ ಈಗಿನ ಕಾಲದಲ್ಲಿಯೂ ಚಕ್ತರಾದ ವಿದ್ವಾಂಸರು ಬರದ ವ್ಯಾಖ್ಯಾನಗಳನ್ನು ಸಂಗ್ರಹಿಸಿ, ಪ್ರಕಟಣೆಯ ಅಭಿಪ್ರಾಯವನ್ನು ಸ್ಪಷ್ಟವಾಗಿಯೂ, ಸುಲಭವಾಗಿಯೂ ವಿವರಿಸುವದಕ್ಕೆ ಪ್ರಯತ್ನ ಮಾಯಿದ್ದೇವೆ. ಆದರೆ ಉತ್ಕೃಷ್ಟ ಪ್ರಕಟಣಾವ್ಯಾಖ್ಯಾನಿಗಳಲ್ಲಿ ಒಬ್ಬನು ತನ್ನ ಅಂತ್ಯಕಾಲದಲ್ಲಿ ಪೌಲಿದ್ದು: ಪ್ರವಾದಿಗಳ ಗ್ರಂಥಗಳಲ್ಲಿ ನಮ್ಮ ದೃಷ್ಟಿಯು ಎಷ್ಟೋ ಮಂದವಾಗಿದೆ.

ಯೌಪಗಾನನ ಪ್ರಕಟಣೆ ಮುಂತಾದ ದೇವವಾಕ್ಯಪ್ರವಾದನೆಗಳ ಪೂರ್ಣವಾದ ತಿಳುವಿಕೆಯು ಅವು ನೆರವೇರುವ ಕಾಲಗಳಲ್ಲಿಯೇ ಚಕ್ತರಿಗೆ ಪ್ರಾಪ್ತವಾಗುವದು. ಅವುಗಳ ಪಠಣವೂ, ಧ್ಯಾನವೂ ಬಲ್ಲ ನುಭವಿಗಳಿಗೆ ಮಾತ್ರ ಪೂರ್ಣ ಪ್ರಯೋಜಕವಾಗಿದೆ. "ಈ ಪ್ರವಾದನೆಯ ವಾಕ್ಯವನ್ನು ಓದುವವನೂ, ಕೇಳುವವರೂ ಅದರಲ್ಲಿ ಬರದಿರುವವುಗಳನ್ನು ಕೈಕಾಳ್ಳುವವರೂ ಭಾಗ್ಯವಂತರು; ಯಾಕಂದರೆ ಕಾಲವು ಸಮೀಪವಾಗಿದೆ" ಎಂಬುವದು ಸದಾ ಸತ್ಯವಾದದ್ದೇ ಸರಿ.

ಕ್ಲಪ್ತವಾದ ತಾತ್ಪರ್ಯಾನುಕ್ರಮಣಿಕೆಯು.

I. ಪ್ರಕಟಣೆಯ ಪೀಠಿಕೆಯು. ಸ. ೧, ೧—೮.

II. ಪ್ರಕಟಣೆಯು.

A. ಅಪೊಸ್ತಲರ ಕಾಲವು.

1. ಸಪ್ತ ನಕ್ಷತ್ರ, ಸಪ್ತ ದೀಪಗಳ ದರ್ಶನವು. ಸ. ೧, ೯—೨೦.

2. ಸಪ್ತ ಸಭೆಗಳ ಪ್ರಖ್ಯಾತ ಪತ್ರಿಕೆಗಳು. ಸ. ೨. ೩.

B. ಶ್ರಮ ಪಡುತ್ತಾ, ಯುದ್ಧ ಮಾಡುತ್ತಾ, ಜಯ ಹೊಂದುತ್ತಾ ಇರುವ ಸಭೆಯ ಕಾಲಗಳು.

1. ಪೀಠಿಕೆಯು.

a. ದೇವಸಿಂಹಾಸನದರ್ಶನವು. ಸ. ೪.

b. ದೇವರ ಕುರಿಮರಿಯ ದರ್ಶನವು. ಸ. ೫.

2. ಪ್ರವಾದನೆಗಳು.

AA. ಸಪ್ತ ಮುದ್ರೆಗಳು.

a. ಮೊದಲನೆಯಿಂದ ಆರನೆ ಮುದ್ರೆಯ ವರೆಗೂ. ಸ. ೬.

b. ಏಳನೆ ಮುದ್ರೆಯ ಸಾಮಗ್ರಿಯು. ಸ. ೭.

c. ಏಳನೆ ಮುದ್ರೆಯು. ಸ. ೮, ೧—೬.

BB. ಏಳನೆ ಮುದ್ರೆಯಿಂದ ಹುಟ್ಟುವ ಏಳು ತುತೂರಿಗಳು.

a. ಮೊದಲನೆಯಿಂದ ನಾಲ್ಕನೆ ತುತೂರಿಯ ವರೆಗೂ. ಸ. ೮, ೭—೧೩.

b. ಐದನೆ ತುತೂರಿಯು. ಸ. ೯, ೧—೧೧.

c. ಆರನೆ ತೂತೂರಿಯು. ಸ. ೯, ೧೨—ಸ. ೧೧, ೧೪.

d. ಏಳನೆ ತುತೂರಿಯು. (ಸಭೆಯ ಯುದ್ಧಾಂತ್ಯಕಾಲವು.)

a. ಉಪಕ್ರಮವು. ಸ. ೧೧, ೧೫—೧೯.

b. ದರ್ಶನಗಳು.

aa. ಸೂರ್ಯಾನ್ವಿತ ಸ್ತ್ರಿಯು. ಘಟಸರ್ಪನು. ಸ. ೧೨.

bb. ಸಮುದ್ರ ಪೃಥ್ವಿಗಳಿಂದ ಏಳುವ ಮೃಗವು. ಸ. ೧೩.

cc. ಮಹೋಪದ್ರವದಲ್ಲಿ ಕರ್ತನು ನಡಿಸುವ ಕಾರ್ಯವು. ಸ. ೧೪.

dd. ಉಗ್ರದ ಪಾತ್ರೆಗಳು.

1. ಸಾಮಗ್ರಿಯು. ಸ. ೧೫.

2. ಸಪ್ತ ಪಾತ್ರೆಗಳು. ೧೬.

ee. ಬಬುಲೋನವು. ಅಗಾಧ ಜನ್ಯಮೃಗವು. ಸ. ೧೭.

ff. ಬಬುಲೋನದ ವಿಷಯವಾದ ಗೋಳಾಟವು. ದೇವರ ಸ್ತೋತ್ರವು. ಸ. ೧೮—೧೯, ೪.

gg. ಮೃಗಕ್ಕು ಅಬದ್ಧಪ್ರವಾದಿಗೂ ಆಗುವ ನ್ಯಾಯ ನಿರ್ಣಯವು.

1. ಸಾಮಗ್ರಿಯು. ಸ. ೧೯, ೪—೧೦.

2. ನ್ಯಾಯನಿರ್ಣಯವು. ಸ. ೧೯, ೧೦—೨೧.

hh. ಸಹಸ್ರ ವರುಷರಾಜ್ಯವು. ಸ. ೨೦, ೧—೬.

ii. ಸೈತಾನನ ಅಂತ್ಯವಂಚನೆಯು. ಗೋಗ, ಮಗೋಗರು. ಸೈತಾನನಿಗೆ ಆಗುವ ನ್ಯಾಯನಿರ್ಣಯವು. ಸ. ೨೦, ೭—೧೦.

kk. ಅಂತ್ಯನ್ಯಾಯನಿರ್ಣಯವು. ಸ. ೨೦, ೧೧—೧೫.

cc. ಸಾರ್ವಕಾಲಿಕವಾಗಿ ಜಯೋತ್ಸವ ಮಾಡುವ ಸಭೆಯು.

1. ಸರ್ವ ನವೀಕರಣವು. ಸ. ೨೧, ೧—೮.

2. ನೂತನ ಯೆರೂಸಲೇಮು. ಸ. ೨೧, ೯—೨೨, ೫.

III. ಪ್ರಕಟಣೋದ್ದೇಶವಾಸಪ್ತಿಯು. ಸ. ೨೨, ೬—೨೨.

ಪ್ರವಾದನಾವಾಕ್ಯ.

ಪ್ರಕ. ೧, ೧—೬.

I. ಪ್ರಕಟಣೆಯ ಪೀಠಿಕೆಯು. ಸು. ೧, ೧—೮.

ಪುಸ್ತಕದ ಪೀಸರು. ವ. ೧—೩. ಅಪಾಸ್ತಲನು ಸಭೆಗಳಿಗೆ ಮಾಡುವ ಆಶೀರ್ವಾದವು. ವ. ೪—೮.

೧. ಯೇಸು ಕ್ರಿಸ್ತನ ಪ್ರಕಟಣೆಯು. ಇದನ್ನು ದೇವರು, ಶೀಘ್ರದಲ್ಲಿ ಆಗಬೇಕಾದವುಗಳನ್ನು[೧] ತನ್ನ ದಾಸರಿಗೆ ತಿಳಿಸುವ ಬಗ್ಗೆ[೨], ಅವನಿಗೆ ಕೊಟ್ಟನು [೩]. ಅವನು ತನ್ನ ದೂತನ ಮುಖಾಂತರ ತನ್ನ ದಾಸನಾದ ಯೋಹಾನನಿಗೆ ಅದನ್ನು ಕಳುಹಿಸಿ ಸೂಚಿಸಿದನು. ೨. ಇವನು ದೇವರ ವಾಕ್ಯಕ್ಕೂ ಯೇಸು ಕ್ರಿಸ್ತನ ಸಾಕ್ಷಿಗೂ ತಾನು ನೋಡಿದವುಗಳೆಲ್ಲಕ್ಕೂ[೪] ಸಾಕ್ಷಿ ಕೊಟ್ಟನು. ೩. ಈ ಪ್ರವಾದನೆಯ ವಾಕ್ಯಗಳನ್ನು ಓದುವವನೂ[೫], ಕೇಳುವವರೂ, ಅದರಲ್ಲಿ ಬರೆದಿರುವವುಗಳನ್ನು ಕೈಕೊಳ್ಳುವವರೂ[೬], ಧನ್ಯರು. ಯಾಕಂದರೆ ಕಾಲವು ಸಮೀಪವಾಗಿದೆ.

೧. ಪ್ರಕಟಣೆಯು, ಉಂಟಾದಂದಿನಿಂದ ನೆರವೇರತಾಡಗಿ, ಅದರಲ್ಲಿ ಸೂಚಿತವಾದ ಕಾಲಗಳಲ್ಲಿ ಲಾಕಾಂತ್ಯದ ವರೆಗೂ ಸಂಪೂರ್ಣವಾಗ ಬೇಕೆಂಬುವದು ಈ ಮಾತಿನಿಂದ ಕಾಣುತ್ತದೆ.

೨. ಕರ್ತನಾದ ಯೇಸು ಕ್ರಿಸ್ತನಿಗೆ ಪೂರ್ಣ ವಿಧೇಯತ್ವದಿಂದ ಸೇವೆ ಮಾಡುವ ಇಕ್ಕನು ಆತನ ಚಿತ್ತವನ್ನೂ, ಆತನ ಮರ್ಮವನ್ನೂ ಈ ಪುಸ್ತಕದಿಂದ ಗ್ರಹಿಸಿ, ಅದು ದಿವ್ಯವಾದದ್ದೋ ಅಲ್ಲವೋ ಎಂದು, ತಿಳಿದು ಕಾಳ್ಳುವನು.

೩. ಯೇಸುವು ಭೂಲೋಕವಾಸ ಕಾಲದಲ್ಲಿ ಹೇಳಿದ ಮಾತುಗಳೂ, ಮಾಡಿದ ಕೃತ್ಯಗಳೂ ದೇವರಿಂದುಂಟಾದ ಪ್ರಕಾರ, ಯೋಹಾ. ೫, ೧೯. ೩೦. ೫೬; ೭, ೧೬; ೧೭, ೮. ಆತನು ಮಹಿಮಾಪ್ರವಿಷ್ಟನಾಗಿ ಮಾಡುವಂಥಾದ್ದೆಲ್ಲಾ ನಿಜವಾದ ದೇವರ ಕೃತ್ಯವಾಗಿದೆ. ಹೀಗಿರಲಾಗಿ ಆತನ ಪ್ರಕಟಣೆಯು ಸಹ ದೇವರ ಪ್ರಕಟಣೆಯಾಗಿದೆ.

೪. ಪ್ರಸಂಗದಿಂದಲೂ, ಉದ್ಯೋಗವೃತ್ತಿಯಿಂದಲೂ, ಶ್ರಮಸಹನೆಯಿಂದಲೂ ಯೋಹಾನನು ದೇವರ ವಾಕ್ಯಕ್ಕೂ, ಯೇಸು ಕ್ರಿಸ್ತನ ಸುವಾರ್ತೆಗೂ ಸಾಕ್ಷಿ ಕೊಟ್ಟನು. ಯೋಹಾ. ೧, ೧೪. ೧ ಯೋಹಾ. ೧, ೧—೩.

೫. ಅಪಾಸ್ತಲರ ಕಾಲದಲ್ಲಿ ಪರಿಶುದ್ಧ ಬರಹವು ಪ್ರತಿಗಳು ಸ್ವಲ್ಪವಾಗಿದ್ದ ಕಾರಣ ಸಭೆಗಳಲ್ಲಿ ಒಬ್ಬನು ಓದಿ ಹೇಳುತ್ತಾ (ಅವನಿಗೆ ಶ್ರಾವಕನೆಂಬ ಹೆಸರಿತ್ತು.) ಉಳಿದವರು ಕೇಳುತ್ತಾ ಇದ್ದರು. ಉಭಯತ್ರರು ಜಾಗ್ರತಪಂತರೆಂದು, ಯೋಹಾನನು ಬರೆಯುತ್ತಾನೆ.

೬. ಈ ಗ್ರಂಥವು ಅತ್ಯಂತ ಲಕ್ಷ್ಯವಾದೆಂದು, ಅದನ್ನು ಉದಾಸೀನ ಮಾಡುವವರು ತಿಳಿದು ಕಾಳ್ಳಲಿ.

೪. ಯೋಹಾನನು ಆಸ್ಯದಲ್ಲಿರುವ[೭] ಏಳು ಸಭೆಗಳಿಗೆ—ಇರುವವನೂ ಇದ್ದವನೂ ಬರುವವನೂ ಆಗಿರುವವನಿಂದಲೂ, ಅವನ ಸಿಂಹಾಸನದ ಮುಂದೆ ಇರುವ ಏಳು ಆತ್ಮಗಳಿಂದಲೂ[೮], ೫. ನಂಬಿಕೆಯಾದ ಸಾಕ್ಷಿಯೂ[೯] ಸತ್ತವರಲ್ಲಿಂದಾದ ಚೊಚ್ಚಲವನೂ[೧೦] ಭೂರಾಜರ ಒಡೆಯನೂ[೧೧] ಆಗಿರುವ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ. ೬. ನಮ್ಮನ್ನು ಪ್ರೀತಿ ಮಾಡಿ, ತನ್ನ ರಕ್ತದಲ್ಲಿ

ನಮ್ಮನ್ನು ನಮ್ಮ ಪಾಪಗಳಿಂದ ತಾಳಿದು ೬), ನಮ್ಮನ್ನು ತನ್ನ ತಂದೆಯಾದ ದೇವರಿಗೆ ಅರಸರನ್ನೂ ಯಾಜಕರನ್ನೂ ಮಾಡಿದ್ದಾನೆ ೭). ಅವನಿಗೆ ಯುಗ ಯುಗಾಂತರಗಳ ವರಿಗೂ ಮಹಿಮೆಯೂ ಪ್ರಭಾವವೂ ಆಗಲಿ. ಆಮೆನ್. ೭. ಇಗೋ, ಮೇಘಗಳಲ್ಲಿ ಬರುತ್ತಾನೆ. ಎಲ್ಲಾ ಕಣ್ಣುಗಳು ಅವನನ್ನು ನೋಡುವವು; ಅವನನ್ನು ತಿವಿದವರು ಸಹ ೮). ಭೂಮಿಯ ಸಕಲ ಕುಲಗಳು ಅವನ ನಿಮಿತ್ತ ಬಡುಕೊಳ್ಳುವರು. ಹೌದು ೯), ಆಮೆನ್. ೮. ನಾನು ಅಕಾರವೂ ಓಕಾರವೂ ೧೦), ಆದಿಯೂ ಅಂತ್ಯವೂ, ಆಗಿದ್ದೇನೆಂದು, ಇರುವವನೂ ಇದ್ದವನೂ ಬರುವವನೂ ಆಗಿರುವ ಸರ್ವಶಕ್ತನಾದ ಕರ್ತನು ೧೧) ಹೇಳುತ್ತಾನೆ.

೧. ಅಂದರೆ, ಸಣ್ಣ ಆಸ್ಪದಲ್ಲಿ. ಅದಕ್ಕೆ ಈಗ ನತಾಲಿಯ ಎಂಬ ಪೆಸರಿದೆ.

೨. ಸ. ೪, ೫.

೩. ಆತನ ಸಾಕ್ಷಿಯು ಸತ್ಯವಾದದ್ದೆಂಬುವದಕ್ಕೆ ಆತನ ರಕ್ತಧಾರೆಯೇ ಪ್ರಮಾಣವಾಗಿದೆ.

೪. ಆತನನ್ನು ನಂಬುವವನು ಮರಣಕ್ಕೆ ಭಯ ಪಡಕೆಲಸವಿಲ್ಲ.

೫. ಆತನು ಶತ್ರುಗಳ ಮಧ್ಯದಲ್ಲಿ ಧಾರೆತನ ಮಾಡುವದನ್ನೂ, ಕಪೆಯಲ್ಲಿ ಎಲ್ಲರೂ ಆತನಿಗೆ ಬೀಳುವದನ್ನೂ ಪ್ರಕಟಣೆಯು ವರ್ಣಿಸುತ್ತದೆ.

೬. ಇದಕ್ಕಾಗಿ ಸಿದ್ಧಿಯನ್ನು ಪಡಾಂದಿದ ನೀತಿವಂತರು ಆತನಿಗೆ ಸ್ತೋತ್ರಗಾಯನ ಮಾಡುತ್ತಾರೆ. ಸ. ೫, ೯. ೧೦. ಚೂಲಾಂಕಯಾತ್ರಸ್ಥರೆಲ್ಲರೂ ಈ ಸ್ತೋತ್ರಗಾಯನ ಮಾಡ ತಕ್ಕದ್ದು.

೭. ೧ ಪೇತ್ರ. ೨. ೯. ಸಭೆಯವರು ಪರರನ್ನು ದೇವರ ಅನ್ಯೋನ್ಯದಲ್ಲಿ ಶೇರಿಸುವ ಯಾಜಕಾದ್ಯೋಗವನ್ನೂ, ಅದನ್ನು ನಡಿಸುವದಕ್ಕೆ ಬೇಕಾದ ರಾಜ್ಯಾಧಿಕಾರವನ್ನೂ ಪಡಾಂದುವರು.

೮. ಇಲ್ಲಿ ಕ್ರಿಸ್ತನ ದ್ವಿತೀಯಾಗಮನವು ಸೂಚಿತವಾಗಿದೆ. ಆತನನ್ನು ಕಾಂದು ಪೂರಾಕಿದವರು ಸಭೆಯ ಆಗ ಆತನನ್ನು ಕಣ್ಣಾರೆ ನೋಡುವರು. ಚಕ್ಕರು ಸಂತೋಷದಿಂದ, ಅವಿಶ್ವಾಸಿಗಳು ಭಯದಿಂದ, ಎಲ್ಲರೂ ಆತನನ್ನು ನೋಡುವ ದಿವಸದಲ್ಲಿ ಶತ್ರುಗಳ ದೂಷಣೆಗಳೂ, ಪೂರಾಸ್ಕಗಾರರ ಲಜ್ಜಾರಹಿತ ವಾದಗಳೂ, ನೆವಗಳೂ, ಕಪಟಿಗಳ ಅಪ್ರಬುದ್ಧ ಚಾವನೆಗಳೂ ಪಕ್ಕನೆ ಭಂಗವಾಗುವವು. ಮತ್ತಾ. ೨೪, ೩೦.

೯. ಈ ಮಾತನ್ನು ಯೋಹಾನನೂ, ಕ್ರಿಸ್ತನು ತಾನೂ, ಹೇಳುತ್ತಾರೆ. ಸ. ೨೨, ೨೦. ನಾವು ಸಭೆ ಕರ್ತನು ಪ್ರತ್ಯಕ್ಷವಾಗುವ ದಿವಸದಲ್ಲಿ ಇದನ್ನು ಹೇಳುವದಕ್ಕೆ ಯೋಗ್ಯರಾಗುವ ಹಾಗೆ, ನಿಷ್ಕಪಟಿಗಳಾಗಿಯೂ, ಜಾಗರೂಕರಾಗಿಯೂ ಇರ ಬೇಕು.

೧೦. ಪ್ರಕಟಣೆಯು ಲಿಖಿತವಾದ ಗ್ರೇಕ ಭಾಷೆಯ ಅಕ್ಷರಮಾಲೆಯಲ್ಲಿ ಅಕಾರವು ಮೊದಲನೇ ಅಕ್ಷರವು, ಓಕಾರವು ಕಡೆ ಅಕ್ಷರವು ಆಗಿದೆ.

೧೧. ಅವನ ದೆಸೆಯಿಂದಲೂ, ಅವನ ಮೂಲವಾಗಿಯೂ, ಅವನಿಗಾಗಿಯೂ ಸಮಸ್ತವು ಉಂಟು. ರೋಮಾ. ೧೧, ೩೬.

II. ಪ್ರಕಟಣೆಯು.

A. ಅಪೊಸ್ತಲರ ಕಾಲವು.

1. ಸಪ್ತನಕ್ಷತ್ರ ಸಪ್ತದೀಪಗಳ ದರ್ಶನವು. ಸ. ೧, ೯—೨೦.

೯. ನಿಮ್ಮ ಸಹೋದರನೂ, ಉಪದ್ರವದಲ್ಲಿಯೂ ಯೇಸು ಕ್ರಿಸ್ತನ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ ೧) ಕೂಡ ಪಾಲುಗಾರನೂ, ಆಗಿರುವ ಯೋಹಾನ

ಪ್ರಕ. ೧, ೧೦—೨೦.

ನೆಂಬ ನಾನು ದೇವರ ವಾಕ್ಯದ ನಿಮಿತ್ತವೂ, ಯೇಸು ಕ್ರಿಸ್ತನ ಸಾಕ್ಷಿಯ ನಿಮಿತ್ತವೂ ಪಾತ್ಮಾಸ್ [ಎ] ದ್ವೀಪದಲ್ಲಿ ಇದ್ದೆನು. ೧೦. ಕರ್ತನ ದಿನದಲ್ಲಿ [ಬಿ] ಆತ್ಮದಲ್ಲಿ ಇದ್ದು, ನನ್ನ ಹಿಂದೆ ತುತೂರಿಯ ಹಾಗೆ ದೊಡ್ಡ ಶಬ್ದವನ್ನು ಕೇಳಿದೆನು. ೧೧. ಅದೇನಂದರೆ—ನಾನು ಅಕಾರವೂ ಓಕಾರವೂ, ಮೊದಲಿನವನೂ ಕಡೆಯವನೂ, ಆಗಿದ್ದೇನೆ. ನೀನು ನೋಡುವದನ್ನು ಪುಸ್ತಕದಲ್ಲಿ ಬರೆದು, ಆಸ್ಪದಲ್ಲಿರುವ ಎಫೆಸ, ಸ್ಮುರ್ನ, ಪೆರ್ಗಮ, ಥುವತ್ಯೈರ, ಸಾರ್ದಿ, ಫಿಲದೆಲ್ಫ್ಯ, ಲವೊದಿಕಯ [ಸಿ], ಎಂಬ ಏಳು ಸಭೆಗಳಿಗೆ ಕಳುಹಿಸು. ೧೨. ನನ್ನ ಸಂಗಡ ಮಾತಾಡಿದ ಶಬ್ದವನ್ನು ನೋಡುವದಕ್ಕೆ ತಿರುಗಿ ಕೊಂಡೆನು; ೧೩. ತಿರುಗಲು, ಏಳು ಚಿನ್ನದ ದೀಪಸ್ತಂಭಗಳನ್ನೂ, ಆ ಏಳು ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯನ ಮಗನಿಗೆ ಸಮಾನವಾದವನನ್ನೂ, ಕಂಡೆನು. ಅವನು ನಿಲುವಂಗಿಯನ್ನು ತೊಟ್ಟು [ಡಿ], ಎದೆಗೆ ಹೊಂದಟ್ಟಿಯನ್ನು ಕಟ್ಟಿ ಕೊಂಡಿದ್ದನು. ೧೪. ಅವನ ತಲೆಯೂ ಕೂದಲುಗಳೂ ಬಿಳಿ ಉಣ್ಣೆಯಂತೆ, ಹಿಮದಂತೆ, ಬಿಳುಪಾಗಿದ್ದವು; ೧೫. ಅವನ ಕಣ್ಣುಗಳು ಬೆಂಕಿಯ ಉರಿಯಂತೆ [ಇ] ಅವನ ಪಾದಗಳು ಕುಲುಮೆಯಲ್ಲಿ ಕಾಸಲ್ಪಟ್ಟ ಬಿಳಿ ಹಿತ್ತಾಳೆಯಂತೆ [ಎಫ್] ಅವನ ಶಬ್ದವು ಅನೇಕ ನೀರುಗಳ ಶಬ್ದದಂತೆ ಇದ್ದವು. ೧೬. ಅವನ ಬಲಗೈಯಲ್ಲಿ ಏಳು ನಕ್ಷತ್ರಗಳು ಇದ್ದವು. ಅವನ ಬಾಯಿಯಾಳಗಿಂದ ಹದವಾದ ಇಬ್ಬಾಯಿಕತ್ತಿಯು ಹೊರಟಿತು. ಅವನ ಮುಖವು ತನ್ನ ಬಲದಿಂದ ಪ್ರಕಾಶಿಸುವ ಸೂರ್ಯನ ಹಾಗಿತ್ತು [ಜಿ]. ೧೭. ಅವನನ್ನು ಕಂಡಾಗಲೇ, ಸತ್ತವನ ಹಾಗೆ [ಎಚ್] ಅವನ ಪಾದಗಳ ಮುಂದೆ ಬಿದ್ದೆನು. ಆಗ ತನ್ನ ಬಲಗೈಯನ್ನು ನನ್ನ ಮೇಲೆ ಇಟ್ಟು, ನನಗೆ ಹೇಳಿದ್ದೇನಂದರೆ [೧೦]—ಅಂಜ ಬೇಡ; ನಾನು ಮೊದಲಿನವನೂ, ಕಡೆಯವನೂ, ಬದುಕುವವನೂ, ಆಗಿದ್ದೇನೆ. ೧೮. ಸತ್ತಿದ್ದೆನು, ಮತ್ತು, ಇಗೋ, ಯುಗ ಯುಗಾಂತರಗಳ ವರೆಗೂ ಬದುಕುವವನಾಗಿದ್ದೇನೆ. ಆಮೆನ್. ಮತ್ತು ಪಾತಾಳ ಮರಣಗಳ ಬೀಗದ ಕೈಗಳು ನನಗುಂಟು [೧೧]. ೧೯. ಕಂಡವುಗಳನ್ನೂ, ಇರುವವುಗಳನ್ನೂ, ಇವುಗಳ ತರುವಾಯ ಆಗುವವುಗಳನ್ನೂ [೧೨], ನನ್ನ ಬಲಗೈಯಲ್ಲಿ ನೀನು ಕಂಡ ಏಳು ನಕ್ಷತ್ರಗಳ ಮರ್ಮವನ್ನೂ, ೨೦. ಏಳು ಚಿನ್ನದ ದೀಪಸ್ತಂಭಗಳನ್ನೂ, ಬರೆ. ಆ ಏಳು ನಕ್ಷತ್ರಗಳು, ಏಳು ಸಭೆಗಳ ದೂತರು [೧೩]; ನೀನು ಕಂಡ ಏಳು ದೀಪಸ್ತಂಭಗಳು, ಏಳು ಸಭೆಗಳು [೧೪].

ಪ್ರಕ. ೧.

೧. ಉಪದ್ರವವನ್ನು ತಾಳುವವನು ರಾಜ್ಯಬಾಧ್ಯತೆಯನ್ನು ಪಡೆದುಕೊಂಡುತ್ತಾನೆ. ರಾಜ್ಯಬಾಧ್ಯನಾದವನು ತಾಳ್ಮೆಯುಳ್ಳವನಾಗುತ್ತಾನೆ. ೨ ತಿಮೊ. ೨, ೧೨.

೨. ಈ ದ್ವೀಪಕ್ಕೆ ಈಗ ಪಲ್ಮಾಸ ಅಥವಾ ಪತ್ಮಾ ಎಂಬ ಹೆಸರಿದೆ. ಅದು ಎಗೇಯ ಸಮುದ್ರದ ದ್ವೀಪಗಳಲ್ಲಿ ಒಂದು. ಅದು ಹೆಚ್ಚು ಕಡಿಮೆಯಾಗಿ ಆರು ಪೌರಡಾರಿ ಸುತ್ತುಳ್ಳ ಅರೆಬಂಡೆಯಾಗಿದ್ದು, ಸಮುದ್ರದಲ್ಲಿ ಪೊಡೆಯ ಹಾಗೆ ಕಾಣುತ್ತದೆ. ಅದರಲ್ಲಿ ನಿಂತು ನೋಡಿದರೆ, ಎಗೆಯ ಸಮುದ್ರದ ದ್ವೀಪಗಳೂ, ಮೂಡಣ ಕಡೆಯಲ್ಲಿ ಆಸ್ಯದ ಘಟ್ಟಗಳೂ ತೋರುತ್ತವೆ. ಯೋಹಾನನು ೯೧—೯೬ವರೆಗೂ ಆಳಿದ ಮಹಾರಾಜನಾದ ದೊಮಿತಿಯಾನನ ಕಾಲದಲ್ಲಿ ದೇಶಪರಿತ್ಯಾಗಿಯಾಗಿ ಪತ್ಮಾಸ್ ದ್ವೀಪದಲ್ಲಿ ಬಂಧನಗ್ರಸ್ಥನಾದನೆಂದು, ಪೂರ್ವ ಚರಿತ್ರಗಾರರು ಬರದಿದ್ದಾರೆ.

೩. ಅಂದರೆ, ಆದಿತ್ಯವಾರದಲ್ಲಿ. ಆದಿಕಾಲದಕ್ರೈಸ್ತರಲ್ಲಿ ಈ ದಿವಸವು, ಕರ್ತನ ಪುನರುತ್ಥಾನದ ದಿವಸವಾದ್ದರಿಂದ, ಪರಿಶುದ್ಧವಾಗಿತ್ತು.

೪. ಇಲ್ಲಿ ಸೂಚಿತವಾದ ಪಟ್ಟಣಗಳು ಸಣ್ಣ ಆಸ್ಯದಲ್ಲಿ ಹೆಸರ್ವಾಸಿಗಳಾದ ಪಟ್ಟಣಗಳಾಗಿದ್ದವು. ಆ ವುಗಳಲ್ಲಿ ಪರಜನರ ನಡುವೆ ಕ್ರೈಸ್ತಸಭೆಗಳು ಸ್ಥಾಪಿತವಾಗಿದ್ದವು. ಪತ್ಮಾಸ್ ದ್ವೀಪದಿಂದ ಬರುವವನು ಆ ಏಳು ಪಟ್ಟಣಗಳಿಗೆ ಹೋಗ ಬೇಕಾದರೆ, ಇಲ್ಲಿ ಬರುವ ಕ್ರಮದ ಪ್ರಕಾರ ಮೊದಲು ಎಫೆಸಕ್ಕೆ ತರುವಾಯ ಸ್ಮುರ್ನಕ್ಕೆ ಕಡೆಯಲ್ಲಿ ಲವಾದಿಕಿಯಕ್ಕೆ ಬರುವನು.

೫. ಕರ್ತನಾದ ಯೇಸು ಕ್ರಿಸ್ತನು ಪ್ರಧಾನಯಾಜಕನ ಹಾಗೆ ನಿಲುವಂಗಿ ತಾಟ್ಟು ಅರಸನ ಹಾಗೆ ಹೊಂದಟ್ಟಿ ಕಟ್ಟಿ ಕಾಂಡವನಾಗಿ, ಯೋಹಾನನಿಗೆ ಕಾಣಿಸಿ ಕಾಂಡನು. ಯಾಕಂದರೆ ತನ್ನ ಸಭೆಗಳಲ್ಲಿ ಪ್ರಧಾನಯಾಜಕರಾಜನಾಗಿದ್ದು, ಅವುಗಳನ್ನು ಪರಿಪಾಲಿಸುತ್ತಾನೆ.

೬. ಇಲ್ಲಿ ಬರದ ವರ್ಣನೆಯು ದನಿ. ೭, ೯ಲ್ಲಿ ಬರದ ದೇವರ ವರ್ಣನೆಗೆ ಅನುಸಾರವಾಗಿದೆ. ಆತನ ಅನಾದಿ ಜ್ಞಾನವೂ ಪರಿಶುದ್ಧತ್ವವೂ, ಆತನ ಸರ್ವಜ್ಞವಾದ ನಿತ್ಯಾಸಕ್ತಿಯೂ, ಈ ನಾಮಗಳಿಂದ ಸೂಚಿತವಾಗಿವೆ. ಆತನಿಗೆ ಮರೆಯಾದದ್ದು ಒಂದೂ ಇಲ್ಲ. ಆದ್ದರಿಂದ ಭಕ್ತನು ಈ ಕೃಪೆಯ ಕಾಲದಲ್ಲಿ ತನ್ನ ಹೃದಯದ ರಹಸ್ಯವನ್ನೆಲ್ಲಾ ಆತನಿಗೆ ವಿಜ್ಞಾಪಿಸಿದರೆ, ಒಳ್ಳೇದು. ಇತರರ ಪಾಪವೆಲ್ಲಾ ನ್ಯಾಯನಿರ್ಣಯ ದಿವಸದಲ್ಲಿ ಹೊರ್ಬಾಗಾದರೂ ಆತನ ಮುಂದೆ ಪ್ರಕಟವಾಗುತ್ತದೆ.

೭. ಇಲ್ಲಿ ಹಿತ್ತಾಳೆಯಂದು ಹೆಸರಿರ್ಪಾಂದದ್ದು ಚಂಗಾರಕ್ಕಿಂತ ಅತಿಶಯವಾದ ಕಾಂತಿಯೂ ಬೆಲೆಯೂ ಕಂಚಿಗಿಂತ ಅತಿಶಯವಾದ ದಾರಢ್ಯವುಳ್ಳ ಮಿಶ್ರಲೋಹವಾಗಿತ್ತು. — ಆತನನ್ನು ಎದುರಿಸುವವನ್ಯಾರು? ಆತನು ಶತ್ರುಗಳನ್ನು ಬೂದಿ ಮಾಪಿ, ತುಳಿದು ಬಿಡುವನು.

೮. ಮಹಿಮಾಪ್ರವಿಷ್ಟನಾದ ಯೇಸುವು ತನ್ನ ವಾಕ್ಯದಿಂದಲೂ ಆತ್ಮದಿಂದಲೂ ಸರ್ವಲೋಕಕ್ಕೆ, ವಿಶೇಷವಾಗಿ ಭಕ್ತರ ಸಭೆಗೆ, ನಿರ್ಮಲವಾದ ಬೆಳಕನ್ನುಂಟು ಮಾಡುವ ಸೂರ್ಯನಾಗಿದ್ದಾನೆ.

೯. ಯೇಸುವಿಗೆ ಅತಿ ಪ್ರಿಯನಾಗಿದ್ದು, ಮೂರು ವರುಷ ಆತನ ಸಹವಾಸ ಮಾಪಿ, ೬೦ ವರುಷ ಅಪಾಸ್ತಲಾದ್ಯೋಗವನ್ನು ನಡಿಸಿ, ಆತನಿಗೆ ಸೇವೆ ಮಾಡಿದ ಯೋಹಾನನು ಆತನ ಮಹಿಮೆಯನ್ನು ಕಂಡದರಿಂದ ಸತ್ತವನ ಹಾಗೆ ನೆಲಕ್ಕೆ ಬಿದ್ದನೆಂದು, ಬರಹವಿದೆ. ಹೌದಾಗಾದರೆ, ಮತ್ತಾಬ್ಬರಿಗೆ ಆತನ ಮಹಿಮೆಯು ಎಷ್ಟಾದೀ ಭಯಂಕರವಾಗಿರ ಬೇಕು.

೧೦. ಕರ್ತನಾದ ಯೇಸುವು ಯೋಹಾನನ ಮೇಲೆ ಬಲಕೈಯಿಟ್ಟು, ಅಭಯವಾಕ್ಯವನ್ನು ಹೇಳಿದೀಂದಲೇ ಸ್ವಸ್ಥವಾದನು.

೧೧. ಕ್ರಿಸ್ತನ ವಿಶ್ವಾಸವಿಲ್ಲದವರ ಶರೀರವು ಮರಣಕ್ಕೆ, ಪ್ರಾಣವು ಪಾತಾಳಕ್ಕೆ ಪಾತ್ರವಾಗುವದು. ಕ್ರಿಸ್ತನು ಉಭಯತ್ರರ ಮೇಲೆ ಅಧಿಕಾರಿಯಾಗಿದ್ದು, ತನ್ನ ಭಕ್ತರನ್ನು ರಕ್ಷಿಸುತ್ತಾನೆ.

೧೨. ಯೋಹಾನನು ಬರೆಯ ಬೇಕೆಂದು ಅಪ್ಪಣೆಯನ್ನು ಪಡೆದುಕೊಂಡಿದ್ದು ಮೂರು ವಿಧವಾಗಿದೆ: ೧) ತಾನು ಕಂಡ ಯೇಸು ಕ್ರಿಸ್ತನ ಪ್ರತ್ಯಕ್ಷತ್ವವು. ೨) ಏಳು ಸಭೆಗಳ ಮತ್ತು ಅವುಗಳ ಮುಖ್ಯಸ್ಥರ ಪ್ರಸ್ತು

ತವಾದ ಸ್ಥಿತಿಯು. ೩) ಸ. ೪ರಿಂದ ಪುಸ್ತಕದ ಕಡೇವರೆಗೂ ಬರದಿರುವ ಭವಿಷ್ಯತ್ಕಾರ್ಯಗಳು.

೧೩. ಪಾಳೆ ವಾಡಂಬಡಿಕೆಯ ಗ್ರಂಥಗಳಲ್ಲಿ, ವಿಶೇಷವಾಗಿ ಮಲೆಯಕೀಯ ಪ್ರವಾಪನೆಯಲ್ಲಿ, ಯಾಜಕರಿಗೂ, ಬಾಧಕರಿಗೂ ದೂತರೆಂಬ ಪೆಸರಿಟ್ಟಿದೆ. ಕ್ರೈಸ್ತಸಭಾಬಾಧಕರು ಕ್ರಿಸ್ತನ ದೂತರಾಗಿದ್ದಾರೆ. ೧ ಕಾರಿ. ೪, ೧. ೨ ಕಾರಿ. ೫, ೨೦. ಅವರು ಆತನಿಗೆ ಪೂರ್ಣವಾಗಿ ಅಧೀನರಾಗಿದ್ದಾರೆ.

೧೪. ಚಿನ್ನದ ದೀಪಸ್ತಂಭಗಳೆಂಬ ಸಭೆಗಳು ಪರರಿಗೆ ಸುವಾರ್ತೆಯ ಪ್ರಕಾಶವನ್ನು ಕಾಡುವ ಪಂಗಿನಲ್ಲಿವೆ. ಫಿಲಿ. ೨, ೧೫.

2. ಏಳು ಪ್ರಸಿದ್ಧ ಪತ್ರಿಕೆಗಳು. ಸ. ೨. ೩.

ಎರಡನೆ ಮೂರನೆ ಸಂಧಿಗಳಲ್ಲಿ ಯೋಹಾನನ ಪ್ರಕಟಣೆಯನ್ನು ಮೊದಲಾಗಿ ಹೊಂದ ತಕ್ಕ ಸನ್ನಿಅನ್ಯದ ಏಳು ಸಭೆಗಳಿಗೆ ಕರ್ತನಾದ ಯೇಸು ಕ್ರಿಸ್ತನು ಕಳುಹಿಸಿದ ಏಳು ಪ್ರಸಿದ್ಧಪತ್ರಿಕೆಗಳು ಬರದವೆ. ಅವು ಆಯಾ ಸಭೆಗಳಿಗೆ ಸ್ತೋತ್ರ, ಶಿಕ್ಷೆ, ವಾಗ್ದತ್ತ, ಭಯೋಕ್ತಿ, ಮುಂತಾವುಗಳನ್ನು ಸೂಚಿಸಿ, ಪ್ರತಿ ಸಭೆಯೂ, ಪ್ರತಿ ಭಕ್ತನೂ ದೃಷ್ಟಿಸಿ ಆತ್ಮಜ್ಞಾನ ಹೊಂದ ತಕ್ಕವರಿಶುದ್ಧ ಬರಹದಲ್ಲಿ ಯಣಕನ್ನಡಿಯಾಗಿವೆ.

ಎಫೆಸವು. ಸ. ೨, ೧—೭.

೧. ಎಫೆಸದಲ್ಲಿರುವ ೧) ಸಭೆಯ ದೂತನಿಗೆ ಬರೆ—ಏಳು ನಕ್ಷತ್ರಗಳನ್ನು ತನ್ನ ಬಲಗೈಯಲ್ಲಿ ಹಿಡು ಕಾಂಡು, ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ಸಂಚರಿಸುವವನು ಹೇಳುವದೇನಂದರೆ—೨. ನಿನ್ನ ಕ್ರಿಯೆಗಳನ್ನೂ ೨), ನಿನ್ನ ಕಷ್ಟವನ್ನೂ, ನಿನ್ನ ತಾಳ್ಮೆಯನ್ನೂ, ನೀನು ದುಷ್ಟರನ್ನು ಸಹಿಸಲಾರದೆ ಇರುವದನ್ನೂ ಬಲ್ಲೆನು. ೩. ಅಪಾಸ್ತಲರಾಗಿರದೆ, ತಾವು ಅಪಾಸ್ತಲರೆಂದು ಅನ್ನಿಸಿ ಕಾಂಡವರನ್ನು ಶೋಧಿಸಿ, ಅವರು ಸುಳ್ಳುಗಾರರೆಂದು ಕಂಡಿ ೩). ನೀನು ಸಹಿಸಿ ಕಾಂಡು, ತಾಳ್ಮೆಯುಳ್ಳವನಾಗಿ, ನನ್ನ ಹೆಸರಿನ ನಿಮಿತ್ತ ಕಷ್ಟ ಪಟ್ಟು, ದಣಿಯಲಿಲ್ಲ. ೪. ಆದರೆ ನೀನು ಮೊದಲಿನ ಪ್ರೀತಿಯನ್ನು ಬಿಟ್ಟು ಬಿಟ್ಟಿದ್ದೀ ೪), ಎಂಬುವದು ನಿನ್ನ ಮೇಲೆ ನನಗುಂಟು. ೫. ಹಾಗಾದರೆ, ಎಲ್ಲಿಂದ ಬಿದ್ದು ಹೋದಿ ಎಂದು ಜ್ಞಾಪಕ ಮಾಡಿ ಕಾಂಡು, ಮಾನಸಾಂತರ ಪಟ್ಟು ೫), ಮೊದಲಿನ ಕ್ರಿಯೆಗಳನ್ನು ಮಾಡು. ಇಲ್ಲದಿದ್ದರೆ, ನೀನು ಮಾನಸಾಂತರ ಪಡದೆ ಇದ್ದರೆ, ನಿನಗೆ ಬೇಗ ಬಂದು, ನಿನ್ನ ದೀಪಸ್ತಂಭವನ್ನು ಅದರ ಸ್ಥಳದಿಂದ ತಾಲಗಿಸುವೆನು ೬). ೬. ಆದರೆ ಇದು ನಿನಗುಂಟು. ಏನಂದರೆ—ನಿಕೊಲಾಯಿತರ ಕ್ರಿಯೆಗಳನ್ನು ಹಗೆ ಮಾಡುತ್ತೀ ೭); ಅವುಗಳನ್ನು ನಾನೂ ಹಗೆ ಮಾಡುತ್ತೇನೆ. ೭. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ೮) ಕೇಳಲಿ. ಜಯಿಸುವವನಾವನೋ, ಅವನಿಗೆ ದೇವರ ಪರದೈಸಿನ ಮಧ್ಯದಲ್ಲಿರುವ ೯) ಜೀವವೃಕ್ಷದಿಂದ ಉಣ್ಣಿ ಕಾಡುವೆನು.

೧. ಸಣ್ಣಆಸ್ಯದ ಯವನದೇಶವೆಂಬ ರಾಷ್ಟ್ರಕ್ಕೆ ಎಫೆಸವು ಪ್ರಾಮುಖ್ಯ ಪಟ್ಟಣವಾಗಿತ್ತು. ಅದು ಅತಿಶಯವಾದ ವ್ಯಾಪಾರದಿಂದಲೂ, ನಾನಾ ವಿಧವಾದ ಕುಶಲಕೃತ್ಯಗಳಿಂದಲೂ, ಪೂರ್ವಕಾಲದ ಪರಜನರಲ್ಲಿ ಅತಿ ಶ್ಲಾಘ್ಯವಾದ ಉತ್ತಮ ಕ್ಷೇತ್ರವಾದ ದಿಯಾನದೇವಿಯ ಗುಡಿಯಿಂದಲೂ, ಪೌಸರ್ವಾನಿಯಾಗಿತ್ತು. ದೇವವಾಕ್ಯವು ಎಫೆಸದಲ್ಲಿ ಪ್ರಬಲವಾದ ಚರಿತ್ರವು ಅಪಾ. ಕ್ರಿ. ಸ. ೧೯ಲ್ಲಿ ಬರದದೆ. ಆದರೆ ಅಪಾಸ್ತಲನಾದ ಪೌಲನು, ಅಬದ್ಧಬಾಧಕರು ಆ ಸಭೆಯಲ್ಲಿ ಶೇರುವರೆಂದು, ಆಗಲೇ ಭಯ ಪಟ್ಟನು. ಅಪಾ. ಕ್ರಿ. ಸ. ೨೦.

೨. ಇದು ಮಿಲು ಪ್ರಸಿದ್ಧ ಪತ್ರಿಕೆಗಳಲ್ಲಿ ಒಂದಾಂದರ ಆದಿವಾಕ್ಯವಾಗಿದೆ. ಕಷ್ಟದಿಂದಲೂ ತಾಳ್ಮೆಯಿಂದಲೂ ಚಕ್ಕನು ಮಾಡುವ ಕೃತ್ಯಗಳು ಕರ್ತನಿಗೆ ಪ್ರಿತವಾಗಿವೆ; ಆದರೆ ಆದಿಪ್ರೀತಿರಹಿತವಾದ ಈ ಕೃತ್ಯಗಳಿಗೆ ಆತನು ಮೆಚ್ಚುವದಿಲ್ಲ.

೩. ಎಫೆಸದ ಸಭೆಯು ದಾಡ್ಡದಾಗಿತ್ತು. ಅದರ ಮುಖ್ಯಸ್ಥನು ಚಾರವಾದ ಉದ್ಯೋಗವೃತ್ತಿಯನ್ನು ಶಕ್ತಿಯಿಂದಲೂ ಸ್ಥೈರ್ಯದಿಂದಲೂ ನಡಿಸುತ್ತಾ, ಅಯೋಗ್ಯವಾಗಿ ನಡಿದು ಕಾಳ್ಕುವ ಸಭೆಯವರನ್ನೂ, ಶುದ್ಧ ಸುವಾರ್ತಾಬಾಧನೆಯನ್ನು ಬೆರಕೆ ಮಾಡುವವರನ್ನೂ, ಆಸಕ್ತಿಯಿಂದ ಖಂಡಿಸುತ್ತಾ, ವಿಶೇಷವಾಗಿ ಯೇಸು ಕ್ರಿಸ್ತನನ್ನು ಕಂಡದೀಂದ ಅಪಾಸ್ತಲರೆಂಬ ಪೆಸರನ್ನು ಪಾಂದಿವ ಅಬದ್ಧಬಾಧಕರನ್ನೂ, ಮನಃಪೂರ್ವಕವಾಗಿ ಎದುರಿಸುತ್ತಾ ಇದ್ದ ಕಾರಣ, ಯೇಸುವು ಅವನನ್ನು ಪಾಗಳುತ್ತಾನೆ.

೪. ಅವನು ಆಸಕ್ತ ನೇವೆಯಿಂದ ತನ್ನ ಪ್ರಾಯದಲ್ಲಿದ್ದ ಕರ್ತನ ಪ್ರೀತಿಯನ್ನು ಪ್ರಮಾಣಿಸಿದನು. ಆದರೆ ವಿರೋಧಿಗಳ ಸಂಗಡ ಎಡೆಬಿಡದೆ ಯುದ್ಧ ಮಾಡುತ್ತಾ ಬಂದದರಿಂದ, ಮೊದಲು ಸಭಾಸ್ಥಾದರರಿಗೆ ತೋರಿಸಿದ ಪ್ರೀತಿಯು ಅವನಲ್ಲಿ ಕುಂದಿತು. ಆದ್ದರಿಂದ ಯೇಸುವು ಅವನನ್ನು ಗದರಿಸಿ,ಮಾನಸಾಂತರ ಪಟ್ಟು, ಆದಿಕೃತ್ಯಗಳನ್ನು ಮಾಡ ಬೇಕೆಂದು, ಎಚ್ಚರಿಸುತ್ತಾನೆ.

೫. ಮಾನಸಾಂತರವು ಭಯಂಕರವಾದದ್ದಲ್ಲ. ರಾಗಿಯು ಸ್ವಸ್ಥವಾದರೆ, ಮಾರ್ಗ ತಪ್ಪಿದವನು ತಿರಿಗಿ ಮಾರ್ಗವನ್ನು ಕಂಡರೆ, ಬಿದ್ದವನು ಎದ್ದರೆ, ಸಂತೋಷ ಪಡುವದೇ ಯುಕ್ತವಾಗಿದೆ.

೬. ನಿನ್ನ ದೀಪಸ್ತಂಭವೆಂಬ ನಿನ್ನ ಸಭೆಯನ್ನು ಅದರ ಸ್ಥಳದಿಂದ ತಾಲಗಿಸುವೆನು. ಅದೇನಂದರೆ: ಎಫೆಸದ ಸಭೆಯನ್ನು ನಾಶ ಮಾಡುವೆನು. ಆ ಕಾಲದಲ್ಲಿ ಆಗ್ಯಾಗ್ಗೆ ಪುಟ್ಟುತ್ತಾ ಇದ್ದ ಕ್ರೈಸ್ತಪಂಗಡಗಳಿಂದ ಅದು ಬೇಗ ಆಗ ಬಹುದಾಗಿತ್ತು. ಇಂಥಾ ಶಿಕ್ಷೆಯು ಅಧ್ಯಕ್ಷಿಯ ಮೇಲೆ ಮಾತ್ರವಲ್ಲ, ಅವನ ಪ್ರೀತಿನ್ಯೂನತ್ವವೆಂಬ ದೋಷದಲ್ಲಿ ಕೂಡಿದ ಸಭೆಯ ಮೇಲೆ ಸಹ ಬೀಳುತ್ತಿತ್ತು.—ಮುಖ್ಯಸ್ಥನೂ, ಎಫೆಸದ ಸಭೆಯವರೂ ಇಲ್ಲಿ ಬರದ ಉದ್ಯೋಗನೆಗೆ ಕಿವಿ ಕಾಟ್ಟು, ಮಾನಸಾಂತರ ಪಟ್ಟರೆಂದು ಕಾಣುತ್ತದೆ; ಯಾಕಂದರೆ: ಕ್ರೈಸ್ತಸಭೆಯು ಎಫೆಸದಲ್ಲಿ ಕೆಲವು ಶತಮಾನದ ವರೆಗೂ ನೆಲೆಯಾದದ್ದಲ್ಲದೆ, ಪಟ್ಟಣವೆಲ್ಲಾ ಕಡೆಯಲ್ಲಿ ಕ್ರಿಸ್ತಭಕ್ತಿಗೆ ಸಂವರ್ಶಿತವಾಯಿತು. ಆದರೆ ಐದನೆ ಶತಮಾನದಿಂದ ಹೆಚ್ಚುತ್ತಾ ಹೆಚ್ಚುತ್ತಾ ಬಂದ ಎಫೆಸದ ಪಾಪಗಳಿಗೆ ಚಾರವಾದ ಕೆಲವು ಶಿಕ್ಷೆಗಳು ಉಂಟಾದ ಬಳಿಕ, ಪಟ್ಟಣವೆಲ್ಲಾ ಭಯಂಕರ ರೀತಿಯಿಂದ ನಾಶವಾಯಿತು. ಇಪ್ಪತ್ತು ಸಾವಿರ ಜನರು ಕೂರುವಷ್ಟು ವಿಶಾಲವಾದ ರಂಗಸ್ಥಾನವು ಕಟ್ಟಿ ಇದ್ದ ಮಹಾನಗರದ ನೆಲವು ಎಲ್ಲಿಯದೇ ಎಂದು, ಈಗ ತೋರುವದಿಲ್ಲ. ಆ ದೀಪಸ್ತಂಭವು ಅದರ ಸ್ಥಳದಿಂದ ಪೂರ್ಣವಾಗಿ ತಾಲಗಿ ಹೋಯಿತು.

೭. ನಿಕಾಲಾಯಿತರು ಆದಿಸಭಾಸೇವಕನಾದ ನಿಕಾಲಾವನ ಪೆಸರನ್ನು (ಅಪಾ. ಕ್ರಿ. ೬, ೫.) ತೆಗದು ಕಾಂಡು, ಒಂದು ಮತವವರಾಗಿದ್ದರು. ಎರಡನೆ ಶತಮಾನದಲ್ಲಿ ಅಲೆಕ್ಸಂಡ್ರಿಯದಲ್ಲಿದ್ದ ಸಭಾಪಿತನಾದ ಕ್ಲಿಮೆನ್ಸ್, ನಿಕಾಲಾವನು ಸಂಸಾರಪರಿತ್ಯಾಗ ಮಾಡ ಬೇಕೆಂದು, ತನ್ನ ಪೆಂಡತಿಯನ್ನು ಬಿಟ್ಟು ಬಿಟ್ಟು, ಮಕ್ಕಳಿಗೂ ಮದುವೆ ಮಾಡದೆ, ಚಕ್ಕರು ವಿರಕ್ತರಾಗಿ ದೇಹವಂಡನೆ ಮಾಡ ಬೇಕೆಂತ ಬಾಧಿಸಿದನೆಂದು, ಬರೆಯುತ್ತಾನೆ. ಆದರೆ ನಿಕಾಲಾಯಿತರು, ಅನೇಕ ಸನ್ಯಾಸಿಗಳ ಪ್ರಕಾರ, ವಿವಾಹ ಪದ್ಧತಿಯನ್ನು ಬಿಟ್ಟ ಮೇಲೆ, ಜಾರತ್ವದ ಬಲೆಯಲ್ಲಿ ಶಿಕ್ಕಿ ಕಾಂಡರು.

ಪ್ರಕ. ೨, ೪—೧೧.

೪. ಇದರಿಂದ ಪ್ರಕಟಣೆಯು ಎಲ್ಲಾ ಕಾಲಗಳ ಕ್ರೈಸ್ತರೆಲ್ಲರ ಉದ್ದಿಶ್ಯವಾಗಿ ರಚಿತವಾದದ್ದೆಂದೂ, ಏಳು ಸಭೆಗಳು ಅವುಗಳ ದೂತರ ಸಹಿತವಾಗಿ, ಲಾವಾದ ಎಲ್ಲಾ ಸ್ಥಳ ಕಾಲಗಳ ಸಭೆಗಳಿಗೂ, ಸಹಾಬ್ಬಾಧಕರಿಗೂ ಉದ್ಬಾಬೋಧನಾರ್ಹವಾದ ಮಾಧ್ಯಮವಾಗಿ, ಯೇಸು ಕ್ರಿಸ್ತನಿಂದ ನೇಮಕವಾದದ್ದೂ, ಕ್ರಿಸ್ತನು ಪ್ರಕಟಣೆಯಿಂದ ಎಲ್ಲಾ ಕ್ರೈಸ್ತರನ್ನು ತನ್ನ ಆಗಮನವಿಷಯಕ್ಕಾಗಿ ಸಿದ್ಧ ಮಾಡ ಮನಸ್ಸಾಗಿದ್ದಾನೆಂಬುವದೂ, ಪ್ರಾಮಾಣ್ಯವಾಗಿದೆ. ಆತ್ಮವು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ ಯೆಂಬ ಮಾತು ವಿಶೇಷಾರ್ಥ ಲಿಖಿತವಾದದ್ದು, ಈ ಉದ್ಬಾಬೋಧನೆಯು ಎಲ್ಲರಿಗೂ ಬರದದ್ದೆಂದು ತಾತ್ಪರಿಸುತ್ತದೆ.

೯. ಯೇಸುವು ಮೃತವಾದ ಕೂಡಲೇ ಪರದೈಸು ಎಂಬಲ್ಲಿ ಶೇರಿದನು. ಅಲ್ಲಿ ಜಯಿಸುವವನಿಗೆ ಪ್ರಾಪ್ತವಾಗುವ ಫಲವುಳ್ಳ ಜೀವವೃಕ್ಷವು ಉಂಟು. ವಿಶ್ವಾಸದಿಂದ ದುರ್ವಿಷಯಪರಿತ್ಯಾಗ ಮಾಡುವವರಿಗೆ ಈ ಪದವಿಯು ದಾರಕುವದು.

ಸ್ಮರ್ನವು. ವ. ೮—೧೧.

೮. ಮತ್ತು ಸ್ಮರ್ನದಲ್ಲಿರುವ ೧) ಸಭೆಯ ದೂತನಿಗೆ ಬರೆ—ಮೊದಲಿನವನೂ, ಕಡೆಯವನೂ, ಸತ್ತವನಾಗಿದ್ದು ಬದುಕುವವನೂ ೨), ಹೇಳುವದೇನಂದರೆ—೯. ನಿನ ಕ್ರಿಯೆಗಳನ್ನೂ ಉಪದ್ರವವನ್ನೂ ೩), ಐಶ್ವರ್ಯವಂತನಾಗಿರುವ ನಿನ್ನ ಬಡತನವನ್ನೂ, ಯೆಹೂದ್ಯರಲ್ಲ, ಸೈತಾನನ ಸಭೆಯವರಾಗಿದ್ದು, ತಮ್ಮನ್ನು ಯೆಹೂದ್ಯರೆನ್ನಿಸಿ ಕೊಳ್ಳುವವರ ದೂಷಣೆಯನ್ನೂ ಬಲ್ಲೆನು. ೧೦. ನಿನಗೆ ಬರುವ ಶ್ರಮಗಳಿಗ್ಯಾಸ್ಕರ ಏನೂ ಭಯ ಪಡ ಬೇಡ. ಇಗ್ಯಾ, ನೀವು ಶೋಧಿಸಲ್ಪಡುವ ಹಾಗೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಶೆರೆಯಲ್ಲಿ ಹಾಕುವನು. ಆಗ ಹತ್ತು ದಿವಸಗಳ ೪) ಉಪದ್ರವವು ನಿಮಗೆ ಇರುವದು. ಮರಣದ ಪರ್ಯಂತರ ನಂಬಿಕೆಯಾಗಿರು; ಆಗ ಜೀವದ ಕಿರೀಟವನ್ನು ನಿನಗೆ ಕೊಡುವೆನು. ೧೧. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ. ಜಯಿಸುವವನು ಎರಡನೇ ಮರಣದಿಂದ ೫) ನಷ್ಟ ಪಡುವದಿಲ್ಲ.

೧. ಸ್ಮರ್ನವು ಈಗಿನ ಪರ್ಯಂತ ಸಣ್ಣ ಆಸ್ಯದ ಪಟ್ಟಣಗಳಲ್ಲಿ ಪೌಸರ್ವಾಸಿಯಾದ ಚಾರಿ ವ್ಯಾಪಾರವ ಪಟ್ಟಣವಾಗಿದೆ. ಮುಸಲ್ಮಾನರೂ, ಕ್ರೈಸ್ತರೂ ಮುಂತಾದ ನಾನಾ ವಿಧನಿವಾಸಿಗಳ ಲೆಖ್ಖವು ಒಂದು ಲಕ್ಷದ ಇಪ್ಪತ್ತು ಸಾವಿರವಾಗುತ್ತದೆ. ಅವರಲ್ಲಿ ಕ್ರೈಸ್ತರು ಹೆಚ್ಚು ಕಮಿಯಾಗಿ ಹದಿನಾಲ್ಕು ಸಾವಿರ ಮಂದಿಯಾಗಿದ್ದಾರೆ. ಪ್ರಥಮ ಕಾಲದಲ್ಲಿ ಅನೇಕ ಕ್ರೈಸ್ತರು ಅಲ್ಲಿ ಸಾಕ್ಷಿಮರಣವನ್ನು ಅನುಭವಿಸಿದರು. ತುರುಕರು ಸಣ್ಣ ಆಸ್ಯವನ್ನು ಅಕ್ರಮಿಸಿ ಕೊಂಡಂದಿನಿಂದ ಸಭೆ ಅನೇಕ ಕ್ರೈಸ್ತರು ಅಲ್ಲಿ ಹುತವಾದರು. ಈಗ ಸ್ಮರ್ನವು ಆ ದಿಕ್ಕಿನಲ್ಲಿ ಸುವಾರ್ತೆಯನ್ನು ಸಾರುವ ಅನೇಕ ಕೂಟಗಳ ಸ್ಥಾನವಾಗಿದೆ.

೨. ಯೇಸು ಕ್ರಿಸ್ತನು ಸತ್ತು ಮೇಲೆ ಬದುಕಿದನು; ಆತನಿಗಾಗಿ ಸಾಯುವವನಿಗೆ ನಿತ್ಯ ಜೀವ ಉಂಟು.

೩. ಸ್ಮರ್ನದ ಸಭಾದೂತನ ವಿಶೇಷವಾದ ಕೃತ್ಯವು ಯಾವದಂದರೆ: ಶ್ರಮಸಹನೆಯು. ಇದು ಯೇಸು ಕ್ರಿಸ್ತನ ದೃಷ್ಟಿಯಲ್ಲಿ ಅತಿ ಶ್ಲಾಘ್ಯವಾದದ್ದು.

೪. ಸ್ಮರ್ನದಲ್ಲಿದ್ದ ಯೆಹೂದರು, ತಾವು ಪರಿಗ

ಪ್ರಕ. ೨, ೧೨—೧೭.

ಖಿತ ದೇವಸಖೆಯವರೆಂಮ ಅನಿಸಿ ಕಾಂಡು, ಯೇಸು ಮಿಗೆ ರಾಷ್ಟಾನ್ವಿತರಾದ ಶತ್ರುಗಳೂ, ಕ್ರೈಸ್ತರಿಗೆ ಪ್ರಾಣ ವೈರಿಗಳೂ ಆಗಿದ್ದರು. ಯೋಪಾ. ೮, ೩೯—೪೫. ಆದ್ದರಿಂದ ಯೇಸುವು ಅವರಿಗೆ ಸೈತಾನನ ಸಖೆಯೆಂದು ಪೆಸರಿಡುತ್ತಾನೆ. ಪ್ರಥಮ ಕಾಲದ ಕ್ರೈಸ್ತ ಹಿಂಸೆಗಳಲ್ಲಿ ಅವರು ಪೆಚ್ಚಾಗಿ ಉದ್ಯುಕ್ತರಾಗಿದ್ದರು. ೧೬೭ನೆ ವರುಷದಲ್ಲಿ ಅವರು ಕ್ರೈಸ್ತರಿಗೆ ವಿರೋಧವಾಗಿ ಎಬ್ಬಿಸಿದ ಕಲಹದಲ್ಲಿ ಅಪಾಸ್ತೊಲನಾದ ಯೋಹಾನನ ಶಿಷ್ಯನಾಗಿದ್ದ ಪಕ್ತಿಯುಳ್ಳ ಪಾಲುಕರ್ಪನೆಂಬ ಮುದುಕನಾದ ಅಧ್ಯಕ್ಷನು ಸಾಯುವ ವರೆಗೂ ನಂಬಿಕೆಯುಳ್ಳವನಾಗಿದ್ದು, ಚಿತೆಯಲ್ಲಿ ದಗ್ಧನಾದನು. ಪುತ್ತು ದಿನದ ಹಿಂಸೆಯು ಬಳಿಕ ಬರ ತಕ್ಕ ಮಹಾ ಹಿಂಸೆಗೆ ಸಾಮಗ್ರಿಯಾಗಿತ್ತು.

೫. ಎರಡನೆ ಮರಣವೆಂಬ ತಾತ್ಪರ್ಯವು ಪ್ರಕಟನೆಯ ಗ್ರಂಥದ ಹೊರತು ಪರಿಶುದ್ಧ ಬರಹದಲ್ಲಿ ಸೂಚಿತವಾಗಿರುವದಿಲ್ಲ. ಈ ಪದವು ನಿರಂತರವಾದ ಯಾತನೆಯ ಪೆಸರು; ಅದು ಅಂಜುವವರಿಗೂ, ಅವಿಶ್ವಾಸಿಗಳಿಗೂ, ಕಾದಲಾಲ್ಲದವರಿಗೂ ನೇಮಕವಾಗಿದೆ. ಪ್ರಕ. ೨೧, ೮.

ಪೆರ್ಗಮವು. ಪ. ೧೨—೧೭.

೧೨. ಮತ್ತು ಪೆರ್ಗಮದಲ್ಲಿರುವ ೧) ಸಖೆಯ ದೂತನಿಗೆ ಬರೆ—ಹದವಾದ ಇಬ್ಬಾಯಿ ಕತ್ತಿ ಉಂಟಾದವನು ಹೇಳುವದೇನಂದರೆ—೧೩. ನಿನ್ನ ಕ್ರಿಯೆಗಳನ್ನೂ, ಸೈತಾನನ ಸಿಂಹಾಸನವಿರುವಲ್ಲಿ ನೀನು ವಾಸವಾಗಿರುವದನ್ನೂ, ನೀನು ನನ್ನ ಹೆಸರನ್ನು ಹಿಡಿದು ಕಾಂಡು, ನಿಮ್ಮಲ್ಲಿಯೂ ಸೈತಾನನು ವಾಸವಾಗಿರುವಲ್ಲಿಯೂ ಕೊಲ್ಲಲ್ಪಟ್ಟ ನಂಬಿಕೆಯುಳ್ಳ ನನ್ನ ಸಾಕ್ಷಿಯಾದ ಅಂತಿಪನ ೨) ದಿನಗಳಲ್ಲಿ ಸಹ ನಂನ ವಿಶ್ವಾಸವನ್ನು ಅಲ್ಲಗಳೆಯದೆ ಇದ್ದದ್ದನ್ನೂ, ಬಲ್ಲೆನು. ೧೪. ಆದರೆ ನಿನ್ನ ಮೇಲೆ ಕೆಲವು ನನಗುಂಟು, ಏನಂದರೆ—ವಿಗ್ರಹಬಲಿಗಳನ್ನು ಉಣ್ಣುವ ಹಾಗೆಯೂ, ಜಾರತ್ವ ಮಾಡುವ ಹಾಗೆಯೂ ಇಸ್ರಾಯೇಲನ ಮಕ್ಕಳ ಮುಂದೆ ಅಂಟಂಕವನ್ನು ಹಾಕುವದಕ್ಕೆ ಬಾಲಾಕನಿಗೆ ಬೋಧಿಸಿದ ಬಿಳಾಮನ ೩) ಬೋಧನೆಯನ್ನು ಕೈಕೊಳ್ಳುವವರು ಅಲ್ಲಿ ನಿನಗೆ ಇದ್ದಾರೆ. ೧೫. ಅದೇ ಪ್ರಕಾರ ನಿಕೊಲಾಯಿತರ ಬೋಧನೆಯನ್ನು ಕೈಕೊಳ್ಳುವವರು ಸಹ ನಿನಗೆ ಇದ್ದಾರೆ. ೧೬. ಅದನ್ನು ಹಗೆ ಮಾಡುತ್ತೇನೆ. ಮಾನಸಾಂತರ ಪಡು; ಇಲ್ಲದಿದ್ದರೆ, ನಿನಗೆ ಬೇಗ ಬಂದು, ನನ್ನ ಬಾಯಿಯ ಕತ್ತಿಯಿಂದ ಅವರ ಸಂಗಡ ಯುದ್ಧ ಮಾಡುವೆನು. ೧೭. ಕಿವಿಯುಳ್ಳವನು, ಆತ್ಮವು ಸಖೆಗಳಿಗೆ ಹೇಳುವದನ್ನು ೪) ಕೇಳಲಿ. ಜಯಿಸುವವನಾವನೋ, ಅವನಿಗೆ ಬಚ್ಚಿಟ್ಟ ಮನ್ನದಲ್ಲಿ ೫) ಉಣ್ಣಿಕೊಡುವೆನು. ಮತ್ತು ಬಿಳಿ ಕಲ್ಲನ್ನು ೬), ಕಲ್ಲಿನ ಮೇಲೆ ಬರೆದ ಹೊಸ ಹೆಸರನ್ನೂ, ಅವನಿಗೆ ಕೊಡುವೆನು. ಆ ಹೆಸರು, ಹೊಂದಿದವನಿಗೆ ಹೊರ್ತು, ಮತ್ತಾರಿಗೂ ತಿಳಿಯದು ೭).

ಪ್ರಕ. ೨, ೧೪—೨೦.

೧. ಪೆರ್ಗಮವು ಈಗ ಪೆಚ್ಚು ಕಮಿಮೆಯಾಗಿ ೨೫೦ ಕ್ರೈಸ್ತರು ತುರುಕರ ನಡುವೆ ವಸತಿಯಾದ ಒಂದು ಚಿಕ್ಕ ಊರಾಗಿದೆ. ಅದು ಪೂರ್ವದಲ್ಲಿ ರಾಜಪಟ್ಟಣವಾಗಿತ್ತು. ತದನಂತರ ಅದು ರೋಮಿಯರಿಗೆ ವಶವಾದ ಆಸ್ಯವೆಂಬ ರಾಜ್ಯಕ್ಕೆ ರಾಜಧಾನಿಯಾಯಿತು. ಎಸ್ಕುಲಾಪನೆಂಬ ಗ್ರೀಕರ ಧನ್ವಂತ್ರಿಗೆ ಅಲ್ಲಿ ಅತಿಶಯ ಕೀರ್ತಿಯುಳ್ಳ ಗುಡಿಯಿತ್ತು. ಅದಕ್ಕೆ ನಾನಾ ದೇಶಗಳಿಂದ ಪುರಕೆ ಪೋಗಿದ ರೋಗಿಗಳು ಬರುತ್ತಾ ಇದ್ದರು. ಅಲ್ಲಿಯ ಜನರು ಸುವಾರ್ತೆಗೆ ಅತಿ ವೈರಿಗಳಾಗಿದ್ದು, ಆಗ್ಗಾಗ್ಗೆ ಕ್ರೈಸ್ತಸಭೆಗೆ ವಿರೋಧವಾಗಿ ಕ್ರೂರ ಹಿಂಸೆಗಳನ್ನು ಮಾಡುತ್ತಾ ಇದ್ದರು. ನಾಲ್ಕನೆ ಶತಮಾನದ ಪರ್ಯಂತ ಪರಜನರಾದ ಜ್ಞಾನಿಗಳ ಮತ್ತು ಮಂತ್ರಗಾರರ ಮತವು ಅಲ್ಲಿ ಇತ್ತು. ಸೈತಾನನ ಸಿಂಹಾಸನವೆಂಬ ಪದವು ಒಂದು ವೇಳೆ ಅದನ್ನು ಸೂಚಿಸುತ್ತದೆ. ಕರ್ತನಾದ ಯೇಸುವು ಸಭಾದೂತನಿಗೆ: ಸೈತಾನನ ಸಿಂಹಾಸನವಿರುವಲ್ಲಿ ನೀನು ವಾಸವಾಗಿರುವದನ್ನು ಬಲ್ಲೆನೆಂಬ ಆದರಣಾವಾಕ್ಯವನ್ನು ಹೇಳಿಸುತ್ತಾನೆ.

೨. ಅಂತಿಪನು ಸಾಕ್ಷಿಮರಣವನ್ನನುಭವಿಸಿದ ಹಿಂಸಾಕಾಲದಲ್ಲಿ ಸಭಾದೂತನು, ಯೇಸು ಕ್ರಿಸ್ತನ ಪೇಸರಿಗೆ ದೃಢವಾದ ಸಾಕ್ಷಿ ಕಾಟ್ಟಿದರಿಂದ, ಪರೀಕ್ಷಿತನಾದನು. ವಿಶೇಷ ಶಾಧನಾಕಾಲಗಳಲ್ಲಿ ಮನುಷ್ಯರ ಯೋಗ್ಯತಾಯೋಗ್ಯತೆಯು ಪ್ರಸಿದ್ಧವಾಗುವದು.

೩. ಬಿಳಾಮನವರಿಗೂ ನಿಕಾಲಾಯಿತರಿಗೂ ವೃತ್ತಾಸವಿತ್ತು; ಉಭಯತ್ರರು ಜಾರತ್ವ ಮುಂತಾದ ಪಾಪಗಳಲ್ಲಿ ಶಿಕ್ಷೆ ಕಾಂಡರು. ಆದರೆ ಎಫೆಸದಲ್ಲಿದ್ದ ನಿಕಾಲಾಯಿತರು ಆ ಅಸಂಭ್ಯವಾದ ಪಾಪಗಳನ್ನು ನಡಿಸಿದಾಗ್ಯೂ, ಅವುಗಳನ್ನು ಮರೆ ಮಾಡಿದರು. ಪೆರ್ಗಮದವರು ಪಾಪಾಚಾರದ ಬಾಧನೆಯನ್ನು ಸ್ವತಪಿಸಿದರು. ಈ ವಿಧವಾದ ಮೋಸದಲ್ಲಿ ಬಿದ್ದವರಿಗೆ ಗತಿಯಿಲ್ಲ.

೪. ಇಲ್ಲಿ ಸಭೆಗೆ ಆತ್ಮವು ಹೇಳುವದೆಂಬ ಮಾತು ಸಭಾದೂತನಿಗೆ ೧೬ನೆ ವಚನದಲ್ಲಿ ಬರದ ಉದ್ಬೋಧನೆಯನ್ನು ಸೂಚಿಸುತ್ತದೆ; ಯಾಕಂದರೆ: ಸಭೆಗಳಿಗೂ, ಬಾಧಕರಿಗೂ ನಿರೂಢವಾದ ಪರಸ್ಪರಸಂಬಂಧವುಂಟು. ಮಾನಸಾಂತರ ಪಡು ಎಂಬ ಆಜ್ಞೆಯ ಅಖಿಪ್ರಾಯವೇನಂದರೆ: ಕ್ರೈಸ್ತನಾಮಕ್ಕೆ ದೂಷಣೆಯನ್ನು ಹುಟ್ಟಿಸುವ ಕಪಟಿಗಳಾದ ಜನರನ್ನು ಸಭೆಯಿಂದ ಪೊರಗೆ ಪೊಕ್ಕು. ಕಾರಿಂಥದ ಸಭೆಯವರು ಈ ಪ್ರಕಾರವಾಗಿ ತಮ್ಮ ಮಾನಸಾಂತರವನ್ನು ಪ್ರಮಾಣಿಸ ಬೇಕಾಯಿತು. ೨ ಕೊರಿ. ೭.

೫. ಬಚ್ಚಿಟ್ಟ ಮನ್ನವು ವಿಗ್ರಹಬಲಿಮಾಂಸಕ್ಕೆ ಪ್ರತಿಕೂಲವಾಗಿದ್ದು, ಯೋಹಾ. ೬. ೪೮ರಲ್ಲಿ ಕ್ರಿಸ್ತನು ತಾನು ನಿಜವಾದ ಮನ್ನವೆಂದು, ಹೇಳಿದ ವಾಕ್ಯವನ್ನು ಸೂಚಿಸುತ್ತದೆ.

೬. ಗ್ರೀಕರಲ್ಲಿ ನ್ಯಾಯಾಧಿಪತಿಗಳು ಬಂಧನಗ್ರಸ್ತರನ್ನು ನಿರಪರಾಧಿಗಳೆಂದು ಬಿಡಿಸ ಬೇಕಾದರೆ, ನ್ಯಾಯಸ್ಥಾನದಲ್ಲಿದ್ದ ಕಲಶದಲ್ಲಿ ಬಿಳಿ ಕಲ್ಲು ಪೊಕ್ಕಾಕುವದು ವಾಡಿಕೆಯಾಗಿತ್ತು.

೭. ಇತಾಲ್ಯಾಕದಲ್ಲಿ ರೂಢಿಯಾದ ಪೇಸರುಗಳು ನಿರರ್ಥಕವಾಗಿವೆ. ದಿವದಲ್ಲಿ ನೇಮಕವಾದ ಪೇಸರುಗಳಿಗೆ ಘನವಾದ ಅರ್ಥವದೆ.

ಥುವತ್ತೈರವು. ವ. ೧೪—೨೯.

೧೪. ಮತ್ತು ಥುವತ್ತೈರದಲ್ಲಿರುವ ೧) ಸಭೆಯ ದೂತನಿಗೆ ಬರೆ—ಬೆಂಕಿಯ ಉರಿಯಹಾಗಿರುವ ಕಣ್ಣುಗಳೂ, ಬಿಳ್ಳಿ ಹಿತ್ತಾಳೆಯ ಹಾಗಿರುವ ಪಾದಗಳೂ, ಉಳ್ಳ ದೇವರ ಮಗನು ಹೇಳುವದೇನಂದರೆ—೧೯. ನಿನ್ನ ಕ್ರಿಯೆಗಳನ್ನೂ, ಪ್ರೀತಿಯನ್ನೂ, ಸೇವೆಯನ್ನೂ, ವಿಶ್ವಾಸವನ್ನೂ, ತಾಳ್ಮೆಯನ್ನೂ, ಮೊದಲಿನವುಗಳಿಗಿಂತ ಹೆಚ್ಚಾಗಿರುವ ನಿನ್ನ ಕಡೇ ಕ್ರಿಯೆಗಳನ್ನೂ ೨), ಬಲ್ಲೆನು. ೨೦. ಆದರೆ ನಿನ್ನ ಮೇಲೆ ಕೆಲವು ನನ

ಗುಂಟು; ಏನಂದರೆ—ತಾನು ಪ್ರವಾದಿ ಸ್ತ್ರೀ ಅನ್ನಿಸಿ ಕೊಳ್ಳುವ ಯೆಜೆಬೆಲೆಂಬ ೫) ಆ ಹೆಂಗಸನ್ನು ನನ್ನ ದಾಸರಿಗೆ ಜಾರತ್ವ ಮಾಡುವ ಹಾಗೆಯೂ, ವಿಗ್ರಹಬಲಿಗಳನ್ನು ಉಣ್ಣುವ ಹಾಗೆಯೂ, ಬೋಧಿಸಿ, ಮೋಸ ಮಾಡ ಗೊಡಿಸುತ್ತಿ; ೨೧. ಶಂನ ಜಾರತ್ವವನ್ನು ಬಿಟ್ಟು, ಮಾನಸಾಂತರ ಪಡುವ ಹಾಗೆ ೪), ಅವಳಿಗೆ ಕಾಲವಂನು ಕೊಟ್ಟೆನು; ಆದರೆ ಮಾನಸಾಂತರ ಪಡಲಿಲ್ಲ. ೨೨. ಇಗೋ, ನಾನು ಅವಳಂನು ಒಂದು ಮಂಚದಲ್ಲಿಯೂ ೫), ಅವಳ ಸಂಗಡ ವ್ಯಭಿಚಾರ ಮಾಡುವವರನ್ನು, ಅವರ ಕ್ರಿಯೆಗಳನ್ನು ಬಿಟ್ಟು ಮಾನಸಾಂತರ ಪಡದೆ ಹೋದರೆ, ಮಹಾ ಉಪದ್ರವದಲ್ಲಿಯೂ ಹಾಕುತ್ತೇನೆ. ೨೩. ಮತ್ತು ಅವಳ ಮಕ್ಕಳನ್ನು ಕೊಂದೇ ಕೊಲ್ಲುವೆನು. ಆಗ ಅಂತರಿಂದ್ರಿಯಗಳನ್ನೂ ಹೃದಯಗಳನ್ನೂ ಶೋಧಿಸುವವನು ನಾನೇ ಎಂದು ಸಕಲ ಸಭೆಗಳು ತಿಳಿಯುವವು. ಮತ್ತು ನಿಂಮಲ್ಲಿ ಒಬ್ಬೊಬ್ಬನಿಗೆ ನಿಮ್ಮ ಕ್ರಿಯೆಗಳ ಪ್ರಕಾರವೇ ಕೊಡುವೆನು. ೨೪. ಇದಲ್ಲದೆ ನಿಮಗೂ, ಈ ಬೋಧನೆಯನ್ನು ಕೈ ಕೊಳ್ಳದೆ, ಸೈತಾನನ ಅಗಾಧಗಳೆಂದು ೬), ಅವರು ಹೇಳುವವುಗಳನ್ನು ತಿಳಿಯದೆ, ಥುವತ್ತೈರದಲ್ಲಿ ಇರುವ ಮಿಕ್ಕಾದವರಿಗೂ, ನಾನು ಹೇಳುವದೇನಂದರೆ—ಬೇರೆ ಭಾರವನ್ನು ನಿಮ್ಮ ಮೇಲೆ ಹಾಕೆನು ೭). ೨೫. ಆದರೆ ನಿಮಗುಂಟಾದದ್ದನ್ನು ನಾನು ಬರುವ ಪರ್ಯಂತರ ಹಿಡಿದು ಕೊಳ್ಳಿರಿ. ೨೬. ಮತ್ತು ಜಯಿಸಿ, ಅಂತ್ಯದ ಪರ್ಯಂತರ ನನ್ನ ಕ್ರಿಯೆಗಳನ್ನು ಕೈ ಕೊಳ್ಳುವವನಿಗೆ ೮) ಜನಾಂಗಗಳ ಮೇಲೆ ಅಧಿಕಾರವಂನು ಕೊಡುವೆನು. ೨೭. ನಾನೂ ನನ್ನ ತಂದೆಯಿಂದ ಹೊಂದಿದ ಮೇರೆಗೆ, ಅವನು ಕುಂಬಾರನ ಪಾತ್ರೆಗಳು ಒಡೆಯಲ್ಪಡುವ ಪ್ರಕಾರ ೯), ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು. ೨೮. ಮತ್ತು ಉದಯ ನಕ್ಷತ್ರವನ್ನು ೧೦) ಅವನಿಗೆ ಕೊಡುವೆನು. ೨೯. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ.

೧. ಥುವತ್ತೈರವು ಪೆರ್ಗಮಕ್ಕೆ ಮೂಡಣ ದಿಕ್ಕಿನಲ್ಲಿದ್ದು, ರಕ್ತಪ್ರಪೃವ್ಯಾಪಾರದಿಂದ ಪ್ರಖ್ಯಾತವಾದ ಪಟ್ಟಣವಾಗಿತ್ತು. ಅಪಕ್ಕೆ ಈಗ ಅಕ್ಕಿಸ್ಸಾರವೆಂಬ ಪೆಸರದೆ. ಅದರ ವರ್ತಕರು ಈಗ ಜಾರಿಯಾಗಿ ಅರಳೇ ವ್ಯಾಪಾರವನ್ನು ನಡಿಸುತ್ತಾರೆ. ಒಂದು ಚಿಕ್ಕ ಕ್ರೈಸ್ತಸಭೆಯು ಇಂದಿನವರೆಗೂ ಅಲ್ಲಿಯುಂಟು.

೨. ಯೇಸುವು ಥುವತ್ತೈರದ ಸಭಾದೂತನನ್ನು, ಅವನಿಗೆ ನಾನಾ ಪ್ರಕಾರವಾಗಿ ಉತ್ತಮನಾದ ಎಫೆಸದವನಿಗಿಂತ, ಅಧಿಕ ಮೃದುವಾಗಿ ಖಂಡಿಸುತ್ತಾನೆ. ಯಾಕಂದರೆ: ಯೇಸುವಿಗೆ ಪ್ರೀತಿಗುಣವೂ, ಪ್ರೀತಿಕೃತ್ಯವೃತ್ತಿಯೂ ಅತ್ಯಂತ ಶ್ಲಾಘ್ಯವಾಗಿವೆ.

೪. ಕೆಲವು ಪೂರ್ವಕಾಲದ ಕೈಬರಪುಗಳಲ್ಲಿ ಯೆಜೆಬೆಲೆಂಬ ಆ ಪೆಂಗಸನ್ನು ಎಂಬದಕ್ಕೆ ಯೆಜೆಬೆಲೆಂಬ ನಿನ್ನ ಪೆಂಡತಿಯನ್ನು ಎಂದು ಬರದದೆ. ಸಭಾಧ್ಯಕ್ಷಿಯು ಒಳ್ಳೆಯವನಾಗಿದ್ದರೂ, ಅವನ ಪೆಂಡತಿಯಿಂದ ಸಭೆಯಲ್ಲಿ ನಷ್ಟಕರವಾದ ಮೋಸವು ಪುಟ್ಟಿತೆಂದು, ತೋರುತ್ತದೆ. ಅವಳು ಬೋಧನೇ ಪೇಳಿದ್ದು ಸಭಾ ಪದ್ಧತಿಗೆ ವಿರೋಧವಾಗಿತ್ತು. ೧ ತಿಮೊ. ೨,

ಪ್ರಕ. ೩, ೧—೫.

೧೨. ಸ್ತ್ರೀಯರು ಬಾಧನೇ ಪೊಳ್ಳುವಲ್ಲಿ ಬುದ್ಧಿಸ್ಥೈರ್ಯವು ತಪ್ಪುವದು.

೪. ಕರ್ತನಾದ ಯೇಸುವು ಮಾನಸಾಂತರಕ್ಕೆ ಸಮಯವನ್ನು ಕಾಟ್ಟರೆ, ಆತನ ತಾಳ್ಮೆಯನ್ನು ಉದಾಸೀನ ಮಾಡುವವನು ಕೆಟ್ಟೆ ಕೆಡುತ್ತಾನೆ.

೫. ಆ ವ್ಯಭಿಚಾರಿಗೆ ವ್ಯರ್ಥಾವಿಕಾರವಾದ ರಾಗವು, ಅವಳ ಮಿಂಡರಿಗೆ ಅವರು ಮಾನಸಾಂತರವಾಗದ ಪಕ್ಷದಲ್ಲಿ ಮಹಾ ಶ್ರಮವು, ಅವಳ ಮಕ್ಕಳಿಗೆ ಸಾವು, ಶಿಕ್ಷೆಯಾಗಿ ನೇಮಕವಾಗಿದೆ.

೬. ಸುಳ್ಳು ಪ್ರವಾದಿಗಳು ಅಗಾಧ ಜ್ಞಾನವುಳ್ಳರನಿಸಿ ಕಾಳ್ಳುವದು ರೂಢಿಯಾಗಿದೆ. ಯೇಸುವು ಸಹ ಅಗಾಧವೆಂಬ ಪದವನ್ನು ಪ್ರಯೋಗಿಸಿ, ಸೈತಾನನ ಅಗಾಧಗಳೆಂದು, ಪೊಳ್ಳುತ್ತಾನೆ.

೭. ಯಥಾರ್ಥ ಮನಸ್ಸುಳ್ಳ ಥುವತ್ತೈರದ ಸಭೆಯವರಿಗೆ ಯೆಜೆಬೆಲಳು ಅವಳ ಪಕ್ಷದವರು ಇವರ ನಡತೆಯು ಅಸಹ್ಯವಾಗಿತ್ತು. ಆ ದುಷ್ಟ ಜನರು ನಿಜ ಭಕ್ತರನ್ನು ಪೀಡಿಸುತ್ತಾ ಇದ್ದರೆಂದು, ನೆನಸುವದು ಸಹಜವಾಗಿದೆ. ಈ ಪ್ರಕಾರವು ಭಕ್ತರಿಗೆ ಸಾಕೆಂದು, ಕರ್ತನು ಸಹ ನೆನಸಿದನು.

೮. ಅಂದರೆ, ನನ್ನ ಬಲದಿಂದಲೂ, ನನ್ನ ಮಾಧ್ರಿಯ ಪ್ರಕಾರವಾಗಿಯೂ, ಅಂತ್ಯದ ವರೆಗೂ ಸತ್ಕರ್ಮ ಮಾಡುವವನಿಗೆ.

೯. ಕ್ರಿಸ್ತನು ತಾನೇ ಅಂತ್ಯಕಾಲದಲ್ಲಿ ಜನಾಂಗಗಳನ್ನು ಆಳುವನು. ಆಗ ಆತನ ಪೌಸರಿನಲ್ಲಿ ಜಯವನ್ನು ಪಡೆಂದಿದವರು ಆತನ ಸಂಗಡ ರಾಜ್ಯವಾಳಿ, ದುಷ್ಟತ್ವವನ್ನೆಲ್ಲಾ ತುಳಿದು ಬಿಡುವರು.

೧೦. ಉದಯ ನಕ್ಷತ್ರವೆಂಬ ಪೌಸರನ್ನು ಸ. ೨೨, ೧೬ಲ್ಲಿ ಯೇಸು ಕ್ರಿಸ್ತನು ತನಗೆ ತಾನೇ ಇಟ್ಟು ಕಾಳ್ಳುತ್ತಾನೆ. ಜಯಶಾಲಿಗಳು ಕರ್ತನಿಗೆ ಸಮ ಬಾಧ್ಯಸ್ಥರಾಗುತ್ತಾರೆ.

ಸರ್ದಿ. ಸ. ೩, ೧—೬.

೧. ಮತ್ತು ಸರ್ದಿಯಲ್ಲಿರುವ [ಗ]) ಸಭೆಯ ದೂತನಿಗೆ ಬರೆ—ದೇವರ ಏಳು ಆತ್ಮಗಳೂ ಏಳು ನಕ್ಷತ್ರಗಳೂ ಉಂಟಾದವನು ಹೇಳುವದೇನಂದರೆ—ನಿನ್ನ ಕ್ರಿಯೆಗಳನೂ, ನೀನು ಬದುಕುತ್ತೀ ಎಂದು ಹೆಸರನ್ನು ಹೊಂದಿ, ಸತ್ತವನಾಗಿದ್ದೀ [ಎ]) ಎಂಬುದನ್ನೂ, ಬಲ್ಲೆನು. ೨. ಎಚ್ಚರಿಕೆಯಾಗಿರು; ಸಾಯಲಾಗಿರುವ [ಬ]) ಉಳಿದವುಗಳನು ದೃಢ ಪಡಿಸು. ಯಾಕಂದರೆ ನಿನ್ನ ಕ್ರಿಯೆಗಳು ದೇವರ ಸನ್ನಿಧಿಯಲ್ಲಿ ಸಂಪೂರ್ಣವಾದವುಗಳೆಂದು ನಾನು ಕಾಣಲಿಲ್ಲ [ಳ]). ೩. ಆದದರಿಂದ, ನೀನು ಹ್ಯಾಗೆ ಹೊಂದಿ ಕೇಳಿದ್ದೀ ಎಂದು ಜ್ಞಾಪಕ ಮಾಡಿ ಕೊಂಡು, ಕೈಕೊಂಡು, ಮಾನಸಾಂತರ ಪಡು. ನೀನು ಎಚ್ಚರಿಕೆಯಾಗದಿದ್ದರೆ, ಕಳ್ಳನಂತೆ ನಿನ್ನ ಮೇಲೆ ಬರುವೆನು. ಮತ್ತು ಯಾವ ಘಳಿಗೆಯಲ್ಲಿ ನಿನ್ನ ಮೇಲೆ ಬರುವೆನ್ನಾ, ಅರಿಯದೆ ಇರುವಿ. ೪. ಶಮ್ಮ ವಸ್ತ್ರಗಳನ್ನು ಕಳಂಕ ಮಾಡಿ ಕೊಳ್ಳದ ಕೆಲವು ಮಂದಿ ಸರ್ದಿಯಲ್ಲಿಯೂ ನಿನಗಿದ್ದಾರೆ [ಕ]). ಅವರು ಪಾತ್ರರಾಗಿರುವದರಿಂದ [ಟ]), ನನ್ನ ಸಂಗಡ ಬಿಳಿ ವಸ್ತ್ರಗಳಲ್ಲಿ ಸಂಚರಿಸುವರು. ೫. ಜಯಿಸುವವನಾವನ್ನಾ, ಅವನು ಬಿಳಿ ವಸ್ತ್ರಗಳನ್ನು ಧರಿಸಿ ಕೊಳ್ಳುವನು; ಮತ್ತು ಅವನ ಹೆಸರನ್ನು ಜೀವದ ಪುಸ್ತಕದಿಂದ ಅಳಿಸೆನು; ಮತ್ತು ಅವನ

ಪ್ರಕ. ೩, ೬—೯.

ಹೆಸರನ್ನು ನನ್ನ ತಂದೆಯ ಸನ್ನಿಧಿಯಲ್ಲಿಯೂ ಅವನ ದೂತರ ಸನ್ನಿಧಿಯಲ್ಲಿಯೂ ಅ
ರಿಕೆ ಮಾಡುವೆನು. ೬. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ.

೧. ಸರ್ದಿಯು ಪೂರ್ವದಲ್ಲಿ ಅತ್ಯಂತ ಐಶ್ವರ್ಯ
ವುಳ್ಳ ಲುದ್ಯ ದೇಶದ ಅರಸನ ರಾಜಧಾನಿಯಾಗಿದ್ದು, ಆ ಸಂಸ್ಥಾನವು ನಷ್ಟವಾದನಂತರ ಧನವೂ ವೈಭವ ವೂ ಉಳ್ಳ ಪಟ್ಟಣವಾಗಿತ್ತು. ತರುವಾಯ ಒಂದು ಕ್ರೈ
ಸ್ತಸಭೆಯು ಸಹ ಅದರಲ್ಲಿ ಉಂಟಾಯಿತು. ಮ
ತ್ತು ಕ್ರೈಸ್ತಧರ್ಮವು ಪ್ರಬಲವಾದ ಮೇಲೆ, ಸುಂದ
ರವಾದ ಕ್ರೈಸ್ತಸಭಾಲಯಗಳು ಅದರಲ್ಲಿ ನಿರ್ಮಿತ
ವಾದವು. ಇತ್ತಲಾಗಿ ಕಾಳಗದಿಂದಲೂ ಘೋರವಾ
ದ ಭೂಕಂಪಗಳಿಂದಲೂ ಆ ಪಟ್ಟಣವು ನಾಶನವಾಗಿ, ಪಾಳುಗಾಡುಗಳು ಮಾತ್ರ ಉಳಿದವು. ಅವುಗ
ಳನ್ನು ನೋಡುವವನು ಚೌಮಿಕ ಮಹಿಮೆಯೆಲ್ಲಾ
ಕಳಿದು ಪಾಳಾಗುತ್ತದಕಟಾ ಯೆಂದು, ಯೋಚಿಸು
ವನು. ಆ ಪಾಳುಗಾಡುಗಳ ಸಮೀಪದಲ್ಲಿರುವ
ಗುಡಿಸಲುಳ್ಳ ಕಾಪ್ಪಲಿಗೆ ಇಂದಿನ ಪರ್ಯಂತ ಸರ್ದ
ವೆಂಬ ಹೆಸರದೆ.

೨. ಮನುಷ್ಯನ ದೇಹವು ನಿರ್ಜೀವವಾದರೆ, ಶಾ
ಸವೂ, ಚಲನೆಯೂ ಇರುವದಿಲ್ಲ; ಆತ್ಮಿಕ ಮೃತಸ್ಥಿ
ತಿಯಲ್ಲಿರುವವನು ಸ್ವಾಭಾವಿಕ ವೃತ್ತಿ ನಡಿಸ ಶಕ್ತನಾ
ಗಿರುವದರಿಂದ, ಆತ್ಮಿಕ ಮೃತಿಲಕ್ಷಣವನ್ನು ತಿಳಿಯುವ
ದು ಕಷ್ಟವಾಗಿದೆ. ಸರ್ದಿಯ ಸಭಾದೂತನೂ ಈ ಅ
ವಸ್ಥೆಯಲ್ಲಿದ್ದನು.

೩. ಯೇಸುವು ಇಲ್ಲಿ ಸೂಚಿತವಾದ ಅವಸ್ಥೆಯಲ್ಲಿ
ರುವ ದೂತನಿಗೆ ಅಸಾಧ್ಯವಾದದ್ದನ್ನು ಮಾಡ ಬೇ
ಕೆಂದು, ಆಜ್ಞಾಪಿಸುತ್ತಾನೆಂಬದಾಗಿ ಕಾಣುತ್ತದೆ. ಆದ
ರೆ ಆತನು ಬೇಡುವವರಿಗೆ ತನ್ನ ಆಜ್ಞೆಯನ್ನು ಪೂರೈ
ಸುವದಕ್ಕೆ ಬೇಕಾದ ಬಲವನ್ನು ಕಾದುತ್ತಾನೆ.

೪. ಸರ್ದಿಯ ಸಭಾದೂತನು ಒಳ್ಳೇ ಆರಂಭವ
ನ್ನು ಮಾಡಿದಾಗ್ಯೂ, ಅವನ ಕೃತ್ಯಗಳಲ್ಲಿ ಕುಂದು ಕಾ
ಣಿಸಿತು.

೫. ಇದರಿಂದ ಸರ್ದಿಯಲ್ಲಿದ್ದ ನಿಜ ಕ್ರೈಸ್ತರು ಅ
ಲ್ಲಿಯ ಸಭೆಯನ್ನು ಬಿಟ್ಟು ಬಿಡಲಿಲ್ಲವೆಂದು, ತಾತ್ಪರ್ಯ
ವಾಗುತ್ತದೆ.

೬. ಅವರು ಯೇಸು ಕ್ರಿಸ್ತನ ಐಕ್ಯದಲ್ಲಿ ದೃಢರಾಗಿ
ದ್ದ ಕಾರಣ, ಪರಿಶುದ್ಧರೂ, ನೀತಿವಂತರೂ ಆದ ಜ
ಯಶಾಲಿಗಳಾಗಿರುವ ರಾಜಯಾಜಕರಿಗೆ ಯೋಗ್ಯವಾ
ದ ಬಿಳಿ ವಸ್ತ್ರವನ್ನು ಉಟ್ಟು ಕಾಳ್ಳುವರು.

ಫಿಲದೆಲ್ಫ್ಯವು. ೪. ೭—೧೩.

೭. ಮತ್ತು ಫಿಲದೆಲ್ಫ್ಯದಲ್ಲಿರುವ ೧) ಸಭೆಯ ದೂತನಿಗೆ ಬರೆ—ಪರಿಶುದ್ಧನೂ,
ಸತ್ಯವಂತನೂ, ದಾವೀದನ ಬೀಗದ ಕೈ ಉಂಟಾದವನೂ, ಯಾರೂ ಮುಚ್ಚದ
ಹಾಗೆ ತೆರೆಯುವವನೂ, ಯಾರೂ ತೆರೆಯದ ಹಾಗೆ ಮುಚ್ಚುವವನೂ, ಈಗಿರುವ
ವನು ೨) ಹೇಳುವದೇನಂದರೆ—ನಿನ್ನ ಕ್ರಿಯೆಗಳನ್ನು ಬಲ್ಲೆನು. ೮. ಇಗೋ, ಯಾರೂ
ಮುಚ್ಚಲಾರದ ತೆರೆದಿರುವ ಬಾಗಲನ್ನು ನಿನ್ನ ಮುಂದೆ ಇರಿಸಿದ್ದೇನೆ ೩). ಯಾಕಂದ
ರೆ ಸ್ವಲ್ಪ ಬಲ ಉಂಟಾದವನಾಗಿ ೪), ನೀನು ನನ್ನ ವಾಕ್ಯವನ್ನು ಕೈಕೊಂಡು ನಂನ
ಹೆಸರನ್ನು ಅಲ್ಲಗಳೆಯಲಿಲ್ಲ. ೯. ಇಗೋ, ಯೆಹೂದರಾಗಿರದೆ, ತಾವು ಯೆಹೂದ
ರೆನ್ನಿಸಿಕೊಂಡು, ಸುಳ್ಳು ಹೇಳುವವರಾದ ೫) ಸೈತಾನನ ಸಭೆಯವರನ್ನು ಒಪ್ಪಿಸುತ್ತೇ
ನೆ. ಇಗೋ, ಅವರು ಬಂದು, ನಿನ್ನ ಪಾದಗಳ ಮುಂದೆ ನಮಸ್ಕರಿಸಿ, ನಾನು ನಿಂನ

(ಪ್ರಕ. ೩, ೧೦—೧೩.

ನ್ನು ಪ್ರೀತಿ ಮಾಡಿದೆನೆಂದು ತಿಳುಕೊಳ್ಳುವ ಹಾಗೆ, ಮಾಡುವೆನು [೯]). ೧೦. ನೀನು ನನ್ನ ತಾಳ್ಮೆಯ ವಾಕ್ಯವನ್ನು ಕೈಕೊಂಡದರಿಂದ [೨]), ನಾನು ಸಹ ಭೂನಿವಾಸಿಗಳಂ ನು ಶೋಧಿಸುವದಕ್ಕೆ ಸಮಸ್ತ ಭೂಮಿಯ ಮೇಲೆ ಬರಲಾಗಿರುವ ಶೋಧನೆಯ ಘಳಿಗೆಯಿಂದ [೪]) ನಿನ್ನನ್ನು ತಪ್ಪಿಸಿ ಕಾಪಾಡುವೆನು. ೧೧. ಇಗೋ, ಬೇಗ ಬರು ತ್ತೇನೆ. ಯಾರಾದರೂ ನಿನ್ನ ಕಿರೀಟವನ್ನು ಕಸಕೊಳ್ಳದ ಹಾಗೆ, ನಿನಗುಂಟಾದದ್ದಂನು ಹಿಡಿದುಕೋ [೫]). ೧೨. ಜಯಿಸುವವನಾವನೋ, ಅವನನ್ನು ನನ್ನದೇವರ ಮಂ ದಿರದಲ್ಲಿ ಸ್ತಂಭವಾಗಿ ಇಡುವೆನು. ಅವನು ಅಲ್ಲಿಂದ ಇನ್ನು ಮೇಲೆ ಹೊರಟು ಹೋಗನು. ಮತ್ತು ನನ್ನದೇವರ ಹೆಸರನ್ನೂ, ನನ್ನದೇವರ ಬಳಿಯಿಂದ ಪರಲೋಕದಿಂದಿಳಿದು ಬರುವ ಹೊಸ ಯೆರೂಸಲೇಮೆಂಬ ನನ್ನದೇವರ ಪಟ್ಟಣದ ಹೆಸರನ್ನೂ, ನನ್ನ ಹೊಸ ಹೆಸರನ್ನೂ, ಅವನ ಮೇಲೆ ಬರೆಯುವೆನು [೧೧]). ೧೩. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ.

೧. ಸರ್ದಿಗೆ ಆಗ್ನೇಯ ದಿಕ್ಕಿನಲ್ಲಿದ್ದ ಫಿಲದೆಲ್ಫಿಯೆಂ ಬ ಪಟ್ಟಣವು ಇಂದಿನ ಪರ್ಯಂತ ಉಂಟು. ಅದು ಅತಿ ಭಯಂಕರವಾದ ಕಾಳಗಕಾಲಗಳಲ್ಲಿ ಚಾಲಾದೃ ಢರೀತಿಯಿಂದ ಉಳಿದು ಕಾಯಿತು. ತಮೆರ್ಲಾನನು ಆ ದಿಕ್ಕಿನಲ್ಲಿದ್ದ ಎಲ್ಲಾ ಕ್ರೈಸ್ತಸಭೆಗಳನ್ನೂ, ಕ್ರೈಸ್ತ ವ ಸತಿಯಾದ ಪಟ್ಟಣ ಗ್ರಾಮಗಳನ್ನೂ ರಕ್ತಪ್ರವಾಹ ದಲ್ಲಿ ಮುಳಿಗಿಸಿದ ಕಾಲದಲ್ಲಿಯೂ ಫಿಲದೆಲ್ಫಿಯೆಂ ಬ ನಗರವು ಮಾತ್ರ ನಾಶವಾಗದೆ ಉಳಿದದ್ದು ಆ ಶ್ಚರ್ಯವಾಗಿತ್ತು. ತಮೆರ್ಲಾನನ ಗುಂಪುಗಳ ಕತ್ತಿ ಗೆ ತಪ್ಪಿಸಿ ಕಾಂಡ ಸರ್ದಿಪಟ್ಟಣದ ಕೆಲವು ಕ್ರೈಸ್ತರಿ ಗೂ, ಅವರ ಅಧೃಷ್ಟಿಗೂ ಸಹಾ ಅದು ಮರೆಯ ಸ್ಥ ಳವಾಯಿತು. ಈಗ ಸುತ್ತಲಿರುವ ಮುಸಲುಮಾನರ ಊರುಗಳ ನಡುವೆಯಲ್ಲಿ ಈ ಚಿಕ್ಕ ಪಟ್ಟಣವು ಕ್ರೈಸ್ತ ಮತದ ಏಕಾಂತವಾದ ಅಂತೃಸ್ಥಾನವಾಗಿದೆ. ಅದ ಕ್ಕೆ ಈಗ ಅಲಾಷಹರೆಂಬ ದೇವಪಟ್ಟಣದ ಅಭಿಪ್ರಾ ಯವುಳ್ಳ ಪೆಸರದೆ.

೨. ದವೀದನಿಗೆ ಅವನ ವಂಶದವನಾದ ಅಭಿಷಿಕ್ತ ರಾಜನು ನಿರಂತರವಾದ ರಾಜ್ಯವನ್ನಾಳಿ ಕಾಳ್ಳುವನೆಂ ಬ ವಾಗ್ದತ್ತ ಉಂಟಾಯಿತು. ಕೀರ್ತ. ೮೯, ೩೬—೩೮. ಅವರ ಬೀಗದ ಕೈ ಎಂಬ ರಾಜ್ಯಾಧಿಕಾರವು ಯೇಸುವಿಗೆ ಉಂಟು. ಆತನು ಸರ್ವಲೋಕದಲ್ಲಿ ಯಾವನಿಗೆ ದ್ವಾರಗಳನ್ನು ತೆರೆಯುತ್ತಾನೋ ಅವನಿ ಗೆ ಯಾರೂ ಅವುಗಳನ್ನು ಮುಚ್ಚ ಕೂಡದು; ಆತ ನು ಯಾವನಿಗೆ ಬಾಗಲುಗಳನ್ನು ಮುಚ್ಚುತ್ತಾನೋ ಅವನಿಗೆ ಯಾರೂ ಅವುಗಳನ್ನು ತೆಗಿಯ ಕೂಡದು.

೩. ಕ್ರಿಸ್ತನ ಐಕ್ಯದಲ್ಲಿ ಬಲಗಾಂಡು, ಆತನ ಸೇವೆ ಯಲ್ಲಿ ಆಸಕ್ತನಾಗಿರುವವನಿಗೆ ಜಯವಾಗುತ್ತದೆ. ಇ ದು ಯೇಸು ಕ್ರಿಸ್ತನ ವರವಾಗಿದೆ.

೪. ಈ ಮಾತು ಸಚಾಥೃಷ್ಟಿಯ ಉದ್ಯೋಗವರವ ನ್ನು ಮಾತ್ರವಲ್ಲ, ಬಲವಿಲ್ಲದ ಚಿಕ್ಕ ಸಭೆಯ ಗುಣ ವನ್ನು ಸಹಾ ಸೂಚಿಸುತ್ತದೆಂದು, ತೋರುತ್ತದೆ.

೫. ನಿಜ ಕ್ರೈಸ್ತರಾಗಿರದೆ, ಕ್ರೈಸ್ತರನಿಸಿ ಕಾಳ್ಳುವವರೆ ಲ್ಲರೂ ಸುಳ್ಳುಗಾರರು.

೬. ಎಲ್ಲಾ ಕಾಲಗಳಲ್ಲಿ ಇಂಥಾ ನಂಬಿಕೆಯುಳ್ಳ ಉದ್ಯೋಗಸ್ಥರು ಇದ್ದರು. ಅವರು ಆಗ್ಯಾಗೈ ಅವ ಮಾನವನ್ನೂ, ಹಿಂಸೆಯನ್ನೂ ಸಹಿಸಬೇಕಾಗಿದ್ದರೂ, ಕಡೆಯಲ್ಲಿ ಕರ್ತನಿಗೆ ಶಕ್ತರಾದ ಸೇವಕರೆಂಬ ಪೆಸರ ನ್ನು ಪಡದು ಕಾಂಡರು. ಕರ್ತನು ಯಾರನ್ನು ಪರೀಕ್ಷಾ ಗಳಿ, ಶತ್ರುಗಳನ್ನು ಸಹಾ ಯಾರಿಗೆ ವಶ ಮಾಡುತ್ತಾ ನೋ ಅವರೇ ಯೋಗ್ಯರು.

ಪ್ರಕ. ೩, ೧೪—೧೯.

೭. ತನ್ನ ಶ್ರಮಗಳಿಗೆ ಸದೃಶವಾದ ಶ್ರಮಗಳನ್ನು ತಾಳ್ಮೆಯಾಗಿ ಸಹಿಸಿದ ಈ ಸಹಾಧ್ಯಕ್ಷಿಯನ್ನು ಸನ್ಮಾನಿಸುವದಕ್ಕಾಗಿ ಕ್ರಿಸ್ತನು ಇಲ್ಲಿ ಸುವಾರ್ತಾವಾಕ್ಯಕ್ಕೆ ತನ್ನ ತಾಳ್ಮೆಯ ವಾಕ್ಯವೆಂಬ ಪೆಸರಿಡುತ್ತಾನೆ.

೮. ಮಹಾರಾಜನಾದ ತ್ರಯಾನನು ಸ್ವಲ್ಪ ಕಾಲದಾಳಗೆ ನಡಿಸಿದಂಥಾ ಆಸ್ಯದಲ್ಲಿ ವಿಶೇಷ ಕ್ರೂರವಾಗಿದ್ದ ಸರ್ವಕ್ರೈಸ್ತಹಿಂಸೆಯು ಇಂಥಾ ಶಾಸನೆಯ ಫಲಿಗೆಯಾಗಿತ್ತು.

೯. ಅಂದರೆ, ನಿನಗುಂಟಾದ ಆತ್ಮಿಕ ವರಗಳನ್ನು ಪ್ರಯೋಗಿಸಿ, ಈವರೆಗೂ ತೋರಿಸಿದ ಸ್ಥೈರ್ಯವನ್ನು ಕೈಕಾ. ಹೀಗೆ ಮಾಡಿದರೆ, ನನ್ನ ರಾಜ್ಯದಲ್ಲಿ ನಿನಗೆ ಕಿರೀಟವು ಪ್ರಾಪ್ತವಾಗುವದು.

೧೦. ಅಂದರೆ, ಅಂತರಾಂತರವಾದ ಪರಿಶುದ್ಧ ಸ್ಥಳದಲ್ಲಿ ಸದಾಕಾಲ ಇರುವಕ್ಕೆ ಅಧಿಕಾರಿಗಳಾದ ಮುಕ್ತರ ಸಮೂಹದಲ್ಲಿ ಮುಖ್ಯವಾದ ಸ್ಥಾನವನ್ನು ಅವನಿಗೆ ನೇಮಿಸಿ, ತಾನೂ, ಮತ್ತಾಬ್ಬರೂ ಅವನು ಯಾವನವನೆಂದು ತಿಳಿದು ಕಾಳ್ಳುವ ಪಾಗಾಗೆ, ನನ್ನ ದೇವರ ಪೆಸರನ್ನು ಅವನ ಮೇಲಿಟ್ಟು, ದೈವಿಕ ಯೆರೂಸಲೇಮಿನ ಗ್ರಹಸ್ಥಾಧಿಕಾರವನ್ನು ಅವನಿಗೆ ಕಾಡುವೆನು.—ಕರ್ತನಾದ ಯೇಸುವು ಮನುಷ್ಯನ ಮಗನಾಗಿದ್ದು, ಭೂಲೋಕವಾಸಕಾಲದಲ್ಲಿ ತನ್ನ ತಂದೆಯಾದ ದೇವರಿಗೆ ನನ್ನ ದೇವರೆಂದು ಪೆಸರಿಟ್ಟಿ ಪ್ರಕಾರ, ಈಗಲೂ ಮಾಡುತ್ತಾನೆ. ದೇವರು ಯೇಸುವಿನ ದೇವರೇ ಸರಿ. ಆತನ ಮುಖಾಂತರ ನಾವು ಸಹ ಆತನಿಗೆ ನಮ್ಮ ದೇವರೆಂದು ಪೇಳುವದಕ್ಕೆ ಅಧಿಕಾರಿಗಳಾಗಿದ್ದೇವೆ. ಇದಕ್ಕಾಗಿ ಯೇಸುವಿಗೆ ಸ್ತೋತ್ರ ಸ್ತುತಿಯುಂಟಾಗಲಿ.

ಲವಾದಿಕಯ. ವ. ೧೪—೨೨.

೧೪. ಮತ್ತು ಲವಾದಿಕಯದವರ ೧) ಸಭೆಯ ದೂತನಿಗೆ ಬರೆ—ಆಮೆನ್ ಎಂಬವನೂ ೨), ನಂಬಿಕೆಯೂ ಸತ್ಯವೂ ಉಳ್ಳ ಸಾಕ್ಷಿಯೂ, ದೇವರ ಸೃಷ್ಟಿಯ ಆದಿಯೂ ೩), ಆಗಿರುವವನು ಹೇಳುವದೇನಂದರೆ—೧೫. ನಿನ್ನ ಕ್ರಿಯೆಗಳನ್ನೂ, ನೀನು ತಂಪಲ್ಲ ಬಿಸಿಯಲ್ಲ ಎಂಬುವದನ್ನೂ, ಬಲ್ಲೆನು. ನೀನು ತಂಪಾದರೂ ಬಿಸಿಯಾದರೂ ಇದ್ದರೆ, ಒಳ್ಳೇದು. ೧೬. ಹಾಗಾದರೆ, ನೀನು ತಂಪೂ ಬಿಸಿಯೂ ಅಲ್ಲದೆ, ಉಗುರು ಬೆಚ್ಚಗೆ ಆಗಿರುವದರಿಂದ ೪), ನಿನ್ನನ್ನು ನನ್ನ ಬಾಯಿಯಿಂದ ಕಾರುವೆನು. ೧೭. ಹಾಗಂದರೆ ಐಶ್ವರ್ಯವಂತನೂ, ದ್ರವ್ಯಸ್ಥನೂ, ಏನೂ ಕಡಿಮೆ ಇಲ್ಲದವನೂ, ಆಗಿದ್ದೇನೆ, ಅಂದು ಕೊಂಡು, ನೀನು ಸಂಕಟವುಳ್ಳವನೂ, ಕರುಣೆಗೆ ಶಕ್ಯವನೂ, ಬಡವನೂ, ಕುರುಡನೂ, ಬೆತ್ತಲೆಯಾದವನೂ ಆಗಿದ್ದೀ ಎಂದು ಅರಿಯೆ. ೧೮. ನೀನು ಐಶ್ವರ್ಯವಂತನಾಗುವ ಹಾಗೆ, ಬೆಂಕಿಯಲ್ಲಿ ಶೋಧಿಸಿದ ಚಿನ್ನವನ್ನೂ ನಿನ್ನ ಬೆತ್ತಲೆತನದ ನಾಚಿಕೆಯು ಕಾಣಿದ ಹಾಗೆ, ನಿನಗೆ ಧರಿಸಿ ಕೊಳ್ಳುವಕ್ಕೆ ಬಿಳಿ ವಸ್ತ್ರಗಳನ್ನೂ, ನನ್ನಿಂದ ಕೊಂಡು ಕೊಂಡು, ನೀನು ನೋಡುವ ಹಾಗೆ ನಿನ್ನ ಕಣ್ಣುಗಳಿಗೆ ೫) ಅಂಜನವನ್ನು ಹಚ್ಚ ಬೇಕೆಂದು, ನಿನಗೆ ಆಲೋಚನೆ ಹೇಳುತ್ತೇನೆ ೬). ೧೯. ನಾನು ಸ್ನೇಹಿಸುವವರನ್ನಷ್ಟು ಖಂಡಿಸಿ ಶಿಕ್ಷಿಸುತ್ತೇನೆ. ಆದದರಿಂದ ಆಸಕ್ತಿ ಪಟ್ಟು, ಮಾನ

ಪ್ರಕ. ೩, ೨೦—೨೨.

ಸಾಂಶರ ಪಡು. ೨೦. ಇಗೌ, ಬಾಗಲಿನ ಹತ್ತರ ನಿಂತು ಕಾಂಡು, ತಟ್ಟುತ್ತೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ, ಬಾಗಲನ್ನು ತೆರೆದರೆ, ನಾನು ಅವನ ಬಳಿಗೆ ಪ್ರವೇಶಿಸಿ, ಅವನ ಸಂಗಡ ಉಣ್ಣುವೆನು; ಅವನು ನನ್ನ ಸಂಗಡ ಉಣ್ಣುವನು ೨). ೨೧. ಜಯಿಸುವವನಾವನಾಗಿ, ಅವನಿಗೆ ನನ್ನ ಸಂಗಡ ನನ್ನ ಸಿಂಹಾಸನದಲ್ಲಿ ಕೂಡ್ರ ಕಾಡುವೆನು; ನಾನು ಸಹ ಜಯಿಸಿ, ನನ್ನ ತಂದೆಯ ಸಂಗಡ ಅವನ ಸಿಂಹಾಸನದಲ್ಲಿ ಕೂತು ಕಾಂಡ ಹಾಗೆಯೇ. ೨೨. ಕಿವಿಯುಳ್ಳವನು ಆತ್ಮನವು ಸಭೆಗಳಿಗೆ ಹೇಳುವದನ್ನು ಕೇಳಲಿ.

೧. ಲಾವಾದಿಕಯವು ಲೂಕ ನದಿಯ ತೀರದಲ್ಲಿ ಐಶ್ವರ್ಯವುಳ್ಳ ಮಹಾ ವ್ಯಾಪಾರಪಟ್ಟಣವಾಗಿತ್ತು. ಕ್ರಿಸ್ತಶಕವ ಪೆಚ್ಚು ಕಡಿಮೆಯಾಗಿ ೬೦ನೆ ವರುಷದಲ್ಲಿ ಅದು ಭೂಕಂಪದಿಂದ ನಾಶವಾದಾಗ, ಅತ್ಯಂತ ಆದಾಯವುಳ್ಳ ಪಟ್ಟಣದವರು ಪರಸಹಾಯವಿಲ್ಲದೆ ತಮ್ಮ ನಗರವನ್ನು ಪುನಾಸದಾಗಿ ಕಟ್ಟಿಸಿದರು. ಈಗ ಅದರ ಖಗ್ನಶಿಲಾಲಯಗಳ ಬೀದಿಗಳಲ್ಲಿ ಚೇಳುಗಳೂ ಪುನಾವುಗಳೂ ತುಂಬಿದ ಪೂರ್ವ ರಂಗಸ್ಥಾನ ಅರಮನೆ ಮುಂತಾದ ಮಂದಿರಗಳ ಪುನಾಳು ಗಾಯಿಡೆಗಳ ಪುತ್ತರ ಆಡುಗಳನ್ನು ಮೇಯಿಸುತ್ತಾರೆ. ದಣಿದ ಪುನಾದಿಗಾರರಿಗೆ ಪುಳೆ ಗುಡಿಸಲಿನ ಮರೆಯು ಸಹ ಉಳಿಯಲಿಲ್ಲ.

೨. ಕರ್ತನಾದ ಯೇಸುವು ತಾನು ಆಮೆನ್ ಎಂದು ಅನಿಸಿ ಕಾಳ್ಳುತ್ತಾನೆ; ಯಾಕಂದರೆ: ಆತನು ಸತ್ಯವಾಗಿದ್ದು, ಸತ್ಯಕ್ಕೆ ಸಾಕ್ಷಿ ಕಾಡುತ್ತಾನೆ; ಆತನ ವಾಕ್ಯವನ್ನು ನಂಬುವವನ ಪೃದಯದಲ್ಲಿ ಅದು ದೃಢವಾಗಿ ನೆರವೇರುವದು.

೩. ಅಂದರೆ, ಸರ್ವವು ವಾಕ್ಯದಿಂದುಂಟಾಯಿತು. ಉಂಟಾದವುಗಳಲ್ಲಿ ಒಂದಾದರೂ ಅದರ ಪುನಾರ ತಾಗಿ ಆಗಲಿಲ್ಲ.

೪. ಸತ್ಯವಾಕ್ಯದ ಬಲವನ್ನು ಎಂದಿಗೂ ತಿಳಿಯದ ಮನುಷ್ಯರು ಸುಮ್ಮನೆ ಚತ್ತರನಿಸಿ ಕಾಂಡವರಿಗಿಂತ ಸುಲಭವಾಗಿ ನಿಜ ಮಾನಸಾಂತರವನ್ನೈದುತ್ತಾರೆ.

೫. ಕರ್ತನಾದ ಯೇಸುವು ಲಾವಾದಿಕಯದ ಸಭಾಧ್ಯಕ್ಷಿಗೆ ಆಜ್ಞೆಯನ್ನು ಕಾಡದೆ, ಆಲಾಚನೆಯನ್ನು ಮಾತ್ರ ಪೇಳುತ್ತಾನೆ. ತಂದೆಯು ಮಕ್ಕಳಿಗೆ, ಒಡೆಯನು ಆಳುಗಳಿಗೆ ಆಜ್ಞೆಯನ್ನು ಕಾಡುತ್ತಾನೆ. ಆದರೆ ಯೇಸುವು ಈ ಸಭಾದೂತನು ಪರಮನುಷ್ಯನೆಂದು ಭಾವಿಸಿ ಕಾಂಡು, ಅವನಿಗೆ ಅಂಕೆ ಮಾಡದೆ, ರಕ್ಷಣೆಯನ್ನು ಪುನಾಂದುವದಕ್ಕೆ ಮನಸ್ಸು ಮಾಡುವನಾ ಏನಾ ಎಂದು, ಆಲಾಚನೆ ಪೇಳುತ್ತಾನೆ ಅಷ್ಟೆ.

೬. ಶ್ರಮಾಗ್ನಿಯಿಂದ ಪರೀಕ್ಷಿತವಾದ ವಿಶ್ವಾಸಕ್ಕೆ ದೇವವಾಕ್ಯವು ಚಂಗಾರವನ್ನು ಪುನಾಲಿಸುತ್ತದೆ. ೧ ಪೇತ್ರ. ೧, ೭. ಬಿಳೀ ವಸ್ತ್ರಗಳು ಯೇಸು ಕ್ರಿಸ್ತನ ರಕ್ತದ ಮೂಲವಾಗಿ ಶುದ್ಧನಾದ ಚಕ್ಕನಿಗೆ ಪ್ರಾಪ್ತವಾಗುವ ನೀತಿಯ ಸಾಮ್ಯವಾಗಿವೆ. ಎಶಾ. ೬೧, ೧೦; ೬೪, ೬. ಪ್ರಕ. ೭, ೧೪. ದೇವವಾಕ್ಯವೂ, ದೇವಾತ್ಮವೂ ಆತ್ಮಿಕಾಂಧನಿಗೆ ದೃಷ್ಟಿಯನ್ನುಂಟು ಮಾಡುವ ಅಂಜನವಾಗಿವೆ. ಕೀರ್ತ. ೧೯, ೯. ೧ಯಾನಾ ಪುನಾ. ೨, ೨೦. —ಬೆಲೆ ಯಾವದಂದರೆ: ನಿನ್ನ ಪೃದಯವನ್ನು, ಮಗನೇ, ನನಗೆ ಕಾಡು, ಇತ್ಯಾದಿ. ನಿನ್ನ ರಕ್ಷಕನು ನಿನ್ನ ಪೃದಯವನ್ನು, ಅದನ್ನು ತನ್ನ ಕೃಪೆಯಿಂದ ತುಂಬುವದಕ್ಕಾಗಿಯೇ, ಕೇಳುತ್ತಾನೆ. ಅದನ್ನು ಆತನಿಗೆ ಅನುದಿನವು ಕಾಟ್ಟರೆ, ಆತನು ನಿನಗೆ ಬೇಕಾದದ್ದನ್ನೆಲ್ಲಾ ಕಾರತೆ ಇಲ್ಲದಂತೆ ಕಾಡುವನು.

೭. ಈ ಖಂಡನಾವಾಕ್ಯವು ಅತಿ ಶೀಕ್ಷ್ಣವಾಗಿದ್ದರೂ, ಪಾಪಿ ಮಿತ್ರನು ಪಾಪಿಯ ಸಂಗಡ ಅತ್ಯಂತ ದಯಾರಸದಿಂದ ಮಾತನಾಡುತ್ತಾನೆ, ಇಗೌ, ನಿನ್ನ ಪೃದಯದ ಬಾಗಲಿನ ಮುಂದೆ ನಿಂತು ತಟ್ಟುತ್ತೇನೆ; ನೀನು ನನಗೆ ಬಾಗಲನ್ನು ತೆಗದರೆ, ನಾನು ಶೀರಿ, ನಿನ್ನ ಸಂಗಡ ರಾತ್ರಿಭೋಜನವನ್ನು ಮಾಡುತ್ತೇನೆ; ನಿನ್ನ ಸಂಗಡ ಮಾತ್ರವಲ್ಲ, ಬಾಗಲನ್ನು ತೆಗೆಯುವ

ಮರೆಲ್ಲರ ಸಂಗಡಲೂ ಹೀಗೇ ಮಾಡುತ್ತೇನೆಂತ. ಮನುಷ್ಯನು ಬಾಗಲನ್ನು ತೆಗೆಯುವಂಥಾದ್ದೇ ಮು|ಖ್ಯವಾದದ್ದು; ಆದರೆ ಯಾರಿಗೂ ಅಂಕೆ ಯಾಗುವ|ದಿಲ್ಲ.

ಸಪ್ತ ಪ್ರಖ್ಯಾತ ಪತ್ರಿಕೆಗಳಲ್ಲೆಲ್ಲಾ, ಯುದ್ಧ ಮಾಡಿ, ಜಯಿಸುವವರಿಗೆ ವಿಶೇಷ ವಾಗ್ದತ್ತಗಳು ಬರದವೆ. ಯುದ್ಧವು ನಿನಗೆ ನೇಮಕವಾಗಿದೆಂಬದನ್ನು ಮರೆಯ ಬಾರದು. ವಿಶ್ವಾಸಯುದ್ಧವನ್ನು ಸರಿಯಾಗಿ ಮಾಡಿ, ನಿತ್ಯಜೀವವನ್ನು ಪಡದುಕೋ; ನಿನಗೂ ಅದು ಸಿದ್ಧವಾಗಿದೆ.

B. ಸಭೆಯ ಶ್ರಮ ಯುದ್ಧ ಜಯ ಕಾಲಗಳು.

ಈ ಪ್ರವಾದನೆಯ ಪೀಠಿಕೆಯೂ, ಪ್ರವಾದನಾತಾತ್ಪರ್ಯವೂ ಲಕ್ಷ್ಯವಾಗಿವೆ. ೧. ಪೀಠಿಕೆಯಲ್ಲಿ ಸ. ಳ. ಶಿ. ಕ್ರಿಸ್ತನ ಸಭೆಯ ಸಂಗತಿಗಳೆಲ್ಲಾ ದೇವರು ಕುರಿಮರಿಯು ಇವರ ಪರಿಶುದ್ಧ ಆಲೋಚನೆಯಿಂದ ಹುಟ್ಟುತ್ತವೆಂದು, ತೋರುತ್ತದೆ. ೨. ಪ್ರವಾದನೆಗಳು ಸಪ್ತ ಮುದ್ರಾದರ್ಶನದಲ್ಲಿಯೂ ಸಪ್ತ ತುತೂರಿದರ್ಶನದಲ್ಲಿಯೂ ಪರಸ್ಪರಾತಿಸಂಬಂಧವಾದ ಎರಡು ಕಾಲವಾಗಿ ವಿಭಾಗವಾಗಿವೆ.

1. ಪೀಠಿಕೆಯು.

a) ದೇವಸಿಂಹಾಸನದ ದರ್ಶನವು. ಸ. ೪.

೧. ಇವುಗಳಾದ ಕರುವಾಯ ನಾನು ನೋಡಲಾಗಿ, ಇಗೋ, ಪರಲೋಕದಲ್ಲಿ ತೆರದಿರುವ ಬಾಗಲು ೧); ಮತ್ತು ನನ್ನಸಂಗಡ ಮಾತಾಡುವ ತುತೂರಿಯ ಹಾಗೆ ನಾನು ಕೇಳಿದ ಮೊದಲನೇ ಶಬ್ದವು ೨)—ಇಲ್ಲಿಗೆ ಏರಿ ಬಾ, ಇವುಗಳ ಕರುವಾಯ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ೩), ಅಂದಿತು. ೨. ಸಂಗಡಲೇ ಆತ್ಮದಲ್ಲಿದ್ದೆನು ೪); ಮತ್ತು, ಇಗೋ, ಪರಲೋಕದಲ್ಲಿ ಸಿಂಹಾಸನವಿತ್ತು; ಮತ್ತು ಸಿಂಹಾಸನದ ಮೇಲೆ ಕೂತು ಕೊಳ್ಳುವವನು ಇದ್ದನು ೫). ೩. ಕೂತು ಕೊಳ್ಳುವವನು ನೋಟಕ್ಕೆ ವಜ್ರ ಅಕ್ಕಿಕ ೬) ಕಲ್ಲುಗಳಿಗೆ ಸಮಾನವಾಗಿದ್ದನು; ಮತ್ತು ಸಿಂಹಾಸನದ ಸುತ್ತಲು ನೋಟಕ್ಕೆ ಪಚ್ಚೆ ಕಲ್ಲಿಗೆ ಸಮಾನವಾದ ೭) ಮಳಿಬಿಲ್ಲು ಇತ್ತು; ೪. ಮತ್ತು ಸಿಂಹಾಸನದ ಸುತ್ತಲು ಇಪ್ಪತ್ತು ನಾಲ್ಕು ಸಿಂಹಾಸನಗಳು ಇದ್ದವು; ಮತ್ತು ಬಿಳಿ ವಸ್ತ್ರಗಳನ್ನುಧರಿಸಿ ಕೊಂಡು, ಸಿಂಹಾಸನಗಳ ಮೇಲೆ ಕೂತು ಕೊಂಡಿರುವ ಇಪ್ಪತ್ತು ನಾಲ್ಕು ಹಿರಿಯರನ್ನು ೮) ಕಂಡೆನು; ಅವರು ತಮ್ಮ ತಲೆಗಳ ಮೇಲೆ ಚಿನ್ನದ ಕಿರೀಟಗಳು ಉಂಟಾದವರಾಗಿದ್ದರು. ೫. ಮತ್ತು ಸಿಂಹಾಸನದಿಂದ ಮಿಂಚುಗಳೂ ಗುಡುಗುಗಳೂ ಶಬ್ದಗಳೂ ಹೊರಟವು; ಮತ್ತು ಏಳು ಬೆಂಕಿಯ ದೀಪಗಳು ಸಿಂಹಾಸನದ ಮುಂದೆ ಉರಿದವು. ೬. ಇವು ದೇವರ ಏಳು ಆತ್ಮಗಳಾಗಿವೆ. ಸಿಂಹಾಸನದ

ಪ್ರಕ. ೪, ೭—೧೧.

ಮುಂದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರವು[೪]; ಸಿಂಹಾಸನದ ಮಧ್ಯದಲ್ಲಿಯೂ ಸುತ್ತಲೂ ಹಿಂದೆ ಮುಂದೆ ಕಣ್ಣುಗಳಿಂದ ತುಂಬಿರುವ ನಾಲ್ಕು ಜೀವಿಗಳು[೧೦]. ೭. ಮೊದಲನೇ ಜೀವಿಯು ಸಿಂಹಕ್ಕೆ ಸಮಾನವಾದದ್ದು; ಎರಡನೇ ಜೀವಿಯು ಕರುವಿಗೆ ಸಮಾನವಾದದ್ದು; ಮೂರನೇ ಜೀವಿಯು ಮನುಷ್ಯನ ಹಾಗೆ ಮುಖವುಳ್ಳದ್ದು; ನಾಲ್ಕನೇ ಜೀವಿಯು ಹಾರುವ ಹದ್ದಿಗೆ ಸಮಾನವಾದದ್ದು. ೮. ಮತ್ತು ನಾಲ್ಕು ಜೀವಿಗಳು, ಒಂದಾಂದು ಆರಾರು ರೆಕ್ಕೆಗಳುಳ್ಳದ್ದಾಗಿ, ಸುತ್ತಲೂ ಒಳಗೆಯೂ ಕಣ್ಣುಗಳಿಂದ ತುಂಬಿದ್ದಾಗಿ[೧೧], ರಾತ್ರಿಹಗಲು ವಿಶ್ರಾಂತಿಯಾಗದೆ ಹೇಳುವದೇನಂದರೆ—ಇದ್ದವನೂ ಇರುವವನೂ ಬರುವವನೂ ಆಗಿರುವಂಥ, ಸರ್ವಶಕ್ತನಾದ ದೇವರಾಗಿರುವಂಥ, ಕರ್ತನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು. ೯. ಮತ್ತು ಆ ಜೀವಿಗಳು ಯುಗ ಯುಗಾಂತರಗಳ ವರಿಗೂ ಬದುಕುವಂಥ, ಸಿಂಹಾಸನದ ಮೇಲೆ ಕೂತು ಕಾಳ್ಳುವವನಿಗೆ ಮಹಿಮೆಯನ್ನೂ ಘನವಂನೂ ಸ್ತೋತ್ರವನ್ನೂ ಕೊಡಲಾಗಿ, ೧೦. ಇಪ್ಪತ್ತು ನಾಲ್ಕು ಹಿರಿಯರು ಸಿಂಹಾಸನದ ಮೇಲೆ ಕೂತು ಕಾಂಡವನ ಮುಂದೆ ಬಿದ್ದು, ಯುಗ ಯುಗಾಂತರಗಳ ವರೆಗೂ ಬದುಕುವವನಿಗೆ ನಮಸ್ಕರಿಸಿ, ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ[೧೨], ೧೧. ಹೇಳುವದೇನಂದರೆ—ಕರ್ತನೇ, ನೀನು ಮಹಿಮೆಯನ್ನೂ ಘನವನ್ನೂ ಬಲವಂನೂ ಹೊಂದ ಯೋಗ್ಯನಾಗಿದ್ದೀ; ಯಾಕಂದರೆ ನೀನು ಎಲ್ಲವುಗಳನ್ನು ಸೃಷ್ಟಿಸಿದಿ, ನಿನ್ನಚಿತ್ತದಿಂದ ಅವು ಉಂಟಾಗಿವೆ, ಮತ್ತು ಸೃಷ್ಟಿಸಲ್ಪಟ್ಟವು.

೧. ದಿವ್ಯಕಾರ್ಯಗಳ ದೃಷ್ಟಿಯು ಮನುಷ್ಯನ ಇಚ್ಛಾಧೀನವಾದದ್ದಲ್ಲ; ಅದರ ಪ್ರಮಾಣ, ವಿಧ, ಕಾಲಗಳು, ಕರ್ತನಾದ ಯೇಸುವಿಗೆ ಪೂರ್ಣಾಧೀನವಾಗಿವೆ.

೨. ಈ ಶಬ್ದವು ಕ್ರಿಸ್ತನದು. ಸ. ೧, ೧೦.

೩. ಸ. ೨. ೩ಲ್ಲಿ ಸೂಚಿತವಾದ ಕಾರ್ಯಗಳ ಬಳಿಕ ಸಂಭವಿಸ ತಕ್ಕ ಭವಿಷ್ಯತ್ಕಾರ್ಯಗಳ ಪ್ರವಾದನೆಗೆ ಇದು ಉಪಕ್ರಮೋಕ್ತಿಯು.

೪. ಯೋಹಾನನು, ದೇಹೇಂದ್ರಿಯವ್ಯಾಪಾರವಿಲ್ಲದೆ, ದೇವಾತ್ಮಪರವಶವಾಗಿದ್ದ ಸ್ಥಿತಿಯು ಈ ಮಾತಿನಿಂದ ಕಾಣುತ್ತದೆ.

೫. ಸಿಂಹಾಸನದಲ್ಲಿ ಕೂತು ಕಾಳ್ಳುವವನು ಯಾರಂದರೆ: ಅದ್ಭುತರಹಿತವಾದ ಮಹಿಮೆಯುಳ್ಳ ಸರ್ವಶಕ್ತರಾಜನಾದ ತಂದೆಯಾಗಿರುವ ದೇವರು. ಆತನ ವರ್ಣನೆಯನ್ನು ಹೇಳುವದು ಅಸಾಧ್ಯವೂ, ಅಯುಕ್ತವೂ ಆಗಿದೆ.

೬. ವಜ್ರವು ನಿರ್ಮಲನೀರಿನಂತೆ ಪಾರಾಳಪಾದ ಪ್ರಕಾಶವುಳ್ಳದ್ದು. ಅಕ್ಕೀಕಕ್ಕೆ ಕೆಂಪು ವರ್ಣ.

೭. ಪುಸುರುವರ್ಣದಿಂದ ಮಳೆಬಿಲ್ಲಿನ ಸಪ್ತ ವಿಧಪ್ರಕಾಶವು ಮಂದವಾಗಿ ದೃಷ್ಟಿಗೆ ಅತಿ ರಮಣೀಯವಾಯಿತು.

೮. ಈ ಹಿರಿಯರು ದೂತರಲ್ಲ, ಮನುಷ್ಯರೇ; ಯಾಕಂದರೆ ಸ. ೫, ೯ಲ್ಲಿ ಕ್ರಿಸ್ತನ ರಕ್ತದ ಮೂಲವಾಗಿ ಪಾಪಪರಿಹಾರವನ್ನು ಹೊಂದಿದವರಾಗಿ ಕಾಣುತ್ತಾರೆ.

೯. ಆ ಸಮುದ್ರವು ಸ್ಫಟಿಕದಂತೆ ನಿರ್ಮಲವೂ, ಗಾಜಿನಂತೆ ಸ್ಥಿರವೂ ಆಗಿದೆ.

೧೦. ಇವು ಸರ್ವ ಸೃಷ್ಟಿಯ ಮೂಲವಸ್ತುಗಳಾಗಿದ್ದು, ದೇವಸಾಮಿಪ್ಯ ಚೂತಗಳಾಗಿ, ನಿರಂತ ಸ್ತ್ರೋತ್ರ ಮಾಡುತ್ತಾ ಇದ್ದಾವೆ.

೧೧. ದೇವದೃಷ್ಟಿಯೂ, ಸೃಷ್ಟಿದೃಷ್ಟಿಯೂ ಅವುಗಳಲ್ಲಿ ಕುಂದದೆ ಚೈತನ್ಯವಾಗಿವೆ.

೧೨. ತಮ್ಮ ಸಿಂಹಾಸನಗಳೂ, ಕಿರೀಟಗಳೂ ದೇವಕೃಪಾಪ್ರಸಾದವೆಂದು ತಿಳಿದು, ಆತನ ಸಿಂಹಾಸನದ ಮುಂದೆ ಎರಗುವ ೨೪ ಹಿರಿಯರ ಕೂಡಾ ದೇವರನ್ನು ಕಂಡು ಆರಾಧಿಸುವ ಆಶೆಯು ಚಕ್ಕನ ಪ್ಪುದಯದಲ್ಲಿ ಪರಮೋತ್ಕೃಷ್ಟವಾದದ್ದು.

b) ದೇವರ ಕುರಿಮರಿಯ ದರ್ಶನವು. ಸ. ೫.

೧. ಮತ್ತು ಸಿಂಹಾಸನದ ಮೇಲೆ ಕೂತು ಕೊಂಡವನ ಬಲಗೈಯಲ್ಲಿ ಒಳಗೆಯೂ ಹಿಂದೆಯೂ ಬರೆದದ್ದಾಗಿಯೂ, ಏಳು ಮುದ್ರೆಗಳಿಂದ ಮುದ್ರಿತವಾಗಿಯೂ, ಇರುವ ಸುರಳಿಯನ್ನು[೧] ಕಂಡೆನು. ೨. ಮತ್ತು ಈ ಸುರಳಿಯನ್ನು ತೆರೆಯಲೂ, ಅದರ ಮುದ್ರೆಗಳನ್ನು ಒಡೆಯಲೂ, ಯೋಗ್ಯನು ಯಾವನು? ಎಂದು ದೊಡ್ಡ ಶಬ್ದದಿಂದ ಸಾರುವ ಬಲಿಷ್ಠ ದೂತನನ್ನು ಕಂಡೆನು. ೩. ಮತ್ತು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಭೂಲೋಕದ ಕೆಳಗೂ ಈ ಸುರಳಿಯನ್ನು ತೆರೆಯಲಾದರೂ, ಅದನು ನೋಡಲಾದರೂ, ಯಾರಿಂದಲೂ ಆಗಲಿಲ್ಲ. ೪. ಮತ್ತು ಈ ಸುರಳಿಯನ್ನು ತೆರೆದು ಓದುವದಕ್ಕೂ, ಅದನ್ನು ನೋಡುವದಕ್ಕೂ, ಯೋಗ್ಯನಾದ ಯಾವನಾದರೂ ಶಿಕ್ಕದ ಕಾರಣ, ನಾನು ಬಹಳವಾಗಿ ಅತ್ತೆನು[೨]. ೫. ಆಗ ಹಿರಿಯರಲ್ಲಿ ಒಬ್ಬನು ನನಗೆ ಹೇಳಿದ್ದೇನಂದರೆ—ಅಳ ಬೇಡ; ಇಗೋ, ಯೆಹೂದನ ಕುಲದ ಸಿಂಹವು[೩] ದಾವೀದನ ಬೇರೂ[೪] ಆಗಿರುವವನು ಈ ಸುರಳಿಯನ್ನು ತೆರೆಯುವದಕ್ಕೂ, ಅದರ ಏಳು ಮುದ್ರೆಗಳನ್ನು ಒಡೆಯುವದಕ್ಕೂ, ಜಯಿಸಿದ್ದಾನೆ. ೬. ಮತ್ತು ನಾನು ನೋಡಲಾಗಿ, ಇಗೋ, ಸಿಂಹಾಸನದ, ನಾಲ್ಕು ಜೀವಿಗಳ ಮಧ್ಯದಲ್ಲಿಯೂ, ಹಿರಿಯರ ಮಧ್ಯದಲ್ಲಿಯೂ, ಕುರಿಮರಿಯು[೫] ಕೊಯ್ದಲ್ಪಟ್ಟಂತೆ, ನಿಂತು ಕೊಂಡಿತು. ಅದಕ್ಕೆ ಏಳು ಕೊಂಬುಗಳೂ ಏಳು ಕಣ್ಣುಗಳೂ[೬] ಇದ್ದವು; ಅವು ಸಕಲ ಭೂಮಿಗೆ ಕಳುಹಿಸಲ್ಪಟ್ಟ ದೇವರ ಏಳು ಆತ್ಮಗಳಾಗಿವೆ. ೭. ಅದು ಬಂದು, ಸಿಂಹಾಸನದ ಮೇಲೆ ಕೂತು ಕೊಂಡವನ ಬಲಗೈಯಿಂದ ಸುರಳಿಯನ್ನು ತೆಗೆದು ಕೊಂಡಿತು. ೮. ಸುರಳಿಯನು ತೆಗೆದಾಗ, ನಾಲ್ಕು ಜೀವಿಗಳೂ ಇಪ್ಪತ್ನಾಲ್ಕು ಹಿರಿಯರೂ[೭], ಒಬ್ಬೊಬ್ಬರು ವೀಣೆಗಳನ್ನೂ, ಪರಿಶುದ್ಧರ ಪ್ರಾರ್ಥನೆಗಳಾದ ಧೂಪದಿಂದ ತುಂಬಿರುವ ಚಿನ್ನದ ಪಾತ್ರೆಗಳನ್ನೂ, ಹಿಡು ಕೊಂಡವರಾಗಿ, ಕುರಿಮರಿಯ ಮುಂದೆ ಬಿದ್ದು, ಹೊಸ ಹಾಡ

ಪ್ರಕ. ೫, ೯—೧೪.

ನ್ನು ಹಾಡುತ್ತಾ ೮) ಹೇಳುವದೇನಂದರೆ—೯. ನೀನು ಸುರಳಿಯನ್ನು ತೆಗೆದು, ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗ್ಯನಾಗಿದ್ದೀ; ಯಾಕಂದರೆ ನೀನು ಕೊಲ್ಲಲ್ಪಟ್ಟಿ, ನಿನ್ನ ರಕ್ತದಿಂದ ನಮ್ಮನ್ನು ಸಕಲ ಕುಲ, ಭಾಷೆ, ಪ್ರಜೆ, ಜನಾಂಗಗಳಿಂದ ದೇವರಿಗೆ ಕೊಂಡು ಕೊಂಡಿ. ೧೦. ನಮ್ಮ ದೇವರಿಗೆ ನಮ್ಮನ್ನು ಅರಸರನ್ನೂ ಯಾಜಕರನ್ನೂ ಮಾಡಿದಿ; ಮತ್ತು ಭೂಮಿಯ ಮೇಲೆ ಆಳುವೆವು ೯). ೧೧. ಮತ್ತು ನಾನು ನೋಡಲಾಗಿ, ಸಿಂಹಾಸನದ, ಜೀವಿಗಳ, ಹಿರಿಯರ, ಸುತ್ತಲು ಅನೇಕ ದೂತರ ಶಬ್ದವನು ಕೇಳಿದೆನು; ಅವರ ಲೆಕ್ಕವು ಅಯುತಗಳ ಅಯುತಗಳೂ, ಸಹಸ್ರಗಳ ಸಹಸ್ರಗಳೂ, ಆಗಿತ್ತು ೧೦). ೧೨. ಅವರು ದೊಡ್ಡ ಶಬ್ದದಿಂದ ಹೇಳಿದ್ದು—ಕೊಲ್ಲಲ್ಪಟ್ಟ ಕುರಿಮರಿಯು ಬಲ, ಐಶ್ವರ್ಯ, ಜ್ಞಾನ, ಶಕ್ತಿ, ಘನ, ಮಹಿಮೆ, ಸ್ತೋತ್ರಗಳನ್ನು ಹೊಂದಲಿ ಯೋಗ್ಯನಾಗಿದೆ. ೧೩. ಮತ್ತು ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ, ಭೂಲೋಕದ ಕೆಳಗೂ, ಸಮುದ್ರದ ಮೇಲೆಯೂ, ಅವುಗಳೊಳಗೂ, ಇರುವ ಸೃಷ್ಟಿಗಳೆಲ್ಲಾ, ಸಿಂಹಾಸನದ ಮೇಲೆ ಕೂಸು ಕೊಂಡವನಿಗೂ, ಕುರಿಮರಿಗೂ, ಸ್ತೋತ್ರ, ಘನ, ಮಹಿಮೆ, ಶಕ್ತಿ, ಯುಗಯುಗಾಂತರಗಳ ವರೆಗೂ ಉಂಟಾಗಲಿ, ಎಂದು ಹೇಳುವದನ್ನು ಕೇಳಿದೆನು. ೧೪. ಮತ್ತು ನಾಲ್ಕು ಜೀವಿಗಳು, ಆಮೆನ್ ಅಂದವು. ಮತ್ತು ಇಪ್ಪತ್ತುನಾಲ್ಕು ಹಿರಿಯರು ಬಿದ್ದು, ಯುಗಯುಗಾಂತರಗಳ ವರೆಗೂ ಬದುಕುವವನಿಗೆ ನಮಸ್ಕರಿಸಿದರು.

೧. ಈ ಸಂಧಿಯಲ್ಲಿ ಬರದದ್ದು ಸಾದೃಶೋಕ್ತಿಯಾಗಿದ್ದರೂ, ಉತ್‌ಕೃಷ್ಟಾಭಿಪ್ರಾಯಗಳನ್ನು ಸೂಚಿಸುತ್ತದೆ. ಈ ಸುರಳಿಯು ಪ್ರಕಟಣಾಗ್ರಂಥದಲ್ಲಿ ಪ್ರಸಿದ್ಧವಾದ ದೇವರಾಜ್ಯಚರಿತ್ರವನ್ನು ಸೂಚಿಸುತ್ತದೆ.

೨. ಯೇಸುವಿಗೆ ಅತಿ ಪ್ರಿಯ ಶಿಷ್ಯನಾದ ಈಗ ಶಾನೆ ಮುಪ್ಪಿನವನಾಗಿರುವ ಯೋಹಾನನು ಏಳು ಮುದ್ರೆಯುಳ್ಳ ಸುರಳಿಯನ್ನು ಯಾರೂ ಬಿಚ್ಚ ಕೂಡದೆಂಬ ಚಿಂತೆಯಿಂದ ಅತ್ತನೆಂಬುವದನ್ನು ಆಲೋಚಿಸಿದರೆ, ಪರಿಶುದ್ಧ ಪ್ರಕಟಣೆಯ ಧ್ಯಾನವು ಪೆಚ್ಚಿಗೆಯಾದದ್ದಲ್ಲವೆಂದು, ತಿಳಿಯ ಬರುತ್ತದೆ.

೩. ಬಲವೂ, ಮಹಿಮಾ ಮನಸ್ಸೂ ಸಿಂಹದ ಲಕ್ಷಣಗಳು; ಶಾಂತಿಯೂ, ತಾಳ್ಮೆಯೂ ಕುರಿಮರಿಯ ಲಕ್ಷಣಗಳು. ಯೇಸುವು ಕುರಿಮರಿಯಂತೆ ಪಾತವಾಗಿ, ಸಿಂಹದಂತೆ ಶತ್ರುಗಳನ್ನು ಜಯಿಸಿದ್ದಾನೆ.

೪. ಅಂದರೆ, ಯೇಸುವು ತನ್ನ ವಂಶಕ್ಕೆ ಮೂಲ ಪುರುಷನಾದ ಕರ್ತನಾಗಿದ್ದಾನೆ. ಆತನು ದಾವೀದನ ಮಗನಾಗಿದ್ದರೂ, ದಾವೀದನು ಅವನಿಗೆ ಕರ್ತನೆಂದು ಪೆಸರಿಡುತ್ತಾನೆ. ಕೀರ್ತ. ೧೧೦, ೧. ಪ್ರಕ. ೨೨, ೧೬.

೫. ಕುರಿಮರಿಯು ಮರಣವನ್ನು ಜಯಿಸಿದ್ದಾಗಿ, ಸಿಂಹಾಸನದಲ್ಲಿ ನಿಲ್ಲುತ್ತದೆ. ಆದರೆ ಕ್ರಿಯೆಯ ಮರಣದ ಚಿನ್ಹೆಗಳು ಅದರಲ್ಲಿ ಕಾಣುತ್ತವೆ. ಶಿಷ್ಯರು ಪುನರುತ್ಥಾನದ ಮೇಲೆ ಕರ್ತನ ಶರೀರದಲ್ಲಿ ಘಾಯಗಳನ್ನು ಕಂಡರು.

೬. ಕೊಂಬುಗಳು ತ್ರಾಣವನ್ನು, ಕಣ್ಣುಗಳು ಬುದ್ಧಿ ಜ್ಞಾನಗಳನ್ನು ಸೂಚಿಸುತ್ತವೆ. ದೇವಾತ್ಮವು ತ್ರಾಣ ಬುದ್ಧಿ ಜ್ಞಾನಗಳುಳ್ಳದ್ದು. ಅದರ ಜ್ಞಾನ ಬುದ್ಧಿ ತ್ರಾಣಗಳು ಭೂಲೋಕದಲ್ಲೆಲ್ಲಾ ವ್ಯಾಪಿಸುತ್ತವೆ.

ತಂದೆಯ ಆತ್ಮವೂ ಮಗನ ಆತ್ಮವೂ ಒಂದೇ. ಆತ್ಮದ ಮಹಿಮೆಯು ದೇವಜಾವಪವಾಗಿದೆ.

೭. ಇಪ್ಪತ್ತು ನಾಲ್ಕು ಪಿರಿಯರು, ಸಿದ್ಧಿಯನ್ನು ಪಡೆದಿರುವ ನೀತಿವಂತರೂ, ಜೀವಾಸಮಾಡುವ ದೇವಜಕ್ತರೂ ಆದ ಪರಿಶುದ್ಧರೆಲ್ಲರ ಮುಖ್ಯಸ್ಥರಾಗಿದ್ದಾರೆ. ಅವರು ಅರ್ಪಿಸುವ ಸ್ತೋತ್ರಬಲಿಯಲ್ಲಿ, ಪಾಪಲೋಕಕ್ಕಾಗಿ ಸತ್ತು ನಮ್ಮನ್ನು ತನ್ನ ರಕ್ತದಿಂದ ಕ್ರಯಕ್ಕೆ ತೆಗದು ಕೊಂಡ ಕುರಿಮರಿಯನ್ನು ಪೂಜಿಸುವ, ಪರಿಶುದ್ಧರೆಲ್ಲರ ಪ್ರಾರ್ಥನೆಗಳು ಶೇರುತ್ತವೆ. ದೇವರ ಸಿಂಹಾಸನವೆಂಬ ಅಂತರಾಂತರಚಕ್ರದಿಂದ ದೇವರು ಕುರಿಮರಿಯು ಇವರ ಸ್ತೋತ್ರವು ಬಹಿರ್ಜಿಶ್ಚಕ್ರಗಳಿಗೆ ಪೂಜಾಗಿ, ಅಲ್ಲಿಂದ ಇದಕ್ಕೆ ತಿರಿಗಿ ಬರುವದು.

೮. ತಮ್ಮ ಕರ್ತನೂ ಗುರುವೂ ಆದ ಕ್ರಿಸ್ತನು ಮರಣದಿಂದ ಎದ್ದ ಬಳಿಕ, ಪ್ರಥಮ ಶಿಷ್ಯರು, ಕ್ರಿಸ್ತನು ಶ್ರಮ ಪಟ್ಟು, ಪುನರುತ್ಥಾನವಾಗಿ, ತನ್ನ ಮಹಿಮೆಯಲ್ಲಿ ಶೇರ ಬೇಕಾಯಿತೆಂಬದನ್ನು ತಿಳಿದು ಕೊಂಡಾಗ, ಈ ಪೂಜೆ ಅವರಿಗೆ ಪೂಜಾಸ್ತಾಗಿತ್ತು. ಯಾವ ಪೂಜನನು ಅದನ್ನು ಕೇಳಿದಾಗ, ಅದು ಅವನಿಗೆ ಪೂಜಾಸ್ತಾಗಿತ್ತು; ಇಂದಿನ ಪರ್ಯಂತ ಸ್ವಸ್ಥಾನದಲ್ಲಿ ಶೇರಿದಂಥ, ಅಥವಾ ಪರಸ್ಥಳಸಂಚಾರ ಮಾಡು ವಂಥ, ಪರಿಶುದ್ಧ ಜಕ್ತರಿಗೆ ಅದು ಪೂಜಾಸ್ತಾಗಿದೆ. ದಿವವೂ, ಪೃಥ್ವಿಯೂ ನೂತನವಾದನಂತರ, ಅದು ಪೂಜಾಸ್ತಾಗಿರುವದು. ಜಾಗ್ರಮಿಕ ಮನಸ್ಸುಳ್ಳವನು ದೈವಿಕ ಕಾರ್ಯಗಳ ಧ್ಯಾನದಿಂದ ಬೇಗ ದಣಿಯುತ್ತಾನೆ. ದೈವಿಕ ಮಹಿಮಾನುಜವವನ್ನು ಪೂಜಾಂದಿರುವವನಲ್ಲಿ ಅವರ ರುಚಿಯು ಕುಂದುವದಿಲ್ಲ.

೯. ಯೇಸುವು ಮುಚ್ಚಿದ ಸುರಳಿಯನ್ನು ಒಡೆಯುವ ಅಧಿಕಾರವನ್ನು ಶ್ರಮ ಮರಣಗಳಿಂದ ಪಡದು ಕೊಂಡಿದ್ದಾನೆ. ಆತನಿಂದಲೇ ಲೋಕವನ್ನು ಪೂಜಾಸ ದಾಗಿ ಮಾಡುವ ದೇವರ ರಹಸ್ಯವಾದ ಆಲೋಚನೆಯು ನೆರವೇರುತ್ತದೆ. ಇದಕ್ಕಾಗಿ ಸರ್ವಲೋಕವು ಆತನ ಅಧೀನವಾಗಿದೆ.

೧೦. ಅದೃಶ್ಯಲೋಕದಲ್ಲಿ ದೇವರ ಕೃತ್ಯಗಳು ಅಸಂಖ್ಯಾತವೂ, ಅತ್ಯಂತ ಮಹಿಮೆಯುಳ್ಳವುಗಳೂ ಆಗಿವೆ. "ದೇವರೇ, ನೀನು ಅವನನ್ನು ನೆನಸುವ ಪೂಜಾಗೆಯೂ, ಅವನ ಅಲ್ಪವಾದ ಸ್ತೋತ್ರವನ್ನು ತಿರಸ್ಕರಿಸದ ಪೂಜಾಗೆಯೂ, ಮನುಷ್ಯನು ಎಂಥವನು."

2. ಪ್ರವಾದನೆಗಳು.

ಉಪಕ್ರಮೋಕ್ತಿಯು.

ಪ್ರವಾದನೆಗಳ ವ್ಯಾಖ್ಯಾನದಲ್ಲಿ ವಿದ್ವಾಂಸರುಗಳಿಗೆ ಬಹಳ ಭೇದ ಉಂಟು. ಕೆಲವರು, ಕ್ರಿಸ್ತನ ರಾಜ್ಯವು ಬಹಳ ಶ್ರಮ ಯುದ್ಧಗಳ ಮೇಲೆ ಕಡೆಯಲ್ಲಿ ಜಯಪ್ರಾಪ್ತವಾಗುವದೆಂಬ ಸಾಮಾನ್ಯವಾದ ವಾಕ್ಯವೇ ಪ್ರಕಟಣೆಯಲ್ಲಿ ಪ್ರವಾದನಾರೂಪವಾಗಿ ಸೂಚಿತವಾಗಿದೆಂದು, ಪ್ರಸ್ತಾಪಿಸುತ್ತಾರೆ. ಈ ಅಭಿಪ್ರಾಯವು ವಿಹಿತವಾದದ್ದಲ್ಲ; ಯಾಕಂದರೆ: ಆ ಸಾಮಾನ್ಯವಾದ ವಾಕ್ಯವನ್ನು ಯೇಸುವು ತಾನು ಸ್ಪಷ್ಟವಾಗಿ ಬೋಧಿಸಿದನು; ಅಪೊಸ್ತಲರು ತಮ್ಮ ಪತ್ರಿಕೆಗಳಲ್ಲಿ ಅದನ್ನು ವಿವರವಾಗಿ ಬರೆದರು. ಹೀಗಿರಲಾಗಿ ಈ ಉದ್ದಿಶ್ಯವಾಗಿ ಪ್ರತ್ಯೇಕವಾದ ಪ್ರಕಟಣಾಗ್ರಂಥದ ರಚನೆಯು ಅವಶ್ಯವಾಗಿರಲಿಲ್ಲ. ಪ್ರಕಟಣೆಯಲ್ಲಿ ಸಭೆಗೆ ನೇಮಕವಾದ ಶ್ರಮಗಳೂ, ಯುದ್ಧಗಳೂ ಎಂಥವುಗಳೆಂದೂ, ಅವುಗಳಿಂದ ಯಾವ ಕಾಲದಲ್ಲಿಯೂ, ಯಾವ ರೀತಿಯಿಂದಲೂ ಅದಕ್ಕೆ ರಕ್ಷಣೆಯುಂಟಾಗುವದೆಂದೂ, ಭಕ್ತರ ಆದರಣೆಗಾಗಿಯೂ, ಅವಿಶ್ವಾಸಿಗಳ ಎಚ್ಚರಿಕೆಗಾಗಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಸೂಚಿತವಾಗಿದೆ. ಸುವಾರ್ತಾಪಕ್ಷದ ಸಭೆಯ ಉತ್ಕೃಷ್ಟ ಬೋಧಕರು ಈ ಅಭಿಪ್ರಾಯವನ್ನು ಬೋಧಿಸುತ್ತಾ ಬಂದರು. ಲುಥರನು ಹೇಳುವದೇನಂದರೆ: "ಈ ಪುಸ್ತಕವು ಮುಂದಣ ಸಭಾಚರಿತ್ರ

ವನ್ನು, ವಿಶೇಷವಾಗಿ ಕ್ರೈಸ್ತಸಭೆಯ ಮುಂದಣ ಶ್ರಮಗಳನ್ನು, ಪ್ರಕಟಿಸುವ ಉದ್ದಿಶ್ಯವಾಗಿ ರಚಿತವಾಯಿತು."

ಇತ್ತಲಾಗಿ ನಡದ ಸಭಾಚರಿತ್ರವು ಪ್ರಕಟಣೆಯಲ್ಲಿ ಬರದ ಪ್ರತ್ಯೇಕ ಪ್ರತ್ಯೇಕ ಪ್ರವಾದನೆಗಳಿಗೆ ಹ್ಯಾಗೆ ಸರಿ ಬೀಳುತ್ತದೆಂದು, ತೋರಿಸುವದು ಅತಿ ಪ್ರಯಾಸವಾಗಿದೆ. ಆದರೆ ೧) ೬ನೆ ೭ನೆ ಮುತೂರಿ ಮುಂತಾದ ಮುಖ್ಯ ದರ್ಶನಗಳ ವ್ಯಾಖ್ಯಾನದಲ್ಲಿ ಇತರ ವಿಷಯವಾಗಿ ಪರಸ್ಪರವ್ಯತ್ಯಾಸವಾದ ವ್ಯಾಖ್ಯಾನಿಗಳು ಸಹ ಹೆಚ್ಚುಕಡಿಮೆಯಾಗಿ ಏಕಮತ್ಯವಾಗಿದ್ದಾರೆ; ೨) ಕ್ರೈಸ್ತ ಸಭಾಚರಿತ್ರವನ್ನು ಹೆಚ್ಚಾಗಿ ತಿಳಿದ ನಂತರ, ಅನೇಕ ಪ್ರವಾದನೆಗಳ ಸಂಪೂರ್ತಿಯು ಕಾಣ ಬಂದೀತು. ನಾವು ಇಲ್ಲಿ ಪ್ರಸ್ತಾಪಿಸುವದನ್ನು ವಿದ್ಯಾರ್ಥಿಗಳು ಚನ್ನಾಗಿ ಪರೀಕ್ಷಿಸಿ, ನಮ್ಮ ವ್ಯಾಖ್ಯಾನದ ತಪ್ಪುಗಳನ್ನು ತಿದ್ದಲಿ. ಹ್ಯಾಗಾದರೂ ಅತಿ ಕಠಿಣವಾದ ಸ್ಥಳಗಳ ಅಭಿಪ್ರಾಯವನ್ನು ಶೋಧಿಸುವವರಿಗೆ ಸ್ವಲ್ಪ ಸಹಾಯ ಮಾಡಿದ್ದೇವೆಂದು, ನೆನಸುತ್ತೇವೆ.

AA. ಸಪ್ತಮುದ್ರೆಗಳು.

a. ಮೊದಲನೆಯಿಂದ ಆರನೆ ಮುದ್ರೆಯ ವರೆಗೂ. ಸ. ೬.

ಮೊದಲನೆ ಮುದ್ರೆಯು. ಸ. ೬, ೧. ೨.

೧. ಮತ್ತು ಕುರಿಮರಿಯು ಮುದ್ರೆಗಳಲ್ಲಿ ಒಂದು ಒಡೆಯುವದನ್ನು೧) ನಾನು ನೋಡಲಾಗಿ, ನಾಲ್ಕು ಜೀವಿಗಳಲ್ಲಿ ಒಂದು, ಗುಡುಗಿನ ಶಬ್ದದ ಹಾಗೆ, ಬಂದು ನೋಡು, ಎಂದು ಹೇಳುವದನ್ನು ಕೇಳಿದೆನು. ೨. ಮತ್ತು ನಾನು ನೋಡಲಾಗಿ, ಇಗೋ, ಬಿಳಿ ಕುದುರೆಯು; ಅದರ ಮೇಲೆ ಕೂತು ಕಾಂಡವನಿಗೆ ಬಿಲ್ಲು ಇತ್ತು; ಕಿರೀಟವು ಅವನಿಗೆ ಕೊಡಲ್ಪಟ್ಟಿತು; ಮತ್ತು ಅವನು ಜಯಿಸುವವನಾಗಿಯೂ, ಜಯಿಸುವ ಹಾಗೆಯೂ, ಹೊರಟನು೨).

೧. ಕುರಿಮರಿಯು ಮುದ್ರೆಗಳನ್ನು ಒಡೆಯುವದರ ಅಭಿಪ್ರಾಯವೇನಂದರೆ: ಕರ್ತನಾದ ಯೇಸು ಕ್ರಿಸ್ತನು ದಿವದಲ್ಲಿಯೂ, ಭೂಮಿಯಲ್ಲಿಯೂ ಸರ್ವಾಧಿಕಾರವನ್ನು ಪಡದು ಕಾಂದಿರುವದರಿಂದ, ಈ ಮುದ್ರೆಗಳಿಂದ ಸೂಚಿತವಾದ ಶ್ರಮಗಳು ಸಹ ಆತನ ಅಧಿಕಾರಕ್ಕೆ ಅಧೀನವಾಗಿವೆ.

೨. ಬಿಳೀ ಕುದುರೆಯಲ್ಲಿ ಕೂತು ಕಾಂಡು, ಜಯಾನ್ವಯ ಮಾಡಿ, ಬಿಲ್ಲನ್ನು ಹಿಡಿಯುವವನು ಪ್ರಕಟಣೆಯ ಗ್ರಂಥವು ರಚಿತವಾದ ಸ್ವಲ್ಪ ಕಾಲದಾಳಗೆ (೧ನೆ ಪರುಷದಲ್ಲಿ) ರೋಮಾಯ ಮಹಾರಾಜ್ಯವ ಪಟ್ಟವನ್ನು ಹೊಂದಿದ ತ್ರಯಾನನನ್ನು ಸೂಚಿಸುತ್ತಾನೆಂದು, ಅನೇಕರು ನೆನಸುತ್ತಾರೆ. ಅವನು ಮಹಾ ಜಯಶಾಲಿಯಾಗಿದ್ದು, ರೋಮಾಯ ಮಹಾರಾಜ್ಯವನ್ನು ಬಹಳವಾಗಿ ವಿಸ್ತರಿಸಿ, ದಾಕೆಯ, ಮೆಸಾಪೊತಾಮಿಯ, ಅರ್ಮೇನಿಯ, ಅಸ್ಸುರ್ಯ ದೇಶಗಳನ್ನು ಆಕ್ರಮಿಸಿ ಕಾಂಡು, ಪರ್ಥರನ್ನೂ ಅರಬರನ್ನೂ ತನ್ನ ವಶ ಮಾಡಿ ಕಾಂಡನು. ಅವನು ಕೂಟಗಳೆಂಬ ಸಭಾಗಮನಗಳನ್ನು ನಿಷೇಧಿಸುವ ಕಟ್ಟಳೆಯನ್ನು ಕ್ರೈಸ್ತರಿಗೆ ವಿರೋಧವಾಗಿ ಪ್ರಕಟ ಮಾಡಿದರಿಂದ, ಮಹಾ ಹಿಂಸೆಯುಂಟಾಯಿತು.

ಪ್ರಕ. ೬, ೫—೬.

ಎರಡನೆ ಮುದ್ರೆಯು. ವ. ೩. ೪.

೩. ಎರಡನೇ ಮುದ್ರೆಯನ್ನು ಒಡೆದಾಗ, ಎರಡನೇ ಜೀವಿಯು, ಬಂದು ನೋಡು, ಎಂದು ಹೇಳುವದನ್ನು ಕೇಳಿದೆನು. ೪. ಆಗ ಕೆಂಪಾದ ಬೇರೆ ಕುದುರೆ ಹೊರಟಿತು; ಅದರ ಮೇಲೆ ಕೂತು ಕೊಂಡವನಿಗೆ, ಒಬ್ಬರನ್ನೊಬ್ಬರು ಕೊಲ್ಲುವ ಹಾಗೆ, ಭೂಮಿಯಿಂದ ಸಮಾಧಾನವನ್ನು ತೆಗೆಯುವ ಅಧಿಕಾರವು ಕೊಡಲ್ಪಟ್ಟಿತು ೧); ಮತ್ತು ದೊಡ್ಡ ಕತ್ತಿ ಅವನಿಗೆ ಕೊಡಲ್ಪಟ್ಟಿತು ೨).

೧. ಮಹಾರಾಜನಾದ ತ್ರಯಾನನ ಅಂತ್ಯಕಾಲದಲ್ಲಿಯೂ, ಅವನಿಗೆ ಪರ್ಯಾಯವಾಗಿ ಬಂದ ಪುಥ್ರಿಯಾನನ ಕಾಲಬಲ್ಲಿಯೂ, ಮಹಾ ಕಾಳಗಗಳು ಭೂಮಿಯಲ್ಲಿ ನಡಪವು. ಬರ್ಕಾಕ್ಬ ಎಂಬ ಸುಳ್ಳು ಕ್ರಿಸ್ತನಾಬ್ಬನು ಯೆಹೂದರಾಳಗೆ ದಾಳ್ದ ಪುಂಡು ಎಬ್ಬಿಸಿ, ಕ್ರೈಸ್ತರು ಗ್ರೇಕರು ರೋಮಾಯರು ಮುಂತಾದ ಯೆಹೂದರಲ್ಲದ ಜನದ ಮೇಲೆ ಎಲ್ಲಾ ಕಡೆಯಲ್ಲಿಯೂ ಬಿದ್ದು, ಕಂಡವರನ್ನೆಲ್ಲಾ ಕಾಂದು ಹಾಕಿಸಿದನು. ಈ ಪುಂಡಿನ ಮೊವಲಿನ ಕಾಲದಲ್ಲಿ ಯೆಹೂದರು ಕುರೇನೆ ದೇಶದಲ್ಲಿ ಗ್ರೇಕರೂ, ರೋಮಾಯರೂ ಆದ ಎರಡು ಲಕ್ಷದ ಇಪ್ಪತ್ತು ಸಾವಿರ ಜನವನ್ನು, ಮಿಚ್ರದೇಶದಲ್ಲಿ ಎರಡು ಲಕ್ಷ, ಕುಪ್ರನ್ವೀಪದಲ್ಲಿ ಎರಡು ಲಕ್ಷದ ನಾಲ್ವತ್ತು ಸಾವಿರ ಜನವನ್ನು ಸಂಹಾರ ಮಾಡಿದರು. ತರುವಾಯ ಅವರು ರೋಮಾಯ ಸಾಮ್ರಾಜ್ಯದ ಸಮೀಪವಾದ ದೇಶಗಳಲ್ಲಿಯೂ ಒಳನುಗ್ಗಿದರಿಂದ, ಮಹಾರಾಜನು ತನಗಿದ್ದ ಉತ್ತಮ ಸೈನ್ಯಗಳನ್ನು ಅವರಿಗೆ ವಿರೋಧವಾಗಿ ಕಳುಹಿಸ ಬೇಕಾಯಿತು. ಈ ಯುದ್ಧವು ಅನೇಕ ಸಂವತ್ಸರ ನಡದನಂತರ ಕಡೆಯಲ್ಲಿ ಮಹಾರಾಜನಿಗೆ ಜಯವಾಯಿತು. (೧೫೬ನೆ ವರುಷದಲ್ಲಿ) ಆದರೆ ಐದು ಲಕ್ಷದ ಎಂಭತ್ತು ಸಾವಿರ ಯೆಹೂದರು ಖಡ್ಗದಿಂದ ಹತವಾದರು. ಮತ್ತು ಯೆಹೂದದೇಶವು ಅರಣ್ಯಪ್ರಾಯವಾಯಿತು.

೨. ಕೆಂಪು ಕುದುರೆಯ ಮೇಲೆ ಕೂರುವವನು ನಾನಾ ದಿಕ್ಕಿನಲ್ಲಿ ಅತ್ಯಂತ ನಷ್ಟವನ್ನು ಹುಟ್ಟಿಸುವದರಿಂದ ಇವನ ದುಷ್ಟತ್ವವು ಮಿತಿ ಮೀರುತ್ತದೆಂದು, ತಾರುತ್ತದೆ. ಆದರೆ ಸರ್ವವು ಕ್ರಿಸ್ತನ ಅಧೀನವಾಗಿದೆಂದು, ತಿಳಿಯುವ ಭಕ್ತನು ಸಮಾಧಾನವಾಗಿದ್ದಾನೆ.

ಮೂರನೆ ಮುದ್ರೆಯು. ವ. ೫. ೬.

೫. ಮೂರನೇ ಮುದ್ರೆಯನ್ನು ಒಡೆದಾಗ, ಮೂರನೇ ಜೀವಿಯು, ಬಂದು ನೋಡು, ಎಂದು ಹೇಳುವದನ್ನು ಕೇಳಿದೆನು. ಮತ್ತು ನೋಡಲಾಗಿ, ಅಗಸ್ಯ, ಕಪ್ಪು ಕುದುರೆಯು; ಅದರ ಮೇಲೆ ಕೂತು ಕೊಂಡವನ ಕೈಯಲ್ಲಿ ತ್ರಾಸು ಇತ್ತು. ೬. ಆಗ ನಾಲ್ಕು ಜೀವಿಗಳ ಮಧ್ಯದಲ್ಲಿ ಶಬ್ದವನ್ನು ಕೇಳಿದೆನು; ಏನಂದರೆ. ದೆನಾರಿಗೆ ೧) ಶೇರು ಗೋಧಿಯು; ದೆನಾರಿಗೆ ಮೂರು ಶೇರು ಜವೆ ಗೋಧಿಯು; ಎಣ್ಣೆಯನ್ನೂ ೨) ದ್ರಾಕ್ಷಿರಸವನ್ನೂ ಕೆಡಿಸ ಬೇಡ.

(ಪ್ರಕ. ೬, ೭—೮.

೧. ದೆನಾರವೆಂಬ ಪೂರ್ಣವು ಕೂಲಿಯವನಿಗೆ ಒಂದು ದಿನದ ಸಂಬಳವಾಗಿತ್ತು. ಒಂದು ಶೇರು ಗಾಧಿಯು ಒಂದು ದಿನದ ಆಹಾರವಾಗಿ ಎಣಿಕೆಯಾಗಿತ್ತು. ಅಂತಾನೀನಪಿಯನ ಮತ್ತು ಮರ್ಕಔರೆಲಿಯನ ಕಾಲಗಳಲ್ಲಿ ರಾಮಿಯಾ ಸಾಮ್ರಾಜ್ಯವು ಸಮಾಧಾನವಾಗಿಯೂ, ಕ್ರಮವಾಗಿಯೂ ನಡೆಯುತ್ತಾ ಇತ್ತು. ಆದಾಗ್ಯೂ ಬರವು, ನದ್ಯಾಕ್ರಮಣಗಳು, ಮಹಾವ್ಯಾಧಿಯು ಮುಂತಾದ ಅತಿಶಯವಾದ ಸಂಕಟಗಳು ಆಗಾಗ್ಗೆ ಬೇರೆ ಬೇರೆ ದೇಶಗಳಲ್ಲಿ ಹುಟ್ಟಿ ಲಾಗಿ, ಪರಜನರು ಈ ಉಪದ್ರವಗಳು ಕ್ರೈಸ್ತರ ದೆಸೆಯಿಂದ ಬರುತ್ತವೆಂತ, ಅವರನ್ನು ಹಿಂಸಿಸುತ್ತಾ ಇದ್ದರು. ಅಂಥಾ ಸಮಯದಲ್ಲಿ ಯೇಸು ಕ್ರಿಸ್ತನು ಸರ್ವಾಧಿಕಾರಿಯಾಗಿದ್ದಾನೆಂಬ ವಿಶ್ವಾಸದಿಂದ ಭಕ್ತರು ತಮ್ಮ ಹೃದಯಗಳನ್ನು ದೃಢ ಪಡಿಸ ಬೇಕಾಯಿತು.

೨. ಎಣ್ಣೆಯು ಗೃಹಕೃತ್ಯಕ್ಕೆ ಅತ್ಯವಶ್ಯವಾದದ್ದು. ಈ ಮಾತು ಸಹ ತಕ್ಕ ಸೌಖ್ಯದ ಸ್ಥಿತಿಯನ್ನು ಸೂಚಿಸುತ್ತದೆ. ಈ ಕಾರ್ಯಗಳೆಲ್ಲ ಯೇಸು ಕ್ರಿಸ್ತನ ಆಜ್ಞಾನುಸಾರವಾಗಿ ಲೌಕದಲ್ಲಿ ನಡೆಯುತ್ತವೆ.

ನಾಲ್ಕನೆ ಮುದ್ರೆಯು. ವ. ೭. ೮.

೭. ನಾಲ್ಕನೇ ಮುದ್ರೆಯನ್ನು ಒಡೆದಾಗ, ಬಂದು ನೋಡು, ಎಂದು ಹೇಳುವ ನಾಲ್ಕನೇ ಜೀವಿಯ ಶಬ್ದವನ್ನು ಕೇಳಿದೆನು. ೮. ಮತ್ತು ನೋಡಲಾಗಿ, ಇಗೋ, ವಿವರ್ಣವಾದ ಕುದುರೆಯು; ಅದರ ಮೇಲೆ ಕೂತವನ ಹೆಸರು ಮರಣವು ೧); ಮತ್ತು ಪಾತಾಳವು ೨) ಅವನನ್ನು ಹಿಂಬಾಲಿಸಿತು; ಮತ್ತು ಅವರಿಗೆ ಭೂಮಿಯ ಕಾಲುಭಾಗದ ಮೇಲೆ ಕತ್ತಿಯಿಂದಲೂ, ಹಸಿವೆಯಿಂದಲೂ, ಮರಣದಿಂದಲೂ, ಭೂಮಿಯ ಮೃಗಗಳಿಂದಲೂ ಕೊಲ್ಲುವ ಅಧಿಕಾರವು ಕೊಡಲ್ಪಟ್ಟಿತು ೩).

೧. ಮರಣವು ಸಹ ಯೇಸುವಿಗೆ ಅಧೀನವಾಗಿದೆ. ಕುದುರೆಯ ವರ್ಣವು ಅದರ ಮೇಲೆ ಕೂತವನ ಭಾವಕ್ಕೆ ಅನುಸಾರವಾಗಿದೆ.

೨. ಪಾತಾಳವು ಮರಣವನ್ನು ಹಿಂಬಿಳಿಸುತ್ತದೆಂಬುವದರ ಅಭಿಪ್ರಾಯವೇನಂದರೆ: ಮರಣಾಧೀನರು ಪಾತಾಳದಲ್ಲಿ ಶೇರುತ್ತಾರೆ. ಆದರೆ ಮುದ್ರೆಗಳನ್ನು ಒಡೆಯುವ ಯೇಸುವು ಸತ್ತವರಿಗೂ, ಬದುಕುವವರಿಗೂ ಒಡೆಯನಾಗಿದ್ದಾನೆ.

೩. ಮೂರನೆ ಶತಮಾನದ ಆರಂಭದಿಂದ ಅದರ ಅಂತ್ಯದ ವರೆಗೂ ರಾಮಿಯಾ ಸಾಮ್ರಾಜ್ಯದಲ್ಲಿ ನಾನಾ ವಿಧವಾದ ಸಂಕಟಗಳು ಹೆಚ್ಚು ಹೆಚ್ಚುತ್ತಾ ಬಂದವು. ಒಬ್ಬ ಮಹಾರಾಜನ ಮೇಲೆ ಮತ್ತೊಬ್ಬನು ಕಾಲೆಯಾದನು. ಹಾಸಬನು ಪಟ್ಟವನ್ನು ಪಡಿಸಿಕೊಂಡರೆ, ಸಾವಿರಾರು ಜನರ ಜೀವಕ್ಕೆ ಹಾನಿಯಾಗುತ್ತಿತ್ತು. ಏಳೆಂಟು ಮೂವತ್ತು ವರುಷಗಳಲ್ಲಿ ನಾಲ್ಕು ಮಂದಿಯು ಸಿಂಹಾಸನಾರೂಢರಾಗಿ ಸತ್ತರು. ಪರಜನಾಂಗಗಳು ಎಲ್ಲಾ ಕಡೆಯಿಂದ ರಾಮಿಯಾ ಸಾಮ್ರಾಜ್ಯಕ್ಕೆ ಒಳನುಗ್ಗಿದವು. ಅನೇಕ ದೇಶಗಳಲ್ಲಿ ಕಾಟಕಾಯಿಗಳು ಹುಟ್ಟಿದ್ದರಿಂದ ರಕ್ತ ಪ್ರಳಯವಾಯಿತು. ಮೂರನೆ ಶತಮಾನದ ಮಧ್ಯದಲ್ಲಿ ಮಹಾವ್ಯಾಧಿಯು ಸಮಸ್ತ ರಾಮಿಯಾ ಸಾಮ್ರಾಜ್ಯದಲ್ಲಿಯೂ ವ್ಯಾಪಿಸಿ, ಹದಿನೈದು ವರ್ಷ ಪ್ರಕೋಪವಾಗಿತ್ತು. ಇಂಥಾ ದುರವಸ್ಥಾಕಾಲದಲ್ಲಿ ಕೃಷಿಕಾರ್ಯ ನಿಂತ ಕಾರಣ, ದುರ್ಭಿಕ್ಷ ಉಂಟಾಯಿತು. ಮೂರನೆ ಶತಮಾನದ ಅಂತ್ಯದಲ್ಲಿ ಸರಕಾರದವರು ದುಷ್ಟ ಮೃಗಗಳನ್ನು ಕೊಲ್ಲುವದಕ್ಕೆ ದಂಡು ಕಳುಹಿಸ ಬೇಕಾಯಿತು; ಯಾಕಂದರೆ: ತಾಳಗಳ ಹಿಂಡುಗಳು ಹಾನಿಯಾದ ಪಟ್ಟಣಗಳಲ್ಲಿ ಬಂದು, ಬೇರೆ ಸ್ಥಳಗಳಲ್ಲಿ ಸಿಂಹಗಳೂ ಹಾವುಗಳೂ ಪ್ರಬಲವಾಗಿ, ಮನುಷ್ಯರನ್ನು ನಾಶ ಮಾಡುತ್ತಾ ಇದ್ದವು. ಗ್ರಂಥಕರ್ತರಾ

ಪ್ರಕ. ೬, ೯—೧೨.

ದ ಕ್ರೈಸ್ತರೂ, ಪರಜನರೂ ಆ ಕಾಲದಲ್ಲಿದ್ದ ಲೌಕಿಕ ವಿಪತ್ತು ಅಪಾರವಾದದ್ದೆಂದೂ, ಇಷ್ಟು ಜನರು ಮುಂಚೆ ಯಾವಾಗಲೂ ನಾಶವಾಗಲಿಲ್ಲವೆಂದೂ, ಬರದರು. ಪರಜನರಾದ ವಿರೋಧಿಗಳು ಈ ಕಷ್ಟಗಳಿಗೆಲ್ಲಾ ಕ್ರೈಸ್ತರು ಮೂಲವಾಗಿದ್ದಾರೆಂದು, ಹೇಳುತ್ತಾ ಇದ್ದರು. ಆದರೆ ಅಧ್ಯಕ್ಷಿಯಾದ ಕುಪ್ರಿಯಾನನು: († ೨೫೮) ಹಾಗಾಗಲ್ಲ, ನಮ್ಮ ಕ್ರಿಸ್ತನನ್ನು ನಂಬಿರಿ! ಆತನು ಇದನ್ನೆಲ್ಲಾ ಮುಂತಿಳಿಸಿದ್ದಾನೆಂದು, ಪ್ರತ್ಯುತ್ತರವಾಗಿ ಹೇಳಿದನು.

ಐದನೆ ಮುದ್ರೆಯು. ವ. ೯—೧೧.

೯. ಐದನೇ ಮುದ್ರೆಯನ್ನು ಒಡೆದಾಗ, ದೇವರ ವಾಕ್ಯಕ್ಕಾಗಿಯೂ, ಅವರು ಹಿಡುಕೊಂಡ ಸಾಕ್ಷಿಗಾಗಿಯೂ, ಕೊಲ್ಲಲ್ಪಟ್ಟವರ ಪ್ರಾಣಗಳನ್ನು ಬಲಿಪೀಠದ ಕೆಳಗೆ ಕಂಡೆನು ೧). ೧೦. ಅವರು ದೊಡ್ಡ ಶಬ್ದದಿಂದ ಕೂಗಿ ಹೇಳಿದ್ದು, ಪರಿಶುದ್ಧನೂ, ಸತ್ಯವಂತನೂ ಆಗಿರುವ ಯಜಮಾನನೇ ೨)! ನೀನು ನಮ್ಮ ರಕ್ತಕ್ಕಾಗಿಯೂ ಭೂನಿವಾಸಿಗಳಿಗೆ ನ್ಯಾಯವನ್ನೂ ಮುಯ್ಯಿಗೆ ಮುಯ್ಯನ್ನೂ ತೀರಿಸದೆ ಇರುವದು ಎಷ್ಟು ಮಟ್ಟಿಗೂ ೩)? ೧೧. ಆಗಲವರಲ್ಲಿ ಒಬ್ಬೊಬ್ಬನಿಗೆ ಬಿಳಿ ಅಂಗಿಗಳು ಕೊಡಲ್ಪಟ್ಟವು; ಮತ್ತು ಅವರ ಹಾಗೆಯೇ ಕೊಲ್ಲಲ್ಪಡುವದಕ್ಕಿರುವ ಅವರ ಸಹೋದರರೂ ಜೊತೆದಾಸರೂ ಸಂಪೂರ್ಣವಾಗುವ ಪರ್ಯಂತರ, ಇನ್ನು ಸ್ವಲ್ಪ ಕಾಲ ವಿಶ್ರಾಂತಿಯಾಗಿರಬೇಕೆಂದು, ಅವರಿಗೆ ಹೇಳಲ್ಪಟ್ಟಿತು ೪).

೧. ಹಿಂದೆ ಒಡಂಬಡಿಕೆಯಲ್ಲಿ ಮೋಶೆಗೆ ಸಾಕ್ಷಿಗುಡಾರವನ್ನೂ, ಬಲಿಪೀಠಗಳನ್ನೂ ದೈವಿಕ ದೇವಸ್ಥಾನದ ಮಾದ್ರಿಯ ಪ್ರಕಾರ ಮಾಡ ಬೇಕೆಂದು, ಅಪ್ಪಣೆಯಾಯಿತು. ಯೇಸು ಕ್ರಿಸ್ತನ ಹೆಸರಿಗಾಗಿ ಪ್ರಾಣ ಪರಿತ್ಯಾಗ ಮಾಡಿದ ಸಾಕ್ಷಿಗಳು ದೈವಿಕ ದೇವಸ್ಥಾನದ ಬಲಿಪೀಠದ ಬಳಿಯಲ್ಲಿದ್ದಾರೆ. ತಮ್ಮ ಪ್ರಾಣವನ್ನು ದೇವರಿಗೆ ಮನಃಪೂರವಾದ ಬಲಿಯಾಗಿ ಅರ್ಪಿಸಿದನಂತರ, ಆತನ ಸಾಮೀಪ್ಯವಾದ ಆಶ್ರಯದಲ್ಲಿದ್ದು, ಪೂರ್ಣ ಜಯದಿವಸವನ್ನು ನಿರೀಕ್ಷಿಸುತ್ತಾರೆ.

೨. ಪ್ರಾಣಸಾಕ್ಷಿಗಳು, ತಾವು ದೇವರ ಮನೆತನದವರೆನಿಸಿ ಕಾಂಡು, ದೇವರಿಗೆ ಯಜಮಾನನೆಂದು, ಹೆಸರಿಡುತ್ತಾರೆ.

೩. ದೇವರ ತಾಳ್ಮೆಯು ಅಮಿತವಾಗಿದ್ದು, ಪರಿಶುದ್ಧರ ಬುದ್ಧಿಯನ್ನು ಮೀರುತ್ತದೆ; ಅದು ಭೂಲೌಕಿಕದಲ್ಲಿರುವ ನೀತಿವಂತರ ತಾಳ್ಮೆಯನ್ನು ಮಾತ್ರವಲ್ಲ, ಬಲಿಪೀಠದ ಬಳಿಯಲ್ಲಿರುವ ಪ್ರಾಣಸಾಕ್ಷಿಗಳ ತಾಳ್ಮೆಯನ್ನು ಸಹ ಅತಿಕ್ರಮಿಸುತ್ತದೆ.

೪. ಮೂರನೆ ಶತಮಾನದ ಕಡೆಯಲ್ಲಿ ಮಹಾರಾಜನಾದ ಡಿಯೊಕ್ಲೇತಿಯಾನನು ಆಳಿದ ಕಾಲದಲ್ಲಿ ಕ್ರೈಸ್ತಹಿಂಸೆಯುಂಟಾಗಿ, ಮುನ್ನೂರ ಮೂರನೆ ವರುಷದಲ್ಲಿ ಅತಿಕ್ರೂರವಾಗಿ ರೋಮಿಯ ಸಮಸ್ತ ಸಾಮ್ರಾಜ್ಯದಲ್ಲಿ ವ್ಯಾಪಿಸಿತು. ಗಲ್ಲಿಯದೇಶದಲ್ಲಿ ಮಾತ್ರ ಕ್ರೈಸ್ತರು ಸಮಾಧಾನವಾಗಿದ್ದರು. ಈ ರಕ್ತಮಯವಾದ ಕ್ರೈಸ್ತಹಿಂಸೆಯು ಅಂತ್ಯವಾದದ್ದಾಗಿತ್ತು.

ಆರನೆ ಮುದ್ರೆಯು. ವ. ೧೨—೧೭.

೧೨. ಮತ್ತು ಆರನೇ ಮುದ್ರೆಯನ್ನು ಒಡೆದಾಗ, ನೋಡಿದೆನು; ಆಗ, ಭೂಕಂಪ ಮಹಾ ಭೂಕಂಪ ಉಂಟಾಯಿತು; ಸೂರ್ಯನು ಕೂದಲಿನ ಗೋಣಿಯ ಹಾಗೆ

ಪ್ರಕ. ೬, ೧೩—೭, ೩.

ಕಪ್ಪಾದನು; ಚಂದ್ರನು ರಕ್ತದ ಹಾಗೆ ಆದನು. ೧೩. ಮತ್ತು ಬಿರು ಘಾಳಿಯಿಂದ ಅಲ್ಲಾಡುವ ಅಶ್ವೀವೃಕ್ಷವು ತನ್ನ ಕಾಯಿಗಳನ್ನು ಉದುರಿಸುವ ಪ್ರಕಾರ, ಆಕಾಶದ ನಕ್ಷತ್ರಗಳು ಭೂಮಿಯ ಮೇಲೆ ಬಿದ್ದವು. ೧೪. ಮತ್ತು ಆಕಾಶವು ಸುತ್ತಲ್ಪಡುವ ಸುರಳಿಯ ಹಾಗೆ ಹೊಕ್ಕಿಗಿ ಬಿಟ್ಟಿತು; ಮತ್ತು ಪರ್ವತಗಳೂ ದ್ವೀಪಗಳೂ ಎಲ್ಲಾ ತಮ್ಮ ಸ್ಥಳಗಳಿಂದ ತಾವಾಗಿ ಹೊದವು. ೧೫. ಮತ್ತು ಭೂರಾಜರೂ, ದೊಡ್ಡ ದೊರೆಗಳೂ, ಐಶ್ವರ್ಯವಂತರೂ, ಸಹಸ್ರಾಧಿಪತಿಗಳೂ, ಪರಾಕ್ರಮಶಾಲಿಗಳೂ, ಎಲ್ಲಾ ದಾಸರೂ, ಸ್ವತಂತ್ರರೂ, ಬೆಟ್ಟಗಳ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಅಡಗಿ ಕೊಂಡು, ೧೬. ಬೆಟ್ಟಗಳಿಗೂ ಗುಡ್ಡಗಳಿಗೂ ಹೇಳುವದೇನಂದರೆ—ನಮ್ಮ ಮೇಲೆ ಬೀಳಿರಿ, ನಿಂ ಹಾಸನದ ಮೇಲೆ ಕೂತು ಕೊಂಡವನ ಮುಖಕ್ಕೂ, ಕುರಿಮರಿಯ ಕೋಪಕ್ಕೂ, ನಂ ಮನ್ನು ಮರೆ ಮಾಡಿರಿ. ೧೭. ಯಾಕಂದರೆ ಅವನ ಕೋಪದ ಮಹಾ ದಿನವು ಬಂತು, ಮತ್ತು ನಿಲ್ಲ ಶಕ್ತನು ಯಾರು?

ಕೆಲವರು, ಈ ಸ್ಥಳದಲ್ಲಿ ರೋಮಾಯ ಸಾಮ್ರಾಜ್ಯದಲ್ಲಿ ಸಾವಿರ ವರುಷ ನಡದ ಪರಜನಧರ್ಮದ ನಾಶವು ಸೂಚಿತವಾಗಿದೆಂದು, ನೆನಸುತ್ತಾರೆ. ಆದರೆ ನಮಗೆ ತೋರುವದೇನಂದರೆ: ಐದನೆ ಮುದ್ರೆಯಲ್ಲಿ ಉದಾಹರಿಸಿರುವ ಪ್ರಾಣಸಾಕ್ಷಿಗಳ ಸ್ಥಿತಿಗೂ, ದೇವರಿಂದ ಅವರಿಗೆ ಪ್ರಾಪ್ತವಾದ ಆದರಣಾವಾಕ್ಯಕ್ಕೂ ಪ್ರತಿಯಾಗಿ, ಆರನೆ ಮುದ್ರೆಯಲ್ಲಿ ದೇವವೈರಿಗಳಾದ ದುರಾತ್ಮಗಳ ಸ್ಥಿತಿಯೂ, ಅವರು ಯಾವಾಗಲೂ ಎದರು ನೋಡುತ್ತಾ ಇರುವ ನ್ಯಾಯತೀರ್ಪಿಕೆಯ ಭಯಂಕರವಾದ ದುರವಸ್ಥೆಯೂ ಸೂಚಿತವಾಗಿವೆ.

b. ಏಳನೆ ಮುದ್ರೆಯ ಸಾಮಗ್ರಿಯು. ಸ. ೭.

ಅ) ಮುದ್ರಿತರಾದ ಇಸ್ರಯೇಲನವರು. ವ. ೧—೮.

೧. ಇವುಗಳ ತರುವಾಯ ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಿಂತು ಕೊಂಡಿರುವ ನಾಲ್ಕು ದೂತರನ್ನು ಕಂಡೆನು; ಅವರು ಭೂಮಿಯಲ್ಲಾದರೂ, ಸಮುದ್ರದಲ್ಲಾದರೂ, ಯಾವ ಮರದ ಮೇಲಾದರೂ, ಘಾಳಿಯು ಬೀಸದ ಹಾಗೆ, ಭೂಮಿಯ ನಾಲ್ಕು ಘಾಳಿಗಳನ್ನು ಹಿಡಿಯುತ್ತಿದ್ದರು. ೨. ಮತ್ತು ಜೀವವುಳ್ಳ ದೇವರ ಮುದ್ರೆ ಉಂಟಾಗಿ, ಸೂರ್ಯೋದಯದಿಂದ ಏರಿ ಬರುವ ಬೇರೊಬ್ಬ ದೂತನನ್ನು ಕಂಡೆನು. ಇವನು ಭೂಮಿಯನ್ನೂ ಸಮುದ್ರವನ್ನೂ ಕೆಡಿಸುವ ಅಧಿಕಾರವನ್ನು ಹೊಂದಿದ ನಾಲ್ಕು ದೂತರಿಗೆ ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ೩. ನಾವು ನಮ್ಮ ದೇವರ ದಾಸರಿಗೆ ಅವರ ಹಣೆಗಳ ಮೇಲೆ ಮುದ್ರೆ ಹಾಕುವ ಪರ್ಯಂತ ೪) ಭೂ

ಮಿಯನ್ನಾದರೂ, ಸಮುದ್ರವನ್ನಾದರೂ, ಮರಗಳನ್ನಾದರೂ, ಕೆಡಿಸ ಬೇಡಿರಿ. ೪. ಮತ್ತು ಮುದ್ರೆ ಹಾಕಿದವರ ಲೆಕ್ಕವನ್ನು ಕೇಳಿದೆನು ೫)—ಇಸ್ರಾಯೇಲ ಮಕ್ಕಳ ಎಲ್ಲಾ ಕುಲಗಳಲ್ಲಿ ಮುದ್ರೆ ಹಾಕಿದವರು ನೂರ ನಾಲ್ವತ್ತ್ನಾಲ್ಕು ಸಾವಿರ. ೫. ಯೆಹೂದನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ರೂಬೇನನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ಗಾದನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ೬. ಅಸ್ಸೇರನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ನೆಫ್ತಲೀಮನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ಮನಸ್ಸೆಯ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ೭. ಸಿಮೆಯೋನನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ಲೇವಿಯ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ಇಸ್ಸಾಕಾರನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ೮. ಜೆಬುಲೋನನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ಯೋಸೇಫನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ. ಬೆನ್ಯಮೀನನ ಕುಲದಲ್ಲಿ ಮುದ್ರೆ ಹಾಕಿದವರು ಹನ್ನೆರಡು ಸಾವಿರ ೪).

೧. ಇಲ್ಲಿ ಬರುವ ಘಾಳಿಗಳು ನಾಲ್ಕನೆ ಐದನೆ ಶತಮಾನಗಳಲ್ಲಿ ವಿಲಾಯತಿಯಲ್ಲಿ ನಡುವ ಮಹಾ ದೇಶಾಂತರಗಮನವನ್ನು ಸೂಚಿಸುತ್ತವೆಂದು, ಕಾಣುತ್ತದೆ.

೨. ಇವರು ಲೋಕವಾಸಿಗಳನ್ನು ಶಿಕ್ಷಿಸುವದಕ್ಕೆ ಎಸಗುತ್ತಾ ಇರುವ ವೇಳೆಯಲ್ಲಿ ಮಹಾ ದೂತನು ಅವರನ್ನು ತಡಿಸುತ್ತಾನೆ. ಹೀಗೆ ಅನೇಕಾವರ್ತಿ ಲೋಕದಲ್ಲಿ ನಡೆಯಿತು. ಘೋರವಾದ ಶಿಕ್ಷೆಯ ಕಾರ ಮುಗಿಲು ಬಂದು, ಶಿಷ್ಟು ಗುಡುಗು ತಾಡಗಲಾಗಿ, ದೇವರ ಕರುಣೆಯಿಂದ ಉಪಶಮನವುಂಟಾಯಿತು. ಅಂಥಾ ಕಾಲಗಳಲ್ಲಿ ದೇವರ ಸೇವಕರು ಅತಿ ಜಾಗರೂಕರಾಗಿದ್ದು, ತಮ್ಮ ಆಹ್ವಾನವನ್ನೂ, ಪರಿಗಣನೆಯನ್ನೂ ಸ್ಥಿರ ಪಡಿಸುವದಕ್ಕೆ ಆಸಕ್ತರಾಗಿದ್ದಾರೆ.

೩. ಈ ಮುದ್ರೆಯು ಆಂತರ್ಯವಾದದ್ದಲ್ಲ. ಆಂತರ್ಯವಾದ ಮುದ್ರೆಯು ಪರಿಶುದ್ಧವಾದ ಆತ್ಮದಿಂದ ಪ್ರಾಪ್ತವಾಗುತ್ತದೆ. ಎಫೆ. ೪, ೩೦. ಪರಿಗಣಿತರಾದ ದೇವರ ಮಕ್ಕಳು ಸರ್ವ ಶಕ್ತನಾದ ತಂದೆಯಾದ ದೇವರ ಆಶ್ರಯವನ್ನು ಪಡದು ಕಾಂಡು, ಲೋಕದ ಮೇಲೆ ಆಯಾ ಕಾಲದಲ್ಲಿ ಪ್ರವಾಹವಾಗಿ ಬರುವ ಮಹಾಪ್ರಳಯಗಳಲ್ಲಿ ನಷ್ಟವನ್ನು ಹೊಂದದೆ, ಸುರಕ್ಷಿತರಾಗಿದ್ದಾರೆ.

೪. ಹನ್ನೆರಡು ಕುಲಗಳಲ್ಲಿ ದಾನ ಕುಲದ ಪೆಸರು ಇಲ್ಲಿ ಶೇರಿರುವದಿಲ್ಲ. ಅದು ೧ ನಡ. ೫, ೭ಲ್ಲಿ ಬರುವ ವಂಶಾವಳಿಗಳಲ್ಲಿ ಸಹ ಲೋಪವಾಗಿದೆ. ಅವರು ಪೂರ್ವಕಾಲದಲ್ಲಿ ದೇವದ್ರೋಹಿಗಳಾಗಿ ಶಾಪಕ್ಕೆ ಒಳಗಾದರೆಂದು, ತೋರುತ್ತದೆ. ಯೆಹೂದರ ಪಳ್ಳೆಗಳ ಪ್ರಕಾರ ದಾನ ಕುಲದಲ್ಲಿ ಹುಸ್ಸಿಮೆಂಬ ವಂಶವು ಮಾತ್ರ ಉಳಿಯಿತು.

ಪ್ರಕ. ೭, ೯—೧೭.

೪) ಪರಿಗಣಿತರಾದ ಪರಜನರು. ವ. ೯—೧೭.

೯. ಇವುಗಳ ತರುವಾಯ ನಾನು ನೋಡಲಾಗಿ, ಇಗೋ, ಸಮಸ್ತ ಜನಾಂಗ, ಕುಲ, ಪ್ರಜೆ, ಭಾಷೆಗಳೊಳಗಿಂದ ಯಾರೂ ಎಣಿಸಲಾರದ ೧) ಮಹಾ ಸಮೂಹವು ಸಿಂಹಾಸನದ ಮುಂದೆಯೂ ಕುರಿಮರಿಯ ಮುಂದೆಯೂ ನಿಂತಿತು. ಅವರು ಬಿಳಿ ಅಂಗಿಗಳನ್ನು ತೊಟ್ಟು ಕೊಂಡವರಾಗಿ, ತಮ್ಮ ಕೈಗಳಲ್ಲಿ ಖರ್ಜೂರದ ಕೊಂಬೆಗಳನ್ನು ಹಿಡುಕೊಂಡು ೨), ೧೦. ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ಸಿಂಹಾಸನದಲ್ಲಿ ಕೂತು ಕೊಂಡಿರುವ ನಮ್ಮ ದೇವರಿಗೂ, ಕುರಿಮರಿಗೂ ರಕ್ಷಣೆಯು ೩). ೧೧. ಮತ್ತು ಸಿಂಹಾಸನದ, ಹಿರಿಯರ, ನಾಲ್ಕು ಜೀವಿಗಳ, ಸುತ್ತಲು ದೂತರೆಲ್ಲರು ನಿಂತು, ಸಿಂಹಾಸನದ ಮುಂದೆ ಮೋರೆ ಕೆಳಗಾಗಿ ಬಿದ್ದು, ದೇವರಿಗೆ ನಮಸ್ಕರಿಸಿ, ಹೇಳಿದ್ದೇನಂದರೆ, ೧೨. ಆಮೆನ್, ನಮ್ಮ ದೇವರಿಗೆ ಸ್ತೋತ್ರವು, ಮಹಿಮೆಯು, ಜ್ಞಾನವು, ಸ್ತುತಿಯು, ಘನವು, ಬಲವು, ಶಕ್ತಿಯು ಯುಗಯುಗಾಂತರಗಳ ವರೆಗೂ ಉಂಟಾಗಲಿ. ಆಮೆನ್. ೧೩. ಆಗ ಹಿರಿಯರಲ್ಲಿ ಒಬ್ಬನು ಉತ್ತರ ಕೊಟ್ಟು, ಬಿಳಿ ಅಂಗಿಗಳನ್ನು ತೊಟ್ಟು ಕೊಂಡ ಇವರು ಯಾರು? ಎಲ್ಲಿಂದ ಬಂದಿದ್ದಾರೆ? ಎಂದು ನನಗೆ ಹೇಳಿದನು. ೧೪. ಆಗ ಅವನಿಗೆ, ಕರ್ತನೇ, ನೀನು ಬಲ್ಲಿ, ಅಂದೆನು. ಮತ್ತು ಅವನು ನನಗೆ ಹೇಳಿದ್ದು, ಇವರು ಮಹಾ ಉಪದ್ರವದೊಳಗಿಂದ ೪) ಬಂದವರಾಗಿದ್ದಾರೆ; ಕುರಿಮರಿಯ ರಕ್ತದಲ್ಲಿ ತಮ್ಮ ಅಂಗಿಗಳನ್ನು ಒಗೆದು ಬಿಳುಪು ಮಾಡಿದ್ದಾರೆ ೫). ೧೫. ಈದಕಾರಣ ಅವರು ದೇವರ ಸಿಂಹಾಸನದ ಮುಂದೆ ಇದ್ದು, ಅವನ ಮಂದಿರದಲ್ಲಿ ರಾತ್ರಿ ಹಗಲು ಅವನನ್ನು ಸೇವಿಸುತ್ತಾರೆ. ಮತ್ತು ಸಿಂಹಾಸನದ ಮೇಲೆ ಕೂತವನು ಅವರ ಮೇಲೆ ತನ್ನ ಗುಡಾರ ಹಾಕಿ ಕೊಳ್ಳುವನು. ೧೬. ಇನ್ನು ಮೇಲೆ ಅವರಿಗೆ ಹಸಿವೆಯಾದರೂ ದಾಹವಾದರೂ ಆಗದೆ, ಸೂರ್ಯನ ಬಿಸಿಲಾದರೂ ಯಾವ ಕಾವಾದರೂ ತಗಲದೆ ಇರುವದು. ೧೭. ಯಾಕಂದರೆ ಸಿಂಹಾಸನದ ಮಧ್ಯದಲ್ಲಿರುವ ಕುರಿಮರಿಯು ಅವರನ್ನು ಮೇಯಿಸಿ, ಜೀವವುಳ್ಳ ನೀರು ಬುಗ್ಗೆಗಳಿಗೆ ನಡಿಸುವದು; ಮತ್ತು ದೇವರು ಕಣ್ಣೀರೆಲ್ಲಾ ಅವರ ಕಣ್ಣುಗಳಿಂದ ಒರಸುವನು.

೧. ಈ ಮಾತು ಅತಿ ಲಕ್ಷವಾದದ್ದು. ಪ್ರಕಟನೆಯ ಅನೇಕ ಸ್ಥಳಗಳಲ್ಲಿ ಬಹಳ ದಾಡ್ಡ ಲೆಖ್ಖಗಳು ಬರದವೆ; ಆದರೆ ಇಲ್ಲಿ ಕಾಣುವ ಮುಕ್ತರನ್ನು ಯಾರೂ ಎಣಿಸಲಾರರೆಂದು ಯೋಹಾನನು ಹೇಳುತ್ತಾನೆ. ಪುನರುತ್ಥಾನದಿವಸದಲ್ಲಿ ದೇವರಾಜ್ಯದ ಪೂರ್ಣತೆಯನ್ನು ಪ್ರವಾದಿಗಳವರು ಲೆಖ್ಖವಿಲ್ಲದವರಾಗಿದ್ದಾರೆಂಬುವದು ದೇವರ ಪರಿಗಣಿತ ಜನರ ಮೇಲೆ ಬರುವ ಶ್ರಮಗಳಿಂದಲೂ, ಶಾಪಗಳಿಂದಲೂ

ಪ್ರಕ. ೮, ೧—೫.

ಅವರಿಗೆ ನಷ್ಟವಾಗುವದಿಲ್ಲವೆಂಬ ನಿರ್ಭಯಚಾಪ
ನೆಯನ್ನು ಹುಟ್ಟಿಸ ತಕ್ಕದ್ದು. ಲೆಖ್ಖವಿಲ್ಲದ ಪಾಪಿಗ
ಳನ್ನು ರಕ್ಷಿಸುವ ಪರಮ ಪ್ರೀತಿಯ ಮಗನಾದ ಯೇ
ಸು ಕ್ರಿಸ್ತನ ಕೃಪೆಯು ಎಷ್ಟಾ್ವೀ ಮಹಿಮೆಯುಳ್ಳದ್ದು!
ಆದರೆ ಇಕ್ಕಟ್ಟಾದ ಬಾಗಲಿಂದ ದೇವರಾಜ್ಯದಲ್ಲಿ ಶೇ
ರುವ ಮುಕ್ತರ ಸಮೂಹವು ಇಷ್ಟು ದಾಡ್ಡದಾಗಿದ್ದ
ರೆ, ಅವರಿಗಿಂತ ಹೆಚ್ಚಾದ ಶಾಪಗ್ರಸ್ತರ ಸಮೂಹ
ವು ಎಷ್ಟಾ್ವೀ ದಾಡ್ಡದಾಗಿರ ಬೇಕು.

೨. ಖರ್ಜೂರದ ಗರಿಗಳು ಜಯವನ್ನೂ, ಸಂತಾ
ಷವನ್ನೂ ಸೂಚಿಸುತ್ತವೆ. ಯೇಸು ಕ್ರಿಸ್ತನು ಯೆರೂ
ಸಲೇಮುಪ್ರವೇಶ ಮಾಡಿದಾಗ, ಜನರು ಅತನನ್ನು
ಈ ರೀತಿಯಿಂದ ಸನ್ಮಾನಿಸಿದರು.

೩. ರಕ್ಷಣೆಯು ಎಂಬದಕ್ಕೆ ಬಿಡುಗಡೆಯೂ ಕಷ್ಟ
ಪರಿಹಾರವೂ ಎಂಬ ಅಭಿಪ್ರಾಯವೂ, ಸಂಪೂರ್ಣ
ಸಂತೋಷ ಮಹಿಮೆಗಳೆಂಬ ಅಭಿಪ್ರಾಯವೂ ಉಂ
ಟು. ಇಲ್ಲಿ ಬರದದ್ದು ಪುನರುತ್ಥಾನದ ಮಕ್ಕಳು
ಹಾಡುವ ನಾಲಿಗೆಯಿಂದ ಉಚ್ಚರಿಸುವ ಮೊದಲನೆ
ಮಾತಾಗಿದೆ.

೪. ೧೪ನೆ ವಚನದಲ್ಲಿ ೧೩ನೆ ವಚನದ ಪ್ರಶ್ನೆಗೆ
ಪ್ರತ್ಯುತ್ತರವು ಹೇಳಿರುತ್ತದೆ: ಇವರು ಮಹಾ ಉ
ಪದ್ರವದಾಳಿಗಿಂದ ಬಂದವರಾಗಿದ್ದಾರೆ. ಈ ಉಪದ್ರ
ವವು ಏನಂದರೆ: ಆದಮನ ಪಾಪಪತನದಿಂದ ಕರ್ತ
ನ ಶಾಪಕ್ಕೆ ಒಳಗಾದ ನರಜಾತಿಗೆ ಇಲ್ಲಾಲೋಕದಲ್ಲಿ
ನೇಮಕವಾದ ಕಷ್ಟಗಳೂ, ವ್ಯಥೆಗಳೂ.

೫. ಜೀವಾಸಕಾಲದಲ್ಲಿ ಆಗಾಗ್ಗೆ ಬಂದ ಶೋ
ಧನೆಗಳಲ್ಲಿ ಪಾಪಮಲವು ಅವರಿಗೆ ಪೀಡ್ತಿದಾಗ್ಲೂ,
ಅವರು ಪಾಪಿಗಳ ರಕ್ಷಣೆಗಾಗಿ ಕ್ರೂಜೆಯಲ್ಲಿ ಸತ್ತ
ಯೇಸು ಕ್ರಿಸ್ತನನ್ನು ನಂಬಿ, ಆತನ ಕೃಪಾಪಾಕ್ಷವನ್ನೂ,
ಬಲಿಮರಣವನ್ನೂ ವಿಶ್ವಾಸದಿಂದ ಹಿಡಿದು ಕಾಂ
ಡು, ಆತನ ರಕ್ತದ ಮೂಲವಾಗಿ ತಮ್ಮನ್ನು ಶುದ್ಧ
ಮಾಡಿ ಕಾಂಡರು. ದೇವರ ಸಿಂಹಾಸನದ ಬಳಿಯ
ಲ್ಲಿ ಶೇರಿ, ಆತನ ಆಲಯದಲ್ಲಿ ರಾತ್ರಿ ಹಗಲು ದ
ಣಿಯದೆ ಸ್ತೋತ್ರವನ್ನರ್ಪಿಸಿ, ಸೇವೆ ಮಾಡುವ ಮಹಿ
ಮೆಗಿಂತ ಅಧಿಕವಾದದ್ದು ಇಹದಲ್ಲಿಯೂ ಪರದಲ್ಲಿ
ಯೂ ಇಲ್ಲ.

c. ಏಳನೆ ಮುದ್ರೆಯು. ಸ. ೮, ೧—೬.

(ಸಪ್ತ ತುತೂರಿಗಳ ದೈವಿಕ ಸಾಮಗ್ರಿಯು.)

೧. ಮತ್ತು ಏಳನೇ ಮುದ್ರೆಯನ್ನು ಒಡೆದಾಗ ೧), ಪರಲೋಕದಲ್ಲಿ ಹೆಚ್ಚು ಕಡಿ
ಮೆ ಅರ್ಧ ತಾಸು ನಿಶಬ್ದವಾಯಿತು ೨). ೨. ಆಗ ದೇವರ ಮುಂದೆ ನಿಂತಿರುವ
ಏಳು ದೂತರನ್ನು ಕಂಡೆನು; ಮತ್ತು ಅವರಿಗೆ ಏಳು ತುತೂರಿಗಳು ಕೊಡಲ್ಪಟ್ಟವು.
೩. ಮತ್ತು ಬೇರೊಬ್ಬ ದೂತನು ಬಂದು, ಚಿನ್ನದ ಧೂಪಾರ್ತಿಯನ್ನು ಹಿಡಿದು ಕಾಂ
ಡು, ಧೂಪ ಪೀಠದ ಹತ್ತರ ನಿಂತನು. ಮತ್ತು ಪರಿಶುದ್ಧರೆಲ್ಲರ ಪ್ರಾರ್ಥನೆಗಳ ಸಂಗ
ಡ ೩) ಸಿಂಹಾಸನದ ಮುಂದಿರುವ ಚಿನ್ನದ ಧೂಪ ಪೀಠದ ಮೇಲೆ ಇಡುವದಕ್ಕೆ
ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು. ೪. ಆಗ ಧೂಪದ ಹೊಗೆಯೂ ಪರಿಶು
ದ್ಧರ ಪ್ರಾರ್ಥನೆಗಳ ಸಂಗಡ ದೂತನ ಕೈಯಾಳಿಗಿಂದ ದೇವರ ಮುಂದೆ ಏರಿ ಬಂ
ತು ೪). ೫. ಮತ್ತು ದೂತನು ಧೂಪಾರ್ತಿಯನ್ನು ತೆಗೆದು, ಧೂಪ ಪೀಠದ ಬೆಂಕಿ
ಯಿಂದ ಅದನ್ನು ತುಂಬಿಸಿ, ಭೂಮಿಗೆ ಬಿಸಾಟನು. ಆಗ ಶಬ್ದಗಳೂ, ಗುಡುಗು

ಪ್ರಕ. ೮, ೬—೭.

ಗಳೂ, ಮಿಂಚುಗಳೂ, ಭೂಕಂಪವೂ, ಉಂಟಾದವು. ೬. ಮತ್ತು ಏಳು ತುತೂರಿಗಳು ಉಳ್ಳ ಏಳು ದೂತರು ಊದುವದಕ್ಕೆ ತಮ್ಮನ್ನು ಸಿದ್ಧ ಮಾಡಿಕೊಂಡರು.

೧. ಈನೆ ಮುದ್ರೆಯಲ್ಲಿ ಏಳು ತುತೂರಿಗಳೂ, ಈ ಯಥಾರ್ಥದಲ್ಲಿ ಬರದ ಅವುಗಳ ಸಾಮಗ್ರಿಯೂ, ಶೇರುತ್ತವೆ.

೨. ನಿರಂತರ ಸ್ತೋತ್ರಧ್ವನಿಪೂರಿತವಾದ ದಿವ ದಲ್ಲಿ ಇರುವವರೆಲ್ಲರು ಚಮಿಷ್ಯತ್ಕಾರ್ಯಗಳನ್ನು ಅ ಗಾಧವಾದ ಜಯಭಕ್ತಿಯಿಂದ ನಿರೀಕ್ಷಿಸುತ್ತಾ ಇರು ವದರಿಂದ, ಅತ್ಯಂತ ಮೌನವು ಪುಟ್ಟುತ್ತದೆ. ಇದ ಕ್ಕೆ ಕೀರ್ತ. ೬೫, ೨. ಒಮ್ಮುತ್ತದೆ.

೩. ದೂತನ ಧೂಪಾರ್ಪಣೆಯೂ ಪರಿಶುದ್ಧರ ಪ್ರಾರ್ಥನೆಗಳೂ ಒಂದೇ ಆಗಿರದೆ, ಒಂದಾಗಿಯೂ ಜತೆಯಾಗಿವೆ. ದೂತನ ಧೂಪಾರ್ಪಣೆಯು ಬಿನ್ನ ಪಾಪನ್ನಲ್ಲಿ, ಕೃತಜ್ಞಸ್ತೋತ್ರಾನ್ವಿತ ಪ್ರಜನೆಯನ್ನು ಸೂ ಚಿಸುತ್ತದೆ. ಅದು ಭೂವಾಸಿಗಳಾದ ಭಕ್ತರೂ, ನಿಷ್ಠಿಯನ್ನು ಪೂರೈಸಿದ ಮುಕ್ತರೂ ಮಾಡುವ ವಿ ಜ್ಞಾಪನೆಗಳಿಗೆ ಅನುಕೂಲವಾಗಿದೆ. ದೂತನಿಗೆ ಪು ಣ್ಯಸ್ಥಾನದ್ಯಾಗವಿಲ್ಲ. ಕ್ರಿಸ್ತನಾಬ್ಬನೇ ನಮಗೂ ದೇವರಿಗೂ ಮಧ್ಯಸ್ಥನಾಗಿದ್ದಾನೆ. ಆತನ ಮು ಖಾಂತರ ನಾವು ದೂತರ ಜಾತೆಯಾಳುಗಳಾಗಿದ್ದೇ ವೆ. ಆತನಿಗಾಗಿ ನಮ್ಮ ಪ್ರಾರ್ಥನೆಗಳು ತಂದೆಯಾದ ದೇವರಿಗೆ ಪ್ರಿತವಾಗಿವೆ. ದೂತರೆಲ್ಲರ ಸ್ತೋತ್ರಗ ಳೂ, ಪರಿಶುದ್ಧರೆಲ್ಲರ ಪ್ರಾರ್ಥನೆಗಳೂ ಒಟ್ಟು ಕೂ ಡಿ ದೇವರ ಮುಂದೆ ಬಂದರೆ, ಮಹಾ ಕಾರ್ಯಗ ಳು ಪುಟ್ಟುತ್ತವೆಂದು, ಇಲ್ಲಿ ತೋರುತ್ತದೆ.

೪. ಧೂಪಾರ್ಪಣೆಯು ಕೂಡಿದ ಈ ಪ್ರಾರ್ಥನೆ ಯು ಅತ್ಯಂತ ಬಲವಾಗಿದೆ. ಅದು ದೇವರಿಗೆ ಪ್ರಿತ ವಾದದ್ದು; ಆತನು ಅದಕ್ಕೆ ಒಪ್ಪಿ ಕೊಂಡು, ತನ್ನ ನಾ ಮದ ಸ್ತೋತ್ರ ಕೀರ್ತಿಗಳಿಗಾಗಿಯೂ, ಲೋಕದ ಚ ರ್ಯಾಗಿಯೂ, ಶತ್ರುಗಳ ಅಪಜಯಕ್ಕಾಗಿಯೂ, ತನ್ನ ರಾಜ್ಯದ ಅಭಿವೃದ್ಧಿಗಾಗಿಯೂ, ತನ್ನ ಪರಿಶುದ್ಧ ಆ ಜ್ಞಾನಿರ್ಣಯಗಳನ್ನು ಪ್ರಕಟಿಸುತ್ತಾನೆ.

BB. ಏಳು ತುತೂರಿಗಳು.

a. ಮೊದಲನೆಯಿಂದ ನಾಲ್ಕನೆ ತುತೂರಿಯ ವರೆಗೂ. ಸ. ೪, ೭—೧೩.

ಮೊದಲನೆ ತುತೂರಿಯು. ಪ. ೭.

೭. ಮೊದಲನೆಯ ದೂತನು ಊದಲಾಗಿ, ರಕ್ತದಿಂದ ಕಲಿಸಿದ ಕಲ್ಲಿಯೂ ಬೆಂ ಕಿಯೂ ಉಂಟಾಗಿ, ಭೂಮಿಗೆ ಹಾಕಲ್ಪಟ್ಟವು. ಆಗ ಮೂರನೆಯ ಭಾ ಗವು ಬೆಂದು ಹೋಯಿತು; ಮತ್ತು ಹಸಿ ಹುಲ್ಲೆಲ್ಲಾ ಬೆಂದು ಹೋಯಿತು.

"ರಕ್ತದಿಂದ ಕಲಸಿದ" ಎಂಬದರಿಂದ ಭೂಮಿಯ ಮೇಲೆ ಬಿದ್ದ ಶಾಪದ ಸಂಗಡ ಕಾಳಗ ಶ್ರಮವು ಸಹ, ಇಲ್ಲಿ ಭೂಮಿಯೆಂದು ಹೆಸರ್ಕೊಂಡಂಥ, ಪತ್ಮದಲ್ಲಿರುವವನ ಕಣ್ಣಿಗೆ ಗೋಚರವಾದಂಥ, ಲೌಕ್ಯಖಂಡದ ನಿವಾಸಿಗಳಿಗೆ ಬರೋಣವು ಸೂಚಿತವಾಗಿದೆ. ವಿಲಾಮತಿಯಲ್ಲಿ, ಕ್ರೈಸ್ತನಾವ ಕೊಂಸ್ತಂತೀನನು ರೋಮಿಯಾ ಯ ಮಹಾರಾಜನಾದದರಿಂದ, ಕ್ರೈಸ್ತಧರ್ಮಕ್ಕೆ ಜಯವು ಪ್ರಾಪ್ತವಾದ ಕಾಲದಲ್ಲಿ ಮೂಡಣ ದಿಕ್ಕಿನಲ್ಲಿ ನೂ ತನ ಘರ್ಜರಾಜ್ಯವು ಉಂಟಾಯಿತು. ಜಯಶಾಲಿಯಾದ ಎರಡನೆ ಶಾಪೂರನು ಸಾಮ್ರಾಜ್ಯವನ್ನು ಕಟ್ಟಿಕೊಂ ಡು, ರೋಮಿಯರ ಸಂಗಡ ರಕ್ತಮಯವಾದ ಕಾಳಗವನ್ನು ಬಹು ಕಾಲ ನಡಿಸಿ, ಅವರಿಗೆ ಅಧೀನವಾದ ಕೆಲ

(ಪ್ರಕ. ೮, ೯—೧೧.

ವು ದೇಶಗಳನ್ನು ಆಕ್ರಮಿಸಿ ಕೊಂಡು, ಫರ್ಸದೇಶದಲ್ಲಿದ್ದ ದೇಶಗಳ ಮಂದಿಯಾದ ಕ್ರೈಸ್ತರಿಗೆ ಅತಿ ಕ್ರೂರ ಹಿಂಸೆಯನ್ನು ಮಾಡಿದನು. (ಕ್ರಿಸ್ತಶಕ ೩೪೩.)

ಎರಡನೆ ತುತೂರಿಯು. ವ. ೮. ೯.

೮. ಎರಡನೇ ದೂತನು ಊದಲಾಗಿ, ಬೆಂಕಿ ಉರಿಯುವ ದಾಡ್ಡ ಬೆಟ್ಟವು ಹಾಗೆ ಇರುವಂಥಾದ್ದು ಸಮುದ್ರದಲ್ಲಿ ಹಾಕಲ್ಪಟ್ಟಿತು. ೯. ಆಗ ಸಮುದ್ರದ ಮೂರನೇ ಭಾಗವು ರಕ್ತವಾಯಿತು. ಮತ್ತು ಸಮುದ್ರದಲ್ಲಿರುವ ಪ್ರಾಣಿವುಳ್ಳ ಜಂತುಗಳ ಮೂರನೇ ಭಾಗವು ಸತ್ತಿತು. ಹಡಗುಗಳ ಮೂರನೇ ಭಾಗವು ನಾಶವಾಯಿತು.

ಬೆಂಕಿಯು ಉರಿಯುವ ದೊಡ್ಡ ಬೆಟ್ಟವು ವಿಲಾಯತಿಯ ಚರಿತ್ರದಲ್ಲಿ ಪ್ರಖ್ಯಾತವಾದ ಮಕಾ ದೇಶಾಂತರ ಗಮನವನ್ನು ಸೂಚಿಸುತ್ತದೆಂದು, ಪ್ರಕಟಣೆಯ ವ್ಯಾಖ್ಯಾನಿಗಳಲ್ಲಿ ಹೆಚ್ಚು ಮಂದಿ ನೆನಸುತ್ತಾರೆ. ಅಸ್ಯ ಖಂಡದಿಂದ ಹೊರಟು ಬಂದ ಗೋಥರೂ ಹೂನರೂ ವಂದಾಲರೂ ಮುಂತಾದ ಜನರು ಅಗಣಿತವಾದ ಸಮೂಹಗಳಾಗಿ ವಿಲಾಯತಿಯಲ್ಲಿ ಸೇರಿ, ವೊಲ್ಗನದಿಯಿಂದ ತಾಯೋನದಿವರ್ಯಂತ ವಿಲಾಯತಿಯ ದಕ್ಷಿಣ ಕಡೆಯ ಸೀಮೆಗಳನ್ನೆಲ್ಲಾ ಆಕ್ರಮಿಸಿ ಕೊಂಡು, ಹಾಳು ಮಾಡಿ, ನಿವಾಸಿಗಳಲ್ಲಿ ಕಂಡವರನ್ನೆಲ್ಲಾ ಸಂಹರಿಸಿ, ತದನಂತರ ಮಧ್ಯಸಮುದ್ರವನ್ನು ದಾಟಿ, ಅಫ್ರಿಕ ಖಂಡದ ಉತ್ತರ ದಿಕ್ಕಿನ ದೇಶಗಳನ್ನು ಸಹ ಅದೇ ಪ್ರಕಾರವಾಗಿ ನಾಶ ಮಾಡಿದರು. ಗೋಥರು ಸ್ವಲ್ಪ ಸಾಧುಗಳಾಗಿದ್ದರು. ಆದರೆ ಹೂನರೂ ವಂಡಾಲರೂ ಐದನೆ ಶತಮಾನದ ಆರಂಭದಿಂದ ಅದರ ಮಧ್ಯದ ವರೆಗೂ ಕೈಗೆ ಸಿಕ್ಕಿದ್ದನ್ನೆಲ್ಲಾ ಕಠೋರವಾದ ಉಗ್ರದಿಂದ ಕೊಂದು, ಸುಲಿದು, ಸುಟ್ಟರು.

ಮೂರನೆ ತುತೂರಿಯು. ವ. ೧೦. ೧೧.

೧೦. ಮೂರನೇ ದೂತನು ಊದಲಾಗಿ, ಆಕಾಶದಿಂದ ದೀಪದಂತೆ ಉರಿಯುವ ದಾಡ್ಡ ನಕ್ಷತ್ರವು ಬಿತ್ತು [೧]; ಅದು ನದಿಗಳ ಮೂರನೇ ಭಾಗದ ಮೇಲೆಯೂ ನೀರು ಬುಗ್ಗೆಗಳ ಮೇಲೆಯೂ ಬಿತ್ತು. ೧೧. ಆ ನಕ್ಷತ್ರದ ಹೆಸರು ಮಾಚಿಪತ್ರೆ ಎಂದು ಹೇಳಲ್ಪಡುತ್ತದೆ. ಮತ್ತು ನೀರುಗಳ ಮೂರನೇ ಭಾಗವು ಮಾಚಿಪತ್ರೆಯಾಯಿತು [೨]; ಅವು ಕಹಿಯಾದ ಕಾರಣ ಆ ನೀರುಗಳಿಂದ ಮನುಷ್ಯರಲ್ಲಿ ಅನ್ಯೇಕರು ಸತ್ತರು.

೧. ಸಂಧಿ. ೧, ೨ರಲ್ಲಿ ನಕ್ಷತ್ರಗಳು ಸಚಾಬಾಧಕರನ್ನು ಸೂಚಿಸುತ್ತವೆ. ವ್ಯಾಖ್ಯಾನಿಗಳಲ್ಲಿ ಅನೇಕರು, ಅರೀಯನೆಂಬ (ಕ್ರಿಸ್ತ ಶಕ ೩೨೫) ಸಚಾಬಾಧಕನು ಈ ನಕ್ಷತ್ರದಿಂದ ಸೂಚಿತನಾಗಿದ್ದಾನೆಂದು, ನೆನಸುತ್ತಾರೆ. ಅವನು, ಯೇಸು ಕ್ರಿಸ್ತನು ದೇವರಾಗಿದ್ದಾನೆಂಬದನ್ನು ಅಲ್ಲಗಳೆದು, ಕ್ರೈಸ್ತಸಭೆಯ ಮೂರನೆ ಭಾಗವನ್ನು ಮೋಸಗಾಳಿನಿದನೆಂದು, ಎಣಿಕೆ ಮಾಡಬಹುದು.

೨. ಇವನ ದುರ್ಬೋಧನೆಯುಂಬ ಕಹಿಯಾದ ಬೇರಿನಿಂದ ಮೂಡಣ ದಿಕ್ಕಿನ ಸಭೆಯು ಕ್ರಮಕ್ರಮವಾಗಿ ನಿರ್ಜೀವವಾಯಿತು. ಅರೀಯನು ಮಹಾರಾ ದೇಶಾಂತರಗಮನಕ್ಕಿಂತ ಮುಂಚೆ ಇದ್ದನು; ಆದರೆ ವಿ

ಪ್ರಕ. ೪, ೧೨—೫, ೧.

ಲಾಯತಿಯಲ್ಲಿ ಒಳನುಗ್ಗಿದ ಗಾಯಥರೂ, ವಂದಾಲರೂ ಅಪನ ಬಾಧೆಯನ್ನು ನಂಬಿ, ಸದ್ವಿಶ್ವಾಸಿಗಳಾದ ಕ್ರೈಸ್ತರನ್ನು ಎಲ್ಲಾ ಕಡೆಯಲ್ಲಿಯೂ ಕ್ರೂರವಾಗಿ ಹಿಂಸಿಸಿದರು.

ನಾಲ್ಕನೆ ತುತೂರಿಯು. ಪ. ೧೨.

೧೨. ನಾಲ್ಕನ್ಯೇ ದೂತನು ಊದಲಾಗಿ, ಸೂರ್ಯನ ಮೂರನ್ಯೇ ಭಾಗವೂ, ಚಂದ್ರನ ಮೂರನ್ಯೇ ಭಾಗವೂ, ನಕ್ಷತ್ರಗಳ ಮೂರನ್ಯೇ ಭಾಗವೂ, ಹೊಡೆಯಲ್ಪಟ್ಟವು. ಇದರಿಂದ ಅವುಗಳ ಮೂರನ್ಯೇ ಭಾಗವು ಕತ್ತಲಾಗಿ, ಹಗಲು ಅದರ ಮೂರನ್ಯೇ ಭಾಗದ ಪರ್ಯಂತರ ಪ್ರಕಾಶಿಸಲಿಲ್ಲ; ರಾತ್ರಿಯು ಹಾಗೆಯೇ.

ರೋಮಾಯ ಸಾಮ್ರಾಜ್ಯವು ಹೆಚ್ಚು ಹೆಚ್ಚಾಗಿ ಕುಂದುತ್ತಾ ಬಂತು. ಇತಲಿಯ ದೇಶವೂ ರಾಜಧಾನಿಯಾದ ರೋಮುಪುರವೂ ಮಹಾ ದೇಶಾಂತರಗಮನದ ಜನಗಳಿಗೆ ವಶವಾದ ಮೇಲೆ, ಕೊಂಸ್ತಂತೀನ ಪುರದ ಸಂಸ್ಥಾನವು ಮಾತ್ರ ಉಳಿಯಿತು. ಈ ಸಂಸ್ಥಾನದವರು ಕ್ರೈಸ್ತಜನರ ಹೆಚ್ಚಾದ ಭಾಗವನ್ನು ಆಳುತ್ತಾ ಇದ್ದು, ಆರನೆ ಶತಮಾನದಲ್ಲಿ ಇತಲಿಯವನ್ನೂ, ಅಫ್ರಿಕವನ್ನೂ ಪುನಃಸ್ವಾಧೀನ ಮಾಡಿ ಕೊಂಡರೂ, ಅವರ ರಾಜ್ಯಾಧಿಕಾರವು ಹೆಚ್ಚು ಹೆಚ್ಚಾಗಿ ಭಂಗವಾಗುತ್ತಾ ಬಂತು. ಅಂಧಕಾರವು ಅತ್ಯಂತ ಬಲಗೊಂಡಿತು. (ಎಜೆ. ೩೨, ೭.) ನಾನಾವಿಧಜನಗಳಲ್ಲಿಯೂ, ವಿಶೇಷವಾಗಿ ಅರಮನೆಯಲ್ಲಿಯೂ, ಅಸಹ್ಯವಾದ ಪಾಪಾಚರಣೆಗಳು ಪ್ರಬಲವಾಗುತ್ತಾ, ಪರಿಶುದ್ಧ ಬರಹದ ಅಭ್ಯಾಸವು ನಿಲ್ಲುತ್ತಾ, ಭಕ್ತಿಯೂ, ದೇವವಾಕ್ಯವಿದ್ಯೆಯೂ ದುರ್ವಿಶ್ವಾಸದಲ್ಲಿಯೂ ದುರ್ಮತ ತೃಣಶೋಧನೆಗಳಲ್ಲಿಯೂ ಮುಳುಗುತ್ತಾ, ಕ್ರೈಸ್ತರಕ್ಷಣಾಬೋಧನೆಯು ಸಭೆಯಲ್ಲಿ ಪೂರ್ಣವಾಗಿ ಅಸಡ್ಡೆಯಾಗುತ್ತಾ ಇರಲಾಗಿ, ನಿಜವಾದ ವಿದ್ಯೆಯು ಕೆಟ್ಟು ಹೋದದರಿಂದಲೂ, ಸನ್ಯಾಸಿಗಳನ್ನಿಸಿ ಕೊಳ್ಳುವ ಮಠದವರ ಬಲವು ಹೆಚ್ಚಿದರಿಂದಲೂ, ಅವರ ಬುದ್ಧಿಯು ರಾಜ್ಯಕಾರ್ಯವೃತ್ತಿಯಲ್ಲಿ ಸಹ ಗೆದ್ದದರಿಂದಲೂ, ಅಯ್ಯೋ ಅಯ್ಯೋ ಅಯ್ಯೋ ಎಂಬ ಶಬ್ದವು ಕೂಗುವ ಕಾಲವು ಸಮೀಪವಾಯಿತು.

ಕಡೇ ಮೂರು ತುತೂರಿಗಳ ಸಾಮಗ್ರಿಯು. ಪ. ೧೩.

೧೩. ಮತ್ತು ನೋಡಲಾಗಿ, ಮಧ್ಯಾಕಾಶದಲ್ಲಿ ಹಾರುವ ದೂತನನ್ನು ಕೇಳಿದೆನು. ಅವನು ಮಹಾ ಶಬ್ದದಿಂದ ಹೇಳಿದ್ದೇನಂದರೆ, ಊದಲಿರುವ ಮೂರು ದೂತರ ಮಿಕ್ಕಾದ ತುತೂರಿಯ ಧ್ವನಿಗಳಿಗಾಗಿರ ಭೂನಿವಾಸಿಗಳಿಗೆ ಅಯ್ಯೋ! ಅಯ್ಯೋ! ಅಯ್ಯೋ!

೯. ಐದನೆ ತುತೂರಿಯು. ಸ. ೯, ೧—೧೧.

೧. ಮತ್ತು ಐದನ್ಯೇ ದೂತನು ಊದಲಾಗಿ, ಆಕಾಶದಿಂದ ಭೂಮಿಯ ಮೇಲೆ ಬಿದ್ದ ನಕ್ಷತ್ರವನ್ನು ಕಂಡೆನು; ಮತ್ತು ಅವನಿಗೆ ಅಗಾಧದ ಗುಂಡಿಯ ಬೀಗದ ಕೈ

ಕೊಡಲ್ಪಟ್ಟಿತು [೨]. ೨. ಅಗಾಧದ ಗುಂಡಿಯನ್ನು ತೆರೆದನು; ಮತ್ತು ಗುಂಡಿಯಾಳಗಿಂದ ದೊಡ್ಡ ಕುಲುಮೆಯ ಹೊಗೆಯ ಹಾಗೆ ಹೊಗೆ ಏರಿತು; ಮತ್ತು ಸೂರ್ಯನೂ ಆಕಾಶವೂ ಗುಂಡಿಯ ಹೊಗೆಯಿಂದ ಕತ್ತಲಾದವು. ೩. ಆ ಹೊಗೆಯಾಳಗಿಂದ ಮಿಡತೆಗಳು [೩] ಭೂಮಿಯ ಮೇಲೆ ಬಂದವು; ಮತ್ತು ಭೂಮಿಯಲ್ಲಿರುವ [೪] ಚೇಳುಗಳಿಗೆ ಇರುವ ಅಧಿಕಾರದ ಪ್ರಕಾರ ಅವುಗಳಿಗೆ ಅಧಿಕಾರವು ಕೊಡಲ್ಪಟ್ಟಿತು. ೪. ಭೂಮಿಯ ಹುಲ್ಲನ್ನಾದರೂ, ಹಸುರಾದ ಯಾವದನ್ನಾದರೂ, ಯಾವ ಮರವನ್ನಾದರೂ, ಕೆಡಿಸದೆ, ತಮ್ಮ ಹಣೆಗಳಲ್ಲಿ ದೇವರ ಮುದ್ರೆ ಇಲ್ಲದ [೫] ಮನುಷ್ಯರನ್ನು ಮಾತ್ರ ಕೆಡಿಸ ಬೇಕೆಂದು, ಅವುಗಳಿಗೆ ಹೇಳಲ್ಪಟ್ಟಿತು. ೫. ಮತ್ತು ಇವರನ್ನೂ ಕೊಲ್ಲುವ ಹಾಗಲ್ಲ, ಐದು ತಿಂಗಳು ಪೀಡಿಸುವ ಹಾಗೆ ಮಾತ್ರ, ಅವುಗಳಿಗೆ ಕೊಡಲ್ಪಟ್ಟಿತು; ಮತ್ತು ಅವುಗಳ ಪೀಡೆಯು ಮನುಷ್ಯನನ್ನು ಹೊಡೆಯುವ ಚೇಳಿನ ಪೀಡೆಯ ಹಾಗಿತ್ತು. ೬. ಆ ದಿನಗಳಲ್ಲಿ ಮನುಷ್ಯರು ಮರಣವನ್ನು ಹುಡುಕಿ, ಅದನು ಕಾಣದೆ ಇರುವರು. ಸಾಯುವದಕ್ಕೆ ಆಶಿಸುವರು; ಆದರೆ ಮರಣವು ಅವರ ಕಡೆಯಿಂದ ಓಡಿ ಹೋಗುವದು [೬]. ೭. ಮತ್ತು ಆ ಮಿಡತೆಗಳ ರೂಪಗಳೂ ಯುದ್ಧಕ್ಕೆ ಸಿದ್ಧವಾದ ಕುದುರೆಗಳಿಗೆ ಸಮಾನವಾಗಿ, ಅವುಗಳ ತಲೆಗಳ ಮೇಲೆ ಬಿಂನಕ್ಕೆ ಸಮಾನವಾದ ಕಿರೀಟಗಳ ಹಾಗೆ, ಅವುಗಳ ಮುಖಗಳು ಮನುಷ್ಯರ ಮುಖಗಳ ಹಾಗೆ, ೮. ಅವುಗಳ ಕೂದಲು ಹೆಂಗಸರ ಕೂದಲಿನ ಹಾಗೆ, ಅವುಗಳ ಹಲ್ಲುಗಳು ಸಿಂಹಗಳ ಹಲ್ಲುಗಳ ಹಾಗೆ, ಇದ್ದವು. ೯. ಕಬ್ಬಿಣದ ಕವಚಗಳ ಹಾಗೆ ಅವುಗಳಿಗೆ ಕವಚಗಳಿದ್ದವು; ಅವುಗಳ ರೆಕ್ಕೆಗಳ ಶಬ್ದವು ಯುದ್ಧಕ್ಕೆ ಓಡುವ ಅನೇಕ ಕುದುರೆಗಳಿರುವ ರಥಗಳ ಶಬ್ದದ ಹಾಗಿತ್ತು. ೧೦. ಮತ್ತು ಚೇಳುಗಳಂತೆ ಅವುಗಳಿಗೆ ಬಾಲಗಳೂ, ಅವುಗಳ ಬಾಲಗಳಲ್ಲಿ ಕೊಂಡಿಗಳೂ, ಉಂಟು; ಮನುಷ್ಯರನ್ನು ಐದು ತಿಂಗಳು ಪೀಡಿಸುವದಕ್ಕೆ ಅವುಗಳಿಗೆ ಅಧಿಕಾರವು ಉಂಟು. ೧೧. ಮತ್ತು ಅಗಾಧದ ದೂತನು ಅವುಗಳಿಗೆ ಅರಸನಾಗಿದ್ದಾನೆ; ಇವನಿಗೆ ಇಬ್ರಿಯ ಮಾತಿನಲ್ಲಿ ಅಬದ್ದೋನನೂ, ಗ್ರೀಕ ಮಾತಿನಲ್ಲಿ ಅಪೊಲ್ಲುವೋನನೂ [೭], ಎಂಬ ಹೆಸರು. ೧೨. ಮೊದಲನೇ ಅಯ್ಯೋ ಆಗಿ ಹೋಯಿತು; ಇಗೋ, ಇನ್ನು ಎರಡು ಅಯ್ಯೋ ಇವುಗಳ ತರುವಾಯ ಬರುತ್ತವೆ.

೧. ಈ ನಕ್ಷತ್ರವು ಒಬ್ಬ ದೂತನನ್ನು ಸೂಚಿಸುತ್ತದೆ.

೨. ಇದು ದುರಾತ್ಮಗಳ ವಾಸಸ್ಥಳವಾದ ಪಾತಾಳದ ಒಂದು ತೆರೆಯ ಪೊಸರಾಗಿದೆ.

ಪ್ರಕ. ೯, ೧೩—೧೪.

೩. ಮಿಡಿತೆಗಳಂತೆ ಗುಂಪು ಗುಂಪಾಗಿ ಬರುವ ದುರಾತ್ಮಗಳು ಈ ಪ್ರಕಾರ ಸೂಚಿತವಾಗಿವೆ.

೪. ಈ ಮಾತು ಪೀಡಿಸುವವರು ಕ್ರೈಸ್ತಮಿಕರಲ್ಲ ವೆಂಬದನ್ನು ಜಾಡೆಯಾಗಿ ತಾತ್ಪರಿಸುತ್ತದೆ.

೫. ಅಂದರೆ, ಮುದ್ರೆಯನ್ನು ಪಡೆಯದೆ ಇರುವ (ಸ. ೭, ೪.) ಇಸ್ರಾಯೇಲನವರ ಮೇಲೆ ಈ ಪೀಡೆಯು ಬರುವದು.

೬. ಈ ಸ್ಥಳದ ಅಭಿಪ್ರಾಯವು ಏನೆಂದು, ನಿಶ್ಚಯವಾಗಿ ಪೇಳಕೂಡದು. ಅನೇಕರು, ಆರನೆ ಶತಮಾನದಲ್ಲಿ ಯೆಹೂದರಲ್ಲಿ ಅಂಗೀಕಾರವಾದ ತಲ್ಮುದೆಂಬ ಗ್ರಂಥದ ದುರ್ಬಾಧನೆಯಿಂದ ಪುಟ್ಟಿದ ನಷ್ಟವು ಇಲ್ಲಿ ಸೂಚಿತವಾಗಿದೆಂದು, ನೆನಸುತ್ತಾರೆ.

೭. ಈ ದೂತನಿಗಿರುವ ಎರಡು ಪೆಸರಿನ ಅಭಿಪ್ರಾಯವು ಯೇಸುವು ಎಂಬದಕ್ಕೆ ಪ್ರತಿ ಕೂಲವಾಗಿದೆ. ಗ್ರೀಕ ಭಾಷೆಯ ಪೆಸರು, ಈ ಮುಖ್ಯ ದೂತನ ಮೋಸವು ಗ್ರೀಕರಲ್ಲಿಯೂ ನಡಿಯಿತೆಂದು, ತಿಳಿಸುತ್ತದೆ.

ಆರನೆ ತುತೂರಿಗೂ ಏಳನೆ ತುತೂರಿಗೂ ಇರುವ ಸಂಬಂಧವಿಷಯವಾದ ಪೂರ್ವಸೂಚನೆಯು.

ಆರನೆ ತುತೂರಿಯಲ್ಲಿ ಬರುವ ಎರಡನೆ ಅಯ್ಯೋ ಎಂಬದು ಸ. ೮, ೧೬ರ ಪ್ರಕಾರ ಬಹು ಕಾಲದ್ದಾಗಿದ್ದು, ಸ. ೧೧, ೧೪. ೧೪ರ ಪ್ರಕಾರ ಕಡೇ ಕಾಲದಲ್ಲಿ ಮಾತ್ರ ಮುಗಿಯುವಂಥಾದ್ದಾಗಿ ತೋರುತ್ತದೆ. ಹೀಗಿದ್ದರೆ, ಅದು ಮೂರನೆ ಅಯ್ಯೋ ಎಂಬದರ ಕಾಲದಲ್ಲಿಯೂ, ಭಾಗವಾಗಿ ನಡೆದು, ಪಾಪಮನುಷ್ಯನು ನರಜಾತಿಯಲ್ಲಿರುವ ಅಂಧಕಾರಬಲಗಳ ಸಾರಾಂಶವಾದ ಮಹಾಪುರುಷನಾಗಿ ಪ್ರತ್ಯಕ್ಷವಾಗುವ ಕಾಲದಲ್ಲಿಯೇ ಪೂರ್ಣವಾಗಿ ತೀರುವದೆಂದು, ನೆನಸ ಬೇಕು. ಹಾಗಾದರೆ ಆರನೆ ತುತೂರಿಯಲ್ಲಿ ಶೇರುವಂಥಾದ್ದೇನಂದರೆ: ೧) ಐಫ್ರತನದಿಯ ಬಳಿಯಲ್ಲಿರುವ ದೂತರ ವಿಸರ್ಜನೆಯು. (ಸ. ೯, ೧೩—೨೧.) ೨) ಏಳನೆ ತುತೂರಿಯ ಸಾಮಗ್ರಿಯಾದ ಕಹಿಯೂ ಶಿಂಯೂ ಆದ ಸುರಳಿಯನ್ನು ಹಿಡಿದು ಕೊಳ್ಳುವ ದೂತನ ದರ್ಶನವು. (ಸ. ೧೦.) ೩) ಯೆರೂಸಲೇಮಿನ ದರ್ಶನವು; ಅದು ಎರಡನೆ ಅಯ್ಯೋ ಎಂಬದರ ಕಾಲದ ಆರನೆ ದೂತನ ತುತೂರಿಯಲ್ಲಿಯೂ, ಏಳನೆ ದೂತನ ತುತೂರಿಗೆ ಕೂಡಿದ ಮೂರನೆ ಅಯ್ಯೋ ಎಂಬದರಲ್ಲಿಯೂ ಶೇರುತ್ತದೆ. (ಸ. ೧೧, ೧—೧೪.)

ಪೂರ್ವಸುವಾರ್ತಾಪಕ್ಷಸಭಾಬೋಧಕರೆಲ್ಲರೂ ಎರಡನೆ ಅಯ್ಯೋ ಮೊಹಮ್ಮದನನ್ನು, ಮೂರನೆ ಅಯ್ಯೋ ಪಾಪವನ್ನು ಸೂಚಿಸುತ್ತದೆಂದು, ವ್ಯಾಖ್ಯಾನಿಸಿದರು. ಈ ಎರಡು ಮಹಾ ವ್ಯಥೆಗಳು ಒಂದರ ಮೇಲೆ ಒಂದು ಹುಟ್ಟಿದಾಗ್ಯೂ, ಇತ್ತಲಾಗಿ ಏಕಕಾಲಿಕವಾಗಿವೆಂದು, ಪ್ರತ್ಯಕ್ಷವಾಗಿವೆ. ಅವೆರಡು ಅಗಾಧ ಜನ್ಯಮೃಗವು ಬರುವ ಪರ್ಯಂತ ಜೊತೆಯಾಗಿ ನಡಿಯುತ್ತವೆಂಬದು ವ್ರಕಟಣಾಗ್ರಂಥದ ವಾಕ್ಯಕ್ಕೆ ಅನುಸಾರವಾಗಿ ತೋರುತ್ತದೆ.

೮. ಆರನೆ ತುತೂರಿಯು. ಸ. ೯, ೧೩—೧೧, ೧೪.

ಅ) ಐಫ್ರತನದಿಯ ಬಳಿಯ ದೂತರ ವಿಸರ್ಜನೆಯು. ಸ. ೯, ೧೩—೨೧.

೧೩. ಆಗ ನಾನು ಯಾಜಕನು ಆದಲಾಗಿ, ದೇವರ ಮುಂದಿರುವ ಚಿನ್ನದ ಧೂಪ ಪೀಠದ ನಾಲ್ಕು ಕೊಂಬುಗಳಿಂದ ಒಂದು ಶಬ್ದವನ್ನು ಕೇಳಿದೆನು; ೧೪. ಅದು ತು

ಪ್ರಕ. ೯, ೧೫—೨೧.

ಶೂರಿ ಹಿಡಿದ ಊರನ್ನೇ ದೂತನಿಗೆ, (ಪ್ರಾತು ಎಂಬ ದಾಡ್ಡ ನದಿಯಲ್ಲಿ೧) ಕಟ್ಟಿರುವ ನಾಲ್ಕು ದೂತರನ್ನು೨) ಬಿಡಿಸು, ಎಂದು ಹೇಳಿತು. ೧೫. ಆಗ, ಮನುಷ್ಯರ ಮೂರನೇ ಭಾಗವನ್ನು ಕೊಲ್ಲುವ ಹಾಗೆ೩), ತಾಸು, ದಿನ, ತಿಂಗಳು, ವರುಷಗಳಿಗೂ ಸಿದ್ಧವಾದ ನಾಲ್ಕು ದೂತರು ಬಿಡುಗಡೆಯಾದರು; ೧೬. ಮತ್ತು ಕುದುರೆ ಸೈನ್ಯದ ಲೆಕ್ಕವು ಇಪ್ಪತ್ತು ಕೋಟಿಯು; ಅವರ ಲೆಕ್ಕವನ್ನು ಕೇಳಿದೆನು೪). ೧೭. ಈ ಮೇರೆಗೆ ನೋಟದಲ್ಲಿ ಕುದುರೆಗಳನ್ನೂ, ಅವುಗಳ ಮೇಲೆ ಕೂತು ಕೊಂಡವರನ್ನೂ, ಕಂಡೆನು. ಅವರಿಗೆ ಬೆಂಕಿಯೂ ನೀಲವೂ ಗಂಧಕವೂ ಆಗಿರುವ ಕವಚಗಳಿದ್ದವು; ಕುದುರೆಗಳ ತಲೆಗಳು ಸಿಂಹಗಳ ತಲೆಗಳ ಹಾಗಿದ್ದವು; ಅವುಗಳ ಬಾಯಿಗಳಿಂದ ಬೆಂಕಿಯೂ ಹೊಗೆಯೂ ಗಂಧಕವೂ ಹೊರಡುತ್ತಾ ಇದ್ದವು. ೧೮. ಅವುಗಳ ಬಾಯಿಗಳಿಂದ ಹೊರಡುವ ಬೆಂಕಿ, ಹೊಗೆ, ಗಂಧಕ, ಈ ಮೂರರಿಂದ೫) ಮನುಷ್ಯರ ಮೂರನೇ ಭಾಗವು ಕೊಲ್ಲಲ್ಪಟ್ಟಿತು. ೧೯. ಯಾಕಂದರೆ ಅವುಗಳ ಅಧಿಕಾರವು ಅವುಗಳ ಬಾಯಿಯಲ್ಲಿಯೂ ಅವುಗಳ ಬಾಲಗಳಲ್ಲಿಯೂ ಅದೆ. ಯಾಕಂದರೆ ಅವುಗಳ ಬಾಲಗಳು ಸರ್ಪಗಳಿಗೆ ಸಮಾನವಾಗಿದ್ದು, ತಲೆಯುಳ್ಳವುಗಳಾಗಿವೆ; ಅವುಗಳಿಂದ ಕೆಡಿಸುತ್ತವೆ೬). ೨೦. ಮತ್ತು ಈ ಬಾಧೆಗಳಿಂದ ಕೊಲ್ಲಲ್ಪಡದೆ ಉಳಿದ ಮನುಷ್ಯರು, ದೆವ್ವಗಳಿಗೂ, ನೋಡಲೂ ಕೇಳಲೂ ನಡೆಯಲೂ ಅರಿಯದ ಬಿನ್ನ, ಬೆಳ್ಳಿ, ಹಿತ್ತಾಳೆ, ಕಲ್ಲು, ಮರಗಳ ಬೊಂಬೆಗಳಿಗೂ೭), ನಮಸ್ಕರಿಸದ ಹಾಗೆ, ಮಾನಸಾಂತರ ಪಡಲಿಲ್ಲ. ೨೧. ಮತ್ತು ತಮ್ಮ ಕೊಲೆಗಳನ್ನೂ, ತಮ್ಮ ಶಂತ್ರಗಳನ್ನೂ, ತಮ್ಮ ಜಾರತ್ವಗಳನ್ನೂ, ತಮ್ಮ ಕಳ್ಳತನಗಳನ್ನೂ ಬಿಟ್ಟು ಮಾನಸಾಂತರ ಪಡಲಿಲ್ಲ.

೧. ಐಫ್ರತನದಿಯ ಸಮೀಪದಲ್ಲಿ ತುರ್ಕ, ಪರ್ಸ, ಅರಬ ಮುಂತಾದ, ಮೊಹಮ್ಮದನ ಮತದಲ್ಲಿ ಶೇರಿದ, ಮುಖ್ಯ ಜನಾಂಗಗಳು ವಸತಿಯಾದ ದೇಶಗಳಿರುತ್ತವೆ.

೨. ಐಫ್ರತನದಿಯ ನಾಲ್ಕು ದೂತರ ವಿಸರ್ಜನೆಯ ಆಜ್ಞೆಯು ಥೂಪಬೀತದಿಂದ ಬಂದದ್ದು, ನರ ಜಾತಿಯ ಅಧಿಕ ಭಾಗದ ಮೇಲೆ ಬೀಳುವಂಥ ಘೋರವಾದ ಶಿಕ್ಷೆಗೆ ಪರಿಶುದ್ಧರ ಪ್ರಾರ್ಥನೆಗಳು ಅಡ್ಡಿ ಮಾಡುವದಿಲ್ಲವೆಂದು, ಜಾಡೆಯಾಗಿ ತಿಳಿಸುತ್ತದೆ.

೩. ಈ ದೂತರು ತಾವು ಬಿಡುಗಡೆಯಾಗುವ ಘಳಿಗೆಯನ್ನು ಕಾದು ಕಾಳ್ಕತ್ತಾ ಬಹು ಕಾಲ ನಿಂತಿದ್ದರು. ಅವರ ವೃತ್ತಿಯು ಆತ್ಮಿಕವಾದದ್ದು. ಅವರು ಮನುಷ್ಯರ ಮೂರನೆ ಭಾಗವನ್ನು, ಕ್ರಿಸ್ತವಿಶ್ವಾಸ ದಾಳ್ಮೀಪಕ್ಕೆ ಎಳದು, ನಾಶ ಮಾಡಿದರು.

೪. ದುರಾತ್ಮಗಣದ ಲೆಕ್ಕವು ಇಪ್ಪತ್ತು ಕೋಟಿ. ಇದನ್ನು ನೆನಸಿದರೆ, ದೃಶ್ಯವಾದ ಲೋಕದ ಮೇಲೆ ಅದೃಶ್ಯವಾದ ಲೋಕಕ್ಕೆ ಇರುವ ಬಲವು ಅತಿಶಯ ಪಾಪದ್ದೆಂದು, ತಿಳಿಯಲಾದೀತು.

೫. ೬. ಈ ಗಣಗಳು ದೇಹಿಕ ಯುದ್ಧಸೈನ್ಯಗಳಲ್ಲ, ಆತ್ಮಿಕ ಗಣಗಳೆಂಬದು ಸಮಾಜವಾಗಿದೆ.

(ಪ್ರಕ. ೧೦, ೧—೪.

೭. ಅಂದರೆ, ತಮ್ಮ ವಿಗ್ರಹಾರಾಧನೆಗಾಗಿಯೂ, ಇತರ ಅಸಹ್ಯವಾದ ಪಾತಕಗಳಿಗಾಗಿಯೂ, ಪಶ್ಚಾತ್ತಾಪ ಪಡದೆ ಇರುವ ಜನರು ಉಳಿದರು. ಮೊಹಮ್ಮದನು ವಿಗ್ರಹಾರಾಧನಾಸಂಹಾರವು ಸ್ವೀಯ ಮುಖ್ಯೋದ್ದಿಶ್ಯವಾಗಿ ತಿಳಿದು ಕಾಂಡು, ಈ ವಿಷಯವಾಗಿ ಅತ್ಯಾಸಕ್ತನಾಗಿದ್ದರೂ, ಅವನ ಅಪೇಕ್ಷೆಯು ಸಾರ್ಥಕವಾಗಲಿಲ್ಲ. ಮುಸಲುಮಾನರು ಆಕ್ರಮಿಸಿಕಾಂಡ ದೇಶಗಳಲ್ಲಿ ಪ್ರಜಾನರ ವಿಗ್ರಹಾರಾಧನೆಯಾದರೂ, ಪ್ರತಿಕ್ರೈಸ್ತರ ವಿಗ್ರಹಾರಾಧನೆಯಾದರೂ, ನಿಂತು ಹೋಗಲಿಲ್ಲ. ಆದರೆ ಮೊಹಮ್ಮದನ ಖಡ್ಗದಿಂದ ದೇವರು ವಿಗ್ರಹಾರಾಧಕರನ್ನು ದಂಡಿಸಿದ್ದೇ ಸರಿ.

ಇ) ದೂತನ ಕಹಿ, ಶೀಯಾದ ಸುರಳಿ. ಸ. ೧೦.

೧. ಮತ್ತು ಪರಲೋಕದಿಂದಿಳಿದು ಬರುವ ಬೇರೊಬ್ಬ ಬಲಿಷ್ಠ ದೂತನನ್ನು ೧) ಕಂಡೆನು. ಅವನು ಮೇಘವನ್ನು ಸುತ್ತಿ ಕೊಂಡಿದ್ದನು; ಅವನ ತಲೆಯ ಮೇಲೆ ಮಳೆಬಿಲ್ಲು ಇತ್ತು. ಅವನ ಮುಖವು ಸೂರ್ಯನ ಹಾಗೆ, ಅವನ ಕಾಲುಗಳು ಬೆಂಕಿಯ ಸ್ತಂಭಗಳ ಹಾಗಿದ್ದವು. ೨. ಅವನ ಕೈಯಲ್ಲಿ ತೆರೆದಿರುವ ಒಂದು ಸಣ್ಣ ಸುರಳಿ ಇತ್ತು ೨); ಅವನು ಬಲಗಾಲನ್ನು ಸಮುದ್ರದ ಮೇಲೆಯೂ, ಎಡಗಾಲನ್ನು ಭೂಮಿಯ ಮೇಲೆಯೂ ಇಟ್ಟು, ೩. ಸಿಂಹವು ಗರ್ಜಿಸುವ ಪ್ರಕಾರ ೩) ಮಹಾ ಶಬ್ದದಿಂದ ಕೂಗಿದನು. ೪. ಕೂಗಿದಾಗ, ಏಳು ಗುಡುಗುಗಳು ತಮ್ಮ ಶಬ್ದಗಳನ್ನು ಕೊಟ್ಟವು. ೪. ಮತ್ತು ಆ ಏಳು ಗುಡುಗುಗಳು ತಮ್ಮ ಶಬ್ದಗಳನ್ನು ಕೊಟ್ಟಾಗಲೇ, ಬರೆಯ ಬೇಕೆಂದಿದ್ದೆನು. ಆಗ, ಆ ಏಳು ಗುಡುಗುಗಳು ನುಡಿದವುಗಳನ್ನು ಬರೆಯದೆ, ಅವುಗಳಿಗೆ ಮುದ್ರೆ ಹಾಕು ೪), ಎಂದು ನನಗೆ ಹೇಳುವ ಪರಲೋಕದಿಂದಾದ ಶಬ್ದವನ್ನು ಕೇಳಿದೆನು. ೫. ಮತ್ತು ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವಂಥ, ನಾನು ಕಂಡ ದೂತನು ತನ್ನ ಬಲಗೈಯನ್ನು ಆಕಾಶಕ್ಕೆ ಎತ್ತಿ ೫), ೬. ಆಕಾಶವನ್ನೂ, ಅದರಲ್ಲಿ ಇರುವವುಗಳನ್ನೂ, ಭೂಮಿಯನ್ನೂ, ಅದರಲ್ಲಿ ಇರುವವುಗಳನ್ನೂ ೬), ಸಮುದ್ರವನ್ನೂ, ಅದರಲ್ಲಿ ಇರುವವುಗಳನ್ನೂ, ಸೃಷ್ಟಿಸಿ, ಯುಗಯುಗಾಂತರಗಳ ವರೆಗೂ ಬದುಕುವವನ ಮೇಲೆ ಆಣೆ ಇಟ್ಟು, ೬. ಇನ್ನು ಮೇಲೆ ಕಾಲವು ಇರದು; ಆದರೆ ಏಳನೇ ದೂತನ ಶಬ್ದದ ದಿನಗಳಲ್ಲಿ, ಅವನು ಊದುವದಕ್ಕಿರುವ ಸಮಯದಲ್ಲಿ, ತನ್ನ ದಾಸರಾದ ಪ್ರವಾದಿಗಳಿಗೆ ೭) ಸುವಾರ್ತೆಯಾಗಿ ಹೇಳಿದ ಪ್ರಕಾರ ದೇವರ ಮರ್ಮವು ಸಂಪೂರ್ಣವಾಗುವದು, ಅಂದನು. ೮. ಮತ್ತು ನಾನು ಕೇಳಿದ, ಪರಲೋಕದಿಂದಾದ ಶಬ್ದವು ತಿರಿಗಿ ನನ್ನ ಸಂಗಡ ಮಾತಾಡಿ, ಹೇಳಿದ್ದೇನಂದರೆ ೮), ಹೋಗಿ, ಸಮುದ್ರದ ಮೇಲೆಯೂ

(ಪ್ರಕ. ೧೦, ೯—೧೧.

ಭೂಮಿಯ ಮೇಲೆಯೂ ನಿಂತಿರುವ ದೂತನ ಕೈಯಲ್ಲಿ ಇರುವಂಥ ತೆರೆದಿರುವ ಸುರಳಿಯನ್ನು ತೆಗೆದುಕೊಂಡು ಆಗ ದೂತನ ಹತ್ತಿರ ಹೋಗಿ, ೯. ಆ ಸಣ್ಣ ಸುರಳಿಯನ್ನು ನನಗೆ ಕೊಡು, ಅಂದೆನು. ಅವನು ನನಗೆ, ಅದನ್ನು ತೆಗೆದು ಕೊಂಡು, ತಿಂದು ಬಿಡು; ಅದು ನಿನ್ನ ಹೊಟ್ಟೆಗೆ ಕಹಿ ಮಾಡುವದು, ಆದರೆ ನಿನ್ನ ಬಾಯಿಯಲ್ಲಿ ಜೇನಿನಂತೆ ಸಿಹಿಯಾಗಿರುವದು [೯]), ಅಂದನು. ೧೦. ಆಗ ದೂತನ ಕೈಯಿಂದ ಆ ಸಣ್ಣ ಸುರಳಿಯನ್ನು ತೆಗೆದು ಕೊಂಡು, ತಿಂದು ಬಿಟ್ಟೆನು. ಅದು ನನ್ನ ಬಾಯಿಯಲ್ಲಿ ಜೇನಿನಂತೆ ಸಿಹಿಯಾಗಿತ್ತು; ಅದನ್ನು ತಿಂದ ಮೇಲೆ ನನ್ನ ಹೊಟ್ಟೆ ಕಹಿಯಾಯಿತು [೧೦]). ೧೧. ಆಗ, ನೀನು ತಿರಿಗಿ ಅನೇಕ ಪ್ರಜೆಗಳನ್ನೂ, ಜನಾಂಗಗಳನ್ನೂ, ಭಾಷೆಗಳನ್ನೂ, ಅರಸರನ್ನೂ ಕುರಿತು ಪ್ರವಾದಿಸ ಬೇಕೆಂದು, ನನಗೆ ಹೇಳಿದನು.

೧. ಸ. ೫, ೨ಲ್ಲಿ ಬಲಿಷ್ಠನಾದ ಒಬ್ಬ ದೂತನು ಕಾಣಿಸಿ ಕೊಂಡನು. ಈ ದೂತನ ವರ್ಣನೆಯು ಮಹಾ ಮಹಿಪ್ರಾಯವುಳ್ಳದ್ದು. ಅವನು ಮೇಘವನ್ನು ಸುತ್ತಿ ಕೊಂಡದ್ದು ಏನಂದರೆ: ತನ್ನ ಸಖೆಯನ್ನು ಮಹಾ ಶ್ರಮಮಾರ್ಗದಲ್ಲಿ ನಡಿಸುವ ದೇವರ ಆಲೋಚನೆಯು ಮುಂದಣ ದರ್ಶನಗಳಲ್ಲಿ ಕೊಂಚ ಮರೆಯಾಗಿ ತೋರುತ್ತದೆ. ದೂತನ ಮೇಲೆ ಕಾಣುವ ಮಳೆಬಿಲ್ಲು, ಅವನ ತೇಜೋಮಯವಾದ ಮುಖವು, ಅಗ್ನಿ ಸ್ತಂಭಗಳಿಗೆ ಸದೃಶವಾದ ಕಾಲುಗಳು, ಇವುಗಳ ಅಭಿಪ್ರಾಯವೇನಂದರೆ: ಅವನನ್ನು ಕಳುಹಿಸುವ ಒಡೆಯನು ತನ್ನ ಸಖೆಯ ಸಂಗಡ ಮಾಡಿದ ಸಮಾಧಾನದ ಒಡಂಬಡಿಕೆಯನ್ನು ದೃಢವಾಗಿ ಕೈಕೊಂಡು, ತನ್ನ ಮುಖದ ಪ್ರಕಾಶವನ್ನು ಅದಕ್ಕೆ ತೋರಿಸಿ, ನ್ಯಾಯನಿರ್ಣಯದಿವಸದಲ್ಲಿ ತನ್ನ ವೈರಿಗಳಾದ ಅದರ ವೈರಿಗಳನ್ನು ತುಳಿದು ಬಿಡುವನು. ಸ. ೧೦, ೧—೧೧, ೧೩ಲ್ಲಿ ಬರದದ್ದು ಏಳು ತುತೂರಿಗಳ ಸಾಲನ್ನು ಖಂಡಿಸುವ ಅಂತರ್ದರ್ಶನವಾಗಿದ್ದು, ೭ನೆ ಸಂಧಿಯು ೭ನೆ ಮುದ್ರೆಗೆ ಸಾಮಗ್ರಿಯಾಗಿರುವ ಪ್ರಕಾರ, ಏಳನೆ ತುತೂರಿಗೆ ಸಾಮಗ್ರಿಯಾಗಿದೆ.

೨. ಅದು ಮುದ್ರಿತವಾಗಿರದೆ, ತೆರೆದದ್ದಾಗಿದೆ; ಯಾಕಂದರೆ ಏಳನೆ ದೂತನ ತುತೂರಿಯ ದಿವಸಗಳಲ್ಲಿ ನೆರವೇರುವ ದೇವರ ಮರ್ಮವು ಪ್ರವಾದನೆಯ ಮೂಲವಾಗಿ ಸರ್ವ ಲೋಕಕ್ಕೆ ಪ್ರಸಿದ್ಧಿಯಾಗ ಬೇಕು.

೩. ದೂತನ ಸಿಂಹನಾದವು, ಅವನ ವಾಕ್ಯವು ಸರ್ವ ಲೋಕಕ್ಕೆ ಅತಿ ಘನವಾದದ್ದೆಂದು, ಸೂಚಿಸುತ್ತದೆ.

೪. ದೂತನ ಶಬ್ದಕ್ಕೆ ಸಮಕಾಲದಲ್ಲಿ ಏಳು ಗುಡುಗು ನುಡಿಯುತ್ತದೆ. ಗುಡುಗು ಪ್ರಕಟನೆಯಲ್ಲಿಯೂ ಕೀರ್ತನೆಗಳಲ್ಲಿಯೂ ಪ್ರವಾದಿಗಳಲ್ಲಿಯೂ ದೇವರ ಮಹಿಮೆ ತ್ರಾಣಗಳ ದೃಷ್ಟಾಂತವಾಗಿ ಕಾಣುತ್ತದೆ. ಏಳು ಗುಡುಗಿನ ಮಾತು ಪ್ರಕಟವಾಗ ಬಾರದೆಂದು, ಯೋಹಾನನಿಗೆ ಅಪ್ಪಣೆಯಾಯಿತು. ಈ ಪ್ರಕಟನಾಗ್ರಂಥದಲ್ಲಿ ಪ್ರಕಟವಾದ ಕಾರ್ಯಗಳು ಬಹಳವಾಗಿದ್ದರೂ, ಗುಪ್ತವಾದವುಗಳು ಅಧಿಕವೆಂದು, ತೋರುತ್ತದೆ. ಏಳು ಗುಡುಗು ಕಾಲದ ಮರ್ಮವನ್ನು ಉಚ್ಚರಿಸಿತಾ ಏನಾ? ಪುರ್ಕಾಗಾದರೂ ಮುಂದಣ ಚರಿತ್ರದ ಲೆಖ್ಖವನ್ನು ತೀರಿಸುತ್ತಾ ಬಂದ ವ್ಯಾಖ್ಯಾನಿಗಳೆಲ್ಲರೂ ತಪ್ಪು ಮಾಡುತ್ತಾ ಬಂದರು.

೫. ದೂತನು ಸಮುದ್ರದಲ್ಲಿಯೂ ಭೂಮಿಯಲ್ಲಿಯೂ ನಿಂತು, ಬಲಗೈ ದಿವಕ್ಕೆ ಎತ್ತಿ, ಶತ್ರುಗಳು ಎಷ್ಟು ಕಾಲಪಾಕ್ರಾಂತರಾಗಿದ್ದರೂ, ಸಮುದ್ರವೂ ಭೂಮಿಯೂ ದಿವವೂ ಈಗಲೂ ಎಂದೆಂದಿಗೂ ತನ್ನ ಒಡೆಯನ ಸೊತ್ತಾಗಿವೆಂದು, ಸಾಕ್ಷಿ ಕೊಡುತ್ತಾನೆ.

೬. ಸರ್ವ ಸೃಷ್ಟಿಯು ದೇವರಿಂದುಂಟಾದ್ದರಿಂದ, ಅದರ ಇಷ್ಟಕ್ಕೆಯೂ ನ್ಯೂನಾಧಿಕ ಕಾರ್ಯಗಳಿಗೆ ನೇಮ

ಕವಾದ ಕಾಲಗಳೂ ಆತನಿಗೂ, ಆತನ ಬುದ್ಧಿನಿರ್ಣಯಕ್ಕೂ ಪೂರ್ಣ ಅಧೀನವಾಗಿವೆ.

೭. ಪುಳೆ ಒಡಂಬಡಿಕೆಯ ಪ್ರವಾದನೆಗಳ ತಾತ್ಪರ್ಯವು ಚಾಗವಾಗಿ ನೆರವೇರಿಯದೆ; ೞನ್ನು ಚಾಗವಾಗಿ ನೆರವೇರ ಬೇಕು. ದೇವರ ಮಗನ ಮಾನುಷಾವತಾರವೂ, ಆತನ ಶ್ರಮವೂ ಮರಣವೂ ಮಹಿಮಾಪ್ರವೇಶವೂ, ಆತನ ಆತ್ಮಸೇಚನೆಯೂ, ಆತನ ಸಚಾಸ್ಥಾಪನೆಯೂ, ನಾನಾ ದೇಶೀಯೞ ಸುವಾರ್ತಾಪ್ರಖ್ಯಾತಿಯೂ, ಈ ಮುಂತಾದ ಕಾರ್ಯಗಳೆಲ್ಲಾ ದೇವಸೇವಕರಾದ ಪ್ರವಾದಿಗಳು ಮುಂತಿಳಿಸಿದ ಪ್ರಕಾರವೇ ಉಂಟಾದವು. ಉಳಿದದ್ದು ದೇವಮರ್ಮ ಸಂಬಂಧವಾಗಿದೆ. ಅದು ಕಡೇ ಕಾಲಗಳಲ್ಲಿ ೞಸ್ರಯೇಲನವರಲ್ಲಿಯೂ ಬೇರೆ ಜನಾಂಗಗಳಲ್ಲಿಯೂ ಪ್ರಕಟವಾಗುವದು. ಪುಳನೆ ದೂತನು ಮಹಾ ಶ್ರಮವು ಅಧಿಕಾಧಿಕವಾದ ಕಾಲದಲ್ಲಿ ತುತೂರಿಯನ್ನೂದುವಾಗ, ಈ ಮರ್ಮವು ನೆರವೇರ ಬೇಕೆಂಬ ಚಕ್ಕರ ಅಭಿಲಾಷೆಯು ಪ್ರಚಂಡವಾದಲ್ಲಿ ೞನ್ನು ಮೇಲೆ ಕಾಲವು (ಅಂದರೆ, ಸ. ೬, ೧೧ರಲ್ಲಿ ಪೇಳಿದ ಪ್ರಕಾರ, ಪೆಚ್ಚು ತಡವು) ೞರದು ಎಂಬ ಮಾತು ಚಕ್ಕರ ಪೃದಯಕ್ಕೆ ಅತ್ಯಂತ ಮನಾೞಪುರವಾಗಿರುವದು.

೮. ಈ ಶಬ್ದವು ನಾಲ್ಕನೆ ವಚನದ ಶಬ್ದವಾಗಿದೆ. ಅದು ಕರ್ತನಾದ ಯೇಸು ಕ್ರಿಸ್ತನ ಶಬ್ದವೇ ಎಂಬದು ಮುಂದಿನ ಪ್ರವಾದನೆಯ ತಾತ್ಪರ್ಯದಿಂದ, ವಿಶೇಷವಾಗಿ: "ನಾನು ನನ್ನ ಸಾಕ್ಷಿಗಳಿಬ್ಬರಿಗೆ ಕಾಡುವೆನು" ಎಂಬ ಸ. ೧೧, ೩ರ ಮಾತಿನಿಂದ ಪ್ರಾಮಾಣ್ಯವಾಗಿದೆ.

೯. ಎಜೆಕಿಯೇಲನು ಸಪು (ಎಜೆ. ೩, ೧.) ಪ್ರವಾದನೆ ಪೇಳುವದಕ್ಕಿಂತ ಮುಂಚಿತವಾಗಿ, ಒಂದು ಪತ್ರಿಕೆಯನ್ನು ನುಂಗ ಬೇಕಾಯಿತು. ಯಾೞಪಾನನು ಈ ಸುರಳಿಯನ್ನು ತಾನು ಪಾಂದಿದ ಆಜ್ಞೆಯ ಪ್ರಕಾರ ಶಿಂದನು. ಒಂದು ಗ್ರಂಥವನ್ನು ಓದಿ ಅದರ ಅಭಿಪ್ರಾಯವನ್ನು ಪೂರ್ಣವಾಗಿ ಗ್ರಪಿಸಿ ಕಾಳ್ಳುವದು ಆಪುಕಾರವನ್ನು ತೆಗದು ಕಾಂಡು, ಉದರದಲ್ಲಿ ಜೀರ್ಣಿಸುವ ಕಾರ್ಯಕ್ಕೆ ಸಾದೃಶ್ಯವಾಗಿದೆ.

೧೦. ದೂತನು ಮೊದಲು ಕಪಿಯಾದ ರುಚಿಯನ್ನು, ಯಾೞಪಾನನು ಮೊದಲು ಶಿಂಯಾದದ್ದನ್ನು ಪೇಳುತ್ತಾನೆ. ಯಾೞಪಾನನ ಬಾಯಿಗೆ ಮೊದಲು ಶಿಳಿದ ಶಿಂಯಾದ ರುಚಿಯು, ಬಳಿಕ ಕಪಿಯಾದ ರುಚಿ ಬಂದಾಗ್ಯೂ, ಕಡೆಯಲ್ಲಿ ಬರುವ ಶಿಂಯಾದ ರುಚಿಗೆ ಸಂಚಕಾರವಾಗಿತ್ತು. ಈ ಪ್ರವಾದನೆಯು ಶ್ರಮಸೂಚಕವಾದಾಗ್ಯೂ ಸುವಾರ್ತಾಪ್ರಾಯವಾಗಿದೆ.

ಬ) ಇಬ್ಬರು ಸಾಕ್ಷಿಗಳು. ಸ. ೧೧, ೧—೧೪.

೧. ಆಗ ನನಗೆ ಕ್ಯೂಲಿಗೆ ಸಮಾನವಾದ ಬೆತ್ತವು ಕಾಡಲ್ಪಟ್ಟಿತು; ಮತ್ತು, ಹೋಳಿದ್ದೀನಂದರೆ, ಎದ್ದು, ದೇವರ ಮಂದಿರವನ್ನೂ, ಬಲಿಪೀಠವನ್ನೂ, ಅದರಲ್ಲಿ ಆರಾಧಿಸುವವರನ್ನೂ ೧), ಅಳತೆ ಮಾಡು. ೨. ಮತ್ತು ಮಂದಿರದ ಹೌರಗಿರುವ ಅಂಗಳವನ್ನು ಅಳತೆ ಮಾಡದೆ, ಬಿಟ್ಟು ಬಿಡು; ಯಾಕಂದರೆ ಅದು ಜನಾಂಗಗಳಿಗೆ ಕಾಡಲ್ಪಟ್ಟಿದೆ; ಅವರು ನಾಲ್ಕು ತ್ತೈರಡು ತಿಂಗಳು ೨) ಪರಿಶುದ್ಧ ಪಟ್ಟಣವನ್ನು ತುಳಿಯುವರು. ೩. ಆಗ ನನ್ನ ೞಬ್ಬರು ಸಾಕ್ಷಿಗಳಿಗೆ, ಗೞೀ ವಸ್ತ್ರಗಳನ್ನು ಹಾಕಿ ಕಾಂಡು, ಸಾವಿರದ ೞನ್ನೂರ ಅರವತ್ತು ದಿನ ಪ್ರವಾದಿಸ ಕಾಡುವೆನು. ೪. ಭೂಮಿಯ ದೇವರ ಮುಂದೆ ನಿಂತಿರುವ ೩) ಎರಡು ೞಪ್ಪೋ ಮರಗಳೂ, ಎರಡು ದೀಪಗಳೂ, ೞವರೇ. ೫. ಯಾರಾದರೂ ಅವರಿಗೆ ಕೇಡು ಮಾಡ ಬೇಕೆಂದಿದ್ದರೆ, ಅವರ ಬಾಯಿಯಾಳಗಿಂದ ಬೆಂ

ಕಿಯು ಹೌರಟು, ಅವರ ಶತ್ರುಗಳನ್ನು ಕಿಂದು ಬಿಡುವದು. ಯಾರಾದರೂ ಅವರಿಗೆ ಕೇಡು ಮಾಡ ಬೇಕೆಂದಿದ್ದರೆ, ಅವನು ಹೀಗೆಯೇ ಕೊಲ್ಲಲ್ಪಡ ಬೇಕು. ೬. ಇವರಿಗೆ, ತಮ್ಮ ಪ್ರವಾದನೆಯ ದಿವಸಗಳಲ್ಲಿ ಮಳೆ ಸುರಿಯದ ಹಾಗೆ, ಆಕಾಶವನು ಮುಚ್ಚುವದಕ್ಕೆ ಅಧಿಕಾರ ಉಂಟು; ನೀರುಗಳನ್ನು ರಕ್ತ ಮಾಡುವದಕ್ಕೂ, ಅವರಿಗೆ ಮನಸ್ಸು ಬಂದಷ್ಟು ಸಾರಿ ಭೂಮಿಯನ್ನು ಸಕಲ ಬಾಧೆಗಳಿಂದ ಬಡಿಯುವದಕ್ಕೂ, ಅಧಿಕಾರ ಉಂಟು. ೭. ಮತ್ತು ತಮ್ಮ ಸಾಕ್ಷಿಯನ್ನು ಮುಗಿಸಿದಾಗ ಳ), ಅಗಾಧದಾಳಗಿಂದ ಏರಿ ಬರುವ ಮೃಗವು ಅವರ ಸಂಗಡ ಯುದ್ಧ ಮಾಡಿ, ಅವರನ್ನು ಜಯಿಸಿ, ಅವರನ್ನು ಕೊಲ್ಲುವದು ಶ). ೮. ಮತ್ತು ಅವರ ಹೆಣಗಳು ಆತ್ಮಾರ್ಥವಾಗಿ ಸೊದಾಮ್ಯಾಮೂ, ಐಗುಪ್ತವೂ ಎಂದು ಕರೆಯಲ್ಪಟ್ಟ ಮಹಾ ಪಟ್ಟಣದ ಬೀದಿಯಲ್ಲಿ, ನಮ್ಮ ಕರ್ತನು ಶಿಲುಬೆಗೆ ಹಾಕಲ್ಪಟ್ಟಲ್ಲಿಯೇ ಷ), ಇರುವವು. ೯. ಮತ್ತು ಪ್ರಜೆ, ಕುಲ, ಭಾಷೆ, ಜನಾಂಗಗಳಲ್ಲಿ ಇರುವವರು ಅವರ ಹೆಣಗಳನ್ನು ಮೂರು ವರೆ ದಿವಸ ನೋಡುವರು ಸ); ಮತ್ತು ಅವರ ಹೆಣಗಳನ್ನು ಸಮಾಧಿಯಲ್ಲಿ ಇಡ ಗೊಡಿಸರು ಹ). ೧೦. ಈ ಇಬ್ಬರು ಪ್ರವಾದಿಗಳು ಭೂಮಿಯ ಮೇಲೆ ವಾಸ ಮಾಡುವವರನ್ನು ಕ) ಪೀಡಿಸಿದ್ದರಿಂದ, ಭೂಮಿಯ ಮೇಲೆ ವಾಸ ಮಾಡುವವರು ಅವರ ಮೇಲೆ ಸಂತೋಷಿಸಿ, ಆನಂದ ಪಟ್ಟು, ಒಬ್ಬರಿಗೊಬ್ಬರು ಉಡುಗೊರೆಗಳನ್ನು ಕಳುಹಿಸುವರು. ೧೧. ಮತ್ತು ಆ ಮೂರು ವರೆ ದಿವಸಗಳ ತರುವಾಯ ದೇವರಿಂದ ಜೀವದ ಆತ್ಮವು ಅವರಾಳಗೆ ಬಂತು; ಮತ್ತು ಅವರು ಕಾಲೂರಿ ನಿಂತರು. ಆಗ ಅವರನ್ನು ನೋಡುವವರ ಮೇಲೆ ಮಹಾ ಭಯವು ಬಿತ್ತು. ೧೨. ಮತ್ತು, ಇಲ್ಲಿಗೆ ಏರಿ ಬನ್ನಿರಿ, ಎಂದು ತಮಗೆ ಹೇಳುವ, ಪರಲೋಕದಿಂದಾದ, ಮಹಾ ಶಬ್ದವನ್ನು ಕೇಳಿ, ಮೇಘದಲ್ಲಿ ಪರಲೋಕಕ್ಕೆ ಏರಿ ಹೋದರು. ೧೩. ಮತ್ತು ಅವರ ಶತ್ರುಗಳು ಅವರನ್ನು ನೋಡಿದರು. ಅದೇ ಕಾಲಿನಲ್ಲಿ ಮಹಾ ಭೂಕಂಪ ಉಂಟಾಗಿ, ಪಟ್ಟಣದ ಹತ್ತನೇ ಪಾಲು ಬಿದ್ದು, ಭೂಕಂಪದಿಂದ ಏಳು ಸಾವಿರ ಮಂದಿ ಕೊಲ್ಲಲ್ಪಟ್ಟರು; ಮಿಕ್ಕಾದವರು ಭಯಸ್ಥರಾಗಿ, ಪರಲೋಕದ ದೇವರಿಗೆ ಮಹಿಮೆಯನ್ನು ಕೊಟ್ಟರು. ೧೪. ಎರಡನೇ ಅಯ್ಯೋ ಆಗಿ ಹೋಯಿತು; ಇಗೋ, ಮೂರನೆ ಅಯ್ಯೋ ಬೇಗ ಬರುತ್ತದೆ ೧೦).

೧. ಇಲ್ಲಿ ಉದಾಹರಿಸುವ ಕಾರ್ಯಗಳು ನಡೆಯುವ ಸ್ಥಳವು ಯೆರೂಸಲೇಮೆಂಬ ಪರಿಶುದ್ಧ ಸ್ಥಳವಾಗಿದೆ. ಅದು ನೂತನ ಯೆರೂಸಲೇಮಲ್ಲ; ಯಾಕಂದರೆ ಪರಜನರು ಇದನ್ನು ತುಳಿದು ಬಿಡುವರೆಂದು, ನೆನಸ ಕೆಲಸವಿಲ್ಲ. ಅದು ಸರ್ವಕ್ರೈಸ್ತಸಭೆಯನ್ನು ಸೂಚಿಸುವದಿಲ್ಲ; ಯಾಕಂದರೆ ಈ ಪ್ರವಾದನೆಯಲ್ಲಿ ಬರುವ ಪ್ರಕಾರವುಳ್ಳ ಒಂದು ದೇವಾಲಯವೂ ಬೀದಿಗಳುಳ್ಳ ಪಟ್ಟಣವೂ ಕಾಣಿಸಿ ಕಾಳ್ಳುತ್ತವೆ. ಇದಲ್ಲದೆ

ಪ್ರಕ. ೧೧.

ಕರ್ತನು ಕ್ರೂಜಿತನಾದ ಪಟ್ಟಣವೆಂಬ ಲಕ್ಷಣವು, ಆ ಗ್ಯಾಗೈ ಪುಸ್ತಾಳಾದ ಮೇಲೆ, ಮೊದಲಿನ ಸ್ಥಳದಲ್ಲಿ ಶಿರಿಗಿ ಶಿರಿಗಿ ಕಟ್ಟಿಸಲ್ಪಟ್ಟ, ಚೌಮಿಕವಾದ ಯೆರೂಸಲೇಮಿಗೆ ಒಪ್ಪುತ್ತದೆ. ಈ ಪಟ್ಟಣದಲ್ಲಿ ಇರುವ ದೇವಾಲಯವನ್ನು ಅಳೆಯ ಬೇಕೆಂದು ಯೋಪುನಾನನಿಗೆ ಅಪ್ಪಣೆಯಾಗುತ್ತದೆ. ಅದು ಎಜೆಕಿಯೇಲನು ೪೦—೪೮ನೆ ಸಂಧಿಯ ಪರ್ಯಂತ ಪ್ರವಾದಿಸಿದ ದೇವಾಲಯವೆಂದು, ತಾರುತ್ತದೆ. ಯಾಕಂದರೆ: ಎಜೆಕಿಯೇಲನ ಪ್ರವಾದನೆಯು, ಅತ್ಯಂತ ಮಹಿಮೆಯುಳ್ಳದ್ದಾಗಿದ್ದು, ಬಬುಲಾನ ಬಹಿರ್ಗಮನದ ಬಳಿಕ ಪುನಸ್ಥಾಪಿತವಾದ ದೇವಾಲಯದಲ್ಲಿ ನೆರವೇರಲಿಲ್ಲವಾದದರಿಂದ, ಅದರ ಸಂಪೂರ್ತಿಯು ಇಸ್ರಯೇಲರ ಸಂಪರ್ತನಕ್ಕೆ ಸಂಬಂಧವಾಗಿದ್ದು, ಇನ್ನೂ ಜವಿಷ್ಯತ್ಕಾರ್ಯವಾಗಿದೆ. ಅದರ ವಿಷಯವಾಗಿ ಬೆಂಗಲ್ ಬರೆಯುವದೇನಂದರೆ: "ಇಲ್ಲಿ ಸೂಚಿತವಾದ ನೂತನ ದೇವಸ್ಥಾನವು ಲೇವಿಯವರಾದ ಯಾಜಕರು ಪೂಜೆ ಮಾಡುವ ಗತಭ್ಯಾಯಾಪ್ರಾಯವಾದ ಗುಪಿ ಎಂದು ಜಾವಿಸಿ ಕಾಳ್ಳುವದೂ, ಅದು ದೃಷ್ಟಾಂತ ಮಾತ್ರವೆಂದು ತಿಳಿದು ಕಾಳ್ಳುವದೂ, ಅನುಚಿತವಾಗಿದೆ. ಎಜೆಕಿಯೇಲನು ವಿವರಿಸಿದ ದೇವಾಲಯವನ್ನೂ, ಸಮಾನವಾದ ಬೇರೆ ಪ್ರವಾದನೆಗಳನ್ನೂ (ಕೀರ್ತ. ೫೧, ೨೧. ಯೆಶಾ. ೬೬, ೨೧. ೨೩. ಪುಸ್ತಾಶೆ. ೩, ೪. ಮಲೆ. ೧, ೧೧ ಇತ್ಯಾದಿ) ಪುಸ್ತಾಸ ಒಡಂಬಡಿಕೆಯ ಬಾಧನೆಗೆ, ವಿಶೇಷವಾಗಿ ಇಬ್ರಿಯರ ಪತ್ರಿಕೆಯ ಅಜಿಪ್ರಾಯಕ್ಕೆ, ಅನುಸಾರವಾದ ರೀತಿಯಿಂದ ವ್ಯಾಖ್ಯಾನಿಸ ಬೇಕು. ಆದರೆ ಅತಿ ಸ್ಪಷ್ಟವಾಗಿ ಬರದಿರುವ ಮರ್ಮಾಜಿಪ್ರಾಯವುಳ್ಳ ವರ್ಣನೆಯನ್ನು ಗಳ್ಳದ್ವಾಖ್ಯಾನದಿಂದ ಸುಲಭವಾಗಿ ವಿವರಿಸ ಬಹುದೆಂಬು, ನೆನಸ ಬಾರದು. ನಿರ್ಮಲವಾದ ನಿಜಾರ್ಥವು ಪರಿಶುದ್ಧರಿಗೆ ತಕ್ಕ ಕಾಲದಲ್ಲಿ ದಾರಕೀತು."

೨. ಲೂಕ. ೨೧, ೨೪ರಲ್ಲಿ ಪರಜನರು ಯೆರೂಸಲೇಮನ್ನು ತುಳಿದು ಬಿಡುವರೆಂಬ ವಾಕ್ಯವು ಬರದದೆ. ಈ ವಾಕ್ಯದ ಪೂರ್ತಿಯು ರಾಮಿಯಾರು ಪಟ್ಟಣವನ್ನು ಪುಸ್ತಾಳು ಮಾಡಿದ ಕಾಲದಿಂದ ತಾಡಗಿ, ಅನೇಕ ಶತಮಾನಗಳ ಪರ್ಯಂತ ನಡೆಯುತ್ತಾ ಇತ್ತು. ಮೇಲೆ ಸೂಚಿತವಾದ ದೇವಾಲಯವು ಯೆರೂಸಲೇಮಿನಲ್ಲಿರುವ ಕಾಲದಲ್ಲಿ ಪರಜನರು ಪರಿಶುದ್ಧ ಸ್ಥಳವನ್ನು ಮೂರುವರೆ ವರುಷದ ಪರ್ಯಂತ ತುಳಿದು ಬಿಡುವರೆಂದು ಇಲ್ಲಿ ಪೇಳಿರುತ್ತದೆ. ಇಬ್ಬರು ಸಾಕ್ಷಿಗಳು ತಮ್ಮ ಪಕ್ಷದವರ ಸಂಗಡ ಮೂರುವರೆ ವರುಷ ಅಂತರ್ದೇವಾಲಯದಲ್ಲಿದ್ದು, ಪ್ರಶಿಕ್ಷೆಸ್ತರೆಸ್ಪೈನ್ಯದ ಸಂಗಡ ಯುದ್ಧ ಮಾಡುವರೆಂದು, ಕಾಣುತ್ತದೆ.

೩. ಸಕರ್ಯನ ಳನೆ ಸಂಧಿಯಲ್ಲಿಯೂ ಸೂಚಿತವಾದ ಈ ಸಾಕ್ಷಿಗಳಿಬ್ಬರ ಒಡೆಯನು ಯೇಸು ಕ್ರಿಸ್ತನೇ. ಸುಶೀಲರಾದ ಈ ಸಾಕ್ಷಿಗಳು ಅಸಾಧುವಾದ ಸಮೂಹದವರಿಗೆ ವಿರೋಧವಾಗಿ ಯೇಸು ಕ್ರಿಸ್ತನ ಸಾಕ್ಷಿಯನ್ನು, ಪರಜನರು ಯೆರೂಸಲೇಮನ್ನು ತುಳಿದು ಬಿಡುವ ಕಾಲದಲ್ಲಿ, ಪರಾಕ್ರಮದಿಂದ ನಡಿಸಿ ಕೈಕಾಳ್ಳುವರು. ಮಾನಸಾಂತರದ ಪ್ರಸಂಗಿಗಳಾಗಿಯೂ, ಪರಿಶುದ್ಧ ಪಟ್ಟಣವು ಪರಜನರಿಂದ ತುಳಿಯಲ್ಪಡುವ ನಿಮಿತ್ತವಾಗಿ ಶೋಕ ಗೈಯ್ಯುವವರಾಗಿಯೂ, ಗೋಣೀತಟ್ಟನ್ನು ಉಟ್ಟುಕಾಳ್ಳುತ್ತಾರೆ. ಪರಿಶುದ್ಧಾತ್ಮವೆಂಬ ಎಣ್ಣೆಯು ಅವರಲ್ಲಿ ಯಾವಾಗಲೂ ಬಹಳವಾಗಿ ಇರುವದರಿಂದ, ಅವರಿಗೆ ಇಪ್ಪೆ ಮರಗಳೆಂಬ ಪೆಸರಿದೆ. ಅವರು ಸುತ್ತಲು ಪ್ರಕಾಶವನ್ನುಂಟು ಮಾಡುವದರಿಂದ, ಅವರಿಗೆ ದೀಪಸ್ತಂಭಗಳೆಂಬ ಪೆಸರಿದೆ. ಸೆರುಬಾಬೆಲನೂ, ಯೋಶುವನೂ, ಸಕರ್ಯನೂ, ಪುಗ್ಗಾಯೂ ತಮ್ಮ ತಮ್ಮ ಕಾಲದಲ್ಲಿದ್ದ ಪ್ರಕಾರ ಇವರು ಕಡೇ ಕಾಲದಲ್ಲಿ ವಿಶೇಷ ದೇವಸಾಕ್ಷಿಗಳಾಗಿರುವದಲ್ಲದೆ ಮೋಶೆ ಎಲೀಯರ ಅದ್ಭುತ ಶಕ್ತಿಯುಳ್ಳ ಪ್ರವಾದಿಗಳಾಗಿದ್ದು ಅದ್ಭುತ ರೀತಿಯಿಂದ ತಮ್ಮ ಉದ್ಯೋಗವನ್ನು ನಡಿಸುತ್ತಾರೆ. ವ. ೫. ೬. ೧೦. ಪುಳೆ ಒಡಂಬಡಿಕೆಯ ಪ್ರವಾದಿಗಳಾದ ಪುಗ್ಗಾಯಿ ಸಕರ್ಯ ಮಲೆಯಕಿಯರು ಅತಿ ಸ್ಪಷ್ಟವಾಗಿ ಸೂಚಿಸಿದ ಇಬ್ಬರು ಸಾಕ್ಷಿಗಳು ಯಾರೆಂದು, ಬುದ್ಧಿಶಾಲಿಯಾದ ವಿದ್ಯಾರ್ಥಿಯು ತಾನೇ, ಸುಲಭವಾಗಿ ತಿಳಿದು ಕಾಳ್ಳ ಬಹುದು.

೪. ಕರ್ತನ ಸಾಕ್ಷಿಗಳು ತಮ್ಮ ಸಾಕ್ಷಿಯನ್ನು ಪೂರೈಸುವದಕ್ಕಿಂತ ಮುಂಚಿತವಾಗಿಯೇ ಅಗಾಧಜನ್ಯ

ಮೃಗವು ಅವರಿಗೆ ವಿರೋಧವಾಗಿ ಏನೂ ನಡಿಸಲಾರದು. ದೇವರು ಯಾವಾಗಲೂ ತಡೆಗಳನ್ನು ತಡಿಸುತ್ತಾ ತನ್ನ ರಾಜಕಾರ್ಯವನ್ನು ನಡಿಸುತ್ತಾನೆ. ಆತನು ಯಾವಾಗಲೂ ಕೇಡಿಗೆ ಮಿತಿ ಮಾಡುತ್ತಾನೆ; ದೇವರು ನೇಮಕ ಮಾಡಿದ ಕಾಲಕ್ಕೆ ಮುಂಚೆ ಅದು ಹುಟ್ಟಲಾರದೆ, ದೇವರು ನೇಮಿಸಿದ ಮಿತಿಯನ್ನೂ, ಕಾಲವನ್ನೂ ಅತಿಕ್ರಮಿಸ ಕೂಡದು.

೫. ಅಗಾಧಜನ್ಯಮೃಗವು ೧೩ನೆ ೧೭ನೆ ಸಂಧಿಗಳಲ್ಲಿ ಮಾತ್ರ ಬಲವಾಗಿ ಬರುತ್ತದೆ. ಅದೇ ಕಾಲದಲ್ಲಿ ಇಬ್ಬರು ಸಾಕ್ಷಿಗಳ ಮರಣವು ಸಂಭವಿಸುತ್ತದೆ. ಸಹಾಪಿತನಾದ ತೆರ್ತುಲ್ಲಿಯಾನನು ಮುಂತಾದ ಪೂರ್ವಕಾಲದ ಕ್ರೈಸ್ತರು ಈ ಮೃಗವು ಪ್ರತಿಕ್ರಿಸ್ತನೆಂದು ಹೇಳಿದರು.

೬. ಕರ್ತನು ಕ್ರೂಜಿತನಾದ ಯೆರೂಸಲೇಮೆಂಬ ಪಟ್ಟಣದಲ್ಲಿ ಈ ಸಾಕ್ಷಿಗಳು ಬರುತ್ತಾರೆ. ಈ ಪಟ್ಟಣವು ಅಸಹ್ಯವಾದ ಪಾಪಾಚರಣೆಗಳಿಂದ ಸಾದಾ ಮವನ್ನು, ಹುಸಿಯಿಂದಲೂ, ದುರ್ವಿಶ್ವಾಸದಿಂದಲೂ, ದೇವಜನಾಂಗದ ವೈರ ಹಿಂಸೆಗಳಿಂದಲೂ ಮಿಶ್ರವನ್ನು ಹುಟ್ಟಾಲುತ್ತದೆ.

೭. ಯೆರೂಸಲೇಮು ಇಂದಿನ ವರೆಗೂ ಸರ್ವ ಜನಾಂಗಮಿಶ್ರಸ್ಥಾನವಾಗಿದ್ದು, ಲೌಕಾಂತ್ಯಕ್ಕಿಂತ ಮುಂಚಿತವಾಗಿ ಬಹಳ ಭೇದವಾದರೂ, ಅಂತ್ಯದ ವರೆಗೂ ಲೌಕಮಿಶ್ರಸ್ಥಳವಾಗಿದ್ದೀತೆಂದು, ನೆನಸುತ್ತೇವೆ.

೮. ಇಬ್ಬರು ಸಾಕ್ಷಿಗಳ ಕಾಲದಲ್ಲಿ ಅವರಿಗೆ ಸಮಾಧಿ ಮಾಡುವದಕ್ಕೆ ಮನಸ್ಸುಳ್ಳವರು ಅನೇಕರು ಇದ್ದಾಗ್ಯೂ, ಅವರಿಗೆ ಅಪ್ಪಣೆಯಾಗುವದಿಲ್ಲ.

೯. ಲೌಕಕ್ಕೆ ಕಣ್ಣಿಲ್ಲ. ದುಃಖ ವ್ಯಥೆಯಾದಿಗಳು ಸಮೀಪವಾದ ವೇಳೆಯಲ್ಲಿ ಅದು ಸುಖಸ್ವಪ್ನವನ್ನು ನಾಡುತ್ತದೆ. ಸತ್ಯವು ನಾಶವಾಯಿತೆಂದು ಲೌಕವು ನೆನಸುವ ಕಾಲದಲ್ಲಿ ಅದರ ಜಯೋತ್ಸವವು ಸಮೀಪವಾಗಿದೆ.

೧೦. ಈ ವಚನದಲ್ಲಿ ಸ. ೯, ೨೦ಲ್ಲಿ ಕತ್ತರಿಸಿದ ತಾತ್ಪರ್ಯದ ಪ್ರಸ್ತಾಪವು ತಿರಿಗಿ ತಾಡಗುತ್ತದೆ.

d. ಏಳನೆ ತುತೂರಿಯು.

ಪ್ರತಿಕ್ರಿಸ್ತನ ಅಪಜಯದಿಂದ ಮುಗಿಯುವ ಮೂರನೆ ಅಯ್ಯೋ ಎಂಬದನ್ನು ಪ್ರಕಟಿಸುತ್ತದೆ. ಬಳಿಕ ಸಹಸ್ರವರುಷರಾಜ್ಯವೂ ಸೈತಾನನ ನ್ಯಾಯನಿರ್ಣಯವೂ ಸರ್ವಲೋಕನ್ಯಾಯನಿರ್ಣಯವೂ ಬರುತ್ತವೆ. ಈ ಪ್ರಕಾರವಾಗಿ ಸಭೆಯು ಯುದ್ಧದಿಂದ ದೈವಿಕ ಜಯೋತ್ಸವದಲ್ಲಿ ಶೇರುತ್ತದೆ.

a. ಉಪಕ್ರಮೋಕ್ತಿಯು. ವ. ೧೫—೧೯.

೧೫. ಏಳನೇ ದೂತನು ಊದಲಾಗಿ ೧), ಪರಲೌಕ್ಯದಲ್ಲಿ ಮಹಾ ಶಬ್ದಗಳು ಉಂಟಾಗಿ ಹೇಳಿದ್ದೇನಂದರೆ ೨), ಲೌಕ್ಯದ ರಾಜ್ಯಗಳು ನಮ್ಮ ಕರ್ತನಿಗೂ ಅವನ ಕ್ರಿಸ್ತನಿಗೂ ಉಂಟಾದವು; ಅವನು ಯುಗ ಯುಗಾಂತರಗಳ ವರೆಗೂ ಆಳುವನು. ೧೬. ಆಗ ದೇವರ ಮುಂದೆ ತಮ್ಮ ಸಿಂಹಾಸನಗಳ ಮೇಲೆ ಕೂತು ಕೊಂಡಿರುವ ಇಪ್ಪತ್ತ ನಾಲ್ಕು ಹಿರಿಯರು ಅಡ್ಡ ಬಿದ್ದು ೩) ದೇವರಿಗೆ ನಮಸ್ಕರಿಸಿ, ೧೭. ಹೇಳಿದ್ದೇನಂದರೆ, ಇದ್ದವನೂ ಇರುವವನೂ ಬರುವವನೂ ಆಗಿರುವ ಸರ್ವಶಕ್ತನಾದ ದೇವರಾಗಿರುವ ಕರ್ತನೇ, ನಿನಗೆ ಸ್ತೋತ್ರ ಮಾಡುತ್ತೇವೆ; ಯಾಕಂದರೆ ನೀನು ನಿನ್ನ ಮಹಾ ಬಲವನ್ನು ಕೈಗೆದು ಕೊಂಡು, ಆಳಿ ಕೊಂಡಿದ್ದೀ. ೧೮. ಜನಾಂಗಗಳು

ಪ್ರಕ. ೧೧, ೧೯—೧೨, ೨.

ಕ್ಕೋಪಿಸಿ ಕಾಂಡವು ೪); ಮತ್ತು ನಿನ್ನ ಕ್ಕೋಪವು,—ಸತ್ತವರಿಗೆ ನ್ಯಾಯ ತೀರಿಸುವ ದಕ್ಕೂ, ನಿನ್ನ ದಾಸರಾದ ಪ್ರವಾದಿಗಳಿಗೂ ಪರಿಶುದ್ಧರಿಗೂ ನಿನ್ನ ಹೆಸರಿಗೆ ಭಯ ಪಡುವ ಹಿರಿ ಕಿರಿಯರಿಗೂ ೫) ಪ್ರತಿಫಲವನ್ನು ಕೊಡುವದಕ್ಕೂ, ಭೂಮಿ ಕೆಡಿಸುವ ವರನ್ನು ೬) ಕೆಡಿಸುವದಕ್ಕೂ, ಸಮಯವು—ಬಂದವೆ. ೧೯. ಮತ್ತು ಪರಲೋಕದ ಲ್ಲಿ ದೇವರ ಮಂದಿರವು ತೆರೆಯಲ್ಪಟ್ಟು, ಅವನ ಒಡಂಬಡಿಕೆಯ ಪೆಟ್ಟಿಗೆಯು ೭) ಅವನ ಮಂದಿರದಲ್ಲಿ ಕಾಣಿಸಿತು. ಮತ್ತು ಮಿಂಚುಗಳೂ, ಶಬ್ದಗಳೂ, ಗುಡುಗುಗ ಳೂ, ಭೂಕಂಪವು, ದೊಡ್ಡ ಕಲ್ಮಳೆಯೂ, ಉಂಟಾದವು.

೧. ಏಳನೆ ತುತೂರಿಯು ಮುಖ್ಯವಾದದ್ದು. ಮೇ ಲಿನ ಯಥೋಕ್ತವು ಅದರ ಸಾರಾಂಶವನ್ನು ಕ್ಷಪ್ತ ವಾಗಿ ಸೂಚಿಸುತ್ತದೆ.

೨. ದೇವರಾಜ್ಯವು ಬಲವಾಗಿ ಬರುವದನ್ನು ನಾಡುವ ದಿವಿಜರು ಅತ್ಯಂತ ಸಂತೋಷ ಪಡುತ್ತಾರೆ.

೩. ಇಲ್ಲಿ ಹಿರಿಯರು ಮೊಣಕಾಲೂರದೆ, ಅಡ್ಡ ಬೀಳುತ್ತಾರೆ; ಏಕಂದರೆ: ಅತ್ಯಂತ ಕೃತಜ್ಞತೆಯುಳ್ಳವ ರು ದೇವರ ಮುಂದೆ ತಮ್ಮನ್ನು ಅಧೋಧವಾಗಿ ತಗ್ಗಿ ಸಿ ಕಾಳ್ಳುತ್ತಾರೆ. ದೇವಮಹಿಮೆಯು ಮಹತ್ತಾ ಪ್ರ ಸಿದ್ಧವಾಗಿರುವಲ್ಲಿ ನಿರ್ಮಾಣಿಗಳ ನ್ಯೂನತೆಯು ಪೂ ರ್ಣವಾಗಿ ಪ್ರಸಿದ್ಧವಾಗುವದು.

೪. ದೇವವೈರಕೋಪವು ವಿಗ್ರಹಾರಾಧಿತರಾದ ಪರಜನರಲ್ಲಿ ಮಾತ್ರವಲ್ಲ, ಪರಜನಮಂಶದವರಾಗಿ ಹುಟ್ಟಿದ ಕ್ರೈಸ್ತರಲ್ಲಿಯೂ ಕಾಣುತ್ತದೆ.

೫. ಇಲ್ಲಿ ದೇವರ ಆಳುಗಳ ಮೂರು ವಿಧವು ಹೇಳಿಯದೆ: ೧) ದೇವರ ವಾಕ್ಯವನ್ನು ಮನುಷ್ಯರಿಗೆ ಪ್ರಕಟ ಮಾಡುವ ವೃತ್ತಿಯಲ್ಲಿ ಹೆಚ್ಚು ಮಂದಿಯಾ ಗಿ ಸತ್ಯ ಪ್ರವಾದಿಗಳು; ೨) ದೇವರ ವಾಕ್ಯವನ್ನು ಪ್ರ ಸಂಗಿಸದೆ ಇದ್ದಾಗ್ಯೂ, ದೇವರ ಚಿತ್ತಕ್ಕೆ ಪೂರ್ಣ ಅ ಧೀನರಾಗಿದ್ದ ಪರಿಶುದ್ಧರು. ಈ ಉಭಯತ್ರರಿಗೆ ದೇ ವಸೇವಕರೆಂಬ ಮಹಿಮೆಯುಳ್ಳ ಹೆಸರು ವಿಶೇಷ ವಾಗಿ ಬರುತ್ತದೆ. ೩) ಆತನ ಹೆಸರಿಗೆ ಭಯ ಪಡು ವವರೆಂಬವರು ಕೀಳರಾಗಿದ್ದರೂ, ಅವರು ಸಹ ದೇ ವಸೇವಕರೆಂಬ ಹೆಸರನ್ನು ಪೊಂದುತ್ತಾರೆ. ಹಿರಿ ಕಿರಿಯರು ಎಂಬದಕ್ಕೆ ಬಾಲ ವೃದ್ಧರೂ, ನ್ಯೂನಾಧಿಕ ರೂ ಎಂಬ ಎರಡು ಅಭಿಪ್ರಾಯವದೆ.

೬. ಭೂಮಿಯನ್ನು ಕೆಡಿಸುವ ಬಗ್ಗೆ ಲೌಕಿಕ ಜನ ರು ಎಷ್ಟೋ ಯುಕ್ತಿ ಚಮತ್ಕಾರ ಕಪಟಿಗಳನ್ನು ನಡಿ ಸುತ್ತಾರೆ!

೭. ಒಡಂಬಡಿಕೆಯ ಪೆಟ್ಟಿಗೆಯ ದರ್ಶನವು, ದೇವ ರು ತನ್ನ ಒಡಂಬಡಿಕೆಯ ಜನಾಂಗಕ್ಕೆ ಮಾಡಿದ ವಾ ಗ್ದತ್ತಗಳನ್ನು ಶತ್ರುಗಳ ಭಯ ನಾಶನಗಳಿಗಾಗಿಯೂ, ಭಕ್ತರ ರಕ್ಷಣೋನಂದಗಳಿಗಾಗಿಯೂ, ನೆರವೇರಿಸುವ ದನ್ನು ಸೂಚಿಸುತ್ತದೆ.

b. ದರ್ಶನಗಳು.

aa. ಸೂರ್ಯಾನ್ವಿತ ಸ್ತ್ರೀ, ಘಟಸರ್ಪ. ಸ. ೧೨.

೧. ಆಗ ಪರಲೋಕದಲ್ಲಿ ದೊಡ್ಡ ಗುರುತು ಕಾಣಿಸಿತು ೧), ಏನಂದರೆ—ಸೂರ್ಯ ನನ್ನು ಹೊದ್ದು ಕೊಂಡಿರುವ ಸ್ತ್ರೀಯು. ಅವಳ ಪಾದಗಳ ಕೆಳಗೆ ಚಂದ್ರನು; ಅವಳ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳ ಕಿರೀಟವು ೨). ೨. ಅವಳು ಗರ್ಭಿಣಿಯಾಗಿ,

ಮೇದನೆ ಪಟ್ಟು, ಹೆರುವ ನೌಮಿನಲ್ಲಿ ಇರುವವಳಾಗಿ ೩), ಕೂಗಿದಳು. ೪. ಮತ್ತು ಬೇರೆ ಗುರುತು ಪರಲೌಕದಲ್ಲಿ ಕಾಣಿಸಿತು. ಇಗೋ, ಬೆಳು ತಲೆಗಳೂ, ಹತ್ತು ಕೊಂಬುಗಳೂ, ಅದರ ತಲೆಗಳ ಮೇಲೆ ಬೆಳು ಕಿರೀಟಗಳೂ, ಉಳ್ಳ ಕೆಂಪಾದ ದೊಡ್ಡ ಗಡಸರ್ಪವು ೪); ೪. ಅದರ ಬಾಲವು ಆಕಾಶದ ನಕ್ಷತ್ರಗಳಲ್ಲಿ ಮೂರನೇ ಭಾಗವನ್ನು ಎಳ ಕೊಂಡು, ಭೂಮಿಗೆ ಹಾಕಿತು. ಆ ಗಡಸರ್ಪವು, ಹೆರುವದಕ್ಕೆ ಇರುವ ಸ್ತ್ರೀಯ ಮುಂದೆ, ಹೆತ್ತಾಗಲೇ ಅವಳ ಕೂಸನ್ನು ತಿಂದು ಬಿಡ ಬೇಕೆಂದು, ನಿಂತು ಕೊಂಡಿತು. ೫. ಆಗ ಅವಳು ಜನಾಂಗಗಳಿಂನೆಲ್ಲಾ ಕಬ್ಬಿಣದ ಕೋಲಿನಿಂದ ಆಳು ವದಕ್ಕಿರುವ ಗಂಡು ಮಗುವನ್ನು ಹೆತ್ತಳು; ಮತ್ತು ಅವಳ ಕೂಸು ದೇವರ ಬಳಿಗೂ ಅವನ ಸಿಂಹಾಸನದ ಬಳಿಗೂ ಫಕ್ಕನೆ ಎತ್ತಲ್ಪಟ್ಟಿತು. ೬. ಮತ್ತು ಆ ಸ್ತ್ರೀಯು ಅರಣ್ಯಕ್ಕೆ ಓಡಿ ಹೋದಳು. ಅಲ್ಲಿ ಅವರು ಅವಳನ್ನು ಸಾವಿರದ ಇನ್ನೂರ ಅರವತ್ತು ದಿವಸ ೫) ಪೋಷಿಸುವ ಹಾಗೆ ೬), ದೇವರಿಂದ ಸಿದ್ಧ ಮಾಡಲ್ಪಟ್ಟ ಸ್ಥಳವು ಅವಳಿಗೆ ಉಂಟು. ೭. ಮತ್ತು ಪರಲೌಕದಲ್ಲಿ ಯುದ್ಧ ಉಂಟಾಗಿ ೭), ಮಿಕಯೇಲನೂ ೮) ಅವನ ದೂತರೂ ಗಡಸರ್ಪದ ಸಂಗಡ ಯುದ್ಧ ಮಾಡಿದರು. ೮. ಮತ್ತು ಗಡಸರ್ಪವೂ ಅದರ ದೂತರೂ ಯುದ್ಧ ಮಾಡಿ, ಗೆಲ್ಲಲಿಲ್ಲ; ಮತ್ತು ಪರಲೌಕದಲ್ಲಿ ಇನ್ನು ಅವರಿಗೆ ಸ್ಥಳ ಸಿಕ್ಕದೆ ಹೋಯಿತು. ೯. ಆಗ ಸಮಸ್ತ ಜಗತ್ತನ್ನು ಮೋಸ ಗೊಳಿಸುವ ಪಿಶಾಚನೂ ಸೈತಾನನೂ ಎಂಬ ಹೆಸರುಳ್ಳ, ಹಳೆ ಹಾವು ಆಗಿರುವ ದೊಡ್ಡ ಗಡಸರ್ಪವು ಹೊರಡಿಸಲ್ಪಟ್ಟು, ಭೂಮಿಗೆ ಹಾಕಲ್ಪಟ್ಟಿತು. ಮತ್ತು ಅವನ ದೂತರು ಅವನ ಸಂಗಡ ಹಾಕಲ್ಪಟ್ಟರು ೯). ೧೦. ಮತ್ತು ಪರಲೌಕದಲ್ಲಿ ದೊಡ್ಡ ಶಬ್ದವನ್ನು ಕೇಳಿದೆನು ೧೦); ಏನಂದರೆ—ಇಗ ರಕ್ಷಣೆಯೂ, ಬಲವೂ, ನಮ್ಮ ದೇವರ ರಾಜ್ಯವೂ, ಅವನ ಕ್ರಿಸ್ತನ ಅಧಿಕಾರವೂ, ಉಂಟಾದವು; ಯಾಕಂದರೆ ನಮ್ಮ ಸಹೋದರರ ಮೇಲೆ ದೇವರ ಮುಂದೆ ರಾತ್ರಿ ಹಗಲು ಚಾಡಿ ಹೇಳುವಂಥ ನಮ್ಮ ಸಹೋದರರ ಚಾಡಿಗಾರನು ಕೆಳಗೆ ಹಾಕಲ್ಪಟ್ಟಿದ್ದಾನೆ. ೧೧. ಮತ್ತು ಅವರು ಮರಣದ ಪರ್ಯಂತಕ್ಕೂ ತಮ್ಮ ಪ್ರಾಣವನ್ನು ಪ್ರೀತಿ ಮಾಡದೆ ೧೧), ಕುರಿಮರಿಯ ರಕ್ತದಿಂದಲೂ ತಮ್ಮ ಸಾಕ್ಷಿಯ ವಾಕ್ಯದಿಂದಲೂ ಅವನನ್ನು ಜಯಿಸಿದರು. ೧೨. ಆದದರಿಂದ, ಪರಲೌಕಗಳೇ, ಅವುಗಳಲ್ಲಿ ವಾಸವಾಗಿರುವವರೇ, ಆನಂದ ಪಡಿರಿ! ಭೂಮಿಯಲ್ಲಿಯೂ ಸಮುದ್ರದಲ್ಲಿಯೂ ವಾಸ ಮಾಡುವವರಿಗೆ ಅಯ್ಯೋ; ಯಾಕಂದರೆ ಪಿಶಾಚನು, ತನಗೆ ಸಮಯವು ಸ್ವಲ್ಪವೇ ಎಂದು ತಿಳಿದು, ಮಹಾ ಉಗ್ರ

(ಪ್ರಕ. ೧೨, ೧೫–೧೭.

ವುಳ್ಳವನಾಗಿ, ನಿಮ್ಮ ಬಳಿಗೆ ಇಳಿದು ಬಂದಿದ್ದಾನೆ. ೧೫. ಮತ್ತು ಗಡಸರ್ಪವು ತಾನು ಭೂಮಿಗೆ ಹಾಕಲ್ಪಟ್ಟಿರುವದನ್ನು ಕಂಡಾಗ, ಆ ಗಂಡು ಕೂಸು ಹೆತ್ತ ಸ್ತ್ರೀಯನ್ನು ೧೩) ಹಿಂದಟ್ಟಿತು. ೧೪. ಆಗ, ಸಮಯವು, ಸಮಯಗಳೂ, ಅರ್ಧ ಸಮಯವು, ಇವುಗಳ ಪರ್ಯಂತರ ಹಾವಿನ ಮುಖಕ್ಕೆ ದೂರವಾಗಿ ಪೋಷಿಸಲ್ಪಡ ಶಕ್ಯ, ಅರಣ್ಯ ದಲ್ಲಿರುವ, ಅವಳ ಸ್ಥಳಕ್ಕೆ ಹಾರುವ ಹಾಗೆ, ದಾಡ್ಡ ಹದ್ದಿನ ಎರಡು ರೆಕ್ಕೆಗಳು ಸ್ತ್ರೀಗೆ ಕೊಡಲ್ಪಟ್ಟವು. ೧೫. ಮತ್ತು ಹಾವು, ಇವಳನ್ನು ಬಡಕೊಂಡು ಹೋಗ ಮಾಡುವ ದಕ್ಕೆ ತನ್ನ ಬಾಯಿಯಿಂದ ನದಿಯಂತೆ ನೀರನ್ನು ಸ್ತ್ರೀಯ ಹಿಂದೆ ಕಾರಿತು. ೧೬. ಮತ್ತು ಭೂಮಿಯು ಸ್ತ್ರೀಗೆ ಸಹಾಯ ಮಾಡಿತು; ಮತ್ತು ಭೂಮಿಯು ತನ್ನ ಬಾಯಿಯನು ತೆರೆದು, ಗಡಸರ್ಪವು ತನ್ನ ಬಾಯಿಯಿಂದ ಕಾರಿದ ನದಿಯನ್ನು ೧೫) ಕುಡಿದು ಬಿಟ್ಟಿತು. ೧೭. ಮತ್ತು ಗಡಸರ್ಪವು ಸ್ತ್ರೀಯ ಮೇಲೆ ಕೋಪ ಮಾಡಿ, ದೇವರ ಕಟ್ಟಳೆಗಳನ್ನು ಕೈಕೊಂಡು ಯೇಸು ಕ್ರಿಸ್ತನ ಸಾಕ್ಷಿ ಉಂಟಾದವರಾದ ೧೪) ಅವಳ ಬೀಜದಲ್ಲಿ ಉಳಿದವರ ಸಂಗಡ ಯುದ್ಧ ಮಾಡುವದಕ್ಕೆ ಹೊರಟಿತು.

೧. ಘನವಾದ ಕಾರ್ಯವನ್ನು ಮುಂಚಿತವಾಗಿ ಸೂಚಿಸುವ ಅಪರೂಪವಾದ ಸಂಗತಿಗೆ ಗುರುತು ಎಂದು ಪೇಸರು.

೨. ಸೂರ್ಯಾನ್ವಿತ ಸ್ತ್ರೀಯು ಯೇಸು ಕ್ರಿಸ್ತನ ಸಖೆಯಾಗಿದ್ದಾಳೆ. ನೀತಿಯ ಸೂರ್ಯನೆಂಬ ಯೇಸು ಕ್ರಿಸ್ತನ ಮಹಿಮೆಯು ಅದರಲ್ಲಿ ಹೊಳೆಯುತ್ತದೆ. ಕ್ಷಯಾಭಿವೃದ್ಧಿಯಾಗುವ ಚಂದ್ರನು ಅದರ ಪಾದಗಳ ಕೆಳಗೆ ಇರುವದು ಅದರ ನಿಶ್ಚಂಚಲತ್ವವನ್ನು ಸೂಚಿಸುತ್ತದೆ. ಹನ್ನೆರಡು ನಕ್ಷತ್ರಗಳ ಕಿರೀಟವು ಹನ್ನೆರಡು ಅಪಾಸ್ತಲರನ್ನು ಸೂಚಿಸುತ್ತದೆ.

೩. ಗರ್ಭಿಣಿಯಾದ ಸ್ತ್ರೀಯಂಬ ಕ್ರಿಸ್ತನ ಸಖೆಯು ಬಹಳ ಬೇನೆಯಿಂದ ಹೆರುವ ಗಂಡು ಕೂಸು ಏನಂದರೆ: ಒನೆ ಸಂಧಿಯಲ್ಲಿ ಕಾಣುವ ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಮಂದಿ ಮುದ್ರಿತರಾದ ಇಸ್ರಾಯೇಲನವರ ಪ್ರಥಮ ಫಲವಾದ ಸಖೆಯು. ಅದಕ್ಕೆ ಪರಜನರ ಮೇಲೆ ರಾಜ್ಯಾಧಿಕಾರವು ಪ್ರಾಪ್ತವಾಗುವದು.

೪. ಕೆಂಪಾದ ದಾಡ್ಡ ಘಟಸರ್ಪವು ಈನೆ ವಚನದ ಪ್ರಕಾರ ಸೈತಾನನ ಸಾದೃಶ್ಯವಾಗಿದೆ. ಅವನು ಸಹಾಬೋಧಕರ ಮೂರನೆ ಭಾಗವನ್ನು ದುರ್ಭೋಧನೆ ಲೌಕಿಕಗುಣಗಳ ಮೋಸದಿಂದ ಸ್ವಾಧೀನ ಮಾಡಿಕೊಂಡನು ಯೆಶಾ. ೧೪, ೧೨. ಆ ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಪರಿಗಣಿತರನ್ನು ಸಹ ಮೋಸಗಾಳ್ಗಿಸುವದಕ್ಕೆ ಎಸಗಲು ಅದು ಆಗದೆ ಹೋಯಿತು; ಹೋಗಿಂದರೆ ಹಣೆಗಳಲ್ಲಿರುವ ಮುದ್ರೆಯ ಮೂಲವಾಗಿ ಭದ್ರವಾಗಿದ್ದು, ಸೈತಾನನ ಶೋಧನೆಗೆ ತಪ್ಪಿಸಿಕೊಂಡು, ದೇವರ ಸಿಂಹಾಸನಕ್ಕೆ ಏರಿದರು. ಬೇರೆ ವ್ಯಾಖ್ಯಾನಿಗಳು ಗಂಡು ಕೂಸು ಇಸ್ರಾಯೇಲನವರ ಸಖೆಯಲ್ಲಿ ಹುಟ್ಟಿದ ದೇವರ ಮಗನಾದ ಯೇಸು ಕ್ರಿಸ್ತನನ್ನು ಸೂಚಿಸುತ್ತದೆಂದು, ನೆನಸುತ್ತಾರೆ.

೫. ಸಾವಿರದ ಇನ್ನೂರ ಅರುವತ್ತು ದಿವಸಗಳು ಸಭಾಪುನಃಸ್ಥಾಪನೆಯ ವರೆಗೂ ನಡದ ಪ್ರವಾದನಾ ಕಾಲವನ್ನು ಸೂಚಿಸುತ್ತದೆಂದು, ಕಾಣುತ್ತದೆ.

೬. ಯಥಾರ್ಥವಾದ ನಿಜ ಕ್ರಿಸ್ತಸಖೆಯು ಪಾಪನ ಧರ್ಮವೂ, ಮೊಹಮ್ಮದನ ಮತವೂ ಪ್ರಬಲವಾಗಿದ್ದ ದೇಶಗಳಿಂದ ಓಡಿ ಹೋಗಿ, ಬಾಪೆಮು ಮುಂತಾದ ಉತ್ತರದಿಕ್ಕಿನ ದೇಶಗಳಲ್ಲಿ ಆಶ್ರಯಸ್ಥಳವನ್ನು ಹೊಂದಿತು.

೭. ಪರಲೋಕವೆಂಬದು ಅಂತರಿಕ್ಷವನ್ನೂ ನಕ್ಷತ್ರ

ಲೋಕವನ್ನೂ ಅಲ್ಲಿ, ದೇವರ ಸಿಂಹಾಸನವಿರುವ ಮಹೋನ್ನತವಾದ ಪರಿಶುದ್ಧ ಸ್ಥಾನವನ್ನು ಸೂಚಿಸುತ್ತದೆ.

೮. ಮಿಕಯೇಲನು ಎಂಬದು ಒಬ್ಬ ದೂತನ ಪೆಸರು. ಯೂದ. ೯.

೯. ಸೈತಾನನು ಪರಿಶುದ್ಧರ ವಾದಿಯಾಗಿ ಪರಲೋಕದಲ್ಲಿ ಶೇರುವದಕ್ಕೆ ಅಧಿಕಾರಿಯಾಗಿದ್ದನು. ಯೋಬ. ೧, ೬. ಅಲ್ಲಿ ಅವನಿಗಿದ್ದ ಸ್ಥಾನದಿಂದ ಪರಿಭ್ರಷ್ಟನಾಗಿ, ೧ ಮೋಶೆ. ೩, ೧೪ಲ್ಲಿ ಬರದ ಶಾಪವು ಅವನಲ್ಲಿ ನೆರವೇರುವ ಹಾಗೆ, ಭೂಮಿಯ ಮೇಲೆ ಬೀಳುತ್ತಾನೆ. ಭೂಮಿಯು ಅವನ ವೃತ್ತಿಯ ಸ್ಥಳವಾಗಿದೆ. ಇಲ್ಲಿ ಅವನು ತನ್ನ ಮೋಸೋಪಾಯಗಳನ್ನೆಲ್ಲಾ ನಡಿಸುವ ಕಾರಣ ಮನುಷ್ಯರಲ್ಲಿ ಕೆಲವರು ಆತ್ಮರಕ್ಷಣೆಯನ್ನು ಹೊಂದುವದು ಬಾಧ್ಯವಾಗಿದೆ.

೧೦. ೧೧ನೆ ಸಂಧಿಯ ೧೫ನೆ ವಚನದಲ್ಲಿ ದೊಡ್ಡ ಶಬ್ದಗಳು, ಇಲ್ಲಿ ದೊಡ್ಡ ಶಬ್ದವು ಕೇಳಿಸಿತೆಂದು, ಬರದದೆ. ೧೧ನೆ ಸಂಧಿಯಲ್ಲಿ ದೂತರೂ ಮನುಷ್ಯರೂ ಕೂಡಿ ಕಾಂಡು ದೇವರನ್ನು ಸ್ತುತಿಸುತ್ತಾರೆ; ಇಲ್ಲಿ ಮುಕ್ತರಾದ ಮನುಷ್ಯರು ಮಾತ್ರ ದೇವರಿಗೆ ಸ್ತೋತ್ರ ಮಾಡುತ್ತಾರೆ. ಆದ್ದರಿಂದ ಅಲ್ಲಿ ಬಹುವಚನವು, ಇಲ್ಲಿ ಏಕವಚನವು ಪ್ರಯೋಗವಾಗಿದೆ.

೧೧. ಈ ಮಾತಿನಿಂದ ಸೈತಾನನು ಅವರ ಮೇಲೆ ಹೋಳಿದ ದೂರಿನ ಅಭಿಪ್ರಾಯವು ಜಾಡೆಯಾಗಿ ತಾರುತ್ತದೆ. ಅದೇನಂದರೆ: "ಈ ಜನರಲ್ಲಿ ದೇವರ ಯಥಾರ್ಥವಾದ ಪ್ರೀತಿಯುಂಟಾ? ತಮ್ಮ ಪ್ರಾಣವನ್ನೂ, ಜೀವವನ್ನೂ ಪ್ರೀತಿಮಾಡುತ್ತಾರೆ ಅಷ್ಟೆ. ದೇವರ ಪೆಸರಿನ ನಿಮಿತ್ತ ಅವರಿಗೆ ಪ್ರಾಣಸಂಕಟ ಬಂದಲ್ಲಿ ಅವರು ಹೇಚ್ಚಾಗಿ ಪ್ರೀತಿ ಮಾಡುವಂಥಾದ್ದು ಏನೆಂದು, ಕಾಣ ಬಂದೀತು." ಈ ರೀತಿಯಾಗಿ ಸೈತಾನನು ಪೂರ್ವಕಾಲದಲ್ಲಿ ಯಾಬನ ಮೇಲೆ ದೂರು ಹೋಳಿದನು. ಆದರೆ ಸಭೆಯವರಾದ ಪರಿಶುದ್ಧರು ಶಾಧನಾಕಾಲದಲ್ಲಿ ಯೇಸು ಕ್ರಿಸ್ತನ ಮಾನವನ್ನೂ ಆತನ ವಾಕ್ಯದ ಪ್ರಖ್ಯಾತಿಯನ್ನೂ ಸ್ವಂತ ಜೀವಕ್ಕಿಂತ ಹೆಚ್ಚಾಗಿ ಪ್ರೀತಿ ಮಾಡಿ, ತಮ್ಮ ರಕ್ತದಿಂದಲ್ಲ, ಕುರಿಮರಿಯ ರಕ್ತದಿಂದ, ತಮ್ಮ ಸಾಕ್ಷಿಯಿಂದಲ್ಲ, ದೇವರ ವಾಕ್ಯದಿಂದ ವಾದಿಯನ್ನು ಜಯಿಸಿ, ದೇವರ ಮಗನಾದ ಯೇಸು ಕ್ರಿಸ್ತನು ಸೈತಾನನ ಸಾಧನೆಗಳನ್ನೆಲ್ಲಾ ಭಂಗ ಮಾಡಿದ ಪ್ರಕಾರ ಆತನ ಶಿಷ್ಯರು ಸಹ ಆತನ ರಕ್ತದ ಬಲದಿಂದ ಗೆಲ್ಲ ಶಕ್ತರಾಗಿದ್ದಾರೆಂದು, ಪ್ರಮಾಣಿಸಿದ್ದರಿಂದ, ಸೈತಾನನು ಎಲ್ಲಾ ಮನುಷ್ಯರ ಮೇಲೆ ಮುಂಚೆ ತನಗಿದ್ದ ಅಧಿಕಾರವನ್ನು ಕಳದುಕೊಂಡನು.

೧೨. ಪೂರ್ವದಿಕ್ಕಿನ ಸಭೆಗೆ ಹುತ್ತನೆ ಶತಮಾನದಲ್ಲಿ ಮುಸಲುಮಾನರು ಮುಂತಾದ ಪರಜನರಿಂದ ಉಂಟಾದ ಹಿಂಸೆಯು ಇಲ್ಲಿ ಸೂಚಿತವಾಗಿದೆಂದು, ಅನೇಕ ವ್ಯಾಖ್ಯಾನಿಗಳು ನೆನಸುತ್ತಾರೆ.

೧೩. ಪೂರ್ವಪಶ್ಚಿಮದಿಕ್ಕಿನ ರಾಮಿಯಾ ಸಾಮ್ರಾಜ್ಯಗಳಲ್ಲಿ ಕ್ರೈಸ್ತಸಭೆಗೆ ಆಶ್ರಯವು ದಾರಕೆತು. ಮೂರೂವರೆ ಕಾಲದ ಗಣನೆಯನ್ನು ನಿಶ್ಚಯಿಸ ಕೂಡದು. ೧೬ನೆ ವಚನದಲ್ಲಿ ಬರದ ನದಿಯು ತುರುಕರ ಸಂಸ್ಥಾನವನ್ನು, ಸಭೆಗೆ ಸಹಾಯ ಮಾಡಿದ ಭೂಮಿಯು ತುರುಕರ ಶತ್ರುಗಳಾದ ಆಸ್ಯಖಂಡದ ಸಂಸ್ಥಾನಗಳನ್ನು ಸೂಚಿಸುತ್ತದೆಂದು, ಅನೇಕರು ನೆನಸುತ್ತಾರೆ.

೧೪. ಇವರು ಯಾರಂದರೆ: ಪರಜನರಾದ ಅರಸುಗಳಿಗೆ ಅಧೀನವಾದ ದೇಶಗಳಲ್ಲಿ ವಸತಿಯಾದ ಕ್ರೈಸ್ತರು.

bb. ಸಮುದ್ರದಿಂದಲೂ ಭೂಮಿಯಿಂದಲೂ ಏಳುವ ಮೃಗಗಳು. ಸ. ೧೩.

ಸಮುದ್ರದಿಂದೇಳುವ ಮೃಗವು. ವ. ೧—೧೦.

೧. ಆಗ ಸಮುದ್ರದ ಮರಳಿನ ಮೇಲೆ ನಿಂತು, ಏಳು ತಲೆಗಳೂ, ಹತ್ತು ಕೊಂಬುಗಳೂ, ತನ್ನ ಕೊಂಬುಗಳ ಮೇಲೆ ಹತ್ತು ಕಿರೀಟಗಳೂ, ತನ್ನ ತಲೆಗಳ ಮೇಲೆ

ಪ್ರಕ. ೧೩, ೨—೧೦.

ದೂಷಣೆಯ ಹೆಸರೂ ಉಳ್ಳ ೧) ಮೃಗವು ಸಮುದ್ರದಾಳಿಗಿಂದ ಏರಿ ಬರುವದಂನು ಕಂಡೆನು ೨). ೨. ನಾನು ಕಂಡ ಮೃಗವು ಚಿರತೆಗೆ ಸಮಾನವಾಗಿತ್ತು. ಅದರ ಕಾಲುಗಳು ಕರಡಿಯ ಕಾಲುಗಳ ಹಾಗೆಯೂ, ಅದರ ಬಾಯಿ ಸಿಂಹದ ಬಾಯಿಯ ಹಾಗೆಯೂ, ಇದ್ದವು ೩); ಅದಕ್ಕೆ ಗಡಸರ್ಪವು ತನ್ನ ಬಲವನ್ನೂ, ಸಿಂಹಾಸನವನ್ನೂ, ಮಹಾ ಅಧಿಕಾರವನ್ನೂ, ಕೊಟ್ಟಿತು ೪). ೩. ಮತ್ತು, ಮರಣಘಾಯವಾದ ಹಾಗೆ, ಅದರ ತಲೆಗಳಲ್ಲಿ ಒಂದನ್ನು ಕಂಡೆನು. ಮತ್ತು ಮರಣಕರವಾದ ಅದರ ಘಾಯವು ವಾಸಿಯಾಯಿತು. ಆಗ ಸಮಸ್ತ ಭೂಮಿಯು ಆ ಮೃಗದ ಹಿಂದೆ ಆಶ್ಚರ್ಯ ಪಟ್ಟಿತು. ೪. ಮತ್ತು ಮೃಗಕ್ಕೆ ಅಧಿಕಾರವನ್ನು ಕೊಟ್ಟ ಗಡಸರ್ಪಕ್ಕೆ ನಮಸ್ಕರಿಸಿದರು; ಮತ್ತು ಮೃಗಕ್ಕೆ ಸಹ ನಮಸ್ಕರಿಸಿ—ಮೃಗಕ್ಕೆ ಸಮಾನವಾದವನು ಯಾರು? ಅದರ ಸಂಗಡ ಯುದ್ಧ ಮಾಡ ಶಕ್ತನು ಯಾರು ೫)? ಅಂದರು. ೫. ಮತ್ತು ದೊಡ್ಡ ಮಾತುಗಳನ್ನೂ ದೂಷಣೆಗಳನ್ನೂ ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು; ಮತ್ತು ನಾಲ್ತು ತಿಂಗಳು ನಡಿಸುವ ಅಧಿಕಾರವು ಅದಕ್ಕೆ ಕೊಡಲ್ಪಟ್ಟಿತು ೬). ೬. ಆಗ ಅದು, ದೇವರ ಹೆಸರನ್ನೂ, ಅವನ ಗುಡಾರವನ್ನೂ, ಪರಲೋಕದಲ್ಲಿ ವಾಸವಾಗಿರುವವರನ್ನೂ ೭), ದೂಷಿಸುವದಕ್ಕೆ, ದೇವರಿಗೆ ವಿರೋಧವಾದ ದೂಷಣೆಗೆ ತನ್ನಬಾಯಿಯನ್ನು ತೆರೆಯಿತು. ೭. ಮತ್ತು ಪರಿಶುದ್ಧರ ಸಂಗಡ ಯುದ್ಧ ಮಾಡುವದಕ್ಕೂ, ಅವರನ್ನು ಜಯಿಸುವದಕ್ಕೂ, ಅದಕ್ಕೆ ಕೊಡಲ್ಪಟ್ಟಿತು ೮); ಮತ್ತು ಸಕಲ ಕುಲ, ಭಾಷೆ, ಜನಾಂಗಗಳ ಮೇಲೆ ಅಧಿಕಾರವು ಅದಕ್ಕೆ ಕೊಡಲ್ಪಟ್ಟಿತು. ೮. ಮತ್ತು ಜಗದುತ್ಪತ್ತಿಮೊದಲುಗೊಂಡು ಕೊಲ್ಲಲ್ಪಟ್ಟ ಕುರಿಮರಿಯ ಜೀವದ ಪುಸ್ತಕದಲ್ಲಿ ಹೆಸರಾಗಿ ಬರೆಯಲ್ಪಡದ ೯) ಭೂನಿವಾಸಿಗಳೆಲ್ಲರು ಅದಕ್ಕೆ ನಮಸ್ಕರಿಸಿದರು ೧೦). ೯. ಕಿವಿಯುಳ್ಳವನು ಯಾವನಾದ್ರೂ, ಅವನು ಕೇಳಲಿ. ೧೦. ಯಾವನಾದರೂ ಶೆರೆ ಹಿಡಿದರೆ, ಶೆರೆಯಲ್ಲಿ ಬೀಳುವನು; ಯಾವನಾದರೂ ಕತ್ತಿಯಿಂದ ಕೊಂದರೆ, ಅವನು ಕತ್ತಿಯಿಂದ ಕೊಲ್ಲಲ್ಪಡ ಬೇಕು ೧೧); ಇದರಲ್ಲಿ ಪರಿಶುದ್ಧರ ತಾಳ್ಮೆಯೂ ವಿಶ್ವಾಸವೂ ಉಂಟು ೧೨).

೧. ಈ ಮೃಗವೆಂಬ ಲೌಕಸಂಸ್ಥಾನವು ಯಾವದೆಂದು, ಸ. ೧೭ರಲ್ಲಿ ಕಾಣುತ್ತದೆ. ಅಲ್ಲಿ ತಿರಿಗಿ ಬರದಿರುವ ಅದರ ವರ್ಣನೆಯು ಆತ್ಮಿಕ ಬಬುಲಾನೆಂಬ ರಾಮಪುರಬದ್ಧಸಂಬಂಧವನ್ನು ಸೂಚಿಸುತ್ತದೆ. ಈ ಪಟ್ಟಣಕ್ಕೆ ಪಾಪನ ಸಂಸ್ಥಾನಕ್ಕಿದ್ದಷ್ಟು ಬದ್ಧಸಂಬಂಧವು ಬೇರೆ ಯಾವ ಲೌಕಸಂಸ್ಥಾನಕ್ಕೂ ಇಲ್ಲ. ನಮ್ಮ ಯಥಾಕ್ತದಲ್ಲಿ ತೋರುವ ಲಕ್ಷಣಗಳೆಲ್ಲಾ ಪಾಪನ ಸಂಸ್ಥಾನಕ್ಕೆ ಸಪಾಜವಾಗಿ ಒಪ್ಪುತ್ತವೆ. ಪೂರ್ಣಾಗಂದರೆ, ಏಳು ತಲೆ, ಹತ್ತು ಕೊಂಬು, ಹತ್ತು ಕಿರೀಟಗಳು, ಮುಂದಿನ ವ್ಯಾಖ್ಯಾನದಲ್ಲಿ ವ್ಯಾಖ್ಯಾನಿಸ ತಕ್ಕ ಅಭಿಪ್ರಾಯದ ಪೂರ್ತಿ, ಅದರ ಅತಿಶಯವಾದ ಬಲವನ್ನು ಸೂಚಿಸುತ್ತವೆ.

ಅದರ ತಲೆಗಳ ಮೇಲಿರುವ ದೂಷಣೆಯ ಪೆಸರು ಗಳು ಪಾಪರಿಗೆ ರೂಢಿಯಾದ ಮಾನಾಪಿಧಾನಗಳಿಗೆ ಒಪ್ಪುತ್ತವೆ. ಪಾಪರಲ್ಲಿ ಕೆಲವರಿಗೆ ಮೂಢ ಚಕ್ತ ರಾದ ಜನರು ಋಾದೇವರೆಂದು ಪೆಸರಿಟ್ಟರು. ಮ ತ್ತಾಬ್ಬರು ಪರಲಾೞಕದಲ್ಲಿಯೂ ಋಲಾೞಕದಲ್ಲಿ ಯೂ ಸರ್ವಾಧಿಕಾರವು ನನಗೆ ಕಾಟ್ಟಿದೆ ಎಂಬ ವಾ ಕ್ಯವನ್ನು ಪಾಪರಿಗೆ ಪ್ರಯೋಗಿಸಿದರು. ಈ ಮುಂ ತಾದ ಪುಾಗಳಿಕೇ ಮಾತುಗಳನ್ನು ಪಾಪರು ತಿರಸ್ಕ ರಿಸಲಿಲ್ಲ. ೞದು ಪ್ರಶಿಕ್ರಿಸ್ತಗುಣವೇ ಸರಿ.

೨. ಪತ್ಮದ್ವೀಪದಲ್ಲಿ ಯೋಪುಾನನು ಮುಖವ ನ್ನು ಪಶ್ಚಿಮಕ್ಕೆ ತಿರುಗಿಸಿದರೆ, ಥರಾ ಮಧ್ಯಸಮುದ್ರ ವನ್ನು ನೋಡುತ್ತಾ ೞದ್ದನು. ಆ ಕಡೆಯಿಂದ ಮೃ ಗವು ಏರುವದನ್ನು ಕಂಡನು. ಸಮುದ್ರವು ಪ್ರವಾ ದನಾಭಾಷೆಯಲ್ಲಿ ವಿಲಾಯತಿಯನ್ನು ಸೂಚಿಸುತ್ತದೆ.

೩. ಚಿರತೇ ಗುಣವು ಕ್ರೂರವಾದದ್ದು; ಕರಡಿಯ ಕಾಲುಗಳು ಎಲ್ಲಾನ್ನು ತುಳಿಯುತ್ತವೆ; ಸಿಂಪುನಾದ ವು ಭಯಂಕರವಾದದ್ದು. ಪಿಲ್ದೆಬ್ರಂದನ ಕಾಲದಿಂದ ಪಾಪರ ಸಂಸ್ಥಾನದ ಚಾಪವು ೞಂಥಾದ್ದಾಗಿತ್ತು.

೪. ಅನೇಕ ಶತಮಾನಗಳಲ್ಲಿ ವಿಲಾಯತಿಯ ಜ ನಾಂಗಗಳ ಮೇಲೆಯೂ, ಅರಸರ ಮೇಲೆಯೂ, ಮ ಪುಾರಾಜರ ಮೇಲೆಯೂ ಅತ್ಯಂತ ಗರ್ವದಿಂದ ಥಾ ರೆತನವನ್ನು ನಡಿಸಿದ ಪಾಪರ ಸಂಸ್ಥಾನದ ಪೆಚ್ಚಿಗೆ ಯ ಮರ್ಮವೇನಂದರೆ: ಸೈತಾನನು ತನ್ನ ಬಲವ ನ್ನೂ, ಸಿಂಪುಾಸನವನ್ನೂ, ಮಪುಾಧಿಕಾರವನ್ನೂ ಪಾಪರಿಗೆ ಕಾಟ್ಟಿನು.

೫. ಪಾಪಸಂಸ್ಥಾನವು ಅಂತ್ಯಕಾಲದಲ್ಲಿ ಅಮಿ ತವಾದ ಬಲವನ್ನು ಋಲಾೞಕದಲ್ಲಿ ಪುಾಂದುವ ದು. ೧೬ನೆ ಶತಮಾನದಲ್ಲಿ ಉಂಟಾದ ಸಚಾಪು ನಃಸ್ಥಾಪನೆಯಿಂದ ಅದಕ್ಕೆ ಶಿರಾೞಘಾಯ ಪ್ರಾಪ್ತವಾ ಯಿತು. ಅದು ಮರಣಘಾಯವಾಗಿ ತಾೞರಿದಾ ಗ್ಯೂ, ತದನಂತರ ವಾಸಿಯಾಯಿತು. ಈಗ ಅದರ ಬಲವು ಪೆಚ್ಚುತ್ತಾ ಬರುತ್ತದೆ.

೬. ನಾಲ್ವತ್ತೆರಡು ತಿಂಗಳಿನ ಕಾಲದ ವಿಷಯವಾ ಗಿ ೧೪ನೆ ವಚನವನ್ನು ನೋಡ ಬೇಕು.

೭. ಮೃಗವು ಅನೇಕ ಕಾರ್ಯಗಳಲ್ಲಿ ದೇವರಾಬ್ಬ ನಿಗಿರುವ ಅಧಿಕಾರವನ್ನು ಅಪಪುರಿಸಿ, ದೇವಮಾನಾ ನುಸಾರವಾದ ಅನೇಕ ವಾಕ್ಯಗಳನ್ನು ಅಲ್ಲಗಳದು, ದೇವರ ಮಾನವನ್ನು ತಪಿಸಿ, ಪರಿಶುದ್ಧ ದೇವರಿಗೆ ಅ ಸಹ್ಯವಾದ ಕೃತ್ಯಗಳನ್ನು ದೇವರ ಪೆಸರಿನಲ್ಲಿ ನಡಿ ಸುವದರಿಂದ ದೇವರ ಪೆಸರನ್ನು ದೂಷಿಸುತ್ತದೆ; ಮೃಗದ ಅಧಿಕಾರವು ದೈವಿಕವಾದದ್ದೆಂದು ವಿಜ್ಞಾಪಿ ಸುವವರಿಗೆ ಪ್ರವೇಶವುಂಟೆಂದೂ, ಅಲ್ಲಗಳಯುವವ ರಿಗೆ ಪ್ರವೇಶವಿಲ್ಲವೆಂದೂ, ಪೋಳುವದರಿಂದ ಪರ ಲಾೞಕದಲ್ಲಿರುವ ದೇವರ ಗುಡಾರವೆಂಬ ಮಪುಾನ್ನತ ಮಹಿಮಾಸ್ಥಾನವನ್ನು ದೂಷಿಸುತ್ತದೆ; ನಿಜ ಪರಿಶುದ್ಧರಿಗೆ ಆಜ್ಞಾನಿರ್ಣಯ ಮಾಡಿ, ದುಷ್ಟ ಮ ನುಷ್ಯರನ್ನು ಅವರು ಮಾಡಿದ ದುಷ್ಕೃತ್ಯಗಳ ನಿಮಿ ತ್ತ ಪರಿಶುದ್ಧರ ಲೆಖ್ಖದಲ್ಲಿ ಶೇರಿಸುವದರಿಂದ ವಿವದ ಲ್ಲಿರುವವರನ್ನು ದೂಷಿಸುತ್ತದೆ.

೮. ದೇವರು ಪರಿಶುದ್ಧ ಆಜ್ಞಾನಿರ್ಣಯದ ಪ್ರಕಾ ರ ಪೀಗೆ ನೇಮಕಾ ಮಾಡಿದ್ದಾನೆ.

೯. ನಿನ್ನ ಪೆಸರು ಜೀವದ ಪುಸ್ತಕದಲ್ಲಿ ಬರದಿರು ವದನ್ನು ಕಂಡರೆ, ನೀನೇನು ಮಾಡುವಿ? ಸಂತೋಷ ದಿಂದ ನನ್ನ ದೇವರನ್ನು ಸ್ತುತಿಸಿ, ಅಗ್ನಿಪ್ರವೇಶವನ್ನಾ ಗಲಿ ಜಲಪ್ರವೇಶವನ್ನಾಗಲಿ ಮಾಡಿ, ಮಾಡ ಬಾರ ದ್ದನ್ನೆಲ್ಲಾ ಬಿಟ್ಟು, ಮಾಡ ತಕ್ಕದ್ದನ್ನೆಲ್ಲಾ ಸಾಧಿಸಿ, ಎಲ್ಲಾ ವಿಷಯವಾಗಿ ಆತನನ್ನು ಮೆಚ್ಚಿಸಿ, ಆತನಿಗೆ ಅಪಿತವಾದದ್ದಾಂದನ್ನಾದರೂ ಮಾಡದೆ, ಯಾವಾ ಗಲೂ ಕೀರ್ತಿಆನಂದಚರಿತನಾಗಿರುವೆನೆಂದು,- ಪ್ರ ತ್ಯುತ್ತರವಾಗಿ ಪೋಳುವಿಯಲ್ಲ? ಈ ಮಾತಿನ ಪ್ರಕಾ ರ ನೀನು ನಡದು ಕಾಂಡರೆ, ನಿನ್ನ ಪೆಸರು ಜೀವದ ಪುಸ್ತಕದಲ್ಲಿ ಬರದದ್ದೆಂಬದನ್ನು ಬೇಗ ತಿಳಿದು ಕಾ ಳ್ಳುವಿ.

೧೦. ೞಲ್ಲಿ ಪಾಪಸಂಸ್ಥಾನವು ಪ್ರಶಿಕ್ರಿಸ್ತಸಂಸ್ಥಾ ನವಾದ ಬಳಿಕ ಆಗ ತಕ್ಕ ಭವಿಷ್ಯತ್ಕಾರ್ಯವು ಬರ ದದೆ.

೧೧. ಪ್ರಶಿಕ್ರಿಸ್ತಸಂಸ್ಥಾನಕ್ಕೆ ವಿರೋಧವಾಗಿ ಬಲ ದಿಂದ ಯಾರೂ ಏನೂ ಸಾಧಿಸ ಕೂಡದೆಂದು, ಈ ಮಾತಿನಿಂದ ತಾೞರುತ್ತದೆ.

೧೨. ತಾಳ್ಮೆಯೂ ವಿಶ್ವಾಸವೂ ಪ್ರಾರ್ಥನೆಯೂ

ಪ್ರಕ. ೧೩, ೧೧—೧೯.

ಕಣ್ಣಿರೂ ಪ್ರಥಮ ಕಾಲದ ಸಭೆಯ ಪರಿಶುದ್ಧರ ಸರ್ವಾಯುಧಗಳಾಗಿದ್ದವು. ಅವರು ಕುರಿಗಳಂತೆ ಪುತವಾಗುತ್ತಾ ಇದ್ದರೂ, ಸಭೆಯು ನಾಶವಾಗಲಿಲ್ಲ.

ಪ್ರತಿಕ್ರಿಸ್ತನ ಕಾಲದಲ್ಲಿ ಲೌಕದಲ್ಲಿರುವ ಜಕ್ಕರು ಇದನ್ನು ಚನ್ನಾಗಿ ಲಕ್ಷಿಸ ಬೇಕು.

ಭೂಮಿಯಿಂದೇಳುವ ಮೃಗವು. ವ. ೧೧—೧೪.

೧೧. ಆಗ ಭೂಮಿಯೊಳಗಿಂದ ಮೆರೆ ಬರುವ ಬ್ಯೇರೆ ಮೃಗವನ್ನು ಕಂಡೆನು. ಅದಕ್ಕೆ ಟಗರಿಗೆ ಸಮಾನವಾದ ಎರಡು ಕೊಂಬುಗಳು ಇದ್ದವು; ಗಡಸರ್ಪದ ಹಾಗೆ ಮಾತಾಡಿತು ೧). ೧೨. ಅದು ಮೊದಲನ್ಯೇ ಮೃಗದ ಸಮಸ್ತ ಅಧಿಕಾರವಂನು ಅದರ ಸನ್ನಿಧಿಯಲ್ಲಿ ನಡಿಸಿ ೨), ಭೂಮಿಯೂ ಅದರ ನಿವಾಸಿಗಳೂ ಆ ಮರಣದ ಘಾಯ ವಾಶಿಯಾದ ೩) ಮೊದಲನ್ಯೇ ಮೃಗಕ್ಕೆ ನಮಸ್ಕರಿಸುವ ಹಾಗೆ ಮಾಡುತ್ತದೆ. ೧೩. ಅದು ದಾಂಡ್ಡ ಗುರುತುಗಳನ್ನು ನಡಿಸಿ ೪), ಬೆಂಕಿಯನ್ನು ಮನುಷ್ಯರ ಮುಂದೆ ಆಕಾಶದಿಂದ ಇಳಿಯ ಮಾಡುತ್ತದೆ. ೧೪. ಮತ್ತು ಮೊದಲನ್ಯೇ ಮೃಗದ ಸಂನಿಧಿಯಲ್ಲಿ ನಡಿಸುವದಕ್ಕೆ ತನಗೆ ಕೊಡಲ್ಪಟ್ಟ ಗುರುತುಗಳಿಂದ ಭೂನಿವಾಸಿಗಳಂನು ಮೋಸಗೊಳಿಸಿ, ಕತ್ತಿಯಿಂದ ಘಾಯವಾಗಿ ಬದುಕಿದ ೫) ಮೃಗಕ್ಕೆ ವಿಗ್ರಹವಂನು ಮಾಡ ಬ್ಯೇಕೆಂದು, ಭೂನಿವಾಸಿಗಳಿಗೆ ಹ್ಯೇಳುತ್ತದೆ. ೧೫. ಮತ್ತು ಮೃಗದ ವಿಗ್ರಹವು ಮಾತಾಡುವ ಹಾಗೆಯೂ ೬), ಮೃಗದ ವಿಗ್ರಹಕ್ಕೆ ನಮಸ್ಕರಿಸುವವರಂನಷ್ಟು ಕೊಲ್ಲಿಸುವ ಹಾಗೆಯೂ ೭), ಮೃಗದ ವಿಗ್ರಹಕ್ಕೆ ಆತ್ಮವನ್ನು ಕೊಡುವದಕ್ಕೆ ಅದಕ್ಕೆ ಕೊಡಲ್ಪಟ್ಟಿತು. ೧೬. ಮತ್ತು ಹಿರಿಕಿರಿಯರೂ, ಐಶ್ವರ್ಯವಂತರೂ, ಬಡವರೂ, ಸ್ವತಂತ್ರರೂ, ದಾಸರೂ ೮), ಎಲ್ಲರೂ ತಮ್ಮ ಬಲಗ್ಯೈಯ ಮ್ಯೇಲಾಗಲಿ, ತಮ್ಮ ಹಣೆಗಳ ಮ್ಯೇಲಾಗಲಿ, ಮುದ್ರೆಯನ್ನು ಮಾಡಿಸಿ ೯) ಕೊಳ್ಳುವ ಹಾಗೆಯೂ, ಮುದ್ರೆಯಾಗಲಿ, ೧೭. ಮೃಗದ ಹೆಸರಾಗಲಿ, ಅದರ ಹೆಸರಿನ ಲೆಕ್ಕವಾಗಲಿ, ಉಂಟಾದವನು ೧೦) ಹೊರ್ತು, ಮತ್ತಾರೂ ಕ್ರಯ ವಿಕ್ರಯ ಮಾಡದ ಹಾಗೆಯೂ ೧೧), ಮಾಡುತ್ತದೆ. ೧೮. ಇಲ್ಲಿ ಜ್ಞಾನ ಉಂಟು. ಬುದ್ಧಿಯುಂಟಾದವನು ಮೃಗದ ಲೆಕ್ಕವನ್ನು ಎಣಿಸಲಿ; ಯಾಕಂದರೆ ಅದು ಮನುಷ್ಯನ ಲೆಕ್ಕವಾಗಿದೆ; ಅದರ ಲೆಕ್ಕವು ಆರು ನೂರ ಅರವತ್ತಾರು ೧೨).

ಪ್ರಕ. ೧೩.

೧. ಎರಡನೆ ಮೃಗದ ಕಾಂಬುಗಳು ಕುರಿಗೆ ಸದೃಶವಾಗಿವೆ. ಅದೇನಂದರೆ ಅದು ಕಪಟವಾದ ಶಾಂತಿದಯಗಳನ್ನು ತೋರಿಸುತ್ತದೆ. ಆದರೆ ಕಾಗೆ ಕಾಗಿಲೆಯಲ್ಲವೆಂದು, ಸ್ವರದಿಂದ ಕಾಣುವ ಪ್ರಕಾರ ಈ ಮೃಗದ ಗುಣವು ಅದರ ಮಾತಿನಿಂದ ಪ್ರಕಟವಾಗುತ್ತದೆ. ಅದು ಘಟಸರ್ಪನ ಬುದ್ಧಿಯಿಂದ ಮಾತನಾಡಿ, ಅಗ್ನಿವಿಷಮಯವಾದ ವಾಕ್ಯಗಳನ್ನುಚ್ಚರಿಸುತ್ತದೆ. ಅದು ಸ. ೧೬, ೧೩ರಲ್ಲಿ ಕಾಣುವ ಅಬದ್ಧ ಪ್ರವಾದಿಯನ್ನು ಸೂಚಿಸುತ್ತದೆ.

೨. ಎರಡನೆ ಮೃಗವು ಮೊದಲನೆ ಮೃಗದ ಅಧೀನದಲ್ಲಿದ್ದು, ಅದರ ಅಧಿಕಾರವನ್ನು ಅದರ ಪೆಸರಿನಲ್ಲಿ ಅದರ ಮಾನಕ್ಕಾಗಿ ನಡಿಸುತ್ತದೆ.

೩. ಅಂದರೆ ನಿರ್ಬಲವಾದ ಕಾಲದ ಮೇಲೆ ಶಿರಿಗಿ ತ್ರಾಣವನ್ನೂ, ಅಧಿಕಾರವನ್ನೂ ಪಡದು ಕಾಂಡ ಪಾಪಸಂಸ್ಥಾನವು.

೪. ಪಾಪರಿಗೆ ವಶವಾದ ಸಭೆಯಲ್ಲಿ ನಾನಾ ತರವಾದ ಅದ್ಭುತಕಾರ್ಯಗಳು ಇಂದಿನವರೆಗೂ ನಡಿಯುತ್ತಾ ಬರುತ್ತವೆ. ಅವುಗಳಲ್ಲಿ ಪೆಚ್ಚಾದವುಗಳು ಪಂಚನೆಯ ಕಾರ್ಯಗಳಾಗಿವೆ. ಉಳಿದವುಗಳಲ್ಲಿ ದೆವ್ವಗಳ ಶಕ್ತಿಯೇ ಪ್ರಯೋಗವಾಗುತ್ತದೆ. ಅಬದ್ಧ ಪ್ರವಾದಿಯು ಅಶಿಶಯವಾದ ಅದ್ಭುತಗಳನ್ನು ನಡಿಸುವನು. ಅವುಗಳಿಗೆ ಪಾಪರ ಬೋಧನೆಯಿಂದ ಬುದ್ಧಿಕೆಟ್ಟ ಜನಗಳು ಪೆಚ್ಚಾಗಿ ವಿಸ್ಮಯ ಪಡುವರು.

೫. ಇದು ಪಾಪರ ಸಂಸ್ಥಾನವನ್ನಲ್ಲ (ಒಂದು ಸಂಸ್ಥಾನದ ರೂಪವನ್ನು ಕಲ್ಪಿಸುವದು ಹೇಗಾಗೆ?) ಪಾಪರ ಸಂಸ್ಥಾನದಿಂದ ಪ್ರತಿಕ್ರಿಸ್ತಸಂಸ್ಥಾನವನ್ನುಂಟು ಮಾಡುವ ಪುರುಷನನ್ನು ಸೂಚಿಸುತ್ತದೆ. ಇವನು ಯುದ್ಧದಲ್ಲಿ ಪರಾಜಿತನಾಗಿ, ಘಾಯವನ್ನು ಹೊಂದಿ, ಸತ್ತವನಂತೆ ಬಿದ್ದು, ಶಿರಿಗಿ ಬದುಕುವನು ಎಂದು, ತೋರುತ್ತದೆ.

೬. ಪಾಪರ ಸಭೆಯಲ್ಲಿ ಮರಿಯಳ ಅದ್ಭುತಶಕ್ತಿಯುಳ್ಳ ಚಿತ್ರಗಳು ಅಲ್ಲಾಡಿ, ಭಜಿಸುವವರ ಕಡೆಗೆ ಬಾಗುತ್ತವೆಂದು, ನಂಬುವದು ವಾಡಿಕೆಯಾಗಿದೆ. ಆದರೆ ಅಬದ್ಧ ಪ್ರವಾದಿಯು ಪೆಚ್ಚಾದ ಆಶ್ಚರ್ಯಕೃತ್ಯಗಳನ್ನು ನಡಿಸುವನು. ಬಾಳನ ಪೂಜಾರಿಗಳಿಗೆ ಅಸಾಧ್ಯವಾದದ್ದನ್ನು ಇವನು ಸಾಧಿಸಿ, ಬೆಂಕಿಯನ್ನು ಆಕಾಶದಿಂದ ಬೀಳ ಮಾಡುವನು. ಇವನ ವಿಗ್ರಹಕ್ಕೆ, ಪ್ರವಾದಿಗಳೂ ಅಪಾಸ್ತಲರೂ ಪೂರ್ವಸ್ಥ ಮಾಡಿದ, ಮೂಕತ್ವದ ದೋಷವಿರದ ಪೂರ್ಣಾಗೆ, ಅವನು ಅದನ್ನು ನುಡಿಸುವನು. ಆ ಕಾಲದ ಶೋಧನೆಯ ಬಲವು ಬಹಳ ದೊಡ್ಡದಾಗಿರುವದು. ಆದರೆ ಬರಹವು ನೆರವೇರ ಬೇಕು.

೭. ನಮಸ್ಕಾರ ಮಾಡದವರನ್ನು ಕಾಂದು ಪೂರ್ಣಾಕುವದು ಪಾಪಸಂಸ್ಥಾನದ ಪದ್ಧತಿಯು. ಆದರೆ ಅವರಿಗೆ ಬಲವಿಲ್ಲದ ದೇಶಗಳಲ್ಲಿಯೂ ಕಾಲಗಳಲ್ಲಿಯೂ ಸಾಧುಗಳಾಗಿದ್ದಾರೆ.

೮. ಪೋಗಿರಲಾಗಿ ಸರ್ವವಿಧದ ಮನುಷ್ಯರಿಗೆ ಈ ಉದ್ಬೋಧನೆಯು ಸಲ್ಲುವದು. ಈ ಗ್ರಂಥವನ್ನು ಓದುವದು ಎಲ್ಲರಿಗೆ ಉಪಯೋಗವಾಗಿದೆ.

೯. ಮೃಗದ ಪುಚ್ಛೆಯು ಅದರ ಆರಾಧನೆಗಿಂತ ಪೆಚ್ಚು ಸಾಮಾನ್ಯವಾಗುವದು. ಮೃಗದ ಪಕ್ಷದಲ್ಲಿ ಶೇರಿದವರೆಲ್ಲರೂ ಅದನ್ನು ಮಾಡಿ ಕಾಳ್ಳುವರು. ಇಂಥಾ ಪುಚ್ಛೆಗಳನ್ನು ಮಾಡಿ ಕಾಳ್ಳುವದು ಪರಜನರಲ್ಲಿ ವಾಡಿಕೆಯಾಗಿದೆ.

೧೦. ಇದು ಪಾಪರ ಸಂಸ್ಥಾನದ ರಾಜನೀತಿಯು. ಸಚಾಪರಿತ್ಯಕ್ತರು ರಾಜ್ಯಪರಿತ್ಯಕ್ತರಾಗ ಬೇಕೆಂದು, ಅವರಲ್ಲಿ ಕಟ್ಟಳೆಯಾಗಿದೆ. ಅವರಿಗೆ ಬಲವಿಲ್ಲದ್ದಲ್ಲಿ ಅಂಥಾ ಕ್ರೂರನಿಯಮವು ತಮ್ಮಲ್ಲಿ ಇಲ್ಲವೆಂದು ಪೋಳುವದೂ, ಬಲಗಾಂಡಲ್ಲಿ ಅದನ್ನು ನಿಷ್ಕರುಣೆಯಿಂದ ನಡಿಸುವದೂ ಅವರಿಗೆ ವಾಡಿಕೆಯಾಗಿದೆ.

೧೧. ಇಬ್ರಿಯ ಗ್ರೀಕ ಲಾತೀನ ಭಾಷೆಗಳಲ್ಲಿ ಅಕ್ಷರಗಳು ಅಂಕೆ ಗುರುತುಗಳಾಗಿಯೂ ಪ್ರಯೋಗವಾಗಿವೆ. ಪ್ರತಿಕ್ರಿಸ್ತನ ಪೆಸರಿನ ಅಕ್ಷರಗಳಿಂದ ಸೂಚಿತವಾದ ಲೆಖ್ಖವು ಆ ಪಕ್ಷದವರಿಗೆ ಪುಚ್ಛೆಯಾಗುವದು.

೧೭. ಮೃಗದ ಲೆಖ್ಖವು ಬೇರೆ, ಅವರ ಪೆಸರಿನ ಲೆಖ್ಖವು ಬೇರೆ. ಮೃಗದ ಲೆಖ್ಖವು ೬೬೬. ಈ ಲೆಖ್ಖವು ಈ ಸಂಧಿಯ ೫ನೆ ವಚನದಲ್ಲಿ ಬರದ ೪೨ ತಿಂಗಳಿಗೆ ಸರಿಬೀಳುತ್ತದೆ. ಪೂರ್ಣಾಗಾದರೆ ೬೬೬ ಯೆಂಬದು ಐರುಷಗಳನ್ನು ಸೂಚಿಸುವದಾಗಿ ತೋರುತ್ತದೆ.

ಪ್ರವಾದನಾವಾಕ್ಯ.

ಪ್ರಕ. ೧೪, ೧—೫.

cc. ಮಹಾವ್ಯಥೆಯ ಕಾಲದಲ್ಲಿ ಕರ್ತನು ನಡಿಸುವ ಅಧಿಕಾರವು. ಸ. ೧೪.

ದೇವರು ಕುರಿಮರಿಯು ಇವರ ಪ್ರಥಮಫಲವೆಂಬವರು. ವ. ೧—೫.

೧. ಮತ್ತು ನೋಡಲಾಗಿ, ಇಗೋ, ಚಿಯೋನ್ ಪರ್ವತದ ಮೇಲೆ ನಿಂತು ಕೊಂಡ ಕುರಿಮರಿಯೂ, ಅವನ ಸಂಗಡ ಅವನ ಹೆಸರೂ ೧) ಅವನ ತಂದೆಯ ಹೆಸರೂ ತಮ್ಮ ಹಣೆಗಳ ಮೇಲೆ ೨) ಬರೆದಿರುವ ನೂರ ನಾಲ್ವತ್ತ್ನಾಲ್ಕು ನಾಲ್ಕು ಸಾವಿರ ಮಂದಿಯೂ. ೨. ಮತ್ತು ಅನೇಕ ನೀರುಗಳ ಶಬ್ದದ ಹಾಗೆಯೂ, ದೊಡ್ಡ ಗುಡುಗಿನ ಶಬ್ದದ ಹಾಗೆಯೂ, ಪರಲೋಕದಿಂದಾದ ಶಬ್ದವನ್ನು ಕೇಳಿದೆನು; ಮತ್ತು ತಮ್ಮ ವೀಣೆಗಳನ್ನು ನುಡಿಸುವ ವೀಣೆಗಾರರ ೩) ಶಬ್ದವನ್ನು ಕೇಳಿದೆನು. ೩. ಅವರು ಸಿಂಹಾಸನದ ಮುಂದೆಯೂ, ನಾಲ್ಕು ಜೀವಿಗಳ ಹಿರಿಯರ ಮುಂದೆಯೂ, ಹೊಸ ರಾಗದಂತೆ ೪) ಹಾಡುತ್ತಾರೆ. ಆ ರಾಗವನ್ನು, ಭೂಮಿಯಿಂದ ಕೊಂಡು ಕೊಳ್ಳಲ್ಪಟ್ಟವರಾದ ನೂರ ನಾಲ್ವತ್ತ್ನಾಲ್ಕು ನಾಲ್ಕು ಸಾವಿರ ಮಂದಿ ಹೊರತಾಗಿ, ಯಾರೂ ಕಲಿಯಲಾರರು ೫). ೪. ಸ್ತ್ರೀಯರ ಸಂಗಡ ಕಳಂಕವಾಗದವರು ಇವರೇ; ಯಾಕಂದರೆ ಕನ್ನಿಕಾವವಾಗಿದ್ದಾರೆ ೬). ಕುರಿಮರಿಯನ್ನು, ಎಲ್ಲಿ ಹೋದಾಗ್ಲೂ, ಹಿಂಬಾಲಿಸುವವರು ಇವರೇ. ಇವರು ದೇವರಿಗೂ ಕುರಿಮರಿಗೂ ಪ್ರಥಮ ಫಲವಾಗಿ, ಮನುಷ್ಯರಿಂದ ಕೊಂಡು ಕೊಳ್ಳಲ್ಪಟ್ಟರು. ೫. ಅವರ ಬಾಯಿಯಲ್ಲಿ ಮೋಸವು ಶಿಕಲಿಲ್ಲ ೭); ಹ್ಯಾಗಂದರೆ ಅವರು ದೇವರ ಸಿಂಹಾಸನದ ಮುಂದೆ ನಿಷ್ಕಳಂಕರಾಗಿದ್ದಾರೆ ೮).

೧. ಅನೇಕ ವಿಧದ ಮುಕ್ತರು ಪ್ರಕಟಣೆಯಲ್ಲಿ ಕಾಣಿಸುತ್ತಾರೆ. ಬಿಳಿ ವಸ್ತ್ರ ಉಟ್ಟು ಕೊಂಡವರನ್ನು ಕುರಿಮರಿಯು ಜೀವಜಲತಟಾಕಗಳಿಗೆ ನಡಿಸುತ್ತೆದೆ. ಸ. ೭, ೧೭. ಈ ಸ್ಥಳದಲ್ಲಿ ಬರದ ವೀಣೆಗಾರರು ಕುರಿಮರಿಯನ್ನು ಎಲ್ಲಿ ಹೋದಾದಾಗ್ಲೂ ಹಿಂಬಳಿಸುವವರಾಗಿದ್ದಾರೆ. ದೈವಿಕ ಚಿಯೋನ್‌ಪರ್ವತವು ಅಪರ ಸ್ಥಾನವಾಗಿದೆ. ಇಬ್ರಿ. ೧೨, ೨೨. ಸ. ೭, ೪ಲ್ಲಿ ಬರದ ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಮಂದಿ ಇವರೇ.

೨. ಅವರನ್ನು ಕಂಡರೆ, ಅವರು ಕರ್ತನವರೆಂದು, ಕಾಣುತ್ತದೆ; ಯಾಕಂದರೆ ಕರ್ತನ ಹೆಸರು ಅವರ ಹಣೆಯಲ್ಲಿ ಬರದದೆ.

೩. ಅಂದರೆ, ವೀಣೆಗಳನ್ನು ಬಾರಿಸಿ ಹಾಡುವವರು.

೪. ದೇವರು ಮಾಡುವ ನೂತನ ಕಾರ್ಯಕ್ಕೆ ಹೊಸ ಹಾಡು ಹುಟ್ಟುತ್ತದೆ.

೫. ತಮಗೆ ಪ್ರಾಪ್ತವಾದ ವಿಶೇಷ ಬಹುಮಾನಕ್ಕೆ ಅವರು ಮಾಡುವ ಸ್ತೋತ್ರಗಾಯನವು ಮತ್ತಾರಿಬ್ಬರಿಗೆ ಯುಕ್ತವಾದದ್ದಲ್ಲ.

೬. ಅಂದರೆ, ಯೇಸುವನ್ನು ಶುದ್ಧ ಹೃದಯದಿಂದ ಮನಃಪೂರ್ವಕವಾಗಿ ಪ್ರೀತಿ ಮಾಡುವವರು. ದೇವಪ್ರೀತ್ಯಾಸಕ್ತರಲ್ಲಿ ಮೋಸವು ಇಲ್ಲ.

೭. ಸತ್ಯಹೃದಯವುಳ್ಳವನ ವಾಕ್ಯವೂ ಸತ್ಯವಾಗಿದೆ.

೮. ಅವರು ಸತ್ಯದಲ್ಲಿ ನೆಲೆಯಾಗಿದ್ದ ಕಾರಣ ಸೈತಾನನು ಅವರ ಮೇಲೆ ದೂರು ಹೇಳಲಾರದೆ ಹೋದನು. ಸ. ೧೨, ೧೧.

ಪ್ರಕ. ೧೪, ೬—೧೨.

ಉದ್ಘಾಟನಾವಾಕ್ಯವನ್ನು ಸಾರುವ ಮೂರು ದೂತರು. ವ. ೬—೧೨.

೬. ಮತ್ತು ಆಕಾಶ ಮಧ್ಯದಲ್ಲಿ ಹಾರುವ ಬೇರಾಬ್ಬ ದೂತನನ್ನು ಕಂಡೆನು. ಭೂನಿವಾಸಿಗಳಲ್ಲಿಯೂ, ಸಕಲ ಜನಾಂಗ, ಕುಲ, ಭಾಷೆ, ಪ್ರಜೆಗಳಲ್ಲಿಯೂ, ಪ್ರಸಂಗಿಸುವದಕ್ಕೆ ನಿತ್ಯವಾದ ಸುವಾರ್ತೆಯು ಅವನಿಗೆ ಇತ್ತು ೧). ೭. ಅವನು ಮಹಾ ಶಬ್ದದಿಂದ—ದೇವರಿಗೆ ಭಯ ಪಡಿರಿ ೨), ಅವನಿಗೆ ಮಹಿಮೆಯನ್ನು ಕೊಡಿರಿ; ಯಾಕಂದರೆ ಅವನ ನ್ಯಾಯಶಿಕ್ಷೆಯ ಘಳಿಗೆ ಬಂತು. ಆಕಾಶವನ್ನೂ, ಭೂಮಿಯನ್ನೂ, ಸಮುದ್ರವನ್ನೂ, ನೀರುಗಳ ಬುಗ್ಗೆಗಳನ್ನೂ ಮಾಡಿ ನಿರ್ಮಿಸಿದವನಿಗೆ ನಮಸ್ಕರಿಸಿರಿ ೩), ಅಂದನು. ೮. ಬೇರಾಬ್ಬ ದೂತನು ಅವನನ್ನು ಹಿಂಬಾಲಿಸಿ—ಬಿತ್ತು, ಬಿತ್ತು, ಮಹಾ ಪಟ್ಟಣವಾದ ಬಾಬೆಲು; ಯಾಕಂದರೆ ತನ್ನ ಜಾರತ್ವದ ಉಗ್ರದ ದ್ರಾಕ್ಷಾರಸವನ್ನು ಜನಾಂಗಗಳಿಗೆಲ್ಲಾ ಕುಡಿಸಿತು ೪), ಅಂದನು. ೯. ಮೂರನೇ ದೂತನು ಅವರನ್ನು ಹಿಂಬಾಲಿಸಿ, ಮಹಾ ಶಬ್ದದಿಂದ ಹೇಳಿದ್ದು, ಯಾವನಾದರೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸಿ, ತನ್ನ ಹಣೆಯ ಮೇಲಾದರೂ, ತನ್ನ ಕೈಯ ಮೇಲಾದರೂ, ಮುದ್ರೆ ಹಾಕಿಸಿಕೊಂಡಿದರೆ, ೧೦. ಅವನು ದೇವರ ಉಗ್ರದ ಪಾತ್ರೆಯಲ್ಲಿ ಬೆರಿಕೆಯಿಲ್ಲದೆ ಹಾಯಿದ ದೇವರ ಉಗ್ರದ ದ್ರಾಕ್ಷಾರಸವನ್ನು ಕುಡಿದು ೫), ಪರಿಶುದ್ಧ ದೂತರ ಮುಂದೆಯೂ, ಕುರಿಮರಿಯ ಮುಂದೆಯೂ, ಬೆಂಕಿ ಗಂಧಕಗಳಿಂದ ಪೀಡಿಸಲ್ಪಡುವನು. ೧೧. ಮತ್ತು ಅವರ ಪೀಡೆಯ ಹೊಗೆಯು ಎಂದೆಂದಿಗೂ ಏರುವದು; ಮೃಗಕ್ಕೂ ಅದರ ವಿಗ್ರಹಕ್ಕೂ, ನಮಸ್ಕರಿಸುವವರಿಗೂ, ಅದರ ಹೆಸರಿನ ಮುದ್ರೆಯನ್ನು ಹೊಂದುವವರಿಗೂ ೬), ರಾತ್ರಿ ಹಗಲು ಉಪಶಮನವಾಗದು ೭). ೧೨. ಇಲ್ಲಿ ಪರಿಶುದ್ಧರ ತಾಳ್ಮೆ ಉಂಟು ೮); ಇಲ್ಲಿ ದೇವರ ಕಟ್ಟಳೆಗಳನ್ನೂ, ಯೇಸುವಿನ ವಿಶ್ವಾಸವನ್ನೂ, ಕೈಕೊಳ್ಳುವವರು ಇದ್ದಾರೆ ೯).

೧. ಅನೇಕರು, ಈ ಯಥೋಕ್ತದ ದೂತರು ಸಕಲ ಜನಾಂಗ ಕುಲ ಭಾಷೆ ಪ್ರಜೆಗಳಲ್ಲಿ ಪ್ರಸಂಗ ಮಾಡುವದರಿಂದ, ಅವರು ದೇವದೂತರಲ್ಲಿ, ಸಹಾಬ್ಬಾಧಕರೆಂದು, ನೆನಸುತ್ತಾರೆ. ಕೆಲವರು, ಸತ್ಯವಾದ ಸುವಾರ್ತೆಯನ್ನು ವಿಲಾಯತಿಯಲ್ಲಿ ಪೌಸ್ತ್ಯಾಗಿ ಆತ್ಮ ಬಲದಿಂದ ಪ್ರಸಂಗಿಸಿದ ಸಹಾಪುನಸ್ಥಾಪಕನಾದ ಲುಥರನು ಇಲ್ಲಿ ಸೂಚಿತನಾಗಿದ್ದಾನೆಂದು, ಹೇಳುತ್ತಾರೆ. ಆದರೆ ಈ ವ್ಯಾಖ್ಯಾನವು ಈ ಸ್ಥಳದ ಯಥಾರ್ಥವಾದ ಅಭಿಪ್ರಾಯಕ್ಕೆ ಒಪ್ಪುವದಿಲ್ಲ; ಯಾಕಂದರೆ ಈ ದೂತನು ಸರ್ವಲೋಕನ್ಯಾಯನಿರ್ಣಯವು ಅತಿ ಸಮೀಪವಾದ ಕಾಲದಲ್ಲಿ ಕಾಣಿಸುತ್ತಾನೆ.

೨. ದೇವರ ಭಯವು ಮಾನಸಾಂತರದ ಆರಂಭವಾಗಿದೆ. ತದನಂತರ ಪ್ರೀತಿಯು ಪುಟ್ಟುತ್ತದೆ. ಭಯಕ್ಕೆ ಕೂಡುವ ಪೃಥೆಯನ್ನು ಸಂಪೂರ್ಣವಾದ ಪ್ರೀತಿಯು ಪರಿಹರಿಸುತ್ತದೆ. ದೇವಮಹಿಮಾಭಾವನೆಯಿಂದ ಭಕ್ತನ ಹೃದಯದಲ್ಲಿ ಪೃಥಾರಹಿತವಾಗಿ ಪುಟ್ಟುವ ಭಯವು ಅತ್ಯಂತ ಮನೋಹರವಾಗಿದೆ.

೩. ಮನುಷ್ಯರಿಗಿಂತ ಅತಿ ಘನವುಳ್ಳ ದೇವದೂತ

ರು, ಮನುಷ್ಯರಾದ ಭಕ್ತರು ದೇವರಿಗೆ ಮಾಡುವ ಆ ರಾಧನೆಯನ್ನು ನಾಶಪಡಿದರೆ, ಅಲ್ಪ ಮನುಷ್ಯರು ಮ ಹೋನ್ನತನಾದ ದೇವರ ಮುಂದೆ ತಮ್ಮನ್ನು ಯುಕ್ತ ವಾಗಿ ತಗ್ಗಿಸಿ ಕಾಳ್ಗವಡಿಲ್ಲವೆಂತಲೂ, ಪ್ರಾರ್ಥನೇ ಮಾಡುವದರಲ್ಲಿಯೂ ಸ್ತೋತ್ರ ಮಾಡುವದರಲ್ಲಿ ಯುಕ್ತವಾದ ಆಸಕ್ತಿರಹಿತರಾಗಿದ್ದಾರೆಂತಲೂ, ತಪ್ಪು ಹೊರಿಸಿಯಾರು.

೪. ದೂತನು ಬಬುಲೋನದ ನಾಶನವು ಅತಿಸ ಮೀಪವಾದದ್ದೆಂದು ತಿಳಿದು, ಬಾಬೆಲ್ ಬಿದ್ದದೆ ಎಂ ದು, ಕೂಗುತ್ತಾನೆ. ಬಬುಲೋನವು ರಾಮಪುರ ವಾಗಿದೆಂದು, ೧೩ನೆ ೧೪ನೆ ಸಂಧಿಗಳಲ್ಲಿ ಚನ್ನಾಗಿ ಕಾಣುತ್ತದೆ. ಅದರ ನಾಶನವು ಇನ್ನೂ ಭವಿಷ್ಯತ್ಕಾ ರ್ಯವಾಗಿರುವದರಿಂದ, ಅದನ್ನು ಸಾರುವ ದೂತನು ಸಹ ಮುಂದಿನ ಕಾಲದಲ್ಲಿ ಬರ ತಕ್ಕವನೆಂದು, ತೋ ರುತ್ತದೆ.

೫. ಮೃಗವು, ಅದರ ರೂಪು, ಅದರ ಹಚ್ಚೆಯು ಇವುಗಳಿಗೆ ಲೋಕದವರು ದೇವಾರಾಧನೆ ಮಾಡುವ ದರಿಂದ, ಅವು ದೇವಶಿಕ್ಷಾತಿಶಯೋದ್ದೀಪಕವಾಗಿವೆ. ಮೂರನೆ ದೂತನು ಸಹ ಇನ್ನು ಬರಲಿಲ್ಲವೆಂದು, ತೋರುತ್ತದೆ.

೬. ಮೃಗಕ್ಕೆ ಆರಾಧನೇ ಮಾಡಿದವರು ಮಾತ್ರವ ಲ್ಲ, ಅದಕ್ಕೆ ಹೊಣೆಗಾದರೂ ಅನುಕೂಲರಾದವರೆಲ್ಲ ರೂ ನಿರಂತರವಾದ ಶಾಪಕ್ಕೂ, ಶಿಕ್ಷೆಗೂ ಒಳಗಾಗು ತ್ತಾರೆ.

೭. ೯. ೧೦. ೧೧ನೆ ವಚನಗಳಲ್ಲಿ ಬರದ ಉ ದ್ಘೋಷನಾವಾಕ್ಯವು ಅತಿ ಭಯಂಕರವಾದದ್ದು. ಮನು ಷ್ಯರು, ಮರಣವು, ಸೈತಾನನು, ಇವರ ಭಯವನ್ನು ಹೊರೋಗಲಾಡಿಸ ತಕ್ಕ ಭಯವು ಈ ವಾಕ್ಯದ ಸ್ಮರಣೆ ಯಿಂದ ಭಕ್ತರಲ್ಲಿ ಹುಟ್ಟುವದು. ಯೇಸುವು ಮತ್ತಾ. ೧೦, ೧೮ರಲ್ಲಿ ಶಿಷ್ಯರಿಗೆ ಇದೇ ರೀತಿಯಾಗಿ ಉದ್ಘೋ ಷಿಸುತ್ತಾನೆ.

೮. ಜೀವದಲ್ಲಿಯೂ ಮರಣದಲ್ಲಿಯೂ ಯೇಸು ಕ್ರಿ ಸ್ತನಿಗೆ ಪೂರ್ಣವಾಗಿ ಅಧೀನರಾದ ಮನುಷ್ಯರು ದೇ ವವಾಕ್ಯದಲ್ಲಿ ಪರಿಶುದ್ಧರೆಂದು ಹೊಸಗರ್ಜಿಳ್ಳುತ್ತಾರೆ.

೯. ಕಠಿಣವಾದ ಈ ಶಾಸನೆಯಲ್ಲಿ ನಿರ್ಬಲರಾದ ಮನುಷ್ಯರು ದೃಢಶಾಲಿಗಳಾಗಿ, ಜಯವನ್ನು ಹೊಂದುವದು ಹೇಗೆ? ಅನುದಿನದ ನಡತೆಯಲ್ಲಿ ಭಯ ಭಕ್ತಿಯಿಂದಲೂ, ವಿಧೇಯತ್ವದಿಂದಲೂ ದೇವರನ್ನು ಸೇವಿಸುವ ಭಕ್ತರಾಳಿಗೆ, ನಿರ್ಬಲರನ್ನು ಜಯಶಾಲಿಗ ಳಾಗಿ ಮಾಡುವ, ದೇವರ ಸರ್ವತ್ರಾಣವು ಅಧಿಕವಾ ದ ಶಾಸನೆಯಲ್ಲಿ ವಿಶೇಷವಾಗಿ ಪ್ರಕಟವಾಗುವದು.

ದಿವದಿಂದ ಬರುವ ಸಮಾಧಾನ ವಾಕ್ಯವು. ವ. ೧೩.

೧೩. ಮತ್ತು ಪರಲೋಕದಿಂದಾದ ಶಬ್ದವನ್ನು ಕೇಳಿದೆನು. ಅದು ನನಗೆ ಹೇಳಿದ್ದೇನಂದರೆ, ಬರೆ--ಇನ್ನು ಮೇಲೆ ಕರ್ತನಲ್ಲಿ ಸಾಯುವ ಮರಣಸ್ಥರು ಭಾಗ್ಯವಂ ತರು; ಹೌದು, ಅವರು ತಮ್ಮ ಕಷ್ಟಗಳಿಂದ ವಿಶ್ರಾಂತಿಯಾಗುವರೆಂದು, ಆತ್ಮವು ಹೇಳುತ್ತದೆ; ಮತ್ತು ಅವರ ಕ್ರಿಯೆಗಳು ಅವರನ್ನು ಹಿಂಬಾಲಿಸುವವು.

೧೩ನೆ ವಚನದ ಅಭಿಪ್ರಾಯವನ್ನು ನೋಡಿದರೆ, ಇಲ್ಲಿ ಪ್ರತಿಕ್ರಿಸ್ತನ ಕಾಲದಲ್ಲಿ ಯೇಸು ಕ್ರಿಸ್ತನ ನಿಮಿತ್ತ ಪ್ರಾಣವನ್ನು ಬಿಡುವವರು ವಿಶೇಷ ಭಾಗ್ಯವಂತರೆಂದು, ಹೇಳಿರುವದಾಗಿ ತೋರುತ್ತದೆ. ಅವರ ಮೇಲೆ ಬರುವ ಕಷ್ಟವು ಅಧಿಕವಾಗಿರುವ ಪ್ರಕಾರ ಅವರಿಗೆ ಪ್ರಾಪ್ತವಾಗುವ ಫಲವು ಸಹ ಅಧಿಕವಾದದ್ದು. ಪೂರ್ವ ಕಾಲದಲ್ಲಿ ಸತ್ತ ಪ್ರಾಣಸಾಕ್ಷಿಗಳು ದೇವರಾಜ್ಯಮಹಿಮಾಬಾಧ್ಯತೆಯನ್ನು ಬಹು ಕಾಲ ನಿರೀಕ್ಷಿಸ ಬೇಕು. ಪ್ರತಿಕ್ರಿಸ್ತನ ಕಾಲದಲ್ಲಿ ಸಾಯುವವರಿಗೆ ಅತ್ಯಂತಕಷ್ಟಕಾಲಾಂತ್ಯದಲ್ಲಿ ತೊಡಗುವ ಕುರಿಮರಿಯ ವಿವಾ ಹೋತನದಲ್ಲಿ ಪರಮಾನಂದವು ಬೇಗ ದೊರಕುವದು.

ಪ್ರಕ. ೧೪, ೧೪—೨೦.

ದೂತರ ಮುಖಾಂತರ ಆಗುವ ಪೈರು ಫಲಗಳ ಕುಯಿಲು. ವ. ೧೪—೨೦.

೧೪. ಮತ್ತು ನಾನೋಡಲಾಗಿ[೧], ಇಗೋ, ಬಿಳಿಯ ಮೇಘವು; ಮತ್ತು ಮೇಘದ ಮೇಲೆ ಮನುಷ್ಯನ ಮಗನಿಗೆ ಸಮಾನನಾಗಿ[೨], ತನ್ನ ತಲೆಯ ಮೇಲೆ ಬಿನ್ನದ ಕಿರೀಟವೂ, ತನ್ನ ಕೈಯಲ್ಲಿ ಹದವಾದ ಕುಡುಗೋಲೂ[೩], ಉಳ್ಳವನಾಗಿ ಕೂತು ಕೊಂಡವನು. ೧೫. ಮತ್ತು ಬೇರೆ ದೂತನು ಮಂದಿರದೊಳಗಿಂದ ಹೊರಟು ಬಂದು, ಮೇಘದ ಮೇಲೆ ಕೂತು ಕೊಂಡವನಿಗೆ ಮಹಾ ಶಬ್ದದಿಂದ ಕೂಗಿ—ನಿನ್ನ ಕುಡು ಗೋಲನ್ನು ಹಾಕಿ, ಕೊಯ್ಯಿ; ಯಾಕಂದರೆ ಕೊಯ್ಯುವದಕ್ಕೆ ಕಾಲ ನಿನಗೆ ಬಂತು; ಭೂಮಿಯ ಬೆಳೆ ಬೆಳೆದು ಒಣಗಿದೆ[೪], ಅಂದನು. ೧೬. ಆಗ ಮೇಘದ ಮೇಲೆ ಕೂತು ಕೊಂಡವನು ತನ್ನ ಕುಡುಗೋಲನ್ನು ಭೂಮಿಯ ಮೇಲೆ ಹಾಕಿದನು. ಮತ್ತು ಭೂಮಿಯ ಬೆಳೆ ಕೊಯ್ಯಲ್ಪಟ್ಟಿತು. ೧೭. ಮತ್ತೊಬ್ಬ ದೂತನು ಪರಲೋಕದಲ್ಲಿರುವ ಮಂದಿರದೊಳಗಿಂದ ಹೊರಟು ಬಂದನು. ಅವನಿಗೂ ಹದವಾದ ಕುಡುಗೋಲು ಇತ್ತು. ೧೮. ಮತ್ತು ಬೆಂಕಿಯ ಮೇಲೆ ಅಧಿಕಾರ ಉಂಟಾದ ಇನ್ನೊಬ್ಬ ದೂತನು ಬಲಿಪೀಠದಿಂದ ಹೊರಟು ಬಂದು, ದೊಡ್ಡ ಧ್ವನಿಯಿಂದ ಕೂಗಿ, ಆ ಹದವಾದ ಕುಡುಗೋಲುಂಟಾದವನಿಗೆ—ನಿನ್ನ ಹದವಾದ ಕುಡುಗೋ ಲನ್ನು ಹಾಕಿ, ಭೂಮಿಯ ದ್ರಾಕ್ಷಿ ಗೊಂಚಲುಗಳನ್ನು ಕೊಯ್ಯಿ; ಯಾಕಂದರೆ ಅದರ ಫಲಗಳು ಮಾಗಿವೆ, ಅಂದನು. ೧೯. ಆಗ ದೂತನು ತನ್ನ ಕುಡುಗೋಲನು ಭೂಮಿಗೆ ಹಾಕಿ, ಭೂಮಿಯ ದ್ರಾಕ್ಷಿಬಳ್ಳಿಯನ್ನು ಕೊಯ್ದಿದು, ದೇವರ ಉಗ್ರದ ದೊಡ್ಡ ದ್ರಾಕ್ಷಿತೊಟ್ಟಿಯಲ್ಲಿ[೫] ಹಾಕಿದನು. ಈ ದ್ರಾಕ್ಷಿತೊಟ್ಟಿ ಪಟ್ಟಣದ ಹೊರಗೆ ತುಳಿಯಲ್ಪಟ್ಟಿತು[೬]. ೨೦. ಮತ್ತು ಸಾವಿರದ ಆರು ನೂರು ಸ್ತಾದ್ಯಗಳಷ್ಟು ದೂರದಲ್ಲಿ ಕುದುರೆ ಕಡಿವಾಣಗಳ ಮಟ್ಟಿಗೂ[೭] ದ್ರಾಕ್ಷಿತೊಟ್ಟಿಯಿಂದ ರಕ್ತವು ಹೊರಟಿತು.

೧. ಈ ಯಥಾಕ್ತವು ಹಿಂದಿನದಕ್ಕೆ ಬದ್ಧ ಸಂಬಂಧವಾಗಿದೆ. ಅಲ್ಲಿ ಪ್ರತಿಕ್ರಿಸ್ತನ ಕಾಲದಲ್ಲಿ ಸಾಯುವ ಪ್ರಾಣಸಾಕ್ಷಿಗಳ ಗತಿಯು, ಇಲ್ಲಿ ಪ್ರತಿಕ್ರಿಸ್ತನು ಅವನ ಪಕ್ಷದವರು ಇವರ ಗತಿಯು ವಿವರಿಸಿರುತ್ತದೆ.

೨. ಅಂದರೆ, ಮನುಷ್ಯನ ಪುಗಾಗೆ ಕಾಣುವ ದೂತನು. ಅವನು ಯೇಸು ಕ್ರಿಸ್ತನೆಂದು, ನೆನಸ ಕೆಲಸವಿಲ್ಲ.

೩. ಈ ಮಾತು ತ್ವರೆಯಾಗಿ ನಡಿಯುವ ಭಯಂಕರವಾಪ ಶಿಕ್ಷೆಯನ್ನು ಸೂಚಿಸುತ್ತದೆ.

೪. ನೀತಿವಂತರು ಸಿದ್ಧಿಗೂ, ಮಹಿಮೆಗೂ ಪಕ್ವರಾಗಿದ್ದಾರೆ.

೫. ಹರ್ಮಗೆದ್ದಾನದ ಯುದ್ಧದಲ್ಲಿ ಪ್ರತಿಕ್ರಿಸ್ತನಿಗೂ ಅವನ ಪಕ್ಷದವರಿಗೂ ಆಗುವ ಶಿಕ್ಷೆಯು ಇಲ್ಲಿ ಸೂಚಿತವಾಗಿದೆ.

೬. ಆ ರಣಭೂಮಿಯು ಯೆರೂಸಲೇಮಿಗೆ ಬಹಳ ದೂರವಾಗಿರುವದಿಲ್ಲ.

೭. ತಾಟ್ಪಿಯಂದರೆ, ರಣಭೂಮಿಯು. ಅದರಿಂದ ರಕ್ತಪ್ರವಾಹವು ಬಂದು, ಎಂಭತ್ತು ಪಾರದಾರಿ ದೂರಕ್ಕೆ ಪಾಸಾಗುವದು. ರಣಭೂಮಿಯಲ್ಲಿ ರಕ್ತವು ಕುದುರೆಗಳ ಪಾಸಾಟ್ಟೆಗೆ ತಗಲುವದು.

dd. ಕೋಪದ ಪಾತ್ರೆಗಳು. ಸ. ೧೫. ೧೬.

1. ಸಾಮಗ್ರಿಯು. ಸ. ೧೫.

೧. ಇದಲ್ಲದೆ ಪರಲೋಕದಲ್ಲಿ ದಾಡ್ಡ ಆಶ್ಚರ್ಯವಾದ ಮತ್ತಾಂದು ಗುರುತನ್ನು ಕಂಡೆನು; ಏನಂದರೆ, ದೇವರ ಉಗ್ರವನ್ನು ಶಿರಿಸುವಂಥ ಏಳು ಕಡ್ಯೆ ಬಾಧೆಗಳನ್ನು[೧] ಇಟ್ಟು ಕಾಂಡ ಏಳು ದೂತರು. ೨. ಮತ್ತು ಬೆಂಕಿ ಕಲತ ಗಾಜಿನ ಸಮುದ್ರವನ್ನೂ[೨], ಮೃಗವು, ಅದರ ವಿಗ್ರಹವು, ಅದರ ಮುದ್ರೆಯು, ಅದರ ಹೆಸರಿನ ಲೆಕ್ಕವು, ಇವುಗಳನ್ನು ಜಯಿಸಿದವರು ದೇವರ ವೀಣೆಗಳನ್ನು ಹಿಡು ಕಾಂಡು, ಆ ಗಾಜಿನ ಸಮುದ್ರದ ಮ್ಯಾಲೆ ನಿಂತಿರುವದನ್ನೂ, ಕಂಡೆನು[೩]. ೩. ಅವರು ದೇವರ ದಾಸನಾದ ಮ್ಯಾಶೆಯ ಹಾಡನ್ನೂ, ಕುರಿಮರಿಯ ಹಾಡನ್ನೂ ಹಾಡಿ, ಹ್ಯೇಳುವದ್ಯೇನಂದರೆ, ಸರ್ವ ಶಕ್ತನಾದ ಕರ್ತನಾಗಿರುವ ದೇವರ್ಯೇ, ನಿನ್ನ ಕ್ರಿಯೆಗಳು ದಾಡ್ಡವುಗಳೂ ಆಶ್ಚರ್ಯವಾದವುಗಳೂ ಆಗಿವೆ. ೪. ಪರಿಶುದ್ಧರ ಅರಸನ್ಯೇ, ನಿನ್ನ ಮಾರ್ಗಗಳು ನ್ಯೀತಿಯೂ ಸತ್ಯವೂ ಆದವುಗಳ್ಯೇ. ಕರ್ತನ್ಯೇ, ನಿನಗೆ ಭಯ ಪಡದೆ, ನಿನ್ನ ಹೆಸರನ್ನು ಮಹಿಮೆ ಪಡಿಸದೆ ಇರುವವನ್ಯಾರು[೪]? ಯಾಕಂದರೆ ನೀನಾಬ್ಬನ್ಯೇ ಪರಿಶುದ್ಧನು. ನಿನ್ನನ್ಯಾಯಗಳು ಪ್ರಕಟವಾದದರಿಂದ, ಜನಾಂಗಗಳೆಲ್ಲಾ ಬಂದು, ನಿನ ಮುಂದೆ ನಮಸ್ಕರಿಸುವರು[೫]. ೫. ಇವುಗಳ ತರುವಾಯ ನಾನು ನ್ಯೋಡಲಾಗಿ, ಇಗೋ, ಪರಲೋಕದಲ್ಲಿ ಸಾಕ್ಷಿಯ ಗುಡಾರದ ಮಂದಿರವು ತೆರೆಯಲ್ಪಟ್ಟಿತು. ೬. ಮತ್ತು ಏಳು ಬಾಧೆಗಳನ್ನು ಹಿಡುಕಾಂಡ ಏಳು ದೂತರು[೬], ಪವಿತ್ರವಾದ ಮಿಂಚುವ ನಾರು ವಸ್ತ್ರಗಳನುಟ್ಟು ಕಾಂಡು, ಹಾಂದಟ್ಟಿಗಳನ್ನು ಎದೆಗಳಿಗೆ ಕಟ್ಟಿ ಕಾಂಡು, ಮಂದಿರದಾಳಿಗಿಂದ ಹಾರಟು ಬಂದರು. ೭. ಮತ್ತು ನಾಲ್ಕು ಜ್ಯೀವಿಗಳಲ್ಲಿ ಒಂದು, ಯುಗಯುಗಾಂತರಗಳ ವರೆಗೂ ಬದುಕುವ ದೇವರ ಉಗ್ರದಿಂದ ತುಂಬಿರುವ ಏಳು ಚಿನ್ನದ ಪಾತ್ರೆಗಳನ್ನು ಏಳು ದೂತರಿಗೆ ಕಾಟ್ಟಿತು. ೮. ಆಗ ದೇವರ ಮಹಿಮೆಯಿಂದಲೂ, ಅವನ ಬಲದಿಂದಲೂ, ಮಂದಿರವು ಹಾಗೆ ತುಂಬಿತು; ಮತ್ತು ಏಳು ದೂತರ ಏಳು ಬಾಧೆಗಳು ತೀರುವ ಪರ್ಯಂತ ಯಾರೂ ಮಂದಿರದಲ್ಲಿ ಪ್ರವೇಶಿಸ ಕೂಡದೆ ಇತ್ತು[೭].

ಪ್ರಕ. ೧೬, ೧—೨.

೧. ತುತೂರಿಗಳಿಂದ ಸೂಚಿತವಾದ ಬಾಧೆಗಳು ಭೂಮಿಯ ಮತ್ತು ಸಮುದ್ರದ ವಿಶಿಷ್ಟದ ಮೇಲೆಯಲ್ಲ, ದಾಡ್ಡ ಭಾಗದ ಮೇಲೆ ಮಾತ್ರ ಬಿದ್ದವು. ಪಾತ್ರೆಗಳು ಸೂಚಿಸುವ ಬಾಧೆಗಳು ಸರ್ವಲೋಕದ ಮೇಲೆ ಮುಂದಿನ ಕಾಲದಲ್ಲಿ ಬೀಳುವವು. ಆದ್ದರಿಂದ ಅವುಗಳಿಗೆ ಕಡೇ ಬಾಧೆಗಳೆಂಬ ಪೆಸರಿದೆ.

೨. ಸಮುದ್ರವು ದಿವವಾಸಿಗಳಿಗೆ ಗಾಜಿನಂತೆ ಶಾಂತವಾಗಿಯೂ ನಿರ್ಮಲವಾಗಿಯೂ ತೋರುತ್ತದೆ; ಆದರೆ ಅದಕ್ಕೆ ಬೆರತ ಬೆಂಕಿಯು ಬರುವ ಶಿಕ್ಷೆಗಳನ್ನು ಸೂಚಿಸುತ್ತದೆ. ಈ ಸಮುದ್ರದ ವಿಧೃಮಾನವು, ಅಲ್ಲಿ ಶೇರಿ ನಿಂತವರಿಗೆ ತಿಳಿಯುತ್ತದೆ ಪೂರ್ತಾರ್ಜ, ನಮಗೆ ತಿಳಿಯುವದಿಲ್ಲ.

೩. ಈ ಸತ್ಯದ ಸಾಕ್ಷಿಗಳು ಸಪ್ತ ಕೋಪಪಾತ್ರೆಗಳ ಕಾಲದಲ್ಲಿ ಮಾತ್ರ ವಿಮುಕ್ತರಾದರೂ, ಯೋಪೂನಾನು ಪ್ರವಾದನಾದೃಷ್ಟಿಯಿಂದ ಅವರು ಎಲ್ಲಾ ವೃಥೆಗಳನ್ನು ಸಹಿಸಿ, ಗೆದ್ದು, ಮಹಿಮೆಯುಳ್ಳ ಜಯಶಾಲಿಗಳಾಗಿ, ಗಾಜಿನ ಸಮುದ್ರತೀರದಲ್ಲಿ ನಿಂತಿರುವದನ್ನು ನೋಡುತ್ತಾನೆ.

೪. ಗಾಜಿನ ಸಮುದ್ರದ ತೀರದಲ್ಲಿ ನಿಲ್ಲುವ ಜಯಶಾಲಿಗಳ ಜಯಶಕ್ತಿಯು ಇಂಥಾದ್ದಾಗಿದ್ದರೆ, ದೇವರ ಜಯರಹಿತವಾದ ಸಮೂಹಗಳ ಮಧ್ಯದಲ್ಲಿದ್ದು, ಪೂರೈಸಾಡುತ್ತಾ ಇರುವ ನಮ್ಮ ಜಯಶಕ್ತಿಯು ಎಷ್ಟೋ ಅತಿಶಯವಾಗಿರ ಬೇಕು!

೫. ವೈರಿಗಳು ಕಲಹ ಮಾಡುವಂಥ, ಶಕ್ತಿಹೀನರು ಥೂರೆತನ ನಡಿಸುವಂಥ, ಕಾಲದಲ್ಲಿ ದೇವರ ನ್ಯಾಯನಿರ್ಣಯವು ಮರೆಯಾಗಿದೆ. ಆದರೆ ಕರ್ತನು ತನ್ನ ಶತ್ರುಗಳನ್ನು ಸಂಹರಿಸುವಾಗ, ಜನಾಂಗಗಳೆಲ್ಲಾ ದೇವರ ಶಿಷ್ಟು ಬಿದ್ದಂತೆ ನಡುಗಿ, ದೇವರ ತ್ರಾಣವನ್ನೂ, ಮಹಿಮೆಯನ್ನೂ ವಿಜ್ಞಾಪಿಸುವರು.—ಈ ಜಯಶಾಲಿಗಳು ಆತ್ಮಸ್ತುತಿ ಮಾಡದೆ, ದೇವರಿಗೆ ಸ್ತೋತ್ರ ಮಾಡುತ್ತಾರೆ; ಯಾಕಂದರೆ: ಆತನ ಸ್ತೋತ್ರವು ಭಕ್ತರಿಗೆ ಪರಮಾನಂದಕರವಾಗಿದೆ. ನಾವು ಮುಖವನ್ನು ಮೇಲಕ್ಕೆತ್ತಿ, ಅಧಿಕ ದೇವಸ್ತೋತ್ರಾಸಕ್ತರಾಗಿರುವದು, ಮನಗುಂದಿ, ಆತ್ಮಶೋಧನೇ ಮಾಡುವದಕ್ಕೆ ಉದ್ಯುಕ್ತರಾಗಿರುವದಕ್ಕಿಂತ ಉತ್ತಮ. ಪೂರ್ತಿಗೆ ಮಾಡುವ ಭಕ್ತರ ಕೆಲಸವೆಲ್ಲಾ ಪೂರ್ಣವಾಗಿ ಕೈಗೂಡುವದು.

೬. ಪಾತ್ರೆಗಳೂ ದೂತರೂ, ದೇವರು ಪ್ರತಿಕ್ರಿಸ್ತನ ಪಕ್ಷದ ಲೋಕಕ್ಕೆ ಮಾಡುವ "ಅಂತ್ಯಶಿಕ್ಷೆಗಳಿಗೆ ಸೂಚಕರಾಗಿದ್ದಾರೆ. ಈ ಶಿಕ್ಷೆಗಳು ವಿಶೇಷವಾಗಿ ಸಾಕ್ಷಿಗಳಿಬ್ಬರ ಮುಖಾಂತರ ಲೋಕದಲ್ಲಿ ನಡೆಯುತ್ತವೆ.

೭. ಚೌಮಿಕವಾದ ಒಡಂಬಡಿಕೆಯ ಗುಡಾರಕ್ಕೆ ಮೂಲಮಾಧ್ರಿಯಾದ ದೈವಿಕ ಪರಿಶುದ್ಧ ಸ್ಥಾನವಾಗಿರುವ ಲಯವು ಪೂರ್ತಿಗೆ ತುಂಬಿದ ಸಂಗತಿಯು, ದೇವರ ಕೋಪವು ಪ್ರಕಟವಾಗುವದಕ್ಕೆ ತಾಡಗುವ ಕಾಲದಲ್ಲಿ ಆತನ ದೂತರೂ ಪರಿಶುದ್ಧರೂ ದೇವಾಲೋಚನಾಶೋಧನೆಯನ್ನು ಬಿಟ್ಟು, ವಿನಯವಾಗಿ ಕಾದುಕಾಂಡಿರುವದು ಯುಕ್ತವಾಗಿದೆಂಬುವದನ್ನು ಸೂಚಿಸುತ್ತದೆ.

2. ಸಪ್ತ ಪಾತ್ರೆಗಳು. ಸ. ೧೬.

ಮೊದಲನೆ ಪಾತ್ರೆಯು. ವ. ೧. ೨.

೧. ಮತ್ತು ಆ ವೆಳ್ಳು ದೂತರಿಗೆ, ನೀವು ಹೋಗಿ, ದೇವರ ಉಗ್ರದ ಪಾತ್ರೆಗಳಿಂದು ಭೂಮಿಯ ಮೇಲೆ ಹೊಯ್ಯಿರಿ, ಎಂದು ಹೇಳುವಂಥ, ಮಂದಿರದಿಂದಾದ, ಮಹಾ ಶಬ್ದವನ್ನು(?) ಕೇಳಿದೆನು. ೨. ಆಗ ಮೊದಲನೆಯವನು ಹೊರಟು ಹೋಗಿ, ತನ್ನ ಪಾತ್ರೆಯನ್ನು ಭೂಮಿಯ ಮೇಲೆ ಹೊಯಿದನು. ಆಗ ಮೃಗದ ಮುದ್ರೆ ಹೊಂ

ಪ್ರಕ. ೧೬, ೩—೭.

ದಿದವರಾಗಿ, ಅದರ ವಿಗ್ರಹಕ್ಕೆ ನಮಸ್ಕರಿಸುವ ಮನುಷ್ಯರಿಗೆ ಕೆಟ್ಟ ಕಾಳಕ ಹುಣ್ಣು ೨) ಉಂಟಾಯಿತು.

೧. ಇದು ದೇವರ ಶಬ್ದವು; ಯಾಕಂದರೆ ಆತನಾ ಬ್ಬನೇ ಪರಿಶುದ್ಧಾಲಯದಲ್ಲಿದ್ದಾನೆ.

೨. ಈ ಪುಣ್ಣಿಗೆ ಮದ್ದು ಇಲ್ಲ.

ಎರಡನೆ ಪಾತ್ರೆಯು. ವ. ೩.

೩. ಮತ್ತು ಎರಡನ್ಯೆ ದೂತನು ತನ್ನ ಪಾತ್ರೆಯನ್ನು ಸಮುದ್ರದಲ್ಲಿ ಹೊಯಿದನು. ಅದು ಸತ್ತವನ ರಕ್ತದಂತೆ ೧) ರಕ್ತವಾಯಿತು; ಮತ್ತು ಸಮುದ್ರದಲ್ಲಿ ಬದುಕುವ ಪ್ರಾಣಿಗಳೆಲ್ಲಾ ಸತ್ತು ಹೊದವು ೨).

೧. ಸತ್ತವನ ರಕ್ತವೆಂಬ ಮಾತು ಅತಿ ಭಯಂಕರವಾದ ಶಿಕ್ಷೆಗೆ ಚಿನ್ಹೆಯಾಗಿದೆ.

೨. ಸಮುದ್ರವೆಂಬದು ಈ ಉಗ್ರದ ಪಾತ್ರೆಗಳ ದರ್ಶನದಲ್ಲಿ ವಿಲಾಯತಿಯ ಜನಾಂಗಗಳನ್ನು ಮಾತ್ರ ಸೂಚಿಸುವದಿಲ್ಲವೆಂದು, ತಾ೧ರುತ್ತದೆ.

ಮೂರನೆ ಪಾತ್ರೆಯು. ವ. ೪—೭.

೪. ಮತ್ತು ಮೂ೧ನ್ಯೆ ದೂತನು ತನ್ನ ಪಾತ್ರೆಯನ್ನು ನದಿಗಳಲ್ಲಿಯೂ ನೀರು ಬುಗ್ಗೆಗಳಲ್ಲಿಯೂ ಹೊಯಿದನು. ಅವು ರಕ್ತವಾದವು. ೫. ಮತ್ತು ನೀರುಗಳ ದೂತನು—ಇರುವವನೂ ಇದ್ದವನೂ ಪರಿಶುದ್ಧನೂ ಆಗಿರುವ ಕರ್ತನ್ಯೆ, ನೀನು ಇ೧ನ್ಯಾಯಗಳನ್ನು ತೀರಿಸಿದ್ದರಿಂದ ನೀತಿವಂತನಾಗಿದ್ದಿ ೧); ೬. ಯಾಕಂದರೆ ಪರಿಶುದ್ಧರ ಪ್ರವಾದಿಗಳ ರಕ್ತವನ್ನು ಚೆಲ್ಲಿದ್ದಾರೆ; ಮತ್ತು ರಕ್ತವನ್ನು ಅವರಿಗೆ ಕುಡಿಯ ಕೊಟ್ಟಿದ್ದಿ ೨); ಅದಕ್ಕೆ ಪಾತ್ರರಾಗಿದ್ದಾರೆ, ಎಂದು ಹೇಳುವದನ್ನು ಕೇಳಿದೆನು. ೭. ಮತ್ತೊಬ್ಬನು ಬಲಿಪೀಠದಾಳಗಿಂದ, ಹೌದು, ಸರ್ವ ಶಕ್ತನಾಗಿರುವ ಕರ್ತನಾದ ದೇವರ್ಯೆ, ನಿಂನ ನ್ಯಾಯತೀರ್ಪುಗಳು ಸತ್ಯವೂ ನೀತಿಯೂ ಆದವುಗಳ್ಯೆ ಎಂದು ಹೇಳುವದನು ಕೇಳಿದೆನು.

೧. ದೂತನು ಪಾತ್ರೆಯನ್ನು ಮಗುಚುವಾಗ, ಇದು ನ್ಯಾಯವಾದ ಶಿಕ್ಷೆಯಂದು, ಹೇಳಲು, ಪ್ರಾಣಿ ಸಾಕ್ಷಿಗಳು ವಿಶ್ರಮಿಸಿ ಕಾಳ್ಳುವ ಬಲಿಪೀಠದಿಂದ ಹೊರಡುವ ಶಬ್ದವು ದೂತನ ವಾಕ್ಯವನ್ನು ದೃಢಪಡಿಸುತ್ತದೆ.

೨. ಮೋಶೆಯ ಕಾಲದಲ್ಲಿ ನೀಲನದಿಯು ರಕ್ತಮಯವಾದಾಗ, ಮಿಚ್ರದವರು ತಾ೧ಡಿದ ಜಾವಿಗಳಲ್ಲಿ ಕುಡಿಯುವದಕ್ಕೆ ನೀರು ದೊರಕಿತು; ಆದರೆ ಇವರು ರಕ್ತವನ್ನೇ ಕುಡಿಯ ಬೇಕು.

(ಪ್ರಕ. ೧೬, ೪—೧೨.

ನಾಲ್ಕನೆ ಪಾತ್ರೆಯು. ವ. ೮. ೯.

೮. ನಾಲ್ಕನ್ಯೇ ದೂತನು ತನ್ನ ಪಾತ್ರೆಯನ್ನು ಸೂರ್ಯನ ಮೇಲೆ ಹೊಯಿದನು. ಮತ್ತು ಬೆಂಕಿಯಿಂದ ಮನುಷ್ಯರನ್ನು ಸುಡ ಅವನಿಗೆ ಕೊಡಲ್ಪಟ್ಟಿತು. ೯. ಆಗ ಮನುಷ್ಯರು ದೊಡ್ಡ ಕಾವಿನಿಂದ ಸುಡಲ್ಪಟ್ಟು, ಈ ಬಾಧೆಗಳ ಮೇಲೆ೧) ಅಧಿಕಾರ ಉಂಟಾದ ದೇವರ ಹೆಸರನ್ನು ದೂಷಿಸಿ, ಅವನಿಗೆ ಮಹಿಮೆ ಕೊಡುವದಕ್ಕೆ ಮಾನಸಾಂತರ ಪಡಲಿಲ್ಲ೨).

೧. ಮನುಷ್ಯರು ಒಂದೇ ಬಾಧೆಯ ನಿಮಿತ್ತವಲ್ಲ, ಎಲ್ಲಾ ಬಾಧೆಗಳ ನಿಮಿತ್ತ ದೇವರನ್ನು ದೂಷಿಸುತ್ತಾರೆಂಬದರಿಂದ ಈ ಬಾಧೆಗಳು ಪರಂಪರೆಯಾಗಿ ಬೇಗ ಬರುತ್ತವೆಂದು ಕಾಣುತ್ತದೆ.

೨. ಈ ಮಾತಿನಿಂದ, ದುಷ್ಟರು ಪರದಲ್ಲಿ ದೇವರ ಶಿಕ್ಷೆಯನ್ನು ಅನುಭವಿಸುವದರಿಂದ ಮಾನಸಾಂತರವನ್ನೈದುವರೆಂಬ ಭಾವನೆಯು ವ್ಯರ್ಥವಾದದ್ದೆಂದು, ತೋರುತ್ತದೆ. ನಿರಾಶೆಯಾದವರಿಗೆ ದೇವರ ಶಿಕ್ಷೆಯಿಂದ ಗುಣವಾಗುವದಿಲ್ಲವೇ ಇಲ್ಲ.

ಐದನೆ ಪಾತ್ರೆಯು. ವ. ೧೦. ೧೧.

೧೦. ಐದನ್ಯೇ ದೂತನು ತನ್ನ ಪಾತ್ರೆಯನ್ನು ಮೃಗದ ಸಿಂಹಾಸನದ ಮೇಲೆ೧) ಹೊಯಿದನು. ಆಗ ಅದರ ರಾಜ್ಯವು ಕತ್ತಲಾಯಿತು; ೧೧. ಮತ್ತು ಅವರು ಕಷ್ಟದ ನಿಮಿತ್ತ ತಮ್ಮ ನಾಲಿಗೆಗಳನ್ನು ಕಚ್ಚಿ ಕೊಂಡು, ತಮ್ಮ ಕಷ್ಟಗಳ ನಿಮಿತ್ತವೂ ತಮ್ಮ ಹುಣ್ಣುಗಳ ನಿಮಿತ್ತವೂ೨) ಪರಲೋಕದ ದೇವರನ್ನು ದೂಷಿಸಿ, ತಮ್ಮ ಕ್ರಿಯೆಗಳಿಂದ ಬಿಟ್ಟು ಮಾನಸಾಂತರ ಪಡಲಿಲ್ಲ೩).

೧. ದೇವರ ಅಭಿಷಿಕ್ತನೆಂದು, ಮನುಷ್ಯರಿಂದ ಪೂಜೆಯನ್ನು ಪೊಂದುವ ಮೃಗವೆಂಬ ಪ್ರತಿಕ್ರಿಸ್ತನು ರಾಜ್ಯಾಭಿಷಿಕ್ತನಾದ ಅರಸನಾಗಿ, ನೇಮಕವಾದ ಸ್ಥಳದಲ್ಲಿ ಸಿಂಹಾಸನಾರೂಢನಾಗಿದ್ದಾನೆ.

೨. ಬಾಧೆಗಳೂ, ಬೇನೆಗಳೂ ಹೆಚ್ಚುತ್ತಾ ಹೆಚ್ಚುತ್ತಾ ಬರುವಲ್ಲಿ, ದುಷ್ಟರು ಅವುಗಳನ್ನು ತಾಳಲಾರದೆ, ಕಾಪ ಭ್ರಷ್ಟರಾಗುತ್ತಾರೆ.

೩. ತಮ್ಮ ಕೃತ್ಯಗಳು ನ್ಯಾಯವಾದವುಗಳೆಂದು, ಸೌಖ್ಯಕಾಲದಲ್ಲಿ ನೆನಸಿದ ಪ್ರಕಾರ, ಶಿಕ್ಷಾಕಾಲದಲ್ಲಿಯೂ ನೆನಸಿ, ತಮಗುಂಟಾದ ಬಾಧೆಯು ಅನ್ಯಾಯವೆಂದು ನಂಬಿ, ದೇವರಿಗೆ ಪೆಚ್ಚಾಗಿ ಪಗೆ ಮಾಡುತ್ತಾರೆ.

ಆರನೆ ಪಾತ್ರೆಯು. ಪ. ೧೬—೧೬.

೧೨. ಆರನ್ಯೇ ದೂತನು ತನ್ನ ಪಾತ್ರೆಯನ್ನು ಪ್ರಾತ ಎಂಬ ಮಹಾ ನದಿಯ ಮೇಲೆ ಹೊಯಿದನು. ಆಗ ಸೂರ್ಯೋದಯದಿಂದ ಬರುವ ಅರಸರ ಮಾರ್ಗ

ಪ್ರಕ. ೧೬, ೧೩—೧೬.

ವು೧) ಸಿದ್ಧವಾಗುವ ಹಾಗೆ, ಅದರ ನೀರು ಒಣ್ಣಿ ಹೋಯಿತು. ೧೩. ಆಗ ಗಡ ಸರ್ಪದ ಬಾಯಿಯೊಳಗಿಂದಲೂ, ಮೃಗದ ಬಾಯಿಯೊಳಗಿಂದಲೂ, ಸುಳ್ಳು ಪ್ರವಾದಿಯ ಬಾಯಿಯೊಳಗಿಂದಲೂ ೨), ಕಪ್ಪೆಗಳಿಗೆ ಸಮಾನವಾಗಿರುವ ಮೂರು ಅಶುದ್ಧವಾದ ಆತ್ಮಗಳನ್ನು ಕಂಡೆನು. ೧೪ ಅವು ಅದ್ಭುತಗಳನ್ನು ಮಾಡುವ ದೆವ್ವಗಳ ಆತ್ಮಗಳೇ. ೧೪. ಅವು, ಸರ್ವ ಶಕ್ತನಾದ ದೇವರ ಮಹಾ ದಿನದ ಯುದ್ಧಕ್ಕೆ ಅವರನ್ನು ಕೂಡಿಸುವದಕ್ಕಾಗಿ ಲೋಕದ ಅರಸುಗಳ ಬಳಿಗೆ ಹೋಗಬೇಕಾಗಿತ್ತು. ೧೫. ಇಗೋ, ಕಳ್ಳನಂತೆ ಬರುತ್ತೇನೆ ೩). ಎಚ್ಚರವಾಗಿದ್ದು, ಅವನು ಬೆತ್ತಲೆಯಾಗಿ ಸಂಚರಿಸದ ಹಾಗೆಯೂ, ಅವನ ನಾಚಿಕೆಯನ್ನು ಅವರು ಕಾಣದ ಹಾಗೆಯೂ, ತನ್ನ ವಸ್ತ್ರಗಳನ್ನು ಕಾಪಾಡಿ ಕಾಯ್ದುವವನು ಧನ್ಯವಂತನು. ೧೬. ಆಗ ಅವನು ಅವರನ್ನು ಇಬ್ರಿಯ ಮಾತಿನಲ್ಲಿ ಅರ್ಮಗೆದ್ದೋನೆಂದು ೪) ಕರೆಯಲ್ಪಟ್ಟ ಸ್ಥಳಕ್ಕೆ ಕೂಡ ಕರೆದನು ೫).

೧. ಫ್ರಾತಿಗೆ ಮೋಶೆಯ ಮೊದಲನೆ ಪುಸ್ತಕದಲ್ಲಿಯೇ ಮಹಾ ನದಿ ಯಂಬ ಪೆಸರುಂಟು. ಈ ನದಿಯು ದವೀದ ಸಾಲಾಮೋನರ ಕಾಲದಲ್ಲಿ ಇಸ್ರಾಯೇಲ ರಾಜ್ಯಕ್ಕೆ, ತರುವಾಯ ರೋಮಾಯ ಸಾಮ್ರಾಜ್ಯಕ್ಕೆ ಮೂಡಣ ಎಲ್ಲೆಯಾಗಿತ್ತು. ಐಫ್ರತಿನ ಮೂಡಣದಲ್ಲಿ ಫರ್ಸ, ಲಿಂದು, ಚೀನ, ತರ್ತರ ದೇಶಗಳುಂಟು. ದನಿ. ೧೧, ೪೪ರ ಪ್ರಕಾರ ಪ್ರತಿ ಕ್ರಿಸ್ತನು ಮಿಚ್ರದಲ್ಲಿ ಮೂಡಣ ಬಡಗ ದಿಕ್ಕುಗಳಿಂದ ಬರುವ ಆರ್ಭಟವನ್ನು ಕೇಳಿ, ಪೆದರಿ, ಪಲೆಸ್ತೀನಕ್ಕೆ ಹಿಂತಿರುಗುತ್ತಾನೆ. ಈ ಆರ್ಭಟವು ಈಶಾನ್ಯದಿಕ್ಕಿನಲ್ಲಿ ಅವನಿಗೆ ವಿರೋಧವಾಗಿ ಕೂಡುವ ಸೈನ್ಯದಿಂದ ಪುಟ್ಟಿ ಬೇಕು. ಐಫ್ರತು ಒಕಸ್ಮಾತ್ತಾಗಿ ಬತ್ತಿ ಹೋದ ಕಾರಣ ಆ ಸೈನ್ಯದ ಮಾರ್ಗವು ಸರಾಗವಾಗುತ್ತದೆ.

೨. ದಿವದಲ್ಲಿರುವ ಸಾಕ್ಷಿಗಳಿಗೆ ಎಲ್ಲಾ ಕೇಡಿಗೆ ಮೂಲಕರಾದ ಮೂವ್ವರು ಪ್ರತಿಕೂಲರಾಗಿದ್ದಾರೆ: ತಂದೆಯಾದ ದೇವರಿಗೆ ಘಟಸರ್ಪನೆಂಬ, ಈ ಲೋಕದ ಅಧಿಪತಿಯಾದ, ಸೈತಾನನೂ, ಕ್ರಿಸ್ತನಿಗೆ ಮೃಗವೆಂಬ ಪ್ರತಿಕ್ರಿಸ್ತನೂ, ಪರಿಶುದ್ಧಾತ್ಮಕ್ಕೆ ಅಬದ್ಧಪ್ರವಾದಿಯೂ ಪ್ರತಿಕೂಲರಾಗಿದ್ದಾರೆ. ದೇವರು ತನ್ನ ಮಗನಿಗೆ ಸರ್ವಾಧಿಕಾರವನ್ನು ಕಾಟ್ಟ ಪ್ರಕಾರ, ಸೈತಾನನು ತನ್ನ ಅಧಿಕಾರವನ್ನೆಲ್ಲಾ ಮೃಗವೆಂಬ ಪ್ರತಿಕ್ರಿಸ್ತನಿಗೆ ಒಪ್ಪಿಸುತ್ತಾನೆ. ಪರಿಶುದ್ಧಾತ್ಮವು ಕ್ರಿಸ್ತನನ್ನು ಮಹಿಮೆ ಪಡಿಸುವ ಪ್ರಕಾರ, ಅಬದ್ಧಪ್ರವಾದಿಯು ಮೃಗದ ಪೂಜೆಗೆ ಸಹಾಯ ಮಾಡುತ್ತಾನೆ. ಒಡ್ಡು ಕೂಡಿದ ಈ ಮೂವ್ವರಿಂದ ಪುಟ್ಟುವ ಮೂರು ಅಶುದ್ಧಾತ್ಮಗಳಲ್ಲಿ ಅವುಗಳ ಜನ್ಮಚಿಹ್ನೆಯು ಪರಿಷ್ಕಾರವಾಗಿ ತೋರುತ್ತದೆ. ೧೪ ಅವುಗಳು ಕ್ರಿಸ್ತನ ಶತ್ರುಗಳನ್ನೆಲ್ಲಾ ಅತಿವೇಗದಿಂದ ಒಟ್ಟು ಕೂಡಿಸುತ್ತವೆ. ಆಗ ಯುದ್ಧ ಮಾಡಿ ಜಯಿಸುವದಕ್ಕೆ ದೇವರ ಸರ್ವಾಯುಧವು ಚಕ್ಕರಿಗೆ ಅತ್ಯವಶ್ಯವಾಗಿದೆ.

೩. ಸರ್ವಕಾಲ ಎಚ್ಚರವಾಗಿರ ಬೇಕೆಂದು, ಯೇಸು ಕ್ರಿಸ್ತನು ಶಿಷ್ಯರನ್ನು ಉದ್ಬೋಧಿಸಿದ್ದಾನೆ. ಅಂತರ್ಮನುಷ್ಯನು ಪರಿಶುದ್ಧಾತ್ಮದಿಂದ ಬದುಕಿ, ಆತ್ಮಿಕ ವರಗಳನ್ನೂ, ದೇವಕೃಪೆಯಿಂದ ಪುನರ್ಜಾತವಾದ ಸ್ವಭಾವದ ವರಗಳನ್ನೂ ಪ್ರಯೋಗಿಸುವದರಲ್ಲಿ ಉದ್ಯುಕ್ತನಾಗಿದ್ದು, ದೇವರ ಬೆಳಕಿನಲ್ಲಿ ನಡದು ಕಾಂಡು, ಆತ್ಮಸ್ವಾಧೀನನಾಗಿದ್ದರೆ, ಚಕ್ತನು ಜಾಗರೂಕನಾಗಿದ್ದಾನೆ. ಐಫ್ರತು ಬತ್ತಿ ಹೋದರೆ, ಕರ್ತನ ಆಗಮನವು ಅತಿ ಸಮೀಪವಾಯಿತೆಂದು ತಿಳಿದು ಕಾಂಡು, ಮೆಚ್ಚಾಗಿ ಎಚ್ಚರವಾಗಿರ ಬೇಕು.

ಪ್ರಕ. ೧೬, ೧೭—೨೧.

೪. ಪಾರ್ಮಗೆದ್ದಾನ್ ಸಮಾಸಪದವಾಗಿದೆ. ಪಾರ್ ಅಂದರೆ ಗಿರಿ. ಮೆಗಿದ್ದಾ ಧರಾಮಧ್ಯಸಮುದ್ರತೀರಕ್ಕೆ ಸಮೀಪವಾದ ಒಂದು ಪಟ್ಟಣದ ಪೆಸರಾಗಿದೆ. ಸಾಲಾಮೋನನು ಪಲೆಸ್ತೀನದ ಮಧ್ಯೋತ್ತರ ಭಾಗಗಳನ್ನು ಸಮುದ್ರ ಕಡೆಯಲ್ಲಿ ಬಲಕಾಯಿಸುವ ಬಗ್ಗೆ ಆ ಪಟ್ಟಣಕ್ಕೆ ಕಾಟೆಯನ್ನು ಕಟ್ಟಿಸಿದನು. ಅದಕ್ಕೆ ಸಮೀಪವಾದ ಬಯಲಿಗೆ ಮೆಗಿದ್ದಾತಗ್ಗೆಂಬ ಪೆಸರುಂಟು. ಅದರ ಪುತ್ತರ ಕರ್ಮೆಲೆಂಬ ಎತ್ತರವಾದ ಬೆಟ್ಟ ಇರುತ್ತದೆ; ಇದಕ್ಕೆ ಪಾರ್ಮಗೆದ್ದಾನ್ ಎಂಬ ಪೆಸರು. ಆ ಸ್ಥಳದಲ್ಲಿ ಯಾಶೀಯನೆಂಬ ಅರಸನು ಸತ್ತ ಯುದ್ಧವು ಉಂಟಾಯಿತು. ೨ ಅರ. ೨೩, ೨೯ ಇತ್ಯಾದಿ. ೨ ನಡ. ೩೫, ೨೨—೨೫. ನಪಾಲೆಯೋನನೆಂಬ ಫ್ರೆಂಚರ ಮಹಾರಾಜನು ಸಹ ಅಲ್ಲಿ ಯುದ್ಧ ಮಾಡಿದನು. ಆದರೆ ಬೇರಾಂದು ತರದ ಯುದ್ಧವು ಮುಂದಿನ ಕಾಲದಲ್ಲಿ ಅಲ್ಲಿ ಸಂಭವಿಸುವದು. ಸಂಥಿ. ೧೯.

೫. ಆತನು ನ್ಯಾಯನಿರ್ಣಯಕ್ಕಾಗಿ ಶತ್ರುಗಳನ್ನು ಅಲ್ಲಿ ಕೂಡಿಸುತ್ತಾನೆ. ಅಶುದ್ಧಾತ್ಮಗಳು ಬರುವ ಕರ್ತನ ಚಿತ್ತಕ್ಕೆ ಸ್ವವಿರುದ್ಧವಾಗಿ ಅನುಕೂಲವಾಗಿರಬೇಕು.

ಏಳನೆ ಪಾತ್ರೆಯು. ವ. ೧೭—೨೧.

೧೭. ಏಳನೇ ದೂತನು ತನ್ನ ಪಾತ್ರೆಯನ್ನು ಆಕಾಶದಲ್ಲಿ ಹಾಯಿದನು. ಮತ್ತು ಪರಲೋಕದ ಮಂದಿರದಾಳಿಗಿಂದ, ಸಿಂಹಾಸನದ ಕಡೆಯಿಂದ, ಆಯಿತು [೧]) ಎಂದು ಒಂದು ಶಬ್ದವು ಹೊರಟಿತು. ೧೮. ಮತ್ತು ಶಬ್ದಗಳೂ ಗುಡುಗುಗಳೂ ಮಿಂಚುಗಳೂ ಉಂಟಾದವು. ಮತ್ತು ದೊಡ್ಡ ಭೂಕಂಪ ಉಂಟಾಯಿತು. ಅಷ್ಟು ದೊಡ್ಡ ಭೂಕಂಪವು ಮನುಷ್ಯರು ಭೂಮಿಯ ಮೇಲೆ ಇದ್ದಾರಭ್ಯ ಉಂಟಾಗಲಿಲ್ಲ. ೧೯. ಮಹಾ ಪಟ್ಟಣವು [೨]) ಮೂರು ಭಾಗವಾಯಿತು. ಮತ್ತು ಜನಾಂಗಗಳ ಪಟ್ಟಣಗಳು ಬಿದ್ದವು [೩]). ಮತ್ತು, ಅದಕ್ಕೆ ದೇವರ ಉಗ್ರ ಕೋಪವೆಂಬ ದ್ರಾಕ್ಷಾರಸದ ಪಾತ್ರೆಯನ್ನು [೪]) ಕೊಡ ಬೇಕೆಂದು, ದೊಡ್ಡ ಬಾಬೆಲು ದೇವರ ಮುಂದೆ ಜ್ಞಾಪಕವಾಯಿತು. ೨೦. ಆಗ ದ್ವೀಪಗಳೆಲ್ಲಾ ಓಡಿ ಹೋಗಿ, ಪರ್ವತಗಳು ಕಾಣದೆ ಹೋದವು [೫]). ೨೧. ಮತ್ತು ಹೆಚ್ಚು ಕಡಿಮೆ ತಲಾಂತ ಭಾರವಾದ ದೊಡ್ಡ ಕಲ್ಮಳೆಯು [೬]) ಆಕಾಶದಿಂದ ಮನುಷ್ಯರ ಮೇಲೆ ಬಿತ್ತು. ಆ ಕಲ್ಮಳೆಯ ಬಾಧೆಗಾಗಿ ಸ್ಕರ, ಅದರ ಬಾಧೆ ಮಹಾ ದೊಡ್ಡದಾಗಿರುವದರಿಂದ, ಮನುಷ್ಯರು ದೇವರಂನು ದೂಷಿಸಿದರು [೭]).

೧. ಅಂದರೆ, ಏಳು ಪಾತ್ರೆಗಳ ಸೇಚನೆಯು ಶೀಘ್ರವಾಗಿತು.

೨. ಈ ದೊಡ್ಡ ಪಟ್ಟಣವು ಪರಜನಪಟ್ಟಣಗಳಿಗೆ ಬೇಧವಾಗಿರುವದರಿಂದ, ಅದು ಯೆರೂಸಲೇಮೆಂದು ತಿಳಿದು ಕಾಳ್ಳಬೇಕು. ಸ. ೧೧, ೮.

೩. ಮಹಾನಗರಗಳು ಪೂರ್ವಕಾಲದಿಂದಲಾ ಕದಲ್ಲಿ ಬಹಳ ಪ್ರಖ್ಯಾತವಾಗಿರುತ್ತಾ ಬಂದವು. ಕಡೇ ಕಾಲದಲ್ಲಿ ಮಹಾ ದೊಡ್ಡ ಪಟ್ಟಣಗಳ ಮೇಲೆ ವಿಶೇಷವಾದ ನಷ್ಟವು ಬರುತ್ತದೆ. ದೊಡ್ಡ ರಾಜ್ಯಗಳಲ್ಲೆಲ್ಲಾ ಈಗ ದೊಡ್ಡ ಪಟ್ಟಣಗಳು ಅಪರೂಪವಾಗಿ ಬೆಳೆಯುತ್ತವೆ.

೪. ವಿಶೇಷವಾದ ಶಿಕ್ಷೆಯು ಪ್ರತಿಕ್ರಿಸ್ತನ ಸ್ಥಾನವಾ

ದ ಬಬುಲೋನಕ್ಕೆ ನೇಮಕವಾಗಿದೆ. ಬೇರೆ ಜನರು ಉಗ್ರದ ಪಾತ್ರದಲ್ಲಿ ಕುಡಿದರು; ಬಬುಲೋನದವರು ಏನೂ ಉಳಿಯದಂತೆ ಎಲ್ಲಾನ್ನು ಕುಡಿಯ ಬೇಕು.

೫. ದ್ವೀಪಗಳು ನ. ೬, ೧೪ರ ಪ್ರಕಾರ ತಮ್ಮ ಸ್ಥಳಗಳನ್ನು ಬಿಡುವದರಿಂದಲೂ, ಪರ್ವತಗಳು ಅಳಿಗುವದರಿಂದಲೂ, ಭೂಮಿಯ ಮೇಲು ಭಾಗವೆಲ್ಲಾ ಬೇರೆಯಾಗುತ್ತದೆ. ಇದಕ್ಕೆ ಸಕ. ೧೪, ೧೦. ೨ಪೇತ್ರ. ೩, ೧೦. ಸರಿ ನೋಡ ಬೇಕು.

೬. ಅಂದರೆ, ೨, ೩ ಮಣಿದ ಕಲ್ಲುಗಳ ಮಳೆಯು. ಭೂಕಂಪದಿಂದ ನಾಶವಾಗದವರ ಮೇಲೆ ಕಲ್ಮಳೆಯು ಬೀಳುವದು. ಸಕ. ೧೩, ಲಲ್ಲಿ ಏಳು ಬಾಧೆಗಳಿಂದ ಮನುಷ್ಯರ ಮೂರನೆ ಭಾಗವು ನಾಶವಾಗುತ್ತದೆಂದು ತಾತ್ಪರ್ಯವಾಗಿದೆ.

೭. ನಾಲ್ಕನೆ ಐದನೆ ಪಾತ್ರಗಳಲ್ಲಿ, ಮನುಷ್ಯರು ಮಾನಸಾಂತರವಾಗದೆ, ದೇವರನ್ನು ದೂಷಿಸುತ್ತಾರೆಂದು ಬರದದೆ. ಇಲ್ಲಿ ಮಾನಸಾಂತರದ ಮಾತು ಮಾತ್ರವಾದರೂ ಕಾಣುವದಿಲ್ಲ; ಕಡೇ ಬಾಧೆಯ ಕಾಲದಲ್ಲಿ ಮುಂಚೆ ಮಾನಸಾಂತರ ಪಡಲಾಲ್ಲದೆ ಇದ್ದ ದುಷ್ಟರು ಮಾನಸಾಂತರ ಪಡಲಾರದೆ ಇದ್ದಾರೆ.

ee. ಬಬುಲೋನವು. ಅಗಾಧಜನ್ಯಮೃಗವು. ಸ. ೧೭.

ಬಬುಲೋನ ಮೃಗಗಳ ದರ್ಶನವು. ವ. ೧—೬.

೧. ಆಗ ಏಳು ಪಾತ್ರೆಗಳನ್ನು ಹಿಡಿದು ಕೊಂಡ ಏಳು ದೂತರಲ್ಲಿ ಒಬ್ಬನು ಬಂದು, ನನ್ನ ಸಂಗಡ ಮಾತಾಡಿ, ಇಲ್ಲಿ ಬಾ, ಅನೇಕ ನೀರುಗಳ ಮೇಲೆ ಕೂತು ಕೊಂಡ[೧] ದೊಡ್ಡ ಜಾರೆಯ[೨] ನ್ಯಾಯ ಶಿಕ್ಷೆಯನ್ನು ನಿನಗೆ ತೋರಿಸುವೆನು, ಎಂದು ನನಗೆ ಹೇಳಿದನು. ೨. ಅವಳ ಸಂಗಡ ಭೂರಾಜರು ಜಾರತ್ವ ಮಾಡಿ[೩], ಅವಳ ಜಾರತ್ವದ ದ್ರಾಕ್ಷಾರಸದಿಂದ ಭೂನಿವಾಸಿಗಳು ಮತ್ತರಾದರು[೪]. ೩. ಆಗ ಅವನು ಆತ್ಮದಲ್ಲಿ ನನ್ನನ್ನು ಅರಣ್ಯಕ್ಕೆ ಕರಕೊಂಡು ಹೋದನು[೫]. ಆಗ, ದೂಷಣೆಯ ಹೆಸರುಗಳಿಂದ ತುಂಬಿ, ಏಳು ತಲೆಗಳೂ ಹತ್ತು ಕೊಂಬುಗಳೂ ಉಂಟಾದ[೬], ಅಳಿ ಬಣ್ಣದ ಮೃಗದ ಮೇಲೆ ಕೂತು ಕೊಂಡ ಸ್ತ್ರೀಯನ್ನು[೭] ಕಂಡೆನು. ೪. ಮತ್ತು ಸ್ತ್ರೀಯು ರಕ್ತಾಂಬರವನ್ನೂ, ಅಳಿ ಬಣ್ಣದ ವಸ್ತ್ರವನ್ನೂ, ಉಟ್ಟು ಕೊಂಡು, ಬಿನ್ನ ರತ್ನ ಮುತ್ತುಗಳಿಂದ ಅಲಂಕರಿಸಲ್ಪಟ್ಟು[೮], ತನ್ನ ಜಾರತ್ವದ ಅಸಹ್ಯಗಳಿಂದಲೂ, ಅಶುದ್ಧತ್ವದಿಂದಲೂ, ತುಂಬಿರುವ[೯] ಬಿನ್ನದ ಪಾತ್ರೆಯನ್ನು ಕೈಯ್ಯಲ್ಲಿ ಹಿಡಿದು ಕೊಂಡಿದ್ದಳು. ೫. ಅವಳ ಹಣೆಯ ಮೇಲೆ, ಮರ್ಮವು, ಜಾರತ್ವಗಳಿಗೂ, ಭೂಮಿಯ ಅಸಹ್ಯಗಳಿಗೂ ತಾಯಿಯಾದ[೧೦] ದೊಡ್ಡ ಬಾಬೆಲೂ, ಎಂಬ ಹೆಸರು[೧೧] ಬರೆದಿತ್ತು. ೬. ಮತ್ತು ಆ ಸ್ತ್ರೀಯು ಪರಿಶುದ್ಧರ ರಕ್ತದಿಂದಲೂ ಯೇಸುವಿನ ಸಾಕ್ಷಿಗಳ ರಕ್ತದಿಂದಲೂ ಮತ್ತಳಾಗಿರುವದನ್ನು[೧೨] ಕಂಡೆನು. ಅವಳನ್ನು ಕಂಡು, ಮಹಾ ಆಶ್ಚರ್ಯದಿಂದ ಆಶ್ಚರ್ಯ ಪಟ್ಟೆನು[೧೩].

ಪ್ರಕ. ೧೭, ೭—೯.

೧. ೧೫ನೆ ವಚನ ನೋಡಿದರೆ, ಈ ಮಾತಿನ ಅ ರ್ಥಾಭಿಪ್ರಾಯ ಕಾಣುತ್ತದೆ.

೨. ಇದು ಸ. ೨೧, ೯ಕ್ಕೆ ಪ್ರತಿಕೂಲವಾದ ನೋ ಟವು ಸ. ೧೨, ೧೪ಲ್ಲಿ ಅರಣ್ಯಕ್ಕೆ ಓಡಿ ಹೋದ ಸ್ತ್ರೀಯು ಈಗ ಜಾರೆಯಾಗಿದ್ದಾಳೆ.

೩. ಅಂದರೆ, ಅವಳಿಗೆ ಪೂಜೆ ಮಾಡಿದವರು. ಇ ದಕ್ಕೆ ಎಜೆ. ಸ. ೨೩. ನೋಡ ಬೇಕು.

೪. ಅಂದರೆ, ಅವರ ಬುದ್ಧಿ ಮರುಳಾದ್ದರಿಂದ ಸ್ವ ಸ್ಥವಾದ ಆಲೋಚನೆ ಮಾಡಲಾರರು.

೫. ಇದು ಸ. ೧೨, ೧೪ಲ್ಲಿ ಸೂಚಿಸಿದ ಅರಣ್ಯ ವಾಗಿದೆ.

೬. ಇದಕ್ಕೆ ವ. ೧೦. ೧೨ ಸರಿ ನೋಡ ಬೇಕು.

೭. ಸ್ತ್ರೀಯು ಸ. ೧೨, ೧೪ಲ್ಲಿ, ಮೃಗವು ೧೩ನೆ ಸಂಧಿಯಲ್ಲಿ ಕಾಣುತ್ತದೆ. ಸ್ತ್ರೀಯಂದರೆ, ಪಾಪನ ಪ ಕ್ಷದ ಸಭೆಯು.

೮. ಕೆಂಪು ರೋಮಾಯಸಂಸ್ಥಾನಕ್ಕೆ ರೂಢಿಯಾದ ಪರ್ಣವಾಗಿದೆ. ಅದು ಗರ್ವವಾದ ಅಟ್ಟಪೋಷಕ್ಕೆ ಅನುಕೂಲವಾಗಿದೆ. ಚಿಂಗಾರ, ರತ್ನ, ಮುತ್ತು ಮುಂ ತಾದ್ದು ರೋಮಾಯ ಸಭೆಯ ಮೆರವಣಿಗೆಗಳಲ್ಲಿ ಬಹಳವಾಗಿ ಮೆರೆಯುತ್ತದೆ.

೯. ಅಂದರೆ, ಜನರ ಮನಸ್ಸುಗಳನ್ನು ಮೋಸಗಾ ಳಿಸಿ ಕೆಡಿಸುವ ದುರ್ಬೋಧನೆಗಳು.

೧೦. ಈ ಮಾತಿನಿಂದ, ಸ್ತ್ರೀಯು ಪರಜನಸ್ಥಾನ ವಾದ ರೋಮಪುರವನ್ನಲ್ಲ, ಪಾಪನ ರಾಜಧಾನಿ ಯಾದ ರೋಮಪುರವನ್ನು ಸೂಚಿಸುವಳೆಂದು ತೋ ರುತ್ತದೆ. ಯಾಕಂದರೆ ಪರಜನರಾದ ರೋಮಾಯರು ತಮಗೆ ವಶವಾದ ಪರಜನರಾದ ಅರಸುಗಳನ್ನು ತ ಮ್ಮ ಮತದಲ್ಲಿ ಶೇರಿಸಲಿಲ್ಲ. ಬೇರೆ ಬೇರೆ ಸಭೆಗಳು ರೋಮಪುರದ ಮಾತೃಸಭೆಗೆ ಅಧೀನವಾಯಿದ್ದು ಇ ಲ್ಲಿ ಸೂಚಿಸಿರುತ್ತದೆ.

೧೧. ಮರ್ಮವೆಂಬ ಮಾತು, ಬಾಬೆಲೆಂಬ ಪೆ ಸರಿಗೆ ಅನ್ಯಾಭಿಪ್ರಾಯ ಉಂಟೆಂದು ತೋರಿಸುತ್ತದೆ.

೧೨. ಪೂರ್ವಕಾಲದ ರೋಮಪುರಕ್ಕೆ ಪ್ರಾಣ ಸಾಕ್ಷಿಗಳ ಕಾಲೆಮಣಿಯಂದು ಪೆಸರಾಯಿತು. ಆ ದರೆ ಪಾಪರ ರಾಜಧಾನಿಯಾದ ರೋಮಪುರದ ರ ಕ್ತಾಪರಾಧವು ಬಹಳ ಪೆಚ್ಚಾಯಿತು. ಒಂದೇ ಒಂ ದು ಮೊದಲಿನ ಮೂರು ಶತಮಾನಗಳಲ್ಲಿ ರೋಮಾ ಯ ಮಹೋರಾಜರು ಕಾಂದು ಹೋಕಿಸಿದವರಿಗಿಂತ ಪೆಚ್ಚಾದ ಪ್ರಾಣಸಾಕ್ಷಿಗಳನ್ನು ೧೬ನೆ ಶತಮಾನದ ಲ್ಲಿ ಪಾಪರು ಸಂಹರಿಸಿದರು. ಯೇಸುವಿನ ಸಾಕ್ಷಿಗಳಂ ದರೆ, ಪುಸ್ಸನು ಮೊದಲಾದ ಸಹಾಬೋಧಕರು.

೧೩. ಕ್ರಿಸ್ತನ ಪೆಸರನ್ನು ಧರಿಸಿ ಕಾಂದ ಸಭೆಯು ಇಂಥಾ ರಕ್ತಪ್ರಿಯಳಾದ ಜಾರೆಯಾದದ್ದು ಚಾಲೈದು ವೇ ಸರಿ.

ದರ್ಶನದ ಅಭಿಪ್ರಾಯವು. ವ. ೭—೧೮.

ಮೃಗವು. ವ. ೭—೧೩.

೭. ಆಗ ದೂತನು ನನಗೆ ಹೇಳಿದ್ದು, ಯಾಕೆ ಆಶ್ಚರ್ಯ ಪಟ್ಟಿ? ಈ ಸ್ತ್ರೀಯ ಮರ್ಮವನ್ನೂ, ಅವಳನ್ನು ಹೊತ್ತು ಕೊಳ್ಳುವಂಥ ಏಳು ತಲೆಗಳೂ ಹತ್ತು ಕೊಂ ಬುಗಳೂ ಉಂಟಾದ ಮೃಗದ ಮರ್ಮವನ್ನೂ, ನಾನು ನಿನಗೆ ಹೇಳುತ್ತೀನೆ. ೮. ನೀ ನು ಕಂಡ ಮೃಗವು ಇತ್ತು; ಇಗ ಇಲ್ಲ; ಅಗಾಧದಾಳಗಿಂದ ಎದ್ದು ಬಂದು ೧), ನಾಶನಕ್ಕೆ ಹೋಗುವದಕ್ಕೆ ಇರುತ್ತದೆ. ಮತ್ತು ಇದ್ದಂಥ, ಇದ್ದರೂ ಇಲ್ಲದಂಥ, ಮೃ ಗವನ್ನು ನೋಡಿ ೨), ಜೀವದ ಪುಸ್ತಕದಲ್ಲಿ ಜಗದುತ್ಪತ್ತಿ ಮೊದಲುಗೊಂಡು ಹೆಸ ರು ಬರೆಯಲ್ಪಡದ ಭೂನಿವಾಸಿಗಳು ಆಶ್ಚರ್ಯ ಪಡುವರು. ೯. ಇಲ್ಲಿಯೇ ಜ್ಞಾ

ಪ್ರಕ. ೧೭, ೧೦—೧೧.

ನವುಳ್ಳ ಬುದ್ಧಿಯು. ಈ ಏಳು ತಲೆಗಳು, ಸ್ತ್ರೀಯು ಕೂತು ಕೊಂಡಿರುವ ಏಳು ಬೆಟ್ಟಗಳಾಗಿವೆ. ೧೦. ಮತ್ತು ಏಳು ಅರಸರು ಇದ್ದಾರೆ i). ಐದು ಮಂದಿ ಬಿದ್ದರು; ಒಬ್ಬನು ಇದ್ದಾನೆ ii); ಮತ್ತೊಬ್ಬನು ಇನ್ನು ಬರಲಿಲ್ಲ. ೧೧. ಅವನು ಬಂದಾಗ, ಸ್ವಲ್ಪ ಕಾಲ ಇರ ಬೇಕು iii). ಮತ್ತು ಇದ್ದಂಥ, ಇಲ್ಲದಂಥ, ಮೃಗವು ತಾನೇ ಎಂಟನೇ ದಾಗಿಯೂ, ಈ ಏಳರಲ್ಲಿ ಒಂದಾಗಿಯೂ, ಇದ್ದು, ನಾಶನಕ್ಕೆ ಹೋಗುತ್ತದೆ iv).

೧. ಈ ಸ್ಥಳದಲ್ಲಿ ಪಾಪಸಂಸ್ಥಾನವು ಮುಂಚಿನ ಬಲವನ್ನು ಕಳದು ಕಾಂಡು ಹೀನವಾದದ್ದಾಗಿ ತಾನೀರುವ ಕಾಲವು ಸೂಚಿತವಾಗಿದೆ. ಆದರೆ ಅದು ತಿರಿಗಿ ಅಗಾಧದಿಂದ ಏರಿ, ಖೇದರೂಪವಾಗಿ ಕಾಣಿಸಿ, ಬಲವಾದ ಸಂಸ್ಥಾನವಾಗಿ ವ. ೧೮., ಎಲ್ಲಾ ಲೌಕಿಕ ಅರಸುಗಳನ್ನು ತನ್ನ ವಶ ಮಾಡಿ ಕಾಂಡು, ಯೇಸು ಕ್ರಿಸ್ತನಿಗೆ ವಿರೋಧವಾಗಿ ಅತ್ಯಂತ ಶಕ್ತಿಯುಳ್ಳ ವೈರಿಯಾಗಿ ಯುದ್ಧ ಮಾಡಿ, ಪ್ರತಿಕ್ರಿಸ್ತನಾಗಿ ಕಾಣಿಸುವದು. ಈಗ ಅದು ಕ್ರಿಸ್ತನ ಪೂರ್ಣ ವೈರಿಯಾಗಿ ತಾನೀರುವದಿಲ್ಲ; ಯಾಕಂದರೆ ಪ್ರತಿಕ್ರಿಸ್ತನ ಕೆಲವು ಲಕ್ಷಣಗಳು ಅದರಲ್ಲಿ ಕಾಣಿಸಿದರೂ, ಅದಕ್ಕೆ ಕ್ರೈಸ್ತವೇಷ ವಿನ್ನೂ ಉಂಟು. ಹೀಗಾಗಿಂದರೆ ರೋಮಾಯ ಸಭೆಯು ತ್ರೈಕನಾದ ದೇವರನ್ನೂ, ಯೇಸು ಕ್ರಿಸ್ತನ ಮಾನುಷಾವತಾರವನ್ನೂ, ಆತನ ಮರಣದಿಂದುಂಟಾದ ವಿಮೋಚನೆಯನ್ನೂ ಇತ್ಯಾದಿ ಬಾಧನೆಗಳನ್ನು, ಮನುಷ್ಯಕಲ್ಪಿತ ಬಾಧನೆಗಳಿಗೆ ಬೆರಸಿ, ವಿಚ್ಛಾಪಿಸುತ್ತದೆ. ಮತ್ತು ಈ ವರೆಗೂ ಅವಿಶ್ವಾಸಿಗಳನ್ನು ಪ್ರತಿಕ್ಷಿಸುತ್ತದೆ. ಆದರೆ ಅದು ಅಗಾಧದಿಂದ ಏರುವ ಕಾಲದಲ್ಲಿ ಕ್ರೈಸ್ತವೇಷವನ್ನು ಪೂರ್ಣವಾಗಿ ಬಿಸಾಟು, ಲೌಕದಲ್ಲಿ ಪ್ರಬಲವಾದ ಅವಿಶ್ವಾಸವನ್ನು ತನ್ನ ದುರ್ವಿಶ್ವಾಸದಿಂದ ನುಂಗಿ ಬಿಡುವದು.

೨. ಈ ಮರ್ಮವಾದ ಮೋಸಕ್ಕೆ ಭಕ್ತರು ಅತಿ ಜಾಗರೂಕರಾಗಿರ ಬೇಕು. ತಿರಿಗಿ ಬಲಗಾಳ್ಳುವ ಪಾಪಸಂಸ್ಥಾನವನ್ನು ದೇವರು ಉದ್ಧರಿಸುತ್ತಾನೆಂದು ನೆನಸುವದು ಮಾತ್ರ ಶಾಪಗ್ರಸ್ತನ ಲಕ್ಷಣವೆಂದು ಇಲ್ಲಿ ಬರಹವೆ.

೩. ರೋಮಪುರದ ಏಳು ಗುಡ್ಡಗಳು ಪಾಪಸಂಸ್ಥಾನದ ಏಳು ಕಾಲಗಳನ್ನೂ, ರೋಮಪುರವು ರೋಮಾಯಸಭೆಯನ್ನೂ ಸೂಚಿಸುತ್ತವೆ ಎಂದು, ಅನೇಕ ವ್ಯಾಖ್ಯಾನಿಗಳು ಹೇಳುತ್ತಾರೆ.

೪. ಪಾಪಸಂಸ್ಥಾನದ ಮೊದಲಿನ ಐದು ಕಾಲಗಳು, ಇಲ್ಲಿ ಪ್ರವಾದನೆಯಲ್ಲಿ ಸೂಚಿತವಾದ ಕಾಲದಲ್ಲಿ, ಕಳದು ಹೋಗಿವೆ. ಆರನೇದು ಈಗ ನಡಿಯುತ್ತದೆ. ಹೀಗಿರಲಾಗಿ ಈ ಪ್ರವಾದನೆಯು ಈಗ ಇರುವವರಾದ ನಮಗೆ ಅತ್ಯುಪಯೋಗವಾಗಿದೆ.

೫. ಏಳನೆಯವನು ಇನ್ನು ಬರ ತಕ್ಕವನು. ಅವನು ಪಾಪಸಂಸ್ಥಾನವನ್ನು ಪುನಸ್ಥಾಪಿಸುವಾಗ, ಅದರ ಏಳನೆ ಕಾಲ ತಾಡಗುವದು. ಆದರೆ ಈ ಏಳನೆ ಅರಸನು ಬೇರೆ, ಪ್ರತಿಕ್ರಿಸ್ತನು ಬೇರೆ; ಯಾಕಂದರೆ: ಪಾಪಮನುಷ್ಯನು ಮೊದಲು ಲೌಕಿಕ ಚಕ್ರವರ್ತಿಯಾಗಿ ಬಂದು, ಅಗಾಧದಿಂದ ತಂದ ಪ. ಲ. ತ್ರಾಣಗಳಿಂದ ಪಾಪಸಂಸ್ಥಾನವನ್ನು ನೂತನವಾಗಿ ಅಭಿವೃದ್ಧಿ ಮಾಡುವನು. ತದನಂತರವೇ ಅದನ್ನು ನಾಶ ಮಾಡುವನು. ಈ ಏಳನೆ ಕಾಲವು ಕಿಂಚಿತ್ತಾಗಿರುವದು.

೬. ಕ್ರಿಸ್ತನಿಗೆ ಪ್ರತಿಯಾದವನಾಗಿ ಅಲ್ಲ, ತಾನೇ ಕ್ರಿಸ್ತನೆಂದು ಹೇಳಿ ಕಾಂಡು, ಪ್ರತಿಕ್ರಿಸ್ತನಾಗಿ ಪಾಪಸಂಸ್ಥಾನವನ್ನು ನಾಶ ಮಾಡುವ ಕಡೇ ಪಾಪನು ಮುಂಚೆ ಬಲಿಷ್ಠನಾಗಿದ್ದು, ಬಳಿಕ ಬಲಹೀನನಾಗಿ, ಪ್ರತಿಕ್ರಿಸ್ತನಾಗಿ ಎಂಟನೆಯವನಾಗಿ ಬರುತ್ತಾನೆ. ಆದರೆ ಪಾಪಸಂಸ್ಥಾನದ ಏಳನೆ ಕಾಲದಲ್ಲಿ ಪಾಪನ ಸಿಂಹಾಸನದಲ್ಲಿ ಕೂತು ಕಾಂಡದರಿಂದ ಏಳರಲ್ಲಿ ಒಬ್ಬನಾಗಿದ್ದಾನೆ. ಅವನ ಅಂತ್ಯವೇ ಆಜ್ಞಾನಿರ್ಣಯವಾಗಿದೆ. ಸ. ೧೯, ೨೦.

ಪುತ್ತು ಕೊಂಬು. ಪ. ೧೨—೧೪. ೧೬—೧೭. ಜಾರಸ್ತ್ರೀಯು. ಪ. ೧೫. ೧೮.

೧೨. ಮತ್ತು ನೀನು ಕಂಡ ಹತ್ತು ಕೊಂಬುಗಳು, ಹತ್ತು ಮಂದಿ ಅರಸರು. ಅವರು ರಾಜ್ಯವನ್ನು ಇನ್ನೂ ಹೊಂದಲಿಲ್ಲ, ಆದರೆ ಮೃಗದ ಸಂಗಡ ಒಂದು ತಾಸು ಅರಸರಾಗಿ ಅಧಿಕಾರ ಹೊಂದುತ್ತಾರೆ ೧). ೧೩. ಇವರು ಏಕ ಮನಸ್ಸುಳ್ಳವರಾಗಿದ್ದಾರೆ; ತಮ್ಮ ಬಲವನ್ನೂ ಅಧಿಕಾರವನ್ನೂ ಮೃಗಕ್ಕೆ ಒಪ್ಪಿಸಿಕೊಡುವರು ೨). ೧೪. ಇವರು ಕುರಿಮರಿಯ ಸಂಗಡ ಯುದ್ಧ ಮಾಡುವರು ೩); ಮತ್ತು ಕುರಿಮರಿಯು ಅವರನ್ನು ಜಯಿಸುವದು. ಯಾಕಂದರೆ ಅವನು ಕರ್ತರ ಕರ್ತನೂ, ಅರಸರ ಅರಸನೂ, ಆಗಿದ್ದಾನೆ. ಮತ್ತು ಅವನ ಸಂಗಡ ಇರುವವರು ಕರೆಯಲ್ಪಟ್ಟವರೂ, ಆಯಲ್ಪಟ್ಟವರೂ, ನಂಬಿಕೆಯುಳ್ಳವರೂ, ಆಗಿದ್ದಾರೆ. ೧೫. ಮತ್ತು ಅವನು ನನಗೆ ಹೇಳಿದ್ದು, ಜಾರೆಯು ಕೂತು ಕೊಂಡಲ್ಲಿ ನೀನು ಕಂಡ ನೀರುಗಳು, ಪ್ರಜೆಗಳೂ, ಸಮೂಹಗಳೂ, ಜನಾಂಗಗಳೂ, ಭಾಷೆಗಳೂ, ಆಗಿವೆ. ೧೬. ಮತ್ತು ಮೃಗದ ಮೇಲೆ ನೀನು ಕಂಡ ಹತ್ತು ಕೊಂಬುಗಳಾದ ಇವರು, ಜಾರೆಯನ್ನು ಹಗೆ ಮಾಡಿ, ಅವಳನ್ನು ಹಾಳೂ ಬೆತ್ತಲೆಯೂ ಮಾಡಿ, ಅವಳ ಮಾಂಸವನ್ನು ತಿಂದು, ಅವಳನ್ನು ಬೆಂಕಿಯಿಂದ ಸುಟ್ಟು ಬಿಡುವರು ೪). ೧೭. ಯಾಕಂದರೆ, ದೇವರ ವಚನಗಳು ಇಡ್ಯೇರುವ ಪರ್ಯಂತ, ಏಕ ಮನಸ್ಸಾಗಿದ್ದು, ತಮ್ಮ ರಾಜ್ಯವನ್ನು ಮೃಗಕ್ಕೆ ಕೊಟ್ಟು, ಅವನ ಆಲೋಚನೆಯನ್ನು ನಡಿಸುವ ಹಾಗೆ, ದೇವರು ಅವರ ಹೃದಯಗಳನ್ನು ಪ್ರೇರಿಸಿದ್ದಾನೆ ೫). ೧೮. ಮತ್ತು ನೀನು ಕಂಡ ಸ್ತ್ರೀಯು, ಭೂರಾಜರ ಮೇಲೆ ರಾಜತ್ವವನ್ನು ಹೊಂದಿದ ಆ ಮಹಾ ಪಟ್ಟಣವಾಗಿದ್ದಾಳೆ ೬).

೧. ಇಲ್ಲಿ ಸೂಚಿತವಾದ ಕಾಲದಲ್ಲಿ ಈ ಪುತ್ತು ಮಂದಿಯು ಅರಸುಗಳಾಗಿರುವದಿಲ್ಲ, ಅವರು ರಾಜ ವಂಶದವರಲ್ಲವೆಂದು ತಾತ್ಪರ್ಯವಿರುತ್ತದೆ.

೨. ಅವರು ಏಕಮತ್ಯದಿಂದ, ಪಾಪಮನುಷ್ಯನು ತಮ್ಮ ಒಡೆಯನೆಂದು ವಿಜ್ಞಾಪಿಸುವರು.

೩. ಅಂದರೆ, ಪ್ರತಿಕ್ರಿಸ್ತನ ಮೇಲೆ ಬರುವ ಸೈನ್ಯದ ಸಂಗಡ ಯುದ್ಧ ಮಾಡುವರು. ಪುನಾಗಾದರೆ ಪ್ರತಿಕ್ರಿಸ್ತನ ಬುದ್ಧಿಗೂ ಬಲಕ್ಕೂ ಅಧೀನವಾಗದ ಒಂದು ದೇಶವುಳಿಯುವದು. ಮೂಡಣದಿಂದಲೂ, ಬಡಗಿನಿಂದಲೂ ಪ್ರತಿಕ್ರಿಸ್ತನ ಅಂತ್ಯವಾದ ಯುದ್ಧಕ್ಕೆ ಬರುವ ಸೈನ್ಯವು ಆ ದೇಶದ್ದೆಂದು ನೆನಸಬೇಕು. ಅಗಾಧಜನ್ಯಮೃಗವು ಇಬ್ಬರು ಸಾಕ್ಷಿಗಳನ್ನು ಕಾಂದು ಪುನಾಕಿದ ಮೇಲೆ, ಅಂತ್ಯವಾದ ಯುದ್ಧವು ಪುರ್ಮಗೆದ್ದಾನದಲ್ಲಿ ಉಂಟಾಗುವದು. ಸ. ೧೯.

೪. ಅವರು ಅಬದ್ಧ ಸಖತೆಯನ್ನು ಪುಗೆ ಮಾಡಿ, ಆ ಸಖತೆಯವರನ್ನು ಸಂಪುರಿಸಿ, ಅದರ ಐಶ್ವರ್ಯವನ್ನೂ ನಿಕ್ಷೇಪಗಳನ್ನೂ ಸೂರೆ ಮಾಡಿ, ಅದರ ಮಹಿಮೆಯನ್ನು ಅಳಿಸುವರು. ಜಾರಸ್ತ್ರೀಗೆ ಸ. ೧೮ಲ್ಲಿ ಪಟ್ಟಣವು ಸಮಾನಾಜಿಪ್ರಾಯವುಳ್ಳ ಸಾದೃಶ್ಯವಾಗಿದೆಯೆಂದು, ನೆನಪು ಮಾಡಿ ಕಾಳ್ಳ ತಕ್ಕದ್ದು.

೫. ಪುನಾಗಾದರೆ ಪ್ರತಿಕ್ರಿಸ್ತನ ಪಕ್ಷದವರು ಸಪುಲಾಕವನ್ನು ಅತ್ಯಂತ ಬುದ್ಧಿಯಿಂದಲೂ, ತ್ರಾಣದಿಂದಲೂ ಆಳುವ ದೇವರ ಕೈಗಾಳಗಾಗಿದ್ದಾರೆ. ಶತ್ರು

ಗಳೆಲ್ಲರೂ ನಾಶವಾಗುವ ಕ್ರಿಸ್ತನ ದಿನದ ವರೆಗೂ ಅವರು ದೇವರ ಆಲೋಚನೆಯನ್ನು ಸ್ವವಿರುದ್ಧವಾಗಿ ನೆರವೇರಿಸುವದಕ್ಕೆ ಉಪಯೋಗವಾಗಿದ್ದಾರೆ.

೬. ಪಟ್ಟಣವು ಆತ್ಮಿಕವಾದ ವಿಸ್ತಾರ ರಾಜ್ಯವನ್ನಾಳುವ ಸಭೆಯ ಸಾದೃಶ್ಯವಾಗಿದೆ.

ff. ಬಬುಲೋನಿನ ನಾಶನಿಮಿತ್ತವಾದ ಶೋಕವೂ ಸ್ತೋತ್ರವೂ. ಸ. ೧೪.

ಬಬುಲೋನಿನ ನಾಶವು. ೧—೪.

೧. ಇವುಗಳ ತರುವಾಯ, ಮಹಾ ಅಧಿಕಾರವುಳ್ಳ ಮತ್ತೊಬ್ಬ ದೂತನು ಪರಲೋಕದಿಂದಿಳಿಯುವದನ್ನು ಕಂಡೆನು; ಮತ್ತು ಅವನ ಮಹಿಮೆಯಿಂದ ಭೂಮಿಯು ಬೆಳಕಾಯಿತು. ೨. ಅವನು ಘಟ್ಟಿಯಾಗಿ ಕೂಗಿ, ಮಹಾ ಶಬ್ದದಿಂದ—ಬಿತ್ತು, ಬಿತ್ತು, ದಾಡ್ಡ ಬಾಬೆಲು; ಅದು ದೆವ್ವಗಳ ನಿವಾಸವು, ಸಕಲ ಅಶುದ್ಧಾತ್ಮಗಳ ಶೆರೆಯೂ, ಅಶುದ್ಧವೂ ಅಸಹ್ಯವೂ ಆಗಿರುವ ಸಕಲ ಪಕ್ಷಿಗಳ ಶೆರೆಯೂ, ಆಯಿತು ೧). ೩. ಯಾಕಂದರೆ ಅವಳ ಜಾರತ್ವದ ಉಗ್ರದ ದ್ರಾಕ್ಷಾರಸದಲ್ಲಿ ಎಲ್ಲಾ ಜನಾಂಗಗಳು ಕುಡಿದವೆ ೨); ಭೂರಾಜರು ಅವಳ ಸಂಗಡ ಜಾರತ್ವ ಮಾಡಿದರು ೩); ಭೂಮಿಯ ವರ್ತಕರು ಅವಳ ವೈಭವದ ಬಲದಿಂದ ಐಶ್ವರ್ಯವಂತರಾದರು ೪), ಅಂದನು. ೪. ಮತ್ತು ಪರಲೋಕದಿಂದಾದ ಮತ್ತೊಂದು ಶಬ್ದವನ್ನು ಕೇಳಿದೆನು; ಏನಂದರೆ, ನನ್ನ ಜನರೇ ೫), ಅವಳ ಪಾಪಗಳಲ್ಲಿ ಪಾಲುಗಾರರಾಗದ ಹಾಗೆಯೂ, ಅವಳ ಬಾಧೆಗಳಲ್ಲಿ ಪಾಲು ಹೊಂದದ ಹಾಗೆಯೂ, ಅವಳೊಳಗಿಂದ ಹೊರಟು ಬನ್ನಿರಿ. ೫. ಯಾಕಂದರೆ ಅವಳ ಪಾಪಗಳು ಆಕಾಶದ ಮಟ್ಟಿಗೂ ಮುಟ್ಟಿ ಅವೆ. ಅವಳ ಅನ್ಯಾಯಗಳನ್ನು ದೇವರು ಜ್ಞಾಪಕ ಮಾಡಿ ಕೊಂಡಿದ್ದಾನೆ. ೬. ಅವಳು ನಿಮಗೆ ಕೊಟ್ಟ ಪ್ರಕಾರ ಅವಳಿಗೆ ಕೊಟ್ಟು, ಅವಳ ಕ್ರಿಯೆಗಳ ಪ್ರಕಾರ, ಅವಳಿಗೆ ಎರಡಷ್ಟು ಹೆಚ್ಚು ಮಾಡಿರಿ. ಅವಳು ಕಲಸಿದ ಪಾತ್ರೆಯಲ್ಲಿ ಅವಳಿಗೆ ಎರಡಷ್ಟು ಕಲಸಿ ಕೊಡಿರಿ ೬). ೭. ಅವಳು ತನ್ನನ್ನು ಎಷ್ಟು ಮಹಿಮೆ ಪಡಿಸಿಕೊಂಡು, ವೈಭವವಾಗಿ ಬದುಕಿದಳೋ ೭), ಅಷ್ಟು ಪೀಡೆಯನ್ನೂ ದುಃಖವನ್ನೂ ಅವಳಿಗೆ ಕೊಡಿರಿ; ಯಾಕಂದರೆ ಅವಳು ತನ್ನ ಹೃದಯದಲ್ಲಿ—ರಾಣಿಯಾಗಿ ಕೂತು ಕೊಳ್ಳುತ್ತೇನೆ; ನಾನು ವಿಧವೆ ಅಲ್ಲ; ದುಃಖವನ್ನು ಕಾಣುವದಿಲ್ಲ ೮), ಅಂದು ಕೊಳ್ಳುತ್ತಾಳೆ. ೮. ಇದಕ್ಕೋಸ್ಕರ ಅವಳ ಬಾಧೆಗಳಾದ ಮರಣವೂ ದುಃಖವೂ ಬರವೂ ಒಂದೇ ದಿನದಲ್ಲಿ ಬರುವವು. ಬೆಂಕಿಯಿಂದ ಸುಟ್ಟು ಬಿಡಲ್ಪಡುವಳು. ಯಾಕಂದರೆ ಅವಳಿಗೆ ನ್ಯಾಯತೀರಿಸುವ ದೇವರಾದ ಕರ್ತನು ಶಕ್ತನೇ.

ಪ್ರಕ. ೧೪, ೯—೧೨.

೧. ಬಬುಲಾನಿನ ನಾಶವು ಈ ವರ್ಣನೆಯು ಪಾಳೆ ಒಡಂಬಡಿಕೆಯ ಪ್ರವಾದಿಗಳು ಪ್ರವಾದಿಸಿದ್ದಕ್ಕೆ ಒಪ್ಪಿಕೆಯಾಗಿದೆ. ಯೆಶಾ. ೧೩, ೧೪—೨೨. ಯೆರೆ. ೫೦.

೨. ಅಂದರೆ, ಪಾಪರ ದುರ್ಭಾವನೆಗಳೂ, ಅವರು ಅನ್ಯಮತಪರರಿಗೆ ವಿರೋಧವಾಗಿ ಜನಾಂಗಗಳಲ್ಲಿ ಬಹುಶಃ ಹುಟ್ಟಿಸಿದ ಪ್ರಾಣದ್ವೇಷವೂ.

೩. ಪಾಪರು ತಮಗೆ ವಿಧೇಯರಾದ ಅರಸುಗಳ ಸಹಾಯಕ್ಕೆ ದೇವರ ನ್ಯಾಯಕ್ಕೂ, ಮನುಷ್ಯರ ನ್ಯಾಯಕ್ಕೂ ವಿರೋಧವಾದ ನಾನಾ ಅಪರಾಧಗಳನ್ನು ನಡಿಸುತ್ತಾ ಇದ್ದರು. ಮತ್ತು ತಮ್ಮ ರಾಜ್ಯಗಳನ್ನು ಅನ್ಯಾಯವಾಗಿ ಆಳಿದ ಅನೇಕ ಅರಸರು ಪಾಪರನ್ನು ಆಶ್ರಯಿಸಿ ಕೊಂಡು, ಅವರ ಬೋಧನೆಯಿಂದ ಅನೇಕ ಅಪರಾಧಗಳನ್ನು ನಡಿಸಿ, ವಿಶೇಷವಾಗಿ ದೇವರ ವಾಕ್ಯವನ್ನು ಸತ್ಯವಾಗಿ ಸಾರುವವರನ್ನು ಹಿಂಸಿಸುತ್ತಾ ಇದ್ದರು.

೪. ರೋಮಿಯ ಸಭೆಯ ವಿಶಿಷ್ಟ ವೃತ್ತಿಯು ದಾಷ್ಟ ವ್ಯಾಪಾರವಾಗಿದೆ. ಪರಜನರ ಪೂಜಾರಿಗಳಂತೆ ಪಾಪರ ಪಕ್ಷವ ಸಹೋದ್ಯೋಗಸ್ಥರು ದ್ರವ್ಯಾರ್ಥವಾಗಿಯೇ ಸರ್ವವನ್ನೂ ಮಾಡುವದೇ ಹೊರ್ತು, ತದ್ರಹಿತವಾಗಿ ಏನೂ ಮಾಡುವದಿಲ್ಲ. ಇತಲಿದೇಶವ ಒಬ್ಬ ಕವಿಯು ಇದಕ್ಕೆ ಪದವನ್ನು ಕಲ್ಪಿಸಿ ಹೇಳಿರುವದೇನಂದರೆ: ರೋಮದಲ್ಲಿ ಸರ್ವವು ಕ್ರಯ ವಿಕ್ರಯವಾಗುವದು: ದೇವಾಲಯಗಳೂ ಸಹೋದ್ಯೋಗಗಳೂ, ಕಿರೀಟಗಳೂ, ಪರಿಶುದ್ಧ ಪೀಠಗಳೂ, ದೀಪದ ಬತ್ತಿಗಳೂ, ಧೂಪವೂ, ಮೋಕ್ಷವೂ ಇವುಗಳು. ಸಾಧ್ಯವಾದರೆ, ಪಾಪನು ದೇವರನ್ನು ಸಹ ಮಾರಿ ಬಿಟ್ಟಾನು.

೫. ಪಾಪನ ಸಭೆಯಲ್ಲಿಯೂ ದೇವರು ಸ್ವಜನರೆಂದು ಕರೆಯುವ ನಿಜ ಚಕ್ತರು ಇದ್ದಾರೆಂದು ಇಲ್ಲಿ ತೋರುತ್ತದೆ. ಆದರೆ ಪ್ರಶಿಕ್ರಿಸ್ತನ ಕಾಲದಲ್ಲಿ, ಲಾವೋದಿಕೀಯನು ಸಾದಾಮಿಯಿಂದ, ಪ್ರಥಮ ಸಭೆಯ ಕ್ರೈಸ್ತರು ಯೆರೂಸಲೇಮಿನಿಂದ ಓಡಿ ಹೋದಂತೆ, ಅವರು ತಮ್ಮ ಸಭೆಯನ್ನು ಬಿಟ್ಟು ಬಿಡ ಬೇಕು.

೬. ದೇವರು ನಿಜ ಚಕ್ತರ ಮುಖಾಂತರ ಪ್ರಶಿಕ್ರಿಸ್ತನ ಸಭೆಯನ್ನು ದಂಡಿಸುವನೆಂದು, ಇಲ್ಲಿ ಜಾಡೆಯಾಗಿ ತೋರುತ್ತದೆ.

೭. ರೋಮಪುರದ ಸಹೋದ್ಯೋಗಸ್ಥರು ಅತಿಶಯವಾದ ಗರ್ವವನ್ನೂ, ವೈಭವವನ್ನೂ ಅಂತ್ಯದ ವರೆಗೂ ನಡಿಸುವರು.

೮. ರೋಮಿಯ ಸಭೆಯು ಕಾಂಚ ಕಾಲಕ್ಕೆ ತಿರಿಗಿ ಬಲಗೊಂಡಾಗ, ಅದರ ಆತ್ಮತುಷ್ಟಿಯೂ ಗರ್ವವೂ ಅಮಿತವಾಗಿರುವವು. ಯೆಶಾ. ೪೭, ೮. ೯.

ಬಬುಲಾನ ನಾಶನಿಮಿತ್ತವಾದ ಶೋಕವು. ವ. ೯—೧೯.

೯. ಅವಳ ಸಂಗಡ ಜಾರತ್ವವನ್ನೂ ವೈಭವವನ್ನೂ ನಡಿಸಿದ ಭೂರಾಜರು, ೧೦. ಅವಳ ಸುಡುಮಿಕೆಯ ಹೊಗೆಯನ್ನು ನೋಡುವಾಗ [೧], ಅವಳಿಗೋಸ್ಕರ ಗೋಳಾಡಿ, ಬಡುಕೊಂಡು, ಅವಳ ಪೀಡೆಯ ಭಯದಿಂದ ದೂರದಲ್ಲಿ ನಿಂತು ಕೊಂಡು— ಅಯ್ಯೋ, ಅಯ್ಯೋ, ಮಹಾ ಪಟ್ಟಣವಾದ ಬಾಬೆಲ್ಯೇ! ಬಲವಾದ ಪಟ್ಟಣವೇ [೨]! ಒಂದು ಘಳಿಗೆಯಲ್ಲಿ ನಿನ್ನನ್ನಾಯಶಿಕ್ಷೆಯು ಬಂತಲ್ಲ? ಅನ್ನುತ್ತಾರೆ. ೧೧. ಮತ್ತು ಭೂಮಿಯ ವರ್ತಕರು ಅವಳಿಗೋಸ್ಕರ ಅತ್ತು, ಗೋಳಾಡುವರು; ಯಾಕಂದರೆ ಅವರ ಸರಕನ್ನು ಯಾರೂ ಇನ್ನು ಕೊಂಡು ಕೊಳ್ಳುವದಿಲ್ಲ. ೧೨. ಆ ಸರಕು ಏನಂದರೆ, ಬಿನ್ನ, ಬೆಳ್ಳಿ, ರತ್ನಕಲ್ಲು, ಮುತ್ತುಗಳು, ನಾರು ಮಡಿ, ರಕ್ತಾಂಬರಗಳು, ರೇಶಿಮೆ,

(ಪ್ರಕ. ೧೮, ೧೩–೧೯.

ಅಾಖಿಬಿಗ್ಗಿ, ಸಕಲವಾದ ಅಗರುಮರವು ೩), ಸಕಲ ವಿಧವಾದ ಜಂತಿದ ಸಾಮಗ್ರಿಗಳು, ಬಹು ಬೆಲೆಯುಳ್ಳ ಮರ, ಹಿತ್ತಾಳಿ, ಕಬ್ಬಿಣ, ಬಿಳಿಕಲ್ಲುಗಳಿಂದುಂಟಾದ ಸಕಲ ವಿಧವಾದ ಸಾಮಗ್ರಿಗಳು, ೧೩. ಲವಂಗ ಚಕ್ಕೆ, ಧೂಪಗಳು ೪), ರಕ್ತಬಾಳೆ, ಸಾಂಬ್ರಾಣಿ, ದ್ರಾಕ್ಷಾರಸ, ಎಣ್ಣೆ, ನಯವಾದ ಹಿಟ್ಟು, ಗಾಯಿ, ದನಗಳು, ಕುರಿಗಳು, ಕುದುರೆಗಳು, ರಥಗಳು ೫), ಮನುಷ್ಯರ ಶರೀರಗಳು, ಪ್ರಾಣಿಗಳು ೬). ೧೪. ನಿನ್ನ ಪ್ರಾಣವು ಆಶಿಸಿದ ಹಣ್ಣುಗಳು ೭) ನಿನ್ನನ್ನು ಬಿಟ್ಟು ಹಾಯಿದವು; ರಮ್ಯವಾಗಿ ಪ್ರಕಾಶವಾಗಿ ಇರುವವುಗಳೆಲ್ಲಾ ನಿನ್ನನ್ನು ಬಿಟ್ಟು ಹಾಯಿದವು; ಅವು ನಿನಗೆ ಇನ್ನು ಶಿಕ್ಕುವದಿಲ್ಲ. ೧೫. ಅವಳಿಂದ ಐಶ್ವರ್ಯವಂತರಾದ ಈ ಸರಕುಗಳ ವರ್ತಕರು ಅವಳ ಪೀಡೆಯ ಭಯದಿಂದ ದೂರದಲ್ಲಿ ನಿಂತು ಕೊಂಡು, ಅಳ್ತು ಗಾಳಾಡಿ— ೧೬. ಅಯ್ಯಾ, ಅಯ್ಯಾ, ಮಹಾ ಪಟ್ಟಣವೇ, ನಾರುಮಡಿ ರಕ್ತಾಂಬರ ಅಾಖಿಬಿಗ್ಗಿಗಳನ್ನು ಹಾಕಿ ಕೊಂಡು, ಬಿನ್ನ ರತ್ನ ಕಲ್ಲು ಮುತ್ತುಗಳಿಂದ ಅಲಂಕರಿಸಿ ಕೊಂಡವಳೇ, ಇಷ್ಟು ಐಶ್ವರ್ಯವು ಒಂದೇ ಘಳಿಗೆಯಲ್ಲಿ ಹಾಳಾಯಿತಲ್ಲಾ? ಅನ್ನುವರು. ೧೭. ಮತ್ತು ಹಡಗದ ಯಜಮಾನರೆಲ್ಲರೂ, ಹಡಗಗಳಲ್ಲಿರುವ ಸಮೂಹಗಳೆಲ್ಲವೂ, ನಾವಿಕರೂ, ಸಮುದ್ರದ ಮೇಲೆ ಕೆಲಸವನ್ನು ನಡಿಸುವವರೆಲ್ಲರೂ, ದೂರದಲ್ಲಿ ನಿಂತು ಕೊಂಡು, ೧೮. ಅವಳ ಸುಡುವಿಕೆಯ ಹೊಗೆಯನ್ನು ನೋಡಿ, ಕೂಗಿ— ಈ ಮಹಾ ಪಟ್ಟಣಕ್ಕೆ ಸಮಾನವಾದದ್ದು ಯಾವದು ೮)? ಅಂದರು. ೧೯. ಮತ್ತು ತಮ್ಮ ತಲೆಗಳ ಮೇಲೆ ಮಣ್ಣು ಹಾಕಿ ಕೊಂಡು, ಅಳ್ತು, ಗಾಳಾಡಿ, ಕೂಗಿ— ಅಯ್ಯಾ, ಅಯ್ಯಾ, ಸಮುದ್ರದಲ್ಲಿ ಹಡಗಗಳುಂಟಾದವರೆಲ್ಲರಿಗೆ ತನ್ನ ಘನತೆಯಿಂದ ಐಶ್ವರ್ಯವನ್ನು ಉಂಟು ಮಾಡಿದ ಮಹಾ ಪಟ್ಟಣವು ಒಂದೇ ಘಳಿಗೆಯಲ್ಲಿ ಹಾಳಾಯಿತಲ್ಲಾ? ಅಂದರು ೯).

೧. ಈವರು ತಮಗೂ ಬರುವ ಶಿಕ್ಷೆಯನ್ನೂಹಿಸಿ, ಇಷ್ಟು ಶೋಕ ಗೈಯುತ್ತಾರೆ.

೨. ರಾಮಪುರವೆಂಬ ಪದಕ್ಕೆ ಬಲವಾದ ಪಟ್ಟಣವೆಂಬ ಅಭಿಪ್ರಾಯವುಂಟು.

೩. ಇದು ಅಫ್ರಿಕದಲ್ಲಿ ಹುಟ್ಟುವ ಮಹಾ ಬೆಲೆಯುಳ್ಳ ಸುಗಂಧವೃಕ್ಷವಾಗಿದೆ.

೪. ಇದು ಲೇಪನೌಷಧಯುಕ್ತವಾದ ಪರಿಮಳವುಳ್ಳ ಗಿಡವಾಗಿದೆ.

೫. ಗ್ರೀಕ ಗ್ರಂಥದಲ್ಲಿ ಇಲ್ಲಿ ಲತೀನ ಭಾಷೆಯ ಶಬ್ದವು ಶೇರಿಯದೆ; ಅದೇನಂದರೆ, ರ್ಹೇದ. ಈ ಪದವು ರಥವೆಂದು ಸೂಚಿಸುತ್ತವೆ.

೬. ಅಂದರೆ, ಅವರು ಮನುಷ್ಯರನ್ನು ಕ್ರಯ ವಿಕ್ರಯ ಮಾಡುತ್ತಾ, ಆತ್ಮರಕ್ಷಣೆಯನ್ನು ಸಹ ಪಣಕ್ಕೆ ಮಾರುತ್ತಾ ಇದ್ದರು.

೭. ರಾಮಪುರಪ್ರದೇಶದಲ್ಲಿ ಹುಟ್ಟುವ ರಸದ್ರವ್ಯಗಳು ಸಹ ಇಲ್ಲಿ ವಿಶೇಷವಾಗಿ ಉದಾಹರಿಸಿರುತ್ತವೆ.

೮. ಸಮುದ್ರದಲ್ಲಿ ಮಹಾ ವ್ಯಾಪಾರವನ್ನು ನ

ಪ್ರಕ. ೧೪, ೨೦—೨೪.

ಡಿಸುವ ಪಟ್ಟಣದ ಸಾದೃಶ್ಯಕ್ಕೆ ಅನುಕೂಲವಾದ ಮಾತುಗಳು ಇಲ್ಲಿ ಶೇರುತ್ತವೆ.

೯. ಈ ಶಾಕ ವಿಸ್ಮಯಗಳ ಶಬ್ದವು ಮೂರಾವರ್ತಿ ಪುಟ್ಟುತ್ತದೆ: ಈ ಮಹಿಮೆಯೆಲ್ಲಾ ಒಂದೇ ಘಳಿಗೆಯಲ್ಲಿ ನಾಶವಾಗುವದುಂಟಾ?

ಸ್ತೋತ್ರದ ಶಬ್ದವು. ವ. ೨೦.

೨೦. ಪರಲೋಕಮ್ಯೇ, ಪರಿಶುದ್ಧ ಅಪೊಸ್ತಲರ್ಯೇ, ಪ್ರವಾದಿಗಳ್ಯೇ, ಅವಳಿಗಾಗ್ಯಾಸ್ಕರ ಆನಂದ ಪಡಿರಿ ೧), ಯಾಕಂದರೆ ದೇವರು ನಿಮ್ಮನ್ನಾಯವನ್ನು ಅವಳ ಮ್ಯೇಲೆ ತೀರಿಸಿದ್ದಾನೆ ೨).

೧. ಬಬುಲಾನನನಾಶವನ್ನೂ, ಅದರ ಶಾಕವನ್ನೂ ಉದಾಹರಿಸಿದ ದೈವಿಕ ಶಬ್ದವು ಈ ವಚನದ ಮಾತನ್ನು ಪೇಳುತ್ತದೆ.

೨. ನಿಮ್ಮ ನ್ಯಾಯವನ್ನೂ ಅಂದರೆ, ಅವರು ನಿಮಗೆ ಮಾಡಿದ ಅನ್ಯಾಯಕ್ಕಾಗಿ ಅವರಿಗೆ ನೇಮಕವಾದ ನ್ಯಾಯವಾದ ಶಿಕ್ಷೆಯನ್ನು. ಈಗ ಚಕ್ತರು ತಮ್ಮ ಶತ್ರುಗಳಿಗಾಗಿ ದೇವರಿಗೆ ವಿಜ್ಞಪ್ತಿ ಮಾಡ ಬೇಕು. ಚಕ್ತರು ವಿಜ್ಞಪ್ತಿ ಮಾಡುವದನ್ನು ಬಿಟ್ಟು, ದುಷ್ಟರ ಶಿಕ್ಷೆಗಾಗಿ ದೇವರನ್ನು ಸ್ತುತಿಸುವ ಕಾಲದಲ್ಲಿ ಅತಿ ಭಯಂಕರವಾದ ಶಿಕ್ಷೆಗಳು ಅಪರಾಧಿಗಳ ಮೇಲೆ ಬರುತ್ತವೆ.

ಬಬುಲಾನದ ಆಜ್ಞಾನಿರ್ಣಯದ ಅಂತ್ಯೋಕ್ತಿಯು. ವ. ೨೧—೨೪.

೨೧. ಆಗ ಒಬ್ಬ ಬಲಿಷ್ಠ ದೂತನು ಬೀಸುವ ಕಲ್ಲಿನಂತಿರುವ ದೊಡ್ಡ ಕಲ್ಲನು ಎತ್ತಿ, ಸಮುದ್ರದಲ್ಲಿ ಹಾಕಿ, ಹೇಳಿದ್ದು, ಹೀಗೆಯೇ ಮಹಾ ಪಟ್ಟಣವಾದ ಬಾಬೆಲು ಬೀಸಿ ಹಾಕಲ್ಪಟ್ಟು, ಇನ್ನು ಮ್ಯೇಲೆ ಕಾಣದೆ ಹೋಗುವದು. ೨೨. ಮತ್ತು ವೀಣೆಗಾರರ ಸಂಗೀತಗಾರರ ಮೇಳಗಾರರ ತುತೂರಿಯವರ ಶಬ್ದವು ಇನ್ನುಮ್ಯೇಲೆ ನಿಂನಲ್ಲಿ ಕೇಳಿಸುವದಿಲ್ಲ, ಮತ್ತು ಯಾವ ಶಿಲ್ಪದ ಯಾವ ಶಿಲ್ಪಿಯಾದರೂ ೧) ಇನ್ನುಮ್ಯೇಲೆ ನಿನ್ನಲ್ಲಿ ಕಾಣಿಸುವದಿಲ್ಲ. ಬೀಸುವ ಕಲ್ಲಿನ ಶಬ್ದವು ನಿನ್ನಲ್ಲಿ ಇನ್ನುಕೇಳಿಸುವದಿಲ್ಲ. ೨೩. ದೀಪದ ಬೆಳಕು ನಿನ್ನಲ್ಲಿ ಇನ್ನು ಪ್ರಕಾಶಿಸುವದಿಲ್ಲ. ಮದಲಿಂಗ ಮದಲಗಿತ್ತಿಯರ ಶಬ್ದವು ನಿನ್ನಲ್ಲಿ ಇನ್ನು ಕೇಳಿಸುವದಿಲ್ಲ; ಯಾಕಂದರೆ ನಿನ್ನ ವರ್ತಕರು ಭೂಮಿಯಲ್ಲಿ ಬಹು ದೊಡ್ಡವರಾಗಿದ್ದರು; ನಿನ್ನ ಮಾತುಗಳಿಂದ ಜನಾಂಗಗಳೆಲ್ಲಾ ಮೋಸ ಹೋದವು. ೨೪. ಮತ್ತು ಪ್ರವಾದಿಗಳು ಪರಿಶುದ್ಧರು ಭೂಮಿಯ ಮ್ಯೇಲೆ ಕೊಲ್ಲಲ್ಪಟ್ಟವರೆಲ್ಲರು ಇವರ ರಕ್ತವು ಅದರಲ್ಲಿ ಕಾಣಿಸಿತು ೨).

೧. ಪಾಪರ ರಾಜಧಾನಿಯಾದ ರೋಮಪುರವು ಪೂರ್ವಕಾಲದಿಂದ ಗಾನ, ಶಿಲ್ಪ, ಚಿತ್ರ ಮುಂತಾದ ವಿದ್ಯೆಗಳಿಗೆ ಮೂಲಸ್ಥಾನವಾಗಿತ್ತು. ಆದರೆ ಅದರ ಶಿಕ್ಷೆಯ ಕಾಲದಲ್ಲಿ ವಿಚಿತ್ರವಾದ ಕುಶಲಗತಿಗಳು ಮಾತ್ರವಲ್ಲ, ಜೀವನಕ್ಕೆ ಉಪಯುಕ್ತವಾದ ವೃತ್ತಿಗಳೆಲ್ಲಾ ಅದರಲ್ಲಿ ನಿಲ್ಲುವವು.

ಪ್ರಕ. ೧೯, ೧—೫.

೨. ಇದಕ್ಕೆ ಸದೃಶವಾಗಿ ಯೇಸು ಕ್ರಿಸ್ತನು ಮತ್ತಾ. ೨೩, ೩೫ರಲ್ಲಿ ಯೆರೂಸಲೇಮಿನ ಮೇಲೆ ರಕ್ತಾಪರಾಧವನ್ನು ಪುರಿಸುತ್ತಾನೆ. ಆದರೆ ರಾಮಮುರದ ರಕ್ತಾಪರಾಧವು ಯೆರೂಸಲೇಮಿನ ರಕ್ತಾಪರಾಧಕ್ಕಿಂತ ಅತ್ಯಧಿಕವಾದದ್ದು. ಪಾಪರು ಲಕ್ಷಾಂತರ ನಿಜ ಚಕ್ತರನ್ನು ವಿಲಾಯತಿಯ ದೇಶಗಳಲ್ಲೆಲ್ಲಾ ಕಾಲ್ಲಿಸಿದ್ದಲ್ಲದೆ, ಅನ್ಯಾಯವಾದ ಅನೇಕಾನೇಕ ಯುದ್ಧಗಳಿಗೆ ತಮಗೆ ಅಧೀನರಾದ ಅರಸುಗಳನ್ನು ಶೇರಿಸಿದರು.

ಈಗ ಪೂರ್ತಿಯಾದ ಬಬುಲಾನಿನ ಶಿಕ್ಷಾವಿಷಯವಾದ ದಿವಿಜರ ಸ್ತೋತ್ರವು.

ಸ. ೧೯, ೧—೪.

೧. ಇವುಗಳ ತರುವಾಯ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವನು ಕೇಳಿದೆನು. ಏನಂದರೆ—ಹಲ್ಲೆಲೂಯಾ ೧), ನಮ್ಮ ದೇವರಾದ ಕರ್ತನಿಗೆ ರಕ್ಷಣೆಯು, ಮಹಿಮೆಯು, ಘನವು, ಬಲವು ಆಗಲಿ. ೨. ಯಾಕಂದರೆ ಅವನ ನ್ಯಾಯತೀರ್ಪುಗಳು ಸತ್ಯವೂ ನೀತಿಯೂ ಆಗಿವೆ; ಹ್ಯಾಗಂದರೆ ಭೂಮಿಯನ್ನು ತನ್ನ ವ್ಯಭಿಚಾರತ್ವದಿಂದ ಕೆಡಿಸಿದ ದೊಡ್ಡ ವೇಶ್ಯೆಗೆ ಅವನು ನ್ಯಾಯತೀರಿಸಿ, ತನ್ನ ದಾಸರ ರಕ್ತಕ್ಕಾಗಿ ಅವಳಿಗೆ ಮುಯ್ಯಿಗೆ ಮುಯ್ಯಿ ತೀರಿಸಿದ್ದಾನೆ. ೩. ಮತ್ತು ಎರಡನ್ನೇ ಸಾರಿ, ಹಲ್ಲೆಲೂಯಾ, ಅಂದರು. ೪. ಮತ್ತು ಅವಳ ಹೊಗೆಯು ಎಂದೆಂದಿಗೂ ಏರುತ್ತದೆ ೨). ಮತ್ತು ಇಪ್ಪತ್ತು ನಾಲ್ಕು ಹಿರಿಯರೂ ನಾಲ್ಕು ಜೀವಿಗಳೂ ಅಡ್ಡ ಬಿದ್ದು, ಸಿಂಹಾಸನದ ಮೇಲೆ ಕೂತು ಕೊಂಡಿರುವ ದೇವರಿಗೆ, ಆಮೆನ್ ೩), ಹಲ್ಲೆಲೂಯಾ, ಎಂದು ನಮಸ್ಕರಿಸಿದರು.

೧. ದೇವರು ತನ್ನ ಜನರ ಕಠಿಣರಾದ ರಕ್ತಪ್ರಿಯ ಹಿಂಸಕರನ್ನು ಸಂಹಾರ ಮಾಡಿದ್ದಕ್ಕೆ ಆಗುವ ಸ್ತೋತ್ರಗಳಲ್ಲಿ ಹಳೆ ಒಡಂಬಡಿಕೆಯ ಗ್ರಂಥಗಳು ವಿಶೇಷವಾಗಿ ಪ್ರಯೋಗಿಸುವ ಈ ಪದವು ಹೊಸ ಒಡಂಬಡಿಕೆಯ ಗ್ರಂಥಗಳಲ್ಲಿ ಇಲ್ಲಿ ಮೊದಲನೆ ಸಾರಿ ಬರುತ್ತವೆ.

೨. ಬಬುಲಾನಿನ ಸುಟ್ಟ ಮೇಲೆ, ಅದರ ಹೊಗೆಯು ಬಹು ಕಾಲ ಏಳುವದು. ಆದರೆ ವ್ಯಭಿಚಾರಸ್ತ್ರೀಯ ಕೃತ್ಯಗಳ ಅನ್ಯಾನ್ಯದಲ್ಲಿ ಶೇರಿದವರ ಯಾತನೆಯು ಸದಾ ಇರುವದು; ಅದರ ಬೆಂಕಿಯು ಆರುವದಿಲ್ಲ.

೩. ಹಿರಿಯರೂ, ಜೀವಗಳೂ ಆಮೆನ್ ಎಂಬ ಮಾತಿನಿಂದ ದಿವಿಜರ ಮಹಾ ಸಮೂಹಗಳು ಮಾಡುವ ಸ್ತೋತ್ರವನ್ನು ದೃಢ ಪಡಿಸುತ್ತಾರೆ.

gg. ಮೃಗಕ್ಕೂ, ಅಬದ್ಧಪ್ರವಾದಿಗೂ ಆಗುವ ಅಜ್ಞಾನಿರ್ಣಯವು.

1. ಸಾಮಗ್ರಿಯು.

ಕುರಿಮರಿಯ ವಿವಾಹಕಾಲ ಬಂದ ವಿಷಯವಾದ ದಿವಿಜರ ಸ್ತೋತ್ರವು.

ಸ. ೧೯, ೫—೧೦.

೫. ಮತ್ತು ಸಿಂಹಾಸನದೊಳಗಿಂದ ಹೊರಟ ಶಬ್ದವು, ದೇವರ ದಾಸರೆಲ್ಲರೇ, ಅವನಿಗೆ ಭಯ ಪಡುವವರಾದ ಹಿರಿ ಕಿರಿಯರೇ ೧), ನಮ್ಮ ದೇವರನ್ನು ಹೊಗಳಿರಿ, ಎಂದು

ಪ್ರಕ. ೧೯, ೬—೧೦.

ಹೇಳಿತು. ೬. ಮತ್ತು ದೊಡ್ಡ ಸಮೂಹದ ಶಬ್ದದ ಹಾಗೆಯೂ, ಅನೇಕ ನೀರುಗಳ ಶಬ್ದದ ಹಾಗೆಯೂ, ಬಲವುಳ್ಳ ಗುಡುಗುಗಳ ಶಬ್ದದ ಹಾಗೆಯೂ,—ಹಲ್ಲೆಲೂಯಾ, ಸರ್ವ ಶಕ್ತನಾದ ದೇವರಾಗಿರುವ ಕರ್ತನು ಆಳುತ್ತಾನೆ; ೭. ಸಂತೋಷಿಸಿ, ಹರ್ಷಿಸಿ [ಗ], ಅವನಿಗೆ ಮಹಿಮೆಯನ್ನು ಕೊಡೋಣ; ಯಾಕಂದರೆ ಕುರಿಮರಿಯ ಮದುವೆಯು ಬಂತು; ಅವನ ಹೆಂಡತಿಯು ತನ್ನನ್ನು ಸಿದ್ಧ ಮಾಡಿ ಕೊಂಡಿದ್ದಾಳೆ [ಘ]) ಎಂದು ಹೇಳುವದನ್ನು ಕೇಳಿದೆನು. ೮. ಮತ್ತು ಪವಿತ್ರವೂ ಪ್ರಕಾಶವೂ ಆದ ನಾರು ಮಡಿಯು ಧರಿಸಿಕೊಳ್ಳುವದಕ್ಕೆ ಅವಳಿಗೆ ಕೊಡಲ್ಪಟ್ಟಿತು. ೯. ಈ ನಾರು ಮಡಿ ಏನಂದರೆ, ಪರಿಶುದ್ಧರ ನೀತಿಗಳು [ಙ]). ಆಗಲವನು ಕುರಿಮರಿಯ ಮದುವೆಯ ಔತಣಕ್ಕೆ ಕರೆಯಲ್ಪಟ್ಟವರು ಭಾಗ್ಯವಂತರೆಂದು [ಚ]) ಬರೆ, ಎಂದು ನನಗೆ ಹೇಳಿ, ಮತ್ತು, ಇವೇ ದೇವರ ಸತ್ಯ ವಾಕ್ಯಗಳಾಗಿವೆ, ಎಂದು ನನಗೆ ಹೇಳಿದನು. ೧೦. ಆಗ ಅವನಿಗೆ ನಮಸ್ಕರಿಸುವದಕ್ಕೆ ಅವನ ಪಾದಗಳ ಮುಂದೆ ಬಿದ್ದೆನು. ಮತ್ತು ಅವನು, ಬೇಡವೇ ಬೇಡ; ನಿನಗೂ, ಯೇಸುವಿನ ಸಾಕ್ಷಿಯನ್ನು ಹೊಂದಿದ ನಿನ್ನ ಸಹೋದರರಿಗೂ [ಛ]), ಜೊತೆದಾಸನಾಗಿದ್ದೇನೆ. ದೇವರಿಗೆ ನಮಸ್ಕರಿಸು; ಯಾಕಂದರೆ ಯೇಸುವಿನ ಸಾಕ್ಷಿಯು ಪ್ರವಾದನೆಯ ಆತ್ಮವಾಗಿದೆ [ಜ]), ಎಂದು ನನಗೆ ಹೇಳಿದನು.

೧. ಚಿಕ್ಕವರು ಸಹ ಭಕ್ತಿಸಿದ್ಧಿಯನ್ನು ಹೊಂದಲೂ, ಮಹಾ ಪಾತಕಿಗಳಾಗಲೂ ಬಹುದು. ಚಿಕ್ಕವರ ವಿಶ್ವಾಸವೂ, ಅವಿಧೇಯತ್ವವೂ ಯೌವನಸ್ಥರ ವಿಶ್ವಾಸಕ್ಕೂ, ಅವಿಧೇಯತ್ವಕ್ಕೂ ಸತುಲ್ಯವಾಗಿವೆ.

೨. ನಿಜವಾದ ಪೃಥಯಾನಂದವು ದೇವರಾಜ್ಯ ಬಾಧ್ಯಸ್ಥರಾದ ಭಕ್ತರಿಗೆ ಪ್ರಾಪ್ತವಾಗುತ್ತದೆ ಹೊರತು ಲೌಕಿಕ ಜನರಿಗೆ ದಾರಕುವದಿಲ್ಲ. ಭಕ್ತರು ಸಹ, ನಿಜವಾದ ಆನಂದವನ್ನು ಅನುಭವಿಸ ಬೇಕಾದರೆ, ಮೊದಲು ಕಾದಿ, ಗೆಲ್ಲ ಬೇಕು. ಜಯಶಾಲಿಗಳಿಗೆ ಏನೂ ಕಾರತೆಯಿಲ್ಲ; ಇಲ್ಲಿ ಎಲ್ಲಾನ್ನು ಕಳದು ಕೊಂಡವನು ಅಲ್ಲಿ ಎಲ್ಲಾನ್ನು ಪಡದು ಕಾಳ್ಳುತ್ತಾನೆ.

೩. ಅಂದರೆ, ಜಾರೆಗೆ ತೀರ್ಪು ಉಂಟಾದನಂತರ ಸ. ೭, ೯ಲ್ಲಿ ಬರದ ಮಹಾ ಸಮೂಹದವರು ಮುಂತಾದ ಯೇಸುವಿನ ಸಖೆಯವರೆಂಬ ಮದಲಗಿತ್ತಿಯು ವಿವಾಹಕ್ಕೆ ಸಿದ್ಧಳಾಗಿದ್ದಾಳೆ. ಅಂದಿನಿಂದ ಭಕ್ತರು ಕ್ರಿಸ್ತನ ನಿರ್ಮಯಾನ್ಯಾನ್ಯದಲ್ಲಿ ಶೇರಿ, ಆತನ ಜೀವದಲ್ಲಿಯೂ ಮಹಿಮೆಯಲ್ಲಿಯೂ ಪಾಲುಗಾರರಾಗಿರುವರು.

೪. ಈ ನೀತಿಯು, ದೇವರ ಉಚಿತ ಕೃಪಾಪ್ರಸಾದವಾಗಿರುವದರಿಂದ, ಸತ್ಯವಾಗಿದೆ.

೫. ಭಕ್ತರನ್ನೆಲ್ಲಾ ದೇವರು ಈ ಪದವಿಗೆ ಕರವಿದ್ದಾನೆ. ದೇವರು ಕರದರೆ ಬರುವವರು ಭಾಗ್ಯವಂತರು.

೬. ದೂತರೂ, ಮನುಷ್ಯರೂ ಸಹಜಾತಿಯವರಲ್ಲ; ಆದರೆ ದೇವರಿಗೆ ಮಾಡುವ ಒಂದೇ ಸೇವೆಗೆ ನೇಮಕವಾಗಿದ್ದಾರೆ. ಆದ್ದರಿಂದ ದೂತನು ಯಾ ಹೊಸಾನನ ಜಾತೆದಾಸನನಿಸಿ ಕಾಳ್ಳುತ್ತಾನೆ. ಯೇಸು ಕ್ರಿಸ್ತನ ಸಾಕ್ಷಿಯನ್ನು ನಂಬಿದವರು, ಮುಖ್ಯ ಅಪೊಸ್ತಲರು ಮೊದಲುಗೊಂಡು ಅಥಮ ಭಕ್ತರ ವರೆಗೂ ಎಲ್ಲರೂ ಸಹೋದರರಾಗಿದ್ದಾರೆ.

೭. ಅಂದರೆ, ದೇವರಿಗೆ ಸ್ತೋತ್ರ ಮಾಡು. ಯಾಕಂದರೆ ಯೇಸುವು ಪ್ರವಾದನೆಯ ಆತ್ಮವೆಂಬ ದೇವರ ಆತ್ಮದಿಂದಲೇ ಸಾಕ್ಷಿ ಕಾಡುತ್ತಾನೆ.

ಪ್ರಕ. ೧೯, ೧೧—೨೦.

2. ಮೃಗ ಅಬದ್ಧಪ್ರವಾದಿ ಇವರ ಸಂಹಾರವು.

ಸ. ೧೯, ೧೧—೨೧.

೧೧. ಮತ್ತು ಪರಲೋಕವು ತೆರೆದಿರುವದನ್ನು ಕಂಡೆನು. ಇಗೋ ಬಿಳಿ ಕುದುರೆಯು ೧); ಅದರ ಮೇಲೆ ಕೂತವನಿಗೆ ನಂಬಿಕೆಯುಳ್ಳವನೂ ಸತ್ಯವಂತನೂ ಎಂಬ ಹೆಸರು ೨). ಅವನು ನೀತಿಯಿಂದ ನ್ಯಾಯ ತೀರಿಸಿ, ಯುದ್ಧ ಮಾಡುತ್ತಾನೆ. ೧೨. ಅವನ ಕಣ್ಣುಗಳು ಬೆಂಕಿಯ ಉರಿಯಂತೆಯೂ, ಅವನ ತಲೆಯ ಮೇಲೆ ಅನೇಕ ಕಿರೀಟಗಳೂ, ತಾನು ಹೊರ್ತು ಯಾರೂ ಅರಿಯದಂಥ, ಬರೆಯಲ್ಪಟ್ಟ ಹೆಸರು ಅವನಿಗೆ ಉಂಟು. ೧೩. ಅವನು ರಕ್ತದಲ್ಲಿ ಅದ್ದಿದ ವಸ್ತ್ರವನ್ನು ೩) ಧರಿಸಿಕೊಂಡಿದ್ದಾನೆ. ಅವನ ಹೆಸರು ದೇವರ ವಾಕ್ಯವೆಂದು ಕರೆಯಲ್ಪಡುತ್ತದೆ ೪). ೧೪. ಮತ್ತು ಪರಲೋಕದಲ್ಲಿರುವ ಸೈನ್ಯಗಳು ೫) ಬಿಳಿ ಕುದುರೆಗಳ ಮೇಲೆ ಕೂತು ಕೊಂಡು, ಪವಿತ್ರವಾದ ಬಿಳಿ ನಾರು ಮಡಿಯನ್ನು ಧರಿಸಿ ಕೊಂಡು, ಅವನನ್ನು ಹಿಂಬಾಲಿಸಿದವು. ೧೫. ಮತ್ತು ಅದರಿಂದ ಜನಾಂಗಗಳನ್ನು ಕಡಿಯುವ ಹಾಗೆ ೬), ಅವನ ಬಾಯಿಯೊಳಗಿಂದ ಹದವಾದ ಕತ್ತಿ ಹೊರಡುತ್ತದೆ; ಮತ್ತು ಅವನು ಅವುಗಳನ್ನು ಕಬ್ಬಿಣದ ಗದೆಯಿಂದ ಆಳುವನು ೭). ಅವನೇ ಸರ್ವಶಕ್ತನಾದ ದೇವರ ಉಗ್ರ ಕೋಪದ ದ್ರಾಕ್ಷೇರಸದ ತೊಟ್ಟಿಯನ್ನು ತುಳಿಯುವನು. ೧೬. ಮತ್ತು ಅವನ ವಸ್ತ್ರದ ಮೇಲೆಯೂ. ಅವನ ಸೊಂಟದ ಮೇಲೆಯೂ, ಅರಸರ ಅರಸನೂ ಕರ್ತರ ಕರ್ತನೂ, ಎಂದು ಬರೆದ ಹೆಸರು ಅವನಿಗೆ ಉಂಟು. ೧೭. ಆಗ ಸೂರ್ಯನಲ್ಲಿ ನಿಂತು ಕೊಂಡಿರುವ ಒಬ್ಬ ದೂತನನ್ನು ಕಂಡೆನು; ಅವನು ಮಹಾ ಶಬ್ದದಿಂದ ಕೂಗಿ, ಆಕಾಶ ಮಧ್ಯದಲ್ಲಿ ಹಾರುವ ಸಕಲ ಹಕ್ಕಿಗಳಿಗೆ, ಮಹಾ ದೇವರ ಔತಣಕ್ಕೆ ಕೂಡಿ ಕೊಂಡು, ೧೮. ಅರಸರ ಮಾಂಸಗಳನ್ನೂ, ಸಹಸ್ರಾಧಿಪತಿಗಳ ಮಾಂಸಗಳನ್ನೂ, ಬಲಿಷ್ಠರ ಮಾಂಸಗಳನ್ನೂ, ಕುದುರೆಗಳ ಮಾಂಸಗಳನ್ನೂ, ಅವುಗಳ ಮೇಲೆ ಕೂತು ಕೊಂಡವರ ಮಾಂಸಗಳನ್ನೂ, ಸ್ವತಂತ್ರರೂ ದಾಸರೂ ಹಿರಿ ಕಿರಿಯರೂ ಆಗಿರುವ ಎಲ್ಲರ ಮಾಂಸಗಳನ್ನೂ, ತಿನ್ನುವದಕ್ಕೆ ಬನ್ನಿರಿ ೮), ಅಂದನು. ೧೯. ಮತ್ತು ಮೃಗವೂ, ಭೂರಾಜರೂ, ಅವರ ಸೈನ್ಯಗಳೂ, ಕುದುರೆಯ ಮೇಲೆ ಕೂತು ಕೊಂಡವನ ಸಂಗಡಲೂ, ಅವನ ಸೈನ್ಯದ ಸಂಗಡಲೂ, ಯುದ್ಧ ಮಾಡುವದಕ್ಕೆ ಕೂಡಿ ಕೊಂಡಿರುವದನ್ನು ಕಂಡೆನು. ೨೦. ಮತ್ತು ಮೃಗವೂ, ಅದರ ಮುಂದೆ ಮಾಡಿದ ಗುರುತುಗಳಿಂದ ಮೃಗದ ಮುದ್ರೆಯನ್ನು ಹೊಂದಿದವರನ್ನೂ, ಅದರ ವಿಗ್ರಹಕ್ಕೆ ನಮಸ್ಕರಿಸುವವರನ್ನೂ ಮೋಸಗಾ

ಪ್ರಕ. ೧೯, ೨೧—೨೦, ೧.

ಳಿಸಿದ ಸುಳ್ಳು ಪ್ರವಾದಿಯೂ, ಕೂಡ ಹಿಡಿಯಲ್ಪಟ್ಟನು [೯]; ಈ ಇಬ್ಬರು ಜೀವಿತರಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು. ೨೧. ಮತ್ತು ಉಳಿದವರು ಕುದುರೆಯ ಮೇಲೆ ಕೂತು ಕಾಂಡವನ ಬಾಯಿಯಾಳಗಿಂದ ಹೊರಡುವ ಕತ್ತಿಯಿಂದ ಕೊಲ್ಲಲ್ಪಟ್ಟರು [೧೦]. ಮತ್ತು ಅವರ ಮಾಂಸಗಳಿಂದ ಹಕ್ಕಿಗಳೆಲ್ಲಾ ತೃಪ್ತಿ ಹೊಂದಿದವು.

೧. ಶ್ರಮಕಾಲದಲ್ಲಿ ಕತ್ತೆಯ ಮೇಲೆ ಕೂತು ಕಾಂಡು ಯೆರೂಸಲೇಮ ಪ್ರವೇಶ ಮಾಡಿದ ಅಭಿಷಿಕ್ತರಾಜನು ಈಗ ಅಪ್ರತಿಜಯಶಾಲಿಯಾಗಿ ಬಿಳೀ ಕುದುರೇ ಮೇಲೆ ಕೂತು ಮಹಾ ಯುದ್ಧಕ್ಕೆ ಬರುವವನಾಗಿ ಕಾಣಿಸುತ್ತಾನೆ.

೨. ಆತನು ನಂಬಿಕೆಯುಳ್ಳವನೂ, ಸತ್ಯವಂತನೂ ಎಂಬ ಪೆಸರುಳ್ಳವನಾಗಿದ್ದಾನೆ. ಶತ್ರುಗಳ ಗುಣವು ಇದಕ್ಕೆ ಪೂರ್ಣ ವಿರೋಧವಾಗಿದೆ. ಅವರೆಲ್ಲರು ಪಂಚನಾಮಿಥ್ಯಾಪ್ರಾಯರಾಗಿದ್ದಾರೆ.

೩. ರಕ್ತದಲ್ಲಿ ಅದ್ದಿದ ವಸ್ತ್ರವು ರಕ್ತಪ್ರವಾಹವು ಹೊತ್ತನ್ನೂ ಜಯದ ನಿಶ್ಚಯವನ್ನೂ ಪ್ರವಾದನಾರೀತಿಯಿಂದ ಸೂಚಿಸುತ್ತದೆ. ಯೆಶಾ. ೬೩, ೩.

೪. ದೇವವಾಕ್ಯವೆಂಬ ಆತನ ಪೆಸರು ಆತನ ದೇವಹಿತಾವವನ್ನು ತೋರಿಸುತ್ತದೆ. ಯೋಹಾನನು ಅದನ್ನು ತನ್ನ ಸುವಾರ್ತೇ ಮೊದಲನೆ ಪತ್ರಿಕೆಗಳ ಉಪಕ್ರಮೋಕ್ತಿಗಳಲ್ಲಿ ಶ್ಲಾಘ್ಯಾರ್ಥಬೋಧಕವಾಗಿ ಪ್ರಯೋಗಿಸುತ್ತಾನೆ. ಈ ಪೆಸರು ದೇವತ್ವದ ಅಶೋಧ್ಯವಾದ ಅಗಾಧವನ್ನು ಪ್ರಕಟಿಸುತ್ತದೆ.

೫. ದಿವದ ಸೈನ್ಯಗಳು ಭೂಮಿಯಲ್ಲಿ ಯೇಸುವಿನ ಮಾನಕ್ಕಾಗಿ ಯುದ್ಧ ಮಾಡುವ ಸೈನ್ಯಗಳಿಗೆ ಹೇಡವಾಗಿವೆ. ಅವು ದೂತಗಣಗಳಲ್ಲ, ಕರ್ತನ ಸನ್ನಿಧಿಯಲ್ಲಿ ಶೇರಿದ ಪರಿಗಣಿತರ ಗಣವೆಂಬ ಲನೆ ಪಚನದಲ್ಲಿ ಕಾಣುತ್ತದೆ. ಆದರೆ ಆ ಸೈನ್ಯವಾದರೂ ಈ ಸೈನ್ಯವಾದರೂ ಮಹಾ ಯುದ್ಧದಲ್ಲಿ ಜಯವನ್ನುಂಟು ಮಾಡುವದಿಲ್ಲ.

೬. ಅಂದರೆ, ಹರ್ಮಗೆದ್ದಾನದಲ್ಲಿ ಆತನಿಗೆ ವಿರೋಧವಾಗಿ ಕೂಡಿದವರನ್ನು ಕರ್ತನು ತಾನೇ ನಾಶ ಮಾಡುವನು.

೭. ಇದಕ್ಕೆ ಸ. ೧೨. ೫ ಸರಿ ನೋಡ ಬೇಕು.

೮. ಯುದ್ಧವು ತಾಡಗುವದಕ್ಕಿಂತ ಮುಂಚೆಯೆ ದೂತನು ಶತ್ರುಗಳು ಸತ್ತವರೆಂದು ಹೇಳಿಸುತ್ತಾನೆ.

೯. ಪ್ರತಿಕ್ರಿಸ್ತನೂ, ಅಬದ್ಧಪ್ರವಾದಿಯೂ ಯುದ್ಧ ತಾಡಗುವದಕ್ಕಿಂತ ಮುಂಚೆ ಆಜ್ಞಾನಿರ್ಣಯವನ್ನು ಹೊಂದಿ ಜೀವಿತರಾಗಿ ಅಗ್ನಿಯ ಕಾಂಡದಲ್ಲಿ ಹೊಕಲು ಪಡುತ್ತಾರೆ. ಮೃಗವು ಅಗಾಧದಿಂದ ಏರಿದನಂತರ ಅತಿಶಯ ಪ್ರಬಲವಾಗಿ ಸ್ವಲ್ಪ ಕಾಲದಾಳಗೆ ಭೂರಾಜರನ್ನೂ, ಅವರ ದಂಡುಗಳನ್ನೂ ದೇವ ಪ್ರಜಾಸಂಹಾರಕ್ಕೆ ಕೂಡಿಸಿ ಕಾಂಡು, ತಾನು ಗೆಲ್ಲುವದಕ್ಕೆ ಸಂಶಯವಿಲ್ಲವೆಂದು ನೆನಸುತ್ತಲೆ ಈ ಅಸಹ್ಯವಾದ ಕಲಹಕ್ಕೆ ಮೂಲಕರಾದ ಇಬ್ಬರು ಜೀವಿತರಾಗಿ ನರಕದಲ್ಲಿ ಬಿದ್ದ ಬಳಿಕ ಮೋಸ ಹೋದ ಸೈನ್ಯಗಳ ಸಹಿತವಾದ ರಾಜರ ಸಂಹಾರವು ಬರುತ್ತದೆ.

೧೦. ಭೂಮಿಯ ರಾಜರೂ, ಪರಾಕ್ರಮಶಾಲಿಗಳೂ, ಸೈನ್ಯಗಳೂ ಸಂಹಾರವಾದ ಮೇಲೆ ಜೂಲಾಕದ ಸ್ಥಿತಿಗತಿಯು ಪೂರ್ಣ ಭೇದವಾಗುವದು.

hh. ಸಹಸ್ರವರುಷರಾಜ್ಯವು.

ಸೈತಾನನ ಬಂಧನಗ್ರಹಣವು. ಸ. ೨೦, ೧—೩.

೧. ಮತ್ತು ಅಗಾಧದ ಬೀಗದ ಕೈಯನ್ನೂ, ದಾಡ್ಡ ಸಂಕೋಲೆಯನ್ನೂ, ತನ್ನ ಕೈಯಲ್ಲಿ ಹಿಡಿದು ಕಾಂಡ ದೂತನು ಪರಲೋಕದಿಂದ ಇಳಿದು ಬರುವದನ್ನು ಕಂ

ಪ್ರಕ. ೨೦, ೨—೬.

ಡೆನು. ೨. ಅವನು ಪಿಶಾಚನೂ ಸೈತಾನನೂ ಆಗಿರುವ ಹಳ್ಳೀ ಹಾವು ಈದ ಗಡಸರ್ಪವನ್ನು ಹಿಡಿದು, ೩. ಸಾವಿರ ವರುಷಕ್ಕೆ ಅದನ್ನು ಕಟ್ಟಿ, ಅದನ್ನು ಅಗಾಧ ದಲ್ಲಿ ಹಾಕಿ, ಅದನ್ನು ಮುಚ್ಚಿ, ಈ ಸಾವಿರ ವರುಷ ಶೀರುವ ಪರ್ಯಂತ ೧) ಜನಾಂ ಗಗಳನ್ನು ಇನ್ನು ಮೋಸಗಾಳಿಸದ ಹಾಗೆ ೨), ಅದರ ಮೇಲೆ ಮುದ್ರೆ ಹಾಕಿದನು ೩). ಇವುಗಳ ಶರುವಾಯ ಅದು ಸ್ವಲ್ಪ ಕಾಲ ಬಿಡಿಸಲ್ಪಡ ಬೇಕು.

೧. ಈ ಲೋಕದಲ್ಲಿ ನಾನಾ ವಿಧವಾದ ಅಧರ್ಮವನ್ನು ಪುಟ್ಟಿಸಿ ಧರ್ಮವನ್ನು ನಾನಾ ಪ್ರಕಾರವಾಗಿ ತಡಿಸಿದ ಶತ್ರುಗಳು ಸಂಪೂರ್ಣವಾದನಂತರ, ಮನುಷ್ಯರು ದೇವರ ನ್ಯಾಯನಿರ್ಣಯಗಳನ್ನು ನೋಡಿ, ಈತನನ್ನು ಸನ್ಮಾನಿಸಿ, ಆತನ ಕೃಪಾವಾಕ್ಯವನ್ನು ನಂಬಿ ಸತ್‌ಕೃತ್ಯಗಳೆಂಬ ಫಲ ಚರಿತರಾಗುವರು. ಆಗ, ದೇವರು ಯೆಹೂದರಾಗಿಯೂ, ಪರಜನರಾಗಿಯೂ ಪುಟ್ಟಿದ ಜನರ ಸಾಮ್ರಾಜ್ಯವನ್ನು ಕಟ್ಟಿ ಕಾಳ್ಳುವನು. ಅವರು ಆತನಿಗೆ ಸತ್ಯದಿಂದಲೂ, ಆತ್ಮದಿಂದಲೂ ಸೇವೆ ಮಾಡುವರು. ಆತನು ಅವರನ್ನು ಆತ್ಮಿಕ ದೈಹಿಕ ವರಗಳಿಂದ ಐಶ್ವರ್ಯವಾಗಿ ಆಶೀರ್ವದಿಸುವನು. ಅವಿಧೇಯತ್ವಮೂಲಕವಾದ ಸೈತಾನನು ಬಂಧನಗ್ರಸ್ತನಾದ ಕಾರಣ, ದೇವದ್ರೋಹವು ಉಂಟಾಗುವದಿಲ್ಲ. ಈ ವರೆಗೂ ನೆರವೇರದಂಥ ಪ್ರವಾದನೆಗಳು ಆಗ ನೆರವೇರುವವು. ಇದು ಸಹಸ್ರವರುಷರಾಜ್ಯವೆಂಬ ದೇವರಾಜ್ಯದ ಜೌಮಿಕ ಸಿದ್ಧಿಯಾಗಿದೆ. ಇದನ್ನು ಮಹಿಮಾಸಂಚಕಾರವಾದ ಆತ್ಮವನ್ನು ಪೂರ್ಣಾಂದಿದ ಭಕ್ತರು ಆದಿಕಾಲದಿಂದ ಎದುರು ನೋಡುತ್ತಾ ಬಂದಿದ್ದಾರೆ.

೨. ಪರಜನರಲ್ಲಿ ವಾಡಿಕೆಯಾದ ವಿಗ್ರಹಾರಾಧನೆ ದೇವಪ್ರಜಾಹಿಂಸೆಗಳು ಮಾತ್ರವಲ್ಲ, ಲೋಕದಲ್ಲಿ ನಡೆಯುವ ಮೋಸವೆಲ್ಲಾ ಅವನಿಂದಲೇ ಪುಟ್ಟುತ್ತದೆ. ಅವನು ಲೋಕಕ್ಕೆ ದೇವರಾಗಿದ್ದಾನೆ. ಲೋಕವು ಅವನಿಗೆ ಪರವಶವಾಗಿದೆ.

೩. ಮೂರನೆ ಅಯ್ಯಾ ಎಂಬದು, ಅದನ್ನು ಪುಟ್ಟಿಸಿದ ಸೈತಾನನು ಅಗಾಧವೆಂಬ ಶರೆಯಲ್ಲಿ ಬಿದ್ದ ಕೂಡಲೆ ಮುಗಿಯುತ್ತದೆ.

ಪ್ರಥಮ ಪುನರುತ್ಥಾನವು. ವ. ೪—೬.

೪. ಮತ್ತು ಸಿಂಹಾಸನಗಳನ್ನು ಕಂಡೆನು; ಅವುಗಳ ಮೇಲೆ ಕೂಡ ಕೂತಿದ್ದರು ೧). ಮತ್ತು ನ್ಯಾಯಶಿಕ್ಷೆ ಅವರಿಗೆ ಕೊಡಲ್ಪಟ್ಟಿತು. ಮತ್ತು ಯೇಸುವಿನ ಸಾಕ್ಷಿಗಾಗಿಯೂ, ದೇವರ ವಾಕ್ಯಕ್ಕಾಗಿಯೂ, ತಲೆ ಕಡಿದವರ ಪ್ರಾಣಿಗಳನ್ನೂ ೨), ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ, ತಮ್ಮ ಹಣೆಯಲ್ಲಿಯೂ ತಮ್ಮ ಕೈಯ ಮೇಲೆಯೂ ಮುದ್ರೆ ಹೊಂದದವರನ್ನೂ, ಕಂಡೆನು. ಅವರು ಬದುಕಿ, ಕ್ರಿಸ್ತನ ಸಂಗಡ ಸಾವಿರ ವರುಷ ಆಳಿದರು ೩). ೫. ಆದರೆ ಮಿಕ್ಕಾದ ಸತ್ತವರು, ಆ ಸಾವಿರ ವರುಷ ಮುಗಿಯುವ ವರೆಗೂ, ತಿರಿಗಿ ಬದುಕಲಿಲ್ಲ ೪). ಇದ್ದೇ ಮೊದಲನ್ನೇ ಪುನರುತ್ಥಾನವು. ೬. ಮೊದಲನ್ನೇ ಪುನರುತ್ಥಾನದಲ್ಲಿ ಪಾಲು ಹೊಂದುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಅಂಥವರ ಮೇಲೆ ಎರಡನ್ನೇ ಮರಣಕ್ಕೆ ಅ

ಪ್ರಕ. ೨೦, ೭—೧೦.

ಧಿಕಾರವಿಲ್ಲ. ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ, ಆವನ ಸಂಗಡ ಸಾವಿರ ವರುಷ ಆಳುವರು ೫).

೧. ಯಾರಂದರೆ, ಸ. ೧೨, ೫; ೧೪, ೧೬ರಲ್ಲಿ ಬರದಿರುವ ಅಪಾಸ್ತಲರು ಮುಂತಾದವರು.

೨. ಗ್ರೀಕ ಗ್ರಂಥದಲ್ಲಿ ಪರಶುಪಿತರಾದವರೆಂದು ಬರದಿದೆ. ಪೂರ್ವಕಾದರೆ ಆದಿಕಾಲದಿಂದ ಪ್ರತಿಕ್ರೈಸ್ತ ಕಾಲದ ವರೆಗೂ ಪಿತವಾದ ಪ್ರಾಣಸಾಕ್ಷಿಗಳು ಜೀವಿತರಾಗಿ ಜಾವಾಂತರವನ್ನೈದಿದವರ ಸಂಗಡ ಕರ್ತನ ಸನ್ನಿಧಿಗೆ ಏರಿ, ಆತನ ಸಂಗಡ ಮಹಿಮಾವಸ್ಥೆಯಲ್ಲಿ ಶೇರಿದ ಚೂಲಾಲೋಕವನ್ನಾಳಿದನಿ. ೭, ೨೭. ಸೈತಾನನಿಗೆ ಪ್ರತಿಯಾಗಿ ಮನುಷ್ಯರ ಬುದ್ಧಿಯನ್ನು ತಮ್ಮ ಸ್ವಾಧೀನ ಮಾಡಿ ಕಾಳ್ಳುವರು.

೩. ಅವರು ಕ್ರಿಸ್ತನ ಸಂಗಡ ಆತನು ಇರುವ ದಿವದಲ್ಲಿದ್ದು ಆಳಿ ಕಾಳ್ಳುವರು. ಅವರು ಚೂನಿವಾಸಿಗಳ ಮೇಲೆ ಪೂರ್ವಾಗೆ ಧಾರೆತನ ಮಾಡುವರೆಂದು, ಈಗ ತಿಳಿಯಲಳವಲ್ಲ. ಆದರೆ ಅಷ್ಟು ಬೇಗ ಕರ್ತನಾದ ಯೇಸುವಿನ ಬಳಿಯಲ್ಲಿ ಶೇರಿ ಎಂದೆಂದಿಗೂ ಆತನ ಸಮೀಪದಲ್ಲಿರುವ ಬಿರುದು ಮಹತ್ವ ಮಹಿಮೆಯುಳ್ಳದ್ದು.

೪. ಅಂದರೆ, ಅವರು ಪೂರ್ಣ ಮಹಿಮಾಜೀವವನ್ನು ಪೂರ್ವಾಂದಲಿಲ್ಲ. ಅವರು ಆಗಲೇ ಪುನರುತ್ಥಾನವನ್ನು ಪೂರ್ವಾಂದಿದಾಗ್ಯೂ ಕ್ರಿಸ್ತನ ಸಂಗಡ ರಾಜ್ಯವನ್ನಾಳುವದಕ್ಕೆ ಅಧಿಕಾರಿಗಳಾಗುವದಿಲ್ಲ.

೫. ಅಂದರೆ, ಪೂರ್ಣ ಮಹಿಮೆಯನ್ನು ಸಹಸ್ರ ವರುಷ ರಾಜ್ಯದಲ್ಲಿ ಪೂರ್ವಾಂದದೆ ಇರುವವರು ಸಹಮೊದಲನೆ ಪುನರುತ್ಥಾನವನ್ನು ಪಡದು ಕಾಂಡರೆ, ಚಾಗ್ಯವಂತರೂ, ಪರಿಶುದ್ಧರೂ ಆಗಿದ್ದಾರೆ.

ii. ಸೈತಾನನ ಮೋಸಾಂತ್ಯವು. ಗೋಗ ಮಗೋಗರು. ಸೈತಾನನಿಗೆ ಆಗುವ ಅಜ್ಞಾನಿರ್ಣಯವು. ವ. ೭—೧೦.

೭. ಆ ಸಾವಿರ ವರುಷ ಮುಗಿದಾಗ, ಸೈತಾನನು ತನ್ನಶೆರೆಯಾಳಿಗಿಂದ ಬಿಡಿಸಲ್ಪಟ್ಟು ೧), ೮. ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ, ಗೊಗ್ ಮಗೊಗ್ ೨) ಎಂಬುವಂಥ, ಲೆಕ್ಕಿಕ್ಕೆ ಸಮುದ್ರದ ಮರಳಿನ ಹಾಗೆ ಇರುವಂಥ, ಜನಾಂಗಗಳನು ಮೋಸ ಗೊಳಿಸಿ, ಅವರನ್ನು ಯುದ್ಧಕ್ಕೆ ಕೂಡಿಸುವದಕ್ಕೆ ಹೊರಟು ಹೋಗುವನು. ೯. ಮತ್ತು ಅವರು ಭೂಮಿಯ ಬೈಲಿಗೆ ಏರಿ ಹೋಗಿ ೩), ಪರಿಶುದ್ಧರ ದಂಡಿನೂ, ಪ್ರಿಯವಾದ ಪಟ್ಟಣವನ್ನೂ, ಮುತ್ತಿಕೊಂಡರು ೪). ಆಗ ದೇವರ ಬಳಿಯಿಂದ ಬೆಂಕಿಯು ಪರಲೋಕದಾಳಿಗಿಂದ ಇಳಿದು, ಅವರನ್ನು ತಿಂದು ಬಿಟ್ಟಿತು ೫). ೧೦. ಮತ್ತು ಅವರನ್ನು ಮೋಸಗೊಳಿಸಿದ ಪಿಶಾಚನು, ಮೃಗವೂ ಸುಳ್ಳು ಪ್ರವಾದಿಯೂ ಇರುವ, ಬೆಂಕಿ ಗಂಧಕಗಳ ಕೆರೆಯಲ್ಲಿ ಹಾಕಲ್ಪಟ್ಟನು. ಮತ್ತು ಎಂದೆಂದಿಗೂ ರಾತ್ರಿ ಹಗಲು ಪೀಡಿಸಲ್ಪಡುವರು.

೧. ೩ನೆ ವಚನದ ಪ್ರಕಾರ ಈ ಕಾಲವು ಕಾಂಚವಾದದ್ದು. ಅದರ ಲೆಕ್ಕವು ನಮಗೆ ತಿಳಿಯುವದಿಲ್ಲ; ಆದರೆ ಮುಂಚೆ ಕರ್ತನ ರಾಜ್ಯದಲ್ಲಿದ್ದವರು ಬೇಗ ಸೈತಾನನ ಮೋಸಕ್ಕೆ ಒಳಗಾಗುವರೆಂದು ನೆನಸ ಕೆಲ

ಸವಿಲ್ಲ. ಆದ್ದರಿಂದ ಒಂದು ತಲಾಂತರವು ಹೋಗಿ ಗಾದರೂ ಮುಂಚೆ ಕಳಿದು ಹೋಗ ಬೇಕೆಂತ ನೆನಸ ತಕ್ಕದ್ದು. ಪರಿಶುದ್ಧರ ರಾಜ್ಯದ ಸಹಸ್ರವರುಷವು ಸೈತಾನನ ಬಂಧನಗ್ರಹಣದ ಸಹಸ್ರವರುಷವು ಏಕ ಕಾಲಿಕವಾಗಿರುವದಿಲ್ಲ; ಇದು ಅದಕ್ಕಿಂತ ಮುಂಚಿತ ವಾಗಿ ತಾಡಗಿ ಮುಂಚಿತವಾಗಿ ಮುಗಿಯುವದು.

೨. ಎಜೆಕಿಯೇಲನು ೩೮ನೆ ಸಂಧಿಯಲ್ಲಿ ಗೋಗ ಮಗೋಗರ ವಿಷಯವಾಗಿ ಮಾತನಾಡುತ್ತಾನೆ. ಗೋಗ್ ಎಂಬುವದು ಅರಸನ ಹೆಸರು. ಮಗೋಗ್ ಎಂಬುವದು ಜನರ ಹೆಸರು. ಕ್ರೈಸ್ತಸಭಾಪಿತನಾದ ಹಿಯೆರಾನುಮನು, ಮಗೋಗೆಂಬ ಹೆಸರು ಕೌಕಸಪರ್ವತಗಳಿಗೂ, ಕಸ್ಪಸಮುದ್ರಕ್ಕೂ ಬಡಗ ಮೂಡಣ ದಿಕ್ಕುಗಳಲ್ಲಿ ಹಿಂದೂ ದೇಶದ ಪರ್ಯಂತ ವಸತಿಯಾದ ಜನಾಂಗಗಳಿಗೆ ಬರುತ್ತದೆಂದು ಬರೆಯುತ್ತಾನೆ. ನಾಲ್ಕು ದಿಕ್ಕಿನ ಜನಾಂಗಗಳು ಸೈತಾನನ ಮೋಸಗಳಿಗೆ ವಶವಾಗಿ ಮಗೋಗನ ಸಂಗಡ ದೇವಪ್ರಜೆಗಳಿಗೆ ವಿರೋಧವಾಗಿ ಯುದ್ಧ ಮಾಡುವವೆಂದು, ಇಲ್ಲಿ ಕಾಣುತ್ತದೆ.

೩. ಅಂದರೆ, ಅವರು ಯೆರೂಸಲೇಮಿಗೆ ವಿರೋಧವಾಗಿ ಏರಿ ಬಂದು ಬಯಲು ಭೂಮಿಯನ್ನೆಲ್ಲಾ ಕವಿದರು.

೪. ಹಳೆ ಒಡಂಬಡಿಕೆಯ ಕಾಲದಲ್ಲಿ ದಾಡ್ಡ ಪಟ್ಟಣಗಳಿಗೆ ಸಮಸ್ತ ದೇಶದಿಂದ ಬಂದ ಯಾತ್ರಸ್ಥರು ಯೆರೂಸಲೇಮಿನ ಸುತ್ತಲಿನ ಗುಡ್ಡಗಳಲ್ಲಿ ತೆರೆಗಳನ್ನು ಕಟ್ಟಿದ ಪ್ರಕಾರ, ಕಡೇ ಕಾಲದಲ್ಲಿ ಯೆರೂಸಲೇಮಿಗೆ ಬರುವ ಚಕ್ರರ ಸಮೂಹವು ಪಟ್ಟಣದ ಪೌರರಿಗೆ ಗುಡಾರಗಳಲ್ಲಿ ವಾಸ ಮಾಡುವರೆಂದು, ತಾತ್ಪರ್ಯವಿರುತ್ತದೆ. ಪ್ರಿಯ ಪಟ್ಟಣವು ಯೆರೂಸಲೇಮೆ. ಕೀರ್ತ. ೪೮.

೫. ಗೋಗ ಮಗೋಗರ ಸಂಪೂರ್ಣಾರವು ಉಂಟಾದಾಗಲೇ ಸರ್ವಾಂತ್ಯವು ಬರುತ್ತದೆಂದು, ನೆನಸುವದು ಯುಕ್ತವಲ್ಲ. ಇದು ಎಜೆಕಿಯೇಲನಲ್ಲಿ ಕಾಣುತ್ತದೆ.

kk. ಅಂತ್ಯನಾಯನಿರ್ಣಯವು. ವ. ೧೧—೧೫.

೧೧. ಆಗ ದಾಡ್ಡ ಬಿಳ್ಳಿ ಸಿಂಹಾಸನವನ್ನೂ, ಅದರ ಮೇಲೆ ಕೂತು ಕಾಂಡವನನ್ನೂ, ಕಂಡೆನು. ಅವನ ಸಮುಖದಿಂದ ಭೂಮಿಯೂ ಆಕಾಶವೂ ಓಡಿ ಹೋಗಿ, ಅವುಗಳಿಗೆ ಸ್ಥಳವು ಶಿಕ್ಕಲಿಲ್ಲ[೧]). ೧೨. ಮತ್ತು ಹಿರಿ ಕಿರಿಯರಾದ[೨]) ಸತ್ತವರು ಸಿಂಹಾಸನದ ಮುಂದೆ[೩]) ನಿಂತಿರುವದನ್ನು ಕಂಡೆನು. ಪುಸ್ತಕಗಳು ತೆರೆಯಲ್ಪಟ್ಟವು. ಮತ್ತೊಂದು ಪುಸ್ತಕವು ತೆರೆಯಲ್ಪಟ್ಟಿತು; ಅದು ಜೀವದ ಪುಸ್ತಕವು[೪]). ಆಗ ಆ ಪುಸ್ತಕಗಳಲ್ಲಿ ಬರೆದವುಗಳಿಂದ ಸತ್ತವರಿಗೆ ಅವರ ಕ್ರಿಯೆಗಳ ಪ್ರಕಾರ ನ್ಯಾಯ ತೀರಿಸಲ್ಪಟ್ಟಿತು. ೧೩. ಸಮುದ್ರವು ಅದರೊಳಗಿರುವ ಸತ್ತವರನ್ನು ಒಪ್ಪಿಸಿತು. ಮರಣವೂ ಪಾತಾಳವೂ ಅವುಗಳೊಳಗಿರುವ ಸತ್ತವರನ್ನು ಒಪ್ಪಿಸಿದವು[೫]). ಆಗ ಎಲ್ಲರಿಗೆ ಅವರವರ ಕ್ರಿಯೆಗಳ ಪ್ರಕಾರ ನ್ಯಾಯತೀರಿಸಲ್ಪಟ್ಟಿತು. ೧೪. ಆಗ ಮರಣವೂ ಪಾತಾಳವೂ ಬೆಂಕಿಯ ಕೆರೆಯಲ್ಲಿ[೬]) ಹಾಕಲ್ಪಟ್ಟವು. ಇದು ಎರಡನ್ನೇ ಮರಣವು. ೧೫. ಮತ್ತು ಯಾವನಾದರೂ ಜೀವದ ಪುಸ್ತಕದಲ್ಲಿ ಬರೆಯಲ್ಪಟ್ಟವನಾಗಿ ಕಾಣಿಸದಿದ್ದರೆ, ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟನು.

ಪ್ರಕ. ೨೧, ೧—೬.

೧. ಇದು ಲಾಕಾಂತ್ಯವಾಗಿದೆ. ಆಗ ಐಹಿಕ ಮನಸ್ಸುಳ್ಳವರು ಆಶಾಚಿಗ್ನರಾಗುವರು. ಯೇಸು ಕ್ರಿಸ್ತನ ಐಕ್ಯದಲ್ಲಿರುವವರೇ ಜಾಗೃವಂತರಾಗಿ ತಾರುವರು.

೨. ಇದು ಬಹಿರವಸ್ಥೆಯ ಚೇದವನ್ನು ಮಾತ್ರವಲ್ಲ, ಆಯರ್ಕೇದವನ್ನು ಸಹ ಸೂಚಿಸುತ್ತದೆ. ಚಿಕ್ಕ ಮಕ್ಕಳಿಗೂ ತೀರ್ಪು ಆಗುವದು.

೩. ಮತ್ತಾ. ೨೫, ೩೧ ಮುಂತಾದ ವಚನಗಳಲ್ಲಿ ಉದಾಹರಿಸಿದ ನ್ಯಾಯನಿರ್ಣಯವೂ, ಇಲ್ಲಿ ಉದಾಹರಿಸಿದ್ದೂ ಒಂದೇ.

೪. ಇದರಲ್ಲಿ ದೇವರ ಪುಂಗಿಲ್ಲದ ಕೃಪೆಯಿಂದ ಪರಿಗ್ಲೋತರಾದವರ ಪೆಸರುಗಳು ಬರದವೆ. ಇದರಿಂದಲೇ ಚಕ್ತರ ರಕ್ಷಣೆಯು ದೇವರ ಕೃಪಾಕಾರ್ಯವೆಂದು ಪ್ರಸಿದ್ಧವಾಗಿದೆ.

೫. ಇಲ್ಲಿ ಮರಣಕ್ಕೂ ಪಾತಾಳಕ್ಕೂ ಕೂಡಿದ ಸಮುದ್ರವು ಸಹ ಸತ್ತವರಿಗೆ ಒಂದು ವಾಸಸ್ಥಳವೆಂದು ತಾರುತ್ತದೆ.

೬. ಮರಣದ ಶೆರೆಯಲ್ಲಿಯೂ, ಪಾತಾಳದ ಶೆರೆಯಲ್ಲಿಯೂ ಇದ್ದವರು ಎಂದಿಗೂ ಆರದ ಬೆಂಕಿಯಲ್ಲಿ ಬೀಳುತ್ತಾರೆಂದು ಬರದದೆ. ಸಮುದ್ರವೆಂಬ ಶೆರೆಯಲ್ಲಿ ಇದ್ದವರ ವಿಷಯವಾಗಿ ಈ ಮಾತು ಪೇಳಿರುವದಿಲ್ಲ.

cc. ಸಭಾಜಯೋತ್ಸವವು.

1. ದೇವರು ಎಲ್ಲಾನೂ ಪುಸಾಸದು ಮಾಡುತ್ತಾನೆ. ಸ. ೨೧, ೧—೮.

೧. ಮಶ್ತು ಹೌಸ ಆಕಾಶವನ್ನೂ ಹೌಸ ಖೂಮಿಯನ್ನೂ ಕಂಡೆನು ೧); ಯಾಕಂದರೆ ಮೊದಲನೇ ಆಕಾಶವೂ ಮೊದಲನೇ ಖೂಮಿಯೂ ಇಲ್ಲದೆ ಹೌದವು. ೨. ಸಮುದ್ರವು ಇನ್ನು ಮೇಲೆ ಇಲ್ಲ. ಮಶ್ತು ಯೌಹಾನನೆಂಬ ನಾನು ಪರಿಶುದ್ಧ ಪಟ್ಟವಾದ ಹೌಸ ಯೆರೂಸಲೇಮು, ತನ್ನಗಂಡನಿಗೌಸ್ಕರ ಅಲಂಕರಿಸಲ್ಪಟ್ಟ ಮದಲಗಿತ್ತಿಯಂತೆ ೨) ಸಿದ್ಧವಾಗಿ, ದೇವರ ಕಡೆಯಿಂದ, ಪರಲೌಕದಲಿಳಿಗಿಂದ, ಇಳಿದು ಬರುವದನ್ನು ಕಂಡೆನು. ೩. ಮಶ್ತು ಪರಲೌಕದಿಂದಾದ ಮಹಾ ಶಬ್ದವನು ಕೇಳಿದೆನು; ಏನಂದರೆ—ಇಗೌ ದೇವರ ಗುಡಾರವು ಮನುಷ್ಯರ ಸಂಗಡ ಅದೆ. ಅವನು ಅವರ ಸಂಗಡ ವಾಸ ಮಾಡುವನು. ಅವರು ಅವನ ಪ್ರಜೆಯಾಗಿರುವರು. ದೇವರು ತಾನೇ ಅವರ ದೇವರಾಗಿ, ಅವರ ಸಂಗಡ ಇರುವನು. ೪. ಮಶ್ತು ದೇವರು ಕಣ್ಣೀರೆಲ್ಲಾ ಅವರ ಕಣ್ಣುಗಳಿಂದ ಒರಸುವನು ೩). ಮಶ್ತು ಮರಣವು ಇನ್ನೂ ಇರುವದಿಲ್ಲ. ಗೌಳಾಟವೂ ೪) ಅಳುವಿಕೆಯೂ ಕಷ್ಟವೂ ಇನ್ನೂ ಇರುವದಿಲ್ಲ; ಯಾಕಂದರೆ ಮೊದಲಿನವುಗಳು ಹೌದವು. ೫. ಮಶ್ತು ಸಿಂಹಾಸನದ ಮೇಲೆ ಕೂಶು ಕೌಂಡವನು, ಇಗೌ, ಎಲ್ಲಾ ಹೌಸದಾಗಿ ಮಾಡುತ್ತೇನೆ, ಅಂದನು. ಮಶ್ತು ನನಗೆ, ಬರೆ; ಯಾಕಂದರೆ ಇ ವಾಕ್ಯಗಳು ಸತ್ಯವೂ ನಂಬಿಕೆಯೂ ಆಗಿವೆ, ಅಂದನು. ೬. ಇನ್ನು ನನಗೆ ಹೇಳಿದ್ದು, ಆಯಿತು; ನಾನು ಅಕಾರವೂ

ಪ್ರಕ. ೨೧, ೭—೧೦.

ಓಕಾರವೂ, ಆದಿಯೂ ಅಂತ್ಯವೂ, ಆಗಿದ್ದೇನೆ. ನಾನು ದಾಹಗೊಂಡವನಿಗೆ ಜೀವದ ನೀರಿನ ಬುಗ್ಗೆಯಿಂದ ಉಚಿತವಾಗಿ ಕೊಡುವೆನು ಶಿ). ೭. ಜಯಿಸುವವನು ಎಲ್ಲವುಗಳನ್ನು ಬಾಧ್ಯವಾಗಿ ಹೊಂದುವನು ೮); ಮತ್ತು ನಾನು ಅವನಿಗೆ ದೇವರಾಗಿರುವೆನು; ಅವನು ನನಗೆ ಮಗನಾಗಿರುವನು; ೮. ಆದರೆ ಅಂಜುವವರಿಗೂ ೯), ಅವಿಶ್ವಾಸಿಗಳಿಗೂ, ಅಪಕ್ರಿಷ್ಟರಿಗೂ, ಕೊಲೆಗಾರರಿಗೂ, ಜಾರರಿಗೂ, ಶೂನ್ಯಗಾರರಿಗೂ, ವಿಗ್ರಹಾರಾಧಕರಿಗೂ, ಸುಳ್ಳುಗಾರರೆಲ್ಲರಿಗೂ—ಬೆಂಕಿ ಗಂಧಕಗಳಿಂದ ಉರಿಯುವ ಕೆರೆಯಲ್ಲಿ ೧೦) ಅವರಿಗೆ ಪಾಲು ಉಂಟು. ಇದು ಎರಡನೇ ಮರಣವು.

೧. ಪೌರಾಣ ಋಮಿ ವಿವಗಳಲ್ಲಿ ನೀತಿವಂತರು ಮಾತ್ರ ವಸತಿಯಾಗಿರುವರು. ಆದ್ದರಿಂದ ಅಲ್ಲಿ ಶೇರ ತಕ್ಕವರು ಅತಿ ಜಾಗರೂಕರಾಗಿರ ಬೇಕು. ೨ ಪೇತ್ರ. ೩, ೧೩.

೨. ಇಬ್ರಿ. ೧೧, ೧೦. ೧೬; ೧೨, ೨೨. ಯೇಸುವಿನ ಸಭೆಯು ಪಟ್ಟಣದಲ್ಲಿ ವಸತಿಯಾಗಿದೆ. ಅಲಂಕಾರಮಯವಾದ ಪಟ್ಟಣವು ಅದಕ್ಕೆ ಯುಕ್ತವಾದ ಸ್ಥಾನವಾಗಿದೆ. ಪ್ರಥಮ ಪುನರುತ್ಥಾನದವರೆಲ್ಲರೂ ಗೃಹಸ್ಥರಾಗಿದ್ದಾರೆ.

೩. ಮಾನಸಾಂತರದಿಂದಲಾಗಲಿ ದೇವರ ಅಖಿಲಾಷೆಯಿಂದಲಾಗಲಿ ಪ್ರಾರ್ಥನಾಸಹನಾವಿಶ್ವಾಸಾನ್ವಿತ ಇಹಶೋಕದಿಂದಲಾಗಲಿ ಹುಟ್ಟಿದ ಕಣ್ಣೀರನ್ನು ಮಮತೆಯುಳ್ಳ ತಂದೆ ಮುದ್ದುಮಗುವಿಗೆ ಮಾಡುವ ಪ್ರಕಾರ ಅವರ ಕಣ್ಣೀರನ್ನು ಒರಸುವನು. ಆಗ ಇಹದ ದುಃಖವು ಪರಮಸುಖವಾಗುವದು.

೪. ಈ ಪದವು ವಿಶೇಷವಾಗಿ ಪ್ರಿಯರ ವಿಯೋಗದಿಂದಲೂ, ಮರಣದಿಂದಲೂ ಹುಟ್ಟುವ ಶೋಕವನ್ನು ಸೂಚಿಸುತ್ತದೆ.

೫. ಬಾಯಾರಿದವರಿಗೆಲ್ಲಾ ಜೀವದ ನೀರು ಶಿಕ್ಕುವದು. ಆದರೆ ಬಾಯಾರಿದವರಿಗೂ ಜಯಶಾಲಿಗಳಿಗೂ ಮಹೋ ವ್ಯತ್ಯಾಸವು.

೬. ನೂತನ ಸೃಷ್ಟಿ ಯೆಲ್ಲಾ ಜಯಶಾಲಿಗಳ ಐಶ್ವರ್ಯವಾದ ಬಾಧ್ಯತೆಯಾಗಿದೆ. ಅವರು ಯೇಸು ಕ್ರಿಸ್ತನಿಗೆ ಜಾತೆಬಾಧ್ಯಸ್ಥರಾಗುತ್ತಾರೆ. ರೋಮಾ. ೮, ೧೭.

೭. ಅಂಜುವವರು ಅಂದರೆ, ಜಯವನ್ನು ಹೊಂದ ತಕ್ಕ ಧೈರ್ಯವಿಲ್ಲದವರು; ಅವಿಶ್ವಾಸಿಗಳಂದರೆ ಸುವಾರ್ತೆಯನ್ನು ನಂಬದವರು ಮಾತ್ರವಲ್ಲ, ವಿಶ್ವಾಸಿಸಿದ ಬಳಿಕ ವಿಶ್ವಾಸದ್ರೋಹ ಮಾಡಿದವರು ಸಹ.

೮. ಇಹದಲ್ಲಿ ನೆವಗಳನ್ನು ಹೇಳಿದವರೆಲ್ಲರೂ ಆಗ ಚಯಾಕ್ರಾಂತರಾಗಿ ಮೌನವಾಗಿರುವರು.

2. ನೂತನ ಯೆರೂಸಲೇಮು. ವ. ೯—ಸ. ೨೨, ೫.

ನೂತನ ಯೆರೂಸಲೇಮಿನ ವರ್ಣನೆಯು. ವ. ೯—೧೬.

೯. ಮತ್ತು ಏಳು ಕಡೇ ಬಾಧೆಗಳಿಂದ ತುಂಬಿದ ಏಳು ಪಾತ್ರೆಗಳನ್ನು ಹಿಡಿದ ಏಳು ದೂತರಲ್ಲಿ ಒಬ್ಬನು ನನ್ನಬಳಿಗೆ ಬಂದು, ನನ್ನಸಂಗಡ ಮಾತಾಡಿ, ಬಾ, ಕುರಿಮರಿಯ ಹೆಂಡತಿಯಾದ ಮದಲಗಿತ್ತಿಯನ್ನು ನಿನಗೆ ತೋರಿಸುತ್ತೇನೆ, ಅಂದನು. ೧೦. ಆಗ ಆತ್ಮದಲ್ಲಿ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಕರಕೊಂಡು ಹೋಗಿ, ಪರಲೋಕದಾಳಿಗಿಂದ, ದೇವರ ಕಡೆಯಿಂದ, ಇಳಿದು ಬರುವ ೧) ಪರಿಶುದ್ಧ ಯೆರೂಸಲೇ

ಪ್ರಕ. ೨೧, ೧೧—೧೪.

ಮೆಂಬ [೨]) ಮಹಾ ಪಟ್ಟಣವನ್ನು ನನಗೆ ತೋರಿಸಿದನು. ೧೧. ಅದಕ್ಕೆ ದೇವರ ಮಹಿಮೆಯು ಇತ್ತು. ಮತ್ತು ಅದರ ಬೆಳಕು ಥಳಥಳಿಸುವ ವಜ್ರದಂತಿರುವ [೩]) ಬಹು ಬೆಲೆಯುಳ್ಳ ಕಲ್ಲಿಗೆ ಸಮಾನವಾಗಿತ್ತು. ೧೨. ಅದಕ್ಕೆ ಎತ್ತರವಾದ ದೊಡ್ಡ ಗೋಡೆಯು; ಅದಕ್ಕೆ ಹನ್ನೆರಡು ಬಾಗಲುಗಳೂ, ಬಾಗಲುಗಳಲ್ಲಿ ಹನ್ನೆರಡು ದೂತರೂ, ಇಸ್ರಾಯೇಲನ ಮಕ್ಕಳ ಹನ್ನೆರಡು ಕುಲದವುಗಳಾದ, ಮೇಲೆ ಬರೆಯಲ್ಪಟ್ಟ ಹೆಸರುಗಳೂ, ಉಂಟು. ೧೩. ಪೂರ್ವದಲ್ಲಿ ಮೂರು ಬಾಗಲುಗಳು; ಉತ್ತರದಲ್ಲಿ ಮೂರು ಬಾಗಲುಗಳು; ದಕ್ಷಿಣದಲ್ಲಿ ಮೂರು ಬಾಗಲುಗಳು; ಪಶ್ಚಿಮದಲ್ಲಿ ಮೂರು ಬಾಗಲುಗಳು [೪]). ೧೪. ಮತ್ತು ಪಟ್ಟಣದ ಗೋಡೆಗೆ ಹನ್ನೆರಡು ಅಸ್ತಿವಾರಗಳು. ಅವುಗಳಲ್ಲಿ ಕುರಿಮರಿಯ ಹನ್ನೆರಡು ಅಪೊಸ್ತಲರ ಹೆಸರುಗಳು [೫]). ೧೫. ಮತ್ತು ನಂಜ ಸಂಗಡ ಮಾತಾಡುವವನಿಗೆ, ಪಟ್ಟಣವನ್ನೂ, ಅದರ ಬಾಗಲುಗಳನ್ನೂ, ಅದರ ಗೋಡೆಯನ್ನೂ, ಅಳತೆ ಮಾಡುವದಕ್ಕೆ, ಚಿನ್ನದ ಕೋಲು ಇತ್ತು. ೧೬. ಆ ಪಟ್ಟಣವು ಚೌಕವಾಗಿದೆ; ಅದರ ಉದ್ದವು ಅಗಲದಷ್ಟು ಇರುವದು. ಮತ್ತು ಅವನು ಕೋಲಿನಿಂದ ಪಟ್ಟಣವನ್ನು ಅಳತೆ ಮಾಡಿ, ಹನ್ನೆರಡು ಸಾವಿರ ಸ್ತಾದ್ಯಗಳೆಂದು ತಿಳಿದನು [೬]). ಅದರ ಉದ್ದವೂ ಅಗಲವೂ ಎತ್ತರವೂ ಸಮವಾಗಿವೆ.

೧. ಎಜೆಕಿಯೇಲನು ಪರ್ಶಿಸುವ ಯೆರೂಸಲೇಮಿನ ಮಹಿಮೆಯು ಇದಕ್ಕಿಂತ ಬಹಳ ಕಡಿಮೆಯಾಗಿದೆ. ಎಜೆಕಿಯೇಲನ ಯೆರೂಸಲೇಮಿನಲ್ಲಿ ದೇವಾಲಯ ಉಂಟು. ಇಲ್ಲಿ ಪಟ್ಟಣವೆಲ್ಲಾ ದೇವಾಲಯವಾಗಿದೆ. ದೇವರ ಮಹಿಮೆಯು ಅದರ ಪ್ರಕಾಶವಾಗಿದೆ. ಕುರಿಮರಿಯು ಅದರ ದೀಪಸ್ತಂಭವಾಗಿದೆ.

೨. ದೂತನು ಪೂರ್ವಯೆರೂಸಲೇಮನ್ನು ಪೂರ್ಣವಾಗಿ ಮರತು ಬಿಟ್ಟು ನೂತನಯೆರೂಸಲೇಮೆಂದು ಹೇಳದೆ, ಸಾಧಾರಣವಾಗಿ ಯೆರೂಸಲೇಮೆಂದು ಹೇಳುತ್ತಾನೆ.

೩. ದೇವಮಹಿಮೆಯು ಆತನ ಸಾಮೀಪ್ಯದ ಚಿನ್ಹೆಯಾಗಿದೆ. ಅದರಲ್ಲಿ ಹೊಳೆಯುವ ಬೆಳಕು ನಿರ್ಮಲವಾದ ವಜ್ರದ ಕಾಂತಿಗೆ ಸಮಾನವಾಗಿದೆ.

೪. ನೂತನ ದಿವ್ಯಪೃಥ್ವಿಗಳು ಉಂಟಾದಾಗ್ಯೂ ಪೂರ್ವಪದ್ಧತಿಯ ಪ್ರಕಾರ, ಚತುರ್ದಿಕ್ಕೂ ಸೂಚಿಸಿರುತ್ತದೆ. ನಾಲ್ಕು ದಿಕ್ಕಿನಿಂದ ಬರುವವರಿಗೆ ಸುಲಭವಾದ ಪ್ರವೇಶವುಂಟು.

೫. ಯೂದನು ಹೀನವಾದ ಮುವ್ವತ್ತು ರೂಪಾಯಿಗಾಸ್ಕರ ಎಂಥಾ ಮಾನಮರ್ಯಾದೆಗಳನ್ನು ಕಳದು ಕಾಂಡನು. ಲುಬ್ಧರೆಲ್ಲರೂ ಹೀಗೆ ಮೋಸ ಪೋಗುತ್ತಾರೆ.

೬. ಹನ್ನೆರಡು ಸಾವಿರ ಸ್ತಾದ್ಯವು ಬೆಚ್ಚು ಕಡಿಮೆಯಾಗಿ ೭೧೪ ಮೈಲಿ ಪುರದಾರಿ. ಪಟ್ಟಣದ ಎತ್ತರವು ಸಹ ೭೧೪ ಮೈಲಿ ಪುರದಾರಿಯಾಗಿದೆ.

ಪೌಲ ಯೆರೂಸಲೇಮಿನ ಗೋಡೆಗಳ ಬಾಗಲುಗಳ ವರ್ಣನೆಯು. ವ. ೧೨—೨೧.

೧೨. ಮತ್ತು ಅದರ ಗೋಡೆಯನ್ನು ಅಳತೆ ಮಾಡಿ, ದೂತನಾದ ಮನುಷ್ಯನ ಅಳತೆಯಿಂದ ನೂರ ನಾಲ್ವತ್ತು ನಾಲ್ಕು ಮೊಳಗಳೆಂದು [೧]) ತಿಳಿದನು. ೧೭. ಮತ್ತು

ಪ್ರಕ. ೨೧, ೧೯—೨೪.

ಅದರ ಗೌಂಡೆಯ ಶಿಲ್ಪ ಕೆಲಸವು ವಜ್ರದ್ದು; ಮತ್ತು ಪಟ್ಟಣವು ಶುದ್ಧವಾದ ಗಾಜಿಗೆ ಸಮಾನವಾದ ಶುದ್ಧ ಚಿಂಗಾರವು [೨]. ೧೯. ಮತ್ತು ಪಟ್ಟಣದ ಗೌಂಡೆಯ ಅಸ್ತಿವಾರಗಳು [೩] ಬೆಲೆಯುಳ್ಳ ಸಕಲ ವಿಧವಾದ ಕಲ್ಲಿನಿಂದ ಅಲಂಕರಿಸಲ್ಪಟ್ಟವುಗಳು. ಮೊದಲನೇ ಅಸ್ತಿವಾರವು ವಜ್ರವು; ಎರಡನೇದು ನೀಲವು; ಮೂರನೇದು ಕೆಂಪು; ೨೦. ನಾಲ್ಕನೇದು ಪಚ್ಚೆಯು; ಐದನೇದು ಸಲ್ಮೀಮ; ಆರನೇದು ಅಕ್ಕೀಕ; ಏಳನೇದು ಪುಷ್ಪರಾಗ; ಎಂಟನೇದು ಬೆರುಲ್ಲ; ಒಂಭತ್ತನೇದು ತಲುಕುಪಡಿಕ; ಹತ್ತನೇದು ವೈದೂರ್ಯ; ಹನ್ನೊಂದನೇದು ಗೌಮ್ಮೇಧಿಕ; ಹನ್ನೆರಡನೇದು ಸುಗಂಧಿ [೪]. ೨೧. ಮತ್ತು ಹನ್ನೆರಡು ಬಾಗಲುಗಳು ಹನ್ನೆರಡು ಮುತ್ತುಗಳಾಗಿ [೫], ಒಂದೊಂದು ಬಾಗಲು ಒಂದೊಂದು ಮುತ್ತಿನಿಂದ ಉಂಟಾಗಿದೆ. ಪಟ್ಟಣದ ಬೀದಿಯು ಥಳಥಳಿಸುವ ಗಾಜಿನಂತಿರುವ ಶುದ್ಧ ಚಿಂಗಾರವು.

೧. ಇದು ಗೌಂಡೆಗಳ ದಪ್ಪದ ಅಳತೆಯು; ಯಾಕಂದರೆ ಉದ್ದವೂ, ಎತ್ತರವೂ ಪನ್ನೆರಡು ಸಾವಿರ ಸ್ತಾದೃವಾಗಿವೆ.

೨. ಈ ಚಿಂಗಾರವು ಭೂಮಿಯ ಗಣಿಗಳಲ್ಲಿ ದಾರಕುವಂಥಾದ್ದಕ್ಕಿಂತ ಅಮೌಲ್ಯವಾಗಿದೆ. ಆ ಚಿಂಗಾರ ಚಾವಿಸಿದರೆ ನಮ್ಮಲ್ಲಿರುವ ಚಿಂಗಾರವು ಮಣ್ಣಿನದೆಂದು ತಾರುತ್ತದೆ.

೩. ಇದು ಇಬ್ರಿ. ೧೧, ೯ಲ್ಲಿ ಸೂಚಿತವಾದ ಪಟ್ಟಣವಾಗಿದೆ. ಅದು ಅಬ್ರಹಾಮ ಮುಂತಾದ ಪೂರ್ವಕಾಲದ ಚಕ್ತರ ಆಶಾವಿಷಯವಾಗಿತ್ತು.

೪. ಈ ಸ್ಥಳದಲ್ಲಿ ಬರದ ಬೆಲೆಯುಳ್ಳ ಕಲ್ಲುಗಳ ಗ್ರೀಕ ಪೌಸರುಗಳಲ್ಲಿ ಒಂದಾಂದರ ಅಭಿಪ್ರಾಯವನ್ನು ನಿಶ್ಚೈಸುವದು ಈಗಿನ ವ್ಯಾಖ್ಯಾನಿಗಳಿಗೆ ಅಸಾಧ್ಯವಾದದ್ದು. ಆದರೆ ಇದಕ್ಕೆ ಚಿಂತೆಯಿಲ್ಲ. ಯಾಕಂದರೆ ಯೋಹಾನನು ಕಂಡ ಕಲ್ಲುಗಳು ಹೊಸಾಗಾದರೂ ಈಗ ಲೋಕದಲ್ಲಿ ದಾರಕುವ ಕಲ್ಲುಗಳಿಗೆ ಸಮಾನವಾಗಿರುವದಿಲ್ಲ.

೫. ಇಲ್ಲಿ ಸಹ ಈಗ ಲೋಕದಲ್ಲಿ ಕ್ರಯ ವಿಕ್ರಯವಾಗುವ ಮುತ್ತುಗಳನ್ನು ಚಾವಿಸ ಬಾರದು. ನೂತನ ಪೃಥ್ವಿಗಳ ವಸ್ತುಗಳ ಚಾವವು ಈಗಿನ ಭೂಮಿಯ ವಸ್ತುಗಳ ಚಾವಕ್ಕೆ ಅತ್ಯಂತ ಭೇದವಾಗಿದೆ.

ನೂತನ ಯೆರೂಸಲೇಮಿನ ಅತಿಥಿಗಳು. ಪ. ೨೨—೨೭.

೨೨. ಅದರಲ್ಲಿ ಮಂದಿರವನ್ನು ಕಾಣಲಿಲ್ಲ. ಯಾಕಂದರೆ ಸರ್ವಶಕ್ತನಾದ ದ್ಯೋವರಾಗಿರುವ ಕರ್ತನೂ ಕುರಿಮರಿಯೂ ಅದರ ಮಂದಿರವಾಗಿದ್ದಾರೆ [೧]. ೨೩. ಮತ್ತು ಪಟ್ಟಕ್ಕೆ, ಅದರಲ್ಲಿ ಪ್ರಕಾಶಿಸುವದಕ್ಕೆ ಸೂರ್ಯನಾದರೂ ಚಂದ್ರನಾದರೂ ಅಗತ್ಯವಿಲ್ಲ. ಯಾಕಂದರೆ ದ್ಯೋವರ ಮಹಿಮೆಯು ಅದಕ್ಕೆ ಬೆಳಕು ಮಾಡಿತು; ಕುರಿಮರಿಯೇ ಅದರ ದೀಪವು. ೨೪. ಮತ್ತು ರಕ್ಷಿಸಲ್ಪಡುವವರ ಜನಾಂಗಗಳು ಅದರ ಬೆಳಕಿನಲ್ಲಿ ಸಂಚರಿಸುವರು. ಭೂರಾಜರು ತಮ್ಮ ಮಹಿಮೆಯನ್ನೂ ಘನವನ್ನೂ ಅದ

(ಪ್ರಕ. ೨೧, ೨೫—೨೨, ೫.

ರಾಳಗೆ ಕರುವರು ೨). ೨೫. ಮತ್ತು ಅದರ ಬಾಗಲುಗಳು ದಿನವೆಲ್ಲಾ ಮುಚ್ಚ ಲ್ಪಡದೆ ಇರುವವು; ಯಾಕಂದರೆ ಅಲ್ಲಿ ರಾತ್ರಿಯು ಇರುವದಿಲ್ಲ ೩). ೨೬. ಮತ್ತು ಜನಾಂಗಗಳ ಮಹಿಮೆಯನ್ನೂ ಘನವನ್ನೂ ಅದರೊಳಗೆ ಕರುವರು. ೨೭. ಮತ್ತು, ಕುರಿಮರಿಯ ಜೀವದ ಪುಸ್ತಕದಲ್ಲಿ ಬರೆಯಲ್ಪಟ್ಟವರಲ್ಲದೆ, ಹೊಲೆ ಮಾಡುವಂಥ ಅಸಹ್ಯವನ್ನೂ ಸುಳ್ಳನ್ನೂ ಮಾಡುವಂಥ ಒಂದಾದರೂ ಅದರೊಳಗೆ ಸೇರುವದಿಲ್ಲ ೪).

೧. ಅಂದರೆ, ಚೌಮಿಕ ದೇವಾಲಯದ ಪರಿಶುದ್ಧ ಸ್ಥಾನದಲ್ಲಿ ವಸತಿಯಾಗಿದ್ದ ದೇವರ ಮಹಿಮೆಯು ಸಮಸ್ತ ಪಟ್ಟಣದಲ್ಲಿ ವ್ಯಾಪಕವಾಗಿರುವದರಿಂದ ಪಟ್ಟಣವೆಲ್ಲಾ ದೇವಾಲಯವಾಗಿದೆ.

೨. ಪೌಾಸ ಚೂಮಿಯಲ್ಲಿ ರಾಜಧಾನಿಯಾದ ಪಟ್ಟಣದ ಮಹಿಮೆಯಲ್ಲಿ ಗೃಪಸ್ಥಾಧಿಕಾರವಿಲ್ಲದವರಾಗಿದ್ದರೂ ಆನಂದ ಪಡುವ ಜನಾಂಗಗಳು ವಸತಿಯಾಗಿರುವರು. ಅವರ ವಿಷಯವಾಗಿ ಮತ್ತಾ. ೧೫, ೩೧ ಇತ್ಯಾದಿ ಬರದದ್ದನ್ನು ಟೀಕಿಸ ತಕ್ಕದ್ದು. ಪಟ್ಟಣದ ಗೃಪಸ್ಥರಾದ ಚೂರಾಜರು ತಮ್ಮ ಸೇವೆಯಿಂದ ನಿತ್ಯಜೀವವನ್ನು ಪೌಾಂದಿದ ಚೂನಿವಾಸಿಗಳನ್ನು ತಮ್ಮ ಮಾನ ಮಹಿಮೆಗಳೆಂದು, ಪಟ್ಟಣದಲ್ಲಿ ಶೇರಿಸುವರು. ಆಗ ಲೂಕ. ೧೬, ೯ಲ್ಲಿ ಬರದದ್ದು ನೆರವೇರುವದು.

೩. ರಾತ್ರಿಯು ಆಗದೆ ಇರುವದರಿಂದ, ದ್ವಾರಗಳು ಯಾವಾಗಲೂ ತೆರದಿರಲಾಗಿ, ೨೬ನೆ ವಚನದಲ್ಲಿ ಸೂಚಿತವಾದ ವೃತ್ತಿ ಯಾವಾಗಲೂ ನಡಿಯುವದು.

೪. ಈ ಪಟ್ಟಣದ ಮಹಿಮೆಯ ಬಾಧ್ಯಸ್ಥರೆಲ್ಲರೂ ಪಾಪಿಗಳಾಗಿ ಪುಟ್ಟಿ ನಾನಾ ಪಾಪಾಚರಣೆಗಳಿಂದ ಶಾಪಕ್ಕೂ, ನಿತ್ಯ ನಾಶಕ್ಕೂ ಪಾತ್ರರಾದ ಮನುಷ್ಯರಾಗಿದ್ದು, ದೇವವಾಕ್ಯ, ಯೇಸು ಕ್ರಿಸ್ತನ ರಕ್ತ, ಪರಿಶುದ್ಧಾತ್ಮ, ಇವುಗಳ ಮೂಲವಾಗಿ ಪರಿಶುದ್ಧರಾಗಿ, ಪರಿಶುದ್ಧ ಪಟ್ಟಣದ ಗೃಪಸ್ಥಾಧಿಕಾರವನ್ನು ಪೌಾಂದಿದವರಾಗಿದ್ದಾರೆ.

ನೂತನ ಯೆರೂಸಲೇಮಿನ ಗೃಪಸ್ಥರು. ೨೨, ೧—೫.

೧. ಮತ್ತು ದೇವರು, ಕುರಿಮರಿಯು, ಇವರ ಸಿಂಹಾಸನದೊಳಗಿಂದ ಹೊರಡುವ ಪವಿತ್ರವಾದಂಥ, ಸ್ಫಟಿಕದ ಹಾಗೆ ಪ್ರಕಾಶವಾದಂಥ ಜೀವದ ನೀರಿನ ನದಿಯನು ನನಗೆ ತೋರಿಸಿದನು. ೨. ಅದರ ಬೀದಿಯ ಮಧ್ಯದಲ್ಲಿಯೂ, ನದಿಯ ಇಚೆ ಈಚೆಯಲ್ಲಿಯೂ, ತಿಂಗಳು ತಿಂಗಳಿಗೆ ತನ್ನ ಫಲವನ್ನು ಕೊಟ್ಟು, ಹನ್ನೆರಡು ವಿಧವಾದ ಫಲಗಳನ್ನು ಫಲಿಸುವ ಜೀವದ ಮರವು ಇತ್ತು. ಆ ಮರದ ಎಲೆಗಳು ಜನಾಂಗಗಳನ್ನು ಸ್ವಸ್ಥ ಮಾಡುವದಕ್ಕಾಗಿವೆ ೧). ೩. ಮತ್ತು ಯಾವ ಶಾಪವಾದರೂ ಇನ್ನು ಇರುವದೋ ಇಲ್ಲ ೨). ಮತ್ತು ದೇವರು, ಕುರಿಮರಿಯು, ಇವರ ಸಿಂಹಾಸನವು ಅದರೊಳಗಿರುವದು; ೪. ಅವನ ದಾಸರು ಅವನನ್ನು ಸೇವಿಸುವರು; ಅವನ ಮುಖವನ್ನು ನೋಡುವರು; ಅವನ ಹೆಸರು ಅವರ ಹಣೆಗಳ ಮೇಲಿರುವದು. ೫. ರಾತ್ರಿ

ಪ್ರಕ. ೨೨, ೬.

ಯು ಅಲ್ಲಿ ಇರುವದಿಲ್ಲ, ಮತ್ತು ದೀಪವೂ ಸೂರ್ಯನ ಬೆಳಕೂ ಅವರಿಗೆ ಅಗತ್ಯವಿಲ್ಲ; ಯಾಕಂದರೆ ಕರ್ತನಾದ ದೇವರು ಅವರಿಗೆ ಬೆಳಕು ಕೊಡುತ್ತಾನೆ. ಯುಗ ಯುಗಾಂತರಗಳ ವರೆಗೂ ಆಳುವರು ೫).

೧. ಈ ಜನಾಂಗಗಳು ಪೂರ್ಣಾಲೆಯಾದವುಗಳಲ್ಲ; ಆದರೆ ದೇವಪಟ್ಟಣದಲ್ಲಿ ಶೇರುವದಕ್ಕೆ ಅಧಿಕಾರಿಗಳಾಗುವ ಪೂರ್ಣಾಗೆ, ಜೀವವೃಕ್ಷಪರ್ಣವೆಂಬೌಷಧವನ್ನು ಸೇವಿಸಿ ಕೊಂಡು ಪೂರ್ಣ ಕ್ಷೇಮವಾಗ ಬೇಕು.

೨. ಇಹದಲ್ಲಿ ದೇವರ ಕೃಪೆಯ ಸಂಪೂರ್ಣವಾದ ಪ್ರಕಟಣೆಗೆ ಯಾವಾಗಲೂ ಪಾಪದಿಂದ ಅಡ್ಡಿಯಾಗುತ್ತದೆ. ಇಸ್ರಯೇಲನವರು ವಾಗ್ದತ್ತದೇಶವನ್ನು ಸ್ವತಂತ್ರಿಸಿ ಕೊಂಡಾಗ, ಆಕಾನನಿಂದ ಶಾಪವು ಪುಟ್ಟಿತು. ಪುನ್ನೆರಡು ಮಂದಿ ಅಪಾಸ್ತಲರಲ್ಲಿ ಯೂದನು ದ್ರೋಹ ಮಾಡಿದನು. ಯೆರೂಸಲೇಮಿನಲ್ಲಿ ಸಾಗಸಿದ ಪ್ರಥಮ ಸಭೆಯಲ್ಲಿ ಅನನಿಯನೂ, ಸಪ್ಫೀರಳೂ ಪಾತಕಿಗಳಾದರು. ಅಪಾಸ್ತಲರು ತಮ್ಮ ಉದ್ಯೋಗವೃತ್ತಿಯಲ್ಲಿ ತಮ್ಮನ್ನು ತಡಿಸುತ್ತಾ ಇರುವ ಅಬದ್ಧ ಬೋಧಕರ ಸಂಗಡ ಅಂತ್ಯದ ವರೆಗೂ ಯುದ್ಧ ಮಾಡ ಬೇಕಾಯಿತು. ಆದರೆ ನೂತನ ಯೆರೂಸಲೇಮಿನಲ್ಲಿ ದೇವರ ಕೃಪೆ ಮಹಿಮೆಗಳ ಐಶ್ವರ್ಯವು ನಿರ್ವಿಘ್ನವಾಗಿ ಪ್ರಸಿದ್ಧವಾಗುವದು.

೩. ನೂತನಭೂನಿವಾಸಿಗಳು ಅವರಿಗೆ ಅಧೀನರಾಗಿ ಸೇವೆ ಮಾಡುವರು.

ಇಲ್ಲಿ ಯೋಹಾನನಿಗೆ ಪ್ರಾಪ್ತವಾದ ದರ್ಶನಗಳ ವಿವರವಾದ ಪ್ರವಾದನೆಯ ಮುಖ್ಯ ಭಾವವು ಮುಗಿದನಂತರ, ಈ ವರೆಗೂ ಬರದ ಪ್ರವಾದನೆಗೆ ಅನುಕೂಲವಾದ ಉದ್ಬೋಧನೆಯು ಬರುತ್ತದೆ. ದೇವರಾಜ್ಯವು ಈ ಗ್ರಂಥದಲ್ಲಿ ವರ್ಣಿಸಿರುವ ತಡೆಗಳನ್ನೆಲ್ಲಾ ಹೋಗಲಾಡಿಸಿ ನಿರಂತರವಾದ ಮಹಿಮಾಸಮಾಪ್ತಿಯಲ್ಲಿ ಶೇರುವದೆಂಬದು, ಪ್ರಕಟಣೆಯ ಮುಖ್ಯಾಭಿಪ್ರಾಯವಾಗಿದೆ. ಲೌಕಿಕ ಸರ್ವ ಸಾಮ್ರಾಜ್ಯಗಳ ಬಲ, ಕೀರ್ತಿ, ಮಹಿಮೆ, ವೈಭವ ಮುಂತಾದ ಪದವಿಯೆಲ್ಲಾ ದೇವರ ಮಕ್ಕಳ ಬಾಧ್ಯತೆಗೆ ತೃಣಪ್ರಾಯವಾಗಿದೆ. ಅದನ್ನು ಹೊಂದುವವರು ಯಾರು? ಅದಕ್ಕೆ ತಪ್ಪುವವರು ಯಾರು? ಆತನ ಆಜ್ಞೆಗಳನ್ನು ಕೈಕೊಳ್ಳುವವರೇ ಭಾಗ್ಯವಂತರು.

III. ಪ್ರಕಟಣೆಯ ಅಂತ್ಯವು. ವ. ೬—೨೧.

ದೂತನೂ, ಕರ್ತನೂ ಪರ್ಯಾಯವಾಗಿ ಭಕ್ತರನ್ನು ಎಚ್ಚರಿಸಿ, ಮಹಿಮೆಯ ದಿವಸವನ್ನು ಕಾದುಕೊಳ್ಳುತ್ತಾ ಇರ ಬೇಕೆಂದು ಉದ್ಬೋಧಿಸುತ್ತಾರೆ. ಪ್ರಕಟಣೆಯ ಅಂತ್ಯೋಕ್ತಿಯು ಅದರ ಉಪಕ್ರಮೋಕ್ತಿಗೆ ಅನುಸಾರವಾಗಿದೆ.

ದೂತನ ಮೊದಲನೆ ಉದ್ಬೋಧನೆಯು.

೬. ಮತ್ತು ಅವನು ನನಗೆ ಹೇಳಿದ್ದು ೧), ಈ ವಾಕ್ಯಗಳು ನಂಬಿಕೆಯೂ ಸತ್ಯವೂ ಆಗಿವೆ. ಮತ್ತು ಪರಿಶುದ್ಧ ಪ್ರವಾದಿಗಳ ದೇವರಾಗಿರುವ ಕರ್ತನು, ತನ್ನ ದೂತನನ್ನು

(ಪ್ರಕ. ೨೨, ೭—೯.

ಗಿ ಈಗ ಬ್ಯೇಕಾದವುಗಳನ್ನು[೨] ತನ್ನ ದಾಸರಿಗೆ ತೋರಿಸುವದಕ್ಕೆ, ತನ್ನ ದೂತನನು ಕಳುಹಿಸಿದ್ದಾನೆ.

೧. ಯೋಹಾನನಿಗೆ ಬೇರೆ ಬೇರೆ ದರ್ಶನಗಳನ್ನು ತೋರಿಸಿದ ದೂತನು ಸ. ೧, ೧. ಇಲ್ಲಿ ಮಾತಾಡಿ, ಯೋಹಾನನು ಕಂಡದ್ದೆಲ್ಲಾ ನಿಶ್ಚಯವಾಗಿ ನೆರವೇರುತ್ತದೆಂದು ಪ್ರಮಾಣಿಸುತ್ತಾನೆ. ಪ್ರವಾದನೆಯ ಆತ್ಮವನ್ನು ವಿಶೇಷವಾಗಿ ಹೊಂದಿದ ಯೋಹಾನನು ತನಗೆ ಪ್ರಾಪ್ತವಾದ ದರ್ಶನಗಳನ್ನೂ, ದೇವರು ಕಳುಹಿಸಿದ ದೂತರ ಮಾತುಗಳನ್ನೂ ಚನ್ನಾಗಿ ತಿಳಿದು ಕಾಳ್ಗಲಧಿಕಾರಿಯಾಗಿದ್ದನು.

೨. ಯೋಹಾನನು ಪ್ರಕಟಣೆಯನ್ನು ಹೊಂದಿದ ಸ್ವಲ್ಪ ಕಾಲದಾಳಗೆ, ಅದರ ಪ್ರವಾದನೆಗಳು ನೆರವೇರ ತೊಡಗಿದವು. ಸ. ೧, ೧.

ಕರ್ತನಾದ ಯೇಸುವಿನ ಪ್ರಥಮೋದ್ಬೋಧನೆಯು.

೭. ಇಗೋ, ಬೇಗ ಬರುತ್ತೇನೆ[೧]. ಈ ಪುಸ್ತಕದ ಪ್ರವಾದನೆಯ ವಾಕ್ಯಗಳನ್ನು ಕೈಕೊಳ್ಳುವವನು ಭಾಗ್ಯವಂತನು[೨].

೧. ಇಗೋ ಈಗ ಬರುತ್ತೇನೆ ಎಂಬುವದು ಯಾವಾಗಲೂ ಕರ್ತನಾದ ಯೇಸುವಿನ ಶಬ್ದವಾಗಿದೆ. ಈ ಪುಸ್ತಕದ ಆರಂಭದಲ್ಲಿ ಸಜಾದೂತರಿಗೆ ಬರದ ಪ್ರಸಿದ್ಧಪತ್ರಿಕೆಗಳಲ್ಲಿ ರೂಢಿಯಾದ ಈ ಮಾತು ಪುಸ್ತಕದ ಸಮಾಪ್ತಿಯಲ್ಲಿಯೂ ತಿರಿಗಿ ಬರುವದು ಯುಕ್ತವಾಗಿದೆ.

೨. ಕರ್ತನು ಬೇಗ ಬರುತ್ತಾನೆಂಬ ಮಾತನ್ನು ಮರತು ಬಿಡದೆ, ನೆನಸುವ ಭಕ್ತನು ದೇವರಾಜ್ಯಬಾಧ್ಯತೆಯಂಬ ಫಲವನ್ನು ಹೊಂದುತ್ತಾನೆ. ಸ. ೧, ೩.

ದೂತನ ಎರಡನೆ ಉದ್ಬೋಧನೆಯು. ವ. ೮. ೯.

೮. ಯೋಹಾನನೆಂಬ ನಾನು[೧] ಇವುಗಳನ್ನು ನೋಡಿ ಕೇಳಿದೆನು. ಅವುಗಳನ್ನು ಕೇಳಿ ನೋಡಿದ ಮೇಲೆ, ಅವುಗಳನ್ನು ನನಗೆ ತೋರಿಸಿದ ದೂತನ ಪಾದಗಳ ಮುಂದೆ ನಮಸ್ಕರಿಸುವದಕ್ಕೆ ಬಿದ್ದೆನು. ೯. ಆಗ ಅವನು ನನಗೆ ಹೇಳಿದ್ದು, ಬೇಡವೇ ಬೇಡ; ಯಾಕಂದರೆ ನಿನಗೂ ನಿನ್ನ ಸಹೋದರರಾದ ಪ್ರವಾದಿಗಳಿಗೂ, ಇ ಪುಸ್ತಕದ ವಾಕ್ಯಗಳನ್ನು ಕೈಕೊಳ್ಳುವವರಿಗೂ, ಜೊತೆದಾಸನಾಗಿದ್ದೇನೆ. ದೇವರಿಗೆ ನಮಸ್ಕರಿಸು[೨].

೧. ಅಪಾಸ್ತಲನಾದ ಯೋಹಾನನು ಇಲ್ಲಿ ತನ್ನ ಹೆಸರನ್ನು ಮಾತ್ರ ಬರೆಯುತ್ತಾನೆ, ಹೊರತು ವಿಶೇಷವಾದ ಚಿನ್ಹೆಯನ್ನು ಹೇಳುವದಿಲ್ಲ. ಆ ಕಾಲದ ಯೆಹೂದಕ್ರೈಸ್ತರಲ್ಲಿಯೂ ಯೆಹೂದರಲ್ಲಿಯೂ ಅನೇಕ ಜನರಿಗೆ ಯೋಹಾನನೆಂಬ ಹೆಸರಿತ್ತು. ಆದರೆ ಅಪಾಸ್ತಲರು ಸ್ಥಾಪಿಸಿದ ಸಭೆಗಳಲ್ಲಿ ತಾನು ಯೋಹಾನನೆಂದು ಸಾಧಾರಣವಾಗಿ ಬರೆಯುವವನು ಅಪಾಸ್ತಲನಾದ ಯೋಹಾನನೇ ಎಂದು, ಎಲ್ಲರಿಗೆ ಚನ್ನಾಗಿ ಗೊತ್ತಾಗಿತ್ತು.

೨. ಸ. ೧೯, ೧೦ಲ್ಲಿ ಯೋಹಾನನು ಮೊದಲು ದೂತನಿಗೆ ನಮಸ್ಕಾರ ಮಾಡಲು, ದೂತನು ಬೇಡೆಂದು ಹೇಳಿದನು. ಬಳಿಕ ಪ್ರಕಟಣೆಯ ಅತಿ

(ಪ್ರಕ. ೨೨, ೧೦—೧೫.

ಶಯ ಮಹಿಮೆಯುಳ್ಳ ದರ್ಶನಗಳನ್ನು ಕಂಡು, ಯಾ ಪೌಲನು ಕರ್ತನಿಗೆ ನಮಸ್ಕಾರ ಮಾಡ ಬೇಕೆಂದು, ಅತನು ಕಳುಹಿಸಿದ ದೂತನ ಪಾದದ ಮುಂದೆ ಬೀಳುತ್ತಾನೆ. ಆದರೆ ಇದು ಸಹ ಆಗುವದಿಲ್ಲವೆಂದು, ದೂತನು ಅವನನ್ನು ತಡಿಸುತ್ತಾನೆ. ದೇವರ ಸೇವಕರು ದೇವಮಾನಾಸಕ್ತರಾಗಿದ್ದು, ಯಾರೂ ತಮ್ಮನ್ನು ಪೂಜಿಸಕೂಡದೆಂದು, ಬೋಧಿಸುವದಕ್ಕೆ ಉದ್ಯುಕ್ತರಾಗಿದ್ದಾರೆ. ಪೌಲನ ವಾಡಂಬಡಿಕೆಯಲ್ಲಿ ಕಡೇ ಸಾರಿ ಮಾತಾಡಿದ ಈ ದೂತನ ಕಡೇ ಮಾತು ಯಾವದಂದರೆ: ದೇವರನ್ನೇ ನಮಸ್ಕರಿಸು. ಇದು ಲಕ್ಷ್ಯವಾದದ್ದು.

ಕರ್ತನಾದ ಯೇಸುವಿನ ಎರಡನೆ ಉದ್ಘಾಟನೆಯು. ವ. ೧೦—೧೫.

೧೦. ಮತ್ತು ನನಗೆ ಹೇಳಿದ್ದು ೧), ಇ ಪುಸ್ತಕದ ಪ್ರವಾದನೆಯ ವಾಕ್ಯಗಳಿಗೆ ಮುದ್ರೆ ಹಾಕ ಬೇಡ. ೧೧. ಯಾಕಂದರೆ ಸಮಯವು ಸಮೀಪವಾಗಿದೆ ೨). ಅನ್ಯಾಯ ಮಾಡುವವನು ಇನ್ನೂ ಅನ್ಯಾಯ ಮಾಡಲಿ. ಮೈಲಿಗೆಯವನು ಇನ್ನೂ ಮೈಲಿಗೆಯಾಗಿರಲಿ. ನೀತಿವಂತನು ಇನ್ನೂ ನೀತಿವಂತನಾಗಿರಲಿ. ಪರಿಶುದ್ಧನು ಇನ್ನೂ ಪರಿಶುದ್ಧನಾಗಿರಲಿ ೩). ೧೨. ಇಗೋ, ಬೇಗ ಬರುತ್ತೇನೆ; ಮತ್ತು ಒಬ್ಬೊಬ್ಬನಿಗೆ ಅವನವನ ಕ್ರಿಯೆಯು ಇರುವ ಪ್ರಕಾರವೇ ಕೊಡುವದಕ್ಕೆ, ನನ್ನ ಪ್ರತಿಫಲವು ನನ್ನ ಸಂಗಡ ಇರುತ್ತದೆ ೪). ೧೩. ನಾನು ಅಕಾರವೂ ಓಕಾರವೂ, ಆದಿಯೂ ಅಂತ್ಯವೂ, ಮೊದಲನೆಯವನೂ ಕಡೆಯವನೂ, ಆಗಿದ್ದೇನೆ ೫).

೧. ಇಲ್ಲಿ ನುಡಿಯುವವನು ಯೇಸುವೆಂದು ೧೭ನೆ ವಚನದಲ್ಲಿ ಸ್ಪಷ್ಟವಾಗಿ ತಾತ್ಪರ್ಯವಾಗುತ್ತದೆ.

೨. ಪ್ರಕಟಣೆಯಲ್ಲಿ ಬರದ ಅನೇಕ ಮಾತುಗಳ ಅಭಿಪ್ರಾಯವು, ಅವು ನೆರವೇರುವ ಕಾಲದಲ್ಲಿಯೇ ಪೂರ್ಣವಾಗಿ ಕಾಣುವದರಿಂದ, ಕರ್ತನು ನೆರವೇರುವ ಕಾಲವು ಸಮೀಪವಾಯಿತೆಂದು, ಹೇಳುತ್ತಾನೆ. ಹೀಗಾದರೆ, ಪ್ರವಾದನೆಯ ಅಭಿಪ್ರಾಯವು ಸಹ ಬೇಗ ಪ್ರಕಟವಾಗುತ್ತವೆ.

೩. ಪ್ರಕಟಣೆಯಲ್ಲಿ ವರ್ಣಿಸಿರುವ ಯುದ್ಧಕಾಲಗಳು ಮಾನಸಾಂತರಕ್ಕೆ ಅನುಕೂಲವಾದವುಗಳಲ್ಲ. ಕಾಳಗದಲ್ಲಿ ಒಬ್ಬೊಬ್ಬನು ಯಾವದಾದರೂ ಒಂದು ಪಕ್ಷದಲ್ಲಿ ಶೀರಿರ ಬೇಕು. ಇದಕ್ಕೆ. ಸ. ೩, ೧೫ ಸರಿನಾನಾಡ ಬೇಕು.

೪. ಯೋಹಾ. ೬, ೨೯ರ ಪ್ರಕಾರ, ಯೇಸು ಕ್ರಿಸ್ತನನ್ನು ನಂಬುವದು ದೇವರ ಕೃತ್ಯವಾಗಿದೆ. ದೇವರು ತನ್ನ ಮಗನ ವಿಷಯವಾಗಿ ಕೊಟ್ಟ ಸಾಕ್ಷಿಯನ್ನು ನಂಬಿದೆ, ದೇವರ ವಾಕ್ಯವು ಸುಳ್ಳೆಂದು ನಿರ್ಣೈಸುವದು ೧ ಯೋಹಾ. ೫, ೧೦. ದೇವದ್ರೋಹಿಯಾದ ಸುಳ್ಳುಗಾರನಾಗಿರುವ ಸೈತಾನನ ಕೃತ್ಯವಾಗಿದೆ. ದೇವ ಕೃತ್ಯವನ್ನು ಮಾಡಿದವರು ದೇವರಾಜ್ಯಬಾಧ್ಯತೆಯನ್ನು ಪೊಂದುವರು. ಸೈತಾನನ ಕೃತ್ಯವನ್ನು ಮಾಡಿದವರಿಗೆ ಸೈತಾನನ ಗತಿಯು ಪ್ರಾಪ್ತವಾಗುವದು. ಆದರೆ ದೇವರಾಜ್ಯದವರಲ್ಲಿಯೂ, ಸೈತಾನನ ಪಕ್ಷದವರಲ್ಲಿಯೂ ಒಬ್ಬೊಬ್ಬನ ಪರದ ಗತಿಯು ಇಹದ ಕೃತ್ಯಗಳಿಗೆ ಪೂರ್ಣವಾಗಿ ಅನುಸಾರವಾಗುವದೆಂದು, ಕರ್ತನು ಇಲ್ಲಿ ಸಾಕ್ಷಿ ಕಾಡುತ್ತಾನೆ.

೫. ಸ. ೨೧, ೬ರಲ್ಲಿ ದೇವರು ಹೇಳಿದ ವಾಕ್ಯವನ್ನು ಕರ್ತನಾದ ಯೇಸುವು ಇಲ್ಲಿ ಹೇಳುತ್ತಾನೆ.

ಪ್ರಕ. ೨೨, ೧೪—೧೯.

ಕರ್ತನಾದ ಯೇಸುವಿನ ಮೂರನೆ ವಾಕ್ಯವು. ವ. ೧೪, ೧೫.

೧೪. ಜೀವದ ಮರದ ಮೇಲೆ ಅವರಿಗೆ ಅಧಿಕಾರವು ಇರುವ ಹಾಗೆಯೂ, ಬಾಗಲುಗಳಿಂದ ಪಟ್ಟಣದಲ್ಲಿ ಪ್ರವೇಶಿಸುವ ಹಾಗೆಯೂ, ಅವನ ಕಟ್ಟಳೆಗಳನ್ನು ಮಾಡುವವರು ಧನ್ಯರು[೧]. ೧೫. ಆದರೆ ನಾಯಿಗಳೂ, ಶೂನ್ಯಗಾರರೂ, ಜಾರರೂ, ಕೊಲೆಗಾರರೂ, ವಿಗ್ರಹಾರಾಧಕರೂ, ಸುಳ್ಳನ್ನು ಪ್ರೀತಿ ಮಾಡಿ ನಡಿಸುವವರೆಲ್ಲರೂ, ಹೊರಗೆ ಇದ್ದಾರೆ[೨].

೧. ದೇವಾಜ್ಞೆಗಳನ್ನು ಕೈಕಾಂಡವರೆಂಬವರು ದೇವಪಟ್ಟಣದ ಅತಿಥಿಗಳಾಗಿದ್ದು, ಜೀವವೃಕ್ಷಫಲಗಳನ್ನು ಅನುಭವಿಸುವರು. ಈ ಜೀವವೃಕ್ಷಗಳು ಜೀವಕರವಾಗಿರುವ ಪ್ರಕಾರ, ಏದೆನ್ ತೋಟದಲ್ಲಿದ್ದ ಜ್ಞಾನವೃಕ್ಷಫಲವು ಅವಿಧೇಯರಾದ ಮನುಷ್ಯರಿಗೆ ಮರಣಕರವಾಗಿತ್ತು.

೨. ಸ. ೨೧, ಲಲ್ಲಿ ಬರದದ್ದು ಇಲ್ಲಿ ಪುನರುಕ್ತವಾಗಿದೆ. ಪೂರ್ವಕಾಲದ ಅಶುದ್ಧ ಮನುಷ್ಯರಿಗೆ ನಾಯಿಗಳೆಂದು ಹೆಸರಿಟ್ಟಿದೆ. ಅಂಥವರು ಪಟ್ಟಣದಲ್ಲಿಯೂ, ಅದರ ಸಮೀಪದಲ್ಲಿಯೂ ಸೇರಲಾರರು. ಬಹಿರಂಧಕಾರವಾದ ಯಾತನಾಸ್ಥಾನವು ಅವರ ಪ್ರದೇಶವಾಗಿದೆ.

ಕರ್ತನಾದ ಯೇಸುವಿನ ಅಂತ್ಯೋದ್ಬೋಧನೆಗಳು. ವ. ೧೬—೧೯.

೧೬. ಸಭೆಗಳಲ್ಲಿ ಇವುಗಳ ಸಾಕ್ಷಿಯನ್ನು ನಿಮಗೆ ಹೇಳುವ ಬಗ್ಗೆ[೧], ಯೇಸುವೆಂಬ ನಾನು[೨] ನನ್ನ ದೂತನನ್ನು ಕಳುಹಿಸಿದ್ದೇನೆ. ನಾನು ದಾವೀದನ ಬೇರೂ, ಸಂತತಿಯೂ, ಉದಯದ ಪ್ರಕಾಶವಾದ ನಕ್ಷತ್ರವೂ, ಆಗಿದ್ದೇನೆ[೩]. ೧೭. ಆತ್ಮವೂ ಮದಲಗಿತ್ತಿಯೂ, ಬಾ, ಅನ್ನುತ್ತಾರೆ. ಕೇಳುವವನು, ಬಾ, ಅನ್ನಲಿ[೪]. ದಾಹವುಳ್ಳವನು ಬರಲಿ. ಬೇಕಾದವನು ಜೀವದ ನೀರನ್ನು ಉಚಿತವಾಗಿ ತೆಕ್ಕೊಳ್ಳಲಿ[೫]. ೧೮. ಈ ಪುಸ್ತಕದ ಪ್ರವಾದನೆಯ ವಾಕ್ಯಗಳನ್ನು ಕೇಳುವ ಪ್ರತಿ ಮನುಷ್ಯನಿಗೆ ನಾನು ಸಾಕ್ಷಿ ಹೇಳುವದೇನಂದರೆ, ಒಬ್ಬನು ಇವುಗಳಿಗೆ ಹೆಚ್ಚು ಮಾತು ಕೂಡಿಸಿದರೆ, ದೇವರು ಈ ಪುಸ್ತಕದಲ್ಲಿ ಬರೆದಿರುವ ಬಾಧೆಗಳನ್ನು ಅವನ ಮೇಲೆ ಕೂಡಿಸಿಡುವನು. ೧೯. ಮತ್ತು ಒಬ್ಬನು ಈ ಪ್ರವಾದನೆಯ ಪುಸ್ತಕದ ವಾಕ್ಯಗಳಿಂದ ಏನಾದರೂ ತೆಗೆದು ಹಾಕಿದರೆ, ದೇವರು ಜೀವದ ಪುಸ್ತಕದಿಂದಲೂ, ಪರಿಶುದ್ಧ ಪಟ್ಟಣದಿಂದಲೂ, ಈ ಪುಸ್ತಕದಲ್ಲಿ ಬರೆದಿರುವವುಗಳಿಂದಲೂ, ಅವನ ಪಾಲನ್ನು ತೆಗೆದು ಹಾಕುವನು[೬].

೧. ಈ ಮಾತು ಸಭಾದೂತರಾದ ಅಧ್ಯಕ್ಷಿಗಳಿಗೆ ಹೇಳಿಯದೆ; ಆದರೆ ಅದು ಅವರಿಗೆ ವಿಶೇಷವಾಗಿ ಅಲ್ಲ, ಸಭೆಗಳ ಮುಂದೆ ಪ್ರಕಟವಾಯಿತು.

೨. ಕರ್ತನಾದ ಯೇಸುವು ಈ ಗ್ರಂಥದ ಅನೇಕ ಸ್ಥಳಗಳಲ್ಲಿ ಮಾತನಾಡುತ್ತಾನೆ. ಆದರೆ ಇಲ್ಲಿ ತನ್ನ ಹೆಸರನ್ನು ಸಹ ಹೇಳುತ್ತಾನೆ. ಈ ಗ್ರಂಥಕ್ಕೆ ಕರ್ತ

ಪ್ರಕ. ೨೨, ೨೦—೨೧.

ನಾದ ಯೇಸುವಿನ ಪ್ರಕಟಣೆಯಂದು ಹೆಸರಿಡುವದು ಯುಕ್ತವಾಗಿದೆ.

೩. ದಾವೀದನ ಬೇರೂ, ಸಂತತಿಯೂ ಎಂಬುವದಕ್ಕೆ ಸ. ೫, ೫ ಸರಿ ನೋಡ ಬೇಕು. ಉದಯನಕ್ಷತ್ರವೆಂಬದು ಸ. ೨, ೨೮ಲ್ಲಿಯೂ ಸೂಚಿತವಾಗಿದೆ. ಈ ವಚನದಲ್ಲಿ ಬರದ ಮೊದಲನೆ ಹೆಸರು, ಯೇಸುವು ಇಸ್ರಾಯೇಲನವರ ಅರಸನಾಗಿದ್ದಾನೆಂಬುವದನ್ನು, ಎರಡನೇದು, ಆತನು ಪರಜನರ ಆಶಾವಿಷಯವಾಗಿದ್ದಾನೆಂಬುವದನ್ನು ಸೂಚಿಸುತ್ತದೆ.

೪. ಸಿದ್ಧಿಯನ್ನು ಹೊಂದಿ, ದಿವದಲ್ಲಿರುವ ಪರಿಶುದ್ಧರ ವಿಶಿಷ್ಟರ ಸಮೂಹಕ್ಕೆ ಕ್ರಿಸ್ತನ ಮದಲಗಿತ್ತಿಯಂಬ ಹೆಸರುಂಟು. ಆದರೆ ಇಲ್ಲಿ ಈ ಹೆಸರು ಮೃತವಾದ ಚಕ್ತರನ್ನು ಮಾತ್ರವಲ್ಲ, ಮದಲಗಿತ್ತಿಯಂಬ ಸಖೆಯಲ್ಲಿ ಶೇರಿ, ಯೇಸು ಕ್ರಿಸ್ತನ ಆಗಮನದ ಆಶಾಸಕ್ತರಾಗಿದ್ದು, ನಿರಂತರಮಹಿಮಾಸಂಚಕಾರವಾದ ಆತ್ಮದ ಬಲದಿಂದ, ಬಾ! ಎಂದು ಹೇಳುವ ಚೂವಾಸಿಗಳಾದ ವಿಶ್ವಾಸಿಗಳನ್ನು ಸಹ ಸೂಚಿಸುತ್ತದೆ.

೫. ಯೋಹಾ. ೭, ೩೯ಲ್ಲಿ ಯೇಸುವು ಗುಡಾರಗಳ ಹಬ್ಬಕ್ಕೆ ಯೆರೂಸಲೇಮಿನ ದೇವಾಲಯದಲ್ಲಿ ಕೂಡಿದ ಸಮೂಹಗಳಿಗೆ ಈ ವಾಕ್ಯವನ್ನು ಕೂಗಿ ಹೇಳಿದನು. — ಕರ್ತನಾದ ಯೇಸುವು ತನ್ನ ಕೃಪಾಪ್ರಸಾದಗಳನ್ನೆಲ್ಲಾ ಚಕ್ತರಿಗೆ ಉಚಿತವಾಗಿ ಕಾಟ್ಟು, ತನ್ನ ಆಗಮನಕ್ಕಾಗಿ ಅವರನ್ನು ಸಿದ್ಧ ಮಾಡುತ್ತಾನೆ. ಕರ್ತನೇ, ನನಗೂ ಜೀವಜಲವನ್ನು ಕಾಡು! ಅಧಿಕಾಧಿಕವಾದ ದಾಹವನ್ನು ನನ್ನಲ್ಲಿ ಹುಟ್ಟಿಸು!

೬. ಈ ಗ್ರಂಥವು ಹೊಸಾಸ ಒಡಂಬಡಿಕೆಯಂಬ ಗ್ರಂಥಸಂಗ್ರಹದಲ್ಲಿ ಇರುವ ಒಂದೇ ಪ್ರವಾದನಾ ಗ್ರಂಥವಾಗಿದೆ. ಉಳಿದ ಅಪಾಸ್ತಲರ ಗ್ರಂಥಗಳಲ್ಲಿ ಬರೆಯದೆ ಇರುವ ಅನೇಕ ವಾಕ್ಯಗಳು ಇದರಲ್ಲಿ ಬರದವೆ. ಆದ್ದರಿಂದ ಇದಕ್ಕೆ ಏನೂ ನ್ಯೂನಾಧಿಕ ಮಾಡಬಾರದೆಂಬ ಆಜ್ಞೆಯು ಶ್ಲಾಘ್ಯವಾದದ್ದು. ಈಗಿನ ಕಾಲದಲ್ಲಿ ಮಹಾ ಜ್ಞಾನಾಂಧಕಾರವು ಕ್ರೈಸ್ತರನಿಸಿಕೊಳ್ಳುವವರಲ್ಲಿ ಹುಟ್ಟಿದ ಕಾರಣ ಅನೇಕರು ಈ ಗ್ರಂಥವನ್ನು ಲಕ್ಷಿಸದೆ, ಅಭ್ಯಾಸ ಮಾಡದೆ, ಇರುತ್ತಾರೆ. ಅದರಲ್ಲಿ ಬರದ ಪ್ರವಾದನೆಯು ಪೂರ್ಣವಾಗಿ ನೆರವೇರುವ ಕಾಲವು ಸಮೀಪವಾಗಲು, ವಿಶ್ವಾಸವಿಲ್ಲದವರೆಲ್ಲರೂ ಪೂರ್ಣ ದೇಪದ್ರೋಹ ಮಾಡಿ, ಪ್ರವಾದನೆಯನ್ನು ಹೆಚ್ಚು ಹೆಚ್ಚಾಗಿ ಹಗೆ ಮಾಡುತ್ತಾ ಇರಲಾಗಿ, ದುರ್ವಿಶ್ವಾಸದವರು ಅದನ್ನು ಅಧಿಕ ಮಾಡದ ಹಾಗೆಯೂ, ಅವಿಶ್ವಾಸದವರು ಅದನ್ನು ನ್ಯೂನ ಮಾಡದ ಹಾಗೆಯೂ, ಪ್ರಯತ್ನವಾದ ಈ ಉದ್ಬೋಧನೆಗಳು ಯುಕ್ತವಾಗಿವೆ.

ಯೋಹಾನನ ಅಂತ್ಯೋಕ್ತಿಯು. ಪ. ೨೦. ೨೧.

೨೦. ಇವುಗಳಿಗೆ ಸಾಕ್ಷಿಯಾದವನು ೧) ಹೇಳುತ್ತಾನೆ—ಹೌದು, ಬೇಗ ಬರುತ್ತೇನೆ; ಆಮೆನ್. ಹೌದು, ಕರ್ತನಾದ ಯೇಸುವೇ ಬಾ ೨). ೨೧. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

೧. ಯೇಸುವು ೧೭ನೆ ವಚನದ ಮಾತಿಗೆ ಈ ಪ್ರತ್ಯುತ್ತರವನ್ನು ಹೇಳುತ್ತಾನೆ.

೨. ಇದು ಯೋಹಾನನ ಮಾತು. ನಾವು ಸಹ ಯಥಾರ್ಥವಾದ ವಿಶ್ವಾಸದಿಂದ ಯೋಹಾನನ ಕೂಡಾ ಆಮೆನ್. ಹೌದು. ಕರ್ತನಾದ ಯೇಸುವೇ, ಬಾ! ಎಂದು ಹೇಳುವ.

ದೇವವಾಕ್ಯಚರಿತ್ರಾನುಕ್ರಮಣಿಕೆಯು.

ಈ ಅನುಕ್ರಮಣಿಕೆಯು ಅಶರ್ ಅಧ್ಯಕ್ಷಿಯು ಪ್ರಕಟಿಸಿದ ಲೌಕಚರಿತ್ರಕಾಲಗಣನೆಗೆ ಹೊಚ್ಚು ಕಡಿಮೆಯಾಗಿ ಅನುಕೂಲವಾಗಿದೆ.

ದೈವವಾಕ್ಯಕಾಲಗಣನಾ ಕ್ಲಪ್ತ ಸೂಚನೆಯು.

೧. ಸೃಷ್ಟಿಯಿಂದ ಜಲಪ್ರಳಯಕ್ಕೆ	೧೬೫೬	ವರುಷ.
ಜಲಪ್ರಳಯದಿಂದ ಅಬ್ರಹಾಮನ ಆಹ್ವಾನಕ್ಕೆ	೪೨೭	—
೨. ಅಬ್ರಹಾಮನ ಆಹ್ವಾನದಿಂದ ಇಸ್ರಯೇಲನವರು ಮಿಚ್ರದಲ್ಲಿ ಶೇರಿದ ಕಾಲಕ್ಕೆ	೨೧೫	—
ಇಸ್ರಯೇಲನವರು ಮಿಚ್ರದೇಶದಲ್ಲಿ ಶೇರಿದ ಕಾಲದಿಂದ ಮಿಚ್ರದೇಶದಿಂದ ಹೊರಟ ಕಾಲಕ್ಕೆ	೨೧೫	—
೩. ಇಸ್ರಯೇಲನವರು ಮಿಚ್ರದಿಂದ ಹೊರಟ ಕಾಲದಿಂದ ಸಾಲಾಮೋನನು ದೇವಾಲಯವನ್ನು ನಿರ್ಮಿಸ ತೊಡಗಿದ ಕಾಲಕ್ಕೆ	೪೮೦	—
೪. ಸಾಲಾಮೋನನು ದೇವಾಲಯವನ್ನು ಕಟ್ಟಿಸಿದ ಆರಂಭದಿಂದ ಬಬುಲಾನದ ಬಂಧನಗ್ರಹಣದ ಆರಂಭಕ್ಕೆ ೫೭ (ಸಾಲಾಮೋನನು) + ೫೬೭ (ಪಟ್ಟಣವೂ ದೇವಾಲಯವೂ ನಾಶವಾಗುವ ಪರ್ಯಂತ ೧೪ ವರುಷ ಹೆಚ್ಚಾದ್ದರಿಂದ ೪೧೪ ವರುಷವಾಗುತ್ತವೆ.)	೪೦೪	—
೫. ಬಬುಲಾನದ ಬಂಧನಗ್ರಹಣದ ಕಾಲವು (ಅರಸನಾದ ಯಾಯಕೀಮನ ಲನೆ ಕಾಲದಿಂದ)	೭೦	—
೬. ಯೆಹೂದರು ಬಬುಲಾನದ ಬಂಧನಗ್ರಹಣದಿಂದ ಬಿಡುಗಡೆಯಾದ ಕಾಲ ಮೊದಲುಗೊಂಡು, ಪ್ರವಾದಿಯಾದ ದನಿಯೇಲನ ೭೦ ವರುಷ ಸಪ್ತಕದ ಆರಂಭಕ್ಕೆ, ಅಂದರೆ ಕಾರೆಸನು ರಾಜ್ಯವನ್ನು ಸ್ವಾಧೀನವಾಗಿ ಆಳಿ ಕಾಂಡ ಪ್ರಥಮ ವರುಷದಿಂದ ದೀರ್ಘ ಬಾಪುವೆಂಬ ಅರ್ತ ಕ್ಸೆರ್ಕ್ಸೆಯನ ೨೦ನೆ ವರುಷದಲ್ಲಿ ಯೆರೂಸಲೇಮಿನ ನೂತನ ನಿರ್ಮಾಣದ ಕಟ್ಟಳೆಯುಂಟಾದ ಕಾಲಕ್ಕೆ	೬೦	ವರುಷ.
೭. ದನಿಯೇಲನ ೭೦ ವರುಷ ಸಪ್ತಕವು = ೪೯೦. (ಇದರಿಂದ ಕಡೆಯ ವರುಷ ಸಪ್ತಕವನ್ನೂ, ಯೇಸು ಕ್ರಿಸ್ತನ ಜನನದಿಂದ ಆತನ ಉದ್ಯೋಗವೃತ್ತಿಯ ಆರಂಭದ ಪರ್ಯಂತ ನಡದ ೩೦ ವರುಷಗಳನ್ನೂ ಕಳೆಯ ಬೇಕು.) — ಹೊಗಾಗಾದರೆ ೫೭ ವರುಷ ಕಡಿಮೆಯಾಗಿ ೪೯೦ ವರುಷ	೪೩೩	—
	೪೦೦೦	ವರುಷ.

ದೇವವಾಕ್ಯಚರಿತ್ರಾನುಕ್ರಮಣಿಕೆಯು.

೮.	ಕ್ರಿಸ್ತನ ಜನನದಿಂದ ಆತನ ದಿವಾರಾಪಣದ ಪರ್ಯಂತ	೩೩½	ವರುಷ.
೯.	ಕ್ರಿಸ್ತನ ದಿವಾರಾಪಣದಿಂದ ಪೌಲನ ಸಂವರ್ತನದ ಪರ್ಯಂತ . .	½	—
೧೦.	ಪೌಲನ ಸಂವರ್ತನದಿಂದ ಅವನ ಪ್ರಥಮ ಸುವಾರ್ತಾಪ್ರಸಂಗಪರ್ಯಟಣದ ಪರ್ಯಂತ	೮	೩೩½
೧೧.	ಅದು ಮೊದಲ್ಗೊಂಡು ಅವನು ಬಂಧನಗ್ರಸ್ತನಾಗಿ ರೋಮಪುರಕ್ಕೆ ಪೋದ ಪರ್ಯಂತ	೧೬	
	ಆ ಕಾಲದಿಂದ ಪೌಲನ ಮರಣದ ಪರ್ಯಂತ	೭	
೧೭.	ಪೌಲನ ಮರಣದಿಂದ ಯೋಹಾನನ ಮರಣದ ಪರ್ಯಂತ . . .	೩೩	
		೪೧೦೦	ವರುಷ.

ಲೌಕಿಕಚರಿತ್ರದಲ್ಲಿ ಕಾಣುವ ಮುಖ್ಯ ಕಾರ್ಯಗಳನ್ನೂ, ಮುಖ್ಯ ಮನುಷ್ಯರನ್ನೂ ಕ್ಲಪ್ತವಾಗಿ ಸೂಚಿಸುವ ಅನುಕ್ರಮಣಿಕೆಯು.

ಸೂ ಚ ನೆ ಯು.

ಸೃಷ್ಟಿಶಕವು.	ಕ್ರಿಸ್ತನ ಪೂರ್ವ ಶಕವು.	
	೪೦೦೦	ಆದಮನು.
೧೬೫೬	೨೩೪೪	ಜಲಪ್ರಳಯವು.
೨೦೮೩	೧೯೧೭	ಅಬ್ರಹಾಮನು.
೨೨೯೮	೧೭೦೨	ಇಸ್ರಯೇಲನವರು ಮಿಚ್ರದೇಶದಲ್ಲಿ ಶೇರಿದ್ದು.
೨೫೧೩	೧೪೪೭	ಮೋಶೆಯು ಇಸ್ರಯೇಲನವರನ್ನು ಮಿಚ್ರದಿಂದ ಪೋರ ತಂದದ್ದು.
೨೯೫೦	೧೦೫೦	ಅರಸನಾದ ದವೀದನು.
೩೧೦೦	೯೦೦	ಪ್ರವಾದಿಯಾದ ಎಲೀಯನು.
೩೨೫೨	೭೪೮	ಪ್ರವಾದಿಯಾದ ಯೆಶಾಯನು.
೩೨೪೦	೭೨೦	ಇಸ್ರಯೇಲ ರಾಜ್ಯದ ಸಂಪೋರವು.
೩೩೯೭	೬೦೩	ಬಬುಲಾನದ ಬಂಧನಗ್ರಪಣದ ಆರಂಭವು.
೩೪೧೧	೫೪೯	ಯೆರೂಸಲೇಮೂ ಯೂದರಾಜ್ಯವೂ ಪೋಳಾದದ್ದು.
೩೪೬೭	೫೩೩	ಯೂದರು ಬಬುಲಾನದ ಬಂಧನಗ್ರಪಣದಿಂದ ಶಿರಿಗಿ ಬಂದದ್ದು.
೩೫೯೬	೪೦೪	ಕಪೆ ಪ್ರವಾದಿಯು.
೩೬೩೨	೧೬೮	ಮಕ್ಕಬೇಯರು.
೪೦೦೦		ಕ್ರಿಸ್ತನು.
	ಕ್ರಿಸ್ತಶಕ.	
	೩೦	ಕ್ರಿಸ್ತನ ಉದ್ಯೋಗಾರಂಭಕ್ರಮವು.
	೩೪	ಕ್ರಿಸ್ತನ ದಿವಾರಾಪಣವು.
	೩೬	ಪೌಲನ ಸಂವರ್ತನವು.

ಸ್ವ. ಶ.	ಕ್ರಿ. ಪೂ. ಶ.	
	೬೭	ಪೌಲನ ಮರಣವು.
	೭೦	ಯೆರೂಸಲೇಮಿನ ನಾಶವು.
	೧೦೦	ಯೋಹಾನನ ಮರಣವು.

ವಿವರಣೆಯು.

ಆದಿಕಾಲವು.

	೪೦೦೦	ಸೃಷ್ಟಿಯು; ಆದಿಮನುಷ್ಯರು.
೧೩೦	೩೮೭೦	ಸೇಥನ ಜನನವು.
೨೩೫	೩೭೮೫	ಏನೋಷನ ಜನನವು.
೬೨೨	೩೪೭೮	ಕೇನಾನನ ಜನನವು.
೬೭೭	೩೪೧೩	ಮೆಹೂಸಲನ ಜನನವು.
೭೭೪	೩೩೬೬	ಲಾಮೆಕನ ಜನನವು.
೮೩೪	೩೦೨೬	ಆದಮನ ಮರಣವು.
೮೭೭	೩೦೧೩	ಕೇನಾನನ ಲೋಕಾಂತರವು.
೯೦೪೨	೨೯೫೮	ಸೇಥನ ಮರಣವು.
೯೦೫೬	೨೯೪೪	ನೋಷನ ಜನನವು.
೯೯೪೦	೨೮೬೦	ಏನೋಷನ ಮರಣವು.
೯೫೫೬	೨೪೪೪	ಯಫೇತನ ಜನನವು.
೯೫೫೮	೨೪೪೨	ಶೇಮನ ಜನನವು.
೯೬೫೯	೨೩೪೯	ಲಾಮೆಕನ ಮರಣವು.

೯೬೫೬	೨೩೪೪	ಮೆಹೂಸಲನ ಮರಣವು. ಜಲಪ್ರಳಯವು.
೯೭೫೬	೨೨೪೨	ಬಾಬೆಲಿನ ಗೋಪುರನಿರ್ಮಾಣವು.
೧೦೦೬	೨೯೯೪	ನೋಪನ ಮರಣವು.
೧೦೭೩	೨೯೭೭	ಥಾರನ ಮರಣವು.

ಪಿತರಕಾಲವು. ಇಸ್ರಯೇಲನವರು ಮಿಚ್ರದೇಶದಲ್ಲಿ ವಾಸ ಮಾಡಿದ ಕಾಲವು.

೧೦೭೩	೨೯೭೭	ಅಬ್ರಹಾಮನು ಮೆಸಾಪಾತಮ್ಯದಿಂದ ಹೊರಟಿದ್ದು.
		ಮಿಚ್ರದೇಶಕ್ಕೆ ಪ್ರಯಾಣ ಮಾಡಿದ್ದು.
		ಲೋತನ ವಿಯೋಗವು.
		ಸೇನಾಪ್ರೇಷಣವು.
೧೦೯೪	೨೯೦೬	ಅಬ್ರಹಾಮನ ಲಟನೆ ವರುಷದಲ್ಲಿ ಇಸ್ಮಯೇಲನು ಹುಟ್ಟಿದ್ದು.

ಸೃ. ಶ.	ಕ್ರಿ. ಪೂ. ಶ.	
೨೧೦೭	೧೮೯೩	ಅಬ್ರಹಾಮನ ೯೯ನೆ ವರುಷದಲ್ಲಿ ನೇಮಕವಾದ ಪರಿಚ್ಛೇದನೆಯೂ ನಾಮಾಂತರವು.
		ಕರ್ತನು ಅಬ್ರಹಾಮನ ಬಳಿಗೆ ಬಂದದ್ದು.
		ಸಾದಾಮದ ನಾಶವು.
		ಅಬ್ರಹಾಮನು ಫಿಲಿಸ್ತದೇಶದಲ್ಲಿ ವಾಸ ಮಾಡಿದ್ದು.
೨೧೦೮	೧೮೯೨	ಅಬ್ರಹಾಮನ ನೂರನೆ ವರುಷದಲ್ಲಿ ಉಂಟಾದ ಇಸಾಕನ ಜನನವು.
		ಇಸ್ಮಯೇಲನ ಪರಿತ್ಯಾಗವು.
		ಅಬೀಮೆಲೆಕನ ಸಂಗಡ ಮಾಡಿದ ಒಡಂಬಡಿಕೆಯು.
		ಶಾಂತಿಯು.
೨೧೪೫	೧೮೫೫	ಸಾರಳ ಮರಣವು.
೨೧೪೮	೧೮೫೨	ಇಸಾಕನ ವಿವಾಹವು. (೧ ಮೋಶೆ. ೨೫, ೨೦.)
		ಅಬ್ರಹಾಮನು ೧೪೦ ವರುಷದವನಾಗಿ ಕೇತುರಳನ್ನು ಮದುವೆ ಮಾಡಿ ಕಾಂಡದ್ದು.
೨೧೫೮	೧೮೪೨	ಶೇಮನ ಮರಣವು (ಮೆಲ್ಕೀಚೆದೆಕನು.)
೨೧೬೮	೧೮೩೨	ಇಸಾಕನ ೬೦ನೆ ವರುಷದಲ್ಲಿ ಯಾಕಾಬ ಏಸಾವರು ಹುಟ್ಟಿದ್ದು.
೨೧೮೩	೧೮೧೭	ಅಬ್ರಹಾಮನ ಮರಣವು.
		ಇಸಾಕನು ಫಿಲಿಸ್ತದೇಶದಲ್ಲಿ ಯೂಬೆಯರ್ಸೆಬದಲ್ಲಿ ಯೂವಾಸವಾಮಾಡಿದ್ದು.
		ಏಸಾವನು ೪೦ನೆ ವರುಷದಲ್ಲಿ ಮದುವೆ ಮಾಡಿ ಕಾಂಡದ್ದು.
		ಯಾಕಾಬನು ಮೆಸಾಪಾತಮ್ಯಕ್ಕೆ ಓಡಿ ಹೋಗಿ, ೭೭ ವರುಷದವನಾಗಿ ಮದುವೆ ಮಾಡಿ ಕಾಂಡದ್ದು. (ಯಾಕಾಬನು ೨೦ ವರುಷ ಮೆಸಾಪಾತಮ್ಯದಲ್ಲಿ ವಾಸ ಮಾಡಿದ್ದನ್ನೂ, ಯಾಸೇಫನು ಅಲ್ಲಿ ಹುಟ್ಟಿದ್ದನ್ನೂ, ಯಾಸೇಫನ ಆಯುಷ್ಯವನ್ನೂ, ಮಿಚ್ರಕ್ಕೆ ಬಂದ ತಂದೆಯಾದ ಯಾಕಾಬನ ಆಯುಷ್ಯವನ್ನೂ ಚನ್ನಾಗಿ ಎಣಿಕೆ ಮಾಡ ಬೇಕು.
೨೨೫೯	೧೭೪೧	ಯಾಸೇಫನು ಮೆಸಾಪಾತಮ್ಯದಲ್ಲಿ ಕಡೇ ಮಗನಾಗಿ ಹುಟ್ಟಿದ್ದು.
೨೨೭೫	೧೭೨೫	ಯಾಕಾಬನು ಮೆಸಾಪಾತಮ್ಯದಿಂದ ತಿರಿಗಿ ಬಂದದ್ದು.
೨೨೭೬	೧೭೨೪	ಯಾಸೇಫನು ೧೭ನೆ ವರುಷದಲ್ಲಿ ವಿಕ್ರಯವಾದದ್ದು.
೨೨೮೮	೧೭೧೨	ಇಸಾಕನ ಮರಣವು.
೨೨೮೯	೧೭೧೧	ಯಾಸೇಫನು ಫರವಾನನ ಮುಂದೆ ನಿಂತದ್ದು. (ಇಸ್ರಯೇಲನವರು ಮಿಚ್ರದೇಶಕ್ಕೆ ಬರುವದಕ್ಕಿಂತ ಮುಂಚೆ ೯ ವರುಷ.)

೨೨೯೮	೧೭೦೨	ಇಸ್ರಯೇಲನವರು ಮಿಚ್ರದೇಶಕ್ಕೆ ಬಂದದ್ದು.
೨೩೧೫	೧೬೮೫	ಯಾಕಾಬನು ಮಿಚ್ರದೇಶದಲ್ಲಿ ಸತ್ತದ್ದು. (ಇಸ್ರಯೇಲನವರು ಮಿಚ್ರದೇಶಕ್ಕೆ ಬಂದ ೧೭ನೆ ವರುಷದಲ್ಲಿ.)
೨೩೬೯	೧೬೩೧	ಯಾಸೇಫನ ಮರಣವು. (ಇಸ್ರಯೇಲನವರು ಮಿಚ್ರದೇಶಕ್ಕೆ ಬಂದ ೭೧ನೆ ವರುಷದಲ್ಲಿ.)

ಸೃ. ಶ.	ಕ್ರಿ. ಪೂ. ಶ.	
೨೪೩೩	೧೫೫೭	ಮೋಶೆಯ ಜನನವು. (ಯೋಸೇಫನ ಮರಣದ ಬಳಿಕ ೬೪ನೆ ವರುಷ; ಇಸ್ರಾಯೇಲನವರು ಮಿಚ್ರದಿಂದ ಪಾರಾಟು ಪಾರಾಗುವದಕ್ಕೆ ಮುಂಚೆ ೮೦ ವರುಷ.)
		ಮೋಶೆ ಯಾಶುವರ ಕಾಲವು.
೨೫೧೩	೧೪೮೭	ಇಸ್ರಾಯೇಲನವರು ಮಿಚ್ರದೇಶದಿಂದ ಪಾರಾಟು ಪಾರಾದದ್ದು.
		ಸೀನಾಯಿಪರ್ವತದ ಪರ್ಯಂತ ೩ ತಿಂಗಳಲ್ಲಿ ಸಂಚರಿಸಿದ್ದು. (ಮಾರ, ಏಲೀಮ್, ರಫಿದಿಮ್.)
		ಸೀನಯಿಪರ್ವತದ ಬಳಿಯಲ್ಲಿ ೧೧೪೨ ತಿಂಗಳು ವಾಸ ಮಾಡಿದ್ದು.
		(೪ ಮೋಶೆ. ೧೦, ೧೧.) ಪಾರಾಗಂದರೆ:
		ಸಾಕ್ಷಿಗುಡಾರವನ್ನು ಕಟ್ಟಿಸುವದಕ್ಕಿಂತ ಮುಂಚೆ ೯೨ ತಿಂಗಳು.
೨೫೧೪	೧೪೮೬	೧ ತಿಂಗಳು ಲೇವಿಯರ ಕಟ್ಟಳೆಗಳಿಂದಲೂ, ಎರಡನೆ ಪಶದ ಆಚರಣೆಯಿಂದಲೂ ಕಳಿದು ಪಾರಾಯಿತು. ೨ ಮೋಶೆ. ೪೦, ೧.
		೧ ತಿಂಗಳು ಜನಗಣನೆಯಿಂದಲೂ ಬೇರೆ ಕಟ್ಟಳೆಗಳಿಂದಲೂ ಕಳಿದು ಪಾರಾಯಿತು. ೪ ಮೋಶೆ. ೧, ೧; ೧೦, ೧೧.
		ಜನರು ಸೀನಯಿಪರ್ವತದಿಂದ ಪಾರಾಟು ಪಾರಾಗಿ (೪ ಮೋಶೆ. ೧೦, ೧೧.)
		ಯಾರ್ದನನದಿಯ ಪಶ್ಚಿಮಪ್ರದೇಶದ ದಕ್ಷಿಣಪ್ರಾಂತ್ಯದಲ್ಲಿದ್ದ ಕಾದೆಸ್ ಬರ್ನೆಯದ ವರೆಗೂ ಸಂಚರಿಸಿದ್ದು. (೫ ಮೋಶೆ. ೧, ೪೬. ೧೯; ೨, ೧೪ಕ್ಕೆ ೪ ಮೋಶೆ. ೧೩, ೧; ೩೩, ೩೬; ೨೦, ೧. ಸರಿ ನಾಡ ಬೇಕು.)
		ತಬೇರ.
		ಮೋಶೆಯ ಸಪಾರಾಯಕರು.
		ವಿಷಯಲಂಪಟರ ಸಮಾಧಿಗಳು.
		ಪಾಜರಾತ್ಥು.
		ಮಿರ್ಯಮ್ ಗುಣಗುಟ್ಟಿದ್ದು.
		ಚಾರಣರ ಮೂಲಕವಾದ ದೇಶವಿಚಾರಣೆಯು.
		ಜನರು ಗುಣಗುಟ್ಟಿದ್ದು.
		ನಾಲ್ವತ್ತು ವರುಷ ಸಂಚಾರಶಿಕ್ಷೆಯು.
		ಯಾರ್ದನನದಿಯ ಪಶ್ಚಿಮಪ್ರದೇಶದ ದಕ್ಷಿಣಕಡೆಯಿಂದ ಯಾರ್ದನನದಿಯ ಪೂರ್ವಪ್ರದೇಶದ ದಕ್ಷಿಣಪ್ರಾಂತ್ಯದ ವರೆಗೂ (ಸಾರೆದ್) ೩೮ ವರುಷ ಸಂಚರಿಸಿದ್ದು.
		ಅ) ಕಾದೆಸ್ ಬರ್ನೆಯದಿಂದ ತಿರಿಗಿ ಕಾಂಡು, ಎಜೆಯಾನ್‌ಗಾಬೆರ್ ಪರ್ಯಂತ ಮಾಡಿದ ಸಂಚಾರವು. ೪ ಮೋಶೆ. ೧೪, ೨೫; ೩೩, ೧೯ — ೩೫.
		ಕಾರನ ಪುಂಡು.
		ಆರಾನನ ಚಿಗುರಿದ ಕಾಲು.
		ಲೇವಿಯರ ಕೆಲವು ಕಟ್ಟಳೆಗಳು.
		ದಾಡ್ದ ಸಾವು.

ಸ್ಪೃ. ಶ.	ಕ್ರಿ. ಪೂ. ಶ.	
		ಇ) ಎಜಿಯಾನ್‌ಗಾಬೆರಿನಿಂದ ಪಾರಾರಟು, ಕಾದೆಸ್‌ಬರ್ನೆಯಕ್ಕೆ ಸಂಚರಿಸಿದ್ದು. ೪ ಮೋಶೆ. ೩೩, ೩೬.
೨೫೫೩	೧೪೪೨	೪೦ನೆ ವರುಷದ ಮೊದಲನೆ ತಿಂಗಳಲ್ಲಿ ಅಲ್ಲಿ ಶೇರಿದ್ದು. ೪ ಮೋಶೆ. ೨೦, ೧. ಮೋಶೆಯ ಪಾಪವು.
		ಊ) ಕನಾನಿನ ಅರಸನಾದ ಆರದನು ಪರಾಜಿತನಾದಾಗ್ಯೂ, ಇಸ್ರಾಯೇಲನವರಿಗೆ ಮಾರ್ಗ ಕಟ್ಟಿದ್ದರಿಂದಲೂ, ಎದಾಮಿದವರು ಸಹ ತಮ್ಮ ದೇಶದ ಮಾರ್ಗವನ್ನು ಬಿಡದೆ ಇದ್ದದರಿಂದಲೂ, ಇಸ್ರಾಯೇಲನವರು ಮರಳಿ ತಿರಿಗಿಕಾಂಡು ಸೆಯಿರ್ ಘಟ್ಟದ ಸುತ್ತಲೂ ಸಾರೆದ್‌ಪಟ್ಟಣಕ್ಕೆ ಪಯಣ ಮಾಡಿದ್ದು.
		ಆರಾನನ ಮರಣವು.
		ಉರಿಪಾವುಗಳು.
		ಇಸ್ರಾಯೇಲನವರು ೩೮ ಶಿಕ್ಷಾವರುಷಗಳ ಅಂತ್ಯದಲ್ಲಿ ಸಾರೆದ್‌ಪಟ್ಟಣಕ್ಕೆ ಬಂದದ್ದು.
		ಸಾರೆದ್‌ಪಟ್ಟಣದಿಂದ ಇಸ್ರಾಯೇಲನವರು ಮೋಪಬದೇಶದ ಮಾರ್ಗವಾಗಿ ಅರ್ನಾನ್‌ಪಟ್ಟಣಕ್ಕೆ ಬಂದು, ಸೀಪಾನರಾಜನನ್ನು ಜಯಿಸಿದನಂತರ, ಪೂರ್ವದಲ್ಲಿ ಮೋಪಬರು, ಆಗ ಅಮೋರ್ಯರು ವಸತಿಯಾಗಿದ್ದ ಅರ್ನಾನ್ ಯಾಬ್ಬೋಕ ಪಟ್ಟಣಗಳ ನಡುವೆಯ ದೇಶವನ್ನು, ಓಗರಾಜನನ್ನು ಜಯಿಸಿದ ಮೇಲೆ, ಬಾಶನ ದೇಶವನ್ನು ಆಕ್ರಮಿಸಿ ಕಾಂಡು, ಮೋಪಬದ ಬೈಲುಶೀಮೆಯಲ್ಲಿ ದಂಡು ಇಳಿಸಿದ್ದು.
		ಬಿಳಿಯಾಮನ ಚರಿತ್ರವು.
		ಕೆಲವು ಲೇವಿಯರ ಕಟ್ಟಳೆಗಳು. ರಾಜನೀತಿನಿಯಮಗಳು.
		ಯಾರ್ದನನದಿಯ ಪೂರ್ವದೇಶದ ವಿಭಾಗವು.
		ಮೋಶೆಯ ಅಂತ್ಯಭಾಷಣಗಳು (ದ್ವಿತೀಯ ನಿಯಮವು. ೫ ಮೋಶೆ.)
		ಮೋಶೆಯ ಮರಣವು. ಯೋಶುವ ಉದ್ಯೋಗಾರೋಪಕ್ರಮವು.

೨೫೭೦	೧೪೪೦	ಯಾರ್ದನನದಿಯ ಪಶ್ಚಿಮದೇಶದ ಅಧಿಕ ಭಾಗವು ಇಸ್ರಾಯೇಲನವರಿಗೆ ವಶವಾದನಂತರ ಅವರು ದೇಶವನ್ನು ವಿಭಾಗಿಸಿದ್ದು.
೨೫೭೦	೧೪೩೦	ಯೋಶುವನು ಜನರನ್ನು ಬೆಚ್ಚಿ ಕಡಿಮೆಯಾಗಿ ೧೭ ವರುಷ ಆಳಿದ ಬಳಿಕ ಸಾಯುತ್ತಾನೆ.
		ಬೆಚ್ಚಿ ಕಡಿಮೆಯಾಗಿ ೧೦ ವರುಷಪರ್ಯಂತ ಹಿರಿಯರು ಜನರನ್ನಾಳುತ್ತಾರೆ.
		ನ್ಯಾಯಾಧಿಪತಿಗಳ ಕಾಲವು.
೨೫೮೦	೧೪೨೦	ಹಿರಿಯರು ಸತ್ತ ಬೆಚ್ಚಿ ಕಡಿಮೆಯಾಗಿ ಮೂರು ವರುಷ ಪರ್ಯಂತ ನಡದ ದೇವದ್ರೋಹವು.

ಸೃ. ಶ.	ಕ್ರಿ. ಪೂ. ಶ.	
೨೫೮೩	೧೪೧೭	ಮೆಸಾಪಾತಮ್ಯದ ಅರಸನಾದ ಕುಸನರಿಸಥಾಯಿಮ್ ಇಸ್ರಯೇಲನವರನ್ನು ಅಣಗಿಸಿ ಆಳಿದ್ದು. ಪರುಷ ೮.
೨೫೯೧	೧೪೦೯	ಅಥ್ನಿಯೇಲನು ಜನರನ್ನು ಕುಸನರಿಸಥಾಯಿಮನ ಕೈಯಿಂದ ರಕ್ಷಿಸಿದ್ದು. ೪೦ ವರುಷದ ವಿಶ್ರಾಂತಿಯು.
೨೬೩೧	೧೩೬೯	ಮೋಪಬಿದ ಅರಸನಾದ ಎಗ್ಲೋನನು ಇಸ್ರಯೇಲನವರನ್ನು ೧೮ ವರುಷ ಅಣಗಿಸಿ ಆಳಿದ್ದು.
೨೬೪೯	೧೩೫೧	ಏಹೂದನು ಎಗ್ಲೋನನನ್ನು ಕಾಂದು ಪೂಕಿದ್ದು. ೮೦ ವರುಷದ ವಿಶ್ರಾಂತಿಯು.
೨೭೨೯	೧೩೨೧	ಕನಾನ್‌ದೇಶದ ಅರಸನಾದ ಯಾಬೀನನು ೨೦ ವರುಷ ಇಸ್ರಯೇಲನವರನ್ನು ಅಣಗಿಸಿ ಆಳಿದ್ದು.
೨೭೪೯	೧೩೦೧	ಬಾರಕನೂ ದೆಬೋರಳೂ ಯಾಬೀನನನ್ನು ಜಯಿಸಿ ಕಾಂದು ಪೂಕಿದ್ದು. ೪೦ ವರುಷದ ವಿಶ್ರಾಂತಿಯು.
೨೭೮೯	೧೨೬೧	ಮಿದ್ಯಾನದವರು ಇಸ್ರಯೇಲನವರನ್ನು ೭ ವರುಷ ಅಣಗಿಸಿ ಆಳಿದ್ದು.
೨೭೯೬	೧೨೦೪	ಗಿದೆಯೋನನು ಮಿದ್ಯಾನದವರನ್ನು ಜಯಿಸಿದ್ದು. ೪೦ ವರುಷದ ವಿಶ್ರಾಂತಿಯು.

೨೮೩೬	೧೦೬೪	ಅಬೀಮೆಲೆಕನು ಮೂರು ವರುಷ ಕ್ರೂರವಾಗಿ ಆಳಿದ್ದು.
೨೮೩೯	೧೦೬೧	ಪಶ್ಚಿಮದೇಶವು ೧೦ ವರುಷ ಫಿಲಿಸ್ತರಿಗೆ ವಶವಾಗಿತ್ತು; ಪೂರ್ವದೇಶದಲ್ಲಿ ಅಮೋನನವರು ೧೮ ವರುಷ ಅಣಗಿಸಿ ಆಳ ತೊಡಗಿದರು. ನ್ಯಾಯಾ. ೧೦, ೮. ನ್ಯಾಯಾಧಿಪತಿಯಾದ ತೋಲನು ಪಶ್ಚಿಮದೇಶವನ್ನು ೨೩ ವರುಷ ಆಳಿದ್ದು. ಯಾಯಿರನು ಪೂರ್ವದೇಶವನ್ನು ೨೨ ವರುಷ ಆಳಿದ್ದು.
೨೮೫೭	೧೦೪೩	ಯೆಪ್ತಹಾಯಿರನ ಕಾಲದಲ್ಲಿ ಅಮೋನನವರ ಸಂಗಡ ಯುದ್ಧ ಮಾಪಿ, ಬಳಿಕ ನ್ಯಾಯಾಧಿಪತಿಯಾದದ್ದು. ಅಮೋನನವರು ದೇಶವನ್ನು ೧೮ ವರುಷ ಆಕ್ರಮಿಸಿ ಕಾಂಡ ಮೇಲೆ ಇದು ಸಂಭವಿಸಿತೆಂದು ಎಣಿಸ ತಕ್ಕದ್ದು.
೨೮೭೩	೧೦೨೭	ನ್ಯಾಯಾಧಿಪತಿಯಾದ ಇಬ್ಚಾನ ೭ ವರುಷ. / ನ್ಯಾಯಾಧಿಪತಿಯಾದ ಏಲ್ಯೋನ ೧೦ ವರುಷ. / ನ್ಯಾಯಾಧಿಪತಿಯಾದ ಅಬ್ದೋನ ೮ ವರುಷ. — ಇವರು ಪಶ್ಚಿಮದೇಶದಲ್ಲಿ ಒಳನುಗ್ಗಿ ತ್ತಾ ಬಂದ ಅಮೋನನವರ ಸಂಗಡ ಈ ಮೂರು ಮಂದಿ ಕಾಳಗ ಮಾಡುತ್ತಾ ಇದ್ದರು.
೨೮೮೦	೧೦೨೦	
೨೮೮೮	೧೦೧೨	

ಅದೇ ಕಾಲದಲ್ಲಿಯೂ ತದನಂತರವೂ ಸಿಂಸೋನನು ಇಸ್ರಯೇಲನವರನ್ನು ೪೦ ವರುಷ ಅಣಗಿಸಿದ ಫಿಲಿಸ್ತರ ಸಂಗಡ ಯುದ್ಧ ಮಾಪಿದ್ದು ೨೦ ವರುಷ.

೨೯೧೦	೧೦೧೦	ಸಮುವೇಲನು ಏಲಿಯನ ಕಾಲದಲ್ಲಿ ಪ್ರವಾದನಾಳುದ್ಯೋಗ ನಪಿಸಿದ್ದು. ವರುಷ ೧೦.
೨೯೦೦	೧೦೦೦	ಇಸ್ರಯೇಲನವರು ಫಿಲಿಸ್ತರಿಂದ ಪರಾಜಿತರಾದದ್ದು. ಏಲಿಯನ ಮರಣವು.

ಸ್ರಿ. ಶ.	ಕ್ರಿ. ಪೂ. ಶ.	
		ಒಡಂಬಡಿಕೆಯ ಪೆಟ್ಟಿಗೆಯು ೭ ತಿಂಗಳು ಫಿಲಿಸ್ತರ ಸೀಮೆಯಲ್ಲಿ, ೨೦ ವರುಷ ಕಿರ್ಯತ್ಯೆಯರಿಮಿನಲ್ಲಿ ಇದ್ದದ್ದು.
		ಪ್ರವಾದಿಯಾದ ಸಮುವೇಲನು ನ್ಯಾಯಾಧಿಪತಿತ್ವವನ್ನು ನಡಿಸಿದ್ದು.

ರಾಜರ ಕಾಲವು.

೨೯೨೦	೧೦೮೦	ಸಮುವೇಲನ ಮಕ್ಕಳು ನ್ಯಾಯಾಧಿಪತಿತ್ವಕ್ಕೆ ಅಯೋಗ್ಯರಾದ ಕಾರಣ ಇಸ್ರಯೇಲನವರು ತಮಗೆ ಅರಸನಿರ ಬೇಕೆಂದು ಅಪೇಕ್ಷಿಸಿದ್ದು.
		ಅರಸನಾದ ಸೌಲನ ಅಭಿಷೇಕವೂ ಪರಿಗಣನೆಯೂ.
೨೯೫೦	೧೦೫೦	ಅರಸನಾದ ದಾವೀದನು.
೨೯೯೦	೧೦೧೦	ಅರಸನಾದ ಸಾಲಾಮೋನನು.

೩೦೩೦	೯೭೦	ಇಸ್ರಯೇಲನವರ ರಾಜ್ಯಖೇದವು.
		ಯೂದರಾಜ್ಯದ ಅರಸನಾದ ರೆಹಬ್ಬಾಬೆಯಮನು. ಇಸ್ರಯೇಲರಾಜ್ಯದ ಅರಸನಾದ ಮೊದಲನೆ ಯೆರಾಬ್ಬಾಮನು.
		(ರೆಹಬೆಯಮನೂ ಅವನ ಮಗನಾದ ಅಬೀಯಮನೂ ತಮ್ಮ ರಾಜ್ಯವನ್ನು ಸರಿಯಾಗಿ ಆಳದೆ ಇದ್ದರು. ಯೆರಾಬ್ಬಾಮನ ಭಕ್ತಿಪರಿತ್ಯಾಗವು.)
೩೦೫೦	೯೫೦	ಯೂದರಾಜ್ಯದ ಅರಸನಾದ ಅಸ್ಸನು. ದೇಶವನ್ನು ಪೆಬ್ಬು ಕಾಲ ಯುಕ್ತವಾಗಿ ಆಳಿದ್ದು.
೩೦೫೪	೯೫೪	ಇಸ್ರಯೇಲರಾಜ್ಯದಲ್ಲಿ ಬಯೆಸನು ಸ್ಥಾಪಿಸಿದ ಎರಡನೆ ಸಂಸ್ಥಾನವು.
೩೦೮೦	೯೩೦	ಇಸ್ರಯೇಲರಾಜ್ಯದಲ್ಲಿ ಅಮ್ರಿ ಸ್ಥಾಪಿಸಿದ ಮೂರನೆ ಸಂಸ್ಥಾನವು.
೩೦೯೧	೯೦೯	ಯೋಸಫತನು ೨೫ ವರುಷ ಯೂದರಾಜ್ಯವನ್ನು ಭಕ್ತಿಯಿಂದ ಆಳಿದ್ದು.
೩೦೯೨	೯೦೮	ಅರಸನಾದ ಆಹಬನು ಇಸ್ರಯೇಲರಾಜ್ಯದಲ್ಲಿ ಬಳಪೂಜೆಯನ್ನು ಸ್ಥಾಪಿಸಿದ್ದು.
		ಪ್ರವಾದಿಯಾದ ಎಲಿಯನು.
		ಬರವನ್ನು ಮುಂತಿಳಿಸಿ,
		ಏರೀಥಪಳ್ಳಕ್ಕೆ ಓಡಿ ಪಾರಾಗಿ,
		ಜಿರ್ಪತಕ್ಕೆ ಪಾರಾಗಿ,
		ಕರ್ಮೆಲಬೆಟ್ಟದಲ್ಲಿಯೂ,
		ಅರಣ್ಯದಲ್ಲಿಯೂ ವಸತಿಯಾಗಿ,
		ಎಲೀಸನನ್ನು ಸೇವಕನಾಗಿಯೂ ಪರ್ಯಾಯದವನಾಗಿಯೂ ಆಯ್ದು ಕಾಂಡು,
		ನಬಾಥನ ಕಾಲೆಗಾಗಿ ಆಹಬನಿಗೆ ಅವನ ಮನೆಯೂ ಅವನ ಸಂಸ್ಥಾನವೂ ಪಾಳಾಗುವದನ್ನು ಪ್ರವಾದಿಸುತ್ತಾನೆ.
೩೧೧೦	೮೯೦	ಅರಸನಾದ ಅಹಜನು ಇಸ್ರಯೇಲರಾಜ್ಯವನ್ನು ಆಳಿದ್ದು.
		ಎಲಿಯನು ಆಕಾಶದಿಂದ ಬೆಂಕಿಯನ್ನು ಬೀಳಿಸುತ್ತಾನೆ.
೩೧೧೨	೮೮೮	ಅರಸನಾದ ಯೋರಮನು ಇಸ್ರಯೇಲರಾಜ್ಯವನ್ನಾಳಿದ್ದು.

ಸ್ರಿ. ಶ.	ಕ್ರಿ. ಪೂ. ಶ.	
		ಎಲಿಯನ ಆರೋಹಣದನಂತರ ಎಲೀಸನು ಪರ್ಯಾಯವನ್ನು ಪೂರೈಸುತ್ತಾನೆ.
		ಎಲೀಸನು ತಿರಿಗಿ ಬಿದ್ದ ಮೋವಬನ ಸಂಗಡ ಯುದ್ಧ ಮಾಡುವ ಯೋರಮನಿಗೂ, ಯೆಹೋಷಫಾಟನಿಗೂ ಸಹಾಯ ಮಾಡುತ್ತಾನೆ.
೩೧೧೬	೮೮೪	ತಂದೆಗೆ ಬಹಳ ಭೇದವಾಗಿಯೂ ಎಜೆಬೇಲಳ ಅಳಿಯನಾಗಿಯೂ ಇರುವ ಯೋರಮನು ಯೂದರಾಜ್ಯವನ್ನಾಳಿದ್ದು.
		ಯೋರಾಮನ ಕಾಲದಲ್ಲಿ ಪ್ರಸಿದ್ಧವಾದ ಸಂಗತಿಗಳು: ಎದಾಮರ ಕಾಟಕಾಯಿ. ಎಲಿಯನಿಂದ ಯೋರಮನಿಗೆ ಬಂದ ಪತ್ರಿಕೆಯು. ಎಲೀಸನು ಅಂತರ್ಬಹಿರಂಗವಾಗಿ ನಡಿಸಿದ ಅದ್ಭುತಕೃತ್ಯಗಳು. ಎಲೀಸನು ಪೂಸಯೇಲನನ್ನು ಸುರ್ಯದೇಶದ ಅರಸನಾಗಿ, ಯೇಹುವನ್ನು ಇಸ್ರಯೇಲ ಅರಸನಾಗಿ ಅಭಿಷೇಕಿಸಿದ್ದು.
೩೧೨೪	೮೮೬	ಯೂದರಾಜ್ಯದ ಅರಸನಾದ ಯೋರಮನ ಕೂಡ ಪೂಸಯೇಲನಿಗೆ ವಿರೋಧವಾಗಿ ಯುದ್ಧ ಮಾಯಿದ್ದು. ಯೋರಮನು ಪರಾಜಿತವಾದದ್ದು.
೩೧೨೫	೮೮೫	ಯೇಹು ಇಸ್ರಯೇಲರಾಜ್ಯದ ಅರಸನಾದ ಆಹಾಬನ ವಂಶವನ್ನೆಲ್ಲಾ ನಿರ್ಮೂಲ ಮಾಯಿದ್ದು. ಯೂದರಾಜ್ಯದ ಅರಸನಾದ ಅಹಾಸ್ಯನನ್ನು ಕಾಂದು ಪೂರೈಕಿದ್ದು. —ನಾಲ್ಕನೆ ಸಂಸ್ಥಾನವು.
		ಅಥಲ್ಯಳು ಯೂದರಾಜ್ಯದಲ್ಲಿ ನಡಿಸಿದ ಕ್ರೂರತ್ವವು.
೩೧೩೧	೮೮೯	ಯೂದರಾಜ್ಯದ ಅರಸನಾದ ಯೋವಾಸ್.
		ಸುರ್ಯದೇಶದ ಅರಸನಾದ ಪೂಸಯೇಲನು ಎರಡು ರಾಜ್ಯಗಳನ್ನು ಪೀಡಿಸಿದ್ದು.
೩೧೫೩	೮೫೭	ಯೇಹುವನ ಮಗನಾದ ಯೋವಹಾಸ್ ಇಸ್ರಯೇಲರಾಜ್ಯವನ್ನಾಳಿದ್ದು; ಪೂಸಯೇಲನೂ, ಅವನ ಮಗನಾದ ಬೆನ್ಹದದನೂ ಇಸ್ರಯೇಲರಾಜ್ಯವನ್ನು ಸ್ವಲ್ಪ ಕಡಿಮೆಯಾಗಿ ಪೂರೈಳು ಮಾಯಿದ್ದು.
೩೧೭೦	೮೪೦	ಯೇಹುವನ ಮೊಮ್ಮಗನಾದ ಯೋವಸ್ ಇಸ್ರಯೇಲರಾಜ್ಯವನ್ನಾಳಿದ್ದು.
		ಎಲೀಸನು ಸುರ್ಯರಿಗೆ ವಿರೋಧವಾಗಿ ಸಹಾಯದ ವಾಗ್ದತ್ತವನ್ನು ಕಾಟ್ಟಿದ್ದು; ಈ ಸಹಾಯವು ಯೋವಸನಿಗೆ ಭಾಗವಾಗಿ ಪ್ರಾಪ್ತವಾದದ್ದು.
		ಎಲೀಸನ ಮರಣವು.
೩೧೭೧	೮೨೯	ಯೂದರಾಜ್ಯದ ಅರಸನಾದ ಅಹಜಿಯನು.
೩೧೮೬	೮೧೪	ಇಸ್ರಯೇಲರಾಜ್ಯದ ಅರಸನಾದ ಯೆರೋಬೋವಮನು.
		ಸುರ್ಯರನ್ನು ಸಂಪೂರ್ಣವಾಗಿ ಜಯಿಸಿದ್ದು.

೩೨೦೦	೮೦೦	ಉಸಿಯನು ಯೂದರಾಜ್ಯವನ್ನು ೫೨ ವರುಷ ಆಳಿದ್ದು.
		ಪ್ರವಾದಿಯಾದ ಯೋನನು ಇಸ್ರಯೇಲರಾಜ್ಯದಲ್ಲಿ ಯೆರೋಬೋವಮನ ಮರಣಕ್ಕೆ ಮುಂಚೆ ಪ್ರವಾದಿಸಿದ್ದು.

ಸ್ವ. ಶ.	ಕ್ರಿ. ಪೂ. ಶ.	
		ಯಾರೆವೆಲನು ಉಸಿಯನ ರಾಜ್ಯದಲ್ಲಿ ಯೂದದೇಶದಾಳಗೆ ಪ್ರವಾಧಿಸಿದ್ದು.
		ಆಮೋಸ್ ಎರಡನೆ ಯೆರಾಬಾವಮನ ಮರಣಕ್ಕೆ ಮುಂಚೆ ಇಸ್ರಯೇಲರಾಜ್ಯ ದಲ್ಲಿ ಪ್ರವಾಧಿಸಿದ್ದು.
		ಯೆಶೆಯನು ಎರಡನೆ ಯೆರಾಬಾವಮನ ಮರಣಕ್ಕೆ ಮುಂಚೆ ಇಸ್ರಯೇಲರಾಜ್ಯ ದಲ್ಲಿ ಪ್ರವಾಧಿಸಿದ್ದು. (ರಾಜ್ಯವು ನಾಶವಾಗುವ ಪರ್ಯಂತ ಅವನು ಪ್ರವಾ ಧಿಸಿದನು.)
೩೨೨೭	೨೭೩	ಎರಡನೆ ಯೆರಾಬಾವಮನ ಮರಣದಿಂದ ಅವನ ಮಗನಾದ ಸಕರ್ಯನು ಅರಸ ನಾದ ವರೆಗೂ ಇಸ್ರಯೇಲರಾಜ್ಯದಲ್ಲಿ ಅರಸಿಲ್ಲದ ಕಾಲವು.
೩೨೩೯	೨೭೧	ಇಸ್ರಯೇಲರಾಜ್ಯದ ಅರಸನಾದ ಮೆನಹೆಮ್: ಐದನೆ ಸಂಸ್ಥಾನವು. ಅಸುರ್ಯ ನಾದ ಫೂಲನು ಇಸ್ರಯೇಲರಾಜ್ಯದಲ್ಲಿ ಬಳನುಗ್ಗಿ (ಯೂಧಿಥಳು), ಮುಖ್ಯ ಸ್ಥರಿಂದ ಪಗಧಿ ತೆಗದು ಕಾಂಡದ್ದು. ಅಸ್ಸುರ್ಯರ ಪ್ರಥಮ ಆಕ್ರಮಣವು.
೩೨೫೦	೨೫೦	ಇಸ್ರಯೇಲರಾಜ್ಯದ ಅರಸನಾದ ಪೇಕಹೂನು: ಆರನೆ ಸಂಸ್ಥಾನವು.
೩೨೫೨	೨೪೮	ಪ್ರವಾಧಿಯಾದ ಯೆಶಾಯನು, ಸ್ವಲ್ಪ ಕಾಲದ ಮೇಲೆ ಮಿಾಕನು ಬಂದದ್ದು.
		ಉಸಿಯನ ಮರಣವು. ಅವನ ಪರ್ಯಾಯವಾಗಿ ಅರಸನಾದ ಯಾೇಥಮನು ಪಟ್ಟವನ್ನು ವಹಿಸಿದ್ದು.
೩೨೫೮	೨೪೨	ಯೂದರಾಜ್ಯದ ಅರಸನಾದ ಆಹಾಸ್.
		ಇಸ್ರಯೇಲ ಅರಸನಾದ ಪೇಕಾಹನು ಮೊದಲನೆ ಸಾರಿ ಯೂದರಾಜ್ಯದ ಲ್ಲಿ ಒಳನುಗ್ಗಿ ಸೂರೆ ಮಾಡಿದ್ದು.
		ಅವನು ಸುರ್ಯದೇಶದ ಅರಸನಾದ ರೆಜೀನನ ಸಂಗಡ ಎರಡನೆ ಸಾರಿ ಒಳನುಗ್ಗಿದ್ದು.
೩೨೬೪	೨೩೬	ಅಸ್ಸುರ್ಯದವನಾದ ಶಿಗ್ಲಾತ್‌ಪಿಲೆಸರನು ಪೇಕಾಹನ ಕಾಲದಲ್ಲಿ ಇಸ್ರಯೇಲರಾ ಜ್ಯದ ಮೇಲೆ ಬಿದ್ದು, ಅನೇಕ ಜನರನ್ನು ಸೆರೆ ಹಿಡಿದು ಅಸ್ಸುರ್ಯದೇಶಕ್ಕೆ ಒಯ್ದು, ಯೂದರಾಜ್ಯವನ್ನು ಸಹ ಹೆದರಿಸಿದ್ದು. ಅಸ್ಸುರ್ಯರ ದ್ವಿತೀ ಯಾಕ್ರಮಣವು.
೩೨೭೧	೨೨೯	ಇಸ್ರಯೇಲರಾಜ್ಯದ ಅರಸನಾದ ಹೂಶೆಯನು.
		ಅಸ್ಸುರ್ಯದ ಅರಸನಾದ ಸಲ್ಮನಸ್ಸರನು. ಇಸ್ರಯೇಲರಾಜ್ಯದ ಮೇಲೆ ಬಿದ್ದು ಹೂಶೆಯನಿಂದ ಕಪ್ಪ ತೆಗದು ಕಾಂಡದ್ದು. ಅಸ್ಸುರ್ಯತೃತೀಯಾ ಕ್ರಮಣವು.
೩೨೭೪	೨೨೬	ಯೂದರಾಜ್ಯದ ಅರಸನಾದ ಹಿಜ್ಕಿಯನು.
		ದೇವಾರಾಧನಾಪುನಸ್ಥಾಪನೆಯು.
		ಯೂದರಾಜ್ಯವು ಅಸ್ಸುರ್ಯರ ಕೈಯಿಂದ ತಪ್ಪಿದ್ದು.
೩೨೮೦	೨೨೦	ಅಸ್ಸುರ್ಯರ ಚತುರ್ಥಾಕ್ರಮಣವು. ಸಲ್ಮನಸ್ಸರನು ರಾಜ್ಯವನ್ನು ಹಾಳು ಮಾಡಿ ಉಳಿದ ನಿವಾಸಿಗಳ ಅಧಿಕಭಾಗವನ್ನು ಅಸ್ಸುರ್ಯದೇಶಕ್ಕೆ ಒ ಯ್ದದ್ದು. (ಇಲ್ಲಿ ಹೂಶೆಯನ ಪ್ರವಾದನೆಯು ಮುಗಿಯುತ್ತದೆ.)

ಸೃ. ಶ.	ಕ್ರಿ. ಪೂ. ಶ.	
೩೨೮೮	೭೧೨	ಅಸ್ಸುರ್ಯರ ಅರಸನಾದ ಸನ್ಹೆರಿಬನು ಹಿಜ್ಕಿಯನ ಕಾಲದಲ್ಲಿ ಯೆರೂಸಲೇಮಿಗೆ ಪಣ್ಕಾಕಿದ ಮುತ್ತಿಗೆಯು ನಿರರ್ಥಕವಾದದ್ದು.
		ಪ್ರವಾದಿಯಾದ ನಾಹೂಮ್.
೩೩೦೩	೬೯೭	ಯೂದರಾಜ್ಯದ ಅರಸನಾದ ಮನಸ್ಸೆ ೪೦ ವರುಷಪರ್ಯಂತ ಅತಿ ದುಷ್ಟನಾಗಿ ನಡದು ಕಾಂಡು ೫೫ ವರುಷ ರಾಜ್ಯವನ್ನಾಳಿದ್ದು. ಇವನ ದುಷ್ಟತ್ವವು ಇಸ್ರಯೇಲರಾಜ್ಯದ ನಾಶಕ್ಕೆ ಮುಖ್ಯ ಕಾರಣವಾಯಿತು. (ಮಿಾಕನ ಪ್ರವಾದನೆಯ ಸಮಾಪ್ತಿಯು.)
		ಅಸ್ಸುರ್ಯದ ಅರಸನಾದ ಎಸರ್ಹದ್ದಾನ್ ೪೦ ವರುಷ ಆಳಿದ ಮನಸ್ಸೆಯನ್ನು ಬಂಧನಗ್ರಸ್ತನಾಗಿ ಬಾಬೆಲಿಗೆ ಒಯ್ದನಂತರ ಅವನು ಮಾನಸಾಂತರ ಪಟ್ಟನು. (ಯೆಶಾಯನ ಪ್ರವಾದನೆಯ ಸಮಾಪ್ತಿಯು.)
೩೩೫೮	೬೪೨	ಯೂದರಾಜ್ಯದ ಅರಸನಾದ ಅಮೊನ್. ಚಿಕ್ಕವನಾದ ಯಾಸೀಯನು. (ದುಷ್ಕಾಲವು.)
		ಪ್ರವಾದಿಯಾದ ಹಬಕುಕ್.
೩೩೭೦	೬೩೦	ಅರಸನಾದ ಯಾಸೀಯನ ಧರ್ಮಪುನಸ್ಥಾಪನಾರಂಭವು.
		ಪ್ರವಾದಿಯಾದ ಯೆರೆಮಿಯನು ಸ್ವಲ್ಪ ಕಾಲದಾಳಗೆ ಜೆಫನ್ಯನು ಬಂದದ್ದು.
೩೩೭೫	೬೨೫	ನಬೂಪಾಲಸ್ಸರನು ಕಲ್ದೀಯರ ರಾಜ್ಯವನ್ನು ಸ್ಥಾಪಿಸುತ್ತಾನೆ. ಎಜೆ. ೧, ೧.
೩೩೭೬	೬೨೪	ಯಾಸೀಯ ಧರ್ಮಪುನಸ್ಥಾಪನೆಯು.
೩೩೮೯	೬೧೧	ಯಾಸೀಯನಿಗೂ, ಫರವಾನೆಕಾಗೂ ಮೆಗಿದ್ದಾ ಬಳಿಯಲ್ಲಿ ಉಂಟಾದ ಯುದ್ಧವು.
		ಅರಸನಾದ ಯಾವಹಾಸ್. ಅರಸನಾದ ಯಾಯಕಿಮ್.
೩೩೯೩	೬೦೭	ನೆಬುಕದ್ನೇಜರನಿಗೂ ಫರವಾನೆಕಾಗೂ ಕರ್ಕೆಮಿಸ ಬಳಿಯಲ್ಲಿ ನೆಬುಕದ್ನೇಜರನ ರಾಜ್ಯದ ಮೊದಲನೆ ವರುಷದಲ್ಲಿ, ಯಾಯಕೀಮನ ನಾಲ್ಕನೆ ವರುಷದಲ್ಲಿ ಉಂಟಾದ ಯುದ್ಧವು.

ಬಬುಲಾನಿನ ಬಂಧನಗ್ರಹಣದ ಕಾಲಗಳು.

೩೩೯೭	೬೦೩	ಕಲ್ದೀಯರ ಪ್ರಥಮ ಯೂದದೇಶಾಕ್ರಮಣವು. ಬಾಬೆಲಿಗೆ ಪ್ರಥಮ ಬಂಧನಗ್ರಸ್ತಗಮನವು (ದನಿಯೇಲನು.) ಯಾಯಕೀಮನ ರಾಜ್ಯದ ಲನೆ ವರುಷ.
೩೪೦೦	೬೦೦	ಕಲ್ದೀಯರ ದ್ವಿತೀಯಾಕ್ರಮಣವು. ದ್ವಿತೀಯ ಬಂಧನಗ್ರಸ್ತಗಮನವು. ಯಾಯಕೀಮನ ಮರಣವು.
		ಅರಸನಾದ ಯಾಯಕೀನನು.
		ಕಲ್ದೀಯರ ತೃತೀಯಾಕ್ರಮಣವು. ಬಾಬೆಲಿಗೆ ಮುಖ್ಯವಾದ ತೃತೀಯ ಬಂಧನಗ್ರಸ್ತಗಮನವು. (ಅರಸನು ಎಜೆಕಿಯೇಲನು ನೀಮೆಯಿ ಮುಂತಾದ ಮುಖ್ಯಸ್ಥರು ಆ ಕಾಲದಲ್ಲಿ ಬಾಬೆಲಿಗೆ ಪಣ್ಕಾಗ ಬೇಕಾಯಿತು.
		ಅರಸನಾದ ಜೆದೆಕಿಯನು.

ಸೃ. ಶ.	ಕ್ರಿ. ಪೂ. ಶ.	
೩೪೦೫	೫೯೫	ಎಜೆಕಿಯೇಲನು ಕಲ್ದೀಯರ ದೇಶದಲ್ಲಿ ವಸತಿಯಾದ ಬಂಧನಗ್ರಸ್ತರಿಗೆ ಪ್ರವಾದಿಸಿದ್ದು. ಎಜೆ. ೧, ೨. ೩.
೩೪೧೦	೫೯೦	ಯೆರೂಸಲೇಮಿನ ಅಂತ್ಯಸೇನಾವೇಷ್ಟನವು. ಚತುರ್ಥ ಬಂಧನಗ್ರಸ್ತಗಮನವು.
೩೪೧೧	೫೮೯	ಕಲ್ದೀಯರು ಯೆರೂಸಲೇಮನ್ನು ವಶೀಕರಣ ಮಾಡಿ ಕಾಂಡದ್ದು. ಪಂಚಮ ಬಂಧನಗ್ರಸ್ತಗಮನವು. ಯೂದರಾಜ್ಯವೂ ಪಟ್ಟಣವೂ ದೇವಾಲಯವೂ ನಾಶವಾದದ್ದು. ಯೆರೆಮಿಯನ ಪ್ರವಾದನಾಸಮಾಪ್ತಿಯು. ಪ್ರವಾದಿಯಾದ ಓಬಾದ್ಯನು.
೩೪೧೫	೫೮೫	ನೆಬುಕದ್ನೆಜರನು ತೂರಪಟ್ಟಣಕ್ಕೆ ಮಾಡಿದ ದ್ವಾದಶ ವರ್ಷದ ಸೇನಾವೇಷ್ಟನದ ಆರಂಭವು. ಷಷ್ಠ ಯೂದಬಂಧನಗ್ರಸ್ತಗಮನವು.
೩೪೨೭	೫೭೩	ಪ್ರವಾದಿಯಾದ ಎಜೆಕಿಯೇಲನ ಕಡೆ ಪ್ರವಾದನೆಯು. ನೆಬುಕದ್ನೆಜರನ ಮಿಚ್ರ ದೇಶಾಕ್ರಮಣವು. ಕಲ್ದೀಯ ಸಾಮ್ರಾಜ್ಯಾಭಿವೃದ್ಧ್ಯಗ್ರವು. ದನಿಯೇಲನು ನೆಬುಕದ್ನೆಜರನ ಸ್ವಪ್ನಗಳನ್ನು ಪ್ರಖ್ಯಾತಿಸಿದ್ದು. (ನೆಬುಕದ್ನೆಜರನ ರಾಜ್ಯದ ಕಡೆ ೧೦ ವರುಷಗಳಲ್ಲಿ ದನಿಯೇಲನು ಉತ್ತಮೋದ್ಯೋಗವನ್ನು ಪೊಂದಿ ರಾಜನ ಸಮೀಪದಲ್ಲಿದ್ದನು.) ದನಿಯೇಲನ ಸ್ನೇಹಿತರ ಅಭ್ಯುದಯವು.
೩೪೩೭	೫೬೩	ಕಲ್ದೀಯರ ಅರಸನಾದ ಎವಿಲ್ಮೆರಾದಕನು ಬಂಧನಗ್ರಸ್ತ ಅರಸನಾದ ಯಾಯಕೀನನಿಗೂ ಉಳಿದ ಬಂಧನಗ್ರಸ್ತರಿಗೆ ದಯೆಯನ್ನು ತೋರಿಸಿದ್ದು. ದನಿಯೇಲನು ಕಲ್ದೀಯರ ಅರಸನಾದ ಬೆಲ್ಶಜರನ ಮೊದಲನೆ ಎರಡನೆ ವರುಷಗಳಲ್ಲಿ ಪ್ರವಾದನಾದ್ಯೋಗವನ್ನು, ಅವನ ಕಡೆ ವರುಷದಲ್ಲಿ ಸ್ವಪ್ನಫಲವಾಚಕೋದ್ಯೋಗವನ್ನು ನಡಿಸಿದನು.
೩೪೭೨	೫೩೮	ದನಿಯೇಲನು ಮೇದರ ಅರಸನಾದ ದರೀಯನ ಸೇವೆಯಲ್ಲಿದ್ದದ್ದು. (ದರ್ಶನವು.)
೩೪೭೪	೫೩೬	ದನಿಯೇಲನು ದರಿಯನಿಗೆ ಯುವರಾಜನಾದ ಕೋರೆಸನ ಸೇವೆಯಲ್ಲಿದ್ದದ್ದು. (ದರ್ಶನಗಳು.)

ಪುನಸ್ಥಾಪಿತವಾದ ಯೂದರಾಜ್ಯವು ಪ್ರಧಾನಯಾಜಕರಿಗೂ ಪರ್ಷರಾಜರ ಸುಖೆದಾರರಿಗೂ ವಶವಾಗಿದ್ದ ಕಾಲಗಳು.

೩೪೭೭	೫೩೩	ಕೋರೆಸನು ಸ್ವಾಧೀನವಾಗಿ ರಾಜ್ಯವನ್ನಾಳಿದ ಮೊದಲನೆ ವರುಷದಲ್ಲಿ ಬಂಧನಗ್ರಸ್ತರಾದ ಯೂದರನ್ನು ಬಿಡಿಸಿದ್ದು. ಅವರಲ್ಲಿ ಅನೇಕರು ಯೋಶುವ ಸೆರುಬಾಬೆಲರ ಸಂಗಡ ಸ್ವದೇಶಕ್ಕೆ ಶಿರಿಗಿ ಪೋದದ್ದು.
೩೪೭೮	೫೩೨	ದೇವಾಲಯಪುನಸ್ಥಾಪನಾರಂಭವು. ಶತ್ರುನಿರೋಧವು.

ಸೃ. ಶ.	ಕ್ರಿ. ಪೂ. ಶ.	
೩೨೨೦	೨೮೦	ಪ್ರಧಾನಯಾಜಕನಾದ ನೀತಿವಂತನೆಂಬ ಸೀಮೋನನು. ನ್ಯಾಯಶಾಸ್ತ್ರಿಗಳ ವಿದ್ಯಮಾನವು.
೩೨೨೩	೨೭೭	ಮಿಚ್ರದೇಶದ ಅರಸನಾದ ಫಿಲದೆಲ್ಫನೆಂಬ ಪ್ತಾಲೆಮಯನ ಕಾಲದಲ್ಲಿ ಉಂಟಾದ ಸಪ್ತತಿಯಂಬ ದೇವವಾಕ್ಯಗ್ರೀಕಭಾಷಾಂತರವು ಉಂಟಾದದ್ದು.
೩೨೭೦	೨೩೦	ಸೀರಾಕೆಂಬ ಯೇಸುವು ಮಿಚ್ರದಲ್ಲಿದ್ದದ್ದು.
೩೪೦೦	೨೦೦	ಸುರ್ಯದೇಶದ ಅರಸನಾದ ದಾಡ್ಡ ಅಂತ್ಯಾಕ್ಕನು ಯೂದರ ಅಧಿಕ ಸಮೂಹವನ್ನು ಸಣ್ಣ ಆಸ್ಯದಲ್ಲಿ ವಸತಿ ಮಾಡಿಸಿದ್ದು. (೨೦೩ ವರುಷದ ಹತ್ತಲಾಗಿ.)
೩೪೩೦	೧೭೦	ಸುರ್ಯದೇಶದ ಅರಸನಾದ ಎಪಿಫನೆಸ್ಸೆಂಬ ಅಂತ್ಯಾಕ್ಕನು ಮಾಡಿದ ಯೆರೂಸಲೇಮಪಟ್ಟಣದ ಪ್ರಥಮ ಆಕ್ರಮಣವು. ಮಹಾ ರಕ್ತಪ್ರವಾಹವು. ದೇವಾಲಯಾಪರಿಶುದ್ಧಿಕರಣವು.
೩೪೩೨	೧೬೮	ಅರಸನಾದ ಅಂತ್ಯಾಕ್ಕ ದ್ವಿತೀಯಾಕ್ರಮಣವು. ಸಂಪ್ರದಾಯವಾದ ಬಲಿಯರ್ಪಣೆಯನ್ನು ನಿಲ್ಲಿಸಿದ್ದು. ಅಸಹ್ಯವಾದ ಮೂರ್ತಿಯನ್ನು ದೇವಾಲಯದಲ್ಲಿ ಸ್ಥಾಪಿಸಿದ್ದು. ಮೊದಿನೂರಿನವನಾದ ಮತ್ತಥಿಯನೆಂಬ ಯಾಜಕನು ಎಬ್ಬಿಸಿದ ಪುಂಡು.
೩೪೩೬	೧೬೪	ಮಕ್ಕಬೇಯನಾದ ಯೂದನು ದೇವಾಲಯವನ್ನು ಪುನಃಪರಿಶುದ್ಧ ಮಾಡಿದ್ದು.
೩೪೪೦	೧೬೦	ಮಿಚ್ರದೇಶದಲ್ಲಿ ವಸತಿಯಾದ ಒನಿಯನೆಂಬ ಯಾಜಕನು ಲೆವಾಂತಾಪಾಲಿಯಲ್ಲಿ ಯೂದರ ದೇವಾರಾಧನಾರ್ಥವಾಗಿ ದೇವಾಲಯವನ್ನು ಕಟ್ಟಿಸಿದ್ದು.
೩೪೪೭	೧೫೩	ಯೂದನ ತಮ್ಮನಾದ ಯೊನಥಾನನು ಪ್ರಧಾನಯಾಜಕಾದ್ಯೋಗವನ್ನು ಪಡೆದಿದ್ದು. (ಆ ಕಾಲದಿಂದ ಪೆರಾದನ ಕಾಲದ ವರೆಗೂ ಮಕಬೇಯ ವಂಶದವರೆ ಪ್ರಧಾನಯಾಜಕರಾಗಿದ್ದರು.)
೩೪೫೫	೧೪೨	ಮಂತ್ರಿಸಭೆಯ ಪ್ರಥಮ ಚಿನ್ಹೆಯು ೨ ಮಕ. ೧, ೧೦; ೪, ೪೪.
೩೪೬೨	೧೩೮	ಯೂದನ ತಮ್ಮನಾದ ಸೀಮೋನನು ಸುರ್ಯದೇಶದ ರಾಜರ ನಾಗವನ್ನು ಪೂರ್ಣವಾಗಿ ಒಡದು ಯೆಹೂದರಾಜ್ಯವನ್ನು ಸ್ಥಾಪಿಸಿ, ತಾನು ಪಟ್ಟವನ್ನು ಕಟ್ಟಿ ಕಾಂಡದ್ದು.

೩೪೬೬	೧೩೪	ಸೀಮೋನನ ಮಗನಾದ ಯೋಹಾನ ಹುರ್ಕಾನನು ಪ್ರಧಾನಯಾಜಕನೂ, ಅರಸನೂ ಆದದ್ದು.
		ಯೆಹೂದರಿಗೆ ಬಂದ ಹಾನಿಸಾಗಸಿನ ಕಾಲವು.
೩೪೭೦	೧೩೦	ಯೆಹೂದರು ಸಮರ್ಯದೇಶವನ್ನು ಆಕ್ರಮಿಸಿ ಕಾಂಡು ಗಾರಿಜಿಮ್ ಗುಡ್ಡದ ಮೇಲಿದ್ದ ದೇವಾಲಯವನ್ನು ಹಾಳು ಮಾಡಿದ್ದು.
೩೪೯೧	೧೦೯	ಎದಾಮದವರ ವಶೀಕರಣವು.
		ಫರಿಸಾಯರ ಸದ್ದುಕಾಯರ ಮತಗಳು.
೩೯೩೪	೬೭	ಪಾಂಪೆಯನು ಯೆರೂಸಲೇಮಿಗೆ ಬಂದು ಎರಡನೆ ಹುರ್ಕಾನನಿಗೂ ಮೊದಲನೆ ಹುರ್ಕಾನನ ಮೊಮ್ಮಗನಾದ ಎರಡನೆ ಅರಿಸ್ತಾಬೂಲನಿಗೂ ನ್ಯಾಯ ತೀರಿಸಿದ್ದು.

ಸೃ. ಶ.	ಕ್ರಿ. ಪೂ. ಶ.	
೩೪೮೨	೫೧೮	ಪುನಸ್ಸ್ಥಿಯಂಬ ದರಿಯನ ಎರಡನೆ ವರುಷದಲ್ಲಿ ಪಗ್ಗಾಯಿ ಸಕರ್ಯರ ಪ್ರವಾದನಾಮೂಲಕವಾಗಿ ಉಂಟಾದ ದೇವಾಲಯಪುನಸ್ಥಾಪನಾನೂತನಾರಂಭವು.
೩೪೮೬	೫೧೪	ಪುನಸ್ಸ್ಥಿಯಂಬ ದರಿಯನ ೬ನೆ ವರುಷದಲ್ಲಿ ಉಂಟಾದ ದೇವಾಲಯಪುನಸ್ಥಾಪನಾಸಮಾಪ್ತಿಯು.
೩೫೩೮	೪೭೨	ಕ್ಷೆರ್ಕ್ಸೆಯರಾಜ್ಯದಲ್ಲಿ ಎಸ್ಥೆರಳಿಂದ ಉಂಟಾದ ಪರದೇಶವಾಸಗಳಾದ ಯೂದರ ರಕ್ಷಣೆಯು.

೩೫೩೭	೪೭೩	ಪೆಚ್ಚಾದ ಯೆಹೂದರು ಎಸ್ರನ ಸಂಗಡ ಸ್ವದೇಶಕ್ಕೆ ತಿರಿಗಿದ್ದು. ಎಸ್ರ ಸ್ವಜನರಿಗೆ ಉತ್ತಮ ಬಾೞಿಕನೂ, ಶಿಕ್ಷಕನೂ ಆಗಿದ್ದನು.
೩೫೪೨	೪೬೮	ಎಸ್ರ ಯೆರೂಸಲೇಮಿನಲ್ಲಿದ್ದಾಗ, ನೆಹೆಮಿಯನು ಬಬುಲಾನದಿಂದ ಬಂದು ಯೆರೂಸಲೇಮಪಟ್ಟಣವನ್ನು ಪೂರ್ವಾಸ್ಥಾಗಿ ಕಟ್ಟಿಸುವದಕ್ಕೆ ಆರಂಭಿಸಿದ್ದು.
೩೫೪೯	೪೬೧	ನೆಹೆಮಿಯನು ತಿರಿಗಿ ಪೋದಾಗ ಯೆರೂಸಲೇಮಿನಲ್ಲಿದ್ದ ಯೂದರು ಕಟ್ಟಳೆಗಳನ್ನು ಮೀರಿದ ಕಾರಣ ಅವನು ಬಬುಲಾನದಿಂದ ತಿರಿಗಿ ಬಂದು ಧರ್ಮವನ್ನೂ ಪದ್ಧತಿಯನ್ನೂ ತಿರಿಗಿ ಸ್ಥಿರ ಪಡಿಸಿದ್ದು.
೩೫೬೬	೪೪೪	ಈ ಕೆಲಸದಲ್ಲಿ ಕಡೇ ಪ್ರವಾದಿಯಾದ ಮಲೆಯಕಿ ಸಹಾಯ ಮಾಡಿದನು.
೩೫೭೭	೪೩೩	ಪಳೆ ಒಡಂಬಡಿಕೆಯ ಗ್ರಂಥಸಂಗ್ರಹಸಮಾಪ್ತಿಯು.

ಪಳೆ ಒಡಂಬಡಿಕೆಯ ಕಡೇ ಕಾಲಗಳು.

೩೬೨೯	೩೨೧	ಫರ್ಸ ಅಧಿಕಾರಿಗಳ ಕ್ರೌರ್ಯಾಚಿವೃದ್ಧಿಯು. ಪ್ರಧಾನಯಾಜಕಾದ್ಯಾಗವಿಷಯವಾದ ತರ್ಕವು.
೩೬೩೮	೩೩೨	ಅಲೆಕ್ಸಂದ್ರನು ಯೆರೂಸಲೇಮಿಗೆ ಬಂದದ್ದು. ಗ್ರೇಕರು ಯೆಹೂದರನ್ನು ಆಳುವದಕ್ಕೆ ಆರಂಭಿಸಿದ್ದು. (ಪ್ರಧಾನಯಾಜಕನಾದ ಯದ್ದುವನು.) ಯದ್ದುವನ ತಮ್ಮನಾದ ವಿಶ್ವಾಸದ್ರೋಹಿಯಾದ ಮನಸ್ಸೆಯಂಬ ಯಾಜಕನು ಗರಿಜಿಮ್‌ಗುದ್ದದಲ್ಲಿ ಸಮರ್ಯದೇಶದವರಿಗೆ ದೇವಾಲಯವನ್ನು ಕಟ್ಟಿಸಿದ್ದು.
೩೬೫೨	೩೨೩	ಮಕೆದ್ದಾನ್ಯ ಸಾಮ್ರಾಜ್ಯವು ವಿಭಾಗವಾದ ಕಾಲದಿಂದ ಮಿಚ್ರಸಂಸ್ಥಾನದವರು ಸುರ್ಯಸಂಸ್ಥಾನದವರು ಉಭಯತ್ರರು ತಮ್ಮ ನಡುವೆಯಲ್ಲಿರುವ ಯೂದ ದೇಶವನ್ನು ಸ್ವಾಧೀನ ಮಾಡುವ ಉದ್ದಿಶ್ಯವಾಗಿ ಎಡೆಬಿಡದೆ ಯುದ್ಧ ಮಾಡಿದ್ದು.
೩೬೬೦	೩೧೦	ಲಾಗೀ ಎಂಬ ಪ್ತಾಲೆಮಯನು ಸಬತ್ತದಿವಸದಲ್ಲಿ ಯೆರೂಸಲೇಮಪಟ್ಟಣವನ್ನು ಆಕ್ರಮಿಸಿ ಕಾಂಡು, ವಾಂದು ಲಕ್ಷ ಯೆಹೂದರನ್ನು ಮಿಚ್ರದೇಶಕ್ಕೆ ಕಾಂಡು ಪೋದ್ದು. (ಮಿಚ್ರವಾಸಿಗಳಾದ ಯೆಹೂದರು.)

ಸೃ. ಶ.	ಕ್ರಿ. ಪೂ. ಶ.	
೩೯೫೩	೪೭	ಪೌರಾದನ ತಂದೆಯಾದ ಎದಾಮಧವನಾದ ಅಂತಿಪತೆರ್ ಕೈಸರನ ದಯೆಯಿಂದ ರಾಮಿಯಾಯ ಆಧಿಪತ್ಯಾದ್ಯಾಗವನ್ನು ಪಡೆದಿದ್ದು.
೩೯೬೦	೪೦	ದಾಡ್ಡಪೆರಾದನು ರಾಮಿಯಾಯ ವೃದ್ಧಸಖೆಯ ಅಪ್ಪಣೆಯಿಂದ ಯೆಹೂದದ ಅರಸನಾದದ್ದು.

ಪೌಸ ಒಡಂಬಡಿಕೆಯ ಕಾಲವು.

ಕ್ರಿಸ್ತ ಶಕವು.	ಕ್ರಿಸ್ತನ ಜನನವು.
೩೦	ಕ್ರಿಸ್ತನ ಉದ್ಯಾಗಾಪಕ್ರಮವು.
೩೪	ಕ್ರಿಸ್ತನ ಮರಣ ಪುನರುತ್ಥಾನ ದಿವಾರಾಪಣಗಳು. ಸಭಾಸ್ಥಾಪನೆಯು. ಸುರ್ಯದೇಶದ ಪರ್ಯಂತ ಸಭಾವಿಸ್ತರಣವು.
೩೬	ಪೌಲನ ಸಂವರ್ತನವು.
೩೯	ಪೌಲನು ಸಂವರ್ತನದ ಬಳಿಕ ಮೊದಲು ಯೆರೂಸಲೇಮಿಗೆ ಬಂದದ್ದು. ಗಲ. ೧. ಪೌಲನು ತರ್ಸದಲ್ಲಿ ವಸತಿಯಾದ್ದದ್ದು. ಬರ್ನಬನು ಪೌಲನನ್ನು ಅಂತ್ಯಾಕ್ಯಕ್ಕೆ ಕರದದ್ದು.
೪೪	ಥರ್ಮದ್ರವ್ಯದಾನಾರ್ಥವಾಗಿ ಎರಡನೆ ಸಾರಿ ಯೆರೂಸಲೇಮಿಗೆ ಪಡೆದಿದ್ದು. ಪ್ರಥಮ ಸುವಾರ್ತಾಪ್ರಸಂಗಪರ್ಯಟಣವು. (ಸಣ್ಣಆಸ್ಯದಲ್ಲಿ)
೪೮	ಪೌಲನು ಪ್ರಥಮ ಸಭಾಕೂಟಕ್ಕಾಗಿ ೩ನೆ ಸಾರಿ ಯೆರೂಸಲೇಮಿಗೆ ಪಡೆದಿದ್ದು.
೪೯	ಪೌಲನು ಎರಡನೆ ಸುವಾರ್ತಾಪ್ರಸಂಗಪರ್ಯಟಣ ಮಾಡಿ, ಸಣ್ಣಆಸ್ಯದಲ್ಲಿ ಗಲತದ ಸಭೆಗಳನ್ನು ಸ್ಥಾಪಿಸಿ ಮಕೆದ್ವಾನ್ಯವನ್ನೂ ಗ್ರೀಕದೇಶವನ್ನೂ ಸಂಚರಿಸಿ ಥೆಸ್ಸಲೋನಿಕೆಯವರ ಎರಡು ಪತ್ರಿಕೆಗಳನ್ನು ಬರದದ್ದು.
೫೪	ಪೌಲನು ೪ನೆ ಸಾರಿ ಯೆರೂಸಲೇಮಿಗೆ ಪಡೆದಿ ೩ನೆ ಸುವಾರ್ತಾಪರ್ಯಟಣಕ್ಕೆ ಪೂರಾರಟು, ಮುಂಚೆ ಸಂಚರಿಸದ ಸಣ್ಣಆಸ್ಯದ ಸೀಮೆಗಳನ್ನು ಸಂಚರಿಸಿದ ಮೇಲೆ (ಎಫೆಸವು; ಗಲತರ ಪತ್ರಿಕೆಯು ಕಾರಿಂಥದವರ ಮೊದಲನೆ ಪತ್ರಿಕೆಯು), ತಿರಿಗಿ ಮಕೆದಾನ್ಯಕ್ಕೂ, (ಕಾರಿಂಥದವರ ಎರಡನೆ ಪತ್ರಿಕೆಯು.) ಗ್ರೀಕದೇಶಕ್ಕೂ (ರಾಮಿಯಾಯರ ಪತ್ರಿಕೆಯು.) ಪಡೆದಿದ್ದನು.
೫೭	ಪಂಚಾಶತ್ಪಬ್ಬಕ್ಕಾಗಿ ಐದನೆ ಸಾರಿ ಯೆರೂಸಲೇಮಿಗೆ ಪಯಣ ಮಾಡಿದ ಪೌಲನು ಅಲ್ಲಿ ಶೆರೆಯಲ್ಲಿ ಬಿದ್ದು, ೨ ವರುಷ ಬಂಧನಗ್ರಸ್ತನಾಗಿ ಕೈಸರೆಯದಲ್ಲಿದ್ದನು.
೬೦	ಪೌಲನು ಬಂಧನಗ್ರಸ್ತನಾಗಿ ರಾಮಪುರಕ್ಕೆ ಪಡೆದಿದ್ದು. ರಾಮಪುರದಲ್ಲಿ ಕಾಲಾಸ್ಸೆಯವರಿಗೂ ಫಿಲೆಮೋನನಿಗೂ ಎಫೆಸದವರಿಗೂ ಫಿಲಿಪ್ಪಿಯವರಿಗೂ ಪತ್ರಿಕೆಗಳನ್ನು ಬರದದ್ದು.

ಕ್ರಿ. ಶ.	
೬೨	ಪತ್ರಿಕಾಕರ್ತನಾದ ನೀತಿವಂತನೆಂಬ ಯಾಕಾಬನು ಯೆರೂಸಲೇಮಿನಲ್ಲಿ ಸತ್ತದ್ದು.
	ಪೌಲನು ರಾಮಪುರಬಂಧನದಿಂದ ಬಿಡುಗಡೆಯಾದದ್ದು. (ಇಬ್ರಿಯರ ಪತ್ರಿಕೆಯು.)
	ಪೌಲನು ತಿರಿಗಿ ಮೂಡಣದೇಶಗಳನ್ನು ಸಂಚರಿಸಿದ್ದು. (೨ತಿಮೊ. ೧ತೀತ.)
	ಪೇತ್ರನು ಬಬುಲಾನದಲ್ಲಿದ್ದದ್ದು. (೧ ಪೇತ್ರ.)
೬೬	ಪೌಲನು ತಿರಿಗಿ ಬಂಧನಗ್ರಸ್ತನಾಗಿ ರಾಮಪುರಕ್ಕೆ ಬಂದದ್ದು. ಪೇತ್ರನು ಅವನ ಜಾತೆಯಲ್ಲಿ ಶೇರಿದ್ದು. (೨ ತಿಮೊ. ೨ ಪೇತ್ರ.)
	ಪೌಲನೂ, ಪೇತ್ರನೂ ರಾಮಪುರದಲ್ಲಿ ಸತ್ತದ್ದು. (ಯೂದನ ಪತ್ರಿಕೆಯು.)
೭೦	ರಾಮಿಯಾಯರಿಂದುಂಟಾದ ಯೆರೂಸಲೇಮಿನ ನಾಶವು.
	ಯಾಪಘಾನನು ಆಸ್ಯದಲ್ಲಿ ವಸತಿಯಾದದ್ದು.
೯೪	ಯಾಪಘಾನನು ದೇಶಪರಿತೃಕ್ತನಾಗಿ ಪತ್ಮದಲ್ಲಿ ವಸತಿಯಾದದ್ದು. (ಪ್ರಕಟಣೆಯು. ಸುವಾರ್ತೆಯು. ಪತ್ರಿಕೆಗಳು.)
೧೦೦	ಯಾಪಘಾನನ ಮರಣವು.

ಸಮಾಪ್ತಿಯು.

I 20-

1892

Calwer Bibelwerk.
Neues Testament.

ಪವಿತ್ರಶಾಸ್ತ್ರದಿಪ್ಪ

ಪ್ರಕಟನೆ ವಾಕ್ಯ.

ಬಳಸಲಾಂಡ.

ಬೆಂಗಳೂರು.
ಬೆಥಿಲಿನ ಪ್ರೆಸ್.
೧೮೬೧.

C XIV. 27. k°

Copyright 4/1999 YxyMaster GmbH www.yxymaster.com
VierFarbSelector Standard* - Euroskala Offset